ಶ್ರೀಮತಿ ಯಶೋಧರಮ್ಮ ದಾಸಪ್ಪ ಜನ್ಮಶತಮಾನೋತ್ಸವ

ಯಶೋಧರಾ ಗಾಥೆ

ಮತ್ತು

ಕರ್ನಾಟಕ ಸಾಧಕಿಯರು



ಪ್ರಕಟಣೆ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು

ಶ್ರೀಮತಿ ಯಶೋಧರಮ್ಮ ದಾಸಪ್ಪ ಜನ್ಮಶತಮಾನೋತ್ಸವ

ಯಶೋಧರಾ ಗಾಥೆ

ಮತ್ತು

ಕರ್ನಾಟಕ ಸಾಧಕಿಯರು

ಪ್ರಧಾನ ಸಂಪಾದಕರು

ಡಾ. ದೇಜಗೌ

ಸಂಪಾದಕರು

ಕೆ.ಎಂ. ವಿಜಯಲಕ್ಷ್ಮಿ

ಸಂಪಾದಕರು ಹಾಗೂ ಸಂಚಾಲಕರು

ಡಾ. ಕೆ.ಆರ್. ಕಮಲೇಶ್

ಪ್ರಕಟಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ

ಡಾ. ಅಂಬೇಡ್ಕರ್ ರಸ್ತೆ, ಬೆಂಗಳೂರು 560 001.

COMMOMERATION VOLUME

"YASHODHARAGHATE AND KARNATAKA SADAKIYARU" Published by Department of Women and Child Welfare on the occasion of CENTUNARY CELEBRATIONS OF SMT. YASHODHARAMMA DASAPPA. PH : 23240886(080)

Chief Editor	: Dr. D. Javaregowda
Editor	: K. M. Vijayalakshmi
Editor & Convenor	: Dr. K.R. Kamalesh

Size	: Crown 1/4
First Publication	: March 2012
Price	: ₹ 650
Total Pages	: 626
Paper used	: 80 GSM Maplitho
Art Paper used	: 130 GSM Art paper
Copeis	: 2000

Design & Printed at :
Directorate of Printing, Stationery and Publications
Government of Karnataka, Bangalore-560 029

ಕರ್ನಾಟಕ ಸರ್ಕಾರ

ಸರ್ಕಾರದ ಆದೇಶ ಸಂಖ್ಯೆ:ಮಮಇ:158 ಐಸಿಡಿ 2005, ಬೆಂಗಳೂರು ದಿನಾಂಕ:23-09-2005

ಭಾರತ ಸ್ವಾತಂತ್ರ್ಯ ಹೋರಾಟಗಾರರು ಮತ್ತು ರಾಜ್ಯದ ಪ್ರಪ್ರಥಮ ಮಹಿಳಾ ಸಚಿವೆಯೂ ಆಗಿದ್ದ ಶ್ರೀಮತಿ. ಯಶೋಧರಮ್ಮ ದಾಸಪ್ಪ ಇವರ ಜನ್ಮ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುವ ಸಲುವಾಗಿ ಈ ಕೆಳಕಾಣಿಸಿರುವ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

- ಸನ್ಮಾನ್ಯ ಮುಖ್ಯಮಂತ್ರಿಗಳು – ಅಧ್ಯಕ್ಷರು
- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಸಚಿವರು – ಕಾರ್ಯಾಧ್ಯಕ್ಷರು
- ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರು – ಸದಸ್ಯರು
- ಮಾನ್ಯ ವಾರ್ತಾ ಮತ್ತು ಪ್ರಚಾರ ಇಲಾಖಾ ಸಚಿವರು – ಸದಸ್ಯರು
- ವಿಶ್ವವಿದ್ಯಾನಿಲಯದ ಉಪಕುಲಪತಿಗಳು, ಬೆಂಗಳೂರು – ಸದಸ್ಯರು
- ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ – ಸದಸ್ಯರು
- ಪ್ರಧಾನ ಕಾರ್ಯದರ್ಶಿಗಳು, ಮ.ಮ.ಅ.ಇಲಾಖೆ – ಸದಸ್ಯರು
- ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ – ಸದಸ್ಯರು
- ಆಯುಕ್ತರು, ವಾರ್ತಾ ಮತ್ತು ಪ್ರಚಾರ ಇಲಾಖೆ – ಸದಸ್ಯರು
- ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ – ಸದಸ್ಯರು
- ಆಯುಕ್ತರು/ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ – ಸದಸ್ಯ ಕಾರ್ಯದರ್ಶಿ

ಸಂಪಾದಕ ಮಂಡಲಿ

ಪ್ರಧಾನ ಸಂಪಾದಕರು

ಡಾ. ದೇ.ಜವರೇಗೌಡ
ಮಾಜಿ ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ

ಸಂಪಾದಕರು

ಶ್ರೀಮತಿ ಕೆ.ಎಂ.ವಿಜಯಲಕ್ಷ್ಮಿ
ಮಾಜಿ ಕಾರ್ಯದರ್ಶಿ, ಲೇಖಕಿಯರ ಸಂಘ

ಸಂಪಾದಕರು ಹಾಗೂ ಸಂಚಾಲಕರು

ಡಾ. ಕೆ.ಆರ್.ಕಮಲೇಶ್

ಶ್ರೀಮತಿ ಯಶೋಧರಮ್ಮ ದಾಸಪ್ಪ ಜನ್ಮಶತಮಾನೋತ್ಸವ
ನೆನಪಿನ ಸಂಪುಟ

ಯಶೋಧರಾ ಗಾಥೆ

ಮತ್ತು

ಕರ್ನಾಟಕ ಸಾಧಕಿಯರು

ಪರಿವಿಡಿ

- ❖ ನುಡಿ ನಮನ
- ❖ ಸಂದೇಶಗಳು
- ❖ ಕಾವ್ಯನಮನ

ಯಶೋಧರಾ ಗಾಥೆ

ಪುಟ ಸಂಖ್ಯೆ

❖ ಚಿತ್ರ ಸಂಪುಟ

ಕರ್ನಾಟಕ ಸಾಧಕಿಯರು

ಯಶೋಧರಾ ಗಾಥೆಗೆ ನುಡಿನಮನ

ಭರತಖಂಡದ ಸರ್ವಕಾಲೀನ ಮಹಿಳಾ ಮಣಿಗಳ ಅಗ್ರಪಂಕ್ತಿಯಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪನವರ ಮಹಾಚೇತನ ಸದಾ ವಿರಾಜಮಾನವಾಗಿರುತ್ತದೆಯೆಂಬುದರಲ್ಲಿ ಸಂದೇಹವಿಲ್ಲ. ಮಹಾತ್ಮ ಗಾಂಧೀಜಿಯ ಸಿದ್ಧಾಂತಗಳನ್ನು ಬದುಕುವಲ್ಲಿ, ಸ್ವಾರ್ಥತ್ಯಾಗದಲ್ಲಿ, ಪರಹಿತಸಾಧನೆಯಲ್ಲಿ, ದೀನ–ದಲಿತರ ಬಗೆಗಿನ ಅನುಕಂಪೆಯಲ್ಲಿ, ಪ್ರಾಮಾಣಿಕತೆಯಲ್ಲಿ, ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಅವರು ಯಾರಿಗೂ ದ್ವಿತೀಯರಲ್ಲ. ಮಹಾತ್ಮಾಜೀ ಅವರನ್ನು ಕೆಲವು ಕಾಲ ಸೇವಾ ಗ್ರಾಮದಲ್ಲಿರಿಸಿಕೊಂಡು, ತಮ್ಮ ಅಂತರಂಗದ ಕ್ಷಕಿರಣ ಹಾಯಿಸಿ, ಪರೀಕ್ಷಿಸಿ, ತಮ್ಮ ಆಪ್ತವಲಯಕ್ಕೆ ಸೇರಿಸಿಕೊಂಡದ್ದೇ ಆ ತಾಯಿಯ ಮಹಿಮೆಗೆ, ಅನರ್ಘ್ಯತೆಗೆ ನಿದರ್ಶನ. ಗಾಂಧಿಗೆ ಶರಣಾಗತಿ, ರಾಷ್ಟ್ರಕ್ಕೆ ಸರ್ವಾರ್ಪಣೆ ಎಂಬ ವ್ರತವನ್ನು ಸ್ವೀಕರಿಸಿದ ನಂತರ ಅವರು ಹಿಂದಿರುಗಿ ನೋಡಲಿಲ್ಲ. ಶಿವಪುರ ಕಾಂಗ್ರೆಸ್ಸಿನ ಅಧಿವೇಶನದಲ್ಲಿ (1938) ಪೋಲೀಸರು ಧ್ವಜವನ್ನು ಕೀಳಲು ಬಂದಾಗ ಯಶೋಧರಾ ತಾಯಿಯವರು ಇತರ ಸ್ವಯಂ ಸೇವಕಿಯರೊಡನೆ ಧ್ವಜಸ್ತಂಭವನ್ನು ತಬ್ಬಿಕೊಂಡು ಧ್ವಜವನ್ನು ರಕ್ಷಿಸುತ್ತಾರೆ.

ಈ ಧ್ವಜ ಗೌರವವನು ಕಾಯಿ;
ಶಿವನೆದೆ ತಲ್ಲಣಿಪುದು, ತಾಯಿ!
ಧ್ವಜವೇ ಸ್ವಾತಂತ್ರ್ಯದ ಶಿವಮೂರ್ತಿ;
ಧ್ವಜರಕ್ಷಣೆಯೇ ದೇಶಕ್ಕೆ ಕೀರ್ತಿ.

ಎಂದು ಸಂತ ಮಹಾಕವಿ ಕುವೆಂಪು ಮೆಚ್ಚಿ ಹಾಡಿದ ಹಾಡೇ ಆ ತಾಯಿ ಯಶೋಗಾಥೆ ಯಾಗಿದೆ. ಮುಂದಿನ ದಿನಗಳಲ್ಲಿ ಜಾನಪದರು ಅವರನ್ನು ಪೌರಾಣಿಕ ವ್ಯಕ್ತಿಯನ್ನಾಗಿ ಚಿತ್ರಿಸಿದರೆ ಸೋಜಿಗವಾಗದು.

ತಮ್ಮನ್ನು ಮಾತ್ರವಲ್ಲ, ಇಡೀ ಕುಟುಂಬವನ್ನೇ ದೇಶಕ್ಷೇಮಕ್ಕಾಗಿ ನಿವೇದಿಸಿದ್ದ ಆ ತಾಯಿ ಕರ್ನಾಟಕದ ಕೀರ್ತಿಧ್ವಜ; ನಾಡಿನ ತಮಸ್ಸನ್ನು ಹರಿಸುವಲ್ಲಿ ಸದಾ ಬೆಳಗುವ ನಂದಾದೀಪ! ಜಗನ್ಮಾತೆಯ ಆಶೀರ್ವಾದವೇ ಸಾಕಾರಗೊಂಡಂತಿದ್ದ ಅಂಥ ಆದರ್ಶ

ಮಹಿಳಾರತ್ನವನ್ನು ಮೇಲಿಂದ ಮೇಲೆ ಸ್ಮರಿಸಿಕೊಳ್ಳಬೇಕಾದ್ದು ಕೃತಜ್ಞ ಜನಾಂಗದ ಧರ್ಮ; ರಾಷ್ಟ್ರದ ಭವಿಷ್ಯದ ದೃಷ್ಟಿಯಿಂದ ಅವರ ಜಾಜ್ವಲ್ಯಮಾನವಾದ ಪವಿತ್ರ ವ್ಯಕ್ತಿತ್ವವನ್ನು ಮುಂದಿನ ಪೀಳಿಗೆಗೆ ಆಗಾಗ್ಗೆ ಪರಿಚಯಿಸಿಕೊಡಬೇಕಾದ್ದು ನಾಡಿನ ನಾಯಕರ ಕರ್ತವ್ಯ.

ಕರ್ನಾಟಕದ ರೂವಾರಿಗಳೂ, ಸ್ವಾತಂತ್ರ್ಯಸಮರದ ವೀರರೂ, ಅಕಳಂಕ ಚರಿತರೂ ಆದ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರು ಮೊದಲುಗೊಂಡು ಹಿರಿಯ ನಾಯಕರಾದ ಸಿ.ಕೆ. ಜಾಫರ್ ಷರೀಫ್, ಮಲ್ಲಿಕಾರ್ಜುನ ಖರ್ಗೆಯವರೂ ಸೇರಿದಂತೆ, ಮೂವತ್ತೆರಡು ಮಂದಿ ನಾಡಿನ ಸಜ್ಜನರು ಯಶೋಧರಾ ಗಾಥೆಯನ್ನು ಹಾಡಿದ್ದಾರೆ. ಅವರೊಬ್ಬರು ತತ್ವನಿಷ್ಠ ಮಹಿಳೆಯೆಂದು ಘೋಷಿಸಿದ ನಿಜಲಿಂಗಪ್ಪನವರು ಕರ್ನಾಟಕ ರಾಜ್ಯಕ್ಕೆ ಯಶೋಧರಮ್ಮನಂತಹ ಧೈರ್ಯವಂತ, ಬುದ್ಧಿವಂತ ಮಹಿಳೆಯ ಅವಶ್ಯಕತೆಯಿದೆ. ರಾಜಕೀಯ ಸೇವೆ ಬಯಸುವ ಮಹಿಳೆಯರಿಗೆ ಯಶೋಧರಮ್ಮನವರ ಜೀವನ ದಾರಿದೀಪವಾಗುತ್ತದೆ ಎಂದು ನಿಷ್ಕಲ್ಮಷ ಮನಸ್ಸಿನಿಂದ ನುಡಿಯುತ್ತಾರೆ. 'ಜೀವನದಲ್ಲಿ ಒಂದು ಆದರ್ಶ, ಗುರಿ, ನಿಷ್ಠೆ, ತತ್ವವನ್ನು ಅಳವಡಿಕೊಂಡಾಗ ಬದುಕು ಸಮಾಜಕ್ಕೆ ಮಾರ್ಗದರ್ಶನವಾಗುತ್ತದೆ' ಎಂಬುದಾಗಿ ಯಶೋಧರಮ್ಮನವರ ಗುಣಗಾನ ಮಾಡಿರುವವರು ಗಾಂಧಿವಾದಿ, ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರು, ಆ ತಾಯಿ 'ಹೋರಾಟದ ಚಿಲುಮೆ' ಎಂದು ಕರೆದವರು ಪ್ರಾಮಾಣಿಕ ದೇಶಭಕ್ತ ಎಂ.ಎಸ್. ಜೋಯಿಸ್ ಅವರು. ಸ್ವತಃ ಗಾಂಧೀಜಿಯವರೇ ಯಶೋಧರಮ್ಮನವರನ್ನು ಬುದ್ಧಿವಂತ ಮತ್ತು ಧೈರ್ಯವಂತ ಮಹಿಳೆಯೆಂದೇ ಕರೆಯುತ್ತಿದ್ದರೆಂದು, ಸಾಕ್ಷಿ ನುಡಿದಿರುವ ಬಿ.ಆರ್. ಪ್ರಾಣೇಶ ರಾವ್ ಅವರೇ ಅವರನ್ನು 'ಕರ್ನಾಟಕದ ಕಸ್ತೂರಿಬಾ' ಎಂದು ಹೇಳಿರುವುದು ನೂರಕ್ಕೆ ನೂರು ಸತ್ಯ. 'ಸ್ತ್ರೀಕುಲದ ಮಕುಟಮಣಿ', 'ದಾರಿದೀಪ', 'ಎಲ್ಲರ ಅಮ್ಮ', 'ವೀರವನಿತೆ', 'ಮೌಲ್ಯಾಧಾರಿತ ಮುತ್ಸದ್ದಿ', 'ಉದಾತ್ತ ವ್ಯಕ್ತಿತ್ವ', 'ಸಾರ್ವಜನಿಕ ಬದುಕಿನ ಆದರ್ಶ ಮಹಿಳೆ, 'ಸ್ವಾಭಿಮಾನದ ನಾಯಕಿ', 'ತ್ಯಾಗಮಯಿ',- ಇವು ನಾಡಿನ ನಾಯಕ-ನಾಯಿಕೆಯರು ಯಶೋಧರಾ ತಾಯಿಗೆ ಎಡೆಮಾಡಿರುವ ನುಡಿನೈವೇದ್ಯ. ದಾನ ಚಿಂತಾಮಣಿ ಅತ್ತಿಮಬ್ಬೆ, ಕೆಳದಿ ಚೆನ್ನಮ್ಮ, ರಾಣಿ ಅಬ್ಬಕ್ಕ-ಇಂಥವರ ಸಾಲಿನಲ್ಲಿ ನಿಲ್ಲಬಲ್ಲ ವ್ಯಕ್ತಿತ್ವವುಳ್ಳವರು ಯಶೋಧರಾ ಅಮ್ಮನವರು ಎಂದು ಎಂ. ವೀರಪ್ಪ ಮೊಯಿಲಿ ರವರು ಅವರಿಗೆ ತಮ್ಮ ಗೌರವವನ್ನು ಸಲ್ಲಿಸುತ್ತಾರೆ. 'ಮಾತೃಶ್ರೀ ಪೂಜ್ಯ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರನ್ನು ನೆನೆಸಿಕೊಳ್ಳು ವುದೆಂದರೆ ಹೆತ್ತೊಡಲನ್ನು ನೆನೆದಂತೆ.....ಅವರು ಇಡೀ ದಲಿತ ಸಮುದಾಯದ ಮಾತೃಸ್ವರೂಪಿಣಿ. ಮಹಾತ್ಮ ಗಾಂಧೀಜಿಯವರ ಆದರ್ಶಗಳನ್ನು ಶ್ರದ್ಧಾಪೂರ್ವಕವಾಗಿ ಅನುಷ್ಠಾನ ಮಾಡಿದ ಮಹಾನುಭಾವಿ' ಎಂದು ಹೆಚ್. ಹನುಮಂತಪ್ಪ ನವರು ನಿಷ್ಕಪಟವಾಗಿ ನುಡಿಯುತ್ತಾರೆ 'ಇಂತಹ ಜನಪರವಾದ ನಿಸ್ವಾರ್ಥವಾದ, ಪಾರದರ್ಶಕವಾದ ವ್ಯಕ್ತಿತ್ವವು ಮುಂದಿನ ಪೀಳಿಗೆಗೆ ಆದರ್ಶವಾಗಿ ನಿಲ್ಲುತ್ತದೆ ಮಾತ್ರವಲ್ಲ, ಹೀಗೂ ಒಂದು ವ್ಯಕ್ತಿತ್ವ ಇರಬಹುದೆ ಎನ್ನುವ ದಂತಕಥಾನಕ ಸೃಷ್ಟಿಯಾಗಲೂಬಹುದು' ಎನ್ನುವ ಎಂ.ಪಿ. ಪ್ರಕಾಶರ ಮಾತು ಅಮೋಘವಾದುದು.

ಕಸ್ತೂರಿಬಾ ಗಾಂಧಿ ರಾಷ್ಟ್ರೀಯ ಟ್ರಸ್ಟ್ ಸ್ಥಾಪನೆಯಾದಾಗ ಗಾಂಧೀಜಿ ಮೈಸೂರು ಪ್ರಾಂತ್ಯದ ಪ್ರತಿನಿಧಿಯಾಗಿ ಯಶೋಧರಾ ಅವರನ್ನು ಟ್ರಸ್ಟಿಯಾಗಿ ನೇಮಿಸುತ್ತಾರೆ. ಯಶೋಧರಾ ಅವರು ಆ ಹೊಣೆಗಾರಿಕೆಯನ್ನು ನಿರ್ವಹಿಸಬಲ್ಲರೆ ಎಂಬ ಸಂಶಯ ಮೂಡಿದಾಗ ಗಾಂಧೀಜಿ ಕೊಟ್ಟ ಉತ್ತರವಿದು: 'ಯಶೋಧರಾ ಬಹದ್ದೂರ್ ಹೆಣ್ಣು ಮಗಳು, ಅವರ ಸಾಮರ್ಥ್ಯದಲ್ಲಿ ನನಗೆ ಪೂರ್ಣ ವಿಶ್ವಾಸವಿದೆ, ಈ ಕಾರ್ಯನಿರ್ವಹಣೆಯನ್ನು ಅವರ ಜೀವ ಕೊಟ್ಟಾದರೂ ನಿಭಾಯಿಸಬಲ್ಲರು'–ಹೀಗೆಂದು ಗಾಂಧೀಜಿಯ ಹೇಳಿಕೆಯನ್ನು ಉದ್ಧರಿಸಿ ಹೆಮ್ಮೆಪಟ್ಟವರು ಶ್ರೀಮತಿ ನಾಗಮಣಿ ಎಸ್.ರಾವ್ ಅವರು. ಡಾ:ಸಿ.ವಿ.ಶೈಲಜಾ ಅವರು ಯಶೋಧರಾ ದಾಸಪ್ಪನವರ ಜೀವನ ಘಟ್ಟಗಳನ್ನು ವಿವರಿಸಿದ್ದಾರೆ.

ಈ ಸಂಸ್ಮರಣ ಗ್ರಂಥದ ಮೊದಲ ಭಾಗ ಯಶೋಧರಮ್ಮನವರ ಯಶೋಗಾಥೆಗೆ ಮೀಸಲಾಗಿದ್ದರೆ, ಎರಡನೆಯ ಭಾಗ ವಿವಿಧ ರೀತಿಯಲ್ಲಿ ನಾಡಿಗೆ ಹಾಗೂ ರಾಷ್ಟ್ರಕ್ಕೆ ಸೇವೆ ಸಲ್ಲಿಸಿರುವ ಕರ್ನಾಟಕದ ಹೆಸರಾಂತ ಮಹಿಳೆಯರ ಸಾಧಕಿಯರ ವ್ಯಕ್ತಿ ಚಿತ್ರಗಳ ಸಂಪುಟವಾಗಿದೆ. ಈ ಸಂಪುಟ ಬೃಹತ್ತಾಗಿ ಬೆಳೆದು ಕರ್ನಾಟಕದ ಎಲ್ಲ ಸೇವಾನಿರತ ಮಹಿಳೆಯರನ್ನೊಳಗೊಳ್ಳಬೇಕಿತ್ತೆಂಬುದು ಸಂಪಾದಕರ ಮಹಾತ್ವಾಕಾಂಕ್ಷೆ. ಆ ಆಕಾಂಕ್ಷೆ ಕೈಗೂಡದಿದ್ದದು ಅವರಿಗೆ ಅತೃಪ್ತಿಯುಂಟುಮಾಡಿದೆ, ದಾನ ಚಿಂತಾಮಣಿ ಅತ್ತಿಮಬ್ಬೆಯಿಂದ ಹಿಡಿದು ಗಮಕಿ ಶ್ರೀಮತಿ ಶಕುಂತಲಾ ಪಾಂಡುರಂಗರಾವ್‌ವರೆಗೆ ವ್ಯಕ್ತಿ ಚಿತ್ರಗಳು ಸೇರ್ಪಡೆಯಾಗಿರುವುದು ಸಾಮಾನ್ಯ ಸಂಗತಿಯಲ್ಲ.

ಯಶೋಧರಾ ತಾಯಿಯ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಸಂಸ್ಮರಣ ಗ್ರಂಥವನ್ನು ಸಿದ್ಧಪಡಿಸಬೇಕೆಂಬ ಭಾವನೆ ಮೊದಲು ಮೊಳೆತದ್ದು ರಾಷ್ಟ್ರದ ಸಚ್ಚಾರಿತ್ರ್ಯದ, ಸುಸಂಸ್ಕೃತ ನಾಯಕರಾದ ಎಂ.ವಿ. ರಾಜಶೇಖರನ್ ಅವರ ಮನಸ್ಸಿನಲ್ಲಿ. ಅವರು ಕೂಡಲೇ ಸರ್ಕಾರಕ್ಕೊಂದು ಪತ್ರ ಬರೆದು, ಯಶೋಧರಮ್ಮನವರು ದೇಶಕ್ಕೆ ಸಲ್ಲಿಸಿರುವ ಸೇವೆಯನ್ನು ಸಂಸ್ಮರಣ ಗ್ರಂಥದ ಮೂಲಕ ನೆನೆಯುವುದು ಸುಸಂಸ್ಕೃತರ ಲಕ್ಷಣವೆಂದು ಸ್ಪಷ್ಟಪಡಿಸುತ್ತಾರೆ. ಇಷ್ಟು ದಿನಗಳ ವಿಳಂಬಕ್ಕೆ ಯಾರು ಕಾರಣವೆಂಬ ಶೋಧನೆ ಅನವಶ್ಯ. ಕೊನೆಗೂ ಒಂದು ಗ್ರಂಥ ಪ್ರಕಟವಾಗುತ್ತದೆಯಲ್ಲ ಎಂದು ಕನ್ನಡಿಗರು ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಎಂ. ವಿ. ರಾಜಶೇಖರನ್ ಅವರ ಆಶಯಕ್ಕೆ ರೂಪಕೊಟ್ಟು ಉನ್ನತಮಟ್ಟದ ಸಮಿತಿ ರಚಿಸಿ, ಹಣಕಾಸು ಸೌಲಭ್ಯ ಕೊಟ್ಟ ಮುಖ್ಯಮಂತ್ರಿಗಳಾಗಿದ್ದ ಎನ್. ಧರ್ಮಸಿಂಗ್, ಹೆಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಪ್ರಸ್ತುತ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾಗಿದ್ದ ಹೆಚ್. ಕೆ. ಕುಮಾರಸ್ವಾಮಿ, ಸಿ. ಎಂ. ನರೇಂದ್ರಸ್ವಾಮಿ ಹಾಗೂ ಸಿ. ಸಿ. ಪಾಟೀಲ್ ಈ ಗ್ರಂಥ ಹೊರಬರಲು ಕಾರಣಕರ್ತರಾಗಿದ್ದಾರೆ.

ಬೌದ್ಧಿಕಸಾಹಸಿಗಳೂ, ಸೃಜನಶೀಲ ಮೇಧಾವಿಗಳೂ, ಕ್ರಿಯಾಶೀಲರೂ ಆದ ಡಾ: ಕೆ.ಆರ್.ಕಮಲೇಶ್ ಅವರು ಅಭಿನಂದನಾ ಹಾಗೂ ಸಂಸ್ಮರಣ ಗ್ರಂಥಗಳ ಸಿದ್ಧತೆಯಲ್ಲಿ ಸಿದ್ಧಹಸ್ತರು. ಈಗಾಗಲೇ ಹತ್ತಾರು ಗ್ರಂಥಗಳನ್ನು ವಿದ್ವಾಂಸರು ಮೆಚ್ಚುವಂತೆ ಸಂಪಾದಿಸಿರುವ ಅಪೂರ್ವಾನುಭವ ಸಂಪತ್ತುಳ್ಳವರು ಅವರು. ಈ ವರ್ಗದ ಸಾಹಿತ್ಯಕ್ಕೆ ಅವರು ಸಲ್ಲಿಸಿರುವ ಸೇವೆ ಅನುಪಮವಾದದ್ದು. ಸರ್ಕಾರದ ನೌಕರಿಯಲ್ಲಿರಲಾಗಿ ಯಾರೂ ಅವರ ಸಾಮರ್ಥ್ಯವನ್ನು ಗಮನಿಸುತ್ತಿಲ್ಲ.

ಸುಪ್ರಸಿದ್ಧ ನಾಟಕಕಾರರಾದ ಪರ್ವತವಾಣಿಯವರ ಸೊಸೆಯರೂ, ಇಪ್ಪತ್ತು ಕಾದಂಬರಿಗಳನ್ನು ಹಲವಾರು ನಾಟಕಗಳನ್ನು ರಚಿಸಿರುವವರೂ, ಕರ್ನಾಟಕ ಲೇಖಕಿಯರ ಸಂಘದ ಪ್ರಧಾನ ಕಾರ್ಯದರ್ಶಿಗಳೂ ಆಗಿದ್ದ ಶ್ರೀಮತಿ. ಕೆ.ಎಂ. ವಿಜಯಲಕ್ಷ್ಮಿಯವರ ಪಾದರಸ ಸದೃಶ ಚಟುಲಗತಿಯ ಕ್ರಿಯಾಶೀಲತೆಯೂ, ಮತಿಸಂಪತ್ಸಮೃದ್ಧದಿಂದ ಕೂಡಿದ ಅನುಭವವೈಶಾಲ್ಯವೂ ಈ ಸಂಸ್ಮರಣ ಕೃತಿ ಪೂರ್ಣಾಕಾರದಲ್ಲಿ ಹೊರಬರಲು ಸಾಧ್ಯವಾಗಿದೆ. ಐ.ಎ.ಎಸ್. ಅಧಿಕಾರಿಗಳಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಇಂದಿನ ಪ್ರಧಾನ ಕಾರ್ಯದರ್ಶಿಗಳಾದ ರಮೇಶ್ ಬಿ. ಝಳಕಿ, ಪ್ರಸ್ತುತ ನಿರ್ದೇಶಕರಾದ ಎಂ.ಇ. ಶಿವಲಿಂಗಮೂರ್ತಿ ಹಾಗೂ ಹಿಂದಿನ ಇಲಾಖೆಯ ಆಯುಕ್ತಕರಾದ ಸಿ.ಆರ್. ಚಿಕ್ಕಮಠ ಅವರ ಸಹಾಯ ಅಭಿನಂದನೆಗೆ ಅರ್ಹವಾದುದು. ಮಾಜಿ ಮುಖ್ಯ ಮಂತ್ರಿ ಧರ್ಮಸಿಂಗ್ ಅವರ ಆಪ್ತ ಕಾರ್ಯದರ್ಶಿ ಶ್ರೀ ಕೆ.ಎಲ್. ಹನುಮಂತರಾವ್ ಅವರ ನೆರವು ಶ್ಲಾಘನೀಯ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಆಪ್ತಕಾರ್ಯದರ್ಶಿಯಾದ ಕೆ.ವಿ. ವಿರೂಪಾಕ್ಷಪ್ಪ ಮತ್ತು ಇಲಾಖೆಯ ಯೋಜನಾ ನಿರ್ದೇಶಕಿಯರಾದ ಶ್ರೀಮತಿ ಎಂ.ಎಂ. ಬಿಂದು ಅವರ ನೆರವು ಪ್ರಶಂಸನೀಯವೆಂಬುದನ್ನು ಮರೆಯುವಂತಿಲ್ಲ.

ಯುವ ಸಂಶೋಧಕರಾದ ಡಾ. ಎಸ್.ಎಂ.ಗಂಗಾಧರಯ್ಯ ಹಾಗೂ ಡಾ. ಸಿ.ವಿ.ಶೈಲಜಾ ಅವರುಗಳು ಇಲ್ಲಿನ ಅನೇಕ ಲೇಖನಗಳ ನಿರೂಪಣೆ ಮೂಲಕ ಸಂಪುಟಕ್ಕೆ ಸಹಾಯ ಮಾಡಿದ್ದಾರೆ.

ಕರ್ನಾಟಕದ ಜ್ಯೇಷ್ಠವರಿಷ್ಠ ಮುತ್ಸದ್ದಿಗಳೂ, ಮಾಜಿ ಕೇಂದ್ರ ಸಚಿವರೂ, ಸದಾ ಪರಹಿತನಿರತರೂ ಆದ ಸಿ.ಕೆ. ಜಾಫರ್ ಷರೀಫ್ ಅವರು ಈ ಗ್ರಂಥದ ಮೌಲ್ಯವನ್ನು ಹೆಚ್ಚಿಸಲು ಅನೇಕ ರೀತಿಯಲ್ಲಿ ಸಹಾಯ ಮಾಡಿದ್ದಾರೆ. ಯಶೋಧರಮ್ಮನವರ ಸೊಸೆ ಶ್ರೀಮತಿ ಸರೋಜ ತುಲಸಿದಾಸಪ್ಪನವರ ಅವಿರತ ಫಲ ಶ್ರಮಗಳನ್ನು ಯಾರೂ ಮರೆಯುವಂತಿಲ್ಲ. ನಾಡಿನ ಅಪೂರ್ವ ಸುಸಭ್ಯ ವ್ಯಕ್ತಿ ಎಂ.ವಿ. ರಾಜಶೇಖರನ್ ಅವರ ಕಾತರತೆಯೇ ಈ ಗ್ರಂಥದ ಯಶಸ್ಸಿಗೆ ಕಾರಣವೆಂಬುದು ಎಲ್ಲರಿಗೂ ಗೊತ್ತು. ಈ ಎಲ್ಲ ಮಹನೀಯರಿಗೂ ಹೃತ್ಪೂರ್ವಕವಾದ ಅಭಿನಂದನೆಗಳು. ಪುಸ್ತಕದ ಕರಡು ತಿದ್ದಿದ ಲೇಖಕ ಜೆ. ಎನ್. ಶಾಮರಾವ್ ಹಾಗೂ ಅಶೋಕಬಾಬು, ಛಾಯಾಚಿತ್ರ ಒದಗಿಸಿದ ಎಂ.ಕೆ. ಜಯಶಂಕರ್, ಗ್ರಂಥ ಅಚ್ಚುಕಟ್ಟಾಗಿ

ಹೊರಬರಲು ಕಾರಣಕರ್ತರಾದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಾದ ಎಂ. ರವಿಶಂಕರ್, ಜಂಟಿ ನಿರ್ದೇಶಕರಾದ ಕೆ.ಎಂ. ಭುವನೇಶ್, ಮತ್ತು ಸಹಾಯಕ ನಿರ್ದೇಶಕರಾದ ಶ್ರೀಮತಿ ಹೆಚ್. ಜ್ಯೋತಿ ಹಾಗೂ ಅವರ ಸಿಬ್ಬಂದಿಗಳಿಗೆ ಅಭಿನಂದನೆಗಳು.

ಗಾಂಧಿ ಪ್ರಣೀತ ಸರ್ವಸಮಾನತಾ ಸಿದ್ಧಾಂತ, ದಲಿತೋದ್ಧಾರ, ಸ್ತ್ರೀಸಬಲೀಕರಣಗಳ ಮೂಲಕ ಕರ್ನಾಟಕ ಇತಿಹಾಸ ನಿರ್ಮಾಣ ಕಾರ್ಯದಲ್ಲಿ ತ್ಯಾಗಮನೋಭಾವದಿಂದ ಸಾಕಷ್ಟು ಶ್ರಮಿಸಿರುವ ಶ್ರೀಮತಿ ಯಶೋಧರಾ ತಾಯಿಯವರ ಪ್ರತಿಮೆಯೊಂದನ್ನು ಸರ್ಕಾರ ನಿರ್ಮಿಸಬಾರದೆ? ಪ್ರತಿಮಾ ಸ್ಥಾಪನೆ ಪುರುಷರಿಗೆ ಮಾತ್ರ ಮುಡಿಪೆ?

– ದೇಜಗೌ

31.01.2012
ವಿಶ್ವಚೇತನ, ಮೈಸೂರು.

ಸಂದೇಶಗಳು

ಘನತೆವೆತ್ತ ರಾಜ್ಯಪಾಲರು

ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳು

ಕರ್ನಾಟಕ ವಿಧಾನ ಸಭಾಧ್ಯಕ್ಷರು

ಮಾನ್ಯ ಮುಖ್ಯಮಂತ್ರಿಗಳು

ವಿಧಾನ ಪರಿಷತ್ತು
ವಿರೋಧ ಪಕ್ಷದ ನಾಯಕರು

ವಿಧಾನ ಸಭೆಯ
ವಿರೋಧ ಪಕ್ಷದ ನಾಯಕರು

ಮಾಜಿ ಮುಖ್ಯಮಂತ್ರಿಗಳಾದ
ಹೆಚ್.ಡಿ. ಕುಮಾರಸ್ವಾಮಿ

ಮಾಜಿ ಮುಖ್ಯಮಂತ್ರಿಗಳಾದ
ಬಿ.ಎಸ್. ಯಡಿಯೂರಪ್ಪ

GOVERNOR
KARNATAKA

RAJ BHAVAN
BANGALORE

No. GS 02 MSG 2012
January 13th 2012

MESSAGE

I am extremely happy to learn that Government of Karnataka is celebrating Birth Centenary of late Smt. Yashodharamma Dasappa, who was one of the leading freedom fighters, an architect a of modern Karnataka State and a pioneering social reformer.

Smt. Yashodharamma, a disciple of Gandhiji and ardent follower as well as practitioner of Gandhian Philosophy, dedicated her life to upliftment of downtrodden, particularly women and children. Her campaign and commitment to eradicate drinking of alcohol from the society and efforts to strengthen women by various processes are well known. Her contributions are not only significant to the Karnataka State but to the whole nation. I wish that Commemoration book on Smt. Yashodharamma will inspire the people of the nation, particularly youths of the country.

(H.R. BHARDWAJ)

ಸಂದೇಶ

ಡಿ.ಹೆಚ್.ಶಂಕರಮೂರ್ತಿ
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು
ವಿಧಾನಸೌಧ, ಬೆಂಗಳೂರು

ದಿನಾಂಕ: 01.02.2012

ಸಂದೇಶ

ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಸ್ವಾತಂತ್ರ್ಯ ಹೋರಾಟಗಾರರಾಗಿ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ರಚನಾತ್ಮಕ ಕೆಲಸಗಳ ಪ್ರವರ್ತಕರಾಗಿ ಶೋಷಿತ ಸಮಾಜದ ಚಿಂತಕರಾಗಿ ಕರ್ನಾಟಕದಲ್ಲಿ ಗಣನೀಯ ಸ್ಥಾನ ಪಡೆದ ಪ್ರಮುಖ ಮಹಿಳೆಯಾಗಿರುತ್ತಾರೆ. ಶ್ರೀಯುತರುಗಳಾದ ದಿವಂಗತ ಎಸ್. ಆರ್.ಕಂಠಿ ಹಾಗೂ ಎಸ್. ನಿಜಲಿಂಗಪ್ಪರವರುಗಳ ನೇತೃತ್ವದ ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವರಾಗಿ ಕಾರ್ಯನಿರ್ವಹಿಸಿದ ಕ್ಯಾಬಿನೆಟ್ ದರ್ಜೆಯ ಸಚಿವೆಯಾಗಿದ್ದ ಪ್ರಥಮ ಮಹಿಳೆಯಾಗಿರುತ್ತಾರೆ. ರಾಷ್ಟ್ರದ ಇತಿಹಾಸದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯನ್ನು ಪ್ರಾರಂಭಿಸಲು ಪ್ರೇರಕ ಶಕ್ತಿಯಾಗಿದ್ದರು ಎಂಬುದು ಕಟುಸತ್ಯ. ಅಷ್ಟೇ ಅಲ್ಲದೆ ಮದ್ಯಪಾನ ಸಡಲಿಕೆಯನ್ನು ಪ್ರತಿಭಟಿಸಿ ತಲೆದಂಡವನ್ನು ತೆತ್ತು ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ಎತ್ತಿಹಿಡಿದ ಏಕೈಕ ಸಚಿವರೆಂದು ಇತಿಹಾಸ ದಾಖಲಿಸಿರುತ್ತಾರೆ. ಇವರ ಸ್ಮರಣಾರ್ಥ ಇಂದಿನ ಸರ್ಕಾರವು ಶತಮಾನೋತ್ಸವವನ್ನು ಆಚರಿಸಲು ನಿರ್ಧರಿಸಿರುವುದು ಶ್ಲಾಘನೀಯವಾಗಿದ್ದು ನನಗೆ ಸಂತಸವನ್ನು ತಂದಿದೆ. ಇದರಿಂದಾಗಿ ಇಂದಿನ ಯುವಪೀಳಿಗೆ ಶ್ರೀಮತಿ ಯಶೋಧರಮ್ಮರವರ ಆದರ್ಶಕ್ಕೆ ಪಾತ್ರರಾಗುವಂತೆ ಕರೆನೀಡಿದಂತಾಗಿದೆ. ಈ ಕ್ರಿಯೆ ಇಡೀ ಸಮಾಜಕ್ಕೇ ಪ್ರೇರಣೆಯಾಗಲೆಂದು ಮನಸಾ ಹಾರೈಸುತ್ತೇನೆ.

(ಡಿ.ಹೆಚ್. ಶಂಕರಮೂರ್ತಿ)

ಸಂದೇಶ

ಕೆ.ಜಿ.ಬೋಪಯ್ಯ
ಸಭಾಧ್ಯಕ್ಷರು
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು

ದಿನಾಂಕ: 03-02-2012

ಸಂದೇಶ

ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವೆಯಾಗಿದ್ದ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ಜನ್ಮಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ **"ಜೀವನ ಮತ್ತು ಸಾಧನೆ"** ಹಾಗೂ **"ಕರ್ನಾಟಕದ ಸಾಧಕಿಯರು"** ಎಂಬ ಗ್ರಂಥಗಳನ್ನು ಹೊರತರುತ್ತಿರುವುದು ಅತ್ಯಂತ ಶ್ಲಾಘನೀಯವಾದುದು.

ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಸ್ವಾತಂತ್ರ್ಯ ಹೋರಾಟಗಾರ್ತಿ. 1905ನೇ ಇಸವಿಯಲ್ಲಿ ಜನಿಸಿದ್ದ ಅವರು ಮಹಿಳೆಯರು ಗೃಹದಿಂದ ಹೊರಬರುವ ಅಂದಿನ ದಿನಗಳಲ್ಲಿಯೇ ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಂಡಿದ್ದು ಅತ್ಯಂತ ಧೈರ್ಯದ ವಿಚಾರ. ಅಂದು ರಾಜ್ಯದಲ್ಲಿ ಹೆಚ್ಚು ಪ್ರಸಿದ್ಧಿ ಪಡೆದ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದಲ್ಲದೇ 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಹೋರಾಟವನ್ನು ಸಂಘಟಿಸಿದ್ದರು. ಮಹಾತ್ಮ ಗಾಂಧೀಜಿಯವರು ಸ್ಥಾಪಿಸಿದ್ದ ಕಸ್ತೂರಬಾ ಟ್ರಸ್ಟ್‌ನ ಕಾರ್ಯಕರ್ತೆಯಾಗಿದ್ದ ಅವರು ಅಂದಿನ ಮೈಸೂರು ರಾಜ್ಯಕ್ಕೆ ಮಹಾತ್ಮ ಗಾಂಧೀಜಿ ಅವರ ಸಹಾಯಕಿಯಾಗಿ ನೇಮಕಗೊಂಡಿದ್ದುದು ಅವರ ಕರ್ತೃತ್ವ ಶಕ್ತಿಗೆ ಸಾಕ್ಷಿಯಾಗಿದೆ. ಸೇವಾಗ್ರಾಮ ಹಾಗೂ ವಾರ್ಧಾದಲ್ಲಿ ಮಹಾತ್ಮ ಗಾಂಧೀಜಿ ಅವರ ಅನುಯಾಯಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಇದರಿಂದ ಪ್ರೇರಿತರಾಗಿ ಅನಾಥ ಹೆಣ್ಣುಮಕ್ಕಳು ಶಿಕ್ಷಣಕ್ಕಾಗಿ ಕಸ್ತೂರಬಾ ಕನ್ಯಾ ವಿದ್ಯಾಲಯವನ್ನು ಸ್ಥಾಪಿಸಿದ್ದರು. 1939ರಲ್ಲಿ ಅಂದಿನ ಮೈಸೂರು ವಿಧಾನ ಪರಿಷತ್ತಿನ (ನ್ಯಾಯ ವಿಧಾಯಕ ಸಭೆ) ಸದಸ್ಯರಾಗಿದ್ದು ಪುನಃ ಮತ್ತೊಂದು ಅವಧಿಗೂ ಚುನಾಯಿತರಾಗಿದ್ದರು. ಮೈಸೂರು ನಗರ ಸಭೆಯ ಸದಸ್ಯರಾಗಿ ಕೆಲವು ಕಾಲ ಕಾರ್ಯನಿರ್ವಹಿಸಿದ್ದರು. ಸ್ವಾತಂತ್ರ್ಯ ಪೂರ್ವ ಹಾಗೂ ನಂತರದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸದಸ್ಯರಾಗಿದ್ದ ಶ್ರೀಮತಿಯವರು 1950ರಲ್ಲಿ ಮೊಟ್ಟಮೊದಲ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. 3ನೇ ವಿಧಾನ ಸಭೆಗೆ ಹಾಸನ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಮತಿ ಯಶೋಧರಮ್ಮ ಅವರು ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿಯೂ ನೇಮಕಗೊಂಡಿದ್ದರು. ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿವಹಿಸಿದ್ದ ಅವರು ತಮ್ಮ ಹೆಚ್ಚಿನ ವೇಳೆಯನ್ನು ಮಹಿಳೆಯರ ಹಾಗೂ ದೀನ ದಲಿತರ ಸೇವೆಗೆ ಮುಡುಪಾಗಿಟ್ಟಿದ್ದರು. ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿ, ರಾಜ್ಯ ಬುಡಕಟ್ಟು

ಅಭಿವೃದ್ಧಿ ಸಲಹಾ ಸಮಿತಿ ಹಾಗೂ ಗಾಂಧಿ ಸ್ಮಾರಕ ನಿಧಿಯ ಸದಸ್ಯರಾಗಿ ಹಾಸನ ಜಿಲ್ಲೆಯ ಭಾರತಸೇವಕ ಸಮಾಜ ಹಾಗೂ ಅಖಿಲ ಭಾರತ ಬರ ಪರಿಹಾರ ಸಮಿತಿಯ ಸಂಚಾಲಕರಾಗಿ ಅನೇಕ ಸೇವಾ ಕಾರ್ಯಗಳನ್ನು ಮಾಡಿದ್ದ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ಯಶೋಗಾಥೆ ಚರಿತ್ರಾರ್ಹವಾಗಿ ದಾಖಲಾಗಿದೆ.

ಅಂದಿನ ಕಾಲದಲ್ಲಿಯೇ ಅಸ್ಪೃಶ್ಯರ ಪರವಾಗಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಜನರ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣವೇ ಮುಖ್ಯ ಸಾಧನ ಎಂಬ ಉದ್ದೇಶ ಹೊಂದಿದ್ದ ಶ್ರೀಮತಿ ಯಶೋಧರಮ್ಮ ಅವರು ಉಚಿತ ಶಿಕ್ಷಣ ಹಾಗೂ ವಿದ್ಯಾರ್ಥಿ ವೇತನದ ವ್ಯವಸ್ಥೆಯನ್ನು ಜಾರಿಗೆ ತಂದ ಕೀರ್ತಿಗೆ ಭಾಜನರಾಗಿದ್ದರು. ಹಾಲಿ ದೇಶದಲ್ಲಿ ಮಹಿಳಾ ಸಬಲೀಕರಣದ ಬಗ್ಗೆ ಚರ್ಚಿಸಲಾಗುತ್ತಿದ್ದರೇ ಶ್ರೀಮತಿ ಯಶೋಧರಮ್ಮ ಅವರು ಗತಕಾಲದಲ್ಲಿಯೇ ಆ ಬಗ್ಗೆ ಕಾರ್ಯೋನ್ಮುಖರಾಗಿದ್ದರು ಎನ್ನುವುದು ಅವರು ಹೊಂದಿದ್ದ ಶ್ರೇಷ್ಠ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಾಗಿದೆ.

ಸಮಾಜದ ಅದರಲ್ಲೂ ಮಹಿಳೆಯರ, ದೀನದಲಿತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಪ್ರಾಮಾಣಿಕ ವ್ಯಕ್ತಿತ್ವದ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಈ ನಾಡಿಗೆ ಸಲ್ಲಿಸಿರುವ ಸೇವೆ ಇಂದಿನ ಹಾಗೂ ಮುಂದಿನ ಪೀಳಿಗೆಗೆ ಮಾದರಿಯಾಗಿದ್ದು, ಈ ಸವಿ ನೆನಪಿನಲ್ಲಿ ಜನ್ಮಶತಮಾನೋತ್ಸವವನ್ನು ಆಚರಿಸುತ್ತಿರುವುದು ಅನ್ವರ್ಥವಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಈ ರಚನಾತ್ಮಕ ಕಾರ್ಯಕ್ಕೆ ಯಶಸ್ಸು ಉಂಟಾಗಲೆಂದು ಹಾರೈಸುತ್ತೇನೆ.

ಕೆ.ಜಿ.ಬೋಪಯ್ಯ

ಸಭಾಧ್ಯಕ್ಷರು

ಡಿ.ವಿ. ಸದಾನಂದ ಗೌಡ
ಮುಖ್ಯಮಂತ್ರಿ
ವಿಧಾನಸೌಧ, ಬೆಂಗಳೂರು

ದಿನಾಂಕ: 19/1/12

ಸಂದೇಶ

ಸ್ವಾತಂತ್ರ್ಯ ಹೋರಾಟಗಾರ್ತಿ, ಮಹಾತ್ಮಗಾಂಧಿಯವರ ಅನುಯಾಯಿ, ಕರ್ನಾಟಕದ ಮೊದಲ ಮಹಿಳಾ ಸಚಿವರು ಆಗಿದ್ದ ಶ್ರೀಮತಿ ಯಶೋಧರಮ್ಮ ದಾಸಪ್ಪನವರ ಜನ್ಮ ಶತಮಾನೋತ್ಸವವನ್ನು ಕರ್ನಾಟಕ ಸರ್ಕಾರದ ವತಿಯಿಂದ ಆಚರಿಸುತ್ತಿರುವುದು ಸಂತಸದ ಸಂಗತಿ.

ಪಂಡಿತ್ ಜವಹರಲಾಲ್ ನೆಹರು ಅವರ ಸಂಪುಟದಲ್ಲಿ ರೈಲ್ವೆ ಸಚಿವರಾಗಿದ್ದ ಹೆಚ್.ಸಿ.ದಾಸಪ್ಪನವರ ಪತ್ನಿಯಾಗಿದ್ದ ಶ್ರೀಮತಿ ಯಶೋಧರಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, 1938ರಲ್ಲಿ ಜರುಗಿದ ಶಿವಪುರ ಧ್ವಜ ಸತ್ಯಾಗ್ರಹ ಮತ್ತು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. 1950ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷರಾಗಿ, 1962ರಲ್ಲಿ ಎಸ್.ಆರ್. ಕಂಠಿ ಹಾಗೂ ಎಸ್. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಖಾತೆ ಸಚಿವರಾಗಿ ಕೆಲಸ ನಿರ್ವಹಿಸಿದ್ದರು. ವಿಶೇಷವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಹಾಗೂ ಅದಕ್ಕೆ ಪೂರಕವಾಗಿ ವಿದ್ಯಾರ್ಥಿ ವೇತನದ ವ್ಯವಸ್ಥೆಯನ್ನು ಜಾರಿಗೆ ತಂದ ಕೀರ್ತಿ ಯಶೋಧರಮ್ಮ ಅವರದು.

ಮೈಸೂರು ಸಂಸ್ಥಾನದಲ್ಲಿ 'ಮಹಿಳಾ ಸಬಲೀಕರಣ' ಯೋಜನೆಯನ್ನು ಮೊಟ್ಟ ಮೊದಲ ಬಾರಿಗೆ ಜಾರಿಗೆ ತಂದ ಕೀರ್ತಿ ಶ್ರೀಮತಿ ಯಶೋಧರಮ್ಮ ದಾಸಪ್ಪನವರದು. 1966ರಲ್ಲಿ ಅಂದಿನ ಸರ್ಕಾರ 'ಪಾನ ನಿರೋಧ'ವನ್ನು ಸಡಿಲಗೊಳಿಸಿದ ನೀತಿಯನ್ನು ಪ್ರತಿಭಟಿಸಿ ಸಚಿವೆ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಅಂದಿನಿಂದ ಮಹಾತ್ಮ ಗಾಂಧೀಜಿಯವರು ಬೋಧಿಸಿದ 'ರಚನಾತ್ಮಕ ರಾಜಕಾರಣ'ಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ತಮ್ಮ ಬದುಕಿನುದ್ದಕ್ಕೂ ಅಸಹಾಯಕ ಮಹಿಳೆಯರ ಬಗ್ಗೆ ವಿಶೇಷ ಕಾಳಜಿಯಿಂದ ಕಸ್ತೂರಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಸ್ಥಾಪಿಸಿ ಮಹಿಳೆಯರಿಗೆ ಮತ್ತು ಗ್ರಾಮೀಣ ವಾಸಿಗಳಿಗೆ ಗಾಂಧೀಜಿ ಬೋಧಿಸಿದ ಜೀವನ ಶಿಕ್ಷಣ ಕೊಡುತ್ತಾ ಬಂದರು. 1980ರಲ್ಲಿ ಶ್ರೀಮತಿ ಯಶೋಧರಮ್ಮನವರು ನಿಧನರಾದರು.

ಸಂದೇಶ

ಅವರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ **'ಜೀವನ ಮತ್ತು ಸಾಧನೆ'** ಹಾಗೂ **'ಕರ್ನಾಟಕದ ಸಾಧಕಿಯರು'** ಎಂಬ ಆಕರ ಗ್ರಂಥ ತರುತ್ತಿರುವುದು ಸ್ವಾಗತಾರ್ಹ ವಿಚಾರ. ಕರ್ನಾಟಕದಲ್ಲಿ ಮಹಿಳೆಯರ ಅಭಿವೃದ್ಧಿಗೆ ದುಡಿದ ಅನೇಕ ಮಹಿಳಾ ಸಾಧಕಿಯರ ಪರಿಚಯ ಮಾಡುವ ಈ ಗ್ರಂಥ ಹತ್ತನೆಯ ಶತಮಾನದ ದಾನಚಿಂತಾಮಣಿ ಅತ್ತಿಮಬ್ಬೆಯಿಂದ ಹಿಡಿದು ಪರಿಸರ ಪ್ರೇಮಿ ಸಾಲುಮರದ ತಿಮ್ಮಕ್ಕನವರೆಗೆ ಕರ್ನಾಟಕದ ಮಹಿಳಾ ಕ್ಷೇತ್ರದ ಬಹುಮಟ್ಟಿನ ಸಾಧಕಿಯರನ್ನು ಓದುಗರಿಗೆ ಪರಿಚಯಿಸುತ್ತಿದೆ.

ಇಂತಹ ಅನುಕರಣೀಯ ಕಾರ್ಯ ಮಾಡುತ್ತಿರುವ ಮಹಿಳಾ ಮತ್ತು ಮಕ್ಕಳ ಇಲಾಖೆಗೆ ನನ್ನ ಅಭಿನಂದನೆಗಳು. ಜನ್ಮ ಶತಮಾನೋತ್ಸವ ಕಾರ್ಯಕ್ರಮ ಯಶಸ್ವಿಯಾಗಲಿ ಹಾಗೂ ಗ್ರಂಥಗಳು ಅತ್ಯುತ್ತಮವಾಗಿ ಮೂಡಿ ಬಂದು ಓದುಗರ ಮೆಚ್ಚುಗೆಯನ್ನು ಪಡೆಯಲಿ ಎಂದು ಆಶಿಸುತ್ತೇನೆ.

(ಡಿ.ವಿ. ಸದಾನಂದ ಗೌಡ)

ಮೋಟಮ್ಮ
ವಿರೋಧ ಪಕ್ಷದ ನಾಯಕರು
ವಿಧಾನ ಪರಿಷತ್ತು
ವಿಧಾನಸೌಧ, ಬೆಂಗಳೂರು

ದಿನಾಂಕ: 01–02–2012.

ಸಂದೇಶ

ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಸ್ವಾತಂತ್ರ್ಯ ಹೋರಾಟಗಾರರಾಗಿ, ಮಹಾತ್ಮ ಗಾಂಧೀಜಿಯವರೊಂದಿಗೆ ರಚನಾತ್ಮಕ ಕೆಲಸಗಳ ಪ್ರವರ್ತಕರಾಗಿ ಶೋಷಿತ ಸಮಾಜದ ಚಿಂತಕರಾಗಿ ಕರ್ನಾಟಕದಲ್ಲಿ ಗಣನೀಯ ಸ್ಥಾನವನ್ನು ಪಡೆದಿರುತ್ತಾರೆ. ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಎಸ್.ಆರ್.ಕಂಠಿ ಹಾಗೂ ಎಸ್. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವರಾಗಿ ಕೆಲಸ ಮಾಡಿದ್ದಾರೆ. ಇಡೀ ರಾಷ್ಟ್ರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪ್ರಾರಂಭವಾಗಲು ಅವರು ಪ್ರೇರಕ ಶಕ್ತಿಯಾಗಿದ್ದರು. ಮದ್ಯಪಾನ ಸಡಿಲಿಕೆಯನ್ನು ವಿರೋಧಿಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಏಕೈಕ ಸಚಿವರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇವರ ಜನ್ಮಶತಮಾನೋತ್ಸವವನ್ನು ಸರ್ಕಾರದ ವತಿಯಿಂದ ಆಚರಿಸುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸುತ್ತೇನೆ. ಶ್ರೀಮತಿ ಯಶೋಧರಮ್ಮನವರ ಆದರ್ಶ ನಮ್ಮ ಸಮಾಜಕ್ಕೆ ಸದಾ ಪ್ರೇರಣೆಯಾಗಿದ್ದು, ಇವರ ಜನ್ಮಶತಮಾನೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ ತಾವು ಇಲಾಖಾ ವತಿಯಿಂದ **"ಯಶೋಧರ ಗಾಥೆ ಮತ್ತು ಕರ್ನಾಟಕದ ಸಾಧಕಿಯರು"** ಎಂಬ ಆಕರ ಗ್ರಂಥಗಳನ್ನು ಹೊರತರುತ್ತಿರುವುದಕ್ಕೆ ಶುಭ ಹಾರೈಸುತ್ತೇನೆ.

(ಮೋಟಮ್ಮ)

ಸಂದೇಶ

ಸಿದ್ದರಾಮಯ್ಯ
ವಿರೋಧ ಪಕ್ಷದ ನಾಯಕರು
ಕರ್ನಾಟಕ ವಿಧಾನಸಭೆ
ವಿಧಾನಸೌಧ, ಬೆಂಗಳೂರು

ವಿರೋಧ ಪಕ್ಷದ ನಾಯಕರು ವಿಧಾನಸಭೆ * ಕರ್ನಾಟಕ *

ದಿನಾಂಕ: 30.12.2011

ಸಂದೇಶ

ಸ್ವಾತಂತ್ರ್ಯ ಹೋರಾಟಗಾರರು, ಕರ್ನಾಟಕದ ಪ್ರಥಮ ಮಹಿಳಾ ಸಚಿವರು, ಶೋಷಿತ ವರ್ಗದ ಧ್ವನಿಯಾಗಿದ್ದ ಶ್ರೀಮತಿ ಯಶೋಧರಮ್ಮ ದಾಸಪ್ಪನವರ ಜನ್ಮಶತಮಾನೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಅವರ "ಜೀವನ ಮತ್ತು ಸಾಧನೆ" ಎಂಬ ಗ್ರಂಥವನ್ನು ಹೊರತರುತ್ತಿರುವ ವಿಷಯ ತಿಳಿದು ಸಂತಸವಾಯಿತು. ಮಹಾತ್ಮ ಗಾಂಧೀಜಿಯವರ ಅನುಯಾಯಿಯಾದ ಇವರು ಮಹಿಳಾ ಸಬಲೀಕರಣ ಹಾಗೂ ಗ್ರಾಮೀಣ ಜನತೆಯ ಏಳಿಗೆಗಾಗಿ ಶ್ರಮಿಸುತ್ತಿದ್ದರು. ಇವರು ಸಮಾಜ ಕಲ್ಯಾಣ ಸಚಿವರಾಗಿದ್ದ ಅವಧಿಯಲ್ಲಿ ಅನೇಕ ಜನಪ್ರಿಯ ಕಾರ್ಯಕ್ರಮಗಳನ್ನು ಜಾರಿಗೆ ತಂದಿರುತ್ತಾರೆ. ಇವರ ಜೀವನ ಮತ್ತು ಸಾಧನೆಯನ್ನು ಇಂದಿನ ಜನತೆಗೆ ಪರಿಚಯ ಮಾಡುತ್ತಿರುವ ಕಾರ್ಯ ಸ್ತುತ್ಯರ್ಹವಾದುದು.

ಕರ್ನಾಟಕದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಮಹಿಳಾ ಸಾಧಕಿಯರ ಕುರಿತಂತೆ **"ಯಶೋಧರ ಗಾಥೆ ಮತ್ತು ಕರ್ನಾಟಕದ ಸಾಧಕಿಯರು"** ಎಂಬ ಗ್ರಂಥದ ಮೂಲಕ ಪರಿಚಯ ಮಾಡಿಸುವ ಪ್ರಯತ್ನ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

(ಸಿದ್ದರಾಮಯ್ಯ)

ಸಂದೇಶ

ಹೆಚ್.ಡಿ.ಕುಮಾರಸ್ವಾಮಿ
ಮಾಜಿ ಮುಖ್ಯಮಂತ್ರಿ ಹಾಗೂ
ಲೋಕಸಭಾ ಸದಸ್ಯರು
ಬೆಂಗಳೂರು ಗ್ರಾಮಾಂತರ
ಬೆಂಗಳೂರು

ದಿ. 02.02.2012

ಶುಭ ಸಂದೇಶ

ಶ್ರೀಮತಿ ಯಶೋಧರಮ್ಮ ದಾಸಪ್ಪರವರು ಎಸ್.ಆರ್. ಕಂಠಿ ಹಾಗೂ ಎಸ್. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವರಾಗಿ ಕೆಲಸ ಮಾಡಿರುತ್ತಾರೆ. ಶ್ರೀಮತಿ ಯಶೋಧರಮ್ಮ ದಾಸಪ್ಪರವರು ಕರ್ನಾಟಕದ ಮೊದಲ ಮಹಿಳಾ ಕ್ಯಾಬಿನೆಟ್ ದರ್ಜೆ ಸಚಿವರಾಗಿದ್ದರು. ಇಡೀ ರಾಷ್ಟ್ರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪ್ರಾರಂಭವಾಗಲು ಅವರ ಪ್ರೇರಕ ಶಕ್ತಿಯಾಗಿದ್ದಾರೆ. ಮದ್ಯಪಾನ ಸಡಿಲಿಕೆಯನ್ನು ವಿರೋಧಿಸಿ ರಾಜೀನಾಮೆ ಕೊಟ್ಟ ಏಕೈಕ ಸಚಿವರೆಂದು ಇತಿಹಾಸದಲ್ಲಿ ದಾಖಲಾಗಿದ್ದಾರೆ. ಕರ್ನಾಟಕ ಸರ್ಕಾರ ಇವರ ಶತಮಾನೋತ್ಸವವನ್ನು ಆಚರಿಸುತ್ತಿರುವುದು ಸ್ವಾಗತಾರ್ಹ. ಶ್ರೀಮತಿ ಯಶೋಧರಮ್ಮನವರ ಆದರ್ಶ ನಮ್ಮ ಸಮಾಜಕ್ಕೆ ಪ್ರೇರಣೆ ನೀಡಲಿ ಎಂದು ಹಾರೈಸುತ್ತೇನೆ.

(ಹೆಚ್. ಡಿ. ಕುಮಾರಸ್ವಾಮಿ)

೨೦೧೨

ಬಿ.ಎಸ್. ಯಡಿಯೂರಪ್ಪ
ಮಾಜಿ ಮುಖ್ಯಮಂತ್ರಿ

ದಿನಾಂಕ: 6–2–2012

ಸಂದೇಶ

ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಎಸ್.ಆರ್.ಕಂಠಿ ಹಾಗೂ ಎಸ್. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವರಾಗಿ ಕೆಲಸ ಮಾಡಿದ್ದಾರೆ. ಅವರು ಕರ್ನಾಟಕದ ಮೊದಲ ಮಹಿಳಾ ಕ್ಯಾಬಿನೆಟ್ ದರ್ಜೆ ಸಚಿವರಾಗಿದ್ದರು. ಇಡೀ ರಾಷ್ಟ್ರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪ್ರಾರಂಭವಾಗಲು ಅವರು ಪ್ರೇರಕ ಶಕ್ತಿಯಾಗಿದ್ದಾರೆ. ಮದ್ಯಪಾನ ಸಡಿಲಿಕೆಯನ್ನು ವಿರೋಧಿಸಿ ರಾಜೀನಾಮೆ ಕೊಟ್ಟ ಏಕೈಕ ಸಚಿವರೆಂದು ಅವರು ಇತಿಹಾಸದಲ್ಲಿ ದಾಖಲಾಗಿದ್ದಾರೆ. ನಮ್ಮ ಸರ್ಕಾರ ಅವರ ಶತಮಾನೋತ್ಸವನ್ನು ಆಚರಿಸಲು ನಿರ್ಧರಿಸಿ, ಯುವಜನತೆ ಅವರ ಹೆಸರನ್ನು ಸದಾ ನೆನೆಯುವಂತೆ ಮಾಡಿದೆ. ಶ್ರೀಮತಿ ಯಶೋಧರಮ್ಮನವರ ಆದರ್ಶಗಳು ನಮ್ಮ ಸಮಾಜಕ್ಕೆ ಪ್ರೇರಣೆ ನೀಡಲಿ ಎಂದು ಶುಭ ಹಾರೈಸುತ್ತೇನೆ.

(ಬಿ.ಎಸ್.ಯಡಿಯೂರಪ್ಪ)

ಕಾವ್ಯ ನಮನ

ಕರುನಾಡ ಕಸ್ತೂರಿ ಬಾ

– ಡಾ. ದೇಜಗೌ

ಧರ್ಮಿಷ್ಠ ಪ್ರಭುನಿಷ್ಠ ಲೋಕಸೇವಾಸಕ್ತ
ವಿದ್ಯಾಭಿಮಾನಿ ದೀನಪರ ನಿರಹಂಕಾರಿ
ದಕ್ಷಾಡಳಿತಗಾರ ಯುವರಾಜರಾಪ್ತ ಸಖ
ಸಂತಾನ ಸಂಪನ್ನ ರಾಮಯ್ಯರಿರ್ದರಾ
ರೇವಮ್ಮ ಜತೆಗೂಡಿ ದೇವರಿಗೆ ಬೇಕಾಗಿ
ದ್ವಾಪರ ಯುಗದ ಯಶೋಧರೆಯೆ ಜನಿಸಿದಳೆನಲ್
ಆ ದಂಪತಿಗಳುದರ ದಿಂದುದ್ಭವಿಸಿ ಬೆಳೆದಳ್
ಗುಣವತಿ ಯಶೋಧರಾ ತಾಯಿ ಕಣ್ಬೆಳಕಾಗು
ಪೆತ್ತರ್ಗೆ, ಸುತ್ತಮುತ್ತಣ ಜನಕೆ ತಂಪಾಗಿ
ದೇಶಕ್ಕೆ ವರವಾಗಿ ದೇರ್ವಗೆ ಪ್ರಿಯವಾಗಿ
ಬೆಳೆಯ ಸಿರಿ ಮೊಳೆಯಲೆಂಬಂತೆ ಬಾಲ್ಯದೊಳವಳು
ವಿದ್ಯೆಯಲಿ ಬುದ್ಧಿಯಲಿ ಸರಿಕರಿಗೆ ಮೀಟೆನಲು
ಬೆಂಗ್ಳೂರು ಚೆನ್ನೈಗಳಲಿ ಮುಗಿಸಿದಳು ವ್ಯಾ
ಸಂಗವನು ತಂದೆಗುಲ್ಲಸವಾಗೆ
ಶುಕ್ಲಪಕ್ಷದ ಚಂದ್ರನಂತೆ ವೊಲ್ ಯೌವನಂ
ದಿನದಿನಕು ಕಳೆಯೇರುತಿರೆ ನೋಡಿ ಪುತ್ರಿಯಂ
ತಾಯ್ತಂದೆಯರು ಕೇಗಿದರು, ಸುರಧನುವ ಕಂಡ
ನವಿಲಂತೆ, ಬ್ರಹ್ಮ ಗಂಟೆನುವಂತೆ ಪುಣ್ಯಾಂಗ
ನೆ ಯಶೋಧರೆಗೆ ಸಮನುಸಿತು ಮದುವೆ ಸುಸಂಸ್ಕೃತ
ಧೀಮಂತ ತರುಣ ವಿದ್ಯಾ ವಿನಯ ಸಂಪನ್ನ
ದಾಸಪ್ಪನೆಂಬ ಹೆಸರಾಂತ ತೇಜಸ್ವಿಯೊಡನೆ.
ಮೈಸೂರಿನಲಿ ಸುವಿಖ್ಯಾತ ಲಾಯರವರು

ರಾಮತುಲಸಿ ಸುತರೊಡಗೂಡಿ ಸುಖವಾಗಿರಲು
ಸ್ವಾತಂತ್ರ್ಯ ಸಂಗ್ರಾಮ ನಡೆದಿತ್ತು ದೇಶದಲಿ.
ಗಾಂಧಿಯೆಂಬ ಗಾರುಡಿಗ ಮಂತ್ರಕೊಳಗಾಗದ
ವರಿಲ್ಲ; ಮಣಿಯದವರಿಹರೆಯವರ ಚುಂಬನಕಕೆ
ಸತಿ ಶಿರೋಮಣಿ ಯಶೋಧರೆ ಪತಿಯ ಕೈ ಹಿಡಿದು
ಧುಮ್ಮಿಕ್ಕಿದರು ಸಂಗರಕೆ ಸಕಲ ಚಾಗಕಣಿ
ಯಾಗಿ ತ್ರಿಕರಣ ಶುದ್ಧಿ ಪೂರ್ವಕವಾಗಿ.
ಬಂತು ಶಿವಪುರದ ಧ್ವಜ ಸತ್ಯಾಗ್ರಹವಂದು
ಯಶೋಧರ ತಾಯಿಯ ಪರೀಕ್ಷೆಗೆನೆ. ಪೋಲೀಸು

ಪಡೆ ನಡುವೆ ಬಂದೂಕಿನಾರ್ಭಟಕೆ ಬೆದರದೆಯೆ
ಬೆಚ್ಚದೆಯೆ ಧ್ವಜ ಕಂಬವ ತಬ್ಬಿದರಾತಾಯಿ
'ಈ ಧ್ವಜ ಗೌರವವನು ಕಾಯಿ;
ಶಿವನೆದೆ ತಲ್ಲಣಿಪುದು, ತಾಯಿ'
ಎಂಬ ಕವಿ ವಾಣಿಯನು ನೆಮ್ಮಿ
ಸ್ವಾತಂತ್ರ್ಯದ ಸಂಕೇತವೆ ಶ್ರೀಧ್ವಜವೆಂದು
ರಕ್ಷಿಸಲದನು.

ಸ್ವಾತಂತ್ರ್ಯದ ಶ್ರೀಮಂತ್ರ
ಸಂಗ್ರಾಮದುರಿಕಿಚ್ಚು ಹಬ್ಬಿದುವು ಮನೆ ಮನೆಗೆ.
ಯಶೋಧರ ದಂಪತಿಗಳ ಹೋರಾಟದ ಸುದ್ದಿ
ಬಿದ್ದಿತು ಮಹಾತ್ಮ ಕಿವಿಗೆ ಕರೆ ಕಳುಹಿಸಿದರು
ಗಾಂಧೀಜಿಯವರನು ಬರೆ ಸೇವಾ ಗ್ರಾಮಕ್ಕೆ,
ಧನ್ಯರಾದೆವೆನುತ್ತ ಯಶೋಧರ ತಾಯಿಯ ಕು
ಟುಂಬ ತೆರಳಿತು ಬೇಗ ವಾರ್ಧಾಕ್ಕೆ, ಮಹಾತ್ಮರ
ದಿವ್ಯ ಸನ್ನಿಧಿಗೆ, ಧನ್ವಂತರಿಯದೆ ಮಂದಿರವಾಯಿತ್ತು
ಯಶೋಧರ ಕುಟುಂಬಕೆಯದುವೆ ತರಬೇತಿ ಮನೆ.
ಗಾಂಧಿ ಪ್ರಣೀತ ಏಕಾದಶ ನಿಯಮವರಿತರು
ಅನುಷ್ಠಾನಗೈದರು; ಗಾಂಧಿ ಸಿದ್ಧಾಂತಗಳ
ಜೀವನದೊಳಳವಡಿಸಿಕೊಂಡರು
ಸೇವೆಯ ರಹಸ್ಯವರಿತರು ಪ್ರಯೋಗದಿಂ
ತಿಂಗಳಾರನು ಕಳೆದು, ಮಹಾತ್ಮರ
ಕೃಪಾಶೀರ್ವಾದ ಭಾಜನರಾಗಿ ಉತ್ತೇಜನಂಗೊಂಡು
ಹಿಂದಿರುಗಿ ತನುಮನಧನವ ಸಮೆಸಿದರು
ಭಕ್ತಿಯಿಂ, ನಿಷ್ಠೆಯಿಂ ಉಲ್ಲಾಸದಿಂ ಸತತ.
ಸ್ವಾತಂತ್ರ್ಯಕ್ಕಾಗಿ ಗಾಂಧಿ ಮಂತ್ರವೆ ಸದಾ ಉಸಿರಾಗೆ
ಊರೂರು ತಿರು ತಿರುಗಿ ಗಾಂಧಿ ಸಂದೇಶವನು
ಸ್ವಾತಂತ್ರ್ಯ ಮಂತ್ರವನು ಬಿತ್ತಿದರು, ಹರಡಿದರು.
ಎಣ್ಮಕ್ಕಲಿಲ್ಲದರಮನೆ ಶೂನ್ಯವೆಂದರಿತು
ದಲಿತ ಮಗು ಪ್ರಭಾಳನು ಸಾಕಿದರು ಆ ತಾಯಿ
ಔರಸ ಸುಪುತ್ರಿಗಿಂ ಮಿಗಿಲಾಗಿ. ವಿದ್ಯೆಯನು
ಕಲಿಸಿ, ವೈದ್ಯ ಪದವೀಧರಗೆ ಮದುವೆಯ ಮಾಡಿ
ಪುತ್ರರಿಗೆ ಸಮನಾಗಿ ಆಸ್ತಿಯನು ವಿತರಿಸಿದ
ದಲಿತರುದ್ಧಾರಕ್ಕೆ ದಾರಿಯನು ತೋರಿಸಿದ

ವರ ಯೋಶಧರಮ್ಮಗೆ ಸಮರುಂಟೆ ಭಾರತದಿ.
ತಾವೆ ಬೆಳೆಯಿಸಿದ ಕಸ್ತೂರಿ ಬಾ ಶಿಬಿರದ ಬಡವಿ
ಸರೋಜಳ ತಂದು ಮನೆಯ ತುಂಬಿಸಿಕೊಂಡು
ಸೊಸೆಯೆಂದು ಮಮತೆಯಿಂ ಕರುಣೆಯಿಂ ಬವಣಿಸಿದ
ಅತ್ತೆಯ ರೊಳರೆ ಜಗದೊಳಗೆ.
ತ್ಯಾಗ ಯೋಗಗಳೆ ಬದುಕಾಗಿದ್ದ ಆ ತಾಯ್ಗೆ
ಶಾಸಕ ಸ್ಥಾನ ಲಭಿಸಿತು ಚುನಾವಣೆಗಳಲಿ
ಧರ್ಮಿನಿಜಲಿಂಗಪ್ಪ ಸಚಿವ ಮಂಡಲಿಯಲ್ಲಿ
ಸ್ಥಾನ ದೂರೆತುದು ಸಹಜ ನಿಜ ಸರ್ವ ವಿಧದಿಂದ.
ವಿದ್ಯೆಯಲಿ ಬುದ್ಧಿಯಲಿ ಪ್ರತಿಭೆಯಲಿ ದುಡಿಮೆಯಲಿ
ಅದ್ವಿತೀಯರೆನೆ ಸದ್ಧರ್ಮದೇವತೆಯಂತೆ
ಧರ್ಮದಿಂ ನಿಷ್ಪಕ್ಷ ಪಾತದಿಂದಾಡಳಿತ
ನಡೆಸಿದರು ನಾಡುನುಡಿ ಸೇವೆ ಕರ್ತವ್ಯವೆಂದು.
ಮದ್ಯಪಾನ ನಿರೋಧ ಕಾಯಿದೆಯ ರದ್ದಿಸಲು
ಸರ್ಕಾರ, ವಿರೋಧಿಸಿದರವರು ಕಠಿನವಾಗಿ
ಗಾಂಧಿ ಹೆಸರಿಗೆ ಮಸಿ ಬಳಿಯುವುದದುತರವೆ
ಗಾಂಧಿ ನೀತಿಗೆ ಮೋಸ ಸಲ್ಲದೆಂದಾಲ್ಪರಿದು
ಸಚಿವ ಪದವಿಗೆ ರಾಜಿನಾಮೆಯನ್ನೊಸೆದಿತ್ತು
'ಮಹಾತ್ಮಾ ಗಾಂಧೀಕೀ ಜಯ್' ಎಂದು ಜಯಕಾರ
ಹಾಕಿ ಗಾಂಧಿ ಸಿದ್ಧಾಂತಕ್ಕೆ ಜಯವಾಗಲೆಂದು
ಹಾರೈಸಿ ಹೊರವಂಟರು ವಿಧಾನ ಸೌಧದಿಂ
ಯುದ್ಧದಲಿ ಗೆದ್ದ ಶೂರ ನಾಯಕನಂದದಲಿ.
ದೇಶದಲಿಯನ್ಯಾಯವಧರ್ಮ ಮಥಿತವಾಗು
ತಿರೆ ಮಹಾತ್ಮ ರನು ನೆನೆ ನೆನೆದವರು ಕೊರಗುತಿರೆ
ತಿರೆ ಸಲ್ಲ ಸಗ್ಗವೇ ಸರಿಯೆಂದು ತರಿಸಂದು
ಯಶೋಧರ ತಾಯಿಯನು ಕರೆಸಿಕೊಂಡರು ಗಾಂಧಿ
ಭಾರತ ಮಾತೆಯಾ ಸತ್ಪುತ್ರಿ
ಗಾಂಧೀ ಗಾಥೆಯಾ ಗಾಯತ್ರಿ
ನಾಡು ನುಡಿಗಳಿಗೆ ಶುಭಮಕ್ಕೆ
ಗಾಂಧಿ ತತ್ತ್ವಕ್ಕೆ ಜಯಮಕ್ಕೆ
ಎಂದು ಹರಸವ್ವ ಶ್ರೀಮಾತೆ
ಶ್ರೀ ಕೃಷ್ಣನ ಪೊರೆದ ಮಾಮಾತೆ
ಕರುನಾಡ ಕಸ್ತೂರಿ ಬಾ ಮಾತೆ

ಅರೆ – ನೀ ಅಪ್ಪಟ ಚಿನ್ನದ ಗಟ್ಟಿ

– ಪ್ರಸನ್ನ ಕುಮಾರ

ಮಹಾತ್ಮರ ಸಹವರ್ತಿ ಕಸ್ತೂರಿ ಬಾಗೆ ನಮಿಸಿ
ಅನಿಬೆಸೆಂಟ್– ಸರೋಜನಿ ನಾಯ್ಡು – ಸುಜೇತ ಕೃಪಲಾನಿಯವರಿಗೆ ವಂದಿಸಿ
ದೇಶದ ವೀರಮಹಿಳೆ ಇಂದಿರಾಜೀಗೆ ತಲೆಬಾಗಿ
ತತ್ವಾದಾರದ ರಾಜಕಾರಿಣಿ ಯಶೋಧರಾ ದಾಸಪ್ಪರ ಸ್ಮರಿಸುವೆನು!

ಕೆ.ಹೆಚ್. ರಾಮಯ್ಯ ರೇವಮ್ಮ ಉದರದಲಿ ಹುಟ್ಟಿ
ದೀನದಲಿತರ ಏಳಿಗೆಗೆ ಅವರ ಭುಜವನು ತಟ್ಟಿ
ಮಹಾತ್ಮ ಗಾಂಧೀಜಿಯ ಮನವನು ಮುಟ್ಟಿ
ಯಶೋಧರಾ ಅರೆ ನೀ ಅಪ್ಪಟ ಚಿನ್ನದ ಗಟ್ಟಿ

ಸಿರಿವಂತರ ಮನೆಯ ಮಗಳಾಗಿ
ಕೆಳಬಿದ್ದ ಮಹಿಳೆಯರ ಕರುಳಾಗಿ
ಸಮಯಸಾಧಕ ಬ್ರಿಟಿಷರಿಗೆ ಉರುಳಾಗಿ
ಶಿವಪುರ ಧ್ವಜಸತ್ಯಾಗ್ರಹದಿ ಉಳಿದೆ ತಿರುಳಾಗಿ

ಇಂಟರ್ ಮೀಡಿಯಟ್‌ಗೆ ಮುಗಿಸಿ ವಿದ್ಯಾಭ್ಯಾಸ
ನಡೆಯಿತೂ ಸ್ವಾತಂತ್ರ್ಯ ಚಳವಳಿಯ ಸಮರಾಭ್ಯಾಸ
ಸಂಘಟಿಸಿ ವಿಮೋಚನೆಯ ಸತ್ಯಾಗ್ರಹ ಉಪವಾಸ
ಮದುವೆ ದಾಸಪ್ಪರೊಂದಿಗೆ, ಹುಟ್ಟಿದರು ರಾಮದಾಸ ತುಳಸೀದಾಸ

1938 ರ ಶಿವಪುರ ಧ್ವಜ ಸತ್ಯಾಗ್ರಹ
ಟಿ.ಸಿದ್ದಲಿಂಗಯ್ಯ ನೇತರ ನೆಡೆದಿತ್ತು ಅದರಲಿ ನಿನ್ನ ಆಗ್ರಹ
ದುರಾಗ್ರಹವ ಮೆಟ್ಟಿ ನೀ ಸೇರಿದೇ ಕಾರಾಗೃಹ
ನಿನ್ನ ಹೆಸರು ಮುಟ್ಟಿತು ಕನ್ನಡದ ಪ್ರತಿಗೃಹ

1939 ರ ವಿದುರಾಶ್ವತ್ಥ ಕಾಂಗ್ರೆಸ್ ಅಧಿವೇಶನ
ರಕ್ತ ಹತ್ಯಾಕಾಂಡದ ವಿರುದ್ಧ ಸಿಡಿಯಿತು ನಿನ್ನಮನ
ರಾಜದ್ರೋಹಿ ಎಂದು ನೀ ಸೇರಿದೆ ಶ್ರೀ ಕೃಷ್ಣ ಜನ್ಮ ಸ್ಥಾನ
ಅದರೂ ನೀ ಏರಿದೆ ಜನತೆಯ ಹೃದಯ ಸಿಂಹಾಸನ

1942 ರ ಕ್ವಿಟ್ ಇಂಡಿಯಾ ಚಳವಳಿ
ನಿನ್ನದು ಸಾಕಷ್ಟಿತ್ತು ಅದಕೆ ಬಳುವಳಿ
ಗೊರೂರು ರಾಮಸ್ವಾಮಿ ಅಯ್ಯಂಗಾರರ ಕಳಕಳಿ
ಕರ್ನಾಟಕದ ಕಸ್ತೂರಿ ಬಾ ಎಂದರವರು ಸಂತೋಷದಲಿ

ಸ್ತ್ರೀ ಶಕ್ತಿ ಸಂಘಟನೆ ನಿನ್ನ ಗುರಿಯಾಗಿತ್ತು
ಗ್ರಾಮೋದ್ಯೋಗ ಕಲಿಕೆಗೆ ನೀಡಿ ನೀ ತಾಕತ್ತು
ಕಸ್ತೂರ್ ಬಾ ಟ್ರಸ್ಟ್ ರಚಿಸಿದೆ ನೀನು ಅವತ್ತು
ಹೆಮ್ಮರವಾಗಿ ಬೆಳೆದಿದೆ ಅದೀಗ ಈವತ್ತು

ದಿಕ್ಕಿಲ್ಲ ದಾರಿಯಿಲ್ಲದ ಮಹಿಳೆಯರಿಗೆ ಅದೆ ನೀ ಮಾತೆ
ಎಚ್.ಸಿ. ದಾಸಪ್ಪನವರ ಪಾಲಿಗೆ ಆಗಿ ನೀ ಸೀತೆ
ನಿನ್ನ ಸೊಸೆ ಸರೋಜಮ್ಮ ನಿಜದಿ ಆಗಿಹರು ಪುನೀತೆ
ನಿಮ್ಮ ಕುಟುಂಬವ ಹರಸುತಿಹಳು ಧನ್ಯೆ ಭಾರತಮಾತೆ

ಪಾನ ನಿಷೇಧವ ಸಡಲಿಸೆ ರಾಜೀನಾಮೆ ನೀ ಕೊಟ್ಟು
ಅಧಿಕಾರ ವ್ಯಾಮೋಹವ ಅಂದೇ ನೀ ಬಿಟ್ಟು
ಅತ್ಯಾಚಾರ ಅನಾಚಾರ ಆಯ್ತು. ಇಂದು ಮನರಂಜನೆ ಪುಗಸಟ್ಟೆ
ಅಕಟಕಟಾ ಓ ಮಹಿಳೆಯೇ ನೀ ಇವರ ನಂಬಿ ಕೆಟ್ಟೆ

ದಾಸಪ್ಪ ದಂಪತಿಗಳು ಇಂದಿಗೂ ಆದರ್ಶ
ನಿನ್ನ ತ್ಯಾಗದ ಮರೆಯನು ಎಂದೂ ಅಸ್ಪರ್ಶ
ನಿನಗಿರಲಿಲ್ಲ ಯಾರ ಬಗ್ಗೆ ದ್ವೇಷದಾ ಈರ್ಷೆ
ಮತ್ತೆ ಹುಟ್ಟಿ ಬಾ ಈ ತಾಯಿ ಆಳಿಸೆ ರೋಷಾವೇಶ

ನೀ ಮಾಡುತ್ತಿದ್ದೆ ಸ್ವಾತಂತ್ರ್ಯ ಹೋರಾಟದೀ ಭಾಷಣ
ಮಹಾತ್ಮನ ತತ್ವ ಅಹಿಂಸಿಗೇ ಆಗಿ ಅರ್ಪಣ
1973 ರಲಿ ರಾಷ್ಟ್ರಪತಿ ನೀಡಿದರು ಪದ್ಮಭೂಷಣ
ಮಹಿಳಾ ದೀಕ್ಷಾ ಬದ್ದತೆಯೇ ಇದಕ್ಕೆ ಕಾರಣ

ಯಶೋಧರಾ ಗಾಥೆ

ತತ್ವನಿಷ್ಠರು

ಎಸ್. ನಿಜಲಿಂಗಪ್ಪ

ಸ್ವಾತಂತ್ರ್ಯ ಹೋರಾಟದಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಅನೇಕ ಮಹಿಳೆಯರು ಗಾಂಧೀಜಿಯವರ ಪ್ರಭಾವದಿಂದ ಭಾಗವಹಿಸುವುದರ ಮೂಲಕ ಚಳವಳಿಯ ಅಭಿಯಾನದ ದಿಕ್ಕಿನ ಪಥವನ್ನೇ ಬದಲಾಯಿಸಿದರು. ಅಂತಹ ಮಹಿಳೆಯರ ಸಾಲಿನಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಕೂಡ ಒಬ್ಬರು. ಆಕೆ ಒಬ್ಬ ಧೀಮಂತ ವ್ಯಕ್ತಿತ್ವದ ಮಹಿಳೆ.

ನನ್ನ ಸಮಕಾಲೀನರಾದ ಇವರು ಮತ್ತು ಇವರ ಪತಿ ಹೆಸ್.ಸಿ.ದಾಸಪ್ಪ ಅತ್ಯಂತ ನಿಕಟವರ್ತಿಗಳಾಗಿದ್ದರು. ಶ್ರೀಮಂತಿಕೆಯ ಆಡಂಬರದ ಪ್ರಭಾವಕ್ಕೆ ಒಳಗಾಗದೆ ಗಾಂಧೀಜಿಯವರ ತತ್ವಗಳನ್ನು ನಿಷ್ಠೆಯಿಂದ ಪಾಲಿಸಿಕೊಂಡು ಬಂದಂತಹ ಈ ದಂಪತಿಗಳ ಕೊಡುಗೆ ದೇಶಕ್ಕೆ ಅದರಲ್ಲೂ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಅಪಾರ. ಪಕ್ಷದ ಏಳಿಗೆ ಅಭಿವೃದ್ಧಿಗಾಗಿ ಯಾವುದೇ ಅಧಿಕಾರದ ಆಮಿಷಕ್ಕೆ ಒಳಗಾಗದೆ ಸೇವೆ ಸಲ್ಲಿಸಿದ್ದಾರೆ. ಕಾರ್ಯಕರ್ತರೊಡನೆ ಇವರಿಗಿದ್ದ ಒಡನಾಟ ಸಂಘಟನಾ ಸಾಮರ್ಥ್ಯ ನಿಜಕ್ಕೂ ಅಭಿನಂದನೀಯ. ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಿದ್ದರು. ಪ್ರಭಾವಿ ನಾಯಕ ಸಾಹುಕಾರ್ ಚೆನ್ನಯ್ಯನವರ ವಿರುದ್ಧ ಚುನಾವಣೆಗೆ ಸ್ಪರ್ಧಿಸಿ ಗೆಲುವು ಸಾಧಿಸುವುದರ ಮೂಲಕ ಮೈಸೂರು ಸಂಸ್ಥಾನದ ಕಾಂಗ್ರೆಸ್ ಪ್ರಥಮ ಮಹಿಳಾ ಅಧ್ಯಕ್ಷೆ ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಮೈಸೂರು ಪ್ರದೇಶ ಕಾಂಗ್ರೆಸಿಗೆ ಒಂದು ಸ್ವಂತ ಕಟ್ಟಡ ಇರಲಿಲ್ಲ. ಇದರ ಕೊರತೆಯನ್ನು ನಿವಾರಿಸಲು ತಮ್ಮ ಮನೆತನದ ಆಸ್ತಿಯ ಜಾಗವನ್ನೇ ಬಳುವಳಿಯಾಗಿ ನೀಡಿದರು. ಜೊತೆಗೆ ಆ ಜಾಗದಲ್ಲಿ ಒಂದು ಕಟ್ಟಡ ನಿರ್ಮಾಣವನ್ನು ಮಾಡಿಯೇ ಮುಗಿಸಿದರು. ಇವರ ಅಧಿಕಾರಾವಧಿಯಲ್ಲಿ ಮೈಸೂರು ಸಂಸ್ಥಾನ ಕಾಂಗ್ರೆಸ್‌ಗೆ ಪ್ರದೇಶ ಕಾಂಗ್ರೆಸ್ ಸಮಿತಿಯ ಸ್ಥಾನಮಾನವನ್ನು ನೀಡಿ ಅದನ್ನು ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರದೇಶ ಘಟಕವನ್ನಾಗಿ ಪರಿಗಣಿಸಿತ್ತು. ಇದೊಂದು ಮೈಸೂರು ಕಾಂಗ್ರೆಸ್ಸಿನ ರಾಜಕೀಯ ಹೊಸ ಇತಿಹಾಸವಾಯಿತು.

ಅವರಿಗೆ ಬಡವರ್ಗದವರ ಬಗ್ಗೆ ಅಪಾರ ಕಾಳಜಿ ಇತ್ತು. ಈ ಮನೋಭಾವವನ್ನು ಹೊಂದಿದ ಇವರು ತಮಗೆ ವಹಿಸಿದ ಅಧಿಕಾರದ ಜವಾಬ್ದಾರಿಯನ್ನು ಯಾವುದೇ ಕಳಂಕವಿಲ್ಲದೆ ನಿಷ್ಠೆಯಿಂದ ನಡೆಸಿಕೊಂಡು ಹೋದರು. ನನ್ನ ಸಚಿವಸಂಪುಟದಲ್ಲಿ ಇವರು ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಸರ್ಕಾರಕ್ಕೆ ಒಳ್ಳೆಯ ಸಹಕಾರವನ್ನು ನೀಡಿದ್ದರು.

ಸರಳ ವ್ಯಕ್ತಿತ್ವದ ಇವರ ಕುಟುಂಬದೊಡನೆ ನಾನು ಅತ್ಯಂತ ನಿಕಟವಾದ ಒಡನಾಟವನ್ನು ಹೊಂದಿದ್ದೆ. ಇವರ ತಂದೆ ಕೆ.ಎಚ್. ರಾಮಯ್ಯ ಮಹಾನ್ ವ್ಯಕ್ತಿ. ಪತಿ ಹೆಚ್.ಸಿ. ದಾಸಪ್ಪನವರು ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ಕೇಂದ್ರ ಮಂತ್ರಿಯಾಗಿ ಅನೇಕ ಪ್ರಗತಿಪರ ಯೋಜನೆಗಳನ್ನು ಕಾರ್ಯಗತಗೊಳಿಸಿ ಯಶಸ್ಸು ಕಂಡ ತತ್ವನಿಷ್ಠ ರಾಜಕಾರಣಿ.

ಕೊನೆಯವರೆಗೂ ದಂಪತಿಗಳಿಬ್ಬರು ಸರಳಜೀವನಕ್ಕೆ ಮಾರುಹೋಗಿ ಗಾಂಧೀಜಿಯ ಮೆಚ್ಚಿನ ಶಿಷ್ಯರಾಗಿ ಅವರು ಹಾಕಿಕೊಟ್ಟ ಮಾರ್ಗದಲ್ಲೆ ಜೀವನವನ್ನು ನಡೆಸಿದರು. ಕಾಂಗ್ರೆಸ್ ಪಕ್ಷದಿಂದಲೇ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ, ವಿಧಾನಸಭೆಯ ಸದಸ್ಯರಾಗಿ ಅನೇಕ ಪ್ರಗತಿಪರ ಯೋಜನೆಯನ್ನು ರೂಪಿಸಿದರು.

ಕಾಂಗ್ರೆಸ್ ಪಕ್ಷದ ಮೂಲಕ ಎಸ್.ಆರ್.ಕಂಠಿಯವರ ಮಂತ್ರಿಮಂಡಲದಲ್ಲಿ ಸಂಪುಟ ದರ್ಜೆಯ ಮಂತ್ರಿಯಾಗಿ ಸಮಾಜಕಲ್ಯಾಣ ಇಲಾಖೆಯ ಜವಾಬಾರಿಯನ್ನು ವಹಿಸಿಕೊಂಡು ಅಧಿಕಾರವನ್ನು ನಡೆಸುತ್ತಿದ್ದರು. ಆದರೆ ಅಂದು ರಾಜ್ಯ ರಾಜಕಾರಣದಲ್ಲಿ ಆದ ಬದಲಾವಣೆಯಿಂದ ನಮ್ಮ ರಾಜ್ಯದ ಮಂತ್ರಿಯಾಗುವ ಸುವರ್ಣಾವಕಾಶ ಲಭಿಸಿತ್ತು. ನನ್ನ ಸಚಿವಸಂಪುಟದಲ್ಲೂ ಅವರು ಮಂತ್ರಿಯಾಗಿ ಮುಂದುವರೆದು ಅದೇ ಖಾತೆಯ ಹೊಣೆಗಾರಿಕೆಯನ್ನು ಅತ್ಯಂತ ಜವಾಬ್ದಾರಿಯಿಂದ ಸರಿದೂಗಿಸಿಕೊಂಡು ಹೋದರು.

ಮೈಸೂರು ಕಾಂಗ್ರೆಸ್ ಸದಸ್ಯರಾಗಿದ್ದಾಗಿನಿಂದಲೂ ಇವರ ಸಹಕಾರ ಕಾಂಗ್ರೆಸ್ ಸಂಸ್ಥೆಗೆ ಇತ್ತು. ತುಂಬ ಬುದ್ಧಿವಂತ ಹೆಣ್ಣುಮಗಳು, ಚೆನ್ನಾಗಿ ಮಾತನಾಡುತ್ತಿದ್ದರು, ಮತ್ತು ದೇಶ ಸೇವೆ ಮಾಡಬೇಕು ಎನ್ನುವ ಮನೋಭಿಲಾಶೆ ಅವರಿಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಅವರಿಗೆ ಮಂತ್ರಿ ಪದವಿಯನ್ನು ನಿಭಾಯಿಸುವ ಯೋಗ್ಯತೆ ಇತ್ತು. ದಲಿತರ, ಹಿಂದುಳಿದವರ, ನಿರ್ಗತಿಕರ, ಮಹಿಳೆಯರ ಅಭ್ಯುದಯದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದ ಇವರು ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದರು. ಜೊತೆಗೆ ಮಂತ್ರಿಮಂಡಲದ ಸಹೋದ್ಯೋಗಿಗಳೊಂದಿಗೆ ಚೆನ್ನಾಗಿ ಬೆರೆಯುತ್ತಿದ್ದರು.

ಕರ್ನಾಟಕ ರಾಜ್ಯಕ್ಕೆ ಯಶೋಧರಮ್ಮನಂತಹ ಧೈರ್ಯವಂತ, ಬುದ್ಧಿವಂತ ಮಹಿಳೆಯ ಅವಶ್ಯಕತೆಯಿದೆ. ರಾಜಕೀಯ ಸೇವೆ ಬಯಸುವ ಮಹಿಳೆಯರಿಗೆ ಯಶೋಧರಮ್ಮನವರ ಜೀವನ ದಾರಿದೀಪವಾಗುತ್ತದೆ.

ನಿರೂಪಣೆ : ಡಾ. ಶೈಲಜಾ ಸಿ.ವಿ.

——— * ———

ದಲಿತರ ಒಡನಾಡಿ

ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್

ಜೀವನದಲ್ಲಿ ಒಂದು ಆದರ್ಶ, ಗುರಿ, ನಿಷ್ಠೆ, ತತ್ವವನ್ನು ಅಳವಡಿಸಿಕೊಂಡಾಗ ಬದುಕು ಸಮಾಜಕ್ಕೆ ಮಾರ್ಗದರ್ಶಕವಾಗುತ್ತದೆ. ಇಂತಹ ವಿಚಾರಧಾರೆಗಳನ್ನು ಅಳವಡಿಸಿಕೊಂಡು ಜೀವನವನ್ನು ನಡೆಸಿಕೊಂಡು ಬಂದಂತಹ ಮಹನೀಯರು ಅನೇಕ. ಅವರು ಅದರಿಂದ ಸಾರ್ಥಕತೆಯನ್ನು ಪಡೆದಿದ್ದಾರೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರವರ ಒಂದು ಮಾತು ನೆನಪಿಗೆ ಬರುತ್ತದೆ – "ಬಡವರಿಗಾಗಿ ಯಾರ ಹೃದಯ ಮಿಡಿಯುತ್ತದೋ ಅಂತಹವರನ್ನು ಮಹಾತ್ಮ ಎಂದು ಕರೆದರೆ, ಯಾರ ಹೃದಯ ಬಡವರಿಗಾಗಿ ಮಿಡಿಯುವುದಿಲ್ಲವೋ ಅಂತಹವರನ್ನು ದುರಾತ್ಮರು ಎಂದು ಕರೆಯುತ್ತೇನೆ". ಈ ಮಾತು ಎಷ್ಟು ಅರ್ಥಗರ್ಭಿತವಾಗಿದೆ. ಬಡವರು, ದೀನದಲಿತರ, ಹಿಂದುಳಿದ ವರ್ಗದವರ ಏಳಿಗೆಗಾಗಿ ಅನೇಕರು ಶ್ರಮಿಸಿದ್ದಾರೆ. ಅಂತಹವರಲ್ಲಿ ನಾನು ನೋಡಿದ ಹಾಗೆ ಯಶೋಧರಮ್ಮ ದಂಪತಿಗಳು ಕೂಡ ಒಬ್ಬರು.

ನಾನು ಅವರ ಕುಟುಂಬವನ್ನು ಹತ್ತಿರದಿಂದ ಬಲ್ಲ ವ್ಯಕ್ತಿ. ಅವರ ತಂದೆ ಮಹಾನ್ ದಾರ್ಶನಿಕ, ಅವರು ಯಾವಾಗಲೂ ಸಮಾಜ ಸೇವೆಯೇ ತಮ್ಮ ಧ್ಯೇಯ ಎಂಬ ಭಾವನೆಯನ್ನು ಹೊಂದಿದ್ದ ವ್ಯಕ್ತಿ. ತಮ್ಮ ವ್ಯಕ್ತಿತ್ವವನ್ನೇ ಮಕ್ಕಳಲ್ಲಿ ಬೆಳೆಸಿದ್ದರು. ತುಂಬ ಆದರ್ಶ ಸಂಸಾರ ಅವರದು. ಮೈಸೂರು ಮಹಾರಾಜರಿಗೆ ಅತ್ಯಂತ ನಿಕಟವರ್ತಿಗಳಾಗಿದ್ದವರು. ಇವರು ಕೂಡ ದಲಿತರ ಹಾಗೂ ಹಿಂದುಳಿದ ವರ್ಗದವರ ಏಳಿಗೆಗಾಗಿ ಅನೇಕ ಪ್ರಗತಿಪರ ಯೋಜನೆಗಳನ್ನು ರೂಪಿಸಿದ್ದರು.

ಅಂತಹ ವ್ಯಕ್ತಿಯ ಮಗಳಾದ ಯಶೋಧರಮ್ಮ ತಂದೆಯ ಗುಣಗಳನ್ನೇ ಮೈಗೂಡಿಸಿಕೊಂಡು ಬಡವರ, ದಲಿತರ, ನಿರ್ಗತಿಕರ, ಮತ್ತು ಹಿಂದುಳಿದವರ ಏಳಿಗೆಗಾಗಿ ಶ್ರಮಿಸಿದರು. ಯಶೋಧರಮ್ಮ ದಲಿತರ ಬಗ್ಗೆ ಅಪಾರವಾದ ಕಾಳಜಿಯನ್ನು ವಹಿಸಿದ್ದವರು. ಸಮಾಜದಲ್ಲಿದ್ದ ಅವ್ಯವಸ್ಥೆಯನ್ನು ಟೀಕಿಸಿದ್ದರು. ದಲಿತರಿಗೆ ದೇವಾಲಯ ಪ್ರವೇಶದ ನಿರ್ಬಂಧವನ್ನು ಕುರಿತು ಟೀಕಿಸಿದ್ದರು. "ಯಾರಲ್ಲಿ ಭಕ್ತಿ ನಿರ್ಮಲ ಮನಸ್ಸು ಇರುತ್ತದೋ ಅಂತಹವರನ್ನು ದೇವರು ಪ್ರೀತಿಸಿದ್ದಾನೆ. ಅಂತಹ ಗುಣ ದಲಿತರಲ್ಲಿ ಇದೆ. ಅವರು ದೇವರ ಮಕ್ಕಳು. ನಮ್ಮ ಜಾತಿ ವ್ಯವಸ್ಥೆಯಿಂದಲೇ ನಾವು ಈ ರೀತಿ ಇನ್ನೂ ಸ್ವಾತಂತ್ರ್ಯ ಪಡೆಯದೆ ಇರುವುದು. ಮೇಲ್ವರ್ಗದವರ ಮೈಯಲ್ಲಿ ರಕ್ತ ಹರಿಯುತ್ತದೆ. ದಲಿತರ ಮೈಯಲ್ಲಿ ರಕ್ತ ಹರಿಯುವುದಿಲ್ಲವೆ? ಅವರಿಗೆ ನಿಮ್ಮ ನಡವಳಿಕೆಯಿಂದ ಆಘಾತವಾಗಿರುವುದು ಸತ್ಯ. ಮೇಲು ಜಾತಿ ಕೀಳು ಜಾತಿ ಎಂಬುದನ್ನು ಹೋಗಲಾಡಿಸಿ ಸಹೋದರತ್ವದ ಭಾವನೆಗಳನ್ನು ಬೆಳೆಸಿಕೊಳ್ಳಿ. ಅವರು ಕೂಡ ನಮ್ಮ ಹಾಗೆ ಭಾವನೆಗಳಿರುವ, ಮನುಷ್ಯರು. ಅವರಿಗೆ ಕೇಡಕಾದರೆ ದೇಶಕ್ಕೆ ಒಳಿತಲ್ಲ" ಎಂದೆಲ್ಲಾ ಹೇಳುತ್ತಿದ್ದರು.

ಯಶೋಧರಮ್ಮ ಸಮಾಜ ಕಲ್ಯಾಣ ಖಾತೆಯ ಸಚಿವೆಯಾಗಿದ್ದಾಗ ನನಗೆ ತಿಳಿದ ಹಾಗೆ ದಲಿತರ ಏಳಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದರು. ದಲಿತರ ಮೇಲಿನ ದೌರ್ಜನ್ಯವನ್ನು ಖಂಡಿಸಿದರು. ಜಾತಿ ಭೇದವನ್ನು ವಿರೋಧಿಸುತ್ತಿದ್ದ ಇವರು ಒಂದು ದಲಿತ ಹೆಣ್ಣುಮಗಳನ್ನು ದತ್ತು ತೆಗೆದುಕೊಂಡು ಸಾಕಿದರು. ಸ್ವಂತ ಮಗಳಂತೆ ಕಂಡ ಇವರು ತಮ್ಮ ಆಸ್ತಿಯಲ್ಲಿ ಒಂದು ಭಾಗವನ್ನು ಕೂಡ ನೀಡಿದ್ದರು. ಇದನ್ನು ನೋಡಿದಾಗ ಯಶೋಧರಮ್ಮನವರ ಘನ ವ್ಯಕ್ತಿತ್ವ ಅರ್ಥವಾಗುತ್ತದೆ.

ನಮ್ಮಲ್ಲಿ ಜಾತಿ ವ್ಯವಸ್ಥೆಯೆಂಬುದು ಅನಾದಿ ಕಾಲದಿಂದ ಬಲವಾಗಿ ಬೆಳೆದು ಬಂದಿದೆ. ಜಾತಿಯ ಹೆಸರಿನ ರಾಜಕೀಯ ನಡೆಯುತ್ತಿದೆ. ಇದು ತೊಲಗಬೇಕು. ಹಿಂದೆ ಇದ್ದಂತಹ ನಮ್ಮ ನಾಯಕರು ಜಾತಿಯ ಹೆಸರಿನಲ್ಲಿ ರಾಜಕೀಯ ಮಾಡಿದವರಲ್ಲ. ಅವರಿಗೆ ದೇಶ ಮತ್ತು ಸಮಾಜದ ಹಿತವೇ ಮುಖ್ಯವಾಗಿತ್ತೇ ವಿನಾ ಸ್ವಂತ ಹಿತವಲ್ಲ. ಈ ರೀತಿಯ ಮನೋಭಾವವನ್ನು ನಮ್ಮ ನಾಯಕರು ಬೆಳೆಸಿಕೊಳ್ಳಬೇಕು. ಯಶೋಧರಮ್ಮ ದಂಪತಿಗಳು ನನಗೆ ತಿಳಿದ ಹಾಗೆ ಎಂದೂ ಜಾತಿಯ ಹೆಸರಿನಲ್ಲಿ ರಾಜಕೀಯ ಮಾಡಿದವರಲ್ಲ. ದಂಪತಿಗಳಿಬ್ಬರೂ ಆದರ್ಶಮಯ ಜೀವನ ನಡೆಸಿದವರು. ಗಾಂಧೀಜಿಯವರಿಗೆ ಅತ್ಯಂತ ನಿಕಟವರ್ತಿಗಳಾಗಿದ್ದವರು. ಅವರ ಪ್ರಭಾವದಿಂದಲೇ ಅನೇಕ ಸಾತ್ವಿಕ ಗುಣಗಳನ್ನು ಮೈಗೂಡಿಸಿಕೊಂಡು ತುಂಬು ಹೃದಯದ ಜೀವನ ನಡೆಸಿದವರು. ಕೆಲವು ವೇಳೆ ನಾನು ಅವರ ಮನೆಗೆ ಹೋಗುತ್ತಿದ್ದೆ. ಅವರ ಬದುಕು ಎಷ್ಟು ಸರಳವಾಗಿತ್ತು ಎಂದರೆ ಅವರ ಮನೆಗೆ ಯಾರೇ ಬರಲಿ ಕರೆದು ಪ್ರೀತಿಯಿಂದ ಅವರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಸ್ವಾಂತನದ ಮಾತುಗಳನ್ನು ಹೇಳಿಕಳುಹಿಸುತ್ತಿದ್ದರು. ಜನರ ಸಮಸ್ಯೆಗಳಿಗೆ ಅವರು ಸ್ಪಂದಿಸುತ್ತಿದ್ದ ರೀತಿ ನಿಜವಾಗಿಯೂ ಮೆಚ್ಚುವಂತಹದು. ಒಂದು ಶ್ರೀಮಂತ ಮನೆತನದಿಂದ ಬಂದವರು ಅವರು. ಆದರೆ ಶ್ರೀಮಂತಿಕೆ ಆಡಂಬರವನ್ನು ನಾನು ಎಂದೂ ಅವರಲ್ಲಿ ಕಾಣಲಿಲ್ಲ. ಸರಳ ಆದರ್ಶ ಜೀವನ ಅವರದಾಗಿತ್ತು. ದಂಪತಿಗಳಲ್ಲಿ ಇಂತಹ ವ್ಯಕ್ತಿತ್ವ ನಿಜವಾಗಿಯೂ ಮೆಚ್ಚುವಂತಹದು.

ಕೊನೆಯದಾಗಿ ನಾನು ಹೇಳುವುದು ಇಷ್ಟೇ. ನಮ್ಮಲ್ಲಿ ಇರುವ ಜಾತಿ ವ್ಯವಸ್ಥೆ ಬದಲಾಗಬೇಕು, ಎಲ್ಲರಿಗೂ ಸಮಾನತೆ ಇರಬೇಕು, ಜಾತಿಯ ಹೆಸರಿನಲ್ಲಿ ರಾಜಕೀಯ ನಡೆಸದೆ ಜನರ ಒಳಿತನ್ನೇ ಕೇಂದ್ರವಾಗಿಟ್ಟುಕೊಂಡು ಸಮಾಜ ಸೇವೆ ಮಾಡಬೇಕು. ನಮ್ಮ ಹಿಂದಿನ ನಾಯಕರ ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡು ದೇಶದ ಪ್ರಗತಿಯ ಬಗ್ಗೆ ಚಿಂತಿಸುವಂತಾಗಬೇಕು. ಸಮಾಜದ ಸಮಸ್ಯೆಗಳ ಪರಿಹಾರಕ್ಕೆ ಹೆಚ್ಚು ಒತ್ತು ನೀಡಬೇಕು. ಇದೇ ನನ್ನ ಆಶಯ. ಯಶೋಧರಮ್ಮನವರ ಕುಟುಂಬದವರಿಗೆ ದೇವರು ಒಳ್ಳೆಯದನ್ನು ಮಾಡಲಿ ಎಂದು ಹಾರೈಸುತ್ತೇನೆ.

ನಿರೂಪಣೆ : ಡಾ. ಶೈಲಜಾ ಸಿ.ವಿ.

*

ಹೋರಾಟದ ಚಿಲುಮೆ

ಎಂ.ಎನ್. ಜೋಯಿಸ್

ಭಾರತ ದೇಶವು ಬ್ರಿಟಿಷ್ ದಾಸ್ಯಕ್ಕೆ ಒಳಗಾಗಿದ್ದ ಸಂದರ್ಭದಲ್ಲಿ ಸ್ವಾತಂತ್ರಕ್ಕಾಗಿ ಅನೇಕ ಮಹಾನ್ ಪುರುಷರು ತಮ್ಮ ಜೀವನದ ಹಂಗನ್ನೇ ತೊರೆದು ದೇಶ ಸೇವೆಯೇ ತಮ್ಮ ಪರಮ ಗುರಿ ಎಂಬ ಸಂಕಲ್ಪದಿಂದ ಹೋರಾಟವನ್ನು ನಡೆಸಿದರು. ಇದರಲ್ಲಿ ಮಹಿಳೆಯ ಪಾತ್ರ ಕೂಡ ಮಹತ್ವದ್ದು.

ರಾಷ್ಟ್ರಮಟ್ಟದ ನಾಯಕರ ಪ್ರಭಾವಕ್ಕೆ ಒಳಗಾದ ನಾನು ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದೆ. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ನಾವು ಅವರು ಹಾಕಿಕೊಟ್ಟ ಮಾರ್ಗವನ್ನೆ ಅನುಸರಿಸಿದ್ದೇವೆ. ರಾಷ್ಟ್ರಮಟ್ಟದ ನಾಯಕರಂತೆ ನಮ್ಮ ರಾಜ್ಯಮಟ್ಟದಲ್ಲೂ ಮಹಿಳೆಯರು ಹೋರಾಟದಲ್ಲಿ ಭಾಗವಹಿಸಿದರು. ನಮ್ಮ ಮೈಸೂರು ಸಂಸ್ಥಾನದಲ್ಲೂ ಮಹಿಳೆಯರು ಅನೇಕರು ಭಾಗವಹಿಸಿದ್ದರು. ನನ್ನ ಮಡದಿ ಸುಬ್ಬಮ್ಮ ಜೋಯಿಸ್, ಬಳ್ಳಾರಿ ಸಿದ್ದಮ್ಮ, ತಾಯಮ್ಮ ವೀರಣ್ಣಗೌಡ ಮುಂತಾದ ಮಹಿಳೆಯರು ಗಾಂಧೀಜಿಯವರ ಕರೆಗೆ ಓಗೊಟ್ಟು ಹೋರಾಟದಲ್ಲಿ ಧುಮುಕಿದ್ದರು. ಇಂತಹ ಮಹಿಳೆಯರ ಸಾಲಿನಲ್ಲಿ ಯಶೋಧರಮ್ಮ ದಾಸಪ್ಪನವರು ಮುಂಚೂಣಿ ಹೋರಾಟದ ನಾಯಕಿಯಾಗಿ ರೂಪುಗೊಂಡಿದ್ದರು.

ಕೆ.ಎಚ್. ರಾಮಯ್ಯಯವರ ಮಗಳಾದ ಇವರಿಗೆ ಸಮಾಜಸೇವೆ ಹಾಗೂ ಹೋರಾಟದ ಮನೋಭಾವ ತಂದೆಯಿಂದಲೇ ಬಳುವಳಿಯಾಗಿ ಬಂದಿತ್ತು. ನಂತರ ಇವರ ಅಭಿರುಚಿಗೆ ಹೊಂದುವ ಪತಿಯನ್ನು ದೇವರು ದಯಪಾಲಿಸಿದ್ದು ಇವರ ಸೇವಾ ಮನೋಭಾವಕ್ಕೆ ಯಾವುದೇ ತೊಂದರೆಯಾಗಲಿಲ್ಲ. ಪತಿ ಹೆಚ್.ಸಿ. ದಾಸಪ್ಪ ಮಹಾನ್ ಹೋರಾಟಗಾರ. ನಾನು ಕೂಡ ಅವರ ಸಮೀಪದ ಒಡನಾಡಿ, ಕುಟುಂಬದ ಸ್ನೇಹಿತರಾಗಿದ್ದೆವು. ಇವರ ಸಹಕಾರದಿಂದಲೇ ಯಶೋಧರಮ್ಮನವರ ಬಹುಮುಖ ಪ್ರತಿಭೆ ಅನಾವರಣಗೊಳ್ಳಲು ಪರೋಕ್ಷವಾಗಿ ಕಾರಣವಾಯಿತು ಎಂದರೆ ತಪ್ಪಿಲ್ಲ.

ಪತಿಯ ಸಹಕಾರದಿಂದ, ಗಾಂಧೀಜಿಯವರ ಪ್ರಭಾವದಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಶ್ರೀಮತಿ ಯಶೋಧರಮ್ಮನವರು ಒಳ್ಳೆಯ ವಾಗ್ಮಿಯಾಗಿದ್ದರು. ತಮ್ಮ ಭಾಷಣಗಳ ಮೂಲಕ ಮಹಿಳೆಯರನ್ನು ಹೋರಾಟದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುತ್ತಿದ್ದರು. ಶಿವಪುರ ಧ್ವಜ ಸತ್ಯಾಗ್ರಹ ಸಂದರ್ಭದಲ್ಲಿ ಇವರು ತೋರಿದ ಧೈರ್ಯ ಸಾಹಸ ಮೆಚ್ಚುವಂತಹದು. ಸರ್ಕಾರದ ಕ್ರಮವನ್ನು ಖಂಡಿಸಿ ಅವರ ಕೋಪಕ್ಕೂ ಗುರಿಯಾಗಿದ್ದರು. ಯಾವುದಕ್ಕೂ ಹೆದರದೆ ಧೈರ್ಯದಿಂದ ಮುನ್ನುಗ್ಗುವ ಗುಣ ಮೆಚ್ಚುವಂತಹುದು. ವಿದುರಾಶ್ವತ್ಥ ದುರ್ಘಟನೆ, ಕ್ವಿಟ್ ಇಂಡಿಯಾ ಚಳವಳಿ, ಮೈಸೂರು ಚಲೋ, ಚಳವಳಿಯಲ್ಲಿ ಇವರ ಪಾತ್ರ ಅಮೋಘವಾದುದು.

ಮುಂಚೂಣಿಯ ನಾಯಕಿಯಾಗಿ ಹೋರಾಟವೇ ಜೀವನ, ದೇಶಸೇವೆ ನನ್ನ ಆದ್ಯ ಕರ್ತವ್ಯ ಎಂಬ ಮನೋಭಾವದಿಂದ ಬದುಕನ್ನು ಕಂಡ ಇವರ ವ್ಯಕ್ತಿತ್ವ ಹೆಮ್ಮೆಪಡುವಂತಹದು.

ಯಶೋಧರಮ್ಮ ದಂಪತಿಗಳು ಆದರ್ಶಮಯ ಜೀವನ ನಡೆಸಿದವರು. ಇವರು ಗಾಂಧೀಜಿಯವರ ಅನುಯಾಯಿಯಾಗಿ ಅವರ ತತ್ವಗಳನ್ನು ಜೀವನಪರ್ಯಂತ ಪಾಲಿಸಿಕೊಂಡು ಬಂದಂತಹವರು. ಅವರ ಪ್ರೀತಿಗೆ ಪಾತ್ರರಾಗಿದ್ದ ಇವರಿಗೆ ಸೇವಾ ಗ್ರಾಮದಲ್ಲಿ ನೆಲೆಸುವ ಭಾಗ್ಯ ದೊರಕಿದ್ದು ಅವರಲ್ಲಿದ್ದ ನಿಸ್ವಾರ್ಥತೆಯ ಮನಸ್ಸಿನಿಂದ, ತುಂಬು ಸಂಸಾರಿಗಳಾಗಿದ್ದ ಇವರ ಜೀವನ ಪ್ರತಿಯೊಬ್ಬರಿಗೂ ಆದರ್ಶವೆನ್ನಿಸುತ್ತದೆ.

ಯಶೋಧರಮ್ಮನಂತಹ ಹೋರಾಟದ ನಿಸ್ವಾರ್ಥ ಮನಸ್ಸಿನ ಸಾಮಾಜಿಕ, ರಾಜಕೀಯ ಅಭಿವೃದ್ಧಿಪರ ಕಾಳಜಿಯುಳ್ಳ ಮಹಿಳೆಯರು ದೇಶದಲ್ಲಿ ಹೆಚ್ಚು ಹೆಚ್ಚು ಮುಂದೆ ಬಂದರೆ ದೇಶವು ಅಭಿವೃದ್ಧಿ ಪಥದಲ್ಲಿ ಸಾಗುತ್ತದೆ ಎಂದು ನನ್ನ ಅನಿಸಿಕೆ. ಬಹುಮುಖ ಪ್ರತಿಭೆಯ ಈ ಯಶೋಧರಮ್ಮ ಹೋರಾಟದ ಚಿಲುಮೆಯಾಗಿ ಕರ್ನಾಟಕದ ಅದರಲ್ಲೂ ಕನ್ನಡಿಗರ ಹೃದಯದಲ್ಲಿ ಹಸಿರಾಗಿ ನೆಲೆಸಿದ್ದಾರೆ. ಅವರ ಕುಟುಂಬದವರಿಗೆ ದೇವರು ಒಳಿತನ್ನುಂಟು ಮಾಡಲಿ.

ನಿರೂಪಣೆ : ಶೈಲಜಾ. ಸಿ.ವಿ.

———— * ————

ಯುವಜನತೆಗೆ ಸ್ಫೂರ್ತಿ

ಹೆಚ್.ಡಿ.ದೇವೇಗೌಡ

ಸ್ವಾತಂತ್ರ್ಯ ಪೂರ್ವದ ಜನಪರ ಚಿಂತನೆಯ ರಾಜಕಾರಣಿಗಳಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪನವರ ಹೆಸರು ಮೊದಲಿಗೆ ಕೇಳಿ ಬರುತ್ತದೆ. ಶಿವಪುರ ಸತ್ಯಾಗ್ರಹದಲ್ಲಿ ಆಕೆ ವಹಿಸಿದ ನಾಯಕತ್ವ ಕರ್ನಾಟಕದ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರೇರಣೆ ನೀಡಿತ್ತು. ಸನ್ಮಾನ್ಯ ಶ್ರೀ ಬಿ.ಡಿ.ಜತ್ತಿ ಹಾಗೂ ಶ್ರೀ ಎಸ್. ನಿಜಲಿಂಗಪ್ಪ ಅವರುಗಳ ಸಚಿವ ಸಂಪುಟದಲ್ಲಿ ಕರ್ನಾಟಕದ ಮೊತ್ತ ಮೊದಲ ಸಮಾಜ ಕಲ್ಯಾಣ ಸಚಿವರಾಗಿ ಆ ಇಲಾಖೆಗೆ ತಮ್ಮ ಕಾರ್ಯದಕ್ಷತೆಯಿಂದ ಜೀವತುಂಬಿದ್ದರು. ನಿಜಲಿಂಗಪ್ಪ ಸರ್ಕಾರ ಪಾನನಿರೋಧವನ್ನು ಸಡಿಲಿಕೆ ಮಾಡಿದಾಗ ಅಸಮಾಧಾನಗೊಂಡು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಯಶೋಧರಮ್ಮ ದಾಸಪ್ಪನವರು ಇತಿಹಾಸ ನಿರ್ಮಿಸಿದ್ದಾರೆ. ಸಾಮಾಜಿಕ ಕಾರ್ಯಕರ್ತೆಯಾಗಿ ಕೂಡ ಅವರು ಅನುಪಮ ಸೇವೆ ಸಲ್ಲಿಸಿದ್ದಾರೆ. ಅರಸೀಕೆರೆಯಲ್ಲಿ ಸ್ಥಾಪಿಸಿರುವ ಕಸ್ತೂರಿಬಾ ಟ್ರಸ್ಟ್ ಅವರ ಸಾಮಾಜಿಕ ಕಳಕಳಿಗೆ ಸಾಕ್ಷಿ ನೀಡಿದೆ. ಇಂತಹವರ ನೆನಪು ಕರ್ನಾಟಕದ ಯುವಜನತೆಯಲ್ಲಿ ಸದಾ ಕಾಲ ಇರಬೇಕು. ಸರ್ಕಾರ ಅವರ ಜನ್ಮೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲೆಂದು ಹಾರೈಸುತ್ತೇನೆ.

*

ಕರ್ನಾಟಕದ ಕಸ್ತೂರ ಬಾ

ಬಿ.ಆರ್. ಪ್ರಾಣೇಶರಾವ್

ಸಮಾಜದ ಪ್ರತಿಷ್ಠಿತ ಸಂಪ್ರದಾಯಸ್ಥ ಮನೆತನದಿಂದ ಬಂದ ಯಶೋಧರಮ್ಮ ದಂಪತಿಗಳು ಮತ್ತು ನಾನು ಸಹೋದರ ಸಂಬಂಧಿಗಳ ಹಾಗೆ ಇದ್ದೇವೆ. ದಂಪತಿಗಳಿಬ್ಬರದ್ದೂ ಸರಳ ವ್ಯಕ್ತಿತ್ವದ ಬದುಕು. ಸಮಾಜ ಸೇವೆ ಮತ್ತು ದೇಶ ಸೇವೆ ಎಂಬುದೇ ಅವರ ಗುರಿ. ಅವರ ಆ ಗುಣಗಳೇ ಅವರು ಗಾಂಧೀಜಿಯವರ ತತ್ವವನ್ನು ಮೈಗೂಡಿಸಿಕೊಳ್ಳಲು ಅನುಕೂಲವಾಯಿತು. ಗಾಂಧೀಜಿಯ ಪ್ರಭಾವದಿಂದ ದೇಶ ಸೇವೆಗೆ ಪಾದಾರ್ಪಣೆ ಮಾಡಿದ ಇವರು ಮಹಾತ್ಮರ ಆಶಯದಂತೆ ಜೀವನ ನಡೆಸಿದರು.

ಸ್ವತಃ ಗಾಂಧೀಜಿಯರೇ ಯಶೋಧರಮ್ಮನವರನ್ನು ಬುದ್ಧಿವಂತ ಮತ್ತು ಧೈರ್ಯವಂತ ಮಹಿಳೆ ಎಂದೇ ಕರೆಯುತ್ತಿದ್ದರು. ಅವರಲ್ಲಿದ್ದ ಸಾಮಾಜಿಕ ಕಳಕಳಿಯನ್ನು ಗುರುತಿಸಿದ ಗಾಂಧೀಜಿಯವರು, ಯಶೋಧರಮ್ಮನವರಿಗೆ ರಚನಾತ್ಮಕ ಕಾರ್ಯದ ದೀಕ್ಷೆ ನೀಡಿ ಮಹಿಳೆಯ ಅಭ್ಯುದಯಕ್ಕೆ ಸೇವೆ ಸಲ್ಲಿಸುವಂತೆ ಆಶೀರ್ವಾದ ಮಾಡಿದ್ದರು. ಯಶೋಧರಮ್ಮನಂತಹ ಮಹಿಳೆ ರಚನಾತ್ಮಕ ಕಾರ್ಯಕ್ಷೇತ್ರದಲ್ಲಿದ್ದರೆ ಸ್ತ್ರೀಶಕ್ತಿ ವರ್ಧನೆಗೆ ಚಾಲನೆ ಬರುತ್ತದೆ ಎಂಬ ನಿಲುವು ಗಾಂಧೀಜಿಯವರದಾಗಿತ್ತು.

ಗಾಂಧೀಜಿಯವರ ಮರಣದ ನಂತರ ಅವರ ಸ್ಮರಣಾರ್ಥ ಕಸ್ತೂರ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ್ನು ಪ್ರಾರಂಭವಾಯಿತು. ಆ ಟ್ರಸ್ಟ್ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸುತ್ತಿತ್ತು. ಯಶೋಧರಮ್ಮ ನವರನ್ನು ಮೈಸೂರು ಶಾಖೆಯ ಪ್ರತಿನಿಧಿಯಾಗಿ ನೇಮಿಸಲಾಯಿತು. ಯಶೋಧರಮ್ಮ ರಾಜ್ಯದಲ್ಲೆಲ್ಲ ಸಂಚರಿಸಿ ಮಹಿಳೆಯರನ್ನು ಒಂದುಗೂಡಿಸಿ ಪ್ರಸೂತಿ, ಹೊಲಿಗೆ, ಪೇಂಟಿಂಗ್ ಮುಂತಾದ ವಿಷಯಗಳಲ್ಲಿ ತರಬೇತಿಗಳನ್ನು ನೀಡಿ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸುವಲ್ಲಿ ಅತ್ಯಂತ ಹೆಚ್ಚಿನ ಶ್ರಮವನ್ನು ವಹಿಸಿದ್ದರು.

ನಾನು ಕೂಡ ಯಶೋಧರಮ್ಮನವರ ಸಹಾಯಕರಾಗಿ ಕೆಲಸವನ್ನು ಮಾಡಿದೆ. ಮಹಿಳೆಯರ, ದಲಿತರ ಮತ್ತು ನಿರ್ಗತಿಕರ ಏಳಿಗೆಗಾಗಿ ಯಶೋಧರಮ್ಮ ವಹಿಸುತ್ತಿದ್ದ ಮುತುವರ್ಜಿ ಅಸಾಧಾರಣವಾದುದು. ನೊಂದು ಬಂದಂತಹ ಮಹಿಳೆಯರಿಗೆ ಆಶ್ರಯ ನೀಡಿ ಅವರ ಜೀವನಕ್ಕೆ ಅನುಕೂಲವಾಗಲೆಂದು ಆರ್ಥಿಕ ಸಹಾಯವನ್ನು ನೀಡುತ್ತಿದ್ದರು. ಜೊತೆಗೆ ಅವರಿಗೆ ತರಬೇತಿಯನ್ನು ನೀಡಿ ಆರ್ಥಿಕ ಸ್ವಾವಲಂಬಿಗಳಾಗಿಸಿ ಅವರ ಬದುಕಿನ ದೀಪವಾಗುತ್ತಿದ್ದರು. ಅವರಲ್ಲಿದ್ದ ಸಾಮಾಜಿಕ ಕಳಕಳಿ ನನ್ನ ಮೇಲೆ ಹೆಚ್ಚಿನ ಪ್ರಭಾವ ಬೀರಿತು. ಅವರಿಂದ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುವ ರೀತಿಯನ್ನು, ಸಮಾಜಸೇವೆಯನ್ನು ಕಲಿತುಕೊಂಡೆವು.

ಯಶೋಧರಮ್ಮ ಅರಸೀಕೆರೆ ಹತ್ತಿರ ಸರ್ಕಾರದಿಂದ ಪಡೆದ ನೂರು ಎಕರೆ ಜಮೀನಿನಲ್ಲಿ ಕಸ್ತೂರ ಬಾ ಗ್ರಾಮವನ್ನು ನಿರ್ಮಾಣ ಮಾಡಿ ಆ ಜಮೀನಿನಲ್ಲಿ ನೂರಾರು ತೆಂಗಿನ ಮರಗಳನ್ನು, ಹಣ್ಣು, ಮತ್ತಿತರ ಗಿಡಗಳನ್ನು ಬೆಳೆಸಿ ತಾವು ಅಲ್ಲೇ ಇದ್ದು ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಹೊತ್ತು ಹಗಲಿರುಳೂ ಶ್ರಮಿಸಿದರು. ಅನೇಕ ಹೆಣ್ಣುಮಕ್ಕಳಿಗೆ ಅದು ಆಶ್ರಯ ತಾಣವಾಗಿ ಪರಿಣಮಿಸಿ ನೊಂದ ಹೆಣ್ಣುಮಕ್ಕಳ ತಾಯಿಯೆನಿಸಿದ ಯಶೋಧರಮ್ಮ ನಿಜವಾಗಿಯೂ ಧೀಮಂತ ವ್ಯಕ್ತಿತ್ವದ ಮಹಿಳೆ.

ರಾಷ್ಟ್ರಮಟ್ಟದಲ್ಲಿ ಕಸ್ತೂರ ಬಾ ಅವರು, ಗಾಂಧೀಜಿಯವರ ಪತ್ನಿಯಾಗಿ ಪ್ರೀತಿ ವಿಷಯದಲ್ಲಿಯೂ ಅವರಿಗೆ ಸಹಾಯಕರಾಗಿ ಸೇವೆ ಸಲ್ಲಿಸುತ್ತಾ ಮಹಿಳೆಯರ ಏಳಿಗೆ ಮತ್ತು ಶ್ರೇಯಸ್ಸಿನ ಬಗ್ಗೆ ಕಾಳಜಿಯನ್ನು ಹೊಂದಿ ರಚನಾತ್ಮಕ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡು ಅವರ ಬದುಕಿಗೆ ಆದರ್ಶವಾದ ಹಾಗೆಯೇ ಯಶೋಧರಮ್ಮ ಸಭ್ಯ ಪತಿಯ ಸತಿಯಾಗಿ ಅವರಿಗೆ ಎಲ್ಲ ರೀತಿಯ ಸಹಕಾರವನ್ನು ನೀಡುತ್ತಲೇ ತಮ್ಮನ್ನು ಸಾಮಾಜಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಮಹಿಳೆಯರಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಅದನ್ನು ಕಾರ್ಯಗತಗೊಳಿಸುವಲ್ಲಿ ಯಶಸ್ಸು ಕಂಡರು.

ಸಮಾಜಸೇವೆ ಮಾಡ ಬಯಸುವ ಪ್ರತಿಯೊಬ್ಬರಿಗೂ ಯಶೋಧರಮ್ಮನವರ ನಿಸ್ವಾರ್ಥ ಬದುಕು ಮಾರ್ಗದಾಯಕವಾಗಿದೆ. ಪ್ರತಿಯೊಬ್ಬರೂ ಅವರ ಗುಣಗಳನ್ನು ಮೈಗೂಡಿಸಿಕೊಂಡು ಸೇವೆಯನ್ನು ನಿಸ್ವಾರ್ಥತೆಯಿಂದ ಮಾಡಿದರೆ ಅವರ ಜೀವನ ಸಾರ್ಥಕತೆಯನ್ನು ಪಡೆಯುತ್ತದೆ ಎಂಬುದು ನನ್ನ ಅನಿಸಿಕೆ.

ನಿರೂಪಣೆ : ಡಾ. ಶೈಲಜಾ ಸಿ.ವಿ.

——— * ———

ಸ್ತ್ರೀಕುಲದ ಮುಕುಟಮಣಿ

ಶರಣಗೌಡ ಇನಾಂದಾರ್

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸಾವಿರಾರು ಜನರು ಸಾರ್ವಜನಿಕ ಬದುಕಿಗೆ ಧುಮುಕಿ ನಮಗೆ ಅಮೂಲ್ಯವಾದ ಸ್ವಾತಂತ್ರ್ಯವನ್ನು ತಂದುಕೊಟ್ಟಿದ್ದಾರೆ. ಅಂತಹ ವ್ಯಕ್ತಿತ್ವಗಳು ನಮಗೆ ಆದರ್ಶವಾಗಬೇಕು. ಶಾಲಾ ಕಾಲೇಜುಗಳಲ್ಲಿ ಅಂತಹ ಮಹಾನ್ ವ್ಯಕ್ತಿತ್ವಗಳ ಬಗೆಗೆ ಜೀವನಚರಿತ್ರೆಗಳನ್ನು ಬರೆಸಿ ಓದಲು ಕೊಡಬೇಕು ಮಾತ್ರವಲ್ಲ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಲು ಮಕ್ಕಳಲ್ಲಿ ಪ್ರೇರಣೆಯನ್ನು ಹಾಗೂ ಪ್ರಭಾವದ ಮುದ್ರೆಯನ್ನು ಒತ್ತಬೇಕು. ಪ್ರಾಯಶಃ ಇಂತಹ ವ್ಯಕ್ತಿತ್ವಗಳ ಸಾಲಿನಲ್ಲಿ ಹೆಮ್ಮೆಯಿಂದ ಸೇರಿಸಬಹುದಾದ ಮತ್ತು ಕರ್ನಾಟಕದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಹೆಸರನ್ನು ಬರೆಯಬಹುದಾದ ಮಹತ್ವದ ವ್ಯಕ್ತಿತ್ವವೆಂದರೆ ಯಶೋಧರಮ್ಮ ದಾಸಪ್ಪ ಅವರದು. ನಿಶ್ಚಿತವಾಗಿ ಅವರು ಕರ್ನಾಟಕದ ಕಸ್ತೂರ ಬಾ. ಜನತೆಯ ಪಾಲಿಗೆ ದೀನದಲಿತರ ಪಾಲಿಗೆ, ದುರ್ಬಲರ ಪಾಲಿಗೆ, ಮಹಿಳೆಯರ ಪಾಲಿಗೆ ಆಶಾಕಿರಣ. ಮೌಲ್ಯಗಳನ್ನು ಮೇಲೆತ್ತಿ ಹಿಡಿದ ಮಹಾನ್ ಸಾಧ್ವಿ ಹಾಗೂ ಮಹತ್ವದ ಕರ್ನಾಟಕದ ನಾಯಕಿ. ಅವರು ಬದುಕಿ ಹೋದ ಶತಮಾನದ ಚಿತ್ರ ನಿಜಕ್ಕೂ ಸ್ತ್ರೀಯರ ಪಾಲಿಗೆ ಅತ್ಯಂತ ಮಹತ್ವದ್ದೆಂದು ನಾನು ಅಭಿಪ್ರಾಯ ಪಡುತ್ತೇನೆ.

ಸ್ತ್ರೀಕಲ್ಯಾಣಕ್ಕಾಗಿ ಅವರು ಮಾಡಿದ ಕೆಲಸ ಒಂದೆರಡಲ್ಲ. ರಚನಾತ್ಮಕ ಕಾರ್ಯಗಳನ್ನು ನಿರ್ಭಿಡೆಯಿಂದ ಪುರುಷ ಪ್ರಧಾನ ಸಮಾಜದಲ್ಲಿ ಪಣತೊಟ್ಟು ಹತ್ತು-ಹಲವು ಸಂಸ್ಥೆಗಳನ್ನು ಕಟ್ಟಿದರು. ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಮೈಸೂರು ಶಾಖೆಯ ಪ್ರತಿನಿಧಿಯಾಗಿ ಗ್ರಾಮೀಣ ಮಹಿಳೆಯರಲ್ಲಿ ಜಾಗೃತಿಯನ್ನುಂಟು ಮಾಡಿದರು. ಸ್ವಾವಲಂಬನೆ, ಧೈರ್ಯ ಮತ್ತು ಅರಿವನ್ನು ಮೂಡಿಸುವ ಕಾರ್ಯದಲ್ಲಿ ನಿರತರಾಗಿ ಮಹಿಳೆಯರಿಗೆ ನಿಸ್ಸಂಶಯವಾಗಿ ದಾರಿದೀಪವಾದರು. 1947ರ ಮಾರ್ಚ್‌ನಲ್ಲಿ ಯಶೋಧರಮ್ಮ ಅವರು ತಾವು ಮಾಡಬೇಕಾದ ಕರ್ತವ್ಯಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಗಾಂಧಿಯವರನ್ನು ಸಂದರ್ಶಿಸಿದರು. ಇವರ ಆಲೋಚನೆಗಳನ್ನು ಕಂಡು ಗಾಂಧೀಜಿ ಬೆರಗಾದರು. ಗ್ರಾಮಸ್ವರಾಜ್ಯ, ಮಹಿಳೆಯರ ಸ್ವಾವಲಂಬನೆ, ಕಸ್ತೂರಬಾ ಕೇಂದ್ರಗಳ ಸ್ಥಾಪನೆ, ಗ್ರಾಮಸೇವಕಿಯರ ತರಬೇತಿ, ಅಂಗನವಾಡಿ ಕೇಂದ್ರಗಳಿಗೆ ಬೇಕಾಗುವ ಮಾನವ ಸಂಪನ್ಮೂಲಕ್ಕೆ ತರಬೇತಿಯನ್ನು ನೀಡಲು ಸಂಸ್ಥೆಗಳನ್ನು ನಿರ್ಮಾಣ ಮಾಡಬೇಕೆಂಬ ಅವರ ಆಶಯವನ್ನು ಗಾಂಧೀಜಿಯವರ ಮುಂದೆ ವ್ಯಕ್ತಪಡಿಸಿದರು. ಗಾಂಧೀಜಿಯವರ ಇಂಗಿತವನ್ನು ಕಂಡುಕೊಂಡ ಮೇಲೆ ಮೈಸೂರು ಅರಸೀಕೆರೆಗಳಲ್ಲಿ ಪ್ರಸೂತಿ ಕೇಂದ್ರಗಳನ್ನು, ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ್ನು ಆರಂಭಿಸಿದರು. ಬನವಾಸಿ, ಗುಂಜಳ್ಳಿ, ಗಣಾಯಕನಹಳ್ಳಿ, ಹೊಸಳ್ಳಿಗಳಲ್ಲಿ ಪ್ರಸೂತಿ ಕೇಂದ್ರಗಳನ್ನು ತೆರೆದರು. ಅದಮಾರು, ಬೈಲೂರು, ಬರೂರು, ಬೆಟ್ಟಸೂರು ಬಾಗೀವಾಲು ಬೂದನೂರು, ಗಣಾಯಕನಹಳ್ಳಿ, ಗಂಗಸಂದ್ರ, ಗುಂಜಹಳ್ಳಿ, ಹೊಸಹಳ್ಳಿ, ಹರೇಕುಂವೀ, ಕೊಡಗನೂರು, ಕಡೋಲಿ, ಮಸ್ಕಲ್, ಮಹಾರ್ನವಮಿ ದೊಡ್ಡಿಗಳಲ್ಲಿ ಗ್ರಾಮಸೇವಾ ಕೇಂದ್ರಗಳು, ಬಾಲವಾಡಿ ಪೌಷ್ಟಿಕ ಆಹಾರ ಯೋಜನೆಗಳೊಂದಿಗೆ

ಕೇಂದ್ರಗಳನ್ನು ಸ್ಥಾಪಿಸಿದರು. ಬಸವಕಲ್ಯಾಣ, ಚಂಡಲಿಕಿ, ಗದಗ, ಗೀಜಿಹಳ್ಳಿ, ಹೀರಾವಂದ, ಇಮ್ಮಡಿಹಳ್ಳಿ, ಕೋಡಿಹೆಜಮಾಡಿ, ರಜತಾದ್ರಿಪುರ, ಸೋಮವಾರಪೇಟೆ ಮುಂತಾದೆಡೆಗಳಲ್ಲಿ ಪ್ರಸೂತಿ ಕೇಂದ್ರಗಳನ್ನು, ಪೌಷ್ಟಿಕ ಆಹಾರ ವಿತರಿಸುವ ಕೇಂದ್ರಗಳನ್ನು, ಬಾಲವಾಡಿ ಕೇಂದ್ರಗಳನ್ನು, ವಯಸ್ಕರ ಶಿಕ್ಷಣ ಕೇಂದ್ರಗಳನ್ನು, ಕರಕುಶಲ ಶಾಲೆಗಳನ್ನು ನಡೆಸಲು ತೀರ್ಮಾನಿಸಿದರು. ಅಂತೆಯೇ ಕಾರ್ಯಾನುಷ್ಠಾನುಮುಖಿಯಾದರು. ಕಸ್ತೂರಬಾ ಗಾಂಧಿ ರಾಷ್ಟ್ರೀಯ ಟ್ರಸ್ಟ್ ರಾಜ್ಯದಲ್ಲಿ ಇಪ್ಪತ್ತು ಶಾಖೆಗಳನ್ನು ಹೊಂದಿದ್ದು, ನಾನೂರರಿಂದ ಐನೂರು ಸೇವಾ ಕೇಂದ್ರಗಳನ್ನು ತೆರೆದಿದೆ. 2000 ಕೇಂದ್ರಗಳು ಅನಕ್ಷರತೆಯ ನಿವಾರಣೆಗಾಗಿ ದುಡಿಯುತ್ತಿವೆ. 40,000 ಸ್ವಯಂಸೇವಕಿಯರಿಗೆ ತರಬೇತಿಯನ್ನು ನೀಡಲಾಗಿದೆ. 23 ಯೋಜನೆಗಳನ್ನು ಗುರುತಿಸಿ ರಾಜ್ಯವ್ಯಾಪಿ ಅವರು ಕಟ್ಟಿದ ಸಂಸ್ಥೆಗಳು ಇಂದು ಕೆಲಸ ಮಾಡುತ್ತಿವೆ. ಸಾಕ್ಷರತೆ, ಪಾನನಿರೋಧ, ಸ್ತ್ರೀಸ್ವಾವಲಂಬನೆ, ಸ್ತ್ರೀಸಬಲೀಕರಣ, ವಯಸ್ಕರ ಶಿಕ್ಷಣ ಮುಂತಾದ ಮುಖ್ಯವಾದ ಧ್ಯೇಯೋದ್ದೇಶಗಳನ್ನಿಟ್ಟುಕೊಂಡು ಅಮ್ಮನವರು ಮಾಡಿದ ಕೆಲಸಗಳು ಅನುಪಮವಾದವುಗಳು, ಶ್ಲಾಘನೀಯವಾದವುಗಳು. ಈ ಕಾರಣಕ್ಕಾಗಿ ಅವರನ್ನು ಕರ್ನಾಟಕದ ಜನತೆ ನಿತ್ಯವೂ ಸ್ಮರಿಸಿಕೊಳ್ಳಬೇಕಾಗಿದೆ.

ನಿರೂಪಣೆ : ಡಾ. ಎಸ್.ಎಂ. ಗಂಗಾಧರಯ್ಯ

———— * ————

ಸುಸಂಸ್ಕೃತ ಕುಟುಂಬ

ಎಸ್.ಎಂ. ಕೃಷ್ಣ

ಕರ್ನಾಟಕ ಸರ್ಕಾರ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ಜನ್ಮಶತಮಾನೋತ್ಸವ ಆಚರಿಸುತ್ತಿರುವುದು ಸಮಯೋಚಿತವಾದ ಸಂಗತಿಯಾಗಿದೆ. ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಸ್ವಾತಂತ್ರ ಹೋರಾಟಗಾರರಾಗಿ ಮಹಾತ್ಮಾ ಗಾಂಧೀಜಿ ಅವರ ರಚನಾತ್ಮಕ ಕೆಲಸಗಳ ಪ್ರವರ್ತಕರಾಗಿ ಶೋಷಿತ ಸಮಾಜದ ಚಿಂತಕರಾಗಿ ಕರ್ನಾಟಕದಲ್ಲಿ ಗಣನೀಯ ಸ್ಥಾನ ಪಡೆದಿದ್ದಾರೆ. ಅವರ ತಂದೆ ಕೆ.ಹೆಚ್. ರಾಮಯ್ಯ ಅವರು ಮೈಸೂರು ಸಂಸ್ಥಾನದಲ್ಲಿ ಹಿರಿಯ ಅಧಿಕಾರಿಗಳಾಗಿದ್ದರು. ರಾಮಯ್ಯ ಅವರು ಸ್ವಾಮಿ ವಿವೇಕಾನಂದರ ಆದರ್ಶಗಳಿಗೆ ಮನಸೋತವರು. ಯಶೋಧರಮ್ಮ ಅವರ ಪತಿ ಹೆಚ್.ಸಿ. ದಾಸಪ್ಪ ಅವರು ಶ್ರೇಷ್ಠ ವಕೀಲರು, ಸ್ವಾತಂತ್ರ್ಯ ಪೂರ್ವದಲ್ಲಿಯೇ ಪ್ರಭಾವಶಾಲಿ ನಾಯಕರಾಗಿದ್ದರು. ದಂಪತಿಗಳಿಬ್ಬರು ಸ್ವಾತಂತ್ರ್ಯ ಹೋರಾಟಗಾರರು. 1938ರಲ್ಲಿ ನಡೆದ ಶಿವಪುರ ಧ್ವಜಸತ್ಯಾಗ್ರಹ ಘಟನೆಯ ಸಂದರ್ಭದಲ್ಲಿ ಶ್ರೀಮತಿ ಯಶೋಧರಮ್ಮ ಅವರ ನಾಯಕತ್ವದ ಪ್ರತಿಭೆ ಶ್ರೇಷ್ಠ ರೀತಿಯಲ್ಲಿ ಹೊರಹೊಮ್ಮಿತ್ತು. ಅರಸೀಕೆರೆ ಬಳಿಯಿರುವ 'ಕಸ್ತೂರಬಾ ಸೇವಾ ಟ್ರಸ್ಟ್' ರಚನಾತ್ಮಕ ಕೆಲಸಗಳಲ್ಲಿ ಯಶೋಧರಮ್ಮ ಅವರಿಗಿದ್ದ ಬದ್ಧತೆಯನ್ನು ಸಾಕ್ಷಿಯ ರೂಪದಲ್ಲಿ ತೋರಿಸುತ್ತದೆ. ಕರ್ನಾಟಕದ ಮೊದಲ ಸಚಿವೆ ಎಂಬ ಹೆಗ್ಗಳಿಕೆ ಪಡೆದಿದ್ದು, ಶ್ರೀಮತಿ ಯಶೋಧರಮ್ಮ ಅವರು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅನೇಕ ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಮದ್ಯಪಾನ ನಿಷೇಧದಲ್ಲಿ ಆಕೆಗಿದ್ದ ದೃಢ ನಿಲುವು ಅವರಿಗೆ ಕರ್ನಾಟಕ ರಾಜ್ಯ ಇತಿಹಾಸದಲ್ಲಿ ಶಾಶ್ವತ ಸ್ಥಾನ ದೊರಕಿಸಿಕೊಟ್ಟಿದೆ. ಯಶೋಧರಮ್ಮ ಅವರ ಮಗ ತುಳಸಿದಾಸಪ್ಪ ಮತ್ತು ನಾನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಜೊತೆಯಾಗಿ ವ್ಯಾಸಂಗ ಮಾಡಿದ್ದೆವು. ಬಹಳ ದಿನಗಳಿಂದಲೂ ಯಶೋಧರಮ್ಮ ಅವರ ಕುಟುಂಬವನ್ನು ನೋಡುತ್ತ ಬಂದಿದ್ದೇನೆ. ಅದೊಂದು ಸುಸಂಸ್ಕೃತವಾದ ಕುಟುಂಬ. ಅವರ ತ್ಯಾಗ ಹಾಗೂ ಪ್ರಾಮಾಣಿಕ ಕರ್ತವ್ಯನಿಷ್ಠೆ ಸ್ತುತ್ಯಾರ್ಹವಾದದ್ದು. ಅವರ ಕಾರ್ಯ ಮತ್ತು ಜೀವನ ಯುವಜನತೆಗೆ ಸ್ಫೂರ್ತಿ ಕೊಡಲೆಂದು ಹಾರೈಸುತ್ತೇನೆ.

——— * ———

ನಿಜವಾದ ಗಾಂಧಿ ಅನುಯಾಯಿ

ಎಚ್.ಎಸ್. ದೊರೆಸ್ವಾಮಿ

ಸ್ವಾತಂತ್ರ್ಯ ಸಂಗ್ರಾಮ ಸಮಯದಲ್ಲಿ ಗಾಂಧೀಜಿಯವರ ಅನುಯಾಯಿಗಳು ಅನೇಕ ಮಹನೀಯರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ತನುಮನಧನಗಳನ್ನರ್ಪಿಸಿ ಸಮರ್ಪಣಾಭಾವದಿಂದ ದೇಶ ಸೇವೆ ಮಾಡಿದ್ದರು. ಗಾಂಧೀಜಿಯವರ ತತ್ವವನ್ನು ನಿಷ್ಠೆಯಿಂದ ಪಾಲಿಸಿ ಸರಳ ಜೀವನವನ್ನು ನಡೆಸಿದರು. ಪುರುಷರಷ್ಟೇ ಮಹಿಳೆಯರು ಕೂಡ ಅವರ ಅನುಯಾಯಿಯಾಗುವುದರೊಂದಿಗೆ ಅವರ ವಿಚಾರಧಾರೆಗಳಿಂದ ಪ್ರಭಾವಿತರಾಗಿ ತತ್ವಬದ್ಧ ಜೀವನವನ್ನು ನಡೆಸಿದರು. ಮಹಿಳೆಯರ ಅವಶ್ಯಕತೆಯನ್ನು ಮನಗಂಡಿದ್ದ ಗಾಂಧೀಜಿಯವರು ಅವರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಹೆಚ್ಚಾಗಿ ತೊಡಗುವಂತೆ ಪ್ರೇರೇಪಿಸಿದರು. ಮೈಸೂರು ಸಂಸ್ಥಾನದ ನಾಯಕ–ನಾಯಕಿಯರ ಮೇಲೂ ಗಾಂಧೀಜಿಯವರ ಪ್ರಭಾವ ಉಂಟಾಗದೆ ಇರಲಿಲ್ಲ. ಅವರ ಪ್ರಭಾವಕ್ಕೆ ಒಳಗಾದ ಮಹಿಳೆಯರಲ್ಲಿ ಯಶೋಧರಮ್ಮ ಕೂಡ ಒಬ್ಬರು.

ನಾನು ಕೂಡ ಯಶೋಧರಮ್ಮ ದಂಪತಿಗಳನ್ನು ಹತ್ತಿರದಿಂದಲೇ ಬಲ್ಲೆನು. ಅವರು ಆ ಕಾಲದ ನಮ್ಮಂತಹ ಯುವಕರಿಗೆ ಮಾರ್ಗದರ್ಶಕರಾಗಿ ಸ್ವಾತಂತ್ರ್ಯ ಹೋರಾಟದ ಸನ್ನಿವೇಶದಲ್ಲಿ ನಮಗೆ ಸ್ಫೂರ್ತಿಯ ನಾಯಕರಾಗಿದ್ದರು. ಅವರ ದೇಶ ಸೇವೆಯ ಮನೋಭಾವದಿಂದ ಆಕರ್ಷಿತರಾಗಿದ್ದೆವು. ದೇಶಸೇವೆ ಜನಸೇವೆ ಎಂಬುದೊಂದೆ ಆ ದಂಪತಿಗಳ ಜಪವಾಗಿತ್ತು. ಅವರ ಮನೆಯಲ್ಲಿ ಯಾವಾಗಲೂ ಜನಸಂದಣಿ.

ಗಾಂಧೀಜಿಯವರ ಅತ್ಯಂತ ನಿಕಟವರ್ತಿಗಳಾಗಿ ಇವರು ಅವರ ಪ್ರೀತಿಯನ್ನು ಗಳಿಸಿದ್ದರು. ಅವರ ವಿಚಾರಧಾರೆಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ತತ್ವನಿಷ್ಠತೆಯನ್ನು ಜೀವನದ ಉದ್ದಕ್ಕೂ ಚಾಚೂ ತಪ್ಪದೆ ಪಾಲಿಸಿಕೊಂಡು ಬಂದರು, ಯಾವುದೇ ಅಧಿಕಾರದ ಆಸೆಗೆ ಒಳಗಾಗಲಿಲ್ಲ. ಅಧಿಕಾರ ಸಿಕ್ಕಾಗ ಅದರ ದುರುಪಯೋಗ ಮಾಡಿಕೊಳ್ಳದೆ ಇದ್ದರು. ತಾವು ನಂಬಿದ ತತ್ವಕ್ಕಾಗಿ ಅಧಿಕಾರವನ್ನೇ ತ್ಯಾಗ ಮಾಡುವಂತಹ ವಿಶಾಲ ಮನೋಭಾವವನ್ನು ಹೊಂದಿದ್ದರು. ಇದಕ್ಕೆ ಮುಖ್ಯ ಉದಾಹರಣೆ ಎಂದರೆ ಎಸ್. ನಿಜಲಿಂಗಪ್ಪರವರ ಮಂತ್ರಿಮಂಡಲದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿ ಪದವಿಯನ್ನು ಅಲಂಕರಿಸಿದ ಯಶೋಧರಮ್ಮ ಯಾವುದೇ ಅಧಿಕಾರ ಹಣದ ಆಮಿಷಕ್ಕೆ ಒಳಗಾಗದೆ ಕೆಲಸವನ್ನು ಮಾಡುತ್ತಿದ್ದರು.

ಆದರೆ ದೇಶದ ರಾಜಕೀಯದಲ್ಲಿ ಆದ ಬದಲಾವಣೆಯಿಂದ ಆಡಳಿತ ರಂಗದಲ್ಲೂ ವ್ಯತ್ಯಾಸವಾಗಿತ್ತು. ಕರ್ನಾಟಕ ರಾಜ್ಯದಲ್ಲಿ ನಿಜಲಿಂಗಪ್ಪನವರ ಮಂತ್ರಿಮಂಡಲ ಮದ್ಯಪಾನ ನಿರೋಧ ಸಡಿಲಿಕೆಯನ್ನು ಜಾರಿಗೊಳಿಸಿತು. ಈ ಸಂದರ್ಭದಲ್ಲಿ ಯಶೋಧರಮ್ಮ ಗಾಂಧೀಜಿಯವರ ಆಶಯಕ್ಕೆ ನೋವನ್ನುಂಟುಮಾಡುವ, ಸರ್ಕಾರ ಜಾರಿಗೊಳಿಸಿದ ಪಾನ ನಿರೋಧ ಸಡಿಲಿಕೆಯನ್ನು ಕುರಿತು ತೀವ್ರವಾದ ಪ್ರತಿಭಟನೆಯನ್ನು ಮಾಡಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು.

ದೀನದಲಿತರ ಜೀವನವನ್ನು ದಾರಿದ್ರ್ಯಕ್ಕೆ ತಳ್ಳುವ, ಕೋಟಿ ಕೋಟಿ ಹೆಣ್ಣುಮಕ್ಕಳ ಕಣ್ಣೀರಿಗೆ ಕಾರಣವಾಗುವ ಮದ್ಯಪಾನವೆಂಬುದು ನಾಗರಿಕರ ಸಮಾಜದ ಲಕ್ಷಣವಲ್ಲ. ನೂರಾರು ಜೀವವನ್ನು ಬಲಿ ತೆಗೆದುಕೊಳ್ಳುವ ಇದನ್ನು ಹಿಂದಕ್ಕೆ ಪಡೆಯಬೇಕೆಂದು ಆಗ್ರಹಿಸಿದರು. ಆದರೆ ಸರ್ಕಾರವು ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆಯನ್ನು ಮಾಡದ ಪರಿಣಾಮ ತತ್ವ ಪರಿಪಾಲನೆಗಾಗಿ ಮಂತ್ರಿ ಪದವಿಗೆ ರಾಜೀನಾಮೆ ನೀಡಿ ಹೊರಬಂದದ್ದು ಅವರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮದಲ್ಲಿ ಮಧ್ಯಪಾನದ ವಿರೋಧವೂ ಒಂದು. "ಒಂದೇ ಒಂದು ದಿನ ನನ್ನನ್ನು ಸರ್ವಾಧಿಕಾರಿಯನ್ನಾಗಿ ಮಾಡಿದರೆ ದೇಶದಾದ್ಯಂತ ಎಲ್ಲ ಮದ್ಯದ ಅಂಗಡಿಗಳನ್ನು ಕಡ್ಡಾಯವಾಗಿ ಯಾವ ಪರಿಹಾರವನ್ನೂ ಕೊಡದೆ ಮುಚ್ಚಿಸಿಬಿಡುತ್ತೇನೆ" ಎಂದು ಹೇಳುತ್ತಿದ್ದರು. ಗಾಂಧೀಜಿ ಯವರ ಅನುಯಾಯಿಯಾದ ಯಶೋಧರಮ್ಮ ಕೂಡ ಮದ್ಯಪಾನದಿಂದಾಗುವ ದುಷ್ಪರಿಣಾಮವನ್ನು ಅರಿತುಕೊಂಡಿದ್ದರು.

ಗಾಂಧಿಯವರ ಅನುಯಾಯಿಯಾಗಿ ಅವರ ನೀತಿನಿಯಮಗಳನ್ನು ಜೀವನದ ಉದ್ದಕ್ಕೂ ಪಾಲಿಸಿಕೊಂಡು ಬಂದ ಇವರು ಅಧಿಕಾರಕ್ಕೆ ಬಲಿಯಾಗದೆ ತತ್ವನಿಷ್ಠ ರಾಜಕಾರಣ ಮಾಡಿದ್ದು ನಿಜಕ್ಕೂ ಅಭಿನಂದನೀಯ. ಇತ್ತೀಚಿನ ದಿನದಲ್ಲಿ ನಾವು ನೋಡುತ್ತಿದ್ದೇವೆ, ನಮ್ಮ ನಾಯಕರು ಅಧಿಕಾರಕ್ಕಾಗಿ ಯಾವ ರೀತಿ ಹಂಬಲಿಸುತ್ತಿದ್ದಾರೆ ಎಂಬುದನ್ನು, ಸಿಕ್ಕ ಅಧಿಕಾರವನ್ನು ಯಾರೂ ಕೂಡ ಬಿಡಲು ಒಪ್ಪುವುದಿಲ್ಲ. ಆದರೆ ಯಶೋಧರಮ್ಮ ಕೇವಲ ತತ್ವಕ್ಕಾಗಿ ರಾಜೀನಾಮೆ ನೀಡಿದ್ದಾರೆ ಎಂದರೆ ಅವರು ಪಾಲಿಸಿಕೊಂಡು ಬಂದ ನೈತಿಕ ಬದುಕಿಗೆ ಸಾಕ್ಷಿಯಾಗಿದೆ.

ಪ್ರಾಚೀನ ಕಾಲದಿಂದಲೂ ಮದ್ಯಪಾನವೆಂಬುದು ಇದೆ. ವೇದಗಳ ಕಾಲದಲ್ಲಿ "ಸೋಮರಸ"ವನ್ನು ಉಪಯೋಗಿಸುತ್ತಿದ್ದುದನ್ನು ಇತಿಹಾಸದ ಪುಟದಲ್ಲಿ ಕಾಣಬಹುದು. ಮದ್ಯಪಾನವು ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಒಮ್ಮೆ ಚಟಕ್ಕೆ ಬಲಿಯಾದನೆಂದರೆ ಮುಗಿಯಿತು. ಅದರಿಂದ ಹೊರಬರಲು ಯಾವ ರೀತಿ ಚಡಪಡಿಸುತ್ತಾರೆ ಎಂಬುದನ್ನು ನಾವು ನೋಡಿದ್ದೇವೆ. ಅನೇಕ ಕುಟುಂಬಗಳು ಇದರಿಂದ ಯಾವ ರೀತಿ ಕಷ್ಟಕ್ಕೆ ಭಾಗಿಯಾಗಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸರ್ಕಾರ ಇದರಿಂದಾಗುವ ದುಷ್ಪರಿಣಾಮಗಳನ್ನು ಅರಿತು ಇದರ ನಿಷೇಧಕ್ಕೆ ಕ್ರಮ ಕೈಗೊಂಡರೆ ನೂರಾರು ಬಡ ಕುಟುಂಬಗಳಿಗೆ ಅನುಕೂಲವಾಗುತ್ತದೆ ಎಂಬುದು ನನ್ನ ಅನ್ನಿಸಿಕೆ. ನೆಹರುರವರು ಪ್ರಧಾನಿಯಾಗಿದ್ದಾಗ 17 ವರ್ಷಗಳ ಕಾಲ ಪಾನನಿರೋಧವನ್ನು ಜಾರಿಗೊಳಿಸಿದ್ದುದು ತಿಳಿದಿದೆ. ಅದೇ ರೀತಿಯ ಕ್ರಮ ಇಂದಿಗೂ ಅವಶ್ಯಕತೆ ಇದೆ ಎಂಬುದು ನನ್ನ ಅನ್ನಿಸಿಕೆ. ಒಟ್ಟಿನಲ್ಲಿ ಯಶೋಧರಮ್ಮರವರ ಮದ್ಯಪಾನ ನಿರೋಧ ಸಡಿಲಿಕೆ ವಿರುದ್ಧದ ನಿಲುವು ಮೆಚ್ಚುವಂತಹದು.

ನಿರೂಪಣೆ : ಡಾ. ಶೈಲಜಾ ಸಿ.ವಿ.

*

ದಾರಿದೀಪ

ಸಿ.ಕೆ. ಜಾಫರ್ ಷರೀಫ್

ಶ್ರೀಮತಿ ಯಶೋಧರಮ್ಮ ದಾಸಪ್ಪನವರ ಜೀವನ ಘಟನೆಗಳನ್ನು ನೆನಪಿಸಿಕೊಳ್ಳುವುದೇ ಚೇತನೋಹಾರಿಯಾದ ವಿಚಾರ. ದುರ್ಬಲ ಶರೀರಕ್ಕೆ ಟಾನಿಕ್ ಕೊಟ್ಟು ಅದನ್ನು ಸಮರ್ಥವಾಗಿ ಮಾಡುವಂತೆ ಇಡೀ ಸಮಾಜಕ್ಕೆ ಮಾರ್ಗದರ್ಶನ ಕೊಡುವ ಸಂಗತಿಗಳು ಇಂತಹವರ ಜೀವನ ಘಟನೆಗಳಲ್ಲಿ ಅಡಕವಾಗಿರುತ್ತದೆ.

ಸ್ವಾತಂತ್ರ್ಯದ ನಂತರ ಅರವತ್ತೈದು ವರ್ಷಗಳ ಬೆಳವಣಿಗೆಯನ್ನು ನಾವು ತೌಲನಿಕವಾಗಿ ಅಧ್ಯಯನ ಮಾಡಿದಾಗ ನಮ್ಮ ದೇಶ ವಿವಿಧ ಕ್ಷೇತ್ರಗಳಲ್ಲಿ ಸಾಕಷ್ಟು ಸಾಧನೆಗಳನ್ನು ಮಾಡಿದೆಯೆಂದು ಧಾರಾಳವಾಗಿ ಹೇಳಬಹುದು. ಆರ್ಥಿಕ ಕ್ಷೇತ್ರದಲ್ಲಿ ನಮ್ಮ ಸಾಧನೆ ಹೆಮ್ಮೆ ಪಡುವಂತಹುದು. ಅದೇ ರೀತಿ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಪ್ರಬುದ್ಧತೆಯತ್ತ ಸಾಗಿದೆ. ವಿಶ್ವದ ಅಗ್ರ ರಾಷ್ಟ್ರಗಳಲ್ಲಿ ಭಾರತಕ್ಕೆ ವಿಶೇಷವಾದ ಸ್ಥಾನ ಇದೆ. ಇವುಗಳ ನಡುವೆಯೂ ನಮ್ಮ ವಿಫಲತೆಯನ್ನು ಮರೆಯುವ ಹಾಗಿಲ್ಲ. ಸಾತಂತ್ರ್ಯ ಸಂಗ್ರಾಮದ ಮೌಲ್ಯಗಳು ನಮ್ಮ ಸಮಾಜದಿಂದ ಮರೆಯಾಗುತ್ತಿರುವುದು ದುರ್ದೈವದ ವಿಚಾರ. ಆ ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಮೌಲ್ಯಗಳು ಯಾವುವು ಎಂಬುದನ್ನು ಮಹಾತ್ಮಾ ಗಾಂಧೀಜಿರವರೇ ಸ್ಪಷ್ಟಪಡಿಸಿದ್ದಾರೆ

1937ರಲ್ಲಿ ಜವಾಬ್ದಾರಿ ಸರ್ಕಾರ ಭಾರತದಲ್ಲಿ ಅಧಿಕಾರಕ್ಕೆ ಬಂದಾಗ ಪ್ರಧಾನಿ ಪಂಡಿತ್ ಜವಹರಲಾಲ್ ನೆಹರುರವರ ಸಚಿವ ಸಂಪುಟಕ್ಕೆ ಮೂರು ಸಂದೇಶಗಳನ್ನು ಗಾಂಧೀಜಿ ನೀಡಿದ್ದರು. ಮೊದಲನೆಯದು ಭಾರತದ ಹಳ್ಳಿಯನ್ನು ಮರೆಯದಿರಿ. ಹಳ್ಳಿಗರ ಬದುಕು ಉತ್ತಮವಾಗಲು ದುಡಿಯಿರಿ. ಖಾದಿ ಅರ್ಥಾತ್ ಚರಕ ಸ್ವಾತಂತ್ರ್ಯದ ಸಂಕೇತ. ಖಾದಿ ಉದ್ಯಮವೆಂದರೆ ಗುಡಿ ಕೈಗಾರಿಕೆ ಇದ್ದಂತೆ. ದೇಶದಲ್ಲಿರುವ ಯಥೇಚ್ಛವಾಗಿರುವ ಮಾನವಸಂಪನ್ಮೂಲವನ್ನು ಬಳಸಿಕೊಂಡು ಸಣ್ಣಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ. ಕೊನೆಯದಾಗಿ ಹಿಂದು-ಮುಸ್ಲಿಂ ಐಕ್ಯತೆಯನ್ನು ಕಾಪಾಡಿ. ಸಾಮಾಜಿಕ ಸಮಾನತೆ ಹಾಗೂ ಜಾತ್ಯಾತೀತ ನೀತಿಗೆ ಆದ್ಯತೆ ನೀಡಿ. ಇವು ಮಹಾತ್ಮ ಗಾಂಧೀಜಿ ಬೋಧಿಸಿದ ತತ್ವಗಳು ಮಾತ್ರವಲ್ಲ ಸ್ವತಃ ಆಚರಣೆಗೆ ತಂದ ಮಹತ್ವದ ಸಂಗತಿಗಳಾಗಿವೆ. ಇಂದು ಮೇಲೆ ಹೇಳಲ್ಪಟ್ಟ ಈ ಎಲ್ಲಾ ವಿಚಾರಗಳು ನಮ್ಮ ಜನತೆಯ ಸ್ಮೃತಿಪಟಲದಿಂದ ಮರೆಯಾಗಿದೆ. ಇವುಗಳನ್ನು ನೆನಪಿಸಿಕೊಡಲು ಶ್ರೀಮತಿ ಯಶೋಧರಮ್ಮ ದಾಸಪ್ಪರೆಂಬ ಮಹಾ ಚೇತನಗಳ ಸ್ಮರಣೆ ಅಗತ್ಯ.

1952ರಲ್ಲಿ ಶ್ರೀಮತಿ ಯಶೋಧರಮ್ಮರವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅವರು ಚಿತ್ರದುರ್ಗಕ್ಕೆ ಭೇಟಿ ಕೊಟ್ಟಾಗ ನಮ್ಮದೇ ಓಡಾಟ. ಸುಭಾಷ್‌ಚಂದ್ರ ಬೋಸ್‌ರವರ ಬಂಧು ಹೀರಾಲಾಲ್‌ಬೋಸ್. ಅವರೇ ಚಿತ್ರದುರ್ಗಕ್ಕೆ

ಬಂದು ನಮ್ಮ ಜಿಲ್ಲೆಯ ಯುವಕಾಂಗ್ರೆಸ್ ಪದಾಧಿಕಾರಿಗಳನ್ನು ನೇಮಕ ಮಾಡಿದ್ದರು. ಆಗ ಎಲ್.ಟಿ. ಕಾರ್ಲೆರವರು ರಾಜ್ಯಮಟ್ಟದ ಸಂಯೋಜಕರು. ಯಶೋಧರಮ್ಮರವರ ಮಗ ತುಳಸಿದಾಸಪ್ಪರವರು ಆಗ ತಾನೇ ಪದವಿ ಮುಗಿಸಿ ಯುವಕಾಂಗ್ರೆಸ್ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ನಾವು ಜಿಲ್ಲಾ ಪದಾಧಿಕಾರಿಗಳು. ಬಹು ಬೇಗ ದಾಸಪ್ಪನವರ ಪರಿವಾರಕ್ಕೆ ಸೇರಿಕೊಂಡೆವು.

1957ರಲ್ಲಿ ದಾಸಪ್ಪನವರು ಬೆಂಗಳೂರು ಗ್ರಾಮಾಂತರದಲ್ಲಿರುವ ಕನಕಪುರ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದರು. ಆ ಚುನಾವಣೆಯಲ್ಲಿ ಯುವ ಕಾಂಗ್ರೆಸ್ಸಿಗರಾದ ನಾವೆಲ್ಲಾ ಚೆನ್ನಾಗಿ ಕೆಲಸ ಮಾಡಿದೆವು. ಅವರು ಚುನಾವಣೆಯಲ್ಲಿ ಗೆದ್ದು ದೆಹಲಿಗೆ ಹೋಗಿ ಕೇಂದ್ರ ಸಚಿವರಾದರು. ರೈಲ್ವೆ ಖಾತೆಯಲ್ಲೂ ಕೂಡ ಅವರು ಕೆಲಸ ಮಾಡಿದರು. ಚಿತ್ರದುರ್ಗದ ಗೆಳೆಯರಾದ ನಾವು ಅನೇಕ ಸಲ ದೆಹಲಿಗೆ ಹೋಗುತ್ತಿದ್ದೆವು. ಆಗೆಲ್ಲಾ ಅವರ ಮನೆಯಲ್ಲೇ ಠಿಕಾಣಿ. ರಾತ್ರಿ ಹೊತ್ತು ಎಲ್ಲಾದರೂ ತಿರುಗಾಡಲಿಕ್ಕೆ ಹೋಗಿ ಮನೆಗೆ ಊಟಕ್ಕೆ ಬರುವುದು ತುಸುಲೇಟ್ ಆದರೆ ಸ್ವತಃ ಯಶೋಧರಮ್ಮರವರೇ ಕಾದಿದ್ದು ನಮ್ಮಗಳಿಗೆ ಊಟ ಬಡಿಸುತ್ತಿದರು. 'ಊಟಕ್ಕೆ ಬಾ ಷರೀಫ್' ಎಂದು ಕರೆದು ತುಳಸಿ ಜೊತೆಯಲ್ಲಿ ಕೂರಿಸಿ ಊಟಕ್ಕೆ ಬಡಿಸಿದ ಅನೇಕ ಸನ್ನಿವೇಶಗಳು ನೆನಪಿನಲ್ಲಿದೆ.

ಅವರ ಕೈಯಲ್ಲಿ ಊಟ ಮಾಡಿದ ಭಾಗ್ಯವಂತ ನಾನು. ಆಕೆ ತಮ್ಮ ಇಬ್ಬರು ಗಂಡು ಮಕ್ಕಳು ರಾಮದಾಸ್ ಮತ್ತು ತುಳಸಿಯಂತೆ ನನ್ನನ್ನೂ ಕಂಡಿದ್ದಾರೆ. ಹರಿಜನ ಸಮುದಾಯಕ್ಕೆ ಸೇರಿದ ಮಗುವನ್ನು ದತ್ತು ತೆಗೆದುಕೊಂಡು ಆಕೆಗೆ ವಿದ್ಯಾಭ್ಯಾಸ ಕೊಡಿಸಿ ಪ್ರತಿಷ್ಠಿತ ಕುಟುಂಬದೊಂದಿಗೆ ಮದುವೆ ಮಾಡಿ ಆಸ್ತಿಯಲ್ಲಿ ಪಾಲು ಕೊಟ್ಟಿದ್ದಾರೆ. ಇದು ಸಾಮಾನ್ಯದ ಸಂಗತಿಯಲ್ಲ. ದಲಿತರು ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಬಗ್ಗೆ ಅವರ ಅನುಕಂಪ ಬಾಯಿಯಲ್ಲಿ ಮಾತ್ರ ವ್ಯಕ್ತವಾಗುತ್ತಿರಲಿಲ್ಲ. ಕ್ರಿಯೆಯಲ್ಲಿ ಅಭಿವ್ಯಕ್ತಗೊಳ್ಳುತ್ತಿತ್ತು. ಆ ಮಾನವ ಪ್ರೀತಿ ಹೃದಯಾಂತರಾಳದಿಂದ ಹೊರಹೊಮ್ಮಿದ ಸಹಜ ಪ್ರೀತಿ ಆಗಿತ್ತು.

ಮಹಾತ್ಮಾ ಗಾಂಧೀಜಿ ಹೆಚ್.ಸಿ. ದಾಸಪ್ಪನವರ ತೊಡೆಯ ಮೇಲೆ ಕೊನೆಯುಸಿರೆಳೆದರೆಂಬ ಪ್ರತೀತಿ ಆಗಲೇ ಇತ್ತು. ಗಾಂಧೀಜಿರವರ ದುರ್ಮರಣದ ದುಃಖವನ್ನು ಇವರು ಅನುಭವಿಸಿದರು. ಗಾಂಧೀಜಿರವರ ಚಿತಾಭಸ್ಮವನ್ನು ಶ್ರೀರಂಗಪಟ್ಟಣದ ಕಾವೇರಿಯ ಸಂಗಮದಲ್ಲಿ ಇವರ ನೇತೃತ್ವದಲ್ಲೇ ವಿಸರ್ಜನೆ ಮಾಡಲಾಯಿತು. ಗಾಂಧೀಜಿ ಅವರ ಸೇವಾಕಾರ್ಯಗಳನ್ನು ಸಮರ್ಥವಾಗಿ ಮುಂದುವರಿಸಿದ ಕೀರ್ತಿ ಯಶೋಧರಮ್ಮನವರಿಗೆ ಸೇರುತ್ತದೆ. ಅರಸೀಕೆರೆ ಬಳಿಯ ಕಸ್ತೂರಿಬಾ ಟ್ರಸ್ಟಿನ ಸೇವಾ ಚಟುವಟಿಕೆಗಳಿಗೆ ಸ್ವತಃ ಮಹಾತ್ಮಾ ಗಾಂಧೀಜಿ ಆಶೀರ್ವಾದ ಮಾಡಿದ್ದರು. ಈಗ ಈ ಟ್ರಸ್ಟಿಗೆ ನನ್ನನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಯಶೋಧರಮ್ಮರವರ ಆಶಯಕ್ಕೆ ತಕ್ಕಂತೆ ಈ ಟ್ರಸ್ಟ್ ಬೆಳೆಸಲು ಪ್ರಯತ್ನಿಸುತ್ತೇನೆ.

1971ರಲ್ಲಿ ಶ್ರೀಮತಿ ಇಂದಿರಾಗಾಂಧಿರವರು ನನಗೆ ಕನಕಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟರು. ಶ್ರೀಮತಿ ಯಶೋಧರಮ್ಮನವರು ಸ್ವಯಂ ಪ್ರೇರಣೆಯಿಂದ ಕನಕಪುರ, ರಾಮನಗರ, ಚನ್ನಪಟ್ಟಣ, ಮಾಗಡಿ ಮೊದಲಾದ ಹತ್ತಾರು ಸ್ಥಳದಲ್ಲಿ ಚುನಾವಣೆ ಸಭೆಗಳನ್ನು ನಡೆಸಿದರು. ದೇವರ ಆಶೀರ್ವಾದದಿಂದ ನನಗೆ ಜಯ ಲಭಿಸಿತು.

1980ರಲ್ಲಿ ನಾನು ಕೇಂದ್ರ ರೈಲ್ವೆ ಸಹಾಯಕ ಸಚಿವನಾದಾಗ ಯಶೋಧರಮ್ಮರವರು ತುಂಬಾ ಹರ್ಷಪಟ್ಟರು. 'ಜಾಫರ್ ಊಟ-ತಿಂಡಿ ಇಲ್ಲದೆ ಕೆಲಸ ಮಾಡಿ ಆರೋಗ್ಯ ಹಾಳು ಮಾಡಿಕೊಳ್ಳಬೇಡ' ಎಂದು ನೂರಾರು ಸಾರಿ ನನಗೆ ಬುದ್ಧಿ ಹೇಳಿದ್ದಾರೆ. ಸ್ವಲ್ಪ ದಿನಗಳಲ್ಲೇ ಅವರು ಇಹಲೋಕವಾಸಿಗಳಾದರು. ಲೋಕಸಭೆಯ

ಕಾರ್ಯಕಲಾಪಗಳಲ್ಲಿದ್ದ ನನಗೆ ಅವರ ನಿಧನದ ಸುದ್ದಿ ತಡವಾಗಿ ತಲುಪಿತು. ಸುದ್ದಿ ತಿಳಿದ ತಕ್ಷಣ ದಿಢೀರನೆ ಬೆಂಗಳೂರಿಗೆ ಬಂದೆ. ಆಗಲೇ ಅರಸಿಕೆರೆಗೆ ಅವರ ಪಾರ್ಥಿವ ಶರೀರವನ್ನು ಕರೆದೊಯ್ಯಲಾಗಿತ್ತು. ಹೇಗೋ ಅಲ್ಲಿಗೆ ಮುಟ್ಟಿ ಅವರ ಅಂತಿಮ ದರ್ಶನ ಪಡೆದೆ. ನನ್ನಂತಹ ಅನೇಕರ ಬದುಕಿಗೆ ದಾರಿ-ದೀಪವಾಗಿದ್ದವರು ಶ್ರೀಮತಿ ಯಶೋಧಮ್ಮರವರು.

ಕೊನೆಯದಾಗಿ ನಮ್ಮ ಹಿಂದಿನ ನಾಯಕರುಗಳ ಉದಾರ ವ್ಯಕ್ತಿತ್ವವನ್ನು ಕುರಿತಂತೆ ಒಂದೆರಡು ಮಾತುಗಳನ್ನು ಹೇಳಲೇಬೇಕು. ಜಾತಿಪ್ರಜ್ಞೆ ಈಗಿರುವಷ್ಟು ಈ ಹಿಂದೆ ಕಾಣುತ್ತಿರಲಿಲ್ಲ. ಅಂದರೆ ಜಾತಿವ್ಯವಸ್ಥೆ ಎಂಬುದು ಇರಲೇ ಇಲ್ಲವೆಂಬುದು ನನ್ನ ಮಾತಲ್ಲ. ಈ ದಿನ ವಿದ್ಯಾವಂತರಲ್ಲಿ ಹಾಗೂ ಅಧಿಕಾರಸ್ಥರಲ್ಲಿ ಜಾತಿಪ್ರಜ್ಞೆ ಅಗತ್ಯಕ್ಕಿಂತ ಹೆಚ್ಚಿದೆ. ಇದು ಅಪಾಯಕಾರಿ ಎನ್ನುವಷ್ಟು ವ್ಯಾಪಿಸಿದೆ. ಈ ಹಿಂದೆ ಹಾಗೂ ಈಗಲೂ ಬಡವರಿಗೆ ಜಾತಿ ಎಂಬುದೇ ಇಲ್ಲ. ಆ ಕಾಲದಲ್ಲಿ ಚಿತ್ರದುರ್ಗದ ನಮ್ಮ ಮನೆಗೆ ಬ್ರಾಹ್ಮಣನೊಬ್ಬ ವಾರಾನ್ನಕ್ಕೆ ಬರುತ್ತಿದ್ದ. ಮುಸ್ಲಿಮರ ಮನೆಗೆ ವಾರಾನ್ನಕ್ಕೆ ಬರುವುದು ಅಂದು ವಿಶೇಷ ಏನೂ ಆಗಿರಲಿಲ್ಲ. ಆ ಹುಡುಗ ನಿರ್ದಿಷ್ಟ ದಿನ ನಮ್ಮ ಮನೆಗೆ ಬಂದಾಗ ನಮ್ಮ ತಾಯಿಯವರು ಅವನಿಗೆ ಬೇಕಾದ ಆಹಾರ ಧಾನ್ಯಗಳನ್ನು ಕೊಟ್ಟು ಕಳುಹಿಸುತ್ತಿದ್ದರು. ಆದರೆ ಇಂದು ಊಟೋಪಚಾರದಲ್ಲಿ ಜಾತಿಯ ಗೋಡೆ ಅಡ್ಡ ಬಾರದೆ ಇರಬಹುದು. ಆದರೆ ಇತರೆ ವಿಚಾರಗಳಲ್ಲಿ ಜಾತಿಯ ಕಂದಕ ಹೆಚ್ಚು ಆಳವಾಗುತ್ತಿದೆ. ಆಗಲೂ ಸಹ ಬೇರೆ ಬೇರೆ ಸಿದ್ಧಾಂತದಲ್ಲಿ ನಂಬಿಕೆಯುಳ್ಳ ನಾಯಕರು ಭಿನ್ನಾಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ಆದರೆ ವೈಯಕ್ತಿಕ ಬಾಂಧವ್ಯಕ್ಕೆ ಭಿನ್ನಾಭಿಪ್ರಾಯ ಅಡ್ಡಬರುತ್ತಿರಲಿಲ್ಲ. ನಾನು ನಿಜಲಿಂಗಪ್ಪ-ಯಶೋಧರಮ್ಮ ಇಬ್ಬರ ನಡುವೆ ಓಡಾಡಿಕೊಂಡಿದ್ದ ಹುಡುಗ. ಮದ್ಯಪಾನ ನಿಷೇಧ ತೆಗೆದು ಹಾಕಿದ ವಿಚಾರದಲ್ಲಿ ಅದನ್ನು ಪ್ರತಿಭಟಿಸಿ ಯಶೋಧರಮ್ಮ ರವರು ನಿಜಲಿಂಗಪ್ಪ ಅವರ ಸಚಿವಸಂಪುಟಕ್ಕೆ ರಾಜೀನಾಮೆ ಕೊಟ್ಟಿದ್ದರು. ಆದರೂ ಅವರಿಬ್ಬರ ವೈಯಕ್ತಿಕ ಸಂಬಂಧಗಳು ಸೌಹಾರ್ದಯುತವಾಗಿದ್ದವು. ಅವರಿಬ್ಬರನ್ನು ಹತ್ತಿರದಿಂದ ನೋಡುತ್ತಿದ್ದೆ. ಒಂದೇ ಪಕ್ಷದಲ್ಲಿ ಅವರಿಬ್ಬರು ಕೆಲಸ ಮಾಡಿದ ಸನ್ನಿವೇಶ ಇದೆ. ಆದರೆ ಇಂದು ಪರಿಸ್ಥಿತಿ ತದ್ವಿರುದ್ಧವಾಗಿದೆ. ಭಿನ್ನಾಭಿಪ್ರಾಯ ತತ್ವ ಹಾಗೂ ಸಿದ್ಧಾಂತದ ಬದಲಾಗಿ ವೈಯಕ್ತಿಕ ನೆಲೆಯಲ್ಲಿ ಸ್ಫೋಟಗೊಳ್ಳುತ್ತಿದೆ. ಇದು ಪ್ರಜಾಪ್ರಭುತ್ವದ ವ್ಯವಸ್ಥೆಗೆ ತುಂಬಾ ಅಪಾಯಕಾರಿ. ಭಾರತದಂತಹ ವೈವಿಧ್ಯಮಯ ದೇಶದಲ್ಲಿ ವಿವಿಧ ಭಾಷೆ, ಸಂಸ್ಕೃತಿ ಹಾಗೂ ಧರ್ಮಗಳು ಪ್ರಾಚೀನ ಕಾಲದಿಂದಲೂ ಸೌಹಾರ್ದಯುತವಾಗಿ ಬಾಳುತ್ತಿವೆ. ಇಂತಹ ಬಹುಸಂಸ್ಕೃತಿಯ ಸೊಗಸನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳುವ ಅಗತ್ಯತೆ ಇದೆ. ವ್ಯಕ್ತಿ ಹಾಗೂ ಸಮುದಾಯಗಳು ಪರಸ್ಪರ ಗೌರವ ಹಾಗೂ ವಿಶ್ವಾಸಾರ್ಹತೆಗಳನ್ನು ಉಳಿಸಿ-ಬೆಳೆಸಿಕೊಂಡು ಹೋಗದಿದ್ದರೆ ಅಪಾಯ ತಪ್ಪಿದ್ದಲ್ಲ. ಯಶೋಧರಮ್ಮ ದಾಸಪ್ಪ ಅವರಂತಹ ತ್ಯಾಗ ಜೀವಿಗಳ ಜೀವನ ಚರಿತ್ರೆ ಅಧ್ಯಯನದಿಂದ ಯುವ ಜನಾಂಗಕ್ಕೆ ಈ ವಿಚಾರದಲ್ಲಿ ಸ್ಫೂರ್ತಿ ದೊರೆಯುವುದರಲ್ಲಿ ಯಾವುದೇ ಸಂಶಯವಿಲ್ಲ.

ನಿರೂಪಣೆ : ಡಾ: ಕೆ. ಆರ್.ಕಮಲೇಶ್

*

ನಮ್ಮೆಲ್ಲರ ಅಮ್ಮ

ಎಂ.ವಿ.ರಾಜಶೇಖರನ್

ಕರ್ನಾಟಕದ ಇತಿಹಾಸದ ಅನೇಕ ಮಹಿಳೆಯರು ತಮ್ಮ ಮಹತ್ವದ ವ್ಯಕ್ತಿತ್ವದಿಂದ ಜನಮನದಲ್ಲಿ ನಿಂತಿದ್ದಾರೆ. ಎರಡನೆಯ ಪುಲಿಕೇಶಿಯ ಸೊಸೆ ವಿಜ್ಜಿಕ ಅಥವಾ ವಿಜಯಭಟ್ಟಾರಿಕೆ ತನ್ನ ಸಾಹಿತ್ಯ ಪ್ರೇಮಕ್ಕಾಗಿ ಪೂಜನೀಯಳಾಗಿದ್ದಾಳೆ. ವಚನ ಯುಗದಲ್ಲಿ ತಮ್ಮ ಅಪೂರ್ವ ಆಧ್ಯಾತ್ಮಕ ಶಕ್ತಿಯಿಂದ ಅಕ್ಕಮಹಾದೇವಿ ಸದಾ ನೆನಪಿನಲ್ಲಿ ಉಳಿಯುತ್ತಾಳೆ. ಹೊಯ್ಸಳರ ದೊರೆ ವಿಷ್ಣುವರ್ಧನನ ರಾಣಿ ಶಾಂತಲಾದೇವಿಯ ವ್ಯಕ್ತಿತ್ವವಂತೂ ಮರೆಯುವಂಥದ್ದಲ್ಲ. ಔರಂಗಜೇಬ್‌ನನ್ನು ಸೋಲಿಸಿದ ರಾಣಿ ಕೆಳದಿ ಚೆನ್ನಮ್ಮ ನಮ್ಮಲ್ಲಿ ಅಭಿಮಾನ ಹುಟ್ಟಿಸುತ್ತಾಳೆ. ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ ಕಿತ್ತೂರಿನ ರಾಣಿ ಚೆನ್ನಮ್ಮ ಇಂದಿಗೂ ನಮಗೆ ಚೈತನ್ಯದಾಯಿನಿಯಾಗಿದ್ದಾಳೆ. ಈ ಸಾಲಿಗೆ ನೂರಾರು ಮಹಿಳೆಯರು ಸೇರ್ಪಡೆಯಾಗುತ್ತಾರೆ.

ಇಂಥವರ ಸಾಲಿಗೆ ನಿಲ್ಲುವ ಶಕ್ತಿ ಪಡೆದವರು ಮಾತೃಸ್ವರೂಪಿಣಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು. ಆ ಕಾಲದಲ್ಲಿ 'ಯಶೋಧರ' ಎಂಬ ಹೆಸರಿಗೆ ವಿಶಿಷ್ಟವಾದ ಅರ್ಥವನ್ನು ಬಿಂಬಿಸಲಾಗುತ್ತಿತ್ತು. ಪ್ರಗತಿಪರ ಧೋರಣೆಯುಳ್ಳ ಕೆ.ಹೆಚ್. ರಾಮಯ್ಯ ತಮ್ಮ ಮಗಳಿಗೆ ಸಂಪ್ರದಾಯದ ವಿರುದ್ಧವಾಗಿ 'ಯಶೋಧರ' ಎಂಬ ಹೆಸರು ಇಟ್ಟಿದ್ದು, ಆ ನಂತರದಲ್ಲಿ ಅವರು ಆ ಹೆಸರಿಗೆ ತಕ್ಕಂತೆ ಬಾಳಿದರೋ ಎಂದು ಭಾವಿಸುವಂತೆಯೇ ಆಗಿದೆ.

ಅಂದಿನಿಂದ ಇಂದಿನ ತನಕ ಕರ್ನಾಟಕದಲ್ಲಿ ಎಲ್ಲ ಸಮುದಾಯದವರು ಸರ್ಕಾರಿ ಕೆಲಸದಲ್ಲಿ ದೊಡ್ಡ ದೊಡ್ಡ ಹುದ್ದೆಯಲ್ಲಿ ಇದ್ದರೆ ಇದಕ್ಕೆ ಮೂಲ ಕಾರಣಕರ್ತರು ಕೆ.ಹೆಚ್. ರಾಮಯ್ಯ ಅವರು. ಅವರಿಗೆ ಯುವರಾಜ ಕಂಠೀರವ ನರಸರಾಜ ಒಡೆಯರ್ ಅವರಲ್ಲಿದ್ದ ಸ್ನೇಹವೇ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಎಲ್ಲ ಸಮುದಾಯಗಳಿಗೂ ಸಾಮಾಜಿಕ ನ್ಯಾಯ ದೊರೆಯುವಂತಾಯಿತು ಎಂಬುದು ವಿಶೇಷವಾಗಿ ನೆನಪಿಸುವಂಥದ್ದು. ಸ್ವಾಮಿ ವಿವೇಕಾನಂದ ಅವರ ಶಿಷ್ಯರಾಗಿದ್ದ ರಾಮಯ್ಯ ಅವರು ಮೈಸೂರು ಸಂಸ್ಥಾನಕ್ಕೆ ಸಾಮಾಜಿಕ ನ್ಯಾಯದ ಲೇಪವನ್ನು ಹತ್ತಿಸಿ, ಅದು ಪ್ರಗತಿಪರ ಸಂಸ್ಥಾನವಾಗುವಂತೆ ಮಾಡಿದರು. ಸ್ವತಃ ಮಹಾತ್ಮಾ ಗಾಂಧೀಜಿಯವರು ಮೈಸೂರು ಸಂಸ್ಥಾನವನ್ನು ಮೆಚ್ಚಿಕೊಂಡಿದ್ದು ಈ ಕಾರಣಕ್ಕಾಗಿಯೇ ಎನ್ನಬಹುದು. ಇಂಥವರ ಮಗಳಾಗಿ ಜನಿಸಿದ ನಮ್ಮ ಅಮ್ಮ ಶ್ರೀಮತಿ ಯಶೋಧರಮ್ಮನವರು ಕೂಡ ಅಷ್ಟೇ ಉದಾತ್ತ ಜೀವನವನ್ನು ನಡೆಸಿದವರು. ಅವರ ಬದುಕು ಹಾಗೂ ಸಾಧನೆ ಅನೇಕ ಮಹಾಪ್ರಬಂಧಗಳಿಗೆ ವಸ್ತುವಾಗುವಂತಹುದು.

1938ರಲ್ಲಿ ಶಿವಪುರದಲ್ಲಿ ನಡೆದ 'ಧ್ವಜ ಸತ್ಯಾಗ್ರಹ'ದಲ್ಲಿ ಸಕ್ರಿಯವಾಗಿ ಭಾಗವಹಿಸಿದವರು ಯಶೋಧರಮ್ಮ ಎಂಬುದು ಹೆಚ್ಚಿನ ಜನಕ್ಕೆ ಗೊತ್ತಿಲ್ಲ. 1950ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿ 'ಕಿಂಗ್ ಮೇಕರ್' ಎಂದು ಖ್ಯಾತಿ ಪಡೆದಿದ್ದ ಸಾಹುಕಾರ್ ಚೆನ್ನಯ್ಯ ವಿರುದ್ಧ ಪ್ರಚಂಡ

ಜಯ ಗಳಿಸಿದವರು ಈಕೆ. 1957ರಲ್ಲಿ ಎಚ್.ಸಿ.ದಾಸಪ್ಪ ಅವರನ್ನು ನಾವೆಲ್ಲ ಯುವಕರು ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಲೋಕಸಭೆಗೆ ಸ್ಪರ್ಧಿಸುವಂತೆ ಪ್ರಾರ್ಥಿಸಿಕೊಂಡೆವು. ಕನಕಪುರ ತಾಲ್ಲೂಕಿನ ಮರಳವಾಡಿ ನನ್ನ ಜನ್ಮಸ್ಥಳವಾಗಿದ್ದು ಆ ಊರು ಕೂಡ ಗ್ರಾಮಾಂತರ ಜಿಲ್ಲೆಯ ಲೋಕಸಭೆಯ ವ್ಯಾಪ್ತಿಗೆ ಬರುವ ಹಿನ್ನೆಲೆಯಲ್ಲಿ ನಾನು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದೆ. ಆ ಸಂದರ್ಭದಲ್ಲಿ ಯಶೋಧರಮ್ಮನವರು ತಮ್ಮ ಸ್ಫೂರ್ತಿದಾಯಕ ಮಾತುಗಳಿಂದ ನಮಗೆಲ್ಲಾ ಮಾರ್ಗದರ್ಶನ ನೀಡುತ್ತಿದ್ದರು. ನಮ್ಮಂಥ ಯುವಕರಿಗೆ ಚುನಾವಣೆಗಳು ಹೇಗೆ ನೈತಿಕ ಮೌಲ್ಯದ ನೆಲೆಗಟ್ಟಿನ ಮೇಲೆ ನಡೆಯಬೇಕೆಂಬುದಕ್ಕೆ ಅವರು ಮಾರ್ಗದರ್ಶನ ನೀಡಿದ್ದರು.

1962ರ ಸಾರ್ವತ್ರಿಕ ಚುನಾವಣೆಯಲ್ಲಿ ಹಾಸನದ ಅರಸೀಕೆರೆಯಿಂದ ಚುನಾಯಿತರಾದ ಯಶೋಧರಮ್ಮ ಅವರು ಎಸ್.ಆರ್.ಕಂಠಿ ಹಾಗೂ ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಖಾತೆಯ ಸಚಿವರಾಗಿದ್ದರು. ಈ ಖಾತೆ ಕೂಡ ಅವರೇ ಕೇಳಿ ಪಡೆದಿದ್ದು. ಹಿರಿಯ ಕಾಂಗ್ರೆಸ್ಸಿಗರಾಗಿದ್ದ ಯಶೋಧರಮ್ಮ ಅವರು ಯಾವ ಖಾತೆ ಕೇಳಿದ್ದರೂ ಅಂದು ಅವರಿಗೆ ಆ ಖಾತೆ ಸಿಗುತ್ತಿತ್ತು. ಆದರೆ ಬಡವರ, ಅಸಹಾಯಕರ, ಅಂಗವಿಕಲರ, ಪರಿಶಿಷ್ಟ ಜಾತಿ–ಜನಾಂಗದವರ ಕಷ್ಟಗಳನ್ನು ಕಣ್ಣಾರೆ ಕಂಡಿದ್ದ ಯಶೋಧರಮ್ಮ ಅವರು ಅವರ ಕಲ್ಯಾಣಕ್ಕೆ ಸಹಾಯಕವಾಗುವಂತೆ ಕೆಲಸ ಮಾಡಲು ಸಮಾಜ ಕಲ್ಯಾಣ ಖಾತೆಯೇ ಉತ್ತಮವೆಂದು ಬಯಸಿ ಅದನ್ನು ಪಡೆದರು. ಅವರು ಕರ್ನಾಟಕದ ಪ್ರಪ್ರಥಮ ಸಂಪುಟ ದರ್ಜೆ ಮಹಿಳಾ ಸಚಿವರೆಂಬುದನ್ನು ನಾವು ಮರೆಯುವಂತಿಲ್ಲ. ಪರಿಶಿಷ್ಟ ಜಾತಿ ಮತ್ತು ವರ್ಗದವರ ಹಾಸ್ಟೆಲ್, ಅಶಕ್ತ ಮಹಿಳೆಯರ ಕಲ್ಯಾಣಕ್ಕಾಗಿ ಯೋಜನೆಗಳು, ಸಮಾಜದ ವಿವಿಧ ಜನಾಂಗಗಳಲ್ಲಿ ಇರುವ ಅತೃಪ್ತಿ ಹೋಗಲಾಡಿಕೆಗೆ ವಿನೂತನ ಯೋಜನೆಗಳನ್ನು ರೂಪಿಸಿದ ಕೀರ್ತಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರದು.

1966ರಲ್ಲಿ ಪಾನ ನಿರೋಧ ರದ್ಧತಿಯನ್ನು ಪ್ರತಿಭಟಿಸಿ ಅವರು ರಾಜೀನಾಮೆ ನೀಡಿದ್ದು ಉಂಟು. ಅದರಿಂದ ಅವರು ಎಂದೂ ಪಶ್ಚಾತ್ತಾಪ ಪಟ್ಟವರಲ್ಲ. 'ಮಹತ್ವದ ಕಾರ್ಯಕ್ಕಾಗಿ ಹೋರಾಡಿ ಸೋಲು ಒಪ್ಪಿಕೊಂಡರೂ ಅದು ಸೋಲಲ್ಲ' ಎಂಬುದು ಅವರ ನಿಲುವು ಆಗಿತ್ತು.

ಈ ರಾಜೀನಾಮೆಯ ನಂತರ ಅವರು ಕರ್ನಾಟಕದ ನಾಯಕರು ಮಾತ್ರವಲ್ಲ, ರಾಷ್ಟ್ರಮಟ್ಟದ ನಾಯಕಿ ಎನಿಸಿಕೊಂಡರು. ಹೆಚ್ಚುಕಡಿಮೆ ಆನಂತರ ರಾಜಕೀಯ ತೊರೆದ ಯಶೋಧರಮ್ಮ ಅವರು ಮಹಾತ್ಮಾ ಗಾಂಧೀಜಿಯವರು ಬೋಧಿಸಿದ ರಚನಾತ್ಮಕ ಕಾರ್ಯಗಳಿಗೆ ತಮ್ಮನ್ನು ತೊಡಗಿಸಿಕೊಂಡರು. ಅರಸೀಕೆರೆ ಬಳಿ ಅವರು ಕಟ್ಟಿ ಬೆಳೆಸಿದ 'ಕಸ್ತೂರಬಾ ರಾಷ್ಟ್ರೀಯ ಸ್ಮಾರಕ ಸಂಘ' ಅವರ ನೆನಪನ್ನು ಸದಾ ನಮಗೆ ಹೇಳುತ್ತದೆ. ಸರ್ಕಾರ ಹಾಗೂ ಸಾರ್ವಜನಿಕರು ಈ ಬಗ್ಗೆ ಎಚ್ಚೆತ್ತುಕೊಂಡು ಯಶೋಧರಮ್ಮ ಅವರು ಕಟ್ಟಿದ ಸಂಸ್ಥೆಗೆ ಪುನಶ್ಚೇತನಕೊಡುವ ಅಗತ್ಯವಿದೆಯೆಂದು ನಾನು ಭಾವಿಸುತ್ತೇನೆ.

ಯಶೋಧರಮ್ಮ ಅವರು ನನ್ನನ್ನು ಅವರ ಮಗ ತುಳಸಿಯನ್ನು ಎಂದೂ ಬೇರೆಯಾಗಿ ನೋಡಿದವರಲ್ಲ. ವಿಶೇಷವೆಂದರೆ ನನ್ನನ್ನು ತಾಯಿಯ ಹಾಗೆ ನೋಡಿಕೊಂಡು, ಎಲ್ಲಾ ರೀತಿಯಲ್ಲೂ ಪ್ರೋತ್ಸಾಹಿಸುತ್ತಿದ್ದರು. ಇಂಥ ಪುಣ್ಯ ಎಲ್ಲರಿಗೂ ದೊರೆಯುವುದಿಲ್ಲ.

ರಾಷ್ಟ್ರನಾಯಕರೂ, ಹಿರಿಯ ರಾಜಕೀಯ ಮುತ್ಸದ್ದಿಗಳಾಗಿದ್ದ ನಿಜಲಿಂಗಪ್ಪ ಅವರ ನಾಲ್ಕನೆಯ ಮಗಳು ಗಿರಿಜಾಳನ್ನು ನಾನು ವಿವಾಹವಾಗಲು ಯಶೋಧರಮ್ಮ ಅವರದೇ ನೇತೃತ್ವ, ತಮ್ಮ ಮಗನ ಮದುವೆಯಂತೆಯೇ ಅವರು ಸಂಭ್ರಮಪಟ್ಟದ್ದು ಇಂದಿಗೂ ನನ್ನ ನೆನಪಿನಲ್ಲಿ ಅಚ್ಚಳಿಯದೆ ಇದೆ. ಜಾತಿ, ಮತ, ಪ್ರಾಂತ್ಯ–ಪ್ರದೇಶದ

ಸೋಂಕು ಇಲ್ಲದೆ ಮನುಷ್ಯರೆಲ್ಲರೂ ಒಂದು ಎಂಬಂಥ ಗುಣ ಎಲ್ಲರಿಗೂ ಬರುವಂಥದ್ದಲ್ಲ. ಈ ದಿಸೆಯಲ್ಲಿ ನಡೆಯಲು ಪ್ರಾಮಾಣಿಕವಾದ ಪ್ರಯತ್ನಪಟ್ಟ ಮಹಾತಾಯಿ ಶ್ರೀಮತಿ ಯಶೋಧರಮ್ಮನವರು.

2005 ಮೇ 28ರಂದು ಯಶೋಧರಮ್ಮ ಅವರು ಹುಟ್ಟಿ ನೂರು ವರ್ಷಗಳಾಯಿತು. ಕನ್ನಡ ನಾಡು ಇಂಥ ಹೆಮ್ಮೆಯ ಪುತ್ರಿಯನ್ನು ಪಡೆದುದಕ್ಕೆ ಅಭಿಮಾನ ಪಡಬೇಕು. ಅವರ ಜನ್ಮ ಶತಮಾನೋತ್ಸವವೂ ಯುವ ಜನಾಂಗಕ್ಕೆ ಸ್ಫೂರ್ತಿ ಕೊಡುವ ರೀತಿ ಆಚರಿಸಬೇಕು. ಶ್ರೀಮತಿ ಯಶೋಧರಮ್ಮ ಅವರಿಗೆ ಯಾವುದೇ ಪ್ರಶಸ್ತಿ-ಸನ್ಮಾನಗಳು ಬೇಕಾಗಿರಲಿಲ್ಲ. ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯನ್ನು ಅವರ ಬಾಲ್ಯದಿಂದಲೂ ಬಲ್ಲ ಯಶೋಧರಮ್ಮ ಅವರು ಇಂತಹ ಲೌಕಿಕ ಆಸೆ-ಆಮಿಷಗಳಿಂದ ದೂರವಿದ್ದರು. ಇಂತಹ ತ್ಯಾಗದಿಂದ ಅವರು ದೊಡ್ಡವರಾಗಿದ್ದಾರೆ. ಮೌಲ್ಯಗಳ ಆರಾಧಕರಾಗಿದ್ದಾರೆ. ಅವರ ನೆನಪು ಸದಾ ಕಾಲವಿರುವಂತೆ ಮಾಡುವುದೇ ಅವರಿಗೆ ನಾವು ಅರ್ಪಿಸುವ ಶ್ರೇಷ್ಠ ಕೃತಜ್ಞತೆಯೆಂದು ನಾನಾದರೋ ಭಾವಿಸುತ್ತೇನೆ. ಈ ದಿಸೆಯಲ್ಲಿ ನಾವೆಲ್ಲಾ ಯೋಚಿಸೋಣ. ಇದು ನನ್ನ ಅರಿಕೆ.

ನಿರೂಪಣೆ : ಡಾ: ಕೆ. ಆರ್.ಕಮಲೇಶ್

———— * ————

ಗಾಂಧೀಜಿಯವರ ಆಧ್ಯಾತ್ಮಿಕ ತತ್ವಗಳಿಗೆ ಒಲಿದವರು

ಜಿ. ನಾರಾಯಣ

ನಾನು ಯಶೋಧರಮ್ಮನವರನ್ನು ಬಹಳ ಸಲ ನೋಡಿಲ್ಲ. ಅವರೊಂದಿಗೆ ಕೆಲಸವೂ ಮಾಡಿಲ್ಲ. ಅದರಿಂದ ನನಗೆ ಖಾಸಗಿಯಾಗಿ ಅವರ ಯಾವುದೇ ಪರಿಚಯವಿಲ್ಲ. ಆದರೆ ದೂರದಿಂದ ನೋಡಿದ್ದೇನೆ. ಅವರ ಮಾತುಗಳನ್ನು ಕೇಳಿದ್ದೇನೆ. ಅವರು ಮಾಡುವ ಕೆಲಸಗಳ ಕುರಿತು ಗಮನಿಸಿದ್ದೇನೆ. ಅವರ ಕೆಲಸ ಕಾರ್ಯಗಳು ತತ್ವಸಿದ್ಧಾಂತಗಳು ಯಾರಿಗೇ ಆದರೂ ಮೆಚ್ಚುಗೆಯಾಗುವಂತಹವು.

ಶಿವಪುರದಲ್ಲಿ ಪ್ರಥಮ ಕಾಂಗ್ರೆಸ್ ಅಧಿವೇಶನ ಸೇರಿದಾಗ ನಾನು ಅವರನ್ನು ನೋಡಿದ್ದು. ಆನಂತರ ಕೆಲವಾರು ಸಂಧರ್ಭಗಳಲ್ಲಿ, ಕಾಂಗ್ರೆಸ್‌ನ ಕಾರ್ಯಕ್ರಮಗಳಲ್ಲಿ ಕಂಡಿದ್ದೇನೆ. ಆದರೆ ಅವರ ಬಗ್ಗೆ ಹೇಳಬಹುದಾದಷ್ಟು ನನಗೆ ತಿಳಿದಿಲ್ಲ. ಗಾಂಧೀಜಿಯವರ ತತ್ವ, ನೇಮ–ನಿಷ್ಠೆಗಳಲ್ಲಿ ಆಕೆ ತುಂಬ ವಿಶ್ವಾಸವಿಟ್ಟಿದ್ದರು. ಅವನ್ನೆಲ್ಲ ಪಾಲಿಸುತ್ತಿದ್ದರು. ಖಾದಿ ಧಾರಣೆ, ಖಾದಿ ಪ್ರಚಾರ, ಮಹಿಳಾ ಸಂಘಟನೆ, ಹರಿಜನೋದ್ಧಾರ, ಮಕ್ಕಳ ಅಭಿವೃದ್ಧಿ ಮತ್ತು ಮಹಿಳಾ ಅಭಿವೃದ್ಧಿಗೆ ಅಗತ್ಯವಾದ ಅನೇಕ ಕೆಲಸಗಳನ್ನು ಅವರು ಮಾಡಿದರು. ಗಾಂಧೀಜಿಯವರ ರಾಜಕೀಯ ತತ್ವಗಳಿಗಿಂತ ಅವರ ಆಧ್ಯಾತ್ಮಿಕ ತತ್ವಗಳ ಬಗ್ಗೆ ಅವರಿಗೆ ಹೆಚ್ಚು ಒಲವು ಇತ್ತು. ಅವರು ಕಾಂಗ್ರೆಸ್‌ನಲ್ಲಿದ್ದುಕೊಂಡು, ದೇಶಕ್ಕಾಗಿ, ಈ ನಾಡಿಗಾಗಿ, ನಮ್ಮ ಸಮಾಜದ ಉದ್ಧಾರಕ್ಕಾಗಿ ತಮ್ಮ ತನುಮನದಿಂದ ದುಡಿದರು. ಇಂದಿನ ರಾಜಕಾರಣಿಗಳು ಅವರಿಂದ ಬಹಳಷ್ಟು ಕಲಿಯಬೇಕಾಗಿದೆ. ಅವರನ್ನು ಚೆನ್ನಾಗಿ ನೋಡಿ ಬಲ್ಲವರೂ ಬಹಳ ಜನ ಈಗ ಇಲ್ಲವಾಗಿದ್ದಾರೆ. ಅದರಿಂದ ಅವರ ಕುರಿತು ಹೆಚ್ಚಿನ ಮಾಹಿತಿಗಳು ಹೊರಬರದೇ ಉಳಿದು ಬಿಟ್ಟವೇನೋ. ಇಂಥ ಉನ್ನತ ಮಹಿಳೆಯ ಸ್ಮರಣಾರ್ಥ ಈಗ ಶತಮಾನೋತ್ಸವ ಆಚರಣೆ ಮಾಡುತ್ತಿರುವುದು ಮತ್ತು ಸಂಸ್ಮರಣ ಗ್ರಂಥವೊಂದನ್ನು ತರುತ್ತಿರುವುದು ತುಂಬ ಸಮಾಧಾನದ ವಿಷಯ.

ನಿರೂಪಣೆ : ವಿಜಯಲಕ್ಷ್ಮಿ ಕೆ.ಎಂ.

——— * ———

ವೀರವನಿತೆ

ಎಂ. ವೀರಪ್ಪ ಮೊಯಿಲಿ

ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಭಾರತದ ರಾಜಕಾರಣದಲ್ಲಿ ತತ್ವನಿಷ್ಠೆ, ಮೌಲ್ಯ ಹಾಗೂ ರಚನಾತ್ಮಕ ಕೆಲಸಗಳಿಗೆ ಖ್ಯಾತರಾಗಿದ್ದಾರೆ. ಸ್ವಾತಂತ್ರ್ಯಪೂರ್ವದಿಂದಲೂ ಕಾಂಗ್ರೆಸ್‌ನ ಸೇವಾಮೌಲ್ಯಗಳಿಗೆ ತಮ್ಮನ್ನು ತೆತ್ತುಕೊಂಡ ದೊಡ್ಡ ಚೇತನ ಅವರು. ಸಾಮಾಜಿಕ ಹಾಗೂ ರಾಜಕೀಯ ಇಚ್ಛಾಶಕ್ತಿಯನ್ನು ಸೂಕ್ತ ಕಾಲದಲ್ಲಿ ಪ್ರದರ್ಶಿಸಿದ ಮನೆತನ ಅವರದು.

ರಾಜಋಷಿ ಎಂದು ಮನೆಮಾತಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರಿಗೆ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿಯ ಎಲ್ಲಾ ವರ್ಗದ ಎಲ್ಲಾ ಬ್ರಾಹ್ಮಣೇತರರಿಗೆ 1881ರಲ್ಲೇ ಮೀಸಲಾತಿಯನ್ನು ತರಲು ಮತ್ತು ಪ್ರೇರಣೆ ಕೊಟ್ಟ ವ್ಯಕ್ತಿ ಅಂದಿನ ಸರ್ಕಾರದ ಹಿರಿಯ ಅಧಿಕಾರಿಯಾಗಿದ್ದ ಕೆ.ಹೆಚ್. ರಾಮಯ್ಯ ಅವರು. ರಾಮಯ್ಯರವರ ಒತ್ತಾಸೆ ಇಲ್ಲದಿದ್ದರೆ, ರಾಷ್ಟ್ರದ ಮೊದಲ ಹಿಂದುಳಿದ ಆಯೋಗ ಎನಿಸಿರುವ 'ಮಿಲ್ಲರ್ ಆಯೋಗ' ರಚನೆಯಾಗುತ್ತಿರಲಿಲ್ಲ. ಇಡೀ ಭಾರತದ ಅಭಿವೃದ್ಧಿ ಹಾಗೂ ಸಾಮಾಜಿಕ ವ್ಯವಸ್ಥೆ ಕುರಿತು ಮಾತನಾಡುವ ಸಂದರ್ಭದಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ಸ್ಪಷ್ಟ ನಿಲುವು ತಾಳಿದ, ಕರ್ನಾಟಕದ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಲಾಗುತ್ತದೆ. ಅದಕ್ಕೆ ಮುಖ್ಯ ಕಾರಣ ಕೆ.ಹೆಚ್. ರಾಮಯ್ಯರವರ ಉದಾರ ನಿಲುವೆನ್ನಬೇಕು. ಇಂತಹವರ ಹೆಮ್ಮೆಯ ಪುತ್ರಿ ಶ್ರೀಮತಿ ಯಶೋಧರಮ್ಮ ದಾಸಪ್ಪರವರು.

ಅದೇ ರೀತಿ ಜವಹರಲಾಲ್ ನೆಹರು ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿಗಳವರ ಸಂಪುಟದಲ್ಲಿ ರೈಲ್ವೆ ಹಾಗೂ ಇತರೆ ಅನೇಕ ಖಾತೆಗಳ ಸಚಿವರಾಗಿ ಕಾರ್ಯನಿರ್ವಹಿಸಿದ ಹೆಚ್.ಸಿ. ದಾಸಪ್ಪರವರು ಭಾರತದ ನಿರ್ಮಾಣಕ್ಕೆ ಸಲ್ಲಿಸಿದ ಸೇವೆ ಪ್ರಶಂಸನೀಯವಾದುದು. ರೈಲ್ವೆ, ಕೈಗಾರಿಕೆ, ಗ್ರಾಮೀಣಾಭಿವೃದ್ಧಿ ಮೊದಲಾದ ಅನೇಕ ಕ್ಷೇತ್ರಗಳಲ್ಲಿ ದಾಸಪ್ಪನವರು ಮಾಡಿದ ಕೆಲಸ-ಕಾರ್ಯಗಳಿಂದ ರಾಷ್ಟ್ರಮಟ್ಟದಲ್ಲಿ ಮನ್ನಣೆ ಪಡೆದಿದ್ದಾರೆ. ಸ್ವತಃ ಮಹಾತ್ಮ ಗಾಂಧೀಜಿಯವರು ಕೂಡ ದಾಸಪ್ಪನವರ ಸೇವಾಕಾರ್ಯವನ್ನು ಮೆಚ್ಚಿದ್ದರು.

ರಾಜ್ಯದ ಅನೇಕ ಯುವಕರು ರಾಜಕಾರಣದಲ್ಲಿ ಜವಾಬ್ದಾರಿಯುತ ಸ್ಥಾನಗಳನ್ನು ಪಡೆಯುವಂತೆ ಪ್ರೋತ್ಸಾಹಿಸಿದ ಕೀರ್ತಿ ಕೂಡ ದಾಸಪ್ಪರವರಿಗೆ ಸಂದಾಯವಾಗಿದೆ. ಒಕ್ಕಲಿಗರ ಸಂಘ ಸೇರಿದಂತೆ ಅನೇಕ ಸಂಸ್ಥೆಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡುವಂತೆ ದಾಸಪ್ಪನವರು ಪ್ರೇರಣೆ ಮತ್ತು ಪ್ರೋತ್ಸಾಹ ನೀಡಿದ್ದರು. ಇವರುಗಳ ಮಕ್ಕಳಾದ ರಾಮದಾಸ ಮತ್ತು ತುಳಸಿದಾಸಪ್ಪನವರು ಸಜ್ಜನರಾಗಿದ್ದರು. ತುಳಸಿದಾಸಪ್ಪರವರು ಮೂರು ಬಾರಿ ಲೋಕಸಭಾ ಸದಸ್ಯರಾಗಿ ಕೆಲಸಮಾಡಿದ್ದಾರೆ.

ಸುಧಾರಣಾವಾದಿ ಕೆ.ಎಚ್. ರಾಮಯ್ಯರವರ ಪುತ್ರಿಯಾಗಿ, ಹೆಚ್.ಸಿ. ದಾಸಪ್ಪರವರ ಧರ್ಮಪತ್ನಿಯಾಗಿ, ಗಾಂಧೀಜಿಯವರ ಅನುಯಾಯಿಯಾಗಿ, ಸ್ವಾತಂತ್ರ್ಯ ಹೋರಾಟದ ನಾಯಕರಾಗಿ, ಸಚಿವರಾಗಿ, ತುಳಸಿ ಮತ್ತು

ರಾಮದಾಸ್‌ರವರ ಮಮತೆಯ ಮಾತೆಯಾಗಿ ಯಶೋಧರಮ್ಮರವರು ನಿರ್ವಹಿಸಿದ ಕರ್ತವ್ಯ ಬಹುದೊಡ್ಡ ರೀತಿಯದು.

ಶ್ರೀಮತಿ ಯಶೋಧರಮ್ಮರವರು ಕರ್ನಾಟಕದ ಪ್ರಪ್ರಥಮ ಸಂಪುಟ ದರ್ಜೆಯ ಮಹಿಳಾ ಸಚಿವರಾಗಿ ಸಮಾಜಕಲ್ಯಾಣ ಖಾತೆಯಲ್ಲಿ ಮಾಡಿದ ಕಾರ್ಯಗಳು ಸದಾಕಾಲ ಪ್ರೇರಣೆ ನೀಡುವಂಥದ್ದು. ಅರವತ್ತರ ದಶಕದಲ್ಲಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಅವರು ಅನೇಕ ಯೋಜನೆಗಳನ್ನು ರೂಪಿಸಿದ್ದರು. ಸ್ವಸಹಾಯ ಗುಂಪುಗಳು ಪ್ರಾರಂಭವಾಗುವಂತೆ ಅವರು ನೋಡಿ ಕೊಂಡಿದ್ದರು. ಅಬಲಾಶ್ರಮ ಆ ಕಾಲದಲ್ಲೇ ಪ್ರಾರಂಭವಾಯಿತು. ಪ್ರತಿಯೊಂದು ತಾಲ್ಲೂಕಿನಲ್ಲೂ ಹೆಣ್ಣುಮಕ್ಕಳ ವಸತಿನಿಲಯ ಪ್ರಾರಂಭವಾಯಿತು. ಎಲ್ಲಾ ತಾಲ್ಲೂಕಿನಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ, ಹಿಂದುಳಿದವರ ಮಕ್ಕಳಿಗೆ ವಸತಿನಿಲಯ ಇರಬೇಕೆಂದು ಅವರು ಯೋಜಿಸಿ ಅದಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ಕೈಗೊಂಡರು. ಅವರ ಸಾಮಾಜಿಕ ಕಾಳಜಿಯಿಂದಾಗಿ ಸಾಮಾಜಿಕ ಸೇವಾ ಭದ್ರತೆಯ ಕಾರ್ಯದಲ್ಲಿ ಕರ್ನಾಟಕ ಮೊದಲಿನಿಂದಲೂ ಮುಂಚೂಣಿಯಲ್ಲಿದೆ. ಇಂತಹ ಮುಂಚೂಣಿಗೆ ಯಶೋಧರಮ್ಮ ದಾಸಪ್ಪರವರ ಕ್ರಿಯಾಶೀಲ ಪ್ರಾಮಾಣಿಕ ತ್ಯಾಗ ಮತ್ತು ದುಡಿಮೆ ಕಾರಣವಾಗಿದೆ. ಮಹಿಳೆಯರಿಗೆ ಅಭಿವೃದ್ಧಿ ಹಾಗೂ ಸಾರ್ವಜನಿಕ ಕ್ಷೇತ್ರದಲ್ಲಿ ಸಮಪಾಲು ಕೊಡಬೇಕೆಂಬುದು ಆಕೆಯ ಸ್ಪಷ್ಟ ಧ್ಯೇಯವಾಗಿತ್ತು. ಅದಕ್ಕಾಗಿ ಅವರು ಅನೇಕ ನೂತನ ಕಾರ್ಯಕ್ರಮಗಳನ್ನು ರೂಪಿಸಿದ್ದರು. ಅರಸೀಕೆರೆಯಲ್ಲಿ ಕಸ್ತೂರ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಎಂಬ ಟ್ರಸ್ಟ್ ಸ್ಥಾಪಿಸಿ ಮಹಿಳೆಯರ ಸಬಲೀಕರಣಕ್ಕೆ ಅವರು ಶ್ರಮಿಸಿದ ರೀತಿ ನಿಜಕ್ಕೂ ಶ್ಲಾಘನೀಯ ವಿಚಾರ. ಮಹಿಳೆಯೊಬ್ಬರು ಮೊಟ್ಟಮೊದಲು ರಾಜ್ಯ ಕಾಂಗ್ರೆಸ್‌ನ ಅಧ್ಯಕ್ಷರಾಗಿ, ಆಕೆ ಪಕ್ಷ ಸಂಘಟಿಸಿದ ರೀತಿ ಅನೇಕರಿಗೆ ಮಾರ್ಗದರ್ಶನ ನೀಡುವಂತಹದು.

1966ರಲ್ಲಿ ಕರ್ನಾಟಕ ರಾಜ್ಯದಲ್ಲಿ ಪಾನ ನಿರೋಧ ನೀತಿ ಸಡಿಲಿಕೆಯಾದಾಗ ಶ್ರೀಮತಿ ಯಶೋಧರಮ್ಮರವರು ರಾಜೀನಾಮೆ ಕೊಟ್ಟು ಮೌಲ್ಯ ಪಾಲನೆಯ ಬಗ್ಗೆ ತಮಗಿರುವ ನಿಷ್ಠೆಯನ್ನು ತೋರಿಸಿದ್ದರು. ಅವರ ತ್ಯಾಗ, ತತ್ವನಿಷ್ಠೆ ಹಾಗೂ ಸಾಮಾಜಿಕ ಕಳಕಳಿಯನ್ನು ದೇಶದ ಪ್ರಜ್ಞಾವಂತ ಜನರು ಗಮನಿಸಿದ್ದರು. ಅನಂತರ ಯಶೋಧರಮ್ಮರವರು ಸಾರ್ವಜನಿಕ ಕ್ಷೇತ್ರದಲ್ಲಿ ಸಕ್ರಿಯವಾಗಿ ಕಾಣಿಸಿಕೊಳ್ಳದೇ ಹೋಗಿರಬಹುದು. ಆದರೆ ಕರ್ನಾಟಕದ ಸಾಮಾಜಿಕ ಇತಿಹಾಸವನ್ನು ಬರೆಯುವ ಪ್ರತಿಯೊಬ್ಬರೂ ಕೂಡ ಯಶೋಧರಮ್ಮರವರ ವ್ಯಕ್ತಿತ್ವವನ್ನು ಸದಾ ಸ್ಮರಿಸುತ್ತಾರೆ.

1978ರಲ್ಲಿ ಕ್ಯಾನ್ಸರ್ ರೋಗಪೀಡಿತರಾದ ಯಶೋಧರಮ್ಮರವರು ಈ ಕಾಯಿಲೆಯ ನಡುವೆಯೂ ಕೂಡ ರಚನಾತ್ಮಕ ಕೆಲಸಗಳನ್ನು ಮಾಡುತ್ತಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟದ ಪ್ರಮುಖ ಘಟನೆಯಾದ ಶಿವಪುರದ ಕಾಂಗ್ರೆಸ್ 'ಧ್ವಜ ಸತ್ಯಾಗ್ರಹ'ದ ನೆನಪು ಇನ್ನೂ ತಮ್ಮಲ್ಲಿ ಇದೆಯೆಂದು ಅವರು ಸದಾ ಹೇಳುತ್ತಿದ್ದುದನ್ನು ಯಾರು ತಾನೆ ಮರೆಯುತ್ತಾರೆ?

ಕರ್ನಾಟಕ ರಾಜ್ಯ ಅನೇಕ ವೀರವನಿತೆಯರಿಗೆ ಜನ್ಮ ಕೊಟ್ಟ ಪುಣ್ಯಭೂಮಿಯಾಗಿದೆ. ದಾನಚಿಂತಾಮಣಿ ಅತ್ತಿಮಬ್ಬೆ, ಕೆಳದಿ ಚೆನ್ನಮ್ಮ, ರಾಣಿ ಅಬ್ಬಕ್ಕ ಮೊದಲಾದವರು ತಮ್ಮ ಕೆಲಸಕಾರ್ಯಗಳಿಂದ ಇತಿಹಾಸದಲ್ಲಿ ಅಚ್ಚಳಿಯದ ಸ್ಥಾನದಲ್ಲಿ ನಿಂತಿದ್ದಾರೆ. ಇಂತಹವರ ಸಾಲಿಗೆ ಮತ್ತೊಂದು ಹೆಸರನ್ನು ಸೇರ್ಪಡೆ ಮಾಡಬಹುದಾದರೆ ಶ್ರೀಮತಿ ಯಶೋಧರಮ್ಮ ದಾಸಪ್ಪನವರದು ಎಂದರೆ ತಪ್ಪಿಲ್ಲ. ಅವರ ಹೆಸರು ಕನ್ನಡನಾಡಿನಲ್ಲಿ ಸದಾ ಹಚ್ಚಹಸಿರಾಗಿರುತ್ತದೆ.

ನಿರೂಪಣೆ : ಡಾ.ಕೆ.ಆರ್. ಕಮಲೇಶ್

*

ಸ್ಫೂರ್ತಿದಾಯಕರು

ಎನ್. ಧರ್ಮಸಿಂಗ್

ಸ್ವಾತಂತ್ರ್ಯಪೂರ್ವದ ಮೌಲ್ಯಯುತ ರಾಜಕಾರಣಿಗಳಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಅತ್ಯಂತ ಪ್ರಮುಖರಾದವರು. ಶಿವಪುರದ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದ ಶ್ರೀಮತಿ ಯಶೋಧರಮ್ಮ ದಾಸಪ್ಪರವರು ಮಹಾತ್ಮಾ ಗಾಂಧೀಜಿಯವರ ಪ್ರೇಮಾದರಗಳಿಗೆ ಪಾತ್ರರಾಗಿದ್ದರು. ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ, ಕರ್ನಾಟಕದಲ್ಲಿ ಹಲವು ಕಾಲ ರಾಜ್ಯದಲ್ಲಿ ಪಕ್ಷವನ್ನು ಮುನ್ನಡೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕರ್ನಾಟಕದ ಮೊದಲ ಮಹಿಳಾ ಸಚಿವರಾಗಿ, ವಿಶೇಷವಾಗಿ ಸಮಾಜ ಕಲ್ಯಾಣ ಖಾತೆಯನ್ನು ಪಡೆದು, ಹಿಂದುಳಿದವರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸಮುದಾಯಕ್ಕೆ ಅಪರೂಪದ ಸೇವೆ ಮಾಡಿದ ಹೆಗ್ಗಳಿಕೆ ಈಕೆಯದು. ಈಕೆಯ ಬದುಕು ಹಾಗೂ ಸಾಧನೆ ಭಾರತದ ಎಲ್ಲ ಜನತೆಗೂ ಸ್ಫೂರ್ತಿದಾಯಕವಾದುದು.

---- * ----

ದಲಿತರ ಮಾತೃ ಸ್ವರೂಪಿಣಿ

ಹೆಚ್. ಹನುಮಂತಪ್ಪ

ಮಾತೃಶ್ರೀ ಪೂಜ್ಯ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರನ್ನು ನೆನೆಸಿಕೊಳ್ಳುವುದೆಂದರೆ ಹೆತ್ತೊಡಲನ್ನು ನೆನೆದಂತೆ ಎಂದು ಭಾವಿಸುತ್ತೇನೆ. ಈ ಮಾತಿನಲ್ಲಿ ಯಾವುದೇ ಅತಿಶಯೋಕ್ತಿಯಿಲ್ಲ. ಆಕೆಯ ಜೀವನವೇ ಉದಾರತೆ ಹಾಗೂ ಗಾಂಧೀಜಿ ಅವರ ಜೀವನ ಮೌಲ್ಯಗಳಿಂದ ರೂಪಿತಗೊಂಡಿದೆ. ಆಕೆಯೇನು ಸಾಮಾನ್ಯ ಕುಟುಂಬದಿಂದ ಬಂದವರಾಗಿರಲಿಲ್ಲ. ಅವರ ತಂದೆ ಕೆ.ಹೆಚ್. ರಾಮಯ್ಯ ಅವರು ಯುವರಾಜ ಕಂಠೀರವ ನರಸರಾಜ ಒಡೆಯರ್ ಸಹಪಾಠಿಗಳು. ಅವರು ಸರ್ಕಾರದ ಮುಖ್ಯ ಇಲಾಖೆಯೊಂದರ ಕಾರ್ಯದರ್ಶಿಯಾಗಿದ್ದರು. ಇನ್ನು ಅವರ ಪತಿ ಹೆಚ್.ಸಿ. ದಾಸಪ್ಪ ಅವರು ಪ್ರಖ್ಯಾತ ವಕೀಲರು. ಸಾರ್ವಜನಿಕ ಕ್ಷೇತ್ರದಲ್ಲಿ ತುಂಬಾ ದೊಡ್ಡ ಹೆಸರು ಪಡೆದಿದ್ದರು. ನೆಹರು ಅವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದರು. ಇವರಿಬ್ಬರ ನಡುವೆ ಪೂಜ್ಯ ಯಶೋಧರಮ್ಮ ಅವರು ಎಂದೂ ಸಣ್ಣವರಾಗಿ ನನ್ನ ಮುಂದೆ ಕಾಣುವುದಿಲ್ಲ. ಶೋಷಿತ ಸಮಾಜದ ದನಿಯಾಗಿ ಎಲ್ಲಾ ಸತ್ಕಾರ್ಯಗಳನ್ನು ಕೇವಲ ಭಾಷಣಕ್ಕೆ ಮೀಸಲಿಡದೆ ಅನುಷ್ಠಾನ ಮಾಡಿದ ಅಪರೂಪದ ವ್ಯಕ್ತಿ ಅವರು.

ಗಾಂಧೀಜಿ ಮತ್ತು ವಿನೋಬಾ ಅವರ ಪೂರ್ಣ ಆಶೀರ್ವಾದ ಪಡೆದಿದ್ದ ಯಶೋಧರಮ್ಮ ಅವರದು ಪ್ರಭಾವಶಾಲಿ ವ್ಯಕ್ತಿತ್ವ 1950ರಲ್ಲೇ ಪ್ರಭಾವಶಾಲಿ ರಾಜಕಾರಣಿ. ಸಾಹುಕಾರ್ ಚೆನ್ನಯ್ಯ ಅವರನ್ನು ಸೋಲಿಸಿ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನಕ್ಕೇರಿ ದಾಖಲೆ ನಿರ್ಮಿಸಿದವರು. ಆಳುವ ಪಕ್ಷದ ಅಧ್ಯಕ್ಷರು ಸರ್ಕಾರಕ್ಕೆ ಹೇಗೆ ಮಾರ್ಗದರ್ಶನ ನೀಡಬಹುದೆಂಬುದಕ್ಕೆ ಅವರ ಕಾರ್ಯ ಹಾಗೂ ಮಾತುಗಳೆ ನಿದರ್ಶನವಾಗಿದೆ.

ಕಾಂಗ್ರೆಸ್ ಪಕ್ಷಕ್ಕೆ ಸ್ವಂತ ಕಛೇರಿ ಇಲ್ಲದ ಸಂದರ್ಭದಲ್ಲಿ ತಮ್ಮ ಅಮೂಲ್ಯ ಜಾಗವನ್ನು ಕಾಂಗ್ರೆಸ್ ಸಂಸ್ಥೆಗೆ ಬಿಟ್ಟುಕೊಟ್ಟರು. ಆ ಜಾಗದಲ್ಲಿ ಇಂದು ಜನತಾದಳದ ಕಛೇರಿ ಇದೆ! ಯಶೋಧರಮ್ಮ ಅವರ ತ್ಯಾಗದ ಕುರಿತು ಕಾಂಗ್ರೆಸ್‌ನಲ್ಲಿ ಎಲ್ಲಾ ಕಾಲಕ್ಕೂ ಸದಭಿಪ್ರಾಯ ಮೂಡಿದೆ.

ಅವರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಸಂದರ್ಭದಲ್ಲಿ ಚಿತ್ರದುರ್ಗಕ್ಕೆ ಆಗಮಿಸಿದ್ದರು. ಆಗ, ನಾನು ಸೇವಾದಳದ ಕಾರ್ಯದರ್ಶಿ. ಡಾ॥ ಎನ್.ಎಸ್. ಹರ್ಡೀಕರ್ ಅವರ ಶಿಷ್ಯರಾದ ವಾಸುದೇವ ರಾವ್ ಅವರು ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್‌ನ ಜವಾಬ್ದಾರಿ ಹೊತ್ತಿದ್ದರು. ಸೇವಾದಳದ ಹೆಣ್ಣುಮಕ್ಕಳಿಂದ ಕಾಂಗ್ರೆಸ್ ಅಧ್ಯಕ್ಷೆ ಯಶೋಧರಮ್ಮ ಅವರಿಗೆ ಸಾಂಪ್ರದಾಯಕ ಸ್ವಾಗತ ಕೋರಲಾಯಿತು. ಜೊತೆಗೆ ನಾವು "ಗಾಡ್ ಆಫ್ ಹಾನರ್" ಕೊಟ್ಟೆವು. ಯಾವುದೇ ಸಾರ್ವಜನಿಕ ಕಾರ್ಯಕ್ರಮವಾಗಲಿ ಹೆಣ್ಣುಮಕ್ಕಳು ಭಾಗವಹಿಸಿದ್ದಾರೆಂದರೆ ಯಶೋಧರಮ್ಮ ಅವರಿಗೆ ಅಪಾರ ಸಂತೃಪ್ತಿ ದೊರಕುತ್ತಿತ್ತು. ಅಂದು ಸೇವಾದಳದ ಎಲ್ಲಾ ಹೆಣ್ಣುಮಕ್ಕಳನ್ನು

ಕರೆದು ಮಾತನಾಡಿಸಿ ಮುಂದೆ ಓದುವಂತೆ ಹಿತವಚನ ಹೇಳುತ್ತಿದ್ದರು. ಅಷ್ಟು ಹೊತ್ತಿಗೆ ಆಗಲೇ ಯಶೋಧರಮ್ಮ ಅವರ ಸಾಧನೆ ಲೋಕವಿಖ್ಯಾತಿಯಾಗಿತ್ತು. ಯಶೋಧರಮ್ಮ-ದಾಸಪ್ಪ ದಂಪತಿಗಳು ವಾರ್ಧಾ ಆಶ್ರಮದಲ್ಲಿದ್ದು ಸ್ವತಃ ಮಹಾತ್ಮ ಗಾಂಧೀಜಿ ಅವರಿಂದ ಸೇವಾದೀಕ್ಷೆ ಪಡೆದಿದ್ದರು. 1938ರ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಆಕೆ ಮಾಡಿದ ಭಾಷಣ ಅಂದಿನ ಎಲ್ಲಾ ಸ್ವಾತಂತ್ರ ಹೋರಾಟಗಾರರಲ್ಲಿಯು ಸ್ಫೂರ್ತಿ ನೀಡಿತ್ತು. ಯಶೋಧರಮ್ಮ ಅವರ ಸಾಮಾಜಿಕ ಕಳಕಳಿಯಂತು ಎಲ್ಲೆಲ್ಲಿಯೂ ಪ್ರಸಿದ್ಧವಾಗಿದೆ. ಅರಸೀಕೆರೆಯ ಬಳಿ ನೂರು ಎಕರೆ ವಿಸ್ತಾರವಾದ ಜಾಗದಲ್ಲಿ ಕಸ್ತೂರಬಾ ಟ್ರಸ್ಟ್ ಸ್ಥಾಪಿಸಿ ಅದರ ಸೇವಾ ಕಾರ್ಯಗಳಿಂದ ಭೂ-ದಾನ ಚಳುವಳಿಯ ಹರಿಕಾರ ವಿನೋಬ ಅವರನ್ನು ಆಕರ್ಷಿಸಿದರು. ದೆಹಲಿಗೆ ಹೋಗಿ ಅಧಿಕಾರ ಸುಖ ಅನುಭವಿಸಿದವರು. ಯಶೋಧರಮ್ಮ ಅವರ ಕಾರ್ಯಕ್ಷೇತ್ರ ಹಳ್ಳಿಯ ಕೇರಿ ಅಥವಾ ಗಾಂಧೀಜಿ ಬೋಧಿಸಿದ ರಚನಾತ್ಮಕ ಕಾರ್ಯಗಳಾಗಿದ್ದವು. ಅವರನ್ನು ಯಾರು ಬೇಕಾದರೂ ಸಂಪರ್ಕಿಸಬಹುದಾಗಿತ್ತು. ಅವರ ವ್ಯಕ್ತಿತ್ವ ಅಷ್ಟು ಸರಳವಾಗಿತ್ತು. 1951ರಿಂದಲೂ ಅವರನ್ನು ನೋಡುತ್ತ ಬಂದಿದ್ದೇನೆ, ಅವರಿಗೆ ರಚನಾತ್ಮಕ ಕೆಲಸಗಳಲ್ಲಿ ಇರುವ ಆಸಕ್ತಿಗೆ ಒಂದು ಉದಾಹರಣೆ ಕೊಡಬಹುದು.

ದೇವರಾಜು ಅರಸು ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಕಾಂಗ್ರೆಸ್‌ನವರಾದ ಎಸ್.ವಿ. ಮಂಜುನಾಥ್ ಅಧ್ಯಕ್ಷತೆಯಲ್ಲಿ ಖಾದಿ ಮಂಡಳಿ ಪುನರ್‌ರಚನೆಯಾಯಿತು. ಅದರ ಸದಸ್ಯರಾಗಿದ್ದರು ಯಶೋಧರಮ್ಮ ದಾಸಪ್ಪ ರವರು. ನಾನು ಕೂಡ ಇದರ ಸದಸ್ಯ. ಇಷ್ಟು ಹೊತ್ತಿಗಾಗಲೇ ಅವರು ದೊಡ್ಡ ಹುದ್ದೆಯಲ್ಲಿದ್ದು ಕಾರ್ಯನಿರ್ವಹಿಸುತ್ತಿದ್ದರು. ಆದರೂ ಖಾದಿ ಬೋರ್ಡ್ ಕೆಲಸಕ್ಕೆ ಅವರು ಸಾಮಾನ್ಯ ಸದಸ್ಯರಾಗಿ ಬಂದಿದ್ದರು. ಖಾದಿ ಗಾಂಧೀಜಿ ಅವರಿಗೆ ಪ್ರಿಯವಾದ ಕ್ಷೇತ್ರ. ಅದರ ಮೂಲಕ ಇಡೀ ಭಾರತದ ಗ್ರಾಮೀಣ ಕೈಗಾರಿಕಾ ಕ್ಷೇತ್ರವನ್ನು ಸ್ವಾವಲಂಬಿತ ಕ್ಷೇತ್ರವನ್ನಾಗಿ ಮಾಡುವ ಮಹತ್ತರ ಹಂಬಲವಿತ್ತು. ಆ ದಿಸೆಯಲ್ಲಿ ತಮ್ಮ ಕಿರು ಸೇವೆಯು ಸಂದಾಯವಾಗಬೇಕೆಂಬುದು ಯಶೋಧರಮ್ಮ ದಾಸಪ್ಪ ಅವರ ಮಹತ್ತರ ಆಶೆಯಾಗಿತ್ತು. ಬೋರ್ಡ್‌ನ ಪ್ರತಿ ಸಭೆಗೂ ತಪ್ಪದೇ ಹಾಜರಾಗಿ ಅಮೂಲ್ಯ ಸಲಹೆ ಕೊಡುತ್ತಿದ್ದರು.

ಖಾದಿ ಬೋರ್ಡ್ ವಿವಿಧ ರೀತಿಯ ಸಣ್ಣ ಉದ್ಯಮ ಕೈಗೊಳ್ಳಲು ಅವರೇ ಪ್ರೇರಣ ಶಕ್ತಿ. ಬೆಂಗಳೂರಿನಲ್ಲಿ ಲಕ್ಷ್ಮಮ್ಮ ಅವರು ಸ್ಥಾಪಿಸಿದ ಮಹಿಳಾ ವಿವಿಧೋದ್ದೇಶ ಸಂಘಕ್ಕೆ ಅವರು ಮಾರ್ಗದರ್ಶಕರಾಗಿದ್ದರು. ಅಂದು ಹೆಚ್.ಎಂ.ಟಿ. ಕೈಗಡಿಯಾರ ಕ್ಷೇತ್ರದಲ್ಲಿ ಪ್ರಸಿದ್ಧವಾದ ಉದ್ಯಮ. ಈ ಕಾರ್ಖಾನೆಗೆ ಬೇಕಾದ ಬಿಡಿ ಭಾಗಗಳನ್ನು ಸಣ್ಣ ಉದ್ಯಮದಾರರಿಂದಲೇ ಖರೀದಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಆ ಉದ್ಯಮದಾರರು ಮಹಿಳೆಯರೇ ಆಗಿರಬೇಕೆಂದು ಸ್ಪಷ್ಟಪಡಿಸಿದ್ದರು. ಅನೇಕ ಮಹಿಳಾ ಉದ್ಯಮೆದಾರರು ಈ ಸಂದರ್ಭದಲ್ಲಿ ಜನ್ಮತಾಳಿದ್ದಾರೆ. ಅವರೆಲ್ಲ ಹೆಚ್.ಎಂ.ಟಿ.ಗಡಿಯಾರ ಕಾರ್ಖಾನೆಯವರು. ಗಡಿಯಾರದ ಜೋಡಣೆಯ ಕೆಲಸವನ್ನು ಮಹಿಳಾ ಸಹಕಾರ ಸಂಘಗಳ ಮೂಲಕ ಮಾಡಿಸುವಂತೆ ಅವರ ಮನವೊಲಿಸಿ ಮಹಿಳೆಯರಿಗೆ ಸ್ವಯಂ ಉದ್ಯೋಗ ದೊರಕಿಸುವಂತೆ ಮಾಡಿದರು. ಒಟ್ಟಿನಲ್ಲಿ ಮಹಿಳೆಯರ ಆರ್ಥಿಕ ಶಕ್ತಿ ಅಭಿವೃದ್ಧಿಯಾಗಬೇಕೆಂದು ಅವರ ಮಹೋನ್ನತ ಉದ್ದೇಶವಾಗಿತ್ತು.

ಯಶೋಧರಮ್ಮ ಅವರ ಸಾಧನೆ-ಸಿದ್ಧಿಗಳ ಬಗ್ಗೆ ಅನೇಕ ವಿಷಯಗಳನ್ನು ಗಣ್ಯರು ಈಗಾಗಲೇ ಹೇಳಿದ್ದಾರೆ. ನಾನು ಅವರ ಮಾತೃ ಹೃದಯಕ್ಕೆ ಸಂಬಂಧಪಟ್ಟಂತೆ ಎರಡು ಘಟನೆಗಳನ್ನು ಮಾತ್ರ ಪ್ರಸ್ತಾಪಿಸಿ, ಶೋಷಿತ ಸಮಾಜದ ಬಗ್ಗೆ ಅವರಿಗಿದ್ದ ಬದ್ಧತೆಯನ್ನು ಸ್ಪಷ್ಟಪಡಿಸಬಯಸುತ್ತೇನೆ. 1937ರಲ್ಲಿ ಯಶೋಧರಮ್ಮ ಅವರು ಮೈಸೂರು ನ್ಯಾಯ ವಿಧೇಯಕ ಸಭೆಯ ಸದಸ್ಯರಾಗಿದ್ದರು. ಮೈಸೂರು ಸಂಸ್ಥಾನದಲ್ಲಿ ಮಹಿಳೆಯೊಬ್ಬಳು ಚುನಾವಣೆಯ

ಮೂಲಕ ಈ ಸ್ಥಾನ ಪಡೆದದ್ದು ಇದೇ ಮೊದಲಾಗಿತ್ತು. ನ್ಯಾಯ ವಿಧೇಯಕ ಸಭೆಯಲ್ಲಿ ಅವರು ಹೇಳಿದ ವಿಚಾರ ಪರಿಶಿಷ್ಟ ಜಾತಿಯ ಯುವಕರಲ್ಲಿ ಅಂದು ಸಾಕಷ್ಟು ಪ್ರಸಿದ್ಧವಾಗಿತ್ತು. ಅದು ದಂತಕಥೆಯೋಪಾದಿಯಲ್ಲಿ ಖ್ಯಾತಿ ಪಡೆದಿತ್ತು. ಯಶೋಧರಮ್ಮ ಅವರು ಗಾಂಧೀಜಿ ಅವರ ವಿಚಾರಧಾರೆಯಲ್ಲಿ ಬದುಕು ರೂಪಿಸಿಕೊಂಡು ಸದಾ ಅವರಿಗೆ ಶೋಷಿತ ದಲಿತ ಸಮಾಜಕ್ಕೆ ಸಮಾನತೆ ಕೊಡಿಸಬೇಕೆಂಬ ಕಳಕಳಿಯಿತ್ತು. ಪ್ರತಿಯೊಂದು ಸಲವು ಅವರ ಮಾತಿನ ಧಾಟಿ ಈ ಶೋಷಿತ ಸಮಾಜಕ್ಕೆ ಹೇಗೆ ನ್ಯಾಯ ದೊರಕಿಸಿಕೊಡಬೇಕೆಂಬುದೇ ಆಗಿರುತ್ತಿತ್ತು. ನ್ಯಾಯ ವಿಧೇಯಕ ಸಭೆಯಲ್ಲಿ ಹರಿಜನರಿಗೆ ಎಲ್ಲಾ ದೇವಸ್ಥಾನಗಳಲ್ಲಿಯೂ ಪ್ರವೇಶ ಅವಕಾಶ ಕೊಡಬೇಕೆಂದು ಆಗ್ರಹಿಸಿ ಖಾಸಗಿ ನಿರ್ಣಯವೊಂದನ್ನು ಅವರು ಮಂಡಿಸಿದ್ದರು. ಆ ನಿರ್ಣಯದ ಪೂರ್ವಭಾವಿಯಾಗಿ ಅವರು ಮಾಡಿದ ಭಾಷಣ ಐತಿಹಾಸಿಕ ಮಹತ್ವ ಪಡೆದಿದೆ. ಅದರಲ್ಲಿ ಬರುವ ಒಂದು ವಿಚಾರ ಹೀಗಿದೆ.–: ಒಮ್ಮೆ ಮಹಾತ್ಮ ಗಾಂಧಿ ಅವರ ಆಪ್ತ ಕಾರ್ಯದರ್ಶಿಯಾದ ಮಹಾದೇವ ದೇಸಾಯಿ ಅವರ ಮಗ ನಾರಾಯಣ ದೇಸಾಯಿ ಮೈಸೂರು ನೋಡಲು ಇವರ ಮನೆಗೆ ಬಂದಿದ್ದರಂತೆ. ಅವರು ಬಹುಶಃ ಯಶೋಧರಮ್ಮ ಅವರ ವಾರ್ಧಾಕ್ಕೆ ಹೋಗಿದ್ದಾಗ ಸುಮಾರು 16 ವರ್ಷದ ತರುಣ. ನಾರಾಯಣ ದೇಸಾಯಿ ಅವರನ್ನು ಮೈಸೂರಿಗೆ ಬರುವಂತೆ ಆಹ್ವಾನಿಸಿದ್ದರು. ಮೈಸೂರಿನ ಪ್ರೇಕ್ಷಣಿಯ ಸ್ಥಳಗಳನ್ನು ನೋಡಿದ ಮೇಲೆ ಯಶೋಧರಮ್ಮ ಅವರು ನಾರಾಯಣ ದೇಸಾಯಿ ಅವರನ್ನು ಚಾಮುಂಡಿ ಬೆಟ್ಟಕ್ಕೆ ಕರೆದುಕೊಂಡು ಹೋದರಂತೆ. ಇನ್ನೇನು ಬಾಗಿಲು ದಾಟಿ ದೇವಸ್ಥಾನದ ಒಳಗೆ ಹೋಗಬೇಕಾದರೆ, ನಾರಾಯಣ ದೇಸಾಯಿ ಹಿಂದಿಯಲ್ಲಿ 'ಅಮ್ಮ, ಈ ದೇವಸ್ಥಾನಕ್ಕೆ ಹರಿಜನರಿಗೆ ಪ್ರವೇಶವಿದೆಯೇ?' ಎಂದು ಪ್ರಶ್ನಿಸಿದರಂತೆ. ಯಶೋಧರಮ್ಮ ಅವರು ನಿಜ ಹೇಳಬೇಕೆಂದು, 'ಇಲ್ಲಪ್ಪ!' ಎಂದರಂತೆ. ನಾರಾಯಣ ದೇಸಾಯಿ ಅವರು 'ಅಮ್ಮ ಮಹಾತ್ಮರ ಇಚ್ಛೆಗೆ ವಿರೋಧವಾಗಿ ನಾನು ದೇವಾಲಯವನ್ನು ಹೇಗೆ ಪ್ರವೇಶಿಸಲಿ? ದೇವಾಲಯದೊಳಗೆ ಹೋಗುವುದಿಲ್ಲ' ಎಂದುಬಿಟ್ಟರಂತೆ. ಈ ಮಾತುಗಳನ್ನು ಭಾವಪೂರ್ಣವಾಗಿ ಹೇಳಿದ ಯಶೋಧರಮ್ಮ ಅವರು ಮುಂದಿನ ಭವಿಷ್ಯದ ಭಾರತ ಹೇಗಿರುತ್ತದೆ, ಯುವಜನತೆಯ ಆಶಯಗಳೇನು, ಅದಕ್ಕೆ ಸ್ಪಂದಿಸದಿದ್ದರೆ, ಜಡ್ಡುಕಟ್ಟುಹೋಗಿರುವ ಸಮಾಜ ಹೇಗೆ ನಾಶವಾಗುತ್ತದೆ ಎಂಬುದನ್ನು ಮನಮುಟ್ಟವಂತೆ ವಿವರಿಸಿದ್ದರು. ಮಹಾತ್ಮ ಗಾಂಧೀಜಿ ಅವರ ಅನುಯಾಯಿ ಆಗಿದ್ದ ಅವರಿಗೆ ಇಂತಹ ಸಾಮಾಜಿಕ ಬದ್ಧತೆ ಸಹಜವಾಗೇ ಇತ್ತು. ಬೇರೆ–ಬೇರೆ ರಾಜ್ಯಗಳಿಗೆ ಹೋಲಿಸಿದರೆ ಮೈಸೂರು ಸಂಸ್ಥಾನದಲ್ಲಿ ದಲಿತ ಸಮಾಜದ ಬಗ್ಗೆ ಸಹಾನುಭೂತಿಯಿಂದ ಚಿಂತನೆ ಮಾಡುವ ಪರಿಪಾಠ ಸ್ವಾತಂತ್ರ ಪೂರ್ವದಿಂದಲೂ ಬೆಳೆದಿತ್ತು. ಇದಕ್ಕೆ ಮುಖ್ಯ ಕಾರಣ ಯಶೋಧರಮ್ಮ ಅಂಥ ಸೇವಾಸಕ್ತರ ಪ್ರಯತ್ನ ಎಂದರೆ ತಪ್ಪಿಲ್ಲ.

ಇಂತಹದೇ ಮತ್ತೊಂದು ಘಟನೆಯನ್ನು ಉಲ್ಲೇಖಿಸಬಹುದು. 1966ರಲ್ಲಿ ಯಶೋಧರಮ್ಮ ಅವರು ಅಂದಿನ ಸರ್ಕಾರ ಮದ್ಯಪಾನದ ಮೇಲಿದ್ದ ನಿರ್ಬಂಧವನ್ನು ತೆಗೆದುಹಾಕಿದ್ದರಿಂದ ಆಕ್ರೋಶಗೊಂಡು, ಎಸ್.ನಿಜಲಿಂಗಪ್ಪ ಸಚಿವ ಸಂಪುಟಕ್ಕೆ ಯಶೋಧರಮ್ಮ ಅವರು ರಾಜೀನಾಮೆಕೊಟ್ಟರು. ಅವರ ರಾಜೀನಾಮೆ ಸರ್ಕಾರ ಮತ್ತು ಜನತೆಯ ಮಟ್ಟದಲ್ಲಿ ಬಹು ದೊಡ್ಡ ಕಂಪನ ಉಂಟುಮಾಡಿತು. ಸರ್ಕಾರದ ವಿರುದ್ಧ ಮಾಧ್ಯಮಗಳು ಪ್ರಬಲ ಜನಾಭಿಪ್ರಾಯ ರೂಪಿಸಿತ್ತು. ಯಶೋಧರಮ್ಮ ಅವರ ಬಗ್ಗೆ ಜನತೆ ಜನಾಭಿಮಾನದ ಹೊಳೆಹರಿಸಿದರು. ಮದ್ಯಪಾನ ದಲಿತ ಸಮುದಾಯಕ್ಕೆ ಅಂಟಿದ ಬಹುದೊಡ್ಡ ಶಾಪ. ಅದರಿಂದ ಕಾಪಾಡಲು ತಮ್ಮನ್ನೇ ಬಲಿಕೊಟ್ಟ ಯಶೋಧರಮ್ಮ ಅವರ ತ್ಯಾಗದ ಬಗ್ಗೆ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾಗಿದೆ. ಆಗ ಬಿ.ರಾಚಯ್ಯ ಮತ್ತು ಪ್ರಭಾಕರ ಅವರು ದಲಿತ ಸಮುದಾಯದ ಸಚಿವರಾಗಿದ್ದರು. ಪ್ರಭಾಕರರಂತು ಯಶೋಧರಮ್ಮ ಅವರ ಕೈಕೆಳಗೆ ಸಮಾಜ ಕಲ್ಯಾಣ ಖಾತೆಯ ಸಹಾಯಕ ಸಚಿವರಾಗಿದ್ದರು. ಆಗ, ಮಾಧ್ಯಮಗಳು ಪರಿಶಿಷ್ಟ ಜಾತಿಯ ಮಂತ್ರಿಗಳು ಸರ್ಕಾರಕ್ಕೆ ರಾಜೀನಾಮೆ ನೀಡಿ ಯಶೋಧರಮ್ಮ ಅವರ ಕೈಬಲಪಡಿಸಬೇಕೆಂದು ಜನಾಭಿಪ್ರಾಯ ರೂಪಿಸಿದರು.

ಮಧ್ಯಮ ವರ್ಗದ ಮತದಾರರಲ್ಲಿಯೂ ಇದೇ ಅಭಿಪ್ರಾಯ ಹೆಚ್ಚು-ಕಡಿಮೆಯಿತ್ತು. ಈ ದಲಿತ ಸಚಿವರಿಗೆ ಉಭಯ ಸಂಕಟ. ಒಮ್ಮೆ ರಾಜೀನಾಮೆ ಕೊಟ್ಟರೆ, ಮುಂದಿನ ರಾಜಕೀಯ ಭವಿಷ್ಯ ಕೊನೆಗೊಳ್ಳಬಹುದೆಂಬ ಭೀತಿ. ಈ ವಿಚಾರಗಳನ್ನು ಯಶೋಧರಮ್ಮ ಅವರು ತಿಳಿಯದವರೇನು ಅಲ್ಲ. ಮೌಲ್ಯಗಳನ್ನು ಪ್ರತಿಪಾದಿಸುವವರನ್ನು ಎಲ್ಲರೂ ಪ್ರಶಂಸಿಸುತ್ತಾರೆ. ಅದೇ ವ್ಯಕ್ತಿ ಅಧಿಕಾರ ತ್ಯಾಗ ಮಾಡಿ ಮತ್ತೆ ಚುನಾವಣೆಗೆ ಹೋದರೆ ಬಹುಸಂಖ್ಯಾತ ಮತದಾರರಲ್ಲಿ ಸಂಬಂಧಪಟ್ಟ ವಿಚಾರಗಳೇ ನೆನಪಿರುವುದಿಲ್ಲ. ಇಷ್ಟರ ಮೇಲೆ ಚುನಾವಣೆಗಳು ಯಾವುದೋ ಬೇರೆ-ಬೇರೆ ಕಾರಣಕ್ಕೆ ನಡೆಯುತ್ತದೆ. ಅದು ಬೇರೆ ವಿಚಾರ. ಯಶೋಧರಮ್ಮ ಅವರು ಸಹ ತಮ್ಮ ರಾಜೀನಾಮೆಯ ನಂತರ ಚುನಾವಣೆಯ ರಾಜಕಾರಣಕ್ಕೆ ಮತ್ತೆ ಹಿಂದಿರುಗಲಿಲ್ಲ. ಸಮಾಜಸೇವಾ ಕ್ಷೇತ್ರದಲ್ಲಿ ಉಳಿದುಕೊಂಡರು. ಈ ಇಬ್ಬರು ದಲಿತ ಮಂತ್ರಿಗಳು ಯಶೋಧರಮ್ಮ ಅವರ ಮನೆಗೆ ಹೋಗಿ ಈ ಸಂಧರ್ಭದಲ್ಲಿ ತಾವೇನು ಮಾಡಬೇಕೆಂದು ಸಲಹೆ ಕೇಳಿದರು. ಯಶೋಧರಮ್ಮ ಅವರಿಗೆ ಸಾಕಷ್ಟು ಉತ್ತಮ ವಾಸ್ತವಿಕ ಪ್ರಜ್ಞೆಯಿತ್ತು, ಈ ಇಬ್ಬರು ದಲಿತ ಮಂತ್ರಿಗಳನ್ನು ಬಲಿಪಶು ಮಾಡುವ ಬಗ್ಗೆ ತೆರೆಮರೆಯ ತಂತ್ರಗಳು ಅವರಿಗೆ ಅರ್ಥವಾಗಿದ್ದವು. ಅದಕ್ಕೆ ಅವರು 'ನೀವೇನು ಯೋಚನೆ ಮಾಡಬೇಡಿ, ನಾಳೆ ನಿಮ್ಮ ಪ್ರಶ್ನೆಗೆ ಸದನದಲ್ಲಿ ಉತ್ತರಕೊಡುತ್ತೇನೆ' ಎಂದರು. ಮಾರನೇ ದಿನ ಯಶೋಧರಮ್ಮ ಅವರು ತಮ್ಮ ರಾಜೀನಾಮೆಗೆ ಕಾರಣವಾದ ವಿಚಾರಗಳನ್ನು ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಮದ್ಯಪಾನ ಮಹಿಳೆ, ಮಕ್ಕಳು ಹಾಗೂ ದಲಿತರಿಗೆ ಹೇಗೆ ಕ್ರೂರವಾಗಿದೆ ಎಂಬುದನ್ನು ಪರಿಣಾಮಕಾರಿಯಾಗಿ ವಿವರಿಸಿದರು. ಸ್ವತಃ ಮಹಾತ್ಮ ಗಾಂಧೀಜಿ ಅವರಿಂದಲೇ ಸೇವಾ ದೀಕ್ಷೆ ಪಡೆದ ತಾವು ಇಂತಹ ಸಂದರ್ಭದಲ್ಲಿ ಆತ್ಮಸಾಕ್ಷಿಗೆ ಅನುಗುಣವಾಗಿ ನಡೆಯದಿದ್ದರೆ ತಮಗೆ ತಾವೇ ದ್ರೋಹ ಮಾಡಿಕೊಂಡಂತೆ ಆಗುತ್ತದೆ ಎಂದು ಸ್ಪಷ್ಟಪಡಿಸಿದ ಅವರು ತಮ್ಮ ರಾಜೀನಾಮೆಯಿಂದ ರಾಜ್ಯದಲ್ಲಿ ಉತ್ಕಟ ಕ್ರಾಂತಿಯಾಗುತ್ತದೆಂಬ ಭ್ರಮೆ ತಮ್ಮಗಿಲ್ಲವೆಂದರು. ಅನಂತರ ಈ ಇಬ್ಬರು ಸಚಿವರ ವಿಷಯ ಪ್ರಸ್ತಾಪಿಸಿ 'ಮಾಧ್ಯಮದವರು ನನ್ನ ಕೈಬಲಪಡಿಸಲು ದಲಿತ ಸಮಾಜದ ಸಚಿವರುಗಳು ಈ ಸಂದರ್ಭದಲ್ಲಿ ರಾಜೀನಾಮೆ ಕೊಡಬೇಕೆಂದು ಒತ್ತಾಯ ಮಾಡಿದೆ. ಸಮಾಜದಲ್ಲಿ ಸತ್‌ವಿಚಾರಗಳನ್ನು ಒಬ್ಬರೆ ಬಿತ್ತಿದರು ಅದರ ಪ್ರಭಾವ ಕಡಿಮೆಯೇನು ಆಗುವುದಿಲ್ಲ. ಈ ಇಬ್ಬರು ನನಗೆ ಮಕ್ಕಳಿದ್ದಂತೆ, ತಾಯಿಯೇ ಮಕ್ಕಳ ನೋವು-ನಲಿವುಗಳನ್ನು ಸಮರ್ಥವಾಗಿ ಬಿತ್ತರಿಸಿದ ಮೇಲೆ ಮಕ್ಕಳು ಹೇಳುವುದೇನಿದೆ? ತಾಯಿಗಿಂತ ಮಕ್ಕಳ ಬೇಕು-ಬೇಡಗಳನ್ನು ಯಾರು ಅರ್ಥ ಮಾಡಿಕೊಳ್ಳುತ್ತಾರೆ. ಹೀಗಾಗಿ ಈ ಇಬ್ಬರು ಸಚಿವರು ರಾಜೀನಾಮೆ ಕೊಡುವ ಅಗತ್ಯವಿಲ್ಲ' ಎಂದರು. ಆ ಇಬ್ಬರು ಸಚಿವರು ಸರ್ಕಾರದಲ್ಲಿ ಮುಂದುವರೆದರು. ಯಶೋಧರಮ್ಮ ಅವರೇ ಹೇಳಿದಂತೆ ಅವರು ಇಡೀ ದಲಿತ ಸಮುದಾಯದ ಮಾತೃಸ್ವರೂಪಿಣಿ. ಮಹಾತ್ಮ ಗಾಂಧೀಜಿ ಅವರ ಆದರ್ಶಗಳನ್ನು ಶ್ರದ್ಧಾಪೂರ್ವಕವಾಗಿ ಅನುಷ್ಠಾನ ಮಾಡಿದ ಮಹಾನುಭಾವಿ.

———— * ————

ಅನುಕರಣೀಯ ವ್ಯಕ್ತಿತ್ವ

ಎಂ. ಮಲ್ಲಿಕಾರ್ಜುನ ಖರ್ಗೆ

ಸ್ವಾತಂತ್ರ್ಯ ಹೋರಾಟಗಾರ್ತಿ, ವಿಶಾಲ ಮೈಸೂರಿನ ಸಂಪುಟ ದರ್ಜೆಯ ಪ್ರಥಮ ಮಹಿಳಾ ಸಚಿವರಾದ ಶ್ರೀಮತಿ ಯಶೋಧರಮ್ಮ ದಾಸಪ್ಪರವರಿಗೆ ಕರ್ನಾಟಕದ ರಾಜಕೀಯ ಹಾಗೂ ಕರ್ನಾಟಕ ಇತಿಹಾಸದಲ್ಲಿ ವಿಶೇಷ ಸ್ಥಾನವಿದೆ. ಮಹಾತ್ಮಾ ಗಾಂಧೀಜಿಯವರ ಆಶ್ರಯದಲ್ಲಿ ಬೆಳೆದು ಯಶೋಧರಮ್ಮ ದಾಸಪ್ಪ ಅವರು ಕಸ್ತೂರಬಾ ಟ್ರಸ್ಟ್‌ನ ಮೂಲಕ ಸಲ್ಲಿಸಿದ ಸಾಮಾಜಿಕ ಸೇವೆ ಸದಾಕಾಲ ಸ್ಮರಣೀಯವಾದುದು. ಸಮಾಜಕಲ್ಯಾಣ ಸಚಿವರಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಹೆಣ್ಣುಮಕ್ಕಳ ವಸತಿನಿಲಯ ತೆರೆಯುವಂತೆ ಅವರು ಅರವತ್ತರ ದಶಕದಲ್ಲೇ ಮಾಡಿದ ಆದೇಶ ತುಂಬಾ ಮಹತ್ವವಾದುದು. ಇವರ ಆದೇಶದಿಂದಾಗಿ ಗ್ರಾಮೀಣ ಪ್ರದೇಶದ ಬಡ ಹೆಣ್ಣುಮಕ್ಕಳು ವಿದ್ಯೆ ಪಡೆಯಲು ಅನುಕೂಲವಾಯಿತು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲೂ ವಸತಿನಿಲಯ ತೆಗೆಯಲು ಅವರು ಸಮಾಜ ಕಲ್ಯಾಣ ಸಚಿವರಾಗಿದ್ದಾಗ ಮಾಡಿದ ಪ್ರಯತ್ನ ಸ್ತುತ್ಯಾರ್ಹವಾದುದು.

ಈ ಪ್ರಯತ್ನ ಆ ಕಾಲದ ಅನೇಕ ಆಡಳಿತಗಾರರಿಗೆ ಹಾಗೂ ಹಿರಿಯ ಮುತ್ಸದ್ದಿಗಳಿಗೆ ಪ್ರೇರಣೆ ಕೊಟ್ಟಿತು. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಅವರೆಲ್ಲಾ ರಚನಾತ್ಮಕ ಕೆಲಸ ಮಾಡಲು ಪ್ರೇರೇಪಣೆ ದೊರೆಯಿತು. ಸ್ವತಃ ಯಶೋಧರಮ್ಮ ದಾಸಪ್ಪರವರು ಪರಿಶಿಷ್ಟ ಜಾತಿಯ ಬಗ್ಗೆ ವಿಶೇಷ ಅನುಕಂಪವುಳ್ಳವರಾಗಿದ್ದು, ತಮ್ಮ ವೈಯಕ್ತಿಕ ಬದುಕಿನಲ್ಲಿ ಈ ಪರಿಶಿಷ್ಟ ಜಾತಿಯ ಹೆಣ್ಣುಮಗುವೊಂದನ್ನು ದತ್ತು ತೆಗೆದುಕೊಂಡು ಆಕೆಗೆ ಎಲ್ಲಾ ರೀತಿಯ ವಿದ್ಯಾಭ್ಯಾಸವನ್ನು ನೀಡಿ ಪ್ರತಿಷ್ಠಿತ ಕುಟುಂಬವೊಂದಕ್ಕೆ ವಿವಾಹ ಮಾಡಿಕೊಟ್ಟ ಅಪರೂಪದ ಪ್ರಸಂಗವೊಂದನ್ನು ಅವರ ಜೀವನ ಚರಿತ್ರಕಾರರು ದಾಖಲು ಮಾಡಿದ್ದಾರೆ. ಇದು ಬದುಕಿನಲ್ಲಿ ಉನ್ನತ ಆದರ್ಶ ಹೊಂದಿದ್ದ ವ್ಯಕ್ತಿಯೊಬ್ಬರು ಮಾಡಬಹುದಾದ ಉತ್ಕೃಷ್ಟ ಕೆಲಸವೆಂದೇ ಹೇಳಬೇಕಾಗಿದೆ. ಕಸ್ತೂರ ಬಾ ಟ್ರಸ್ಟ್‌ನ ಮೂಲಕ ಯಶೋಧರಮ್ಮ ದಾಸಪ್ಪರವರು ಗ್ರಾಮೀಣ ಹೆಣ್ಣುಮಕ್ಕಳ ಸ್ವಾವಲಂಬನೆಗೆ ಸಹಾಯಕವಾಗುವ ಹತ್ತಾರು ಕೆಲಸಕಾರ್ಯಗಳನ್ನು ಸರ್ಕಾರಿ ಕಾರ್ಯಕ್ರಮವಾಗಿ ಜಾರಿಗೆ ತಂದರು. ಇಂತಹ ಹೆಣ್ಣುಮಕ್ಕಳಿಗೆ ಆರ್ಥಿಕ ಸ್ವಾವಲಂಬನೆ ಕೊಡಿಸುವುದು ಉದ್ದೇಶವಾಗಿತ್ತು. ಅದಕ್ಕಾಗಿ ಅನೇಕ ಕೌಶಲ್ಯ ಹೆಚ್ಚಳದ ತರಬೇತಿ ಶಿಬಿರಗಳನ್ನು ಅವರು ಆಯೋಜಿಸಿದ್ದರು. ಅಂಗನವಾಡಿ ಕೇಂದ್ರಗಳ ಪ್ರಾರಂಭಕ್ಕೆ ಅವರು ಕಾರಣೀಭೂತ ಶಕ್ತಿಯಾಗಿದ್ದಾರೆ. ದಲಿತರು, ಹಿಂದುಳಿದವರು ಹಾಗೂ ಬಡವರು ಮದ್ಯಪಾನ ಮಾಡುವುದರ ಮೂಲಕ ಆರ್ಥಿಕವಾಗಿ ದುಸ್ಥಿತಿಗೆ ತಲುಪುತ್ತಾರೆಂಬುದು ಆಕೆಯ ಖಚಿತ ಅಭಿಪ್ರಾಯ. ಅದಕ್ಕಾಗಿ ಪಾನನಿರೋಧ ಸಡಿಲತೆಯ ಬಗ್ಗೆ ಸರ್ಕಾರ ಸಡಿಲ ನಿಲುವು ಕೈಗೊಂಡಾಗ ಅದನ್ನು ಪ್ರತಿಭಟಿಸಿ ರಾಜೀನಾಮೆ ನೀಡಿದ ಏಕೈಕ ಸಚಿವರು ಅವರಾಗಿದ್ದರು. ಅವರ ಪತಿ ಹೆಚ್.ಸಿ.ದಾಸಪ್ಪರವರು ಹಿರಿಯ ಕಾಂಗ್ರೆಸ್ಸಿಗರಾಗಿದ್ದು, ನೆಹರು ಹಾಗೂ ಲಾಲ್‌ಬಹದ್ದೂರ್ ಶಾಸ್ತ್ರಿ ಸಚಿವ ಸಂಪುಟಗಳಲ್ಲಿ ಉತ್ತಮ

ಕೆಲಸಮಾಡಿದ್ದರು. ಅವರ ಮಕ್ಕಳಾದ ತುಳಸಿ ದಾಸಪ್ಪರವರು ಕೂಡ ಮೈಸೂರಿನಿಂದ ಲೋಕಸಭಾ ಸದಸ್ಯರಾಗಿದ್ದರು, ಪ್ರಗತಿಪರ ವಿಚಾರಧಾರೆಗಳನ್ನು ಹೊಂದಿದವರಾಗಿದ್ದರು. ಸರಳ ಜೀವನಕ್ಕೆ ಪ್ರಸಿದ್ಧಿ ಪಡೆದಿದ್ದರು. ಯಶೋಧರಮ್ಮ ದಾಸಪ್ಪರವರ ಜನ್ಮಶತಮಾನೋತ್ಸವವನ್ನು ಸಾಮಾಜಿಕ ನ್ಯಾಯ ಹಾಗೂ ಕೆಳವರ್ಗದ ಜನತೆಯ ಪ್ರಗತಿ ಕಾರ್ಯಕ್ರಮವಾಗಿ ನಡೆಸುವುದು ಅತ್ಯಂತ ಅಗತ್ಯವಿದೆ. ಯಶೋಧರಮ್ಮ ದಾಸಪ್ಪರವರಂತಹ ನ್ಯಾಯಪರ ಹಾಗೂ ಸಾಮಾಜಿಕ ಕಳಕಳಿಯುಳ್ಳ ಮಹಾಚೇತನಗಳಿಂದ ರಾಜ್ಯಕ್ಕೆ ಮಾತ್ರವಲ್ಲ, ಇಡೀ ರಾಷ್ಟ್ರಕ್ಕೆ ಗೌರವ ಬರುತ್ತದೆ. ತಮ್ಮ ಕಷ್ಟಸುಖಗಳನ್ನು ಲೆಕ್ಕಿಸದೆ, ವೈಯಕ್ತಿಕವಾಗಿ ಲಾಭ-ನಷ್ಟಗಳನ್ನು ಅಪೇಕ್ಷಿಸದೆ ತುಳಿತಕ್ಕೊಳಗಾದ ಜನರ ಹಾಗೂ ಮಾನವೀಯ ಮೌಲ್ಯಗಳ ಬಗ್ಗೆ ಶ್ರದ್ಧೆ ನಿಜಕ್ಕೂ ಪ್ರಶಂಸನೀಯವಾದುದು. ಇಂತಹ ಶ್ರದ್ಧೆಯನ್ನು ಯುವಜನ ರೂಢಿಸಿಕೊಳ್ಳಬೇಕೆಂಬ ಆಶಯ ನಮ್ಮೆಲ್ಲರಿಗಿದೆ.

ನಿರೂಪಣೆ : ಡಾ.ಕೆ.ಆರ್.ಕಮಲೇಶ್

——— * ———

ಮೌಲ್ಯಾಧಾರಿತ ಮುತ್ಸದ್ದಿ

ಎಂ.ಪಿ.ಪ್ರಕಾಶ

ಪ್ರಾಯಶಃ ನಾಡಿನ ಮತ್ತಾವ ಮುತ್ಸದ್ಧಿ ರಾಜಕಾರಣಿಯೂ ಯಶೋಧರಮ್ಮ ದಾಸಪ್ಪ ಅವರ ಪಾರದರ್ಶಕ ವ್ಯಕ್ತಿತ್ವದಷ್ಟು ಪಾರದರ್ಶಕವಾಗಿರಲಾರರು. ಮೌಲ್ಯಾಧಾರಿತ ಮುತ್ಸದ್ಧಿಯಾಗಿ ನಾಡಿನ ಏಕಮೇವ ತತ್ವನಿಷ್ಠ ರಾಜಕಾರಣಿಯಾಗಿ ಚರಿತ್ರೆಯಲ್ಲಿ ದಾಖಲಾಗಿರುವ ಮಹತ್ವದ ವ್ಯಕ್ತಿಯಾಗಿರಲೂಬಹುದು. ಸುಸಂಸ್ಕೃತ ಮನೆತನದಲ್ಲಿ ಹುಟ್ಟಿ ಬಾಲ್ಯದಿಂದಲೇ ಉದಾತ್ತ ಸಂಸ್ಕಾರಗಳನ್ನು ಹೊಂದಿ, ಸಭ್ಯ ಪತಿಗೆ ಸತಿಯಾಗಿ ದಾಂಪತ್ಯದ ತರುಣದಲ್ಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿಕೊಂಡು, ಗಾಂಧೀಜಿಯವರ ವಿಚಾರಧಾರೆಗಳಿಂದ ಪ್ರಭಾವಿತರಾಗಿ ತಮ್ಮನ್ನು ವಿಶಿಷ್ಟರೀತಿಯಿಂದ ಸಾರ್ವಜನಿಕ ಬದುಕಿಗೆ ಮಾದರಿ ವ್ಯಕ್ತಿತ್ವವಾಗಿ ನಿಲ್ಲುತ್ತಾರೆ. ಸಾವಿರ ಸವಾಲುಗಳು ಬಂದರೂ ಸ್ವಲ್ಪವೂ ತಾಳ್ಮೆ ಕಳೆದುಕೊಳ್ಳದೆ ಅಖಂಡ ಸ್ಥಿತಪ್ರಜ್ಞತೆಯಿಂದ ಎದುರಿಸುತ್ತಾರೆ. ತ್ಯಾಗ ಬಲಿದಾನಗಳಿಗೆ ಹೆದರದೆ ಸವಾಲುಗಳನ್ನು ಸ್ವೀಕರಿಸಿ ಜಗ್ಗದೆ, ಕುಗ್ಗದೆ, ಮುನ್ನುಗ್ಗಿ ಕಾರ್ಯತತ್ಪರರಾಗುತ್ತಾರೆ. ಸೇವಾಗ್ರಾಮದಲ್ಲಿದ್ದು ಜನಸೇವೆಯ ಶಿಸ್ತನ್ನು ರೂಢಿಸಿಕೊಂಡು ಗಾಂಧೀಜಿಯವರ ಪ್ರಶಂಸೆಗೆ ಪಾತ್ರರಾಗುತ್ತಾರೆ. ಅಷ್ಟೇಅಲ್ಲ ಅವರಿಂದ ಪೂರ್ಣಪ್ರಮಾಣದ ಆಶೀರ್ವಾದವನ್ನು ಪಡೆದುಕೊಳ್ಳುತ್ತಾರೆ. ಗಾಂಧೀಜಿಯವರ ಅಹಿಂಸಾ ಮಾರ್ಗವನ್ನು ಆಂದೋಲನವಾಗಿಸುವ ನಿಟ್ಟಿನಲ್ಲಿ ಸತತ ಪ್ರಯತ್ನಿಸುತ್ತಾರೆ. ಜೈಲುವಾಸವನ್ನು ಅನುಭವಿಸುತ್ತಾರೆ. ಸ್ವಾತಂತ್ರ್ಯ ದೊರೆತಾದ ಮೇಲೆ ರಾಜ್ಯ ವಿಧಾನಸಭೆಗೆ ಆಯ್ಕೆಯಾಗುತ್ತಾರೆ. ಮೈಸೂರು ರಾಜ್ಯದ ಮೊದಲ ಸಂಪುಟ ದರ್ಜೆಯ ಸಚಿವರಾಗಿ ಸಮಾಜ ಕಲ್ಯಾಣ ಇಲಾಖೆಯ ನೈತಿಕತೆ, ಆಧ್ಯಾತ್ಮಿಕತೆಗೆ ಒತ್ತುಕೊಟ್ಟು ಸಮಾಜದ ವಿಸಂಗತಿಗಳನ್ನು ತೊಡೆದು ಹಾಕುವ ನಿಟ್ಟಿನತ್ತ ಸಾಕಷ್ಟು ಪರಿಶ್ರಮದಿಂದ ನಿಷ್ಕಾಮ ಮನಸ್ಸಿನಿಂದ ದುಡಿದವರು ಇವರಾಗಿದ್ದಾರೆ.

ಮೈಸೂರು ರಾಜ್ಯದ ನ್ಯಾಯವಿಧಾಯಕ ಸಭೆಯ ಮೊದಲ ಮಹಿಳಾ ಸದಸ್ಯೆಯರಾಗಿದ್ದ ಶ್ರೀಮತಿ ಕಮಲಮ್ಮ ದಾಸಪ್ಪ ಮತ್ತು ಶ್ರೀಮತಿ ಸಾಕಮ್ಮ ಅವರಿಂದ ಪ್ರಭಾವಿತರಾದ ಯಶೋಧರಮ್ಮ ದಾಸಪ್ಪ ಅವರಿಗೆ ರಾಜಕಾರಣದ ನೈಜ ಹಾದಿಯ ಪರಿಚಯವಿತ್ತು. ರಾಜಕೀಯದಲ್ಲಿ ಮಹಿಳೆಯೂ ಹತ್ತು ಹಲವು ಆದರ್ಶಗಳನ್ನಿಟ್ಟುಕೊಂಡು ಕೆಲಸಗಳನ್ನು ನಿರ್ಭಿಡೆಯಿಂದ ಮಾಡಬಹುದೆಂಬ ಉತ್ಸಾಹದಲ್ಲಿ ಸಮಾಜಸೇವೆಯ ಮೂಲಕ ರಾಜಕೀಯದಲ್ಲಿ ತರಬೇತಿ ಹೊಂದಿ ಸಮಾಜಸೇವೆಯ ಎಲ್ಲಾ ಹಂತಗಳನ್ನು ತಿಳಿದುಕೊಂಡಿದ್ದರು. ಗಾಂಧೀಜಿಯವರ ದಟ್ಟ ಪ್ರಭಾವದಿಂದಾಗಿ ಅಹಿಂಸೆ, ಸತ್ಯಾಗ್ರಹ, ಗ್ರಾಮ ಸ್ವರಾಜ್ಯ, ಮುಂತಾದ ಗಾಂಧಿ ವಿಚಾರಗಳಿಗೆ ಮನಸೋತದ್ದರಿಂದ ಅವರಿಗೆ ಚಳವಳಿಯ ಹಾದಿ ಹೊಸದೇನಾಗಿರಲಿಲ್ಲ. ಮೈಸೂರು ರಾಜ್ಯದ ನ್ಯಾಯ ವಿಧಾಯಕಸಭೆಯ ಮಹಿಳಾ ಸದಸ್ಯೆಯಾಗಿ ನೇಮಕಗೊಂಡ ನಂತರವೂ ಯಶೋಧರಮ್ಮ ದಾಸಪ್ಪ ಅವರ ರಾಜಕೀಯ ಹೋರಾಟ ತೀವ್ರವಾಗುತ್ತಾ ಹೋಯಿತು. ಜವಾಬ್ದಾರಿ ಸರ್ಕಾರಕ್ಕಾಗಿ ನಡೆಸುತ್ತಿದ್ದ ಹೋರಾಟ ಈ ಸಂದರ್ಭದಲ್ಲಿ ತೀವ್ರವಾಗುತ್ತಾ ಹೋಯಿತು. ಯಶೋಧರಮ್ಮ ದಾಸಪ್ಪ ಅವರು ಮೈಸೂರು ರಾಜ್ಯದ ನ್ಯಾಯವಿಧಾಯಕ

ಸಭೆಯ ಚುನಾವಣೆಗೆ ಮೊದಲ ಬಾರಿಗೆ ಸ್ಪರ್ಧಿಸಿದರು. ಅಷ್ಟು ಹೊತ್ತಿಗಾಗಲೇ ಶ್ರೀಯುತ ಹೆಚ್.ಸಿ.ದಾಸಪ್ಪ ಅವರು ರಾಜೀನಾಮೆಯನ್ನು ನೀಡಿದ್ದರು. ಮತ್ತೆ ಅವರು ಆ ಸದಸ್ಯತ್ವಕ್ಕೆ ಸ್ಪರ್ಧಿಸುವಂತಿರಲಿಲ್ಲ. ಆ ಜಾಗವನ್ನು ಯಶೋಧಮ್ಮ ದಾಸಪ್ಪ ಅವರು ತುಂಬಬೇಕೆಂದು ರಾಜ್ಯದಾದ್ಯಂತ ಬೇಡಿಕೆ ಬಂದಿತು. ಶ್ರೀಯುತ ಹೆಚ್.ಸಿ. ದಾಸಪ್ಪ ಅವರು ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನವನ್ನು ತುಂಬಲು ಯಶೋಧರಮ್ಮ ದಾಸಪ್ಪ ಅವರನ್ನು ಕಾಂಗ್ರೆಸ್ ಪಕ್ಷದವತಿಯಿಂದ ಚುನಾವಣೆಗೆ ನಿಲ್ಲಿಸಿದರು. 5–3–1938ರಂದು ನಡೆದ ಚುನಾವಣೆಯಲ್ಲಿ ಯಶೋಧರಮ್ಮ ದಾಸಪ್ಪ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಶ್ರೀ ರಾವ ಸಾಹೇಬ ಮುನಿವೆಂಕಟಪ್ಪ ಅವರನ್ನು ಸೋಲಿಸಿ ಮೈಸೂರು ರಾಜ್ಯದ ನ್ಯಾಯವಿಧಾಯಕ ಸಭೆಯ ಮೊದಲ ಚುನಾಯಿತ ಮಹಿಳಾ ಸದಸ್ಯೆಯಾಗಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಶಾಸನಸಭೆಯನ್ನು ಪ್ರವೇಶಿಸಿದರು. ಅಂದಿನಿಂದ ಮೈಸೂರು ರಾಜ್ಯದಲ್ಲಿ ಪ್ರಜಾತಂತ್ರ ವ್ಯವಸ್ಥೆಯ ಜವಾಬ್ದಾರಿ ಸರ್ಕಾರದ ರಚನೆಗೆ ಆರಂಭಿಸಿದರು. ಇದಾದ ನಂತರ ರಾಜ್ಯ ಪ್ರಾದೇಶಿಕ ಮಹಿಳಾ ಕಾಂಗ್ರೆಸ್‌ನ ಪ್ರಥಮ ಅಧ್ಯಕ್ಷೆಯಾಗಿ ಆಯ್ಕೆಯಾದರು. ಆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಬಲಿಷ್ಠವಾಗುತ್ತಾ ಹೋಯಿತು. ಮೈಸೂರು ಹಾಗೂ ಬೆಂಗಳೂರುಗಳಲ್ಲಿ ಸುಸಜ್ಜಿತ ಕಟ್ಟಡಗಳ ನಿರ್ಮಾಣದ ಗುರಿಯನ್ನು ಹಾಕಿಕೊಳ್ಳಲಾಯಿತು. ಮುಂದೆ ಯಶೋಧರಮ್ಮ ದಾಸಪ್ಪ ಅವರು ಕೆ.ಹನುಮಂತಯ್ಯನವರಿಗೆ ಸಂಪೂರ್ಣ ಬೆಂಬಲವನ್ನು ಸೂಚಿಸಿದ ಹಿನ್ನೆಲೆಯಲ್ಲಿ ತೀರ ಬಡ ಕುಟುಂಬದಿಂದ ಬಂದು ಸ್ವಸಾಮರ್ಥ್ಯದಿಂದ ಎದ್ದು ಬಂದ ನಾಯಕನನ್ನು ಹರಸುವುದರ ಮೂಲಕ ನಾಡಿಗೆ ಒಬ್ಬ ಸಮರ್ಥ ನಾಯಕನನ್ನು ನೀಡಿದರು. ಯಶೋಧರಮ್ಮ ದಾಸಪ್ಪ ಅವರು ಪ್ರೋತ್ಸಾಹಿಸಿದ ಹಿನ್ನೆಲೆಯಲ್ಲಿ ಕೆ. ಹನುಮಂತಯ್ಯನವರಂತಹ ಮುತ್ಸದ್ಧಿ ನಾಯಕ ಈ ರಾಜ್ಯದ ಮುಖ್ಯಮಂತ್ರಿಗಳಾಗುವ ಸನ್ನಿವೇಶ ನಿರ್ಮಾಣವಾಯಿತು.

ಇಂತಹ ಜನಪರವಾದ ನಿಸ್ವಾರ್ಥವಾದ ಪಾರದರ್ಶಕವಾದ ವ್ಯಕ್ತಿತ್ವವು ಮುಂದಿನ ಪೀಳಿಗೆಗೆ ಆದರ್ಶವಾಗಿ ನಿಲ್ಲುತ್ತದೆ. ಮಾತ್ರವಲ್ಲ ಹೀಗೂ ಒಂದು ವ್ಯಕ್ತಿತ್ವ ಇರಬಹುದೆ ಎನ್ನುವ ದಂತ ಕಥಾನಕ ಸೃಷ್ಟಿಯಾಗಲೂಬಹುದು. ರಾಜಕೀಯವೆಂದರೆ ಬರೀ ಮೋಸ, ವಂಚನೆ, ಭ್ರಷ್ಟಾಚಾರ, ಸ್ವಾರ್ಥ, ಸ್ವಜನ ಪಕ್ಷಪಾತ ಎನ್ನುವ ಇಂದಿನ ರಾಜಕಾರಣವೆಲ್ಲಿ, ಅಂದಿನ ನಿಸ್ವಾರ್ಥದ ಮತ್ತು ನಿಷ್ಕಾಮ ಪಾರದರ್ಶಕ ಜನಸೇವೆಯೆಲ್ಲಿ? ಅದನ್ನು ನೆನೆದರೆ ನಿಜಕ್ಕೂ ನಮ್ಮ ಪೀಳಿಗೆಯ ರಾಜಕಾರಣಕ್ಕೆ ನಾಚಿಕೆಯನ್ನು ತರುವಂತಿದೆ. ರಾಜಕಾರಣವು ಗಾಂಧೀಜಿಯವರು ಹೇಳಿದಂತೆ ಅದೊಂದು ಅಪ್ಪಟ ಜನಸೇವೆ. ಅದಕ್ಕಾಗಿ ಅವರು 'ತತ್ವವಿಹೀನ ರಾಜಕಾರಣ'ವನ್ನು ಸಪ್ತ ಪಾತಕಗಳಲ್ಲೊಂದು ಎಂದು ಕರೆದರು. ಇದರಿಂದ ಪ್ರಭಾವಿತಗೊಂಡ ಯಶೋಧರಮ್ಮ ದಾಸಪ್ಪ ಅವರು ಗಾಂಧೀಜಿಯವರ ತತ್ವಾದರ್ಶಗಳನ್ನೇ ತಮ್ಮ ರಾಜಕಾರಣದ ನೈಜ ಆಧಾರವನ್ನಾಗಿ ಇಟ್ಟುಕೊಂಡರು. ಮನುಷ್ಯನಲ್ಲಿ ಕರ್ತವ್ಯ ಪ್ರಜ್ಞೆ ಬಹಳ ಮುಖ್ಯವೆಂದು ನಂಬಿದ್ದ ಅವರು ಸದಾ ಕ್ರಿಯಾಶೀಲ ರಾಜಕಾರಣಿ. ಬದುಕಿನಲ್ಲಿ ವಿರಾಮವೆಂಬುದನ್ನು ಎಂದೂ ಅನುಭವಿಸಲಿಲ್ಲ. ಅಂದಿನ ಮುಖ್ಯಮಂತ್ರಿಗಳಾದ ಎಸ್.ಆರ್. ಕಂಠಿ ಹಾಗೂ ಎಸ್. ನಿಜಲಿಂಗಪ್ಪನವರು ಅವರಿಗೆ ಸಮಾಜ ಕಲ್ಯಾಣ ಖಾತೆಯ ಸಚಿವ ಸ್ಥಾನವನ್ನು ನೀಡಿದರು. ಟೀಕಾಕಾರರು ಇಷ್ಟು ದೊಡ್ಡ ಖಾತೆಯನ್ನು ಅವರಿಂದ ನಿಭಾಯಿಸಲು ಸಾಧ್ಯವಾಗದು ಎನ್ನುವ ಟೀಕೆಗಳಿಗೆ ತಮ್ಮ ವಿಶಿಷ್ಟ ಶೈಲಿಯ ಕಾರ್ಯವೈಖರಿಯಿಂದ ಉತ್ತರಿಸುತ್ತಾ ಹೋದರು. ಯಶೋಧರಮ್ಮ ದಾಸಪ್ಪ ಅವರ ಈ ಕರ್ತವ್ಯ ಪ್ರಜ್ಞೆಯನ್ನು ಕಂಡು ಸಚಿವ ಸಂಪುಟವು ಒಕ್ಕೊರಲಿನಿಂದ ಪ್ರಶಂಸಿಸಿತು. ಅಂದಿನ ಮುಖ್ಯಮಂತ್ರಿಗಳಾದ ಎಸ್. ನಿಜಲಿಂಗಪ್ಪನವರು ಅವರನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

ಮಹಿಳೆಯರು ಮತ್ತು ಮಕ್ಕಳ ಕ್ಷೇತ್ರದಲ್ಲಿ ತಮಗಿದ್ದ ಅಪಾರ ಅನುಭವವನ್ನು ಬಳಸಿಕೊಂಡು ಮಹಿಳಾ ಸಮಾಜ, ಶಿಶುವಿಹಾರ ಕೇಂದ್ರಗಳನ್ನು ತೆರೆಯುತ್ತಾ ಹೋದರು. ಬಾಲವಾಡಿ ಕೇಂದ್ರಗಳನ್ನು ಗ್ರಾಮೀಣ ಭಾಗಗಳಲ್ಲಿ ತೆರೆದರು. ಅವರು ಮಂತ್ರಿಯಾಗಿದ್ದ ನಾಲ್ಕು ವರ್ಷಗಳ ಅವಧಿಯಲ್ಲಿ ರಾಜ್ಯ ವಿಪರೀತವಾಗಿ ಅಭಿವೃದ್ಧಿಯ

ಪಥವಲ್ಲಿ ಸಾಗಿತು. ಹರಿಜನ ಗಿರಿಜನರ ಅಭ್ಯುದಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಪಾನ ನಿರೋಧ, ಮುಂತಾದವುಗಳ ಬಗೆಗೆ ಅವರಿಗಿದ್ದ ಆಸಕ್ತಿ ಅನನ್ಯವಾದದ್ದು. ಯಶೋಧರಮ್ಮ ದಾಸಪ್ಪ ಅವರು ಎಂದೂ ಸಿದ್ಧಾಂತಗಳ ಜೊತೆಗೆ ರಾಜಿ ಮಾಡಿಕೊಂಡವರಲ್ಲ. ತತ್ವನಿಷ್ಠರಾದ ಅವರಿಗೆ ಅನುಕೂಲಸಿಂಧು ರಾಜಕಾರಣ ಸಹಿಸದ ಸಂಗತಿ. ಕೇವಲ ಪಾನನಿರೋಧವನ್ನು ಸಡಿಲಿಸಿದರೆಂಬ ಕಾರಣಕ್ಕಾಗಿ ಮಂತ್ರಿಗಿರಿಗೆ ರಾಜೀನಾಮೆಯನ್ನು ನೀಡಿ ಇತಿಹಾಸವನ್ನು ನಿರ್ಮಿಸಿದರು. ಮಂತ್ರಿ ಪದವಿಗೆ ರಾಜೀನಾಮೆಯನ್ನು ನೀಡಿದ ಬಳಿಕ ಶಾಸನಸಭೆಯಲ್ಲಿ ಭಾಗವಹಿಸಿ ವಿಧಾನ ಮಂಡಲದಲ್ಲಿ ನಾನೇಕೆ ರಾಜೀನಾಮೆಯನ್ನು ನೀಡಿದೆ ಎಂಬ ಬಗ್ಗೆ ಅಪರೂಪದ ಭಾಷಣವನ್ನು ಮಾಡಿದರು. ಆ ಭಾಷಣದ ಪ್ರತಿಯನ್ನು ಇಂದಿನ ಸಂದರ್ಭದ ರಾಜಕೀಯ ನೇತಾರರು ಓದಿ ತಿಳಿಯಬೇಕಾದ ಅಗತ್ಯವಿದೆ. ತೋಳ್ಬಲದ, ಹಣಬಲದ ಅಲ್ಲದೆ ಶಕ್ತಿ ರಾಜಕಾರಣದ ಇಂದಿನ ರಾಜಕೀಯಕ್ಕೆ ಪರಿಹಾರಗಳನ್ನು ಇಲ್ಲಿ ಹುಡುಕಿಕೊಳ್ಳುವುದು ಸೂಕ್ತ.

———— * ————

ಉದಾತ್ತ ವ್ಯಕ್ತಿತ್ವ

ಕೆ.ಎಚ್. ಪಾಟೀಲ

ಪಾನನಿರೋಧದ ಬಗೆಗಿನ ಹೋರಾಟದ ಚರಿತ್ರೆಯಲ್ಲಿ ಯಶೋಧರಮ್ಮ ದಾಸಪ್ಪ ಅವರ ಹೆಸರು ಅಜರಾಮರವಾಗಿದೆ. ಅವರ ತತ್ವನಿಷ್ಠೆ, ಆದರ್ಶಗಳು ಅಷ್ಟೇ ಶಾಶ್ವತ ಮೌಲ್ಯಗಳಾಗಿವೆ. ಕರ್ನಾಟಕದ ಚರಿತ್ರೆಯಲ್ಲಿ ಅಂತಹ ವಿರಳ ನಾಯಕರು ಮತ್ತೆ ಹುಟ್ಟಿ ಬರಲಿಕ್ಕಿಲ್ಲ. ಭಾರತಕ್ಕೆ ಸ್ವಾತಂತ್ರ ಸಿಕ್ಕಾದ ಮೇಲೆ ನಮ್ಮದೇ ಆದ ಸಂವಿಧಾನ ರಚಿಸಿಕೊಂಡ ಮೇಲೆ ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳಡಿ ಪಾನನಿರೋಧವನ್ನು ಸೇರಿಸಿದರು ಅಷ್ಟೇ. ಸಂವಿಧಾನ ರಚಿಸಿದ ಮಹನೀಯರಿಗೆ ಅದರ ಬಗೆಗೆ ಸ್ಪಷ್ಟ ಅರಿವಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ. ಗಾಂಧಿಯವರ ಆಶಯವನ್ನು ಅದರಲ್ಲಿ ನೆರವೇರಿಸುವ ಉದ್ದೇಶವನ್ನುಳಿದಂತೆ ವಾಸ್ತವ ಅರ್ಥದಲ್ಲಿ ಅದರ ಅನುಷ್ಠಾನದ ಇಚ್ಛಾಶಕ್ತಿಯ ಕೊರತೆ ಅವರಲ್ಲಿಯೂ ಕಂಡುಬಂದಿತ್ತು. ಹೀಗಾಗಿ ಪಾನನಿರೋಧವೆನ್ನುವ ಗಾಂಧೀಜಿಯವರ ಮಂತ್ರ ಆ ಸನ್ನಿವೇಶದಲ್ಲಿ ಅವರನ್ನು ಓಲೈಸುವ ತಂತ್ರವಾಗಿತ್ತು. ಕುಡಿತದ ಚಟ ಮಾನವನಿಗೆ ಎಂದಿದ್ದರೂ ಮಾರಕವೆನ್ನುವ ಸತ್ಯ ಗೊತ್ತಿದ್ದರೂ ಸಹ ಅದರ ಅನುಷ್ಠಾನವನ್ನು ಉದಾಸೀನ ಮಾಡಿದ ಹಿನ್ನೆಲೆಯಲ್ಲಿ ಯಶೋಧರಮ್ಮ ದಾಸಪ್ಪ ಅವರು ಕರ್ನಾಟಕ ರಾಜ್ಯ ಸಚಿವ ಸ್ಥಾನಕ್ಕೆ ಸದನದಲ್ಲಿ ರಾಜೀನಾಮೆ ನೀಡಿ ಹೊರನಡೆದ ಸನ್ನಿವೇಶವು ಅವರ ವ್ಯಕ್ತಿತ್ವದ ಉದಾತ್ತತೆಗೆ ಸಾಕ್ಷಿಯಾಗಿದೆ. ಇಂತಹ ಉದಾತ್ತ ಉದ್ದೇಶಕ್ಕಾಗಿ ಅಧಿಕಾರವನ್ನು ತೊರೆದು ನಿಂತ ಮತ್ತೊಬ್ಬ ನಾಯಕ ಸ್ವತಂತ್ರ ಭಾರತದಲ್ಲಿ ಹುಟ್ಟಿ ಬರಲಿಲ್ಲ. ಅದು ಸಾಧ್ಯವಿಲ್ಲವೆಂದು ಖಚಿತವಾಗಿ ತಿಳಿಸಬಹುದು.

ಪಾನನಿರೋಧ ಜಾರಿಯಾಗದೇ ಇರುವುದರಿಂದ ಇಂದು ಆರೋಗ್ಯಪೂರ್ಣ ಸಮಾಜ ಕಟ್ಟಲಾಗುತ್ತಿಲ್ಲ. ಕೌಟುಂಬಿಕ ವ್ಯವಸ್ಥೆಗಳು ಸಂಘಟನೆಯಿಂದ ವಿಘಟನೆಯತ್ತ ಹೋಗುತ್ತಿವೆ. ಇಂದಿನ ಈ ದುರವಸ್ಥೆಗೆ ನಮ್ಮ ಆಡಳಿತ ವ್ಯವಸ್ಥೆಯೇ ಕಾರಣವೆನ್ನುವಲ್ಲಿ ಯಾವುದೇ ಅತಿಶಯೋಕ್ತಿ ಕಾಣದು. ಸಮಾಜದ ದುರವಸ್ಥೆಯನ್ನು ರಾಜ್ಯ ನಿರ್ದೇಶಕ ತತ್ವಗಳು ಅನುಷ್ಠಾನಗೊಳ್ಳದೇ ಅಸಹಾಯಕವಾಗಿ ಸಂವಿಧಾನದ ಹೃದಯ ಭಾಗದಲ್ಲಿ ಮಲಗಿರುವ ಸನ್ನಿವೇಶ ನಿಜಕ್ಕೂ ಭಾರತ ದೇಶಕ್ಕೊಂದು ಸಂವಿಧಾನ ಇದೆಯೇ ಎನ್ನುವ ಅನುಮಾನವನ್ನು ಉಂಟುಮಾಡದಿರದು.

ಪಾನನಿರೋಧರಿಂದ ಇಂದಿನ ಸಮಾಜದಲ್ಲಿ ಉಂಟಾಗಿರುವ ಸನ್ನಿವೇಶಗಳನ್ನು ಕಂಡಾಗ ನಿಜಕ್ಕೂ ಯಶೋಧರಮ್ಮ ದಾಸಪ್ಪ ಅವರ ನೈತಿಕ ಕೇಂದ್ರಿತ ಹೋರಾಟದ ನೆಲೆ-ಬೆಲೆಗಳು ಅರ್ಥವಾಗುತ್ತವೆ. ಲಂಚಗುಳಿತನ, ಸ್ವಾರ್ಥಲಾಲಸೆ, ರಾಷ್ಟ್ರ ವಿದ್ರೋಹಿ ಶಕ್ತಿಗಳು ನೆಲೆ ನಿಲ್ಲಲು ಅದು ಕಾರಣವಾಗಿದೆ. ಬದುಕನ್ನು ಸಂಕೀರ್ಣ ವ್ಯವಸ್ಥೆಗೆ ಇದು ನೇರವಾಗಿ ಕಾರಣವಾಗಿದೆ. ಬದುಕಿನಲ್ಲಿ ತಾಮಸ ಶಕ್ತಿಯ ಮನೋಭಾವ ಉಂಟಾಗುವುದರಲ್ಲಿ ಸಂಶಯವಿಲ್ಲ. ತಾಮಸ ಶಕ್ತಿಯು ಮನುಷ್ಯನಲ್ಲಿ ಸಿಟ್ಟು ಕೋಪ ಇತ್ಯಾದಿಗಳನ್ನು ಉಂಟುಮಾಡುತ್ತದೆ. ಐಷಾರಾಮಿ

ಭೋಗ ಜೀವನವನ್ನು ಮನುಷ್ಯನು ರೂಢಿಸಿಕೊಂಡು ಸಮಾಜದ ವ್ಯವಸ್ಥೆಗೆ ಮಾರಕವಾಗುತ್ತಾ ಹೋಗುತ್ತಾನೆ. ಮನೆಯ ಆರೋಗ್ಯಕರ ವಾತಾವರಣವನ್ನು ಇದು ಹಾಳುಮಾಡುತ್ತದೆ. ದಾಂಪತ್ಯ ವ್ಯವಸ್ಥೆಗೆ ಇದರಿಂದ ಹಿನ್ನಡೆಯಾಗುತ್ತದೆ. ಅನಕ್ಷರತೆಯಿಂದಾಗಿ ಕುಡಿತದ ಚಟವನ್ನು ಬಿಡಲಾರದ ಸ್ಥಿತಿ ತಲುಪುತ್ತಾನೆ. ಇಡೀ ಬದುಕಿನ ಸೂತ್ರ ಹರಿದು ಹೋಗುತ್ತದೆ.

ಇಂತಹ ಕುಡಿತದ ಚಟವು ಅನಕ್ಷರಸ್ಥರೇ ಹೆಚ್ಚಿರುವ ದುರ್ಬಲ ವರ್ಗದ ಸಮುದಾಯದ ಕುಟುಂಬಗಳೇ ಹೆಚ್ಚು ಬಲಿಯಾಗುವುದು ಶೋಚನೀಯ ಸಂಗತಿ. ಇದು ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಅವರ ಆಶಯಕ್ಕೂ ವಿರೋಧವಾಗಿದೆ. ಇದನ್ನು ನಿಷೇಧಿಸದ ಹೊರತು ದೇಶದ ಸಾಮಾಜಿಕ ದುರ್ಬಲ ವರ್ಗಗಳು ಖಂಡಿತ ಮೇಲೆ ಬರುವುದಿಲ್ಲವೆನ್ನುವ ಸತ್ಯ ಎಲ್ಲರಿಗೂ ಗೊತ್ತಿದ್ದರೂ ಅದನ್ನು ನಿಷೇಧಿಸುವ ಗೊಡವೆಗೆ ಹೋಗದೆ ನಮ್ಮ ರಾಜಕೀಯ ಇಚ್ಛಾಶಕ್ತಿಯ ಕುಟಿಲ ನೀತಿ ಸಂಶಯಾಸ್ಪದವಾಗಿದೆ. ಆದರೆ ಈ ಸಮಸ್ಯೆ ಈಗ ಬಲಿತು ನೆಮ್ಮದಿಯ ಸಮಾಜವನ್ನು ನುಂಗಿಹಾಕುತ್ತಿರುವುದನ್ನು ನೋಡಿದರೆ ಸಾತ್ವಿಕ ಶಕ್ತಿಯ ಭಾರತಕ್ಕೆ ಭವಿಷ್ಯ ಅಂತಹ ಉಜ್ವಲವಾಗಿಯೇನೂ ಕಾಣದು. ಇದನ್ನು ಕಂಡ ಅಂದಿನ ನೇತಾರರು ಇದನ್ನು ಬದುಕಿನ ಒಂದು ಪ್ರಣಾಳಿಕೆ ಎಂದು ಬಿಂಬಿಸಿದರು. ಗಾಂಧೀಜಿಯವರ ಆಶಯವೂ ಅದೇ ಆಗಿತ್ತು. ಗ್ರಾಮ ಸ್ವರಾಜ್ಯ, ಪಾನ ನಿರೋಧ, ಅಹಿಂಸೆ, ಸತ್ಯಾಗ್ರಹ, ಮೂಲ ಶಿಕ್ಷಣ, ಗುಡಿಕೈಗಾರಿಕೆ ಮುಂತಾದ ಗಾಂಧಿ ತತ್ವಗಳು ತಾತ್ವಿಕ ನೆಲೆಯಲ್ಲೆ ಪರ್ಯವಸಾನಗೊಂಡವು.

ಯಾರ ತತ್ವಗಳಿಂದ ಭಾರತೀಯ ಜನತೆ ಸ್ವಾತಂತ್ರ ಹೋರಾಟಕ್ಕೆ ಸಂಘಟಿತರಾದರೋ, ಯಾರ ಮಾರ್ಗದರ್ಶನದಲ್ಲಿ ಜನತೆ ಸಂಘಟಿತವಾಗಿ ಭಾರತದಿಂದ ಬ್ರಿಟಿಷರನ್ನು ಹೊರದಬ್ಬಿದರೋ ಅವರ ತಾತ್ವಿಕ ವಿಚಾರಗಳಿಗೆ ತಿಲಾಂಜಲಿ ಇಟ್ಟು ರಾಜಕೀಯವೆಂಬ ಪವಿತ್ರ ಕ್ಷೇತ್ರವನ್ನು ಅಧಿಕಾರವೆಂದು ಭಾವಿಸಿದರೋ ಅಂದಿನಿಂದೇ ಭಾರತೀಯರ ನೈತಿಕ ಮೌಲ್ಯಗಳು ಕುಸಿದು ಬಿದ್ದವು. ಗಾಂಧೀಜಿಯವರು ಕಟ್ಟಬಯಸಿದ ಆದರ್ಶ ರಾಷ್ಟ್ರ ಪರಿಕಲ್ಪನೆಯು ಅನುಷ್ಠಾನದ ಹಂತದಲ್ಲಿ ಮಣ್ಣುಪಾಲಾದವು. ಗಾಂಧಿಯವರಿಂದ ಪ್ರಭಾವಿತರಾದ ನೆಹರೂರವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಪಾನನಿರೋಧವನ್ನು ಭಾಗಶಃ ಜಾರಿಗೆ ತಂದಿದ್ದರು. ಆದರೆ ಅದು ಬಹು ದಿನಗಳ ಕಾಲ ಉಳಿಯಲಿಲ್ಲ. ಸರ್ಕಾರಗಳ ಬೊಕ್ಕಸಕ್ಕೆ ಬರುವ ಹಣದ ಕೊರತೆಯನ್ನೇ ಕಾರಣವನ್ನಾಗಿಸಿಕೊಂಡು ಸರ್ಕಾರಗಳು ಪುನಃ ಅದನ್ನು ಜಾರಿಗೆ ತಂದವು. ಗಾಂಧೀಜಿ ಈ ವ್ಯವಸ್ಥೆಯನ್ನು ಪ್ರಬಲವಾಗಿ ವಿರೋಧಿಸುತ್ತ 'ಕಳ್ಳಬಟ್ಟಿಯ ಕಾರುಭಾರನ್ನು ನಿಲ್ಲಿಸಲು ಸರ್ಕಾರಗಳು ಕಟ್ಟುನಿಟ್ಟಾದ ಕಾನೂನುಗಳನ್ನು ರೂಪಿಸಬೇಕು. ಅದಕ್ಕೆ ಬೇಕಾದ ರಾಜಕೀಯ ಇಚ್ಛೆ ಮತ್ತು ಸಿದ್ಧಾಂತನಿಷ್ಠೆ ಸರ್ಕಾರದಲ್ಲಿರುವ ನಾಯಕರಿಗೆ ಮುಖ್ಯವಾಗಿ ಇರಬೇಕು. ಜನತೆಗೆ ಹೆಂಡ ಸಾರಾಯಿ ಕುಡಿಸಿ ಲಕ್ಷಾಂತರ ಬಡ ಕುಟುಂಬಗಳನ್ನು ನಿರ್ಗತಿಕ ಸ್ಥಿತಿಗೆ ತಲುಪಿಸಿ ದಾರುಣ ಸ್ಥಿತಿಗೆ ತಳ್ಳಿ ಅದರಿಂದ ಗಳಿಸುವ ವರಮಾನ ಪಾಪದ ಹಣವಾಗುತ್ತದೆ. ಅಂತಹ ಹಣದಿಂದ ದೇಶದ ಕಲ್ಯಾಣವನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ. ಅದಕ್ಕೆ ಯಾವ ನೈತಿಕತೆಯೂ ಇಲ್ಲ' ಎನ್ನುವುದು ಅವರ ಸ್ಪಷ್ಟ ನಿಲುವಾಗಿತ್ತು.

1966ರಲ್ಲಿ ಎಸ್. ನಿಜಲಿಂಗಪ್ಪನವರ ಸರ್ಕಾರ ಪಾನನಿರೋಧವನ್ನು ರದ್ದುಪಡಿಸಿತು. ಕಾರಣವೇನಾದರೂ ಇರಲಿ ಯಶೋಧರಮ್ಮನವರು, ಅದನ್ನು ಸ್ವತಃ ಸರ್ಕಾರದ ಸಚಿವರಾಗಿ ನಿರ್ಭಿಡೆಯಿಂದ ವಿರೋಧಿಸಿದರು. ಸರ್ಕಾರಕ್ಕೆ ರಾಜೀನಾಮೆಯನ್ನು ನೀಡಿ ಸದನದಲ್ಲಿ ಅದರ ಕಾರಣಗಳನ್ನು ಅರುಹಿದರು. ಅಧಿಕಾರದ ಆಮಿಷಕ್ಕೆ ಒಳಗಾಗದೇ ತನ್ನ ಉನ್ನತ ಪದವಿಯನ್ನು ತೊರೆದು ತಾನು ನೆಚ್ಚಿಕೊಂಡು ಅಳವಡಿಸಿಕೊಂಡಿದ್ದ ತಾತ್ವಿಕ ಸಿದ್ಧಾಂತಗಳಿಗೆ ಬದ್ಧತೆಯಿಂದ ನಡೆದುಕೊಂಡು ಚಾರಿತ್ರಿಕವಾಗಿ ದಾಖಲೆಯನ್ನು ನಿರ್ಮಿಸಿದರು. ಇಂತಹ ಮಹಾನ್ ನಾಯಕ ಸಾಧ್ವಿ ಶಿರೋಮಣಿಯನ್ನು ಈ ದೇಶಕ್ಕೆ ಅರ್ಪಿಸಿದ ನೆಲವಿದು. ಅಂತಹ ಆದರ್ಶದ ಹಿರಿದಾರಿಯಲ್ಲಿ ಇಂದಿನ ನಾಯಕತ್ವ ನಡೆಯಬೇಕು.

ಚರಿತ್ರೆಯಲ್ಲಿ ಇಂತಹ ಇದೊಂದು ನಿದರ್ಶನವನ್ನು ಬಿಟ್ಟರೆ ಇತಿಹಾಸದಲ್ಲಿ ಇಂತಹ ಸನ್ನಿವೇಶಗಳಿಗೆ ಉದಾಹರಣೆಗಳೇ ಇಲ್ಲ. ಕರ್ನಾಟಕದ ಚರಿತ್ರೆಯನ್ನು ದಾಖಲಿಸುವಾಗ ಶ್ರೀಮತಿ ಯಶೋಧರಮ್ಮನವರನ್ನು ಅಧ್ಯಯನಮಾಡುವುದೊಳಿತು ಎಂದು ನನಗನ್ನಿಸುತ್ತದೆ.

——— * ———

ಪದ್ಮಭೂಷಣರು

ಪ್ರೊ. ಹೆಚ್.ಆರ್. ದಾಸೇಗೌಡ

ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯೆ ಅಸಂಗ್ರಹ
ಶರೀರ ಶ್ರಮ ಅಸ್ವಾದ ಸರ್ವತ್ರ ಭಯವರ್ಜನ
ಸರ್ವಧರ್ಮ ಸಮಾನತ್ವ ಸ್ವದೇಶಿ ಸ್ಪರ್ಶಭಾವನ

ಎಂಬ ಹನ್ನೊಂದು ವ್ರತಗಳನ್ನು ಜನಸಮುದಾಯಕ್ಕೆ ನೀಡಿದ ಮಹಾತ್ಮಾ ಗಾಂಧೀಯವರ ನಿಷ್ಠಾವಂತ ಅನುಯಾಯಿಯಾಗಿ, ಆ ತತ್ವಗಳ ಆಚರಣೆಯಲ್ಲಿ ಚಾಚೂ ತಪ್ಪದೆ ತಮ್ಮ ಜೀವಿತವನ್ನು ಜನಸೇವೆಯಲ್ಲಿ ಸವೆಸಿದ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಹಳೆಯ ಮೈಸೂರು ಕಂಡಂತಹ ಅಪರೂಪದ ಮಹಿಳಾ ರಾಜಕಾರಣಿ ಯಾಗಿದ್ದರೆಂದು ತಿಳಿಯುತ್ತದೆ. ಶ್ರೀಮತಿಯವರು ಸ್ವಂತ ಹಿತವನ್ನು ಬದಿಗೊತ್ತಿ ರಾಷ್ಟ್ರಸೇವೆ ತನ್ನ ಪರಮ ಕರ್ತವ್ಯವೆಂದು ತಿಳಿದು ಮಹಾತ್ಮಗಾಂಧೀಜಿಯವರು ಮೆಚ್ಚುವ ರೀತಿಯಲ್ಲಿ ಆದರ್ಶ ಜೀವನ ನಡೆಸಿದ ಶ್ರೇಷ್ಠ ರಾಜಕಾರಣಿಯಾಗಿದ್ದರೆಂದು ಇತಿಹಾಸ ಸ್ಪಷ್ಟಪಡಿಸುತ್ತದೆ.

1905ರಲ್ಲಿ ಬೆಂಗಳೂರಿನ ಧೀಮಂತ ಮುಂದಾಳಾಗಿದ್ದ ಕೆ.ಎಚ್.ರಾಮಯ್ಯ ಅವರ ಮಗಳಾಗಿ ಜನಿಸಿ 1980ರ ಜೂನ್ ತಿಂಗಳ 20ರಂದು ಪರಮಪದವನ್ನೈದ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ಐದು ದಶಕಗಳಿಗೂ ಹೆಚ್ಚು ಕಾಲ ಬಿಡುವಿಲ್ಲದೆ ಜನರ ಏಳ್ಗೆಗಾಗಿ ದುಡಿದವರಾಗಿದ್ದಾರೆ. ಕೆ.ಎಚ್.ರಾಮಯ್ಯ ಅವರು ತಮ್ಮ ಮಗಳು ಯಾವ ಪುರುಷನಿಗೂ ಕಡಿಮೆಯಿಲ್ಲದೆ ಶ್ರೇಷ್ಠತೆಯನ್ನು ಮೆರೆಯುವಂತಾಗಬೇಕೆಂದು ಅನಿಸಿ ಯಶೋಧರಾ ಅವರಿಗೆ ಐದು ವರ್ಷಗಳಾದ ತಕ್ಷಣ ಚಾಮರಾಜಪೇಟೆ ಬಾಲಕಿಯರ ಶಾಲೆಗೆ ಸೇರಿಸಿದರು. ಅಂದಿನ ಸಾಮಾಜಿಕ ಪರಿಸ್ಥಿತಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹದಾಯಕವಾಗಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಯಶೋಧರಮ್ಮ ಅವರು ಲಂಡನ್ ಮಿಷನ್ ಶಾಲೆಯ ಮೂಲಕ ಎಸ್.ಎಸ್.ಎಲ್.ಸಿ ಯಲ್ಲಿ ಪ್ರಥಮದರ್ಜೆಯಲ್ಲಿ ತೇರ್ಗಡೆಯಾಗಿ ತಂದೆಗೂ ಮತ್ತು ಹಿರಿಯರಿಗೆ ಅಪಾರ ಆನಂದವನ್ನುಂಟುಮಾಡಿದರು. ನಂತರ ಮದ್ರಾಸ್‌ನ ಕ್ವೀನ್ ಮೇರಿ ಕಾಲೇಜಿಗೆ ಉನ್ನತ ವ್ಯಾಸಂಗಕ್ಕಾಗಿ ಸೇರಿದರು. ಆದರೆ ಅಲ್ಲಿನ ಹವಾಮಾನ ಒಗ್ಗದ ಕಾರಣ ತಮ್ಮ ಅಭಿಲಾಷೆಯನ್ನು ಬದಿಗೊತ್ತಿ ಬೆಂಗಳೂರಿಗೆ ವಾಪಸ್ಸಾದರು. ಆದರೆ ಅವರ ತಂದೆಯವರು ಮಾಡುತ್ತಿದ್ದ ಸೇವಾ ಕಾರ್ಯಕ್ರಮಗಳಲ್ಲಿ ತುಂಬಾ ಆಸಕ್ತಿಯಿಂದ ಪಾಲ್ಗೊಳ್ಳುತ್ತ, ಅವರು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ, ಮುಗ್ಧಜನ ಸಮುದಾಯದ ಏಳಿಗೆಗೆ ಹಮ್ಮಿಕೊಳ್ಳುತ್ತಿದ್ದ ಸುಧಾರಣಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ತಮ್ಮ ಜೀವನದ ಆದರ್ಶಗಳನ್ನು ಗುರುತಿಸಿಕೊಳ್ಳುತ್ತಿದ್ದರು.

ಕೊಡಗಿನ ರಾವ್‌ಬಹದ್ದೂರ್ ಚೆನ್ನಯ್ಯ ಅವರ ಮಕ್ಕಳಾದ, ಮೈಸೂರಿನಲ್ಲಿ ವಕೀಲ ವೃತ್ತಿಯಲ್ಲಿದ್ದ ಹೆಚ್.ಸಿ.ದಾಸಪ್ಪ ಅವರೊಂದಿಗೆ ಶ್ರೀಮತಿ ಯಶೋಧರಾ ಅವರ ವಿವಾಹ 1926ರಲ್ಲಿ ನೆರವೇರಿತು. ಶ್ರೀಯುತ

ದಾಸಪ್ಪ ಅವರು ವೃತ್ತಿಯಲ್ಲಿ ವಕೀಲರಾದರೂ ಪ್ರವೃತ್ತಿಯಲ್ಲಿ ಸಮಾಜಸೇವಕರಾಗಿದ್ದರು. ಶ್ರೀಮತಿ ಯಶೋಧರಮ್ಮ ಅವರು ವಿವಾಹದ ನಂತರ ಪತಿಯ ಸಮಾಜಸೇವೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಗಳಲ್ಲಿ ತುಂಬಾ ಆಸಕ್ತಿಯಿಂದ ದುಡಿಯಲು ತೊಡಗಿಸಿಕೊಂಡರು.

ಪೂಜ್ಯ ಮಹಾತ್ಮಗಾಂಧೀಯವರ ಅನುಯಾಯಿ ಆಗಿ ಸಮಾಜಾಭಿವೃದ್ಧಿ ಕೆಲಸಗಳಲ್ಲಿ ಮೈಸೂರು ರಾಜ್ಯದಲ್ಲಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿ ಅವರು ದುಡಿಯುತ್ತಿದ್ದರು. ದಂಪತಿಗಳ ಸೇವಾ ಕಾರ್ಯವನ್ನು ಗುರುತಿಸಿದ ಮಹಾತ್ಮ ಗಾಂಧೀಜಿಯವರು ಅವರಿಗೆ ವಾರ್ಧಾ ಆಶ್ರಮಕ್ಕೆ ಬರಲು ಆಹ್ವಾನಿಸಿದರು. ಅವರ ಆಹ್ವಾನದ ಮೇರೆಗೆ ಸೇವಾಗ್ರಾಮಕ್ಕೆ ತೆರಳಿ ಆಶ್ರಮದಲ್ಲಿ ಮೂರು ತಿಂಗಳ ಕಾಲ ತಂಗಿದ್ದು ಆಶ್ರಮದ ಕೆಲಸ ಕಾರ್ಯಗಳಲ್ಲಿ ಶ್ರದ್ಧಾಪೂರ್ವಕವಾಗಿ ತೊಡಗಿಸಿಕೊಂಡು ಮಹಾತ್ಮರ ಮೆಚ್ಚುಗೆಗೆ ಪಾತ್ರರಾಗಿದ್ದರು.

ಸೇವಾಗ್ರಾಮದ ಸೇವಾಶ್ರಮದಲ್ಲಿದ್ದಾಗ, ಕಸ್ತೂರಿಬಾ, ಸರೋಜಿನಿನಾಯ್ಡು, ಸುಚೇತ ಕೃಪಲಾನಿ, ಆಶಾದೇವಿ ಮುಂತಾದ ವಿದ್ಯಾವಂತ ಸೇವಾಸಕ್ತ ಮಹಿಳೆಯರ ಸಹಚರ್ಯೆಯಲ್ಲಿ ನಡೆಯುತ್ತಿದ್ದ ಚರ್ಚಾಗೋಷ್ಠಿಗಳಿಂದ ತಮ್ಮ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಂಡರು. ಆಶ್ರಮದಿಂದ ಹೊರಡುವ ವೇಳೆಗೆ ದಾಸಪ್ಪ ದಂಪತಿಗಳು ದೇಶ ಸೇವೆಗೆ ದೀಕ್ಷಾಬದ್ಧರಾಗಿ ಮಹಾತ್ಮರ ಆಶೀರ್ವಾದ ಪಡೆದು ಮೈಸೂರಿಗೆ ಹಿಂದಿರುಗಿದರು. ಸ್ವಕ್ಷೇತ್ರಕ್ಕೆ ಬಂದನಂತರ ತಮ್ಮ ಇಡೀ ಜೀವನವನ್ನು ದೇಶಸೇವೆಗಾಗಿ ಮುಡುಪಾಗಿಡಲು ಸಂಕಲ್ಪಿಸಿ, ದುಡಿಯಲು ಆರಂಭಿಸಿದರು. ಅಹಿಂಸಾ ಸಮರದಲ್ಲಿ ಸ್ತ್ರೀಯರು ಹೆಚ್ಚು ಹೆಚ್ಚು ಪಾಲ್ಗೊಳ್ಳಬೇಕು ಎಂಬ ಮಹಾತ್ಮಗಾಂಧೀಯವರ ಕರೆಗೆ ಓಗೊಟ್ಟು ಶ್ರೀಮತಿ ಯಶೋಧರಮ್ಮ ಅವರು ತಮ್ಮ ಶ್ರೀಮಂತ ಸಂಸಾರದಿಂದ ಹೊರಬಂದು ರಾಜಕೀಯ ರಂಗಕ್ಕೆ ಪ್ರವೇಶಿಸಿ ದಿಟ್ಟತನದಿಂದ ಮುನ್ನುಗ್ಗುತ್ತಾ 1948ರಲ್ಲಿ ಮೈಸೂರು ರಾಜ್ಯಕ್ಕೆ ಸ್ವಾತಂತ್ರ್ಯ ಬರುವವರೆಗೂ ಅವಿರತವಾಗಿ ದುಡಿದರು. ಸೇವಾಗ್ರಾಮದ ಜೀವನಶೈಲಿ ಯಶೋಧರಮ್ಮನವರ ಜೀವನಶೈಲಿಯ ಮೇಲೆ ಅಪಾರ ಪ್ರಭಾವ ಬೀರಿ ಅವರು ರೇಷ್ಮೆ ವಸ್ತ್ರ ಬಂಗಾರದ ಒಡವೆಗಳನ್ನು ತ್ಯಜಿಸಿ ಸರಳ ಜೀವನಕ್ಕೆ ಪರಿವರ್ತಿತರಾಗಿ ಖಾದಿಧಾರಿಗಳಾದರು. ಸಮಾಜದಲ್ಲಿ ತಮಗೆ ಲಭ್ಯವಾಗುತ್ತಿದ್ದ ಅಧಿಕಾರವನ್ನು ಯಶೋಧರಮ್ಮನವರು ಎಂದೂ ತಮ್ಮ ಸ್ವಂತಕ್ಕೆ ಬಳಸಿಕೊಳ್ಳಲಿಲ್ಲ. ಶ್ರೀಮತಿ ಯಶೋಧರಮ್ಮನವರ ಧೈರ್ಯಸ್ಥೈರ್ಯಗಳಿಗೆ ಸಾಕ್ಷಿಯಾದ ಶಿವಪುರ ಸತ್ಯಾಗ್ರಹ ಘಟನೆ ಇತಿಹಾಸವನ್ನು ನಿರ್ಮಿಸಿತು.

1938ರ ಏಪ್ರಿಲ್ 11ರಂದು ಮಂಡ್ಯ ಜಿಲ್ಲೆ ಮದ್ದೂರಿನಲ್ಲಿ ತ್ರಿವರ್ಣ ಧ್ವಜಾರೋಹಣ ಮಾಡಿ ಸಮಾವೇಶ ನಡೆಸಲು ಕಾಂಗ್ರೆಸ್ ಪಕ್ಷ ನಿರ್ಧರಿಸಿತ್ತು. ಅಂದಿನ ಮೈಸೂರು ಸರಕಾರ ಆ ಪ್ರಯತ್ನವನ್ನು ರಾಜ್ಯ ವಿರೋಧಿ ಎಂದು ಭಾವಿಸಿ ಅಂದಿನ ಕಾರ್ಯಕ್ರಮ ನಡೆಸಬಾರದೆಂದು ಎಚ್ಚರಿಕೆ ನೀಡಿತ್ತು. ಆ ಸಂದರ್ಭದಲ್ಲಿ ಪುರುಷ ಮುಂದಾಳುಗಳೆಲ್ಲ ಹೆದರಿ ಧ್ವಜಾರೋಹಣವನ್ನು ಮಾಡಬಾರದೆಂದು ತೀರ್ಮಾನಿಸಿದ್ದರು. ಆಗ ಶ್ರೀಮತಿ ಯಶೋಧರಮ್ಮ ಅವರು ಅಲ್ಲಿನ ಮಹಿಳಾ ಮುಂದಾಳುಗಳ ಜೊತೆ ಸೇರಿ ನಾವಂತು ಇಟ್ಟ ಹೆಜ್ಜೆ ತೊಟ್ಟ ಸಂಕಲ್ಪವನ್ನು ಬಿಡುವುದಿಲ್ಲವೆಂದು ಘೋಷಿಸಿ ದಿಟ್ಟತನದಿಂದ ಧ್ವಜಾರೋಹಣವನ್ನು ನಡೆಸಿದರು. ಶ್ರೀಮತಿ ಯಶೋಧರಮ್ಮ ಅವರು ಭಾಷಣಗಳ ಮೂಲಕ ಸಭೆಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಮಹತ್ವವನ್ನು ವಿವರಿಸುತ್ತ ಜನಬೆಂಬಲ ಪಡೆಯುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. 1939ರಲ್ಲಿ ವಿದುರಾಶ್ವತ್ಥದಲ್ಲಿ ನಡೆದ ಹತ್ಯಾಕಾಂಡವನ್ನು ತೀಕ್ಷ್ಣವಾದ ಮಾತುಗಳಿಂದ ಖಂಡಿಸಿದರು. ಅವರ ಭಾಷಣ ರಾಜದ್ರೋಹಾತ್ಮಕವೆಂದು ಅವರನ್ನು ಬಂಧಿಸಿ, ಬಿಡುಗಡೆ ಮಾಡಿದರು.

1942ರ ಭಾರತ ಬಿಟ್ಟು ತೊಲಗಿ ಚಳವಳಿಯಲ್ಲೂ ಯಶೋಧರಮ್ಮ ಅವರು ಸಕ್ರಿಯವಾಗಿ ಭಾಗವಹಿಸಿದರು. ಈ ಚಳವಳಿಯಲ್ಲಿ ಪೊಲೀಸರ ಕಣ್ಣು ತಪ್ಪಿಸಿ ಭೂಗತ ಚಳುವಳಿಯನ್ನು ನಿರ್ದೇಶಿಸುತ್ತಿದ್ದರು. ಶ್ರೀಮತಿ ಯಶೋಧರಮ್ಮನವರ ಮೈಸೂರಿನ ಮನೆ "ಯಶೋವಿಲಾಸ" ಕ್ವಿಟ್ ಇಂಡಿಯಾ ಚಳವಳಿಯ ಹೋರಾಟದ ಗುಪ್ತ ಕೇಂದ್ರವಾಗಿ ಕೆಲಸ ಮಾಡುತ್ತಾ ಬಂದದ್ದು ಇತಿಹಾಸವಾಗಿದೆ.

ಶ್ರೀಮತಿ ಯಶೋಧರಮ್ಮ ಅವರು ಮೈಸೂರು ಚಲೋ ಚಳವಳಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. 1938ರಲ್ಲಿ ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಶ್ರೀಮತಿಯವರು ಆಯ್ಕೆಯಾಗುವ ಮೂಲಕ ರಾಜಕೀಯ ಜೀವನದ ಮೊಟ್ಟಮೊದಲ ಮೆಟ್ಟಿಲು ಹತ್ತಿದರು. ಸಭೆಯ ಸದಸ್ಯರಾಗಿ ಕ್ರಿಯಾಶೀಲರಾಗಿ ವಿಷಯಗಳನ್ನು ಚರ್ಚಿಸುತ್ತ ರೈತರಿಗೆ ಮಹಿಳೆಯರಿಗೆ ಅನಾನುಕೂಲವಾಗುವಂತ ವಿಷಯಗಳು ಬಂದಾಗ ಅವರ ಪರವಾದಿಸಿ ಅವರುಗಳ ಪ್ರಗತಿಗೆ ದುಡಿಯುತ್ತಿದ್ದರು. 1938ರಲ್ಲಿ ಸರಕಾರ ಜಾರಿಗೆ ತಂದ ಪತ್ರಿಕಾ ಮಸೂದೆಯನ್ನು ಬಲವಾಗಿ ವಿರೋಧಿಸಿದರು. ಗಾಂಧೀಜಿಯವರ ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಳ್ಳುವ ದೃಷ್ಟಿಯಿಂದ 1942ರಲ್ಲಿ ನ್ಯಾಯವಿಧಾಯಕ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು.

ಮಹಾತ್ಮ ಗಾಂಧೀಜಿಯವರು ಶ್ರೀಮತಿ ಯಶೋಧರಮ್ಮ ಅವರನ್ನು 'ಕಸ್ತೂರ ಬಾ ಗಾಂಧೀ ರಾಷ್ಟ್ರೀಯ ಸ್ಮಾರಕ ಟ್ರಸ್ಟಿನ' ಪ್ರತಿನಿಧಿಯಾಗಿ ನೇಮಿಸಿದರು. ಆ ಟ್ರಸ್ಟಿನ ಪ್ರತಿನಿಧಿಯಾಗಿ ಇವರು ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ತುಂಬಾ ನಿಷ್ಠೆಯಿಂದ ಶ್ರಮಿಸಿದರು. ಈ ಟ್ರಸ್ಟಿನ ಮೂಲಕ ವಿವಿಧ ಜನಪರ ಕಾರ್ಯಗಳನ್ನು ಹಮ್ಮಿಕೊಳ್ಳಲು ಅನುಕೂಲವಾಗುವಂತೆ ಸರಕಾರದಿಂದ ಹಾಸನ ಜಿಲ್ಲೆ ಅರಸೀಕೆರೆ ಬಳಿ 80 ಎಕರೆ ಭೂಮಿಯನ್ನು ಪಡೆದು ಆಶ್ರಮವನ್ನು ಸ್ಥಾಪಿಸಿದರು. ಕಸ್ತೂರ ಬಾ ಗಾಂಧೀ ಸ್ಮಾರಕ ಟ್ರಸ್ಟಿನ ಪ್ರತಿನಿಧಿಗಳ ಶಿಬಿರದಲ್ಲಿ ಶಿಕ್ಷಣ ಪಡೆದು, ಮೈಸೂರು ಸಂಸ್ಥಾನದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದು ಸೇವಾ ಮನೋಭಾವ ಹೊಂದಿದ್ದ ಯುವತಿಯರನ್ನು ಆಯ್ಕೆ ಮಾಡಿ ಅವರಿಗೆ ಗ್ರಾಮಸೇವಾ ಕಾರ್ಯದಲ್ಲಿ ತರಬೇತಿ ನೀಡಿದರು.

ಮೈಸೂರು ಸಂಸ್ಥಾನದ ಈಸೂರಿನಲ್ಲಿ ಕ್ವಿಟ್ ಇಂಡಿಯಾ ಚಳವಳಿ ಸಂದರ್ಭದಲ್ಲಿ ನಡೆದ ಐತಿಹಾಸಿಕ ಸಂಗ್ರಾಮದಲ್ಲಿ ಶಿಕ್ಷೆಗೆ ಒಳಗಾಗಿದ್ದ ಗೋವಿಂದಮ್ಮ ಮತ್ತು ಈಶ್ವರಮ್ಮನವರನ್ನು ಗುರುತಿಸಿ ಶ್ರೀಮತಿ ಯಶೋಧರಮ್ಮ ಅವರು ಅವರಿಗೆ ಆಶ್ರಯ ನೀಡಿ ಗ್ರಾಮಸೇವಕಿಯರ ಶಿಕ್ಷಣ ನೀಡಿ ಅವರ ಮುಂದಿನ ಜೀವನ ಸುಗಮವಾಗುವಂತೆ ಮಾಡಿದರು. ರಾಜಕೀಯ ದ್ವೇಷದ ಕಾರಣ ಅಂದಿನ ಮೈಸೂರು ಸರಕಾರ ಯಶೋಧರಮ್ಮ ಅವರು ಸೇವಾ ಕಾರ್ಯಕ್ಕೆ ಉಪಯೋಗಿಸುತ್ತಿದ್ದ ಅರಮನೆಗೆ ಸೇರಿದ ಕಟ್ಟಡವನ್ನು 24 ಗಂಟೆಗಳಲ್ಲಿ ಖಾಲಿ ಮಾಡಬೇಕೆಂದು ತಿಳಿಸಿದಾಗ, ಅವರು ಧೃತಿಗೆಡದೆ ಅಲ್ಲಿನ ಶಿಕ್ಷಣಾರ್ಥಿಗಳೆಲ್ಲರ ಸಾಮಾನು ಸರಂಜಾಮೆಲ್ಲವನ್ನು ಕೆಂಗೇರಿ ಬಳಿಯ ಸ್ವಾಮಿ ವಿಶ್ವಾನಂದರ ಗುರುಕುಲಕ್ಕೆ ವರ್ಗಾಯಿಸಿ ಶಿಬಿರದ ಶಿಕ್ಷಣ ಮುಂದುವರಿದು ಪೂರ್ಣಗೊಳ್ಳುವಂತೆ ಮಾಡಿ ತಮ್ಮ ಧೀಮಂತ ಶಕ್ತಿಯನ್ನು ಮೆರೆದರು. ಶಿಕ್ಷಣ ಮುಗಿಸಿದ ಗ್ರಾಮಸೇವಕಿಯರನ್ನು ವಿವಿಧ ಗ್ರಾಮಸೇವಾ ಕೇಂದ್ರಗಳಿಗೆ ನಿಯುಕ್ತಿ ಮಾಡಿ ಅವರುಗಳ ಜೀವನಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದರು.

ಮೈಸೂರಿನ ಗ್ರಾಮಾಂತರ ಪ್ರದೇಶದಲ್ಲಿ ಸ್ತ್ರೀಶಕ್ತಿಯ ಸಂವರ್ಧನೆಗಾಗಿ ಗ್ರಾಮೋದ್ಯೋಗ, ಹೊಲಿಗೆ ಮುಂತಾದ ಕ್ಷೇತ್ರಗಳಲ್ಲಿ ತರಬೇತಿ ನೀಡುವುದು ಹಾಗೂ ಆರೋಗ್ಯಕರ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಸೂತಿ ಕೇಂದ್ರಗಳನ್ನು ಸ್ಥಾಪಿಸಿ, ನುರಿತ ಸೂಲಗಿತ್ತಿಯರನ್ನು ನೇಮಿಸುವುದು, ಚಿಕ್ಕಮಕ್ಕಳಿಗೆ ಶಿಶುವಿಹಾರ ನಡೆಸುವುದು ಬಾಲಕಿಯರ ಹಾಗೂ ಪ್ರೌಢಮಹಿಳೆಯರಿಗೆ ಶಿಕ್ಷಣ ನೀಡುವುದು ಮುಂತಾದ ಕಾರ್ಯಕ್ರಮಗಳು

ಸಕ್ರಮವಾಗಿ ನಡೆಯುವಂತೆ ತರಬೇತಿ ನೀಡುವುದು ಮುಂತಾಗಿ ವಿವಿಧ ಕಾರ್ಯಯೋಜನೆಗಳನ್ನು ರೂಪಿಸಿ ಚಾಲನೆಗೆ ತಂದರು. ಅಲ್ಲದೆ ಆಶ್ರಯ ಕೇಂದ್ರಗಳು ಸ್ವಾವಲಂಬಿಗಳಾಗಲು ಅವುಗಳಿಗೆ ಆದಾಯ ಮೂಲಗಳನ್ನು ಕಲ್ಪಿಸಿದರು.

1962ರಲ್ಲಿ ಕರ್ನಾಟಕ ರಾಜ್ಯದ ಮಂತ್ರಿಮಂಡಲದಲ್ಲಿ ಸಚಿವರಾಗಿ ಅಧಿಕಾರ ವಹಿಸಿಕೊಂಡರು. ಆದರೆ ಅಂದಿನ ಸರಕಾರ ಪಾನನಿಷೇಧವನ್ನು ಜಾರಿ ಮಾಡದ ಕಾರಣ ತಮ್ಮ ಸಚಿವ ಪದವಿಗೆ ರಾಜೀನಾಮೆ ನೀಡಿದರು. ಭಾರತದಲ್ಲಿ ಯಾವ ರಾಜ್ಯದಲ್ಲಿಯೂ ಇಂತಹ ಓರ್ವ ಮಂತ್ರಿಯನ್ನು ಕಾಣಲಿಲ್ಲ. ನಂತರ ರಚನಾತ್ಮಕ ಕಾರ್ಯಗಳಲ್ಲಿ ಪುನಃ ತೊಡಗಿಸಿಕೊಂಡು ಕಸ್ತೂರ ಬಾ ಟ್ರಸ್ಟಿನ ಕನ್ಯಾ ವಿದ್ಯಾಲಯವನ್ನು ಸ್ವತಂತ್ರ ಸೇವಾ ಸಂಸ್ಥೆಯಾಗಿ ಬೆಳೆಸಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಪ್ರೌಢಶಾಲೆಯ ಶಿಕ್ಷಣದ ವ್ಯವಸ್ಥೆಯನ್ನು ಮಾಡಿದರು.

ಮೈಸೂರಿನ ಯಾದಗಿರಿಯಲ್ಲಿ ಒಂದು ಮನೆಯಲ್ಲಿ ಅಂಧ ಹೆಣ್ಣುಮಕ್ಕಳಿಗೆ ಅನುಕೂಲವಾಗುವಂತೆ ವಸತಿ ಶಾಲೆಯನ್ನು ಸ್ಥಾಪಿಸಿ. ಅಲ್ಲಿ ಸಂಗೀತ ಮತ್ತು ಕಲೆಯಲ್ಲಿ ತರಬೇತಿ ನೀಡಲು ವ್ಯವಸ್ಥೆ ಮಾಡಿದರು. ಬೆಂಗಳೂರಿನ ಎಚ್.ಎಂ.ಟಿ. ಮತ್ತು ಐ.ಟಿ.ಐ. ಉದ್ಯಮಗಳ ಸಹಯೋಗದೊಂದಿಗೆ ಅನಾಥ ಹೆಣ್ಣುಮಕ್ಕಳಿಗೆ ಸ್ವಯಂಉದ್ಯೋಗ ಕಲ್ಪಿಸುವ ಉದ್ದೇಶದಿಂದ ಗಡಿಯಾರ ಮತ್ತು ಟೆಲಿಫೋನ್ ಭಾಗಗಳನ್ನು ತಯಾರಿಸುವ ಪೂರಕ ಘಟಕಗಳನ್ನು ಸ್ಥಾಪಿಸಿದರು.

ರಾಷ್ಟ್ರಮಟ್ಟದಲ್ಲಿ 1949ರಲ್ಲಿ ಸ್ಥಾಪನೆಯಾದ ಗಾಂಧೀ ಸ್ಮಾರಕ ನಿಧಿಯ ಧರ್ಮದರ್ಶಿ ಮಂಡಳಿಯಲ್ಲಿ ಮೈಸೂರು ರಾಜ್ಯದ ಪ್ರತಿನಿಧಿಯಾಗಿ ಡಾ. ರಾಜೇಂದ್ರಪ್ರಸಾದ್ ಅವರು ಶ್ರೀಮತಿ ಯಶೋಧರಮ್ಮ ಅವರನ್ನು ನೇಮಕ ಮಾಡಿದರು. ಅಲ್ಲಿ ಶ್ರೀಮತಿಯವರು ಸಲ್ಲಿಸಿದ ಸೇವೆ ಅಪರಿಮಿತವಾದ ಶ್ಲಾಘನೆಗೆ ಪಾತ್ರವಾಯಿತು. ಇಂತಹ ಅನೇಕ ರಾಷ್ಟ್ರ ಪ್ರಗತಿಯ ಕಾರ್ಯದಲ್ಲಿ ತೊಡಗಿಕೊಂಡಿದ್ದ ಶ್ರೀಮತಿ ಯಶೋಧರಮ್ಮ ಅವರು ಐದು ದಶಕಗಳಿಗೂ ಹೆಚ್ಚು ಕಾಲ ದುಡಿದು 1980ರ ಜೂನ್ ತಿಂಗಳಿನಲ್ಲಿ ದೈವಾಧೀನರಾದರು. ಹೀಗೆ ಶ್ರೀಮತಿ ಯಶೋಧರಾ ಅವರು ಆದರ್ಶ ಗೃಹಿಣಿಯಾಗಿ, ಪ್ರೀತಿಯ ಪತ್ನಿಯಾಗಿ, ಅಂತಃಕರಣಪೂರಿತ ತಾಯಿಯಾಗಿ, ಸಮಾಜಸೇವಕಿಯಾಗಿ, ರಾಜಕಾರಿಣಿಯಾಗಿ ತಾವು ವಹಿಸಿಕೊಂಡ ಕರ್ತವ್ಯಗಳನ್ನು ಅತ್ಯಂತ ನಿಷ್ಠೆ ಹಾಗೂ ಜವಾಬ್ದಾರಿಯಿಂದ ನಿರ್ವಹಿಸಿದರು.

———— * ————

ನಾ ಕಂಡ ಅಮ್ಮ

ಸರೋಜ ತುಳಸೀದಾಸಪ್ಪ

ನಾನು ಮೊದಲು ಅವರನ್ನು ಕಂಡಿದ್ದು ನಮ್ಮೂರಿನ ಮಾತೃ ಮಂದಿರದಲ್ಲಿ. ಮಾತೃ ಮಂದಿರ ಅಂದರೆ ಸ್ವಾತಂತ್ರ್ಯ ಹೋರಾಟ ಮುಗಿದ ಕೂಡಲೇ ಗಾಂಧೀಜಿಯವರ ಅಪ್ಪಣೆ ಮೇರೆಗೆ ಅರಸೀಕೆರೆಯಲ್ಲಿ 85 ಎಕರೆ ಜಮೀನಿನಲ್ಲಿ ಅನಾಥ ಹೆಣ್ಣುಮಕ್ಕಳು (ಹೆಂಗಸರು) ನಿರ್ಗತಿಕ ಹೆಂಗಸರು ಅಲ್ಲಿ ಬಂದು ಸೇರಿದರು. ಇನ್ನು ಬೇರೆ ಬೇರೆ ಹೆಣ್ಣುಮಕ್ಕಳು ಕೂಡ ಬಂದು ವ್ಯಾಸಂಗ ಪಡೆದರು. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಒಂದೊಂದು ಶಾಖೆ ತೆಗೆದರು. ಆ ಶಾಖೆಯಲ್ಲಿ ಬಾಲವಾಡಿ, ಹೊಲಿಗೆ, ರಾತ್ರಿ ಸ್ಕೂಲು ನಡೆಸುತ್ತಿದ್ದರು ಮತ್ತು ಆಗ ಹಳ್ಳಿಗಾಡಿನಲ್ಲಿ ರಸ್ತೆ ಇಲ್ಲ, ದೀಪ ಇಲ್ಲ, ಆಸ್ಪತ್ರೆಗಳಿಲ್ಲ, ಮಿಡ್ ವೈಫ್ ತರಬೇತಿ ಕೊಟ್ಟು ಇಂತಹ ಮಾತೃ ಮಂದಿರಗಳಿಗೆ ಕಳಿಸುತ್ತಿದ್ದರು. ಬಸವಾನಿಯಲ್ಲಿ ಶ್ರೀಮತಿ ಸಾವಿತ್ರಮ್ಮ ರಾಮಶರ್ಮ ಅರಸೀಕೆರೆ ಟ್ರೈನಿ ಮತ್ತು ಪದ್ಮ ರಾಮದಾಸ್ ಈ ಇಬ್ಬರು ಮಹಿಳೆಯರು ಸೇರಿ ತುಂಬಾ ಕೆಲಸ ಮಾಡಿದರು. ಈಗಲೂ ಆ ಜಾಗದಲ್ಲಿ ವೃದ್ಧಾಶ್ರಮ ನಡೆಯುತ್ತಿದೆ. ಆ ಮಾತೃ ಮಂದಿರದಲ್ಲೆ ನಾಲ್ಕು ಮಂಚ ಮತ್ತು ನಾಲ್ಕು ತೊಟ್ಟಿಲು ಇಟ್ಟು ಹೆರಿಗೆ ಮಾಡಿ ಹನ್ನೊಂದು ದಿನ ಸುಧಾರಿಸಿ ಕಳಿಸಿಕೊಡುತ್ತಿದ್ದರು. ನಾವು ಚಿಕ್ಕವರಿರುವಾಗ ನೋಡಿದ್ದು ಎತ್ತಿನ ಗಾಡಿಯಲ್ಲಿ ಬಸುರಿಯರು, ಬಾಣಂತಿಯರು ಮಗುವಿನ ಜೊತೆ ಗಾಡಿಯಲ್ಲಿ ಓಡಾಡುತ್ತಿದ್ದರು. ಅಂತಹ ಮಾತೃ ಮಂದಿರ ನೂರಾರು ಸ್ಥಾಪನೆ ಮಾಡಿದ್ದರು. ಅದರಲ್ಲಿ ಬಸವಾನಿ ಒಂದು. ಇದು ಬಹಳ ಹಿಂದುಳಿದ ಗ್ರಾಮ. ಮಲೆನಾಡು. ಸುತ್ತಮುತ್ತ ಕಾಡು ಪ್ರದೇಶ. ಮಳೆಗಾಲದಲ್ಲಿ ವಿಪರೀತ ಮಳೆ, ಕಾಡು ಪ್ರಾಣಿಗಳ ಕಾಟ. ಒಬ್ಬೊಬ್ಬರೇ ಓಡಾಡಲು ಕಷ್ಟವಿದ್ದ ಪ್ರದೇಶ. ಅಲ್ಲಿಗೆ ಬಂದು ಸ್ವಲ್ಪ ಜಾಗ ಕೊಡಿ ಎಂದು ಊರಿನ ಮುಖ್ಯಸ್ಥರನ್ನು ಕೇಳಿ ಚಿಕ್ಕದಾಗಿ ಹೆಂಚಿನ ಮನೆ ಕಟ್ಟಿ ಹಾಗೆ ದೊಡ್ಡದಾಗುತ್ತಾ ಹೋಯ್ತು. ಅದನ್ನು ನೋಡಲು ಮತ್ತು ಅಲ್ಲಿಯ ಲೆಕ್ಕಪತ್ರ ಪರಿಶೀಲಿಸಲು ಯಶೋಧರಮ್ಮ, ಪ್ರಾಣೇಶರಾವ್, ಇಂದೂರಿನಿಂದ ಲೆಕ್ಕಪರಿಶೋಧಕರು, ಚೆಲುವಮ್ಮ ಮತ್ತು ತುಳಸೀದಾಸ್‌ರವರು ಬಂದಿದ್ದರು. ಮಧ್ಯಾಹ್ನ ನಮ್ಮ ಮನೆಯಲ್ಲಿ ಊಟ ಇಟ್ಟುಕೊಂಡಿದ್ದವು. ಊಟದ ನಂತರ ನಮ್ಮ ದೊಡ್ಡಪ್ಪನವರನ್ನು ಕೇಳಿದರು ನಿಮಗೆ ಮಕ್ಕಳೆಷ್ಟು? ನಾವೆಲ್ಲ ಹೊರಗೆ ಬಂದು ಸಾಲಾಗಿ ನಿಂತೆವು. ಏಳು ಜನ ಹೆಣ್ಣುಮಕ್ಕಳು. ಆಗ ಅಮ್ಮ ನನ್ನ ಜೊತೆ ಯಾರು ಬರುತ್ತೀರಾ ಎಂದು ಕೇಳಿದರು. ಯಾರೂ ಒಪ್ಪಲಿಲ್ಲ. ಆಗ ನಾನು ರೆಡಿಯಾಗಿ ನಾನು ಬರುವೆ ಎಂದು ಜೊತೆಯಲ್ಲಿ ಹೊರಟೆ, ಬಸವಾನಿ ಸ್ಕೂಲಿನಲ್ಲಿ ಏಳನೇ ತರಗತಿಯಲ್ಲಿದ್ದೆ. ಅವತ್ತಿನಿಂದ ಅವರ ನನ್ನ ಸಂಪರ್ಕ ಹೆಚ್ಚುತ್ತಾ ಬಂತು.

ಅವರಿಗೆ ನನ್ನ ಡ್ಯಾನ್ಸ್ (ಭರತ ನಾಟ್ಯ) ಡ್ರಾಮ ಬಹಳ ಇಷ್ಟ, ಕನ್ಯಾ ವಿದ್ಯಾಲಯದಲ್ಲಿ ಬಹಳಮಟ್ಟಿಗೆ ವಿದ್ಯೆ, ಕಲೆ ಎಲ್ಲದರಲ್ಲೂ ಮನೆಯಲ್ಲೇ ಪಾಠ. ಆತ್ಮೀಯತೆಗೆ ಕರೆದುಕೊಂಡು ಹೋಗಿದ್ದು, ನಾನು ಆಗಾಗ ಊರಿಗೆ ಹೋಗುತ್ತಿದ್ದೆ. ಮೂರ್‍ನಾಲ್ಕು ದಿನದಲ್ಲೇ ಟೆಲಿಗ್ರಾಂ ಕಳಿಸುತ್ತಿದ್ದರು. ಬೇಗ ಬಾ ಡ್ಯಾನ್ಸ್ ಪ್ರೋಗ್ರಾಂ ಇದೆ ಎಂದು. ಬಂದ ಮೇಲೆ ಅವರ ಪ್ರೀತಿಯ ನೋಟ ನನ್ನನ್ನು ಅವರ ಕಡೆ ಸೆಳೆಯಲು ಶುರುವಾಯ್ತು.

ಅವರ ಮನೆ ಬೇರೆ ವಿದ್ಯಾಲಯ ಬೇರೆಯಾಗಿರಲಿಲ್ಲ. ಎಲ್ಲಾ ಒಂದೇ ಕಡೆ. ಅವರು ನಮ್ಮನ್ನೆಲ್ಲಾ ಬೇರೆಯವರಂತೆ ಕಾಣುತ್ತಿರಲಿಲ್ಲ. ಆದ್ದರಿಂದ ನಾವೆಲ್ಲಾ ಒಂದೇ ಮನೆಯ ಮಕ್ಕಳಂತೆ ವಾಸಿಸುತ್ತಿದ್ದೆವು. ಅವರನ್ನು ಅಪ್ಪ, ಅಮ್ಮ ಎಂದು ಕರೆಯಲು ಶುರು ಮಾಡಿದೆವು. ಅವರ ಮಕ್ಕಳು ಕೂಡ ಯಾವ ಬೇಧಭಾವ ಇಲ್ಲದೆ ನಮ್ಮೊಡನೆ ಒಬ್ಬರಂತೆ ಇದ್ದರು. ಆದ್ದರಿಂದ ನಾವೆಲ್ಲಾ ಆಗ ಅಣ್ಣ ಎಂದು ಕರೆಯುತ್ತಿದ್ದೆವು. ಅವರ ದೊಡ್ಡ ಮಗನನ್ನು ದಪ್ಪಣ್ಣ ಎಂದು ಮತ್ತು ಚಿಕ್ಕವರನ್ನು ತುಳಸಣ್ಣ ಎಂದು ಕರೆದು ಸಂತೋಷವಾಗಿ ಇರುತ್ತಿದ್ದೆವು. ನಾವೆಲ್ಲಾ 30 ಜನ ಇರುತ್ತಿದ್ದೆವು. ಕ್ರಮೇಣ ನಮ್ಮ ನಮ್ಮ ಮನೆ ಮರೆತು, ಇದೇ ನಮ್ಮ ಮನೆ, ಇವರೇ ನಮ್ಮ ಬಂಧುಗಳು ಅನ್ನುವ ಹಾಗೆ ಆಯ್ತು.

ಯಶೋಧರಮ್ಮ ಅವರ ವ್ಯಕ್ತಿತ್ವ ಸ್ವಲ್ಪಮಟ್ಟಿಗೆ ನನ್ನ ಮೇಲೆ ಬೀರಿದೆ. ಹೇಗೆಂದರೆ, ಅವರು ಸದಾ ಪರರ ಚಿಂತೆಯಲ್ಲಿರುತ್ತಿದ್ದರು. ಯಾರೇ ಆಗಲಿ ಉದಾಹರಣೆಗೆ ಅವರ ಸಂಬಂಧಿಕರಲ್ಲಿ ಯಾರಾದರೂ ಮದುವೆ ಆಗುತ್ತಿದ್ದಾರೆ ಎಂದರೆ ಅವರ ಮನೆಗೆ ಹೋಗಿ ಅವರಿಗೆ ಯಾವ ರೀತಿಯ ಸಹಾಯ ಬೇಕು ಎಂಬುದನ್ನು ನೋಡಿ ಅದಕ್ಕೆ ಅನುಗುಣವಾಗಿ ಮಾಡುತ್ತಿದ್ದರು. ಕಾಯಿಲೆ ಆದವರಿಗೆ ಸುಧಾರಿಸುವುದು, ಅವರ ಮನೆಯಲ್ಲಿ ತೊಂದರೆ ಇದ್ದರೆ ತನ್ನ ಮನೆಗೆ ಕರೆತಂದು ಹುಷಾರು ಮಾಡಿ ಕಳಿಸಿಕೊಡುತ್ತಿದ್ದರು. ಒಳ್ಳೆ ದಾದಿಯರು ನೋಡುವ ಹಾಗೆ ನೋಡಿಕೊಳ್ಳುವ ಗುಣ, ಸ್ವಲ್ಪವೂ ಬೇಸರಪಡದೆ, ಅಸಹ್ಯಪಡದೆ ನೋಡಿಕೊಳ್ಳುತ್ತಿದ್ದರು. ಮತ್ತು ಹೆಂಗಸರು ಕೆಲವರು ಕಷ್ಟದಲ್ಲಿದ್ದು ತಡೆಯಲಾರದೆ ಇವರ ಬಳಿಗೆ ಬಂದಾಗ ಅವರನ್ನು ಸಂತೈಸಿ ಊಟ, ತಿಂಡಿ ಕೊಟ್ಟು, ತನ್ನ ಸೀರೆಯನ್ನೇ ಕೊಟ್ಟು ಸ್ನಾನ ಮಾಡಿಕೊಳ್ಳಲು ಹೇಳಿ ನಂತರ ಅವರನ್ನು ಎಲ್ಲಿಗೆ ಅನುಗುಣವಾಗಿದ್ದಾರೆ ಎಂದು ಯೋಚಿಸಿ ಅಲ್ಲಿಗೆ ಕಳಿಸುತ್ತಿದ್ದರು. (ಅರಸೀಕೆರೆ ಅಥವಾ ಬ್ರಾಂಚಸ್‌ಗಳಿಗೆ) ಮಕ್ಕಳಿದ್ದ ಪಕ್ಷದಲ್ಲಿ ತನ್ನ ಹತ್ತಿರ ಅಂದರೆ ಕನ್ಯಾ ವಿದ್ಯಾಲಯದಲ್ಲಿಟ್ಟು ನೋಡಿಕೊಳ್ಳುತ್ತಿದ್ದರು. ಇದನ್ನೆಲ್ಲಾ ನೋಡಿ ನಮಗೆ ಇವರು ಯಾವ ಜನ್ಮದ ತಾಯಿಯೋ ಇವರು ಅನಿಸುತ್ತಿತ್ತು. ಕ್ರಮೇಣ ನಿಜ ತಾಯಿಯಂತೆ ಭಾಸವಾಯ್ತು.

ಸಾರ್ವಜನಿಕ ಕೆಲಸಗಳೆಂದರೆ ಹಳ್ಳಿಯ ಬಡಮಕ್ಕಳಿಗೆ ಹಾಸ್ಟೆಲ್ ಮಾಡಿ ಅವರಿಗೆ ವಸತಿ, ಊಟ ಉಚಿತವಾಗಿ ನಡೆಸುವುದು ಬಹಳ ಕಷ್ಟ. ಅದಕ್ಕೆ ಕೆಲವರನ್ನು ನೇಮಿಸಿದ್ದರು. ಹಳ್ಳಿಯ ಶ್ರೀಮಂತರಿಂದ ದವಸ ಧಾನ್ಯ ತಂದು ಶೇಖರಿಸಿ ಆ ಮಕ್ಕಳಿಗೆ ವರ್ಷ ಪೂರ್ತಾ ಊಟ ನಡೆಯಬೇಕು ಹಾಗೆ ಮಾಡಿದರು. ಅಲ್ಲಿ ಓದಿದ ವಿದ್ಯಾರ್ಥಿಗಳು ಸಾವಿರಾರು. ಈಗ ಅವರೆಲ್ಲಾ ಈ ದೇಶದಲ್ಲೂ, ಹೊರ ದೇಶದಲ್ಲೂ ದೊಡ್ಡ ಹುದ್ದೆಯನ್ನು ಅಲಂಕರಿಸಿದ್ದಾರೆ.

ಗಂಡ ಹೆಂಡತಿ ಇಬ್ಬರೂ ಕೂಡಿ ಸಾರ್ವಜನಿಕ ಕೆಲಸಗಳನ್ನು ಮಾಡುತ್ತಿದ್ದರು. ತಮ್ಮ ಮನೆ ಯಶೋವಿಲಾಸದಲ್ಲಿ ಹಾಸ್ಟೆಲ್ ಶುರು ಮಾಡಿದರು. ಅಲ್ಲಿದ್ದ ಕೆಲವರಲ್ಲಿ ಹೆಚ್.ಎಲ್.ತಿಮ್ಮೇಗೌಡ್ರು ಒಬ್ಬರು. ಸ್ವಲ್ಪ ವರ್ಷದ ಮೇಲೆ ಒಂದು ಮನೆ ದಾನವಾಗಿ ಸಿಕ್ಕಿತು. ಆಗ ಅದಕ್ಕೆ ತಮ್ಮ ತಂದೆಯಾದ 'ಕೆ.ಹೆಚ್.ರಾಮಯ್ಯ ಹಾಸ್ಟೆಲ್' ಎಂದು ಹೆಸರಿಸಲಾಯ್ತು. ಇವರಿಬ್ಬರಾಗಲೀ, ಇವರ ತಂದೆಯಾಗಲೀ ಸಮಾಜ ಸೇವೆ ಮಾಡುತ್ತಿದ್ದುದನ್ನು ಗಮನಿಸಿ ಜನ ತಾವಾಗಿ ಸಹಾಯ ಹಸ್ತ ನೀಡುತ್ತಿದ್ದರು.

ಸ್ವಾತಂತ್ರ್ಯ ಹೋರಾಟದ ದಿನಗಳನ್ನು ಆಗಾಗ ಸ್ಮರಣೆ ಮಾಡಿಕೊಂಡು ಬೇಸರಪಡುತ್ತಿದ್ದರು. ನಾವು ಆ ದಿನಗಳನ್ನು ಕಂಡಿಲ್ಲ, ಆದರೆ ಅವರು ಮಾಡಿದ ಮಹಾನ್ ಕಾರ್ಯಗಳನ್ನು ನೆನಸಿಕೊಂಡು ಬೇರೆಯವರು ಅಚ್ಚರಿ ಪಡುತ್ತಿದ್ದುದ್ದನ್ನು ಕಂಡಿದ್ದೇನೆ, ಕೇಳಿದ್ದೇನೆ.

ನನಗೆ ಕುತೂಹಲಕಾರಿಯಾದದ್ದು ತಿಳಿಸುತ್ತೇನೆ. ದಂಪತಿಗಳಿಬ್ಬರು ಬಹಳ ಹೋರಾಟಗಾರರು. ದಾಸಪ್ಪನವರನ್ನು ಸನ್ನದು ಕಿತ್ತುಕೊಂಡು ಜೈಲಿಗೆ ಹಾಕಿದರು. ಅಮ್ಮ ಹೆದರದೆ ಜನರನ್ನು ಕಟ್ಟಿಕೊಂಡು ಬಹಳ ಧೈರ್ಯದಿಂದ ಕೆಲಸ ಮಾಡುತ್ತಿದ್ದರು. ಅದನ್ನು ಕಂಡು ಹೌಸ್ ಅರೆಸ್ಟ್ ಮಾಡಿದರಂತೆ. ಆಗಲೂ ಬಿಡದೆ ಕೆಲಸ ಮಾಡುತ್ತಿದ್ದರೆಂದು, ಗೂಢಚಾರರಿಂದ ತಿಳಿದು ಮನೆ ಜಪ್ತಿಗೆ ಬಂದರಂತೆ. ಮನೆಯಲ್ಲಿ ಒಂದು ರೋಲ್ ಟಾಪ್ ಇತ್ತು. ಅದಕ್ಕೆ ಬಲಗಡೆ ನಾಲ್ಕು ಡ್ರಾಯರ್ ಇತ್ತು. ಮೇಲಿನ ಎರಡನೇ ಡ್ರಾಯರ್‌ನಲ್ಲಿ ಎಲ್ಲ ನಿಗೂಢ ವಸ್ತುಗಳು(ಪೇಪರ್ಸ್ ಇತ್ತಂತೆ) ಅದಕ್ಕೆ ಅಮ್ಮ ಮೊದಲು ಮೇಲಿನ ಡ್ರಾಯರ್ ತೋರಿಸಿ ಕೆಳಗಿನಿಂದ ಎರಡನೇ ಡ್ರಾಯರ್ ಪೂರ್ತ ಎಳೆದು ಕಾಲ ಮೇಲೆ ಬೀಳಿಸಿಕೊಂಡರಂತೆ ಹೆಬ್ಬೆರಳಲ್ಲಿ ರಕ್ತ ಚಿಮ್ಮಿತಂತೆ. ಆಗ ಅವರು ಬೇಸರಗೊಂಡು "ಪರವಾಗಿಲ್ಲ ಬಿಡಿ ಪರವಾಗಿಲ್ಲ" ಎಂದು ಮುಂದೆ ಏನೂ ನೋಡದೇ ಹೋದರಂತೆ. ನಂತರ ಬೇರೆ ರೂಂಗಳನ್ನು ನೋಡುತ್ತಾ ದೇವರ ಮನೆ ಕಡೆ ಬಂದಾಗ ದಯವಿಟ್ಟು ಷೂ ತೆಗೆದು ಬನ್ನಿ ಎಂದರಂತೆ. ಆಗ ಬಂದವರು "ಪರವಾಗಿಲ್ಲ" ಎಂದು ವಾಪಸ್ಸೇ ಹೋದರಂತೆ. ದೇವರ ಮನೆಯಲ್ಲಿ ಅವರ ಎಲ್ಲಾ ಒಡವೆಗಳನ್ನು ಒಂದು ಟ್ರಂಕ್‌ನಲ್ಲಿ ಹಾಕಿ ಷೀಟ್ ಮುಚ್ಚಿ ದೀಪ ಹಚ್ಚಿದ್ದರಿಂದ ಒಳಗೆಹೋಗದೆ ಬಿಟ್ಟುಹೋದರಂತೆ. ಅಮ್ಮನವರು- ಟ್ರಿಕ್ ಉಪಯೋಗಿಸಿದ್ದರಿಂದ, ಇಲ್ಲಿ ಸಿಕ್ರೆಟ್ ಪೇಪರ್ಸ್ ಉಳಿಯಿತು, ಒಡವೆ ಉಳಿಯಿತು. ಇವರನ್ನು ಅರೆಸ್ಟ್ ಮಾಡುವುದು ತಪ್ಪಿತು. ತುಳಸಿದಾಸ್ ಇನ್ನು ಬಹಳ ಚಿಕ್ಕವರಿದ್ದರಂತೆ, ಆಗ ಅವರ ಕೈಲಿ ಒಂದು ಪಾತ್ರೆಯಲ್ಲಿ ಕೆಳಗೆ ಪೇಪರ್ ಇಟ್ಟು ಅದರ ಮೇಲೆ ರಾಗಿ ಹಾಕಿ ಬೀಸಲು ಹೋಗುವ ಹಾಗೆ ಕಳಿಸಿ ಎಸ್ಟೇಟ್ ಜನಕ್ಕೆ ಪೇಪರ್ಸ್ ರವಾನಿಸುತ್ತಿದ್ದರಂತೆ, ಪೊಲೀಸ್ ಹಿಡಿದರೆ ಏನಪ್ಪ ಮಾಡುತ್ತೀ ಎಂದು ಸುಶೀಲಬಾಯಿ ನಾಗೇಶ್ ರಾವ್ ಕೇಳಿದರೆ ಅಗಿದು ನುಂಗಿಬಿಡುತ್ತೇನೆಂದು ಹೇಳುತ್ತಿದ್ದರಂತೆ, ಇದು ನನಗೆ ಸುಶೀಲಬಾಯಿಯವರೇ ತಿಳಿಸಿದ್ದು. ಮನೆ ತುಂಬಾ ಸ್ವಾತಂತ್ರ್ಯ ಹೋರಾಟಗಾರರು ತುಂಬಿದ್ದರಿಂದ ಅವರೇ ಮನೆ ನೋಡಿಕೊಳ್ಳುತ್ತಿದ್ದರಂತೆ, ಈ ಎರಡು ಮಕ್ಕಳು ಎಲ್ಲಾ ಹೋರಾಟಗಾರರ ಮಕ್ಕಳಂತೆ ಬೆಳೆದಿದ್ದಾರೆ ಎನ್ನುತ್ತಿದ್ದರು. ಆದರೆ ಅದನ್ನೆಲ್ಲಾ ನೆನಸಿಕೊಂಡರೆ ಮೈ ಜುಮ್ ಎನ್ನುತ್ತೆ. ನಾ ಕಂಡ ಅಮ್ಮ ಎಂತಹ ಧೈರ್ಯ ಸಾಹಸ, ಛಲವಂತೆ ಎನ್ನುವುದು ಎದ್ದುಕಾಣುತ್ತದೆ.

ಯಶೋಧರಮ್ಮರವರು ಸಚಿವೆಯಾಗಿ ಬಹಳ ಕೆಲಸ ಮಾಡಿದ್ದಾರೆ. ಮುಖ್ಯವಾಗಿ ಅವರಿಗೆ ಆಗ ಹರಿಜನರನ್ನು ಮುಂದೆ ತರಬೇಕು ಎನ್ನುವುದು ಬಹಳ ಇತ್ತು. ಮತ್ತು ಈ ದೇಶದಲ್ಲಿ ಬಡತನ ಹೋಗಲಾಡಿಸುವ ಬಗ್ಗೆ ಚಿಂತೆ ಮಾಡಿ ಅಲ್ಲಲ್ಲಿ ಬಡಮಕ್ಕಳಿಗೆ ಅದರಲ್ಲೂ ಹರಿಜನ ಮಕ್ಕಳಿಗೆ ಸ್ಕೂಲ್ (ರೆಸಿಡೆನ್ಸಿ) ಹಾಸ್ಟೆಲ್‌ಗಳನ್ನು ಮಾಡಿ ಮಕ್ಕಳನ್ನು ಇರಿಸಿ ಅವರಿಗೆ ಕ್ಲೀನಿಂಗ್ ತೋರಿಸುತ್ತಿದ್ದರು. ಸ್ಕೂಲ್ (ಫ್ರೀ ಆಗಿ) ಆಗಲೇ ತಲೆಎತ್ತಿದ್ದ ರೆಸಿಡೆನ್ಸಿಯಲ್ ಸ್ಕೂಲುಗಳು ಮತ್ತು ಅಂಧರಿಗೆ ಪಾಠಶಾಲೆ, ವಸತಿ ಶಾಲೆ, ಡೆಫ್ ಅಂಡ್ ಡಂಬ್ ಮಕ್ಕಳಿಗೆ ವಸತಿ ಪಾಠಶಾಲೆ, ಕೈಕಾಲು ಊನ ಇರುವ ಮಕ್ಕಳಿಗೆ ವಸತಿ ಗೃಹ, ವೃದ್ಧಾಶ್ರಮ ನಮ್ಮ ಕರ್ನಾಟಕದಲ್ಲಿ ಮುಳುಗಡೆಯಾಗಿ ವಸತಿಹೀನರಾಗಿರುವವರಿಗೆಲ್ಲಾ ವಸತಿಯನ್ನು ಕಲ್ಪಿಸಿ ಕೊಟ್ಟಿರುವರು. ಎಷ್ಟೋ ಸಂಸಾರ ಕುಡಿಯುವ ಚಟಕ್ಕೆ ಸಿಕ್ಕಿ ಗೋಳಾಡುತ್ತಿರುವುದನ್ನು ಕಣ್ಣಾರೆ ಕಂಡ ಅವರು, ಕುಡಿಯುವ ಚಟಕ್ಕೆ ಕಡಿವಾಣ ಹಾಕಲು ಬಹಳಷ್ಟು ಶ್ರಮವಹಿಸಿದ್ದಾರೆ. ಅವರ ಶ್ರಮ ಕಂಡಾಗಲಿ, ಅಥವಾ ಕೆಲವು ಸಂಸಾರ ಹಾಳಾಗಿ ನೆರಳಿಲ್ಲ, ಅನ್ನವಿಲ್ಲ ಎಂಬಂತೆ ಇದ್ದರೂ ಸರ್ಕಾರದ ಕಣ್ಣಿಗೆ ಬೀಳಲಿಲ್ಲ. ಜನರ ಕಷ್ಟವನ್ನು ಕಂಡು ಸಹಿಸಲಾರದೆ ತನ್ನ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಮನೆಯಲ್ಲಿ ಉಳಿದರು. ಮಹಾತ್ಮನನ್ನು ಧ್ಯಾನಿಸುವುದೇ ಅವರ ಕೆಲಸವಾಗಿತ್ತು. ಅವರು ಸ್ಥಾಪಿಸಿದ್ದ ಅರಸೀಕೆರೆ ಕಸ್ತೂರಿ ಬಾ ಗ್ರಾಮದ ಬ್ರಾಂಚುಗಳಲ್ಲಿ ಎಲ್ಲಾ ಕಡೆ ವಿದ್ಯುತ್ ದೀಪವಿಲ್ಲ. ಲಾಂಟ್ರಿನ್, ಬುಡ್ಡಿ ದೀಪವಿಟ್ಟುಕೊಂಡು ರಾತ್ರಿ ಶಾಲೆ ನಡೆಸುತ್ತಿದ್ದರು. ಹೆಂಗಸರೇ ಜಾಸ್ತಿ ಹೊರಗಿನ ಕೆಲಸ ಮುಗಿಸಿಕೊಂಡು ಮನೆಯಲ್ಲಿ ಮಕ್ಕಳ ಮತ್ತು ಮನೆಯ ಕೆಲಸ ಮುಗಿಸಿಕೊಂಡು ಏಳು ಗಂಟೆಗೆ ಕ್ಲಾಸ್‌ಗೆ ಹೋಗಿ ತಮ್ಮತಮ್ಮ ಹೆಸರು ಬರೆಯುವುದನ್ನು

ಕಷ್ಟಪಟ್ಟು ಕಲಿತುಕೊಳ್ಳುತ್ತಿದ್ದರು. ಅದು ನಾವು ಕಂಡ ರಾತ್ರಿ ಸ್ಕೂಲು, ಬಾಗಿಲಿಗೆ ರಂಗೋಲೆ ಹಾಕೋದು, ಹಾಡು ಹೇಳುವುದು, ಈ ತರಹ ತರಬೇತಿ; ಎಣಿಸುವುದು, ಇದೆಲ್ಲಾ ಆ ಶಿಬಿರಗಳಲ್ಲಿ ನಡೆಯುತ್ತಿತ್ತು. ಯಾವ ಹಳ್ಳಿಗೆ ಹೋದರೂ ಕೂಡ ತಾವೂ ಅವರಲ್ಲಿ ಒಬ್ಬರಂತೆ ಸೇರಿಕೊಂಡು ಬಹಳ ಆತ್ಮೀಯತೆಯಿಂದ ಬುದ್ಧಿವಾದಗಳನ್ನು ಹೇಳಿಕೊಡುತ್ತಿದ್ದರು. ಎಂಥಾ ಕಠಿಣವಾದ ಮಹಿಳೆ ಇರಲಿ ಯಶೋಧರಮ್ಮನವರ ವಾತ್ಸಲ್ಯವನ್ನು ಕಂಡು ಅವರ ಹಿಂದೆ ಬೀಳುತ್ತಿದ್ದರು.

ಕಷ್ಟವಲ್ಲಿರುವ ಹೆಣ್ಣುಮಕ್ಕಳ ಸಂಸಾರ ಸರಿಪಡಿಸಲು ಮನೆಯಲ್ಲಿಟ್ಟುಕೊಂಡು ಸಂತೈಸುತ್ತಿದ್ದರು. ಆಗ ನಮಗೆ ಬಹಳ ಕಷ್ಟವಾಗುತ್ತಿತ್ತು. ಏಕೆಂದರೆ ಒಳಗೆ ಏನಿದೆ ಏನಿಲ್ಲವೆಂದು ಯೋಚಿಸುತ್ತಿರಲಿಲ್ಲ. ನಾವು ಒಳಗೆ ಹೇಗೆ ಈ ನಾಲ್ಕು ಜನಕ್ಕೆ ಊಟ ಹಾಕಿಕೊಡುವುದು ಎಂದು ಯೋಚಿಸಬೇಕಿತ್ತು. ಏಕೆಂದರೆ ಮನೆಯೊಳಗೆ ಸಾಮಾನು ಆಗ ತಂದು ಆಗ ಮಾಡಿ ತಿನ್ನುವ ಪರಿಸ್ಥಿತಿ. ಅವರೂ ಕೂಡ ಒಳಗೇ ಕೊರಗುತ್ತಿದ್ದರು. ಆದರೆ ಬಾಪು ನನ್ನ ಪರೀಕ್ಷೆ ಮಾಡುತ್ತಿದ್ದಾರೆ ಆಗಲಿ ಎನ್ನುತ್ತಿದ್ದರು. ತನಗೊಂದು, ಮನೆಯವರಿಗೊಂದು ಬಂದವರಿಗೊಂದು ಎನ್ನುವ ಬೇಧ ಭಾವನೆ ಇರುತ್ತಿರಲಿಲ್ಲ. ಮನೆಯಲ್ಲಿ ಏನಿದೆ ಅದು ಎಲ್ಲರಿಗೂ ಸಮವಾಗಿ ಹಂಚಿ ತಿನ್ನುವ ಮನೆಯಾಗಿತ್ತು.

ಅಮ್ಮನವರು ಗಾಂಧೀಜಿ, ಕಸ್ತೂರಬಾ ಅವರೇ ದೇವರೆಂದು ತಿಳಿದಿದ್ದರು. ಅವರ ಚೈನಿನಲ್ಲಿ ಎರಡು ಪೆಂಡೆಂಟ್ ಇದ್ದವು. ಬಾ ಮತ್ತು ಬಾಪುದು. ರಾತ್ರಿ ಅದಕ್ಕೆ ನಮಸ್ಕರಿಸಿ ಮಲಗುತ್ತಿದ್ದರು. ಬೆಳಿಗ್ಗೆ ಎದ್ದರೆ ಅದನ್ನು ನೋಡಿ ನಮಸ್ಕರಿಸಿ ನಂತರ ಉಳಿದ ಕೆಲಸ, ಒಂದೊಂದು ಸಲ ಬಹಳ ಬೇಸರವಾಗುತ್ತಿತ್ತು ಎಂದು ಕಾಣುತ್ತೆ. ನಮಗೆಲ್ಲಾ ಕೇಳಿಸುವಂತೆ ಒಬ್ಬರೇ ಮಾತಾಡಿಕೊಳ್ಳುತ್ತಿದ್ದರು. ಬಾಪು ನೀನು ಹೇಳಿದ ಕೆಲಸವೆಷ್ಟೋ ಉಳಿದಿದೆ, ಈ ದೇಶದಲ್ಲಿ ಆ ಕೆಲಸಗಳನ್ನು ಯಾರು ನಡೆಸುತ್ತಾರೋ ತಂದೆ? ಎಂದು ನಿಟ್ಟುಸಿರುಬಿಡುತ್ತಿದ್ದರು. ಇಂದಿಗೂ ನನಗೆ ನೆನಸಿಕೊಂಡಾಗ ನೋವಾಗುತ್ತದೆ. ಗಾಂಧೀಜಿಯವರು ಕಂಡ ಕನಸುಗಳನ್ನು ಬಹಳ ಹತ್ತಿರದಿಂದ ನೋಡಿದ ದಂಪತಿಗಳು, ಮನೆಯೆಲ್ಲಾ ಖಾದಿ, ಬೆಡ್‌ಶೀಟು. ಕರ್ಟನ್ ಪ್ರತಿಯೊಂದು ಖಾದಿ, ಪ್ರತಿಯೊಬ್ಬರು ಖಾದಿ ಧರಿಸಬೇಕು ಎನ್ನುವ ಹಂಬಲ, ಬೇರೆ ಮಕ್ಕಳನ್ನು ತಮ್ಮ ಮಕ್ಕಳಂತೆ ನೋಡಿಕೊಂಡು ಎಷ್ಟೋ ಜನಕ್ಕೆ ಅಮ್ಮ ಅಪ್ಪ ಆಗಿದ್ದರು. ಅವರ ಸಂದೇಶ ನಮಗೆಲ್ಲಾ ಇದ್ದಿದ್ದು ಸಹಬಾಳ್ವೆ ಸಮಾನತೆ, ಎಲ್ಲಾ ಜನರನ್ನು ಪ್ರೀತಿಯಿಂದ ಕಂಡು ಮೇಲಕ್ಕೆತ್ತುವ ಗುಣವಿರಬೇಕು ಎನ್ನುತ್ತಿದ್ದರು. ಇಬ್ಬರೂ, "ಗಾಂಧೀಜಿಯ ಪ್ರಾರ್ಥನೆ ಗಾಂಧಿ ತತ್ವವನ್ನು ಪಾಲಿಸಿಕೊಂಡು ಈ ದೇಶದಲ್ಲಿ ಎಂದಿಗೆ ಪಾನ ನಿರೋಧ ಜಾರಿಗೆ ಬರುತ್ತೋ ಅಂದಿಗೆ ಪೂರ್ತಾ ಬಡತನ ನಿವಾರಣೆ ಆಗುತ್ತೆ, ಸಮಾನತೆ ಸಿಕ್ಕುತ್ತೆ" ಎನ್ನುತ್ತಿದ್ದರು.

ಯಶೋಧರಮ್ಮನವರು ಬಹಳ ಶ್ರೀಮಂತ ಮನೆಯಲ್ಲಿ ಹುಟ್ಟಿದ್ದರು. ದೊಡ್ಡ ಲಾಯರ್ ಅನ್ನು ಮದುವೆಯಾದರು. ಆ ಕುಟುಂಬದವರೂ ಕೂಡ ಶ್ರೀಮಂತರು. ಎರಡೂ ಕುಟುಂಬದ ಶ್ರೀಮಂತಿಕೆ ಇದ್ದರೂ ಈಕೆ ಒಂದು ಆದರ್ಶ ಮಹಿಳೆಯಾಗಿದ್ದರು. ತಂದೆ ಮನೆಯಲ್ಲಿ ಓದಿಕೊಂಡು, ಹಾಡು ಕಲಿತು, ಟೆನ್ನಿಸ್ ಆಡಿಕೊಂಡಿದ್ದವರು. ಮದುವೆಯಾದ ನಂತರ ಅಡುಗೆ ಮಾಡುವುದು, ಮನೆಗೆ ಬರುವ ಜನರನ್ನು ಸುಧಾರಿಸುವುದು, ತನ್ನ ತಂಗಿ ತಮ್ಮಂದಿರನ್ನು ನೋಡಿಕೊಳ್ಳುವುದು, ನಾದಿನಿ ಅಂದರೆ ಗಂಡನ ತಂಗಿಯರು, ತಮ್ಮಂದಿರನ್ನು ಓದಿಸಿ, ಮದುವೆ ಮಾಡಿಸುವುದು, ಇವರ ಕೆಲಸಗಳಾದವು. ರಾಮಕೃಷ್ಣ ಆಶ್ರಮವೆಂದರೆ ಇಬ್ಬರಿಗೂ ಬಹಳ ಮೆಚ್ಚುಗೆ. ತಮ್ಮ ಮಕ್ಕಳಿಗೆ ಆಶ್ರಮದಲ್ಲೇ ಹೆಸರಿಡಬೇಕು. ತಮ್ಮ ಪತಿ ದಾಸಪ್ಪನವರು ಆಜೀವ ಸೆಕ್ರೆಟರಿ ಆಶ್ರಮಕ್ಕೆ. ದಾಸಪ್ಪನವರ ತಂದೆತಾಯಿ ಪ್ರತಿಯೊಬ್ಬರೂ ಆಶ್ರಮದ ಸದಸ್ಯರು. ಅವರ ಮನೆಗೆ ರಾಮಕೃಷ್ಣ ನಿಲಯವೆಂದು ಹೆಸರಿತ್ತು. ಯಶೋಧರಮ್ಮನವರ ತಂದೆ ಮನೆಗೆ ರಾಮಾಲಯ ಎಂದು ಹೆಸರಿತ್ತು. ಈ ಎಲ್ಲಾ ಹಿನ್ನೆಲೆ ಅವರಿಗೆ ಬಹಳ ಆದರ್ಶವನ್ನೇ ತಂದಿತ್ತು.

ಯಶೋಧರಮ್ಮನವರ ತಂದೆ, ಮಗಳನ್ನು ಬಹಳವಾಗಿ ಪ್ರೀತಿಸುತ್ತಿದ್ದರಂತೆ. ಮಗಳಿಗೆ ಯಶೋಧರಾ ಎಂದು ಹೆಸರಿಟ್ಟು ಮಗುವಿಗೆ ಆಗಾಗ ಎಣ್ಣೆಸ್ನಾನ ಮಾಡಿಸುತ್ತಿದ್ದರಂತೆ. ಆಗ ಹೊಡೆದು ಅಳಿಸುತ್ತಿದ್ದರಂತೆ, ಅವರ ತಾಯಿ ಯಾಕೋ ರಾಮು ಮಗುನ ಅಳಿಸುತ್ತೀ ಎಂದು ಕೇಳಿದರೆ? ನನ್ನ ಮಗಳು ದೊಡ್ಡವಳಾದ ಮೇಲೆ ದೊಡ್ಡ ಹಾಲಿನಲ್ಲಿ ನಿಂತು ಭಾಷಣ ಮಾಡಿದರೆ ಆ ಮೂಲೆಯಲ್ಲಿರುವ ವರಿಗೂ ಕೇಳಿಸಬೇಕು, ಅದಕ್ಕಾಗಿ ನಾನು ಅಳಿಸುವುದು ಎನ್ನುತ್ತಿದ್ದರಂತೆ (ಆಗ ಮೈಕು ಇರುತ್ತಿರಲಿಲ್ಲ). ಹಾಗೆಯೇ ಆಕೆಯ ಸ್ವರವೂ ಬಹಳ ಜೋರಾಗಿತ್ತು. ಭಾಷಣವು ಕೂಡ ಬಹಳ ಚೆನ್ನಾಗಿರುತ್ತಿತ್ತು. ಅವರ ಭಾಷಣಕ್ಕೆ ಜನರೂ ಕೂಡ ಹಾಗೇ ಸೇರುತ್ತಿದ್ದರು. ಜನರನ್ನು ಅಳಿಸುತ್ತಿದ್ದರು. ಹಾಗೇ ನಗಿಸುತ್ತಿದ್ದರು. ವಾಕ್‌ಚಾತುರ್ಯ ಚೆನ್ನಾಗಿತ್ತು.

ಆಕೆ ಒಬ್ಬ ಆದರ್ಶ ಮಹಿಳೆಯಾಗಿಬ್ಬರು. ಈ ದೇಶದ ಜನತೆ ಮತ್ತು ಮುಂದಿನ ಪೀಳಿಗೆಗೆ ಈ ಒಂದು ಆದರ್ಶ, ಒಳ್ಳೆ ಮನೋಭಾವನೆ, ಎಲ್ಲರನ್ನೂ ಮೇಲಕ್ಕೆತ್ತುವ ಮನಸ್ಸು, 'ಸರ್ವೇಜನಾಃ ಸುಖಿನೋಭವಂತು' ಎನ್ನುವ ಗುಣ ಅವರಲ್ಲಿ ಇತ್ತೆಂದರೆ ತಪ್ಪಾಗಲಾರದು. ಅಂತಹ ಮಹಿಳೆಯ ಹತ್ತಿರ ಇರುವುದೇ ಒಂದು ಹೆಮ್ಮೆಯ ಮಾತು. ತನ್ನ ಮಕ್ಕಳಿಗೆಂದು ಆಸ್ತಿಯನ್ನಾಗಲೀ, ಒಡವೆ ಸಂಪತ್ತನ್ನಾಗಲೀ ಗಳಿಸಿದವರಲ್ಲ. ಅವರಿಗೆ ಅವರ ತಂದೆ ಮನೆಯಲ್ಲಿ ಕೊಟ್ಟ ಒಡವೆಯನ್ನು ಕೂಡ ಚೀನಾ ದೇಶದ ಯುದ್ಧ ಸಮಯದಲ್ಲಿ ಸರ್ಕಾರಕ್ಕೆ ಕೊಟ್ಟರು. ಆಗ ಬಾಂಡ್ ಕೊಟ್ಟಿದ್ದರು. ಆ ಗೋಲ್ಡ್ ಬಾಂಡ್‌ನ್ನು ಬ್ಯಾಂಕ್‌ನಲ್ಲಿಟ್ಟು ಸಾಲ ಪಡೆದಿದ್ದರು. ಅಂತಹ ಜೀವನ ಅವರದ್ದು, ನನಗೆ ಈಗ ಅನಿಸುತ್ತಿದೆ ಅದಕ್ಕಾಗಿ ಇಂತಹ ಬಡ ಕುಟುಂಬದ ಹೆಣ್ಣುಮಕ್ಕಳನ್ನು ಸೊಸೆಯರನ್ನಾಗಿ ತಂದುಕೊಂಡಿರಬೇಕು ಎಂದು. ಅಲ್ಲೂ ಆದರ್ಶ ಮಹಿಳೆಯಾದರು.

ತನ್ನ ಅಂತ್ಯ ಕಾಲದಲ್ಲೂ ನಮಗೆ ತಿಳಿಸಿದ್ದು "ನನ್ನನು ಅರಸೀಕೆರೆಯಲ್ಲೇ ಹಾಕಬೇಕು. ನನ್ನ ಬೂದಿಯನ್ನು ಕಸ್ತೂರಬಾ ಗ್ರಾಮದ ಭೂಮಿಗೆ ಹರಡಬೇಕು" ಎಂದರು. ತನ್ನ ಸ್ವಂತ ಜಮೀನಿನ ವಿಷಯವಿಲ್ಲ, ತನ್ನ ಗಂಡನನ್ನು ಹಾಕಿದ ಕಡೆ ಹಾಕಲು ಹೇಳಲಿಲ್ಲ. ಇದು ತಮ್ಮ ಮಕ್ಕಳಿಗೆ ಕೊನೆಯಲ್ಲಿ ಹೇಳಿದ ಮಾತು.

——— * ———

ಧೀಮಂತ ರಾಜಕಾರಣಿ

ಲೀಲಾದೇವಿ ಆರ್. ಪ್ರಸಾದ್

ಕರ್ನಾಟಕದ ಕಸ್ತೂರ ಬಾ ಯೆಂದು ಹೆಸರು ಮಾಡಿದ ಶ್ರೀಮತಿ ಯಶೋಧರಮ್ಮ ದಾಸಪ್ಪನವರು. ಇಪ್ಪತ್ತನೇ ಶತಮಾನದ ಕರ್ನಾಟಕ ಕಂಡ ಅಪರೂಪದ ಸಮಾಜ ಸೇವಕಿ ಹಾಗೂ ರಾಜಕಾರಣಿ ಇಂದಿನ ಕಲುಷಿತ ರಾಜಕಾರಣದಲ್ಲಿ ತತ್ವಸಿದ್ಧಾಂತಗಳ ಆಧಾರಿತ ರಾಜಕಾರಣಿಗಳನ್ನು ಕಾಣುವುದು ಅಪರೂಪವಾಗಿದೆ. ಆದರೆ ದಿವಂಗತ ಯಶೋಧರಮ್ಮ ದಾಸಪ್ಪನವರು ತತ್ವಾಧಾರಿತ ರಾಜಕಾರಣಿಯಾಗಿ, ಕರ್ನಾಟಕ ಕಸ್ತೂರ ಬಾ ಹೆಸರುಗಳಿಸಿದ ಒಂದು ಅಪರೂಪದ ನಕ್ಷತ್ರ ರತ್ನವೆಂದೇ ಹೇಳಬಹುದು. ಅವರ ಸರಳ ಜೀವನ ಉದಾತ್ತ ಚಿಂತನೆ ಸಜ್ಜನಿಕೆಯನ್ನು ಮೈಗೂಡಿಸಿಕೊಂಡು ಸಮಗ್ರ ಜನಸೇವೆಯೇ ಜನಾರ್ಧನನ ಸೇವೆಯೆಂದು ಗುರುತಿಸಿಕೊಂಡು ತಮ್ಮ ಜೀವನದ ಉದ್ದಕ್ಕೂ ನಿರಂತವಾಗಿ ಜನರ ಸೇವೆಯಲ್ಲಿಯೇ ಬಾಳಿ ಬದುಕಿನ ಅಪರೂಪದ ವ್ಯಕ್ತಿಯಾಗಿ ಮಿಂಚಿದರು. ಇಂದಿನ ಸ್ತ್ರೀಯರ ಸಮಾಜ ಸೇವೆ, ರಾಜಕಾರಣಿಯರಾಗಿ ಬದುಕಿನಲ್ಲಿ ಬೆಳೆಯಬೇಕಾದರೆ ಶ್ರೀಮತಿ ಯಶೋಧರಮ್ಮ ದಾಸಪ್ಪನವರನ್ನು ತಮ್ಮ Role model ಆಗಿ ಇಟ್ಟುಕೊಂಡರೆ, ಮಹಿಳೆಯರ ಸಾರ್ವಜನಿಕ ಜೀವನಕ್ಕೆ ಬಂದು ಕಳೆಕಟ್ಟುವದು. ಅವರ ಜೀವನವೇ ಒಂದು ಅಪರೂಪದ ಸೇವೆಯಾಗಿ ನಿಂತಿದೆ.

ಯಶೋಧರಮ್ಮನವರು 1905ರಲ್ಲಿ ಶ್ರೀ ಕೆ.ಎಚ್. ರಾಮಯ್ಯ ಮತ್ತು ಶ್ರೀಮತಿ ರೇವಮ್ಮ ದಂಪತಿಗಳ ಹಿರಿಯ ಮಗಳಾಗಿ ಜನಿಸಿದರು. ರಾಮಯ್ಯನವರು ಶ್ರೀಮಂತ ಕುಟುಂಬ ಆದರೆ ತಮ್ಮ ಮಗಳು ಭಗವಾನ ಬುದ್ಧನ ಪತ್ನಿಯಂತೆ ಸಕಲ ಶ್ರೀಮಂತಿಕೆಯ ವೈಭವಗಳನ್ನು ತ್ಯಾಗಮಾಡಿ ಬುದ್ಧನದಾರಿ ಹಿಡಿದ ಯಶೋಧರೆಯಂತೆ ತಮ್ಮ ಸುಪುತ್ರಿ ಕೂಡ ಯಶಸ್ವಿಯಾಗಿ ಬಾಳಬೇಕೆಂದು ಮಗಳಿಗೆ ಯಶೋಧರಾ ಯೆಂದು ನಾಮಕರಣ ಮಾಡಿದರು. ತಂದೆ ರಾಮಯ್ಯನವರ ಇಚ್ಛೆಯಂತೆ ಮುಂದೆ ಮಗಳು ಯಶೋಧರಾ ಆಗಿ ಬದುಕಿನ ಉದ್ದಕ್ಕೂ ಬಾಳಿ ತೋರಿಸಿದರು. ಇದು ಅವರಿಗಿಟ್ಟ ನಾಮದ ಶಕ್ತಿ ಅವರ ಪ್ರತಿಭೆಗೆ ಒಡಗೂಡಿ ಬೆಳೆಯಿತೆನ್ನಬಹುದು.

ತಂದೆ ರಾಮಯ್ಯನವರು ಮಗಳನ್ನು ಬಹಳ ಮುದ್ದಿನಿಂದ ಹೆಣ್ಣುಮಗಳೆಂದು ಕಡೆಗಣಿಸದೇ ಅಂದಿನ ಕಾಲದಲ್ಲಿ ಮಗಳ ವಿದ್ಯಾಭ್ಯಾಸಕ್ಕೆ ವಿಶೇಷ ಅಸಕ್ತಿ ವಹಿಸಿದ್ದರು. ಮಹಿಳೆಯರು ವಿದ್ಯಾವಂತರಾದರೆ ಮಾತ್ರ ಸಮಾಜದ ಮುನ್ನಡೆ ಸಾಧ್ಯವೆಂದು ನಂಬಿದ್ದ ರಾಮಯ್ಯನವರು ತಮ್ಮ ಮನೆತನದಿಂದಲೇ ಸ್ತೀ ವಿದ್ಯಾಭ್ಯಾಸಕ್ಕೆ ನಾಂದಿ ಹಾಡಿದರು. ಯಶೋಧರಾ ಅವರಿಗೆ ಎಳೆ ವಯಸ್ಸಿನಲ್ಲಿಯೇ ಬೆಂಗಳೂರಿನ ಚಾಮರಾಜಪೇಟೆಯಲ್ಲಿಯ ಬಾಲಕಿಯರ ಶಾಲೆಗೆ ಸೇರಿಸಿದರು. ಶ್ರೀಮತಿ ಯಶೋಧರಮ್ಮ ಅವರು ಮುಂದೆ ಅಲ್ಲಿಯೇ ಪ್ರೌಢ ಶಿಕ್ಷಣವನ್ನು ಮುಗಿಸಿ ಲಂಡನ್ ಮಿಷನ್ ಶಾಲೆಯ ಬಾಲಿಕೆಯರ ವಿಭಾಗಕ್ಕೆ ಸೇರಿ ಎಸ್.ಎಸ್.ಎಲ್.ಸಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಕಾಲೇಜ್ ವಿದ್ಯಾಭ್ಯಾಸಕ್ಕೆ ಮದ್ರಾಸಿಗೆ ತೆರಳಿ ಮದ್ರಾಸಿನ ಖ್ಯಾತ "ಕ್ವೀನ್‌ಮೇರಿಸ್" ಕಾಲೇಜಿಗೆ ಸೇರಿ ಅಲ್ಲಿಯ ಹಾಸ್ಟೇಲಿನಲ್ಲಿ ತಂಗಿದರು. ಅದರೆ ಯಶೋಧರಮ್ಮನವರಿಗೆ ಮದ್ರಾಸಿನ ಹವಾಮಾನ, ಹಾಸ್ಟೇಲಿನ

ಊಟ ಮೈಗೆ ಒಗ್ಗದೆ ಆರೋಗ್ಯ ಕ್ಷೀಣವಾಗುತ್ತ ಬಂದು ಇಂಟರ್‌ಮೀಡಿಯೇಟ್‌ಗೆ ವಿದ್ಯಾಭ್ಯಾಸ ನಿಲ್ಲಿಸಿ ಬೆಂಗಳೂರಿಗೆ ಮರಳಿ ಬಂದರು. ತಂದೆಯ ಸಮಾಜ ಸೇವೆ ಗ್ರಾಮೀಣ ಜನಸಮುದಾಯದ ಅನೇಕ ಕಾರ್ಯಕ್ರಮಗಳಲ್ಲಿ ತಾವೂ ನಿರಂತರವಾಗಿ ಭಾಗವಹಿಸಿ ತಂದೆಯ ನಿರೀಕ್ಷೆಯಂತೆ ಸಕ್ರಿಯವಾಗಿ ಸಮಾಜದಲ್ಲಿ ಹೆಜ್ಜೆಯ ಗುರುತನ್ನು ಮೂಡಿಸುತ್ತ ಮುನ್ನಡೆದರು. ವ್ಯಕ್ತಿತ್ವ ವಿಕಸನಕ್ಕೆ ಕೇವಲ ಕಾಲೇಜ್ ವಿದ್ಯಾಭ್ಯಾಸ ಮಾತ್ರ ಪೂರಕವಲ್ಲವೆಂಬುದನ್ನು ತೋರಿಸತೊಡಗಿದರು.

ಕೆ.ಎಸ್. ರಾಮಯ್ಯನವರು ಯಶೋಧರಮ್ಮ ಅವರ ಮದುವೆಯನ್ನು ಮೈಸೂರಿನಲ್ಲಿ ವಕೀಲ ವೃತ್ತಿಯಲ್ಲಿ ಖ್ಯಾತರಾಗಿದ್ದ ಕೊಡಗಿನ ರಾವ್ ಬಹುದ್ದೂರ ಚೆನ್ನಯ್ಯನವರ ಸುಪುತ್ರ ಹೆಚ್.ಸಿ. ದಾಸಪ್ಪನವರಿಗೆ ಧಾರೆಯೆರೆದು ಕೊಟ್ಟರು. 1929ರಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಯಶೋಧರಾ ಅವರು ಯಶೋಧರಮ್ಮ ದಾಸಪ್ಪನವರಾದರು. ದಾಸಪ್ಪನವರು ಕೇವಲ ವಕೀಲ ವೃತ್ತಿ ಆಗಿರಲಿಲ್ಲ. ಅವರೂ ಅಂದು ಸಮಾಜಸೇವಕರಾಗಿ ಅನೇಕ ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸತಿ–ಪತಿಗಳೊಂದಾಗಿ ಮಾಡಿದ ಭಕ್ತಿ ಹಿತವಾಗುವುದು ಶಿವಂಗೆಯೆಂಬ ನುಡಿಯಂತೆ ಪತಿಯ ಸೇವಾ ಕಾರ್ಯಕ್ರಮಗಳಲ್ಲಿ ಸಹಭಾಗಿಗಳಾಗಿ ಯಶೋಧರಮ್ಮ ಅವರು ದುಡಿಯತೊಡಗಿದರು. ದಂಪತಿಗಳಿಬ್ಬರೂ ಮಹಾತ್ಮಾ ಗಾಂಧೀಜಿಯ ಪ್ರಭಾವಕ್ಕೆ ಮಾರುಹೋಗಿ ಅವರ ಕರೆಗೆ ಓಗೊಟ್ಟು ವಾರ್ಧಾದಲ್ಲಿ ಸೇವಾ ಗ್ರಾಮಕ್ಕೆ ತೆರಳಿ ಅಲ್ಲಿ ಕೆಲವು ಸಮಯ ತಂಗಿದ್ದು, ಆಶ್ರಮದ ಸೇವಾ ಕಾರ್ಯಕ್ರಮಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು.

ಗಾಂಧಿ ಆಶ್ರಮದ ಸುಸಂಬದ್ಧ ಜೀವನ ಪ್ರಾರ್ಥನಾ ಕ್ರಮ, ಅಲ್ಲಿಯ ಜಾತ್ಯತೀತ ಮನೋಭಾವನೆಗಳು; ಗಾಂಧಿಜೀ ಅವರ ಕಾರ್ಯಕ್ರಮ ಆಶ್ರಮದ ದಿನಚರಿಯ ಕಾರ್ಯಕ್ರಮಗಳು. ಎಲ್ಲ ಆಶ್ರಮವಾಸಿಗಳು ತಮ್ಮ ತಮ್ಮ ಶೌಚಾಲಯಗಳನ್ನು ತಾವೇ ಸ್ವಚ್ಛಗೊಳಿಸುವ ಪದ್ಧತಿ, ಸ್ವಾವಲಂಬನೆಯ ಅನುಷ್ಠಾನ ಇಂತಹ ಸರಳ ಜೀವನ ಉದಾತ್ತ ಚಿಂತನೆಯ ತಾಣ. ಅಲ್ಲಿಯ ಪರಿಸರ ಯಶೋಧರ ಹಾಗೂ ದಾಸಪ್ಪನವರ ಜೀವನದ ಗುರಿಯನ್ನು ಬದಲಾಯಿಸಲು ನೆರವಾಯಿತು. ಅಲ್ಲದೆ ಅಂದು ಅಲ್ಲಿ ಆಶ್ರಮವಾಸಿಗಳಾದ ಕಸ್ತೂರ ಬಾ, ಸರೋಜಿನಿನಾಯ್ಡು, ರಾಜಕುಮಾರಿ ಅಮೃತಕೇರ, ಸುಚೇತಾ ಕೃಪಲಾನಿ, ವಿದೇಶೀ ಶ್ರೀಮಂತ ಮಹಿಳೆಯರ ಜೊತೆಗೆ ದಿನನಿತ್ಯ ನಡೆಯುತ್ತಿದ್ದ ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸುತ್ತ ತಮ್ಮ ಮುಂದಿನ ಜೀವನದ ಗುರಿಯನ್ನೇ ಬದಲಾಯಿಸಿಕೊಂಡರು. ಆಶ್ರಮದಿಂದ ಹೊರಡುವ ಮುನ್ನ ಮಹಾತ್ಮಾಗಾಂಧೀಜಿ ಅವರ ಸಂಪೂರ್ಣ ಆಶೀರ್ವಾದವನ್ನು ಪಡೆದು ದೇಶಸೇವೆಯ ದೀಕ್ಷೆಯನ್ನು ಪಡೆದು ಮರಳಿ ಮೈಸೂರಿಗೆ ಬಂದರು. ಸೇವಾ ಗ್ರಾಮದ ಜೀವನ ದಂಪತಿಗಳ ಜೀವನದ ಶೈಲಿಯನ್ನು ಸಂಪೂರ್ಣ ಬದಲಾಯಿಸಿತು. ಮೈಸೂರಿಗೆ ಮರಳಿ ಬಂದೊಡನೆ ತಮ್ಮ ಎಲ್ಲ ರೇಷ್ಮೆ ವಸ್ತ್ರ, ಒಡವೆಗಳನ್ನು ತ್ಯಜಿಸಿ ತಾವೇ ಸ್ವತಃ ಚರಕದಿಂದ ನೂಲನ್ನು ತೆಗೆಯಲು ಪ್ರಾರಂಭಿಸಿ ದಂಪತಿಗಳಿಬ್ಬರು ಖಾದಿವಸ್ತ್ರಧಾರಿಗಳಾದರು. ಅವರದು ಪುಟ್ಟ ಸುಖ ಸಂಸಾರ. ಇಬ್ಬರು ಗಂಡುಮಕ್ಕಳು ರಾಮದಾಸ್, ತುಳಸೀದಾಸ. ತಂದೆ–ತಾಯಿಗಳಂತೆ ಇಬ್ಬರು ಮಕ್ಕಳು ಕೂಡ ಸಾರ್ವಜನಿಕ ಸೇವೆಗೆ ಕಂಕಣಬದ್ಧರಾಗಿ ನಿಂತರು. ಗಾಂಧೀಜೀ ಅವರ ಆದೇಶದಂತೆ ಅಹಿಂಸಾ ಚಳವಳಿಯಲ್ಲಿ ಮಹಿಳೆಯರು ಹೆಚ್ಚಾಗಿ ತೊಡಗಿಸಿಕೊಳ್ಳಬೇಕೆಂಬ ಅವರ ಕರೆಗೆ ಹೊರಡಲು ಸಜ್ಜಾದರು. ತಮ್ಮ ಸುಖ ಸಂಸಾರವನ್ನು ಬದಿಗೊತ್ತಿ ರಾಜಕೀಯ ಜೀವನಕ್ಕೆ ಪ್ರವೇಶಿಸಿ ಧೈರ್ಯದಿಂದ ಮುಂದೆ ಬಂದು 1938–39ರಿಂದ ಹೆಜ್ಜು ಹಿಂದಕ್ಕೆ ಸರಿಯೇ ಇಲ್ಲ. ದೇಶಸೇವೆ–ಸ್ವಾತಂತ್ರ್ಯ ಸಂಗ್ರಾಮದಲ್ಲಿ ದಾಪುಗಾಲಿನಿಂದಲೂ ಯಶೋಧರಮ್ಮ ಅವರ ಪತಿ ಅವರು ಮುಂದೆ ಮಂತ್ರಿಗಳಾದರು. ಆಗಲೂ ಯಶೋಧರಮ್ಮ ಅವರು ಪತಿಯ ಅಧಿಕಾರವನ್ನು ತಮ್ಮ ಸ್ವಾರ್ಥಕ್ಕಾಗಿ ಎಂದೂ ಬಳಸಿಕೊಳ್ಳಲಿಲ್ಲ. ಸತಿಪತಿಗಳೊಂದಾಗಿ ಮಾಡಿದ ಭಕ್ತಿ ಹಿತವಾಗುವುದು ಶಿವಂಗೆಯೆಂಬ ಶರಣರ ವಾಣಿಯಂತೆ ದಂಪತಿಗಳಿಬ್ಬರೂ

ಸಮಾಜ ಸೇವೆ ಮಾಡಬೇಕೆಂಬ ಹಂಬಲದಿಂದ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ನಂತರದಲ್ಲಿ ದೇಶದೆಲ್ಲೆಡೆಯಲ್ಲಿ ಸ್ವಾತಂತ್ರ್ಯದ ಕಿಡಿ ಹೊತ್ತಿದ ಸಂದರ್ಭ ಮೊದಲೇ ಗಾಂಧೀಜಿ ಅವರಿಂದ ಪ್ರಭಾವಿತರಾದ ಯಶೋಧರಮ್ಮನವರು, ಗಾಂಧೀಜಿ ಅವರ ಕರೆಗೆ ಸ್ಪಂದಿಸಿ, ತಮ್ಮ ಸುಖ ಸಂಸಾರಕ್ಕೆ ತಿಲಾಂಜಲಿ ಇಟ್ಟು ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದರು. ಅವರ ಧೈರ್ಯ, ದಿಟ್ಟತನದ ನಿಲುವು ಶಿವಪುರ ಸತ್ಯಾಗ್ರಹ ಅಪರೂಪವಾದ ಮರೆಯಲಾಗದ ಪ್ರಸಂಗ. 1938ರ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಯಶೋಧರಮ್ಮನವರ ಪಾತ್ರ ಬಹು ಪ್ರಮುಖವಾಗಿ ಪರಿಣಮಿಸಿತು. ಅಂದು ಟಿ.ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಶಿವಪುರದಲ್ಲಿ 1938 ಏಪ್ರಿಲ್ 11ರಂದು ತ್ರಿವರ್ಣ ಧ್ವಜಾರೋಹಣಕ್ಕೆ, ಮೈಸೂರು ಸರ್ಕಾರ ಕಟ್ಟೆಚ್ಚರ ವಿಧಿಸಿತ್ತು. ಸರ್ಕಾರದ ಕ್ರಮಕ್ಕೆ ನಾಯಕರೆಲ್ಲ ಹೆದರಿದರು. ಆದರೆ ನಾಯಕರ ನಿಲುವನ್ನು ಬಹಳವಾಗಿ ವಿರೋಧಿಸಿದವರು ಯಶೋಧರಮ್ಮ ದಾಸಪ್ಪ ಮತ್ತು ಮಹಿಳಾ ನಾಯಕಿ ಟಿ. ಸುನಂದಮ್ಮನವರು. ಯಾರಿಗೂ ಹೆದರದೆ ಶಿವಪುರದಲ್ಲಿ ಧ್ವಜಾರೋಹಣಕ್ಕೆ ನಾಂದಿ ಹಾಡಿದ ಕೀರ್ತಿ ಯಶೋಧರಮ್ಮನವರಿಗೆ ಸಲ್ಲುತ್ತಾರೆ. ಇಂದಿಗೂ ಬೆಂಗಳೂರಿನಿಂದ ಮೈಸೂರಿಗೆ ಹೋಗುವ ಮಾರ್ಗದಲ್ಲಿ ಶಿವಪುರದ ಸತ್ಯಾಗ್ರಹದ ಮಹಿಳೆಯರ ಸ್ವಾತಂತ್ರ್ಯದ ಹೋರಾಟದ ಸಂಕೇತವಾಗಿ ನಿಂತಿದೆ. ಇದಾದನಂತರ 1939ರಲ್ಲಿ ಕಾಂಗ್ರೆಸಿನ ಎರಡನೆಯ ಅಧಿವೇಶನ ಗೌರಿಬಿದನೂರಿನ ವಿದುರಾಶ್ವತ್ಥದಲ್ಲಿ ಹೆಚ್.ಸಿ. ದಾಸಪ್ಪನವರ ನೇತೃತ್ವದಲ್ಲಿ ನಡೆಯಿತು. ಅಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ತಮ್ಮ ತೀಕ್ಷ್ಣವಾದ ಭಾಷಣದಿಂದ ಸರ್ಕಾರ ಮತ್ತು ಪೊಲೀಸರನ್ನು ಟೀಕಿಸಿದರು. ಬಂಧಿಸಿದರು. ಆದರೆ ಯಶೋಧರಾ ಅವರು ಯಾವ ಬಂಧನಕ್ಕೂ ಹೆದರಲಿಲ್ಲ. ಪುನಃ ಶಿವಪುರ ಸತ್ಯಾಗ್ರಹದಂತೆ 1942ರಲ್ಲಿ "ಭಾರತ ಬಿಟ್ಟು ತೊಲಗಿ" ಯೆಂಬ ಚಳವಳಿಯಲ್ಲಿಯೂ ಮೈಚಳಿ ಬಿಟ್ಟು ಸಕ್ರಿಯವಾಗಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಈ ಎಲ್ಲ ಚಳವಳಿಯ ಕೇಂದ್ರ ಬಿಂದು. ಮೈಸೂರಿನ ಇವರ ಮನೆ "ಯಶೋವಿಲಾಸ" ಸರ್ಕಾರ ಸುಮಾರು ಎರಡು ವರ್ಷಕಾಲ ಈ ಮನೆ ಗುಪ್ತ ಕೇಂದ್ರವಾಗಿ ಚಳವಳಿಯನ್ನು ಕಾಪಾಡಿಕೊಂಡು ಬಂದದ್ದು ಒಂದು ಐತಿಹಾಸಿಕ ದಾಖಲೆಯಾಗಿದೆ. ಒಂದು ಯಶೋಧರಮ್ಮನ "ಯಶೋವಿಲಾಸ" ಗ್ರಾಮೀಣ ಭಾಗದಿಂದ ಓದಲು ಬರುವ ಬಡ ವಿದ್ಯಾರ್ಥಿನಿಯರಿಗೆ ಆಶ್ರಯ ತಾಣವಾಗಿ ನಿಂತೆದ್ದಿತು.

ಯಶೋಧರಮ್ಮನವರು ತಮ್ಮ ತವರೂರಾದ ಮೈಸೂರು ಚಲೋ ಚಳವಳಿಯಲ್ಲಿಯೂ ಸಕ್ರಿಯವಾಗಿ ಭಾಗವಹಿಸಿ, ಬೇಜವಾಬ್ದಾರಿ ಸರಕಾರದ ವಿರುದ್ಧ ಸಾರ್ವಜನಿಕ ಸಭೆಗಳಲ್ಲಿ ಭಾಷಣಮಾಡುತ್ತ ಸರ್ಕಾರದ ಕ್ರಮ ಖಂಡಿಸುತ್ತ ಬಂದರು. ಸರಕಾರ ಅವರನ್ನು ಬಂಧಿಸಿದರೂ ವಿಚಲಿತರಾಗಲಿಲ್ಲ. ಉಗ್ರ ತೀವ್ರವಾದ ಹೋರಾಟಕ್ಕೆ ಅಂದಿನ ಸರಕಾರ ಮಣಿದು ಸ್ಪಂದಿಸಿತು. ಇದು ಯಶೋಧರಮ್ಮನವರ ದಿಟ್ಟ ಸಾಹಸದ ಸ್ವಾತಂತ್ರ್ಯದ ನಿಲುವೆಂದೇ ಹೇಳಬಹುದು. ಮುಂದೆ 1938ರಲ್ಲಿ ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಆಯ್ಕೆಯಾಗಿ ಅಂದಿನಿಂದ ರಾಜಕೀಯ ಜೀವನಕ್ಕೆ ಪಾದಾರ್ಪಣೆ ಮಾಡಿದರು. ಮುಂದೆ ಗಾಂಧೀಜೀ ರಚನಾತ್ಮಕ ಕಾರ್ಯಗಳಲ್ಲಿ ಇವರ ಕಾರ್ಯವೈಖರಿಯನ್ನು ಅರಿತು ಗಾಂಧೀಜಿ ಇವರನ್ನು "ಕಸ್ತೂರ ಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್" ನ ಪ್ರತಿನಿಧಿಯಾಗಿ ನೇಮಿಸಿದರು. ಈ ಟ್ರಸ್ಟಿನ ಪ್ರತಿನಿಧಿಯಾಗಿ ಯಶೋಧರಮ್ಮ ಅವರು ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸತೊಡಗಿದರು. ಅಲ್ಲದೆ ಕಸ್ತೂರಿ ಬಾ ಟ್ರಸ್ಟಿನ ಪ್ರತಿನಿಧಿಯ ಅನೇಕ ರಾಷ್ಟ್ರೀಯ ಶಿಬಿರಗಳಲ್ಲಿ ಶಿಕ್ಷಣ, ತರಬೇತಿ ಪಡೆದು ತಮ್ಮ ಮೈಸೂರು ಸಂಸ್ಥಾನದ ಅನೇಕ ಹಳ್ಳಿಗಳಲ್ಲಿ ಮಹಿಳೆಯರನ್ನು ಸಂಘಟಿಸಿ ಅವರಿಗೆ ಗ್ರಾಮಸೇವೆಯಲ್ಲಿ ಶಿಕ್ಷಣ ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಿದರು. ಮೊದಲನೆಯ ಗ್ರಾಮ ಸೇವೆಯ ತರಬೇತಿ 1944-45ರಲ್ಲಿ ಮೈಸೂರಿನಲ್ಲಿ ಪ್ರಾರಂಭವಾಯಿತು. 1942 ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಈಸೂರಿನ ಘಟನೆಗೆ ಸಂಬಂಧಿಸಿದ ಗೋವಿಂದಮ್ಮ ಮತ್ತು ಈಶ್ವರಮ್ಮನವರನ್ನು ಗುರುತಿಸಿ ಅವರಿಬ್ಬರನ್ನು ತಮ್ಮ ಬಳಿಗೆ ಬರಮಾಡಿಕೊಂಡು ಅವರಿಗೆ ವಾತ್ಸಲ್ಯವನ್ನು ತೋರಿಸಿ ಅವರುಗಳಿಗೆ

ಗ್ರಾಮ ಸೇವಕಿಯರ ಶಿಕ್ಷಣ, ತರಬೇತಿ ಕೊಟ್ಟು ತಮ್ಮ ಸೇವಾ ಶಿಬಿರಕ್ಕೆ ಸೇರಿಸಿಕೊಂಡರು. ಇದು ಅವರು ಸ್ವಾತಂತ್ರ್ಯ ಹೋರಾಟದಲ್ಲಿ ನೊಂದ ಮಹಿಳೆಯರಿಗೆ ತೋರಿದ ಪ್ರೀತಿ ವಿಶ್ವಾಸದ ಪ್ರತೀಕವೆಂದೇ ಗುರುತಿಸಬಹುದು. ಇಲ್ಲಿಯೂ ಮೈಸೂರು ಅಧಿಕಾರಿಗಳ ಕಿರುಕುಳ ಯಶೋಧರಮ್ಮನವರಿಗೆ ತಪ್ಪಲಿಲ್ಲ. ಯಾವ ಬೆದರಿಕೆಗೆ ಹೆದರದೇ ತಮ್ಮ ಮೈಸೂರಿನ ಶಿಕ್ಷಣ ಶಿಬಿರವನ್ನು ಮೈಸೂರಿನ ಬಳಿ ಬೆಳವಾಡಿಯಲ್ಲಿ ಆರಂಭಿಸಿದ ಈ ಶಿಬಿರಕ್ಕೆ ರಾಷ್ಟ್ರೀಯ ಟ್ರಸ್ಟಿನ ಕಾರ್ಯದರ್ಶಿಯ ಸುಚೇತಾ ಕೃಪಲಾನಿ ಅವರು ಬಂದು ಶಿಬಿರದಲ್ಲಿ ಭಾಗವಹಿಸಿದ ಯಶೋಧರಮ್ಮ ದಾಸಪ್ಪನವರ ಸಂಘಟನಾ ಶಕ್ತಿಯ ಸಾಮರ್ಥ್ಯ ಬಹಳವಾಗಿ ಹೊಗಳಿದರು. ಸೇವಾ ಶಿಬಿರದಲ್ಲಿ ಶಿಕ್ಷಣ ಮುಗಿಸಿದ ಮಹಿಳೆಯರನ್ನು ಕಸ್ತೂರ ಬಾ ಟ್ರಸ್ಟಿನ ಅಥವಾ ನಿಯೋಜನೆ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಕೆಲಸಕ್ಕೆ ಚಾಲನೆಯನ್ನು ಕೊಡುವುದು.

ಯಶೋಧರಮ್ಮನವರ ಗ್ರಾಮೀಣ ಜನತೆಯ ಸೇವೆ ಬಹುಮುಖವಾಗಿ ಬೆಳೆಯತೊಡಗಿತು. ಮೈಸೂರಿನ ಯಾದಗಿರಿಯಲ್ಲಿ ಒಂದು ಮನೆಯನ್ನು ತೆಗೆದುಕೊಂಡು ಅಲ್ಲಿ ಅಂಥ ಹೆಣ್ಣುಮಕ್ಕಳಿಗೆ ವಸತಿ, ಶಾಲೆ, ಸಂಗೀತ, ಕಲೆ ತರಬೇತಿಯ ವ್ಯವಸ್ಥೆಯನ್ನು ಕಲ್ಪಿಸಿದರು. ಬೆಂಗಳೂರಿನಲ್ಲಿ ವಿಭೂತಿಪುರದಲ್ಲಿ ಅಂಥ ಹೆಣ್ಣುಮಕ್ಕಳಿಗೆ ವಸತಿ ಶಾಲೆಯ ಸ್ಥಾಪನೆ. ಬಡ ಮಹಿಳೆಯರಿಗೆ ಸ್ವಯಂ ಉದ್ಯೋಗವನ್ನು ಕಲ್ಪಿಸುವ ಆಲೋಚನೆಯಿಂದ ಬೆಂಗಳೂರಿನಲ್ಲಿ ಎಚ್.ಎಮ್.ಟಿ. ಮತ್ತು ಟೆಲಿಫೋನ್ ಉದ್ಯಮಗಳ ನೆರವು ಪಡೆದು ಬೆಂಗಳೂರು-ಮೈಸೂರಿನಲ್ಲಿ ಇವೆರಡೂ ಕಾರ್ಖಾನೆಗಳ ಪೂರಕ ಘಟಕಗಳನ್ನು ಸ್ಥಾಪಿಸಿ, ಅನೇಕ ಬಡ ಹೆಣ್ಣುಮಕ್ಕಳಿಗೆ ಅನ್ನವನ್ನು ಹೊಸ ಜೀವನ ಕೊಡುವ ಪವಿತ್ರ ಕೆಲಸವನ್ನು ಕೈಗೊಂಡರು. ಇವೆರಡು ಪೂರಕ ಘಟಕಗಳ ಜೊತೆಗೆ ವೈಟ್‌ಫೀಲ್ಡ್‌ನ ಮಹಿಳೆಯರಿಂದ ಬೇಕರಿ ಘಟಕವನ್ನು ಸ್ಥಾಪಿಸಿ ಕನ್ಯಾ ವಿಶ್ವವಿದ್ಯಾಲಯಕ್ಕೆ ಶಕ್ತಿ ತುಂಬಿದರು.

ಇನ್ನೊಂದು ಗರಿ ಅವರ ಮುಕುಟಕ್ಕೆ ಡಾ॥ ರಾಜೇಂದ್ರ ಪ್ರಸಾದ್ ಅವರ ಅಖಿಲಭಾರತ ಗಾಂಧೀ ಸ್ಮಾರಕ ನಿಧಿಯ ಧರ್ಮದರ್ಶಿ ಮಂಡಳಿ ಯಶೋಧರಮ್ಮನವರನ್ನು ಧರ್ಮದರ್ಶಿಯಾಗಿ ನೇಮಿಸಿದರು. ಅವರು ಜೀವನದ ಉದ್ದಕ್ಕೂ ಹೀಗೆ ಅನೇಕ ರಾಷ್ಟ್ರೀಯ ಟ್ರಸ್ಟ್‌ಗಳಲ್ಲಿ ರಚನಾತ್ಮಕ ಕೆಲಸಗಳನ್ನು ಕೈಗೆತ್ತಿಕೊಂಡು ಕೆಲಸಮಾಡಿ ಕರ್ನಾಟಕ, ಮೈಸೂರು ಸಂಸ್ಥಾನದಲ್ಲಿ ಏಕೈಕ ಧೀಮಂತ ಮಹಿಳೆ ಎನಿಸಿಕೊಂಡವರು ಯಶೋಧರಮ್ಮ ದಾಸಪ್ಪನವರು.

ಮಹಿಳೆಯರ ಸ್ವಾವಲಂಬನ ಜೀವನಕ್ಕೆ ಭೂಮಿತಾಯಿಯ ಸೇವೆಯೇ ಬಹು ಮುಖ್ಯವೆಂದು ಅರಿತು ಭೂಮಿಯಲ್ಲಿ ಉತ್ತಿ ಬಿತ್ತು ಬೆಳೆದು ಭೂಮಿಯನ್ನು ಹರಿದು ಕ್ರಾಂತಿಯನ್ನಾಗಿ ಮಾಡಿ ಅದರ ಮೂಲಕ ಬಡ ಮಹಿಳೆಯರು ತಮ್ಮ ಉಪಜೀವನವನ್ನು ಸಾಗಿಸಬೇಕೆಂದು ಹಂಬಲದಿಂದ ಅಂದಿನ ಸರಕಾರದಿಂದ ಅರಸೀಕೆರೆ ಬಳಿ ನೂರು ಎಕರೆ ಜಮೀನು ಪಡೆದು "ಕಸ್ತೂರ ಬಾ ಗ್ರಾಮ ಸೇವಾಕೇಂದ್ರ" ವನ್ನು ಸ್ಥಾಪಿಸಿ. ಅಲ್ಲಿ, ತೆಂಗು, ಭತ್ತ ಮುಂತಾದ ಬೆಳೆಗಳನ್ನು ಬೆಳೆದರು. ಈ ಸೇವಾ ಕೇಂದ್ರಕ್ಕೆ ವಿನೋಬಾಜೀ ಅವರು ಭೇಟಿ ನೀಡಿ ಯಶೋಧರಮ್ಮನವರ ಸೇವಾ ಮನೋಭಾವನೆಯನ್ನು ಮುಕ್ತಕಂಠದಿಂದ ಹೊಗಳಿದ ನಿದರ್ಶನವೂ ಇದೆ. ಯಶೋಧರಮ್ಮನವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಥಮ ಮಹಿಳಾ ಅಧ್ಯಕ್ಷರಾಗಿದ್ದುದು ವಿಶೇಷ.

ಇನ್ನು ಯಶೋಧರಮ್ಮನವರ ರಾಜಕೀಯ ಹೋರಾಟ ಒಂದು ಅಪರೂಪದ ಹಾಸನ ತಾಲ್ಲೂಕಿನಿಂದ ವಿಧಾನಸಭೆಯ ಚುನಾವಣೆಗೆ ನಿಂತು ಆಯ್ಕೆ ಆದರು. ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಮರೆಯಲಾರದ ಅಪರೂಪದ ಕರ್ನಾಟಕದ ಮಹಿಳಾ ಮಂತ್ರಿ ಇವರು. ಮಂತ್ರಿ ಆದಾಗ್ಗೆ ಒಂದು ಇತಿಹಾಸವನ್ನೇ ಸೃಷ್ಟಿಸಿದರು. ಇಂದಿನ ರಾಜಕಾರಣಿಗಳು ಮಂತ್ರಿಗಳ ಒಡನಾಟ, ಅವರ ಅಭಿರುಚಿ ಅವರ ಅಹಂಕಾರ ಅಧಿಕಾರದ ದರ್ಪವನ್ನು ನೋಡಿದಾಗ ಯಶೋಧರಮ್ಮನವರ ನಿಲುವೇ ವಿಭಿನ್ನವಾಗಿತ್ತು. ಅಂದಿನ ಕ್ಯಾಬಿನೇಟಿನಲಿದ್ದ ವಿಷಯ ಬಂದಾಗ್ಗೆ

ಯಶೋಧರಮ್ಮನವರು ಕರ್ನಾಟಕ ರಾಜ್ಯ ಪಾನಮುಕ್ತ ರಾಜ್ಯವಾಗಬೇಕು. ಸರಕಾರದಲ್ಲಿ ಪಾನ ಮಾರಾಟದ ಹಣದಿಂದ ನಡೆಯಬಾರದು. ನಮ್ಮ ಕರ್ನಾಟಕದಲ್ಲಿ ಜನ ಸಭ್ಯರಾಗಿ ಬದುಕಬೇಕು ಬಡ ಹೆಣ್ಣು ಮಕ್ಕಳ ಪವಿತ್ರ ತಾಳಿ ಗಂಡಸರ ಹೆಂಡಕ್ಕೆ ಹೋಗಬಾರದು ಎಂತೆಲ್ಲ ಮಂತ್ರಿಮಂಡಳದಲ್ಲಿ ಏಕೈಕ ಮಹಿಳಾ ಮಂತ್ರಿಯಾಗಿ ಧ್ವನಿ ಎತ್ತಿದರೂ ಅಂದಿನ ಸರಕಾರಕ್ಕೆ ಇವರ ಕರುಳಿನ ಕೂಗು ಕೇಳದಾಯಿತು. ಆಗ ಯಶೋಧರಮ್ಮನವರು ಧೈರ್ಯದಿಂದ ಮಂತ್ರಿ ಮಂಡಳದ ಸದಸ್ಯರಿಗೆ "ನೀವು ನನ್ನ ಮಾತು ಕೇಳದಿದ್ದರೆ, ನನಗೆ ನಿಮ್ಮ ಮಂತ್ರಿ ಸ್ಥಾನಬೇಡ" ಎಂದು ಹೇಳಿ ಸಭೆಯಿಂದ ಹೊರಗೆ ಬಂದು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಸಲ್ಲಿಸಿ ತಾವಿದ್ದ ಸರ್ಕಾರಿ ಭವನವನ್ನು ಖಾಲಿ ಮಾಡಿ ತಮ್ಮ ಮನೆಗೆ ತಮ್ಮ ಖಾಸಗಿ ವಾಹನದಲ್ಲಿ ಮನೆಗೆ ಬಂದರು. ನಂತರ ಎಂದಿನಂತೆ ನಮ್ಮ ರಚಾನಾತ್ಮಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ಮತ್ತೆ ತೊಡಗಿಸಿಕೊಂಡು ಹೊಸ ಹೊಸ ಯೋಜನೆಗಳಿಗೆ ಚಾಲನೆ ಕೊಡಲು ಪ್ರಾರಂಭಿಸಿದರು. ಮಹಿಳೆಯರಿಗೆ ಮಾತ್ರವಲ್ಲ ಎಲ್ಲಾ ರಾಜಕಾರಣಿಗಳಿಗೂ ಇದೊಂದು ಮಾದರಿ. ಸಮಾಜದಲ್ಲಿ ಸಾರ್ವಜನಿಕ ಸೇವೆ ಮಾಡಲು ಮಂತ್ರಿಯಾಗಿಯೇ ಮಾಡಬೇಕಾಗಿಲ್ಲ. ಅಧಿಕಾರವಿಲ್ಲದೆ ಸಮಾಜದಲ್ಲಿ ಜನಪರ ಸೇವೆ ಮಾಡಲು ಅನೇಕ ಮಾರ್ಗಗಳಿವೆಯೆಂಬುದನ್ನೂ ತೋರಿಸಿಕೊಟ್ಟರು. ಅಂತೆಯೇ ಈಕೆ ಅಪರೂಪ ತತ್ವಾಧಾರಿತ ರಾಜಕಾರಣಿ. ಅಂದಿನ ದಶಕದ ಮುತ್ಸದ್ದಿ. ಅವರ ಸಾಂಸಾರಿಕ ಜೀವನ ಹಾಲು-ಜೇನು ಇತ್ತು. ಶ್ರೀಮತಿ ಯಶೋಧರಮ್ಮ ದಂಪತಿಗಳು ಗಾಂಧಿ ತತ್ವ ವಿಚಾರಧಾರೆಗಳನ್ನು ಭಾಷಣಗಳಲ್ಲಿ ಮಾತ್ರವೇ ಹೇಳಲಿ. ಹರಿಜನ ಹೆಣ್ಣು ಮಗುವನ್ನು ದತ್ತು ತೆಗೆದುಕೊಂಡು ತಮ್ಮ ಸ್ವಂತ ಮಗಳಂತೆ ಬೆಳೆಸಿ ವಿದ್ಯಾಭ್ಯಾಸ ಕೊಡಿಸಿ ವಿವಾಹ ಮಾಡಿಕೊಟ್ಟು ತಮ್ಮ ಜೀವನದಲ್ಲಿ ಅನೇಕ ನೋವುಗಳುಂಡವರು. 1942ರಲ್ಲಿ ಸ್ವಾತಂತ್ರ ಹೋರಾಟದಲ್ಲಿ ಇಬ್ಬರಿಗೂ ಸೆರೆಮನೆವಾಸ ದಾಸಪ್ಪ ದಂಪತಿ ಇಬ್ಬರು ಸುಪುತ್ರರು ತಮ್ಮ ಮಕ್ಕಳನ್ನು ಕೂಡ ಗಾಂಧೀತತ್ವದ ಆಧಾರದ ಮೇಲೆಯೇ ಬೆಳೆಸಿದರು. ಅವರ ಸರಳ ಜೀವನ ಉದಾತ್ತ ಚಿಂತನೆಗೆ ಅವರ ಬದುಕೇ ನಿದರ್ಶನ. ಅವರ ಎರಡನೇ ಮಗ ತುಳಸೀ ದಾಸಪ್ಪ ಅವರೂ ಮಾಜಿ ಲೋಕಸಭಾ ಸದಸ್ಯರಾಗಿದ್ದರು. ಅವರಿಗೆ ಲಕ್ಷಾಂತರ ಆದಾಯ ಇರುವ ಶ್ರೀಮಂತರು ಕನ್ಯಾ ಕೊಡಲು ಮುಂದಾದರು ದಾಸಪ್ಪ ದಂಪತಿಗಳು ಹಣಕ್ಕೆ ಆಸೆಪಡದೆ ವರದಕ್ಷಿಣೆಗೆ ಕಡಿವಾಣ ಹಾಕಿ ಮಲೆನಾಡಿನ ಬಡ ಕುಟುಂಬದಲ್ಲಿ ಜನಿಸಿದ ಒಬ್ಬ ಬಡ ಕನ್ಯೆಯನ್ನು ತಮ್ಮ ಮಗನಿಗೆ ವಧುವಾಗಿ ತೆಗೆದುಕೊಂಡು 'ಕಸ್ತೂರ ಬಾ' ಗ್ರಾಮದ ಕನ್ಯಾವಿದ್ಯಾಲಯದಲ್ಲಿ ಬಹಳ ಸರಳ ವಿವಾಹವನ್ನು ನೆರವೇರಿಸಿದರು. ಇಂದಿನ ಅದ್ದೂರಿ ವಿವಾಹ ಪದ್ಧತಿಗಳಿಗೆ ಈ ದಂಪತಿಗಳು ನಡೆಸಿದಂತಹ ವಿವಾಹಗಳ ಸಾಧ್ಯವೆಯೆಂಬ ಪ್ರಶ್ನೆ ಪ್ರಶ್ನೆಯಾಗಿ ನಿಲ್ಲುತ್ತದೆ. ದಂಪತಿ ತಾಳ್ಮೆ, ಸಹನೆ ಅಪಾರವಾದದ್ದು. ಅವರಿಬ್ಬರು ಎಂದಿಗೂ ಹಣಕ್ಕೆ ಜೋತು ಬೀಳಲಿಲ್ಲ. ಅವರಿಬ್ಬರದೂ ಅಪರೂಪದ ಆದರ್ಶದಾಂಪತ್ಯ.

ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಸಚಿವ ಪದವಿ ತ್ಯಾಗ ಮಾಡಿದರೂ ಕೊರಗಲಿಲ್ಲ. ಅವರಿಗೆ ಅದರ ಬಗ್ಗೆ ನಿರಾಶೆ ಆಗಲಿಲ್ಲ. ಅವರು ಗಾಂಧಿ ಸ್ಮಾರಕ ನಿಧಿಯ ಧರ್ಮದರ್ಶಿಗಳ ವಾರ್ಷಿಕ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ಹೋಗಿದ್ದರು ಸಭೆಯಲ್ಲಿ ಭಾಗವಹಿಸಿದ ಆಚಾರ್ಯ ಕೃಪಲಾನಿ ಅವರು "ಯಶೋಧರಾ, ತುಂಗಂಗಾ ಬಿನ್ ಗಯೀ" ಎನ್ನುತ್ತಿದ್ದರು. ಸುಮಾರು ಐವತ್ತು ಅರವತ್ತು ವರ್ಷಗಳ ಕಾಲ ನಿರಂತರ ಬಿಡುವಿಲ್ಲದೆ ಹಗಲು ಇರುಳು ಜನಹಿತ ಕಾರ್ಯಕ್ರಮಗಳಲ್ಲಿ ದುಡಿದು ಹಣ್ಣಾಗಿ ಅವರಿಗೆ 1978ರಲ್ಲಿ ಅರಿವಿಲ್ಲದೆಯೇ ಕ್ಯಾನ್ಸರ್ ಕಾಯಿಲೆ ಅಂಟಿಕೊಂಡಿತು; ಅವರಿಗೆ ಕಾಡತೊಡಗಿತು. ಆದರೂ ಯಶೋಧರಮ್ಮನವರು ಕಾಯಿಲೆಗೂ ಕೊರಗಲಿಲ್ಲ. ನರಳಲಿಲ್ಲ. ಅಂತಹದರಲ್ಲಿಯೂ, ಅನೇಕ ಸಭೆಸಮಾರಂಭಗಳಿಗೆ ತಪ್ಪದೇ ಹೋಗುತ್ತಿದ್ದರು. ಆದರೆ ವಿಧಿ ಅವರನ್ನು ಬಾಳಲು ಬಿಡಲಿಲ್ಲ. 20-6-1980ರಂದು ಶ್ರೀಮತಿ ಯಶೋಧರಮ್ಮನವರು, ವಿಧಿವಶವಾದರು. ತಮ್ಮ ಜೀವನದ ಅಮೂಲ್ಯ ವರ್ಷಗಳನ್ನು ತಮ್ಮ ಸ್ವಂತ ಹಿತವನ್ನು ಬದಿಗೊತ್ತಿ ರಾಷ್ಟ್ರಸೇವೆಯೇ ತನ್ನ ಜೀವನದ ಗುರಿಯೆಂದು

ಕೊನೆಯ ಉಸಿರಿರುವವರೆಗೆ ಜನಪರ, ವಿಶೇಷವಾಗಿ ಬಡ ಮಹಿಳೆಯ ದೀನ ದಲಿತರ ಸೇವೆಯಲ್ಲಿಯೇ ಜೀವನವನ್ನು ಸವೆಸಿದರು. ಇವರ ಸೇವಾ ನಿಷ್ಠೆಯನ್ನು ಅರಿತು 1973ರಲ್ಲಿ ಭಾರತ ಸರಕಾರ ಇವರಿಗೆ "ಪದ್ಮಭೂಷಣ" ಪ್ರಶಸ್ತಿಯನ್ನು ನೀಡಿ ಗೌರವಿಸಿತು. ರಾಜ್ಯದ ಸೇವಾ ಸಂಘಗಳ ಒಕ್ಕೂಟ ಇವರ ಹೆಸರಿನಲ್ಲಿ "ಪ್ರಶಸ್ತಿ" ಸ್ಥಾಪಿಸಿದ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಇವರನ್ನು ಕರ್ನಾಟಕದ ಕಸ್ತೂರ ಬಾ ಎಂದು ಕರೆದು ಗೌರವಿಸಿದ್ದರು.

ಕೊನೆಗೆ ಅವರೇ ಕಟ್ಟಿ ಬೆಳೆಸಿದ ಸಾವಿರಾರು ನಿರ್ಗತಿಕ ಮಹಿಳೆಯರಿಗೆ, ಜೀವನೋಪಾಯವನ್ನು ಕಲ್ಪಿಸಿಕೊಟ್ಟ "ಕಸ್ತೂರ ಬಾ ಸೇವಾ ಕೇಂದ್ರ"ದಲ್ಲಿ ಅವರ ಇಚ್ಛೆಯಂತೆ ಅಂತ್ಯಕ್ರಿಯೆ ನಡೆಯಿತು. ಇಲ್ಲಿಯ ವಿಶೇಷವೆಂದರೆ ಗಾಂಧಿಜೀಯವರ ಚಿತಾಭಸ್ಮದ ಸಮಾಧಿ ಇಲ್ಲಿದೆ. ಎರಡೂ ಆತ್ಮಗಳು ಒಂದೆಡೆ ಸೇರಿದ ತಾಣ "ಕಸ್ತೂರ ಬಾ ಗ್ರಾಮಸೇವಾ ಕೇಂದ್ರ" ವೆಂದು ಹೇಳಬಹುದು. ಯಶೋಧರಮ್ಮ ದಾಸಪ್ಪನವರು ಆದರ್ಶ ಗೃಹಿಣಿಯಾಗಿ ಪತ್ನಿಯಾಗಿ, ತಾಯಿ, ಸಮಾಜ ಸೇವಕಿಯಾಗಿ, ರಾಜಕಾರಣಿಯಾಗಿ ಅನುಪಮ ಸೇವೆ ಸಲ್ಲಿಸಿದ್ದಾರೆ.

———— * ————

ಕಿರಿಯರ ಆಪ್ತ ರಕ್ಷಕರು

ಹೇಮಲತಾ ಮಹಿಷಿ

ಅದು 1975ನೇ ಸಾಲಿನ ಆರಂಭದ ಸಮಯ. ಆಗ ನಾನು ಕಾನೂನು ಪದವಿಯ ಕೊನೆಯ ವರ್ಷದ ವಿದ್ಯಾರ್ಥಿನಿ. ಸಮಾಜದಲ್ಲಿ ಹೆಣ್ಣುಮಕ್ಕಳ ಪರವಾದ ಆಲೋಚನೆಗಳಲ್ಲಿ ಒಂದು ಹೊಸ ಅಲೆ ಏಳತೊಡಗಿದ ಕಾಲ. ಹೆಣ್ಣುಮಕ್ಕಳು ಜಾಗೃತರಾಗತೊಡಗಿದ್ದರು. ವಿಶ್ವಸಂಸ್ಥೆ 1975ನೇ ಸಾಲನ್ನು 'ಅಂತರ ರಾಷ್ಟ್ರೀಯ ಮಹಿಳಾ ವರ್ಷ'ವೆಂದು ಘೋಷಿಸಿತ್ತು. ಎಲ್ಲ ಕ್ಷೇತ್ರಗಳಲ್ಲೂ ಹೆಣ್ಣಿಗೆ ವಿರೋಧವಾದ ಅಥವಾ ಅನಾನುಕೂಲವೇ ಆಗುವಂತಹ ನಡವಳಿಕೆ ನಮ್ಮ ವ್ಯವಸ್ಥೆಯಲ್ಲಿದೆ ಎಂಬುದರ ಬಗ್ಗೆ ಸಮಾಜವೂ ಎಚ್ಚೆತ್ತು ಗಮನಿಸತೊಡಗಿತ್ತು. ಯಾವುದೇ ಕಾನೂನಿನ ಅಂಶಗಳು ಹೆಣ್ಣುಮಕ್ಕಳಿಗೆ ಅನುಕೂಲವಾಗುವಂತೆ ರಚನೆಗೊಂಡಿರಲಿಲ್ಲ. ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣುಮಕ್ಕಳಿಗೆ ಹಂಚಿಕೆ ಇರಲಿಲ್ಲ. ಮದುವೆ, ವರದಕ್ಷಿಣೆ, ಅತ್ಯಾಚಾರ, ವಿಚ್ಛೇದನೆ ಮುಂತಾದ ಎಲ್ಲ ಕಾನೂನುಗಳೂ ಗಂಡಿನ ಪರವಾಗಿಯೇ ಇದ್ದವು. ಅತ್ಯಾಚಾರವಾದ ಹೆಣ್ಣು, ತನ್ನ ಮೇಲೆ ಅತ್ಯಾಚಾರವಾದುದನ್ನು ಪ್ರಮಾಣೀಕರಿಸಲೂ ಸಾಧ್ಯವಾಗದೇ ನ್ಯಾಯದಿಂದ ವಂಚಿತಳಾಗುತ್ತಿದ್ದಳು. ವರದಕ್ಷಿಣೆ ಕೊಟ್ಟುದನ್ನು ಹೆಣ್ಣಿನ ತಂದೆ–ತಾಯಿಗಳು ದಾಖಲೆಗಳ ಮೂಲಕ ತೋರಿಸಲು ಸಾಧ್ಯವಾಗುತ್ತಿರಲಿಲ್ಲ. ಪಿತ್ರಾರ್ಜಿತ ಆಸ್ತಿ ಬೇಕಾದಷ್ಟು ಇದ್ದರೂ ಹೆಣ್ಣುಮಕ್ಕಳಿಗೆ ಪಾಲು ಸಿಗದೇ ಕಷ್ಟಕಾರ್ಪಣ್ಯಗಳನ್ನು ಎದುರಿಸುವ ಸಂದರ್ಭವಿತ್ತು. ಮಧುರಾಳ ಅತ್ಯಾಚಾರದ ಪ್ರಕರಣ ಮೇಲೆ ಎದ್ದು ಸಮಾಜದಲ್ಲಿ ಸದ್ದು ಮಾಡಿದ್ದು ಇದೇ ಸಮಯದಲ್ಲಿಯೇ.

ಇಂಥ ಒಂದು ಹಿನ್ನೆಲೆಯಿದ್ದ ಸಂದರ್ಭದಲ್ಲಿ ನಡೆದ ಯಾವುದೋ ಒಂದು ಕಾರ್ಯಕ್ರಮದಲ್ಲಿ ಯಶೋಧರಮ್ಮ ದಾಸಪ್ಪನವರು ಅಧ್ಯಕ್ಷರಾಗಿದ್ದರು. ನಾನು ಆ ಕಾರ್ಯಕ್ರಮದಲ್ಲಿ ಒಬ್ಬಳಾಗಿ ಭಾಗವಹಿಸಿ, ಕಾನೂನಿನಲ್ಲಿರುವ ತೊಡಕುಗಳ ಕುರಿತು ಒಂದು ದೀರ್ಘ ಭಾಷಣ ಕೊಟ್ಟಿದ್ದೆ. ವೇದ ಕಾಲದಿಂದ ಹಿಡಿದು ಅಂದಿನವರೆಗಿನ ವಿವಿಧ ಕಾನೂನುಗಳು, ಹೆಣ್ಣುಮಕ್ಕಳಿಗೆ ವಿರೋಧವಾದ ಅಂಶಗಳು, ನ್ಯಾಯದಿಂದ ವಂಚಿತಳಾದ ಸ್ತ್ರೀಯರ ಕಷ್ಟಕಾರ್ಪಣ್ಯಗಳು, ಇತ್ಯಾದಿ ಅಂಶಗಳ ಕುರಿತು ನಾನು ಮಾತಾಡಿದ್ದೆ. ನಾನು ಮಾತಾಡಿದ ಪ್ರತಿ ವಿವರಗಳನ್ನೂ ಆಸಕ್ತಿಯಿಂದ ಆಲಿಸಿ ಕೇಳಿದ ಯಶೋಧರಮ್ಮನವರು, ಈ ಬಗ್ಗೆ ತಮ್ಮ ಮಾತಿನಲ್ಲಿ ಮೆಚ್ಚುಗೆ ಸೂಚಿಸಿದ್ದಲ್ಲದೆ ಕಾರ್ಯಕ್ರಮದ ನಂತರವೂ ಕಾನೂನಿನ ಕೆಲ ತೊಡಕುಗಳ ಬಗ್ಗೆ ಚರ್ಚಿಸಿದ್ದರು. ನನಗೆ ಮೊದಲ ಶಹಭಾಸ್ ಸಿಕ್ಕಿದ್ದು ಈ ಮಾಜಿ ಸಚಿವೆಯಿಂದ.

ಇದಾದ ಕೆಲವೇ ದಿನಗಳ ನಂತರ ಮಹಿಳೆಗೆ ಸಂಬಂಧಿಸಿದ ಒಂದು ಕಾರ್ಯಕ್ರಮವನ್ನು ಹಾಸನದಲ್ಲಿ ಆಯೋಜಿಸಲಾಗಿತ್ತು. ಆಗ ಯಶೋಧರಮ್ಮನವರು ನನ್ನನ್ನು ಜ್ಞಾಪಿಸಿಕೊಂಡು ನನಗೂ ತಮ್ಮ ಜೊತೆ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಿದ್ದಲ್ಲದೇ ತಮ್ಮೊಂದಿಗೆ ಕಾರಿನಲ್ಲಿ ಕರೆದುಕೊಂಡು ಹೋದರು. ಅವರೊಡನೆ ಪ್ರಯಾಣದ ಸಮಯದಲ್ಲಿ ಕಳೆದ ಆ ಘಳಿಗೆಗಳು, ಅವರು ಅದೆಷ್ಟು ಸರಳ ವ್ಯಕ್ತಿ ಮತ್ತು ಸ್ನೇಹಜೀವಿ ಎಂಬುದನ್ನು ನನಗೆ ಪರಿಚಯ ಮಾಡಿಕೊಟ್ಟವು. ಹಾಸನದಲ್ಲಿ ವೇದಿಕೆಯ ಮೇಲೆ ಮಾತನಾಡುವಾಗ ವಯಸ್ಸಿನಲ್ಲಿ, ಅನುಭವದಲ್ಲಿ,

ಖ್ಯಾತಿ ಮತ್ತು ಅಧಿಕಾರದಲ್ಲಿ ತಮಗಿಂತ ತುಂಬ ತುಂಬ ಕಿರಿಯಳಾದ ನನ್ನಿಂದ ಅವರ ಪರಿಚಯವನ್ನು ಮಾಡಿಸಿಕೊಳ್ಳುವ ಬದಲು, ಅವರೇ ನನ್ನನ್ನು 'ಹೇಮಲತಾ ಅವರು ಬೆಂಗಳೂರಿನ ಪ್ರಸಿದ್ಧ ವಕೀಲರು' ಎಂದು ಪರಿಚಯಿಸಿಕೊಟ್ಟಿದ್ದು ಈಗಲೂ ಒಂದು ಅವಿಸ್ಮರಣೀಯ ಸಂಗತಿ. ಕಾನೂನಿನ ಯಾತ್ರೆಯ ಪ್ರಾರಂಭದ ದಿನಗಳಲ್ಲಿ ನನಗೆ ಅವರಿಂದ ಸಿಕ್ಕ ಪ್ರೋತ್ಸಾಹವಿದು.

ಯಶೋಧರಮ್ಮನವರು ಹೀಗೆ ತಮಗಿಂತ ಸುಮಾರು ನಲವತ್ತು ವರ್ಷ ಚಿಕ್ಕವಳಾದ ಒಬ್ಬ ವಿದ್ಯಾರ್ಥಿನಿಯ ಪರಿಚಯವನ್ನು ಯಾವುದೇ ಅಹಂ ಅಥವಾ ಅಧಿಕಾರದ ಗತ್ತುತೋರದೆ ಮಾಡಿಕೊಟ್ಟಿದ್ದರು. ಇನ್ನೂ ಕಾನೂನು ಪದವಿಯ ಫಲಿತಾಂಶವೂ ಬರುವ ಮೊದಲೇ, ನನ್ನ ಪ್ರತಿಭೆಯನ್ನು ಒಂದೇ ಒಂದು ಭಾಷಣದಿಂದ ಅಳೆದು ತೂಗಿ ಬೆಂಗಳೂರಿನ ಪ್ರಸಿದ್ಧ ವಕೀಲರಾಗುವ ಲಕ್ಷಣಗಳನ್ನು ನನ್ನಲ್ಲಿ ಕಂಡಿದ್ದರು. ಅವರ ಈ ಮುಂಗಡದ ಪರಿಚಯ ಸುಳ್ಳಾಗಲಿಲ್ಲ ಎನ್ನಲೂಬಹುದು.

ಕಿರಿಯರಲ್ಲಿರುವ ಪ್ರತಿಭೆಯನ್ನು ಗುರುತಿಸಿ ಉತ್ತೇಜಿಸುವ ಮತ್ತು ಆ ಪ್ರತಿಭೆಯಿಂದ ತಮ್ಮ ಸಮಾಜಸೇವೆಗೆ ಅಗತ್ಯ ಮಾಹಿತಿಯನ್ನು ಹೇಗೆ ಪಡೆದುಕೊಳ್ಳಬಹುದೆಂದು ಆಲೋಚಿಸುವ ಒಂದು ದೊಡ್ಡ ಗುಣ ಯಶೋಧರಮ್ಮನವರಲ್ಲಿ ಇತ್ತು ಎಂಬುದು ಇದೊಂದು ಘಟನೆಯಿಂದ ತಿಳಿದುಬರುತ್ತದೆ. ಆಕೆ ಆ ಸಮಯಕ್ಕೆ ಆಗಲೇ ಮೈಸೂರು ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿ ಕೆಲಸ ಮಾಡಿದವರಾಗಿದ್ದರು. ಸಮಾಜ ಕಲ್ಯಾಣ ಇಲಾಖೆಯ ಸಂಪುಟ ದರ್ಜೆಯ ಸಚಿವೆಯಾಗಿ ಉನ್ನತ ಸ್ಥಾನದ ಅಧಿಕಾರ ವಹಿಸಿ ನಿಭಾಯಿಸಿದವರಾಗಿದ್ದರು. ಸಂಘ-ಸಂಸ್ಥೆಗಳನ್ನು ಕಟ್ಟಿದ ಉತ್ತಮ ಸಂಘಟಕಿಯಾಗಿದ್ದರು. ವಯಸ್ಸಿನಲ್ಲಿ ಹಿರಿಯರಾಗಿದ್ದರು. ಆಗಲೇ ಜನಾನುರಾಗಿಯಾಗಿ ಹೆಸರು ಗಳಿಸಿದವರಾಗಿದ್ದರು. ಆದರೆ ಈ ಎಲ್ಲವನ್ನೂ ಮರೆತು, ಆಗ ತಾನೇ ವಿದ್ಯಾರ್ಥಿ ಜೀವನವನ್ನು ಮುಗಿಸಲಿದ್ದ ನನ್ನಂಥ ಒಬ್ಬ ಕಿರಿಯಳನ್ನು ತಾನೇ ಹಾಸನದ ಕಾರ್ಯಕ್ರಮಕ್ಕೆ ಆಹ್ವಾನಿಸಿ ಕರೆದೊಯ್ದು ಪ್ರಯಾಣದುದ್ದಕ್ಕೂ ತನ್ನ ಸಮಕ್ಕಿರುವ ಸ್ನೇಹಿತೆಯಂತೆ ನಿರಾಳವಾಗಿ ನಡೆದುಕೊಂಡ ಬಗೆ ನಿಜಕ್ಕೂ ಆಕೆಯ ದೊಡ್ಡ ಮನಸ್ಸಿನ ಸಂಕೇತ.

ಆ ಕಾಲದಲ್ಲಿ ಉನ್ನತ ಸ್ಥಾನದಲ್ಲಿದ್ದು ಶ್ರಮ ಮತ್ತು ಜ್ಞಾನ ಎರಡನ್ನೂ ಬಳಸಿ ದುಡಿದ ಇತರ ಪುರುಷರ ಸಮಸಮಕ್ಕೆ ನಿಲ್ಲುವ ಸಾಮರ್ಥ್ಯವಿದ್ದವರು ಯಶೋಧರಮ್ಮನವರು. ಹಾಗೆಂದೇ ಅವರ ವ್ಯಕ್ತಿತ್ವಕ್ಕೆ ಮತ್ತು ಮಾತಿಗೆ ಬಹಳ ಬೆಲೆ ಇತ್ತು. ನನಗೆ ಪರಿಚಯವಾದಾಗ ಆಗಲೇ ಅವರಿಗೆ ವಯಸ್ಸಾಗಿದ್ದರೂ ಕೆಲಸದಲ್ಲಿ ಲವಲವಿಕೆ ಇತ್ತು. ಸಮಾಜಸೇವೆಯಲ್ಲಿ ಇನ್ನೂ ಉತ್ಸಾಹವಿತ್ತು. ರಾಜಕೀಯದಲ್ಲಿ ಮಾತ್ರವೇ ಕೆಲಸ ಮಾಡದೇ ಅದರಿಂದ ಹೊರಗಿದ್ದೂ ಸಮಾಜಸೇವೆಗೆ ತಮ್ಮನ್ನು ತೊಡಗಿಸಿಕೊಂಡಿದ್ದ ಅವರು, "ಅಧಿಕಾರ ಇರುವುದು ಸ್ವಂತದ ಬೆಳವಣಿಗೆಗಲ್ಲ, ಸಮಾಜ ಸೇವೆಗೆ" ಎಂಬುದನ್ನೂ ಮತ್ತು "ಅಧಿಕಾರ, ಪದವಿ ಇತ್ಯಾದಿಗಳಿಲ್ಲದೆಯೂ ಮನುಷ್ಯ ಉತ್ತಮವಾದ ಕೆಲಸಗಳನ್ನು ಮಾಡಬಲ್ಲ" ಎಂಬುದನ್ನೂ ತಮ್ಮ ಕೆಲಸಗಳ ಮೂಲಕ ತೋರಿಸಿಕೊಟ್ಟಿದ್ದರು. ಇಡೀ ರಾಜ್ಯದ ಜನತೆ ತಮ್ಮ ಸತ್ವಯುತ ನಾಯಕತ್ವವನ್ನು ಮತ್ತು ಕೆಲಸಕಾರ್ಯಗಳನ್ನು ಒಪ್ಪಿಕೊಳ್ಳುವಂತೆ ಮಾಡಿದ್ದರು.

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಲ್ಲದೆ, ಮಹಿಳೆಯರ ಹಕ್ಕುಗಳಿಗಾಗಿ ಹೋರಾಡಿದ ಕಮಲಾದೇವಿ ಚಟ್ಟೋಪಾಧ್ಯಾಯ, ಸರೋಜಿನಿ ನಾಯ್ಡು ಮುಂತಾದ ಸಮರ್ಥ ನಾಯಕಿಯರ ಸಾಲಿನಲ್ಲಿ ಸರಿಸಮನಾಗಿ ನಿಲ್ಲುವವರು ಯಶೋಧರಮ್ಮನವರು. ಅವರ ನಂತರ ಆ ಮಟ್ಟದಲ್ಲಿ ಕಾರ್ಯವೆಸಗುವ ಮಹಿಳೆಯರನ್ನು ಕರ್ನಾಟಕದ ರಾಜಕೀಯ ಕ್ಷೇತ್ರ ಈವರೆಗೂ ಕಂಡಿಲ್ಲ ಎಂಬುದು ಒಂದು ಶೋಚನೀಯ ವಿಚಾರ.

ನಿರೂಪಣೆ : ವಿಜಯಲಕ್ಷ್ಮಿ ಕೆ.ಎಂ.

*

ಸಾರ್ವಜನಿಕ ಬದುಕಿನ ಆದರ್ಶ ಮಹಿಳೆ

ಮನೋರಮಾ ಮಧ್ವರಾಜ್

ನನಗೆ ಯಶೋಧರಮ್ಮ ದಾಸಪ್ಪ ಅವರ ಸಂಪರ್ಕ ಕಡಿಮೆ ಮತ್ತು ಅವರ ಬಗೆಗೆ ಓದಿದ್ದು ಕಡಿಮೆ. ಆದರೆ ಅವರ ಬಗೆಗೆ ತಿಳಿದುಕೊಂಡದ್ದು ಮತ್ತು ಶಾಸನಸಭೆಯಲ್ಲಿ ಅವರು ಕೊಟ್ಟು ಹೋದ ಭಾಷಣಗಳು ನನಗೆ ಸತತ ಪ್ರೇರಣೆಯನ್ನು ತುಂಬಿವೆ. ಒಂದು ಆದರ್ಶ ಆಲೋಚನೆ ಹೇಗಿರಬೇಕು ಅಲ್ಲದೆ ಆದರ್ಶ ಸಾರ್ವಜನಿಕ ಬದುಕು ಏನನ್ನು ಹೊಂದಿರಬೇಕು ಎಂಬುದನ್ನು ತಿಳಿಯಬೇಕಾದರೆ ಯಶೋಧರಮ್ಮ ದಾಸಪ್ಪ ಅವರ ಬದುಕನ್ನು ಅರ್ಥೈಸಿಕೊಳ್ಳಬೇಕು. ಮಾತನಾಡಿದ್ದು ಕಡಿಮೆಯಾದರೂ ಮಾಡಿದ್ದು ಮೌನಕ್ರಾಂತಿ. ಸ್ವಾತಂತ್ರ್ಯ ಹೋರಾಟದಲ್ಲಿ ಸ್ತ್ರೀಯ ಗಟ್ಟಿ ಧ್ವನಿಯಾಗಿದ್ದ ಅವರು ನಾಡಿನ ಹಿತಕ್ಕಾಗಿ ಅನುಪಮವಾಗಿ ದುಡಿದ ಸಾಧ್ವೀಮಣಿ. ಸ್ತ್ರೀ ಕುಲಕ್ಕೆ ನಿಶ್ಚಿತವಾಗಿಯೂ ದಾರಿದೀಪ, ಆದರ್ಶ. ಬದುಕನ್ನು ಸರಳ ರೇಖಾತ್ಮಕವಾಗಿ ಕಟ್ಟಿಕೊಂಡ ಅವರು ಆಲೋಚಿಸಿದ್ದು ಮೇರು ಪರ್ವತದಷ್ಟು. ಶ್ರೀಮಂತ ಮನೆತನದಲ್ಲಿ ಹುಟ್ಟಿ ಬೆಳೆದರೂ ಬಾಲ್ಯದಲ್ಲೇ ಶಿಕ್ಷಣದ ಬಗೆಗೆ ಅಪಾರ ಆಸಕ್ತಿಯನ್ನು ಹೊಂದಿದ್ದರೂ ಅವರು ತೋರಿಸಿದ ಕಾಳಜಿ ಜನಪರವಾದದ್ದು ಮತ್ತು ನಾಡಿನ ಅಭಿವೃದ್ಧಿಪರವಾದದ್ದು.

ಒಬ್ಬ ಯಶಸ್ವಿ ಮಹಿಳೆ ತಾನು ಹುಟ್ಟಿ ಬೆಳೆದ ಪರಿಸರದಿಂದ ಹೊರಬಂದು ಸಾರ್ವಜನಿಕವಾಗಿ ಮಾತನಾಡುವುದು ಇಂದಿನ ಸಂದರ್ಭದಲ್ಲೂ ಕಷ್ಟಕರವಾದ ಸಂಗತಿ. ಕಳೆದ ಶತಮಾನದ ಆರಂಭದಲ್ಲೇ ಸಾರ್ವಜನಿಕ ಬದುಕಿನಲ್ಲಿ ಸ್ವಚ್ಛಂದ ಮತ್ತು ಆದರ್ಶಪ್ರಾಯವಾದ ಬದುಕನ್ನು ಆರಂಭಿಸಿ ಚರಿತ್ರೆಯ ಮೈಲುಗಲ್ಲಾಗಿ ನಿಂತ ಅವರ ವ್ಯಕ್ತಿತ್ವ ಸದಾ ಅನುಕರಣೀಯ. ಅವರ ಬಗೆಗೆ ಮಾತನಾಡುವಾಗಲೆಲ್ಲ ಅವರು ರಾಜೀನಾಮೆ ನೀಡಿದ ರೀತಿಯನ್ನೇ ನಮ್ಮ ಹಿರಿಯ ಮುತ್ಸದ್ಧಿ ನಾಯಕರು ನೆನೆಸಿಕೊಳ್ಳುತ್ತಾರೆ. ನಾನು ಹಿರಿಯ ಕಾಂಗ್ರೆಸ್ ನಾಯಕರೊಬ್ಬರ ಹತ್ತಿರ ಸಾರ್ವಜನಿಕ ಬದುಕನ್ನು ಕುರಿತು ಮಾತನಾಡುತ್ತಿದ್ದಾಗ ಅವರು ಆರಾಧನಾ ಭಾವದಿಂದ ಯಶೋಧರಮ್ಮ ದಾಸಪ್ಪ ಅವರನ್ನು ನೆನೆಸಿಕೊಂಡರು. ಅಷ್ಟೇಅಲ್ಲ ಅವರ ಬಗ್ಗೆ ಮಾತನಾಡುತ್ತಾ ಭಾವುಕರಾಗುತ್ತಾ ಹೋದರು. ಅವರು ಮಾತನಾಡಿ ಮುಗಿಸುವ ಹೊತ್ತಿಗೆ ಅವರ ಕಣ್ಣಲ್ಲಿ ನೀರು ತುಂಬಿದ್ದವು. ಇದರಿಂದ ನಾನು ಕುತೂಹಲ ಮತ್ತು ಕಾತರಗಳಿಂದ ಅವರು ಹೇಳಿದ ವಿಷಯಗಳನ್ನು ಚರ್ವಿತಚರ್ವಣ ಮಾಡಿಕೊಂಡೆ. ಸಾರ್ವಜನಿಕ ಬದುಕು ಎಂದರೆ ಪಂಜಿನಾಟ ಇದ್ದಂತೆ. ಆಟವಾಡುವಾಗ ತುಂಬ ಖುಷಿಯನ್ನು ಕೊಡುತ್ತದೆ ನಿಜ. ಆದರೆ ಸ್ವಲ್ಪ ಎಚ್ಚರತಪ್ಪಿದರೆ ಪಂಜಿನಲ್ಲಿರುವ ಬೆಂಕಿ ಇಡೀ ಮೈಯನ್ನೇ ಸುಡಬಹುದು ಎನ್ನುವ ಅನುಭವ ನನಗಾಯಿತು.

ಸದ್ಗುಣ ಮತ್ತು ಪ್ರಯೋಗಶೀಲ ಮನಸ್ಸುಗಳಿಂದ ಕೂಡಿದ ಅವರ ವ್ಯಕ್ತಿತ್ವ ಕರ್ನಾಟಕದ ಮಹಿಳೆಯರ ಮಟ್ಟಿಗೆ ಒಂದು ವಿಶ್ವಕೋಶವಿದ್ದಂತೆ. ಪ್ರತಿ ಸಂದರ್ಭದಲ್ಲೂ ಅವರು ಮಹಿಳೆಯರ ಕಲ್ಯಾಣಕ್ಕಾಗಿ ಯೋಚಿಸಿದರು. ಮಹಿಳೆಯರಿಗಿರುವ ಅಪೌಷ್ಟಿಕತೆಯನ್ನು ಹೋಗಲಾಡಿಸಲು ಪೌಷ್ಟಿಕ ಆಹಾರ ವಿತರಣಾ ಕೇಂದ್ರದ ಬಗೆಗೆ 1950ರ

ಸುಮಾರಿಗೆ ಅಷ್ಟು ಹಿಂದೆಯೇ ಆಲೋಚಿಸಿದ್ದರು. ಕೇವಲ ಸಮಾಜ ಕಲ್ಯಾಣ ಸಚಿವೆಯಾಗಿ ಮಾತ್ರವಲ್ಲ ಒಬ್ಬ ಮಾನವತಾವಾದಿಯಾಗಿ ಆಲೋಚಿಸಿದ್ದರು. ಆ ಬಾಲವಾಡಿ ಕೇಂದ್ರಗಳಂತಹ ಮಹತ್ವದ ಪ್ರಾಥಮಿಕ ಶಿಕ್ಷಣದ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳುವ ನೆಲೆಯಲ್ಲಿ ಸಾಕಷ್ಟು ಮುಂದುವರೆದು ತಮ್ಮ ಸಾಮರ್ಥ್ಯವನ್ನು ತೋರಿದ್ದರು. ಮಹಿಳಾ ಸಂಘಟನೆಗಳನ್ನು ಕಟ್ಟುವ ಮೂಲಕ ರಾಜ್ಯದಾದ್ಯಂತ ಪ್ರವಾಸ ಕೈಗೊಂಡರು. ಕೌಟುಂಬಿಕ ದೌರ್ಜನ್ಯವನ್ನು ಸಮಾಜದ ದುರ್ಬಲ ವರ್ಗದ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಯುವ ನಿಟ್ಟಿನಲ್ಲಿ ಸಾಕಷ್ಟು ಶ್ರಮ ವಹಿಸಿದರು. ಅವರು ಸ್ಥಾಪಿಸಿದ ಮಹಿಳಾ ತರಬೇತಿ ಕೇಂದ್ರಗಳು ಬೀದರ್‌ನಲ್ಲೂ ಇವೆ, ಕೋಲಾರದಲ್ಲೂ ಇವೆ. ಕೇವಲ ಅಧಿಕಾರಕ್ಕಾಗಿ ಅವರು ರಾಜಕಾರಣಕ್ಕೆ ಬಂದವರಲ್ಲ. ಸ್ವತಃ ಈ ದೇಶಕ್ಕೆ ಸ್ವಾತಂತ್ರ್ಯ ತರುವ ನಿಟ್ಟಿನಲ್ಲಿ ನಿರಂತರ ಹೋರಾಟದಲ್ಲಿ ಧುಮುಕಿದವರು. ಮಹಿಳಾ ಕಾಂಗ್ರೆಸ್‌ನ ಅಧ್ಯಕ್ಷೆಯಾಗಿ ಪ್ರಥಮ ಬಾರಿಗೆ ಆಯ್ಕೆಯಾದರು. ಟಿ.ಸಿದ್ದಲಿಂಗಯ್ಯ, ಬಳ್ಳಾರಿ ಸಿದ್ದಮ್ಮ ಅವರ ಸಾರಥ್ಯದಲ್ಲಿ ನಡೆಯುತ್ತಿದ್ದ ಕಾಂಗ್ರೆಸ್ಸನ್ನು ಎರಡು ರೀತಿಯಿಂದ ಕಟ್ಟುವ ಆಲೋಚನೆಯನ್ನು ಕೈಗೊಂಡರು. ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಿ ಮತ್ತು ಸ್ವಾತಂತ್ರ್ಯ ಹೋರಾಟದ ಸಂಘಟನೆಯಾಗಿ ಇವರ ಪ್ರಯತ್ನದಿಂದ ರೂಪು ಪಡೆದುಕೊಂಡಿತು. ಅವರ ಧ್ಯೇಯನಿಷ್ಠ ಸತ್ಸಂಕಲ್ಪಗಳು ಪಾರದರ್ಶಕ ವ್ಯಕ್ತಿತ್ವ, ಅಧ್ಯಯನಶೀಲತೆ ಮತ್ತು ಹೋರಾಟದ ಬದುಕು ನನ್ನನ್ನು ಸದಾ ಪ್ರೇರೇಪಿಸುತ್ತವೆ. ಈ ನಾಡಿನ ಮಹಿಳೆಯರು ಅವರು ಹಿಡಿದ ಜಾಡನ್ನು ಹಿಡಿದು ಮುಂಬರುವ ದಿನಗಳಲ್ಲಿ ಸ್ತ್ರೀಕೇಂದ್ರಿತ ಹೊಸ ಸಮಾಜವನ್ನು ನಿರ್ಮಿಸುವ ನಿಟ್ಟಿನತ್ತ ಸಂಕಲ್ಪಬದ್ಧ ಆಲೋಚನೆಯನ್ನು ರೂಢಿಸಿಕೊಳ್ಳಬೇಕೆಂಬುದು ಇವರನ್ನು ನೆನೆದು ನಾನು ನೀಡುವ ಈ ಹೊತ್ತಿನ ಸಂದೇಶ.

——— * ———

ಸ್ತ್ರೀ ಸಬಲೀಕರಣಕ್ಕೆ ದುಡಿದ ಮಹಿಳೆ

ಭಾಗೀರಥಿ ಮರುಳುಸಿದ್ಧನಗೌಡ

ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ಪರಿಚಯ ನೇರವಾಗಿ ನನಗಿಲ್ಲದಿರಬಹುದು. ಆದರೆ ಅವರ ತತ್ವಾದರ್ಶಗಳಿಂದ ನಾನು ಪ್ರಭಾವಿತಳಾಗಿದ್ದೇನೆ. ನನ್ನ ರಾಜಕೀಯ ಬದುಕಿಗೂ ಕೂಡ ಅವರು ಪ್ರೇರಣೆಯಾಗಿದ್ದಾರೆ. ಅವರ ಆದರ್ಶದ ಬದುಕು ನನ್ನನ್ನು ಸಮಾಜ ಸೇವೆಯತ್ತ ಪ್ರೇರೇಪಿಸಿತು. ನಾನು ಒಮ್ಮೆ ಬೇರೆ ಯಾವುದೋ ಕಾರಣಕ್ಕಾಗಿ ಹಾಸನಕ್ಕೆ ಹೋಗಬೇಕಾಯಿತು. ಶಾಸಕಿಯಾಗಿದ್ದ ನನ್ನನ್ನು ಅಲ್ಲಿ ಹಿರಿಯ ಶಾಸಕರೊಬ್ಬರು ಅವರು ಸ್ಥಾಪಿಸಿದ ಕೆಲವು ಸಂಘ-ಸಂಸ್ಥೆಗಳಿಗೆ ಕರೆದುಕೊಂಡು ಹೋದರು. ಅವರ ಆಲೋಚನೆಗಳು ವಿಭಿನ್ನವಾಗಿವೆಯೆಂದು ತಿಳಿದದ್ದು ನನಗಾಗಲೇ. ಯಶೋಧರಮ್ಮ ದಾಸಪ್ಪ ಅವರು ಕೇವಲ ರಾಜಕಾರಣಿಗಳಲ್ಲ; ಸಮಾಜಸೇವಕರಲ್ಲ; ಅದರಾಚೆಗಿರುವ ಅವರ ಮಾನವೀಯ ಸ್ಪಂದನಗಳು ನನ್ನಲ್ಲಿ ದಿಗಿಲು ಮತ್ತು ಜೊತೆಗೆ ಹೊಸ ಆಸಕ್ತಿಯನ್ನು ಮೂಡಿಸಿದವು. ಅಂದಿನಿಂದ ನಾನು ಯಶೋಧರಮ್ಮ ದಾಸಪ್ಪ ಅವರ ಕಟ್ಟಾ ಅನುಯಾಯಿಯಾದೆ. ಅವರ ಸರಳ ಜೀವನ, ಸಾಮಾಜಿಕ ಪರಿವರ್ತನೆಯ ಬಗೆಗಿದ್ದ ಕನಸುಗಳು, ಸ್ತ್ರೀಕಲ್ಯಾಣ, ನಿರ್ಗತಿಕ ಮಕ್ಕಳ ಪುರೋಭಿವೃದ್ಧಿ, ಮುಂತಾದ ಹತ್ತು ಹಲವು ಆಲೋಚನೆಗಳನ್ನು ಅವರು ಒಂದು ಸಂಪುಟದಂತೆ ನನ್ನ ಮೇಲೆ ಪ್ರಭಾವವನ್ನು ಬೀರಿದರು. ಅವರು ಬದುಕನ್ನು ಅರ್ಥೈಸಿಕೊಂಡ ರೀತಿಯೇ ಬೇರೆ. ಹಣ ಅಥವಾ ಅಧಿಕಾರಕ್ಕಾಗಿ ಎಂದೂ ರಾಜಕೀಯ ಮಾಡಿದವರಲ್ಲ. ಗಾಂಧಿ ಎಂಬ ಮೂರ್ತಿಯನ್ನು ಅಂತರಂಗದಲ್ಲಿ ಪ್ರತಿಷ್ಠಾಪಿಸಿಕೊಂಡು ರಾಜ್ಯವ್ಯಾಪಿ ಸಂಚರಿಸಿ ಸ್ವಾತಂತ್ರ್ಯ ಹೋರಾಟದತ್ತ ಮಹಿಳೆಯರನ್ನು ಹುರಿದುಂಬಿಸಿದರು. ಕೇವಲ ಮಹಿಳೆಯರು ಎಂದು ಹೇಳಲು ನಾನು ಇಷ್ಟಪಡುವುದಿಲ್ಲ. ಆದರೆ ನನ್ನ ನೋಟ ಮಹಿಳಾಭಿವೃದ್ಧಿಯ ಪರವಾಗಿ ನಿಂತದ್ದರಿಂದ ವಿಶೇಷವಾಗಿ ನಾನು ಅವರನ್ನು ಗೌರವಿಸುವುದಕ್ಕಾಗಿ ಮಹಿಳಾ ನಾಯಕಿ ಎಂದು ಕರೆದುಕೊಳ್ಳುತ್ತೇನೆ. ನನಗೆ ಹಾಗೆ ಅವರನ್ನು ಕರೆದುಕೊಳ್ಳುವುದು ಇಷ್ಟ. ಈ ದೇಶದಲ್ಲಿ ಪಿತೃಪ್ರಧಾನ ವ್ಯವಸ್ಥೆಯ ಪ್ರತಿ ಸಂದರ್ಭದಲ್ಲೂ ಪುರುಷ ನಾಯಕತ್ವವನ್ನು ಒಪ್ಪಿಕೊಂಡ ನಾವು ಮಹಿಳಾ ನಾಯಕತ್ವವನ್ನು ಪರಿಶಿಷ್ಟ ನೆಲೆಯಲ್ಲಿ ನಿಲ್ಲಿಸುತ್ತೇವೆ. ಆದರೆ ಯಶೋಧರಮ್ಮ ದಾಸಪ್ಪ ಅವರ ವ್ಯಕ್ತಿತ್ವವನ್ನು ಕಂಡಾಗ ಅದೊಂದು ಅಖಂಡ ನಾಯಕತ್ವ ಎಂದು ಸಾರ್ವತ್ರಿಕವಾದ ಆದರ್ಶಗಳನ್ನು ತುಂಬಿಕೊಂಡ ಮೇರು ವ್ಯಕ್ತಿತ್ವವೆಂದು ಗುರುತಿಸಬಹುದು.

ಕರ್ನಾಟಕದ ಮಟ್ಟಿಗೆ ಅವರು ಖಂಡಿತವಾಗಿಯೂ ಗಾಂಧಿ ಮನೆತನಕ್ಕೆ ಸೇರಿದವರು. ಮಹಾತ್ಮಾ ಗಾಂಧಿಯವರ ಎಲ್ಲ ಆದರ್ಶಗಳನ್ನು ಮೈದುಂಬಿಕೊಂಡ ಒಂದು ಅದ್ಭುತ ವ್ಯಕ್ತಿತ್ವ, ಬ್ರಿಟಿಷರ ವಿರುದ್ಧ ಜನತೆಯನ್ನು ಎತ್ತಿಕಟ್ಟುವಲ್ಲಿ ಅವರು ಅನುಸರಿಸಿದ ಮಾರ್ಗ ಶಾಂತಿ ಅಹಿಂಸೆ ಮತ್ತು ಸತ್ಯಾಗ್ರಹವೆಂಬ ಮಂತ್ರಗಳಿಂದ. ಧ್ವಜ ಸತ್ಯಾಗ್ರಹವಿರಲಿ, ಮೈಸೂರಿನ ಜವಾಬ್ದಾರಿ ಸರ್ಕಾರದ ಹೋರಾಟವೇ ಇರಲಿ, ಆ ಭಾಗವಾಗಿ ಕರ್ನಾಟಕದ

ಚರಿತ್ರೆಯಲ್ಲಿ ಯಶೋಧರಮ್ಮ ದಾಸಪ್ಪ ಅವರು ನಿಲ್ಲುತ್ತಾರೆ. ಮೈಸೂರು ರಾಜ್ಯಕ್ಕೆ ಸಮಾಜ ಕಲ್ಯಾಣ ಇಲಾಖೆ ಮೂಲಕ ಪ್ರಪ್ರಥಮ ಮಹಿಳಾ ಮಂತ್ರಿಯಾಗಿ ನಾಡಿನ ಜನರ ಮನಸ್ಸನ್ನು ಸೂರೆಗೊಂಡರು. ಪಾನನಿರೋಧವನ್ನು ನಿರ್ಭಿಡೆಯಿಂದ ವಿರೋಧಿಸಿ ಪಾನನಿರೋಧ ಸಡಿಲಿಕೆ ವಿರುದ್ಧ ಪ್ರತಿಭಟಿಸಿ ರಾಜೀನಾಮೆ ಕೊಟ್ಟು ಮಂತ್ರಿ ಪದವಿಯಿಂದ ಹೊರಬಂದರು. ಹಾಗೆ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟ ಬಳಿಕ ನಾನೇಕೆ ರಾಜೀನಾಮೆಯನ್ನು ಸಲ್ಲಿಸಿದೆ ಎಂಬ ಬಗೆಗೆ ಸುದೀರ್ಘವಾದ ಭಾಷಣವನ್ನು ಶಾಸನಸಭೆಯಲ್ಲಿ ಮಾಡಿದರು. ಒಬ್ಬ ಶಾಸಕಿಯಾಗಿ, ನಾಡಿನ ಒಬ್ಬ ಸಚಿವೆಯಾಗಿ ಸಂವಿಧಾನದ ಹೃದಯ ಭಾಗವಾದ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಒಂದಾದ ಪಾನ ನಿರೋಧವನ್ನು ಅನುಸರಿಸದೇ ಇರದ ಮೇಲೆ ಸಂವಿಧಾನವಾದರೂ ಏತಕ್ಕೆ ಬೇಕು ಎಂಬುದು ಅವರು ಶಾಸನಸಭೆಯಲ್ಲಿ ಮಾಡಿದ ಭಾಷಣದ ಒಕ್ಕಣೆಯಾಗಿತ್ತು. ಎಂತಹ ಸಂದರ್ಭದಲ್ಲೂ ರಾಜಿ ಮಾಡಿಕೊಳ್ಳದ ತತ್ವಾದರ್ಶಗಳಿಗೆ ಬದ್ಧವಾದ ನಾಡಿನ ಜ್ವಲಂತ ಸಮಸ್ಯೆಗೆ ನಿರ್ಭಿಡೆಯ ನಿಲುವನ್ನು ವ್ಯಕ್ತಪಡಿಸಿದರು. ಅವರು ತೆಗೆದುಕೊಂಡ ನಿಲುವು ಚಾರಿತ್ರಿಕ ನಿಲುವಾಗಿದೆ ಮಾತ್ರವಲ್ಲ, ಗಾಂಧಿವಾದದ ಒಂದು ಭಾಗವಾಗಿದೆ. ಯಾವ ಉದ್ದೇಶಕ್ಕಾಗಿ ಪಾನ ನಿರೋಧ ಕ್ರಮವನ್ನು ಸರ್ಕಾರಗಳು ಅನುಸರಿಸಬೇಕು ಎಂಬ ಬಗೆಗೆ ಅವರು ತಮ್ಮ ಭಾಷಣವನ್ನು ಶಾಸನಸಭೆಯಲ್ಲಿ ಮಂಡಿಸಿರುವ ಭಾಗವನ್ನು ನಾನು ಕುತೂಹಲದಿಂದ ಓದಿ ನೋಡಿದೆ. ಇಂತಹ ನಾಯಕರು ಮತ್ತೊಮ್ಮೆ ಹುಟ್ಟಿ ಬರಬೇಕು, ನಮ್ಮ ಮಹಿಳೆಯರಿಗೆ ಬಲ ತುಂಬಬೇಕು, ನಮ್ಮ ಸ್ತ್ರೀಸಂಕುಲ ಸಬಲೀಕರಣದೊಂದಿಗೆ ಹೊಸ ಚೈತನ್ಯವನ್ನು ಪಡೆದುಕೊಂಡು ಸಾಮಾಜಿಕ ವಿಸಂಗತಿಗಳ ವಿರುದ್ಧ ಹೋರಾಟ ಮೆಟ್ಟಿ ನಿಲ್ಲಬೇಕು ಎಂಬ ಸಂದೇಶದೊಡನೆ ಯಶೋಧರಮ್ಮ ದಾಸಪ್ಪ ಅವರನ್ನು ನೆನೆಸಿಕೊಂಡು ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

———— * ————

ಬಹಾದ್ದೂರ್ ಮಹಿಳೆ

ನಾಗಮಣಿ ಎಸ್.ರಾವ್

1966ರ ನವೆಂಬರ್-ಡಿಸೆಂಬರ್ ತಿಂಗಳ ಸಮಯ ಎಂದು ನೆನಪು.

ವಿಧಾನಸೌಧದ ಅಧಿಕಾರಿ ವಲಯಗಳಲ್ಲಿ ರಾಜಕೀಯ ಕೂಟಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಸಚಿವೆಯೊಬ್ಬರ ಹೆಸರು ಬಿಸಿ ಸುದ್ದಿಯಲ್ಲಿತ್ತು. ಅವರೇ ಶ್ರೀಮತಿ ಯಶೋಧರಮ್ಮ ದಾಸಪ್ಪನವರು. ಆಕಾಶವಾಣಿ ವಾರ್ತಾ ವಿಭಾಗದ ಸುದ್ದಿಗಾರಳಾಗಿ ವಿಧಾನಸೌಧದ ಕಾರಿಡಾರ್‌ಗಳಲ್ಲಿ, ಹೊಸತನದ ಉತ್ಸಾಹದಲ್ಲಿ ಓಡಾಡುತ್ತಿದ್ದ ನನಗೆ ಈ ಧೀಮಂತ ಮಹಿಳೆಯ ಬಗ್ಗೆ ಎಲ್ಲಿಲ್ಲದ ಅಭಿಮಾನ.

ಪಾನನಿರೋಧ ನೀತಿಯನ್ನು ಅಂದಿನ ಸರ್ಕಾರ ರದ್ದುಮಾಡಲು ನಿರ್ಧರಿಸಿದಾಗ, ಆ ನಿರ್ಧಾರವನ್ನು ತೀವ್ರವಾಗಿ ವಿರೋಧಿಸಿದ ಯಶೋಧರಮ್ಮ ನವರು ರಾಜೀನಾಮೆ ಸಲ್ಲಿಸಿದ ದಿನಗಳವು. ಸಮಾಜ ಕಲ್ಯಾಣ ಖಾತೆಯ ಸಂಪುಟ ದರ್ಜೆ ಸಚಿವರಾಗಿ ಬಡಜನರು, ಮಹಿಳೆಯರು, ಹಾಗೂ ದುರ್ಬಲ ಜನರ ಬಗ್ಗೆ ತೀವ್ರ ಕಾಳಜಿಯಿಂದ ಕಾರ್ಯನಿರ್ವಹಿಸುತ್ತಿದ್ದು ಯಶೋಧರಮ್ಮ ದಾಸಪ್ಪ ಅವರಿಗೆ ಪಾನನಿರೋಧ ತೆಗೆದು ಹಾಕುವ ಕ್ರಮ ಸರಿ ಕಾಣಲಿಲ್ಲ. ಅವರು ಅದನ್ನು ಬಲವಾಗಿ ವಿರೋಧಿಸಿದರು. ಅಪ್ಪಟ ಗಾಂಧೀವಾದಿಯಾದ ಅವರು, "ಇಂತಹ ಕುಡಿತದ ಒಂದು ಆಮಿಷವನ್ನು ಕೈಗೆಟುಕುವಷ್ಟು ಸುಲಭ ಮಾಡಬಾರದು; ಅನಕ್ಷರಸ್ಥರು ದುರ್ಬಲರು, ಬಡಜನರು ಬಹುಬೇಗ ಇದಕ್ಕೆ ಬಲಿಯಾಗುತ್ತಾರೆ, ಹೆಣ್ಣುಮಕ್ಕಳ ಹಾಗೂ ಹರಿಜನ ಗಿರಿಜನರ ಕಷ್ಟ ಹೆಚ್ಚುತ್ತದೆ, ಇದು ಒಂದು ರೀತಿಯ ಪಾಪಕೃತ್ಯ" ಎಂದು ವಾದಿಸಿದರು. ಆದರೆ ಸರ್ಕಾರದ ನಿರ್ಧಾರವನ್ನು ತಡೆಯುವ ಪ್ರಯತ್ನದಲ್ಲಿ ವಿಫಲರಾದಾಗ ತಮ್ಮ ಸಚಿವ ಪದವಿಗೇ ರಾಜೀನಾಮೆ ಸಲ್ಲಿಸಿ, ಸಚಿವಸಂಪುಟದಿಂದಲೇ ಹೊರಬಂದ ಧೀರ ಮಹಿಳೆ ಶ್ರೀಮತಿ ಯಶೋಧರಮ್ಮ ದಾಸಪ್ಪ. ಎಸ್.ಆರ್.ಕಂಠಿ ಮತ್ತು ಎಸ್.ನಿಜಲಿಂಗಪ್ಪನವರಂತಹ ಅಗ್ರಗಣ್ಯ ನಾಯಕರ ಸಂಪುಟದಲ್ಲಿ, ಅದರಲ್ಲೂ ಸಂಪುಟ ದರ್ಜೆಯ ಸ್ಥಾನಮಾನ ಪಡೆದಿದ್ದ ಪ್ರಥಮ ಮಹಿಳೆ ಎಂಬ ಹಿರಿಮೆಯನ್ನು ತಮ್ಮದಾಗಿಸಿಕೊಂಡಿದ್ದ ಶ್ರೀಮತಿ ಯಶೋಧರಮ್ಮ ನೈತಿಕ ಆಧಾರದ ಮೇಲೆ ಅಪ್ಪಟ ಗಾಂಧೀವಾದಿಯಾಗಿ ಇಂತಹ ಅಧಿಕಾರ ನನಗೆ ಬೇಡ ಎಂದು ಹೊರಬಂದರು "ಇದೊಂದು ರಾಜಕೀಯ ಕಸರತ್ತು; ಜನಪ್ರಿಯತೆಗಳಿಸುವ ಆಟ" ಎಂದು ಕೆಣಕಿದವರು ಅಂದೂ ಸಹ ಇದ್ದರು. ಆದರೆ ತಮ್ಮ ನಿಲುವಿಗೆ ಗಟ್ಟಿಯಾಗಿ ಅಂಟಿಕೊಂಡ ಯಶೋಧರಮ್ಮನವರು ಅನಂತರದ ತಮ್ಮ ಬದುಕನ್ನೆಲ್ಲ ಸಮಾಜಸೇವೆಗೆ ಮೀಸಲಿಟ್ಟರು. ಅಧಿಕಾರ ಸ್ಥಾನಗಳತ್ತ ಹಿಂದಿರುಗಿಯೂ ನೋಡಲಿಲ್ಲ.

ಕಸ್ತೂರ ಬಾ ಗಾಂಧಿ ರಾಷ್ಟ್ರೀಯ ಟ್ರಸ್ಟ್ ಸ್ಥಾಪನೆಯಾದಾಗ, ಅಂದಿನ ಮೈಸೂರು ಸಂಸ್ಥಾನದಲ್ಲಿ ಈ ಟ್ರಸ್ಟಿನ ಪ್ರತಿನಿಧಿಯಾಗಿ ಯಶೋಧರಮ್ಮ ದಾಸಪ್ಪ ಅವರನ್ನು ಮಹಾತ್ಮಾ ಗಾಂಧಿಯವರು ನೇಮಿಸಿದರು. ಯಶೋಧರಮ್ಮನವರ ಪತಿ ಹಿರಿಯ ಕಾಂಗ್ರೆಸ್ ನಾಯಕ ಎಚ್.ಸಿ.ದಾಸಪ್ಪನವರೇ ಈ ಬಗ್ಗೆ ಹಿಂಜರಿದು

"ಯಶೋಧರಮ್ಮನವರ ಕೈಯಲ್ಲಿ ಈ ಹೊಣೆ ನಿರ್ವಹಿಸುವುದು ಸಾಧ್ಯವಿಲ್ಲ; ಮರುಚಿಂತಿಸಿ" ಎಂದು ಗಾಂಧೀಜಿಯವರಲ್ಲಿ ಬಿನ್ನವಿಸಿದರಂತೆ.

ಆದರೆ ಗಾಂಧೀಜಿಯವರು ನೀಡಿದ ಉತ್ತರ ಕನ್ನಡಿಗರೆಲ್ಲ ಹೆಮ್ಮೆಪಡುವಂತಹುದು. "ಯಶೋಧರಾ–ಬಹಾದ್ದೂರ್ ಹೆಣ್ಣುಮಗಳು; ಅವರ ಸಾಮರ್ಥ್ಯದಲ್ಲಿ ನನಗೆ ಪೂರ್ಣ ವಿಶ್ವಾಸವಿದೆ; ಈ ಕಾರ್ಯನಿರ್ವಹಣೆಯನ್ನು ಅವರು ಜೀವ ಕೊಟ್ಟಾದರೂ ನಿಭಾಯಿಸಬಲ್ಲರು" ಎಂದು ಗಾಂಧೀಜಿ ಹೇಳಿದರಂತೆ. ಯಶೋಧರಮ್ಮ ದಾಸಪ್ಪನವರ ಮಗ ಮಾಜಿ ಸಂಸತ್ ಸದಸ್ಯ ತುಳಸೀದಾಸಪ್ಪ ನವರು ತಾಯಿ–ತಂದೆಯವರಿಂದ ಕೇಳಿದ ಈ ಮಾತನ್ನು ಅಭಿಮಾನದಿಂದ ಸ್ಮರಿಸಿಕೊಳ್ಳುತ್ತಿದ್ದರು.

ಯಶೋಧರಮ್ಮನವರಿಗೆ ಹುಟ್ಟಿದಂದಿನಿಂದಲೂ ಒಳ್ಳೆಯ ವಾತಾವರಣ, ವಿದ್ಯೆ, ಸಂಸ್ಕೃತಿ ದೊರೆತದ್ದು ಅವರ ಮತ್ತು ನಾಡಿನ ಪುಣ್ಯ.

ತಂದೆ ಕೆ.ಎಚ್.ರಾಮಯ್ಯನವರು ವಿದೇಶಗಳಲ್ಲಿ ಓದಿ ದಕ್ಷ ಆಡಳಿತಗಾರರೂ, ವಿದ್ಯಾಪಕ್ಷಪಾತಿಗಳೂ ಆಗಿ ಸಮಾಜಕ್ಕೆ ನೇರವಾದವರು. ಯಶೋಧರಮ್ಮ ಮದುವೆಯಾದದ್ದು ನಮ್ಮ ರಾಜ್ಯದ ಪ್ರಖ್ಯಾತ ಸ್ವಾತಂತ್ರ್ಯ ಸೇನಾನಿ ಹಾಗೂ ಕೇಂದ್ರ ಸರ್ಕಾರದಲ್ಲಿ ಹಣಕಾಸು ಮತ್ತು ರೈಲ್ವೆ ಸಚಿವರಾಗಿ ದಕ್ಷ ಸೇವೆ ಸಲ್ಲಿಸಿದ ಎಚ್.ಸಿ.ದಾಸಪ್ಪನವರನ್ನು. ಈ ಎರಡೂ ಮನೆಗಳ ಸತ್ವ, ಆದರ್ಶವನ್ನು ಮೈಗೂಡಿಸಿಕೊಂಡು ಬೆಳೆದವರು ಯಶೋಧರಮ್ಮ.

ಮೈಸೂರು ನ್ಯಾಯವಿಧಾಯಕ ಸಭೆಗೆ ಗೆದ್ದು ಬಂದ ಪ್ರಪ್ರಥಮ ಮಹಿಳೆ ಎಂಬ ಹೆಗ್ಗಳಿಕೆ ಅವರದು. 1950ರಲ್ಲಿ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ನಂತರ 1962ರಲ್ಲಿ ರಾಜ್ಯ ವಿಧಾನಸಭೆಗೆ ಚುನಾಯಿತರಾದರು.

ಯಶೋಧರಮ್ಮನವರು ಅಂದಿನ ದಿನಗಳಲ್ಲಿ ರಾಜ್ಯಾದ್ಯಂತ ಸಂಚರಿಸಿ ಸಲ್ಲಿಸಿದ ಜನಸೇವೆ, ಸಮಾಜಸೇವೆ ಅಪಾರ, ಕರ್ನಾಟಕದ ಮಹಿಳಾ ಸೇವಾ ಕಾರ್ಯಕರ್ತರ ತರಬೇತಿಗಾಗಿ ಅರಸೀಕೆರೆ ಬಳಿ ಅವರು ಸ್ಥಾಪಿಸಿದ ಕಸ್ತೂರ ಬಾ ಗ್ರಾಮಸೇವಾ ಕೇಂದ್ರ ಅವರ ಸಂಘಟನಾ ಶಕ್ತಿಗೆ ಮತ್ತು ರಚನಾತ್ಮಕ ದೂರದೃಷ್ಟಿಗೆ ಒಂದು ಜೀವಂತ ನಿದರ್ಶನ. ಸ್ವಾವಲಂಬನೆಯಿಂದ ತನ್ನ ಆದಾಯದ ಮೇಲೆಯೇ ತಾನು ನಿಲ್ಲುವಂತಹ ಸಂಸ್ಥೆ ಇದಾಗ ಬೇಕೆಂದು ಅವರು ಅಪಾರ ಶ್ರಮವಹಿಸಿ ಒಂದು ಸಾವಿರ ತೆಂಗಿನ ಸಸಿಗಳನ್ನು ನೆಡಿಸಿದರು. 1957ರಲ್ಲಿ ಪೂಜ್ಯರಾದ ವಿನೋಬಾ ಭಾವೆಯವರು ಈ ಸಂಸ್ಥೆಗೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಈ ಸಂಸ್ಥೆ ತನ್ನ ಚಿನ್ನದ ಹಬ್ಬದ ದಿನಗಳನ್ನು ಕಂಡು ಉಪಯುಕ್ತ ಸೇವೆ ಸಲ್ಲಿಸಿದೆ.

ಸಾಮಾಜಿಕ ಬದುಕಿನಲ್ಲೂ ಪರಿಶುದ್ಧತೆ, ಪಾವಿತ್ರ್ಯವನ್ನು ಕಾಪಾಡಿಕೊಂಡು ಬರಲು ಸಾಧ್ಯವಿದೆ ಎಂದು ನಡೆದು ತೋರಿಸಿದ ಈ ಧೀಮಂತ ಮಹಿಳೆಗೆ ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತ್ತು.

ದೇಶಕ್ಕಾಗಿ, ಜನತೆಗಾಗಿ, ತಾನು ನಂಬಿದ ತತ್ವಗಳಿಗಾಗಿ ದಿಟ್ಟತನದಿಂದ ಶ್ರಮಿಸಿದ ಯಶೋಧರಮ್ಮ ದಾಸಪ್ಪನವರು ಎಪ್ಪತ್ತೈದು ವರ್ಷಗಳ ತುಂಬು ಜೀವನದ ನಂತರ 1980ರ ಜೂನ್‌ನಲ್ಲಿ ನಮ್ಮನ್ನಗಲಿದರು. ಆದರೆ ಅವರು ಆರಂಭಿಸಿದ ಸೇವಾ ಸಂಸ್ಥೆಗಳು ಮತ್ತು ತೋರಿದ ಮಾರ್ಗದರ್ಶನ ಅವರ ನೆನಪನ್ನು ಸದಾ ಹಸಿರಾಗಿಡುತ್ತವೆ.

ಇಂತಹ ಅಪರೂಪದ ಅಪೂರ್ವ ಚೇತನದ ಶತಮಾನೋತ್ಸವ ಸಂದರ್ಭದಲ್ಲಿ ಈ ದಿವ್ಯ ಚೇತನಕ್ಕೆ ನನ್ನ ಹೃತ್ಪೂರ್ವಕ ನಮನ.

———— * ————

ಸ್ವಾಭಿಮಾನದ ನಾಯಕಿ

ಪ್ರಮೀಳಾ ನೇಸರ್ಗಿ

ಸ್ವಾತಂತ್ರ್ಯಪೂರ್ವದ ಕಾಂಗ್ರೆಸ್ ಚಳವಳಿಯು, ರಾಷ್ಟ್ರೀಯತೆಯನ್ನು ಎತ್ತಿಹಿಡಿದ ಭಾರತೀಯರ ಸ್ವಾಭಿಮಾನದ ಸಂಕೇತವಾಗಿ ಹೊರಹೊಮ್ಮುತ್ತದೆ. ಸ್ವಾತಂತ್ರ್ಯ ಪೂರ್ವದ ಹೋರಾಟದ ಬದುಕು ಭಾರತೀಯರಿಗೆ ನಾಯಕತ್ವದ ಗುಣಗಳನ್ನು ಕಲಿಸಿಕೊಟ್ಟಿತು. ಮೈಸೂರು ಸಂಸ್ಥಾನದಲ್ಲಿ ಮುಖ್ಯವಾಗಿ ಅನೇಕ ಮಹಿಳಾ ಹೋರಾಟಗಾರ್ತಿಯರು ಸಕ್ರಿಯವಾಗಿ ಭಾಗವಹಿಸಿದರು. ಶಿವಪುರದ ಧ್ವಜ ಸತ್ಯಾಗ್ರಹದಲ್ಲಿ ಅವರು ಭಾಗವಹಿಸುವುದರೊಂದಿಗೆ ರಾಜ್ಯದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಸೃಷ್ಟಿಸಿದರು. ಹೊಸ ವರ್ಚಸ್ಸನ್ನು ಮೂಡಿಸಿಕೊಂಡರು. ಕೋಟಿ ಸಂಖ್ಯೆಯಲ್ಲಿರುವ ಮಹಿಳೆಯರಿಗೆ ಆದರ್ಶಪ್ರಾಯವಾಗಿ ಬದುಕಿದರು. ಆ ಸಂದರ್ಭದಲ್ಲಿ ಗುರುತಿಸಬಹುದಾದ ಕರ್ನಾಟಕದ ಹೋರಾಟಗಾರ್ತಿಯರೆಂದರೆ, ಹೋರಾಟದ ಮಂಚೂಣಿಯಲ್ಲಿದ್ದ ಶ್ರೀಮತಿ ಯಶೋಧರಮ್ಮ, ಬಳ್ಳಾರಿ ಸಿದ್ದಮ್ಮ, ಉಮಾದೇವಿ ಕುಂದಾಪುರ, ಟಿ.ಸುನಂದಮ್ಮ, ನಾಗರತ್ನಮ್ಮ ಹಿರೇಮಠ್, ಎಂ.ಆರ್. ಲಕ್ಷ್ಮಮ್ಮ, ಸುಬ್ಬಮ್ಮ ಜೋಯಿಸರಂಥವರು ಮುಖ್ಯರಾಗುತ್ತಾರೆ.

ಗಾಂಧಿತತ್ವಗಳನ್ನು ಆಶ್ರಯಿಸಿ ಅವುಗಳನ್ನು ಅನುಷ್ಠಾನಕ್ಕೆ ತಂದುಕೊಂಡು ರಟ್ಟೆಯಲ್ಲಿ ಶಾಂತಿ, ಸತ್ಯ, ಸಹನೆ, ಸತ್ಯಾಗ್ರಹ, ಅಹಿಂಸೆ ಮುಂತಾದ ಗಾಂಧಿಯ ಆದರ್ಶ ತತ್ವಗಳ ಶಕ್ತಿಯನ್ನಾಗಿಸಿಕೊಂಡರು. ಬ್ರಿಟಿಷರ ಲಾಟಿ ಬೂಟಿನ ಏಟುಗಳಿಗೆ ಮೈಯೊಡ್ಡಿದರು. ಅಸ್ಪೃಶ್ಯತೆಯನ್ನು ಭಾರತೀಯರ ಮಹಾನ್ ಶಾಪವೆಂದು ಪರಿಗಣಿಸಿದರು. ಹಿಂಸಾ ಚಳವಳಿಗೆ ತಿರುಗುವ ಸಂದರ್ಭಗಳಲ್ಲೂ ಶಾಂತಿಶೀಲ, ಮಮತಾಮಯಿ ಗುಣಗಳಿಂದ ಮೆರೆದವರು. ಮಹಿಳೆಯರಲ್ಲಿ ಅಡಗಿದ್ದ ಹೋರಾಟದ ಶಕ್ತಿಯನ್ನು ಗಾಂಧೀಜಿಯವರು ಮೊದಲೇ ಗುರುತಿಸಿಕೊಂಡಿದ್ದರು. ಅಖಂಡ ಭಾರತದಾದ್ಯಂತ ಮಹಿಳಾ ಶಕ್ತಿಯ ಮೇಲೆ ವಿಪರೀತವಾದ ನಂಬಿಕೆಯನ್ನಿಟ್ಟಿದ್ದರು. ಕೇವಲ ಒಬ್ಬ ಮಹಿಳೆ ಸಾಕ್ಷರರಾದರೂ ಇಡೀ ಕುಟುಂಬ ಸಾಕ್ಷರವಾಗುತ್ತದೆ ಎನ್ನುವ ಧ್ಯೇಯವಾಕ್ಯದೊಡನೆ ಮಹಿಳೆಯರನ್ನು ಸಾಕ್ಷರಗೊಳಿಸುವುದಲ್ಲದೆ ಅವರನ್ನು ಪ್ರಜ್ಞಾವಂತರನ್ನಾಗಿ ಮಾಡುವಲ್ಲಿ ಅವರ ಆ ಆಲೋಚನೆಗಳು ಅನುಷ್ಠಾನಕ್ಕೆ ಬಂದವು.

ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರಿನ ಮಹಿಳೆಯರು ತೋರಿಸಿದ ಸಾಹಸ, ಇತರ ರಾಜ್ಯಗಳ ಸಹೋದರಿಯರಿಗೆ ಮಾದರಿಯಾಯಿತು. ಬಿಪಿನ್ ಚಂದ್ರಪಾಲ್, ಬಾಲಗಂಗಾಧರ ತಿಲಕ್, ಅನಿಬೆಸೆಂಟ್ ಮುಂತಾದ ಅಂದಿನ ಭಾರತದ ನಾಯಕರ ಉದಾತ್ತ ಚಿಂತನೆಗಳಿಗೆ ಮಾರುಹೋಗಿ ಸ್ವ-ಶಕ್ತಿಯಿಂದ ಹೋರಾಟಕ್ಕಿಳಿದು, ಕಮಲಾದೇವಿ ಚಟ್ಟೋಪಾಧ್ಯಾಯ, ಸರೋಜಿನಿ ನಾಯ್ಡು ಮುಂತಾದ ಮಹಿಳೆಯರು ಇವರಿಗೆ ಮಾದರಿಯಾಗಿದ್ದರು. ಇಂತಹ ಸಂದರ್ಭದಲ್ಲಿ ಕನ್ನಡ ನಾಡಿನ ಅನರ್ಘ್ಯ ರತ್ನವೆನ್ನಬಹುದಾದ ಸಾಧ್ವಿಮಣಿ ಯಶೋಧರಮ್ಮ ದಾಸಪ್ಪ ಅವರ ಮನೋಸಂಕಲ್ಪ ಹಾಗೂ ಹೋರಾಟದ ಬದುಕು ಆದರ್ಶಪ್ರಾಯವಾಯಿತು. ಕಳೆದ ಶತಮಾನದ

ಮಧ್ಯಭಾಗದಲ್ಲಿ ಯಶೋಧರಮ್ಮ ದಾಸಪ್ಪ ಈ ರಾಷ್ಟ್ರದ ಮಹಿಳಾ ನಾಯಕಿಯಾಗಿ ರೂಪಿತವಾದುದು ಮಾತ್ರವಲ್ಲ ತನ್ನ ತಾತ್ವಿಕ ಮತ್ತು ಘನೀಕೃತ ಆಲೋಚನೆಗಳಿಂದ ಚರಿತ್ರೆಯಲ್ಲಿ ತಮ್ಮ ಹೆಸರನ್ನು ಚಿರಸ್ಥಾಯಿಯಾಗಿ ಬರೆಸಿಕೊಂಡರು.

ಅವರ ಬಗೆಗೆ ನನ್ನಲ್ಲಿ ಪ್ರಾತಃಸ್ಮರಣೀಯ ಭಾವನೆಯಿದೆ. ನಮ್ಮ ಹೆಣ್ಣುಮಕ್ಕಳಿಗೆ ಅವರನ್ನು ತೋರಿಸಿ ಹತ್ತುಹಲವು ಬಾರಿ ಪ್ರೇರಣೆ ನೀಡಿದ್ದೇನೆ. ಬದುಕಿದರೆ ಅಂತಹ ಮಹಿಳೆಯಾಗಿ ಬದುಕಬೇಕು. ಆಗ ಸ್ತ್ರೀ ಜನ್ಮ ಸಾರ್ಥಕವಾಗುವುದು ಎನ್ನುವ ನೈಜ ನಂಬಿಕೆ ನನ್ನದು. ಇಂದಿಗೂ ಕೂಡ ಆ ಮಮತಾಮಯಿಯ ಫೋಟೋವನ್ನು ಮನೆಯಲ್ಲಿಟ್ಟುಕೊಂಡು ಆರಾಧಿಸುತ್ತಿದ್ದೇನೆ. ಪ್ರತಿಯೊಬ್ಬ ಮಹಿಳೆಯೂ ಇಷ್ಟು ಜಾಗೃತವಾದರೆ ಭಾರತವೆಂಬ ದೇಶ ಪ್ರಪಂಚದ ಮೊದಲ ಸ್ತರದಲ್ಲಿ ನಿಲ್ಲುವುದರಲ್ಲಿ ಸಂಕೋಚವಿಲ್ಲ. ಪಾನನಿರೋಧದ ಸಂದರ್ಭದಲ್ಲೂ ಅವರು ಭಾರತೀಯರಿಗೆ ಬಹುದೊಡ್ಡ ಪಾಠವನ್ನು ಕಲಿಸಿಕೊಟ್ಟಿದ್ದಾರೆ. ಗಾಂಧಿ ವಿಚಾರಧಾರೆಗಳಿಗೆ ಮನಸೋತು ಅವರು ಕೊಟ್ಟ ಕೊಡುಗೆ ಅನುಪಮವಾದದ್ದು, ಅಪಾರವಾದದ್ದು, ಈ ನಾಡು ಪ್ರಾತಃಸ್ಮರಣೀಯವಾಗಿ ಸ್ಮರಿಸಿಕೊಳ್ಳಲು ಯೋಗ್ಯವಿರುವ ಬಹುದೊಡ್ಡ ವ್ಯಕ್ತಿತ್ವವದು.

ನಿರೂಪಣೆ : ಡಾ.ಎಸ್.ಎಂ. ಗಂಗಾಧರಯ್ಯ

——— * ———

ಅನುಪಮ ಗಾಂಧೀವಾದಿ

ರಾಣಿ ಸತೀಶ್

ಭಾರತಕ್ಕೆ ಸ್ವಾತಂತ್ರ್ಯ ಬಂದಾದ ಮೇಲೆ ನಡೆದ ರಾಜಕೀಯ ಅಯೋಮಯಗಳನ್ನು ನೆನೆಸಿಕೊಂಡಾಗ ಮೈನವಿರೇಳುತ್ತದೆ. ಯಾವ ಮೌಲ್ಯಗಳಿಗಾಗಿ ಗುಂಡಿಗೆ ಎದೆಯೊಡ್ಡಿ, ಲಾಠಿ-ಬೂಟುಗಳ ಏಟಿಗೆ ಮೈಯೊಡ್ಡಿ ನಮ್ಮ ನೇತಾರರು ನಿಂತರೋ ಗೊತ್ತಿಲ್ಲ. ಆದರೆ ಅನಂತರ ನಡೆದ ಅಯೋಮಯಗಳಂತೂ ವರ್ಣಿಸಲಸದಳ. ಭಾರತಕ್ಕೆ ಸ್ವಾತಂತ್ರ್ಯ ದೊರೆತ ತಕ್ಷಣ ಗಾಂಧೀಜಿಯವರು ಸಂಪೂರ್ಣವಾಗಿ ಭಾರತದಲ್ಲಿ ಮದ್ಯಪಾನವನ್ನು ನಿಷೇಧಿಸುವುದಾಗಿ ತಮ್ಮ ರಾಜಕೀಯ ಪ್ರಣಾಳಿಕೆಯನ್ನು ಜನತೆಯ ಮುಂದಿಟ್ಟಿದ್ದರು. ಮದ್ಯ ಅಥವಾ ಮಾದಕ ಚಟವು ಮನುಷ್ಯನಿಗೆ ಯಾವತ್ತಿದ್ದರೂ ಕೆಡುಕುಂಟುಮಾಡಬಲ್ಲವು ಎನ್ನುವ ಸತ್ಯವನ್ನು ಗಾಂಧೀಜಿಯವರು ಜನತೆಯ ಮುಂದಿಟ್ಟಿದ್ದರು. ಎಂತಹದೇ ಸಂದರ್ಭದಲ್ಲಿ ಮಾದಕವಸ್ತುಗಳ ಸೇವನೆ ಮಾನವೀಯವಲ್ಲವೆಂಬ ಅವರ ಸಂಕಲ್ಪ ಸಾತ್ವಿಕ ವಿರಾಟ್ ಶಕ್ತಿಯ ಪ್ರತಿನಿರ್ಮಿತಿಯಾಗಿತ್ತು. ಪ್ರಾಯಶಃ ಮುಂದಿನ ನಾಯಕರುಗಳಿಗೆ ಈ ಸತ್ಯ ಅರ್ಥವಾಗಲಿಲ್ಲವೋ ಏನೋ.

ಸಂವಿಧಾನದ ರಾಜ್ಯನಿರ್ದೇಶಕ ತತ್ವಗಳಲ್ಲಿ ಪಾನನಿರೋಧವನ್ನು ಒಂದೆಂದು ಸಾರಿ ಹೇಳಿದೆ. ಸಂವಿಧಾನದ ಹೃದಯ ಭಾಗವೇ ಅದಾದ್ದರಿಂದ ಪಾನನಿರೋಧವೆಂಬ ಗಾಂಧೀವಾದ ಅನುಷ್ಠಾನಗೊಳ್ಳುವ ಭರವಸೆಯನ್ನು ಸ್ವಾತಂತ್ರ್ಯ ದೊರೆತ ನಿಕಟ ತರುವಾಯದಲ್ಲಿ ಇಟ್ಟುಕೊಂಡಿದ್ದರು. ಆದರೆ ಅದಾದದ್ದೇ ಬೇರೆ. ಮದ್ಯಪಾನ ಮಾರಾಟದಿಂದ ಬಂದಂತಹ ಹಣವನ್ನೇ ಸರ್ಕಾರದ ಬಂಡವಾಳವೆಂಬಂತೆ ಮಾಡಿಕೊಂಡದ್ದು ಘೋರ ಅಮಾನವೀಯ ಹಾಗೂ ಅದಕ್ಕೆ ಗಾಂಧೀಜಿಯವರ ಶಾಪವೂ ಉಂಟು. ಮದ್ಯಪಾನ ಎನ್ನುವುದು ಇಂದು ಆಹಾರಕ್ಕಿಂತ ಹೆಚ್ಚು ಅನಿವಾರ್ಯವೆಂಬ ಭಾವನೆಯನ್ನು ಜನತೆ ತಂದುಕೊಂಡಿದೆ. ಜನತೆ ತಮಗಿರುವ ಅಜ್ಞಾನದ ಮೂಲಕ ಆ ಅಮಲು ಬರುವ ಪದಾರ್ಥವನ್ನು ಸೇವಿಸಿ ತಮ್ಮಲ್ಲಿರುವ ಮಾನವೀಯ ಹಾಗೂ ಸಾತ್ವಿಕ ಗುಣಗಳನ್ನು ತೊರೆಯುತ್ತಿದ್ದಾರೆ. ಪಾನನಿರೋಧವೆಂಬ ಸಾಮಾಜಿಕ ಮೌಲ್ಯದ ಬೆಲೆಯೇ ಗೊತ್ತಿಲ್ಲದ ಈ ಜನಗಳು ರಾಜಕಾರಣವನ್ನು ವಾಣಿಜ್ಯೀಕರಣಗೊಳಿಸಿ ಅದೊಂದು ವೃತ್ತಿಯೆಂದು ಸ್ವೀಕರಿಸಿದ್ದಾರೆ. ಗಾಂಧಿಯ ಮೌಲ್ಯಗಳ ಬಗೆಗೆ ಮಾತನಾಡುತ್ತಾ ಆ ಮೌಲ್ಯಗಳ ಮೇಲೆ ಸವಾರಿ ಮಾಡುತ್ತಾ ಅದರ ಎಲ್ಲ ಉಪಯೋಗಗಳನ್ನು ಜನತೆಯ ಮುಂದೆ ಇಡುತ್ತಾ ನಯವಂಚಕತನದಿಂದ ಮೇಲುಗೈ ಸಾಧಿಸುತ್ತಿದ್ದಾರೆ. ಇದು ಅತ್ಯಂತ ದುರದೃಷ್ಟಕರ ಹಾಗೂ ಖಂಡನೀಯ. ಪಾನನಿರೋಧದ ಹೋರಾಟದ ಚರಿತ್ರೆಯನ್ನು ನೆನೆಸಿಕೊಂಡಾಗಲೆಲ್ಲ ನಮಗೆ ಮೂಡಿಬರುವ ಚಿತ್ರಣವೆಂದರೆ ಯಶೋಧರಮ್ಮ ದಾಸಪ್ಪ ಅವರದ್ದು. ಪಾನನಿರೋಧವನ್ನು ಜಾರಿಗೆ ತರಲಿಲ್ಲ ಎನ್ನುವ ಕಾರಣಕ್ಕಾಗಿ ಮಂತ್ರಿ ಪದವಿಯನ್ನು ಕಾಲ ಕಸಕ್ಕೆ ಸಮ ಮಾಡಿಕೊಂಡು ರಾಜೀನಾಮೆಯನ್ನು ಸದನದಲ್ಲಿ ಬಿಸಾಡಿ ಹೊರ ನಡೆದ ಮಹಾನ್ ಸಂಕಲ್ಪನಿಷ್ಠ ಸಚಿವೆ ಇವರು. ಇವರನ್ನು ಮನುಕುಲ ಮಾನವೀಯ ಸಂದರ್ಭಗಳಲ್ಲೆಲ್ಲ ಸ್ಮರಿಸಿಕೊಳ್ಳುತ್ತಿದೆ.

ಕರ್ನಾಟಕದ ಜನತೆಗೆ ಇವರೊಂದು ನೈತಿಕ ಆದರ್ಶವಾಗಿ ಜೀವಂತಿಕೆಯಿಂದ ಮೆರೆಯುತ್ತಿದ್ದಾರೆ. ಇಂದಿಗೂ ಕೂಡ ಮಹಿಳೆಯರ ಕೈಗೆ ಅಧಿಕಾರ ಸಿಕ್ಕಾಗ ಮಾಡುವ ಮೊದಲ ಕೆಲಸ ಪಾನನಿರೋಧ. ಆದರೆ ಅದನ್ನು ಪಟ್ಟಭದ್ರ ಹಿತಾಸಕ್ತಿಗಳು ತಡೆಯುತ್ತಿವೆ. ಒಂದು ಕಡೆ ಸರ್ಕಾರಗಳು, ಡಿಸ್ಟಿಲರಿ ಕಂಪನಿಗಳಿಗೆ ಮಂಜೂರಾತಿಯನ್ನು ನೀಡುತ್ತಿದ್ದರೆ. ಮತ್ತೊಂದೆಡೆ ಮದ್ಯಪಾನ ಸಂಯಮ ಮಂಡಳಿಯಂತಹ ಸಂಸ್ಥೆಗಳನ್ನು ತೆರೆಯುತ್ತಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ. ಪ್ರಜ್ಞಾವಂತ ನಾಗರಿಕರಿಗೆ ಈ ಕುರಿತು ಸರ್ಕಾರಗಳು ಏನು ಉತ್ತರ ಕೊಡುತ್ತವೆ ಎನ್ನುವುದು ಕುತೂಹಲದ ಸಂಗತಿ. ಅಷ್ಟೇ ಅಲ್ಲ ತಲೆ ತಗ್ಗಿಸುವಂತಹ ಸಂಗತಿ. ಈ ಸಂದೇಶದೊಡನೆ ನಾನು ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರನ್ನು ನೆನೆಸಿಕೊಳ್ಳುತ್ತಿದ್ದೇನೆ.

ನಿರೂಪಣೆ : ಡಾ.ಎಸ್.ಎಂ. ಗಂಗಾಧರಯ್ಯ

*

ಆದರ್ಶವಾದಿ ರಾಜಕೀಯ ಧುರೀಣೆ

ಪ್ರೇಮಾ ಭಟ್

ಆಗಿನ್ನು ದೇಶ ಬಿಟ್ರಿಷರ ಬಿಗಿಮುಷ್ಟಿಯಲ್ಲಿತ್ತು, ದೇಶಕ್ಕಿನ್ನೂ ಸ್ವಾತಂತ್ರ್ಯ ಬಂದಿರಲಿಲ್ಲ. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ಎಷ್ಟೋ ಮಂದಿ ಮಹಿಳೆಯರು ದೇಶದ ಸ್ವಾತಂತ್ರ್ಯಕ್ಕಾಗಿ ಆಂದೋಳನದಲ್ಲಿ ಧುಮುಕಿದ್ದನ್ನು ಮರೆಯುವಂತೆಯೇ ಇಲ್ಲ. ಅವರಲ್ಲಿ ಒಬ್ಬರು ಶ್ರೀಮತಿ ಯಶೋಧರಮ್ಮ ದಾಸಪ್ಪನವರು. ಧೀರೋದಾತ್ತ ನಿಲುವನ್ನು ಹೊಂದಿದ ಯಶೋಧರಮ್ಮ ಅವರು ಮಹಾತ್ಮ ಗಾಂಧೀಜಿಯವರ ನಿಷ್ಠ ಅನುಯಾಯಿಗಳಾಗಿದ್ದರು; ಅವರ ತತ್ವಾದರ್ಶಗಳನ್ನು ಹೊತ್ತು ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿರಿಸಿದಂಥ ಧೀಮಂತ ವ್ಯಕ್ತಿಯಾಗಿದ್ದರು. ಸುಮಾರು 1938ರಲ್ಲಿ ಸಮಾಜಸೇವೆ ಹಾಗೂ ರಾಜಕೀಯಕ್ಕೆ ಶ್ರೀಮತಿಯವರು ಪ್ರವೇಶಿಸಿದಂಥ ಕಾಲದಲ್ಲಿ ಆಗಲೇ ಹೇಳಿದಂತೆ ದೇಶಕ್ಕಿನ್ನೂ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ಹೆಣಗಾಡುತ್ತಿದ್ದ ಮಹನೀಯರ ಜೊತೆಯಲ್ಲಿ ಭಾಗಿಯಾಗಲು ಹೊರಟಿದ್ದು ಇವರ ಹೆಗ್ಗಳಿಕೆಗೊಂದು ಸಾಕ್ಷಿ. ಅವರು ಪ್ರಥಮ ಸಂಪುಟ ದರ್ಜೆಯ ಮಹಿಳಾ ಸಚಿವೆಯಾಗಿ ಜವಾಬ್ದಾರಿಯುತವಾದ ಸ್ಥಾನವನ್ನು ಗಿಟ್ಟಿಸಿಕೊಂಡ ಹೆಗ್ಗಳಿಕೆಗೆ ಪಾತ್ರರಾದವರು. ತಮ್ಮ ಕಾರ್ಯಕ್ಷೇತ್ರದಲ್ಲಿ ಅತ್ಯಂತ ದಕ್ಷತೆಯಿಂದ ಕಾರ್ಯನಿರ್ವಹಿಸಿದ ಯಶೋಧರಮ್ಮ ದಾಸಪ್ಪನವರು ಜನಮಾನಸದಲ್ಲಿ ಅಚ್ಚಳಿಯದೆ ಉಳಿದುಬಿಟ್ಟಿದ್ದಾರೆ.

ಯಶೋಧರಮ್ಮ ದಾಸಪ್ಪನವರ ಬಾಲ್ಯ

1905ರಲ್ಲಿ ಯಶೋಧರಮ್ಮ ದಾಸಪ್ಪನವರು ಮೈಸೂರಲ್ಲಿ ಜನಿಸಿದರು. ಇವರ ತಂದೆ ಪ್ರಸಿದ್ಧ ಸಮಾಜ ಸೇವಾಕರ್ತರಾಗಿದ್ದವರು, ತಾಯಿ ರೇವಮ್ಮ ಸಂಪ್ರದಾಯಸ್ಥ ಮಹಿಳೆಯಾಗಿದ್ದರು, ಆದರೆ ತುಂಬ ತಿಳುವಳಿಕಸ್ಥ ಮಹಿಳೆಯಾಗಿದ್ದರು. ಆಗಿನ ದಿವಸಗಳಲ್ಲೆ ಶ್ರೀಮತಿ ರೇವಮ್ಮನವರು ಸುಧಾರಣೆಯ ವಾತಾವರಣಕ್ಕೆ ಹೊಂದಿಕೊಂಡು ಬಿಟ್ಟದ್ದರು. ಮೈಸೂರಿನಲ್ಲಿ ಹುಟ್ಟಿದರೂ ಯಶೋಧರಮ್ಮ ದಾಸಪ್ಪನವರ ಪ್ರಾಥಮಿಕ ಹಾಗೂ ಪ್ರೌಢ ವಿದ್ಯಾಭ್ಯಾಸ ಬೆಂಗಳೂರಿನಲ್ಲಿ ನಡೆಯಿತು. ಇವರು ಪ್ರೌಢ ವಿದ್ಯಾಭ್ಯಾಸವನ್ನು ಬೆಂಗಳೂರಿನ ಲಾರ್ಡ್ ಮಿಷನ್ ಹೈಸ್ಕೂಲಲ್ಲಿ ಮುಗಿಸಿದರು. ಇವರ ವಿದ್ಯಾರ್ಥಿ ಜೀವನದಲ್ಲಿ ಇವರ ಮೇಲೆ ಗಾಢವಾದ ಪ್ರಭಾವ ಬೀರಿದವರು ಎಂದರೆ ಆ ಕಾಲೇಜಿನ ಪ್ರಾಂಶುಪಾಲರಾಗಿದ್ದ ಎಸ್. ಬಟ್ಲರ್ ಎಂಬುವವರು. ಇವರ ಪ್ರಭಾವದಿಂದಾಗಿ ಶ್ರೀಮತಿಯವರಿಗೆ ಸಮಾಜ ಸೇವಾಕರ್ತೆಯಾಗಿ ದುಡಿಯಲು ಸ್ಫೂರ್ತಿ ಸಿಕ್ಕಿತು. ಆನಂತರ ಇವರು ಮದ್ರಾಸಿನಲ್ಲಿ ಕೆಲಕಾಲ ಕಾಲೇಜು ಶಿಕ್ಷಣ ಪಡೆದರು. ಇವರಿಗೆ ಪ್ರಾಪ್ತವಯಸ್ಸಾಗುತ್ತಿದ್ದಂತೆ 1926ರಲ್ಲಿ ಎಚ್.ಸಿ. ದಾಸಪ್ಪನವರೊಂದಿಗೆ ವಿವಾಹವಾಯಿತು. ದಾಸಪ್ಪನವರು ವಕೀಲರಾಗಿಯೂ ಮೈಸೂರು ಪೌರಸಭೆ ಮತ್ತು ಪ್ರಜಾಪ್ರತಿನಿಧಿಸಭೆಯ ಸದಸ್ಯರಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲೇ ಸಮಾಜ ಸೇವಾಕಾರ್ಯದಲ್ಲಿ ಆಸಕ್ತಿ ಹೊಂದಿದ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಸಮಾನ ಮನಸ್ಕರೊಂದಿಗೆ ವಿವಾಹವಾಗಲು ನಿರ್ಧರಿಸಿದ್ದು.

ರಾಜಕೀಯ ಕ್ಷೇತ್ರದಲ್ಲಿ ಅಷ್ಟಾಗಿ ಮಹಿಳೆಯರು ಕಾಣಿಸಿಕೊಳ್ಳದ ದಿನಗಳಲ್ಲಿ, ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ 1962ರಲ್ಲಿ ಹಾಸನ ಜಿಲ್ಲೆಯ ಗಂಡಸಿ ಕ್ಷೇತ್ರದ ಮೂಲಕ ಯಶೋಧರಮ್ಮ ಅವರು ಚುನಾವಣೆಗೆ ಸ್ಪರ್ಧಿಸಿ ವಿಧಾನಸಭೆಗೆ ಆರಿಸಿ ಬಂದರು. ಮುಂದೆ ಅವರು ತಮ್ಮ ಕಾರ್ಯಕ್ಷೇತ್ರದಲ್ಲಿ ಹಿಂತಿರುಗಿ ನೋಡಲೇ ಇಲ್ಲ. ವಿಧಾನಸಭೆಗೆ ಆರಿಸಿ ಬಂದ ಅದೇ ವರ್ಷದಲ್ಲಿ ಇವರು ಸಚಿವ ಸಂಪುಟವನ್ನು ಅಲಂಕರಿಸಿದರು. ರಾಜಕೀಯ ಧುರೀಣರೂ ಹಾಗೂ ಸಮರ್ಥ ರಾಜಕಾರಣಿಗಳೂ ಆಗಿದ್ದ ಎಸ್.ಆರ್.ಕಂಠಿ ಹಾಗೂ ಎಸ್. ನಿಜಲಿಂಗಪ್ಪನವರ ಸಚಿವಸಂಪುಟದಲ್ಲಿ ಈಕೆ ಸಮಾಜ ಕಲ್ಯಾಣ ಇಲಾಖೆಯ ಪ್ರಥಮದರ್ಜೆ ಮಂತ್ರಿಗಳಾಗಿದ್ದರು ಎಂದರೆ ಇವರ ಸಾಮರ್ಥ್ಯವನ್ನು ಕುರಿತು ಹೇಳಬೇಕಾಗಿಲ್ಲ.

ಯಶೋಧರಮ್ಮ ಅವರ ಬದುಕು ಮತ್ತು ರಾಜಕಾರಣ

ಪ್ರತಿಯೊಬ್ಬ ಆಧುನಿಕ ಮಹಿಳೆ ಹೆಚ್ಚಿನ ಜವಾಬ್ದಾರಿಯನ್ನು ಹೊತ್ತು ದುಡಿಯುತ್ತಿರುವುದನ್ನು ಇವತ್ತಿನ ದಿವಸಗಳಲ್ಲಿ ನಾವು ಕಾಣುತ್ತಿದ್ದೇವೆ. ರಾಜಕೀಯ ಮತ್ತು ಕುಟುಂಬ ಎರಡನ್ನು ಎಷ್ಟೋ ಮಂದಿ ಮಹಿಳೆಯರಿಂದ ನಿಭಾಯಿಸಲು ಸಾಧ್ಯವಾಗುವುದಿಲ್ಲ. ಎಲ್ಲೋ ಒಂದು ಕಡೆ ಎರಡರಲ್ಲಿ ಒಂದಕ್ಕೆ ತಾನು ಸಲ್ಲಿಸಬೇಕಾದಷ್ಟು ಸೇವೆಯನ್ನು ಸಲ್ಲಿಸಲಿಲ್ಲವೇನೋ ಎನ್ನುವ ಕೊರಗು ಕಾಡುತ್ತಿದ್ದರೆ ಅದು ಅವರ ತಪ್ಪಲ್ಲ. ಅವರ ಸಾಮರ್ಥ್ಯದ ಬಲ ಎರಡನ್ನು ನಿಭಾಯಿಸುವಷ್ಟಿರಲಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಯಶೋಧರಮ್ಮ ದಾಸಪ್ಪನವರು ಕುಟುಂಬ ಮತ್ತು ರಾಜಕೀಯ ಎರಡಕ್ಕೂ ನ್ಯಾಯ ದೊರಕಿಸಿಕೊಟ್ಟವರು. ಇಬ್ಬರು ಗಂಡುಮಕ್ಕಳನ್ನು ಹೊಂದಿದ್ದ ಯಶೋಧರಮ್ಮ ದಾಸಪ್ಪನವರು ಒಂದು ಹೆಣ್ಣುಮಗುವನ್ನು ಸಾಕಿ ಬೆಳೆಸಿ ದೊಡ್ಡದು ಮಾಡಿದ್ದಾರೆ. ಕುಟುಂಬ ನಿರ್ವಹಣೆಯ ಜವಬ್ದಾರಿಯನ್ನು ಹೊತ್ತಷ್ಟೆ ಸುಲಭವಾಗಿ ರಾಜಕೀಯ ಜವಾಬ್ದಾರಿಯನ್ನು ಸುಲಭವಾಗಿ ಸುಲಲಿತವಾಗಿ ಹೊತ್ತು ನಡೆಸಿಕೊಂಡು ಹೋಗಿದ್ದಾರೆ. ಅವರ ಸಾಮರ್ಥ್ಯದ ಬಲ ಹಾಗಿತ್ತು. ನಾನು ಸಚಿವಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಿನಗಳಲ್ಲಿ ಅಂದರೆ 1962ರಲ್ಲಿ ಅವರು ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿದ್ದರು. ಅಷ್ಟೇನು ದಢೂತಿಯಲ್ಲದಿದ್ದರೂ ತುಸು ಸ್ಥೂಲಕಾಯವೆನಿಸುವ ಶರೀರ ಯಶೋಧರಮ್ಮ ದಾಸಪ್ಪನವರದಾಗಿತ್ತು. ಹೃದಯ ಶ್ರೀಮಂತಿಕೆಯನ್ನು ಹೊಂದಿದ್ದ ಶ್ರೀಮತಿಯವರದು ಸರಳ ಸೌಜನ್ಯದ ನಡವಳಿಕೆಯಾಗಿತ್ತು. ಸದಾ ಶುಭ್ರವಾದ ಖಾದಿ ಉಡುಪಿ ಧರಿಸುತ್ತಿದ್ದ ಯಶೋಧರಮ್ಮ ದಾಸಪ್ಪನವರದು ತೀರ ಸರಳ ವ್ಯಕ್ತಿತ್ವ

ಸಮಾಜಸೇವಕಿಯಾಗಿ, ಸ್ವಾತಂತ್ರ ಹೋರಾಟಗಾರ್ತಿಯಾಗಿ ಸಾಂಸ್ಕೃತಿಕ ಪ್ರತಿನಿಧಿಯಾಗಿ ಮಹತ್ವದ ಪಾತ್ರವನ್ನು ವಹಿಸಿದ್ದ ಯಶೋಧರಮ್ಮ ದಾಸಪ್ಪನವರು ಒಬ್ಬ ಅಸಾಮಾನ್ಯ ಮಹಿಳೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅವರು ವಹಿಸಿದ ಪಾತ್ರವನ್ನು ಮರೆಯುವಂತೆಯೇ ಇಲ್ಲ. ಮಹಿಳೆಯಾಗಿ ಅವರು ತೋರಿದ ಧೈರ್ಯ ಉತ್ಸಾಹ ಶ್ಲಾಘನೀಯ. ಮೈಸೂರು ಚಲೇ ಜಾವ್ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ, ಶಿವಪುರ ಧ್ವಜ ಸತ್ಯಾಗ್ರಹ ಹೀಗೆ ಅನೇಕ ಚಳುವಳಿಗಳಲ್ಲಿ ಪಾತ್ರವಹಿಸಿ ಮಹಿಳೆ ಮನಸ್ಸು ಮಾಡಿದರೆ ಏನೂ ಬೇಕಾದರೂ ಸಾಧಿಸಬಹುದು ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಒಬ್ಬ ವ್ಯಕ್ತಿ ಶಕ್ತಿಯಾಗಿ ದುಡಿದಿರುವುದನ್ನು ನಾವು ಯಶೋಧರಮ್ಮ ದಾಸಪ್ಪನವರರಲ್ಲಿ ಕಾಣುತ್ತೇವೆ. 1938ರಲ್ಲಿ ನ್ಯಾಯವಿಧೇಯಕ ಸಭೆಗೆ ಆಯ್ಕೆಯಾಗಿ "ಪ್ರಥಮ ಮಹಿಳೆ" ಎಂದು ಖ್ಯಾತನಾಮರಾದರು. ನಂತರ 1950ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ "ಪ್ರಥಮ ಅಧ್ಯಕ್ಷಿಣಿ" ಎನ್ನುವ ಕೀರ್ತಿಗೆ ಭಾಜನರಾದರು. 1962ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಚಿವೆಯಾದ ಮೇಲೆ ರಚನಾತ್ಮಕ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರೆಂದೇ ಹೇಳಬೇಕು. ಕೆಲವರಿಗೆ ಬದುಕು ಇರುವುದು ತನಗಾಗಿ ಹೆಚ್ಚೆಂದರೆ ತನ್ನ ಕುಟುಂಬಕ್ಕಾಗಿ. ಆದರೆ ಯಶೋಧರಮ್ಮ ದಾಸಪ್ಪನವರು ಕುಟುಂಬ ನಿರ್ವಹಣೆಯ

ಜೊತೆಗೆ ತಮ್ಮ ಬದುಕನ್ನು ಸಮಾಜಸೇವೆಗಾಗಿ ಮುಡಿಪಾಗಿಟ್ಟರು, ಸಮಾಜಕ್ಕೆ ತಮ್ಮಿಂದ ಏನು ಕೊಡಲು ಸಾಧ್ಯವಿದೆಯೋ ಅದೆಲ್ಲವನ್ನು ಕೊಡಮಾಡಿದರು.

ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿ ಮಹಿಳೆ, ಹಿಂದುಳಿದ ವರ್ಗ, ಮಕ್ಕಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗಗಳ ಕಲ್ಯಾಣಕ್ಕಾಗಿ ಅನೇಕ ರೀತಿಯ ಕಾರ್ಯಕ್ರಮವನ್ನು ರೂಪಿಸಿದರು. 1966ರಲ್ಲಿ ಸರ್ಕಾರದ ಪಾನ ವಿರೋಧ ನೀತಿಯನ್ನು ಸಡಿಲಿಸಿದಾಗ ಅನೇಕ ಬಡಕುಟುಂಬಗಳು ಸರ್ವನಾಶವಾಗುತ್ತದೆಂಬ ಅರಿವಿದ್ದ ಯಶೋಧರಮ್ಮ ದಾಸಪ್ಪನವರು ಅದನ್ನು ಪ್ರತಿಭಟಿಸಿ ನಿಂತ ಏಕೈಕ ಮಹಿಳೆಯಾಗಿದ್ದರು. ಜೀವನದಲ್ಲಿ ಉತ್ತುಂಗ ಸ್ಥಿತಿಗೆ ಏರಿದ್ದರೂ ಸ್ವಲ್ಪವೂ ಅಹಂ ಇಲ್ಲದೆ ಬಡವರ ಹಿಂದುಳಿದ ವರ್ಗದವರ ಏಳಿಗೆಗಾಗಿ ದುಡಿದರು.

ಸಾಮಾಜಿಕ ಸೇವೆಯಲ್ಲಿ ಅವರ ಪಾತ್ರ

ಸಾಮಾಜಿಕ ಸೇವೆಯಲ್ಲಿ ಯಶೋಧರಮ್ಮನವರ ಪಾತ್ರ ಮಹತ್ವಪೂರ್ಣವಾದುದು. ಅನೇಕವರ್ಷಗಳ ಕಾಲ ಹಿಂದಿನ ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿದ್ದ ಇವರು ಸಮಾಜ ಸೇವೆಯಲ್ಲಿ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲವೆಂಬುದನ್ನು ಅರಿತು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡಿ ನಂತರದ ದಿನಗಳಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮದಲ್ಲಿ ತಮ್ಮ ಪೂರ್ಣಕಾಲವನ್ನು ವಿನಿಯೋಗಿಸಿಕೊಂಡರು. ಕಸ್ತೂರಿ ಬಾ ಗಾಂಧೀ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ರೂಪುಗೊಂಡಮೇಲೆ ಗಾಂಧೀಜಿಯವರು ಇವರನ್ನು ಮೈಸೂರು ಸಂಸ್ಥಾನದಲ್ಲಿ ಕಸ್ತೂರಿ ಬಾ ಟ್ರಸ್ಟಿನ ಪ್ರತಿನಿಧಿಯಾಗಿ ನೇಮಿಸಿದರು. ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಲು ಇದು ಅವರಿಗೆ ಬಹಳ ಅನುಕೂಲ ಮಾಡಿಕೊಟ್ಟಿತು. ಮುಂದೆ ಇವರು ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಬಹಳ ಶ್ರಮಿಸಿದರು. ಮಹಿಳೆಯರ ಶಿಕ್ಷಣ, ಕೈಗಾರಿಕಾ ಕೇಂದ್ರಗಳು ಹಾಗೂ ಹೆರಿಗೆ ಆಸ್ಪತ್ರೆಗಳು ಗ್ರಾಮೀಣ ಮಹಿಳೆಯರಿಗಾಗಿ ಸ್ಥಾಪನೆಗೊಂಡವು. ಈ ಎಲ್ಲಾ ಸೇವಾ ಕೇಂದ್ರಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಅದಕ್ಕಾಗಿ ಭೂ ಆಸ್ತಿಗಳನ್ನು ಸಂಗ್ರಹಿಸಿದರು. ಕರ್ನಾಟಕ ಮಹಿಳಾ ಸೇವಾಕರ್ತರಿಗೆ ತರಬೇತಿ ನೀಡಲು ಅರಸೀಕೆರೆ ಬಳಿ ಕಸ್ತೂರಿ ಬಾ ಗ್ರಾಮವನ್ನು ನಿರ್ಮಿಸಿದರು.

ಈ ಎಲ್ಲಾ ಕಾರ್ಯಕ್ರಮಗಳ ಜೊತೆಗೆ ಬಡ ಹೆಣ್ಣುಮಕ್ಕಳಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡುವ ಉದ್ದೇಶದಿಂದ ಗೀತಾ ಕೈಗಾರಿಕಾ ಸಹಕಾರ ಸಂಘವನ್ನು ಸ್ಥಾಪಿಸಿದರು. ಬೆಂಗಳೂರು ಐ.ಟಿ.ಐ. ಸಂಸ್ಥೆಯ ಸಹಯೋಗದೊಂದಿಗೆ ಟೆಲಿಫೋನ್ ಜೋಡಣೆಯ ಉಪಕೇಂದ್ರಗಳನ್ನು ಆರಂಭಿಸಿದರು. ಇದಲ್ಲದೆ ಬೆಂಗಳೂರಿನಲ್ಲಿದ್ದಂಥ ತಮ್ಮ ಮನೆಯಲ್ಲಿ ವಿದ್ಯಾವಂತ ಹರಿಜನ ಬಡ ಹೆಣ್ಣುಮಕ್ಕಳಿಗಾಗಿ ಗಡಿಯಾರದ ಜೋಡಣಾ ಉಪಕೇಂದ್ರವೊಂದನ್ನು ಆರಂಭಿಸಿದರು. ಇದರಿಂದ ವಿದ್ಯಾವಂತರಾದ ಎಷ್ಟೋ ಬಡ ಹೆಣ್ಣುಮಕ್ಕಳಿಗೆ ಉದ್ಯೋಗಾವಕಾಶ ಲಭಿಸಿ ತೃಪ್ತ ಜೀವನವನ್ನು ನಡೆಸಲು ಸಾಧ್ಯವಾಯಿತು. ಇದಕ್ಕೆಲ್ಲಾ ದಾರಿದೀಪವಾದವರು ಯಶೋಧರಮ್ಮ ದಾಸಪ್ಪನವರು. ಇವರ ಸಾಧನೆಯ ಕೈಮೇಲಾಗುತ್ತಿದ್ದಂತೆ ಇವರ ಸೇವೆಯನ್ನು ಗುರುತಿಸಿದ ಭಾರತ ಸರ್ಕಾರ ಇವರಿಗೆ 1973ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನಿತ್ತು ಗೌರವಿಸಿತು. ಇವರು ಸಲ್ಲಿಸಿದ ಅನುಪಮ ಸೇವೆಗೆ ಸಂದ ಗೌರವ ಇದು. ಹಲವಾರು ಇಲಾಖೆಯಲ್ಲಿ ದುಡಿದ ಶ್ರೇಯಸ್ಸು ಕೂಡ ಇವರದಾಗಿದೆ. ಗಾಂಧೀ ಸ್ಮಾರಕ ನಿಧಿ, ಹರಿಜನ ಸೇವಾ ಸಂಘ, ಗ್ರಾಮೀಣ ಮಹಿಳಾ ಸಂಘ, ಸಮಾಜ ಕಲ್ಯಾಣ ಮಂಡಲಿ, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಹೀಗೆ ಹಲವೆಡೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ತಮ್ಮ ವ್ಯಕ್ತಿತ್ವದಿಂದ, ಸಮಾಜ ಸೇವೆಯಿಂದ, ದಕ್ಷ ರಾಜಕಾರಣದಿಂದ, ಇನ್ನು ಹಲವು ಹತ್ತು ಕಾರ್ಯಗಳಿಂದ ಜನಾದರಣೆಯನ್ನು ಸಂಪಾದಿಸಿದ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಪ್ರಾತಃಸ್ಮರಣೀಯರು. ಅವರನ್ನು ಕುರಿತು ಸಂಸ್ಮರಣಾಗ್ರಂಥ ಹೊರತರುತ್ತಿರುವುದು ಹೆಚ್ಚು ಪ್ರಸ್ತುತ.

*

ಅಪರೂಪದ ಚೇತನ

ಎಸ್.ಎನ್.ಸರೋಜಮ್ಮ

ಸುಮಾರು ನಲವತ್ತು-ನಲವತ್ತೈದು ವರ್ಷಗಳ ಹಿಂದೆ ನಡೆದ ಘಟನೆ. ಈಗ ಅದನ್ನು ಹೇಗೆ ಹೇಳಬೇಕೆಂದೇ ಗೊತ್ತಾಗುತ್ತಿಲ್ಲ. ಗೊತ್ತುಗುರಿಯಿಲ್ಲದ ಬದುಕಿಗೊಂದು ಅರ್ಥ ತಂದುಕೊಟ್ಟ ಘಟನೆಯದು. ಅದನ್ನು ನನ್ನ ಮಾತುಗಳಲ್ಲಿ ಬಿತ್ತರಿಸುತ್ತೇನೆ.

ತುಮಕೂರು ತಾಲ್ಲೂಕು ಸಾಸಲು ನನ್ನ ಹುಟ್ಟೂರು. ಯಾವುದೇ ಸೌಲಭ್ಯ ಅಥವಾ ನಾಗರಿಕತೆಯ ಸೋಂಕಿಲ್ಲದ ಕುಗ್ರಾಮ. ಮೂರು ಗಂಡು, ಐದು ಹೆಣ್ಣುಮಕ್ಕಳ ದೊಡ್ಡ ಕುಟುಂಬ ನಮ್ಮದು. ಅ ಕುಟುಂಬದ ಕೊನೆಯ ಹೆಣ್ಣುಮಗಳಾಗಿ ಹುಟ್ಟಿದ ನನಗೆ ಹೆತ್ತವರ ಸ್ವಾಗತವಾಗಲಿ, ಮಗು ಹುಟ್ಟಿದಕ್ಕೆ ಅಕ್ಕಪಕ್ಕದವರ ಸಂಭ್ರಮವಾಗಲಿ ದೊರೆಯಲಿಲ್ಲ.

ಶಾನುಭೋಗಿಕೆಯ ಜೊತೆ ಅಷ್ಟಿಷ್ಟು ಜಮೀನಿದ್ದ ಅತ್ಯಂತ ಸಾಮಾನ್ಯ ಕುಟುಂಬ ನಮ್ಮದು. ಆರ್ಥಿಕ ಸಂಕಷ್ಟದಿಂದ ಯಜಮಾನಿಕೆಯನ್ನು ಗಂಡುಮಕ್ಕಳಿಗೆ ಬಿಟ್ಟುಕೊಟ್ಟು, ಅವರ ಆಶ್ರಯದಲ್ಲಿದ್ದ ಅಪ್ಪ; ಸದಾ ರೋಗ ರುಜಿನಗಳಿಂದ ನರಳಿ ಬೆಂಡಾಗಿ ಬದುಕಿನ ಬಗ್ಗೆ ಜುಗುಪ್ಸೆಗೊಂಡು ಮನೋರೋಗಿಯಾಗಿದ್ದ ಅಮ್ಮ. ತಮ್ಮ ತಮ್ಮ ಬದುಕಿನಲ್ಲಿ ತಲ್ಲೀನರಾದ ಅಣ್ಣ ಹಾಗೂ ಅಕ್ಕಂದಿರು. ಇಂತಹ ಬಾಲ್ಯ ಕಳೆದ ನನಗೆ ಬುದ್ಧಿ ಬರುವ ಮೊದಲೇ ಮದುವೆಯಾಗಿ, ತಿಳುವಳಿಕೆ ಬರುವ ಮುಂಚೆ ಗಂಡುಮಗು ಮಡಿಲಿಗೆ ಬಂದು, ಆ ಗಂಡನೂ ನನ್ನ ಕೈಬಿಟ್ಟ ದುಸ್ತರ ಸನ್ನಿವೇಶವದು.

ಐವತ್ತರ ದಶಕದಲ್ಲಿ ಸಾಮಾನ್ಯ ಕುಟುಂಬದ ಹೆಣ್ಣುಮಗಳೊಬ್ಬಳು ಇಂತಹ ಸ್ಥಿತಿಗೆ ಒಳಪಟ್ಟರೆ ಹೇಗಿರುತ್ತದೆಂಬುದು ಇಂದಿನ ಯುವಪೀಳಿಗೆಗೆ ಊಹಿಸಲೂ ಸಾಧ್ಯವಾಗದ ವಿಚಾರವಾಗಿದೆ. ಅಂತಹ ಸಂದರ್ಭದಲ್ಲೂ ಹಲವರ ಸಲಹೆ ಒತ್ತಾಸೆಗಳ ನಡುವೆ ಚಿಕ್ಕನಾಯಕನಹಳ್ಳಿಯಲ್ಲಿದ್ದ ಅಕ್ಕನ ಮನೆಗೆ ಪಯಣ. ಎಲ್.ಎಸ್. ಪಾಸ್ ಮಾಡಿ ಮೂರು ವರ್ಷಗಳ ಪ್ರೌಢಶಾಲಾ ತರಗತಿಗಳಿಗೆ ಹಾಜರಾಗಿ ಒಂದೇಸಲಕ್ಕೆ ಎಸ್.ಎಸ್.ಎಲ್.ಸಿ ಪಾಸ್ ಮಾಡಿದಾಗ ಹಿಮಾಲಯದ ಗೌರಿಶಂಕರ ತುತ್ತತುದಿಗೆ ಏರಿದ ಅನುಭವ. ಈ ದುರ್ಗಮಯ ಪ್ರಯಾಣದಲ್ಲಿ ಹತ್ತು ಹಲವು ಕೈಗಳಿಂದ ಸಾಂತ್ವನ. ಎದೆಗೆ ಅಪ್ಪಿಕೊಂಡು ದುಃಖದ ಹೊರೆ ಕಡಿಮೆ ಮಾಡಿದ ಚೈತನ್ಯ ಸ್ವರೂಪಿ ವ್ಯಕ್ತಿಗಳು.

ಪ್ರಾಣಿ ಹಾಗೂ ಮನುಷ್ಯರಲ್ಲಿ ಪ್ರಮುಖ ವ್ಯತ್ಯಾಸ ಇದೆ. ಪ್ರಾಣಿಲೋಕದಲ್ಲಿ ಯಾವುದೇ ಕಷ್ಟಗಳು ಬಂದರೆ ಅದನ್ನು ಅವುಗಳೇ ಅನುಭವಿಸಬೇಕಾಗುತ್ತದೆ. ಕೆಲವೊಮ್ಮೆ ಅದರ ಸಹಜೀವಿಗಳು ಕಣ್ಣೀರು ಸುರಿಸಿ ಸಾಂತ್ವನ ಹೇಳಬಹುದು. ಮನುಷ್ಯನ ಬದುಕು ಹಾಗಲ್ಲ. ಅಂತಹ ಕಷ್ಟ ಎದುರಿಸುವ ವ್ಯಕ್ತಿಗಳಿಗೆ ಸಂದರ್ಭೋಚಿತವಾಗಿ ಸಾಂತ್ವನ ನೀಡಿ ಬಂದಿರುವ ಕಷ್ಟಗಳ ಹೊರೆ ಕಡಿಮೆ ಮಾಡುವ ಹತ್ತಾರು ಸತ್‌ಶಕ್ತಿಗಳು ಅಲ್ಲಲ್ಲಿ ಕಾಣುತ್ತವೆ.

ಅಷ್ಟೇಅಲ್ಲ, ಮಹಾತ್ಮರು ಸಮುದಾಯದ ಕಷ್ಟವನ್ನು ಸ್ವಪ್ರೇರಣೆಯಿಂದ ತಮ್ಮ ಮೇಲೆ ಆಹ್ವಾನಿಸಿಕೊಂಡು ಜನಸಮೂಹಕ್ಕೆ ಪರಿಹಾರವನ್ನು ನೀಡಿದ ಅನೇಕ ಸನ್ನಿವೇಶಗಳಿವೆ. ಇಂತಹ ದೇವತಾ ಮನುಷ್ಯರಿಂದಲೇ ನಮ್ಮ ಸಂಸ್ಕೃತಿ ಮತ್ತು ನಾಗರಿಕತೆಗಳು ಉನ್ನತೀಕರಣ ಪಡೆಯುತ್ತಾ ಹೋಗಿರುವುದನ್ನು ನಾವು ಕಾಣಬಹುದು.

ಎಸ್.ಎಸ್.ಎಲ್.ಸಿ. ಪಾಸಾಗಿ ನಂತರ ಚಿಕ್ಕನಾಯಕನಹಳ್ಳಿಯಲ್ಲಿಯೇ ನಮ್ಮ ಮನೆಯ ಎದುರಿಗಿದ್ದ ಗಾಂಧೀವಾದಿ ಜಿ.ವಿ.ನಾರಾಯಣಮೂರ್ತಿಯವರನ್ನು ಅವರ ತಾಯಿ ಸಲಹೆಯಂತೆ ಅವರಿಗೆ ಕೊಬ್ಬರಿ ಸಕ್ಕರೆ ಕೊಡಲೆಂದು ಅಟ್ಟ ಏರಿ ಹೋದೆ. ಯಾವುದೋ ಬರಹದಲ್ಲಿ ತಲ್ಲೀನರಾಗಿದ್ದ ನಾರಾಯಣಮೂರ್ತಿ ಕಣ್ಣೆತ್ತಿ ನನ್ನನ್ನೊಮ್ಮೆ ಅಕ್ಕರೆಯಿಂದ ನೋಡಿ "ಏನಮ್ಮಾ" ಎಂದರು. ಪುಟ್ಟ ಹುಡುಗಿಯಂತೆ 'ಎಸ್.ಎಸ್.ಎಲ್.ಸಿ. ಪಾಸಾದೆ' ಎನ್ನುತ್ತಾ ಕೊಬ್ಬರಿ ಸಕ್ಕರೆ ಬಟ್ಟಲನ್ನು ಅವರ ಮುಂದೆ ಹಿಡಿದೆ. ಒಂದೇ ಚಿಟಿಕೆ ಕೊಬ್ಬರಿ ಸಕ್ಕರೆ ಬಾಯಿಗೆ ಹಾಕಿಕೊಂಡು, "ನಿನ್ನ ಅಣ್ಣ ದೊರೆಸ್ವಾಮೀನ ಕರೆದುಕೊಂಡು ಬೆಂಗಳೂರಿಗೆ ಮಂತ್ರಿ ಯಶೋಧರಮ್ಮ ದಾಸಪ್ಪ ಅವರನ್ನು ಕಾಣು. ನಾನು ಅವರಿಗೊಂದು ಪತ್ರ ಕೊಡುತ್ತೇನೆ" ಎಂದರು. ನನಗೆ ಬಾಯಿಯಿಂದ ಶಬ್ದವೇ ಹೊರಡಲಿಲ್ಲ. ನಮಸ್ಕರಿಸಿ ಅಲ್ಲಿಂದ ಜಾಗ ಖಾಲಿ ಮಾಡಿದೆ. ನಾನು ಜಿ.ವಿ.ನಾರಾಯಣಮೂರ್ತಿ ಅವರನ್ನು ಅಷ್ಟು ಹತ್ತಿರದಿಂದ ನೋಡಿರಲಿಲ್ಲ. ನನಗೂ ಅವರ ವಿಚಾರ ಅಷ್ಟೊಂದು ತಿಳಿದಿರಲಿಲ್ಲ. ನನ್ನ ಬಗ್ಗೆ ಒಂದಿಷ್ಟು ವಿಚಾರವನ್ನು ಅವರ ತಾಯಿಯವರೇ ಹೇಳಿದ್ದಿರಬಹುದು. ಜಿ.ವಿ.ನಾರಾಯಣಮೂರ್ತಿ ಅವರು ಆ ಹೊತ್ತಿಗಾಗಲೇ ಖ್ಯಾತ ಗಾಂಧಿ ವಿಚಾರಧಾರೆ ಚಿಂತಕರಲ್ಲಿ ಒಬ್ಬರಾಗಿದ್ದರು. ಅವರು ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದರು. ಸ್ವಾತಂತ್ರ್ಯಪೂರ್ವದಲ್ಲಿ 'ದೇಶೀಯ ವಿದ್ಯಾಪೀಠ' ಎಂಬ ಸಂಸ್ಥೆಯನ್ನು ಚಿಕ್ಕನಾಯಕನಹಳ್ಳಿಯಲ್ಲಿ ಸ್ಥಾಪಿಸಿ, ಆ ಪ್ರದೇಶದ ಶೈಕ್ಷಣಿಕ ಅಭಿವೃದ್ಧಿಗೆ ಕಾರಣಕರ್ತರಾಗಿದ್ದರು. ಜನತೆಗೆ ಅವರನ್ನು ಕಂಡರೆ ಭಯಮಿಶ್ರಿತವಾದ ಗೌರವ. ಅಂತಹವರ ಮನಸ್ಸಿನಲ್ಲಿ ನನಗೊಂದು ಸ್ಥಾನ ದೊರೆತಿದೆ ಎಂದರೆ ಅದೊಂದು ಭಾಗ್ಯವಲ್ಲವೇ ಎಂಬ ಸಂಭ್ರಮ ನನ್ನದು. ಉದಾರ ಮನಸ್ಸಿನ ವ್ಯಕ್ತಿಗಳು ದೇವರಿದ್ದ ಹಾಗೆ. ನಾವು ದೇವರನ್ನು ಪ್ರಾರ್ಥಿಸುವುದು ಬೇಕಾಗಿಲ್ಲ. ಆತನೇ ನಮ್ಮ ಕಷ್ಟಗಳನ್ನು ತಿಳಿದು ಪರಿಹಾರ ನೀಡುತ್ತಾನೆ.

ನಾರಾಯಣಮೂರ್ತಿಯವರು ಹೇಳಿದಂತೆ ಪತ್ರ ಸಿದ್ಧ ಮಾಡಿ ತಮ್ಮ ತಾಯಿಯವರ ಮೂಲಕ ನನಗೆ ಕಳುಹಿಸಿಕೊಟ್ಟರು. ನಮ್ಮೂರು ಸಾಸಲಿಗೆ ಬಂದು ನಮ್ಮ ಅಣ್ಣ ದೊರೆಸ್ವಾಮಿ ಜೊತೆ ಸಚಿವರನ್ನು ನೋಡಲು ಬೆಂಗಳೂರಿಗೆ ಹೊರಟೆನು. ಆಗ ಬೆಂಗಳೂರಿಗೆ ಹೋಗುವುದೇ ದೊಡ್ಡ ಸಾಹಸವಾಗಿತ್ತು. ಕುಗ್ರಾಮದಿಂದ ಬಂದ ನನಗೆ ಚಿಕ್ಕನಾಯಕನಹಳ್ಳಿಯೇ ದೊಡ್ಡ ಊರಾಗಿತ್ತು. ಇನ್ನು ಬೆಂಗಳೂರು ಕೇಳಬೇಕೇ? ಅಲ್ಲಿರುವ ಸಚಿವರು, ಇನ್ನು ಅವರು ನಮ್ಮಂತಹ ಸಾಮಾನ್ಯರನ್ನ ನೋಡುವವರೇ ಎಂಬುದರ ಬಗ್ಗೆ ಅನುಮಾನ. ಹೇಗೇ ಇರಲಿ ಎಂದುಕೊಂಡು ಅಣ್ಣನ ಜೊತೆ ಬೆಂಗಳೂರಿನ ಬಸ್‌ಸ್ಟ್ಯಾಂಡ್‌ನಲ್ಲಿ ಇಳಿದು ಸಚಿವೆ ಯಶೋಧರಮ್ಮ ಅವರ ಮನೆಯನ್ನು ಹುಡುಕುತ್ತಾ ಹೊರಟೆವು.

ನನಗೆ ಜ್ಞಾಪಕ ಇರುವಂತೆ ಅಂದು ಬಾಲಬ್ರೂಯಿ ಹತ್ತಿರದ ಗಾಲ್ಫ್ ರಸ್ತೆಯ ಸ್ವತಂತ್ರ ಮನೆಯೊಂದು ಸಮಾಜ ಕಲ್ಯಾಣ ಸಚಿವರ ಅಧಿಕೃತ ನಿವಾಸವಾಗಿತ್ತು. ನಮ್ಮ ಪುಣ್ಯಕ್ಕೆ ಅಂದು ಸಚಿವರಿದ್ದರು. ಅವರ ಆಪ್ತ ಸಹಾಯಕ ನಮ್ಮ ವಿವರ ಕೇಳಿ 'ಕುಳಿತುಕೊಳ್ಳಿ, ಮೇಲೆ ಯಾರೋ ಅಧಿಕಾರಿಗಳು ಬಂದಿದ್ದಾರೆ. ಮೇಡಂ ಅವರ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದಾರೆ. ಆಮೇಲೆ ಕಳುಹಿಸುತ್ತೇನೆ' ಎಂದರು. ಕಾದೆವು. ಸುಮಾರು ಹೊತ್ತು ಆದ ಮೇಲೆ ನಮ್ಮಣ್ಣನ ಜೊತೆ ಸಚಿವರನ್ನು ನೋಡಲು ನಮ್ಮನ್ನು ಬಿಟ್ಟರು. ನಮಸ್ಕಾರ ಮಾಡಿ ನಿಂತಿದ್ದೆವು. ಕಣ್ಣಲ್ಲೇ 'ಏನು' ಎಂಬಂತೆ ಯಶೋಧರಮ್ಮ ಪ್ರಶ್ನಿಸಿದರು. ಜಿ.ವಿ. ನಾರಾಯಣಮೂರ್ತಿ ಕಳುಹಿಸಿದ್ದಾರೆ ಎನ್ನುತ್ತಾ ಪತ್ರವನ್ನು ಕೊಟ್ಟೆವು. ತಾವೇ ಕವರ್ ಒಡೆದು, ಓದಿ, ನಿಂತಿದ್ದ ನಮ್ಮ ಕಡೆ ತಿರುಗಿ 'ಅಯ್ಯೋ ಮರೆತುಬಿಟ್ಟೆ, ನಿಂತೇ

ಇದ್ದೀರಾ ಕುಳಿತುಕೊಳ್ಳಿ' ಎಂದರು. ನನ್ನ ಕಡೆ ನೋಡುತ್ತಾ 'ಕುಳಿತುಕೊಳ್ಳಮ್ಮಾ' ಎನ್ನುತ್ತಾ ತಾವೇ ಎದ್ದು ಬಾಗಿಲ ಬಳಿ ಬಂದು ಆಪ್ತ ಸಹಾಯಕರನ್ನು ಕರೆದು 'ಇವರು ಬಂದು ಎಷ್ಟು ಹೊತ್ತಾಯಿತೆಂದು' ಪ್ರಶ್ನಿಸಿದರು. ಆಗ ಆಪ್ತ ಸಹಾಯಕ 'ಸುಮಾರು ಎರಡು ಘಂಟೆ ಆಗಿರಬಹುದು ಮೇಡಂ, ತಾವು ಸಾಹೇಬರೊಂದಿಗೆ ಚರ್ಚೆ ಮಾಡುತ್ತಿದ್ದೀರಲ್ಲ, ಅದಕ್ಕೆ ನಾನು ಇವರನ್ನು ಇಲ್ಲೇ ಕೂರಿಸಿದ್ದೆ' ಎಂದರು. ಅವರ ಮಾತು ಕೇಳುತ್ತಲೇ ಯಶೋಧರಮ್ಮ ಅವರಿಗೆ ತಟಕ್ಕನೆ ಕೋಪ ನೆತ್ತಿಗೇರಿತು. "ಎನ್ರೀ ನೀವು ಹೇಳೋದು, ನಮ್ಮ ಆಫೀಸರ್ ಬಂದು ಮಾತನಾಡುತ್ತಿದ್ದರೆ ಇವರನ್ನ ಒಳಗೆ ಬಿಡುವುದಕ್ಕೆ ನಿಮಗೇನು ತೊಂದರೆ? ಇವರನ್ನು ಯಾರು ಕಳುಹಿಸಿದ್ದಾರೆ ಎಂದು ಗೊತ್ತಿದ್ಯಾ? ಅಪ್ಪಟ ಗಾಂಧೀವಾದಿ ಜಿ.ವಿ.ನಾರಾಯಣ ಮೂರ್ತಿ ಅವರು ಕಳುಹಿಸಿದ್ದಾರೆ. ಸಾಮಾನ್ಯವಾಗಿ ನಾರಾಯಣಮೂರ್ತಿ ತುರ್ತು ಅಲ್ಲದಿದ್ದರೆ ಯಾರಿಗೂ ಪತ್ರ ಕೊಡುವುದಿಲ್ಲ. ನಾನು ಇವರನ್ನು ಕಾಯಿಸಿಬಿಟ್ಟೆ ಎಂಬುದು ಅವರಿಗೆ ಗೊತ್ತಾದರೆ ಅವರು ಏನು ಅಂದ್ಕೋತಾರೆ?.. .. .." ಹೀಗೆ ಯಶೋಧರಮ್ಮ ಅವರ ವಾಗ್ಝರಿ ಸಾಗುತ್ತಾ ಹೋಯಿತು. ಮಧ್ಯೆ ಮಾತನಾಡಿದರೆ ಏನಾದರೂ ತಪ್ಪಾಗುತ್ತೋ ಎಂದು ನಾವು ಸುಮ್ಮನಿದ್ದೆವು. ಸ್ವಲ್ಪ ಹೊತ್ತು ಆದಮೇಲೆ ಅವರೇ ತಮ್ಮ ಆಪ್ತ ಸಹಾಯಕರ ಕಡೆ ತಿರುಗಿ, "ಆ ಹುಡುಗಿ ಕೈಯಲ್ಲಿ ಒಂದು ಅರ್ಜಿ ಬರೆಸಿಕೊಳ್ಳಿ, ಅಲ್ಲ ನೀವೇ ಅರ್ಜಿ ಬರೆದು ಅವರಿಂದ ರುಜು ತಗೊಳ್ಳಿ" ಎಂದರು. ನಮ್ಮತ್ತ ತಿರುಗಿ 'ನೋಡಿ, ನಾರಾಯಣಮೂರ್ತಿ ನನ್ನ ಹಿರಿಯ ಸಹೋದರ ಇದ್ದಂತೆ. ಮಂತ್ರಿ ಆದ ಮೇಲೆ ಯಶೋಧರಮ್ಮನಿಗೆ ತಲೆತಿರುಗಿದೆ ಎಂದು ಅಂದುಕೊಂಡರೆ ನನಗೆ ಒಳ್ಳೆಯದಾಗಲ್ಲ' ಎಂದರು. ಇಡೀ ಸನ್ನಿವೇಶವೇ ನಮಗೆ ಏನೂ ಮಾತನಾಡದಂತೆ ಬಾಯಿಗೆ ಬೀಗ ಹಾಕಿಸಿತ್ತು. ಯಶೋಧರಮ್ಮ ಅವರ ನಡವಳಿಕೆಯಿಂದ ನಾವು ಮೂಕರಾಗಿಬಿಟ್ಟಿದ್ದೆವು. ಅತ್ಯಂತ ಶ್ರೀಸಾಮಾನ್ಯನೊಬ್ಬ, ಅದರಲ್ಲೂ ಸಹಾಯ ಯಾಚಿಸಿ ಬರುವ ವ್ಯಕ್ತಿಯೊಡನೆ ಸಚಿವರು ಹೀಗೆ ವರ್ತಿಸುತ್ತಾರೆಂಬುದು ಆಶ್ಚರ್ಯಕರವಾದ ವಿಚಾರವಲ್ಲವೆ? ನಾನೇ ಆ ಸನ್ನಿವೇಶಕ್ಕೆ ಸಾಕ್ಷಿಯಾಗಿದ್ದ ಕಾರಣ ಅದನ್ನು ನಂಬಬೇಕೆ ಹೊರತು, ಇಲ್ಲದಿದ್ದರೆ ಸಚಿವರುಗಳು ಹೀಗಿರುವುದುಂಟೆ? ಎಂದು ಅನುಮಾನ ವ್ಯಕ್ತಪಡಿಸುತ್ತಿದ್ದೆ.

ಸಚಿವರ ಅಣತಿಯಂತೆ ಆಪ್ತ ಸಹಾಯಕರು ತಾವೇ ಅರ್ಜಿ ಬರೆದು, ನನ್ನಿಂದ ರುಜು ಹಾಕಿಸಿಕೊಂಡು, 'ನೀವಿನ್ನು ಯೋಚನೆ ಮಾಡಬೇಡಿ, ನಿಮ್ಮ ಕೆಲಸ ಆದ ಹಾಗೆ, ನೀವು ಹೊರಡಿ, ನಿಮ್ಮ ಮನೆ ಬಾಗಿಲಿಗೆ ಕೆಲಸದ ಆರ್ಡರ್ ಬರುತ್ತದೆ' ಎಂದರು.

ದೇವಲೋಕ ಗೆದ್ದು ಬಂದ ಹೆಮ್ಮೆಯೊಡನೆ ಹೊರಗೆ ಬಂದೆ. ಇದು 1962ರ ಮೇ ತಿಂಗಳಲ್ಲಿ ನಡೆದ ಘಟನೆ. ದುರಾದೃಷ್ಟ ನನ್ನ ಬೆನ್ನು ಹತ್ತಿತ್ತು. ಆ ಹೊತ್ತಿಗೆ ಚೀನಾ–ಭಾರತ ಯುದ್ಧ ಪ್ರಾರಂಭವಾಗಿ ಯಾವುದೇ ಸರ್ಕಾರಿ ನೇಮಕಾತಿ ಮಾಡಿಕೊಳ್ಳದಂತೆ ಆದೇಶ ಜಾರಿಗೆ ಬಂತು. ಮತ್ತೊಮ್ಮೆ ನಾನಾದರೂ ಗಾಡಾಂಧಕಾರದಲ್ಲಿ ಮುಳುಗಿದ್ದೆ.

ಇಂತಹ ಸನ್ನಿವೇಶದಲ್ಲಿ ನನ್ನ ಸಹೋದರ ಸಂಬಂಧಿಯೊಬ್ಬರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕರೆದಿದ್ದ 'ಹೆಲ್ತ್ ವಿಜಿಟರ್' ಹುದ್ದೆಗೆ ನನ್ನ ಪರವಾಗಿ ಅರ್ಜಿ ಸಲ್ಲಿಸಿದ್ದರು. ಅನೇಕ ದಿನಗಳ ನಂತರ ಆ ಹುದ್ದೆಗೆ ಸಂದರ್ಶನ ಕರೆದರು. 'ಹುದ್ದೆಯೇನೋ ಚೆನ್ನಾಗಿದೆ. ರೆಕಮೆಂಡೇಶನ್ ಮಾಡಿಸಿದರೆ ಒಳ್ಳೆಯದು' ಎಂದರು ಕೆಲವರು. ಆಗ ನನಗೆ ಯಶೋಧರಮ್ಮ ಅವರು ನೆನಪಿಗೆ ಬಂದರು. ಅಣ್ಣನ್ನ ಕರೆದುಕೊಂಡು ಅವರ ನಿವಾಸಕ್ಕೆ ಹೊರಟೆ. ಮುಸ್ಸಂಜೆ ಹೊತ್ತು, ಅವರಿಗೆ ನನ್ನ ಮುಖ ನೋಡಿದ ತಕ್ಷಣ ನನ್ನೆಲ್ಲಾ ಕಷ್ಟಗಳು ಜ್ಞಾಪಕಕ್ಕೆ ಬಂದವೆನಿಸಿತು. 'ಅಯ್ಯೋ, ನಿನ್ನ ಕಷ್ಟ ನನಗೆ ಗೊತ್ತಮ್ಮ. ನಾರಾಯಣಮೂರ್ತಿಯವರು ಹಾಗೆಲ್ಲಾ ಹೇಳೋರೇ ಅಲ್ಲ. ನಮ್ಮ ಇಲಾಖೆಯಲ್ಲಿ ನೇಮಕಾತಿ ಮಾಡಿಕೊಳ್ಳುವ ಹಾಗಿಲ್ಲ' ಎಂದರು. ಆಗ ನಾನು ಧೈರ್ಯವಾಗಿ 'ಮೇಡಂ, ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಹೆಲ್ತ್ ವಿಜಿಟರ್ ಹುದ್ದೆಗೆ ಇಂಟರ್‌ವ್ಯೂ ಬಂದಿದೆ.

ಡೈರೆಕ್ಟರ್ ಶ್ಯಾಮಶಾಸ್ತ್ರಿ ಅವರಿಗೆ ತಾವು ಒಂದು ಮಾತು ಹೇಳಬೇಕು ಎಂದೆ' ತಕ್ಷಣ ಯಶೋಧರಮ್ಮ ಶ್ಯಾಮಶಾಸ್ತ್ರಿಯವರಿಗೆ ಫೋನ್ ಕೊಡುವಂತೆ ಹೇಳಿದರು. ಕೆಲವೇ ಕ್ಷಣಗಳಲ್ಲಿ ಶ್ಯಾಮಶಾಸ್ತ್ರಿ ಸಂಪರ್ಕಕ್ಕೆ ಬಂದರು. ಯಶೋಧರಮ್ಮ ಅವರ ಧ್ವನಿಯೇ ಹಾಗಿತ್ತು. ಆದೇಶ ನೀಡುವಂಥ ಧ್ವನಿ ಅವರದು. ಆ ಕಡೆಯಿಂದ ಈ ಹುದ್ದೆಗೆ ಅರ್ಜಿಯಲ್ಲಿ ಗಂಡನ ಅನುಮತಿ ಪತ್ರ ಇಲ್ಲ ಎಂಬ ವಿಚಾರ ಹೇಳಿರಬೇಕು. ತಕ್ಷಣ ಯಶೋಧರಮ್ಮ "ಏನ್ರೀ, ಮಹಿಳೆಯರು ಕೆಲಸ ಮಾಡಬೇಕಾದರೆ ಅದಕ್ಕೆ ತಂದೆ, ಗಂಡ ಮತ್ತು ಮಗನ ಅನುಮತಿ ಪತ್ರ ತರಬೇಕೆ? ಮಹಿಳೆಯರಿಗೇನು ವ್ಯಕ್ತಿತ್ವ ಇಲ್ವೇ? ಕೊನೆ ಪಕ್ಷ ದುಡಿದು ಬದುಕುವಷ್ಟು ಸ್ವಾತಂತ್ರ್ಯ ಕೂಡ ಅವಳಿಗೆ ಇಲ್ಲವೇ? ಅವಳಿಗೆ ಸಂಬಂಧಪಟ್ಟ ನಿರ್ಧಾರವನ್ನೆಲ್ಲಾ ಬೇರೆಯವರು ತೆಗದುಕೊಳ್ಳಬೇಕಾ?" ಎಂದು ಗುಡುಗಿ, 'ಈಕೆಗೆ ಕೆಲಸ ಕೊಟ್ಟು ಆಮೇಲೆ ನನಗೆ ತಿಳಿಸಿ' ಎಂದು ಫೋನ್ ಇಟ್ಟರು.

ಆಮೇಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೆಲಸವೇನೋ ದೊರೆಯಿತು. ಎರಡೂವರೆ ವರ್ಷಗಳ ಕಾಲ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತರಬೇತಿ ಪಡೆದು ಮೈಸೂರು, ತುಮಕೂರು, ಚಿತ್ರದುರ್ಗ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಆತ್ಮಸಾಕ್ಷಿಗನುಗುಣವಾಗಿ ಸೇವೆ ಸಲ್ಲಿಸಿ ನಿವೃತ್ತಿಯಾದೆ. ನೂರಾರು ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ಕಾಪಾಡುವಲ್ಲಿ ತುಸು ಕೆಲಸ ಮಾಡಿದ ಪುಣ್ಯ ನನ್ನದು. ಇಂತಹ ಶ್ರೇಷ್ಠ ಸೇವಾ ಕೆಲಸ ಮಾಡುತ್ತಾ, ಸ್ವಾಭಿಮಾನದ ಬದುಕನ್ನು ನಡೆಸಲು ಅವಕಾಶ ಮಾಡಿಕೊಟ್ಟವರು ಪೂಜ್ಯ ಯಶೋಧರಮ್ಮ ಅವರು. ಅನಂತರ ಅವರನ್ನು ನಾನೆಂದೂ ಹೋಗಿ ಕಂಡಿಲ್ಲ. ಅವರಿಗೆ ಮಾತಲ್ಲಿ ಕೃತಜ್ಞತೆ ಕೂಡ ಹೇಳಲಿಲ್ಲ. ನನ್ನಂಥ ಸಾವಿರಾರು ಜನರಿಗೆ ಬೇರೆ ಬೇರೆ ರೀತಿ ಉಪಕಾರ ಮಾಡಿ ಅವರ ಬದುಕಿಗೆ ಬೆಳಕು ನೀಡಿದ್ದಾರೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಅವರಿಗೆ ಕೃತಜ್ಞತೆ ಬಯಸುತ್ತಾ ಅವರ ನೆನಪು ಹೃದಯದಲ್ಲಿ ಸದಾ ಹಸಿರಾಗಿದೆ. ಪ್ರತಿನಿತ್ಯ ದೇವರಿಗಿಂತ ಮೊದಲು ಅವರನ್ನು ನೆನೆಯುತ್ತೇನೆ. ಜೊತೆಗೆ ಅವರು ನೀಡಿದ ಕೆಲಸದಲ್ಲಿ ಕಾಯಾವಾಚಾಮನಸಾ ನನ್ನನ್ನು ತೊಡಗಿಸಿಕೊಂಡ ಕಾರಣ ನನಗೆ ಬದುಕಿನಲ್ಲಿ ಸಂತೃಪ್ತಿ ದೊರೆತಿದೆ. ಅನಂತರ ಮತ್ತಷ್ಟು ಕೆಲಸ ಮಾಡುವ ಬಗ್ಗೆ ಪ್ರೇರಣೆ ದೊರೆತಿದೆ.

ಮಹಿಳಾ ಕಲ್ಯಾಣದ ಬಗ್ಗೆ ಭಾಷಣ ಮಾಡುವವರು ಅನೇಕರಿದ್ದಾರೆ. ರಚನಾತ್ಮಕ ಕಾರ್ಯಗಳಿಂದ ಮಹಿಳೆಯರ ಬಾಳಿಗೆ ಆಪದ್ಬಾಂಧವರು ಎನಿಸಿಕೊಂಡವರು ಬೆರಳೆಣಿಕೆಯ ಜನ ಮಾತ್ರ. ಅವರಲ್ಲಿ ಯಶೋಧರಮ್ಮ ಮೊದಲಿಗರು. ಮಹಿಳಾ ಸಬಲೀಕರಣಕ್ಕಾಗಿ ತಮ್ಮ ಬದುಕನ್ನು ಮೀಸಲಾಗಿಟ್ಟವರು. ಸಚಿವರು ಹೇಗಿರಬೇಕೆಂಬುದಕ್ಕೆ ಉದಾಹರಣೆಯಂತಿದ್ದವರು. ಮೌಲ್ಯಾಧಾರಿತ ಎಂಬುದನ್ನು ಬದುಕು ಹಾಗೂ ರಾಜಕಾರಣ ಎರಡಕ್ಕೂ ಅನ್ವಯಿಸಿ ಬಾಳಿದ ಅಪರೂಪದ ಚೇತನ ನಮ್ಮ ಯಶೋಧರಮ್ಮ ದಾಸಪ್ಪ.

——— * ———

ತ್ಯಾಗಮಯಿ

ಪ್ರೊ. ಬಿ.ಎಲ್. ಭಾಗ್ಯಲಕ್ಷ್ಮಿ

ನನಗೆ ಯಶೋಧರಮ್ಮ ದಾಸಪ್ಪ ಅವರು ದೂರದ ಸಂಬಂಧಿಯೆಂದು ಹೇಳಿಕೊಳ್ಳಲಿಕ್ಕೆ ಅಭಿಮಾನ, ಹೆಮ್ಮೆ ಎನಿಸುತ್ತಿದೆ. ಕರ್ನಾಟಕದ ಚರಿತ್ರೆಯಲ್ಲಿ ಹೊಸದೊಂದು ಸಂವೇದನೆಯನ್ನು ಸೃಷ್ಟಿಸಿದ ಮಹಾನ್ ಅಗ್ರಗಣ್ಯ ಸ್ವಾತಂತ್ರ್ಯ ಹೋರಾಟಗಾರ್ತಿ, ಸ್ತ್ರೀಸಬಲೀಕರಣಕ್ಕಾಗಿ ದುಡಿದ ಚೇತನ. ಅದ್ಭುತ ಮಾನವೀಯತೆಯ ಹರಿಕಾರರೂ ಆದ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ತತ್ವಾದರ್ಶದ ಪ್ರತಿಮೂರ್ತಿಯಾದ ಅವರ ಜೀವನ, ನನಗೆ ಮಾರ್ಗದರ್ಶನ. ಸದಾ ಪ್ರೇರಣೆಯನ್ನು ತುಂಬಬಲ್ಲಂತಹ ಮಹತ್ವದ ವ್ಯಕ್ತಿತ್ವ ಅವರದ್ದು. ಈ ನಾಡು ಪ್ರಾತಃಸ್ಮರಣೀಯವಾಗಿ ಅವರನ್ನು ಸ್ಮರಿಸಿಕೊಳ್ಳಬೇಕು. ಅಷ್ಟೊಂದು ಪಾರದರ್ಶಕ ವ್ಯಕ್ತಿತ್ವದ ಸಂಕಲ್ಪಮೂರ್ತಿಯದು. ಜಾತಿಮೂಲವನ್ನು ಸಮಾಜದಿಂದ ವಿನಾಶ ಮಾಡುವ ಅವರ ಧೀರ ಸಂಕಲ್ಪ ಇಂದಿನ ಮಹಿಳೆಯರಿಗೆ ದಾರಿದೀಪ. ನಾಡನ್ನು ಹೇಗೆ ಕಟ್ಟಬೇಕು? ನೈತಿಕ ಮೌಲ್ಯಗಳು ನಮ್ಮಲ್ಲಿ ಏಕೆ ಬೆಳೆಯಬೇಕು? ನಾವು ಕೇವಲ ಅಡುಗೆ ಮನೆಗೆ ಸೀಮಿತರೇ? –ಎನ್ನುವ ಎಲ್ಲ ಪ್ರಶ್ನೆಗಳಿಗೆ ಯಶೋಧರಮ್ಮ ದಾಸಪ್ಪ ಅವರ ಜೀವನ ಉತ್ತರವನ್ನು ಒದಗಿಸುತ್ತದೆ. ಈ ನಾಡು ಕಂಡ ಮಹತ್ವದ ಮಹಿಳಾ ನಾಯಕಿಯರಲ್ಲಿ ಅವರೊಬ್ಬರು.

ನಾನು ಮಹಿಳಾ ಕಾಲೇಜಿನ ಪ್ರಾಂಶುಪಾಲರಾಗಿ ಯಶೋಧರಮ್ಮ ದಾಸಪ್ಪ ಅವರ ತತ್ವಾದರ್ಶಗಳನ್ನು ಅವರ ಬದುಕಿನ ಚಿತ್ರಣವನ್ನು ಕುರಿತು ಹತ್ತು ಹಲವು ಸಲ ವಿದ್ಯಾರ್ಥಿಗಳ ಮುಂದೆ ಮೌಲ್ಯಗಳನ್ನು ಅರುಹಿದ್ದೇನೆ. ಸ್ವಾತಂತ್ರ್ಯ ಹೋರಾಟ, ಸ್ತ್ರೀಸಬಲೀಕರಣ, ಬಡತನ ನಿವಾರಣೆ, ಸಾಮಾಜಿಕ ಪರಿವರ್ತನೆ, ಪೌಷ್ಟಿಕ ಆಹಾರದ ಕೊರತೆಯಿಂದ ಉಂಟಾಗುವ ದುಷ್ಪರಿಣಾಮಗಳು, ಬಾಲವಾಡಿ ಶಿಕ್ಷಣ, ಮಹಿಳಾ ಸಮಾಜಗಳು, ಮಹಿಳಾ ತರಬೇತಿ ಕೇಂದ್ರಗಳು ಇತ್ಯಾದಿಗಳ ಮೂಲಕ ಈ ನಾಡನ್ನು ಅಭ್ಯುದಯದತ್ತ ಕೊಂಡೊಯ್ಯುವಲ್ಲಿ ಅವರು ಶ್ರಮಿಸಿದ ಪಾತ್ರವನ್ನು ಕುರಿತು ಗಂಟೆಗಟ್ಟಲೆ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಿದ್ದೇನೆ. ಚರಿತ್ರೆಯನ್ನು ಓದದವನು ಚರಿತ್ರೆಯನ್ನು ಸೃಷ್ಟಿಸಲಾರ ಎನ್ನುವ ಸಂವಿಧಾನಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರ ಮಾತನ್ನು ಪುಷ್ಟೀಕರಿಸುತ್ತಾ ಯಶೋಧರಮ್ಮ ದಾಸಪ್ಪ ಅವರ ಬದುಕಿನ ಹಲವು ಆಯ್ದ ಭಾಗಗಳನ್ನು ವಿದ್ಯಾರ್ಥಿಗಳ ಮುಂದೆ ವರದಿಯಂತೆ ಒಪ್ಪಿಸಿದ್ದೇನೆ. ನಾಡನ್ನು ಹೊಸ ದೃಷ್ಟಿಕೋನಗಳಿಂದ ಕಟ್ಟುವ ಆಲೋಚನೆಗಳತ್ತ ವಿದ್ಯಾರ್ಥಿಗಳ ಯೋಚನಾ ಕ್ರಮವನ್ನು ತಿರುಗಿಸಿದ್ದೇನೆ. ನನ್ನ ತಂದೆಯವರಾದ ದಿ. ಜೆ.ಲಿಂಗಯ್ಯನವರು ಅವರ ಕಿರಿಯ ತಮ್ಮ ಸಮಕಾಲೀನರಾಗಿದ್ದರು. ನನ್ನ ತಂದೆಯವರು ಯಶೋಧರಮ್ಮ ದಾಸಪ್ಪ ಮತ್ತು ಹೆಚ್.ಸಿ. ದಾಸಪ್ಪ ಅವರ ಆದರ್ಶ ನಾಯಕತ್ವವನ್ನು ಒಪ್ಪಿಕೊಂಡು ಕಾರ್ಮಿಕ ನಾಯಕರಾಗಿ ಮೇಲೆದ್ದು ಬಂದರು. ಸ್ವಾತಂತ್ರ್ಯ ಸಂಗ್ರಾಮದಿಂದ ಒಡಿದು ಬೆಂಗಳೂರಿನ ಸ್ಥಳೀಯ ಸಂಸ್ಥೆಯಾದ ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್‌ಗಿರಿಯವರೆಗೆ ಅವರು ಅನುಸರಿಸಿದ್ದು ಹೆಚ್.ಸಿ.ದಾಸಪ್ಪ ಮತ್ತು ಯಶೋಧರಮ್ಮ ದಾಸಪ್ಪ ಅವರ ಮಾರ್ಗದರ್ಶನವನ್ನು.

ನಾನು ಚಿಕ್ಕವಳಿರುವಾಗ ನಮ್ಮ ಮನೆಗೆ ಅನೇಕ ಸಲ ಹೆಚ್.ಸಿ. ದಾಸಪ್ಪನವರು ಹಾಗೂ ಯಶೋಧರಮ್ಮ ದಾಸಪ್ಪನವರು ಬಂದುಹೋಗಿದ್ದಾರೆ. ನಾನು ಅವರ ಮನೆಗೆ ಹತ್ತು ಹಲವು ಸಲ ಹೋಗಿ ಬಂದಿದ್ದೇನೆ. ಅವರು ತೋರಿಸುತ್ತಿದ್ದ ಪ್ರೀತಿ, ಮಾನವೀಯ ಅಂತಃಕರಣ ನೆನೆದಾಗ ಇಂದಿಗೂ ಭಾವಪುಳಕಿತಳಾಗುತ್ತಿದ್ದೇನೆ. ಅಂತಹ ಮಹಾನ್ ನಾಯಕಿಯಾದರೂ ಕೌಟುಂಬಿಕ ಪರಿಸರದಲ್ಲಿ ಎಲ್ಲ ಪಾತ್ರಗಳನ್ನು ಕ್ರಿಯಾಶೀಲವಾಗಿ ಮತ್ತು ಮಾನವೀಯ ಸಂಬಂಧಗಳ ಹಿನ್ನೆಲೆಯಲ್ಲಿ ನಿರ್ವಹಿಸುತ್ತಿದ್ದರು. ಮೊಮ್ಮಕ್ಕಳಿಗೆ ಅಜ್ಜಿಯಾಗಿ, ಮಕ್ಕಳಿಗೆ ತಾಯಿಯಾಗಿ, ಯಜಮಾನರಿಗೆ ಹೆಂಡತಿಯಾಗಿ ಎಂದೂ ಯಾರೊಡನೆಯೂ ಸಂಘರ್ಷಕ್ಕೆ ಇಳಿಯದೆ ಅಗಾಧ ಪ್ರೀತಿಯನ್ನು ಕೊಟ್ಟು ಪಡೆದುಕೊಳ್ಳುತ್ತಿದ್ದರು. ಈ ಸಿದ್ಧಾಂತ ಅವರಿಂದ ಕಲಿಯಬೇಕಾದ ಬಹುದೊಡ್ಡ ಪಾಠವೆಂದು ನಾನು ತಿಳಿದಿರುವೆ. ನನ್ನ ತಂದೆ ನನ್ನನ್ನು ಮತ್ತು ನನ್ನ ಅಕ್ಕಂದಿರನ್ನು ಕುಳ್ಳಿರಿಸಿಕೊಂಡು ಅವರನ್ನು ತೋರಿಸಿ ಗಂಟೆಗಟ್ಟಲೆ ಅವರ ಬಗೆಗೆ ಹೇಳುತ್ತಿದ್ದರು.

ಅವರ ವ್ಯಕ್ತಿತ್ವ ಅಥವಾ ಅವರ ಸಂಕಲ್ಪಗಳೇನೇ ಇರಲಿ, ಸಾರ್ವಜನಿಕ ಬದುಕಿನಲ್ಲಿ ತಾಳ್ಮೆ, ಸಹನಶೀಲತೆ, ಪ್ರಜ್ಞಾಶೀಲತೆಗಳು ಬೇಕಾಗುತ್ತವೆ. ಅದನ್ನು ಯೋಜಿತ ರೀತಿಯಲ್ಲಿ ಅವರು ರೂಢಿಸಿಕೊಂಡಿದ್ದರು. ಮನೆಗೆ ಬರುವ ಸಹಸ್ರಾರು ಅತಿಥಿ–ಅಭ್ಯಾಗತರನ್ನು, ಕುಂದುಕೊರತೆಗಳನ್ನು ತರುವ ಸಾವಿರಾರು ಬಡ, ದುರ್ಬಲರನ್ನು ಸಂತೈಸುವ ರೀತಿ ನಿಜಕ್ಕೂ ಅವರಲ್ಲಿರುವ ನಾಯಕತ್ವಕ್ಕೆ ಸಾಕ್ಷಿಯಾಗಿ ನಿಲ್ಲುತ್ತಿತ್ತು. ಬದುಕನ್ನು ಪಾರದರ್ಶಕವನ್ನಾಗಿಸಿಕೊಂಡು ಸಾರ್ವಜನಿಕ ಬದುಕಿನಿಂದ ಕಿಂಚಿತ್ ದ್ರವ್ಯವನ್ನು ನಿರೀಕ್ಷಿಸದೆ, ಇದ್ದ ಆಸ್ತಿಯನ್ನೆಲ್ಲ ಸಾರ್ವಜನಿಕ ಟ್ರಸ್ಟ್‌ಗಳಿಗೆ, ಸಂಘ–ಸಂಸ್ಥೆಗಳಿಗೆ ಬರೆದುಕೊಟ್ಟ ಮಹಾನ್ ತ್ಯಾಗಮಯಿ ಜೀವಿ ಅವರು. ಇಂದಿನ ಒಕ್ಕಲಿಗರ ಸಂಘಕ್ಕೆ ಅಪಾರವಾದ ಜಮೀನನ್ನು ನೀಡಿ ಉದಾರತೆಯನ್ನು ಮೆರೆದರು. ಸಮಾಜದ ದುರ್ಬಲ ವರ್ಗದವರು ಶಿಕ್ಷಣವನ್ನು ಪಡೆದುಕೊಂಡು ಮೇಲೆ ಬರಬೇಕೆಂಬ ಅವರ ಸದುದ್ದೇಶ ಇತ್ತಿತ್ತ ಈಡೇರುತ್ತಿದೆ. ಇದೊಂದು ಸುಕೃತವೇ ಸರಿ. ಅವರನ್ನು ನಾನು ಮನದಾಳದ ದೇವತೆಯಂತೆ ನೆನೆದು ಸಾರ್ವಜನಿಕ ಬದುಕಿಗೆ, ಅವರು ಈ ನಾಡಿನ ಮಹಿಳೆಯರಿಗೆ ಪ್ರೇರಣೆಯನ್ನು ನೀಡಿ ಮುಂಬರುವ ದಿನಗಳಲ್ಲೂ ಆದರ್ಶವಾಗುತ್ತಾರೆ ಎನ್ನುವ ನಂಬಿಕೆ ನನಗಿದೆ. ಅವರ ಜೀವನವೇ ಒಂದು ಸಿದ್ಧಾಂತ, ಅವರ ಆಲೋಚನೆಗಳೇ ಒಂದು ಅಭಿವೃದ್ಧಿಯ ಸಂಪುಟ ಹೇಳುತ್ತಾವೆಂದು ಹೇಳಬಹುದು.

——— * ———

ಗಾಂಧಿ ಚಿಂತನಧಾರೆಯ ನಾಯಕಿ

ಕೆ.ಬಿ. ಮುದಗಲ್

ನಾನು ಚರಕ ಸಂಘಟನೆಯಲ್ಲಿ ಮೊದಲಿನಿಂದ ಗುರುತಿಸಿಕೊಂಡವನು. ಗಾಂಧೀಜಿಯವರು ಚರಕ ಚಳವಳಿಯ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ನಿಕಟ ತರುವಾಯದಲ್ಲೇ ಒಂದು ಸಂಸ್ಥೆಯನ್ನು ಮಾಡಿಕೊಂಡೆವು. ಅದು ಕನಕಪುರದಲ್ಲಿ ಅಸ್ತಿತ್ವಕ್ಕೆ ಬಂತು. ಹಾರ್ನಳ್ಳಿ ರಾಮಸ್ವಾಮಿ ಅವರು ನಮ್ಮನ್ನೆಲ್ಲ ಚರಕ ಸಂಘಟನೆಯಡಿ ಒಟ್ಟುಗೂಡಿಸಿದರು. ವಾಸ್ತವವಾಗಿ ಬೆಳಗಾವಿ ಜಿಲ್ಲೆ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೆಚ್ಚು ಹೆಸರು ಮಾಡಿದ ಪ್ರದೇಶವಾಗಿದೆ. ಅಲ್ಲಿ ಮನೆಗೊಬ್ಬ ಸ್ವಾತಂತ್ರ್ಯ ಹೋರಾಟಗಾರರು ಸಿಗುತ್ತಾರೆ. ಕೇವಲ ಪ್ರವೃತ್ತಿಗಾಗಿ ಸ್ವಾತಂತ್ರ್ಯ ಹೋರಾಟವನ್ನು ರೂಢಿಸಿಕೊಂಡವರಲ್ಲ. ಹೋರಾಟದ ಕೆಚ್ಚನ್ನು ತುಂಬಿದ ಗಾಂಧೀಜಿಯವರ ನೈಜ ಅನುಯಾಯಿಗಳು. ಗಾಂಧಿ ವಿಚಾರಧಾರೆಯನ್ನು ಆಮೂಲಾಗ್ರವಾಗಿ ಅನುಷ್ಠಾನದಲ್ಲಿ ತಂದುಕೊಂಡು ಸ್ವಾತಂತ್ರ್ಯ ಹೋರಾಟದ ನೈಜ ಭೂಮಿಕೆಯಲ್ಲಿ ತಮ್ಮ ಹೋರಾಟವನ್ನು ದಾಖಲಿಸುತ್ತಾರೆ. ಇಂದಿಗೂ ಕೂಡ ಚಿಕ್ಕೋಡಿ, ಕಾಗವಾಡ, ರಾಯಭಾಗ್, ಬೆಳಗಾವಿ, ಗೋಕಾಕ್ ಮುಂತಾದ ಊರುಗಳ ಪೋಲೀಸ್ ಸ್ಟೇಷನ್‌ಗಳಲ್ಲಿ ಹಳೆಯ ಕಡತಗಳನ್ನು ತೆಗೆಸಿ ನೋಡಿದಾಗ ಸ್ವಾತಂತ್ರ್ಯ ಚಿತ್ರಣವು ಕಣ್ಣಿಗೊದಗಿ ಬರುತ್ತದೆ. ಸ್ವಾತಂತ್ರ್ಯ ಹೋರಾಟವೆನ್ನುವುದು ನಮ್ಮ ಕರ್ತವ್ಯವೆಂದು ಭಾವಿಸಿದವರು. ಗಾಂಧೀಜಿಯವರ ಕರೆಗೆ ಅರ್ಥಪೂರ್ಣವಾಗಿ ಪ್ರತಿಕ್ರಿಯಿಸಿ ಇಂದಿಗೂ ಕೂಡ ಗಾಂಧಿ ವಿಚಾರಧಾರೆಗಳ ಬಗೆಗೆ ಅಪಾರ ಗೌರವವನ್ನು ಇಟ್ಟುಕೊಂಡವರು. ಈ ಸ್ವಭಾವದ ವೃದ್ಧ ಸಮೂಹ, ಬೆಳಗಾವಿ ಜಿಲ್ಲೆಯಲ್ಲಿ ಅಲ್ಲಲ್ಲಿ ನಮಗೆ ಸಿಗುತ್ತದೆ.

ಇದನ್ನೆಲ್ಲ ಏತಕ್ಕಾಗಿ ಹೇಳಬೇಕಾಗಿದೆಯೆಂದರೆ, ಕರ್ನಾಟಕದಲ್ಲಿ ಗಾಂಧಿ ತತ್ವವನ್ನು ಸಾರಾಸಗಟಾಗಿ ಒಪ್ಪಿಕೊಂಡು ಅದರ ಅನುಷ್ಠಾನಕ್ಕಾಗಿ ಆಲೋಚಿಸಿದ ಕೀರ್ತಿ ಮತ್ತು ಅನುಷ್ಠಾನಕ್ಕೆ ತಂದ ಕೀರ್ತಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರದ್ದು. ಅವರನ್ನು ಕೇವಲ ಒಬ್ಬ ಮಹಿಳಾ ನಾಯಕಿಯನ್ನಾಗಿ ನೋಡುವುದು ತಪ್ಪೆನಿಸುತ್ತದೆ. ಅವರು ಈ ನಾಡಿನ ಪಾರದರ್ಶಕತೆ, ಸದ್ಗುಣ, ನೈಜ ಕಾಳಜಿಗಳ ಪ್ರತಿಮೂರ್ತಿಯಾಗಿದ್ದಾರೆ. ನಾವು ಚರಕ ಸಂಘಟನೆಯನ್ನು ಆರಂಭಿಸಿದಾಗ ಖುದ್ದಾಗಿ ನಮ್ಮೊಡನೆ ಬಂದು ಮಾತನಾಡಿ ಬೇಕಾದ ಪರಿಕರಗಳನ್ನು ಒದಗಿಸುವುದಾಗಿ ಹೇಳಿಹೋದರು. ಮತ್ತೆ ಮರುದಿನ ನಾವು ಆ ಸಂಘಟನೆಯ ಕೇಂದ್ರಕ್ಕೆ ಹೋಗುವ ಹೊತ್ತಿಗೆ ಅವರು ಅಲ್ಲಿ ಉಪಸ್ಥಿತರಿದ್ದರು. ತಮ್ಮ ಕೈಲಾಗುವ ಹಣವನ್ನು ಕೈಯಲ್ಲಿ ಹಿಡಿದುಕೊಂಡು ಚರಕ ಯಂತ್ರಕ್ಕೆ ಬೇಕಾಗುವ ಸಾಮಾನು-ಸರಂಜಾಮುಗಳೊಡನೆ ಅಲ್ಲಿ ಉಪಸ್ಥಿತರಿದ್ದರು. ನಾವು ಹಾರ್ನಳ್ಳಿ ರಾಮಸ್ವಾಮಿಯವರೊಡಗೂಡಿ ಚರಕಕ್ಕೆ ಬೇಕಾದ ಕಟ್ಟಿಗೆಯನ್ನು ನೋಡುವುದಕ್ಕೆ ಹೋಗಿ ತಡವಾಗಿ ಅಲ್ಲಿಗೆ ಬಂದೆವು. ಆವರೆಗೂ ಆ ಮಹಿಳೆ ತನ್ನ ಸಾಮಾನು ಸರಂಜಾಮುಗಳನ್ನಿಟ್ಟುಕೊಂಡು ನಮಗಾಗಿ ಕಾಯುತ್ತಾ ಕುಳಿತಿದ್ದರು. ಅಷ್ಟು ಹೊತ್ತಿಗೆ ಅವರು ಮೈಸೂರು ನ್ಯಾಯಾಧಿಕರಣದ ಸದಸ್ಯೆಯಾಗಿ ನಿವೃತ್ತಿಯನ್ನು ಹೊಂದಿದ್ದರು. ಅಲ್ಲದೆ ಸ್ವತಃ

ಶಾಸಕಿಯಾಗಿ ನಾಡಿನ ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆದಾಗ್ಯೂ ಕೂಡ ಕೇವಲ ಕಾರ್ಯಕರ್ತರನ್ನು ಮತ್ತು ಗಾಂಧಿ ವಿಚಾರಧಾರೆಗಳನ್ನು ಅನುಷ್ಠಾನಕ್ಕೆ ತರುವವರೆಂದು ನಮ್ಮ ಮೇಲೆ ಭರವಸೆಯಿಟ್ಟು ನಮಗಿಂತ ಕಿರಿಯರ ಜೊತೆ ಆ ಸಂಘಟನೆಯಲ್ಲಿ ನಿರತರಾಗಿದ್ದರು. ಆ ಕಾರಣದಿಂದ ಅವರು ನಮಗಾಗಿ ಸುಮಾರು ಮೂರು-ನಾಲ್ಕು ತಾಸು ಹೊತ್ತು ಕಾದು ಕುಳಿತಿದ್ದರು.

ನನ್ನ ಅವರ ಸಂಬಂಧ ಹತ್ತತ್ತಿರ ತಾಯಿ-ಮಗನ ಸಂಬಂಧದಂತಿತ್ತು. ಬೆಳಗಾವಿ ಜಿಲ್ಲೆಯಲ್ಲಿ ಚರಕ ಸಂಘಟನೆಯ ಶಾಖೆಯನ್ನು ತೆರೆಯಲು ಅವರು ಕಾರಣಕರ್ತರು. ಬೆಳಗಾವಿಯಿಂದ ಕನಕಪುರಕ್ಕೆ ಬರುವುದು ತೊಂದರೆಯಾಗುವುದೆಂದು ಭಾವಿಸಿ ಚರಕ ಸಂಘಟನೆಯ ಶಾಲೆಯನ್ನು ಅಲ್ಲಿ ತೆರೆದರು. ಖಾದಿ ಬಟ್ಟೆಯನ್ನು ಹೊತ್ತು ತಂದಾಗಲೆಲ್ಲ ಬೆಂಗಳೂರಿನಲ್ಲಿ ರೈಲ್ವೇ ನಿಲ್ದಾಣಕ್ಕೆ ತಮ್ಮ ಕಾರನ್ನು ಕಳಿಸಿಕೊಡುತ್ತಿದ್ದರು. ಅಲ್ಲಿಂದ ಕನಕಪುರಕ್ಕೆ ಆ ಬಟ್ಟೆಯನ್ನು ಒಯಿದುಕೊಡುವಾಗಲೆಲ್ಲ ಅವರು ನನಗೆ ಸಹಾಯ ಮಾಡುತ್ತಿದ್ದರು. ಅವರ ಆಲೋಚನೆಗಳೇ ವಿಭಿನ್ನವಾಗಿದ್ದವು. ಗಾಂಧಿ ವಿಚಾರಧಾರೆಯ ಬಗೆಗೆ ಅವರಿಗಿದ್ದ ಭಾವನೆಗಳು ಅತ್ಯಂತ ಪೂಜನೀಯವಾಗಿದ್ದವು. ಗಾಂಧೀಜಿಯವರು ಬರೆದ ಗ್ರಾಮ ಸ್ವರಾಜ್ ಪುಸ್ತಕದ ಪ್ರತಿಯೊಂದನ್ನು ನನಗೆ ನೀಡಿ ಇದು ನನ್ನ ಬದುಕಿನ ಬಹುದೊಡ್ಡ ಪ್ರಣಾಳಿಕೆ. ಇದನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ನಾನು ಜೀವಿತ ದುದ್ದಕ್ಕೂ ಹೋರಾಟ ಮಾಡುತ್ತೇನೆ ಎಂದು ಹೇಳುತ್ತಿದ್ದರು. ಗಾಂಧೀಜಿಯವರ ಗ್ರಾಮ ಸ್ವರಾಜ್ಯದಲ್ಲಿ ಗ್ರಾಮಗಳ ಸ್ವಾವಲಂಬನೆಯನ್ನೇ ಮುಖ್ಯವಾಗಿ ಮಾತನಾಡುತ್ತಾ ಚರಕ ಸಂಘಟನೆಯು ಬಲಗೊಳ್ಳಲೆಂದು ಆಶಿಸಿದ್ದರು. ಗಾಂಧೀಜಿಯವರ ಮತ್ತೊಂದು ಪ್ರಮುಖ ಸಾಮಾಜಿಕ ಪ್ರಣಾಳಿಕೆಯಾದ ಪಾನನಿರೋಧ ಮತ್ತು ದುರ್ಬಲರ ಏಳಿಗೆಯನ್ನು ಗಮನದಲ್ಲಿಟ್ಟುಕೊಂಡು ದುಡಿಯುತ್ತಿದ್ದರು. ಪಾನ ನಿರೋಧದ ಕ್ರಮವನ್ನು ಸಡಿಲಿಸಿದ ಸರ್ಕಾರವನ್ನು ಖಂಡಿಸಿ, ವಿಷಾದ ವ್ಯಕ್ತಪಡಿಸಿ ಮಂತ್ರಿ ಪದವಿಗೆ ರಾಜೀನಾಮೆಯನ್ನು ನೀಡಿ ರಾಜ್ಯದ ಅದ್ವಿತೀಯ ಆದರ್ಶ ನಾಯಕಿಯಾಗಿ ರೂಪಿತರಾದರು. ಅವರನ್ನು ನೆನೆದು ಅಂದಿನ ಮೌಲ್ಯಗಳನ್ನು ಸ್ಮರಿಸಿಕೊಂಡಂತಾಗಿದೆ.

——— * ———

ಮರೆಯಲಾಗದ ಮಹಿಳೆ

ಪ್ರೊ. ಆರ್. ರಾಜಣ್ಣ

ಶ್ರೀಮತಿ ಯಶೋಧರಾ ದಾಸಪ್ಪರವರು ಭಾರತ ಕಂಡ ಅಪರೂಪದ ಮಹಿಳೆ ಎಂದರೆ ಅತಿಶಯವಲ್ಲ. ಅಂದು ರಾಜಮಹಾರಾಜರು ಸಾಧಿಸಿದ ರೀತಿಯಲ್ಲಿಯೇ ಇವರು ಸಹ ಅನೇಕ ಕಾರ್ಯಗಳನ್ನು ಸಾಧಿಸಿದ್ದಾರೆ. ಆದ್ದರಿಂದಲೇ ಇವರಿಗೆ ಕದಂಬ ರಾಣಿ ಎಂದು ಕರೆಯಬಹುದಾಗಿದೆ. ಏಕೆಂದರೆ, ಕದಂಬರ ಕಾಲದ ಮೊಟ್ಟಮೊದಲ ಕನ್ನಡ ಶಾಸನ ಹಾಸನ ಜಿಲ್ಲೆಯ ಹಲ್ಮಿಡಿ ಎಂಬ ಗ್ರಾಮದಲ್ಲಿ ದೊರೆತಿದೆ. ಹಾಗೆಯೇ ಅಂದು ಇವರು ಸ್ಥಾಪಿಸಿದ ನಂತರ ಪ್ರಚಲಿತಕ್ಕೆ ಬಂದ ಕಸ್ತೂರ ಬಾ ಸಂಸ್ಥೆಯು ಹಾಸನ ಜಿಲ್ಲೆಯ ಅರಸೀಕೆರೆಯ ಪಕ್ಕದಲ್ಲಿಯೇ ಇರುವುದರಿಂದ ಇವರಿಗೆ ಕದಂಬ ರಾಣಿ ಎಂದು ಕರೆಯುವುದು ಸೂಕ್ತ. ಭಾರತದ ಮಡಿಲಲ್ಲಿ ಅದರಲ್ಲೂ ಕರ್ನಾಟಕದ ಧ್ರುವತಾರೆ ಎಂದೇ ಪ್ರಖ್ಯಾತರಾಗಿರುವ ಶ್ರೀಮತಿ ಯಶೋಧರಾ ದಾಸಪ್ಪರವರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ಒಬ್ಬ ವೀರ ಮಹಿಳೆ ಅಲ್ಲದೆ ಸಮಾಜ ಸುಧಾರಕಿ ಎಂದು ಹೇಳಬಹುದು.

ಕರ್ನಾಟಕವನ್ನಾಳಿದ ವೀರವನಿತೆ ರಾಣಿ ಚೆನ್ನಮ್ಮಾಜಿ ಆಡಳಿತದ ಚುಕ್ಕಾಣಿ ಹಿಡಿದು ಶೌರ್ಯ ಪ್ರದರ್ಶಿಸಿದ ವೀರವನಿತೆ. ಶ್ರೀಮತಿ ಯಶೋಧರಮ್ಮ ದಾಸಪ್ಪರವರು ಕೂಡ ನಾಡು–ನುಡಿ ರಾಷ್ಟ್ರ ಸೇವಾಧರ್ಮ, ಸಮಾನತೆ ಮುಂತಾದವುಗಳ ಬಗ್ಗೆ ಎಲ್ಲಿಲ್ಲದ ಅಭಿಮಾನ ಬೆಳಸಿಕೊಂಡಿದ್ದರು. ಅಥಣಿ ತಾಲ್ಲೂಕಿನ ಮಲಬಾರ್ ಗ್ರಾಮದ ಚಂದ್ರವ್ವಾ ಗೋಬಾವಿ, ಚಿಕ್ಕೋಡಿ ತಾಲ್ಲೂಕಿನ ಮಾಂಜರಿ ಗ್ರಾಮದ ಲಕ್ಷ್ಮೀಬಾಯಿ, ಗೌರಿಬಿದನೂರು ತಾಲ್ಲೂಕು ರಂಗಸಂದ್ರದ ಗೌರಮ್ಮ, ಬಳ್ಳಾರಿ ಸಿದ್ದಮ್ಮ, ಅಲ್ಲದೆ ಶಾಂತಮ್ಮ, ನಾಗರತ್ನಮ್ಮ, ಕಾವೇರಮ್ಮ, ಜಯಲಕ್ಷ್ಮೀಬಾಯಿ, ಚಳ್ಳಕರೆಯ ಸಾವಿತ್ರಮ್ಮ, ಉಡುಪಿಯ ಚನ್ನಬಸಪ್ಪನ ಹೆಂಡತಿ ಚನ್ನವ್ವ ಅಡಿವೆಪ್ಪ, ಮೈಲಾರ ಮಹದೇವನ ಧರ್ಮಪತ್ನಿ ಸಿದ್ದಮ್ಮ – ಹೀಗೆ ಹಲವಾರು ಸ್ತ್ರೀಯರು ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರುತ್ತಾರೆ. ಆದರೆ ಶ್ರೀಮತಿ ಯಶೋಧರಮ್ಮ ಅವರ ಪಾತ್ರ ಅಮೋಘವಾದದ್ದು,

ಜೀವನ : ಶ್ರೀಮತಿ ಯಶೋಧರಮ್ಮ ಅವರು 28.5.1905ರಂದು ಜನಿಸಿದರು. ಸಮಾಜ ಸುಧಾರಕರಾದಂತಹ ಒಕ್ಕಲಿಗ ಜನಾಂಗದ ಪಿತಾಮಹನೆಂದೇ ಖ್ಯಾತರಾಗಿರುವ ಆದಿ ಚುಂಚನಗಿರಿ ಮಠವನ್ನು ಸ್ಥಾಪಿಸಲು ಅತ್ಯಂತ ಕಾಳಜಿ ವಹಿಸಿದ ಹಾಗೂ ರಾಜಮನೆತನಕ್ಕೆ ನಿಕಟವರ್ತಿಗಳಾಗಿದ್ದ ಕೆ.ಎಚ್.ರಾಮಯ್ಯರವರೇ ಇವರ ತಂದೆ, ತಾಯಿ ಶ್ರೀಮತಿ ರೇವಮ್ಮ. ಯಶೋಧರಮ್ಮ ಅವರ ಪತಿ ಹೆಚ್.ಸಿ. ದಾಸಪ್ಪರವರು ಕೊಡಗಿನಲ್ಲಿ ಸಬ್ ಜಡ್ಜ್ ಆಗಿದ್ದರು. ದಾಸಪ್ಪರವರ ತಂದೆ ಹೆಚ್. ಚೆನ್ನಯ್ಯರವರು.

ಶ್ರೀಮತಿ ಯಶೋಧರಮ್ಮ ಅವರಿಗೆ ಶ್ರೀ ಹೆಚ್.ಸಿ. ದಾಸಪ್ಪರವರೊಂದಿಗೆ 1926ರಲ್ಲಿ ಮದುವೆಯಾಯಿತು. ಯಶೋಧರಮ್ಮ ಅವರ ತಂದೆ ಕೆ.ಎಚ್. ರಾಮಯ್ಯ ಅಂದು ಹೆಣ್ಣುಮಕ್ಕಳಿಗೆ ಶಿಕ್ಷಣ ಅಗತ್ಯ ಎಂಬುದನ್ನು ನಂಬಿದ್ದರು. ಆದುದರಿಂದಲೇ ಬೆಂಗಳೂರಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಕೊಡಿಸಿ ನಂತರ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಮದ್ರಾಸಿಗೆ ಕಳುಹಿಸಿದರು. ಇವರಿಂದಲೇ ಶ್ರೀಮತಿ ಯಶೋಧರಮ್ಮ ಅವರ ಆದರ್ಶ ಬದುಕಿಗೊಂದು ನಿದರ್ಶನವಾಯಿತೆಂದು ಹೇಳಬಹುದಾಗಿದೆ.

ಯಶೋಧರಮ್ಮ ಅವರು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಅಚಲ ದೇಶಾಭಿಮಾನದಿಂದ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿ ದೇಶಸೇವೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟರು. ಗಾಂಧೀಜಿಯವರ ತತ್ವಗಳನ್ನು ಜೀವನವಿಡೀ ಪಾಲಿಸಿದ ಆದರ್ಶ ಮಹಿಳೆ, ಗಾಂಧೀತತ್ವಕ್ಕೆ ಬದ್ಧರಾಗಿ ರಾಜ್ಯದಲ್ಲಿ ಪಾನನಿಷೇದಾಜ್ಞೆಯನ್ನು ಸಡಿಲಗೊಳಿಸಿದಾಗ ತನ್ನ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ತತ್ವಕ್ಕಾಗಿ ಮಹಾತ್ಯಾಗವನ್ನೇ ಮಾಡಿದರು. ಕರ್ನಾಟಕ ರಾಜ್ಯದ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾದ ಪ್ರಥಮ ಮಹಿಳೆಯಾಗಿದ್ದರು. ಶ್ರೀ ನಿಜಲಿಂಗಪ್ಪರವರ ಮಂತ್ರಿ ಮಂಡಲದಲ್ಲಿ ಸಮಾಜ ಕಲ್ಯಾಣ ಮಂತ್ರಿಯಾಗಿದ್ದರು. ರಚನಾತ್ಮಕ ಕಾರ್ಯಗಳನ್ನು ಮಾಡಿದ್ದಾರೆ. ಉದಾಹರಣೆಗೆ 'ಕಸ್ತೂರಬಾ ಗಾಂಧೀ ರಾಷ್ಟ್ರೀಯ ಸ್ಮಾರಕ ಸಂಸ್ಥೆ'ಯ ಟ್ರಸ್ಟೀಯಾಗಿ ಅದರ ಕರ್ನಾಟಕ ರಾಜ್ಯ ಪ್ರತಿನಿಧಿಯಾಗಿ ಅರಸೀಕೆರೆಯಲ್ಲಿ ಕಸ್ತೂರಬಾ ಗ್ರಾಮ ಸ್ಥಾಪನೆ, ಹಿಂದುಳಿದ ಗ್ರಾಮಾಂತರ ಪ್ರದೇಶಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿ, ಅರಸೀಕೆರೆಯಲ್ಲಿ ಗ್ರಾಮ ಸೇವಕರಿಗೆ ತರಬೇತಿ ಕೊಟ್ಟು, ಗ್ರಾಮಾಂತರ ಪ್ರದೇಶಗಳ ಕೇಂದ್ರಕ್ಕೆ ಕಳುಹಿಸಿದರು. ಈ ಕೇಂದ್ರಗಳು ಮಹಿಳೆಯರ ಮತ್ತು ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದ್ದವು. ವಿನೋಬಾಜಿ ಅರಸೀಕೆರೆಗೆ ಭೂದಾನ ಚಳವಳಿಯ ಅಂಗವಾಗಿ ಬಂದು ಕಸ್ತೂರಬಾ ಗ್ರಾಮದಲ್ಲಿ ತಂಗಿದ್ದರು. ಅವರು ಯಶೋಧರಮ್ಮನವರನ್ನು ಉದ್ದೇಶಿಸಿ ಯಶೋಧರಾ ನೀನು ಕಾಡಿನಲ್ಲಿ ಸ್ವರ್ಗಲೋಕವನ್ನು ನಿರ್ಮಿಸಿದ್ದೀಯಾ ಎಂದು ಹೇಳಿದರು. ಕಸ್ತೂರಬಾ ಕನ್ಯಾವಿದ್ಯಾಲಯ ಗ್ರಾಮಾಂತರ ಪ್ರದೇಶ ಗ್ರಾಮ ಸೇವಕಿಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮತ್ತು ಗ್ರಾಮಾಂತರ ಪ್ರದೇಶದ ಅನಾಥ ಹೆಣ್ಣುಮಕ್ಕಳ ಕ್ಷೇಮಾ ಶ್ರೇಯೋಭಿವೃದ್ಧಿಗಾಗಿ ಅವರವರ ಜೀವನವನ್ನು ರೂಪಿಸಲು ಅನುವು ಮಾಡಿಕೊಟ್ಟಿದ್ದು, ಮುಂದೆ ಈ ಸಂಸ್ಥೆಯು ಸ್ವಾವಲಂಬನೆಗಾಗಿ ಬಹಳ ಬಡವರಾದ, ಸಮಾಜದಲ್ಲಿ ವಂಚಿತರಾದ ವಿದ್ಯಾವಂತ ಹೆಣ್ಣುಮಕ್ಕಳಿಗೆ ಆದಾಯವನ್ನು ಕಲ್ಪಿಸಿಕೊಟ್ಟು ಸಂಸ್ಥೆಗೂ ಆದಾಯ ಬರುವಂತೆ ಮಾಡಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣುಮಕ್ಕಳಿಗೆ ವಸತಿ ಸಮೇತ ವಿದ್ಯಾಭ್ಯಾಸಕ್ಕೆ ಶಾಲೆಗಳನ್ನು ಕಲ್ಪಿಸಿಕೊಟ್ಟರು. ಅಂದು ಮೈಸೂರು ಪ್ರಾಂತ್ಯದಲ್ಲಿ ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಪ್ರತಿನಿಧಿಯಾಗಿ ಗ್ರಾಮೀಣ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸಿದರು. ಗ್ರಾಮಾಂತರ ಪ್ರದೇಶಗಳಲ್ಲಿ ಬಾಲವಾಡಿ ಮಹಿಳೆಯರಿಗೆ ಶಿಕ್ಷಣ ಮತ್ತು ಕೈಗಾರಿಕಾ ಕೇಂದ್ರಗಳನ್ನು ತೆರೆಯಲಾಯಿತು. ಕರ್ನಾಟಕ ಮಹಿಳಾ ಸೇವಾ ಕಾರ್ಯಕರ್ತರ ತರಬೇತಿಗಾಗಿ ಹಲವು ವ್ಯವಸ್ಥೆ ಮಾಡಲಾಯಿತು. ಇವುಗಳು ಯಶೋಧರಮ್ಮ ಅವರ ಸಾಧನೆಯ ಹೆಗ್ಗಳಿಕೆ ಎಂದೇ ಹೇಳಬಹುದು. ಇದು ಸ್ಥಾಪನೆಯಾಗಬೇಕಾದರೆ ಮಹಾತ್ಮ ಗಾಂಧೀಜಿಯವರೇ ಕಾರಣ ಎಂದರೆ ತಪ್ಪಾಗಲಾರದು. ಇವರ ದೃಷ್ಟಿಯಲ್ಲಿ ಮಹಿಳೆಯರು ಸ್ವಾವಲಂಬಿಗಳಾಗಬೇಕೆಂಬುದು ಅವರ ಆಶಯವಾಗಿತ್ತು. ಬಡ ಹೆಣ್ಣುಮಕ್ಕಳಿಗೆ ಉದ್ಯೋಗ ಕಲ್ಪಿಸುವುದಕ್ಕಾಗಿ ಗೀತಾ ಕೈಗಾರಿಕಾ ಸಹಕಾರ ಸಂಘ ಸ್ಥಾಪಿಸಿ, ಐ.ಟಿ.ಐ. ನೆರವಿನಿಂದ ಟೆಲಿಫೋನ್ ಜೋಡಣೆ ಉಪಘಟಕ ಆರಂಭಿಸಿದರು. HMT ಗಡಿಯಾರ ಜೋಡಣೆ ಉಪಘಟಕವೂ ಅವರ ಪ್ರಯತ್ನದ ಫಲ. ಎಲ್ಲ ಹೆಣ್ಣುಮಕ್ಕಳಿಗೂ ಶಿಕ್ಷಣ ಉದ್ಯೋಗ ನೀಡಬೇಕೆಂಬುದು ಅವರ ಕನಸಾಗಿತ್ತು.

1973ರಲ್ಲಿ ಶ್ರೀಮತಿ ಯಶೋಧರಮ್ಮ ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶ್ರೀಮತಿ ಯಶೋಧರಾ ದಾಸಪ್ಪರವರು ಯಾವಾಗಲೂ ರಾಷ್ಟ್ರೀಯ ಭಾಷೆಯಾದ ಹಿಂದೀ ಅಧ್ಯಯನ ಮತ್ತು ಸಮಾಜದ

ಬಗ್ಗೆ ಕಾಳಜಿ ಇದ್ದುದರಿಂದ ಸ್ತ್ರೀ ಸಮಾಜಗಳ ಸಂಘಟನೆಗಳಲ್ಲಿ ಸದಾ ಕಾಲವಿದ್ದು ನಂತರದ ಕಾಲದಲ್ಲಿ ದಾಸಪ್ಪ ಮತ್ತು ಶ್ರೀಮತಿ ಯಶೋಧರಮ್ಮ ಇಬ್ಬರ ಮನಸ್ಸು ಸ್ವಾತಂತ್ರ್ಯ ಹೋರಾಟದ ಕಡೆ ಬಾಗಿತು. ಅಂದು ಅಂಧರೆ 1927ರಲ್ಲಿ ಮಹಾತ್ಮ ಗಾಂಧೀಜಿಯವರು ಮೈಸೂರು ಪ್ರಾಂತ್ಯಕ್ಕೆ ಅಲ್ಲದೆ ಇನ್ನಿತರ ಭಾಗಗಳಿಗೆ ಭೇಟಿ ನೀಡುತ್ತಿದ್ದರು. ಅಂದು ಧರ್ಮಪ್ರಕಾಶಕರಾದ ಡಿ.ಬನುಮಯ್ಯರವರ ಅಧ್ಯಕ್ಷತೆಯಲ್ಲಿ ಸುಂದರವಾದ ಇತಿಹಾಸ ಸೃಷ್ಟಿಸಿದ ಕಾರ್ಯಕ್ರಮ ಒಂದರಲ್ಲಿ ಬಾಪೂಜಿಯವರು ಮಾಡಿದ ಭಾಷಣದಿಂದ ಇವರು ಪ್ರಭಾವಿತರಾದರು. ಈ ಕಾರ್ಯಕ್ರಮದ ಒಂದು ಹಿನ್ನೆಲೆಯಿಂದ ಮೈಸೂರು ಮತ್ತು ಸುತ್ತಲ ಪ್ರದೇಶಗಳ ನಾಗರೀಕರು ಸ್ವಾತಂತ್ರ ಚಳುವಳಿಗೆ ಧುಮುಕಿದರು. ಅದೇ ಸಂದರ್ಭದಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪರವರು ಸಹ ಈ ಹೋರಾಟದಲ್ಲಿ ಪಾಲ್ಗೊಂಡು, ಮುಂಚೂಣಿಯಲ್ಲಿದ್ದು, ತಮ್ಮ ದೇಶಭಕ್ತಿಯನ್ನು ಪ್ರದರ್ಶಿಸಿದರು. ಆ ಸಂದರ್ಭದಲ್ಲಿ ಪೌರಸಭೆ, ಪ್ರಜಾ ಪ್ರತಿನಿಧಿ ಸಭೆ ಹಾಗೂ ಸಾರ್ವತ್ರಿಕವಾಗಿ ಸಭೆ ನಡೆಯುತ್ತಿತ್ತು. ಆದರೆ ಇನ್ನೂ ದಾಸಪ್ಪರವರು ಕಾಂಗ್ರೆಸ್ ಪಕ್ಷ ಸೇರಿರಲಿಲ್ಲ. ಯಶೋಧರಮ್ಮ ಮಾತ್ರ ಎಡಬಿಡದೆ ಕಾಂಗ್ರೆಸ್‌ನ್ನು ಸೇರಲು ಪ್ರೇರೇಪಿಸಿದರು. ಈ ನಡುವೆ ಅಂದಿನ ಪ್ರಜಾಪ್ರತಿನಿಧಿ ಸಭೆಯ ಚುನಾವಣೆಯು ನಡೆಯಿತು. ಮೈಸೂರಿನಲ್ಲಿ ಪ್ರಜಾಪಕ್ಷದ ಉಮೇದುವಾರನಾಗಿ ದಾಸಪ್ಪ ಸ್ಪರ್ಧಿಸಿದ್ದರೂ ಸಹ ಅವರ ಶ್ರೀಮತಿ ಯಶೋಧರಮ್ಮ ಮಾತ್ರ ದಾಸಪ್ಪರವರ ವಿರೋಧವಾಗಿ ಸ್ಪರ್ಧಿಸಿದ ಲಿಂಗಪ್ಪಯ್ಯ ಎಂಬುವವರಿಗೆ ಮತ ಚಲಾಯಿಸಿದರು. ಈ ಘಟನೆ ತಿಳಿದ ದಾಸಪ್ಪರವರು ಯಶೋಧರಮ್ಮನವರ ಕಾಂಗ್ರೆಸ್ ಪಕ್ಷದ ನಿಷ್ಠೆ, ದೇಶಪ್ರೇಮ ಮತ್ತು ವಸ್ತುನಿಷ್ಠೆ, ಸ್ವಾತಂತ್ರ್ಯ ಮನೋಭಾವನೆಯನ್ನು ಮೆಚ್ಚಿ ಕಾಂಗ್ರೆಸ್ ಪಕ್ಷ ಸೇರಿದರು. ಅಲ್ಲಿಂದ ಮುಂದೆ ದಾಸಪ್ಪರವರು ಸಹ ಸ್ವಾತಂತ್ರ್ಯ ಸಮರದಲ್ಲಿ ಹೋರಾಡುತ್ತಾ ಹಲವು ಬಾರಿ ಜೈಲುವಾಸವನ್ನು ಅನುಭವಿಸಿದ್ದಾರೆ.

ಶ್ರೀಮತಿ ಯಶೋಧರಮ್ಮ ದಾಸಪ್ಪರವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಕಾಂಗ್ರೆಸ್ಸಿನ ಅಭ್ಯರ್ಥಿಯಾಗಿ ಅಂದಿನ ನ್ಯಾಯವಿಧಾಯಕ ಸಭೆಗೆ ಸ್ಪರ್ಧಿಸಿದ್ದರು. ಸರ್ ಮಿರ್ಜಾರವರ ಬೆಂಬಲದ ಅಭ್ಯರ್ಥಿಯನ್ನು ಸೋಲಿಸಿ ಆ ಕೀರ್ತಿಗೆ ಪಾತ್ರರಾಗಿದ್ದಾರೆ. 1938ರಲ್ಲಿ ಶಿವಪುರದ ಧ್ವಜ ಸತ್ಯಾಗ್ರಹಕ್ಕಾಗಿ ಹೋರಾಟ ನಡೆದ ಸಂದರ್ಭದಲ್ಲಿ ಮೈಸೂರು ಪ್ರಾಂತ್ಯದಿಂದ ಶಿವಪುರಕ್ಕೆ ಹೋಗಿದ್ದಾರೆ. ಅಲ್ಲಿ ಏನೇ ಆಗಲಿ ಈ ಧ್ವಜ ಸತ್ಯಾಗ್ರಹ ನಡೆಯಲೇಬೇಕು ಎಂದು ಪಟ್ಟು ಹಿಡಿದರು. ಗುಂಡಿನ ಮಳೆ ನಮ್ಮ ಮೇಲೆ ಬೀಳಲಿ, ನಾವು ಮಹಿಳೆಯರು ಈ ಕಾರ್ಯವನ್ನು ಮಾಡಿ ಮುಗಿಸುತ್ತೇವೆ. ಗಂಡಸರಾದ ನೀವು ಸ್ಥೈರ್ಯ ನೀಡಿ ಅಷ್ಟೇ ಸಾಕು ಎಂದು ಸಿಡಿಲಿನಂತೆ ಯಶೋಧರಮ್ಮ ಅವರು ನುಡಿದರು. ಕಾಯಿದೆಯನ್ನು ಉಲ್ಲಂಘಿಸಿದ ಸತ್ಯಾಗ್ರಹಿಗಳೆಲ್ಲರನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿದರು. 1942ರ ಚಲೇ ಜಾವ್ ಚಳವಳಿಯಲ್ಲಿ ಹೆಚ್.ಸಿ. ದಾಸಪ್ಪರವರು ಜೈಲುವಾಸದಲ್ಲಿದ್ದರು. ಆದರೆ ಶ್ರೀಮತಿ ಯಶೋಧರಮ್ಮ ಅವರು ಮನೆಯಲ್ಲಿಯೇ ಜೈಲುವಾಸ ಮಾಡಿದಂತೆ ಕಾಲ ಕಳೆದರು. ಆದರೂ ಮನೆಯ ಸುತ್ತಲೂ ಪೋಲೀಸರು ಕಾವಲಾಗಿದ್ದರು. 1944ರಲ್ಲಿ ಗಾಂಧೀಜಿಯು ಜೈಲಿನಿಂದ ಹೊರಬಂದ ಅವಧಿಯಲ್ಲಿ ಕೆಲವು ತಿಂಗಳುಗಳ ಕಾಲ ಸೇವಾ ಗ್ರಾಮದಲ್ಲಿ ಬಾಪೂಜಿಯೊಡನೆಯೇ ಇದ್ದರು ಎಂಬ ಹೇಳಿಕೆಯೂ ಕೂಡ ಇದೆ. 1950ರಲ್ಲಿ ಶ್ರೀಮತಿ ಯಶೋಧರಮ್ಮ ಅವರ ಆರೋಗ್ಯ ಹದಗೆಟ್ಟಿದ್ದು, ಮದ್ರಾಸಿನ ಆಸ್ಪತ್ರೆ ಒಂದರಲ್ಲಿ ದಾಖಲಾಗಿದ್ದರು. ಆಗ ಮೈಸೂರಿನ ಕಾಂಗ್ರೆಸ್‌ನ ಸಂಘಟನೆ ಆಗ ತಾನೇ ಬೆಳೆಯುತ್ತಿತ್ತು. ಅಂದು ಮೈಸೂರಿನ ಪ್ರಮುಖ ವ್ಯಕ್ತಿಯಾಗಿದ್ದ ಸಾಹುಕಾರ್ ಚೆನ್ನಯ್ಯರವರು ಅಲ್ಲದೆ ಮತ್ತೊಬ್ಬ ಪ್ರಧಾನ ವ್ಯಕ್ತಿ ಚನ್ನಬಸವಯ್ಯರವರ ವಿರುದ್ಧ ಅಂದಿನ ಕಾಂಗ್ರೆಸ್‌ನವರು ಎದುರು ಬಂದಿರುವುದರಿಂದ ಸಮಸ್ಯೆಯು ಮಿತಿ ಮೀರಿತು. ಆದರೂ ಕೂಡ ಕಾಂಗ್ರೆಸ್ ಅಧ್ಯಕ್ಷ ಪದವಿಗೆ ಚುನಾವಣೆ ನಡೆಯಬೇಕಿತ್ತು. ಅದರಿಂದ ಕಾಂಗ್ರೆಸ್ ಪದವಿಗೆ ಚೆನ್ನಯ್ಯರವರು ಸ್ಪರ್ಧಿಸಿದ್ದರು. ಆದರೆ ಕಾಂಗ್ರೆಸ್‌ನ ಕಾರ್ಯಕರ್ತರಲ್ಲಿ ಬಹುಪಾಲು ಮದ್ರಾಸಿನಲ್ಲಿದ್ದ ಶ್ರೀಮತಿ ಯಶೋಧರಮ್ಮ ಅವರನ್ನು ಅಭ್ಯರ್ಥಿಯಾಗಿ ಒತ್ತಾಯದಿಂದ ನಿಲ್ಲಿಸಿದರು. ಕಾರ್ಯಕರ್ತರ ಅಭಿಮಾನ ಹಾಗೂ ಯಶೋಧರಮ್ಮರವರ ಧೀಮಂತಿಕೆ, ದಕ್ಷತೆ ಪರಿಣಾಮವಾಗಿ

ಗೆಲುವು ಸಾಧಿಸಿತು. ಅಂದಿನ ಸಂದರ್ಭದಲ್ಲಿ ಮಹಿಳೆಯೊಬ್ಬರು ಆಯ್ಕೆಯಾದದ್ದು ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆಯಿತು. ನಂತರ 1952ರಲ್ಲಿ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಯಶೋಧರಮ್ಮ ಅವರು ಬಹುಮತದಿಂದ ಗೆಲುವು ಸಾಧಿಸಿದರು. ಶ್ರೀ ನಿಜಲಿಂಗಪ್ಪರವರ ಸಚಿವ ಸಂಪುಟದಲ್ಲಿ ಸಮಾಜ ಕಲ್ಯಾಣ ಸಚಿವರೂ ಆಗಿ ಸಾಮಾಜಿಕ ನ್ಯಾಯದ ಅನೇಕ ಕಾರ್ಯಕ್ರಮವನ್ನು ರೂಪಿಸಿ ಆದರ್ಶ ಮಂತ್ರಿಗಳಾಗಿದ್ದರು.

ಶ್ರೀ ನಿಜಲಿಂಗಪ್ಪರವರ ಮಂತ್ರಿಮಂಡಲವು ಪಾನನಿರೋಧವನ್ನು ರದ್ದುಗೊಳಿಸಿದ್ದನ್ನು ವಿರೋಧಿಸಿದ ಶ್ರೀಮತಿ ಯಶೋಧರಮ್ಮರವರು ತೀವ್ರವಾಗಿ ಖಂಡಿಸಿದರು. ಗಾಂಧೀ ತತ್ವಕ್ಕೆ ಮಸಿ ಬಳಿಯುವ ನಿಮ್ಮ ಸರ್ಕಾರದಲ್ಲಿ ನಾನು ಇರಲಾರೆ ಎಂದು ತಮ್ಮ ಸಚಿವ ಪದವಿಗೆ 1966ರಲ್ಲಿ ರಾಜೀನಾಮೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಸಹ ನಿಜಲಿಂಗಪ್ಪರವರಿಗೆ ಪತ್ರ ಬರೆದರು. ಯಶೋಧರಮ್ಮ ಅವರು ತತ್ವಬದ್ಧವಲ್ಲದ ರಾಜಕಾರಣ ಬೇಡ ಎಂಬುದನ್ನು ಪ್ರತಿಪಾದಿಸಿದರು. ಇದು ಅವರ ದಿಟ್ಟತನ ಹಾಗೂ ಆದರ್ಶಗಳ ಪ್ರತೀಕವಾಗಿದೆ. ತದನಂತರ ದೆಹಲಿಗೆ ಹೊರಟು ಅಲ್ಲಿನ ಗಾಂಧೀ ಸ್ಮಾರಕ ಧರ್ಮದರ್ಶಿ ಮಂಡಲಿಯ ಸಭೆಯಲ್ಲಿ ಪಾಲ್ಗೊಂಡರು. ನಂತರ ತಮ್ಮ ಕೊನೆಗಾಲದಲ್ಲೂ ಜನಸೇವೆಗೆ ಪಾತ್ರರಾಗಿ ಕೊನೆಗೆ ಕ್ಯಾನ್ಸರ್ ರೋಗದಿಂದಾಗಿ ಇಹ ಲೋಕ ತ್ಯಜಿಸಿದರು. ಗಾಂಧೀಜಿಯವರ ಆಶೀರ್ವಾದ ಪಡೆದ ಇವರು ಅವರ ದೀಕ್ಷಾ ಮಂತ್ರವ ಅನುಗ್ರಹ ಪಡೆದ ವೀರ ಮಹಿಳೆ, ಧೀಮಂತ ನಾಯಕಿ. ಸಮಾಜ ಸೇವಾಕರ್ತೆಯಾಗಿ ಹಲವಾರು ದೃಷ್ಟಿಕೋನಗಳಿಂದ ಅವರ ಆದರ್ಶ ಗುಣಗಳು ಇಂದಿಗೂ ಅನುಕರಣೀಯ ಎಂದು ಹೇಳಬಹುದು. ರಾಜ–ಮಹಾರಾಜರ ಆದರ್ಶ ಗುಣಗಳನ್ನು ಇವರು ಸೆರೆ ಹಿಡಿದು ಇವರು ಸಹ ಸಮಾಜದಲ್ಲಿ ಮಹಿಳೆ ಎಂಬುದನ್ನು ಮರೆತು ಹಿಂದುಳಿದ ವರ್ಗಗಳು, ದಲಿತರ ಬಡಕುಟುಂಬಗಳ ಬಗ್ಗೆ ಎಲ್ಲಕ್ಕಿಂತ ಮಿಗಿಲಾಗಿ ಮಹಿಳೆಯರ ಮೇಲೆ ಇದ್ದದಂತಹ ಅಪಾರ ಕಾಳಜಿಯ ಮನೋಭಾವನೆಯಿಂದ ಸ್ತ್ರೀ ಶಕ್ತೀಕರಣಕ್ಕೆ ತಮ್ಮ ಸೇವೆ ಸಲ್ಲಿಸಿದ್ದಾರೆ. ಅವರ ಈ ಕೊಡುಗೆಯನ್ನು ಈಗಲೂ ಸ್ಮರಿಸಿಕೊಂಡು ಸಂಸ್ಮರಣ ಗ್ರಂಥವನ್ನು ತರುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

——— * ———

ಕರ್ನಾಟಕದ ಕಸ್ತೂರ ಬಾ ಅವರ ಜೀವನ ಘಟ್ಟಗಳು

ಡಾ. ಸಿ.ವಿ. ಶೈಲಜಾ

ಮಹಾತ್ಮರ ಕರೆ

ಗಾಂಧೀಜಿಯವರು ಸ್ವಾತಂತ್ರ ಹೋರಾಟಕ್ಕೆ ಮಹಿಳೆಯ ಅಗತ್ಯತೆಯನ್ನು ಮನಗಂಡು ಹೋರಾಟದಲ್ಲಿ ಭಾಗವಹಿಸಲು ಪ್ರೇರೇಪಿಸಿದರು. ಸಂಪ್ರದಾಯಬದ್ಧವಾದ ಭಾರತೀಯ ಸಮಾಜದಲ್ಲಿ ಮಹಿಳೆಯರು ಹೊರ ಬರುವುದೇ ಒಂದು ಸಂದಿಗ್ಧದ ಪರಿಸ್ಥಿತಿ ಇತ್ತು. ಇಂತಹ ಸಮಯದಲ್ಲಿ ಮಹಿಳೆಯರು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ ಹೋರಾಟದಲ್ಲಿ ಧುಮುಕಿದ್ದರು.

ಐರೋಪ್ಯ ಮೂಲದ ಭಗಿನಿ ನಿವೇದಿತ, ಅನಿಬೆಸೆಂಟ್, ಮಾರ್ಗರೇಟ್ ಕಸಿನ್ಸ್ ಹಾಗೂ ಭಾರತೀಯರೇ ಆದ ಕಸ್ತೂರಬಾ ಗಾಂಧಿ, ಸರೋಜಿನಿ ನಾಯ್ಡು, ಪಂಡಿತ ರಮಾಬಾಯಿ ರಾನಡೆ, ಕಮಲಾದೇವಿ ಚಟ್ಟೋಪಾಧ್ಯಾಯ, ಕಮಲಾ ನೆಹರು ಮುಂತಾದ ಮಹಿಳೆಯರೂ ಕೂಡ ರಾಜಕೀಯ, ಶೈಕ್ಷಣಿಕ, ಸಂಘಟನಾತ್ಮಕ ಚಟುವಟಿಕೆಗಳ ಮೂಲಕ ಮಹಿಳೆಯರು ಪ್ರಗತಿ ಹೆಚ್ಚಲು ಕಾರಣವಾದರು. ಸಮಾಜದ ಅತ್ಯಂತ ಕೆಳಸ್ತರದ ಹಾಗೂ ಸಂಪ್ರದಾಯಸ್ಥ ಮಹಿಳೆಯರು ತಮ್ಮ ಕಟ್ಟುಪಾಡುಗಳಿಗೆ ತಿಲಾಂಜಲಿಯನ್ನಿಟ್ಟು ಸ್ವಾತಂತ್ರಕ್ಕಾಗಿ ಹೋರಾಟ ನಡೆಸಲು ಮನೆಯಿಂದ ಹೊರಬಂದರು. ಇದರೊಂದಿಗೆ ಮಹಿಳೆಯರ ಸ್ಥಾನಮಾನದಲ್ಲಿ ಗಮನಾರ್ಹವಾದ ಬದಲಾವಣೆ ಕಂಡುಬಂದಿತು. ರಾಷ್ಟ್ರಮಟ್ಟದ ನಾಯಕಿಯರ ಪ್ರಭಾವ, ರಾಜ್ಯಮಟ್ಟದ ನಾಯಕಿಯರ ಮೇಲೆ ಉಂಟಾಗದೆ ಇರಲಿಲ್ಲ. ತಾವೇನು ಕಡಿಮೆ ಎಂಬ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧೀಜಿಯವರ ಪ್ರೇರಣೆಯಿಂದಾಗಿ ಪಾದಾರ್ಪಣೆ ಮಾಡಿದ್ದರು. ಅದರಲ್ಲಿ ಕರ್ನಾಟಕದಲ್ಲಿ ಮಹಿಳೆಯ ಪಾತ್ರ ವಿಸ್ಮಯಕಾರಕವಾಗಿತ್ತು. ಶ್ರೀಮತಿ ಟಿ. ಸುನಂದಮ್ಮ, ಶ್ರೀಮತಿ ಸುಬ್ಬಮ್ಮ ಜೋಯಿಸ್, ಶ್ರೀಮತಿ ನಾಗರತ್ನ ಹಿರೇಮಠ, ಶ್ರೀಮತಿ ತಾಯಮ್ಮ ವೀರಣ್ಣಗೌಡ ಇನ್ನು ಕೆಲವು ನಾಯಕಿಯರ ಪಾತ್ರ ಅವಿಸ್ಮರಣೀಯ.

ಹುಟ್ಟಿದ ಮನೆ

ಇಂತಹ ಅಗ್ರಪಂಕ್ತಿಯ ನಾಯಕಿಯರಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರ ಸೇವಾ ಕೈಂಕರ್ಯ ಮಹತ್ವವಾದದು. ಆಗಿನ ಕಾಲದಲ್ಲೇ ಸಮಾಜದ ಪ್ರತಿಷ್ಠಿತ ಸಮಾಜ ಸೇವಕರಾದ ಕೆ.ಎಚ್. ರಾಮಯ್ಯನವರ ಮಗಳಾದ ಇವರು, ತಂದೆಯ ಪ್ರಭಾವಕ್ಕೆ ಒಳಗಾಗಿ ತಂದೆಯಂತೆ ಸಮಾಜಸೇವೆಗೆ ತಮ್ಮ ಜೀವನವನ್ನು ಮುಡುಪಾಗಿಸಿಕೊಂಡರು.

ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಕಲ್ಲುದೇವರಹಳ್ಳಿ ಯಶೋಧರಮ್ಮ ದಾಸಪ್ಪನವರ ಪೂರ್ವಿಕರ ಜನ್ಮಸ್ಥಳ, ಜಮೀನ್ದಾರರಾಗಿದ್ದ ಇವರ ಮುತ್ತಾತ ಚಿಕ್ಕಣ್ಣಗೌಡರು ಬರಗಾಲದಿಂದ ಊರನ್ನು ತೊರೆದು ಬೆಂಗಳೂರಿಗೆ ವಲಸೆ ಬಂದು ಚಿಕ್ಕಪುಟ್ಟ ಕೆಲಸಗಳನ್ನು ಮಾಡಿಕೊಂಡು, ನಂತರ ಸ್ವತಃ ಗುತ್ತಿಗೆದಾರರಾಗಿ ಸೇವೆಯನ್ನು ಪ್ರಾರಂಭಿಸಿ ಬೆಂಗಳೂರಿನಲ್ಲೇ ನೆಲೆಸಿದರು. ಇವರ ಮಗ ಹನುಮಯ್ಯರವರು ತಂದೆಯ ಕೆಲಸವನ್ನೆ ಮುಂದುವರಿಸಿಕೊಂಡು ಹೋದರು.

ಹನುಮಯ್ಯ ಮತ್ತು ಶ್ರೀಮತಿ ನಂಜಮ್ಮ ದಂಪತಿಗಳ ಮಗನೇ ಕೆ.ಎಚ್.ರಾಮಯ್ಯ, ತಂದೆತಾಯಿಯ ಅಭಿಲಾಷೆಯಂತೆ ಶಿಕ್ಷಣವನ್ನು ಪಡೆದ ಕೆ.ಎಚ್.ರಾಮಯ್ಯನವರು ಮೈಸೂರಿನ ಮಹಾರಾಜರ ಆಸ್ಥಾನದ ಅಠಾರ ಕಛೇರಿಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಆ ಕಾಲದಲ್ಲಿ ಹಿಂದುಳಿದ ವರ್ಗದವರು ಅಕ್ಷರ ಕಲಿಯುವುದೇ ಕಷ್ಟವಾಗಿತ್ತು. ಅದರಲ್ಲೂ ರೈತ ಜನಾಂಗದ ಪ್ರತಿಭೆಯೊಬ್ಬ ಬಿ.ಎ.ಬಿ.ಎಲ್. ಪದವಿಯನ್ನು ಗಳಿಸಿರುವ ಸಂಗತಿ ಜನರ ಬಾಯಿಂದ ಯುವರಾಜರಾಗಿದ್ದ ಕಂಠೀರವ ನರಸರಾಜ ಒಡೆಯರ ಗಮನಕ್ಕೆ ಬಂದಿತು. ಹಿಂದುಳಿದವರ್ಗದವರ ಅಭಿವೃದ್ಧಿ ಯೋಜನೆಯನ್ನು ರೂಪಿಸುತ್ತಿದ್ದ ಇವರಿಗೆ ಆ ವರ್ಗದ ಜನರ ಬದುಕಿನ ಚಿತ್ರಣವನ್ನು ಅರ್ಥ ಮಾಡಿಕೊಂಡು ಕೆಲಸ ಮಾಡುವ ವ್ಯಕ್ತಿಯ ಅವಶ್ಯಕತೆ ಇತ್ತು. ಇಂತಹ ಸನ್ನಿವೇಶದಲ್ಲಿ ಕೆ.ಎಚ್. ರಾಮಯ್ಯನವರು ಪದವಿ ಪಡೆದು ಬಂದಿದ್ದು, ಅವರ ಏಳಿಗೆಗೆ ಮೆಟ್ಟಿಲು ಆಯಿತು.

ತಮಗೆ ದೊರೆತ ಕೆಲಸದಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸಿದ ಇವರು ಎಲ್ಲ ಪ್ರಶಂಸೆಯನ್ನು ಪಡೆದರು. ಇವರ ಕಾರ್ಯದಕ್ಷತೆ ಮಹಾರಾಜರಲ್ಲಿ ಹೊಸ ಭರವಸೆಯನ್ನು ಮೂಡಿಸಿತು. ಹಿಂದುಳಿದ ವರ್ಗಗಳ ಶೈಕ್ಷಣಿಕ ಮತ್ತು ಸರ್ವಾಂಗೀಣ ಪ್ರಗತಿಗಾಗಿ ಯೋಜನೆ ರೂಪಿಸುತ್ತಿದ್ದ ಮಹಾರಾಜರು ಹಿಂದುಳಿದವರಿಗೆ ವಿದ್ಯಾಭ್ಯಾಸದ ಅರಿವು ಮೂಡಿಸಲು ರಾಮಯ್ಯರವರ ನಾಯಕತ್ವವೇ ಸರಿಯಾದ ಅಸ್ತ್ರವೆಂದು ಮನಗಂಡು ಇವರನ್ನು ಹಿಂದುಳಿದ ವರ್ಗಗಳ ಜಾಗೃತಿಯ ಮಹಾಂದೋಲನ ವಿಶೇಷಾಧಿಕಾರಿಯಾಗಿ ನೇಮಿಸಿದರು. ತಮ್ಮ ಪ್ರಾಮಾಣಿಕ ಸೇವೆಯಿಂದ ಎಲ್ಲ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದರು. ಇವರು 1906ರಲ್ಲಿ ಸ್ಥಾಪಿಸಿದ ಮೈಸೂರು ರಾಜ್ಯ ಒಕ್ಕಲಿಗರ ಸಂಘ ಮತ್ತು ಆದಿ ಕರ್ನಾಟಕದ ಸಂಘಗಳು ಹಿಂದುಳಿದ ಮತ್ತು ಹರಿಜನರ ಏಳಿಗೆಗೆ ಅದರಲ್ಲೂ ವಿಶೇಷವಾಗಿ ಅವರುಗಳ ಶೈಕ್ಷಣಿಕ ಮುನ್ನಡೆಗೆ ಸಹಕಾರಿಯಾದವು.

ಇವರ ಸೇವಾಕೈಂಕರ್ಯವನ್ನು ಮೆಚ್ಚಿದ ಮಹಾರಾಜರು ಇವರನ್ನು "ಬಾರ್ ಅಟ್ ಲಾ" ಪರೀಕ್ಷೆ ಬರೆಯಲು ಇಂಗ್ಲೆಂಡ್‌ಗೆ ಕಳುಹಿಸಿದರು. ಅದರಲ್ಲೂ ಉತ್ತೀರ್ಣರಾಗಿ ಕೆ.ಎಚ್. ರಾಮಯ್ಯನವರು ಸರ್ಕಾರದಲ್ಲಿ ಉನ್ನತ ಹುದ್ದೆಯನ್ನು ಪಡೆದು ಯಶಸ್ಸನ್ನು ಗಳಿಸಿದರು. ಹೀಗೆ ಮಹಾರಾಜರೊಂದಿಗೆ ನಿಕಟ ಸಂಪರ್ಕವನ್ನು ಹೊಂದುವುದರ ಮೂಲಕ ಅವರ ಪ್ರೀತಿಗೆ ಪಾತ್ರರಾದ ಕೆ.ಎಚ್.ರಾಮಯ್ಯ ಅವರು ಹಿಂದುಳಿದ ವರ್ಗದಲ್ಲಿ ಹುಟ್ಟಿ ಬೆಳೆದರೂ ಅಂದಿನ ಕಾಲದಲ್ಲಿನ ಅಡೆತಡೆಗಳನ್ನು ಅನಾನುಕೂಲತೆಗಳನ್ನು ಎದುರಿಸಿ ತಮ್ಮ ಸ್ವಯಂಪ್ರತಿಭೆಯಿಂದ ಜೀವನದಲ್ಲಿ ಏಳಿಗೆ ಹೊಂದಿದರು. ಸಮಾಜಸೇವೆಯೇ ತಮ್ಮ ಆದ್ಯ ಕರ್ತವ್ಯವೆಂದು ತಿಳಿದು ದೀನದಲಿತರ, ಬಡವರ, ಹಿಂದುಳಿದವರ, ಒಳಿತಿಗಾಗಿ ನಿಸ್ವಾರ್ಥತೆಯಿಂದ ಸೇವೆ ಸಲ್ಲಿಸುವ ಮೂಲಕ ಅಮರರಾಗಿ ಇತಿಹಾಸವನ್ನು ಸೇರಿದ್ದಾರೆ. ಇಂತಹ ಸ್ವಾತಿಕ ವ್ಯಕ್ತಿಯೊಬ್ಬರ ಮಗಳೇ ಶ್ರೀಮತಿ ಯಶೋಧರಮ್ಮ ದಾಸಪ್ಪ ತಂದೆಯಂತೆ ಸಮಾಜಸೇವೆಯಲ್ಲಿ ತೊಡಗಿಸಿಕೊಂಡು ಅಜರಾಮರಾಗಿದ್ದಾರೆ.

ಬಾಲ್ಯ–ವಿದ್ಯಾಭ್ಯಾಸ

1905 ಮೇ 28ರಂದು ಕೆ.ಎಚ್.ರಾಮಯ್ಯ ಮತ್ತು ಶ್ರೀಮತಿ ರೇವಮ್ಮ ಎಂಬ ಆದರ್ಶ ದಂಪತಿಗಳ ಹಿರಿಯ ಮಗಳಾಗಿ ಯಶೋಧರಮ್ಮನವರು ಬೆಂಗಳೂರಿನಲ್ಲಿ ಜನಿಸಿದರು. ಒಟ್ಟು ಹನ್ನೊಂದು ಜನ ಮಕ್ಕಳಲ್ಲಿ ಇವರು ತಂದೆಯ ಪ್ರೀತಿಪಾತ್ರ ಮಗಳಾಗಿದ್ದರು. ಯಾವ ಪುರುಷನಿಗೆ ಕಡಿಮೆ ಇಲ್ಲದಂತೆ ಮಗಳನ್ನು ಬೆಳೆಸಿ ಉನ್ನತ ಸೇವೆಯನ್ನು ಸಲ್ಲಿಸುವಂತೆ ತಮ್ಮ ಮಗಳು ಆಗಬೇಕೆಂಬ ಅಭಿಲಾಷೆಯನ್ನು ತಾಳಿದ ರಾಮಯ್ಯನವರು ಮಗಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತುನೀಡಿದ್ದರು. ಮಹಿಳೆಯರ ಶಿಕ್ಷಣದಿಂದಲೇ ಸಮಾಜದ ಪ್ರಗತಿ ಎಂಬ ನಿಲುವನ್ನು ತಾಳಿದ ಇವರು ತಮ್ಮ ಮನೆಯಿಂದಲೇ ಸ್ತ್ರೀವಿದ್ಯಾಭ್ಯಾಸ ಆಂದೋಲನಕ್ಕೆ ನಾಂದಿ ಹಾಡಿದ್ದರು.

ಆ ಕಾಲದಲ್ಲಿ ಹಿಂದುಳಿದ ವರ್ಗಗಳ ಗಂಡುಮಕ್ಕಳೇ ಶಿಕ್ಷಣ ಪಡೆಯುವುದು ಕಷ್ಟವಾಗಿತ್ತು. ಅಂತಹ ಸಮಯದಲ್ಲಿ ರಾಮಯ್ಯನವರು ಮಗಳಿಗೆ ಶಿಕ್ಷಣ ಕೊಡಿಸಲು ಪ್ರಯತ್ನಿಸಿದ್ದಾಗ ತಮ್ಮ ಮನೆಯಲ್ಲೇ ವಿರೋಧದ ಅಲೆಯಲ್ಲಿ ಈಜಬೇಕಾಗಿತ್ತು. ಶ್ರೀಮತಿ ರೇವಮ್ಮವರು ಕಟ್ಟಾ ಸಾಂಪ್ರದಾಯಕ ನಿಲುವನ್ನು ತಾಳಿದ್ದು ಹೆಣ್ಣುಮಕ್ಕಳು ರೀತಿನೀತಿಯಲ್ಲಿ ಬೆಳೆದು ಮದುವೆಯಾಗಿ ಸಂಸಾರ ಮಾಡಬೇಕೆಂಬ ನಂಬಿಕೆಯನ್ನು ಹೊಂದಿದ್ದರು. ಆದರೆ ರಾಮಯ್ಯನವರ ಧೋರಣೆಯೇ ಬೇರೆ ರೀತಿಯಾಗಿದ್ದರಿಂದ ಮಗಳನ್ನು ಬೆಂಗಳೂರಿನ ಚಾಮರಾಜ ಪೇಟೆಯ ಸರ್ಕಾರಿ ಪ್ರಾಥಮಿಕ ಶಾಲೆಗೆ ಸೇರಿಸಿದರು. ಪ್ರೌಢಶಿಕ್ಷಣವನ್ನು ಬೆಂಗಳೂರಿನ ಲಂಡನ್ ಮಿಷನ್ ಶಾಲೆಯಲ್ಲಿ ಮುಗಿಸಿದ ಯಶೋಧರಮ್ಮ ಇಂಟರ್‌ಮೀಡಿಯೇಟ್ ಶಿಕ್ಷಣವನ್ನು ಮದ್ರಾಸಿನ ಕ್ವೀನ್ಸ್ ಮೇರಿ ಕಾಲೇಜಿನಲ್ಲಿ ಓದಿದ್ದರು.

ತಮ್ಮ ಮಗಳು ತಮ್ಮಂತೆಯೇ ಸಮಾಜ ಕೈಂಕರ್ಯದಲ್ಲಿ ತೊಡಗಬೇಕೆಂಬ ಅಭಿಲಾಷೆಯನ್ನು ಹೊಂದಿದ ರಾಮಯ್ಯನವರು, ತಾವು ಭೇಟಿ ನೀಡುತ್ತಿದ್ದ ಹಳ್ಳಿಗೆ ಜೊತೆಯಲ್ಲಿ ಮಗಳನ್ನು ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿಯ ಜನಜೀವನ ಅವರ ಕಷ್ಟಕಾರ್ಪಣ್ಯದ ಬಗ್ಗೆ ಅರಿವು ಮೂಡಿಸುತ್ತಿದ್ದರು. ಹೀಗೆ ತಂದೆಯಿಂದ ಸ್ಫೂರ್ತಿಗೊಂಡ ಯಶೋಧರಮ್ಮ ಸಮಾಜಸೇವೆ ಒಲವನ್ನು ಚಿಕ್ಕಂದಿನಿಂದಲೇ ಮೈಗೂಡಿಸಿಕೊಂಡು.

ಯಶೋಧರಮ್ಮನವರು ಶ್ರೀರಾಮಕೃಷ್ಣ ಪರಮಹಂಸ ಮತ್ತು ಶ್ರೀಮತಿ ಶಾರದ ಮಾತೆಯವರ ಪ್ರಭಾವಕ್ಕೆ ಒಳಗಾಗಿದ್ದರು. ತಾವು ಹುಟ್ಟಿ ಬೆಳೆದ ಹಿಂದೂಧರ್ಮದ ಆಚಾರ ವಿಚಾರಗಳ ಬಗ್ಗೆ ಶ್ರದ್ಧೆ ಭಕ್ತಿ ಗೌರವವನ್ನು ತಾಳಿದ ಇವರು ಭಜನೆ, ಕೀರ್ತನೆ ದೇವರ ಸ್ತುತಿಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು. ದೇವರು ಮತ್ತು ಸಂತರ ಬಗ್ಗೆ ಅಪಾರ ನಂಬಿಕೆಯನ್ನು ಹೊಂದಿದ್ದರು.

ವೈವಾಹಿಕ ಜೀವನ

ಮಗಳು ಯಶೋಧರಾ ಬುದ್ಧಿವಂತಿಕೆ, ಸಹಾನುಭೂತಿ ಅಂತಃಕರಣದ ವ್ಯಕ್ತಿತ್ವ ರಾಮಯ್ಯನವರಿಗೆ ಹೆಮ್ಮೆಯನ್ನುಂಟುಮಾಡಿತ್ತು. ಬೆಳೆದು ನಿಂತ ಮಗಳಿಗೆ ಮದುವೆ ಮಾಡಿಸುವ ಯೋಚನೆ ಮಾಡಿದ ಇವರು, ಕೊಡಗಿನಲ್ಲಿ ನ್ಯಾಯವಾದಿಗಳಾದ ರಾವಸಾಹೇಬ ಚೆನ್ನಯ್ಯನವರ ಪುತ್ರ ಹೆಚ್.ಸಿ.ದಾಸಪ್ಪರೊಂದಿಗೆ ವಿವಾಹವನ್ನು ನೆರವೇರಿಸಿದರು. ಹೆಚ್.ಸಿ.ದಾಸಪ್ಪನವರು ವಕೀಲರಾಗಿದ್ದು ನಂತರ ತಮ್ಮ ಸೇವಾ ಮನೋಭಾವದಿಂದ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದ ಬಗ್ಗೆ ತಮ್ಮ ಗಮನವನ್ನು ಹರಿಸಿದರು.

ಪೌರಸಭೆಯ ಸದಸ್ಯರಾಗಿ ಸಾರ್ವಜನಿಕ ಜೀವನಕ್ಕೆ ಪಾದಾರ್ಪಣೆ ಮಾಡಿದ ಇವರು ಶ್ರೀ ರಾಮಕೃಷ್ಣ ಆಶ್ರಮದ ಕಾರ್ಯದರ್ಶಿಯಾಗಿಯೂ ಸೇವೆಸಲ್ಲಿಸಿದ್ದಾರೆ. ಪ್ರಜಾಪಕ್ಷದ ಸ್ಥಾಪಕರಲ್ಲಿ ಒಬ್ಬರಾಗಿದ್ದ ಇವರು ಅದೇ ಪಕ್ಷದಿಂದ ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕಸಭೆಯ ಸದಸ್ಯರಾಗಿ ಪ್ರಸಿದ್ಧಿ ಪಡೆದಿದ್ದರು. ಸಮಾಜದ ಸಾಮಾಜಿಕ ಕಟ್ಟುಪಾಡುಗಳ ಬಗ್ಗೆ ವಿರೋಧವನ್ನು ವ್ಯಕ್ತಪಡಿಸುತ್ತ ಇವರು 1929ರಲ್ಲಿ ಜಾರಿಗೆ ಬಂದ ಶಾರದ ಕಾಯಿದೆಯನ್ನು ಪ್ರಬಲವಾಗಿ ಸಮರ್ಥಿಸುವ ಮೂಲಕ ಸಂಪ್ರದಾಯವಾದಿಗಳ ಅಸಮಾಧಾನಕ್ಕೆ ಕಾರಣವಾಗಿದ್ದರು.

ಗಾಂಧೀಜಿಯವರ ಅನುಯಾಯಿಯಾಗಿ ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿದ ಇವರು ಶಿವಪುರ ಧ್ವಜ ಸತ್ಯಾಗ್ರಹದ ವೇಳೆ ಮುಂಚೂಣಿಯ ನಾಯಕರಾಗಿದ್ದು ಬ್ರಿಟಿಷ್ ಸರ್ಕಾರದ ಕ್ರಮವನ್ನು ವಿರೋಧಿಸಿ ಜೈಲುವಾಸವನ್ನು ಅನುಭವಿಸಿದ್ದರು. ಇವರ ವರ್ಚಸ್ಸು ಇವರಲ್ಲಿ ಸಂಘಟನಾ ಶಕ್ತಿಯಿಂದ ಕ್ರೋಧಗೊಂಡ ಸರ್ಕಾರ ರಾಜದ್ರೋಹ ಮತ್ತು ಯುದ್ಧ ವಿರೋಧ ಚಟುವಟಿಕೆಗಳ ಆರೋಪ ಹೊರಿಸಿ ದಸ್ತಗಿರಿ ಮಾಡಿ ಶಿಕ್ಷೆಯನ್ನು ವಿಧಿಸಿತು. ಕ್ವಿಟ್ ಇಂಡಿಯಾ ಚಳವಳಿಯಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದ್ದರು. 1946ರಲ್ಲಿ ನಡೆದ ಜವಾಬ್ದಾರಿ ಸರ್ಕಾರದ ಚಳವಳಿಯ ಮುಂಚೂಣಿಯ ಪಾತ್ರವನ್ನು ವಹಿಸಿದ್ದರು.

ಹೀಗೆ ಸ್ವಾತಂತ್ರ ಹೋರಾಟ ಸಮಾಜಸೇವೆ ರಾಜಕೀಯ ಕ್ಷೇತ್ರದಲ್ಲಿ ತಮ್ಮದೇ ಆದ ವರ್ಚಸ್ಸಿನ ಮೂಲಕ ಜನಮನ ಗೆದ್ದ ಇವರು ಕರ್ನಾಟಕದ ರಾಜಕೀಯ ಧುರೀಣರಲ್ಲಿ ಪ್ರಭಾವಿ ನಾಯಕರೆನ್ನಿಸಿಕೊಂಡರು. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದ ಇವರು ಪತ್ನಿಯೊಂದಿಗೆ ಸೇವಾಗ್ರಾಮದಲ್ಲಿ ಆರು ತಿಂಗಳ ವಾಸ್ತವ್ಯವನ್ನು ಹೂಡುವುದರೊಂದಿಗೆ ಅಲ್ಲಿನ ದೈನದಿಂದ ಕಾರ್ಯಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಗಾಂಧೀಜಿಯವರ ಪ್ರೀತಿಗೆ ಪಾತ್ರರಾಗಿದ್ದು ಇವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ ಎನ್ನಿಸಿದೆ.

ಹೀಗೆ ಪ್ರಭಾವಿ ನಾಯಕರೆನ್ನಿಸಿದ ದಾಸಪ್ಪನವರು ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿ ಜವಹರಲಾಲ್ ನೆಹರು ಮಂತ್ರಿಮಂಡಲದಲ್ಲಿ ರೈಲ್ವೆ ಸಚಿವರಾಗಿ ರೈಲ್ವೆ ಯೋಜನೆಗಳ ಕಾರ್ಯದಕ್ಷತೆಗೆ ವಿಶೇಷ ಒತ್ತು ನೀಡಿದ್ದರು. ಹಾಗೆಯೇ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಮಂತ್ರಿಮಂಡಲದಲ್ಲಿ ಕೈಗಾರಿಕೆ ಮತ್ತು ನೀರಾವರಿ ಇಲಾಖೆಯ ಮಂತ್ರಿಯಾಗಿ ಅನೇಕ ಪ್ರಗತಿಪರ ಯೋಜನೆಗಳನ್ನು ರೂಪಿಸಿದ್ದಾರೆ. ಹೀಗೆ ತಮ್ಮದೇ ಆದ ವರ್ಚಸ್ಸಿನಿಂದ ಜನರ ಮೆಚ್ಚುಗೆ ಪಾತ್ರರಾಗಿದ ಹೆಚ್.ಸಿ.ದಾಸಪ್ಪವರು ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸೇವೆ ಸಲ್ಲಿಸುವುದರ ಮೂಲಕ ಇತಿಹಾಸದ ಪುಟದಲ್ಲಿ ಹಚ್ಚಹಸಿರಾಗಿ ನೆಲೆಸುವುದರ ಮೂಲಕ ಮುಂದಿನ ತಲೆಮಾರಿನ ನಾಯಕರಿಗೆ ಆದರ್ಶವಾಗಿದ್ದಾರೆ.

ಸ್ವಾತಂತ್ರ್ಯ ಹೋರಾಟದಲ್ಲಿ ಯಶೋಧರಮ್ಮ

ಆದರ್ಶ ಪತ್ನಿಯಾದ ಯಶೋಧರಮ್ಮ ತಮ್ಮ ಪತಿಯವರ ಸಹಕಾರದಿಂದ ವಿವಿಧ ಸಾಮಾಜಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡರು. ತಂದೆಯ ಸ್ಫೂರ್ತಿ ಪತಿಯ ಸಹಕಾರದಿಂದ ಸಮಾಜಕ್ಷೇತ್ರದಲ್ಲಿ ತೊಡಗಿಕೊಂಡಿದ್ದ ಇವರು ಗಾಂಧೀಜಿಯವರ ತತ್ವಗಳಿಗೆ ಮಾರುಹೋಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು.

ಅಂದಿನ ಸಮಾಜದಲ್ಲಿ ಮಹಿಳೆಯು ಹೊರಬರುವುದೇ ಒಂದು ರೀತಿಯ ತ್ರಾಸದ ಸಂಗತಿಯಾಗಿತ್ತು. ಅಂತಹ ಸನ್ನಿವೇಶದಲ್ಲಿ ಒಂದು ಪ್ರತಿಷ್ಠಿತ ಸಂಪ್ರದಾಯದಸ್ಥ ಮನೆತನದಿಂದ ಬಂದ ಇವರು ದೇಶಸೇವೆಗಾಗಿ ದೃಢ ನಿಲುವು ತಾಳಿದ್ದು ಪ್ರಶಂಸನೀಯ.

ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟದ ಜಾಗೃತಿ ಕಂಡುಬಂದಿದ್ದು ಮಹಾತ್ಮಾಗಾಂಧೀಜಿಯರು ರಾಜ್ಯಕ್ಕೆ ಭೇಟಿ ನೀಡಿದ ನಂತರ. ಅವರ ಆಗಾಧವಾದ ಸ್ವಾತಿಕ ಶಕ್ತಿಯಿಂದ ಪ್ರೇರಿತರಾದ ಮಹಿಳೆಯರು ತಂಡೋಪತಂಡವಾಗಿ ದೇಶ ಸೇವೆಗೆ ಧುಮುಕಿದ್ದರು. ಗಾಂಧೀಜಿಯವರ ವಿಚಾರಧಾರೆಗಳಾದ ಅಹಿಂಸೆ, ರಚನಾತ್ಮಕ ಕಾರ್ಯಕ್ರಮ, ಸಹನಶೀಲ ಪ್ರತಿರೋಧ ಮಹಿಳೆಯರ ಮನೋಭಾವಕ್ಕೆ ಸಹಜತೆಯಿಂದ ಹೊಂದಿಕೊಂಡವು. ಪುರುಷರಿಗಿಂತ ಮಹಿಳೆ ಸೇವೆಯ ಅನನ್ಯತೆಯನ್ನು ಮನಗಂಡಿದ್ದ ಗಾಂಧೀಜಿ, ಪ್ರೀತಿ, ತ್ಯಾಗ, ಸಹನೆ, ನೈತಿಕತೆ, ಮುಂತಾದವು ಹೆಣ್ಣಿನ ಸ್ವಾಭಾವಿಕ ಗುಣಗಳು ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಗಾಂಧೀಜಿಯವರು ಮಹಿಳೆಯರನ್ನು ಸಕ್ರಿಯ ರಾಜಕೀಯ, ಸಾಮಾಜಿಕ, ಸ್ವಾತಂತ್ರ್ಯ ಕ್ಷೇತ್ರಗಳಲ್ಲಿ ಭಾಗವಹಿಸಲು ಹೆಚ್ಚು ಪ್ರೋತ್ಸಾಹ ಸಹಕಾರವನ್ನು ನೀಡಿದ್ದರು. ಪಾತಿವ್ರತ್ಯತೆ ಹೆಣ್ಣಿಗೆ ಎಷ್ಟೋ ಮುಖ್ಯವೋ ಗಂಡಿಗೂ ಅಷ್ಟೇ ಮುಖ್ಯ. ಒಬ್ಬ ಗುಣವಂತ ಮಹಿಳೆಯ ಶೀಲವು ಅವಳ ಇಚ್ಛೆಗೆ ವಿರುದ್ಧವಾಗಿ ಕೆಡುವುದು ಸಾಧ್ಯವಿಲ್ಲ, ಅವಳ ಪರಿಶುದ್ಧತೆಯೇ ಅವಳಿಗೆ ಒಂದು ರಕ್ಷಣೆ. ಬಲಾತ್ಕಾರದಿಂದ ತನ್ನ ಶೀಲವನ್ನು ಕಳೆದುಕೊಂಡಿರುವ ಒಬ್ಬ ಹೆಣ್ಣು ಯಾವ ರೀತಿಯಿಂದಲೂ ನಾಚಿಕೆಪಡುವ ಅವಶ್ಯಕತೆ ಇಲ್ಲ, ಅವಳು ಯಾವ ರೀತಿಯಿಂದಲೂ ಅಪವಿತ್ರಳಲ್ಲ ಎಂದು ಗಾಂಧೀಜಿ ಹೇಳಿದ ಮಾತು ಮಹಿಳೆಯರಲ್ಲಿ ಹೆಚ್ಚಿನ ಆತ್ಮವಿಶ್ವಾಸವನ್ನುಂಟುಮಾಡುವುದರೊಂದಿಗೆ ಅವರು ದೇಶ ಸೇವೆಯಲ್ಲಿ ತೊಡಗಲು ಸಾಧ್ಯವಾಯಿತು. ಮನೆಯ ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ಇದ್ದು ಹೊರ ಪ್ರಪಂಚವನ್ನೇ ಕಾಣದ ಅಂತಹ ಮಹಿಳೆಯರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕುವುದರೊಂದಿಗೆ ಕತ್ತಲೆ ಕವಿದ ಮೋಡಗಳಿಗೆ ಮಿಂಚು ಗುಡುಗಿನ ಅಬ್ಬರ ಉಂಟಾದ ಹಾಗೆಯೇ ಬಿಂಬಿತವಾಯಿತು. ಅವರ ಉತ್ಸಾಹ ಧೈರ್ಯ ಸಾಹಸಗಳಿಗೆ ಪುರುಷರೇನು ಅಡ್ಡಿಯಾಗಲಿಲ್ಲ.

ಹೀಗೆ ರಾಜ್ಯ ರಾಷ್ಟ್ರಮಟ್ಟದಲ್ಲಿ ಮಹಿಳೆಯರು, ದೇಶ ಸೇವೆ ತಮ್ಮ ಜೀವನದ ಗುರಿ ಎಂಬ ನಿಲುವು ತಾಳುವ ಮಟ್ಟಕ್ಕೆ ಹೋದರು. ಇಂತಹ ಮನೋಭಾವವನ್ನು ತಾಳಿದ ಮಹಿಳೆಯರ ಸಾಲಿನಲ್ಲಿ ಯಶೋಧರಮ್ಮ ಅಗ್ರಪಂಕ್ತಿಯ ನಾಯಕಿ.

ಕಂಚಿನ ಕಂಠವನ್ನು ಹೊಂದಿದ ಯಶೋಧರಮ್ಮ ತಮ್ಮ ಭಾಷಣದ ಮೂಲಕ ನೋಡುಗರು ಮತ್ತು ಕೇಳುಗರನ್ನು ಮಂತ್ರಮುಗ್ಧರನ್ನಾಗಿಸಿದ್ದರು. ಅವರ ಆತ್ಮವಿಶ್ವಾಸ, ಮಾತಿನಲ್ಲಿದ್ದ ಅಚಲವಾದ ನಂಬಿಕೆ ಹೋರಾಟದ ಮನೋಭಾವಕ್ಕೆ ಸ್ಫೂರ್ತಿಯೆನ್ನಿಸಿತ್ತು. ಯಾವ ಸನ್ನಿವೇಶದಲ್ಲಿಯೂ ಎದೆಗುಂದದ ಇವರು ಎಂತಹ ಕಠಿಣ ಸನ್ನಿವೇಶವನ್ನು ಅತ್ಯಂತ ಬುದ್ಧಿವಂತಿಕೆಯಿಂದ ಹೋಗಲಾಡಿಸುವ ಚಾಕಚಕ್ಯತೆಯನ್ನು ಮೈಗೂಡಿಸಿಕೊಂಡಿದ್ದರು. ಇವರಲ್ಲಿದ್ದ ಹೋರಾಟದ ಮನೋಭಾವಕ್ಕೆ ಗಾಂಧೀಜಿಯವರ ಪ್ರಭಾವ ಮತ್ತಷ್ಟು ಸ್ಫೂರ್ತಿದಾಯಕವಾಯಿತು.

ಹೀಗೆ ಹೋರಾಟದ ಮನೋಭಾವನೆಯಿಂದ ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿದ ಯಶೋಧರಮ್ಮ 1938ರಲ್ಲಿ ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಮುಂಚೂಣಿಯ ನಾಯಕಿಯಾಗಿದ್ದರು. ಶಿವಪುರದಲ್ಲಿ ಧ್ವಜಾರೋಹಣ ಮಾಡಕೂಡದು ಎಂಬ ಸರ್ಕಾರದ ಆದೇಶವನ್ನು ದಿಟ್ಟ ನುಡಿಗಳಿಂದ ಖಂಡಿಸಿದ್ದರು. ಧ್ವಜಾರೋಹಣವನ್ನು ಮಾಡಲೇಬೇಕು, ನಿಮಗೆ ಮಾಡಲು ಸಾಧ್ಯವಿಲ್ಲದಿದ್ದರೆ ನಮಗೆ ಬಿಡಿ ನಾವು ಧ್ವಜಾರೋಹಣ ಮಾಡುತ್ತೇವೆ. "ಕಾಂಗ್ರೆಸ್ ಅಧ್ಯಕ್ಷರಾಗಲಿ ಅಥವಾ ನಾಯಕರಾಗಲಿ ಧ್ವಜಾರೋಹಣ ಮಾಡಿದರೆ ತಾನೇ ದಸ್ತಗಿರಿ ಹಾಗೂ ಹತ್ಯಕಾಂಡದ ಭಯ? ನಾವು ಎಲ್ಲದ್ದಕ್ಕೂ ಸಿದ್ಧರಿದ್ದೇವೆ. ಅವರು ಬಂಧಿಸಿ ಶಿಕ್ಷೆ ವಿಧಿಸಿದರೂ ಚಿಂತೆಯಿಲ್ಲ, ನಾವಂತೂ ಇಟ್ಟ ಹೆಜ್ಜೆಯನ್ನು, ತೊಟ್ಟ ಸಂಕಲ್ಪವನ್ನು ಬಿಡುವುದಿಲ್ಲ. ಇದು ಸರ್ಕಾರದ ಸ್ಥಳವಲ್ಲ. ಸಾರ್ವಜನಿಕರ ಸ್ವತ್ತು ಇದಕ್ಕೆ ಯಾಕೆ ನಾವು ಹೆದರಬೇಕು", ಎಂದು ದಿಟ್ಟತನದಿಂದ ಹೇಳಿ ನಾಯಕರಿಗೆ ಮುಜುಗರವನ್ನು ಉಂಟುಮಾಡಿದ್ದರು. ಟಿ. ಸುನಂದಮ್ಮ ಮತ್ತು ಇತರ ಮಹಿಳೆಯುರು ಯಶೋಧರಮ್ಮನವರ ಈ ಮಾತಿಗೆ ಧ್ವನಿಗೂಡಿಸಿದ್ದರು.

ಈ ರೀತಿಯ ಬೆಳವಣಿಗೆಯಿಂದ ನಾಯಕರಿಗೆ ಕೊಂಚ ಮುಜುಗರವಾಯಿತು. ಮಹಿಳೆಯರನ್ನು ಮುಂದೂಡಿ ನಾವು ಹಿಂದೆ ಸರಿದರೆ ಗಾಂಧೀಜಿ ಏನು ಭಾವಿಸುವರು, ಜನರ ಪ್ರತಿಕ್ರಿಯೆ ಏನಾಗುವುದು ಎಂದು ಧ್ವಜಾರೋಹಣ ಮಾಡಲು ನಿರ್ಧರಿಸಿದರು. ಜನತೆಯ ನಿಲುವನ್ನು ಅವರ ಪ್ರೇರಕ ಶಕ್ತಿಯನ್ನು ಅರಿತು ನಾಯಕರು ಅಂತಿಮವಾಗಿ ಧ್ವಜಾರೋಹಣ ಮಾಡಲು ತೀರ್ಮಾನಿಸಿ ಅಧಿವೇಶನದ ಅಧ್ಯಕ್ಷರಾಗಿದ್ದ ಟಿ.ಸಿದ್ದಲಿಂಗಯ್ಯನವರು ಮುಂದಾದರು. ಅಧಿಕಾರಿಗಳು ಇದನ್ನು ತಡೆಯಲು ಮುಂದೆ ಬಂದರು. ಆದರೂ ಧ್ವಜಾರೋಹಣ ಮಾಡಿ ಧ್ವಜದ ದಾರ ಬಿಚ್ಚಿಕೊಳ್ಳುವ ಮೊದಲೇ ಟಿ.ಸಿದ್ದಲಿಂಗಯ್ಯ ಬಂಧಿತರಾದರು. ನಂತರ ಎಂ.ಎಸ್. ಜೋಯಿಸ ಮುಂತಾದ ನಾಯಕರು ದಸ್ತಗಿರಿಯಾದರು.

ಶಿವಪುರ ಧ್ವಜ ಸತ್ಯಾಗ್ರಹದ ಮಹಿಳಾ ವಿಭಾಗದ ನಾಯಕತ್ವವನ್ನು ಯಶೋಧರಮ್ಮ ವಹಿಸಿದರು. ಅವರ ನಾಯಕತ್ವದಲ್ಲಿ ಮಹಿಳೆಯರು ಧ್ವಜದ ಸ್ತಂಭಕ್ಕೆ ಅಪಾಯವಾಗದಂತೆ, ಯಾರೂ ಹತ್ತಿರಕ್ಕೆ ಬರದಂತೆ ಸುತ್ತಲೂ ಕಾವಲು ಕುಳಿತರು. ರಾಷ್ಟ್ರಧ್ವಜ ಗೌರವ ಕಾಪಾಡುವುದೇ ಅವರ ನಿಲುವಾಗಿತ್ತು. ಯಶೋಧರಮ್ಮ ತಮ್ಮ ಇಬ್ಬರು ಚಿಕ್ಕ ಮಕ್ಕಳನ್ನು ಜೊತೆಯಲ್ಲಿಟ್ಟುಕೊಂಡು ಧ್ವಜದ ರಕ್ಷಣೆಗೆ ಕುಳಿತಿದ್ದುದು ಶಿವಪುರದ ರಾಷ್ಟ್ರ ಧ್ವಜಾರೋಹಣ ಸಂದರ್ಭದಲ್ಲಿ ಕರ್ನಾಟಕದ ವೀರಮಹಿಳೆಯರು ಗಂಡುಗಲಿಗಳಂತೆ ಸೆಡ್ಡು ಹೊಡೆದು ನಿಂತು ಕರ್ನಾಟಕದ ಕೀರ್ತಿಯನ್ನು ಹೆಚ್ಚಿಸಿದರು. ಯಶೋಧರಮ್ಮ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ವಹಿಸಿದ ದಿಟ್ಟತನವನ್ನು ಕಂಡ ಕುವೆಂಪುರವರು ಅವರ ಹೋರಾಟದ ಸ್ಫೂರ್ತಿಯ ನೆಲೆಯ ಧೀಮಂತ ವ್ಯಕ್ತಿತ್ವದ ಹೋರಾಟ ನಿಲುವನ್ನು ಮೆಚ್ಚಿ ಒಂದು ಕವಿತೆಯನ್ನು ಬರೆದಿರುವುದು ನಿಜಕ್ಕೂ ಸಂತೋಷದ ಸಂಗತಿ.

ಶಿವಪುರದ ಧ್ವಜ ಸತ್ಯಾಗ್ರಹದ ಬಿಸಿ ಇನ್ನೂ ಮಾಸದೆ ಇರುವಾಗಲೇ 1938ರಲ್ಲಿ ಕೋಲಾರದ ವಿದುರಾಶ್ವತ್ಥದಲ್ಲಿ ಮತ್ತೊಂದು ಹತ್ಯಾಕಾಂಡ ನಡೆದು ದೇಶವನ್ನೆ ತಲ್ಲಣಗೊಳಿಸಿತ್ತು. ಧ್ವಜ ಸತ್ಯಾಗ್ರಹಕ್ಕೆ ಸಂಬಂಧಿಸಿದಂತೆ ನಡೆದ ಗಲಭೆಯಲ್ಲಿ ಅನೇಕ ಮುಗ್ಧ ಜನರು ಬಲಿಯಾಗಿ ಆಘಾತವನ್ನುಂಟುಮಾಡಿತ್ತು.

ಗಾಂಧೀಜಿ, ನೆಹರು, ಪಟೇಲ್‌ರಂತಹ ರಾಷ್ಟ್ರೀಯ ನಾಯಕರು ಈ ಅಮಾನುಷ ಘಟನೆಯನ್ನು ಖಂಡಿಸಿದರು. ಯಶೋಧರಮ್ಮ ಸರ್ಕಾರದ ಪೈಶಾಚಿಕ ಕೃತ್ಯದ ಕ್ರಮವನ್ನು ಕುರಿತು ತೀಕ್ಷ್ಣವಾದ ಭಾಷಣದ ಮೂಲಕ ಖಂಡಿಸಿದ್ದರು. ಇವರ ಭಾಷಣ ರಾಜದ್ರೋಹಕರವಾಗಿದೆ ಎಂದು ಇವರನ್ನು ಬಂಧಿಸಿ ಬಿಡುಗಡೆಗೊಳಿಸಲಾಗಿತ್ತು. ನಂತರ ಇವರ ಮೇಲೆ ಎರಡು ತಿಂಗಳು ಯಾವುದೇ ರೀತಿಯ ಭಾಷಣ ಮಾಡದಂತೆ ದಿಗ್ಬಂಧನ ವಿಧಿಸಿತ್ತು.

1942ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಇಡೀ ದೇಶವೇ ಗಾಂಧೀಜಿಯವರ "ಮಾಡು ಇಲ್ಲವೇ ಮಡಿ" ಎಂಬ ಕರೆಗೆ ಸ್ಪಂದಿಸಿ ಭಾಗವಹಿಸಿತ್ತು. ಸಮಾಜದ ಎಲ್ಲ ವರ್ಗದ ಜನತೆ ಭಾಗವಹಿಸುವ ಮೂಲಕ ಚಳವಳಿಗೆ ಒಂದು ಹೊಸ ತಿರುವನ್ನೇ ನೀಡಿದ್ದರು. ಮೈಸೂರು ಸಂಸ್ಥಾನದಲ್ಲೂ ಚಳವಳಿಯ ಕಾವು ಕಾಣಿಸಿಕೊಳ್ಳದೆ ಇರಲಿಲ್ಲ. ಪುರುಷರು ಮಹಿಳೆಯರು ಚಳವಳಿಯಲ್ಲಿ ಭಾಗವಹಿಸಿದ್ದರು. ಪತಿಯೊಂದಿಗೆ ಚಳವಳಿಯಲ್ಲಿ ಭಾಗವಹಿಸಿದ ಯಶೋಧರಮ್ಮ ಭಿನ್ನವಾಗಿ ನಿಂತರು.

ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಪೊಲೀಸರ ಕಣ್ಣು ತಪ್ಪಿಸಿ ಭೂಗತರಾಗಿ ಚಳವಳಿಯನ್ನು ನಿರ್ದೇಶಿಸಿ ಸಂಘಟಿಸುತ್ತಿದ್ದ ಯುವಗುಂಪಿನ ನಿರ್ದೇಶನದ ನೇತೃತ್ವವನ್ನು ವಹಿಸಿದ ಅವರಿಗೆ ಎಲ್ಲ ರೀತಿಯ ಸಹಕಾರ ನೀಡುತ್ತಿದ್ದರು. ಇವರ ಮನೆ 'ಯಶೋವಿಲಾಸ' ಚಳವಳಿಗಾರರಿಗೆ ಬೇಕಾದ ಊಟ, ತಿಂಡಿ, ವಾರ್ತಾ ಪತ್ರಿಕೆ

ಮತ್ತಿತರ ಸಾಮಗ್ರಿಗಳನ್ನು ಒದಗಿಸುವ ತಾಣವಾಗಿ ಮಾರ್ಪಾಡುಗೊಂಡಿತ್ತು. ಭೂಗತ ಚಳವಳಿಯ ಕಾರ್ಯಗಾರವಾಗಿದ್ದ ಇವರ 'ಯಶೋವಿಲಾಸ' ಪೊಲೀಸ್ ಗಮನಕ್ಕೆ ಬಂದಿತ್ತು. ಈ ಮನೆಯ ಕಾರ್ಯಚಟುವಟಿಕೆಯನ್ನು ಗಮನಿಸಿದ ಪೊಲೀಸರು ಬೇಹುಗಾರಿಕೆ ನಡೆಸುತ್ತಿದ್ದರು. ಯಶೋಧರಮ್ಮನವರ ಮೇಲೆ ಗೃಹಬಂಧನ ಆಜ್ಞೆಯನ್ನು ಹಾಕಲಾಯಿತು. ಹೀಗೆ ಯಶೋಧರಮ್ಮ ಕ್ವಿಟ್ ಇಂಡಿಯಾ ಚಳವಳಿಯಲ್ಲಿಯೂ ಕೂಡ ವಿಭಿನ್ನತೆಯನ್ನು ಮೆರೆದರು.

ಬ್ರಿಟಿಷರ ದಾಸ್ಯದಿಂದ 1947ರಲ್ಲಿ ವಿಮೋಚನೆಯನ್ನು ಪಡೆದ ಭಾರತೀಯರ ಸಂಭ್ರಮ ಮುಗಿಲು ಮುಟ್ಟಿತ್ತು. ಅನೇಕ ಮಹನೀಯರ ಹೋರಾಟದ ಪ್ರತಿಫಲವೇ ಈ ಸಂತೋಷ ಸಂಭ್ರಮಕ್ಕೆ ತಳಹದಿಯಾಗಿ ರೂಪುಗೊಂಡಿತ್ತು. ಹೀಗೆ ಸಂಭ್ರಮದ ಉತ್ಸಾಹವಿದ್ದರೂ ಮೈಸೂರು ಸಂಸ್ಥಾನದ ಜನತೆಗೆ ನಿಜವಾದ ಸ್ವಾತಂತ್ರ್ಯದ ಪರಿಣಾಮ ಕಾಣಿಸಲಿಲ್ಲ. ಒಂದು ಕಡೆ ಅಸಮಾಧಾನ ಉಂಟಾಯಿತು. ಕಾರಣ ಮೈಸೂರು ಮಹಾರಾಜರು ಭಾರತದ ಒಕ್ಕೂಟ ಸೇರಲು ನಿರ್ಧರಿಸಿದರು. ಒಪ್ಪಂದದಂತೆ ವಿದೇಶಾಂಗ ವ್ಯವಹಾರ, ರಕ್ಷಣೆ, ಮತ್ತು ಸಾರಿಗೆ ವ್ಯವಸ್ಥೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಬಿಟ್ಟು ಎಲ್ಲ ವಿಷಯಗಳ ಮೇಲೆ ಮೈಸೂರು ಮಹಾರಾಜರ ಸರ್ಕಾರವೇ ಸಾರ್ವಭೌಮ ಅಧಿಕಾರವನ್ನು ಉಳಿಸಿಕೊಂಡಿತ್ತು. ಮೈಸೂರಿಗೆ ಸ್ವಾತಂತ್ರ್ಯ ಬರಲಿಲ್ಲ. ದಿವಾನರಾಗಿದ್ದ ಅರ್ಕಾಟ್ ರಾಮಸ್ವಾಮಿಯವರು ಪ್ರಜಾತಂತ್ರವನ್ನೇ ಜಾರಿಗೆ ತಂದು ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಸಮ್ಮತಿಸಲಿಲ್ಲ. ಇದರಿಂದ ಅಸಮಾಧಾನಗೊಂಡ ಮೈಸೂರು ಜನತೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುವುದರೊಂದಿಗೆ ಆಂದೋಲನವನ್ನೇ ನಡೆಸಿದ್ದರು. ಯಶೋಧರಮ್ಮ 'ಬೇಜವಾಬ್ದಾರಿ ಸರ್ಕಾರದ ವಿರುದ್ಧ ಚಳವಳಿ ಮಾಡುವುದು ಈಗ ಅನಿವಾರ್ಯವಾಗಿದೆ' ಎಂದು ಭಾಷಣವನ್ನು ಮಾಡಿ ಸರ್ಕಾರದ ಕ್ರಮವನ್ನು ಖಂಡಿಸಿದರು. ತಮ್ಮ ಬಹುಮುಖ ವರ್ಚಸ್ಸಿನಿಂದ ಯಶೋಧರಮ್ಮ ಜವಾಬ್ದಾರಿ ಸರ್ಕಾರದ ಸ್ಥಾಪನೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು. ಹೀಗೆ ತಮ್ಮದೆ ಆದ ವರ್ಚಸ್ಸಿನಿಂದ ಯಶೋಧರಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿ ನಾಯಕಿಯಾಗಿ ರೂಪುಗೊಳ್ಳುವುದರ ಮೂಲಕ ಇತಿಹಾಸದ ಪುಟದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದಿರುವುದು ಹೆಮ್ಮೆಯ ಸಂಗತಿ.

ರಾಜಕೀಯ ಕ್ಷೇತ್ರದಲ್ಲಿ ಯಶೋಧರಮ್ಮ

ಸ್ವಾತಂತ್ರ್ಯ ಲಭಿಸಿದ ನಂತರ ಭಾರತ ದೇಶವು ತನ್ನದೇ ಆದ ಪ್ರಜಾಪ್ರಭುತ್ವ ಸರ್ಕಾರವನ್ನು ಹೊಂದುವುದರ ಮೂಲಕ ಅಭಿವೃದ್ಧಿ ಹಾದಿಯಲ್ಲಿ ಮುನ್ನಡೆಯಿತು. ಪುರುಷ ಪ್ರಧಾನ ಸಮಾಜವಾಗಿದ್ದ ಭಾರತ ಖಂಡದಲ್ಲಿ ಎಲ್ಲ ಕ್ಷೇತ್ರದಂತೆ ರಾಜಕೀಯ ಕ್ಷೇತ್ರದಲ್ಲಿ ಪುರುಷರೇ ಪ್ರಧಾನ ಸ್ಥಾನವನ್ನು ಪಡೆದಿದ್ದರು. ಮಹಿಳೆಯರ ಸ್ಥಾನ ಸೀಮಿತವಾಗಿತ್ತು. ಕೇವಲ ಬೆರಳೆಣಿಕೆಯಷ್ಟು ಮಹಿಳೆಯರು ರಾಜಕೀಯ ಜೀವನಕ್ಕೆ ಪಾದಾರ್ಪಣೆ ಮಾಡಿದ್ದರು. ನಂತರ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಉನ್ನತ ಸ್ಥಾನವನ್ನು ಹೊಂದಿ ದೇಶವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಮಹಿಳೆ ಹೊಂದಿದ್ದಳು. ರಾಜಕೀಯ ಕ್ಷೇತ್ರದಲ್ಲಿ ಪುರುಷನಷ್ಟೇ ಸರಿಸಮಾನ ಸ್ಥಾನವನ್ನು ಹೊಂದುವಂತಾದಳು.

ರಾಜಕೀಯ ಕ್ಷೇತ್ರ ಎಂಬುದು ನಿರುದ್ಯೋಗಿಗಳ ಆಶ್ರಯ ತಾಣವಾಗಿದ್ದು ಭ್ರಷ್ಟಾಚಾರಿಗಳ ಲೂಟಿಯ ಬೀಡಾಗಿದೆ. ಪ್ರಾಮಾಣಿಕ, ತತ್ವನಿಷ್ಠ ರಾಜಕಾರಣಿ ಸಿಗುವುದು ಅಪರೂಪ ಹಾಗೂ ವಿಸ್ಮಯದ ಸಂಗತಿ. ಬಡತನದಲ್ಲಿ ಹುಟ್ಟಿದವರೂ ರಾಜಕೀಯ ಪ್ರವೇಶದ ನಂತರ ತಂತಮ್ಮ ಅದೃಷ್ಟ ಸಾಮರ್ಥ್ಯಗಳಿಗನುಸಾರವಾಗಿ ಲಕ್ಷಾಧಿಪತಿಗಳೋ, ಕೋಟ್ಯಾಧಿಪತಿಗಳೋ ಆಗಿರುವುದುಂಟು. ಸಮಾಜಸೇವೆ, ಜನಸೇವೆ ಎಂದು ಆ ನಿಟ್ಟಿನಲ್ಲಿ ಜೀವನ ನಡೆಸುವ ವ್ಯಕ್ತಿಗಳು ವಿರಳ. ಲಾಲ್‌ಬಹದ್ದೂರ್ ಶಾಸ್ತ್ರಿ, ಎಸ್. ನಿಜಲಿಂಗಪ್ಪ, ಕೆ.ವಿ.ಶಂಕರಗೌಡ, ಗುಲ್ಜಾರಿಲಾಲ್ ನಂದರಂತಹ

ಬರಿಕಿಸೆಯ ನಾಯಕರು ಅಲ್ಲೊಬ್ಬರು ಇಲ್ಲೊಬ್ಬರು ಸಿಕ್ಕಿದರೂ ಆಶ್ಚರ್ಯವಿಲ್ಲ. ಹಲವಾರು ವರ್ಷ ಸ್ವಾತಂತ್ರ ಹೋರಾಟದ ಮುಂಚೂಣಿಯ ನಾಯಕಿಯಾಗಿದ್ದು ತಮ್ಮ ಬಹುಮುಖ ಪ್ರತಿಭೆಯ ಮೂಲಕ ಜನರ ಪ್ರೀತಿಗೆ ಪಾತ್ರರಾಗಿದ್ದ ಯಶೋಧರಮ್ಮ ರಾಜಕೀಯ ಕೇತ್ರವನ್ನು ಪ್ರವೇಶಿಸಿ ತಾವು ನಂಬಿದ ಗಾಂಧಿ ತತ್ವಗಳಿಗೆ ಯಾವುದೇ ರೀತಿಯ ದ್ರೋಹವೆಸಗದೆ ತತ್ವನಿಷ್ಠೆಯಿಂದ ಜೀವನವನ್ನು ರೂಪಿಸಿಕೊಂಡು ನ್ಯಾಯವಿಧಾಯಕ ಸಭೆಯ ಸದಸ್ಯೆ, ಕಾಂಗ್ರೆಸ್ ಅಧ್ಯಕ್ಷೆಯಾಗಿ, ಮಂತ್ರಿಯಾಗಿದ್ದವರು. ಪಿತ್ರಾರ್ಜಿತ ಆಸ್ತಿಯ ಬಹುಭಾಗವನ್ನು ದೇಶಕ್ಕೆ ಅರ್ಪಿಸಿ ಶ್ರೀಮಂತಿಕೆ ಅಡಂಬರಕ್ಕೆ ಮಾರುಹೋಗದೆ ಸರಳ ಬದುಕನ್ನು ಮೈಗೂಡಿಸಿಕೊಂಡು ತಮ್ಮ ಬದುಕನ್ನೇ ಧ್ಯೇಯಕ್ಕಾಗಿ ತತ್ವಕ್ಕಾಗಿ ಸಮರ್ಪಿಸಿ ಕೊಂಡ ಧೀಮಂತ ವ್ಯಕ್ತಿತ್ವದ ಮಹಿಳೆ ಇವರು.

ಇವರ ಮೊದಲ ರಾಜಕೀಯ ಪ್ರವೇಶ 1938ರಲ್ಲಿ ನ್ಯಾಯವಿಧಾಯಕ ಸಭೆಯ ಸದಸ್ಯರಾಗುವ ಮೂಲಕ ಪ್ರಾರಂಭವಾಯಿತು. ನ್ಯಾಯವಿಧಾಯಕ ಸಭೆಗೆ ನಾಮಕರಣಗೊಂಡ ಮೊಟ್ಟ ಮೊದಲ ಮಹಿಳೆಯೆಂದರೆ ಶ್ರೀಮತಿ ಕಮಲಮ್ಮ ಮತ್ತು ಶ್ರೀಮತಿ ಸಾಕಮ್ಮ. ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು ನ್ಯಾಯವಿಧಾಯಕ ಸಭೆಯ ಚುನಾವಣೆಯಲ್ಲಿ ಜಯಗೊಳಿಸಿದ ಪ್ರಥಮ ಮಹಿಳೆ.

ಜನಪದ ಕಾಳಜಿಯ ಸಮಸ್ಯೆ

ಯಶೋಧರಮ್ಮ ನ್ಯಾಯವಿಧಾಯಕ ಸಭೆಯ ಸದಸ್ಯರಾದ ನಂತರ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಲು ಸರ್ಕಾರದ ಸದನದಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ರೈತರು ದಲಿತರು ನಿರ್ಗತಿಕರು ಮಹಿಳೆಯರ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ ಯಶೋಧರಮ್ಮ ಅವರ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವಂತೆ ಒತ್ತಾಯಪಡಿಸುತ್ತಿದ್ದರು.

ಇವರು ಸದಸ್ಯರಾಗಿದ್ದ ಸಂದರ್ಭದಲ್ಲೆ ಸರ್ಕಾರ ಪತ್ರಿಕೆಯ ಮಸೂದೆ ಕಾಯ್ದೆಯನ್ನು ಜಾರಿಗೆ ತಂದು ಜಾಮೀನು ಮೊಬಲಗೂ ಕೊಟ್ಟು ಪತ್ರಿಕೆಯನ್ನು ಹೊರಡಿಸಬೇಕೆಂದು ಪತ್ರಿಕೆಗಳ ಮೇಲೆ ಕೆಲವು ನಿರ್ಬಂಧವನ್ನು ವಿಧಿಸಿದ ವಿರುದ್ಧ ಅಸಮಾಧಾನವನ್ನು ವ್ಯಕ್ತಪಡಿಸಿದ ಯಶೋಧರಮ್ಮ ಅದನ್ನು ಬಲವಾಗಿ ವಿರೋಧಿಸಿದರು. ಪತ್ರಿಕೆಗಳ ಮೇಲೆ ಸ್ವಲ್ಪಮಟ್ಟಿನ ನಿರ್ಬಂಧವನ್ನು ವಿಧಿಸುವುದು ಎಲ್ಲರೂ ಒಪ್ಪುವ ವಿಷಯ. ಆದರೆ ಜಾಮೀನು ಮೊಬಲಗನ್ನು ಕೊಟ್ಟು ಪತ್ರಿಕೆಯನ್ನು ಹೊರಡಿಸಬೇಕೆಂದರೆ ಹರಿತವಾದ ಕತ್ತಿಯನ್ನು ಕೂದಲಿಗೆ ಕಟ್ಟಿ ಯಾವಾಗಲೂ ತಲೆಯ ಮೇಲೆ ತೂಗುಬಿಟ್ಟಂತೆ. ಅದು ಯಾವ ರೀತಿಯಲ್ಲಾದರೂ ಅಪಾಯವನ್ನುಂಟುಮಾಡಬಹುದು ಎಂಬ ಭಯದಿಂದ ನಿರ್ಭಯವಾಗಿ ನಿಜವಾದ ಸಂಗತಿಗಳನ್ನು ಜನರಿಗೆ ತಿಳಿಸುವುದಕ್ಕೆ ಪತ್ರಿಕೆಯವರು ಹೆದರುತ್ತಾರೆ. ದೇಶದ ಪ್ರಜೆಗಳ ಹಿತದೃಷ್ಟಿಯಿಂದ ಸತ್ಯದ ಸಂಗತಿಯನ್ನು ಹೊರಹಾಕುವ ಪತ್ರಿಕಾ ಸ್ವಾತಂತ್ರ್ಯಕ್ಕೆ ಅಡಚಣೆ ಉಂಟುಮಾಡಲು ಪ್ರಯತ್ನಿಸುವುದು ಸರಿಯಾದ ಕ್ರಮವಲ್ಲ, ಎಂಬುದಾಗಿ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದು ಮಹತ್ವವಾದುದು. "ದೇಶದ ಜನರಿಗೆ ಜ್ಞಾನವನ್ನು, ತಿಳುವಳಿಕೆಯನ್ನು ಹರಡುವ ಸಾಧನವಾದ ಪತ್ರಿಕೆಯ ಮೇಲೆ ಈ ರೀತಿಯ ಶಾಸನ ಕ್ರಮಬದ್ಧವಲ್ಲ. ಒಂದು ಮಗುವನ್ನು ಪಂಜರದಲ್ಲಿಟ್ಟು ಒಳ್ಳೆಯ ಆಹಾರವನ್ನು ಹಾಕಿ ಅದು ಚೆನ್ನಾಗಿ ಬೆಳೆಯಲಿ ಎಂದು ಹೇಳಿದ ಹಾಗೆ. ನೀವು ತಂದಿರುವ ಕಾನೂನಿನಿಂದ ನಮ್ಮ ದೇಶದ ಪತ್ರಿಕೆಗಳಿಗೆ ತೊಂದರೆಯಾಗುತ್ತದೆಯೇ ಹೊರತು ಹೊರಗಿನಿಂದ ಬರುವ ಪತ್ರಿಕೆಗಳಿಗಲ್ಲ. ನಮ್ಮ ಪತ್ರಿಕೆಗಳನ್ನು ನಿಲ್ಲಿಸುವುದರಿಂದ ಹೊರಗಿನ ಪತ್ರಿಕೆಗಳಿಗೆ ಹಣವೆಲ್ಲಾ ಹೋಗಿರುತ್ತದೆ. ಈ ತರದ ಭಯ ಪ್ರದರ್ಶನದಿಂದ ಯಾವ ರೀತಿ ಒಳ್ಳೆಯ ಪರಿಣಾಮ ಆಗುವುದಿಲ್ಲ. ದೇಶದಲ್ಲಿ ನಿಜವಾದ ಶಾಂತಿ ನೆಲೆಸಬೇಕಾದರೆ ವಿಶ್ವಾಸ, ಪ್ರೇಮ, ಭಾತೃತ್ವದ

ಮನೋಭಾವದಿಂದ ಮಾತ್ರ ಸಾಧ್ಯ. ಇಂಥ ಕ್ರೂರ ಶಾಸನಗಳಿಂದ ಸಾಧ್ಯವಿಲ್ಲ. ಪತ್ರಿಕೆಯ ಸಂಪಾದಕರು ಹಣವಂತರಲ್ಲದೆ ಇರಬಹುದು. ಗುಣವಂತರು, ವಿದ್ಯಾವಂತರು ಹಣವನ್ನು ಗಳಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಪತ್ರಿಕೆಯನ್ನು ಹೊರಡಿಸಿ ಜೀವನ ನಡೆಸಬೇಕೆಂಬ ನೀಚ ದೃಷ್ಟಿಕೋನವನ್ನು ಹೊಂದಿಲ್ಲ. ಜನಹಿತ ದೇಶದ ಹಿತಕ್ಕಾಗಿ ಅನೇಕ ಕಷ್ಟಗಳನ್ನು ಸಹಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಜನರ ತಪ್ಪನ್ನೇ ಆಗಲಿ, ಸರ್ಕಾರದ ತಪ್ಪನ್ನೇ ಆಗಲಿ ನಿರ್ಭಯವಾಗಿ ಪ್ರಕಟಿಸಿದರೆ ಯಾವ ತಪ್ಪು. ಅದು ಕಹಿ ಅನ್ನಿಸಿದರೂ ಮುಂದೆ ಅನುಕೂಲವಾಗುವುದರಲ್ಲಿ ಸಂದೇಹವಿಲ್ಲ. ಕಾಲ ಸನ್ನಿವೇಶ ಮತ್ತು ಜನರ ಪ್ರಗತಿ ಮಾರ್ಗ ಇವುಗಳಿಗನುಸಾರವಾಗಿ ಪತ್ರಿಕೆಗಳು ಕೇವಲ ದೇಶದ ರಾಜಕೀಯ ತಿಳುವಳಿಕೆಯನ್ನು ಕುರಿತು ಜನರ ಮೇಲ್ಮೆಗಾಗಿ ಅವರಲ್ಲಿ ಜ್ಞಾನೋದಯವನ್ನುಂಟು ಮಾಡಿದರೆ ತಪ್ಪೇನು? ಪತ್ರಿಕೆಗಳು ಆಡಳಿತ ವ್ಯವಸ್ಥೆಯನ್ನು ಕೇವಲ ಹೊಗಳಲು ಇಲ್ಲ. ಈ ಕಾರಣದಿಂದ ಈಗ ತಂದಿರುವ ಮಸೂದೆಯನ್ನು ಹಿಂದಕ್ಕೆ ಪಡೆಯಿರಿ" ಎಂದು ಪ್ರಬಲವಾಗಿ ವಿರೋಧಿಸಿದರು.

1938ರ ಸಾಲಿನಲ್ಲಿ ಸರ್ಕಾರ ಮುಂಗಡ ಪತ್ರದಲ್ಲಿ ವಿದ್ಯಾಭ್ಯಾಸಕ್ಕಾಗಿ ಮಂಡಿಸಿದ ಕೆಲವು ಅಂಶಗಳನ್ನು ಯಶೋಧರಮ್ಮ ಸರ್ಕಾರದ ಗಮನಕ್ಕೆ ತಂದರು. "ವಿದ್ಯಾಭ್ಯಾಸಕ್ಕಾಗಿ ಈ ವರ್ಷ ಸರ್ಕಾರ ಹೆಚ್ಚು ಹಣವನ್ನು ಒದಗಿಸಿರುವುದಾಗಿ ತಿಳಿಸಿದೆ. ವಿದ್ಯಾಭ್ಯಾಸಕ್ಕಾಗಿ 1934–35ರಲ್ಲಿ 47.5 ಲಕ್ಷ ರೂಪಾಯಿಗಳಿದ್ದು 1938–39ಕ್ಕೆ 55 ಲಕ್ಷದಷ್ಟು ಆಗುವುದೆಂದು ಅಂದಾಜು ಹಾಕಿದೆ. ಇದರಿಂದೇನೋ ಈ ನಾಲ್ಕು ವರ್ಷಗಳಲ್ಲಿ 7.5 ಲಕ್ಷ ರೂಪಾಯಿಗಳಷ್ಟು ಜಾಸ್ತಿ ಹಣವನ್ನು ವಿದ್ಯಾಭ್ಯಾಸಕ್ಕಾಗಿ ಒದಗಿಸಿಕೊಟ್ಟಿರುವ ಹಾಗೆ ಕಂಡುಬರುತ್ತದೆ. ಈ ಪೈಕಿ ಸುಮಾರು ವಿಶ್ವವಿದ್ಯಾನಿಲಯಕ್ಕೆ ಎರಡು ಲಕ್ಷ, ಕಟ್ಟಡದ ಬಾಬ್ತಿಗೆ ಎರಡು ಲಕ್ಷ, ಮಿಡಲ್ ಮತ್ತು ಹೈಸ್ಕೂಲುಗಳಿಗೆ ಎರಡು ಲಕ್ಷ ಮತ್ತು ಇತರ ಖರ್ಚುಗಳಿಗೆ ಅರ್ಧ ಲಕ್ಷ, ಈ ಬಾಬ್ತುಗಳಲ್ಲಿ ಹೆಚ್ಚಾಗಿ ಹಣವು ಉಪಯೋಗಿಸಲ್ಪಟ್ಟಿದೆಯೇ ವಿನಾ ಪ್ರತಿಯೊಬ್ಬರಿಗೂ ಉಪಯುಕ್ತವಾದ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಕೊಟ್ಟಿರುವುದು ಬಹಳ ಕಡಿಮೆ. ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಈ ವರ್ಷಗಳಲ್ಲಿ ತಾವು ಕೊಟ್ಟಿರುವುದು ಕೇವಲ 30,000 ರೂಪಾಯಿಗಳು ಮಾತ್ರ." ಭಾರತ ದೇಶದಲ್ಲಿ ವಿದ್ಯಾಭ್ಯಾಸದಲ್ಲಿ ಮುಂದುವರಿದಿರುವ ರಾಜ್ಯಗಳನ್ನು ತೆಗೆದುಕೊಂಡರೆ ಕೊಚ್ಚಿ, ಟ್ರಾವಂಕೂರ್ ಮತ್ತು ಬರೋಡಾ ಸಂಸ್ಥಾನಗಳೂ, ಕೊಡಗು, ಡೆಲ್ಲಿ, ಬಂಗಾಳ, ಮದ್ರಾಸು ಮತ್ತು ಬೊಂಬಯಿ ಈ ಐದು ಪ್ರಾಂತ್ಯಗಳೂ ಆದಮೇಲೆ ನಮ್ಮ ಮೈಸೂರು ರಾಜ್ಯವಿದೆ. ವಿದ್ಯಾಭ್ಯಾಸದ ವಿಚಾರದಲ್ಲಿ ಈ ಎಲ್ಲಾ ಪ್ರಾಂತ್ಯಗಳನ್ನೂ ಮೀರಿಸಿ ನಮ್ಮ ಮೈಸೂರು ರಾಜ್ಯವು ಮುಂದೆ ಬರಬೇಕೆಂಬುದು ನಮ್ಮ ಆಶೆ. ಹಾಗಾದ ಪಕ್ಷದಲ್ಲಿ ನಮ್ಮ ದೇಶದಲ್ಲಿ ಸ್ವಾತಂತ್ರ್ಯವು ನೆಲೆಸಿ, ಜನಗಳಲ್ಲಿ ಕಷ್ಟನಿಷ್ಠೂರಗಳು ಕಡಿಮೆಯಾಗಿ, ದೇಶವು ಅಭಿವೃದ್ಧಿಗೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. 1930ನೆಯ ಇಸವಿಯಲ್ಲಿ ಪ್ರೈಮರಿ ವಿದ್ಯಾಭ್ಯಾಸದ ವಿಚಾರದಲ್ಲಿ ಕಾನೂನನ್ನು ತಂದಾಗ ಸರ್ಕಾರದವರು ಈ ರೀತಿ ತಿಳಿಸಿರುತ್ತಾರೆ. "ಹೆಚ್ಚುವರಿ ತೆರಿಗೆಗಳನ್ನು ಹಾಕದೆ ಹಣಕಾಸಿನ ಸೌಲಭ್ಯದ ಹೊಂದಾಣಿಕೆಯೊಡನೆ ಹೆಚ್ಚುವರಿ ಮೊತ್ತವನ್ನು ಒದಗಿಸುವುದೇ ಸರ್ಕಾರದ ಗುರಿಯಾಗಿದೆ. ಈ ಕಾಯಿದೆಗಾಗಿ ನಿರ್ದಿಷ್ಟ ಮತ್ತು ಸಾಕಷ್ಟು ಹಣವನ್ನು ಈ ವರ್ಷದ ಆಯವ್ಯಯದಲ್ಲಿ ಒದಗಿಸುವ ಭರವಸೆಯಿದೆ. ಖಂಡಿತವಾಗಿಯೂ ಇದು ಇತರೆ ಇಲಾಖೆಗಳ ಹಣಕಾಸಿನ ಅವಶ್ಯಕತೆಯ ಮೇಲೆ ಪರಿಣಾಮ ಬೀರುತ್ತದೆ. ಆದರೆ, ಸದನದ ಮತ್ತು ಪ್ರಜಾಪ್ರತಿನಿಧಿ ಸಭೆಯ ದೃಷ್ಟಿಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಹಣದ ಅವಶ್ಯಕತೆ ಬೇರೆ ಎಲ್ಲದಕ್ಕಿಂತ ಹೆಚ್ಚಿನದಾಗಿದೆ" ಎಂದು ತಿಳಿಸಿದರು.

ಪೊಲೀಸ್ ಇಲಾಖೆಯ ವಿಚಾರವಾಗಿ, ಸರ್ಕಾರವು ಪೊಲೀಸ್ ಇಲಾಖೆಗೆ ಒದಗಿಸಿದ ಹಣವನ್ನು ಕುರಿತಂತೆ ಮಾತನಾಡುತ್ತಾ, ಸರ್ಕಾರ ಮೆಮೋರ್‍ಯಾಂಡಮಿನಲ್ಲಿ "ರಾಜ್ಯದ ಆಂತರಿಕ ಭದ್ರತಾ ವ್ಯವಸ್ಥೆಯನ್ನು ಭದ್ರ ಬುನಾದಿಯ ಮೇಲೆ ನಿಲ್ಲಿಸಲು ಪ್ರಸಕ್ತ ವರ್ಷದಲ್ಲಿ ಪೊಲೀಸ್ ದಳವನ್ನು ಬಲಪಡಿಸುವ ಅವಶ್ಯಕತೆಯಿದೆ" ಎಂದು ಹೇಳಿದೆ. "1938–39ನೆಯ ಸಾಲಿಗೆ ಈ ವರ್ಷದ ಖರ್ಚಿಗಿಂತ ಒಂದು ಲಕ್ಷದಷ್ಟು ಹಣವನ್ನು ಹೆಚ್ಚಾಗಿ ಒದಗಿಸಿದ ನೀವು ರಿಜರ್ವ್ ಪೊಲೀಸ್ ಮತ್ತು ಸ್ಪೆಷಲ್ ಇಂಟೆಲಿಜೆನ್ಸ್ ಎಲ್.ಸಿ. ಸಿಬ್ಬಂದಿಯನ್ನೂ ಹೆಚ್ಚಿಸಬೇಕೆಂದು

ಹೇಳಿದ್ದೀರಿ. ಈ ಬಾಬಿಗಾಗಿ ಮುಂದಿನ ವರ್ಷದ ಸಾಲಿನಲ್ಲಿ 63 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ. ಪೋಲೀಸ್ ಇಲಾಖೆಗೆ ಕಳೆದ ಸಾಲಿನಲ್ಲಿ ಅಂದಾಜಾದ ಮೊಬಲಗು 19 ಲಕ್ಷ 45 ಸಾವಿರ ರೂಪಾಯಿಗಳಾಗಿದ್ದು, ಖರ್ಚಾಗಿರುವುದು 19 ಲಕ್ಷ 14 ಸಾವಿರ ರೂಪಾಯಿಗಳು. 1936–37ನೆಯ ಸಾಲಿನಲ್ಲಿ ಖರ್ಚಾಗಿರುವುದು 19 ಲಕ್ಷ 14 ಸಾವಿರ ರೂಪಾಯಿಗಳು. 1936–37ನೆಯ ಸಾಲಿನಲ್ಲಿ 57 ಸಾವಿರ ರೂಪಾಯಿಯಷ್ಟು ಜಾಸ್ತಿ ಮೊಬಲಗನ್ನು ಒದಗಿಸಿದೆ. ಅಂದರೆ ಎರಡು ವರ್ಷಗಳಲ್ಲಿ ಸುಮಾರು 1.5 ಲಕ್ಷದಷ್ಟು ಮೊಬಲಗನ್ನು ಹೆಚ್ಚಿಸಿದಂತಾಗಿದೆ. ಈ ಪೋಲೀಸ್ ಬಾಬಿಗೆ ಏಳು ವರ್ಷಗಳ ಕೆಳಗೆ ಸುಮಾರು 17 ಲಕ್ಷವಿದ್ದುದು ಈಗ 21 ಲಕ್ಷ ಚಿಲ್ಲರೆ ರೂಪಾಯಿಗಳಷ್ಟಾಗಿದೆ. ಅಂದರೆ 4 ಲಕ್ಷ 71 ಸಾವಿರ ರೂಪಾಯಿ ಜಾಸ್ತಿ ಮೊಬಲಗು ತೋರಿಸಿ ಶೇಕಡಾ 28ರಂತೆ ಜಾಸ್ತಿಯಾದ ಹಾಗಾಯಿತು. ಈ ಇಲಾಖೆಗೆ ನಮ್ಮ ಸರ್ಕಾರದವರು ಹೆಚ್ಚುಹೆಚ್ಚಾಗಿ ಹಣವನ್ನು ಒದಗಿಸುತ್ತಿರುವುದನ್ನು ನೋಡಿದರೆ, ಇಲಾಖೆಯ ವಿಷಯದಲ್ಲಿ ತಾವು ಇಟ್ಟಿರುವ ಪ್ರೇಮವು ಮತ್ತು ಧಾರಾಳ ಹೃದಯವೂ ಎಂತಹುದು ಎಂದು ಕಂಡುಬರುತ್ತದೆ. ಈ ರೀತಿ ಮಾಡಿರುವುದು ರಾಜ್ಯದ ಆಂತರಿಕ ಭದ್ರತೆಗಾಗಿ ಎಂದು ಹೇಳಿದ್ದೀರಿ. ಈ ದೇಶದಲ್ಲಿ ಪೋಲೀಸ್ ಸಿಬ್ಬಂದಿಯು ಹೆಚ್ಚಾದಂತೆ ಗಲಾಟೆಯೂ ಕೂಡ ಹೆಚ್ಚಾಗುತ್ತಿದೆ. ಪೋಲೀಸರ ಹೆದರಿಕೆಯಿಂದ ಜನರು ಸುಮ್ಮನಾಗುವರೆಂದು ತಿಳಿಯಬಾರದು. ಆದ್ದರಿಂದ ಜನರಲ್ಲಿ ಸರ್ಕಾರದವರು ಪ್ರೀತಿ, ವಿಶ್ವಾಸ ಮತ್ತು ನಂಬಿಕೆಯನ್ನು ಹುಟ್ಟಿಸಿ, ಅವರಿಗೆ ಹೆಚ್ಚು ಸೌಕರ್ಯಗಳನ್ನು ಕಲ್ಪಿಸಿಕೊಟ್ಟರೆ ಖಂಡಿತವಾಗಿಯೂ ಈ ರೀತಿಯಾಗಲು ಅವಕಾಶವಾಗುವುದಿಲ್ಲ.

"ಇತ್ತೀಚೆಗೆ ದೇಶದಲ್ಲಿ ಕೋಮುವಾರು ಭಾವನೆಗಳು ಬೇರೆ ತಲೆದೋರಿವೆ. ಪೋಲೀಸ್ ಸಿಬ್ಬಂದಿಯು ಹೆಚ್ಚಾಗುವುದಕ್ಕೆ ಮುಂಚೆ ಈ ದೇಶದಲ್ಲಿ ಕೋಮುವಾರು ಭಾವನೆ ಇರಲಿಲ್ಲ. ಒಂದೇ ಮನೆಯಲ್ಲಿ ಒಬ್ಬರಿಗೊಬ್ಬರಿಗೆ ವೈಮನಸ್ಯವುಂಟಾದರೆ, ಅದನ್ನು ರಾಜಿಯ ಮೂಲಕ ಹೇಗೆ ಸರಿಪಡಿಸಬಹುದೋ, ಅದೇ ರೀತಿಯಲ್ಲಿ ಈ ಕೋಮುವಾರು ಭಾವನೆಗಳೂ ಕೂಡ. ಎರಡು ಕಡೆಯ ಸಮಸ್ತ ವಿಷಯಗಳನ್ನೂ ಹೊರಹಾಕಿ ಮತ್ತೆ ಒಬ್ಬರಿಗೊಬ್ಬರಿಗೆ ಸಮಾಧಾನವಾಗುವ ರೀತಿಯಲ್ಲಿ ಅದನ್ನು ಸರಿಪಡಿಸಿದರೆ ಈ ತರದ ಗಲಾಟೆಗಳಿಗೆ ಅವಕಾಶವಿರುವುದಿಲ್ಲ. ರಿಜರ್ವ್ ಪೋಲೀಸು ಮತ್ತು ಸ್ಪೆಷಲ್ ಇಂಟೆಲಿಜೆನ್ಸ್ ಸಿಬ್ಬಂದಿಯನ್ನು ಹೆಚ್ಚಿಸುವುದಕ್ಕೆ ಬದಲಾಗಿ ಇಷ್ಟು ಸುಖಸಂಪತ್ತು ನಮ್ಮ ದೇಶದಲ್ಲಿದ್ದರೆ ಕಾನ್‌ಸ್ಟೇಬಲ್‌ಗಳನ್ನು ಆ ಸಂಪತ್ತನ್ನು ರಕ್ಷಿಸುವುದಕ್ಕಾಗಿ ಹೆಚ್ಚಿಸಬಹುದಾಗಿದ್ದಿತು. ಈ ರೀತಿಯ ಬಂದೂಕದ ರಿಜರ್ವ್ ಪಡೆ ಮತ್ತು ಗುಪ್ತ ಪೋಲೀಸರ ಪಡೆಯನ್ನು ಕಡಿಮೆಮಾಡುವುದೆ ಒಳ್ಳೆಯದು. ಸ್ವಾಮಿ, ತಾವು ಹಳ್ಳಿಗಳ ಕಡೆ ಹೋಗಿ ವಿಚಾರಿಸಿದರೆ, ಅಲ್ಲಿಯ ಜನರು ಕಂದಾಯವನ್ನು ಕೊಡಬೇಕಾದರೆ ಎಷ್ಟು ಸಂಕಟದಿಂದ ಕೊಡುತ್ತಾರೆಂಬುದು ತಮಗೆ ಗೊತ್ತಾಗುತ್ತದೆ. ಅಲ್ಲದೆ, ಯಾರೇ ಆಗಲಿ ಅವರ ಸ್ಥಿತಿಯನ್ನು ನೋಡಿದರೆ ತಮ್ಮಲ್ಲಿರುವುದನ್ನೆಲ್ಲಾ ಅವರಿಗೆ ಕೊಟ್ಟು ಉಪಕಾರ ಮಾಡಬೇಕೆಂಬ ಸ್ಮರಣೆಯು ಬಂದೇ ಬರುತ್ತದೆ. ನಮ್ಮ ದೇಶದಲ್ಲಿ ನಿಜವಾಗಿಯೂ ಸುಖಸಂಪತ್ತು ಇದೆಯೇ? ಅಥವಾ ಇಲ್ಲವೇ? ಮತ್ತು ಜನಗಳು ನೆಮ್ಮದಿಯಿಂದ ಇದ್ದಾರೆಯೇ? ಅಥವಾ ಇಲ್ಲವೇ? ಎಂಬುದನ್ನು ಸರಿಯಾಗಿ ವಿಚಾರಿಸಿ ಸರ್ಕಾರದವರು ಈ ಪೋಲೀಸ್ ಬಡಾವಣೆಗೆ ಕೊಡುವ ಹಣವನ್ನು ದೇಶದ ವಿದ್ಯಾಭ್ಯಾಸಕ್ಕಾಗಲೀ ಅಥವಾ ಜನರ ಕಷ್ಟ ನಿವಾರಣೆಗಾಗಲೀ ಕೊಟ್ಟಿದ್ದರೆ ದೇಶವು ಸಂತೋಷದಿಂದ ಇರುತ್ತಿತ್ತು." ಎಂದು ಸಭೆಯಲ್ಲಿ ತಿಳಿಸಿದರು.

ಪಿಂಚಣಿ ಇಲಾಖೆಯ ವಿಚಾರದಲ್ಲಿ ಕೂಡ "ಹತ್ತು ವರ್ಷಗಳ ಹಿಂದೆ 13.5 ಲಕ್ಷ ರೂಪಾಯಿಗಳು ಮಾತ್ರವೇ ಇದ್ದದ್ದು ಈಗ 24.5 ಲಕ್ಷದಷ್ಟು ಆಗಿದೆ. ಹೊಸಹೊಸದಾಗಿ ಕೆಲಸಗಳನ್ನು ನಿರ್ಮಿಸುತ್ತಿರುವುದೇ ಪಿಂಚಣಿ ಮೊಬಲಗು ಈ ರೀತಿ ಹೆಚ್ಚಾಗಲು ಕಾರಣವಾಗಿದೆ. ಆದುದರಿಂದ ಸರ್ಕಾರದವರು ಹೊಸ ಹೊಸದಾಗಿ ಕೆಲಸಗಳನ್ನು ನಿರ್ಮಿಸುವಾಗಲೇ ಆಗಲಿ, ಸಿಬ್ಬಂದಿಯನ್ನು ಹೆಚ್ಚಿಸುವಾಗಲೇ ಆಗಲಿ, ಬಹಳ ಎಚ್ಚರಿಕೆಯಿಂದಿರ ಬೇಕಾಗುತ್ತದೆ" ಎಂದರು.

ಕಂದಾಯದ ವಿಷಯವನ್ನು ಕುರಿತಂತೆ ಮಾತನಾಡುತ್ತಾ, "ಕಂದಾಯದ ಒಟ್ಟಾರೆ ದರ ವಿನಿಯೋಗದ ಕ್ರಮ ವಿಚಾರಿಸಿದಲ್ಲಿ ದೇಶದಲ್ಲಿ ಜನರು ಬಡತನದಿಂದ ಕುಗ್ಗಿ ಕಷ್ಟಪಡುತ್ತಿರುವಾಗ, ಅವರಿಂದ ತೆರಿಗೆಯ ರೂಪದಲ್ಲಿ ತೆಗೆದುಕೊಳ್ಳುತ್ತಿರುವ ಹಣವನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸುತ್ತಿಲ್ಲವೆಂದೇ ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ಭಾರತೀಯ ನೀತಿಶಾಸ್ತ್ರಜ್ಞ ಶುಕ್ರಾಚಾರ್ಯರೆಂಬುವವರು ಪ್ರಜೆಗಳಲ್ಲಿ ಕೊಡುವ ಶಕ್ತಿಯನ್ನು ಹೆಚ್ಚಿಸಿದ ನಂತರವೇ ಅವರಿಂದ ರಾಜನಿಗೆ ಧನವನ್ನು ತೆಗೆದುಕೊಳ್ಳಲು ಅಧಿಕಾರ ಬರಬಹುದು ಎಂಬುದಾಗಿ ಹೇಳಿದ್ದಾರೆ. ಖ್ಯಾತ ಅರ್ಥಶಾಸ್ತ್ರಜ್ಞ ಕೌಟಿಲ್ಯ ಎಂಬುವವರು ಮರದಿಂದ ಮಾಗಿದ ಹಣ್ಣುಗಳನ್ನು ಮಾತ್ರ ತೆಗೆದುಕೊಂಡು ಮರಕ್ಕೆ ಹಾನಿಮಾಡದಂತೆಯೂ, ಕುರಿಯ ಮೇಲಿನ ತುಪ್ಪಟವನ್ನು ಮಾತ್ರ ಕತ್ತರಿಸಿಕೊಂಡು ಚರ್ಮವನ್ನು ಸುಲಿಯದಂತೆ, ಕಂದಾಯವನ್ನು ತೆಗೆದುಕೊಳ್ಳುವ ರೀತಿ ಇರಬೇಕು ಎಂಬುದಾಗಿ ಹೇಳಿದ್ದಾರೆ. ಸಾಲಗಾರರು ಬಂದು ಒಬ್ಬ ಮನುಷ್ಯನನ್ನು ಸಾಲದ ಮೊಬಲಗಿನ ಬಡ್ಡಿಯನ್ನು ಕೇಳುತ್ತಿರುವಾಗ, ಅವನನ್ನು ಕಂದಾಯ ಕೇಳಲು ಆಗುತ್ತದೆಯೇ, ಅದು ಸಾಧ್ಯವೇ? ನೀರು ಸಮುದ್ರದಿಂದ ಹಬೆಯಾಗಿ ಎದ್ದು ಮೋಡವಾಗುವಂತೆ ಪ್ರಜಾವರ್ಗದ ಶ್ರೀಮಂತರ ಭಾಗ್ಯದಿಂದ ವಸೂಲಾಗಿ ಕಂದಾಯವು ರಾಜಕೋಶವನ್ನು ಸೇರಬೇಕು. ಎಲ್ಲಿ ಅವಶ್ಯಕತೆ ಇದೆಯೋ ಅಂಥಾ ಕಡೆ ಮತ್ತು ಇತರೆ ಪ್ರದೇಶಗಳಲ್ಲೂ ಮೋಡವು ಮಳೆ ಸುರಿಸುವಂತೆ ಈ ರೀತಿ ಸಂಗ್ರಹಿಸಿದ ಧನವು ಪ್ರಜೆಗಳ ಉತ್ಪನ್ನ ಶಕ್ತಿಯನ್ನು ಹೆಚ್ಚಿಸಲು ಅನುಕೂಲವಾಗುವಂತೆ ಹಂಚಲ್ಪಡಬೇಕು. ಇದಕ್ಕೆ ಬದಲಾಗಿ, ಬಡವರಿಂದ ವಸೂಲಾದ ಕಂದಾಯವು ಅನುಕೂಲವಾಗಿರುವವರ ಅನುಕೂಲತೆಯನ್ನು ಮತ್ತಷ್ಟು ಹೆಚ್ಚಿಸುವುದಕ್ಕಾಗಿ ಉಪಯೋಗಿಸುವುದು ನ್ಯಾಯವಲ್ಲ" ಎಂದು ಸಭೆಯಲ್ಲಿ ಚರ್ಚಿಸಿ ಸರ್ಕಾರದ ಗಮನ ಸೆಳೆದರು.

ಮೈಸೂರಿನಲ್ಲಿ ಹೊಸದಾಗಿ ನಿರ್ಮಾಣವಾಗಿದ್ದ ಸೆಂಟ್ರಲ್ ಕಟ್ಟಡದ ಪೋಲೀಸ್ ಠಾಣೆಗೆ ಹ್ಯಾಮಿಲ್ಟನ್ ಬಿಲ್ಡಿಂಗ್ ಎಂದು ಹೆಸರಿಟ್ಟ ಸರ್ಕಾರದ ಕ್ರಮವನ್ನು ವಿರೋಧಿಸಿ ಪ್ರತಿಭಟನೆಯನ್ನು ಮೈಸೂರಿನ ಜನತೆ ನಡೆಸಿದರು. ಹ್ಯಾಮಿಲ್ಟನ್ ಒಬ್ಬ ಪೋಲೀಸ್ ಅಧಿಕಾರಿ. ಮದ್ರಾಸಿನಿಂದ ಕರೆದು ತಂದು ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಚಳವಳಿಗಳನ್ನು ದಮನ ಮಾಡಲು ಅವನನ್ನು ನಿಯೋಜಿಸಿ ಪೋಲೀಸ್ ಇಲಾಖೆಯ ಮುಖ್ಯಸ್ಥನನ್ನಾಗಿ (ಐ.ಜಿ.ಪಿ.) ಸರ್ಕಾರ ನೇಮಿಸಿದ್ದಿತು. ಕಾಂಗ್ರೆಸಿಗರು ಮತ್ತು ಅವರನ್ನು ಬೆಂಬಲಿಸುತ್ತಿದ್ದ ಜನತೆಯ ಮೇಲೆ ಗೋಲಿಬಾರ್ ಮುಂತಾದ ಕ್ರಮಗಳನ್ನು ಕೈಗೊಂಡು ದೌರ್ಜನ್ಯವೆಸಗಿದ್ದ ಹ್ಯಾಮಿಲ್ಟನ್ ಹೆಸರನ್ನು ಇಡುವ ಸರ್ಕಾರದ ನಿರ್ಧಾರವನ್ನು ಮೈಸೂರಿನ ಜನತೆ ಮತ್ತು ಕಾಂಗ್ರೆಸಿಗರು ಪ್ರಬಲವಾಗಿ ವಿರೋಧಿಸಿದರು. ಇದರ ವಿರುದ್ಧ ಒಂದು ಚಳವಳಿ ನಡೆದು ಸತ್ಯಾಗ್ರಹ ರೂಪವನ್ನು ತಾಳಿತು. ಪ್ರತಿಭಟನಾಕಾರರು ಉದ್ದವಾದ ಕೋಲಿಗೆ ಒಂದು ಈಚಲು ಪೊರಕೆಯನ್ನು ಕಟ್ಟಿಕೊಂಡು, ಸುಣ್ಣದಲ್ಲಿ ಅದನ್ನು ಅದ್ದಿ ಕಟ್ಟಡದ ಫಲಕಕ್ಕೆ ಎರಚಿ ಹೆಸರನ್ನು ಅಳಿಸುತ್ತಿದ್ದರು. ಪೋಲೀಸರು ಅವರನ್ನು ಬಂಧಿಸಿ ಸತ್ಯಾಗ್ರಹಿಗಳಿಗೆ ಕೋರ್ಟಿನಲ್ಲಿ ಜೈಲು ಶಿಕ್ಷೆ ವಿಧಿಸುತ್ತಿದ್ದರು.

ಹೀಗೆ ಹ್ಯಾಮಿಲ್ಟನ್ ಬಿಲ್ಡಿಂಗ್ ಸಂಬಂಧಿಸಿದಂತೆ ಮೈಸೂರು ಸಂಸ್ಥಾನದಲ್ಲಿ ಪ್ರಬಲವಾದ ವಿರೋಧ ವ್ಯಕ್ತವಾಯಿತು. ಈ ಸಮಯದಲ್ಲಿ ಮೈಸೂರು ಕ್ಷೇತ್ರದ ನ್ಯಾಯವಿಧಾಯಕ ಸಭೆಯ ಸದಸ್ಯೆಯಾಗಿದ್ದ ಯಶೋಧರಮ್ಮನವರು ಆ ವಿಷಯಕ್ಕೆ ಸಂಬಂಧಿಸಿದಂತೆ ಸದನದಲ್ಲಿ ವಿಷಯವನ್ನು ಪ್ರಸ್ತಾಪಿಸಿ ಅದನ್ನು ಕುರಿತು ಕೆಲವು ವಿಷಯಗಳನ್ನು ಚರ್ಚಿಸಿದರು. "ಈಗ ಹೊಸದಾಗಿ ರಾಜಧಾನಿಯಲ್ಲಿ ಕಟ್ಟಿರುವ ಸೆಂಟ್ರಲ್ ಪೋಲೀಸ್ ಸ್ಟೇಷನಿಗೆ 'ಹ್ಯಾಮಿಲ್ಟನ್ ಬಿಲ್ಡಿಂಗ್' ಎಂದು ಹೆಸರಿಟ್ಟಿರುವ ವಿಷಯದಲ್ಲಿ ಈಗ ಸುಮಾರು ಒಂದೂವರೆ ತಿಂಗಳಿನಿಂದಲೂ ಮೈಸೂರಿನ ಜನರು ಯಾವ ರೀತಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ, ಆ ಹೆಸರನ್ನು ತೆಗೆದುಹಾಕಬೇಕೆಂದು ತಮ್ಮನ್ನು ಪ್ರಾರ್ಥಿಸಿರುತ್ತಾರೆಂಬುದನ್ನು ತಮಗೆ ನಾನೇನೂ ಹೊಸದಾಗಿ ತಿಳಿಸಬೇಕಾಗಿಲ್ಲ. ಇಷ್ಟು ವಿರೋಧವು ಅಲ್ಲಿ ಕಂಡುಬಂದರೂ ಕೂಡ ತಾವು ಅದನ್ನು ಇದುವರೆಗೂ ತಮ್ಮ ಗಮನಕ್ಕೆ ತಂದುಕೊಳ್ಳದೆ ಇರುವುದು

ವಿಷಾದಕರವಾದ ಸಂಗತಿ. ನಿನ್ನೆಯ ದಿನ ಈ ಸಂಬಂಧವಾಗಿ ನಾವು ಹಾಕಿದ ಪ್ರಶ್ನೆಗೆ ಉತ್ತರ ಕೊಡುತ್ತಾ ಆ ಕಟ್ಟಡಕ್ಕೆ ಹ್ಯಾಮಿಲ್ಟನ್ನರ ಹೆಸರನ್ನು ಇಟ್ಟಿದ್ದು ನಮ್ಮ ಸೂಚನೆಯ ಮೇಲೆ ಎಂದು ಹೇಳಲು ಸಂತೋಷಪಡುತ್ತೇವೆ ಎಂದೂ, ಅವರು ಮಾಡಿದ ಪ್ರಶಂಸನೀಯವಾದ ಸೇವೆಯ ಜ್ಞಾಪಕಾರ್ಥವಾಗಿ ಈ ರೀತಿ ಹೆಸರನ್ನು ಇಟ್ಟಿದ್ದೆಂದೂ ತಾವು ತಿಳಿಸಿದಿರಿ. ಇದರಿಂದ ನನ್ನ ಮನಸ್ಸಿಗೆ ಮತ್ತಷ್ಟು ನೋವು ಆಯಿತು. ಅವರು ಮಾಡಿರುವ ಕೆಲಸಗಳು ತಮ್ಮ ಮನಸ್ಸಿಗೆ ಸಂತೋಷವನ್ನುಂಟುಮಾಡಿರಬಹುದು. ಆದರೆ ಜನರ ಮನಸ್ಸಿನ ಮೇಲೆ ಯಾವ ರೀತಿ ಪರಿಣಾಮವನ್ನುಂಟುಮಾಡಿದೆ ಎನ್ನುವುದನ್ನೂ ಸಹ ಯೋಚಿಸಬೇಕಾಗಿದೆ ಎಂದು ತಿಳಿಸುತ್ತಾ ಮಿ.ಹ್ಯಾಮಿಲ್ಟನ್ ಅವರು ಹಿಂದಿನ ವರ್ಷ ಬೆಂಗಳೂರಿನಲ್ಲಿ ಈರ್ವರನ್ನು ಬಂಧಿಸಿದ ಸಂದರ್ಭದಲ್ಲಿ ಮ್ಯಾಜಿಸ್ಟ್ರೇಟರ ಅಪ್ಪಣೆಯಿಲ್ಲದೆ ತಾವೇ ಗುಂಡನ್ನು ಹಾರಿಸಲು ಅಪ್ಪಣೆ ಮಾಡಿ ನಿರಪರಾಧಿ ಗುಂಡಪ್ಪನೆಂಬುವವನನ್ನು ಗುಂಡಿನ ಬಾಯಿಗೆ ತುತ್ತುಮಾಡಿದ್ದು ನಿಮಗೆ ಸಮ್ಮತವೇ? ಅದೇ ದಿನ ಅವರು 50 ಜನರು ಕೆಳಗೆ ಉರುಳಿದರೆ ಗುಂಪು ತಾವಾಗಿಯೇ ಚದುರುತ್ತೆ ಎಂದು ಹೇಳಿದರು. ಇದು ತಮಗೆ ಸಂತೋಷವನ್ನುಂಟುಮಾಡಿತ್ತೆ? ವಿದುರಾಶ್ವತ್ಥದಲ್ಲಿ ಅನೇಕ ಜನರು ನೆರೆದಿದ್ದಾಗ ಅವರಲ್ಲಿ ಹೆಚ್ಚು ಮಂದಿ ಪೂಜೆಗಾಗಿ ಬಂದಿದ್ದರು, ಅಂಥ, ಏನೂ ಅರಿಯದ, ಮುಗ್ಧ ರೈತರನ್ನು ಹೊಡೆದಿದ್ದರಿಂದಲೂ ಸುಟ್ಟಿದ್ದರಿಂದಲೂ, ಸಾಮಾನ್ಯ ಜನರಿಗೆ ಕಾಂಗ್ರೆಸ್ ಚಳವಳಿಗೆ ಸೇರದ ಹಾಗೆ ಬುದ್ಧಿ ಕಲಿಸಿಕೊಟ್ಟಂತಾಯಿತು ಎಂದು ಅವರು ಹೇಳಿರುವುದು ತಮಗೆ ಸಂತೋಷವನ್ನುಂಟುಮಾಡಿತೆ? ಹಿಂದೆ ದಸರಾ ಉತ್ಸವದ ಕಾಲದಲ್ಲಿ ಮಹಾಸ್ವಾಮಿಯವರ ಮೆರವಣಿಗೆಯಲ್ಲಿ ಮೈಸೂರಿನಲ್ಲಿ ಗಲಭೆಯು ನಡೆದಾಗ ಮಿ.ಹ್ಯಾಮಿಲ್ಟನ್‌ರವರು ಎಲ್ಲಿದ್ದರೋ ಯಾರಿಗೂ ಗೊತ್ತಿಲ್ಲ. ಅಂಥ ಸಮಯದಲ್ಲಿ ಮಿ. ಹ್ಯಾಮಿಲ್ಟನ್‌ರವರು ಯಾವ ರೀತಿ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರೆಂಬುದು ಎಲ್ಲರಿಗೂ ಗೊತ್ತೇ ಇದೆ. ಗಲಭೆಯೆಲ್ಲಾ ಮುಗಿದ ಮೇಲೆ ಬಂದರಲ್ಲಾ! ಇದು ತಮಗೆ ಆನಂದವನ್ನುಂಟುಮಾಡಿತೆ? ಮಹಾಸ್ವಾಮಿಯವರ ವಿಷಯದಲ್ಲಿಯೇ ಅವರು ಈ ರೀತಿ ನಡೆದುಕೊಂಡಿರುವಾಗ, ಮಹಾಸ್ವಾಮಿಯವರ ವರ್ಧಂತ್ಯುತ್ಸವಾದಿಗಳು ನಡೆಯುವ ರಾಜಬೀದಿಯಲ್ಲಿಯೇ ಇರುವ ಕಟ್ಟಡಕ್ಕೆ ತಾವು ಈ ಹೆಸರನ್ನು ಇಟ್ಟಿರುವುದು ಜನಗಳ ಮನಸ್ಸಿಗೆ ಬಹಳ ನೋವನ್ನುಂಟುಮಾಡಿದೆ" ಎಂದರು.

ಮತ್ತೆ ತಮ್ಮ ಮಾತನ್ನು ಮುಂದುವರಿಸಿ ಯಶೋಧರಮ್ಮ "ಮಿ. ಹ್ಯಾಮಿಲ್ಟನ್ ಅವರು ಬಹಳ ಚೆನ್ನಾಗಿ ಕೆಲಸ ಮಾಡಿರುವುದಕ್ಕಾಗಿ ತಮ್ಮ ಮೆಚ್ಚಿಗೆಯನ್ನು ತೋರಿಸಲು ಈ ರೀತಿ ಮಾಡಿರುವುದಾಗಿ ಹೇಳಿದಿರಿ. ಆದರೆ ಅವರಿಗಿಂತ ಹಿಂದೆ ಇದ್ದ ಅಧಿಕಾರಿಗಳ ಹೆಸರನ್ನು ತಾವು ಯಾವ ಕಟ್ಟಡಕ್ಕೂ ಇಟ್ಟಿರುವುದಿಲ್ಲ. ಯಾಕೆ ಅವರುಗಳು ತಮ್ಮ ಮೆಚ್ಚಿಗೆಯನ್ನು ಪಡೆಯುವಂತೆ ಕೆಲಸಮಾಡಲಿಲ್ಲ ಎಂತಲೇ? ಈಗ ಪ್ರತಿಯೊಂದು ಇಲಾಖೆಯ ಅಧಿಕಾರಿಗಳೂ ಚೆನ್ನಾಗಿ ಕೆಲಸ ಮಾಡುತ್ತಿಲ್ಲವೇ? ಪ್ರತಿಯೊಬ್ಬರ ಹೆಸರಿನಲ್ಲಿಯೂ ಒಂದು ಕಟ್ಟಡವನ್ನು ಕಟ್ಟಿಸುವುದಕ್ಕಾಗುತ್ತದೆಯೆ. ಹಾಗೆ ಸಂತೋಷವಾಗಿದ್ದ ಪಕ್ಷದಲ್ಲಿ ಯಾರ ಮನಸ್ಸಿಗೆ ಸಂತೋಷವಾಗಿದೆಯೋ ಅಂಥವರೆಲ್ಲ ಹಣ ಸೇರಿಸಿ ಮಿ.ಹ್ಯಾಮಿಲ್ಟನ್ ಅವರ ಸುವರ್ಣ ಪ್ರತಿಮೆಯೊಂದನ್ನು ಮಾಡಿಸಿ, ಅದಕ್ಕೆ ನಾವು ಬೇಡ ಎನ್ನುವುದಿಲ್ಲ. ಇದು ಸಾರ್ವಜನಿಕರ ಹಣ, ಸಾರ್ವಜನಿಕ ಕಟ್ಟಡ, ಜನರ ಸಮ್ಮತಿಯಿಲ್ಲದೆ, ಅವರ ಅಭಿಪ್ರಾಯಕ್ಕೆ ವಿರೋಧವಾಗಿರುವ ಹೆಸರನ್ನು ಅದಕ್ಕೆ ಇಡುವುದು ಸರಿಯಲ್ಲ" ಎಂದು ತಿಳಿಸುತ್ತಾ ಸಂಸ್ಥಾನದಲ್ಲಿ ಈಚೆಗೆ ನಡೆದಿರುವ ಘಟನೆಗಳಿಂದ ನಮ್ಮ ಗಾಯಗಳು ಇನ್ನೂ ಮಾಯದೇ ಇರುವ ಕಾಲದಲ್ಲಿ ತಾವು ಈ ರೀತಿ ಮಾಡಿರುವುದು ಜನರಿಗೆ ಬಹಳ ವ್ಯಥೆಯನ್ನುಂಟುಮಾಡಿದೆ. ಅಲ್ಲದೆ ಈಗ್ಗೆ 5–6 ತಿಂಗಳ ಹಿಂದೆ ಸಿಂಧ್ ಪ್ರಾಂತ್ಯದಲ್ಲಿ ಕೋಮುವಾರು ಜಗಳವುಂಟಾದ ಕಾಲದಲ್ಲಿ ಲಕ್ಷಾಂತರ ಜನರು ಆವೇಶದಿಂದ ಕೂಡಿ ನಿಜವಾಗಿ ಜಗಳವಾಡಬೇಕೆಂಬ ಉದ್ದೇಶದಿಂದಲೇ ಬಂದಾಗ, ಅಲ್ಲಿನ ಆಂಗ್ಲ ಐ.ಸಿ.ಎಸ್. ಅಧಿಕಾರಿಯೊಬ್ಬರು ಧೈರ್ಯದಿಂದ ಅವರ ಮುಂದೆ ಬಂದು ಮಹಾತ್ಮಾ ಗಾಂಧಿಯವರಾಗಿದ್ದರೆ

ಈ ಸಂದರ್ಭದಲ್ಲಿ ಏನು ಮಾಡುತ್ತಿದ್ದರೆಂದು ಯೋಚಿಸಿ, ನಡುಬೀದಿಯಲ್ಲಿ ಕುರ್ಚಿಯನ್ನು ಹಾಕಿಸಿಕೊಂಡು ಕುಳಿತು, ಪ್ರಾಣದ ಮೇಲಿನ ಆಸೆಯಿಲ್ಲದೆ ಕೆಲಸ ಮಾಡಿ, ಅಲ್ಲಿ ಬಂದಿದ್ದ ಜನರ ಕೋಮುವಾರು ಭಾವನೆಯನ್ನು ಸಮರಸವನ್ನಾಗಿ ಮಾಡಿದರೆಂದು ಪತ್ರಿಕೆಯಲ್ಲಿ ಓದಿದ್ದೇನೆ. ಇಂಥ ಕೆಲಸವನ್ನು ಮಿ.ಹ್ಯಾಮಿಲ್ಟನ್ ಅವರು ಮಾಡಿದ್ದರೆ ಜನರು ಅವರನ್ನು ಪ್ರೀತಿವಿಶ್ವಾಸಗಳಿಂದ ಸ್ಮರಣೆ ಮಾಡುತ್ತಿದ್ದರು. ಮಹಾರಾಜರು ಆ ಕಟ್ಟಡಕ್ಕೆ ಇವರ ಹೆಸರನ್ನಿಡಲು ಒಪ್ಪಿದ್ದಾರೆಂದು ತಿಳಿದುಕೊಳ್ಳೋಣವೇ? ಈ ಹೆಸರನ್ನಿಡಲು ತಾವೇ ಜವಾಬ್ದಾರರೆಂದು ನಿನ್ನೆಯ ದಿನ ಹೇಳಿದಿರಿ. ಎಂದರೆ ಇದಕ್ಕೆ ಶ್ರೀಮಾನ್ ಮಹಾರಾಜರವರ ಒಪ್ಪಿಗೆಯಿಲ್ಲವೆ? ಅಲ್ಲದೆ ತಾವು ಈ ಹೆಸರನ್ನು ಕೊಡುವ ಯೋಜನೆಯನ್ನು ಮಾಡಿದಾಗ ತಮ್ಮ ಸಹೋದ್ಯೋಗಿಗಳೊಡನೆ ಪರ್ಯಾಲೋಚನೆ ಮಾಡಿದಿರಾ? ಈ ವಿಷಯಗಳ ಬಗ್ಗೆ ವಿವರಣೆ ನೀಡಿ" ಎಂದು ಸರ್ಕಾರವನ್ನು ಪ್ರಶ್ನಿಸಿದರು.

"ಮೈಸೂರು ನಗರದಲ್ಲಿ ಈ ಹೆಸರಿನ್ನಿಟ್ಟಿರುವ ಸಂಬಂಧದಲ್ಲಿ ಬಹಳ ಅಸಮಾಧಾನ ಪ್ರದರ್ಶನವಾಗುತ್ತಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಇದು ಕೇವಲ ಕಾಂಗ್ರೆಸ್ ಪಕ್ಷದವರಿಗೆ ಮಾತ್ರವೇ ಅಲ್ಲ, ಸಾರ್ವಜನಿಕರಿಗೆಲ್ಲಾ ಇದು ಬಹಳ ಅಸಮಾಧಾನವನ್ನುಂಟುಮಾಡಿದೆ. ಯಾರಿಗೂ ಈ ಹೆಸರು ಬೇಕಿಲ್ಲ. ಆದುದರಿಂದ ಈ ಹೆಸರನ್ನು ತೆಗೆದುಬಿಡಿ. ಮಿ. ಹ್ಯಾಮಿಲ್ಟನ್ ಅವರನ್ನು ಸಹ, ಅವರು ಕೆಲಸದಿಂದ ವಿಶ್ರಾಂತಿ ಹೊಂದಿ ಹೋಗತಕ್ಕ ಸಮಯದಲ್ಲಿ ಈ ರೀತಿಯ ಜನವಿರೋಧಕ್ಕೆ ಅವಕಾಶ ಕೊಡದಂತೆ ಅವರೇ ತಮ್ಮ ಹೆಸರನ್ನು ಅಳಿಸಲು ಸೂಚಿಸಬೇಕಾಗಿ ಜನರ ಪರವಾಗಿ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಒಂದೂವರೆ ತಿಂಗಳಿನಿಂದ ಖಾಯಿಲೆಯಿದ್ದರೂ ಸಹ ನಾನು ಮೈಸೂರು ನಗರವಾಸಿಗಳ ಪರವಾಗಿ ಚುನಾವಣೆಯಲ್ಲಿ ಗೆದ್ದು ಬಂದಿರುವುದರಿಂದ ನನ್ನ ಅನಾರೋಗ್ಯವನ್ನು ಸಹ ಲೆಕ್ಕಿಸದೆ, ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತಂದು ಮೈಸೂರಿನ ನಗರವಾಸಿಗಳಿಗೆ ಇದರಿಂದುಂಟಾಗಬಹುದಾದ ಕಷ್ಟಗಳನ್ನು ತಪ್ಪಿಸಬೇಕೆಂದೂ, ಸರ್ಕಾರದವರಲ್ಲಿ ಇರುವ ವಿದ್ಯಮಾನಗಳನ್ನು ತಿಳಿಸಿ ಈಗಲಾದರೂ ಆ ಹೆಸರನ್ನು ತೆಗೆಯಲು ಪ್ರಯತ್ನಮಾಡಬೇಕೆಂದೂ ನಾನು ಇಲ್ಲಿ ಬಂದಿರುತ್ತೇನೆ. ಈ ಸಂಬಂಧದಲ್ಲಿ ಜನಗಳ ಮನಸ್ಸು ಎಷ್ಟು ಉದ್ರೇಕಗೊಂಡಿದೆ ಎಂಬುದು ಕಾಯಿಲೆಯಲ್ಲಿದ್ದ ನನ್ನನ್ನು ಅವರು ಒತ್ತಾಯಪಡಿಸಿ ಕಳುಹಿಸಿರುವುದರಿಂದಲಾದರೂ ತಮಗೆ ಗೊತ್ತಾಗಬಹುದು. ಜನಗಳ ಮನಸ್ಸೇ ನಮ್ಮ ಮನಸ್ಸೆಂದು ಸರ್ಕಾರದವರು ಪದೇಪದೇ ಹೇಳುತ್ತಿರುವುದರಿಂದ, ಈ ವಿಧವಾಗಿ ಜನರ ಅಭಿಪ್ರಾಯಕ್ಕೆ ತಾವು ಮನ್ನಣೆಯನ್ನು ಕೊಟ್ಟು ಆ ಹೆಸರನ್ನು ದಯವಿಟ್ಟು ತೆಗೆಸಿಹಾಕಬೇಕು" ಎಂದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಸಾಕಷ್ಟು ಪರ ಮತ್ತು ವಿರೋಧಗಳು ವ್ಯಕ್ತವಾದವು. ನ್ಯಾಯವಿಧಾಯಕ ಸಭೆಯ ಸದಸ್ಯರೊಬ್ಬರಾದ ಧರ್ಮಪ್ರವರ್ತ ಎಂ.ಎಲ್.ನಾಗಪ್ಪ ಶೆಟ್ಟಿಯವರು ಈ ವಿಷಯವನ್ನು ಕುರಿತಂತೆ 'ಇಷ್ಟು ಸಣ್ಣ ವಿಷಯವನ್ನು ಇಷ್ಟೊಂದು ದೊಡ್ಡದು ಮಾಡಿಕೊಂಡು ಚರ್ಚಿಸುತ್ತಾ ಇದ್ದರೆ ಇದು ವಿಷಘಳಿಗೆ ಎಂದು ತಿಳಿಯಬೇಕಾಗುತ್ತದೆ. ಮಿ.ಹ್ಯಾಮಿಲ್ಟನ್‌ರವರ ಹೆಸರನ್ನು ಇಟ್ಟಿರುವುದರಿಂದ ನಮ್ಮ ದೇಶಕ್ಕೆ ಕೀರ್ತಿ ಬರುತ್ತದೆ. ಈ ಹೆಸರನ್ನು ಅಳಿಸಿಹಾಕಬೇಕಾಗಿಲ್ಲ. ನಮ್ಮ ದೇಶದ ಕೀರ್ತಿಯು ಪರದೇಶಗಳಲ್ಲಿ ಚೆನ್ನಾಗಿ ಬೆಳಗುವ ಹಾಗೆ ಮಾಡಿರುವುದು ನಮಗೆ ಒಳ್ಳೆಯದು, ಈ ಎಲ್ಲಾ ಕಾರಣಗಳಿಂದ ಯಶೋಧರಮ್ಮನವರು ಈ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು' ಎಂದರು. ಇತರೆ ಕೆಲವು ಸದಸ್ಯರು ಈ ರೀತಿ ಕೇಳಿಕೊಂಡಿದ್ದನ್ನು ಕುರಿತಂತೆ ಯಶೋಧರಮ್ಮನವರು ವಿರೋಧಿಸುತ್ತಾ "ಒಂದೂವರೆ ತಿಂಗಳಿನಿಂದ ಹಾಸಿಗೆ ಹಿಡಿದು ಮಲಗಿದ್ದ ನನ್ನನ್ನು ಒತ್ತಾಯಪಡಿಸಿ ಕಳುಹಿಸಿದ ಮೇಲೆ ಅವರು ಎಷ್ಟರಮಟ್ಟಿಗೆ ನನ್ನ ಮೇಲೆ ಜವಾಬ್ದಾರಿಯನ್ನು ಹೊರಿಸಿ ಕಳುಹಿಸಿದ್ದಾರೆ. ಪ್ರಜೆಗಳಿಗೆ ಕೊಟ್ಟ ಮಾತಿನಂತೆ ಕರ್ತವ್ಯವನ್ನು ನೆರವೇರಿಸುವುದರಲ್ಲಿ ನಾನು ಪ್ರಾಣವನ್ನು ಕೊಡಲು ಸಹ ಅಂಜುವವಳಲ್ಲ. ನನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡದ ಈ ಬಿಲ್ಡಿಂಗ್ ಹೆಸರನ್ನು ನಾನು ಕಠಿಣವಾಗಿ

ವಿರೋಧಿಸುತ್ತೇನೆ" ಎಂದು ಒತ್ತಾಯ ಮಾಡಿದರು. ತದನಂತರ ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಕಟ್ಟಡಕ್ಕೆ ಹ್ಯಾಮಿಲ್ಟನ್ ಹೆಸರನ್ನು ತೆಗೆದು ಹಾಕಿ "ಮುಖ್ಯ ಪೊಲೀಸ್ ಸ್ಟೇಷನ್ ಕಟ್ಟಡ" ಎಂದು ನಾಮಕರಣ ಮಾಡಿತು.

ಇರ್ವಿನ್ ನಾಲಾ ಪ್ರದೇಶದಲ್ಲಿರುವ ರೈತರ ಸಂಕಷ್ಟಗಳ ಪರಿಹಾರಕ್ಕೆ ಕ್ರಮಗಳು : ಈ ವಿಷಯಕ್ಕೆ ಸಂಬಂಧಿಸಿದಂತೆ ಯಶೋಧರಮ್ಮನವರು ಸದನದಲ್ಲಿ ಚರ್ಚಿಸಿದರು, "ಇರ್ವಿನ್ ನಾಲಾ ಪ್ರದೇಶದ ರೈತರು ಕಬ್ಬನ್ನು ಬೆಳೆದು ಅದನ್ನು ಕಂಪೆನಿಗೆ ತೆಗೆದುಕೊಂಡು ಹೋಗಿ ಕೊಡುವವರೆಗೆ ಬಹಳ ಕಷ್ಟವನ್ನು ಅನುಭವಿಸಬೇಕಾಗಿದೆ. ಕಬ್ಬು ಬೆಳೆಸುವಾಗ ಗೊಬ್ಬರ ತೆಗೆದುಕೊಳ್ಳಬೇಕಾದರೆ ಕೆಲವು ಅಧಿಕಾರಿಗಳು ತೊಂದರೆಕೊಡುತ್ತಾರೆ. ಕಬ್ಬು ಬೆಳೆದ ಮೇಲೂ ಕೂಡ ಅದನ್ನು ಸಮಯಕ್ಕೆ ಸರಿಯಾಗಿ ತೆಗೆದುಕೊಳ್ಳದೆ ಕಟಾವಿಗೆ ಅನಾನುಕೂಲಪಡಿಸುತ್ತಾರೆ. ಕಾಲಮೀರಿ ಕೊಟ್ಟರೆ ಕಬ್ಬಿನ ತೂಕ ಕಡಿಮೆಯಾಗಿ ಹೋಗುತ್ತದೆ. ಲಾಭವು ಹೆಚ್ಚಾಗಿ ಬರುವುದಿಲ್ಲ. ಇದಲ್ಲದೆ ಕಂಪನಿಗೆ ಕಬ್ಬನ್ನು ಕೊಡಬೇಕಾದರೆ ಕೆಲ ಅಧಿಕಾರಿಗಳ ಅಪ್ಪಣೆ ಪಡೆಯಬೇಕು. ಈ ರೀತಿ ಒಪ್ಪಿಗೆ ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ ರೈತರಿಗೆ ಅನೇಕ ವಿಧವಾದ ಕಷ್ಟಗಳುಂಟಾಗುತ್ತವೆ. ರೈತರು ಕಷ್ಟಪಟ್ಟು ಬೆಳೆದ ಕಬ್ಬಿನಿಂದ ಪ್ರತಿಫಲವನ್ನು ಹೊಂದುವ ವಿಚಾರದಲ್ಲಿ ಈ ರೀತಿ ಅಧಿಕಾರಿಗಳು ತೊಂದರೆಪಡಿಸುವುದು ಸೂಕ್ತವಲ್ಲ. ಅಧಿಕಾರಿಗಳು ಒಪ್ಪಿಗೆ ಕೊಡಬೇಕಾದ ಸಂದರ್ಭದಲ್ಲಿ ಕೂಡ ಕೆಲವು ಮಹನೀಯರಿಂದ ರೈತರು ಚೀಟಿ ತೆಗೆದುಕೊಂಡು ಬಾರದಿದ್ದರೆ ಒಪ್ಪಿಗೆ ಕೊಡುವುದಿಲ್ಲ. ಇನ್ನು ಕೆಲವು ಸಂದರ್ಭಗಳಲ್ಲಿ ಕೆಲವರಿಗೆ ರಾಜಕೀಯ ವಿಚಾರದಲ್ಲಿ ತೊಡಗಿದವರೆಂದು ಒಪ್ಪಿಗೆ ದೊರೆಯುವುದಿಲ್ಲ. ಒಪ್ಪಿಗೆಯ ಕಬ್ಬನ್ನು ತೆಗೆದುಕೊಂಡು ಹೋಗಿ ಕೊಟ್ಟರೆ ಕಂಪನಿಯವರು ಅದನ್ನು ತೆಗೆದುಕೊಳ್ಳುವುದು ಅವರ ಕರ್ತವ್ಯ. ಕೆಲವು ಸಂದರ್ಭಗಳಲ್ಲಿ ಒಪ್ಪಿಗೆ ಇಲ್ಲದ ಕಬ್ಬನ್ನು ಕೂಡ ಕೆಲವರ ಶಿಫಾರಸ್ಸಿನ ಮೇಲೆ ಕಂಪನಿಯವರು ತೆಗೆದುಕೊಳ್ಳುತ್ತಾರೆ. ಅಂಥ ಸಂದರ್ಭದಲ್ಲಿ ಒಪ್ಪಿಗೆ ಪಡೆದವರ ಕಬ್ಬಿನ ಗತಿಯೇನು? ಒಪ್ಪಿಗೆ ಪಡೆದವರ ಕಬ್ಬಿನ ವಿಚಾರದಲ್ಲಿ ಕೂಡ ಅವರಿಗೆ ಕಿರುಕುಳವನ್ನು ಕೊಡುವುದು ವಿಷಾದಕರವಾದುದು. ಇರ್ವಿನ್ ನಾಲಾ ಪ್ರದೇಶದಲ್ಲಿ ಮಲೇರಿಯಾ ಹಾವಳಿಯಿಂದ ಈ ಜನರು ಎಷ್ಟು ಕಷ್ಟಪಡುತ್ತಿದ್ದಾರೆಂಬುದನ್ನು ಹೇಳಬೇಕಾಗಿಲ್ಲ. ಈ ವಿಚಾರದಲ್ಲಿ ಅನೇಕ ಸದಸ್ಯರು ಹಿಂದೆಯೇ ಎಚ್ಚರಿಕೆ ಕೊಟ್ಟಿದ್ದಾರೆ. ಸಕಾಲದಲ್ಲಿ ರೈತರ ಆರೋಗ್ಯದ ವಿಚಾರದಲ್ಲಿ ಕೂಡಲೇ ಸರಿಯಾದ ಎಚ್ಚರಿಕೆಯನ್ನು ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ಮಾರಿ ಕಣಿವೆ ನಾಲಾದ ಗತಿಯೇ ಇಲ್ಲಿಯೂ ಆಗಬಹುದೆಂಬ ಭೀತಿಯಿದೆ. ನಾಲಾ ಪ್ರಾರಂಭವಾಗುವಾಗಲೇ ಅನೇಕರು ಮುನ್ನೆಚ್ಚರಿಕೆ ಕೊಟ್ಟಿದ್ದರೂ ಸಹ ಅದನ್ನು ಗಮನಿಸದೆ ಇದ್ದುದರಿಂದ ಈಗ ಇಷ್ಟು ತೊಂದರೆಯಾಗುತ್ತಿದೆ. ಈ ಪ್ರದೇಶದಲ್ಲಿ ಮಲೇರಿಯಾ ಹಾವಳಿಯಿಂದ ಜನರು ಕಷ್ಟಪಡುತ್ತಿದ್ದಾರೆ. ಇಂಥ ಕಷ್ಟದಲ್ಲಿ ಕೂಡ ರೈತರು ಕಬ್ಬನ್ನು ಬೆಳೆದು ತಂದುಕೊಟ್ಟರೆ ಕಂಪನಿಯವರು ಅವರಿಗೆ ಹೆಚ್ಚಿನ ಅನುಕೂಲವನ್ನು ಒದಗಿಸಿಕೊಡಬೇಕು. ಅಲ್ಲದೆ ಸರ್ಕಾರದವರು ಕೂಡ ಅವರ ಆರೋಗ್ಯ ಭಾಗ್ಯದ ಕಡೆ ಹೆಚ್ಚು ನಿಗಾ ಕೊಡಬೇಕು" ಎಂದು ವಿಷಯವನ್ನು ತಿಳಿಸಿದರು.

ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಈ ಖೋತಾ ಸೂಚನೆಯನ್ನು ವಿರೋಧಿಸುತ್ತಾ "ಕೆಲವರು ರೈತರಿಗೆ ಈಗ ಕೊಡುತ್ತಿರುವ ಹಣವೇ ಜಾಸ್ತಿಯೆಂದು ಹೇಳಿದ ಒಂದು ವಾದವು ನನ್ನ ಗಮನಕ್ಕೆ ಬಂದಿತು. ಆದರೆ 8–9 ರೂಪಾಯಿ ಕೊಡತಕ್ಕ ಕ್ರಮವು ಎಷ್ಟು ಅನುಕೂಲವಾಗಿದೆ ಎಂಬುದನ್ನು ನಾವು ಗಮನಿಸಬೇಕು. ಕಬ್ಬನ್ನು ಚೆನ್ನಾಗಿ ಬೆಳೆದು ಅದರಿಂದ ಸಕ್ಕರೆ ಕಂಪನಿಯವರಿಗೆ ಹೆಚ್ಚು ಲಾಭವು ಬರುವಂತೆ ಮಾಡುವ ರೈತರಿಗೆ ಹೆಚ್ಚು ಸೌಲಭ್ಯಗಳನ್ನೊದಗಿಸಿಕೊಡುವುದು ಸೂಕ್ತವಲ್ಲವೆ ಎಂಬ ದೃಷ್ಟಿಯಿಂದ ನಾವು ಈ ವಿಚಾರವನ್ನು ಪರಿಶೀಲನೆ ಮಾಡಬೇಕು. ಇನ್ನು ಒಪ್ಪಿಗೆ ಕಬ್ಬು ಮತ್ತು ಒಪ್ಪಿಗೆ ಅಲ್ಲದ ಕಬ್ಬಿನ ವಿಚಾರದಲ್ಲಿ ಸಕ್ಕರೆ ಕಂಪನಿಯವರು ಒಪ್ಪಿಗೆ

ಕಬ್ಬಿನವರ ಜೊತೆಗೆ ಒಪ್ಪಿಗೆ ಅಲ್ಲದ ಕಬ್ಬನ್ನು ತೆಗೆದುಕೊಂಡು ಬಂದರೆ ಒಪ್ಪಿತ ಕಬ್ಬಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುವುದು ಅವರ ಕರ್ತವ್ಯವಲ್ಲವೆ? ಸರ್ಕಾರದವರೇನೂ ತಾವು ಈ ವಿಚಾರವನ್ನೆಲ್ಲಾ ಯೋಚನೆ ಮಾಡುವುದಾಗಿ ಹೇಳಬಹುದು. ಇದೇ ರೀತಿ ಎಷ್ಟೋ ಸಲ ಸರ್ಕಾರದವರಿಂದ ಜವಾಬು ಬಂದಿದೆ? ಉದಾಹರಣೆಗಾಗಿ, 1930ನೆಯ ಇಸವಿಯಲ್ಲಿ ಪ್ರಾಥಮಿಕ ಶಿಕ್ಷಣ ಕಾಯಿದೆ ಜಾರಿಗೆ ತಂದರು. ಆದಾಯವು ಹೆಚ್ಚಿದಂತೆಲ್ಲಾ ನಮ್ಮ ಸಂಸ್ಥಾನದಲ್ಲಿ ಕಡ್ಡಾಯ ಪ್ರೈಮರಿ ವಿದ್ಯಾಭ್ಯಾಸ ಪದ್ಧತಿಯನ್ನು ಜಾರಿಗೆ ತರುವುದಾಗಿ ಸರ್ಕಾರದವರು ಹೇಳಿ ಹತ್ತು ವರ್ಷಗಳಾದರೂ ಮತ್ತು ಆದಾಯವು ಸುಮಾರು ಒಂದೂ ಕಾಲು ಕೋಟಿ ರೂಪಾಯಿಗಳು ಹೆಚ್ಚಿದರೂ ಸಹ ಅದನ್ನು ಇನ್ನೂ ಆಚರಣೆಗೆ ತಂದಿಲ್ಲ. ಆದುದರಿಂದ ನಾವು ಹೇಳುವುದೇನೆಂದರೆ ಸರ್ಕಾರದವರು ಯೋಚನೆ ಮಾಡುತ್ತೇವೆ, ಎಂದು ಹೇಳಿದರೂ ಕೂಡ ಸಂದೇಹಪಡಬೇಕಾಗಿ ಬಂದಿದೆ. ನನಗೆ ಇದರಲ್ಲಿ ನಂಬಿಕೆ ಇಲ್ಲ. ಅವರು ಹೇಳತಕ್ಕದ್ದನ್ನು ಕಾರ್ಯರೂಪಕ್ಕೆ ತರಬೇಕು. ಸರ್ಕಾರದವರ ಗಮನಕ್ಕೆ ಇನ್ನೊಂದು ವಿಚಾರವನ್ನು ತರಬೇಕೆಂದಿದ್ದೇನೆ. ಸರ್ಕಾರದವರು ತಾವು ಒಂದು ಕಾರ್ಯವನ್ನು ಮಾಡುವುದಾಗಿ ಭರವಸೆ ಕೊಟ್ಟರೆ, ಅದನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರುವುದು ಒಳ್ಳೆಯದು. ಈಗ ಸರ್ಕಾರದವರು ಹೊಸದಾಗಿ ಕೊಟ್ಟಿರುವ ಭರವಸೆಯನ್ನು ಪರೀಕ್ಷೆ ಮಾಡುವುದಕ್ಕಾಗಿ ಈ ಖೋತಾ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತೇನೆ.

"ಇರ್ವಿನ್ ನಾಲಾ ಪ್ರದೇಶದ ರೈತರು ಬೆಳೆದ ಕಬ್ಬನ್ನು ಕಂಪೆನಿಗೆ ತೆಗೆದುಕೊಂಡು ಹೋಗಿ ಕೊಡುವುದು ಕಷ್ಟವಾಗಿದೆ. ಬೆಳೆಯನ್ನು ಬೆಳೆಯುವಾಗ ಗೊಬ್ಬರ ಮುಂತಾದ ಸಲಕರಣೆಗಳನ್ನು ಕೊಳ್ಳುವುದಕ್ಕೆ ಹೋದರೆ ಅಧಿಕಾರಿಗಳಿಂದ ತೊಂದರೆ ಉಂಟಾಗುತ್ತದೆ. ಹಾಗೆಯೇ ಈ ರೀತಿ ಮಾಡುವುದರಿಂದ ರೈತರಿಗೆ ತುಂಬ ಕಷ್ಟವಾಗುತ್ತದೆ. ಆದ್ದರಿಂದ ಸರ್ಕಾರ ರೈತರ ಅನಾನುಕೂಲವನ್ನು ಸರಿಪಡಿಸಬೇಕೆಂದು" ಚರ್ಚಿಸಿದರು.

ಯಶೋಧರಮ್ಮನವರು ಹರಿಜನರ ಮುಜರಾಯಿ ದೇವಸ್ಥಾನದ ಪ್ರವೇಶಕ್ಕೆ ಸಂಬಂಧಿಸಿದಂತೆ ಸದನದಲ್ಲಿ ವಿಷಯವನ್ನು ಪ್ರಸ್ತಾಪಿಸಿದರು. ಮುಜರಾಯಿ ದೇವಸ್ಥಾನದ ಪ್ರವೇಶಕ್ಕೆ ಹರಿಜನರಿಗೆ ಇದ್ದ ತಡೆಯಾಜ್ಞೆಯನ್ನು ಕುರಿತಂತೆ ವಿರೋಧಿಸಿದ ಇವರು ಇದನ್ನು ಸಭೆಯಲ್ಲಿ ವಿಶ್ಲೇಷಿಸುತ್ತಾ "ಮುಜರಾಯಿ ದೇವಸ್ಥಾನಗಳ ಪ್ರವೇಶಕ್ಕೆ ಹರಿಜನರಿಗೆ ಅವಕಾಶವಿಲ್ಲದ್ದರಿಂದ ತುಂಬಾ ಅನ್ಯಾಯವಾಗಿದೆ. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು. ಈ ವಿಷಯವಾಗಿ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆಗಾಗಿ ಅವಶ್ಯವಾದರೆ ಒಂದು ಸಮಿತಿಯನ್ನು ರಚಿಸಬೇಕು. ಈ ವಿಚಾರವು ಅನೇಕ ಸಲ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಯಾಗಿದೆ, ಆದರೂ ಕೂಡ ಇದನ್ನು ಪದೇಪದೇ ತರುವ ಅವಶ್ಯಕತೆ ಬಂದಿದೆ. ಈಗಂತೂ ಕಾಲ ಸ್ಥಿತಿಯು ಬಹಳಮಟ್ಟಿಗೆ ಬದಲಾವಣೆಯಾಗಿದೆ. ಜನರ ಮನಸ್ಸು ಕೂಡ ಬಹಳಮಟ್ಟಿಗೆ ಮಾರ್ಪಟ್ಟಿದೆ. ಇದನ್ನು ಎಷ್ಟು ಸಾರಿ ಚರ್ಚೆಗೆ ತಂದರೂ ಈ ವಿಚಾರದಲ್ಲಿ ಸರಿಯಾದ ಉತ್ತರವು ದೊರೆಯದಿದ್ದುದರಿಂದ, ಸರ್ಕಾರದವರಿಂದ ನಿರ್ದಿಷ್ಟವಾದ ಉತ್ತರವನ್ನು ಪಡೆಯಬೇಕೆಂಬ ಉದ್ದೇಶದಿಂದ ಈ ಖೋತಾ ಸೂಚನೆಯನ್ನು ತಂದಿದ್ದೇನೆ. ಹರಿಜನರನ್ನು, ಅಸ್ಪೃಶ್ಯರನ್ನು ದೂರ ಇಟ್ಟಿರಬೇಕೆಂಬ ಮನೋಭಾವನೆಯು ಈಗ ಹೋಗಿದೆ. ಸರ್ಕಾರದವರು ಕೂಡ ಅವರಲ್ಲಿ ಮಿತ್ರತ್ವ ಬೆಳೆಸಲು ತಮ್ಮ ಕೆಲಸ ಕಾರ್ಯಗಳಿಗೆ ಅವರು ಬೆಂಬಲವಾಗುವಂತೆ ಅನುಕೂಲವನ್ನು ಅವರಿಗೆ ಕಲ್ಪಿಸಿಕೊಟ್ಟಿದ್ದಾರೆ. ಹೀಗೆ ಅವರೊಡನೆ ಮಿತ್ರತ್ವವು ಜನರಲ್ಲಿ ಬೆಳೆದು ಅವರಿಗೂ ದೇಶದಲ್ಲಿ ಒಂದು ಗೌರವ ಸಲ್ಲುತ್ತಿದೆ. ಹರಿಜನರು ಬೇರೆ, ನಾವು ಬೇರೆ ಎಂಬ ಭಾವನೆಯು ನಮ್ಮಲ್ಲಿ ಸ್ವಲ್ಪವೂ ಇರಬಾರದು. ಅವರು ದೇವಸ್ಥಾನದೊಳಕ್ಕೆ ಬಂದ ಮಾತ್ರದಿಂದಲೇ ದೇವರು ಮಾಯವಾಗುವುದಿಲ್ಲ. ಹರಿಜನರಲ್ಲಿ ಕೂಡ ಅನೇಕ ಮಂದಿ ವಿದ್ಯಾವಂತರೂ, ಸದ್ಗುಣಿಗಳೂ ಮತ್ತು ಪರಿಶುದ್ಧರೂ ಇದ್ದಾರೆ. ದೇವರು ಪ್ರತಿಯೊಬ್ಬರಿಗೂ ಒಂದೇ ವಿಧವಾದ ಮನಃಶಕ್ತಿಯನ್ನು ಕೊಟ್ಟಿದ್ದಾನೆ ಮತ್ತು ಎಲ್ಲರನ್ನೂ ಸಮದೃಷ್ಟಿಯಿಂದ ಕಾಣುತ್ತಿರುತ್ತಾನೆ. ಇಂಥಾದ್ದರಲ್ಲಿ ನಾವು ಮೇಲು, ಅವರು ಕೀಳು ಎಂಬ ಭಾವನೆಯನ್ನು ಇಟ್ಟುಕೊಳ್ಳಬಾರದು.

ನನಗೆ ತಿಳಿದಿರುವ ಹಾಗೆಯೇ ಕೆಲವು ದೇವಸ್ಥಾನಗಳಲ್ಲಿ ಹರಿಜನರ ಪ್ರವೇಶಕ್ಕೆ ಆಸ್ಪದವಿದೆ. ಅಲ್ಲದೆ ಹರಿಜನರನ್ನು ದೇವಸ್ಥಾನಗಳೊಳಗೆ ಬಿಡುವ ವಿಚಾರದಲ್ಲಿ ಈಗ ಅನೇಕ ಜನರಿಗೆ ಭಿನ್ನಾಭಿಪ್ರಾಯವಿರಲಾರದೆಂದು ಭಾವಿಸಿದ್ದೇನೆ" ಎಂದು ತಿಳಿಸಿದರು.

"ನಮ್ಮನ್ನಾಳುವ ಮಹಾಸ್ವಾಮಿಯವರು ಕೂಡ ಅರಮನೆಯೊಳಕ್ಕೆ ಹರಿಜನರು ಪ್ರವೇಶಿಸಲು ಅನುಕೂಲವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದ್ದರಿಂದ ನಾವುಗಳು ಕೂಡ ಅವರು ಎಂಥ ಉದಾತ್ತ ಭಾವನೆಯನ್ನು ತಾಳಿದ್ದಾರೆಂಬುದನ್ನು ಮನಗಂಡು ಹರಿಜನರಿಗೆ ದೇವಾಲಯ ಪ್ರವೇಶಕ್ಕೆ ಯಾವ ಅಡ್ಡಿಆತಂಕಗಳೂ ಇಲ್ಲದಂತೆ ಮಾಡುವುದು ಸೂಕ್ತವಾದುದು. ಹರಿಜನ ಪಂಗಡದ ಹೆಣ್ಣುಮಕ್ಕಳು ಕೂಡ ಈಗೀಗ ಬಹಳಮಟ್ಟಿಗೆ ಮುಂದುವರಿಯುತ್ತಿದ್ದಾರೆ. ಯಾವ ಒಂದು ಸಭೆಯಲ್ಲಾಗಲೀ ಅಥವಾ ಚುನಾವಣೆಯು ನಡೆಯತಕ್ಕ ಸ್ಥಳಗಳಲ್ಲಾಗಲೀ ಇವರು ಇತರರೊಡನೆ ಕಲೆತು ಭಾಗವಹಿಸುವುದನ್ನು ನಾವು ನೋಡಬಹುದು. ಮೊನ್ನೆ ಮಹಿಳಾ ಸಮ್ಮೇಳನದಲ್ಲಿ ಕೂಡ ಅವರೊಡನೆ ಕುಳಿತು ನಾವು ಊಟ ಮಾಡಿದೆವು. ಈಗೀಗ ನಮ್ಮ ಭಾವನೆಯು ಅವರ ವಿಚಾರದಲ್ಲಿ ಬಹಳಮಟ್ಟಿಗೆ ಬದಲಾವಣೆಯನ್ನು ಹೊಂದಿದೆ. ದೊಡ್ಡವರಲ್ಲಿ ಮಾತ್ರವೇ ಅಲ್ಲ ಮಕ್ಕಳಲ್ಲಿಯೂ ಕೂಡ" ಎಂದು ತಿಳಿಸಿ "ಈ ಸಂದರ್ಭದಲ್ಲಿ ನನಗೊಂದು ನಿದರ್ಶನವು ಜ್ಞಾಪಕಕ್ಕೆ ಬರುತ್ತದೆ. ಮಹಾತ್ಮಾ ಗಾಂಧಿಯವರ ಆಪ್ತ ಕಾರ್ಯದರ್ಶಿಯವರಾದ ಶ್ರೀಮಾನ್ ಮಹದೇವ ದೇಸಾಯಿಯವರ ಹದಿನಾರು ವರ್ಷ ವಯಸ್ಸಿನ ಮಗ ಶ್ರೀಮಾನ್ ನಾರಾಯಣ ದೇಸಾಯಿ ಎಂಬುವರು ಮೈಸೂರಿಗೆ ಒಂದು ಸಲ ಬಂದಿದ್ದರು. ಚಾಮುಂಡಿ ಬೆಟ್ಟವನ್ನು ನೋಡಬೇಕೆಂಬ ಆಕಾಂಕ್ಷೆಯುಳ್ಳವರಾಗಿ ಅಲ್ಲಿಗೆ ನಾವೆಲ್ಲರೂ ಹೋಗಿದ್ದಾಗ, ಇವರು ಆ ದೇವಾಲಯ ಪ್ರವೇಶ ಮಾಡುವುದಕ್ಕೆ ಮುಂಚೆ ಅಲ್ಲಿ ಹರಿಜನರಿಗೆ ಪ್ರವೇಶವಿದೆಯೇ ಎಂದು ಕೇಳಿದರು. ಇಲ್ಲವೆಂದು ಉತ್ತರ ಬಂದೊಡನೆಯೇ ನಾವು ಎಷ್ಟು ಸಮಾಧಾನ ಹೇಳಿದರೂ ಅವರು ಆ ದೇವಾಲಯ ಪ್ರವೇಶ ಮಾಡದೆ ಹೊರಗೆ ನಿಂತುಬಿಟ್ಟರು. ಸಣ್ಣ ವಯಸ್ಸಿನವರಿಗೂ ಹರಿಜನ ದೇವಾಲಯ ಪ್ರವೇಶದ ವಿಚಾರದಲ್ಲಿ ಎಷ್ಟರಮಟ್ಟಿಗೆ ಮನೋಭಾವನೆ ಇದೆಯೆಂಬುದಕ್ಕೆ ಇದೊಂದು ಸರಿಯಾದ ನಿದರ್ಶನ. ಮುಂದಿನ ಜನಾಂಗವಾಗುವ ಇಂದಿನ ಮಕ್ಕಳ ಮನೋಭಾವನೆಯೇ ಈ ರೀತಿಯಾಗಿರುವಾಗ ಅದಕ್ಕೆ ಸರಿಯಾದ ಪ್ರೋತ್ಸಾಹ ಕೊಡುವುದು ನಮ್ಮ ಕರ್ತವ್ಯವಲ್ಲವೇ? ಆದ್ದರಿಂದ ಸರ್ಕಾರದವರು ಈ ಹರಿಜನ ದೇವಾಲಯ ಪ್ರವೇಶದ ವಿಚಾರದಲ್ಲಿ ತಾವು ತಾಳಿರುವ ಮನೋಭಾವನೆಯನ್ನು ಬದಲಾವಣೆ ಮಾಡಿಕೊಳ್ಳುವುದು ಸೂಕ್ತವಾದುದು. ಉಚಿತವೆಂದು ಕಂಡುಬಂದರೆ ಇದಕ್ಕಾಗಿ ಒಂದು ಸಮಿತಿ ಯನ್ನೇರ್ಪಡಿಸಿ ಈ ವಿಚಾರದಲ್ಲಿ ಜನಾಭಿಪ್ರಾಯವು ಯಾವ ರೀತಿ ಇದೆ ಎಂಬುದನ್ನು ತಿಳಿದುಕೊಂಡು, ಆ ಸಮಿತಿಯವರು ಕೊಡುವ ಸಲಹೆಯ ಮೇರೆಗೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂಬ ಉದ್ದೇಶದಿಂದ ಈ ಖೋತಾ ಸೂಚನೆಯನ್ನು ನಾನು ಈ ಸಭೆಯ ಮುಂದೆ ಚರ್ಚೆಗೆ ತಂದಿರುತ್ತೇನೆ" ಎಂದರು.

ಶ್ರೀಮಾನ್ ರಾಮಚಂದ್ರರಾವ್ ಸಿಂಧ್ಯರೆಂಬ ಸದಸ್ಯರು ಶ್ರೀಮತಿ ಯಶೋಧರಮ್ಮ ದಾಸಪ್ಪನವರು ತಂದಿರತಕ್ಕ ಠರಾವನ್ನು ಮನಃಪೂರ್ವಕವಾಗಿ ಅನುಮೋದಿಸುತ್ತೇನೆ ಎಂಬುದಾಗಿ ತಿಳಿಸಿದರು. ನಂತರ ಹರಿಜನರು ದೇವಾಲಯವನ್ನು ಪ್ರವೇಶಿಸುವುದಕ್ಕೆ ಸಂಬಂಧಿಸಿ ಇರುವ ವಿಷಯಗಳನ್ನು ಕುರಿತಂತೆ ಈ ಸಭೆಯ ಸದಸ್ಯರಲ್ಲಿ ಕೆಲವರಿಗೆ ನಮ್ಮ ದೇಶದಲ್ಲಿ ಹರಿಜನ ದೇವಾಲಯ ಪ್ರವೇಶಕ್ಕೆ ಅವಕಾಶ ಕೊಡಬಾರದೆಂಬ ಭಾವನೆಯಿರಬಹುದು. ಆದರೆ, ಈ ರೀತಿಯ ಭಾವನೆಯಿರುವುದು ದೇಶದ ಹಿತದೃಷ್ಟಿಯಿಂದ ಉತ್ತಮವಲ್ಲ. ತಿರುವಾಂಕೂರಿನಲ್ಲಿ ಹರಿಜನರಿಗೆ ದೇವಸ್ಥಾನದ ಪ್ರವೇಶಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಅಲ್ಲದೆ ನಮ್ಮನ್ನಾಳುವ ಮಹಾಸ್ವಾಮಿಯವರು ಕೂಡ, ಹರಿಜನರು ಅರಮನೆಯ ಪ್ರವೇಶಮಾಡುವುದಕ್ಕೆ ಅವಕಾಶ ನೀಡಿದ್ದಾರೆ. ಈಗ ಸ್ಥಿತಿಯು ಬಹಳಮಟ್ಟಿಗೆ ಬದಲಾವಣೆ ಹೊಂದಿದೆ. ಜನರಲ್ಲಿಯೂ ಹರಿಜನರು ಬೇರೆ ಮತ್ತು ತಾವು ಬೇರೆ ಎಂಬ ಭಾವನೆಯು ದೂರವಾಗುತ್ತಿದೆ.

ಇಂಥಾದ್ದರಲ್ಲಿ ಸರ್ಕಾರದವರು ಉದಾರ ನೀತಿಯಿಂದ ಹರಿಜನರು ಮುಜರಾಯಿ ದೇವಸ್ಥಾನಗಳಿಗಾದರೂ ಪ್ರವೇಶ ಮಾಡುವುದಕ್ಕೆ ಯಾವ ಅಡ್ಡಿಆತಂಕಗಳೂ ಉಂಟಾಗದಂತೆ ತಕ್ಕ ಏರ್ಪಾಡುಗಳನ್ನು ಮಾಡುವುದು ಸೂಕ್ತವೆಂದು ತಿಳಿಸಿದರು.

ಯಶೋಧರಮ್ಮನವರು ಮೇಲಿನ ವಿಷಯವನ್ನು ಕುರಿತಂತೆ "ಈಗ ಈ ಸಭೆಯಲ್ಲಿ ಸರ್ಕಾರದ ಪರ ಮಾತನಾಡಿದವರ ವಿನಾ ಇನ್ಯಾರೂ ನನ್ನ ಖೋತಾ ಸೂಚನೆಯನ್ನು ವಿರೋಧಿಸಿರುವುದಲ್ಲ. ಖಾಸಗೀ ಸದಸ್ಯರೆಲ್ಲರೂ ಕೊಟ್ಟ ಬೆಂಬಲಕ್ಕಾಗಿ ನಾನು ಅವರಿಗೆ ವಂದಿಸುತ್ತೇನೆ. ನನ್ನ ಖೋತಾ ಸೂಚನೆಯ ಪರ ಮಾತನಾಡಿದವರ ಪೈಕಿ ಒಬ್ಬರು ನನ್ನ ಅಭಿಪ್ರಾಯವನ್ನು ಪೂರ್ತಿಯಾಗಿ ಸಮರ್ಥಿಸಲಿಲ್ಲ. ಇದಕ್ಕಾಗಿ ತಮ್ಮ ವಿಷಾದವನ್ನು ಸೂಚಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ" ಎಂದು "ದೇವಾಲಯ ಪ್ರವೇಶದ ಸಮಸ್ಯೆಯನ್ನು ಕೇವಲ ತರ್ಕ ಮತ್ತು ವಾದಗಳ ಆಧಾರದ ಮೇಲೆ ಮನಸ್ಸನ್ನು ಒಪ್ಪಿಸಲು ಸಾಧ್ಯವಿಲ್ಲ. ಈ ವಿಷಯವು ನಮ್ಮ ನಮ್ಮ ಹೃದಯದಲ್ಲಿ ತಿಳಿಯಬೇಕಾದುದು. ಮನಸ್ಸಿನ ಸಂಬಂಧಕ್ಕಿಂತಲೂ ಇದರಲ್ಲಿ ನಮ್ಮ ಅಂತಃಕರಣದ ಪ್ರಭಾವವೇ ಹೆಚ್ಚಾಗಿರುವುದು" ಎಂದರು.

ಖೋತಾ ನಿರ್ಣಯವನ್ನು ಸಮರ್ಥಿಸಿದ ಸಭೆಯ ಒಬ್ಬ ಸದಸ್ಯರು, "60 ಸಾವಿರ ಜನಗಳ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಈ ದೇವಾಲಯ ಪ್ರವೇಶವು ಒಪ್ಪಿಗೆ ಇರಬಹುದು. ಆದರೆ 70 ಲಕ್ಷ ಜನರ ಅಭಿಪ್ರಾಯವನ್ನು ನಾವು ತಿಳಿಯಬೇಡವೆ? ಅಲ್ಲದೆ, ಈ ಸಭೆಯಲ್ಲಿರುವ ವಿದ್ಯಾವಂತರಿಗೆ ಹೇಳಿ ಒಪ್ಪಿಸಬಹುದು. ತಿಳುವಳಿಕೆ ಇಲ್ಲದ ಆ ಲಕ್ಷಾಂತರ ಜನರಿಗೆ ಹೇಳಿ ಒಪ್ಪಿಸುವುದು ಬಹಳ ಕಷ್ಟ. ಆದ್ದರಿಂದ ಇದು ಬಹಳ ಯೋಚಿಸಿ ಮಾಡಬೇಕಾದ ವಿಚಾರ. ಆದರೆ ನಾನೇನೋ ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತೇನೆ ಎಂದರು. ಆದರೆ, ಸದಸ್ಯರಾದ ನಾವು ಸಂಸ್ಥಾನದ ವಿವಿಧ ಕ್ಷೇತ್ರಗಳ ಪ್ರಜೆಗಳ ಪ್ರತಿನಿಧಿಗಳಾಗಿ ಇಲ್ಲಿ ಪ್ರತಿನಿಧಿಸುವುದರ ಜೊತೆಗೆ ಯಾವುದು ದೇಶಕ್ಕೆ ಹಿತವೆಂದು ಕಂಡುಬರುವುದೋ, ಆ ಅಭಿಪ್ರಾಯಕ್ಕೆ ಆ ಪ್ರಜೆಗಳ ಸಮ್ಮತಿಯನ್ನು ಸಂಪಾದಿಸಿಕೊಳ್ಳುವುದು ಸಹ ಮುಖಂಡರ ಭಾಗಕ್ಕೆ ಸೇರಿದುದಾಗಿದೆ. ಹೀಗೆ ಯಾರು ಪ್ರಜೆಗಳ ನಂಬಿಕೆಯನ್ನು ಗಳಿಸುತ್ತಾರೋ ಅವರೇ ನಿಜವಾದ ಪ್ರಜಾಮುಖಂಡರು. ಈ ಹರಿಜನ ದೇವಾಲಯ ಪ್ರವೇಶವು ನ್ಯಾಯವೆಂದು ತಮಗೆ ತೋರಿದರೆ ಹಾಗೆಯೆ, ನಮಗೂ ನ್ಯಾಯವೆಂದು ತೋರಿಯೇ ಇದೆ. ಆಗ ನಾವೆಲ್ಲರೂ, ಸಂಸ್ಥಾನದ ಎಲ್ಲಾ ಭಾಗಗಳಿಗೂ ಹೋಗಿ ಈ ವಿಷಯಕ್ಕೆ ಕೊಂಚವೂ ವಿರೋಧಾಭಿಪ್ರಾಯ ಬರದಂತೆ ಮಾಡಲು ಪ್ರಯತ್ನಿಸೋಣ. ಯಾವ ಒಳ್ಳೆಯ ಕೆಲಸವೇ ಆಗಲಿ ಅದಕ್ಕೆ ಅಡ್ಡಿಆತಂಕಗಳು ಬರದೆ ಇರುವುದೇ ಇರುವುದಿಲ್ಲ, ಎಂಬ ವಿಷಯವನ್ನು ನಾವು ಚರಿತ್ರೆಯಲ್ಲಿಯೂ ಸಹ ನೋಡಿದ್ದೇವೆ. ಕೆಲವರು ಸ್ವಲ್ಪವೂ ಅಡ್ಡಿ ಬರದೆ, ಯಾವ ವಿರೋಧಾಭಿಪ್ರಾಯವೂ ಬರದೆ ಇರುವ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗಬೇಕೆಂದು ಇಚ್ಛಿಸುತ್ತಾರೆ. ಅದು ಕಾರ್ಯಸಾಧ್ಯವಲ್ಲ. ಏನೇ ತೊಂದರೆ ಬರಲಿ, ಒಳ್ಳೆಯದೆಂದು ಕಂಡುಬಂದ ಕಾರ್ಯವನ್ನೇ ಮುಂದುವರಿಸಿಕೊಂಡು ಹೋಗುವುದರಲ್ಲಿಯೇ ನಮ್ಮ ಶಕ್ತಿ ವಿನಿಯೋಗವಾಗಬೇಕು. ಕಾರ್ಯವನ್ನು ಆರಂಭಿಸಿದ ಮೇಲೆ ಅಡ್ಡಿಆತಂಕಗಳನ್ನು ನೋಡಿ ಹೆದರುವುದು ಸರಿಯಲ್ಲ" ಎಂದು ಆ ಸದಸ್ಯರು ತಿಳಿಸಿದರು.

ಯಶೋಧರಮ್ಮನವರು ಅಕ್ಕಮಹಾದೇವಿಯು ತನ್ನ ವಚನದಲ್ಲಿ ಹೇಳಿರುವ ಮಾತನ್ನು ಸದನದಲ್ಲಿ ತಿಳಿಸುತ್ತಾ "ಕಾಡಿನಲ್ಲಿ ಮನೆಯನ್ನು ಕಟ್ಟಿ ದುಷ್ಟಮೃಗಗಳಿಗೆ ಅಂಜಿದರೆ ಆಗುತ್ತದೆಯೇನು? ಸಮುದ್ರದ ತೀರದಲ್ಲಿ ಮನೆಯನ್ನು ಕಟ್ಟಿ ಅಲೆಗಳಿಗೆ ಹೆದರುವುದುಂಟೆ, ಸಂತೆಯಲ್ಲಿ ಮನೆಯನ್ನು ಕಟ್ಟಿ ಗಲಾಟೆ ಎಂದರೆ ಆಗುವುದೇ? ಅದೇ ರೀತಿ ಒಂದು ಒಳ್ಳೆಯ ಕೆಲಸವನ್ನು ಕೈಗೊಂಡಾಗ ಅಡ್ಡಿಆತಂಕಗಳು ಬಂದೇಬರುತ್ತವೆ. ಪ್ರಪಂಚದಲ್ಲಿ

ಹುಟ್ಟಿದ ಮೇಲೆ ನಿಂದೆಸ್ತುತಿಗಳಿಗೆ ಪರವಶವಾಗದೆ ಆತ್ಮ ಮೆಚ್ಚುವಂತೆ ಕೆಲಸ ಮಾಡಬೇಕು. ಇದರಂತೆಯೇ ಗೌತಮ ಬುದ್ಧನು ಒಂದು ತತ್ವವನ್ನು ಸಾರಿದ್ದಾನೆ ಪ್ರಪಂಚದಲ್ಲಿ ಜೀವಿಸುವುದೇ ದುಃಖಕರವು. ಈ ದುಃಖವೆಲ್ಲಾ ನಮ್ಮ ದುರಾಶೆಯ ಫಲವು, ದುರಾಶೆಯನ್ನು ಬಿಟ್ಟು ಲೋಕೋಪಕಾರ ಮಾಡುತ್ತಾ ಸನ್ಮಾರ್ಗದಲ್ಲಿ ನಡೆದರೆ ಯಾರು ಬೇಕಾದರೂ ಮೋಕ್ಷವನ್ನು ಹೊಂದಬಹುದು. ಈ ತತ್ವ ಹೇಗೆ ಒಬ್ಬ ವ್ಯಕ್ತಿಗೆ ಅನ್ವಯಿಸುತ್ತದೆಯೋ ಹಾಗೆಯೇ ದೇಶಕ್ಕೂ ಅನ್ವಯಿಸುತ್ತೆ. ನಮ್ಮ ದೇಶದಲ್ಲಿ ಉತ್ತಮ ಸ್ಥಾನ ಹೊಂದಿರುವವರು ತಮ್ಮ ದುರಾಶೆಯನ್ನು ದೂರಮಾಡಿ ಹರಿಜನರಿಗೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನಮಾನಗಳನ್ನು ದೊರಕಿಸಿಕೊಟ್ಟರೆ, ಆಗ ಇಡೀ ದೇಶದ ಮತ್ತು ಜನಾಂಗದ ಮುಕ್ತಿಯನ್ನೇ ಸಾಧಿಸಿದ ಹಾಗಾಗುತ್ತದೆ. ಯಾರು ಉದಾತ್ತವಾದ ಮತ್ತು ಉದಾರವಾದ ಭಾವನೆಯಿಂದ ಒಳ್ಳೆಯ ಕೆಲಸಗಳನ್ನು ಕೈಗೊಳ್ಳುತ್ತಾರೋ ಅವರು ಹೆದರಿಕೊಂಡು ಆ ಕೆಲಸಗಳನ್ನು ನಿಲ್ಲಿಸಬಾರದು" ಎಂದರು.

ಶ್ರೀಮಾನ್ ಚೆನ್ನಿಗರಾಮಯ್ಯನವರು ಯಶೋಧರಮ್ಮ ಭಾಷಣವನ್ನು ಪ್ರಸ್ತಾಪ ಮಾಡುತ್ತಾ "ಅವರ ಭಾಷಣವನ್ನು ಕೇಳಿದರೆ ಯಾರಿಗಾದರೂ ಮನಸ್ಸು ಕರಗದೇ ಇರುವುದಿಲ್ಲ. ಸಂತೋಷದಿಂದ ನಮ್ಮನ್ನು ದೇವಾಲಯಗಳಿಗೆ ಬರಮಾಡಿಕೊಳ್ಳಿ. ಇಲ್ಲವಾದರೆ ನಾವಿದ್ದಲ್ಲಿಯೇ ನಮ್ಮ ಭಕ್ತಿಯನ್ನು ದೇವರಿಗೆ ಸಲ್ಲಿಸುತ್ತೇವೆ. ಒಂದು ವೇಳೆ ದೇವರು ದೇವಸ್ಥಾನಗಳಲ್ಲಿ ನಿಜವಾಗಿಯೂ ಇದ್ದಿದ್ದರೆ ನಮ್ಮನ್ನು ಹೀಗೆ ಬಿಡದೆ ಈಗಾಗಲೇ ಬರಮಾಡಿಕೊಳ್ಳುತ್ತಿದ್ದನು" ಎಂದು ಅವರು ಹೇಳಿದ್ದರು. "ಅವರು ಎಷ್ಟು ದುಃಖದಿಂದ ಹೀಗೆ ಹೇಳಿದ್ದಾರೆಂದು ನಾವು ತಿಳಿಯಬೇಕು. ಇದಕ್ಕೆ ಮನುಷ್ಯನಿಂದ ಏನೂ ಮಾಡಲು ಸಾಧ್ಯವಿಲ್ಲ, ದೇವರೇ ಬಗೆಹರಿಸಬೇಕು ಎಂದು ನಿರಾಶೆಯನ್ನು ತೋರ್ಪಡಿಸಿರುವುದನ್ನು ನೋಡಿದರೆ, ಅವರಿಗೆ ಸರ್ಕಾರದಲ್ಲಿಯೂ ಸಹ ವಿಶ್ವಾಸವು ಉಳಿದಿಲ್ಲವೆಂಬುದು ವ್ಯಕ್ತವಾಗುತ್ತದೆ. ಮತ್ತು ಅವರು ಕೊನೆಗೆ ನಮ್ಮನ್ನು ಎಂದರೆ ಹರಿಜನರನ್ನು ನಿಮ್ಮ ಮನೆಗಳಲ್ಲಿ ಕೆಲಸಕ್ಕಾದರೂ ಇಟ್ಟುಕೊಳ್ಳಿ ಎಂದು ಹೇಳಿದರು. ಈ ವಿಚಾರವಾಗಿ ಮಹಿಳಾ ಸಮ್ಮೇಳನದಲ್ಲಿ ಪ್ರತಿಯೊಬ್ಬರ ಮನೆಯಲ್ಲಿಯೂ ಒಬ್ಬೊಬ್ಬ ಹರಿಜನ ಸೇವಕರನ್ನು ಇಟ್ಟುಕೊಳ್ಳಬೇಕು ಎಂದು ಠರಾವಾಯಿತು. ಆ ಸಮ್ಮೇಳನದಲ್ಲಿ ಅಧಿಕಾರಿಗಳ ಮತ್ತು ದೊಡ್ಡ ಮನುಷ್ಯರ ಮನೆಯ ಹೆಂಗಸರೇ ಹೆಚ್ಚಾಗಿ ಸೇರಿದ್ದರು. ಇದರಿಂದ ಮಹಿಳೆಯರು ಈ ವಿಷಯದಲ್ಲಿ ಅಡ್ಡಿಬರುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಇನ್ನೂ ಮುಂದೆ ಹೋಗುವುದಾದರೆ ಅವರನ್ನು ಸೇವಕರನ್ನಾಗಿ ಇಟ್ಟುಕೊಳ್ಳುವುದಕ್ಕಿಂತಲೂ ಸರಿಸಮಾನರನ್ನಾಗಿ ಅವರನ್ನು ಕಾಣಬೇಕೆಂಬುದು ನನ್ನ ಅಭಿಪ್ರಾಯ. ಪ್ರತಿ ಸನ್ಯಾಸಿಗೂ ಒಂದು ಹಿಂದಿನ ದಿನವಿದೆ ಮತ್ತು ಪ್ರತಿ ಪಾಪಿಗೂ ಭವಿಷ್ಯವಿದೆ. ಪಾಪಿಗೇ ಭವಿಷ್ಯವಿರುವಾಗ, ನಮ್ಮಂತೆ ಮನುಷ್ಯರಾದ ಹರಿಜನರ ಭವಿಷ್ಯವೇಕೆ ಆಶಾದಾಯಕವಾಗಿರಬಾರದು? ದೇವಸ್ಥಾನದ ಪ್ರವೇಶಕ್ಕೆ ಉತ್ತಮ ಜಾತಿಯವರಲ್ಲಿಯೂ ಸಹ ಭಕ್ತಿ, ನಿರ್ಮಲ ಮನಸ್ಸು ಮುಂತಾದ ಗುಣಗಳಿರಬೇಕು. ಅವುಗಳಿಲ್ಲದಿದ್ದರೂ ಸಹ ಉತ್ತಮರೆಂದು ಹೇಳಿಕೊಳ್ಳುತ್ತಾ ನಾವು ಪ್ರವೇಶ ಮಾಡುತ್ತಿದ್ದೇವೆ. ಅದೇ ಭಕ್ತಿ ಮತ್ತು ನಿರ್ಮಲ ಮನಸ್ಸಿನಿಂದ ಹರಿಜನರು ಬಂದರೆ ಅವರನ್ನೇಕೆ ದೇವಾಲಯಗಳಿಗೆ ಪ್ರವೇಶಮಾಡಲು ಬಿಡಬಾರದು" ಎಂದು ಪ್ರಶ್ನಿಸಿದರು.

"ತಂದೆತಾಯಿಗಳು ಮಾಡಿದ ಕರ್ಮದ ಫಲವನ್ನು ಮಕ್ಕಳು ಅನುಭವಿಸುತ್ತಾರೆ. ಕರ್ಮದ ಫಲವನ್ನು ಅನುಭವಿಸಲೇಬೇಕೆಂಬ ತತ್ವವನ್ನು ನಾವು ಒಪ್ಪುತ್ತೇವೆ. ನಮ್ಮ ಪೂರ್ವಿಕರು ಹರಿಜನರಿಗೆ ಸ್ವಾತಂತ್ರ್ಯ ಕೊಡದೆ ಅವರನ್ನು ಅದುಮಿಟ್ಟಿದ್ದರಿಂದಲೇ ನಮಗೆ ಇಂದು ಸ್ವಾತಂತ್ರ್ಯವು ಸಿಕ್ಕಿಲ್ಲ. ಆದ್ದರಿಂದ, ಇಂದು ನಾವು ಅವರ ಮೇಲೆ ನಡೆಸುತ್ತಿರುವ ದೌರ್ಜನ್ಯ, ಅನ್ಯಾಯವನ್ನು ನಿಲ್ಲಿಸಿ ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟರೆ ಮುಂದೆ ನಮ್ಮ ಮಕ್ಕಳಿಗಾದರೂ ಪರಾಧೀನತೆ ತಪ್ಪುವುದು. ನಮ್ಮ ಮಕ್ಕಳಿಗೆ ಒಳ್ಳೆಯದಾಗಲಿ ಎಂಬ ಭಾವನೆಯಿಂದಲಾದರೂ ನಾವೂ ಹೀಗೆ ಮಾಡಬೇಕು. ಕಬೀರರು 'ನಿನ್ನ ದಾರಿಯಲ್ಲಿ ಮುಳ್ಳು ಬಿತ್ತಿದವನ ಮಾರ್ಗದಲ್ಲಿ ನೀನು ಹೂವನ್ನು

ಬಿತ್ತು. ಏಕೆಂದರೆ, ಅವನಿಗೆ ಮುಳ್ಳು ಬಿತ್ತಿದುದಕ್ಕೆ, ಮುಳ್ಳೇ ಫಲ. ನೀನು ಹೂವು ಬಿತ್ತಿದುದಕ್ಕೆ ಹೂವೇ ಫಲವಾಗಿ ಸಿಕ್ಕುವುದು' ಎಂದು ಹೇಳಿ, ನಮಗೆ ಕೆಡಕನ್ನು ಮಾಡುವವರಿಗೂ ಒಳ್ಳೆಯದನ್ನೇ ಮಾಡಬೇಕೆಂದು ತಿಳಿಸಿರುವಾಗ ನಿರ್ದೋಷಿಗಳಾದ ಹರಿಜನರನ್ನು ದೇವಾಲಯ ಪ್ರವೇಶಕ್ಕೆ ಅಡ್ಡಿಮಾಡದಿರುವುದು ಒಳ್ಳೆಯದು. ಇಷ್ಟು ಮಾತ್ರ ಹೇಳಬಲ್ಲೆ. ನಮಗೆ ಎಷ್ಟೇ ಅಡಚಣೆಗಳಿರಲಿ, ಈ ವಿಚಾರದಲ್ಲಿ ನಾವು ಯಾವ ವಿಧವಾದ ಕೀಳುಮೇಲೆಂಬ ಭಾವನೆಯನ್ನಿಟ್ಟುಕೊಳ್ಳದೆ ಕಾರ್ಯವನ್ನು ನಡೆಸುವುದು ಒಳ್ಳೆಯದು. ನಾನು ಈ ಖೋತಾ ಸೂಚನೆಗೆ ಸದಸ್ಯರೆಲ್ಲರ ಸಂಪೂರ್ಣ ಬೆಂಬಲವನ್ನು ಕೋರಿ ಇದನ್ನು ಒತ್ತಾಯಪಡಿಸುತ್ತೇನೆ" ಎಂದು ತಿಳಿಸಿದರು.

ಶ್ರೀಮತಿ ಯಶೋಧರಾ ದಾಸಪ್ಪನವರು ಕೆಲಸಗಾರರಿಗೆ ತುಟ್ಟಿಭತ್ಯ ಕೊಡುವ ಸಂಬಂಧವಾಗಿ ಖೋತಾ ಸೂಚನೆಯನ್ನು ಸಭೆಯ ಮುಂದೆ ಚರ್ಚೆಗೆ ಮಂಡಿಸುತ್ತಾ, "ಒಂದು ಲಕ್ಷ ರೂಪಾಯಿಗಳಿಗೆ ಇರುವ ಬೇಡಿಕೆಯನ್ನು ಒಂದು ರೂಪಾಯಿಗೆ ಇಳಿಸಬೇಕೆಂದು ನಾನು ಆಗ್ರಹಿಸುತ್ತೇನೆ. ಏಕೆಂದರೆ ಕೆಲವು ಅರ್ಹ ವಿಚಾರಗಳಲ್ಲಿ ತುಟ್ಟಿಭತ್ಯವನ್ನು ಏರಿಸುವ ಅವಶ್ಯಕತೆ ಇದೆ. ಅಷ್ಟೇ ಅಲ್ಲದೆ ತುಟ್ಟಿಭತ್ಯವನ್ನು ಎಲ್ಲಿಯವರೆಗೆ ದಿನನಿತ್ಯದ ಅಗತ್ಯ ವಸ್ತುಗಳ ಬೆಲೆಯು ಹೆಚ್ಚಾಗಿರುವುದೊ, ಅಲ್ಲಿಯವರೆಗೆ ಚಾಲ್ತಿಯಲ್ಲಿಡಬೇಕು ಎಂಬ ಆಶ್ವಾಸನೆಯನ್ನು ಕೊಡಬೇಕಾಗಿದೆ. ಈ ಖೋತಾ ಸೂಚನೆಯನ್ನು ನಾನು ಮೊದಲೇ ಕಳುಹಿಸಿದ್ದೆ. ಆದರೆ ಈಗ ಮೂರು ದಿವಸದಿಂದ ಕೂಲಿಗಾರರ ವಿಚಾರ ಚರ್ಚೆಯಾದುದನ್ನು ನೋಡಿದರೆ, ಈ ವಿಷಯದ ಮೇಲೆ ಮಾತನಾಡುವುದಕ್ಕೆ ನನಗೆ ಅಧಿಕಾರವಿದೆಯೇ ಅಥವಾ ಇಲ್ಲವೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ.

"ಇಲ್ಲಿ ಅನೇಕ ಮಹನೀಯರು, ನಾವು ಯಾವ ವಿಷಯ ಮಾತನಾಡಿದರೂ 'ಅವರಿಗೆ ಕೂಲಿಗಾರರ ವಿಷಯ ಏನು ಗೊತ್ತು? ಅವರಿಗೂ ಕೂಲಿಗಾರರಿಗೂ ಏನು ಸಂಬಂಧ? ಮತ್ತು ಅವರ ವಿಷಯದಲ್ಲಿ ಈ ರೀತಿ ಮಾತನಾಡಲು ಏನು ಕಾರಣವಿರಬೇಕು? ಎಂಬುದಾಗಿ ಆಕ್ಷೇಪಣೆ ಮಾಡುತ್ತಾರೆ. ನಾನು ಕೂಲಿಗಾರಳೂ ಅಲ್ಲ ಮತ್ತು ಸರ್ಕಾರಿ ನೌಕರಳೂ ಅಲ್ಲ. ಹೀಗಿದ್ದ ಮೇಲೆ ಈ ಖೋತಾ ನಿರ್ಣಯವನ್ನು ತರುವುದಕ್ಕೆ ನನಗೆ ಏನು ಅಧಿಕಾರವಿದೆಯೆಂದು ತಾವು ಕೇಳಬಹುದು. ಆದರೆ ನಾನು ಈ 'ಕೂಲಿಗಾರರ ಕೂಲಿಗಾರಳಾದುದರಿಂದ' ಇದನ್ನು ತರಲು ನನಗೆ ಅಧಿಕಾರವಿದೆ. ಈ ಕೂಲಿಗಾರರಿಗೆ ಮಾತನಾಡುವುದಕ್ಕೆ ಶಕ್ತಿ ಇಲ್ಲ. ಅವರು ಹೇಳಿದ ಕೆಲಸವನ್ನು ವಿಧೇಯತೆಯಿಂದ ಮಾಡುವುದೊಂದನ್ನೇ ಅರಿತಿರತಕ್ಕವರು. ಒಂದು ವೇಳೆ ಅವರಿಗೆ ಕಷ್ಟ ಒದಗಿದರೂ ಸಹ ಅದನ್ನು ಪ್ರತಿಭಟನೆ ಮಾಡಿದರೆ ಇನ್ನೇನು ಕಷ್ಟಬರುತ್ತದೆಯೋ, ಎಂಬ ಭೀತಿಯಿಂದ, ಸದಾ ಕಾಲದಲ್ಲಿಯೂ ತಲೆಬಾಗಿ, ಭಯವನ್ನು ಯಾವಾಗಲೂ ಹೊತ್ತುಕೊಂಡು ಮನಸ್ಸಿನಲ್ಲಿಯೇ ಕಷ್ಟಗಳನ್ನು ಸಹಿಸಿಕೊಂಡು ಕೆಲಸಮಾಡುವವರು, ಇದನ್ನು ನೋಡಿದರೆ, ನಮ್ಮ ಹೃದಯವು ಮರುಕಗೊಳ್ಳುತ್ತದೆ. ಅಂಥವರಿಗೆ ಸಹಾಯಮಾಡಕೂಡದೆಂದು ಹೇಳುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಯಾರಿಗೆ ಕಷ್ಟವಿದೆಯೋ ಅಂಥವರಿಗೆ ಕಷ್ಟದಿಂದ ಪಾರಾಗಲು, ಅದಕ್ಕಾಗಿ ಒಂದು ಲಕ್ಷ ರೂಪಾಯಿ ಹೆಚ್ಚಾಗಿ ಕೊಟ್ಟು ಅವರಿಗೆ ದುಬಾರಿ ಬೆಲೆಯ ಭತ್ಯವನ್ನು ಕೊಡಿರೆಂದು ಹೇಳಿದರೆ ಯಾರೂ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಲಾರರು.

"ಸರ್ಕಾರದವರು ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು, ಪದಾರ್ಥಗಳ ಬೆಲೆ ಈಗ ವಿಪರೀತವಾಗಿ ಹೆಚ್ಚಾಗಿರುವುದರಿಂದ, ಎಲ್ಲರಿಗೂ ಈ ಸೌಲಭ್ಯವನ್ನು ಕಲ್ಪಿಸಿಕೊಟ್ಟು ಸಹಾಯಮಾಡಬೇಕಾದುದು ಅವರ ಕರ್ತವ್ಯ. ಬೆಲೆಯು ಹೆಚ್ಚಾಗಿದೆ ಎಂಬ ವಿಷಯದಲ್ಲಿ ನಿನ್ನೆಯ ದಿನ ಚರ್ಚೆಯಾಗಿ, ಅದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಬಡವರಿಗೆ ಮುಖ್ಯವಾಗಿ ಬೇಕಾದುದು ಆಹಾರ ಮತ್ತು ಬಟ್ಟೆ. ಇವುಗಳ ಬೆಲೆಯು ಹೆಚ್ಚಾಗಿದ್ದರೆ ಇವುಗಳನ್ನು ಕೊಂಡುಕೊಳ್ಳುವುದಕ್ಕೆ ಅವರಿಗೆ ಹೇಗೆ ತಾನೇ ಸಾಧ್ಯ? ಅವರಿಗೆ ಒಂದು ರೂಪಾಯಿ ಭತ್ಯವನ್ನು ಕೊಟ್ಟರೆ ಅದು

ಸಾಕಾಗುತ್ತದೆಯೇ ಎಂಬುದನ್ನು ತಾವು ಪರಿಶೀಲನೆ ಮಾಡಬೇಕು. ಈಗ ಸಾಮಾನುಗಳ ಬೆಲೆಯು ಶೇಕಡಾ 60ರಷ್ಟು ಹೆಚ್ಚಾಗಿರುವುದರಿಂದ ಒಂದು ರೂಪಾಯಿ ಹೇಗೆ ಸಾಕು? ಈಗಿನ ಪರಿಸ್ಥಿತಿಯಲ್ಲಿ, ಬಡವರಿಗೇ ಅಲ್ಲ ಮಧ್ಯಮ ಅಂತಸ್ತಿನಲ್ಲಿರುವವರಿಗೂ ಕಷ್ಟವಾಗಿದೆ. ಹೀಗಿರುವಾಗ, ಇನ್ನು ಬಡವರ ಗತಿಯೇನು? ದೊಡ್ಡ ಸಂಸಾರ ಇಟ್ಟುಕೊಂಡಿರುವವರಿಗೆ, ತಿಂಗಳಿಗೆ 15-16 ರೂಪಾಯಿ ಸಂಬಳ ಬರತಕ್ಕವರಿಗೆ ಸಹಾಯಮಾಡಬೇಕೆಂದು ಮಾತನಾಡಿದರೆ, ಹಾಗೆ ಮಾತನಾಡಿದವರ ಮೇಲೆ ಇಲ್ಲದ ಪ್ರತಿಬಂಧಕಾಜ್ಞೆಗಳನ್ನೋ ಅಥವಾ ಗಡೀಪಾರು ಆಜ್ಞೆಗಳನ್ನೋ ಸರ್ಕಾರದವರು ಹಾಕಿಬಿಡುತ್ತಾರೆ ಎಂಬುದು ಈಗ ಸಾರ್ವಜನಿಕ ಗಮನಕ್ಕೆ ಬಂದಿದೆ. ಅಲ್ಲದೆ, ಈಗ ಮಹಾರಾಜ ಮತ್ತು ಮಿನರ್ವ ಮಿಲ್ಲುಗಳಲ್ಲಿ ಮೂರೂವರೆ ರೂಪಾಯಿ ದುಬಾರಿ ಬೆಲೆಯ ಭತ್ಯವನ್ನು ಕೊಟ್ಟಿದ್ದಾರೆ. ಇಂಥಾದ್ದರಲ್ಲಿ, ನಮ್ಮಲ್ಲಿ ಒಂದು ರೂಪಾಯಿ ಕೊಟ್ಟರೆ ಅದು ಏನೂ ಸಾಲದು. ಈಗಿನ ಪ್ರಕಾರ 25 ರೂಪಾಯಿ ಸಂಬಳ ಮತ್ತು ಅದಕ್ಕೆ ಕಡಿಮೆ ಸಂಬಳ ಬರುವವರಿಗೆ ಮಾತ್ರ ಈ ಭತ್ಯವನ್ನು ಕೊಡಬೇಕೆಂದು ಮಾಡಿದ್ದೀರಿ. ಆದರೆ 50 ರೂಪಾಯಿ ಸಂಬಳ ಬರುವವರಿಗೂ ಸಂಸಾರಗಳನ್ನು ನಡೆಸುವುದು ಈಗಿನ ಪರಿಸ್ಥಿತಿಯಲ್ಲಿ ಬಹಳ ಕಷ್ಟ. ಅವರಿಗೂ ಈ ರೀತಿ ಕೊಡಬೇಕಾದುದು ಅಗತ್ಯ. ಈ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕಾಗಿಯೇ ಈ ಸಭೆಯ ಮುಂದೆ ಈ ಖೋತಾ ಸೂಚನೆಯನ್ನು ಕಾಂಗ್ರೆಸ್ ಪಕ್ಷದ ಸದಸ್ಯರು ತಂದಿದ್ದಾರೆಯೇ ಹೊರತು ಇನ್ನಾವ ದುರುದ್ದೇಶದಿಂದಲೂ ಅಲ್ಲ. ಕಾಂಗ್ರೆಸ್ಸಿನವರಿಗೂ ಇತರರಿಗೂ ರಾಜಕೀಯ ನೀತಿಯಲ್ಲಿ ವ್ಯತ್ಯಾಸವಿರಬಹುದು. ಆದರೆ ತಂದಿರತಕ್ಕ ಈ ವಿಷಯದಲ್ಲಿ ನಮ್ಮ ಹೃದಯ ಮತ್ತು ಅಂತರಾತ್ಮ ಒಪ್ಪಬೇಕೇ ಹೊರತು ಪಕ್ಷ ಭಾವನೆಗಳಿರಕೂಡದು. ಈ ಏರ್ಪಾಡನ್ನು ಸರ್ಕಾರದವರು ಮೊದಲೇ ಮಾಡಿದ್ದರೆ ಚೆನ್ನಾಗಿತ್ತು. ಈಗ ಭದ್ರಾವತಿಯಲ್ಲಿ ತಯಾರಾಗತಕ್ಕ ಸಾಮಾನುಗಳಿಂದ ತುಂಬಾ ಲಾಭ ಬರುತ್ತಿದೆ. ಅಲ್ಲಿಯ ಕೆಲಸಗಾರರಿಗೆ ಮೊದಲೇ ಈ ಭತ್ಯವನ್ನು ಕೊಟ್ಟಿದ್ದರೆ ಕೆಲಸಗಾರರು ತೃಪ್ತಿ ಹೊಂದುತ್ತಿದ್ದರು. ಅಲ್ಲದೆ ಈಗ ಕೊಡುವ ರಿಯಾಯಿತಿಯನ್ನು ಕೂಲಿಗಾರರಿಗೆ ಕೊಟ್ಟಿದ್ದರೆ ಸಾಮಾನು ತಯಾರು ಮಾಡುವ ಖರ್ಚು ಹೆಚ್ಚಾಗುತ್ತಿತ್ತು. ಅದಕ್ಕೆ ಅನುಗುಣವಾದ ಬೆಲೆ ಭಾರತ ಸರ್ಕಾರದವರಿಂದ ನಮಗೆ ದೊರೆಯುತ್ತಿತ್ತು. ನಮಗೆ ಯಾವ ನಷ್ಟವೂ ಆಗದೆ, ಕೂಲಿಗಾರರಿಗೆ ಹೆಚ್ಚಿನ ಪ್ರಯೋಜನವಾಗುತ್ತಿತ್ತು. ಇಂಥಾ ಕಷ್ಟ ಕಾಲದಲ್ಲಿ ಅವರಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಡದೇ ಇದ್ದುದರಿಂದ ಅಲ್ಲಿಯ ಕೂಲಿಗಾರರ ಮುಷ್ಕರ ನಡೆಯಲು ಅವಕಾಶವಾಯಿತು. ಸರ್ಕಾರದವರು ಇಂಥ ಸಂದರ್ಭಗಳಲ್ಲಿ ಸ್ವಲ್ಪ ಮುಂದಾಲೋಚನೆಯಿಂದ ವರ್ತಿಸಿ, ಇವರಿಗೆ ಸಹಾಯಮಾಡಬೇಕೆಂದು ಕೇಳಿಕೊಳ್ಳುತ್ತೇನೆ" ಎಂದು ತಿಳಿಸಿದರು.

ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿದ್ದ ಯಶೋಧರಮ್ಮನವರು ವಿದುರಾಶ್ವತ್ಥದ ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ನಡೆದ ಮಹಿಳೆಯರ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಶ್ರೀ ದಾಸಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ಸ್ತ್ರೀಯರ ವಿಷಯವಾಗಿ ಏನೂ ಹೇಳದಿರುವುದಕ್ಕಾಗಿ ವಿಷಾದಿಸಿ ಸ್ತ್ರೀಯರನ್ನು ಕುರಿತ ಭಾಷಣವನ್ನು ಮಾಡಿದರು. "ಭಾರತ ದೇಶದಲ್ಲಿ ವೇದಗಳ ಕಾಲದಿಂದಲೂ ಸ್ತ್ರೀಯರು ಮನ್ನಣೆ ಪಡೆದಿದ್ದಾರೆ ಸಾವಿತ್ರಿ, ದಮಯಂತಿ, ರಾಣೀ ಲಕ್ಷ್ಮೀಬಾಯಿ ಮುಂತಾದವರು ಉನ್ನತ ಆದರ್ಶಗಳನ್ನು ತೋರಿಸಿರುವರು. ತಮ್ಮ ಸ್ವಾತಂತ್ರ್ಯವನ್ನು ಸ್ತ್ರೀಯರು ಕಳೆದುಕೊಂಡಿರುವುದಕ್ಕೆ ತಾವೇ ಕಾರಣರು. ಪುರುಷರನ್ನು ಆಕ್ಷೇಪಿಸುವಂತಿಲ್ಲ. ಮಹಿಳೆಯರು ಪರದೇಶಿಯರನ್ನು ಅನುಕರಿಸಬೇಕಾಗಿಲ್ಲ. ಸ್ತ್ರೀಯರ ಜನ್ಮವು ಯಾವಾಗಲೂ ಸೇವೆಗಾಗಿಯೇ ಇದೆ. ಸ್ವಾತಂತ್ರ ಸಾಧನೆಯಲ್ಲಿ ನಮ್ಮ ಪುರುಷರಿಗೆ ನಾವು ಬೆಂಬಲವಾಗಿ ನಿಂತರೆ ಶತ್ರುಗಳು ನಿರ್ನಾಮವಾಗುವರು. ಹೆಂಗಸರು ಗಂಡಸರನ್ನು ಹೇಡಿಗಳನ್ನಾಗಿ ಮಾಡಬಾರದು. ಹೆಂಗಸರಿಗೆ ಗಂಡಸರಿಗಿಂತ ತಾಳ್ಮೆ ಹೆಚ್ಚು, ಅವರು ಶಾಂತಿಯಿಂದಲೂ ಪ್ರೇಮದಿಂದಲೂ ಸಂಸಾರ ಸುಖವನ್ನು ನಡೆಸಿ, ಗಂಡಸರಿಗೆ ಉತ್ತೇಜನ ಕೊಟ್ಟು ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಲು ಸಹಾಯಕರಾಗಬೇಕು" ಎಂದು ಕರೆಕೊಟ್ಟರು.

ಯಶೋಧರಮ್ಮನವರು ಸ್ತ್ರೀಯರ ವಿದ್ಯಾಭ್ಯಾಸದ ಬಗ್ಗೆ ತಮ್ಮ ಭಾಷಣದಲ್ಲಿ ತಿಳಿಸುತ್ತಾ "ಸ್ತ್ರೀಯರ ಈಗಿನ ವಿದ್ಯಾಭ್ಯಾಸವು ಸರಿಯಾದ ಕ್ರಮದಲ್ಲಿ ನಡೆಯುತ್ತಿಲ್ಲ. ಅವರ ವಿದ್ಯಾಭ್ಯಾಸವು 16ನೇ ವಯಸ್ಸಿನಲ್ಲಿ ಮುಗಿಯಬೇಕು. ಅವರಿಗೆ ಗೃಹಕೃತ್ಯ ಶಿಕ್ಷಣವನ್ನು ಕೊಡಬೇಕು. ವಾರ್ಧಾ ಶಿಕ್ಷಣ ಪದ್ಧತಿಯನ್ನು ಅನುಸರಿಸಬೇಕು. ವಿಶ್ವವಿದ್ಯಾಲಯದಲ್ಲಿ ಮಹಿಳೆಯರೂ ಓದಬಹುದು. ಆದರೆ, ಮದುವೆಯಾಗಿ ಗೃಹಿಣಿಯರಾಗಿರುವುದೇ ಅವರ ಧರ್ಮವೆಂಬುದನ್ನು ಮರೆಯಬಾರದು. ತಾಯಂದಿರಾದ ಹೆಂಗಸರಿಗೆ ಕೋಮುವಾರು ಭೇದಗಳಿಲ್ಲ. ಎಲ್ಲ ಜಾತಿಯ ಮಕ್ಕಳನ್ನು ಒಂದೇ ರೀತಿಯಿಂದ ಕಾಣುವರು. ನಮ್ಮ ದೇಶದ ಸ್ವಾತಂತ್ರ್ಯವನ್ನು ಸಂಪಾದಿಸುವುದರಲ್ಲಿ ಮಹಿಳೆಯರೆಲ್ಲರೂ ಸಹಾಯ ಮಾಡಬೇಕು" ಎಂದು ಹೇಳಿದರು.

ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಪ್ರಥಮ ಸದಸ್ಯರು ಎಂಬ ಹೆಗ್ಗಳಿಕೆಗೆ ಪಾತ್ರರಾದ ಶ್ರೀಮತಿ ಯಶೋಧರಾ ದಾಸಪ್ಪನವರು ಸಭೆಯ ಸದಸ್ಯರಾಗಿ ತಮ್ಮದೆ ಆದ ವರ್ಚಸ್ಸಿನಿಂದ ಪ್ರತಿಯೊಂದು ವಿಷಯವನ್ನು ಕುರಿತು ಸಭೆಯಲ್ಲಿ ಚರ್ಚಿಸುತ್ತಿದ್ದರು. ಯಶೋಧರಮ್ಮನವರು, ಜನರಿಗೆ ಅನನುಕೂಲವಾದ ವಿಷಯಗಳನ್ನು ಕಂಡಾಗ ಯಾವುದೇ ಅಂಜಿಕೆ ಇಲ್ಲದೆ ಪ್ರಬಲವಾಗಿ ಖಂಡಿಸುತ್ತಿದ್ದರು. ಸರ್ಕಾರದ ಕೆಲವು ಮಸೂದೆಗಳ ವಿರುದ್ಧ ಅವರು ಮಂಡಿಸುತ್ತಿದ್ದ ಖೋತಾ ಸೂಚನೆಗಳು ಮಹತ್ವವುಳ್ಳದಾಗಿದ್ದವು.

ಮೈಸೂರು ಕಾಂಗ್ರೆಸ್ ಅಧ್ಯಕ್ಷರು

1950ರಲ್ಲಿ ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶ್ರೀಮತಿ ಯಶೋಧರಾ ದಾಸಪ್ಪನವರು ಮೈಸೂರು ಸಂಸ್ಥಾನದ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದರು. ತಮ್ಮ ಪತಿಯಂತೆ ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ಪಾಲುಗೊಳ್ಳದೆ ಸಮಾಜ ಸೇವಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಶ್ರೀಮತಿ ಯಶೋಧರಮ್ಮನವರು ಮಹಿಳಾ ಸದನ, ಭಗಿನಿ ಸಮಾಜ, ಮತ್ತು ವನಿತಾ ಸಮಾಜ, ಮುಂತಾದ ಸಂಸ್ಥೆಗಳ ಮೂಲಕ ಮಹಿಳೆಯರ ಏಳಿಗೆಗೆ ಶ್ರಮಿಸುತ್ತಿದ್ದರು. ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದ್ದ ಯಶೋಧರಮ್ಮನವರು ರಾಷ್ಟ್ರೀಯ ವಿಮೋಚನೆಯ ಮುಖ್ಯ ಶ್ರೇಣಿಯಲ್ಲಿ ಸೇರಿ ತಮ್ಮ ಪಾತ್ರವನ್ನು ನಿರ್ವಹಿಸಲು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸದಸ್ಯರಾದರು. ಕಾಂಗ್ರೆಸ್ ಸದಸ್ಯತ್ವ ಪಡೆದ ಯಶೋಧರಮ್ಮನವರು ಮೈಸೂರು ಸಂಸ್ಥಾನದ ಕಾಂಗ್ರೆಸ್ಸಿನ ಸಕ್ರಿಯ ಸದಸ್ಯರೂ ಆದರು. ಅಂತಹ ಸಂದರ್ಭದಲ್ಲಿ ದಾಸಪ್ಪನವರು ಬ್ರಾಹ್ಮಣೇತರರ ಚಳುವಳಿಯ ಪಕ್ಷವಾಗಿದ್ದ ಪ್ರಜಾಸಂಯುಕ್ತ ಪಕ್ಷದ ನಾಯಕರಾಗಿದ್ದರು. ಯಶೋಧರಮ್ಮನವರ ದೃಷ್ಟಿಯಲ್ಲಿ ಪ್ರಜಾಸಂಯುಕ್ತ ಪಕ್ಷದ ಉದ್ದೇಶ ಸಂಕುಚಿತವಾಗಿತ್ತು. ಆದುದರಿಂದ ಅವರು ಕಾಂಗ್ರೆಸ್ ಸಂಸ್ಥೆ ಸೇರಿದರು.

ಯಶೋಧರಮ್ಮನವರು ಕಾಂಗ್ರೆಸ್ ಪಕ್ಷದ ಬಗ್ಗೆ ನಿಷ್ಠೆ ಇಟ್ಟಿದ್ದರು ಎಂಬುದಕ್ಕೆ ಒಂದು ನಿದರ್ಶನವೆಂದರೆ 1937ರಲ್ಲಿ ಮೈಸೂರು ಕ್ಷೇತ್ರದಿಂದ ನ್ಯಾಯವಿಧಾಯಕ ಸಭೆಗೆ ಚುನಾವಣೆ ನಡೆಯಿತು. ಆಗ ಹೆಚ್.ಸಿ.ದಾಸಪ್ಪನವರು ಪ್ರಜಾಸಂಯುಕ್ತ ಪಕ್ಷದ ಅಭ್ಯರ್ಥಿಯಾಗಿಯೂ, ಶ್ರೀ ಲಿಂಗಪ್ಪನವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿಯೂ ನಿಂತಿದ್ದರು. ಕಾಂಗ್ರೆಸ್ ಸದಸ್ಯರಾಗಿದ್ದ ಯಶೋಧರಮ್ಮನವರು ಪತಿಯೊಂದಿಗೆ ಕಾರಿನಲ್ಲಿ ಮತಗಟ್ಟೆಗೆ ಬಂದು ಕಾಂಗ್ರೆಸ್ ಅಭ್ಯರ್ಥಿ ಲಿಂಗಪ್ಪಯ್ಯನವರಿಗೆ ಓಟು ಹಾಕಿದರು. ಯಶೋಧರಮ್ಮನವರ ಕಾಂಗ್ರೆಸ್ ನಿಷ್ಠೆ ಆ ರೀತಿಯಾಗಿತ್ತು.

ಹೀಗೆ ಯಶೋಧರಮ್ಮನವರು ಸಕ್ರಿಯ ರಾಜಕಾರಣವನ್ನು ಪ್ರವೇಶಿಸಿ ಕಾಂಗ್ರೆಸ್ ಪಕ್ಷದ ಬಗ್ಗೆ ತಮಗೆ ಇದ್ದ ನಿಷ್ಠೆಯನ್ನು ಎತ್ತಿ ತೋರಿಸಿದರು. ಕಾಂಗ್ರೆಸ್ ಪಕ್ಷದ ಕಾರ್ಯಕರ್ತೆಯಾಗಿ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಾ ಬಂದ ಯಶೋಧರಮ್ಮ ದಾಸಪ್ಪನವರಿಗೆ ಮೈಸೂರು ಸಂಸ್ಥಾನದ ಕಾಂಗ್ರೆಸ್‌ಗೆ ಅಧ್ಯಕ್ಷರಾಗುವ ಅವಕಾಶ ಒದಗಿ ಬಂತು.

1950ರಲ್ಲಿ ಟಿ.ಸಿದ್ಧಲಿಂಗಯ್ಯನವರ ಅಧ್ಯಕ್ಷ ಸ್ಥಾನ ತೆರವಾದ ನಂತರ ಮೈಸೂರು ಕಾಂಗ್ರೆಸ್ ಸಂಸ್ಥಾನದ ಅಧ್ಯಕ್ಷರ ಚುನಾವಣೆ ನಡೆಯಲು ಏರ್ಪಾಟಾಯಿತು. ಮೈಸೂರು ಸಂಸ್ಥಾನ ಕಾಂಗ್ರೆಸ್ ಖಜಾಂಚಿಯಾಗಿದ್ದ, ದಕ್ಷ ಸಂಘಟನಾಕಾರರಾಗಿದ್ದ ಸಾಹುಕಾರ ಚನ್ನಯ್ಯನವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದರು. ಚನ್ನಯ್ಯನವರಿಗೆ ವಿದ್ಯಾಭ್ಯಾಸ ಹೆಚ್ಚಾಗಿಲ್ಲದಿದ್ದರೂ ಅಪಾರ ಲೋಕಜ್ಞಾನ ಮತ್ತು ಅನುಭವವನ್ನು ಹೊಂದಿದ್ದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಅನೇಕ ಕಾಂಗ್ರೆಸ್ ಕಾರ್ಯಕರ್ತರಿಗೂ, ನಾಯಕರಿಗೂ ಆರ್ಥಿಕ ಸಹಾಯವನ್ನು ನೀಡಿದ ಇವರು ಅವರೆಲ್ಲರ ಕೃತಜ್ಞತೆಗೂ ಪಾತ್ರರಾಗಿದ್ದರು. ಜವಾಬ್ದಾರಿ ಸರ್ಕಾರ ಬಂದ ನಂತರ ಸಾಹುಕಾರ ಚನ್ನಯ್ಯನವರು ಕಾಂಗ್ರೆಸ್ ವಲಯದಲ್ಲಿ ಅತ್ಯಂತ ಪ್ರಮುಖ ವ್ಯಕ್ತಿಯಾಗಿ ಒಂದು ರೀತಿ ಕಿಂಗ್ ಮೇಕರ್ ಎಂಬ ಹೆಸರೂ ಪಡೆದಿದ್ದರು. ಇಂತಹ ಪ್ರಬಲವಾದ ವ್ಯಕ್ತಿ ಅಧ್ಯಕ್ಷ ಪದವಿಗೆ ಸ್ಪರ್ಧಿಸಿದ್ದನ್ನು ಮಂತ್ರಿಮಂಡಲದ ಬಹುತೇಕ ಸದಸ್ಯರು ಮತ್ತು ಇತರ ನಾಯಕರುಗಳು ಇವರನ್ನು ಬೆಂಬಲಿಸಿದರು. ಆದರೆ ಚನ್ನಯ್ಯನವರು ಕಾಂಗ್ರೆಸ್ ಅಧ್ಯಕ್ಷರಾಗಿ ಸಂಸ್ಥೆಯ ಮೇಲೆ ಪೂರ್ಣ ಯಜಮಾನಿಕೆ ಇಟ್ಟುಕೊಂಡರೆ ಸಾಮಾನ್ಯ ಕಾರ್ಯಕರ್ತರ ಪಾಡೇನಾಗುವುದೆಂಬ ಚಿಂತೆ ಬಹುತೇಕ ಮಂದಿಯಲ್ಲಿ ಉಂಟಾಯಿತು. ಈ ನಿಟ್ಟಿನಿಂದ ಇವರ ವಿರುದ್ಧ ಪ್ರಬಲ ವ್ಯಕ್ತಿಯನ್ನು ನಿಲ್ಲಿಸಿ ಇವರನ್ನು ಸೋಲಿಸಬೇಕು ಎಂದು ನಿಶ್ಚಯ ಮಾಡಿಕೊಂಡಿದ್ದರು. ಆದರೆ ಚನ್ನಯ್ಯನವರನ್ನು ಎದುರಿಸಲು ಯಾವ ಹಿರಿಯ ನಾಯಕರೂ ಮುಂದೆ ಬರಲಿಲ್ಲ. ಕಾಂಗ್ರೆಸ್ ಕಾರ್ಯಕರ್ತರು ತಮ್ಮ ನಿಲುವನ್ನು ಬದಲಾಯಿಸದೆ ಮದ್ರಾಸ್ ಆಸ್ಪತ್ರೆಯಲ್ಲಿ ಕಾಯಿಲೆಯಿಂದ ಚಿಕಿತ್ಸೆ ಪಡೆಯುತ್ತಿದ್ದ ಯಶೋಧರಮ್ಮನವರ ಹತ್ತಿರ ಹೋಗಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬೇಕೆಂದು ಕೇಳಿಕೊಂಡರು. ಅನಾರೋಗ್ಯದಿಂದ ಚಿಕಿತ್ಸೆ ಪಡೆಯುತ್ತಿದ್ದ ಯಶೋಧರಮ್ಮ ಇಕ್ಕಟ್ಟಿಗೆ ಸಿಲುಕಿದ್ದರು. ಒಂದು ಕಡೆ ಅನಾರೋಗ್ಯದ ಚಿಂತೆ, ಮತ್ತೊಂದೆಡೆ ತಮ್ಮ ಸೇವಾ ನಿಷ್ಠೆ, ಕಾಂಗ್ರೆಸ್ ಕಾರ್ಯಕರ್ತರ ಒತ್ತಾಯ. ಇಂತಹ ಸಂದಿಗ್ಧ ಸಮಯದಲ್ಲಿ ಯಾವ ಸವಾಲನ್ನು ಎದುರಿಸಬಲ್ಲವರಾಗಿದ್ದ ಯಶೋಧರಮ್ಮ ನಮ್ಮ ಕೋರಿಕೆಯನ್ನು ಒಪ್ಪುತ್ತಾರೆಂಬ ವಿಶ್ವಾಸ ಕಾಂಗ್ರೆಸ್ ಕಾರ್ಯಕರ್ತರಲ್ಲಿತ್ತು. ಕಡೆಗೆ ಯಶೋಧರಮ್ಮ ಚುನಾವಣೆಗೆ ಸ್ಪರ್ಧಿಸಲು ಒಪ್ಪಿ ನಾಮಪತ್ರಕ್ಕೆ ಸಹಿ ಹಾಕಿದರು. 'ನಾನಂತೂ ಆಸ್ಪತ್ರೆಯಿಂದ ಸದ್ಯಕ್ಕೆ ಹೊರ ಬರುವ ಸ್ಥಿತಿ ಇಲ್ಲ, ನೀವು ನನ್ನ ಪರವಾಗಿ ಕೆಲಸಮಾಡಿ ಗೆದ್ದರೆ ಸಂತೋಷ' ಎಂದರು. ಕಾರ್ಯಕರ್ತರು ಸಂತೋಷದಿಂದ ಯಶೋಧರಮ್ಮನವರ ಸಮ್ಮತಿಯನ್ನೊಳಗೊಂಡ ನಾಮಪತ್ರವನ್ನು ಕಾಂಗ್ರೆಸಿನ ಕಛೇರಿಯಲ್ಲಿ ಸಲ್ಲಿಸಿದರು. ಮೈಸೂರು ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷ ಚುನಾವಣೆ ನಡೆಯುವ ಪ್ರಕಟಣೆ ಹೊರಬಿದ್ದಿತು. ಚುನಾವಣೆಗೆ ವಿಶೇಷ ಮಹತ್ವ ಬಂದು ಪ್ರತಿಯೊಬ್ಬರಲ್ಲಿ ಕುತೂಹಲವನ್ನುಂಟು ಮಾಡಿತು. ಕಾಂಗ್ರೆಸ್ಸಿನ ಪ್ರಗತಿಪರ ಯುವಕರು, ಕಾರ್ಯಕರ್ತರು, ಮತದಾನದ ಹಕ್ಕು ಪಡೆದಿದ್ದ ಕಾಂಗ್ರೆಸ್ ಪ್ರತಿನಿಧಿಗಳನ್ನು ಯಶೋಧರಮ್ಮನವರಿಗೆ ಓಟು ಮಾಡುವಂತೆ ಮನವೊಲಿಸಿಕೊಳ್ಳಲು ಸತತವಾಗಿ ಪ್ರಯತ್ನಿಸಿದರು. ಚನ್ನಯ್ಯನವರು ಪ್ರಬಲ ಸ್ಪರ್ಧಿಯಾಗಿ ಚುನಾವಣಾ ಕಣದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡರು. ಕಾಂಗ್ರೆಸ್ಸಿನಲ್ಲಿ ಯಜಮಾನಿಕೆ ವ್ಯವಸ್ಥೆ ಬೇಕೋ ಅಥವಾ ಕಾರ್ಯಕರ್ತರ ದನಿಗೆ ಸ್ಪಂದಿಸುವ ಅಧ್ಯಕ್ಷರಿರಬೇಕೋ ಎಂಬ ಚುನಾವಣಾ ಪ್ರಣಾಳಿಕೆಯನ್ನು ಕಾರ್ಯಕರ್ತರು ಬಿಡುಗಡೆಗೊಳಿಸಿದ್ದರು. ಮೈಸೂರು ಸಂಸ್ಥಾನದ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನಕ್ಕೆ ಕುತೂಹಲ ಸ್ಪರ್ಧೆ ಇಬ್ಬರು ಪ್ರಬಲ ವ್ಯಕ್ತಿಗಳ ನಡುವೆ ಏರ್ಪಟ್ಟಿತ್ತು.

ಮಾರ್ಚ್ 12ನೇ ತಾರೀಖು 1950ರಲ್ಲಿ ಬೇಲೂರಿನಲ್ಲಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದು ಚುನಾವಣಾ ಫಲಿತಾಂಶ ಹೊರಬಿತ್ತು. ಶ್ರೀಮತಿ ಯಶೋಧರಮ್ಮನವರು ಚನ್ನಯ್ಯನವರ ವಿರುದ್ಧ 13 ಮತಗಳ ಅಂತರದಿಂದ ಜಯಗಳಿಸಿ, ಮೈಸೂರು ಸಂಸ್ಥಾನದ ಪ್ರಪ್ರಥಮ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗಿ ಇತಿಹಾಸ ನಿರ್ಮಿಸಿದರು. (ಯಶೋಧರಮ್ಮನವರಿಗೆ 68 ಮತ್ತು ಚನ್ನಯ್ಯನವರಿಗೆ 55 ಮತಗಳು ಬಿದ್ದಿದ್ದವು.) ಚುನಾವಣೆಯ

ಫಲಿತಾಂಶ ಹೊರಬಂದಾಗ ಆಸ್ಪತ್ರೆಯಲ್ಲಿ ಇನ್ನೂ ಚಿಕಿತ್ಸೆ ಪಡೆಯುತ್ತಿದ್ದರು. ಯಶೋಧರಮ್ಮನವರ ಆಯ್ಕೆ ಕುರಿತು ಎಚ್.ಸಿ.ದಾಸಪ್ಪನವರು ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ ಇದು ಇತ್ತೀಚಿನ ಘಟನೆಗಳ ಪ್ರತಿಕ್ರಿಯೆಯ ಫಲ ಎನ್ನುತ್ತಾ ಮೈಸೂರಿನ ರಾಜಕೀಯದ ಬಗ್ಗೆ ಭದ್ರತೆಯ ಆಶ್ವಾಸನೆ ಕೊಟ್ಟರು.

1950, ಮಾರ್ಚಿ 20ನೇ ತಾರೀಖು ಯಶೋಧರಮ್ಮನವರು ಕಾಂಗ್ರೆಸ್ ಕಛೇರಿಯಲ್ಲಿ ಟಿ. ಸಿದ್ಧಲಿಂಗಯ್ಯನವರಿಂದ ಅಧಿಕಾರವನ್ನು ವಹಿಸಿಕೊಂಡರು. ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ವಹಿಸಿಕೊಂಡ ನಂತರ ಯಶೋಧರಮ್ಮನವರು ತಮ್ಮ ಕಾರ್ಯಚಟುವಟಿಕೆಗಳನ್ನು ತೀವ್ರಗೊಳಿಸುವತ್ತ ಗಮನ ನೀಡಿದರು. ಕಾಂಗ್ರೆಸ್ ಮಂತ್ರಿಮಂಡಲದ ಕಾರ್ಯನೀತಿಯ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಸಚಿವ ಸಂಪುಟವು ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳಿಗೆ ಬದ್ಧವಾಗಿಯೂ, ಸಂಸ್ಥೆಗೆ ಉತ್ತರಾಧಿಕಾರಿಯಾಗಿಯೂ ಇರುವಂತೆ ನೋಡಿಕೊಂಡರು. ಮಾಹೆಯಾನ ನಡೆಯುತ್ತಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಮಂತ್ರಿಮಂಡಲದ ಸದಸ್ಯರು ಬಂದು ತಮ್ಮ ಇಲಾಖೆಯಲ್ಲಿ ಕೈಗೊಂಡ ಕಾರ್ಯಯೋಜನೆಗಳ ಬಗ್ಗೆ ವಿವರಣೆ ನೀಡುವ ವ್ಯವಸ್ಥೆಯನ್ನು ಜಾರಿಗೆ ತಂದರು.

ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಯಶೋಧರಮ್ಮನವರು ಮಂಡ್ಯದ ಕಾಂಗ್ರೆಸ್‌ನ ಕಾರ್ಯಕರ್ತರ ಸಭೆಯಲ್ಲಿ ಭಾಷಣ ಮಾಡುತ್ತಾ ಸಂಸ್ಥೆಯಲ್ಲಿ ಜಿಗುಪ್ಸೆ ಮನೋಭಾವನೆ ಹುಟ್ಟಿದಾಗ ಚುನಾವಣೆಯೆಂಬುದು ಪ್ರಗತಿಯ ಸಂಪ್ರದಾಯ, ಕಾಂಗ್ರೆಸ್ ರೀತಿನೀತಿಗಳು ಸರಿಯಾಗಿಲ್ಲವೆಂದು ಹೇಳಲಾಗುವುದಿಲ್ಲ. ಈ ಸಂಸ್ಥೆಯು ಗಾಂಧೀಜಿಯವರ ತತ್ವಗಳ ತಳಹದಿಯ ಮೇಲೆ ರೂಪುಗೊಂಡಿದೆ ಎಂದು ಹೇಳಿದರು. ಒಂದು ವೇಳೆ ಕೆಟ್ಟ ಹೆಸರು ಬಂದರೆ ಅದು ಸಂಸ್ಥೆಯ ತಪ್ಪಲ್ಲ, ವ್ಯಕ್ತಿಗಳ ತಪ್ಪು. ಸಂಸ್ಥೆಯನ್ನು ದುರುಪಯೋಗಪಡಿಸಿಕೊಂಡಿರುವುದರಿಂದ ಸಂಸ್ಥೆಯ ಹೆಸರು ಕೆಟ್ಟಿರುತ್ತದೆ. ಈ ರೀತಿ ಮಾಡಿದರೆ ವ್ಯಕ್ತಿಗಳು ಹಾಳಾಗುವರೇ ವಿನಾ ಸಂಸ್ಥೆ ಕೆಡಲಾರದು. ಹಿಂದಿನ ಕಾಲದಲ್ಲಿ ಎಲ್ಲ ಗುಂಪಿನವರ ದೃಷ್ಟಿ ಸ್ವರಾಜ್ಯ ಗಳಿಸುವ ಕಡೆಗಿತ್ತು. ಈಗಿನ ಚುನಾವಣೆಯಲ್ಲಿ ಗಾಂಧೀ ತತ್ವವನ್ನು, ರಚನಾತ್ಮಕ ಕಾರ್ಯವನ್ನು, ಚುನಾಯಿಸಲಾಗಿದೆಯೇ ಹೊರತು ನನ್ನ ವ್ಯಕ್ತಿತ್ವದ ಅಂದರೆ ಯಶೋಧರಮ್ಮನವರನ್ನು ಚುನಾಯಿಸಲಿಲ್ಲವೆಂದು ಹೇಳಬಯಸುತ್ತೇನೆ, ನಿಜವಾದ ಕಾಂಗ್ರೆಸ್ಸಿಗರಲ್ಲ ಎಂದೂ ಕೋಮುವಾರು ಭಾವನೆ ಇರಬಾರದು. ಆದರೆ, ಇದನ್ನು ಹೇಳುವಾಗ ಹೇಳುವ ವ್ಯಕ್ತಿಯು ನಿಜವಾಗಿ ಅದಕ್ಕೆ ತಗುಲಿಕೊಂಡಿದ್ದಾನೆಯೇ ಎಂದು ಯೋಚಿಸಿಕೊಳ್ಳಬೇಕು. ಈಗ ನಾನು ಹೇಳುವುದಾದರೂ ಇಷ್ಟೆ. ನನ್ನಲ್ಲಿ ಖಂಡಿತ ಕೋಮು ಭೇದಗಳಿಲ್ಲ. ಕೋಮುವಾರು, ಅಧಿಕಾರ ದುರುಪಯೋಗ ಕಾಳಸಂತೆ ನಡೆಸುವವರಿಗೆ ಗಾಂಧೀಜಿಯವರ ಹೆಸರು ಹೇಳುವ ಯೋಗ್ಯತೆಯಿಲ್ಲ ಎಂದು ತಮ್ಮ ಭಾಷಣದಲ್ಲಿ ತಿಳಿಸುತ್ತಾ, ಕಾಂಗ್ರೆಸ್ ಕಾರ್ಯಕರ್ತರೆಲ್ಲ ತಮ್ಮ ತಮ್ಮ ಪಾರ್ಟಿಗಳನ್ನು ಬಿಟ್ಟು ಒಂದೇ ಗಾಂಧಿಪಾರ್ಟಿ ಕಟ್ಟಿ ಕಾರ್ಯಗತ ಮಾಡೋಣ ಎಂದು ಕರೆಕೊಟ್ಟರು. ಕಾಂಗ್ರೆಸಿನಲ್ಲಿ ನಡೆದ ಚುನಾವಣೆಯ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ಸಿನಲ್ಲಿ ಚುನಾವಣೆಯಾಗುತ್ತಿರುವುದಕ್ಕೆ ಯಾರಾದರೂ ಟೀಕಿಸಿದರೆ ಸರಿ ಪಡಿಸಿಕೊಳ್ಳಬೇಕೆ ವಿನಾ, ಜಿದ್ದು ಸಾಧಿಸಿ ಸೇಡು ಇಟ್ಟುಕೊಳ್ಳದೆ ಕ್ಷಮಾದಾನ ಪರಿಪಾಲನೆ ಮಾಡಬೇಕು ಎಂದು ತಿಳಿಸಿದರು. ಕಾಂಗ್ರೆಸೇತರರು ಮಾಡುವ ತಪ್ಪನ್ನು ಕ್ಷಮಿಸಬಹುದು. ಆದರೆ ಕಾಂಗ್ರೆಸಿನವರು ಮಾಡುವ ತಪ್ಪನ್ನು ಕ್ಷಮಿಸಲಾಗುವುದಿಲ್ಲ. ಆದ್ದರಿಂದ ನಮ್ಮನ್ನು ನಾವು ಸರಿಪಡಿಸಿಕೊಂಡು ಶಿಸ್ತನ್ನು ಪಾಲಿಸಿ ಭಿನ್ನಾಭಿಪ್ರಾಯಗಳನ್ನು ಮರೆತು ಒಗ್ಗಟ್ಟಿನಿಂದ ಕೆಲಸ ಮಾಡೋಣವೆಂದರು. ಯಶೋಧರಮ್ಮನವರು ಮೈಸೂರು ಪತ್ರಿಕೋದ್ಯೋಗಿ ಸಂಘಕ್ಕೆ ಭೇಟಿ ನೀಡಿ ಅವರು ಏರ್ಪಡಿಸಿದ ಸಮಾರಂಭದಲ್ಲಿ ಮಾತನಾಡುತ್ತಾ ತಮ್ಮ ಆಯ್ಕೆ ಕುರಿತಂತೆ ಕೆಲವು ವಿಚಾರಗಳನ್ನು ತಿಳಿಸಿದರು. ಮೈಸೂರು ಕಾಂಗ್ರೆಸ್ಸಿನಂತಹ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ಮಹಿಳೆಯು ಚುನಾಯಿತವಾಗಿರುವ ಪ್ರಯುಕ್ತ ಕೆಲಸ ಕಾರ್ಯಗಳು ನಡೆಸಲು ಸಾಧ್ಯವೇ? ಎಂಬ ಭಾವನೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಬರಬಹುದು.

ಆದರೆ, ಮಹಿಳೆಯರು ತಮಗೆ ವಹಿಸಿದ ಕಾರ್ಯವನ್ನು ಯಶಸ್ವಿಯಾಗಿ ನಡೆಸುವರೆಂಬ ಭಾವನೆ ತಮಗಿದೆ ಎಂದು ಹೇಳಿದರು. ನಂತರ ನನಗಿರತಕ್ಕ ಅಲ್ಪ ಅವಧಿಯಲ್ಲಿ ಸಾಧ್ಯವಾದಷ್ಟು ಕಾಂಗ್ರೆಸ್ ಕಾರ್ಯಕರ್ತರ ಸಂಘಟನೆ ಮಾಡಲು ಪ್ರಯತ್ನಿಸುವುದಾಗಿ ತಿಳಿಸಿದರು. ಜನತೆಯ, ರೈತ ಸಮಸ್ಯೆಯ ಬಗ್ಗೆ ತಮಗೆ ಅರಿವಿದೆ ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇನೆ ಎಂಬ ಭರವಸೆಯಿತ್ತರು.

ಯಶೋಧರಮ್ಮನವರು ಕೋಲಾರದಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಾ 'ಕಾಂಗ್ರೆಸಿನ ಮೇಲೆ, ಹೋರಾಟ ಕಾಲದಲ್ಲಿದ್ದಂತಹ ದೇಶಪ್ರೇಮ ಈಗ ಕಡಿಮೆಯಾಗಿರುವ ಕುರುಹುಗಳು ಕಂಡುಬರುತ್ತಾ ಇವೆ. ಆದ್ದರಿಂದ ಕಾರ್ಯಕರ್ತರೆಲ್ಲ ಭಿನ್ನಾಭಿಪ್ರಾಯಗಳನ್ನು ತೊರೆದು ಒಗ್ಗಟ್ಟಾಗಿ ಪೂಜ್ಯ ಗಾಂಧೀಜಿಯವರು ತೋರಿಸಿರತಕ್ಕ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಹಾಗೆಯೇ ಸತ್ಯ, ಅಹಿಂಸೆ, ನಿಸ್ಪೃಹತೆಯಿಂದ ನಡೆದು ದೇಶದಲ್ಲಿ ಕಾಂಗ್ರೆಸ್ ಶಕ್ತಿಯನ್ನು ಬೆಳಗಿಸಿ ಜನರ ವಿಶ್ವಾಸಗಳಿಸಬೇಕು. ಕಾಂಗ್ರೆಸ್ಸಿಗರು ಶಾಂತಿ ಮತ್ತು ಶಿಸ್ತನ್ನು ಪಾಲಿಸಬೇಕು, ಇತರರನ್ನು ನಾವು ದೂಷಿಸುವಾಗ ಸತ್ಯಾಸತ್ಯತೆಯನ್ನು ತಿಳಿದು ಟೀಕಿಸಬೇಕೆ ಹೊರತು, ವೃಥಾ ಟೀಕಿಸುವುದರಿಂದ ಸಂಸ್ಥೆಯ ಘನತೆಗೆ ಕುಂದು ಉಂಟಾಗುತ್ತದೆ' ಎಂದರು. ಇಂದಿನ ಜನತೆಯ ಜಾಗೃತಿಯನ್ನು ಪ್ರಶಂಸಿಸುತ್ತಾ ಭಾಷಣಗಳ ಮೂಲಕ ಜನವಿಶ್ವಾಸಗಳಿಸುವುದನ್ನು ಬಿಟ್ಟು ಕಾರ್ಯತಃ ವಿಶ್ವಾಸವನ್ನು ಸಂಪಾದಿಸಬೇಕೆಂದು ಕಾರ್ಯಕರ್ತರಿಗೆ ಹಿತವಚನವನ್ನು ಹೇಳಿದರು.

ಯಶೋಧರಮ್ಮನವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸಮಯದಲ್ಲಿ ಮೈಸೂರು ಸಂಸ್ಥಾನ ಕಾಂಗ್ರೆಸ್ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾಂತೀಯ ಶಾಖೆಯಾಗಿರದೆ ಸ್ವತಂತ್ರ ಘಟಕವಾಗಿತ್ತು. ಯಶೋಧರಮ್ಮನವರು ಮೈಸೂರು ಕಾಂಗ್ರೆಸನ್ನು ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಅವಿಭಾಜ್ಯ ಅಂಗವನ್ನಾಗಿ ಮಾಡುವತ್ತ ಕಾರ್ಯಪ್ರವೃತ್ತರಾಗಿ ಎ.ಐ.ಸಿ.ಸಿ.ಗೆ ತಮ್ಮ ಬೇಡಿಕೆಯನ್ನು ಇತರ ನಾಯಕರೊಡನೆ ಸೇರಿ ಮುಂದಿಟ್ಟಿದ್ದರು. "ಮೈಸೂರು ಕಾಂಗ್ರೆಸಿಗೆ ಪ್ರಾಂತೀಯ ಸ್ಥಾನ ಕೊಡಬೇಕೆಂದು ಸಲ್ಲಿಸಿದ ಬೇಡಿಕೆ ಪತ್ರದಲ್ಲಿ ಸ್ವಾತಂತ್ರ್ಯ ಬಂದ ನಂತರದ ಮೇಲೆ ಮೈಸೂರು ಇತರ ಸಂಸ್ಥಾನಗಳ ಸ್ಥಾನಮಾನ ಸಂಪಾದಿಸಿದೆ. ಮೈಸೂರಿನ ಜನ ಅಖಿಲ ಭಾರತ ಕಾಂಗ್ರೆಸಿನೊಡನೆ ಇಷ್ಟು ನಿಕಟ ಸಂಬಂಧವಿಟ್ಟುಕೊಂಡಿರುವಾಗ ತಮ್ಮದೇ ಆದ ಬೇರೆ ಸಂಸ್ಥೆಯಲ್ಲಿರಲು ಇಚ್ಛಿಸುವುದಿಲ್ಲ. ಅಖಿಲ ಭಾರತ ಕಾಂಗ್ರೆಸ್ಸಿನ ವಿಧಿನಿಯಮಗಳು ಎರಡೂ ಸಂಸ್ಥೆಗಳ ಸದಸ್ಯತ್ವವನ್ನು ಒಪ್ಪುವುದಿಲ್ಲ. ಬರಿಯ ಭಾವನಾತ್ಮಕ ದೃಷ್ಟಿಯಿಂದ ಕೈಕೆಳಗೆ ಬರಲು ನಮಗಿಷ್ಟವಿಲ್ಲ. ಆದರೆ ಮೈಸೂರು ಕರ್ನಾಟಕ ಪ್ರಾಂತ್ಯ ರಚನೆಗಾಗಲಿ, ಭಾಷಾವಾರು ಪ್ರಾಂತ್ಯ ರಚನೆಗಾಗಲಿ ವಿರುದ್ಧವಲ್ಲವೆಂಬುದರಲ್ಲಿ ಎಳ್ಳಷ್ಟೂ ಸಂದೇಹ ಬೇಡ. ಕಾಂಗ್ರೆಸ್ ವಿಧಿನಿಯಮಗಳ ರೀತ್ಯಾ ಹೊಸ ಪ್ರಾಂತ್ಯ ರಚಿಸಲು ಕಾಂಗ್ರೆಸ್ ಸಮಿತಿಗೆ ಪೂರ್ಣಾಧಿಕಾರವಿದೆ" ಎಂದು ತಿಳಿಸಿ ಕಾಂಗ್ರೆಸ್ ಸಮಿತಿಗೆ ಮನವಿಯನ್ನು ಸಲ್ಲಿಸಿದ್ದರು. ಅವರ ಪ್ರಯತ್ನ ಯಶಸ್ವಿಯಾಗಿತ್ತು. ಮೈಸೂರು ಸಂಸ್ಥಾನ ಕಾಂಗ್ರೆಸ್‌ಗೆ ಪ್ರದೇಶ ಕಾಂಗ್ರೆಸ್ ಸಮಿತಿಯ ಸ್ಥಾನಮಾನವನ್ನು ಎ.ಪಿ.ಸಿ.ಸಿ.ಗೆ ನೀಡಿ ಅದನ್ನು ರಾಷ್ಟ್ರೀಯ ಕಾಂಗ್ರೆಸಿನ ಪ್ರದೇಶ ಘಟಕವನ್ನಾಗಿ ಪರಿಗಣಿಸಿತು. ಇದರಿಂದ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಸಂಸ್ಥಾನದ ರಾಜಕಾರಣ ರಾಷ್ಟ್ರದ ಮುಖ್ಯ ಶ್ರೇಣಿಯಲ್ಲಿ ಸೇರಿ ಮೈಸೂರು ಪ್ರದೇಶ ಕಾಂಗ್ರೆಸಿನ ಪ್ರಮುಖರು ಎ.ಐ.ಸಿ.ಸಿ.ಯಲ್ಲಿ ತಮ್ಮ ಧ್ವನಿಯನ್ನು ಅಭಿವ್ಯಕ್ತಗೊಳಿಸಲು ಅವಕಾಶವಾಯಿತು.

ನಂತರ ವಿಸರ್ಜಿತವಾದ ಎ.ಎಂ.ಸಿ.ಸಿ.ಯಲ್ಲಿ ಶ್ರೀಮತಿ ಯಶೋಧರಾ ದಾಸಪ್ಪ ಮಾತನಾಡುತ್ತಾ "ನಮ್ಮಲ್ಲಿರುವ ಸದ್ಗುಣಗಳನ್ನು, ಮಾಡಿರುವ ಮಹತ್ಕಾರ್ಯಗಳನ್ನು ಎತ್ತಿಹಿಡಿಯಬೇಕು. ಜೊತೆಗೆ ನಮ್ಮಲ್ಲಿರುವ ದುರ್ಗುಣಗಳನ್ನು,

ನಿತ್ರಾಣವನ್ನು ಅರಿತು, ಆಗಾಗ್ಗೆ ನೆನೆದು ಅವನ್ನು ಸರಿಪಡಿಸಿಕೊಂಡು ಆ ಮೂಲಕ ಶಕ್ತಿ ಗಳಿಸಿಕೊಳ್ಳಬೇಕು" ಎಂದು ತಿಳಿಸುತ್ತಾ, "ಸ್ವಜನ ಪಕ್ಷಪಾತ ಬಿಟ್ಟು ಮನೋದೌರ್ಬಲ್ಯ ಸರಿಪಡಿಸಿಕೊಳ್ಳಿ. ಹೆಚ್ಚುತ್ತಿರುವ ಕೋಮುವಾರು ಭಾವನೆಯನ್ನು ಇಂದೇ ಹಾಳುಮಾಡದಿದ್ದರೆ ವಿಷಮಶೀತ ಜ್ವರದಂತೆ ಅದು ಹರಡಿ ನಮ್ಮ ಸಂಸ್ಥೆಯ ಅಸ್ತಿತ್ವವನ್ನೇ ಹಾಳುಮಾಡುತ್ತದೆ. ಈಗ ನಾವು ತೊಡಗಿರುವುದು ಪಾರ್ಲಿಮೆಂಟರಿ ಕಾರ್ಯಕ್ರಮದಲ್ಲಿ, ಅದರಲ್ಲೂ ವಿಜಯಗಳಿಸಬೇಕಾದರೆ, ಜನಪ್ರಿಯರಾಗಬೇಕಾದರೆ, ಸ್ಥಾನ ಉಳಿಯಬೇಕಾದರೆ ಸರಿಯಾದ ಸಂಘಟನೆ ಅತ್ಯವಶ್ಯಕವೆಂದರು. ಶಾಸನಸಭೆಯಲ್ಲಿ 75 ಸ್ಥಾನಗಳಿರಬಹುದು. ಆ ಸ್ಥಾನಗಳ ಪೈಕಿ ಒಂದನ್ನು ಗಳಿಸಲೋ ಅಥವಾ ಮಂತ್ರಿಯಾಗಲೋ ನಾವು ಹಾತೊರೆಯುತ್ತಿದ್ದೇವೆ, ಅದು ಹೋಗಬೇಕು ರಚನಾತ್ಮಕ ಕಾರ್ಯಕ್ರಮದಲ್ಲಿ ನಿರತರಾಗಬೇಕು" ಎಂದು ಯಶೋಧರಮ್ಮನವರು ಮೈಸೂರು ಕಾಂಗ್ರೆಸನ್ನು ಭಾರತೀಯ ಕಾಂಗ್ರೆಸಿನಲ್ಲಿ ವಿಲೀನಗೊಳಿಸಲು ಸೇರಿದ ಎ.ಎಂ.ಸಿ.ಸಿ. ಸಭೆಯಲ್ಲಿ ವಿಸರ್ಜನಾ ಭಾಷಣ ಮಾಡುತ್ತಾ ಘೋಷಿಸಿದರು. ಕಾಂಗ್ರೆಸಿನ ತ್ಯಾಗಮಯ ಚರಿತ್ರೆಯ ಹಿನ್ನೆಲೆಯಲ್ಲಿ ಈಗಿನ ಅದರ ಸ್ಥಿಗತಿಗಳ ಅವಲೋಕನ ಮಾಡಿ ಸಂಸ್ಥೆಯ ಉಳಿವಿಗೆ ಭಾವೀ ಕಾರ್ಯಕ್ರಮವನ್ನು ಸೂಚಿಸುತ್ತಾ "ಮೈಸೂರು ಕಾಂಗ್ರೆಸಿಗೆ ಇಂದು ಸುದಿನ. ಜವಾಬ್ದಾರಿಯನ್ನು ವಹಿಸಿಕೊಡತಕ್ಕ ದಿನ. ಅರಿಷಡ್ವರ್ಗಗಳೂ, ಮನೋವೈಕಲ್ಯಗಳೂ ಇರುವ ಎಲ್ಲ ಕೋಮುಗಳಿಂದ ಮತ್ತು ಜನಾಂಗಗಳಿಂದ ಕೂಡಿರುವ ಈ ಸಂಸ್ಥೆಯಲ್ಲಿ ವ್ಯತ್ಯಾಸಗಳು ಕಂಡುಬಂದರೂ ಕೂಡ, ಸರಿಪಡಿಸಿಕೊಂಡು ಬಂದಿದ್ದೇವೆ. ನಮ್ಮ ನಡೆ, ನುಡಿ ಸರಿಯಾಗಿದ್ದು ನಮ್ಮ ಅಂತರಾತ್ಮ ಮೆಚ್ಚುವಂತಿರಬೇಕು. ನಮ್ಮ ಎದುರಾಳಿ ಕೂಡ ನಮ್ಮಲ್ಲಿರುವ ಶಿಸ್ತು, ದಕ್ಷತೆ, ಐಕ್ಯಮತ್ಯ, ಸಂಯಮ ನೋಡಿ ಆತನ ಮನಸ್ಸು ಒಲಿಯುವಂತಾಗಬೇಕು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡೇ ನಾನು ಹಿಂದೆ ನಮ್ಮವರನ್ನೇ ಟೀಕೆ ಮಾಡಿದ್ದೇನೆ. ಆ ಟೀಕೆ ಮಾಡುತ್ತಿದ್ದುದು ನಮ್ಮಲ್ಲಿರುವ ಲೋಪದೋಷಗಳನ್ನು ಸರಿಪಡಿಸಿಕೊಂಡು ಸಂಸ್ಥೆಯ ಕೀರ್ತಿ ಪ್ರತಿಷ್ಠೆಗಳನ್ನು ಇನ್ನಷ್ಟು ಬೆಳೆಸಬೇಕು ಎಂಬುದಕ್ಕೆ, ಇಂತಹ ಸಂಸ್ಥೆಗಳಲ್ಲಿ ಹೆಣ್ಣುಮಕ್ಕಳಿಗೆ ಸ್ಥಳ ದೊರೆಯುವುದಾದರೆ ಹೆಚ್ಚು ಸಾಮರಸ್ಯ ಉಂಟಾಗುತ್ತದೆ, ನಮ್ಮಲ್ಲಿರುವ ಅಂತಃಕಲಹ, ಭೇದಭಾವಗಳನ್ನು ತೊಡೆದು ಹಾಕಿ ಕೂಪಮಂಡೂಕ ಪ್ರಪಂಚದಿಂದ ದೂರವಾಗಿ ವಿಶಾಲ ಕ್ಷೇತ್ರಕ್ಕೆ ಬರಬೇಕು. ಸಾಮರ್ಥ್ಯವಿದ್ದವರಿಗೆ ಇನ್ನು ಮುಂದೆ ಇಲ್ಲಿ ಸ್ಥಳ. ನಮ್ಮ ಅಂತರಾತ್ಮನಿಗೆ ಮೆಚ್ಚಿಕೆಯಾಗುವಂತೆ ದಿಟ್ಟತನದಿಂದ ವರ್ತಿಸುವವರಿಗೆ ನಾಯಕತ್ವವೇ ಹೊರತು ಪಿತೂರಿಗಾಗಲಿ, ಒಳಸಂಚಿಗಾಗಲಿ ಇನ್ನು ಸ್ಥಾನವಿಲ್ಲವೇ ಇಲ್ಲ. ಅಪನಂಬಿಕೆಗಳನ್ನು ಇಟ್ಟುಕೊಂಡು, ಗುಂಪು ಕಟ್ಟಿಕೊಂಡು ನಮ್ಮಲ್ಲಿ ನಾವೇ ಸಂಶಯ ಮನಸ್ಕರಾಗಿದ್ದರೆ ದೇಶ ನಮ್ಮನ್ನು ಎಷ್ಟು ಸಂಶಯದಿಂದ ನೋಡಬಹುದು? ಪರಿಶುದ್ಧ ಹಸ್ತರಾಗಿ ಎಲ್ಲ ಕೆಲಸಗಳನ್ನು ಮಾಡಬೇಕು. ನಮ್ಮ ನಮ್ಮ ಜಾತಿಗಳ ಮೇಲ್ಮೆಗೆಂದು ನಾವು ಹೋಗುವುದಾದರೆ, ಸಂಕುಚಿತ ರೀತಿಯಲ್ಲಿ ವರ್ತಿಸುವುದಾದರೆ ಸ್ವಲ್ಪ ಕಾಲಾನಂತರ ನಮಗೆ ವಿಪತ್ತು ಒದಗುತ್ತದೆ, ನಿಷ್ಕಾಮ ವಿಶ್ವಪ್ರೇಮದಿಂದ ಸೌಹಾರ್ದ ಐಕ್ಯಮತ್ಯಗಳಿಂದ ಮುನ್ನಡೆಯಲು ಪ್ರಯತ್ನಿಸೋಣ" ಎಂದು ತಿಳಿಸಿದರು.

ಅಂದು ಮೈಸೂರು ಪ್ರದೇಶ ಕಾಂಗ್ರೆಸ್‌ಗೆ ಒಂದು ಸ್ವಂತ ಕಟ್ಟಡ ಇಲ್ಲದೆ ದೊಡ್ಡ ಕೊರತೆಯಾಗಿತ್ತು. ಇದನ್ನು ನಿವಾರಿಸಲು ಯಶೋಧರಮ್ಮನವರು ಕ್ರಮ ಕೈಗೊಂಡರು. ಯಶೋಧರಮ್ಮನವರು ಅಧ್ಯಕ್ಷೆಯಾಗಿದ್ದರಿಂದ ಕಾಂಗ್ರೆಸಿಗೆ ಒಂದು ಕಛೇರಿಯನ್ನು ಕಟ್ಟಲು ಇವರ ಚಿಕ್ಕಮ್ಮ ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯಲ್ಲಿನ ಆನಂದರಾವ್ ಸರ್ಕಲ್‌ನ ಹತ್ತಿರದ ವಿಶಾಲವಾದ ಜಾಗವನ್ನು ಬಳುವಳಿಯಾಗಿ ನೀಡಿದರು. ಬೆಂಗಳೂರು ನಗರದ ಮಧ್ಯಭಾಗದಲ್ಲಿ ದೊಡ್ಡ ನಿವೇಶನವನ್ನು ಪಡೆದುಕೊಂಡ ಇವರು ಶಂಕುಸ್ಥಾಪನೆಯನ್ನು ತಾವೇ ನೆರವೇರಿಸಿ ಅತಿ ಶೀಘ್ರದಲ್ಲೆ ಕಟ್ಟಡ ನಿರ್ಮಾಣದ ಕಾರ್ಯಮುಗಿಯುವಂತೆ ಮಾಡಿದರು. ಇದರಿಂದ ಪ್ರದೇಶ ಕಾಂಗ್ರೆಸಿನ ಮುಖ್ಯ ಕಛೇರಿ, ಮಹಿಳಾ ಮತ್ತು ಯುವಕ ವಿಭಾಗಗಳ ಕೇಂದ್ರಗಳು ಈ ಕಟ್ಟಡ ಸಮುಚ್ಚಯದಲ್ಲಿ ಕಾರ್ಯನಿರ್ವಹಿಸಲು ಅನುಕೂಲವಾಯಿತು. ಯಶೋಧರಮ್ಮನವರ ಅಧಿಕಾರಾವಧಿಯಲ್ಲಿ ಆದ ಮಹತ್ವದ ಕ್ರಮ ಇದಾಗಿದೆ.

ಯಶೋಧರಮ್ಮನವರು ಅಧ್ಯಕ್ಷರಾಗಿದ್ದಾಗ ಮೈಸೂರು ವಿಧಾನಸಭೆಗೆ ಬಸವನಗುಡಿ ಕ್ಷೇತ್ರದಿಂದ ಉಪಚುನಾವಣೆ ನಡೆಯಿತು. ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಯಾಗಿದ್ದ ವಿ.ಎಸ್. ನಾರಾಯಣರಾವ್ ಚುನಾವಣೆಯಲ್ಲಿ ಸ್ಪರ್ಧಿಸಿದರು. ಅವರ ಪರವಾಗಿ ಪ್ರಚಾರ ಕೈಗೊಂಡು ಅವರು ಚುನಾವಣೆಯಲ್ಲಿ ಜಯಗೊಳಿಸಲು ಶ್ರಮಿಸಿದರು. ವಿಧಾನಸಭೆಯ ಉಪಚುನಾವಣೆಯ ನಂತರ ಈ ಬಗ್ಗೆ ಯಶೋಧರಮ್ಮನವರು ತಮ್ಮ ಹೇಳಿಕೆಯನ್ನು ನೀಡುತ್ತಾ 'ಶಾಸನಸಭೆಯ ಉಪಚುನಾವಣೆಯ ಆರು ಸ್ಥಾನಗಳಲ್ಲಿ ಐದು ಸ್ಥಾನಗಳನ್ನು ಕಾಂಗ್ರೆಸ್ ಗಳಿಸಿರುತ್ತದೆ. ಐವತ್ತು ವರ್ಷಗಳಿಂದಲೂ ಜನಸೇವೆಯಲ್ಲಿ ತೊಡಗಿದ್ದು, ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ಗಳಿಸಿಕೊಟ್ಟ ಕಾಂಗ್ರೆಸ್ ಅಲ್ಲದೆ ಬೇರಾವ ಸಂಸ್ಥೆ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರವಾದೀತು? ಕಾಂಗ್ರೆಸಿನಲ್ಲಿ ಕಾಂಗ್ರೆಸಿಗರಲ್ಲಿ ಲೋಪದೋಷಗಳಿಲ್ಲದೆ ಇಲ್ಲ. ಈ ಸ್ಥಾನಗಳನ್ನು ಗಳಿಸಲು ಇಷ್ಟು ಶ್ರಮಪಡಬೇಕಾಗಿ ಬಂದಿದ್ದು ಮತ್ತು ವಿರೋಧವಾಗಿ ನಿಂತಿದ್ದವರಿಗೆ ಬಂದಿರುವ ಓಟುಗಳ ಸಂಖ್ಯೆ, ಇವುಗಳನ್ನು ಕಾಂಗ್ರೆಸಿನವರು ಗಮನಕ್ಕೆ ತೆಗೆದುಕೊಳ್ಳಬೇಕು. ದೋಷಗಳನ್ನರಿತು ಅವುಗಳ ನಿವಾರಣೆಗೆ ಸರ್ವಪ್ರಯತ್ನ ಮಾಡುವುದು ಕಾಂಗ್ರೆಸಿಗರ ಕರ್ತವ್ಯ' ಎಂಬುದಾಗಿ ತಿಳಿಸಿದರು.

ಹಾಸನದ ಪೌರಸಭೆಯವರು ಶ್ರೀಮತಿ ಯಶೋಧರಾ ದಾಸಪ್ಪನವರಿಗೆ ಅವರು ನಾಡಿಗೆ ಸಲ್ಲಿಸಿರುವ ಅಮೋಘಸೇವೆ, ಅವರ ಕಾರ್ಯತತ್ಪರತೆ ಮತ್ತು ಗುಣಗಾನಗಳಿಂದೊಡಗೂಡಿದ ಸನ್ಮಾನ ಪತ್ರವನ್ನು ಅರ್ಪಿಸಿದರು. ಯಶೋಧರಮ್ಮನವರು ಸನ್ಮಾನ ಪತ್ರವನ್ನು ಸ್ವೀಕರಿಸಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ "ಯಾವುದೇ ಸಭೆ ಸಂಸ್ಥೆಗಳಿಂದ ಸನ್ಮಾನ ಪತ್ರ ಸ್ವೀಕರಿಸಲು ತಮ್ಮ ವಿರೋಧವಿರುವುದಾದರೂ ಕಾರ್ಲೆ ಗ್ರಾಮದ ಒಬ್ಬ ರೈತರಿಗಾಗಿ ತಾವು ಸನ್ಮಾನ ಪತ್ರ ಸ್ವೀಕರಿಸಬೇಕಾಗಿದೆ" ಎಂದು ತಮ್ಮ ನಿಲುವನ್ನು ತಿಳಿಸಿದರು. ನಂತರ ಪ್ರಸ್ತುತ ಪರಿಸ್ಥಿತಿಯಲ್ಲಿ ಸ್ತ್ರೀಯರ ಸ್ಥಾನವೇನೆಂಬುದನ್ನು ಪ್ರಪಂಚ ಮರೆತಿದೆ, ಪುರುಷರು, ರಾಜಕೀಯ ಧುರೀಣರು ಅಥವಾ ಸುಸಜ್ಜಿತ ಸೈನ್ಯಗಳಿಂದ ಮಾತ್ರವೇ ದೇಶವು ಮುಂದುವರಿಯಲು ಸಾಧ್ಯವಿಲ್ಲ ಎಂದರು. ಇದುವರೆಗೆ ಅಚ್ಚರಿಯ ಕಾರ್ಯಗಳನ್ನು ಸಾಧಿಸಿದ ಶ್ರೀರಾಮಕೃಷ್ಣರಂಥ ದೈವೀ ಪುರುಷರು, ಶಿವಾಜಿಯಂಥ ರಣಧುರೀಣರು, ದೇಶವೀರರು, ರಾಜಕೀಯಪಟುಗಳು ಇವರುಗಳಿಗೆ ಜನ್ಮ ಕೊಟ್ಟವಳು ಚಿಕ್ಕಂದಿನಲ್ಲಿ ಶಿಕ್ಷಣ ಕೊಟ್ಟವಳು ತಾಯಿ. ಅಂಥ ಪವಿತ್ರವಾದ ಮಾತೃಸ್ಥಾನಕ್ಕೆ ಪೂರ್ವದಲ್ಲಿ ಸಲ್ಲುತ್ತಿದ್ದ ಗೌರವ ಈಗಲೂ ಅಗತ್ಯ. ಇಂದಿನ ಹೆಣ್ಣುಮಕ್ಕಳಿಗೆ ಉತ್ತಮ ಗೃಹಿಣಿಯಾಗಲು ಶಿಕ್ಷಣ ಬಹುಮುಖ್ಯ ಎಂದು ಹೇಳಿದರು. ಅದು ಹೆಣ್ಣುಮಕ್ಕಳಿಂದ ಮುಂದಿನ ರಾಮರಾಜ್ಯ ಸ್ಥಾಪನೆಯಾಗಲು ನಿಜವಾಗಿಯೂ ನೆರವಾಗುವುದು. ಆದ್ದರಿಂದ ಹೆಣ್ಣುಮಕ್ಕಳನ್ನು ತುಚ್ಛೀಕರಿಸಿ ಮೂಲೆಗೊತ್ತರಿಸದೆ, ಆಕೆಗೆ ಶಿಕ್ಷಣ ಕೊಡಿಸಿದರೆ ಆಕೆ ಆದರ್ಶ ಗೃಹಿಣಿಯಾಗುತ್ತಾಳೆ ಎಂದರು. ನಂತರ ಕಾಂಗ್ರೆಸ್ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾ ಸಂಸ್ಥೆಯು ದೇಶದ ಹಿತಕ್ಕಾಗಿ ದುಡಿಯುತ್ತಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ, ಸ್ವಾತಂತ್ರ್ಯ ನಮಗೆ ದೊರಕಿದಾಗ ನಮಗೆ ಅನೇಕ ಅಡಚಣೆಗಳು ತೊಂದರೆಗಳು ಇದ್ದವು. ಅವುಗಳನ್ನೆಲ್ಲ ಒಂದೊಂದಾಗಿ ನಿವಾರಿಸಿ ಜನರು ಸ್ವಾತಂತ್ರ್ಯದ ಸವಿಯನ್ನು ಪೂರ್ಣವಾಗಿ ಅನುಭವಿಸುವಂತೆ ಮಾಡಲು ಕಾಲಾವಕಾಶ ಬೇಕು ಎಂದು ತಿಳಿಸುತ್ತಾ, ಆಂತರ್ಯಶುದ್ಧಿಯಿಲ್ಲದೆ ಯಾವ ಕೆಲಸವನ್ನು ಸಾಧಿಸಲು ಸಾಧ್ಯವಿಲ್ಲ. ಇಂತಹದರಲ್ಲಿ ಇದ್ದಾಗ ಮಾತ್ರ ಸನ್ಮಾನ ದೊರೆತರೆ ಸಾಲದು, ಸತ್ತ ಮೇಲೆಯೂ ಮಾಡಿದ ಕೆಲಸಗಳನ್ನು ಕೊಂಡಾಡುವಂತಿರಬೇಕು. ಅದೇ ನಿಸ್ವಾರ್ಥ ಸೇವೆ. ಈ ರಾಜಕೀಯ ತಂತ್ರ ಚದುರಂಗದಾಟದಂತೆ. ಇದರಲ್ಲಿ ನೀತಿ, ಧರ್ಮ, ಸತ್ಯ, ವಿಶ್ವಪ್ರೇಮ ಇವು ಇರಬೇಕು. ಯಾವುದೇ ಅಧಿಕಾರ ಸ್ಥಾನವಾಗಲೀ ಆ ಸ್ಥಾನವನ್ನು ಆಕ್ರಮಿಸಿರುವುದರಿಂದ ಅನೇಕ ಕೆಲಸಗಳನ್ನು ಮಾಡಿಸಬಲ್ಲದು ಎಂದು ತಿಳಿಸಿದರು.

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಒಂದು ವರ್ಷ ಸೇವೆ ಸಲ್ಲಿಸಿದ ಮೇಲೆ ಮರುವರ್ಷ ನಡೆದ ಚುನಾವಣೆಯಲ್ಲಿ ಕೆ. ಹನುಮಂತಯ್ಯನವರು ಅಧ್ಯಕ್ಷರಾಗಿ ಆರಿಸಿ ಬರಲು ಯಶೋಧರಮ್ಮ ಪೂರ್ಣ ಬೆಂಬಲ ನೀಡಿದರು. ತೀರ ಬಡಕುಟುಂಬದಲ್ಲಿ ಹುಟ್ಟಿ ಸ್ವಸಾಮರ್ಥ್ಯದಿಂದ ವಿದ್ಯಾರ್ಜನೆ ಮಾಡಿ ನಂತರ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ನಾಯಕರಾಗಿ ಬೆಳೆದಿದ್ದ ಹನುಮಂತಯ್ಯನವರಿಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ವಹಿಸಿಕೊಟ್ಟರು.

ಯಶೋಧರಮ್ಮ ದಾಸಪ್ಪನವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಪರಿಣಾಮ ಕಾಂಗ್ರೆಸ್ ಸಂಸ್ಥೆ ಮತ್ತು ರಾಜಕೀಯ ಅಧಿಕಾರ ಕ್ಷೇತ್ರದಲ್ಲಿ ಪ್ರಬಲವಾಗಿದ್ದ ಶ್ರೀಮಂತರ ಅಧಿಕಾರವ್ಯೂಹ ಭೇದಿಸಲ್ಪಟ್ಟು ಕೆ. ಹನುಮಂತಯ್ಯ ಅವರಂಥ ಮುತ್ಸದ್ದಿ ರಾಜ್ಯದ ಮುಖ್ಯಮಂತ್ರಿಯಾಗಲು ಸಾಧ್ಯವಾಯಿತು. ಮೈಸೂರಿನ ರಾಜಕೀಯ ಇತಿಹಾಸದಲ್ಲಿ ಇದು ಒಂದು ಮೈಲುಗಲ್ಲು.

ತತ್ವಕ್ಕಾಗಿ ಬದುಕಿದ ಸಚಿವೆ

ಕರ್ತವ್ಯಪ್ರಜ್ಞೆಯ ಕ್ರಿಯಾಶೀಲ ವ್ಯಕ್ತಿಗೆ ಜೀವನದಲ್ಲಿ ವಿಶ್ರಾಂತಿಯೇ ಇರುವುದಿಲ್ಲ. ಅದರಲ್ಲಿಯೂ ಸಮಾಜ ಸೇವೆ ತನ್ನ ಜೀವನ ಧ್ಯೇಯವೆಂದು ನಂಬಿ ಅದಕ್ಕಾಗಿಯೇ ತನ್ನ ಸರ್ವಸ್ವವನ್ನು ತ್ಯಾಗ ಮಾಡಿದ ವ್ಯಕ್ತಿ, ಸಮಾಜೋನ್ನತಿ ತನ್ನ ಕಣ್ಣಿಗೆ ಕಾಣಿಸುವ ತನಕ ಸುಮ್ಮನೆ ಕುಳಿತಿರುವಂತಿಲ್ಲ. ಸದಾ ಕಾಲ ಆತನ ಹೃದಯ ಸಮಾಜ ಸೇವೆಗಾಗಿ ಮಿಡಿಯುತ್ತಿರುತ್ತದೆ. ಅದೇ ಆತನ ಉಸಿರು, ಗಾಳಿ, ಬೆಳಕು, ಆಗಿರುತ್ತದೆ. ಅದಕ್ಕಾಗಿ ತನ್ನ ಜೀವನವನ್ನು ಮುಡುಪಾಗಿಸಿಬಿಡುತ್ತಾನೆ. ಅಂತಹ ವ್ಯಕ್ತಿಗಳಲ್ಲಿ ಯಶೋಧರಮ್ಮ ಕೂಡ ಒಬ್ಬರು. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ತನ್ನದೆ ವರ್ಚಸ್ಸನ್ನೂ ಮೂಡಿಸಿ ಅಗ್ರಪಂಕ್ತಿಯ ನಾಯಕಿಯಾಗಿದ್ದ ಯಶೋಧರಮ್ಮ ಸಕ್ರಿಯ ರಾಜಕಾರಣಕ್ಕೆ ಪ್ರವೇಶ ಮಾಡುವ ಮೂಲಕ ಕಾಂಗ್ರೆಸ್ ಪಕ್ಷವನ್ನೇ ಸೇರಿ ಆ ಪಕ್ಷದ ನಿಷ್ಠಾವಂತ ಕಾರ್ಯಕರ್ತೆಯಾಗಿ ಸೇವೆ ಸಲ್ಲಿಸಿದ್ದರು. ಅವರಿಗೆ ಪಕ್ಷದಲ್ಲಿನ ನಿಷ್ಠೆಯ ಫಲವೇ ರಾಜ್ಯದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿ ಸೇವೆ ಸಲ್ಲಿಸುವ ಅವಕಾಶ ಕೂಡಿ ಬಂದಿತ್ತು. ಅದರ ಸದುಪಯೋಗವನ್ನು ಪಡೆದ ಯಶೋಧರಮ್ಮ ಸಿಕ್ಕ ಅವಕಾಶವನ್ನು ದುರುಪಯೋಗ ಮಾಡದೆ ಅಧಿಕಾರವನ್ನು ನಡೆಸಿ ತತ್ವನಿಷ್ಠ ರಾಜಕೀಯ ಮಾಡಿದ್ದರು.

ಯಾವುದೇ ಆಸೆಆಕಾಂಕ್ಷೆಗಳಿಗೆ ಬಲಿಯಾಗದೆ ತತ್ವನಿಷ್ಠೆಯಿಂದ ರಾಜಕೀಯ ಮಾಡಿ ಯಶೋಧರಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಮೈಸೂರು ಸಂಸ್ಥಾನದಿಂದ ನ್ಯಾಯವಿಧಾಯಕ ಸಭೆಯ ಸದಸ್ಯ ಸೇವೆ ಸಲ್ಲಿಸಿದರು. ಇವರ ರಾಜಕೀಯ ಆಸಕ್ತಿಯನ್ನು ಗುರುತಿಸಿದ ಕಾಂಗ್ರೆಸ್ ಪಕ್ಷ ಇವರಿಗೆ ರಾಜ್ಯ ವಿಧಾನಸಭೆಗೆ ಸ್ಪರ್ಧಿಸುವ ಅವಕಾಶವನ್ನು ನೀಡಿ, ಪಕ್ಷದಿಂದ ಟಿಕೆಟ್ ನೀಡಿ ಬೆಂಬಲಿಸಿತ್ತು.

ಯಶೋಧರಮ್ಮ ಹಾಸನ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಉಮೇದುವಾರರಾಗಿ ಸ್ಪರ್ಧಿಸಿ ತಮ್ಮ ಪ್ರತಿಸ್ಪರ್ಧಿ ಎಸ್.ಜಿ. ಜ್ವಾಲನಯ್ಯರವರನ್ನು ಹನ್ನೊಂದು ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಸೋಲಿಸಿ ಗೆದ್ದು ಕರ್ನಾಟಕ ವಿಧಾನಸಭೆಗೆ ಪ್ರಥಮವಾಗಿ 1962ರಲ್ಲಿ ಆಯ್ಕೆಗೊಂಡರು.

ಈ ಚುನಾವಣೆ ಯಶೋಧರಮ್ಮರವರ ರಾಜಕೀಯ ಕ್ಷೇತ್ರವನ್ನು ವಿಸ್ತಾರಗೊಳಿಸಿದ್ದು ಮಾತ್ರವಲ್ಲದೆ ಅವರ ರಾಜಕೀಯ ಜೀವನಕ್ಕೆ ಒಂದು ಹೊಸ ತಿರುವು ನೀಡಿತ್ತು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಹುಮತಗಳಿಸಿದ ಪ್ರಭಾವದಿಂದ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿಯುವ ಅವಕಾಶ ಕಾಂಗ್ರೆಸ್ ಪಕ್ಷಕ್ಕೆ ಲಭಿಸಿತ್ತು.

ಅಂದಿನ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಎಸ್. ನಿಜಲಿಂಗಪ್ಪ ಚುನಾವಣೆಯಲ್ಲಿ ಸೋತಿದ್ದ ಪ್ರಯುಕ್ತ, ಕಾಂಗ್ರೆಸ್ ಪಕ್ಷದ ಹಿರಿಯ ರಾಜಕಾರಣಿ ಎಸ್.ಆರ್. ಕಂಠಿಯವರು ರಾಜ್ಯದ ಮುಖ್ಯಮಂತ್ರಿಯಾಗಿ ನೇಮಕವಾಗಿ ಸಚಿವ ಸಂಪುಟವನ್ನು ರಚಿಸಿದ್ದರು.

ಯಶೋಧರಮ್ಮನವರು ಎಸ್.ಆರ್. ಕಂಠಿಯವರ ನೂತನ ಸಂಪುಟದಲ್ಲಿ ಸಚಿವರಾಗಿ ಅಧಿಕಾರವನ್ನು ಸ್ವೀಕರಿಸಿ ಸಮಾಜ ಕಲ್ಯಾಣ ಖಾತೆಯಂತಹ ಜವಾಬ್ದಾರಿಯುತ ಖಾತೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಈ ಮಧ್ಯೆ ಎಸ್. ನಿಜಲಿಂಗಪ್ಪನವರು ಬಾಗಲಕೋಟೆ ಕ್ಷೇತ್ರದಿಂದ ಉಪಚುನಾವಣೆಯಲ್ಲಿ ಗೆದ್ದು ಬಂದರು. ಪರಿಣಾಮವಾಗಿ ಎಸ್.ಆರ್. ಕಂಠಿಯವರು ರಾಜೀನಾಮೆ ನೀಡಿದರು. ಎಸ್. ನಿಜಲಿಂಗಪ್ಪ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡರು. ತಮ್ಮ ಹೊಸ ಸಚಿವ ಸಂಪುಟದಲ್ಲಿ ಯಶೋಧರಮ್ಮ ಅವರನ್ನು ಮಂತ್ರಿಮಂಡಲದ ಸಚಿವೆಯಾಗಿ ಮುಂದುವರೆಸುವ ಆಶಯವನ್ನು ಹೊಂದಿದ್ದು ಸಮಾಜ ಕಲ್ಯಾಣ ಖಾತೆಯ ಜವಾಬ್ದಾರಿಯನ್ನು ಮತ್ತೆ ವಹಿಸಿದರು. ಕರ್ನಾಟಕದಲ್ಲಿ ಪ್ರಥಮವಾಗಿ ಸಂಪುಟ ದರ್ಜೆಯ ಮಂತ್ರಿ ಪದವಿಯನ್ನು ಅಲಂಕರಿಸುವ ಮಹಿಳೆ ಎಂಬ ಹೆಗ್ಗಳಿಕೆಗೆ ಶ್ರೀಮತಿ ಯಶೋಧರಮ್ಮ ಪಾತ್ರರಾದರು.

ಸಮಾಜ ಕಲ್ಯಾಣ ಖಾತೆಯ ಮಂತ್ರಿಯಾದವರಿಗೆ ಅನೇಕ ಗುರುತರವಾದ ಜವಾಬ್ದಾರಿಗಳಿರುತ್ತಿದ್ದವು. ಸಮಾಜದ ದುರ್ಬಲರು, ಹರಿಜನರು, ಆಶಕ್ತರು, ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ದುಡಿಯಬೇಕಾಗುತ್ತಿತ್ತು. ಶ್ರೀಮತಿ ಯಶೋಧರಮ್ಮನವರು ಮೊದಲಿನಿಂದಲೂ ಇವುಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದು ಇಂತಹ ಜವಾಬ್ದಾರಿಯುತ ಖಾತೆಯನ್ನು ನಿಭಾಯಿಸುವುದು ಕಷ್ಟವಾಗಲಿಲ್ಲ. ಈ ನಿಟ್ಟಿನಲ್ಲಿ ಅವರು ವಿಶೇಷ ಹುಮ್ಮಸ್ಸಿನಿಂದ ಇಲಾಖೆಯ ಎಲ್ಲಾ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಶ್ರಮಿಸಿದರು. ಯಶೋಧರಮ್ಮನವರು ಮಂತ್ರಿಯಾಗಿದ್ದ ನಾಲ್ಕು ವರ್ಷಗಳ ಅವಧಿಯಲ್ಲಿ ಕೈಗೊಂಡ ಕಾರ್ಯಕ್ರಮಗಳು ತುಂಬಾ ವಿಸ್ತಾರವಾದದ್ದು. ಅದರಲ್ಲೂ ಮುಖ್ಯವಾಗಿ ಹರಿಜನ ಗಿರಿಜನರ ಅಭ್ಯುದಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಪಾನನಿರೋಧ ಸಡಿಲಿಕೆ ಇವುಗಳ ಬಗ್ಗೆ ಅವರಿಗಿದ್ದ ವಿಶೇಷ ಆಸಕ್ತಿ ಹಾಗೂ ಅವರು ರೂಪಿಸಿದ ಯೋಜನೆಗಳು, ಅತ್ಯಂತ ಮಹತ್ವದ್ದಾಗಿತ್ತು. ಇವುಗಳಿಗೆ ಸಂಬಂಧಿಸಿದಂತೆ ಅವರು ರೂಪಿಸಿದ ನೀತಿನಿಯಮಗಳು ಅವರ ಜೀವನದ ಧ್ಯೇಯಗಳಿಗೆ ಹೊಂದಿಕೊಂಡಂತೆ ಇದ್ದುದೆ ಅಲ್ಲದೆ ಅವರ ಮೇಲೆ ಪರಿಣಾಮ ಬೀರಿದ ಗಾಂಧೀಜಿಯವರ ತತ್ವಗಳಿಗೆ ಅನುಸಾರವಾಗಿದ್ದವು. ತತ್ವನಿಷ್ಠರಾದ ಶ್ರೀಮತಿ ಯಶೋಧರಮ್ಮನವರು ಪಾನನಿರೋಧದ ಬಗ್ಗೆ ಸರ್ಕಾರದ ಬದಲಾದ ನೀತಿಯನ್ನು ವಿರೋಧಿಸಿ ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನು ನೀಡಿ ಸರ್ಕಾರದಿಂದ ಹೊರಬಂದದ್ದು ಮಹತ್ವದ ಮತ್ತು ಚರ್ಚಾಸ್ಪದ ವಿಷಯವಾಗಿತ್ತು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಈ ಯೋಜನೆಗೆ ಸಂಬಂಧಿಸಿದಂತೆ ಶ್ರೀಮತಿ ಯಶೋಧರಮ್ಮನವರು ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಿದರು. ತಮ್ಮ ಮಂತ್ರಿ ಪದವಿಯ ಅಧಿಕಾರಾವಧಿಯಲ್ಲಿ ಪ್ರತಿ ಹಂತಗಳಲ್ಲಿಯೂ ಸ್ತ್ರೀಯರ ಅಭ್ಯುದಯಕ್ಕಾಗಿ ದುಡಿದರು. ಈ ಯೋಜನೆಗೆ ಸಂಬಂಧಿಸಿದಂತೆ ಮಹಿಳೆಯರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡು ಅವುಗಳನ್ನು ಕಾರ್ಯರೂಪಗೊಳಿಸುವಲ್ಲಿ ಸಫಲರಾದರು. ಅವರು ರೂಪಿಸಿದ ಕಾರ್ಯಯೋಜನೆಗಳಲ್ಲಿ ಮುಖ್ಯವಾದ ಮಹಿಳಾ ಕಲ್ಯಾಣ ಕೇಂದ್ರ, ಹೊಲಿಗೆ ತರಬೇತಿ ಕೇಂದ್ರಗಳು, ಉತ್ಪಾದನಾ ಕೇಂದ್ರಗಳು, ವಸತಿ ಶಾಲೆ, ಗ್ರಾಮ ಸೇವಕ ತರಬೇತಿ ಕೇಂದ್ರಗಳು, ಗೃಹವಿಜ್ಞಾನ, ಕಲಿಕಾಕೇಂದ್ರಗಳು,

ಇವುಗಳನ್ನು ಸ್ಥಾಪಿಸಿ ಸ್ತ್ರೀಯರ ಶ್ರೇಯಸ್ಸಿಗೆ ದುಡಿದರು. ಇವರ ಅಧಿಕಾರದ ಅವಧಿಯಲ್ಲಿ ಕೈಗೊಂಡ ಯೋಜನೆಯನ್ನು ಕುರಿತಂತೆ ಅವರು ಕಾರ್ಯಗತಗೊಳಿಸಿದ ಕೆಲವು ಕಾರ್ಯಕ್ರಮಗಳ ವಿವರಣೆಯನ್ನು ಅವುಗಳ ಅಂಕಿಅಂಶಗಳೊಂದಿಗೆ ಇಲ್ಲಿ ನೀಡಲಾಗಿದೆ.

1963–64ರಲ್ಲಿ 438 ಮಹಿಳಾ ಸಮಿತಿ ಮತ್ತು ಮಂಡಲಿಗಳು 10,355 ಸದಸ್ಯರಿಂದ ಪ್ರಾರಂಭವಾದವು. ಇದರೊಂದಿಗೆ 276 ಮಕ್ಕಳು ಭಾಗವಹಿಸಿದ್ದರು. 2424 ಹೊಗೆರಹಿತ ಒಲೆಗಳನ್ನು ಸ್ಥಾಪಿಸಲಾಯಿತು. 145 ಮಹಿಳಾ ಶಿಬಿರಗಳಲ್ಲಿ 3480 ಮಹಿಳೆಯರು ಭಾಗವಹಿಸಿದ್ದರು.

1965–66ರಲ್ಲಿ 438 ಮಹಿಳಾ ಸಮಿತಿ ಮತ್ತು ಮಂಡಲಿಗಳು 9166 ಸದಸ್ಯರನ್ನು ಹೊಂದಿದ್ದು, 394 ಬಾಲವಾಡಿ ನರ್ಸರಿಗಳಲ್ಲಿ 11,071 ಮಕ್ಕಳು ಭಾಗವಹಿಸಿದ್ದರು. ಇದರ ಜೊತೆಗೆ 2728 ಹೊಗೆರಹಿತ ಒಲೆಗಳನ್ನು ಸ್ಥಾಪಿಸಲಾಯಿತು. ಅನೇಕ ಮಹಿಳಾ ಶಿಬಿರಗಳಲ್ಲಿ 297 ಮಹಿಳೆಯರು ಭಾಗವಹಿಸಿದರು.

ಗ್ರಾಮಸೇವಿಕಾ ತರಬೇತಿ ಕೇಂದ್ರಗಳು 1963–64ರಲ್ಲಿ ಮಂಡ್ಯ, ಧಾರವಾಡ, ಕೂಡಿಗೆ, ಬಾಗಲಕೋಟೆ, ಗಂಗಾವತಿಯಲ್ಲಿ ತನ್ನ ಕಾರ್ಯಗಳನ್ನು ಮುಂದುವರೆಸಿದವು. ಎಲ್ಲ ಕೇಂದ್ರಗಳಿಂದ ಒಟ್ಟು 188 ಅಭ್ಯರ್ಥಿಗಳು ತಮ್ಮ ತರಬೇತಿಯನ್ನು ಮುಗಿಸಿದರು. ಇದಲ್ಲದೆ ಇನ್ನೂ 177 ಸದಸ್ಯರನ್ನು ಹೊಸದಾಗಿ ತರಬೇತಿಯನ್ನು ನೀಡಲು ಸೇರಿಸಿಕೊಳ್ಳಲಾಯಿತು. ಈ ಅವಧಿಯಲ್ಲಿ ಮದ್ದೂರು, ಧಾರವಾಡ ಮತ್ತು ಗಂಗಾವತಿಯಲ್ಲಿ 51 ಮಹಿಳಾ ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲಾಯಿತು. ಕೇಂದ್ರಗಳಲ್ಲಿ ಕಾರ್ಯಾಗಾರ ವಿಭಾಗವು ಗ್ರಾಮಂತರ ಪ್ರದೇಶದ ಕುಶಲಕರ್ಮಿಗಳ ವಿನ್ಯಾಸ ಮತ್ತು ವ್ಯವಸಾಯೋಪಕರಣಗಳ ಸರಬರಾಜಿಗೆ ಸಂಬಂಧಪಟ್ಟ ವಿಷಯಗಳಲ್ಲಿ 15 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಯಿತು. ಮಂಡ್ಯ ಮತ್ತು ಧಾರವಾಡದ ಗ್ರಾಮಸೇವಿಕಾ ತರಬೇತಿ ಕೇಂದ್ರಗಳಲ್ಲಿ ನವಚೇತನದಾಯಕ ಪ್ರವಚನಸರಣಿ ಕಾರ್ಯಕ್ರಮವನ್ನು ಮುಂದುವರೆಸಲಾಯಿತು.

ಗ್ರಾಮಸೇವಿಕಾ ಮತ್ತು ಗೃಹವಿಜ್ಞಾನ ತರಬೇತಿ ಕೇಂದ್ರಗಳ ವತಿಯಿಂದ 1961–62ರಲ್ಲಿ ಮಂಡ್ಯದ ಗ್ರಾಮಸೇವಿಕಾ ತರಬೇತಿ ಕೇಂದ್ರದಲ್ಲಿ 146 ಗ್ರಾಮಸೇವಕಿಯರು ಪುನಶ್ಚೇತನ ಪ್ರವಚನ ಸರಣಿಯನ್ನು ಪಡೆದರು. ಧಾರವಾಡದ ಗ್ರಾಮಸೇವಿಕಾ ತರಬೇತಿ ಕೇಂದ್ರದಲ್ಲಿ ಅದೇ ವರ್ಷದಲ್ಲಿ ಒಂದು ಪುನಶ್ಚೇತನ ವಿಭಾಗವನ್ನು ಗ್ರಾಮಸೇವಕಿಯರ ತರಬೇತಿಗಾಗಿ ಪ್ರಾರಂಭ ಮಾಡಲಾಯಿತು. ಈ ಹೊಸ ವಿಭಾಗದಲ್ಲಿ 30 ಗ್ರಾಮಸೇವಕಿಯರು ತರಬೇತಿಯನ್ನು ಪಡೆದರು. ಮಂಡ್ಯ, ಧಾರವಾಡ, ಗಂಗಾವತಿಯ ಗ್ರಾಮಸೇವಿಕಾ ಕೇಂದ್ರಗಳಿದ್ದ ಗೃಹವಿಜ್ಞಾನ ಶಾಲೆಗಳು ತಮ್ಮ ಕಾರ್ಯಚಟುವಟಿಕೆಗಳನ್ನು ಮುಂದುವರೆಸಿಕೊಂಡು ಬಂದವು.

ಸಾಮಾಜಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ 1495 ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಿ ಅಲ್ಲಿ 23,739 ವಯಸ್ಕರಾದ ಮಹಿಳೆಯರು ಮತ್ತು ಪುರುಷರನ್ನು ವಿದ್ಯಾವಂತರನ್ನಾಗಿ ಮಾಡಲಾಯಿತು. ಪ್ರಾರಂಭಿಸಿದ ಎರಡು ಯುವಕೇಂದ್ರಗಳಲ್ಲಿ 209 ಮತ್ತು 326 ಸದಸ್ಯರಿದ್ದರು. ಇದಲ್ಲದೆ 5,210 ಸದಸ್ಯ ಸಂಖ್ಯೆಯುಳ್ಳ ರೈತಸಂಘಗಳನ್ನು ಪ್ರಾರಂಭಿಸಲಾಯಿತು, ಹಾಗೂ 13,776 ಸದಸ್ಯರನ್ನೊಳಗೊಂಡ 644 ಮಹಿಳಾಮಂಡಲಿಗಳನ್ನು ಪ್ರಾರಂಭಿಸಲಾಯಿತು.

1963–64ರ ಅವಧಿಯಲ್ಲಿ 1,158 ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭ ಮಾಡಿದ್ದರಿಂದ 15,437 ಯುವಕರು ಇದರ ಪ್ರಯೋಜನವನ್ನು ಪಡೆದುಕೊಂಡರು. ಇದಲ್ಲದೆ ಓದುಗರಿಗೆ ಅನುಕೂಲವಾಗುವಂತೆ ಅದೇ ವರ್ಷದಲ್ಲಿ 744 ವಾಚನಾಲಯಗಳು ಮತ್ತು ಗ್ರಂಥಾಲಯಗಳನ್ನು ಪ್ರಾರಂಭಿಸಲಾಯಿತು.

1965-66ರ ಅವಧಿಯಲ್ಲಿ 771 ವಯಸ್ಕರ ಶಿಕ್ಷಣ ಕೇಂದ್ರಗಳು ತಮ್ಮ ಕಾರ್ಯ ಪ್ರಾರಂಭಿಸುವುದರೊಂದಿಗೆ 11,234 ವಯಸ್ಕರನ್ನು ಅಕ್ಷರಸ್ಥರಾಗಿಸಲು ಅನುಕೂಲವಾಯಿತು. ಅದೇ ವರ್ಷದಲ್ಲಿ 478 ವಾಚನಾಲಯಗಳು ಮತ್ತು 16 ಗ್ರಂಥಾಲಯಗಳನ್ನು ಪ್ರಾರಂಭಿಸಲಾಯಿತು.

ಶ್ರೀಮತಿ ಯಶೋಧರಮ್ಮನವರ ಅಧಿಕಾರಾವಧಿಯಲ್ಲಿ ಕರ್ನಾಟಕದಲ್ಲಿ ಇದ್ದ ಮಹಿಳಾ ಕಲ್ಯಾಣ ಕೇಂದ್ರಗಳ ಸಂಖ್ಯೆ 265. ಈ ಕೇಂದ್ರಗಳಲ್ಲಿ ಆಗುತ್ತಿದ್ದ ಸಂಪೂರ್ಣ ಆಯವ್ಯಯದ ಖರ್ಚನ್ನು ಸರ್ಕಾರದ ಸಮಾಜಕಲ್ಯಾಣ ಇಲಾಖೆಯ ವತಿಯಿಂದ ಕೊಡಲಾಗುತ್ತಿತ್ತು. 50 ಮಕ್ಕಳಿಗೆ ಮಧ್ಯಾಹ್ನದ ಊಟ, ಬಟ್ಟೆ ಮತ್ತು ಪುಸ್ತಕ, ಹೆಣ್ಣುಮಕ್ಕಳಿಗೆ ಹೊಲಿಗೆ ಮಿಶನ್‌ಗಳನ್ನು ಕೊಟ್ಟು ಅವರಿಗೆ ಪ್ರಯೋಜನವಾಗುವಂತೆ ತರಬೇತಿಯನ್ನು ನೀಡಲಾಗುತ್ತಿತ್ತು. ಈ ಎಲ್ಲ ವ್ಯವಸ್ಥೆಯ ಆಗುಹೋಗುಗಳನ್ನು ನೋಡಿಕೊಂಡು ಕೆಲಸವನ್ನು ನಿರ್ವಹಿಸಲು ಒಬ್ಬ ಸಂಚಾಲಕರು ಇರುತ್ತಿದ್ದು, ಆಕೆಯ ಸಂಬಳ ಮತ್ತು ಒಬ್ಬ ಗುತ್ತಿಗೆದಾರರ ಸಂಬಳ, ಮನೆಯ ಬಾಡಿಗೆ ಎಲ್ಲವನ್ನು ಸಂಪೂರ್ಣವಾಗಿ ಈ ಖಾತೆಯಿಂದ ನೀಡಲಾಗುತ್ತಿತ್ತು. ಸರ್ಕಾರದಿಂದ ಈ ರೀತಿಯಾಗಿ ಸ್ಥಾಪಿಸಲ್ಪಟ್ಟ ಮಹಿಳಾ ಕಲ್ಯಾಣ ಕೇಂದ್ರಗಳ ಸಂಖ್ಯೆ ಎಲ್ಲಾ ಜಿಲ್ಲೆಯಲ್ಲಿಯೂ ಒಂದೇ ರೀತಿಯಲ್ಲಿರುತ್ತಿರಲಿಲ್ಲ. ಕಾರಣ, ಜನಸಂಖ್ಯೆಯ ಆಧಾರದ ಮೇಲೆ ಇವುಗಳನ್ನು ತೆರೆಯಲಾಗುತ್ತಿತ್ತು. ಈ ಕೇಂದ್ರಗಳನ್ನು ತೆರೆಯುವಾಗ ಹರಿಜನ ಸಂಖ್ಯೆಯನ್ನು ಆಧಾರ ಇಟ್ಟುಕೊಂಡು ಪ್ರಾರಂಭಿಸಲಾಗುತ್ತಿತ್ತು. ವಿಧಾನಸಭೆಯ ಸದಸ್ಯರೊಬ್ಬರು ಮಹಿಳಾ ಕಲ್ಯಾಣ ಕೇಂದ್ರಗಳನ್ನು ಎಲ್ಲೆಡೆಯೂ ಒಂದೇ ರೀತಿಯಲ್ಲಿ ಸ್ಥಾಪಿಸಿದೆ, ಮೈಸೂರಿನಲ್ಲಿ ಮಾತ್ರ 32 ಮಹಿಳಾ ಕೇಂದ್ರ ಸ್ಥಾಪಿಸಿದ್ದೀರಿ ಇದಕ್ಕೆ ಕಾರಣವೇನು ಎಂದು ಕೇಳಿದರು. ಇದಕ್ಕೆ ಸಂಬಂಧಿಸಿದಂತೆ ಯಶೋಧರಮ್ಮನವರು, "ಇದಕ್ಕೆ ಹರಿಜನರ ಸಂಖ್ಯೆ ಆ ಪ್ರದೇಶದಲ್ಲಿ ಹೆಚ್ಚು ಇರುವುದೇ ಕಾರಣ" ಎಂಬ ಉತ್ತರವನ್ನು ನೀಡಿದರು. ತಮ್ಮ ಅಧಿಕಾರದ ಅವಧಿಯಲ್ಲಿ ಮಹಿಳಾ ಕೇಂದ್ರಗಳನ್ನು ಸ್ಥಾಪಿಸಿ ಅವುಗಳ ಅಭಿವೃದ್ಧಿಗೆ ಒತ್ತು ನೀಡಿ ಶ್ರಮಿಸಿದ ಶ್ರೀಮತಿ ಯಶೋಧರಮ್ಮನವರ ಸಾಧನೆ ಗಮನಾರ್ಹವಾದುದು.

ಯಶೋಧರಮ್ಮನವರು ತಮ್ಮ ಅಧಿಕಾರಾವಧಿಯಲ್ಲಿ ಮೈಸೂರು ಮಕ್ಕಳ ವಿಧೇಯಕವನ್ನು ಜಾರಿಗೆ ತಂದು ಅದನ್ನು ಕುರಿತಂತೆ ಅದರ ಉದ್ದೇಶವನ್ನು ಸದನದಲ್ಲಿ ಚರ್ಚಿಸಿ ಸಹೋದ್ಯೋಗಿಗಳಿಗೆ ತಿಳಿಸಿದರು. "ದೊಡ್ಡ ದೊಡ್ಡ ನಗರಗಳಲ್ಲಿರತಕ್ಕ ಕೂಲಿಗಾರರ ಮಕ್ಕಳು ಅನೇಕ ತೊಂದರೆಗಳಿಗೀಡಾಗಿ ಅವರು ದುರುಪಯೋಗಕ್ಕೆ ಒಳಗಾಗತಕ್ಕ ಸನ್ನಿವೇಶದಲ್ಲಿ ಇಂಥ ಒಂದು ಕಾನೂನು ಬಹಳ ಅಗತ್ಯ. ತೊಂದರೆಗೊಳಗಾದ ಮಕ್ಕಳನ್ನು ಜೈಲಿಗೆ ಹಾಕದೆ, ಪೋಲೀಸರಿಗೂ ಒಪ್ಪಿಸದೆ, ಇವರಿಗೆ ಒಂದು ಪ್ರತ್ಯೇಕವಾದ ಕೋರ್ಟು ಸ್ಥಾಪಿಸಿ ಆ ಮಕ್ಕಳನ್ನು ದೇಶದ ಸತ್ಪ್ರಜೆಗಳನ್ನಾಗಿ ಮಾಡುವುದೆ ಇದರ ಉದ್ದೇಶ" ಎಂದು ತಿಳಿಸಿದರು. ಇಂಥ ತಪ್ಪಿತಸ್ಥ ಮಕ್ಕಳ ವಯಸ್ಸು, ಹೆಣ್ಣುಮಕ್ಕಳಾದರೆ 18 ವರ್ಷ ವಯಸ್ಸಿನೊಳಗಿರಬೇಕೆಂದೂ, ಗಂಡುಮಕ್ಕಳಾದರೆ ಅವರ ವಯಸ್ಸು 16 ಇರಬೇಕೆಂದೂ ಇದರಲ್ಲಿ ವಿಧಾಯಕ ಮಾಡಲಾಗಿದೆ ಎಂದು ತಿಳಿಸಿದರು. ಈ ವಿಧೇಯಕವನ್ನು ಸದನದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಸದಸ್ಯರು ಸ್ವಾಗತಿಸಿ ಇದರ ಅವಶ್ಯಕತೆ ಹೆಚ್ಚು ಇದೆ ಎಂದು ಅಭಿಪ್ರಾಯಪಟ್ಟರು. ಶ್ರೀಮತಿ ಯಶೋಧರಮ್ಮನವರ ಸಮಕಾಲೀನರಲ್ಲಿ ಒಬ್ಬರಾದ ಶ್ರೀಮತಿ ನಾಗರತ್ನಮ್ಮ ಹಿರೇಮಠರವರು ಈ ವಿಧಾಯಕವನ್ನು ಸ್ವಾಗತಿಸುತ್ತಾ "ಗಾಂಧೀಜಿಯವರು ಹೇಳಿದ ಮಾತನ್ನು ಸಭಾಂಗಣದಲ್ಲಿ ಸ್ಮರಿಸಿದರು. ರಾಷ್ಟ್ರೀಯ ಜೀವಾಳದ ಭದ್ರವಾದ ಆಸ್ತಿಭಾರವು ನಮ್ಮ ಮಕ್ಕಳ ನಡತೆಯೇ ಆಗಿದೆ, ಭಾವೀ ರಾಷ್ಟ್ರೀಯ ಆಗುಹೋಗುಗಳು ಅಂತಹ ಮಕ್ಕಳನ್ನೆ ಅವಲಂಬಿಸಿದೆ ಎಂದು ರಾಷ್ಟ್ರಪಿತರು ಹೇಳಿದರು, ಮುಂದೆ ಸತ್ಪ್ರಜೆಗಳಾಗುವ ಇಂತಹ ಮಕ್ಕಳು ಅಂದರೆ 16 ವರ್ಷದೊಳಗಿನ ಹುಡುಗರ ಮತ್ತು ಹುಡುಗಿಯರ ರೀತಿನೀತಿಗಳನ್ನು ಉತ್ತಮಗೊಳಿಸಲು ನೆರವಾಗುವಂಥ ಈ ವಿಧೇಯಕವನ್ನು ಸ್ವಾಗತಿಸುತ್ತೇನೆ" ಎಂದರು.

ಶ್ರೀಮತಿ ಯಶೋಧರಮ್ಮನವರು ತಮ್ಮ ಅಧಿಕಾರಾವಧಿಯಲ್ಲಿ ಮೈಸೂರು ಮಕ್ಕಳ ವಿಧಾಯಕವನ್ನು ಮಂಡಿಸಿದುದು ಕ್ರಾಂತಿಕಾರಿಯಾದ ಮೈಲಿಗಲ್ಲು. ಏಕೆಂದರೆ, ಕೂಲಿಗಾರರು, ತಮ್ಮ ಮಕ್ಕಳಿಗೆ ಸರಿಯಾದ ಸೌಕರ್ಯಗಳನ್ನು ಒದಗಿಸದಂತಹ ಸಂದರ್ಭದಲ್ಲಿ ಅವರು ಅಪಾಯಕ್ಕೆ ಸಿಗುವುದು ಸಹಜ. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷೆಗೆ ಒಳಗಾಗಿ ಮಾನಸಿಕ ಹಿಂಸೆಗೆ ಮಕ್ಕಳು ಗುರಿಯಾಗುತ್ತಾರೆ. ಸಂಸ್ಕೃತಿಯ ಅಭಾವದಿಂದಲೊ, ಸಹವಾಸಗಳ ಕಾರಣದಿಂದಲೋ, ತಂದೆತಾಯಿಗಳ ನಿರ್ಲಕ್ಷತೆಯಿಂದಲೋ, ದಾರಿದ್ರ್ಯತೆಯ ದೆಸೆಯಿಂದಲೋ, ಅನೇಕ ಹುಡುಗ ಹುಡುಗಿಯರು ನೈತಿಕತೆಯನ್ನು ಮರೆತು ದಾರಿ ತಪ್ಪುವುದು ಸಹಜ. ಇಂಥ ಮಕ್ಕಳನ್ನು ಭಿಕ್ಷಾಟನೆ, ಅನೀತಿ ಕಾರ್ಯಚಟುವಟಿಕೆಗಳಿಗೆ ತೊಡಗಿಸಿ, ಹೆಣ್ಣುಮಕ್ಕಳನ್ನು ವ್ಯಭಿಚಾರ ಗೃಹಗಳಿಗೆ ಮಾರಿ ಹಣಗಳಿಸಿ ಜೀವನ ಸಾಗಿಸುವ ದುಷ್ಟರು ಮತ್ತು ದುಷ್ಟಕೂಟಗಳಿಂದ ಇಂತಹ ಮಕ್ಕಳನ್ನು ರಕ್ಷಿಸಲು ಈ ವಿಧಾಯಕ ಮಹತ್ವದ್ದಾಗಿತ್ತು.

ಪ್ರತಿಕ್ಷಣದಲ್ಲಿಯೂ ಸ್ತ್ರೀಯರ ಉನ್ನತಿ ಹಾಗೂ ಅವರ ಜೀವನೋತ್ಸಾಹದ ಬಗ್ಗೆ ಚಿಂತಿಸುತ್ತಿದ್ದ ಶ್ರೀಮತಿ ಯಶೋಧರಮ್ಮನವರು, ತಮ್ಮ ಸಹಪಾಠಿಗಳು ಅಥವಾ ಇತರ ಯಾರಾದರೂ ಸ್ತ್ರೀಯರ ಕೆಲಸಕಾರ್ಯದ ಬಗ್ಗೆ ಟೀಕೆಗಳನ್ನು ಮಾಡಿದರೆ ಅದಕ್ಕೆ ಸಮಂಜಸವಾದ ಉತ್ತರ ನೀಡುತ್ತಿದ್ದರು. ಮಹಿಳೆಯರ ಒಳಿತಿಗಾಗಿ ಶ್ರಮಿಸಿ, ಸ್ತ್ರೀಯರ ಸ್ಥಾನವನ್ನು ದೇವತೆಗೆ ಹೋಲಿಸಿದರು. ಚರ್ಚೆ, ಗೊತ್ತುವಳಿ ಸಂದರ್ಭದಲ್ಲಿ ಕೆಲವು ನಾಯಕರು ಅಥವಾ ಸಹಪಾಠಿಗಳು ಸ್ತ್ರೀಯರ ಕೆಲಸಕಾರ್ಯಗಳನ್ನು ಕುರಿತಂತೆ ಮಾಡಿದ ಟೀಕೆಗಳಿಗೆ ಶ್ರೀಮತಿ ಯಶೋಧರಮ್ಮ ನವರು ಉತ್ತರ ನೀಡುತ್ತಾ "ಹೆಣ್ಣುಮಕ್ಕಳು ಹೊರಗೆ ಬಂದು ಸಮಾಜ ಕಲ್ಯಾಣದ ಕೆಲಸವನ್ನು ಮಾಡುವಾಗ ಮತ್ತು ಸಮಾಜ ಸೇವೆಯನ್ನು ಮಾಡುವುದಕ್ಕೆ ಹೊರಗಡೆ ಬರುವಂತಹ ಹೆಣ್ಣುಮಕ್ಕಳು ಕೆಡುತ್ತಾರೆ, ಎಂಬುದು ಸರಿಯಲ್ಲ, ಅದು ನಂಬುವ ಮಾತಲ್ಲ ಎಂದು ತಿಳಿಸಿದರು. ಕೆಡುವಂತಹ ಹೆಣ್ಣುಮಕ್ಕಳು ಮನೆಯಲ್ಲಿದ್ದರೂ ಕೆಡುತ್ತಾರೆ ಹೊರಗೆ ಬಂದರೂ ಕೆಡುತ್ತಾರೆ. ಈ ರೀತಿಯ ದೋಷಾರೋಪಣೆ ಮಾಡುವುದು ಸಮಾಜದಲ್ಲಿರತಕ್ಕ ರೋಗವೇ ವಿನಾ ಮತ್ತೇನಲ್ಲ. ಸಣ್ಣಪುಟ್ಟ ವಿಷಯಗಳನ್ನು ದೊಡ್ಡದಾಗಿ ಮಾಡಬಾರದು, ಸಮಾಜ ಕಲ್ಯಾಣ ಶಾಖೆಯಲ್ಲಿ ಹೆಣ್ಣುಮಕ್ಕಳ ಅಭಿವೃದ್ಧಿಯಾಗಬೇಕು, ಅವರು ಸ್ವತಂತ್ರವಾಗಿ ಸ್ವಾವಲಂಬಿಗಳಾಗಿ, ಪವಿತ್ರ ಜೀವನವನ್ನು ನಡೆಸುವಂತೆ ಎಲ್ಲರೂ ಆಶಿಸಬೇಕು. ಅವರನ್ನು ಯಾವುದೇ ರೀತಿಯ ತಪ್ಪು ಧೋರಣೆಗೆ ಗುರಿಮಾಡಬಾರದು" ಎಂದು ಸಮರ್ಥಿಸುತ್ತಿದ್ದರು.

ಮತ್ತೊಂದು ಸಂದರ್ಭದಲ್ಲಿ ಯಶೋಧರಮ್ಮನವರು ಹೆಣ್ಣುಮಕ್ಕಳೇ, ಹೆಣ್ಣುಮಕ್ಕಳನ್ನು ಕುರಿತು ಮಾಡುತ್ತಿದ್ದ ಟೀಕೆಗಳಿಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ "ಅನೇಕ ಸೊಸೈಟಿಗಳಲ್ಲಿ, ಕ್ಲಬ್‌ಗಳಲ್ಲಿ, ಹೆಣ್ಣುಮಕ್ಕಳೇ ಹೆಣ್ಣುಮಕ್ಕಳನ್ನು ಟೀಕೆ ಮಾಡುತ್ತಾರೆ. ಇವರಲ್ಲಿ ಬಾಲವಿಧವೆಯರು, ಅವಿವಾಹಿತ ಹೆಣ್ಣುಮಕ್ಕಳು ಇರುತ್ತಾರೆ. ಕಷ್ಟದಲ್ಲಿರುವ ಮಧ್ಯಮ ವರ್ಗದ ಸಂಸಾರಸ್ಥ ಈ ಹೆಣ್ಣುಮಕ್ಕಳು ಸಂಪಾದನೆ ಮಾಡದಿದ್ದರೆ ಜೀವನ ಸಾಗಿಸುವುದು ಕಷ್ಟ. ಇಂಥವರು ಗೌರವದಿಂದ ಕೆಲಸಮಾಡಿ ಜನರಿಗೂ, ದೇಶಕ್ಕೂ ಸೇವೆಮಾಡುತ್ತೇವೆಂದರೆ ಅವರಿಗೆ ವಿದ್ಯಾಭ್ಯಾಸ, ತರಬೇತಿ ಕೊಟ್ಟು ಅವರಿಂದ ಸಮಾಜಕ್ಕೆ ಸೇವೆಯನ್ನು ಮಾಡಿಸಬೇಕು. ಅದನ್ನು ಬಿಟ್ಟು ಮೊದಲೇ ಜೀವನದಲ್ಲಿ ನೊಂದಿರುವ ಹೆಣ್ಣುಮಕ್ಕಳನ್ನು ಟೀಕೆ ಮಾಡಿದರೆ ಅವರ ಮನಸ್ಸಿನ ಮೇಲೆ ಯಾವ ರೀತಿ ಪರಿಣಾಮವಾಗುತ್ತದೆ ಎಂಬುದನ್ನು ಯೋಚಿಸಬೇಕು" ಎಂದು ತಿಳಿಸುತ್ತಾ ಮಹಾತ್ಮಾ ಗಾಂಧಿಯವರ ಹತ್ತಿರ ಇದ್ದಾಗ, ಇಂತಹ ಸಮಾಜ ಸೇವಾ ಕಾರ್ಯ ಮಾಡುವಾಗ, ಅವರು ಹೇಳುತ್ತಿದ್ದ ಮಾತನ್ನು ಸ್ಮರಿಸಿದರು. "ಗಾಂಧಿಯವರು ಸಮಾಜ ಸೇವೆ ಮಾಡುವವರನ್ನು ಕುರಿತು ನನ್ನಲ್ಲಿ ಕೆಲಸ ಮಾಡುವವರಿಗೆ ಸುಮಾರು ಶೇಕಡ 90ರಷ್ಟು ಹೃದಯವಿದ್ದು 10ರಷ್ಟು ಬುದ್ಧಿ ಅಥವಾ ಮೇಧಾವಿ ಶಕ್ತಿಯಿದ್ದರೂ ಸಾಕು ಎಂದು ಹೇಳುತ್ತಿದ್ದರು" ಎಂದು ತಿಳಿಸಿದರು.

ಗಾಂಧಿಯವರ ಆದರ್ಶದ ಮೌಲ್ಯವನ್ನು ಒಪ್ಪಿಕೊಂಡಿದ್ದ ಯಶೋಧರಮ್ಮನವರು ಅವರ ತತ್ವಗಳ ಪರಿಪಾಲನೆಗೆ ಜೀವನವಿಡೀ ಶ್ರಮಿಸಿದರು ಎಂದು ಹೇಳಬಹುದು. ನಮ್ಮ ಸಮಾಜದಲ್ಲಿ ಸ್ತ್ರೀಯರು ಹೊರಬಂದು ಸಮಾಜಸೇವೆ ಮಾಡಬಯಸಲು ತೊಡಗಿದರೆ ಅದು ದೊಡ್ಡ ಅಪರಾಧವೆಂಬಂತೆ ಅವರ ಬಗ್ಗೆ ಟೀಕೆ ಮಾಡುತ್ತಿದ್ದವರಿಗೆ ಶ್ರೀಮತಿ ಯಶೋಧರಮ್ಮವರು ನೀಡಿದ ಉತ್ತರ ಸಮಂಜಸವಾಗಿತ್ತು. ನಮ್ಮ ಸಮಾಜದಲ್ಲಿ ಸ್ತ್ರೀಯು ಕೇವಲ ನಾಲ್ಕು ಗೋಡೆಗಳ ನಡುವೆ ಬದುಕಬೇಕು ಎಂಬ ಪ್ರವೃತ್ತಿ ಇದ್ದು, ಯಾವುದೇ ಮಹಿಳೆ ಹೊರಬಂದಾಗ ಆಕೆಯ ಬಗ್ಗೆ ಇಲ್ಲದಸಲ್ಲದ ಅಪರಾಧವನ್ನು ಹೊರಿಸಿ ದೋಷಪೂರಿತರನ್ನಾಗಿ ಮಾಡುವುದು ತೀರ ಅಸಹನೀಯ ಪದ್ಧತಿ ಎನ್ನಿಸುತ್ತದೆ. ಹೆಣ್ಣುಮಕ್ಕಳೇ ಹೆಣ್ಣುಮಕ್ಕಳನ್ನು ಕುರಿತು ಟೀಕೆ ಮಾಡುತ್ತಿದ್ದು ದುರಾದೃಷ್ಟಕರವೆನಿಸುತ್ತದೆ. ಜೀವನದಲ್ಲಿ ಮೊದಲೇ ನೊಂದಿರುವ ಒಬ್ಬ ಹೆಣ್ಣುಮಗಳಿಗೆ ಸಾಂತ್ವನವನ್ನು ಹೇಳಿ ಪ್ರೋತ್ಸಾಹಿಸುವುದರ ಬದಲು ಟೀಕೆ ಮಾಡುವುದು ಸರಿಯಾದ ವ್ಯವಸ್ಥೆಯಲ್ಲ. ಒಬ್ಬ ಹೆಣ್ಣುಮಗಳ ಕಷ್ಟಕಾರ್ಪಣ್ಯಗಳು ಅರ್ಥವಾಗುವುದು ಮತ್ತೊಬ್ಬ ಹೆಣ್ಣುಮಗಳಿಗೆ ಮಾತ್ರ. ಅಂತಹವರು ಅವಳ ಸಮಸ್ಯೆಗಳಿಗೆ ಸ್ಪಂದಿಸಿ ಉತ್ತೇಜನ ನೀಡುವುದನ್ನು ಬಿಟ್ಟು ಅವಳನ್ನು ಕುರಿತು ಅವಹೇಳನ ಮಾಡುವುದು ತಪ್ಪು. ಪ್ರಸ್ತುತ ಸಮಾಜದಲ್ಲಿಯೂ ಇದು ಒಂದು ಪಿಡುಗಾಗಿ ಉಳಿದುಕೊಂಡೇ ಬಂದಿದೆ. ಯಾವುದೇ ಒಂದು ಹೆಣ್ಣುಮಗಳು ಧೈರ್ಯದಿಂದ ಹೊರಬಂದು ಯಾವುದಾದರೂ ಕೆಲಸದಲ್ಲಿ ತೊಡಗಿಸಿಕೊಂಡರೆ ಸಾಕು, ಇಲ್ಲದಸಲ್ಲದ ಆಪಾದನೆಗಳೇ. ಮರ್ಯಾದೆಯಿಂದ ಜೀವನ ನಡೆಸುತ್ತಿದ್ದರೂ, ತಮ್ಮ ಕುಹಕಬುದ್ಧಿಯಿಂದ ಅವಳ ಬಗ್ಗೆ ದೋಷಾರೋಪಣೆಯ ಅಪವಾದ ಹೊರಿಸಿ ಮಾನಸಿಕ ಹಿಂಸೆಗೆ ಗುರಿ ಮಾಡುತ್ತಿರುವುದು ಸಾಮಾನ್ಯವಾಗಿ ಬಿಟ್ಟಿದೆ. ಸಮಾಜದಲ್ಲಿ ಇಂತಹ ದೋಷಗಳನ್ನು ಕುರಿತು ಶ್ರೀಮತಿ ಯಶೋಧರಮ್ಮ ಹೇಳಿದ ಮಾತು ಅರ್ಥಗರ್ಭಿತವಾಗಿದೆ.

ಸಮಾಜದ ಕಾರ್ಯವನ್ನು ಮಾಡುವ ಮಹಿಳೆಯರನ್ನು ಕುರಿತು ಶ್ರೀಮತಿ ಯಶೋಧರಮ್ಮನವರು ಮಾತನಾಡುತ್ತಾ "ಸಮಾಜ ಕಾರ್ಯವನ್ನು ಮಾಡುತ್ತೇನೆ ಎಂದು ಬಯಸುವ ಪ್ರತಿಯೊಬ್ಬರಿಗೂ ಹೃದಯ ವೈಶಾಲ್ಯವಿರಬೇಕು. ಇದನ್ನು ಬಿಟ್ಟು ಬುದ್ಧಿ, ತರ್ಕ, ಇವುಗಳ ಮೇಲೆ ಯೋಚನೆ ಮಾಡಿದರೆ ಯಾವ ಸಮಾಜವನ್ನೂ ಸುಧಾರಿಸುವುದಕ್ಕೆ ಆಗುವುದಿಲ್ಲ" ಎಂಬುದಾಗಿ ತಿಳಿಸಿ ಹಿಂದೆ ಹೆಣ್ಣುಮಕ್ಕಳು ತಮ್ಮ ವಿದ್ಯಾಭ್ಯಾಸಕ್ಕೆ ಯಾವ ರೀತಿಯ ತೊಂದರೆಯನ್ನು ಅನುಭವಿಸುತ್ತಿದ್ದರು ಎಂದು ಜ್ಞಾಪಿಸಿಕೊಳ್ಳುತ್ತಾ, ಅಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ತಮ್ಮ ತಂದೆ ತಾಯಿಗಳ ಪ್ರೋತ್ಸಾಹದಿಂದ ಇಂತಹ ಒಂದು ಉನ್ನತ ಸ್ಥಾನಕ್ಕೆ ಬರಲು ತಮಗೆ ಸಾಧ್ಯವಾಗಿದೆ ಎಂಬುದನ್ನು ಸ್ಮರಿಸಿಕೊಂಡರು. ಶ್ರೀಮತಿ ಯಶೋಧರಮ್ಮ ಭಾಷಣದಲ್ಲಿ ಒಮ್ಮೆ ಸ್ತ್ರೀಯರ ಬಗ್ಗೆ ತಿಳಿಸುತ್ತಾ "ಭಾರತದಲ್ಲಿ ಯಾವುದೇ ಜನಾಂಗಕ್ಕಿಂತ ಅತಿ ಹಿಂದುಳಿದ ಜನಾಂಗ ಸ್ತ್ರೀಜನಾಂಗ. ನಾನು ವಿದ್ಯೆ ಕಲಿತು ಸಮಾಜಸೇವೆಗೆ ಬರಬೇಕಾದರೆ ಅನುಭವಿಸಬೇಕಾದ ತೊಂದರೆಗಳನ್ನು ಇಂದಿನ ಮಹಿಳೆಯರು ಸಹ ಅನುಭವಿಸಬೇಕಾಗಿರುವುದು ಶೋಚನೀಯ ಸಂಗತಿ ಎಂದರು. ಸ್ತ್ರೀಯರು ಸ್ವಸಾಮರ್ಥ್ಯದಿಂದ ಮುಂದೆ ಬಂದು ಸಮಾಜಸೇವೆ ಮಾಡಿ ಉನ್ನತಿಯನ್ನು ಸಾಧಿಸಬೇಕು" ಎಂಬ ಅವರ ನಿಲುವು ಅವರಿಗೆ ಸ್ತ್ರೀಯರ ಬಗ್ಗೆ ಇದ್ದ ಕಾಳಜಿಗೆ ಕನ್ನಡಿ ಹಿಡಿದಂತಿದೆ.

ಸ್ತ್ರೀಯ ಉನ್ನತಿಯ ಬಗ್ಗೆ ಹೆಚ್ಚು ಒತ್ತು ಕೊಡುತ್ತಾ ಬಂದ ಶ್ರೀಮತಿ ಯಶೋಧರಮ್ಮನವರಿಗೆ ತಮ್ಮ ಅಧಿಕಾರಾವಧಿಯ ಉದ್ದಕ್ಕೂ ಸ್ತ್ರೀಯರ ಬಗ್ಗೆ ಅವರಿಗಿದ್ದ ಗೌರವದ ಮನೋಭಾವ ಅವರ ಕೆಲವು ಭಾಷಣಗಳಿಂದ ತಿಳಿಯುತ್ತದೆ. ಯಶೋಧರಮ್ಮನವರು ತಮ್ಮ ಭಾಷಣದಲ್ಲಿ ಮಹಿಳೆಯನ್ನು ಕುರಿತು ಆದರ್ಶ ಗೃಹಿಣಿ ದೇಶದ ವ್ಯಕ್ತಿತ್ವವನ್ನು ಉಳಿಸಬಲ್ಲಳು ಎಂದು ತಿಳಿಸಿದರು. ಹೆಣ್ಣು ಎಂದರೆ ಕೇವಲ ಭೋಗದ ವಸ್ತುವಲ್ಲ, ಆಕೆ ಸದ್ಗುಣಿ. ಇಡೀ ದೇಶವನ್ನು ಮುಂದೆ ಬರುವಂತೆ ಮತ್ತು ದೇಶದ ವ್ಯಕ್ತಿತ್ವ ಉಳಿಸಲು ಪತಿವ್ರತಾ ಧರ್ಮದಿಂದ ಪ್ರಯತ್ನಿಸುವ

ದೇವತೆ. ಆದ್ದರಿಂದ ಇಂತಹ ಆದರ್ಶ ಗುಣಗಳನ್ನು ಹೊಂದಿದ ಗೃಹಿಣಿ ದೇಶವನ್ನು ಒಂದು ಪ್ರತಿಷ್ಠೆಯ ಹಂತಕ್ಕೇರಿಸುವಳು. ಇವಳ ಧರ್ಮಕಾರ್ಯದಿಂದ ದೇಶಕ್ಕೆ ಗೌರವ ಪ್ರತಿಷ್ಠೆಯನ್ನು ತಂದು ಕೀರ್ತಿ ಬೆಳಗಿಸುವಳೆಂದು, ಈ ನಿಟ್ಟಿನಲ್ಲಿ ದೇಶದ ಜ್ಯೋತಿ ಬೆಳಗುವುದು, ಎಂದು ನುಡಿದರು. ಹೆಣ್ಣಿನ ಆಕರ್ಷಣೆ, ಭೋಗವಸ್ತುಗಳಲ್ಲದೆ; ಸಹನೆ, ಸತ್ಯ, ಸದ್ಗುಣ ಮತ್ತು ಪಾತಿವ್ರತ್ಯ ಇವುಗಳ ಮೇಲೆ ಅವಲಂಬಿಸಿವೆ ಎಂಬುದು ಅವರ ದೃಢ ನಿಲುವಾಗಿತ್ತು. ಕಠಿಣ ಸಂದಿಗ್ಧ ಪರಿಸ್ಥಿತಿಯಿಂದ ಅವಳು ಮುಂದೆ ಬರಬೇಕಾದರೆ ವಿದ್ಯಾಭ್ಯಾಸ ಅಗತ್ಯ ಎನ್ನುವುದು ಶ್ರೀಮತಿ ಯಶೋಧರಮ್ಮನವರ ಮನೋಭಾವವಾಗಿತ್ತು.

ಶ್ರೀಮತಿ ಯಶೋಧರಮ್ಮನವರು ತಮ್ಮ ಭಾಷಣದಲ್ಲಿ ಜೀವನದಲ್ಲಿ ಶಿಸ್ತು ಸಂಯಮಕ್ಕೆ ಪ್ರಾಧಾನ್ಯ ದೊರೆಯಬೇಕು ಎಂದು ತಿಳಿಸುತ್ತಾ, "ಜೀವನದಲ್ಲಿ ಶಿಸ್ತು, ಸಂಯಮ ಹಾಗೂ ಮಿತಿ ಮುಖ್ಯವೆನ್ನಿಸುತ್ತದೆ ಎಂದು, ಒಂದು ನಿಟ್ಟಿನಲ್ಲಿ ನಮ್ಮ ಜೀವನ ಪ್ರಶಾಂತವಾಗಿ ಹರಿಯುವ ನದಿಯಾಗಿರಬೇಕೆ ವಿನಾ ಸಿಕ್ಕಾಪಟ್ಟೆ ಕೊಚ್ಚಿಕೊಂಡು ಹೋಗುವಂತಹ ಪ್ರವಾಹ ಆಗಬಾರದು. ಜೀವನದಲ್ಲಿ ಪ್ರತಿಯೊಬ್ಬರು ಎಷ್ಟು ಶಿಸ್ತು, ಸಂಯಮದಿಂದ ವರ್ತಿಸುತ್ತಾರೆಯೋ ಅದು ಅವರ ಪ್ರತಿಷ್ಠೆ, ವರ್ಚಸ್ಸು ಹೆಚ್ಚಿಸುವುದರಲ್ಲಿ ಸಂಶಯವಿಲ್ಲ. ಈ ದೃಷ್ಟಿಯಿಂದ ಪ್ರಾಧಾನ್ಯತೆ ಇರಬೇಕು" ಎಂದು ತಿಳಿಸಿದರು. ಇವರ ಈ ಹೇಳಿಕೆ ಗಮನಾರ್ಹವಾಗಿದೆ. ಜೀವನದಲ್ಲಿ ಶಿಸ್ತು, ಸಂಯಮವೇ ಇಲ್ಲದ ವ್ಯಕ್ತಿ ಜೀವನದಲ್ಲಿ ಮಹಾನ್ ಕೆಲಸ ಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲ. ಯಾರು ಇದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾರೆಯೋ ಅವರು ಉನ್ನತಿಯನ್ನು ಹೊಂದುವುದರಲ್ಲಿ ಸಂಶಯವೇ ಇಲ್ಲ.

ಶ್ರೀಮತಿ ಯಶೋಧರಮ್ಮನವರು ತಮ್ಮ ಭಾಷಣದಲ್ಲಿ ಚಲನಚಿತ್ರ ಸೃಷ್ಟಿಯ ಬಗ್ಗೆ ಮಾತನಾಡುತ್ತಾ, ಸೀತೆ ದ್ರೌಪದಿಯರ ಆದರ್ಶ ಮರೆತು ಶೃಂಗಾರ ಮಾಡಿಕೊಳ್ಳುವುದರಿಂದಲೇ ವೇಳೆ ಕಳೆದು ಸಾಲ ಮಾಡಿಯಾದರೂ ಅಶ್ಲೀಲ ಚಿತ್ರ ನೋಡುತ್ತೇವೆ ಎಂಬ ಹೆಣ್ಣುಮಕ್ಕಳನ್ನು ಕುರಿತು ಸ್ತ್ರೀಯರನ್ನು ಅವಹೇಳನ ಮಾಡುವ ಚಿತ್ರಕ್ಕೆ ನಮ್ಮ ಸ್ತ್ರೀಯರೆ ಮುಗಿಬೀಳುವುದು ದುರ್ದೈವದ ಸಂಗತಿಯಾಗಿದೆ ಎಂಬುದಾಗಿ ವಿಷಾದ ವ್ಯಕ್ತಪಡಿಸಿದರು. ಗಾಂಧೀಯವರ ತತ್ವಗಳನ್ನು ತಪ್ಪದೇ ಪರಿಪಾಲಿಸುತ್ತಿದ್ದ ಇವರು ಗಾಂಧೀಜಿಯವರ ಹೇಳಿಕೆಗಳನ್ನು ಜೀವನವಿಡೀ ಸ್ಮರಿಸುತ್ತಿದ್ದರು. ಶೃಂಗಾರದ ಬಗ್ಗೆ ಗಾಂಧಿಯವರ ಹೇಳಿಕೆಯನ್ನು ತಿಳಿಸುತ್ತಾ, ಮಹಾತ್ಮಾ ಗಾಂಧೀಜಿಯವರು ಒಮ್ಮೆ ಮದ್ರಾಸಿನ ಮಹಿಳಾ ಮಂಡಳದ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡುತ್ತಾ ಅವರ ಶೃಂಗಾರ ನೋಡಿ ದುಃಖಿಸಿದರು. ಶೃಂಗಾರದಲ್ಲೇ ವೇಳೆ ಕಳೆಯಬಾರದು ಎಂದು ಕೇಳಿಕೊಂಡರು ಎಂದು ತಿಳಿಸಿದರು. ಮತ್ತೊಂದು ಕಡೆ ಸ್ವಾತಂತ್ರ್ಯ ನಂತರದಲ್ಲಿ ಭಾರತೀಯರು ಕೊಲೆ, ಸುಲಿಗೆಗಳಲ್ಲಿ ನಿರತವಾದುದನ್ನು ಕಂಡು ದೇವರು ತಮ್ಮನ್ನು ಬೇಗನೆ ಕರೆದೊಯ್ಯಲಿ ಎಂದು ದುಃಖಿಸಿದ ಗಾಂಧೀಜಿಯವರು ಸ್ತ್ರೀಯರನ್ನು ಕುರಿತು "ಭಾರತದ ಸ್ತ್ರೀಯರು ಕೊಲೆ ಸುಲಿಗೆಗಳಿಂದ ದೂರವಿರುವುದರೊಂದಿಗೆ ಅವರು ದೇಶವನ್ನು ಮುಂದೆ ತರಬೇಕು" ಎಂದು ಕೇಳಿಕೊಂಡಿದ್ದರು ಎಂದು ಹೇಳುತ್ತಾ "ಪ್ರತಿಯೊಬ್ಬರು ಅವರ ಆದರ್ಶ ಮಾರ್ಗದಲ್ಲಿ ನಡೆದರೆ ಒಳ್ಳೆಯದಾಗುವುದು" ಎಂದು ತಿಳಿಸಿದರು. ಇಂದಿನ ಸಮಾಜದಲ್ಲಿ ಎಷ್ಟೋ ಸ್ತ್ರೀಯರು ಸೀತೆ, ದ್ರೌಪದಿಯ ಆದರ್ಶವನ್ನು ಮರೆತಿದ್ದಾರೆ ಎನ್ನುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ನಮ್ಮ ಸಮಾಜ ಸಂಪೂರ್ಣ ಬದಲಾಗುತ್ತಿದೆ. ಕಾರಣ, ಪಾಶ್ಚಾತ್ಯ ಸಂಸ್ಕೃತಿ ಭಾರತ ದೇಶದಲ್ಲಿ ಪ್ರಬಲವಾಗಿ ಬೀಡು ಬಿಟ್ಟಿದೆ, ಸ್ತ್ರೀಯರನ್ನು ಅಶ್ಲೀಲ ಚಿತ್ರಗಳಿಗೆ ಉದಾಹರಿಸುವ ನಮ್ಮ ಸಮಾಜದ ವಿರುದ್ಧ ಸ್ತ್ರೀಶಕ್ತಿ ಧ್ವನಿಗೂಡಿಸಬೇಕೆ ವಿನಾ ಅದಕ್ಕೆ ಉತ್ತೇಜನ ನೀಡಬಾರದು. ಒಬ್ಬ ಸ್ತ್ರೀಯನ್ನು ಅವಹೇಳನ ಮಾಡಿ ಅಶ್ಲೀಲ ಚಿತ್ರ ತಯಾರಿಸಿದರೆ ಅದು ಇಡೀ ಸ್ತ್ರೀಸಮೂಹಕ್ಕೆ ಮಾಡಿದ ಅವಮಾನ ಎನ್ನಬಹುದು. ಈ ವಿಷಯವನ್ನು ಕುರಿತು ಯಶೋಧರಮ್ಮನವರು ತಮ್ಮ ಭಾಷಣದಲ್ಲಿ ದುಃಖವ್ಯಕ್ತಪಡಿಸಿದ್ದು ಅವರಲ್ಲಿ ಸ್ತ್ರೀಯರ ಬಗ್ಗೆ ಇದ್ದ ಕಾಳಜಿ ಮತ್ತು ಗೌರವವನ್ನು ತೋರಿಸುತ್ತದೆ.

ಸ್ತ್ರೀಯರನ್ನು ಗೌರವ ಮನೋಭಾವದಿಂದ ನೋಡುತ್ತಿದ್ದ ಶ್ರೀಮತಿ ಯಶೋಧರಮ್ಮನವರು ಅವರನ್ನು ಕುರಿತು ಮತ್ತೊಮ್ಮೆ ತಮ್ಮ ಭಾಷಣದಲ್ಲಿ "ಮಾತೃ ಸ್ಥಾನ ಸ್ತ್ರೀಯರಿಗೆ ಸಿಕ್ಕ ವರ" ಎಂದು ತಿಳಿಸುತ್ತಾ "ಇದರ ಸದುಪಯೋಗ ಮಾಡಿಕೊಳ್ಳಬೇಕು. ನಮ್ಮ ಆದರ್ಶ, ಪರಂಪರೆ, ಸಂಸ್ಕೃತಿಯನ್ನು ಮರೆತು ಜೀವನವನ್ನು ಬಹಳ ಲಘುವಾಗಿ ಕಾಣುತ್ತಿದ್ದೇವೆ. ಹೆಣ್ಣುಮಕ್ಕಳು ನೀತಿ ಭ್ರಷ್ಟರಾದರೆ, ಸಂಸ್ಕೃತಿ ಮರೆತರೆ ದೇಶವು ನಶಿಸಿಹೋಗುವುದು. ಆದರ್ಶ ಪರಂಪರೆ ನಮ್ಮದು. ಆದರ್ಶ ಮಹಿಳೆಯಾಗಿ, ತಾಯಿಯಾಗಿ ಮಕ್ಕಳನ್ನು ಬೆಳೆಸಿದರೆ ದೇಶ ಉಜ್ವಲ ಭವಿಷ್ಯವನ್ನು ಕಾಣುವುದು. ಹೆಣ್ಣುಮಕ್ಕಳು ಜಾಗರೂಕರಾಗಿ ಉತ್ತಮ ನಾಗರಿಕರಾಗಿ ದೇಶಕ್ಕೆ ಕೀರ್ತಿ ತರಬೇಕು, ತಾಯಿಯ ಸ್ಥಾನದ ಮಹತ್ವವನ್ನು ಕುರಿತು ಅದರ ಸದುಪಯೋಗವನ್ನು ಪಡೆದು ದೇಶಕ್ಕೆ ಉಜ್ವಲ ಭವಿಷ್ಯ ನೀಡಬೇಕು" ಎಂದರು.

"ಒಂದು ಕಡೆ ಮಾತೃಸ್ಥಾನ ಸ್ತ್ರೀಗೆ ಸಿಕ್ಕ ವರ" ಎಂದು ಹೆಮ್ಮೆಪಡುತ್ತಿದ್ದ ಶ್ರೀಮತಿ ಯಶೋಧರಮ್ಮನವರು ಮತ್ತೊಂದು ಕಡೆ ತಮ್ಮ ಭಾಷಣದಲ್ಲಿ "ಸ್ತ್ರೀ ಬಗ್ಗೆ ಪೂಜ್ಯಭಾವನೆ ಇಲ್ಲವಾಗುತ್ತಿದೆ" ಎಂದು ಕಳವಳ ವ್ಯಕ್ತಪಡಿಸುತ್ತಿದ್ದರು. "ಅಂದು ಸ್ತ್ರೀಯನ್ನು ಆದರ್ಶ ಗೃಹಿಣಿಯೆಂದು, ಸಹೋದರಿಯೆಂದು ಪರಿಗಣಿಸಿ ಅವಳ ಸೇವೆಯಿಂದ ಪುನೀತವಾಗುತ್ತಿದ್ದ ಸಮಾಜದಲ್ಲಿ ಇಂದು ಅದು ಇಲ್ಲವಾಗುತ್ತಿದೆ. ಯಾವುದೇ ವಸ್ತು ಮಾರಾಟವಾಗಬೇಕಾದರೆ ಅದರ ಜಾಹೀರಾತಿನಲ್ಲಿ ಹೆಣ್ಣಿನ ಚಿತ್ರವಿರಬೇಕು. ಇದು ಸ್ತ್ರೀಯರ ತ್ಯಾಗ ಸೇವೆಗಳ ಪ್ರಶಂಸೆಯಾಗಿರದೆ ಅರೆನಗ್ನ ಅಶ್ಲೀಲ ಚಿತ್ರಗಳನ್ನು ಪ್ರಕಟಿಸಿ ಸ್ತ್ರೀಕುಲಕ್ಕೆ ಅಪಮಾನ ಬಗೆಯುವ ದುಸ್ಸಾಹಸವಾಗಿದೆ. ಇಂತಹ ಸಮಾಜಘಾತಕ ಹೀನ ಪ್ರವೃತ್ತಿಗಳನ್ನು ತಡೆಗಟ್ಟುವಲ್ಲಿ ಕಾರ್ಯಪ್ರವೃತ್ತರಾಗಬೇಕು" ಎಂದು ತಿಳಿಸಿ, "ದಲಿತರನ್ನು, ಸ್ತ್ರೀಯರನ್ನು ಕಡೆಗಣಿಸಿರುವವರು, ಸ್ತ್ರೀಯರಿಂದ ಸಂಸಾರ ಎಂಬುದನ್ನು ಮರೆಯಕೂಡದು. ಅವಳ ಸಹನೆ, ಸತ್ಯ, ತ್ಯಾಗ ಜಗತ್ತಿಗೆ ಶಾಂತಿ ನೀಡುತ್ತದೆ. ಆಧುನಿಕತೆಯ ವೇಷಾಡಂಬರಗಳು ಮಹಿಳೆಯರನ್ನು ದುರಾಸೆಗಳ ಗುಲಾಮರನ್ನಾಗಿ ಮಾಡಿದೆ. ಬಾಹ್ಯರಂಗದ ವೇಷಭೂಷಣಗಳಿಗಿಂತ ಆಂತರಿಕ ಸೌಂದರ್ಯ ನಿರಂತರ ಆಕರ್ಷಣೆ. ಸಮಾಜದಲ್ಲಿ ಪೂರ್ವಿಕರು ಹೆಣ್ಣಿಗೆ ಪೂಜ್ಯ ಸ್ಥಾನವನ್ನು ನೀಡಿದ್ದರು. ಆದರೆ ಅಂತಹ ಸ್ಥಾನ ಬದಲಾಗುವ ಪ್ರವೃತ್ತಿಯು ಕಂಡುಬಂದಿದೆ. ಸ್ತ್ರೀಯನ್ನು ಸಮಾಜವು ಭೋಗವಸ್ತು ಎಂದು ಪರಿಗಣಿಸಿ ಅವಳನ್ನು ತನ್ನ ಸ್ವಾರ್ಥತೆಗೆ ಉಪಯೋಗಿಸುತ್ತಿರುವುದು ಅಮಾನವೀಯ" ಎಂದರು.

ಯಶೋಧರಮ್ಮನವರು ಸ್ತ್ರೀ ಕುಲದ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸುತ್ತಾ ಎಲ್ಲ ಸ್ತ್ರೀಯರು ಸಂಘಟಿತರಾಗಿ ಇಂತಹ ಅನಾಚಾರ ಭ್ರಷ್ಟನೀತಿಯನ್ನು ತೊಲಗಿಸಿ ಎಂದು ಹಿತವಚನ ನೀಡಿ ಸ್ತ್ರೀಶಕ್ತಿಗೆ ಪ್ರೇರಣೆ ನೀಡಿದ್ದು ಪ್ರಶಂಸನೀಯ. ಇಂದಿನ ಸಮಾಜವು ಮಹಿಳೆಯ ಸ್ಥಾನಮಾನವನ್ನು ಪರಿಗಣಿಸಿ, ದಬ್ಬಾಳಿಕೆಯಿಂದ ಮಹಿಳೆಯರನ್ನು ಶೋಷಣೆ ಮಾಡುತ್ತಾ ಬಂದಿದೆ. ಹೆಣ್ಣು ಕೇವಲ ಭೋಗದವಸ್ತು ಎಂಬ ಮನೋಪ್ರವೃತ್ತಿಯನ್ನು ರೂಢಿಸಿಕೊಂಡು ಬಂದಿದೆ. ನಮ್ಮ ಸಮಾಜ ಇಂತಹ ಪ್ರವೃತ್ತಿಯನ್ನು ತೊಲಗಿಸಿ ಸ್ತ್ರೀ ಬಗ್ಗೆ ಹಿಂದೆ ಇದ್ದ ಗೌರವಯುತ ಸ್ಥಾನವನ್ನು ನೀಡಬೇಕು. ಅದನ್ನು ಸ್ತ್ರೀಸಮೂಹ ಪಡೆಯಬೇಕು. ಜೊತೆಗೆ ಯಾವುದೇ ಮಹಿಳೆ ಜಾಹೀರಾತಿಗಾಗಿ ದುಡಿಯುವಾಗ ಎಚ್ಚರಿಕೆಯಿಂದ ಇರಬೇಕು. ಅಶ್ಲೀಲ ಚಿತ್ರಗಳಲ್ಲಿ ತನ್ನನ್ನು ಬಳಸಲು ಪ್ರಯತ್ನಿಸಿದರೆ ಅದನ್ನು ಪ್ರತಿಭಟಿಸಬೇಕು. ಕಾರಣ, ಇದನ್ನು ಪ್ರತಿಯೊಬ್ಬ ಸ್ತ್ರೀ ಪ್ರತಿಭಟಿಸಿದಾಗ ಸ್ತ್ರೀ ಬಗ್ಗೆ ಹಿಂದೆ ಇದ್ದ ಪೂಜ್ಯ ಭಾವನೆ ಪ್ರತಿಯೊಬ್ಬರಲ್ಲಿ ಮತ್ತೆ ಮೂಡುತ್ತದೆ ಎನ್ನಬಹುದು ಎನ್ನುತ್ತಿದ್ದಾರೆ.

ಮಹಿಳೆಯ ಏಳಿಗೆಗಾಗಿ ಹೋರಾಡಿ ಅವರ ಶ್ರೇಯಸ್ಸಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯರೂಪಕ್ಕೆ ತಂದ ಯಶೋಧರಮ್ಮನವರನ್ನು ಕುರಿತು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ

ಆರ್.ಆರ್.ದಿವಾಕರ್‌ರವರು, ಧಾರವಾಡದಲ್ಲಿ ಜರುಗಿದ ವಿದ್ಯಾರ್ಥಿನಿಯರ ವಸತಿಗೃಹ ಉದ್ಘಾಟನಾ ಸಮಾರಂಭದ ಸಮಯದಲ್ಲಿ ಶುಭ ಸಂದೇಶವನ್ನು ಕಳುಹಿಸಿ "ಜನತಾ ಶಿಕ್ಷಣ ಸಮಿತಿಯು ವಿದ್ಯಾರ್ಥಿನಿಯರಿಗೆ ವಸತಿಗೃಹದ ಸೌಕರ್ಯವನ್ನು ಒದಗಿಸಲು ಸಮರ್ಥವಾದುದು ಸಂತೋಷದ ಸಂಗತಿ. ಭಾರತದ ಮಹಾ ಮಹಿಳೆಯರಿಬ್ಬರಾದ ಶ್ರೀಮತಿ ಯಶೋಧರಾ ದಾಸಪ್ಪ ಹಾಗೂ ಸೌಂದರಂ ರಾಮಚಂದ್ರನ್‌ರವರು ಈ ವಸತಿಗೃಹವನ್ನು ಆಶೀರ್ವದಿಸುತ್ತಿರುವುದನ್ನು ಕಂಡು ಸಮಿತಿಗೆ ಸಂತೋಷವಾಗಿದೆ. ಇವರಿಬ್ಬರೂ ಮಹಿಳೆಯರು ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿರುವ ವೀರವನಿತೆಯರಾಗಿರುವುದಲ್ಲದೆ, ಮಹಾತ್ಮಾ ಗಾಂಧೀಜಿಯವರಿಗೆ ಅತ್ಯಂತ ಪ್ರಿಯರಾಗಿದ್ದ ವಿಧಾಯಕ ಕಾರ್ಯಕರ್ತರಲ್ಲಿ ಅಗ್ರಗಣ್ಯರಾಗಿದ್ದಾರೆ, ಸರ್ಕಾರದಲ್ಲಿ ಅವರು ಉನ್ನತ ಸ್ಥಾನದಲ್ಲಿದ್ದಾರೆ" ಎಂದು ತಿಳಿಸಿದರು. ಹಾಗೆಯೇ ಮತ್ತೊಬ್ಬ ಸ್ವಾತಂತ್ರ್ಯ ಹೋರಾಟಗಾರರಾದ ಆರ್.ಎಸ್.ಹುಕ್ಕೇರಿಯವರು ಸಮಾರಂಭದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ "ಯಶೋಧರಮ್ಮನವರನ್ನು ಮಂತ್ರಿಯೆಂದು ಇಲ್ಲಿಗೆ ಬರಮಾಡಿಕೊಂಡಿಲ್ಲ, ಮಹಿಳೆಯರ ಉನ್ನತಿಗಾಗಿ ಕಳೆದ 30 ವರ್ಷಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಸತತ ದೇಶಸೇವೆ ಸಲ್ಲಿಸುತ್ತಿರುವ ದೇಶಸೇವಕರು. ಇಂಥವರನ್ನು ಈ ಸಂದರ್ಭದಲ್ಲಿ ಬರಮಾಡಿಕೊಳ್ಳುವುದು ಒಂದು ಸುಯೋಗ" ಎಂದು ಶ್ರೀಮತಿ ಸೋನುಪಾ ಕಬ್ಲೂರ್ ವಸತಿ ಗೃಹ ಉದ್ಘಾಟನೆಯ ಸಂದರ್ಭದಲ್ಲಿ ಸ್ಮರಿಸಿದರು. ಯಶೋಧರಮ್ಮನವರನ್ನು ಕುರಿತು ಈ ಮಹಾನ್ ವ್ಯಕ್ತಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದು ಅವರ ವ್ಯಕ್ತಿತ್ವ, ವರ್ಚಸ್ಸು ಮತ್ತು ಮಹಿಳೆಯರ ಬಗ್ಗೆ ಅವರಿಗಿದ್ದ ಭಾವನೆಯನ್ನು ಎತ್ತಿ ತೋರಿಸುವುದರಲ್ಲಿ ಸಂದೇಹವೇ ಇಲ್ಲ.

1964ರ ಅಕ್ಟೋಬರ್ 24ರಂದು ಆಫ್ರಿಕಾಖಂಡದ ಜಾಂಬಿಯಾ ದೇಶ ಸ್ವಾತಂತ್ರ್ಯ ಪಡೆದ ಐತಿಹಾಸಿಕ ದಿನ. ಜಾಂಬಿಯಾ ದೇಶದ ಸ್ವಾತಂತ್ರೋತ್ಸವದಲ್ಲಿ ಭಾರತದ ಹಿರಿಯ ನಾಯಕರು ಭಾಗವಹಿಸಬೇಕೆಂದು ಆಹ್ವಾನವನ್ನು ಕಳುಹಿಸಿದರು. ತಮ್ಮ ದೇಶದ ಸ್ವಾತಂತ್ರ್ಯೋತ್ಸವದಲ್ಲಿ ಭಾರತದ ಹಿರಿಯ ಗಾಂಧೀವಾದಿ ನೇತಾರರು ಭಾಗವಹಿಸಬೇಕೆಂಬ ಅಭಿಲಾಷೆ ಜಾಂಬಿಯಾ ನಾಯಕರದಾಗಿತ್ತು. ಭಾರತ ಮತ್ತು ಆಫ್ರಿಕಾ ಖಂಡದ ದೇಶಗಳೊಡನೆ ಉನ್ನತಮಟ್ಟದಲ್ಲಿ ಸೌಹಾರ್ದಯುತ ಸ್ನೇಹವನ್ನು ಬೆಳೆಸುವ ದೃಷ್ಟಿಯಿಂದ ಭಾರತೀಯ ನಿಯೋಗವನ್ನು ಜಾಂಬಿಯಾ ದೇಶಕ್ಕೆ ಕಳುಹಿಸುವುದಕ್ಕೆ ಸರ್ಕಾರ ನಿರ್ಧರಿಸಿತ್ತು. ಅದರಂತೆ ಮಂತ್ರಿಮಂಡಲದ ಹಿರಿಯ ಸದಸ್ಯರೂ ನಿಷ್ಠಾವಂತ ಗಾಂಧೀವಾದಿಯೂ ಆಗಿದ್ದ ಹೆಚ್.ಸಿ.ದಾಸಪ್ಪನವರ ನಾಯಕತ್ವದಲ್ಲಿ ಭಾರತೀಯ ನಿಯೋಗವನ್ನು ಕಳುಹಿಸಬೇಕು ಎಂದು ಪ್ರಧಾನಿ ಲಾಲ್ ಬಹುದ್ದೂರ್‌ಶಾಸ್ತ್ರಿಯವರು ತೀರ್ಮಾನಿಸಿ, ಈ ಭಾರತೀಯ ನಿಯೋಗದಲ್ಲಿ ಕರ್ನಾಟಕದ ಮಂತ್ರಿಯಾಗಿದ್ದ ಯಶೋಧರಮ್ಮ ದಾಸಪ್ಪನವರನ್ನೂ ಕೂಡ ಸದಸ್ಯರನ್ನಾಗಿ ಮಾಡಲು ನಿರ್ಧರಿಸಿದರು. ಈ ಆಯ್ಕೆಯನ್ನು ಸಂತೋಷದಿಂದ ಒಪ್ಪಿದ ದಂಪತಿಗಳು ಭಾರತ ನಿಯೋಗದ ಇತರ ಸದಸ್ಯರೊಡನೆ ಜಾಂಬಿಯಾ ದೇಶಕ್ಕೆ ಹೋಗಿ ಅಲ್ಲಿಯ ಸ್ವಾತಂತ್ರ್ಯೋತ್ಸವದ ಸಮಾರಂಭದಲ್ಲಿ ಭಾಗವಹಿಸಿದರು. ನಂತರ ಜಾಂಬಿಯಾ ದೇಶದಿಂದ ದಾಸಪ್ಪ ದಂಪತಿಗಳು ತಮ್ಮ ನಿಯೋಗದೊಂದಿಗೆ ಉಗಾಂಡ ಮತ್ತು ಕೆನ್ಯಾ ದೇಶಗಳಿಗೆ ಭೇಟಿ ನೀಡಿದರು. ಯಶೋಧರಮ್ಮ ದಾಸಪ್ಪನವರು ಆ ದೇಶಗಳಲ್ಲಿನ ಅನೇಕ ಮಹಿಳಾ ಸಂಘ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಮಹಿಳಾ ಸಮುದಾಯಗಳನ್ನು ಉದ್ದೇಶಿಸಿ ಮಾತನಾಡುತ್ತಾ "ಜಗತ್ತಿನ ವಿವಿಧ ದೇಶಗಳನ್ನು ಜನಸಮೂಹಗಳನ್ನು ಒಟ್ಟಿಗೆ ತಂದು ಶಾಂತಿ ಮತ್ತು ಸೌಹಾರ್ದವನ್ನು ಮೂಡಿಸುವ ಕೆಲಸದಲ್ಲಿ ಪುರುಷರಿಗಿಂತ ಮಹಿಳೆಯರಿಗೇ ಹೆಚ್ಚು ಸಾಮರ್ಥ್ಯವಿರುತ್ತದೆ" ಎಂದು ಹೇಳಿ ಎಲ್ಲ ದೇಶಗಳಲ್ಲೂ ಸ್ತ್ರೀ ಶಕ್ತಿಯ ಸಂವರ್ಧನೆಯಾಗಿ ಮಹಿಳೆಯರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಪಾಲುದಾರರಾಗಿ ತಮ್ಮ ಸ್ಥಾನಮಾನಗಳನ್ನು ಸಮಾಜದ ಭದ್ರತೆಯನ್ನು ಬಲಗೊಳಿಸುವ ಐತಿಹಾಸಿಕ ಸನ್ನಿವೇಶ ಒದಗಿದೆ ಎಂದು ಹೇಳಿ, ಆಫ್ರಿಕಾದ ಮಹಿಳೆಯರನ್ನು

ಹುರಿದುಂಬಿಸಿದರು. ಆಫ್ರಿಕಾ ಸಹೋದರಿಯರು ಭಾರತಕ್ಕೆ ಬಂದು ಅಲ್ಲಿನ ಮಹಿಳಾ ಚಳವಳಿಗಳ ಅಧ್ಯಯನ ಮಾಡಬೇಕೆಂದು ಪ್ರೇಮ ಪೂರ್ವಕವಾಗಿ ಆಹ್ವಾನ ನೀಡಿ, ಅಲ್ಲಿನ ಮಹಿಳಾ ವೃಂದದ ಮನಸ್ಸನ್ನು ಸೂರೆಗೊಂಡರು. ಕೆನ್ಯಾದ ಅಧ್ಯಕ್ಷ ಕೆನ್ಯಾಟಾ ಅವರ ಮಗಳೇ ಖುದ್ದಾಗಿ ಯಶೋಧರಮ್ಮ ದಾಸಪ್ಪನವರನ್ನು ಅನೇಕ ಸಂಘ ಸಂಸ್ಥೆಗಳಿಗೆ ಕರೆದೊಯ್ದು ಅಲ್ಲಿನ ಚಟುವಟಿಕೆಗಳ ಪರಿಚಯ ಮಾಡಿಕೊಟ್ಟರು. ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಭಾರತದಲ್ಲಷ್ಟೇ ಅಲ್ಲದೆ ದಕ್ಷಿಣಾ ಆಫ್ರಿಕಾ ದೇಶಗಳಲ್ಲಿಯೂ ತಮ್ಮ ಭಾಷಣದಿಂದ ಸ್ತ್ರೀಯರಲ್ಲಿ ಜಾಗೃತಿ ಉಂಟಾಗುವಂತೆ ಪ್ರೇರೇಪಿಸಿದ್ದು ಮಹತ್ವದ್ದಾಗಿತ್ತು.

ಜೀವನದುದ್ದಕ್ಕೂ ಸ್ತ್ರೀಯರ ಬಗ್ಗೆ ಕಾಳಜಿ ಹೊಂದಿದ ಯಶೋಧರಮ್ಮನವರು ಸ್ತ್ರೀಯರ ಅಭಿವೃದ್ಧಿಗಾಗಿ ಮಹಿಳಾ ಸದನ, ವನಿತಾ ಸದನ, ಸ್ತ್ರೀ ಶಕ್ತಿ ಯೋಜನೆ, ಮಹಿಳಾ ಕಲ್ಯಾಣ ಕೇಂದ್ರಗಳು, ಬಾಲವಾಡಿಗಳು, ಗ್ರಾಮ ಸೇವಿಕಾ ತರಬೇತಿ ಕೇಂದ್ರಗಳು ಮತ್ತು ಗೃಹವಿಜ್ಞಾನ ತರಬೇತಿ ಕೇಂದ್ರಗಳು, ಸಾಮಾಜಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿ ಅವುಗಳ ಮುಖಾಂತರ ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಹಾಗೆಯೇ ತಮ್ಮ ಅಧಿಕಾರಾವಧಿಯಲ್ಲಿ ಅದನ್ನು ಕಾರ್ಯಗತಗೊಳಿಸಿ ಸ್ತ್ರೀಯರ ಉತ್ತಮ ಬದುಕಿಗೆ ನಾಂದಿ ಹಾಡಿದರು. ಅವರು ಕೈಗೊಂಡ ಯೋಜನೆಗಳು ಸಫಲವಾಗುವುದರೊಂದಿಗೆ ಮಹಿಳೆಯರ ಬಗ್ಗೆ ಅವರು ಹೊಂದಿದಂತಹ ಕಳಕಳಿ, ಮನೋಭಾವ, ಅವರ ವ್ಯಕ್ತಿತ್ವವನ್ನು ತೋರಿಸುತ್ತದೆ. ಇದರ ಜೊತೆಗೆ ಪ್ರತಿಯೊಂದು ಸಮಯದಲ್ಲಿ ತಮ್ಮ ಭಾಷಣಗಳಲ್ಲಿ ಸ್ತ್ರೀ ಕುರಿತು ಹೇಳುತ್ತಿದ್ದ ವಿಷಯಗಳು ಅವರಿಗೆ ಸ್ತ್ರೀಯರ ಬಗ್ಗೆ ಇದ್ದ ಗೌರವ ಮತ್ತು ಅಭಿಮಾನವನ್ನು ತೋರಿಸುತ್ತದೆ. ಪ್ರತಿಯೊಂದು ಹಂತದಲ್ಲಿಯೂ ಸ್ತ್ರೀಯನ್ನು ಬೆಂಬಲಿಸುತ್ತಾ ಬಂದ ಯಶೋಧರಮ್ಮನವರು ಗಾಂಧೀಜಿಯವರ ಅನುಯಾಯಿಯಾಗಿ ಅವರ ತತ್ವಗಳನ್ನು ಜೀವನವಿಡಿ ಸ್ಮರಿಸುತ್ತಾ ನಡೆದದ್ದು ಅವರ ತತ್ವನಿಷ್ಠೆ ಎಂತಹುದು ಎಂಬುದನ್ನು ಮನದಟ್ಟುಮಾಡಿಕೊಡುತ್ತದೆ. ಸ್ತ್ರೀ ಏಳಿಗೆಗಾಗಿ ಇವರು ಕೈಗೊಂಡ ಮಹತ್ವದ ಕಾರ್ಯಗಳನ್ನು ವಿಮರ್ಶಿಸಿದಾಗ ಇದು ಪ್ರಶಂಸನೀಯ ಎನಿಸುತ್ತದೆ. ಯಶೋಧರಮ್ಮನವರು ಮೂಲತಃ ಒಂದು ಪ್ರತಿಷ್ಠಿತ ಶ್ರೀಮಂತ ಮನೆತನದಿಂದ ಬಂದಿದ್ದರೂ, ಶ್ರೀಮಂತಿಕೆಗೆ ಅಂಟಿಕೊಳ್ಳದೆ ಯಾವಾಗಲೂ ಅಬಲೆಯರ, ವಿಧವೆಯರ, ಸಮಾಜ ಕಡೆಗಣಿಸಿದ ಹೆಣ್ಣುಮಕ್ಕಳ ಕಷ್ಟಸುಖಗಳಲ್ಲಿ ಸ್ಪಂದಿಸಿ ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸಿದರು. ಇಂತಹ ಮಹಾನ್ ಮಹಿಳೆಯ ಆದರ್ಶ ತತ್ವಗಳನ್ನು ನಮ್ಮ ಸಮಾಜದ ಪ್ರತಿಯೊಬ್ಬರೂ ಅಳವಡಿಸಿಕೊಂಡಾಗ ದೇಶ ಪ್ರಗತಿಯನ್ನು ಕಾಣಬಹುದು. ಇಂತಹ ಧೀಮಂತ ವ್ಯಕ್ತಿತ್ವದ ಯಶೋಧರಮ್ಮನವರ ಆದರ್ಶ, ಮಹಿಳಾ ಕಲ್ಯಾಣಕ್ಕಾಗಿ ದುಡಿಯ ಬಯಸುವ ಪ್ರತಿಯೊಬ್ಬರಲ್ಲೂ ಇರಬೇಕು. ಜೊತೆಗೆ ಅವರ ತತ್ವಗಳನ್ನು ಅಳವಡಿಸಿಕೊಂಡರೆ ಸಮಾಜ ಮತ್ತು ಹೆಣ್ಣುಮಕ್ಕಳ ಶ್ರೇಯಸ್ಸು ಉಂಟಾಗುತ್ತದೆ. ಯಶೋಧರಮ್ಮನವರು ಮಹಿಳೆಯರ ಕಲ್ಯಾಣಕ್ಕಾಗಿ ಶ್ರಮಿಸಿ ಅನೇಕ ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಯಶಸ್ವಿಗೊಳಿಸಿ ಅವರ ಜೀವನ ಮಾರ್ಗಕ್ಕೆ ಅನುಕೂಲವಾಗುವಂತೆ ಉತ್ತಮ ಭವಿಷ್ಯವನ್ನು ರೂಪಿಸಿದರು.

ಹರಿಜನ ಮತ್ತು ಗಿರಿಜನರ ಅಭ್ಯುದಯ

ಅಸ್ಪೃಶ್ಯತೆಯೆಂಬುದು ಹಿಂದೂ ಸಮಾಜದಲ್ಲಿ ಅಂಟಿದ ಒಂದು ಸಾಮಾಜಿಕ ಪಿಡುಗು. ಅಸ್ಪೃಶ್ಯರ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಹಿಂದೂ ಸಮಾಜದಲ್ಲಿ ಜಾತಿಪದ್ಧತಿ ವ್ಯವಸ್ಥೆ ಅನಾದಿಕಾಲದಿಂದಲೂ ಇದ್ದು, ಅದು ಈಗಲೂ ಅದೇ ರೀತಿ ಮುಂದುವರೆಯುತ್ತಾ ಬಂದಿದೆ. ಹಿಂದೆ ಹರಿಜನರು ಅನೇಕ ಸವಲತ್ತುಗಳಿಂದ ವಂಚಿತರಾಗಿದ್ದರು. ಅವರಿಗೆ ಶೈಕ್ಷಣಿಕ ಅವಕಾಶಗಳನ್ನು ನಿರಾಕರಿಸಲಾಗಿತ್ತು. ಅವರು ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲತೆಯಿಂದ ಬಳಲುತ್ತಿದ್ದರು. ಮೇಲ್ವರ್ಗದವರು ಹರಿಜನರನ್ನು ಮನುಷ್ಯರಂತೆ ಕಾಣದೆ ಅವರ ಜೊತೆ

ಅಮಾನವೀಯವಾಗಿ ವರ್ತಿಸುತ್ತಿದ್ದರು. ಮಹಾತ್ಮಾಗಾಂಧಿಯವರು ಅಸ್ಪೃಶ್ಯತೆಯನ್ನು ಕುರಿತು "ಅಸ್ಪೃಶ್ಯತೆ ಎಂಬುದು ಅನಾಗರಿಕ, ಅನೈತಿಕ ಮತ್ತು ಕ್ರೂರ ಪದ್ಧತಿ. ಆದ್ದರಿಂದ, ಪ್ರತಿಯೊಬ್ಬ ಹಿಂದುವೂ ಅದರ ವಿರುದ್ಧ ಹೋರಾಡಬೇಕು" ಎಂದು ಕರೆಯಿತ್ತರು. ಆಗಿನ ಕಾಲದಲ್ಲಿ ದೇವಾಲಯಗಳಿಗೆ ಹೋಗದಂತೆ ಹರಿಜನರಿಗೆ ಹಾಕಿದ ನಿರ್ಬಂಧವನ್ನು ಕುರಿತಂತೆ ಗಾಂಧೀಜಿಯವರು ಮಾತನಾಡುತ್ತಾ ಹಿಂದೂ ಧರ್ಮದಲ್ಲೇ ಜನಿಸಿದರೂ, ಹಿಂದೂ ದೇವಾಲಯಗಳಿಗೆ ಹೋಗಲು ಅಸ್ಪೃಶ್ಯರಿಗೆ ಪ್ರವೇಶವಿಲ್ಲದಿರುವುದು ದುರ್ದೈವದ ಸಂಗತಿ. ತಮ್ಮ ಅನುಯಾಯಿಗಳ ಮೂಲಕ ಅಸ್ಪೃಶ್ಯರಿಗೆ ದೇವಾಲಯಕ್ಕೆ ಹೋಗುವಂತೆ ಪ್ರವೇಶವನ್ನು ಕಲ್ಪಿಸಲು ಚಳವಳಿಯನ್ನೇ ಹಮ್ಮಿಕೊಂಡರು. ಹಿಂದೂ ಸಮಾಜದಲ್ಲಿ ಆಳವಾಗಿ ಬೇರೂರಿದ ಅಸ್ಪೃಶ್ಯ ಎಂಬ ಬೇಧಭಾವನೆಯನ್ನು ತೆಗೆದುಹಾಕಬೇಕೆಂಬ ದೃಢಸಂಕಲ್ಪದಿಂದ ಮಹಾತ್ಮಾ ಗಾಂಧೀಜಿಯವರ ಮಾರ್ಗದರ್ಶನದಲ್ಲಿ 1932ರ ಸೆಪ್ಟೆಂಬರ್ 30ರಂದು "ಹರಿಜನ ಸೇವಕ ಸಂಘ"ವೊಂದನ್ನು ಸ್ಥಾಪಿಸಲಾಯಿತು. ಇದು ಜನರ ಮನದಲ್ಲಿದ್ದ ಸ್ಪೃಶ್ಯ, ಅಸ್ಪೃಶ್ಯರೆಂಬ ಭಾವನೆಯನ್ನು ತೊಡೆದು ಹಾಕುವ ಉದ್ದೇಶವನ್ನು ಹೊಂದಿತ್ತಲ್ಲದೆ ಹರಿಜನರು ಶೈಕ್ಷಣಿಕ ಮತ್ತು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಜೀವಿಸುವಂತೆ ಅನುಕೂಲವಾಗುವಂತಹ ಪ್ರಗತಿ ಕಾರ್ಯವನ್ನು ಸಹ ಕೈಗೊಂಡಿತು. ಅನೇಕ ಮಹನೀಯರುಗಳು, ಸಂಘ ಸಂಸ್ಥೆಗಳು ಸಮಾಜದ ಈ ಪಿಡುಗನ್ನು ಹೋಗಲಾಡಿಸಲು ಶ್ರಮಿಸಿದರು. ಸ್ವಾತಂತ್ರ್ಯ ಬಂದ ನಂತರ ನಮ್ಮ ಭಾರತದ ಸಂವಿಧಾನ, ಹರಿಜನರಿಗೆ ಶೇಕಡ 18ರಷ್ಟು ಮೀಸಲಾತಿಯನ್ನು ಕಲ್ಪಿಸಿ ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆಗೆ ಅನುವು ಮಾಡಿಕೊಟ್ಟಿದೆ. ಇಂದು ಕೂಡ ಸರ್ಕಾರ ಹರಿಜನೋದ್ಧಾರಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸುವ ಕಡೆ ಗಮನಹರಿಸಿ ಅವರ ಏಳಿಗೆಗಾಗಿ ಶ್ರಮಿಸುತ್ತಿದೆ.

1962ರಲ್ಲಿ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಸಮಾಜಕಲ್ಯಾಣ ಇಲಾಖೆಯ ಜವಾಬ್ದಾರಿಯನ್ನು ವಹಿಸಿದ್ದ ಯಶೋಧರಮ್ಮನವರು, ತಮ್ಮ ಅಧಿಕಾರಾವಧಿಯಲ್ಲಿ ಹರಿಜನ, ಗಿರಿಜನರ ಅಭ್ಯುದಯಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಿದರು. ಗಾಂಧೀಜಿಯವರ ಅನುಯಾಯಿಯಾಗಿ ಅವರ ತತ್ವಗಳನ್ನು ತಪ್ಪದೇ ಪಾಲಿಸಿದ ಶ್ರೀಮತಿ ಯಶೋಧರಮ್ಮನವರು ಹರಿಜನೋದ್ಧಾರಕ್ಕಾಗಿ ಶ್ರಮಿಸಿದರು. ಅಸ್ಪೃಶ್ಯತೆಯ ಕಳಂಕವನ್ನು ಅರ್ಥಮಾಡಿಕೊಂಡಿದ್ದ ಮಹಿಳೆಯರಲ್ಲಿ ಶ್ರೀಮತಿ ಯಶೋಧರಮ್ಮನವರು ಪ್ರಮುಖರು. ಅವರು ತಮ್ಮ ಮನೆಯಲ್ಲಿ ಅಸ್ಪೃಶ್ಯರ ಕೆಲವು ಮಕ್ಕಳನ್ನು ಸಾಕಿ ಅವರಿಗೆ ವಿದ್ಯಾಭ್ಯಾಸವನ್ನು ಕೊಡಿಸಿದರು. ಹಾಗೆಯೇ ಒಂದು ಹರಿಜನ ಹೆಣ್ಣು ಮಗುವನ್ನು ದತ್ತು ತೆಗೆದುಕೊಂಡು ಸಾಕಿದ ಅವರು ತಮ್ಮ ಆಸ್ತಿಯ ಅರ್ಧ ಭಾಗವನ್ನು ಆ ಹೆಣ್ಣುಮಗಳಿಗೆ ನೀಡಿದ್ದು ಕೂಡ ವಿಶೇಷವಾಗಿತ್ತು. ಹರಿಜನರ ಬಗ್ಗೆ ಹೆಚ್ಚು ಕಳಕಳಿಯನ್ನು ಹೊಂದಿದ್ದ ಯಶೋಧರಮ್ಮನವರು ತಮ್ಮ ಅಧಿಕಾರಾವಧಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಹರಿಜನರ ಅಭ್ಯುದಯಕ್ಕಾಗಿ ಕೈಗೊಂಡ ಕಾರ್ಯಕ್ರಮಗಳನ್ನು ಇಲ್ಲಿ ನೀಡಿರುವ ವಿವರಗಳಲ್ಲಿ ನಾವು ನೋಡಬಹುದಾಗಿದೆ.

1961–62ನೇ ಸಾಲಿನಲ್ಲಿ ಹರಿಜನ ಮತ್ತು ಗಿರಿಜನರ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುವುದಕ್ಕಾಗಿ ಭಾರತ ಸರ್ಕಾರ 12,14,700 ರೂಪಾಯಿಗಳನ್ನು ಮಂಜೂರು ಮಾಡಿತ್ತು. ಅದರಲ್ಲಿ ಹರಿಜನ ವಿದ್ಯಾರ್ಥಿಗಳಿಗೆ 5,04,100 ರೂ.ಗಳು, ಗಿರಿಜನ ವಿದ್ಯಾರ್ಥಿಗಳಿಗೆ 7,500 ರೂ.ಗಳನ್ನು ವಿದ್ಯಾರ್ಥಿವೇತನಕ್ಕಾಗಿ ನೀಡಲಾಗಿತ್ತು. ಹರಿಜನರ ವಿದ್ಯಾಭ್ಯಾಸಕ್ಕಾಗಿ 28,82,800 ರೂಪಾಯಿಗಳನ್ನು 1961–62ನೇ ಸಾಲಿನಲ್ಲಿ ಸರ್ಕಾರ ಮಂಜೂರು ಮಾಡಿತ್ತು. ಅದನ್ನು ಬೇರೆ ಬೇರೆ ವ್ಯವಸ್ಥೆಗಳಿಗೆ ನೀಡಲಾಗಿತ್ತು. ಅವುಗಳೆಂದರೆ ಮಾಧ್ಯಮಿಕ ಮತ್ತು ಪ್ರೌಢಶಾಲಾ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಸ್ಲೇಟು, ಪುಸ್ತಕ ಮತ್ತು ಪೆನ್ಸಿಲ್ ವಿತರಣೆ, ಹುಡುಗ ಹುಡುಗಿಯರಿಗೆ ವಿದ್ಯಾರ್ಥಿನಿಲಯಗಳ ಪ್ರಾರಂಭ, ಹಾಲಿ

ವಿದ್ಯಾರ್ಥಿನಿಲಯಗಳಲ್ಲಿರುವ ಸಂಖ್ಯಾಬಲವನ್ನು ಹೆಚ್ಚಿಸುವುದು, ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಧನ, ಮಹಿಳಾ ಕಲ್ಯಾಣ ಕೇಂದ್ರಗಳ ಪ್ರಾರಂಭ ಇವುಗಳಿಗಾಗಿ 21,30,488.54 ರೂ.ಗಳನ್ನು ವೆಚ್ಚ ಮಾಡಲಾಯಿತು.

ಹರಿಜನರ ಆರ್ಥಿಕಾಭಿವೃದ್ಧಿಗಾಗಿ 9,30,000 ರೂ.ಗಳನ್ನು ಸರ್ಕಾರದಿಂದ ಮಂಜೂರು ಮಾಡಲಾದ ಹಣದಲ್ಲಿ ಈ ಯೋಜನೆಯ ವತಿಯಿಂದ ಹರಿಜನರಿಗೆ ನೇಗಿಲು, ಎತ್ತುಗಳು, ಹೊಲಿಗೆ ಯಂತ್ರಗಳನ್ನು ನೀಡಲಾಗಿತ್ತು. ಇವುಗಳಿಗಾಗಿ 7,20,544 ರೂಪಾಯಿಗಳನ್ನು ವೆಚ್ಚ ಮಾಡಲಾಯಿತು.

ಆರೋಗ್ಯ, ವಸತಿ ಮತ್ತು ಇತರೆ ಯೋಜನೆಗಳು

ಈ ಯೋಜನೆಯಲ್ಲಿ ಮನೆಯನ್ನು, ನಿವೇಶನವನ್ನು ಹೊಂದಲು, ಕುಡಿಯುವ ನೀರಿಗಾಗಿ ಕೊಳವೆ ಬಾವಿಗಳನ್ನು ತೋಡಲು, ಸಮುದಾಯ ಭವನಗಳ ನಿರ್ಮಾಣ, ಇವುಗಳಿಗಾಗಿ ಒಟ್ಟು 10,57,600 ರೂಪಾಯಿಗಳನ್ನು ಸರ್ಕಾರದಿಂದ ಮಂಜೂರು ಮಾಡಲಾಗಿತ್ತು. ಅದರಲ್ಲಿ 8,03,253.40 ರೂಪಾಯಿಗಳನ್ನು, ಅವರಿಗೆ ಮೂಲಭೂತ ಸೌಕರ್ಯಗಳನ್ನು ನೀಡುವುದಕ್ಕಾಗಿ ವೆಚ್ಚ ಮಾಡಲಾಯಿತು. ಅದೇ ರೀತಿ ಗಿರಿಜನರ ವಿದ್ಯಾಭ್ಯಾಸಕ್ಕಾಗಿ ವಸತಿಸಮೇತ ಶಾಲೆಗಳು, ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣ, ವಿದ್ಯಾರ್ಥಿವೇತನ ಇವುಗಳಿಗಾಗಿ 2,16,102 ರೂಪಾಯಿಗಳನ್ನು ಮಂಜೂರು ಮಾಡಲಾಗಿತ್ತು. ಅದರಲ್ಲಿ 91,102 ರೂಪಾಯಿಗಳನ್ನು ವೆಚ್ಚ ಮಾಡಲಾಗಿತ್ತು. ಹಾಗೆಯೇ ಅವರ ಆರ್ಥಿಕಾಭಿವೃದ್ಧಿಗಾಗಿ, ರೈತರಿಗಾಗಿ, ಅರಣ್ಯ ಕಾರ್ಮಿಕರ ವ್ಯವಸ್ಥೆಗಾಗಿ, ಗೃಹಕೈಗಾರಿಕೆಗಳ ಅಭಿವೃದ್ಧಿ ಇವೆಲ್ಲವುಗಳಿಗಾಗಿ 73,775 ರೂಪಾಯಿಗಳನ್ನು ಮಂಜೂರು ಮಾಡಲಾಗಿತ್ತು. ಅದರಲ್ಲಿ 71,983 ರೂ. ವೆಚ್ಚ ಮಾಡಲಾಗಿತ್ತು. ವಸತಿ ನಿರ್ಮಾಣ, ಕುಡಿಯುವ ನೀರಿಗಾಗಿ ಕೊಳವೆ ಬಾವಿಗಳ ವ್ಯವಸ್ಥೆ, ರಸ್ತೆಗಳ ನಿರ್ಮಾಣ, ಸಮುದಾಯ ಭವನ ನಿರ್ಮಾಣ, ಧಾನ್ಯಗೋಲಗಳ ಪ್ರಾರಂಭಕ್ಕಾಗಿ ಇವುಗಳಿಗಾಗಿ 3,35,123 ರೂಪಾಯಿ ಮಂಜೂರು ಮಾಡಲಾಗಿತ್ತು. ಇದರಲ್ಲಿ 2,59,280.99 ರೂಪಾಯಿಗಳು ವೆಚ್ಚವಾಗಿತ್ತು. ಅನುಸೂಚಿತ ಗಿರಿಜನರ ವಿದ್ಯಾಭ್ಯಾಸ, ಆರ್ಥಿಕಾಭಿವೃದ್ಧಿ, ಆರೋಗ್ಯ ಮತ್ತು ಇತರೆ ವ್ಯವಸ್ಥೆಗಾಗಿ, 4,25,750 ರೂಪಾಯಿಗಳನ್ನು ಮಂಜೂರು ಮಾಡಲಾಗಿದ್ದು ಅದರಲ್ಲಿ 3,03,743 ರೂ. ಖರ್ಚು ಮಾಡಲಾಗಿತ್ತು.

ಯಶೋಧರಮ್ಮನವರು ಸಮಾಜ ಕಲ್ಯಾಣ ಖಾತೆಯ ಜವಾಬ್ದಾರಿ ವಹಿಸಿಕೊಂಡ ನಂತರ ಅದಕ್ಕೆ ಹೊಂದಿಕೊಂಡಂತೆ ಕರ್ತವ್ಯಗಳನ್ನು ಚಾಚೂತಪ್ಪದೆ ಪರಿಪಾಲಿಸುತ್ತಿದ್ದರು. 1962ರ ಮಾರ್ಚ್‌ನಲ್ಲಿ ಇವರು ಮಂತ್ರಿ ಪದವಿ ವಹಿಸಿಕೊಂಡ ಸಂದರ್ಭದಲ್ಲೇ ಸಮಯ ಪ್ರಜ್ಞೆಯನ್ನು ಉಪಯೋಗಿಸಿ ಸರ್ಕಾರದಿಂದ ಹರಿಜನರಿಗೆ ಬಂದಂತಹ 5.5 ಲಕ್ಷ ರೂಪಾಯಿಗಳನ್ನು ರದ್ದಾಗದಂತೆ ತಡೆದು ಅದನ್ನು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ವಿದ್ಯಾರ್ಥಿವೇತನವನ್ನು ನೀಡಿ ಕೆಲವು ವಿದ್ಯಾರ್ಥಿಗಳ ಮುಂದಿನ ಉತ್ತಮ ಭವಿಷ್ಯಕ್ಕೆ ಕಾರಣರಾದರು. ಇದು ಅವರಿಗೆ ಸಮಾಜದ ಬಗ್ಗೆ ಇದ್ದ ಕಾಳಜಿ ಮತ್ತು ಕರ್ತವ್ಯ ಪ್ರಜ್ಞೆಯನ್ನು ಎತ್ತಿತೋರಿಸುತ್ತದೆ. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ಒದಗಿಸಿದ ಹಣಕಾಸಿನ ಬಗ್ಗೆ ಯಶೋಧರಮ್ಮನವರು ಸದನದಲ್ಲಿ ವಿವರಿಸುತ್ತಾ ಸರ್ಕಾರ ಒದಗಿಸಿದ್ದ ಹಣಕಾಸಿನಲ್ಲಿ "ನಿಮ್ನವರ್ಗದವರಿಗೆ 52 ಲಕ್ಷ ರೂಪಾಯಿಗಳನ್ನು, ನಿಮ್ನ ಪಂಗಡದವರಿಗೆ 16 ಲಕ್ಷ ರೂಪಾಯಿಗಳನ್ನು, ಅನುಸೂಚಿತ ಪಂಗಡದವರಿಗೆ 14 ಲಕ್ಷ 96 ಸಾವಿರ ರೂಪಾಯಿಗಳನ್ನು, ಅಲೆಮಾರಿ ಮತ್ತು ಅರೆಅಲೆಮಾರಿ ಪಂಗಡದವರಿಗೆ 9 ಲಕ್ಷ 34 ಸಾವಿರ ರೂಪಾಯಿಗಳನ್ನು ರಾಜ್ಯ ಸರ್ಕಾರ ನೀಡಿತ್ತು. ಅದೇ ರೀತಿ ಕೇಂದ್ರ ಸರ್ಕಾರದವರು ನಿಮ್ನ ವರ್ಗದವರ ಅಭಿವೃದ್ಧಿ ಕಾರ್ಯಗಳಿಗಾಗಿ ಎರಡು ಲಕ್ಷ ರೂಪಾಯಿಗಳು, ಅನುಸೂಚಿತ ಪಂಗಡದವರಿಗೆ 3.52 ಲಕ್ಷ ರೂಪಾಯಿಗಳು, ಅರೆ ಅಲೆಮಾರಿ ಪಂಗಡದವರಿಗೆ 8.8 ಲಕ್ಷ ರೂಪಾಯಿ ಹಣವನ್ನು ಒದಗಿಸಿತ್ತು" ಎಂಬುದನ್ನು ಸವಿಸ್ತಾರವಾಗಿ ವಿವರಿಸಿದರು.

ಅಸ್ಪೃಶ್ಯತೆಯ ಬಗ್ಗೆ ಕಳಕಳಿಯ ಭಾವನೆಯನ್ನು ಹೊಂದಿದ್ದು ಹರಿಜನರ ಬದುಕಿನ ಉದ್ಧಾರಕ್ಕಾಗಿ ಶ್ರಮಿಸುತ್ತಿದ್ದ ಯಶೋಧರಮ್ಮನವರು ತಮ್ಮ ಅಧಿಕಾರಾವಧಿಯಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಯೋಜನೆಯನ್ನು ಜಾರಿಗೆ ತಂದಿದ್ದರು. "ಯಾವ ಹಳ್ಳಿಯ ಪಂಚಾಯಿತಿಯ ಬಾವಿಯಲ್ಲಾಗಲಿ ಹರಿಜನರು ನೀರು ತೆಗೆದುಕೊಳ್ಳುವ ವಿಷಯದಲ್ಲಿ ಜನಗಳು ಅಸ್ಪೃಶ್ಯತಾ ಭಾವನೆಯನ್ನು ತೋರಿಸುವುದಿಲ್ಲವೋ ಅಂತಹ ಹಳ್ಳಿಗಳಿಗೆ ಎಲ್ಲ ರೀತಿ ಸೌಲಭ್ಯವನ್ನು ನೀಡುವುದಾಗಿ" ಕ್ರಮಕೈಗೊಂಡು, ಜೊತೆಗೆ ಅಂಥ ಹಳ್ಳಿಗೆ 1500ರಿಂದ 2500 ರೂಪಾಯಿಗಳ ಬಹುಮಾನ ನೀಡುವುದಾಗಿ ಘೋಷಣೆ ಮಾಡಿದರು.

ಯಶೋಧಮ್ಮನವರಿಗೆ ಹರಿಜನರ ಬಗ್ಗೆ ಅಪಾರ ಕಾಳಜಿ ಮತ್ತು ಆಸಕ್ತಿ ಇತ್ತು. "ಮಹಾತ್ಮಾ ಗಾಂಧೀಜಿ ಯಾವಾಗ ಹರಿಜನರು ಎಂಬುದಾಗಿ ನಿಮ್ಮ ವರ್ಗದವರಿಗೆ ಹೆಸರು ಇಟ್ಟರೋ ಆಗಲೇ ನಾನು ಅವರನ್ನು ದೇವರ ಮಕ್ಕಳು ಎಂಬುದಾಗಿ ತಿಳಿದಿದ್ದೇನೆ. ಅವರು ಯಾವಾಗಲೂ ಸತ್ಪ್ರಜೆಗಳಾಗಿ ಬಾಳುತ್ತಾರೆ ಎಂಬ ನಂಬಿಕೆ ನನಗೆ ಇದೆ" ಎಂದು ಸದನದಲ್ಲಿ ಮಾತನಾಡುತ್ತಾ ತಿಳಿಸಿದರು. ಯಶೋಧರಮ್ಮನವರು ಹುಬ್ಬಳ್ಳಿಯ ಹರಿಜನ ಮತ್ತು ಹಿಂದುಳಿದ ವರ್ಗದವರಿಗೆ ಕಟ್ಟಲಾಗಿದ್ದ ನಿಲಯಗಳ ಉದ್ಘಾಟನಾ ಸಮಾರಂಭದಲ್ಲಿ ಭಾಷಣ ಮಾಡುತ್ತಾ "ಹರಿಜನರು ಮತ್ತು ಹಿಂದುಳಿದವರಿಗಾಗಿ ಕಟ್ಟಿಸಲಾದ ನಿಲಯಗಳು ದೇವಾಲಯಗಳಿದ್ದ ಹಾಗೆ, ಅದರ ಹಣವನ್ನು ದುರುಪಯೋಗ ಮಾಡುವುದು ಪಾಪದ ಕಾರ್ಯ. ಸಾಮಾಜಿಕ ಅನೈಕ್ಯತೆ ಇರುವವರೆಗೆ ಶಾಂತಿ ಸಾಧ್ಯವಿಲ್ಲ, ಹಿಂದುಳಿದವರ ಅಭಿವೃದ್ಧಿಗಾಗಿ ಎಲ್ಲರೂ ಶ್ರಮಿಸಬೇಕು" ಎಂದು ಹೇಳಿದರು. ಇವರು ತಮ್ಮ ಭಾಷಣದಲ್ಲಿ ಹರಿಜನರ ಮತ್ತು ಹಿಂದುಳಿದವರಿಗೆ ಕಟ್ಟಿಸಲಾಗಿದ್ದ ವಿದ್ಯಾರ್ಥಿನಿಲಯಗಳನ್ನು ದೇವಾಲಯಗಳಿಗೆ ಹೋಲಿಸಿ ಯಾವುದೇ ಮೋಸ ಮಾಡಬಾರದು ಎಂಬ ಅವರ ಮಾತು ಹರಿಜನರ ಮತ್ತು ಹಿಂದುಳಿದವರ ಬಗ್ಗೆ ಅವರಿಗಿದ್ದ ವಿಶ್ವಾಸ ಮತ್ತು ಕಳಕಳಿಯನ್ನು ತೋರಿಸುತ್ತದೆ.

ಯಶೋಧರಮ್ಮನವರ ಅಧಿಕಾರಾವಧಿಯಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಪರೀಕ್ಷಾ ಪೂರ್ವಸಿದ್ಧತೆ ಮಾಡಿಕೊಳ್ಳಬಯಸುವ ಹರಿಜನ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಶಿಕ್ಷಣ ಕೊಡಲು ಕೆಲವು ಪ್ರತ್ಯೇಕ ಕೊಠಡಿಗಳನ್ನು ಪ್ರಾರಂಭಿಸಿದರು. ಮತ್ತೆ ಜಿಲ್ಲೆಗೊಂದು ವಿದ್ಯಾರ್ಥಿನಿಲಯ ಎಂಬಂತೆ ಪ್ರತಿಯೊಂದು ಜಿಲ್ಲೆಗೂ ವಿದ್ಯಾರ್ಥಿನಿಲಯಗಳ ಸೌಕರ್ಯವನ್ನು ಒದಗಿಸುತ್ತಾ ಬಂದರು. ಹಳೆಯ ಹುಬ್ಬಳ್ಳಿಯ ಕೃಷ್ಣಾಪುರದ ಸಿಕ್ಕಲಿಗಾರ ಜನಾಂಗದ 26 ಕುಟುಂಬಗಳಿಗೆ ಎಮ್ಮೆಗಳನ್ನು ನೀಡಿದರು. ನಂತರ ಇದರ ಸದುಪಯೋಗವನ್ನು ನಿಮ್ಮ ಜನಾಂಗದ ಆರ್ಥಿಕಾಭಿವೃದ್ಧಿಗಾಗಿ ಉಪಯೋಗಿಸಿ ಅವರು ಉತ್ತಮ ಜೀವನವನ್ನು ನಡೆಸಿದರೆ ಮತ್ತು ಇದು ಸಾರ್ಥಕವಾದರೆ ಮತ್ತೆ 300 ಕುಟುಂಬಗಳಿಗೆ ಎಮ್ಮೆಯನ್ನು ನೀಡುವುದಾಗಿ ತಿಳಿಸಿದರು.

ಯಶೋಧರಮ್ಮನವರು ತಮ್ಮ ಭಾಷಣದಲ್ಲಿ ಸಮಾಜಘಾತಕರಿಗೆ ಎಚ್ಚರಿಕೆಯನ್ನು ನೀಡುತ್ತಾ ಬಲಯುತವಾದ ಸಮಾಜ, ದುರ್ಬಲವಾದ ಜನಾಂಗವನ್ನು ಹತ್ತಿಕ್ಕುವುದು ಇಂದು ತೀರ ಸಹಜವಾಗಿದೆ. ಸರ್ಕಾರ ಅಂತಹ ದುರ್ಬಲರನ್ನು ತಮ್ಮ ಸ್ವಂತ ಮಕ್ಕಳೆಂದು ತಿಳಿದು ಅದಕ್ಕಾಗಿ ಶ್ರಮಿಸುತ್ತದೆ. ಹರಿಜನರಿಗೆ, ಗಿರಿಜನರಿಗೆ, ಬಡವರಿಗೆ, ಹಿಂದುಳಿದ ವರ್ಗದವರಿಗೆ ನೀಡುವ ಸಹಾಯ ಸರಿಯಾದ ರೀತಿಯಲ್ಲಿ ದೊರೆಯುತ್ತಿಲ್ಲ. ಸಮಾಜಸೇವೆಯೇ ತಮ್ಮ ಧ್ಯೇಯವೆಂದು ಹೇಳುವ ಅಧಿಕಾರಿಗಳು, ಕಾರ್ಯಕರ್ತರು, ಸರ್ಕಾರದ ಸಹಾಯಕ್ಕೆ ಕತ್ತರಿ ಹಾಕುತ್ತಿದ್ದಾರೆ, ಅಂಥವರಿಗೆ ಒಳ್ಳೆಯದು ಆಗುವುದಿಲ್ಲ ಎಂದು ನುಡಿದರು. ನಂತರ, ಯಶೋಧರಮ್ಮನವರು ದಲಿತ ಮಕ್ಕಳಿಗೆ ಪ್ರತ್ಯೇಕವಾಗಿದ್ದ ವಿದ್ಯಾರ್ಥಿನಿಲಯಗಳಿಗೆ ನಿರ್ದಿಷ್ಟ ಪ್ರಮಾಣದಲ್ಲಿ ಇತರ ಹಿಂದುಳಿದ ವರ್ಗಗಳ ಜಾತಿಯ ಮಕ್ಕಳನ್ನು ಸೇರಿಸುವ ನೀತಿಯನ್ನು ರೂಪಿಸಿ ಎಲ್ಲ ಮಕ್ಕಳ ಸಂಯೋಜಿತ ಪ್ರಗತಿಗೆ ಅನುವಾಗುವಂತೆ ಪ್ರಯತ್ನಿಸಿ

ಯಶಸ್ಸು ಪಡೆದರು. ಈ ಮಾದರಿಯ ಸಾರ್ವಜನಿಕ ವಿದ್ಯಾರ್ಥಿನಿಲಯಗಳು ಇತರ ರಾಜ್ಯಗಳ ಅಧಿಕಾರಿಗಳ ಗಮನವನ್ನು ಸೆಳೆಯುವುದ ರೊಂದಿಗೆ ಕೆಲವು ನೆರೆರಾಜ್ಯಗಳು ಇದೇ ಮಾದರಿಯನ್ನು ಅನುಸರಿಸಿದವು.

ಯಶೋಧರಮ್ಮನವರು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಹರಿಜನರ ಮತ್ತು ಗಿರಿಜನರ ಅಭ್ಯುದಯಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳನ್ನು ಕಾರ್ಯಗತಗೊಳಿಸಿದ್ದು ಮಹತ್ವವಾದದ್ದು. ಅವರನ್ನು ದೇವರುಗಳಿಗೆ ಹೋಲಿಸಿದ್ದು ಗಮನಾರ್ಹವಾದ ಸಂಗತಿ. ಜೀವನದುದ್ದಕ್ಕೂ ದೀನದಲಿತರ ಶ್ರೇಯಸ್ಸಿಗಾಗಿ ದುಡಿದರು. ಸರ್ಕಾರದ ವತಿಯಿಂದ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಅದನ್ನು ಕಾರ್ಯಗತಗೊಳಿಸಿದ ಇವರು ಹರಿಜನರ–ಗಿರಿಜನರ ಭವಿಷ್ಯಕ್ಕೆ ನಾಂದಿಯಾದರು. ಗಾಂಧಿ ಅನುಯಾಯಿಯಾಗಿ ಅವರ ತತ್ವಗಳನ್ನು ತಪ್ಪದೆ ಪಾಲಿಸಿದ ಇವರು ಹರಿಜನೋದ್ಧಾರಕ್ಕಾಗಿ ತಮ್ಮ ಅಧಿಕಾರಾವಧಿಯಲ್ಲಿ ಶ್ರಮಿಸಿದ ರೀತಿ ವಿಶೇಷವಾಗಿತ್ತು. ಹೀಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಹರಿಜನ ಗಿರಿಜನರ ಅಭ್ಯುದಯಯಕ್ಕಾಗಿ ಶ್ರಮಿಸಿದ ಇವರು, ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಅಧಿಕಾರವನ್ನು ನಿರ್ವಹಿಸಿದರು.

ಪಾನನಿರೋಧ ಸಡಿಲಿಕೆಯ ವಿರುದ್ಧ ರಾಜೀನಾಮೆ

ಪಾನನಿರೋಧ ಸಡಿಲಿಕೆ ಎಂದರೆ ಹೆಂಡ, ಸಾರಾಯಿ ಮತ್ತು ಇನ್ನಿತರ ಮಾದಕ ಪಾನೀಯಗಳನ್ನು ಮುಕ್ತವಾಗಿ ಮಾರುಕಟ್ಟೆಯಲ್ಲಿ ದೊರೆಯುವಂತೆ ಮಾಡುವುದು. ಅನಾದಿಕಾಲದಿಂದಲೂ ಮದ್ಯಪಾನ ಸಮಾಜಕ್ಕೆ ಮಾರಕ ಅಸ್ತ್ರವಾಗಿತ್ತು. ಇದರ ಸೇವನೆಯಿಂದ ಅನುಕೂಲಕ್ಕಿಂತ ಅನಾನುಕೂಲಗಳೆ ಹೆಚ್ಚು, ಒಂದು ಬಾರಿ ಈ ಚಟಕ್ಕೆ ಬಲಿಯಾದರೆ ಮತ್ತೆ ಇದರಿಂದ ಹೊರಬರುವುದು ತುಂಬ ಕಷ್ಟ. ಅನೇಕ ಕುಟುಂಬಗಳ ಸರ್ವನಾಶಕ್ಕೆ ಇದು ಕಾರಣ. ಬಡಜನರಿಗೆ, ಹಿಂದುಳಿದವರಿಗೆ, ನಿಮ್ನ ವರ್ಗದವರಿಗೆ ಇದು ಮಾರಕವಾಗಿದೆ, ಇದರ ದುಷ್ಪರಿಣಾಮವನ್ನು ಅರಿತ ಕೆಲವು ವಿಚಾರವಂತರು, ಹಲವಾರು ತಜ್ಞರು ಈ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಅಭಿಮತ ವ್ಯಕ್ತಪಡಿಸಿದರು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಭಾರತದ ಸಂವಿಧಾನದ ರಾಜ್ಯಾಂಗದ ನಿರ್ದೇಶಕ ತತ್ವಗಳಲ್ಲಿ ಪಾನನಿರೋಧ ನಿಷೇಧದ ಬಗ್ಗೆ ತಿಳಿಸಲಾಗಿದೆ. ಪಾನನಿರೋಧ ಜಾರಿ ಸಮಾಜಕ್ಕೆ ತೀರ ಅಗತ್ಯವಾದುದು. ಕಾರಣ, ಮದ್ಯಪಾನ ಸೇವನೆಯಿಂದ ನಮ್ಮ ಕೌಟುಂಬಿಕ ವ್ಯವಸ್ಥೆಗಳು ಸಂಘಟನೆಯ ಕಡೆಯಿಂದ ವಿಘಟನೆಯ ಕಡೆಗೆ ಹೋಗುತ್ತದೆ. ಇಂತಹ ಪರಿಸ್ಥಿತಿಯನ್ನು ನಿವಾರಿಸಬೇಕಾದರೆ ಪಾನನಿರೋಧವನ್ನು ಜಾರಿಗೊಳಿಸಿದರೆ ಮಾತ್ರ ಸಾಧ್ಯವಾಗುತ್ತದೆ. ಇದು ವ್ಯಕ್ತಿಯ ಸುಖಮಯ ದಾಂಪತ್ಯಜೀವನಕ್ಕೆ ಭದ್ರವಾದ ಅಡಿಗಲ್ಲು. ಹಾಗೆಯೇ ವ್ಯಕ್ತಿಯಲ್ಲಿನ ಕಾರ್ಯಕೌಶಲ್ಯತೆಯನ್ನು ಹೆಚ್ಚಿಸುತ್ತದೆ. ದೀನದಲಿತರ, ದುರ್ಬಲ ವರ್ಗದವರ ಭವಿಷ್ಯಕ್ಕೆ ಅನುಕೂಲವಾಗುತ್ತದೆ. ನಮ್ಮ ದೇಶಕ್ಕೆ ಶ್ರೀ ಜವಹರಲಾಲ್ ನೆಹರೂರವರು ಪ್ರಧಾನಿಯಾಗಿದ್ದ 17 ವರ್ಷಗಳ ಅವಧಿಯವರೆಗೆ ಪಾನನಿರೋಧ ಪ್ರತಿಯೊಂದು ರಾಜ್ಯದಲ್ಲಿಯೂ ಜಾರಿಯಲ್ಲಿತ್ತು. "ಸರ್ಕಾರದ ಬೊಕ್ಕಸಕ್ಕೆ ಬರುವ ಹಣದ ಕೊರತೆ ಎಷ್ಟೇ ಆದರೂ ಸಾಮಾಜಿಕವಾಗಿ ಪ್ರಯೋಜನಕಾರಿಯಾಗುವ ಈ ನೀತಿಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲ" ಎಂದು ನೆಹರು ತಿಳಿಸಿದರು.

ಗಾಂಧಿ ಮದ್ಯಪಾನದ ವಿರುದ್ಧ ಮಾತನಾಡುತ್ತಾ "ಕಳ್ಳಭಟ್ಟಿಯ ಕಾರುಬಾರನ್ನು ನಿಲ್ಲಿಸಲು ಸರ್ಕಾರ ಬಿಗಿಯಾದ ಕಾನೂನು ವ್ಯವಸ್ಥೆಯನ್ನು ರೂಪಿಸಬೇಕು. ಅದಕ್ಕೆ ಬೇಕಾದ ರಾಜಕೀಯ ಇಚ್ಛೆ ಮತ್ತು ಸಿದ್ಧಾಂತ ನಿಷ್ಠೆ ಸರ್ಕಾರದಲ್ಲಿರುವ ನೇತಾರರಲ್ಲಿ ಮುಖ್ಯವಾಗಿ ಇರಬೇಕು. ಜನತೆಗೆ ಹೆಂಡ ಸಾರಾಯಿ ಕುಡಿಸಿ ಲಕ್ಷಾಂತರ ಬಡ ಕುಟುಂಬಗಳನ್ನು ದಾರಿದ್ರ್ಯದ ದಾರುಣ ಸ್ಥಿತಿಗೆ ತಳ್ಳಿ ಸಂಸಾರಗಳನ್ನು ಒಡೆದು ಗಳಿಸುವ ವರಮಾನ

ಪಾಪದ ಹಣ" ಎಂದು ಹೇಳುತ್ತಿದ್ದರು. "ಒಂದು ವೇಳೆ ನನ್ನನ್ನೇ ಒಂದು ದಿನ ಸರ್ವಾಧಿಕಾರಿಯನ್ನಾಗಿ ಮಾಡಿದರೆ ಭಾರತದಾದ್ಯಂತ ನಾನು ಎಲ್ಲ ಮದ್ಯದ ಅಂಗಡಿಗಳನ್ನು ಕಡ್ಡಾಯವಾಗಿ ಯಾವ ಪರಿಹಾರವನ್ನೂ ಕೊಡದೆ ಮುಚ್ಚಿಸಿಬಿಡುತ್ತೇನೆ" ಎಂದು ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಹೇಳಿದ್ದರು. ಮನುಷ್ಯನನ್ನು ನಾಶಮಾಡುವ ಮದ್ಯಪಾನದ ವಿರುದ್ಧ ಹೋರಾಡಲು ಗಾಂಧೀಜಿಯವರ ಸಂದೇಶ ಬಹಳ ಮುಖ್ಯವಾಗಿತ್ತು. ಇದರ ಜೊತೆಗೆ ಬಸವಣ್ಣನವರು "ಅಂಗದಿಚ್ಛೆಗೆ ಮದ್ಯ ಮಾಂಸ ತಿಂದರು, ಕಂಗಳಿಚ್ಛೆಗೆ ಪರವಧುವನೆರೆವರು, ಕೂಗಿಡೆ ಕೂಗಿಡೆ ನರಕದಲ್ಲಿಕ್ಕುವ" ಎಂಬ ವಚನವೊಂದನ್ನು ಹೇಳಿದ್ದಾರೆ. ಸರ್ವಜ್ಞನು ಸಹ ಮದ್ಯಪಾನವನ್ನು ಕುರಿತು "ಮದ್ಯಪಾನವ ಮಾಡಿ ಇದ್ದುದೆಲ್ಲವ ನೀಗಿ ಬಿದ್ದು ಹೋಗುವವನ ಸದ್ದಡಗಿ ಸಂತಾನ ಎದ್ದು ಹೋಗುವುದು" ಎಂದು ಹೇಳಿದ್ದಾನೆ. ಭಗವಾನ್ ಬುದ್ಧನು "ಕುಡಿತದ ದುಶ್ಚಟದಿಂದ ಜನಮನ ನಾಶವಾಗುವುದು. ಇದು ಮಹಾ ಪಾಪದ ಪಾನೀಯ" ಎಂದು ತಿಳಿಸಿದ್ದಾನೆ. ಇದನ್ನರಿತ ಗಾಂಧೀಜಿಯವರು ಮತ್ತು ಕಾಂಗ್ರೆಸ್ಸಿನವರು ಸ್ವಾತಂತ್ರ್ಯ ಬಂದ ನಂತರ 1947ರಿಂದಲೇ ಪೂರ್ಣಪಾನ ನಿರೋಧವನ್ನು ದೇಶಾದ್ಯಂತ ಸಾರಿದರು.

ನೆಹರುರವರ ನಂತರ ಕಾಂಗ್ರೆಸ್‌ನ ಅಧಿಕಾರ ವಹಿಸಿಕೊಂಡ ಲಾಲ್ ಬಹದ್ದೂರ್ ಶಾಸ್ತ್ರಿಯವರ ನಾಯಕತ್ವದ ಸಂದರ್ಭದಲ್ಲಿ ಕೆಲವು ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕಾಂಗ್ರೆಸ್ ಮುಖಂಡರು ತಮ್ಮ ವರ್ಚಸ್ಸು ಮತ್ತು ಅಧಿಕಾರವನ್ನು ಹೆಚ್ಚಿಸಿಕೊಂಡು ಪ್ರಬಲರಾಗತೊಡಗಿದರು. ಕಾಂಗ್ರೆಸ್ ಅಧ್ಯಕ್ಷ ಕಾಮರಾಜ್, ಎಸ್. ನಿಜಲಿಂಗಪ್ಪ, ನೀಲಂ ಸಂಜೀವರೆಡ್ಡಿ, ಬಿಜು ಪಟ್ನಾಯಕ್, ಅತುಲ್ಯ ಘೋಷ್ ಮುಂತಾದ ನಾಯಕರ ಶಕ್ತಿಕೂಟ ಪ್ರಬಲವಾಯಿತು. ಲಾಲ್ ಬಹದ್ದೂರ್ ಶಾಸ್ತ್ರಿ ಆಯ್ಕೆಯಲ್ಲೂ ಈ ನಾಯಕ ಬಣದ ಪ್ರಭಾವ ನಿರ್ಣಾಯಕವಾಯಿತು. ಹೀಗಾಗಿ ಹಿರಿಯ ನಾಯಕರ ನೇತೃತ್ವದಲ್ಲಿ ನಡೆಯುತ್ತಿದ್ದ ರಾಜ್ಯ ಸರ್ಕಾರಗಳು ದೆಹಲಿಯ ಕಾಂಗ್ರೆಸ್ ವರಿಷ್ಠ ಮಂಡಲಿಯತ್ತ ನೋಡದೆ ಸ್ವಾಯತ್ತವಾಗಿ ವರ್ತಿಸುತ್ತಿದ್ದವು. ಅಂತಹ ಸಂದರ್ಭದಲ್ಲಿ ಮೈಸೂರು ಸರ್ಕಾರ ರಾಜ್ಯದಲ್ಲಿ ಪಾನನಿರೋಧ ನೀತಿಯನ್ನು ರದ್ದುಮಾಡುವುದಕ್ಕೆ ಉಪಕ್ರಮವಾಯಿತು. ಈ ಮಧ್ಯೆ ಎಸ್. ನಿಜಲಿಂಗಪ್ಪನವರ ಮಂತ್ರಿಮಂಡಲ ಪಾನನಿರೋಧವನ್ನು ರದ್ದುಗೊಳಿಸುವ ಉದ್ದೇಶದಿಂದ ಪಾನನಿರೋಧ ಅಧ್ಯಯನ ಮಾಡಲು ಒಂದು ಸಮಿತಿಯನ್ನು ನೇಮಿಸಿತು. ಅದರ ಅಧ್ಯಕ್ಷರಾಗಿ ನ್ಯಾಯಮೂರ್ತಿ ಶ್ರೀ ಟೇಕ್ ಚಂದ ಮತ್ತು ಕಾರ್ಯದರ್ಶಿಯಾಗಿ ಶ್ರೀ ನಾರಾಯಣಸ್ವಾಮಿಯನ್ನು ನೇಮಿಸಿತ್ತು. ಟೇಕ್ ಚಂದ ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಕೆಲವು ಸಲಹೆಗಳನ್ನು ಸೂಚಿಸಿತ್ತು. ಸಮಿತಿ ತನ್ನ ಸಲಹೆಯಲ್ಲಿ ಕುಡಿತದ ಅಭ್ಯಾಸವಿರುವ ನಾಲ್ವತ್ತು ವರುಷದ ಮೇಲಿನವರಿಗೆ ಈಗ ಪರವಾನಿಗೆ ಕೊಡುವ ಪದ್ಧತಿಯನ್ನು ಬದಲಿಸಿ, ಅವರ ಆದಾಯವನ್ನು ಗಣನೆಗೆ ತಂದುಕೊಳ್ಳಬೇಕು. ಎರಡನೆಯದಾಗಿ ಕಳ್ಳಭಟ್ಟಿ ಸಾರಾಯಿಯ ಹಾವಳಿ ತಪ್ಪಿಸಲು ಮೂವತ್ತು ವರುಷದ ಮೇಲಿನವರಿಗೆ ಶೇಕಡ ಐದಕ್ಕಿಂತ ಕಡಿಮೆ ಪ್ರಮಾಣ ಆಲ್ಕೋಹಾಲ್ ಇರುವ ಬೀರ್ ಮೊದಲಾದ ಪೇಯಗಳ ಪರ್ಮಿಟ್ಟುಗಳನ್ನು ಮಾತ್ರ ಕೊಡಬೇಕು ಎಂದು ತಿಳಿಸಿತು. ಹಾಗೆಯೇ ಒಂದು ವೇಳೆ ಅದಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಹಂಚಿದರೆ, ತರುಣ ಪೀಳಿಗೆಯಲ್ಲಿ ಕುಡುಕತನ ಹೆಚ್ಚುವುದೆಂದೂ ಅವರು ಸಲಹೆ ನೀಡಿದ್ದರು.

ಪಾನನಿರೋಧವನ್ನು 20 ವರ್ಷಗಳ ಕಾಲ ಸತತವಾಗಿ ಸಾಧಿಸಿಕೊಂಡು ಬಂದ ಪರಿಣಾಮವಾಗಿ ಗೌರಿಬಿದನೂರು ತಾಲ್ಲೂಕಿನ ಗ್ರಾಮವೊಂದರಲ್ಲಿ ಕಳ್ಳಭಟ್ಟಿ ಸಾರಾಯಿ ಕುಡಿದು 90 ಮಂದಿ ಮರಣಹೊಂದಿದರು. ಇದನ್ನು ಉಪಯೋಗಿಸಿಕೊಂಡ ಪಟ್ಟಭದ್ರ ಜಮೀನ್ದಾರರು "ಸ್ವಾಮಿ ತಾವು ಕುಡಿತ ನಿಲ್ಲಿಸಿದ್ದರಿಂದ ಕೂಲಿ ಮಾಡಲು ಬರುತ್ತಿದ್ದ ಜನಗಳು ಕೂಲಿ ಕೆಲಸಕ್ಕೆ ಬರುವುದಿಲ್ಲವೆಂದು, ಅಲ್ಲದೆ ಇರುವುದರಲ್ಲಿಯೇ ತೃಪ್ತಿಪಟ್ಟುಕೊಂಡು ಜೀವನ ಸಾಗಿಸುತ್ತಿದ್ದರೆಂದು ಇದರಿಂದ ವ್ಯವಸಾಯ ಕೆಲಸ ಕುಂಠಿತವಾಗಿದೆಯೆಂದು" ದೂರನ್ನು ಹೇಳಿದರು. ಈ ವಿಷಯವನ್ನು ಮನದಲ್ಲಿ ಇಟ್ಟುಕೊಂಡಿದ್ದ ಮುಖ್ಯಮಂತ್ರಿಯವರು ತಮ್ಮ ಸಚಿವಸಂಪುಟದ ಸಭೆಯನ್ನು ಕರೆದು

ಪಾನನಿರೋಧವನ್ನು ರದ್ದುಪಡಿಸುವುದಾಗಿ ತಿಳಿಸಿದರು. ಎಸ್.ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಅಬಕಾರಿ ಸಚಿವರಾಗಿದ್ದ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಪಾನನಿರೋಧ ನೀತಿಯನ್ನು ರದ್ದುಮಾಡುವ ಪ್ರಕ್ರಿಯೆಯನ್ನು ಚಾಲನೆಗೊಳಿಸಿ ಕೆಲವು ಕೆಲವು ಸಚಿವರ ಮನವೊಲಿಸಿ ಪಾನನಿರೋಧವನ್ನು ರದ್ದುಮಾಡಲು ಮುಂದಾದರು. ಅದರಂತೆ 1966ರ ಹೊತ್ತಿಗೆ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಪಾನನಿರೋಧವನ್ನು ರದ್ದುಮಾಡಿ ಮುಕ್ತವಾಗಿ ಮಾರುಕಟ್ಟೆಯಲ್ಲಿ ಮದ್ಯಪಾನ ದೊರೆಯುವಂತೆ ಮಾಡಬೇಕು ಎಂಬ ಪ್ರಸ್ತಾಪವನ್ನು ಸಚಿವರು ತಿಳಿಸಿದರು. ಇದನ್ನು ರದ್ದುಗೊಳಿಸಲು ಸರ್ಕಾರ ಎರಡು ಕಾರಣಗಳನ್ನು ನೀಡಿತ್ತು. ಕಳ್ಳಭಟ್ಟಿಯನ್ನು ತಪ್ಪಿಸುವುದು, ಆರ್ಥಿಕ ನಷ್ಟವನ್ನು ತೆರಿಗೆ ರೂಪದಲ್ಲಿ ಗಳಿಸುವುದು. ಸರ್ಕಾರ ದೃಢವಾದ ನಿರ್ಧಾರವನ್ನು ಕೈಗೊಂಡು ಮೈಸೂರು ರಾಜ್ಯದಲ್ಲಿ ಪಾನನಿರೋಧವನ್ನು ರದ್ದುಪಡಿಸಲು ಸಮ್ಮತಿಸಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ದೊಡ್ಡಮನೆ ಕುಟುಂಬಕ್ಕೆ ಸೇರಿದ "ರಾಮಕೃಷ್ಣ ಹೆಗಡೆಯವರು ಸರ್ವೋದಯದ ಚಳವಳಿಯಲ್ಲಿದ್ದು ವಿನೋಬಾಭಾವೆಯವರ ಅನುಯಾಯಿ ಆಗಿದ್ದು ನಂತರ ರಾಜಕಾರಣಕ್ಕೆ ಬಂದ ನಾಯಕರು. ಅವರೇ ಪಾನನಿರೋಧ ನೀತಿಗೆ ಇತಿಶ್ರೀ ಹಾಡುವ ಸಶಕ್ತ ಬಣದ ವಕ್ತಾರರಾದದ್ದು ವಿಸ್ಮಯಕಾರಿ ಸಂಗತಿ." ವಿನೋಬಾ ಭಾವೆಯಂಥ ಮಹಾನ್ ಪುರುಷರ ಅನುಯಾಯಿ, ಸರ್ವೋದಯ ಚಳವಳಿಯಲ್ಲಿ ಭಾಗವಹಿಸಿದ ರಾಮಕೃಷ್ಣ ಹೆಗಡೆಯವರು ತಮ್ಮ ತತ್ವನಿಷ್ಠೆ ಮರೆತಿದ್ದು ಸಮಂಜಸವಲ್ಲ ಎನ್ನಿಸುತ್ತದೆ.

ಗಾಂಧೀಜಿಯವರು ಸ್ವಾತಂತ್ರ್ಯಕ್ಕೆ ಹೋರಾಟ ನಡೆಸಿ ದೇಶದ ಪುನರ್‌ನಿರ್ಮಾಣಕ್ಕೆ ಕೈಗೊಂಡಿದ್ದ ರಚನಾತ್ಮಕ ಕಾರ್ಯಗಳಲ್ಲಿ ಪ್ರಧಾನ ಅಂಗವಾಗಿದ್ದ ಪಾನನಿರೋಧವನ್ನು ರದ್ದುಮಾಡುವ ಸರ್ಕಾರದ ನಿಲುವಿನ ಬಗೆಗಿನ ಸುದ್ದಿ ಸಮಾಜ ಕಲ್ಯಾಣ ಮಂತ್ರಿಯಾಗಿದ್ದ ಯಶೋಧರಮ್ಮನವರಿಗೆ ದಿಗ್ಭ್ರಮೆಯನ್ನುಂಟುಮಾಡಿತ್ತು. ಎಸ್. ನಿಜಲಿಂಗಪ್ಪನವರು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಮದ್ಯಪಾನದ ವಿರುದ್ಧ ಹೋರಾಟ ಮಾಡಿ, ಅದನ್ನು ವಿರೋಧಿಸಿ ಮುಂದಾಳತ್ವ ವಹಿಸಿದರು. ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಈಚಲು ಮರಗಳನ್ನು ಕತ್ತರಿಸಿ ಹೆಂಡದ ಗಡಿಗೆಗಳನ್ನು ಒಡೆದು ಹಾಕುವ ಸಾಮೂಹಿಕ ಸತ್ಯಾಗ್ರಹದಲ್ಲಿ ನೇತಾರರಾಗಿದ್ದ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರೆ ಮುಖ್ಯಮಂತ್ರಿಯಗಿ ಪಾನನಿರೋಧವನ್ನು ರದ್ದುಮಾಡುವ ಕ್ರಮ ಕೈಗೊಳ್ಳುವುದು ಐತಿಹಾಸಿಕ ವಿಪರ್ಯಾಸ ಎಂದು ಗಾಂಧಿ ಅನುಯಾಯಿಯಾಗಿ ಅವರ ತತ್ವಗಳನ್ನು ತಪ್ಪದೆ ಪಾಲಿಸಿದ ಯಶೋಧರಮ್ಮನವರು ಪ್ರಬಲವಾಗಿ ವಿರೋಧಿಸಿದರು. ಒಂದು ವೇಳೆ ಈ ನೀತಿಯನ್ನು ಸಡಿಲಿಸದರೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ತಿಳಿಸಿದರು. ಆದರೆ ಸರ್ಕಾರ ತನ್ನ ನಿಲುವಿನಲ್ಲಿ ಬದಲಾವಣೆಯನ್ನು ಮಾಡದೆ 1966ರ ಜೂನ್ ಹೊತ್ತಿಗೆ ಕರ್ನಾಟಕದಲ್ಲಿ ಪಾನನಿರೋಧಿ ನೀತಿಯನ್ನು ರದ್ದುಮಾಡಿತು.

ಪಾನನಿರೋಧ ಸಡಿಲಿಕೆಗೆ ಸಂಬಂಧಿಸಿದಂತೆ ಎಸ್. ನಿಜಲಿಂಗಪ್ಪನವರನ್ನು ಕುರಿತು "ಗಾಂಧಿ ಅನುಯಾಯಿಯಾಗಿ, ಅವರ ತತ್ವಗಳನ್ನು ಪಾಲಿಸಿಕೊಂಡು ಬಂದ ನೀವು ಸ್ವಾತಂತ್ರ್ಯ ಪೂರ್ವದಲ್ಲಿ ಮದ್ಯಪಾನದ ವಿರುದ್ಧ ಪ್ರಬಲವಾದ ಹೋರಾಟ ನಡೆಸಿದ್ದೀರಿ, ಆದರೆ ನೀವು ನಿಮ್ಮ ಅಧಿಕಾರಾವಧಿಯಲ್ಲಿಯೇ ಈ ನೀತಿಯನ್ನು ಯಾವ ಉದ್ದೇಶದಿಂದ ರದ್ದುಮಾಡಿದಿರಿ" ಎಂಬ ಪ್ರಶ್ನೆಗೆ "ಗೌರಿಬಿದನೂರಿನ ತಾಲ್ಲೂಕಿನಲ್ಲಿ ಕಳ್ಳಭಟ್ಟಿ ಸಾರಾಯಿಯನ್ನು ಕುಡಿದು ಸುಮಾರು 90ರಿಂದ 100 ಜನ ಸತ್ತರೆಂಬ ಸುದ್ದಿ ನನ್ನ ಗಮನಕ್ಕೆ ಬಂದಿತು. ಆ ರೀತಿ ಆಗುವುದನ್ನು ತಪ್ಪಿಸಲು ಮುಕ್ತವಾಗಿ ಮದ್ಯಪಾನ ದೊರೆತರೆ ಇಂತಹ ಅನಾಹುತ ತಪ್ಪಿಸಬಹುದು ಎಂದು ತೀರ್ಮಾನಿಸಿ ಈ ನಿರ್ಧಾರಕ್ಕೆ ಬಂದೆ" ಎಂದು ತಿಳಿಸಿದರು.

ಸರ್ಕಾರದ ನಿಲುವನ್ನು ಕುರಿತು ಶ್ರೀಮತಿ ಯಶೋಧರಮ್ಮನವರು ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕಾಮರಾಜರವರಿಗೆ ಪತ್ರ ಬರೆದು ರಾಜೀನಾಮೆ ನೀಡುವ ನಿರ್ಧಾರವನ್ನು ತಿಳಿಸಿದರು. ಆದರೆ ಪ್ರಧಾನಿಯವರು ಇವರ ನಿರ್ಧಾರವನ್ನು ಒಪ್ಪದೆ ಇವರು ರಾಜೀನಾಮೆಯನ್ನು ವಾಪಸ್ಸು ಪಡೆಯುವಂತೆ ಮಾಡಿ ಎಂದು ನಾಯಕರಿಗೆ ಸೂಚಿಸಿದರು. ಪ್ರಧಾನಿಯವರ ಸಲಹೆಯ ಮೇರೆಗೆ ಅನೇಕ ಹಿರಿಯ ಮಂತ್ರಿಗಳು ಇವರ ಮನವೊಲಿಸಲು ಪ್ರಯತ್ನಿಸಿದರು. ಯಶೋಧರಮ್ಮ ತಮ್ಮ ನಿಲುವನ್ನು ಬದಲಾಯಿಸದೆ ಪಾನನಿರೋಧವನ್ನು ಜಾರಿಗೊಳಿಸಿ ಇಲ್ಲವೆಂದರೆ ನನ್ನ ರಾಜೀನಾಮೆಯನ್ನು ಒಪ್ಪಿಕೊಳ್ಳಿ, ಎಂದು ಕೋಟಿ ಕೋಟಿ ಹೆಣ್ಣುಮಕ್ಕಳನ್ನು ವ್ಯಥೆಗೆ ಗುರಿಮಾಡುವ, ದೀನದಲಿತರ ಜೀವನವನ್ನು ದಾರಿದ್ರ್ಯ ಮತ್ತು ವ್ಯಸನಕ್ಕೆ ತಳ್ಳುವ, ಈ ಕ್ರಮಕ್ಕೆ ನನ್ನ ಸಮ್ಮತಿಯಿಲ್ಲ ಎಂದು ಸ್ಪಷ್ಟಪಡಿಸಿದರು. ಆದರೆ ಸರ್ಕಾರ ಈ ತನ್ನ ನಿಲುವನ್ನು ಬದಲಾಯಿಸಲು ಸಿದ್ಧವಿರಲಿಲ್ಲ. 1966ರಲ್ಲಿ ಎಸ್. ನಿಜಲಿಂಗಪ್ಪ ನವರ ಮಂತ್ರಿಮಂಡಲವು ಪಾನನಿರೋಧವನ್ನು ರದ್ದುಪಡಿಸಿತು. ಇದರಿಂದ ಮನನೊಂದು ಯಶೋಧರಮ್ಮನವರು ತಮ್ಮ ತತ್ವಪರಿಪಾಲನೆಗಾಗಿ ಮಂತ್ರಿ ಪದವಿಗೆ ರಾಜೀನಾಮೆ ಸಲ್ಲಿಸಿ ತಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಮಾಡಲಿಲ್ಲ. ಅಧಿಕಾರದ ಆಮಿಷಕ್ಕೆ ಒಳಗಾಗದೆ ತಮ್ಮ ಉನ್ನತವಾದ ಜವಾಬ್ದಾರಿಯುತ ಸ್ಥಾನವನ್ನು ಬಿಟ್ಟುಬಂದುದು ಮಹತ್ವದ ವಿಷಯವಾಗಿತ್ತು.

ಯಶೋಧರಮ್ಮನವರು ಸರ್ಕಾರದ ಬದಲಾಗದ ಧೋರಣೆಯಿಂದ ಪಾನನಿರೋಧ ಸಡಿಲಿಕೆಯ ನೀತಿಯನ್ನು ಪ್ರತಿಭಟಿಸಲು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಬಗ್ಗೆ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರಿಗೆ ಪತ್ರ ಬರೆದು ತಮ್ಮ ರಾಜೀನಾಮೆಯನ್ನು ಜನವರಿ ಒಂದನೇ ತಾರೀಖಿನಿಂದ ಜಾರಿಗೆ ಬರುವಂತೆ ಅಂಗೀಕರಿಸಲು ತಿಳಿಸಿದರು. ನಂತರ ತಮ್ಮ ರಾಜೀನಾಮೆ ವಿಷಯದ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸುತ್ತಾ, "ಪಾನನಿರೋಧವನ್ನು ಸಡಿಲಿಸುವುದು ಪ್ರತಿಗಾಮಿ ಹೆಜ್ಜೆಯೆಂದು, ಇದರಿಂದ ಹರಿಜನರಿಗೆ ಆಗಿರುವ ಶ್ರೇಯಸ್ಸು ಹಾಳಾಗುವುದೆಂದು ಅಭಿಪ್ರಾಯಪಟ್ಟು ತಮ್ಮ ರಾಜೀನಾಮೆಯನ್ನು ಕುರಿತಂತೆ ದೇಶದ ಹಿರಿಯ ರಾಜಕೀಯ ಮುಖಂಡರಿಗೆ ಪತ್ರ ಬರೆದು ತಿಳಿಸಿದ್ದೇನೆ" ಎಂದರು. ಸರ್ಕಾರದ ದೃಢವಾದ ನಿಲುವಿಗೆ ಸಹಕಾರ ನೀಡದ ಯಶೋಧರಮ್ಮನವರು ತತ್ವಕ್ಕಾಗಿ ಮಂತ್ರಿ ಪದವಿಗೆ ರಾಜೀನಾಮೆ ನೀಡಿದ್ದು ಗಮನಾರ್ಹ ಸಂಗತಿ. ಈ ನೀತಿಯ ಸಡಿಲಿಕೆಯಿಂದ ಅಸಂಖ್ಯಾತ ಸಂಸಾರಗಳು ಹಾಳಾಗುವುದೆಂದೂ, ಸಮಾಜವು ಅಧೋಗತಿಗೆ ಇಳಿಯುವುದೆಂದೂ, ಹರಿಜನರೇ ಮೊದಲಾದ ಹಿಂದುಳಿದ ವರ್ಗಗಳ ಜನರ ಉದ್ಧಾರವು ಸಾಧ್ಯವಿಲ್ಲವೆಂದು ಎಲ್ಲಕ್ಕಿಂತ ಹೆಚ್ಚಾಗಿ ಹೆಂಗಸರು ಮತ್ತು ಮಕ್ಕಳ ಸರ್ವನಾಶವಾಗುವುದು ಎಂದು ಮನಗಂಡ ಇವರು ಅದಕ್ಕೆ ತಮ್ಮ ಬೆಂಬಲವನ್ನು ನೀಡದೆ ರಾಜೀನಾಮೆ ಕೊಟ್ಟು ಹೊರಬಂದುದು ರಾಜ್ಯದ ಚರಿತ್ರೆಯಲ್ಲಿ ಮಹತ್ವದ್ದಾಗಿತ್ತು.

ರಾಜೀನಾಮೆಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಯಶೋಧರಮ್ಮ ತಮ್ಮ ರಾಜೀನಾಮೆಯ ಹಿನ್ನೆಲೆಯ ಕಾರಣಗಳನ್ನು ವಿಧಾನಸಭೆಯಲ್ಲಿ ವಿವರಿಸಿದರು. ಇವರು ಸದನದಲ್ಲಿ ತಮ್ಮ ರಾಜೀನಾಮೆಯ ನಿರ್ಧಾರವನ್ನು ಕುರಿತು ತಿಳಿಸುತ್ತಾ "ಯಾವಾಗ ಕಾಲ ಸನ್ನಿವೇಶ ಅದಕ್ಕೆ ಸಕಾರಣವಾಗಿ ದೊರಕುತ್ತದೆಯೋ ಆಗ ಒಂದು ತತ್ವದ ಮೇಲೆ ಯಾವ ನಿರ್ಧಾರಕ್ಕೆ ಬರಬೇಕು ಎನ್ನುವಂಥದ್ದು ವ್ಯಕ್ತಿಗತವಾದ ಹಕ್ಕು. ಗಾಂಧೀಜಿಯವರು ಸ್ವಾತಂತ್ರ್ಯವನ್ನು ನಮಗೆ ಗಳಿಸಿ ಕೊಡುವುದಕ್ಕೆ ಮುನ್ನ ಅನೇಕ ಪವಿತ್ರವಾದ ಕಾರ್ಯಕ್ರಮಗಳನ್ನು ಕಾಂಗ್ರೆಸಿನಂಥ ಮಹಾ ಸಂಸ್ಥೆಗೆ ಹಾಕಿಕೊಟ್ಟಿದ್ದರು. ಆ ತತ್ವಗಳನ್ನು ಚಾಚುತಪ್ಪದೆ ಭಕ್ತಿಯಿಂದ ಅನೇಕ ನಾಯಕರು ಅವರ ನಾಯಕತ್ವದಲ್ಲಿ ಅನುಷ್ಠಾನಕ್ಕೆ ತಂದು ಈ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಡುವ ಅವಕಾಶ ಬಂತು. ಈ ರೀತಿಯಾದಂಥ ಮನೋಭಾವನೆ ನಮ್ಮನ್ನು ಆಳುತ್ತಿದ್ದ ಬ್ರಿಟಿಷರ ಮೇಲೂ, ಇಡೀ ಪ್ರಪಂಚದ ಮೇಲೂ ಪರಿಣಾಮಕಾರಿಯಾಗಿ ಪರಿಣಮಿಸಿದ್ದು ಇದು ಮಹಾ ಸಿದ್ಧಾಂತದ ಮೇಲೆ ಅವಲಂಬಿಸಿತ್ತು ಎಂದು ಹೇಳುವುದರಲ್ಲಿ ಸಂಶಯವಿಲ್ಲ.

ಜನರು ಜಗತ್ತಿನಲ್ಲಿ ಪಾವಿತ್ರ್ಯತೆಯಿಂದ ಏನನ್ನಾದರೂ ಸಾಧಿಸಬಹುದು ಎನ್ನುವುದನ್ನು ಮಹಾತ್ಮಾ ಗಾಂಧೀಜಿಯವರು ತೋರಿಸಿ ಕೊಟ್ಟಿದ್ದಾರೆ. ಅದರಲ್ಲಿ ಕೆಲವರಿಗೆ ಸಂಪೂರ್ಣ ನಂಬಿಕೆ, ಕೆಲವರಿಗೆ ಕೆಲವು ತತ್ವಗಳಲ್ಲಿ ನಂಬಿಕೆ ಇರಬಹುದು, ಅದರಂತೆ ಅಸ್ಪೃಶ್ಯತಾ ನಿವಾರಣೆ, ಪಾನನಿರೋಧ, ಹಳ್ಳಿಗಾಡಿನಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಮಾಡತಕ್ಕದ್ದು ನನ್ನ ಮನಸ್ಸಿಗೆ ಬಹಳ ಹಿತವಾದ ವಿಷಯ. ಆದ್ದರಿಂದ 30 ವರ್ಷಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಆ ಕೆಲಸದಲ್ಲಿ ನಾನು ಭಾಗಿಯಾಗಿದ್ದೆ" ಎಂದು ತಿಳಿಸುತ್ತಾ ಗಾಂಧೀಜಿಯವರು ಪಾನನಿರೋಧದ ವಿಚಾರದಲ್ಲಿ ಹೇಳಿರುವ ಕೆಲವು ವಿಷಯಗಳನ್ನು ಸಭೆಯಲ್ಲಿ ತಿಳಿಸಿದರು. "ನಮ್ಮ ಮಧ್ಯದಲ್ಲಿ ಸಾವಿರಾರು ಕುಡುಕರು ವಾಸಮಾಡುವ ಸಂದರ್ಭಕ್ಕಿಂತ ನಮ್ಮ ದೇಶವನ್ನು ನಿರ್ಗತಿಕ ಪರಿಸ್ಥಿತಿಯಲ್ಲಿ ಇರಿಸಬಯಸುತ್ತೇನೆ, ಕುಡುಕರನ್ನು ಪ್ರೋತ್ಸಾಹಿಸುವುದಕ್ಕಿಂತ ಭಾರತವನ್ನು ಅವಿದ್ಯಾವಂತ ದೇಶವನ್ನಾಗಿಯೇ ಇರಿಸಬಯಸುತ್ತೇನೆ." ಇದನ್ನು 1927ರಲ್ಲಿ ಯಂಗ್ಇಂಡಿಯಾದಲ್ಲಿ ಗಾಂಧೀಜಿಯವರು ಹೇಳಿದರು ಎಂದು ತಿಳಿಸಿದರು. 1930ರ ಯಂಗ್ಇಂಡಿಯಾ ಪತ್ರಿಕೆಯಲ್ಲಿ ಗಾಂಧೀಜಿ ಮದ್ಯಪಾನದ ಬಗ್ಗೆ ಈ ರೀತಿ ಬರೆದಿದ್ದಾರೆ. "ಕುಡಿತ ಮತ್ತು ಮಾದಕ ವಸ್ತುಗಳು ಅದರ ಚಟಕ್ಕೆ ಮಾರುಹೋಗಿರುವವರ ನೈತಿಕ ಮಟ್ಟವನ್ನು ನಾಶಮಾಡುತ್ತದೆ. ಪ್ರಶಾಂತವಾಗಿದ್ದ, ವ್ಯವಸ್ಥಿತವಾಗಿದ್ದ ಕುಟುಂಬಗಳು ಹೇಗೆ ಕುಡಿತದಿಂದ ನಾಶವಾಗುತ್ತವೆ ಎಂಬ ಸತ್ಯ ಕುಡುಕರನ್ನು ಗಂಡಂದಿರನ್ನಾಗಿ ಪಡೆದಿರುವ ಹೆಂಗಸರಿಗೆ ಮಾತ್ರ ಗೊತ್ತು. ನನ್ನನ್ನು ಒಂದು ಗಂಟೆಗಳ ಕಾಲ ಇಡೀ ಭಾರತದ ಸರ್ವಾಧಿಕಾರಿಯನ್ನಾಗಿ ಮಾಡಿದರೆ ನಾನು ಮಾಡುವ ಮೊದಲನೆಯ ಕೆಲಸವೆಂದರೆ ಯಾವುದೇ ಪರಿಹಾರವನ್ನು ಕೊಡದೆ ಎಲ್ಲಾ ಸಾರಾಯಿ ಅಂಗಡಿಗಳನ್ನು ಮುಚ್ಚಿಸುತ್ತೇನೆ, ಎಲ್ಲಾ ಈಚಲ ಮರಗಳನ್ನು ನಾಶಪಡಿಸುತ್ತೇನೆ.

ಹೀಗೆ ಯಶೋಧರಮ್ಮನವರು ಪ್ರತಿಯೊಂದು ವಿಷಯದಲ್ಲೂ ಕೂಡ ಗಾಂಧೀ ಸಿದ್ಧಾಂತವನ್ನು ಹೊರಗೆಡುವುದರಲ್ಲಿ ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ. ಗಾಂಧೀಜಿಯವರ ಆದರ್ಶ ತತ್ವಗಳು ಒಂದು ರೀತಿಯ ರಾಜಕೀಯ ಉತ್ಸಾಹ ಮತ್ತು ಶಕ್ತಿಯನ್ನು ಮೂಡಿಸುತ್ತದೆ ಎಂದು ತಿಳಿಸಿದರು. ಮತ್ತೆ 1929ರ ಯಂಗ್ ಇಂಡಿಯಾದಲ್ಲಿ ತಿಳಿಸಿದ್ದ ಗಾಂಧೀಜಿಯವರ ಹೇಳಿಕೆಯನ್ನು ವಿವರಿಸುತ್ತಾ "ನಾನು ನಿಮ್ಮಲ್ಲಿ ವಿಶೇಷವಾಗಿ ಮಹಿಳೆಯರಲ್ಲಿ ಕೇಳಿಕೊಳ್ಳುವುದೇನೆಂದರೆ ನಿಮ್ಮ ಧೈರ್ಯವನ್ನು ನಿಮ್ಮ ಕೈಯಲ್ಲಿ ಹಿಡಿಯಿರಿ, ನಾನು ಹೇಳಿದ್ದನ್ನು ವೇದ ವಾಕ್ಯವೆಂದು ಪರಿಗಣಿಸಬೇಡಿ. ನಾನು ಹೇಳಿರುವ ಸತ್ಯವನ್ನು ನಿಮ್ಮಲ್ಲೆ ಪರೀಕ್ಷೆ ಮಾಡಿಕೊಳ್ಳಿ. ನಿಮ್ಮ ಸತ್ಯಶೋಧನೆಯಲ್ಲಿ ನಾನು ಹೇಳಿರುವುದು ಸತ್ಯವೆಂದು ದೃಢಪಟ್ಟರೆ ಸಂಪೂರ್ಣ ಪಾನನಿರೋಧಕ್ಕೆ ಪ್ರಚಂಡ ಹೋರಾಟವನ್ನು ಪ್ರಾರಂಭಿಸುವುದು ನಿಮ್ಮ ಪವಿತ್ರ ಕರ್ತವ್ಯವಾಗುವುದು, ಕುಡಿತವನ್ನು ಕಾನೂನುಬದ್ಧವಾಗಿ ಮಾಡಿರುವುದು ಈ ಕಾರ್ಯಯೋಜನೆಯನ್ನು ಕಷ್ಟಕರವಾಗಿಸಿದೆ". ಗಾಂಧೀಜಿಯವರ ಹೇಳಿಕೆಯನ್ನು ತಿಳಿಸಿ ಇದು ನನ್ನ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡಿತೆಂಬುದನ್ನು ಹೇಳಿದರು. ಹೆಣ್ಣುಮಕ್ಕಳ ಮೇಲೆ ಅವರು ತಮ್ಮ ಸಿದ್ಧಾಂತವನ್ನು ಹೇರಲಿಲ್ಲ. ನಾವು ನಮ್ಮ ಧೈರ್ಯದಿಂದ ಬುದ್ಧಿಯಿಂದ ವಿಮರ್ಶೆ ಮಾಡಿ ನಮಗೆ ಅದರಲ್ಲಿ ಸಂಪೂರ್ಣ ನಂಬಿಕೆಯಿದ್ದರೆ ಅನುಸರಿಸ ಬಹುದೆಂದು ಗಾಂಧೀಜಿ ಹೇಳಿದರು ಎಂದು ತಿಳಿಸಿದರು. ಮತ್ತೆ ತಮ್ಮ ನಿಲುವನ್ನು ತಿಳಿಸುತ್ತಾ ಮುಂದುವರೆದ ಯಶೊಧರಮ್ಮನವರು "ಸ್ವಾಮಿ, ಈ ಗೌರವಯುತವಾದ ಸಭೆಗೆ ಹೇಳುವುದಾದರೆ 25 ವರ್ಷಗಳಿಂದ ನಾನು ಹೆಣ್ಣುಮಕ್ಕಳ ಏಳಿಗೆಗಾಗಿ ದುಡಿದೆ. ಅವರ ಕಷ್ಟಸುಖಗಳನ್ನು ಕಣ್ಣಾರೆ ನೋಡಿ ಬಹಳ ನೊಂದಿದ್ದೇನೆ. ಅನೇಕ ಮುತ್ತಿನಂಥ ಸಂಸಾರಗಳು ಹಾಳಾಗಿವೆ. ಒಳ್ಳೆಯ ಪ್ರೇಮಪೂರಿತವಾದ ದಾಂಪತ್ಯ ಜೀವನ ಈ ಒಂದು ಚಟಕ್ಕೋಸ್ಕರ ಮುರಿದುಹೋಗಿದೆ. ಅನೇಕ ಹೆಣ್ಣುಮಕ್ಕಳು ಇವತ್ತಿನ ದಿನ ಆಶ್ರಯರಹಿತವಾಗಿ ಅನೇಕ ದುಃಖ ಸಂಕಟಗಳಿಗೆ ಈಡಾಗಿದ್ದಾರೆ. ನಮ್ಮ ದೇಶದಲ್ಲಿ ಯಾವ ಹೆಣ್ಣುಮಕ್ಕಳನ್ನು ಸದಾ ಆದಿಶಕ್ತಿ ಎಂದು ಗೌರವಿಸುತ್ತಿದ್ದೆವೋ ಅದೇ ದೇಶದಲ್ಲಿ ಇವತ್ತು ಅವರು ಚಟಗಳಿಗೆ ತುತ್ತಾಗಿ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿದ್ದಾರೆ. ಇದರಿಂದ ದೇಶವು ಅಧೋಗತಿಗೆ ಬರುತ್ತದೆ. ದೇಶದಲ್ಲಿರತಕ್ಕ ಧರ್ಮ ನೀತಿ ಹಿಂದಿನಿಂದ ಬಂದ ಸಂಪ್ರದಾಯ ಸಂಸ್ಕೃತಿಗಳಿಗೆ ಧಕ್ಕೆ

ಬರುತ್ತದೆ ಎಂಬ ಸಂಪೂರ್ಣ ನಂಬಿಕೆ ನನಗಿರುವಾಗ ಈ ಕೆಟ್ಟ ಚಟಗಳಿಂದ ಮನುಷ್ಯ ಹಾಳಾಗಿ ತನ್ನ ಐಶ್ವರ್ಯವನ್ನೆಲ್ಲಾ ಬರಿದುಮಾಡಿಕೊಂಡು ಶಾಂತಿಯನ್ನು ಕಳೆದುಕೊಳ್ಳುವುದಕ್ಕೆ ಅವಕಾಶಕೊಡುವುದು ಸರಿಯಲ್ಲ. ಇದರಿಂದ ಮುಂದಿನ ಭವಿಷ್ಯ ಪೀಳಿಗೆಯ ಮೇಲೇನು ಪರಿಣಾಮವಾಗುವುದೆಂಬುದನ್ನು ಕೂಡ ಯೋಚನೆ ಮಾಡಿಲ್ಲ. ನಮ್ಮ ದೇಶದ ಮಹತ್ತರ ಸಂಪತ್ತಾದ ನಮ್ಮ ಮಕ್ಕಳ ಏಳಿಗೆ, ಹೆಣ್ಣುಮಕ್ಕಳ ನಡತೆ, ಧರ್ಮ ಮುಂತಾದವನ್ನು ಕಾಪಾಡಿಕೊಳ್ಳಬೇಕಾದದ್ದು ಅಗತ್ಯ, ಹಿಂದುಳಿದ ಜನರ ಅಭಿವೃದ್ಧಿಗಾಗಿ ಹೋರಾಡುವುದು ಅವಶ್ಯಕ ಎಂದು ಪ್ರತಿಯೊಬ್ಬರೂ ಹೇಳುತ್ತಿರುವಾಗ, ಚಟಕ್ಕೆ ಗುರಿಯಾಗಿರುವ ಹರಿಜನರು, ಗಿರಿಜನರು ಮುಂತಾದವರನ್ನು ಅದರಿಂದ ತಪ್ಪಿಸಿ ಅವರಿಗೆ ಸರಿಯಾದ ವಿದ್ಯೆಯನ್ನು ಕಲಿಸಿ ಅವರನ್ನು ಯೋಗ್ಯರನ್ನಾಗಿ ಮಾಡಬೇಕಾದ್ದು ನಮ್ಮ ಧರ್ಮ, ಅವರಿಗೆ ವಿದ್ಯಾರ್ಥಿವೇತನ ಮುಂತಾದ ನೆರವನ್ನು ನೀಡಿ ಅವರನ್ನು ಅಭಿವೃದ್ಧಿಗೆ ತರಬೇಕಾದ್ದು ನಮ್ಮ ಕರ್ತವ್ಯ. ಮಹಾತ್ಮ ಗಾಂಧಿಯವರು ಐವತ್ತು ವರ್ಷಗಳಿಂದ ಹೇಳಿರುವ ತತ್ವವನ್ನು ಈ ದಿವಸ ತೆಗೆದುಹಾಕಿ ಸ್ವಲ್ಪಮಟ್ಟಿಗಾದರೂ ಕೂಡ ಅದನ್ನು ಸಡಿಲಮಾಡುವುದಾದರೆ ನನ್ನಂಥ ವೃದ್ಧೆ, ಜನರ ಕಷ್ಟವನ್ನು ಕಣ್ಣಾರೆ ನೋಡಿರುವ ನಾನು ಅದರಿಂದುಂಟಾಗುವ ಕಷ್ಟನಷ್ಟಗಳನ್ನು ಅರಿತು ಅದರಲ್ಲಿ ಭಾಗಿಯಾಗುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತು ಪಾನನಿರೋಧ ಯಾವ ರೀತಿಯಲ್ಲಿ ಸಡಿಲವಾಗಿಲ್ಲ. ಅದನ್ನು ತೆಗೆದುಹಾಕಿಲ್ಲ. ಬಹಳ ಆತುರಪಟ್ಟು ಮಂತ್ರಿಗಳು ತಮ್ಮ ಪದವಿಗೆ ರಾಜೀನಾಮೆ ಕೊಟ್ಟರು ಎಂದು ಕೆಲವರು ಹೇಳುತ್ತಾರೆ. ಸ್ವಾಮಿ, ಸಾಧಾರಣವಾಗಿ ಯಾವ ನಿಂದಾಸ್ತುತಿಗಳಿಗೂ ಜಗ್ಗದೆ ಆಶಾಪಾಶಗಳಿಗೂ ಮಾರುಹೋಗದೆ, ಯಾವ ಸ್ಥಾನಮಾನಗಳೂ ಶಾಶ್ವತವಲ್ಲವೆಂದು ತಿಳಿದಿರುವ, ಈ ಇಳಿ ವಯಸ್ಸಿನಲ್ಲಿ ಏನೇ ಕಷ್ಟ ಬಂದರೂ ತತ್ವವನ್ನು ಬಿಟ್ಟು ಹೋಗಲು ಸಿದ್ಧವಾಗಿಲ್ಲ, ಯಾರನ್ನು ಎದುರಿಸಬೇಕಾಗಿ ಬಂದರೂ ಚಿಂತೆಯಿಲ್ಲ. ಗಾಂಧೀಜಿಯವರ ತತ್ವಗಳನ್ನು ರಕ್ಷಣೆ ಮಾಡಲು ನನ್ನ ಕೈಲಾದಷ್ಟು ಹೋರಾಡುತ್ತೇನೆ. ಗೃಹಿಣಿಯಾದವಳು ತನ್ನ ಮಕ್ಕಳ ಪುರೋಭಿವೃದ್ಧಿಗಾಗಿ ಎಲ್ಲವನ್ನು ತ್ಯಾಗ ಮಾಡುವಂತೆ, ಇಡೀ ದೇಶದ ಗೌರವ ಮತ್ತು ಹಿತಕ್ಕೆ ಪ್ರತಿಯೊಬ್ಬರೂ ಮುಂದೆ ಬಂದು ತನ್ನ ಕೈಲಾದ ಸೇವೆ ಸಲ್ಲಿಸಬೇಕಾಗಿರುವ ಸಂದರ್ಭದಲ್ಲಿ ಯಾರೂ ಹಿಂಜರಿಯದೆ ಕಷ್ಟಪಟ್ಟು ದುಡಿಯಬೇಕು. ಇಂದು ಗಾಂಧೀಜಿಯವರ ಆಶೀರ್ವಾದದಿಂದ ಈ ದೇಶದ ಪ್ರಧಾನ ಮಂತ್ರಿ ಸ್ಥಾನವನ್ನು ಒಬ್ಬ ಹೆಣ್ಣುಮಗಳು ಅಲಂಕರಿಸಿದ್ದಾಳೆ. ಅದು ನಮಗೆಲ್ಲಾ ಹೆಮ್ಮೆಯ ವಿಷಯ. ಕೇರಳದಲ್ಲಿ ಅಕ್ಕಿಯಿಲ್ಲವೆಂಬ ಕೂಗಿಗೆ ಸಾಂಕೇತಿಕವಾಗಿ ಆಕೆ ಅಕ್ಕಿಯನ್ನು ಉಪಯೋಗ ಮಾಡುವುದಿಲ್ಲವೆಂದೂ ನಿರ್ಧರಿಸಿದ್ದಾರೆ. ಆದ್ದರಿಂದ ಉಳಿತಾಯವಾಗುವುದು ಹೆಚ್ಚೇನೂ ಅಲ್ಲದಿದ್ದರೂ, ಅದು ಕೇರಳಕ್ಕೆ ಸಾಕಾಗದಿದ್ದರೂ, ಆ ರೀತಿಯಲ್ಲಿ ಮಾಡಿರುವುದು ಆಕೆಯ ಉದಾರತನವನ್ನು ಪ್ರತಿಬಿಂಬಿಸುತ್ತದೆ. ಹಾಗೆ ಮಾಡಿದ್ದು ಬಹಳ ಒಳ್ಳೆಯದು, ಅದರಿಂದ ಸತ್ಪರಿಣಾಮವಾಗಲಿದೆ. ಪಾನನಿರೋಧ ಕಾನೂನು ನಮ್ಮ ಮೈಸೂರು ರಾಜ್ಯದಲ್ಲಿ ಮೊದಲಿನಿಂದಲೂ ಜಾರಿಗೆ ಬಂತು. ಆಮೇಲೆ ಕಾನೂನನ್ನು ಇತ್ತೀಚೆಗೆ ಮಾಡಿದರು. ಮೊದಲು ಕಾನೂನಿನ ಚೌಕಟ್ಟು ಮಾಡಿರಲಿಲ್ಲ. ಈಗ ಮಾಡಿದ್ದಾರೆ. ನಮ್ಮ ದೇಶಕ್ಕೆ ಮುಂಬಯಿ ಕರ್ನಾಟಕ, ಹೈದರಬಾದ್ ಕರ್ನಾಟಕ ಮುಂತಾದ ಭಾಗಗಳೆಲ್ಲಾ ಸೇರಿಕೊಂಡ ಮೇಲೆ ಪ್ರತಿಯೊಂದು ವಿಚಾರದಲ್ಲೂ ಏಕರೂಪದ ಕಾನೂನು ಮತ್ತು ಕಾಯಿದೆ ಮಾಡುವುದು ಸಹಜವಾಗಿಯೇ ಇದೆ.

"ಈಗ ನಮ್ಮ ರಾಜ್ಯಕ್ಕೆ ಬೊಂಬಾಯಿ-ಕರ್ನಾಟಕ, ಹೈದರಾಬಾದ್-ಕರ್ನಾಟಕ ಪ್ರದೇಶಗಳು ಬಂದ ಮೇಲೆ ಪ್ರತಿಯೊಂದು ವಿಚಾರದಲ್ಲಿ ಕಾಯಿದೆಯನ್ನು ಮಾಡುತ್ತಾ ಇದ್ದೇವೆ. ಆ ಬಗ್ಗೆ ಕಾನೂನನ್ನು ಕೂಡ ಮಾಡುತ್ತಾ ಇರುವುದು ಸಹಜವೇ ಆಗಿದೆ. 1961ರಲ್ಲಿ ಪ್ರಮೋಷನ್ ಅಂಡ್ ಎನ್ಫೋರ್ಸ್‌ಮೆಂಟ್ ಬಗ್ಗೆ ಜೂನ್‌ನಲ್ಲಿ ಕರಡು ಕಾಯಿದೆ ತಯಾರು ಮಾಡಿ ಆಮೇಲೆ ಮತ್ತೊಮ್ಮೆ ಡಿಸೆಂಬರ್‌ನಲ್ಲಿ ಯಾವುದನ್ನು ಪ್ರಕಟಣೆಮಾಡಲಾಗಿದೆಯೋ ಆ ಕಾನೂನನ್ನೇ ಇವತ್ತಿನ ದಿವಸ ಜಾರಿಗೆ ಕೊಡಬೇಕೆಂದು ಇದ್ದಾರೆ. ರಿಲಾಕ್ಸೇಷನ್ ಹೇಗೆ ಎಂದರೆ ಅದರ ಲೀಗಲ್ ಇಂಪ್ಲಿಕೇಷನ್ ಹೇಳತಕ್ಕಷ್ಟು ಶಕ್ತಿ ನನಗೆ ಸಾಲದೇ ಇದ್ದರೂ ಕೂಡ, ಬರೀ ಸಾಮಾನ್ಯ ದೃಷ್ಟಿಯಿಂದ

ನೋಡುವುದಾದರೆ ಹಿಂದೆ ಒಂದು ಪರ್ಮಿಟ್ ಬೇಕಾದರೆ ನೂರು ರೂಪಾಯಿ ಕೊಟ್ಟು ಪರವಾನಿಗೆ ತೆಗೆದುಕೊಳ್ಳ ಬೇಕಾಗಿತ್ತು. ಅದು 20 ರೂಪಾಯಿಗೆ ಉಳಿತಾಯವಾಯಿತು ಮತ್ತು ವೈದ್ಯಕೀಯ ಮಂಡಲಿಯವರ ಅಡಿಕ್ಟ್ಸ್ ಪರವಾನಗೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಈಗ ಸಾಧಾರಣ ಮೆಡಿಕಲ್ ಪ್ರಾಕ್ಟೀಷನರ್ಸ್ ಕೊಡಬಹುದು. 30 ವರ್ಷದ ಕೆಳಗೆ ಇರತಕ್ಕ ಮಕ್ಕಳಿಗೂ ಕೊಡಬಹುದು. ಸ್ವಾಮಿ, ನಮ್ಮ ದೇಶದಲ್ಲಿ ಮುದುಕರು, ಯೌವ್ವನಸ್ಥರು, ಚಿಕ್ಕ ಪ್ರಾಯದವರೂ ಕೂಡ ಆರೋಗ್ಯ ಸರಿಪಡಿಸಿಕೊಳ್ಳಬೇಕಾದರೆ ಕುಡಿತದಿಂದಲೇ ಸರಿಪಡಿಸಿಕೊಳ್ಳಬಹುದು ಎಂಬ ನಂಬಿಕೆ ತಮಗೆ ಇದ್ದರೆ ನಾನು ಏನನ್ನೂ ಹೇಳಲಾರೆ. ಮುದುಕರಿಗೆ ಕುಡಿಯುವುದು ಚಟ, ಕುಡಿಯದೆ ಇರಲಾರರು. ಅವರ ವಿಚಾರ ಬೇಡ ಏಕೆಂದರೆ ಅವರಿಗೆ ಇರುವುದೇ ಬಹಳ ಸ್ವಲ್ಪ ದಿವಸಗಳು. ಯಾರಾದರೂ ಕುಡಿದುಕೊಂಡು ಹೋಗಲಿ. ಮೂವತ್ತು ವರ್ಷದಿಂದ ಕೆಳಗೆ ಇರುವವರು ಕುಡಿಯುವುದು ಬೇಡ, ಮೂವತ್ತು ವರ್ಷದವರು ಕುಡಿಯುವುದಕ್ಕೆ ಪ್ರಾರಂಭ ಮಾಡಿದರೆ ಇವತ್ತು ಅಮೆರಿಕಾದಲ್ಲಿ ಯುವಜನರ ಸ್ಥಿತಿ ಏನಾಗಿದೆ. ಆ ರೋಗ ನಮ್ಮ ದೇಶಕ್ಕೆ ಬರುವುದು ಬೇಡ.

"ಅಮೆರಿಕಾದಲ್ಲಿ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲೂ ಕುಡಿಯುತ್ತಾರೆ ಎಂದರೆ ಚೆನ್ನಾಗಿ ತಿನ್ನುತ್ತಾರೆ. ಆದ್ದರಿಂದ ಅವರ "ಸ್ಟಾಂಡರ್ಡ್ ಲೈಫ್" ಏನಿದೆ ಅದನ್ನೆಲ್ಲಾ ಅನುಕರಣೆ ಮಾಡುವುದಾದರೆ ಇದನ್ನು ಅನುಕರಣ ಮಾಡಿ, ಅದರಿಂದ ಆಗತಕ್ಕ ದುಷ್ಪರಿಣಾಮವನ್ನು ಅನುಭವಿಸಿ ಬುದ್ಧಿ ಕಲಿಯುವುದಿಲ್ಲ ಎಂದರೆ ಅಡ್ಡಿಮಾಡುವುದಕ್ಕೆ ಸಾಧ್ಯವಿಲ್ಲ. ಅನೇಕ ರೀತಿಯ ಸುಧಾರಣೆಗಳು ಅಲ್ಲಿ ಆಗಿವೆ. ಇಂತಹ ಚಟಗಳೂ ಕೂಡ ಅಲ್ಲಿ ಹೆಚ್ಚಾಗಿ ಇವೆ. ನಾಳೆ ಹೆಣ್ಣುಮಕ್ಕಳೂ ಕೂಡ ಕುಡಿಯುವುದಕ್ಕೆ ಪ್ರಾರಂಭ ಮಾಡಿದರೆ ಏನು ಹೆಣ್ಣುಮಕ್ಕಳು ಕುಡಿಯುತ್ತಾರೆಯೇ ಎಂದು ಹಾಸ್ಯ ಮಾಡುವವರು ಉಂಟು. ಹಳ್ಳಿಗಾಡಿನಲ್ಲಿ ಹೆಣ್ಣುಮಕ್ಕಳು ಕುಡಿಯುವುದಕ್ಕೆ ಪ್ರಾರಂಭ ಮಾಡಿದರೆ ನಿಮ್ಮ ಮನೆಯಲ್ಲಿ ಒಂದು ಸಾಮಾನು ಇರುವುದಿಲ್ಲ. ಚಟ ಬಂದಾಗ ಹಣ ಇಲ್ಲದೆ ಇದ್ದರೆ ಮನೆಯಲ್ಲಿರುವ ಸಾಮಾನುಗಳನ್ನು ಒತ್ತೆ ಇಟ್ಟು ಹಣ ತಂದು ಕುಡಿಯತಕ್ಕ ಹವ್ಯಾಸಕ್ಕೆ ತೊಡಗುವುದರಲ್ಲಿ ಸಂದೇಹವಿಲ್ಲ. ಇದಕ್ಕಿಂತ ಹೆಚ್ಚಿಗೆ ಏನನ್ನು ಹೇಳಲಾರೆ. "ನೆಮ್ಮದಿಗಾಗಿ ಪಾನ" ಅನ್ನುವುದು ಈಗ ಏನಾಗಿದೆ? ಇದು ಇನ್ನು ಸಡಿಲವಾದರೆ ಮುಂದೆ ಇದರ ಪರಿಣಾಮ ಏನಾದೀತು, ಎಂಬ ಭೀತಿಯಿಂದ ಜನಗಳು ಇದನ್ನು ಹೊರಗೆ ಹೇಳಬೇಕಾದರೆ ಮಂತ್ರಿಮಂಡಲದಲ್ಲಿ ಇದ್ದುಕೊಂಡು ಸರ್ಕಾರ ಮಾಡತಕ್ಕ ನೀತಿಯನ್ನು ಸರ್ಕಾರದ ಬಳಿ ಇದ್ದು ಪ್ರತಿಭಟಿಸುವುದು ಎಂದರೆ ಸಾಧ್ಯವಾಗುವುದಿಲ್ಲ. ಅದು ನ್ಯಾಯವೂ ಅಲ್ಲ. "ಟೇಕ್ ಚಂದ್ ಕಮಿಟಿ ರಿಪೋರ್ಟ್" ಬಂದಾಗ ಅದಕ್ಕೆ ನನ್ನ ಒಂದು ಅಭಿಪ್ರಾಯವನ್ನು ಕೊಟ್ಟಿದ್ದೆ. ಇದನ್ನು ಸಡಿಲ ಮಾಡಿದಾಗ ನಾಲ್ಕನೇ ತಾರೀಖು ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಐದನೇ ತಾರೀಖು ಮತ್ತು 17ನೇ ತಾರೀಖು ಕಾಗದ ಬರೆದು ನನ್ನ ಎಲ್ಲ ಸಹೋದ್ಯೋಗಿಗಳಿಗೂ ಹಂಚಿದ್ದೇನೆ. ಸರ್ವ ಪ್ರಯತ್ನವನ್ನು ನಾನು ಮಾಡಿ ಎಲ್ಲರ ಮೇಲೂ ಕೂಡ ಏಕ ರೀತಿಯಲ್ಲಿ ಇದರ ಅರ್ಥವನ್ನು ತಿಳಿಯಪಡಿಸುವುದಕ್ಕೆ ಶಕ್ತಿ ಸಾಲದೇ ಇದ್ದದರಿಂದ ಹೊರಗೆ ಬರಬೇಕಾಯಿತು. 16ನೇ ತಾರೀಖಿನ ದಿವಸ ಇದು ಗೆಜೆಟ್‌ನಲ್ಲಿ ಬಂದು ಆಗ ನಾನು ರಾಜೀನಾಮೆ ಸಲ್ಲಿಸಿದೆ. ಈ ಕಾಗದಗಳಲ್ಲಿ ನನ್ನ ಮನಸ್ಸಿನ ಮೇಲೆ ಆದಂತಹ ಅಭಿಪ್ರಾಯ ಮತ್ತು ಅವರನ್ನು ಎಷ್ಟು ಬಗೆಯಿಂದ ಮನವಿ ಮಾಡಿಕೊಳ್ಳಬಹುದೋ ಅಷ್ಟೂ ಮಾಡಿಕೊಂಡು ಸರ್ವ ಪ್ರಯತ್ನವನ್ನು ಮಾಡಿ ಅದರಲ್ಲಿ ಜಯಸಿಕ್ಕದೆ ಹೋಗಿದ್ದರಿಂದ ಹೊರಗೆ ಬಂದು ನನ್ನ ಕೈಲಾದಂತಹ ರಚನಾತ್ಮಕ ಕೆಲಸಕಾರ್ಯಗಳನ್ನು ಮಾಡೋಣ ಎಂದು ಹೇಳಿ ಹೊರಗೆ ಬಂದಿದ್ದೇನೆ. ಈ ವಿಚಾರಗಳನ್ನೆಲ್ಲಾ ಬಹಳ ಸಂವಿಧಾನಾತ್ಮಕವಾಗಿ ನಮ್ಮ ಪಕ್ಷಕ್ಕೆ ಅನುಗುಣವಾಗಿ ಯಾವ ರೀತಿ ಮಾಡಬೇಕೆಂದು ಹೇಳಿ ಯೋಚನೆ ಮಾಡಿ ದೊಡ್ಡವರು, ಹಿರಿಯರೆಲ್ಲರ ಅಪ್ಪಣೆಯ ಮೇರೆಗೆ ಇವತ್ತಿನ ದಿವಸ ನಾನು ಈ ರೀತಿಯನ್ನು ಅನುಸರಿಸಿದ್ದೇನೆ ಎಂದು ಹೇಳಬಯಸುತ್ತೇನೆ" ಎಂದು ತಿಳಿಸಿದರು.

ಮತ್ತೆ ತಮ್ಮ ನಿಲುವನ್ನು ಮುಂದುವರೆಸಿ, "ಈ ಸಭೆಯಲ್ಲಿ ಅನೇಕ ಮಹನೀಯರು ಅನೇಕ ರೀತಿಯಲ್ಲಿ ಪ್ರಶ್ನೆ ಕೇಳಿದ್ದಾರೆ. ಇಲ್ಲಿ ಕೇಳಿರುವುದೂ ಅಲ್ಲದೆ ಹೊರಗಡೆಯೂ ಸಹ ಜನ ಕೇಳಿದ್ದಾರೆ. ಹೊರಗಿನ ಜನಕ್ಕೆ ಹೊರಗಡೆಯೇ ಉತ್ತರ ಕೊಡುತ್ತೇನೆ. ಈ ಕೆಲಸಗಳನ್ನು ಮಾಡುವಾಗ "ರೋಮನ್ ರೊಲಾ" ಅವರು ಒಂದು ವಿಷಯವನ್ನು ಹೇಳಿದ್ದಾರೆ. ನಾಲ್ಕಾರು ಜನ ದೊಡ್ಡ ವ್ಯಕ್ತಿಗಳು ಹೇಳಿದ್ದನ್ನು ಹೇಳಿ ಈ ನನ್ನ ಹೇಳಿಕೆಯನ್ನು ಮುಗಿಸುತ್ತೇನೆ" ಎಂದು ತಿಳಿಸಿದರು. "ಈ ಒಂದು ಕೆಟ್ಟ ದೋಷವು ಕಾಯಕವನ್ನು ಹಾಳು ಮಾಡುತ್ತದೆ, ಹೇಗೆಂದರೆ ಕೆಡುಕಿನ ಶಕ್ತಿಯಿಂದಲ್ಲ ಆದರೆ ಒಳ್ಳೆಯತನದ ನಿಶ್ಶಕ್ತಿಯಿಂದ. ಈ ಮಾತನ್ನು ನಾನು ಅನೇಕ ಬಾರಿ ಘೋಷಿಸಿದ್ದೇನೆ. ಈ ವಿಷಯಗಳನ್ನು ಪ್ರತಿಭಟಿಸಲು ಒಂದು ಬಗೆಯ ಸಂಕೋಚದಿಂದಲೋ ಅಥವಾ ಜನಗಳ ಒತ್ತಾಸೆ ಸಿಕ್ಕುತ್ತದೆಯೋ ಇಲ್ಲವೋ ಎಂಬ ಹೆದರಿಕೆಯಿಂದಲೋ ನಾವು ಸತ್ಯವನ್ನು ಎತ್ತಿ ಹಿಡಿಯುವುದರಲ್ಲಿ ಹಿಂದೆಗೆಯಬಾರದು. ಇದು ರೊಮನ್ ರೊಲಾ ಅವರು ಹೇಳಿರತಕ್ಕ ಮಾತು" ಎಂದು ತಿಳಿಸುತ್ತಾ, ಸ್ವಾಮಿ ವಿವೇಕಾನಂದರು "ಇಂತಹ ಒಂದು ದೇಶ ಸೇವೆ ಮತ್ತು ಅದರ ಶ್ರದ್ಧಾಭಿವೃದ್ಧಿಯ ಬಗ್ಗೆ ಹೇಳುತ್ತಾ ಇದಕ್ಕೆ ಶ್ರದ್ಧೆ, ಶಕ್ತಿ, ಕ್ಷಾತ್ರೀಯಬಲ ಬೇಕು ಎಂದು ಹೇಳಿದ್ದಾರೆ. ಇದಕ್ಕೆ ಒಂದು ತೇಜಸ್ಸು ಬೇಕು. ಇಂತಹ ತೇಜಸ್ಸು, ಶಕ್ತಿ, ಸಾಮರ್ಥ್ಯ, ಚೈತನ್ಯ ನಮಗೆ ಬರಬೇಕಾದರೆ ಯಾವ್ಯಾವ ಕಷ್ಟಕಾರ್ಪಣ್ಯಗಳು ಬರುತ್ತವೆಯೋ ಅದನ್ನು ಎದುರಿಸತಕ್ಕ ಮನೋಧರ್ಮ ನಮ್ಮಲ್ಲಿ ಬೆಳೆಯಬೇಕು. ಅದಕ್ಕೆ ಗಾಂಧೀಜಿಯವರು ಯಾವಾಗಲೂ "ಪ್ರಚಾರಕ್ಕಾಗಿ ಹಾತೊರೆಯಬೇಡಿ, ನಿಮ್ಮ ಕೆಲಸವೇ ನಿಮ್ಮ ಬಗ್ಗೆ ಮಾತನಾಡಬೇಕು, ಏನು ಮಾಡಿದರೂ ಕೃತಿಯಲ್ಲಿ ಮಾಡಬೇಕು ಮಾತನಾಡುವುದಕ್ಕೆ ಹೋಗಬೇಡಿ" ಎಂದು ಅವರು ಪದೇ ಪದೇ ರಚನಾತ್ಮಕ ಕೆಲಸಗಳನ್ನು ಮಾಡುವಾಗ ಹೇಳುತ್ತಾ ಇದ್ದರು. ಕಸ್ತೂರಬಾ ಸಂಸ್ಥೆಯಲ್ಲಿ ನಡೆಯುತ್ತಾ ಇರುವ ವ್ಯವಹಾರದಲ್ಲಿ ನೀವೇನು ಮಾಡುತ್ತಾ ಇದ್ದೀರಿ? ಅದರಲ್ಲಿ ಸಂಗ್ರಹವಾದ ಹಣ ಏನು ಮಾಡಿದಿರಿ ಎಂದು ಜನ ನಾನಾ ರೀತಿಯಲ್ಲಿ ದೂಷಣೆ ಮಾಡುತ್ತಾರೆ ಎಂದು ನಾವು ಗಾಂಧೀಜಿ ಅವರ ಹತ್ತಿರ ಹೇಳಿದಾಗ ಅವರು ಈ ಕೆಳಗಿನ ಮಾತನ್ನು ಹೇಳಿದರು. "ಪ್ರಚಾರಕ್ಕಾಗಿ ಹಾತೊರೆಯಬೇಡಿ, ಸ್ವಾಮಿ ಸರಕಾರದ ಪಾನನಿರೋಧ ನೀತಿಯ ಪರಿಣಾಮವಾಗಿ ನಾನು ರಾಜೀನಾಮೆ ಕೊಟ್ಟು ಹೊರಗೆ ಬಂದಾಗ್ಗೆ ಅರಸೀಕೆರೆಯಲ್ಲಿ ಹತ್ತು ಲಕ್ಷ ರೂಪಾಯಿ ಆಸ್ತಿ ನಾನು ಮಾಡಿದ್ದೇನೆ. ಮಹಾರಾಜರವರು ನನಗೆ ನೂರು ಎಕರೆ ಜಮೀನು ಕೊಟ್ಟಿದ್ದಾರೆ. ಸುಮ್ಮನೆ ನಾನು ಮನೆಯಲ್ಲಿ ಇರಬಹುದು ಹೊರಗೆ ಕೆಲಸ ಮಾಡುವುದು ಬಿಟ್ಟು ಬಿಡಬೇಕು ಎಂದು ಕೆಲವರು ಕಾಗದ ಬರೆದರು. ಅರಸೀಕೆರೆಯಲ್ಲಿಯ ಈ ಆಸ್ತಿ ನನಗೆ ಸೇರಿದ್ದು ಅಲ್ಲ. ಅದು ಕಸ್ತೂರ ಬಾ ಟ್ರಸ್ಟಿಗೆ ಸೇರಿದೆ. ಅದರಲ್ಲಿ ಒಂದು ಎಕರೆ ಭೂಮಿಯಾಗಲಿ ಒಂದು ತೆಂಗಿನ ಮರವಾಗಲಿ ನನಗೆ ಸೇರಿಲ್ಲ. ಮಹಾರಾಜರು ಅಲ್ಲಿಗೆ ಬಂದು ನೋಡಬೇಕು. ಈ ಆಸ್ತಿ ಯಾರಿಗೆ ಸೇರಿದೆ, ಎಂಬುದು ಮಹಾರಾಜರಿಗೆ ಗೊತ್ತಾದರೆ ಅದೊಂದು ಹೆಮ್ಮೆಯ ವಿಷಯ. ನಿಜವಾಗಿಯೂ ಕೆಲಸ ಕಾರ್ಯಗಳ ಬಗ್ಗೆ ಮಾತನಾಡಬೇಕು. ಆದರೆ ತಾವು ಈ ರೀತಿ ಪ್ರಚಾರ ಮಾಡತಕ್ಕದ್ದು ಸರಿಯಲ್ಲ.

"ಈಗ ಜನ ತೆರಿಗೆ ವಿಚಾರ ಮಾತನಾಡುತ್ತಾರೆ. ತೆರಿಗೆಗಳ ಮೂಲಕ ಸರ್ಕಾರಕ್ಕೆ ಹಣವಿಲ್ಲದಿದ್ದರೆ ದೇಶದ ಕೆಲಸ ಕಾರ್ಯಗಳನ್ನು ಮಾಡುವುದು ಸರ್ಕಾರಕ್ಕೆ ಕಷ್ಟ ಎಂಬುದನ್ನು ನಾನು ಬಲ್ಲೆ. ಯಾವ ರೀತಿ ತೆರಿಗೆ ಹಾಕಬೇಕು, ಯಾವ ರೀತಿ ಹಣ ವಸೂಲಿ ಮಾಡಬೇಕು, ಇದಕ್ಕೆ ಎಷ್ಟು ಸಿಬ್ಬಂದಿ ಇಡಬೇಕು, ಇದೆಲ್ಲಾ ಆಡಳಿತ ವರ್ಗಕ್ಕೆ ಸೇರಿದ್ದು. ಯಾವುದೇ ಕಂದಾಯ ಇರಲಿ ಅದನ್ನು ಸರಿಯಾದ ಸಮಯದಲ್ಲಿ ಸರ್ಕಾರಕ್ಕೆ ಒದಗಿಸತಕ್ಕದ್ದು ಮಹಾಜನರ ಕರ್ತವ್ಯ. ಪಾನನಿರೋಧ ನೀತಿ ಬದಲಾವಣೆಯಿಂದ ಕಂದಾಯ ಕೊಡುವುದು ಕಡಿಮೆಯಾಗುತ್ತದೆ ಎಂದು ತಿಳಿದುಕೊಳ್ಳುವುದು ಖಂಡಿತವಾಗಿ ತಪ್ಪಾಗುತ್ತದೆ. ಪಾನ ನಿರೋಧದಿಂದ ಸರ್ಕಾರದ ಖಜಾನೆಗೆ ಬರಬೇಕಾದ ಹಣ ಎಷ್ಟು ಕಡಿಮೆಯಾಗುತ್ತದೆಯೋ ಅದನ್ನು ಸರಿದೂಗಿಸಲು ಘಾರಾಟ ತೆರಿಗೆ ಹಾಕುವುದನ್ನು ರಾಜಾಜಿಯವರು

ಸೂಚಿಸಿದರು ಎಂದು ಕೆಲವರು ಹೇಳುತ್ತಾರೆ. ಪಾನನಿರೋಧ ಹೋದರೂ ಕೂಡ ಮಾರಾಟ ತೆರಿಗೆ ಉಳಿಯುತ್ತದೆ. ಆಡಳಿತ ಸೂತ್ರ ಯಾವ ಪಕ್ಷದವರ ಕೈಯಲ್ಲಿ ಇದ್ದರೂ ಜನಸಮುದಾಯದ ಕಲ್ಯಾಣ ಸಾಧನೆ ಮಾಡಬೇಕಾಗುತ್ತದೆ. ಆದುದರಿಂದ ಇರತಕ್ಕಂಥ ಪರಿಮಿತಿಯ ಚೌಕಟ್ಟಿನಲ್ಲಿ ಆಡಳಿತ ಸೂತ್ರ ನಡೆಸುವವರು ಯಾವ ರೀತಿ ಕೆಲಸ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಎಷ್ಟು ಆದಾಯ ಇದೆಯೋ ಇದ್ದಷ್ಟರಲ್ಲಿಯೇ ವೆಚ್ಚವನ್ನು ಸರಿಪಡಿಸಿಕೊಳ್ಳಬೇಕು. ಈ ಮಾತನ್ನು ಪ್ರತಿಯೊಬ್ಬ ಗೃಹಿಣಿಯೂ ಬಲ್ಲಳು. ಒಬ್ಬ ಮಹಾಕವಿ ಈ ರೀತಿ ಹೇಳಿದ್ದಾರೆ" ಎಂದು ಕೆಳಗಿನ ಸಾಲುಗಳನ್ನು ತಿಳಿಸಿದರು.

"ಕರ್ತವ್ಯವೆಂಬುದು ನರನು ತೆರಬೇಕಾದ ತೆರಿಗೆ ಕಣಾ
ತೆರೆದೊಡೆ ಅವಮಾನಸಿದ್ಧ, ನೀತಿ ಭ್ರಷ್ಟತೆ ಸಿದ್ಧವಯ್ಯಾ
ಕರ್ತವ್ಯ ಶೂರನಾಗು
ಕರ್ತವ್ಯ ಭಾರನಾಗಬೇಡ
ಜನನವಾದದ್ದು ಮೊದಲಾಯಿತೀ ಭಾರತೀಯರಿರುವುದು ಮರಣದೊಂದಿಗಯ್ಯಾ
ಕರ್ತವ್ಯ ಧರ್ಮದ ಮೇಲೆ ನಿಂತಿದೆ. ಧರ್ಮ ಪ್ರೀತಿಯಿಂದ ಸ್ಫೂರ್ತಿಗೊಂಡಿದೆ.

ಆದುದರಿಂದ ಒಂದು ಮಾತಿನಲ್ಲಿ ಹೇಳುವುದಾದರೆ, ಕುಡಿತದಿಂದ ಆರೋಗ್ಯ ಕೆಡುತ್ತದೆ. ಆಧ್ಯಾತ್ಮಿಕ ಉನ್ನತಿಯಾಗುವುದಿಲ್ಲ. ಬೌದ್ಧಿಕ ಬೆಳವಣಿಗೆ ಕೆಟ್ಟು ಹೋಗುತ್ತದೆ. ಇದಲ್ಲದೆ ಆರ್ಥಿಕ ಸ್ಥಿತಿ ಕೂಡ ಬಹಳ ಕೆಳಮಟ್ಟಕ್ಕೆ ಇಳಿಯುತ್ತದೆ. ಇದರಲ್ಲಿ ಅನೇಕರಿಗೆ ನಂಬಿಕೆ ಇರಬಹುದು ಅಥವಾ ಇಲ್ಲದೆ ಇರಬಹುದು. ನನ್ನ ಪ್ರಚಾರವನ್ನು ಮೊದಲು ನಿಮ್ಮಲ್ಲಿ ಪ್ರಾರಂಭ ಮಾಡುತ್ತೇನೆ. ನಾನು ಕೈಜೋಡಿಸಿ ನಿಮಗೆಲ್ಲರಿಗೂ ಬೇಡಿಕೊಳ್ಳುತ್ತೇನೆ. ಒಂದು ಮನೆಯಲ್ಲಿ ಒಬ್ಬ ಕುಡುಕ ಇದ್ದರೆ ಅಣ್ಣತಮ್ಮಂದಿರಲ್ಲಿ ಒಬ್ಬನು ಕುಡುಕನಾದರೆ ಮನೆಯವರೆಲ್ಲರೂ ಎಷ್ಟು ಕಷ್ಟಪಡಬೇಕಾಗುತ್ತದೆ ಎಂಬುದು ಆ ತಾಯಿಗೆ ಮಾತ್ರ ಗೊತ್ತು. ಪರಿಸ್ಥಿತಿಗೆ ಅನುಗುಣವಾಗಿ ನಿಸ್ಸಹಾಯಕರಾದ ಹೆಣ್ಣುಮಕ್ಕಳಿಗೆ ಅದು ಗೊತ್ತು. ಇಂಥ ಪರಿಸ್ಥಿತಿಯಲ್ಲಿ ನಮ್ಮ ದೇಶ ಹಿನ್ನಡೆಯುವುದಕ್ಕೆ ಬಿಡಲು ಯಾವ ಹೆಣ್ಣುಮಗಳೂ ತಯಾರು ಇರುವುದಿಲ್ಲ. ನಮ್ಮಲ್ಲಿ ಕುಡಿಯುವುದು ಕೆಲವರಿಗೆ ಶೋಕಿ ಆಗಿದೆ. ನಾಲ್ಕು ಜನ ಸೇರಿದಾಗ ಕುಡಿಯುವುದು ಒಂದು ಪದ್ಧತಿಯಾಗಿದೆ. ಆದರೆ ಇಂಥ ಸಂದರ್ಭದಲ್ಲಿ ಸಹ ಕುಡಿಯದೆ ಇರತಕ್ಕಂಥ ಅನೇಕ ಮಹನೀಯರು ಇದ್ದಾರೆ. ಬೇರೆಯವರಿಗೆ ಕುಡಿಸುತ್ತಾರೆ, ಆದರೆ ತಾವು ಮಾತ್ರ ಕುಡಿಯುವುದಿಲ್ಲ. ವ್ಯಾಪಾರ ಮಾಡತಕ್ಕ ಜನರು ಬೇರೆಯವರಿಗೆ ಕುಡಿಸುತ್ತಾರೆ ಆದರೆ ತಾವು ಕುಡಿಯದೆ ಎಚ್ಚರಿಕೆಯಿಂದ ಇರುತ್ತಾರೆ. ಕುಡಿದು ಎಚ್ಚರ ತಪ್ಪಿದಾಗ ಗುಪ್ತ ಹಾಗೂ ಸೈನ್ಯದ ರಹಸ್ಯಗಳು ಕೂಡ ಬಹಿರಂಗಪಡಿಸಲ್ಪಟ್ಟಿವೆ. ಕುಡಿತದ ಅಮಲಿನಲ್ಲಿ ಎಂಥ ರಹಸ್ಯವನ್ನಾದರೂ ಹೇಳಿ ಬಿಡುತ್ತಾರೆ. ಕುಡಿತ ಒಂದು ವಿಷ ಇದ್ದ ಹಾಗೆ ಇದೆ. ಇದೊಂದು ಚಟ ಹವ್ಯಾಸವಾಗಿದೆ. ಕಾಫಿ, ಟೀ ಕುಡಿಯುವವರು ಕುಡಿಯದೇ ಇದ್ದರೆ ಹೇಗೆ ತಲೆನೋವು ಬರುತ್ತದೆಯೋ, ಹಾಗೆಯೇ ಇದೂ ಒಂದು ಕುಡಿಯುವ ಚಟವಾಗಿದೆ. ಕುಡಿಯುವ ಚಟದ ಬಗ್ಗೆ ಸರ್ವಜ್ಞ ಕವಿಯು ಒಂದು ಪದ್ಯದಲ್ಲಿ ಈ ರೀತಿ ಹೇಳಿದ್ದಾನೆ" ಎಂದು ಕೆಳಗಿನ ಸಾಲುಗಳನ್ನು ಓದಿದರು.

"ಅಡವಿಯನು ಹೊಗಬಹುದು
ಮಡದಿಯ ಬಿಡಬಹುದು
ಬಿಡದೆ ಧ್ಯಾನವಿರಬಹುದು
ವಾಸನೆಯ ಕೊಡಹಲಳವಲ್ಲ ಸರ್ವಜ್ಞ

ಕುಡಿಯುವ ಚಟವನ್ನು ಬಿಡುವುದು ಸಾಧ್ಯವಿಲ್ಲ. ಆದರೂ ಕೂಡ ಇಂಥ ಚಟಗಳನ್ನು ಗೆದ್ದವನೆ ನಿಜವಾದ ಧೀರ. ಅವನೇ ರಾಜ್ಯ ಸೂತ್ರಗಳನ್ನು ಹಿಡಿದು ನಡೆಸಬಲ್ಲ ವೀರ, ಅವನೇ ಮಹಾತ್ಯಾಗಿ" ಎಂದು ತಿಳಿಸಿದರು.

"ಶಾಂತಿದೂತರಾದ ಲಾಲ್‌ಬಹಾದ್ದೂರ್ ಶಾಸ್ತ್ರಿಯವರು ಕೈಗೊಂಡ ಸರಳ ಜೀವನ ಎಲ್ಲರಿಗೂ ಆದರ್ಶವಾಗಿದೆ. ವೀರಧೀರರಾಗಿ ತಮ್ಮ ಕರ್ತವ್ಯ ನೆರವೇರಿಸುತ್ತಾ ಅವರು ಕಣ್ಣುಮುಚ್ಚಿದರು. ಅವರ ಸರಳತೆ, ಅವರ ಪ್ರಭಾವ ಎಲ್ಲರಿಗೂ ಆದರ್ಶವಾಗಿದೆ. ಸಾಧ್ವೀಮಣಿಯಾದ ಅವರ ಹೆಂಡತಿಯು ಎಲ್ಲ ಹೆಣ್ಣುಮಕ್ಕಳ ಮನಸ್ಸಿನಲ್ಲಿ ಅಭಿಮಾನ ಹುಟ್ಟಿಸಿದ್ದಾರೆ. ಸಾಧ್ವೀಮಣಿಯಾದವರು ತಮ್ಮ ಪ್ರಭಾವದಿಂದ ಮನೆಯನ್ನು ಮೇಲಕ್ಕೆ ಎತ್ತಿ ತರುತ್ತಾರೆ, ದೇಶವನ್ನು ಉದ್ಧಾರ ಮಾಡುತ್ತಾರೆ. ಆದುದರಿಂದ, ಅವರ ಕೈಯಲ್ಲಿ ಮನೆ ಯಜಮಾನಿಕೆ ಕೊಡುತ್ತೇವೆ. ಮನೆಯನ್ನು ಸರಿಯಾಗಿ ಕಾಪಾಡಿಕೊಂಡು ಬರುತ್ತಾರೆ. ಇವತ್ತಿನ ದಿವಸ ಆಡಳಿತ ಸೂತ್ರ ಇಂಥ ಸ್ವಾಧೀಮಣಿ ಕೈಯಲ್ಲಿ ಇರುವುದರಿಂದ ದೇಶದ ಕಲ್ಯಾಣವಾಗುತ್ತಿದೆ, ಸಮಾಜ ಕಲ್ಯಾಣವಾಗುತ್ತಿದೆ. ಇಂದು ನಮ್ಮ ಸಮಾಜ ಅಧೋಗತಿಗೆ ಹೋಗುವುದು ಬೇಡ. ದೇಶದಲ್ಲಿಯ ಹೆಣ್ಣುಮಕ್ಕಳು ಕಣ್ಣೀರು ಸುರಿಸುವಂತಾದರೆ ಸಮಾಜ ಕಲ್ಯಾಣ ಮಂತ್ರಿಯಾಗಿ ನಾನು ಇರುವುದು ನ್ಯಾಯವಲ್ಲ, ಧರ್ಮವಲ್ಲ ಎಂದು ನಾನು ತಿಳಿದುಕೊಂಡು, ಈ ಸ್ಥಾನದಿಂದ ಹೊರಗೆ ಬರಲು ತೀರ್ಮಾನ ಮಾಡಿದೆ. ಇದನ್ನು ಬಹಳ ದಿನ ಯೋಚಿಸಿದ್ದೇನೆ, ಆಗಾಗ್ಗೆ ಮದ್ಯಪಾನ ನಿರೋಧ ಸಡಲಿಕೆಯ ವರ್ತಮಾನ ಬಂದಾಗ್ಗೆ ನನ್ನ ಮನಸ್ಸಿನಲ್ಲಿ ಉಂಟಾದ ಭಾವನೆಯ ಬಗ್ಗೆ ನನ್ನ ಹಿತಚಿಂತಕರೊಡನೆ ನಾನು ಮಾತನಾಡುತ್ತಿದ್ದೆ. ಈಗ ಅಂಥ ಸನ್ನಿವೇಶ ಬಂದುದರಿಂದ ಕೊನೆಯ ತೀರ್ಮಾನಕ್ಕೆ ಬಂದೆ. ಜನಗಳ ಮನಃ ಪರಿವರ್ತನೆ ಕೆಲಸ ಮಾಡುವುದಕ್ಕೆ ಸಿದ್ಧಳಾಗಿದ್ದೇನೆ" ಎಂದು ತಿಳಿಸಿದರು.

ತಾವು ಮಂತ್ರಿ ಪದವಿಯಲ್ಲಿ ಇರುವಾಗ್ಗೆ ಎಲ್ಲ ರೀತಿಯ ಬೆಂಬಲ ಸಹಕಾರ ನೀಡಿದ ಮುಖ್ಯಮಂತ್ರಿಗಳು ಮತ್ತು ಸಹೋದ್ಯೋಗಿಗಳಿಗೆ ಮತ್ತು ಅಧಿಕಾರಿ ವರ್ಗದವರಿಗೆ ಅಭಿನಂದನೆಯನ್ನು ಸಲ್ಲಿಸಿದರು. ನಂತರ ಮತ್ತೆ ತಮ್ಮ ನಿಲುವಿನ ಬಗ್ಗೆ ಮಾತನ್ನು ಮುಂದುವರೆಸಿದರು, "ಮಾನ್ಯ ಮುಖ್ಯಮಂತ್ರಿಗಳವರಿಗೆ ಒಂದು ವಿಷಯ ಜ್ಞಾಪಕಕ್ಕೆ ತಂದುಕೊಡುತ್ತೇನೆ" ಎನ್ನುತ್ತಾ "ಸಾವಿರಾರು ಜನರ ಕೂಡ ಸೇರಿಕೊಂಡು ತುರುವನೂರಿನಲ್ಲಿ ಸತ್ಯಾಗ್ರಹ ಮಾಡಿ ಪಾನ ನಿರೋಧ ಚಳುವಳಿಯಲ್ಲಿ ಭಾಗವಹಿಸಿ ಈಚಲ ಮರಗಳನ್ನು ಕಡಿದು ತುರಂಗವಾಸ ಅನುಭವಿಸಿರುವುದನ್ನು ಅವರ ಜ್ಞಾಪಕಕ್ಕೆ ತಂದು ಕೊಡುತ್ತೇನೆ" ಎಂದು ಹೇಳಿದರು. "ಅಂಥವರು ಯಾವುದೋ ಒಂದು ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ಬಿದ್ದು ಈ ಪಾನನಿರೋಧ ಸಡಲಿಕೆಗೆ ಹೇಗೆ ಒಪ್ಪಿದರು ಎಂಬುದು ನನಗೆ ಅರ್ಥವಾಗಿಲ್ಲ. ಇವತ್ತು ಕೂಡ ಸಂಪೂರ್ಣ ಪಾನನಿರೋಧದಲ್ಲಿ ಅವರಿಗೆ ನಂಬಿಕೆ ಇದೆ. ಸಹಿ ಸಂಗ್ರಹಣೆ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದಾಗ ಮೊದಲು ಅವರ ಸಹಿಯನ್ನು ತೆಗೆದುಕೊಳ್ಳುವ ಸಂಪೂರ್ಣ ನಂಬಿಕೆ ನನಗೆ ಇದೆ. ಇಂದು ನಾನು ಯಾವುದೇ ರೀತಿಯ ವೈಮನಸ್ಸಿನಿಂದ ರಾಜೀನಾಮೆಯನ್ನು ಕೊಟ್ಟು ಹೊರಗೆ ಹೋಗುತ್ತಿಲ್ಲ. ಗಾಂಧೀಜಿಯವರ ತತ್ವಗಳನ್ನು ಅನುಷ್ಠಾನಕ್ಕೆ ತರುವಾಗ ನಾನು ಮಾಡತಕ್ಕಂಥ ಪ್ರಚಾರದಲ್ಲಿ ಯಾವ ಒಂದು ಸತ್‌ಪ್ರೇರಣೆ, ಸನ್ಮಾರ್ಗವಿದೆಯೊ ಅದನ್ನು ಉಜ್ವಲವಾಗಿ ನಡೆಸಿಕೊಂಡು ಹೋಗುತ್ತೇನೆಂದು ಹೇಳುತ್ತೇನೆ. ಅದಕ್ಕೆ ಬೇರೆ ಬೇರೆ ಅರ್ಥಗಳನ್ನು ಕಲ್ಪಿಸಬಾರದು. ನನ್ನ ಸಂಪೂರ್ಣ ಬೆಂಬಲ ಈ ಕಾಂಗ್ರೆಸ್ ಸಂಸ್ಥೆಗೂ ಮತ್ತು ಈ ಸರ್ಕಾರಕ್ಕೂ ಇದೆ. ಅವರಿಗೆ 50 ಲಕ್ಷ ರೂಪಾಯಿಗಳು ಸಡಲಿಕೆಯಿಂದ ಬರುವಂತಹ ಹಣವನ್ನು ಯಾವ ಬಗೆಯಲ್ಲಿ ನಾವು ಸಂಪಾದನೆ ಮಾಡಿಕೊಡಬಹುದು ಎಂಬುದು ನನ್ನ ಯೋಜನೆಯಲ್ಲಿದೆ. ಈ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ನನಗೆ ಯಾವುದೇ ರೀತಿಯ ಘರ್ಷಣೆ ವೈಮನಸ್ಯವಿಲ್ಲ. ಲಾಲ್ ಬಹಾದ್ದೂರ್ ಶಾಸ್ತ್ರಿಜೀಯವರು ಪಾಕಿಸ್ತಾನದ ಮನಸ್ಸನ್ನು ಒಲಿಸಿಕೊಂಡು ತನ್ನ ದೇಹವನ್ನು ಈ ದೇಶಕ್ಕೆ

ತ್ಯಾಗ ಮಾಡಿ ಅದೇ ಅಯೂಬ್‌ಖಾನ್ ಅವರು ಪಾರ್ಥಿವ ಶರೀರವನ್ನು ಹೊತ್ತುಕೊಂಡು ಹೋಗುವ ಒಂದು ಸಂದರ್ಭವನ್ನು ಕಲ್ಪಿಸಿ ಆ ಪಾಕಿಸ್ತಾನದ ಮೇಲೆ ತನ್ನ ಭೌತಿಕ ಶರೀರವು ಹಾರಿ ಹೋಗುವಂತೆ ಮಾಡಿ ನಮ್ಮಲ್ಲಿ ಒಂದು ಐಕ್ಯತೆಯನ್ನು ಹುಟ್ಟಿಸಿದರು. ಆದ್ದರಿಂದ ಈ ಮಹಾನುಭಾವರು ಸತ್ತರೂ ಸಹ ಅವರ ಶಾಂತಿಪ್ರಿಯತೆ, ಅವರು ಲೋಕ ಕಲ್ಯಾಣಕ್ಕಾಗಿ ಮಾಡತಕ್ಕಂಥ ಕಾರ್ಯಮಾಡಿ ತೋರಿಸಿ ಹೋಗಿದ್ದಾರೆ. ಈ ಒಂದು ಒಳ್ಳೆಯ ಸತ್ಕಾರ್ಯ ನಮ್ಮ ಮನಸ್ಸಿನಲ್ಲಿ ಬೇರೂರಿ ನಾವೆಲ್ಲರೂ ಈ ದೇಶದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ ಮತ್ತು ಈ ನಮ್ಮ ದೇಶವನ್ನು ಸಂಪದ್ಭರಿತವನ್ನಾಗಿ ಮಾಡಿ ಈ ಬಡತನದ ಕಷ್ಟಕಾರ್ಪಣ್ಯಗಳನ್ನು ನೀಗುವುದಕ್ಕೆ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣ" ಎಂದರು.

ಮತ್ತೆ ಮಾತನ್ನು ಮುಂದುವರೆಸುತ್ತ ಯಶೋಧರಮ್ಮನವರು "ಪದೇಪದೇ ಈ ಸಭೆಯಲ್ಲಿ ಮತ್ತು ಪತ್ರಿಕೆಗಳಲ್ಲಿ ಅರಣ್ಯ ಶಾಖೆಯ ಮಂತ್ರಿಗಳಾದ ಬಿ. ರಾಚಯ್ಯ ನವರು ಮತ್ತು ಸಮಾಜ ಕಲ್ಯಾಣ ಶಾಖೆಯ ಉಪಮಂತ್ರಿಗಳಾದ ಪ್ರಭಾಕರರವರು ಏತಕೋಸ್ಕರ ರಾಜೀನಾಮೆ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ ಮತ್ತು ಕೇಳುತ್ತಿದ್ದಾರೆ. ನಾನು ರಾಜೀನಾಮೆ ಕೊಡುವುದಕ್ಕೆ ಮನಸ್ಸು ಮಾಡಿದಾಗ ಅವರಿಬ್ಬರೂ ನನ್ನಲ್ಲಿ ಬಂದು ಈ ವಿಚಾರ ಚರ್ಚೆ ಮಾಡಿದ್ದಾರೆ. ನನ್ನ ಮಕ್ಕಳಿಗೆ ಯಾವ ರೀತಿ ಬುದ್ಧಿ ಹೇಳುತ್ತಿದ್ದೇನೆಯೊ, ಅದೇ ರೀತಿ ಅವರುಗಳಿಗೂ ಬುದ್ಧಿ ಹೇಳುವುದಕ್ಕೆ ಹಿಂಜರಿಯಲಿಲ್ಲ. ಇಷ್ಟು ದಿನವೂ ಯಾರಿಗೋಸ್ಕರವಾಗಿ ಕೆಲಸ ಮಾಡುತ್ತಿದ್ದೆನೋ, ಯಾರ ಕಲ್ಯಾಣಕ್ಕೋಸ್ಕರವಾಗಿ ಕೆಲಸ ಮಾಡುತ್ತಿದ್ದೆನೋ, ಅದೇ ರೀತಿ ಇನ್ನು ಮುಂದೆಯೂ ಕೂಡ ಅವರ ಕಲ್ಯಾಣ ನೋಡಿಕೊಳ್ಳುವಂಥದ್ದು ನನ್ನ ಕರ್ತವ್ಯ. ಯಾವ ಹರಿಜನರಿಗೋಸ್ಕರವಾಗಿ ಸ್ಥಾನಗಳು ಬೇಕು, ಕೆಲಸಗಳು ಬೇಕು, ಅವರ ಮಕ್ಕಳಿಗೆ ವಿದ್ಯೆ ಬೇಕು, ಅವರ ಆರ್ಥಿಕ ಸಂಪತ್ತು ಬೆಳೆಯಬೇಕು ಎಂದು ನಾನು ಹೇಳುತ್ತಾ ಇದ್ದು, ಈಗ ಮಂತ್ರಿಮಂಡಲದಿಂದ ಹೊರಗೆ ಬಂದೆನೆಂದು ಉದ್ರಿಕ್ತಳಾಗಿ ನನಗೆ ನೀವು ಬೆಂಬಲ ಕೊಡಿ ಎಂದು ಕೇಳುವ ಬಯಕೆ ನನ್ನಲ್ಲಿ ಇಲ್ಲ. ನೀವು ಇಂಥ ಸಣ್ಣ ಕಾರ್ಯಕ್ಕೆ ಪಾನನಿರೋಧದ ಸಡಲಿಕೆಗೋಸ್ಕರವಾಗಿ ರಾಜೀನಾಮೆ ಕೊಟ್ಟು ಹೊರಗೆ ಬರಬೇಕಾದದ್ದು ಅಗತ್ಯವಿಲ್ಲವೆಂದು ಹೇಳಿದೆ. ಅವರುಗಳು ಅವರ ಸ್ಥಾನಗಳಲ್ಲಿಯೇ ಇರಲಿ. ಪಾನನಿರೋಧವನ್ನು ಸಂಪೂರ್ಣವಾಗಿ ರದ್ದುಮಾಡಿ ಹರಿಜನರ ಮನೆಮನೆ ಕೇರಿಕೇರಿಯಲ್ಲಿ ಹೆಂಡ ಮಾರುವಂಥ ಸಂದರ್ಭ ಬಂದಾಗ ನೋಡೋಣ. ಈಗ, ನೀವು ನಿಮ್ಮ ನಿಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗಿ ಎಂದು ನನ್ನ ಮಕ್ಕಳಿಗೆ ಎಷ್ಟರಮಟ್ಟಿಗೆ ಪುತ್ರವಾತ್ಸಲ್ಯದಿಂದ ಹೇಳುತ್ತೇನೋ ಅಷ್ಟರಮಟ್ಟಿಗೆ ಅವರಿಗೂ ಹೇಳಿದೆ. ಮಾತೃಪ್ರೇಮದಿಂದ ಪ್ರೇರಿತರಾದ ಅವರುಗಳು ನೀವು ರಾಜೀನಾಮೆ ಕೊಟ್ಟು ಹೊರಗೆ ಬಂದಮೇಲೆ ನಾವುಗಳು ಮಂತ್ರಿಮಂಡಲ ದಲ್ಲಿರುವುದಕ್ಕೆ ಇಷ್ಟವಿಲ್ಲ, ತಾವೂ ಸಹ ರಾಜೀನಾಮೆ ಕೊಟ್ಟು ಹೊರಗೆ ಬರುತ್ತೇವೆಂದು ಹೇಳಿದರು. ಆದಕಾರಣ ಮಾನ್ಯ ಸದಸ್ಯರುಗಳು ಅವರುಗಳ ವಿಚಾರದಲ್ಲಿ ಪದೇಪದೇ ಕಾರಣ ಕೇಳುವುದು ಪ್ರಯೋಜನವಿಲ್ಲ. ಅವರುಗಳ ಅಭಿವೃದ್ಧಿಗೆ ಮತ್ತು ಅವರ ಜನಾಂಗದ ಅಭಿವೃದ್ಧಿಗಾಗಿ ನಾನು ಶ್ರಮಿಸುತ್ತೇನೆ. ಅವರಲ್ಲೂ ಸಹ ಮಾತೃಭೂಮಿಯ ಪ್ರೇಮವಿದೆ. ಅವರೇ ಅಲ್ಲದೆ ಇನ್ನೂ ಅನೇಕ ಹರಿಜನರೂ ಮತ್ತು ಅನೇಕ ಎಂ.ಎಲ್.ಎ.ಗಳು ಕೂಡ ಪಾನನಿರೋಧ ಸಡಲಿಕೆ ವಿಚಾರದಲ್ಲಿ ಅದರ ವಿರುದ್ಧ ಹೋರಾಡಲು ಸಿದ್ಧರಾಗಿದ್ದೇವೆಂದು ನನ್ನ ಕೈಯಲ್ಲಿ ಕಾಗದ ಬರೆದುಕೊಟ್ಟಿದ್ದಾರೆ. ಈ ಒಂದು ಚಳವಳಿಯಲ್ಲಿ ಯಾವ ಒಂದು ರಾಜಕೀಯವೂ ಇಲ್ಲ. ಇದು ತಾತ್ವಿಕವಾಗಿ ಮಾಡತಕ್ಕಂಥ ಒಂದು ಕೆಲಸವಾದ್ದರಿಂದ ದೇಶದಲ್ಲಿ ಏನೋ ಒಂದು ಆಂದೋಲನವನ್ನು ಎಬ್ಬಿಸಬೇಕಾದ್ದು ಇಲ್ಲ. ಹೊರಗಿರುವ ನಮ್ಮ ಜನರು ಸಹ ನಮ್ಮ ಕೈಲಾದ ಕೆಲಸ ಮಾಡುವುದಾಗಿ ಹೇಳಿದ್ದಾರೆ. ಇನ್ನು ಮೇಲಾದರೂ ಕೂಡ ಅವರಿಬ್ಬರೂ ರಾಜೀನಾಮೆ ಕೊಟ್ಟು ಹೊರಬರಬೇಕೆಂದು ಹೇಳುವುದನ್ನು ಬಿಡಿ. ಅವರದ್ದು ಏನು ಅಪರಾಧವಿಲ್ಲ. ಅಪರಾಧ ನನ್ನದೆ. ನಾನೇ ಅವರನ್ನು ರಾಜೀನಾಮೆ ಕೊಡಬೇಡಿ ಎಂದು ಹೇಳಿದ್ದೆ. ನನಗೆ ಇಷ್ಟು ಸಮಯ ಮಾತನಾಡುವುದಕ್ಕೆ

ಅವಕಾಶ ಕೊಟ್ಟ ನಮ್ಮ ಸ್ಪೀಕರ್‌ರವರಿಗೆ ವಂದಿಸುತ್ತೇನೆ. ನೀವು ಇನ್ನೇನಾದರೂ ಹೆಚ್ಚಿನ ವಿಷಯವನ್ನು ತಿಳಿದುಕೊಳ್ಳಬೇಕೆಂದಿದ್ದರೆ ಪ್ರಚಾರ ಕಾರ್ಯದಲ್ಲಿ ಪ್ರತಿಬಂಧಕ ವಿಚಾರದಲ್ಲಿ ಸಂಪೂರ್ಣ ನಂಬಿಕೆ ಇರುವಂಥವರು ಸೇರಿಕೊಂಡು ಬೆಂಬಲ ಕೊಡಬಹುದು" ಎಂದು ಸದನಕ್ಕೆ ತಿಳಿಸಿದರು.

ಯಶೋಧರಮ್ಮನವರು ತಮ್ಮ ರಾಜೀನಾಮೆ ನಿಲುವನ್ನು ಸಭೆಯಲ್ಲಿ ಸಮರ್ಥಿಸಿ ಇದರಿಂದಾಗುವ ದುಷ್ಪರಿಣಾಮಗಳನ್ನು ತಿಳಿಸಿ ತಾವು ನಂಬಿದ ತತ್ವಕ್ಕೆ ಯಾವುದೇ ನಿಟ್ಟಿನಿಂದ ದ್ರೋಹ ಬಗೆಯದೆ, ಸ್ಥಾನಮಾನವೆಲ್ಲ ಶಾಶ್ವತವಲ್ಲ ಎಂದು ಮನಗೊಂಡಿದ್ದ ಅವರ ಅಂತರಾಳದ ಭಾವನೆ ಪ್ರಶಂಸನೀಯವಾಗಿದೆ.

ಯಶೋಧರಮ್ಮ ದಾಸಪ್ಪನವರ ರಾಜೀನಾಮೆಯನ್ನು ಒಪ್ಪಿಕೊಳ್ಳುವ ನಿರ್ಧಾರವನ್ನು ಮುಖ್ಯಮಂತ್ರಿ ನಿಜಲಿಂಗಪ್ಪನವರು ಕೈಗೊಂಡ ನಂತರ ಯಶೋಧರಮ್ಮ ದಾಸಪ್ಪನವರು ಮಂತ್ರಿಮಂಡಲದ ಸಭೆಯಿಂದ ಹೊರಬರುವುದಕ್ಕೆ ಮುಂಚೆ ಎಲ್ಲ ಸಚಿವರಿಗೂ ಚಾಕೊಲೇಟ್ ಹಂಚಿದರು. ವೈಯಕ್ತಿಕವಾಗಿ ನಾನು ಯಾವುದೇ ಕಹಿಭಾವನೆಯಿಂದ ಮಂತ್ರಿಮಂಡಲವನ್ನು ತ್ಯಜಿಸಿ ಹೋಗುತ್ತಿಲ್ಲ ಎಂದು ತಿಳಿಸಿದರು. ನೀವು ಕೈಗೊಂಡ ಕ್ರಮದಿಂದ ಜನಕೋಟಿಗೆ ಅಪಾರ ಹಾನಿಯಾಗುವುದೆಂಬ ಹಾಗೂ ಸ್ವಾತಂತ್ರ್ಯ ಹೋರಾಟ ಕಾಲದ ಅತ್ಯಂತ ಮೌಲಿಕವಾದ ಸಿದ್ಧಾಂತಕ್ಕೆ ಬದ್ಧಳಾಗಿದ್ದ ನಾನು ಇದನ್ನು ವಿರೋಧಿಸಿ ನಿರ್ಗಮಿಸುತ್ತಿದ್ದೇನೆ ಎಂದು ಹೇಳಿ ಹೊರಬಂದರು. ಮುಖ್ಯಮಂತ್ರಿ ನಿಜಲಿಂಗಪ್ಪನವರು ಮಾತ್ರ ಚಾಕೊಲೇಟ್ ಸ್ವೀಕರಿಸಲಿಲ್ಲ ಎಂದು ಯಶೋಧರಮ್ಮನವರು ತಿಳಿಸಿದರು.

ಯಶೋಧರಮ್ಮನವರು ರಾಜೀನಾಮೆ ಸಲ್ಲಿಸಿದ ನಂತರ ಪತ್ರಕರ್ತರು ರಾಜೀನಾಮೆ ವಿಷಯವನ್ನು ಕುರಿತಂತೆ ತಮ್ಮ ನಿಲುವಿನಲ್ಲಿ ಯಾವುದಾದರೂ ಬದಲಾವಣೆ, ರಾಜಿ ಮಾಡಿಕೊಳ್ಳುವಿರಾ ಎಂದು ಕೇಳಿದರು. ಅದಕ್ಕೆ ಅವರು "ಪಾಪದೊಡನೆ ರಾಜಿ ಸಾಧ್ಯವಿಲ್ಲ. ಈ ನನ್ನ ನಿರ್ಧಾರ ಅಚಲವಾದುದು, ಹದಿನಾಲ್ಕು ಮಂದಿಗೆ ನನ್ನ ನಿಲುವನ್ನು ಬದಲಾವಣೆ ಮಾಡಲು ಸಾಧ್ಯವಾಗಲಿಲ್ಲ. ನಾನು ಅವರನ್ನು ಬದಲು ಮಾಡಲು ಸಾಧ್ಯವಾಗಲಿಲ್ಲ. ಮುಖ್ಯಮಂತ್ರಿಯವರು ರಾಜೀನಾಮೆ ನೀಡಬೇಡಿ ಎಂದು ಹೇಳಿದರು, ನಾನು ಅವರ ಮಾತಿಗೆ ಉತ್ತರವಾಗಿ ವಾತಾವರಣ ಹೀಗಿರುವಾಗ ಒಂದು ವರ್ಷ ಅಲ್ಲ ಒಂದು ದಿನ ಕೂಡ ಇರಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಮಹಾತ್ಮಾಜೀಯವರ ನಂಬಿಕೆ ಕುರುಡು ನಂಬಿಕೆಯೇ? ಆದರೂ ಸರಿಯೇ, ನಾನು ಅದನ್ನು ಅನುಸರಿಸಿಯೇ ತೀರುತ್ತೇನೆ. ನನ್ನ ಗಂಡನಿಗೂ ಮತ್ತು ನನ್ನ ಗುರುವಿಗೂ ನೀವು ಹೇಳಿದಂತೆ ನಡೆದಿದ್ದೇನೆ ಎಂದು ಉತ್ತರ ಹೇಳಬೇಕಾಗುತ್ತದೆ. ಆದ್ದರಿಂದ ಈ ನನ್ನ ನಿರ್ಧಾರ ಯಾವುದೇ ಕಾರಣಕ್ಕೂ ಬದಲಾಗುವುದಿಲ್ಲ" ಎಂದು ತಿಳಿಸಿದರು.

ಯಶೋಧರಮ್ಮನವರ ರಾಜೀನಾಮೆಯ ದೃಢ ನಿಲುವನ್ನು ಕುರಿತು ಕೇಳಿದ ಪ್ರಶ್ನೆಗೆ ಅವರು ಕೊಟ್ಟ ಉತ್ತರ ಅವರ ವ್ಯಕ್ತಿತ್ವ ಮತ್ತು ಅಧಿಕಾರದ ವ್ಯಾಮೋಹ ಇಲ್ಲದಿರುವುದನ್ನು ಎತ್ತಿಹಿಡಿಯುತ್ತದೆ. ಜೀವನವಿಡೀ ಗಾಂಧೀ ತತ್ವಗಳಲ್ಲಿ ಅಚಲವಾದ ನಂಬಿಕೆ ಗೌರವಗಳನ್ನು ಇಟ್ಟುಕೊಂಡು ಬಂದವರು ಯಶೋಧರಮ್ಮ. ಸಹೋದ್ಯೋಗಿಗಳು ಮತ್ತು ಮುಖ್ಯಮಂತ್ರಿಯವರು ಅವರ ಮನವೊಲಿಸಲು ಪ್ರಯತ್ನಿಸಿದರೂ ಕೂಡ ಗಾಂಧೀಜಿಯವರ ನಂಬಿಕೆ ಒಂದು ವೇಳೆ ಅಂಧತ್ವದಿಂದ ಇದ್ದರೂ ಅದನ್ನೇ ಅನುಸರಿಸುತ್ತೇನೆಂದು ಪ್ರತಿಕ್ರಿಯಿಸಿದ್ದು ಪ್ರಶಂಸನೀಯ ಕ್ರಮ ಮತ್ತು ಅವರು ತೆಗೆದುಕೊಂಡ ಈ ನಿರ್ಧಾರ ಮಹತ್ವವಾದುದು. ಕಾರಣ ಪಾನನಿರೋಧ ಸಡಿಲಿಕೆಯಿಂದ ಆಗಿರುವ ಅನಾಹುತ ಹೆಚ್ಚು. ಇಂತಹ ಸಂದರ್ಭದಲ್ಲಿ ಒಬ್ಬ ಗಾಂಧಿ ಅನುಯಾಯಿಯಾಗಿ ಅವರ ತತ್ವಗಳನ್ನು ಪಾಲಿಸಿಕೊಂಡು ಬಂದಿದ್ದ ಅವರು ಅಧಿಕಾರಕ್ಕಾಗಿ ಗಂಟುಬಿದ್ದು ಒಂದು ವೇಳೆ ಮನಸೋತಿದ್ದರೆ ಗಾಂಧಿತತ್ವಗಳಿಗೆ ಮಸಿಬಳಿದಂತಾಗುತ್ತಿತ್ತು. ಅಧಿಕಾರಕ್ಕಾಗಿ ಕಟ್ಟುಬಿದ್ದಿದ್ದಾರೆ ಎಂಬ ಮಾತುಗಳಿಗೆ ಯಶೋಧರಮ್ಮನವರು ಗುರಿಯಾಗುತ್ತಿದ್ದರು. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅವರು ತೆಗೆದುಕೊಂಡ ನಿರ್ಧಾರ ಇಡೀ ದೇಶದ ಜನತೆ ಮೆಚ್ಚುವಂತದ್ದು.

ಯಶೋಧರಮ್ಮನವರು ಮದ್ಯಪಾನದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಪಾನನಿರೋಧವು ತಮ್ಮ ಆತ್ಮವಿಶ್ವಾಸದ ಒಂದು ಕಾರ್ಯಕ್ರಮವೆಂದು, ಅದನ್ನು ಸಡಿಲಿಸುವುದು ಅನರ್ಥವೆಂದು, ಅನರ್ಥದೊಡನೆ ಹೊಂದಾಣಿಕೆ ಸಾಧ್ಯವಿಲ್ಲವೆಂದು ತಿಳಿಸುತ್ತಾ, ಗಾಂಧಿ ಹಾಕಿ ಕೊಟ್ಟ ಮಾರ್ಗದಲ್ಲಿ ಧರ್ಮದಿಂದ ನಡೆಯುತ್ತೇನೆ ಎಂದು ತಿಳಿಸಿದರು. ಯಶೋಧರಮ್ಮನವರು ತಮ್ಮ ಮಂತ್ರಿ ಪದವಿಯಿಂದ ಹೊರಬಂದ ನಂತರ ಪಾನನಿರೋಧ ಸಡಲಿಕೆ ನೀತಿಯನ್ನು ಕೈಬಿಡುವಂತೆ ಮಾಡಲು ರಾಜ್ಯದಾದ್ಯಂತ ನಡೆದ ಆಂದೋಲನದಲ್ಲಿ ಮುಖ್ಯ ಪಾತ್ರ ವಹಿಸಿದರು. ಹಾಗೆಯೇ ದೆಹಲಿಗೆ ಭೇಟಿ ನೀಡಿ ಮೊರಾರ್ಜಿ ದೇಸಾಯಿ ಮತ್ತು ಕಾಮರಾಜರವರಿಗೆ ತಮ್ಮ ರಾಜೀನಾಮೆಯ ನಿಲುವನ್ನು ತಿಳಿಸಿದ ಸಂದರ್ಭದಲ್ಲಿ ಅವರು ಅದರ ಬಗ್ಗೆ ಪ್ರಶಂಸಿಸಿ ಯಶಸ್ಸು ಕೋರಿದರು.

ಪಾನನಿರೋಧವನ್ನು ಸರ್ಕಾರ ಸಡಿಲಿಸಿದ ನಂತರ ರಾಜ್ಯಾದ್ಯಂತ ವ್ಯಾಪಕ ಚರ್ಚೆ ಪ್ರತಿಭಟನೆ ಪ್ರಾರಂಭವಾಗಿತ್ತು. ಅನೇಕ ಸ್ವಾತಂತ್ರ್ಯ ಹೋರಾಟಗಾರರು, ಕೂಲಿ ಕಾರ್ಮಿಕರು, ರೈತರು, ಕಾಂಗ್ರೆಸ್ಸಿನ ಕಾರ್ಯಕರ್ತರು, ಸಚಿವರುಗಳು, ದೇಶದ ಹಿರಿಯ ರಾಜಕಾರಣಿಗಳು ಇದನ್ನು ಪ್ರಬಲವಾಗಿ ಖಂಡಿಸಿದರು. ಈ ನೀತಿಯ ವಿರುದ್ಧ ಕೆಲವು ಪರ ಮತ್ತು ವಿರೋಧ ಅಭಿಪ್ರಾಯಗಳು ಮೂಡಿದವು.

ರಚನಾತ್ಮಕ ಕಾರ್ಯಕ್ರಮ

ಸ್ವಾತಂತ್ರ್ಯ ಹೋರಾಟ, ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುವ ಮೂಲಕ ಸಮಾಜದಲ್ಲಿ ತಮ್ಮದೆ ಆದ ವರ್ಚಸ್ಸನ್ನು ಬೆಳೆಸಿಕೊಂಡಿದ್ದ ಯಶೋಧರಮ್ಮನವರಿಗೆ ಗಾಂಧೀಜಿಯವರ ಪ್ರಭಾವ ಮತ್ತಷ್ಟು ಪರಿಣಾಮವನ್ನುಂಟು ಮಾಡಿತ್ತು. ತಂದೆಯವರ ಪ್ರಭಾವದಿಂದ ಸಮಾಜಸೇವೆಯ ಮೂಲಕ ಮಹಿಳೆಯರ ಏಳಿಗೆಗಾಗಿ ದುಡಿಯುತ್ತಿದ್ದ ಇವರಿಗೆ ಗಾಂಧೀಜಿಯವರು ರಚನಾತ್ಮಕ ಕಾರ್ಯಕರ್ತೆಯಾಗಿ ಮಹಿಳೆಯರ ಅಭ್ಯುದಯಕ್ಕಾಗಿ ಸೇವೆ ಸಲ್ಲಿಸುವಂತೆ ಕಾರ್ಯದ ದೀಕ್ಷೆ ನೀಡಿ ಅದರಲ್ಲಿ ತೊಡಗಿ ಸೇವೆ ಸಲ್ಲಿಸುವಂತೆ ಸಲಹೆ ಮಾಡಿದ್ದರು.

ಗಾಂಧೀಜಿಯವರ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದ ಯಶೋಧರಮ್ಮ ಅವರ ಆಹ್ವಾನದ ಮೇರೆಗೆ ಸೇವಾಗ್ರಾಮಕ್ಕೆ ತೆರಳಿ ಆರು ತಿಂಗಳು ಅಲ್ಲಿಯೇ ವಾಸ್ತವ್ಯವನ್ನು ಹೂಡಿ ಗಾಂಧೀಜಿಯವರಿಂದ ಅನೇಕ ವಿಷಯಗಳನ್ನು ಬದುಕಿನ ಅರಿವನ್ನು ಕಲಿತರು. ಇದು ಅವರು ರಚನಾತ್ಮಕ ಕ್ಷೇತ್ರದಲ್ಲಿ ದುಡಿಯಲು ಮತ್ತಷ್ಟು ಹುರುಪನ್ನು ನೀಡಿತ್ತು.

ಕಸ್ತೂರ್ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಮೈಸೂರು ಶಾಖೆಯ ಪ್ರತಿನಿಧಿಯಾಗಿ

ಗ್ರಾಮೀಣ ಮಹಿಳೆಯರಲ್ಲಿ ಜಾಗೃತಿಯನ್ನುಂಟುಮಾಡಿ ಅವರಲ್ಲಿ ಸ್ವಾವಲಂಬನೆ, ಧೈರ್ಯ ಮತ್ತು ಅರಿವನ್ನು ಮೂಡಿಸುವ ಜವಾಬ್ದಾರಿಯನ್ನು ಹೊರಲು ಗಾಂಧೀಜಿಯವರು ನಿಷ್ಠಾವಂತರಾದ ಕೆಲವು ಮಹಿಳೆಯರನ್ನು, ದೇಶದ ಬಹುತೇಕ ಎಲ್ಲಾ ಪ್ರಾಂತಗಳಿಂದ ಆರಿಸಿದರು. ಅದರಂತೆ ಶ್ರೀಮತಿ ಯಶೋಧರಮ್ಮ ದಾಸಪ್ಪನವರನ್ನು ಮೈಸೂರು ಶಾಖೆಯ ಪ್ರತಿನಿಧಿಯನ್ನಾಗಿ ಗಾಂಧೀಜಿಯವರೇ ಸ್ವತಃ ನೇಮಿಸಿದರು. ಎಲ್ಲ ಪ್ರಾಂತೀಯ ಪ್ರತಿನಿಧಿಗಳಿಗೂ ತರಬೇತಿ ನೀಡಲು ಪೂನಾ ಬಳಿ ಶಿಬಿರವೊಂದನ್ನು ಹಮ್ಮಿಕೊಂಡು ತರಬೇತಿಯನ್ನು ನೀಡಲಾಯಿತು. ಈ ಶಿಬಿರದಲ್ಲಿ ಗಾಂಧೀಜಿ ಮತ್ತು ಥಕ್ಕರ ಬಾಪಾ ಅವರುಗಳೇ ಹಾಜರಿದ್ದು ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಸಾಧನೆಗೆ ಯಾವಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದನ್ನು ನಿರ್ಧರಿಸಿದರು. ಗ್ರಾಮಾಂತರ ಪ್ರದೇಶದಲ್ಲಿ ಸ್ತ್ರೀ ಶಕ್ತಿಯ ಸಂವರ್ಧನೆ, ಖಾದಿ ಗ್ರಾಮೋದ್ಯೋಗ, ಹೊಲಿಗೆ ಮುಂತಾದ ಕ್ಷೇತ್ರಗಳಲ್ಲಿ ತರಬೇತಿ ನೀಡುವುದು, ವೈಜ್ಞಾನಿಕ ಹಾಗೂ ಆರೋಗ್ಯಕರ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಸೂತಿ

ಕೇಂದ್ರಗಳನ್ನು ಸ್ಥಾಪಿಸಿ ನುರಿತ ಸೂಲಗಿತ್ತಿಯನ್ನು ನೇಮಿಸುವುದು, ಚಿಕ್ಕಮಕ್ಕಳಿಗೆ ಶಿಶುವಿಹಾರ ನಡೆಸುವುದು, ಬಾಲಕಿಯರ್ರ ಹಾಗೂ ಪ್ರೌಢ ಮಹಿಳೆಯರ ಶಿಕ್ಷಣ ಇತ್ಯಾದಿ ಮುಖ್ಯವಾದ ಕಾರ್ಯಕ್ರಮಗಳನ್ನು ಯಾವ ರೀತಿ ನಿರೂಪಿಸಿ ಕಾರ್ಯಗತ ಮಾಡಬೇಕೆಂಬುದರ ಬಗ್ಗೆ ಪ್ರತಿನಿಧಿಗಳಿಗೆ ಸೂಕ್ತ ತರಬೇತಿ ಹಾಗೂ ಪ್ರೇರಣೆ ನೀಡಲಾಯಿತು.

ಕಸ್ತೂರಬಾ ಗಾಂಧೀ ಸ್ಮಾರಕ ಟ್ರಸ್ಟ್‌ನ ಪ್ರಾಂತೀಯ ಪ್ರತಿನಿಧಿಗಳು ಸಾಮಾನ್ಯವಾಗಿ ಯಾವುದೇ ರೀತಿಯ ಸಂಭಾವನೆ ಪಡೆಯದೆ ಸೇವೆ ಮಾಡಬೇಕೆಂಬ ನೀತಿಯನ್ನು ಸೂಚಿಸಲಾಯಿತು. ತೀರ ಅವಶ್ಯಕವಿರುವವರಿಗೆ ಸ್ವಲ್ಪ ಮಾಸಿಕ ನಿರ್ವಹಣಾ ಭತ್ಯೆ ಪಡೆಯುವ ಅವಕಾಶವಿದ್ದಿತು. ನಾಲ್ಕಾರು ಜನ ಹಾಗೆ ನಿರ್ವಹಣಾ ಸಂಭಾವನೆ ಪಡೆದುಕೊಂಡರು. ಯಶೋಧರಮ್ಮ ದಾಸಪ್ಪ ಈ ಸಂಬಂಧವಾಗಿ ಮಹಾತ್ಮರ ಕಡೆ ನೋಡಿದರು. "ಯಶೋಧರಾ ನಿನ್ನ ಕೈಗಳಲ್ಲಿ ಎರಡೆರಡು ಚಿನ್ನದ ಬಳೆಗಳಿವೆ, ಅವು ನಿನ್ನ ಕೈಗಳಲ್ಲಿ ಇರುವಷ್ಟು ದಿನ ನೀನು ಸಂಭಾವನೆ ತೆಗೆದುಕೋಬೇಡ" ಎಂದು ಬಾಪೂಜಿ ಮುಗುಳ್ನಗೆ ನಕ್ಕು ಹೇಳಿದರು. "ನೀವು ಹೇಳಿದಂತೆಯೇ ಆಗಲಿ ಬಾಪು" ಎಂದು ಯಶೋಧರಮ್ಮ ದಾಸಪ್ಪನವರು ಉತ್ತರ ನೀಡಿದರು.

ಪ್ರತಿನಿಧಿಗಳ ಶಿಬಿರದಿಂದ ತರಬೇತಿ ಮುಗಿಸಿ ಬರುತ್ತಿದ್ದಂತೆ ಯಶೋಧರಮ್ಮ ದಾಸಪ್ಪನವರು ಮೈಸೂರು ಸಂಸ್ಥಾನದಲ್ಲಿ ಕಸ್ತೂರ ಬಾ ಟ್ರಸ್ಟ್‌ನ ಸೇವಾ ಕಾರ್ಯವನ್ನು ಸಂಘಟಿಸಲು ಅತಿಹುಮ್ಮಸ್ಸಿನಿಂದ ಕಾರ್ಯೋನ್ಮುಖರಾದರು. ಸಂಸ್ಥಾನದಲ್ಲಿ ಸಂಚರಿಸಿ, ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದು, ಎಲ್ಲ ಜಿಲ್ಲೆಗಳಿಂದ ಸೇವಾಕಾಂಕ್ಷೆಯುಳ್ಳ ಮಹಿಳೆಯರನ್ನು ಆರಿಸಿ ಅವರಿಗೆ ಗ್ರಾಮಸೇವೆಯಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದರು. ಅದರಂತೆ ಇವರು ಮೊದಲ ಬಾರಿಗೆ 1944-45ರಲ್ಲಿ ತರಬೇತಿ ಶಿಬಿರವನ್ನು ಕೈಗೊಂಡರು. ಮೈಸೂರಿನಲ್ಲಿ ಶಿಕ್ಷಣ ಶಿಬಿರ ನಡೆಸಲು ಕ್ವಿಟ್ ಇಂಡಿಯಾ ಚಳುವಳಿ ಸಮಯದಲ್ಲಿ ರಾಜಕೀಯ ಖೈದಿಗಳನ್ನು ಇರಿಸಲು ತಾತ್ಕಾಲಿಕವಾಗಿ ಉಪಯೋಗಿಸುತ್ತಿದ್ದ ಅರಮನೆ ಕಟ್ಟಡವನ್ನು ಅರಮನೆ ಅಧಿಕಾರಿಗಳಿಂದ ಅನುಮತಿ ಪಡೆದು ಬಳಸಲು ತೀರ್ಮಾನಿಸಿದರು. ಸಂಸ್ಥಾನದ ನಾನಾ ಕಡೆಯಿಂದ ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳು ಗ್ರಾಮಸೇವಕಿಯಾಗಿ ಶಿಕ್ಷಣ ಪಡೆಯಲು ಬಂದಿದ್ದರು. ಶಿಕ್ಷಣಾರ್ಥಿ ಗಳಿಗೆ ಪ್ರತ್ಯಕ್ಷ ಅನುಭವ ಪಡೆಯಲು ಪಡುವಾರಹಳ್ಳಿಯಲ್ಲಿ ಹೆಣ್ಣುಮಕ್ಕಳ ಮತ್ತು ಚಿಕ್ಕಮಕ್ಕಳ ಸೇವಾ ಕೇಂದ್ರವನ್ನು ಸ್ಥಾಪಿಸಿ, ದಿನವೂ ಕೆಲವು ಗಂಟೆಗಳ ಕಾಲ ಅಲ್ಲಿ ಕೆಲಸ ಮಾಡಿಸುತ್ತಿದ್ದರು. ಮೂರು ನಾಲ್ಕು ತಿಂಗಳ ಕಾಲ ಶಿಕ್ಷಣ ಶಿಬಿರದ ಕೆಲಸ ಕಾರ್ಯಗಳು ನಡೆದವು. ಗ್ರಾಮಸೇವಕಿಯರಾಗಿ ಶಿಕ್ಷಣ ಪಡೆಯಲು ಬಂದಿದ್ದವರಲ್ಲಿ ಸ್ವಾತಂತ್ರ್ಯ ಹೋರಾಟಗಾರ್ತಿ ಕೊಡಗನೂರಿನ ಅಚ್ಚಮ್ಮ, ಗಂಗಸಂದ್ರದ ಗೌರಮ್ಮ, ಈಸೂರಿನ ಗೋವಿಂದಮ್ಮ ಮತ್ತು ಈಶ್ವರಮ್ಮ, ಬಸವಾನಿಯ ಸಾವಿತ್ರಮ್ಮ ರಾಮಶರ್ಮ ಮುಂತಾದವರಿದ್ದರು. ಇವರಲ್ಲಿ ಈಸೂರಿನಿಂದ ಬಂದಿದ್ದ ಗೋವಿಂದಮ್ಮ ಮತ್ತು ಈಶ್ವರಮ್ಮನವರು ಶಿಬಿರಾರ್ಥಿಗಳಾಗಿದ್ದುದು ಅರಮನೆಯ ಅಧಿಕಾರಿಗಳಿಗೆ ಗೊತ್ತಾಯಿತು. ಅವರಿಬ್ಬರನ್ನು ಶಿಬಿರದಿಂದ ವಾಪಸ್ಸು ಕಳುಹಿಸಬೇಕು ಎಂದು ಅಧಿಕಾರಿಗಳು ತಿಳಿಸಿದರು. ಏಕೆಂದರೆ, 1942ರ ಕ್ವಿಟ್ ಇಂಡಿಯಾ ಚಳವಳಿ ಕಾಲದಲ್ಲಿ ಈಸೂರಿನಲ್ಲಿ ಐತಿಹಾಸಿಕ ಸಂಗ್ರಾಮವೇ ನಡೆದಿತ್ತು. ಅಲ್ಲಿನ ಜನರು ತಮ್ಮ ಗ್ರಾಮದಲ್ಲಿ ಸ್ವಾತಂತ್ರ್ಯ ಘೋಷಿಸಿಬಿಟ್ಟಿದ್ದರು. ಇದರಿಂದ ಸರ್ಕಾರಿ ಅಧಿಕಾರಿಗಳಿಗೂ ಗ್ರಾಮಸ್ಥರಿಗೂ ಮಧ್ಯೆ ಘರ್ಷಣೆಯುಂಟಾಗಿ ಮೂವರು ಸರ್ಕಾರಿ ನೌಕರರು ಮರಣ ಹೊಂದಿದರು. ಸರ್ಕಾರ ಇದಕ್ಕೆ ಸಂಬಂಧಿಸಿದವರನ್ನು ಬಂಧಿಸಿ ಶಿಕ್ಷೆ ವಿಧಿಸಿತ್ತು. ಆರೇಳು ಜನಕ್ಕೆ ಫಾಸಿ ಶಿಕ್ಷೆ ವಿಧಿಸಿ ಅವರನ್ನು ಗಲ್ಲಿಗೇರಿಸಿತು. ಆ ಫಾಸಿ ಶಿಕ್ಷೆಗೆ ಒಳಗಾದ ಮನೆತನಕ್ಕೆ ಸೇರಿದವರೇ ಗೋವಿಂದಮ್ಮ ಮತ್ತು ಈಶ್ವರಮ್ಮ. ಇವರನ್ನು ಶ್ರೀಮತಿ ಯಶೋಧರಮ್ಮನವರು ಗುರುತಿಸಿ ಶಿಬಿರದಲ್ಲಿ ಆಶ್ರಯ ನೀಡಿದ್ದರು. ಇದನ್ನು ಸಹಿಸದ ಅರಮನೆ ಅಧಿಕಾರಿಗಳು ಯಶೋಧರಮ್ಮನವರಿಗೆ ನೋಟೀಸು ಕೊಟ್ಟು ಆ ಇಬ್ಬರನ್ನು ಶಿಬಿರದಿಂದ ಹೊರಕಳುಹಿಸಿ, ಇಲ್ಲದಿದ್ದರೆ 24 ಗಂಟೆಗಳಲ್ಲಿ ಅರಮನೆಗೆ ಸೇರಿದ ಕಟ್ಟಡವನ್ನು ಖಾಲಿಮಾಡಿ ಎಂದು ಸೂಚಿಸಿದರು. ಆದರೆ ಇದಕ್ಕೆ ಹೆದರದ

ಯಶೋಧರಮ್ಮ ಈಸೂರು ಮಹಿಳೆಯರನ್ನು ಶಿಬಿರದಿಂದ ಬಿಡಲು ಒಪ್ಪಲಿಲ್ಲ. ಆದ್ದರಿಂದ ಒಂದೇ ದಿನದಲ್ಲಿ ಶಿಬಿರಾರ್ಥಿಗಳನ್ನು ಬೆಂಗಳೂರಿನ ಬಳಿ ಕೆಂಗೇರಿಯಲ್ಲಿದ್ದ ಸ್ವಾಮಿ ವಿಶ್ವಾನಂದರ ಗುರುಕುಲಾಶ್ರಮಕ್ಕೆ ಕರೆತಂದರು. ಅಲ್ಲಿ ಶಿಬಿರದ ತರಬೇತಿ ಕಾರ್ಯವನ್ನು ಪೂರ್ಣಗೊಳಿಸಿದರು. ಈಸೂರಿನಲ್ಲಿ ಕಸ್ತೂರ ಬಾ ಸೇವಾಕೇಂದ್ರವನ್ನು ಸ್ಥಾಪಿಸಿ ಗೋವಿಂದಮ್ಮನವರನ್ನು ಕೇಂದ್ರದ ಮುಖ್ಯಸ್ಥರನ್ನಾಗಿ ನೇಮಿಸಿದರು. ಈಶ್ವರಮ್ಮ ಮತ್ತೊಂದು ಕಸ್ತೂರ ಬಾ ಗ್ರಾಮಸೇವಾ ಕೇಂದ್ರದ ಕಾರ್ಯಕ್ಕೆ ನೇಮಕವಾದರು.

ಕೆಂಗೇರಿ ಗುರುಕುಲದ ಶಿಬಿರ ಮುಗಿದ ನಂತರ ಮೈಸೂರಿನ ಬಳಿ ಬೆಳವಾಡಿಯಲ್ಲಿ ಶಿಬಿರವನ್ನು ಪ್ರಾರಂಭಿಸಿದರು. ಟ್ರಸ್ಟ್‌ನ ಕಾರ್ಯದರ್ಶಿಯಾಗಿದ್ದ ಸುಚೇತಾ ಕೃಪಲಾನಿಯವರೇ ಸ್ವತಃ ಹೊಸ ಶಿಬಿರದ ಉದ್ಘಾಟನೆ ನಡೆಸಿ ಯಶೋಧರಮ್ಮನವರ ಸಂಘಟನಾ ಸಾಮರ್ಥ್ಯವನ್ನು ಬಹುವಾಗಿ ಪ್ರಶಂಸಿಸಿದರು. ಶಿಬಿರದಲ್ಲಿ ಮಹಿಳೆಯರಿಗೆ ಒಂದು ವರ್ಷದ ತರಬೇತಿ ನೀಡಿ ಗ್ರಾಮಸೇವಕಿಯರನ್ನಾಗಿ ಗ್ರಾಮಸೇವಾ ಕೇಂದ್ರಗಳಿಗೆ ನೇಮಿಸಲಾಗುತ್ತಿತ್ತು. ತೀರ ಹಿಂದುಳಿದ ಗ್ರಾಮಗಳಲ್ಲಿ ಕಸ್ತೂರ ಬಾ ಸೇವಾಕೇಂದ್ರಗಳನ್ನು ಸ್ಥಾಪಿಸುವ ಯೋಜನೆಯನ್ನು ಹಾಕಿಕೊಂಡಿದ್ದರು. ಪ್ರತಿ ಜಿಲ್ಲೆಯಲ್ಲೂ ಸಾಮಾನ್ಯವಾಗಿ ಎರಡು ಗ್ರಾಮ ಸೇವಾಕೇಂದ್ರಗಳಿರುತ್ತಿದ್ದವು. ಚಿತ್ರದುರ್ಗ ಜಿಲ್ಲೆಯ ಗನ್ನಾಯಕನ ಹಳ್ಳಿಯಲ್ಲಿ ಮಾತೃ ರಕ್ಷಾಮಂದಿರ, ಶಿವಮೊಗ್ಗ ಜಿಲ್ಲೆಯ ಬಸವಾನಿ ಕೇಂದ್ರ, ಚಿಕ್ಕಮಗಳೂರು ಜಿಲ್ಲೆಯ ಭಾರತೀಬೈಲ್ ಹೊಸಹಳ್ಳಿ ಕೇಂದ್ರಗಳಲ್ಲಿ ವ್ಯವಸ್ಥಿತ ಪ್ರಸೂತಿ ಕೇಂದ್ರಗಳು ಮೊದಲ ವರ್ಷದಲ್ಲೆ ಪ್ರಾರಂಭವಾದವು. ಕಸ್ತೂರ ಬಾ ಟ್ರಸ್ಟ್‌ನ ಕೇಂದ್ರಗಳ ಮೂಲಕ ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಕೆಲಸ ಕ್ರಮೇಣ ಮಹತ್ತರವಾಗಿ ಜನಮನ ಸೆಳೆಯುವುದರಲ್ಲಿ ಯಶಸ್ವಿಯಾಯಿತು.

ಕಸ್ತೂರ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಸಂಚಿತ ನಿಧಿಯಿಂದ ಪ್ರಾಂತ್ಯಗಳಲ್ಲಿನ ಸೇವಾಕೇಂದ್ರಗಳ ನಿರ್ವಹಣೆ ವೆಚ್ಚವನ್ನು ನೋಡಿಕೊಳ್ಳಲಾಗುತ್ತಿತ್ತು. ಆದರೆ ಕೇಂದ್ರದ ನಿಧಿ ಖರ್ಚಾದ ಮೇಲೆ ಮುಂದೇನು? ಎಂಬ ಪ್ರಶ್ನೆ ಸ್ವಾಭಾವಿಕವಾಗಿಯೇ ಮುಂದಾಯಿತು. ಕಸ್ತೂರ ಬಾ ಟ್ರಸ್ಟ್‌ನ ಸೇವಾಕಾರ್ಯ ಯಾವುದೇ ತೊಂದರೆ ಇಲ್ಲದೆ ನಡೆಯಬೇಕಾದರೆ ಗ್ರಾಮಾಂತರ ಪ್ರದೇಶಗಳ ಈ ಸೇವಾಕೇಂದ್ರಗಳನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಮಾಡಬೇಕೆಂದು ಯಶೋಧರಾ ದಾಸಪ್ಪ ಮನಗಂಡರು. ಹಾಗೆ ಆಗಬೇಕಾದರೆ ಯಾವುದೇ ಆರ್ಥಿಕ ಸಮಸ್ಯೆ ಇಲ್ಲದೆ ನಡೆಯಬೇಕು. ಅದರಂತೆ ಒಂದೊಂದು ಸೇವಾಕೇಂದ್ರಕ್ಕೂ ಅನುಕೂಲವಾಗುವಂತೆ ಆರ್ಥಿಕ ಸೌಲಭ್ಯವನ್ನು ಒದಗಿಸಲು ಹತ್ತಾರು ಎಕರೆ ಜಮೀನನ್ನು ಪಡೆದು ಬೇಸಾಯದಿಂದ ಉತ್ಪತ್ತಿಯಾಗುವ ಹಣದಿಂದ ಸೇವಾಕೇಂದ್ರಗಳನ್ನು ಸ್ವಾವಲಂಬಿ ಸೇವಾಕೇಂದ್ರಗಳನ್ನಾಗಿ ಮಾಡಬೇಕೆಂದು ತೀರ್ಮಾನಿಸಿದರು. ಅದರಂತೆ ಸರ್ಕಾರ ಮತ್ತು ಸಾರ್ವಜನಿಕ ಸಹಕಾರದಿಂದ ಭೂದಾನ ಪಡೆಯುವ ಕಾರ್ಯಕ್ರಮ ಹಾಕಿಕೊಂಡು ಕೆಲವೇ ವರ್ಷಗಳಲ್ಲಿ ಜಮೀನನ್ನು ಪಡೆದು ವ್ಯವಸಾಯಕ್ಕೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಿದರು.

ಕಸ್ತೂರ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟಿನ ಮೈಸೂರು ಸಂಸ್ಥಾನದ ಶಾಖೆಯ ಕೇಂದ್ರ ಸ್ಥಾನಕ್ಕೆ ಸೂಕ್ತ ಸ್ಥಳದಲ್ಲಿ ನಿವೇಶನ ಪಡೆದು ಒಂದು ಸೇವಾಗ್ರಾಮವನ್ನೇ ನಿರ್ಮಾಣ ಮಾಡಬೇಕೆಂದು ಯಶೋಧರಮ್ಮ ಸಂಕಲ್ಪ ಮಾಡಿದರು. ಅದರಂತೆ ಗ್ರಾಮಸೇವಕಿಯರ ಖಾಯಂ ತರಬೇತಿ ಕೇಂದ್ರ, ಪ್ರಾಂತೀಯ ಕೇಂದ್ರ ಕಛೇರಿ, ಮತ್ತಿತರ ಚಟುವಟಿಕೆಗಳಿಗೆ ಅಗತ್ಯವಾದಷ್ಟು ಜಮೀನನ್ನು ಪಡೆಯಲು ಪ್ರಯತ್ನಪಟ್ಟರು. ಅರಸೀಕೆರೆ ಸಮೀಪ ಇದ್ದ ಸರ್ಕಾರದ 86 ಎಕರೆಯಷ್ಟು ಪಾಳು ಭೂಮಿಯನ್ನು ಪಡೆದು ಸಾಗುವಳಿ ಮಾಡಿ ಅಲ್ಲೆ ಕಸ್ತೂರ ಬಾ ಗ್ರಾಮವನ್ನು ನಿರ್ಮಿಸಲು ಯೋಜನೆಯನ್ನು ಹಾಕಿಕೊಂಡರು.

ಯಶೋಧರಮ್ಮನವರು ಕಸ್ತೂರ ಬಾ ಗ್ರಾಮದ ನೀಲಿ ನಕ್ಷೆ ಕಾರ್ಯ ಯೋಜನೆಯನ್ನು ಮಾಡಿಕೊಂಡು 1947ರ ಮಾರ್ಚ್‌ನಲ್ಲಿ ಗಾಂಧೀಜಿಯವರಿಗೆ ತೋರಿಸಿ "ಇಲ್ಲಿ ನನ್ನ ಸ್ವಾವಲಂಬನಾ ಕಸ್ತೂರ ಬಾ ಗ್ರಾಮ ನಿರ್ಮಾಣ ಮಾಡಬೇಕೆಂದು ಇದ್ದೇನೆ ಇದೇ ನನ್ನ ಯೋಜನೆ" ಎಂದು ತಿಳಿಸಿದರು. ಇದನ್ನು ಕೇಳಿದ ಗಾಂಧೀಜಿಯವರು "ಓಹೋ ನೀನು ಅರಸೀಕೆರೆಯನ್ನು ಮೈಸೂರಿನ ವಾರ್ಧ ಮಾಡಲು ಹೊರಟಿರುವೆಯಾ? ಆದರೆ ನೀನು ಅಲ್ಲಿ ನೆಲೆಸದೆ ಹೋದರೆ ಈ ಯೋಜನೆ ಸಿದ್ಧಿಯಾಗುವುದು ಕಷ್ಟ" ಎಂದರು. ಯಶೋಧರಮ್ಮ "ಅಲ್ಲೆ ಇರುತ್ತೇನೆ" ಎಂದು ಉತ್ತರ ನೀಡಿದ್ದಕ್ಕೆ "ಹಾಗಲ್ಲಾ, ಇನ್ನು ನಿನ್ನ ಗಂಡ ಮಾಡುತ್ತಾರೆ, ಮಕ್ಕಳು ಮಾಡುತ್ತಾರೆಂದರೆ ಆಗದು, ಇದರಲ್ಲಿ ನಿನಗಿರುವ ನಂಬಿಕೆ ಅವರಿಗಿರದು, ನೀನೆ ಅಲ್ಲಿ Bury Your-self ಅಂದರೆ ಮಾತ್ರ ನನ್ನ ಆಶೀರ್ವಾದ" ಎಂದು ಗಾಂಧೀಜಿ ಹೇಳಿದರು. ಆಗ ಯಶೋಧರಮ್ಮ "ಹಾಗೇ ಆಗಲಿ" ಎಂಬ ಉತ್ತರವಿತ್ತರು. ಇದಕ್ಕೆ ಗಾಂಧೀಜಿ, "ಇಷ್ಟಕ್ಕೆ ನಾನು ಒಪ್ಪಲಾರೆ, ನಿನ್ನ ಗಂಡನ ಅಪ್ಪಣೆಯಾಗಬೇಕು" ಎಂದರು. "ಸರಿ ಬಾಪೂ ಅವರು ದೆಹಲಿಗೆ ಬಂದಿದ್ದಾರೆ ಸಂಜೆ ಪ್ರಾರ್ಥನೆಗೆ ಇಲ್ಲಿಗೆ ಬರುತ್ತಾರೆ ನಿಮ್ಮ ಮುಂದೆ ಅವರಿಂದ ಹೇಳಿಸುತ್ತೇನೆ" ಎಂದು ತಿಳಿಸಿದರು. ಯಶೋಧರಮ್ಮ ತಮ್ಮ ಪತಿಯಿಂದ ಅನುಮತಿ ಪಡೆದ ಮೇಲೆ ಬಾಪೂ ಅವರ ಹತ್ತಿರ ಹೋಗಿ 'ನೀವು ಹೇಳಿರುವಂತೆ ನಾನು ಈ ಕೆಲಸ ಮಾಡಿದ್ದೇನೆ, ಮುಂದಾದರೂ ನನ್ನದು ಅದೇ ಮಾರ್ಗವಾದುದರಿಂದ ಕೊನೆಗೆ ನನ್ನ ಗುರಿಯೂ ಅದೆ' ಎಂದು ತನಗೆ ಆಶೀರ್ವಾದ ಮಾಡಿ ಎಂದು ಕೇಳಿದರು. ಆಗ ಸಂತೋಷದಿಂದ ಗಾಂಧೀಜಿಯವರು ತಮ್ಮ ತೊಡೆಯ ಮೇಲೆ ಯಶೋಧರಮ್ಮನವರ ತಲೆಯಿರಿಸಿಕೊಂಡು ಎರಡು ನಿಮಿಷ ಪ್ರಾರ್ಥಿಸಿ "ನೀನು ಕಸ್ತೂರ ಬಾ ಗ್ರಾಮದಲ್ಲೆ ಇದ್ದು ಅಲ್ಲೆ ಸಮಾಧಿ ಮಾಡಿಕೊಳ್ಳುವುದಾದರೆ ನನ್ನ ಆಶೀರ್ವಾದ ಇರುತ್ತದೆ" ಎಂದು ಹರಸಿದರು. ನಂತರ ಸರ್ಕಾರಕ್ಕೆ ಕಸ್ತೂರ ಬಾ ಗ್ರಾಮವನ್ನು ತೆರೆಯಲು ಅವಕಾಶವಾಗುವ ಹಾಗೆ ಜಮೀನನ್ನು ನೀಡಬೇಕೆಂದು ಯಶೋಧರಮ್ಮ ಅರ್ಜಿ ಸಲ್ಲಿಸಿದರು. ಅದರಂತೆ 1949ರಲ್ಲಿ 86 ಎಕರೆಗಳ ವಿಸ್ತಾರವಾದ ಜಮೀನನ್ನು ಟ್ರಸ್ಟ್‌ಗೆ ಅಂದಿನ ಕಂದಾಯ ಮಂತ್ರಿಯಾಗಿದ್ದ ಹೆಚ್. ಸಿದ್ದಯ್ಯನವರಿಂದ ಕೊಡಲ್ಪಟ್ಟಿತು. ನಂತರ ತಕ್ಷಣವೇ ಜಮೀನನ್ನು ಸಾಗುವಳಿ ಮಾಡಿ ಅಲ್ಲಿ ಸುಮಾರು ನೂರು ತೆಂಗಿನ ಮರಗಳನ್ನು ನೆಡಿಸಿದರು. ಅಂದಿನ ಮಂತ್ರಿಯಾಗಿದ್ದ ಕೆ.ಟಿ.ಭಾಷ್ಯಂರವರು ಗ್ರಾಮಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಸಹಾಯಮಾಡಿದರು. ವಿದ್ಯುಚ್ಛಕ್ತಿಯನ್ನು ನೀರಾವರಿ ಪಂಪ್‌ಗಳನ್ನು ಮತ್ತು ಬೀದಿಯ ಹಾಗೂ ಮನೆಗಳಿಗೆ ದೀಪಗಳನ್ನು ಉರಿಸಲು ಉಪಯೋಗಿಸಲಾಯಿತು.

ಒಮ್ಮೆ ಯಶೋಧರಮ್ಮನವರು ಗಾಂಧೀಜಿಯವರ ಹತ್ತಿರ "ಬಾಪೂ, ಜನರು ಹೆಣ್ಣುಮಕ್ಕಳು ಸಮಾಜ ಕಾರ್ಯದಲ್ಲಿ ಹೀಗೆ ಮುಂದೆ ಬಂದು ಕೆಲಸ ಮಾಡಿದರೆ ನಾನಾ ರೀತಿ ದೋಷಾರೋಪಣೆ ಮಾಡುತ್ತಾರೆ. ಎಷ್ಟೋ ಸಲ ನನ್ನ ರಾಜಕೀಯ ಜೀವನದಲ್ಲಿ ಗಂಡುಮಕ್ಕಳಿದ್ದರೂ ಕೂಡ ಕೆಲವರ ಬಾಯಿಯಿಂದ ಕೇಳಬಾರದ ಮಾತು ಕೇಳಬೇಕಾಯಿತು. ಈಗ ಇಷ್ಟು ಹೆಣ್ಣುಮಕ್ಕಳ ಜವಾಬ್ದಾರಿ ಸುಲಭವಲ್ಲ. ಬಲು ಟೀಕೆ, ಅಸಹ್ಯದ ಆರೋಪಗಳನ್ನು ನಮ್ಮ ಮುಖಂಡರೇ ಮಾಡುತ್ತಿದ್ದಾರೆ. ಇದು ಬಲು ಕಷ್ಟ ಬಾಪೂ" ಎಂದಾಗ "ಓಹೋ! ನೀನು ಬಹದ್ದೂರ್ ಎಂದು ತಿಳಿದು ನಾನು ನಿನಗೆ ಈ ಕೆಲಸ ಒಪ್ಪಿಸಿದೆ, ಹೇಡಿಯೆಂದು ನನಗೆ ತಿಳಿಯಲಿಲ್ಲ. ಬಾಪೂ ತನ್ನ ಹೆಂಡತಿಯಿಂದಲೇ ಬ್ರಹ್ಮಚರ್ಯ ಜೀವನ ನಡೆಸುವವನಿಗೆ ಇಲ್ಲ ಸಲ್ಲದ ಮಾತು, ಪತ್ರಿಕೆಗಳಲ್ಲಿ ಊಹಾಪೋಹ ಲೇಖನಗಳು ಬಂದಿವೆ. ನೀನು ನನಗಿಂತಲೂ ದೊಡ್ಡವಳು, ನಿನ್ನನ್ನು ಯಾರು ಏನೂ ಅನ್ನಬಾರದಲ್ಲವೇ? ಹುಚ್ಚಿ ! ನಿನ್ನ ಹೃದಯ ಪವಿತ್ರವಾಗಿದ್ದಲ್ಲಿ ಜಗತ್ತಿಗೆ ಹೆದರಬೇಡ. ಕೇವಲ ಕುಮಾರ್ಗದಲ್ಲಿ ನಡೆಯುತ್ತಿರುವ ಜನರೇ ಈ ಹೊಲಸು ಮಾತನಾಡುವವರು. ಸದ್ಧರ್ಮಿಗಳು ಎಂದಿಗೂ ದೂಷಿಸಲಾರರು. ಧೈರ್ಯದಿಂದ ನಿನ್ನ ಜೀವನ ಪರ್ಯಂತ ಹೆಣ್ಣು ಮಕ್ಕಳ ಶ್ರೇಯಸ್ಸಿಗಾಗಿ ದುಡಿ. ನಿನಗೆ ಭಗವಂತನು ಒಳ್ಳೆಯದು ಮಾಡುತ್ತಾನೆ" ಎಂದು ತಿಳಿಸಿದರು.

ಮೈಸೂರು ಸಂಸ್ಥಾನದ ಪ್ರತಿನಿಧಿಯಾಗಿ ಯಶೋಧರಮ್ಮನವರು ಅತ್ಯಂತ ಶ್ರದ್ಧೆಯಿಂದ ಗ್ರಾಮೀಣ ಪ್ರದೇಶಗಳ ಸ್ತ್ರೀಯರ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿಗಾಗಿ ಹೊಸ ಕಾರ್ಯಯೋಜನೆಗಳನ್ನು ಕೈಗೊಳ್ಳುತ್ತಿದ್ದರು. ಟ್ರಸ್ಟ್‌ನ ಪ್ರತಿನಿಧಿಗಳ ಸಭೆಯನ್ನು ಪ್ರತಿವರ್ಷವೂ ಒಂದೊಂದು ಪ್ರಾಂತ್ಯದಲ್ಲಿ ನಡೆಸಲಾಗುತ್ತಿತ್ತು. ಆಗ ಧರ್ಮದರ್ಶಿ ಮಂಡಲಿಯು ಕಾರ್ಯಯೋಜನೆಗಳ ಪ್ರಗತಿಯನ್ನು ಪರಿಶೀಲಿಸುತ್ತಿದ್ದಿತು. ಅಂತಹ ವಾರ್ಷಿಕ ಸಮಾವೇಶವನ್ನು ಯಶೋಧರಮ್ಮ ದಾಸಪ್ಪನವರು ಅರಸೀಕೆರೆಯ "ಮಾಲೆಕಲ್ ತಿರುಪತಿ"ಯಲ್ಲಿ ಏರ್ಪಡಿಸಿದ್ದರು. ಅಲ್ಲಿ ಟ್ರಸ್ಟಿನ ಗ್ರಾಮ ಸೇವಕಿಯರ ತರಬೇತಿ ಶಿಬಿರವೂ ನಡೆಯುತ್ತಿದ್ದು, ಮಾಲೆಕಲ್ ತಿರುಪತಿಯಲ್ಲಿ ಏರ್ಪಾಟಾಗಿದ್ದ ಐತಿಹಾಸಿಕ ಸಮಾವೇಶದಲ್ಲಿ ಥಕ್ಕರ್ ಬಾಪಾರವರೂ, ಇತರ ಧರ್ಮದರ್ಶಿಗಳೂ ಪ್ರಾಂತೀಯ ಪ್ರತಿನಿಧಿಗಳು ಭಾವಹಿಸಿದ್ದರು.

ಕಸ್ತೂರ ಬಾ ಗ್ರಾಮವು ಆರ್ಥಿಕವಾಗಿ ಸ್ವಾವಲಂಬಿಯಾಗಿರಬೇಕೆಂದು ಅಲ್ಲಿ ಒಂದು ಸಹಸ್ರ ತೆಂಗಿನ ಸಸಿಗಳನ್ನು ನಡೆಸಿ ಪೋಷಿಸಿದರು. ಹತ್ತು ಹನ್ನೆರಡು ವರ್ಷಗಳಲ್ಲಿ ತೆಂಗಿನ ಮರಗಳು ದೊಡ್ಡದಾಗಿ ಬೆಳೆದು ಫಲ ಬಿಡುವಂತಾಯಿತು. ಅದರ ಜೊತೆಗೆ ಜೋಳ, ರಾಗಿ, ಎಣ್ಣೆಕಾಳುಗಳು ಮತ್ತು ಇತರ ಬೆಳೆಗಳನ್ನೂ ಬೆಳೆಯಲಾರಂಭಿಸಿದರು. ಯಶೋಧರಮ್ಮ ದಾಸಪ್ಪನವರು ಕಸ್ತೂರ ಬಾ ಗ್ರಾಮ ಸ್ಥಾಪಿಸಿದ ನಂತರ ಕಸ್ತೂರ ಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಧರ್ಮದರ್ಶಿ ಮಂಡಲವೂ ಅದೇ ಮಾದರಿಯಲ್ಲಿ ಮಧ್ಯಪ್ರದೇಶದ ಇಂದೂರಿನ ಬಳಿ ಕಸ್ತೂರ ಬಾ ಗ್ರಾಮವನ್ನು ನಿರ್ಮಾಣ ಮಾಡಿ ಅಲ್ಲಿ ಟ್ರಸ್ಟಿನ ರಾಷ್ಟ್ರೀಯ ಕೇಂದ್ರವನ್ನು ಸ್ಥಾಪಿಸಿತು.

ಯಶೋಧರಮ್ಮನವರು ಗೃಹ ಕೈಗಾರಿಕೆ ನಡೆಸಲು ಬಹಳ ಹಣ ಬೇಕಾಗುತ್ತದೆ. ಸರ್ಕಾರದಿಂದಲೇ ತೆಗೆದುಕೊಳ್ಳಲೆ ಎಂದು ಗಾಂಧೀಜಿಯವರನ್ನು ಕೇಳಿದಾಗ "ನಿನ್ನ ಗಂಡ ಹಣಕಾಸು ಮತ್ತು ಕೈಗಾರಿಕಾ ಮಂತ್ರಿ ಪದವಿಯಿಂದ ಹೊರಗೆ ಹೋಗುವ ತನಕ ಬೇಡ, ಗಂಡ ಎಲ್ಲಾ ಹೆಂಡತಿಗೆ ಕೊಟ್ಟ ಎಂಬ ಅಪವಾದ ಬರುತ್ತದೆ" ಎಂದರು. "ಎಷ್ಟೋ ಜನ ನೀವು ಏನು ಮಾಡುತ್ತಿರುವುದು, ಕಸ್ತೂರ ಬಾ ಹಣವೆಲ್ಲಾ ತಿಂದುಬಿಟ್ಟಿರಾ? ಎನ್ನುತ್ತಾರೆ. ಇದರ ಬಗ್ಗೆ ಆಗಾಗ ಪತ್ರಿಕೆಗಳಲ್ಲೂ ಲೇಖನಗಳು ಬಂದಿವೆ" ಎಂದು ಯಶೋಧರಮ್ಮ ಹೇಳಿದ ಕೂಡಲೆ ಗಾಂಧೀಜಿಯವರು "ನಿನಗೆ ಬೈಸಿಕೊಳ್ಳಲು ಇಷ್ಟವಿದ್ದರೆ ನೀನು ಕೆಲಸದ ಪ್ರಚಾರಕ್ಕೆ ಹೋಗು, ನೀನು ಕೆಲಸ ತಾನೇ ಮಾಡಬೇಕು ನೀನೇಕೆ ಪತ್ರಿಕೆ ಓದಬೇಕು, ನಿಧಾನವಾದರೂ ಬಾಧಕವಿಲ್ಲ, ಜನರು ಏನೆಂದರೂ ಚಿಂತೆಯಿಲ್ಲ, ತಾಳ್ಮೆಯಿಂದ ಮುಂದುವರೆಸು" ಎಂದು ತಿಳಿಸಿದರು.

ಯಶೋಧರಮ್ಮ ದಾಸಪ್ಪನವರು 1962ರಲ್ಲಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಕಸ್ತೂರ ಬಾ ಟ್ರಸ್ಟ್‌ನ ಅಧಿಕಾರವನ್ನು ಬೇರೆಯವರಿಗೆ ಒಪ್ಪಿಸಿದರು. ಆದರೆ, ಪಾನನಿರೋಧ ಸಡಿಲಿಕೆ ನೀತಿಯಿಂದ ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನು ನೀಡಿದ ನಂತರ ಎಂದಿನಂತೆ ತಮ್ಮ ರಚನಾತ್ಮಕ ಕಾರ್ಯಕ್ರಮಗಳಲ್ಲಿ, ತಮ್ಮನ್ನು ಮತ್ತೆ ತೊಡಗಿಸಿಕೊಂಡು ಹೊಸ ಹೊಸ ಕಾರ್ಯಯೋಜನೆಗಳನ್ನು ರೂಪಿಸಿದರು. ಕಸ್ತೂರ ಬಾ ಸ್ಮಾರಕ ಟ್ರಸ್ಟ್‌ನ ಗ್ರಾಮ ಸೇವಕಿಯರ ಹಾಗೂ ಇತರ ಕಾರ್ಯಕರ್ತರ ಮಕ್ಕಳಿಗೆ ಸ್ಥಾಪಿಸಿದ ಕನ್ಯಾವಿದ್ಯಾಲಯವನ್ನು ಸ್ವಾತಂತ್ರ್ಯ ಸೇವಾ ಸಂಸ್ಥೆಯಾಗಿ ಬೆಳೆಸಿ, ಇದರ ಸಹಯೋಗದಿಂದ ಹಾಸನ ಜಿಲ್ಲೆಯ "ಕಾರ್ಲೆ" ಗ್ರಾಮದಲ್ಲಿ ಗ್ರಾಮೀಣ ಮಕ್ಕಳಿಗೆ ಅನುಕೂಲವಾಗುವಂತೆ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಪ್ರೌಢಶಾಲೆಯ ಶಿಕ್ಷಣದ ವ್ಯವಸ್ಥೆಯನ್ನು ರೂಪಿಸಿದರು.

ಮೈಸೂರಿನ ಯಾದವಗಿರಿಯಲ್ಲಿ ಒಂದು ಮನೆಯನ್ನು ತೆಗೆದುಕೊಂಡ ಯಶೋಧರಮ್ಮನವರು ಅಲ್ಲಿ ಅಂಥ ಹೆಣ್ಣುಮಕ್ಕಳಿಗೆ ಅನುಕೂಲವಾಗುವಂತೆ ವಸತಿಶಾಲೆಯನ್ನು ಸ್ಥಾಪಿಸಿ, ಅವರಿಗೆ ಸಂಗೀತ ಮತ್ತು ಕಲೆಯಲ್ಲಿ ತರಬೇತಿ ವ್ಯವಸ್ಥೆಯನ್ನು ಕಲ್ಪಿಸಿದರು. ಅನಾಥ ಮತ್ತು ಬಡ ಹೆಣ್ಣುಮಕ್ಕಳಿಗೆ ಸ್ವಯಂ ಉದ್ಯೋಗ ಕಲ್ಪಿಸುವ

ಉದ್ದೇಶದಿಂದ ಬೆಂಗಳೂರಿನ ಎಚ್.ಎಂ.ಟಿ. ಮತ್ತು ಟೆಲಿಫೋನ್ ಉದ್ಯಮಗಳ ನೆರವು ಪಡೆದು ಮೈಸೂರು ಮತ್ತು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ಗಡಿಯಾರ ಹಾಗೂ ಟೆಲಿಫೋನ್ ಭಾಗಗಳನ್ನು ತಯಾರಿಸುವ ಪೂರಕ ಘಟಕಗಳನ್ನು ಸ್ಥಾಪಿಸಿದರು. ಈ ಘಟಕಗಳಲ್ಲಿ ಅಂಧ ಹೆಣ್ಣುಮಕ್ಕಳೂ ಸೇರಿದಂತೆ ಅನೇಕ ಬಡ ಮಹಿಳೆಯರು ಉದ್ಯೋಗದ ತರಬೇತಿ ಪಡೆದು ಸ್ವಾವಲಂಬಿಗಳಾಗಿ ಬದುಕುವ ಭಾಗ್ಯ ಪಡೆದರು. ಜೊತೆಗೆ ಅದೇ ವೈಟ್‌ಫೀಲ್ಡ್‌ನಲ್ಲಿ ಬೇಕರಿ ಘಟಕವನ್ನು ಸ್ಥಾಪಿಸಿ ಕನ್ಯಾ ವಿದ್ಯಾಲಯದ ಕಾರ್ಯಕ್ರಮಗಳನ್ನು ವಿಸ್ತಾರ ಮಾಡಿದರು.

ಕಾರ್ಲೆಯಲ್ಲಿ ಸ್ಥಾಪಿಸಲಾಗಿದ್ದ ಕನ್ಯಾ ವಿದ್ಯಾಲಯದಲ್ಲಿ ಶೈಕ್ಷಣಿಕ ವಿಷಯಗಳನ್ನು ಬೋಧಿಸುವುದರ ಜೊತೆಗೆ ನೃತ್ಯ, ಭರತನಾಟ್ಯ, ಸಂಗೀತ, ಕಸೂತಿ ಇತ್ಯಾದಿಗಳಲ್ಲಿ ವಿಶೇಷ ತರಬೇತಿ ಕೊಡಿಸಿ ಆ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅನುಗುಣವಾದ ಶಿಕ್ಷಣ ಕ್ರಮವನ್ನು ಜಾರಿಗೊಳಿಸಿದರು. ಜೊತೆಗೆ ಕೆಲಸಕ್ಕೆ ಬರುತ್ತಿದ್ದ ಕೃಷಿ ಕಾರ್ಮಿಕರಿಗೆ ರಾತ್ರಿಶಾಲೆ, ಕೋಲಾಟ, ಮತ್ತಿತರ ಸಾಂಸ್ಕೃತಿಕ ಶಿಕ್ಷಣ ಹಾಗೂ ಕೃಷಿಶಾಸ್ತ್ರದಲ್ಲಿ ಪ್ರಾಥಮಿಕ ವ್ಯವಸ್ಥೆಯನ್ನು ಮಾಡಿದರು.

ಅರಸೀಕೆರೆಯಲ್ಲಿ ಕಸ್ತೂರ ಬಾ ಗಾಂಧೀ ಶಿಕ್ಷಣ ಶಿಬಿರವನ್ನು ಹಮ್ಮಿಕೊಂಡಿದ್ದು ವಿದ್ಯಾರ್ಥಿನಿಯರಿಗೆ ಉಚಿತವಾಗಿ ಊಟ ಮತ್ತು ವಸತಿಗಳನ್ನು ಕಲ್ಪಿಸಲಾಗಿತ್ತು. 18ರಿಂದ 30 ವರ್ಷದ ಮಹಿಳೆಯರಿಗೆ ಕನಿಷ್ಠ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ನೀಡಲಾಗುವುದೆಂದು, ಶಿಕ್ಷಣ ಪಡೆದ ಮೇಲೆ ಮೂರು ವರ್ಷಕಾಲ ಕಸ್ತೂರ ಬಾ ಟ್ರಸ್ಟಿನ ಆಶ್ರಮದಲ್ಲಿ ಸೇವೆ ಸಲ್ಲಿಸಲು ಬದ್ಧರಾಗಿರಬೇಕು ಎಂಬುದಾಗಿ ಯಶೋಧರಮ್ಮ ದಾಸಪ್ಪನವರು ತಿಳಿಸಿದರು.

ಕಸ್ತೂರ ಬಾ ಶಿಕ್ಷಣ ಶಿಬಿರದಲ್ಲಿ ಭಾಗವಹಿಸಿದವರನ್ನು ಸತ್ಕರಿಸುವ ಸಲುವಾಗಿ ಏರ್ಪಡಿಸಿದ್ದ ಕೂಟದಲ್ಲಿ ಯಶೋಧರಮ್ಮ ದಾಸಪ್ಪನವರು ಮಾತನಾಡಿ ಕೆಲಸಗಾರರು ತಮಗಿತ್ತ ಸಹಕಾರವನ್ನು ಮುಂದೆಯೂ ಕೊಡಬೇಕೆಂದು ಕೋರಿದರು.

ಮಹಿಳೆಯರಿಂದಲೇ ಗ್ರಾಮೋದ್ಧಾರ ಎಂದು ಶ್ರೀಮತಿ ಲೋಕಸುಂದರಿ ರಾಮನ್‌ರವರು ಕಸ್ತೂರ ಬಾ ನಿಧಿಯ ಸಮಿತಿಯ ಆಶ್ರಯದಲ್ಲಿ ಏರ್ಪಡಿಸಿದ್ದ ಶಿಕ್ಷಣ ಶಿಬಿರದ ಆರಂಭೋತ್ಸವವನ್ನು ಪಡವಾರಹಳ್ಳಿ ಜಯಲಕ್ಷ್ಮೀ ವಿಲಾಸ ಕಟ್ಟಡದಲ್ಲಿ ನೆರವೇರಿಸಿ ಮಾತನಾಡಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಿದ್ಧವನಹಳ್ಳಿ ಕೃಷ್ಣಶರ್ಮರು ಮಾತನಾಡಿ "ಅಹಿಂಸೆಯ ಸಂದೇಶವನ್ನು ಸಾರಲು ಪುರುಷರಿಗಿಂತ ಸ್ತ್ರೀಯರು ಹೆಚ್ಚು ಸಮರ್ಥರಾದುದರಿಂದ ಈ ಕಸ್ತೂರ ಬಾ ಸ್ಮಾರಕದ ಫಲವಾಗಿ ದೇಶದ ಯಾವುದಾದರೊಂದು ಕಡೆ ಅಹಿಂಸೆಯ ಮೂರ್ತಿ ಸ್ವರೂಪಗಳಲ್ಲಿ ಒಬ್ಬ ಮಹಿಳಾ ಮಣಿಯು ಉದ್ಭವಿಸಿ, ಈ ಸಂದೇಶವನ್ನು ಜಗತ್ತಿಗೆ ಸಾರಲೆಂಬುದೆ ಮಹಾತ್ಮರ ಮುಖ್ಯ ಉದ್ದೇಶವಾಗಿತ್ತು" ಎಂದು ತಿಳಿಸಿದರು. ಯಶೋಧರಮ್ಮ ದಾಸಪ್ಪನವರು ಒಂದು ತಿಂಗಳಿನಿಂದ ನಡೆದ ಕಾರ್ಯಕಲಾಪಗಳ ವರದಿಯನ್ನು ತಿಳಿಸಿದ ನಂತರ ನೂಲುವುದು, ಸಣ್ಣ ಪುಟ್ಟ ಕೈಗಾರಿಕಾ ಸಾಮಾನುಗಳನ್ನು ಮಾಡುವುದು, ಅಕ್ಷರ ಪ್ರಚಾರ ಮುಂತಾದ ಪ್ರದರ್ಶನಗಳನ್ನು ಏರ್ಪಾಡು ಮಾಡಿದರು.

ದೊಡ್ಡಬಳ್ಳಾಪುರದ ಬಳಿ ಕನ್ನಮಂಗಲದಲ್ಲಿ ನಡೆದ ಕಸ್ತೂರ ಬಾ ಶಿಬಿರಕ್ಕೆ ಭೇಟಿ ನೀಡಿದ ಶ್ರೀ ಮನ್ಮಹಾರಾಜರು ಅಲ್ಲಿ ನಡೆಯುತ್ತಿದ್ದ ಕೆಲಸಕಾರ್ಯಗಳನ್ನು ನೋಡಿ ಮೆಚ್ಚಿಗೆಯನ್ನು ಸೂಚಿಸಿದರು. ಹಾಗೆಯೇ ಮಹಾತ್ಮ ಗಾಂಧಿಯವರಲ್ಲಿ ತಮಗಿರುವ ಅಚಲವಾದ ಭಕ್ತಿ, ವಿಶ್ವಾಸಗಳನ್ನು, ಕಸ್ತೂರ ಬಾ ಗಾಂಧಿಯವರ ಜೀವನದಲ್ಲಿ ಯಾವ ರೀತಿಯ ಪರಿಣಾಮ ಬೀರಿದರು ಎಂದು ವಿವರಿಸಿದರು. ಅವರ ಆದರ್ಶವನ್ನು ಮಹಿಳೆಯರೆಲ್ಲರೂ ಹೊಂದಿರಬೇಕು ಎಂದು ತಿಳಿಸಿದರು.

ಯಶೋಧರಮ್ಮನವರಿಗೆ ಸಮಾಜಸೇವೆ ಮಾಡುವಾಗ ಸಮಯದ ಪರಿವೆಯೇ ಇಲ್ಲದ ರೀತಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಹಳ್ಳಿಗಳಿಂದ ಕರೆ ಬಂದ ತಕ್ಷಣವೇ ಹೊರಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದರು. ಒಮ್ಮೆ ಇದೇ ರೀತಿ ಹಾಸನದ ಪಕ್ಕದ ಹಳ್ಳಿಯಿಂದ ಕರೆ ಬಂದ ತಕ್ಷಣ ರಾತ್ರಿ 7–8 ಗಂಟೆ ಸಮಯದಲ್ಲಿ ಯಶೋಧರಮ್ಮನವರು ತಮ್ಮ ಡ್ರೈವರ್ ಮತ್ತು ತಂಗಿಯ ಮಗಳು ಇಂದಿರಾಕೃಷ್ಣಾ ಜೊತೆ ಸೇರಿ ಹೊರಟೇಬಿಟ್ಟರು. ಮಧ್ಯದಲ್ಲಿ ದಾರಿ ತಪ್ಪಿ ಊರಿಗೆ ಹೋಗಲು ತೊಂದರೆ ಉಂಟಾಯಿತು. ನಂತರ ಜೀಪಿನಲ್ಲಿ ಪೆಟ್ರೋಲ್ ಸ್ವಲ್ಪ ಇದ್ದುದರಿಂದ ಡ್ರೈವರ್ ಗಾಡಿಯನ್ನು ದಾರಿಯ ಮಧ್ಯೆ ನಿಲ್ಲಿಸಿ ಊರಿನ ದಾರಿ ಹುಡುಕಲು ಹೊರಟನು. ಕಾಡಿನ ಮಧ್ಯೆ ಯಶೋಧರಮ್ಮನವರು ಮಗ ತುಳಸಿದಾಸ ಮತ್ತು ಇಂದಿರಾಕೃಷ್ಣ ಜೊತೆ ಹಾಗೆ ಕತ್ತಲಲ್ಲಿ ಜೀಪ್‌ನಲ್ಲಿ ಕುಳಿತರು. ಡ್ರೈವರ್ ಬಂದ ನಂತರ ರಾತ್ರಿ 12 ಘಂಟೆಗೆ ಊರನ್ನು ತಲುಪಿದರು. ಇವರಿಗಾಗಿ ಕಾದಿದ್ದ ಜನರನ್ನು ಮತ್ತೆ ಎಬ್ಬಿಸಿ ಅವರ ಸಮಸ್ಯೆಗಳನ್ನು ಚರ್ಚೆ ಮಾಡಿದರು. ಹೀಗೆ ಸಮಯ ಪ್ರಜ್ಞೆ ಇಲ್ಲದೆ ಚಳಿಯಿರಲಿ ಮಳೆಯಿರಲಿ ರಾತ್ರಿಯ ಸಮಯದಲ್ಲಿಯೂ ಹಳ್ಳಿಯ ಜನರ ಸಮಸ್ಯೆಗಳನ್ನು ಕೇಳಲು ಧಾವಿಸಿ ಹೋಗುತ್ತಿದ್ದರು.

ಒಮ್ಮೆ ಹಳ್ಳಿಯಿಂದ ಹಾಸನಕ್ಕೆ ಹೋಗುವಾಗ ಜೀಪ್ ಪಂಚರ್ ಆಗಿತ್ತು. ಅದು ರಿಪೇರಿ ಹೊಂದುವುದಕ್ಕೆ ಸುಮಾರು ಎರಡು ಘಂಟೆಯ ಸಮಯವನ್ನು ತೆಗೆದುಕೊಂಡಿತ್ತು. ಆ ಸಮಯದಲ್ಲಿ ಯಶೋಧರಮ್ಮನವರು ತಮ್ಮ ಸೂಟ್‌ಕೇಸನ್ನು ತೆಗೆದು ಯಾವುದಾದರೂ ಫೈಲ್‌ಗಳನ್ನು ನೋಡುತ್ತಿದ್ದರು. ಸಮಯವನ್ನು ಎಂದೂ ವ್ಯರ್ಥವಾಗಿ ಕಳೆಯುವುದಕ್ಕೆ ಒಪ್ಪುತ್ತಿರಲಿಲ್ಲ. ಎಲ್ಲ ಕೆಲಸಗಳಿಗೆ ಹೆಣ್ಣುಮಕ್ಕಳನ್ನೇ ನೇಮಿಸುತ್ತಿದ್ದ ಇವರು ತಾವು ನಡೆಸುತ್ತಿದ್ದ ಸಂಸ್ಥೆಗಳಿಗೆ ಕಾವಲುಗಾರರಾಗಿಯೂ ಹೆಣ್ಣುಮಕ್ಕಳನ್ನೇ ನೇಮಿಸಿದ ಸಂದರ್ಭವಿದೆ.

ಹೆಣ್ಣುಮಕ್ಕಳಿಗೆ ಮಿತಿ ಮೀರಿದ ಔದಾರ್ಯ ತೋರುತ್ತಿದ್ದ ಯಶೋಧರಮ್ಮನವರು ಶಾರದಾ ಸೇವಿಕಾ ಮಂಡಲಿಯಲ್ಲಿ ಇದ್ದಾಗ ಒಮ್ಮೆ ಒಬ್ಬ ಮಹಿಳೆ ಕೆದರಿದ ಕೂದಲಿನಿಂದ ಅಳುತ್ತ ಇವರ ಹತ್ತಿರ ಬಂದಳು. ಸೀಮೆಎಣ್ಣೆ ವಾಸನೆ ಬರುತ್ತಿತ್ತು. ತನ್ನ ಸಂಕಟವನ್ನು ಇವರ ಹತ್ತಿರ ಹೇಳಿಕೊಂಡು ಚಡಪಡಿಸಿದಳು. ನಂತರ ಅವಳನ್ನು ಸಮಾಧಾನ ಮಾಡಿ, ಸ್ನಾನ ಮಾಡಿಸಿ, ತಮ್ಮ ಬಟ್ಟೆಯನ್ನೇ ನೀಡಿ, ಊಟ ಹಾಕಿ ಧೈರ್ಯ ತುಂಬಿದರು. ಮನಸ್ಸಿಗೆ ನೋವುಂಟಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ ಆ ಮಹಿಳೆ ಯಶೋಧರಾ ದಾಸಪ್ಪನವರು ಇರುವ ವಿಷಯ ತಿಳಿದು ಅವರನ್ನು ನೆನೆಸಿಕೊಂಡು ಅವರ ಹತ್ತಿರ ಬಂದು ದುಃಖವನ್ನು ಹಂಚಿಕೊಂಡು ಸಮಾಧಾನದ ನಂತರ ಮನೆಗೆ ವಾಪಸ್ಸಾದರು.

ನುಡಿದಂತೆ ನಡೆಯುತ್ತಿದ್ದ ಯಶೋಧರಮ್ಮ ಕನ್ಯಾ ವಿದ್ಯಾನಿಲಯದಲ್ಲಿ ಇದ್ದ ಬಡ ಕುಟುಂಬದ ಸರೋಜ ಎಂಬ ಹೆಣ್ಣುಮಗಳನ್ನು ತಮ್ಮ ಎರಡನೇ ಮಗ ತುಳಸಿದಾಸಪ್ಪನವರಿಗೆ ಕಸ್ತೂರ ಬಾ ಗ್ರಾಮದ ಕನ್ಯಾ ವಿದ್ಯಾಲಯದಲ್ಲಿಯೇ ಬಹಳ ಸರಳವಾಗಿ ವಿವಾಹ ಮಾಡಿಕೊಂಡರು. ತಾವು ಇತರರಿಗೆ ಉಪದೇಶಿಸುತ್ತಿದ್ದುದನ್ನು ಆಚರಣೆಗೆ ತರುವಂತವರಾಗಿದ್ದರು.

ಹರಿಜನರ ಬಗ್ಗೆ ಕಾಳಜಿ ಹೊಂದಿದ್ದ ಯಶೋಧರಮ್ಮನವರು ತಮ್ಮ ಮಗ ತುಳಸಿದಾಸಪ್ಪನವರಿಗೆ ಹರಿಜನ ಹೆಣ್ಣುಮಗಳನ್ನು ವಿವಾಹ ಮಾಡಬೇಕೆಂದು ಇಚ್ಛಿಸಿದ್ದರು. ಆದರೆ ಅವರ ಆಸೆ ಫಲಿಸಲಿಲ್ಲ. ಯಾವಾಗಲೂ ಜನರ ಬಗ್ಗೆ ಕಾಳಜಿಯನ್ನು ಹೊಂದಿದ್ದ ಯಶೋಧರಮ್ಮ, ಅವರ ಶ್ರೇಯಸ್ಸಿಗಾಗಿ ಶ್ರಮಿಸುತ್ತಿದ್ದರು. ಒಮ್ಮೆ ಹರಿಜನ ಕುಟುಂಬದಲ್ಲಿ ಜನಿಸಿ ಕೆಲವೇ ದಿನಗಳಾಗಿದ್ದ ಹೆಣ್ಣು ಮಗುವನ್ನು ಯಾರೋ ಇವರಿಗೆ ತಂದುಕೊಟ್ಟರು. ಅದನ್ನು ಪತಿ–ಪತ್ನಿ ಶಾಸ್ತ್ರೋಕ್ತವಾಗಿ ದತ್ತು ತೆಗೆದುಕೊಂಡು ಸಾಕಿದರು. ಇದರಿಂದ ಬಂಧುಗಳ ಕೋಪಕ್ಕೆ ತುತ್ತಾದರು. ಯಶೋಧರಮ್ಮ ಇದರ ಬಗ್ಗೆ ಚಿಂತಿಸದೆ ತಮ್ಮ ಬಂಧುಗಳ ಆಕ್ಷೇಪಣೆಗೆ ಕಿವಿಗೊಡಲಿಲ್ಲ. ಆ ಮಗುವನ್ನು

ಗಾಂಧೀಜಿಯವರ ಬಳಿ ತೆಗೆದುಕೊಂಡು ಹೋಗಿ ಹೆಸರಿಡಬೇಕೆಂದು ಕೇಳಿಕೊಂಡಾಗ ಗಾಂಧೀಜಿಯವರು ಮಗುವಿಗೆ "ಪ್ರಭಾ" ಎಂದು ನಾಮಕರಣ ಮಾಡಿ "ನಿನ್ನ ಪ್ರಭೆಯೂ ಇದರೊಂದಿಗೆ ವಿಕಾಸಗೊಳ್ಳಲಿ" ಎಂದು ಹರಸಿದರು. ಮಗಳನ್ನು ಸಾಕಿ ಬೆಳೆಸಿ ತಮ್ಮ ಆಸ್ತಿಯ ಒಂದು ಭಾಗವನ್ನು ಅವಳಿಗೆ ನೀಡಿ ಡಾ. ಮೋಹನ್ ಚಂಪಾ ಎಂಬುವರಿಗೆ ವಿವಾಹ ಮಾಡಿಕೊಟ್ಟರು.

ಡಾ. ರಾಜೇಂದ್ರಪ್ರಸಾದ್ ಅವರು ಅಖಿಲ ಭಾರತದ ರಾಷ್ಟ್ರಮಟ್ಟದಲ್ಲಿ ಗಾಂಧಿ ಸ್ಮಾರಕ ನಿಧಿಯ ಧರ್ಮದರ್ಶಿ ಮಂಡಲಿಗೆ ಯಶೋಧರಮ್ಮ ದಾಸಪ್ಪನವರನ್ನು ಧರ್ಮದರ್ಶಿಯನ್ನಾಗಿ ನೇಮಕ ಮಾಡಿದರು. ಆಜೀವಪರ್ಯಂತ ಇವರು ಗಾಂಧಿ ಸ್ಮಾರಕ ನಿಧಿಯ ಧರ್ಮದರ್ಶಿಯಾಗಿಯೂ, ಮಂಡಲಿಯ ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಕಳೆದ ಐದು ದಶಕಗಳಿಂದ ಗಾಂಧಿ ಸ್ಮಾರಕ ಟ್ರಸ್ಟ್ ದೇಶಾದ್ಯಂತ ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಅಭ್ಯುದಯಕ್ಕಾಗಿ ಅತ್ಯಂತ ಮೌಲಿಕವಾದ ಮಾರ್ಗದರ್ಶಿ ಸ್ವರೂಪದ ಕಾರ್ಯ ನಿರ್ವಹಿಸಿಕೊಂಡು ಬಂದಿದೆ. ಯಶೋಧರಮ್ಮನವರ ನಾಯಕತ್ವದಲ್ಲಿ ಕರ್ನಾಟಕದ ಮೈಸೂರು ಸಂಸ್ಥಾನದಲ್ಲಿ ನಡೆದ ಕೆಲಸ ಇಡೀ ದೇಶಕ್ಕೆ ಮಾದರಿಯಾಗಿತ್ತು.

'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಅನೇಕ ಹೋರಾಟಗಾರರಿಗೆ ಕಾರ್ಯಗೃಹವಾಗಿದ್ದ ಯಶೋವಿಲಾಸವನ್ನೂ ಯಶೋಧರಮ್ಮನವರು ರಾಷ್ಟ್ರಕ್ಕೆ ಅರ್ಪಿಸಿ ಹೆಚ್.ಸಿ.ದಾಸಪ್ಪನವರ ಹೆಸರಿನಲ್ಲಿ ಸ್ಮಾರಕ ಟ್ರಸ್ಟನ್ನು ಸ್ಥಾಪಿಸಿ ಧರ್ಮದರ್ಶಿ ಮಂಡಲದ ಸ್ಥಾಪಕ ಅಧ್ಯಕ್ಷೆಯಾಗಿದ್ದರು.

ಇವರಲ್ಲಿ ಇದ್ದ ಸಾಮಾಜಿಕ ಕಾಳಜಿ, ರಾಜಕೀಯ ಕ್ಷೇತ್ರದಲ್ಲಿ ಇವರ ನಿಷ್ಠೆ, ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ಅದನ್ನು ಕಾರ್ಯಗತ ಮಾಡಿದ್ದು, ಕೊನೆಯವರೆಗೆ ತತ್ವನಿಷ್ಠೆಯಿಂದ ಗಾಂಧೀಜಿಯವರ ಅನುಯಾಯಿಯಾಗಿ ಸ್ವಾರ್ಥರಹಿತ ಸಾರ್ವಜನಿಕ ಸೇವೆ ಮಾಡಿದ ಇವರನ್ನು ಗುರುತಿಸಿ ಭಾರತ ಸರ್ಕಾರ ಇವರಿಗೆ 1973ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು.

ರಾಷ್ಟ್ರಕ್ಕೆ ಇವರು ಸಲ್ಲಿಸಿದ ಉಜ್ವಲ ಕೊಡುಗೆ ಚಿರಸ್ಮರಣೀಯವಾದುದು. ರಾಜ್ಯ ಸೇವಾಸಂಘಗಳ ಒಕ್ಕೂಟ ಯಶೋಧರಮ್ಮದಾಸಪ್ಪನವರ ಹೆಸರಿನಲ್ಲಿ ಪ್ರಶಸ್ತಿ ಯೊಂದನ್ನು ಸ್ಥಾಪಿಸಿದೆ. ಇದರ ಮೊದಲ ಪ್ರಶಸ್ತಿಯನ್ನು 2001ರಲ್ಲಿ ಸರ್ವೋದಯ ಕಾರ್ಯಕರ್ತರಾದ ಟಿ.ಎ. ದಾಸಪ್ಪನವರಿಗೆ ನೀಡಿ ಪುರಸ್ಕರಿಸಿದೆ.

"1980ರಲ್ಲಿ ಕ್ಯಾನ್ಸರ್ ರೋಗಕ್ಕೆ ತುತ್ತಾಗಿ ಮರಣ ಹೊಂದಿದ ಯಶೋಧರಮ್ಮನವರು ಮಹಾತ್ಮಾಗಾಂಧಿಗೆ ವಚನ ಕೊಟ್ಟಂತೆ ತುಂಬಾ ಪರಿಶ್ರಮದಿಂದ ದುಡಿದು ಕಟ್ಟಿದ್ದ ಕಸ್ತೂರ ಬಾ ಗ್ರಾಮದಲ್ಲಿ ತಮ್ಮ ಅಂತ್ಯಸಂಸ್ಕಾರ ಆಗಬೇಕೆಂದು ಬಯಸಿದರು. ಅದರಂತೆ ಕಸ್ತೂರ ಬಾ ಗ್ರಾಮದಲ್ಲಿ ಗಾಂಧಿ ಚಿತಾಭಸ್ಮವನ್ನಿಟ್ಟು ನಿರ್ಮಿಸಲಾಗಿರುವ ಸ್ಮಾರಕ ಬೃಂದಾವನದ ಎದುರಿನಲ್ಲೆ ಯಶೋಧರಾ ಅವರ ಪಾರ್ಥಿವ ಶರೀರವನ್ನು ದಹನಮಾಡಲಾಗಿದೆ. ಅವರ ಇಚ್ಛೆಯಂತೆ ಅವರ ಚಿತಾಭಸ್ಮವನ್ನು ಕಸ್ತೂರ ಬಾ ಗ್ರಾಮದ ಜಮೀನಿನ ಮೇಲೆ ಉದುರಿಸಿ ಮಿಕ್ಕದ್ದನ್ನು ಹೇಮಾವತಿ ನದಿಗೆ ಬಿಟ್ಟು ಬಿಡಲಾಯಿತು. ಇದು ಅವರ ಇಚ್ಛೆಯಂತೆಯೇ ನಡೆಯಿತು."

ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ದೀನದಲಿತರ, ಸ್ತ್ರೀಯರ, ಮಕ್ಕಳ, ನಿರ್ಗತಿಕ ಮಹಿಳೆಯರ, ಸಮಾಜ ಕಡೆಗಣಿಸಿದ ಎಲ್ಲರ ಸೇವೆಯನ್ನು ಮಾಡಿ ಈ ದೇಶದಲ್ಲಿ ದೇವರೇ ಹುಟ್ಟಿ ಬಂದರೂ ಇಷ್ಟು ಕೆಲಸ ಮಾಡಲು ಸಾಧ್ಯವಿರಲಿಲ್ಲ, ಅವರು "ಕರ್ನಾಟಕದ ಕಸ್ತೂರ ಬಾ" ಎಂದು ಯಶೋಧರಮ್ಮನವರ ಅಂತ್ಯ ಸಂಸ್ಕಾರದ ಸಮಯದಲ್ಲಿ ಕಂಬನಿಗೈದರು.

ತುಂಬಾ ಶ್ರಮದಿಂದ ಯಶೋಧರಮ್ಮ ಕಟ್ಟಿ ಬೆಳೆಸಿದ ಈ ಕಸ್ತೂರ ಬಾ ಸಂಸ್ಥೆ ಇಂದು ಅಷ್ಟೊಂದು ಉನ್ನತಿಯನ್ನು ಕಾಣುತ್ತಿಲ್ಲ ಎಂದು ಅನ್ನಿಸುತ್ತದೆ. ಕಾರಣ, ಅರಸೀಕೆರೆಯ ಕಸ್ತೂರ ಬಾ ಟ್ರಸ್ಟ್‌ಗೆ ಭೇಟಿ ಕೊಟ್ಟಾಗ ಟ್ರಸ್ಟ್ ಬೆಳವಣಿಗೆಯ, ಕಾರ್ಯಚಟುವಟಿಕೆಯ ಬಗ್ಗೆ ಅಕ್ಕಪಕ್ಕದ ಜನರನ್ನು ಕುರಿತು ಕೇಳಿದಾಗ ತುಂಬಾ ದುಃಖ ವ್ಯಕ್ತಪಡಿಸಿದರು. "ನಾವು ಚಿಕ್ಕಂದಿನಿಂದಲೂ ನೋಡಿದ ಸಂಸ್ಥೆ ಇಂದು ಕೆಲವು ಮಂದಿಯಿಂದ ಹಾಳಾಗುತ್ತಿದೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇದನ್ನು ಕಬಳಿಸಲು ಪ್ರಯತ್ನಿಸುತ್ತಿದ್ದಾರೆ. ಅಂದು ತುಂಬ ಶ್ರಮವಹಿಸಿ ಯಶೋಧರಮ್ಮ ನವರು ಕಟ್ಟಿ ಬೆಳೆಸಿದ ಸಂಸ್ಥೆ ಈಗ ಯಾವ ರೀತಿ ಇದೆ ನೋಡಿ" ಎಂದು ತಮ್ಮ ಸಂಕಟವನ್ನು ತೋಡಿಕೊಂಡರು. ಒಂದು ಸಂಸ್ಥೆಯನ್ನು ಸ್ಥಾಪಿಸುವುದು ಎಷ್ಟು ಕಷ್ಟವೋ ಅದನ್ನು ಬೆಳೆಸುವುದು ಅಷ್ಟೇ ಕಷ್ಟ. ಯಾವ ಉದ್ದೇಶದಿಂದ ಗಾಂಧೀಜಿಯವರ ನಿಶ್ಚಯದಂತೆ ಯಶೋಧರಮ್ಮ ಇಂತಹ ಸಂಸ್ಥೆಯನ್ನು ಸ್ಥಾಪಿಸಿದ್ದರೋ ಅದು ಉಳಿಯಬೇಕು. ಅಂತಹ ಮಹಾನ್ ವ್ಯಕ್ತಿಯ ಉದ್ದೇಶ ಮತ್ತು ತತ್ವಕ್ಕೆ ಯಾವುದೇ ಕಾರಣಕ್ಕೂ ಧಕ್ಕೆ ಉಂಟಾಗಬಾರದು.

ಕೊನೆಯ ಮಾತು

ಭಾರತದ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿ ಇತಿಹಾಸ ಸೇರಿದ ಅಗ್ರಪಂಕ್ತಿಯ ನಾಯಕಿಯರಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪನವರು ಒಬ್ಬರು. ಇವರ ತ್ಯಾಗಮಯ ಸೇವಾ ಜೀವನ, ಸ್ತ್ರೀ ಶಕ್ತಿ ಸಂವರ್ಧನೆಗಾಗಿ ದುಡಿಯುತ್ತಿರುವ ಎಲ್ಲಾ ಕ್ಷೇತ್ರದ ಸಾತ್ವಿಕ ಮಹಿಳಾ ಚಳವಳಿಗಾರರಿಗೂ ಚಿರಸ್ಫೂರ್ತಿ ನೀಡುವಂತಹದು. ರಾಷ್ಟ್ರೀಯ ಜೀವನದ ಪರಿಶುದ್ಧತೆಗೂ, ಸಾಮಾಜಿಕ ಪರಿವರ್ತನೆಗೂ, ಸೇವಕಾರ್ಯಗಳಲ್ಲೂ ತೊಡಗಬಯಸುವ ಎಲ್ಲಾ ತತ್ವನಿಷ್ಠ ರಾಜಕಾರಣಿಗಳಿಗೂ, ರಚನಾತ್ಮಕ ಕಾರ್ಯಕರ್ತರಿಗೂ ಇವರ ಜೀವನ ಮತ್ತು ಸಾಧನೆ ಆದರ್ಶವಾಗಿದೆ. ಇವರ ಆದರ್ಶವನ್ನು ಮೌಲ್ಯ ನಿಷ್ಠೆಯನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡರೆ ದೇಶದ ಕೀರ್ತಿ ಮತ್ತು ಪ್ರಗತಿ ಹೆಚ್ಚುತ್ತದೆ. ಸಮಾಜದಲ್ಲಿ ತುಳಿತಕ್ಕೆ ಒಳಪಟ್ಟ ಮಹಿಳಾ ಜನಾಂಗದ ಕಲ್ಯಾಣಕ್ಕೆ ದಾರಿದೀಪವಾಗುತ್ತದೆ. ಶ್ರೀಮತಿ ಯಶೋಧರಮ್ಮ ನವರಿಗೆ ನೀಡಿರುವ 'ಕರ್ನಾಟಕದ ಕಸ್ತೂರ ಬಾ' ಎಂಬ ಶೀರ್ಷಿಕೆ ಸೂಕ್ತವಾಗಿದೆ. ಕಾರಣ, ರಾಷ್ಟ್ರಮಟ್ಟದಲ್ಲಿ ಕಸ್ತೂರ ಬಾ ಗಾಂಧೀ ರಚನಾತ್ಮಕ ಕಾರ್ಯಗಳ ಬಗ್ಗೆ ಯಾವ ರೀತಿ ಮನೋಭಾವವನ್ನು ಹೊಂದಿದ್ದು ಪ್ರತಿಯೊಂದು ವಿಷಯದಲ್ಲೂ ಗಾಂಧೀಜಿಯವರಿಗೆ ಬೆನ್ನೆಲುಬಾಗಿ ಇದ್ದರೋ ಅದೇ ರೀತಿ ಯಶೋಧರಮ್ಮ ತಮ್ಮ ಪತಿಗೆ ಆದರ್ಶ ಸತಿಯಾಗಿ ಗಾಂಧೀಜಿ ದಂಪತಿಗಳ ಅನುಯಾಯಿಯಾಗಿ ಬಡ ಗ್ರಾಮೀಣ ಹೆಣ್ಣುಮಕ್ಕಳ, ನಿರ್ಗತಿಕ ಮಹಿಳೆಯರ, ಅಭ್ಯುದಯಕ್ಕಾಗಿ ಜೀವನ ಪರ್ಯಂತ ತಮ್ಮನ್ನು ತೊಡಗಿಸಿಕೊಂಡು ಅವರ ಶ್ರೇಯಸ್ಸನ್ನು ಕಂಡು ಅವರ ಉತ್ತಮ ಬದುಕಿಗೆ ನಾಂದಿಯಾದರು.

(ಡಾ. ಸಿ.ವಿ. ಶೈಲಜಾ ಅವರ ಶ್ರೀಮತಿ ಯಶೋಧರಾ ದಾಸಪ್ಪ ಜೀವನ ಮತ್ತು ಸಾಧನೆ. : ಪಿಹೆಚ್.ಡಿ. ಪ್ರಬಂಧದಿಂದ ಆಯ್ದ ಭಾಗ)


*



ವಿಶಿಷ್ಟ ಭಂಗಿಯಲ್ಲಿ ಶ್ರೀಮತಿ ಯಶೋಧರಮ್ಮ




ಯಶೋಧರಾ ದಾಸಪ್ಪ ಅವರ ತಂದೆ ಕೆ.ಹೆಚ್. ರಾಮಯ್ಯನವರು



ಬೇಲೂರು ಚೆನ್ನಕೇಶವ ದೇವಾಲಯದಲ್ಲಿ ಯಶೋಧರಮ್ಮ ದಾಸಪ್ಪ

ಶ್ರೀ

॥ ಶುಭಮಸ್ತು ॥



ಆದಿತ್ಯಾದಿ ಗ್ರಹಾಸ್ಸರ್ವೇ ಸನಕ್ಷತ್ರಾಸ್ಸರಾಶಯಃ ।
ಕುರ್ವಂತು ಮಂಗಳಂ ನಿತ್ಯಂ ಯಸ್ಯೈಷಾ ಲಗ್ನಪತ್ರಿಕಾ ॥

ಶ್ರೀಮತ್ ಯುವರಾಜಾ ಸಾಹೇಬ್ ಬಹದ್ದೂರವರ
ಸನ್ನಿಧಾನದಲ್ಲಿ

ರಿಟೈರ್ಡ್ ಸಬ್-ಜಡ್ಜ್ ರಾವ್‌ಸಾಹೆಬ್ ಎಚ್. ಚನ್ನಯ್ಯನು ಭಕ್ತಿಪುರಸ್ಸರವಾಗಿ
ಅತ್ಯಂತ ವಿನಯದೊಡನೆ ಮಾಡುವ ವಿಜ್ಞಾಪನೆಗಳು.

ಮಹಾಸ್ವಾಮಿ :

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೮೪೮ ನೇ ಶುಭ ಕ್ರೋಧನನಾಮ ಸಂವತ್ಸರದ ಫಾಲ್ಗುಣ ಬಹುಳ ಪಂಚಮಿ ಗುರುವಾರ ಘಟಿಕಾ ೫೦—೪೧, ಸ್ವಾತಿ ೪೬—೧೬, ಧೃ. ೪೨—೩೨, ಕೌ. ೨೦—೧೫, ಉ. ಭಾ. ೧, ಬುಧಃ ಕುಂಭಮಾಸ ತೇದಿ ೨೧ ಏವಂ ಪಂಚಾಂಗ ಶುದ್ಧಿಃ ಈ ಶುಭದಿವಸ (೧೯೨೬ನೇ ಮಾರ್ಚಿ ೪ನೇ ತಾರೀಖು) ಸೂರ್ಯೋದಯಾನಂತರ ೨ ಘಳಿಗೆ ಮೇಲೆ ೫ ಘಳಿಗೆ ಒಳಗೆ ಸಲ್ಲುವ ಶುಭ ಮೀನಲಗ್ನ ಪುಷ್ಕರಾಂಶದಲ್ಲಿ,

ನನ್ನ ತೃತೀಯ ಕುಮಾರ ಅಡ್ವೊಕೇಟ್
ಚಿ|| ರಾ|| ಎಚ್. ಸಿ. ದಾಸಪ್ಪಗೆ

ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ|| ರಾ|| ಕೆ. ಎಚ್. ರಾಮಯ್ಯನವರ ಜ್ಯೇಷ್ಠ ಪುತ್ರಿ
ಚಿ|| ಸೌ|| ಹ|| ಕುಂ|| ಶೋ|| ಯಶೋಧರಮ್ಮನನ್ನು

ತಂದು, ಬೆಂಗಳೂರು ಸಿಟಿ ವಿಶ್ವೇಶ್ವರಪುರಂ ಎಕ್ಸ್‌ಟೆನ್ಷನ್‌ನಲ್ಲಿರುವ " ಮೈತ್ರೇಯವಿಲಾಸ " ವೆಂಬ ಮ|| ರಾ|| ರಾಮಯ್ಯನವರ ಸ್ವಗೃಹದಲ್ಲಿ ವಿವಾಹವನ್ನು ಬೆಳೆಸಲು ಶ್ರೀಹರಿ ಪ್ರೇರಣಾನುಸಾರ ನಿಶ್ಚೈಸಿರುವ ವಿವರವನ್ನು ಮಹಾ ಸನ್ನಿಧಾನದಲ್ಲಿ ಭಕ್ತಿಪುರಸ್ಸರವಾಗಿ ಅತ್ಯಂತ ವಿನಯದೊಡನೆ ಅರಿಕೆ ಮಾಡಿಕೊಂಡು ಇರುತ್ತೇನೆ—ಮಹಾಸ್ವಾಮಿ.

ದಾಸಪ್ಪ ದಂಪತಿಗಳ ಲಗ್ನ ಪತ್ರಿಕೆ



ಹೆಚ್.ಸಿ. ದಾಸಪ್ಪ ದಂಪತಿಗಳು



ಹೆಚ್.ಸಿ. ದಾಸಪ್ಪ ಮತ್ತು ಯಶೋಧರಮ್ಮ ದಾಸಪ್ಪ ಅವರ ಮಕ್ಕಳಾದ
ರಾಮದಾಸ್ ಮತ್ತು ತುಳಸಿಯವರೊಂದಿಗೆ



ಹೆಚ್.ಸಿ. ದಾಸಪ್ಪ ಅವರೊಂದಿಗೆ, ಅವರ ಕುಟುಂಬ ವರ್ಗ



ಮೊಮ್ಮಗಳು ಉಮಾಳ ಜೊತೆ



ಶಿವಪುರ ಸತ್ಯಾಗ್ರಹ ಸೌಧ : ಶ್ರೀಮತಿ ಯಶೋಧರಾ ದಾಸಪ್ಪ ಅವರ ಹೋರಾಟದ ಕರ್ಮಭೂಮಿ



ಶಿವಪುರದ ಧ್ವಜಸತ್ಯಾಗ್ರಹದಲ್ಲಿ ಅಧ್ಯಕ್ಷ ಟಿ. ಸಿದ್ದಲಿಂಗಯ್ಯನವರೊಡನೆ
ಶ್ರೀಮತಿ ಯಶೋಧರಾ ದಾಸಪ್ಪ



ಯಶೋಧರಮ್ಮ ಅವರ ತಂಗಿ ಜಯಲಕ್ಷ್ಮಿ, ತಾಯಿ ರೇವಮ್ಮ
ಮಗ ತುಳಸಿ ದಾಸಪ್ಪ ಮತ್ತು ಮೊಮ್ಮಗ ಲೋಕೇಶ್



ಮಗ ತುಳಸಿದಾಸಪ್ಪ, ಸೊಸೆ ಸರೋಜಮ್ಮ ತುಳಸಿದಾಸಪ್ಪ ಅವರೊಡನೆ



ಮಗಳು ಪ್ರಭಾ ಚಂಪರವರ ಮದುವೆ ಸಂದರ್ಭದಲ್ಲಿ ತಾರಕೇಶ್ವರಿ ಸಿನ್ಹ, ಸಂಜೀವರೆಡ್ಡಿ,
ಟಿ. ಸಿದ್ದಲಿಂಗಯ್ಯನವರೊಂದಿಗೆ ಯಶೋಧರಾ ದಾಸಪ್ಪನವರು



ಪ್ರೀತಿಯ ಮೊಮ್ಮಗನೊಡನೆ



1969ರ ಕಾಂಗ್ರೆಸ್ ವಿಭಜನೆಯ ಸಂದರ್ಭದಲ್ಲಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆದ ಎ.ಐ.ಸಿ.ಸಿ. ಸಮಾವೇಶಕ್ಕೆ ಪೂರ್ವ ಭಾವಿಯಾಗಿ ಸಿ.ಕೆ. ಜಾಫರ್ ಷರೀಫ್ ಅವರು ಗೇಟ್ ಆಂಜನೇಯ ಮಾವಳ್ಳಿ ವೃತ್ತದ ಬಳಿ ಏರ್ಪಡಿಸಿದ್ದ ಸಮಾವೇಶದಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಿರುವುದು ಶ್ರೀಮತಿ ಇಂದಿರಾ ಗಾಂಧಿಯವರ ಜೊತೆ ಯಶೋಧರಮ್ಮ ದಾಸಪ್ಪ.



ಕೀನ್ಯಾ ರಾಷ್ಟ್ರಾಧ್ಯಕ್ಷ ಜೈರೋ ಕೆನಾಟರವರ ಜೊತೆ ದಾಸಪ್ಪ ದಂಪತಿಗಳು



ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾದ ಡಿ. ಸಂಜೀವಯ್ಯರವರೊಡನೆ



ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ, ಸಂಸದರಾದ ಬದ್ರಿನಾರಾಯಣ್, ಮಕ್ಕಳಾದ ತುಳಸಿ ದಾಸಪ್ಪ ಹಾಗೂ ರಾಮ್‌ದಾಸ್ ಅವರೊಡನೆ



ಕೀನ್ಯಾ ಪ್ರವಾಸದ ಸಂದರ್ಭದಲ್ಲಿ, ಅಲ್ಲಿನ ಮಹಿಳಾ ಸೇವಾ ಸಂಸ್ಥೆಗಳು ತಯಾರಿಸಿದ ಕರಕುಶಲ ವಸ್ತುಗಳ ವೀಕ್ಷಣೆ



ಕೀನ್ಯಾ ಭೇಟಿ ಸಂದರ್ಭದಲ್ಲಿ ದುಭಾಷಿಯ ಸಹಾಯದಿಂದ ಸಂಭಾಷಣೆ ನಡೆಸುತ್ತಿರುವುದು




ಪದ್ಮಭೂಷಣ ಪ್ರಶಸ್ತಿ ಬಂದಾಗ ಮೈಸೂರಿನಲ್ಲಿ ಜರುಗಿದ ನಾಗರಿಕ ಸನ್ಮಾನಕ್ಕೆ ಯಶೋಧರಮ್ಮ ಅವರ ಉತ್ತರ



ಸಮಾಜ ಕಲ್ಯಾಣ ಸಚಿವರಾಗಿ ಗೌರವ ರಕ್ಷೆ ಪಡೆಯುತ್ತಿರುವುದು



ಭಾರತದ ಮೊದಲ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂ ಅವರ ಚಿತಾಭಸ್ಮವನ್ನು ದೆಹಲಿಯ ತಮ್ಮ ನಿವಾಸಕ್ಕೆ ತಂದ ದಾಸಪ್ಪ ದಂಪತಿಗಳು



ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಕೈಜರ್ ಜೊತೆ



ಅರಸೀಕೆರೆಯ ಕಸ್ತೂರಿಬಾ ಕನ್ಯಾ ವಿದ್ಯಾಶಾಲಾ ವಿದ್ಯಾರ್ಥಿನಿಯರೊಡನೆ



ಕೀನ್ಯಾ ಪ್ರವಾಸದ ಸಂದರ್ಭದಲ್ಲಿ ಮಹಿಳಾ ಸೇವಾ ಸಂಸ್ಥೆಗಳ ಸದಸ್ಯರೊಡನೆ ಸಂವಾದ



ಹುಬ್ಬಳ್ಳಿ ಧಾರವಾಡ ನಗರಸಭೆಯ ಶಂಕು ಸ್ಥಾಪನೆಯ ಸಮಾರಂಭದಲ್ಲಿ ಮೇಯರ್ ಕಮಲಾನಿ ಜೊತೆ



ದತ್ತು ಪುತ್ರಿ ಪ್ರಭಾಚಂಪ - ಮೋಹನ್ ಅವರ ವಿವಾಹ ಸಂದರ್ಭದಲ್ಲಿ ಆಚಾರ್ಯ ಕೃಪಾಲಾನಿ ಹಾಗೂ ಶ್ರೀಮತಿ ಸುಚೇತ ಕೃಪಲಾನಿ ಅವರ ಜೊತೆ ಯಶೋಧರಮ್ಮ ದಾಸಪ್ಪ



ಅರಸೀಕೆರೆಯ ಕನ್ಯಾಶ್ರಮದ ವೈದ್ಯಕೀಯ ಶಿಬಿರದಲ್ಲಿ ಯಶೋಧರಮ್ಮ ದಾಸಪ್ಪ



ಉತ್ತರ ಭಾರತದ ಪ್ರಮುಖ ನಾಯಕರೊಂದಿಗೆ ದಾಸಪ್ಪ ದಂಪತಿಗಳು



ಪ್ರಧಾನಿ ಮೊರಾರ್ಜಿ ದೇಸಾಯಿಯವರೊಡನೆ ಶ್ರೀಮತಿ ಯಶೋಧರಮ್ಮ ದಾಸಪ್ಪ



ಉತ್ತರ ಕರ್ನಾಟಕ ಪ್ರವಾಸದ ಸಂದರ್ಭದಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪ



ಗಾಂಧಿ ಶಾಂತಿ ಪ್ರತಿಷ್ಠಾನದ ಸಭೆಯಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪ



ಕರ್ನಾಟಕದ ಪ್ರಮುಖ ನಾಯಕರುಗಳಾದ ಡಿ. ದೇವರಾಜ್ ಅರಸು, ಹೆಚ್.ಸಿ. ದಾಸಪ್ಪ,
ಹೆಚ್.ಎಂ. ಚೆನ್ನಬಸಪ್ಪ ಹಾಗೂ ಯಶೋಧರಮ್ಮ ದಾಸಪ್ಪ



ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಮರಗತಮ್ ಚಂದ್ರಶೇಖರ್ ಹಾಗೂ
ಸರೋಜಾ ಕೆ.ಸಿ. ರೆಡ್ಡಿ ಜೊತೆ ಯಶೋಧರಮ್ಮ ದಾಸಪ್ಪ




ಸಚಿವರಾಗಿದ್ದ ಸಂದರ್ಭದಲ್ಲಿ ಸಮಾಜ ಸೇವೆ ಸಲ್ಲಿಸಿದ ಗಣ್ಯರಿಗೆ ಗೌರವಿಸುತ್ತಿರುವುದು



ಐತಿಹಾಸಿಕ ಲಾಲ್‌ಬಾಗ್ ಅಧಿವೇಶನದಲ್ಲಿ ದೇವರಾಜ ಅರಸ್ ಹಾಗೂ
ಶ್ರೀಮತಿ ಇಂದಿರಾ ಗಾಂಧಿ ಅವರೊಡನೆ



ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಕಸ್ತೂರಿ ಬಾ ಟ್ರಸ್ಟ್‌ನಲ್ಲಿ ಓಂ ನಾಮ ಹಾಡಿದ ಯಶೋಧರಮ್ಮ ದಾಸಪ್ಪ



ಸರೋಜಿನಿ ಮಹಿಷಿ, ಶ್ರೀಮತಿ ಇಂದಿರಾ ಗಾಂಧಿ, ವಿರೇಂದ್ರ ಪಾಟೀಲ್, ಜಾಫರ್ ಷರೀಪ್‌ರೊಡನೆ ಶ್ರೀಮತಿ ಯಶೋಧರ ದಾಸಪ್ಪ.



ಅರಸೀಕೆರೆ ಬಳಿ ಕಸ್ತೂರಿ ಬಾ ಟ್ರಸ್ಟ್‌ನಲ್ಲಿರುವ ಮಹಾತ್ಮ ಗಾಂಧೀಜಿಯವರ ಚಿತಾಭಸ್ಮದ ಸಮಾಧಿ.

ಕರ್ನಾಟಕ ಸಾಧಕಿಯರು

ದಾನಚಿಂತಾಮಣಿ ಅತ್ತಿಮಬ್ಬೆ

ಲೋಕನಾಥ ದೀಕ್ಷಿತ್

ಐತಿಹಾಸಿಕ ಮಹಾನ್ ವ್ಯಕ್ತಿ ಅತ್ತಿಮಬ್ಬೆಗೆ ಕವಿಕಾವ್ಯದ ಕಾಮಧೇನು, ಗುಣದೇವತೆ, ದಾನಚಿಂತಾಮಣಿ ಮುಂತಾದ ಬಿರುದುಗಳು ಬಂದಿದ್ದರೂ, 'ದಾನಚಿಂತಾಮಣಿ' ಎಂಬುದೇ ಪ್ರಸಿದ್ಧವಾದ ಬಿರುದು. ಅತ್ತಿಮಬ್ಬೆ ಎಂದೇ ಪ್ರಖ್ಯಾತೆ. ಹತ್ತನೇ ಶತಮಾನದ ಉತ್ತರಾರ್ಧ ಹಾಗೂ ಹನ್ನೊಂದನೇ ಶತಮಾನದ ಮೊದಲ ಭಾಗದಲ್ಲಿ ಅಂದಿನ ಸಮಾಜಕ್ಕೆ ಕಳಶಪ್ರಾಯಳಾಗಿ ಜೀವಿಸಿದ್ದ ಮಹಿಳೆ ಹಾಗೂ ಜೈನ ಶ್ರಾವಕಿ. ರನ್ನ ಮಹಾಕವಿಯಿಂದ ರಚಿತವಾದ ಲಕ್ಕುಂಡಿ ಶಾಸನ ಈಕೆಯ ಬದುಕನ್ನು ಸಮರ್ಥವಾಗಿ ಚಿತ್ರಿಸುತ್ತದೆ.

ಅತ್ತಿಮಬ್ಬೆ ಜನಿಸಿದ್ದು ಕ್ರಿ.ಶ.950ರಲ್ಲಿ. ಇವರ ಪೂರ್ವಜರು ವೆಂಗಿಮಂಡಲ (ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ) ಪುಂಗನೂರು ಪ್ರದೇಶದವರು. ತಂದೆ ಮಲ್ಲಪ್ಪಯ್ಯ, ತಾಯಿ ಅಪ್ಪಕಬ್ಬೆ. ಅಜ್ಜ ನಾಗಮಯ್ಯ.

ತಂದೆ ಮಲ್ಲಪ್ಪಯ್ಯ ಕಲೆ, ಸಾಹಿತ್ಯ ಇವುಗಳ ಪೋಷಕ. ಕವಿ ಪೊನ್ನ ಮಲ್ಲಪ್ಪಯ್ಯನ ಆಶ್ರಿತನಾಗಿದ್ದ. ಲಭ್ಯ ಮಾಹಿತಿಗಳ ಪ್ರಕಾರ ಕಲ್ಯಾಣಿ ಚಾಲುಕ್ಯ ಚಕ್ರವರ್ತಿಯಾದ ಅಹವಮಲ್ಲ ಸೋಮೇಶ್ವರನ ಸಮರ್ಥ ಸೇನಾನಿಯಾದ ನಾಗದೇವ ಅತ್ತಿಮಬ್ಬೆಯ ಪತಿ. ವಿವಾಹವಾಗಿದ್ದು ಕ್ರಿ.ಶ.965ರಲ್ಲಿ. ಅತ್ತಿಮಬ್ಬೆಯ ಕಿರಿಯ ಸಹೋದರಿ ಗುಂಡಮಬ್ಬೆಯೂ ಸಹ ನಾಗದೇವನ ಪತ್ನಿ. ಅತ್ತಿಮಬ್ಬೆಯ ಮಗ ಅಣ್ಣಿಗದೇವ.

ನಾಗದೇವ ಕ್ರಿ.ಶ. 984ರಲ್ಲಿ ಯುದ್ಧದಲ್ಲಿ ಮರಣ ಹೊಂದಿದ. ಆ ಕಾಲದ ಸತಿ ಪದ್ಧತಿಯ ಪ್ರಕಾರ ಮೃತ ಗಂಡನ ಶರೀರದೊಡನೆ ಪತ್ನಿ ಚಿತೆ ಏರಬೇಕು. ಗುಂಡಮಬ್ಬೆ ಚಿತೆ ಏರಲು ತೀರ್ಮಾನಿಸಿದಳು. ಅವಳ ಜೊತೆ ಅತ್ತಿಮಬ್ಬೆಯು ಸಹ ಚಿತೆ ಏರಲು ಸಿದ್ಧಳಾದಳು. ಆದರೆ, ತಂಗಿ ಗುಂಡಮಬ್ಬೆ 'ಅಕ್ಕಾ ನಿನಗೆ ಬೆಳೆಯುತ್ತಿರುವ ಮಗನಿದ್ದಾನೆ. ಹಾಗಾಗಿ ನಿಶ್ಚಿಂತೆಯಿಂದ ಮಗನ ಲಾಲನೆ ಪಾಲನೆ ಮಾಡು, ನಾನು ಪತಿ ಜೊತೆ ಚಿತೆ ಏರುತ್ತೇನೆ'..... ಎಂದು ಅಕ್ಕನಿಗೆ ಅವಳ ಜವಾಬ್ದಾರಿಯನ್ನು ಪೂರೈಸಲು ಅನುವು ಮಾಡಿಕೊಟ್ಟಳು. ಪತಿಯನ್ನು ಬಹುವಾಗಿ ಪ್ರೀತಿಸುತ್ತಿದ್ದ ಅತ್ತಿಮಬ್ಬೆ ತಂಗಿಯ ನಿರ್ಧಾರವನ್ನು ಎಲ್ಲರಿಗೂ ತಿಳಿಸಿದಳು. ಅವಳ ತಂದೆ-ತಾಯಿ ಮತ್ತು ಬಂಧುಗಳೆಲ್ಲ ತುಂಬಾ ದೈನ್ಯತೆಯಿಂದ 'ಪ್ರಾಣಾಹುತಿ ಮಾಡಬೇಡ'ವೆಂದು ಬಹುವಾಗಿ ಬೇಡಿಕೊಂಡರೂ ಗುಂಡಮಬ್ಬೆ ತನ್ನ ಹಠ ಬಿಡಲಿಲ್ಲ, ನಿರ್ಧಾರ ಸಡಿಲಿಸಲಿಲ್ಲ. ಮನಸ್ಸಿಲ್ಲದ ಮನಸ್ಸಿನಿಂದ ಮಕ್ಕಳ ಪೋಷಣೆಗಾಗಿ ಉಳಿದುಕೊಂಡರೂ ಅತ್ತಿಮಬ್ಬೆ ಪ್ರಕಾರ "ಒಬ್ಬ ಜೈನ ವಿಧವೆಗಿರುವುದು ಎರಡೇ ಮಾರ್ಗ. ಒಂದು ಪತಿಯ ಶವದೊಂದಿಗೆ ಬೆಂಕಿಗೆ ಹಾರುವುದು. ಇನ್ನೊಂದು ಜೈನದೀಕ್ಷೆ ಪಡೆಯುವುದು."

ಅತ್ತಿಮಬ್ಬೆ ಪತಿಯ ಸಾವಿನ ದುಃಖವನ್ನು ಬೆಳೆಯುವ ಮಗನನ್ನು ನೋಡಿ ಮರೆಯುತ್ತಾ, ಧಾರ್ಮಿಕ ಜೀವನ ನಡೆಸಲು ಪ್ರಾರಂಭಿಸಿದಳು. ಶ್ರೀಮಂತಳಾಗಿ ಹುಟ್ಟಿದರೂ, ಬಡತನವನ್ನು ತನ್ನದಾಗಿಸಿಕೊಂಡಳು. ಒಬ್ಬ ನಾಯಕನ ಪತ್ನಿಯಾಗಿದ್ದರೂ ಯಾವುದಕ್ಕೂ ಅಂಟಿಕೊಳ್ಳದೇ ಒಬ್ಬ 'ಶ್ರಾವಕಿ (ಜೈನ ಭಕ್ತೆ)ಯಾಗಿ' ಜೀವನ ನಡೆಸಿದಳು.

ಚಕ್ರವರ್ತಿಗೆ ರಾಜಕೀಯದಲ್ಲಿ ಮಾರ್ಗದರ್ಶನ ನೀಡಲು ಪ್ರಾರಂಭಿಸಿದಳು. ವಿದ್ಯೆಗಿಂತ ಕದನಕ್ಕೆ ಮಹತ್ವವಿದ್ದ ಕಾಲದಲ್ಲಿ ಕವಿಗಳಿಗೆ ಮತ್ತು ಸಾಹಿತಿಗಳಿಗೆ ಉತ್ತೇಜನ ನೀಡಿದಳು. ಪೊನ್ನ-ರನ್ನರು ಹೀಗೆ ಇವಳಿಂದ ಪ್ರೋತ್ಸಾಹ ಪಡೆದಂತಹ ಕವಿಗಳು.

ಡಾ. ಚಿದಾನಂದಮೂರ್ತಿಯವರ ಪ್ರಕಾರ ಪೊನ್ನನ 'ಶಾಂತಿನಾಥಪುರಾಣ' ಹಾಗೂ ರನ್ನನ 'ಅಜಿತನಾಥ ಪುರಾಣ'ದ ಒಂದೊಂದು ಸಾವಿರ ಪ್ರತಿಗಳನ್ನು ಓಲೆಗರಿಗಳಲ್ಲಿ ಬರೆಸಿ, ಸಾಹಿತ್ಯ ನಿರ್ಮಾಣ ಹಾಗೂ ಪೋಷಣೆಗೆ ಕಾರಣಳಾಗಿದ್ದಾಳೆ. ಗ್ರಂಥಾಲಯ ಚಳವಳಿಯ ಆದ್ಯವ್ಯಕ್ತಿ ದಾನಚಿಂತಾಮಣಿ ಅತ್ತಿಮಬ್ಬೆ. ಹತ್ತನೆಯ ಶತಮಾನದಲ್ಲಿ ಜಿನಪ್ರತಿಮೆಯೊಡನೆ ದಾನ ಮಾಡಿದ ಮಹಾನ್ ಪುಸ್ತಕಪ್ರೇಮಿ ದಾನಚಿಂತಾಮಣಿ ಅತ್ತಿಮಬ್ಬೆ.

'ಅಜಿತನಾಥ ಪುರಾಣ' ರನ್ನ ಕವಿ ವಿರಚಿತ ಕೃತಿ. ಎರಡನೇ ತೀರ್ಥಂಕರನಾದ ಅಜಿತನಾಥನ ಕಥೆ ಮತ್ತು ಎರಡನೇ ಚಕ್ರವರ್ತಿಯಾಗಿದ್ದು ಅರವತ್ತು ಸಾವಿರ ಮಕ್ಕಳ ತಂದೆಯಾದ ಸಗರನ ಕಥೆಗಳ ವಿವರಗಳನ್ನು ಒಳಗೊಂಡಿರುವ ಕೃತಿ ಇದು. ಹನ್ನೆರಡು ಆಶ್ವಾಸಗಳುಳ್ಳ ಒಂದು ಚಂಪೂಗ್ರಂಥ. ಕ್ರಿ.ಶ. 993ರಲ್ಲಿ ರಚಿತವಾದುದು. ಇದನ್ನು ಬರೆಸಿದ ಹಿರಿಮೆ ದಾನಚಿಂತಾಮಣಿ ಅತ್ತಿಮಬ್ಬೆಯದು. ಈ ಪುರಾಣ ಕಾವ್ಯದಲ್ಲಿ ಅತ್ತಿಮಬ್ಬೆಯ ಚರಿತ್ರೆಯನ್ನು ವಿವರಿಸಿರುವುದರೊಂದಿಗೆ ಅವಳ ದಾನಗುಣದ ಬಗ್ಗೆ ಸ್ತುತಿಸಿರುವುದನ್ನು ಕಾಣಬಹುದು.

ರನ್ನನಿಗೆ ಇಳಿವಯಸ್ಸಿನಲ್ಲಿ ಹುಟ್ಟಿದ್ದು ಇಬ್ಬರು ಮಕ್ಕಳು. ಒಂದು ಗಂಡು ಮತ್ತೊಂದು ಹೆಣ್ಣು. ತನ್ನ ಪೋಷಕರೂ ಮತ್ತು ತನಗೆ ಆಪ್ತರೂ ಆದ ಅತ್ತಿಮಬ್ಬೆಗೆ ಹಾಗೂ ಚಾವುಂಡರಾಯನಿಗೆ ತನ್ನ ಎರಡು ಕಾವ್ಯಗಳನ್ನು ಅಂಕಿತ ಮಾಡಿದ್ದಾನೆ ರನ್ನ ಮಹಾಕವಿ. ಅಲ್ಲದೆ ತನ್ನ ಮಗಳಿಗೆ ಆತ ಇಟ್ಟ ಹೆಸರು ಅತ್ತಿಮಬ್ಬೆ ಎಂದೇ.

ಧಾರ್ಮಿಕ ಸಾಹಿತ್ಯ ಹಾಗೂ ಸಾಮಾಜಿಕ ಕ್ಷೇತ್ರಗಳಿಗೆ ಅತ್ತಿಮಬ್ಬೆಯ ಕಾಣಿಕೆ ಅಪಾರ.

ಜೈನ ವ್ರತಾಚರಣೆಗೆ ಅನುಕೂಲವಾಗುವಂತೆ ಅತ್ತಿಮಬ್ಬೆಯು ಲಕ್ಕುಂಡಿಯಲ್ಲಿ ಒಂದು ವಿಶಾಲವಾದ ಜೈನ ಬಸದಿ ನಿರ್ಮಿಸಿ ಅರ್ಹನಂದಿ ಪಂಡಿತಾಚಾರ್ಯರಿಗೆ ದಾನ ನೀಡಿದ್ದಾಳೆ. ಅತ್ತಿಮಬ್ಬೆಯಿಂದ ಕ್ರಿ.ಶ.1007ರಲ್ಲಿ ನಿರ್ಮಿತವಾದ ಈ ಬಸದಿಯ ನಿರ್ವಹಣೆಗೆಂದು 'ಸುರುಕಿ' ಎಂಬ ಗ್ರಾಮವನ್ನು ದಾನ ನೀಡಿರುವುದಾಗಿಯೂ ತಿಳಿದು ಬಂದಿದೆ. ಸಾವಿರದ ಐನೂರು ರತ್ನ ಖಚಿತವಾದ ಬಂಗಾರದ ಜೈನ ತೀರ್ಥಂಕರ ಮೂರ್ತಿಗಳನ್ನು ಮಾಡಿಸಿ ಹಾಗೂ ಪೊನ್ನನ ಶಾಂತಿನಾಥ ಪುರಾಣ ಗ್ರಂಥದ ಪ್ರತಿಗಳನ್ನು ಸಹ ಭಕ್ತರಿಗೆ ದಾನವಾಗಿ ನೀಡಿದ್ದಾಳೆ. ಅತ್ತಿಮಬ್ಬೆ ಮರಣಾನಂತರ ಸ್ಥಾಪಿತವಾದ ಅನೇಕ ಶಾಸನಗಳು, ಆನಂತರದ ಹಲವು ಕವಿಗಳು ಅತ್ತಿಮಬ್ಬೆಯನ್ನು ಹಾಡಿ ಹೊಗಳಿದ್ದಾರೆ. ರನ್ನನು ಅವಳ ಪಾವಿತ್ರ್ಯವನ್ನು ಗಂಗಾನದಿಯ ನೀರಿಗೆ ಮತ್ತು ಕೊಪ್ಪಳದಲ್ಲಿರುವ ಪವಿತ್ರವಾದ ಬೆಟ್ಟಕ್ಕೆ ಹೋಲಿಸಿದ್ದಾನೆ. ಈ ರನ್ನನಂತೆಯೇ ಬ್ರಹ್ಮಶಿವನೂ ಇವಳ ಗುಣಗಾನ ಮಾಡಿರುವ ಇನ್ನೊಬ್ಬ ಕವಿ. ಅತ್ತಿಮಬ್ಬೆ 'ಜೈನ ಶಾಸನ ರಕ್ಷಾಮಣಿ' ಎಂಬುದು ಇವನ ಮಾತು. ಶಾಸನ ಮತ್ತು ಕಾವ್ಯಗಳಲ್ಲಿ ಅತ್ತಿಮಬ್ಬೆ ಎಂದರೆ ಎಂದೂ ಸೋಲದ 'ಉದಾತ್ತತೆಯ ಅಮೂಲ್ಯ ರತ್ನ' (ದಾನಚಿಂತಾಮಣಿ) ಎಂದೇ ಸ್ತುತಿಸಲಾಗಿದೆ.

ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ಒಂದು ಉತ್ಕೃಷ್ಟ ಮಾದರಿಯಾಗಿ ಪರಿಗಣಿಸಲಾಗಿದ್ದು, ಅವಳು ಹುಟ್ಟು ಹಾಕಿದ ಧಾರ್ಮಿಕ ಸಂಪ್ರದಾಯವು ನಂತರದ ಮೂರು ಶತಮಾನಗಳಿಗಿಂತ ಹೆಚ್ಚು ಕಾಲದವರೆಗೆ ಪಾಲನೆಯಲ್ಲಿತ್ತು ಎನ್ನಲಾಗಿದೆ. ತನ್ನ ತಪಸ್ಸು, ನಿಷ್ಠೆ, ಔದಾರ್ಯ, ತ್ಯಾಗ ಧರ್ಮಾನುರಾಗ, ಕಾವ್ಯ ಪ್ರೇಮಗಳಿಂದ ತನ್ನ ಕಾಲದ ಜನರ ಕಣ್ಣಲ್ಲಿ ಮಹಾನ್ ವ್ಯಕ್ತಿಯಾಗಿದ್ದಾಳೆ. ಮಹೋನ್ನತ ಮಹಿಳೆಯರೆನ್ನಲಾದ ರತಿ, ಸೀತಾ, ರೇವತಿ ಮತ್ತು ಅರುಂಧತಿಯರ ಜೊತೆಗೆ ಅತ್ತಿಮಬ್ಬೆಯೂ ಒಬ್ಬ ಮಹಾನ್ ಮಹಿಳೆ ಎಂಬುದೂ ಆ ಕಾಲದ ಎಲ್ಲರ ಅನಿಸಿಕೆ. ಲೋಕಪಾಲದೇವಿ ಎಂಬ ಮಹಿಳೆಯು ಅತ್ತಿಮಬ್ಬೆಯಂತೆಯೇ ಒಬ್ಬ ಉತ್ತಮ ಜೈನ ಧರ್ಮಾನುಯಾಯಿ ಎಂದೂ; ಪತಿವ್ರತೆ ಬಾಚವ್ವೆಯು

ಪಾರ್ವತಿ, ಗಂಗೆ, ಸೀತೆ ಮತ್ತು ಅತ್ತಿಮಬ್ಬೆಗೆ ಸರಿಸಾಟಿಯಾದ ಮಹಿಳೆ ಎಂದೂ; ದಂಡನಾಯಕಿ ಮಾಚಿಕಬ್ಬೆಯು ದಾನದಲ್ಲಿ ಅತ್ತಿಮಬ್ಬೆಯಂತೆ ಎಂದೂ ಹೋಲಿಸಿರುವುದನ್ನು ಗಮನಿಸಿದರೆ, ಮಧ್ಯಕಾಲೀನ ಕರ್ನಾಟಕದಲ್ಲಿ ಅತ್ತಿಮಬ್ಬೆಯ ಪ್ರಭಾವ ಯಾವರೀತಿ ಪರಂಪರೆಯಲ್ಲಿ ಸೇರಿಹೋಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಮಹಿಳೆಯೊಬ್ಬಳ ಯಾವುದೇ ಸಿದ್ಧಿ–ಸಾಧನೆ–ಸ್ವಭಾವಗಳನ್ನು ಚರಿತ್ರೆಯಲ್ಲಿ ದಾಖಲಿಸುವುದೇ ಒಂದು ಅಪರೂಪದ ಸಂಗತಿಯಾಗಿರುವಾಗ, ಚರಿತ್ರೆಯಲ್ಲಿ ಉಲ್ಲೇಖಗೊಂಡಿರುವ ಈ ವಿಶೇಷ ವ್ಯಕ್ತಿತ್ವದ ದಾನಚಿಂತಾಮಣಿ ಅತ್ತಿಮಬ್ಬೆಯ ಹೆಸರನ್ನು ಅಜರಾಮರವಾಗಿರಿಸುವಂತೆ ಕರ್ನಾಟಕ ಸರ್ಕಾರವು ಈಕೆಯ ಹೆಸರಿನಲ್ಲಿ ಒಂದು ಪ್ರತಿಷ್ಠಿತ ಪ್ರಶಸ್ತಿಯನ್ನು 1995ರಲ್ಲಿ ಸ್ಥಾಪಿಸಿದೆ. ಗಣನೀಯವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಸಾಹಿತಿಗೆ ಒಂದು ಲಕ್ಷ ರೂಪಾಯಿಗಳ ನಗದು, ಕಂಚಿನ ವಿಗ್ರಹ ಮತ್ತು ತಾಮ್ರದ ಮಾನಪತ್ರವನ್ನು ಪ್ರಶಸ್ತಿ ರೂಪವಾಗಿ ಕೊಡಲಾಗುತ್ತಿದೆ. ಟಿ. ಸುನಂದಮ್ಮ, ಶಾಂತಾದೇವಿ ಮಾಳವಾಡ, ವೈದೇಹಿ, ಡಾ. ಕಮಲಾ ಹಂಪನಾ, ಕಡಿದಾಳ್ ಮಲ್ಲಿಕಾ, ಜಯಲಕ್ಷ್ಮಿ ಶ್ರೀನಿವಾಸನ್, ಸಾರಾ ಅಬೂಬಕರ್, ಡಾ. ಗೀತಾ ನಾಗಭೂಷಣ, ಡಾ. ಶೈಲಜಾ ಉಡಚಣ, ಡಾ. ಎಂ. ಸುನೀತಾಶೆಟ್ಟಿ, ಡಾ. ವೀಣಾ ಶಾಂತೇಶ್ವರ, ಬಿ. ಟಿ. ಲಲಿತಾನಾಯಕ್, ಡಾ. ಶಶಿಕಲಾ ವೀರಯ್ಯಸ್ವಾಮಿ, ಡಾ. ವಿಜಯಾ ದಬ್ಬೆ, ಡಾ. ಶಾಂತಾದೇವಿ ಕಣವಿ– ಇವರುಗಳು 1995ರಿಂದ 2009ರವರೆಗಿನ ಅವಧಿಯಲ್ಲಿ ಈ 'ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ'ಗೆ ಭಾಜನರಾಗಿರುವ ಮಹಿಳಾ ಸಾಹಿತ್ಯ ಮಣಿಗಳು.

——— * ———

ಕನ್ನಡದ ಪ್ರಥಮ ಕವಯಿತ್ರಿ ಕಂತಿ

ಪ್ರೊ. ಎಂ.ಆರ್. ಲಕ್ಷ್ಮೀದೇವಿ

ಕನ್ನಡ ಸಾಹಿತ್ಯದ ಇತಿಹಾಸವನ್ನು ಗಮನಿಸಿದರೆ, ಮಹಿಳೆಯರನ್ನು ಕುರಿತ ಕಾವ್ಯ-ಸಾಹಿತ್ಯ ಸಾಕಷ್ಟು ಕಂಡು ಬಂದರೂ 20ನೇ ಶತಮಾನದವರೆಗಿನ ಅವಧಿಯಲ್ಲಿ ಮಹಿಳೆಯರೇ ರಚಿಸಿದ ಕಾವ್ಯ ಸಾಕಷ್ಟಿಲ್ಲವೆನ್ನಬಹುದು. ಈ ಅವಧಿಯಲ್ಲಿ ವಚನ ಸಾಹಿತ್ಯದಲ್ಲಿ ಕಂಡುಬರುವ ಹತ್ತಾರು ಮಂದಿ ವಚನಕಾರ್ತಿಯರು, ದಾಸ ಸಾಹಿತ್ಯದ ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವರು ಪ್ರಸಿದ್ಧರಾಗಿದ್ದಾರೆ. ಜೈನ ಸಾಹಿತ್ಯದಲ್ಲಿ ಕವಿಜನ ಪೋಷಕಿಯಾದ ಅತ್ತಿಮಬ್ಬೆ ಪ್ರಸಿದ್ಧಳಾದರೂ, ಕವಯಿತ್ರಿಯಲ್ಲ. ಇನ್ನು ಉಳಿದಂತೆ ಜಾನಪದ ಕವಯಿತ್ರಿಯರನ್ನು ಬಿಟ್ಟರೆ, 19ನೇ ಶತಮಾನದವರೆಗೆ ಚಂದನಾಂಬಿಕೆ ಕಂತಿಯರನ್ನುಳಿದು ಇತರ ಕವಯಿತ್ರಿಯರು ಕಂಡುಬರುವುದಿಲ್ಲ.

ಸುಮಾರು ಹನ್ನೊಂದನೆಯ ಶತಮಾನದಲ್ಲಿ (ಸುಮಾರು 1010ರ ಆಸುಪಾಸಿನಲ್ಲಿ) ಅಭಿನವ ಪಂಪನ ಸಮಕಾಲೀನಳಾಗಿದ್ದ ಕಂತಿ, ಕನ್ನಡದ ಮೊದಲ ಕವಯಿತ್ರಿ. ಈಕೆ ಐತಿಹಾಸಿಕ ವ್ಯಕ್ತಿ ಎನ್ನಲು ಹಲವಾರು ಉಲ್ಲೇಖಗಳಿವೆ. ಸು. 1560ರಲ್ಲಿ ಬಾಹುಬಲಿ ಕವಿ ತನ್ನ ನಾಗಕುಮಾರ ಚರಿತೆಯಲ್ಲಿ ಈಕೆಯನ್ನು ಸ್ತುತಿಸಿದ್ದಾನೆ.

ವಿಬುಧಜನಸ್ತುತ ಶ್ರೀವೀರದೋರನ
ಸಭೆಗೆ ಮಂಗಳ ಲಕ್ಷ್ಮಿಯೆನಿಪ
ಶುಭಗುಣಚರಿತೆ ಕಂತಿಕೆಯರ ಸೈಗಟ್ಟೆನಾ
ನಭಿನವ ವಾಗ್ದೇವಿಯರ॥

ಇದರಿಂದ ದ್ವಾರಸಮುದ್ರದ ಬಲ್ಲಾಳರಾಯನ ಸಭೆಯಲ್ಲಿ ಪಂಡಿತೆಯಾಗಿದ್ದ ಕಂತಿ "ಅಭಿನವ ವಾಗ್ದೇವಿ" ಎಂಬ ಬಿರುದನ್ನು ಹೊಂದಿದ್ದಳು ಎಂದು ತಿಳಿದುಬರುತ್ತದೆ. 'ನೀತಿಸಾರ' ವೆಂಬ ಅಜ್ಞಾತಕರ್ತೃವಿನ ಗ್ರಂಥದಲ್ಲಿ "ತುರಗ ಮಯೂರ ಹಂಪುಗನು ಕಂತಿ ಚವುಂಡಿಯರೇ ಕವೀಂದ್ರರು" ಎಂಬ ಮಾತು ಬರುತ್ತದೆ.

ಕ್ರಿ.ಶ. 1938ರಲ್ಲಿ ದೇವಚಂದ್ರ ಕವಿ ತನ್ನ "ರಾಜಾವಳೀ ಕಥೆ" ಗ್ರಂಥದಲ್ಲಿ ಈಕೆಯ ಬಗ್ಗೆ ಹೇಳುವ ಕಥೆ ಹೀಗಿದೆ:

ದೋರರಾಯನು ಬೀಡನ್ನು ನಿರ್ಮಿಸಿ ತನ್ನ ವಶವಾದ ನಾಡುಗಳನ್ನು ಆಳುತ್ತ ದೋರಸಮುದ್ರವೆಂಬ ಕೆರೆಯನ್ನು ಕಟ್ಟಿಸಿದನು. ಈತನಿಗೆ ಧರ್ಮಚಂದ್ರನೆಂಬ ಬ್ರಾಹ್ಮಣನು ಮಂತ್ರಿಯಾಗಿದ್ದನು. ಆತನ ಮಗನು ಉಪಾಧ್ಯಾಯನಾಗಿ ಮುನ್ನೂರು ಜನ ತೇವಾಸಿಗಳಿಗೆ ಛಂದಸ್ಸು, ಅಲಂಕಾರ, ವ್ಯಾಕರಣ, ಕಾವ್ಯಾದಿಗಳನ್ನು ಅಭ್ಯಾಸ ಮಾಡಿಸುತ್ತಿದ್ದನು. ಆತನು ಮಕ್ಕಳ ಬುದ್ಧಿ ಪ್ರಕಾಶಕ್ಕೆ ಬೇಕಾದ ಜ್ಯೋತಿಷ್ಮತೀ ತೈಲವನ್ನು ಮಾಡಿ ಕುಡಿಕೆಯೊಳಗಿಟ್ಟು ಕೊಂಡಿದ್ದನು. ಇದನ್ನು ಆತನು ಮಂದಬುದ್ಧಿಯವರಿಗೆ ಅರ್ಧಬಿಂದುವಿನಷ್ಟು ಮಾತ್ರ ಕೊಡುತ್ತಿರಲು, ಕಂತಿಯೆಂಬ

ಕೆಳದಿಯು ತಿಳಿಯದೆ ಆ ತೈಲವೆಲ್ಲವನ್ನು ಸೇವಿಸಿದಳು, ಇದರಿಂದ ಆಕೆಗೆ ಉರಿಹತ್ತಿ ಬಾವಿಯಲ್ಲಿ ಬಿದ್ದಳು. ಅಲ್ಲಿ ಕುತ್ತಿಗೆಯವರೆಗೆ ನೀರಿದ್ದುದರಿಂದ ಜೀವ ಉಳಿಯಿತು. ಅಲ್ಲಿಯೇ ಇವಳು ವಿದ್ಯಾವಿಶಾರದೆಯಾಗಿ ಕವಿತೆಯನ್ನು ಹೇಳುತ್ತಾ ನಿಂತಳು. ದೋರರಾಯನು ಆಸ್ಥಾನದ ಕನ್ನಡ–ಸಂಸ್ಕೃತ–ಮಹಾಕವಿಗಳಿಗೂ ಹಿರಿಯನಾದ ಅಭಿನವ ಪಂಪ ಕವಿಯನ್ನು ಕಳುಹಿಸಿದನು. ಅಲ್ಲಿಗೆ ಬಂದ ಆತನು ತನ್ನ ವಿದ್ಯಾಸಾಮರ್ಥ್ಯದಿಂದ ಸಾವಿರ ಪ್ರಶ್ನೆಯನ್ನು ಕೇಳುತ್ತಿರಲು ಆಕೆಯು ಉತ್ತರವನ್ನಿತ್ತಳು. ಅನಂತರ ಆಕೆಯನ್ನು ರಾಜಸಭೆಗೆ ಕರೆದೊಯ್ದು ವಿದ್ವತ್ ಸಮೂಹದಲ್ಲಿ ಆರ್ಥಿಕ ಕವೀಶ್ವರಿಯಾಗಿದ್ದಳು. (ದೇವಚಂದ್ರನ ರಾಜಾವಳೀ ಕಥಾಸಾರ: ಹೊಸಗನ್ನಡ ಅನುವಾದ, ಬಿ.ಎಸ್. ಸಣ್ಣಯ್ಯ. ಪುಟ–155.)

ಅಭಿವನ ಪಂಪನಿಗೂ ಕಂತಿಗೂ ಸಂಬಂಧಿಸಿದ ಇನ್ನೊಂದು ಕಥೆ ಹೀಗಿದೆ:

ಬಲ್ಲಾಳರಾಯನ ಸಭೆಯಲ್ಲಿ ನಾಗಚಂದ್ರನಿಗೂ ಕಂತಿಗೂ ಪರಸ್ಪರ ಕಾವ್ಯಸಂವಾದಗಳು ನಡೆಯುತ್ತಿದ್ದವು. ಕಂತಿಯ ಕವಿತಾ ಚಾತುರ್ಯವನ್ನು ಕಂಡು ಮಾರುಹೋದ ನಾಗಚಂದ್ರ ಆಕೆಯನ್ನು ಪ್ರಶಂಸಿಸಿದರೂ, ಆಕೆ ನಾಗಚಂದ್ರನನ್ನು ಮೆಚ್ಚಿಕೊಳ್ಳಲಿಲ್ಲವಂತೆ. ಇದನ್ನು ಕಂಡ ನಾಗಚಂದ್ರ ಒಂದು ಉಪಾಯವನ್ನು ಯೋಚಿಸಿದನು. ತಾನು ಸತ್ತವನಂತೆ ನಟಿಸಿ ಮಲಗಿದ್ದು ದೂತರ ಕೈಲಿ 'ನಾಗಚಂದ್ರ ನಿಧನನಾದ' ನೆಂದು ಕಂತಿಗೆ ಹೇಳಿ ಕಳುಹಿಸಿದನು. ಆಗ ಕಂತಿ ಕೂಡಲೇ ಓಡಿಬಂದಳು. ಪ್ರತಿಭಾಮಣಿ ನಾಗಚಂದ್ರನು ನಿಶ್ಚಲನಾಗಿ ಮಲಗಿದ್ದುದನ್ನು ನೋಡಿ ಆತನ ಕವಿತಾ ಪ್ರತಿಭೆಯನ್ನು ನೆನೆಸಿಕೊಳ್ಳುತ್ತಾ ಶೋಕಿಸತೊಡಗಿದಳು.

ಕವಿರಾಯ ಕವಿಪಿತಾಮಹ
ಕವಿಕಂಠಾಭರಣ ಕವಿ ಶಿಖಾಮಣಿ ಭಾಮುರೇ।
ಕವಿಕುಲತಿಲಕ ಪಂಪುಗ
ಕವಿ ಚಕ್ರೇಶಂಗೆ ಸಾವು ಸಮನಿಸಿತಕಟಾ॥

ಕಲ್ಲೊಸರ್ಗುಂ ಕೊಯ್ದೊಣಗಿದ
ಪುಲ್ಲೆಲ್ಲಂ ಚಿಗುರ್ಗುಮಡವಿಗಡಿದ ಮರಂಗಳ್।
ಪಲ್ಲವಿಕುಮಮಮ! ಕವಿಗಜ
ಮಲ್ಲನ ಪಂಪುಗನ ಕಾವ್ಯ ರಸಾಮೃತಾ ಮೃತದಿಂ॥

ಇನ್ನೇಕೆ ದೋರನೋಲಗ
ಮಿನ್ನೇಕೆ ಕವಿತ್ವವಾದ ತರ್ಕ ಸಮಸ್ಯಂ।
ಇನ್ನೇಕೆ ಬಲ್ವಿಚಾರಂ
ಚನ್ನಿಗ ಕವಿ ಪಂಪರಾಜನಳಿದ ಬಳಿಕ್ಕಂ॥

ಎಂದು ಹಾಡಿ ಹೊಗಳತೊಡಗಿದ್ದಳು. ಹೀಗೆ ಕಂತಿ ಹೊಗಳಿ ಹಾಡುತ್ತಿರುವಾಗಲೇ ಪಂಪನು ದಿಗ್ಗನೆ ಮೇಲೆದ್ದು ನುಡಿಯುತ್ತಾನೆ:

ಎಲೆ ಕಂತಿ ಗೆಲ್ದಪರಾರೀಗರಿದಪೆಯಾ
ಎನಿತಾದೊಡಂ ನೀ ಸ್ತ್ರೀ ನಾ ಪುರುಷನ್
ಪುರುಷರ್ಗಿಂ ಸ್ತ್ರೀಯರ್ಕಳ್ ಸಾಹಸಷಡ್ಗುಣರೆಂಬ ನೀತಿ ನಿನ್ನೊಳ್
ಸೋಲ್ತುದಲ್ತೇ? ಅಂತದರಂ ಸತ್ತವರ ಪೊಗಳುವುದು
ಇದ್ದವರ ಬಗುಳುವುದು ನಿನ್ನ ಸಹಜಗುಣಮಾಯ್ತಲ್ತೇ?

ಎಂದು ಅಭಿನವ ಪಂಪ ಮೂದಲಿಸಿದಾಗ ಕಂತಿ ತಿರುಗೇಟು ನೀಡುತ್ತಾಳೆ:

ಪುರುಷರ್ಕಳ್ಗೇಂ ಪೆರ್ಮೆ ಪಂಪಾ
ತತ್ ಪುರುಷ ಪುರುಷರಂ ಪೆತ್ತು ಪೊತ್ತು ಮತಿಗಲಿಸಿದಬ್ಬೆ ಸ್ತ್ರೀಯಲ್ತೇ?
ಆದೊಡು ಸತ್ತವರ ಪೊಗಳುವುದು ಇದ್ದವರ ಬಗುಳುವುದು
ಎನ್ನೋರ್ವಳ ಸಹಜಗುಣಮಲ್ಲೈ! ಲೋಕದ ಸಹಜಗುಣಂ ॥

ಈ ದಂತಕತೆಗಳಿಂದ ಅಭಿನವ ಪಂಪನಿಗೂ ಕಂತಿಗೂ ಸಂವಾದ ಏರ್ಪಡುತ್ತಿತ್ತು. ಇಬ್ಬರೂ ಒಬ್ಬರು ಇನ್ನೊಬ್ಬರ ಕಾವ್ಯಪ್ರತಿಭೆಯನ್ನು ಮೆಚ್ಚಿಕೊಂಡಿದ್ದರು ಎಂಬ ಅಂಶ ತಿಳಿದುಬರುತ್ತದೆ. ಒಟ್ಟಿನಲ್ಲಿ ಈಕೆ ಐತಿಹಾಸಿಕ ವ್ಯಕ್ತಿ ಎನ್ನುವುದರಲ್ಲಿ ಸಂಶಯವಿಲ್ಲ.

"ಕಂತಿ ಎಂದರೆ ಜೈನ ಸಂನ್ಯಾಸಿ ಅಥವಾ ಶ್ರಾವಕಿ ಎಂದು ಅರ್ಥವಿರುವ ಕಾರಣ ಈಕೆಯು ಓರ್ವ ಜೈನ ಶ್ರಾಮಣಿಯೇ ಆಗಿದ್ದಿರಬಹುದೆಂದೂ ಇವಳ ನಿಜನಾಮಧೇಯವು ಅಜ್ಞಾತವೆಂದೂ ತಿಳಿಯಬಹುದು" ಎಂದು ಶತಾವಧಾನಿ ಗಣೇಶ್ ಅವರು ಅಭಿಪ್ರಾಯಪಡುತ್ತಾರೆ.

ಕಂತಿ-ಹಂಪನ ಸಮಸ್ಯೆಗಳನ್ನು ಕುರಿತು ಒಂದೆರಡು ಗ್ರಂಥಗಳೂ ಹಲವಾರು ಲೇಖನಗಳೂ ಬಂದಿವೆ. ಅವೆಲ್ಲವೂ ಕಂತಿಯ ಜೀವನ ಮತ್ತು ಆಕೆಗೂ ಅಭಿನವ ಪಂಪನಿಗೂ ನಡೆದ ಸಂವಾದದ ಪದ್ಯಗಳನ್ನೂ ಆ ಬಗ್ಗೆ ವಿವರಣೆಗಳನ್ನೂ ನೀಡುತ್ತವೆ.

ಆಕೆಯ ಕಾಲವನ್ನು ಕುರಿತು ಚರ್ಚೆ ಸಾಕಷ್ಟು ನಡೆದಿದೆ. ಆಕೆಯ ಕವಿತೆಯ ಸ್ವರೂಪವನ್ನು ಕುರಿತು ವಿಶ್ಲೇಷಣೆಯನ್ನು ಇತ್ತೀಚೆಗೆ ಇಬ್ಬರು ವಿದ್ವಾಂಸರು ಮಾಡಿದ್ದಾರೆ. ಅವರಲ್ಲಿ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು ತಮ್ಮ 'ಕನ್ನಡ ಚಿತ್ರಕಾವ್ಯ' ಎಂಬ ಬೃಹತ್ ಗ್ರಂಥದಲ್ಲಿ 'ಪ್ರಹೇಳಿಕೆ' ಎಂಬ ಚಿತ್ರಕಾವ್ಯದ ಲಕ್ಷಣಗಳನ್ನು ವಿವರಿಸುತ್ತಾ ಆ ಹಿನ್ನೆಲೆಯಲ್ಲಿ ಕಂತಿ-ಹಂಪನ ಸಮಸ್ಯಾ ಪದ್ಯಗಳನ್ನು ವಿಶ್ಲೇಷಿಸಿದ್ದಾರೆ. ಡಾ. ಶತಾವಧಾನಿ ಗಣೇಶ್ ಅವರು ತಮ್ಮ 'ಅವಧಾನಕಲೆ'ಯ ಹಿನ್ನೆಲೆಯಲ್ಲಿ ಕಂತಿಯ ಪದ್ಯಗಳನ್ನು ವಿಶ್ಲೇಷಿಸಿದ್ದಾರೆ. ಅವರ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಕಂತಿಯ ಪದ್ಯಗಳನ್ನು ಇಲ್ಲಿ ವರ್ಗೀಕರಿಸಲಾಗಿದೆ.

"ಕಂತಿ-ಹಂಪನ ಸಮಸ್ಯೆಗಳ ಗ್ರಂಥ "ಪ್ರಹೇಳಿಕೆ" ಎಂಬ ಚಿತ್ರಕಾವ್ಯದ ಒಂದು ಉಪವಿಭಾಗವಾಗಿರುವ "ಸಮಸ್ಯೆ" ಎಂಬ ಪ್ರಕಾರದ ಲಕ್ಷ್ಯ ಗ್ರಂಥವಾಗಿದೆ. ಈ ಗ್ರಂಥದಲ್ಲಿ 28ರಿಂದ 49ಪದ್ಯಗಳು ಹಸ್ತಮುದ್ರಿತ ಪ್ರತಿಗಳಲ್ಲಿ ಕಾಣಸಿಗುತ್ತವೆ. ಇವುಗಳಲ್ಲಿ 89 ಪದ್ಯಗಳು 'ಸಮಸ್ಯೆ' ಲಕ್ಷ್ಯಗಳು, ಉಳಿದವು ಇತರ ವೈಚಿತ್ರ್ಯಗಳಿಗೆ ಸೇರಿದವು" ಎಂದು "ಕನ್ನಡ ಚಿತ್ರಕಾವ್ಯ" ಗ್ರಂಥದಲ್ಲಿ ಹೇಳಲಾಗಿದೆ.

ಈ ಕೃತಿಯಲ್ಲಿ ಕವಿ ನಾಗಚಂದ್ರ ಕಂತಿಗೆ ಕಂದ ಪದ್ಯದ ಕೊನೆಯ ಸಾಲನ್ನು ಸಮಸ್ಯೆಯನ್ನಾಗಿ ಒಡ್ಡುತ್ತಾನೆ. ಅದಕ್ಕೆ ಮೊದಲ ಮೂರು ಪಾದಗಳನ್ನು ಸೇರಿಸಿ, ಉತ್ತರ ರೂಪದ ರೀತಿಯಲ್ಲಿ ಪದ್ಯವನ್ನು ಪೂರ್ಣಗೊಳಿಸಲು ಕಂತಿಗೆ ತಿಳಿಸುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ "ಸಮಸ್ಯಾಪಾದದ" ಎಂದರೆ ಕೊನೆಯ ಸಾಲಿನ

ಅರ್ಥ ಆಶಯಗಳು ತಮ್ಮ ಮಟ್ಟಿಗೆ ಪೂರ್ಣವಾಗಿದ್ದರೂ, ಮೇಲುನೋಟಕ್ಕೆ ಅಪಾರ್ಥವನ್ನೂ ಆಭಾಸಕರವಾದ ಆಶಯವನ್ನೂ ಕೊಡುವಂತಿರುತ್ತವೆ. ಇದರಿಂದ ಒಂದು ಬಗೆಯ ವಿನೋದವೂ ಕುತೂಹಲವೂ ಉಂಟಾಗುತ್ತದೆ. ಪ್ರಾರಂಭದಿಂದ ಮೊದಲ ಮೂರು ಸಾಲುಗಳನ್ನು ಪೂರೈಸಿದಾಗ ಅಪಾರ್ಥಕರವೂ ಆಭಾಸರಕವೂ ಆದ ನಾಲ್ಕನೇ ಸಾಲಿನ ಅರ್ಥ ಮಾರ್ಪಾಟು ಸಮುಚಿತವಾದ ಅರ್ಥ ಆಶಯಗಳನ್ನು ಪಡೆದುಕೊಂಡು, ಗಂಭೀರ ರೀತಿಯ ಪದ್ಯ ರೂಪುಗೊಳ್ಳುತ್ತದೆ. ಇದು ಸಮಸ್ಯಾಪಾದಗಳ ಸ್ವರೂಪವಾಗಿದೆ. ಅಲ್ಲದೆ, ಶತಾವಧಾನಿ ಗಣೇಶ್ ಹೇಳುವಂತೆ "ಈ ಪದ್ಯಗಳಲ್ಲಿ ಶಾಸ್ತ್ರೀಯವಾಗಿ ಸಮಸ್ಯೆಯ ಜಾತಿಗೆ ಸೇರುವ ಪದ್ಯಗಳು ಹೆಚ್ಚಾಗಿವೆ. ಉಳಿದಂತೆ ದತ್ತಪದಿಗಳೂ ನಿರೋಷ್ಠ್ಯದಂತಹ ಚಿತ್ರಗಳೂ, ಚಮತ್ಕಾರಿಕ ಪ್ರಹೇಳಿಕೆಗಳೂ, ಸಾದಾ ಮಾದರಿಯ ಆಶುಕವಿತೆಗಳೂ ಸೇರಿವೆ."

ಇಲ್ಲಿ 'ಕನ್ನಡ ಚಿತ್ರಕಾವ್ಯ' ಮತ್ತು 'ಅವಧಾನ ಕಲೆ' ಗ್ರಂಥಗಳು ಗುರುತಿಸಿರುವ ವೈಶಿಷ್ಟ್ಯಗಳನ್ನು ಒಳಗೊಂಡ ಕೆಲವು ಪದ್ಯಗಳು ಹೀಗಿವೆ:

(1) ತಿರುಪು ಪದ ಬಳಕೆ ವಿಧಾನಕ್ಕೆ ಈ ಪದ್ಯವನ್ನು ಗಮನಿಸಬಹುದು.

ನತಸುರ ಕಿನ್ನರ ಮಕುಟೀ
ಗತರುಚಿರ ಪ್ರತ್ನರತ್ನಗುಣ ರಚಿಲಹರೀ
ಶತ ಪತ್ರೋಜ್ವಲ ಪದ ಜಿನ
ಪತಿಗಾಂ ಭಕ್ತಿಯೊಳು ನಮಿಸಿ ಸದ್ಗತಿ ಪಡೆವೇಂ ॥

'ಪತಿಗಾಂ ಭಕ್ತಿಯೊಳು ನಮಿಸಿ ಸದ್ಗತಿ ಪಡೆವೇಂ' ಎಂದು ಪಂಪನು ಕಂತಿಯ ಮುಂದಿಟ್ಟ ಸಮಸ್ಯೆಗೆ "ಜಿನಪತಿಯನ್ನೆ" ಅನನ್ಯದೈವ-ಪತಿ ಎಂದು ಭಾವಿಸಿರುವ ಕಂತಿ "ಜಿನಪತಿಗಾಂ ಭಕ್ತಿಯೊಳು ನಮಿಸಿ ಸದ್ಗತಿ ಪಡೆವೇಂ" ಎಂದು ಉತ್ತರಿಸುತ್ತಾಳೆ.

ಇದು ತಿರುಪುಪದವನ್ನೊಳಗೊಂಡ ಸಮಸ್ಯಾ ಪಾದ.

ಪದ್ಯದ ಕೊನೆಯ ಸಾಲು 'ತಿರುಪು' ಎಂದರೆ ಸಮಸ್ಯಾಪಾದದ ಪ್ರಾರಂಭದ ಸಾರ್ಥಕವಾದ ಒಂದು ಪದವಾಗಿ, ಆ ಪದವನ್ನು ಬೇರ್ಪಡಿಸುವುದು ಅಥವಾ ಕತ್ತರಿಸುವಾಗ ಅಕ್ಷರನ್ಯೂನತೆಗಳಾಗಬಾರದು, ಇಲ್ಲಿ "ಜಿನಪತಿಗಾಂ" ಎಂಬಲ್ಲಿ ತಿರುಪುಪದದ ಭಾಗದಲ್ಲಿ ಶಬ್ದರೂಪ ಕೆಡದಹಾಗೆ 'ಜಿನ + ಪತಿಗಾಂ' ಎಂದು ಪದ ವಿಭಾಗವಾಗಿದೆ.

"ಮೊಕದೊಳೆ ದೀವಿಗೆಯ ಹಚ್ಚಿ ಸಂತೋಷಿಸುವರ್" ಎಂಬ ಮತ್ತೊಂದು ತಿರುಪುಪದವನ್ನೊಳಗೊಂಡ ಸಮಸ್ಯಾ ಪಾದ.

ಮುಖಮಂಟಪದೊಳ್ ವಿಲಸಿತ
ಮುಕುರಂಗಳಂ ಕಟ್ಟಿ ದೇವ ಬಿಂಬಗಳಿಟ್ಟುಂ
ಸಕಲ ವಿಭವಂಗಳಿಂದಭಿ
ಮೊಕದೊಳೆ ದೀವಿಗೆಯ ಹಚ್ಚಿ ಸಂತೋಷಿಸುವರ್ ॥

'ಶೃಂಗರಿಸಿದ ಮುಖಮಂಟಪದಲ್ಲಿ ದೇವವಿಗ್ರಹಗಳನ್ನಿಟ್ಟು ಸಕಲ ವೈಭವದಿಂದ, ಆ ದೇವವಿಗ್ರಹದೆದುರು ದೀಪವನ್ನು ಹಚ್ಚಿ ಸಂತೋಷಿಸುತ್ತಾರೆ'. 'ಮುಖದೊಳ್' ಎಂಬುದನ್ನು 'ಅಭಿಮುಖದೊಳ್' ಎಂದು ಹೇಳುವಲ್ಲಿ ಸಮಸ್ಯೆ ನಿವಾರಣೆ ಆಗಿದೆ. ಅಭಿ + ಮುಖದೊಳ್ ಎಂಬಲ್ಲಿ ತಿರುಪುಪದ ಭಾಗದಲ್ಲಿ ಶಬ್ದರೂಪ ಕೆಡದಂತೆ ಪದ ವಿಭಾಗವಾಗಿದೆ. ಇದನ್ನು ಗಣೇಶ್ ಅವರು 'ಶಬ್ದರೂಪ ಕೆಡದಂಥ ಪರಿಹಾರ ವಿಧಾನದ ಪದ್ಯ' ಎಂದು ಕರೆದಿದ್ದಾರೆ.

(2) ಭಿನ್ನಾರ್ಥಕ ಪದಗಳ ರಚನಾ ವಿಧಾನದ ಪರಿಹಾರ ಮಾರ್ಗ

"ಕಳ್ಳಂ ಕುಡಿವುದನು ಕಂಡೆ ಜೈನರ ಮನೆಯೊಳ್" ; ಆಭಾಸಕರವಾದ ಅರ್ಥ ಕೊಡುವ ಸಾಲಿದು. ಪರಮಸಾತ್ವಿಕರೂ, ಅಪ್ಪಟ ಸಸ್ಯಾಹಾರಿಗಳೂ ಆದ ಜೈನರ ಮನೆಯಲ್ಲಿ 'ಕಳ್ಳನ್ನು' ಎಂದರೆ 'ಸುರೆ' ಇಲ್ಲವೇ 'ಹೆಂಡ'ವನ್ನು ಕುಡಿಯುವುದೆಂದರೇನು? ಆದರೆ, ಇಲ್ಲಿ 'ಕಳ್ಳಂ' ಎಂಬ ಪದವನ್ನು ಶ್ಲೇಷಾರ್ಥದಲ್ಲಿ ಬಳಸಿ ಕಂತಿ ಸಮಸ್ಯೆ ಪರಿಹರಿಸುತ್ತಾಳೆ.

ಹೊಳ್ಳಿಸಿ ಗೋಡೆಯ ಕನ್ನವ
ನೊಳ್ಳೆಯ ಕತ್ತಿಯಿಂ ಕೊರೆದು ನೆಲವಿನ ಮೊಸರಂ
ಬೆಳ್ಳಿಯ ಬಟ್ಟಲೊಳಿಕ್ಕುತ
ಕಳ್ಳಂ ಕುಡಿವುದನು ಕಂಡೆ ಜೈನರ ಮನೆಯೊಳ್ ॥

'ಮನೆಯ ಗೋಡೆಗೆ ಕನ್ನಹಾಕಿದ ಕಳ್ಳ ಮನೆಯ ಬಳಹೊಕ್ಕು ಬೆಳ್ಳಿಯ ಬಟ್ಟಲಲ್ಲಿ ಮೊಸರನ್ನು ಸುರಿದುಕೊಂಡು ಕುಡಿಯುವುದನ್ನು ಕಂಡೆ; ಇಲ್ಲಿ 'ಕಳ್ಳಂ' ಎನ್ನುವುದನ್ನು 'ಹೆಂಡ' ಎನ್ನುವ ಬದಲು 'ಕಳ್ಳ' ಎಂದರೆ 'ಕದಿಯುವವನು' ಎಂದು ಶ್ಲೇಷಾರ್ಥದಲ್ಲಿ ಬಳಸಿ ಸಮಸ್ಯೆಯನ್ನು ಬಗೆಹರಿಸುತ್ತಾಳೆ. ಇದನ್ನು ವೆಂಕಟಾಚಲಶಾಸ್ತ್ರಿಗಳು "ಚಾಕ್ಷುಷವಾಗಿ ಒಂದೇ ರೂಪದ ಆದರೆ ಭಿನ್ನಾರ್ಥದ ಪದಗಳ ಪದರಚನೆ" ಎಂದಿದ್ದಾರೆ.

(3) ಸ್ವತಂತ್ರ ಪದಭೇದನ ವಿಧಾನದಿಂದ ಸಮಸ್ಯಾಪರಿಹಾರ

"ತಲೆಯೊಳ್ ಜಾರೆಯರು ಬಂದು ರಮಿಸುತ್ತಿರ್ಪರ್" ; ಎಂಬ ಪಂಪನ ಸಮಸ್ಯೆಗೆ ಜಾರ ಸ್ತ್ರೀಯರ ನಡವಳಿಕೆಯನ್ನು ಸಹಜವಾಗಿ ನಿರೂಪಿಸುವುದರೊಂದಿಗೆ ಉತ್ತರಿಸುತ್ತಾಳೆ:

ಮಲಗಲು ನಿದ್ರೆಯು ಬಾರದೆಯ
ರಲಂಬಿನಡಾಳಿ ಮುಸುಕೆ ಪತಿಯಂ ವಂಚಿಸಿ
ಗಲಗುಗಳಂ ತೋರದೆ ಕ
ತ್ತಲೆಯೊಳ್ ಜಾರೆಯರು ಬಂದು ರಮಿಸುತಿರ್ಪರ್

ಇಲ್ಲಿ 'ಕತ್ತಲೆಯೊಳ್' ಎಂಬ ಸ್ವತಂತ್ರ ಪದದ ಉತ್ತರ ಭಾಗವನ್ನು 'ತಲೆಯೊಳ್' ಎಂಬುದಾಗಿ ಮಾಡಿಕೊಂಡು ಸಮಸ್ಯಾ ಪದವನ್ನಾಗಿ ಮಾಡಿಕೊಂಡಿದೆ. 'ತಲೆಯೊಳ್' ಪದವನ್ನು 'ಕತ್ತಲೆಯೊಳ್' ಎಂಬ ಸ್ವತಂತ್ರ ಪದ ಬಳಕೆಯಿಂದ ಪರಿಹಾರ ಕಂಡುಕೊಳ್ಳಲಾಗಿದೆ. ಇದು ಸ್ವತಂತ್ರ ಪದಚ್ಛೇದ ವಿಧಾನಕ್ಕೆ ನಿದರ್ಶನವಾಗಿದೆ.

ಸ್ವತಂತ್ರ ಪದಚ್ಛೇದ ವಿಧಾನಕ್ಕೆ ಮತ್ತೆ ಕೆಲವು ನಿದರ್ಶನಗಳನ್ನು ನೋಡಬಹುದು.
"ಗಜಮಂ ಬಟ್ಟೆಯಲಿ ಕಟ್ಟಿ ಪೊತ್ತರು ಪೆಗಲೊಳ್"– ಇದು ಸಮಸ್ಯಾಪಾದ

ನಿಜರಾಜ್ಯೊಳುತ್ಪತ್ತಿಯ
ನಿಜಮಂ ಕಾಣಲ್ಕೆ ಭೂಪ ಮನಮಂ ಮಾಡಲ್
ಪ್ರಜವದೆ ಲೇಖಕ ಜನ ಕಾ
ಗಜಮಂ ಬಟ್ಟೆಯಲಿ ಕಟ್ಟಿ ಪೊತ್ತರು ಪೆಗಲೊಳ್ ॥

ರಾಜ್ಯದ ಆದಾಯ ವೆಚ್ಚಗಳಿಗೆ ಸಂಬಂಧಿಸಿದ ಕಾಗದಪತ್ರಗಳನ್ನು ಬಟ್ಟೆಯಲಿ ಕಟ್ಟಿ ಆ ವ್ಯವಹಾರಕ್ಕೆ ಸಂಬಂಧಿಸಿದ ಜನ, ಅವನ್ನು ಹೆಗಲ ಮೇಲೆ ಹೊತ್ತು ರಾಜನ ಆಸ್ಥಾನಕ್ಕೆ ಒಯ್ದರಂತೆ! ಕಾಗಜ-ಕಾಗದ ಎಂಬ ಸ್ವತಂತ್ರ ಪದಬಳಕೆಯಿಂದ ಸಮಸ್ಯೆ ಪರಿಹಾರವಾಗಿದೆ.

"ನರಿರಾಗಕೆ ಮೆಚ್ಚಿ ಭೂಪ ಪದಕಮನಿತ್ತಂ"- ನರಿಯ ಗಾನಕ್ಕೆ ಮೆಚ್ಚುವ ರಾಜನ ರಸಿಕತೆ ಎಂಥದಿರಬೇಕು? ಈ ಸಮಸ್ಯಾಪಾದಕ್ಕೆ ಉತ್ತರ -

ಸರಸಿಜಮುಖಿಯಾಸ್ಥಾನದೆ
ಕೊರಳಂ ಬೆರಳೊಂದುಮಾಡಿ ಪೊಗಳುತ ನೃಪನಂ
ಹರುಷದಿ ನುಡಿಸುವಳಾ
ಕಿನ್ನರಿರಾಗಕೆ ಮೆಚ್ಚಿ ಭೂಪ ಪದಕಮನಿತ್ತಂ ॥

'ನರಿರಾಗ' ಪದವನ್ನು 'ಕಿನ್ನರಿರಾಗ' ಎಂಬ ಸ್ವತಂತ್ರ ಪದವನ್ನಾಗಿ ಬಳಸಿ, ಸಮಸ್ಯೆಯನ್ನು ಬಗೆಹರಿಸಿದೆ.

"ನರಿಗಲ್ಲದೆ ಬುದ್ಧಿಯುಂಟೆ ಭೂಮಂಡಲದೊಳ್"- ತಂತ್ರಗಾರಿಕೆಗೆ ಹೆಸರಾಗಿರುವ ನರಿಯನ್ನು ಬಿಟ್ಟರೆ ಬೇರೆಯವರಿಗೆ ಬುದ್ಧಿ ಉಂಟೆ? ಈ ಸಮಸ್ಯೆಗೆ ಉತ್ತರ:

ಸರಸವಚನಾದಿ ಕುಶಲತೆ
ವರತರ್ಕಾಗಮದೊಳನ್ಯವಾದಿಯ ಜಯಿಸುವ
ಧರೆಗಗ್ರಗಣ್ಯರಹ ಸುಜ
ನರಿಗಲ್ಲದೆ ಬುದ್ಧಿಯುಂಟೆ ಭೂಮಂಡಲದೊಳ್ ॥

'ನರಿಗಲ್ಲದೆ' ಎಂಬ ಪದವನ್ನು 'ಸುಜನರಿಗಲ್ಲದೆ' ಎಂದು ಸ್ವತಂತ್ರಪದವಾಗಿ ಬಳಸಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗಿದೆ.

(4) ಅಕ್ಷರಗಳ ನ್ಯೂನಾತಿರೇಕವಿಲ್ಲದೆ ಶಬ್ದರೂಪ ಕೆಡದಂತೆ ಪದಚ್ಛೇದದಿಂದ ಸಮಸ್ಯಾ ಪರಿಹಾರ

"ದನಮಂ ಕಡಿಕಡಿದು ಬಸದಿಗೆಳೆಯುತಿರ್ದರ್"-ಇದು ಸಮಸ್ಯಾಸಾಲು. ಅಹಿಂಸಾಪ್ರಿಯರಾಗಿ, ಅಹಿಂಸೆಯನ್ನೇ ಪರಮೋಚ್ಚ ಧರ್ಮವಾಗಿ ಆಚರಿಸುತ್ತಿರುವ, ಜೈನರ ಬಸದಿಗೆ ದನವನ್ನು ಕಡಿಕಡಿದು ತುಂಬುವುದೆಂದರೇನು? ಈ ಸಮಸ್ಯೆಗೆ ಉತ್ತರ:

ವನದೊಳಗೆ ಪುಟ್ಟಿ ಬೆಳೆಯುತೆ
ತನಿಗಂಪಂ ಪತ್ತುದೆಸೆಗೆ ಬೀರುತ್ತಿರ್ಪಾ
ಘನತರ ಸುರುಚಿರ ಸಚ್ಚಂ
ದನಮಂ ಕಡಿಕಡಿದು ಬಸದಿಗೆಳೆಯುತಿರ್ದರ್ ॥

'ಚಂದನದ ಕಟ್ಟಿಗೆಯನ್ನು' ಎಂದು ಹೇಳಿ ಸಮಸ್ಯೆಯನ್ನು ಹಗುರಗೊಳಿಸುತ್ತಾಳೆ. 'ಸಚ್ಚಂ + ದನಮಂ" ಎಂದು ಹೇಳುವಲ್ಲಿ ಉತ್ತರ ಭಾಗದ ಪದ 'ದನಮಂ' ಎಂಬಲ್ಲಿ ಅಕ್ಷರಗಳ ನ್ಯೂನಾತಿರೇಕವಿಲ್ಲ.

"ಧನಂ ಕಳ್ಳರಿಗೆ ರಾಜರೀವರು ನಿತ್ಯಂ"- ಇದು ಸಮಸ್ಯಾಪದ. ಕಳ್ಳಕಾಕರನ್ನು ಶಿಕ್ಷಿಸಿ ರಾಜ್ಯವನ್ನು ಕಾಪಾಡಬೇಕಾದ ರಾಜನೇ ಕಳ್ಳರಿಗೆ ಧನವನ್ನು ಕೊಡುತ್ತಾನೆನ್ನುವುದು ಎಂಥ ಆಘಾತಕಾರಿ ಸುದ್ದಿ! ಪಂಪನ ಇಂಥ ಕ್ಲಿಷ್ಟ ಸಮಸ್ಯೆಗೆ ಕಂತಿಯ ಉತ್ತರ ಹೀಗಿದೆ:

ಅನವರತ ಸತ್ಯಮಿಲ್ಲದೆ
ಯಿನಿಸಾದರೂ ಪಾಪಮೆಂದು ಮನದಲಿ ತರದೆ
ಪರಧನಮಂ ಕೊಳೆ ನಿರ್ಬಂ
ಧನಮಂ ಕಳ್ಳರಿಗೆ ರಾಜರೀವರು ನಿತ್ಯಂ ॥

'ಪರರ ಧನವನ್ನು ಅಪಹರಿಸುವಲ್ಲಿ ಪಾಪಪ್ರಜ್ಞೆ ಇಲ್ಲದೆ, ಅಸತ್ಯವಾದಿಗಳಿಗೆ ರಾಜರು 'ನಿರ್ಬಂಧ'ವನ್ನು ಹೇರುತ್ತಿದ್ದರು. 'ನಿರ್ಬಂ+ಧನಮಂ' ಎಂಬಲ್ಲಿ ಉತ್ತರಭಾಗದ ಪದ 'ಧನಮಂ' ಎನ್ನುವಲ್ಲಿ ಅಕ್ಷರಗಳ ನ್ಯೂನಾತಿರೇಕವಿಲ್ಲ.

"ರತಿ ಎನ್ನಯ ಮುಖದಿ ನಿಂತು ನರ್ತಿಸುತಿರ್ಕೆ"– ಎನ್ನುವುದು ಸಮಸ್ಯಾಪಾದ.

ಅತುಲ ಸುಖವೀವಗುಣಮಣಿ
ಯುತಯೌವನೆ ಪರಮ ಪುರುಷ ಮುಖಸರಸಿಜೆ
ಮತಿಯಿತ್ತು ಸಂತತಂ ಭಾ
ರತಿ ಎನ್ನಯ ಮುಖದಿ ನಿಂತು ನರ್ತಿಸುತಿರ್ಕೆ ॥

"ಭಾರತಿ ಎನ್ನಯ ಮುಖದಿ ನಿಂತು ನರ್ತಿಸುತಿರ್ಕೆ"–ಎಂಬ ಉತ್ತರದಲ್ಲಿ 'ಭಾರತಿ' ಎಂಬ ಸ್ವತಂತ್ರ ಬಳಕೆಯಿಂದ ಸಮಸ್ಯೆ ಪರಿಹಾರವಾಗಿದೆ. 'ಭಾ+ರತಿ' ಎಂಬಲ್ಲಿ 'ರತಿ' ಎಂಬ ಉತ್ತರ ಪದದಲ್ಲಿ ಯಾವುದೇ ನ್ಯೂನಾತಿರೇಕವಿಲ್ಲ.

(5) ಅಕ್ಷರ ಸಂಯೋಗ ವಿಕೃತಿ ರೂಪದ ಸಮಸ್ಯಾಪರಿಹಾರ –

"ಅಡಿಯಿಂದಳಕವನು ತಿದ್ದಿಕೊಂಬರ್ ಸತಿಯರ್" ತಮ್ಮ ಪಾದಗಳಿಂದ ಕೂದಲನ್ನು ಸತಿಯರು ತಿದ್ದಿಕೊಳ್ಳುತ್ತಾರೆ, ಎಂಬ ಪಂಪನ ಸಮಸ್ಯೆಗೆ ಕಂತಿಯ ಉತ್ತರ:

ಕಡುಚೆಲುವಿಂ ರವಿ ಮೂಡ
ಲ್ಕೊಡನೆ ಕುಶೇಶಯಮನುಟ್ಟು ಸಿಂಗರಿಸುತ್ತಂ
ಪಿಡಿದಿಹ ಮಣಿಮಯ ಕೈಗ
ನ್ನಡಿಯಿಂದಳಕವನು ತಿದ್ದಿಕೊಂಬರ್ ಸತಿಯರ್ ॥

ಇಲ್ಲಿ 'ಕೈಗನ್ನಡಿ' ಎಂಬ ಪದವನ್ನು 'ಕೈಕನ್+ಅಡಿ' ಎಂದು ಬದಲಿಸಿ ತಪ್ಪಾಗಿ ಅನ್ವಯ ಮಾಡಿ, ಸಮಸ್ಯೆಯನ್ನು ಸೃಷ್ಟಿಸಲಾಗಿದೆ. ಆದರೆ 'ಕೈಕನ್+ಅಡಿ' ಎಂಬ ವಿಕೃತಾನ್ವಯವನ್ನು "ಕೈಗನ್ನಡಿ" ಎಂದು ಅನ್ವಯ ಮಾಡಿ ಸಮಸ್ಯೆಗೆ ಪರಿಹಾರ ನೀಡಲಾಗಿದೆ.

"ನಗೆಮುಖದೊಳು ಕಪ್ಪು ಕಾಣ್ಬುದೇನಿದು ಚಿತ್ರಂ?" ಈ ಸಮಸ್ಯಾಪಾದಕ್ಕೆ ಪರಿಹಾರ ರೂಪ ಹೀಗಿದೆ:

ಮಿಗಿಲೆನಿಪೋಪಳಕಣ್ಣಾ
ಡಿಗೆ ಚುಂಬಿಪ ಸಮಯದಲಿ ಸಂಬಂಧಿಸುತಂ
ಬಗೆಬಗೆ ರತಿಗಳ ಮಾಳ್ವ ನಿ
ನಗೆ ಮುಖದೊಳು ಕಪ್ಪು ಕಾಣ್ಬುದೇನಿದು ಚಿತ್ರಂ ॥

'ನಗೆಮುಖ'ವು 'ನಿನಗೆ ಮುಖ' ಎಂದು ಎರಡು ಪದಗಳಾಗಿ ಬದಲಾಗಿ ಸಮಸ್ಯೆ ಪರಿಹಾರವಾಗಿದೆ.

ಕನ್ನಡದಲ್ಲಿ ಅವಧಾನಕಲೆಯ ಅಂಗವಾಗಿ ಸಮಸ್ಯಾಪೂರ್ಣ ಪದ್ಯಗಳನ್ನು ರಚಿಸಿದ ಕಂತಿ, ಮೊದಲ ಕವಯಿತ್ರಿ ಅಷ್ಟೇ ಅಲ್ಲದೆ ಅವಧಾನಕಲೆಯ ಸಾಹಿತ್ಯ ರಚಿಸಿದ ಮೊದಲ ಮಹಿಳೆಯೂ ಆಗಿದ್ದಾಳೆ.

ಶತಾವಧಾನಿ ಗಣೇಶ್ ಅವರು ಹೇಳುವಂತೆ ಅವಧಾನಕಲೆಯ ಅಂಗವಾದ 'ದತ್ತಪಾದಿ' ಎಂದರೆ ಕೊಟ್ಟ ಪದಗಳನ್ನೇ ಬಳಸಿ ಪದ್ಯ ರಚನೆ ಮಾಡುವುದನ್ನು ಕಂತಿಯ ಪದ್ಯಗಳಲ್ಲಿ ಕಾಣಬಹುದು.

ಉದಾಹರಣೆಗೆ ಕಂತಿಯು "ಅಭಿನವ ಪಂಪ ನಿನ್ನ ಕವಿತ್ವಮೆಲ್ಲಂ ಮಡಕೆ ತುಡಕೆ ಅಡಕೆ ಹೊಡಕೆ...ಎಂದೊಡೆ ಪಂಪನು ಆ ಪದಗಳನ್ನೇ ಬಳಸಿ ಪದ್ಯವನ್ನು ಮುಂದಿಡುತ್ತಾನೆ:

ಮಡಕೆ ನಿಮಿರ್ದಾಡೆ ಜಡೆಗಳ್
ತುಡುಕೆ ಶರೌಘಮುಮನಭವನತಿ ಕೋಪದೊಳಂ
ಅಡಕೆ ಮರುಳ್ಗಳ್ ಪೆಣನಂ
ಹೊಡಕೆಡೆದರ್ ದೈತ್ಯರಂದು ತ್ರಿಪುರಸ್ಥಳದೊಳ್ ॥

ಮಸೆಕಲ್ಲು, ಬಾಚಿ, ಉಳಿ, ಕೊಡಲಿ, ಇವುಗಳನ್ನೆಲ್ಲ ಬಳಸಿ ಒಂದು ಕಂದ ಪದ್ಯ ರಚಿಸಲು ಹೇಳಿದಾಗ

ಮಸೆಕಲ್ಗಿಳಿ ಮಾಬಳಮಂ
ವಸುಧಾತಳಕು ಬಾಚಿಯೆತ್ತಿದಳೊರ್ವಳ್
ಶಶಿ ಮುಖಿಗೆ ಕೊಡಲಿಕಾ ವಧು
ಪೊಸವಣ್ಣಂ ಸವಿದು ನೋಡಿ ನಸುವುಳಿಯೆಂದಳ್ ॥

ನಿರೋಷ್ಠ್ಯ ಪದಗಳಿಂದ ಪದ್ಯರಚನೆ; ತುಟಿಗಳೆರಡು ಸೇರದ ಪದಗಳನ್ನೇ ಬಳಸಿ ಒಂದು ಕಂದಪದ್ಯ ರಚಿಸಬೇಕೆಂಬುದು ಪಂಪನ ಸವಾಲು. ಕಂತಿ ರಚಿಸಿದ ಅಂಥದೊಂದು ಪದ್ಯ ಹೀಗಿದೆ :

ಸುರಸುನಾಗಾಧೀಶ್ವರ
ಹೀರ ಕಿರೀಟಾಗ್ರಲಗ್ನ ಚರಣ ಸರೋಜಾ
ಧೀರೋದಾರ ಚರಿತ್ರೋ
ತ್ತಾರಿತ ಕಲುಷೌಘ ರಕ್ಷಿಸೆನ್ನನರುಹಾ ॥

ಇದು 'ಪ' ವರ್ಗ ರಹಿತ ಅಕ್ಷರಗಳಿಂದ ರಚಿತವಾದ ಪದ್ಯವಾಗಿದೆ.

ಪ್ರಹೇಳಿಕೆ – 'ಹರವಿ' 'ವಿರಹ' ಆಗ ಬಲ್ಲುದೇ?

ಯಾವಾಗಲೂ ಪಂಪನ ಸಮಸ್ಯೆಗಳಿಗೆ ಉತ್ತರಿಸುತ್ತಿದ್ದ ಕಂತಿ, ಒಮ್ಮೆ, 'ಹರವಿ' ಎಂಬ ಪದದ ಒಗಟಿನ ಕಂದ ಪದ್ಯವನ್ನು ಪಂಪನ ಮುಂದಿಟ್ಟು ಆ ಒಗಟನ್ನು ಒಡೆಯುವಂತೆ ಹೇಳಿದಳು.

ಕಡೆದೊಡೆಯಲು ಹರನಾಮಂ
ನಡುದೊಡೆಯಲು ಹವಿಯನಾಮ ಮೊದಲಕ್ಕರಮಂ
ತೊಡೆಯಲು ತಾಂ ರವಿನಾಮಂ
ಕಡೆಯಿಂದೋದಲ್ಕೆ ವಿರಹ ಕೇಳೆಲೊ ಪಂಪಾ ॥

'ಹರವಿ' ಶಬ್ದದಲ್ಲಿ ಮೊದಲಕ್ಷರ ಲೋಪವಾದರೆ 'ರವಿ' ಶಬ್ದ, ಮಧ್ಯದ ಅಕ್ಷರ ತೆಗದರೆ 'ಹವಿ' ಶಬ್ದವೂ,

ಅಂತ್ಯಾಕ್ಷರ ಲೋಪದಿಂದ 'ಹರ' ಶಬ್ದವೂ ಬರುತ್ತದೆ. ಕೊನೆಯಿಂದ ಓದಿದರೆ 'ವಿರಹ' ಎಂದಾಗುತ್ತದೆ. ಈ ಬಗೆಯ ರಚನೆಯನ್ನು 'ಅಂತರ್ಲಾಪಿ ಪ್ರಹೇಳಿಕೆ' ಎಂದು ಕರೆಯುತ್ತಾರೆ.

ಕುತೂಹಲ ಕೆರಳಿಸುವ ಕೊನೆ ಸಾಲಿನ ಕೆಲವು ಪದ್ಯಗಳನ್ನು ಇಲ್ಲಿ ನೋಡಬಹುದು.

"ಕತ್ತೇಮಗಳೆಂದು ನುಡಿಯೆ ನಲಿಯುತ ಪೋದಳ್"- ಇದು ಸಮಸ್ಯಾಪಾದ.

ಚಿತ್ತಜ ಸಮರೂಪನೋಪನು
ಇತ್ತಂ ಬರುತಿರ್ಪ ನಿನ್ನ ನೆನೆಯುತ ಸುಖದಿಂ
ದತ್ತಂ ಪೋದಪನೆಂದೇ
ಕತ್ತೇ ಮಗಳೆಂದು ನುಡಿಯೆ ನಲಿಯುತ ಪೋದಳ್ ॥

ಮನ್ಮಥನಿಗೆ ಸಮನೆನಿಸಿದ ನಿನ್ನ ಪ್ರಿಯಕರನು ನಿನ್ನನ್ನೇ ಧ್ಯಾನಿಸುತ್ತ ಇತ್ತ ಬರುತ್ತಿರುವಾಗ, ಆ ಕಡೆ ಹೋಗುವನೆಂದು ತಿಳಿದು ಏಕತ್ತೇ ಮಗಳೆ (ಏಕೆ ಅತ್ತೆ ಮಗಳೆ) ಎಂದು ಹೇಳಲು ಅವಳು ಸಂತಸದಿಂದ ಹೋದಳ್, "ಕತ್ತೇ" ಎಂಬುದನ್ನು "ಏ+ಕತ್ತೇ"=(ಏಕೆ+ಅತ್ತೆ) ='ಏಕತ್ತೇ' ಎಂಬ ಬದಲಾವಣೆಯಿಂದ ಸಮಸ್ಯೆ ಬಗೆಹರಿದಿದೆ.

"ಸತ್ತವಳೆದ್ದೋಡಿ ಪೋದಳೇನಿದು ಚಿತ್ರಂ"- ಇದು ಸಮಸ್ಯಾಪಾದ. ಜಗತ್ತಿನಲ್ಲಿ ಸತ್ತವರು ಎದ್ದು ಬರುವುದುಂಟೇ?

ಅತ್ತೆಯ ಬೈಗುಳ ಮಾತಿಂ
ದತ್ತಿಗೆಯ ದೌರ್ಜನ್ಯದಿಂದ ಗಂಡನ ಪೆಟ್ಟಿಂ
ಮತ್ತೆ ಮುದಿಮಾವನಿಂ ಬೇ
ಸತ್ತವಳೆದ್ದೋಡಿ ಪೋದಪಳೇನಿದು ಚಿತ್ರಂ ॥

ಇಲ್ಲಿ ಕಂತಿ "ಸತ್ತವಳು" ಎಂಬ ಪದವನ್ನು 'ಬೇಸತ್ತವಳು' ಎಂದು ಬದಲಾಯಿಸಿ ಸಮಸ್ಯೆಯನ್ನು ಬಗೆಹರಿಸಿದ ರೀತಿ ಕುತೂಹಲಕಾರಿಯಾಗಿದೆ.

"ಕಲಿಗಾದುದು ಪೇಳಲೇನು ಬಹುದಾರಿದ್ರ್ಯಂ"- ಅಲಸಿಗಗೆ, ಸೋಮಾರಿಗೆ, ಮೈಗಳ್ಳನಿಗೆ ದಾರಿದ್ರ್ಯ ಬರುವುದು ಸಹಜ, ಆದರೆ, 'ಕಲಿ'ಗೆ ದಾರಿದ್ರ್ಯವೆಂದರೇನು?

ಪಲವುದಿನಕೊಂದು ಮಳೆಬೆಳೆ
ಸುಲಭಂ ಸಾಲಿಗರ ಕಾಟ ತಪ್ಪುವುದಿಲ್ಲಂ
ಬಲುಸಂಕಟದಿಂ ಬಡವ
ಕ್ಕಲಿಗಾದುದು ಪೇಳಲೇನು? ಬಹುದಾರಿದ್ರ್ಯಂ

ಸರಿಯಾದ ಮಳೆಬೆಳೆಗಳಿಲ್ಲದೆ, ಸಾಲಿಗರ ಕಾಟದಿಂದ ಬೇಸತ್ತ ಒಕ್ಕಲಿಗನ ಬದುಕು ಬಲುದಾರಿದ್ರ್ಯಸ್ಥಿತಿ ತಲುಪಿತು. ಇಲ್ಲಿ "ಬಡವಕ್ಕಲಿಗ" ಎಂಬ ಪದ ಕೇವಲ "ಕಲಿ"ಯಾಗಿ ಒಡೆದು ಅನನ್ವಯವಾಗಿರುವುದನ್ನು ಗಮನಿಸಬಹುದು. ಒಕ್ + ಕಲಿಗಾದುದು=ಎಂಬ ಅನನ್ವಯವನ್ನು 'ವಕ್ಕಲಿಗಾದುದು' ಎಂದು ಅನ್ವಯ ಮಾಡಿ ಸಮಸ್ಯೆ ಪರಿಹರಿಸಿದೆ.

"ರತಿಯಿಂದಂ ರಥವನಡರಿ ವೈರಿಯಗೆಲ್ದಂ"- ಈ ಸಮಸ್ಯಾಪಾದಕ್ಕೆ ಉತ್ತರ:

ಚತುರತೆಯಿಂದೊಡಗೂಡಿದ
ಗತಿ ಮಂಜುಳ ವಾಜಿಗಳನು ಯೋಜಿಸಿ ಮತ್ತಂ
ಅತಿ ನಿಪುಣತೆವೆತ್ತಿಹ ಸಾ
ರತಿಯಿಂದಂ ರಥವನಡರಿ ವೈರಿಯಗೆಲ್ದಂ ॥

ಯುದ್ಧ ಗೆಲ್ಲಲು ನಿಪುಣಸಾರಥಿಯ ಅಗತ್ಯವಿದೆ. ಅಂಥ "ನಿಪುಣತೆವೆತ್ತಿಹ ಸಾರತಿಯಿಂದಂ ರಥವನಡರಿ ವೈರಿಯಗೆಲ್ದಂ". "ರತಿ" ಎಂಬ ಎಂಬ ಪದವನ್ನು "ಸಾರತಿ" ಎಂದು ತಿರುಗಿಸಿ ಹೇಳುವ ಮೂಲಕ ಸಮಸ್ಯೆಗೆ ಪರಿಹಾರ ಸೂಚಿಸಲಾಗಿದೆ.

'ಒಂದೂ ಕ್ರಿಯಾಪದವಿಲ್ಲದ ಕಂದ ಪದ್ಯವನ್ನು ರಚಿಸಿ ತೋರು ಎಂಬ ಪಂಪನ ಸವಾಲಿಗೆ ಕಂತಿಯ ಉತ್ತರ:

ಸಾರನವರತ ಮನೋಹರ
ಚಾರುತರ ಪ್ರೀತಿಯುಕ್ತ ಮೋಹನ ಮದನಾ
ನೀರೆಯರ ಮನಸೆಳೆಯುವ
ಧೀರ ಗುಣೋಜ್ವಲ ಎನ್ನನಗಲದೆ ದಯೆಯಿಂ ॥

"ನರನಾರಿಗೆ ತೋಳು ನಾಲ್ಕಿದೇನು ವಿಚಿತ್ರಂ"- ಎಂಬ ಸಮಸ್ಯೆಗೆ ಕಂತಿಯ ಉತ್ತರ:

ಕರಕರದ ಖಡ್ಗವರೆಗಳೋ
ವರನಾರಿಯು ಪಿಡಿದರು ಚಿರಚಾಮರ ಯುಗವೋ
ಪರಿಕಿಸೆಯುಪಮಾನಗಳಿಂ
ನರನಾರಿಗೆ ತೋಳು ನಾಲ್ಕಿದೇನು ವಿಚಿತ್ರಂ ॥

ದೇವತಾ ಸ್ತ್ರೀಗೆ ನಾಲ್ಕು ತೋಳುಗಳಿರಬಹುದು. ಆದರೆ ಮಾನವ ಸ್ತ್ರೀಗೆ ನಾಲ್ಕು ತೋಳುಗಳಿರಲು ಸಾಧ್ಯವೇ? ಇದು ವಿಚಿತ್ರವೇ ಸರಿ. ಆದರೆ, ಅರ್ಥ ವ್ಯತ್ಯಾಸವಿಲ್ಲದೇ, ಅನ್ವಯಾರ್ಥದಲ್ಲಿ ಉಪಮೆಗಳ ಮೂಲಕ ಅರ್ಥಾನ್ವಯ ಮಾಡುವ ಸೊಗಸಿನ ಪದ್ಯ ಇದಾಗಿದೆ.

"ಯಿಸಮಂ ಸೇವಿಸುತ ಬಾಳ್ದರೇನಚ್ಚರಿಯೋ?"

ವಿಷವನ್ನು ಸೇವಿಸುತ್ತ ಬಾಳುತ್ತಿರುವುದು ಏನು ಆಶ್ಚರ್ಯ? ಇಂದು ಪಂಪನ ಸಮಸ್ಯೆ. ಇದಕ್ಕೆ ಪರಿಹಾರವನ್ನು "ವಿಷ" ಎಂಬ ಪದದ ತದ್ಭವ ರೂಪವಾದ "ಯಿಸ" ಎಂಬ ಮಾತನ್ನು ಚಮತ್ಕಾರಿಕವಾಗಿ ಬಳಸಿದ ಉತ್ತರ ಇದಾಗಿದೆ.

ರಸಬಾಳೆಯ ಕಬ್ಬಿನೊಳಂ
ರಸವಂ ತೆಗೆದಲ್ಲಿ ಗೋದಿನುಚ್ಚುಗಳಿಟ್ಟುಂ
ಬಿಸಿಮಾಳ್ಪ ತುಪ್ಪದೊಳ್ ಪಾ
ಯಿಸಮಂ ಸೇವಿಸುತ ಬಾಳ್ವರೇನಚ್ಚರಿಯೊ ॥

"ಯಿಸ"- 'ಪಾಯಿಸ'ವಾಗಿ ಸಮಸ್ಯೆ ಪರಿಹಾರವಾಗಿದೆ.

"ಕುದುರೆ ಗಜಂಗಳನು ಮುರಿದೆಂಬುದನರಿಯಾ" ಎನ್ನುವುದು ಪಂಪನ ಸಮಸ್ಯೆ, ಅದಕ್ಕೆ ಉತ್ತರ:

ಹರಿಗುಡಿಸುತ ನೆಗೆನೆಗೆ
ದುರುಕುಂಭಸ್ಥಳಮನೇರಿಯಾಸ್ಫಾಲಿಸಲುಂ
ಸಿರದಿಂ ಮುತ್ತಿನ ಮಣಿ ಕೆಳ
ಕುದುರೆ ಗಜಂಗಳನು ಮುರಿದುದೆಂಬುದನರಿಯಾ ॥

"ಕುದುರೆ" ಪದವು "ಕೆಳಕುದುರೆ" ಎಂಬ (ಕೆಳಕೆ + ಉದುರೆ) ಎರಡು ಪದಗಳಾಗಿ ಮಾರ್ಪಟ್ಟು, ಅಕ್ಷರ ಸಂಯೋಗ ವಿಕೃತಿಯಿಲ್ಲದೆ ಪರಿಹಾರವು ಸಾಧ್ಯವಾಗಿದೆ.

"ಬೆಲ್ಲವನುಂ ಬಿಲ್ಲುನಿಂಗಿತೆಂಬುದ ಕೇಳ್ದೆಂ"– ಈ ಸಮಸ್ಯಾಪಾದಕ್ಕೆ ಕಂತಿಯ ಉತ್ತರ:

ಹುಲ್ಲೆಯ ಮರಿಯನು ಕಾಣುತ
ನಲ್ಲಳ ಕರಸನ್ನೆಯಲಿ ನಿಲ್ಲಿಸಿ ಶಬರಂ
ಮೆಲ್ಲನೆ ತಾಂ ಸಂಧಿಸಿದಂ
ಬೆಲ್ಲವನುಂ ಬಿಲ್ಲುನುಂಗಿತೆಂಬುದು ಕೇಳ್ದೆಂ ॥

'ಬೆಲ್ಲ' ಎನ್ನುವ ಪದವು 'ಅಂಬು' ಎಂದಾಗಿ 'ಬೆಲ್ಲವನುಂ' ಎನ್ನುವುದು 'ಅಂಬು + ಎಲ್ಲವನುಂ' 'ಅಂಬೆಲ್ಲವನುಂ' ಎಂದು ಮಾಡಿಕೊಂಡಾಗ ಸಮಂಜಸ ಅರ್ಥ ಸಿಗುತ್ತದೆ.

ಕಂತಿ ಒಡ್ಡಿದ ಕೆಲವು ಒಗಟಿನ ಪದ್ಯಗಳಿಗೆ, ಪಂಪನಿಂದ ಉತ್ತರ ಬಂದಂತೆ ಕಾಣುವುದಿಲ್ಲವಾದರೂ, ಪಂಪನ ಒಗಟಿನ ಸಾಲುಗಳಿಗೆ ಉತ್ತರಿಸುವುದರಲ್ಲಿ ಆಕೆ ತೋರಿದ ಜಾಣ್ಮೆ ಮೆಚ್ಚುವಂಥದು.

"ಪಲವು ವೃಕ್ಷದ ಮಧ್ಯದೊಳು ಪೂತುಕಾತು ಕಾಯಾಗಿರ್ಪುದು ಮರ ಬೇವುದ ಕಂಡೆ, ಉರಿ ಹೊಗೆ ಕಾಣೆ" ಎಂದಾಗ, ಅದು "ಬೇವಿನ ಮರ" ಎಂದು ತಟ್ಟನೆ ಉತ್ತರಿಸುತ್ತಾಳೆ. ಅದೇ ರೀತಿ "ಬಿಳಿದುಂ ಪೊದ್ದು ಬಿಳಿದೊಂದುಟ್ಟು ಬಿಳಿ ಮುತ್ತಿನ ಹಾರವಂ ಧರಿಸಿ ಬೆಳುದಿಂಗಳೊಳ್ ಪೋಪಳೆಲೆ" ಎಂಬ ಒಗಟಿಗೆ "ಅಗಸರ ಮಗಳ್" ಎಂದು ಒಗಟನ್ನು ಬಿಡಿಸುತ್ತಾಳೆ.

"ವಿಪ್ರರು ಕಾಗೆ ಮಾಂಸವನು ಭಕ್ಷಿಸುವದು ಕಂಡೆನಿದೇನು ಚಿತ್ರವೆ ಕಂತಿ" ಎಂಬ ಪಂಪನ ಅಚ್ಚರಿಯ ಮಾತಿಗೆ, "ಬೆಟ್ಟದ ತಪ್ಪಲೊಳ್ ನವಿಲು / ಪಾಲ್ಗರೆಯೆ ಪಶುವು ಚಿಣ್ಣನೆತ್ತಿ / ಬಾಲೆ ವೇದವನೋದೆ / ವಿಪ್ರರು ಕಾಗೆ ಮಾಂಸವ ಭಕ್ಷಿಸುವುದಲ್ಲದೆ. . ." ಎಂದು ಅಘಟಿತ ಘಟನೆಗಳು ಸಂಭವಿಸಿದಾಗ, ಇಂಥ ವಿಘಟನೆಗಳು ಸಾಧ್ಯವೆನ್ನುತ್ತಾಳೆ.

ಹೀಗೆ ರಸಚಿತ್ರಗಳನ್ನು ಚಮತ್ಕಾರದ ಮಾತುಗಳಿಂದ ನೀಡುವ ಕಂತಿಯ ಕಾವ್ಯಪ್ರತಿಭೆ, ಛಂಧೋರಚನೆಯಲ್ಲಿನ ಅಗಾಧ ಪಾಂಡಿತ್ಯ, ಸಮಸ್ಯೆಗೆ ಪರಿಹಾರವನ್ನು ಸೂಚಿಸುವಲ್ಲಿ ಆಕೆ ತೋರುವ ಜಾಣ್ಮೆ, ಲೋಕಾನುಭವ, ಅಪೂರ್ವ ಪದಸಂಪತ್ತುಗಳಿಂದ ಕನ್ನಡದಲ್ಲೇ ವಿಶಿಷ್ಟ ಕವಯಿತ್ರಿ ಆಗಿದ್ದಾಳೆ.

ಕಂತಿಯ ಪದ್ಯಗಳನ್ನು ಮುಕ್ತಕ ಸಾಹಿತ್ಯ ವರ್ಗಕ್ಕೆ ಸೇರಿಸಬಹುದಾಗಿದೆ. ಅಂತೆಯೇ ಅವು ಅವಧಾನ ಕಲೆಯ ಅಂಗವಾದ ರಚನೆಗಳಾಗಿವೆ. ಆದಕಾರಣ ಆಕೆಯನ್ನು ಮುಕ್ತಕ ಕವಯಿತ್ರಿ ಅಥವಾ ಅವಧಾನ ಕಲಾಚತುರೆ ಎಂದು ಕರೆಯಬಹುದಾಗಿದೆ, ಕಾವ್ಯ ರಚನಾಪ್ರತಿಭೆಯಲ್ಲಂತೂ ಅಕ್ಕಮಹಾದೇವಿಯನ್ನು ಬಿಟ್ಟರೆ ಇಪ್ಪತ್ತು ಶತಮಾನದವರೆಗಿನ ಕವಯಿತ್ರಿಯರಲ್ಲಿ ಕಂತಿ ವಿಶಿಷ್ಟವಾಗಿ ಕಂಗೊಳಿಸಿದ್ದಾಳೆ. ಕನ್ನಡದಲ್ಲಿ ಕಂತಿಯಂಥ ಇನ್ನೊಬ್ಬ ಕವಯಿತ್ರಿ ಕಂಡುಬಂದಿಲ್ಲ ಎನ್ನುವುದು ಒಂದು ವಿಸ್ಮಯವೇ ಸರಿ!

– –

ಆಕರ ಸಾಹಿತ್ಯ

(1) ಅಭಿನವ ವಾಗ್ದೇವಿ ಕಂತಿ– ಡಿ. ಪದ್ಮನಾಭಶರ್ಮ–1953

(2) ಕರ್ನಾಟಕದ ಕವಯತ್ರಿಯರು–(ಮಹಾಪ್ರಬಂಧ) ಲೇ: ಡಾ. ಸರೋಜಿನಿ ಮಹಿಷಿ. 1965. ಪ್ರ: ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿ. ಧಾರವಾಡ

(3) ದೇವಚಂದ್ರನ ರಾಜಾವಳಿ ಕಥಾಸಾರ (ಹೊಸಗನ್ನಡ ಗದ್ಯಾನುವಾದ) ಬಿ.ಎಸ್. ಸಣ್ಣಯ್ಯ, ಶ್ರೀ ಕನಕಗಿರಿ ಪ್ರಕಾಶನ, ಮಲೆಯೂರು.

(4) ಕವಿ ಚರಿತ್ರೆ ಭಾಗ –1– ಆರ್. ನರಸಿಂಹಾಚಾರ್. 1961 ಪ್ರ: ಕನ್ನಡ ಸಾಹಿತ್ಯ ಪರಿಷತ್ತು

(5) ಕರ್ನಾಟಕ ಕವಿಯಿತ್ರಿಯರು (ವಿವಿಧ ಲೇಖಕಿಯರು) ಸಂ: ನಿರುಪಮಾ, 1980, ಶ್ರೀ ಪ್ರಕಾಶನ, ಬೆಂಗಳೂರು–10

(6) ಕನ್ನಡ ಚಿತ್ರಕಾವ್ಯ– ಟಿ.ವಿ.ವೆಂಕಟಾಚಲಶಾಸ್ತ್ರೀ, 1987, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ.

(7) ಕನ್ನಡದಲ್ಲಿ ಅವಧಾನ ಕಲೆ (ಮಹಾ ಪ್ರಬಂಧ) ಶತವಾಧಾನಿ ಗಣೇಶ್, ಕರ್ನಾಟಕ ಸಂಘ, ಪುತ್ತೂರು, 1998.

*

ನಾಟ್ಯರಾಣಿ ಶಾಂತಲೆ

ಡಾ: ಕಮಲಾ ಹಂಪನಾ

ಕರ್ನಾಟಕದ ಶಾಸನ ಚರಿತ್ರೆ ಸಂಪದ್ಭರಿತ, ಕುತೂಹಲ ಹಾಗೂ ವಿಸ್ಮಯದಿಂದ ಕೂಡಿದೆ. ಐತಿಹಾಸಿಕ ದಾಖಲೆಗಳನ್ನು ಬಿತ್ತರಿಸುತ್ತಲೇ ಸಾಹಿತ್ಯ, ಸಂಸ್ಕೃತಿ, ಪರಂಪರೆ, ಕಲೆ ಇವುಗಳನ್ನು ಈ ಶಾಸನಗಳು ಕಟ್ಟಿಕೊಡುತ್ತವೆ. ಜನಜೀವನದ ವಿಸ್ಮಯದ ಬಾಗಿಲು ತೆರೆಯುತ್ತವೆ. ಕರ್ನಾಟಕದ ಶಾಸನಸಂಪತ್ತಿನಲ್ಲಿ ಹೆಚ್ಚಿನ ಪಾಲು ಶಾಸನಗಳು ಶ್ರವಣಬೆಳುಗೊಳದ ಗರ್ಭದಲ್ಲಿ ಅರಳಿವೆ.

ಆ ಶಾಸನಗಳು ಚೆಲ್ಲುವ ಅನೇಕ ಮಹಿಳೆಯರ ಪೂರ್ವೇತಿಹಾಸಗಳ ಸಂಗತಿಗಳನ್ನು ಸಂರಚಿಸಿ ನೋಡಿದಾಗ ದಾನ ಚಿಂತಾಮಣಿ ಅತ್ತಿಮಬ್ಬೆ, ನಾಟ್ಯರಾಣಿ ಶಾಂತಲ, ನಾಟ್ಯದೇವಿ ಬಾಚಲದೇವಿ, ಮಾಳಲದೇವಿ, ಸಸಿಮತಿಗಂತಿಯರು ಹೀಗೆ ನೂರಾರು ಮಹಿಳೆಯರ ಜೀವನ ಸಂಗತಿಗಳು ಮನಸೆಳೆಯುತ್ತವೆ.

ಶಾಸನಗಳು ದಾಖಲಿಸಿರುವ ವ್ಯಕ್ತಿಗಳಲ್ಲಿ, ಇತಿಹಾಸ ರಚಿಸಿರುವ ಮಹಿಳೆಯರಲ್ಲಿ, ನಾಟ್ಯರಾಣಿ ಶಾಂತಲ ಬಹುಮುಖ್ಯಳಾಗಿ ವಿಜೃಂಭಿಸುತ್ತಾಳೆ. ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯಿಕ, ಧಾರ್ಮಿಕ ಹಾಗೂ ಐತಿಹಾಸಿಕ ಮಹತ್ವವುಳ್ಳ ದೋರಸಮುದ್ರದ ಆಳ್ವಿಕೆಯಲ್ಲಿ ವಿಷ್ಣುವರ್ಧನನ ಹೆಸರು ಚಿರಸ್ಥಾಯಿಯಾಗಿ ನಿಲ್ಲುವಂಥದು. ಆತನ ಪಟ್ಟದರಾಣಿ ಶಾಂತಲಾದೇವಿ ನಾಟ್ಯಸರಸ್ವತಿಯಾಗಿ, ವಾಗ್ದೇವಿಯಾಗಿ, ಧರ್ಮದೇವತೆಯಾಗಿ, ದಾನ ಚಿಂತಾಮಣಿಯಾಗಿ ಬಹುಮುಖದ ಸಾಧನೆಗಳನ್ನು ಮಾಡಿ ಸಾರ್ಥಕ ಬದುಕನ್ನು ಬಾಳಿದವಳು. ಅವಳ ಅನೇಕ ವಿಶಿಷ್ಟ ಗುಣಗಳು ಮಹಿಳಾ ಜಗತ್ತಿಗೆ ಮಾತ್ರವಲ್ಲ ಜಗತ್ತಿನ ಎಲ್ಲರಿಗೂ ಮಾರ್ಗದರ್ಶನ ನೀಡುವಷ್ಟು ಆದರ್ಶಪ್ರಾಯವಾಗಿವೆ.

ಬಳ್ಳಿಗಾವೆಯ ಪೆರ್ಗಡೆ ಮಾರಸಿಂಗಯ್ಯ ಹಾಗೂ ಮಾಚಿಕಬ್ಬೆ ದಂಪತಿಗಳಿಗೆ ಹುಟ್ಟಿದ ಮಗಳು ಶಾಂತಲೆ. ಆಕೆಯ ಗುರು, ಪ್ರಭಾಚಂದ್ರದೇವ. ತಾಯಿ ಮಾಚಿಕಬ್ಬೆ ಜೈನಮನೆತನದಲ್ಲಿ ಹುಟ್ಟಿ, ಜೈನಸಂಪ್ರದಾಯ, ಪರಂಪರೆ, ಧರ್ಮಗಳಲ್ಲಿ ನಿಷ್ಠೆಯಿಂದ ಬದುಕಿದವಳು. ತಂದೆ ಪೆರ್ಗಡೆ, ಮಾರಸಿಂಗಯ್ಯ ಶಿವಭಕ್ತ, ಶೈವಧರ್ಮದಲ್ಲಿ ನಿಡುಬಾಳು ನಡೆಸಿದವನು. ಇವರೀರ್ವರ ಮಗಳಾದ ಶಾಂತಲೆ ಬದುಕಿನ ಕಡೆಯವರೆಗೂ ಜೈನಧರ್ಮದಲ್ಲಿಯೇ ನಿಷ್ಠೆಯುಳ್ಳವಳಾದರೂ, ತನ್ನ ಪಟ್ಟಮಹಿಷಿ ಸ್ಥಾನಕ್ಕೆ ಗೌರವ, ಮರ್ಯಾದೆ ತರುವಹಾಗೆ ಎಲ್ಲ ಧರ್ಮಗಳಿಗೂ ಪ್ರೋತ್ಸಾಹ ಕೊಡುತ್ತಾ ಜನರೆಲ್ಲರ ಪ್ರೀತ್ಯಾರದಗಳಿಗೆ ಪಾತ್ರಳಾಗಿದ್ದಳು.

ಅತ್ಯಂತ ಸ್ಫುರದ್ರೂಪಿಯೂ ಗುಣಶೀಲಳೂ ನಾಟ್ಯ–ಸಂಗೀತ–ವಿಶಾರದೆಯೂ ಆಗಿದ್ದ ಶಾಂತಲಾದೇವಿಯ ಗುಣಾವಳಿಗಳನ್ನು ಅನೇಕ ಶಾಸನಗಳು ಬಹು ವಿಧಗಳಲ್ಲಿ ಬಣ್ಣಿಸಿವೆ:

ಆ ನೆಗರ್ದ್ದ ವಿಷ್ಣುನ್ರಿಪನ ಮ
ನೋನಯನ ಪ್ರಿಯೆ ವಿಲೋಳ ನೀಳಾಳಕಿ ಚಂ
ದ್ರಾನನೆ ಕಾಮನ ರತಿಯಲು
ತಾನೆಣೆ ತೊಣೆ ಸರಿ ಸಮಾನೆ ಶಾಂತಲದೇವಿ ॥

ಪ್ರಸಿದ್ಧನಾದ ವಿಷ್ಣುವರ್ಧನ ನೃಪನ ಮನೋವಯನೆ, ಪ್ರಿಯೆ, ಪ್ರೀತಿಪಾತ್ರಳು, ತೊನೆದಾಡುವ ನೀಳವಾದ ಕುಂತಳವನ್ನು ಉಳ್ಳವಳು, ಚಂದ್ರನಂತೆ ಶಾಂತವಾದ, ಪ್ರಸನ್ನವಾದ, ಸ್ನಿಗ್ಧವಾದ ಮುಖವುಳ್ಳವಳು. ಸೌಂದರ್ಯದ ಅಧಿದೇವತೆಗಳಾದ ರತಿ–ಮನ್ಮಥ ದಂಪತಿಗಳಲ್ಲಿ ರತಿಯ ಸರಿಸಾಟಿಯಾದ ಶೃಂಗಾರದೇವತೆ ಶಾಂತಲಾದೇವಿ ಆಗಿದ್ದಳು. ಐಶ್ವರ್ಯದ ಅಧಿದೇವತೆ ಸೌಭಾಗ್ಯದ ಲಕ್ಷ್ಮಿದೇವತೆಯಂತೆ ಕಂಗೊಳಿಸಿದ್ದಳು ಎನ್ನುವುದು ಪದ್ಯದ ಸಾರಾಂಶ. ಯುದ್ಧದ ಸಂದರ್ಭದಲ್ಲೆಲ್ಲಾ ವಿಷ್ಣು ನೃಪಾಲನಿಗೆ ಶಾಂತಲಾದೇವಿ ಜಯವನ್ನು ತಂದುಕೊಡುವ ವಿಜಯಲಕ್ಷ್ಮಿಯಾಗಿದ್ದಳು. ವಿಷ್ಣುವರ್ಧನನ ಹೃದಯ ಕಮಲದಲ್ಲಿ ಸಂತಸದಿಂದ ನೆಲಸಿ ನಿರಂತರ ವಿಫುಲತೆಯನ್ನು ವೈಭವವನ್ನು ಸಮೃದ್ಧತೆಯನ್ನು ತಂದುಕೊಡುವವಳು. ತನ್ನ ಪತಿಯ ಕೀರ್ತಿಯನ್ನು ದಿಗ್ಭಿತ್ತಿಗಳಲ್ಲಿ ನೆಲೆಗೊಳಿಸುವವಳೂ ಆದ ಶಾಂತಲದೇವಿಯನ್ನು ಏನೆಂದು ವರ್ಣಿಸಲಿ ಎಂದು ಶಾಸನ ಕವಿ ವಿಸ್ಮಿತನಾಗುತ್ತಾನೆ.

ಸತತಂ ನೋರ್ಪ್ಪಡೆ ಲಕ್ಷ್ಮಿದೇವತೆ ರಣವ್ಯಾಪಾರದೊಳ್ ಖಡ್ಗದೇ
ವತೆ ಬಿಣ್ಪಿನ್ದಮೆ ಭೂಮಿದೇವತೆ ಜನಕೆಲ್ಲಂದದಿಂ ಪುಣ್ಯದೇ
ವತೆ ವಾಗ್ದೇವತೆ ವಿದ್ದಿಯೊಳ್ ಸಕಳ ಕಾರ್ಯೋದ್ಯೋಗದೊಳ್ ಮಂತ್ರದೇ
ವತೆ ನಾಥಂಗೆನೆ ಶಾನ್ತಿದೇವಿಯನ್ನದಿನ್ನೇ ವಣ್ಣಿಪಂ ಬಣ್ಣಿಪಂ ॥

ಶಾಂತಲದೇವಿ ವಿಷ್ಣುನೃಪಾಲನಿಗೆ ನಿರಂತರ ಲಕ್ಷ್ಮಿದೇವತೆಯಾಗಿ ಐಶ್ವರ್ಯವನ್ನು ಕರುಣಿಸಿದ್ದಾಳೆ. ಯುದ್ಧರಂಗದಲ್ಲಿಯಾದರೋ ಖಡ್ಗದೇವತೆಯಾಗಿ ಸದಾ ಗೆಲುವನ್ನು ತಂದುಕೊಟ್ಟಿದ್ದಾಳೆ. ಗಾಂಭೀರ್ಯದಲ್ಲಿ ಭೂದೇವತೆಯಾಗಿದ್ದಾಳೆ. ಪ್ರಜೆಗಳೆಲ್ಲರಿಗೂ ಪುಣ್ಯದೇವತೆಯಾಗಿ ಅವರನ್ನು ಕಾಪಾಡಿದ್ದಾಳೆ. ವಿದ್ಯೆಯಲ್ಲಿ ವಾಗ್ದೇವಿ. ವಿಷ್ಣುವರ್ಧನ ಆಲೋಚಿಸಿದ ಕಾರ್ಯಗಳಲ್ಲೆಲ್ಲಾ ಮಂತ್ರದೇವತೆಯಾಗಿ ನಿಂತು ವಿಜಯ ತಂದುಕೊಟ್ಟಿದ್ದಾಳೆ. ಹೀಗೆ ವಿಷ್ಣುವರ್ಧನನಿಗೆ ಪತ್ನಿಯಾಗಿ ಸಕಲ ವಿಧದಲ್ಲಿಯೂ ನೆರವಾಗಿ ನಿಂತಿದ್ದಾಳೆ.

ಶಾಂತಲದೇವಿಯ ಗುಣಮಂ
ಶಾಂತಲದೇವಿಯ ಸಮಸ್ತದಾನೋನ್ನತಿಯಂ
ಶಾಂತಲದೇವಿಯ ಶೀಳಮ
ಚಿಂತ್ಯ ಭುವನಯ್ಕ ದಾನ ಚಿಂತಾಮಣಿಯಂ ॥

ಶಾಂತಲದೇವಿಯ ಸದ್ಗುಣಗಳನ್ನು ಶಾಂತಲದೇವಿಯ ಸಮಸ್ತ ದಾನದ ಔನ್ನತ್ಯವನ್ನು ಶಾಂತಲದೇವಿಯ ಶೀಲೋನ್ನತಿಯನ್ನು ಮೇರೆ ಮೀರಿದ ಆಕೆಯ ದಾನಗುಣವನ್ನು ಯೋಚಿಸಲೂ ಅಸಾಧ್ಯ. ದಾನಚಿಂತಾಮಣಿ ಅತ್ತಿಮಬ್ಬೆಯನ್ನು ನೆನಪಿಸುವ ದಾನೋನ್ನತಿ ಶಾಂತಲಾದೇವಿಯದು.

ಶಾಂತಿಗ್ರಾಮದ ಧರ್ಮೇಶ್ವರ ದೇವಾಲಯದ ಶಾಸನ ಶಾಂತಲೆಯನ್ನು ಹೀಗೆ ವರ್ಣಿಸುತ್ತದೆ:

ಬಸನಂ ಪತಿಹಿತದಲ್ಲಿಯೇ
ಬಸನಂ ದ್ವಿಜದೇವ ಪೂಜೆಯಲ್ಲಿಯೆ ನೆಗದ್ರ್ದಾ
ಬಸನಂ ನೋಂಪಿಗಳಲ್ಲಿಯೆ
ಬಸನಂಗಳು ಶಾನ್ತಿದೇವಿಯೊಳ್ ಪೆಮೊಳವೆ ॥

ಶಾಂತಲಾದೇವಿಯ ಆಲೋಚನೆಗಳೆಲ್ಲ ಪತಿಗೆ ಹಿತವಾಗುವ ಕೆಲಸಗಳಲ್ಲಿ, ದ್ವಿಜ, ದೇವರುಗಳ ಪೂಜೆಯಲ್ಲಿ ಶ್ರೇಷ್ಠವಾದ ವ್ರತಗಳಲ್ಲಿ ಲೀನವಾದವುಗಳು, ಇವುಗಳನ್ನು ಹೊರತುಪಡಿಸಿ ಆಕೆಗೆ ಬೇರೆ ಆಲೋಚನೆಗಳು ಉಂಟೆ? ಎಂದು ಈ ಶಾಸನ ಕವಿ ಆಶ್ಚರ್ಯಚಕಿತನಾಗುತ್ತಾನೆ.

ಶಾಂತಲಾದೇವಿಗಿದ್ದ ಅನೇಕ ಬಿರುದುಗಳಲ್ಲಿ ಕೆಲವನ್ನು ನೋಡಿದರೂ ಆಕೆಯ ವ್ಯಕ್ತಿತ್ವದ ಹಿರಿಮೆಗರಿಮೆಗಳನ್ನು ಅರ್ಥೈಸಬಹುದು. ಅಭಿನವ ರುಕ್ಮಿಣೀದೇವಿ, ಪತಿಹಿತ ಸತ್ಯಭಾಮೆ, ವಿವೇಕಯ ಬೃಹಸ್ಪತಿ, ಪ್ರತ್ಯುತ್ಪನ್ನ ವಾಚಸ್ಪತಿ, ಮುನಿಜನ ವಿಧೇಯ ಜನವಿನೀತೆ, ಪತಿವ್ರತಾಪ್ರಭಾವ ಪ್ರಸಿದ್ಧಶೀಲೆ, ಸಕಳವಂದಿ ಜನಚಿಂತಾಮಣಿ, ಸಮ್ಯಕ್ತ್ವ ಚೂಡಾಮಣಿ, ಸವತಿಗಂಧವಾರಣೆ, ಚತುಸ್ಸಮಯಸಮುದ್ಧರಣಕಾರಣೆ, ನಿಜಕುಳಾಭ್ಯುದಯ ದೀಪಿಕೆ, ಗೀತವಾದ್ಯ–ನೃತ್ಯ ಸೂತ್ರಧಾರೆ, ಜಿನಮಯಸಮುದಿತಪ್ರಾಕಾರೆ, ಆಹಾರಾಭಯ ಭೈಷಜ್ಯಶಾಸ್ತ್ರದಾನವಿನೋದೆ, ವಿಷ್ಣುವರ್ಧನ ಹೊಯ್ಸಳ ದೇವರ ಪಿರಿಯರಸಿ, ಪಟ್ಟಮಹಾದೇವಿ ಈ ಎಲ್ಲ ಬಿರುದು ಗೌರವಗಳು ಆಕೆಗೆ ಅನ್ವರ್ಥವಾಗಿ ಬಂದಂಥವು.

ನಾಟ್ಯರಾಣಿಯಾಗಿದ್ದ ಪಟ್ಟಮಹಿಷಿ ಶಾಂತಲಾದೇವಿಯ ವಿವಿಧ ನೃತ್ಯ ಭಂಗಿಗಳೇ, ವಿಷ್ಣುವರ್ಧನ ಕಟ್ಟಿಸಿದ ಚನ್ನಕೇಶದ ದೇವಾಲಯದ ಭಿತ್ತಿ ಮೂಲೆಗಳಲ್ಲಿ ವಿರಾಜಮಾನವಾಗಿರುವ ನಾಟ್ಯಭಂಗಿಯ ವಿಗ್ರಹಗಳಾಗಿವೆ. ಶಾಂತಲಾದೇವಿಗೆ ಕುಮಾರ ಬಲ್ಲಾಳನೆಂಬ ಮಗನಿದ್ದು ತಂದೆಗೆ ರಾಜ್ಯಾಡಳಿತೆಯಲ್ಲಿ ಸಹಾಯಕನಾಗಿದ್ದು. ಯೌವನದ ಕಿರುವಯಸ್ಸಿನಲ್ಲಿಯೇ ತೀರಿಹೋದನೆಂದು ತಿಳಿದುಬರುತ್ತದೆ. ಚಿಕ್ಕ ಹರಿಯಲೆ (ಹರಿಯಲಾದೇವಿ) ಎಂಬ ಮಗಳಿದ್ದು ಅವಳನ್ನು ಭರತೇಶ ಎಂದು ದಂಡನಾಯಕನಿಗೆ ಕೊಟ್ಟು ಮದುವೆ ನೆರವೇರಿಸಲಾಗಿತ್ತು.

ಶಾಂತಲೆಯ ಸಾಧನೆಯನ್ನು ಧರ್ಮಕಾರ್ಯಗಳ ವಿಷಯದಲ್ಲೂ ಉಲ್ಲೇಖಿಸಬಹುದು. ಉದಾಹರಣೆಯಾಗಿ ಆಕೆ ಕಟ್ಟಿಸಿದ ದೇವಾಲಯಗಳು ಇಂದಿಗೂ ಸಾಕ್ಷಿ ನುಡಿಯುತ್ತಿವೆ. ಶ್ರವಣಬೆಳಗೊಳದ ಚಿಕ್ಕಬೆಟ್ಟ ಚಂದ್ರಗಿರಿಯಲ್ಲಿ ಆಕೆ ಕಟ್ಟಿಸಿದ 'ಸವತಿಗಂಧವಾರಣ ಬಸದಿ', ಹಾಸನ ಜಿಲ್ಲೆಯಲ್ಲಿ ಶಾಂತಿಗ್ರಾಮವನ್ನು ಸ್ಥಾಪಿಸಿ ಅಲ್ಲಿ ದೇವಾಲಯಗಳನ್ನು ಕಟ್ಟಿಸಿದ್ದು, ಬೇಲೂರಿನಲ್ಲಿ ಚನ್ನಕೇಶವ ದೇವಾಲಯದ ಪಕ್ಕದಲ್ಲಿರುವ ಕಪ್ಪೆ ಚನ್ನಿಗರಾಯ ದೇವಾಲಯ ಇವುಗಳನ್ನು ನಿರ್ಮಿಸಿದ ವಿವರಗಳು ಶಾಸನಗಳಲ್ಲಿ ದೊರೆಯುತ್ತವೆ.

ರಾಮಾನುಜರ ಪ್ರಭಾವದಿಂದ ಬಿಟ್ಟಿದೇವ ವೈಷ್ಣವ ಧರ್ಮಕ್ಕೆ ಪರಿವರ್ತಿತನಾಗಿ ವಿಷ್ಣುವರ್ಧನನಾದರೂ ಶಾಂತಲಾದೇವಿ ಮಾತ್ರ ಜೈನಧರ್ಮದಲ್ಲಿಯೇ ಉಳಿದಳು. ಬೇಲೂರಿನ ಚನ್ನಕೇಶವ ದೇವಾಲಯದ ಮುಂದೆ ಅಂಜಲಿ ಮುದ್ರೆಯಲ್ಲಿ ಕೆತ್ತಿರುವ ಸರ್ವಾಲಂಕಾರ ಗಂಡು–ಹೆಣ್ಣಿನ ವಿಗ್ರಹವನ್ನು ಆರ್.ನರಸಿಂಹಾಚಾರ್ಯರು ವಿಷ್ಣುವರ್ಧನ ಹಾಗೂ ಶಾಂತಲೆಯರೆಂದು ಗುರುತಿಸಿದ್ದಾರೆ. ಕೇಶವ ದೇವಾಲಯದ ಮುಂಭಾಗದ ಗೋಡೆಯ ಮೇಲಿನ ಚಿತ್ತಾರದ ಜಾಲೇಂದ್ರ ಒಂದರಲ್ಲಿ, ಶಾಂತಲೆ ಪತಿಯೊಡನೆ ಒಡ್ಡೋಲಗದಲ್ಲಿ ಕುಳಿತಿರುವ ಭವ್ಯ ದೃಶ್ಯದ ಕಲಾಕೃತಿ ಒಂದಿದೆ. ಶಾಂತಲಾದೇವಿ ತನ್ನ ಅಂತ್ಯಕಾಲವನ್ನು ಸಲ್ಲೇಖನವ್ರತ ತೆಗೆದುಕೊಳ್ಳುವ ಮೂಲಕ ಶಿವಗಂಗೆಯಲ್ಲಿ ಮುಡುಪಿದಳೆಂದು ಶಾಸನ ದಾಖಲಿಸುತ್ತದೆ.

ಶಾಂತಲಾದೇವಿಯ ಬದುಕಿನ ಚಿತ್ತಾರವನ್ನು ಇಪ್ಪತ್ತನೆಯ ಶತಮಾನದ ಸಾಹಿತಿಗಳು ಅನೇಕ ರೀತಿಯಲ್ಲಿ ಸೊಗಸಾಗಿ ಬಿತ್ತರಿಸಿದ್ದಾರೆ. ಕಥೆಗಳು, ಕವನಗಳು, ನಾಟಕಗಳು, ನೃತ್ಯರೂಪಕಗಳು, ಲಾವಣಿಗಳು, ಕಾದಂಬರಿಗಳು–ಹೀಗೆ ನಾನಾ ಪ್ರಕಾರಗಳಲ್ಲಿ ಶಾಂತಲೆಯ ವೈಭವಯುತ ಜೀವನ ವಿವರಗಳು ಚಿತ್ರಿತವಾಗಿವೆ. ಮ.ನ.ಮೂರ್ತಿಯವರ ನಾಟ್ಯರಾಣಿ ಶಾಂತಲಾ, ಸಮೇತನಹಳ್ಳಿ ರಾಮರಾಯರ ಸವತಿಗಂಧವಾರಣೆ, ಕೆ.ವಿ. ಅಯ್ಯರ್ ಅವರ ಶಾಂತಲಾ, ಸಿ.ಕೆ.ನಾಗರಾಜರಾಯರ ಪಟ್ಟಮಹಾದೇವಿ ಶಾಂತಲಾದೇವಿ ಇವುಗಳು ಕನ್ನಡ ಸಾಹಿತ್ಯ ಲೋಕದಲ್ಲಿ ಮನಸೆಳೆದ ಕಾದಂಬರಿಗಳಾಗಿವೆ.

ರೋಚಕ, ವೈವಿಧ್ಯಮಯ ಬದುಕಿನ ಧಾರ್ಮಿಕ, ಸಾಂಸ್ಕೃತಿಕ, ಐತಿಹಾಸಿಕ, ರಾಜಕೀಯ ಸೃಷ್ಟಿಗಳಿಂದ ಗಮನ ಸೆಳೆದ ವ್ಯಕ್ತಿತ್ವ ಪಟ್ಟಮಹಿಷಿ ಶಾಂತಲೆಯದ್ದು. ಕನ್ನಡ ನಾಡಿನಲ್ಲಿ ಮಾತ್ರವಲ್ಲ, ಭಾರತೀಯ ಹಾಗೂ ಅಂತರ ರಾಷ್ಟ್ರೀಯ ನೆಲೆಯಲ್ಲಿಯೂ ಗುರುತಿಸಿಕೊಂಡಿರುವ ಉನ್ನತ ಆದರ್ಶದ ಮಹಿಳೆಯಾಗಿ ರಾಣಿ ಶಾಂತಲಾ ವಿರಾಜಮಾನಳಾಗಿದ್ದಾಳೆ.

ಆಧಾರ : ಎಪ್ಟಿಗ್ರಾಫ್ಟಿಯ ಕರ್ನಾಟಕ ಸಂಪುಟ ಎರಡರ 162ನೇ ಶಾಸನ, ಮತ್ತು ಸಂಪುಟ ಎಂಟರ 167ನೇ ಶಾಸನ, ಸಂಪುಟ ಎಂಟರ 167ನೇ ಶಾಸನ ಹಾಗೂ ಶಾಂತಿಗ್ರಾಮದ ಧರ್ಮೇಶ್ವರ ದೇವಾಲಯದ ಶಾಸನಗಳು.

——— * ———

ಅಭಿನವ ಪಾರ್ವತಿ ಮಹಾಮಂಡಳೇಶ್ವರಿ ರಾಣಿ ಬಮ್ಮಲಾದೇವಿ

ಅರುಣಾ ಕುಮಾರಿ ಡಾ. ಸಂಗೀತ ಸುವರ್ಣ

ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗೆ ಮಹಿಳೆಯರು ನೀಡಿರುವ ಕೊಡುಗೆ ಅಪಾರವಾದುದು. ನಾಡಿನ ಭವ್ಯ ಇತಿಹಾಸದಲ್ಲಿ ಮಹಿಳೆಯರ ಪಾತ್ರವು ಕೂಡ ಪ್ರಮುಖವಾದುದಾಗಿದೆ. ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಅನೇಕ ರಾಜಮನೆತಗಳು ಆಳ್ವಿಕೆ ನಡೆಸಿದ್ದಾರೆ. ರಾಜರುಗಳ ಜೊತೆ ಅವರ ರಾಣಿಯರು ಕೂಡ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಅನೇಕ ಆಧಾರಗಳಿಂದ ತಿಳಿಯುತ್ತದೆ.

ಹೊಯ್ಸಳರ ವೀರಬಲ್ಲಾಳನ ಕಾಲದಲ್ಲಿ ಅವನ ರಾಣಿಯರು ಕೂಡ ಅವನಿಗೆ ಆಡಳಿತದಲ್ಲಿ ನೆರವಾಗಿದ್ದು ಅವರಲ್ಲಿ ಪ್ರಮುಖ ರಾಣಿಯಾದ ಬಮ್ಮಲಾದೇವಿಯು ಸಹ ಆಡಳಿತ ಮತ್ತು ಇತರ ಕಾರ್ಯಗಳಲ್ಲಿ ವೀರಬಲ್ಲಾಳನಿಗೆ ನೆರವಾಗಿದ್ದಳೆಂದು ಅನೇಕ ಶಾಸನಗಳು ತಿಳಿಸುತ್ತವೆ. ವೀರಬಲ್ಲಾಳನ ಬಹುಸಂಖ್ಯೆಯ ಶಾಸನಗಳಲ್ಲಿ ಪಿರಿಯರಸಿ ಬಮ್ಮಲಾದೇವಿ ಕಾಣಿಸಿಕೊಂಡಿದ್ದಾಳೆ. ಚನ್ನರಾಯಪಟ್ಟಣದ ಅತ್ತಿಹಳ್ಳಿಯ ಶಾಸನ ಇವಳ ಮನೆತನದ, ಹೆತ್ತವರ ಪರಿಚಯವನ್ನು ತಿಳಿಸುತ್ತದೆ. ಇದರ ಪ್ರಕಾರ ಮೊಖರಿ ಲಖಯ್ಯ ಮತ್ತು ಸೋಮವ್ವೆ ಇವಳ ತಂದೆತಾಯಿಯರು. ವಲ್ಲಪಯ್ಯ ಮತ್ತು ಅಕ್ಕಾಬಾಯಿ ಆಕೆಯ ಅಜ್ಜಅಜ್ಜಿಯರು. ಮೊಖರಿ ಲಖಯ್ಯನು ಇಮ್ಮಡಿ ವೀರಬಲ್ಲಾಳನ ಕೈಕೆಳಗೆ ಮಹಾಪಸಾಯಿತನಾಗಿದ್ದುದರ ಜೊತೆಗೆ ನೀರ್ಗುಂದ ನಾಡಿನ ಹುಲಿಕಲ್ಲ ಪ್ರಭುವಾಗಿದ್ದನು.

ಮೈಳನಾಯಕ ಇವಳ ಸೋದರನಾಗಿದ್ದಂತೆ ಶಾಸನದಲ್ಲಿ ವಿಷಯವಿದೆ ಮತ್ತು ಇವಳ ಮಾವ ನಾರಸಿಂಗಗೌಡನು ಹಲಕೂರಿನ ಮಹಾಪ್ರಭುಗೌಡನಾಗಿದ್ದನು. ಬಮ್ಮಲಾದೇವಿ ಧಾರ್ಮಿಕ ಪ್ರವೃತ್ತಿಯುಳ್ಳವಳು. ರಾಜಕಾರಣ ತವರಿನ ಕಡೆಯಿಂದ ಬಂದ ಬಳುವಳಿ. ಶೈವಧರ್ಮೀಯಳಾಗಿ ಅದರ ಬೆಳವಣಿಗೆಗೆ ತಕ್ಕ ಸಹಾಯ ಸಹಕಾರ ಸಲ್ಲಿಸಿದ್ದುಂಟು. 'ಅಭಿನವ ಪಾರ್ವತಿ' ಎನಿಸಿಕೊಂಡ ಬಮ್ಮಲೆ, ಪತಿಯೊಂದಿಗೆ ಹಲಕೂರಿನ ಕಲಿದೇವರ ನೈವೇದ್ಯ ನಂದಾದೀವಿಗೆಗೆ ಲಾಕುಳಾಗಮಸಮಯಸಮುದ್ಧರಣ, ಎಕ್ಕೋಟ ಮುನೀಂದ್ರ ತಾಳಮುಖ ಸಂಪ್ರದಾಯದ ರಾಮನಾಥ ದೇವರ ಪಾದಾರಾಧಕ ಕಲ್ಯಾಣಶಕ್ತಿ ಪಂಡಿತರ ಪಾದಪೂಜಿಸಿ ದತ್ತಿಕೊಟ್ಟಿರುವಳು. 'ವಂದಿಜನ ಚಿಂತಾಮಣಿ' ಬಿರುದು ಸಾರ್ಥಕ ಪಡಿಸಿಕೊಂಡಳು. ಅಂತೆಯೆ :

ಬಮ್ಮಲದೇವಿಯ ಗುಣಮಂ
ಬಮ್ಮಲದೇವಿಯ ಸಮಸ್ತದಾನೋನ್ನತಿಯಂ
ಬಮ್ಮಲದೇವಿಯ ಶೀ
ಲಮೆಚ್ಚಿಂತ್ಯಭುವನಯ್ನ ದಾನಚಿಂತಾಮಣಿಯಂ

ಎಂದು ಅತ್ತಿಹಳ್ಳಿ ಶಾಸನ, ಬಮ್ಮಲಾದೇವಿಯ ದಾನದ ಔನ್ನತ್ಯದ ಬಗ್ಗೆ ಮನಬಿಚ್ಚಿ ಕೊಂಡಾಡಿದೆ. ಅವಳ ದಾನಗುಣ ತವರಿನ ಕೊಡುಗೆ. ತಂದೆ ಮೊಖರಿಲಖಯ್ಯ ತಾಯಿ ಸೋಮವ್ವೆ (ಸೋಮಲದೇವಿ)ಯರು ಅತ್ತಿಹಳ್ಳಿಯ ಅಮೃತೇಶ್ವರ ದೇವಾಲಯಕ್ಕೆ, ಅಂಗರಂಗಭೋಗಕ್ಕೆ ಸ್ಥಾನಿಕ ಹೊಂನಜೀಯನ ಮಗ ಚೌಡಜೀಯನಿಗೆ ಒಂದು ನೂರು ಕಂಬ ಬೆದ್ದಲಭೂಮಿ ದಾನ ಮಾಡಿದ್ದು ಉತ್ತಮ ಉದಾಹರಣೆ.

ಬಮ್ಮಲಾದೇವಿ ಕಲಾಭಿಮಾನಿಯೂ ಆಗಿದ್ದು, ಅತ್ತಿಹಳ್ಳಿಯ ಶಾಸನದಲ್ಲಿ ಅವಳನ್ನು ಆ ವಿಷಯದಲ್ಲಿ ಸ್ತುತಿಗೈದಿದೆ. ಅದರಂತೆ ಹೊಯ್ಸಳ ವೀರಬಲ್ಲಾಳನ ಮಡದಿ ಬಮ್ಮಲದೇವಿ ಶಾಂತಲೆಯಂತೆ ತನ್ನ ಕಲಾಭಿರುಚಿಯನ್ನು ತೋರ್ಪಡಿಸಿದುದಕ್ಕೆ ಕ್ರಿ.ಶ. 1184ರ ಶಾಸನವೊಂದು ಆಧಾರವಾಗಿದೆ. 'ವಿವೇಕಯ್ಯ ಬೃಹಸ್ಪತಿ', 'ಪ್ರತ್ಯುತ್ಪನ್ನ ವಾಚಸ್ಪತಿ', 'ಗೀತವಾದ್ಯ ನೃತ್ಯ ಸೂತ್ರಧಾರೆ', 'ನಿಜಪದಾಭ್ಯುದಯ ದೀಪಿಕೆ' ಎಂದು ಶಾಸನ ಅವಳನ್ನು ವರ್ಣಿಸಿದೆ. ಇವು ಅವಳ ಸುಸಂಸ್ಕೃತ ಬದುಕಿನ ಸೂಚನೆಗಳು.

ವೀರಬಲ್ಲಾಳನ 'ಮನೋನಯನಪ್ರಿಯೆ ಚಳಾಳ ನೀಳಾಳಕ ಚಂದ್ರಾನನೆ, ಕಾಮನರತಿಯಲ್ತಾನೆಣೆ ತೊಣೆ ಸರಿಸಮನೆ 'ಬಮ್ಮಲದೇವಿ' ಎಂದು ಭಾವದುಂಬಿ ವರ್ಣಿಸುವ ಅತ್ತಿಹಳ್ಳಿ ಶಾಸನ ಅವಳ ಇನ್ನೊಂದು ಮುಖವಾದ ರಾಜಕಾರಣವನ್ನೂ ಸೂಚಿಸಿದೆ. ಆಗಿನ ಕಾಲದಲ್ಲಿ ರಾಣಿಯರು ಪತಿಯಿಂದ ದೂರದಲ್ಲಿದ್ದು ರಾಜ್ಯ ಪರಿಪಾಲನೆ ಮಾಡುತ್ತಿದ್ದರು. ಈ ಪ್ರದೇಶಗಳ ಮೇಲೆ ವೈರಿಗಳ, ಕಳ್ಳಕಾಕರ ದಾಳಿ ಸಹಜವಿತ್ತು, ಇಂತಹ ಸಂದರ್ಭಗಳಲ್ಲಿ ರಾಣಿಯಾದವಳು ತನ್ನ ಪ್ರದೇಶದ ರಕ್ಷಣೆಗೆ ಸದಾ ಸಿದ್ಧಳಾಗಿರಬೇಕಿತ್ತು. ಎಷ್ಟೋ ಸಲ ದುಷ್ಟ ಸಂಹಾರಕ್ಕಾಗಿ ಕೈಯಲ್ಲಿ ಕತ್ತಿ ಧರಿಸಬೇಕಾದ ಸಂದರ್ಭಗಳೂ ಬರುತ್ತಿದ್ದವು. ಕರ್ನಾಟಕದ ರಾಣಿಯರಲ್ಲಿ ಪ್ರತ್ಯಕ್ಷ ರಣಾಂಗಣ ದರ್ಶನ ಮಾಡಿದ ಕೆಲವೇ ರಾಣಿಯರಲ್ಲಿ ಬಮ್ಮಲಾದೇವಿ ಕೂಡ ಒಬ್ಬಳು.

ಸಣ್ಣೇನಹಳ್ಳಿಯ ಶಾಸನ 'ಬಲ್ಲಾಳದೇವನರಸಿ ಬಂಮಲದೇವಿ ದೋರಸಮುದ್ರದೊಳು ಸುಖಸಂಕಥಾ ವಿನೋದದಿಂ ಆಳೆ' ಎಂದರೆ ದೋರಸಮುದ್ರದಿಂದ ಆಳುತ್ತಿದ್ದಳೆಂದು ತಿಳಿಸುತ್ತದೆ. ಕ್ರಿ.ಶ. 1193ರ ಹೆಮ್ಮನಹಳ್ಳಿಯ ಮಹಲಿಂಗೇಶ್ವರ ದೇವಾಲಯದ ಎದುರಿಗಿನ ಶಾಸನ 'ಶ್ರೀಮತು ಪಿರಿಯರಸಿ ಬಮ್ಮಲದೇವಿ ಅಧಿಕಾರದಲ್ಲು' ಎಂಬ ವಾಕ್ಯವನ್ನೊಳಗೊಂಡಿದ್ದು, ಈಕೆ ಅಧಿಕಾರ ನಡೆಸಿದ್ದಳು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಇವಳು ಸ್ವತಂತ್ರವಾಗಿ ಅಧಿಕಾರ ನಿರ್ವಹಿಸಿದ ಬಗೆಗೆ ಸ್ಪಷ್ಟವಾದ ದಾಖಲೆಗಳು ದೊರಕದೆ ಹೋದರೂ ರಾಜ್ಯದ ಆಡಳಿತದಲ್ಲಿ ಬಹುಶಃ ಆಕೆ ಪಾಲ್ಗೊಂಡಿದ್ದಿರಬೇಕು ಅಥವಾ ಆಕೆ ಈ ಊರಿನವಳಾಗಿದ್ದು ಇದರ ಸುತ್ತಮುತ್ತಲ ಪ್ರದೇಶವು (ಉಂಬಳಿಯಾಗಿ) ಆಕೆಯ ಆಡಳಿತಕ್ಕೊಳಪಟ್ಟಿರಬೇಕು. ಕ್ರಿ.ಶ. 1173ರ ಹುಲಿಕಲ್ಲು ಶಾಸನೋಕ್ತ 'ಮಹಾಮಂಡಳೇಶ್ವರಿ' ಪದವಿ ಅವಳ ಅಧಿಕಾರದ ಸ್ಥಾನಮಾನ ಸೂಚಿಸಿದೆ.

ಮಲಮಲದು ಮಲೆದು ಮಲೆಪರ
ಕುಲಮಂ ಬೇರ್ವರಿಸಿ ಕಿತ್ತು ಬಂಮಲೆ ಮುದದಿಂ
ಫಲಫಲಕುಫಲಕುಫಲಕೆನ
ಲಲೆವಳು ಪರಸತಿಯರ ವರ ಕೀರ್ತ್ತ್ಯುನ್ನತಿಯಂ ॥

ಎಂದು ಹೇಳುವ ಹಲಕೂರಿನ ಶಾಸನ ಅವಳ ವ್ಯಕ್ತಿತ್ವದ ನಿಷ್ಠುರತೆಯನ್ನು ಬಿಚ್ಚಿ ಹೇಳಿದೆ. ಮಲೆದುನಿಂತ ಮಲೆಪರ ಕುಲವನ್ನು ಬೇರು ಸಹಿತ ಕಿತ್ತು ನೀರಿನಲ್ಲಿ ಫಲಕು ಫಲಕೆಯನ್ನುವಂತೆ ತೊಳೆದು ಅದನ್ನು ಮತ್ತೊಮ್ಮೆ ಹುಟ್ಟದಂತೆ ಮಾಡುವ ನೀತಿಯನ್ನು ಇವಳು ಪರಸತಿಯರ ಕೀರ್ತಿ ಉನ್ನತಿಗಳಲ್ಲಿ ಉಪಯೋಗಿಸಬೇಕಾದರೆ ಬಮ್ಮಲದೇವಿಯ ದೃಢತೆ ಸ್ಪಷ್ಟವಾಗುತ್ತದೆ. ಶಾಸನಗಳಲ್ಲಿ ಇವಳು ಪಡೆದಷ್ಟು ವರ್ಣನೆ, ಅತಿಶಯೋಕ್ತಿ, ಬಿರುದಾವಳಿಗಳ ಪಟ್ಟಿಯನ್ನು

ಇನ್ನಾವ ಮಡದಿಯರೂ ಪಡೆಯದೆ ಹೋದುದು, ಸವತಿಮತ್ಸರದ ಪದಗಳನ್ನು ಇವಳಷ್ಟು ಯಾರೂ ಬಳಸದೆ ಹೋದುದು ಇವಳ ವೈಶಿಷ್ಟ್ಯವೆನಿಸಿದೆ.

ಇವಳು ವೀರಬಲ್ಲಾಳನ ರಾಣಿವರ್ಗದಲ್ಲಿಯೇ ಅಧಿಕಸ್ಥಾನ, ವೈವಿಧ್ಯಪೂರ್ಣ ಬದುಕು ಸಾಗಿಸಿದುದು ಕಂಡುಬರುವ ಅಂಶ. ಬಲ್ಲಾಳನ 'ಅರ್ಧಾಂಗಲಕ್ಷ್ಮಿ'ಯೂ ಸವತಿಮುಖದರ್ಪಣೆಯೂ, ಸತಿಯರವೆನ್ನ ಸಮ್ಮಟಿಗೆಯೂ, ಮಲೆದು ಮಲೆಪರ ಕುಲಮಂ ಬೇರ್ವರಿಸಿ ಕಿತ್ತು ಪರಸತಿಯರ ವರಕೀರ್ತಿಯುನ್ನತಿಯಂ ಭಂಗಿಸಿದವಳೂ ಆದ ಬಮ್ಮಲದೇವಿಯನ್ನು ಬಣ್ಣಿಸಲು ಶಾಸನ ಕವಿ ಹೀಗೆ ಪ್ರಯಾಸಪಟ್ಟಿದ್ದಾನೆ:

ಇಂಗಡಲ ಸುತೆಯ ಪೆಂಪು ಭಂಗಿಸುವ
ವಿಲಸದ ಮುದ್ರಿಜಾತೆಯ ಸೊಬಗಂ॥
ಭಂಗಿಸುವ ಸೊಗಸು ತನಗೆಸಲೇಂಗಳ
ಬಣ್ಣಿಸುವರಳವೆ ಬಮ್ಮಲೆ ವಧುವಾ॥

ಆಡಳಿತ ಜ್ಞಾನ, ದಾನದಲ್ಲಿ ಔನ್ನತ್ಯ, ಬುದ್ಧಿವಂತಿಕೆ, ಕಲಾಭಿಜ್ಞಾನಗಳ ಜೊತೆಗೆ ರಾಣಿ ಬಮ್ಮಲಾದೇವಿಗೆ ಸವತಿ ಮತ್ಸರವೂ ಇತ್ತು. ಈ ಸವತಿ ಮಾತ್ಸರ್ಯವನ್ನು ಒಂದು ದೊಡ್ಡ ವಿಷಯವಾಗಿ ಪರಿಗಣಿಸಲಾಗುತ್ತಿತ್ತು. ಆದ್ದರಿಂದಲೇ ಬಿರುದಿನ ಬಿಂಕದಂಕದ ವಿಳಾಸಮಂ ಮೆರೆವ ಸವತಿಯರ ಮುಖದ ಕೈ 'ಉದ್ವೃತ್ತಸವತಿಗಜಕೇಸರಿ' ಎಂಬ ವಿಭಿನ್ನ ರೀತಿಯ ಬಿರುದುಗಳು ಅವಳ ಸವತಿಮಾತ್ಸರ್ಯದ ಬಗ್ಗೆ ನಿರೂಪಿಸಿದಂತಹ ಹೆಸರುಗಳಾಗಿವೆ. ವೈವಿಧ್ಯಪೂರ್ಣ ಹೆಸರುಗಳಿಂದ ತಮ್ಮನ್ನು ಕರೆದುಕೊಳ್ಳುವುದು ಅವರಿಗೆ ಅಭಿಮಾನ ಸೂಚಕ ಪದಗಳೆನಿಸಿರಬೇಕು. ಈ ರೀತಿ ಸಂಸಾರದಲ್ಲಿ ಪ್ರೀತಿ ವಿಶ್ವಾಸಗಳ ಮುಖ ಒಂದಾದರೆ, ಸಂಸಾರದ ಬಿಕ್ಕಟ್ಟಿನ ಪ್ರಸಂಗವನ್ನು ಸೂಚಿಸುವ ಬಹುಪತ್ನಿತ್ವ ಪದ್ಧತಿ ಹೊಯ್ಸಳರಲ್ಲಿ ಹೆಚ್ಚಿನ ಸವತಿಮತ್ಸರಕ್ಕೆ ಎಡೆಮಾಡಿಕೊಟ್ಟಿದೆ. ಅವರು ತಮ್ಮ ಭಾವನೆಗಳನ್ನು ಕಲ್ಬರಹದಲ್ಲಿ ಒಡಮೂಡಿಸಿದುದು. ಸಮಕಾಲೀನ ಸಮಾಜದ ಮತ್ತು ಸಾಮಾಜಿಕ ಬದುಕಿನ ದೃಷ್ಟಿಯಿಂದ ಅತ್ಯಂತ ಅಪರೂಪದ ನಿದರ್ಶನಗಳೆನಿಸಿವೆ.

ಹೀಗೆ ಕ್ರಿ.ಶ. 11 ಮತ್ತು 12ನೇ ಶತಮಾನದ ವೇಳೆಗೆ ಸ್ತ್ರೀಯರು ರಾಜ್ಯಾಡಳಿತದ ಬಗ್ಗೆ ನುರಿತವರಾಗಿದ್ದು ರಾಜಕುಮಾರರಂತೆಯೇ ರಾಜಯೋಗ್ಯ ಶಿಕ್ಷಣ ಪಡೆಯುತ್ತಿದ್ದರು. ಸ್ತ್ರೀಯರು ಸಮಾಜದಲ್ಲಿ ಪ್ರಮುಖ ಸ್ಥಾನ ಪಡೆದಿದ್ದು ಆಡಳಿತದಲ್ಲೂ ಅವರು ಭಾಗವಹಿಸುತ್ತಿದ್ದರು ಎಂದು ತಿಳಿಯುತ್ತದೆ. ಜನರ ಸಾಮಾಜಿಕ ಜೀವನ ಮತ್ತು ರಾಜರ ಜೊತೆ ಆಡಳಿತ, ಸಂಸ್ಕೃತಿ ಮುಂತಾದ ಅಂಶಗಳಲ್ಲಿ ಹೇಗೆ ಪ್ರಭಾವ ಬೀರಿದ್ದರು, ಅವರು ಸಮಾಜದಲ್ಲಿ ಯಾವ ರೀತಿ ಪ್ರಭಾವ ಹೊಂದಿದ್ದರು ಮುಂತಾದ ಅಂಶಗಳನ್ನು ಇದರಿಂದ ತಿಳಿಯಬಹುದು.

ಹೀಗೆ ಹೊಯ್ಸಳರ ವೀರಬಲ್ಲಾಳನ ಬದುಕಿನಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿದ ರಾಣಿ ಎಂದರೆ, ಬಮ್ಮಲಾದೇವಿ ಎಂದು ಹೇಳಬಹುದು. ಇವಳ ಕುರಿತಾಗಿ ಹೇಳಿರುವ ಶಾಸನಗಳನ್ನು ಗಮನಿಸಿದರೆ, ಇತರ ರಾಣಿಯರಿಗೆ ದಾನ ನೀಡಲು, ತಮಗಿಷ್ಟ ಬಂದ ಧರ್ಮವನ್ನು ಅನುಸರಿಸಲು ಮತ್ತು ಸ್ವತಂತ್ರ ಮನೋಭಾವ ಹೊಂದಲು ಅವಕಾಶವಿತ್ತು ಎಂಬುದು ತಿಳಿಯುತ್ತದೆ. ಈಕೆ ಇಮ್ಮಡಿ ಬಲ್ಲಾಳನ ಪ್ರಭಾವಶಾಲಿ ರಾಣಿಯಾಗಿದ್ದಳು.

ಆಕರ ಗ್ರಂಥಗಳು

1. ಎ.ಕ. ಸಂಪುಟ 5 ಮತ್ತು 10
2. ಶಾಸನಗಳಲ್ಲಿ ಸ್ತ್ರೀಸಮಾಜ –ಡಾ॥ ಚನ್ನಕ್ಕ ಎಲಿಗಾರ
   ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1990
3. ಪ್ರಾಚೀನ ಕರ್ನಾಟಕದ ರಾಣಿಯರು –ಡಾ॥ ಚನ್ನಕ್ಕ ಎಲಿಗಾರ
   ಚನ್ನಗಂಗಾ ಪ್ರಕಾಶನ, ಧಾರವಾಡ, 1987
4. ಇತಿಹಾಸದ ಇಣುಕುನೋಟ –ಡಾ॥ ಹೆಚ್.ಎಸ್.ಗೋಪಾಲ್‌ರಾವ್ (ಲೇಖನ: ಹೊಯ್ಸಳ ವೀರಬಲ್ಲಾಳನ ಅಷ್ಟಮಹಿಷಿಯರು)

—————— * ——————

ಮಹಾ ಸಾಧಕಿ ಮಹಾದೇವಿಯಕ್ಕ

ಡಾ. ಕೆ.ಆರ್. ಕಮಲೇಶ್

ಕ್ರಿಯಾಶೀಲ ಸಮಾಜ ನಿರ್ಮಾಣ

ಕನ್ನಡ ನಾಡಿನ ಸಾಧನಶೀಲರ ಉಜ್ಜಲ ಚರಿತ್ರೆಯಲ್ಲಿ ವಚನಕಾರರಿಗೆ ಮೊದಲ ಸ್ಥಾನವಿದೆ. ಮಧ್ಯಕಾಲೀನ ಕರ್ನಾಟಕದಲ್ಲಿ ಜಡ್ಡುಗಟ್ಟಿ ಹೋಗಿದ್ದ ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯಕ ಕ್ಷೇತ್ರಗಳಿಗೆ ತಮ್ಮ ಕ್ರಿಯಾಶೀಲ ನಡಿಗೆಯಿಂದ ವೇಗ ಅಥವಾ ಬದಲಾವಣೆಯ ಸ್ಪರ್ಶ ಕೊಟ್ಟವರು, ಈ ವಚನಕಾರರು. ಅವರು ವೈಯಕ್ತಿಕವಾಗಿ ಬಹುದೊಡ್ಡ ಸಾಧಕರು. ಜೊತೆಗೆ ಆ ಕಾಲದ ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯಕ ಕ್ಷೇತ್ರಗಳಲ್ಲಿನ ಅಸಮಾನತೆಯ ಬಗ್ಗೆ ಕಣ್ಣುಕಿವಿ ತೆರೆದುಕೊಂಡಿದ್ದ ಅತ್ಯುತ್ತಮ ಸಮಾಜಶಾಸ್ತ್ರಜ್ಞರು, ಸುಧಾರಣಾವಾದಿಗಳು. ತಮ್ಮ ಕಾಲದ ಪರಿಮಿತಿಯನ್ನು ದಾಟಿ ಚಿಂತಿಸುತ್ತಾ, ಕಾರ್ಯಪ್ರವೃತ್ತರಾದ ಆ ಶಿವಶರಣ-ಶಿವಶರಣೆಯರು ತಮ್ಮ ಅಪೂರ್ವ ಸಾಧನೆಯಿಂದ ಇಂದಿನವರು ಆಶ್ಚರ್ಯಪಡುವಂತೆ ಮಾಡಿದ್ದಾರೆ. ಸಮಾಜದ ಎಲ್ಲಾ ವರ್ಗದ ಜನ ಈ ಚಳವಳಿಯಲ್ಲಿ ಭಾಗವಹಿಸಿದ್ದು, ಇದರ ವೈಶಿಷ್ಟ್ಯ. ಅಧಿಕಾರ ವ್ಯವಸ್ಥೆಯಲ್ಲಿ ತುತ್ತತುದಿಯಲ್ಲಿದ್ದರೂ ಅದನ್ನು ವಿರೋಧಿಸಿದ ಬಸವಣ್ಣ, ಧಾರ್ಮಿಕ ಕ್ಷೇತ್ರದ ಪ್ರಮುಖ ನಾಯಕನಾಗಿದ್ದರೂ ಅಲ್ಲಿನ ಡಂಭಾಚಾರವನ್ನು ಪ್ರತಿಭಟಿಸಿದ ಅಲ್ಲಮ, ಕೌಟುಂಬಿಕ ಪರಿಸರದಿಂದ ಬಂದವಳಾದರೂ ವಿವಾಹ ವ್ಯವಸ್ಥೆಯನ್ನು ಧಿಕ್ಕರಿಸಿದ ಮಹಾದೇವಿಯಕ್ಕ ಅವರುಗಳ ಬದುಕು-ತತ್ವ ಇಂದಿನವರೆಗೆ ಭಾರಿ ಅದ್ಭುತವಾಗಿ ಕಂಡರೆ ಆಶ್ಚರ್ಯವಿಲ್ಲ.

ಕನ್ನಡನಾಡಿಗೊಬ್ಬಳೇ ಅಕ್ಕಾ!

ಕನ್ನಡಿಗರು ಹನ್ನೆರಡನೆಯ ಶತಮಾನದ ವೀರಶೈವ ಧಾರ್ಮಿಕ ಪರಂಪರೆಗೆ ವಿಶೇಷ ಕೃತಜ್ಞತೆ ಸಲ್ಲಿಸಬೇಕು. ಮೊದಲ ಪಂಕ್ತಿಯ ಶಿವಶರಣರ ಸಾಲಿನಲ್ಲಿ ಮಹಾದೇವಿಯಕ್ಕಂಗೆ ಮಾನ್ಯತೆ ನೀಡಿದ್ದು, ಆಕೆಯ ವಚನಗಳನ್ನು ಶ್ರದ್ಧೆ ಗೌರವಗಳಿಂದ ಉಳಿಸಿಕೊಂಡು ಬಂದಿರುವುದು ಸಾಮಾನ್ಯದ ಸಂಗತಿಯಲ್ಲ. ಹೀಗೆ ಆಕೆಯ ವಚನಗಳನ್ನು ಕಾಯ್ದುಕೊಂಡಿದ್ದಕ್ಕಾಗಿಯೇ ಆಕೆಯ ಸಾಧನೆ ನಮಗೆಲ್ಲಾ ಇಂದು ಪರಿಚಿತವಾಗಿದೆ.

ಡಾ. ಹೆಚ್. ತಿಪ್ಪೇರುದ್ರಸ್ವಾಮಿರವರು ಮಹಾದೇವಿಯಕ್ಕನ ಇಡೀ ಬದುಕನ್ನು ಕೆಲವೇ ಮಾತುಗಳಲ್ಲಿ ಸಂಗ್ರಹಿಸಿದ್ದಾರೆ-"ಅಕ್ಕಮಹಾದೇವಿ ಕನ್ನಡನಾಡಿಗೆ ಮಾತ್ರವಲ್ಲ, ಇಡೀ ಜಗತ್ತಿನ ಮಹಿಳಾ ಸಾಧಕಿಯರಲ್ಲಿಯೇ ಅಗ್ರಗಣ್ಯಳು. ಹೆಣ್ಣುತನದ ಪರಿಪೂರ್ಣ ಸ್ವರೂಪವನ್ನು ಉಜ್ವಲವಾಗಿ ತೋರಿದ ಮಹಾಶಕ್ತಿ. ಈ ಜಗತ್ತೆಂಬ ಕದಲಿಯಲ್ಲಿ ಅದೊಂದು ಪರಿಮಳಿತ ಕರ್ಪುರದ ಪರಂಜ್ಯೋತಿ. ಅದಕ್ಕೆ ಸಂಕೇತವೋ ಎಂಬಂತೆ ಅವಳ ಜೀವನದ ಘಟನೆಗಳು ಬೆಳೆಯುತ್ತವೆ. ಅವಳ ವೈರಾಗ್ಯದ ಪ್ರಭೆ ಹೊಳೆಯುತ್ತದೆ. ಕೊನೆಯಲ್ಲಿ ಆಕೆ ಉರಿಯುಂಡ ಕರ್ಪೂರದಂತೆ ತನ್ನ ಭೌತ ದೇಹವನ್ನು ಮೀರಿ ಬಯಲಾಗುವುದು ಶ್ರೀಶೈಲದ ಕದಳಿ ವನದಲ್ಲಿ ಎಂಬುದು ಗಮನಾರ್ಹ".

"ಮಹಾದೇವಿಯಕ್ಕನ ಜೀವನ ಹೆಣ್ಣಿನ ಸ್ವಾತಂತ್ರ ಸಾಧನೆಯ ಪರಮಾರ್ಥ ಸಾಧನೆಯ ಮಹಾಪ್ರಕರಣ" ಎಂದು ಡಾ. ಬಿ.ಎನ್. ಸುಮಿತ್ರಾಬಾಯಿ ಹೇಳುತ್ತಾರೆ. 'ಎಳೆತನದಲ್ಲಿ ತಂದೆತಾಯಿಯಂದಿರು, ಯೌವನದಲ್ಲಿ ಕೈಹಿಡಿದ ಗಂಡ, ಮುಪ್ಪಿನಲ್ಲಿ ಮಕ್ಕಳ ಸಂರಕ್ಷಣೆಯಲ್ಲಿ ಇರಬೇಕಾದ ಹೆಣ್ಣು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ, ಎಂಬ ಮನುಧರ್ಮ ಸೂತ್ರವು ನಿಯಂತ್ರಿಸಿದ ಸಾಂಸಾರಿಕ ಚೌಕಟ್ಟನ್ನು ದಾಟಿ ಹೆಣ್ಣಿಗೆ ಇದರಿಂದಾಚೆಯೂ ಬೇರೊಂದು ಅಸ್ತಿತ್ವವೂ, ವ್ಯಕ್ತಿತ್ವವೂ ಉಂಟು ಎಂಬುದನ್ನು ತನ್ನ ವೈಚಾರಿಕ ಹಾಗೂ ದಿಟ್ಟತನದ ನಡವಳಿಕೆಯ ಮೂಲಕ ಸಾಧಿಸಿ, ತೋರಿಸಿದ ಅಕ್ಕಮಹಾದೇವಿ ಹನ್ನೆರಡನೆಯ ಶತಮಾನದ ಶರಣ ಚಳವಳಿಯ ನಡುವೆ ವಿಶಿಷ್ಟವೂ, ಭಿನ್ನವೂ ಆದ ನಿಲುವಿನಿಂದ ಹೆಣ್ತನದ ಘನತೆ ಗೌರವಗಳ ಸಂಕೇತವಾಗಿದ್ದಾಳೆ" ಎಂಬ ಡಾ.ಜಿ.ಎಸ್.ಶಿವರುದ್ರಪ್ಪನವರ ಅಭಿಪ್ರಾಯ ಸರ್ವಥಾ ಸಮರ್ಥನೀಯವಾಗಿದೆ.

ಹರಿಹರನಿಂದ ಹಿಡಿದು ಇವತ್ತಿನವರೆಗೂ ಮಹಾದೇವಿಯಕ್ಕನ ಬದುಕು ನೂರಾರು ಜನ ಕವಿ ವಿಮರ್ಶಕ, ತತ್ವಜಿಜ್ಞಾಸು, ಸಾಹಿತಿ, ಚಿಂತಕರು ಹಾಗೂ ಸಂಶೋಧಕರಿಗೆ ವಿಚಾರವಾದದತ್ತ ಪ್ರೇರಣೆ ನೀಡುವ ಸ್ಫೂರ್ತಿಯ ಗಣಿಯಾಗಿದೆ. ಇದು ಆಕೆಯ ವ್ಯಕ್ತಿತ್ವದ ಘನತೆಗೆ ಹಿಡಿದ ಕೈಗನ್ನಡಿ.

ಜಗತ್ತಿನ ಮಹಾಸಾಧಕರಾದ ರಾಬಿಯಾ, ಸಂತ ಥೆರೇಸಾ, ಕಾರಿಕಾಲಮ್ಮೆ, ಅಂಡಾಳ್, ಮೀರಾಬಾಯಿ, ಲಲ್ಲೇಶ್ವರಿ, ಜನಾಬಾಯಿ ಮುಂತಾದ ಭಕ್ತೆಯರ ಜೀವನ ಸಾಧನೆಗಳಿಗೆ ಅಕ್ಕಮಹಾದೇವಿಯ ಬದುಕನ್ನು ಹೋಲಿಸಿ, ಅಧ್ಯಯನ ನಡೆಸಬೇಕಾಗಿದೆ. ಈ ಎಲ್ಲಾ ಅಧ್ಯಯನಗಳಲ್ಲೂ ಅಕ್ಕಮಹಾದೇವಿಗೆ ಹಿರಿದಾದ ಸ್ಥಾನವಿದೆ. ಆಕೆಯ ವೈರಾಗ್ಯ, ವೈಚಾರಿಕತೆಗಳೇ ಆಕೆಗೆ ಉನ್ನತ ಸ್ಥಾನ ದೊರಕಿಸಿಕೊಟ್ಟಿದೆ. ಬದುಕಿನ ಎಲ್ಲಾ ಮಾನವೀಯ ಸಂಬಂಧಗಳ ಅರ್ಥಪೂರ್ಣತೆ ಬಯಸುವವರಿಗೆ ಆ ಅಕ್ಕನ ದಿಟ್ಟತನ, ಅನುಭವಕ್ಕೆ ಆಕೆ ತನ್ನನ್ನು ಒಡ್ಡಿಕೊಂಡ ಧೀರತೆ, ಅಭಿವ್ಯಕ್ತಿಯಲ್ಲಿ ಪ್ರಾಮಾಣಿಕತೆ ಹಾಗೂ ಆತ್ಮೋದ್ಧಾರ ಸಂಗತಿ ಮೆಚ್ಚುಗೆಯಾಗುತ್ತದೆ.

ಡಾ. ಪಿ.ವಿ.ನಾರಾಯಣ್‌ರವರು ಅಕ್ಕನ ಸಾಧನೆಯನ್ನು ಆಧುನಿಕತೆಯ ಬೆಳಕಿನಲ್ಲಿ ಕಂಡಿರಿಸಿದ್ದಾರೆ-- "ಮಹಾದೇವಿಯಕ್ಕನು ಎಲ್ಲಾ ಕಾಲದ ಸ್ತ್ರೀಯರ ಸ್ಥೈರ್ಯದ ಸಂಕೇತವಾಗಿದ್ದಾಳೆ. ಸ್ತ್ರೀಗಳಿಸಿದ ಸಾಧನೆಯ ಪ್ರತೀಕವಾಗಿದ್ದಾಳೆ. ಸ್ತ್ರೀ ಸಂಕಲ್ಪ ಶಕ್ತಿಯ ಸಾಕಾರಳಾಗಿದ್ದಾಳೆ. ಆಕೆಯ ಕೆಚ್ಚು ಒಂದು ಬಗೆಯಲ್ಲಿ ಎಲ್ಲಾ ಶರಣರ ನೈತಿಕ ಸ್ಥೈರ್ಯವನ್ನು ಪ್ರತಿನಿಧಿಸುತ್ತದೆ."

ಇಷ್ಟಾದರೂ ಸ್ತ್ರೀವಾದಿ ನೆಲೆಯನ್ನು ಮೀರಿದ ದಿಟ್ಟೆಂಬುದು ಡಾ. ಗುರುಲಿಂಗ ಕಾಪಸೆಯವರ ಅಭಿಪ್ರಾಯ- "ಮಹಾದೇವಿಯಕ್ಕ ಸ್ತ್ರೀಯಾಗಿ ಸ್ತ್ರೀ ತತ್ವವನ್ನು ಮೀರಿ ನಿಂತಿದ್ದು, ಒಂದು ವಿಶೇಷವೇ ಸರಿ."

ಹನ್ನೆರಡನೆಯ ಶತಮಾನದ ಶಿವಶರಣರ ಆಂದೋಲನ, ಅಂದಿನ ಸಮಾಜದ ಚಿಂತನೆ ವಿಶೇಷವಾಗಿ ಸ್ತ್ರೀಯರು ಎದುರಿಸುತ್ತಿದ್ದ ಹತ್ತು-ಹಲವು ಸಮಸ್ಯೆಗಳ ಬಗ್ಗೆ ಚಿಂತಿಸಿರುವುದು ಇಡೀ ಚಳವಳಿಯ ಜೀವಂತಿಕೆಗೆ ಸಾಕ್ಷ್ಯ ನೀಡುತ್ತದೆ. ತಮ್ಮ 'ಕನ್ನಡ ಸಾಹಿತ್ಯ ಚರಿತ್ರೆ' ಕೃತಿಯಲ್ಲಿ ಡಾ. ರಂ.ಶ್ರೀ. ಮುಗಳಿಯವರು ಅಕ್ಕಮಹಾದೇವಿಯ ಸಾಹಿತ್ಯಕ ಹಾಗೂ ಸಾಮಾಜಿಕ ಕೊಡುಗೆಯನ್ನು ವಿಶೇಷವಾಗಿ ಗುರುತಿಸಿದ್ದಾರೆ-"ಮಹಾದೇವಿಯಕ್ಕನು ವ್ಯಕ್ತಿ ವೈಶಿಷ್ಟ್ಯದಿಂದಲೂ ವಚನ ಮಹಿಮೆಯಿಂದಲೂ ಮೇಲಾದ ಶಿವಶರಣೆ. ನಮಗೆ ತಿಳಿದ ಮಟ್ಟಿಗೆ ಕನ್ನಡ ಸಾಹಿತ್ಯದಲ್ಲಿ ಅವಳೇ ಮೊದಲನೆಯ ಕವಯಿತ್ರಿ. ಕಂತಿ ದಂತಕತೆಯ ನಿರ್ಮಿತಿಯಲ್ಲವಾದರೂ ಅವಳದು ಚತುರ ಕವಿತೆ. ಅನುಭವಜನ್ಯವಾದ ಹೃದಯಗೀತವಲ್ಲ. ಅಧ್ಯಾತ್ಮ ಮತ್ತು ಗದ್ಯ ಕವಿತ್ವ ಇವುಗಳ ಸಂಮಿಲನಕ್ಕಾದರೂ ಅಕ್ಕಮಹಾದೇವಿ ಮೊದಲಗಿತ್ತಿ. ಅವಳ ಚರಿತ್ರೆ, ಕೃತಿಗಳಿಂದ ಆಧ್ಯಾತ್ಮಿಕ ಸಾಹಸ ಮತ್ತು ಸಿದ್ಧಿಯ ಅದ್ಭುತ ರಮ್ಯತೆ ಕಟ್ಟುತ್ತದೆ. ಸಾಂಪ್ರದಾಯಿಕ ಸಮಾಜದ ಸಂಕೋಲೆಗಳನ್ನು ಮುರಿದೊಗೆದು, ಲಗ್ನಸಂಸ್ಥೆಯನ್ನು ಅಲ್ಲಗಳೆದು, ಚನ್ನಮಲ್ಲಿಕಾರ್ಜುನನೆಂಬ

ಲೋಕಪತಿಯನ್ನು ಸತಿಯಾಗಿ ವರಿಸಿ, ಅವಳು ಮಾಡಿದ ಉಗ್ರಸಾಧನೆ, ಪಡೆದ ಸಿದ್ಧಿ, ಆಶ್ಚರ್ಯಕರವಾದವು. ಅಷ್ಟೇ ಅಲ್ಲ, ಅವಳ ಪ್ರಸಿದ್ಧವಾದ ವಚನಗಳು ಶಕ್ತಶಾಲಿಯಾದ ಚಿಕ್ಕಚಿಕ್ಕ ಭಾವಗೀತೆಗಳಾಗಿದ್ದು, ಚಿರಂತನ ಸ್ಫೂರ್ತಿಯ ಚಿಲುಮೆಯಾಗಿದೆ."

ಮತ್ತೊಬ್ಬ ಪ್ರಮುಖ ಸಾಹಿತ್ಯ ಚರಿತ್ರೆಕಾರರಾದ ಡಾ. ತ.ಸು. ಶಾಮರಾಯರ ಪ್ರಕಾರ "ಬಸವಣ್ಣನವರ ವಚನಗಳಂತೆ ಅಕ್ಕನ ವಚನಗಳಲ್ಲಿಯೂ ಭಗವಂತನ ಸಾಕ್ಷಾತ್ಕಾರಕ್ಕಾಗಿ ಸಾಧಕನಲ್ಲಿ ಕಾಣಬಹುದಾದ ಆಂತರಿಕ ಹೋರಾಟ, ಆತ್ಮರೋಧನಗಳು ಸುಂದರವಾರ ಭಾವಗೀತೆಯ ಮಾಧುರ್ಯದಿಂದ ತುಂಬಿ ಅಭಿವ್ಯಕ್ತಗೊಂಡಿದೆ."

ಮಕ್ಕಳಿದ್ದರೆ ಮಹಾದೇವಿಯಂತಿರಬೇಕು!

ಸಹ್ಯಾದ್ರಿ ಶ್ರೇಣಿಯ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆಯ ಸಮೀಪದ ಉಡುತಡಿ ಅಕ್ಕಮಹಾದೇವಿ ಜನ್ಮಸ್ಥಳ. ನಿಜಾಂ ರಾಜ್ಯದ ಹೈದರಾಬಾದ್-ಕರ್ನಾಟಕದ ಕಲ್ಯಾಣದ ಸಮೀಪದಲ್ಲಿ ಉಡುತಡಿಯೆಂಬ ಸ್ಥಳವಿದೆ ಎಂಬ ಅಭಿಪ್ರಾಯವನ್ನು ಕೆಲವು ವಿದ್ವಾಂಸರು ಹೇಳುತ್ತಾರೆಂದು 'ವಚನಧರ್ಮಸಾರ' ಗ್ರಂಥ ರಚಿಸಿರುವ ಎಂ.ಆರ್. ಶ್ರೀನಿವಾಸಮೂರ್ತಿ ಅಭಿಪ್ರಾಯಪಡುತ್ತಾರೆ.

ಉಡುತಡಿಯ ನಿರ್ಮಲಸೆಟ್ಟಿ ಮತ್ತು ಸುಮತಿ ದಂಪತಿಗಳಿಗೆ ಜನಿಸಿದ ಪುತ್ರಿ ಮಹಾದೇವಿ. ಈ ದಂಪತಿಗಳು ಸದ್ಗುಣಿಗಳು, ಜ್ಞಾನಸಂಪನ್ನರು, ದಾನಶೀಲರು ಹಾಗೂ ಶಿವಭಕ್ತರು. ಪಾರ್ವತಿಯ ವರಪ್ರಸಾದದಿಂದ ಜನಿಸಿದ ಪುಣ್ಯ ಕೂಸು ಮಹಾದೇವಿ. ಆಕೆಯ ಗುರುಗಳು ಮರುಳಸಿದ್ದೇಶ್ವರರು. ಬಾಲ್ಯದಲ್ಲೇ ಮಹಾದೇವಿ ಪಾದರಸದಂತೆ ಚುರುಕು. ಸ್ವಲ್ಪ ದಿನಗಳಲ್ಲೇ ಧಾರ್ಮಿಕ ಗ್ರಂಥಗಳನ್ನು ಓದಿ ಅರ್ಥ ಮಾಡಿಕೊಳ್ಳುವ ಪ್ರಬುದ್ಧತೆ ಪಡೆದುಕೊಂಡಳು. ಸ್ವತಂತ್ರವಾಗಿ ವಚನ ರಚನೆಗೆ ಕೈಹಾಕಿದಳು. ಬಾಲ್ಯದಲ್ಲೇ ಸದಾಕಾಲ ನನ್ನ ಗಂಡ ಚನ್ನಮಲ್ಲಿಕಾರ್ಜುನನೆಂದು ಹಂಬಲಿಸುತ್ತಿದ್ದಳು. ದೈವ ಸಾಕ್ಷಾತ್ಕಾರ ಪಡೆಯಲು ಜನಿಸಿದ ದಿವ್ಯಚೇತನ ಇದೆಂದು ಅವಳ ಗುರುಗಳು ಹೇಳುತ್ತಿದ್ದರು. ಅವಳ ಶ್ರದ್ಧಾಭಕ್ತಿ ನೋಡಿದ ಜನ 'ಮಕ್ಕಳಿದ್ದರೆ ಮಹಾದೇವಿಯಂತಿರಬೇಕು' ಎನ್ನುತ್ತಿದ್ದರು. ಯೌವನದಲ್ಲಿ ಮಹಾದೇವಿ ಸಹಜ ಸೌಂದರ್ಯ ಹಾಗೂ ದೈವೀ ಕಳೆಯಿಂದ ಇಡೀ ಪರಿಸರವನ್ನೇ ಸಮ್ಮೋಹನಗೊಳಿಸಿದ್ದಳು.

ಮೂರು ಷರತ್ತುಗಳು

ಒಮ್ಮೆ ಊರಿನ ಅರಸ ಕೌಶಿಕ ಸಂಚಾರ ಮುಗಿಸಿಕೊಂಡು ಅರಮನೆಯತ್ತ ಹಿಂದಿರುಗುತ್ತಿದ್ದಾಗ, ಆಕಸ್ಮಿಕವಾಗಿ ಮಹಾದೇವಿಯನ್ನು ಕಂಡು ಅವಳಿಗೆ ಮನಸೋತು ಅವಳನ್ನು ವಿವಾಹವಾಗಲು ತನ್ನ ದೂತ ವಸಂತಕನನ್ನು ಮಹಾದೇವಿಯವರ ತಂದೆತಾಯಿಗಳ ಬಳಿ ಕಳುಹಿಸಿದ. ರಾಜಾಜ್ಞೆಗೆ ಎಲ್ಲರೂ ಹೆದರಿದರು. ಮಹಾದೇವಿಯೇ ಧೈರ್ಯ ಮಾಡಿ ರಾಜನನ್ನು ಮದುವೆಯಾಗಲು ಮೂರು ಷರತ್ತುಗಳನ್ನು ವಿಧಿಸಿದಳು. ಮೊದಲನೆಯದು, 'ನನ್ನ ಮನಸ್ಸಿಗೆ ಇಷ್ಟಬಂದ ಹೊತ್ತು ಶಿವಪೂಜೆ-ಶಿವಧ್ಯಾನದಲ್ಲಿ ನಿರತಳಾಗಿರುತ್ತೇನೆ.' ಎರಡನೆಯದು, 'ಮನಸ್ಸು ಬಯಸಿದಷ್ಟು ಹೊತ್ತು ಶಿವಶರಣ-ಶರಣೆಯರ ಶಿವಪುರಾಣ ಹಾಗೂ ಶಿವತತ್ವಗಳನ್ನು ಕೇಳುತ್ತಾ ಇರುತ್ತೇನೆ'. ಮೂರನೆಯದು, 'ಮನವೊಪ್ಪಿದಂತೆ ಗುರು, ಲಿಂಗಪೂಜೆಯಲ್ಲಿ ತಲ್ಲೀನಳಾಗಿರುತ್ತೇನೆ. ಅವುಗಳಿಗೆ ವಿಘ್ನವುಂಟಾದರೆ ತಪ್ಪೆಂದು ಭಾವಿಸುತ್ತೇನೆ'. ಇಂತಹ ಮೂರು ತಪ್ಪುಗಳನ್ನು ಅರಸ ಮಾಡಿದರೆ ಅವನನ್ನು ತ್ಯಜಿಸಿ, ನನ್ನ ಇಷ್ಟಬಂದಂತೆ ಇರುತ್ತೇನೆ. ಇದನ್ನು ರಾಜ ಒಪ್ಪಬೇಕು. ಒಮ್ಮೆ ಅರಮನೆಯ ಭೋಗ ಜೀವನ ಕಂಡವರು ಅದನ್ನು ಎಲ್ಲಿ ಬಿಡುತ್ತಾರೆ ಎಂಬ ಭ್ರಮೆ ಕೌಶಿಕ ಅರಸನದು. ಮಹಾದೇವಿಯ ಎಲ್ಲಾ ಷರತ್ತುಗಳಿಗೂ ಆತ ಒಪ್ಪಿದ.

ಆತ್ಮಸಂಗಾತ ಚೆನ್ನಮಲ್ಲಿಕಾರ್ಜುನ

ಕೇವಲ ಕೆಲವೇ ದಿನಗಳಲ್ಲಿ ರಾಜ ಕೌಶಿಕ ಮಹಾದೇವಿಗೆ ಕೊಟ್ಟ ವಚನಗಳಿಗೆ ಭಂಗ ತಂದನು. ಇದನ್ನೇ ನೆಪಮಾಡಿಕೊಂಡ ಮಹಾದೇವಿ ಮದುವೆಯ ಮುನ್ನ ಆತ ಕೊಟ್ಟಿದ್ದ ಅಲಂಕಾರ ಸಾಮಗ್ರಿ, ಒಡವೆ, ವಸ್ತ್ರಗಳನ್ನು ಕೌಶಿಕನಿಗೆ ಒಪ್ಪಿಸಿ, ತನ್ನ ಕೇಶರಾಶಿಯಿಂದ ಮೈಮುಚ್ಚಿಕೊಂಡು ಅರಮನೆ ತೊರೆದಳು.

ಆಗ ಬಂಧುಮಿತ್ರರು ಹೀಗೆ ಅರಮನೆ ತೊರೆದು ಹೋದರೆ ನಿನಗೆ ಯಾರು ರಕ್ಷಣೆ ಕೊಡುತ್ತಾರೆ, ದುಡುಕಬೇಡವೆಂದು ಪರಿಪರಿಯಾಗಿ ತಿಳಿಹೇಳಿದರು. ಆಗ ಆಕೆ ಅವರಿಗೆ ಕೊಟ್ಟ ಉತ್ತರ ಹೀಗಿದೆ:

ಹಸಿವಾದೊಡೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆಹಳ್ಳ ಬಾವಿಗಳುಂಟು, ಶಯನಕ್ಕೆ
ಹಾಳುದೇಗುಲಗಳುಂಟು, ಚೆನ್ನಮಲ್ಲಿಕಾರ್ಜುನಯ್ಯ
ಆತ್ಮಸಂಗಾತಕ್ಕೆ ನೀನೆನಗುಂಟು !

ಪುನಃ ಆ ಚೆನ್ನಮಲ್ಲಿಕಾರ್ಜುನನು ನನ್ನ ಕೈಬಿಟ್ಟರೆ ಎಂಬ ಸಂಶಯ ಬಂದಾಗ ಅದಕ್ಕೂ ಅವಳು ಉತ್ತರ ಕೊಟ್ಟಿದ್ದಾಳೆ:

ಆರು ಇಲ್ಲದವಳೆಂದು ಆಳಿಗೊಳಲು ಬೇಡ ಕಂಡಯ್ಯ ಏನು
ಮಾಡಿದರೆಯೋ ನಾನಂಜುವಲ್ಲ, ತರಗೆಲೆ ಮೆಲ್ಲಿದು
ನಾನಿಹೆನು,
ಸುರುಗಿಯವರ ಮೇಲೋರಗಿ ನಾನಿಹೆನು
ಚೆನ್ನಮಲ್ಲಿಕಾರ್ಜುನಯ್ಯ ಕರಕಡೆ ನೋಡಿದಡೆ
ಒಡಲಪ್ರಾಣವನು ನಿಮಗೊಪ್ಪಿಸಿ ಶುದ್ಧಳಹೆನು

ಮಹಾದೇವಿಯಕ್ಕನಿಗೆ ಚೆನ್ನಮಲ್ಲಿಕಾರ್ಜುನನ ಹಂಬಲ ಎಷ್ಟೆಂದರೆ– 'ವನವೆಲ್ಲಾ ನೀವೆ, ವನದೊಳಗಣ ದೇವತರುವೆಲ್ಲಾ ನೀವೆ, ತರುವಿನೊಳಗಾಡುವ ಖಗಮೃಗಗಳೆಲ್ಲಾ ನೀವೆ, ಚೆನ್ನಮಲ್ಲಿಕಾರ್ಜುನ ಸರ್ವಭರಿತ'. ಪ್ರಕೃತಿಯನ್ನು ತನಗೆ ಚೆನ್ನಮಲ್ಲಿಕಾರ್ಜುನನು ಕಾಣಿಸಿಕೊಡಬೇಕೆಂದು ಬೇಡುವ ಮಹಾದೇವಿಯಕ್ಕನ ವಚನ ಕನ್ನಡದ ಶ್ರೇಷ್ಠ ವಚನಗಳಲ್ಲಿ ಒಂದಾಗಿದೆ. ಇವು ತಮಗೆ ತಾವೇ ಅಧಿಕ ಕಾವ್ಯಾಂಶಗಳಿಂದ ಕಂಗೊಳಿಸುತ್ತದೆ:

ಅಳಿಸಂಕುಳವೇ, ಬೆಳದಿಂಗಳೇ ಕೋಗಿಲೆಯೇ,
ನಿಮ್ಮೆಲ್ಲರನು ಬಂದು ಬೇಡುವೆನು
ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕರೆದು
ತೋರಿರೆ

ಚಿಲಿಪಿಲಿಯೆಂದೋದುವ ಗಿಳಿಗಳಿರಾ! ನೀವು ಕಾಣಿರೆ, ನೀವು ಕಾಣಿರೆ?
ಸರವೆತ್ತಿ ಪಾಡುವ ಕೋಗಿಲೆಗಳಿರಾ! ನೀವು ಕಾಣಿರೆ, ನೀವು ಕಾಣಿರೆ?
ಮೊರೆದು ಬಂದಾಡುವ ತುಂಬಿಗಳಿರಾ! ನೀವು ಕಾಣಿರೆ, ನೀವು ಕಾಣಿರೆ?

ಕೊಳನ ತಡಿಯಾಳಾಡುವ ಅಂಚೆಗಳಿರಾ! ನೀವು ಕಾಣಿರೆ, ನೀವು ಕಾಣಿರೆ?
ಗಿರಿಗಹ್ವರದರದೊಳಾಡುವ ನವಿಲುಗಳಿರಾ! ನೀವು ಕಾಣಿರೆ, ನೀವು ಕಾಣಿರೆ?
ಚೆನ್ನಮಲ್ಲಿಕಾರ್ಜುನನೆಲ್ಲಿರ್ದಿಹನೆಂದು ಬಲ್ಲೊಡನೆ ನೀವು ಹೇಳಿರೆ.

ಹೀಗೆ ಅಂಗಲಾಚುತ್ತಾ, ತೊಳಲಾಡುವ ಮಹಾದೇವಿಯಕ್ಕ ಭಕ್ತಿಯ ಪರಾಕಾಷ್ಠೆಯನ್ನು ತಲುಪುತ್ತಾಳೆ. ಗಿರಿ, ಕೋಗಿಲೆ, ಭೃಂಗ, ಹಂಸ, ನವಿಲುಗಳು ಸಂತೋಷದಿಂದ ಗೀತೆಗಳನ್ನು ಹಾಡುತ್ತಾ, ಕುಣಿಯುತ್ತಾ, ಆಡುತ್ತಾ, ಸಂಭ್ರಮಗೊಳ್ಳುತ್ತಾ ಆ ಶಿವನನ್ನು ಕಾಣುತ್ತಿವೆಯಲ್ಲಾ, ಮಾನವರಾದ ನಮಗೇಕೆ ಆತ ಕಾಣಲೊಲ್ಲನು ಎಂಬುದು ಆಕೆಯ ಪ್ರಶ್ನೆ. ಬಸವಣ್ಣನವರು ಕೂಡಲಸಂಗಮನಲ್ಲಿ ಮೊರೆಯಿಟ್ಟಂತೆ, ಮಹಾದೇವಿಯಕ್ಕ ಚೆನ್ನಮಲ್ಲಿಕಾರ್ಜುನನ ಸಾಕ್ಷಾತ್ಕಾರಕ್ಕೆ ಹಂಬಲಿಸುತ್ತಾಳೆ.

ಮನುಷ್ಯನಿಗೆ ಅಹಂಕಾರ ಅಳಿದು ವಿವಿಧ ಬಗೆಯ ಕಷ್ಟ–ನಷ್ಟಗಳ ನಡುವೆ ನಿಶ್ಚಲವಾಗಿ ಭಗವಂತ ಸ್ಮರಣೆ ಮಾಡಿದಾಗ ಮಾತ್ರ ಚೆನ್ನಮಲ್ಲಿಕಾರ್ಜುನನ ಕೃಪೆ ದೊರೆಯಲು ಸಾಧ್ಯ. ಮಹಾದೇವಿಯಕ್ಕ ಜನಸಾಮಾನ್ಯರ ಆಶಯಕ್ಕೆ ವಿರುದ್ಧವಾಗಿ ತನ್ನೊಡೆಯನನ್ನ ಹೀಗೆ ಹೇಳುತ್ತಾಳೆ:

ಮನೆಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯಾ,
ಬೇಡಿದೊಡೆ ಇಕ್ಕದಂತೆ ಮಾಡಯ್ಯಾ,
ಇಕ್ಕಿದೊಡೆ ನೆಲಕ್ಕೆ ಬೀಳುವಂತೆ ಮಾಡಯ್ಯಾ,
ನೆಲಕ್ಕೆ ಬಿದ್ದೊಡನೆ ನಾನೆತ್ತಿ ಕೊಂಬುದಕ್ಕೆ ಮುನ್ನವೇ
ಶುನಿ ಎತ್ತಿಕೊಂಬಂತೆ ಮಾಡಯ್ಯಾ ಚೆನ್ನಮಲ್ಲಿಕಾರ್ಜುನಯ್ಯಾ

ಮಹಾದೇವಿಯಕ್ಕನದು ಬಹುದೊಡ್ಡ ಛಲ. ಅದೊಂದು ದಿಟ್ಟ ವ್ಯಕ್ತಿತ್ವ. ಆಕೆಯ ಕಠೋರ ಸಾಧನೆಗೆ ಸಾಕ್ಷ್ಯ ಈ ವಚನ:

ಮುಗಿಲು ಹರಿದು ಬಿದ್ದರೆ ಎನಗೆ ಮಜ್ಜನಕ್ಕರೆದರೆಂಬೆನು
ಗಿರಿ ಬಿದ್ದರೆ ಪುಷ್ಪ ಚೆಲ್ಲಿದರೆಂಬೆನು
ಶಿರ ಹರಿದು ಬಿದ್ದರೆ ಪ್ರಾಣ ನಿಮಗರ್ಪಿತನೆಂಬೆನು

ಅಕ್ಕಮಹಾದೇವಿಯ ವಚನಗಳಲ್ಲಿ ಅನುಭಾವದ ಸೊಗಸನ್ನು ಕಾಣಬಹುದು. ಕೇವಲ ವಚನ ರಚನೆ ಆಕೆಯ ಮುಖ್ಯ ಉದ್ದೇಶವೂ ಆಗಿರಲಿಲ್ಲ. ಚೆನ್ನಮಲ್ಲಿಕಾರ್ಜುನನನ್ನು ಕಾಣುವುದೇ ಆಕೆಯ ಮುಖ್ಯ ಗುರಿಯಾಗಿತ್ತು. ಮಹಾದೇವಿಯಕ್ಕ ಸತಿಪತಿ ಭಾವದ ಸಾಧನೆಯಲ್ಲಿ ಕೊಟ್ಟ ಕೊನೆಗೆ ಏರಿದ ಎತ್ತರ ಆಶ್ಚರ್ಯ ತರುವಂಥದ್ದು. ಪರಬ್ರಹ್ಮ ವಸ್ತುವಿನಲ್ಲಿ ಪ್ರಾಣ ಐಕ್ಯವಾದ ಅದ್ವೈತ ತತ್ವದ ವಚನ ಹೀಗಿದೆ:

ತನು ನಿಮ್ಮ ರೂಪಾದ ಬಳಿಕ ನಾನಾರಿಗೆ ಮಾಡುವೆ,
ಮನ ನಿಮ್ಮ ರೂಪಾದ ಬಳಿಕ ನಾನಾರ ನೆನೆವೆ,
ಪ್ರಾಣ ನಿಮ್ಮ ರೂಪಾದ ಬಳಿಕ ನಾನಾರನಾರಾಧಿಸುವೆ?
ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ನಾನಾರಬರಿವೆ?
ಚೆನ್ನಮಲ್ಲಿಕಾರ್ಜುನ ನಿಮ್ಮಲ್ಲಿ ನೀವಾಗಿ ನಿಮ್ಮಿಂದ ನಿಮ್ಮ
ಮರೆದೆನಯ್ಯಾ

ಅಕ್ಕಮಹಾದೇವಿ ತಾನು ಬಯಸಿದ ಚೆನ್ನಮಲ್ಲಿಕಾರ್ಜುನ ಗಂಡ ಎಂತಹನೆಂಬುದನ್ನು ವಚನವೊಂದರಲ್ಲೇ ಸ್ಪಷ್ಟಪಡಿಸಿದ್ದಾಳೆ.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆನವ್ವ,
ಎಡೆಯಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗಾನೊಲಿದೆ ಎಲೆ ಅವ್ವ ! ನೀನು ಕೇಳಾ ತಾಯೇ

ಚೆನ್ನಮಲ್ಲಿಕಾರ್ಜುನನ ಪಡೆಯುವುದೇ ಜೀವನದ ಹೆಗ್ಗುರಿಯಾದ ಮಹಾದೇವಿಯಕ್ಕನಿಗೆ ಉಳಿದ ವಿಚಾರಗಳು ಗೌಣ. ಆಕೆಯ ಪ್ರಕಾರ 'ನಮಗೆ ನಮ್ಮ ಚೆನ್ನಮಲ್ಲಿಕಾರ್ಜುನನ ಚಿಂತೆಯಲ್ಲದೆ, ಲೋಕದ ಮಾಡ ನಮಗೇಕಣ್ಣ'.

ನಿತ್ಯಸುಖಿಯಾಗಿರು

ನೀನು ಬೇಗ ಒಲಿದು, ಕೈಹಿಡಿದು ಉದ್ಧರಿಸು. ನೀನೇ ಗತಿಯೆಂದು ನಂಬಿ ಬಂದಿಹಳನ್ನು ಹೊರದೂಡದಿರು ಎಂದು ತವಕಿಸುತ್ತಾ, ಮೊರೆಯಿಡುತ್ತಾ, ಬಳಲುತ್ತಾ, ಕಾಡಿನಲ್ಲಿ ಅಲೆದಾಡಿ ಕೊನೆಗೆ ಹೇಗೋ ಊರೂರು ಸುತ್ತಿ, ಕಲ್ಯಾಣವನ್ನು ತಲುಪಿದಳು, ಮಹಾದೇವಿಯಕ್ಕ. ಕಲ್ಯಾಣದಲ್ಲಿ ವಚನ ಚಳವಳಿ ಹುಟ್ಟಿ ಬೆಳೆದು ಎಷ್ಟೋ ವರ್ಷಗಳ ನಂತರ, ಅಲ್ಲಿಗೆ ಬಂದ ಅಕ್ಕಮಹಾದೇವಿ ಶಿವಶರಣರ ಮಹೋನ್ನತ ವ್ಯಕ್ತಿತ್ವ, ವಿಚಾರ, ಸಾಧನೆ ಹಾಗೂ ತಾತ್ವಿಕ ನಂಬಿಕೆಗಳಿಂದ ಸಾಕಷ್ಟು ಪ್ರೇರಣೆ ಪಡೆದುಕೊಂಡಳು. ಬಾಹ್ಯದ ಅರಿವಿಲ್ಲದೆ, ಚೆನ್ನಮಲ್ಲಿಕಾರ್ಜುನನೇ ಪತಿಯೆಂದು ಪರಿತಪಿಸುತ್ತಿದ್ದ ಮಹಾದೇವಿಯಕ್ಕನನ್ನು ಕಲ್ಯಾಣದ ಶಿವಶರಣ-ಶಿವಶರಣೆಯರು ತದೇಕಾಶ್ಚರ್ಯದಿಂದ ನೋಡತೊಡಗಿದರು. ಶಿವಾನುಭವ ಮಂಟಪದಲ್ಲಿ ಮಹಾದೇವಿಯಕ್ಕ ಅಲ್ಲಮಪ್ರಭುವನ್ನು ಕಂಡಳು. ಅಕ್ಕಮಹಾದೇವಿಯ ಘನತೆಯನ್ನು ಲೋಕಕ್ಕೆ ಸಾರಬೇಕೆಂದು ನಿರ್ಧರಿಸಿದ ಅಲ್ಲಿನ ಶಿವಶರಣರು ವಿವಿಧ ಪ್ರಶ್ನಾವಳಿಗಳಿಂದ ಆಕೆಯನ್ನು ಚುಚ್ಚತೊಡಗಿದರು. ಎಲ್ಲಾ ಪ್ರಶ್ನೆಗಳಿಗೂ ಸಮಾಧಾನ ಚಿತ್ತದಿಂದ ಉತ್ತರಕೊಟ್ಟ ಅಕ್ಕಮಹಾದೇವಿ ಕೊನೆಗೆ ಹೀಗೆಂದಳು:

ಫಲವೊಳಗೆ ಪಕ್ವವಾಗಿಯಲ್ಲದ,
ಹೊರಗಣ ಸಿಪ್ಪೆ ಒಡೆದು.
. . . .
. . . .
ಕಾಡದಿರಣ್ಣಾ, ಚೆನ್ನಮಲ್ಲಿಕಾರ್ಜುನ ದೇವರ ದೇವನ
ಒಳಗಾದವಳಾ

ಮಹಾದೇವಿಯಕ್ಕ ಎಲ್ಲರಿಗಿಂತ ಬಸವಣ್ಣನವರಿಗೆ ಮೆಚ್ಚುಗೆಯಾದಳು. ಚೆನ್ನಮಲ್ಲಿಕಾರ್ಜುನನನ್ನು ಸಾಕಾರವಾಗಿ ಕಾಣಬೇಕೆಂದು ಆಕೆ ಹಂಬಲಿಸುತ್ತಿರುವುದನ್ನು ನೋಡಿ ಬಸವಣ್ಣನವರ ಮನ ಕರಗಿತು. ಚೆನ್ನಬಸವಣ್ಣನಿಗೆ 'ನಾನೇನು ಬಲ್ಲೆ, ನಾನು ಗುರುವಾಗಲೊಲ್ಲೆ' ಎಂದು ಹೇಳಿದ್ದ ಬಸವಣ್ಣನವರು ಮಹಾದೇವಿಯಕ್ಕನ ವಿಷಯದಲ್ಲಿ ಮನಸ್ಸು ಬದಲಾಯಿಸಿ, ಇಷ್ಟಲಿಂಗವನ್ನು ನೀಡಿ, ಆಕೆಗೆ ಗುರುವಾದರು. ಅಲ್ಲೇ ಶರಣರು ಮಹಾದೇವಿಯಕ್ಕನನ್ನು ಚೆನ್ನಮಲ್ಲಿಕಾರ್ಜುನನಿಗೆ ದೀಕ್ಷಾ ವಿವಾಹ ಮಾಡಿಸಿ, 'ನಿತ್ಯಸುಖಿಯಾಗಿರು' ಎಂದು ಆಶೀರ್ವದಿಸಿದರು. ಸ್ವತಃ ಮಹಾಜ್ಞಾನಿ ಅಲ್ಲಮನೇ ಅಕ್ಕಮಹಾದೇವಿಯ ವೈರಾಗ್ಯವನ್ನು ಕುರಿತು ಹೀಗೆ ಹೇಳುತ್ತಾನೆ:

ಅಂಗ ಅಂಗನೆಯ ರೂಪವಲ್ಲದೆ,
ಮನ ವಸ್ತು ಭಾವದಲಿ ಬೆಚ್ಚಂತಿಪ್ಪುದು
ಬಂದ ಕಥನದಲಿ ಬರಿದು ಹಿಂಗಿದೆಯಲ್ಲಾ ಅಕ್ಕ,
ಗುಹೇಶ್ವರ ಲಿಂಗದಲಿ ಉಭಯನಾಮಾವಳಿದೆ ಎನ್ನಕ್ಕಾ

ಹಿರಿಯತನ

ಶಿವಾನುಭವ ಮಂಟಪದ ಪರೀಕ್ಷೆಯಿಂದ ಯಶಸ್ವಿಯಾಗಿ ಹೊರಬಂದ ಮಹಾದೇವಿಯನ್ನು ಅಲ್ಲಿದ್ದ ಶರಣರೆಲ್ಲಾ 'ಅಕ್ಕಾ' ಎಂದೇ ಒಕ್ಕೊರಲಿನಿಂದ ಕರೆದು. ಅಂದಿನಿಂದ ಮಹಾದೇವಿ ಅಕ್ಕಮಹಾದೇವಿ ಎಂದೇ ಖ್ಯಾತಳಾಗಿದ್ದಾಳೆ. 'ಅಕ್ಕಾ' ಎಂದರೆ ಹಿರಿಯಳು ಎಂದರ್ಥ. ಚೆನ್ನಬಸವಣ್ಣ ಮಹಾದೇವಿಗೆ ಹಿರಿತನ ಪಟ್ಟ ಕಟ್ಟಿದವರಲ್ಲಿ ಮೊದಲಿಗ:

ಅನವರಿತು ಘನವ ಬೆರೆಸಿ ಹಿರಿದು ಕಿರಿದೆಂಬ
ಭೇದವ ಮರೆದು ಕೂಡಲಸಂಗಯ್ಯನಲ್ಲಿ ಬೆರೆಸಿ ಬೇರಿಲ್ಲದ
ಹಿರಿತನ ನಮ್ಮ ಅಕ್ಕ ಮಹಾದೇವಿಯಕ್ಕಂಗಾಯಿತು

"ಕಾಲದ ಪಿರಿಯತನದಲ್ಲಿ ಕಾಮವ ಸುಟ್ಟ ಮಹಾದೇವಿಯಕ್ಕನ ಹಿರಿತನ ನೋಡಾ" ಎನ್ನುತ್ತಾರೆ ಪ್ರಭುದೇವರು. ಅಕ್ಕನನ್ನು ಭಕ್ತಿಭಂಡಾರಿ ಬಸವಣ್ಣನವರು 'ಮುಕ್ತಾಂಗನೆ, ಸತ್ಯಸದನ ಸ್ವಾನುಭಾವದ ಸಾಗರ, ಶಿವಾನುಭವದ ಸಂಪನ್ನೆ, ಎನ್ನ ಹೆತ್ತತಾಯಿ' ಎಂದೆಲ್ಲಾ ಕೊಂಡಾಡಿದ್ದಾರೆ. ಮಹಾಯೋಗಿ ಸಿದ್ದರಾಮ ಅಕ್ಕಮಹಾದೇವಿಯ ಮೂಲಕ ಇಡೀ ಸ್ತ್ರೀ ಕುಲವನ್ನು ಗೌರವಿಸುತ್ತಾನೆ. 'ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ'.

ಅಕ್ಕಮಹಾದೇವಿಯ ಪ್ರಗಾಢ ಭಕ್ತಿಭಾವದಲ್ಲಿ ಮುಗ್ಧತೆ ಇದೆ, ಕಂಪನವಿದೆ, ಸೌರಭವಿದೆ, ಭಾವಾವೇಶವಿದೆ, ತೀವ್ರ ಅನುಭೂತಿ ಇದೆ. ಇದು ಆ ಕಾಲದ ಎಲ್ಲಾ ಶರಣರ ಮೇಲೆ ಪ್ರಭಾವ ಬೀರಿದ ವಿಶಿಷ್ಟ ಅಂಶವಾಗಿತ್ತು. ಇದರ ಜೊತೆ ಕಲ್ಯಾಣದ ಶರಣರ ವ್ಯಕ್ತಿತ್ವದ ವೈಶಿಷ್ಟ್ಯಗಳನ್ನು ಮಹಾದೇವಿಯಕ್ಕ ತನ್ನದಾಗಿಸಿಕೊಂಡಳು. ಅದನ್ನು ಈ ವಚನದಲ್ಲಿ ಕಾಣಬಹುದು:

ಬಸವಣ್ಣನ ಭಕ್ತಿ ಚೆನ್ನಬಸವಣ್ಣನ
ಜ್ಞಾನ, ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ
ಜಂಗಮಸ್ಥಲ, ಅಜಗಣ್ಣನೈಕ್ಯಸ್ಥಲ, ಸಿದ್ದರಾಮರ
ಸಮಾಧಿಸ್ಥಲ, ಇಂತಿವರ ಕರುಣಪ್ರಸಾದ ಎನಗಾಯಿತು
ಚೆನ್ನಮಲ್ಲಿಕಾರ್ಜುನಯ್ಯಾ!

ಬಸವಣ್ಣನಿಂದ ಇಷ್ಟಲಿಂಗ ಪಡೆದ ಮೇಲೆ ಅಕ್ಕಮಹಾದೇವಿಗೆ ಆ ಪರಮಾತ್ಮ ಅಂದರೆ ಚೆನ್ನಮಲ್ಲಿಕಾರ್ಜುನ ದೂರದಲ್ಲಿಲ್ಲ ಅಥವಾ ಕೈಲಾಸದಲ್ಲಿ ಕುಳಿತಿಲ್ಲ, ತನ್ನ ಕೈಯಲ್ಲಿದ್ದಾನೆ ಎಂಬ ಭಾವನೆ ಮೂಡಿತು. ಮನಸ್ಸಿಗೆ ಶಾಂತಿ ದೊರೆಯಿತು. 'ಹರನೆ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ' ಎಂಬುದು ಅದು ಈಗ ಸಿದ್ಧಿಸಿದೆಂಬ ತೃಪ್ತಿ ದೊರಕಿತು. 'ನಾನು ನಿನಗೊಲಿದೆ' ಎಂದು ಗಂಡ ಚೆನ್ನಮಲ್ಲಿಕಾರ್ಜುನನೊಡನೆ ಮಧುರ ಸಂಭಾಷಣೆ ನಡೆಸಿದಳು. ಇಂತಹ ಚೆನ್ನಮಲ್ಲಿಕಾರ್ಜುನನನ್ನು ಕಂಡ ಅನುಭವನನ್ನು ವಚನವೊಂದರಲ್ಲಿ ಆಕೆ ಅಭಿವ್ಯಕ್ತಗೊಳಿಸಿದ್ದಾಳೆ:

ಹೊಳೆವ ಕೆಂಜೆಡೆಗಳ ಮಣಿಮಕುಟದ
ಒಪ್ಪುವ ಸುಲಿಪಲ್ಲ ನಗೆಮೊಗದ
ಕಂಗಳ ಕಾಂತಿಯಂ ಈರೇಳು ಭುವನಮಂ ಬೆಳಗುವ
ದಿವ್ಯ ಸ್ವರೂಪನ ಕಂಡೆ ನಾನು,
ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು!

ಲೌಕಿಕ ದೃಷ್ಟಿಯಿಂದ ಮದುವೆಯಾಗಬೇಕೆಂದು ಮಹಾದೇವಿಯಕ್ಕ ಪರಿತಪಿಸಲಿಲ್ಲ. ಆಕೆಯದು ಪಾರಮಾರ್ಥಿಕ ದೃಷ್ಟಿ. 'ಶರಣಸತಿ ಲಿಂಗಪತಿ' ಎಂಬ ಭಾವಕನುಗುಣವಾದ ದಾಂಪತ್ಯ ಬದುಕು ಆಕೆಯದು. ಅಪೂರ್ವಜ್ಞಾನ, ಸೈರಣೆ, ಲೋಕಾನುಭವ ಹಾಗೂ ವಿರಕ್ತಿ ವಿಚಾರಗಳಲ್ಲಿ ಆಕೆ ಅಲ್ಲಮಪ್ರಭುವಿನ ಪ್ರತಿರೂಪ ಎನಿಸಿದ್ದಾಳೆ.

ಶ್ರೀಶೈಲಕ್ಕೆ ಹೊರಟೆ

ಕಲ್ಯಾಣ ತೊರೆದು ಶ್ರೀಶೈಲ ಗಿರಿಗೆ ಹೊರಡಲು ಅಕ್ಕಾ ನಿರ್ಧರಿಸಿದಳು. ಬಸವಣ್ಣಾದಿ ಶಿವಶರಣರನ್ನು ಬಿಟ್ಟು ಹೊರಡುವುದು ಪರಮ ವಿರಕ್ತಳಾದ ಅಕ್ಕಮಹಾದೇವಿಗೂ ಕಷ್ಟವಾಯಿತು. ಭೂಕೈಲಾಸವಾದ ಕಲ್ಯಾಣ ಪಟ್ಟಣವನ್ನು ಬಿಟ್ಟುಹೋಗುವ ಅಕ್ಕನ ನಿರ್ಧಾರಕ್ಕೆ ಶಿವಶರಣರೆಲ್ಲಾ ಮರುಗಿದರು. ಬಸವಣ್ಣ ಮೊದಲಾದವರನ್ನೆಲ್ಲಾ ನೋಡಿ ಅಕ್ಕ ಹೀಗೆಂದಳು:

ಬಸವಣ್ಣ ಎನ್ನ ಭಕ್ತಿ ನಿಮ್ಮ ಧರ್ಮ,
ಎನ್ನ ಜ್ಞಾನವೇ ಪ್ರಭುದೇವರ ಧರ್ಮ,
ಎನ್ನ ಪರಿಣಾಮವೇ ಚೆನ್ನಬಸವಣ್ಣನ ಧರ್ಮ
ಈ ಮೂವರೂ ಒಂದೊಂದು ಕೊಟ್ಟರೆನಗೆ ಮೂರು ಭಾವವಾಯಿತು

ಆಕೆಗೆ ಶ್ರೀಶೈಲ ಪರ್ವತದಲ್ಲಿ ಚೆನ್ನಮಲ್ಲಿಕಾರ್ಜುನನ್ನು ಅರಸಬೇಕೆನಿಸಲಿಲ್ಲ. 'ಚೆನ್ನಮಲ್ಲಿಕಾರ್ಜುನ ಲಿಂಗದಲ್ಲಿ ಘನಲಿಂಗೈಕ್ಯನಾದ ಬಳಿಕ ಏನೂ ಎನ್ನೆ' ಎಂಬ ದೇವದೇವನಲ್ಲಿ ಅವಿನಾಭಾವ ಹುಟ್ಟಿ ಅಲ್ಲಿನ ಕದಳಿವನದಲ್ಲೇ ಬಯಲಾದಳು.

ಬಾಹ್ಯಾಡಂಬರ ತೊರೆ

ಅಕ್ಕಮಹಾದೇವಿ ಉಪದೇಶಾತ್ಮಕ ವಚನಗಳನ್ನು ಹೆಚ್ಚಾಗಿ ಬರೆದಿಲ್ಲ. ಸಮಾಧಾನ ಚಿತ್ತದಿಂದ ಸರ್ವಸಮತಾಭಾವ ಪಡೆದುಕೊಳ್ಳಬೇಕು. ಅರಿಷಡ್ವರ್ಗಕ್ಕೆ ಈಡಾಗಿ ಹುಟ್ಟು ಸಾವುಗಳೆಂಬ ಚಕ್ರದಲ್ಲಿ ಸುತ್ತುತ್ತಿರಬೇಕಾದರೆ, ಸಮಾಧಾನ ಚಿತ್ತದ ಬಗ್ಗೆ ಆಕೆಯ ವಚನವೊಂದು ಹೀಗಿದೆ:

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ,
ಸಮುದ್ರದ ತಡಿಯಲ್ಲಿ ಮನೆಯ ಮಾಡಿ
ನೆರೆತೊರೆಗಳಿಗಂಜಿದಡೆಂತಯ್ಯಾ,

ಶಬ್ದಕ್ಕೆ ನಾಚಿದಡೆಂತಯ್ಯಾ,
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯಾ,
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿನಿಂದನೆಗಳು ಬಂದೊಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು!

"ಬಿಟ್ಟನೆಂದರೆ ಬಿಡದೀ ಮಾಯೆ, ಬಿಡದಿದ್ದರೆ ಬೆಂಬತ್ತಿತು ಮಾಯೆ" ಎಂಬ ದೊಡ್ಡ ಅನುಭಾವದ ನುಡಿಯೊಂದನ್ನು ಆಕೆ ಹೇಳುತ್ತಾಳೆ.

ಅಕ್ಕನ ದೃಷ್ಟಿಯಲ್ಲಿ ಬಾಹ್ಯಾಡಂಬರಗಳು ವ್ಯರ್ಥ. ವೇದಶಾಸ್ತ್ರ ಪುರಾಣಗಳಿಂದ ಏನೂ ಸಾಧಿಸಲಾಗದು. ಭವದಲ್ಲಿದ್ದರೂ ಸನ್ಯಾಸಿಯಾದರೆ ಏನು ಪ್ರಯೋಜನ. ಆತ್ಮಸಾಕ್ಷಿಗನುಗುಣವಾಗಿ ಬದುಕಬೇಕೆಂಬುದು ಆಕೆಯ ನುಡಿ:

ವೇದಶಾಸ್ತ್ರ ಪುರಾಣಾಗಮಂಗಳೆಲ್ಲಾ
ಕೊಟ್ಟಣವ ಕುಟ್ಟುತ್ತಾ ನುಚ್ಚು ತೌಡು
ಕಾಣಿಭೋ . . . . ಇವ ಕುಟ್ಟಿದೇಕೆ ?

ಯೋಗಾಂಗ ತ್ರಿವಿಧಿ

ವಚನಗಳನ್ನು ಹೊರತಾಗಿ ಅಕ್ಕಮಹಾದೇವಿ ತ್ರಿಪದಿಯಲ್ಲಿ 'ಯೋಗಾಂಗ ತ್ರಿವಿಧಿ' ಎಂಬ ಸಣ್ಣ ಕೃತಿಯೊಂದನ್ನು ರಚಿಸಿದ್ದಾಳೆ. ಇದು ಅರವತ್ತೇಳು ಪದ್ಯಗಳನ್ನೊಳಗೊಂಡ ತ್ರಿಪದಿ. ಇದರಲ್ಲಿ ತಾತ್ವಿಕ ವಿಷಯದ ಜೊತೆ ಅವಳ ವೈಯಕ್ತಿಕವಾದ ಅನೇಕ ವಿಚಾರಗಳು ಪ್ರಸ್ತಾಪಿಸಿದೆ. ತಾತ್ವಿಕ ವಿಷಯಗಳನ್ನು ಕೆಲವು ಸಲ ಸರಳವಾಗಿ ಕೆಲವೊಮ್ಮೆ ಬೆಡಗಿನ ವಚನದ ರೂಪದಲ್ಲಿ ಹೇಳುತ್ತಾಳೆ. ಉದಾಹರಣೆಗೆ 'ಕೋಟಿ ರವಿಶಶಿಗಳ್ಗೆ ಮೀಟಾದ ಪ್ರಭೆ ಬಂದು ನಾಟಿತು ಎನ್ನ ಮನದೊಳಗದರಿಂದ ದಾಟಿದೆನೊ ಭವಗಳ ಕೊಳಗಳ'. ಯೋಗಾಂಗ ತ್ರಿವಿಧಿ ಚಿಕ್ಕದಾದರೂ ಅಕನ ಅನುಭವ ಸಂಪತ್ತಿನ ಸಹಜ ರೂಪಕ್ಕೆ ಉದಾಹರಣೆಯಾಗಿರುವ ಚೆಲುವಾದ ಕೃತಿ. ಅವಳ ತತ್ವ ಸಂಗ್ರಹಶಕ್ತಿ, ಗುರುಭಕ್ತಿ ಹಾಗೂ ಪ್ರೌಢಿಮೆ ಈ ಕೃತಿಯಲ್ಲಿ ಎದ್ದು ಕಾಣುತ್ತದೆ. ತ್ರಿಪದಿಯ ಛಂದಸ್ಸು ಸಲೀಲವಾಗಿ ಈ ಕೃತಿಯಲ್ಲಿ ಹರಿದಾಡಿದೆ.

ಹಿಮಾಲಯದೆತ್ತರ

ಅಕ್ಕಮಹಾದೇವಿಯದು ಪರ್ವತ ಸದೃಶ್ಯವಾದ ವ್ಯಕ್ತಿತ್ವ, ಆಕೆಯ ಸಾಧನೆ ಹತ್ತು-ಹಲವು. ಕನ್ನಡ ನಾಡಿನ ಅನೇಕ ಬರಹಗಾರರಿಗೆ ಹಾಗೂ ಸಾಧಕರಿಗೆ ಆಕೆ ಸದಾ ಮಾರ್ಗದರ್ಶಕಳಾಗಿದ್ದಾಳೆ. ಅವಳ ವ್ಯಕ್ತಿತ್ವವನ್ನು ಕುರಿತಂತೆ ಚೆನ್ನಬಸವಣ್ಣ ಹೇಳಿದ ಮಾತೊಂದು ಸದಾಕಾಲ ಸ್ಮರಣಾರ್ಹವಾಗಿದೆ. ಅದು ವಚನಕಾರರಲ್ಲಿ ಆಕೆಯ ಶ್ರೇಷ್ಠತೆಯನ್ನೂ ಕೂಡ ಹಿಡಿದಿಟ್ಟಿದೆ.

ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ,
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ,
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ,
ಅಜಗಣ್ಣನ ಐದು ವಚನಕ್ಕೆ ಕೂಡಲಚೆನ್ನಸಂಗಯ್ಯನಲಿ
ಮಹಾದೇವಿಯಕ್ಕನ ಒಂದು ವಚನ ನಿರ್ವಚನ ಕಾಣಾ
ಸಿದ್ಧರಾಮಯ್ಯ!

*

ವಚನಗಾರ್ತಿ ಅಕ್ಕನಾಗಮ್ಮ

ಡಾ. ಶಾಲಿನಿ ರಘುನಾಥ

ಅಕ್ಕನಾಗಮ್ಮ, ಶರಣ ಚಳವಳಿಯ ಏಳು-ಬೀಳುಗಳನ್ನು ಕಣ್ಣಾರೆ ಕಂಡವಳು; ಕಲ್ಯಾಣದ ಕ್ರಾಂತಿಯ ಸಂದರ್ಭದಲ್ಲಿ ಎದೆಗುಂದದೇ ಶರಣರೊಂದಿಗೆ ಸೇರಿ ಹೋರಾಡಿ, ಕೊನೆ ಉಸಿರಿರುವವರೆಗೂ ಧರ್ಮ ಉಳಿಸಲು ಪ್ರಯತ್ನಿಸಿದವಳು. ಅಕ್ಕನಾಗಮ್ಮ ಕ್ರಾಂತಿಯೋಗಿ ಬಸವಣ್ಣನ ಸಹೋದರಿ; ವೀರಶೈವ ಸಿದ್ಧಾಂತ ಪ್ರತಿಪಾದಕ ಚೆನ್ನಬಸವಣ್ಣ ತಾಯಿ, 'ನಾಗಲಾಂಬಿಕೆ', ನಾಗವ್ವ', 'ನಾಗಮ್ಮ', 'ನಾಗಲದೇವಿ', 'ನಾಗಾಯಿ', 'ನಾಗಾಂಬೆ' ಮುಂತಾದ ಹೆಸರುಗಳಿಂದ ಅವಳು ವೀರಶೈವ ಕಾವ್ಯಗಳಲ್ಲಿ, ಶರಣರ ವಚನಗಳಲ್ಲಿ ಉಕ್ತವಾಗಿದ್ದಾಳೆ.

ಹರಿಹರನ ಬಸವರಾಜದೇವ ರಗಳೆಯಲ್ಲಿ ಬಸವಣ್ಣನವರ ಜೀವನದಲ್ಲಿ ಪ್ರಮುಖ ಪಾತ್ರವಹಿಸಿದ ಅಕ್ಕನಾಗಮ್ಮನ ಪ್ರಸ್ತಾಪವಿಲ್ಲದಿರುವುದು ಆಶ್ಚರ್ಯದ ಸಂಗತಿಯಾಗಿದೆ. ಪಾಲ್ಕುರಿಕೆಯ ಸೋಮನಾಥನ ಬಸವಪುರಾಣದಲ್ಲಿ ಮೊದಲಬಾರಿಗೆ ನಾಗಲಾಂಬಿಕೆಯ ಪ್ರಸ್ತಾಪ ಬರುತ್ತದೆ. ಭೀಮಕವಿಯೂ ಆಕೆಯನ್ನು ಹೆಸರಿಸಿದ್ದಾನೆ. ಆದರೆ, ಸಿಂಗಿರಾಜನ 'ಸಿಂಗಿರಾಜಪುರಾಣ' ಹಾಗೂ ಶಾಂತಲಿಂಗದೇಶಿಕ ಕವಿಯ 'ಭೈರವೇಶ್ವರ ಕಥಾಮಣಿಸೂತ್ರ ರತ್ನಾಕರ'ಗಳಲ್ಲಿ ನಮಗೆ ಅಕ್ಕನಾಗಮ್ಮನ ಜೀವನ ವೃತ್ತಾಂತಕ್ಕೆ ಸಂಬಂಧಿಸಿದ ಕೆಲವು ವಿಷಯಗಳು ತಿಳಿಯುತ್ತವೆ. ನಾಗಮ್ಮನ ಹೆಸರಿನ ಪೂರ್ವದಲ್ಲಿ 'ಅಕ್ಕ' ಪದ ಸೇರಿಕೊಂಡಿರುವುದು ಅವಳು ಬಸವಣ್ಣನ ಅಕ್ಕ ಎಂದು ತಿಳಿಯಲು ಕಾರಣವಾದಂತಿವೆ. ಆದರೆ ಆಕೆ ಬಸವಣ್ಣನ ತಂಗಿ ಎಂಬುದನ್ನು ಕೆಲವು ಕಾವ್ಯಗಳು ಹಾಗೂ ಆಕೆಯ ಕುರಿತಿರುವ ಜನಪದ ಸಾಹಿತ್ಯ ತಿಳಿಸುತ್ತವೆ. ಭೀಮಕವಿಯ ಬಸವಪುರಾಣದಲ್ಲಿ ಬಸವಣ್ಣ ಕಲ್ಯಾಣಕ್ಕೆ ಹೊರಡುವಾಗ,

> ಧೀವರಂ ನಿಜವನಿತೆ ಗಂಗಾ
> ದೇವಿಯುಂ ತನ್ನನುಜೆನಾಗಲ
> ದೇವಿಯುಂ ತಾನೆಯ್ದಿದನು ಬಲದೇವನಟ್ಟಿದಡೆ (4–49)

ಎಂಬ ಮಾತುಗಳಿವೆ. ಇಲ್ಲಿ 'ಅನುಜೆ ನಾಗಲದೇವಿ' ಎಂಬಲ್ಲಿ ನಾಗಲದೇವಿ, ಬಸವಣ್ಣನ ತಂಗಿ ಎಂಬುದು ಸ್ಪಷ್ಟ ಎಂಬ ಸತ್ಯಾಂಶದತ್ತ ಸಂಶೋಧಕ ಡಾ. ಎಂ.ಎಂ ಕಲಬುರ್ಗಿಯವರು ನಮ್ಮ ಗಮನಸೆಳೆದಿದ್ದಾರೆ. ಅಲ್ಲದೆ. ಶಿವಗಣ ಪ್ರಸಾದಿ ಮಹದೇವಯ್ಯನವರ ಶೂನ್ಯ ಸಂಪಾದನೆಯಲ್ಲಿಯೂ 'ಅಲ್ಲಿ ತನ್ನಿಂ ಕಿರಿಯಳಪ್ಪ ನಾಗಾಂಬಿಕೆ ಸಹಿತ ಕಪ್ಪಡಿ ಸಂಗಮ ದೇವರಿಗೆ ಬಂದು ಶಿವೋಪದೇಶ ಪಡೆದು' ಎಂದಿದೆ. ಕೆಲವು ಜನಪದ ಹಾಡುಗಳಲ್ಲಿಯೂ ಜನಪದ ಬಸವ ಪುರಾಣದಲ್ಲಿಯೂ ಅಕ್ಕನಾಗಮ್ಮ ಬಸವಣ್ಣನ ತಂಗಿ ಎಂದೇ ಉಕ್ತವಾಗಿದೆ. ಇವುಗಳ ಹೊರತಾಗಿ, ಅಕ್ಕನಾಗಮ್ಮ ತನ್ನೊಂದು ವಚನದಲ್ಲಿ,

'ಅಣ್ಣಾ ಶಶಿಧರನಟ್ಟಿದ ಮಣಿಹ ಪೂರೈಸಿತೆಂದು ನೀವು
ಲಿಂಗೈಕ್ಯವಾದೊಡೆ ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ'

ಎಂಬಲ್ಲಿ ಬಸವಣ್ಣನನ್ನು 'ಅಣ್ಣಾ ಎಂದು ಸಂಬೋಧಿಸಿದ್ದು ಕಂಡುಬರುತ್ತದೆ. ಇವೆಲ್ಲವುಗಳ ಆಧಾರದಿಂದ ಬಸವಣ್ಣ-ಅಕ್ಕನಾಗಮ್ಮರದ್ದು ಅಣ್ಣ-ತಂಗಿಯ ಸಂಬಂಧ ಎಂಬುದನ್ನು ದೃಢಪಡಿಸಬಹುದಾಗಿದೆ.

ಕೆಲವು ವೀರಶೈವ ಪುರಾಣಗಳು ಅಕ್ಕನಾಗಮ್ಮ ಮದುವೆಯಾಗದ ಕನ್ಯೆ, ಅಣ್ಣ ಬಸವಣ್ಣನೊಂದಿಗೆ ಕಲ್ಯಾಣಕ್ಕೆ ಹೋದವಳು, ಅಲ್ಲಿ ಬಸವಣ್ಣ ತಂದುಕೊಟ್ಟ ಶಿವಶರಣ ಕಕ್ಕಯ್ಯನ ಮನೆಯ ಮಿಕ್ಕ ಪ್ರಸಾದ ಸೇವನೆಯಿಂದ ಚೆನ್ನಬಸವಣ್ಣ ಹುಟ್ಟಿದ ಎಂದು ಹೇಳುತ್ತವೆ. ಆದರೆ, ಸಿಂಗಿರಾಜ ಪುರಾಣ, ಅಕ್ಕನಾಗಮ್ಮನ ವಿವಾಹ ಶಿವಸ್ವಾಮಿಯೊಂದಿಗೆ ಆಗಿದ್ದನ್ನು ತಿಳಿಸುತ್ತವೆ. ಇದಕ್ಕೆ ಪುಷ್ಟಿ ನೀಡುವಂತೆ, ಜನಪದ ಸಾಹಿತ್ಯ ಅಕ್ಕನಾಗಮ್ಮನ ಜೀವನದ ಕೆಲವು ಮಹತ್ವದ ಘಟನೆಗಳನ್ನು ಬಣ್ಣಿಸುತ್ತದೆ.

ಕಲ್ಯಾಣದಲ್ಲಿ ಷಟ್‌ಸ್ಥಲ ಚಕ್ರವರ್ತಿಯಾಗಿ ವೀರಶೈವಮತದ ಸಿದ್ಧಾಂತಗಳನ್ನು ರೂಪಿಸಿದ ಚೆನ್ನಬಸವಣ್ಣ ಆ ಹೊತ್ತಿಗೆ ಸಾಕಷ್ಟು ಪ್ರೌಢನಾಗಿರಬೇಕು. ಈ ಹಿನ್ನೆಲೆಯಲ್ಲಿ ಅವನ ಜನನ ಕಲ್ಯಾಣದಲ್ಲಿ ಆಯಿತೆಂದು ಅಭಿಪ್ರಾಯಪಡುವುದು ಸಮಂಜಸವೆನ್ನಿಸುವುದಿಲ್ಲ. ಸರಸ್ವತಿದೇವಿ ಗೌಡರ, ಡಾ.ವೀರಣ್ಣ ದಂಡೆ ಮುಂತಾದವರು ಊಹಿಸುವಂತೆ ಕಲ್ಯಾಣಕ್ಕೆ ಬರುವ ಹೊತ್ತಿಗೆ ಚೆನ್ನಬಸವಣ್ಣ ಸಾಕಷ್ಟು ದೊಡ್ಡ ಹುಡುಗನಾಗಿದ್ದ. ಬಸವಣ್ಣನಿಗೂ ಅವನಿಗೂ ಹನ್ನೆರಡು ವರ್ಷಗಳ ವ್ಯತ್ಯಾಸವಿದೆ ಎನ್ನಲಾಗಿದೆ.

ಶರಣರ ಜೀವನ ಕುರಿತು ರಚನೆಯಾದ ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯಗಳನ್ನು ತೌಲನಿಕವಾಗಿ ಅಭ್ಯಾಸಮಾಡಿರುವ ಡಾ.ವೀರಣ್ಣ ದಂಡೆಯವರು ಸತ್ಯಕ್ಕೆ ಹತ್ತಿರವಾದ ಅಕ್ಕನಾಗಮ್ಮನ ಚರಿತ್ರೆಯನ್ನು ಪುನಃರೂಪಿಸುವ ಪ್ರಯತ್ನ ಮಾಡಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಅವರಿಗೆ ದೊರೆತಿರುವ 'ಅಕ್ಕನಾಗಮ್ಮನ ಹಾಡು' ಪುಣ್ಯಕಥೆಗಳ ಸಾಲಿಗೆ ಸೇರುವಂತಹುದು. ಆ ಕಥನಗೀತೆಯಲ್ಲಿ ಅಕ್ಕನಾಗಮ್ಮನ ಕೌಟುಂಬಿಕ ಜೀವನ ಸಂಬಂಧಗಳ ಪ್ರಸ್ತಾಪ ಬರುತ್ತದೆ. ಇಂಗಳೇಶ್ವರದ ಮಾದರಸ ಮಾದಲಾಂಬಿಕೆಯರ ಮಗಳು ಅಕ್ಕನಾಗಮ್ಮ. ಅದೇ ಊರಿನಲ್ಲಿದ್ದ ಮಾದಲಾಂಬಿಕೆಯ ಮೂವರು ತಮ್ಮಂದಿರಲ್ಲಿ ಒಬ್ಬನಾದ ನೀಲಕಂಠನ ಮಗ ಶಿವರಾಯನಿಗೆ ಅಕ್ಕನಾಗಮ್ಮನನ್ನು ಕೊಟ್ಟು ಮದುವೆ ಮಾಡಲಾಗಿತ್ತು. ಆದರೆ ಮದುವೆಯ ಮನೆಯಲ್ಲಿ 'ತಾಯಿಹೊಟ್ಟ ಸೀರಿ ಮನಸಿಗಿಲ್ಲದೇವ' ಎಂಬ ನೆವವೊಡ್ಡಿ ಜಗಳ ಪ್ರಾರಂಭವಾಯಿತು. 'ಕಟ್ಟಿದ ಕರಿಮಣಿ ಕಡಿಯಿರಿ', 'ಹಚ್ಚಿದ ಅರಿಶಿಣ ತೊಳೆಯಿರಿ' ಎಂಬ ಮಾತುಗಳು ಕೇಳಿಬಂದವು. ಎಲ್ಲರೂ ಗಪ್ಪಾಗಿ, ಗಂಡು-ಹೆಣ್ಣುಗಳನ್ನು ಅವರವರ ಮನೆಗೆ ಕರೆದೊಯ್ದರು. ಈ ರೀತಿಯಲ್ಲಿ ಮದುವೆ ಮುಗಿದು ಹನ್ನೆರಡು ವರ್ಷಗಳಾದರೂ ಗಂಡು-ಹೆಣ್ಣು ಪರಸ್ಪರ ಸೇರಲೇ ಇಲ್ಲ. ಹೀಗೆ ಅಷ್ಟು ದೀರ್ಘಕಾಲ ಒಬ್ಬರ ಮುಖ ಒಬ್ಬರು ನೋಡದಂತೆ ಕಳೆದಿರುವುದನ್ನು ಗಮನಿಸಿದರೆ, ಅಕ್ಕನಾಗಮ್ಮನದು ಬಾಲ್ಯವಿವಾಹವಾಗಿರಬೇಕೆಂದು ಡಾ. ದಂಡೆ ಊಹಿಸುತ್ತಾರೆ. ಅವಳು ಕ್ರಮೇಣ ದೊಡ್ಡವಳಾಗುತ್ತಾಳೆ; ಬರಬರುತ್ತ ತವರುಮನೆಯಲ್ಲಿ ಅತ್ತಿಗೆಯರ ಕಾಟ ಹೆಚ್ಚಾಗುತ್ತದೆ. ಆಕೆ ಅಳುತ್ತ ಮಾಳಿಗೆ ಏರುತ್ತಾಳೆ. ನೀರು ತರಲು ಓಣಿಗೆ ಬಂದ ಶಿವಸ್ವಾಮಿಗೆ ಆಕೆಯ ಅಳು ಕೇಳುತ್ತದೆ. ಅವನು ಕಾರಣ ವಿಚಾರಿಸುತ್ತಾನೆ; ಆಕೆ ಅವನನ್ನು ಮನೆಗೆ ಕರೆದು ತಾಯಿ-ತಂದೆಯರನ್ನು ಭೆಟ್ಟಿ ಮಾಡಿಸುತ್ತಾಳೆ.

'ನಗುತ ಮಾಳಿಗಿ ಇಳಿದಾಳ ನಾಗಮ್ಮ
ಹೊರಗಿನ ತಂದಿನ ಕರದಾಳ ದೇವ
ತಾಯಿ-ತಂದಿ ಕರದು ಹೇಳುತಾಳಕ್ಕನಾಗಮ್ಮ
ಕದ್ದುಡಿ ತುಂಬಿ ಕುಡಿರಂದ ದೇವ'

ಯೌವನಕ್ಕೆ ಕಾಲಿರಿಸಿದ ಶಿವದೇವನಿಗೂ ಹೆಂಡತಿಯೊಂದಿಗೆ ಬಾಳುವ ಬಯಕೆ. ತಾಯಿ-ತಂದೆಯವರಿಗೂ ಮಗಳ ಬದುಕು ಹಸನಾಗಲೆಂಬ ಹಾರೈಕೆ. ಹೀಗಾಗಿ 'ಎರಡು ಬಾಗಿಲು ಮುಚ್ಚಿ ನಾಲ್ಕು ಕಿಟಕಿ ಮುಚ್ಚಿ ಕದ್ದುಡಿ ತುಂಬಿ ಕೊಟ್ಟಿದಾರ', ಬಾಲ್ಯವಿವಾಹದಲ್ಲಿ ಹೆಣ್ಣು ದೊಡ್ಡವಳಾದ ಮೇಲೆಯೇ ಗಂಡನ ಮನೆಗೆ ಕಳಿಸುವುದು ಸಂಪ್ರದಾಯ. ಆದರೆ ತವರುಮನೆಯಲ್ಲಿಯೇ ಉಳಿದಿದ್ದ ನಾಗಮ್ಮ ಅಲ್ಲಿಯೇ ಗಂಡನ ಸಖ್ಯ ಪಡೆಯುತ್ತಾಳೆ. ತಾನು ಬಸಿರಾದುದು ತಿಳಿಯುತ್ತಲೇ ಗಂಡನ ಮನೆಗೆ ಹೋಗಿ, ಅತ್ತೆ-ಮಾವರ ಪಾದಕ್ಕೆ ನಮಸ್ಕರಿಸಿ ಆಶೀರ್ವಾದ ಕೋರುತ್ತಾಳೆ. ಆದರೆ ಮುಖ ನೋಡುತ್ತಲೇ

'ಮಾರಿ ಆಗ್ಯಾದ ಹಸರ ಯಾರಿಗಾಗಿದಿ ಬಸರ
ಖರೆ ಹೇಳ ಬಾರ ಮನಿಯಾಗ ದೇವ'

ಎಂದು ಅತ್ತೆ ಸವಾಲು ಹಾಕುತ್ತಾಳೆ. ನ್ಯಾಯ-ನಿಷ್ಠುರಿಯಾದ ಅಕ್ಕನಾಗಮ್ಮ, 'ಗಂಡ ಮಾಡಿದ ಬಸರ ನನಗ್ಯಾತರ ನಾಚಿಕೆ' ಎಂದು ಪ್ರತ್ಯುತ್ತರ ಕೊಡುತ್ತಾಳೆ. ಪರಿಣಾಮ, ಕಾದೆಣ್ಣೆಯಲ್ಲಿಯ ದುಡ್ಡನ್ನು ಬೆರಳದ್ದಿ ತೆಗೆಯುವ ದಿವ್ಯವನ್ನು ಎದುರಿಸುವುದು. ಸತ್ಯವಂತೆ ನಾಗವ್ವ ದಿವ್ಯವನ್ನು ಗೆಲ್ಲುತ್ತಾಳೆ. 'ಮುತ್ತೈದಿ ಬೆರಳ ಸುಡಲಿಲ್ಲ ದೇವ' ಎನ್ನುತ್ತದೆ ಕಾವ್ಯ. ಇದರಿಂದ ಅವಳ ಅತ್ತೆಮಾವರೇ ಶರಣಾಗುತ್ತಾರೆ. ಇದು ಜನಪದ ಕಾವ್ಯ ನೀಡುವ ಅಕ್ಕನಾಗಮ್ಮ ದಾಂಪತ್ಯ ಜೀವನದ, ಚೆನ್ನಬಸವಣ್ಣನ ಜನನ ಪೂರ್ವದ ವೃತ್ತಾಂತ. ಹಿರಿಯರ ಕ್ಷುಲ್ಲಕ ಜಗಳ, ಅವಳ ವೈವಾಹಿಕ ಜೀವನದೊಂದಿಗೆ ಆಡಿದ ಆಟವನ್ನು, ಅವಳ ದುರ್ವಿಧಿಯನ್ನು ಇಲ್ಲಿ ನಾವು ಗುರುತಿಸಬಹುದಾಗಿದೆ. ಆದರೆ ಅಕ್ಕನಾಗಮ್ಮ ದಿಟ್ಟ ಹೆಣ್ಣು. ಧೈರ್ಯವಾಗಿ ಗಂಡನ ಮನೆಯಲ್ಲಿ ತನ್ನ ಹಕ್ಕು-ಗೌರವಗಳನ್ನು ಸಂಪಾದಿಸಿಕೊಂಡು, ಅಲ್ಲಿಯೇ ಚೆನ್ನಬಸವಣ್ಣನನ್ನು ಪೋಷಿಸಿ, ಅವನ ಬಾಲ್ಯವನ್ನು ಚೆನ್ನಾಗಿ ರೂಪಿಸಿಕೊಟ್ಟಳೆಂದು ಭಾವಿಸಬಹುದಾಗಿದೆ.

ಬಸವಣ್ಣ, ಬಾಗೇವಾಡಿ ತೊರೆದು ಕಲ್ಯಾಣಕ್ಕೆ ಹೋಗುವ ಮನಸ್ಸು ಮಾಡಿದಾಗ, ಅಕ್ಕನಾಗಮ್ಮ ಚೆನ್ನಬಸವಣ್ಣ ಹಾಗೂ ಶಿವಸ್ವಾಮಿ, ಬಸವಣ್ಣನೊಂದಿಗೆ ಹೋದಂತಿದೆ. ಅಷ್ಟರಲ್ಲಿ ಅವಳ ಅತ್ತೆ-ಮಾವಂದಿರು ತೀರಿಕೊಂಡಿದ್ದಿರಲೂಬಹುದು. ಕಾರಣ, ಸಿಂಗಿರಾಜ ಪುರಾಣ, ಕಲ್ಯಾಣಕ್ಕೆ ಅಕ್ಕನಾಗಮ್ಮನೊಂದಿಗೆ ಶಿವಸ್ವಾಮಿಯೂ ಹೋದನೆಂದೂ, ಬಸವಣ್ಣನ ಮದುವೆ ನೀಲಾಂಬಿಕೆಯೊಂದಿಗೆ ಆದಾಗ, ಅವನೂ ಅಲ್ಲಿ ಉಪಸ್ಥಿತನಿದ್ದನೆಂದೂ ತಿಳಿಸುತ್ತದೆ.

ಬಸವಣ್ಣನನ್ನು ಹಿಂಬಾಲಿಸಿ ಕಲ್ಯಾಣಕ್ಕೆ ಹೋದ ಅಕ್ಕನಾಗಮ್ಮ, ಬಸವಣ್ಣನ ಸಾಮಾಜಿಕ-ಧಾರ್ಮಿಕ ಕಾರ್ಯಗಳಲ್ಲಿ ತನ್ನ ಕೈಜೋಡಿಸಿದ್ದಾಳೆ. ಅವನಿಗೆ ತಾಯಿಯ ಸ್ಥಾನದಲ್ಲಿ ನಿಂತು ಉಪದೇಶಿಸಿದ್ದಾಳೆ; ವಾತ್ಸಲ್ಯದಿಂದ ಪೊರೆದಿದ್ದಾಳೆ; ನೈತಿಕ ಧೈರ್ಯ ನೀಡಿದ್ದಾಳೆ. ಬಸವಣ್ಣನ ಮಹಾಮನೆಯ ಉಸ್ತುವಾರಿಯನ್ನು ಅವನ ಪತ್ನಿಯರು ನೋಡಿಕೊಂಡರೂ ಅವರ ಕರ್ತೃತ್ವ ಶಕ್ತಿಯ ಹಿಂದೆ ಗಟ್ಟಿ ತಳಹದಿಯಾಗಿ ನಿಂತಿದ್ದಾಳೆ. ಹೀಗೆ ಕಲ್ಯಾಣದಲ್ಲಿ ಅವಳು ಗೈದ ಸಾಧನೆ ಎಲೆಮರೆಯ ಕಾಯಿಯ ತೆರನದು. ಚೆನ್ನಬಸವಣ್ಣನನ್ನು ಷಟ್‌ಸ್ಥಲ ಮೂರುತಿಯನ್ನಾಗಿ ನಿರೂಪಿಸಿದ್ದಲ್ಲದೇ ಬಸವಣ್ಣನ ಸಾಮಾಜಿಕ, ಧಾರ್ಮಿಕ ಮಹತ್ಸಾಧನೆಯ ಹಿಂದೆಯೂ ಇವಳ ಕೊಡುಗೆ ಇದೆ. ಅನುಭವ ಮಂಟಪದಲ್ಲಿ ಶಿವಶರಣರ ತತ್ವಾರ್ಥಗೋಷ್ಠಿಗಳಿಂದ, ಚರ್ಚೆಗಳಿಂದ, ತನ್ನ ವ್ಯಕ್ತಿತ್ವವನ್ನು ಅಕ್ಕನಾಗಮ್ಮ ಬೆಳೆಸಿಕೊಂಡಳು; ಶಿವಯೋಗ ಸಾಧನೆಯ ಮೂಲಕ ಸಿದ್ಧಿ ಪಡೆದಳು. ತ್ರಿಪುರಾಂತಕೇಶ್ವರ ಕೆರೆಯ ಬಳಿ ಇರುವ ಅಕ್ಕನಾಗಮ್ಮನ ಗುಹೆ, ಅವಳ ಯೋಗಸಾಧನೆಯ ಕುರುಹಾಗಿ ಇಂದಿಗೂ ಗುರುತಿಸಲ್ಪಡುತ್ತದೆ.

ಕಲ್ಯಾಣ ಕ್ರಾಂತಿಯ ದಿಗ್ಭ್ರಮೆಯಲ್ಲಿದ್ದಾಗಲೇ ಧರ್ಮರಕ್ಷಣೆಯ ತೀವ್ರತರ ಜವಾಬ್ದಾರಿ ಅಕ್ಕನಾಗಮ್ಮನ ಮೇಲೆ ಬೀಳುತ್ತದೆ. ಅಷ್ಟೊತ್ತಿಗಾಗಲೇ ಬಸವಣ್ಣ ಕೂಡಲಸಂಗಮಕ್ಕೆ ಹೋಗಿಬಿಟ್ಟಿರುತ್ತಾನೆ. ಬಿಜ್ಜಳನ ಅನುಯಾಯಿಗಳು

ಶರಣರನ್ನು ಕಂಡಲ್ಲಿ ಅಟ್ಟಿಸಿಕೊಂಡು ಹೋಗಿ ಕೊಲ್ಲತೊಡಗಿದ್ದರು. ಪ್ರಾಯಶಃ ಅವಳ ಪತಿ ಶಿವಸ್ವಾಮಿಯೂ ಅಷ್ಟೊತ್ತಿಗಾಗಲೇ ಮರಣವನ್ನಪ್ಪಿದ್ದ. ಅವರೆಲ್ಲರ ವಿಯೋಗಕ್ಕಾಗಿ ದುಃಖಿಸುತ್ತ ಕುಳಿತುಕೊಳ್ಳಲು ಆಕೆಗೆ ಸಮಯವಿರಲಿಲ್ಲ. ಪರಿಸ್ಥಿತಿಯ ತೀವ್ರತೆಯನ್ನರಿತು, ಚದುರತೊಡಗಿದ್ದ ಶರಣರ ಸಂಘಟನೆ ಮಾಡಿ, ಹೊಸಶಕ್ತಿಯನ್ನು ಹುಟ್ಟುಹಾಕುವ ಅನಿವಾರ್ಯತೆ ಅವಳ ಪಾಲಿಗಿತ್ತು. ಬಸವಣ್ಣನ ಉಜ್ವಲ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಕುರಿತು ಯೋಚಿಸಬೇಕಿತ್ತು. ಚೆನ್ನಬಸವಣ್ಣ ಹಾಗೂ ಅಳಿದುಳಿದ ಶರಣರೆಲ್ಲ ಒಟ್ಟು ಸೇರಿ ಧರ್ಮ ರಕ್ಷಣೆಗಾಗಿ ಯುದ್ಧ ಮುಖವನ್ನು ರಚಿಸಿದಾಗ, ಅಕ್ಕನಾಗಮ್ಮ, ಗಂಗಾಂಬಿಕೆಯೊಂದಿಗೆ ಮುಖ್ಯ ಸಹಾಯಕಳಾಗಿ ನಿಂತಳು. ಕಲ್ಯಾಣವನ್ನು ಬಿಡಲೇಬೇಕಾದ ಒತ್ತಡದ ಪರಿಸ್ಥಿತಿಯಲ್ಲಿ ಚೆನ್ನಬಸವಣ್ಣನ ನೇತೃತ್ವದಲ್ಲಿ ಶರಣರು ತೊರಗಲ್ಲು ನಾಡಿನತ್ತ ಹೊರಟರು. ಮುರಗೋಡ ಸಮೀಪ ಬಿಜ್ಜಳನ ಸೈನಿಕರು ಅವರನ್ನು ಬೆನ್ನಟ್ಟಿದಾಗ, ಚೆನ್ನಬಸವಣ್ಣ ಅವರ ಕಣ್ತಪ್ಪಿಸಿ ತನ್ನ ಜನರನ್ನು ನಾಗಲಾಪುರಕ್ಕೆ ಕೊಂಡೊಯ್ದು, ಅಲ್ಲಿ ಶರಣರ ಸೈನಿಕ ಕೇಂದ್ರ ಸ್ಥಾಪಿಸಿದನು. ಆ ಕೇಂದ್ರದ ವ್ಯವಸ್ಥೆಯ ಸಂಪೂರ್ಣ ಹೊಣೆಯನ್ನು ಅಕ್ಕನಾಗಮ್ಮ ಹೊತ್ತಳು. ಕಾತರವಳ್ಳಿಯ ಕಾಳಗದಲ್ಲಿ ಬಿಜ್ಜಳನ ಸೈನ್ಯವನ್ನು ಹಿಮ್ಮೆಟ್ಟಿಸುವಷ್ಟು ಸಾಮರ್ಥ್ಯವನ್ನು ಶರಣ ಸಂಘಟನೆ ಹೊಂದಿತ್ತು. ಆ ಸಮಯದಲ್ಲಿ ಸೇನಾಪತಿಯಾದ ಬಿಜ್ಜಳನ ಅಳಿಯ ಮೂರ್ಛಿತನಾಗಿ ಕೈಸೆರೆ ಸಿಕ್ಕಾಗ, ಅವನಿಗೆ ಪ್ರಾಣದಾನ ಮಾಡಿದವಳು ಅಕ್ಕನಾಗಮ್ಮ. ನಾಗಲಾಪುರದಲ್ಲಿ ಅಕ್ಕನಾಗಮ್ಮನ ಹೆಸರಿನ ದೇವಾಲಯವಿದೆ. ಇದು ಜನತೆ ಆಕೆಯ ಮೇಲಿಟ್ಟಿರುವ ಭಕ್ತಿ–ಗೌರವದ ಸೂಚನೆಯಾಗಿದೆ.

ಕಾತರವಳ್ಳಿಯ ಜಯದ ನಂತರ ಶಿವಶರಣರು ಉಳಿವೆಯತ್ತ ಹೊರಡುತ್ತಾರೆ. ಗಂಗಾಂಬಿಕೆ ಕಾತರವಳ್ಳಿಯಲ್ಲಿಯೇ ಲಿಂಗೈಕ್ಯಳಾದಳೆಂದು ಭಾವಿಸಲಾಗಿದೆ. ಉಳಿದ ಶಿವಶರಣರೊಂದಿಗೆ ಅಕ್ಕನಾಗಮ್ಮ ಮುಂದೆ ಸಾಗುತ್ತಾಳೆ. ಕಿನ್ನರಿ ಬ್ರಹ್ಮಯ್ಯನ ಹೊಳೆಯದಡದಲ್ಲಿ ಮಹಾಮನೆಯ ಗುಹೆಯೊಂದರಲ್ಲಿ ಅವರು ಕೆಲಕಾಲ ಆಶ್ರಯ ಪಡೆಯಲು ಪ್ರಯತ್ನಿಸಿದರೂ ವೈರಿ ಸೈನ್ಯದ ಭಯದಿಂದ ಅದು ಸಾಧ್ಯವಾಗುವುದಿಲ್ಲ. ಕೆಲವು ಶರಣರು ಅಲ್ಲಿಯೇ ಬಯಲಾದರೆಂದು ತಿಳಿದುಬರುತ್ತದೆ. ಧರ್ಮಸಂಘಟನೆಯ ಆಶಯ ಮಾತ್ರ ಆಗಲೂ ಜೀವಂತವಾಗಿ ಉಳಿದಿರುತ್ತದೆ. ಕಲ್ಯಾಣದ ಗುರುಮನಿ ಮತ್ತು ಹಿಪ್ಪರಿಗೆಯ ಮಲ್ಲಿಕಾರ್ಜುನ ದೇವರುಗಳ ಜೊತೆ ಚರ್ಚೆಯ ನಂತರ ಮುಂದಿನ ಯೋಜನೆಗಳನ್ನು ರೂಪಿಸಿಕೊಳ್ಳಲಾಗುತ್ತದೆ. ಆ ಪ್ರಕಾರ ರುದ್ರಮುನಿ ಶ್ರೀಶೈಲ ಪ್ರಾಂತಕ್ಕೆ ಹೋಗಿ ಅಲ್ಲಿಯ ಪೀಠಕ್ಕೆ ಅಧಿಪತಿಯಾಗಿದ್ದ ಮುಕ್ತಿಮುನಿಯ ಸಹಾಯದಿಂದ ಪಶ್ಚಿಮ ಪ್ರದೇಶದಲ್ಲಿ ವೀರಶೈವ ಧರ್ಮ ಪುನರುತ್ಥಾನಕ್ಕೆ ಪ್ರಯತ್ನಿಸುತ್ತಾನೆ. ಶಿವಮೊಗ್ಗ ಜಿಲ್ಲೆಯಲ್ಲಿ ವೀರಶೈವ ಧರ್ಮಸಂಘಟನೆಯನ್ನು ನುಲಿಯ ಚಂದಯ್ಯ ಹಾಗೂ ಅಕ್ಕನಾಗಮ್ಮ ವಹಿಸಿಕೊಳ್ಳುತ್ತಾರೆ. ಎಣ್ಣೆಹೊಳೆಯ ಬಳಿ ಅಕ್ಕನಾಗಮ್ಮನೂ, ನಂದಿಯಲ್ಲಿ ನುಲಿಯ ಚಂದಯ್ಯನೂ ವಾಸ್ತವ್ಯ ಮಾಡಿ, ಧರ್ಮದ ಉಳಿವಿಗಾಗಿ ಯತ್ನಿಸುತ್ತಾರೆ. ಮುಂದೆ ದಿಗಂಬರ ಮುಕ್ತಿ ಮುನಿ ಸೈನ್ಯಸಮೇತ ಅಲ್ಲಿಗೆ ಬಂದು, ಶತ್ರು ಸೈನ್ಯವನ್ನು ಸದೆಬಡಿದು ಬಾಳೆಹೊನ್ನೂರಿನಲ್ಲಿ ಸಿಂಹಾಸನವನ್ನು ಸ್ಥಾಪಿಸುತ್ತಾರೆ. ಇದರಿಂದ ಮುಂದೆ ಆ ಪ್ರಾಂತ್ಯದಲ್ಲಿ ವೀರಶೈವ ಧರ್ಮ ರಕ್ಷಣೆಗೆ ದೊಡ್ಡ ನೆರವು ದೊರೆಯುತ್ತದೆ. ಅಕ್ಕನಾಗಮ್ಮನ ಸಮಾಧಿ ಎಣ್ಣೆಹೊಳೆ ದಂಡೆಯ ಮೇಲೆಯೇ ಇರುವುದರಿಂದ ಧರ್ಮ ಸಂರಕ್ಷಣೆಯ ತನ್ನ ಕರ್ತವ್ಯವನ್ನು ಆದಷ್ಟು ಮುಂದುವರೆಸಿ, ಮುಂದೆ ಆಕೆ ಅಲ್ಲಿಯೇ ಲಿಂಗೈಕ್ಯಳಾದಳೆಂದು ಭಾವಿಸಬಹುದು.

ವಿರೂಪಾಕ್ಷ ಕವಿಯ 'ಚೆನ್ನಬಸವಣ್ಣ ಪುರಾಣ'ದ ಪ್ರಕಾರ ಅಕ್ಕನಾಗಮ್ಮ ಬಿಜ್ಜಳನ ಸೈನ್ಯದೊಂದಿಗೆ ಕಾದಾಡಿ, ಕಾತರವಳ್ಳಿಯ ಕಾಳಗವನ್ನು ಪೂರೈಸಿ ಮುಂದೆ ಸಾಗಿ, ಕರಿಹೊಳೆಯ ದಂಡೆಯ ಮೇಲಿರುವ ಗುಹೆಯಲ್ಲಿ ಐಕ್ಯಳಾಗುತ್ತಾಳೆ. ಆದರೆ ಫ.ಗು.ಹಳಕಟ್ಟಿಯವರು ಇದನ್ನು ಒಪ್ಪುವುದಿಲ್ಲ. ಎಣ್ಣೆಹೊಳೆಯ ದಡದಲ್ಲಿ ಆಕೆಯ ಸಮಾಧಿ ಇದ್ದು, ಆಕೆ ಅಲ್ಲಿಯೇ ಐಕ್ಯಳಾದದ್ದು ಎಂದು ಅಭಿಪ್ರಾಯಪಡುತ್ತಾರೆ.

ಅಕ್ಕನಾಗಮ್ಮನೊಂದಿಗೆ ಕೋಲಶಾಂತಯ್ಯ, ಮುಖವಾಡದ ಮಲ್ಲಿನಾಥ, ಹಡಪದ ರೇಚಣ್ಣ, ಮಡಿವಾಳ ಮಾಚಯ್ಯ, ಇವರೆಲ್ಲ ಸಂಗನ ಬಸವಣ್ಣನ ಬಯಲ ಕೂಡಿರೆಂದು ಚೆನ್ನಬಸವಣ್ಣ ಹೇಳಿದರೆ, ಮಡಿವಾಳ ಮಾಚಯ್ಯ, ಅಕ್ಕನಾಗಾಯಿ, ಮಿಂಡಮಲ್ಲಿನಾಥ, ಹಡಪದ ಅಪ್ಪಣ್ಣ, ಮೊಗವಾಡದ ಕೇಶಿರಾಜ, ಕೋಲಶಾಂತಯ್ಯ ಮೊದಲಾದ ಶಿವಗಣಂಗಳೆಲ್ಲವೂ ಬಸವರಾಜನ ಬಯಲ ಬೆರಸಿದರು ಎಂದಿದ್ದಾನೆ. ಆದ್ದರಿಂದ ಬೆನ್ನಟ್ಟಿದ ಶತ್ರು ಸೈನ್ಯದೊಂದಿಗೆ ಧರ್ಮಯುದ್ಧ ಮಾಡುತ್ತ ಇವರೆಲ್ಲ ಒಟ್ಟಿಗೆ ಮಡಿದಿರಬೇಕೆಂದು ಊಹಿಸಬಹುದಾಗಿದೆ. ಚೆನ್ನಬಸವಣ್ಣನ ಹೇಳಿಕೆಯಿಂದ ಅವನಿಗಿಂತಲೂ ಮೊದಲೇ ಅಕ್ಕನಾಗಮ್ಮ ಬಯಲನಪ್ಪಿದಂತಿದೆ.

ಅಕ್ಕನಾಗಮ್ಮ ಬಹಳಷ್ಟು ವಚನಗಳನ್ನು ಬರೆದಿದ್ದಾಳೆ, 'ಎಮ್ಮಕ್ಕ ನಾಗಾಯಿಯ ವಚನ ಮೂರು ಲಕ್ಷದ ತೊಂಬತ್ತಾರು ಸಾವಿರ' ಎಂದು ಸಿದ್ಧರಾಮ ಹೇಳಿದ್ದರೂ ಆಕೆಯ ಹೆಸರಿನಲ್ಲಿ ನಮಗೀಗ ಕೇವಲ ಹದಿನೈದು ವಚನಗಳು ದೊರೆಯುತ್ತವೆ. ವಿದ್ವಾಂಸರು ಗುರುತಿಸಿರುವಂತೆ 'ಬಸವ ವಾತ್ಸಲ್ಯ' ಆಕೆಯ ವಚನಗಳ ಮುಖ್ಯ ಸಂವೇದನೆ. ಬಸವಣ್ಣನವರನ್ನು ಅನುಸರಿಸಿ ಕಲ್ಯಾಣಕ್ಕೆ ಬಂದ ಅಕ್ಕನಾಗಮ್ಮನಿಗೆ ಆಧ್ಯಾತ್ಮ ಸಾಧನೆಯಲ್ಲಿ ಬಸವಣ್ಣನೇ ಗುರುವೂ, ಮಾರ್ಗದರ್ಶಕನೂ ಆಗಿದ್ದಾನೆ. ಅವಳ ವಚನಗಳಲ್ಲಿ ಬಹಳಷ್ಟು ಬಸವಣ್ಣನ ಸ್ತುತಿಗೇ ಮೀಸಲಾಗಿರುವುದನ್ನು ಗಮನಿಸಿದರೆ, ಅವಳ ಒಳ-ಹೊರಗೆಲ್ಲ ಬಸವಮಯವಾದದ್ದನ್ನು ಕಾಣುತ್ತೇವೆ. ಅಷ್ಟು ಪ್ರೀತಿ, ಅಭಿಮಾನ ಮತ್ತು ಕೃತಜ್ಞತೆ ಬಸವಣ್ಣನ ಮೇಲೆ ಅವಳಿಗೆ. ಅವಳ ವಚನಗಳ ಅಂಕಿತ 'ಬಸವಪ್ರಿಯ ಚೆನ್ನಸಂಗಯ್ಯ' ಕೂಡ ಇದನ್ನೇ ತಿಳಿಸುತ್ತದೆ. ಕೆಲವು ವಚನಗಳು ಅವಳು ನಿಜದ ನಿಲವಿನಲ್ಲಿ ಇರುವುದನ್ನು ಅರುಹುತ್ತವೆ. ಶರಣಧರ್ಮ ಸಂಘಟನೆಗಾಗಿ ಹೋರಾಡುತ್ತಲೇ ವೈಯಕ್ತಿಕ ಸಾಧನೆಯನ್ನೂ ಮಾಡಿ ನಿಜದ ನಿಲುವನ್ನು ಅರಿಯುವ ಮಟ್ಟವನ್ನು ಅವಳು ತಲುಪಿದ್ದಾಳೆಂಬುದು ಗಮನಾರ್ಹ ಅಂಶವಾಗುತ್ತದೆ. ತನ್ನನ್ನು ಆ ಮಟ್ಟಕ್ಕೆ ತಂದವನು ಬಸವಣ್ಣನೇ ಎಂಬುದು ಅವಳ ಅನ್ನಿಸಿಕೆ.

'ಎನ್ನ ಕುಲ ಸೂತಕವ ಕಳೆದಾತ ಬಸವಣ್ಣ
ಎನ್ನ ಛಲ ಸೂತಕವ ಕಳೆದಾತ ಬಸವಣ್ಣ
ನಿಜದ ನಿರ್ವಯಲ ಬಾಗಿಲ ನಿಜವ ತೋರಿದಾತ ಬಸವಣ್ಣ'

ಎಂದು ಅಭಿಮಾನದಿಂದ ಹೇಳಿಕೊಂಡಿದ್ದಾಳೆ. ಮುಂದುವರೆದು, ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು ಇವರ ಸಂಬಂಧದಿಂದಾಗಿ ತನ್ನ ಭವದ ಬಳ್ಳಿ ಹರಿದುಕೊಂಡು, ಮನದ ಕಪಟ ಇಂಗಿಸಿಕೊಂಡು, ಅಂತರಂಗದ ಸಂದು ಸಂಶಯ ತೊಲಗಿಸಿಕೊಂಡು, ತಾನು ಸಂಪೂರ್ಣ ಆತ್ಮಸಾಧನೆ ಮಾಡಲು ಸಾಧ್ಯವಾಯಿತೆಂದು ತಿಳಿಸಿದ್ದಾಳೆ. ಷಟ್‌ಸ್ಥಲ ಸಾಧನೆಯನ್ನು ಮಾಡುವಲ್ಲಿ, ಬಸವಣ್ಣ, ಪ್ರಭುದೇವ, ಸಿದ್ಧರಾಮ, ಮರುಳಶಂಕರದೇವರು, ಅನುಮಿಷದೇವರು, ಘಟ್ಟಿವಾಳ, ಅಜಗಣ್ಣ, ಚೆನ್ನಬಸವಣ್ಣ ಇವರೆಲ್ಲರ ಸಹಾಯ ತನಗೆ ದೊರಕಿರುವುದನ್ನು ಅತ್ಯಂತ ವಿನಯ ಹಾಗೂ ಹೆಮ್ಮೆಯಿಂದ ಸ್ಮರಿಸಿಕೊಂಡಿದ್ದಾಳೆ. ಬಸವಣ್ಣನ ಭಕ್ತಿ-ಸದಾಚಾರ ಅವನೊಡನೆಯೇ ಹೊರಟು ಹೋಯಿತೆಂಬ ಭಾವನೆ ಹಾಗೂ ಯಾತನೆ, ಅವಳಿಗೆ. ಯಾವಾಗಲೂ ಗುರುಲಿಂಗ, ಜಂಗಮ ಭಕ್ತರಿಂದ ತುಂಬಿ ತುಳುಕುತ್ತಿದ್ದ ಮಹಾಮನೆ, ಬಸವಣ್ಣನವರ ನಿರ್ಗಮನದಿಂದ ಶೂನ್ಯವೆನಿಸುತ್ತದೆ. ಬಸವಣ್ಣನ ಅನುಪಸ್ಥಿತಿಯಲ್ಲಿ ಅವಳ ಮಾತೃಹೃದಯ ನಾನಾ ರೀತಿಯಲ್ಲಿ ಗೋಳಾಡುತ್ತದೆ;

'ಬಸವನ ಬೆಸಲಾದ ಬಾಣತಿ ನಾನಯ್ಯ
ಬಸವಾ ಬಸವಾ ಬಸವಾ'

ಎಂದು ಆರ್ದ್ರ ಹೃದಯಿಯಾಗಿ ಪರಿತಪಿಸುತ್ತಾಳೆ. ತನ್ನ ಅಂತರಂಗದಲ್ಲೆಲ್ಲ ಬಸವನನ್ನು ತುಂಬಿಕೊಂಡಿದ್ದಾಳೆ.

'ಬಸವ ಮಾಡಿದಡಾಯ್ತು ಭುವಿಗೆ ಭಕ್ತಿಯ ಬೆಳಕು
ಬಸವ ಮಾಡಿದಡಾಯ್ತು ಗುರುಲಿಂಗ ಜಂಗಮಪೂಜೆ
ಬಸವ ಮಾಡಿದಡಾಯ್ತು ಲಿಂಗಾಂಗ ಸಾಮರಸ್ಯ ಸುಧೆಯಲಿ
ಬಸವ ಮಾಡಿದಡಾಯ್ತು ಭಕ್ತ ಭಕ್ತರಲಿ ಸಮಭಾವ'

ಮುಂತಾಗಿ ಹೇಳುತ್ತ 'ತನ್ನ ಅಂತರಂಗ ತುಂಬಿ ನಿಂದಾತ ಬಸವ' ಎನ್ನುತ್ತಾಳೆ.

ಭವಿಗಳು ವಿವೇಚನೆ ಇಲ್ಲದೆ ತಮ್ಮ ಮನಬಂದಂತೆ ಮಾತನಾಡಿದಾಗ, ವೈಯಕ್ತಿಕ ಟೀಕೆ ಮಾಡಿದಾಗ, ಒಮ್ಮೆ ನೋವೆನಿಸಿದರೂ ತಾಳ್ಮೆಗೆಡದೆ, ನಿಶ್ಚಿಂತಳಾಗುವುದನ್ನು ರೂಢಿಸಿಕೊಳ್ಳುತ್ತಾಳೆ. ಅದಕ್ಕೆ ಅವಳ ವಚನವೇ ಸಾಕ್ಷಿ.

'ಮನದೊಡೆಯ ಮಹಾದೇವ ಮನವ ನೋಡಿಹನೆಂದು
ಮನುಜರ ಕೈಯಿಂದ ಒಂದೊಂದ ನುಡಿಸುವನು
ಇದಕ್ಕೆ ಕಳವಳಿಸದಿರು ಮನವೆ, ಕಾತರಿಸದಿರು ಮನವೆ
ನಿಜವ ಮರೆಯದಿರು ಕಂಡಾ, ನಿಶ್ಚಿಂತನಾಗಿರು ಮನವೆ
ಬಸವಣ್ಣಪ್ರಿಯ ಚೆನ್ನಸಂಗಯ್ಯನು
ಬೆಟ್ಟದನಿತಪರಾಧವನು ಒಂದು ಬೊಟ್ಟಿನಲ್ಲಿ ತೊಡೆವನು'

ಎಂದು ತನ್ನನ್ನೇ ತಾನು ಸಂತೈಸಿಕೊಂಡಿದ್ದನ್ನು, ಈ ರೀತಿ ಲೌಕಿಕದ ತೊಡಕುಗಳನ್ನೆಲ್ಲ ಮೀರಿ ಅವಳು ನಿಜವನ್ನು ಅರಿಯಲು ಪ್ರಯತ್ನಿಸಿದ್ದನ್ನು ಕಾಣುತ್ತೇವೆ.

ಕಲ್ಯಾಣದಲ್ಲಿ ಅಕ್ಕನಾಗಮ್ಮ ಸಾಧಿಸಿದ್ದು, ಆಧ್ಯಾತ್ಮ ದಾಂಪತ್ಯ ಜೀವನವನ್ನು; ಶರಣಸತಿ-ಲಿಂಗಪತಿ ಭಾವದ ಭಕ್ತಿಯನ್ನು, ಇದನ್ನು ತಾನು ಹೇಗೆ ಸಾಧಿಸಿದೆನೆಂಬುದನ್ನು ಕೌಟುಂಬಿಕ ಸಂಬಂಧದ ಹಿನ್ನೆಲೆಯಲ್ಲಿ ನಿರೂಪಿಸಿದ್ದಾಳೆ.

'ಶ್ರೀಗುರುವೆ ತಾಯಿತಂದೆಯಾಗಿ, ಲಿಂಗವೆ ಪತಿಯಾಗಿ
ಜಂಗಮವೆ ಅತ್ತೆ-ಮಾವಂದಿರಾಗಿ, ಶಿವಭಕ್ತರೆ ಬಾಂಧವರಾಗಿ
ಸತ್ಯಸದಾಚಾರವೆಂಬ ನಾಮ ನಿಜವಾಯಿತು.
ಆದಂತೆ ಇರುವೆ, ಹಿಂದು ಮುಂದರಿಯದೆ ನಡೆವೆ
ಬಸವಣ್ಣಪ್ರಿಯ ಚೆನ್ನಸಂಗಯ್ಯಾ ನಿಮ್ಮಡಿಗಳಿಗೆ'

ಅಕ್ಕನಾಗಮ್ಮನ ವಚನಗಳೆಲ್ಲ ವೈಯಕ್ತಿಕ ಸಾಧನೆ, ಸಂಬಂಧಗಳನ್ನು ಅಭಿವ್ಯಕ್ತಿಸುತ್ತವೆ. ಬಹುಪಾಲು ವಚನಗಳು ಬಸವಣ್ಣನನ್ನು ಕುರಿತು ಅವಳಿಗಿದ್ದ ಪ್ರೀತಿ-ಅಭಿಮಾನ-ವಾತ್ಸಲ್ಯಗಳನ್ನು ವ್ಯಕ್ತಪಡಿಸಿವೆ. ಅದರಂತೆ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭುಗಳ ಕಾರಣದಿಂದ ತಾನು ನಿಜದ ನೆಲೆಯನ್ನು ಅರಿಯಲು ಸಾಧ್ಯವಾಯಿತು. ಕಲ್ಯಾಣದ ಅನುಭವ ಮಂಟಪದಲ್ಲಿ ಅನೇಕ ಶರಣರ ಅನುಭಾವದಿಂದ ತಾನು ಪುನೀತಳಾಗಿದ್ದೇನೆ ಎಂಬ ಕೃತಜ್ಞತಾಭಾವ ಅವಳ ವಚನಗಳಲ್ಲಿ ತುಂಬಿ ತುಳುಕುತ್ತದೆ.

ಅಕ್ಕನಾಗಮ್ಮನ ಹೆಸರಿನಲ್ಲಿರುವ ಒಂದು ವಚನದ ಅರ್ಥ ವಾದಗ್ರಸ್ತವಾಗಿದೆ.

'ಅಯ್ಯಾನಾನಭವೆ, ಅಯ್ಯಯ್ಯಕೈಯ ಕೋಲ ಕೊಂಬರೆ?
ಅಯ್ಯಾ ಎಳಗರುವಿನ ಎಳಗಂತಿಯನೆಳೆದೊಯ್ವರೆ ಭಕ್ತರು?
ಅಯ್ಯೋ ಅಯ್ಯೋ ಎನಲೊಯ್ವರೆ
ಬಸವಣ್ಣಪ್ರಿಯ ಚೆನ್ನಸಂಗಯ್ಯಾ'

ಇದರಲ್ಲಿ ಬಂದಿರುವ 'ಅಭವೆ' ಎಂಬ ಶಬ್ದಕ್ಕೆ 'ಗಂಡನಿಲ್ಲದವಳು,' 'ಮದುವೆಯಾಗದವಳು' ಎಂದೆಲ್ಲ ಅರ್ಥ ಗ್ರಹಿಸಿ, ಅಕ್ಕನಾಗಮ್ಮನ ಜೀವನ ಇತಿಹಾಸವನ್ನು ಕೆದಕುವ ಸಾಹಸ ಕೆಲವರು ಮಾಡಿದರು. ಆದರೆ ಕೊನೆಯಲ್ಲಿ ಡಾ. ವೀರಣ್ಣ ದಂಡೆಯವರು ಜನಪದ ಸಾಹಿತ್ಯದ ಸಾಂದರ್ಭಿಕತೆಯ ಹೋಲಿಕೆಯ ಮೇಲೆ ಮುಂದಿನ 'ಕೈಯ ಕೋಲು,' 'ಎಳೆಗರು,' 'ಎಳೆಗಂತಿ' ಮುಂತಾದ ಶಬ್ದಗಳು ಅವಳ ಪತಿಯನ್ನು ಸೂಚಿಸುತ್ತಿದ್ದು, ಅವನನ್ನು ಯಾರೋ ಅವಳಿಂದ ಅಗಲಿಸಿದ್ದನ್ನು ಅದು ಸೂಚಿಸುತ್ತದೆ. ಇದು ಪ್ರಾಯಶಃ ಅಕ್ಕನಾಗಮ್ಮ ತನ್ನ ಬಾಲ್ಯ ವಿವಾಹದ ಕಹಿ-ಸಂದರ್ಭವನ್ನು ಮುಂದಿನ ಜೀವನದ ಯಾವುದೋ ಘಟ್ಟದಲ್ಲಿ ಸ್ಮರಿಸಿಕೊಂಡು ದಾಖಲುಗೊಳಿಸಿರಬೇಕು ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಅಕ್ಕನಾಗಮ್ಮ ನಿರ್ವಯಲಾಗುವ ಪೂರ್ವದಲ್ಲಿಯೇ ಅಧ್ಯಾತ್ಮ ಸಾಧನೆಯ ಪರಿಪೂರ್ಣ ಸ್ಥಿತಿಯನ್ನು ತಲುಪಿ ನಿಧಿ ಪಡೆದಂತೆ ಅವಳ ವಚನಾನುಭವ ಹೇಳುತ್ತದೆ.

'ಭುವನದ ಹದಿನಾಲ್ಕರೊಳಗೆ ಪರಿಪೂರ್ಣ
ನಿರಂಜನ ಜ್ಯೋತಿಯಾಗಿ ಬೆಳಗುವ ಪ್ರಭುವ ಕಂಡು
ಬದುಕಿದೆನು ಕಾಣಾ ಬಸವಣ್ಣಪ್ರಿಯ ಚೆನ್ನಸಂಗಯ್ಯಾ'

ಅಕ್ಕನಾಗಮ್ಮ ತನ್ನ ನಡೆ-ನುಡಿ, ವಾತ್ಸಲ್ಯ ಮನೋಭಾವ, ಭಕ್ತಿ, ಸದಾಚಾರಗಳಿಂದ ಶರಣ ಸಮುದಾಯ ಗೌರವಕ್ಕೆ ಪಾತ್ರಳಾದವಳು. ಮರುಳ ಶಂಕರದೇವ, ಕೋಲಶಾಂತಯ್ಯ, ಸಿದ್ಧರಾಮ, ಆಯ್ದಕ್ಕಿ ಲಕ್ಕಮ್ಮ, ನೀಲಮ್ಮ ಬಸವಣ್ಣ ಮುಂತಾದ ಶರಣರು ಆಕೆಯ ಹಿರಿಮೆಯನ್ನು ಎತ್ತಿ ಕೊಂಡಾಡಿದ್ದಾರೆ. ಹೀಗೆ ಸಮಾಜಮುಖಿಯಾಗಿ ಕ್ರಿಯಾಶೀಲಳಾಗಿದ್ದುಕೊಂಡು ವೈಯಕ್ತಿಕ ಸಾಧನೆಯನ್ನು ಅಷ್ಟೇ ಕಾಳಜಿಪೂರ್ವಕವಾಗಿ ಮಾಡಿ, ತಾನು ಬಯಸಿದ ಜೀವನ್ಮುಕ್ತ ಸ್ಥಿತಿಯಲ್ಲಿ ನಿಜಾನಂದವನ್ನು ಪಡೆದ ಶಕ್ತಿ ಅಕ್ಕನಾಗಮ್ಮ. ಅಂತೆಯೇ, ಆಕೆ ಕರ್ನಾಟಕದ ಅಪೂರ್ವ ಸಾಧಕಿಯರಲ್ಲೊಬ್ಬಳು.

——— * ———

ವಿವೇಕಯುತ ಚಿಂತನೆಯ ಕಾಳವ್ವೆ

ಡಾ. ಎಚ್. ಜಯಮ್ಮ ಕರಿಯಣ್ಣ

ಹನ್ನೆರಡನೆಯ ಶತಮಾನ, ಕನ್ನಡ ಸಾಹಿತ್ಯದ ನವೋದಯಕಾಲ. ಅಂದು ವಚನ ಸಾಹಿತ್ಯದ ಮೂಲಕ ಕ್ರಾಂತಿ ಕಹಳೆ ಮೊಳಗಿತು. ಎಲ್ಲ ದೃಷ್ಟಿಯಿಂದ ಅಂದರೆ ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಹಿತ್ಯಕವಾಗಿಯೂ ಪ್ರಮುಖ ಸ್ವರೂಪ ಪಡೆಯಿತು. ಕೇವಲ ವಿದ್ವಾಂಸರ, ಪಂಡಿತರ ಸ್ವತ್ತಾಗಿದ್ದ ಸಾರಸ್ವತ ಲೋಕದ ಕದವನ್ನು ಶ್ರೀಸಾಮಾನ್ಯರೂ ತಟ್ಟುವಂತಾದರು. ಕನ್ನಡದ ವಿಶಿಷ್ಟ ಛಂದಸ್ಸುಗಳಾದ ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ಚೌಪದಿಗಳ ಜೊತೆಗೆ ವಚನ ಸಾಹಿತ್ಯದ ಪ್ರಕಾರವೂ ರೂಪುಗೊಂಡಿತ್ತು.

ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದ ಶರಣ – ಶರಣೆಯರು ವಚನ ಸಾಹಿತ್ಯದ ಮೂಲಕ ಬದುಕಿನ ಹಲವು ನಡೆಗಳ ಮಾರ್ಗದರ್ಶಕರಾದರು. ಕಾಯಕವೇ ಕೈಲಾಸವೆಂದು ಕಾಯಕಕ್ಕೆ ಮೊದಲ ಆದ್ಯತೆ ಕೊಟ್ಟ ಬಸವಣ್ಣನವರು ವಚನಗಳ ಮೂಲಕ ಧರ್ಮಸಿದ್ಧಾಂತ ಮತ್ತು ನ್ಯಾಯ–ನಿಯಮಗಳನ್ನು ನೀತಿ–ನಡಾವಳಿಗಳನ್ನು ಬದುಕಿನ ಪ್ರೀತಿಯ ಜೊತೆಗೆ ವಿಶ್ವಪ್ರೇಮ, ಹೃದಯದ ವೈಶಾಲ್ಯತೆ, ಶಿವ ಜಂಗಮ ಪೂಜೆ, ಪ್ರಸಾದದ ಸರ್ವ ಶ್ರೇಷ್ಠತೆಯ ಬಗ್ಗೆ ಎಚ್ಚರಿಸಿದರು. ಅವರು ಆತ್ಮಕ್ಕೆ ಪ್ರಾಧ್ಯಾನತೆಯನ್ನು ಕೊಟ್ಟು ಗಂಡು–ಹೆಣ್ಣೆಂಬ ಲಿಂಗ ಭೇದ ಮಾಡದೆ, ಸ್ತ್ರೀಯರನ್ನು ಸಮಾನ ಗೌರವದಿಂದ ನೋಡಿದರು. ಇದರಿಂದ ಹನ್ನೆರಡನೆಯ ಶತಮಾನದಲ್ಲಿ ಸ್ತ್ರೀಯರು ಪಡೆದ ಪುರುಷ ಸಮಾನ ಅವಕಾಶಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮುಖ್ಯ. ಶತಮಾನಗಳಿಂದ ಸಾಹಿತ್ಯ ರಚನೆ ಕೇವಲ ಪುರುಷರಿಗೆ ಮೀಸಲಾಗಿದ್ದ ಹಕ್ಕನ್ನು ನಿರಾಕರಿಸಿ, ಸಾಹಿತ್ಯ ರಚನೆಯಿಂದ ವಂಚಿತಳಾಗಿದ್ದ ಮಹಿಳೆ, ಸಮಾನ ವೇದಿಕೆಯ ಮೇಲೆ ತನ್ನ ಅನುಭವಗಳನ್ನು ವಚನಗಳ ಮೂಲಕ ಸಮರ್ಥವಾಗಿ ಅಭಿವ್ಯಕ್ತಪಡಿಸಿ, ಉತ್ಕೃಷ್ಟ ಸಾಹಿತ್ಯವನ್ನು ಸೃಷ್ಟಿ ಮಾಡಬಲ್ಲಳು ಎಂಬುದನ್ನು ತೋರಿಸಿಕೊಟ್ಟ ಅನೇಕ ವಚನಕಾರ್ತಿಯರು ನಮ್ಮ ಮುಂದೆ ಇದ್ದಾರೆ.

ಆದರೆ ದಲಿತರಾಗಿ ಹುಟ್ಟಿ ಶರಣರ ಸಹವಾಸದಿಂದ ತಾನೂ ಉತ್ತಮ ಸ್ಥಾನ ಪಡೆದ 'ಕಾಳವ್ವೆ'ಯ ಬಗ್ಗೆ ಇತಿಹಾಸಕಾರರು ಹೆಚ್ಚಿನ ಗಮನ ಹರಿಸಿಲ್ಲ. ಕ್ರಿ.ಶ. 1160ರಿಂದ 1180ರ ಆಸುಪಾಸಿನಲ್ಲಿ ನಾಲ್ಕು ಜನ ಕಾಳವ್ವೆಯರ ಹೆಸರುಗಳು ಕೇಳಿಬರುತ್ತವೆ. (1) ಮೊದಲು ಡಕಾಯಿತನಾಗಿ ಅನಂತರ ದೈವಭಕ್ತವಾಗಿ, ಶಿವದೀಕ್ಷೆ ಪಡೆದು ಶರಣನಾದ ಉರಿಲಿಂಗ ಪೆದ್ದಿ ಎಂಬುವವನ ಮಡದಿ ಕಾಳವ್ವೆ. ಈಕೆ ರಚಿಸಿದ ವಚನಗಳಲ್ಲಿ 'ಉರಿಲಿಂಗಪೆದ್ದಿಗಳರಸ' ಎಂಬ ಅಂಕಿತ ಬಳಸಿದ್ದಾಳೆ. (2) ಕದಿರ ಕಾಯಕದ ಕಾಳವ್ವೆ 'ಗುಮ್ಮೇಶ್ವರ' ಅಂಕಿತದಲ್ಲಿ ರಚಿಸಿರುವ ಒಂದು ವಚನ ಮಾತ್ರ ದೊರೆತಿದೆ. (3) ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ 'ಕರ್ಮಹರ ಕಾಳೇಶ್ವರಾ' ಎಂಬ ಅಂಕಿತದಲ್ಲಿ ರಚಿಸಿರುವ ಎರಡು ವಚನಗಳು ದೊರಕಿವೆ. (4) ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ 'ಭೀಮೇಶ್ವರ' ಎಂಬ ಅಂಕಿತದಲ್ಲಿ ರಚಿಸಿರುವ ಒಂದು ವಚನ ಮಾತ್ರ ದೊರೆತಿದೆ.

ಈ ನಾಲ್ವರಲ್ಲಿ ಉರಿಲಿಂಗಪೆದ್ದಿಯ ಹೆಂಡತಿ ಕಾಳವ್ವೆಯನ್ನು ಪ್ರಸ್ತುತ ಲೇಖನದಲ್ಲಿ ಪರಿಚಯಿಸಲಾಗಿದೆ.

ಕಾಳವ್ವೆ ಮತ್ತು ಆಕೆಯ ಪತಿ ಪೆದ್ದಿ ಅಥವಾ ಪೆದ್ದಣ್ಣ ಹುಟ್ಟಿನಿಂದ ದಲಿತರು. ನಾಂದೇಡ ಜಿಲ್ಲೆಯು ಮಹಾರಾಷ್ಟ್ರಲ್ಲಿದ್ದು ಆಂಧ್ರಪ್ರದೇಶ ಹಾಗೂ ಕರ್ನಾಟಕದ ಗಡಿಗಳಿಗೆ ಹೊಂದಿಕೊಂಡಿದೆ. ನಾಂದೇಡ ಜಿಲ್ಲೆಯ ಕಾಂದಹಾರ ಗ್ರಾಮ ಕಾಳವ್ವೆಯ ಊರು. ಊರ ಹೊರಗೆ ಒಂದು ಸಣ್ಣ ಗುಡಿಸಲಿನಲ್ಲಿ ವಾಸಿಸುತ್ತಿದ್ದರು. ಬದುಕಲು ಹೊಲ ಮನೆ ಇಲ್ಲದೆ ಕಿತ್ತು ತಿನ್ನುವ ಬಡತನ. ಇವರನ್ನು ಕುಲೀನರು ಕೂಲಿನಾಲಿಗೆ ಇರಲಿ, ಹತ್ತಿರವೂ ಸೇರಿಸುತ್ತಿರಲಿಲ್ಲವಾಗಿ ಜೀವಿಸಲು ದರೋಡೆ ಮತ್ತು ಕಳ್ಳತನದಿಂದ ಜೀವನ ಸಾಗಿಸಬೇಕಾಗಿದ್ದ ಪರಿಸ್ಥಿತಿ ಇತ್ತು. ಪರಿಸ್ಥಿತಿಯ ಅನಿವಾರ್ಯತೆಯಿಂದಾಗಿ ಈ ದರೋಡೆ ಕೆಲಸವನ್ನು 'ಪೆದ್ದಿ' ಮಾಡಿ ಹೆಂಡತಿಯನ್ನು ಸಾಕುತ್ತಿದ್ದನೆ ವಿನಾ ಆಸೆಯಿಂದ ಮಾಡುತ್ತಿರಲಿಲ್ಲ. ಆದರೂ ಕಾಳವ್ವೆಗೆ ಅಸಮಾಧಾನ. ಆಕೆ ಅನೇಕ ಸಾರಿ ಗಂಡನಿಗೆ ಕಳ್ಳತನ ಮಾಡುವುದನ್ನು ಧಿಕ್ಕರಿಸಿ, ಬೇರೆ ಬದುಕನ್ನು ರೂಪಿಸಿಕೊಳ್ಳಲು ಹೇಳುತ್ತಿದ್ದಳು. ಅವಳ ಇಷ್ಟ ನೆರವೇರುವಂಥ ಕಾಲ ಕೂಡಿ ಬಂದಿದ್ದು ಆ ಊರಿನಲ್ಲಿದ್ದ ದೊಡ್ಡ ಮಠಕ್ಕೆ ಪೆದ್ದಿ ಹೋದ ಒಂದು ದಿನದಂದು.

ಆ ದೊಡ್ಡ ಮಠದಲ್ಲಿ ಉರಿಲಿಂಗ ಸ್ವಾಮಿಗಳು ಅಧಿಪತಿಗಳು. ಉರಿಲಿಂಗ ಸ್ವಾಮಿಗಳ ಗುರುಗಳಾದ ಶಿವಲಿಂಗ ಮಂಚಣ್ಣ ಎಂಬುವವರು ಕಾಶಿಕ್ಷೇತ್ರದಲ್ಲಿದ್ದು, ಕಲ್ಯಾಣದ ಕೀರ್ತಿಯನ್ನು ಕೇಳಿ ಅಲ್ಲಿಗೆ ಬಂದು ನೆಲೆಸಿದ್ದರು. ಮೂಲತಃ ಅವರು ಆಂಧ್ರಪ್ರದೇಶದವರಾದರೂ ಕರ್ನಾಟಕ ಕಾಂದಹಾರ ಪ್ರದೇಶದಲ್ಲಿ ನೆಲೆ ನಿಂತರು. ಆದರೆ ಆ ಮಠದಲ್ಲಿ ಎಲ್ಲಾ ವ್ಯವಹಾರವನ್ನು ನೋಡಿಕೊಂಡು ಗುರುಗಳಾಗಿ ಎಲ್ಲವನ್ನು ನಡೆಸುತ್ತಿದ್ದವರು ಉರಿಲಿಂಗಸ್ವಾಮಿಗಳು. ಇವರು ತಮ್ಮ ಗುರುಗಳಂತೆ ವೇದ, ಶಾಸ್ತ್ರ, ಪುರಾಣ, ಉಪನಿಷತ್ತು, ಆಗಮಗಳ ಜೊತೆ ಬಹುಭಾಷೆಗಳನ್ನು ಅರಿತಿದ್ದರು. ಈ ಗುರುಗಳು ಕಲ್ಯಾಣದ ಅನುಭವ ಮಂಟಪದ ಸಂಪರ್ಕವನ್ನಿರಿಸಿಕೊಂಡು ಅಲ್ಲಿ ಶರಣರ ವಿಚಾರಗಳನ್ನು, ಸದಾಚಾರ, ಬೋಧನೆ, ಆಚಾರವಿಚಾರಗಳನ್ನು ಆಚರಣೆಗೆ ತರುವಲ್ಲಿ ಶ್ರಮಿಸುತ್ತಿದ್ದರು. ಹುಟ್ಟಿನಿಂದ ಬಂದ ಜಾತಿ, ಮತ, ಕುಲ ಧರ್ಮಗಳನ್ನು ಮೀರಿ ಸಕಲ ಜಾತಿಯವರನ್ನು ಹೊಸ ಧರ್ಮಕ್ಕೆ ಬರಮಾಡಿಕೊಳ್ಳುತ್ತಿದ್ದರು.

ಆ ಒಂದು ದಿನ ಈ ಮಠಕ್ಕೆ ಬಂದ ಪೆದ್ದಿ ಅಲ್ಲಿ ನಡೆಯುತ್ತಿದ್ದ ಪೂಜೆ, ಪುನಸ್ಕಾರ, ಲಿಂಗಧಾರಣೆ ಮಾಡುವ ಕಲಾಪಗಳನ್ನು ವೀಕ್ಷಿಸಿದಾಗ ತಾನು ಕೆಟ್ಟಮಾರ್ಗದಲ್ಲಿ ಬದುಕು ನಡೆಸುತ್ತಿದ್ದೇನೆ ಎನಿಸಿತು. ಕಣ್ಣು ತುಂಬ ನೀರು ತುಂಬಿಕೊಂಡು, ತಾನು ಇನ್ನು ಮುಂದೆ ಕಳ್ಳತನ ಅಥವಾ ದರೋಡೆ ಕಸುಬು ಬಿಟ್ಟೆ ಎಂದು ಶಪಥ ಮಾಡಿ ಮನೆಗೆ ಬಂದು ಮಲಗಿದ. ಮರುದಿನ ರಾತ್ರಿ ಕಳ್ಳತನಕ್ಕೆ ಹೋಗದೆ ಮನೆಯ ಒಂದು ಮೂಲೆಯಲ್ಲಿ ತಲೆತಗ್ಗಿಸಿ ಯೋಚಿಸುತ್ತ ಕುಳಿತ. ಕಾಳವ್ವೆ ದಿನದಂತೆ ಮನೆಯ ಕೆಲಸ ಮುಗಿಸಿ ಮಲಗಲು ಬಂದಾಗ ಮೂಲೆಯಲ್ಲಿ ಚಿಂತಾಕ್ರಾಂತನಾಗಿ ಕುಳಿತಿದ್ದ ಗಂಡನನ್ನು ಕಂಡು ಆಶ್ಚರ್ಯದಿಂದ, ಅವನು ಕೆಲಸಕ್ಕೆ ಹೋಗದೇ ಕುಳಿತಿರುವ ಬಗ್ಗೆ ಪ್ರಶ್ನಿಸಿದಳು. ಆಗ ತಾನು ಹಿಂದಿನ ದಿನ ಮಠದಲ್ಲಿ ನೋಡಿದ ಪೂಜಾಕಲಾಪಗಳನ್ನು, ಕಣ್ಣೀರು ಸುರಿಸುತ್ತಾ ಹೆಂಡತಿಗೆ ಒಪ್ಪಿಸಿ. ಇನ್ನು ಮುಂದೆ ಕಳ್ಳತನ ಮಾಡುವುದಿಲ್ಲ. ಆ ಕೆಟ್ಟ ಕಸುಬನ್ನು ಬಿಟ್ಟೆ ಎಂದ.

ಕಾಳವ್ವೆ, ಗಂಡ ಹೇಳಿದ ಸುದ್ದಿ ಕೇಳಿ ಆನಂದದಿಂದ "ಕಳ್ಳತನ ಬಿಡುವಂತೆ ಅನೇಕ ಸಾರಿ ಹೇಳಿದ್ದೆ. ಅಂತು ಕಳ್ಳತನ ಬಿಡಲು ನಿರ್ಧರಿಸಿ ಬಿಟ್ಟು ಒಳ್ಳೆ ಕೆಲಸ ಮಾಡಿದಿರಿ. ನಾವು ಸಹ ಆ ಪುಣ್ಯವಂತರ ದರುಶನ ಮಾಡಿ ಬರೋಣ. ಮೊನ್ನೆ ಮೊನ್ನೆ ನಮ್ಮ ನೆರೆಮನೆಯವರು ಅಲ್ಲಿ ಹೋಗಿ ಲಿಂಗ ಕಟ್ಟಿಕೊಂಡು ಬಂದರು. ಮಠದ ಸ್ವಾಮಿಗಳು ದೇವರಂತಹ ಮನುಷ್ಯರು ಅಂತ ಅವರು ಹೇಳ್ತಿದ್ದರು." ಎಂದಳು ಗಂಡ ಅಚ್ಚರಿಯಿಂದ, "ನೀನು ಏನು ಹೇಳುತ್ತಿದ್ದಿ? ಅವರು ನಮ್ಮಂತೆ ಹೊಲೆಯರ ಕುಲದವರಲ್ಲ. ಅವರನ್ನು ಹ್ಯಾಂಗ ತಮ್ಮ ಹತ್ತಿರ ತೊಗೋತಾರೆ. ಲಿಂಗವನ್ನು ಹ್ಯಾಂಗ ಕಟ್ಟತಾರೆ? ನೀ ಹೇಳೋದು ಖರೆನಾ ಬೇಗ ಹೇಳು" ಎಂದು ಅವಸರಿಸಿದ. ಮರುದಿನ ತಾವು ಲಿಂಗ ಕಟ್ಟಿಕೊಂಡು ಉತ್ತಮರಾಗುವ ಆಸೆಯಲ್ಲಿ ಕನಸು-ಜಾಗರಣೆಯ ಬಡಬಡಿಕೆಯಲ್ಲಿ ಈ ದಂಪತಿಗಳು ಆ ರಾತ್ರಿಯನ್ನು ಕಳೆದರು.

ಮರುದಿನ ಕಾಳವ್ವೆ ದಂಪತಿಗಳಿಗೆ ಹೊಸಹುಟ್ಟು, ನಿತ್ಯಕರ್ಮಗಳನ್ನು ಮುಗಿಸಿ ಗುರುಗಳ ದರ್ಶನಕ್ಕೆಂದು ಮಠಕ್ಕೆ ಹೊರಟರು. ಮಠದ ಅಂಗಳಲ್ಲಿ ಕೈಮುಗಿದು ನಿಂತರು. ನಮ್ಮಂತಹ ಅಂತ್ಯಜರನ್ನು ಗುರುಗಳು ಮಾತನಾಡಿಸದಿದ್ದರೆ ಎಂಬ ಅಂಜಿಕೆಯಿಂದ ದೂರದಲ್ಲಿಯೇ ನಿಂತರು. ದೂರದಿಂದಲೆ ದಂಪತಿಗಳನ್ನು ಗಮನಿಸಿದ ಗುರುಗಳು ತಮ್ಮ ಹತ್ತಿರಕ್ಕೆ ಬರುವಂತೆ ಕರೆದರು. ನಮ್ಮ ಜಾತಿ ಕುಲವನ್ನು ಅರಿಯದ ಗುರುಗಳು ಕರೆಯುತ್ತಿದ್ದಾರೆ ಹೋದರೆ ಹೇಗೆ? ಹೋಗದಿದ್ದರೆ ಹೇಗೋ ಎಂಬ ಆತಂಕದ ಸ್ಥಿತಿಯಲ್ಲಿ ದಲಿತ ದಂಪತಿಗಳು ಹೊರಗೇ ನಿಂತರು. ಗುರುಗಳು ತಾವೇ ಆ ದಂಪತಿಗಳ ಹತ್ತಿರಕ್ಕೆ ಬಂದರು. ಬರುತ್ತಿದ್ದಂತೆಯೆ, ದಂಪತಿಗಳಿಬ್ಬರೂ ಅವರ ಪಾದಕ್ಕೆ ಬಿದ್ದು ನಮಸ್ಕರಿಸಿದರು. ನಮ್ಮನ್ನು ಯಾರು ಹತ್ತಿರ ಸೇರಿಸುತ್ತಿರಲಿಲ್ಲ. ಈ ಗುರುಗಳು ಹತ್ತಿರಕ್ಕೆ ಬಂದು ಕರೆಯುತ್ತಿದ್ದಾರೆ ಎಂದು ಅಂದುಕೊಂಡರು ಮನದಲ್ಲಿ. ಅವರ ಪ್ರೀತಿಯ ಕರೆಗೆ ಸೋತ ದಂಪತಿಗಳು ಅದುವರೆಗೆ ಅನುಭವಿಸಿದ ನೋವು, ದುಃಖ ಒತ್ತರಿಸಿಕೊಂಡು ಬಂದು ಅಳಲಾರಂಭಿಸಿದರು. ಕೈಮುಗಿದು ಮೂಕರಂತೆ ನಿಂತುಬಿಟ್ಟರು.

ಆಗ ಗುರುಗಳು ಅವರ ದೈನ್ಯತೆಗೆ ಕನಿಕರಿಸಿ, "ಅಪ್ಪಾ, ಅವ್ವಾ ನನ್ನಜೊತೆ ಬನ್ನಿ" ಎಂದು ಕರೆದೊಯ್ದರು. ಗುರುಗಳ ಪ್ರೀತಿಗೆ ಕೃತಜ್ಞತೆಯಿಂದ ಕಣ್ಣೀರು ಸುರಿಸಿ, ಸಮಾಧಾನಗೊಂಡು ಕಾಳವ್ವೆ ಮಾತನಾಡಿದಳು. "ಬುದ್ಧಿ ನಾವು ಅಂತ್ಯಜರು, ಸಮಾಜ ನಮ್ಮನ್ನು ದೂರ ಇರಿಸಿದೆ. ದುಡಿದು ತಿನ್ನಲು ಹೊಲ ಮನೆ ಇಲ್ಲ. ಕೂಲಿಯೂ ಸಿಗದೆ ಬದುಕಿನ ಅನಿವಾರ್ಯತೆಯಲ್ಲಿ ನನ್ನ ಗಂಡ ದರೋಡೆ, ಕಳ್ಳತನ ಮಾಡಿ ತಂದುದನ್ನು ತಿರಿದು ಬದುಕುತ್ತಿದ್ದೆವು. ಮೊನ್ನೆ ನಿಮ್ಮ ಮಠಕ್ಕೆ ಬಂದು ಇಲ್ಲಿ ನಡೆದ ಎಲ್ಲಾ ಧರ್ಮಕಾರ್ಯಗಳನ್ನು ಗಮನಿಸಿ ಹೃದಯ ಪರಿಶುದ್ಧಗೊಂಡು ಕಳ್ಳತನವನ್ನು ಬಿಡಲು ನಿರ್ಧರಿಸಿದ್ದಾನೆ. ನಾವಿಬ್ಬರೂ ಧೈರ್ಯಮಾಡಿ ತಮ್ಮ ಪಾದಕ್ಕೆ ಬಂದು ಬಿದ್ದಿದ್ದೇವೆ. ನಮ್ಮನ್ನು ಉದ್ಧರಿಸಿ" ಎಂದು ಬೇಡಿಕೊಂಡಳು.

"ತಾಯಿ, ನೀವು ನಿಮ್ಮ ಪಾಪದ ಕೊಳೆಯನ್ನು ಪಶ್ಚಾತ್ತಾಪದ ಕಣ್ಣೀರಿನಿಂದ ತೊಡೆದು ಹಾಕಿರುವಿರಿ. ಕಳ್ಳತನವನ್ನು ಬಿಟ್ಟು ಪರಿಶುದ್ಧರಾಗಿರುವಿರಿ. ಈಗ ನಿಮಗೆ ಶಿವ ದೀಕ್ಷೆ ಪಡೆದು ಲಿಂಗವನ್ನು ಕಟ್ಟಿಕೊಳ್ಳಲು ಮನಸ್ಸಿದೆಯಾ?" ಎಂದು ಕೇಳಿದರು. ಕಾಳವ್ವೆ ಹರ್ಷದಿಂದ "ಅಪ್ಪಾ ನಮ್ಮನ್ನು ಉದ್ಧಾರ ಮಾಡಿರಿ. ನಾವು ಇಂದೇ ಲಿಂಗವನ್ನು ಕಟ್ಟಿಕೊಳ್ಳುತ್ತೇವೆ. ಶಿವದೀಕ್ಷೆಯನ್ನು ಪಡೆದುಕೊಳ್ಳುತ್ತೇವೆ" ಎಂದಳು. ಉರಿಲಿಂಗ ಸ್ವಾಮಿಗಳು ಆ ದಂಪತಿಗಳಿಂದ ಪೂಜೆ ಮಾಡಿಸಿ ಲಿಂಗಧಾರಣೆ ಮಾಡಿಸಿದರು. ಲಿಂಗದೀಕ್ಷೆಯ ಜೊತೆಯಲ್ಲಿ ಅಷ್ಟಾವರಣಗಳನ್ನು ತಿಳಿಸಿ ಹೇಳಿಕೊಟ್ಟರು. ಬದುಕಲು ಕಟ್ಟಿಗೆ ಕಡಿದು ಮಾರಿ ತಮ್ಮ ಜೀವನ ಸಾಗಿಸುವ ಕಾಯಕದ ಮಾರ್ಗವನ್ನು ತೋರಿಸಿದರು.

ಅಂದಿನಿಂದ ಪ್ರತಿದಿನವೂ ಸ್ನಾನಾದಿ ನಿತ್ಯಕರ್ಮಗಳನ್ನು ಮುಗಿಸಿ ದರ್ಶನ ಪಡೆದು ಗುರುಗಳು ಪೂಜಾವಧಿಯಲ್ಲಿ ಪಠಿಸುತ್ತಿದ್ದ ಪದ್ಯಗಳನ್ನು ಮತ್ತು ವಚನಗಳನ್ನು ಕಲಿತು ಪುನರುಚ್ಚರಿಸುತ್ತಿದ್ದರು. ಆ ದಂಪತಿಗಳ ನಿಷ್ಠೆ, ಆತ್ಮಸಂಯಮ, ಅಗಾಧ ಸ್ಮರಣ ಶಕ್ತಿ, ಅವರಲ್ಲಾದ ಪರಿವರ್ತನೆ ಕಂಡು ಗುರುಗಳಿಗೆ ಅಚ್ಚರಿ. ವಯಸ್ಸಿನಲ್ಲಿ ಕಿರಿಯರಾಗಿದ್ದಂತಹ ಈ ದಂಪತಿಗಳಿಗೆ ಕನ್ನಡ ಮತ್ತು ಸಂಸ್ಕೃತ ಭಾಷೆಗಳನ್ನು ಕಲಿಸಿದರು. ಪೆದ್ದಿ ಮತ್ತು ಕಾಳವ್ವೆ ಕ್ರಮೇಣ ಸಂಸ್ಕೃತ ಶ್ಲೋಕಗಳ ಮತ್ತು ಕನ್ನಡ ವಚನಗಳ ಅರ್ಥ ಹೇಳುವಷ್ಟು ಸಾಮರ್ಥ್ಯ ಪಡೆದರು. ಗುರುಗಳಿಗೆ ಪರಮಾಪ್ತ ಶಿಷ್ಯರಾದರು.

ಒಮ್ಮೆ ದಿನದಂತೆ ತನ್ನ ಸ್ನಾನಾದಿ ಪೂಜೆಗಳನ್ನು ಮುಗಿಸಿಕೊಂಡು ಗುರುಗಳ ದರ್ಶನಕ್ಕೆ ಕಾಳವ್ವೆ ಬಂದಾಗ, ಅವಳ ಸಪ್ಪಗಿದ್ದ ಮುಖವನ್ನು ಕಂಡು ಕಾರಣ ಕೇಳಿದರು. "ಅಪ್ಪಾ ನಿನ್ನೆ ತಮ್ಮ ದರುಶನ ಪಡೆದು ಮನೆಗೆ ಹೋಗುವಾಗ ದಾರಿಯಲ್ಲಿ ಒಂದು ಚಿಕ್ಕ ಹುಡುಗನಿಗೆ ಎತ್ತು ಇರಿಯಲು ಬಂತು. ನಾನು ಗಾಬರಿಯಿಂದ ಅಳುತ್ತಿದ್ದ ಆ ಹುಡುಗನನ್ನು ಎತ್ತಿಕೊಂಡೆ. ಸ್ವಲ್ಪ ದೂರದಲ್ಲಿ ಆ ಹುಡುಗನ ತಾಯಿ ಧಾವಿಸಿ ಬಂದು 'ಛೀ ಛೀ –ನಿನ್ನ ಜಾತಿ, ಕುಲ ಯಾವುದೆಂದು ತಿಳಿಯದೆ? ನನ್ನ ಮಗನನ್ನು ಮುಟ್ಟಿ ಮೈಲಿಗೆ ಮಾಡಿದೆಯಲ್ಲಾ' ಎಂದು ಕೂಗಾಡಿದಳು. 'ತಾಯಿ ಎತ್ತು ಅವನನ್ನು ಇರಿದುಬಿಡುತ್ತದೆ ಎಂದು ಎತ್ತಿಕೊಂಡೆ. ಮೈಲಿಗೆ ಮಾಡುವ ಉದ್ದೇಶ ನನಗಿಲ್ಲ' ಎಂದೆ.

ಆಕೆ ಪುನಃ 'ಕುಲಾಚಾರವನ್ನೆಲ್ಲಾ ಬಿಟ್ಟು ಆ ಮಠಕ್ಕೆ ಹೋಗಿ ಹಾಳಾದಿರಿ. ಮಠದ ಉರಿಲಿಂಗ ಸ್ವಾಮಿ ಊರಿನ ಜನರನ್ನು ಹಾಳು ಮಾಡುತ್ತಿದ್ದಾನೆ' ಎಂದು ಬಾಯಿಗೆ ಬಂದಂತೆ ಬೈಯುತ್ತಾ ಮಗನನ್ನು ಮುಟ್ಟಿಸಿಕೊಳ್ಳದೆ ಕರೆದುಕೊಂಡುಹೋದಳು. "ಅಪ್ಪಾ ಶತಶತಮಾನಗಳಿಂದ ಕುಲಾಚಾರದ ಕಟ್ಟುಕಟ್ಟಳೆಯಂತೆಯೆ ನಡೆದು – ಬಂದ ಎಲ್ಲ ನೋವು, ಸಂಕಟ, ಅವಮಾನ ಸಹಿಸಿಕೊಂಡು ಬಂದವರು ನಾವು. ತಮ್ಮಂತಹ ಸಜ್ಜನರ, ಗುರುಗಳ ಸಹವಾಸದಲ್ಲಿ ನಮ್ಮ ನಡತೆ ಮರೆತು ಆ ಹುಡುಗನನ್ನು ಮುಟ್ಟಿ ಎತ್ತಿಕೊಂಡು ತಪ್ಪು ಮಾಡಿದೆ. ಆದರೆ ಅದರಿಂದ ನೀವು ಅಪವಾದದ ಮಾತು ಕೇಳಬೇಕಾಯಿತು. ನನ್ನ ಅಪರಾಧ ಕ್ಷಮಿಸಿ" ಎಂದು ಕಣ್ಣೀರಿಟ್ಟಳು.

ಗುರುಗಳು "ತಾಯಿ, ಜಾತಿ ಕುಲವೇ ಪ್ರಧಾನ ಎಂದು ನಂಬಿರುವ ಜನ ಅವರು. ಪ್ರಾಣ ಹೋಗುವಂತಾದರೂ ಜಾತಿಯೆ ಮುಖ್ಯ. ಈ ಜಾತಿ ನೀತಿಯಿಂದ ಸಮಾಜ ಹಾಳಾಗಿ ಹೋಗಿದೆ. ನೀನು ನೊಂದುಕೊಳ್ಳಬೇಡ. ಒಂದು ಮಗುವಿನ ಪ್ರಾಣ ಉಳಿಸಿದ ಪುಣ್ಯ ನಿನಗೆ. ಸಮಾಧಾನ ಮಾಡಿಕೊ" ಎಂದರು. "ಮೊನ್ನೆ ಕಲ್ಯಾಣಕ್ಕೆ ಹೋಗಿದ್ದಾಗ ಅಣ್ಣ ಬಸವಣ್ಣ, ಅಕ್ಕ ನಾಗಮ್ಮನವರ ಹಿರಿತನದಲ್ಲಿ ಹೊಸಧರ್ಮದ ಬೆಳವಣಿಗೆ ಆಗುತ್ತಿದೆ. ಅನುಭವ ಮಂಟಪದಲ್ಲಿ ನಡೆದ ಸುದೀರ್ಘ ಚರ್ಚೆಯಲ್ಲಿ ನಾನು ಭಾಗವಹಿಸಿದ್ದೆ. ಶರಣರು ತಾವು ಕಂಡುಕೊಂಡ ಸತ್ಯಗಳನ್ನು ಕಾರ್ಯರೂಪಕ್ಕೆ ತರಲು ಯಾವ ಬಲಿದಾನಕ್ಕಾದರೂ ಸಿದ್ಧವಾಗಿದ್ದಾರೆ. ಆಗ ಜಾತಿ ಮತದ ನಿರ್ಬಂಧ ತನ್ನತಾನೇ ಕಡಿದು ಬೀಳುತ್ತದೆ" ಎಂದರು.

ಪುನಃ ತಮ್ಮ ಮಾತನ್ನು ಮುಂದುವರಿಸಿ, "ತಾಯಿ, ನಾನೇ ಒಂದು ನಿರ್ಧಾರಮಾಡಿ ಕಲ್ಯಾಣದ ಅನುಭವ ಮಂಟಪದಲ್ಲಿ ಶರಣರ ಅನುಮತಿ ಪಡೆದು ಕಾರ್ಯರೂಪಕ್ಕೆ ತರಲು ಹೋಗಿದ್ದೆ. ಹಿರಿಯ ಎಲ್ಲ ಶರಣರ ಒಪ್ಪಿಗೆ ಪಡೆದು ಬಂದಿರುವೆ. ಅದನ್ನು ನಿನ್ನೊಡನೆ ಪ್ರಸ್ತಾಪ ಮಾಡಬೇಕು. ಇನ್ನು ನನ್ನ ಇಳಿ ವಯಸ್ಸಿನಲ್ಲಿ ಕಂದಹಾರದ ಮಹಾಗುರುಪೀಠ ಪರಂಪರೆಯನ್ನು ನಿಭಾಯಿಸಿಕೊಂಡು ಬರಲು ಕಷ್ಟವಾಗುತ್ತದೆ. 'ಪೆದ್ದಿ' ಗೆ ಈ ಮಠದ ಪೀಠವನ್ನು ಒಪ್ಪಿಸಲು ನಿರ್ಧಾರ ತೆಗೆದುಕೊಳ್ಳಲಾಗಿದೆ. ಇನ್ನು ಮುಂದೆ ನೀವು ಸತಿ–ಪತಿ ಭಾವನೆಯನ್ನು ಮೀರಿ ನಿಲ್ಲಬೇಕಾಗುತ್ತದೆ. ಅವ್ವ–ನಿನ್ನನ್ನು, ಅಕ್ಕನಾಗಮ್ಮನವರು ಕಲ್ಯಾಣದಲ್ಲಿ ಕೆಲವು ಕಾಲ ಅಲ್ಲಿರಲು ಕರೆದಿದ್ದಾರೆ, ನೀನು ಅಲ್ಲಿಗೆ ಹೋಗಿ ಬಾ" ಎಂದರು.

"ಗುರುಗಳೆ, ನಾವು ಮಠಕ್ಕೆ ಕಾಲಿರಿಸಿದ ದಿನವೇ ಸತಿ–ಪತಿ ಭಾವನೆ ಬಿಟ್ಟಿದ್ದೇವೆ. ಆದರೆ ನನ್ನ ಗಂಡನನ್ನು ಈ ಮಠಕ್ಕೆ ಪೀಠಾಧಿಪತಿಯನ್ನಾಗಿಸುವ ನಿಮ್ಮ ನಿರ್ಧಾರ ಅಂಜಿಕೆ ತರುತ್ತಿದೆ. ಸನಾತನ ಧರ್ಮದಾದೇಶವನ್ನು ಮೀರಿ ನಡೆಯಲು ಸಾಧ್ಯವೇ? ತಪ್ಪಿದರೆ ಅದು ಎಂತಹ ಅನಾಹುತಕ್ಕೆ ಅನುವು ಮಾಡಿಕೊಡಬಹುದೆನ್ನುವ ಕಲ್ಪನೆ ಭಯವನ್ನುಂಟುಮಾಡುತ್ತಿದೆ. ಅದು ಎಲ್ಲಿಗೆ ಮುಟ್ಟುತ್ತದೆಯೋ ವಿಚಾರ ಮಾಡಿ ಮುಂದುವರಿಯುವುದು ಒಳ್ಳೆಯದು. ನನ್ನ ಅಲ್ಪ ಬುದ್ಧಿಗೆ ತೋಚಿದ್ದನ್ನು ತಮ್ಮ ಮುಂದಿಟ್ಟಿರುವೆ. ನಿಮ್ಮ ಪಾದಕ್ಕೆ ಬಂದುಬಿದ್ದ ಕೂಸುಗಳು ನಾವು. ತಿದ್ದಿ ಬುದ್ಧಿ ಕಲಿಸಿ, ಸನ್ಮಾರ್ಗದಲ್ಲಿ ನಡೆಯಲು ದಾರಿ ತೋರಿದವರು ನೀವು" ಎಂದು ವಿನಯದಿಂದ ಬಿನ್ನವಿಸಿಕೊಂಡಳು ಕಾಳವ್ವೆ

"ತಾಯಿ, ಗುಣ ಕರ್ಮಗಳಿಗೆ ಹೊಸ ಮೌಲ್ಯಗಳನ್ನು ಕಂಡವರು ನಾವು. ಸತ್ಯದ ದಾರಿ ಎಂದೂ ಭಯಾನಕ. ಸತ್ಯವನ್ನು ಶರಣರಲ್ಲದೆ ಮತ್ತಾರು ನಡೆಸಬೇಕು. ಆ ವಿಷಯ ಇಲ್ಲಿಗೇ ಬಿಡು" ಎಂದ ಗುರುಗಳು ಕಾಳವ್ವೆಗೆ ಆಶೀರ್ವಾದ ಮಾಡಿ ಕಳಿಸಿಕೊಟ್ಟರು.

ಕೆಲಕಾಲದ ನಂತರ ಕಾಳವ್ವೆಯ ಪತಿ ಪೆದ್ದಿ, ಗುರುಗಳ ಶಿಷ್ಯನಾಗಿ, ಶಿವಾಚಾರವನ್ನು ಸ್ವಲ್ಪವೂ ಲೋಪ ಬರದಂತೆ ಅಳವಡಿಸಿಕೊಂಡು ಕಂದಹಾರ ಮಠದ ಪೀಠಾಧಿಕಾರಿಯಾದನು. ಮುಂದೆ ಆತನು 'ಉರಿಲಿಂಗ ಪೆದ್ದಿ'

ಅಂಕಿತದಲ್ಲಿ ವಚನಗಳನ್ನು ರಚಿಸಿದನು. ಆತನ ವಿಷಯ ಪ್ರೌಢರಾಯನ ಕಾವ್ಯ, ಚನ್ನಬಸವ ಪುರಾಣ, ಗುರುರಾಜ ಚರಿತ್ರೆ, ಗಣಸಹಸ್ರದಲ್ಲಿ ಮತ್ತು ಕಾಳವ್ವೆಯ ಗಂಡ ಉರಿಲಿಂಗಪೆದ್ದಿ ಮೊದಲಾದ ವೀರಶೈವ ಕಾವ್ಯಗಳಲ್ಲಿ ಪ್ರಸ್ತಾಪವಾಗಿದೆ.

ಮುಂದೆ ಕಾಳವ್ವೆ ರಚಿಸಿರುವ ವಚನಗಳನ್ನು ಪರಿಶೀಲಿಸೋಣ.

ಕಾಳವ್ವೆ ಏಕೈಕ ದಲಿತ ವಚನಕಾರ್ತಿ. ಕಾಳವ್ವೆಯ ಹನ್ನೆರಡು ವಚನಗಳು ದೊರಕಿವೆ. 'ಉರಿಲಿಂಗ ಪೆದ್ದಿಗಳರಸ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾಳೆ. ಈಕೆಯ ವಚನಗಳಲ್ಲಿ ಭಕ್ತನಿಗಿರುವ ಲಕ್ಷಣ, ವ್ರತಾಚರಣೆಯ ಮಹತ್ವ, ಪ್ರಸಾದದ ಮಹಿಮೆ, ಕಾಯಕ ನಿಷ್ಠೆ–ಕಂಡುಬರುವ ಮುಖ್ಯ ಅಂಶಗಳು.

(1) ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ?
ಹುಸಿದು ತಂದು ಮಾಡುವಾತ ಭಕ್ತನೆ?
ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ?
ಒಡೆಯರೆಂಬ ತುಡುಗುಣಿಗಳು ತಾವು ಪೂಜೆಗೊಂಬಲ್ಲಿ
ಅವರ ಮನೆಗೆ ಹೂ ಹಣ್ಣು ಕಾಯಿ ಪತ್ರೆಗಳ ತರುವ
ಹೋಗುವ ಬರುವ ಊಳಿಗವ ಕೊಂಬಾತ ಭಕ್ತನಲ್ಲ
ಅಲ್ಲಿ ಪೂಜೆಗೊಂಬಾತ ಜಂಗಮನಲ್ಲ

ಇಂತಹವರ ಸಂಗವನ್ನು ತ್ಯಜಿಸಬೇಕು ಎಂದವಳು ಕಾಳವ್ವೆ

ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯ ಶುದ್ಧವಿಲ್ಲದುದು ಕಾಯಕವಲ್ಲ
ಆಸೆಯೆಂಬುದು ಭವದ ಬಲಜ
ನಿರಾಶೆಯೆಂಬುದು ನಿತ್ಯ ಮುಕ್ತಿ
ಉರಿಲಿಂಗ ಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ –

ಎಂದು ನಿಜವಾದ ಭಕ್ತರು ಯಾರು ಎನ್ನುವುದನ್ನು ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾಳೆ. ವ್ರತಾಚರಣೆಗಳ ಬಗೆಗೆ ಇತರ ಶರಣೆಯರಂತೆಯೇ ಕಾಳವ್ವೆಗೂ ಇದ್ದ ಕಾಳಜಿಯನ್ನು ಕೆಳಗಿನ ಈ ವಚನದಲ್ಲಿ ನೋಡಬಹುದು:

ವ್ರತವೆಂಬುದು ನಾಯಕರತ್ನ
ವ್ರತವೆಂಬುದು ಸುಪ್ಪಾಣಿಯ ಮುತ್ತು
ವ್ರತವೆಂಬುದು ಜೀವನ ಕಳೆ
ವ್ರತವೆಂಬುದು ಸುಯಿದಾನ
ತಪ್ಪಲು ಉರಿಲಿಂಗ ಪೆದ್ದಿಗಳರಸನೊಲ್ಲನವ್ವಾ
ವ್ರತಹೋದಾಗಳೆ ಇಷ್ಟಲಿಂಗದ ಕಳೆ ನಷ್ಟವವ್ವಾ
ಅವರು ಲಿಂಗವಿದ್ದೂ ಭವಿಗಳು
ಅವರು ಹೇಗೆಂದಡೆ, ಪ್ರಾಣವಿಲ್ಲದ ದೇಹದಂತೆ
ಉರಿಲಿಂಗ ಪೆದ್ದಿಗಳರಸನೊಲ್ಲನವ್ವಾ

ಮೇಲಿನ ವಚನಗಳು ಕಾಳವ್ವೆಯ ವ್ರತನಿಷ್ಠೆಯ ಪರಾಕಾಷ್ಠೆಯನ್ನು ತೋರಿಸುತ್ತವೆ. ಕೃತಯುಗ ಮೂವತ್ತೆರಡು ವರುಷದಲ್ಲಿ ಹಾಗೂ ಕಲಿಯುಗದವರೆಗೆ ಬರುವ ಯುಗದಲ್ಲಿ ಕುಂಜರನೆಂಬ ಆನೆ, ಮಹಿಷನೆಂಬ ಕರಿ ಎಮ್ಮೆಯ ಮಗ, ಅಶ್ವನೆಂಬ ಕುದುರೆಯನ್ನು ಜಾತಿಯಾಡಿನ ಮಗ ಹೋತನನ್ನು ಯಜ್ಞಕ್ಕೆ ಬಲಿಕೊಡುತ್ತ ಬಂದವರು ಬ್ರಾಹ್ಮಣರು. 'ಶಿವಭಕ್ತರು ಹೊತ್ತಾರೆಯೆದ್ದು ಗುರುಲಿಂಗ ಜಂಗಮಕ್ಕೆ ಶರಣೆನ್ನದೆ ಮೊದಲು ಒಂಟಿ ಬ್ರಾಹ್ಮಣನನ್ನು ಕಂಡು ಶರಣಾರ್ಥಿ ಎಂದರೆ ಎಂಬತ್ತು ನಾಲ್ಕು ಲಕ್ಷ ಯೋನಿಯಲ್ಲಿ ಹಂದಿಯ ಬಸುರಲ್ಲಿ ಬರುವುದನ್ನು ತಪ್ಪಿಸಲಾದೀತೆ' ಎಂಬ ಅಂಶವನ್ನು ಹದಿಮೂರು ಸಾಲಿನ ವಚನವೊಂದರಲ್ಲಿ ಈಕೆ ಹೇಳಿದ್ದಾಳೆ. ಶತಶತಮಾನಗಳಿಂದ ತುಳಿಸಿಕೊಂಡು ಅವಮಾನದಿಂದ ನೊಂದವರ ನೋವಿನ ಧ್ವನಿಯು ಈ ವಚನದಲ್ಲಿ ಅಡಗಿದೆ. ಸಮಾಜವು ದಲಿತ ಜಾತಿಯವರನ್ನು ನಿಂದಿಸಿ ದೂರವಿಟ್ಟದ್ದರ ಬಗ್ಗೆ ಮತ್ತೊಂದು ವಚನದಲ್ಲಿ ಪ್ರಶ್ನಿಸಿದ್ದಾಳೆ. "ಕುರಿ, ಕೋಳಿ, ಕಿರುಮೀನು, ತಿಂಬವರಿಗೆಲ್ಲ ಕುಲಜರೆಂದೆಂಬರು, ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು ಅವರೆಂತು ಕೀಳು ಜಾತಿಯಾದಾರು? ಜಾತಿಗಳು ನೀವೇಕೆ ಕೀಳಾಗಿರೊ?' ಎಂದು ಸಮಾಜ ಯಾವುದರೂ ಕೀಳಾಗುವುದು ಅವರವರ ಅವಗುಣಗಳಿಂದಲೇ ಹೊರತು ಜಾತಿಯಿಂದ ಕೀಳಾಗುವುದಿಲ್ಲ ಎಂಬುದನ್ನು ಮನದಟ್ಟು ಮಾಡಿದ್ದಾಳೆ. ಮಾದಿಗರನ್ನು ಕೀಳು ಜಾತಿಯವರೆಂದು ಕರೆಯವುದನ್ನು ಆಕೆ ನಿರಾಕರಿಸಿ, ದೂಷಿಸಿದ್ದಾಳೆ.

ಕಾಳವ್ವೆಯ ನೊಂದು ಬೆಂದ ಈ ನುಡಿಗಳಲ್ಲಿನ ಸತ್ಯವನ್ನು ಯಾರೂ ಅಲ್ಲಗಳೆಯಲಾರರು. ಒಬ್ಬ ಸಾಮಾನ್ಯ ಹೆಣ್ಣು ಸಮಾಜ ವ್ಯವಸ್ಥೆಯ ಎದುರು ನಿಂತು ದಿಟ್ಟತನದಿಂದ ಹೇಳುವ ಧೈರ್ಯ ಅಥವಾ ಎದೆಗಾರಿಕೆ ಈಕೆಗಿತ್ತು ಎಂಬುದಕ್ಕೆ ಈಕೆಯ ವಚನಗಳು ಜೀವಂತ ಸಾಕ್ಷಿಯಾಗಿ ನಿಂತಿವೆ.

ಇತರ ವಚನಕಾರ್ತಿಯರಂತೆಯೇ ಸಂಸಾರಿಯಾಗಿ, ಶರಣೆಯಾಗಿ, ವಚನಕಾರ್ತಿಯಾಗಿ, ತನ್ನ ರಚನೆಗಳನ್ನು ತನ್ನ ಇಷ್ಟದೈವದ ಹೆಸರಿನ ಅಂಕಿತನಾಮದಲ್ಲಿ ರಚಿಸಿದ್ದಾಳೆ ಕಾಳವ್ವೆ. ಅವರು ತಮ್ಮ ಪೂರ್ವಾಶ್ರಮದ ಜಾತಿ-ಭೇದ, ಅಂತರ ಅಂತಸ್ತುಗಳನ್ನು ಮೀರಿ ಶರಣರು ನಿರ್ಮಿಸಿದ ಸರ್ವ ಸಮಾನ ಮಾನವಧರ್ಮದ ವೇದಿಕೆಯಲ್ಲಿ ಒಂದಾಗಿ ಬೆರೆತಿದ್ದಾಳೆ. ಕೌಟುಂಬಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ, ಅನುಭಾವಿಕ ಹಂತಗಳಲ್ಲಿ ತಮ್ಮ ಚಿಂತನೆಗಳನ್ನು ಹಂಚಿಕೊಂಡಿದ್ದಾಳೆ. ವರ್ಗಭೇದ, ವರ್ಣಭೇದವನ್ನು ತಿರಸ್ಕರಿಸಿದಂತೆ ಲಿಂಗಭೇದವನ್ನೂ ತಿರಸ್ಕರಿಸಿ ಪುರುಷರ ಜೊತೆಗೆ ತಮ್ಮ ಧ್ವನಿಯನ್ನು ಸೇರಿಸಿ ಅರ್ಥಪೂರ್ಣವಾಗಿ ಆಚರಣೆಗೆ ತಂದಿದ್ದಾಳೆ.

ಶರಣೆಯರು ಸ್ವಾಭಿಮಾನ ಧಾರ್ಮಿಕ ವಿಚಾರಗಳಿಂದ ನೀತಿಯುತ ಬದುಕು ನಡೆಸಿ ಸಾಮಾಜಿಕ ಆರೋಗ್ಯ ಕಾಪಾಡಿಕೊಳ್ಳಲು ಬೋಧಿಸಿ, ತಾವೂ ಶರಣದ ಹೊಸ ಸಮಾಜ ನಿರ್ಮಾಣ ಕೆಲಸದಲ್ಲಿ ಮನಃಪೂರ್ವಕವಾಗಿ ತೊಡಗಿಸಿಕೊಂಡರು. ಅಂಥ ಕೆಲವಾರು ಮಹಿಳೆಯರಲ್ಲಿ ಕಾಳವ್ವೆಯೂ ಒಬ್ಬಳಾದರೂ, ಅತ್ಯಂತ ಕೀಳು ಜಾತಿಯಲ್ಲಿ ಹುಟ್ಟಿ, ಸಮಾಜದ ನಿಂದನೆಗೆ, ಅಸ್ಪೃಶ್ಯತೆಗೆ ಒಳಗಾಗಿ ತಿರಸ್ಕರಿಸಲ್ಪಟ್ಟ ಹೆಣ್ಣಾಗಿ; ತನ್ನ ವಿವೇಕಯುತ ಚಿಂತನೆಯಿಂದ ನಿಜವಾದ ಭಕ್ತಿ, ಕಾಯಕದ ಮಹತ್ವ, ಜಾತಿಗಿಂತ ಮುಖ್ಯವಾದ ವ್ಯಕ್ತಿತ್ವ ಇವುಗಳ ಬಗ್ಗೆ ಮೇಲುಮಟ್ಟದ ಸಮಾಜಕ್ಕೂ ವಚನಗಳ ಮೂಲಕ ತಿಳಿಹೇಳುವಂತಹ ಸಾಮರ್ಥ್ಯವನ್ನು ಈಕೆ ಹೊಂದಿದ್ದಳೆಂಬ ಕಾರಣಕ್ಕೆ ಈ ಕಾಳವ್ವೆ ಸದಾಕಾಲ ಮುಖ್ಯಳಾಗುತ್ತಾಳೆ.

———— * ————

ದಲಿತ ಧ್ವನಿ ಗೊಗ್ಗವ್ವೆ

ಶಾಂತಾಕುಮಾರಿ

ವಚನಕಾರ್ತಿಯರ ಸಂದರ್ಭ ಮತ್ತು ಸ್ಥಾನ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯಕ್ಕೊಂದು ವಿಶಿಷ್ಟ ಸ್ಥಾನವಿದೆ. ಮಹಿಳೆಯರು, ದಲಿತರು, ಶೋಷಿತರು ಮೊದಲ ಬಾರಿಗೆ ಸಾಹಿತ್ಯದ ಮುಖಾಂತರ ದನಿಯಾದರು. ರಾಜಾಶ್ರಯದಲ್ಲಿದ್ದು ರಾಜರನ್ನೇ ಹಾಡಿ ಹೊಗಳುತ್ತಿದ್ದ ಸಾಹಿತ್ಯ ಸಹಜವಾಗಿ ಉಸಿರಾಡಿದ್ದು ವಚನಕಾರರ ಕಾಲದಲ್ಲಿ. ಮೊದಲಿದ್ದ ಸಾಹಿತ್ಯಕ್ಕಿಂತ ಸಂಪೂರ್ಣ ಭಿನ್ನವಾಗಿ ಸಾಮಾನ್ಯನ ನೋವುನಲಿವುಗಳಿಗೆ ಸ್ಪಂದಿಸಿ ಸಾರ್ವಕಾಲಿಕ ಮೌಲ್ಯವುಳ್ಳ ಸಾಹಿತ್ಯವನ್ನು ನೀಡಿದ್ದು ವಚನಕಾರರ ಹೆಗ್ಗಳಿಕೆ. ಪಂಡಿತರ ಸ್ವತ್ತಾಗಿದ್ದ ಸಾಹಿತ್ಯ ಆಡುಮಾತಿನಲ್ಲಿ ಶ್ರೀಸಾಮಾನ್ಯನ ಹಾಡಾಗಿ ಸಾಹಿತ್ಯ ಚರಿತ್ರೆಯ ದಿಕ್ಕನ್ನೇ ಬದಲಿಸಿದ್ದು ಅಪೂರ್ವ ಸಂಗತಿ.

ವೈದಿಕ ಸಂಸ್ಕೃತಿಯಲ್ಲಿದ್ದ ಅನಿಷ್ಟ ಪದ್ಧತಿಗಳಿಂದ ರೋಸಿಹೋದ ಬಸವಣ್ಣ ಹದಗೆಟ್ಟ ಧಾರ್ಮಿಕ ಪರಿಸ್ಥಿತಿಯನ್ನು ಸುಧಾರಿಸಲು ಮುಂದಾಗಿದ್ದೇ ವಚನಸಾಹಿತ್ಯದ ಉಗಮಕ್ಕೆ ನಾಂದಿಯಾಯಿತು. ಆದ್ದರಿಂದ ವಚನ ಸಾಹಿತ್ಯದ ಪ್ರಮುಖ ಉದ್ದೇಶವೇ ಧರ್ಮವಾಗಿ ಆ ಮೂಲಕ ಉತ್ತಮ ವಿಚಾರಗಳನ್ನು ಬಿತ್ತುವುದು, ಮಾನವ ಸಂಸ್ಕೃತಿಯನ್ನು ಉದಾತ್ತಗೊಳಿಸುವುದು ಅದರ ಪ್ರಮುಖ ಅಂಶಗಳಾದವು. ಅದನ್ನು ಹೇಳುವ ಮಾರ್ಗ 'ವಚನ'ವೆಂಬ ಹೊಸ ಸಾಹಿತ್ಯಿಕ ಪ್ರಕಾರವಾಗಿ ಸಾಮಾಜಿಕ ಸಮಾನತೆ ಅದರ ಇನ್ನೊಂದು ಪ್ರಮುಖಾಂಶವಾಯಿತು.

ವಚನ ಸಾಹಿತ್ಯವೇ ಕನ್ನಡದ ಮೊದಲ ಬಂಡಾಯ ಸಾಹಿತ್ಯ ಎನ್ನಬಹುದು. ನಿಂತ ನೀರಾಗಿ ಪಾಚಿಕಟ್ಟಿದ್ದ ಅಂದಿನ ಧಾರ್ಮಿಕ ವ್ಯವಸ್ಥೆಯ ವಿರುದ್ಧ ವಚನಕಾರರು ಬಂಡಾಯದ ಕಹಳೆ ಊದಿದರು. ದುಡಿವವರ್ಗದಿಂದ ಶೋಷಿತವರ್ಗದಿಂದ ಬಂದ ವಚನಕಾರರು, ಧರ್ಮ ಹಚ್ಚಿದ ದ್ವೇಷದ ದಳ್ಳುರಿಯನ್ನು ಪ್ರತಿಭಟಿಸಿ ಮಾನವೀಯತೆಯ ಬೀಜ ಬಿತ್ತಿದರು. ಬಂಡಾಯ ವಚನಕಾರರ ಮನೋಧರ್ಮವಾಗಿತ್ತು. ಚಿಂತನೆಯ ಒರೆಗಲ್ಲಿಗೆ ಹಚ್ಚದೆ ಯಾವುದನ್ನೂ ಅವರು ಒಪ್ಪುತ್ತಿರಲಿಲ್ಲ. ಅಂದಿನ ಅನುಭವ ಮಂಟಪ ಜಾತಿ, ಧರ್ಮ, ಲಿಂಗ ಮತ್ತು ವಯಸ್ಸಿನ ಭೇದವಿಲ್ಲದೆ ಎಲ್ಲರಿಗೂ ತೆರೆದ ವೇದಿಕೆಯಾಗಿತ್ತು. ತಮ್ಮ ಮಿತಿಗಳನ್ನು ತಾವೇ ದಾಟುತ್ತಾ, ತಮ್ಮ ಆತ್ಮಕ್ಕೆ ತಾವೇ ಪ್ರಶ್ನಿಸಿಕೊಳ್ಳುತ್ತಾ ತಮ್ಮನ್ನು ತಾವೇ ತಿದ್ದಿಕೊಳ್ಳುತ್ತಾ ನುಡಿದಂತೆ ನಡೆದರು. ಬದುಕಿದ್ದನ್ನೇ ಬರೆದರು. ವಚನಕಾರರ ಯುಗ ಒಂದು ಬೌದ್ಧಿಕ ಪ್ರವಾಹದಂತೆ ಹರಿಯಿತು. ಸಮಾಜದ ಎಲ್ಲಾ ಸ್ತರಗಳ ಜನರೂ ಇದರಲ್ಲಿ ಮಿಳಿತವಾಗಿ ತಾವೂ ತಿಳಿಯುತ್ತಾ ಇತರರಿಗೆ ತಿಳಿಸುತ್ತಾ ಬೆಳೆದು ಇಡೀ ಸಮೂಹವನ್ನೇ ಒಂದು ಬೌದ್ಧಿಕ ಹಾಗೂ ಆಧ್ಯಾತ್ಮಿಕದ ಎತ್ತರಕ್ಕೆ ತೆಗೆದುಕೊಂಡು ಹೋದರು. ಹೀಗೆ ಬೌದ್ಧಿಕವಾಗಿ ಬೆಳೆಯುತ್ತಾ ಸಾಮಾಜಿಕವಾಗಿ ಹೋರಾಡುತ್ತಾ ಅರಿವಿನೊಂದಿಗೆ ವಿವೇಕಯುತವಾಗಿ ನಡೆದ ಕ್ರಾಂತಿ ಜಗತ್ತಿನಲ್ಲಿ ಇನ್ನೊಂದಿಲ್ಲ ಎಂದೇ ಅನ್ನಬಹುದು.

ಇಂತಹ ಒಂದು ಕ್ರಿಯಾತ್ಮಕ ಹೋರಾಟದಲ್ಲಿ ವಚನಕಾರ್ತಿಯರ ಪಾಲೂ ಕಡಿಮೆಯದಲ್ಲ. ಒಂದು ಅಂದಾಜಿನ ಪ್ರಕಾರ ಇದುವರೆಗೂ ಸಿಕ್ಕ ಇಪ್ಪತ್ತು ಸಾವಿರ ವಚನಗಳಲ್ಲಿ ಸುಮಾರು ಒಂದು ಸಾವಿರದ ನೂರಕ್ಕೂ ಹೆಚ್ಚು ವಚನಗಳು ಮಹಿಳೆಯರು ರಚಿಸಿದ್ದು. ಒಟ್ಟು ಸುಮಾರು ಮೂವತ್ತಮೂರು ವಚನಕಾರ್ತಿಯರಿದ್ದರು ಎನ್ನುವ ಊಹೆ ಇದೆ. ಈ ಮಟ್ಟದ ಸ್ತ್ರೀಯರ ಭಾಗವಹಿಸುವಿಕೆಗೆ ಕಾರಣ ಸ್ತ್ರೀಯನ್ನು ಕಂಡ ಕಂಡಿರಿಸಿದ ಶರಣರ ದೃಷ್ಟಿ ಉದಾತ್ತವೂ ವಿಶಾಲವೂ ಆಗಿತ್ತು. ಹೀಗೆ ಪುರುಷ ಸಮಾನ ಸ್ಥಾನವನ್ನು ನೀಡಿ ಗೌರವಿಸಿದರು. ಶತಶತಮಾನಗಳಿಂದಲೂ ಭೋಗವಸ್ತುವಾಗಿ ಅಲಕ್ಷಿಸಲ್ಪಟ್ಟಿದ್ದ ಹೆಣ್ಣಿಗೆ ಉನ್ನತ ಸ್ಥಾನ ಕೊಟ್ಟರು. ಹೆಣ್ಣು ಮಾಯೆ ಎಂದ ಜಗತ್ತಿಗೆ "ಹೆಣ್ಣು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ" ಎಂದು ಉತ್ತರ ಕೊಟ್ಟರು. ಅಂತೆಯೇ "ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂದು ಹೆಣ್ಣಿಗೆ ಪೂಜೆಯಲ್ಲಿ ಸಮಾನ ಸ್ಥಾನ ನೀಡುತ್ತಲೇ ದಾಂಪತ್ಯಕ್ಕೊಂದು ಗೌರವ ತಂದರು. ಹೀಗೆ ವಸ್ತುನಿಷ್ಠರೂ ವಾಸ್ತವವಾದಿಗಳೂ ಆದ್ದರಿಂದಲೇ ವಚನಕಾರರು ಸರ್ವಕಾಲಕ್ಕೂ ಸಲ್ಲುತ್ತಾರೆ.

ಶರಣರು ನೀಡಿದ ಈ ಅವಕಾಶ ಅರಿವುಗಳನ್ನು ವಿಫುಲವಾಗಿ ಅದ್ಭುತವಾಗಿ ಬಳಸಿಕೊಂಡ ವಚನಕಾರ್ತಿಯರು ಅವರು ಹಾಕಿದ ಹೆಜ್ಜೆಯನ್ನು ಅನುಸರಿಸಿದರು. ಆದ್ದರಿಂದ ಈ ಎಲ್ಲ ಸನ್ನಿವೇಶ ಸಂದರ್ಭದ ಪರಿಣಾಮವನ್ನು ವಚನಕಾರ್ತಿಯರ ವಚನಗಳಲ್ಲಿ ಕಾಣಬಹುದು. ಅಂದಿನ ವಚನಕಾರ್ತಿಯರಲ್ಲಿದ್ದ ಧೈರ್ಯ, ಕೆಚ್ಚು, ಛಲ, ಪ್ರತಿಭಟನೆ, ಮುಕ್ತತೆ ಇಂದಿಗೂ ಕಾಣುವುದು ಕಷ್ಟಸಾಧ್ಯವಾಗಿದೆ.

ಸುಮಾರು ಎಂಟುನೂರು ವರ್ಷಗಳಷ್ಟು ಹಿಂದೆಯೇ ಸ್ತ್ರೀಪುರುಷರ ನಡುವಿನ ಅಸಮಾನತೆಯ ಬಗ್ಗೆ ದನಿ ಎತ್ತಿದವರು ವಚನಕಾರ್ತಿಯರು. ಸ್ತ್ರೀ ಪ್ರಜ್ಞೆಯ ಮೂಲಸೆಲೆ ಭಾರತಭೂಮಿಯಲ್ಲಿ ಅದೂ ಕರುನಾಡಿನಲ್ಲಿ ಮೊದಲು ಉಗಮವಾಯಿತು ಎಂಬುದೇ ಹೆಮ್ಮೆಯ ವಿಷಯ.

ವಚನಕಾರ್ತಿಯಲ್ಲಿ ಶಿಖರಪ್ರಾಯವಾಗಿ ಅಕ್ಕಮಹಾದೇವಿ ಇದ್ದರೆ ಪುಟ್ಟ ಶಿಖರಗಳಾಗಿ ಉರಿಲಿಂಗ ಪೆದ್ದಿಯ ಹೆಂಡತಿ ಕಾಳವ್ವೆ, ಅಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಹಾದರದ ಗಂಗಮ್ಮ, ಸತ್ಯಕ್ಕ, ಸೂಳೆಸಂಕವ್ವೆ, ಕದಿರೆಮ್ಮವ್ವೆ, ಮೋಳಿಗೆ ಮಹಾದೇವಿ, ದುಗ್ಗವ್ವೆ, ಬೋಂತಾದೇವಿ, ಗೊಗ್ಗವ್ವೆ ಇನ್ನೂ ಮುಂತಾದವರು ಬರುತ್ತಾರೆ.

ಗೊಗ್ಗವ್ವೆಯ ಬದುಕು-ಬರಹ : ಗೊಗ್ಗವ್ವೆಯು ರಚಿಸಿದ ವಚನಗಳು ಏಳು. ಸಂಖ್ಯೆಯ ದೃಷ್ಟಿಯಿಂದ ನೋಡಿದಾಗ ಬಹಳ ಕಡಿಮೆ ಎನಿಸಿದರೂ ವಿಷಯದ ಔನ್ನತ್ಯದ ಹಿರಿಮೆಯೇನೂ ಕಡಿಮೆಯದಲ್ಲ. ನಾಸ್ತಿನಾಥ ಎಂಬ ಅಂಕಿತದಿಂದ ಬರೆದಿದ್ದರಿಂದ ನಾಥ ಪಂಥದ ಪ್ರಭಾವ ಈಕೆಯ ಮೇಲಾಗಿರಬಹುದು ಎಂಬ ಊಹೆ ಇದೆ. ಗೊಗ್ಗವ್ವೆ ಶಿವನಿಗೆ ಧೂಪ ಹಾಕುವ ಕೆಲಸದ ಮೂಲಕ ಶಿವಸಾಕ್ಷಾತ್ಕಾರವನ್ನು ಕಂಡುಕೊಂಡವಳು. ಪುರಾಣಗಳ ಪ್ರಕಾರ ಗೊಗ್ಗವ್ವೆ ಚೇರಮರಾಯನ ಜ್ಞಾನೋದಯಕ್ಕೆ ಕಾರಣಳಾದವಳು ಎಂದು ತಿಳಿದುಬರುತ್ತದೆ. ಇಷ್ಟು ಬಿಟ್ಟರೆ ಆಕೆಯ ವೈಯಕ್ತಿಕ ವಿಷಯಗಳೇನೂ ತಿಳಿದು ಬರುವುದಿಲ್ಲ.

ಆಕೆಯ ವಚನಗಳಿಂದ ನಾವು ಆಕೆಯ ಧೋರಣೆಗಳನ್ನು ನಿಚ್ಚಳವಾಗಿ ಅರಿಯಬಹುದು. ಗೊಗ್ಗವ್ವೆ ಹೆಣ್ಣು ಗಂಡುಗಳ ಭೇದವನ್ನು ಮನ್ನಿಸುವುದಿಲ್ಲ ಎಂಬುದನ್ನು ಅವಳ ಈ ಕೆಳಗಿನ ವಚನದ ಮೂಲಕ ತಿಳಿಯಬಹುದು:

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೊ ಗಂಡೊ ನಾಸ್ತಿನಾಥಾ?

ಜ್ಞಾನಕ್ಕೆ ಬಾಹ್ಯ ಶರೀರ ಮುಖ್ಯವಲ್ಲ. ಅದಕ್ಕೆ ಲಿಂಗಭೇದವೇಕೆ ಎಂಬುದು ಅವಳ ವಾದ.

ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಒಬ್ಬರ ಒಡವೆ ಎಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು?
ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ.

ಗೊಗ್ಗವ್ವೆಯ ಈ ವಚನ ಈ ದೇಶದ ಸಂಸ್ಕೃತಿಯ ಬುಡವನ್ನೇ ಅಲ್ಲಾಡಿಸುವಂತಿದೆ. ಈ ವಚನದಲ್ಲಿ ಗೊಗ್ಗವ್ವೆ ಹೆಣ್ಣಿಗೊಂದು ಗಂಡಿಗೊಂದು ನಿಯಮ ಇರುವುದನ್ನು ಪ್ರಶ್ನಿಸುತ್ತಾಳೆ. ಗಂಡು ಮೋಹಿಸಿ ಹೆಣ್ಣನ್ನು ಹಿಡಿದರೆ ಅದು ಅವನ ಒಡವೆಯಾಗುತ್ತದೆ. ಅದೇ ಹೆಣ್ಣು ಮೋಹಿಸಿ ಗಂಡನ್ನು ಹಿಡಿದರೆ ಅವನು ಅವಳ ಒಡವೆಯಾಗುವನೆ? ಇದಕ್ಕೆ ಉತ್ತರವೇನು ಎಂದು ಕೇಳುವ ಅವಳ ಪ್ರಶ್ನೆಯಲ್ಲಿ ಸಂಗಾತಿಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ಇಬ್ಬರಿಗೂ ಸಮಾನವಾಗಿರಬೇಕು ಎನ್ನುವ ದೃಷ್ಟಿ ಇದೆ.

ಇಲ್ಲಿ ಅವಳು ಗಂಡ ಹೆಣ್ಣಿನ ಒಡವೆಯಾಗಬೇಕು ಎಂದು ಹೇಳುವುದಿಲ್ಲ. ಬದಲಿಗೆ ಯಾರಿಗೂ ಯಾರೂ ಒಡವೆಯಾಗಬಾರದೆನ್ನುವ ಸಮಾನತೆಯ ಆಶಯವನ್ನು ಪ್ರಕಟಿಸುತ್ತಾಳೆ. ಮೋಹಿಸುವ ಕ್ರಿಯೆ ಹೆಣ್ಣಿನಿಂದ ನಡೆದರೂ ಅಷ್ಟೆ ಗಂಡಿನಿಂದ ನಡೆದರೂ ಅಷ್ಟೇ ಎನ್ನುವ ಒಳಸತ್ಯ ಪ್ರಶ್ನೆಯ ಮೂಲಕವೇ ಪರೋಕ್ಷವಾಗಿ ಉತ್ತರದ ರೂಪ ಪಡೆದುಕೊಳ್ಳುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ಈ ದೇಶದಲ್ಲಿ ಹೆಣ್ಣು ಒಂದು ಒಡವೆಯಾದ, ವಸ್ತುವಾದ ವಿಷಾದದ ನೋವು ಇಲ್ಲಿದೆ. ಇದು ನಮ್ಮ ಭವ್ಯ ಸಂಸ್ಕೃತಿಗೆ ಹಿಡಿದ ಕನ್ನಡಿ. ಆಕೆ ನೇರವಾಗಿ ಪ್ರಶ್ನಿಸಿರುವ ಧಾಟಿ ಪರಂಪರಾಗತವಾಗಿ ಬಂದ ಪುರುಷ ಪ್ರಧಾನ ಸಮಾಜಕ್ಕೆ ಬಿಟ್ಟ ಬಾಣ–ನೆಟ್ಟ ಚೂರಿ. ಈ ಪ್ರಶ್ನೆ ಹೆಣ್ಣಿನ ಶತಮಾನಗಳ ನೋವಿನ ಧ್ವನಿ ಅವಳ ಎದೆಗಾರಿಕೆ, ಕೆಚ್ಚು ಮನಮೆಚ್ಚುವಂತೆ ಎಂಟುನೂರ ವರ್ಷಗಳ ಹಿಂದೆ ದನಿ ಎತ್ತಿದರೂ ಇಂದಿಗೂ ಹೆಣ್ಣಿನ ಸಂದರ್ಭ ಹಾಗೆಯೇ ಇರುವ ಕಾರಣವನ್ನು ಕೆದಕುವುದು ಸಕಾರಣವಾಗುತ್ತದೆ.

ವಚನಕಾರರೆಲ್ಲರು ಪ್ರಶ್ನೆಗಳಿಗೆ ಆಧ್ಯಾತ್ಮದಲ್ಲಿಯೇ ಪರಿಹಾರಕಂಡುಕೊಳ್ಳವುದಕ್ಕೆ ಅವರಿಗಿದ್ದಂತಹ ಧಾರ್ಮಿಕ ಚೌಕಟ್ಟು ಕಾರಣ ಎನ್ನಬಹುದಾದರೂ ಇದು ಅವರ ಮಿತಿಯೂ ಹೌದು ಎನ್ನುವುದನ್ನು ಒಪ್ಪಲೇಬೇಕಾಗುತ್ತದೆ. ಆದರೆ ಆ ಮಿತಿಯಲ್ಲಿಯೇ ಅವರು ಸಾಧಿಸಿದ ಎತ್ತರವನ್ನು ಮರೆಯಲಾಗದು.

ಗೊಗ್ಗವ್ವೆಯಂತಹ ಅನೇಕ ವಚನಕಾರ್ತಿಯರು ಅಂದಿನ ಸಮಾಜ ವ್ಯವಸ್ಥೆಯಲ್ಲಿದ್ದ ಅಸಮಾನತೆಗೆ ಪುರುಷರನ್ನು ನಿಂದಿಸುವುದಿಲ್ಲ ಅಥವಾ ಸೇಡಿನ ಮನೋಭಾವನೆಯನ್ನು ಹೊಂದುವುದಿಲ್ಲ. ಇಬ್ಬರ ಅಜ್ಞಾನಕ್ಕೆ ಕಾರಣವಾಗಿರುವ ಸ್ಥಾಪಿತ ಮೌಲ್ಯಗಳನ್ನು ಪ್ರಶ್ನಿಸುತ್ತಾರೆ. ಇದು ಸ್ತ್ರೀವಾದದ ನೆಲೆಯಲ್ಲಿ ಅತ್ಯಂತ ಮಹತ್ವದ ಸಂಗತಿ.

ಗೊಗ್ಗವ್ವೆಯ ಇನ್ನಿತರ ವಚನಗಳು ಈ ಕೆಳಕಂಡಂತಿವೆ:

ಅನಲಕೊಂಡ ಭೋಗಕ್ಕೆ ಪರಿಪ್ರಕಾರವುಂಟೆ?
ಶರಧಿಕೊಂಡ ಸಾಗರಕ್ಕೆ ಕುರುಹಿನ ತಲೆಯೇ?
ಲಿಂಗ ಮುಟ್ಟಿದ ಅಂಗಕ್ಕೆ ಮತ್ತೆ ಪುಣ್ಯ ಉಂಟೆ?

ಹುಸಿ ನಾಸ್ತಿನಾಥಾ.
ಉದ್ದವನೇರುವುದಕ್ಕೆ ಗದ್ದುಗೆಯಿಲ್ಲದೆ ಎಯ್ದಬಾರದು
ಚಿದ್ರೂಪನರಿವುದಕ್ಕೆ ಅರ್ಚನೆ ಪೂಜನೆ
ನಿತ್ಯ ನೇಮವಿಲ್ಲದೆ ಕಾಣಬಾರದು
ಅದ ಸತ್ಯದಿಂದ ಮಾಡಿ ಅಸತ್ಯವ ಮರೆದಡೆ
ಇದೇ ಸತ್ಯ ನಾಸ್ತಿನಾಥಾ

ಭಕ್ತರು ಜಂಗಮದಲ್ಲಿ ಕಟ್ಟಿ ಹೋರಲೇಕೆ?
ಧೂಪದ ಹೊಗೆ ಎತ್ತ ಹೋದಡೂ ಸರಿ
ಇದು ಸತ್ಯವೆಂದೆ ನಾಸ್ತಿನಾಥಾ

ಮಾರುತನಲ್ಲಿ ಬೆರೆದ ಗಂಧದಂತೆ
ಸುರತದಲ್ಲಿ ಬೆರೆದ ಸುಖದಂತೆ
ಮಚ್ಚಿದಲ್ಲಿ ಕೊಡುವ ಉಚಿತದಂತೆ
ಭಕ್ತರಿಗದೆ ಹಾದಿ ಎಂದೆ ನಾಸ್ತಿನಾಥಾ

ಈ ಎಲ್ಲ ವಚನಗಳು ಪೂಜೆ ನೇಮ ವ್ರತಗಳ ಕುರಿತಾಗಿದೆ. ವಿಷಯದಲ್ಲಿ ವಿಶೇಷವಿಲ್ಲದಿದ್ದರೂ ಪದಗಳ ಪ್ರಾಸ, ಉಪಮೆಗಳು, ವಿಚಾರದಲ್ಲಿನ ಧೃಡತೆ, ಆಧ್ಯಾತ್ಮದ ಔನ್ನತ್ಯ ಗಮನ ಸೆಳೆಯುತ್ತವೆ.

ಸಮಾರೋಪ : ವಚನ ಸಾಹಿತ್ಯದಲ್ಲಿ ವಚನಕಾರ್ತಿಯರ ಸಂಖ್ಯೆ ಅವರು ಕೊಟ್ಟ ಸಾಹಿತ್ಯದ ವಿಪುಲತೆ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಅತ್ಯಂತ ಗಮನಾರ್ಹವಾದುದು. ವಚನಕಾರರ ಜೊತೆ ಸಮಾನ ಹೆಜ್ಜೆ ಹಾಕಿದ ವಚನಕಾರ್ತಿಯರು ಸ್ತ್ರೀ ಸಮುದಾಯದಲ್ಲಿ ಜಾಗೃತಿ ಮೂಡಿಸಿದ್ದು, ಸಮಾಜದ ಸಮಸ್ಯೆಗಳಿಗೆ ವ್ಯಕ್ತಿನಿಷ್ಠವಾಗಿ ಸ್ಪಂದಿಸಿದ್ದು ಬಹಳ ಮೌಲಿಕವಾದಂತಹ ಕೊಡುಗೆ.

ಮಹಾದೇವಿಯಕ್ಕನಂಥವರ ವಚನಗಳಲ್ಲಿ ಆಧ್ಯಾತ್ಮಿಕ ಔನ್ನತ್ಯ, ಕಾವ್ಯದ ಉತ್ಕೃಷ್ಟತೆ ಕಂಡುಬಂದರೆ ಗೊಗ್ಗವ್ವೆಯಂತಹ ವಚನಕಾರ್ತಿಯರಲ್ಲಿ ಸ್ತ್ರೀಪರ ಚಿಂತನೆ, ಸಾಮಾಜಿಕ ಕಳಕಳಿ ಎದ್ದು ಕಾಣುತ್ತದೆ. ಸರಳ, ನೇರ, ನಿಷ್ಠುರ, ನಿರ್ಭಯತೆಗಳೇ ವಚನಕಾರ್ತಿಯರ ವೈಶಿಷ್ಟ್ಯತೆ.

ಹನ್ನೆರಡನೆಯ ಶತಮಾನದ ಈ ಮಹಿಳೆಯರ ಕೊಡುಗೆ ಜಾಗತಿಕ ಇತಿಹಾಸದಲ್ಲೇ ವಿಶಿಷ್ಟವಾದುದು ಹಾಗೂ ಭಾರತೀಯ ಇತಿಹಾಸದಲ್ಲಿ ವೈಚಾರಿಕ ಕ್ರಾಂತಿಯನ್ನು ಮೊದಲು ಹುಟ್ಟುಹಾಕಿದ ಸ್ತ್ರೀ ಸಮುದಾಯ ಎಂಬ ಮಹತ್ವದ ಮನ್ನಣೆಗೆ ವಚನಕಾರ್ತಿಯರು ಸಲ್ಲುತ್ತಾರೆ. ಆ ಮಿನುಗು ನಕ್ಷತ್ರಗಳಲ್ಲಿ ಗೊಗ್ಗವ್ವೆಯೂ ಒಬ್ಬಳಾಗಿರುವುದು ಅವಳು ಮೂಡಿಸಿದ ಛಾಪು.

———— * ————

ದೇಶಾಭಿಮಾನಿ ಉಳ್ಳಾಲದ ರಾಣಿ ಅಬ್ಬಕ್ಕ

ಡಾ. ಎಂ.ಬಿ. ಪದ್ಮ

ಮನುಕುಲದ ಇತಿಹಾಸಲ್ಲಿ ಅತ್ಯಂತ ಪುರಾತನವಾದ ಹಾಗೂ ಭವ್ಯವಾದ ಸಾಮಾಜಿಕ- ಸಾಂಸ್ಕೃತಿಕ ಪರಂಪರೆಯನ್ನು ಬೆಳೆಸಿಕೊಂಡು ಬಂದಿರುವ ದೇಶ ನಮ್ಮ ಭಾರತ. ಈ ಪರಂಪರಾವಾಹಿನಿಯು ನಿರಂತರವಾಗಿ ಹರಿಯುತ್ತಾ ಬರುತ್ತಿರುವ ಪವಿತ್ರ ಗಂಗಾ ನದಿಯಂತೆ ಎಡಬಿಡದೆ ಪ್ರವಹಿಸುತ್ತಾ ಮುಂಬರಿಯುತ್ತಿದೆ. ಇಲ್ಲಿ ಸತ್ಯ, ಅಹಿಂಸೆ, ವಿಶ್ವಪ್ರೇಮ, ವಿಶಾಲದೃಷ್ಟಿ, ತೆರೆದ ಮನೋಬುದ್ಧಿ, ವೈಜ್ಞಾನಿಕ, ವೈಚಾರಿಕ ಮನೋಭಾವ, ಆತ್ಮಸಂಯಮ, ದಯೆ, ನಿಸ್ವಾರ್ಥತ್ಯಾಗ-ಸೇವೆ, ಸರ್ವಧರ್ಮ ಸಮಾನತ್ವ, ಸಹಿಷ್ಣುತೆ, ರಚನಾತ್ಮಕವಾದ ದಾರ್ಶನಿಕ ದೃಷ್ಟಿಕೋನ, ಆಧ್ಯಾತ್ಮಿಕಾಭಿಮುಖತೆ ಮುಂತಾದ ಮಾನವನನ್ನು ವಿಶ್ವಮಾನವ, ದೇವಮಾನವನನ್ನಾಗಿಸಬಲ್ಲ ಜೀವನೋತ್ಕರ್ಷಕ ಮೌಲ್ಯಗಳ ಸುಮಧುರ ಕಂಪು; ಸಂಯೋಜನಾ ಸಾಮರ್ಥ್ಯ, ಸಮಷ್ಟಿ ದೃಷ್ಟಿ ಹಾಗೂ ವಸ್ತುನಿಷ್ಠೆ ಅವಲೋಕನ-ಅಧ್ಯಯನಾಧಾರಿತ ಸುಜ್ಞಾನದ ಸೊಂಪು ಮತ್ತು ವೈವಿಧ್ಯದಲ್ಲಿ ಏಕತೆಯನ್ನು ಅರಸಿ ಅರಿಯುವ ಸೂಕ್ಷ್ಮ ಪರಿಜ್ಞಾನ ಹಾಗೂ ಆತ್ಮಜ್ಞಾನದ ದಿವ್ಯ ದೀಪ್ತಿಯ ಪೆಂಪು-ತಂಪು ತುಂಬಿದೆ. ಸಂಸ್ಕೃತಿ ಎಂದರೆ, "ಮಾಧುರ್ಯ ಮತ್ತು ಸುಜ್ಞಾನ" ಎಂಬುದಾಗಿ ಮ್ಯಾಥ್ಯೊ ಆರ್ನಾಲ್ಡ್ ನೀಡಿರುವ ವ್ಯಾಖ್ಯೆಗೆ ಅತ್ಯುತ್ತಮವಾದ ಉದಾಹರಣೆ ಎಂದರೆ ನಮ್ಮ ಭಾರತದ ಸಂಸ್ಕೃತಿ ಎಂಬುದಾಗಿ ಧಾರಾಳವಾಗಿ ಹೇಳಬಹುದು. ಇದನ್ನು ಸಂರಕ್ಷಿಸಿ, ಪೋಷಿಸಿ, ಕಾಲ-ಕಾಲಕ್ಕೆ ಬದುಕಿನಲ್ಲಿ ಸಂಭವಿಸುತ್ತಾ ಬಂದಿರುವ/ ಬರುತ್ತಿರುವ ಬದಲಾವಣೆಗಳಿಗೆ ಅನುಗುಣವಾಗಿ ಇದರಲ್ಲಿ ಸೂಕ್ಷ್ಮ ಪರಿವರ್ತನೆಗಳನ್ನು ಮಾಡಿ ಉತ್ತಮೀಕರಿಸುವ ಮಹತ್ಕಾರ್ಯದಲ್ಲಿ ಮೊದಲಿನಿಂದಲೂ ಭಾರತದ ಮಹಿಳೆಯರು ವಹಿಸಿರುವ/ ವಹಿಸುತ್ತಾ ಬಂದಿರುವ ಪಾತ್ರ ಮತ್ತು ನೀಡಿರುವ/ ನೀಡುತ್ತಾ ಬಂದಿರುವ ಕೊಡುಗೆಗಳು ಸ್ತುತ್ಯರ್ಹವಾದುವೇ.

"ಭಾರತ ಜನನಿಯ ತನುಜಾತೆ"ಯಾಗಿರುವ ಕರ್ಣಾಟಕ ಜನರ ಬದುಕಿನ ರೀತಿಗಳ ಮೂಲ ಜೀವಸತ್ತ್ವವೂ ಇದೇ ಆಗಿದೆ. ಇಲ್ಲಿನ ಶಾಸನಗಳು, ಗ್ರಂಥಗಳೇ ಮುಂತಾದ ಮೂಲಾಧಾರಗಳಲ್ಲಿ ಸಮಾಜದ ಎಲ್ಲಾ ಸ್ತರಗಳಿಗೆ ಸೇರಿದ್ದ ಮಹಿಳೆಯರು ತಮ್ಮದೇ ಆದ ಬಗೆಯಲ್ಲಿ ಜೀವನದ ಎಲ್ಲಾ ಕ್ಷೇತ್ರಗಳನ್ನು ಶ್ರೀಮಂತಗೊಳಿಸುವಂಥ ಕೊಡುಗೆಗಳನ್ನು ನೀಡುತ್ತಾ ಬಂದಿದ್ದಾರೆ ಮತ್ತು ಪುರುಷರಿಗೆ ಸರಿಸಮವಾಗಿ ನಿಂತು ಸುಭದ್ರವೂ, ಗತಿಶೀಲವೂ ಆಗಿರುವಂತಹ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಕಲಾತ್ಮಕ ಹಾಗೂ ರಾಜಕೀಯ ಪರಂಪರೆ ಮತ್ತು ಸಂಸ್ಥೆಗಳನ್ನು ಕಟ್ಟಿ ಬೆಳೆಸುವಂಥ ಗುರುತರವಾದ ಹೊಣೆಗಾರಿಕೆಯನ್ನು ಪ್ರಶಂಸಾರ್ಹವಾದ ರೀತಿಯಲ್ಲಿ ಹೊತ್ತು ನಿರ್ವಹಿಸುತ್ತಾ ಬಂದಿದ್ದಾರೆ ಎಂಬ ವಸ್ತುಸ್ಥಿತಿಯ ಸ್ಪಷ್ಟ ಚಿತ್ರಣವನ್ನು ಕಾಣಬಹುದು.

ದೇವಾಲಯ, ಗುಡಿ-ಗೋಪುರ, ಬಸದಿಗಳನ್ನು ಕಟ್ಟಿದ, ದೇವರ ಪ್ರತಿಮೆಗಳನ್ನು ಪ್ರತಿಷ್ಠಾಪನೆ ಮಾಡಿದ ಮತ್ತು ಪವಿತ್ರಾಲಯಗಳಿಗೆ ಹಾಗೂ ಅವುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರ ಯೋಗಕ್ಷೇಮಕ್ಕಾಗಿ ಅನೇಕ ವಿಧವಾದ ದತ್ತಿ, ಭೂಮಿ-ಕಾಣಿಕೆಗಳನ್ನು ಅರ್ಪಿಸಿದ; ಜನ-ಜಾನುವಾರುಗಳ ಉಪಯೋಗಕ್ಕಾಗಿ ಹಾಗೂ ಕೃಷಿ ಕಾರ್ಯಕ್ಕಾಗಿ ಕೆರೆ-ಕುಂಟೆ-ಕಾಲುವೆಗಳನ್ನು ಕಟ್ಟಿದ ಮತ್ತು ದಾರಿಹೋಕರಿಗಾಗಿ ತೋಪುಗಳನ್ನು ಬೆಳೆಸಿದ, ಅನ್ನಸತ್ರಗಳನ್ನು, ಮಠಗಳನ್ನು

ಸ್ಥಾಪಿಸಿದ; ವಿವಿಧ ವೃತ್ತಿಗಳಲ್ಲಿ ತೊಡಗಿದ್ದ; ಶಿಕ್ಷಣ ಕ್ಷೇತ್ರ ಮತ್ತು ಗುರು-ಶಿಷ್ಯರಿಗಾಗಿ ಹಲವಾರು ಬಗೆಯ ದಾನಗಳನ್ನು ನೀಡಿದ; ಸಂಗೀತ, ನೃತ್ಯವೇ ಮುಂತಾದ ಕಲೆಗಳಲ್ಲಿ ನಿಷ್ಣಾತರಾಗಿದ್ದ ಮತ್ತು ವಾಸ್ತು-ಶಿಲ್ಪಕಲೆಗಳನ್ನು ಪ್ರೋತ್ಸಾಹಿಸಿದ್ದ ಅನೇಕಾನೇಕ ರಾಣಿಯರ, ಅಧಿಕಾರಿಗಳ ಪತ್ನಿಯರ ಮತ್ತು ಸಾಮಾನ್ಯ ಸ್ತ್ರೀಯರ ಹೆಸರುಗಳನ್ನು ಈ ಆಧಾರಗಳು ಅತ್ಯಂತ ಗೌರವದಿಂದ ಸೂಚಿಸಿ, ಅವರ ದಾನಶೀಲತೆ, ಧರ್ಮನಿಷ್ಠತೆ, ಔದಾರ್ಯ ಇತ್ಯಾದಿಗಳನ್ನು ಕೊಂಡಾಡಿ ಅವರನ್ನು ಅಮರರನ್ನಾಗಿಸಿವೆ.

ಇಷ್ಟು ಮಾತ್ರವಲ್ಲದೆ. ರಾಜಕೀಯ ಕ್ಷೇತ್ರದಲ್ಲೂ ಸಹ ಮಹಿಳೆಯರು ಮಿಂಚಿದ್ದಾರೆ. ರಾಜ್ಯಗಳನ್ನು ಆಳಿದ ಅರಸಿಯರು, ಸಮರ್ಥವಾಗಿ ರಾಜ್ಯಾಡಳಿತ ನಡೆಸಿದ ಆಡಳಿತಗಾರ್ತಿಯರು, ಪ್ರಜೆಗಳ ಒಳಿತಿಗಾಗಿ ತಮ್ಮನ್ನೇ ಮುಡಿಪಾಗಿಟ್ಟು ರಾಜಧರ್ಮವನ್ನು ಚಾಚು ತಪ್ಪದಂತೆ ಅನುಸರಿಸಿ ಆಳಿದ ರಾಣಿಯರು ಮತ್ತು ಯುದ್ಧೋಚಿತ ಮೌಲ್ಯಗಳನ್ನು ತಮ್ಮ ವ್ಯಕ್ತಿತ್ವದ ಭಾಗವನ್ನಾಗಿಸಿಕೊಂಡ ಕದನಕಲೆಗಳನ್ನು ಕರತಲಾಮಲಕ ಮಾಡಿಕೊಂಡು ತಾಯ್ನೆಲದ ಸ್ವಾತಂತ್ರ್ಯವನ್ನು ಕಾಪಾಡುವುದಕ್ಕಾಗಿ ಕೆಚ್ಚೆದೆಯಿಂದ ಕಾದಾಡಿದ ವೀರರಮಣಿಯರು ಕರ್ನಾಟಕದ ರಾಜಕೀಯಾಗಸದಲ್ಲಿ ನಕ್ಷತ್ರಗಳಂತೆ ಹೊಳೆಯುತ್ತಿದ್ದಾರೆ. ಈ ನಕ್ಷತ್ರಪುಂಜದಲ್ಲಿರುವ ಹಿರಿಯ ಹಾಗೂ ಇಮ್ಮಡಿ ಅಬ್ಬಕ್ಕ ಅತ್ಯಂತ ಪ್ರಮುಖ ವೀರವನಿತೆ.

ಹದಿನೈದನೆಯ ಶತಮಾನದ ಅಂತ್ಯದ ಸಮಯದಲ್ಲಿ ಜಗತ್ತಿನ ಒಂದು ಅನಿರೀಕ್ಷಿತ ಭೂಭಾಗದಿಂದ ವಿದೇಶಿವರ್ತಕ ಅಲೆಗಳು ಬಂದು ದಕ್ಷಿಣ ಭಾರತದ ಕಡಲದಂಡೆಗಳನ್ನು ಅಪ್ಪಳಿಸಿದುವು. ಹೀಗೆ ಈ ಕಾಲದಲ್ಲಿ ಯುರೋಪ್ ಖಂಡದಿಂದ ಇಲ್ಲಿಗೆ ಬಂದ ಮೊಟ್ಟಮೊದಲ ವಿದೇಶಿಯರೇ ಪೋರ್ಚುಗೀಸರು. ಕಲ್ಲಿಕೋಟೆಯ ಜಾಮೊರಿನ್ ಪ್ರಭುವಿನಿಂದ ಎಲ್ಲಾ ವಾಣಿಜ್ಯ ಸೌಲಭ್ಯಗಳನ್ನು ಪಡೆದುಕೊಂಡ ಅವರು ಕ್ರಮೇಣ ಕರಾವಳಿ ಪ್ರದೇಶಗಳಲ್ಲಿ ಮಳಿಗೆಗಳನ್ನು ಕಟ್ಟಿಕೊಂಡು ಅವುಗಳ ಸುತ್ತಲೂ ಕೋಟೆಗಳನ್ನು ನಿರ್ಮಿಸಿದರು. ನ್ಯಾಯಬದ್ಧವಾಗಿದ್ದ ವಾಣಿಜ್ಯ ನೀತಿಯನ್ನು ಗಾಳಿಗೆ ತೂರಿಬಿಟ್ಟು ಅವರು ದೇಶೀಯ ಹಾಗೂ ಇತರ ರಾಷ್ಟ್ರಗಳ ವರ್ತಕರಿಗೆ ಭಯಂಕರ ಮುಳ್ಳಾದರಲ್ಲದೆ ಇಲ್ಲಿನ ರಾಜಕೀಯ ವ್ಯವಹಾರಗಳಲ್ಲೂ ಹಸ್ತಕ್ಷೇಪವನ್ನು ಮಾಡಲಾರಂಭಿಸಿದರು ಹಾಗೂ ಇಡೀ ಕರಾವಳಿಯನ್ನೆಲ್ಲಾ ತಮ್ಮದೇ ಅಧಿಕಾರ ಕ್ಷೇತ್ರವೆಂದು ಬಗೆದು ಆಳಲಾರಂಭಿಸಿದರು.

ಉತ್ಕಟ ಸ್ವಾತಂತ್ರ್ಯಪ್ರೇಮಿಯೂ, ದೇಶಾಭಿಮಾನಿಯೂ ಆಗಿದ್ದ ರಾಣಿ ಹಿರಿಯ ಅಬ್ಬಕ್ಕನಿಗೆ ಈ ರೀತಿ ತಮ್ಮ ನೆಲ ಬೇರೆಯವರ ಅಧೀನದಲ್ಲಿರುವುದು, ಪರದೇಶದವರ ಗುಲಾಮಗಿರಿ ಅತ್ಯಂತ ಅಪ್ರಿಯವೂ, ಅಸಹ್ಯಕರವೂ ಹಾಗೂ ಅಪಮಾನಕರವೂ ಆದ ವಿಷಯವಾಗಿ ಅತ್ಯಂತ ಬೇಸರವನ್ನು ಉಂಟುಮಾಡಿದುವು. ಮಂಗಳೂರಿನ ಪಕ್ಕದಲ್ಲಿ ನೇತ್ರಾವತಿ ನದಿಯ ದಕ್ಷಿಣದಲ್ಲಿರುವ ಉಳ್ಳಾಲವನ್ನು ಆಳುತ್ತಿದ್ದ ಚೌಟ ಮನೆತನದ ಹಿರಿಯ ಅಬ್ಬಕ್ಕ ಅಲ್ಲಿನ ಮಾತೃ ಪ್ರಧಾನ ವ್ಯವಸ್ಥೆಯ ಪ್ರಕಾರ ಪಟ್ಟವೇರಿದಳು. ಆ ಪದ್ಧತಿಯ ಅನ್ವಯ, ಒಬ್ಬ ವ್ಯಕ್ತಿಯ ಮರಣಾನಂತರ ಅವನ ಆಸ್ತಿ ಅವನ ತಂಗಿಯ ಮಕ್ಕಳಿಗೆ ಸೇರಬೇಕು. ಅದೇ ಪ್ರಕಾರ, ಉಳ್ಳಾಲದ ರಾಜ ಮೃತ್ಯುವಶನಾದಾಗ ಅವಿವಾಹಿತಳಾಗಿ ಉಳಿದಿದ್ದ ಅವನ ತಂಗಿ ಹಿರಿಯ ಅಬ್ಬಕ್ಕ ಪಟ್ಟಾಭಿಷಿಕ್ತಳಾಗಿ ರಾಜ್ಯ ಸೂತ್ರಗಳನ್ನು ಹಿಡಿದಳು. ಪೋರ್ಚುಗೀಸರ ವಿರುದ್ಧ ನಡೆಸಿದ ಯುದ್ಧದಲ್ಲಿ ಅವಳು ಸೋಲಿನ ಕಹಿಯನ್ನು ಉಣ್ಣಬೇಕಾಗಿ ಬಂದು, ತನ್ನ ರಾಜ್ಯದಲ್ಲಿ ಭತ್ತ ಹಾಗೂ ಬಟ್ಟೆಗಳನ್ನು ಅವರಿಗೆ ಮಾರಲು ಒಪ್ಪಿಕೊಳ್ಳಬೇಕಾಯಿತು. ಅವರು ಆ ವಸ್ತುಗಳಿಗೆ ಕಡಮೆ ಬೆಲೆಯನ್ನು ನೀಡುತ್ತಿದ್ದರು. ಬೇರೆ ನಾಡುಗಳಲ್ಲಿ ಮಾರಿದ್ದರೆ ಆ ಪದಾರ್ಥಗಳಿಗೆ ಹೆಚ್ಚಿಗೆ ಬೆಲೆ ಸಿಗುತ್ತಿದ್ದಿತು. ಈ ಕಾರಣದಿಂದ ಆ ಧೀರರಾಣಿ ತನ್ನ ರಾಜ್ಯದ ರಕ್ಷಣೆಗಾಗಿ ಉಳ್ಳಾಲದಲ್ಲಿ ಕೋಟೆಯನ್ನು ಕಟ್ಟಿಸಿ, ತನ್ನ ಪ್ರಜೆಗಳ ಹಿತಕ್ಕಾಗಿ ಪುಟ್ಟ-ಪುಟ್ಟ ಹಡಗುಗಳಲ್ಲಿ ಅಕ್ಕಿ, ಬಟ್ಟೆಗಳನ್ನು ತುಂಬಿ ಅರೇಬಿಯಾ-ಪರ್ಷಿಯಾ ದೇಶಗಳಿಗೆ ಕಳುಹಿಸತೊಡಗಿದಳು; ಪೋರ್ಚುಗೀಸರಿಗೆ ಕಪ್ಪ ಕೊಡುವುದನ್ನು ನಿಲ್ಲಿಸಿಯೇ ಬಿಟ್ಟಳು; ಜೊತೆಗೆ ಅವರ ವೈರಿ

ಜಾಮೋರಿನ್ ದೊರೆಯೊಂದಿಗೆ ಸ್ನೇಹ ಸಂಬಂಧವನ್ನು ಬೆಳೆಸಿಕೊಂಡಳು. ಅವಳು ಪೋರ್ಚುಗೀಸ್ ನೌಕಾಧಿಕಾರಿ ರೋಮ್ ಆಳ್ವಾರೆಸ್ ದ ಸಿಲ್ವೀರಾ ವಿರುದ್ಧ ಕೆಚ್ಚೆದೆಯಿಂದ ಕಾದಾಡಿದಳು. ಮೂರು ವರ್ಷಗಳ ಅನಂತರ ಅವರ ವಿರುದ್ಧವಾಗಿ ವೀರಾವೇಶದಿಂದ ನೌಕಾ ಯುದ್ಧಮಾಡಿ 1566ರ ಯುದ್ಧದಲ್ಲಿ ಮೇಲುಗೈ ಸಾಧಿಸಿದಳು ಮತ್ತು ಈ ಕದನದಲ್ಲಿ ಪೋರ್ಚುಗೀಸ್ ಅಧಿಕಾರಿ ಪೀಕೋಟ್ಸ್ ಹತನಾದನು.

ಈ ಎಲ್ಲಾ ಕಾರಣಗಳಿಂದ ಕುಪಿತನಾದ ಪೋರ್ಚುಗೀಸ್ ವೈಸ್‌ರಾಯ್ ನರೋನ್ನ ಮೂರುಸಾವಿರ ಸೈನಿಕರನ್ನು ಏಳು ದೊಡ್ಡ ಹಾಗೂ ಏಳು ಸಣ್ಣ ಹಡಗುಗಳಲ್ಲಿ ತುಂಬಿ ರಾಣಿಯ ವಿರುದ್ಧ ಕಾದಾಡಲು ಕಳುಹಿಸಿದನು. ಈ ಸೈನ್ಯ ಸಾಗರವನ್ನು ಕಂಡು ಅವಳು ಹೆದರಿ ಶರಣಾಗುವಳು ಎಂದು ತಪ್ಪಾಗಿ ಎಣಿಸಿ ಆ ಸೈನಿಕರು ಮದ್ಯಪಾನ ಮಾಡುತ್ತಾ, ಹಾಡು ಹಾಡುತ್ತಾ, ನೃತ್ಯ ಮಾಡುತ್ತಾ ಯಥೇಚ್ಛವಾದ ಮೋಜಿನಿಂದ ಮತ್ತೇರಿ ಬಿದ್ದುಕೊಂಡಿದ್ದಾಗ ರಾಣಿಯ ವೀರಸೈನಿಕರು ತೆಂಗಿನಗರಿಗಳ ಸೂಡೆಗಳೆಂಬುದಾಗಿ ಹೇಳಲಾಗುವ ದೀವಟಿಗೆಗಳನ್ನು ಉರಿಸಿ ಪೋರ್ಚುಗೀಸರ ಹಡಗುಗಳ ಮೇಲೆ ಎಸೆದು ಭಸ್ಮ ಮಾಡಿದರು. ಅನೇಕ ವಿದೇಶಿ ಸೈನಿಕರನ್ನು ಹತ್ಯೆ ಮಾಡಿದರು. ಇದರಿಂದ ರೊಚ್ಚಿಗೆದ್ದ ಉಳಿದ ಪೋರ್ಚುಗೀಸರು ಉಳ್ಳಾಲ ಮೇಲೆ ಪುನಃ ದಂಡೆತ್ತಿ ಬಂದು ಅದನ್ನು ನಾಶಪಡಿಸಿದರು. ಆಗ ಆ ವೀರರಾಣಿ ತನ್ನ ಪ್ರಜೆಗಳೊಡನೆ ಗುಡ್ಡಗಾಡು ಪ್ರದೇಶಗಳಲ್ಲಿ ತಲೆಮರೆಸಿಕೊಂಡು ಇರತೊಡಗಿದಳು.

ಆದರೆ ಇದರಿಂದ ತನ್ನ ಪ್ರಜೆಗಳಿಗೆ ಆಗುತ್ತಿದ್ದ ಅಪಾರ ತೊಂದರೆಗಳನ್ನು ಕಂಡ ಆ ಮಾತೃವಾತ್ಸಲ್ಯದ ಧೀರರಾಣಿ ಅವರಿಗಾಗಿ ಪೋರ್ಚುಗೀಸರೊಂದಿಗೆ ಒಪ್ಪಂದ ಮಾಡಿಕೊಂಡಳು. ನೆರೆಯ ರಾಜ್ಯದ ಪ್ರಭು ಕಾಮರಾಯ ಬಂಗನೊಂದಿಗೂ ಕಾದಾಡಬೇಕಾಗಿ ಬಂದಿದ್ದರಿಂದ ಅವಳಿಗೆ ಪೋರ್ಚುಗೀಸರೊಂದಿಗೆ ಕರಾರು ಮಾಡಿಕೊಳ್ಳಬೇಕಾದ ನಿರ್ಬಂಧ ಉಂಟಾಯಿತು. ಈ ದೇಶೀಯ ಅರಸ ಹಾಗೂ ಅರಸಿಯರ ಸೆಣಸಾಟದಿಂದ ತಮ್ಮ ವ್ಯಾಪಾರಕ್ಕೆ ತೊಂದರೆ ಉಂಟಾಗುತ್ತಿದ್ದರಿಂದ ಪೋರ್ಚುಗೀಸರು ಮಧ್ಯಸ್ಥಿಕೆ ವಹಿಸಿ ಅವರಿಬ್ಬರಿಗೆ ರಾಜಿ ಮಾಡಿಸಿದರು. ಈ ರಾಜಿ, ಬಂಗರಸ ಹಾಗೂ ಈ ಚೌಟರಾಣಿಯ ವಿವಾಹದಲ್ಲಿ ಪರ್ಯವಸಾನಗೊಂಡಿತು.

ಇವರೀರ್ವರ ಮಗಳೇ ರಾಜಕುವರಿ ಇಮ್ಮಡಿ ಅಬ್ಬಕ್ಕ; ಹಿರಿಯ ಅಬ್ಬಕ್ಕ ಮೃತ್ಯುವಿನ ಅತಿಥಿಯಾದಾಗ ಇಮ್ಮಡಿ ಅಬ್ಬಕ್ಕ ಉಳ್ಳಾಲದ ರಾಣಿಯಾದಳು. ಅದೇ ರೀತಿ ಕಾಮರಾಯ ಬಂಗರಸನನ್ನು ಮೃತ್ಯು ತನ್ನ ವಶಕ್ಕೆ ತೆಗೆದುಕೊಂಡಾಗ ಅವನ ಸೋದರಳಿಯ ವೀರನರಸಿಂಹ ಲಕ್ಷ್ಮಪ್ಪರಸನು ಬಂಗರ ರಾಜಧಾನಿ ಬಂಗಾಡಿಯಲ್ಲಿ ಪಟ್ಟಾಭಿಷಕ್ತನಾದನು. ಅವನು ತನ್ನ ಸೋದರ ಮಾಮನ ಮಗಳು ರಾಣಿ ಇಮ್ಮಡಿ ಅಬ್ಬಕ್ಕನನ್ನು ವಿವಾಹವಾಗಿ ಅವಳಿಂದ ಒಂದು ಹೆಣ್ಣುಮಗು ಹಾಗೂ ಇಬ್ಬರು ಗಂಡುಮಕ್ಕಳನ್ನು ಪಡೆದನು.

ಇಮ್ಮಡಿ ಅಬ್ಬಕ್ಕನ ಶೌರ್ಯ-ಸಾಹಸಗಳ ಬಗ್ಗೆ ಕೇಳಿದ ಇಟಲಿದೇಶದ ಪಿತ್ರೋ ಅವಳನ್ನು ಸ್ವತಃ ಭೇಟಿಯಾಗಬೇಕೆಂದು ಇಲ್ಲಿಗೆ ಬಂದು ಅವಳನ್ನು ಕಂಡು, ಅವಳ ಅತಿಥ್ಯ ಪಡೆದು ಅವಳ ಘನವಂತ ವ್ಯಕ್ತಿತ್ವದಿಂದ ಪ್ರಭಾವಿತನಾಗಿ ಬರೆದಿರುವ ಸಮಕಾಲೀನ ಸಂಭವಗಳ ದಾಖಲೆ ಬಹು ನಂಬಲರ್ಹವಾದುದು. ಅದರ ಪ್ರಕಾರ, ತಾಯ್ನೆಲದ ಬಗ್ಗೆ ಉತ್ಕಟ ಅಭಿಮಾನವನ್ನು ಹಾಗೂ ಸ್ವಾತಂತ್ರ್ಯ ಪ್ರೇಮವನ್ನು ಬೆಳೆಸಿಕೊಂಡಿದ್ದ ಹಿರಿಯ ಅಬ್ಬಕ್ಕ ತನ್ನ ಮಗಳ ಮನದಲ್ಲಿ ಇದೇ ಮೌಲ್ಯದ ಬೀಜಗಳನ್ನು ಆಳವಾಗಿ ಬಿತ್ತಿ ಕರಾವಳಿಯನ್ನು ವಿದೇಶೀಯರ ದಾಸ್ಯ ಸಂಕೋಲೆಯಿಂದ ಮುಕ್ತಗೊಳಿಸಬೇಕೆಂಬ ಮಹದಾಸೆಯನ್ನು ಬೆಳೆಸಿದ್ದಳು. ಆದ್ದರಿಂದ ಅತ್ಯಂತ ಬುದ್ಧಿಶಾಲಿಯು ಪ್ರತಿಭಾಸಂಪನ್ನಳು, ರಾಜ್ಯತಂತ್ರಜ್ಞಳೂ ಹಾಗೂ ರಾಜಕೀಯ ವ್ಯವಹಾರ ಚತುರೆಯೂ ಆಗಿದ್ದ ಇಮ್ಮಡಿ ಅಬ್ಬಕ್ಕ ಪೋರ್ಚುಗೀಸರ ದುಂಡಾವರ್ತೆಯನ್ನು ಕೊನೆಗಾಣಿಸದಿದ್ದರೆ ತನ್ನ ಪ್ರಜೆಗಳಿಗೆ ಸುಖನೆಮ್ಮದಿ ಇರುವುದಿಲ್ಲ, ತನ್ನ ರಾಜ್ಯದಲ್ಲಿ ಶಾಂತಿ ಸಾಧ್ಯವಿಲ್ಲ ಎಂದು ಅರಿತು ರಾಜ್ಯಸೂತ್ರಗಳನ್ನು ಕೈಗೆತ್ತಿಕೊಂಡ ಕೂಡಲೇ ಪೋರ್ಚುಗೀಸರು ಓಂದೆ ಹಾಳುಗೆಡಹಿದ್ದ ಕೋಟೆಯನ್ನು ಪುನಃ ಕಟ್ಟಿಸಿಬಿಟ್ಟಳು; ಪೋರ್ಚುಗೀಸರಿಗೆ ಕೊಡುತ್ತಿದ್ದ ಕಪ್ಪವನ್ನು ನಿಲ್ಲಿಸಿ

ಪುಟ್ಟ ಪುಟ್ಟ ಹಡಗು–ಮಂಜಿಗಳಲ್ಲಿ ಅರೇಬಿಯಾ ದೇಶಕ್ಕೆ ಅಕ್ಕಿ, ಬಟ್ಟೆಗಳನ್ನು ರಫ್ತು ಮಾಡತೊಡಗಿದಳು. ಇದರಿಂದ ಕೃದ್ಧರಾದ ಪೋರ್ಚುಗೀಸರು ಉಳ್ಳಾಲವನ್ನು ಮುತ್ತಿ ಕೋಟೆಯನ್ನು ಕೆಡವಿ ಮತ್ತೆ ಕಪ್ಪ ವಸೂಲಿ ಮಾಡಿದರಾದರೂ ರಾಣಿ ಹೆದರಲಿಲ್ಲ. ಅದಕ್ಕೆ ಕಾರಣ ಕೆಳದಿಯ ಸಮರ್ಥ ಪ್ರಭು ವೆಂಕಟಪ್ಪನಾಯಕನೊಂದಿಗೆ ಅವಳು ಬೆಳೆಸಿಕೊಂಡ ಸ್ನೇಹ ಬಾಂಧವ್ಯ. ಅವಳು ಪುನಃ ಕೋಟೆಯನ್ನು ಕಟ್ಟಿ, ಹೊರದೇಶಗಳೊಂದಿಗೆ ವ್ಯಾಪಾರವನ್ನು ಮುಂದುವರಿಸಿದಳು.

ಏತನ್ಮಧ್ಯೆ ತಮ್ಮ ಮಗಳ ಮದುವೆಯ ವಿಚಾರದಲ್ಲಿ ಇಮ್ಮಡಿ ಅಬ್ಬಕ್ಕನಿಗೂ, ಅವಳ ಪತಿ ವೀರನರಸಿಂಹನಿಗೂ ಮನಸ್ತಾಪ ಉಂಟಾಯಿತು. ವೀರನರಸಿಂಹ ತನ್ನ ಸೋದರಳಿಯನಿಗೆ ಮಗಳನ್ನು ವಿವಾಹ ಮಾಡಿಕೊಡ ಬೇಕೆಂದಿದ್ದನು. ಆದರೆ ಅವನು ಕೆಲಸಕ್ಕೆ ಬಾರದ ಸೋಮಾರಿಯಾಗಿದ್ದರಿಂದ ರಾಣಿ ಒಪ್ಪದೆ ಯೋಗ್ಯ ವರನಿಗಾಗಿ ಅನ್ವೇಷಣೆ ಮಾಡತೊಡಗಿದಾಗ ಈ ಮನಸ್ತಾಪ ಇನ್ನೂ ಹೆಚ್ಚಾಯಿತು. ಈ ವೈಮನಸ್ಯ ಮಂಗಳೂರು ಲೋಕೇಶ್ವರ ಜಾತ್ರೆಯ ಸಮಯದಲ್ಲಿ ಮಗಳನ್ನು ಅಪಹರಿಸಲು ವೀರನರಸಿಂಹ ಮಾಡಿದ ವ್ಯರ್ಥ ಪ್ರಯತ್ನ ಹಾಗೂ ಹರಿಸಿದ ರಕ್ತದ ಕೋಡಿ ಮತ್ತು ರಾಣಿ ನೆರೆಯ ರಾಮನಾಥ ಅರಸನೆಂಬ ರಾಜಕುವರನೊಂದಿಗೆ ತನ್ನ ಮಗಳನ್ನು ಕೊಟ್ಟು ಮಾಡಿದ ಮದುವೆಯಿಂದ ಒಂದು ದಳ್ಳುರಿಯೇ ಆಯಿತು. ಇದರಿಂದ ಮಗಳ ಮದುವೆ ಮತ್ತು ಮಗಳು ಮುಂದೆ ಉತ್ತರಾಧಿಕಾರಿಯಾದ ಚಿಕ್ಕರಾಯನಿಗೆ ಜನ್ಮವಿತ್ತು ಸಾವನ್ನಪ್ಪಿದಾಗಲೂ ವೀರನರಸಿಂಹ ಬಂದು ನೋಡದ ಕ್ರೂರ ತಂದೆಯಾಗಿ ಉಳಿದನು. ಇದಷ್ಟೇ ಸಾಲದೋ ಎಂಬಂತೆ ಮಂಗಳೂರಿನ ಸಮೀಪದ ಪೊಳಲಿಯಲ್ಲಿ ನಡೆದ ದುರ್ಗಾದೇವಿ ಜಾತ್ರೆಯಲ್ಲಿ ಭಾಗವಹಿಸಿ ಹತ್ತಿರದ ಹಳ್ಳಿಯಲ್ಲಿ ಸಮಾರಂಭಕ್ಕೆ ಹೋಗಿದ್ದ ತನ್ನ ಪತ್ನಿಯನ್ನು ಬಂಧಿಸಿ ವೀರನರಸಿಂಹ ಖಂಡನಾರ್ಹವಾದ ಕಾರ್ಯವನ್ನು ಮಾಡಿದನು. ಅವಳ ವಾದವೈಖರಿಯ ಮುಂದೆ ಮೂಕನಾಗಿ ಕೊನೆಗೆ ಅವಳನ್ನು ಬಿಡುಗಡೆ ಮಾಡಬೇಕಾದ ನಿರ್ಬಂಧಕ್ಕೆ ಒಳಗಾದನು. ಜೊತೆಗೆ ನೆರೆಯ ಬೈಲಂಗಡಿ ರಾಜ್ಯದ ಶಂಕರದೇವಿಯನ್ನು ಮದುವೆಯಾದನು. ಈ ಎಲ್ಲಾ ಕಾರಣಗಳಿಂದ ಪತಿ–ಪತ್ನಿಯರ ನಡುವೆ ಇದ್ದ ವಿರಸದ ದಳ್ಳುರಿಗೆ ಪೀಪಾಯಿಗಟ್ಟಲೆ ಎಣ್ಣೆ ಸುರಿದಂತಾಯಿತು.

ತನ್ನ ಪತ್ನಿ ಇಮ್ಮಡಿ ಅಬ್ಬಕ್ಕನಿಗೆ ಬುದ್ಧಿ ಕಲಿಸಬೇಕೆಂದು ವೀರನರಸಿಂಹ ಪೋರ್ಚುಗೀಸರ ಸಹಾಯವನ್ನು ಬೇಡಿದ. ತನ್ನ ಗೃಹದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು, ತಾನು ಕೈಹಿಡಿದ ಸತಿಯ ವಿರುದ್ಧ ಸೇಡು ತೀರಿಸಿಕೊಳ್ಳಲು ವಿದೇಶೀಯರ ಬೆಂಬಲ ಯಾಚಿಸಿ ತನ್ನ ರಾಜ್ಯದ ಸ್ವಾತಂತ್ರ್ಯವನ್ನೇ ಒತ್ತೆ ಇಡಲು ಅವನು ಹಿಂಜರಿಯಲಿಲ್ಲ ಎಂಬುದು ಅತ್ಯಂತ ಖಂಡನಾರ್ಹ ವಿಷಯವೇ. ಪೋರ್ಚುಗೀಸರ ಬಲ ಕುಗ್ಗಿದ್ದರಿಂದ ಮತ್ತು ಅವರು ಕೆಳದಿಯ ವೆಂಕಟಪ್ಪನಾಯಕನಿಗೆ ಭಯಪಡುತ್ತಿದ್ದುದರಿಂದ ಅವನಿಗೆ ತಕ್ಷಣ ಅವರ ಸಹಾಯ ಒದಗಿ ಬರಲಿಲ್ಲ. ಕೆಳದಿಯ ವೆಂಕಟಪ್ಪನಾಯಕನಿಗೆ ಸೋತು ಅವನಿಗೆ ಕಪ್ಪ ಕೊಡಬೇಕಾಗಿ ಬಂದಿದ್ದು ವೀರನರಸಿಂಹನಿಗೆ ನುಂಗಲಾರದ ಬಿಸಿ ತುಪ್ಪವಾಯಿತು. ಆದ್ದರಿಂದ ಅವನು ತನ್ನ ಅಧೀನದಲ್ಲಿದ್ದ ಮಂಗಳೂರಿನಲ್ಲಿ, ಪೋರ್ಚುಗೀಸರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟು ಅವರ ಸ್ನೇಹ ಬೆಳೆಸಿದನು.

ಈ ಕಡೆ ಇಮ್ಮಡಿ ಅಬ್ಬಕ್ಕ ಕಲ್ಲಿಕೋಟೆಯ ಜಾಮೋರಿನ್‌ನತ್ತ ಸಹಾಯಹಸ್ತ ಚಾಚಿ ಅವನೊಂದಿಗೆ ಹದಿನೈದು ವರ್ಷಗಳ ಕಾಲ ನಿರಾಂತಕವಾಗಿ ಅರೇಬಿಯಾ ಹಾಗೂ ಪರ್ಷಿಯಾ ದೇಶಗಳೊಡನೆ ಲಾಭದಾಯಕವಾಗಿ ವ್ಯಾಪಾರವನ್ನು ಮುಂದುವರಿಸಿಕೊಂಡು ಬಂದಳು. ಪೋರ್ಚುಗೀಸರ ಪ್ರತಿಭಟನೆಗೆ ಸೊಪ್ಪು ಹಾಕಲಿಲ್ಲ. ಈ ಕಾರಣದಿಂದ ಒಂದು ಸಲ ಅರೇಬಿಯಾದಿಂದ ವಾಪಸ್ಸು ಬರುತ್ತಿದ್ದ ಅವಳ ಹಾಗೂ ಜಾಮೋರಿನ್‌ನ ಹಡಗುಗಳ ಮೇಲೆ ಪೋರ್ಚುಗೀಸರು. ದಾಳಿ ಮಾಡಿ ಅವಳ ಒಂದು ಹಡಗನ್ನು ಸ್ವಾಧೀನ ಪಡಿಸಿಕೊಂಡರು. ಇದರಿಂದ ಕುಪಿತಳಾದ ರಾಣಿ ಅವರು ಕೊಂದ ತನ್ನ ಸೈನಿಕರಿಗಾಗಿ ಸಾವಿರ ಗದ್ಯಾಣಗಳನ್ನು ಪರಿಹಾರವಾಗಿ ಕೊಡಬೇಕೆಂದು ಮಂಗಳೂರಿನಲ್ಲಿದ್ದ ಪೋರ್ಚುಗೀಸರಿಗೆ ಹೇಳಿ ಕಳುಹಿಸಿದಳು. ಅದಕ್ಕೆ ಉತ್ತರವಾಗಿ ಅವರು ತನ್ನ ಕೋಟೆಯ ಮೇಲೆ ಗುಂಡು ಹಾರಿಸಿದ್ದರಿಂದ

ಈ ದಿಟ್ಟೆದೆಯ ರಾಣಿ ಭಾರಿಸೈನ್ಯದೊಂದಿಗೆ ಮಂಗಳೂರನ್ನು ಮುತ್ತಿ ಪೋರ್ಚುಗೀಸರ ಮಳಿಗೆಗಳನ್ನು ಲೂಟಿ ಮಾಡಿದಳು. ಅವರಿಗೆ ಸಹಾಯ ಮಾಡಿದ ತನ್ನ ಪತಿಯ ಮಂಗಳೂರು ಪೇಟೆಯನ್ನು ಸುಲಿದಳು. ಈ ರೀತಿ ಸಾವಿರ ಗದ್ಯಾಣಗಳ ಪರಿಹಾರದ ಬದಲಾಗಿ ಸಾವಿರಾರು ಗದ್ಯಾಣಗಳನ್ನು ಪಡೆದುಕೊಂಡಳು. ಪೋರ್ಚುಗೀಸರು ಹಿಡಿದಿದ್ದ ತನ್ನ ಒಂದು ಹಡಗಿಗೆ ಬದಲಾಗಿ ಅವರ ನಾಲ್ಕು ಹಡಗುಗಳನ್ನು ತನ್ನ ವಶಪಡಿಸಿಕೊಂಡಳು.

ಈ ಪರಾಜಯದ ಕಹಿಸುದ್ದಿ ಪೋರ್ಚುಗೀಸರ ಕೇಂದ್ರವಾಗಿದ್ದ ಗೋವೆಗೆ ತಲುಪಿದಾಗ, ಕುತಿನ್ನೋ ಎಂಬ ಸೇನಾಧಿಕಾರಿಯ ನೇತೃತ್ವದಲ್ಲಿ ಒಂದು ಸೈನ್ಯ ಮಂಗಳೂರಿಗೆ ಬಂದು ಇಮ್ಮಡಿ ಅಬ್ಬಕ್ಕನ ವಿರುದ್ಧ ಭಾರಿ ಯುದ್ಧವನ್ನು ನಡೆಸಿ ಅವಳು ಹಿಮ್ಮೆಟ್ಟುವಂತೆ ಮಾಡಿತು ಮತ್ತು ಮರುದಿನ ಅವಳ ಉಳ್ಳಾಲ ಕೋಟೆಯ ಮೇಲೆ ದಾಳಿ ಮಾಡಿತು. ಆಗ ಅತ್ಯಂತ ಧೈರ್ಯಶಾಲಿ ಮಹಿಳೆಯಾಗಿದ್ದ ರಾಣಿ ತಾನೇ ಸ್ವತಃ ಪಲ್ಲಕ್ಕಿಯಲ್ಲಿ ಕುಳಿತು, ಹಾರಿಬರುತ್ತಿದ್ದ ಗುಂಡುಗಳನ್ನು ಲೆಕ್ಕಿಸದೆ ಸೈನಿಕರಿಗೆ ಪ್ರೋತ್ಸಾಹದಾಯಕ ಚಿಲುಮೆಯೂ, ಸ್ಫೂರ್ತಿದಾಯಕ ಶಕ್ತಿಯೂ ಆಗಿ ಸತತವಾಗಿ ನಾಲ್ಕು ದಿನಗಳು ಹೋರಾಟ ನಡೆಸಿ ವಿಜಯ ದುಂದುಭಿ ಬಾರಿಸಿದಳು. ಉಳ್ಳಾಲವನ್ನು ವಶಪಡಿಸಿಕೊಳ್ಳುವ ವಿದೇಶೀಯರ ಕನಸು ನನಸಾಗದೆ ಅವರು ಹಿಂದಕ್ಕೆ ಸರಿಯಬೇಕಾಯಿತು. ಒಂದು ಸಣ್ಣ ರಾಜ್ಯದ ಧೀರ ಮಹಿಳೆಯ ಈ ಸಾಹಸವು ಪೋರ್ಚುಗೀಸರಿಗೆ ಬೆದರಿ ಕಪ್ಪ ಕೊಡುತ್ತಿದ್ದ ರಾಜರುಗಳು ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡಿತು.

ಇಷ್ಟರಿಂದ ಇಮ್ಮಡಿ ಅಬ್ಬಕ್ಕ ಎದುರಿಸಬೇಕಾದ ಸವಾಲುಗಳು ಮುಕ್ತಾಯಗೊಳ್ಳಲಿಲ್ಲ. ಮಳೆಗಾಲ ಕಳೆದ ಮೇಲೆ ಅವಳ ರಾಜ್ಯವನ್ನು ಹೇಳಹೆಸರಿಲ್ಲದಂತೆ ಮಾಡುವುದಾಗಿ ಪೋರ್ಚುಗೀಸರು ಮಾಡುತ್ತಿದ್ದ ಅಬ್ಬರ; ಮತ್ತು ತನ್ನ ಮಂಗಳೂರನ್ನು ಸುಲಿಗೆ ಮಾಡಿದ್ದರಿಂದ ಸಾವಿರ ಗದ್ಯಾಣ ಪರಿಹಾರ ನೀಡಬೇಕೆಂದೂ, ಇಲ್ಲದಿದ್ದರೆ ಅವಳ ರಾಜ್ಯವನ್ನೇ ಪೂರ್ತಿಯಾಗಿ ಸುಲಿಗೆ ಮಾಡುವುದಾಗಿ ಅವಳ ಪತಿ ಬಂಗರಾಜ ಮಾಡುತ್ತಿದ್ದ ಬೆದರಿಕೆ; ಮುಂತಾಗಿ ಭಯ ಹುಟ್ಟಿಸುವ ಸುದ್ದಿಗಳೇ ಬಂದು ಅಪ್ಪಳಿಸುತ್ತಿದ್ದುವು. ಆದರೂ ಸ್ವಲ್ಪವೂ ಧೃತಿಗೆಡದ ರಾಣಿ, ಕೆಳದಿಯ ವೆಂಕಟಪ್ಪನಾಯಕನಿಗೆ ಪತ್ರಬರೆದು ಪೋರ್ಚುಗೀಸರನ್ನು ಹೊಡೆದಟ್ಟದಿದ್ದರೆ ತಮ್ಮ ಪ್ರಜೆಗಳಿಗೆ, ರೈತರಿಗೆ ಹಾಗೂ ಧರ್ಮಕ್ಕೆ ಉಳಿಗಾಲವಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಟ್ಟಳು ಮತ್ತು ಜಾಮೋರಿನ್ ನೆರವಿನಿಂದ ಉಳ್ಳಾಲದಲ್ಲಿ ಭಾರಿ ಸೈನ್ಯವನ್ನು ಸಂಗ್ರಹಿಸಿದಳು. ಗೋವೆಯಿಂದ ಡಿಮೆಲ್ಲೊ ಹಾಗೂ ಮಿರಾಂಡ ಎಂಬ ಸೇನಾಧಿಪತಿಗಳು ಸೈನ್ಯದೊಡನೆ ಮಂಗಳೂರಿಗೆ ಬರುವ ಮೊದಲೇ ಮಂಗಳೂರನ್ನು ಮುತ್ತಿದ ವೆಂಕಟಪ್ಪನಾಯಕನಿಗೆ ಜಾಮೋರಿನ್ ಜೊತೆ ಸೇರಿ ಇಮ್ಮಡಿ ಅಬ್ಬಕ್ಕ ಸಂಪೂರ್ಣವಾಗಿ ಸಹಾಯ ಮಾಡಿದಳು. ನಡೆದ ಭಾರಿ ಕದನದಲ್ಲಿ ಆ ಇಬ್ಬರು ಸೇನಾಧಿಕಾರಿಗಳಲ್ಲದೆ ನೂರಾರು ಪೋರ್ಚುಗೀಸ್ ಸೈನಿಕರು ಸಾವನ್ನಪ್ಪಿದರು. ಮಂಗಳೂರು ಕೋಟೆ ಕೆಳದಿಯ ವಶವಾಗಿ ಹೋಗಿ ಇಮ್ಮಡಿ ಅಬ್ಬಕ್ಕನ ಕನಸು ನನಸಾಯಿತು. ವಿಜಯಲಕ್ಷ್ಮಿ ಈ ಧೀರರಾಣಿಯನ್ನು ಅಪ್ಪಿಕೊಂಡಳು, ಅಲ್ಲಿಂದ ಮುಂದೆ ಈ ದಿಟ್ಟೆದೆಯ ಉಳ್ಳಾಲ ರಾಣಿಗೆ ವಿದೇಶೀಯರಿಂದ ಯಾವ ಸವಾಲೂ ಬರಲು ಸಾಧ್ಯವಾಗಲೇ ಇಲ್ಲ. ಒಂದು ಪುಟ್ಟರಾಜ್ಯದ ಧೀರರಾಣಿಯಿಂದ ಪೋರ್ಚುಗೀಸರು ಪರಾಭವ ಹೊಂದಿದ ವಿಷಯ ಇಡೀ ಯೂರೋಪಿನಲ್ಲಿ ದೊಡ್ಡ ಸುದ್ದಿಯಾಯಿತು. ಇದರಿಂದ ಭಾರತದ ಎಂತಹ ವೀರಮೌಲ್ಯಗಳ ನಾಡು, ಇದರ ಸ್ವಾತಂತ್ರಾಭಿಮಾನ ಹಾಗೂ ದೇಶಪ್ರೇಮದಿಂದ ಕೂಡಿದ್ದ ವಿರೋಚಿತ ಸಂಸ್ಕೃತಿಯಲ್ಲಿ ಸ್ತ್ರೀಯರ ಪಾತ್ರ ಎಷ್ಟು ಮಹತ್ವಪೂರಿತವಾಗಿದ್ದಿತು ಎಂಬುದು ವಿದೇಶೀಯರಿಗೆ ಮನದಟ್ಟಾಯಿತು ಎನ್ನಬಹುದು.

ಇಮ್ಮಡಿ ಅಬ್ಬಕ್ಕ ಕೇವಲ ಸಾಹಸಿಯೂ, ಧೀರಳೂ ಆಗಿದ್ದ ರಾಣಿ ಮಾತ್ರ ಆಗಿರಲಿಲ್ಲ, ಅವಳು ವಾತ್ಸಾಲ್ಯಮಯಿ ತಾಯಿಯೂ ಆಗಿದ್ದಳು. ಅವಳ ಪ್ರಜಾಪ್ರೇಮ ಅದ್ವಿತೀಯವಾಗಿದ್ದಿತು. ಅವರ ಹಿತಕ್ಕಾಗಿ ಅವಳು ಮಾಡುತ್ತಿದ್ದ ದುಡಿಮೆ ಅಸಮಾನವಾಗಿದ್ದಿತು. ಕೃಷಿ ಚೆನ್ನಾಗಿದ್ದರೆ ಪ್ರಜೆಗಳು ಸುಖವಾಗಿರುತ್ತಾರೆ ಎಂದು ಭಾವಿಸಿ ನೀರಾವರಿ

ಕಾರ್ಯಕ್ಕೆ ಹೆಚ್ಚಿನ ಗಮನಕೊಟ್ಟು ಕೃಷಿಯನ್ನು ಅಭಿವೃದ್ಧಿಪಡಿಸಲು ಸದಾ ಯತ್ನಿಸುತ್ತಿದ್ದ ಈ ರಾಣಿ ಒಂದು ಸಾದಾ ಬಿಳಿ ಸೀರೆಯನ್ನುಟ್ಟು, ಸ್ವಲ್ಪವೇ ಆಭರಣಗಳನ್ನು ಧರಿಸಿ, ಪಾದರಕ್ಷೆಗಳನ್ನು ಹಾಕಿಕೊಳ್ಳದೆ ನದಿ ದಂಡೆಗೆ ದಿನಾ ಹೋಗಿ ಅಣೆಕಟ್ಟು ಕಟ್ಟುವ ಕಾರ್ಯದಲ್ಲಿ ಗಂಡು ಹೆಣ್ಣಾಳುಗಳಿಗೆ ಸೂಚನೆ ಕೊಡುತ್ತಾ, ಮಧ್ಯಾಹ್ನ ಅರಮನೆಗೆ ಬಂದು ಊಟಮಾಡಿ ಪುನಃ ಸಂಜೆಯತನಕ ಈ ಕಾರ್ಯದಲ್ಲಿ ನಿರತಳಾಗಿರುತ್ತಿದ್ದಳು, ಸಂಜೆಯಾದ ಮೇಲೆ ಪ್ರಜೆಗಳ ಸುಖದುಃಖಗಳನ್ನು ವಿಚಾರಿಸಿ ನ್ಯಾಯ ಮಾಡುತ್ತಿದ್ದಳು. ವಿಶ್ವವಿಖ್ಯಾತಳಾಗಿದ್ದ ಈ ಧೀರರಾಣಿ ಅಸಾಮಾನ್ಯ ಮಹಿಳೆಯೂ ದಿವ್ಯಮಾನೆಯೂ ಆಗಿದ್ದಳು. ಅವಳೆಂತಹ ಧೈರ್ಯಶಾಲಿ, ಬುದ್ಧಿವಂತೆ ಎಂಬುದನ್ನು ಎತ್ತಿ ತೋರುತ್ತಿದ್ದ ಅವಳ ತೂಕದ ಮಾತುಗಳು, ಗತ್ತುಗಾರಿಕೆ ವಿನಯ–ಗಾಂಭಿರ್ಯದಿಂದ ಕೂಡಿದ ವರ್ತನೆ ಅವಳ ವ್ಯಕ್ತಿತ್ವ ಎಷ್ಟು ಘನವಂತವಾಗಿದ್ದಿತು ಎಂಬುದನ್ನು ಎತ್ತಿತೋರುತ್ತಿದ್ದುವು. ಅವಳಿಗೆ ಇಟಲಿಯ ಪಿತ್ರೋ, ಗೌರವಾದರಗಳಿಂದ ತಲೆಬಾಗಿ ವಂದಿಸುತ್ತಿದ್ದುದರಲ್ಲಿ ಆಶ್ಚರ್ಯವೇನಿಲ್ಲ. ಅವಳು ಅಡ್ಕದ ಭಗವತಿಗಳ ಮಹಾ ಭಕ್ತೆಯಾಗಿ ಆ ಕ್ಷೇತ್ರಕ್ಕೆ ಉಂಬಳಿ–ಉತ್ತಾರಗಳು ನೀಡಿದಳು ಎಂಬ ವಿಷಯ ಅವಳ ಧಾರ್ಮಿಕ ಮನೋವೃತ್ತಿಗೆ ನಿದರ್ಶನವಾಗಿದೆ.

ಒಟ್ಟಿನಲ್ಲಿ, ಪ್ರತಿಯೊಬ್ಬರೂ ಹೆಮ್ಮೆ ಪಡಲೇಬೇಕಾದ ಉತ್ಕಟ ದೇಶಾಭಿಮಾನಿ ಹಾಗೂ ಸ್ವಾತಂತ್ರಪ್ರೇಮಿ ಹಿರಿಯ ಹಾಗೂ ಇಮ್ಮಡಿ ಅಬ್ಬಕ್ಕರೆಂಬ ಕುವರಿಯರನ್ನು ಪಡೆದ ಕರ್ನಾಟಕ ಮಾತೆ, ಏಕೆ ಭಾರತಾಂಬೆ ನಿಜಕ್ಕೂ ಧನ್ಯಳೇ.

——— * ———

ದಾಸ ಸಾಹಿತಿ ಗಲಗಲಿ ಅವ್ವ

ಡಾ. ಅಕ್ಕಮಹಾದೇವಿ

ರಾಮಾಯಣ, ಮಹಾಭಾರತ, ಭಾಗವತಗಳ ನಿರಂತರ ವಾಚನ ಹಾಗೂ ಗಾಯನ ಭಾರತದ ನೆಲೆಗಟ್ಟನ್ನು ಸಾಂಸ್ಕೃತಿಕವಾಗಿ ಗಟ್ಟಿಗೊಳಿಸಿವೆ. ಅವಿಚ್ಛಿನ್ನವಾದ ಧಾರ್ಮಿಕ ಒಳಹರಿವೊಂದನ್ನು ಸದಾ ಜೀವಂತವಾಗಿಟ್ಟುಕೊಂಡೇ ಕನ್ನಡ ಸಾಹಿತ್ಯ ಪ್ರಪಂಚದ ಮೌಲ್ಯಯುತ ಸಾಹಿತ್ಯ ಪರಂಪರೆಯ ಸಾಲಿನಲ್ಲಿ ವಿಶಿಷ್ಟವಾದ ಸ್ಥಾನ ಪಡೆದಿದೆ. ಪ್ರಾಯಶಃ ಪ್ರಾಚೀನ ಸಾಹಿತ್ಯ ಮೌಖಿಕವಾಗಿ ಹರಿದು ಬರುತ್ತ, ಕಾಲಕ್ಕೆ ತಕ್ಕಂತೆ ಪ್ರಭಾವಗೊಂಡು ಬದಲಾಗುತ್ತದೆ. ಅದೇ ವೇಳೆ ಮೂಲ ಭಾವಕ್ಕೆ ಚ್ಯುತಿ ಬರದಂತೆ ಕಾಪಿಟ್ಟುಕೊಳ್ಳುತ್ತ ಬಂದದ್ದೇ ಇದಕ್ಕೆ ಕಾರಣವಿರಬಹುದು.

ಕನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳಲ್ಲಿ ದಾಸವಾಙ್ಮಯ ಹಲವಾರು ದೃಷ್ಟಿಯಿಂದ ವಿಶೇಷವಾದದ್ದು. ಧಾರ್ಮಿಕ ಆಚರಣೆಗಳ ಜೊತೆಗೆ ಸಾಮಾಜಿಕ ಕಳಕಳಿಯಿಂದ ಭಗವಂತನಿಗೆ ಸಮರ್ಪಣಾ ಭಾವ ಪ್ರಕಟಿಸುತ್ತದೆ. ಭಕ್ತಿಭಾವವನ್ನು ಅಭಿವ್ಯಕ್ತಿಸುವಲ್ಲಿ ಗಾಯನಕ್ಕೆ ಯೋಗ್ಯವಾಗುವಂಥ ರಚನೆಗಳೂ ಇವೆ. ಕನ್ನಡ ಸಾಹಿತ್ಯ ಹಾಗೂ ಸಂಗೀತ ಕ್ಷೇತ್ರಗಳಿಗೆ ಇದರಿಂದಾದ ಪ್ರಯೋಜನ ಅತ್ಯಂತ ಮೌಲ್ಯಯುತವಾದದ್ದು.

ಶ್ರೀಪಾದರಾಜರಿಂದ ಪ್ರಾರಂಭಗೊಂಡ ಕನ್ನಡ ದಾಸ ಸಾಹಿತ್ಯದಲ್ಲಿ ಅನೇಕ ದಾಸರು ಕೀರ್ತಿಗೆ, ಉಗಾಭೋಗ, ಸುಳಾದಿ ಎಂಬ ವಿಶೇಷ ಪ್ರಕಾರಗಳನ್ನು ರಚಿಸಿ ಗಾಯನಕ್ಕೂ ಅಳವಡಿಸುವಂತೆ ಮಾಡಿ ಕರ್ನಾಟಕದ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ. ಸಾಮಾನ್ಯವಾಗಿ ದಾಸರೆಂದರೆ ಪುರುಷ ಸಂತರನ್ನಷ್ಟೇ ಗುರುತಿಸುವುದು ವಾಡಿಕೆ. ಈ ನಿಟ್ಟಿನಲ್ಲಿ ಅತ್ಯಂತ ಗಂಭೀರವಾಗಿ ತೊಡಗಿಸಿಕೊಂಡ ಮಹಿಳೆಯರಲ್ಲಿ ಗಲಗಲಿ ಅವ್ವ, ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ–ಹೀಗೆ ಅನೇಕರನ್ನು ಹೆಸರಿಸಬಹುದು.

ಲಭ್ಯ ರಚನೆಗಳ ಆಧಾರದಿಂದ ದಾಸವಾಙ್ಮಯದಲ್ಲಿ ಗಲಗಲಿ ಅವ್ವ ಮೊದಲಿಗಳಾಗಿ ನಿಲ್ಲುತ್ತಾಳೆ. ಸುಮಾರು ಹದಿನಾರನೆಯ ಪೂರ್ವಾರ್ಧದಲ್ಲಿ ಜೀವಿಸಿದ್ದ ಈಕೆಯ ಹುಟ್ಟೂರು ಕರ್ನಾಟಕ ರಾಜ್ಯದ ಕೊಪ್ಪಳ ತಾಲ್ಲೂಕಿನ ಭೋಗಾಪುರ ಗ್ರಾಮ. ಹನ್ನೆರಡು ವರ್ಷದ ಕನ್ಯೆಯನ್ನು ಬಿಜಾಪುರದ 95 ವಯಸ್ಸಿನ ವಿದ್ವಾಂಸರಾದ ಮುದ್ಗಲಾಚಾರ್ಯರಿಗೆ ಮದುವೆ ಮಾಡಿದರು. ಕೇವಲ ಎಂಟೇ ದಿನಗಳಲ್ಲಿ ಅವ್ವ ವಿಧವೆಯಾದಳು. ಅವಳಿಗಿಂತ ಹಿರಿಯರಾದ ಐದು ಜನ ವಿದ್ವಾಂಸ ಮಲಮಕ್ಕಳೇ ಅವಳಿಗೆ ಗುರುಗಳಾಗಿ ವಿದ್ಯೆ ಕಲಿಸುತ್ತಾರೆ. ಕನ್ನಡ ಸಂಸ್ಕೃತಗಳೆರಡರಲ್ಲೂ ಬಹುಬೇಗ ಪಾಂಡಿತ್ಯ ಗಳಿಸಿದ ಅವ್ವ 'ರಾಮೇಶ', 'ರಮ ಅರಸ', ಎಂಬ ಅಂಕಿತಗಳಲ್ಲಿ ಕನ್ನಡ ಹಾಡುಗಳನ್ನು ರಚಿಸಿದಳು. ಈಕೆಯ ರಚನೆಗಳೆಲ್ಲ ಇತರ ಕೀರ್ತನಕಾರರ ರಚನೆಗಳಂತೆಯೇ ಇದ್ದು ಸಂಪ್ರದಾಯದ ಹಾಡುಗಳೇ ಹೆಚ್ಚಾಗಿವೆ. ಆದರೂ ದಿನನಿತ್ಯದ ಪರಿಪಾಟಲುಗಳ ಮಧ್ಯೆ ಕೌಟುಂಬಿಕ ವಾತಾವರಣದೊಳಗೇ ಜೀವಿತಾವಧಿಯನ್ನು ಕಳೆದ ಹೆಣ್ಣು ಹೇಗೆ ನವನವೋನ್ಮೇಷಶಾಲಿಯಾಗಿ ಬದುಕಬಲ್ಲಳು ಎಂಬುದಕ್ಕೆ ಈಕೆಯ ಹಾಡುಗಳೇ ಸಾಕ್ಷಿ. ಇವುಗಳಲ್ಲಿ

ಮುಯ್ಯದ ಹಾಡುಗಳು, ಮುಯ್ಯ ಹಿಂದಿರುಗಿಸುವ ಹಾಡು, ಶೃಂಗಾರ ತಾರತಮ್ಯ, ಮೋರೆಗೆ ನೀರು ತಂದ ಹಾಡುಗಳು, ಬೀಗರ ಹಾಡುಗಳು ಮುಂತಾದ ಸುಮಾರು 266ರಷ್ಟು ಹಾಡುಗಳಿವೆ. ಇವಿಷ್ಟೇ ಅಲ್ಲದೆ ಜೋಗುಳದ ಹಾಡು, ಸೇತುಬಂಧನದ ಹಾಡುಗಳನ್ನು 'ಅವ್ವ'ನವೆಂದೇ ಗುರುತಿಸಲಾಗಿದೆ.

ಇವುಗಳ ಪೈಕಿ ಸಂಪೂರ್ಣ ದೊರೆತಿರುವಂಥವು ಮುಯ್ಯದ ಹಾಡುಗಳೇ. 'ಶೃಂಗಾರ ತಾರತಮ್ಯ'ದ ಆಶಯ ಹೀಗಿದೆ: ಇಲ್ಲಿ ಭಕ್ತ–ಭಗವಂತನ ನಡುವಿನ ಪರಸ್ಪರ ಪ್ರೇಮಬಂಧದ ಚಾತುರ್ಯಪೂರ್ಣ ವರ್ಣನೆಯಿದೆ. ಇಲ್ಲಿ ಸ್ತ್ರೀ ಸಹಜ ಬಯಕೆ ಹಾಗೂ ಬೆರಗಿನಿಂದ ಅವ್ವ ಆಭರಣಗಳ ಅಂಗಡಿಯನ್ನೆ ತೆರೆದು ನಮ್ಮೆದುರು ಪ್ರದರ್ಶನಕ್ಕಿಡುತ್ತಾಳೆ. ಆದರೆ ಅದು ಕಣ್ಣು ಕೋರೈಸುವ ಭೋಗದ ನೆಲೆಯ ಐಶ್ವರ್ಯವಾಗಿ ಅಲ್ಲ. ಭಕ್ತನ ಮನಸ್ಸಿನ ವೈವಿಧ್ಯಮಯ ಭಕ್ತಿಯನ್ನು ಭಗವಂತನಿಗೆ ಆಭರಣವಾಗಿ ಅಲಂಕರಿಸಿದ ಹಾಗೆ. ಭಕ್ತಿಗೆ ಪ್ರೇಮಪೂರ್ಣ ನಿವೇದನೆಯೂ ಭಕ್ತನ ಕೋಮಲಭಾವವೂ ಇಲ್ಲಿ ಅಭಿವ್ಯಕ್ತಗೊಂಡಿದೆ. ಭಕ್ತಿಯ ನೆಲೆ ಬೇರೆಯಾದಂತೆಲ್ಲ ತೊಡಿಸುವ ಆಭರಣವೂ ಬೇರೆಯಾಗುತ್ತದೆ. ಇದು ಅವ್ವನ ಅಪೂರ್ವವಾದ ಚಿಂತನ ಶೀಲತೆಗೆ ಸಾಕ್ಷಿ. ಇಲ್ಲಿ ನೀಡಿರುವ ಆಭರಣಗಳ ಪಟ್ಟಿ ಅಪೂರ್ವವೂ ಮನೋಹರವೂ ಆಗಿವೆ. ಅವುಗಳಲ್ಲಿ ಕೆಲವು–ಕಂಕಣ ಒಡ್ಯಾಣ, ಕುಂಡಲ, ಮುರಿಗೆವಂಕಿ, ಕಟಿಗಂಟೆ, ಕಡ್ಡಿಬಳೆ, ಕೊಪ್ಪು, ಝುಲ್ಲಿ, ರುಳಿ, ರಾಗಟೆ, ಬಿಂದಲಿ, ಬಾಪುರಿ, ಪದ್ಮ, ಪಂಜರದವಾಲೆ, ಬಟುಮುತ್ತಿನವಾಲೆ, ಗೊಂಡ್ಯ ಕಂಠೀಹಾರ–ಹೀಗಿವೆ.

ಮುಯ್ಯದ ಹಾಡು

ಗೌರಿ ಪೂಜೆಯ ನೆಪದಲ್ಲಿ ಕುಟುಂಬದ ಸದಸ್ಯರು ಒಂದೆಡೆ ಕಲೆತು ಪರಸ್ಪರ ಕುಶಲೋಪರಿ ಮಾಡಿಕೊಳ್ಳುತ್ತ, ಛೇಡಿಸುತ್ತ, ಕಾಡುತ್ತ ಪುಲಕಗೊಂಡು ಆನಂದಿಸುವುದನ್ನು ಮುಯ್ಯದ ಹಾಡು ಸೆರೆ ಹಿಡಿದಿದೆ. ಅಣ್ಣಂದಿರ ಮನೆಗೆ ತಂಗಿ ಮುಯ್ಯನ್ನೊಯ್ದು ಕೆಲಕಾಲ ಅಲ್ಲಿದ್ದು ಅವರ ಕಷ್ಟಸುಖಗಳನ್ನು ಹಂಚಿಕೊಳ್ಳುತ್ತಾಳೆ. ಅ ಮೂಲಕ ಬಾಂಧವ್ಯವನ್ನು ಗಟ್ಟಿಗೊಳಿಸಿ ಹೆಂಡತಿಯರೂ ಮುಯ್ಯನ್ನು ಹಿಂದಿರುಗಿಸುವ ನೆವದಲ್ಲಿ ನಾದಿನಿ ಮನೆಗೆ ಬರುತ್ತಾರೆ. ಮತ್ತೆ ಅದೇ ಆಮೋದ ಪ್ರಮೋದಗಳು! ಸದಾ ಒಂದಿಲ್ಲೊಂದು ಚಿಂತೆಯ ಗೂಡಾಗಿಬಿಡಬಹುದಾದ ಜೀವನದಲ್ಲಿ ಕ್ಷಣಕ್ಷಣವನ್ನೂ ರಸಗಳಿಗೆಗಳನ್ನಾಗಿ ಪರಿವರ್ತಿಸಿಕೊಳ್ಳುವ ಜಾಣ್ಮೆಯನ್ನು ಮಹಿಳಾ ಪರಂಪರೆ ಹಬ್ಬದ ನೆವದಲ್ಲಿ ರೂಢಿಸಿಕೊಂಡಿದೆ. ಪೌರಾಣಿಕ ಪಾತ್ರಗಳಾದ ಸುಭದ್ರೆ, ದ್ರೌಪದಿ, ಕೃಷ್ಣ, ರಾಮಲಕ್ಷ್ಮಣ, ಸೀತೆ, ರುಕ್ಮಿಣಿ, ಸತ್ಯಭಾಮೆ, ಗಂಗೆಗೌರಿ, ಶಿವವಿಷ್ಣು ಮೊದಲಾದವರ ಸರಸ ಸಲ್ಲಾಪಗಳು, ವಿಶೇಷ ಉಲ್ಲಾಸದ ಸಂದರ್ಭಗಳು, ನೋವು, ನಲಿವುಗಳ ಚಿತ್ರಣಗಳನ್ನು ನೀಡುತ್ತ ಅವ್ವ ತನ್ನ ಹಾಡುಗಳಿಗೊಂದು ಸಾಂಸ್ಕೃತಿಕ ನೆಲಗಟ್ಟನ್ನು ರಚಿಸಿಕೊಳ್ಳುತ್ತಾಳೆ.

ಹೆಣ್ಣುಮಕ್ಕಳಿಗೆ ತವರೆಂದರೆ ವಿಶೇಷ ಆಕರ್ಷಣೆ. ಅಣ್ಣನ ನೆನಪೋ ತಂಪೆರೆಯುವ ಹಚ್ಚ ಹಸುರು. ಸುಭದ್ರೆ ದ್ರೌಪದಿಯರು ಅಣ್ಣ ಕೃಷ್ಣನನ್ನು ಕಾಣಲುತ್ಸುಕರಾಗಿ ಮುಯ್ಯ ನೆಪದಲ್ಲಿ ದ್ವಾರಕೆಗೆ ಬರುತ್ತಾರೆ. ಕೃಷ್ಣನನ್ನೂ ಅವನ ಪ್ರಿಯಪತ್ನಿಯರಾದ ರುಕ್ಮಿಣಿ ಸತ್ಯಭಾಮೆಯರನ್ನೂ ಮಾತಿಗೆಳೆದು ಟೀಕಿಸಿ ಲೇವಡಿ ಮಾಡಿ ಅವರ ಪ್ರೀತಿಕರುಣೆಗಳನ್ನೂ ಅಪೂರ್ವ ಗುಣಗಳನ್ನೂ ಸ್ತುತಿಸುವುದು ಅವರ ಉದ್ದೇಶ. ಹಾಗೆ ಅತ್ಯುತ್ಸಾಹದಿಂದ ಬಂದ ಅವರನ್ನು ದ್ವಾರಕೆ ಎದುರುಗೊಳ್ಳುತ್ತದೆ. ಅವ್ವನ ಮಾತುಗಳಲ್ಲೇ ದ್ವಾರಕೆಯ ವರ್ಣನೆ ಹೇಗಿತ್ತು ನೋಡೋಣ:

ದಿಕ್ಕು ತುಂಬಿತು ಲೆಕ್ಕವಿಲ್ಲದೆ ಜನರು
ಕಾಶ ತುಂಬಿತು ಎಲ್ಲ ಕೋಶ ತುಂಬಿತು
ಆಶೆ ಬಡುತಲೆ ಜನರು ಸೋಸಿನ ಮುಯ್ಯಕ್ಕೆ
ಹಾದಿ ತುಂಬಿತು ಎಲ್ಲ ಬೀದಿ ತುಂಬಿತು

ಅಂಬರ ತುಂಬಿತು ಪಟ್ಟಣ ತುಂಬಿತು
ಒಂದಿಷ್ಟು ಬಿಡದಲೆ

ಅಷ್ಟೇ ಅಲ್ಲ,

ದ್ವಾರದ್ವಾರಂಗಳಿಗೆ ತಳಿರು ತೋರಣ
ನಿವಹ ಮೇರುವಿಗೆ ಪೊನ್ನ ಕಳಸ
ಮೇರುವಿಗೆ ಪೊನ್ನ ಕಳಸ ಕನ್ನಡಿ
ಮನೋಹರವಾಗಿದ್ದು ಸಾಟಿಯಿಲ್ಲ

ಮುಯ್ಯ ನೀಡಲು ಬಂದವರು ಸುಭದ್ರ ದ್ರೌಪದಿಯರು ಮಾತ್ರವಲ್ಲ. "ದೇವಾನುದೇವತೆಯರು, ತಾಳತಂಬೂರಿಯವರು, ತುಂಬುರು ನಾರದರು, ಸಿದ್ಧಸಾಧ್ಯರು. ಎಲ್ಲ ಕೂಡಿ ಕೋಟಿ ಸೂರ್ಯರ ದಾಟಿ ತೋರೋ ಅಂಗಳದಿ ಮುತ್ತಿನ ತೋರಣ ನವರತ್ನದ ಹಂದರ ಪಚ್ಚದ ಪಾವಟಿಗೆ ರತ್ನ ಹಚ್ಚಿದ ಹೊಸ್ತುಲ" ದಾಟಿ ಬಂದರಂತೆ! ಕೃಷ್ಣನ ದ್ವಾರಕೆಗೆ ರತ್ನ ಪಚ್ಚಪವಳಗಳ ವೈಭವದೊಂದಿಗೆ ದಿಕ್ಕುದಿಕ್ಕನ್ನೂ ಆವರಿಸಿದ ಸುರಜನ ಪುರಜನರ ಸಂಭ್ರಮ ಬೇರೆ. ಇವರ ಮಧ್ಯದಲ್ಲಿ ಶ್ರೀ ರಮಾರಮಣನಾದ ಶ್ರೀಕೃಷ್ಣನ ಅರಮನೆಗೆ ಸುಭದ್ರೆ ಮುಯ್ಯ ತರುವಳು.

ಇದೇ ಸಂದರ್ಭಕ್ಕೆ ಇಂದ್ರ ಗಜೇಂದ್ರನನ್ನೇರಿಕೊಂಡು ಮಂದಗಮನೆ ಶಚಿ ಸಹಿತ, ಹುತಭುಕ್ತ ಸ್ವಾಹಾದೇವಿಯೊಂದಿಗೆ ಜಾಣ ಯಮ ಕೋಣವನ್ನೇರಿ, ವರುಣ ಮಕರನ ಮೇಲೇರಿ ಭಾಗೀರಥಿಯೊಡನೆ ಮರುತ ತರುಣಿ ಪ್ರವಹಿಯೊಂದಿಗೆ, ಈಶ ವೃಷಭನನ್ನೇರಿ, ಧರ್ಮ ಭೀಮಾರ್ಜುನ ನಕುಲ ಸಹದೇವರು ದ್ವಾರಕೆಗೆ ಬರುತ್ತಾರೆ. ಅದೆಂಥ ನಗರ!

ಮುಂದಕ್ಕೆ ನೋಡಲು ಹೊಂದಿದ್ದ ಮನೆಗಳು
ಹಂದರದ ಜಗಲಿ ಸುಳಿಗೊಳ
ಅತ್ತಿತ್ತ ನೋಡಲು ಕಾಣುವ ಗೋಪುರ
ಮುತ್ತಿನಂಗಡಿ ಎಡಬಲ
ಕೋಗಿಲದ ಸ್ವರದಂತೆ ಮಕ್ಕಳ ಜೋಗಳ ಹಾಡುತೆ
ಮನೆ ಬಾಗಿಲ ಮುಂದೆ ಲಾಲಿ ಪಾಡುವರು
ಹಸಿರು ಬಳೆ ತೊಟ್ಟು ಕುಸುರಿನ ಸಿಂಬೆಯಲಿ
ಮೊಸರ ಗಡಿಗೆಲಿ ಎಸಗುತ ಮಾರುವ
ಬಿಸಜ ನೇತ್ರೆಯರು ಕಣ್ಣು ಕಜ್ಜಲದ ಕೆಲದೆಯರು

ಅಷ್ಟೇ ಅಲ್ಲ–

ಬಾಜಾರದೊಳಗೆಲ್ಲ ತೇಜಿ ಆನೆಯ ಸಾಲು
ಕಾಜಿನಕಂಬ ಕಿಡಕಿ ಕಮಲಾಕ್ಷಿ
ನೀಟಾದ ಬೀದೀಲಿ ಥಾಟಾದ ಮನೆಗಳು
ನೀಲಮಾಣಿಕ ಬಿಗಿದ ಮೇಲಾದ ಮನೆಗಳು
ಏಳಂತಸ್ತಿನ ಮಾಳಿಗೆ ಮ್ಯಾಲಿನ ಗೊಂಬೆಗಳು
ಸೋಜಿಗವಾಗಿದ್ದ ಜಾಜಿ ಮಲ್ಲಿಗೆ ಹೂ

ಸೂಜಿ ಮಲ್ಲಿಗೆ ಸರಗಳು
ನಾಲ್ಕು ದಿಕ್ಕಿಗೆ ದಿವ್ಯ ಆಕಳ ಹಿಂಡುಗಳು
ಎತ್ತೆತ್ತ ನೋಡಿದರೂ ಮುತ್ತಿನ ಪಲ್ಲಕ್ಕಿ
ಶಂಖಚಕ್ರಾಂಕಿತ ಬಿಂಕುಳ್ಳ ಶ್ರೀವತ್ಸ
ಕುಂಕುಮಾಂಕಿತನ ಅರಮನೆ ಶೃಂಗಾರ

ಇವೆಲ್ಲವನ್ನು ಗಮನಿಸುತ್ತಲೇ ಸುಭದ್ರೆ ದ್ರೌಪದಿಯರು ಬರುತ್ತಿದ್ದಾರೆ. "ವಾಜಿ ಹತ್ತಿ ಮುತ್ತಿನ ತುರಾಯಿಯವರೊಂದಿಗೆ ಮುತ್ತಿನ ಪಲ್ಲಕ್ಕಿ ಮುಂದಕ್ಕೆ ಹಾಕಿ ತೇರಿನ ಬೀದಿಯಲ್ಲಿ ಮದ್ದುಬಾಣಬಿರುಸು ರಭಸದಲ್ಲಿ ಕುಂದಣವ ರಚಿಸಿದ ಅಂದಣವನೇರಿಕೊಂಡು." ಕೃಷ್ಣನಿಗೆ ತಾವು ಬಂದ ಸುದ್ದಿ ಕಳುಹಿಸುತ್ತಾರೆ. ಅನಂತರ ಅಣ್ಣತಂಗಿಯರು ಹಾಗೂ ಅತ್ತಿಗೆ ನಾದಿನಿಯರ ನಡುವೆ ಚಮತ್ಕಾರಯುತವಾದ ಕುಶಲೋಪರಿ ನಡೆಯುತ್ತದೆ. ನಾದಿನಿಯರನ್ನು ಎದುರುಗೊಳ್ಳಲು ಭಾಮೆ ರುಕ್ಮಿಣಿಯರು ಬರುತ್ತಾರೆ. ಅವರ ಮಾತುಕತೆಗಳಲ್ಲಿ ಪರಸ್ಪರರನ್ನು ಛೇಡಿಸುವ, ಲೇವಡಿ ಮಾಡುವ ಹಾಗೂ ಜತೆಜತೆಗೆ ನಕ್ಕು ಹಗುರಾಗುವ ರೀತಿಯನ್ನು ಕಾಣಬಹುದು. ಹೀಗೆ ಮುಯ್ಯ ಕೊಡುವ ಹಾಗೂ ಪಡೆದವರು ಅದನ್ನು ಹಿಂದಿರುಗಿಸುವ ಸಂಪ್ರದಾಯ ಇಂದಿಗೂ ಉತ್ತರ ಕರ್ನಾಟಕದ ಕಡೆ ಉಳಿದು ಬಂದಿದೆ. ಇವರು ಮಾಡುವ ಲೇವಡಿಗಳಲ್ಲಿ ವ್ಯಂಗ್ಯದ ಜತೆಗೆ ನವುರಾದ ಹಾಸ್ಯವೂ ನಿಂದಾಸ್ತುತಿಯೂ ಇದೆ. ಕೃಷ್ಣನ ಸತಿಯರು ದ್ರೌಪದಿಯನ್ನು ಬರಮಾಡಿಕೊಳ್ಳುವ ರೀತಿಯಿದು.

ಭಯವುಳ್ಳ ಬಾಲೆ ನೀ ಐವರಿಗೆ ಇಂತಿಪ್ಪೆ
ಸೈವಲ್ಲದ ಮಾತು ಜಗಕಿದು
ಲೋಕದೊಳೊಬ್ಬಳಿಗೆ ಏಕಪತಿಯುಂಟು
ಏಕಕಾಲದೆ ಐವರನ ಕೂಡೋದು
ನಾ ಕಾಣೆನೆಲ್ಲೂ ಕೌತುಕವ
. . . . .
ಎಲ್ಲ ನಾರಿಯರೊಬ್ಬ ನಲ್ಲನ ಬೆರಿಯೆ
ಬಲ್ಲಿದ ಭೂಪರನ್ಯೆವರನೊಲಿಸಿದಿ
ಎಲ್ಲರಂಥಲ್ಲ ಬಲುಧೀರೆ
. . . .

ಅದಕ್ಕೆ ದ್ರೌಪದಿ ಮಾರುತ್ತರವಾಗಿ ಅವರನ್ನು ಛೇಡಿಸುತ್ತಾಳೆ. ಸವತಿಯರಾದ ರುಕ್ಮಿಣಿ ಸತ್ಯಭಾಮೆಯರ ಮತ್ಸರ ಹಾಗೂ ಕಾದಾಡುವ ಗುಣವ ಕಂಡು ಸೈರಿಸಲಾರದೆ ಹರಿ ನೀರೊಳಡಗಿದನಂತೆ!

ನಾರಿಯರಿಬ್ಬರ ಬಿಟ್ಟು ನೀರೊಳಡಗಿದ
ಮಾರಿ ತೋರದಲೆ ನೆಲವನೆ ಬಗಿದು
ಅತಿಕ್ರೂರನಾದರೂ ಬಿಡರೆಲೆ ಸಖಿಯೆ
ಭಾಮೆ ರುಕ್ಮಿಣಿ ನಿಮ್ಮ ಹೀನಗುಣವ ನೋಡದೆ
ಕಾಮನ ಪಿತನು ಕೈಹಿಡಿದ ಕಾರಣ
ಭೂಮಂಡಲವೆಲ್ಲ ನಮಿಸಿತು ಸಖಿಯೆ

ಈ ಸಂದರ್ಭದಲ್ಲಿ ದಶಾವತಾರದ ಕಲ್ಪನೆಯದೆ. ಇದಕ್ಕೆ ರುಕ್ಮಿಣಿ ಹೀಗೆ ಮಾರ್ನುಡಿಯುತ್ತಾಳೆ:

ಇಂಥವಳು ಹುಟ್ಟದೇಕಿನ್ನು ಜಗದೊಳು
. . . . .
ಗಂಡನ ಬಳಗವ ಚಂಡನಾಡಿಸಿಬಿಟ್ಟೆ
ಪುಂಡಗಾರ್ತಿಯೆ ಜಗದೊಳು ನಿನ್ನ ಕೀರ್ತಿ
ಕೊಂಡಾಡುತಾರೆ ದ್ರೌಪದಿ
ನೂರುಮಂದಿಯ ಕೊಂದು ಊರು ಕೇರಿಯ ಪಡೆದು
ಯಾರ್‍ಯಾರನೆಲ್ಲ ಅಡವಿಗೆ ಅಟ್ಟಿದೆ
ಮಹಾರಾಯಳೆ ನಿನಗೆ ಭಯವುಂಟೆ
ಎಂತೆಂಥ ಪರಿಗಳ ಎಂತೆಂತು ಮಾಡಿದೆ
ಕೊಂಚರೆ ಬೀತಿ ನಿನಗಿಲ್ಲ ಧರ್ಮನ
ಶಾಂತ ಗುಣದಿಂದ ಉಳಿದಿದಿ ದ್ರೌಪದಿ

ಹೀಗೆ ಪರಸ್ಪರ ಛೇಡಿಸಿ ನಕ್ಕು ಮಾತನಾಡಿಸುತ್ತಲೇ ಬಹಳ ವಿನಯದಿಂದ ದ್ರೌಪದಿಯನ್ನು ಆಲಿಂಗನ ಮಾಡಿ ಕರೆಯುತ್ತಾರೆ. ರುಕ್ಮಿಣಿ ಸುಭದ್ರೆಯೊಂದಿಗೆ ಮಾತಿಗಿಳಿದಾಗ ಸುಭದ್ರೆ 'ಅಣ್ಣನ ವಂಚಿಸಿ ಕೃಷ್ಣನ ಹಿಂದೆ ಓಡಿಬಂದವಳೆಂದು' ಜರಿಯುತ್ತಾಳೆ. ಅದಕ್ಕೆ ರುಕ್ಮಿಣಿ 'ನಿನ್ನಂತೆ ಸನ್ಯಾಸಿಯೊಡನೆ ಬರಲಿಲ್ಲ' ಎನ್ನುತ್ತಾಳೆ.

ಪಾಂಡವರೈವರೂ ಬಂದಾಗ ಬಲರಾಮ ಅವರನ್ನು 'ಇಂದ್ರರೊ ದೇವೇಂದ್ರರೊ ಚಂದ್ರನಂತೆ ಹೊಳೆಯುತ ಬಂದರೈವರು' ಎಂದು ಪ್ರೇಮದಿಂದ ಕೈಹಿಡಿದು ಕ್ಷೇಮಾಲಿಂಗನ ಕೊಟ್ಟು ಸ್ವಾಮಿಸನ್ನಿಧಿಗೆ ಬರಬೇಕೆಂದು ಸ್ವಾಗತಿಸುತ್ತಾನೆ.

ಕೃಷ್ಣನೂ ಬಂದು ಪಾಂಡವರನ್ನು ಎದುರುಗೊಳ್ಳುತ್ತಾನೆ. 'ದುಂಡು ಮುತ್ತುಗಳಿನಿಟ್ಟು ಪೆಂಡೆಸರ ಹಾಕಿ ಪುಂಡರೀಕಾಕ್ಷನ ಚರಣಕ್ಕೆ ತಂತಮ್ಮ ಬಾಲರ ಸಹಿತ ಸುಭದ್ರೆ ದ್ರೌಪದಿಯರು ಬಂದು ಕುಳಿತುಕೊಳ್ಳುವರು.

ಇದೇ ರೀತಿ ಪಡೆದ ಮುಯ್ಯನ್ನು ಹಿಂದಿರುಗಿಸಲು ಕೃಷ್ಣ, ರುಕ್ಮಿಣಿ ಸತ್ಯಭಾಮೆಯರೆಲ್ಲ ಪಾಂಡವರಲ್ಲಿಗೆ ಬರುತ್ತಾರೆ. ಮತ್ತದೇ ಕೀಟಲೆ, ಹುಸಿಮುನಿಸು, ಪರಸ್ಪರ ಹೀಗಳೆಯುವಿಕೆ. ಕೀರ್ತಿ ಪೌರುಷಗಳ ಹೆಗ್ಗಳಿಕೆ. ಅನಂತರ ದ್ರೌಪದಿಯಾದಿಯಾಗಿ ಎಲ್ಲ ಪಾಂಡವ ವೀರರು ಬಂದವರನ್ನು ಉಪಚರಿಸುತ್ತಾರೆ.

ಮೆಲ್ಲಗೆ ಉಣ್ಣಯ್ಯ ಯದುವೀರ
ಹಿಂದೆ ಬಲ ಬುತ್ತಿಯ ಕದ್ದು ಉಂಡ ಅತಿಶೂರ
ಗೊಲ್ಲರೆಲ್ಲರ ಕೂಡ ವಿಹಾರ
ಎನಿಸಿ ಎಲ್ಲ ಪದಾರ್ಥ ಚೆಲ್ಲದಿರೊ ಧೀರ
. . . . . .
ಬೇಕಾದ್ದು ಬೇಡೊ ಸಿದ್ಧ
ದ್ರೌಪದಿ ನೀಡುತಿರಲು ಉದ್ದಿನ ಕಾಳಷ್ಟು ಭಿಡೆಯು ಬ್ಯಾಡ

ಎಂದು ಆತ್ಮೀಯವಾಗಿ ಉಣಬಡಿಸಿದಾಗ ಕೃಷ್ಣ ಉಂಡು ತೃಪ್ತನಾದ. ಅನಂತರ ಆರತಿಯೆತ್ತಿ ಪರಸ್ಪರರಿಗೆ ಫಲ-ತಾಂಬೂಲ ಪಟ್ಟೆ ಸರಿಗೆ ಸೀರೆಗಳನ್ನು ಉಡುಗೊರೆ ಕೊಟ್ಟು ಮುಯ್ಯ ತೀರಿಸುತ್ತಾರೆ. ಈ ಸಂದರ್ಭಗಳನ್ನೆಲ್ಲ ಅತ್ಯಂತ ನಾಜೂಕಾಗಿ ಚಿತ್ರಿಸಲಾಗಿದೆ.

ಕೃಷ್ಣನನ್ನು ವರ್ಣಿಸುವಾಗ ಅವನ ಬಾಲಲೀಲೆಯಿಂದ ಮೊದಲುಗೊಂಡು ಹಲವು ಹತ್ತು ಪ್ರಸಂಗಗಳನ್ನು ಉಲ್ಲೇಖಿಸಲಾಗಿದೆ. ಅಂಥ ಸಂದರ್ಭದಲ್ಲಿ ಅವ್ವನ ಕೃಷ್ಣ ಪ್ರೀತಿ ಮೇರೆ ಮೀರುತ್ತದೆ. 'ಆರು ಬಣ್ಣಿಸರಮ್ಮ ಶ್ರೀಹರಿಯ' ಎನ್ನುತ್ತಲೇ ಮೂರು ಪಾದ ಬೇಡಿ ವಾಮನನಾದ, ಭಾರ ಕೊಡಲಿ ಹೊತ್ತ ಹಿರಿಯ ಪರಶುರಾಮನಾದ, ನಾರಿ ತಂದ ಧೀರ ರಾಮನಾದ, ನೀರ ಪೊಕ್ಕು ಭಾರ ಹೊತ್ತ ವರಾಹವಾದ, ದೊರೆಯನೆತ್ತಿದ ಕರಳು ಕಿತ್ತಿದ ನರಸಿಂಹನಾದ, ದ್ವಾರಕೆ ದೊರೆಯಾಗಿ ಕೃಷ್ಣನಾದ, ಕ್ರೂರಕಂಸನ ಕೊಂದ ಹರಿಯಾದ-ಕೃಷ್ಣನ ಎಲ್ಲ ಅವತಾರಗಳನ್ನೂ ಅವ್ವ ಪರಿಪರಿಯಾಗಿ ಬಣ್ಣಿಸುತ್ತಾಳೆ. ಹಾಗೆಯೇ ಚೆಲುವ ಕೃಷ್ಣನ ಕುರಿತ ಕೋಮಲ ಭಾವದ ಹಾಡುಗಳಿರುವಂತೆಯೇ "ಘಿಲಿ ಘಿಲಿ ಘಿಲಿಕೆಂದು ಗೆಜ್ಜೆ ಕಿಲಿ ಕಿಲಿ ಕಿಲಿ ಕಿಲಿ ಕಿಂಕಿಣಿ ಜಾಲದಿ..." ಎಂಬ ನಾಟ್ಯರಸಭಾವಗಳಿಗನುಗುಣವಾದ ಹಾಡುಗಳೂ ಅವ್ವನಲ್ಲಿವೆ.

ಪುರಾಣ ಪ್ರಸಂಗಗಳನ್ನು ಸಾಂದರ್ಭಿಕವಾಗಿ, ಔಚಿತ್ಯಪೂರ್ಣವಾಗಿ ಪದೇಪದೇ ಬಳಸಿರುವುದು ಎದ್ದು ಕಾಣುತ್ತದೆ. ಈ ವಿವರಗಳು ಸರಳವಾಗಿ, ಸಹಜವಾಗಿ ಸುಲಲಿತವಾಗಿ ರಮಣೀಯವಾಗಿವೆ.

'ಅಚ್ಯುತನ ನಖತಾಕಿ ಬಿಚ್ಚಿ ಬ್ರಹ್ಮಾಂಡವು' ಎನ್ನಲಾದ ತ್ರಿವಿಕ್ರಮಾವತಾರದಲ್ಲಿ ಶ್ರೀವಿಷ್ಣುವಿನ ಎಡಗಾಲಿನುಂಗುಷ್ಠದ ಉಗುರು ತಾಕಿ ಗಂಗೋತ್ಪತ್ತಿಯಾದದ್ದು; 'ಆಪನೋಳು ಮನೆಕಟ್ಟಿ' ಎಂಬಲ್ಲಿ ಸಮುದ್ರದಲ್ಲಿ ಅರಮನೆ ನಿರ್ಮಿಸಿದ ಶ್ರೀಕೃಷ್ಣ ಅದನ್ನು ದ್ವಾರಕೆಯೆಂದು ಕರೆದದ್ದು; 'ಪಲ್ಯಾದ ತುದಿಯಿಂದ ಎಲ್ಲ ಪದಾರ್ಥ ಮಾಡಿ ಬಲ್ಲಿದ ಮುನಿಗೆ ಉಣಿಸಿ' –ಈ ಸಂದರ್ಭ ವನವಾಸದಲ್ಲಿದ್ದ ಪಾಂಡವರು ದೂರ್ವಾಸಾತಿಥ್ಯ ನೀಡಿದ್ದು– ಹೀಗಿವೆ ಆಕೆಯ ವರ್ಣನೆಗಳು.

ಅನೇಕ ಸಂದರ್ಭಗಳಲ್ಲಿ ಮಾಧ್ವ ತತ್ತ್ವ, ಹನುಮನ ಅವತಾರತ್ರಯ ವಿವರ, ಹಯವದನನ ಸ್ತುತಿ, ಪಂಚಭೇದಗಳ ಉಲ್ಲೇಖಗಳೂ ಇಲ್ಲದಿಲ್ಲ. ಹರಿಸರ್ವೋತ್ತಮ, ಸರ್ವವ್ಯಾಪಕ, ಸರ್ವಾಂತರ್ಯಾಮಿ, ಸಕಲಗುಣಗಣ ಪೂರ್ಣನಾದ ಹರಿಯನ್ನು ಹೃದಯಮಂದಿರದಲ್ಲಿ ಬಿಂಬರೂಪವಾಗಿ ಪೂಜಿಸುವ ವಿಧವನ್ನೂ ಹೇಳುತ್ತಾಳೆ.

ಇಷ್ಟೇ ಅಲ್ಲದೆ ಜೋಗುಳದ ಹಾಡುಗಳು, ಕೋಲುಪದಗಳು, ಸುವ್ವಿ ಗೀತೆಗಳೂ ಈಕೆಯ ರಚನೆಯಲ್ಲಿವೆ.

'ಜೋಗುಳ ಹಾಡು' ಕೃಷ್ಣಲೀಲೆಯ ಸವಿಯುಣಿಸುವ ಮಧುರಗಾನ, ಕೃಷ್ಣನ ಜನನದಿಂದ ಮೊದಲ್ಗೊಂಡು ಜಾತಕರ್ಮ, ತೊಟ್ಟಿಲು ಕಟ್ಟುವ ಸಂಭ್ರಮ ಮುಂತಾದ ಅನೇಕ ಘಟ್ಟಗಳ ವಿಸ್ತೃತ ವಿವರಣೆ ಇದರಲ್ಲಿದೆ.

'ಸೇತು ಬಂಧನದ ಹಾಡು' ರಾಮಭಕ್ತ ಹನುಮ, ಕೃಷ್ಣ ಭಕ್ತ ಪಾರ್ಥನ ವಾಗ್ವಾದದ ರೂಪದ್ದು. ಸಂಭಾಷಣಾ ರೂಪದ ಈ ಹಾಡು ರಾಮಕೃಷ್ಣರಿಬ್ಬರ ಮಹಿಮೆಯನ್ನು ಸೊಗಸಾಗಿ ಕಟ್ಟಿಕೊಡುತ್ತದೆ. ಕೊನೆಗೆ ಪಾರ್ಥ ಸೋಲುತ್ತಾನೆ. ಆದರೆ ಹನುಮ ಅವನ ಧ್ವಜದಲ್ಲಿ ನೆಲಸುತ್ತಾನೆ. ಭಕ್ತರ ನಡುವೆ ಶಕ್ತ-ಶಕ್ತರ ನಡುವೆ ಸೋಲೂ ಗೆಲುವಾಗಿಯೇ ಇರುತ್ತದೆ ಎಂಬುದನ್ನಿಲ್ಲಿ ಮುಖ್ಯ ಆಶಯವಾಗಿಟ್ಟುಕೊಳ್ಳಲಾಗಿದೆ.

ಗಲಗಲಿ ಅವ್ವನ ಹಾಡುಗಳನ್ನು ಒಟ್ಟಾರೆ ಗಮನಿಸಿದಾಗ ನಿಚ್ಚಳವಾಗಿ ಒಡಮೂಡುವ ಅಂಶಗಳಿವು. ಭಕ್ತಿಭಾವದ ಅಭಿವ್ಯಕ್ತಿ, ಮಾಧ್ವಮತ ತತ್ತ್ವ ನಿರೂಪಣೆ, ಪೌರಾಣಿಕ ಪ್ರಸಂಗಗಳ ಬಳಕೆ, ಸಂಪ್ರದಾಯ ಆಚರಣೆಗಳ ವಿವರ, ಜಾನಪದೀಯ ಹಿನ್ನೆಲೆಯ ಸರಳ ಆತ್ಮೀಯ ಭಾವ, ನಿತ್ಯ ಜೀವನಾನುಭವಗಳ ದಾಖಲಾತಿ, ಇವುಗಳ ಮೂಲಕ ಸಂಸ್ಕೃತಿಯ ಅನಾವರಣ. ಈ ಹಿನ್ನೆಲೆಯಿಂದ ರಚನೆಗೊಂಡಿರುವ ಈಕೆಯ ಕೀರ್ತನೆಗಳು ಅನಂತರ ಬಂದ ಅನೇಕ ಕೀರ್ತನಕಾರ್ತಿಯರಿಗೆ ದಾರಿದೀವಿಗೆಗಳಾಗಿವೆ.

ಸಾವಿನ ಕದದ ಸಮೀಪ ನಿಂತ, 95ರ ಮುದುಕನನ್ನು ಮದುವೆಯಾಗಬೇಕಾದ ಅನಿವಾರ್ಯತೆಯಿಂದಾಗಿ ನಾಲ್ಕು ದಿನಗಳ ಮದುವೆ ಸಮಾರಂಭದ ಸಂಭ್ರಮ ಸಡಗರಗಳನ್ನು ಸರಿಯಾಗಿ ಅನುಭವಿಸದೇ ಉಳಿದ ಹುಡುಗಿ ಗಲಗಲಿ ಅವ್ವ, ಎಂಟೇ ದಿನಗಳಲ್ಲಿ ವಿಧವೆಯಾಗಿ ಕ್ರೂರ ಸಂಪ್ರದಾಯಗಳ ಕಾರಣದಿಂದ ಲೌಕಿಕ ಸುಖವನ್ನೇ

ಅನುಭವಿಸಲಾಗದೇ ಹೋದರೂ, ಅಳುತ್ತ ಕೂಡದೇ, ತನಗಿಂತ ವಯಸ್ಸಿನಲ್ಲಿ ಬಹಳ ಹಿರಿಯರಾದ ಮಕ್ಕಳಿಂದ ಓದು ಕಲಿತು ಪುಸ್ತಕಗಳ ಅಧ್ಯಯನ ಮಾಡಿ, ಮನೆಗೆಲಸ, ಪರರ ಕೆಲಸಗಳ ಬಿಡುವಿನ ವೇಳೆಯಲ್ಲಿ ಸಾಹಿತ್ಯ ರಚನೆ ಮಾಡಿದರು. ನಿರರ್ಥವಾಗಲಿದ್ದ ಬದುಕಿಗೆ ಸದರ್ಥ ಕೊಟ್ಟುಕೊಂಡ ಸಾಧಕಿಯಾದರು, ಸಾಮಾನ್ಯ ಸ್ತ್ರೀಯರಿಗೆ ಮಾದರಿಯಾದರೆಂಬುದು ಉಲ್ಲೇಖನೀಯ ಸಂಗತಿ.

*

ಕೆಳದಿಯ ಅನರ್ಘ್ಯ ರತ್ನ ಚೆನ್ನಮ್ಮ

ಎನ್. ಭಾರತಿ

ಮಾನವ ಸಂಪನ್ಮೂಲತೆಯ ಹೆಚ್ಚಳದಲ್ಲಿ ಮಹಿಳೆ

ಜನಸಮುದಾಯದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಸ್ತ್ರೀ ಪುರುಷರ ಸಮಾನ ಪಾಲುಗೊಳ್ಳುವಿಕೆ ಅತ್ಯಂತ ಅಗತ್ಯವಾಗಿದೆ. ದುರ್ದೈವವಶಾತ್ ನಮ್ಮಲ್ಲಿ ಸ್ತ್ರೀ ಎಂದರೆ ಮೂಗುಮುರಿಯುವವರು ಹೆಚ್ಚು. ಆಕೆ ಮೂಲತಃ 'ಚಂಚಲೆ' ಎನ್ನುವ ಭಾವನೆ ಇದೆ.

ಸ್ತ್ರೀ ಮನಸ್ಸು ಅರಿಯಲು ಸಾಧ್ಯವಿಲ್ಲ, ಆಕೆ ದುರ್ಬಲಳು ಚಂಚಲೆ ಎಂದೆಲ್ಲಾ ಮಾತುಗಳೂ ಕೇಳಿ ಬರುತ್ತವೆ. ಆದರೆ ಸ್ತ್ರೀ ಎಂದೂ ಚಂಚಲೆ ಅಥವಾ ದುರ್ಬಲಳು ಅಲ್ಲ. ಆಕೆ ಕಷ್ಟಸಹಿಷ್ಣು, ತ್ಯಾಗಿ ಆತ್ಮವಿಶ್ವಾಸದ ಪ್ರತೀಕ. ಎಲ್ಲಾ ತರಹದ ಜವಾಬ್ದಾರಿ ಹೊರಬಲ್ಲ ಸಮರ್ಥೆ. ಕುಟುಂಬ ಹಾಗೂ ಸಮಾಜಕ್ಕೆ ಅರ್ಪಣಾ ಮನೋಭಾವದಿಂದ ದುಡಿಯುವ ಮಹಾನ್ ಜೀವಿ.

ವೇದಜ್ಞೆ ಶಾಶ್ವತೀಯಿಂದ ಹಿಡಿದು ಇತ್ತೀಚಿನ ಅಮೇರಿಕಾದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಕ್ಲಿಂಟನ್ ಹಿಲರಿ ವರೆಗಿನ ಶ್ರೇಷ್ಠ ಮಹಿಳಾಮಣಿಗಳತ್ತ ಒಮ್ಮೆ ಕಣ್ಣು ಆಡಿಸಿದಾಗ ಅವರ ಕರ್ತೃತ್ವ ಶಕ್ತಿಯ ಪರಿಚಯವಾಗುತ್ತದೆ. ಭಾರತದ ಇತ್ತೀಚಿನ ದಿನಗಳಲ್ಲಿ ಜನತೆಯ ಮನೆಮಾತಾಗಿರುವ ಶ್ರೀಮತಿ ಸೋನಿಯಾಗಾಂಧಿ, ಕುಮಾರಿ ಮಾಯಾವತಿ, ಐ.ಪಿ.ಎಸ್. ಅಧಿಕಾರಿ ಕಿರಣ್ ಬೇಡಿ, ಟೆನಿಸ್ ಆಟಗಾರ್ತಿ ಸಾನಿಯಾ ಮಿರ್ಜಾ, ಅಂಗವಿಕಲ ಕ್ರೀಡಾಪಟು ಮಾಲತಿಹೊಳ್ಳ ಇವರುಗಳಲ್ಲಿ ಯಾರನ್ನು ನೆನೆದರೂ ಒಮ್ಮೆಲೆ ಅವರ ಬೃಹತ್ ಸಾಧನೆ ಕಣ್ಮುಂದೆ ನಿಲ್ಲುತ್ತದೆ.

ಕೆಳದಿ ರಾಜಮನೆತನದಲ್ಲೊಂದು ಅನರ್ಘ್ಯ ಸ್ತ್ರೀ ರತ್ನ

ಇಂತಹ ನೂರಾರು ಮಹಾನ್ ಚೇತನಗಳು ಇತಿಹಾಸದ ಪುಟಗಳಲ್ಲಿ ಅಡಕವಾಗಿವೆ. ಅವುಗಳಲ್ಲಿ ಕೆಳದಿ ಮನೆತನದ ಅನರ್ಘ್ಯರತ್ನ ಕೆಳದಿ ಚೆನ್ನಮ್ಮ. ಕೆಳದಿ ಮನೆತನದ ಇನ್ನೂರೈವತ್ತು ವರ್ಷಗಳ ಸುದೀರ್ಘ ಆಳ್ವಿಕೆಯಲ್ಲಿ ಹತ್ತಾರು ಪ್ರಭಾವಶಾಲಿ ಅರಸರು ಆಳಿ ಹೋಗಿದ್ದಾರೆ. ಜನತೆ ಅವರನ್ನ ನೆನೆಯುವುದಿಲ್ಲ. ಸಾಮ್ರಾಟರ ಸೊಕ್ಕಡಗಿಸಿ ಕನ್ನಡಿಗರ ಸ್ವಾಭಿಮಾನದ ಸಾಕಾರಮೂರ್ತಿಯಾದವಳು ಕೆಳದಿ ಚೆನ್ನಮ್ಮ. ಪ್ರಾಥಮಿಕ ಶಾಲಾ ವಿದ್ಯಾರ್ಥಿಯಿಂದ ಹಿಡಿದು ಹಿರಿಯ ವಿದ್ವಾಂಸರ ತನಕ ಕೆಳದಿ ಮನೆತನ ಎಂದರೆ 'ಚೆನ್ನಮ್ಮ' ಎನ್ನುತ್ತಾರೆ. ಅಂದರೆ ಆಕೆ ಯಾವುದೇ ಲಿಂಗಭೇದವಿಲ್ಲದೇ ಒಂದು ಸಂಸ್ಕೃತಿಯನ್ನು ಪ್ರತಿನಿಧಿಸಿದ ಮಹಾವ್ಯಕ್ತಿಯಲ್ಲವೇ? ಅಂತಹ ಹಿರಿಯ ಮಹಾಚೇತನದ ಒಂದು ಪುಟ್ಟ ಪರಿಚಯವಿದು.

ಕೆಳದಿ ಮನೆತನದ ಮಹತ್ವ

ಕೆಳದಿ ಕನ್ನಡನಾಡಿನ ಮಲೆನಾಡಿನ ಒಂದು ಚಿಕ್ಕ ಸಂಸ್ಥಾನ. ಮೊದಲದೊರೆ ಚೌಡಪ್ಪನಾಯಕ. 1500ರಲ್ಲಿ ಈತ ಪಟ್ಟಕ್ಕೆ ಬಂದನು. ಈತ ಅದ್ವಿತೀಯ ಪರಾಕ್ರಮಿ. ಶಿವಪ್ಪನಾಯಕ 1645ರಲ್ಲಿ ಆಳಿದ ದೊರೆ. ಈತ 'ಶಿಸ್ತಿನ ಶಿವಪ್ಪನಾಯಕ' ಎಂದು ಕನ್ನಡನಾಡಿನಲ್ಲಿ ಪ್ರಸಿದ್ಧನಾಗಿರುವನು. ಈತನ ರಾಜ್ಯದ ಆಡಳಿತದಲ್ಲಿ ಅನೇಕ ಸುಧಾರಣೆಗಳಾದವು. ಇವನ ಕಾಲದಲ್ಲಿ ನಡೆದ ಭೂಸುಧಾರಣೆ ಒಂದು ಹೊಸ ಮಾರ್ಪಾಟನ್ನೇ ತಂದಿತು. ಭೂಮಿಗಳನ್ನು ಸರ್ಕಾರದ ವೆಚ್ಚದಿಂದ ಕೃಷಿಮಾಡಿಸಿ ರಾಜ್ಯಾದಾಯವನ್ನ ವೃದ್ಧಿಗೊಳಿಸುವ ಏರ್ಪಾಡು ಮಾಡಿದನು. ಜಮೀನುಗಳನ್ನು ಐದು ಭಾಗಗಳಾಗಿ ವಿಂಗಡಿಸಿ ಆಯಾ ಭೂಮಿಯ ಉತ್ಪತ್ತಿ ಪ್ರಮಾಣದ ಆಧಾರದ ಮೇಲೆ ಕಂದಾಯ ನಿಗದಿ ಮಾಡಿದನು. ಮೊತ್ತ ಮೊದಲ ಬಾರಿಗೆ ಕರ್ನಾಟಕದಲ್ಲಿ ಪ್ರಜೆಗಳಿಂದ ತೆರಿಗೆ ಸಂಗ್ರಹಿಸುವ ಪದ್ಧತಿಯನ್ನು ಜಾರಿಗೆ ತಂದನು.

ಬಾಲ್ಯದಲ್ಲೇ ಗಮನ ಸೆಳೆದ ಪ್ರತಿಭೆ

ಇವನ ನಂತರ ಸೋಮಶೇಖರ ನಾಯಕನು 1667ರಲ್ಲಿ ಪಟ್ಟಕ್ಕೆ ಬಂದನು. ಈತನ ಆಳ್ವಿಕೆಯಲ್ಲಿ ಕೆಳದಿ ಸಂಸ್ಥಾನವು ಗೋವಾದಿಂದ ಮಲಬಾರಿನವರೆಗೆ ವ್ಯಾಪಿಸಿತ್ತು. ಈತ ದಕ್ಷ, ಗುಣವಂತ, ಹಾಗೂ ಧಾರ್ಮಿಕ ಬುದ್ಧಿಯುಳ್ಳವನಾಗಿದ್ದನು. ಅನೇಕ ವರ್ಷಗಳ ಕಾಲ ಈತ ಮದುವೆ ಮಾಡಿಕೊಂಡಿರಲಿಲ್ಲ. ಒಂದುದಿನ ರಾಮೇಶ್ವರ ಜಾತ್ರೆಯ ಸಂದರ್ಭದಲ್ಲಿ ಕೋಡೆಪುರದ ಸಿದ್ಧಪ್ಪಶೆಟ್ಟರ ಮಗಳು ಚೆನ್ನಮ್ಮನನ್ನು ನೋಡಿ ಮದುವೆ ಆಗುವುದಾದರೆ ಈಕೆಯನ್ನೇ ಎಂದು ಮನಸ್ಸಿನಲ್ಲಿ ನಿರ್ಧರಿಸಿ, ಸಿದ್ಧಪ್ಪಶೆಟ್ಟರಿಗೆ ವಿಷಯ ತಿಳಿಸಿದನು. ಬಿದನೂರಿನಲ್ಲಿ ಇವರಿಬ್ಬರ ಮದುವೆ ಬಹು ವೈಭವಯುತವಾಗಿ ನಡೆಯಿತು. ಆಪ್ತಸಚಿವಳಾಗಿ ರಾಜನಿಗೆ ಸಲಹೆ ಕೊಡುತ್ತಿದ್ದಳು. ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಳ್ಳುತ್ತಿದ್ದಳು. ಪ್ರಜೆಗಳು ರಾಣಿಯ ಬಳಿ ತಮ್ಮ ದೂರುಗಳನ್ನು ಹೇಳಿಕೊಳ್ಳುತ್ತಿದ್ದರು. ರಾಣಿಯನ್ನು ಪ್ರಜೆಗಳು ಭಕ್ತಿ ಗೌರವಗಳಿಂದ ಆದರಿಸುತ್ತಿದ್ದರು. ಸಂಸ್ಥಾನದ ಎಲ್ಲಾ ಧರ್ಮದವರನ್ನು ಸಮಾನ ಭಾವದಿಂದ ನೋಡಿಕೊಳ್ಳುತ್ತಿದ್ದಳು.

ರಾಜ್ಯಪ್ರಭುತ್ವ ಕಾಪಾಡಿದ ಮಹಾನುಭಾವೆ!

ವಿಜಯನಗರದ ಅರಸರು ನಾಡಹಬ್ಬವನ್ನು ವೈಭವದಿಂದ ಆಚರಿಸುತ್ತಿದ್ದರು. ಈ ಪರಂಪರೆಯನ್ನ ಕೆಳದಿಯ ಅರಸರು ಉಳಿಸಿಕೊಂಡು ಬಂದರು; ನೃತ್ಯ ಸಂಗೀತ ಕಾರ್ಯಕ್ರಮಗಳಿಗೆ ವಿಶೇಷ ಮನ್ನಣೆಯಿತ್ತರು. ಒಮ್ಮೆ ಕಲಾವತಿ ಎಂಬ ನರ್ತಕಿಯು ನಾಡಹಬ್ಬದಂದು ನರ್ತನ ಮಾಡಿದಳು. ಅವಳ ನರ್ತನಕ್ಕೆ ಮನಸೋತ ನಾಯಕನು ಆಕೆಯಿಂದ ಆಕರ್ಷಿತನಾದನು. ಅವಳಿಗಾಗಿ ಭವ್ಯವಾದೊಂದು ಅರಮನೆಯನ್ನು ಕಟ್ಟಿಸಿದನು. ಈಕೆಯ ಸಾಕುತಂದೆ ಭರಮೆ ಮಾವುತ. ಆತ ಮಂತ್ರತಂತ್ರವಿದ್ಯೆಯಲ್ಲಿ ಪರಿಣಿತ. ಚೆನ್ನಮ್ಮನಿಗೆ ಮಕ್ಕಳಿಲ್ಲದ ಕಾರಣ ಸೋಮಶೇಖರನಾಯಕನ ಸ್ನೇಹವನ್ನು ಬೆಳೆಸಿಕೊಂಡ ಇವನು ಮಗಳು ಕಲಾವತಿಯೊಂದಿಗೆ ವಾಸಿಸುವಂತೆ ಮಾಡಿದನು. ಇದರಿಂದ ರಾಜ್ಯದ ಜವಾಬ್ದಾರಿಯನ್ನು ಮರೆತು ಅರಸನು ಭರಮೆ ಮಾವುತನ ಕೈಗೊಂಬೆಯಾದನು. ಆತ ಕೊಟ್ಟದ್ದನ್ನೆಲ್ಲಾ ಔಷಧಿಯೆಂದು ಕುಡಿದು ಅರೆಹುಚ್ಚನಂತಾಗಿ ವಿಧವಿಧ ರೋಗಗಳ ಗುಡಾಣವಾದನು. ಇದರಿಂದಾಗಿ ಚೆನ್ನಮ್ಮನು ದಿಙ್ಮೂಢಳಾದಳು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಶತ್ರುಗಳು ಪಿತೂರಿ ನಡೆಸಿದರು. ಈ ಸಮಯವನ್ನು ಕಾಯುತ್ತಿದ್ದ ಬಿಜಾಪುರದ ಸುಲ್ತಾನನು ಕೆಳದಿಗೆ ಮುತ್ತಿಗೆ ಹಾಕಿದನು.

ಚೆನ್ನಮ್ಮ ಹಿರಿಯರಿಂದ ಬಂದಂತಹ ರಾಜ್ಯವನ್ನು ಹೇಗಾದರೂ ಮಾಡಿ ಉಳಿಸಬೇಕೆಂದು ಛಲತೊಟ್ಟು ರಾಜ್ಯ ಪರರ ಪಾಲಾಗುತ್ತದೆಂದು ತಿಳಿದು ನರ್ತಕಿಯ ಮನೆಗೆ ಹೋಗಿ ಸೋಮಶೇಖರ ನಾಯಕನನ್ನು ಭೇಟಿ ಮಾಡಿದಳು. ಆದರೆ ನಾಯಕನು ಭರಮೆ ಮಾವುತನ ಮಾತಿಗೆ ಮರುಳಾಗಿ ರಾಣಿಯ ಜೊತೆ ಬರಲು ಒಪ್ಪಲಿಲ್ಲ.

ಹೀಗಾಗಿ ರಾಜ್ಯಕ್ಕೆ ಒಳಿತಾಗಬೇಕಾದರೆ ತಾನೇ ರಾಜ್ಯದ ಅಧಿಕಾರವನ್ನು ವಹಿಸಿಕೊಳ್ಳಬೇಕೆಂದು ನಿಶ್ಚಯಿಸಿದಳು. ತನ್ನ ತಂದೆ ಸಿದ್ಧಪ್ಪಶೆಟ್ಟರು ಮತ್ತು ದಳಪತಿಗಳ ಸಲಹೆ ಮತ್ತು ಸಹಕಾರವನ್ನು ಪಡೆದು ರಾಜ್ಯಭಾರ ವಹಿಸಿಕೊಂಡಳು. ಇವಳು ಹೆಂಗಸು, ಬೆದರಿಸಿ ರಾಜ್ಯವನ್ನು ತಮ್ಮ ವಶಪಡಿಸಿಕೊಳ್ಳಬಹುದು ಎಂದು ಅನೇಕರು ಪ್ರಯತ್ನಿಸಿದರು. ತಿಮ್ಮಣ್ಣನಾಯಕ ಮತ್ತು ಸಬ್ಬನೀಸ ಕೃಷ್ಣಪ್ಪ ಅವರುಗಳು ದಂಡನಾಯಕನ ಮಗ ವೀರಭದ್ರನಾಯಕನನ್ನು ದತ್ತು ತೆಗೆದುಕೊಂಡರೆ ತಾವು ಸಹಾಯ ಮಾಡುತ್ತೇವೆ ಇಲ್ಲವಾದರೆ ನಿಮ್ಮ ವಿರುದ್ಧ ಜನರನ್ನು ಒಂದುಗೂಡಿಸಿ ನಿಮ್ಮ ವಿರುದ್ಧವಾಗಿ ಆತನನ್ನೇ ಪಟ್ಟಕ್ಕೆ ತರುತ್ತೇವೆ ಎಂದು ಬೆದರಿಕೆ ಹಾಕಿದರು. ಒಂದೆಡೆ ಭರಮೆ ಮಾವುತ ಮತ್ತೊಂದೆಡೆ ಮಂತ್ರಿಮಾನ್ಯರ ಒತ್ತಾಯ. ಇವುಗಳಿಗೆ ಮಣಿಯದೇ ರಾಣಿ ಚೆನ್ನಮ್ಮ ತುಂಬು ಸಹನೆಯಿಂದ ಯೋಚಿಸಿ ತನಗೆ ಮಕ್ಕಳಿಲ್ಲವಾದ್ದರಿಂದ ರಾಜ್ಯದ ಅಭ್ಯುದಯಕ್ಕಾಗಿ ಒಳ್ಳೆಯ ಗುಣವಂತನಾದ ಬಸಪ್ಪನಾಯಕನನ್ನು ದತ್ತು ತೆಗೆದುಕೊಂಡು ಅವನಿಗೆ ಯೋಗ್ಯ ಶಿಕ್ಷಣ ಕೊಡಿಸಿದಳು.

ದುಃಖತಪ್ತೆ

ರಾಜ್ಯ ಮಹಿಳೆಯೊಬ್ಬಳ ಕೈಯಲ್ಲಿದೆ ಎಂದು ತಿಳಿದು ಬಿಜಾಪುರ ಸುಲ್ತಾನನು ಜನ್ನೋಪಂತ ಎಂಬ ರಾಯಭಾರಿಯನ್ನು ಸಂಧಾನಕ್ಕಾಗಿ ರಾಣಿಯ ಬಳಿ ಕಳುಹಿಸಿದನು. ಯುದ್ಧಕ್ಕಾಗಿ ದಳಪತಿ ಮುಸಫರ್ ಖಾನನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿಕೊಟ್ಟನು. ಗುಪ್ತಚಾರರ ಮೂಲಕ ರಾಣಿ ಈ ವಿಷಯವನ್ನು ಮೊದಲೇ ಅರಿತಿದ್ದಳು. ಯುದ್ಧ ಮಾಡುವಂತಹ ಸಿದ್ಧತೆಯಲ್ಲಿ ರಾಣಿ ಇರಲಿಲ್ಲ. ಹಾಗಾಗಿ ಆಕೆ ಸುಲ್ತಾನನೊಂದಿಗೆ ಒಪ್ಪಂದ ಮಾಡಿಕೊಂಡಳು. ಆದರೂ ಸುಲ್ತಾನನ ಸೈನಿಕರು ಕೆಳದಿಗೆ ಮುತ್ತಿಗೆ ಹಾಕಿದರು. ತನ್ನ ಸೈನಿಕರನ್ನು ಯುದ್ಧ ಮಾಡುವಂತೆ ರಾಣಿ ಹುರಿದುಂಬಿಸಿದಳು. ಜನ್ನೋಪಂತನು ಭರಮೆ ಮಾವುತನನ್ನು ಭೇಟಿಯಾಗಿ ಸೋಮಶೇಖರ ನಾಯಕನನ್ನು ಕೊಲ್ಲಿಸಿದನು.

ಸಾಮ್ರಾಜ್ಯಕ್ಕೆ ತನ್ನನ್ನೇ ಅರ್ಪಿಸಿಕೊಂಡಾಕೆ

ಸೋಮಶೇಖರನಾಯಕನ ಮರಣದಿಂದ ಬಹಳ ದುಃಖಿತಳಾದ ರಾಣಿ ಚೆನ್ನಮ್ಮಾಜಿ ದೊರೆಯ ಕೊಲೆಯ ಸೇಡನ್ನು ತೀರಿಸಿಕೊಳ್ಳಲು ರಣಚಂಡಿಯಾದಳು. ಬಿಜಾಪುರದ ಸೈನ್ಯ ಬಹು ದೊಡ್ಡದು. ಸಿದ್ಧಪ್ಪಶೆಟ್ಟಿ ಮತ್ತು ಕೆಳದಿಯ ಸರದಾರರು ಬಿದನೂರನ್ನು ಬಿಟ್ಟುಬಿಡುವಂತೆ ಸಲಹೆ ನೀಡಿದರು. ರಾಣಿಗೆ ಇಷ್ಟವಿಲ್ಲದೆ ಕೊನೆಗೆ ಕೆಳದಿಯ ಸಿಂಹಾಸನವನ್ನು ಹಾಗೂ ರಾಜ್ಯದ ಸಂಪತ್ತನ್ನು ಭುವನಗಿರಿಗೆ ಸಾಗಿಸಿದಳು. ಇತ್ತ ವೈರಿಗಳು ಕೋಟೆಯ ಬಾಗಿಲನ್ನು ನಾಶಪಡಿಸಿ ಅರಮನೆ ಹೊಕ್ಕರು. ಅಲ್ಲಿ ರಾಣಿಯನ್ನು ಕಾಣದೆ ನಿರಾಶೆ ಹೊಂದಿದರು.

ದತ್ತು ಸ್ವೀಕೃತಿಯ ವಿಚಾರದಲ್ಲಿ ರಾಣಿಯೊಂದಿಗೆ ಮನಸ್ತಾಪ ಮಾಡಿಕೊಂಡಿದ್ದ ತಿಮ್ಮಣ್ಣನಾಯಕನು ಬಿಜಾಪುರದ ಸುಲ್ತಾನರು ಬಿದನೂರನ್ನು ವಶಪಡಿಸಿಕೊಂಡ ವಿಷಯ ತಿಳಿದು ಕೆಂಡಮಂಡಲನಾದನು. ರಾಣಿಯನ್ನು ಕಂಡು ಕ್ಷಮೆ ಯಾಚಿಸಿ ಬಿದನೂರು ಬೇರೆಯವರ ವಶವಾಗುವುದು ತನಗಿಷ್ಟವಿಲ್ಲವೆಂದು ತಿಳಿಸಿದನು. ಚೆನ್ನಮ್ಮನು ಆತನನ್ನು ಪುನಃ ತನ್ನ ಸಚಿವ ಸಂಪುಟಕ್ಕೆ ಸೇರಿಸಿಕೊಂಡು ಆತ ಪ್ರಧಾನ ಮಂತ್ರಿಯಾಗಿ ಅಧಿಕಾರ ಮುಂದುವರೆಸಿಕೊಂಡು ಹೋಗುವಂತೆ ಮಾಡಿದಳು.

ಬಿದನೂರನ್ನು ಗೆದ್ದ ಬಿಜಾಪುರದ ಸೈನಿಕರು ಭುವನಗಿರಿಯತ್ತ ತಮ್ಮ ಪಡೆಯನ್ನ ತಿರುಗಿಸಿದರು. ದಟ್ಟವಾದ ಕಾಡಿನ ನಡುವೆ ಸುಲ್ತಾನನ ಸೈನ್ಯ ಚೆನ್ನಮ್ಮನ ಪಡೆಗೆ ಸಿಲುಕಿತು. ಸೈನಿಕರು ಬಿಜಾಪುರದ ಸೈನ್ಯವನ್ನು ನಾಶಮಾಡುತ್ತಾ ಬಿದನೂರಿಗೆ ಹೋದರು. ಅಲ್ಲಿ ಕನ್ನಡ ವೀರರನ್ನು ಕಂಡ ಪ್ರಜೆಗಳು ತುಂಬ ಸಂತೋಷದಿಂದ ರಾಜಧಾನಿಗೆ ಬರಮಾಡಿಕೊಂಡರು.

ಜನೋಪಯೋಗಿ ಕಾರ್ಯ

ಕೆಳದಿಯ ರಾಜ್ಯದ ಪ್ರಜೆಗಳು ಒಮ್ಮತದಿಂದ ಚೆನ್ನಮ್ಮನ ಆಡಳಿತವನ್ನು ಒಪ್ಪಿಕೊಂಡು 1671ರಲ್ಲಿ ಭುವನಗಿರಿ ದುರ್ಗದಲ್ಲಿ ಪಟ್ಟ ಕಟ್ಟಿದರು. ಆಗ ಚೆನ್ನಮ್ಮನು ರಾಜ್ಯ ಆಡಳಿತ ಸೂತ್ರವನ್ನು ತನ್ನ ಕೈಗೆತ್ತಿಕೊಂಡಳು. ಯುದ್ಧದಲ್ಲಿ ಸಹಾಯ ಮಾಡಿದವರಿಗೆ ನೆರವು ನೀಡಿದಳು. ರಾಜ್ಯದಲ್ಲಿ ಸುಖಶಾಂತಿ ನೆಲೆಸುವಂತೆ ಮಾಡಿದಳು. ಶಿವಪ್ಪನಾಯಕನ ಕಾಲದ ಆಡಳಿತ ವ್ಯವಸ್ಥೆಯನ್ನು ಪುನಃ ಜಾರಿಗೆ ತಂದಳು. ತನ್ನ ಪತಿಯ ಮರಣಕ್ಕೆ ಕಾರಣರಾದ ಭರಮೆ ಮಾವುತ ಮತ್ತು ಜನ್ನೋಪಂತನನ್ನು ಸೆರೆಹಿಡಿದು ಕೊಲ್ಲಿಸಿದಳು. ಪತಿಯ ನೆನಪಿಗಾಗಿ ಒಂದು ಅಗ್ರಹಾರವನ್ನು ಕಟ್ಟಿಸಿ ಅಲ್ಲಿ ಪಂಡಿತರಿಗೆ ಆಶ್ರಯ ನೀಡಿದಳು. ಆ ಅಗ್ರಹಾರಕ್ಕೆ 'ಸೋಮಶೇಖರ ಪುರ' ಎಂದು ನಾಮಕರಣ ಮಾಡಿದಳು.

ಕೆಳದಿಯ ರಾಜ್ಯಪಡೆಯನ್ನು ಹೆಚ್ಚಿಸಿದಳು. ರಾಜ್ಯ ಕಾರ್ಯವನ್ನು ನಿರ್ವಹಿಸಿ ಉಳಿದ ಸಮಯವನ್ನು ಧ್ಯಾನ, ಪೂಜೆ, ದಾನಧರ್ಮ, ಪರೋಪಕಾರಗಳಲ್ಲಿ ಕಳೆಯುತ್ತಿದ್ದಳು. ಎಲ್ಲಾ ಧರ್ಮಗಳನ್ನು ಸಮಾನ ರೀತಿಯಲ್ಲಿ ನೋಡುತ್ತಿದ್ದಳು. ಮಠಮಾನ್ಯಗಳಿಗೆ ಹೇರಳವಾದ ದಾನದತ್ತಿಗಳನ್ನು ನೀಡಿದಳು.

ಅಕ್ಕಪಕ್ಕದವರ ಅಸಹನೆ

ಮೈಸೂರು ಅರಸರಿಗೆ ಕೆಳದಿಯ ಹಿರಿಮೆ ಸಹಿಸದಾಯಿತು. ಎರಡು ಬಾರಿ ಅವರೊಡನೆ ಯುದ್ಧಮಾಡಿ ಸೋತಿದ್ದರು. ಆ ಸಮಯದಲ್ಲಿ ಚಿಕ್ಕದೇವರಾಯ ಒಡೆಯರು ರಾಜರಾಗಿದ್ದರು. ವೆಂಕಟನಾಯಕನು ಚೆನ್ನಮ್ಮನೊಡನೆ ಯುದ್ಧ ಮಾಡಿದರೆ ಅರ್ಧರಾಜ್ಯವನ್ನು ಕೊಡುವುದಾಗಿ ಪತ್ರ ಬರೆದರು. ಇದನ್ನೋದಿದ ಒಡೆಯರು ಹೆಂಗಸಿನ ಕೈಯಲ್ಲಿರುವ ರಾಜ್ಯವನ್ನು ಬಹುಬೇಗ ವಶಪಡಿಸಿಕೊಳ್ಳಬಹುದೆಂದು ತಿಳಿದು ಕೆಳದಿಯ ಮೇಲೆ ಯುದ್ಧ ಸಾರಿದರು. ಇದನ್ನು ತಿಳಿದ ರಾಣಿ ಭದ್ರಪ್ಪನಾಯಕನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿದಳು. ಈ ಸಮಯದಲ್ಲಿಯೇ ಸೋದೆ, ಸಿರಸಿ, ಬನವಾಸಿ ಪಾಳೇಗಾರರು ಕೆಳದಿಯ ಮೇಲೆ ಯುದ್ಧ ಸಾರಿದರು. ರಾಣಿ ಚೆನ್ನಮ್ಮನು ಅವರೆಲ್ಲರೊಡನೆ ಎದೆಗುಂದದೆ ಹೋರಾಡಿ ಜಯ ಪಡೆದಳು. ಇದರಿಂದಾಗಿ ಚೆನ್ನಮ್ಮನ ಬಗ್ಗೆ ಚಿಕ್ಕದೇವರಾಜ ಒಡೆಯರು ಆದರ ಅಭಿಮಾನ ತಳೆದರು. ಇದರ ಪರಿಣಾಮವಾಗಿ ಕೆಳದಿ ಮತ್ತು ಮೈಸೂರು ರಾಜ್ಯಗಳ ನಡುವೆ ಸ್ನೇಹ ಒಪ್ಪಂದವೇರ್ಪಟ್ಟಿತು. ರಾಜ್ಯಕ್ಕಾಗಿ ಆಸೆಪಟ್ಟ ಕೆಲನಾಯಕರು ರಾಣಿಯ ಮೇಲಿನ ಈರ್ಷ್ಯೆಯಿಂದಾಗಿ ಪರರಾಜ್ಯದ ಪಡೆಗಳೊಡನೆ ಸೇರಿ ಯುದ್ಧ ಮಾಡಿದರು. ರಾಣಿ ದಕ್ಷತೆಯಿಂದ ಹೋರಾಡಿ ಅವರುಗಳನ್ನು ಸೋಲಿಸಿದಳು.

ಶರಣಾದವರಿಗೆ ರಕ್ಷಣೆ

ರಾಣಿ ಚೆನ್ನಮ್ಮ ತನ್ನ ದತ್ತು ಮಗನಾದ ಬಸಪ್ಪನಾಯಕನಿಗೆ ಹೇಗೆ ಆಡಳಿತ ನಿರ್ವಹಣೆ ಮಾಡಬೇಕು ಎಂಬುದನ್ನು ಸ್ವತಃ ಹೇಳಿಕೊಡುತ್ತಿದ್ದಳು. ಉಳಿದ ಸಮಯವನ್ನು ದಾನಧರ್ಮಗಳಿಗೆ ವಿನಿಯೋಗಿಸುತ್ತಿದ್ದಳು. ಹೀಗೆ ಒಂದುದಿನ ದಾನ ಮಾಡುತ್ತಿದ್ದಾಗ ನಾಲ್ವರು ಜಂಗಮರು ಬಂದರು. ಅವರು ರಾಣಿಯ ದರ್ಶನ ಪಡೆದುಕೊಳ್ಳಲು ಕಾತರರಾಗಿದ್ದರು. ಅವರನ್ನು ಕಂಡ ಚೆನ್ನಮ್ಮನು ನೀವುಗಳು ಯಾರು? ಎಂದು ಕೇಳಿದಳು. ಆಗ 'ನಾನು ಛತ್ರಪತಿ ಶಿವಾಜಿ ಮಹಾರಾಜರ ಮಗ ರಾಜಾರಾಮ' ಎಂದು ಉತ್ತರಿಸಿದರು. 'ಔರಂಗಜೇಬನು ತನ್ನನ್ನು ಕೊಲೆ ಮಾಡಲು ಸೈನ್ಯವನ್ನು ಕಳುಹಿಸಿರುವುದಾಗಿಯೂ ನಾವುಗಳು ವೇಷ ಮರೆಸಿಕೊಂಡು ನಿಮ್ಮ ಆಶ್ರಯ ಕೋರಿ ಬಂದಿದ್ದೇವೆ' ಎಂದನು. ಆಗ ರಾಣಿ ಕೆಳದಿ ಅರಮನೆಗೆ ಆಶ್ರಯ ಕೋರಿ ಬಂದಿರುವ ನೀವುಗಳು ನಿರಾಶರಾಗಬೇಕಿಲ್ಲ. ಆಶ್ರಯ ನೀಡುವುದು ನಮ್ಮ ಧರ್ಮ. ನೀವುಗಳು ವಿಶ್ರಾಂತಿ ಪಡೆಯುತ್ತಿರಿ, ಸಂಜೆ ಮಂತ್ರಿಮಾನ್ಯರೊಡನೆ ಚರ್ಚಿಸಿ ನಿರ್ಣಯಿಸುತ್ತೇವೆ ಎಂದಳು. ಮಂತ್ರಿಗಳ ಅನುಮೋದನೆಯೊಂದಿಗೆ ರಾಜಾರಾಮನಿಗೆ ಆಶ್ರಯ ಕೊಡಲು ನಿರ್ಣಯಿಸಲಾಯಿತು. ಔರಂಗಜೇಬನೊಡನೆ ಯುದ್ಧ ಮಾಡಲು ಕೆಳದಿರಾಜ್ಯ ಸಿದ್ಧವಾಯಿತು. ಔರಂಗಜೇಬನು ತನ್ನ ಮಗ ಅಜಮತಾರನೊಂದಿಗೆ

ಅಪಾರಸೈನ್ಯವನ್ನು ಯುದ್ಧಕ್ಕೆ ಕಳುಹಿಸಿದನು. ಆ ಸಮಯದಲ್ಲಿ ರಾಜಾರಾಮನು ಜಿಂಜಿಕೋಟೆಯನ್ನು ರಕ್ಷಿಸಿದನು. ಔರಂಗಜೇಬನು ಸ್ನೇಹೊಪ್ಪಂದ ಮಾಡಿಕೊಳ್ಳುವಂತೆ ರಾಣಿ ಚೆನ್ನಮ್ಮನಿಗೆ ಒಂದು ಪತ್ರ ಬರೆದನು. ಈ ಒಪ್ಪಂದಕ್ಕೆ ಚೆನ್ನಮ್ಮ ಒಪ್ಪಿಗೆ ನೀಡದೆ ಪ್ರತಿ ಪತ್ರವನ್ನು ಬರೆದಳು. ಅಜಮತಾರನು ಯುದ್ಧದಲ್ಲಿ ಸೋತುಹೋದನು. ಮೊಗಲರು ರಾಣಿಚೆನ್ನಮ್ಮನೊಡನೆ ಒಪ್ಪಂದ ಮಾಡಿಕೊಂಡರು. ಔರಂಗಜೇಬನು ರಾಣಿಚೆನ್ನಮ್ಮನನ್ನು ಸ್ವತಂತ್ರಳೆಂದು ಘೋಷಿಸಿದನು. ಔರಂಗಜೇಬನೊಡನೆ ಯುದ್ಧಮಾಡಿ ಜಯ ಪಡೆದ ಮೊದಲ ವೀರ ಕನ್ನಡತಿ ರಾಣಿ ಚೆನ್ನಮ್ಮಾಜಿ. ಜಿಂಜಿಕೋಟೆಯನ್ನು ಸುರಕ್ಷಿತವಾಗಿ ತಲುಪಿದ ರಾಜಾರಾಮನು ಕೃತಜ್ಞತೆಯಿಂದ ರಾಣಿಗೆ ಒಂದು ಪತ್ರ ಬರೆದನು.

ವಿದೇಶಿಯರೊಡನೆ ಒಪ್ಪಂದ

ರಾಣಿ ಚೆನ್ನಮ್ಮನು ಅರಬರು ಹಾಗೂ ಪೋರ್ಚುಗೀಸರೊಂದಿಗೆ ವ್ಯಾಪಾರ ವ್ಯವಹಾರ ನಡೆಸಿ ರಾಜ್ಯದ ಸಂಪತ್ತನ್ನು ಹೆಚ್ಚಿಸಿದಳು.

ಅವಳ ಹೆಸರಿನಲ್ಲೊಂದು ಊರು

ತನ್ನ ದತ್ತುಮಗ ಬಸಪ್ಪನಾಯಕನಿಗೆ ತನ್ನ ಕೊನೆಗಾಲದಲ್ಲಿ ರಾಜ್ಯದ ಆಡಳಿತದ ಜವಾಬ್ದಾರಿಯನ್ನು ಕೊಟ್ಟಳು. ಬಸವಾಪಟ್ಟಣದ ಬಳಿಯಿರುವ ಹುಲಿಕೆರೆಯನ್ನು ಗೆದ್ದು ಹಾಳುಬಿದ್ದ ಕೋಟೆಯನ್ನು ಅಲ್ಲಿ ಕಟ್ಟಿಸಿದಳು. ಚೆನ್ನಮ್ಮನ ನೆನಪಿಗಾಗಿ ಹುಲಿಕೆರೆಗೆ ಬಸಪ್ಪನಾಯಕನು 'ಚೆನ್ನಗಿರಿ' ಎಂದು ನಾಮಕರಣ ಮಾಡಿದನು.

ಕರ್ನಾಟಕದ ಸ್ವಾಭಿಮಾನಿಯೆನಿಸಿದವಳು

ಚೆನ್ನಮ್ಮಾಜಿ 1671ರಿಂದ 1696ರವರೆಗೆ ಧರ್ಮದಿಂದ ದಕ್ಷತೆಯಿಂದ ರಾಜ್ಯಭಾರ ಮಾಡಿದಳು. ಧರ್ಮಭಾವನೆಯುಳ್ಳ, ದೈವಭಕ್ತೆಯಾದ ಚೆನ್ನಮ್ಮನು ತನ್ನ ಕೊನೆಗಾಲವನ್ನು ಶಿವನ ಸ್ಮರಣೆ ಮಾಡುತ್ತಾ ಕಳೆದಳು. ರಾಮೇಶ್ವರ, ವೀರಭದ್ರೇಶ್ವರ, ಕೊಲ್ಲೂರು ಮೂಕಾಂಬಿಕೆ ದೇವಾಲಯಗಳಲ್ಲಿ ಸದಾಕಾಲ ಪೂಜೆ ನಡೆಯುವಂತೆ ವ್ಯವಸ್ಥೆ ಮಾಡಿದಳು. ಜಂಗಮರಿಗೆ ಮಠಗಳನ್ನು, ಶೈವವೈಷ್ಣವರಿಗೆ ಅಗ್ರಹಾರಗಳನ್ನು ಕಟ್ಟಿಸಿದಳು. ಛತ್ರಪತಿ ಶಿವಾಜಿ ಮಹಾರಾಜರ ಮಗನಿಗೆ ಆಶ್ರಯ ಕೊಡಲು ಒಪ್ಪಿದಳು. ರಾಣಿಯಾಗಿ ಶೌರ್ಯದಿಂದ ಹೋರಾಡಿದಳು. ರಾಜ್ಯದಲ್ಲಿ ಶಾಂತಿ ಸ್ಥಾಪಿಸಿದಳು, ಬಡವರಿಗೆ ತಾನೇ ಆಶ್ರಯದಾತಳಾದಳು. ಎಲ್ಲ ಧರ್ಮಗಳನ್ನು ಸಮಾನ ದೃಷ್ಟಿಯಿಂದ ಗೌರವಿಸಿದಳು.

ಕರ್ನಾಟಕದ ಇತಿಹಾಸದಲ್ಲಿ ವೀರರಮಣಿ ಕೆಳದಿ ಚೆನ್ನಮ್ಮನ ಹೆಸರು ಸುವರ್ಣಾಕ್ಷರಗಳಲ್ಲಿ ಕಂಗೊಳಿಸುತ್ತಿದೆ. ಆಕೆಯ ಜೀವನ ಕನ್ನಡಿಗರಿಗೆ ಸ್ಫೂರ್ತಿಯ ಚಿಲುಮೆಯಾಗಿದೆ.

——— * ———

ಹದಿಬದೆಯ ಧರ್ಮದ ಸಂಚಿ ಹೊನ್ನಮ್ಮ

ಡಾ. ವೈ.ಸಿ. ಭಾನುಮತಿ

ಕನ್ನಡ ಸಾಹಿತ್ಯದಲ್ಲಿ ಅಕ್ಕಮಹಾದೇವಿಯನ್ನು ಬಿಟ್ಟರೆ ಅತ್ಯಂತ ಚರ್ಚೆಗೆ ಒಳಗಾದ ಮತ್ತು ವಿವಿಧ ತಲೆಮಾರಿನ ಓದುಗರ ಚಿಂತನೆಗೆ ಗ್ರಾಸವಾದ ಕವಯಿತ್ರಿ ಎಂದರೆ ಸಂಚಿ ಹೊನ್ನಮ್ಮ. ಈಕೆ ಮತ್ತು ಶೃಂಗಾರಮ್ಮ ಸಮಕಾಲೀನರು, ಚಿಕದೇವರಾಜನ ಆಶ್ರಯದಲ್ಲಿದ್ದವರು. ಅಕ್ಕಮಹಾದೇವಿ ತನ್ನ ದಿಟ್ಟತನ ಮತ್ತು ಕ್ರಾಂತಿಕಾರಕ ವಿಚಾರಗಳಿಂದ ಹೆಸರು ಮಾಡಿದ್ದರೆ, ಸಂಚಿಹೊನ್ನಮ್ಮ ತನ್ನ ಸಾಂಪ್ರದಾಯಿಕ ಪುರುಷಪ್ರಧಾನ ಚಿಂತನೆಗಳಿಂದಲೇ ಗಮನಸೆಳೆದಿದ್ದಾಳೆ.

ಹೊನ್ನಮ್ಮ ಚಿಕ್ಕದೇವರಾಜನ ರಾಣಿಯರಲ್ಲಿ ಒಬ್ಬಳೆ? ಉಪಪತ್ನಿಯೆ? ಊಳಿಗದವಳೆ? ಶೂದ್ರವರ್ಗಕ್ಕೆ ಸೇರಿದವಳೆ? ಈ ಕುರಿತು ಪುರುಷ ವಿದ್ವಾಂಸರು ಬಹಳವಾಗಿ ಚರ್ಚಿಸಿದ್ದಾರೆ. ಯಳಂದೂರಿನಲ್ಲಿದ್ದ ಹೊನ್ನಮ್ಮ ಚಿಕ್ಕದೇವರಾಜನ ಪಟ್ಟದರಸಿ ದೇವಮ್ಮನೊಡನೆ ಊಳಿಗದವಳಾಗಿ ಬಂದಳೆಂದು ಕೆಲವರ ಹೇಳಿಕೆ. ಇದಕ್ಕೆ ಆಧಾರ ಹೊನ್ನಮ್ಮನೇ ತನ್ನ ಕೃತಿ ಹದಿಬದೆಯ ಧರ್ಮದಲ್ಲಿ "ಚೆನ್ನಿನ ಚಿಕ್ಕದೇವರಾಯ ಸಂಚಿಯ ಹೊನ್ನಮ್ಮ" ಎಂದು ಹೇಳಿಕೊಂಡಿರುವುದು. ಸಂಚಿಯವಳಾಗಿದ್ದು ಸತಿಯಾಗಿ ಮೇಲೇರುತ್ತ ಹೋದವಳೆಂಬ ಊಹೆಯೂ ಇದೆ. ಆದರೆ ಈವರೆಗೆ ಪುರುಷ ಅಧ್ಯಯನಕಾರರು ಯಾರೂ ಈಕೆಯ ಕೃತಿಯಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳ ಬಗ್ಗೆ ಚಕಾರ ಎತ್ತಿಲ್ಲ. ಏಕೆಂದರೆ ಹದಿಬದೆಯ ಧರ್ಮ ಪುರುಷಪ್ರಧಾನ ಚಿಂತನಾಲಹರಿಯನ್ನು ಅನುಸರಿಸಿರುವುದರಿಂದ ಅದರಲ್ಲಿನ ಮಿತಿಗಳು ಗೋಚರಿಸದೆ ಹೋಗಿರಬಹುದು. ಹಾಗಾಗಿ ಹೆಣ್ಣಿನ ಆತ್ಮಗೌರವಕ್ಕೆ ಕುಂದುಂಟಾಗುವಂತಹ ವಿಚಾರಗಳಿವೆ ಎಂಬ ಬಗ್ಗೆ ಯಾವ ಸಾಹಿತ್ಯ ಚರಿತ್ರೆಕಾರರೂ ಹೇಳುವುದಿಲ್ಲ. ಶತಮಾನಗಳ ದೀರ್ಘ ಗೈರುಹಾಜರಿಯ ಬಳಿಕ ಹೊನ್ನಮ್ಮ ಕಾವ್ಯ ರಚಿಸಿದ್ದು ರಂ.ಶ್ರೀ. ಮುಗಳಿಯವರಿಗೆ "ರಾಯನ ಪ್ರೇರಣೆಯಿಂದ ಸಿಂಗರಾರ್ಯನಲ್ಲಿ ವ್ಯಾಸಂಗ ಮಾಡಿ ಹದಿಬದೆಯ ಧರ್ಮವೆಂಬ ನೀತಿಕಾವ್ಯ ಬರೆದದ್ದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸೋಜಿಗದ ಸಂಗತಿ" ಯಾಗಿ ತೋರುತ್ತದೆ. ಆದರೆ ಮಹಿಳೆಯಾಗಿ ಮಹಿಷಿಯುವರು ಬೇರೆ ರೀತಿಯಲ್ಲಿ ಯೋಚಿಸುತ್ತಾರೆ. ಇವರು ಇಷ್ಟು ಕಾಲ ಸಾಹಿತ್ಯ ಚರಿತ್ರೆಯಲ್ಲಿ ಮಹಿಳೆಯರ ಪ್ರವೇಶವಿಲ್ಲದಿರುವಿಕೆಗೆ ಕಾರಣಗಳನ್ನು ಹುಡುಕುತ್ತ "ಕವಯಿತ್ರಿಯರ ಸಂಖ್ಯೆ ನಮ್ಮ ನಾಡಿನಲ್ಲಿ ಹೆಚ್ಚಿಲ್ಲ. ಸ್ತ್ರೀಯರಲ್ಲಿ ಪ್ರತಿಭೆ ವಿದ್ವತ್ತೆಗಳು ಇಲ್ಲವೆಂದು ಕವಯಿತ್ರಿಯರ ಸಂಖ್ಯೆ ಹೆಚ್ಚಿಲ್ಲವೆಂದು ಹೇಳುವುದು ಸಮಂಜಸವಾಗದು. ಆ ಪ್ರತಿಭೆ ವಿದ್ವತ್ತೆಗಳ ವಿಕಾಸಕ್ಕೆ ಬೇಕಾದ ಸೌಕರ್ಯಗಳು ದೊರೆತಿಲ್ಲವೆಂದು ಕವಯಿತ್ರಿಯರ ಸಂಖ್ಯೆ ಹೆಚ್ಚಿಲ್ಲ. ಅವಕಾಶವನ್ನು ಒದಗಿಸಿದ್ದೇ ಆದರೆ ಎಂತಹ ಅನುಭಾವಿಗಳೂ ಕವಯಿತ್ರಿಯರೂ ಉದಯವಾಗಬಹುದೆಂಬುದಕ್ಕೆ ಹನ್ನೆರಡನೆಯ ಶತಮಾನದ ಶಿವಶರಣೆಯರು ಉದಾಹರಣೆಯಾಗಿದ್ದಾರೆ" ಎಂದು ಮಹಿಳೆಯರಿಗೆ ಅವಕಾಶಗಳಲ್ಲಿ ವಂಚನೆಯಾಗಿದ್ದೇ ಕಾರಣವೆಂದು ಸರಿಯಾಗಿಯೇ ಗುರುತಿಸಿದ್ದಾರೆ.

ಹದಿಬದೆಯಧರ್ಮಕ್ಕೆ ಸ್ತ್ರೀಧರ್ಮ ಸಾಂಗತ್ಯ ಎಂಬ ಪರ್ಯಾಯ ನಾಮವೂ ಹಸ್ತಪ್ರತಿಗಳಲ್ಲಿದೆ. ಆ ಕಾಲದಲ್ಲಿ ಹೆಣ್ಣಿನ ಧರ್ಮ ಎಂದು ಶಾಸ್ತ್ರಕಾರರು ಏನೇನು ವಿಧಿಸಿದ್ದರೊ ಅದನ್ನು ಈ ಕೃತಿಯಲ್ಲಿ ನಿರೂಪಿಸಲಾಗಿದೆ. ರಾಮಾಯಣ, ಮಹಾಭಾರತ, ಭಾಗವತದ ಸನ್ನಿವೇಶಗಳು, ತೀರ್ಥಂಕರ ಚರಿತೆಗಳು, ಶರಣರ ಕಥೆಗಳೇ ಕಾವ್ಯಕ್ಕೆ ವಸ್ತುವಾಗಿದ್ದಂತಹ ಸಂದರ್ಭದಲ್ಲಿ ಸ್ತ್ರೀಕೇಂದ್ರಿತ ಹದಿಬದೆಯ ಧರ್ಮವನ್ನು ಕುರಿತು ಕೃತಿ ರಚಿಸಲು ಸಾಧ್ಯವಾದದ್ದು ಕವಯಿತ್ರಿಗಿರುವ ಸ್ತ್ರೀಪರ ಕಾಳಜಿಯೇ ಆಗಿದೆ. ಏಕೆಂದರೆ ಹೊನ್ನಮ್ಮನಿಗೆ ನಾಯಕ ಅಥವಾ ನಾಯಕಿ ಪ್ರಧಾನವಾದ ಕಾವ್ಯ ಮಾದರಿಗಳು ಅಪರಿಚಿತವೇನೂ ಆಗಿರಲಿಲ್ಲ. ಈಕೆ ಅರಮನೆಯಲ್ಲಿದ್ದ ಕಾರಣ ಶಾಸ್ತ್ರೀಯ ಶಿಕ್ಷಣ ಲಭಿಸಿತ್ತು. ಸಾಮಾನ್ಯ ಹೆಣ್ಣಿನ ವಿದ್ಯಾಭ್ಯಾಸ ಅಸಾಧ್ಯವಾದರೂ ಅರಮನೆಯಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಿತ್ತು. ಹೊನ್ನಮ್ಮನೇ ತನ್ನ ಕೃತಿಯಲ್ಲಿ ಆಸ್ಥಾನದಲ್ಲಿದ್ದ ಅರವತ್ನಾಲ್ಕು ಕಲೆಗಳು ಒಂದೆಡೆ ಸೇರಿವೆಯೋ ಎಂಬಂಥ ವಿದ್ಯಾವಂತರು ಹಾಡುವ ಕುಣಿಯುವ ನುಡಿಸುವ ಹಾಸ್ಯಗೈಯುವ ಹೆಂಗಳೆಯರನ್ನು ವರ್ಣಿಸಿದ್ದಾಳೆ. ಈ ಕೃತಿ ರಚನೆಗೆ ಗುರುಪ್ರೇರಣೆಯೆ, ಸ್ವಪ್ರೇರಣೆಯೆ ಸ್ಪಷ್ಟವಾಗುವುದಿಲ್ಲ. ಈಕೆಯಲ್ಲಿದ್ದ ಪ್ರತಿಭೆಯನ್ನು ಗುರುತಿಸಿದ್ದ ರಾಜ ಇವಳಿಂದ ಸರಸವಾದ ಗ್ರಂಥ ಮಾಡಿಸು ಎಂದು ರಾಣಿಗೆ ಹೇಳಿದ್ದರೂ ವಸ್ತುವಿನ ನಿರ್ದಿಷ್ಟತೆಯಿಲ್ಲ.

ಹೊನ್ನಮ್ಮ ಊಳಿಗದ ಹೆಣ್ಣೇ ಆಗಿದ್ದರೆ ಅವಳು ಬರವಣಿಗೆಯಲ್ಲಿ ತೊಡಗಿಕೊಂಡಿದ್ದೆ ಅಚ್ಚರಿಯ ಸಂಗತಿ. ಅದರಲ್ಲಿಯೂ ವಿಭಿನ್ನ ವಸ್ತುವಿಷಯವನ್ನೊಳಗೊಂಡ ಇಂಥ ಗ್ರಂಥವನ್ನು ರಚಿಸಿದ್ದು ಚರಿತ್ರೆಯಲ್ಲಿ ದಾಖಲಿಸುವಂಥದ್ದು. ಈಕೆಗೆ ಪೂರ್ವದಲ್ಲಿ ಬಂಧುವರ್ಮ ಎಂಬ ಕವಿ 'ಸತಿಧರ್ಮಸಾರ' ಎಂಬ ಕೃತಿಯನ್ನು ರಚಿಸಿದ್ದಾನೆ. ಅದು ಜೈನಧರ್ಮದ ಹಿನ್ನೆಲೆಯಲ್ಲಿ ಸತಿಯರಿಗೆ ಧರ್ಮ ಬೋಧಿಸುವ ಪುಟ್ಟ ಗ್ರಂಥ. ಆದರೆ ಹೊನ್ನಮ್ಮ ತನ್ನ ಕೃತಿಗೆ ಆಕರವನ್ನು ಸೂಚಿಸುವಾಗ ಈ ಗ್ರಂಥವನ್ನು ಹೆಸರಿಸಿಲ್ಲ. ರಾಮಾಯಣ ಮಹಾಭಾರತ ಮನುಧರ್ಮ ಶಾಸ್ತ್ರಗಳಲ್ಲಿ ಹಿರಿಯರು ನಿರೂಪಿಸಿದ ವಿಚಾರವನ್ನು ಈ ಕೃತಿ ರೂಪದಲ್ಲಿ ತಿಳಿಸಿರುವುದಾಗಿ ಹೇಳಿದ್ದಾಳೆ.

ಹೊನ್ನಮ್ಮ ಪ್ರಭುತ್ವದಲ್ಲಿ ಪುರುಷ ಪ್ರಾಧಾನ್ಯತೆಯಲ್ಲಿ ನಿಷ್ಠೆ ಇಟ್ಟುಕೊಂಡವಳು. ಹಾಗಾಗಿ ತನಗೆ ಆಶ್ರಯ ನೀಡಿದ ರಾಜನಲ್ಲಿ–

ನಿನ್ನಡಿಯೊಲವರಿತಿರ್ಪುದೆನಗೆ ಬಿಜ್ಜೆ
ನಿನ್ನೂಳಿಗವೆನ್ನ ಧರ್ಮ
ನಿನ್ನಾಣತಿಗೈವುದೆನ್ನ ಮನೋರಥ
ವೆನ್ನ ಭಾಗ್ಯಕ್ಕೆ ಸರಿಯುಂಟೆ

ಎಂಬು ಅತಿ ವಿನಯವಂತಿಕೆ ಪ್ರದರ್ಶಿಸಿರುವುದುಂಟು. ಈಕೆಯ ಸಾಹಿತ್ಯ ರಚನೆಗೆ ಪ್ರೇರಣೆಯಿತ್ತ ಮತ್ತೊಬ್ಬ ವ್ಯಕ್ತಿಯೆಂದರೆ ಗುರು ಅಳಸಿಂಗರಾರ್ಯ. ಹೊನ್ನಮ್ಮನಲ್ಲಿದ್ದ ಕವಿತಾ ಶಕ್ತಿಯನ್ನು ಗುರುತಿಸಿದ ಈತ "ಅರಸ ಕೇಳೀ ಸರಸ ಸಾಹಿತ್ಯದ ವರದೇವತೆ ಇವಳು ಕಾವ್ಯಾಲಂಕಾರ ನಾಟಕಗಳ ಪವಣಿಗೆಯಿರವ ಬಲ್ಲವಳು" ಎಂದು ರಾಜಸಭೆಯಲ್ಲಿ ಮುಕ್ತಕಂಠದಿಂದ ಪ್ರಶಂಸೆ ಮಾಡುತ್ತಾನೆ. ಹೊನ್ನಮ್ಮ ತನ್ನ ಹಿಂದಿನ ಸ್ಥಿತಿಯನ್ನು ನೆನೆದು ಇಂದಿನ ಹೊಗಳಿಕೆಯನ್ನು ಕೇಳಿ ಸಂಕೋಚಪಟ್ಟಾಗ ಚಿಕ್ಕದೇವರಾಜನ ರಾಣಿ ದೇವಮ್ಮ "ಹೊನ್ನಿ ಬಾ ಹೊನ್ನಕ್ಕ ಬಾ" ಎಂದು ಬರಮಾಡಿಕೊಂಡದ್ದು ಕೂಡ ಹೊನ್ನಮ್ಮನ ಬದುಕಿನಲ್ಲಿ ಬಂದ ವಿಶೇಷವೇ ಸರಿ. ಇಷ್ಟೆಲ್ಲ ಪ್ರೋತ್ಸಾಹ ದಕ್ಕಿದ್ದರಿಂದ ಈಕೆ ಸಮಕಾಲೀನ ಮಹಿಳೆಯರಲ್ಲಿ ವಿರಳವೆನ್ನುವಂತೆ ರಾಮಾಯಣ ಮಹಾಭಾರತ ಭಾಗವತ ವಿಷ್ಣು ಪುರಾಣ ಧರ್ಮಶಾಸ್ತ್ರ ಮೊದಲಾದ ಗ್ರಂಥಗಳನ್ನು ಗುರು ಅಳಸಿಂಗರಾರ್ಯರ ನೆರವಿನಿಂದ ಅಭ್ಯಾಸ ಮಾಡಿದ್ದಳು. ಆದರೆ ಎಲ್ಲಿಯೂ ತಾನು ಹೆಚ್ಚು ಅರಿತವಳೆಂಬ ಬಿಂಕವಿಲ್ಲ. ಹದಿಬದೆಯರಿಗೆ ಸಮಾಜ ನಿಯಮಿಸಿದ ಧರ್ಮದ ಬಗ್ಗೆ ಅತೀವ ಗೌರವ. ಹಾಗಾಗಿ ಧರ್ಮದ ನೆನಪು ಮರೆಯದಂತೆ ಕೃತಿಯಾಗಿ ನಿರ್ಮಿಸಿ ನೆಲೆಗೊಳಿಸುವ ಪ್ರಯತ್ನ ಈಕೆಯದು. ಹೊನ್ನಮ್ಮನಿಗೆ

ಆತ್ಮವಿಶ್ವಾಸಕ್ಕಿಂತ ಸಮಾಜ ತಾನು ಹೆಣ್ಣು ಎಂಬ ಕಾರಣಕ್ಕಾಗಿ ಕರುಣೆ ತೋರಬೇಕೆಂಬ ನಿರೀಕ್ಷೆ ಇದ್ದಂತಿದೆ. ಹಾಗಾಗಿ "ಬಾಲೆ ಬಣ್ಣಿಸಿ ಬಳಲಿದಳೆಂಬ ಮರುಕದಿಂದಾಲಿಪುದಖಿಲಸತಿಯರು" ಎಂದು ಹೆಂಗಳೆಯರು ಇದನ್ನು ಓದಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಾಳೆ.

ಹೊನ್ನಮ್ಮ ಹದಿಬದೆಯರ ಧರ್ಮವನ್ನು ಒಂಬತ್ತು ಸಂಧಿಯಲ್ಲಿ ಪ್ರಸ್ತುತಪಡಿಸಿದ್ದಾಳೆ. ಆರಂಭದ ಸಂಧಿಯಲ್ಲಿ ಸ್ವವಿಚಾರ, ರಾಜಾಸ್ಥಾನ, ಗುರು ಮೊದಲಾದ ಸಂಗತಿಗಳಿದ್ದರೆ, ಎರಡನೆಯ ಸಂಧಿಯು ಪಾತಿವ್ರತ್ಯದ ಮಹಿಮೆಯನ್ನು ನಿರೂಪಿಸಲು ಮೀಸಲಾಗಿದೆ. ಪತಿ ಶುಶ್ರೂಷೆಯ ಬಗ್ಗೆ ಮೂರನೆಯ ಸಂಧಿ ತಿಳಿಸುತ್ತದೆ. ನಾಲ್ಕನೆಯ ಸಂಧಿಯಲ್ಲಿ ಹೆಣ್ಣಾದವಳು ಅತ್ತೆ ಮಾವ ನೆರೆಯವರು ಮೊದಲಾದವರೊಂದಿಗೆ ಹೇಗೆ ಗೌರವದಿಂದ ವ್ಯವಹರಿಸಬೇಕೆಂಬುದರ ವಿವರಣೆಯಿದೆ. ಐದನೆಯ ಸಂಧಿ ಸ್ತ್ರೀವಾದಿ ದೃಷ್ಟಿಯಿಂದ ಹಾಗೂ ಕವಯಿತ್ರಿಯ ಧ್ಯೇಯ ಧೋರಣೆಗಳ ದೃಷ್ಟಿಯಿಂದ ಬಹು ಮುಖ್ಯವಾದುದು. ಇಲ್ಲಿ ಹೆಣ್ಣುಮಕ್ಕಳ ಬಗ್ಗೆ ತಂದೆತಾಯಿಗಳು ತೋರಬೇಕಾದ ಕಾಳಜಿಗಳೇನೆಂದು ಹೇಳಲಾಗಿದೆ. ಆರು ಮತ್ತು ಏಳನೆಯ ಸಂಧಿಗಳಲ್ಲಿ ಕ್ರಮವಾಗಿ ದಾಂಪತ್ಯ ಜೀವನ ಹಾಗೂ ಪಾತಿವ್ರತ್ಯಕ್ಕಿರುವ ತಪಶ್ಶಕ್ತಿಯನ್ನು ಸತಿಯ ವಿರಹವನ್ನು ನಿರೂಪಿಸಲಾಗಿದೆ. ಎಂಟನೆಯ ಸಂಧಿಯು ಗೃಹಿಣಿಯ ಕರ್ತವ್ಯಗಳನ್ನು ತಿಳಿಸುತ್ತದೆ. ಒಂಬತ್ತನೆಯ ಸಂಧಿಯಲ್ಲಿ ಭಗವಂತನ ನಾಮಸ್ಮರಣೆಯಿಂದ ಮುಕ್ತಿ ದೊರಕುವುದೆಂಬ ಸಂದೇಶವಿದೆ. ಹೀಗೆ ವಸ್ತುವನ್ನು ಅಚ್ಚುಕಟ್ಟಾಗಿ ವಿನ್ಯಾಸಗೊಳಿಸಿಕೊಳ್ಳಲಾಗಿದೆ.

ಹೊನ್ನಮ್ಮನ ಪ್ರಕಾರ ಪತಿವ್ರತಾ ಧರ್ಮದಿಂದಲೇ ಹೆಣ್ಣಿನ ಇಹಪರ ಸಾಧನೆ. ಹಾಗಾಗಿ ಈ ಕೃತಿಯನ್ನು ಓದಿ ಮಹಿಳೆಯರು ತಮ್ಮ ಬದುಕನ್ನು ಹಸನಾಗಿಸಕೊಳ್ಳಬೇಕೆಂದು ಆಶಿಸುವ ಈ ಕವಯಿತ್ರಿ ಸೂಚಿಸಿರುವ ಮಾರ್ಗ ಮಾತ್ರ ಹೆಣ್ಣಿನ ಅಸ್ತಿತ್ವಕ್ಕೆ ಧಕ್ಕೆಯನ್ನುಂಟುಮಾಡುವಂತಿದೆ. ಈಕೆ ಮಹಿಳೆಯ ಬದುಕನ್ನು ಪುರುಷ ನೆಲೆಯಿಂದಲೇ ನೋಡಿರುವುದರಿಂದ ಇಲ್ಲಿನ ಬಹಳಷ್ಟು ವಿಚಾರಗಳು ಪುರುಷಪರವಾಗಿವೆ. ಪತಿಭಕ್ತಿ ಎಂಬುದು ಹರಿಭಕ್ತಿಗೂ ಮಿಗಿಲು. ಹರಿಭಕ್ತಗಾದರೂ ಮತಬೇಧವಿರಬಹುದು ಪತಿಭಕ್ತಿಗೆ ಮತಬೇಧವಿಲ್ಲವೆಂಬುದು ಈಕೆಯ ಅಭಿಮತ. ಪುರುಷನಿಗೆ ಧರ್ಮ ಅರ್ಥ ಕಾಮ ಮೋಕ್ಷ ಎಂದು ಹಲವು ಮಾರ್ಗಗಳಲ್ಲಿ ಸಿದ್ಧಿ ಕಂಡುಕೊಳ್ಳಬಹುದೆನ್ನುವ ಸಮಾಜ ಸ್ತ್ರೀಗೆ ತೋರುವುದು ಒಂದೇ ಮಾರ್ಗವನ್ನು ಅದೇ ಪತಿಸೇವೆ. ಸ್ತ್ರೀಗೆ ಇದೇ ತಪಸ್ಸು, ತೀರ್ಥದರ್ಶನ. ಪತಿವ್ರತೆಯರೇ ಪ್ರತ್ಯಕ್ಷದೇವತೆಯರು, ಪ್ರಾತಃಸ್ಮರಣೀಯರು ಎಂದು ಈಕೆ ಹೇಳುವಲ್ಲಿ ಮನುವಿನ ಚಿಂತನೆಯನ್ನೇ ಸರಳೀಕರಿಸಲಾಗಿದೆ. ಇಲ್ಲಿ ಹೆಣ್ಣಿಗೆ ದೇವತೆಯ ಪಟ್ಟದ ಆಸೆ ತೋರಿಸಿ ಪುರುಷರ ದಾಸಿಯಾಗಿಸಲೆತ್ನಿಸಿರುವುದನ್ನು ಗಮನಿಸಬಹುದು. ಹೆಣ್ಣಿನ ಜನ್ಮವೇ ಪತಿಗಾಗಿ ಎಂಬುದು ಹೊನ್ನಮ್ಮನ ತಿಳುವಳಿಕೆಯೂ ಆಗಿದೆ.

ಪತಿಯೇ ಪರಮಗುರು ಪತಿಯೇ ದೇವತೆ
ಪತಿಯೇ ಸದ್ಗತಿಯೆಂದು
ಪತಿಯ ಪಾದಾಂಬುಜದೊಳು ಭಕ್ತ್ಯೈವುದು
ಸತಿಯರ ಧರ್ಮದ ಸಾರ

ಇದು ಕೃತಿಯ ಕೇಂದ್ರಬಿಂದು, ಕೃತಿಯಲ್ಲಿ ಬಳಕೆಯಾಗಿರುವ 'ಪತಿಯ ಊಳಿಗ' 'ಇನಿಯನೂಳಿಗ' ಎಂಬ ಶಬ್ದಗಳೇ ಹೆಣ್ಣಿನ ದಾಸ್ಯಸ್ಥಿತಿಯನ್ನು ಬಿಂಬಿಸುತ್ತವೆ. ವ್ರತ ಹೋಮ ನಿಯಮ ಇವುಗಳಿಗೆ ಧಾರ್ಮಿಕ ಆಚರಣೆಗಳಲ್ಲಿ ಮಹತ್ವವಿದೆ. ಆದರೆ ಸತೀಧರ್ಮದ ವಿಚಾರ ಬಂದಾಗ ಇವೂ ಮಹತ್ವ ಕಳೆದುಕೊಳ್ಳುತ್ತವೆ. ಹೆಣ್ಣು ವ್ರತ ಹೋಮಗಳಲ್ಲಿ ತೊಡಗಿದ್ದಾಗ ಪುರುಷ ಸೇವೆಗೆ ಚ್ಯುತಿ ಬರುವುದೆಂಬ ದಿಗಿಲು. ಹಾಗಾಗಿ ಸತಿಯಾದವಳಿಗೆ ಪತಿಸೇವೆಗಿಂತ ಮಿಗಿಲಾದ ವ್ರತ ನಿಯಮ ಹೋಮಗಳಿಲ್ಲವೆಂದು ಆಕೆಯ ಧಾರ್ಮಿಕ ಬದುಕಿಗೂ ಲಕ್ಷ್ಮಣರೇಖೆ ಎಳೆದಿರುವುದನ್ನು ಹೊನ್ನಮ್ಮ ಪ್ರಶ್ನಿಸದೆ ಒಪ್ಪಿಕೊಳ್ಳುತ್ತಾಳೆ.

ಹೆಣ್ಣಿಗೆ ತನ್ನ ಮನೆಯಲ್ಲಿಯೇ ಎಂಥ ಸ್ಥಾನವಿದ್ದಿತೆಂಬುದಕ್ಕೆ ಪತಿಸೇವೆಯ ವೈಖರಿಯನ್ನು ಓದಬೇಕು. ಪತಿ ಹೊರಗಿನಿಂದ ಬಂದಾಗ ಆಕೆಗೆ ಆಲಸ್ಯವಿರಲಿ, ಬಿಟ್ಟು ಬರಲಾಗದ ಮನೆಗೆಲಸದಲ್ಲಿ ತೊಡಗಿರಲಿ, ಮಕ್ಕಳ ಲಾಲನೆ ಮಾಡುತ್ತಿರಲಿ, ಪತಿಯ ದನಿ ಕೇಳಿದ ಕೂಡಲೇ ಅವನನ್ನು ಎದುರುಗೊಂಡು, ಪಾದ ತೊಳೆದು ಒರೆಸಿ ಬಳಲಿಕೆ ಕಳೆದು ಒಲುಮೆಯ ಮಾತುಗಳನ್ನಾಡಬೇಕು. ಮನೆಯ ಕಷ್ಟಗಳನ್ನು ಆತನಿಗೆ ಕಾಣಿಸಬಾರದು, ಗಂಡ ಅನುಚಿತವಾದ ಕಾರ್ಯ ಮಾಡಿದಾಗ ಕೂಡ ಇದು ಉಚಿತವಲ್ಲವೆಂದು ನೆನಪಿಸುತ್ತೇನೆಯೇ ಹೊರತು ಅಜ್ಞೆಯಲ್ಲ ಎಂಬುದನ್ನು ಹೇಳಬೇಕು ಎನ್ನಲಾಗಿದೆ. ಬಹುಪತ್ನಿತ್ವ ವ್ಯವಸ್ಥೆಯಲ್ಲಿ ಹೆಣ್ಣು ಸವತಿಯೊಡನೆ ಒಂದಾಗಿ ಪತಿಯ ಆರೈಕೆ ಮಾಡಬೇಕೆನ್ನುವ ಅಭಿಪ್ರಾಯ ತಾಳುತ್ತಾಳೆಯೇ ಹೊರತು ಪ್ರತಿಭಟಿಸುವುದಿಲ್ಲ. ಗಂಡನಿಗಾಗದವರನ್ನು ದೂರವಿರಿಸು, ಗಂಡನ ಪಡಿಗ ಪಾವುಗೆ ಹಿಡಿದು ನಡೆಯಬೇಕು ಇವೇ ಮೊದಲಾದವು ಹೆಣ್ಣಿನ ಅಸ್ಮಿತೆಯನ್ನೇ ಕೆಣಕುವಂತಿವೆ. ಗಂಡನಿಗೆ ಹೆಂಡತಿ ನಿಷ್ಠಳಾಗಿರಬೇಕೆಂಬುದಕ್ಕೆ ಎರಡನೆಯ ಮಾತಿಲ್ಲ. ಆದರೆ ಆತನೂ ಸತಿಯ ಮನವನ್ನರಿತು ನಡೆಯಬೇಕೆಂದು ಸತಿಯ ನಿರೀಕ್ಷೆ ಇರುತ್ತದೆಂದು ಆಕೆ ಯೋಚಿಸುವುದಿಲ್ಲ. ಹೀಗೆ ಹೊನ್ನಮ್ಮ ಪುರುಷ ಪ್ರಧಾನ ಸಮಾಜದ ಬಿಗಿಮುಷ್ಟಿಯಲ್ಲಿ ಸಿಲುಕಿಕೊಂಡಿದ್ದಾಳೆ. ಪತಿಸೇವೆಗೆ ಪ್ರಾಮುಖ್ಯತೆ ನೀಡಿದ ಬಳಿಕ ಅತ್ತೆಮಾವಂದಿರ ಸೇವೆಯ ಬಗ್ಗೆ ಹೇಳಲಾಗಿದೆ. ಅತ್ತೆಮಾವರಿಗೆ ಸ್ನಾನ ಮಾಡಿಸುವುದು, ಕಾಲು ಒತ್ತುವುದು, ಬೀಸಣಿಗೆಯಿಂದ ಗಾಳಿ ಬೀಸುವುದು ಮೊದಲಾದ ಸೇವೆಗಳನ್ನು ಹೇಳಲಾಗಿದೆ. ಶೋಷಿಸುತ್ತಿದ್ದ ಅತ್ತೆಯರನ್ನು ನೋಡಿದ ಹೊನ್ನಮ್ಮ ಈ ಕುರಿತು ಯೋಚಿಸಿದ್ದಾಳೆ. ತಂದೆತಾಯಿಯವರನ್ನು ಬಿಟ್ಟು ಬಂದ ಸೊಸೆಯನ್ನು ಪಾಲಿಸದೆ ಆಹಾರ ವಸ್ತ್ರಗಳನ್ನು ನೀಡದೆ ಹಿಂಸಿಸುತ್ತಿದ್ದರೆಂಬ ಅಂಶವನ್ನು ಈ ಹಿನ್ನೆಲೆಯಲ್ಲಿ ಊಹಿಸಬಹುದು. ಈ ನಿಟ್ಟಿನಿಂದ "ಹದಿಬದೆಯ ಧರ್ಮ ಅಂದಿನ ಗೃಹಿಣಿಯ ಜೀವನವನ್ನು ಮೂಡಿಸುವ ಕನ್ನಡಿ" ಎಂಬ ಚಂಪಾಬಾಯಿಯವರ ಮಾತಿಗೆ ನಾವೂ ದನಿಗೂಡಿಸಬಹುದು.

ಹೊನ್ನಮ್ಮ ಪುರುಷ ನಿರ್ಮಿಸಿದ ಮಾದರಿಯಲ್ಲಿಯೇ ಹೆಣ್ಣಿನ ಜೀವನವನ್ನು ನೋಡಬಯಸಿದ್ದರೂ ಹೆಣ್ಣು ಗಂಡಿನಲ್ಲಿರುವ ತಾರತಮ್ಯ ಅಸಮಾನತೆಯ ಬಗ್ಗೆ ಕ್ಷೀಣವಾಗಿಯಾದರೂ ದನಿ ಎತ್ತಿರುವುದನ್ನು ದಾಖಲಿಸಲೇಬೇಕು.

ಪೆಣ್ಣು ಪೆತ್ತವರ ಬಳಗ ಬಳೆವುದು ಬೇಗ
ಪೆಣ್ಣು ಪೆತ್ತವರು ಪೆರ್ಚುವರು
ಪೆಣ್ಣು ಪೆತ್ತುದರಿಂದ ಪೆಸರೆನಿಸಿತು ಮಿಗೆ
ಉಣ್ಣವೇರಿತು ಪಾಲ್ಗಡಲು
ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು

ಎಂದು ಹೆಣ್ಣಿನ ಬಗ್ಗೆ ಸಮಾಜ ತೋರುವ ಅನಾದರವನ್ನು ವಿರೋಧಿಸುತ್ತ ಹೆಣ್ಣಿನ ಘನತೆಯನ್ನು ಎತ್ತಿ ಹಿಡಿಯುವ ಮೇಲಿನ ಪದ್ಯಗಳು ತುಂಬಾ ಪ್ರಸಿದ್ಧವಾದವು. ಗಂಡಾದರೆ ಬಂದ ಗುಣವೇನು? ಹೆಣ್ಣಾದರೆ ಬಂದ ಕುಂದೇನು ಎಂದು ಆಕೆ ಪ್ರಶ್ನಿಸಿರುವುದು ಆ ಕಾಲಕ್ಕೆ ಮಹತ್ವದ ಅಂಶವೇ ಆಗಿದೆ. ಉಗುರಿನಿಂದ ನುಡಿಸುವ ವೀಣೆಗೆ ಒನಕೆಯನ್ನು ಉಪಯೋಗಿಸಬಾರದು ಎಂದು ಕವಯಿತ್ರಿ ಹೇಳಿರುವುದು ಹೆಣ್ಣಿನ ಮೇಲೆ ನಡೆಸುವ ದೌರ್ಜನ್ಯಕ್ಕೆ ತೋರಿದ ಪ್ರತಿಭಟನೆ ಆಗಿರಬಹುದು. ಹೀಗೆ ಸಾಂಪ್ರದಾಯಿಕ ಚೌಕಟ್ಟಿನೊಳಗೆಯೂ ಹೊನ್ನಮ್ಮ ಅಲ್ಲಿರುವ ಇತ್ಯಾತ್ಮಕ ಅಂಶಗಳನ್ನು ಧೈರ್ಯವಾಗಿ ಎತ್ತಿಹಿಡಿದಿದ್ದಾಳೆ.

ವಿವಾಹದಂಥ ಬದುಕಿನ ಬಹು ನಿರ್ಣಾಯಕ ಸಂದರ್ಭದಲ್ಲಿ ಕೂಡ ಹೆಣ್ಣುಮಕ್ಕಳ ಅಭಿಪ್ರಾಯವನ್ನು ಕೇಳುವ ಮನ್ನಿಸುವ ಪರಿಪಾಠ ಹೊನ್ನಮ್ಮನ ಕಾಲದಿಂದಲೂ ಇರಲಿಲ್ಲ. ನಂಟು ಉಳಿಯಲೆಂದೊ, ಸ್ನೇಹ ಉಳಿಯಲೆಂದೊ, ಹಣದಾಸೆಗಾಗಿಯೊ ಕಟ್ಟುಬಿದ್ದು ಹಿರಿಯರಾದವರು ತಮ್ಮ ಹೆಣ್ಣುಮಕ್ಕಳನ್ನು ಎಷ್ಟೋ ವೇಳೆ ಯೋಗ್ಯನಲ್ಲದವನೊಡನೆಯೂ ಮದುವೆ ಮಾಡುತ್ತಿದ್ದುದನ್ನು ಗಮನಿಸಿದ ಹೊನ್ನಮ್ಮ, ಗುಣ ಯೌವನ ಕುಲ ರೂಪವಿಲ್ಲದವನಿಗೆ ಹಾಗೂ ನಡೆದಾಡುವ ಹೆಣಕ್ಕೆ ಹೆಣ್ಣುಮಕ್ಕಳನ್ನು ವಿವಾಹ ಮಾಡಬಾರದೆಂದಿದ್ದಾಳೆ. ಇದರಿಂದ ಸಮಾಜದಲ್ಲಿ ಇಂಥ ವಿಷಮ ವಿವಾಹಗಳ ಸಂಖ್ಯೆ ಎಷ್ಟಿತ್ತೆಂಬುದನ್ನು ಊಹಿಸಬಹುದು. ಹೆಣ್ಣುಮಕ್ಕಳನ್ನು ಆಗಾಗ ತವರಿಗೆ ಕರೆಸುವುದು, ಪ್ರೀತಿಯಿಂದ ಕಾಣುವುದು, ಗಂಡನ ಮನೆಯಲ್ಲಿದ್ದಾಗ ಆಗಾಗ ಕ್ಷೇಮ ಸಮಾಚಾರ ತಿಳಿಯುವುದು ಇವೆಲ್ಲವೂ ತಂದೆ ತಾಯಿಗಳ ಕರ್ತವ್ಯವೆಂದು ತಿಳಿಸಿರುವಲ್ಲಿಯೂ ಹೆಣ್ಣುಮಕ್ಕಳ ಬಗೆಗಿರುವ ಕಾಳಜಿ ವ್ಯಕ್ತವಾಗಿದೆ.

ದಾಂಪತ್ಯಜೀವನ ಸೌಹಾರ್ದದಿಂದಿರಬೇಕಾದರೆ ಗಂಡಿಗೂ ಕೆಲವು ಜವಾಬ್ದಾರಿಗಳಿರುತ್ತದೆಂಬುದನ್ನು ಹೊನ್ನಮ್ಮ ಚಿಂತಿಸಿದ್ದಳು. ಈ ಕುರಿತು ಘೋಷವಾಗಿ ಹೇಳದಿದ್ದರೂ ಪಿಸುಮಾತಿನಲ್ಲಾದರೂ ಕೆಲವೊಂದು ಸಲಹೆ ನೀಡಿದ್ದಾಳೆ. ಗಂಡನಾದವನು ಗಲಾಟೆ ಮಾಡದೆ, ಗಾಬರಿಗೊಳಿಸದೆ, ಜಗಳ ತೆಗೆಯದೆ ಪ್ರಿಯವಾದ ಮಾತಿನಿಂದ ಹೆಂಡತಿಯನ್ನು ಒಲಿಸಿಕೊಳ್ಳಬೇಕೆಂದು ಸೂಚಿಸಿದ್ದಾಳೆ. ಇಂಥ ಕೆಲವು ವಿಚಾರಗಳನ್ನು ಗಮನಿಸಿದ ಮಹಿಷಿಯವರು ಈಕೆಯ ಬಗ್ಗೆ "ಸಮಾಜದಲ್ಲಿ ಸಾಮಾನ್ಯ ಸ್ತ್ರೀಗಾಗುವ ಅನ್ಯಾಯವನ್ನು ಕಂಡು ನೊಂದವಳು. ಆದರೂ ಅದನ್ನು ಧೈರ್ಯವಾಗಿ ಹೇಳುವ ಸಾಹಸ ಅವಳಲ್ಲಿರಲಿಲ್ಲ" ಎಂದಿದ್ದಾರೆ.

ಬಂಧುವರ್ಮನ ಸತಿಧರ್ಮಸಾರದಲ್ಲಿ ಪಾಕದಲ್ಲಿ ತೋರಬೇಕಾದ ಶುಚಿತ್ವ, ಆಹಾರ, ನೈರ್ಮಲ್ಯ ಇತ್ಯಾದಿ ವಿಚಾರಗಳನ್ನು ನಿರೂಪಿಸಿದಂತೆ ಹೊನ್ನಮ್ಮನೂ ಧಾನ್ಯವನ್ನು ಕೆಡದಂತೆ ಇಡುವ ಕ್ರಮ, ಸದಾಚಾರ, ನೆರೆಯವರೊಡನೆ ವ್ಯವಹರಿಸಬೇಕಾದ ರೀತಿ ಇತ್ಯಾದಿ ಅಂಶಗಳನ್ನು ತಿಳಿಸಿದ್ದಾಳೆ. ಇವು ಉಪಯುಕ್ತ ವಿಚಾರಗಳೇ ಆಗಿವೆ. ಈಕೆ ವೈಷ್ಣವ ಸಂಪ್ರದಾಯದವಳಾದುದರಿಂದ ಸಾಯುವಾಗ ಹರಿಯನ್ನು ನೆನೆಯಲು ತಿಳಿಸುತ್ತಾಳೆ. ಇಂಥ ಸಂಗತಿಗಳಿದ್ದರೂ ಗ್ರಂಥಾಂತ್ಯದಲ್ಲಿ "ಪತಿಯೊಕ್ಕೆ ಸತಿಯರೊಳು ಸತಿಯರು ಪತಿಪಾದಭಕ್ತೆಯರಕ್ಕೆ" ಎಂದೇ ಹಾರೈಸುತ್ತಾಳೆ. ಸತಿಯರ ಮಹಿಮೆ ಜಗತ್ತಿನಲ್ಲಿ ನಿಲ್ಲಬೇಕೆಂಬ ಆಶಯ ಹಿರಿದಾಗಿದ್ದರೂ ಅದು ಸತಿಧರ್ಮದ ಮೂಲಕವಾಗಿ ಎಂಬುದು ಆಕೆಯ ಅಭಿಮತ. ಹೆಣ್ಣಿಗೆ ಬಾಹ್ಯ ಜಗತ್ತಿರುವುದನ್ನೇ ಮುಚ್ಚಿ ಕೇವಲ ಆಂತರಿಕ ಜಗತ್ತನ್ನು ಮಾತ್ರ ಅನಾವರಣಗೊಳಿಸಲಾಗಿದೆ. ಮಹಿಳೆಯ ನೋವು, ಅಸಹಾಯಕತೆ, ಭಯ, ಅಭದ್ರತೆಗಳಿಗೆ ಕಾರಣವಾಗಿರುವ ನೆಲೆಯನ್ನು ಈ ಕಾವ್ಯ ಗುರುತಿಸಲು ಹೋಗಿಲ್ಲ. ಸ್ತ್ರೀವಾದಿ ನೆಲೆಯಿಂದ ಹದಿಬದೆಯ ಧರ್ಮವನ್ನು ಅಭ್ಯಾಸ ಮಾಡಿದಾಗ ಇದು ತೀರ ಸಾಂಪ್ರದಾಯಿಕ ದೃಷ್ಟಿಕೋನದ, ಪುರುಷಪ್ರಧಾನ ವ್ಯವಸ್ಥೆಯನ್ನು ಬೆಂಬಲಿಸುವ ಕೃತಿಯಾಗಿ ಕಂಡುಬರುವುದರಲ್ಲಿ ಸಂದೇಹವಿಲ್ಲ. ಹೆಣ್ಣಿನ ಜೀವನ ಸಾರ್ಥಕ ಮದುವೆ ಮತ್ತು ದಾಂಪತ್ಯದಲ್ಲಿ ಎಂದು ಭಾವಿಸುವ ಹೊನ್ನಮ್ಮ ಪತಿಸೇವೆಯಲ್ಲಿಯೇ ಹೆಣ್ಣಿನ ಅಭ್ಯುದಯ ಕಾಣುವವಳು. ಸಮಾನ ಸ್ಥಾನಮಾನಗಳಿಗಾಗಿ ಹೋರಾಟ ನಡೆಸುತ್ತಿರುವ ಇಂದಿನ ಹೆಣ್ಣಿನ ಕಣ್ಣಿನಲ್ಲಿ ಹೊನ್ನಮ್ಮನ ಧೋರಣೆ ಪ್ರತಿಗಾಮಿತನದ್ದೇ ಆಗಿರಬಹುದಾದರೂ ಆಕೆಯ ಅಭಿಪ್ರಾಯವನ್ನು ಅಡಿಗಡಿಗೆ ಚರ್ಚಿಸುತ್ತ ಪ್ರತಿಕ್ರಿಯಿಸುತ್ತ ಹೋಗಬಹುದಾದರೂ ಅಲ್ಲಲ್ಲಿ ಹೆಣ್ಣಿನ ಸಮಸ್ಯೆಗಳತ್ತಲೂ ಇಣುಕುನೋಟ ಬೀರಿರುವುದರಿಂದ ಕೃತಿಯಲ್ಲಿ ವ್ಯಕ್ತವಾದ ಧೋರಣೆಗೆ ಹೊನ್ನಮ್ಮ ಬದುಕಿದ ಸಮಾಜದ ಪಾಲುದಾರಿಕೆಯೂ ಇರುವುದನ್ನು ಮರೆಯಬಾರದು. ಇಲ್ಲಿ ನಿರೂಪಿತವಾಗಿರುವ ಹೆಣ್ಣಿನ ಸ್ಥಿತಿಗತಿಗಳು ಆ ಕಾಲದ ಸಮಾಜದ ಹೆಣ್ಣಿನ ಸ್ಥಿತಿಗತಿಗಳ ಪ್ರತಿಬಿಂಬವೇ ಆಗಿದೆ. ಪತಿಯೇ ಪರದೈವ ಎಂದು ನಂಬಿಸಿ ಆತನ ಆಜ್ಞಾಪಾಲಕಿಯಾದ ಹೆಂಡತಿಯನ್ನು ಸಮಾಜ ನಿರೀಕ್ಷಿಸುತ್ತದೆ. ಪ್ರಖರವಾದ ವೈಚಾರಿಕ ಪ್ರಜ್ಞೆಯುಳ್ಳ ಮಹಾದೇವಿಯಕ್ಕ ಹಾಗೂ ಅತ್ಯಂತ ಸಂಪ್ರದಾಯ ನಿಷ್ಠಳಾದ ಹೊನ್ನಮ್ಮ ಇವರಿಬ್ಬರನ್ನು ವಿದ್ವಾಂಸರು ತುಲನೆ ಮಾಡುವುದುಂಟು. "ಹೊಸಗನ್ನಡ

ಸಾಹಿತ್ಯ ಸಂದರ್ಭದಲ್ಲಿ ಅಕ್ಕಮಹಾದೇವಿ ಮತ್ತು ಸಂಚಿಹೊನ್ನಮ್ಮ ಇವರಿಬ್ಬರೂ ಮಹಿಳೆಯರಿಗೆ ಸಂಬಂಧಿಸಿದ ಎರಡು ಮಾದರಿಗಳನ್ನು ಪ್ರತಿನಿಧಿಸುತ್ತಾರೆಂದು" ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ. ಸಂಸಾರವನ್ನು ತೊರೆದು ಅಕ್ಕ ವೈಯಕ್ತಿಕ ಸಾಧನೆಯ ಸಾಧ್ಯತೆಯ ಕುರುಹಾಗಿ ಶ್ರೀಶೈಲಗಿರಿಯ ತುತ್ತತುದಿಯಲ್ಲಿ ಶೋಭಿಸುವ ಸ್ತ್ರೀಶಕ್ತಿಯಾದರೆ, ಅಗಮನೆಯ ವೈಭವದ ಬದುಕಿನ ನಡುವೆ ಸಮಸ್ತ ಸ್ತ್ರೀ ಕುಲವನ್ನೆ ಕುರಿತು ಚಿಂತಿಸುವ ಹೊನ್ನಮ್ಮ ಮನೆಗೆ ಹತ್ತಿರದವಳಾಗುತ್ತಾಳೆ. ಅಕ್ಕನ ದಿಟ್ಟತನಕ್ಕೆ ಅನುಭವಕ್ಕೆ ಗೌರವ ಮೆಚ್ಚುಗೆ ಸೂಚಿಸಬಹುದು. ಆದರೆ ಹೊನ್ನಮ್ಮನೊಂದಿಗೆ ಜಗಳವಾಡುತ್ತಾ ಅವಳ ಅಭಿಪ್ರಾಯಗಳನ್ನೂ ವಿರೋಧಿಸುತ್ತ ಸಮಾನಾಂತರವಾದ ಸ್ತ್ರೀಪರವಾದ ಕೈಪಿಡಿಯನ್ನು ರಚಿಸಬಹುದು ಎಂಬ ಅಭಿಪ್ರಾಯವ್ಯಕ್ತವಾಗಿದ್ದು ತುಂಬ ಮನನೀಯವಾಗಿದೆ. ಏಕೆಂದರೆ ಹೊನ್ನಮ್ಮ "ಒಡೆಯನಿರಿಸಿದಂತಿರ್ಪುದಲ್ಲದೆ ಪೇಳೊಡವಗೆ ಬೇರಿರವುಂಟೆ" ಎಂದು ಹೇಳಿರುವುದನ್ನು ಮಹಿಷಿಯವರು "ಸ್ತ್ರೀ ಪುರುಷನ ಒಡವೆಯೆ? ಅವರಿಗೆ ಸುಖ ದುಃಖ ನೋವು ನಲಿವುಗಳಿಲ್ಲವೆ" ಎಂದು ಪ್ರಶ್ನಿಸಿರುವುದುಂಟು. ಹೀಗೆ ಅನೇಕ ಅಧ್ಯಯನಕಾರರು ಹೊನ್ನಮ್ಮನ ವಿಚಾರಗಳಿಗೆ ಪ್ರತಿಕ್ರಿಯಿಸಿದ್ದಾರೆ. ಆದರೆ ಇದು ಒಂದು ಕಾಲದ ಹೆಣ್ಣಿನ ಸ್ಥಿತಿಗತಿಗಳ ಉತ್ತಮ ದಾಖಲೆಯಾಗಿ ಯಶಸ್ವಿಯಾಗಿದೆ. ಹೊನ್ನಮ್ಮನ ವಿಚಾರಗಳ ಬಗ್ಗೆ ಭಿನ್ನಾಭಿಪ್ರಾಯಗಳಿರಬಹುದು, ಇರುತ್ತದೆ. ಆದರೆ ಆಕೆಯ ಕವಿತಾಶಕ್ತಿಯನ್ನು ಯಾರೂ ಅಲ್ಲಗಳೆಯಲಾರರು. ಹದಿಬದೆಯ ಧರ್ಮದಲ್ಲಿ ಕಂಡುಬರುವ ಪ್ರಸಾದಗುಣ ತುಂಬ ಅಪೂರ್ವವಾದುದು. ಆ ಕಾಲದ ಲೇಖಕಿಯರಲ್ಲಿ ಪ್ರತಿಭೆ ಅಧ್ಯಯನ ಎರಡೂ ಒಬ್ಬ ವ್ಯಕ್ತಿಯಲ್ಲಿ ಮೇಳೈಸಿದ್ದು ವಿರಳ. ಇಂಥ ವಿರಳ ಕವಯಿತ್ರಿಯಾದ ಹೊನ್ನಮ್ಮನನ್ನು ಕನ್ನಡ ಸಾಹಿತ್ಯ ಚರಿತ್ರೆಕಾರರು ದಾಖಲಿಸಿರುವುದರಲ್ಲಿ ಅರ್ಥವಿಲ್ಲದೇ ಇಲ್ಲ.

——— * ———

ಹೆಳವನಕಟ್ಟೆ ಗಿರಿಯಮ್ಮ

ಲಲಿತಾ ರವೀಂದ್ರ

ಕನ್ನಡ ಸಾಹಿತ್ಯದ ಎರಡು ಅಶ್ವಿನಿ ದೇವತೆಗಳಂತೆ ಕಂಗೊಳಿಸುತ್ತಿರುವ ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯದ ಪ್ರಭಾವ ಜನಜೀವನದ ಮೇಲೆ ಅಗಣಿತವಾದುದು. ಶತಶತಮಾನ ಕಳೆದರೂ ದಾಸ ಸಾಹಿತ್ಯ ಇನ್ನೂ ಜನಮನದಲ್ಲಿ ಅಚ್ಚಳಿಯದೇ ನಿಂತಿದೆ. ಭಾರತೀಯ ಸಂಸ್ಕೃತಿಯ ಏಕದೇವೋಪಾಸನೆ ಅನನ್ಯ ಶ್ರದ್ಧೆ, ಆತ್ಮಾರ್ಪಣೆ ಹಾಗೂ ಸಮಾಜ ಸುಧಾರಣೆ ದಾಸ ಸಾಹಿತ್ಯದ ಪ್ರಮುಖ ಉದ್ದೇಶವಾಗಿದೆ. ಮಾಧ್ವಸಂಪ್ರದಾಯದ ಶ್ರೀ ನರಹರಿ ತೀರ್ಥರಿಂದ ಪ್ರಾರಂಭವಾದ ಹರಿದಾಸ ಪರಂಪರೆ ಈ ತನಕ ಮುಂದುವರೆಯುತ್ತಿರುವುದು ಅದರಲ್ಲಿನ ಸೃಜನಶೀಲ ಶಕ್ತಿಯಿಂದಲೇ ಎಂದು ಭಾವಿಸಬೇಕಾಗಿದೆ. ವಚನ ಸಾಹಿತ್ಯಕ್ಕೆ ಭಕ್ತಿಭಂಡಾರಿ ಬಸವಣ್ಣನವರಿದ್ದಂತೆ ಹರಿದಾಸ ಸಾಹಿತ್ಯಕ್ಕೆ ಪುರಂದರದಾಸರು ನಾಯಕ ಶಿರೋಮಣಿಗಳಾಗಿದ್ದಾರೆ. ಇವರುಗಳ ಪ್ರಭಾವದಿಂದ ಅನೇಕ ಪ್ರತಿಭಾವಂತರು ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯದಲ್ಲಿ ಕೆಲಸ ಮಾಡಿ ಅನನ್ಯ ಸಿದ್ಧಿಯನ್ನು ಪಡೆದಿದ್ದಾರೆ. ಅಷ್ಟೇ ಅಲ್ಲ ಸಮಾಜಕ್ಕೆ ಅಪೂರ್ವ ಮಾರ್ಗದರ್ಶನ ಮಾಡಿದ್ದಾರೆ. ಅಂತಹ ಮಹಾಚೇತನಗಳಲ್ಲಿ ಹೆಳವನಕಟ್ಟೆ ಗಿರಿಯಮ್ಮ ಕೂಡಾ ಒಬ್ಬರು. ವಚನ ಸಾಹಿತ್ಯದಲ್ಲಿ ಅಕ್ಕ ಮಹಾದೇವಿ ಹೇಗೆ ಮಾನ್ಯಳೋ ಹಾಗೆ ದಾಸ ಸಾಹಿತ್ಯದಲ್ಲಿ ತನ್ನ ಭಕ್ತಿ ಹಾಗೂ ಅಧಿಕ ಕಾವ್ಯಗುಣಗಳಿಂದ ಹೆಸರಾದ ಪ್ರಥಮ ಮಹಿಳೆ ಹೆಳವನಕಟ್ಟೆ ಗಿರಿಯಮ್ಮ.

ಹೆಳವನಕಟ್ಟೆ ಗಿರಿಯಮ್ಮ ಕ್ರಿ.ಶ. 1700ರಲ್ಲಿ ರಾಣೆಬೆನ್ನೂರಿನಲ್ಲಿ ಜನಿಸಿದಳೆಂದು ಹೇಳಲಾಗಿದೆ. ಆಕೆ ಗೋಪಾಲದಾಸರನ್ನು ಭೇಟಿಯಾಗಿದ್ದಳೆಂದು ಗೋಪಾಲದಾಸರು ಉಡುಪಿಗೆ ಹೋಗುವಾದ ಈಕೆಗೆ ಆಶೀರ್ವದಿಸಿದರೆಂದು ಹೇಳಲಾಗಿದೆ. ಗೋಪಾಲದಾಸರೇ ಆಕೆಗೆ ಬಾಲಗೋಪಾಲನ ವಿಗ್ರಹವನ್ನು ಕೊಟ್ಟಿದ್ದರಂತೆ. ಗೋಪಾಲದಾಸರ ಕಾಲ ಕ್ರಿ.ಶ. 1722ರಿಂದ ಕ್ರಿ.ಶ. 1765.

ಆಕೆಯ ಪೂರ್ವ ವಯಸ್ಸಿನಲ್ಲಿ ಶ್ರೀರಾಘವೇಂದ್ರರ ಶಿಷ್ಯರಾದ ಶ್ರೀ ಸುಮತೀಂದ್ರರು ಆಕೆಯನ್ನು ಆಶೀರ್ವದಿಸಿದ್ದರೆಂದು ಹೇಳಲಾಗಿದೆ. ಆಕೆಯ ಬಗ್ಗೆ ಜನಮನದಲ್ಲಿ ಸಹಜ ಪ್ರೀತಿ ಬೆಳೆಯುವಂತೆ ಆಕೆಯ ನಿಜವಾದ ದರ್ಶನವನ್ನು ಜನತೆಗೆ ಮಾಡಿಸಲು ನೆರವಾದ ಶ್ರೀಗಳಾದ ಸುಮತೀಂದ್ರ ತೀರ್ಥರೆಂದು ಹರಿದಾಸ ಪರಂಪರೆ ಹೇಳುತ್ತದೆ. ಆಕೆಯ ತಂದೆ ಬೀಷ್ಟಪ್ಪ ಜೋಯಿಸ್, ತಾಯಿ ತುಂಗಮ್ಮ. ಈ ದಂಪತಿಗಳು ತಿರುಪತಿ ವೆಂಕಟೇಶ್ವರನ ದರ್ಶನ ಮಾಡಿದ ನಂತರ ಈಕೆ ಹುಟ್ಟಿದಳಂತೆ. ಅದಕ್ಕಾಗಿ ಈಕೆಗೆ 'ಗಿರಿಯಮ್ಮ' ಎಂಬ ಹೆಸರು ಇಡಲಾಗಿದೆ. ಗಿರಿಯಮ್ಮ ನಾಲ್ಕು ವರ್ಷದ ಮಗುವಾಗಿದ್ದಾಗಲೇ ಆಕೆಯ ತಂದೆ ತಾಯಿಗಳು ತೀರಿಕೊಂಡರು. ಚಿಕ್ಕಪ್ಪ ಚಿಕ್ಕಮ್ಮಂದಿರ ಆಶ್ರಯದಲ್ಲಿ ಬೆಳೆದ ಗಿರಿಯಮ್ಮನಿಗೆ ಆಧ್ಯಾತ್ಮಿಕ ಚಿಂತನೆ ರಕ್ತಗತವಾಗಿತ್ತು. ಹಾಡುತ್ತಾ, ನರ್ತಿಸುತ್ತಾ ದೇವರ ಧ್ಯಾನದಲ್ಲಿ ಮೈಮರೆಯುತ್ತಿದ್ದ ಗಿರಿಯಮ್ಮನಿಗೆ ಸ್ತೋತ್ರಕಾರ್ಯ ಹಾಗೂ ಪೂಜಾಕಾರ್ಯಗಳು ತುಂಬಾ ಪ್ರಿಯವೆನಿಸಿದ್ದವು. ಆ

ಕಾಲದ ಸಂಪ್ರದಾಯದಂತೆ ಗಿರಿಯಮ್ಮನ ಮದುವೆ ಹರಿಹರ ತಾಲ್ಲೂಕಿನ ಮಲೆಬೆನ್ನೂರಿನ ಕೊಮಾರನಹಳ್ಳಿ ಶಾನುಭೋಗರಾದ ಕೃಷ್ಣಪ್ಪನವರ ಮಗ ತಿಪ್ಪರಸನೊಡನೆ ಜರುಗಿತು. ಅಲ್ಲಿನ ಶ್ರೀರಂಗನಾಥ ಸ್ವಾಮಿಯೇ ಗಿರಿಯಮ್ಮನ ಮನಸ್ಸಿನಲ್ಲಿ ಭದ್ರವಾಗಿ ನೆಲೆಯೂರಿದ. ಅವಳು ಲೌಕಿಕ ಸಂಸಾರದಿಂದ ವಿಮುಖಳಾದಳು.

ಅವಳ ಪತಿ ತಿಪ್ಪರಸ ಇದಕ್ಕೆ ವಿರೋಧ ವ್ಯಕ್ತಪಡಿಸದಿದ್ದರೂ ಕೊನೆಗೆ ಗಿರಿಯಮ್ಮನೇ ಮುಂದೆ ನಿಂತು ತನ್ನ ಗಂಡನಿಗೆ ಎರಡನೆಯ ವಿವಾಹ ಮಾಡಿಸಿದಳು. ಮದುವೆಯಾಗಿದ್ದರೂ ಸಾಂಸಾರಿಕ ಜೀವನದಿಂದ ಬೇರೆಯಾಗಿ ದೇವರ ಸೇವೆ ಹಾಗೂ ನೊಂದ ಜನರ ಸೇವೆಗೆ ತನ್ನ ಜೀವಿತವನ್ನು ಮುಡುಪಿಟ್ಟ ಹೆಳವನಕಟ್ಟೆ ಗಿರಿಯಮ್ಮ ವಚನಯುಗದ ಮಹಾಸಾಧಕಿ ಮಹಾದೇವಿ ಅಕ್ಕನ ನೆನಪನ್ನು ತರುತ್ತಾಳೆ.

ಹೆಳವನಕಟ್ಟೆ ಗಿರಿಯಮ್ಮ ಒಟ್ಟು ಏಳು ಕೃತಿಗಳನ್ನು ಹಾಗೂ ನಲವತ್ತಕ್ಕೂ ಹೆಚ್ಚು ಸುಂದರವಾದ ಕಾವ್ಯಾಂಶವುಳ್ಳ ಕೀರ್ತನೆಗಳನ್ನು ರಚಿಸಿದ್ದಾಳೆ. 'ಹೆಳವನಕಟ್ಟೆರಂಗ' ಅವಳ ಅಂಕಿತ. 'ಚಂದ್ರಹಾಸನಕಥೆ', 'ಸೀತಾಕಲ್ಯಾಣ' 'ಉದ್ದಾಲಕನ ಕಥೆ' 'ಗಜೇಂದ್ರ ಮೋಕ್ಷ', 'ಬ್ರಹ್ಮ ಕೊರವಂಜಿ', 'ಶಂಕರ ಗಂಡನ ಹಾಡು', 'ಕೃಷ್ಣ ಕೊರವಂಜಿ' ಹಾಗೂ 'ಲವಕುಶದ ಕಾಳಗ', ಎಂಬ ಕೃತಿಗಳನ್ನು ಗಿರಿಯಮ್ಮ ರಚಿಸಿದ್ದಾಳೆ. ಇವಳ ಕೀರ್ತನೆಗಳು ಭಾವಗೀತೆಯ ಅಂಶಗಳನ್ನು ಒಳಗೊಂಡಿವೆ. ಇವುಗಳ ಜೊತೆ ಇವಳು ಅನೇಕ ಒಗಟುಗಳನ್ನು ರಚಿಸಿದ್ದಾಳೆಂದು ಹೇಳಲಾಗಿದೆ.

ಹೆಳವನಕಟ್ಟೆ ಗಿರಿಯಮ್ಮನ ಕೃತಿಗಳಲ್ಲಿ ಚಂದ್ರಹಾಸನ ಕಥೆ ತುಂಬಾ ಪ್ರಮುಖವಾದ ಕಾವ್ಯ, ಇದು ಸಾಂಗತ್ಯ ರೂಪದಲ್ಲಿದೆ. ಇದರಲ್ಲಿ ಐದು ಸಂಧಿಗಳಿವೆ. ಗ್ರಂಥದ ಕೊನೆಯಲ್ಲಿ "ಶ್ರೀ ಹೆಳವನಕಟ್ಟೆ ರಂಗನಾಥ ಸ್ವಾಮಿಯ ಕರುಣ ಉಳ್ಳವರಾದ ಹೆಳವನ ಕಟ್ಟೆ ಗಿರಿಯಮ್ಮನವರು" ಎಂಬ ಮಾತು ಬರುತ್ತದೆ.

ಚಂದ್ರಹಾಸನ ಕಥೆಯನ್ನು ಲಕ್ಷ್ಮೀಶನ ಜೈಮಿನಿಭಾರತದಿಂದ ಆಯ್ದುಕೊಳ್ಳಲಾಗಿದೆ. ಕಾವ್ಯದಲ್ಲಿ ಲಕ್ಷ್ಮೀಶನ ಪ್ರಭಾವ ದಟ್ಟವಾಗಿ ಕಂಡುಬರುತ್ತದೆ. ಚಂದ್ರಹಾಸನ ಬಾಲ್ಯವನ್ನು ಸ್ತ್ರೀಸಹಜವಾದ ತಾಯ್ತನದಿಂದಲೇ ವರ್ಣಿಸಿದ್ದಾಳೆ. ಚಂದ್ರಹಾಸನ ಮೂಲಕ ದೈವಶ್ರದ್ಧೆಯನ್ನ ಪ್ರಚುರಪಡಿಸುವ ಅವಳ ಉದ್ದೇಶ ಬಹುಮಟ್ಟಿಗೆ ಯಶಸ್ವಿಯಾಗಿದೆ. 'ಸೀತಾಕಲ್ಯಾಣ' ಹಾಡಿನ ರೂಪದಲ್ಲಿದ್ದು ಗೃಹಿಣಿಯರ ದಿನನಿತ್ಯದ ಹಾಡಾಗಿರುತ್ತದೆ. 'ಉದ್ದಾಲಕ ಕತೆ'ಯೂ ಕೂಡಾ ಸಾಂಗತ್ಯದಲ್ಲಿದೆ.

ಇವಳ ಕೀರ್ತನೆಗಳು ಈಕೆಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತವೆ. ಈಕೆಯ ಹಾಡುಗಳಲ್ಲಿ ತತ್ವ ಮತ್ತು ನೀತಿ ಬೋಧನೆ ಸಮರಸವಾಗಿ ಬೆರೆತಿದೆ ಎಂದೂ, ಸಂಗೀತ ಪ್ರಕಾರಕ್ಕೂ ಕೂಡಾ ಇದೊಂದು ದೊಡ್ಡ ಕಾಣಿಕೆಯೆಂದೂ ಹೇಳಲಾಗಿದೆ. "ಹೆಳವನಕಟ್ಟೆ ಗಿರಿಯಮ್ಮ ಅವರ ಕೃತಿಗಳಲ್ಲಿ ಶುದ್ಧ ಸರಳ ಸೌಂದರ್ಯವಿದೆ. ನಿರ್ವ್ಯಾಜವಾದ ಭಾವನಾಶಕ್ತಿಯಿದೆ" ಎನ್ನುತ್ತಾರೆ. ಡಾ. ರಂ.ಶ್ರೀ. ಮುಗಳಿ ಅವರು. ನುಡಿದಂತೆ ನಡೆದು ದೊಡ್ಡ ಬಾಳನ್ನು ನಡೆಸಿದ, ಜನಸಾಮಾನ್ಯರಲ್ಲಿ ದೈವಪ್ರಜ್ಞೆ ಹಾಗೂ ನೈತಿಕ ಪ್ರಜ್ಞೆ ಬೆಳೆಸಿದ ಹೆಳವನಕಟ್ಟೆ ಗಿರಿಯಮ್ಮ ಬಹುದೊಡ್ಡ ಸಂತಜೀವಿ. ಅವಳ ಜೀವನ ಸಿದ್ಧಿ, ವ್ಯಕ್ತಿತ್ವ ಪರಿಣಿತಿ ಹಾಗೂ ಕವಿತಾ ಪಾಂಡಿತ್ಯ ಸಹಜ ಸಾಹಿತ್ಯ ಸೃಷ್ಟಿಗೆ ಪ್ರೇರಣೆ ನೀಡಿದೆ.

ಹೆಳವನಕಟ್ಟೆ ಗಿರಿಯಮ್ಮ ತನ್ನ ಕಾಲದಲ್ಲೇ ಪವಾಡ ಪುರುಷಳಾಗಿದ್ದಳು. ಅನೇಕ ಭಕ್ತರಿಂದೊಡಗೂಡಿ ಆ ಚೇತನಗಳಿಗೆ ಭಕ್ತಿರಸವನ್ನು ಮನದಟ್ಟು ಮಾಡಿ ಆ ಭಕ್ತರು ಕೊಟ್ಟ ಅಪಾರ ದಾನವನ್ನು ಸದ್ವಿನಿಯೋಗ ಮಾಡಿದ ಪುಣ್ಯಜೀವಿ ಆಕೆ. ಹೆಳವನಕಟ್ಟೆ ಗಿರಿಯಮ್ಮ ಕೊಮ್ಮಾರಘಟ್ಟಿಯಲ್ಲಿ ಹನುಮಂತದೇವರಗುಡಿ ಕಟ್ಟಿಸಿದಳೆಂದು ಹೇಳಲಾಗಿದೆ. ಅಲ್ಲಿ ರಥೋತ್ಸವವಾಗುವ ಶ್ರಾವಣ ಶುದ್ಧ ಪಂಚಮಿಯ ದಿನದಂದೇ ಆಕೆ ಶೀರಿಕೊಂಡಳು. ಆಕೆಯ ಹೆಸರಲ್ಲಿ ಹರಕೆ ಹೊತ್ತುಕೊಳ್ಳುವ ಪದ್ಧತಿ ಇಂದಿಗೂ ಇದೆ.

ಹೆಳವನಕಟ್ಟೆ ಗಿರಿಯಮ್ಮ ಅನೇಕ ಪವಾಡಗಳನ್ನು ಮಾಡಿದಳೆಂದು ಐತಿಹ್ಯಗಳು ಹೇಳುತ್ತವೆ. ಶ್ರೀರಂಗನಾಥಸ್ವಾಮಿಯ ಬೆರಳ ಉಂಗುರ ಕಾಣೆಯಾದಾಗ ಗುಬ್ಬಿಯ ಮೂಲಕ ಅದನ್ನು ಮರಳಿ ಪಡೆದದ್ದು; ಆ ಮೃತ ಶಿಶುವನ್ನು ಬದುಕಿಸಿದ್ದು; ಕುರುಡ ಬಾಲಕನಿಗೆ ದೃಷ್ಟಿದಾನ ಮಾಡಿದ್ದು; ಭೀಕರ ಬರಗಾಲದ ಸಂದರ್ಭದಲ್ಲಿ ಕೀರ್ತನೆ ರಚಿಸಿ ಸ್ವತಃ ಹಾಡಿ ಮಳೆ ತರಿಸಿದ್ದು; ಮೊದಲಾದ ಪ್ರಸಂಗಗಳ ಉಲ್ಲೇಖವಿದೆ. ತಾನೇ ರಂಗವಲ್ಲಿ ಬಿಡಿಸಿ ದೇವರನ್ನ ಹಾಡುತ್ತಾ ಕುಣಿಯುತ್ತಾ ದೇವರ ವಿವಿಧ ರೂಪಗಳನ್ನು ಜನರ ಮನದಲ್ಲಿ ಬೇರೂರುವಂತೆ ಮಾಡಿದ ಈಕೆಗೆ ಶ್ರೀಹರಿ ಮಗುವಾಗಿ ದರ್ಶನವಿತ್ತನೆಂದು ಹೇಳಲಾಗಿದೆ. ಈ ಪವಾಡ ಕಥೆಗಳಿಗೆ ಹೊಂದಿಕೊಂಡಂತೆ ಕೆಲವೊಂದು ಕೀರ್ತನೆಗಳೂ ಇವೆ. ಗುಬ್ಬಿಯ ಮೂಲಕ ರಂಗನಾಥಸ್ವಾಮಿಯ ಉಂಗುರ ಮರಳಿ ಪಡೆದಿದ್ದ ಬಗ್ಗೆ ಈ ಕೀರ್ತನೆ ಹೀಗೆ ನುಡಿಯುತ್ತದೆ.

"ಹೊನ್ನು ತಾ ಗುಬ್ಬಿ ಹೊನ್ನು ತಾ
ಚಿನ್ಮಯ ಮೂರುತಿ ಚೆಲುವ ರಂಗನ ಕೈಗೆ
ಹೊನ್ನು ತಾ ಗುಬ್ಬಿ ಹೊನ್ನು ತಾ..........

ಆಗಮವನು ತಂದು ಜಗಕಿತ್ತ ಕೈಗೆ
ಸಾಗರವನು ಮಥಿಸಿ ಸುಧೆ ತಂದ ಕೈಗೆ
ತೂಗಿ ಮಾತಾಡುವ ಸ್ಥೂಲಕಾಯದ ಕೈಗೆ
ಸಾಗರಪತಿ ನರಸಿಂಹನ ಕೈಗೆ ಕೈಗೆ ಕೈಗೆ .... ತಾ ಗುಬ್ಬಿ ॥

ಕುರುಡ ಬಾಲಕನಿಗೆ ದೃಷ್ಟಿದಾನ ಮಾಡಿದ ಪ್ರಸಂಗ ಕುರಿತಂತೆ ಅವಳ ಕೀರ್ತನೆಯೊಂದು ಈ ರೀತಿ ಸಾಕ್ಷ್ಯ ನೀಡುತ್ತದೆ:

"ತೋರಬಾರದೆ ನಿಮ್ಮ ಚರಿತೆಯನರೊಳು ನಗೆಗೇಡು ಮಾಡದೆ
ನೀನೆ ಗತಿಯೆಂದು ಬಂದ ಭಕ್ತನ ಕಣ್ಣುನವ ತಿದ್ದಿ ನಿಜವ ತೋರಿಸಯ್ಯ
ದೀನದಯಾಳೋ ಹೆಳವನಕಟ್ಟೆರಂಗಯ್ಯ
ದಾನಿ ಎನ್ನೊಡಯ ದೊಡ್ಡವನೆಂದು ಹೊಗಳುವೆ....."

ಒಮ್ಮೆ ಆ ಪ್ರಾಂತ್ಯದಲ್ಲಿ ಭೀಕರ ಬರಗಾಲ ಬಂದು ಹೆಳವನಕಟ್ಟೆ ಗಿರಿಯಮ್ಮ ತಾನು ರಚಿಸಿದ ಕೀರ್ತನೆಯನ್ನು ಹಾಡಿದ ನಂತರ ಮಳೆಯಾಯಿತೆಂಬ ಪ್ರತೀತಿಯಿದೆ. ಅದಕ್ಕೆ ಪೂರಕವಾಗಿದೆ ಅವಳ ಈ ಮಾತು.

"ಮಳೆಯ ದಯಮಾಡೋ ರಂಗಯ್ಯ ನಿನ್ನ ಕರುಣ ತಪ್ಪಿದರೆ ಉಳಿಯದು ಲೋಕ
ಸಂದು ಹೋದನು ಜೇಷ್ಠ ಆಷಾಢ ಶ್ರಾವಣ ಬಂದಿದೆ ಭಾದ್ರಪದ ಮಾಸವೀಗ!
ಇಂದು ಪುರಂದರಗೆ ಹೇಳಿ ದೃಷ್ಟಿಯ ತರಿಸೋ
ಸಂದೇಹವ್ಯಾಕೆ ಹೆಳವನಕಟ್ಟೆ ರಂಗ.........."

ಬಹುಮುಖ ಪ್ರತಿಭೆಯ ಹೆಳವನಕಟ್ಟೆ ಗಿರಿಯಮ್ಮನ ಕೊಡುಗೆಯನ್ನು ಇನ್ನೂ ಸಮರ್ಥವಾಗಿ ಅಧ್ಯಯನ ಮಾಡಬೇಕಾಗಿದೆ. ಡಾ. ತ.ಸು. ಶ್ಯಾಮರಾಯರು ಆಕೆಯ ಕೊಡುಗೆಯನ್ನು ಹೀಗೆ ಬಣ್ಣಿಸುತ್ತಾರೆ;

"ಸಮಕಾಲೀನ ಸಮಾಜದ ಆಚಾರ--ವಿಚಾರ, ನಂಬಿಕೆ, ಪದ್ಧತಿಗಳು ಈಕೆಯ ಕೃತಿಯಲ್ಲಿ ಸಂದರ್ಭೋಚಿತವಾಗಿ ಬಂದಿದೆ. ಸಾಮಾಜಿಕ ಪ್ರಜ್ಞೆಯಿರುವ ಹರಿದಾಸ ಪಂಥದಲ್ಲಿ ಈಕೆ ಅತ್ಯಂತ ಪ್ರಮುಖಳು."

——— * ———

ಚಿತ್ರದುರ್ಗದ ವೀರ ವನಿತೆ ಓಬವ್ವ

ಬಿ.ಎಲ್.ವೇಣು

ಚಿತ್ರದುರ್ಗ ಅಂದರೆ ಜನತೆಯ ಕಂಗಳ ಮುಂದೆ ಮೂಡಿ ಬರುವ ವ್ಯಕ್ತಿಗಳು ಗಂಡುಗಲಿ ಮದಕರಿನಾಯಕ ಮತ್ತು ವೀರವನಿತೆ ಒನಕೆ ಓಬವ್ವ. ಸುಮಾರು ಹದಿಮೂರು ಮಂದಿ ಪಾಳೆಗಾರರು ದುರ್ಗವನ್ನಾಳಿದರೂ ನಾಡಿನ ಜನರ ಹೃದಯದಲ್ಲಿ ಅಚ್ಚಳಿಯದೆ ಉಳಿದವರು ಮಾತ್ರ ಇಬ್ಬರೆ. ದುರ್ಗದ ಏಳು ಸುತ್ತಿನ ಕೋಟೆಯನ್ನು ನೋಡಲು ಬಂದವರು ಒನಕೆ ಕಿಂಡಿ ನೋಡದೆ ಹೋಗುವುದೇ ಇಲ್ಲವೆಂದರೆ ಅತಿಶಯೋಕ್ತಿಯಾಗದು. ಮೇಲುದುರ್ಗದಲ್ಲಿ ಒನಕೆ ಕಿಂಡಿಯು ಪಶ್ಚಿಮದ ಕಡೆ ತಗ್ಗಿನಲ್ಲಿದ್ದು, ನಯನಮನೋಹರ ತಾಣವಾಗಿದೆ. ತಣ್ಣೀರು ದೋಣಿಯನ್ನು ದಾಟಿದ ನಂತರ ಬೃಹತ್ ಬಂಡೆಕಲ್ಲುಗಳ ಚಾವಣಿ ದಾಟಿ ಮುಂದೆ ಸಾಗಿದರೆ ಒಂದಷ್ಟು ಮೆಟ್ಟಿಲುಗಳು ಎದುರಾಗುತ್ತವೆ. ಪಕ್ಕದಲ್ಲೇ ಓಬವ್ವನ ಮನೆಯೆಂದು ಗುರುತಿಸಲಾಗಿರುವ ಕಲ್ಲಿನ ಮನೆ, ಹಲವು ಗಜಗಳ ದೂರದಲ್ಲಿ ಬಂಡೆಗಳಡಿಯ ಕಳ್ಳಗಂಡಿ ಆಸಕ್ತರನ್ನು ರೋಮಾಂಚನಗೊಳಿಸುತ್ತದೆ. ಮಳೆಗಾಲದಲ್ಲಿ ನೀರು ಹರಿವುದರಿಂದ ಪ್ರವಾಸಿಗರು ಈ ತಂಪುದಾಣದಲ್ಲೇ ಕೂತು ಇತಿಹಾಸದ ಬಗ್ಗೆ ಕನಸುತ್ತಾ, ಕನವರಿಸುತ್ತಾ ತಂದ ಬುತ್ತಿಯ ಗಂಟುಗಳನ್ನು ಬಿಚ್ಚುವುದುಂಟು. ಓಬವ್ವನ ಒನಕೆ ಕಿಂಡಿ ನೋಡಿದ ನಂತರ ಮತ್ತೇನಿದೆ? ಎಂದು ಬಹುತೇಕ ಪ್ರವಾಸಿಗರು ಬಂದ ದಾರಿ ಹಿಡಿವುದೇ ಹೆಚ್ಚು. ಇಂದಿಗೂ ಪ್ರವಾಸಿಗರನ್ನು ಓಬವ್ವ ಸೆಳೆವ ಪರಿ ಇಂತದ್ದು.

ಇತಿಹಾಸದಲ್ಲಿ ಇದ್ದಳೋ, ಇಲ್ಲವೋ, ಆದರೆ ಈಕೆಯ ಬಗ್ಗೆ ಹಾಡು, ಹಸೆ, ಲಾವಣಿ, ಜಾನಪದ ಗೀತೆಗಳಿವೆ. ಇದೊಂದು ಕಾಲ್ಪನಿಕ ಘಟನೆ. ಸಾಕಷ್ಟು ಸ್ಪಷ್ಟ ಪುರಾವೆಗಳಿಲ್ಲವೆಂದು ಇತಿಹಾಸ ಸಂಶೋಧಕರು ಎಷ್ಟೇ ತುತ್ತೂರಿ ಊದಿದರೂ ದುರ್ಗದವರಿಗೆ ಅವರ ಸಂಶೋಧನೆ ಬಗ್ಗೆಯೇ ಅನುಮಾನ. ಓಬವ್ವನ ಬಗೆಗೆ ಇನ್ನಿಲ್ಲದ ಅಭಿಮಾನ. ಓಬವ್ವಳ ವಂಶಸ್ಥರೆಂದು ದುರ್ಗದ ರುದ್ರೇಶ್ ಪೂಜಾರ್ (ಮಾಜಿ ನಗರಸಭಾ ಸದಸ್ಯರು) ಹೆಮ್ಮೆಯಿಂದ ಬೀಗುತ್ತಿದ್ದರು. ಈಗವರು ದಿವಂಗತರು. ಅಂತೆಯೇ ಮೈಸೂರುವಾಸಿ ಪ್ರೊ. ಎ.ಡಿ.ಕೃಷ್ಣಯ್ಯ ಸಹ ಈ ರೀತಿಯಲ್ಲಿ ಬೀಗುವುದುಂಟು. ಅದೇನೆ ಇರಲಿ, ಆಕೆಯ ವಂಶಸ್ಥರ ಬಗ್ಗೆ ಈವರೆಗೆ ತಲೆಕೆಡಿಸಿಕೊಂಡವರಿಲ್ಲ. ಓಬವ್ವ ಕೋಟೆಯನ್ನು ರಕ್ಷಿಸಿದ ತಾಯಿ, ಅಷ್ಟೇ ಅಲ್ಲ ದುರ್ಗದವರ ಧೈರ್ಯ, ಸಾಹಸ, ಅಭಿಮಾನ, ಸ್ವಾಭಿಮಾನದ ಸಂಕೇತವೆಂಬುದರಲ್ಲಿ ಎರಡು ಮಾತಿಲ್ಲ.

ಪ್ರೊ. ಎ.ಡಿ. ಕೃಷ್ಣಯ್ಯನವರು 'ಭಾರತದ ಧೀಮಂತ ಮಹಿಳೆ ಒನಕೆ ಓಬವ್ವ' ಎಂದು ಆಕೆಯ ಇತಿಹಾಸ ಸಾರುವ ಪುಟ್ಟ ಪುಸ್ತಕ ಒಂದನ್ನು ಹಿಂದೆಯೇ ಹೊರತಂದಿದ್ದಾರೆ. ನಮ್ಮಂತಹ ಬರಹಗಾರರಿಗೆ ಇದೇ ಚಾರಿತ್ರಿಕ ದಾಖಲೆ. ನಾನು 'ಗಂಡುಗಲಿ ಮದಕರಿ ನಾಯಕ' ಕಾದಂಬರಿ ಬರೆದಾಗ ಆ ಕಿರು ಪುಸ್ತಕದಲ್ಲಿನ ವಿವರಗಳನ್ನು ಕೃತಜ್ಞತೆಯಿಂದ ಬಳಸಿಕೊಂಡಿದ್ದೇನೆ. ಪ್ರೊ. ಕೃಷ್ಣಯ್ಯ ಸಹ ಹಿಂದೆ ನಡೆದ ಎಂದು ಹೇಳಲಾಗುವ ಘಟನೆಯನ್ನು ತುಲನಾತ್ಮಕವಾಗಿ ವಿವೇಚಿಸದೆ ನಾವು ನೀವೆಲ್ಲಾ ಪ್ರೈಮರಿ ತರಗತಿಯಲ್ಲಿ ಓದಿದ ಓಬವ್ವನ ಪಾಠವನ್ನೇ ಬಳಸಿಕೊಂಡಿದ್ದಾರೆ.

"ನಾಗರಹಾವು" ಚಿತ್ರದಲ್ಲಿ ಅಂತೆಯೇ ಚಿತ್ರಿಸಲಾಗಿದೆ. ಓಬವ್ವ ನೂರಾರು ತಲೆಗಳನ್ನು ಒಡೆದದ್ದು ಇತಿಹಾಸವೆ? ಸ್ಪಷ್ಟ ಪುರಾವೆಗಳಿಲ್ಲವೆಂದು ನಮ್ಮಲ್ಲಿ ಅನುಮಾನಿಸುವ ತಜ್ಞರಿದ್ದಾರೆ. ಅನುಮಾನಿಸುವವರಿಗೆ ತಾಳೆ ಹಾಕುವಂತೆಯೇ ಜನಜನಿತವಾದ ಆ ಕಥೆಯ ಸಂಕ್ಷಿಪ್ತ ರೂಪ ಹೀಗಿದೆ:

ಓಬವ್ವ ತನ್ನ ಗಂಡ ಮದ್ದಹನುಮಪ್ಪನಿಗೆ ಊಟಕ್ಕಿಟ್ಟು, ಕುಡಿಯಲು ನೀರಿಲ್ಲದಿರುವುದನ್ನು ಗಮನಿಸಿ, ನೀರು ತರಲು ಹೋಗುವಳು, ಆಗ ಕಳ್ಳಗಂಡಿಯ ಬಳಿ ಶತ್ರುಗಳ ಸದ್ದು ಕೇಳಿಬರುವುದು. ತಟ್ಟನೆ ಮನೆಗೆ ಹಿಂದಿರುಗಿದ ಓಬವ್ವ ನೆಮ್ಮದಿಯಿಂದ ಊಟ ಮಾಡುತ್ತಿರುವ ಗಂಡನಿಗೆ ವಿಷಯ ತಿಳಿಸಿದರೆ ಊಟ ಮಾಡದೆ ಮಧ್ಯದಲ್ಲೇ ಎದ್ದುಬಿಡುತ್ತಾನೆ. ತನ್ನ ಸತಿಧರ್ಮಕ್ಕೆಲ್ಲಿ ಊನವಾಗುತ್ತದೋ ಎಂದಳುಕಿದ ಆಕೆ, ತಾನೇ ಒನಕೆ ಎತ್ತಿಕೊಂಡು ಹೋಗಿ ಶತ್ರುಗಳ ಸಂಹಾರ ಮಾಡುತ್ತಾಳೆ. ನಂತರ ಎದ್ದು ಬಂದ ಹನುಮಪ್ಪ ರಣದುರ್ಗಿ ಅವತಾರ ತಾಳಿರುವ ಆಕೆಯನ್ನು ಹೆಣವಾಗುತ್ತಿರುವ ಶತ್ರುಗಳನ್ನು ನೋಡಿ ಕಹಳೆ ಊದುತ್ತಾನೆ. ಸೇನೆ ಬರುತ್ತದೆ. ಓಬವ್ವ ಪ್ರಾಣಾರ್ಪಣೆ ಮಾಡುತ್ತಾಳೆ ಇತ್ಯಾದಿ, ಇತ್ಯಾದಿ.

ಹೀಗೇ ಘಟನೆ ನಡೆದಿರಲು ಸಾಧ್ಯವೆ?

ಇತಿಹಾಸ ಯಾರೂ ನೋಡಿದ್ದಲ್ಲ, ಕೇಳಿದ್ದು. ಹೀಗೆ ನಡೆದಿರಬಹುದೆಂದು ಪಟ್ಟು ಹಿಡಿದರೆ ಹಲವು ಪ್ರಶ್ನೆಗಳು ಏಳುತ್ತವೆ. ಶತ್ರುಗಳು ಕೋಟೆಗೆ ಲಗ್ಗೆ ಇಟ್ಟಾಗ ಗಂಡನಿಗೆ ವಿಷಯ ತಿಳಿಸದೆ ಸತಿ ಧರ್ಮವನ್ನು ಮೆರೆವುದು ಎಷ್ಟು ಸರಿ? ಕುಡಿಯಲು ನೀರು ಇಲ್ಲದೆ ಊಟಕ್ಕಿಟ್ಟಳೆ? ಸತಿ ಧರ್ಮಕ್ಕಿಂತಲೂ ಮಣ್ಣಿನ ಋಣ ಹೆಚ್ಚಲ್ಲವೆ? ಕೋಟೆಗಿಂತ ಗಂಡನ ಊಟವೇ ಹೆಚ್ಚಾಯಿತೆ? ಕೋಟೆಯ ರಕ್ಷಣೆ ಮುಖ್ಯವೊ, ಊಟವೊ? ಇದೆಲ್ಲಾ ಒತ್ತಟ್ಟಿಗಿರಲಿ, ಓಬವ್ವ ನೂರಾರು ಜನಗಳ ತಲೆಯೊಡೆದು ಉರುಳಿಸುವಾಗ ಸಾಯುವವರ ನರಳಾಟ, ಚೀರಾಟ, ಆಕ್ರಂದನ ಹಲವು ಗಜಗಳಷ್ಟೆ ದೂರದ (ಪ್ರೊ. ಕೃಷ್ಣಯ್ಯನವರು ತಮ್ಮ ಪುಸ್ತಕದಲ್ಲಿ ಗುರುತಿಸಿರುವ ಓಬವ್ವನ ಮನೆಯೆಂಬ ಭಾವಚಿತ್ರದ ಪ್ರಕಾರ) ಮನೆಯಲ್ಲಿ ಊಟಕ್ಕೆ ಕೂತ ಹನುಮಪ್ಪನಿಗೆ ಕೇಳಲಿಲ್ಲವೆ? ಆತನಿಗೇನು ಕಿವುಡೆ? ಇದನ್ನು ಕಡೆಗಾಣಿಸಿದರೂ ಮತ್ತೊಂದು ಪ್ರಶ್ನೆ ಕೆಣಕುತ್ತದೆ. ನೂರಾರು ಶತ್ರುಗಳ ತಲೆಯೊಡೆಯುವವರೆಗೂ ಹನುಮಪ್ಪ ಊಟ ಮಾಡುತ್ತಲೇ ಇದ್ದನೆ? ಇಂತಹ ಅನುಮಾನಗಳು ಕಾಡುವಾಗ ಸಂದುಹೋದ ಘಟನೆಯ ಬಗ್ಗೆಯೆ ಸಂಶಯ ಮೂಡಿಬಿಡುತ್ತದೆ. ಈ ಅನುಮಾನಗಳನ್ನು ನಾನು ಕೃಷ್ಣಯ್ಯನವರಿಗೆ 1981ರಲ್ಲೇ ಕೇಳಿದ್ದುಂಟು. ನಾನೇಕೆ ಹೀಗೆಲ್ಲಾ ಕೇಳಿದೆ. ಅವರೇಕೆ ನನ್ನ ಬಳಿ ಬಂದಿದ್ದರು ಎಂಬುದನ್ನು ಹೇಳಹೊರಟರೆ ಅದು ಮತ್ತೊಂದು ಲೇಖನವಾದೀತು. ಆ ಮಾತು ಇರಲಿ. ಪ್ರೊ. ಕೃಷ್ಣಯ್ಯ ಕೂಡ ಇಂತಹ ಪ್ರಶ್ನೆಗಳ ಬಗ್ಗೆ ಅಸಹಾಯಕರೆ. ಅವರಿಗೆ ತೋಚಿದ್ದನ್ನು ಬರೆದಿದ್ದಾರೆ. ಸಿಕ್ಕಷ್ಟು ಐತಿಹಾಸಿಕ ಸಂಗತಿಗಳನ್ನು ದಾಖಲಿಸಿ ಉಪಕರಿಸಿದ್ದಾರೆನ್ನಿ.

ಆದರೆ ಈ ಬಗ್ಗೆ ಎಲ್ಲಾ ಯೋಚಿಸಿ ತಲೆಕೆಡಿಸಿಕೊಂಡ ನಾನು 1981ರಲ್ಲೇ ಬರೆದ 'ಗಂಡುಗಲಿ ಮದಕರಿ ನಾಯಕ' ಐತಿಹಾಸಿಕ ಕಾದಂಬರಿಯಲ್ಲಿ ಮೇಲ್ಕಂಡ ಪ್ರಕರಣವನ್ನು ತಾರ್ಕಿಕವಾಗಿ ಚಿಂತಿಸಿ ಬೇರೆಯದೇ ರೂಪ ನೀಡಿದ್ದೇನೆ. ಆಕೆಯ ಪಾತ್ರವನ್ನು ಕಾದಂಬರಿಯಲ್ಲಿ ಮೊದಲಿನಿಂದಲೂ ಬೆಳೆಸಿದ್ದೇನೆ. ನಾಯಕನಿಗಿರುವಷ್ಟೇ ಪ್ರಾಶಸ್ತ್ಯ ಓಬವ್ವಗೂ ಇದೆ. ಅದರ ಸಂಕ್ಷಿಪ್ತ ರೂಪ ಹೀಗಿದೆ:

ಓಬವ್ವೆ ಅಡುಗೆ ಮಾಡಿಟ್ಟು ಕೋಟೆ ಕಾವಲಿಗೆ ಹೋದ ಗಂಡನ ಬರುವಿಕೆಗಾಗಿ ಕಾದಿರುತ್ತಾಳೆ. ಯುದ್ಧದ ದಿನಗಳದು. ಯಾವಾಗ ಬರುವನೋ ನಿರ್ದಿಷ್ಟವಾಗಿ ಹೇಳುವಂತಿಲ್ಲ. ಬೇಸತ್ತ ಆಕೆ ಪಕ್ಕದ ಮನೆಯಿಂದ ತಂದ ಒನಕೆಯನ್ನು ಕೊಟ್ಟು ಬರಲು ಒನಕೆ ಹಿಡಿದು ಸಾಗುತ್ತಾಳೆ. ಕಳ್ಳಗಂಡಿ ಬಳಿ ಸದ್ದು. ಶತ್ರು ನುಸುಳಿ ಬರುವ ಹಿಂಡನ್ನು ಕಂಡು ವೀರಗಚ್ಚೆ ಹಾಕಿ ನಿಂತು ಸದೆ ಬಡಿದು ಹೆಣಗಳ ಬಣವೆ ಒಟ್ಟುತ್ತಾಳೆ. ಈ ಸಂಹಾರ ಸಂದರ್ಭದಲ್ಲೆ ಬಂದ

ಹನುಮಪ್ಪ ನಿಬ್ಬೆರಗಾಗಿ ಗಾಬರಿಗೊಂಡು ಕಹಳೆ ಊದುತ್ತಾನೆ. ಸೇನೆ ಬರುತ್ತದೆ. ಅಷ್ಟರಲ್ಲಿ ಶತ್ರು ಸೈನಿಕನಿಗೆ ಓಬವ್ವ ಬಲಿಯಾಗುತ್ತಾಳೆ. ಅಂದಿನ ಯುದ್ಧದಲ್ಲಿ ಆಕೆಯ ಸಾಹಸದಿಂದಾಗಿ ದುರ್ಗಕ್ಕೆ ಜಯವಾಗುತ್ತದೆ ಇತ್ಯಾದಿ, ಇತ್ಯಾದಿ.

ನಾನು ಚಿತ್ರಿಸಿರುವ ರೀತಿಯ ಬಗ್ಗೆ ಈವರೆಗೆ ಇತಿಹಾಸ ತಜ್ಞರಾಗಲಿ, ದುರ್ಗದವರಾಗಲಿ, ಓದುಗರಾಗಲಿ ಅಪಸ್ವರವೆತ್ತಲಿಲ್ಲ. ಓಬವ್ವ ನೂರು ಜನರ ತಲೆಯೊಡೆದಳೊ, ಮೂರೇ ಜನರ ತಲೆಯೊಡೆದಳೊ, ಅದು ಮುಖ್ಯವಲ್ಲ. ಆಕೆ ತೋರಿದ ಸಮಯಪ್ರಜ್ಞೆ, ದಿಟ್ಟತನ ರಾಜನ ಮೇಲಿನ ಅಭಿಮಾನ, ಗೌರವ, ಕೋಟೆಯ ಮೇಲೆ ಆಕೆಗಿದ್ದ ಪ್ರೀತಿಯ ದ್ಯೋತಕವಲ್ಲವೆ? ಓಬವ್ವ ನಾಯಕರ ಹೆಣ್ಣೆಂದು ಬಹುಕಾಲದವರೆಗೂ ನಂಬಿದ್ದುಂಟು. ಓಬವ್ವ ಚಲವಾದಿಗರ ಹೆಣ್ಣುಮಗಳು. ತವರೂರು ಗುಡೇಕೋಟೆ.

ಇಲ್ಲಿ ಮತ್ತೊಂದು ಹೇಳಬೇಕಿದೆ. ಓಬವ್ವ ಹೋರಾಟದಲ್ಲಿ ಸಾವನ್ನಪ್ಪಲಿಲ್ಲ. ಆ ದುರ್ಘಟನೆಯ ನಂತರ ಬುದ್ಧಿಭ್ರಮಣೆಯಾಗಿ ದುರ್ಗದಲ್ಲಿ ಅಲೆಯುತ್ತಿದ್ದಳೆಂದೇ ಕೆಲವು ಇತಿಹಾಸಕಾರರು ಅಭಿಪ್ರಾಯಪಡುವುದುಂಟು. ನಾನು ಕಾದಂಬರಿ ಬರೆದ ವರ್ಷದ ನಂತರ ಮದಕರಿ ನಾಯಕನನ್ನೇ ವಸ್ತುವನ್ನಾಗಿಟ್ಟುಕೊಂಡು 'ದುರ್ಗಾಸ್ತಮಾನ' ರಚಿಸಿದ ಹಿರಿಯ ಸಾಹಿತಿ ತ.ರಾ.ಸು. ನನ್ನಂತೆಯೇ ಓಬವ್ವೆಯ ಪ್ರಕರಣವನ್ನು ಚಿತ್ರಿಸಿದ್ದಾರೆ. ಗಂಡನಿಗೆ ಊಟಕ್ಕಿಟ್ಟು, ನೀರು ತರಲು ಆಕೆ ಹೋಗುವುದಿಲ್ಲ. ಅಡುಗೆ ಮಾಡಿಟ್ಟು ಮಗುವನ್ನು ಮಲಗಿಸಿ ಗಂಡ ಬರುವುದರೊಳಗೆ ನೀರು ತರೋಣವೆಂದು ಹೋಗುತ್ತಾಳೆ. ಕಳ್ಳಗಂಡಿಯ ಬಳಿ ಶತ್ರುಗಳ ಸದ್ದು ಕೇಳಿ ಮನೆಗೆ ಹಿಂದಿರುಗಿದ ಆಕೆ ಒನಕೆ ಹಿಡಿದು ಬಂದು ಶತ್ರುಗಳ ಸದೆಬಡಿಯುತ್ತಾಳೆ.

ಚಿತ್ರದುರ್ಗದ ಚರಿತ್ರೆಯಲ್ಲಿ ನಡೆದುಹೋಗಿದೆ ಎಂದು ಬಣ್ಣಿಸಲಾಗುವ ಸದರಿ ಪ್ರಕರಣವನ್ನು ಅನುಮಾನಿಸುವುದಕ್ಕಿಂತ ಅಭಿಮಾನಿಸುವುದು ಹೆಚ್ಚು ಔಚಿತ್ಯವೆನಿಸುತ್ತದೆ.

ಘಟನೆ ಹೇಗೇ ನಡೆದಿರಲಿ ತನ್ನ ದೇಶ ಮತ್ತು ಜನಗಳನ್ನು ಪೋಷಿಸಲು, ಒಬ್ಬ ಸಾಮಾನ್ಯ ಹೆಣ್ಣೂ ಕೂಡ, ಸಂದರ್ಭ ಬಂದಾಗ ಯುದ್ಧಕ್ಕೆ ಸನ್ನದ್ಧಳಾಗಿ ಜಯವನ್ನು ಸಾಧಿಸಲು ಸಾಧ್ಯ ಎಂಬ ಅಂಶವನ್ನು ಈ ಕಥೆ ಹೇಳುತ್ತದೆ. ಇಂಥ ವ್ಯಕ್ತಿ ಚಿತ್ರಣ ಕಾಲ್ಪನಿಕ ಕಥೆಯಾದರೂ ಇಂದಿನವರಿಗೂ ಮಾದರಿಯೇ ಸರಿ.

——— * ———

ಭಾರತ ಸ್ವಾತಂತ್ರ್ಯ ಹೋರಾಟದ ಪ್ರಥಮ ಮಹಿಳಾ ಮಣಿ ಕಿತ್ತೂರು ಚೆನ್ನಮ್ಮಾಜಿ

ಲೀಲಾದೇವಿ ಆರ್.ಪ್ರಸಾದ್

ಭಾರತದ ಸ್ವಾತಂತ್ರ ಸಂಗ್ರಾಮ ಇತಿಹಾಸದಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಹೇಗೆ ಚಿತ್ರಿತವಾಗಿರುವಳೋ ಅದೇ ತೆರನಲ್ಲಿ ಕರ್ನಾಟಕ ವೀರವನಿತೆ ಕಿತ್ತೂರು ರಾಣಿ ಚೆನ್ನಮ್ಮ ಸ್ವಾತಂತ್ರದ ಅರುಣೋದಯವನ್ನು ಮಾಡಿಸಿದ ಭಾರತೀಯ ಪ್ರಥಮ ಕನ್ನಡತಿಯಾಗಿದ್ದಾಳೆ.

ಬೆಳಗಾವಿ ಜಿಲ್ಲೆಯ ಕಾಕತೀಯಲ್ಲಿ ಕಾಕತಿ ದೇಸಾಯರ ಮಗಳಾಗಿ ಹುಟ್ಟಿ ಅದೇ ಜಿಲ್ಲೆಯ ಕಿತ್ತೂರ ಸಂಸ್ಥಾನದ ದೇಸಾಯಿ ಮಲ್ಲಸರ್ಜನ ಕೈಹಿಡಿದ ವೀರವನಿತೆ ಚೆನ್ನಮ್ಮ 1772ರಿಂದ 1816ರವರೆಗೆ ರಾಜ್ಯವಾಳಿದ ಮಲ್ಲಸರ್ಜ ದೇಸಾಯಿಯು, ಕಿತ್ತೂರನ್ನು ಮಾದರಿ ನಾಡಾಗಿಸಲು ಯೋಚಿಸಿದ್ದು ಹಾಗೂ ಎರಡನೇ ಹೆಂಡತಿಯಾಗಿ ಪಡೆದದ್ದು ಚೆನ್ನಮ್ಮಳನ್ನು. ಕಿತ್ತೂರು ಸಂಸ್ಥಾನದ ಅರಸು ಮನೆತನ 1585ರಿಂದ 1824ರವರೆಗೆ 239 ವರ್ಷಗಳ ಕಾಲ ತನ್ನತನವನ್ನು ಕಾಯ್ದುಕೊಂಡು ಆಳ್ವಿಕೆ ನಡೆಸಿದೆ. ಹನ್ನೆರಡು ಜನ ಅರಸರು ಈ ಸಂಸ್ಥಾನವನ್ನು ಆಳಿದರು, ಕೊನೆಯವಳೇ ರಾಣಿ ಚೆನ್ನಮ್ಮ.

ಕಿತ್ತೂರು ನಾಡಿನ ಪ್ರತಿ ಕಲ್ಲೂ ಸ್ವಾತಂತ್ರದ ಜಪವನ್ನು ಉಸಿರುತ್ತಿದ್ದಿತು. ಕಿತ್ತೂರನ್ನು ಆಕ್ರಮಿಸಬೇಕೆಂಬ ಮರಾಠಾ ಪೇಶ್ವೆಗಳ ಪಟವರ್ಧನರ ಆಸೆ ಎಂದಿಗೂ ಕೈಗೂಡಿರಲಿಲ್ಲ. 40 ವರ್ಷಗಳ ದೀರ್ಘಕಾಲ ಸತತವಾಗಿ ದಾಳಿ ಮಾಡಿದರೂ ಕಿತ್ತೂರನ್ನು ಅವರು ವಶಪಡಿಸಿಕೊಳ್ಳಲಾಗಿರಲಿಲ್ಲ. ಹೈದರ್ ಟಿಪ್ಪು ಅವರ ಯತ್ನವೂ ಯಾವ ಫಲವನ್ನು ನೀಡಿರಲಿಲ್ಲ. ಕಿತ್ತೂರಿನತ್ತ ಬ್ರಿಟಿಷರು ಕಣ್ಣು ಹಾಕಲು ಒಂದು ಸನ್ನಿವೇಶ ನಿರ್ಮಿತವಾಯಿತು. 1772ರಲ್ಲಿ ಪಟ್ಟವೇರಿದ ಮಲ್ಲಸರ್ಜ ದೇಸಾಯಿ, ತನ್ನ ಕಾಲದಲ್ಲಿ ಸಂಸ್ಥಾನವನ್ನು ಸರ್ವಾಂಗೀಣವಾಗಿ ಬೆಳೆಸಲು ಹಾಗೂ ಉಳಿಸಲು ಯತ್ನಿಸಿದ್ದ. ಅವನ ಕಕ್ಷೆಯಲ್ಲಿ 285 ಗ್ರಾಮಗಳಿದ್ದವು. ಸಮರ್ಥ ಅರಸನೆಂದೂ "ಪ್ರತಾಪದೀಪ" ಎಂಬ ಬಿರುದನ್ನು ಆತ ಪಡೆದಿದ್ದ. ಮಲ್ಲಸರ್ಜ ದೇಸಾಯಿ ತನ್ನ ಆಳ್ವಿಕೆಯ ಕಾಲದಲ್ಲಿ ಎರಡು ಬಾರಿ ಬಂಧಿತನಾಗಿ ಸೆರೆಮನೆಯ ವಾಸವನ್ನು ಅನುಭವಿಸಬೇಕಾಯಿತು. ಟಿಪ್ಪುವಿನ ದಾಳಿಯಲ್ಲಿ ಒಮ್ಮೆ, ಇನ್ನೊಮ್ಮೆ ಧೀರ್ಘಕಾಲ ಎರಡನೇ ಬಾಜೀರಾಯನ ಕ್ರೋಧಕ್ಕೆ ತುತ್ತಾಗಿ. ಈ ಎರಡೂ ಬಾರಿಯೂ ತುರಂಗವಾಸವನ್ನು ಅನುಭವಿಸಿ ಬಿಡುಗಡೆ ಹೊಂದಿಯೂ ತನ್ನ ಸಂಸ್ಥಾನವನ್ನು ಕಟ್ಟಿದ ಕೀರ್ತಿ ಮಲ್ಲಸರ್ಜನದ್ದಾಗಿತ್ತು.

ಮಲ್ಲಸರ್ಜನ ನಿಧನದ ನಂತರ ಆತನ ಹಿರಿಯ ಪತ್ನಿ ತಲ್ಲೂರು ದೇಸಗತಿಯ ರುದ್ರಮ್ಮನಿಂದ ಪಡೆದಿದ್ದ ಶಿವಲಿಂಗಸರ್ಜನನಿಗೆ ಪಟ್ಟವಾಯಿತು. ಆದರೆ ಈತ ರೋಗಪೀಡಿತನಾಗಿ 1826ರಲ್ಲಿ ಮರಣ ಹೊಂದಿದ. ಆತನಿಗೆ ಮಕ್ಕಳಿರಲಿಲ್ಲ. ಆತನ ಮಲತಾಯಿ ಮಲ್ಲಸರ್ಜನ ಎರಡನೇ ಹೆಂಡತಿಯಾಗಿದ್ದ ಚೆನ್ನಮ್ಮನಿಗೂ ಮಕ್ಕಳಿರಲಿಲ್ಲ. ಆ ಕಾರಣ ಶಿವಲಿಂಗಸರ್ಜ ದತ್ತು ಪುತ್ರನನ್ನು ಪಡೆದ. ಆದರೆ ಈ ದತ್ತು ಪಡೆದ ಪ್ರಕರಣ ಇಂಗ್ಲಿಷರ ಕಣ್ಣು ಕೆರಳಿಸಿತು. ತಮ್ಮ ಅನುಮತಿ ಇಲ್ಲದೆ ಈ ದತ್ತು ಪಡೆದರೆಂಬ ಕುಂಟು ಆರೋಪದ ಮೇಲೆ ಬ್ರಿಟಿಷರು ಕಿತ್ತೂರನ್ನು ಕಬಳಿಸುವ ಯೋಜನೆಯನ್ನು ಹಮ್ಮಿಕೊಂಡರು. ಆದರೆ ಬ್ರಿಟಿಷರ ಗುಟುರಿಗೆ ಸೊಪ್ಪು ಹಾಕದೆ ರಾಣಿ ಚೆನ್ನಮ್ಮ ತನ್ನ ಅರಸು ಮನೆತನವನ್ನು ಕಾಪಾಡಲು ಸನ್ನದ್ಧಳಾದಳು.

1924ರ ಅಕ್ಟೋಬರ್ 21ನೇ ದಿನ ಸ್ಮರಣಾರ್ಹ ದಿನ. ಬ್ರಿಟಿಷರ ಚಿಕ್ಕ ಸೈನ್ಯವನ್ನು ಸಂಧಾನದ ಹೆಸರಿನಲ್ಲಿ ಕಿತ್ತೂರಿನ ಮುಖಕ್ಕೆ ಮಸಿ ಬಳೆಯುವ ಯತ್ನ ಧಾರವಾಡದ ಕಲೆಕ್ಟರ್ ಆಗಿದ್ದ ಥ್ಯಾಕರೆಯಿಂದ ದುರಂತ ಸಾಹಸ, ಕೋಟೆಯ ಬಾಗಿಲಿಗೆ ತುಫಾಕಿಗಳನ್ನು ನಿಲ್ಲಿಸಿ ಅರವತ್ತು ನಿಮಿಷಗಳ ಎಚ್ಚರಿಕೆಯ ಅವಧಿ ಕೊಟ್ಟು ಅದನ್ನು ಸಿಡಿಸಲು ಪ್ರಯತ್ನಿಸಿದ ಥ್ಯಾಕರೆ. ಆದರೆ ದೈವ ನಿಯಾಮಕ ಬೇರೆಯಾಗಿದ್ದಿತು. ಕೋಟೆಯ ಬಾಗಿಲಿಗೆ ಆಂಗ್ಲರ ಸಿಡಿಮದ್ದು ಬಿದ್ದಿತು. ಅಂತೆಯೇ ಕಿತ್ತೂರಿನ ಸ್ವಾತಂತ್ರ್ಯಕ್ಕೆ ಕಿಚ್ಚು ಹತ್ತಿತು. ಕಿತ್ತೂರಿನ ಕೋಟೆಯ ಸ್ವಾತಂತ್ರ್ಯ ವೀರಯೋಧ ಬಾಬಾಸಾಹೇಬನ ತುಫಾಕಿಯ ಗುರಿ, ಥ್ಯಾಕರೆಗೆ ಬಿದ್ದು ಉರುಳಿದ. ಸರ್ದಾರ ಗುರುಸಿದ್ದಪ್ಪನ ವೀರ ನಾಯಕತ್ವದಲ್ಲಿ ಕಿತ್ತೂರಿನ ಅರಮನೆಯಿಂದ ರಾಣಿ ಚೆನ್ನಮ್ಮನ ವೀರ ಘೋಷದೊಡನೆ ಕಿತ್ತೂರು ಸೈನ್ಯ ಮುನ್ನುಗ್ಗಿತು. "ಹರ-ಹರ ಮಹಾದೇವ" ಎಂಬ ರಣಘೋಷ ಮುಗಿಲು ಮುಟ್ಟಿತು. ಕಿತ್ತೂರಿನ ಸುತ್ತಮುತ್ತಲೂ ಪ್ರಕೃತಿದೇವಿ ಕನಲಿದಳು. ಬ್ರಿಟಿಷ್ ಸೈನ್ಯ ಬಂಧಿತವಾಗಿ ಎಲ್ಲ ಸೈನ್ಯವೂ ಹಿಮ್ಮೆಟ್ಟಿತು. ಕಿತ್ತೂರಿನ ಗೆಲುವಿನ ಜಯಘೋಷ ಮುಗಿಲು ಮುಟ್ಟಿತು.

ಆದರೆ ಈ ಜಯಘೋಷ ಬಹಳ ದಿನ ನಿಲ್ಲಲಿಲ್ಲ. ವಿಧಿ ತನ್ನದೇ ಆಟ ನಡೆಸಿತ್ತು. ಗಾಯಗೊಂಡ ಹುಲಿಯಂತೆ ಬ್ರಿಟಿಷರು ಕಿತ್ತೂರಿನ ಸ್ವಾತಂತ್ರ ಹರಣಕ್ಕೆ- ಕೋಟೆಯ ನೆಲಸಮಕ್ಕೆ ಹಗಲಿರುಳು ಹಾತೊರೆಯ ತೊಡಗಿದರು. ತಮ್ಮ ಸೈನ್ಯವನ್ನು ನವೀಕರಿಸಿ ಮತ್ತೆ ಆಕ್ರಮಣಕ್ಕೆ ಸಜ್ಜಾಗತೊಡಗಿದ್ದರು. ತಮ್ಮ ಬೆಂಬಲಕ್ಕೆ, ಮುಂಬೈ, ಬೆಳಗಾವಿ, ಮೈಸೂರು ಹಾಗೂ ಮದ್ರಾಸಗಳಲ್ಲಿದ್ದ ಸೈನ್ಯವನ್ನು ಒಟ್ಟುಗೂಡಿಸಲು ಪ್ರಾರಂಭಿಸಿದರು. ಲೆ॥ ಕರ್ನಲ್ ಡಿಕಾರ್ಸ್ ನೇತೃತ್ವದಲ್ಲಿ ಸೈನ್ಯ ಒಟ್ಟುಗೂಡಿ ಕಿತ್ತೂರನ್ನು ಕೊನೆಗಾಣಿಸಲು ಸಿದ್ಧವಾಗತೊಡಗಿತು. ಮತ್ತೊಮ್ಮೆ ಕಿತ್ತೂರಿನಲ್ಲಿ ಸೋಲನ್ನು ಅನುಭವಿಸಿದ್ದಲ್ಲಿ ದಕ್ಷಿಣ ಭಾರತದಲ್ಲಿ ಬ್ರಿಟಿಷರ ತಳಊರಿಕೆಗೆ ಅಪಾಯವಿದ್ದುದರ ಅರಿವಾಗತೊಡಗಿತು. ಕಿತ್ತೂರಿನಂತೆ ಆಂಗ್ಲ ಅರಸರ ವಿರುದ್ಧ ಸಿಡಿದೆದ್ದ, ಅವರ ಸೈನ್ಯವನ್ನು ಓಡಿಸಿದ್ದ ಯಾವ ಸಂಸ್ಥಾನವೂ ಅಂದು ಇರಲಿಲ್ಲ. 1824ರ ನವೆಂಬರ ಮೂವತ್ತರಂದು ಆಂಗ್ಲ ಸೈನ್ಯಾಧಿಪತಿ ಕಿತ್ತೂರಿನ ಕೋಟೆಯ ಮುತ್ತಿಗೆಯನ್ನು ಆರಂಭಿಸಿದ. ಡಿಸೆಂಬರ್ ಮೂರರಂದು ಘೋಷಣೆಯೊಂದನ್ನು ಹೊರಡಿಸಿ ಆ ದಿನದ ಒಳಗಾಗಿ ಕಿತ್ತೂರು ಶರಣಾಗದಿದ್ದಲ್ಲಿ ಕೋಟೆಯನ್ನು ಧ್ವಂಸಮಾಡುವದಾಗಿಯೂ ಜನತೆ ಗಂಭೀರ ಪರಿಸ್ಥಿತಿಗೆ ಒಳಗಾಗುವರೆಂದೂ ಕೊನೆಯ ಎಚ್ಚರಿಕೆಯನ್ನು ನೀಡಿದರು. ಅಲ್ಲದೆ ಕೋಟೆಯ ಒಳಗೂ ವಿದ್ರೋಹಿಗಳನ್ನು ಸಂಚುಗಾರರನ್ನು ಪತ್ತೆ ಹಚ್ಚಿ ಒಡೆದು ಆಳುವ ಬ್ರಿಟಿಷರ ನೀತಿಬೀಜವನ್ನು ಬಿತ್ತಿದರು. ಆ ವಿಷಬೀಜ ಚಿಗುರೊಡೆದು ಹುರುಕಡ್ಲಿ ಮಲ್ಲಪ್ಪಶೆಟ್ಟಿ, ಅಂತಹವರು ಮನೆ ಮುರುಕರ ಸಂಚಿನಲ್ಲಿ ಸೇರಿದರು.

ರಾಣಿ ಚೆನ್ನಮ್ಮ ಮುಂದೊದಗಬಹುದಾದ ಇಂತಹ ದುರ್ದಿನಗಳನ್ನು ಊಹಿಸಬಲ್ಲವಳಾಗಿದ್ದಳು. ಅವಳ ಸ್ವಾತಂತ್ರ್ಯದ ಕಿಚ್ಚು ಹಾಗೂ ಅವಳ ನಿಷ್ಕಾಮ ರಾಷ್ಟ್ರಪ್ರೇಮ ಯಾವುದೋ ಅವ್ಯಕ್ತ ಭರವಸೆಗಳನ್ನು ಮನದಲ್ಲಿ ನೀಡುತ್ತಲಿದ್ದವು. ತನ್ನ ರಕ್ತದ ಕಣಕಣದಲ್ಲಿಯೂ ಸ್ವಾತಂತ್ರ, ನಾಡಪ್ರೇಮ ತುಂಬಿಕೊಂಡಿದ್ದ ಚೆನ್ನಮ್ಮನ ಒಳಧ್ವನಿ "ಮಾಡು ಇಲ್ಲವೆ ಮಡಿ" ಎಂಬ ನುಡಿಯನ್ನೇ ನುಡಿಸುತ್ತಿದ್ದಿತು. ಕಿತ್ತೂರಿನ ಪ್ರತಿ ಸೈನಿಕನೂ "ಹರ-ಹರ ಮಹಾದೇವ" ಎಂಬ ವೀರಘೋಷಣೆಯೊಡನೆ ತಮ್ಮ ಎಲ್ಲ ಯುದ್ಧ ಸಾಮಗ್ರಿಗಳನ್ನು ಸಜ್ಜುಗೊಳಿಸತೊಡಗಿದರು. ಕಿತ್ತೂರಿನ ಕ್ರಾಂತಿವೀರರಿಗೆ ಇದು ನಿರ್ಣಾಯಕ ಯುದ್ಧವಾಗುವುದೆಂಬ ಕಲ್ಪನೆಯೂ ಬಂದಿತ್ತು. ರಾಣಿ ಚೆನ್ನಮ್ಮನಿಗೆ ವಿಶ್ವಾಸದ್ರೋಹದ ಸುಳಿವು ಸಿಕ್ಕಿರಲಿಲ್ಲ. ಮದ್ದಿನಲ್ಲಿ ಸಗಣಿ ಬೆರೆಸಿ ಮದ್ದುಗುಂಡುಗಳು ನಿಷ್ಕ್ರಿಯವಾಗುವಂತೆ ಮಾಡುವಲ್ಲಿ ವಿದ್ರೋಹಿ ಮನೆಮುರುಕರು ಸಾಕಷ್ಟು ಸಂಚುಹೂಡಿ ಕೆಲಸ ಮಾಡಿದ್ದರು. ಅದು ತಿಳಿದೊಡನೆ ಚೆನ್ನಮ್ಮ ಆ ದ್ರೋಹಿಗಳನ್ನು ಆನೆಯ ಕಾಲಿಗೆ ಎಳೆ ಹೊಡೆಸಿ ಶಿಕ್ಷಿಸಿದಳು. ಆದರೆ ಕಾಲ ಮಿಂಚಿತ್ತು. ಕೋಟೆಯ ಹೊರಗಡೆ ಫಿರಂಗಿಗಳ ಹೊಡೆತ ಭಾರೀ ಪ್ರಮಾಣದಲ್ಲಿ ನಡೆದಿತ್ತು.

ಕಿತ್ತೂರು ಚೆನ್ನಮ್ಮ ನಮ್ಮ ನಾಡಿಗೆ ಸ್ಫೂರ್ತಿದಾಯಕಳು. ಅಂತೆಯೇ ನನ್ನ ಕುಟುಂಬಕ್ಕೂ ಸ್ಫೂರ್ತಿದಾಯಕಳು. ಕಾರಣ ಅವಳ ನೆಚ್ಚಿನ ಸೇನಾನಿಯಾಗಿದ್ದ ಸರದಾರ ಗುರುಸಿದ್ದಪ್ಪ ನಮ್ಮ ಮುತ್ತಾತ. ಅಂದರೆ ನನ್ನ ತಾಯಿ ಗುರುದೇವಿ ಹಿರೇಮಠ ಅವರಿಗೆ ಪಂಚವ್ವಬಾಯಿ ಸರದಾರ ಅವರು ಚಿಕ್ಕಮ್ಮ ಆಗಬೇಕು. ಪಂಚವ್ವಬಾಯಿಯ ಅವರ ಪತಿ ಬ್ಯಾರಿಸ್ಟರ್ ಎಮ್.ಎನ್. ಅವರು ಸೇನಾನಿ ಸರದಾರ ಗುರುಸಿದ್ದಪ್ಪನವರ ಮೊಮ್ಮಗ. ಸರದಾರ ಗುರುಸಿದ್ದಪ್ಪನವರ ಎಲ್ಲ ಖಿಲ್ಲತ್ತು ಹಾಗೂ ಕತ್ತಿ ಯುದ್ಧದ ಪೋಷಾಕುಗಳನ್ನು ಕಿತ್ತೂರಿನ ಕೋಟೆಯ ವಸ್ತುಸಂಗ್ರಹಾಲಯಕ್ಕೆ ಕೊಡಲಾಗಿದೆ.

ಭಾರತದ ಸ್ವಾತಂತ್ರ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ನಾಂದಿ ಹಾಡಿದ ಕನ್ನಡದ ಸುಪುತ್ರಿ ರಾಣಿ ಚೆನ್ನಮ್ಮ. ಅವಳ ಹೆಸರು ಮತ್ತು ಹೋರಾಟದ ನೆನಪೇ ನಮಗೆಲ್ಲ ಸ್ಫೂರ್ತಿ.

ಕಿತ್ತೂರ ಚೆನ್ನಮ್ಮ ಅಂದು ಹತ್ತಿಸಿದ ಸ್ವಾತಂತ್ರದ ಕಿಡಿ ಕಿತ್ತೂರಿನಿಂದ ಕಾಶ್ಮೀರದವರೆಗೆ ಹರಡಿತು. 1824ರ ಸ್ವಾತಂತ್ರದ ಅರುಣೋದಯ 1857ರ ಹೋರಾಟಕ್ಕೆ ಇಂಬುಕೊಟ್ಟಿತು. ತನ್ನ ನಾಡಿನ ಸ್ವಾತಂತ್ರಕ್ಕಾಗಿ ತುರಂಗವನ್ನು ಅನುಭವಿಸಿ, ಸಾವನ್ನಪ್ಪಿದಳೇ ಹೊರತು ತನ್ನತನವನ್ನಾಗಲಿ, ನಾಡ ಧರ್ಮವನ್ನಾಗಲಿ, ರಾಣಿ ಚೆನ್ನಮ್ಮ ಎಂದಿಗೂ ಬಿಟ್ಟುಕೊಡಲಿಲ್ಲ. ಅವರ ವೀರತ್ವ, ಶೂರತ್ವ ಇಂದಿನ ಜನಾಂಗಕ್ಕೆ ದಾರಿದೀಪವಾಗಿ ನಿಂತಿದೆ.

ಬೆಳಗಾಂವಿ ಜಿಲ್ಲೆಯ ಕಣಕಣವೂ ನಾಡಪ್ರೇಮದಿಂದ ರಾಷ್ಟ್ರಪ್ರೇಮದಿಂದ ತುಳುಕುತ್ತಿದೆ. ಕಲ್ಲು ಕಲ್ಲುಗಳೂ, ನಾಡಿನ ಸ್ವಾತಂತ್ರಪ್ರೇಮಿಗಳ, ಹುತಾತ್ಮರ, ಸಂತರ, ಮಹಿಮೆಯನ್ನು ಸಾರಿಹೇಳುತ್ತವೆ. ಜಿಲ್ಲೆಯ ಉದ್ದಗಲಕ್ಕೂ ಹರಡಿರುವ ನಾನಾದೇಸಗತಿಗಳ ಮನೆತನಗಳು, ಅರಸು ಮನೆತನಗಳು, ಪಾಳೆಯಪಟ್ಟಗಳು ಮುಂತಾದವುಗಳು ನಾಡಿನ ಇತಿಹಾಸ ರಚನೆಗೆ ಒಂದಲ್ಲ ಒಂದು ರೀತಿ ತಮ್ಮ ಪಾಲಿನ ಸೇವೆ ಸಲ್ಲಿಸಿರುವುದು ಕಂಡುಬರುತ್ತದೆ.

ಕಿತ್ತೂರು ಚೆನ್ನಮ್ಮನ ನೆನಪಿನಲ್ಲಿ ದಿಲ್ಲಿಯ ಪಾರ್ಲಿಮೆಂಟ್ ಆವರಣದಲ್ಲಿ ಚೆನ್ನಮ್ಮನ ಕಂಚಿನ ಪುತ್ಥಳಿ ಅನಾವರಣಗೊಂಡಿದೆ. ಇದು ಸಂತಸದ ಸಂಗತಿ. ಅಂತೆಯೇ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿಯೂ ಕನ್ನಡ ಭವನ ಹಾಗೂ ನಗರ ಭವನದ ಮಧ್ಯೆ ಅಶ್ವಾರೂಢ ಕಂಚಿನ ಚೆನ್ನಮ್ಮನ ಪುತ್ಥಳಿ ಕಂಗೊಳಿಸುತ್ತಿದೆ. ಇದೇ ತೆರನಾದ ಇನ್ನೊಂದು ಕಂಚಿನ ಪುತ್ಥಳಿ ಚೆನ್ನಮ್ಮನ ಕಿತ್ತೂರಿನಲ್ಲಿಯೂ ಸ್ಥಾಪಿತವಾಗಿದೆ. ಅವಳ ಹುಟ್ಟೂರಾದ ಕಾಕತಿಯಲ್ಲಿಯೂ ಚೆನ್ನಮ್ಮನ ಹೆಸರಿನ ಹೆಬ್ಬಾಗಿಲು ಕಂಗೊಳಿಸುತ್ತಿದೆ. (ಅವಳ ಈ ಎಲ್ಲ ಸ್ಮಾರಕಗಳು ನಾನು ಕರ್ನಾಟಕ ಸರಕಾರದಲ್ಲಿ ಕನ್ನಡ ಮತ್ತು ಸಂಸ್ಕೃತಿಯ ಸಚಿವೆಯಾಗಿದ್ದಾಗ ಆದುದು ನನ್ನ ಹೆಮ್ಮೆ) ಇದಲ್ಲದೆ ಬೆಳಗಾಂವಿ ನಗರ ಚೌಕದ ಮಧ್ಯದಲ್ಲಿ ಹಾಗೂ ಹುಬ್ಬಳ್ಳಿಯ ಚೌಕದ ಮಧ್ಯದಲ್ಲಿಯೂ ಬಹು ಹಿಂದೆಯೇ ಅವಳ ಪುತ್ಥಳಿಯು ಸ್ಥಾಪಿತಗೊಂಡಿದೆ. ಇದಲ್ಲದೆ ಬೈಲಹೊಂಗದಲ್ಲಿ ಅವಳ ಸಮಾಧಿಯು ರೂಪಿತವಾಗಿದೆ. ಅನೇಕ ವರ್ಷಗಳ ನಂತರ ಬೆಂಗಳೂರು ಮೀರಜ್ ಕೊಲ್ಲಾಪುರ ರೈಲಿಗೆ "ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್"ಯೆಂದು ನಾಮಕರಣವಾಗಿರುವುದು, ಪ್ರತಿ ನಿತ್ಯ ಆ ರೈಲಿನಲ್ಲಿ ಸಂಚರಿಸುವ ಪ್ರಯಾಣಿಕರ ಧ್ವನಿಯಲ್ಲಿ ಚೆನ್ನಮ್ಮ ನಲಿಯುತ್ತಿದ್ದಾಳೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಕಿತ್ತೂರಿನ ಚೆನ್ನಮ್ಮನ ಕೋಟೆ ಮಾತ್ರ ಶಿಥಿಲಾವಸ್ಥೆಯಲ್ಲಿಯೇ ನಿಂತಿದೆ.

ಪ್ರತಿವರ್ಷ ಚೆನ್ನಮ್ಮನ ನೆನಪಿಗಾಗಿ ಅಕ್ಟೋಬರ್ 23ರಂದು ಕಿತ್ತೂರಿನಲ್ಲೂ ಕಿತ್ತೂರು ಸಾಂಸ್ಕೃತಿಕ ಉತ್ಸವವನ್ನು ನಡೆಸುವ ಯೋಜನೆಯೊಂದನ್ನು ನಾನು ಸಚಿವೆಯಾಗಿ ಜಾರಿಗೆ ತಂದದ್ದು ನನ್ನ ಹೆಮ್ಮೆ. ಭಾರತದ ಕರ್ನಾಟಕದ ಇತಿಹಾಸದ ಪುಟಪುಟಗಳಲ್ಲಿ ಆಯಾ ಸಂಸ್ಥಾನಗಳ ಸ್ವಾತಂತ್ರ್ಯ ಹಗರಣದಲ್ಲಿ ಇಂತಹ ವಿದ್ರೋಹಿಗಳ ಕಾರಸ್ಥಾನ ನಡೆದಿರುವುದನ್ನು ನಾವು ಕೇಳಿದ್ದೇವೆ. ಈ ಮನೆಮುರುಕುತನದ ಹೀನ ಕೃತ್ಯದ ಪ್ರಭಾವ ಅಂದಿನ ಯುದ್ಧದಲ್ಲಿಯೂ ಪುನರಾವರ್ತನೆಯಾಯಿತು.

ಒಳಗಿನ ವಿದ್ರೋಹ-ಹೊರಗಿನಿಂದ ಬರಬೇಕಾದ ನೆರವು ಸಕಾಲದಲ್ಲಿ ಬಾರದೇ ಹೋದದ್ದು ಚೆನ್ನಮ್ಮನನ್ನು ಅಧೀರಳನ್ನಾಗಿ ಮಾಡಿದರೂ ಶರಣಾಗತಿಯ ಬಗ್ಗೆ ಆಕೆ ಯೋಚಿಸಲಿಲ್ಲ. ಕೊನೆಯವರೆಗೆ ಹೋರಾಟ, ಅವಳ ನಿರ್ಧಾರವಾಗಿತ್ತು. 1824 ಡಿಸೆಂಬರ್ ತಿಂಗಳು ಕಿತ್ತೂರಿನ ಇತಿಹಾಸದಲ್ಲಿ ಅಂತೆಯೇ ಭಾರತದ ಚರಿತ್ರೆಯ ಪುಟಗಳಲ್ಲಿ ಕರಾಳ ದಿನವಾಗಿ ನೆನೆಪಿನಲ್ಲಿ ಉಳಿಯುವಂತಾಯಿತು. ಕೆಲವೇ ದಿನಗಳ ಹಿಂದೆ ವಿಜಯೋತ್ಸವವನ್ನು ಆಚರಿಸಿದ ಕೋಟೆಯಲ್ಲಿ ಮಬ್ಬು ಕವಿಯಲಾರಂಭಿಸಿತು. ಎಲ್ಲೆಲ್ಲಿಯೂ ಹಾಹಾಕಾರ, ಚೀತ್ಕಾರಗಳು ಕೇಳಲಾರಂಭಿಸಿದವು. ಆದರೆ ರಾಣಿ ಚೆನ್ನಮ್ಮ ಎದೆಗುಂದದೆ ತನ್ನ ನೆಚ್ಚಿನ ಸರ್ದಾರ ಗುರುಸಿದ್ದಪ್ಪ, ಸಂಗೊಳ್ಳಿ ರಾಯಣ್ಣ ಅವರ ತಂಡದೊಡನೆ ಉಡುಪು ಧರಿಸಿ ಖಡ್ಗಧಾರಿಯಾಗಿ ಸಂಚರಿಸಲಾರಂಭಿಸಿದಳು. ಪರಿಸ್ಥಿತಿ ಕೈಮೀರಿತೆನ್ನುವಾಗ ಕೋಟೆಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಮೊದಲಾದ ಕ್ರಾಂತಿವೀರರು ಬ್ರಿಟಿಷರ ಕೈಸೆರೆಗೊಳಗಾದರು.

1824ನೇ ಡಿಸೆಂಬರ್ ಹನ್ನೆರಡನೆಯ ಇನ್ನೊಂದು ದುರ್ದಿನ. ಕಿತ್ತೂರಿನ ಕೋಟೆಯ ಮೇಲೆ ಬ್ರಿಟಿಷರ ಧ್ವಜ, ಯೂನಿಯನ್ ಜಾಕ್ ಹಾರಲಾರಂಭಿಸಿತು. ಅದರೊಂದಿಗೆ ಕಿತ್ತೂರಿನ ಶೌರ್ಯಮಯ ಇತಿಹಾಸದ ತೆರೆಕಂಡಿತು. ಸೆರೆಸಿಕ್ಕ ರಾಣಿಯನ್ನು ಬೈಲಹೊಂಗಲಕ್ಕೆ ಸ್ಥಳಾಂತರಿಸಿ ಬಂಧನದಲ್ಲಿಟ್ಟರು. ಆದರೆ ಬೈಲಹೊಂಗಲದಲ್ಲಿ ಸೆರೆಮನೆಯಲ್ಲಿದ್ದಾಗಲೂ ಆಕೆಯ ಸ್ವಾತಂತ್ರದ ಕನಸು ಕಮರಿರಲಿಲ್ಲ. ಎರಡು ಬಾರಿ ಸೆರೆಯಿಂದ ತಪ್ಪಿಸಿಕೊಳ್ಳಲು ಯತ್ನಿಸಿ ಹೆಚ್ಚಿನ ಕಠಿಣ ಕಾವಲಿಗೆ ತುತ್ತಾದಳು. ರಾಣಿ ಚೆನ್ನಮ್ಮ ಐದುವರ್ಷಗಳ ನಂತರ ಸೆರೆಮನೆಯಲ್ಲಿ ಸಾವನ್ನಪ್ಪಿದಳು. 1826ರ ಫೆಬ್ರವರಿ ಎರಡರಂದು ಅವಳ ಸಮಾಧಿಯನ್ನು ಎಲ್ಲ ಗೌರವಗಳೊಂದಿಗೆ ಬೈಲಹೊಂಗಲದಲ್ಲಿ ನೆರವೇರಿಸಲಾಯಿತು. ರಾಣಿ ಚೆನ್ನಮ್ಮ ಕಾಲಗರ್ಭದಲ್ಲಿ ಅಡಗಿ ಹೋದರೂ, ಅವಳೂ, ಅವಳ ಸಹಚರರಾದ ಸರ್ದಾರ ಗುರುಸಿದ್ದಪ್ಪ, ಸಂಗೊಳ್ಳಿ ರಾಯಣ್ಣ, ಅಮಚೂರು ಬಾಬಾಸಾಹೇಬ ಮೊದಲಾದವರು ಇಂದಿಗೂ ಸ್ವಾತಂತ್ರದ ಅಭಿಮಾನಿಗಳಲ್ಲಿ ಚಿರಂತನವಾಗಿದ್ದಾರೆ.

——— * ———

ಮಹಿಳಾ ಸೈನ್ಯದ ರೂವಾರಿ ಬೆಳವಡಿ ಮಲ್ಲಮ್ಮ

ಎಸ್. ವಿ. ಶ್ರೀನಿವಾಸರಾವ್

ಉಲ್ಲಾಳ ಸಂಸ್ಥಾನದ ರಾಣಿ ಅಬ್ಬಕ್ಕದೇವಿ, ಚಿತ್ರದುರ್ಗದ ವೀರವನಿತೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮ, ಕೆಳದಿಯ ರಾಣಿ ಚೆನ್ನಮ್ಮ ಮತ್ತು ಬೆಳವಡಿ ಮಲ್ಲವ್ವ ಕನ್ನಡ ನಾಡಿನ ವೀರವನಿತೆಯರೆಂದು ಖ್ಯಾತರಾಗಿದ್ದಾರೆ.

ಮಂಗಳೂರು ಬಳಿಯ ಉಲ್ಲಾಳ ಹಿಂದೆ ಒಂದು ಚಿಕ್ಕ ಸ್ವತಂತ್ರ ಸಂಸ್ಥಾನವಾಗಿತ್ತು. ಆ ಸಂಸ್ಥಾನವನ್ನು ಇಬ್ಬರು ಅಬ್ಬಕ್ಕದೇವಿಯರು ಆಳಿದರು. ಕಿರಿಯ ಅಬ್ಬಕ್ಕದೇವಿ ಫ್ರೆಂಚರನ್ನು ಸೋಲಿಸಿದ ಹೆಗ್ಗಳಿಕೆಗೆ ಪಾತ್ರಳಾಗಿದ್ದಾಳೆ. ಬೆಳಗಾವಿ ಜಿಲ್ಲೆಯ ಕಿತ್ತೂರು ಹದಿನೆಂಟನೇ ಶತಮಾನದಲ್ಲಿ ಸ್ವತಂತ್ರ ಸಂಸ್ಥಾನವಾಗಿತ್ತು. ದೊರೆ ಮಲ್ಲಸರ್ಜನ ತರುವಾಯ ಅವನ ಎರಡನೆ ಹೆಂಡತಿಯಾಗಿದ್ದ ಚೆನ್ನಮ್ಮ ಆ ಸಂಸ್ಥಾನವನ್ನು ಆಳಲಾರಂಭಿಸಿದಳು. ಮಕ್ಕಳಿಲ್ಲದ ಈಕೆ ತೆಗೆದುಕೊಂಡಿದ್ದ ದತ್ತುಪುತ್ರನನ್ನು ರಾಜ್ಯದ ಉತ್ತರಾಧಿಕಾರಿಯಾಗಿ ಬ್ರಿಟಿಷರು ಮಾನ್ಯ ಮಾಡಲಿಲ್ಲ. ಸಂಸ್ಥಾನವನ್ನು ತಮ್ಮ ಆಡಳಿತಕ್ಕೆ ತೆಗೆದುಕೊಳ್ಳಲು ಬ್ರಿಟಿಷರು ಮುಂದಾದಾಗ ಚೆನ್ನಮ್ಮ ಅದನ್ನು ಒಪ್ಪಲಿಲ್ಲ. ಸ್ವಾತಂತ್ರ್ಯ ಸಮರ ಸಾರಿ ಅವರ ವಿರುದ್ಧ ಹೋರಾಡಿ ಜಯಗಳಿಸಿದಳು. ಎರಡನೆ ಬಾರಿ ಬ್ರಿಟಿಷರು ಭಾರಿ ಸೈನ್ಯದೊಡನೆ ಬಂದು ಮುತ್ತಿಗೆ ಹಾಕಿದಾಗ ಸ್ವಜನರ ಪಿತೂರಿಗೆ ಒಳಗಾಗಿ 1824ರಲ್ಲಿ ಸೋತು ಹೋದಳು. ಬೈಲಹೊಂಗಲದ ಸೆರೆಮನೆಯಲ್ಲಿ 1829ರಲ್ಲಿ ತೀರಿಕೊಂಡಳು. ಆದರೂ ಅವಳ ಧೈರ್ಯಸ್ಥೈರ್ಯದ ಹೋರಾಟ ಅವಳನ್ನು ವೀರವನಿತೆಯಾಗಿ ಅಮರವಾಗುಳಿಸಿದೆ. ಬೈಲಹೊಂಗಲದಲ್ಲಿನ ಅವಳ ಸ್ಮಾರಕ ಅವಳ ವೀರತ್ವವನ್ನು ಸಾರುತ್ತಿದೆ.

ಸುಮಾರು 450 ವರ್ಷಗಳ ಹಿಂದೆ ಶಿವಮೊಗ್ಗ ಜಿಲ್ಲೆಯಲ್ಲಿ ಕೆಳದಿ ಸಂಸ್ಥಾನ ಅಸ್ತಿತ್ವದಲ್ಲಿತ್ತು. ಅದನ್ನಾಳುತ್ತಿದ್ದ ಒಂದನೆ ಸೋಮಶೇಖರ ನಾಯಕ ದುರ್ಜನರ ಸಹವಾಸದಿಂದ ಕೊಲೆಗೀಡಾದಾಗ ಆತನ ಪತ್ನಿ ಚೆನ್ನಮ್ಮ ರಾಜ್ಯಾಡಳಿತವನ್ನು ಇಪ್ಪತ್ತೈದು ವರ್ಷಕ್ಕೂ ಹೆಚ್ಚು ಕಾಲ ದಕ್ಷತೆಯಿಂದ ಸಂಭಾಳಿಸಿದಳು. ಛತ್ರಪತಿ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿ ಮೊಗಲರ ಔರಂಗಜೇಬನ ಕೋಪಕ್ಕೆ ತುತ್ತಾದಳು. ಎದೆಗುಂದದೆ ಆತನನ್ನು ಎದುರಿಸಿ ಗೆದ್ದ ಕೀರ್ತಿಗೆ ಭಾಜನಳಾಗಿದ್ದಾಳೆ. ಪ್ರಬಲ ಮೊಗಲರನ್ನು ಗೆದ್ದ ಕೀರ್ತಿ ಇಡೀ ಭಾರತದಲ್ಲಿ ಹಬ್ಬಿತು. ಹೀಗೆ ಶೌರ್ಯ ಮೆರೆದ 'ವೀರರಾಣಿ ಚೆನ್ನಮ್ಮ' ಇತಿಹಾಸದಲ್ಲಿ ದಾಖಲಾಗಿದ್ದಾಳೆ.

ಸಾಮಾನ್ಯ ಸೈನಿಕನ ಪತ್ನಿಯಾಗಿದ್ದ ಚಿತ್ರದುರ್ಗದ ಓಬವ್ವನ ಶೌರ್ಯ ಮತ್ತೊಂದು ವಿಧದ್ದು. ಸಮಯಪ್ರಜ್ಞೆಗೆ ಉದಾಹರಣೆಯಾದ ವೀರವನಿತೆಯೆನಿಸಿಕೊಂಡಿದ್ದಾಳೆ. ಏಕಾಂಗಿಯಾಗಿ ಗಿಡ್ಡಿಬಾಗಿಲಿನಿಂದ ನುಸುಳಿದ ನೂರಾರು ಹೈದರನ ಸೈನಿಕರನ್ನು ತನ್ನ ಮನೆಯ ಒನಕೆಯಿಂದ ಜಜ್ಜಿ ರಾಜಾ ವೀರಮದಕರಿನಾಯಕನಿಗೆ ವಿಜಯತಂದುಕೊಟ್ಟು ಖ್ಯಾತಿವಂತಳಾಗಿದ್ದಾಳೆ.

ರಾಣಿಯರ ಗುಂಪಿಗೆ ಸೇರಿ ಶೌರ್ಯ ಪ್ರದರ್ಶನ ನೀಡಿ ಖ್ಯಾತಳಾಗಿರುವ ಇನ್ನೊಬ್ಬ ಮಹಿಳೆ 'ಬೆಳವಡಿಯ ಮಲ್ಲಮ್ಮ'. ಶಿವಾಜಿಯ ಸೈನ್ಯದ ವಿರುದ್ಧ ಹೋರಾಡಿದ್ದ ಧೀರೋದಾತ್ತ ಸೇನಾನಾಯಕಿ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ 'ಬೆಳವಡಿ' ಸುಮಾರು ನಾಲ್ಕುನೂರು ವರ್ಷಗಳ ಹಿಂದೆ ಸ್ವತಂತ್ರ ಸಂಸ್ಥಾನವಾಗಿತ್ತು. ಅಲ್ಲಿನ ದೇಸಾಯಿ ಈಶಪ್ರಭು. ಈತ ಸೋಂದೆಯ ರಾಜಕುಮಾರಿ ಮಲ್ಲವ್ವನನ್ನು ವಿವಾಹವಾಗಿದ್ದ. ಮಲ್ಲವ್ವನ ತಂದೆ ಮಧುಲಿಂಗನಾಯಕ. ಈಕೆಗೆ ತನ್ನ ಮಗ ಸದಾಶಿವರಾಯನ ಜೊತೆಗೆ ಸಕಲ ವಿದ್ಯೆಗಳನ್ನು ಕಲಿಸಿದ್ದುದಲ್ಲದೆ ಯುದ್ಧದ ತರಬೇತಿಯನ್ನು ನೀಡಿದ್ದ. ಸಾಹಿತ್ಯದಲ್ಲಿ ಆಸಕ್ತಿಯಿದ್ದ ಈಕೆ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲೂ ಪ್ರಾವೀಣ್ಯ ಗಳಿಸಿಕೊಂಡಿದ್ದಳು. ಈಶಪ್ರಭುವಿನ ರಾಣಿಯಾಗಿ ಬೆಳವಡಿ ಸೇರಿದ ಮೇಲೆ ಆಕೆ ಮಾಡಿದ ಮೊದಲ ಕಾರ್ಯವೆಂದರೆ ಹೆಂಗಳೆಯರನ್ನು ಸೇರಿಸಿ, ಅವರಿಗೆ ಯುದ್ಧ ತರಬೇತಿಯನ್ನು ನೀಡಿ, ಮಹಿಳಾಪಡೆ ನಿರ್ಮಿಸಿದ್ದು. ಅಲ್ಲದೆ, ಪುರುಷ ಸೈನಿಕರೊಡನೆ ಸಮಸಮನಾಗಿ ನಿಂತು ಹೋರಾಡುವ ಸಾಮರ್ಥ್ಯವನ್ನು ಕುದುರಿಸಿದ್ದು. ಪ್ರಾಯಶಃ ಮಹಿಳಾ ಸೈನ್ಯ ಕಟ್ಟಿದ ಪ್ರಥಮ ಕೀರ್ತಿ ಬೆಳವಡಿ ಮಲ್ಲವ್ವನಿಗೆ ಸಂದಾಯವಾಗಿದೆ.

ಕ್ರಿ.ಶ. ಸುಮಾರು 1678ರ ಸುಮಾರಿನಲ್ಲಿ ಶಿವಾಜಿ ಪ್ರಬಲನಾಗಿದ್ದು ಮರಾಠ ಸಾಮ್ರಾಜ್ಯವನ್ನು ದಕ್ಷಿಣ ಭಾರತದಲ್ಲಿ ವಿಸ್ತರಿಸಲು ಪ್ರಾರಂಭಿಸಿದ್ದನು. ಹಲವು ಪ್ರದೇಶಗಳನ್ನು ಗೆದ್ದು ಗೆಲುವಿನ ಅಮಲಿನಲ್ಲಿದ್ದ ಮರಾಠ ಸೈನಿಕರು ವಿನಾಕಾರಣ ಬೆಳವಡಿ ಸಂಸ್ಥಾನವನ್ನು ಪ್ರವೇಶಿಸಿ, ಸಾವಿರಾರು ದನಕರುಗಳನ್ನು ತಮ್ಮ ನಾಡಿನತ್ತ ಸಾಗಿಸಿದ್ದಲ್ಲದೆ, ಬೆಳವಡಿ ಸಂಸ್ಥಾನದ ಸಂಪತ್ತನ್ನು ಲೂಟಿ ಮಾಡಿದರು.

ಈಶಪ್ರಭು ಶಿವಾಜಿಯೊಡನೆ ಮಧುರ ಸ್ನೇಹವನ್ನು ಬಯಸಿ, ಈ ಬಗ್ಗೆ ಸಂಧಾನ ಸಹ ನಡೆಸಿದ್ದನು. ಸಂಸ್ಥಾನದಲ್ಲಾದ ಅಪಾರ ಹಾನಿಯಿಂದ ಈಶಪ್ರಭು ಕಂಗಾಲಾದ ಹಾಗೂ ಮರಾಠ ಸೈನಿಕರ ಅಟ್ಟಹಾಸದಿಂದ ಬೇಸತ್ತು, ಕೆರಳಿ, ಮನಸ್ಸಿಲ್ಲದಿದ್ದರೂ ಯುದ್ಧರಂಗಕ್ಕಿಳಿಯಲೇಬೇಕಾಯಿತು. ಶಿವಾಜಿಯ ಸೇನಾಪತಿ ದಾದಾಜಿ ರಘುನಾಥನ ಅಟ್ಟಹಾಸವನ್ನು ಅಡಗಿಸಲು ಈಶಪ್ರಭುವೇ ಯುದ್ಧರಂಗಕ್ಕಿಳಿದ. ಹಲವುದಿನ ನಡೆದ ಘೋರಯುದ್ಧದಲ್ಲಿ ಅಧಿಕ ಸೈನ್ಯ ಬಲವಿದ್ದ ಮರಾಠ ಸೈನ್ಯವೇ ಜಯಗಳಿಸಿತು. ಯುದ್ಧರಂಗದಲ್ಲೇ ಈಶಪ್ರಭು ವೀರಸ್ವರ್ಗ ಸೇರಿದ. ಪತಿಯ ದುರಂತ ತಿಳಿದ ಮಲ್ಲಮ್ಮ ಎದೆಗುಂದದೆ ಶತ್ರುವನ್ನು ರಾಜ್ಯದಿಂದ ಹೊಡೆದೋಡಿಸಲು ಸನ್ನದ್ಧಳಾದಳು. ರಾಜನ ಮರಣದಿಂದ ಕಂಗಾಲಾಗಿದ್ದ ಸೈನಿಕರನ್ನು ಒಂದುಗೂಡಿಸಿದಳು. ತಾನೇ ರಣರಂಗಕ್ಕಿಳಿದು ಸೈನಿಕರಿಗೆ ಸ್ಫೂರ್ತಿ ತುಂಬಿ ದ್ವಿಗುಣಿತ ಉತ್ಸಾಹದಿಂದ ಮರಾಠರ ಸೈನ್ಯವನ್ನು ಎದುರಿಸಿದಳು.

ಶತ್ರು ಸೈನ್ಯವನ್ನು ಸಂಸ್ಥಾನದಿಂದ ಹೊರದೂಡಿ ಕೋಟೆಯ ಬಾಗಿಲನ್ನು ಭದ್ರಪಡಿಸಿದಳು. ಈ ಸೋಲಿನಿಂದ ರೊಚ್ಚಿಗೆದ್ದ ಶಿವಾಜಿ ಹೆಚ್ಚು ಸೈನ್ಯಬಲ ಕಳುಹಿಸಿದ. ಮಲ್ಲಮ್ಮ ಸಂಸ್ಥಾನದಲ್ಲಿದ್ದ ಆಹಾರ, ಮದ್ದುಗುಂಡು ತೀರುವ ತನಕ ಒಳಗಿದ್ದೇ ಶತ್ರುವನ್ನು ಎದುರಿಸಿದಳು. ಆನಂತರ ಕೋಟೆಯ ಬಾಗಿಲು ತೆರೆದು ಮರಾಠ ಸೈನ್ಯವನ್ನು ಖುದ್ದಾಗಿ ಎದುರಿಸಲು ಮುಂದಾದಳು. ತನ್ನ ಒಂದು ವರ್ಷದ ಮಗನನ್ನು ಹುಲಿಯಮಠದ ಸಿದ್ಧವೀರಯೋಗಿ ಸಂರಕ್ಷಣೆಯಲ್ಲಿ ಬಿಟ್ಟು ಯುದ್ಧರಂಗಕ್ಕಿಳಿದಳು. ಆದರೆ, ಅಲ್ಪಸಂಖ್ಯೆಯಲ್ಲಿದ್ದ ಮಲ್ಲಮ್ಮನ ಸೈನ್ಯ ಹೆಚ್ಚುದಿನ ಎದುರಿಸಲು ಸಾಧ್ಯವಾಗಲಿಲ್ಲ. ಮರಾಠ ಸೈನಿಕನೊಬ್ಬ ಮಲ್ಲಮ್ಮನ ಕುದುರೆಯ ಹಿಂಗಾಲಿಗೆ ಹೊಡೆದು ಘಾಸಿಗೊಳಿಸಿದ. ಮಲ್ಲಮ್ಮ ಕೆಳಗೆ ಬಿದ್ದಳು. ಹಾಗೇ ಹೋರಾಡುತ್ತಾ ನಿಂತಳು. ಆದರೆ ಶತ್ರು ಸೈನಿಕನ ಕತ್ತಿ ಏಟು ಅವಳ ಬಲಗೈಗೆ ಬಿದ್ದಾಗ ಮಲ್ಲಮ್ಮ ನೋವಿನಿಂದ ಮೂರ್ಛೆ ಹೋದಳು. ಮರಾಠ ಸೈನಿಕರು ಅವಳನ್ನು ಹೊತ್ತು ಶಿವಾಜಿಯ ಬಳಿಗೊಯ್ದರು. ಶಿವಾಜಿ ಮಲ್ಲಮ್ಮನ ಧೈರ್ಯ, ಸ್ಥೈರ್ಯ, ಯುದ್ಧಕುಶಲತೆಗೆ ಮಾರು ಹೋಗಿದ್ದ. ಆದ್ದರಿಂದ, ಅವಳನ್ನು ಗೌರವಿಸಿ ಸಕಲ ರಾಜಮರ್ಯಾದೆಯೊಡನೆ ಅವಳನ್ನು ಬೆಳವಡಿ ಸಂಸ್ಥಾನಕ್ಕೆ ಹಿಂತಿರುಗಿಸಿದನು.

ಮರಾಠರ ಸೈನ್ಯವನ್ನು ಧೈರ್ಯದಿಂದ ಎದುರಿಸಿದ ಧೀರೋದಾತ್ತ ವೀರಮಹಿಳೆಯಾಗಿ ಕರ್ನಾಟಕದ ಚರಿತ್ರೆಯಲ್ಲಿ ಖ್ಯಾತಳಾಗಿದ್ದಾಳೆ.

ಇತ್ತೀಚೆಗೆ ಹೊರಬಿದ್ದಿರುವ, ಶಿವಾಜಿಯ ಸೊಸೆ ತಾರಾಬಾಯಿ ಬರೆಸಿದ 'ಶಿವಾಜಿ–ಮಲ್ಲಮ್ಮಾಜಿ ಸಮರೋತ್ಸವ' ಎಂಬ ಗ್ರಂಥದಲ್ಲಿನ ಉಲ್ಲೇಖ ಕೊಂಚ ವಿಭಿನ್ನವಾಗಿದೆ. ಇದರ ರೀತ್ಯ ಶಿವಾಜಿಯೇ ಬೆಳವಡಿ ಸಂಸ್ಥಾನದ ವಿರುದ್ಧ ನಡೆದ ಮರುಯುದ್ಧದಲ್ಲಿ ತಾನೇ ಮುಂದಾಳತ್ವ ವಹಿಸಿದ್ದನು. ಯುದ್ಧರಂಗದಲ್ಲಿ ರಣಚಂಡಿಯಂತೆ ವೀರಾವೇಶದಿಂದ ಹೋರಾಡುತ್ತಿದ್ದ ಮಲ್ಲವ್ವನನ್ನು ಕಂಡು ಗೌರವಾಭಿಮಾನದಿಂದ ಹೀಗೆ ನುಡಿದ 'ತಾಯಿ ನಿಮ್ಮ ಪತಿಯನ್ನು ದೈಹಿಕವಾಗಿ ನೋಯಿಸದೆ ಸೆರೆ ಹಿಡಿಯಲು ಆದೇಶಿಸಿದ್ದೆ. ದುಷ್ಟನೊಬ್ಬ ಅವರನ್ನು ಸಂಹರಿಸಿದ. ಆತನನ್ನು ನಾವು ಶಿಕ್ಷಿಸುತ್ತೇನೆ. ನೀವು ಮಾತೃಸದೃಶ್ಯರು. ನನ್ನನ್ನು ಶಿಕ್ಷಿಸಬೇಕೆಂದಿದ್ದರೆ ನಾನು ಶಿಕ್ಷೆ ಅನುಭವಿಸಲು ಸಿದ್ಧನಿದ್ದೇನೆ' ಎಂದು ತಲೆಬಾಗಿ ನುಡಿದನಂತೆ.

ತಪ್ಪುಕಲ್ಪನೆಯಿಂದ ನಡೆದ ಘೋರ ಪ್ರಮಾದದ ಅರಿವು ಇಬ್ಬರ ಕೆಚ್ಚೆದೆಯ ಜೀವಗಳಿಗೆ ಹೆಚ್ಚಿನ ದುಃಖ ತಂದಿತ್ತು. ಗುರು ಸಮ್ಮುಖದಲ್ಲಿ ಸಂಧಾನದ ಮಾತು ನಡೆಯುತ್ತಿದ್ದಾಗ ಮಲ್ಲವ್ವನ ಅಣ್ಣ ಸ್ವಾಧಿಯ ಸದಾಶಿವ ನಾಯಕನೂ ಅಲ್ಲಿಗೆ ಬಂದು ತಲುಪಿದ್ದ. ಮಲ್ಲವ್ವ ರಾಣಿಯ ಶೌರ್ಯಸ್ಥೈರ್ಯಗಳನ್ನು ಕಣ್ಣಾರೆ ಕಂಡ ಶಿವಾಜಿ, ಬೆಳವಡಿ ಸಂಸ್ಥಾನವನ್ನು ಪುನಃ ಮಲ್ಲವ್ವನಿಗೇ ಒಪ್ಪಿಸಿ, ತನ್ನ ರಾಜ್ಯಕ್ಕೆ ಹಿಂತಿರುಗಿದ. ಸುಮಾರು ನಾಲ್ಕುನೂರು ವರ್ಷದ ಈ ಕಥಾನಕ ವೀರಗಾಥೆಯಾಗಿ ಮಲ್ಲವ್ವನ ಶೌರ್ಯವನ್ನು ಬಿತ್ತರಿಸುತ್ತಿದೆ. ಅವಳನ್ನು ಅಮರವಾಗಿಸಿದೆ.

ಯಾದವಾಡದ ದೇವಾಲಯದಲ್ಲಿ ಶಿವಾಜಿಯು ರಾಣಿಯ ಮಗುವಿಗೆ ಹಾಲು ಕುಡಿಸುತ್ತಿರುವ ಉಬ್ಬುಶಿಲ್ಪವೊಂದಿದೆ. ಇದರ ಮೇಲುಗಡೆ ಕುದುರೆಯೇರಿ ಸಾಗುತ್ತಿರುವ ಶಿವಾಜಿಯ ಚಿತ್ರವೂ ಇದೆ. ಈ ಯುದ್ಧದ ನೆನಪಿಗಾಗಿ ಮಲ್ಲವ್ವ ಬೆಳವಡಿಯಲ್ಲಿ ಹಲವು ವೀರಗಲ್ಲುಗಳನ್ನು ಸ್ಥಾಪಿಸಿದ್ದಾಳೆ. ಬೆಳವಡಿ ಮಲ್ಲವ್ವ ಶೌರ್ಯ, ಧೈರ್ಯ, ಸ್ಥೈರ್ಯದ ಮೂರ್ತಿವೆತ್ತ ರೂಪವಾಗಿ ಸಂಸ್ಥಾನದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀರ ವೀರವನಿತೆಯಾಗಿ ವಿರಾಜಿಸುತ್ತಾ ಅಮರವಾಗುಳಿದಿದ್ದಾಳೆ.

——— * ———

ಸಮಾಜ ಸುಧಾರಕಿ ರಮಾಬಾಯಿ

ಗುಡಿಬಂಡೆ ಪೂರ್ಣಿಮಾ

ಸಾಮಾನ್ಯವಾಗಿ ಮಹಿಳೆಯರ ಬಗೆಗೆ ಮಾತನಾಡುವಾಗ ಅಥವಾ ಬರೆಯುವಾಗ ತುಂಬ ಉತ್ಪ್ರೇಕ್ಷೆ / ನಿರ್ಲಕ್ಷ್ಯಗಳನ್ನು, ವರ್ಣಿಸುವಾಗ ಅತಿ ಸೌಂದರ್ಯ / ಅತಿ ಕುರೂಪಗಳನ್ನು ದಾಖಲಿಸುವ ಒಂದು ಜಾಯಮಾನ ನಮ್ಮ ಚರಿತ್ರೆ ಕಂಡಿದೆ. ಮಹಿಳಾ ಜಾಗೃತಿಯ ಪರಿಣಾಮದಿಂದ, ಬರವಣಿಗೆಯಲ್ಲಿ ವಾಸ್ತವತೆ ಅರಿವಿನ ಹರವು, ಚಿಕಿತ್ಸಕದೃಷ್ಟಿ, ಅಧ್ಯಯನಪರತೆ, ಕಲಾಕುಸುರಿಯನ್ನೂ ಇಂದು ನಾವು ಕಾಣುತ್ತಿದ್ದೇವೆ.

"ತನ್ನ ನಾಡಿನ ಮಹಿಳೆಯರ ಸ್ಥಾನಮಾನಗಳ ಸುಧಾರಣೆಯನ್ನೇ ತಮ್ಮ ಬದುಕಿನ ಧ್ಯೇಯವಾಗಿಟ್ಟುಕೊಂಡು ಮಹಿಳಾ ವಿಮೋಚನೆಗಾಗಿ ಹೋರಾಡಿದ ಅಪರೂಪದ ಮಹಿಳೆ ಪಂಡಿತ ರಮಾಬಾಯಿ ಸರಸ್ವತಿ. ವಿಧವೆಯರ, ಪರಿತ್ಯಕ್ತೆಯರ, ಬರಗಾಲ ಪೀಡಿತೆಯರ, ಅನಾಥೆಯರ ಆಶ್ರಯದಾಯಿಯಾಗಿ, ಸಮಾಜಸೇವಕಿಯಾಗಿ, ಪ್ರತಿಭಾವಂತ ಲೇಖಕಿಯಾಗಿ ಚರಿತ್ರೆಯಲ್ಲಿ ದಾಖಲಾಗಿರುವ ರಮಾಬಾಯಿಯವರ ಬದುಕು-ಬರಹ ಅನನ್ಯ. ತಾವು ಬದುಕಿದ್ದಾಗಲೇ ದಂತಕತೆಯಾಗಿ ವಿಶ್ವದ ಗಮನ ಸೆಳೆದ ರಮಾಬಾಯಿ, ಕಲ್ಲು-ಮುಳ್ಳುಗಳ ಹಾದಿಯನ್ನೇ ತಮ್ಮ ಬದುಕಿನ ಮಾರ್ಗವಾಗಿಸಿಕೊಂಡಿದ್ದು. ಸಹೃದಯೀ ಮಹಿಳೆಯರಿಗೆ, ಸಮಾಜದ ಕಳಕಳಿ ಇರುವವರಿಗೆ ಆದರ್ಶಪ್ರಾಯರು. ಅನೇಕ ಪ್ರಥಮಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧಿಸಿದ ದಿಟ್ಟ ಮಹಿಳೆ. ಇವರ ಸಂಸ್ಕೃತ ಭಾಷೆಯ ಪಾಂಡಿತ್ಯ, ನಿರರ್ಗಳ ವಾಕ್ಚಾತುರ್ಯ, ದುಃಖ ದುರಂತಗಳಿಗೆ ಸೋಲದ ವ್ಯಕ್ತಿತ್ವ ಅಂದಿನ ಸಮಾಜದಲ್ಲಿ ಮನೆಮಾತಾಗಿ ಪ್ರಚಾರ ಪಡೆದಿತ್ತು" ಎಂದು ಇವರ ಬಗೆಗೆ ಕೃತಿ ರಚಿಸಿರುವ ಡಾ॥ ಗೀತಾ ಶೆಣೈ ಅಭಿಪ್ರಾಯಪಡುತ್ತಾರೆ. ಅವರ ಮಾತಿನಲ್ಲಿ 'ರಮಾಬಾಯಿ ಅವರ ಜೀವನ ಚರಿತೆ ಲೇಖಿಸುವುದು ಎಂದರೆ ಭಾರತೀಯ ಸಮಾಜ ಸುಧಾರಣಾ ಚಳುವಳಿಯ ಸ್ಥೂಲ ಪರಿಚಯ ಮಾಡಿಕೊಡುವುದು' ಎಂದು ಕೂಡ ಆಗುತ್ತದೆ.

1858ರ ಏಪ್ರಿಲ್ 23ರಂದು ರಮಾಬಾಯಿ ಜನಿಸಿದ್ದು. ತಂದೆ ಅನಂತ ಶಾಸ್ತ್ರಿ ಡೋಂಗ್ರೆ, ತಾಯಿ ಲಕ್ಷ್ಮೀಬಾಯಿ ಡೋಂಗ್ರೆ. ಈ ದಂಪತಿಗಳ ಮೂರು ಮಕ್ಕಳಲ್ಲಿ ಚಿಕ್ಕವರು ರಮಾಬಾಯಿ. ಅಕ್ಕ ಕೃಷ್ಣಬಾಯಿ, ಅಣ್ಣ ಶ್ರೀನಿವಾಸ.

ಐದು ಸದಸ್ಯರ ಈ ಕುಟುಂಬ ತಮ್ಮ ಬದುಕಿನ ಬಹಳಷ್ಟು ಕಾಲ ಯಾತ್ರೆಯಲ್ಲಿ ಕಳೆಯುತ್ತಿತ್ತು. ಇವರ ಬಾಲ್ಯ ಕರಾವಳಿ ಪ್ರದೇಶದ ದಟ್ಟ ಅರಣ್ಯದಲ್ಲಿ ಅರಳಿದರೆ, ಹರೆಯದ ದಿನಗಳು ತೀರ್ಥಕ್ಷೇತ್ರಗಳ ದರ್ಶನದಲ್ಲಿ ಬೆಳಗಿದವು. ಕರ್ಮಭೂಮಿಯಾಗಿ ನಡು ರಾಜ್ಯವನ್ನು ಆರಿಸಿಕೊಂಡ ಶ್ರೀಮತಿ ರಮಾಬಾಯಿ ತಾನು ಇಡೀ ದೇಶಕ್ಕೆ ಸೇರಿದವಳು, ಮಹಿಳೆಯರ ಸುಧಾರಣೆ ತನ್ನ ಬದುಕಿನ ಗುರಿ ಎಂಬ ಉದಾತ್ತ ವಿಚಾರವನ್ನು ಮೈಗೂಡಿಸಿಕೊಂಡಿದ್ದರು. ಜ್ಞಾನಾರ್ಜನೆ ಜ್ಞಾನ ಪ್ರಸಾರ ಇವರ ಧ್ಯೇಯವಾಗಿತ್ತು.

ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ವಿರೋಧವಿದ್ದ ಕಾಲದಲ್ಲಿ ಅನಂತ ಶಾಸ್ತ್ರಿ ಡೋಂಗ್ರೆ ತಮ್ಮ ದ್ವಿತೀಯ ಪತ್ನಿ ಲಕ್ಷ್ಮೀಬಾಯಿಗೆ, ಸಂಸ್ಕೃತಾಭ್ಯಾಸ ಮಾಡಿಸುವೆ ಎಂದಾಗ ತಾಯಿಗೆ ಮಗನ ನಿರ್ಧಾರ ಸರಿ ಎನಿಸಿದರೂ ಊರಿನವರು,

ಸಂಬಂಧಿಕರು ವಿರೋಧ ವ್ಯಕ್ತಪಡಿಸಿದರು. ಅನಂತಶಾಸ್ತ್ರಿ ಡೋಂಗ್ರೆ ಪತ್ನಿಯೊಡನೆ ಊರು ಬಿಟ್ಟು ಕಾಡು ಸೇರಿ (ಗಂಗಾಮೂಲ ಕಾರ್ಕಳ) ಪತ್ನಿಗೆ ವಿದ್ಯೆ ಕಲಿಸಿದರು. ದಟ್ಟವಾದ ಅರಣ್ಯ ಪ್ರದೇಶದಲ್ಲಿ ಸುಮಾರು ಹತ್ತು ವರ್ಷದ ಪುಟ್ಟ ಲಕ್ಷ್ಮೀಬಾಯಿಗೆ ಗುರುಕುಲ ಪದ್ಧತಿಯ ಶಿಕ್ಷಣವನ್ನು ನಡೆಸುವ ತಮ್ಮ ಬಹುದಿನದ ಬಯಕೆಗೆ ನೆಲೆ ಒದಗಿಸಿ, ತಮ್ಮ ಜೀವನದ ಅಮೂಲ್ಯವಾದ ಹದಿಮೂರು ವರ್ಷಗಳನ್ನು ಕಳೆದರು. ಇವರ ಮನೆ ಎಂಬುದು ವಿದ್ಯೆ ಅರಸುವವರಿಗೆ ಯಾತ್ರಿಕರಿಗೆ ತಂಗುದಾಣವಾಯಿತು. ವಯಸ್ಸಾದ ತಂದೆ–ತಾಯಿಗಳಿಗೆ ಆಸರೆ ಭೂಮಿಯಾಯಿತು. ಈ ಅವಧಿಯಲ್ಲಿ ಕಿರಿಯ ಪುತ್ರಿಯಾಗಿ ರಮಾಬಾಯಿ ಜನಿಸಿ ತನ್ನ ತಾಯಿಯ ಪರಮಶಿಷ್ಯೆ ಆದರು. ಎಂಟು ವರ್ಷಗಳು ಅಮ್ಮನಿಂದ ಪಡೆದ ಶಿಕ್ಷಣ ರಮಾಬಾಯಿ ಅವರ ಭವಿಷ್ಯದ ಬದುಕಿಗೆ ಮಾರ್ಗದರ್ಶಕ ಬೆಳಕಾಯಿತು.

ಸುಧಾರಣೆಯನ್ನು ಆಘಾತಕಾರಿ ಎಂದು ತಿಳಿದುಕೊಳ್ಳುವ ಜನರನ್ನೂ, ಹೆಣ್ಣುಮಕ್ಕಳಿಗೆ ವಿದ್ಯೆ ನೀಡುವುದು ಪಾಪ ಎಂಬ ಮನೋಭಾವವನ್ನು ಧಿಕ್ಕರಿಸಿ ನಡೆದ ತನ್ನ ತಾಯ್ತಂದೆಯರ ಬದುಕನ್ನು ಮಾದರಿಯಾಗಿರಿಸಿಕೊಂಡ ರಮಾಬಾಯಿ ಸಾಂಪ್ರದಾಯಿಕ ಶಿಕ್ಷಣ ನೀಡುವುದಕ್ಕಿಂತ ಹೆಚ್ಚಿನ ಜ್ಞಾನವನ್ನು ತಾನು ಹುಟ್ಟಿ ಬೆಳೆದ ಪರಿಸರದಲ್ಲಿ ಪಡೆದರು.

ತಮ್ಮ ನಿಲುವು, ಮಾರ್ಗ ಸರಿ ಎಂದು ಸಾಧಿಸಿ ತೋರಿಸಿದ ಶ್ರೀ ಡೋಂಗ್ರೆ ಸಾಂಪ್ರದಾಯಿಕ ಸುಧಾರಣಾವಾದಿ ಆಗಿದ್ದರು. ವಿಪರೀತ ಉಪಚಾರ, ದಾನ, ಬಂಧುವರ್ಗದ ಜವಾಬ್ದಾರಿಗಳಿಂದ ಬರಿಗೈಯಾದ ಅವರು ಪರಿಭ್ರಮಣದ ಬದುಕನ್ನು ತಮ್ಮದಾಗಿಸಿಕೊಂಡರು. ಹದಿಮೂರು ವರ್ಷ ವಸತಿ ತಾಣವಾಗಿದ್ದ 'ಗಂಗಾಮೂಲ' ತೊರೆದು ಹೊರಟಾಗ ರಮಾಬಾಯಿ ಪುಟ್ಟ ಬಾಲಿಕೆ. ಈ ಅನುಭವ–ಪಾಠಶಾಲೆ ರಮಾಬಾಯಿ ಅವರಿಗೆ ಅನೇಕ ವಿಚಾರಗಳನ್ನು ಮನನ ಮಾಡಿಕೊಟ್ಟಿತು. ಜಾತಿಪದ್ಧತಿಯ ಕೆಟ್ಟ ಪರಿಣಾಮ, ಹೆಣ್ಣಿಗೆ ಶಿಕ್ಷಣ ಅನಗತ್ಯ, ಅಕೆಗೆ ಮುಕ್ತಿ ಇಲ್ಲವೆಂಬಂತಹ ವಿಚಾರಗಳು, ಮುಗ್ಧ ಭಕ್ತರನ್ನು ಹಿಂಡುವ ಧರ್ಮಬೋಧನೆ ಮತ್ತು ಆಚರಣೆ, ಕಪಟ ಸನ್ಯಾಸಿ ಬದುಕುಗಳನ್ನು ಕಣ್ಣಾರೆ ಕಂಡ ಅವರಿಗೆ ತಾಯ್ತಂದೆಯರ ಬದುಕು ಆದರ್ಶನೀಯವಾಗಿ ಕಂಡಿತು. ಸ್ತ್ರೀ ಶಿಕ್ಷಣ ಕುರಿತ ತಂದೆಯ ಧೋರಣೆ ಹೆಮ್ಮೆಯ ವಿಚಾರವೆನಿಸಿತು.

ಬರಗಾಲ ಬಂದಾಗ ಕುಟುಂಬದ ಭೀಕರ ಸ್ಥಿತಿಗಳಿಂದ ನಲುಗಿದವರು ಒಬ್ಬೊಬ್ಬರನ್ನಾಗಿ ಕಳೆದುಕೊಂಡು ಕಡೆಗೆ ರಮಾಬಾಯಿ ಮತ್ತು ಅಣ್ಣ ಶ್ರೀನಿವಾಸ ಇಬ್ಬರೇ ಉಳಿದು ಉದ್ಯೋಗವೂ ಇಲ್ಲದೆ ಶಿಕ್ಷಣವಿಲ್ಲದೆಯೂ ಪಂಡಿತರಾಗಿದ್ದರೂ ಬಡತನ ಅಪ್ಪಿ, ಸೇತುವೆ ಕಮಾನು, ಮರಗಳ ಆಸರೆಯಲ್ಲಿ ದಿನ ಕಳೆದು ನಾಲ್ಕು ವರ್ಷಗಳಲ್ಲಿ ನಾಲ್ಕು ಸಾವಿರ ಮೈಲಿ ಕ್ರಮಿಸಿ, ಕಡೆಗೆ ಬಂಗಾಲಕ್ಕೆ ಬಂದರು. ಕಲ್ಕತ್ತಾಗೆ ಬಂದಿಳಿದ ರಮಾಬಾಯಿಗೆ ತಮ್ಮ ಬದುಕಿನ ಮಹತ್ವಪೂರ್ಣ ಅಧ್ಯಾಯವೊಂದು ಈ ನಗರದಲ್ಲಿ ತೆರೆದುಕೊಳ್ಳಬಹುದು ಎಂಬ ಕಲ್ಪನೆ ಸ್ವಲ್ಪವೂ ಇರಲಿಲ್ಲ.

ಆತ್ಮೀಯವಾದ ಕುಟುಂಬ ಸದಸ್ಯರನ್ನು ಕಳೆದುಕೊಂಡು ಶೋಕದ ಹೆಗಲಿನಲ್ಲಿ ಆಹಾರ, ನಿದ್ದೆ, ವಿಶ್ರಾಂತಿಗಳಿಲ್ಲದೆ, ದೈಹಿಕ ಬಳಲಿಕೆಯ ಜೊತೆ ಭವಿಷ್ಯದ ಮುನ್ನೆಚ್ಚರಿಕೆ ಇಲ್ಲದ ಸ್ಥಿತಿಯಲ್ಲಿ ಸೋದರನೊಡನೆ, ಕಾಣದ ಪ್ರಪ್ರಂಚದಲ್ಲಿ ಅಡಿ ಇಟ್ಟಿದ್ದರು ರಮಾಬಾಯಿ.

ಜಾತಿಪದ್ಧತಿ, ಸಂಪ್ರದಾಯ ಶರಣತೆಯಿಂದ ಕಳಚಿಕೊಂಡ ಈ ಸೋದರ ಸೋದರಿಯರು ಪ್ರಾಚೀನ ಗ್ರಂಥಗಳ ಆಧಾರದ ಮೇಲೆ ಸಮಕಾಲೀನ ಸಮಾಜದ ಬೇಕುಬೇಡಗಳ ಸ್ವರೂಪ ನಿರ್ಧರಿಸಿ ತಮ್ಮ ತಿಳುವಳಿಕೆ ಹೆಚ್ಚು ಮಾಡಿಕೊಳ್ಳುತ್ತ ಜ್ಞಾನಪ್ರಸಾರದಲ್ಲಿ ತೊಡಗಿದ್ದು ಸ್ಥಳೀಯ ವಿದ್ವಾಂಸರ, ಪಂಡಿತರ ಗಮನ ಸೆಳೆಯಿತು. ಸಂಸ್ಕೃತದಲ್ಲಿ ನಿರರ್ಗಳವಾಗಿ ಮಾತಾಡುವ ರಮಾಬಾಯಿ ವಿದ್ವತ್ ವಲಯದಲ್ಲಿ ವಿದ್ಯುತ್ ಸಂಚಾರವನ್ನೇ ತಂದರು.

ಬುದ್ಧಿ ಚಾತುರ್ಯ ಪರೀಕ್ಷೆಯಾಗಿ ಬಂಗಾಲದ ಪ್ರಸಿದ್ಧ ವಿದ್ವಾಂಸ ಮಹೋಪಾಧ್ಯಾಯ ಪಂಡಿತ ಮಹೇಶ ಚಂದ್ರ ನ್ಯಾಯರತ್ನ ಮತ್ತು ಇಬ್ಬರು ವಿದೇಶಿ ವಿದ್ವಾಂಸರ ಸಮ್ಮುಖದಲ್ಲಿ ರಮಾಬಾಯಿ ಗೆದ್ದು ಬಂದರು. ಬಂಗಾಲದ ಹಿಂದೂ ಸಮುದಾಯದ ಪ್ರಮುಖ ನೇತಾರರಾಗಿದ್ದ ಮಹಾರಾಜ ಜ್ಯೋತೀಂದ್ರ ಮೋಹನ ಠಾಗೋರರು ಸಂಘಟಿಸಿದ್ದ ಕಾರ್ಯಕ್ರಮದಲ್ಲಿ ರಮಾಬಾಯಿಯನ್ನು 'ಸರಸ್ವತಿ'ಯ ಅವತಾರವೆಂದು ಭಾವಿಸಿ ಅವರಿಗೆ 'ಪಂಡಿತ' ಬಿರುದು ನೀಡಿ ಸನ್ಮಾನಿಸಿದರು. ಇದು ಭಾರತದ ಪ್ರಥಮ ಘಟನೆಯಾಗಿ ದಾಖಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ರಮಾಬಾಯಿ, "ನಾನು ಪಂಡಿತಳೆಂಬ ಭಾವನೆ ನನ್ನಲ್ಲಿಲ್ಲ. ಇದನ್ನು ಸ್ವೀಕರಿಸುವ ಅರ್ಹತೆ ನನಗಿದೆ ಎಂದು ತಿಳಿದಿಲ್ಲ. ನಿಮ್ಮ ಸಹೃದಯತೆಯನ್ನು ಇದು ತೋರುತ್ತದೆ," ಎಂದರು.

ಈ ಘಟನೆ ಹೆಚ್ಚಿನ ಪ್ರಚಾರ ಪಡೆದು ರಮಾಬಾಯಿ ಮನೆಮಾತಾದರು. ಆಹ್ವಾನಗಳ ಸುರಿಮಳೆಯನ್ನು ಸದುಪಯೋಗಪಡಿಸಿಕೊಂಡ ರಮಾಬಾಯಿ ಧಾರ್ಮಿಕ ತಳಹದಿಯ ಮೇಲೆ ಸ್ತ್ರೀವಿಮೋಚನೆಯ ಚಿಂತನೆ ಬೆಳೆಸುವ ಪ್ರಯತ್ನ ಮಾಡಿದರು. ಬ್ರಹ್ಮ ಸಮಾಜದ ನವೀನ ವಿಚಾರಧಾರೆ ಅವರನ್ನ ಸೆಳೆಯಿತು. ಕೇಶವ ಚಂದ್ರಸೇನರ ಪ್ರೋತ್ಸಾಹದಿಂದ ವೇದಾಧ್ಯಯನ ಮಾಡಿ ಹೆಣ್ಣುಮಕ್ಕಳಿಗೆ ಸಲ್ಲದಾಗಿದ್ದ ಕಟ್ಟುಪಾಡನ್ನು ಮುರಿದರು. ಬಂಗಾಲದ ವಾಸ್ತವ್ಯದಲ್ಲಿ ತಾನು ನಡೆಸಿದ ನಿರಂತರ ಓದು, ವಿದ್ವಾಂಸರ ಸಹಚರ್ಯ ಅವರ ವ್ಯಕ್ತಿತ್ವಕ್ಕೆ ಹೊಸ ಆಯಾಮ ನೀಡಿತು. ಈ ಎಲ್ಲ ಕಾರ್ಯಗಳಲ್ಲಿ ಸೋದರ ಶ್ರೀನಿವಾಸರ ಪ್ರೋತ್ಸಾಹ ಇತ್ತು. ದೂರ ದೂರ ಉಪನ್ಯಾಸಗಳಿಗಾಗಿ ಹೋಗುತ್ತಿದ್ದರು. ಶಾಸ್ತ್ರಾಧ್ಯಯನ ತಳಹದಿಯ ಮೇಲೆ ಸಮಕಾಲೀನ ಸಮಸ್ಯೆಗಳಿಗೆ ರಮಾಬಾಯಿ ನೀಡುತ್ತಿದ್ದ ಪರಿಹಾರಗಳು ಅದ್ಭುತ ಎನಿಸುತ್ತಿದ್ದವು. ಅವರ ಎಲ್ಲ ಕಾರ್ಯಕ್ರಮಗಳಲ್ಲಿ ಹಣ ಸಂಗ್ರಹಿಸಿ ನೀಡುವ ಪದ್ಧತಿ ರೂಪುಗೊಂಡಿತು.

ತನ್ನವರೆನಿಸಿಕೊಂಡವರಿಂದ ಅಸಡ್ಡೆ, ಅಸಹನೆ, ಅವಮಾನಗಳನ್ನು ಅನುಭವಿಸಿ ರೋಸಿ ಹೋದ ರಮಾಬಾಯಿ ಅವರ ಮನಸ್ಸಿಗೆ ಬಂಗಾಲ–ಅಸ್ಸಾಂ ಜನತೆ ನೀಡಿದ ಪ್ರೀತಿ, ವಿಶ್ವಾಸ, ಆದರ, ಗೌರವಗಳು ಅಪೂರ್ವ ಎನಿಸಿದ್ದವು. ಆಧುನಿಕ 'ಭಾರತ ಮಾತೆ'ಯಾಗಿ ಜನತೆಯ ಕಣ್ಣಿಗೆ ಅವರು ಕಂಡಿದ್ದರು.

ಅಸ್ಸಾಂ ರಾಜ್ಯದ ಹಲವೆಡೆ ಉಪನ್ಯಾಸ ನೀಡಿ ಸಿಲ್ಹೆಟ್ ಜಿಲ್ಲೆಗೆ ಅಣ್ಣ–ತಂಗಿಯರು ಬಂದಾಗ ಅಭೂತಪೂರ್ವ ಸ್ವಾಗತ ಎದುರಾಗಿತ್ತು. ರಮಾಬಾಯಿ ಅವರನ್ನು ಸಭೆಗೆ ಪರಿಚಯಿಸಿದ ಬಿಪಿನ್ ಬಿಹಾರಿ ದಾಸ್, ದಿನಗಳೆದಂತೆ ಆತ್ಮೀಯರಾದರು. ಕೆಲವು ದಿನಗಳ ಅಸ್ವಸ್ಥತೆಯ ನಂತರ ಅಣ್ಣ ನಿಧನರಾದಾಗ ರಮಾಬಾಯಿ, ಬಿಪಿನ್ ದಾಸರ ಅಪೇಕ್ಷೆಯ ಮೇರೆಗೆ 1880ರ ನವೆಂಬರ್ 13ರಂದು ಬಂಕಾಪುರ ನ್ಯಾಯಾಲಯವೊಂದರಲ್ಲಿ ಸಿವಿಲ್ ಕಾಯಿದೆ ಅನ್ವಯ ವಿವಾಹವಾದರು. ಜಾತಿ ಮತ ಮೀರಿದ ಸರಳ ವಿವಾಹ ಅದಾಗಿತ್ತು. ಇದು ಸಂಪ್ರದಾಯಸ್ಥರನ್ನು ಕೆರಳಿಸಿದಾಗ ದಂಪತಿಗಳು ಊರುಬಿಟ್ಟು ಸಿಲ್‌ಚರ್ ಸೇರಬೇಕಾಯಿತು. "ಮನೋರಮಾ" ಎಂಬ ಮುದ್ದು ಹೆಣ್ಣು ಮಗುವಿನ ತಾಯಿಯಾದರು ರಮಾಬಾಯಿ.

ಬಿಪಿನ್ ಬಿಹಾರಿದಾಸ್ (ಕಾಯಸ್ಥ)ರ ಅನಿರೀಕ್ಷಿತ ಸಾವು ರಮಾಬಾಯಿಯವರನ್ನು ಕಂಗೆಡಿಸಿತು. ಅವರು ಆಗ ಕೇವಲ ಮುವ್ವತ್ತರ ಹರೆಯದವರಾಗಿದ್ದರು. ಗಂಡ ಬಿಟ್ಟು ಹೋದ ಸಾಲದ ಜೊತೆ ಎಳೆಮಗುವಿನ ಪಾಲನೆಯ ಜವಾಬ್ದಾರಿಯೂ ಸೇರಿದಾಗ ಅವರು ಬಂದಿದ್ದು ಚೆನ್ನೈಗೆ. ಅಲ್ಲಿಂದ ಮತ್ತೆ ಪುಣೆಗೆ ಹಿಂತಿರುಗಿದರು. ಇದೇ ಪುಣೆ ಅವರ ಕಾರ್ಯಕ್ಷೇತ್ರವಾಯಿತು.

ದೂರುವವರಿಂದ ದೂರವಿದ್ದು, ಇಷ್ಟವಾದವರನ್ನು ಹತ್ತಿರವಾಗಿಸಿಕೊಂಡು ಬಾಡಿಗೆ ಮನೆಯೊಂದರಲ್ಲಿ ಪುಟ್ಟ ಮಗಳೊಡನೆ ವಾಸವಾಗಿ ಹೊಸ ಬದುಕನ್ನು ತೆರೆದರು. ಪ್ರಾರ್ಥನಾ ಸಮಾಜದ 'ಅಲಕ್ಷಿತ ಶಿಶು ಸಂಸ್ಥೆ', 'ವಿಧವಾ ವಿವಾಹ ಸಂಸ್ಥೆ' 'ಸಾರ್ವಜನಿಕ ಸಭಾ'ದಂಥ ಸಮಾಜ ಸಂಸ್ಥೆಗಳಲ್ಲಿ ದುಡಿದರು. ಇವರನ್ನು ವಿರೋಧಿಸಿದವರೂ ಕೂಡ ಮೆಚ್ಚುವಂತೆ, ದಕ್ಷತೆಯಿಂದ ಕೆಲಸ ಮಾಡಿದರು ರಮಾಬಾಯಿ. ಪುರಾಣ ವಾಚನ, ವಿಮೋಚನಾ ಉಪನ್ಯಾಸಗಳಲ್ಲದೆ ಮಾಧವ ಗೋವಿಂದ ರಾನಡೆ ಅವರ ಪತ್ನಿ ರಮಾದೇವಿ ರಾನಡೆ ಅವರಿಂದ ಕಲಿತ ಆಂಗ್ಲ ಭಾಷೆ ಹೆಚ್ಚು ಪ್ರಯೋಜನಕ್ಕೆ ಬಂದಿತು. ಬೈಬಲ್ ಅಭ್ಯಾಸ ನಡೆಸಿದರು. 'ಆರ್ಯ ಮಹಿಳಾ ಸಮಾಜ'ವನ್ನು 1882ರಲ್ಲಿ ರಮಾಬಾಯಿ ಪ್ರಾರಂಭಿಸಿದರು. ಹಲವೆಡೆ ಇದರ ಶಾಖೆಗಳನ್ನೂ ತೆರೆದರು. ಇದು ಭಾರತದ ಮೊದಲ ಮಹಿಳಾ ಸಮಾಜವಾಗಿ ವಿಮೋಚನಾ ಹೋರಾಟದ ಬೇರಾಯಿತು.

ಶಿಕ್ಷಣದ ಮೂಲಕ ಮಹಿಳೆಯರ ಪ್ರಗತಿ ಅವರ ಮೂಲ ಧ್ಯೇಯ. "ವಿದ್ಯಾರ್ಥಿನಿಯರಿಗೆ ನಿಯುಕ್ತರಾಗುವ ಶಿಕ್ಷಕರು, ಪರೀಕ್ಷಕರು ಮಹಿಳೆಯರೇ ಆಗಿರಬೇಕು. ಪುರುಷರಿಗಿಂತ ಇವರಿಗೆ ಹೆಚ್ಚು ವೇತನ ನಿಗದಿಯಾಗಬೇಕು. ನಡತೆಯನ್ನು ಅವರು ಕಲಿಸಬೇಕು. ಈ ವೃತ್ತಿಗೆ ಬರುವವರು ಗೌರವಾನ್ವಿತ ಕುಟುಂಬದವರಾಗಿರಬೇಕು. ಮಾತೃಭಾಷೆ ಬಲ್ಲವರಾಗಿರಬೇಕು" ರಮಾಬಾಯಿಯವರ ಈ ಮಾತುಗಳ ವಸ್ತುನಿಷ್ಠತೆಗೆ ಆ ಕಾಲದಲ್ಲಿ ಬಂದ ಮಹಿಳಾ ಜೀವನ ಚರಿತ್ರೆಗಳು ಸಾಕ್ಷಿಯಾಗಿವೆ.

ಆರ್ಯ ಮಹಿಳಾ ಸಮಾಜದ ಬಿಡುವಿಲ್ಲದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ರಮಾಬಾಯಿಗೆ ಇನ್ನೂ ಮಹತ್ವ ಸಾಧಿಸಬೇಕೆಂಬ ಆಸೆಯು, ವೈದ್ಯಳಾಗಬೇಕೆಂಬ ಕನಸಿನಿಂದ ಹುಟ್ಟಿತು. ಇದಕ್ಕೆ ಕಾರಣವಾದದ್ದು ಅವರ ಸೋದರ ಸಂಬಂಧಿ ಆನಂದಿಬಾಯಿ ಜೋಶಿಯ ಸಾಹಸಗಾಥೆ.

ವಿಧವಾಶ್ರಮ ಸ್ಥಾಪಿಸುವ ಹಂಬಲದಿಂದ ಹಣದ ಕೊರತೆ ನೀಗಿಸಲು ತಮ್ಮ ಪುಟ್ಟ ಮಗುವಿನೊಂದಿಗೆ 1883ರ ಏಪ್ರಿಲ್‌ನಲ್ಲಿ ರಮಾಬಾಯಿ ಹಡಗಿನಲ್ಲಿ ಇಂಗ್ಲೆಂಡ್‌ಗೆ ಹೋದರು. ಅಲ್ಲಿ ಕ್ರೈಸ್ತಧರ್ಮದ ದೀಕ್ಷೆ ಪಡೆದು ಮೂರು ವರ್ಷದ ಶಿಕ್ಷಣದ ನಂತರ ಅಮೇರಿಕೆಗೆ ಹೋದರು. ಅಲ್ಲಿ 'ಹೈ ಕಾಸ್ಟ್ ಹಿಂದೂ ಉಮನ್' ಎಂಬ ತಮ್ಮ ಕೃತಿಯ ದಾಖಲೆ ಮಾರಾಟದ ಮೊತ್ತ ಸೇರಿಸಿ ಸುಮಾರು ಅರವತ್ತು ಸಾವಿರ ಹಾಗೂ ಸಂಸ್ಥೆಗೆ ಹತ್ತು ವರುಷಗಳ ಅನುದಾನದ (ವಾರ್ಷಿಕ ಹದಿನೈದು ಸಾವಿರ) ಆಶ್ವಾಸನೆಯೊಂದಿಗೆ ಭಾರತಕ್ಕೆ ಮರಳಿದರು.

1889ರಲ್ಲಿ ಮುಂಬೈಯಲ್ಲಿ 'ಶಾರದಾ ಸದನ' ಆರಂಭವಾಯಿತು. ಉಚ್ಚವರ್ಗದ ಅಸಹಾಯಕ ಮಹಿಳೆಯರಿಗೆ, ವಿಧವೆಯರಿಗೆ, ವಿದ್ಯಾಕಾಂಕ್ಷಿ ಹುಡುಗಿಯರಿಗೆ ತೆರೆದ ಈ ಸಂಸ್ಥೆಯು ವಸತಿ ಸೌಕರ್ಯವನ್ನು ಒಳಗೊಂಡಿತ್ತು. ಮಹಿಳೆಯರಿಗೆ ಈ ಸದನದಲ್ಲಿ ತಂತಮ್ಮ ನಂಬಿಕೆ ಸಂಪ್ರದಾಯಗಳಿಗನುಸಾರವಾಗಿ ಬದುಕುವ ವೈಧವ್ಯದ ಕಟ್ಟುಪಾಡುಗಳಿಲ್ಲದ ಸ್ವಚ್ಛಂದ ರೂಪದಲ್ಲಿ ದಿನ ಕಳೆಯುವ ಸ್ವಾತಂತ್ರ್ಯ ಇತ್ತು. ಮರಾಠಿ, ಗುಜರಾತಿ, ಇಂಗ್ಲಿಷ್, ಸಂಸ್ಕೃತ, ಮಾಧ್ಯಮ ಇತ್ತು. ಸ್ವಾವಲಂಬನೆಯ ಶಿಕ್ಷಣವೂ ಇದ್ದುದರಿಂದ ಹಲವಾರು ಅಸಹಾಯಕ ಮಹಿಳೆಯರು ತಮ್ಮ ಬದುಕಿನಲ್ಲಿ ಸುಧಾರಣೆ ಕಂಡರು. ಗೋಮಾಬಾಯಿ, ಪಾರ್ವತಿ ಬಾಯಿ ಅಠವಳೆ ಮುಂತಾದವರು ಈ ಮಾತಿಗೆ ಉದಾಹರಣೆ.

1889ರಲ್ಲಿ ಶಾರದಾ ಸದನ ಪೂನಾಕ್ಕೆ ಸ್ಥಳಾಂತರಗೊಂಡಿತು. 'ಮುಕ್ತಿಸದನ', 'ಕೃಪಾಸದನ'ಗಳೂ ಅವತರಿಸಿದವು. ಕಲಿಕೆ+ಗಳಿಕೆಯ ಈ ಸಂಸ್ಥೆಗಳಲ್ಲಿ ಕುಶಲ ಕೈಗಾರಿಕೆ. ಉತ್ಪಾದನೆಗಳೂ ಇದ್ದುವು. ಪುತ್ರಿ ಮನೋರಮಾ ಕೂಡ ರಮಾಬಾಯಿಯವರ ಕೈಕಂಬವಾದರು.

ತಮ್ಮ ಬಿಡುವಿಲ್ಲದ ದುಡಿಮೆಯ ನಡುವೆ ರಮಾಬಾಯಿ ಬರವಣಿಗೆಯ ಕೆಲಸವನ್ನು ಮಾಡಿದರು. ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಇವು ಪ್ರಕಟಗೊಂಡಿವೆ. ಇವು ಜನಜಾಗೃತಿಗೆ ಉಪಯುಕ್ತವಾದುದಷ್ಟೇ ಅಲ್ಲ. ವಿದೇಶ ಪ್ರಯಾಣದ ವೆಚ್ಚ, ಸಂಸ್ಥೆಗಳ ನಿರ್ವಹಣೆಯ ಸಲುವಾಗಿ ರಚಿತಗೊಂಡಿವೆ.

ರಮಾಬಾಯಿ ಅವರ ಮೊದಲ ರಚನೆ 'ಬರ್ಲಿನ್ ಕಾಂಗ್ರೆಸ್' ಕುರಿತು ಸಂಸ್ಕೃತದಲ್ಲಿ ಒಂದು ಪದ್ಯ. 1882ರಲ್ಲಿ 'ಸ್ತ್ರೀ ಧರ್ಮ ನೀತಿ' ಕೃತಿಯಾಗಿ ಹೊರ ಬಂತು (ಮರಾಠಿ). ಆತ್ಮವಿಶ್ವಾಸ ಮತ್ತು ಸ್ವಾವಲಂಬನೆಯ ಅಗತ್ಯ, ಜವಾಬ್ದಾರಿ ಈ ಕೃತಿಯ ತಿರುಳು.

ವಿಚಾರ ಸ್ವಾತಂತ್ರ್ಯ ಮಹಿಳೆಗೆ ಇರಲೇಬೇಕು ಎನ್ನುವುದು ರಮಾಬಾಯಿಯವರ ವಾದ. ಇದಕ್ಕೆ ತಕ್ಕ ಪರಿಸರ ನಿರ್ಮಾಣದ ಅಗತ್ಯ ಕೂಡ ಇವರ ಒತ್ತಾಸೆ. ಮೂಢನಂಬಿಕೆಗಳ ಆಳಾಗದೆ ನೈಜ ಶಿಕ್ಷಣ ಪಡೆದು ಸಮಾಜಕ್ಕೆ ಉಪಯುಕ್ತವಾಗುವ ರೀತಿಯಲ್ಲಿ ಬದುಕಬೇಕು ಎನ್ನುವುದು ಆಶಯ. ತನ್ನ ಸಾಮರ್ಥ್ಯದ ಬಗೆಗೆ ವಿಶ್ವಾಸ ಇಲ್ಲದವರಿಗೆ ದೇವರ ಭರವಸೆಯ ಅವಶ್ಯಕತೆ ಇದೆ ಎಂದು ನೇರ ಆಪಾದಿಸಿದ್ದಾರೆ. ಇವರ 'ಹೈ ಕಾಸ್ಟ್ ಹಿಂದು ವುಮನ್' ಹತ್ತು ಸಾವಿರದಷ್ಟು ಪ್ರತಿಗಳು ಕೆಲವೇ ತಿಂಗಳಲ್ಲಿ ಮಾರಾಟವಾದ ಕೃತಿ. ಇದರ ಹಣ 'ಶಾರದಾ ಸದನ'ಕ್ಕೆ ವಿನಿಯೋಗವಾಗಿದೆ. 'ಪೀಪಲ್ಸ್ ಆಫ್ ಯುನೈಟೆಡ್ ಸ್ಟೇಟ್ಸ್' ಮರಾಠಿ ಭಾಷೆಯ ಕೃತಿ. 1889ರಲ್ಲಿ ಮುಂಬೈಯಲ್ಲಿ ಪ್ರಕಟವಾದ ಈ ಕೃತಿಯಲ್ಲಿ ಅಮೇರಿಕಾ ಬದುಕಿನ ಬಗೆಗೆ ವಿಮರ್ಶಾತ್ಮಕ ಪ್ರತಿಕ್ರಿಯೆ ಇದೆ.

'ವೊಯೇಜ್ ಟು ಇಂಗ್ಲೆಂಡ್' ಅವರ ವಿದೇಶ ಪ್ರಯಾಣದ ಬವಣೆಯ ಚಿತ್ರಣ. 'ಮೈ ಟೆಸ್ಟಿಮನಿ' (ನನ್ನ ಸಾಕ್ಷ್ಯ) ಅವರ ಆತ್ಮಕತೆಯಾಗಿದೆ. 1907ರಲ್ಲಿ ಪ್ರಕಟವಾದ ಇದು ಈವರೆಗೆ ಸುಮಾರು ಒಂಭತ್ತು ಮುದ್ರಣ ಕಂಡಿದೆ. ಇದರಲ್ಲಿ ತಮ್ಮ ಬದುಕಿನ ಪ್ರತಿಯೊಂದು ವಿವರಗಳನ್ನು ದಾಖಲಿಸುತ್ತ ಸನಿಹದವರನ್ನು ವಿಮರ್ಶೆಗೂ ಗುರಿಮಾಡಿದ್ದಾರೆ. ಕೆಲವು ಅನುವಾದಗಳನ್ನೂ ರಮಾಬಾಯಿ ಮಾಡಿದ್ದಾರೆ. ಮೂಲ ಗ್ರೀಕ್ ಮತ್ತು ಹೀಬ್ರೂವಿನಿಂದ ಇಡೀ ಬೈಬಲನ್ನು ಯಾರ ಸಹಾಯವೂ ಇಲ್ಲದೆ ಅನುವಾದ ಮಾಡಿದ ಜಗತ್ತಿನ ಏಕೈಕ ಮಹಿಳೆ ಎಂಬ ಕೀರ್ತಿಗೆ ಅವರು ಭಾಜನರಾಗಿದ್ದಾರೆ.

ಕರ್ನಾಟಕದ ಕರಾವಳಿಯಿಂದ ಆರಂಭಗೊಂಡ ಇವರ ಜೀವನ ಯಾತ್ರೆ ಕಾಶ್ಮೀರ, ಸಮುದ್ರ ದಾಟಿ ಹಲವು ದೇಶಗಳ ಪರ್ಯಟನ ಕಂಡರೂ ತಾಯ್ನೆಲದ ಪ್ರೀತಿ ಅದಮ್ಯವಾಗಿದ್ದುದು ಅವರ ಕೃತಿಗಳಲ್ಲಿ ಮತ್ತು ಮಾತುಗಳಲ್ಲಿ ಕಾಣುತ್ತದೆ. ತನ್ನ ತಾಯಿಯ ಅಂತ್ಯನೆಲ ರಾಯಚೂರನ್ನು ನೋಡಿ ಬರುವಂತೆ ಮಗಳು ಮನೋರಮಾಗೆ ಹೇಳುತ್ತಿದ್ದರು.

ಸಾಮಾಜಿಕ ಚಟುವಟಿಕೆಗಳಲ್ಲಿ ತನ್ನ ತಾಯಿಯೊಂದಿಗೆ ಸಮಾನವಾಗಿ ಕೆಲಸ ಮಾಡುತ್ತಿದ್ದ ಮನೋರಮಾ (ಜನನ: 1881, ಏಪ್ರಿಲ್ 19 ಸಿಲ್‌ಚರ್) ತನ್ನ ಹತ್ತೊಂಬತ್ತನೇ ವಯಸ್ಸಿನಿಂದಲೇ ಸಂಸ್ಥೆಗಳಿಗಾಗಿ ದುಡಿದರೂ ನೆಲೆ ಕಾಣಬೇಕೆಂಬ ತಾಯ ಒತ್ತಾಸೆ ಪೂರ್ಣವಾಗುವ ಮೊದಲೇ 1921ರಲ್ಲಿ ಅಸು ನೀಗಿದರು.

ಮಗಳ ಮರಣಾನಂತರ ರಮಾಬಾಯಿ ಬಹಳ ದಿನ ಉಳಿಯಲಿಲ್ಲ. ಮಗಳ ಅಂತ್ಯ ಯಾತ್ರೆಯಲ್ಲೂ ಅಸೌಖ್ಯದ ಕಾರಣ ಭಾಗವಹಿಸಲಿಲ್ಲ. ಮುಕ್ತಿ ಸದನದ ತಮ್ಮ ಕೊಠಡಿಯಲ್ಲಿ ಏಕಾಂಗಿಯಾಗಿ 1922ರ ಏಪ್ರಿಲ್ ಐದರಂದು ಚಿರನಿದ್ರೆಗೆ ಸೇರಿಹೋದರು. ಆದರೆ ಭಾರತದ ಮಹಿಳೆಯರಲ್ಲಿ ಮರೆಯಲಾಗದ ವ್ಯಕ್ತಿತ್ವವಾಗಿ ಸದಾ ಉಳಿಯುವಂತಾದರು.

ಅವರ ಬದುಕಿನ ಹಾದಿ ಕಲ್ಲುಮುಳ್ಳಿನದು. ತಮ್ಮ ಜೀವಿತಾವಧಿಯಲ್ಲಿ ತಮಗೆ ಸಂಬಂಧಿಸಿದ (ತಂದೆ ತಾಯಿ ಅಣ್ಣ ಅಕ್ಕ ಗಂಡ ಮಗಳು) ಹೀಗೆ ಎಲ್ಲರನ್ನೂ ಎಲ್ಲವನ್ನೂ ಕಳೆದುಕೊಂಡರು.

ತನ್ನ ತಿಳುವಳಿಕೆ, ಜ್ಞಾನ, ಕ್ರಿಯಾಶಕ್ತಿ, ದುಡಿಮೆಯ ದಾಹಗಳಿಂದ ಪಂಡಿತ ಮತ್ತು ಸರಸ್ವತಿ ಬಿರುದುಗಳನ್ನು, ಕೈಸರ್–ಇ–ಹಿಂದ್ ಬಂಗಾರದ ಪದಕವನ್ನೂ ಪಡೆದರು. ಟೀಕೆಗಳು, ಅಪವಾದಗಳು, ಹೋರಾಟಗಳು, ಆರ್ಥಿಕ ಸೋಲು ಎಲ್ಲವೂ ಅವರ ಬಾಳಿನಲ್ಲಿ ಮಿಳಿತವಾಗಿದ್ದರೂ ತಮ್ಮ ವೈಯಕ್ತಿಕ ಸಾಧನೆಯನ್ನಾಗಲಿ ಸಮಸ್ಯೆಯನ್ನಾಗಲಿ, ಪ್ರಧಾನ ನೆಲೆಯಲ್ಲಿ ಎಂದೂ ಪರಿಗಣಿಸದೆ, ಅವರ ವ್ಯಕ್ತಿತ್ವ ಸ್ತ್ರೀಪರ ವಿಚಾರದಲ್ಲಿ ಯಾವುದೇ ರೀತಿಯ ಹೊಂದಾಣಿಕೆಯಿಲ್ಲದೆ ನಡೆದುಕೊಂಡಿತು ಎನ್ನುವುದು ಅಪೂರ್ವ ಸಂಗತಿ.

ಗ್ರಂಥಋಣ: ಪಂಡಿತ ರಮಾಬಾಯಿ ಸರಸ್ವತಿ – ಡಾ॥ ಗೀತಾ ಶೆಣೈ

*

ಆಧುನಿಕ ಕನ್ನಡದ ಮೊದಲ ಬರಹಗಾರ್ತಿ ನಂಜನಗೂಡು ತಿರುಮಲಾಂಬಾ

ಎಂ.ಕೆ. ಉಮಾದೇವಿ

ಇಪ್ಪತ್ತನೆಯ ಶತಮಾನದ ಪ್ರಥಮ ಕನ್ನಡ ಬರಹಗಾರ್ತಿಯಾಗಿ, ಪತ್ರಕರ್ತೆಯಾಗಿ, ಸಮಾಜ ಸೇವಕಿಯಾಗಿ, ಪ್ರಕಾಶಕಿಯಾಗಿ, ಉದ್ಯಮಿಯಾಗಿ ಮೆರೆದು ಕರ್ನಾಟಕದ ಧ್ರುವತಾರೆ ಎನಿಸಿದ ತಿರುಮಲಾಂಬಾ ಹುಟ್ಟಿದ್ದು ದಕ್ಷಿಣ ಕಾಶಿಯೆಂದೇ ಹೆಸರುವಾಸಿಯಾದ ಪುಣ್ಯಕ್ಷೇತ್ರ ನಂಜನಗೂಡಿನಲ್ಲಿ. ಪೌರಾಣಿಕವಾಗಿ ಹಾಗೂ ಐತಿಹಾಸಿಕವಾಗಿ ಪ್ರಸಿದ್ಧವಾದ, ಪವಿತ್ರಯಾತ್ರಾ ಸ್ಥಳವಾದ ನಂಜನಗೂಡು ಮೈಸೂರಿಗೆ ಹದಿನಾಲ್ಕು ಮೈಲಿ ದೂರದಲ್ಲಿದೆ. ಈ ಪುಣ್ಯಕ್ಷೇತ್ರದ ಆರಾಧ್ಯ ದೈವ ನಂಜುಂಡ, ವಿಷಕಂಠನಾದ ನಂಜುಂಡೇಶ್ವರ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಂಜುಂಡೇಶ್ವರ ದೇವಸ್ಥಾನ ಅಭಿವೃದ್ಧಿಯಾಗಿ ದೇವಾಲಯದ ಸುತ್ತಮುತ್ತ ಮನೆಗಳು ಹಾಗೂ ಬೀದಿಗಳಾಗಿ ಊರು ಬೆಳೆಯಿತು. ಹೀಗೆ ಧಾರ್ಮಿಕವಾಗಿ, ಪುಣ್ಯಕ್ಷೇತ್ರವಾಗಿ ಬೆಳೆದ ಊರಿಗೆ ತಿರುಮಲಾಂಬಾರವರ ಪೂರ್ವಿಕರೊಬ್ಬರು ಬಂದು ನೆಲೆಸಿದರು. ದೇವಸ್ಥಾನಕ್ಕೆ ತೀರ ಹತ್ತಿರವಿರುವ ರಸ್ತೆಯಲ್ಲಿ ಎದ್ದು ಕಾಣುವ ದೊಡ್ಡಮನೆ "ಮಾತೃ ಮಂದಿರ". ಈ ಮನೆಯಲ್ಲೇ ತಿರುಮಲಾಂಬಾರವರ ಜನನ, 25.3.1887ರಂದು. ತಂದೆ ವೆಂಕಟಕೃಷ್ಣ ಅಯ್ಯಂಗಾರ್, ತಾಯಿ ಅಲಮೇಲಮ್ಮ ತಿರುಮಲಾಂಬಾವರಿಗೆ ಜಾನಕಮ್ಮ, ತಿರುವೆಂಗಡಮ್ಮ, ಲಕ್ಷ್ಮಮ್ಮ ಎಂಬ ಸಹೋದರಿಯರು, ಶಾಮು ಎಂಬ ಸಹೋದರ ಇದ್ದರು. ತಮ್ಮ ಐದನೇ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದರು ತಿರುಮಲಾಂಬಾ. ವೆಂಕಟಕೃಷ್ಣ ಅಯ್ಯಂಗಾರರು ಲಕ್ಷಮ್ಮ ಎಂಬುವರೊಂದಿಗೆ ಮರುಮದುವೆಯಾದರು, ತಿರುಮಲಾಂಬಾ ಮಲತಾಯಿಯ ಪೋಷಣೆಯಲ್ಲಿ ಬೆಳೆದರು. ವೆಂಕಟಕೃಷ್ಣ ಅಯ್ಯಂಗಾರರು ವಕೀಲರು ಹಾಗೂ ವಿಚಾರವಂತರು. ತಮ್ಮ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಕೊಟ್ಟು ಪ್ರಾಥಮಿಕ ಶಿಕ್ಷಣದವರೆಗೂ ಕಲಿಸಿದರು. ವೆಂಕಟಕೃಷ್ಣ ಅಯ್ಯಂಗಾರರು ಎಷ್ಟೇ ವಿಚಾರವಂತರಾದರೂ, ಸಂಪ್ರದಾಯಸ್ಥ ವೈದಿಕ ಕುಟುಂಬಕ್ಕೆ ಸೇರಿದ ಅವರು ಸಾಮಾಜಿಕ ಕಟ್ಟಳೆಯನ್ನು ಮೀರುವಂತೆ ಇರಲಿಲ್ಲ. ಹೀಗಾಗಿ ಅವರು ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ತಿರುಮಲಾಂಬಾ ಅವರಿಗೆ ಹತ್ತು ವರ್ಷವಾದಾಗ ಅವರ ವಿವಾಹವನ್ನು ಕೊಳ್ಳೆಗಾಲದ ನರಸಿಂಹ ಅಯ್ಯಂಗಾರ್ ಅವರೊಂದಿಗೆ ಮಾಡಿದರು. ವಿವಾಹದೊಂದಿಗೆ ಶಾಲಾಶಿಕ್ಷಣವು ಕೊನೆಗೊಂಡಿತು. ಮದುವೆಯಾದ ನಾಲ್ಕುವರ್ಷಕ್ಕೆ ತಿರುಮಲಾಂಬಾ ತಮ್ಮ ಗಂಡನನ್ನು ಕಳೆದುಕೊಂಡು ವಿಧವೆಯಾದರು. ಪ್ಲೇಗು ರೋಗಕ್ಕೆ ತುತ್ತಾಗಿ ಕಾಲವಶವಾದ ಗಂಡನನ್ನು ತಿರುಮಲಾಂಬಾ ಮೊದಲು ಹಾಗೂ ಕಡೆಯಬಾರಿ ಜೀವಂತ ನೋಡಿದ್ದು ತಮ್ಮ ಮದುವೆಯ ಮಂಟಪದಲ್ಲಿ.

ವಿಧವೆಯರು ಅಂದಿನ ಸಾಮಾಜಿಕ ಜೀವನದಲ್ಲಿ ಅಸಹನೀಯವಾದ ಕಷ್ಟನಿಷ್ಠುರಗಳಿಂದ ಕೂಡಿದ ಬದುಕನ್ನು ಸವೆಸಬೇಕಾಗಿತ್ತು. ಅಗ ಸಮಾಜದಲ್ಲಿ ವಿಧವೆಯ ದರ್ಶನವೇ ಅಪಶಕುನ ಎಂಬ ಅಭಿಪ್ರಾಯವಿತ್ತು ಎಂದ ಮೇಲೆ ಯಾವುದೇ ಶುಭಕ್ಕೆ ಇವಳು ಸಲ್ಲಳು. ಇವಳು ಮುಟ್ಟಿದ್ದು, ನೋಡಿದ್ದು ಹಾಳಾಗುತ್ತದೆ ಎಂಬ ನಂಬಿಕೆ ಬೇರೆ. ಇದೆಲ್ಲ ಸಾಲದೆಂಬಂತೆ ಇವಳ ರೂಪಸ್ವರೂಪಗಳು ವಿರೂಪವಾಗುತ್ತಿತ್ತು. ಇವಳ ನೆಲೆ ಎಂದರೆ ಮನೆಯ ಅಡುಗೆ ಕೋಣೆ ಇಲ್ಲವೆ ಹಿತ್ತಲಕೋಣೆ.

ಇಂತಹ ಸಾಮಾಜಿಕ ವಾತಾವರಣದಲ್ಲಿ ತಮ್ಮ ಹದಿನಾಲ್ಕು ವರ್ಷಕ್ಕೆ ವಿಧವೆಯಾದ ತಿರುಮಲಾಂಬಾ ಬರಡಾದ ಬದುಕಿನ ಸುಳಿಯಲ್ಲಿ ಸಿಕ್ಕಿ ಬಾಳನ್ನು ಸವೆಸದೆ ತಮ್ಮ ಜೀವನಕ್ಕೊಂದು ಅರ್ಥಕಂಡುಕೊಂಡು, ವಿಧಿಯನ್ನು ಹಳಿಯದೆ ತಮಗೆ ಹೀಗಾಯಿತಲ್ಲಾ ಎಂದು ಕೊರಗುತ್ತಾ ಕೂರದೆ ತಮ್ಮ ಮುಂದಿನ ಬದುಕಿಗೆ ಒಂದು ಸುಭದ್ರ ನೆಲೆಯನ್ನು ಹಾಕಿಕೊಂಡದ್ದು ಅವರ ತಂದೆಯವರ ಬೆಂಬಲ ಹಾಗೂ ಪ್ರೋತ್ಸಾಹದಿಂದ.

ವಿಧವೆ ಹೊಸಲು ದಾಟಿದರೆ ಬಹಿಷ್ಕಾರಕ್ಕೆ ಒಳಗಾಗಬೇಕಾದ ಆ ಕಾಲದಲ್ಲಿ ಮಗಳನ್ನು ಮತ್ತೆ ಶಾಲೆಗೆ ಸೇರಿಸುವುದು ವೆಂಕಟಕೃಷ್ಣ ಅಯ್ಯಂಗಾರರಿಗೆ ಕನಸಿನ ಮಾತಾಗಿತ್ತು. ಮಗಳ ಗುರಿ ಮುಂದೇನು ಎಂಬುದೇ ಚಿಂತೆಯಾಗಿ ಕೊನೆಗೆ ತಾವೇ ಗುರುವಾಗಿ ಮನೆಯಲ್ಲೆ ಅಲ್ಪಸ್ವಲ್ಪ ವಿದ್ಯಾಭ್ಯಾಸ ಮಾಡಿಸಿ ಮಗಳ ಮನೋಸ್ಥೆರ್ಯ ಬೆಳೆಯಲು ಶ್ರಮಿಸಿದರು. ರಾಮಾಯಣ, ಮಹಾಭಾರತ, ಭಗವದ್ಗೀತೆ ಮುಂತಾದ ಒಳ್ಳೆಯ ಗ್ರಂಥಗಳ ಪಠಣವೇ ತಿರುಮಲಾಂಬಾರವರ ವಿದ್ಯಾಭ್ಯಾಸವಾಗಿತ್ತು. ಜ್ಞಾನಾರ್ಜನೆಯ ಜೊತೆಜೊತೆಗೆ ಪೂಜೆ ಜಪತಪಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಿರುಮಲಾಂಬಾರವರು ಧೃತಿಗೆಡದೆ 95 ವರ್ಷಗಳ ಪೂರ್ಣಬಾಳನ್ನು ಬಾಳಲು ಭದ್ರಬುನಾದಿ ಹಾಕಿದವರು ಅವರ ತಂದೆ ವೆಂಕಟಕೃಷ್ಣ ಅಯ್ಯಂಗಾರ್.

ತಮ್ಮ ವಾಚನಾಭಿರುಚಿ, ಲೇಖನಾಭಿರುಚಿ ಇವೆರಡು ಸ್ಫುರಿಸಲು ತಮಗೆ ಚಿತ್ತಸ್ಥೈರ್ಯ ಬರಲು ತಂದೆಯ ಪೂರ್ಣ ಪ್ರೋತ್ಸಾಹವೇ ಕಾರಣ ಎಂದು ತಿರುಮಲಾಂಬಾ ಹೇಳಿದ್ದಾರೆ.

ತಂದೆ ವಕೀಲರಾಗಿ, ಲೌಕಿಕದಲ್ಲಿ ಪರಿಣಿತರಾಗಿದ್ದರಿಂದ ತಿರುಮಲಾಂಬಾ ಕಣ್ಣೀರಿನಲ್ಲಿ ಕೈತೊಳೆಯುವ ಹಾಗಾಗಲಿಲ್ಲ. ತಮ್ಮ ತಂದೆಯವರ ಪ್ರೋತ್ಸಾಹದ ಪೂರ್ಣ ಪ್ರಯೋಜನ ಪಡೆದುಕೊಂಡು ಕನ್ನಡ ಸಾರಸ್ವತ ಲೋಕದ ಪ್ರಥಮ ಬರಹಗಾರ್ತಿ, ಕವಯತ್ರಿ, ವಿಚಾರವಾದಿ, ಪತ್ರಿಕಾ ಸಂಪಾದಕಿ, ಗ್ರಂಥಮಾಲೆಯ ಪ್ರಕಾಶಕಿ ಮತ್ತು ಸಮಾಜ ಸುಧಾರಕಿಯಾಗಿ ಕೆಲಸ ಮಾಡುವ ಚೈತನ್ಯವನ್ನು ಹೊಂದಿ ಭಾರತೀಯ ಮಹಿಳೆಯರ ಬದುಕಿನಲ್ಲಿ ಒಂದು ಹೊಸ ಅಧ್ಯಾಯವನ್ನು ಆರಂಭಿಸಿದರು. ಪರಾವಲಂಬಿಯಾಗಿ, ವಿದ್ಯಾವಿಹೀನಳಾಗಿ, ಅಬಲೆಯಾಗಿ, ಅಡುಗೆ ಮನೆಯಲ್ಲೇ ತನ್ನ ಸರ್ವಸ್ವವನ್ನು ಕಂಡು ತನ್ನ ಅಸ್ತಿತ್ವವೆ ಇಲ್ಲದೆ ಮೂಕಳಾಗಿ ವೇದನೆಯಿಂದ ಬಾಳುತ್ತಿದ್ದ ಸಾವಿರಾರು ಹೆಣ್ಣುಮಕ್ಕಳ ಬಾಳಿಗೆ ತಮ್ಮ ಬರಹದ ಮೂಲಕ ಹೊಸ ಜೀವನದ ಬೆಳಕನ್ನು ಇತ್ತರು.

ತಿರುಮಲಾಂಬಾ ತುಂಬಾ ಮೃದು ಸ್ವಭಾವದವರು. ಪರರ ಹಿತಕ್ಕಾಗಿ ಕೆಲಸ ಮಾಡಲು ಸದಾ ಸಿದ್ಧವಿರುತ್ತಿದ್ದರು. ತಮ್ಮ ಎಲ್ಲಾ ಕಾರ್ಯಗಳಲ್ಲೂ ಬಹಳ ಅಚ್ಚುಕಟ್ಟು. ತಮ್ಮ ಕೆಲಸ ಕಾರ್ಯಗಳಿಗೆ ಎಂದೂ ಇತರರನ್ನು ಆಶ್ರಯಿಸುತ್ತಿರಲಿಲ್ಲ. ಶಾರೀರಿಕವಾಗಿ ಸಶಕ್ತರಾಗಿದ್ದರು. ಚಿಕ್ಕಂದಿನಿಂದಲೂ ಬಹಳ ನೋವನ್ನು ಅನುಭವಿಸುತ್ತಾ ಬಂದ ತಿರುಮಲಾಂಬಾ ಸಾಹಿತ್ಯ ಸೇವೆಯಲ್ಲಿ ಹಾಗೂ ಪರರ ಸೇವೆಯಲ್ಲಿ ತಮ್ಮ ಜೀವನದ ಸಾರ್ಥಕತೆಯನ್ನು ಕಂಡುಕೊಂಡರು. ತಮ್ಮ ಬದುಕಿನಲ್ಲಿ ಬಹಳಷ್ಟು ಎತ್ತರಕ್ಕೆ ಬೆಳೆದಿದ್ದರೂ ತಿರುಮಲಾಂಬಾ ನಿಗರ್ವಿ. ಅಹಂಕಾರ ಇವರ ಹತ್ತಿರ ಸುಳಿಯಲಿಲ್ಲ. ತಮ್ಮ ಸರಳತೆ ಹಾಗೂ ನಿಸ್ವಾರ್ಥ ಪ್ರೀತಿಯಿಂದಾಗಿ ಅವರು ಎಲ್ಲರಿಗೂ ಅಚ್ಚುಮೆಚ್ಚಿನ ಅಕ್ಕನಾಗಿದ್ದರು. ತಮ್ಮ ಸೋದರಮಾವ ಗುಂಡ್ಲು ಪಂಡಿತರಿಂದ ಕಲಿತ ಮನೆ ವೈದ್ಯದಲ್ಲಿ ನಿಪುಣೆ. ಆ ವಿದ್ಯೆಯನ್ನು ಜನರ ಸೇವೆಗಾಗಿ ಮುಡುಪಿಟ್ಟರು. ಇವರು ಕೊಡುತ್ತಿದ್ದ ಔಷಧದಿಂದ ಜನ ಗುಣಮುಖರಾಗುತ್ತಿದ್ದುದಲ್ಲದೆ ಇವರನ್ನು "ಧನ್ವಂತರಿ" ಎಂದೇ ಕರೆಯುತ್ತಿದ್ದರು. ತಿರುಮಲಾಂಬಾರವರಿಗೆ ಅತಿಥಿ ಸತ್ಕಾರದಲ್ಲಿ ಆಸಕ್ತಿ, ಅದು ಅಷ್ಟೇ ಪ್ರಿಯವಾದ ಕೆಲಸ. 'ಮಾತೃಮಂದಿರ' ಯಾವಾಗಲೂ ಬಂದು ಹೋಗುವ ಅತಿಥಿಗಳಿಂದ ತುಂಬಿರುತ್ತಿತ್ತು. ಬಡಮಕ್ಕಳಿಗೆ ಮನೆಯಲ್ಲೆ ಆಶ್ರಯಕೊಟ್ಟು ಅವರಿಗೆ ಓದುಬರಹ ಕಲಿಸುತ್ತಿದ್ದರು. ತಿರುಮಲಾಂಬಾರವರಿಗಿದ್ದ ಮತ್ತೊಂದು ವಿಶೇಷವೇನೆಂದರೆ ಇವರಿಗಿದ್ದ ಅತೀಂದ್ರಿಯಶಕ್ತಿ; ಇವರಾಡುವ ಮಾತು ಭವಿಷ್ಯವಾಣಿಯಂತೆ ಸತ್ಯವಾಗಿರುತ್ತಿತ್ತು.

1902ರಲ್ಲಿ ಒಂದು ದಿನ ಹದಿನಾಲ್ಕು ವರ್ಷದ ತಿರುಮಲಾಂಬಾರವರಿಗೆ ಒಂದು ಅಲೌಕಿಕವಾದ ಅನುಭವವಾಯಿತು. ಆ ದಿನ ಬೆಳಗ್ಗೆ ಸೂರ್ಯನನ್ನು ಧ್ಯಾನ ಮಾಡಿ ಸೂರ್ಯಬಿಂಬವನ್ನೇ ನೋಡುತ್ತಿದ್ದಾಗ ಆ ಬಿಂಬದಲ್ಲಿ ಒಂದು ಮೂರ್ತಿ ಹೊರಹೊಮ್ಮಿತು. ಆಗ ಅವರು ರಚಿಸಿದ "ಸರಸ್ವತಿ ಪೊರೆ ಎನ್ನನು" ಎಂಬ ಮೂರು ನುಡಿಯ ಗೀತೆಯೇ ಆಕೆ ಬರೆದ ಮೊದಲ ಗೀತೆ, ಅವರು ಸಾಹಿತ್ಯಕ್ಕೆ ಇತ್ತ ಮೊದಲ ಕಾಣಿಕೆ ಎಂದು ತಿಳಿದು ಬರುತ್ತದೆ. ನಂತರ ತಿರುಮಲಾಂಬಾರವರು ಸುಮಾರು ನಲವತ್ತು ವರ್ಷಕ್ಕೂ ಮೇಲ್ಪಟ್ಟು ಅವಿರತವಾಗಿ ಸೃಷ್ಟಿಸಿದ ಕಾದಂಬರಿ, ಕಥೆ, ಕವನ, ನಾಟಕ, ಇತ್ಯಾದಿ ಸಾಹಿತ್ಯ ಕೃತಿಗಳು ಹಲವಾರು. ಇವುಗಳಲ್ಲಿ ಕಾದಂಬರಿಗಳದ್ದೆ ಮೇಲುಗೈ ಆಗಿದೆ.

(1) ಸಾಮಾಜಿಕ ಕಥಾವಸ್ತುವನ್ನು ಒಳಗೊಂಡ ಕಾದಂಬರಿಗಳು ಸುಶೀಲೆ, ನಭ, ವಿದ್ಯುಲ್ಲತಾ, ವಿರಾಗಿಣಿ, ರವಿವರ್ಮ, ವಿವೇಕೋದಯ, ಗಿರಿಜಾಬಾಯಿ, ಮಾತೃನಂದಿನಿ, ಮಣಿಮಾಲ ಅಜಮಿಳೋಪಾಖ್ಯಾನಂ, ಪೂರ್ಣಕಲಾ.

(2) ಪತ್ತೇದಾರಿ ಕಾದಂಬರಿಗಳು: ದಕ್ಷಕನ್ಯ, ನಿಶಾಕಾಂತ, ವಿಕ್ರಮ

(3) ಕಥಾ ಸಂಕಲನ: ಸಚ್ಚರಿತ ಸುಧಾರ್ಣವ.

(4) ಕವನ ಸಂಕನಗಳು: ಭದ್ರಗೀತಾವಳಿ, ಭಕ್ತಿಗೀತಾವಳಿ, ಭಾವಗೀತಾವಳಿ, ಸುಮುಖೀ ವಿಜಯ

(5) ಪ್ರಬಂಧಗಳು: ಸೇವಾವಿಚಾರ, ವಿಧವಾತತ್ವ, ವಿದ್ಯಾವಿಚಾರ, ಅಬಲಾ ಪೌರ್ಜನ್ಯಂ.

(6) ನಾಟಕಗಳು: ರಮಾನಂದ, ಭಾರ್ಗವ ಗರ್ವಭಂಗ, ಚಂದ್ರವದನ.

ತಮ್ಮ ಸಾಹಿತ್ಯ ಕೃತಿಗಳ ಪ್ರಕಟಣೆಗಾಗಿ ಆ ಕಾಲದಲ್ಲೇ 'ಸತಿ ಹಿತೈಷಿಣಿ' ಗ್ರಂಥಮಾಲೆಯನ್ನು ಆರಂಭಿಸಿದ ಧೀರ ಮಹಿಳೆ ತಿರುಮಲಾಂಬಾ, ಇದಲ್ಲದೆ ಹೆಣ್ಣುಮಕ್ಕಳಿಗೋಸ್ಕರ 'ಕರ್ನಾಟಕ ನಂದಿನಿ' ಮಾಸ ಪತ್ರಿಕೆಯನ್ನೂ; ಬಾಲಕ ಬಾಲಕಿಯರಿಗಾಗಿಯೇ 'ಸನ್ಮಾರ್ಗದರ್ಶಿನಿ' ಎಂಬ ಪತ್ರಿಕೆಯನ್ನೂ ಪ್ರಾರಂಭಿಸಿದರು.

'ಸತಿ ಹಿತೈಷಿಣಿ' ಗ್ರಂಥಮಾಲೆಯನ್ನು ಆರಂಭಿಸಿದ ಬಗ್ಗೆ ತಿರುಮಲಾಂಬಾರವರು ಹೀಗೆ ಹೇಳುತ್ತಾರೆ: "1912ರವರೆಗೆ ಬರೆಯಲ್ಪಟ್ಟ ಕೃತಿಗಳು ಹೊರಗೆ ಬರಲು ದಾರಿಕಾಣದೆ ಹಾಗೆ ಇದ್ದವು. ಭಗವತ್ ಕೃಪೆಯಿಂದಲೂ, ಕರ್ನಾಟಕ ಭಾರತೀ ದೇವಿಯ ಅನುಗ್ರಹದಿಂದಲೂ ಮೇಲಿನ ಕೃತಿಗಳಿಗೆ ಯೋಗದೆಶೆ ಕೂಡಿ ಬಂತು."

1913ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ 'ಸತಿ ಹಿತೈಷಿಣಿ' ಗ್ರಂಥಮಾಲೆಯ ಪ್ರಕಾಶನ ಕಾರ್ಯವನ್ನು ಪ್ರಾರಂಭಿಸಿ ಪ್ರಥಮ ಗ್ರಂಥವಾಗಿ ತಾವೇ ಬರೆದ 'ಸುಶೀಲೆ' ಕಾದಂಬರಿಯನ್ನು ಪ್ರಕಟಿಸಿದರು. ನಂತರ ಮೂರು ವರ್ಷಗಳಲ್ಲಿ ನಭ, ವಿದ್ಯುಲ್ಲತಾ, ವಿರಾಗಿಣಿ ಇತ್ಯಾದಿ ಹನ್ನೊಂದು ಕೃತಿಗಳನ್ನು ಬರೆದು ಪ್ರಕಟಿಸಿದ್ದಲ್ಲದೆ "ಕರ್ನಾಟಕ ನಂದಿನಿ" ಮಾಸ ಪತ್ರಿಕೆಯ ಪ್ರಥಮ ಸಂಚಿಕೆಯನ್ನು ಮುದ್ರಿಸಿದರು.

ತಿರುಮಲಾಂಬಾರವರ ಮನೆಯ ಮಾತು ತಮಿಳಾದರೂ ಕನ್ನಡ ಭಾಷೆಯ ಮೇಲೆ ಅವರಿಗಿದ್ದ ಪ್ರಭುತ್ವವನ್ನು ನಾವು ಅವರ ಸಾಹಿತ್ಯದಲ್ಲಿ ನೋಡಬಹುದು. ಅವರು ಕನ್ನಡದ ಕಟ್ಟಾಳು. "ಕನ್ನಡವು ನಮ್ಮ ತಾಯ್ನುಡಿ, ತಾಯಿಯ ಹಾಲನ್ನು ಕುಡಿದೇ ಮಕ್ಕಳು ಪುಷ್ಟವಾಗಿ ಬೆಳೆದು, ಆಮೇಲೆ ಇತರ ಆಹಾರವನ್ನು ತೆಗೆದುಕೊಳ್ಳುವ ಚೈತನ್ಯವನ್ನು ಪಡೆಯುವಂತೆ ಮಾತೃಭಾಷೆಯ ಬಲದಿಂದ ನಾವು ಚೆನ್ನಾಗಿ ಬೆಳೆದು ಅದರ ಸವಿಯನ್ನು ತಿಳಿಯಲು ಇತರ

ಭಾಷೆಗಳನ್ನು ಕಲಿಯಬೇಕು, ಎಂದರೆ ಕನ್ನಡವೆ ಮುಖ್ಯಭಾಷೆಯಾಗಿಯೂ, ಇಂಗ್ಲಿಷು ಎರಡನೆಯದಾಗಿಯೂ ಇರಬೇಕು" ಎಂದು ಎಂಬತ್ತು ವರ್ಷಗಳ ಹಿಂದೆಯೇ ತಮ್ಮ ಲೇಖನದಲ್ಲಿ ಪ್ರಕಟಿಸಿ ಕನ್ನಡದ ಕಹಳೆಯೂದಿದ ತಿರುಮಲಾಂಬಾರವರ ನಾಡಿನಾಡಿಯಲ್ಲಿ ಮಿಂದಿದ್ದು ಕನ್ನಡದ ಮಹಾಮಂತ್ರ, ಕನ್ನಡಿಗರಿಗೆ ಕನ್ನಡದ ದೀಕ್ಷೆಯನ್ನು ಕೊಟ್ಟ 20ನೇ ಶತಮಾನದ ಕನ್ನಡದ ಪ್ರಥಮ ಧೀಮಂತ ಬರಹಗಾರ್ತಿ ನಂಜನಗೂಡು ತಿರುಮಲಾಂಬಾ ಎಂದರೆ ತಪ್ಪಾಗಲಾರದು.

1910–11ರಲ್ಲಿ ನಡೆದ ತಂಗಿಯ ಮದುವೆಯ ಕಾಲದಲ್ಲಿ ವಧುವರರು ಉರುಟಣೆಯಾಡುವ ಸಮಯದಲ್ಲಿ ಹೇಳುವ ಹಾಡುಗಳನ್ನು ಬರೆಯಬೇಕೆಂದು ಹಿರಿಯರು ತಿರುಮಲಾಂಬಾರವರಿಗೆ ಹೇಳಿದಾಗ, ಬಾಲವಿಧವೆಯಾದ ಅವರು ಉರುಟಣೆ ಹಾಡುಗಳನ್ನು ಸಂತೋಷದಿಂದ 'ಭದ್ರಗೀತಾವಳಿ' ಎಂದು ರಚಿಸಿದ್ದು ಆಕೆಯ ಆತ್ಮಬಲವನ್ನು ತೋರಿಸುತ್ತದೆ. ಹಾಗೆಯೇ ಅಂದಿನ ಸಮಾಜ ಮದುವೆಯ ಶುಭ ಸಮಾರಂಭದಲ್ಲಿ ಈ ಗೀತೆಗಳನ್ನು ಹಾಡಿಸಿ ಕೇಳಿ, ಆದರಿಸಿದ್ದು ಈ ಗೀತೆಗಳ ಹಿರಿಮೆಯಾಗಿದೆ.

1914ರಲ್ಲಿ ದೇಶಭಾಷೆಗಳ ಉದ್ಧಾರದ ಮಾತುಗಳು ಎಲ್ಲೆಲ್ಲೂ ಕೇಳಿಬರುತ್ತಿತ್ತು. ಇದನ್ನು ಕುರಿತ ವಿಚಾರವನ್ನೇ ತಮ್ಮ ಸಾಹಿತ್ಯದಲ್ಲಿ ನೀತಿಬೋಧಕ ಭಾಷಣಗಳಿಂದ ತುಂಬಿ, ಸ್ಪಷ್ಟ ವಿಚಾರವನ್ನು ಕಾದಂಬರಿಯ ಪಾತ್ರಗಳಿಂದ ಹೇಳಿಸುವ ಕಲೆ ತಿರುಮಲಾಂಬಾರವರದ್ದು. ಆ ದಿನಗಳಲ್ಲಿ ವಿಧವೆಯು ತನ್ನ ಬಾಳನ್ನು ಸವೆಸುವುದು ಎಷ್ಟು ಕಷ್ಟ ಎಂಬುದರ ಬಗ್ಗೆ ಎಳೆಎಳೆಯಾಗಿ ವಿವರಿಸುತ್ತಾರೆ. ಅವರು ಅಂದಿನ ಮಧ್ಯಮ ವರ್ಗದ ಚಿತ್ರಣ, ಸಮಾಜದ ಅಂಕುಡೊಂಕು, ಸಂಪ್ರದಾಯ, ಮೂಢನಂಬಿಕೆ, ಹೆಣ್ಣಿನ ಶೋಷಣೆ ಇತ್ಯಾದಿಯನ್ನು ತಮ್ಮ ಕೃತಿಗಳಲ್ಲಿ ಹೇಳಿರುವ ರೀತಿಯನ್ನು ನೋಡಿದರೆ ತಿರುಮಲಾಂಬಾರವರ ದೃಢನಂಬಿಕೆ, ಅಪಾರ ಅನುಭವ, ಸೂಕ್ಷ್ಮ ಮನಸ್ಸು, ಧೈರ್ಯವನ್ನು ನಾವು ಮೆಚ್ಚದೆ ಇರಲು ಸಾಧ್ಯವಿಲ್ಲ. ಅವರ ಸಾಹಿತ್ಯದಲ್ಲಿ ನಾನಾ ಭಾಷಾ ಪ್ರಯೋಗದ ಹಲವು ಹತ್ತು ಮುಖಗಳನ್ನು ನೋಡುತ್ತೇವೆ. ನಾಲ್ಕು ಸಾವಿರ ಪುಟಗಳಿಗೂ ಮೀರಿರುವ ಅವರ ಬರಹದಲ್ಲಿ ಸಾಹಿತ್ಯದ ಶಾಶ್ವತ ಮೌಲ್ಯಗಳನ್ನು, ಸಾರ್ವಕಾಲಿಕ ಸತ್ಯಗಳನ್ನು ನೋಡಬಹುದು. ಅವುಗಳಲ್ಲಿ ಕೆಲವನ್ನು ಇಲ್ಲಿ ನೋಡಿ:

"ಒಳ್ಳೆಯ ಹೆಂಗಸು ಒಳ್ಳೆಯವಳೇ. ಕೆಟ್ಟವಳು ಕೆಟ್ಟವಳೇ. ಒಳ್ಳೆವಳು ಮುಂಡನಾದಿಗಳಿಂದಲೇ ಸಭ್ಯಳಾಗಿರುವಳೆಂದು ತಿಳಿಯುವಂತಿಲ್ಲ. ಸತೀ ಧರ್ಮಪರಾಯಣೆಯರು ಸರ್ವದಾ ಪರಿಶುದ್ಧರೆ ಅಹುದು." (ನಭ– 43)

"ಮೈಲಿಗೆಯು ತಲೆಯ ಕೂದಲಿನಲ್ಲಿಲ್ಲ. ಅದಿರುವುದು ಮನಸ್ಸಿನಲ್ಲಿ" (ನಭ– 43)

"ಅಮ್ಮ ತಲೆಯನ್ನು ಬೋಳಿಸಿಕೊಂಡಮಾತ್ರಕ್ಕೆ ಪವಿತ್ರರಾಗುವರೋ ಈ ರೀತಿ ಮಾಡಬೇಕೆಂದು ಆವ ಶಾಸ್ತ್ರದಲ್ಲಿಯೂ ಇರುವಂತೆ ಕಾಣೆ." (ನಭ– 43)

"ವಿದ್ಯೆಯೆಂದರೆ ಸರಿಯಾದ ತಿಳುವಳಿಕೆ. ದೊಡ್ಡ ದೊಡ್ಡ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಬಿರುದಾವಳಿಯ ಅಕ್ಷರಗಳನ್ನು ಹೆಸರಿನ ಮುಂದಿಟ್ಟುಕೊಂಡು ಮೆರೆಯುವುದಲ್ಲ. ವಿದ್ಯೆಯೆಂದರೆ ಪರೀಕ್ಷೆಗಳಲ್ಲಿ ಹೇಗಾದರೂ ತೇರ್ಗಡೆ ಹೊಂದಿ ಪದವಿಯನ್ನು ಪಡೆಯುವುದಾಗಿ ಪರಿಣಮಿಸುವುದು. ಪ್ರಪಂಚದಲ್ಲಿ ಪ್ರತಿಯೊಬ್ಬನೂ ವಿದ್ಯಾರ್ಥಿಯೇ. ಪ್ರತಿಯೊಬ್ಬನೂ ಒಂದಲ್ಲ ಒಂದನ್ನು ಕಲಿಯಬೇಕಾಗಿರುವುದು." (ನಭ–77–78)

"ಮಹಾಶಯ, ನೀವು ನಿಮ್ಮ ಮಕ್ಕಳನ್ನು ಬಾಲ್ಯವಿವಾಹವೆಂಬ ಕಟ್ಟಳೆಯಲ್ಲಿ ಕೆಡಹುವ ಪ್ರಯತ್ನಕ್ಕೆ ನಿಂತು, ವಯೋ–ವಿದ್ಯೆ–ಗುಣ–ಶೀಲಗಳಲ್ಲಿ ಪರಸ್ಪರ ಹೊಂದಿಸಲಾಗದ ಸಂಬಂಧವೆಂಬ ಆಳವಾದ ಬಾವಿಗೆ ತಳ್ಳಿ, ಅವರನ್ನು ನೀವಾಗಿ ಕೆಡಿಸುತ್ತಿರುವಿರಿ. ಅವರು ಜ್ಞಾನಮಯ ಪ್ರಪಂಚವನ್ನು ಕಾಯುವುದಕ್ಕೆ ಬದಲಾಗಿ ಕಾಮ, ಕ್ರೋಧ,

ಅಹಂಕಾರ, ಮಾತ್ಸರ್ಯ, ತಾಮಸ ಪ್ರಪಂಚದಲ್ಲಿಯೇ ಸಿಕ್ಕಿ ಭ್ರಾಂತಿಯಿಂದ ಕರ್ತವ್ಯವನ್ನರಿಯಲಾರದೆ ಅಪ್ರಯೋಜಕರೆನ್ನಿಸುತ್ತಿರುವುದನ್ನು ನೋಡುವಿರಿ." (ಮಾತೃನಂದಿನಿ–32–33)

ವರದಕ್ಷಿಣೆಯನ್ನು ವಿರೋಧಿಸುವ ಮಾತುಗಳನ್ನು ತಮ್ಮ ಕೃತಿಗಳಲ್ಲಿ ಕಾಣಿಸಿದ್ದು, ಒಂದೆರಡನ್ನು ಇಲ್ಲಿ ಉಲ್ಲೇಖಿಸಿದೆ: "ಜೀವಿತವನ್ನು ಕಲ್ಪಿಸಿಕೊಳ್ಳಲಾರದೆ, ಹೆರರ ಹಣಕ್ಕಾಗಿ ಕೈ ಒಡ್ಡಿ ಜೀವಿಸಬೇಕೆಂಬ ಹೇಡಿಗಳಿಗೆ ನಮ್ಮ ಹೆಣ್ಣುಮಕ್ಕಳನ್ನು ಹೇಗೂ ಕೊಡಲಾರೆವು." (ನಂದಿನಿ–ಪು–42)

"ಹಣಕ್ಕಾಗಿ ಹೆಣಗಾಡಿ ಸಾಯುತ್ತಾ, ತಮ್ಮ ತಮ್ಮ ಮಕ್ಕಳನ್ನೇ ಮಾರುತ್ತಿರುವ ಈ ಕಾಲದ ಮಹಾಜನರ ಕೈಕಾಲುಗಳಿಗೆ ಬೇಡಿಗಳನ್ನು ತೊಡಿಸಲಿಕ್ಕೂ, ಲಜ್ಜಾ–ಭಯಗಳಿಲ್ಲದೆ, ಹಲ್ಕಿರಿದು ವರದಕ್ಷಿಣೆ ಕೊಟ್ಟರೆ ನಿಮ್ಮ ಮಗಳನ್ನು ನಮ್ಮ ಮಗನಿಗೆ ಕೊಳ್ಳುವೆವೆಂದಾಡುವವರ ನಾಲಿಗೆಗೆ ಕರಗಿಸಿದ ಸೀಸವನ್ನು ಸುರಿಯಲಿಕ್ಕೆ ತಗುಲುವ ವೆಚ್ಚಕ್ಕಾಗಿ ನನಗೆ ಲಕ್ಷರೂಪಾಯಿಗಳು ವರದಕ್ಷಿಣೆ ಬೇಕು." (ಮಾತೃನಂದಿನಿ–43)

ಸ್ತ್ರೀಯರ ಸ್ಥಾನಮಾನದ ಸುಧಾರಣೆಗೆ ಮತ್ತು ಅವರ ಶಿಕ್ಷಣಕ್ಕೆ ಸಾಹಿತ್ಯ ಸೇವೆಯ ಮೂಲಕ ಪ್ರಯತ್ನಿಸಿದವರು ತಿರುಮಲಾಂಬಾವರವರು– "ಸ್ತ್ರೀ ಜನಾಂಗವನ್ನು ಯಾರು ದೂಷಿಸುವರೋ ಅವರು ಆತ್ಮದ್ರೋಹ ಪಾತಕಕ್ಕೆ ಮೊದಲು ಗುರಿಯಾಗತಕ್ಕವರು. ಏಕೆಂದರೆ ನಮ್ಮನ್ನು ಹೆತ್ತವಳು ಹೆಂಗಸು, ಹೊತ್ತುಹೊತ್ತಿಗೆ ಅನ್ನ ನೀರಿತ್ತು ಆಡಿಸಿ. ಪಾಡಿಸಿದವಳು ಹೆಂಗಸು." (ಮಾತೃನಂದಿನಿ–171)

"ಸ್ತ್ರೀಯರಿಗೆ ವಿದ್ಯೆಯು ಅಗತ್ಯವಾಗಿಯೂ ಬರಬೇಕು. ಏಕೆಂದರೆ ಲೋಕಯಾತ್ರೆಯಲ್ಲಿ ಸ್ತ್ರೀಯ ಕರ್ತವ್ಯ ಬಹು ಬಲವತ್ತರವಾಗಿರುವುದು." (ಚಂದ್ರವದನ–ನಾಟಕ–10)

"ಸ್ತ್ರೀಯರಿಗೆ ಅತ್ಯುಚ್ಚ ಶಿಕ್ಷಣ, ಆತ್ಮಜ್ಞಾನ, ವಿವೇಚನಾಶಕ್ತಿ, ಶ್ರಮ ಸಹಿಷ್ಣುತೆಗಳೇ ಮೊದಲಾದ ಉತ್ತಮ ಗುಣಗಳು ಬಲವಾಗಿರಬೇಕು. ಹೀಗಾಗಬೇಕಾದರೆ. ಹೆಣ್ಣುಮಕ್ಕಳ ಶಿಕ್ಷಣ ವಿಷಯದಲ್ಲಿ ತಾಯ್ತಂದೆಯರು, ಹೆಚ್ಚಾಗಿ ತಂದೆಯು ಪಕ್ಷಪಾತಾದಿ ದೋಷಗಳಿಗೆಡೆಕೊಡದೆ ಬಹು ಜಾಗರೂಕರಾಗಿರಬೇಕಾಗಿದೆ." (ಚಂದ್ರವದ– 6–7)

ತಮ್ಮ ಸ್ಪಷ್ಟ ಸಂಪಾದಕೀಯ ನಿಲವುಗಳಿಂದ ಸಮಾಜವನ್ನು ಅದರಲ್ಲೂ ಮಹಿಳೆಯರು ಮತ್ತು ಮಕ್ಕಳನ್ನು ಜ್ಞಾನಜ್ಯೋತಿಗಳನ್ನಾಗಿ ಮಾಡುವುದಕ್ಕಾಗಿ ತಿರುಮಲಾಂಬಾರವರು ಸಂಪಾದಿಸುತ್ತಿದ್ದ "ಕರ್ಣಾಟಕ ನಂದಿನಿ" "ಸನ್ಮಾರ್ಗ ದರ್ಶಿನಿ" ಎರಡು ಪತ್ರಿಕೆಗಳೂ ಕನ್ನಡ ಪತ್ರಿಕಾರಂಗದ ಧ್ರುವತಾರೆಗಳು. ಕರ್ನಾಟಕ ನಂದಿನಿಯಲ್ಲಿ ಪ್ರಕಟವಾಗುತ್ತಿದ್ದ ನಿತ್ಯ ಚರ್ಚೆಯು ಬಹಳ ಉಪಯುಕ್ತವಾಗಿರುತ್ತಿತ್ತು. ಜನತೆಗೆ ಬೇಕಾದ ಅತ್ಯಂತ ಗಮನಾರ್ಹ ಆಚಾರ–ವಿಚಾರವನ್ನು ಅವು ಬೋಧಿಸುತ್ತಿದ್ದವು. ಶಿಶುಗಳ ಯೋಗಕ್ಷೇಮ, ಶಿಶುಗಳ ಮರಣಕ್ಕೆ ಮೂಲ ಕಾರಣ, ಶಿಶುಗಳ ಮರಣ ನಿವಾರಣ–ಉಪಾಯಗಳು, ಇಂತಹ ಉತ್ತಮ ಲೇಖನಗಳಲ್ಲಿ ತಿರುಮಲಾಂಬಾರವರ ವೈಜ್ಞಾನಿಕ ಮನೋವೃತ್ತಿಯನ್ನು ನೋಡಬಹುದು. ಇದೇ ಅಲ್ಲದೆ ತಿರುಲಾಂಬಾರವರು ನಂಜನಗೂಡಿನಂತಹ ಕುಗ್ರಾಮದಲ್ಲಿ ಕುಳಿತು; ಸ್ವೇಚ್ಛಾ ಜೀವನದಿಂದ ಅನೇಕಾನೇಕ ತೊಂದರೆಗೀಡಾದ ಪಾಶ್ಚಾತ್ಯರ ಬಗ್ಗೆ ಹಾಗೂ ಅವರ ನಾಗರೀಕತೆಯ ಬಗ್ಗೆ ಬರೆದು 1914ರಲ್ಲೇ ಇಂದಿನ ಏಡ್ಸ್ ಮುಂತಾದ ಆಂತರಂಗಿಕ ರೋಗರುಜಿನಗಳ ಬಗ್ಗೆ ಎಚ್ಚರಿಸಿದ್ದು ಜಾಗೃತ ವಿಶ್ವ ಪ್ರಜ್ಞೆಯ ಅದ್ಭುತ ಸಂಕೇತ ಎನ್ನದೆ ಇರಲು ಸಾಧ್ಯವಿಲ್ಲ.

"ಸನ್ಮಾರ್ಗದರ್ಶಿನಿ" ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ 'ಜೀವನ ದರ್ಶಿನಿ' ಅಂಕಣ ಬರಹಗಳು ಇಂದಿನ ಅಂಕಣಕಾರರಿಗೆ ಮಾರ್ಗದರ್ಶಿಯಾಗಿದೆ. 'ಪತ್ರವ್ಯಾಸಂಗ' ಮಾಲಿಕೆ ಅಂದಿನ ಬದುಕಿಗೆ ಹಿಡಿದ ಕನ್ನಡಿಯಾಗಿದೆ. ಪತ್ರವ್ಯಾಸಂಗ ಸಾಹಿತ್ಯವನ್ನು ಬಳಕೆಗೆ ತಂದ ಮೊದಲಿಗರು ತಿರುಮಲಾಂಬಾ. ಪತ್ರಿಕಾ ಪಕಟಣೆ ಹಾಗೂ ಮುದ್ರಣ

ಕ್ಷೇತ್ರದಲ್ಲಿ ಎಂಬತ್ತು ವರ್ಷಗಳ ಹಿಂದೆಯೇ ತಮ್ಮನ್ನು ತೊಡಗಿಸಿಕೊಂಡ ಏಕೈಕ ಧೀರ ಮಹಿಳೆ, ಇವರ ಈ ಧೈರ್ಯ ಸಾಹಸ ಕನ್ನಡಿಗರಿಗೆ ಇಂದಿಗೂ ಎಂದೆಂದಿಗೂ ಸ್ಫೂರ್ತಿದಾಯಕ. ಮಹಿಳೆಯರಿಗಾಗಿ ತಮ್ಮ ಕ್ರಾಂತಿಕಾರಕ ಲೇಖನಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿ, ಮಹಿಳಾಪರ ಹೋರಾಟಕ್ಕೆ ನಾಂದಿ ಹಾಡಿದ ಮೊದಲ ಲೇಖಕಿ ತಿರುಮಲಾಂಬಾರವರು.

ತಿರುಮಲಾಂಬಾರವರು ನಂಜನಗೂಡಿನಲ್ಲಿ ತಮ್ಮ ತಮ್ಮಂದಿರು ಹಾಗೂ ಅವರ ಮಕ್ಕಳೊಂದಿಗೆ ಬಹಳ ಕಾಲವಿದ್ದರೂ, ಅವರ ತಮ್ಮ ನಾರಾಯಣ ಅಯ್ಯಂಗಾರರ ನಿಧನದ ನಂತರ ಅನೇಕ ವರ್ಷಗಳ ಕಾಲ ಮದ್ರಾಸಿನಲ್ಲಿ ಅವರ ತಂಗಿಯ ಮಗಳ ಮನೆಯಲ್ಲಿ ಇದ್ದರು. ಆ ಹೊತ್ತಿಗಾಗಲೇ ಅವರ ಪ್ರಕಾಶನ ಸಂಸ್ಥೆ ಹಾಗೂ ಬರಹ ನಿಂತು ಹೋಗಿತ್ತು. 1993ರ ವೇಳೆಗೆ ಕನ್ನಡಿಗರ ಮನದಿಂದ ಮರೆಯಾಗಿ ಅಜ್ಞಾತವಾಸದಲ್ಲಿ ಇದ್ದ ತಿರುಮಲಾಂಬಾರವರನ್ನು ಮತ್ತೆ ಕನ್ನಡಿಗರ ಮನದಲ್ಲಿ ನೆನಪಿಸಿ ಶಾಶ್ವತವಾಗಿ ನೆಲೆಸುವಂತೆ ಮಾಡಿದವರು ಖ್ಯಾತ ಶಿಕ್ಷಣತಜ್ಞೆಯಾಗಿದ್ದ ಚಿ.ನಾ. ಮಂಗಳ ಅವರು.

ಚಿ.ನಾ. ಮಂಗಳ ಅವರ ಶ್ರಮದಿಂದಾಗಿ ರಾಷ್ಟ್ರೀಯ ಟ್ರಸ್ಟ್‌ನ ಸಹಕಾರದಿಂದ "ಶಾಶ್ವತೀ" ವಸ್ತುಸಂಗ್ರಹಾಲಯ, ಮಹಿಳಾ ಅಧ್ಯಯನ ಕೇಂದ್ರ ಆರಂಭವಾಯಿತು. ತಿರುಮಲಾಂಬಾರವರ ಹೆಸರಿನಲ್ಲಿ ಆರಂಭವಾದ 'ಶಾಶ್ವತೀ' ಸಂಸ್ಥೆಯಲ್ಲಿ ಕನ್ನಡದ ಮಹಿಳೆಯರು ಸೃಷ್ಟಿಸಿರುವ ಸರ್ವವಿಧದ ಕೌಶಲಕಾರ್ಯಗಳನ್ನು, ಸಾಹಿತ್ಯ ಕೃತಿಗಳನ್ನು ಸಂಗ್ರಹಿಸಿ ಇಡಲಾಗಿದೆ. ಅಲ್ಲದೇ, ತಿರುಮಲಾಂಬಾರವರ ಹೆಸರಿನಲ್ಲಿ ತಿರುಮಲಾಂಬಾ ಪ್ರಶಸ್ತಿಯನ್ನು ಸ್ಥಾಪಿಸಿ ಭಾರತದ ಯಾವುದೇ ಭಾಷೆಯ ಲೇಖಕಿಗೆ ಈ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ಭಾರತದಲ್ಲಿ ಬರಹಗಾರ್ತಿಯರಿಗಾಗಿಯೇ ಇರುವ ರಾಷ್ಟ್ರೀಯ ಮಟ್ಟದ ಪ್ರಶಸ್ತಿ ಇದೊಂದೇ.

ಬೆಂಗಳೂರು ವಿಶ್ವವಿದ್ಯಾಲಯವು ಕನ್ನಡ ಎಂ.ಎ.ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ತಿರುಮಲಾಂಬಾ ಹೆಸರಿನಲ್ಲಿ ಚಿನ್ನದ ಪದಕ ನೀಡುತ್ತಾ ಬಂದಿದೆ. ಇವರ ಸಾಹಿತ್ಯದ ಬಗ್ಗೆ ಬರೆದ ಪ್ರೌಢ ಪ್ರಬಂಧಕ್ಕೆ ಪಿಎಚ್.ಡಿ. ಪಡೆದವರು ಅರ್ಜುನಪುರಿ ಅಪ್ಪಾಜಿಗೌಡ ಎಂಬುವವರು. ತಿರುಮಲಾಂಬಾರವರ ಪ್ರಥಮ ಲೇಖನ 'ಸದಾಚಾರ'ಕ್ಕೆ 1916ರಲ್ಲಿ ಬಹುಮಾನ ದೊರಕಿತ್ತು. ಆಮೇಲೆ ಅವರಿಗೆ ಮೈಸೂರು ಬೊಂಬಾಯಿ, ಮದರಾಸು, ಸರ್ಕಾರಗಳ ವಿದ್ಯಾ ಇಲಾಖೆಯಿಂದ ಅನೇಕ ಬಹುಮಾನಗಳು ಬಂದವು. ಇವರ ಸಾಹಿತ್ಯ ಸಾಧನೆಗಾಗಿ 1979–80ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ, 1981ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳು ಇವರಿಗೆ ದೊರೆತವು.

ತಿರುಮಲಾಂಬಾರವರ ಅನೇಕ ಪುಸ್ತಕಗಳು ಮೈಸೂರು, ಬೊಂಬಾಯಿ, ಮದರಾಸು ಶಾಲಾಕಾಲೇಜುಗಳಲ್ಲಿ ಪಠ್ಯ ಪುಸ್ತಕಕ್ಕೆ ಆಯ್ಕೆ ಆಗಿ ಸಾವಿರಾರು ವಿದ್ಯಾರ್ಥಿಗಳು ಅವರ ಸಾಹಿತ್ಯವನ್ನು ಅಭ್ಯಾಸ ಮಾಡಿದ್ದಾರೆ.

ತಿರುಮಲಾಂಬಾರವರ ಜನ್ಮಾಶತಾಬ್ಧಿಯನ್ನು ನಂಜನಗೂಡಿನ "ಮಾತೃಮಂದಿರ"ದಲ್ಲಿ ದೀಪ ಬೆಳಗುವುದರ ಮೂಲಕ ಆರಂಭಿಸಿ 1987–1988ರ ಇಡೀ ಒಂದು ವರ್ಷ ರಾಷ್ಟ್ರದ ನಾನಾ ಕಡೆ ಆಚರಿಸಲಾಯಿತು.

ಇಪ್ಪತ್ತನೆಯ ಶತಮಾನದ ಖ್ಯಾತ ಬರಹಗಾರ್ತಿ ನಂಜನಗೂಡು ತಿರುಮಲಾಂಬಾ ಅವರು ಸಾರ್ಥಕ ತುಂಬು ಜೀವನ ನಡೆಸಿ ತಮ್ಮ 95ನೆಯ ವಯಸ್ಸಿನಲ್ಲಿ ತಾ. 31–8–1982ರಂದು ಬೆಂಗಳೂರಿನ ತಮ್ಮ ತಮ್ಮನ ಮನೆಯಲ್ಲಿ ಕಾಲವಾದರು. ಸಾಹಿತ್ಯ ಲೋಕಕ್ಕೆ ತಿರುಮಲಾಂಬಾರವರ ಬದುಕು–ಬರಹ ಒಂದು ಆದರ್ಶ. ಅವರು ನಮ್ಮ ನಾಡಿನ ಅನನ್ಯ ಮಹಿಳಾ ಚೇತನ. ಕರ್ನಾಟಕದ ನಂದಾದೀಪ. ಈ ಬೆಳಕು ಕನ್ನಡಿಗರ ಮನ, ಮನೆಗಳಲ್ಲಿ ಸದಾ ಬೆಳಗುತ್ತಿರಲಿ.

——— * ———

ಮಕ್ಕಳ ಕೂಟದ ನಿರ್ಮಾಪಕಿ ಆರ್.ಕಲ್ಯಾಣಮ್ಮ

ವಿಜಯಲಕ್ಷ್ಮಿ ಕೃಷ್ಣಪ್ರಸಾದ್

"ಎಲ್ಲ ವಿಧವೆಯರ ಹಾಗೆ ಬರೀ ಗೋಳಾಡುತ್ತ, ಇನ್ನೊಬ್ಬರ ಗೋಳಾಗುತ್ತ ಬದುಕು ಸವೆಸಬಾರದು" ಎಂಬ ನಿರ್ಧಾರ ಕೈಗೊಂಡಾಗ, ಆಕೆಗಿನ್ನೂ ಹದಿಹರೆಯ ಅರಳುತ್ತಿದ್ದ ವಯಸ್ಸು. ಜೀವನ, ದಾಂಪತ್ಯ, ಸಂಸಾರ, ವಿವಾಹಗಳ ನಿಜವಾದ ಅರ್ಥ ತಿಳಿಯುವ ಮೊದಲೇ ಆಕೆಯ ಪಾಲಿನ ಈ ಎಲ್ಲವೂ ಮುಗಿದುಹೋಯಿತು ಎಂದಿತ್ತು ಸಮಾಜ. ತಿಳಿವಳಿಕೆಯ ಕಣ್ಣುಗಳು ತೆರೆಯುವ ಮೊದಲೇ ವಿಧವೆಯಾದ ಆಘಾತಕ್ಕೆ ಅರಳಿಕೊಂಡಿದ್ದವು. ಆಕೆಯ ಹೆಸರು ಆರ್. ಕಲ್ಯಾಣಮ್ಮ. ಮನೆ ಇದ್ದುದು, ಬೆಂಗಳೂರಿನ ನಡುವಿನ ಚಾಮರಾಜಪೇಟೆಯಲ್ಲಿ. ಆಕೆ ಹುಟ್ಟಿದ ವರ್ಷದ ಬಗ್ಗೆ ದ್ವಂದ್ವ ಹೇಳಿಕೆಗಳಿದ್ದು, ನಿಜವಾಗಿ ಹುಟ್ಟಿದ್ದು, 1892ರಲ್ಲಿ ಎಂಬುದು ಬಹುಜನರ ಹೇಳಿಕೆಯಾಗಿರುವುದರಿಂದ, ಅದನ್ನೇ ಇಲ್ಲಿ ದಾಖಲಿಸಿಕೊಳ್ಳಲಾಗಿದೆ.

ಸಾಲು ಸಾಲು ಸಮಸ್ಯೆಗಳ ಸನಿಹದಲ್ಲಿ, ಕಣ್ಣೀರಿನೊಂದಿಗೆ ಸಾಗಿಸಬೇಕಾಗಿದ್ದಂಥ ಜೀವನವನ್ನು ಬೋರಲು ಹಾಕಿ, ಪ್ರತಿಭಾಶಕ್ತಿಯಾಗಿ ಬೆಳೆಯಲು ಪ್ರೇರಣೆ ನೀಡಿದ್ದು, ಅವರ ಚಿಕ್ಕಪ್ಪನವರಾದ ಕೆ.ಎಸ್. ಕೃಷ್ಣಯ್ಯಂಗಾರ್. ವಿಧವೆಯಾದ ಹುಡುಗಿಗೆ ಸುಮ್ಮನೆ ಕೂಡಲು ಬಿಡದೇ ಓದು ಮುಂದುವರಿಸಲು ಪ್ರೇರೇಪಿಸಿದರು ಅವರು. ಆಕೆ ಓದಿದ್ದು, ಕೇವಲ ಲೋಯರ್ ಸೆಕೆಂಡರಿ. ಆದರೆ, ಪ್ರಪಂಚದ ಅಗತ್ಯ ಜ್ಞಾನಗಳನ್ನು ಮಿದುಳುಗಳಿಗೆ ತುಂಬಿಸಿಕೊಳ್ಳಲು ಇಷ್ಟೇ ಓದು ಸಾಕಲ್ಲ? ಕಲ್ಯಾಣಮ್ಮನವರು ಮನೆಯಲ್ಲಿಯೇ ತಮಿಳು, ಸಂಸ್ಕೃತ ಭಾಷೆಗಳ ಪ್ರಾಚೀನ ಗ್ರಂಥಗಳ ಅಧ್ಯಯನ ಮಾಡಿದರು.

ಮನಸಿನಲ್ಲಿ ಛಲವಿತ್ತು, ಮಿದುಳಿನಲ್ಲಿ ಜ್ಞಾನವಿತ್ತು, ಸ್ತ್ರೀಯರ ಸ್ಥಿತಿಗತಿಗಳ ಬಗ್ಗೆ ಸ್ವತಃ ಅನುಭವವೂ ಸೇರಿದ ಅರಿವಿತ್ತು. ಅಧ್ಯಯನದ ಬೆಳಕಲ್ಲಿ ಮೂಡಿದ ಆಲೋಚನೆಗಳನ್ನು ಹಿಡಿದು, ಪ್ರಥಮವಾಗಿ ಬೇರೆಬೇರೆ ಪತ್ರಿಕೆಗಳಿಗೆ ಲೇಖನ ಮತ್ತು ಕಥೆಗಳನ್ನು ಬರೆದು ಕಳಿಸತೊಡಗಿದರು. ವಿಧವೆಯಾಗಿ ಹಲವಾರು ಸಮಸ್ಯೆಗಳನ್ನೂ, ಒಂಟಿತನವನ್ನೂ ಎದುರಿಸಬೇಕಾಗಿದ್ದ ಸಂದರ್ಭದಲ್ಲಿ, ಹೆಣ್ಣು ಹೊಸ್ತಿಲು ದಾಟಿದಾಕ್ಷಣ ಅನುಮಾನದ ಕಣ್ಣುಗಳಿಂದ ನೋಡುವ ಸಮಾಜಕ್ಕೆ ನೈತಿಕ ಅಚ್ಚಿನಲ್ಲಿದ್ದುಕೊಂಡೇ ಮಹತ್ತರವಾದುದನ್ನು ಸಾಧಿಸುವ ಸಾಮರ್ಥ್ಯ ಸ್ತ್ರೀಗಿದೆ ಎಂಬುದನ್ನು ಜನರಿಗೆ ತಿಳಿಸಿ, ತೋರಿಸಿಕೊಡಬೇಕಾಗಿತ್ತು ಅವರು. ಆದರೆ ಈಗಲೂ ಅನುಮಾನಿಸುವಂತೆಯೇ, ನೇರವಾಗಿ ಹೇಳಿದರೆ ಹೇಳುವವರ ನೀತಿ–ನಡತೆಗಳ ಬಗ್ಗೆಯೇ ಶಂಕಿಸಿ ಬಿಡುವ ಸಮಾಜದ ಅನುಮಾನದ ಕತ್ತಿಯಿಂದ ತಪ್ಪಿಸಿಕೊಳ್ಳಲು ತಮ್ಮ ಅಂತರಂಗದ ಮಾತುಗಳಿಗೆ, ಕೊಡಬೇಕಾದ ಉಪದೇಶಗಳಿಗೆ, ಸಾಹಿತ್ಯ ಮತ್ತು ಪತ್ರಿಕೆಗಳ ಕವಚ ತೊಡಿಸಿದರು. ಶಾಸ್ತ್ರ ಸಂಪ್ರದಾಯಗಳ ದೊಡ್ಡ ಕುಟುಂಬದಲ್ಲಿ ವಿಧವೆಯರ ಅಡಿಗೆಗೆ ಮನ್ನಣೆ ಇರಲಿಲ್ಲ. ಮಡಿಯಡುಗೆಗೆ ಅವಕಾಶವಿರಲಿಲ್ಲ. ಒಂದು ರೀತಿಯಲ್ಲಿ ಅವರ ಬೆಳವಣಿಗೆಗೆ ಇದು ಮಾರುವೇಷದ ಆಶೀರ್ವಾದವೇ ಆಯಿತು. ಅಡಿಗೆಗಿರುವ ಹಾಗೆ ಉಳಿದ ಕೆಲಸಗಳನ್ನು ಮಾಡಲು ಹೊತ್ತುಗೊತ್ತುಗಳ ನಿಗದಿ ಇರುವುದಿಲ್ಲವಲ್ಲ.

ಅಂಗಳ ಸಾರಿಸಿ ರಂಗೋಲೆ ಇಡುವುದು, ಕುಟ್ಟುವುದು, ಬೀಸುವುದು, ಹಪ್ಪಳ ಲಟ್ಟಿಸುವುದು, ಎಲೆ ಹಚ್ಚುವುದು, ಬಟ್ಟೆ ಒಗೆಯುವುದು, ಇತ್ಯಾದಿ ಕಲ್ಯಾಣಮ್ಮನವರ ಪಾಲಿಗಿದ್ದ ಕೆಲಸಗಳು. ಮನೆಯ ಎಲ್ಲ ಹೆಂಗಸರ ಒಂಭತ್ತು ಗಜದ ಸೀರೆಗಳನ್ನು ಚೆನ್ನಾಗಿ ಒಗೆದು, ಇಸ್ತ್ರೀ ಮಾಡಿದಂತೆ ಒಣ ಹಾಕುವುದು ಮತ್ತು ಎಲ್ಲರ ಊಟದ ನಂತರ ಪಾತ್ರೆಗಳನ್ನು ತೊಳೆಯುವುದು ಕಲ್ಯಾಣಮ್ಮನವರ ಕೆಲಸ. "ಸರಸ್ವತಿ" ಪತ್ರಿಕೆಯ ಕೆಲಸದ ಜೊತೆಜೊತೆಗೇ ಬಿಡದೇ ಮುಂದುವರಿಸಿಕೊಂಡು ಮಾಡುತ್ತಿದ್ದ ಮನೆಗೆಲಸಗಳು. ಹೊರಗೆ ಬಂದಾಗ ಪುಟಗಟ್ಟಲೆ ಮಾತಾಡುವ ಸಾಮರ್ಥ್ಯ ತೋರುತ್ತಿದ್ದ ವಾಗ್ಮಿ. ಮನೆಯಲ್ಲಿ ಮಿತಭಾಷಿ. ನಯವಾದ ನಡತೆ, ಮೃದು ಮಾತು, ಸೌಜನ್ಯತೆ–ಇವು ಅವರ ಮೂಲಗುಣಗಳು, ಎಂದು 'ಕಲ್ಯಾಣ ಸರಸ್ವತಿ'ಯಲ್ಲಿ ಹೇಳಲಾಗಿದೆ.

1913ರಲ್ಲಿ ಮಹಿಳೆಯರಿಗಾಗಿ "ಶ್ರೀ ಶಾರದಾ ಸ್ತ್ರೀ ಸಮಾಜ"ವನ್ನು ಆರಂಭಿಸಿದರು. ಒಬ್ಬ ಉಪಾಧ್ಯಕ್ಷೆ, ಒಂಬತ್ತು ಸದಸ್ಯರ ಕಾರ್ಯಕಾರಿ ಸಮಿತಿಯನ್ನೊಳಗೊಂಡು, ಲೇಡಿ ಪುಟ್ಟಣ್ಣ ಚೆಟ್ಟಿಯವರ ಅಧ್ಯಕ್ಷತೆಯಲ್ಲಿ, ಆರಂಭಗೊಂಡ ಈ ಸಮಾಜಕ್ಕೆ ಕಾರ್ಯದರ್ಶಿ ಮತ್ತು ಖಜಾಂಚಿಯಾದವರು ಆರ್.ಕಲ್ಯಾಣಮ್ಮನವರೇ. ಮಹಿಳೆಯರು ಸಿದ್ಧಪಡಿಸುವ ಕೈ ಕೆಲಸದ ವಸ್ತುಗಳ ಸಂಗ್ರಹಿಸಿ ಪ್ರದರ್ಶನಕ್ಕಿಡುವುದು, ಅವರ ತಯಾರಿಕೆಯನ್ನು ಪ್ರಚಾರ ಮಾಡುವುದು, ಅವರಿಗೆ ಕರಕುಶಲವಸ್ತು ತಯಾರಿಕೆಗೆ ಪ್ರೋತ್ಸಾಹ ನೀಡುವಂಥ ಕೆಲಸಗಳೇ ಅಲ್ಲದೇ ದೇಶದ ಸಮಕಾಲೀನ ಸುದ್ದಿಗಳ ಬಗ್ಗೆಯೂ ಅರಿವು ಮೂಡಿಸುವಂಥ ಕೆಲಸವನ್ನು ಈ ಸಮಾಜದಲ್ಲಿ ಮಾಡಲಾಗುತ್ತಿತ್ತು. ಭೂಕಂಪ, ನೈಸರ್ಗಿಕ ಉಪಟಳಗಳು, ಬೇರೆ ಬೇರೆ ದೇಶಗಳ ಸ್ತ್ರೀಯರ ಸ್ಥಿತಿಗಳು ಮುಂತಾದ ವಿಷಯಗಳ ಬಗ್ಗೆ ಉಪನ್ಯಾಸಗಳು, ಆಗಿನ ಆಗುಹೋಗುಗಳ ಬಗ್ಗೆ ಸ್ತ್ರೀಯರನ್ನು ಆಲೋಚನೆಗೆ ಒಳಗುಮಾಡುವಂಥ ವಿಚಾರ ಸಮಾಲೋಚನೆಗಳು, ಹೊಲಿಗೆ, ಬೆತ್ತದ ಹೆಣಿಗೆಯಂಥ ಕೈ ಕಸುಬು, ಇಲ್ಲಿ ನಡೆಯುತ್ತಿದ್ದವು. ಶ್ರೀಮಂತರು ಮತ್ತು ಬಡವರ ನಡುವಿನ ಬೇಧಭಾವವನ್ನು ಹೋಗಲಾಡಿಸುವಂತೆ ಒಟ್ಟಾಗಿ ಕಲೆತು ಹೊಲಿಗೆ, ಕಸೂತಿ, ಚಿತ್ರಕಲೆ ಮುಂತಾದ ಕಲಿಕೆ, ನಿರಕ್ಷರರಿಗಾಗಿ ಉಪನ್ಯಾಸ, ಸಾಕ್ಷ್ಯ ಚಿತ್ರ ಪ್ರದರ್ಶನ, ಆರೋಗ್ಯ, ಕುಟುಂಬ ರಕ್ಷಣೆ, ಮಹಿಳಾ ಸ್ವಾವಲಂಬನೆಗೆ ಮಾರ್ಗದರ್ಶನ ಮುಂತಾದವುಗಳ ವ್ಯವಸ್ಥೆ ಇರುವಂಥ ಮಹಿಳಾ ಸಮಾಜಗಳು ರಾಜ್ಯಾದ್ಯಂತ ಕಾರ್ಯನಿರ್ವಹಿಸಬೇಕೆಂಬುದು ಅವರ ಆಶಯ. ಮೊದಲ ಮಹಾ ಯುದ್ಧದ ಸೈನಿಕರಿಗೆ ಕಾಲುಚೀಲ, ರೆಡಿಮೇಡ್ ತಯಾರಿಕೆಗಳು, ಕೈಕಸುಬಿನ ವಸ್ತುಗಳು, ಸಂಗ್ರಹಿಸಿದ ಹಣ, ಮುಂತಾದುವನ್ನು ಶಾರದಾ ಸ್ತ್ರೀ ಸಮಾಜದಿಂದ ನೀಡಿದ್ದಾರೆ.

ಆದರೆ ಕಲ್ಯಾಣಮ್ಮನವರ ಅಗಾಧ ಚೈತನ್ಯಕ್ಕೆ ಈ ಸಮಾಜದ ಕಾರ್ಯಭಾರದಿಂದ ತೃಪ್ತಿ ಸಿಗಲಿಲ್ಲ. ರಾಜ್ಯದ ಎಲ್ಲ ಸ್ತ್ರೀಯರಿಗೆ ಅರಿವು ಮೂಡಿಸಬೇಕಾದರೆ, ಪತ್ರಿಕಾ ಮಾಧ್ಯಮ ಒಂದರಿಂದಲೇ ಸಾಧ್ಯವೆಂದು ಅವರ ಆಲೋಚನೆ ಹೇಳತೊಡಗಿತ್ತು. ಸಮಾಜದ ನಾಲ್ಕನೇ ವಾರ್ಷಿಕೋತ್ಸವ ಸಂದರ್ಭದಲ್ಲಿ, ಎ.ಆರ್. ಬ್ಯಾನರ್ಜಿಯವರ ಪತ್ನಿ ಶ್ರೀಮತಿ ನಳಿನೀದೇವಿಯವರು, ಬಂಗಾಲದ ಸ್ವರ್ಣ ಕುಮಾರಿ ದೇವಿಯವರು ನಡೆಸುತ್ತಿರುವ, ಭಾರತೀಯ ರೀತಿಯಲ್ಲಿ ಕನ್ನಡದಲ್ಲಿ ಒಂದು ಪತ್ರಿಕೆಯನ್ನು ಯಾರಾದರೂ ಹೊರತಂದರೆ, ತಾವು ಅದಕ್ಕೆ ಹಣ ಸಹಾಯ ಮಾಡುತ್ತೇವೆ ಎಂದು ಹೇಳಿದ ಮಾತು, ಕಲ್ಯಾಣಮ್ಮನವರ ಅಂತರಂಗದಲ್ಲಿ ಮೊದಲೇ ಇದ್ದ ಆಶಯಕ್ಕೆ ಶುಭ ನುಡಿದಂತಾಯಿತು. ಸಂಕಲ್ಪ ದೃಢಗೊಂಡು, 1917ರಲ್ಲಿ 'ಸರಸ್ವತಿ' ಪಾಕ್ಷಿಕ ಪತ್ರಿಕೆ ಹೊರಬರತೊಡಗಿತು. ಒಂದೆರಡು ವರ್ಷಗಳು ಕಾಲ ಶ್ರಮಪಟ್ಟು ನಡೆಸಿ ನಿಲ್ಲಿಸಿ, 1920ರಲ್ಲಿ ಪುನಃ ಮಾಸ ಪತ್ರಿಕೆಯಾಗಿ ಆರಂಭಿಸಿದರು. ಇದನ್ನು ಸುಮಾರು ನಲವತ್ತಮೂರು ವರ್ಷಗಳ ಕಾಲ ಬಿಡದೇ, ಬೇಸರಿಸದೇ, ಸೋಲದೇ ನಡೆಸಿದರು. ಸ್ತ್ರೀಯರ ಸಮಸ್ಯೆಗಳು, ನಾರಿಯರಿಗಾಗಿ ಜಗತ್ತಿನ ವಿವಿಧ ವಿಷಯಗಳು, ಸಾಮಾನ್ಯ ಜ್ಞಾನಾಭಿವೃದ್ಧಿಗೆ ಅಂಕಣಗಳು, ಸಾಂಸ್ಕೃತಿಕ ಕಾರ್ಯಕ್ರಮಗಳ ವರದಿಗಳು, ಹೊಸರುಚಿ, ಪಥ್ಯ, ಕೌಟುಂಬಿಕ ಸಲಹೆಗಳು, ತಿಳಿಹಾಸ್ಯದ ಚುಟುಕುಗಳು, ಮಹಿಳಾ ಪ್ರಗತಿಗೆ ಪೂರಕವಾದ ಲೇಖನಗಳು, ಈ ಸರಸ್ವತಿ ಪತ್ರಿಕೆಯಲ್ಲಿರುತ್ತಿದ್ದವು. ಆದರೆ ಎಂಥ ಕಠಿಣ ಪರಿಸ್ಥಿಯಲ್ಲೂ ಅವರು, ಹಣಕ್ಕಾಗಿ

ಚಲನಚಿತ್ರ ವಿಭಾಗವನ್ನು ತೆರೆಯದೆ, ತಮ್ಮ ದೃಢ ನೀತಿ ಮತ್ತು ಸದಭಿಲಾಷೆಯನ್ನು ತೋರಿದ್ದಾರೆ. ಮಕ್ಕಳ ಮನರಂಜನೆ ಮತ್ತು ಮಾರ್ಗದರ್ಶನ ದೃಷ್ಟಿಯಿಂದ 'ಮಕ್ಕಳ ಬಾವುಟ' ಎಂಬ ವಿಭಾಗ ಆರಂಭಿಸಿ, ಮಕ್ಕಳದೇ ಬರಹಗಳನ್ನು ಅದರಲ್ಲಿ ಪ್ರಕಟಿಸುವ ಮೂಲಕ ಅವರೊಳಗಿನ ಸಾಹಿತಿಯನ್ನು ಮೇಲೆಬ್ಬಿಸುವ ಪ್ರಯತ್ನ ಮಾಡಿದರು. ಮಾತ್ರವಲ್ಲ ಆಗ ಬಾಲಕನಾಗಿದ್ದ ಚಿ. ಉದಯಶಂಕರಗೆ ಈ ವಿಭಾಗದ ಸಂಪಾದಕನನ್ನಾಗಿಸುವ ಮೂಲಕ ಕಟ್ಟಿ ಕೊಟ್ಟ ಅವಕಾಶ ಮತ್ತು ಅನುಭವಗಳೇ, ಅವರು ಮುಂದೆ ಕನ್ನಡ ಚಿತ್ರರಂಗದಲ್ಲಿ ಪ್ರಸಿದ್ಧ ಬರಹಗಾರರಾಗಲು ಬುನಾದಿಯಾದದ್ದು. ಸಂಸ್ಕೃತದ ಘನ ವಿದ್ವಾಂಸರೂ, ಶಾಲಾ ಇನ್ಸ್‌ಪೆಕ್ಟರೂ ಮತ್ತು ಸರಸ್ವತಿಗೆ ಚಂದಾದಾರರೂ ಆದ ಎಚ್.ವೈ. ಯೋಗಾನನರಸಿಂಹರವರ ಪತ್ನಿ ಸರಸ್ವತಮ್ಮನವರು, ಇದರ ಪತ್ರಿಕೆಗೆ ಲೇಖನ ಬರೆಯುವಷ್ಟು ಬೆಳೆದದ್ದು, ಮೈಸೂರಿನಲ್ಲಿ ಒಂದು ಮಕ್ಕಳ ಕೂಟವನ್ನು ಸ್ಥಾಪಿಸಿ, ಹದಿನೆಂಟು ವರ್ಷ ಅದರ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವಂತಾದದ್ದು, ಕಲ್ಯಾಣಮ್ಮನವರ ಉತ್ತೇಜನ ಮತ್ತು ಮಾರ್ಗದರ್ಶನಗಳಿಂದಲೇ. ಮಕ್ಕಳ ಚಟುವಟಿಕೆಗಳನ್ನು ಹೆಚ್ಚಿಸಲು, ಅವರಲ್ಲಿರುವ ಪ್ರತಿಭೆ ಮತ್ತು ಚೈತನ್ಯಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಲ್ಯಾಣಮ್ಮನವರು 1938ರಲ್ಲಿ ಸ್ಥಾಪಿಸಿದ್ದು, ಅಖಿಲ ಕರ್ನಾಟಕ ಮಕ್ಕಳ ಕೂಟವನ್ನು, ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ ತಂಗಿ ರಾಜಕುಮಾರಿ ವಿಜಯಲಕ್ಷಮ್ಮಣ್ಣಿಯಿಂದ ಉದ್ಘಾಟನೆಗೊಂಡ ಈ ಮಕ್ಕಳ ಕೂಟ, ಈಗಲೂ ಚಾಮರಾಜಪೇಟೆಯಲ್ಲಿ ಇದ್ದು ಕಲ್ಯಾಣಮ್ಮನವರ ಹೆಸರನ್ನು ಜನರಿಗೆ ಪರಿಚಯಿಸಿ ಕೊಡುತ್ತಿದೆ. ಈ ಕೂಟ ಆರಂಭಗೊಂಡ ವರ್ಷದೊಳಗಾಗಿ, ಮೈಸೂರು, ಮಂಗಳೂರುಗಳಲ್ಲಿ ಇದರ ಶಾಖೆಗಳು ತಲೆ ಎತ್ತಿದುವು.

ಕಲ್ಯಾಣಮ್ಮನವರು ತಮ್ಮ ಮನಸ್ಸಿನಲ್ಲಿ, ಮಹಿಳೆಯರು ಮತ್ತು ಮಕ್ಕಳಿಗಾಗಿ, ಒಂದು ಇಲಾಖೆಯು ಮಾಡಬಹುದಾದಷ್ಟು ಕೆಲಸಗಳ ಪಟ್ಟಿಯನ್ನೇ ಹಾಕಿಕೊಂಡಿದ್ದರು. ಸಾಹಿತ್ಯದ ಕ್ಷೇತ್ರದಲ್ಲೂ ಅದನ್ನು ಅಲ್ಲಲ್ಲಿ ತಂದಿದ್ದರು. ಪತ್ರಿಕೆಗೆ ಸಂಪಾದಕೀಯ, ಲೇಖನಗಳನ್ನಲ್ಲದೆ ಕೆಲವಾರು ಕಾದಂಬರಿ, ನಾಟಕಗಳನ್ನು ಬರೆದರು. 'ಪ್ರಿಯಂವದೆ' ಕಲ್ಯಾಣಮ್ಮನವರು ಬರೆದ ಮೊದಲ ಕಾದಂಬರಿ. ನಿರ್ಭಾಗ್ಯವನಿತೆ, ಸುಖಲತ, ಭಕ್ತೆ ಮೀರಾ, ಮಾಧವಿ ನಿರ್ಮಲಾ, ಸತೀ ಪದ್ಮಿನಿ, ರಣಕೇಸರಿ, ಷಹಜಹಾನ್–ಇವರ ಇನ್ನಿತರ ಕಾದಂಬರಿಗಳು. ಯದುರಾಯ, ಬ್ಯಾರಿಸ್ಟರ್ ರಾಮಚಂದ್ರನ್, ವರದಕ್ಷಿಣೆ, ದರಿದ್ರ ನಾರಾಯಣ, ಬಲಿಪೀಠದಲ್ಲಿ ಮುಂತಾದವು ಇವರ ನಾಟಕಗಳು. ಪಂಚಕಜ್ಜಾಯ, ಪುಟಾಣಿ ಕಥೆಗಳು, ವಿಕಟ ಕವಿ, ನಮ್ಮ ಹಿಂದೂಸ್ಥಾನ, ಆಟದ ಹುಲಿ, ಸಕ್ಕರೆ ಸಿಪಾಯಿ ಮುಂತಾದವು ಮಕ್ಕಳಿಗಾಗಿ ಅವರು ರಚಿಸಿದ ಕೃತಿಗಳು.

ಸ್ತ್ರೀಯರ ಶಿಕ್ಷಣವು ಅವರನ್ನು ಸಾಮಾಜಿಕ ಕರ್ತವ್ಯಗಳಿಗೆ ತೊಡಗಿಕೊಳ್ಳಲು ಸಹಾಯಕವಾಗುವಂತಿರಬೇಕು, ಆರ್ಥಿಕ ಸ್ವಾವಲಂಬನೆಗೆ ಅವಕಾಶವಾಗಬೇಕು, ಗೃಹಿಣೀ ಧರ್ಮಕ್ಕೆ ನೆರವಾಗಬೇಕು ಎಂಬ ಅಂಶಗಳನ್ನು ಪ್ರತಿಪಾದಿಸಿದ ಕಲ್ಯಾಣಮ್ಮನವರು, ತಮ್ಮ 'ಸರಸ್ವತಿ' ಪತ್ರಿಕೆಯಲ್ಲಿ ಸ್ತ್ರೀಯರ ಸಮಸ್ಯೆಗಳಿಗೆ ಸ್ಪಂದಿಸುವ, ಆಧುನಿಕ ರೀತಿಯಲ್ಲಿ ಯೋಚಿಸುವ, ಸ್ತ್ರೀಯರ ಸಾಧನೆಗಳಿಗೆ ಒತ್ತು ಕೊಡುವ, ಅಂಥ ಜೀವನ ಚರಿತ್ರೆಗಳನ್ನು ಪರಿಚಯಿಸುವ ಲೇಖನಗಳನ್ನು ಪ್ರಕಟಿಸುತ್ತಿದ್ದುದು ಕಂಡುಬರುತ್ತದೆ. ಪ್ರಪಂಚವೂ ಈಗಿರುವ ಕಷ್ಟಸ್ಥಿತಿಯಿಂದ ಪಾರಾಗಬೇಕಾದರೆ ಹೆಂಗಸರ ಸ್ಥಿತಿಯು ಉತ್ತಮಗೊಳ್ಳಬೇಕು, ಅವರಿಗೂ ಗಂಡಸರಷ್ಟೆ ಗೌರವ ಸಿಕ್ಕಬೇಕು ಮತ್ತು ಆಕೆಯ ದಾಸ್ಯತ್ವ ತಪ್ಪಿ ಸಂಪೂರ್ಣ ಸ್ವಾತಂತ್ರ್ಯ ದೊರಕುವವರೆಗೂ ಹೆಂಗಸಿನ ನಿಜವಾದ ಸ್ವರೂಪ ಏನೆಂಬುದು ಜನರಿಗೆ ಗೊತ್ತಾಗುವುದಿಲ್ಲ ಎನ್ನುವಂಥ ಅಂಶಗಳಿರುವ, ಥಿಯಾಸಫಿಸ್ಟ್ ಪತ್ರಿಕೆಯಿಂದ ತೆಗೆದುಕೊಂಡ 'ಸ್ತ್ರೀ–ಪುರುಷರು ಸರಿಸಮಾನರು' ಎಂಬ ಲೇಖನ; ಕಾಮಾಕ್ಷಮ್ಮನವರ 'ಸ್ತ್ರೀ ಶಿಕ್ಷಣ ಮತ್ತು ಸಂತ ವಿನೋಬಾಜಿ'; ಎನ್.ಆರ್. ಗೌರಮ್ಮನವರ, 'ಹಿಂದೂಸ್ಥಾನದಲ್ಲಿ ಸ್ತ್ರೀ ವಿದ್ಯಾಭ್ಯಾಸವೂ ಇಂಗ್ಲೀಷರೂ'; ಸೀತಾದೇವಿ ಪಡುಕೋಣೆಯವರ 'ಸ್ತ್ರೀ ವಿದ್ಯಾಭ್ಯಾಸ ಸ್ವರೂಪ'; ಎಂ. ಮಲ್ಲಪ್ಪನವರ 'ಗಾಂಧೀ ಶಿಕ್ಷಣವೂ ಸ್ತ್ರೀಯರೂ' ಮುಂತಾದವು ಇಂಥ ಕೆಲವು ಲೇಖನಗಳಾಗಿವೆ.

ಬಾಲ್ಯ ವಿವಾಹವನ್ನು ಖಂಡಿಸಿ, ವಿಧವಾ ವಿವಾಹವು ತಪ್ಪಲ್ಲ, ಅದು ವೇದಕಾಲದಿಂದಲೂ, ಸ್ಮೃತಿ ಶಾಸ್ತ್ರಗಳಿಂದಲೂ ಒಪ್ಪಿತವಾದುದೆಂಬುದನ್ನು ಪ್ರತಿಪಾದಿಸಲು 'ನಿರ್ಭಾಗ್ಯ ವನಿತೆ'ಯಲ್ಲಿ ಹತ್ತು ಹಲವು ಪರಿಯಿಂದ ಆಲೋಚಿಸುವ ಸುಂದರೇಶ ಮತ್ತು ಶಚೀಂದ್ರನಂತ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ದಿವಾನ್ ಬಹದ್ದೂರ್ ರಘುನಾಥರಾಯರು 1892ರಲ್ಲಿ ಪ್ರಚುರ ಪಡಿಸಿದ 'ವಿವಾಹ ವಿಧಿಗಳನ್ನು ಬೋಧಿಸುವ 'ಆರ್ಯ ಧರ್ಮಶಾಸ್ತ್ರ' ಎಂಬ ಪುಸ್ತಕದ ಸಂಬಂಧಿತ ಅಧ್ಯಾಯದ ಸಾಲುಗಳನ್ನೂ; ಗೋಖಲೆ, ರಾನಡೆ, ಜಿ.ಸುಬ್ರಹ್ಮಣ್ಯ ಅಯ್ಯರ್, ಕೆ.ವೀರೇಶಲಿಂಗಂ ಪಂತುಲು ಮೊದಲಾದ ಸಮಾಜ ಸುಧಾರಕರ ವಿಚಾರಗಳನ್ನೂ, ವಿಧವಾ ಮಗಳನ್ನಿಟ್ಟುಕೊಂಡು, ನಲವತ್ತೈದು ವರ್ಷದ ತಂದೆ ಮರುವಿವಾಹವಾಗುವ ಅನ್ಯಾಯವನ್ನೂ ಗಮನಕ್ಕೆ ತಂದು, ಈ ವಿಧವಾ ವಿವಾಹವು ಸಮ್ಮತವಾದುದೆಂಬುದಕ್ಕೆ ಆಧಾರವಾಗಿ ನೀಡಿ ವಾದಿಸಿದ್ದಾರೆ.

ಕಲ್ಯಾಣಮ್ಮನವರು ಯಾವುದೇ ಶಾಸ್ತ್ರ ಸಂಪ್ರದಾಯಗಳನ್ನು ಅದರ ಹಿನ್ನೆಲೆ ಹಾಗೂ ಅದರಿಂದಾಗುವ ಪ್ರಯೋಜನಗಳ ಬಗ್ಗೆ ಆಲೋಚಿಸದೇ ಕಾರ್ಯಗತಗೊಳಿಸುವುದನ್ನು ಒಪ್ಪುವವರಾಗಿರಲಿಲ್ಲ ಎಂಬುದನ್ನು, ಅವರ 'ಬಲಿಪೀಠದಲ್ಲಿ' ಮತ್ತು 'ದೇವನೆಲ್ಲಿ' ಎಂಬಂತಹ ಕೃತಿಗಳು ಸ್ಪಷ್ಟಪಡಿಸುತ್ತವೆ. 'ದೇವನೆಲ್ಲಿ' ಕಥೆಯಲ್ಲಿ ಬರುವ ಬೀರ ಮತ್ತು ಚೆನ್ನಿ ಹರಿಜನ ದಂಪತಿಗಳು. ಮೇಲ್ವರ್ಗದವನೊಬ್ಬ ಪ್ರಾಣ ಬಿಡುವ ಸಂದರ್ಭದಲ್ಲಿ ಅವನನ್ನು ಉಳಿಸಲು ಹೋಗಿ ಬೀರ ಪ್ರಾಣ ಕಳೆದುಕೊಳ್ಳುತ್ತಾನೆ. ಚೆನ್ನಿ ಒಂಟಿಯಾಗಿ ಜೀವನ ನಡೆಸುತ್ತಾಳೆ, ಅವಳ ಮಗುವಿಗೆ ಒಮ್ಮೆ ವಿಪರೀತ ಜ್ವರದಿಂದ ನರಳುತ್ತಿರುವಾಗ, ಬೀರ ಅವಳ ಕನಸಿನಲ್ಲಿ ಬಂದು, ಮಗುವನ್ನು ದೇವರ ಗುಡಿಗೆ ಕರೆದೊಯ್ದರೆ ಜ್ವರ ವಾಸಿಯಾಗುತ್ತದೆಂದು ಹೇಳಿದಂತೆನಿಸಿ, ಗುಡಿಗೆ ಕರೆದೊಯ್ಯುತ್ತಾಳೆ. ಗುಡಿಯಲ್ಲಿ ಅವಳು ಕಾಲಿಟ್ಟುದಕ್ಕೆ ಮೇಲ್ವರ್ಗದ ಜನ ಕುಪಿತರಾಗಿ, ಅವಳನ್ನು ಥಳಿಸುತ್ತಾರೆ. ಈ ಅವಾಂತರದಲ್ಲಿ ಚೆನ್ನಿಯ ಮಗುವಿನ ಪ್ರಾಣವೇ ಯಾವಾಗಲೋ ಹೋಗಿ ಬಿಟ್ಟಿರುತ್ತದೆ. ಚೆನ್ನಿಗೆ ಆಘಾತವಾಗಿ, ಆವೇಶ, ಆಕ್ರೋಶಗಳಿಂದ 'ದೇವನೆಲ್ಲಿ, ದೇವನೆಲ್ಲಿ, ಈ ಗುಡಿಯಲ್ಲಂತೂ ದೇವನಿಲ್ಲ' ಎನ್ನುತ್ತ ಹುಚ್ಚಿಯ ಹಾಗೆ ಓಡುತ್ತಾಳೆ. ಇಲ್ಲಿ ಬೀರ ಮೇಲ್ವರ್ಗದವರಿಗಾಗಿ ತನ್ನ ಪ್ರಾಣ ಕಳೆದುಕೊಂಡರೂ, ಅದೇ ಮೇಲುವರ್ಗದ ಜನ ತಮ್ಮ ಮೂಢನಂಬಿಕೆಯಿಂದಾಗಿ, ಅಂತಹವನ ಮಗುವಿನ ಪ್ರಾಣವನ್ನೇ ಕಳೆಯುವುದು ನ್ಯಾಯವೇ ಎಂಬ ಪ್ರಶ್ನೆಯೂ ಇದೆ. ಇದೇ ರೀತಿ, ಪ್ರಾಣಿ ಬಲಿಯನ್ನು ಯಾವ ದೇವರೂ ಬೇಡುವುದಿಲ್ಲವೆಂಬುದನ್ನೂ, ಪಶುಬಲಿ ನಿಲ್ಲಿಸಬೇಕೆಂಬುದನ್ನೂ 'ಬಲಿ ಪೀಠದಲ್ಲಿ' ಎಂಬ ನಾಟಕದಲ್ಲಿ ತ್ರಿಪುರ ರಾಜ್ಯದರಸನಾದ ಗೋವಿಂದ ಭೂಪತಿಯು ಜಾರಿಗೆ ತರುವ ಕಾನೂನಿನ ಮೂಲಕ ತಿಳಿಯಪಡಿಸಿರುವುದೂ ಕೂಡ ಕಲ್ಯಾಣಮ್ಮನವರ ಉನ್ನತ ವಿಚಾರ ಸರಣಿಯನ್ನು ಪ್ರಸ್ತುತಪಡಿಸುವಂತಹುದು.

ಕಲ್ಯಾಣಮ್ಮನವರ ಕಾರ್ಯ ಒಂದು ಕ್ಷೇತ್ರದ್ದಲ್ಲ, ದುಡಿಮೆ ಒಂದೇ ರೀತಿಯದಲ್ಲ. ಮೈಸೂರು ರಾಜ್ಯ ಜೀವವಿಮಾ ಕಂಪನಿಯ ನಿರ್ದೇಶಕರಾಗಿ, ಯೂನಿವರ್ಸಿಟಿ ಸೆನೆಟ್ ಸದಸ್ಯೆಯಾಗಿ, ಅಶಕ್ತ ಪೋಷಕ ಸಭೆ, ಸಿವಿಕ್ ಅಂಡ್ ಸೋಷಿಯಲ್ ಪ್ರೋಗ್ರೆಸ್ ಸೊಸೈಟಿ ಸೆಂಟ್ರಲ್ ಜೈಲ್ ಸಮಿತಿಯ ಸದಸ್ಯೆಯಾಗಿ, ಬೆಂಗಳೂರು ಮೈಸೂರು ಪ್ರಜಾ ಪ್ರತಿನಿಧಿ ಸಭೆ, ಕನ್ನಡ ಸಾಹಿತ್ಯ ಪರಿಷತ್ತು, ಥಿಯಾಸಾಫಿಕಲ್ ಸೊಸೈಟಿ, ಮುಸ್ಲಿಂ ಶಿಕ್ಷಣ ಸಮಿತಿ, ಲಂಗರ್ ಖಾನೆ ಸಮಿತಿ, ಪುರಸಭಾ ಆರೋಗ್ಯ ಸಮಿತಿ ಮುಂತಾದ ಸಂಘ, ಸಮಿತಿ ಸಂಸ್ಥೆಗಳಲ್ಲಿ ವಿವಿಧ ಪದಗಳಲ್ಲಿದ್ದು ಸೇವೆ ಸಲ್ಲಿಸಿದ್ದಾರೆ. ಕನ್ನಡ ನುಡಿಯ ಸಂಪಾದಕ ಮಂಡಳಿಯಲ್ಲಿದ್ದು ಹಲವು ಕಾಲ ಸಂಪಾದಕೀಯ ಬರೆದಿದ್ದಾರೆ. ಸಿಟಿ ಮುನಿಸಿಪಲ್ ಸ್ಕೂಲ್ ಬೋರ್ಡ್‌ಗೆ ಮಹಿಳಾ ಸದಸ್ಯೆಯಾಗಿ 1937ರಲ್ಲಿ ಸರ್ಕಾರದಿಂದ ನೇಮಕಗೊಂಡು ಬೆಂಗಳೂರಿನ ಸುಮಾರು ಇನ್ನೂರು ಶಾಲೆಗಳಿಗೆ ಭೇಟಿ ಕೊಟ್ಟು ಕುಂದುಕೊರತೆಗಳನ್ನು ಪರಿಶೀಲಿಸುವ ಕರ್ತವ್ಯ. ಸುಧಾರಣೆಗೆ ಅಗತ್ಯ ಸಲಹೆಗಳೊಂದಿಗೆ ಸರ್ಕಾರಕ್ಕೆ ವರದಿ. ದಕ್ಷತೆಯಿಂದ ಈ ಎಲ್ಲ ಕರ್ತವ್ಯಗಳ ನಿರ್ವಹಣೆ. ಬೆಂಚ್ ಮ್ಯಾಜಿಸ್ಟ್ರೇಟ್ ಆಗಿ 1937ರಲ್ಲಿ ಸರ್ಕಾರದಿಂದ ನೇಮಕಗೊಂಡು ಸುಮಾರು ಹದಿನೈದು ವರ್ಷಗಳ ಕಾಲ

ಕಾರ್ಯನಿರ್ವಹಣೆ. ಮಹಿಳೆಯರು ಮತ್ತು ಮಕ್ಕಳ ಪ್ರಕರಣಗಳಿಗೆ ಆದ್ಯತೆ ಮತ್ತು ಶೀಘ್ರ ಇತ್ಯರ್ಥಗೊಳಿಸಲು ಒತ್ತಾಯ. ಬೆಂಗಳೂರು ನಗರ ಸಭೆಯ ಪ್ರಥಮ ಮಹಿಳಾ ಸದಸ್ಯೆಯಾದ ಹಿರಿಮೆ. ಸಲ್ಲಿಸಿದ ದಕ್ಷ ಸೇವೆಯಿಂದಾಗಿ ನಗರ ಸಭೆಯ ಉಪಾಧ್ಯಕ್ಷೆಯಾಗಿ ಮುಂದಿನ ಆಯ್ಕೆ. ಹೋದಲ್ಲೆಲ್ಲ ಪ್ರಾಮಾಣಿಕತೆ ಮತ್ತು ಶ್ರದ್ಧಾ ಮನೋಭಾವದಿಂದ ದುಡಿಯುವುದು ಕಲ್ಯಾಣಮ್ಮನವರ ಸ್ವಭಾವ. ಅವರ ಈ ಸ್ವಭಾವವೇ ಅವರನ್ನು ಅ ಎತ್ತರಕ್ಕೆ ಏರಿಸಿದ್ದು. 1919ರಲ್ಲಿ ಬಂಗಾಲದ ಆರ್ಯ ಸಾಹಿತ್ಯ ಪರಿಷತ್ತು ನೀಡಿದ 'ವಿದ್ಯಾ ವಿನೋದಿನಿ" ಎಂಬ ಬಿರುದು; 1938ರಲ್ಲಿ ಮೈಸೂರು ಮಹಾರಾಜರಿಂದ ಪಡೆದ "ಸಾರ್ವಜನಿಕ ಸೇವಾ ಪದಕ"; ಮತ್ತು 1949ರಲ್ಲಿ ಸಾರ್ವಜನಿಕರಿಂದ ಅರ್ಪಿಸಿದ ನಿಧಿ, ಆ ನಂತರ, ಮಕ್ಕಳ ಕೂಟದಲ್ಲಿ ಅವರ ಜ್ಞಾಪಕಾರ್ಥ ಒಂದು ಸ್ಮಾರಕ ನಿಧಿಯ ಸ್ಥಾಪನೆ, ಇವೆಲ್ಲವೂ ಆ ಮಹಾನ್ ಚೇತನಕ್ಕೆ ಸಂದ ಗೌರವಗಳು. 1965ರ ಫೆಬ್ರವರಿ ಇಪ್ಪತ್ತಾರರಂದು ಕಲ್ಯಾಣಮ್ಮನವರ ದೇಹ ಮರಣಿಸಿತು. ಆದರೆ ಅವರು ಮಹಿಳೆಯರಿಗಾಗಿ ಮಾಡಿದ ಸೇವೆ, ಹಾಕಿ ಕೊಟ್ಟ ದಾರಿ, ಕಟ್ಟಿ ಬಿಟ್ಟು ಹೋದ ಮಕ್ಕಳ ಕೂಟ, ಎಲ್ಲ ಎಲ್ಲವೂ ಚಿರಸ್ಥಾಯಿಯಾಗಿವೆ.

—— * ——

ಸುಮಧುರ ಕಂಠದ ಸೋಬಾನೆ ಕಲಾವಿದೆ ಚಿಕ್ಕಮ್ಮ

ಡಾ. ಕೆ.ಆರ್. ಸಂಧ್ಯಾರೆಡ್ಡಿ

ಸೋಬಾನೆ ಚಿಕ್ಕಮ್ಮ ಸುಪ್ರಸಿದ್ಧ ಜಾನಪದ ಹಾಡುಗಾರ್ತಿ, ಈಕೆಯನ್ನು ಗುರುತಿಸಿದ ಕೀರ್ತಿ ದಿವಂಗತ ಎಚ್.ಎಲ್.ನಾಗೇಗೌಡರಿಗೆ ಸಲ್ಲುತ್ತದೆ. ಈಕೆಯ ಸಾವಿನೊಂದಿಗೆ ಈಕೆಯ ಹಾಡುಗಳು ಮರೆಯಾಗಿ ಬಿಡುತ್ತವಲ್ಲ ಎಂಬ ಕಳಕಳಿಯಿಂದ ನಾಗೇಗೌಡರು 1967ರಿಂದ ಈಕೆಯ ಹಾಡುಗಳನ್ನು ಸಂಗ್ರಹಿಸಲಾರಂಭಿಸಿದರು. ಎರಡು ಮೂರು ವರ್ಷ ಎಡೆಬಿಡದೆ ಆಕೆಯ ಹಾಡುಗಳನ್ನು ಸಂಗ್ರಹಿಸಿ, 'ಸೋಬಾನೆ ಚಿಕ್ಕಮ್ಮನ ಪದಗಳು' ಎಂಬ ಕೃತಿಯನ್ನು 1972ರಲ್ಲಿ ಪ್ರಕಟಿಸಿದರು. ಸೋಬಾನೆ ಚಿಕ್ಕಮ್ಮನ ಜೀವನದ ಕಥೆಯನ್ನು ಆಕೆಯಿಂದಲೇ ಹೇಳಿಸಿ ದಾಖಲು ಮಾಡಿರುವುದು ನಾಗೇಗೌಡರ ಇನ್ನೊಂದು ಮಹತ್ವದ ಕೆಲಸ.

'ಸೋಬಾನೆ ಚಿಕ್ಕಮ್ಮನ ಪದಗಳು' ಕೃತಿಯ ಅರಂಭದಲ್ಲೇ ಇರುವ ಈ ಆತ್ಮಕಥೆಯಿಂದ ತಿಳಿದುಬರುವಂತೆ ಸೋಬಾನೆ ಚಿಕ್ಕಮ್ಮ ಮಂಡ್ಯ ಜಿಲ್ಲೆಯ ಹೆರಗನಹಳ್ಳಿಯ ಹೆಣ್ಣುಮಗಳು. ಒಂಬತ್ತು ಜನ ಒಡಹುಟ್ಟಿದವರಲ್ಲಿ ಈಕೆಯನ್ನು ಬಿಟ್ಟು ಉಳಿದವರೆಲ್ಲಾ ಇನ್‌ಫ್ಲೂಯೆನ್ಜಾ ಖಾಯಿಲೆಗೆ ತುತ್ತಾದರು. ಸುಮಾರು ಹನ್ನೆರಡನೇ ವಯಸ್ಸಿಗೇ ಸೋದರತ್ತೆಯ ಮಗನೊಂದಿಗೆ ಆಕೆಯ ವಿವಾಹವಾಯಿತು. ಆದರೆ ಆಕೆಯ ದಾಂಪತ್ಯ ಜೀವನ ತೀರಾ ಅಲ್ಪಾವಧಿಯದು. ಮದುವೆಯಾಗಿ ಕೇವಲ ಒಂದು ವರ್ಷದಲ್ಲಿಯೇ ಗಂಡಹೆಂಡಿರ ಮಧ್ಯೆ ಮನಸ್ತಾಪ ಬಂದು, ತವರಿಗೆ ಮರಳಿದ ಆಕೆ ಮತ್ತೆಂದೂ ಗಂಡನ ಮನೆಗೆ ಕಾಲಿಡಲಿಲ್ಲ. ಆಕೆಯ ಗಂಡ ಮತ್ತೊಂದು ಮದುವೆಯಾದ. ಅಲ್ಲದೆ ತನ್ನ ಎರಡನೇ ಹೆಂಡತಿಯ ತಂಗಿಯನ್ನೂ ಮದುವೆಯಾದ. ತವರಿಗೆ ಮರಳಿದ ಚಿಕ್ಕಮ್ಮನನ್ನು ಅಪ್ಪ ಅಮ್ಮ ಪ್ರೀತಿಯಿಂದ ನೋಡಿಕೊಂಡರು. ಸ್ವಲ್ಪ ಜಮೀನನ್ನು ಆಕೆಯ ಹೆಸರಿಗೆ ಆಕೆಯ ತಂದೆ ಬರೆದದ್ದರಿಂದ ಚಿಕ್ಕಮ್ಮ ಅದರ ಆಧಾರದ ಮೇಲೆ ಜೀವನ ನಡೆಸಿದಳು. ಕೆಲವೇ ವರ್ಷಗಳಲ್ಲಿ ಆಕೆಯ ತಾಯಿ ಮತ್ತು ತಂದೆ ತೀರಿಕೊಂಡರು ಬಲತಾಯಿಯಿಂದ ಚಿಕ್ಕಮ್ಮ ಸಾಕಷ್ಟು ಕಷ್ಟಗಳನ್ನು ಅನುಭವಿಸಿದಳು, ಮದುವೆಯಾದ 27 ವರ್ಷಗಳ ನಂತರ ಆಕೆಯ ಗಂಡ ಪ್ಲೇಗ್‌ನಿಂದ ತೀರಿಕೊಂಡ, ಆತನ ಸಾವಿಗೆ ಬರುವಂತೆ ಆಳುಗಳು ಬಂದು ಕರೆದಾಗ ಆಕೆ "ಬಾಳುವಾಗಿಲ್ಲ ಬದುಕುವಾಗಿಲ್ಲ, ಸಾಯೋವಾಗ ಬಂದಿದ್ದೀರಲ್ಲಪ್ಪ ನನ್ನ ಎಳೆದಾಡಾಕೆ" ಅಂದಳಂತೆ. ಆದರೆ ಹಿರಿಯರ ಒತ್ತಾಯಕ್ಕಾಗಿ ಶಾಸ್ತ್ರ ತೀರಿಸಿ ಬಂದಳಂತೆ.

ತಾನು ಹಾಡುಗಳನ್ನು ಹಠಹಿಡಿದು ಕಲಿಯುವಂತೆ ಮಾಡಿದ ಒಂದು ಸಂದರ್ಭವನ್ನು ಚಿಕ್ಕಮ್ಮನೇ ವಿವರಿಸಿದ್ದಾಳೆ, ಗಂಡನೊಂದಿಗೆ ಮನಸ್ತಾಪವಾಗಿ ತವರಿಗೆ ಮರಳಿದ ಮೇಲೆ ಆಕೆ ತಾಯಿಯೊಂದಿಗೆ ದಿನವೂ ರಾಗಿ ಬೀಸಲು ಕುಳಿತುಕೊಳ್ಳುತ್ತಿದ್ದಳಂತೆ. ಹಾಡು ಹೇಳಿಕೊಂಡು ರಾಗಿ ಬೀಸುತ್ತಿದ್ದ ತಾಯಿ, 'ಹೇಳೆ ಪುಟ್ಟ ಹೇಳೆ' ಅಂತಲೇ ಇದ್ದರೂ ಚಿಕ್ಕಮ್ಮ ಬಾಯಿ ಬಿಡದೆ ಇದ್ದಾಗ ಆಕೆಯ ಅಪ್ಪ 'ಮುಂದಲೆ ಹಿಡಿದು ಮೂರಸತ್ತಿ ಓಗಿ ರಾಗಿಕಲ್ಲು ತೂಜಿಗೆ, ಅಮೇಲೆ ಅವಳೇ ಹೇಳ್ತಾಳೆ' ಅಂತ ಅಂದುಬಿಟ್ಟನಂತೆ. ನಮ್ಮಪ್ಪ ಹಿಂಗಂದು ಬಿಟ್ಟನಲ್ಲ ಎಂಬ ಅಪಮಾನವೇ ಹಾಡುಗಳನ್ನು ಕಲಿಯಬೇಕೆಂಬ ಹಟ ಹುಟ್ಟಲು ಕಾರಣವಾಯಿತಂತೆ. ಹೀಗೆ ಹಟಕ್ಕೆ ಬಿದ್ದು, ಹಾಡು ಕಲಿಯತೊಡಗಿದಳು.

"ಅದೇನ್ಲೇ ಚಿಕ್ಕಮ್ಮ ಪಟಪಟ ಅಂತ್ಲೇ ಅದೆ ಬಾಯಿ" ಎಂದು ಯಾರಾದರೂ ಅಂದರೆ 'ಹೂಂ ಕಾಣಯ್ಯ' ಎಂದು ಒಂದೇ ಮಾತಿನಲ್ಲಿ ಹೇಳಿ ತನ್ನ ಕಲಿಕೆಯನ್ನು ಮುಂದುವರೆಸುತ್ತಿದ್ದಳಂತೆ. ಈ ಕಲಿಕೆ ಕುರಿತು ಆಕೆ ಹೇಳುವ ಮಾತು, "ಛಲ ಬರಬೇಕು ಯಾವುದಾದರು ಬದುಕು ಮಾಡಬೇಕೆಂದರೂ."

ರಾತ್ರಿ ಮಲಗುವ ಮುಂಚೆ ಬೀಸುವಾಗ, ಬೆಳಗಿನಲ್ಲಿ ಮುಂಗೋಳಿ ಕೂಗಿದಾಗ, ಹಿಂಗೋಳಿ ಕೂಗಿದಾಗ, ದೊಡ್ಡ ಮಬ್ಬಿಗೆ ಎದ್ದು ಬೀಸುವಾಗ ಪದಗಳನ್ನು ಹಾಡಿಕೊಳ್ಳುತಿದ್ದಳು. ಆಕೆಯೇ ಹೇಳುವಂತೆ "ನಾನು ಪದ ಹೇಳಿಕೊಂಡು ಏಸು ರಾಗಿ ಬೀಸಿದ್ದೀನೊ ಲೆಕ್ಕವೇ ಇಲ್ಲ, ನಾನ-ಬೀಸ್ತಾ ಇದ್ದ ರಾಗಿಕಲ್ಲು ಇನ್ನೊ ಅದೆ. ಏಸು ರಾಗಿ ಬೀಸಿದರೂ ಅದು ಸವೆದಿಲ್ಲ. ಅ ಕಲ್ಲೆಳೆದುಕೊಂಡು ಈ ಪದನೆಲ್ಲಾ ರಾಗಿಕಲ್ಲು ಮ್ಯಾಲೆ ಮುಗಿಸ್ತಿದ್ದೆ." ಸೋಬಾನೆ ಚಿಕ್ಕಮ್ಮನ ದನಿ ಎಷ್ಟು ಇಂಪಾಗಿತ್ತೆಂದರೆ ಆಕೆಗೆ ಸಾಕಷ್ಟು ಕಷ್ಟಕೋಟಲೆಗಳನ್ನು ಕೊಟ್ಟ ಬಲತಾಯಿಯೂ ಸಹ "ನನ್ನ ಸವತಿ ಮಗಳ ದನಿ ನೋಡೆ ಏನು ಚಂದಗದೆ" ಎನ್ನುತ್ತಿದ್ದಳಂತೆ. ಹೀಗೆ ನೆರೆಹೊರೆಯವರಿಂದ, ಭಿಕ್ಷಾಟನೆಗೆ ಬರುತ್ತಿದ್ದ ವೃತ್ತಿ ಗಾಯಕರಿಂದ, ಹಿರಿಯ ಬಂಧುಗಳಿಂದ ದೇವರ ಪದಗಳು 'ಸೋಬಾನದ ಪದಗಳು' ಹೇಮಗಿರಿ ಜೋಗಿ, ಚಲುವಯ್ಯ, ಈರೋಬಿ, ಗಂಗೆ ಗೌರಿ ಜಗಳ, ಮೊದಲಾದ ಕಥನ ಗೀತೆಗಳು, ತಿಂಗಳು ಮಾವನ ಪದಗಳು, ಜುಂಜಪ್ಪನ ಪದಗಳು ಇತ್ಯಾದಿಯನ್ನೆಲ್ಲ ಚಿಕ್ಕಮ್ಮ ಕಲಿತಳು.

ಹೀಗೆ ಹಾಡುಗಳನ್ನು ಹೇಳುತ್ತಲೇ ಹಾಡುಗಳ ದನಿ ಧಾಟಿ, ವಿಷಯಗಳ ತಿಳುವಳಿಕೆಯೂ ಬೆಳೆಯಿತು. ಬೀಸುವಾಗ ಒಂದು ದನಿ, ಭತ್ತ ನಾಟಿ ಹಾಕುವಾಗ, ಕಳೆ ಕೀಳುವಾಗ ಒಂದು ದನಿ, ಒಂದೇ ದನಿ ಬೇಜಾರಾದಾಗ ಬೇರೆ ದನಿಗಳನ್ನು ಅಳವಡಿಸುವ ಕಲೆಯೂ ಕರಗತವಾಯಿತು. ಈಕೆಯ ಹಾಡುಗಾರಿಕೆಯನ್ನು ಜನ ಮೆಚ್ಚಿದರು. ಊರಿನ ಸುತ್ತಮುತ್ತ ಎಲ್ಲೇ ಮದುವೆಗಳಾಗಲಿ, ಬಾರವ್ವ ನಮ್ಮನೆ ಮದುವೆಗೆ ಎಂದು ಕರೆದುಕೊಂಡು ಹೋಗಿ ಸೋಬಾನೆಗಳನ್ನು ಹೇಳಿಸುತ್ತಿದ್ದರು. ಸೋಬಾನೆ ಪದಗಳಿಲ್ಲದೆ ಮದುವೆ ಕಾರ್ಯಗಳು ಮುಗಿಯುತ್ತಿರಲಿಲ್ಲ "ನನ್ನ ಸೋಬಾನದಲ್ಲಿ ಏಸೋ ಮದುವೆ ಮಾಡಿದೀನಿ" ಎಂದು ಹೇಳುತ್ತಾಳೆ ಚಿಕ್ಕಮ್ಮ.

ಸೋಬಾನೆ ಹಾಡುಗಳಿಗೆ ಪ್ರಸಿದ್ಧಳಾದ ಚಿಕ್ಕಮ್ಮನಿಗೆ 'ಸೋಬಾನೆ ಚಿಕ್ಕಮ್ಮ' ಎಂಬ ಹೆಸರು ಪ್ರಾಪ್ತವಾಗಿದ್ದರ ಹಿಂದೆ ಒಂದು ಘಟನೆ ಇದೆ. ಒಂದು ಸಲ ಆಕೆಯ ಹೊಲ ಅಳೆಯಲು ಮೋಜಣಿದಾರರು ಬಂದರು. ಇದು ಯಾರ ಹೊಲ ಎಂದು ಅವರು ಕೇಳಿದಾಗ ನಾಗೇಗೌಡರು, ಇದು ಸೋಬಾನೆ ಚಿಕ್ಕಮ್ಮನ ಹೊಲ ಅಂದರು. ಮೋಜಣಿದಾರರು ಹಾಗೇ ಬರೆದುಕೊಂಡರು. ಆಗಿನಿಂದ ಆಕೆಯನ್ನು ಜನರು 'ಸೋಬಾನೆ ಚಿಕ್ಕಮ್ಮ' ಎಂದೇ ಕರೆಯತೊಡಗಿದರು. "ಗೌಡರಿಂದಾಗಿ ಸೋಬಾನೆ ಚಿಕ್ಕಮ್ಮ ಅಂತ ಹೆಸರು ಬಂದು ಬಿಡ್ತು. ಈಗ ಸುಮ್ಮನೆ ಚಿಕ್ಕಮ್ಮ ಅಂದ್ರೆ ಯಾರಿಗೂ ಗೊತ್ತಾಗಲ್ಲ. ಸೋಬಾನೆ ಚಿಕ್ಕಮ್ಮ ಅಂದ್ರೇನೆ ಗೊತ್ತಾಗೋದು" ಎನ್ನುತ್ತಾಳೆ ಆಕೆ.

ಇಷ್ಟೆಲ್ಲಾ ಹಾಡುಗಳನ್ನು ಕಲಿತ ಚಿಕ್ಕಮ್ಮ "ನನ್ಗೆ ತೊಟ್ಲುಪದಗಳು ಬರಾಕಿಲ್ಲ" ಎನ್ನುವುದು ಗಮನಾರ್ಹ. ತಾಯಿಯಾಗುವ ಅವಕಾಶ ಸಿಗದಿದ್ದುದೇ ಇದಕ್ಕೆ ಕಾರಣ ಎನ್ನಬಹುದು. ಸೋಬಾನೆ ಪದಗಳ ಮೇಲೆ ಆಕೆಗೆ ಭಾರೀ ಅಭಿಮಾನ. ಈ ಪದಗಳನ್ನು ಆಕೆ ವ್ಯಾಖ್ಯಾನಿಸುವುದು ಹೀಗೆ:

"ಸೋಬಾನೆ ಮಾಡಿದೋನು ಭಗವಂತ. ಅವನ್ನು ಕವಿ ಕಟ್ಟಿಕೊಂಡು ಹೇಳೋವಲ್ಲ. ಪಾಪ, ಕವಿ ಕಟ್ಟಿಕೊಂಡು ಹೇಳಾಕೆ ಬಂದಾರ ಬಂದಾವೇನಪ್ಪ/ ಸ್ವಾಮಿ ಈಶ್ವರ, ಪಾರ್ವತಿ ಇವರೆಲ್ಲ ಈ ಭೂಮಿ ಹುಟ್ಟೋಕೆ ಮೊದಲು ಹುಟ್ಟಿದೋರು.. ಪಾರ್ವತಿಗೆ ಸಕೂನೆ ಆಡಲು ತಂಗಿ, ಈಶ್ವರನಿಗೆ ಕ್ರಿಷ್ಣನೇ ಆಡಲು ತಮ್ಮ ಆ ಹೊತ್ತು ಹುಟ್ಟಿದ ಸೋಬಾನ, ಆ ಹೊತ್ತು ಹುಟ್ಟಿದ ಹೊನ್ನಾ ಕಳಸ ಲೋಕದ ಮ್ಯಾಲೆ ಬೆಳೀತಾ ಬಂದವಂತೆ. ಅದ್ರಿಂದ ಮದುವೇಲಿ ಮೂರು ಸೋಬಾನವಾದ್ರೂ ಹೇಳೇ ತೀರಬೇಕು. ಇವು ಕವಿಗಿವಿ ಕಟ್ಟಿಕೊಂಡು ಹೇಳೋ ಸೋಬಾನಲ್ಲ. ತೇಟಾದ ಸೋಬಾನಗಿ. ನನ್ನ ಸೋಬಾನದಲ್ಲಿ ಏಸೋ ಮದುವೆ ಮಾಡಿದ್ದೀನಿ."

"ನಾನು ನಮ್ಮ ಯಜಮಾನ ಮನೇನ ಸೇರಿದ್ರೆ ಸೋಬಾನ ಕಲಿತಿದ್ದೆನೊ ಇಲ್ಲವೋ ದೇವರೇ ಬಲ್ಲ, ಇಲ್ಲ ಕಲೀತಾ ಇಲ್ಲ" ಎನ್ನುವ ಸೋಬಾನೆ ಚಿಕ್ಕಮ್ಮ ತನ್ನ ಅಪ್ಪನ ಆಜ್ಞೆಯೇ ಈ ಹಟ ಹುಟ್ಟಲು ಕಾರಣವಾಯಿತು ಎಂದು ಸ್ಮರಿಸುತ್ತಾಳೆ.

"ಹೀಗೆ ಸೋಬಾನೆಗಳನ್ನು ಹಾಡುತ್ತಲೇ ವೃದ್ಧಾಪ್ಯ ತಲುಪಿದ ಸೋಬಾನೆ ಚಿಕ್ಕಮ್ಮನ ಶರೀರ ಕುಗ್ಗಿ ತಲೆ ನಡುಗುತ್ತಿದ್ದರೂ ಹಾಡಬೇಕೆಂಬ ಉತ್ಸಾಹ ಕುಗ್ಗಲಿಲ್ಲ, ಆಕೆ ಮುಪ್ಪಿನಲ್ಲೂ ಹಗಲೂ ರಾತ್ರಿ ಒಂದೇ ಸಮನೆ ಹಾಡಬಲ್ಲವಳಾಳು. ಅಗಾಗ್ಗೆ ಮರೆವು ಬಂದು ಕ್ರಮತಪ್ಪಿ ಹಾಡಿ ಮತ್ತೆ ನೆನಪಿಸಿಕೊಂಡು ಸರಿಯಾಗಿ ಹಾಡುತ್ತಿದ್ದಳು. ಆಕೆಯ ಕಂಠ ಹರೆಯತನ ಕಳೆದುಕೊಂಡಿರಲಿಲ್ಲ. ಒಟ್ಟಿನಲ್ಲಿ ತನ್ನ ಬರಿದಾದ ಬಾಳನ್ನು ಸೋಬಾನದ ಹಾಡಿನಲ್ಲಿ ತುಂಬಿಕೊಂಡು ನಮ್ಮ ನಾಡನ್ನು ನಲಿಸಿದವಳು ಸೋಬಾನೆ ಚಿಕ್ಕಮ್ಮ" ಎಂದು ನಾಗೇಗೌಡರು ಹೇಳುತ್ತಾರೆ. ಹಾಡಿನ ಕಣಜವೇ ಆಗಿದ್ದ ಸೋಬಾನೆ ಚಿಕ್ಕಮ್ಮನ ಬದುಕು ಬಡತನದಲ್ಲಿ ಮುಳುಗಿತ್ತು. ಕಾಲಕಾಲಕ್ಕೆ ಮಳೆಯಾಗದ ಕಾರಣ, ಇರುವ ಒಂದಿಷ್ಟು ಜಮೀನಿನಲ್ಲೂ ಏನೂ ಬೆಳೆಯದೆ, ಇನ್ನೊಬ್ಬರನ್ನು ಬೇಡಲು ಮನಸ್ಸು ಬಾರದೆ ಒಂದು ಹೊತ್ತು ಉಂಡು ಇನ್ನೊಂದು ಹೊತ್ತು ಹೇಗೋ ಉಪವಾಸವಿದ್ದ ಚಿಕ್ಕಮ್ಮನಿಗೆ ಸರ್ಕಾರದಿಂದ ಸಿಗುತ್ತಿದ್ದ ವೃದ್ಧಾಪ್ಯ ವೇತನ 30 ರೂಪಾಯಿ ಮಾತ್ರ. ಅದೂ ಸಿಕ್ಕದಿದ್ದರೆ ಇಷ್ಟು ಹೊತ್ತಿಗೆ ಸತ್ತೇಹೋಗಿಬಿಡುತ್ತಿದ್ದೆ ಎಂದು ಸಂಕಟದಿಂದ ಹೇಳಿಕೊಳ್ಳುತ್ತಿದ್ದ ಚಿಕ್ಕಮ್ಮ 1977ರ ಏಪ್ರಿಲ್ ಎಂಟರಂದು ತನ್ನ 80ನೇ ವಯಸ್ಸಿನಲ್ಲಿ ತೀರಿಕೊಂಡಳು.

ಇಂಥ ಹಾಡಿನ ಕಣಜವನ್ನು ಎಚ್.ಎಲ್. ನಾಗೇಗೌಡರು ಒಬ್ಬ ಅಧಿಕಾರಿಯಾಗಿ, ಜಾನಪದದ ಅಭಿಮಾನಿಯಾಗಿ ಗುರುತಿಸಿದ್ದರಿಂದಾಗಿ ಆಕೆಯ ಹಾಡುಗಳು ಇಂದು ನಮಗೆ ಲಭ್ಯವಾಗುತ್ತವೆ. ಮೂಲಧಾಟಿಗಳನ್ನು ಅಳವಡಿಸಿಕೊಂಡಿರುವುದು ಆಕೆಯ ಪದಗಳ ವೈಶಿಷ್ಟ್ಯ. ಆಕೆ ಹಾಡಿದ ಧಾಟಿಗಳಿಗೆ ನೂರುವರ್ಷಗಳಿಗಿಂತಲೂ ಹಿಂದಿನ ಪರಂಪರೆ ಇದೆ. ಆಕೆಯ ಎಲ್ಲ ಹಾಡುಗಳು ನಾಗೇಗೌಡರು ಸ್ಥಾಪಿಸಿದ ಜಾನಪದ ಪರಿಷತ್ತಿನ ಧ್ವನಿ ಭಂಡಾರದಲ್ಲಿವೆ. ಆಕೆಯ ಹಾಡುಗಳ ಕ್ಯಾಸೆಟ್‌ಗಳು ಲಭ್ಯವಿವೆ. ಆಕೆ ಬದುಕಿರುವಾಗ "ನಾನು ಹಾಡಿದ ಹೇಮಗಿರಿ ಜೋಗಿ ಅಥವಾ ನಾಗರಗನ್ನೆ ನಾಟಕ ಮಾಡಿದರೆ ಚೆನ್ನಾಗಿರುತ್ತದೆ" ಅನ್ನುತಿದ್ದಳಂತೆ. ಈ ಕುರಿತು, "ಒಬ್ಬ ಹಳ್ಳಿಯ ಹೆಂಗಸು ಈ ಮಾತು ಹೇಳಬೇಕಾದರೆ ಆಕೆಯ ಕಲ್ಪನಾ ಸಾಮರ್ಥ್ಯ ಸಾಮಾನ್ಯವಾದುದಲ್ಲ. ಆಕೆಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸನ್ಮಾನ ಮಾಡಿದಾಗ ಆಕೆಯೇ ಹಾಡಿದ ಗಂಗೆಗೌರಿ ಕಥೆಯನ್ನು ಮೈಸೂರಿನ ಶ್ರೀ ಅನಂತಸ್ವಾಮಿಯವರ ನೇತೃತ್ವದಲ್ಲಿ ಒಂದು ರೂಪಕವಾಗಿ ಪ್ರದರ್ಶಿಸಲಾಯಿತು" ಎಂದು ನಾಗೇಗೌಡರು ಹೇಳುತ್ತಾರೆ. ತರೀಕೆರೆ, ಮಂಗಳೂರು, ನಾಗಮಂಗಲಗಳಲ್ಲಿ ನಡೆದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನಗಳಲ್ಲಿ ಚಿಕ್ಕಮ್ಮ ಹಾಡಿದಳು. ನಾಗಮಂಗಲದಲ್ಲಿ ನಡೆದ ಪ್ರಥಮ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದಲ್ಲಿ ಆಕೆಯನ್ನು ಸನ್ಮಾನಿಸಲಾಯಿತು. ಸಾವಿರಾರು ಪದಗಳನ್ನು ಕಿವಿಯಿಂದ ಕೇಳಿ, ಮಿದುಳಲ್ಲಿ ತುಂಬಿಟ್ಟುಕೊಂಡು, ಸುಮಧುರ ಕಂಠದಲ್ಲಿ ತಪ್ಪದೇ ಮರೆಯದೇ ಹಾಡುತ್ತಿದ್ದ ಸರಸ್ವತಿಯ ಗ್ರಾಮ ಸ್ವರೂಪವೇ "ಸೋಬಾನೆ ಚಿಕ್ಕಮ್ಮ".

*

ಸಾಹಿತ್ಯ, ಸಂಗೀತ, ದೇಶ ಭಕ್ತಿಯ ತ್ರಿವೇಣಿ ಸಂಗಮ ಭಾರತಿ

ಎಚ್.ಎಸ್. ಪಾರ್ವತಿ

ದೊಡ್ಡ ಆಲದ ಮರೆಯಲ್ಲಿರುವ ಬೇರೆ ಯಾವ ಮರವೂ ಜನರ ಕಣ್ಣಿಗೆ ಕಾಣಲಾರದು, ಹಾಗೆಯೇ ಖ್ಯಾತ ವ್ಯಕ್ತಿಯ ಮಡದಿಯಾದವಳು ಸ್ವತಃ ಪ್ರತಿಭಾವಂತಳಾದರೂ, ಸಮರ್ಥಳಾದರೂ ಅವಳ ಕೀರ್ತಿ ಪತಿಯ ಕೀರ್ತಿಯ ನೆರಳಾಗಿಯಷ್ಟೇ ಕಂಡುಬರುತ್ತದೆ. ಈ ಮಾತಿಗೆ ಅಪವಾದವಾಗಿ ನಿಂತ ಅಪರೂಪದ ಮಹಿಳೆ ಶ್ರೀಮತಿ ತಿರುಮಲೆ ರಾಜಮ್ಮನವರು. ಕನ್ನಡದ ಭೀಷ್ಮ, ಪತ್ರಕರ್ತ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಧೀರ, ಈ ಎಲ್ಲವುಗಳ ಜೊತೆಗೆ ಕನ್ನಡ ಸಾಹಿತ್ಯದಲ್ಲಿ ಮೇಲ್ಮಟ್ಟದ ಸ್ಥಾನವನ್ನು ಪಡೆದಿರುವ ಟಿ.ಟಿ.ಶರ್ಮರ ಪತ್ನಿಯಾಗಿದ್ದು ಕೇವಲ ಸಾಹಿತಿ ಪತ್ನಿಯಾಗಿ ಉಳಿಯದೆ 'ಭಾರತಿ'ಯಾಗಿ ಪತಿಯಷ್ಟೇ ಕೀರ್ತಿಯನ್ನೂ, ಗೌರವವನ್ನೂ ಪಡೆದ ಶ್ರೇಯಸ್ಸು ರಾಜಮ್ಮನವರಿಗೆ ಸಲ್ಲುತ್ತದೆ. ಅವರು ಎಂತಹ ಪ್ರತಿಭಾಶಾಲಿ ಎನ್ನುವುದಕ್ಕೂ ಇದೊಂದೇ ನಿದರ್ಶನ ಸಾಕು.

ರಾಜಮ್ಮವನರ ತಂದೆ ರಾಘವಾಚಾರ್ಯರು ಪ್ರೌಢಶಾಲೆಯ ಉಪಾಧ್ಯಾಯರು. ವ್ಯಾಕರಣ, ಗಣಿತ, ಸಂಸ್ಕೃತ ವ್ಯಾಕರಣಗಳಲ್ಲಿ ಪಂಡಿತರು. ತುಂಬಾ ಶಿಸ್ತಿನ ವ್ಯಕ್ತಿ. ರಾಜಮ್ಮನವರ ತಾಯಿ ಸೀತಮ್ಮ ತುಂಬಾ ಜಾಣೆ, ಉದಾರಿ. ಮನೆಯವರಿಗೂ, ಅತಿಥಿಗಳಾಗಿ ಬಂದವರಿಗೂ 'ಅನ್ನಪೂರ್ಣೆ'. ಈ ದಂಪತಿಗಳ ನಾಲ್ಕನೆಯ ಮಗಳಾಗಿ 1900ನೇ ನವೆಂಬರ್ ಇಪ್ಪತ್ತಮೂರರಂದು ತುಮಕೂರಿನಲ್ಲಿ ರಾಜಮ್ಮ ಜನಿಸಿದರು.

ರಾಜಮ್ಮನಿಗೆ ಬಾಲ್ಯದಿಂದಲೂ ಎಲ್ಲ ವಿಷಯಗಳಲ್ಲೂ ಕುತೂಹಲ, ಕಲಿಕೆಯಲ್ಲಿ ಅಸಕ್ತಿ. ಮನೆಯಲ್ಲಿ ತಾಯಿ ಹಾಡುತ್ತಿದ್ದ ಕನ್ನಡ, ತೆಲುಗು ಹಾಡುಗಳು, ತಂದೆಯ ಸಂಸ್ಕೃತ ಶ್ಲೋಕಗಳು ಇವೇ ಆಕೆಗೆ ದೊರೆತ ಮೊದಲ ಶಿಕ್ಷಣ. ತಂದೆ ಹಾಸನದಲ್ಲಿದ್ದಾಗ ಅಕ್ಷರಾಭ್ಯಾಸ ಶುರುವಾಯಿತು. ಅಲ್ಲಿಯೇ ಮಿಷನ್ ಸ್ಕೂಲ್, ರಾಷ್ಟ್ರೀಯ ಬಾಲಿಕಾ ಪಾಠಶಾಲೆಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ವಿದ್ಯಾಭ್ಯಾಸ ನಡೆಯಿತು. ಲೋಯರ್ ಸೆಕೆಂಡರಿಗೆ ಶಿಕ್ಷಣ ಮುಗಿಯಿತು.

ರಾಜಮ್ಮನಿಗೆ ಹದಿಮೂರನೆಯ ವಯಸ್ಸಿನಲ್ಲಿಯೇ ತಾಯಿಯ ದೊಡ್ಡಪ್ಪನ ಮಗ ತಿರುಮಲೆ ತಾತಾಚಾರ್ಯ ಶರ್ಮರೊಂದಿಗೆ ವಿವಾಹವಾಯಿತು. ಅಂದಿನ ಪದ್ಧತಿಯಂತೆ ತಾತಾಚಾರ್ಯ ಶರ್ಮರ ವಿದ್ಯಾಭ್ಯಾಸ ಮುಗಿಯುವವರೆಗೆ ರಾಜಮ್ಮ ತವರು ಮನೆಯಲ್ಲೇ ಉಳಿದಳು. ತಂದೆಗೆ ಬೆಂಗಳೂರಿಗೆ ವರ್ಗವಾಗಿ ಅವರು ತುಳಸೀ ತೋಟದ ಬಳಿ ಮನೆ ಮಾಡಿ ನೆಲಸಿದಾಗ ರಾಜಮ್ಮನಿಗೆ ಸಂಗೀತ ಶಿಕ್ಷಣಕ್ಕೆ, ಸಾಹಿತ್ಯ ರಚನೆಗೆ ಹೆಚ್ಚಿನ ಅವಕಾಶ ದೊರೆಯಿತು.

ಒಮ್ಮೆ, ಪ್ರಸಿದ್ಧ ವಿದ್ವಾಂಸರಾಗಿದ್ದ ಪಿಟೀಲು ತಾಯಪ್ಪನವರು ರಾಜಮ್ಮನವರ ವೀಣಾವಾದನ ಕೇಳಿ ಸಂತೋಷ ಪಟ್ಟು, ಹೆಚ್ಚಿನ ಶಿಕ್ಷಣ ಪಡೆಯಲೆಂದು ವೀಣೆ ಗೋಪಾಲರಾಯರ ಪರಿಚಯ ಮಾಡಿಸಿದರು. ಅಂದಿನಿಂದ ಪ್ರಸಿದ್ಧ ವೈಣಿಕರಾಗಿದ್ದ ಗೋಪಾಲರಾಯರಲ್ಲಿ ವೀಣಾಪಾಠ ಮುಂದುವರಿದು ರಾಜಮ್ಮ ವೀಣಾವಾದನದಲ್ಲಿ ವಿದುಷಿಯೇ ಆದರು.

ರಾಜಮ್ಮನವರ ಸೋದರಮಾವಂದಿರಾದ ವಿದ್ವಾನ್ ಟಿ. ವೆಂಕಟಾಚಾರ್ಯರು ನಾಟಕಕಾರರು. ಅವರ 'ಭೋಜಪ್ರಬಂಧ', 'ಶ್ರೀಕೃಷ್ಣಲೀಲಾ', 'ಪ್ರಹ್ಲಾದ ಚರಿತ್ರೆ' ಆಗ್ಗೆ ತುಂಬ ಜನಪ್ರಿಯವಾಗಿದ್ದ ನಾಟಕಗಳು. ಅವರ ಪ್ರಭಾವದಿಂದಾಗಿ ರಾಜಮ್ಮನವರ ಸಾಹಿತ್ಯದ ವ್ಯವಸಾಯ ಬೆಳೆಯಿತೆಂಬುದು ನಿರ್ವಿವಾದ ವಿಷಯ. ಸಂಸ್ಕೃತ ಸಾಹಿತ್ಯದ ಪರಿಚಯ ರಾಜಮ್ಮನವರಿಗೆ ಆದದ್ದೂ ಇವರಿಂದಲೇ.

ರಾಜಮ್ಮನವರ ತಂದೆಯ ಮನೆಯವರು ತುಳಸೀತೋಟದ ಮನೆಯಲ್ಲಿದ್ದಾಗ ಅಲ್ಲಿನ ನಾಟಕ ಮಂದಿರದಲ್ಲಿ ಶಿರಹಟ್ಟಿ ಕಂಪನಿಯ ನಾಟಕಗಳು ನಡೆಯುತ್ತಿದ್ದವು. ಈ ಕಂಪನಿಯವರು ವೆಂಕಟಾಚಾರ್ಯರ ನಾಟಕಗಳನ್ನು ಅಭಿನಯಿಸುತ್ತಿದ್ದರು. ಮನೆಯವರಿಗೆಲ್ಲ ಈ ನಾಟಕಗಳಲ್ಲಿ ಆಸಕ್ತಿ. ಇದೇ ಸಂದರ್ಭದಲ್ಲಿ ಟಿ.ಪಿ. ಕೈಲಾಸಂ ಅವರ ಪರಿಚಯವೂ ಈ ಪರಿವಾರಕ್ಕೆ ಲಭಿಸಿತು.

ಇಷ್ಟರಲ್ಲಿ ತಾತಾಚಾರ್ಯರು ಇಂಟರ್‌ಮೀಡಿಯಟ್‌ವರೆಗೆ ಓದಿ ಮದರಾಸಿನಲ್ಲಿ ಶಾಸನ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಅವರ ಕನ್ನಡ ಭಾಷಾಜ್ಞಾನ ಅಸಾಧಾರಣವಾಗಿತ್ತು. ರಾಜಮ್ಮನೂ ಪತಿಯೊಡನೆ ವಾಸಿಸಲು ಮದರಾಸಿಗೆ ಹೋದರು. ಅಷ್ಟರಲ್ಲಾಗಲೇ ಸ್ವಾತಂತ್ರ್ಯ ಚಳವಳಿ, ಅದಕ್ಕೆ ಹಿನ್ನೆಲೆಯಾಗಿ ಸಮಾಜ ಸುಧಾರಣೆಯ ಕಾರ್ಯಗಳು ದೇಶಾದ್ಯಂತ ಆರಂಭವಾಗಿದ್ದವು. ಆ ಸಂದರ್ಭದಲ್ಲಿ ಈ ವಿಷಯಗಳಿಗೆ ಸಂಬಂಧಿಸಿದ ಅನೇಕ ಭಾಷಣಗಳನ್ನು ದೇಶದ ಮುಖಂಡರಿಂದ ರಾಜಮ್ಮನವರು ಕೇಳಿದರು. ಅವುಗಳಿಂದ ಪ್ರಭಾವಿತರೂ ಆದರು. ಇದರ ಪರಿಣಾಮವಾಗಿ, ಬಾಲ್ಯ ವಿವಾಹ ನಿಷೇಧ, ಬಾಲ ವಿಧವೆಯರ ಪುನರ್ವಿವಾಹ ಈ ವಸ್ತುವನ್ನುಳ್ಳ ಮನಕಲಕುವ ಮೂರಂಕದ ಒಂದು ನಾಟಕ ರಚಿಸಿದರು. ಬಹುಶಃ ಇದೇ ರಾಜಮ್ಮನವರ ಮೊದಲ ರಚನೆ. ನಾಟಕದ ಹೆಸರು 'ಸುಖಮಾರ್ಗ'. ಅಂದಿನ ಅಮೆಚೂರ್ ನಾಟಕ ಸಂಘದವರು ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಈ ನಾಟಕಕ್ಕೆ ಬಹುಮಾನವೂ ಬಂತು.

ಈ ಮಧ್ಯೆ ರಾಜಮ್ಮನವರಿಗೆ ಮೈಸೂರಿನ ಪ್ರಖ್ಯಾತ ವೈಣಿಕರಾದ ಶೇಷಣ್ಣನವರಿಂದ ವೀಣೆ ಪಾಠವನ್ನು ಮುಂದುವರಿಸುವ ಅವಕಾಶವೂ ದೊರೆಯಿತು. ಮೊದಲೇ ಪಳಗಿದ್ದ ಕೈ ಶೇಷಣ್ಣನವರ ಶೈಲಿಯನ್ನು ಶೀಘ್ರವಾಗಿ ರೂಢಿಸಿಕೊಂಡಿತು.

ಮದ್ರಾಸಿನಲ್ಲಿದ್ದಾಗಲೇ ರಾಜಮ್ಮನವರು ಮೊಟ್ಟಮೊದಲ ಬಾರಿಗೆ ಗಾಂಧೀಜಿಯವರನ್ನು ಕಂಡರು. ಅವರೊಳಗೆ ಸುಪ್ತವಾಗಿದ್ದ ದೇಶಪ್ರೇಮ ಗಾಂಧೀಯವರ ದರ್ಶನದಿಂದ ಜಾಗೃತಗೊಂಡಿತು.

ಶರ್ಮರು ನಡೆಸುತ್ತಿದ್ದ 'ವಿಶ್ವ ಕರ್ನಾಟಕ' ಪತ್ರಿಕೆಗೆ ರಾಜಮ್ಮನವರು ನೀಡುತ್ತಿದ್ದ ನೆರವು ಅಸಾಧಾರಣ-ವಾದುದು. ಪತ್ರಿಕೆಯಲ್ಲಿ ಪ್ರಕಟವಾದ ತಪ್ಪುಗಳನ್ನು ತಿದ್ದಿ, ಸಂಪಾದಕರ ಮೇಜಿನ ಮೇಲೆ ಇಡುತ್ತಿದ್ದರು. ಅದನ್ನು ನೋಡಿದ ಕೂಡಲೇ ಸಂಪಾದಕರಿಗೆ ತಮ್ಮ ತಪ್ಪಿನ ಅರಿವಾಗುತ್ತಿತ್ತು.

ಸರಕಾರದವರು ಪತ್ರಿಕೆಗೆ ಸಾಕಾಗುವಷ್ಟು ಕಾಗದ ಕೊಡುತ್ತಿರಲಿಲ್ಲ. ಅಲ್ಪಸ್ವಲ್ಪ ಕೊಡುತ್ತಿದ್ದರು. ಮಿಕ್ಕುದನ್ನು ಒಂದಕ್ಕೆರಡು ಬೆಲೆಕೊಟ್ಟು ಕಾಳಸಂತೆಯಲ್ಲಿ ಕೊಂಡುತರಬೇಕಾಗುತ್ತಿತ್ತು. ಕಾಗದ ಬರುವುದು ತಡವಾದರೆ ಪತ್ರಿಕೆ ಸಕಾಲದಲ್ಲಿ ಹೊರಡುತ್ತಿರಲಿಲ್ಲ. ಒಮ್ಮೆ ಹಣಕ್ಕೆ ವಿಪರೀತ ಅಡಚಣೆಯಾದಾಗ ರಾಜಮ್ಮನವರು ತಮ್ಮ ಕೈಯಲ್ಲಿದ್ದ ಚಿನ್ನದ ಬಳೆಗಳನ್ನೇ ತೆಗೆದು ವ್ಯವಸ್ಥಾಪಕರ ಕೈಯ್ಯಲ್ಲಿಟ್ಟು "ಕೂಡಲೇ ಹೋಗಿ, ಇದನ್ನು ಮಾರಿಯೋ, ಒತ್ತೆ ಒಟ್ಟೋ, ಹಣ ತಂದು ಕಾಗದ ಕೊಂಡು ಪತ್ರಿಕೆಯನ್ನು ಹೊರಡಿಸಿ" ಎಂದರು. ಶರ್ಮರು ತಮ್ಮ ಪತ್ನಿಯ ಈ ತ್ಯಾಗವನ್ನು ಕೃತಜ್ಞತೆಯಿಂದ ಜ್ಞಾಪಿಸಿಕೊಳ್ಳುತ್ತಿದ್ದರು.

ವಿವಾಹಕ್ಕೆ ಮುಂಚಿನಿಂದಲೂ ನೆಂಟಸ್ತಿಕೆ ಇದ್ದೇ ಇತ್ತು. "ನಮ್ಮಿಬ್ಬರದೂ ಒಂದೇ ಮನೆತನ, ನಮ್ಮಿಬ್ಬರ ಸಂಸ್ಕಾರ ಒಂದೇ, ನಮ್ಮಿಬ್ಬರ ಆದರ್ಶಗಳೂ ಒಂದೇ" ಎಂದು ಶರ್ಮರು ಆಗಾಗ ಹೇಳಿಕೊಳ್ಳುತ್ತಿದ್ದರು. ಕ್ರಾಂತಿಕಾರಿ ಜೀವನವನ್ನು ನಡೆಸಿದ ಟಿ.ಟಿ. ಶರ್ಮರಿಗೆ ಅವರ ಎಲ್ಲ ಕೆಲಸಗಳಿಗೆ ಚೇತನ ಕೊಡುವ ಪತ್ನಿಯಾಗಿದ್ದರು ರಾಜಮ್ಮನವರು. ಈ ಆದರ್ಶ ಪತ್ನಿಗೆ ತಕ್ಕ ಪತಿ ಶರ್ಮರು. ನಾನಾ ಮುಖವಾದ ಪ್ರತಿಭೆಗಳಿಂದ ಶೋಭಿಸುವ ರಾಜಮ್ಮನವರ ಎಲ್ಲ ಕೆಲಸಗಳಿಗೂ ಸ್ಫೂರ್ತಿಯನ್ನು ನೀಡುವ ಶಕ್ತಿಯಾಗಿದ್ದರು ಶರ್ಮರು. "ನನ್ನ ವೈಯಕ್ತಿಕ ಜೀನವದಲ್ಲಾಗಲೀ, ವೃತ್ತಿಯಲ್ಲಾಗಲೀ ಅಪೂರ್ವ ಪ್ರಭಾವ ಬೀರಿದವರು ನನ್ನ ಪತ್ನಿಯೇ" ಎಂದು ಸ್ವತಃ ಶರ್ಮರೇ ಹೇಳಿಕೊಂಡಿದ್ದಾರೆ.

ಈ ಅಪರೂಪದ ದಂಪತಿಗಳಿಗೆ ಮೂರು ಜನ ಮಕ್ಕಳು. ಮೊದಲ ಮಗಳು ಜಯಮ್ಮ, ಎರಡನೆಯ ಮಗ ಶ್ರೀರಂಗಾಚಾರ್ಯ, ಮೂರನೆಯ ಮಗ ವೆಂಕಟಾಚಾರ್ಯ (ಬಾಪೂ). ವಿವಾಹಿತಳಾಗಿ, ಒಂದು ಮಗುವಿನ ತಾಯಿಯೂ ಆಗಿದ್ದ ತಮ್ಮ ಒಬ್ಬಳೇ ಮಗಳು 1949ರಲ್ಲಿ ಅಕಾಲ ಮೃತ್ಯುವಿಗೆ ಈಡಾದದ್ದು ರಾಜಮ್ಮನವರಿಗೆ ಭರಿಸಲಾರದ ಸಂಕಟವನ್ನು ತಂದೊಡ್ಡಿತು. ಅಂತಹ ದುಃಖವನ್ನು ಸಹಿಸುವ ಶಕ್ತಿಯನ್ನು ಅವರಿಗೆ ಕೊಟ್ಟದ್ದು ಬಹುಶಃ ಸಂಗೀತ-ಸಾಹಿತ್ಯಗಳೇ.

ಸಂಖ್ಯೆಯ ದೃಷ್ಟಿಯಿಂದ ನೋಡಿದರೆ ತಿರುಮಲೆ ರಾಜಮ್ಮನವರ ಪ್ರಕಟಿತ ಕೃತಿಗಳು ಆರೇ. "ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು" ಎನ್ನುವಂತೆ ಅವರ ಒಂದೊಂದು ಕೃತಿಯೂ ಸತ್ವಯುಕ್ತವಾದುದು. ಅಲ್ಲದೆ ಪ್ರಕಟವಾಗದೆ ಉಳಿದಿರುವ ಲೇಖನಗಳೂ, ಹಾಡುಗಳೂ ಸಾಕಷ್ಟಿವೆ.

ರಾಜಮ್ಮನವರ ಜೀವನವನ್ನು ಪರಿಶೀಲಿದಾಗ ಹೆಚ್ಚಿನ ಶಾಲಾಶಿಕ್ಷಣವಿಲ್ಲದ ಈಕೆ ಸಾಹಿತ್ಯರಂಗದಲ್ಲಿ ಇಂತಹ ಸಮರ್ಥ ಬರಹಗಾರ್ತಿ ಹೇಗಾದರೆಂದು ಆಶ್ಚರ್ಯವಾಗುತ್ತದೆ. ಸಾಹಿತ್ಯದಲ್ಲೂ ಈಕೆ ಆರಿಸಿಕೊಂಡಿದ್ದು ನಾಟಕ, ಗೀತೆ ಹಾಗೂ ಪ್ರಬಂಧಗಳು. ಈ ಪ್ರಕಾರಗಳಲ್ಲಿ ಅದರಲ್ಲೂ ನಾಟಕದಲ್ಲಿ ಈಗಲೂ ಲೇಖಕಿಯರ ಸಂಖ್ಯೆ ಬೆರಳೆಣಿಕೆಯಷ್ಟು ಇಲ್ಲವೆಂಬುದನ್ನು ನೆನೆದಾಗ ಇನ್ನಷ್ಟು ಅಚ್ಚರಿ ಎನ್ನಿಸುತ್ತದೆ.

ರಾಜಮ್ಮನವರ ಮಾತೃಭಾಷೆ ತೆಲುಗು. ಮಾತನಾಡುವುದಷ್ಟೇ ಅಲ್ಲದೆ ತೆಲುಗಿನಲ್ಲಿ ಓದಿ ಬರೆಯಲೂ ರಾಜಮ್ಮ ಸಮರ್ಥರಾಗಿದ್ದರು. ಮೊದಲು ತೆಲುಗು ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡರು. ಅದರಲ್ಲೂ ಪ್ರಸಿದ್ಧ ದೇಶಭಕ್ತ ಸಾಹಿತಿ ಎನಿಸಿಕೊಂಡಿದ್ದ 'ವೀರೇಶಲಿಂಗಂ' ಅವರ ಸಾಹಿತ್ಯವನ್ನು ಓದಿ ಮೆಚ್ಚಿಕೊಂಡರು. ಕ್ರಮೇಣ ದೇಶಭಾಷೆಯಾದ ಕನ್ನಡದಲ್ಲೂ ಆಸಕ್ತಿ ಮೂಡಿತು. ಆ ಕಾಲದ ಪ್ರಸಿದ್ಧ ಕಾದಂಬರಿಕಾರರಾದ ವೆಂಕಟಾಚಾರ್ಯ, ಗಳಗನಾಥ ಮುಂತಾದವರ ಕಾದಂಬರಿಗಳನ್ನು ಓದಿ ಕನ್ನಡದಲ್ಲಿ ಪ್ರಭುತ್ವ ಪಡೆದರು. ಪತಿ ಟಿ.ಟಿ. ಶರ್ಮರು ಕನ್ನಡಾಭಿಮಾನಿಯಾಗಿದ್ದುದೂ ಇವರ ಕನ್ನಡ ಕಲಿಕೆಗೆ ಕಾರಣವಾಯಿತು.

ಸಂಗೀತದಂತೆಯೇ ರಾಜಮ್ಮನವರಿಗೆ ಸಾಹಿತ್ಯದಲ್ಲೂ ಚಿಕ್ಕಂದಿನಿಂದಲೇ ಪರಿಶ್ರಮವಿತ್ತು. ಅವರು ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೇ ರವೀಂದ್ರನಾಥ ಠಾಕೂರರ 'ದೃಢಪ್ರತಿಜ್ಞೆ' ಎನ್ನುವ ನಾಟಕವನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದರು. "ಭಾರತಿ" ತಿರುಮಲೆ ರಾಜಮ್ಮನವರ ಕಾವ್ಯನಾಮ.

1919ರಲ್ಲಿ ಅಂದರೆ ರಾಜಮ್ಮನವರಿಗೆ ಹತ್ತೊಂಬತ್ತು ವರ್ಷವಾಗಿದ್ದಾಗ 'ಸುಖಮಾರ್ಗ' ಎನ್ನುವ ಮೂರಂಕದ ಸ್ವತಂತ್ರ ನಾಟಕವನ್ನು ರಚಿಸಿದರು. ಬೆಂಗಳೂರಿನ ಅಮೆಚೂರ್ ನಾಟಕ ಸಂಘದವರು ಕನ್ನಡದಲ್ಲಿ ಹೊಸ ನಾಟಕವನ್ನು ಬರೆಸುವ ಉದ್ದೇಶದಿಂದ ನಾಟಕ ಬರೆಯುವ ಸ್ಪರ್ಧೆಯನ್ನು ಏರ್ಪಡಿಸಿದ್ದರು. ಅದರ ಫಲವಾಗಿ ಅನೇಕ ಒಂದಂಕದ ಮತ್ತು ಮೂರಂಕದ ನಾಟಕಗಳು ಸ್ಪರ್ಧೆಗೆ ಬಂದವು. ಇವುಗಳಲ್ಲಿ ಕೈಲಾಸಂ ಅವರ 'ಟೊಳ್ಳು-ಗಟ್ಟಿ' ನಾಟಕಕ್ಕೆ ಏಕಾಂತ ನಾಟಕಗಳಿಗೆ ಮೀಸಲಾದ ಬಹುಮಾನಗಳಲ್ಲಿ ಮೊದಲನೆಯ ಬಹುಮಾನ ಬಂದಿತು. ಮೂರಂಕ ನಾಟಕಗಳ

ಸ್ಪರ್ಧೆಯಲ್ಲಿ ರಾಜಮ್ಮನವರ 'ಸುಖಮಾರ್ಗ'ಕ್ಕೂ, ಕೆ. ಭೀಮರಾವ್ ಎನ್ನುವವರ 'ಪೃಥ್ವೀರಾಜ' ಎನ್ನುವ ಐತಿಹಾಸಿಕ ನಾಟಕಕ್ಕೂ ಮೊದಲ ಬಹುಮಾನದ ಹಣವನ್ನು ಸಮನಾಗಿ ಹಂಚಲಾಯಿತು. ಆದರೆ ರಾಜಮ್ಮನವರ ಮೊದಲಿನ ಈ ಎರಡು ನಾಟಕಗಳೂ ಅಚ್ಚಾಗಿರುವಂತೆ ತೋರುವುದಿಲ್ಲ.

ಗಾಂಧೀಜಿಯವರ ದರ್ಶನ, ಪರಿಚಯಗಳಿಂದ ಸ್ಫೂರ್ತಿಗೊಂಡ ಮೇಲೆ ರಾಜಮ್ಮನವರು ಹೆಚ್ಚು ಹೆಚ್ಚು ಗೀತೆಗಳನ್ನು ಮುಖ್ಯವಾಗಿ ದೇಶಭಕ್ತಿ ಗೀತೆಗಳನ್ನು ರಚಿಸಲಾರಂಭಿಸಿದರು. ಅವರು ಹೀಗೆ ರಚಿಸಿದ ಮೊದಲ ಗೀತೆ 'ದೇಶ ಸೇವಾ ನಿರತರಾಗ್ಯೆ ಲೋಗರೇ' ಎಂಬುದು. ಅನಂತರ ಅವರು ನೂರಾರು ಗೀತೆಗಳನ್ನು ರಚಿಸಿದರು. ಇವುಗಳಲ್ಲಿ 1942ರ 'ಭಾರತ ಬಿಟ್ಟು ತೊಲಗಿ' ಚಳವಳಿಯ ಸಂದರ್ಭದಲ್ಲಿ ರಚಿತವಾದ 'ರಾಷ್ಟ್ರಶಕ್ತಿಯ ವಿರಾಡ್ರೂಪಧಾರೀ ನಮೋ', ಉಪ್ಪಿನ ಸತ್ಯಾಗ್ರಹಕ್ಕೆ ಸಂಬಂಧಪಟ್ಟ 'ಸತ್ಯ ಸಂಗ್ರಾಮ ರಂಗಕೆ ಬನ್ನಿ ಬನ್ನಿ', ದೇಶ ಸ್ವತಂತ್ರವಾದ ಬೆಳಗ್ಗೆ ರಚಿಸಿದ 'ನಿದ್ದೆ ತಿಳಿದೆಚ್ಚರು' ಮುಂತಾದವು ಪ್ರಸಿದ್ಧವಾದ ಹಾಡುಗಳು. 'ಜೈ ಭಾರತ ಭುವಿಗೇ ಮಾತೆಗೆ' ಎನ್ನುವ ಹಾಡು ಆ ದಿನಗಳಲ್ಲಿ ಶಾಲೆಯ ಪ್ರಾರ್ಥನಾ ಗೀತೆಯಾಗಿ ವಿದ್ಯಾರ್ಥಿಗಳ ಬಾಯಲ್ಲಿ ನಲಿಯುತ್ತಿತ್ತು. ಇವಲ್ಲದೆ ಗಾಂಧೀಜಿಯವರಿಗೆ ಅತಿ ಪ್ರಿಯವಾಗಿದ್ದ 'ವೈಷ್ಣವ ಜನತೋ ತೇನೇ ಕಹಿಯೇ' ಎಂಬ ಹಾಡನ್ನು 'ವೈಷ್ಣವನವನೇ ನಿಜವೀ ಜಗದಿ' ಎಂದು ಕನ್ನಡಕ್ಕೆ ಅನುವಾದಿಸಿ ಅದನ್ನು ಗಾಂಧೀಜಿಯವರ ಮುಂದೆ ಹಾಡಿ ಅವರಿಂದಲೇ ಶಹಬಾಸ್‌ಗಿರಿಯನ್ನು ಪಡೆದಿದ್ದರು ರಾಜಮ್ಮನವರು. ಸ್ವತಃ ಸಂಗೀತಗಾರ್ತಿಯಾಗಿದ್ದರಿಂದ ಹಾಡಿಗನುಕೂಲವಾದ ಶಬ್ದಗಳನ್ನು ಜೋಡಿಸಿ, ಭಾವಕ್ಕೆ ತಕ್ಕ ರಾಗವನ್ನು ಜೋಡಿಸಿ ಸುಂದರವಾದ ಗೀತೆಗಳನ್ನು ರಚಿಸುವುದು ರಾಜಮ್ಮನವರಿಗೆ ಸುಲಭವಾಗಿತ್ತು.

'ರಾಷ್ಟ್ರಭಕ್ತಿ', 'ರಾಷ್ಟ್ರಶಕ್ತಿ' ಎಂಬ ಎರಡು ಸಂಕಲನಗಳಲ್ಲಿ ರಾಜಮ್ಮನವರ ಹಾಡುಗಳು ಸಂಗ್ರಹಿತವಾಗಿವೆ. ಇವೆರಡರಲ್ಲೂ ಸೇರಿ ಸುಮಾರು ನೂರು ಹಾಡುಗಳು ಪ್ರಕಟವಾಗಿವೆ. ಇವಲ್ಲದೆ ಇನ್ನೂ ಇಪ್ಪತ್ತರಷ್ಟು ಹಾಡುಗಳು ಪ್ರಕಟವಾಗದೆ ಉಳಿದಿವೆ. ಜೊತೆಗೆ 'ಜ್ವಾಲಾಮುಖಿ' ಮತ್ತು 'ವೇದನ ನಿವೇದನ' ಎಂಬ ನೀಳ್ಗವನಗಳನ್ನು ಇವರು ರಚಿಸಿದ್ದಾರೆ.

'ಆರ್ಯ ಕೈಲಾಸಂ' ಮತ್ತು 'ವೀಣೆ ಶೇಷಣ್ಣ' ಭಾರತಿಯವರು ರಚಿಸಿದ ಜೀವನ ಚಿತ್ರಗಳು. ಈ ಇಬ್ಬರು ಮಹನೀಯರು ರಾಜಮ್ಮನವರಿಗೆ ಆತ್ಮೀಯರಾಗಿದ್ದವರು. ವೀಣೆ ಶೇಷಣ್ಣನವರು ಅವರಿಗೆ ವೀಣಾವಾದನ ಕಲಿಸಿದ ಗುರುಗಳು. ಅವರ ಬಗ್ಗೆ ತುಂಬಾ ಗೌರವದಿಂದ ರಾಜಮ್ಮನವರು ಬರೆದಿದ್ದಾರೆ. ಜೊತೆಗೆ ಅವರು ಪಾಠ ಕಲಿಸುತ್ತಿದ್ದ ರೀತಿಯನ್ನೂ ವರ್ಣಿಸಿದ್ದಾರೆ.

ಕೈಲಾಸಂ ಭಾರತಿಯವರ ಕುಟುಂಬದವರಿಗೆಲ್ಲ ಆತ್ಮೀಯರಾದ ಬಂಧುವಿನಂತಿದ್ದವರು. ರಾಜಮ್ಮನವರು ಕೈಲಾಸಂ ಅವರಲ್ಲಿ ಅಣ್ಣನನ್ನು ಕಂಡುಕೊಂಡವರು. ಅವರಿಗೆ ಕೈಲಾಸಂ ಅವರಲ್ಲಿ ಅಪಾರ ಅಭಿಮಾನ, ಬಾಹ್ಯಚರ್ಯೆಯಲ್ಲಿ ಅವರು ಹೇಗಾದರೂ ಇರಲಿ, ಅಂತರಂಗದ ನೈರ್ಮಲ್ಯದ ಕಡೆ ಗಮನಹರಿಸಿದರೆ ಕೈಲಾಸಂ ಋಷಿಗಳ ಪರಂಪರೆಯಲ್ಲಿ ಬಂದವರು ಎನ್ನುತ್ತಾರೆ ರಾಜಮ್ಮನವರು. ಅದಕ್ಕೆ ಅವರು 'ಆರ್ಯ' ಎನ್ನುವ ಗೌರವಕ್ಕೆ ಪಾತ್ರರಾದರು. 'ಆರ್ಯ ಕೈಲಾಸಂ' ಕೇವಲ ಐವತ್ತೊಂದು ಪುಟಗಳ ಪುಟ್ಟ ಪುಸ್ತಕ. ವಿಚಿತ್ರ ವ್ಯಕ್ತಿತ್ವದ ಕೈಲಾಸಂ ಅವರನ್ನು ಅರ್ಥಮಾಡಿಕೊಳ್ಳಬಯಸುವವರಿಗೆ ಒಂದು ಕೈಪಿಡಿಯಂತಿದೆ. ಕೈಲಾಸಂ ಅವರಂತಹ ಅದ್ಭುತ ವ್ಯಕ್ತಿಯನ್ನು ಜೀವಂತ ನಿಲ್ಲಿಸುವಂತಹ ಅನುಭವಗಳಿಂದ ಕೂಡಿದೆ ಈ ಬರಹ.

ಭಾರತಿಯವರಿಗೆ ವಿಶೇಷವಾಗಿ ಕೀರ್ತಿಯನ್ನು ತಂದುಕೊಟ್ಟಿದ್ದು ಅವರ ನಾಟಕಗಳು. ಅವೇ 'ತಪಸ್ವಿನಿ', 'ಮಹಾಸತಿ', 'ವಾತ್ಸಲ್ಯ ತರಂಗ ಲೀಲಾ' ಈ ಮೂರು ನಾಟಕಗಳು 'ಭಾರತೀರೂಪಕತ್ರಯೀ' ಎನ್ನಿಸಿಕೊಂಡಿವೆ.

1931ರಲ್ಲಿ 'ತಪಸ್ವಿನಿ' ನಾಟಕ ಪುಸ್ತಕ ರೂಪದಲ್ಲಿ ಪ್ರಕಟವಾಯಿತು. ಲಕ್ಷ್ಮಣ, ಶ್ರೀರಾಮಸೀತೆಯರೊಂದಿಗೆ ವನವಾಸಕ್ಕೆ ಹೋದಾಗ, ಆಗ ಅಯೋಧ್ಯೆಯಲ್ಲಿಯೇ ಉಳಿದಿದ್ದ ಊರ್ಮಿಳೆ ಏನು ಮಾಡಿರಬಹುದು? ಅವಳು ತನ್ನ ಪತಿಯನ್ನೇ ನಿರೀಕ್ಷಿಸುತ್ತಾ ತಪಸ್ವಿನಿಯಾಗಿ ಕಾಲಕಳೆದಳು ಎನ್ನುತ್ತಾರೆ ರಾಜಮ್ಮನವರು. ಇದೇ ವಸ್ತುವನ್ನೊಳಗೊಂಡಿದೆ ಅವರ ಈ ನಾಟಕ. ಬಿಡಿ ವೃತ್ತವನ್ನು ಉಪಯೋಗಿಸಿ ಈ ಕಾವ್ಯವನ್ನು ರಚಿಸಲಾಗಿದೆ. ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆಯುತ್ತ ಕನ್ನಡದ ಹಿರಿಯ ಸಾಹಿತಿ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಹೇಳುತ್ತಾರೆ:

"ಇಂಥ ವೃತ್ತವನ್ನು ಬರೆಯುವುದರಲ್ಲಿ ಶ್ರೀಮತಿ ರಾಜಮ್ಮನವರು ಅಸಾಧಾರಣವಾದ ಕುಶಲತೆಯನ್ನು ತೋರಿದ್ದಾರೆ. ಕನ್ನಡ ಬಿಡಿ ವೃತ್ತದ ರೂಪು ನಿಯಮಿತವಾಗುವುದಕ್ಕೆ ಈ ಕಾವ್ಯದಿಂದ ಬಹಳ ಸಹಾಯಕವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಇಲ್ಲಿ ಸಹಜವಾದ ಕಾವ್ಯದೃಷ್ಟಿಯೂ, ಸರಳವಾದ ಕಾವ್ಯಶಕ್ತಿಯೂ ಸೇರಿ ಸುಂದರವಾದ ಒಂದು ಕಾವ್ಯವನ್ನು ನಿರ್ಮಾಣ ಮಾಡಿದೆ." ಮಾಸ್ತಿಯಂತಹವರಿಂದ ಇಂತಹ ಪ್ರಶಂಸೆಯನ್ನು ಪಡೆಯುವುದು ಸಾಮಾನ್ಯ ವಿಚಾರವಲ್ಲ. 'ತಪಸ್ವಿನಿ' ನಾಟಕಕ್ಕೆ ಮೈಸೂರು ವಿಶ್ವವಿದ್ಯಾಲಯದ ಬಹುಮಾನವೂ ದೊರೆಯಿತು.

ಟಿ.ಟಿ. ಶರ್ಮರು ಮದರಾಸಿನಲ್ಲಿ ಪುರಾತನ ಶಾಸನಗಳ ಅನ್ವೇಷಣೆ, ಅಧ್ಯಯನ, ಸಂಶೋಧನೆ ನಡೆಸುವ ಪ್ರಾಕ್ತನ ಸಂಶೋಧನಾ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಅವರ ಜೊತೆಯಲ್ಲಿ ಇತಿಹಾಸ ಹಾಗೂ ಪುರಾಣ ಪ್ರಸಿದ್ಧವಾದ ಊರುಗಳನ್ನು ಸುತ್ತುವ, ಅಲ್ಲಿನ ಸ್ಥಳ ಮಹಿಮೆಯನ್ನು ತಿಳಿಸುವ ಶಾಸನಗಳನ್ನು, (ವೀರಗಲ್ಲು, ಮಾಸ್ತಿಗಲ್ಲುಗಳನ್ನು) ಕಾಣುವ ಅವಕಾಶ ರಾಜಮ್ಮನವರಿಗೆ ಒದಗಿತು. ಇದರ ಫಲವಾಗಿ ಮೂಡಿಬಂದ ನಾಟಕ: 'ಮಹಾಸತಿ'. ಚೋಳರಾಜನ ಅಧೀನದಲ್ಲಿ ನವಿಲನಾಡಿನೊಡೆಯ ಏಚನ ಹೆಂಡತಿ ದೇಕಬ್ಬೆ (ನುಗು ನಾಡಿನ ಅರಸುಕುವರಿ) ಇಲ್ಲಿನ ಮಹಾಸತಿ, ರಾಜನ ಆಜ್ಞೆಯನ್ನು ಉಲ್ಲಂಘಿಸಿ ಏಚನು ಮಲ್ಲಯುದ್ಧದಲ್ಲಿ ತನ್ನ ದಾಯಾದಿ ಎರೆಯಂಗನನ್ನು ಕೊಲ್ಲಲು, ರಾಜ ಸಿಟ್ಟಿಗೆದ್ದು ಏಚನಿಗೆ ಮರಣದಂಡನೆ ವಿಧಿಸುತ್ತಾನೆ. ಈ ಸುದ್ದಿಯನ್ನು ಕೇಳಿದ ದೇಕಬ್ಬೆ ಸಹಗಮನ ಮಾಡಲು ನಿಶ್ಚಯಿಸಿ ಏಚನ ದೇಹವನ್ನು ಜೊತೆಗಿಟ್ಟುಕೊಂಡು ಮಹಾವೈಭವದಿಂದ ಸಹಗಮನ ಮಾಡುತ್ತಾಳೆ. 'ಮಹಾಸತಿ' ರೂಪಕಕ್ಕೆ ಇದೇ ವಸ್ತು. 1956ರಲ್ಲಿ ಈ ನಾಟಕ ಪ್ರಕಟವಾಯಿತು. ಅಂದಿನ ಅನೇಕ ವಿದ್ವಾಂಸರಿಂದ ಈ ನಾಟಕ ಪ್ರಶಂಸೆಗಳಿಸಿತು. ಈ ನಾಟಕಕ್ಕೆ ಕನ್ನಡದ ಪ್ರಸಿದ್ಧ ಸಾಹಿತಿ ಪ್ರೊ॥ ವಿ. ಸೀತಾರಾಮಯ್ಯನವರು ಮುನ್ನುಡಿ ಬರೆದಿದ್ದಾರೆ.

ಭಾರತೀ ರೂಪಕತ್ರಯಿಯಲ್ಲಿನ ಮೂರನೆಯ ರೂಪಕ 'ವಾತ್ಸಲ್ಯತರಂಗಲೀಲಾ'. ಈ ನಾಟಕವನ್ನು ಭಾರತೀಯವರು ತಮ್ಮ ಇಳಿವಯಸ್ಸಿನಲ್ಲಿ ರಚಿಸಿದರು. ಕಾಳಿದಾಸ ಮಹಾಕವಿಯ ಶಾಕುಂತಲ ನಾಟಕದ ಹಿನ್ನೆಲೆಯಲ್ಲಿ ಈ ರೂಪಕ ರಚಿತವಾಗಿದೆ. ಮೇನಕೆ ವಿಶ್ವಾಮಿತ್ರನಿಂದ ಹೆಣ್ಣು ಮಗುವನ್ನು ಪಡೆಯುತ್ತಾಳೆ. ದೇವಕಾರ್ಯ ಮುಗಿದಿದ್ದರಿಂದ ದೇವಲೋಕಕ್ಕೆ ಹಿಂತಿರುಗುವಂತೆ ದೇವೇಂದ್ರ ಮೇನಕೆಗೆ ನಿರೂಪ ಕಳುಹಿಸುತ್ತಾನೆ. ಮಗುವನ್ನು ಬಿಟ್ಟು ಹೋಗಲಾರದೆ ಮೇನಕೆ ತೊಳಲಾಡುತ್ತಾಳೆ. ಕೊನೆಗೆ ಬಿಟ್ಟುಹೋಗಲೇಬೇಕಾಗುತ್ತದೆ. ಮೇನಕೆಯ ಮನಸ್ಸಿನ ತೊಳಲಾಟವನ್ನು ಭಾರತಿಯವರು ತುಂಬಾ ಮನೋಜ್ಞವಾಗಿ ಚಿತ್ರಿಸಿದ್ದಾರೆ. ದೇವಗಣಿಕೆಯಾದರೇನು? ತಾಯಿ ತಾಯಿಯೇ! ಪ್ರಬಲವಾದ ಶಕ್ತಿಗೆ ಮಣಿದು ತಾನು ಹೆತ್ತ ಮಗುವನ್ನು ಬಿಟ್ಟು ಹೊರಡುವಾಗ ಆ ತಾಯಿ ಕೊರಗದಿರುವುದು ಸಾಧ್ಯವೇ? ಈ ಭಾವನೆಯೇ ಈ ರೂಪಕಕ್ಕೆ ಪ್ರೇರಣೆ. ಈ ಭಾವನೆಯಿಂದಾಗಿ ಮೇನಕಾ ಪ್ರಸಂಗಕ್ಕೆ ಒಂದು ಹೊಸ ತಿರುವು ಬಂದಿದೆ.

ಒಟ್ಟಿನಲ್ಲಿ ಪ್ರೊಫೆಸರ್ ಎಸ್.ಕೆ. ರಾಮಚಂದ್ರರಾವ್ ಅವರು ಹೇಳುವಂತೆ: " 'ಭಾರತೀ ರೂಪಕತ್ರಯ' ನಮ್ಮನ್ನು ಮೂರು ಲೋಕಗಳಿಗೊಯ್ಯುತ್ತದೆ. 'ತಪಸ್ವಿನಿ'ಯಲ್ಲಿ ಲಕ್ಷ್ಮಣನ ಮಡದಿ ಊರ್ಮಿಳೆಯ ಉದಾತ್ತ ಆದರ್ಶ,

'ಮಹಾಸತಿ'ಯಲ್ಲಿ ನಾಡಿನ ಮರ್ಯಾದೆಗಾಗಿ ಸತಿಯು ಮಾಡುವ ಬಲಿದಾನ, ಮೂರನೆಯದರಲ್ಲಿ ದೇವಮಾನವರ ಸಂಕಲ್ಪದಿಂದ ಮಾನವ ಶಿಶು ತಿಪಿದೆಬ್ಬಿಸುವ ಮಾತೃವಾತ್ಸಲ್ಯದ ತರಂಗ ಲೀಲೆ. ಅನುಭವದ ಆಳದಿಂದ, ಭಾವನೆಗಳ ಬುಗ್ಗೆಯಿಂದ ಹೊರಬಂದಿರುವ ಈ ಮೂರು ರೂಪಕಗಳೂ ಮನೋಜ್ಞವಾದವು, ಹೃದ್ಯವಾದವು."

ಈ ಪ್ರಕಟಿತ ಕೃತಿಗಳಲ್ಲದೆ ರಾಜಮ್ಮನವರ ಅನೇಕ ಹಾಡುಗಳು, ಲೇಖನಗಳು ಪುಸ್ತಕ ರೂಪದಲ್ಲಿ ಪ್ರಕಟವಾಗದೆ ಉಳಿದಿವೆ. ಇವರ ಅಪ್ರಕಟಿತ ಕೃತಿಗಳಲ್ಲಿ 'ಜ್ವಾಲಾಮುಖಿ', 'ವೇದನ-ನಿವೇದನ' ಎಂಬ ನೀಳ್ಗವನಗಳು, 'ದುಂದುಭಿ', 'ಉನ್ಮತ್ತಭಾಮಿನಿ' ಎಂಬ ಕಿರುನಾಟಕಗಳು ಪ್ರಸಿದ್ಧವಾಗಿವೆ.

ಅಗ್ನಿಪರ್ವತಗಳು ಸಿಡಿದೆದ್ದಾಗ ಪ್ರಕೃತಿ ಮಾತೆಯ ಭೀಕರ ರೂಪ ಅದೆಂದು ಕಲ್ಪಿಸಿಕೊಂಡು ಶಾಂತಳಾಗೆಂದು ದೇವಿಯಲ್ಲಿ ಬೇಡುವ ಕವಿತೆ 'ಜ್ವಾಲಾಮುಖಿ'. ಇದರಲ್ಲಿ ಮುವ್ವತ್ತಾರು ಪದ್ಯಗಳಿವೆ. ಪ್ರತಿ ಪದ್ಯಕ್ಕೂ ಆದಿ ಪ್ರಾಸವಿದ್ದು ನಾಲ್ಕು ಸಾಲುಗಳಿವೆ.

'ವೇದನ-ನಿವೇದನ'ದ ವಸ್ತು ದೈವದ ಅಸ್ತಿತ್ವವನ್ನು ನಂಬಿ, ಒಳಿತು-ಕೆಡಕುಗಳಲ್ಲಿ ಶ್ರದ್ಧೆ ಹೊಂದಿರುವ ಭಕ್ತಿ ಸ್ತೋತ್ರಗಳಿಂದ ಆದಿಮೂಲನನ್ನು ಸ್ತುತಿಸಿದ ಜೀವ, ದೇವನಿಂದ ಯಾವ ಬಗೆಯ ಪ್ರತಿಕ್ರಿಯೆಯೂ ಕಾಣದಿದ್ದಾಗ ರೋಸಿ ನುಡಿದ ಮಾತುಗಳಿವು. ಒಂದು ರೀತಿಯ ನಿಂದಾಸ್ತುತಿ. ಇದರಲ್ಲಿ ಅರವತ್ತೈದು ಪದ್ಯಗಳಿವೆ.

ಭಾರತಿಯವರು ಆಗಾಗ ರಚಿಸಿದ ಲೇಖನಗಳು ತಮ್ಮದೇ ಆದ ವೈಶಿಷ್ಟ್ಯದಿಂದ ಇಂದಿಗೂ ಸ್ಫೂರ್ತಿದಾಯಕವಾಗಿವೆ. 'ಮರೆಯಲಾಗದ ಬಾಪೂ'ವಿನಲ್ಲಿ ಗಾಂಧೀಜಿಯವರ ಬಗ್ಗೆ ಭಕ್ತಿ, ಅಭಿಮಾನ ತುಂಬಿದ ಬರಹ ತುಂಬಿದ್ದರೆ, ವಾಸುದೇವಾಚಾರ್ಯರ 'ನೆನಪುಗಳು', ಪು.ತಿ.ನ. ಅವರ ಕೃತಿ 'ಅಹಲ್ಯೆ', ಗೀತಕಾರ ಜಯದೇವ ಇಂತಹ ಲೇಖನಗಳಲ್ಲಿ ಸಹೃದಯ ವಿಮರ್ಶೆಯಿದೆ. ಅವರ 'ಸ್ತ್ರೀ ವಿದ್ಯಾಭ್ಯಾಸ', 'ಶ್ರೀರಾಮನ ಪತ್ನೀ ಪ್ರೇಮ' ಇಂತಹ ಲೇಖನಗಳಲ್ಲಿ ಭಾರತಿಯವರ ಪ್ರಗತಿಪರ ಧೋರಣೆಯನ್ನು ಗುರುತಿಸಬಹುದಾಗಿದೆ. ಸಂಗೀತಕ್ಕೆ ಸಂಬಂಧಿಸಿದ 'ಸಂಗೀತ ಸ್ವರೂಪ' ಮುಂತಾದ ಲೇಖನಗಳಲ್ಲಿ ಸಂಗೀತದ ಬಗ್ಗೆ ಅವರಿಗಿರುವ ಆಳವಾದ ಜ್ಞಾನ ಗೋಚರವಾಗುತ್ತದೆ. ವಸ್ತು ವೈವಿಧ್ಯದಿಂದ ಕೂಡಿದ ರಾಜಮ್ಮನವರ ಲೇಖನಗಳೆಲ್ಲ ಒಂದು ಸಂಕಲನದಲ್ಲಿ ದೊರೆಯುವಂತಾದರೆ ಅದೊಂದು ಉತ್ತಮ ಸಂಗ್ರಹವಾಗುವುದರಲ್ಲಿ ಸಂದೇಹವಿಲ್ಲ.

ಭಾರತಿ ಅವರು ತಮ್ಮ ಸಮಕಾಲೀನ ಸಾಹಿತಿಗಳಿಂದ, ಸಂಗೀತಗಾರರಿಂದ ಆದರ, ಗೌರವಗಳನ್ನು ಪಡೆದಿದ್ದವರು. ದೇಶಾಭಿಮಾನಿಗಳು, ಸಾಹಿತಿಗಳು, ಸಂಗೀತಗಾರರು ಅವರ ಮನೆಗೆ ಭೇಟಿ ಕೊಡುವುದು ಸಾಮಾನ್ಯವಾಗಿತ್ತು. ಈ ಎಲ್ಲರೊಂದಿಗೆ ಮಾತುಕತೆಗಳಲ್ಲಿ ಭಾಗವಹಿಸಿ ಅವರು ಅಪಾರ ಲೋಕಜ್ಞಾನವನ್ನು ಸಂಪಾದಿಸಿದ್ದರು. ಹಾಗೆಯೇ ಆ ಎಲ್ಲ ಹಿರಿಯವರಿಂದ ಆತ್ಮೀಯತೆಯನ್ನು ಪಡೆದುಕೊಂಡಿದ್ದರು. ಈ ಮಾತಿಗೆ ಡಾ॥ ದ.ರಾ. ಬೇಂದ್ರೆಯವರ ಒಂದು ಕವನವನ್ನೇ ಸಾಕ್ಷಿಯಾಗಿ ಉದಾಹರಿಸಬಹುದು:

ಭಾವಕ್ಕೆ ತಕ್ಕ ತಾಳವೂ ರಾಗವೂ ಉಂಟು
ಭಾರತದ ಏಳಿಗೆಗೆ ಯಾವುದೋ ಕೃತಕೃತ್ಯ
'ಭಾರತಿ'ಯ ಬಾಳುವೆಗೆ ಆ ನಡಿಗೆಯ ನೃತ್ಯ
ಸಾಹಿತ್ಯ ಸಂಗೀತ ಸಹಜವಾಗಿದೆ ನಂಟು.

ರಾಜಮ್ಮನವರು 1943ರಲ್ಲಿ ಶಿವಮೊಗ್ಗೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಮಹಿಳಾ ಗೋಷ್ಠಿಯ ಅಧ್ಯಕ್ಷೆಯಾಗಿದ್ದರು. ಆಗ ಅವರು ಮಾಡಿದ ಭಾಷಣ ವಿದ್ವತ್ಪೂರ್ಣವೂ, ವಿಚಾರಯುಕ್ತವೂ ಆಗಿದ್ದು ಗಣ್ಯರ ಮೆಚ್ಚುಗೆ ಗಳಿಸಿತು.

1968ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ರಾಜಮ್ಮನವರಿಗೆ ದೊರೆಯಿತು.

1972ರಲ್ಲಿ ತಿರುಮಲೆ ರಾಜಮ್ಮನವರನ್ನು ರಾಜ್ಯಮಟ್ಟದಲ್ಲಿ ಸನ್ಮಾನಿಸಲು ಅಭಿಮಾನಿಗಳಿಂದ ಕೂಡಿದ ಒಂದು ಸನ್ಮಾನ ಸಮಿತಿ ರಚಿತವಾಯಿತು. ರಾಜಮ್ಮನವರಿಗೆ ಸನ್ಮಾನ ಮಾಡುವ ಸುದ್ದಿ ತಿಳಿದಾಗ ಹಿರಿಯ ಸಾಹಿತಿಗಳಿಂದ, ಸಂಗೀತಗಾರರಿಂದ, ದೇಶದ ಅನೇಕ ಗಣ್ಯರಿಂದ ಬಂದ ಪ್ರತಿಕ್ರಿಯೆ ಅಸಾಧಾರಣವಾದುದು. ಅವುಗಳಲ್ಲಿ ಕೆಲವು ಇಲ್ಲಿವೆ:

"ರಾಜಮ್ಮನವರು ಸಾಹಿತ್ಯ, ಸಂಗೀತ, ದೇಶಭಕ್ತಿಗಳ ತ್ರಿವೇಣಿ ಸಂಗಮ."

"ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ಸಾಹಿತ್ಯ, ಸಂಗೀತ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ರಾಜಮ್ಮನವರ ಕೃತಿಗಳು ಸಂಖ್ಯೆಯಲ್ಲಿ ಕಡಿಮೆಯಾದರೂ ಮೌಲ್ಯದ ದೃಷ್ಟಿಯಿಂದ ಹೆಚ್ಚಿನವು."

" 'ಭಾರತಿ' ಕಾವ್ಯನಾಮ ಇವರಿಗೆ ಅನ್ವರ್ಥವಾಗಿದೆ."

"ಇಂಥ ಮಹಿಳೆ ಯಾವ ನಾಡು ನುಡಿಗಾದರೂ ಭೂಷಣ. ಇಂತಹವರನ್ನು ಸನ್ಮಾನಿಸಬೇಕಾದುದು ನಾಡಿನವರ ಕರ್ತವ್ಯ."

ಈ ಸಂದರ್ಭದಲ್ಲಿ ಪ್ರಕಟವಾಗಲಿದ್ದ ಅಭಿನಂದನ ಗ್ರಂಥಕ್ಕೂ ಇದೇ ಅಭಿಮಾನದಿಂದ ನಾಡಿನ ಹಿರಿಯರು, ಕಿರಿಯರು ಲೇಖನಗಳನ್ನು ಬರೆದುಕೊಟ್ಟರು. ಹಿರಿಯ ಸಾಹಿತಿಗಳಾದ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ 1976 ನವೆಂಬರ್ 19ರಂದು ಬೆಂಗಳೂರಿನ ಪುರಭವನದಲ್ಲಿ ರಾಜಮ್ಮನವರನ್ನು ವೈಭವದಿಂದ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ 'ಭಾರತಿ' ಅಭಿನಂದನ ಗ್ರಂಥವನ್ನು ಇವರಿಗೆ ಸಮರ್ಪಿಸಲಾಯಿತು. (ಸಂಪಾದಕಿ: ಎಚ್.ಎಸ್. ಪಾರ್ವತಿ)

ಇದಲ್ಲದೆ ಪತ್ರಿಕೆಗಳಲ್ಲಿ, ಆಕಾಶವಾಣಿಯಲ್ಲಿ ಹಲವಾರು ಬಾರಿ ಇವರ ಸಂದರ್ಶನಗಳು ಪ್ರಕಟವಾಗಿವೆ.

ಮೊದಲಿನಿಂದಲೂ ರಾಜಮ್ಮನವರ ದೇಹಸ್ಥಿತಿ ಅಷ್ಟಕ್ಕಷ್ಟೇ, ಆಗಾಗ ಖಾಯಿಲೆಯಿಂದ ನರಳುತ್ತಿದ್ದರು. ಆದರೆ ಅವರ ಮನಶ್ಶಕ್ತಿ ಮಾತ್ರ ಅಸಾಧಾರಣವಾದದ್ದು. ಆಕಾರ ಪುಟ್ಟದಾದರೂ ಅದರೊಳಗಿದ್ದುದು ದೃಢವಾದ ಮನಸ್ಸು. ದೇಶಾಭಿಮಾನ, ಭಾಷಾಭಿಮಾನಗಳು ಅವರಿಗೆ ರಕ್ತಗತವಾಗಿ ಬಂದಿದ್ದವು. ಕೊನೆಯವರೆಗೂ ಚಟುವಟಿಕೆಯಿಂದಿದ್ದ ಈಕೆ, 1984ರಲ್ಲಿ ತಮ್ಮ 84ನೇ ವಯಸ್ಸಿನಲ್ಲಿ ದಿವಂಗತರಾದರು.

'ಭಾರತಿ'ಯವರಂತಹವರ ಜೀವನವೇ ಲೋಕಕೊಂದು ಸಂದೇಶ. ಜೊತೆಗೆ ಅವರ ಕೃತಿಗಳು ಅವರ ಸಂದೇಶವನ್ನು ಸಾರುವಲ್ಲಿ ಸಮರ್ಥವಾಗಿವೆ.

---- * ----

ದಾಸ ಸಾಹಿತ್ಯದ ಮೇರು ಪ್ರತಿಭೆ ಅಂಬಾಬಾಯಿ

ಶಾಂತಾ ನಾಗರಾಜ್

ಕರ್ನಾಟದಲ್ಲಿ ಸಾಹಿತ್ಯಕ್ಕೆ ಮಹಿಳೆ ಕಾಲಿರಿಸಿದ್ದೇ ಭಕ್ತಿ ಪಂಥದ ಮೂಲಕ. ಹನ್ನೆರಡನೇ ಶತಮಾನದ ಅಕ್ಕಮಹಾದೇವಿಯಿಂದ ಮೊದಲುಗೊಂಡ ಈ ಪ್ರಕಾರ, ದಾಸಸಾಹಿತ್ಯದಲ್ಲಿ ವಿಫುಲವಾಗಿ ಮುಂದುವರೆದಿದ್ದನ್ನು ಕಾಣುತ್ತೇವೆ. ಹರಪನಹಳ್ಳಿ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮ, ಮುಂತಾದವರಂತೆಯೇ ಚಿತ್ರದುರ್ಗದ ಅಂಬಾಬಾಯಿಯೂ ಈ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಅಂಬಾಬಾಯಿಯವರ ಕಾಲ 1902ರಿಂದ 1945ರ ವರೆಗೆ. ಅವರೇ ತಮ್ಮ ಒಂದು ದೇವರನಾಮದಲ್ಲಿ "ಧರೆಯೊಳಗೆ ಪುಟ್ಟಿ ಮೂವತ್ತಾರು ಸಂವತ್ಸರವು ಸರಿದುದೀ ಬಹುಧಾನ್ಯಕೆ" ಎಂದು ಹೇಳಿಕೊಂಡಿದ್ದಾರೆ. ಅಂದರೆ 1902ರ ಶೋಭನಕೃತು ಸಂವತ್ಸರದ ಕಾರ್ತೀಕ ಶುದ್ಧ ದಶಮಿಯಂದು ಹುಟ್ಟಿದರೆಂದು ಖಚಿತವಾಗಿ ಹೇಳಬಹುದು. ಬದುಕಿದ ನಲವತ್ತೆರಡು ವರ್ಷಗಳಲ್ಲಿ ಪ್ರಾರಂಭಿಕ ಇಪ್ಪತ್ತೆಂಟು ವರ್ಷಗಳನ್ನು ನೀರಸವಾಗಿಯೇ ಕಳೆದು, ಸ್ವಲ್ಪ ನಿಧಾನವಾಗಿಯೇ ಶುರುವಾದ ಅವರ ಸಾಹಿತ್ಯ ಯಾತ್ರೆ ಬೇಗನೇ ತನ್ನ ವೇಗವನ್ನು ಪಡೆದುಕೊಂಡು ಸುಮಾರು ನಾನೂರಕ್ಕೂ ಹೆಚ್ಚು ದೇವರನಾಮಗಳನ್ನೂ, ಹತ್ತಾರು ಸುದೀರ್ಘ ಪದಗಳನ್ನೂ, ರಾಮಾಯಣ ಮಹಾಕಾವ್ಯವನ್ನೂ ರಚಿಸಿದ್ದಾರೆಂದರೆ ಇದು ನಿಜಕ್ಕೂ ಅನೂಹ್ಯವಾದುದು.

ಹುಟ್ಟಿನಿಂದಲೇ ನಿಷಿತಮತಿಯಾಗಿದ್ದ ಅಂಬಾಬಾಯಿಗೆ ವ್ಯಾಸಂಗವೆಂದರೆ ಪಂಚಪ್ರಾಣ. ತಂದೆ ಭೀಮರಾಯರು ತಾಯಿ ಭಾರತೀಬಾಯಿಗೆ ತಮ್ಮ ಎರಡನೇ ಮಗಳು ಅಂಬಾಳನ್ನು ಕಂಡರೆ ಇನ್ನಿಲ್ಲದ ಅಕ್ಕರೆ! ಆ ಕಾಲದ ಸಾಮಾಜಿಕ ನಿಯಮವಾಗಿದ್ದ 'ಹೆಣ್ಣಿಗೇಕೆ ವಿದ್ಯೆ' ಎನ್ನುವ ನಿಲುವನ್ನೂ ಧಿಕ್ಕರಿಸಿ ಮಗಳನ್ನು ಶಾಲೆಗೆ ಸೇರಿಸಿದರು. ಜಾಣೆಯಾದ ಅಂಬಾಬಾಯಿ ಒಂದನೇ ತರಗತಿಯಲ್ಲಿ ಎರಡು ಮೂರನೇ ತರಗತಿಯ ಪಾಠಗಳನ್ನೂ, ಎರಡರಲ್ಲಿ ಮುಂದಿನ ತರಗತಿಗಳ ಪಾಠಗಳನ್ನೂ ಸುಲಲಿತವಾಗಿ ಕಂಠಪಾಠ ಮಾಡಿಕೊಂಡಿದ್ದರಂತೆ. ಇಂಥ ಅಸಾಧ್ಯದ ಚುರುಕುತನದಿಂದಲೇ ಅವರು ರಚಿಸಿರುವ ದೇವರನಾಮಗಳಲ್ಲಿ ಅದ್ಭುತವಾದ ಪದಪ್ರಯೋಗ ಮತ್ತು ಭಾವಗಳ ಜಾಲಗಳನ್ನೇ ಹರಡಿದ್ದಾರೆ. ಇಷ್ಟೆಲ್ಲ ಕಲಿಕೆಗೆ ಉತ್ತೇಜಿಸಿದ ತಂದೆಗೆ ಅಂದಿನ ಬಾಲ್ಯವಿವಾಹದ ಪದ್ಧತಿಯನ್ನು ಮೀರುವುದು ಸಾಧ್ಯವಾಗಲಿಲ್ಲ. ಹತ್ತುವರ್ಷದ ಹಾಲುಗಲ್ಲದ ಹಸುಳೆಗೆ ಮದುವೆಯ ಹಸೆಮಣೆಯನ್ನು ಏರಲೇಬೇಕಾಯಿತು. ಅಂಬಾಬಾಯಿ ಸೇರಿದ ಮನೆ ಚಿತ್ರದುರ್ಗದ ಹತ್ತಿರವೇ ಇದ್ದ ಗೋಪಾಲಪುರವೆನ್ನುವ ಸಣ್ಣ ಹಳ್ಳಿ. ಗಂಡ ಹನುಮಂತಾಚಾರ್ಯನೆನ್ನುವ ಬಾಲಕ. ಅತ್ತೆ ಮನೆಯವರು ಸಾಕಷ್ಟು 'ಉಳ್ಳವರೇ'. ಹನ್ನೊಂದನೇ ವಯಸ್ಸಿನಲ್ಲಿ ಅತ್ತೆಮನೆಯ ಪದಾರ್ಪಣ. ಹನ್ನೆರಡನೇ ವಯಸ್ಸಿನಲ್ಲಿಯೇ ಇಡೀ ಊರಿಗೇ ಬಡಿದ ಪ್ಲೇಗುಮಾರಿಯಿಂದ ಒಂದೇ ದಿನ ಗಂಡನನ್ನೂ ತಂದೆಯನ್ನೂ ಕಳೆದುಕೊಂಡ ದುರ್ದೈವಿ ಅಂಬಾಬಾಯಿ. ಹಣವಂತ ಅತ್ತೆಮನೆಯವರು ಕೊಟ್ಟ ಬಳುವಳಿಯೆಂದರೆ ಕೇಶಮುಂಡನ ಮಾಡಿಸಿ ಹಿಡಿ ಕೂಳೂ ಹಾಕದೇ ಬಾಲೆಯನ್ನು ತೌರಿಗೆ ಅಟ್ಟಿದ್ದು!! ಇಪ್ಪತ್ತನೇ ಶತಮಾನದ ಆದಿಯಲ್ಲಿ ಇಂಥಾ ದುರ್ದೈವೀ ಮಹಿಳೆಯರ ಸಂಖ್ಯೆ ಎಷ್ಟಿತ್ತೋ ಲೆಕ್ಕವಿಟ್ಟವರು ಯಾರು? ಬಾಲ್ಯವಿವಾಹ, ಪ್ಲೇಗು ಕಾಲರಾದಂತಹ

ಮಾರಣಾಂತಿಕ ರೋಗಗಳು ವಿಧವೆಯರ ಸಂಖ್ಯೆಯನ್ನು ದಿನೇದಿನೇ ಹೆಚ್ಚಿಸಿದ್ದವು. ಅಶಿಕ್ಷಣ, ತುತ್ತಿನ ಚೀಲತುಂಬಲು ಪರಾವಲಂಬನ, ಅವಹೇಳನ, ಮತ್ತು ಸಮಾಜದ ನಿರ್ದಯತೆಗೆ ತುತ್ತಾದ ಈ ಜೀವಿಗಳು ಕವಿ ಬೇಂದ್ರೆಯವರು ಹೇಳುವಂತೆ "ಹುರಿಹಿಟ್ಟು ಅವಲಕ್ಕಿಗೆ ಹುಟ್ಟಿದವಳೂ" ಎಂದು ಮೂತಿ ತಿವಿಸಿಕೊಂಡೇ ಕಾಲ ಹಾಕಿದವು. ಮನಸ್ಸು ಅರಳುವ, ದೇಹ ಬೆಳೆಯುವ ವಯಸ್ಸಿನಲ್ಲಿ, ದೇಹ ದಂಡಿಸುವ, ಮನಸ್ಸು ಕುಗ್ಗಿಸುವ ಕಟ್ಟುಪಾಡುಗಳಿಗೆ ಬಲಿಯಾಗಬೇಕಾಯಿತು.

'ಮಹಿಳೆಗೆ ಸತ್ತಗಂಡನ ಆಸ್ತಿಯಲ್ಲಿ ಪಾಲಿದೆ' ಎನ್ನುವ ನಿಯಮ ಇಂದಿಗೂ ಅನೇಕ ದುರ್ದೈವೀ ಮಹಿಳೆಯರಿಗೆ ತಲುಪುತ್ತಿಲ್ಲ. ಇನ್ನು ಅಂದು ಹೇಗೆ ಈ ನಿಯಮ ಅಂಬಾಬಾಯಿಯನ್ನು ಮುಟ್ಟೀತು? ಉಳ್ಳವರ ಮನೆಯ ಸೊಸೆಯಾಗಿಯೂ ಆಕೆ ಅಕ್ಷರಶಃ ಅನಾಥೆಯೇ ಆದರು. ತೌರಿನಲ್ಲಿ ತಾಯಿ ಮತ್ತು ಅಜ್ಜಿಯರು ಮಡಿ ಹೆಂಗಸರು. ಅವರ ವಾಸ್ತವ್ಯವೇ ಅಂಬಾಬಾಯಿಯ ಅಣ್ಣ ಅಥವಾ ತಮ್ಮನ ಮನೆಯಲ್ಲಿ. ಆ ಇಬ್ಬರ ಜೊತೆ ಮೂರನೆಯವರಾಗಿ ಈ ಪುಟ್ಟ ವಿಧವೆಯೂ ಸೇರ್ಪಡೆಯಾಗಬೇಕಾಯಿತು. ಅತ್ತಿಗೆಯ ಬಸಿರುತನ, ತಮ್ಮನ ಹೆಂಡತಿಯ ಬಾಣಂತಿತನ, ತಂಗಿಯ ಮಕ್ಕಳ ಲಾಲನೆಪಾಲನೆ ಇವೇ ಅಂಬಾಬಾಯಿಯ ನಿತ್ಯದ ಕಾಯಕವಾಯಿತು. ಇಪ್ಪತ್ತೆಂಟು ವರ್ಷಗಳು ಹೇಗೆ ಉರುಳಿದವೋ ಅದು ಯಾವ ದಾಖಲೆಯಲ್ಲೂ ಇಲ್ಲ. ಕೇವಲ ಇಪ್ಪತ್ತೆಂಟು ವರ್ಷಗಳಿಗೇ ತೊಂಬತ್ತರ ವೈರಾಗ್ಯ ಬಂದಿದ್ದು ಸುಳ್ಳಲ್ಲ. "ಎಷ್ಟು ದಿವಸ ಹೀಗೆ ಕಳೆಯಲೋ...ಎಷ್ಟು ದಿವಸ ಹೀಗೆ ಎನ್ನ ಸೃಷ್ಟಿಗೊಡೆಯ ಬಳಲಿಸುವೆಯೋ..ಕಷ್ಟಪಡಲಾರೆ ಭವದಿ ದೃಷ್ಟಿಯಿಂದ ನೋಡಿ ಸಲಹೋ" ಎಂದು ಬೇಡುತ್ತಾರೆ. ಹೀಗೆ ಭಗವಂತನನ್ನು ಅಕ್ಷರಗಳ ಮಾಧ್ಯಮದಿಂದ ಬೇಡಬಹುದು ಎನ್ನುವ ದಾರಿ ತೆರೆದದ್ದೂ ಸಹ ಒಂದು ಚಮತ್ಕಾರವೇ. ಆಗ ಅಂಬಾಬಾಯಿಯ ತಮ್ಮ ರೈಲ್ವೇ ಇಲಾಖೆಯಲ್ಲಿ ಉದ್ಯೋಗಿಯಾಗಿ ಬೆಂಗಳೂರಿನಲ್ಲಿದ್ದರು. ತಮ್ಮನ ಹೆಂಡತಿಯ ಬಾಣಂತನವೋ ಮತ್ತೊಂದೋ ಅಂಬಾಬಾಯಿಯೂ ತಮ್ಮನ ಮನೆಯಲ್ಲೇ ಇದ್ದರು. ತಮ್ಮನ ಪರಿಚಿತರ ಮನೆಯಲ್ಲಿ ದೇವರಾಯನದುರ್ಗದ 'ತಂದೆ ಮುದ್ದುಮೋಹನ ವಿಠಲ ದಾಸರ' ಆಗಮನವಾಗಿತ್ತು. ಅವರ ಒಂದು ಪ್ರವಚನಕ್ಕೆ ತಮ್ಮನ ಮನೆಯವರಿಗೆ ಆಹ್ವಾನವಿತ್ತು. ತಮ್ಮ ತನ್ನ ಜೊತೆಯಲ್ಲೇ ಈ ಅಕ್ಕನನ್ನೂ ಕರೆದೊಯ್ದರು. ಅಂದೇ ಅಂಬಾಬಾಯಿಯ ಭಕ್ತಿಸಾಹಿತ್ಯದ ಬಾಗಿಲು ತೆರೆಯಿತು. ಅಂಬಾಬಾಯಿಯ ಕಣ್ಣಿನಲ್ಲಿದ್ದ ದೈನ್ಯತೆ, ಮುಖದಲ್ಲಿದ್ದ ಪ್ರೌಢತೆ, ವಿನಯಶೀಲ ನಡವಳಿಕೆ, ಚುರುಕುಗಣ್ಣಿನ ದಾಸರ ಗಮನ ಸೆಳೆಯಿತು. ಅವರ ಅಂತರಂಗ ಸದಾ ಇಂಥ ಭಕ್ತರ ಹುಡುಕಾಟದಲ್ಲಿತ್ತು. ಗುರುವಿನ ಹುಡುಕಾಟ, ಪ್ರತಿಭಾವಂತ ಚೈತನ್ಯ ಎರಡರ ಮಿಲನವಾಗಿತ್ತು. ಅಂಬಾಬಾಯಿಯ ಏಕತಾನತೆಯ ಬದುಕು ಅಂದಿಗೆ ಮುಕ್ತಾಯವಾಗಿತ್ತು. ಗುರುಗಳು ಈಕೆಯನ್ನು ಶಿಷ್ಯೆಯಾಗಿ ಸ್ವೀಕರಿಸಿದರು. "ಇತ್ತಿತ್ತ ಬಾರೆಂದು ಕರೆಯುವವರಿಲ್ಲದೇ ವ್ಯರ್ಥವಲ್ಲವೆ ಜನ್ಮವು... ಅತ್ತತ್ತ ಹೋಗೆಂಬ ನುಡಿಕೇಳಿ ಜಗದೊಳಗೆ ಮತ್ತೆ ಇರಬಹುದೆ ಹರಿಯೇ" ಎನ್ನುತ್ತಿದ್ದ ನೀರಸ ಬದುಕಿಗೊಂದು 'ಭಕ್ತಿ'ಯ ಹೊಸ ನೀರಿನ ಝರಿ ಸೇರಿತು. ಮುಂದೆ ಅದು ದೇವರನಾಮಗಳ ರೂಪದಲ್ಲಿ ಓತಪ್ರೋತವಾಗಿ ಹರಿಯಿತು. ಹೆಜ್ಜೆಹೆಜ್ಜೆಗೂ ಗುರುವಂದನೆ ಅಂಬಾಬಾಯಿಯ ಉಸಿರಾಯಿತು. ಪರಮಪ್ರಿಯ ಸುಬ್ಬರಾಯದಾಸರ ಶಿಷ್ಯರಲ್ಲಿ ತಮ್ಮ ಗುರುವನ್ನು ವಂದಿಸಿ ಅಂಬಾಬಾಯಿಯವರು ರಚಿಸಿರುವಷ್ಟು ದೇವರನಾಮಗಳನ್ನು (ಸುಮಾರು ಐವತ್ತಕ್ಕೂ ಹೆಚ್ಚು) ಮತ್ತ್ಯಾವ ಶಿಷ್ಯರೂ ರಚಿಸಿಲ್ಲವೆಂದರೆ ಅವರ ಸಕಲ ಸದ್ಗುಣಗಳನ್ನೂ ಪ್ರತಿ ಹಾಡಿನಲ್ಲೂ ಕೊಂಡಾಡಿದ್ದಾರೆ.

ಗುರು ದರ್ಶನವಾಗಿ ಅಂಬಾಬಾಯಿಗೆ ಅಂಕಿತ ದೊರಕ್ಕಿದ್ದೇ ಅವರ ಬದುಕಿನ ಶೈಲಿಯೇ ಬದಲಾಯಿತು. ಹಗಲೂ ರಾತ್ರಿ ಭಗವಂತನ ನಾಮಸ್ಮರಣೆ, ಹೊಸಹೊಸ ಭಾವಗಳ ಸೃಷ್ಟಿ, ಅದನ್ನು ಅಕ್ಷರಗಳಲ್ಲಿ ಹಾಡಾಗಿಸುವುದು, ಗುರುವಿನ ಪದಚರಣದಲ್ಲಿ ಸಮರ್ಪಿಸುವುದು, ಇದೇ ಅವರ ನಿತ್ಯ ಕಾಯಕವಾಯಿತು. ಈ ದೈತ್ಯಪ್ರತಿಭೆಯನ್ನು ಕಂಡು ಗುರುಗಳು ಅವಾಕ್ಕಾದರು! ತಮ್ಮೆಲ್ಲ ಶಿಷ್ಯರಿಗಿಂತ ಈಕೆಯನ್ನು ಮಗಳಂತೆ ಭಾವಿಸುತ್ತಾ ರಕ್ಷಿಸುವ ನೆಲೆಯಾದರು. ಗುರುಗಳಿಗೆ ಕರ್ನಾಟಕ, ಆಂಧ್ರ, ತಮಿಳುನಾಡು ಮುಂತಾದ ಕಡೆಗಳಲ್ಲಿ ಶಿಷ್ಯರು ಇದ್ದದ್ದರಿಂದ ಅವರು ಆಗಾಗ್ಗೆ

ಪ್ರವಾಸ ಹೊರಡುತ್ತಿದ್ದರು. ಆದರೆ ಅವರು ಎಲ್ಲೇ ಇರಲಿ ದಿನಕ್ಕೊಂದು ಪೋಸ್ಟ್‌ಕಾರ್ಡ್ ಈ ಶಿಷ್ಯಳ ಹೆಸರಿಗೆ ರವಾನೆಯಾಗುತ್ತಿತ್ತು. ಆಕೆಯ ಪ್ರತಿದಿನದ ದೇವರನಾಮ ಸೃಷ್ಟಿಯ ವಿಚಾರವನ್ನು ತಪ್ಪದೇ ತಿಳಿದುಕೊಳ್ಳುತ್ತಿದ್ದರು. ಒಂದುದಿನ ಪತ್ರ ಬಾರದೇ ಹೋದರೆ ಈ ಶಿಷ್ಯೆ ಎನ್ನುವ ಹಕ್ಕಿ ವಿಲವಿಲನೆ ಒದ್ದಾಡುತ್ತಿತ್ತು. ಆ ಒದ್ದಾಟವೇ ಹಾಡಾಗಿ ಹರಿಯುತ್ತಿತ್ತು. "ಇಂದೇಕೆ ಈ ಪರಿ ನಿರ್ದಯಗೈದಿ ತಂದೆ ಶ್ರೀ ಗುರುವೆ ಪೇಳಿ...ನೊಂದೆನು ಈ ದಿನ ನಿಮ್ಮ ವಾರ್ತೆ ತಿಳಿಯದೆ...ಕುಂದೇನು ತೋರಿತೋ ಎನ್ನಿಂದ ಕ್ಷಮಿಸಿರಿ" ಎನ್ನುವ ಪ್ರಲಾಪದೊಂದಿಗೆ ಆರು ನುಡಿಗಳ ದೇವರನಾಮ ಸಿದ್ಧವಾಗಿಯೇ ಬಿಡುತ್ತಿತ್ತು, ಹಾಗಿತ್ತು ಈ ಗುರು ಶಿಷ್ಯರ ಭಾವಬಂಧ!! ಅಂಬಾಬಾಯಿ ಅತ್ತೆಮನೆಯಿಂದ ಯಾವ ಆಸ್ತಿಯನ್ನು ತಾರದೇ ಹೋದರೂ ಒಂದು ಪಂಚಲೋಹದ ಪುಟ್ಟ ಗೋಪಾಲಕೃಷ್ಣನ ವಿಗ್ರಹವನ್ನು ಬೇಡಿ ತಂದರು. 'ಹೆಣ್ಣಿಗೆ ಯಾಕೆ ದೇವರ ವಿಗ್ರಹ' ಎನ್ನುವ ಪ್ರಶ್ನೆ ಅತ್ತೆಮನೆಯವರನ್ನು ಕಾಡಿದರೂ 'ಸಧ್ಯ ಈಕೆ ಮತ್ತೆ ಈ ಕಡೆ ತಲೆ ಹಾಕದಿದ್ದರೆ ಸಾಕು' ಎನ್ನುವ ಭಾವದಲ್ಲಿ, ತಮ್ಮಲ್ಲಿ ಇರುವ ಹತ್ತಾರು ವಿಗ್ರಹಗಳಲ್ಲಿ 'ಇದೊಂದು ಹೋದರೆ ಹೋಗಲಿ' ಎಂದು ಕೊಟ್ಟು ಕಳಿಸಿದರು. ಆಕೆಯ ಕೃಷ್ಣಪ್ರೀತಿಯನ್ನು ಅರಿತು ಗುರುಗಳು ಆಕೆಗೆ 'ಗೋಪಾಲಕೃಷ್ಣವಿಠಲ' ಎನ್ನುವ ಅಂಕಿತವನ್ನೇ ದಯಪಾಲಿಸಿದರು. ಆಕೆಯ ಕೊನೆಯ ಉಸಿರಿರುವವರೆಗೆ ಆ ವಿಗ್ರಹ ಆಕೆಯ ಸಂಗಾತಿಯಾಗಿತ್ತು. ಪುಟ್ಟ ಮಗುವನ್ನು ಪಾಲಿಸುವಂತೆ ಆ ವಿಗ್ರಹವನ್ನು ಆಕೆ ಜತನ ಮಾಡುತ್ತಿದ್ದರು. ಒಮ್ಮೆ ವಿಗ್ರಹ ಕಳೆದು ಹೋಯಿತು. ಅಂಬಾಬಾಯಿಗೆ ತನ್ನ ಉಸಿರೇ ನಿಂತುಹೋದಂತೆ ವ್ಯಥೆಯಾಯಿತು. 'ಬದುಕಿಗೆ ಇನ್ನು ಅರ್ಥವಿಲ್ಲ ಸಾವೇ ಗತಿ' ಎನ್ನುವ ತೀರ್ಮಾನಕ್ಕೂ ಬಂದರು. ಕಳೆದುಹೋದಷ್ಟೇ ಚಮತ್ಕಾರವಾಗಿ ಬೆಳಗ್ಗೆ ಏಳುವಾಗ ಆ ವಿಗ್ರಹ ಆಕೆಯ ಪಕ್ಕದಲ್ಲಿತ್ತು. ಅದನ್ನು ಗುರುಗಳಿಗೆ ಒಪ್ಪಿಸಿ ಮತ್ತೆ ಪಡೆದುದನ್ನು ಹೀಗೆ ವರ್ಣಿಸುತ್ತಾರೆ "ಘನ್ನ ಗುಣರು ನಿನ್ನ ಪೂಜಿಸಿ ಪೋಗಲಂದು, ಮನೆಪೆಟ್ಟಿಗೆಯೊಳ್ ಸುಮ್ಮನಿರಲಾರೆನೆಂದು, ಮನಕೆ ಪ್ರೇರಿಸೆ ದುರುಳರಿಗೆ ಕದ್ದು ಒಯ್ದು, ಘನಮೂರ್ತಿಗಳು ಪೋಗೆ ನೀನೊಬ್ಬ ಬಂದು: ಬಹುದಿವಸ ಮಲಿನವಾಗಿರುತಿರಲು ನೀನು, ಮಹಮಹಿಮೆ ಅರಿಯಲಿಲ್ಲಾಗ ನಾನು, ಅಹಹ ನಮ್ಮ ಗುರುಗಳೆರೆಯಲು ಜ್ಞಾನವನು, ಮಹಿಯೊಳೆನ್ನ ಪೂಜೆಯನ್ನು ಬಯಸಿದೆಯೋ ನೀನು."

ಅಂಬಾಬಾಯಿ ಭಕ್ತಿಮಾರ್ಗ ಹಿಡಿದರು ಎಂದು ಆಕೆಯ ಮನೆಯ ಚಾಕರಿಗೆ ಏನೂ ರಿಯಾಯಿತಿ ಸಿಗಲಿಲ್ಲ. ಅಲ್ಲಿ ಬಸಿರು, ಇಲ್ಲಿ ಬಾಣಂತಿ, ಮತ್ತೊಂದೆಡೆ ಆರೈಕೆ, ಹೀಗೆ, ಅಣ್ಣ, ತಮ್ಮ ತಂಗಿಯರ ಮನೆಯ ಸುತ್ತಾಟ ಅವರಿಗೆ ವಿಧಿಲಿಖಿತ ಬರಹವೇ ಆಗಿತ್ತು. ಆದರೆ ಯಾವ ಮನೆಯಲ್ಲಿದ್ದರೂ ಅಬಾಧಿತವಾಗಿ ದೇವರನಾಮಗಳ ರಚನೆ ನಡೆಯುತ್ತಿತ್ತು. ಈ ಮಧ್ಯೆ ತಮ್ಮ, ತಂಗಿ, ತಂಗಿಯ ಗಂಡ, ಎಲ್ಲರೂ ಪರಮಪ್ರಿಯ ಸುಬ್ಬರಾಯದಾಸರ ಶಿಷ್ಯರಾಗಿ ಅಂಕಿತವನ್ನು ಪಡೆದು, ಅವರುಗಳೂ ಆಗೊಂದು ಈಗೊಂದು ದೇವರನಾಮವನ್ನೂ ರಚಿಸುತ್ತಾ, ಅಂಬಾಬಾಯಿಯ ಸಮಾನಮನಸ್ಕರಾಗಿಯೂ ಇದ್ದದ್ದರಿಂದ ಕುಟುಂಬಕ್ಕೆ ಕುಟುಂಬವೇ ದಾಸ ಸಾಹಿತ್ಯದಲ್ಲಿ ತೇಲಿ ಸುಖವನ್ನು ಪಡೆಯುತ್ತಿತ್ತು. ಆಗಾಗ್ಗೆ ದೇವರಾಯನ ದುರ್ಗಕ್ಕೆ ಹೋಗಿ ಗುರುದರ್ಶನ ಪಡೆಯುವುದು, ಗುರುಗಳನ್ನು ತಮ್ಮ ಮನೆಗೇ ಕರೆಸಿಕೊಳ್ಳುವುದೂ ಆದರದಿಂದ ನಡೆಯುತ್ತಿದ್ದ ಕೈಂಕರ್ಯ. ಇದು ಅಂಬಾಬಾಯಿಗೆ ಸುಖವನ್ನೇ ಕೊಡುತ್ತಿತ್ತು. ಈ ಮಧ್ಯೆ ದೇವರಾಯನದುರ್ಗದಿಂದ 'ಪಾರಮಾರ್ಥಿಕ ಚಂದ್ರೋದಯ' ಎನ್ನುವ ಮಾಸಿಕ ಪತ್ರಿಕೆಯನ್ನು ಗುರುಗಳು ಪ್ರಾರಂಭಿಸಿದರು. ಈ ಪತ್ರಿಕೆಯ ಮೂಲಕ ಎಲ್ಲೆಲ್ಲೋ ಚದುರಿರುವ ಶಿಷ್ಯರನ್ನು ಮಾನಸಿಕವಾಗಿಯಾದರೂ ಒಂದೇ ವೇದಿಕೆಯಡಿಯಲ್ಲಿ ಒಂದುಗೂಡಿಸುವ, ಮತ್ತು ಭಕ್ತಿಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವ ಉದ್ದೇಶ ಅವರದಾಗಿತ್ತು. ಈ ಬಗ್ಗೆ ಗುರುಗಳ ಅಭೂತಪೂರ್ವ ಲೇಖನಗಳು ಅದರಲ್ಲಿ ಪ್ರಕಟವಾಗುವುದರ ಜೊತೆಗೆ ಅಂಬಾಬಾಯಿಯ ದೇವರನಾಮಗಳೂ ಪ್ರಕಟವಾಗುತ್ತಿದ್ದವು. ಈಗ ಅಂಬಾಬಾಯಿ ತಮ್ಮ ಗುರುಗಳ ನೂರಾರು ಶಿಷ್ಯರಿಗೆ ತಮ್ಮ ಹಾಡುಗಳ ಮುಖಾಂತರ ತಲುಪುತ್ತಿದ್ದರು. ಬಾಲ್ಯದಲ್ಲೇ ಗಂಡನನ್ನು ಕಳೆದುಕೊಂಡು ಯಾವುದೋ ಮನೆಯ ಮೂಲೆಯಲ್ಲೇ ನಶಿಸಿಹೋಗಬಹುದಾದಂತಹ ಒಂದು ಚೈತನ್ಯ, ತನ್ನದೇ ಪ್ರಯತ್ನ ಮತ್ತು ಪ್ರತಿಭೆಗಳಿಂದ

ನೂರಾರು ಮನಸ್ಸುಗಳಿಗೆ ತಮ್ಮ ದೇವರನಾಮಗಳ ಮುಖಾಂತರ ಭಕ್ತಿಯ ಅನುಭಾವವನ್ನು ಹಂಚಿದ್ದರು!! ದೇವರನಾಮಗಳನ್ನು ಓದಿದವರು ತಮ್ಮ ಮೆಚ್ಚಿಗೆಯನ್ನು ಸೂಚಿಸಿ ಅದೇ ಪತ್ರಿಕೆಗೆ ಪತ್ರಗಳನ್ನು ಬರೆಯುತ್ತಿದ್ದರು. ಆ ಪತ್ರಗಳು ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಪ್ರತಿ ಪತ್ರಿಕೆಯಲ್ಲೂ ಅಂಬಾಬಾಯಿಯ ಗುಣಗಾನವಿದ್ದೇ ಇರುತ್ತಿತ್ತು. ಅಂಬಾಬಾಯಿಯ ಮುದುಡಿಹೋಗಬಹುದಾಗಿದ್ದ ಚೈತನ್ಯ ದಿನೇದಿನೇ ಗಟ್ಟಿಯಾಗತೊಡಗಿತು. ಪ್ರೌಢತ್ವದ ಸಾಕಾರವಾಯಿತು. ಚಿಂತನೆಗಳು ಹರಿತವಾದವು. ದೇವರನಾಮಗಳಲ್ಲಿ ವೈವಿಧ್ಯಗಳು ವಿಜೃಂಭಿಸಿದವು. ಬರವಣಿಗೆ ಹದಗೊಳ್ಳತೊಡಗಿತು. ಪದಲಾಲಿತ್ಯದ ನಿರರ್ಗಳತೆ ಒದಗಿತು. ಒಮ್ಮೆ ತಂಗಿಯ ಮನೆಗೆ ಬಂದಾಗ ತಂಗಿಯೇಕೋ ಬೇಸರದಿಂದ ಇದ್ದದ್ದು ಕಂಡಿತು. ವಿಚಾರಿಸಲಾಗಿ ಪಕ್ಕದ ಮನೆಯ ಗೃಹಿಣಿ ಯಾವುದೋ ಜೋಗುಳವನ್ನು ಹಾಡುತ್ತಿದ್ದರಂತೆ, ಅದು ಕೃಷ್ಣನನ್ನು ಕುರಿತಾದದ್ದು. ಈಕೆ 'ನನಗೂ ಬರೆದು ಕೊಡಿ' ಎಂದಿದ್ದಾರೆ, ಆಕೆ ಇವತ್ತು ನಾಳೆ ಎಂದು ಸತಾಯಿಸಿ ಕೊನೆಗೂ ಬರದೇ ಕೊಡಲಿಲ್ಲ. ಇದೇ ಬೇಸರಕ್ಕೆ ಕಾರಣ!! "ಅಷ್ಟೇ ತಾನೇ ಇರಲಿ ನೋಡೋಣ, ಭಗವಂತನಿದ್ದಾನೆ" ಎಂದರು ಅಂಬಾಬಾಯಿ. ಆಕೆಗೆ ಅಂದೇ ರಾತ್ರಿ ಒಂದು ಗಂಟೆಗೆ ಎಚ್ಚರವಾಯಿತು. ಹೋಗಿ ತಣ್ಣೀರು ಸ್ನಾನ ಮಾಡಿಬಂದು ದೇವರಮನೆಯಲ್ಲಿ ಕುಳಿತ 'ಕೃಷ್ಣನ ಹುಟ್ಟು' ಎನ್ನುವ ದೇವರನಾಮವನ್ನು ಬರೆಯಲು ತೊಡಗಿದರು. ಬೆಳಗಿನ ಏಳುಗಂಟೆಯ ವೇಳೆಗೆ ಮುನ್ನೂರ ಐವತ್ತು ನುಡಿಗಳ ಕೃಷ್ಣನ ಬಾಲಲೀಲೆ ಸಿದ್ಧವಾಗಿತ್ತು. ತಂಗಿಯ ಕೈಗಿತ್ತು "ಅದೆಷ್ಟು ಬೇಕೋ ಹಾಡಿಕೋ" ಎಂದರು!! "ಅನ್ಯಸ್ಮರಣೆಗಳೇಕೆ ಅನ್ಯವಾಕ್ಯಗಳೇಕೆ ಅನ್ಯರಾಡುವ ನುಡಿಯೇಕೆ ಶ್ರೀಕೃಷ್ಣ ನಿನ್ನ ನೆನಹೆನಗೆ ಆನಂದ. ಪುಟ್ಟಿತು ಮನದಲ್ಲಿ ಕೃಷ್ಣಲೀಲೆಯ ಸ್ಮರಣೆ ಥಟ್ಟನೆದ್ದೀಗ ಬರೆಯೂವೆ ಬರೆದು ಹರಿಚರಿತೆಯನು ಶ್ರೇಷ್ಠ ಗುರುಚರಣಕರ್ಪಿಸುವೆ" ಎಂದು ಪ್ರಾರಂಭವಾಗುವ ಈ ಹಾಡನ್ನು ಆಕೆಯ ತಂಗಿ ಪ್ರತಿನಿತ್ಯ ಹಾಡಿಕೊಳ್ಳುತ್ತಿದ್ದರು.

ಬದುಕು ಈಗ ಸ್ಥಿರವಾಗಿತ್ತು. ಭಕ್ತಿಮಾರ್ಗ ಸುಖದ ಅನುಭವವನ್ನು ಕೊಡುತ್ತಾ ಅರ್ಥಹೀನ ಜೀವ ತನ್ನೆದೆನ್ನುವ ಭಾವವನ್ನು ಮರೆಮಾಸುತ್ತಲಿತ್ತು. ಗುರುದರ್ಶನಕ್ಕೆ ದೇವರಾಯನಪುರಕ್ಕೆ ಹೋಗುವಂತೆಯೇ, ಗುರುಗಳ ಪ್ರಿಯ ಊರಾದ ಕದರಮಂಡಲಗಿ ಹನುಮಂತನ ದರ್ಶವೂ ಗುರುಗಳೊಂದಿಗೇ ಲಭಿಸಿ, ತೀರ್ಥಯಾತ್ರೆಯೆನ್ನುವ ಹೊಸ ಹವ್ಯಾಸವೊಂದು ಅಂಬಾಬಾಯಿಯವರ ಜೀವನದಲ್ಲಿ ಪ್ರವೇಶಮಾಡಿತು. ಮಡಿಹೆಂಗಸಾಗಿ ರೂಪವನ್ನು ವಿಕೃತಗೊಳಿಸಿದರೂ ಯೌವನವೆನ್ನುವ ತೇಜಸ್ಸು ಆಕೆಯನ್ನು ಅಧೀರಳನ್ನಾಗಿಸುತ್ತಿತ್ತು. ಒಂಟಿಯಾಗಿ ಎಲ್ಲೂ ಹೋಗಲಾಗದೇ ತಮ್ಮನನ್ನೋ ತಂಗಿಯ ಸಂಸಾರವನ್ನೋ ಅವಲಂಬಿಸಿ ಯಾತ್ರೆ ಮಾಡಬೇಕಾಗಿದ್ದ ಪರಾಧೀನತೆಗೆ ಜೀವ ರೋಸಿಹೋಗಿತ್ತು. ತಮಗೆ ಮೂವತ್ತೈದು ವರ್ಷವಾಗುತ್ತಲೇ ಈ ಭಾವವನ್ನೂ ಕೊಡವಿಕೊಂಡು ಮೇಲೆದ್ದರು ಈಕೆ. ತಮ್ಮ ತಂಗಿರು ಬಾಣಂತನ ಇತ್ಯಾದಿ ನೆವದಿಂದ ಸೀರೆ ಬಟ್ಟೆಯನ್ನು ಕೊಡಲು ಬಂದಾಗ ಹಣವನ್ನೇ ಕೇಳಿ ಪಡೆದುದರಿಂದ, ಕದರಮಂಡಲಗಿ, ತಿರುಪತಿ, ಉಡುಪಿ, ಪಂಢರಾಪುರ, ಸವಣೂರು, ಮಂತ್ರಾಲಯ, ಹಂಪೆ, ಮುಂತಾದ ಕ್ಷೇತ್ರಗಳ ಸುತ್ತಾಟವೂ ಅಂಬಾಬಾಯಿಯವರ ಜೀವನದ ಭಾಗವಾಯಿತು. ಹೆಂಗಸರು ಏಕಾಂಗಿಯಾಗಿ ಓಡಾಡದ ಆ ದಿನಗಳಲ್ಲಿ ಅಂಬಾಬಾಯಿ ಪದೇ ಪದೇ ಯಾತ್ರೆಗಳನ್ನು ಮಾಡುತ್ತಾ ತಾವು ನೋಡಿದ ದೇವರುಗಳ ಬಗ್ಗೆ ದೇವರನಾಮಗಳನ್ನು ರಚಿಸುತ್ತಾ, ಅದನ್ನು ಗುರುಗಳಿಗೆ ಒಪ್ಪಿಸುತ್ತಾ ಧನ್ಯತೆಯ ಭಾವವನ್ನು ಪಡೆಯುತ್ತಿದ್ದರು. ಇಂಥಾ ಈ ಶಿಷ್ಯೆಯನ್ನು ನೋಡಿ ಗುರುಗಳಿಗೆ ಆಶ್ಚರ್ಯವೋ ಆಶ್ಚರ್ಯ!! ಗುರುಗಳು ಈ ಸುತ್ತಾಟಕ್ಕೊಂದು ಅರ್ಥವಂತಿಕೆಯನ್ನೂ ಲಭಿಸುವಂತೆ ಮಾಡಿದರು. "ಹೇಗೂ ಸುತ್ತಾಡುತ್ತೀ ಜೊತೆಗೆ ಅಲ್ಲಿಯ ಜನಗಳಿಗೆ ದಾಸಸಾಹಿತ್ಯದ ಮತ್ತು ದಾಸಪಂಥದ ಪರಿಚಯವನ್ನು ಮಾಡಿಕೊಡು" ಎನ್ನುವ ಅವರ ಸಲಹೆಯನ್ನು ಶಿರಸಾವಹಿಸಿ ಜಾರಿಗೆ ತಂದೇಬಿಟ್ಟರು ಈ ಶಿಷ್ಯೋತ್ತಮೆ! ಅವರ ಕೈಗೊಂದು ಪುಟ್ಟ ತಂಬೂರಿ ಬಂತು ("ಬೆಟ್ಟದೊಡೆಯ ತಾನಿಪ್ಪು ಹಠವಮಾಡಿ ಕೊಟ್ಟೇ ಕೊಟ್ಟನು ತಂಬೂರಿ,...ಬಿಟ್ಟುಹೋಯಿತು ಭವದ ಕಟ್ಟು ಇಂದೆನ್ನನು ಮುಟ್ಟಿಸಿತು ಹರಿಪುರ ತಂಬೂರಿ") ಕಾಲಿಗೆ ಗೆಜ್ಜೆ ಸೇರಿತು. ಭುಜದಲ್ಲಿ ಜೋಳಿಗೆ ತೂಗಾಡಿತು. "ಮಧುಕರ ವೃತ್ತಿ" ಅಕ್ಷರಶಃ ಜಾರಿಗೆ

ಬಂತು. ಗುರುಗಳು ನಿರ್ದೇಶಿಸಿದ ಊರಿಗೆ ಹೋಗುವುದು. ಗುರುಗಳ ಪರಿಚಿತರ ಮನೆಯಿದ್ದರೆ ಅಲ್ಲಿ ವಾಸ, ಇಲ್ಲದಿದ್ದರೆ ಊರಿನ ದೇವಸ್ಥಾನವೇ ಆಶ್ರಯ ತಾಣ. ಒಪ್ಪತ್ತಿನ ಊಟ, ಒಂದು ದಿನಕ್ಕೆ ಐದು ಅಥವಾ ಆರು ಮನೆಗಳಲ್ಲಿ ಮಾತ್ರ ಬೇಡುವುದು. ತಂದ ಅಕ್ಕಿ ಮತ್ತು ಇತರ ಪದಾರ್ಥಗಳನ್ನು ಬಳಸಿ ಪರಿಚಿತರ ಮನೆಯಲ್ಲಿ ಸ್ವಯಂಪಾಕ ಮಾಡಿಕೊಳ್ಳುವುದು. ಅಥವಾ ಆ ಊರಿನಲ್ಲಿ ತಮ್ಮ ಜಾತಿಯ ಮಠವಿದ್ದರೆ ತಾವು ಬೇಡಿ ತಂದ ಪದಾರ್ಥಗಳನ್ನು ಅಲ್ಲಿಗೆ ದಾನಮಾಡಿ ಅಲ್ಲಿಯೇ ಊಟ ಮಾಡುವುದು "ಹೆಚ್ಚು ಗಳಿಸಲಿ ಬೇಡ, ನಾಳೆಗೆಂದೆನಬೇಡ" ಎನ್ನುವ ದಾಸವಾಣಿಯನ್ನು ಅಕ್ಷರಶಃ ಪಾಲಿಸಿದರು.

ಹೀಗೆ ಆರಿಸಿಕೊಂಡ ಬದುಕು ತುಂಬಾ ಸುಖವಾಗಿಯೇನೂ ಇರಲಿಲ್ಲ. ಹೇಳೀ ಕೇಳಿ ಮಡಿಹೆಂಗಸು, ಸಾರುತ್ತಿರುವುದು ದಾಸವಾಣಿಯನ್ನು. ಶುದ್ಧ ಆಚಾರವಂತರಿಗೆ ದಾಸವಾಣಿಯೆಂದರೆ ಅಷ್ಟೇನೂ ಗೌರವವಿರದ ಕಾಲ. "ವೇದಗಳ ಕಾಲದಿಂದ ಅನೂಚಾನವಾಗಿ ಬಂದಿರುವ ಸಂಸ್ಕೃತ ಮಂತ್ರಗಳನ್ನು ಎಂಥೆಂಥಾ ಮಹಾಮಹಿಮರು ಪಠಿಸಿದ್ದಾರೆ, ಅವರಿಗೇ ಭಗವಂತ ಒಲಿದಿಲ್ಲ, ಇನ್ನು ಈ ಮಡಿಹೆಂಗಸು, ಕನ್ನಡದಲ್ಲಿ ಹಾಡಿ ಬಿಟ್ಟರೆ ದೇವರು ಬಂದು ಮುಂದೆ ನಿಂತು ಕುಣಿದು ಬಿಡುತ್ತಾನೋ?" ಎನ್ನುವ ವ್ಯಂಗ್ಯದ ಪ್ರಶ್ನೆಗಳು ಪಂಡಿತಶ್ರೇಷ್ಠರಿಂದ. ಹೀಗಾಗಿ ಅಂಬಾಬಾಯಿ ಕೆಲವು ಕಡೆ ಮುಖಭಂಗಕ್ಕೆ ಒಳಗಾಗಿದ್ದೂ ಉಂಟು. ಆಗೆಲ್ಲಾ ಅವರಿಗೆ ಅಂತಃಶಕ್ತಿಯಾಗಿದ್ದು ಗುರುಸ್ಮರಣೆಯೇ. "ಇಂದುನಾಳೆಗೆ ಎಂಬ ಮಂದಬುದ್ಧಿಯ ಬಿಟ್ಟು, ಬಂದದ್ದರಿಂದ ಆನಂದಿಸುತ್ತಾ" ದಿನಕಳೆಯುವ ದೀಕ್ಷೆಯನ್ನು ತೊಟ್ಟು, ತಮ್ಮನ್ನು ತಾವು ತಹಬಂದಿಗೆ ತಂದುಕೊಳ್ಳುತ್ತಾರೆ. ಇಂಥ ದಿವಸಗಳಲ್ಲಿ ರಚಿಸಿರುವ ತಮ್ಮ ರಚನೆಗಳಲ್ಲಿ, ದಾಸ ಪಂಥದ ಎರಡು ಮುಖ್ಯಗುಣಗಳನ್ನು ಅಲ್ಲಲ್ಲಿ ಸ್ಮರಿಸಿದ್ದಾರೆ. "ಮುಖ್ಯವಾಗಿ 'ನಾನು' ಎನ್ನುವ ಸ್ವಾಭಿಮಾನವನ್ನು ಬಿಡಬೇಕು, ಅವಮಾನವಾದರೆ ಅದು 'ಭಗವಂತನ ಚಿತ್ತ' ಎಂದು ಸಹಿಸಬೇಕು" ಗುರುಗಳು ರಚಿಸಿ, ತಮ್ಮ ಶಿಷ್ಯರೆಲ್ಲರಿಗೆ ಕಲಿಸಿದ ಮೊದಲ ಪಾಠವೇ, "ನಾನು ನನ್ನದು ಎಂಬ ಮಾಯಾಪಾಶವ ಬಿಡಿಸಿ, ನೀನು ನಿನ್ನದು ಎಂಬ ದಿವ್ಯಮತಿಯನೆ ಕೊಟ್ಟು ಕಾಪಾಡೊ ಹರಿಯೇ" ಎನ್ನುವುದಾಗಿತ್ತಾದ್ದರಿಂದ, ಮಾನಾವಮಾನಗಳನ್ನು ಜಯಿಸುವ ಕಲೆ ಅಂಬಾಬಾಯಿಯವರಿಗೆ ಕರಗತವಾಗಿತ್ತು.

ಶಿಸ್ತು ಅಂಬಾಬಾಯಿಯ ನರನಾಡಿಯಲ್ಲಿ ಹರಿಯುತ್ತಿತ್ತು. ಆಕೆಯ ಪ್ರತಿ ಕೆಲಸವೂ ಅಚ್ಚುಕಟ್ಟು, ಸಮಯಪಾಲನೆ, ಮಿತವ್ಯಯ, ಕಡಿಮೆ ಮಾತು, ಕಷ್ಟಸಾಧ್ಯ ಕೆಲಸಗಳನ್ನೂ ಗೊಣಗದೇ ನಿಭಾಯಿಸುವ ಚಾತುರ್ಯ, ಇವೆಲ್ಲವೂ ಸೇರಿ ಆಕೆ ತಮ್ಮ ನೆಂಟರ ನಡುವಿನಲ್ಲಿಯೇ ಜನಪ್ರಿಯ ವ್ಯಕ್ತಿಯಾಗಿದ್ದರು. ಇದೇ ಶಿಸ್ತು ಆಕೆಯ ದಾಸಜೀವನದಲ್ಲೂ ಮುಂದುವರೆಯಿತು. ಆಂಗ್ಲ ಶಿಕ್ಷಣವಿಲ್ಲದ ಆಕೆ ಪ್ರತಿನಿತ್ಯ 'ಡೈರಿ' ಬರೆಯುವ ಪರಿಪಾಠವಿಟ್ಟುಕೊಂಡಿದ್ದರೆಂದರೆ ಇಂದಿನ ವಿದ್ಯಾವಂತ ಮಹಿಳೆಯರೂ ಹುಬ್ಬೇರಿಸಿಯಾರು. ಆಕೆ ತಮ್ಮ ಈ ಊರೂರಲೆಯುವ ದಿನಗಳಲ್ಲು ಪ್ರತಿರಾತ್ರಿ ಮಲಗುವ ಮುನ್ನ ಅಂದಂದಿನ ದಿನಚರಿ ಬರೆದು ಅದನ್ನು ಗುರುಗಳಿಗೆ ಅರ್ಪಣೆ ಮಾಡಿ ಮಲಗುತ್ತಿದ್ದರು. ಹೀಗೆ ಬರೆದ ಹತ್ತಾರು ಡೈರಿಗಳಲ್ಲಿ ಒಂದೇ ಒಂದು ಪುಸ್ತಕ ಈಗ ಲಭ್ಯವಿದೆ. ಅದರಲ್ಲಿ ಆಕೆಯ ದಾಸಜೀವನದ ಚಿತ್ರಣವಿದೆ. ಬೆಳಿಗ್ಗೆ ಸೂರ್ಯ ಹುಟ್ಟುವ ಮೊದಲೇ ಏಳುವುದು. ನದಿ ಹರಿಯುವ ಊರಾದರೆ ನದಿಯಲ್ಲಿ ಸ್ನಾನ, ಇಲ್ಲದಿದ್ದರೆ ಊರ ಭಾವಿಯಲ್ಲಿ ಸ್ನಾನ. ನಂತರ ತಮ್ಮ ಕೃಷ್ಣವಿಗ್ರಹಕ್ಕೆ ಪೂಜೆ. ನಂತರ ಮಧುಕರವೃತ್ತಿ, ಮಧ್ಯಾಹ್ನ ಹನ್ನೆರಡರವರೆಗೆ ದೇವಾಲಯದ ಕಟ್ಟೆಯ ಮೇಲೆ ಕುಳಿತು ತಾವು ಬರೆದ, ತಮ್ಮ ಗುರುಗಳು ಬರೆದ, ಮತ್ತು ಪುರಂದರದಾಸರೇ ಮೊದಲಾದ ಹಿರಿಯರು ರಚಿಸಿದ ದೇವರನಾಮಗಳ ಗಾಯನ. ಊರಲ್ಲಿ ತಮ್ಮ ಜಾತಿಯ ಮಠವಿದ್ದರೆ ಅಕ್ಕಿಯನ್ನು ಸಮರ್ಪಿಸಿ, ಅಲ್ಲಿಯೇ ಪ್ರಸಾದ ಸ್ವೀಕಾರ. ಆ ಊರಲ್ಲಿ ಪರಿಚಿತರ ಮನೆಯಿದ್ದು, ಅವರು ಆದರಿಸಿದರೆ ಅಲ್ಲಿ ಸ್ವಯಂಪಾಕ ಮಾಡಿಕೊಳ್ಳುವುದು, ಇಲ್ಲದಿದ್ದರೆ, ಮೂರು ಇಟ್ಟಿಗೆಗಳನ್ನು ಜೋಡಿಸಿ ಒಲೆಹತ್ತಿಸಿ, ಅನ್ನ ಮಾಡಿಕೊಂಡು ಕೃಷ್ಣನಿಗೆ ನೈವೇದ್ಯಮಾಡಿ, ಆ ಪ್ರಸಾದವನ್ನೇ ಸ್ವೀಕರಿಸುವುದು, ಊಟದ ನಂತರ ಸ್ವಲ್ಪಹೊತ್ತು ವಿಶ್ರಾಂತಿ. ನಂತರ

ದೇವರನಾಮಗಳ ರಚನೆ. ಮತ್ತೆ ಸಂಜೆ ದೀಪ ಮುಟ್ಟಿಸುವ ಸಮಯಕ್ಕೆ ದೇವಾಲಯದ ಕಟ್ಟೆಯ ಮೇಲೆ ಭಜನೆ ಪ್ರಾರಂಭ, ಊರ ಹೆಂಗಳೆಯರು, ಮಕ್ಕಳು, ವೃದ್ಧರು, ಇವರ ಗಾಯನಕ್ಕೆ ಶ್ರೋತೃಗಳು. ಅವರ ಮುಂದೆ ದಾಸರ ಮಹಿಮೆಗಳು, ದಾಸಪಂಥದಲ್ಲಿರುವ ನೆಮ್ಮದಿಗಳು ಇವುಗಳ ಪ್ರವಚನ ಸ್ವಲ್ಪಕಾಲ. ಈಕೆಯ ಮಾತಿಗೆ ಹಾಡಿಗೆ ಮರುಳಾಗಿ ಯಾರಾದರೂ ಹಣ ಕೊಟ್ಟರೆ ಅದನ್ನು ಆ ದೇವಾಲಯಕ್ಕೇ ಅರ್ಪಣೆ! ರಾತ್ರಿ ದೇವಸ್ಥಾನದ ದೀಪದ ಬೆಳಕಿನಲ್ಲೇ ಡೈರಿಯ ಬರವಣಿಗೆ. ದೇವಾಲಯದ ಜಗುಲಿಯೇ ಶಯನಾಗೃಹ!! ಹರಿದಾಸರ ಜೀವನಕ್ರಮಕ್ಕೆ ಅತ್ಯುತ್ತಮ ಉದಾಹರಣೆ. (ದಿನಚರಿಯಿಂದ ಒಂದು ಉಲ್ಲೇಖ) 'ತಾ: 12–11–1938 ಸ್ಥಿರವಾರ, ಸ್ಥಳ: ಅನುಗೋಡು. ಕಾರ್ತೀಕ ಬಹುಳ ಪಂಚಮಿ. ಪ್ರಾತಃ ನಿಯಮ. ಗೋಪಾಳ ವೃತ್ತಿ, ಆರು ಮನೆ. ಪ್ರಾಣದೇವರ ದರ್ಶನ. ಪರಿಚಿತರ ಮನೆಯಲ್ಲಿ ಇಳಕೊಂಡಿರುವುದು. ಅಲ್ಲಿಗೆ ಬಂದು, ಅಕ್ಷಯಪಾತ್ರೆಗೆ ಮಂಗಳಾರತಿ. ಮನೆಯವರೊಡನೆ ಮತ್ತು ಇತರರೊಡನೆ ವಿಚಾರವಿನಿಮಯ. ಸ್ನಾನ ಆಹ್ನೀಕಾದಿ ಮುಗಿಸಿ ಗೋಪಾಲಕೃಷ್ಣನ ಪೂಜೆ, ಊಟ. ಸಾಯಂಕಾಲ ಭಜನೆ. ಆಲೂರು ಶೇಷಣ್ಣನವರು, ಶ್ರೀ ರಂಗಮೂರ್ತಿ ವಿಠಲರು, ಆನಂದರಸಪೂರ್ಣರು, ಇವರೆಲ್ಲರ ಜೊತೆ ರಾತ್ರಿ ಬಹಳ ಹೊತ್ತಿನವರೆಗೆ ದಾಸರ ವಿಚಾರಗಳು ತತ್ವವಿಚಾರಗಳ ಬಗ್ಗೆ ಮಾತುಕತೆ. ನಿದ್ರೆ.'

ತಮಗೇನೋ ವಯಸ್ಸು ಮೂವತ್ತರ ಮೇಲಾಯಿತು ಎಂದು ದಾಸಪಂಥವನ್ನು ಮೈಮೇಲೆ ಎಳೆದುಕೊಂಡರೂ ಇನ್ನೂ ದೇಹವನ್ನು ಬಿಟ್ಟು ಹೋಗದ ಹರೆಯ ಮತ್ತು ಸೌಂದರ್ಯ ಒಳಗೊಳಗೇ ಭಯದ ಅಲೆಗಳನ್ನು ಎಬ್ಬಿಸುತ್ತಿತ್ತು. 'ರಕ್ಷಣೆಗೆ ಕೃಷ್ಣ ತನ್ನ ಬಳಿಯಿದ್ದಾನೆ' ಎನ್ನುವ ಧೈರ್ಯ ಮೇಲುಮೇಲಿನದಾಗಿತ್ತು. ಒಳಗೊಂದು ಅಭದ್ರತೆಯ ಎಳೆ ಎಡಬಿಡದಂತೆ ಕಾಡಿದೆ. ಅವರು ಬರೆಯುತ್ತಾರೆ 'ಧಾರವಾಡಕ್ಕೆ ಬಂದಾಗ ತೀರಾ ಕತ್ತಲಾಗಿತ್ತು. ಸ್ಟೇಶನ್ನಿನಲ್ಲೇ ಮಲಗಿದ್ದು ಬೆಳಿಗ್ಗೆ ಎದ್ದು ಹೋಗೋಣವೆಂದು ಕುಳಿತಿದ್ದೆ. 'ದೇವರೇಗತಿ'ಯೆಂದು ಮನದಲ್ಲೇ ದೇವರನಾಮಸ್ಮರಣೆಯನ್ನು ಮಾಡುತ್ತಿದ್ದೆ. ಆ ನಿರ್ಜನ ಪ್ರದೇಶಕ್ಕೆ ಸ್ವಲ್ಪ ಹೊತ್ತಿನಲ್ಲೇ ಒಬ್ಬರು ಬಂದರು. ಕೆಲಕಾಲ ಅವರೂ ಅಲ್ಲೇ ಕುಳಿತಿದ್ದರು. ನಂತರ ನನ್ನ ಹತ್ತಿರಕ್ಕೆ ಬಂದು 'ನಾನು ಯಾರು ಎಲ್ಲಿಂದ ಬಂದೆ' ಎಂದು ವಿಚಾರಿಸಿದರು. ನಾನು ನನ್ನ ಪೂರ್ವೋತ್ತರಗಳನ್ನು ಹೇಳಿದೆ. ಕೆಲಸಮಯ ವಿಚಾರಮಾಡಿ ಅವರು 'ನಮ್ಮ ಮನೆ ಹತ್ತಿರದಲ್ಲೇ ಇದೆ ಬನ್ನಿ' ಎಂದರು. ಅವರು ತಮ್ಮ ಮನೆಗೆ ಕರೆದುಕೊಂಡು ಹೋಗಿ ತಮ್ಮ ಪತ್ನಿಗೆ ವಿಚಾರ ತಿಳಿಸಿ ನನಗೆ ಮಲಗಲು ಸ್ವಲ್ಪ ಜಾಗ ಕೊಡಿಸಿದರು. ಸುಖವಾಗಿ ನಿದ್ರೆ ಬಂತು. ಶ್ರೀಕೃಷ್ಣ ಕಾಪಾಡಿದ". ಯಾವುದೋ ಒಂದೂರು. ಅಲ್ಲಿ ಅಂಬಾಬಾಯಿಯವರ ಜಾತಿಯದೇ ಒಂದು ಮಠ. ಸ್ವಲ್ಪ ದೊಡ್ಡೂರಾದ್ದರಿಂದ ಸಂಜೆ ಇವರ ಗಾಯನಕ್ಕೆ, ಪ್ರವಚನಕ್ಕೆ ಹೆಚ್ಚು ಜನ ಸೇರುತ್ತಿದ್ದರು. ಅಂಬಾಬಾಯಿಗೆ ನಾಲ್ಕುದಿನ ಇಲ್ಲೇ ತಂಗಿರಲು ಮನಸ್ಸಾಯಿತು. ಮೊದಲೆರಡು ದಿನ ಮಠದ ಪ್ರಸಾದವೇ ಊಟವಾಯಿತು. ಮರುದಿನವೂ ಮಧುಕರವೃತ್ತಿಯನ್ನು ಮಾಡಿ ಅಕ್ಕಿಯನ್ನು ಮಠಕ್ಕೆ ಸಮರ್ಪಿಸಿಯೂ ಆಗಿತ್ತು. ಎಂದಿನಂತೆ ಕಟ್ಟೆಯ ಮೇಲೆ ದೇವರ ನಾಮಸ್ಮರಣೆ ನಡೆಯುತ್ತಿತ್ತು. ಊಟದ ಹೊತ್ತೂ ಬಂತು. ನೈವೇದ್ಯದ ಆರತಿಗೆ ಒಳಹೋಗಿ ನಮಸ್ಕರಿಸಿ ಬಂದದ್ದು ಆಯಿತು. ರೂಢಿಯಂತೆ ಊಟಕ್ಕೆ ಒಳಗಿನಿಂದ ಕರೆ ಬರಲಿಲ್ಲ. "ಯಾರೋ ಹೆಂಗಸರು ಹೊರಗಿದ್ದಾರಲ್ಲ ಆಕೆಯನ್ನು ಊಟಕ್ಕೆ ಕರೆಯೋಣವೇ" ಎಂದು ಮಠದ ಪಾರುಪತ್ಯೆಗಾರರನ್ನು ಕೇಳಿದ್ದೂ, ಅದಕ್ಕೆ ಆತ "ಏನೂ ಅಗತ್ಯವಿಲ್ಲ ದಿನದಿನಾ ನಾವೇ ಊಟ ಹಾಕುತ್ತೇವೆಂದು ಬರೆದುಕೊಟ್ಟಿದ್ದೇವೆಯೇ?" ಎಂದದ್ದೂ ಕೇಳಿಸಿತು. ಅಂಬಾಬಾಯಿಯ ಮುಖದಿಂದ 'ಕೃಷ್ಣಾ ನಿನಗೇ ಪ್ರೀತಿ' ಎನ್ನುವ ಉದ್ಗಾರ ಹೊರಬಿತ್ತು. ಆದರೆ ಪರಜೀವಪ್ರೀತಿ, ಕರುಣೆ, ಮಮತೆಗಳು ಮಾನವನ ಹೃದಯದಿಂದ ಎಂದಿಗೂ ಜಾರಿಹೋಗುವುದಿಲ್ಲ. ಗಂಡಸರ ಊಟವಾಗಿ ಪಾರುಪತ್ಯೆಗಾರರು ಮನೆಗೆ ಹೋಗಿಯಾದ ಮೇಲೆ ಹೆಂಗಸರು ಹೊರಬಂದು ದೈನ್ಯತೆಯಿಂದ ಅಂಬಾಬಾಯಿಯನ್ನು ಬೇಡಿಕೊಂಡರು. ಹಾಗೆ ಬೇಡಿಕೊಂಡವರಲ್ಲಿ ಆ ಪಾರುಪತ್ಯೆಗಾರರ ಹೆಂಡತಿಯೂ ಇದ್ದಳು. ಆಕೆ ಹೇಳಿದಳು "ನನ್ನ ಗಂಡನಿಗೆ ಸ್ವಲ್ಪ ವಿವೇಕ ಕಡಿಮೆ. ಅಹಂಕಾರ ಹೆಚ್ಚು. ಅವರನ್ನು ಕ್ಷಮಿಸಿ ಊಟಕ್ಕೆ ಬನ್ನಿ.

ನೀವು ಊಟಮಾಡದಿದ್ದರೆ ನಮಗೂ ಗಂಟಲಲ್ಲಿ ಅನ್ನವಿಳಿಯುವುದಿಲ್ಲ" ಎಂದು. ಅಂಬಾಬಾಯಿ ಬರೆಯುತ್ತಾರೆ "ಕೃಷ್ಣಾ ಏನು ನಿನ್ನ ಲೀಲೆ? ಗಂಡನ ಮನದಲ್ಲಿ ಕಠೋರತೆಯನ್ನೂ, ಹೆಂಡತಿಯ ಮನದಲ್ಲಿ ಮೃದುತ್ವವನ್ನೂ ಒಂದೇ ಘಳಿಗೆಯಲ್ಲಿ ನೀಡುತ್ತೀಯಲ್ಲ?" ಎಂದು!

ಮೊದಮೊದಲು ಅಂಬಾಬಾಯಿಗೆ ಊರೂರು ಸುತ್ತಲು ಬಸ್ಸು ಮತ್ತು ರೈಲು ಛಾರ್ಜುಗಳಿಗೆ ತಮ್ಮನೋ ತಂಗಿಯೋ ಹಣವನ್ನು ಕೊಡಬೇಕಾಗಿತ್ತು. ಈ ಮಧುಕರ ವೃತ್ತಿಯನ್ನೂ ದಾಸಪಂಥವನ್ನೂ ಹಿಡಿದ ಮೇಲೆ, ಅಂಬಾಬಾಯಿಯ ಜಾಣಬುದ್ಧಿ ಮತ್ತೊಂದು ಉಪಾಯವನ್ನು ಕಂಡುಕೊಂಡಿತು. ಅದಕ್ಕೆ ಗುರುಗಳ ಅಪ್ಪಣೆಯೂ ದೊರೆತ ಮೇಲೆ ಈ ದಾರಿ ಸ್ಪಷ್ಟವಾಯಿತು. ಆ ಕಾಲದಲ್ಲಿ ದೇವರನಾಮಗಳನ್ನು ಒಬ್ಬರಿಗೊಬ್ಬರು ಕಲಿಸುತ್ತಿರಲಿಲ್ಲ. ತಂದೆತಾಯಿಯ ಹತ್ತಿರ ಮಕ್ಕಳು ಮೊಮ್ಮಕ್ಕಳು ಕಲಿಯಬೇಕಾಗಿತ್ತೇ ವಿನಾ ಬೇರೆಯವರು ಹೇಳಿಕೊಡುವುದು ಅಪರೂಪವಾಗಿತ್ತು. "ಹಾಗೆ ದೇವರನಾಮಗಳನ್ನು ಯಾರು ಯಾರಿಗೂ ಬರೆದುಕೊಡಬಾರದು, ಹಿಂದೆ ಅಪರೋಕ್ಷಜ್ಞಾನಿಗಳು ಬರೆದ ಹಾಡಿದು, ಅದನ್ನು ಯಾರುಯಾರೋ ಕಲಿತು, ಮೈಲಿಗೆಯಲ್ಲಿ ಹಾಡಿದರೆ ಆ ಪಾಪ ಹೇಳಿಕೊಟ್ಟವರಿಗೇ ಸುತ್ತಿಕೊಳ್ಳುತ್ತದೆ" ಎನ್ನುವ ಪ್ರತೀತಿ ಇತ್ತು. ಹಾಡುವ ಚೇತನಗಳಿಗೆ ಹೊಸ ಹಾಡುಗಳೆಂದರೆ ಕಲಿಯುವ ಆಸೆ. ಆದರೆ ಹೇಳಿಕೊಡುವ ಜನರಿಲ್ಲ. ಇಂಥಾ ದಿನಗಳಲ್ಲಿ ಅಂಬಾಬಾಯಿ ಹೊಸಹೊಸ ಹಾಡುಗಳನ್ನು ಕಟ್ಟೆಯ ಮೇಲೆ ಕುಳಿತು ಹಾಡುತ್ತಿದ್ದರೆ ಹೆಂಗಳೆಯರು ಬಿಟ್ಟ ಕಣ್ಣು ಬಿಟ್ಟ ಬಾಯಿಯಿಂದ ನೋಡುತ್ತಾ, ಕಡೆಗೆ ದೀನರಾಗಿ "ನನಗೂ ಈ ಹಾಡನ್ನು ಹೇಳಿಕೊಡುವಿರಾ" ಎಂದು ಕೇಳುತ್ತಿದ್ದರು. ತಂದೆ ಮುದ್ದುಮೋಹನದಾಸರು ಹಳೆಯ ಕಂದಾಚಾರಗಳನ್ನು ಧಿಕ್ಕರಿಸುವ ಹೊಸ ಸುವಿಚಾರಗಳನ್ನು ಪ್ರೋತ್ಸಾಹಿಸುವ ಅಪರೂಪದ ಪ್ರಗತಿ ಪಥಿಕರಾಗಿದ್ದರು. ಅವರಿಂದ ಶಿಷ್ಯತ್ವವನ್ನು ಪಡೆದ ಅಂಬಾಬಾಯಿ ಅವರ ಮಾರ್ಗದಲ್ಲೇ ನಡೆದರು. ಯಾರು ಕೇಳಿದರೂ ತಮ್ಮ ಹಾಡುಗಳನ್ನು ಬರೆದುಕೊಡುತ್ತಿದ್ದರು. "ಇದು ಯಾವ ದಾಸರು ಬರೆದ ಹಾಡು" ಎನ್ನುವ ಪ್ರಶ್ನೆಗೆ ಒಂದೇ ಉತ್ತರ "ಯಾರೋ ಗೋಪಾಲಕೃಷ್ಣವಿಠಲ ದಾಸರಂತೆ!!" ಎಂದು. ಯಾವತ್ತಿಗೂ ಅದು ತಾವೇ ಬರೆದ ಹಾಡೆಂದು ಹೇಳಿಕೊಳ್ಳುತ್ತಿರಲಿಲ್ಲ. ತಾನು ಮಹಿಳೆ, ಮೇಲಾಗಿ ಮಡಿಹೆಂಗಸು, ಇಂಥಾ ಅಪಸ್ವರೂಪಗಳು ತಮ್ಮ ಹಾಡಿನ ಮೇಲೆ ಬೀಳುವುದು ಅಂಬಾಬಾಯಿಗೆ ಬೇಕಿರಲಿಲ್ಲ. ಜೊತೆಗೆ 'ನಾನು' ಎನ್ನುವ ಮೋಹವನ್ನು ಎಂದೋ ಕಳೆದುಕೊಂಡಿದ್ದರಿಂದ, ಬರೆದವರು ತಾವು ಎಂದು ಹೇಳಿಕೊಂಡು ಬೀಗುವ ಅಗತ್ಯವೂ ಅವರಿಗಿರಲಿಲ್ಲ. ಹೀಗಾಗಿ ಹಾಡುಗಳು ಏಕಪ್ರಕಾರವಾಗಿ ಪ್ರಚಾರವನ್ನು ಪಡೆದವು. ಅದಕ್ಕೆ ಬದಲಾಗಿ ಹೆಂಗಳೆಯರು ನಾಲ್ಕಾಣೆ ಎಂಟಾಣೆಗಳನ್ನು ಅವರ ಜೋಳಿಗೆಗೆ ಹಾಕುತ್ತಿದ್ದರು. ಅಂಬಾಬಾಯಿ ಬರೆಯುತ್ತಾರೆ "ಸಂಜೆ ಹಾಡುವಾಗ ಬೀಳುವ ಕಾಸುಗಳು ಒಳಗಿರುವ ಆ ಕಟ್ಟೆಯ ಒಡೆಯನಿಗೆ ಸಮರ್ಪಣೆ: ಬೆಳಿಗ್ಗೆ ನಾನು ಬರೆದುಕೊಟ್ಟ ಹಾಡುಗಳಿಗೆ ಪ್ರತಿಯಾಗಿ ಜೋಳಿಗೆಗೆ ಬೀಳುವ ಕಾಸುಗಳು ನನ್ನ ಪ್ರಯಾಣಕ್ಕೆ ಸಮರ್ಪಣೆ."

ಅಂಬಾಬಾಯಿಯವರ ಸೃಷ್ಟಿಕಾರ್ಯ ಅನಿರ್ಬಾಧಿತವಾಗಿ ಮುಂದುವರೆಯಿತು. ದಾಸಕೂಟದಲ್ಲಿನ ಧ್ರುವತಾರೆಯಾಗಿದ್ದರು ಅವರು. ಗುರುಗಳು ಒಮ್ಮೆ "ಗಂಡಸರಿಗೆ ಮಂತ್ರಗಳ ಆಸರೆಯಿದೆ. ಹೆಂಗಸರಿಗೆ ಅಡುಗೆ ಮಾಡುತ್ತಲೇ ಹೇಳಿಕೊಳ್ಳುವಂಥಾ ಸ್ತೋತ್ರಗಳನ್ನು ಬರೆ" ಎಂದು ಅಪ್ಪಣೆ ಕೊಡಿಸಿದಾಗ ಕೃಷ್ಣನ ಬಾಲಲೀಲೆ, ಶ್ರೀನಿವಾಸಕಲ್ಯಾಣ, ನರಸಿಂಹದೇವರ ಚರಿತೆ, ಮುಂತಾದ ಮುನ್ನೂರು ನಾನ್ನೂರು ನುಡಿಗಳ ಸ್ತೋತ್ರಗಳು ಸಿದ್ಧವಾದುವು. ಶ್ರೀನಿವಾಸಕಲ್ಯಾಣವಂತೂ ಅನೇಕರ ಮನೆಗಳಲ್ಲಿ ನವರಾತ್ರಿಯಲ್ಲಿ ಪಠಣವಾಗುತ್ತಿತ್ತು. ಅಂಬಾಬಾಯಿಯವರ ಮತ್ತೊಂದು ಶ್ರೇಷ್ಠಕೃತಿಯೆಂದರೆ ರಾಮಾಯಣ ಮಹಾಕಾವ್ಯ. ಲವಕುಶರು ಶ್ರೀರಾಮನ ಮುಂದೆ ವೀಣೆ ನುಡಿಸುತ್ತಾ ಹಾಡುವಂತೆ ಕಲ್ಪಿಸಿರುವ ಈ ಕಾವ್ಯ ಚೌಪದಿಯ ಛಂದಸ್ಸಿನಲ್ಲಿದೆ. ಪ್ರತಿ ಚೌಪದಿಯ ಕೊನೆಯಲ್ಲಿ 'ರಾಮಚಂದ್ರ' ಎನ್ನುವ ಅಭಿನಾಮವಿದೆ. ಇದರ ಸುಂದರಕಾಂಡ ಅಂದಿಗೆ ತುಂಬ ಜನಪ್ರಿಯವಾಗಿತ್ತು. ಅಂಬಾಬಾಯಿ ಅದನ್ನು ಸುಶ್ರಾವ್ಯವಾಗಿ

ಹಾಡುತ್ತಿದ್ದರು. ಅವರನ್ನು ಕರೆಸಿ ಸುಂದರಕಾಂಡ ಹಾಡಿಸಿದರೆ ಸಕಲ ಕ್ಲೇಶಗಳೂ ದೂರಾಗುತ್ತವೆ ಎನ್ನುವ ನಂಬಿಕೆ ಜನಜನಿತವಾಗಿತ್ತು. ಚಿತ್ರದುರ್ಗ ಮತ್ತು ಇನ್ನೂ ಅನೇಕ ಊರುಗಳಲ್ಲಿ 'ಸುಂದರಕಾಂಡದ ಅಂಬಾಬಾಯಿ' ಎಂದೇ ಅವರು ಪ್ರಸಿದ್ಧರಾಗಿದ್ದರು. ಗುರುಗಳಂತೂ ತಾವು ಹೋದಲೆಲ್ಲಾ ಅಂಬಾಬಾಯಿಯ ರಾಮಾಯಣದ ಉದಾಹರಣೆಯನ್ನೇ ಕೊಡುತ್ತಿದ್ದರು. ತಮ್ಮ ಇಪ್ಪತ್ತೆಂಟನೇ ವಯಸ್ಸಿನಲ್ಲಿ ಸಾಹಿತ್ಯ ಸೃಷ್ಟಿಗೆ ತೊಡಗಿದ ಅಂಬಾಬಾಯಿ ತಮ್ಮ ನಲವತ್ತೆರಡರ ಹೊತ್ತಿಗೆ ಮೇರು ಶಿಖರವನ್ನೇರಿದ್ದರು. ಇನ್ನೂ ಬದುಕಿದ್ದರೆ ಇನ್ನಷ್ಟು ಒಳ್ಳೆಯ ಕೃತಿಗಳು ಅವರಿಂದ ರಚನೆಯಾಗುತ್ತಿತ್ತೇನೋ. ಆದರೆ ವಿಧಿಗೆ ಇವರ ಸೇವೆ ಸಾಕಾಯಿತೇನೋ. ಯಾವ ದಾಸಪಂಥವನ್ನು ಸ್ವೀಕರಿಸಿ ಹರಿದಾಸರಾದರೋ, ಅದಕ್ಕಾಗಿ ಯಾರ ಹಂಗಿಲ್ಲದೆ ಊರೂರು ಸುತ್ತಿದರೋ, ಅದೇ ಊರೂರು ಸುತ್ತಾಟವೇ ನಲವತ್ತೆರಡನೇ ವಯಸ್ಸಿಗೆ ಅವರ ಜೀವವನ್ನೇ ಕಸಿದಿದ್ದು ವಿಪರ್ಯಾಸವೇ ಸರಿ. ಯಾವುದಾದರೂ ಒಂದು ಗುಂಪು ಜೊತೆಗೆ ಸಿಕ್ಕರೆ ಸಾಕು ಪಂಡರಾಪುರ, ತಿರುಪತಿ ಮುಂತಾದ ಕಡೆಗಳಿಗೆ ಯಾತ್ರೆ ಹೊರಟುಬಿಡುತ್ತಿದ್ದರು. ತಮಗೆ ಆ ಊರು ಇಷ್ಟವಾದರೆ ಜೊತೆಗೆ ಬಂದ ಗುಂಪು ವಾಪಸ್ ಹೊರಡುವಾಗ ತಾವು ಜೊತೆಯಲ್ಲಿ ಹೊರಡದೇ ಅಲ್ಲೇ ಉಳಿದೇಬಿಡುತ್ತಿದ್ದರು. ಹೀಗೆ ಒಮ್ಮೆ ಎಲ್ಲಿಗೋ ಹೋದಾಗ ಗುಂಪು ವಾಪಸ್ ಆಯಿತು. ಅಂಬಾಬಾಯಿ ಬರಲಿಲ್ಲ. "ನಾಲ್ಕುದಿನ ಕಳೆದು ಬರುತ್ತಾರಂತೆ" ಎನ್ನುವ ಉತ್ತರ ಬಂತಾದರೂ ನಾಲ್ಕು ದಿನವೇನು ನಲವತ್ತು ದಿನವಾದರೂ ಅಂಬಾಬಾಯಿಯವರ ಪತ್ತೆಯಿಲ್ಲ. ನೆಂಟರು ಸಾಕಷ್ಟು ಕಡೆ ಹುಡುಕಿದರು. ಯಾರಿಗೂ ಅವರ ಸುಳಿವೇ ಸಿಗಲಿಲ್ಲ. ಮಳೆಗಾಲ, ಭರಪೂರ ನದಿ ಹರಿಯುತ್ತಿದ್ದ ಕಾಲ. ಸ್ನಾನಮಾಡಲು ಹೋದಾಗ ನೀರಿಗೇ ಜಾರಿದ್ದರೋ, ನಲವತ್ತೈದರ ಸ್ವಾತಂತ್ರ್ಯ ಹೋರಾಟದ ಕಾಲ, ಯಾವುದಾದರೂ ಗಲಾಟೆಯಲ್ಲೇ ಸಿಕ್ಕಿಕೊಂಡರೋ ಒಂದೂ ತಿಳಿಯದಾಗಿತ್ತು. ಸಮಾಜದಲ್ಲಿ ಅದೃಷ್ಟಹೀನ ಎನಿಸಿಕೊಂಡು, ಮೂಲೆ ಗುಂಪು ಆಗಬಹುದಾಗಿದ್ದ ಒಂದು ಜೀವ ತನ್ನ ನೆಲೆಯನ್ನು ತಾನೇ ಕಂಡುಕೊಂಡು ಕನ್ನಡ ದಾಸಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಯನ್ನು ಅರ್ಪಿಸಿ ಬಂದ ಹಾಗೆಯೇ ಹಿಂದೆ ಸರಿದದ್ದು ಆಕೆ ಪೂಜಿಸುತ್ತಿದ್ದ ಶ್ರೀಕೃಷ್ಣನ ಇಚ್ಛೆಯಾಗಿತ್ತೇನೋ!!

ಅಂಬಾಬಾಯಿ ಮರೆಯಾಗುವುದಕ್ಕೆ ಬಹಳ ಮುನ್ನವೇ ಅವರ ಗುರುಗಳ ದೇಹಾಂತವಾಗಿತ್ತು. ಈ ವಿಚಾರ ಆಕೆಯನ್ನು ಬಹಳವಾಗಿ ಕುಗ್ಗಿಸಿತ್ತು. ಆಕೆ ತಮ್ಮ ಈ ಹಳಹಳಿಯನ್ನು ಅನೇಕ ದೇವರನಾಮಗಳಲ್ಲಿ ತೋಡಿಕೊಂಡಿದ್ದಾರೆ. ಕಾಲಸರಿದಂತೆ ಅಂಬಾಬಾಯಿಯೂ ಜನರ ಮರವೆಗೆ ಸಂದಿದ್ದರು. ದೇವರಾಯನದುರ್ಗದಲ್ಲಿ ಗುರುಗಳ ಜಾಗಕ್ಕೆ ಅವರ ಮಗನೇ ನಿಂತು 'ದಾಸಕೂಟಸಭಾ'ವನ್ನು ನಡೆಸಿದರೂ ಶಿಷ್ಯರಿಗೆ ಅಂಕಿತವನ್ನು ನೀಡಿ ಅವರನ್ನು ತಮ್ಮ ಸ್ವಂತ ಮಕ್ಕಳಂತೆಯೇ ಕಾಣುತ್ತಾ ಸಾಕ್ಷಾತ್ ತಂದೆಯ ಮಮತೆಯನ್ನು ತೋರುತ್ತಿದ್ದ ಗುರುವಿನ ವರ್ಚಸ್ಸನ್ನು ಮಗನಿಗೆ ಉಳಿಸಿಕೊಳ್ಳಲಾಗಲಿಲ್ಲ. 'ಪಾರಮಾರ್ಥಿಕ ಚಂದ್ರೋದಯ' ಪತ್ರಿಕೆ ಪ್ರಕಟಣೆ ನಿಂತೇಹೋಗಿತ್ತು. ಅಂಬಾಬಾಯಿಯವರ ದೇವರನಾಮಗಳು ಅವರ ಸಂಬಂಧಿಕರ ಮನೆಯಲ್ಲಿ ಹಾಡಲ್ಪಡುತ್ತಿದ್ದರೂ ಮೊದಲಿನ ಖದರು ಇರಲಿಲ್ಲ. ಕ್ರಮೇಣ ಜೀವನ ಶೈಲಿಯೇ ಬದಲಾಯಿತು. ಅಂಬಾಬಾಯಿಯ ತಂಗಿ ತಮ್ಮ ನಲವತ್ತಾರನೇ ವಯಸ್ಸಿನಲ್ಲೇ ತೀರಿಕೊಂಡರು. ಅಣ್ಣ ತಮ್ಮಂದಿರ ಮನೆಗಳಲ್ಲಿ ನಡೆಯುತ್ತಿದ್ದ ಭಜನೆ ಕಾರ್ಯಕ್ರಮಗಳು ಕ್ರಮೇಣ ಅಪರೂಪವಾಗಿ ಕಡೆಗೆ ನಿಂತೇಹೋದವು. ಅವರ ರಚನೆಗಳ ಪುಸ್ತಕಗಳು ಗಂಟಿನೊಳಗೆ ಸೇರಿ, ಹುಳುಹುಪ್ಪಡಿಗಳಿಗೆ ಆಹಾರವಾಗ ತೊಡಗಿದ್ದವು. ಹೀಗೆ ಇತಿಹಾಸದ ಪುಟಗಳೊಳಗೆ ಮರೆಯಾಗಿಹೋಗಿದ್ದ ಅಂಬಾಬಾಯಿಯನ್ನು ಮತ್ತೆ ಪ್ರಕಾಶಮಾನಕ್ಕೆ ತಂದವರು ವಿಜಯಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಅನಂತಪದ್ಮನಾಭರಾವ್‌ರವರು. ಅವರು ತಮ್ಮ ಸಂಶೋಧನೆಗಾಗಿ ದಾಸಸಾಹಿತ್ಯವನ್ನು ಸಂಗ್ರಹಿಸುತ್ತಿದ್ದಾಗ ಅಂಬಾಬಾಯಿಯವರ ಹಾಡುಗಳು ಲಭಿಸಿದವು. ಅವುಗಳ ಭಾವ ಭಾಷೆ ಅವರನ್ನು ಆಕರ್ಷಿಸಿತು. ತಮ್ಮ ಪಿಎಚ್.ಡಿಯ ನಂತರವೂ ಸಂಗ್ರಹ ಕಾರ್ಯವನ್ನು ಮುಂದುವರೆಸಿದರು. ಈ ಮಧ್ಯೆ ಅಂಬಾಬಾಯಿಯವರ ದೇವರನಾಮವೊಂದು 'ಗೋಪಾಲಕೃಷ್ಣವಿಠಲ' ಎನ್ನುವ ಅಂಕಿತದ ಬದಲು

'ಗೋಪಾಲವಿಠಲ' ಎಂದು ಬದಲಾಗಿ, ಗೋಪಾಲದಾಸರ ಕೃತಿಗಳಲ್ಲಿ ಸೇರಿಹೋಗಿತ್ತು. ಬಾಂಬೆ ಜಯಶ್ರೀ ಎನ್ನುವ ಸಂಗೀತ ಕಲಾವಿದೆ, ತಿರುಪತಿಯ ದಾಸಸಾಹಿತ್ಯದ ಪ್ರಾಜೆಕ್ಟ್‌ನ ಮುಖಾಂತರ ಹೊರಬಂದ ಕ್ಯಾಸೆಟ್‌ನಲ್ಲಿ 'ಮೂರುನಾಮಗಳ ಧರಿಸಿರುವ ಕಾರಣವೇನು' ಎನ್ನುವ ಹಾಡನ್ನು ಹೇಳಿದ್ದರು. ಅದನ್ನು ಕೇಳಿದ ಅಂಬಾಬಾಯಿಯ ತಂಗಿ ಮಗಳು ಶ್ರೀಮತಿ ಫಣಿರಾಜರತ್ನ ಅವರು ಇದನ್ನು ತಮ್ಮ ದೊಡ್ಡಮ್ಮ ಬರೆದಿದ್ದೆಂದೂ ಅದನ್ನು ಸ್ವತಃ ತಾವು ಅವರ ಕೈಲೇ ರಾಗ ಹಾಕಿಸಿ ಹೇಳಿಸಿಕೊಂಡಿದ್ದಾಗಿಯೂ ಅದಕ್ಕೆ ತಮ್ಮ ಹತ್ತಿರ ದೊಡ್ಡಮ್ಮನ ಹಸ್ತಾಕ್ಷರವಿರುವ ಈ ಹಾಡು ಇದೆಯೆಂದೂ, ಪುಸ್ತಕ ಪ್ರಕಾಶಕರಿಗೂ ತಿರುಪತಿಯ ಪ್ರಾಜೆಕ್ಟ್‌ಗೂ ತಿಳಿಸಿದರು, ಮತ್ತು ಮುಂದೆ ತಾವೇ ಅಂಬಾಬಾಯಿಯವರ ಒಂದು ದೇವರನಾಮದ ಪುಸ್ತಕವನ್ನು ಪ್ರಕಟಿಸಿದರು. 141 ದೇವರನಾಮಗಳಿರುವ ಈ ಕೃತಿಯ ಬಿಡುಗಡೆ ಸಮಾರಂಭಕ್ಕೆ ನಾಡಿನ ಹೆಸರಾಂತ ವಿದ್ವಾಂಸರಾದ ಪ್ರೊ. ಎಸ್.ಕೆ.ರಾಮಚಂದ್ರರಾಯರೂ, ಡಾ. ಅನಂತಪದ್ಮನಾಭರಾಯರೂ ಆಗಮಿಸಿದ್ದರು. ಅಂದು ಪ್ರಖ್ಯಾತ ಸಂಗೀತ ವಿದುಷಿ ಡಾ. ಟಿ.ಎಸ್. ಸತ್ಯವತಿಯವರ ಶಿಷ್ಯೆಯರು ಅಂಬಾಬಾಯಿಯ ಕೃತಿಗಳನ್ನು ಸುಶ್ರಾವ್ಯವಾಗಿ ಹಾಡಿದರು. ಪ್ರೊ. ರಾಮಚಂದ್ರರಾಯರು ಆಡಿದ ಕೆಲವು ಮಾತುಗಳು ಉಲ್ಲೇಖಾರ್ಹ. "ತತ್ವಸಾರಾಮೃತ, ಭಾಗವತ ಸಾರೋದ್ಧಾರ (ವಿಷ್ಣುತೀರ್ಥರ ಸಂಸ್ಕೃತ ಕೃತಿಯ ಕನ್ನಡರೂಪ) ಇಂಥಾ ಕಬ್ಬಿಣದ ಕಡಲೆಗಳನ್ನು ಸರಳ ಕನ್ನಡದಲ್ಲಿ ಬರೆದಿರುವ ಅಂಬಾಬಾಯಿ ನಿಜಕ್ಕೂ ಅದ್ವಿತೀಯ ಸೃಜನಶೀಲೆ. ಆಕೆಗೆ ಸಂಸ್ಕೃತದ ಪಾಠ ಚೆನ್ನಾಗಿ ಆಗಿದೆ. ಇಲ್ಲದಿದ್ದರೆ ಇಂಥಾ ತತ್ವಸಾರಗಳನ್ನು ಇಷ್ಟು ಸುಲಭವಾಗಿ ಮರುಸೃಷ್ಟಿಸಲು ಸಾಧ್ಯವಿಲ್ಲ. ಈಕೆಯ ಸಾಹಿತ್ಯ ಸತ್ವದ ಬಗ್ಗೆಯೇ ಸಂಶೋಧನೆಯಾಗಬೇಕು. ಈಕೆಯ ಕೃತಿಗಳಲ್ಲಿ ಅದೆಷ್ಟು ಸಂಸ್ಕೃತದ ಕಠಿಣ ತತ್ವಗಳು ಕನ್ನಡದಲ್ಲಿ ಸರಳ ಸುಂದರವಾಗಿ ಮೂಡಿವೆಯೋ ಪರಾಮರ್ಶಿಸಬೇಕು. ಇಂಥಾ ಸಂಶೋಧನೆಗಳು ಇಂದಿನ ದಾಸಸಾಹಿತ್ಯ ಪ್ರಕಾರಕ್ಕೆ ಅತ್ಯವಶ್ಯಕ."

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, 'ಸಮಗ್ರದಾಸ ಸಾಹಿತ್ಯ'ದ ಯೋಜನೆಯಡಿಯಲ್ಲಿ ಡಾ. ಅನಂತಪದ್ಮ ನಾಭರಾಯರು ಸಂಪಾದಿಸಿರುವ 'ಅಂಬಾಬಾಯಿಯವರ ಕೀರ್ತನೆಗಳು' (ಸಂಪುಟ 18, ಭಾಗ3) ಎನ್ನುವ ಬೃಹತ್ ಕೃತಿಯನ್ನು 2003ರಲ್ಲಿ ಪ್ರಕಟಿಸಿದೆ. 450 ಪುಟಗಳ ಈ ಕೃತಿಯಲ್ಲಿ, 266 ದೇವರನಾಮಗಳಿವೆ. ಇದರಲ್ಲಿ ಮೂರು ಐದು ನುಡಿಗಳ ಹಾಡುಗಳೇ ಅಲ್ಲದೇ ನೂರಾರು ನುಡಿಗಳ ಕಥನಕವನಗಳೂ ಇವೆ. ಅಂಬಾಬಾಯಿಯವರ ಬದುಕು ಮತ್ತು ಸಾಹಿತ್ಯದ ವಿವರಗಳ ಪ್ರಸ್ತಾವನೆಯನ್ನು ದೀರ್ಘವಾಗಿ ಡಾ. ಅನಂತಪದ್ಮನಾಭರಾಯರು ಬರೆದಿದ್ದಾರೆ. ಕಠಿಣಪದಗಳ ಅರ್ಥ, ಟಿಪ್ಪಣಿಗಳು, ಅಕಾರಾದಿಯಾಗಿ ಒಪ್ಪವಾಗಿಟ್ಟಿರುವ ಕೀರ್ತನೆಗಳು, ತಂದೆ ಮುದ್ದುಮೋಹನದಾಸರ ಶಿಷ್ಯರ ವಿವರಗಳಿಂದ ಕೂಡಿದ ಈ ಕೃತಿ ಸಂಗ್ರಹ ಯೋಗ್ಯವಾಗಿದೆ. ಇದಲ್ಲದೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂಬಾಬಾಯಿಯವರ ಕೆಲವು ಆಯ್ದ ಹಾಡುಗಳನ್ನು ನಾಡಿನ ಸಂಗೀತಗಾರರಿಂದ ಹೇಳಿಸಿ ಸಿ.ಡಿ ರೂಪದಲ್ಲಿ ಕೂಡ ಹೊರತಂದಿದೆ.

ಅಂಬಾಬಾಯಿಯವರ ಕೃತಿಗಳು ಇಂದು ಬೆಳಕಿಗೆ ಬರಲು ಡಾ. ಅನಂತಪದ್ಮನಾಭರಾಯರು ಹೇಗೆ ಕಾರಣರೋ ಹಾಗೆಯೇ ಈ ಕೃತಿಗಳು ಸಂಗೀತವಲಯದಲ್ಲಿ ಹಬ್ಬಲು ವಿದುಷಿ ಡಾ. ಸತ್ಯವತಿಯವರೂ ಕಾರಣ. ನಾಡಿನ ಶ್ರೇಷ್ಠ ಸಂಗೀತ ಶಾಸ್ತ್ರ ವಿದ್ವಾಂಸೆಯೂ ಆದ ಸತ್ಯವತಿಯವರಿಗೆ ಅಂಬಾಬಾಯಿಯ ಕೃತಿಗಳೆಂದರೆ ಬಹಳ ಇಷ್ಟ. ಆಕೆ ಹೇಳುತ್ತಾರೆ "ಲಯದಲ್ಲಿ, ಅರ್ಥದಲ್ಲಿ ಅಂಬಾಬಾಯಿಯವರ ಹಾಡುಗಳು ಬಹಳ ಅಪೂರ್ವವಾಗಿವೆ. ಕೆಲವು ಭಾವಗಳಂತೂ ನವನವೀನವಾಗಿವೆ. ಈ ಭಾವಪೂರ್ಣ ಕೃತಿಗಳನ್ನು ಹಾಡುವಾಗ ಬಹಳ ಅಪ್ಯಾಯವೆನಿಸುತ್ತದೆ." ಆಕೆ ತಮ್ಮ ಪ್ರತಿ ಸಂಗೀತ ಕಚೇರಿಯಲ್ಲೂ ಅಂಬಾಬಾಯಿಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳಿ ಒಂದು ಅಥವಾ ಎರಡು ಕೃತಿಗಳನ್ನು ಹಾಡುತ್ತಾರೆ. ಅಷ್ಟೇ ಅಲ್ಲ ಅವರ ಎಲ್ಲ ಶಿಷ್ಯಂದಿರಿಗೂ ಈ ಕೃತಿಗಳ ಪಾಠ ಮಾಡಿದ್ದಾರೆ. ಅವರೂ ಸಹ ತಮ್ಮ ಸಂಗೀತ ಕಚೇರಿಯಲ್ಲಿ ತಪ್ಪದೇ ಗುರುವಿನ ಮಾರ್ಗವನ್ನೇ ಪಾಲಿಸುತ್ತಾರೆ.

ಸಾಹಿತ್ಯಕ ದೃಷ್ಟಿಯಿಂದ ಅಂಬಾಬಾಯಿಯವರ ರಚನೆಗಳನ್ನು ಕನಕದಾಸರ ರಚನೆಗಳಿಗೆ ಹೋಲಿಸಬಹುದು. ಪುರಂದರದಾಸರಂತೆ ಸರಳ, ನೇರ ಮಾರ್ಗಗಳನ್ನು ಹಿಡಿದಿದ್ದರೂ ಕೆಲವೆಡೆ ಕನಕದಾಸರಂತೆ ರೂಪಕ, ಉಪಮೆ, ಕಾವ್ಯಪ್ರತಿಮೆ, ಮುಂತಾದ ಸಾಹಿತ್ಯಸತ್ವ ಮಾರ್ಗವನ್ನೂ ಹಿಡಿದಿದ್ದಾರೆ. ಆದಿಪ್ರಾಸಗಳಿಗೆ, ಪದಲಾಲಿತ್ಯಕ್ಕೆ ಎಲ್ಲೂ ಕಷ್ಟಪಡದೇ ಸುಲಲಿತವಾಗಿ ರಚಿಸಿದ್ದಾರೆ. ಕೆಲವು ಕಡೆ ನೇರವಾಗಿ ಹೋಗುವ ಅವರ ಮಾತುಗಳು ಕೆಲವೆಡೆ ಪ್ರತಿಮೆಯ ಸ್ವರೂಪವನ್ನೂ, ದಾಸತತ್ವದ ಕ್ಲಿಷ್ಟತೆಯನ್ನೂ ತಳೆಯುತ್ತವೆ. ಉದಾಹರಣೆಗೆ ತಿರುಪತಿಯ ವೆಂಕಟರಮಣನನ್ನು ಕುರಿತು ಹಾಡಿರುವ 'ಮೂರು ನಾಮಗಳ ಧರಿಸಿರುವ ಕಾರಣವೇನು' ಕೃತಿಯನ್ನು ನೋಡಬಹುದು. "ಮೂರು ರೂಪನು ನಾನು ಮೂರು ಲೋಕಗಳಿಹವು; ಮೂರು ಮಾಳ್ಪೆನು ಜಗವ ಮೂರು ಗುಣದಿ, ಮೂರು ತಾಪವ ಗೆದ್ದು, ಮೂರು ಮಾರ್ಗದಿ ಭಜಿಸೆ, ಪಾರುಮಾಡುವೆನೆಂದು ತೋರುವಬಗೆಯೋ" (ಸೃಷ್ಟಿ, ಸ್ಥಿತಿ, ಲಯದ ರೂವಾರಿ ಭಗವಂತ, ಸತ್ವ ತಮೋ ರಜೋಗುಣಗಳನ್ನು ಬಿಟ್ಟಾಗ, ಜ್ಞಾನ ಭಕ್ತಿ, ವೈರಾಗ್ಯ ಮಾರ್ಗಗಳಿಂದ ಭಜಿಸಿದಾಗ, ಮರುಹುಟ್ಟು ಇಲ್ಲದಂತೆ, ವ್ಯಸನವಿಲ್ಲದಂತೆ, ಮುಕ್ತಿಯನ್ನು ಕೊಡುವ ಮೂರನ್ನು ಮಾಳ್ಪೆನು, ಎಂದು ತನ್ನ ಮೂರು ನಾಮಗಳಿಂದ ಸಾಂಕೇತಿಕವಾಗಿ ಹೇಳುತ್ತಿದ್ದಾನೆ ಎನ್ನುವ ಭಾವ) ಇದೇ ಹಾಡಿನಲ್ಲಿ ಮುಂದುವರೆದು, "ಮೂರೆರಡು ಎರಡೊಂದು ಇಂದ್ರಿಯವನರ್ಪಿಸಲು, ತೋರುವನು ನಿಜರೂಪ ಭಕ್ತಗೆಂದು, ಸಾರುತ್ತಿದ್ದರು ವಾಯು ಅರಿಯದೇ ಭಜಿಸಿದರೆ, ಮೂರು ನಾಮವೆ ಗತಿ ಎನ್ನುವ ಬಗೆಯೋ" (ಮಾಧ್ವ ಸಂಪ್ರದಾಯದಲ್ಲಿ ತಾರತಮ್ಯಸತ್ಯ, ಪಂಚಬೇಧಸತ್ಯ ಎನ್ನುವ ಮಾತಿದೆ. ಅದನ್ನು ವಾಯುದೇವರು ಧರೆಗೆ ಸಾರಿದರು ಎನ್ನುವುದೂ ಪ್ರತೀತಿ, ಇದನ್ನೇ ದೃಢೀಕರಿಸುತ್ತಾ, ಇದನ್ನು ವಾಯು ಸಾರುತ್ತಿದ್ದರೂ ಅರಿಯದೇ ಹೇಗೆ ಹೇಗೋ ಭಜನೆ ಮಾಡಿದವರಿಗೆ ಬದುಕಿನಲ್ಲಿ ಮೂರು ನಾಮವೇ ಗತಿಯೆಂದು ಅಣಕವಾಡಿದ್ದಾರೆ). 'ಹಚ್ಚಡ ಒಗೆಯಬೇಕಮ್ಮ' ಕೃತಿಯಂತೂ ಪೂರಾ ಕಾವ್ಯಪ್ರತಿಮೆಯಿಂದ ವರ್ಣಿಸಲ್ಪಟ್ಟಿದೆ. ಇಡೀ ದೇಹವನ್ನು ಮತ್ತು ಕೆಲವು ಕಡೆ ಬದುಕನ್ನೂ ಹೊದ್ದುಕೊಳ್ಳುವ ಬಟ್ಟೆಗೆ ಹೋಲಿಸುತ್ತಾರೆ. ಈ ದೇಹ ಕಾಮಕ್ರೋಧಾದಿಗಳಿಂದ ಕೊಳೆಯಾಗಿದೆ. ಇದನ್ನು ಆಗಾಗ್ಗೆ ಭಗವಂತನ ನಾಮಸ್ಮರಣೆ ಎನ್ನುವ ನಿರ್ಮಲ ಉದಕದಿಂದ ಸ್ವಚ್ಛಗೊಳಿಸಿ, ಇಲ್ಲದಿದ್ದರೆ ಕೊನೆಯ ಹೊತ್ತಿಗೆ ತೀರಾ ಮಲಿನವಾದ ಬಟ್ಟೆ ನಿರುಪಯುಕ್ತವಾಗುವಂತೆ ಈ ಬದುಕೂ ವ್ಯರ್ಥವಾಗುತ್ತದೆ ಎಂದು ಎಚ್ಚರಿಸುತ್ತಾರೆ. ತಾವು ಕಂಡ ನದಿಗಳ ಪಾವಿತ್ರ್ಯತೆಯನ್ನು ಅರುಹುವ ನಾಲ್ಕಾರು ದೇವರನಾಮಗಳು ತುಂಬ ಸುಂದರವಾಗಿವೆ. (ತುಂಗೆ ಮಂಗಳತರಂಗೆ, ಗೋದಾವರಿ ಎನಗೆ, ಕಂಗಳಿಂದಲಿ ನಿನ್ನ ಕಂಡೆ, ನಮಿಪೆ ನದೀ ದೇವತೆಗಳೇ). 'ಮುತ್ತೈದೆಯಾದೆ ನಾ ಮುರಹರನ ದಯದಿ' ಎನ್ನುವ ಹಾಡಿನಲ್ಲಿ ಯಾವುದನ್ನು ಬದುಕಿನಲ್ಲಿ ಕಾಣಲೇ ಇಲ್ಲವೋ ಅವೆಲ್ಲವನ್ನೂ ವಿಶೇಷ ಅರ್ಥಗಳನ್ನಾಗಿಸಿ ತಮ್ಮ ಒಳ ಮನಸ್ಸನ್ನು ಭಗವಂತನ ಪಾದಾರವಿಂದಗಳಿಗೆ ಅರ್ಪಿಸಿಕೊಳ್ಳುವ ಶುಭಸಂಭ್ರಮದಲ್ಲೆ ತಮ್ಮನ್ನು ಅಮೂರ್ತವಾದ ವಸ್ತುಗಳೊಂದಿಗೆ ಶೃಂಗರಿಸಿಕೊಳ್ಳುವ ಚಿತ್ರಣವನ್ನು ನೀಡಿದ್ದಾರೆ. ಜ್ಞಾನ ಭಕ್ತಿ ವೈರಾಗ್ಯಗಳು ಜಡೆಯ ಮೂರುಕಾಲುಗಳು, ಪರಿಪರಿಯ ತತ್ವಗಳೆ ಚೌರಿ ರಾಗಟೆ ಗೊಂಡ್ಯಗಳು, ಗುರುವಾಜ್ಞೆ ಎನ್ನುವ ಪುಷ್ಪವನ್ನು ಧರಿಸಿದ್ದಾರೆ, ಗುರುಕೊಟ್ಟ ಅಂಕಿತವೆ ಮಾಂಗಲ್ಯವಾಗಿದೆ, ಗುರುಪ್ರೀತಿ ಎನ್ನುವ ರೇಶಿಮೆಯ ಬಟ್ಟೆ ಉಟ್ಟಿದ್ದಾರೆ, ಗುರುಕೊಟ್ಟ ಹೊಸ ಹೆಸರು ಹಣೆಯಲ್ಲಿ ಹೊಳೆಯುವ ತಿಲಕವಾಗಿದೆ, ಹೀಗೆ ಗುರುವಿನ ದಯೆಯ ಸಕಲ ಅಭರಣಗಳನ್ನು ತೊಟ್ಟಿರುವ ತಮ್ಮನ್ನು, ಗುರುಗಳೇ ನಿಂತು ಸಾಕ್ಷಾತ್ ಶ್ರೀಕೃಷ್ಣಪರಮಾತ್ಮನಿಗೆ ಧಾರೆ ಎರೆದುಕೊಡುವ ಮಂಗಳ ದೃಶ್ಯವನ್ನು ಚಿತ್ರಿಸುತ್ತಾರೆ. ಎಲ್ಲಿಯ ಮಡಿ ಹೆಂಗಸು, ಎಲ್ಲಿಯ ಮದುಮಗಳು? ಮನಸ್ಸಿನಲ್ಲಿ ಭಕ್ತಿಯ ಮುದವೊಂದಿದ್ದರೆ ಸಾಮಾಜಿಕ ಕಟ್ಟುಪಾಡುಗಳನ್ನೂ ದಾಟಿ, ಸ್ವರ್ಗಸುಖದ ಪರಿಕಲ್ಪನೆಯನ್ನು ಸಕಾರಾತ್ಮಕವಾಗಿ ಮಾಡಿಕೊಳ್ಳಬಹುದೆನ್ನುವುದಕ್ಕೆ ಅಂಬಾಬಾಯಿ ಉತ್ತಮ ಉದಾಹರಣೆಯಾಗಿದ್ದಾರೆ. ಇದನ್ನು ಓದಿದಾಗ ಅಯಾಚಿತವಾಗಿ ಭಕ್ತಮೀರಾಬಾಯಿಯ 'ಕೃಷ್ಣಭಕ್ತಿ' ನೆನಪಿಗೆ ಬರುತ್ತದೆ.

ಪ್ರೊ.ಎಸ್.ಕೆ. ರಾಮಚಂದ್ರರಾಯರು ಹೇಳುವಂತೆ ಅಂಬಾಬಾಯಿಯವರ ಕೃತಿಗಳ ಸಾಹಿತ್ಯಕ ಸಂಶೋಧನೆ ಮತ್ತು ವಿಮರ್ಶೆ ಹಾಗೂ ವಿದ್ವಜ್ಜನರ ನಡುವೆ ಚರ್ಚೆ ಇವೆಲ್ಲಾ ನಡೆಯಬೇಕಿದೆ. ಇಂಥಾ ಒಂದು ಅದ್ಭುತ ಪ್ರತಿಭೆಗೆ ಸರಿಯಾದ ನ್ಯಾಯ ಸಿಗಬೇಕಾಗಿದೆ. 2001ರಲ್ಲಿ ಅವರ ಜನ್ಮ ಶತಮಾನವನ್ನು ಅವರ ನೆಂಟರಿಷ್ಟರು ಸೇರಿ ಆಚರಿಸಿದ್ದಾರೆ. ಅದೇ ದಿನ ಡಾ. ಸತ್ಯವತಿ ಮತ್ತು ಅವರ ಶಿಷ್ಯರು ಹಾಡಿರುವ ಅಂಬಾಬಾಯಿಯವರ ದೇವರನಾಮಗಳ ಕ್ಯಾಸೆಟ್ ಅನ್ನೂ ಬಿಡುಗಡೆ ಮಾಡಿದ್ದಾರೆ. ಇದಿಷ್ಟೂ ಈವರೆಗೆ ನಡೆದಿರುವ ವಿಷಯಗಳು. ಆದರೆ ಒಬ್ಬ ಪ್ರತಿಭಾಪೂರ್ಣ ದಾಸಸಾಹಿತಿಗೆ ಇದಿಷ್ಟೇ ಸಾಲದು. ಅವರು ಕರ್ನಾಟಕದ ದಾಸ ಕವಯತ್ರಿಯಾಗಿ ಮನೆಮನೆಗೂ ತಲುಪಬೇಕಾದ ಅಗತ್ಯ ಖಂಡಿತಾ ಇದೆ.

———— * ————

ಬಹುಮುಖ ಸಾಧಕಿ ಕಮಲಾದೇವಿ ಚಟ್ಟೋಪಾಧ್ಯಾಯ

ಕೆ.ಎಂ. ವಿಜಯಲಕ್ಷ್ಮಿ

ಕಮಲಾದೇವಿ ಚಟ್ಟೋಪಾಧ್ಯಾಯರ ಸಾಧನೆಗಳು ಹಲವು ರೀತಿಯವು. ಆಕೆ ಲೇಖಕಿ, ಮಾನವತಾವಾದಿ, ಪಕ್ಕಾ ಸ್ತ್ರೀವಾದಿ, ಒಳ್ಳೆಯ ಕಲಾವಿದೆ, ಉತ್ತಮ ನಟಿ, ಭಾರತದ ಸ್ವಾತಂತ್ರ್ಯ ಹೋರಾಟಗಾರ್ತಿ, ಸಾಮಾಜಿಕ ಕಾರ್ಯಕರ್ತೆಯೂ ಹೌದು; ಕಲಾಭಿಜ್ಞೆಯೂ ಹೌದು. ಹೆಣ್ಣುಮಕ್ಕಳ ಹಕ್ಕು ಮತ್ತು ಬಾಧ್ಯತೆಗಳಿಗೆ, ಅವರ ಸ್ಥಾನಮಾನವನ್ನು ಎತ್ತರಿಸಲು ಈಕೆ ಮಾಡಿದ್ದು ಅಸಾಧಾರಣ ಹೋರಾಟ.

ಪ್ರಾರಂಭಿಕ ಬದುಕು : ಕಮಲಾದೇವಿಯವರು ಹುಟ್ಟಿದ್ದು 1903ರ ಏಪ್ರಿಲ್ ಮೂರರಂದು. ಅಪ್ಪಟ ಕನ್ನಡಿತಿ, ಹುಟ್ಟಿದ್ದು, ಬೆಳೆದದ್ದು, ಮದುವೆಯಾದದ್ದು, ಹಲವು ಕಾಲ ಜೀವನ ಕಳೆದಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ. ಇವರ ತಂದೆ ಅನಂತಯ್ಯನವರು ಶ್ರೀಮಂತ ಮನೆತನದವರು. ಕಲೆಕ್ಟರ್ ಆಗಿ, ಜಿಲ್ಲಾಧಿಕಾರಿಯಾಗಿ ನಿವೃತ್ತರಾದವರು. ತಾಯಿ ಗಿರಿಜಾಬಾಯಿ ಅನಂತಯ್ಯನವರ ಎರಡನೇ ಪತ್ನಿ. ಅವರ ಮೊದಲನೇ ಪತ್ನಿಗೆ ಆಗಲೇ ಮೂರು ಮಕ್ಕಳಿದ್ದುವು. ತಂದೆ ಅನಂತಯ್ಯನವರು, ತಾಯಿಯ ತಾಯಿ ಅಜ್ಜಿ ಮತ್ತು ಅಮ್ಮ ಗಿರಿಜಾಬಾಯಿ ಕಮಲಾದೇವಿಯ ಮೇಲೆ ಪ್ರಭಾವ ಬೀರಿದ ಮೂವರು ವ್ಯಕ್ತಿಗಳು. ಕಮಲಾರವರ ತಾಯಿ ಸಂಗೀತ ಪ್ರೇಮಿ. ಸಾಮಾಜಿಕ ಪ್ರಜ್ಞೆಯನ್ನು ಹೊಂದಿದ್ದ ಈಕೆ, ಮಂಗಳೂರಿನಲ್ಲಿ ಮಹಿಳಾ ಸಂಘವನ್ನು ಸ್ಥಾಪಿಸಿ, ಹಲವು ವರ್ಷಗಳ ಕಾಲ ಅದರ ಅಧ್ಯಕ್ಷತೆಯಾಗಿ ಕಾರ್ಯನಿರ್ವಹಿಸಿದರು. ಸಭೆಯಲ್ಲಿ ಇತರರಿಗಾಗಿ ಪುಸ್ತಕಗಳನ್ನು ಮತ್ತು ಪತ್ರಿಕೆಗಳನ್ನು ಓದಿ ಪ್ರತಿದಿನದ ಆಗುಹೋಗುಗಳ ಅರಿವು ಮೂಡಿಸುತ್ತಿದ್ದರು. ಮನೆಮನೆಗೆ ಹೋಗಿ ಹೆಣ್ಣುಮಕ್ಕಳನ್ನು ಶಾಲೆಗೆ ಸೇರಿಸಲೂ ಕೇಳಿಕೊಳ್ಳುತ್ತಿದ್ದರು. ಇದರಿಂದ ತಾಯಿಯ ಈ ಸ್ತ್ರೀಕಾಳಜಿ, ಸರಳತೆ ಮತ್ತು ದೇಶಭಕ್ತಿ, ಸಂಘಟನಾ ಚಾತುರ್ಯ, ಸಂಗೀತ ಪ್ರೇಮ; ಅಜ್ಜಿಯ ಸಾಹಸ ಸ್ವಭಾವ ಹಾಗೂ ಓದುವ ಗುಣ, ತಂದೆಯ ಜಾಣ್ಮೆ ಮತ್ತು ಪಾಂಡಿತ್ಯಗಳು ಈ ಎಲ್ಲವೂ ಕಮಲಾರವರಲ್ಲಿ ಮೇಳೈಸಿದ್ದುವು.

ಕಮಲಾದೇವಿಯವರು ಮಂಗಳೂರಿನ ಕ್ಯಾಥೋಲಿಕ್ ಕಾನ್ವೆಂಟ್ ಹಾಗೂ ಸೇಂಟ್ ಮೇರೀಸ್ ಕಾಲೇಜಿನಲ್ಲೂ ಆ ನಂತರ ಲಂಡನ್ನಿನ ಬೆಡ್‌ಫರ್ಡ್ ಕಾಲೇಜು ಮತ್ತು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲೂ ವಿದ್ಯಾಭ್ಯಾಸ ಮಾಡಿದರು.

ಸುಶಿಕ್ಷಿತ ಕುಟುಂಬವಾದರೂ, ಪಕ್ಕದಮನೆಯ ಶ್ರೀಮಂತ ಸಾರಸ್ವತ ಬ್ರಾಹ್ಮಣ ವಕೀಲರಾದ ನಾಯಂಪಲ್ಲಿ ಸುಬ್ಬರಾವ್‌ರವರ ಮಗ ಕೃಷ್ಣರಾವ್ ಎಂಬ ಕಾಲೇಜು ವಿದ್ಯಾರ್ಥಿಯೊಂದಿಗೆ ಕಮಲಾರವರ ಮದುವೆ, 1917ರಲ್ಲಿ ಬಾಲ್ಯದಲ್ಲಿಯೇ ನಡೆಯಿತು. ಆದರೆ ಮದರಾಸಿನಲ್ಲಿ ಓದುತ್ತಿದ್ದ, ಈ ಹುಡುಗನಿಗೆ ಬಂದ ಜ್ವರ ದೂರವಾದದ್ದು ಅವನ ಸಾವಿನೊಂದಿಗೇ, ಮದುವೆಯಾದ ಮರುವರ್ಷವೇ ಕಮಲಾ ವಿಧವೆಯಾದರು. ಕೃಷ್ಣರಾವ್ ಅವರ ತಂದೆ ಸುಬ್ಬರಾವ್ ಅವರು, ಶತಮಾನದ ಹಿಂದೆಯೇ ತಮ್ಮ ಸೊಸೆಗೆ, "ನಿನಗಿಷ್ಟವಾಗುವ ಯಾವುದಾದರೂ ಹುಡುಗನೊಬ್ಬನನ್ನು

ಆರಿಸಿ ಇನ್ನೊಂದು ಮದುವೆಯಾಗು", ಎಂದು ಸಲಹೆ ಕೊಡುವಷ್ಟು ಮಾನವತಾ ಮನೋಭಾವದವರು. ಮಂಗಳೂರಿನ ಎತ್ತರದ ಬೆಟ್ಟದ ಮೇಲೆ, ಸಕಲ ಸೌಲಭ್ಯಗಳನ್ನೊಳಗೊಂಡ, ಅವರ ದೊಡ್ಡ ಮಹಲಿನಲ್ಲಿ, ನೆಹರೂ, ರಾಜಾಜಿ, ರವೀಂದ್ರನಾಥ ಟಾಗೊರರಂಥ ದೇಶದ ಗಣ್ಯ ವ್ಯಕ್ತಿಗಳು ಇಳಿದುಕೊಳ್ಳುತ್ತಿದ್ದರೆಂದರೆ, ಅವರ ಜೀವನದ ಮಟ್ಟವೂ ಎಷ್ಟು ಉನ್ನತವಿತ್ತೆಂದು ತಿಳಿಯಬಹುದು.

ಸ್ತ್ರೀಯರ ಸ್ಥಿತಿಗತಿ ಸುಧಾರಣೆ : ಸ್ತ್ರೀವಾದವೆಂಬ ಪದ ಆಗಿನ್ನೂ ಪ್ರಚಲಿತವಾಗಿರಲಿಲ್ಲವಾದರೂ ಕಮಲಾದೇವಿಯವರು ಮಾಡಿರುವ ಹೋರಾಟ ಮತ್ತು ಅವರ ಧೋರಣೆ, ನಡವಳಿಕೆ ಇತ್ಯಾದಿಗಳಿಂದ ಅವರು ಒಬ್ಬ ಅಪ್ಪಟ ಸ್ತ್ರೀವಾದಿ ಎಂದು ಖಚಿತವಾಗಿ ಗುರುತಿಸಬಹುದು. ಕುಡಿತದ ಚಟಕ್ಕೆ ಬಿದ್ದು ಬದುಕು ಹಾಳಾಗಿಸಿದ ಗಂಡಂದಿರ ಬಳಿ ಅಸಹಾಯ ಅಕ್ಕಂದಿಬ್ಬರು ಅನುಭವಿಸಿದ ಕಷ್ಟಗಳು, ಅವರುಗಳ ಅಕಾಲ ಮರಣ, ತಂದೆಯ ಮರಣಾನಂತರ ತಾಯಿಗೆ ಬಂದ ದುರ್ದಶೆ, ಮತ್ತು ತಾವೇ ಅನುಭವಿಸಿದ ವೈಧವ್ಯ, ವಿಧವೆಯರನ್ನು ಕಡೆಗಣಿಸಿದ ಸಮಾಜದ ದೃಷ್ಟಿಕೋನ, ಇವೆಲ್ಲವೂ ಬಾಲ್ಯದಲ್ಲೇ, ಕಮಲಾರವರು ಮಹಿಳಾಭಿವೃದ್ಧಿ ಮತ್ತು ವಿಮೋಚನೆಯ ಬಗ್ಗೆ ಆಲೋಚಿಸುವಂತೆ ಮಾಡಿದವು. ಭಾರತದ ಮೊದಲ ಗವರ್ನರ್‌ರಾದ ರಾಜಾಜಿಯವರು ಅವರ ಮನೆಗೆ ಯಾವುದೋ ಕಾರಣಕ್ಕೆ ಭೇಟಿ ಇತ್ತಾಗ, ದೊಡ್ಡವಳಾದ ಮೇಲೆ ನೀನೇನು ಮಾಡುವೆ? ಎಂಬ ಪ್ರಶ್ನೆಗೆ "ನಾನು ಈ ಸಮಾಜವನ್ನು ಅದರಲ್ಲೂ ವಿಶೇಷವಾಗಿ ಸ್ತ್ರೀಯರನ್ನು ಪರಿವರ್ತಿಸುತ್ತೇನೆ. ಎಷ್ಟೇ ಕಷ್ಟವಾಗಲಿ ಈ ಕೆಲಸ ಮಾಡಿಯೇ ಮಾಡುತ್ತೇನೆ" ಎಂದು ಉತ್ತರ ಕೊಟ್ಟಿದ್ದರಂತೆ. ಅದರಂತೆ ಮುಂದೆ ಆಕೆ ಈ ಕ್ಷೇತ್ರದಲ್ಲಿ ಗಣನೀಯವಾದ ಹಲವಾರು ಕೆಲಸಗಳನ್ನು ಮಾಡಿದರು. ಇತರರಿಗೂ ಮಾದರಿಯಾದರು, ಮಾರ್ಗದರ್ಶಕಿಯಾದರು.

1927ರಲ್ಲಿ ಅಖಿಲ ಭಾರತ ಮಹಿಳಾ ಪರಿಷತ್ತಿಗೆ ಮೂರು ಬಾರಿ ವ್ಯವಸ್ಥಾಪಕ ಕಾರ್ಯದರ್ಶಿಯಾಗಿ, ಒಮ್ಮೆ ಉಪಾಧ್ಯಕ್ಷೆಯಾಗಿ, ಅನಂತರ ಅಧ್ಯಕ್ಷೆಯಾಗಿ ಕಮಲಾರವರು ಆಯ್ಕೆಗೊಂಡಾಗ, ಮಹಿಳೆಯರ ಸ್ಥಿತಿಯ ಸುಧಾರಣೆಗೆ ನೆರವಾಗುವಂತಹ, ಹಲವಾರು ಕಾಯಿದೆ-ಕಾನೂನುಗಳನ್ನು ಜಾರಿಗೆ ತರಿಸುವಲ್ಲಿ, ಬದ್ಧತೆಯಿಂದ ಕಾರ್ಯನಿರ್ವಹಿಸಿದರು. ಬಾಲ್ಯ ವಿವಾಹ ನಿಷೇಧ ಕಾಯಿದೆ ಅಥವಾ ಶಾರದಾ ಆ್ಯಕ್ಟ್ ಜಾರಿಗೆ ತರಲು ಶ್ರಮಿಸಿ, ಹೆಣ್ಣುಮಕ್ಕಳಿಗೆ ಅನುಕೂಲ ಮಾಡಿಕೊಟ್ಟರು. (ಆಗಿನ ಜನಗಣತಿ ಪ್ರಕಾರ ಹತ್ತು ಸಾವಿರ ವಿಧವಾ ಹೆಣ್ಣುಮಕ್ಕಳು ಪರಾವಲಂಬಿಗಳಾಗಿ ಹಿಂಸೆ ಅನುಭವಿಸುತ್ತಿದ್ದರು) ಹಿಂದು ಕೋಡ್ ಬಿಲ್‌ಗೆ ಬುನಾದಿಯಾದಂತಹ ಸಮಿತಿಯೊಂದನ್ನು ರಚನೆ ಮಾಡಿದ್ದು, ಈ ಸಮಿತಿಯು ಮಹಿಳೆಯ ಆದಾಯ, ಅವಳ ಗಂಡನ ಮತ್ತು ತಂದೆಯ ಆಸ್ತಿಯಲ್ಲಿ ಆಕೆಯ ಅಧಿಕಾರ ಸಂರಕ್ಷಣೆ-ಇವುಗಳ ಬಗ್ಗೆ ಸೂಕ್ತ ಕ್ರಮ ಕೈಗೊಂಡಿತು. ಅವಿವಾಹಿತ ಯುವತಿಯರ ಸಮ್ಮತಿ ವಯಸ್ಸು (ಏಜ್ ಆಫ್ ಕನ್ಸೆಂಟ್), ಏಕಪತ್ನಿತ್ವ, ವಿಚ್ಛೇದನೆ ಮತ್ತು ಆಸ್ತಿ ಉತ್ತರಾಧಿಕಾರ-ಇವುಗಳ ಕುರಿತು ಕಾಯಿದೆ ತರಲು ಒತ್ತಾಯ ನಡೆಯಿತು. ಬಹುಪತ್ನಿತ್ವ ಹಾಗೂ ಅಸಮ ವಿವಾಹಗಳಿಂದಾಗಿ ಹೆಣ್ಣುಮಕ್ಕಳು ವಿಪರೀತ ಸಂಕಷ್ಟಗಳನ್ನು ಅನುಭವಿಸುವ ದಾರುಣ ಸ್ಥಿತಿ ಇದ್ದು, ಈ ಬಗ್ಗೆ, ಕಾರ್ಯೋನ್ಮುಖವಾಗಿ, 1937-38ರ ಅವಧಿಯಲ್ಲಿ ಅನೇಕ ಕಾಯಿದೆಗಳಾದುವು. ಇವುಗಳ ಹಿಂದೆ ಕಮಲಾರವರ ಶ್ರಮ ಮತ್ತು ಕಾಳಜಿಗಳು ಎಲ್ಲರಿಗಿಂತ ಹೆಚ್ಚಾಗಿದ್ದವು.

ಕಮಲಾದೇವಿಯವರು ಎಲ್ಲಿ ಹೋದರೂ ಸ್ತ್ರೀಯರ ಸ್ಥಿತಿಗತಿಗಳನ್ನು ಗಮನಿಸುವುದು ಮತ್ತು ಸುಧಾರಣೆಗೆ ಆಲೋಚಿಸುವುದು ಅವರ ಸದಾ ಸರ್ವದಾ ಗುಣ. ಮಧುರೈನ ಜವಳಿ ಕಾರ್ಖಾನೆ ಮತ್ತು ಮಂಗಳೂರಿನ ಗೋಡಂಬಿ ಕಾರ್ಖಾನೆಗಳಲ್ಲಿ ಹೆಣ್ಣುಮಕ್ಕಳಿಗೆ ಸುವ್ಯವಸ್ಥೆ ಇರಲಿಲ್ಲ. ಗೋಡಂಬಿಯ ಸಿಪ್ಪೆಯನ್ನು ಬೆರಳು ಅಥವಾ ಉಗುರಿನಿಂದಲೇ ಸುಲಿಯಬೇಕೆಂಬುದು ಕಡ್ಡಾಯ ನಿಯಮ. ಇದರಿಂದ ಕೈಗೆ ನೋವು-ಗಾಯ. ಚಾಕು ಅಥವಾ ಇತರ ಉಪಕರಣಗಳನ್ನು ಬಳಸಬಾರದೆಂಬುದು ಮೇಲಧಿಕಾರಿಗಳ ಆದೇಶ. ಕಮಲಾರವರು ಹೋರಾಡಿ ಈ ಕೆಲಸದ ವಿಧಾನದಲ್ಲಿ ಸುಧಾರಣೆ ತಂದರು. ಮಂಗಳೂರಿನಲ್ಲಿ ಮಹಿಳೆಯರ ಮತ್ತು ಪುರುಷ ಕಾರ್ಮಿಕ ಸಂಘಗಳನ್ನು ಕಟ್ಟಿಕೊಟ್ಟರು. ಗಿರಣಿಗಳಲ್ಲಿ

ಗಣಿಗಳಲ್ಲಿ ಮತ್ತಿತರ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಹೆಂಗಸರಿಗೆ ಅಗತ್ಯವಿದ್ದ ಮೂರು ತಿಂಗಳ ಹೆರಿಗೆ ರಜೆಯನ್ನು, ಅವರ ಮಕ್ಕಳಿಗಾಗಿ ಶಿಶುವಿಹಾರಗಳನ್ನು ಮತ್ತು ಬೆಳಗಾಂನ ಜೈಲಿನಲ್ಲಿ ಮಹಿಳಾ ಖೈದಿಗಳಿಗಾಗಿ ಒಂದು ಸಣ್ಣ ಕ್ಲಿನಿಕ್ ಅನ್ನು ಆರಂಭಿಸಲು ಸರ್ವ ಪ್ರಯತ್ನಗಳನ್ನು ಮಾಡಿ ಸಫಲರಾದರು.

ಹೆಣ್ಣುಮಕ್ಕಳ ಮನೆಗೆಲಸದ ಮಹತ್ವವನ್ನು, ಅಡುಗೆ, ಮನೆಗೆಲಸ ಮತ್ತು ಕುಟುಂಬದ ಜವಾಬ್ದಾರಿಗಳಿಗೆ ಗಂಡೂ ಹೆಗಲು ಕೊಟ್ಟರೆ ಹೆಣ್ಣಿಗೆ ಮಾತ್ರವಲ್ಲ, ಗಂಡಿನ ಮತ್ತು ಇಡೀ ಕುಟುಂಬದ ಸುಖ–ನೆಮ್ಮದಿಗಳು ಹೆಚ್ಚುತ್ತವೆ ಎಂಬ ರಹಸ್ಯ–ಸಾರವನ್ನು ಸಾರ್ವಜನಿಕರ ಮುಂದೆ ಧೈರ್ಯವಾಗಿ ತಿಳಿಹೇಳಿದವರಲ್ಲಿ ಬಹುಶಃ ಕಮಲಾದೇವಿಯವರೇ ಮೊದಲಿಗರು. ಹೆಂಗಸರು ತಮ್ಮ ಮನೆಗೆಲಸದಲ್ಲಿ ಸಮಯವನ್ನು ಉಳಿಸಿ, ಇತರ ಕ್ಷೇತ್ರಗಳ ಜ್ಞಾನಾರ್ಜನೆಗೆ ತೊಡಗಿಸಿಕೊಳ್ಳಲು, ಗೃಹ ಯಂತ್ರೋಪಕರಣಗಳ ಬಳಕೆಯ ಬಗ್ಗೆ ತಿಳಿಸಿಕೊಟ್ಟಿದ್ದು; ಅಡುಗೆ ಒಂದು ಕಲೆ, ಅದೂ ಒಂದು ವಿಜ್ಞಾನ, ಕೀಳೂ ಅಲ್ಲ, ಸಣ್ಣದೂ ಅಲ್ಲ ಎಂಬುದನ್ನು ಮನದಟ್ಟುಮಾಡಿದ್ದು; ಮಹಿಳಾ ಪರಿಷತ್ತಿನ ಮೂಲಕ ಗೃಹ ವಿಜ್ಞಾನ ಕಾಲೇಜು ಆರಂಭಗೊಳ್ಳಲು ಕಾರಣರಾದದ್ದು; ಉಲ್ಲೇಖನೀಯ ಕಾರ್ಯಗಳು.

ಕರಕುಶಲ ಕಲೆಗೆ ಪ್ರೋತ್ಸಾಹ : ಕಮಲಾದೇವಿ ಅವರು ದೇಶದ ಮೂಲೆ ಮೂಲೆಗಳಿಗೆ ಪ್ರವಾಸ ಕೈಗೊಂಡು ಕರಕುಶಲ ಕೈಗಾರಿಕಾ ವಸ್ತುಗಳ ಸಾಂಪ್ರದಾಯಿಕ ಕಸಬುದಾರಿಕೆಯ ಬಗ್ಗೆ ತಿಳಿದುಕೊಂಡರು. ಭಾರತದ ಆಧುನಿಕ ಇತಿಹಾಸದಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಪ್ರಶಸ್ತಿಗಳನ್ನು ಕರಕುಶಲಕರ್ಮಿಗಳಿಗಾಗಿ ಸ್ಥಾಪಿಸಿದರು. ಅಖಿಲ ಭಾರತ ಕರಕುಶಲ ಮಂಡಳಿಗೆ ಕಮಲಾರವರೇ ಪ್ರಥಮ ಅಧ್ಯಕ್ಷೆಯಾಗಿ ಗುಡಿ ಕೈಗಾರಿಕೆಗಳ ಎಂಪೋರಿಯಂಗಳ ವ್ಯವಸ್ಥೆಗೆ ನೆರವಾದರು. ಕೈಮಗ್ಗ ಮತ್ತು ಕೈಕುಶಲ ಕೈಗಾರಿಕೆಗಳಿಗಾಗಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗಳನ್ನು ಸೃಷ್ಟಿಸಿದರು, ಮತ್ತು ಪ್ರತಿವರ್ಷದ ಮಾರಾಟದ ವ್ಯವಸ್ಥೆ ಮಾಡಿ ಜನಪ್ರಿಯಗೊಳಿಸಿದರು. 'ಭಾರತೀಯ ಕಸೂತಿ ಕಲೆ' ಎಂಬ ಪುಸ್ತಕ ರಚನೆಗಾಗಿ, ಒಂದೊಂದು ರಾಜ್ಯದ ವಿವಿಧ ಸಾಂಪ್ರದಾಯಿಕ ತಂತ್ರಗಳನ್ನು ಅಧ್ಯಯನ ಮಾಡಿ, ತಂತಿ ಜರಿ ಕಸೂತಿ, ಚಿಕನ್ ಕೆಲಸ, ಅಂಗಮಿ ನಾಗಾ ಶಾಲು, ಕಚಿ ರಬಡಿ, ಹಿಮಾಚಲ ಪ್ರದೇಶದ ರಾಸ ಲೀಲಾ ಸಾಮಗ್ರಿ, ಚೋಪ್ಪ್ ಜೊತೆಗಿನ ದುರ್ರಿ, ಬಂಗಾಳದ ಕಾಂತಾ ಕಸೂತಿ, ರಾಜಾಸ್ಥಾನದ ಪಿಚ್ ವೇಸ್ ಇತ್ಯಾದಿಗಳ ಹೆಸರಿನ ಹಿನ್ನೆಲೆ, ಬಳಸುವ ಬಣ್ಣ, ಕಾರಣ, ಚರಿತ್ರೆ, ಇತ್ಯಾದಿ ಎಲ್ಲ ಅಂಶಗಳ ಬಗ್ಗೆ ಸಂಶೋಧನೆ ನಡೆಸಿ ಪುಸ್ತಕ ಬರೆದರು. ಬೇರೆ ಬೇರೆ ದೇವಸ್ಥಾನಗಳಿಗೆ ಭೇಟಿ ನೀಡಿ ಲ್ಯಾಂಪ್‌ಗಳು, ಘಂಟೆಗಳು, ಹರಕೆ ಸಾಮಾನುಗಳಲ್ಲಿ ಹಸ್ತ ಕೌಶಲ್ಯ, ಅವುಗಳ ಉಪಯೋಗ, ಬಳಕೆಗೆ ಅನುಸರಿಸುವ ಪದ್ಧತಿ ಮುಂತಾದ ವಿಷಯಗಳ ಬಗ್ಗೆ ಆಳ ಅಧ್ಯಯನ ನಡೆಸಿ, ಕುಂಬಾರ, ನೇಕಾರ, ಶಿಲ್ಪಿ, ಚಿತ್ರಕಾರ, ಬಣ್ಣಗಾರ, ಕೈಕುಶಲಗಾರ, ಮುಂತಾದ ಎಲ್ಲ ರೀತಿಯ ಕರಕುಶಲ ಕಸಬುದಾರ ವೃತ್ತಿಯ ಏಳ್ಗೆಗೆ ಕೆಲಸದ ಆದೇಶಗಳು ಬರುವಂತೆ ಮಾಡಿದರು. ವರ್ಲ್ಡ್ ಕ್ರಾಫ್ಟ್ಸ್ ಕೌನ್ಸಿಲ್‌ನ ಮುಖ್ಯ ಶಿಲ್ಪಿಗಳಲ್ಲಿ ಇವರೂ ಒಬ್ಬರಾಗಿದ್ದುದಲ್ಲದೆ, ಉಪಾಧ್ಯಕ್ಷೆಯೂ ಆಗಿದ್ದರು. ವೃತ್ತಿದಾರರ ಮಾರುಕಟ್ಟೆ ಸೌಲಭ್ಯ ನೀಡಲು, ಬಾಂಬೆಯಲ್ಲಿ ಶಿಲ್ಪಿ ಕೇಂದ್ರವನ್ನು ಆರಂಭಿಸಿದರು, ಶ್ರೀಲಂಕಾ ದೇಶವು, ತಮ್ಮ ಸಾಂಪ್ರದಾಯಿಕ ಕರಕುಶಲ ತಂತ್ರಗಳನ್ನುಳಿಸಿ ಬೆಳೆಸಲು ಈಕೆಯ ನೆರವು ಬೇಡಿತು. ಸೆನೆಗಲ್‌ನ ಅಧ್ಯಕ್ಷ, ಡಾಕರ್‌ನಲ್ಲಿ ನಡೆಸಿದ ಉತ್ಸವಕ್ಕೆ ಕಮಲಾರನ್ನು ಆಹ್ವಾನಿಸಿ ಸನ್ಮಾನಿಸಿದರು.

ಪುಸ್ತಕಗಳ ರಚನೆ : ಕಮಲಾದೇವಿಯವರು ತಮ್ಮ ಬರಹವನ್ನು ಆರಂಭಿಸಿದ್ದು 1924ರಲ್ಲಿ, ಬೆಳಗಾಂನಲ್ಲಿ ಕಾಂಗ್ರೆಸ್ ಪಕ್ಷದ ಅಧಿವೇಶನವಾದಾಗ ಸೇವಾ ದಳದ ಚಟುವಟಿಕೆಗಳ ಬಗ್ಗೆ ಲೇಖನ ಮಾಲೆಯನ್ನು ಬರೆಯುವ ಮೂಲಕ. ಅನಂತರ ಆರು ದಶಕಗಳಿಗಿಂತ ಹೆಚ್ಚು ಕಾಲ ಬರೆಯುತ್ತಲೇ ಇದ್ದ ಇವರು, ಭಾರತ ಮಹಿಳಾ ಚಳವಳಿಗಳು, ಬುಡಕಟ್ಟು ಜನಾಂಗಗಳು, ಕರಕುಶಲ ಕೈಗಾರಿಕೆ, ಭಾರತದ ಸಾಂಪ್ರದಾಯಿಕ ಕಲೆಗಳು, ಹಾಗೂ ವಿವಿಧ ದೇಶಗಳ ತಮ್ಮ ಪ್ರವಾಸದ ಅನುಭವಗಳು, ರಂಗಭೂಮಿಯ ಕಲೆ, ಇತ್ಯಾದಿ ವಿವಿಧ ವಿಷಯಗಳ ಬಗ್ಗೆ

ಬರೆದಿದ್ದಾರೆ. Awakeining of Indian Women (1939), Indian Handicrafts (1963), The Glory of Indian Handicrafts (1976), Indian Embroidery (1977), Tribalism in India, (1978), Indian Womens Battle for Freedom (1983), Indian Carpets and Floor Coverings, ಜಮೀಲಾ ಬ್ರಜಭೂಷಣ ಮತ್ತು Future of the Indian Theatre, ಮುಂತಾದವು ಹಾಗೂ ಇನ್ನೂ ಹಲವಾರು ಲೇಖನಗಳು ಇವರ ರಚನೆಗಳು. ಇವುಗಳಲ್ಲಿ ಕೆಲವು ಕನ್ನಡಗೊಂಡಿವೆ. ಈ ಲೇಖಕಿಯ ಬದುಕು, ಸಿದ್ಧಿ ಮತ್ತು ಸಾಧನೆಗಳ ಬಗ್ಗೆಯೇ ಕನ್ನಡ, ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲಿ ಹಲವಾರು ಪುಸ್ತಕಗಳು ಬಂದಿವೆ. 1986ರಲ್ಲಿ ಇವರು ಬರೆದ, ನಾಲ್ಕುನೂರಾ ಹತ್ತು ಪುಟಗಳ 'Inner Recesses, Outer Spaces' ಕೃತಿ, ಕಮಲಾದೇವಿಯವರ ಸ್ವಾನುಭವನಗಳ ಚರಿತ್ರೆ. ಇದರಲ್ಲಿ, ತಮ್ಮ ವೈಯಕ್ತಿಕ ಜೀವನದ ವಿಷಯಗಳನ್ನು ಬಿಟ್ಟು, ಭಾರತ ಸ್ವಾತಂತ್ರ್ಯ ಮತ್ತು ಸಾರ್ವಜನಿಕ ಆಗುಹೋಗುಗಳ ಬಗ್ಗೆ ನಿರೂಪಿಸಿರುವುದು ವಿಶೇಷ.

ಆಕಾಶವಾಣಿಗೆ ಅತ್ಯಂತ ಮಹತ್ವವಿದ್ದ ಕಾಲದಲ್ಲಿ 'ಇಫ್ ಐ ವರ್ ಟ್ವೆಂಟಿ ಅಗೇನ್' ಎಂಬ ವಿಷಯದ ಮೇಲೆ ನೀಡಿದ ಕಮಲಾರವರ ಭಾಷಣವೂ ಬಹಳಷ್ಟು ಶ್ರೋತೃಗಳನ್ನು ಆಕರ್ಷಿಸಿತ್ತು. ಭಾರತೀಯ ಕಲೆಗಳು, ಕರಕುಶಲ ಕೈಗಾರಿಕೆ ಅಥವಾ ರಾಜಕೀಯ ರಂಗ, ಮಹಿಳಾ ಹಕ್ಕುಗಳು, ಪ್ರವಾಸದ ಅನುಭವಗಳು ಇತ್ಯಾದಿ ಯಾವುದೇ ವಿಷಯಗಳ ಬಗ್ಗೆಯೇ ಬರೆಯಲಿ, ಅದರಲ್ಲಿ ಮುಳುಗಿಹೋಗುವಂಥ ತಲ್ಲೀನತೆ ಅವರಿಗೆ. ಒಂದೊಂದು ಪುಸ್ತಕ ರಚನೆಗೂ ತತ್ಸಂಬಂಧದ ಊರು-ಕೇರಿಗಳಿಗೆ, ಮೂಲೆ ಮೂಲೆಗಳಿಗೆ ಹೋಗಿ, ವಿಚಾರಿಸಿ, ಸಂಶೋಧನೆ ನಡೆಸಿಯೇ ಬರೆಯುವುದು ಅವರ ರೀತಿ. ರಾಜಕೀಯ ಕಾರ್ಯಗಳಿಗಾಗಿ ಸತತವಾಗಿ ಕೈಗೊಳ್ಳುತ್ತಿದ್ದ ಪ್ರಯಾಣದ ಸಮಯದಲ್ಲಿ ಆಕೆ ಯಾವಾಗಲೂ ತಮ್ಮೊಂದಿಗೆ ಒಂದು ಬೆರಳಚ್ಚು ಯಂತ್ರವನ್ನೂ ಕೊಂಡೊಯ್ಯುತ್ತಿದ್ದು, ಮೂರನೇ ದರ್ಜೆಯ ಡಬ್ಬಿಯಲ್ಲಿ ಕುಳಿತು, ಅಗತ್ಯ ಅಂಶಗಳನ್ನೊ ಅಥವಾ ಪ್ರಯಾಣದ ಅನುಭವಗಳನ್ನೊ ಇಲ್ಲವೇ ತಮ್ಮ ಕ್ಷೇತ್ರದ ಕಾರ್ಯಗಳ ವರದಿಗಳನ್ನೊ ಬೆರಳಚ್ಚು ಮಾಡುತ್ತಿದ್ದರಂತೆ.

ನಾಟಕ ಮತ್ತು ರಂಗಭೂಮಿ : ನಾಟಕ, ರಂಗಸಜ್ಜಿಕೆ ಮತ್ತು ತೆರೆಯ ಹಿಂದಿನ ಅಗತ್ಯ ವ್ಯವಸ್ಥೆಗಳ ಬಗ್ಗೆ ಕಮಲಾರವರು ಮಾಡಿದ ಕೆಲಸ, ಪಟ್ಟ ಶ್ರಮ ಅಪಾರ. ಸಂಗೀತಗಾರ, ನಟ, ನಾಟಕಕಾರ, ಕವಿ, ದೇಶಪ್ರೇಮಿ ಮತ್ತು ಚಿತ್ರಕಾರ, ಹರೀಂದ್ರನಾಥ ಚಟ್ಟೋಪಾಧ್ಯಾಯರ ಪ್ರತಿಭೆಯನ್ನು ಮೆಚ್ಚಿದ ಈಕೆ, ಹಳೆಯ ಕಂದಾಚಾರಗಳನ್ನು ಮುರಿದು, ಎರಡನೇ ಬಾರಿಗೆ ಮದುವೆಯಾಗಿ, ಅವರೊಂದಿಗೆ ನಾಟಕ ಕ್ಷೇತ್ರದಲ್ಲಿ ಗಣನೀಯ ಕೆಲಸ ಮಾಡಿದರು. ಅವರೊಂದಿಗೆ ಯುರೋಪಿನಲ್ಲಿ ರಷ್ಯಾ, ಸ್ವೀಡನ್, ಜಪಾನ್ ಇತ್ಯಾದಿ ದೇಶಗಳಲ್ಲಿ ಪ್ರವಾಸಮಾಡಿ ಕಲಾವಿದರನ್ನು ಸಂದರ್ಶಿಸಿ ನಾಟಕ ಪ್ರದರ್ಶನ, ರಂಗಭೂಮಿಯ ಅಧ್ಯಯನ ಮಾಡಿದರು. ಹೊಸ ಹೊಸ ತಂತ್ರವನ್ನು ಕಲಿತರು. ಪ್ರಮುಖ ಪಾತ್ರಗಳನ್ನು ವಹಿಸಿ ರಂಗಭೂಮಿಯ ಮೇಲೆ ತಂದರು.

ಅಂತರರಾಷ್ಟ್ರೀಯ ರಂಗಭೂಮಿ ಸಂಸ್ಥೆಯ ಭಾರತ ರಾಷ್ಟ್ರೀಯ ರಂಗಭೂಮಿ ಕೇಂದ್ರದ ಸಂಸ್ಥಾಪಕರು ಈಕೆ. 1944ರಲ್ಲಿ ಹುಟ್ಟು ಹಾಕಲ್ಪಟ್ಟ ಈ ಕೇಂದ್ರಕ್ಕೆ ಈಕೆ ಪ್ರಥಮ ಅಧ್ಯಕ್ಷೆ. ಭಾರತೀಯ ಭಾಷೆ, ಸ್ವದೇಶಿ ಕಲೆ, ಗೀತನಾಟಕಗಳನ್ನು ಉಳಿಸಿ ಬೆಳಸಲು ಈ ಕೇಂದ್ರದಿಂದ ಹಲವಾರು ಪ್ರದರ್ಶನಗಳನ್ನು ನಡೆಸಲಾಯಿತು. ಇಂಗ್ಲೆಂಡಿನಿಂದ ಬಂದ ಭಾರತೀಯರು ಹೇಗೆ ನಡೆದುಕೊಳ್ಳುತ್ತಾರೆಂಬ ವಸ್ತುವನ್ನಿಟ್ಟುಕೊಂಡು ಹಾಸ್ಯಮಯವಾಗಿ ರಚಿಸಲ್ಪಟ್ಟ 'ರಿಟರ್ನ್ ಫ್ರಂ ಅಬ್ರಾಡ್' ಅವರಿಬ್ಬರ ಅಭಿನಯದ ಮೊದಲನೆಯ ನಾಟಕ. ಮೂರ್‍ನಾಲ್ಕು ವರ್ಷ, ಇಬ್ಬರೂ ದೇಶದ ಎಲ್ಲ ಸಾಂಸ್ಕೃತಿಕ ಕೇಂದ್ರಗಳಿಗೆ ಭೇಟಿ ಕೊಟ್ಟು, 'ತುಕಾರಾಂ' 'ಏಕನಾಥ' ಎಂಬ ನಾಟಕಗಳನ್ನೂ; ಜನಜಾಗೃತಿಯ ಉದ್ದೇಶದಿಂದ ಹಲವಾರು ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳನ್ನೊಗೊಂಡ ನಾಟಕಗಳನ್ನೂ ಬರೆದು ಆಡಿದರು. ಕಮಲಾದೇವಿಯವರು ರಂಗಸಜ್ಜಿಕೆ ಮತ್ತು ವಸ್ತ್ರಾಭರಣ ಕೆಲಸವನ್ನೂ, ಹರೀಂದ್ರನಾಥರು ಸಂಗೀತ

ಜೋಡಣೆಯನ್ನೂ ಮಾಡಿದರು. ಅನಂತರ ಹರೀಂದ್ರನಾಥರು ಬರೆದ ಎಲ್ಲ ನಾಟಕಗಳಲ್ಲಿ ಇವರಿಬ್ಬರೇ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ ಕಲಾವಿದರು.

ತಾವು ಹೋದ ಊರುಗಳಲ್ಲೆಲ್ಲ ಅಲ್ಲಿ ಆಡುವ ನಾಟಕಗಳನ್ನು, ಯಕ್ಷಗಾನಗಳನ್ನು, ನೋಡುವುದು ಕಲಾವಿದರನ್ನು ಕಾದು ಕಂಡು ಮಾತಾಡಿಸುವುದು, ಹೊಸ ಹೊಸ ವಿಧಾನಗಳನ್ನು, ತಂತ್ರಗಳನ್ನು ಬಳಸಿ, ತಮ್ಮ ನಾಟಕಗಳಲ್ಲಿ ಅಳವಡಿಸಿಕೊಂಡು ಆಡುವುದು ಕಮಲಾರವರ ಹವ್ಯಾಸ. ಅದಕ್ಕೇ ಅವರ ನಾಟಕಗಳಿಗೆ ಅವರ ಕಾಲದಲ್ಲಿ ಬಹು ಬೇಡಿಕೆ ಇತ್ತು. ಈ ಕಮಲಾದೇವಿಯವರೊಂದಿಗಿದ್ದಷ್ಟು ಅವಧಿಯಲ್ಲಿ ಹರೀಂದ್ರನಾಥರಿಂದ ನಾಟಕಗಳು ಮತ್ತು ರೂಪಕಗಳು ಹೆಚ್ಚಿನ ಸಂಖ್ಯೆಯಲ್ಲಿ ರಚನೆಗೊಂಡುವು. ಆದರೆ ಈ ಹರೀಂದ್ರನಾಥರಿಗೆ, ಹೆಣ್ಣಿನ ದುರ್ಬಲತೆ ಅತಿಯಾಗಿದ್ದುದರಿಂದ, ಸಮಸ್ಯೆಗಳು ಉಂಟಾಗಿ, ಇದ್ದ ಒಬ್ಬ ಮಗನಿಗೋಸ್ಕರ ಬಿಡುಗಡೆ ಪಡೆಯಬಾರದೆಂದು ಹಲವು ವರ್ಷಗಳ ಕಾಲ ಜೊತೆಗಿದ್ದು, ಆನಂತರ ಅನಿವಾರ್ಯವಾಗಿ ವಿಚ್ಛೇದನ ಪಡೆದರು.

ಆನಂತರವೂ ಕಮಲಾರ ರಂಗಭೂಮಿಯ ಸೇವೆ ಮುಂದುವರಿದೇ ಇತ್ತು. ಜವಾಹರಲಾಲ್ ನೆಹರೂರವರ 'ಡಿಸ್ಕವರಿ ಆಫ್ ಇಂಡಿಯಾ'ವನ್ನು ಬ್ಯಾಲೆ ರೂಪದಲ್ಲಿ ಪ್ರದರ್ಶಿಸಲು, ಕೇವಲ ಏಳು ವಾರಗಳೊಳಗೆ ಆಗಿನ ಕಾಲಕ್ಕೆ ದೊಡ್ಡ ಮೊತ್ತವೆನ್ನಬಹುದಾದ 33,000 ರೂ.ಗಳನ್ನು ಚಂದಾ ಮೂಲಕ ಸಂಗ್ರಹಿಸಿದ್ದಲ್ಲದೆ, 'ಇದು ನಾನು ಬರೆದುದಕ್ಕಿಂತ ತುಂಬ ಚೆನ್ನಾಗಿದೆ' ಎಂದು ನೆಹರೂರವರಿಂದಲೇ ವೇದಿಕೆಯ ಮೇಲೆ ಮೆಚ್ಚುಗೆ ಪಡೆಯುವ ರೀತಿಯಲ್ಲಿ ಪ್ರದರ್ಶಿಸಿದ್ದು ಅದ್ಭುತ ದಾಖಲೆ. ಬೆಂಗಳೂರಿನಲ್ಲಿ ಹರೀಂದ್ರನಾಥ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯರ ನಾಟಕಗಳು ನಡೆದರೆ ಪ್ರವೇಶ ದರ ಅತಿ ಹೆಚ್ಚಿದ್ದರೂ, ಜನರು ಬಯಸಿ ಬಂದು ಇವರ ನಾಟಕಗಳನ್ನು ನೋಡುತ್ತಿದ್ದರು.

ಕಮಲಾದೇವಿಯವರು, ರಾಷ್ಟ್ರೀಯ ನಾಟಕ ಸಂಸ್ಥೆಯ ಸಂಸ್ಥಾಪಕಿಯೂ ಕೂಡ. ಭಾರತೀಯ ರಂಗ ಮಂಟಪ (ಇಂಡಿಯನ್ ನ್ಯಾಷನಲ್ ಥಿಯೇಟರ್), 1945ರಲ್ಲಿ ಸ್ಥಾಪನೆಗೊಂಡಿದ್ದು; 1946ರಲ್ಲಿ ಯುನೆಸ್ಕೊ ಪ್ಯಾರೀಸಿನಲ್ಲಿ ಅಂತರರಾಷ್ಟ್ರೀಯ ನಾಟ್ಯರಂಗ ಸಮಿತಿಯನ್ನು (ಇಂಟರ್ ನ್ಯಾಷನಲ್ ಥಿಯೇಟರ್ ಇನ್ಸ್ಟಿಟ್ಯೂಟ್), ಸ್ಥಾಪಿಸಿದಾಗ, ಅದರ ಒಂದು ಅಂಗಸಂಸ್ಥೆಯನ್ನು ಭಾರತದಲ್ಲಿ ಸ್ಥಾಪಿಸಿದ್ದು ಕಮಲಾದೇವಿಯವರು. ಮುಂದೆ ಇದು ಭಾರತೀಯ ನಾಟ್ಯ ಸಂಘವೆಂದಾಯಿತು.

1949ರಲ್ಲಿ ಕಮಲಾ ಸ್ಥಾಪಿಸಿದ ಭಾರತೀಯ ನಾಟ್ಯ ಸಂಘ, ಸುಮಾರು ಇನ್ನೂರು ಸಮುದಾಯ ತಂಡಗಳನ್ನು ಒಳಗೊಳ್ಳುವಷ್ಟು ಅಭಿವೃದ್ಧಿಗೊಂಡಿತು. 'ನಾಟಕ ಕಲೆ ಎನ್ನುವುದು ತರಬೇತಿಯಿಂದ ಬರುವುದಲ್ಲ' ಎಂಬ ಹಲವು ವಿರೋಧಗಳ ನಡುವೆಯೂ, ದೆಹಲಿಯಲ್ಲಿ ರಾಷ್ಟ್ರೀಯ ನಾಟಕ ಶಾಲೆಯನ್ನು ಆರಂಭಿಸುವ ವಿಷಯಕ್ಕೆ ನೇತೃತ್ವ ವಹಿಸಿದವರು ಈಕೆ. ಭಾರತೀಯ ರಾಷ್ಟ್ರೀಯ ರಂಗಭೂಮಿಯಿಂದ ಗುಜರಾತಿನ ಭವಾಯಿ, ಡಂಗ್ ಆದಿವಾಸಿಗಳ ಉತ್ಸವ, ನಾಟಕೋತ್ಸವಗಳನ್ನು ಕೆಲವು ಪ್ರದೇಶಗಳಲ್ಲಿ ನಡೆಸಿ, ಕಲಾವಿದರನ್ನು ಭೇಟಿ ಕೊಟ್ಟು ಮಾತನಾಡಿದರು. 1958ರಲ್ಲಿ ಏಶಿಯಾ ದೇಶಗಳ ಸುತ್ತು ಹಾಕಿ ನಾಟ್ಯ ಪರಂಪರೆಯ ಅಧ್ಯಯನ ಕೈಗೊಂಡು, ಏಷ್ಯಾ ನಾಟ್ಯ ಸಂಸ್ಥೆಯನ್ನು ಹುಟ್ಟುಹಾಕಿದರು.

ಸಿನಿಮಾ ರಂಗ : ಹೆಣ್ಣುಮಕ್ಕಳು ಅಭಿಯಿಸಲು ಒಪ್ಪದೇ ಇದ್ದ ಕಾಲವದು. ಅವರನ್ನು ಅಭಿನಯ ಕ್ಷೇತ್ರಕ್ಕೆ ಬರುವಂತೆ ಮಾಡುವ ಉದ್ದೇಶದಿಂದ ಕಮಲಾರವರು ಎರಡು ಚಿತ್ರಗಳಲ್ಲಿ ನಟಿಸಿದರು. ಮೋಹನ್ ಭವಾನಿಯವರ 'ವಸಂತಸೇನಾ' ಮತ್ತು 'ಭಿಖರೆ ಮೋತಿ' ಅವರು ನಟಿಸಿದ ಎರಡು ಚಿತ್ರಗಳು.

ನಿರಾಶ್ರಿತರಿಗೆ ಆಶ್ರಯ : ಭಾರತ ಸ್ವತಂತ್ರವಾದ ಸಂದರ್ಭದಲ್ಲಿ, ಪಂಜಾಬ್ ಮತ್ತು ಬಂಗಾಳಗಳಿಂದ, ಮನೆ ಮಠ ಮತ್ತು ಸಾಮಾನುಗಳನ್ನೆಲ್ಲ ಬಿಟ್ಟು, ಭಾರತಕ್ಕೆ ಸಾವಿರಾರು ಜನ ಪ್ರವಾಹದಂತೆ ಹರಿದು ಬಂದಾಗ,

ಅವರುಗಳಿಗೆ ಬಟ್ಟೆ-ಬರೆ, ಊಟ-ವಸತಿ, ಆಶ್ರಯ, ಇತ್ಯಾದಿ ಒದಗಿಸುವ ಬಹು ದೊಡ್ಡ ಜವಾಬ್ದಾರಿಯನ್ನು ಕಮಲಾ ಅವರು ತೆಗದುಕೊಂಡಿದ್ದು, ಇದು ಬಹುದೊಡ್ಡ ಜವಾಬ್ದಾರಿಯ ಹಾಗೂ ಮಾನವೀಯ ಸಂಗತಿ.

ವಿವಿಧ ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಣೆ : ಅಖಿಲ ಭಾರತ ಮಹಿಳಾ ಪರಿಷತ್‌ಗೆ ಮೂರು ಬಾರಿ ವ್ಯವಸ್ಥಾಪಕ ಕಾರ್ಯದರ್ಶಿ, ಉಪಾಧ್ಯಕ್ಷೆ, ಆನಂತರ ಅಧ್ಯಕ್ಷೆ; 1979ರಲ್ಲಿ ಸಂಗೀತ ನಾಟಕ ಅಕಡೆಮಿಯ ಮೊದಲ ಉಪಾಧ್ಯಕ್ಷೆ; ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್‌ಗೆ ಉಪಾಧ್ಯಕ್ಷೆ; ನ್ಯಾಷನಲ್ ಸೆಂಟರ್ ಫಾರ್ ಕಲ್ಚರಲ್ ರಿಸೋರ್ಸಸ್ ಅಂಡ್ ಟ್ರೇನಿಂಗ್‌ಗೆ ಅಧ್ಯಕ್ಷೆ (ಸಭಾಪತಿ); ಅಂತರರಾಷ್ಟ್ರೀಯ ಪಪ್ಪೆಟ್ ಥಿಯೇಟರಿನ ಉಪಾಧ್ಯಕ್ಷೆ; ಅಂತರರಾಷ್ಟ್ರೀಯ ರಂಗಭೂಮಿ ಸಂಸ್ಥೆಯ ಭಾರತ ರಾಷ್ಟ್ರೀಯ ರಂಗಭೂಮಿ ಕೇಂದ್ರದ ಸಂಸ್ಥಾಪಕಿ; 1944ರಲ್ಲಿ ಹುಟ್ಟುಹಾಕಲ್ಪಟ್ಟ ಈ ಕೇಂದ್ರಕ್ಕೆ ಪ್ರಥಮ ಅಧ್ಯಕ್ಷೆ; ರಾಷ್ಟ್ರೀಯ ನಾಟಕ ಸಂಸ್ಥೆಯ ಸಂಸ್ಥಾಪಕಿ; ಅಖಿಲ ಭಾರತ ಕರಕುಶಲ ಮಂಡಳಿಗೆ ಪ್ರಥಮ ಅಧ್ಯಕ್ಷೆ; ದೆಹಲಿಯಲ್ಲಿ ರಾಷ್ಟ್ರೀಯ ನಾಟಕ ಶಾಲೆಯನ್ನು ಆರಂಭಿಸುವುದಕ್ಕೆ ನೇತೃತ್ವ ವಹಿಸಿದ ಮಹಿಳೆ ವರ್ಲ್ಡ್ ಕ್ರಾಫ್ಟ್ಸ್ ಕೌನ್ಸಿಲ್‌ನ ಉಪಾಧ್ಯಕ್ಷೆ ಮತ್ತು ಮುಖ್ಯ ಶಿಲ್ಪಿಗಳಲ್ಲಿ ಒಬ್ಬರು; ಹೀಗೇ ಹೇಳುತ್ತ ಹೋದರೆ ಪುಟಗಟ್ಟಲೆಯಾಗುತ್ತದೆ, ಸಮಿತಿ-ಸಂಸ್ಥೆಗಳ ಅವರ ಪದಾಧಿಕಾರದ ವಿವರಗಳು. ಭಾರತದ ಇತಿಹಾಸದಲ್ಲಿ ವಿಧಾನ ಸಭೆಯ ಚುನಾವಣೆಯ ಕಣಕ್ಕಿಳಿದ (1926) ಪ್ರಥಮ ಮಹಿಳಾ ಪ್ರತಿನಿಧಿ ಕಮಲಾದೇವಿ ಚಟ್ಟೋಪಾಧ್ಯಾಯರು.

ಸ್ವಾತಂತ್ರ್ಯ ಹೋರಾಟ : ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಹಲವು ವಿಧದಲ್ಲಿ ಕೆಲಸ ಮಾಡಿದ್ದರು ಕಮಲಾ. 1930ರಲ್ಲಿ, ಉಪ್ಪಿನ ಸತ್ಯಾಗ್ರಹ ಆರಂಭಿಸಿದಾಗ, ಗಾಂಧೀಜಿಯವರು ತಂಗಿದ್ದ ಹಳ್ಳಿಗೆ ಭೇಟಿ ನೀಡಿ "ಭಾರತೀಯ ಮಹಿಳೆಯರ ಬಂಧ ವಿಮೋಚನೆಗೊಂದು ಶ್ರೇಷ್ಠ ಅವಕಾಶವಿದು. ಇದರಲ್ಲಿ ಹೆಂಗಸರನ್ನೂ ಸೇರಿಸಿಕೊಳ್ಳಿ" ಎಂದು ಸಲಹೆ ನೀಡಿದ ಕಮಲಾದೇವಿ, ಗಾಂಧೀಜಿ ನಿರಾಕರಿಸಿದರೂ ಪಟ್ಟುಬಿಡದೆ, ಅವರ ಅನುಮತಿ ಪಡೆದರು. ಘಟಕದ ಮುಂದಾಳತ್ವ ವಹಿಸಿದ ಇಬ್ಬರು ಮಹಿಳೆಯರಲ್ಲಿ ಇವರೂ ಒಬ್ಬರಾಗಿ, ಮಧ್ಯಮ ಮತ್ತು ಕೆಳವರ್ಗದ ಸಾವಿರಾರು ಮಹಿಳೆಯರನ್ನು ಒಂದುಗೂಡಿಸಿದರು. ಮಾನವ ಪ್ರವಾಹದಂತಿದ್ದ ಮಹಿಳೆಯರು, ಮುಂಬಯಿಯ ಚೌಪಾಟಿಯ ಸಮುದ್ರ ತೀರವನ್ನು ತುಂಬಿ, ನೀರನ್ನು ಕುದಿಸಿ ಉಪ್ಪು ತಯಾರಿಸುವ ಮೂಲಕ ಬ್ರಿಟಿಷರು ಹೊರಡಿಸಿದ ಉಪ್ಪಿನ ಕಾಯಿದೆಯನ್ನು ಧಿಕ್ಕರಿಸಿದ್ದರು. ಹೀಗೆ ಉಪ್ಪಿನ ಸತ್ಯಾಗ್ರಹದ ಮೂಲಕ ಸಾವಿರಾರು ಮಹಿಳೆಯರನ್ನು ಹೊರಕರೆತಂದು ಒಂದುಗೂಡಿಸಿದ ಹಿರಿಮೆ ಕಮಲಾದೇವಿ ಅವರದು.

ರಾಜಕೀಯ ರಂಗ : ಭಾರತದ ಇತಿಹಾಸದಲ್ಲಿ ವಿಧಾನಸಭೆಯ ಚುನಾವಣೆಯ ಕಣಕ್ಕಿಳಿದ ಪ್ರಥಮ ಮಹಿಳಾ ಪ್ರತಿನಿಧಿ, ಕಮಲಾದೇವಿ ಚಟ್ಟೋಪಾಧ್ಯಾಯರು. 1926ರಲ್ಲಿ ಅಖಿಲ ಭಾರತ ಮಹಿಳಾ ಪರಿಷತ್ತಿನ ಆಂದೋಲನದ ಕಾರಣ ಮಹಿಳೆಯರಿಗೆ ವಿಧಾನಸಭೆಯಲ್ಲಿ ಸದಸ್ಯತ್ವದ ಅಧಿಕಾರ ಲಭಿಸಿದಾಗ, ಮಾರ್ಗರೆಟ್ ಕಸಿನ್ಸ್‌ರ ಒತ್ತಾಯರ ಮೇರೆಗೆ ಸ್ಪರ್ಧೆಗಿಳಿದು, ಕೇವಲ ಐವತ್ತೊಂದು ಮತಗಳಿಂದ ಸೋತರು. 1927ರಲ್ಲಿ ಅಖಿಲ ಮಹಿಳಾ ಪರಿಷತ್ತಿನ ವ್ಯವಸ್ಥಾಪಕ ಕಾರ್ಯದರ್ಶಿಯ ಹೊಣೆ ಹೊತ್ತು ಮಹಿಳೆಯರ ಕೌಟುಂಬಿಕ ಬದುಕಿನಿಂದ ಹಿಡಿದು, ರಾಜಕೀಯ, ಶಿಕ್ಷಣ ಮತ್ತಿತರ ವಿಚಾರಗಳವರೆಗೆ, ಮಹಿಳೆಗೆ ಅಗತ್ಯವಾದ ರಕ್ಷಣೆ, ಸಿಗಬೇಕಾದ ಅವಕಾಶಗಳಿಗಾಗಿ ಹೋರಾಡಿದರು.

ಕಮಲಾರವರಿಗೆ, ಸ್ವಾತಂತ್ರ್ಯಾನಂತರ, ಒರಿಸ್ಸಾ ಮತ್ತು ತಮಿಳುನಾಡಿನ ರಾಜ್ಯಪಾಲೆಯಾಗಲು; ಕೈರೊ ಅಥವಾ ಮಾಸ್ಕೋಗೆ ರಾಯಭಾರಿಯಾಗಲು; ಭಾರತದ ಉಪ ರಾಷ್ಟ್ರಪತಿಯಾಗಲು; ಹೀಗೇ ಹಲವು ಉನ್ನತ ಸ್ಥಾನಗಳಿಗೆ ಆಹ್ವಾನ ಬಂದರೂ ಅಧಿಕಾರಗಳ ಆಸೆಗೆ ಒಳಪಡದೆ ಎಲ್ಲವನ್ನೂ ತಿರಸ್ಕರಿಸಿದರು. "ಕಮಲಾರನ್ನು ಒಪ್ಪಿಸಲು ಸಾಧ್ಯವಾದರೆ ಪ್ರಯತ್ನಿಸಿ ನೋಡಿ" ಎಂದು ತಮ್ಮ ಬಳಿ ಬಂದವರಿಗೆ ನೆಹರೂ ಹೇಳಿಕಳಿಸಿದ್ದರಂತೆ.

ರಾಜಕೀಯ ಕ್ಷೇತ್ರವನ್ನು ಬಿಟ್ಟುಬಿಡಲು ಧೃಢ ನಿಶ್ಚಯಮಾಡಿದ್ದ, ಕೇವಲ ನಲವತ್ತನಾಲ್ಕು ವರ್ಷದ ಕಮಲಾ, ತಮ್ಮ ಸೇವಾ ಕಾರ್ಯಗಳನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ಬದಲಿಸಿದರು.

ಸನ್ಮಾನ ಮತ್ತು ಪ್ರಶಸ್ತಿಗಳು : ಕಮಲಾದೇವಿಯವರ ಸೇವೆ ಸಾಧನೆಗಳಿಗೆ ದೊರಕಿದ ಸನ್ಮಾನ ಪ್ರಶಸ್ತಿಗಳು ಅಸಂಖ್ಯಾತ. ಅವುಗಳಲ್ಲಿ ಪದ್ಮಭೂಷಣ ಪ್ರಶಸ್ತಿ (1955); ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಗೌರವ ಡಿ.ಲಿಟ್; ಇವರ ಬರವಣಿಗೆಯ ಸಾಧನೆಯನ್ನು ಗುರುತಿಸಿ, 1986ರಲ್ಲಿ, ನೀಡಲಾದ ಭಾರತದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಎರಡನೆಯದಾದ 'ಪದ್ಮವಿಭೂಷಣ' ಪ್ರಶಸ್ತಿ; ಸಾಮಾಜಿಕ ಧುರೀಣತೆಗಾಗಿ 1962ರಲ್ಲಿ ಪಡೆದ ವಾಟ್ಟುಮಲ್ ಪ್ರಶಸ್ತಿ; ಕಲಾಕಾರರು ಮಾಡಿದ ಸೇವೆಗಾಗಿ, 1966ರಲ್ಲಿ ಫಿಲಿಪೈನ್ಸ್‌ನ ರಾಷ್ಟ್ರಪತಿಯ ಹೆಸರಿನಲ್ಲಿರುವ ರೇಮನ್ ಮ್ಯಾಗ್ಸೆಸೆ ಪ್ರಶಸ್ತಿ; ಕರಕುಶಲ ವೃತ್ತಿಯ ಪುನರ್ಜೀವನಗೊಳಿಸಿದ ಇವರ ಸಾಧನೆಗಾಗಿ, 1977ರಲ್ಲಿ, ನೀಡಿ ಗೌರವಿಸಿದ ಯುನೆಸ್ಕೊ ಪ್ರಶಸ್ತಿ; ಸಾಂಸ್ಕೃತಿಕ ಕುಲಕಸಬುಗಳ ಉಳಿವಿಗಾಗಿ ಮತ್ತು ದೇಶ ಸ್ವಾತಂತ್ರ್ಯಕ್ಕಾಗಿ ಸಲ್ಲಿಸಿದ ಸೇವೆಯನ್ನು ಗಮನಿಸಿ, 1970ರಲ್ಲಿ ರವೀಂದ್ರನಾಥ ಠಾಗೂರರು ಸ್ಥಾಪಿಸಿದ ಶಾಂತಿನಿಕೇತನದ ವಿಶ್ವಭಾರತಿ ವಿಶ್ವವಿದ್ಯಾಲಯದಿಂದ ಪ್ರದತ್ತವಾದ 'ದೇಶಿಕೋತ್ತಮಾ' ಅತುನ್ನತ ಪ್ರತಿಷ್ಠಿತ ಪ್ರಶಸ್ತಿಗಳು.

ವಿವಿಧ ಕ್ಷೇತ್ರಗಳಲ್ಲಿ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೃತ್ಪೂರ್ವಕ ಸೇವೆ ಸಲ್ಲಿಸಿದ ಕರ್ನಾಟಕದ ಕನ್ನಡತಿ ಕಮಲಾದೇವಿಯವರ ಬಾಹ್ಯ ದೇಹ, ಲೋಕದ ಕಣ್ಣಿಂದ ಮರೆಯಾಗಿದ್ದು 1988ರ ಅಕ್ಟೋಬರ್ ಇಪ್ಪತ್ತೊಂಬತ್ತರಂದು. ಅವರ ಅಂತರಾತ್ಮದ ಚೈತನ್ಯ ಒಂದು ದೊಡ್ಡ ಶಕ್ತಿಯಾಗಿ ಇಂದಿಗೂ ಭಾರತೀಯರೆಲ್ಲರ ಮನಗಳಲ್ಲಿ ಮನೆ ಮಾಡಿಕೊಂಡಿದೆ.

*

ಅಭಿನಯ ವಿಶಾರದೆ ಮಳವಳ್ಳಿ ಸುಂದರಮ್ಮ

ಶ್ರೀವತ್ಸ

ಕನ್ನಡ ನಾಡಿನಲ್ಲಿ 1880ರ ಸುಮಾರಿಗೆ ಕೆಲವಾರು ವೃತ್ತಿ ನಾಟಕ ಸಂಸ್ಥೆಗಳು ಪ್ರಾರಂಭವಾದವು. ಕೆಲವು ಹುಟ್ಟಿನ ಬಾಲಗ್ರಹ ಪೀಡಿಗೆ ಒಳಗಾಗಿ ಕಣ್ಮುಚ್ಚಿದ್ದವು. 1920ರವರೆಗೆ ಕನ್ನಡ ರಂಗಭೂಮಿಗೆ ಸ್ತ್ರೀಯರ ಪ್ರವೇಶವಿರಲಿಲ್ಲ. ಬೋಧರಾಯರು, ಆರ್. ನಾಗೇಂದ್ರರಾಯರು, ಸುಬ್ಬಯ್ಯ ನಾಯ್ಡು, ತುಮಕೂರಿನ ಸೀತಪ್ಪ ಮೊದಲಾದವರು ಹದಿನೆಂಟು ಮೊಳದ ಸೀರೆಯನ್ನುಟ್ಟು ಬಿಂಕ, ವೈಯ್ಯಾರ, ಬೆಡಗು–ಬಿನ್ನಾಣಗಳನ್ನು ಹೊರಹೊಮ್ಮಿಸುವ ಅಂದಗಾತಿಯರ ಪಾತ್ರಗಳನ್ನು ನಿರ್ವಹಿಸುತ್ತಾ, ಕಲಾಭಿಮಾನಿಗಳ ಮನಸ್ಸನ್ನು ಸೆಳೆಯುತ್ತಿದ್ದರು.

ಕನ್ನಡ ರಂಗಭೂಮಿಯ ಮೇಲೆ ಸ್ತ್ರೀ ಪಾತ್ರಧಾರಿಗಳಿಲ್ಲವೆಂಬ ಕೊರಗು ಕಳೆಯಲು ಮೊದಲ ಬಾರಿಗೆ ಕನ್ನಡ ರಂಗಭೂಮಿಯನ್ನೇರಿ ತಮ್ಮ ಸಹಜ ಪ್ರತಿಭೆಯಿಂದ ಇಡೀ ದಕ್ಷಿಣ ಭಾರತದಲ್ಲಿ ಖ್ಯಾತಿಗಳಿಸಿದವರು ಮಳವಳ್ಳಿ ಸುಂದರಮ್ಮ ಅವರು. ಎಂತಹ ಸಾಹಸಿ ಗಂಡೆದೆಯವರನ್ನು ನಡುಗಿಸಬಲ್ಲ ವೃತ್ತಿರಂಗಭೂಮಿಯ ನಿರ್ವಹಣೆಯನ್ನು ನಾಲ್ಕು ದಶಕಗಳ ಕಾಲ 'ಚಾಮುಂಡೇಶ್ವರಿ ನಾಟಕ ಕಂಪನಿ'ಯ ಮೂಲಕ ಅಚ್ಚುಕಟ್ಟಾಗಿ ನೆರವೇರಿಸಿದ ಮಳವಳ್ಳಿ ಸುಂದರಮ್ಮ ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ದಾಖಲೆ ನಿರ್ಮಿಸಿದ್ದಾರೆ. ಕನ್ನಡ ವೃತ್ತಿರಂಗಭೂಮಿಗೆ ಮೆರುಗನ್ನು ತಂದುಕೊಟ್ಟ ಅತ್ಯಂತ ಪ್ರತಿಭಾನ್ವಿತ ಕಲಾವಿದರಲ್ಲಿ ಮಳವಳ್ಳಿ ಸುಂದರಮ್ಮ ಅತ್ಯಂತ ಪ್ರಮುಖರು. ತಮ್ಮ ಗಾಯನ, ಅಭಿನಯ ಹಾಗೂ ಸೌಂದರ್ಯದಿಂದ ಸಹಸ್ರಾರು ಅಭಿಮಾನಿಗಳನ್ನು ಹೊಂದಿದ್ದ ಅಭಿನಯವಿಶಾರದೆ ಅವರು.

"ತಾವು ಅರವತ್ತು ವರ್ಷಗಳಿಂದಲೂ ಕನ್ನಡ ರಂಗಭೂಮಿಯಲ್ಲಿ ತಮ್ಮ ಅಮೋಘವಾದ ಹಾಡುಗಾರಿಕೆಯಿಂದ, ಅಭಿನಯ ಕೌಶಲ್ಯದಿಂದ ಕನ್ನಡ ರಂಗಕಲೆಯ ಸೇವೆಗೈದಿದ್ದೀರಿ, ಕನ್ನಡಿಗರ ಪ್ರೀತಿ–ಗೌರವ ವಿಶ್ವಾಸಗಳಿಗೆ ಪಾತ್ರರಾಗಿದ್ದೀರಿ, ಕನ್ನಡಿಗರ ಹೃದಯ ಸಿಂಹಾಸನದಲ್ಲಿ ಚಿರಸ್ಥಾಯಿ ಸ್ಥಾನ ಪಡೆದಿದ್ದೀರಿ" ಎಂದು ಅನೇಕ ಸನ್ಮಾನ ಪತ್ರಗಳ ಮೂಲಕ ಕಲಾರಸಿಕರು ಅವರನ್ನು ಪ್ರಶಂಸೆ ಮಾಡಿದ್ದಾರೆ.

ಮಳವಳ್ಳಿ ಸುಂದರಮ್ಮ ಅವರು 12ನೇ ಸೆಪ್ಟಂಬರ್ 1905ರಲ್ಲಿ ಮೈಸೂರಿನಲ್ಲಿ ಜನಿಸಿದರು. ಅವರ ತಂದೆ ಮಳವಳ್ಳಿ ಸುಬ್ಬಣ್ಣ, ತಾಯಿ ಲಕ್ಷ್ಮಿದೇವಮ್ಮ, ಅಕ್ಕ ಪಾರ್ವತಮ್ಮ, ಅಣ್ಣ ಪುಟ್ಟಮಲ್ಲಪ್ಪ. ಮಳವಳ್ಳಿ ಸುಬ್ಬಣ್ಣರವರು ಕಲೋಪಾಸಕರು, ಖ್ಯಾತ ಪಿಟೀಲು ವಾದಕರು. ಮಹಮ್ಮದ್ ಪೀರ್, ಎಂ.ಎನ್. ಗಂಗಾಧರರಾವ್, ಆರ್.ನಾಗೇಂದ್ರರಾಯರು, ಎಂ. ಸುಬ್ಬರಾವ್, ಎಂ.ವಿ. ಸುಬ್ಬಯ್ಯ ನಾಯ್ಡು, ಬಿ. ಜಯಮ್ಮ ಇವರುಗಳಿಗೆ ಸಂಗೀತ ಹೇಳಿಕೊಟ್ಟವರೇ ಮಳವಳ್ಳಿ ಸುಬ್ಬಣ್ಣರವರು. ಸಹಜವಾಗಿ ತಮ್ಮ ಮಗಳು ಮಳವಳ್ಳಿ ಸುಂದರಮ್ಮ ಅವರಿಗೆ ಅವರೇ ಗುರುವಾದರು. ಸುಂದರಮ್ಮ ಅವರಲ್ಲಿದ್ದ ದೈವದತ್ತ ಸಂಗೀತ ಪ್ರತಿಭೆಯನ್ನು ಗುರುತಿಸಿದ ಸುಬ್ಬಣ್ಣರವರು 'ನೋಡಮ್ಮಾ ನಿನಗೆ ದೈವದತ್ತವಾದ ಕಂಠಶ್ರೀ ಇದೆ. ನಾನಾದರೂ ಸಾಕಷ್ಟು ತರಬೇತಿ ಕೊಟ್ಟಿದ್ದೇನೆ. ಆದರೆ, ನೀನು ತೃಪ್ತಿಪಡಬೇಡ.

ಸಂಗೀತವೇ ನಿನ್ನ ಬಾಳಿನ ತಾರಕಮಂತ್ರವಾಗಲಿ. ಸಾಧನೆಯ ಮೂಲಕ ನೀನು ಮತ್ತಷ್ಟು ಎತ್ತರಕ್ಕೇರು' ಎಂದು ಕಿವಿಮಾತು ಹೇಳಿದ್ದರು.

ಮಳವಳ್ಳಿ ಸುಂದರಮ್ಮರವರು ತಮ್ಮ ಏಳನೇ ವಯಸ್ಸಿನಲ್ಲಿ 'ಶ್ರೀ ಕೃಷ್ಣ ವಿಲಾಸ ನಾಟಕ ಸಭಾ' ವೃತ್ತಿ ನಾಟಕ ಕಂಪನಿಯ ಮೂಲಕ ಬಾಲನಟರಾಗಿ ರಂಗಭೂಮಿಯನ್ನು ಪ್ರವೇಶಿಸಿದರು. ಕಲಾವತಿ ಪರಿಣಯ, ಪಾಂಡು ವಿಜಯ, ಸದಾರಮೆ, ಗುಲೇಬ ಕಾವಲಿ, ಚೋರಕತೆ, ಸಾರಂಗಧರ ಹಾಗೂ ವಸಂತ ಮಿತ್ರ ವಿಜಯ, ಮೊದಲಾದ ಸಂಗೀತ ಪ್ರಧಾನ ನಾಟಕಗಳ ಮೂಲಕ ಅವರ ರಂಗಭೂಮಿ ಪ್ರವೇಶವಾಯಿತು. ಆಗ ವಿದ್ಯುತ್ ಅಥವಾ ಧ್ವನಿವರ್ಧಕಗಳಿರಲಿಲ್ಲ. ರಂಗಭೂಮಿಯ ನಟರು ಕೇವಲ ತನ್ನ ಶಾರೀರದಿಂದಲೇ ನಾಟಕ ಮಂದಿರದಲ್ಲಿದ್ದ ಕೊನೆಯ ಪ್ರೇಕ್ಷಕನನ್ನು ಮುಟ್ಟಬೇಕಾಗಿತ್ತು. 1914ರಲ್ಲಿ ಸುಂದರಮ್ಮ ಅವರು 'ಸೀತಪ್ಪ ಕಂಪನಿ'ಯಲ್ಲಿ ನಟಿಯಾಗಿ ಅಭಿನಯಿಸುತ್ತಿದ್ದರು. ಸ್ವತಃ ಸೀತಪ್ಪರವರು ಆ ಕಾಲದ ಪ್ರಸಿದ್ಧ ಸ್ತ್ರೀ ಪಾತ್ರದ ಕಲಾವಿದರಾಗಿದ್ದರು.

ಮಳವಳ್ಳಿ ಸುಂದರಮ್ಮರವರ ತಂದೆ ಸುಬ್ಬಣ್ಣರವರು ಹಾಗೂ ಅಣ್ಣ ಪುಟ್ಟಮಲ್ಲಪ್ಪನವರುಗಳೇ 1920–21ರ ಅವಧಿಯಲ್ಲಿ 'ಶ್ರೀ ಸಾಮ್ರಾಜ್ಯ ಲಕ್ಷ್ಮಿ ನಾಟಕ ಸಭಾ' ಎಂಬ ವೃತ್ತಿ ನಾಟಕ ಭೂಮಿಯನ್ನು ಸ್ಥಾಪಿಸಿದರು. ಅದರಲ್ಲಿ ಮಳವಳ್ಳಿ ಸುಂದರಮ್ಮರವರು ಸುಭದ್ರ, ದ್ರೌಪದಿ, ಗುಲೇಬ ಕಾವಲಿ, ಚೂಡಾಮಣಿ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಒಮ್ಮೆ ಈ ಕಂಪನಿ ಬಳ್ಳಾರಿಯಲ್ಲಿ ನಾಟಕವಾಡುತ್ತಿತ್ತು, ಒಂದು ನಾಟಕಕ್ಕೆ ಅಂದಿನ ಪ್ರಸಿದ್ಧ ವೃತ್ತಿ ರಂಗಭೂಮಿಯ ಕಲಾವಿದರಾಗಿದ್ದ ಬಳ್ಳಾರಿ ರಾಘವರವರು ಆಗಮಿಸಿ, ನಾಟಕವನ್ನು ವೀಕ್ಷಿಸಿ ಮಳವಳ್ಳಿ ಸುಂದರಮ್ಮನವರ ದ್ರೌಪದಿ ಪಾತ್ರದ ಅಭಿನಯ ಹಾಗೂ ಹಾಡುಗಾರಿಕೆಯನ್ನು ಗಮನಿಸಿ 'ಇದು ರಂಗಭೂಮಿಯ ಅನರ್ಘ್ಯ ರತ್ನ' ಎಂದು ಹೊಗಳಿ ಆಕೆಗೆ ಪುಷ್ಪಮಾಲೆ ಅರ್ಪಿಸಿ, ಸಂತೋಷಪಟ್ಟಿದ್ದರು.

ಮಳವಳ್ಳಿ ಸುಂದರಮ್ಮರವರು ಸುಭದ್ರ ಕಲ್ಯಾಣ ನಾಟಕದಲ್ಲಿ ಸುಭದ್ರೆಯ ಪಾತ್ರವನ್ನು ಅಭಿನಯಿಸುತ್ತಿದ್ದ ರೀತಿಯ ಬಗ್ಗೆ ಅರಮನೆಗೆ ಕೂಡ ಸುದ್ದಿ ಮುಟ್ಟಿತು. ಮೈಸೂರು ಸಂಸ್ಥಾನದ ಆಳರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಜಗನ್ಮೋಹನ ಪ್ಯಾಲೇಸ್‌ನಲ್ಲಿ ಈ ನಾಟಕ ಆಡುವಂತೆ ಆಹ್ವಾನ ಕೊಟ್ಟರು. ಅರಮನೆಯಲ್ಲಿ ನಡೆದ ಈ ನಾಟಕಕ್ಕೆ ಮಹಾರಾಜರು ಅವರ ಪರಿವಾರವಲ್ಲದೆ ದಕ್ಷಿಣಭಾರತದ ಘನ ಸಂಗೀತ ವಿದ್ವಾಂಸರಾದ ಬಿಡಾರಂ ಕೃಷ್ಣಪ್ಪ, ವೀಣೆ ಶೇಷಣ್ಣ, ಪಿಟೀಲು ಚೌಡಯ್ಯರವರುಗಳು ಆಗಮಿಸಿದ್ದರು. ಸ್ವತಃ ಮಹಾರಾಜರು ಮಳವಳ್ಳಿ ಸುಂದರಮ್ಮರವರ ತಂದೆಯವರಿಗೆ 'ನಿಮ್ಮಗಳ ವಿದ್ವತ್ಪೂರ್ಣ ರಂಗಕಛೇರಿ ನಮಗೆ ಆನಂದ ತಂದಿದೆ' ಎಂದಿದ್ದರು. ಅಷ್ಟೇಅಲ್ಲ ನಮ್ಮ ಸಮ್ಮರ್ ಪ್ಯಾಲೇಸ್‌ನಲ್ಲಿ ಸುಂದರಮ್ಮನವರ ಸಂಗೀತ ಕಛೇರಿ ಏರ್ಪಾಡಾಗಲಿ ಎಂದು ಸೂಚನೆ ಕೊಟ್ಟರು. ಆಗ ಆಕೆಗೆ ಕೇವಲ ಹದಿನೆಂಟು ವರ್ಷ. ತಂದೆಯ ಧೈರ್ಯದ ನುಡಿ ಹಾಗೂ ತಮ್ಮ ಅಭಿಜಾತ ಸಂಗೀತ ಪ್ರತಿಭೆಯಿಂದ ಮಹಾರಾಜರ ಸಮ್ಮುಖದಲ್ಲಿ ಯಶಸ್ವಿಯಾಗಿ ಸಂಗೀತ ಕಛೇರಿ ನಡೆಸಿಕೊಟ್ಟರು. ಮಹಾರಾಜರು 1,500 ರೂ. ನಗದು ಬಹುಮಾನ, ಜೋಡಿ ಶಾಲು ಹಾಗೂ ಬಂಗಾರದ ಪದಕ ನೀಡಿ ಗೌರವಿಸಿದರು. ಇದು ಆ ಕಾಲದಲ್ಲಿ ಮಹಿಳೆಯೊಬ್ಬರಿಗೆ ಸಂದ ಶ್ರೇಷ್ಠ ಪುರಸ್ಕಾರವಾಗಿದೆ.

ಇವರ ಕಂಪನಿ ಮೈಸೂರಿನಲ್ಲಿ 'ಸುಭದ್ರ ಪರಿಣಯ' ನಾಟಕ ಅಭಿನಯಿಸುತ್ತದ್ದಾಗ 'ಕನ್ನಡಕ್ಕೊಬ್ಬನೆ ಕೈಲಾಸಂ' ಬಿರುದಾಂಕಿತರಾಗಿದ್ದ ಟಿ. ಪಿ. ಕೈಲಾಸಂರವರು ಇವರ ನಾಟಕಕ್ಕೆ ಆಸಕ್ತಿಪೂರ್ಣವಾಗಿ ಬಂದು ಸುಂದರಮ್ಮನವರ ಹಾಡುಗಾರಿಕೆ ಹಾಗೂ ಅಭಿನಯ ಮೆಚ್ಚಿ ಇವರ ಹಾಡೊಂದಕ್ಕೆ 'ಒನ್ಸ್‌ಮೋರ್' ಎಂದು ಮೂರುಸಾರಿ ಕಿರುಚಿ ಪ್ರೇಕ್ಷಕರಿಂದ ಬೈಸಿಕೊಂಡ ಘಟನೆ ಉಲ್ಲೇಖಾರ್ಹವಾದುದು. ಆ ನಂತರ ನಾಟಕ ಕಂಪನಿಯ ಮಾಲೀಕರು ಕೈಲಾಸಂರವರನ್ನು ಗುರುತಿಸಿ, ಅವರನ್ನು ರಂಗಭೂಮಿಗೆ ಕರೆಸಿ ಮಳವಳ್ಳಿ ಸುಂದರಮ್ಮನವರ ಬಗ್ಗೆ ಕೆಲವು ಮಾತುಗಳನ್ನಾಡಿಸಿದ್ದು ಇದೆ.

ಮಹಾವಿದುಷಿ, ವಿದ್ಯಾಸುಂದರಿ, ಗಾನಕಲಾವಿಶಾರದೆ ಎಂದೆಲ್ಲಾ ಖ್ಯಾತರಾಗಿದ್ದ ಬೆಂಗಳೂರಿನ ನಾಗರತ್ನಮ್ಮನವರು ಮಳವಳ್ಳಿ ಸುಂದರಮ್ಮರವರ ಸುಭದ್ರೆ, ದ್ರೌಪದಿ, ತಿಲೋತ್ತಮೆ ಹಾಗೂ ಅಂಬೆ ಪಾತ್ರಗಳನ್ನು ಮುಕ್ತಕಂಠದಿಂದ ಪ್ರಶಂಸಿದ್ದಾರೆ. ನಾಟಕ ರತ್ನ ಜಿ. ಹೆಚ್. ವೀರಣ್ಣರವರು ಸ್ವತ: ಇವರ ನಾಟಕಕ್ಕೆ ಬಂದು ನಾಟಕ ನೋಡಿ ಆನಂದಿಸಿ 'ಸಂಗೀತಾಭಿನಯ ನಿನಗೆ ಒಲಿದಿದೆಯಮ್ಮ! ಸರಸ್ವತಿ ನಿನಗೆ ಪ್ರಸನ್ನಳಾಗಿದ್ದಾಳೆ. ನೀನು ಹಾಡುತ್ತಿದ್ದರೆ ಆ ಮಹಾತಾಯಿ ಸಂಗೀತ ಶಾರದೆಯೇ ಹಾಡುತ್ತಿದ್ದಾಳೆಂದು ಭಾಸವಾಗುತ್ತದೆ' ಎಂದಿದ್ದರು. ಬೇರೆ ಕಂಪನಿಯ ಮಾಲೀಕರು ಅದರಲ್ಲೂ ಶ್ರೇಷ್ಠ ನಟರಾದ ಗುಬ್ಬಿ ವೀರಣ್ಣನವರಿಂದ ಇಂತಹ ಪ್ರಶಂಸೆ ಪಡೆಯುವುದು ಅಷ್ಟು ಸುಲಭದ ಮಾತಾಗಿರಲಿಲ್ಲ.

1924ರಲ್ಲಿ ಮದರಾಸಿನ ಹೆಸರಾಂತ ಧ್ವನಿಮುದ್ರಕ ಸಂಸ್ಥೆ 'ಓಡಿಯನ್' ಕಂಪನಿ ಮಳವಳ್ಳಿ ಸುಂದರಮ್ಮರವರ ಪ್ರಸಿದ್ಧ ರಂಗಗೀತೆಗಳನ್ನು ಧ್ವನಿ ಮುದ್ರಿಸಿಕೊಂಡಿತು. ' ಮಾರನೋ ಈ ಮೋಹನಾಂಗ' (ಕಾಳಿದಾಸ), 'ಪ್ರಾಣೇಶನೇ ಬೇಡಿಕೊಂಬೆನು ಪೋಗಬೇಡವೋ' (ಮನ್ಮಥ ವಿಜಯ), 'ತಾಪ ಏನಾಂತೂ' (ಸುಭದ್ರ ಕಲ್ಯಾಣ), 'ಮನೋ ವಿನೋದಕ್ಕೀಗ' (ಕಬೀರ್), ಮೊದಲಾದ ಗೀತೆಗಳು ಆ ಕಾಲದಲ್ಲಿ ತುಂಬಾ ಜನಪ್ರಿಯವಾಗಿದ್ದವು.

1926ರಲ್ಲಿ ಬೆಂಗಳೂರಿನ ಗಾಯನ ಸಮಾಜಲ್ಲಿ ಮಳವಳ್ಳಿ ಸುಂದರಮ್ಮನವರು ಮೊದಲ ಸಂಗೀತ ಕಛೇರಿಯನ್ನು ಕೊಟ್ಟರು. ಬಿಡಾರಂ ಕೃಷ್ಣಪ್ಪನವರ ಆಹ್ವಾನದ ಮೇಲೆ ಮೈಸೂರಿನ ಶ್ರೀರಾಮಮಂದಿರದಲ್ಲಿ ಇವರ ಸಂಗೀತ ಕಛೇರಿ ಏರ್ಪಾಟಾಯಿತು. ಇವರ ಕೀರ್ತಿ ಕೇಳಿ ವೀಣೆ ಶೇಷಣ್ಣರವರು ತಮ್ಮ ಮನೆಗೆ ಇವರನ್ನು ಕರೆಸಿಕೊಂಡು ಇವರಿಂದ ಹಾಡಿಸಿ, ಹರ್ಷ ಪಟ್ಟಿದ್ದರು. ಇವರ ಸಂಗೀತದ ಖ್ಯಾತಿ ಮದ್ರಾಸ್ ತನಕ ಹರಡಿತು. ಅಲ್ಲಿನ ಸಂಗೀತ ಸಮಾಜದವರು 'ಸೌಂದರ್ಯ ಮಹಲ್'ನಲ್ಲಿ ಮಳವಳ್ಳಿ ಸುಂದರಮ್ಮನವರ ಸಂಗೀತ ಕಛೇರಿ ಏರ್ಪಡಿಸಿದ್ದರು. ಡಾ. ಯು. ರಾಮರಾವ್, ದಿವಾನ್ ಬಹದ್ದೂರ್ ಶೆಲ್ಲ ಗುರುಸ್ವಾಮಿಶೆಟ್ಟಿ, ಸಾಮಿ ವೆಂಕಟಾಚಲಶೆಟ್ಟಿ ಹಾಗೂ ಎಸ್. ಸತ್ಯಮೂರ್ತಿ ಮೊದಲಾದವರು ಈ ಕಛೇರಿಗೆ ಆಗಮಿಸಿದ್ದರು. ಮದ್ರಾಸ್‌ನ ಪ್ರಮುಖ ಪತ್ರಿಕೆ 'ಇಂತಹ ಸಂಗೀತಗಾರರನ್ನು ಪಡೆದಿರುವುದು ಬೆಂಗಳೂರಿನ ಪುಣ್ಯ' ಎಂದು ಬರೆದಿತ್ತು. ಆದರೆ, ಮಳವಳ್ಳಿ ಸುಂದರಮ್ಮನವರದು ಸಾಧಕಿಯ ಮನೋಧರ್ಮ. ಬೆಂಗಳೂರಿಗೆ ಹಿಂದಿರುಗಿದ ನಂತರ ಪಿಟೀಲು ತಾಯಪ್ಪ, ವಾಗ್ಗೇಯಕಾರ, ಸಂಗೀತ ಶಾಸ್ತ್ರಜ್ಞ ಮೈಸೂರಿನ ವಾಸುದೇವಾಚಾರ್ಯರು ಹಾಗೂ ಪಲ್ಲಡಂ ಸಂಜೀವರಾಯರ ಬಳಿ ಸಂಗೀತ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡಿದರು.

ಪ್ರಖ್ಯಾತ ನ್ಯಾಯವಾದಿ ಬೇಲೂರು ಶ್ರೀನಿವಾಸ ಅಯ್ಯಂಗಾರ್‌ರವರ ಮಗಳ ಲಗ್ನದಲ್ಲಿ ಮಳವಳ್ಳಿ ಸುಂದರಮ್ಮರವರ ಹಾಡುಗಾರಿಕೆ ಕೇಳಿದ ಖ್ಯಾತ ಸಾಹಿತಿ ಡಿ.ವಿ.ಜಿ.ಯವರು ಇವರ ಸಂಗೀತಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಲ್ಲದೆ ಹರಿಕಾಂಬೋದಿರಾಗದ 'ದಿನಮಣಿ ವಂಶ' ಕೀರ್ತನೆಯನ್ನು ಸುಂದರಮ್ಮನವರ ಬಾಯಿಯಲ್ಲಿ ಮೂರುಸಾರಿ ಹಾಡಿಸಿ ಸಂತೋಷಪಟ್ಟಿದ್ದರು.

ಅನೇಕ ಕಾರಣಗಳಿಂದಾಗಿ ರಂಗಭೂಮಿಯಿಂದ ಸಂಗೀತ ಕ್ಷೇತ್ರಕ್ಕೆ ತಾತ್ಕಾಲಿಕವಾಗಿ ವಲಸೆ ಬಂದಿದ್ದ ಮಳವಳ್ಳಿ ಸುಂದರಮ್ಮನವರನ್ನು ಕನ್ನಡ ರಂಗಭೂಮಿ ಮತ್ತೆ ಕೈಬೀಸಿ ಕರೆಯಿತು. ನಾಟ್ಯಕಲಾ ಚತುರ ಎ. ವಿ. ವರದಾಚಾರ್ಯರವರ ಸ್ಮಾರಕ ಮಂದಿರದ ಸಹಾಯಾರ್ಥ ಏರ್ಪಡಿಸಿದ್ದ ನಾಟಕದಲ್ಲಿ ಮಳವಳ್ಳಿ ಸುಂದರಮ್ಮನವರು ಪಾತ್ರವಹಿಸಿದರು. ಆ ನಾಟಕದಲ್ಲಿ ಆರ್. ನಾಗೇಂದ್ರರಾಯರು, ನಟಭಯಂಕರ ಗಂಗಾಧರರಾಯರು, ನಾಗೇಶ್‌ರಾಯರು, ಎಂ. ಜಿ. ಮರಿರಾಯರು, ಗಾನಕಲಾನಿಧಿ ಬಿ. ಎಸ್. ರಾಜಾಯ್ಯಂಗಾರ್, ಹರಿರಾಯರು ಹಾಗೂ ಕೃಷ್ಣಸ್ವಾಮಿ ಅಯ್ಯಂಗಾರ್ ಮೊದಲಾದ ಖ್ಯಾತ ಕಲಾವಿದರು ಭಾಗವಹಿಸಿದ್ದರು. ಒಮ್ಮೆ ರಂಗಭೂಮಿಯ ಮೇಲೆ ಬಂದ ಮಳವಳ್ಳಿ ಸುಂದರಮ್ಮನವರಿಗೆ ಹತ್ತಾರು ಕಡೆಗಳಿಂದ ಅಭಿನಯ ಕಲೆಯನ್ನು ಮುಂದುವರೆಸುವಂತೆ ಒತ್ತಾಯ ಬಂತು.

ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಕಂಪನಿಯ ಮಾಲೀಕರಾದ ಜಿ. ಹೆಚ್. ವೀರಣ್ಣರವರ ಆಹ್ವಾನದ ಮೇರೆಗೆ ಗುಬ್ಬಿ ಕಂಪನಿಯ ಪ್ರಧಾನ ನಟಿಯಾಗಿ ಜೊತೆಗೆ ಕಂಪನಿಯ ಪಾರ್ಟ್‌ನರ್ ಆಗಿ ನವಚೈತನ್ಯದಿಂದ ಮಳವಳ್ಳಿ ಸುಂದರಮ್ಮನವರು ರಂಗಭೂಮಿಯ ಮರುಪ್ರವೇಶ ಮಾಡಿದರು. ರಾಜಭಕ್ತಿ, ಕರ್ನಾಟಕ ಸಾಮ್ರಾಜ್ಯ, ಸುಭದ್ರ ಪರಿಣಯ, ಕಾಳಿದಾಸ, ರಾಮಾಂಜನೇಯ ಯುದ್ಧ, ಸದಾರಮೆ, ಗುಲೇಬ ಕಾವಲಿ, ಪ್ರಭಾಮಣಿ ವಿಜಯ, ಲಂಕಾದಹನ ಮೊದಲಾದ ನಾಟಕಗಳು ಅತ್ಯಂತ ಜನಪ್ರಿಯವಾಗಿದ್ದವು. ರಾಮಾಂಜನೇಯ ಯುದ್ಧ ನಾಟಕದ ಚಾರುಮತಿ ಪಾತ್ರಕ್ಕೆ ಮಳವಳ್ಳಿ ಸುಂದರಮ್ಮ ಅತ್ಯಂತ ಪ್ರಸಿದ್ಧರಾಗಿದ್ದರು. ಇವರ ಸಂಗೀತ ಕೇಳಲು ಹಾಗೂ ಅಭಿನಯ ನೋಡಲು ಜನ ಥಿಯೇಟರಿಗೆ ಬರುತ್ತಿದ್ದರು. ಗುಬ್ಬಿ ಕಂಪನಿಯ ಪ್ರಸಿದ್ಧವಾದ ನಾಟಕ ಬಿ. ಪುಟ್ಟಸ್ವಾಮಯ್ಯನವರ 'ಕುರುಕ್ಷೇತ್ರ'. ಇದರಲ್ಲಿ ಮಳವಳ್ಳಿ ಸುಂದರಮ್ಮನವರು ಸುಭದ್ರೆಯ ಪಾತ್ರ. ದಿವಾನ್ ಸರ್. ಮಿರ್ಜಾ ಇಸ್ಮಾಯಿಲ್‌ರವರು ಈ ನಾಟಕ ನೋಡಿ, ಮಳವಳ್ಳಿ ಸುಂದರಮ್ಮನವರ ಅಭಿನಯ ಹಾಗೂ ಸಂಗೀತ ಪ್ರೌಢಿಮೆಗೆ ಅಭಿಮಾನದ ಮಾತುಗಳನ್ನಾಡಿದ್ದರು.

ಮಳವಳ್ಳಿ ಸುಂದರಮ್ಮನವರು 'ಜೀವನಾನಂದ ರತ್ನಾವಳಿ ನಾಟಕ ಸಭಾದ' ಪ್ರಮುಖ ಪಾತ್ರಧಾರಿಯಾಗಿದ್ದರು. ಕನ್ನಡ ಸಾಹಿತ್ಯದ ಹೆಸರಾಂತ ಕಾದಂಬರಿಕಾರರಾದ ದೇವುಡು ನರಸಿಂಹಶಾಸ್ತ್ರಿಗಳು ದಿ ಕರ್ನಾಟಕ ಟಾಕೀಜ್ ಲಿ. (ಧಾರವಾಡ) ಎಂಬ ಲಾಂಛನದಡಿ ಕನ್ನಡದಲ್ಲಿ ವಾಕ್ಚಿತ್ರ 'ಚಿರಂಜೀವಿ ಅಥವಾ ಮಾರ್ಕಂಡೇಯ' ಎಂಬ ಚಿತ್ರ ತಯಾರಿಸಿದ್ದರು. ಅದರಲ್ಲಿ ಸುಂದರಮ್ಮನವರು ಮಾರ್ಕಂಡೇಯನ ತಾಯಿ 'ಮರುದ್ವತಿ' ಪಾತ್ರ ನಿರ್ವಹಿಸಿದ್ದರು. ಮಲ್ಲಿಕಾರ್ಜುನ ಮನ್ಸೂರ್‌ರವರ ಅಣ್ಣ ಬಸವರಾಜ್ ಮನ್ಸೂರ್, ಖ್ಯಾತ ಗಾಯಕಿ ಕರ್ನಾಟಕದ ಕೋಗಿಲೆ ಎಂದೇ ಪ್ರಸಿದ್ಧರಾಗಿದ್ದ ಅಮಿರ್ ಜಾನ್ ಕರ್ನಾಟಕಿ ಈ ಚಿತ್ರದಲ್ಲಿ ಅಭಿನಯಿಸಿದ್ದರು. 1937ರಲ್ಲಿ ತೆರೆಕಂಡ ಈ ಚಿತ್ರ ಬೆಂಗಳೂರಿನ ಮೆಜೆಸ್ಟಿಕ್‌ನಲ್ಲೂ ತೆರೆಕಂಡಿತ್ತು. ಸರ್. ಸಿ. ವಿ. ರಾಮನ್, ಸರ್ ಪುಟ್ಟಣ್ಣ ಚೆಟ್ಟಿ, ಕೆ. ಶಂಕರನಾರಾಯಣರಾವ್, ಸುಬ್ಬರಾಮಶೆಟ್ಟಿ, ಲೇಡಿ ಮಿರ್ಜಾ ಇಸ್ಮಾಯಿಲ್, ಪ್ರೊ. ಬಿ. ಎಂ. ಶ್ರೀ ಮೊದಲಾದ ಖ್ಯಾತ ವ್ಯಕ್ತಿಗಳು ಈ ಚಿತ್ರ ನೋಡಿ ಸಂತೋಷಪಟ್ಟರು. ಕರ್ನಾಟಕ ಟಾಕೀಜ್ ಪರವಾಗಿ ಪ್ರೊ. ಬಿ.ಎಂ.ಶ್ರೀಯವರು ಮಳವಳ್ಳಿ ಸುಂದರಮ್ಮರವರಿಗೆ ಸ್ವರ್ಣಪದಕ ನೀಡಿ ಗೌರವಿಸಿದರು.

ಅನೇಕ ಹಿತೈಷಿಗಳ ಒತ್ತಾಯದ ಮೇರೆಗೆ ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾದ ಮ್ಯಾನೇಜರ್ ಹುದ್ದೆಗೆ ಮಳವಳ್ಳಿ ಸುಂದರಮ್ಮನವರು ಒಪ್ಪಿಕೊಳ್ಳಬೇಕಾಯಿತು. ನಾಟಕ ಅಭಿನಯದ ಜೊತೆಗೆ ಕಂಪನಿಯ ನಿರ್ವಹಣೆಯ ಜವಾಬ್ದಾರಿಯು ಇವರ ತಲೆಯ ಮೇಲೆ ಬಂತು. ಕಲಿಯುಗದ ಕರ್ಣ ಎಂದೇ ಖ್ಯಾತರಾಗಿದ್ದ ಕೊಟ್ಟೂರಪ್ಪನವರು ಅಂದು ಅವರ ಕಂಪನಿಯಲ್ಲಿದ್ದರು. ಕೊಟ್ಟೂರಪ್ಪನವರು ಬೆಳಗ್ಗೆ ಹೊತ್ತು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರೆ ಜನ ಇವರು ಸ್ವತಃ ಕರ್ಣನೆಂದೇ ಭಾವಿಸಿ, ಭಯಭಕ್ತಿಗಳಿಂದ ಕಾಲಿಗೆ ನಮಸ್ಕಾರ ಮಾಡುತ್ತಿದ್ದರಂತೆ! ಕರ್ಣನ ಹೆಂಡತಿ 'ಸೋಮಪ್ರಭೆ'ಯ ಪಾತ್ರ ಸುಂದರಮ್ಮನವರದಾಗಿತ್ತು. ಮಂಡ್ಯ, ಮೈಸೂರು, ದಾವಣಗೆರೆ, ಗದಗ, ಹುಬ್ಬಳ್ಳಿ, ಬೆಟಗೇರಿ, ತೀರ್ಥಹಳ್ಳಿ, ಶಿವಮೊಗ್ಗ, ಚಿತ್ರದುರ್ಗ ಮೊದಲಾದ ಕಡೆ ಕಂಪನಿಯ ಸುತ್ತಾಟ ನಡೆದಿತ್ತು. ಈ ಕಂಪನಿಯ ನಾಟಕಗಳೆಂದರೆ ಜನ ಮುಗಿಬೀಳುತ್ತಿದ್ದರು. ಆದರೆ, ಮಳವಳ್ಳಿ ಸುಂದರಮ್ಮನವರು ಕಂಪನಿಯ ನಿರ್ವಹಣೆಯ ಜವಾಬ್ದಾರಿಯಿಂದಾಗಿ ಸಾಕಷ್ಟು ಘಾಸಿಗೆ ಒಳಗಾದರು. ಈ ಕಂಪನಿ ಗದಗನಲ್ಲಿದ್ದಾಗ ಕಂಪನಿಯ ಹುಡುಗನೊಬ್ಬ ಇವರ ಸಮಸ್ತ ಒಡವೆಗಳನ್ನು ಎತ್ತಿಕೊಂಡು ಪರಾರಿಯಾದ. ಅನೇಕ ನಟ–ನಟಿಯರು ಸಂಬಳ ಸಾಲದೆಂದಾಗ ಸುಂದರಮ್ಮನವರು ತಮ್ಮ ಒಡವೆಗಳನ್ನು ಅಡವಿಟ್ಟು ಹಣ ಕೊಟ್ಟ ಪ್ರಸಂಗಗಳು ಇವೆ. ಆದರೂ, ಚಾಮುಂಡೇಶ್ವರಿ ನಾಟಕ ಸಭಾ ಕರ್ನಾಟಕ ವೃತ್ತಿ ರಂಗಭೂಮಿಯ ಇತಿಹಾಸದಲ್ಲಿ ದಾಖಲೆ ಬರೆಯಿತು. ತೀರ್ಥಹಳ್ಳಿಯ ಜನತೆ ಇದೇ ಕಾಲದಲ್ಲಿ ಕಲಿಯುಗ ಕರ್ಣನೆಂದು ಖ್ಯಾತರಾಗಿದ್ದ ಕೊಟ್ಟೂರಪ್ಪರವರಿಗೆ 'ಅಭಿನವ ಕರ್ಣ' 'ಕಲಾವಿಶಾರದ' ಎಂಬ ಬಿರುದುಗಳನ್ನು ನೀಡಿ, ಸಾರ್ವಜನಿಕ ಸಮಾರಂಭವನ್ನು ಮಾಡಿತು. ತಮ್ಮ ಕಂಪನಿಯ ಕಲಾವಿದರೊಬ್ಬರಿಗೆ

ನಡೆದ ಈ ಸನ್ಮಾನದಿಂದ ಮಳವಳ್ಳಿ ಸುಂದರಮ್ಮ ಅತಿ ಹೆಚ್ಚು ಸಂತೋಷಪಟ್ಟರು. ಅನೇಕ ಕಾರಣಗಳಿಂದ ಕಂಪನಿ ಸ್ಥಗಿತಗೊಂಡಿತು.

1943ರಲ್ಲಿ ಶ್ರೀ ಚಾಮುಂಡೇಶ್ವರಿ ನಾಟಕ ಸಭಾ ವೃತ್ತಿ ರಂಗಭೂಮಿ ಮಳವಳ್ಳಿ ಸುಂದರಮ್ಮನವರ ಒಡೆತನದಲ್ಲಿ ಎರಡು ವರ್ಷಗಳ ನಂತರ ಮತ್ತೆ ಪ್ರಾರಂಭವಾಯಿತು. ಕೊಟ್ಟೂರಪ್ಪ, ಚಿಕ್ಕಬಸವರಾಜು, ಜಿ. ವಿ. ಕೃಷ್ಣಮೂರ್ತಿ, ಎಂ. ಬಿ. ಬಸವರಾಜು, ನಾಗವರ್ಮ ಪಂಡಿತ, ಸುರೇಂದ್ರನಾಥ ಪಂಡಿತ, ಜಿ. ವಿ. ರುದ್ರಪ್ಪ, ವೆಂಕಟೇಶಯ್ಯಾ, ಕೇಶವಯ್ಯಾ, ಶ್ರೀಕಂಠಮೂರ್ತಿ, ಆರ್. ನಾಗರತ್ನಮ್ಮ, ಲಕ್ಷ್ಮಿಬಾಯಿ ಮೊದಲಾದ ಖ್ಯಾತ ಕಲಾವಿದರು ಈ ಕಂಪನಿಯಲ್ಲಿದ್ದರು. ಚಾಮುಂಡೇಶ್ವರಿ ನಾಟಕ ಸಭಾ ದೃಷ್ಟಿಯಿಂದಲೂ ಇದೊಂದು ಸುವರ್ಣಕಾಲ. 'ಶಾಕುಂತಲ', 'ಕವಿರತ್ನ ಕಾಳಿದಾಸ', 'ವಿರಾಟಪರ್ವ', 'ಮನ್ಮಥ ವಿಜಯ', 'ತಿಲೋತ್ತಮೆ', 'ಪ್ರಹ್ಲಾದ ಚರಿತ್ರೆ', 'ನಿರುಪಮಾ', 'ಗುಲೇಬ ಕಾವಲಿ', ಮೊದಲಾದ ನಾಟಕಗಳು ಅತ್ಯಂತ ಜನಪ್ರಿಯವಾಗಿದ್ದವು. ಮಹಿಳೆಯೊಬ್ಬಳು ನಾಲ್ಕು ದಶಕಗಳ ಕಾಲ ವೃತ್ತಿರಂಗಭೂಮಿಯಲ್ಲಿದ್ದುದಷ್ಟೆ ಅಲ್ಲ, ವೃತ್ತಿ ನಾಟಕ ಕಂಪನಿಯೊಂದನ್ನು ಯಶಸ್ವಿಯಾಗಿ ಮುನ್ನಡೆಸಿದ್ದಾಳೆಂಬುದು ಕೂಡ ದಾಖಲಾರ್ಹವಾದ ವಿಚಾರವಾಗಿದೆ. ಮೈಸೂರು, ಮಂಡ್ಯ, ತುಮಕೂರು, ಉಡುಪಿ, ಬಳ್ಳಾರಿ, ಹಾಸನ, ಚಾಮರಾಜನಗರ, ಟಿ. ನರಸೀಪುರ, ತಿಪಟೂರು ಮೊದಲಾದ ಕಡೆ ನೂರಾರು ನಾಟಕಗಳನ್ನು ಈ ಕಂಪನಿ ಆಡಿದೆ. ಕ್ವಿಟ್ ಇಂಡಿಯಾ ಚಳವಳಿ, ಎರಡನೆಯ ಮಹಾಯುದ್ಧ, ಪ್ಲೇಗು, ಸ್ವಾತಂತ್ರ್ಯ ಹೋರಾಟ ಹಾಗೂ ಸ್ವಾತಂತ್ರ್ಯೋತ್ಸವ, ಮಹಾತ್ಮ ಗಾಂಧೀಜಿಯವರ ಕಗ್ಗೊಲೆ– ಇಂತಹ ಸಂದರ್ಭದಲ್ಲೆಲ್ಲಾ ಶ್ರೀ ಚಾಮುಂಡೇಶ್ವರಿ ನಾಟಕ ಸಭಾ ಸಹ ತನ್ನ ಸ್ಥಳೀಯ ಆದ್ಯತೆಗಳಿಗನುಸಾರವಾಗಿ ವರ್ತಿಸಿದೆ.

ಬೇಲೂರಿನಲ್ಲಿದ್ದಾಗ ದಾನಶೂರ ನಾಟಕದ ಕಾಂಟ್ರ್ಯಾಕ್ಟ್ ವಹಿಸಿಕೊಂಡಿದ್ದ ಹೊಟೇಲ್ ರಾಘವಾಚಾರ್ಯರವರು ಒಂದು ದಿನ ಸಂಗ್ರಹಿತವಾದ ಹಣವನ್ನು ಗೋಣಿಚೀಲದಲ್ಲಿ ತುಂಬಿಕೊಂಡು ಮನೆಗೆ ಹೋದರೆಂಬ ಪ್ರಸಂಗ ಅಂದಿನ ಅನೇಕ ಕಲಾವಿದರ ಬಾಯಲ್ಲಿತ್ತು. ಮಳವಳ್ಳಿ ಸುಂದರಮ್ಮನವರು ಅನೇಕ ಶಿಕ್ಷಣ ಸಂಸ್ಥೆಗಳಿಗೆ ಸಹಾಯಾರ್ಥ ನಾಟಕಗಳನ್ನು ಕೊಟ್ಟಿದ್ದಾರೆ.

ಚನ್ನರಾಯಪಟ್ಟಣದಲ್ಲಿ ಈ ಕಂಪನಿ 1947ರಲ್ಲಿ ಬೀಡುಬಿಟ್ಟಿದ್ದಾಗ, ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು. ಮಾರನೆಯ ದಿನ ಅಭಿಮನ್ಯು ಕುಳಿತುಕೊಳ್ಳುವ ನಿಜವಾದ ರಥದಲ್ಲಿ ಶ್ರೀ ಕೃಷ್ಣ ಮತ್ತು ಅಭಿಮನ್ಯು ಪಾತ್ರಧಾರಿಗಳನ್ನು ಮೇಕಪ್‌ನೊಡನೆ ಕುಳ್ಳಿರಸಿ, ರಾಷ್ಟ್ರನಾಯಕರ ಭಾವಚಿತ್ರದೊಂದಿಗೆ ಊರೆಲ್ಲಾ ಮೆರವಣಿಗೆ ಮಾಡಿದ್ದರು. ಚನ್ನರಾಯಪಟ್ಟಣದ ಜನತೆ ಮಳವಳ್ಳಿ ಸುಂದರಮ್ಮ ಹಾಗೂ ಸಹ ಕಲಾವಿದರ ದೇಶಾಭಿಮಾನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿತು.

ಇದೇ ಸಂದರ್ಭ ಇರಬಹುದು. ಕಡೂರಿನಲ್ಲಿ ಕಂಪನಿ ಕ್ಯಾಂಪ್ ಮಾಡಿದೆ. ಭೀಷ್ಮ ಪ್ರತಿಜ್ಞೆ ನಾಟಕ. ರಾತ್ರಿ ಹತ್ತುಗಂಟೆಗೆ ನಾಟಕ ಪ್ರಾರಂಭವಾಗಬೇಕು. ಆಕಾಶಕ್ಕೆ ತೂತು ಬಿದ್ದಿದೆಯೋ ಎಂಬಂತೆ ಧೋ ಮಳೆ. ನಾಟಕ ನಿಲ್ಲಿಸಬೇಕೆಂದುಕೊಂಡರೆ ಪ್ರೇಕ್ಷಕರು 'ನೀವು ನಾಟಕ ನಿಲ್ಲಿಸಬೇಡಿ ನಾವು ಛತ್ರಿ ಹಿಡಿದು ನಾಟಕ ನೋಡುತ್ತೇವೆ' ಎಂದರು. ಹಾಗೆಯೇ ನಾಟಕ ಮುಂದುವರೆಯಿತು. ಒಮ್ಮೆ ಬೆಂಗಳೂರಿನಲ್ಲಿ ಈ ಚಾಮುಂಡೇಶ್ವರಿ ನಾಟಕ ಸಭಾ 'ದಾನಶೂರ ಕರ್ಣ' ನಾಟಕವನ್ನಾಡುತ್ತಿರಬೇಕಾದರೆ ಹಿಂದಿಯ ನಟಸಾಮ್ರಾಟ ಪೃಥ್ವಿರಾಜ ಕಪೂರ್ ನಾಟಕ ನೋಡಲು ಆಗಮಿಸಿದರು. ಅವರು ಈ ಕಂಪನಿಯಲ್ಲಿ ಅಪೂರ್ವ ಕಲಾವಿದರಿದ್ದಾರೆಂದು ಹೊಗಳಿದ್ದುಂಟು.

ವಿಶ್ವ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿದ್ದ ಖ್ಯಾತ ಬರಹಗಾರರಾದ ತಿ. ತಾ. ಶರ್ಮಾರವರು ಚಾಮುಂಡೇಶ್ವರಿ ನಾಟಕ ಸಭಾದ 'ರಾಜಸುಯೋಗ' ನಾಟಕ ನೋಡಲು ಒಮ್ಮೆ ಆಗಮಿಸಿದ್ದರು. ಆಗ ಅವರು 'ಕನ್ನಡ ರಂಗಭೂಮಿಯಲ್ಲಿ ಈ ನಾಟಕದ ಪಾತ್ರಧಾರಿಗಳು ಚಿರಸ್ಮರಣೀಯರು' ಎಂದಿದ್ದರು. ಇಂತಹ ಅಭಿಮಾನ ಮಳವಳ್ಳಿ ಸುಂದರಮ್ಮನವರ ಮೇಲೆ ಶೋತ್ರವೃಂದಕ್ಕೆ ಹಾಗೂ ನಾಟಕ ತಜ್ಞರಿಗೆ ಇತ್ತೆಂಬುದು ಹೆಮ್ಮೆಯ ವಿಚಾರ.

ಕಾಲದ ಪರಿವನ್ನು ತಿಳಿಯುವವರು ಯಾರು? ಮೇಲೆ ಹೋದವ ಕೆಳಗಿಳಿಯಲೇಬೇಕೆಂಬುದು ಪ್ರಕೃತಿ ನಿಯಮತಾನೇ? ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕನ್ನಡ ವೃತ್ತಿ ರಂಗಭೂಮಿ ಅಧೋಮುಖವಾಯಿತು. ಜನರ ಅಭಿರುಚಿಯಲ್ಲಿ ತೀವ್ರ ಬದಲಾವಣೆಗಳಾದವು. ಪೌರಾಣಿಕ ಸಂಗೀತ ಪ್ರಧಾನ ನಾಟಕಗಳ ಸ್ಥಾನದಲ್ಲಿ ಸರಸ ಸಂಭಾಷಣೆಯ ಸಾಮಾಜಿಕ ನಾಟಕಗಳು ಜನಮನದಲ್ಲಿ ಸ್ಥಾನಗಳಿಸಲಾರಂಭಿಸಿದವು. ಚಲನಚಿತ್ರ ತಯಾರಿಕೆಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯಿತು. ಅನೇಕ ಕಲಾವಿದರು ಚಲನಚಿತ್ರ ಕ್ಷೇತ್ರದತ್ತ ಆಕರ್ಷಿತರಾದರು.

ಅಭಿನಯ ವಿಶಾರದೆ ಮಳವಳ್ಳಿ ಸುಂದರಮ್ಮನವರು ಪ್ರವಾಹದ ಎದುರು ಈಜುವ ಪ್ರಯತ್ನದಲ್ಲಿ ವಿಫಲರಾದರು. 1947ರ ನವೆಂಬರ್‌ನಲ್ಲಿ ಅವರ ತಂದೆ ಪಿಟೀಲು ಸುಬ್ಬಣ್ಣನವರು ಇಹಲೋಕವಾಸಿಗಳಾದರು. ಇದೊಂದು ದೊಡ್ಡ ಹೊಡೆತವಾಗಿತ್ತು. ಒಮ್ಮಿಂದೊಮ್ಮೆಲೆ ಸುಂದರಮ್ಮನವರು ತಮ್ಮೆಲ್ಲ ಧೈರ್ಯ ಹಾಗೂ ಸಾಹಸಗಳನ್ನು ಕಳೆದುಕೊಂಡರು. ಇಷ್ಟಾದರೂ ಧರ್ಮಸ್ಥಳದ ರತ್ನವರ್ಮ ಹೆಗಡೆಯವರು ನಮ್ಮಲ್ಲಿ ನಾಟಕವಾಡಿ ಎಂದು ಒತ್ತಾಯ ಮಾಡಿ ಒಂದಿಷ್ಟು ನಾಟಕಗಳನ್ನಾಡಿಸಿದರು. ಜನರ ಅಭಿರುಚಿಯಲ್ಲಿ ತೀವ್ರ ಬದಲಾವಣೆಯಾದುದನ್ನು ಗುರುತಿಸಿದ ಮಳವಳ್ಳಿ ಸುಂದರಮ್ಮನವರು ನಾಟಕ ಕಂಪನಿಯ ಒಡೆತನದಿಂದ ದೂರ ಸರಿಯಲು ನಿರ್ಧರಿಸಿದರು. ನಲವತ್ತು ವರ್ಷಗಳ ಕಾಲ ಅವರು ಕನ್ನಡ ರಂಗಭೂಮಿಯ ಮೂಲಕ ಕಲಾಸೇವೆ ಮಾಡಿದ್ದರೆ ಹೊರತು ತಮಗಾಗಿ ಏನನ್ನೂ ಮಾಡಿಕೊಂಡಿರಲಿಲ್ಲ.

ರಂಗಭೂಮಿಯ ಬೆಳಕಿನಲ್ಲಿ ರಾಣಿ–ಮಹಾರಾಣಿಯಂತೆ ಮೆರೆದ ಮಳವಳ್ಳಿ ಸುಂದರಮ್ಮನವರಿಗೆ ಮುಪ್ಪಿನಲ್ಲಿ ಯಾವುದೇ ಆಸರೆ ಇಲ್ಲದಂತಾಯಿತು. ಅವರು ಆರ್ಥಿಕ ಸಂಕಷ್ಟಕ್ಕೆ ಗುರಿಯಾದರು. ಬೆಂಗಳೂರಿನ ಆಕಾಶವಾಣಿ ನಿಲಯದ ನಿರ್ದೇಶಕರಾದ ಡಾ. ಎ. ಎಂ. ನಟೇಶ್‌ರವರು ಮೂರು ತಿಂಗಳಿಗೊಮ್ಮೆ ಆಕಾಶವಾಣಿಯಲ್ಲಿ ರಂಗಗೀತೆ ಹಾಡಲು ಇವರಿಗೆ ಅವಕಾಶ ಕಲ್ಪಿಸಿಕೊಟ್ಟರು. ಖ್ಯಾತ ಕಾದಂಬರಿಕಾರರಾದ ಡಾ. ಅ.ನ.ಕೃರವರ ಶಿಫಾರಸ್ಸಿನ ಮೇಲೆ ಮಳವಳ್ಳಿ ಸುಂದರಮ್ಮನವರಿಗೆ ರಾಜ್ಯ ಸಂಗೀತ ನಾಟಕ ಅಕಾಡೆಮಿ ನೂರು ರೂಪಾಯಿಗಳ ಮಾಶಾಸನ ಮಂಜೂರು ಮಾಡಿತು. ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರು ಖ್ಯಾತ ಸಾಹಿತಿ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ 1962 ಸೆಪ್ಟಂಬರ್ 17ರಂದು ಬೆಂಗಳೂರಿನ ಪುರಭವನದಲ್ಲಿ ರಾಜ್ಯ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಕೊಟ್ಟು ಗೌರವಿಸಿದರು. ಬೆಂಗಳೂರು ಆಕಾಶವಾಣಿ ಕೇಂದ್ರದ ಡಾ. ಎ. ಎಂ. ನಟೇಶ್‌ರವರು ಮಳವಳ್ಳಿ ಸುಂದರಮ್ಮನವರು ಸೇರಿದಂತೆ ಅನೇಕ ರಂಗಭೂಮಿಯ ಕಲಾವಿದರ ರಂಗಗೀತೆಗಳನ್ನು ರೆಕಾರ್ಡ್ ಮಾಡಿಕೊಂಡು ರಂಗಕಲಾವಿದರಿಗೆ ಆರ್ಥಿಕ ಸಹಾಯ ಮಾಡಿದರು. ಆದರೆ, ಯಾವುದೇ ಕಡೆಯಿಂದಲೂ ದೊಡ್ಡ ರೀತಿಯ ಸಹಾಯ ಮಳವಳ್ಳಿ ಸುಂದರಮ್ಮನವರಿಗೆ ಸಿಗಲೇ ಇಲ್ಲ. ರಾಜ್ಯೋತ್ಸವ ಪ್ರಶಸ್ತಿಯಾಗಲಿ ಅಥವಾ ಇನ್ನಾವುದೇ ಸಹಾಯವಾಗಲಿ ಈ ಅಭಿಜಾತ ಕಲಾವಿದೆಗೆ ದೊರಕದೆ ತಮ್ಮ ಮುಪ್ಪಿನ ದಿನಗಳನ್ನು ಕಷ್ಟದ ದಿನಗಳಲ್ಲೇ ಕಳೆದರು.

ಕೋಟ್ಯಂತರ ಜನರ ಮನಸ್ಸಿಗೆ ತಮ್ಮ ಸಂಗೀತ ನಾಟಕಗಳಿಂದ ಮುದಕೊಟ್ಟ ಈ ಹಿರಿಯ ಜೀವ ಕೊನೆಗಾಲದಲ್ಲಿ ಸುಖಪಡಲಿಲ್ಲ. ಅವರ ಸಂತತಿಯನ್ನು ಸಹ ಗುರುತಿಸುವ ಸಾಹಸಕ್ಕೆ ಯಾರೂ ಹೋಗಿಲ್ಲ. ಅವರಿಗೆ ವಿರುಪಾಕ್ಷನೆಂಬ ಮಗನಿದ್ದನೆಂದು ತಿಳಿದು ಬರುತ್ತದೆ. 2005ರಲ್ಲಿ ಭಾರತ ಯಾತ್ರಾ ಕೇಂದ್ರ ಕರ್ನಾಟಕ ನಾಟಕ ಅಕಾಡೆಮಿಯ ನೆರವಿನೊಂದಿಗೆ ಮಳವಳ್ಳಿ ಸುಂದರಮ್ಮನವರ ಜನ್ಮ ಶತಮಾನೋತ್ಸವವನ್ನು ಆಚರಿಸಿದೆ. ಮಳವಳ್ಳಿ ಸುಂದರಮ್ಮನವರು ಕನ್ನಡ ರಂಗಭೂಮಿಗೆ ಕೊಟ್ಟ ಕೊಡುಗೆಗಳ ಬಗ್ಗೆ ವ್ಯಾಪಕ ಅಧ್ಯಯನ ಇನ್ನೂ ನಡೆಯಬೇಕಾಗಿದೆ.

ಆಕರ:– ಅಭಿನಯ ಶಾರದೆ ಮಳವಳ್ಳಿ ಸುಂದರಮ್ಮನವರ ಆತ್ಮಕಥೆ– ನಿರೂಪಣೆ ಹ. ವೆಂ. ಸೀತಾರಾಮಯ್ಯ ಪರಿಷ್ಕರಣೆ: ಗುಡಿಹಳ್ಳಿ ನಾಗರಾಜ್

*

ಗಾಂಧಿ ವಿಚಾರಧಾರೆಯ ಶತಾಯುಷಿ ಮಹಾದೇವಿ ತಾಯಿ

ಪ್ರೊ. ಎಚ್.ಆರ್. ದಾಸೇಗೌಡ

ಮಹಾದೇವಿ ತಾಯಿಯವರು ಕಳೆದ ಶತಮಾನದ ಎಂಬತ್ತರ ದಶಕದಲ್ಲಿ ದಿವಂಗತ ಸೀತಾಶರಣ ಶರ್ಮರ ಮೂಲಕ ನನಗೆ ಪರಿಚಯವಾದರು. ಶ್ರೀಮತಿಯವರು ಬೆಂಗಳೂರಿನ ಕುಮಾರಾ ಪಾರ್ಕ್‌ನಲ್ಲಿರುವ ಗಾಂಧೀ ಭವನದ ವಿಶ್ವನೀಡಂ ಟ್ರಸ್ಟಿನ ಪಕ್ಕದಲ್ಲಿರುವ ಟ್ರಸ್ಟಿಯಾಗಿದ್ದ ವಲ್ಲಭ ಸ್ವಾಮಿಯವರ ನಿಧನಾನಂತರ ಆ ಟ್ರಸ್ಟಿನ ಅಧ್ಯಕ್ಷರಾಗಿ ಅವರು ದೈವಾಧೀನರಾಗುವವರೆಗೂ ಅಂದರೆ 2006ನೇ ಇಸವಿಯ ಆಗಸ್ಟ್ ತಿಂಗಳ ಆರನೇ ತಾರೀಖಿನವರೆಗೂ ಸಮಾಜಕ್ಕೆ ಅಗಣಿತ ಸೇವೆ ಸಲ್ಲಿಸಿದವರು. ಶ್ರೀಮತಿ ಮಹಾದೇವಿ ತಾಯಿಯವರು ತಮ್ಮ ತುಂಬು ಜೀವನವನ್ನು ಸಾರ್ಥಕ ರೀತಿಯಲ್ಲಿ ಸವೆಸಿ ಮಹಿಳೆಯರ, ಮಕ್ಕಳ, ದೀನ-ದಲಿತರ ಉದ್ಧಾರಕ್ಕಾಗಿ ಅಪರಿಮಿತ ದುಡಿಮೆ ಮಾಡಿದವರು.

"ಕನ್ನಡ ನಾಡಿನಲ್ಲಿ ಬುದ್ಧಿಯಿದೆ, ಶಕ್ತಿಯಿದೆ, ತೇಜವಿದೆ, ಪ್ರತಿಭೆಯಿದೆ, ಆದರೆ ಅವುಗಳಿಗೆ ಯೋಗ್ಯ ಸಂಸ್ಕಾರ ಕೊಟ್ಟು ನಾಡಿನ ಬೆಳವಣಿಗೆಗೆ ಉಪಯೋಗಿಸಿಕೊಳ್ಳುವ ಕರ್ಮಕುಶಲಿಗರು ನಾಡಿಗೆ ಬೇಕಾಗಿದ್ದಾರೆ" ಎಂಬ ಬುರ್ಲಿ ಬಿಂದು ಮಾಧವರಾಯರ ಮಾತಿಗೆ ಅತ್ಯಂತ ಸೂಕ್ತ ನಿದರ್ಶನವೆಂದರೆ ಮಹಾದೇವಿ ತಾಯಿಯವರ ಜೀವನ ಮತ್ತು ಅವರ ಕಾರ್ಯಕ್ಷಮತೆ. "ಮಹಾದೇವಿಯನ್ನು ನಾನು ಚಿಕ್ಕ ಬಾಲಕಿಯನ್ನಾಗಿ ಮೊದಲು ಕಂಡೆ, ಬಳಿಕ ಆಕೆಯ ದೇಶ ಪ್ರೇಮ, ತ್ಯಾಗ ಇವುಗಳ ಬೆಳವಣಿಗೆ ಬಂದ ಹಾಗೆ ಆಕೆಯಲ್ಲಿ ಹುದುಗಿಕೊಂಡಿರುವ ಗುಣಗಳು ವಿಕಸನವಾಗತೊಡಗಿದವು" ಎಂಬ ಶ್ರೀ ರಂಗನಾಥ ದಿವಾಕರರ ಮಾತುಗಳು ಬುರ್ಲಿ ಬಿಂದು ಮಾಧವರಾಯರ ಹೇಳಿಕೆಗೆ ಪೂರಕವಾದುದಾಗಿದೆ.

ಮಹಾದೇವಿ ತಾಯಿಯವರು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಸುಪ್ರಸಿದ್ಧ ಶ್ರೀಮಂತ ಮನೆತನವೆಂಬ ಖ್ಯಾತಿಗೆ ಹೆಸರಾಗಿದ್ದ ದೊಡ್ಮನೆ ಶ್ರೀ ಕೃಷ್ಣಯ್ಯ ಸುಬ್ಬಯ್ಯ ಹೆಗ್ಗಡೆಯವರ ಮಗಳು. ಕರ್ನಾಟಕದ ರಾಜ್ಯದ ಮಾಜಿ ಮುಖ್ಯಮಂತ್ರಿಯಾಗಿದ್ದ ಶ್ರೀ ರಾಮಕೃಷ್ಣ ಹೆಗಡೆ ಅವರ ಸೋದರ ಸಂಬಂಧಿ, ಸನ್ ಸಾವಿರದ ಒಂಭೈನೂರ ಮೂವತ್ತನೆಯ ಇಸವಿಯಲ್ಲಿ ನಡೆದ ಸ್ವಾತಂತ್ರ್ಯ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮನೆತನ ಅದು. ಶ್ರೀ ಕೃಷ್ಣಯ್ಯ ಸುಬ್ಬಯ್ಯ ಹೆಗಡೆ ಅವರು ಆ ಆಂದೋಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲದೇ ಆ ಪ್ರಾಂತ್ಯದ ಹೋರಾಟಗಳಿಗೆ ಮುಖ್ಯಸ್ಥರಾಗಿದ್ದವರು. "ದೊಡ್ಮನೆ" ಆ ಭಾಗದ ಆಂದೋಳನದ ಕೇಂದ್ರವಾಗಿತ್ತು. ಆ ಮನೆಯವರೆಲ್ಲರೂ ಸ್ವಾತಂತ್ರ್ಯಕ್ಕಾಗಿ ಕಂಕಣಬದ್ಧರಾಗಿದ್ದವರು. ಆ ಸಂದರ್ಭದಲ್ಲಿ ಮಹಾದೇವಿಯಮ್ಮ ರಾಷ್ಟ್ರಸೇವೆಯ ಸಂಕಲ್ಪ ಮಾಡಿದರು. ಆಂದೋಳನದಲ್ಲಿ ಧುಮುಕಿದರು, ಆಕೆ ವಿದ್ಯಾವಂತಳಾಗಿರಲಿಲ್ಲ. ಪ್ರಾಥಮಿಕ ಹಂತದಲ್ಲಿ ಅಲ್ಪಸ್ವಲ್ಪ ಕಲಿತಿದ್ದರು. ಈಕೆಗೆ ಚಿಕ್ಕವಯಸ್ಸಿನಲ್ಲಿ ವಿವಾಹವಾಗಿ ಲಗ್ನವಾದ ಎರಡು ವರ್ಷದಲ್ಲಿಯೇ ವೈಧವ್ಯ ಪ್ರಾಪ್ತವಾಗಿತ್ತು. ಜೀವನದಲ್ಲಿ ಬೇಸತ್ತವರಾಗಿ ವೈರಾಗ್ಯದ ಕಡೆಗೆ ವಾಲಿದ್ದರು. ಪುರಾಣ ಗ್ರಂಥಗಳ ಶ್ರವಣವನ್ನು ಕೇಳುತ್ತಾ ತಂದೆ ತಾಯಿಗಳ ಸೇವೆ

ಮಾಡುತ್ತಾ ಕಾಲ ಕಳೆಯುತ್ತಿದ್ದರು. 1930ರ ರಾಷ್ಟ್ರೀಯ ಆಂದೋಳನ ಮಹಾದೇವಿತಾಯಿಯವರನ್ನು ತನ್ನತ್ತ ಸೆಳೆದುಕೊಂಡಿತು. ಆಗ ತಾಲ್ಲೂಕಿನಲ್ಲಿ ಹಬ್ಬಿದ್ದ ಕಾಯಿದೆ ಭಂಗ ಚಳುವಳಿ ಮತ್ತು ಕರನಿರಾಕರಣೆ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಮಹಾದೇವಿಯವರು ಆ ಚಳುವಳಿಯನ್ನು ಯಶಸ್ಸಿನತ್ತ ಕೊಂಡೊಯ್ಯಲು ತಂದೆಗೆ ಸಹಾಯ ನೀಡಿದ್ದರು. ಅವರ ಈ ಹೋರಾಟ ತಾಲೂಕಿನ ಮಹಿಳೆಯರಲ್ಲಿ ಜಾಗೃತಿಯನ್ನುಂಟುಮಾಡಿತು. ತನ್ನ ಮಾತಿನ ಧಾಟಿಯಿಂದ ಮಹಿಳೆಯರಲ್ಲಿ ಜಾಗೃತಿ ಮೂಡಿಸಿ ಅವರನ್ನೆಲ್ಲಾ ಸತ್ಯಾಗ್ರಹದಲ್ಲಿ ಭಾಗವಹಿಸುವಂತೆ ಮಾಡಿದರು. ಇವರ ಮುಂದಾಳುತನದಲ್ಲಿ ಅನೇಕ ಮಹಿಳೆಯರು ಮನೆಮಠಗಳನ್ನು, ಮಕ್ಕಳನ್ನು ಮರೆತು ಸತ್ಯಾಗ್ರಹಿಗಳಾಗಿ ಕಾರಾಗೃಹ ಸೇರಿದರು.

ಈ ಆಂದೋಲನದಲ್ಲಿ ಭಾಗವಹಿಸಿ ಅನೇಕ ಮಂದಿ ಮಹಿಳೆಯರು ಅನಾಥರಾದರು, ಮತ್ತವರ ಮಕ್ಕಳು ದಾರುಣ ಸ್ಥಿತಿ ತಲುಪಿದರು. ಅವರುಗಳ ದಾರುಣ ಸ್ಥಿತಿ ಮಹಾದೇವಿಯವರನ್ನು ಕಳವಳಕ್ಕೀಡುಮಾಡಿತು. ಅಂದಿನ ಮುಖಂಡರ ನೆರವಿನಿಂದ ಮಹಾದೇವಿ ಎರಡು ಅನಾಥ ಬಾಲಿಕಾಶ್ರಮಗಳನ್ನು ತೆರೆದು ಅನಾಥ ಮಕ್ಕಳ ಯೋಗಕ್ಷೇಮದ ಜವಾಬ್ದಾರಿಯನ್ನು ಹೊತ್ತು ಕಾರ್ಯನಿರ್ವಹಿಸುತ್ತಿದ್ದರು.

1933ರಲ್ಲಿ ಮಹಾತ್ಮಾ ಗಾಂಧೀಯವರು ಹರಿಜನ ಪ್ರಚಾರದ ಕಾರ್ಯಕ್ಕಾಗಿ ಸಿದ್ದಾಪುರಕ್ಕೆ ಭೇಟಿ ನೀಡಿದ್ದರು. ಆಗ ತಾನೇ ಜೈಲಿನಿಂದ ಬಿಡುಗಡೆಯಾಗಿದ್ದ ಮಹಾದೇವಿ, ಕುಮುಟದಲ್ಲಿ ಮಹಾತ್ಮರನ್ನು ಸಂದರ್ಶಿಸಿ ಅವರ ಆರ್ಶೀವಾದ ಪಡೆದರು. ಮಹಾದೇವಿಯರ ತಂದೆ ಶ್ರೀ ಕೃಷ್ಣ ಹೆಗಡೆಯವರು ಗಾಂಧೀಜಿಯವರನ್ನು ಸ್ವಾಗತಿಸುವ ಸಮಿತಿಯ ಅಧ್ಯಕ್ಷರಾಗಿದ್ದರು. ಇದನ್ನು ನೋಡಿದ ಮಹಾತ್ಮರು ಹರ್ಷಚಿತ್ತರಾಗಿ ದೊಡ್ಮನೆಯ ಎಲ್ಲಾ ಸದಸ್ಯರು ಆಂದೋಳನದಲ್ಲಿ ಭಾಗವಹಿಸಿರುವುದನ್ನು ತಿಳಿದು ಕ್ಷಣ ಹೊತ್ತು ಸ್ಥಂಭೀಭೂತರಾದರು. ಆ ಮನೆಯವರೊಂದಿಗೆ ತಾಲ್ಲೂಕಿನ ಎಲ್ಲಾ ಜನತೆಯ ತ್ಯಾಗ ಬಲಿದಾನಗಳನ್ನು ತಿಳಿದು ತಮ್ಮ ತತ್ವಗಳಿಗೆ ವಿಜಯ, ಆ ತಾಲ್ಲೂಕಿನಲ್ಲಿ ಲಭಿಸಿದೆ ಎಂದುಕೊಂಡರು ಮಹಾತ್ಮಾಜೀಯವರು ಮಹಾದೇವಿಯವರನ್ನು ವಾರ್ಧಾ ಮಹಿಳಾಶ್ರಮಕ್ಕೆ ಕಳುಹಿಸಿಕೊಡುವಂತೆ ಕೃಷ್ಣ ಹೆಗ್ಗಡೆಯವರನ್ನು ಕೇಳಿದರು.

ಮಹಾತ್ಮಾಜಿಯವರ ಇಚ್ಛೆಯಂತೆ ಮಹಾದೇವಿಯವರನ್ನು ಅವರ ತಂದೆ ಶ್ರೀ ಕೃಷ್ಣ ಹೆಗಡೆಯವರು ಗಾಂಧೀಜಿಯವರ ಸ್ವಾಧೀನಕ್ಕೆ ಒಪ್ಪಿಸಿದರು. ಮತ್ತು ಅವರ ಜೊತೆಯಲ್ಲಿಯೇ ಮಹಾದೇವಿಯವರು ವಾರ್ಧಾಕ್ಕೆ ಪ್ರಯಾಣ ಬೆಳೆಸಿದರು. ವಾರ್ಧಾ ಮಹಿಳಾಶ್ರಮವಾಸಿಯಾಗಿ ಮಹಾದೇವಿ ಹಿಂದೀ ಶಿಕ್ಷಣವನ್ನು ಪಡೆದರು. ಮತ್ತು ಸೇವಾಗ್ರಾಮದಲ್ಲಿ ಗಾಂಧೀಜಿಯವರ ಉಪದೇಶಾಮೃತವನ್ನು ಪಡೆಯುವ ಸೌಭಾಗ್ಯವೂ ಲಭ್ಯವಾಯಿತು ಅವರಿಗೆ. ಮಹಾದೇವಿಯವರು ತಮ್ಮ ನಡೆನುಡಿಯಿಂದ ಗಾಂಧೀಜಿಯವರಿಗೆ ಆಪ್ತಳಾದರು. ಜೊತೆಗೆ ವಿನೋಬಾಜಿಯವರ ಆಧ್ಯಾತ್ಮಿಕ ಉಪದೇಶವೂ, ಜಮನ್‌ಲಾಲ್ ಬಜಾಜ್ ಅವರ ಸ್ನೇಹಪೂರ್ಣ ಸಾನ್ನಿಧ್ಯವೂ ಲಭಿಸುವಂತಾಯಿತು. ಶ್ರೀಯುತ ಕಾಕಾ ಕಾಲೇಲ್‌ಕರ್‌ರವರ ವಿಚಾರಪೂರ್ಣ ಉಪನ್ಯಾಸಗಳ ವತಿಯಿಂದ ಗ್ರಾಮಸೇವೆ, ಸಮಾಜಸೇವಾ ಕಾರ್ಯದಲ್ಲಿ ತತ್ಪರತೆಯಿಂದ ದುಡಿಯುವಂತಾದುದಲ್ಲದೇ ಸಂಕುಚಿತ ಮನೋಭಾವ ಮಾಯವಾಗಿ ಅವರಲ್ಲಿ ವಿಶ್ವ ಕುಟುಂಬದ ಭಾವನೆಯೂ ಬಲವಾಗಿ ಬೇರೂರಿತು. ಇವರ ಸೇವಾ ಮನೋಭಾವವನ್ನು, ವಿನಯ ಸೌಜನ್ಯಗಳನ್ನು ಮತ್ತು ವೃತ್ತಿ ನೈಪುಣ್ಯತೆಯನ್ನು ಗುರುತಿಸಿದ ಗಾಂಧೀಜಿ ಇವರನ್ನು ಡೆಹರಾಡೂನ್‌ನಲ್ಲಿನ ಕನ್ಯಾ ಗುರುಕುಲಕ್ಕೆ ಶಿಕ್ಷಕಿಯಾಗಿ ಕಳುಹಿಸಿದರು. ತನಗೆ ವಹಿಸಿದ ಕಾರ್ಯವನ್ನು ಶ್ರದ್ಧೆಯಿಂದ ನೆರವೇರಿಸುತ್ತಾ ತನ್ನ ಹಿಂದಿ ಭಾಷೆಯ ಜ್ಞಾನವನ್ನು ಹೆಚ್ಚಿಸಿಕೊಳ್ಳುವತ್ತ ಗಮನಹರಿಸಿ ಅನೇಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಹಿಂದಿಯಲ್ಲಿ ಬರವಣಿಗೆ ಮಾಡುವಷ್ಟು ಪರಿಣಿತಿಯನ್ನು ಪಡೆದರು. ಈಕೆ 'ದೇವತಾತ್ಮ' ಎಂಬ ಕೃತಿಯನ್ನು ಹಿಂದೀ ಭಾಷೆಯಲ್ಲಿ ರಚಿಸಿದರು. ಅಲ್ಲಿಂದ ಹಿಂದಕ್ಕೆ ಬಂದ ನಂತರ ಸೇವಾಗ್ರಾಮವನ್ನೆ ತನ್ನ ಮನೆಯಾಗಿಸಿಕೊಂಡು ಅಲ್ಲಿಗೆ ಬರುತ್ತಿದ್ದ ಜನರ

ಶುಶ್ರೂಷೆಯನ್ನು ಮಾಡುತ್ತಾ ಗಾಂಧೀಜಿ, ವಿನೋಬಾಜಿ, ಕಸ್ತೂರ ಬಾ ಮುಂತಾದವರಿಗೆ ಅಚ್ಚುಮೆಚ್ಚಿನವರಾಗಿ ಭಾರತ ಸ್ವಾತಂತ್ರ್ಯ ಗಳಿಕೆಗೆ ಗಾಂಧೀಜಿಯವರ ಯೋಜನೆಗಳಿಗೆ ಪರೋಕ್ಷ ಸಹಕಾರ ನೀಡುತ್ತಿದ್ದರು. ಗಾಂಧೀಜಿಯವರ ಮರಣಾನಂತರ ಪೂಜ್ಯ ವಿನೋಬಾಜಿಯವರಿಗೆ ಆಪ್ತ ಕಾರ್ಯದರ್ಶಿಯಾಗಿ ಅವರು ಕೈಗೊಂಡ ಭೂದಾನ ಚಳುವಳಿ ಮುಂತಾದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತನ್ನನ್ನು ತಾನು ತೊಡಗಿಸಿಕೊಂಡಿದ್ದರು.

ಈ ಮಧ್ಯೆ ಪೂಜ್ಯ ವಿನೋಬಾಜಿಯವರು 1958ರ ಸುಮಾರಿಗೆ ಬೆಂಗಳೂರಿಗೆ ಬಂದಿದ್ದಾರೆಂದು ತಿಳಿದು ಬರುತ್ತದೆ. ಆ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಒಂದು ಅಂತರರಾಷ್ಟ್ರೀಯ ಸಹಜೀವನ ಸಂಸ್ಥೆಯನ್ನು ಸ್ಥಾಪನೆ ಮಾಡಲು ಆಲೋಚಿಸಿ ಶ್ರೀ ಜಮನಾಲಾಲ್ ಬಜಾಜ್ ಅವರು ನೀಡಿದ ಮಾಗಡಿ ರಸ್ತೆಯಲ್ಲಿರುವ ನಾಲ್ಕುನೂರು ಎಕರೆ ಪ್ರದೇಶದಲ್ಲಿ ವಿಶ್ವನೀಡಂ ಎಂಬ ಸಂಸ್ಥೆಯನ್ನು ಸ್ಥಾಪನೆ ಮಾಡಿ ಮಹಾತ್ಮಗಾಂಧೀಜಿಯವರ ರಚನಾತ್ಮಕ ಕಾರ್ಯ ಯೋಜನೆಗಳ ಪ್ರಾಯೋಗಿಕ ಕೇಂದ್ರವಾಗಿ ಪರಿವರ್ತನೆ ಮಾಡಿದರು. ಆ ಕೇಂದ್ರದ ಉಸ್ತುವಾರಿ ನೋಡಿಕೊಳ್ಳಲು ಬೆಂಗಳೂರು ನಗರದಲ್ಲೊಂದು ಕಛೇರಿಯನ್ನು ತೆರೆಯಲು ಪ್ರಯತ್ನಮಾಡಿ ಪ್ರಸ್ತುತ ಕುಮಾರಾ ಪಾರ್ಕ್ ಪೂರ್ವದಲ್ಲಿರುವ ವಲ್ಲಭ ನಿಕೇತನವನ್ನು ಸ್ಥಾಪಿಸಿದರು. ಈ ಕೇಂದ್ರದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದ್ದ ವಲ್ಲಭ ಸ್ವಾಮಿಯವರ ನಿಧನಾನಂತರ ಸುಮಾರು ಎಪ್ಪತ್ತರ ದಶಕದಲ್ಲಿ ಮಹಾದೇವಿತಾಯಿಯವರನ್ನು ವಿನೋಭಾಜೀಯವರು, ಶ್ರೀ ಸೀತಾಶರಣ ಶರ್ಮ ಅವರ ಜೊತೆಯಲ್ಲಿ ಕಾರ್ಯನಿರ್ವಹಿಸಲು ಕಳುಹಿಸಿದರು. ವಿನೋಬಾಜಿಯವರ ಒಡನಾಟದಲ್ಲಿಯೇ ತಮ್ಮ ಜೀವನದ ಬಹುಭಾಗವನ್ನು ಕಳೆದಿದ್ದ ಮಹಾದೇವಿತಾಯಿಯವರ ಸಮಾಜಮುಖಿ ವ್ಯಕ್ತಿತ್ವ ವಿಕಸನವಾಗಿತ್ತು. ಸರ್ವೋದಯ, ಭೂದಾನ ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದ ವಿನೋಬಾಜಿ ಕಾಲುನಡಿಗೆಯಲ್ಲಿ ಇಡೀ ದೇಶವನ್ನು ಸುತ್ತಿದ ಸಮಯದಲ್ಲಿ ಮಹಾದೇವಿತಾಯಿಯೂ ಅವರೊಂದಿಗೆ ನಿರಂತರ ಸುತ್ತಿದ್ದು ಮಹಾದೇವಿತಾಯಿಯವರ ದಿಟ್ಟ ನಿಲುವಿಗೆ ನಿದರ್ಶನವಾಗಿದೆ. ಹೆಚ್ಚು ಓದಿರದ ಮಹಾದೇವಿಯವರು ವಿನೋಬಾ ಅವರಿಂದ ಶಾಸ್ತ್ರ ಗ್ರಂಥಗಳನ್ನು ಅಭ್ಯಸಿಸಿದರು. ವಿವೇಕಚೂಡಾಮಣಿ, ರಾಮಚರಿತ ಮಾನಸ, ಮುಂತಾದ ಗ್ರಂಥಗಳನ್ನು ಕಂಠಸ್ಥಮಾಡಿಕೊಂಡು ನಿರರ್ಗಳವಾಗಿ ಮತ್ತು ಭಾಷಣಗಳಲ್ಲಿ ಹೇಳುವಷ್ಟು ಸಮರ್ಥರಾಗಿದ್ದರು. ವಿನೋಬಾಜಿಯವರು ಕಾಲವಾದಾಗ ಅವರ ಚಿತೆಗೆ ಅಗ್ನಿಸ್ಪರ್ಶ ಮಾಡುವ ಭಾಗ್ಯವು ಅವರದಾಗಿತ್ತು.

ಬೆಂಗಳೂರಿನಲ್ಲಿ ನೆಲೆಸಿದ ನಂತರ ಮಹಾದೇವಿತಾಯಿಯವರು ಬಡಮಕ್ಕಳಿಗಾಗಿ ವಸತಿನಿಲಯಗಳನ್ನು ಆರಂಭಿಸಿದರು. ವಲ್ಲಭನಿಕೇತನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿದರು. ಕಳೆದ 25-30 ವರ್ಷಗಳಿಂದ ವಿಶ್ವನೀಡಂ ಟ್ರಸ್ಟಿನ ಸಮರ್ಪಕ ಕಾರ್ಯನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತು ಜನಹಿತ ಕಾರ್ಯಗಳಲ್ಲಿ ತೊಡಗಿಸಿಕೊಂಡು ಅನಾಥರಿಗೆ, ವಯಸ್ಸಾದ ಹಿರಿಯರಿಗೆ ಆಶ್ರಯ ನೀಡುತ್ತಿದ್ದರು. ಸರಳ ಜೀವನಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದ ಮಹಾದೇವಿತಾಯಿ ತಾವು ಶ್ರೀಮಂತ ಕುಟುಂಬದಿಂದ ಬಂದವರಾಗಿದ್ದರೂ ಸಿರಿವಂತಿಕೆಯನ್ನು ತೊರೆದು ಖಾದಿ ವಸ್ತ್ರಧಾರಿಣಿಯಾಗಿ ಹರಿಜನ, ಗಿರಿಜನರ ಮಹಿಳೆಯರ ಏಳ್ಗೆಗೆ ನಿರಂತರ ಸ್ಪಂದಿಸಿದ ಮಮತಾಮಯಿಯಾಗಿ 101 ಸಂವತ್ಸರಗಳನ್ನು ಸವೆಸಿ 2006ರ ಆಗಸ್ಟ್ ತಿಂಗಳ ಆರನೇ ದಿನಾಂಕದಂದು ದೈವಾಧೀನರಾದರು.

——— * ———

ಮೈಸೂರು ಶೈಲಿಯ ನೃತ್ಯ ಪರಂಪರೆಯ ಮೇರು ಕಲಾವಿದೆ ವೆಂಕಟಲಕ್ಷ್ಮಮ್ಮ

ವೈ.ಎಸ್. ವಿಜಯಲಕ್ಷ್ಮಿ

ಪಾರಂಪರಿಕ ಪ್ರದರ್ಶನ ಕಲೆಗಳಲ್ಲಿ ಒಂದಾದ ನೃತ್ಯ ಕಲೆಯು ಹಲವು ಶತಮಾನಗಳಿಂದ ಕರ್ನಾಟಕದಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಪಡೆದಿದೆ. ಕರ್ನಾಟಕದ ರಾಜವಂಶಗಳು ಕಲೆ ಮತ್ತು ಸಂಸ್ಕೃತಿಗೆ ಪ್ರೋತ್ಸಾಹ ನೀಡಿರುವುದು ಇತಿಹಾಸ. ವಿಜಯನಗರದ ಪತನಾನಂತರ ಕನ್ನಡ ಸಂಸ್ಕೃತಿಗೆ ಭದ್ರ ನೆಲೆಗಟ್ಟು ದೊರಕಿದ್ದು ಮೈಸೂರು ಅರಸರಲ್ಲಿ, ಕಲೆ ಮತ್ತು ಸಂಸ್ಕೃತಿಗೆ ಮೈಸೂರು ಅರಸರು ನೀಡಿದ ಪ್ರೋತ್ಸಾಹ ಅಪಾರ. ಹಾಗಾಗಿಯೇ ಎಲ್ಲ ಕಲೆಗಳಂತೆ ನೃತ್ಯಕಲೆಯು ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಸರ್ವತೋಮುಖವಾದ ನೆಲೆಗಟ್ಟನ್ನು ಸ್ಥಾಪಿಸಿತು.

ಭರತ ನಾಟ್ಯ ಇತಿಹಾಸದಲ್ಲಿ ಮೈಸೂರು ಸಂಪ್ರದಾಯ ನೃತ್ಯಶೈಲಿಯು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಅನೇಕ ನೃತ್ಯ ಕಲಾವಿದರು, ನೃತ್ಯಗುರುಗಳು, ನೃತ್ಯೋಪಾಸಕರು ಈ ಅದ್ಭುತ, ದೈವಿಕ ಕಲೆಯನ್ನು ಉಳಿಸಿಕೊಂಡು ಪೋಷಿಸಿಕೊಂಡು ಬಂದಿದ್ದಾರೆ. ಮೈಸೂರು ಶೈಲಿ ಹೆಮ್ಮರವಾಗಿ ಬೆಳೆದು, ಫಲಭರಿತವಾಗಿರುವುದರಲ್ಲಿ ಜಟ್ಟಿ ತಾಯಮ್ಮನವರ ಕೊಡುಗೆ ಗಣನೀಯವಾದುದು. ಈ ವಿಶಿಷ್ಟ ಪರಂಪರೆಯ ರೂವಾರಿ 'ನಾಟ್ಯಸರಸ್ವತಿ' ಎಂದೇ ಖ್ಯಾತಿ ಪಡೆದಿದ್ದ ಜಟ್ಟಿ ತಾಯಮ್ಮನವರು. ಈ ಪರಂಪರೆ ರೂಪುಗೊಳ್ಳಲು ಶ್ರಮಿಸಿದವರು ಮೂಗೂರು ಜೇಜಮ್ಮ, ಕೆ.ವೆಂಟಕಲಕ್ಷ್ಮಮ್ಮ, ಸುಂದರಮ್ಮ ಮುಂತಾದವರು.

'ನಾಟ್ಯ ಸರಸ್ವತಿ' ಜಟ್ಟಿ ತಾಯಮ್ಮ (1862–1947) ನೃತ್ಯಕ್ಕೆ ಹೊಸ ಕೃತಿಗಳನ್ನು ಸೇರಿಸಿ ಮೈಸೂರು ಸಾಂಪ್ರದಾಯಿಕ ನೃತ್ಯ ಶೈಲಿಗೆ ಸುಂದರ ಆಕಾರ ನೀಡಿ, ಆ ಕಲೆಗೆ ವಿಶಿಷ್ಟ ಸೊಬಗನ್ನು ತಂದುಕೊಟ್ಟರು. ಈ ಭವ್ಯ ಪರಂಪರೆಯನ್ನು ಮುಂದುವರೆಸಿಕೊಂಡು ಬಂದವರು. ಇವರ ಪಟ್ಟ ಶಿಷ್ಯೆ ಕೆ.ವೆಂಕಟಲಕ್ಷ್ಮಮ್ಮನವರು. ಕರ್ನಾಟಕದ ನೃತ್ಯ ಪ್ರಪಂಚದಲ್ಲಿ ಮತ್ತು ನೃತ್ಯಾಭಿಮಾನಿಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದವರು ಡಾ॥ ಕಡೂರು ವೆಂಕಟಲಕ್ಷ್ಮಮ್ಮ ಅವರು.

ಕಡೂರು ತಾಲ್ಲೂಕಿನ ತಂಗಲಿ ತಾಂಡ್ಯದ ಬಂಜಾರ ಜನಾಂಗದಲ್ಲಿ 1906ರ ಮೇ 29ರಂದು ಕೆ. ವೆಂಕಟಲಕ್ಷ್ಮಮ್ಮ ಜನಿಸಿದರು. ಸಣ್ಣವರಿದ್ದಾಗಲೇ ತಂದೆಯನ್ನು ಕಳೆದುಕೊಂಡು ಅಜ್ಜ ರಾಮನಾಯಕ ಅಜ್ಜಿಯ ಪೋಷಣೆಯಲ್ಲಿ ಬೆಳೆದ ವೆಂಕಟಲಕ್ಷ್ಮಮ್ಮನವರದು ಬಾಲಪ್ರತಿಭೆ. ಪ್ರಾಥಮಿಕ ವಿದ್ಯಾಭ್ಯಾಸ ಕಡೂರಿನಲ್ಲಿ. ಎಂಟನೆಯ ವಯಸ್ಸಿನಲ್ಲೇ ಬುದ್ಧಿಶಕ್ತಿ ನಾಶಮಾಡಲಾರದ ಸಂಪತ್ತು ಎಂಬ ತತ್ತ್ವವುಳ್ಳ 'ಲಕ್ಷ್ಮೀಸರಸ್ವತಿ ಸಂವಾದ'ವನ್ನು ಅಭಿನಯಿಸಿ, ಪುಟ್ಟ ವೆಂಕಟಲಕ್ಷ್ಮಮ್ಮ ತಾವು ಉತ್ತಮ ಕಲಾವಿದೆಯೆಂಬ ಕುರುಹನ್ನು ತೋರಿದ್ದಲ್ಲದೆ ಅಂತಹ ಅಪಹರಿಸಲಾಗದ ಸಂಪತ್ತನ್ನು ತಮ್ಮದಾಗಿಸಿಕೊಂಡರು. ಕಲಾಜಗತ್ತಿನಲ್ಲಿ ವಿಶಿಷ್ಟ ಹೆಜ್ಜೆಗುರುತನ್ನು ನಿರ್ಮಿಸಿದರು; ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಒಂದು ಹಳ್ಳಿಯ ಲಂಬಾಣಿ ಕುಟುಂಬದಲ್ಲಿ ಜನಿಸಿ, ತಮ್ಮ ಪ್ರತಿಭೆಯಿಂದ ಮೈಸೂರು ಅರಮನೆಯ ಆಸ್ಥಾನ ವಿದುಷಿ ಪಟ್ಟ ಪಡೆದಿದ್ದು ಕೆ.ವೆಂಕಟಲಕ್ಷ್ಮಮ್ಮನವರ ಸಾಧನೆಯ ಮೈಲಿಗಲ್ಲು.

ವೆಂಕಟಲಕ್ಷ್ಮಮ್ಮನವರಿಗೆ ಚಿಕ್ಕಂದಿನಿಂದಲೂ ನೃತ್ಯವೆಂದರೆ ಪ್ರಾಣ. ಒಮ್ಮೆ ಊರಿನಲ್ಲಿ ನೃತ್ಯ ಮಾಡಿದಾಗ ಬಾಲಕಿಯ ಹಾವಭಾವಗಳಿಗೆ ಮಾರುಹೋದ ಜೋಯಿಸರೊಬ್ಬರು 'ಹುಡುಗಿ ನೃತ್ಯ ಕಲಿತರೆ ಪ್ರಸಿದ್ಧಿ ಪಡೆಯುತ್ತಾಳೆ' ಎಂದು ಭವಿಷ್ಯ ನುಡಿದರು. ಅಂದಿನಿಂದ ಬಾಲಕಿಗೆ ಅದೇ ಗೀಳಾಯಿತು. ಕೆ.ವೆಂಕಟಲಕ್ಷ್ಮಮ್ಮ ಅವರ ಬಾಲಪ್ರತಿಭೆಯನ್ನು ಗುರುತಿಸಿ, ಈಕೆಯ ಕಲೆಯು ಗೀಳನ್ನು ಅರಿತ ಅಜ್ಜ-ಅಜ್ಜಿ ತಂಗಲಿ ತಮ್ಮಯ್ಯಂಗಾರರಿಂದ ಅಮರಕೋಶ, ಸಂಸ್ಕೃತಪಾಠ, ಪಿಟೀಲು ಕಿಟ್ಟಪ್ಪನವರಿಂದ ಸಂಗೀತದ ಪಾಠ ಹೇಳಿಸಿದರು. ನಂತರ ಊರ ಹಿರಿಯರ ಸಲಹೆಯಂತೆ ಕೆ. ವೆಂಕಟಲಕ್ಷ್ಮಮ್ಮನವರನ್ನು ಒಂಬತ್ತನೆ ವಯಸ್ಸಿನಲ್ಲಿಯೇ ವಿದ್ಯಾಭ್ಯಾಸದ ಸಲುವಾಗಿ ಮೈಸೂರಿಗೆ ಕರೆತಂದರು. ಆಗ ನೃತ್ಯ ಕ್ಷೇತ್ರದಲ್ಲಿ ಜಟ್ಟಿ ತಾಯಮ್ಮನವರು ಖ್ಯಾತಿ ಪಡೆದಿದ್ದರು. ಹೀಗಾಗಿ ನಾಟ್ಯ ಸರಸ್ವತಿ ಜಟ್ಟಿತಾಯಮ್ಮನವರಿಂದ ಭರತನಾಟ್ಯ ತರಬೇತಿ ಪಡೆಯಲಾರಂಭಿಸಿ ಇಪ್ಪತ್ತೇಳು ವರ್ಷಗಳ ದೀರ್ಘಕಾಲ ಶಿಕ್ಷಣ ಪಡೆದು ಕೆ. ವೆಂಕಟಲಕ್ಷ್ಮಮ್ಮ ಅವರ ಪಟ್ಟ ಶಿಷ್ಯೆಯೆನಿಸಿದರು. ಗುರುವಿನ ಪಾಂಡಿತ್ಯ, ಶಿಷ್ಯೆಯ ಆಸಕ್ತಿ ಎರಡು ಮೇಳೈಸಿ, ಅದ್ಭುತ ಕಲಾವಿದೆಯೊಬ್ಬಳು ರೂಪುಗೊಂಡಳು. ದೇವೋತ್ತಮ ಜೋಯಿಸರಿಂದ ಸಂಸ್ಕೃತ ಪಾಠ, ಶಾಂತಶಾಸ್ತ್ರಿಗಳಿಂದ ಮತ್ತಿತರ ಸಾಹಿತ್ಯದ ಪಾಠ, ಚಿಕ್ಕರಾಮರಾಯರು ಮತ್ತು ಆಸ್ಥಾನ ವಿದ್ವಾನ್ ಬಿ.ದೇವೇಂದ್ರಪ್ಪನವರಲ್ಲಿ ಶಾಸ್ತ್ರೀಯ ಸಂಗೀತ ಶಿಕ್ಷಣ ಹೀಗೆ ನೃತ್ಯದ ಉಪಾಂಗಗಳಲ್ಲಿಯೂ ಪರಿಣತಿ ಪಡೆದಿದ್ದ ಕೆ.ವೆಂಕಟಲಕ್ಷ್ಮಮ್ಮನವರು ಸಂಸ್ಕೃತ-ಕನ್ನಡ-ಸಂಗೀತ ಪೂರ್ಣಜ್ಞಾನವುಳ್ಳ ನರ್ತಕಿಗೆ ಅವಶ್ಯಕ ಎಂಬ ಅಭಿಪ್ರಾಯ ತಳೆದವರಾಗಿದ್ದರು.

ಹದಿಮೂರನೆಯ ವಯಸ್ಸಿನಲ್ಲೇ ಕೆ.ವೆಂಕಟಲಕ್ಷ್ಮಮ್ಮನವರ ರಂಗಪ್ರವೇಶವು ಮೂಗೂರು ಪುಟ್ಟಮ್ಮಣ್ಣಿ, ಸೀತಮ್ಮ, ಜಯಲಕ್ಷ್ಮಮ್ಮ ಎಂಬ ನೃತ್ಯ ಕಲಾವಿದೆಯರ, ಮತ್ತು ಬಿಡಾರಂ ಕೃಷ್ಣಪ್ಪ, ವೆಂಕಟಗಿರಿಯಪ್ಪ, ಚಿಕ್ಕರಾಮರಾಯರು, ದೇವೋತ್ತಮ ಜೋಯಿಸರು, ಗುಂಡಾಜೋಯಿಸರು ಮೊದಲಾದ ವಿದ್ವಾಂಸರ ಸಮ್ಮುಖದಲ್ಲಿ ನಡೆಯಿತು. ಅನಂತರ ಜಟ್ಟಿ ತಾಯಮ್ಮನವರು, ತಮ್ಮೊಡನೆ ಶಿಷ್ಯೆ ವೆಂಕಟಲಕ್ಷ್ಮಮ್ಮನವರನ್ನು ಕಛೇರಿಗಳಿಗೆ ಕರೆದೊಯ್ಯುತ್ತಿದ್ದರು. ಕಛೇರಿಯ ಮೊದಲ ಭಾಗವಾದ ಪೂರ್ವರಂಗ, ಜತಿಶ್ವರ, ವರ್ಣಗಳನ್ನು ಶಿಷ್ಯೆಯರ ಕೈಲಿ ಮಾಡಿಸಿ, ನಂತರ ತಾವು ಶ್ಲೋಕ, ಅಷ್ಟಪದಿ, ಪದ, ಜಾವಳಿಗಳ ಅಭಿನಯ ಮಾಡುತ್ತಿದ್ದರು. ಇದರಿಂದ ತಾಯಮ್ಮನವರ ಶಿಷ್ಯೆಯರಾದ ಪುಟ್ಟವೆಂಕಟಮ್ಮ, ನಾಗರತ್ನ ಮತ್ತು ವೆಂಕಟಲಕ್ಷ್ಮಮ್ಮನವರು ಕಾರ್ಯಕ್ರಮ ನಡೆಸಲು ಅವಕಾಶ ದೊರಕುತ್ತಿತ್ತು. ವೆಂಕಟಲಕ್ಷ್ಮಮ್ಮನವರು ಮಾಡಿದ 'ಮರಚತಿವೊ ನಾ ಸಾಮಿ' ಎಂಬ ಜಾವಳಿಯನ್ನು ನೋಡಿದ ಸುಬ್ಬಣ್ಣನವರು 'ತಾಯಮ್ಮ ನಿನಗೆ ಈಕೆ ತಕ್ಕ ಶಿಷ್ಯೆ' ಎಂದು ಕೊಂಡಾಡಿದ್ದು ವಿಶೇಷ.

1939ರಲ್ಲಿ ಮೈಸೂರು ಅರಮನೆಯ ಆಸ್ಥಾನ ವಿದುಷಿಯಾಗಿ ಕೆ.ವೆಂಕಟಲಕ್ಷ್ಮಮ್ಮನವರು ನೇಮಕಗೊಂಡರು. ಆಗ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲ. ಮಹಾರಾಜರು ಸ್ವತಃ ಕಲಾವಿದರಾಗಿದ್ದರಿಂದ ಆಸ್ಥಾನ ವಿದ್ವಾಂಸರಾಗುವುದು ಸುಲಭವಾಗಿರಲಿಲ್ಲ. ಸಂಗೀತ, ನೃತ್ಯ, ಸಾಹಿತ್ಯದಲ್ಲಿ ಪರಿಣತರಾದವರಿಗೆ ಅರಮನೆ ದರ್ಬಾರು ಕೆಲಸಕ್ಕೆ ಅವಕಾಶ ದೊರಕುತ್ತಿತ್ತು. ನಾಲ್ಕಾರು ಪೂರ್ವಭಾವಿ ಪರೀಕ್ಷೆಗೊಳಪಟ್ಟು ತೇರ್ಗಡೆಯಾಗಿ ಅರಸರ ಕೃಪೆಗೆ ಪಾತ್ರರಾದರೇ ಅರಮನೆಯಲ್ಲಿ ಪ್ರವೇಶ. ವೆಂಕಟಲಕ್ಷ್ಮಮ್ಮನವರು ನೃತ್ಯ, ಸಂಗೀತ, ಸಾಹಿತ್ಯದಲ್ಲಿ ಪರಿಣತಿ ಗಳಿಸಿ ಅರಮನೆಯ ಪರೀಕ್ಷೆಗೆ ಸಿದ್ಧವಾದರು. ಸಂಗೀತ ದಿಗ್ಗಜ ಮೈಸೂರು ಕೆ.ವಾಸುದೇವಾಚಾರ್ಯರ ಮನೆಯಲ್ಲಿ ಹತ್ತಾರು ವಿದ್ವಾಂಸರನ್ನೊಳಗೊಂಡ ವಿದ್ವತ್ ಮಂಡಳಿ, ವೆಂಕಟಲಕ್ಷ್ಮಮ್ಮನವರನ್ನು ಪರೀಕ್ಷಿಸಿದ ನಂತರ ಅವರನ್ನು 'ಆಸ್ಥಾನ ವಿದುಷಿ' ಪಟ್ಟಕ್ಕೆ ನೇಮಿಸಲಾಯಿತು. ಗುರುಕುಲ ಮಾದರಿಯಲ್ಲಿ ಪಡೆದ ಶಿಸ್ತುಬದ್ಧ ಶಿಕ್ಷಣ, ಸತತ ಅಭ್ಯಾಸದಿಂದ ನೃತ್ಯಕಲೆಯನ್ನು ಕರಗತಗೊಳಿಸಿಕೊಂಡ ಕೆ.ವೆಂಕಟಲಕ್ಷ್ಮಮ್ಮ ಇಪ್ಪತ್ತೆರಡನೆಯ ವಯಸ್ಸಿನಲ್ಲೇ ಮೈಸೂರು ಅರಮನೆಯ ಆಸ್ಥಾನ ನರ್ತಕಿಯಾದರು. ಪ್ರತಿಷ್ಠಿತ ಆಸ್ಥಾನ ವಿದುಷಿ ಪಟ್ಟ ದೊರಕಿ, ಅರಮನೆ ಸೇರಿದ ನಂತರ ಅರಮನೆಯ ದ್ವಾದಶಿ ಕಟ್ಟಳೆ, ಕೃಷ್ಣಾಷ್ಟಮಿ, ಗಣಪತಿ ಹಬ್ಬ, ದಸರಾ ದರ್ಬಾರ್ ಹೀಗೆ ಹಲವಾರು ವಿಶೇಷ ಸಂದರ್ಭಗಳಲ್ಲಿ

ಮೂವತ್ತು ವರ್ಷಗಳ ಕಾಲ ಮೈಸೂರು ಅರಮನೆಯ ಆಸ್ಥಾನ ನರ್ತಕಿಯಾಗಿ ಸೇವೆ ಸಲ್ಲಿಸಿ, ತಮ್ಮ ಗುರುವಿನಂತೆ ಆಸ್ಥಾನದ ಗೌರವ ಘನತೆಯನ್ನು ಶ್ರೀಮಂತಗೊಳಿಸಿದರು.

ವಾಸುದೇವಾಚಾರ್ಯರ ಮುಂದೆ ಮೂರು ಗಂಟೆಗಳ ಕಾಲ ಹಾಡಿದ್ದು, ಮುತ್ತಯ್ಯ ಭಾಗವತರ ಮನೆಯಲ್ಲಿ ಒಂದು ಗಂಟೆ ನರ್ತಿಸಿದ್ದು, ವೀಣೆ ಭಕ್ಷಿ ಸುಬ್ಬಣ್ಣನವರ ಮನೆಯಲ್ಲಿ ಕೃಷ್ಣೋತ್ಸವದಲ್ಲಿ ನರ್ತಿಸಿದ್ದು, ಅವರ ನೃತ್ಯ ಜೀವನದ ವಿಶೇಷ ಸಂದರ್ಭಗಳು. ಕೃಷ್ಣರಾಜ ಒಡೆಯರವರ ವರ್ಧಂತಿ ಉತ್ಸವ, ಜಯಚಾಮರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ ಮತ್ತು ಮದುವೆಗಳಲ್ಲಿ ತಾವು ಭಾಗಿಯಾಗಿ ನಡೆಸಿದ ಕಾರ್ಯಕ್ರಮಗಳು ಕೆ. ವೆಂಕಟಲಕ್ಷ್ಮಮ್ಮನವರ ಮನಸ್ಸಿನಲ್ಲಿ ಕೊನೆಯವರೆಗೂ ಹಚ್ಚಹಸಿರಾಗಿದ್ದ ಸುವರ್ಣ ನೆನಪುಗಳು. ನೃತ್ಯ ಕಾರ್ಯಕ್ರಮಗಳೇ ಅಲ್ಲದೆ ಕೆಲವು ವಿಶೇಷ ಸಂದರ್ಭಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸಿಕೊಟ್ಟವರು ಡಾ॥ ಕೆ. ವೆಂಕಟಲಕ್ಷ್ಮಮ್ಮ ಅವರು.

ರಸಾಭಿನಯದ ಪ್ರಾಮುಖ್ಯವೇ ಮೈಸೂರು ಶೈಲಿಯ ಹೆಗ್ಗಳಿಕೆ; ವೈಶಿಷ್ಟ್ಯ ಎಂಬುದು ಆ ಶೈಲಿಯ ಪ್ರವರ್ತಕರಲೊಬ್ಬರಾಗಿದ್ದ ಕೆ. ವೆಂಕಟಲಕ್ಷ್ಮಮ್ಮನವರ ಅಭಿಪ್ರಾಯ. ಹೀಗಾಗಿ ವೆಂಕಟಲಕ್ಷ್ಮಮ್ಮ ಅವರ ನೃತ್ಯ ಮೈಸೂರು ಶೈಲಿಯ ವೈಶಿಷ್ಟ್ಯ ಮತ್ತು ಸಿರಿವಂತಿಕೆಗಳ ಶ್ರೇಷ್ಠ ಪ್ರದರ್ಶನವೆಂದು ಹೆಸರು ಪಡೆಯಿತು. ಮೈಸೂರು ಅರಸರನ್ನು ಹೊಗಳುವ ಚೂರ್ಣಿಕೆಗಳು, ನೃತ್ಯಕ್ಕಾಗಿಯೇ ವಿದ್ವಾಂಸರಿಂದ ರಚಿತವಾದ ಸಪ್ತಪದಿಗಳು, ಅಷ್ಟಪದಿಗಳು, ಪದ, ಜಾವಳಿ ಇವೆಲ್ಲವನ್ನು ಮನಮುಟ್ಟುವಂತೆ ಅಭಿನಯಿಸುವ ಮೈಸೂರು ಸಾಂಪ್ರದಾಯಿಕ ನೃತ್ಯ ಶೈಲಿ ವೆಂಕಟಲಕ್ಷ್ಮಮ್ಮನವರಲ್ಲಿ ಸಾರ್ಥಕತೆಯನ್ನು ಕಂಡಿತು. ಇಪ್ಪತ್ತನೆಯ ಶತಮಾನದಲ್ಲಿ ಮೈಸೂರು ಶೈಲಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಾಗೂ ಅದರ ಬೆಳವಣಿಗೆಗೆ ಕೆ. ವೆಂಕಟಲಕ್ಷ್ಮಮ್ಮನವರು ನೀಡಿದ ಕೊಡುಗೆ ಅಸಾಧಾರಣವಾದುದು.

ಸ್ವಾತಂತ್ರ್ಯಾನಂತರ ಆಸ್ಥಾನ ವಿದುಷಿ ನೇಮಕ ಅಂತ್ಯಗೊಂಡಾಗ ವೆಂಕಟಲಕ್ಷ್ಮಮ್ಮನವರ ಪ್ರತಿಭೆಗೆ ಹೊಸದೊಂದು ತಿರುವು ದೊರಕಿತು. ಅರಮನೆಗೆ, ದೇವಾಲಯಕ್ಕೆ ಸೀಮಿತವಾಗಿದ್ದ ನೃತ್ಯಕಲೆಯು ಸಾಮಾಜಿಕ ರಂಗವನ್ನು ಪ್ರವೇಶಿಸಿತು. ನಾಡಿನ ಕಲಾಜೀವನದ ಹಲವಾರು ವೇದಿಕೆಗಳಲ್ಲಿ ಕೆ. ವೆಂಕಟಲಕ್ಷ್ಮಮ್ಮನವರು ತಮ್ಮ ಅದ್ಭುತ ನೃತ್ಯವನ್ನು ಪ್ರದರ್ಶಿಸಿದ್ದರ ಪರಿಣಾಮವಾಗಿ ಕರ್ನಾಟಕದ ಈ ಶ್ರೇಷ್ಠ ಕಲಾವಿದೆಯ ಸಾಧನೆ ರಾಷ್ಟ್ರಮಟ್ಟದಲ್ಲಿ ಬೆಳಗುವಂತಾಯಿತು.

ಮೈಸೂರು ವಿಶ್ವವಿದ್ಯಾಲಯವು 1963ರಲ್ಲಿ ಲಲಿತಕಲಾ ಕಾಲೇಜಿನ ನೃತ್ಯ ವಿಭಾಗಕ್ಕೆ ವೆಂಕಟಲಕ್ಷ್ಮಮ್ಮನವರನ್ನು ನೇಮಕ ಮಾಡಿತು. ಇವರ ನೇಮಕಾತಿ ಸಂದರ್ಭವನ್ನು ಹೀಗೆ ಜ್ಞಾಪಿಸಿಕೊಳ್ಳುತ್ತಾರೆ. ಇವರು ಲಲಿತ ಕಲಾ ಕಾಲೇಜಿಗೆ ಸಂದರ್ಶನಕ್ಕೆ ಬಂದಿದ್ದಾಗ ತಮಿಳು ನಾಡಿನ ಪ್ರಸಿದ್ಧ ನೃತ್ಯಶಾಸ್ತ್ರದ ಪ್ರಾಧ್ಯಾಪಕರ ನೇತೃತ್ವದಲ್ಲಿ ಇವರ ಸಂದರ್ಶನ ಕಾರ್ಯಕ್ರಮ ನಡೆಯಿತು. ಇವರ ಖ್ಯಾತಿ ತಿಳಿದಿದ್ದ ಆ ಪ್ರಾಧ್ಯಾಪಕರೆಲ್ಲ "ಇದು ಸಂದರ್ಶನವಲ್ಲ, ಕೇವಲ ವಿಷಯದ ಚರ್ಚೆ" ಎಂದು ಸ್ಪಷ್ಟಪಡಿಸಿ ಡಾ: ವೆಂಕಟಲಕ್ಷ್ಮಮ್ಮ ಹೇಳಿದ ವಿಚಾರಗಳನ್ನು ನೋಟ್ಸ್ ಮಾಡಿಕೊಂಡರು. ಮೈಸೂರು ನೃತ್ಯ ಪರಂಪರೆಯಲ್ಲಿ ಇವರ ಅನುಭವ ಮತ್ತು ವಿದ್ವತ್ತು ಶ್ರೇಷ್ಠಮಟ್ಟದ್ದು,; ಮುಂದೆ ಮತ್ತೆ ಒಂಬತ್ತು ವರ್ಷಗಳ ಕಾಲ ರೀಡರ್ ಆಗಿಯೂ ಸೇವೆ ಸಲ್ಲಿಸಿದ ಕೆ. ವೆಂಕಟಲಕ್ಷ್ಮಮ್ಮ ಅವರು ಭಾರತ ಕಲಾನಿಕೇತನ ಎಂಬ ಸ್ವಂತ ಸಂಸ್ಥೆಯೊಂದನ್ನು ಸ್ಥಾಪಿಸಿ ನಡೆಸುತ್ತಿದ್ದರು. ಇದರಲ್ಲಿ ಅಮೇರಿಕದ ವಿಶ್ವವಿದ್ಯಾಲಯದ ಒಂದು ವಿದ್ಯಾರ್ಥಿಗಳ ತಂಡ ಬಂದು ವೆಂಕಟಲಕ್ಷ್ಮಮ್ಮನವರಿಂದ ತರಬೇತಿ ಪಡೆದದ್ದು ವಿಶೇಷ. ಹಲವಾರು ಮಂದಿ ಪ್ರಖ್ಯಾತ ನೃತ್ಯಗಾರ್ತಿಯರೂ ವೆಂಕಟಲಕ್ಷ್ಮಮ್ಮನವರ ಮೈಸೂರು ಶೈಲಿಯ ಅಭಿನಯವನ್ನು ಕಲಿತಿದ್ದಾರೆ. ತಮ್ಮ 70-80ರ ವಯಸ್ಸಿನಲ್ಲಿಯೂ ಇವರು ವೇದಿಕೆಯ ಮೇಲೆ ಕುಳಿತುಕೊಂಡೇ ಹಿನ್ನೆಲೆ ಗಾಯನಕ್ಕೆ ತಕ್ಕಂತೆ ರಸಾಭಿನಯ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದರು. ಇದು ಮದ್ರಾಸಿನ ಪ್ರಖ್ಯಾತ ಕಲಾವಿದೆ ಬಾಲಸರಸ್ವತಿ ಅವರನ್ನು ನೆನಪಿಗೆ ತರುತ್ತಿತ್ತು. ರಾಷ್ಟ್ರಪತಿ ಡಾ.ರಾಧಾಕೃಷ್ಣನ್ ಅವರೇ ವೆಂಕಟಲಕ್ಷ್ಮಮ್ಮನವರ ಅಷ್ಟಪದಿ, ಜಾವಳಿಗಳಿಗೆ ನೀಡಿದ ಅಭಿನಯವನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು.

ಮೈಸೂರು ಕಲಾಪರಂಪರೆಯ ಶ್ರೇಷ್ಠ ಪ್ರತಿನಿಧಿಯಾಗಿದ್ದ ಕೆ.ವೆಂಕಟಲಕ್ಷ್ಮಮ್ಮನವರಿಗೆ ಅನೇಕ ಪ್ರಶಸ್ತಿ, ಸನ್ಮಾನಗಳು ಸಂದಿವೆ. ಕರ್ನಾಟಕದ ಸಂಗೀತ ನಾಟಕ ಅಕಾಡೆಮಿ 1962ರಲ್ಲೇ ಇವರನ್ನು ಸನ್ಮಾನಿಸಿತ್ತು. ರಾಜ್ಯ ಮತ್ತು ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, 1977ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಡಿ.ಲಿಟ್, ವೆಂಕಟಲಕ್ಷ್ಮಮ್ಮನವರು ರಾಜ್ಯ ಸಂಗೀತ ಅಕಾಡೆಮಿ ಸದಸ್ಯರಾಗಿದ್ದರಲ್ಲದೆ ರಾಜ್ಯದ ಹಲವು ಸಂಗೀತ ನೃತ್ಯ ಸಂಸ್ಥೆಗಳೊಂದಿಗೆ ಸಂಪರ್ಕವಿಟ್ಟುಕೊಂಡಿದ್ದರು. 1986ರಲ್ಲಿ ಮುಂಬಯಿಯ ಮೈಸೂರು ಅಸೋಸಿಯೇಶನ್‌ನವರು ಇವರ 80ನೇಯ ಹುಟ್ಟುಹಬ್ಬವನ್ನು ವೈಭವದಿಂದ ಆಚರಿಸಿ ಇವರಿಂದ ಅಭಿನಯ, ಪ್ರಾತ್ಯಕ್ಷಿಕೆ ಏರ್ಪಡಿಸಿ ಸನ್ಮಾನಿಸಿತು. ಬೆಂಗಳೂರಿನ ಗಾನಕಲಾ ಪರಿಷತ್ತು 'ನಾಟ್ಯವಿಶಾರದೆ' ಎಂಬ ಬಿರುದನ್ನಿತ್ತು ಸನ್ಮಾನಿಸಿತು. 1988ರಲ್ಲಿ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಲಭಿಸಿತು. 1989ರಲ್ಲಿ ಬೆಂಗಳೂರಿನ ಗಾಯನ ಸಮಾಜ ತಮ್ಮ ವಾರ್ಷಿಕ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ವೆಂಕಟಲಕ್ಷ್ಮಮ್ಮನವರನ್ನು ಆಯ್ಕೆ ಮಾಡಿ 'ಸಂಗೀತ ಕಲಾರತ್ನ' ಬಿರುದು ನೀಡಿ ಗೌರವಿಸಿತು. ಸಾಹಿತಿ ಚದುರಂಗರ ನೇತೃತ್ವದಲ್ಲಿ ಗುರು ವೆಂಕಟಲಕ್ಷ್ಮಮ್ಮನವರ ಸಾಕ್ಷ್ಯಚಿತ್ರವೊಂದನ್ನು ವಾರ್ತಾ ಮತ್ತು ಪ್ರಚಾರ ಇಲಾಖೆ ನಿರ್ಮಿಸಿದೆ. ಸಂಗೀತ ನೃತ್ಯ ಅಕಾಡೆಮಿ ಕೂಡ ಸಾಕ್ಷ್ಯಚಿತ್ರದ ವೀಡಿಯೋ ಒಂದನ್ನು ತಯಾರಿಸಿರುತ್ತದೆ. ನಾಟ್ಯಲೋಕದ ಅನಭಿಷಕ್ತ ಸಾಮ್ರಾಜ್ಞೆ ಕೆ.ವೆಂಕಟಲಕ್ಷ್ಮಮ್ಮನವರಿಗೆ 1992ರಲ್ಲಿ ರಾಷ್ಟ್ರದ ಪ್ರತಿಷ್ಠಿತ 'ಪದ್ಮಭೂಷಣ ಪ್ರಶಸ್ತಿ' ಲಭಿಸಿದ್ದು ಕರ್ನಾಟಕಕ್ಕೇ ಹೆಮ್ಮೆ ತಂದುಕೊಟ್ಟಿತು. 1995ರಲ್ಲಿ ಪ್ರಥಮವಾಗಿ ಶಾಂತಲಾ ನಾಟ್ಯ ಪ್ರಶಸ್ತಿ ಪಡೆದ ಹಿರಿಮೆಗೆ ಕೆ. ವೆಂಕಟಲಕ್ಷ್ಮಮ್ಮನವರು ಪಾತ್ರರು.

ಸರಳ ಜೀವನ, ಅಪಾರ ಗುರುಭಕ್ತಿ, ಆಧ್ಯಾತ್ಮದ ಕಡೆಗೆ ಹೆಚ್ಚಿನಾಸಕ್ತಿ– ಇವು ಅವರ ವ್ಯಕ್ತಿತ್ವದ ಕೆಲವು ಪ್ರಮುಖ ಅಂಶಗಳು. ಅಭಿನಯಕ್ಕೆ ನಿಂತರೆ ವೆಂಟಕಲಕ್ಷ್ಮಮ್ಮನವರು ಬೇರೊಂದು ಲೋಕವನ್ನೇ ಸೃಷ್ಟಿಸುತ್ತಿದ್ದರು. ಒಂದೇ ಸಾಹಿತ್ಯವನ್ನು ಹಲವು ರೀತಿಯಲ್ಲಿ ಅಭಿನಯಿಸಬಲ್ಲ ಪ್ರತಿಭೆ ಅವರಿಗಿತ್ತು. ಜಯದೇವ ಅಷ್ಟಪದಿ, ಚೂರ್ಣಿಕೆ, ಕಂದ, ಜಾವಳಿ, ಶ್ಲೋಕಗಳನ್ನು ಅಭಿನಯಿಸುವಾಗ ಪ್ರದರ್ಶಿಸುತ್ತಿದ್ದ ಭಾವತೀವ್ರತೆಯ ಸ್ಪರ್ಶ ಅವರ ಕಲಾಭಿಜ್ಞತೆಗೆ ಸಾಕ್ಷಿಯಾಗಿದೆ. ಭಾಷಾಜ್ಞಾನ–ಸಂಗೀತ ಜ್ಞಾನ–ನೃತ್ಯ ಪರಿಣತಿ ಇವುಗಳ ಸಮ್ಮೇಳನದೊಂದಿಗೆ ಅವರು ಅಭಿನಯಿಸುವ ಕೃತಿಗಳು ಸುಂದರ ಆಕಾರ ಪಡೆಯುತ್ತಿತ್ತು; ಕಲಾರಸಿಕರನ್ನು ಮೂಕವಿಸ್ಮಿತರನ್ನಾಗಿಸುತ್ತಿತ್ತು.

ಮೈಸೂರು ಶೈಲಿಯ ನೃತ್ಯ ಪರಂಪರೆಯ ಭವ್ಯ ಪ್ರತೀಕವಾಗಿದ್ದ ಡಾ॥ ಕಡೂರು ವೆಂಕಟಲಕ್ಷ್ಮಮ್ಮನವರು ಕರ್ನಾಟಕದ ಅನನ್ಯ ನೃತ್ಯಕಲಾವಿದೆ, ನೃತ್ಯಗುರು. ಏಳು ದಶಕಗಳಿಗೂ ಹೆಚ್ಚುಕಾಲ ಕಲಾಸೇವೆಯನ್ನು ಮಾಡಿದ ಪದ್ಮಭೂಷಣ ಡಾ॥ ಕೆ.ವೆಂಕಟಲಕ್ಷ್ಮಮ್ಮನವರು ಸಾವಿರಾರು ನೃತ್ಯ ವಿದ್ಯಾರ್ಥಿಗಳಿಗೆ ಅಭಿನಯದ ಮಾಹಿತಿ, ಮಾರ್ಗದರ್ಶನ ನೀಡಿದ್ದಾರೆ. ಹೆಚ್ಚುಕಡಿಮೆ ನಾಡಿನ ಎಲ್ಲಾ ನೃತ್ಯ ಗುರುಗಳ ಶಿಷ್ಯರೂ ಒಂದಲ್ಲ ಒಂದು ಬಾರಿ ವೆಂಕಟಲಕ್ಷ್ಮಮ್ಮನವರಿಂದ ಮಾರ್ಗದರ್ಶನ ಪಡೆದವರೇ ಆಗಿದ್ದಾರೆ ಎಂದರೆ ಅತಿಶಯೋಕ್ತಿಯಾಗದು. ಬೆರಗುಗೊಳಿಸುವ ಸ್ಮರಣಶಕ್ತಿ, ಸೂಕ್ಷ್ಮಮತಿ, ವಿದ್ವತ್ತು, ವಿಚಾರ–ಅನುಭವ ಮಿಳಿತಗೊಂಡ ಅವರ ನೃತ್ಯ ಸಾಧನೆಯು ಡಾ.ಕೆ.ವೆಂಕಟಲಕ್ಷ್ಮಮ್ಮ ಅವರನ್ನು ಕಲಾಪ್ರಪೂರ್ಣೆಯನ್ನಾಗಿಸಿದೆ.

ಇಂತಹ ಅದ್ಭುತ ಪ್ರತಿಭಾವಂತ ಮೈಸೂರು ಸಾಂಪ್ರದಾಯಿಕ ನೃತ್ಯ ಶೈಲಿಯ ನಾಟ್ಯವಿಶಾರದೆ ಡಾ. ಕೆ. ವೆಂಕಟಲಕ್ಷ್ಮಮ್ಮನವರು ಕಡೂರಿನಲ್ಲಿ ದಿನಾಂಕ: 03.07.2002 ರಂದು ವಿಧಿವಶರಾದರು. ಮೈಸೂರು ಶೈಲಿಯ ನಾಟ್ಯಕಲಾ ಪ್ರಪಂಚದಲ್ಲಿ ಚಿರಸ್ಥಾಯಿಯಾದ ಹೆಸರನ್ನು ಮಾಡಿರುವ ಪದ್ಮಭೂಷಣ ಡಾ॥ ಕೆ.ವೆಂಕಟಲಕ್ಷ್ಮಮ್ಮನವರು ಕಾಲವಳಿಸದ ಕಲಾವಿದೆ; ಕಲಾ ಪ್ರಪಂಚದ ಧ್ರುವತಾರೆ. ಕಡೂರಿನ ಒಂದು ಹಳ್ಳಿಯ ಲಂಬಾಣಿ ಕುಟುಂಬದಲ್ಲಿ ಜನಿಸಿ, ರಾಷ್ಟ್ರಮಟ್ಟದಲ್ಲಿ ತಮ್ಮ ಉಜ್ವಲ ಪ್ರತಿಭೆಯಿಂದ ಹೆಸರುಗಳಿಸಿದ ಪದ್ಮವಿಭೂಷಣ ಕಡೂರು ವೆಂಕಟಲಕ್ಷ್ಮಮ್ಮನವರ ನೃತ್ಯಕಲಾ ಜೀವನ ಒಂದು ಸಾಹಸ, ಸಾಧನಾ ಮತ್ತು ರಸಗಾಥೆಯಾಗಿದೆ.

———— * ————

ಹಾಡುನಟಿ ಅಮೀರಬಾಯಿ ಕರ್ನಾಟಕಿ

ಡಾ. ರಹಮತ್ ತರೀಕೆರೆ

ನಟಿಯ ಬೆನ್ನುಹತ್ತಿ

ಕರ್ನಾಟಕ ಸಂಸ್ಕೃತಿಯ ಅಧ್ಯಯನಕ್ಕಾಗಿ ಉತ್ತರ ಕರ್ನಾಟಕವನ್ನು ನಾನು ಸುತ್ತುವಾಗೆಲ್ಲ, ನನ್ನ ಕಿವಿಯ ಮೇಲೆ ಅಮೀರಬಾಯಿ ಕರ್ನಾಟಕಿ ಅವರ ಹೆಸರು ಬೀಳುತ್ತಿತ್ತು. ಬಿಜಾಪುರದ ಅಮೀನುದ್ದೀನ್ ದರ್ಗಾಕ್ಕೆ ಹೋದಾಗ, ಅವರು ಉರುಸಿನಲ್ಲಿ ಹಾಡುತ್ತಿದ್ದುದನ್ನು ಜನ ನೆನೆಯುತ್ತಿದ್ದರು; ಬೀಳಗಿಯ ಡೋಂಗ್ರಿ ಸಾಹೇಬನ ದರ್ಗಾದಲ್ಲಿರುವಾಗ, ಆಕೆ ದರ್ಗಾದ ಪರಮಭಕ್ತೆ ಎನ್ನುತ್ತಿದ್ದರು; ಬೀಳಗಿಯ ಮೊಹರಂ ಹಬ್ಬದಲ್ಲಿ ಖತಲರಾತ್ರಿಯ ದಿನ ಅಮೀರಬಾಯಿ ಮುಂಬೈನಿಂದ ಬಂದು ಹಾಡುತ್ತಿದ್ದುದನ್ನು ಹೇಳುತ್ತಿದ್ದರು. ಗದಗ, ಧಾರವಾಡ, ಬಾಗಲಕೋಟೆಯ ಹಿಂದೂಸ್ತಾನಿ ಸಂಗೀತಗಾರರ ಜತೆ ಮಾತಾಡುವಾಗ, ಅಮೀರಬಾಯಿ ಹಾಡುತ್ತಿದ್ದ ಗಜಲ್ ಮುಜರಾ ಬಗ್ಗೆ ಪ್ರಸ್ತಾಪಿಸುತ್ತಿದ್ದರು. ರಂಗಭೂಮಿಯವರಂತೂ ಅವರ ಕನ್ನಡ ರಂಗಗೀತೆಗಳನ್ನು ಆನಂದದಿಂದ ಸ್ಮರಿಸುತ್ತಿದ್ದರು. ಹೀಗೆ ಸೂಫಿಪಂಥ, ಮೊಹರಂ, ರಂಗಭೂಮಿ, ಸಿನಿಮಾ, ಸಂಗೀತ–ಇತ್ಯಾದಿ ವಿಷಯಗಳಲ್ಲಿ ಹುಡುಕಾಟ ಮಾಡಲು ಹೋದ ಯಾರಿಗೂ, ಅಮೀರಬಾಯಿಯವರ ಹೆಸರು ಕೇಳಿಸುತ್ತದೆ. ಅಮೀರಬಾಯಿ ಕಳೆದ ಶತಮಾನದ 40–50ರ ದಶಕದಲ್ಲಿ ಹಿಂದಿ ಸಿನಿಮಾ ರಂಗದ ಖ್ಯಾತ ನಟಿಯೂ ಮಧುರ ಗಾಯಕಿಯೂ ಆಗಿದ್ದವರು. ಅವರ ಹಾಡುಗಳಿಂದಲೇ ಪ್ರಸಿದ್ಧವಾಗಿದ್ದ 'ಕಿಸ್ಮತ್' ಸಿನಿಮಾ ಆ ಕಾಲದ ತರುಣರಿಗೆ ಹುಚ್ಚು ಹಿಡಿಸಿತ್ತು. ಅಮೀರಬಾಯಿಯವರು 'ವೈಷ್ಣವ ಜನತೋ ತೇನೆ ಕಹಿಯೇ' ಭಜನ್ ಹಾಡಿಗಾಗಿ ಸ್ವತಃ ಗಾಂಧೀಜಿ ಅವರ ಅಭಿಮಾನಿಯಾಗಿದ್ದರು. ಇವೆಲ್ಲ ವಿವರಗಳು ಅವರ ಬಗೆಗಿನ ಕುತೂಹಲವನ್ನು ಉಕ್ಕಿಸುತ್ತಿದ್ದವು. ಆದರೆ ಎಲ್ಲೂ ಪೂರ್ಣ ಮಾಹಿತಿ ಸಿಗುತ್ತಿರಲಿಲ್ಲ.

ನನ್ನ ಕುತೂಹಲಕ್ಕೆ ತಿರುವು ಸಿಕ್ಕಿದ್ದು, ಧಾರವಾಡದ ಸಂಗೀತ ಪ್ರೇಮಿಯಾದ ರಾಜಶೇಖರ ಜಂಗಮಶೆಟ್ಟಿ ಅವರಿಂದ. ಮೂಲತಃ ಬಿಜಾಪುರ ಜಿಲ್ಲೆಯವರಾದ ಜಂಗಮಶೆಟ್ಟರು ವಿದ್ಯುತ್ ಇಲಾಖೆಯ ಇಂಜಿಯನಿಯರಾಗಿ ನಿವೃತ್ತರಾದವರು. ಹಳೇ ಹಿಂದಿ ಸಿನಿಮಾ ಹಾಡುಗಳ ಪ್ರೇಮಿಯಾದ ಅವರು ಒಮ್ಮೆ ಮಾತಾಡುತ್ತ ಅಮೀರ್‌ಬಾಯಿ ಸುದ್ದಿ ತೆಗೆದರು: "ನೋಡ್ರಿ, ಬೀಳಗಿಯಂತಹ ಸಣ್ಣ ಊರಿಂದ ಹೋದ ಈ ಹೆಣ್ಮಗಳು ಮುಂಬೈದೊಳಗೆ ಎಷ್ಟು ದೊಡ್ಡ ಸಾಧನಿ ಮಾಡಿದಳು? ಅವಳು ನೋಡಲಿಕ್ಕೂ ಎಷ್ಟು ಚಂದ? ಅವಳ ಹಾಡಾದರೂ ಎಷ್ಟು ಮಧುರ? ಅವಳಿಗೆ ಕರ್ನಾಟಕದ ಮ್ಯಾಲ ಶೋಧ ಮಾಡ್ರಿ" ಎಂದರು. ಜತೆಗೆ ತಮ್ಮ ಬಳಿ ಆಕೆ ಬಗ್ಗೆಯಿದ್ದ ಒಂದು ಚಿಕ್ಕ ಪತ್ರಿಕಾ ಲೇಖನವನ್ನೂ ಹಾಡುಗಳ ಕ್ಯಾಸೆಟ್ಟನ್ನೂ ಕೊಟ್ಟರು. ಮಾತ್ರವಲ್ಲ, ಆಕೆಯ ಬಗ್ಗೆ ಅಭಿಮಾನವು ಅಪಾರ ತಿಳಿವಳಿಕೆಯೂ ಇದ್ದ ಧಾರವಾಡದಲ್ಲಿರುವ ರಂಗನಟ, ಚಲನಚಿತ್ರ ಇತಿಹಾಸಕಾರ ಸುರೇಶ ಕುಲಕರ್ಣಿಯವರನ್ನು ಭೇಟಿ ಮಾಡಿಸಿದರು.

ನನಗೆ ಈ ನಟಿಯ ಬೆನ್ನು ಹತ್ತಲು ಇಷ್ಟು ಸಾಕಾಯಿತು. ಹುಡುಕಾಟ ಶುರು ಮಾಡಿದೆ. ಉತ್ತರ ಕರ್ನಾಟಕದ ಅನೇಕ ಊರುಗಳಲ್ಲಿ ಅವರ ಅಭಿಮಾನಿಗಳು ಸಾವಿರಾರು ಜನರಿದ್ದರು. ಧಾರವಾಡದ ಆಕಾಶವಾಣಿಯು ಅವರ ಬಗ್ಗೆ ಒಂದು ಕಾರ್ಯಕ್ರಮ ಪ್ರಸಾರ ಮಾಡಿತ್ತು. ಬಿಜಾಪುರದಲ್ಲಿ ಅವರ ತಮ್ಮನ ಮಕ್ಕಳಿದ್ದರು. ಅವರು ತಮ್ಮನಿಗೆ ಕಟ್ಟಿಸಿಕೊಟ್ಟ ಅಮೀರ್ ಥಿಯೇಟರ್ ಕೂಡ ಅಲ್ಲಿತ್ತು. ಬಿಜಾಪುರದ ಖಬರಸ್ಥಾನದಲ್ಲಿ ಅವರ ಸಮಾಧಿಯಿತ್ತು. ಅಮೀರಬಾಯಿ ಅವರನ್ನು ತಮ್ಮ ಯೌವನದ ದಿನಗಳಲ್ಲಿ ಕಂಡಿರುವ ಹಿರಿಯ ತಲೆಮಾರಿಗೆ ಸೇರಿದ ಅನೇಕರನ್ನು ಕಂಡು ಮಾತಾಡಿಸಿದೆ. ಬಿಜಾಪುರದಲ್ಲಿರುವ ಅವರ ತಮ್ಮನ ಮಕ್ಕಳನ್ನು ಭೇಟಿಯಾದೆ. ಅಮೀರಬಾಯಿ ಅವರ ಅಪೂರ್ವ ಫೋಟೋಗಳು ಸಿಕ್ಕಿದವು. ಒಂದು ಫೋಟೋದಲ್ಲಿ ನಾಲ್ಕೂ ಸೋದರಿಯರು ಕುಳಿತಿದ್ದಾರೆ. ಗೋಹರಬಾಯಿಯವರಲ್ಲಿ ಒಂದು ಬಗೆಯ ಚಂಚಲವಾದ ಎಳೆತನವಿದ್ದರೆ, ಅಮೀರಬಾಯಿವರ ಮೊಗದಲ್ಲಿ ಗಾಂಭೀರ್ಯವಿದೆ, ಪ್ರಸನ್ನ ಮಂದಸ್ಮಿತವಿದೆ. ಏನಿಲ್ಲವೆಂದರೂ ಇದು ಎಪ್ಪತ್ತೈದು ವರ್ಷದ ಹಿಂದಿನ ಚಿತ್ರ. ಹುಡುಕುತ್ತ ಹುಡುಕುತ್ತ ವಿಸ್ಮೃತಿಯ ಗರ್ಭದಲ್ಲಿ ಹೂತುಹೋಗಿದ್ದ ಅಮೀರಬಾಯಿಯವರ ಲೋಕವೊಂದು ನಿಧಾನವಾಗಿ ನನ್ನೆದುರು ಬಿಚ್ಚಿಕೊಳ್ಳತೊಡಗಿತು.

ಬಿಜಾಪುರ ಹಿನ್ನೆಲೆ

ಅಮೀರಬಾಯಿ ಕರ್ನಾಟಕಿ ಆಗಿನ ಬಿಜಾಪುರ ಜಿಲ್ಲೆಯ ಬೀಳಗಿಯಲ್ಲಿ ಹುಟ್ಟಿದವರು. ತಾಯಿ ಅಮೀನ. ತಂದೆ ಹುಸೇನಸಾಬ, ತಬಲಾ ಮತ್ತು ಪೇಟಿ ನುಡಿಸುವ ಕಲಾವಿದ. ಅಮೀರಬಾಯಿಯವರಿಗೆ ಅಹಲ್ಯಾಬಾಯಿ ಎಂಬ ಅಕ್ಕನೂ, ಗೋಹರ್‌ಬಾಯಿ, ಬಡೇಮಾ, ಡೋಂಗ್ರಿಮಾ ಎಂಬ ತಂಗಿಯರೂ, ದಸ್ತಗಿರ್ ಎಂಬ ಸೋದರನೂ ಇದ್ದರು. ಅಮೀರಬಾಯಿ ಮೂಲತಃ ಸಂಗೀತ ಮತ್ತು ನಟನಾ ವೃತ್ತಿಯ ಕಲಾವಂತರ ಮನೆತನದಲ್ಲಿ ಹುಟ್ಟಿದವರು. ಕರ್ನಾಟಕದ ಕಲಾವಂತರು ಮೂಲತಃ ಗುಡಿಸಂಸ್ಕೃತಿಗೆ ಸೇರಿದವರು. ಈಗಲೂ ಕರ್ನಾಟಕದಲ್ಲಿ ಅನೇಕ ಗುಡಿಗಳಲ್ಲಿ ಕಲಾವಂತರು–ಇವರಲ್ಲಿ ಹೆಚ್ಚಿನವರು ಮುಸ್ಲಿಮರು–ಸಂಗೀತ ಸೇವೆ ಸಲ್ಲಿಸುವ ಪದ್ಧತಿಯಿದೆ. ಇದಕ್ಕಾಗಿ ಕೆಲವರಿಗೆ ಉಂಬಳಿಗಳಿವೆ. ಉತ್ತರ ಕರ್ನಾಟಕದ ಅನೇಕ ಊರುಗಳಲ್ಲಿ ಕಲಾವಂತರ ಓಣಿಗಳಿವೆ. ಧರ್ಮಾತೀತ ಬಾಳುವೆ ಮಾಡುತ್ತಿದ್ದ ಈ ಕಲಾವಂತರಲ್ಲಿ ಪ್ರತಿಭಾವಂತರ ಸಂಗೀತಗಾರರೂ ನಟರೂ ಮೂಡಿಬಂದರು.

ಇಪ್ಪತ್ತನೇ ಶತಮಾನದ ಮೊದಲ ಘಟ್ಟದಲ್ಲಿ ಹಿಂದೂಸ್ಥಾನಿ ಸಂಗೀತ, ರಂಗಭೂಮಿ, ಸಿನಿಮಾಗಳು ಒಂದರ ಹೊಟ್ಟೆಯಲ್ಲಿ ಇನ್ನೊಂದು ಹುಟ್ಟಿದಂತೆ ರೂಪುಗೊಂಡಂತಹ ಕಲೆಗಳು. ದೊಡ್ಡ ದೊಡ್ಡ ಗಾಯಕರು, ಸಿನಿಮಾ ಮತ್ತು ರಂಗಭೂಮಿಯಲ್ಲಿಯೂ ಕೆಲಸ ಮಾಡುತ್ತಿದ್ದರು. ಸಿನಿಮಾ ಮತ್ತು ರಂಗಭೂಮಿಯಲ್ಲಿರುವವರಿಗೆ ಕಡ್ಡಾಯವಾಗಿ ಸಂಗೀತ ಜ್ಞಾನವಿರುತ್ತಿತ್ತು. ಆಗಿನ ನಾಟಕ–ಸಿನಿಮಾಗಳು ಕೂಡ ಸಂಗೀತ ಪ್ರಧಾನವಾಗಿದ್ದವು. ಈ ಮೂರು ಕಲಾರಂಗಗಳ ಚರಿತ್ರೆಯನ್ನು ಕಲಾವಂತರನ್ನು ಬಿಟ್ಟು ಕಲ್ಪಿಸಿಕೊಳ್ಳುವಂತಿಲ್ಲ. ಬೆಂಗಳೂರು ನಾಗರತ್ನಮ್ಮ, ಲತಾ ಮಂಗೇಶ್‌ಕರ್, ಆಶಾ ಭೌಂಸ್ಲೆ, ಎಂ.ಎಸ್. ಸುಬ್ಬಲಕ್ಷ್ಮಿ, ಕರ್ನಾಟಕದ ಶಾಂತಾ ಹುಬ್ಳೀಕರ್, ಪಂಡರೀಬಾಯಿ, ಗಂಗೂಬಾಯಿ ಹಾನಗಲ್ ಮುಂತಾದವರೆಲ್ಲ ಇದೇ ಹಿನ್ನೆಲೆಯವರು. ಕಲೆಯ ಜಗತ್ತಿನಲ್ಲಿ ಕೀರ್ತಿವಂತರಾಗಿದ್ದ ಇವರು ಕೆಲಮಟ್ಟಿಗೆ ಸಾಮಾಜಿಕವಾಗಿ ಅಷ್ಟು ಮಾನ್ಯತೆಯಿಲ್ಲದ ಜೀವನವನ್ನು ಅನುಭವಿಸುತ್ತಿದ್ದವರು. ಮರಾಠಿ ಸಿನಿಮಾದಲ್ಲಿ ದೊಡ್ಡ ಹೆಸರು ಮಾಡಿದ ಶಾಂತಾ ಹುಬ್ಳೀಕರರ ಜೀವನದಲ್ಲಿ ಈ ಅಭದ್ರತೆಯ ಪರಿಯನ್ನು ಕಾಣುತ್ತೇವೆ. ಈಗ ಮುಪ್ಪು ಹಿಡಿದಿರುವ ಕರ್ನಾಟಕದ ಸಾನಿಗಳನ್ನು ನೋಡಿದರೂ ಈ ಘೋರ ಸತ್ಯ ಕಣ್ಣಿಗೆ ರಾಚುತ್ತದೆ. ತಮ್ಮನ್ನು ಕೀಳು ದೃಷ್ಟಿಯಿಂದ ನೋಡುವ ಸಾಂಪ್ರದಾಯಕ ಸಮಾಜದ ಕೊಂಕು ನೋಟಗಳಿಂದ ಈ ಕಲಾವಿದರು ಸಾಕಷ್ಟು ನೋವುಂಡರು. ಈ ನೋವಿನ ಎಳೆಗಳು ಅವರ ಕುಟುಂಬಗಳಿಗೆ ಸುತ್ತಿಕೊಂಡು ಇನ್ನೂ ಕಾಡುತ್ತಿವೆ. ಹೆಚ್ಚಿನ ಕಲಾವಂತರು ತಾವು ಸಂಗೀತಸೇವೆ ಸಲ್ಲಿಸುವ ಗುಡಿಗಳನ್ನು ನೆಚ್ಚಿಕೊಂಡು ತಂತಮ್ಮ ಊರುಗಳಲ್ಲೇ ಉಳಿದುಬಿಟ್ಟರು.

ಆದರೆ ಕೆಲವರು ಮಾತ್ರ ಈ ಗುಡಿಸೇವೆಯ ಸೀಮಿತ ಜಗತ್ತನ್ನು ತೊರೆದು, ವಿಶಾಲವಾದ ರಂಗಭೂಮಿಗೂ ಶಾಸ್ತ್ರೀಯ ಸಂಗೀತಕ್ಕೂ ಸಿನಿಮಾಕ್ಕೂ ಹೋಗಿ ದೊಡ್ಡ ಕಲಾವಿದರಾಗಿ ಬೆಳೆದುಬಿಟ್ಟರು. ಅವರಲ್ಲಿ ಗಂಗೂಬಾಯಿ ಹಾನಗಲ್, ಶಾಂತಾ ಹುಬ್ಳೀಕರ್, ಪಂಡರಿಬಾಯಿ, ಅಮೀರಬಾಯಿ, ಗೋಹರಬಾಯಿ ಮುಖ್ಯರು.

ಮುಂಬೈ ಪಯಣ

ಉತ್ತರ ಕರ್ನಾಟಕವು ಮುಂಬೈ ಪ್ರಾಂತ್ಯಕ್ಕೆ ಸೇರಿದ್ದಾಗ ಬಿಜಾಪುರ, ಧಾರವಾಡ, ಗದಗ, ಹುಬ್ಬಳ್ಳಿ, ಬೆಳಗಾವಿ ಜಿಲ್ಲೆಗಳ ಬಹುತೇಕ ನಟರಿಗೆ ಕೊಲ್ಲಾಪುರ, ಪುಣೆ, ಮುಂಬೈಗಳು ಸೆಳೆಯುತ್ತಿದ್ದವು. ಈ ಭಾಗದ ಅನೇಕ ನಟನಟಿಯರು ಈ ನಗರಗಳಿಗೆ ವಲಸೆ ಹೋದರು. ಅವರಲ್ಲಿ ಒಣಕುದರಿಯ ಶಾಂತಾರಾಂ, ಹುಬ್ಬಳ್ಳಿ ಪಕ್ಕದ ನಟಿ ಲೀಲಾ ಚಿಟ್ನೀಸ್, ಸುಮನ್ ಕಲ್ಯಾಣಪುರ್, ಲೀಲಾ ಚಂದಾವರ್ಕರ್, ಶಾಂತೇಶ ಪಾಟೀಲ್ ಮುಖ್ಯರು. ಈ ಸಾಲಿನಲ್ಲಿ ಗಿರೀಶ್ ಕಾರ್ನಾಡ್ ಈಚಿನವರು ಅಷ್ಟೆ. ಮುಂಬೈ ಕರ್ನಾಟಕದ ಕಲಾವಿದರು ಕೊಲ್ಲಾಪುರ ಪುಣೆ ಮುಂಬೈ ಜಗತ್ತಿಗೆ ಬೆಸೆದುಕೊಳ್ಳಲು ಅವರು ರಾಜಕೀಯವಾಗಿ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದು ಮಾತ್ರ ಕಾರಣವಲ್ಲ. ಈ ಭಾಗದ ಸಾಂಸ್ಕೃತಿಕ ಪರಿಸರವೂ ಕಾರಣ. ಹಿಂದಿ ಮತ್ತು ಮರಾಠಿ ಸಿನಿಮಾಕ್ಕೆ ಬೇಕಾದ ಭಾಷಿಕ ಪರಿಸರ ಇಲ್ಲಿತ್ತು. ಧಾರವಾಡ ಹುಬ್ಬಳ್ಳಿಗಳು ಭಾರತದ ಪ್ರಮುಖ ಹಿಂದೂಸ್ಥಾನಿ ಗಾಯಕರನ್ನು ಪಡೆದಿದ್ದವು. ಮರಾಠಿ ರಂಗಭೂಮಿ ಈ ಭಾಗದಲ್ಲಿ ಬಂದು ಕ್ಯಾಂಪ್ ಹಾಕುತ್ತಿತ್ತು. ಇದೇ ಹೊತ್ತಿನಲ್ಲಿ ಕನ್ನಡದ ಪ್ರಧಾನಧಾರೆಯ ಸಿನಿಮಾಗಳು ಮೈಸೂರು ಕರ್ನಾಟಕದಲ್ಲಿ ತಯಾರಾಗುತ್ತಿದ್ದವು. ಅವಕ್ಕೆ ಮದ್ರಾಸು ಕೊಯಮತ್ತೂರು ಕೇಂದ್ರಗಳಾಗಿದ್ದವು. ಮೈಸೂರು ರಂಗಭೂಮಿಯು ಕರ್ನಾಟಕ ಸಂಗೀತ ಹಿನ್ನೆಲೆಯುದಾಗಿದ್ದು, ಹಿಂದೂಸ್ಥಾನಿ ಸಂಗೀತ ಹಿನ್ನೆಲೆಯ ಕಲಾವಿದರಿಗೆ ಅಲ್ಲಿ ಹೆಚ್ಚಿನ ಅವಕಾಶವಿರಲಿಲ್ಲ. ಗಂಗೂಬಾಯಿ ಹಾನಗಲ್ಲರಾದರೂ ಮರಾಠಿ ಸಿನಿಮಾಗಳಲ್ಲಿ ನಟಿಸಿದರೇ ಹೊರತು ಕನ್ನಡದಲ್ಲಲ್ಲ. ಅಪವಾದವೆಂದರೆ, ಗುಬ್ಬಿ ವೀರಣ್ಣನವರು ತಯಾರಿಸಿದ 'ಜೀವನ ನಾಟಕ' ಸಿನಿಮಾದಲ್ಲಿ ಶಾಂತಾ ಹುಬ್ಳೀಕರ್ ಅವರು ನಟಿಸಿದ್ದು. ಕನ್ನಡ ಸಿನಿಮಾ ಒಂದು ಬಗೆಯ ಬ್ರಾಹ್ಮಣ ಜೀವನ ಪ್ರಧಾನವಾಗಿದ್ದು, ಅದು ಹಿಂದು–ಮುಸ್ಲಿಂ ಸಂಸ್ಕೃತಿಗಳು ಕೂಡಿ ನಿರ್ಮಿಸಿದ್ದ ಸಂಗೀತ, ರಂಗಭೂಮಿ ಮತ್ತು ಜಾನಪದಗಳ ಗರ್ಭದಿಂದ ಮೂಡಿದ ಈ ಭಾಗದ ಕಲಾವಿದರಿಗೆ ಅಷ್ಟಾಗಿ ಹೊಂದುತ್ತಿರಲಿಲ್ಲ. ಹಿಂದಿ ಸಿನಿಮಾ, ಹಿಂದೂಸ್ಥಾನಿ ಸಂಗೀತ ಹಾಗೂ ಈ ಭಾಗದ ರಂಗಭೂಮಿಯಲ್ಲಿ ದೊಡ್ಡ ಪ್ರಮಾಣದ ಮುಸ್ಲಿಮರಿದ್ದರು. ಇಡೀ ಮುಂಬೈ ನಗರವೇ ಭಾರತದ ಬಹುಭಾಷಿಕ, ಬಹು ಸಾಂಸ್ಕೃತಿಕ, ಬಹುಧರ್ಮೀಯ ಕಲಾವಿದರನ್ನು ಕೂಡಿಸಿಕೊಂಡ ಕಡಲಿನಂತೆ ಇತ್ತು.

ಇಪ್ಪತ್ತನೇ ಶತಮಾನದ ಮೊದಲ ಘಟ್ಟದಲ್ಲಿ ನಾಟಕ ಮತ್ತು ಸಿನಿಮಾಗಳಲ್ಲಿ ಕೆಲಸ ಮಾಡಬೇಕಾದರೆ ನಟನೆಯ ಜತೆಗೆ ಹಾಡುಗಾರಿಕೆ ಆವಶ್ಯಕವಾಗಿತ್ತು. ಕನ್ನಡ ಮತ್ತು ಮರಾಠಿ ರಂಗಭೂಮಿಯಲ್ಲಿ ಗಾಯಕ ನಟಿಯರಾಗಿ ಕೆಲಸ ಮಾಡುತ್ತಿದ್ದ ಅಮೀರಬಾಯಿ–ಗೋಹರಬಾಯಿ ಸೋದರಿಯರು, ತಮ್ಮ ಭಾಗದ ಜಾತ್ರೆ ಹಬ್ಬ ಉರುಸುಗಳಲ್ಲಿ ಕೂಡ ಹಾಡುತ್ತಿದ್ದವರು. ಅವರ ಬಣ್ಣದ ಬದುಕು ಆರಂಭವಾಗಿದ್ದೆ ರಂಗಭೂಮಿಯಲ್ಲಿ. ಬಿಜಾಪುರದಲ್ಲಿ ಆಗ ಬಿಡಾರ ಬಿಟ್ಟಿದ್ದ ಮರಾಠಿ ರಂಗಭೂಮಿಯ ಪ್ರಸಿದ್ಧ ಸಂಗೀತಗಾರ ಹಾಗೂ ನಾಟಕಕಾರ ಬಾಲ ಗಂಧರ್ವರು (ಮೂಲ ಹೆಸರು: ನಾರಾಯಣರಾವ್ ರಾಜಹಂಸ) ಈ ಸೋದರಿಯರ ಪ್ರತಿಭೆಯನ್ನು ಪತ್ತೆ ಮಾಡಿ ತಮ್ಮ ಕಂಪನಿಗೆ ಆಹ್ವಾನಿಸಿದರು. ಇದರಲ್ಲಿ ಮಹತ್ವದ ಪಾತ್ರ ವಹಿಸಿದವರು ನಾನಾಸಾಹೇಬ್ ಚಾಪೇಕರ್. ಆಗ ಬೀಳಗಿ ಬಿಟ್ಟು ಅಮೀರಬಾಯಿವರ ಕುಟುಂಬ ಬಿಜಾಪುರಕ್ಕೆ ಬಂದು ನೆಲೆಸಿತು. ನಂತರ ಈ ಸೋದರಿಯರು ಮುಂಬೈಗೆ ಹೊರಟರು. ಅವರು ಮುಂಬೈಗೆ ಹೋದ ವರ್ಷ ಖಚಿತವಾಗಿಲ್ಲ. ಅದು ಆಗತಾನೇ ರಂಗಭೂಮಿಯು ಸಿನಿಮಾ ಎಂಬ ಅದ್ಭುತ ಮಾಯಾಲೋಕವಾಗಿ ರೂಪಾಂತರಗೊಳ್ಳುತ್ತಿದ್ದ ಕಾಲ. ಮುಂಬೈಗೆ ಹೋದ ಬಳಿಕ ಬೀಳಗಿ ಸೋದರಿಯರ ಬದುಕಿನ ಹೊಸ ಅಧ್ಯಾಯವೇ ಆರಂಭವಾಯಿತು. ಅಮೀರಬಾಯಿಯವರು 15 ವರ್ಷದವರಿದ್ದಾಗಲೇ

ಹೆಚ್‌ಎಂವಿ ಕಂಪನಿ ಅವರಿಂದ ಒಂದು ಖವಾಲಿ ಹಾಡಿಸಿತು. ಅದು ಅವರಿಗೆ ಅದ್ಭುತ ಪ್ರವೇಶ ಒದಗಿಸಿತು. ಮುಂದೆ ಅಮೀರಬಾಯಿ ಹಾಡುನಟಿಯಾದರೆ ಗೋಹರ್ ರಂಗಭೂಮಿಗೂ ರಂಗಸಂಗೀತಕ್ಕೂ ತಮ್ಮನ್ನು ಸೀಮಿತಗೊಳಿಸಿಕೊಂಡರು; ಗೋಹರ್ ಮುಂದೆ ಗಂಧರ್ವ ಕಂಪನಿ ಸೇರಿ, ಬಾಲಗಂಧರ್ವರನ್ನು ಜೀವನ ಸಂಗಾತಿಯಾಗಿಸಿಕೊಂಡರು. ಬಾಲಗಂಧರ್ವರು ಪಾರ್ಶ್ವವಾಯು ಬಡಿದು ಮಲಗಿದಾಗ ಗೋಹರ್, ಅವರನ್ನು ಹತ್ತುವರ್ಷ ಮಗುವಿನಂತೆ ಸಲಹಿದರು. ಗಂಧರ್ವರ ಸೇವೆ ಮಾಡುತ್ತ ದಣಿದು ತಾವೇ ಮೊದಲು ತೀರಿಕೊಂಡರು (1964). ಕೊಲಂಬಿಯಾ ರೆಕಾರ್ಡಿಂಗಿನಲ್ಲಿ ಗೋಹರ್ ಹಾಡಿದ 78 ಆರ್‌ಪಿಎಂ ಅರಗಿನ ರೆಕಾರ್ಡಿಂಗ್‌ಗಳಿವೆ. ಮಾರಾಠಿಯಲ್ಲೂ ಬಂಗಾಳಿಯಲ್ಲಿಯೂ ಅವರು ವಿಭಿನ್ನ ರಾಗಗಳಲ್ಲಿ ಹಾಡಿರುವ ಪಟ್ಟಿಯನ್ನು ನೋಡಿದರೆ ಸೋಜಿಗವಾಗುತ್ತದೆ. 'ಕಿತ್ತೂರ ರುದ್ರಮ್ಮ' ನಾಟಕದಲ್ಲಿ ಅವರು ಹಾಡಿದ ರಂಗಗೀತೆಗಳು ಕೂಡ ಪ್ರಸಿದ್ಧವಾಗಿವೆ.

ಸಿನಿಮಾ ಪ್ರವೇಶ

ಆದರೂ ಬೀಳಗಿ ಸೋದರಿಯರಲ್ಲಿ ಹೆಚ್ಚು ಕೀರ್ತಿ ಪಡೆದವರು ಅಮೀರಬಾಯಿ. ಇದಕ್ಕೆ ಕಾರಣ, ಅವರು ಪ್ರತಿಷ್ಠಿತವೂ ಪ್ರಭಾವಶಾಲಿಯೂ ಆಗಿದ್ದ ಸಿನಿಮಾದಲ್ಲಿ ಕೆಲಸ ಮಾಡಿದ್ದು. ಅಮೀರಬಾಯಿಯವರಿಗೆ ಸಿನಿಮಾ ಪ್ರವೇಶ ದೊರಕಿಸಿ ಕೊಟ್ಟದ್ದು ಗೋಹರ್‌ಬಾಯಿ ಎನ್ನಲಾಗುತ್ತದೆ. ಈ ಗಾಯಕ ನಟಿಯನ್ನು ಮೂಕಿ ಸಿನಿಮಾಗಳಿಂದ ಟಾಕಿಗೆ ಹೊರಳುತ್ತಿದ್ದ ಸಿನಿಮಾ ಜಗತ್ತು ಸಹಜವಾಗಿ ಸೆಳೆದುಕೊಂಡಿತು. ಆಗ ಕಂಪನಿ ನಾಟಕ ಮತ್ತು ಹಿಂದೂಸ್ಥಾನಿ ಸಂಗೀತ ಕ್ಷೇತ್ರದ ಅನೇಕ ನಟರು ಮತ್ತು ಗಾಯಕರು ಸಿನಿಮಾ ಲೋಕವನ್ನು ಪ್ರವೇಶಿದರು. ಅಮೀರಬಾಯಿ ಸಿನಿಮಾ ಹಾಡಿಕೆಗೆ ಬಂದಾಗ, ಮುಂಬೈನಲ್ಲಿ ಮುಬಾರಕ್ ಬೇಗಂ, ಸುರಯ್ಯಾ, ಜೊಹ್ರಾ ಅಂಬಾಲಾವಾಲಿ, ನೂರ್‌ಜಹಾನ್, ಶಂಶಾದ್ ಬೇಗಂ, ಉಮಾದೇವಿ, ಮುಂತಾದ ಪ್ರಸಿದ್ಧ ಗಾಯಕಿಯರಿದ್ದರು. ಲತಾ ಮಂಗೇಶಕರ್ ಆಗಿನ್ನೂ ಕಿರಿಯವರು. ಇವರ ನಡುವೆ ಅಮೀರಬಾಯಿ ತಮ್ಮ ಅಪೂರ್ವ ಕಂಠದಿಂದ ವಿಶಿಷ್ಟರಾಗಿ ನಿಂತರು. ಬಹುಶಃ 1940ರ ದಶಕ ಅವರ ಯಶಸ್ಸಿನ ದಶಕ. ಅವರನ್ನು ನಿಜವಾಗಿಯೂ ಕೀರ್ತಿ ಶಿಖರಕ್ಕೆ ಏರಿಸಿದ್ದು 'ಬಾಂಬೆ ಟಾಕೀಸ್'ನವರ ಪ್ರೊಡಕ್ಷನ್‌ನಲ್ಲಿ ಬಂದ ಗ್ಯಾನ್ ಮುಖರ್ಜಿ ನಿರ್ದೇಶನದ 'ಕಿಸ್ಮತ್' (1942) ಸಿನಿಮಾ. ಪಿಕ್‌ಪ್ಯಾಕೆಟ್ ಮಾಡುವ ಕಡುಪ್ರೇಮಿಯ ಪಾತ್ರದಲ್ಲಿ ಅಶೋಕ್‌ಕುಮಾರ್ ನಟಿಸಿರುವ ಚಿತ್ರವಿದು. ಇದು ಕಲ್ಕತ್ತೆಯಲ್ಲಿ ಸತತ ಮೂರು ವರ್ಷ ಓಡಿತು. ಭಾರತೀಯ ಸಿನಿಮಾ ಇತಿಹಾಸದಲ್ಲಿ ಅದು ಮಾಡಿದ ಗಳಿಕೆ (ಒಂದು ಕೋಟಿ) ಒಂದು ದಾಖಲೆಯಾಗಿತ್ತು. ಮುಂದೆ ಅದರ ದಾಖಲೆಯನ್ನು ಮುರಿದಿದ್ದು ಎಂಟು ವರ್ಷದ ಬಳಿಕ ಬಂದ 'ಆವಾರ' ಸಿನಿಮಾ. 'ಕಿಸ್ಮತ್' ಆ ಕಾಲದ ತರುಣರಿಗೆ ಹುಚ್ಚು ಹಿಡಿಸಿತ್ತು. ಈ ಹುಚ್ಚಿಗೆ ಅದರಲ್ಲಿ ಅಮೀರಬಾಯಿ ಹಾಡಿದ ಹಾಡುಗಳೂ ಕಾರಣವಾಗಿದ್ದವು. 'ದೂರ್ ಹಟೋ ಓ ದುನಿಯಾ ವಾಲೋಂ' 'ಘರ್‌ಘರ್‌ಮೆ ಮೇ ದಿವಾಲಿ' 'ಧೀರೆ ಧೀರೆ ಆರೆಬಾದಲ್' ಮುಂತಾದವು ಆ ಕಾಲದ ಹಿಟ್‌ಸಾಂಗುಗಳು.

ಪ್ರಮುಖ ಸಿನಿಮಾಗಳು

ಹಾಡುನಟಿಯಾದ ಅಮೀರಬಾಯಿ ಸಿನಿಮಾಗಳಲ್ಲಿಯೂ ನಟಿಸಿದರು. ಅವರು ನಟಿಸಿದ ಮೊದಲ ಸಿನಿಮಾ 'ವಿಷ್ಣುಭಕ್ತಿ' (1934). ಅಮೀರಬಾಯಿ ನಟನೆಯ ಸಿನಿಮಾಗಳೆಂದರೆ: ಭಾರತ್ ಕೆ ಬೇಟಿ (1935), ಯಾಸ್ಮಿನ್ (1935), ಪ್ರೇಮಬಂಧನ್ (1936), ದುಖಿಯಾರಿ (1927), ನರಸಿಭಗತ್ (1940), ಹಮಾರದೇಶ್ (1940), ಸರ್ದಾರ್ (1940), ಭಕ್ತಿ ಮಾಲಾ (1940), ದರ್ಶನ್ (1941), ಸ್ಟೇಶನ್ ಮಾಸ್ಟರ್ (1942), ಭರತ್ ಮಿಲಾಪ್ (1942), ಭಾರತ ಭೇಟ್ (1942), ರಾಮರಾಜ್ಯ (1943), ಪೃಥ್ವಿವಲ್ಲಭ (1943), ಮಾಲಿ (1944), ಮಾಬಾಪ್ (1944), ಕುಲಕಲಂಕ್ (1945), ರಾಮಾಯಣ್ (1945), ನರ್ಗೀಸ್ (1946), ಹಖದಾರ್ (1946), ಪ್ಲೈಯಿಂಗ್

ಮ್ಯಾನ್ (1947), ಅಂಗೂರಬಾಲಾ (1947), ಕಿಸ್ಮತ್ ಕಾ ಸಿತಾರ (1942), ಹಾತಿಮತಾಯಿ (1947), ಜಾದೂಯಿ ಬನಸಾರಿ (1948), ರಾಮಬಾಣ್ (1986) ರತನ್ ಮಂಜರಿ, (1986), ಭಕ್ತ ಭಿಲವಮಂಗಲ್ (1948), ಭಕ್ತ ಗೋಪಾಲ್ ಭಯ್ಯಾ (1948), ಸಿಪಾಹಿಯಾ (1949), ರೂಪ್‌ಬಸಂತ್ (1949), ಬಿಜಲಿ (1850), ಜನ್ಮಾಷ್ಟಮಿ (1950), ಬೇದರ್ದಿ (1951), ಲವಕುಶ್ (1951), ದೀವಾನ (1952), ಮಾಶೂಕ್ (1953), ಆನ್ಸೂ (1953), ಸುಭಾಹು ಕಾ ತಾರಾ (1954), ಹಂ ಪಂಚಿ ಏಕ್ ಡಾಲ್‌ಕೆ (1957), ಪವನ್‌ಪುತ್ರ ಹನುಮಾನ್ (1957), ಜನಂ ಜನಂ ಕೆ ಫೇರೆ (1957), ಮಿಸ್ಟರ್ ಎಕ್ಸ್ (1957), ಖೋಟಾ ಪೈಸಾ (1958), ಬೇದರ್ದ್ ಜಮಾನಾ ಕ್ಯಾ ಜಾನೆ (1959), ಬಾಯ್‌ಫ್ರೆಂಡ್ (1961), ಡಾರ್ಕ್‌ಸ್ಟ್ರೀಟ್ (1961) ಮತ್ತು ಅಮೃತ್ ಮಂಥನ್ (1961).

ಅಮೀರಬಾಯಿ ಮುಖ್ಯವಾಗಿ ಮೂರು ಬಗೆಯ ಸಿನಿಮಾಗಳಲ್ಲಿ ಕೆಲಸ ಮಾಡಿದರೆನ್ನಬಹುದು. (ಅ) ಹಿಂದೂ ಪುರಾಣವನ್ನು ಆಧರಿಸಿದ ಭಕ್ತಿಪ್ರಧಾನ ಸಿನಿಮಾಗಳು. ಗುಡಿ ಸಂಸ್ಕೃತಿಯ ಹಿನ್ನೆಲೆಯಿದ್ದ ಅವರಿಗೆ ಇವುಗಳಲ್ಲಿ ಕೆಲಸ ಮಾಡುವುದು ಕಷ್ಟವಾಗಲಿಲ್ಲ. (ಆ) ಸ್ವಾತಂತ್ರ್ಯ ಚಳವಳಿಯ ಕೇಂದ್ರಗಳಲ್ಲಿ ಒಂದಾಗಿದ್ದ ಮುಂಬೈನ ಪ್ರಭಾವದಿಂದ ಸ್ವಾತಂತ್ರ್ಯ ಹೋರಾಟದ ಆಶಯವನ್ನು ಒಳಗೊಂಡಿದ್ದ ಸಿನಿಮಾಗಳು. ಮುಂದೆ ಇವು ಅವರು ಗಾಂಧಿಯವರಿಗೆ ಪ್ರಿಯವಾಗಲು ಕಾರಣವಾಗಿರಬಹುದು. (ಈ) ಪ್ರೇಮ, ಸಾಮಾಜಿಕ ಸಮಸ್ಯೆಯುಳ್ಳ ಕೌಟುಂಬಿಕ ವಸ್ತುವಿನ ಸಿನಿಮಾಗಳು. ಅಮೀರಬಾಯಿ ನಟಿಸಿದ ಕೆಲವು ಸಿನಿಮಾಗಳನ್ನು ಅವರ ಜಿಲ್ಲೆಯವರೇ ಆಗಿದ್ದ ವಿ. ಶಾಂತಾರಾಂ ಸಹ ನಿರ್ದೇಶನ ಮಾಡಿದರು. ಅವುಗಳಲ್ಲಿ 'ಭರತ್ ಮಿಲಾಪ್' ಮುಖ್ಯವಾದುದು. ಅಮೀರ್‌ಬಾಯಿ ಸ್ವಾತಂತ್ರ್ಯಾ ನಂತರದ ವರ್ಷಗಳಲ್ಲಿ ಹಿಂದಿ ಸಿನಿಮಾ ಬಿಟ್ಟುಕೊಟ್ಟು, ಗುಜರಾತಿ ಮತ್ತು ಮಾರವಾರಿ ಸಿನಿಮಾಗಳತ್ತ ಹೋದರು. ಮೂರು ರಾಜ್ಯಗಳಲ್ಲಿ ವಾಸ ಮಾಡಿದ ಅವರು ಬಹುಭಾಷೆಗಳಲ್ಲಿ ಹಾಡಿದರು ಮತ್ತು ನಟಿಸಿದರು. ಅವರ ವೈಯಕ್ತಿಕ ಬದುಕು ಕೂಡ ಧರ್ಮಾತೀತವಾದ ಸಂಬಂಧಗಳನ್ನು ಪಡೆಯಿತು. ಈ ಬಗೆಯ ಜಾತಿ ಮತಾತೀತವಾದ ವ್ಯಕ್ತಿತ್ವ ಪಡೆದುಕೊಳ್ಳಲು ಅವರ ಕಲೆಯೇ ಕಾರಣ ಮತ್ತು ಆ ಹೊತ್ತಿನ ಮುಂಬೈ ಪರಿಸರ ಕೂಡ. ಕನ್ನಡ ಮೂಲದ ಜೀಳಗಿ ಸೋದರಿಯರು, ಉರ್ದು, ಮರಾಠಿ, ಗುಜರಾತಿ, ಹಿಂದಿ, ಮಾರವಾಡಿ ಹಾಗೂ ಬಂಗಾಳಿ ಭಾಷೆಯ ಸಿನಿಮಾ ಮತ್ತು ಹಾಡುಗಳ ಜತೆ ಸರಾಗವಾಗಿ ಕೆಲಸ ಮಾಡಿದರು.

ಯಶಸ್ವಿ ಗಾಯಕಿಯಾಗಿ

ನಟಿಯಾಗಿ ಅಷ್ಟೊಂದು ಯಶಸ್ಸು ಕಾಣದ ಅಮೀರಬಾಯಿ, ಮತ್ತೆ ಮತ್ತೆ ತಮಗೆ ಪ್ರಿಯವಾದ ಹಿನ್ನೆಲೆ ಗಾಯನಕ್ಕೆ ಮರಳಿ ಬರುತ್ತಿದ್ದರು ಎಂದು ತಿಳಿದುಬರುತ್ತದೆ. ಹಾಡುವಿಕೆ ಅವರ ನಿಜವಾದ ಅಭಿವ್ಯಕ್ತಿ ರೂಪವಾಗಿತ್ತು. ಅವರು ಹಿನ್ನೆಲೆ ಗಾಯಕರಾಗಿ ಹಾಡಿದ ಮುಖ್ಯ ಸಿನಿಮಾಗಳೆಂದರೆ–ಬಸಂತ್ (1942) ಕಿಸ್ಮತ್ (1943) ಆಮ್ರಪಾಲಿ (1945) ಶಿಕಾರಿ (1946) ಸಿಂಧೂರ್ (1947) ಲೀಲಾ (1947) ಏಲಾನ್ (1947) ಸಮಾಧಿ (1950) ಫಾಯಲ್ (1951) ದೀಪಕ್ (1951) ಸಗಾಯಿ (1951) ಲವಕುಶ್ (1951) ಭಿಖರೆಮೋತಿ (1951) ಉಷಾಕಿರಣ್ (1952) ಭರ್ತೃಹರಿ (1944) ರತನ್ (1944) ಶಹನಾಯಿ (1947) ಕಾರವಾನ್, ಎಯ್ಟ್‌ಡೇಯ್ಸ್ ಮುಂತಾದವು. ಅವರ ಹಾಡಿಕೆಗೆ ಅಲ್ಲಾರಖಾ, ಪನ್ನಾಲಾಲ್ ಘೋಷ್, ಎಸ್.ಡಿ. ಬರ್ಮನ್, ಅನಿಲ್ ಬಿಸ್ವಾಸ್, ನೌಶಾದ್ ಅಲಿ ಮುಂತಾದ ಖ್ಯಾತನಾಮರು ಸಂಗೀತವನ್ನು ಸಂಯೋಜಿಸಿದರು. ಆ ಹೊತ್ತಿನಲ್ಲಿ ನೌಶಾದಲಿ ರಾಗ ಸಂಯೋಜನೆಯಲ್ಲಿ ಭಾರತದ ಶ್ರೇಷ್ಠ ಗಾಯಕಿಯರಾದ ಲತಾ, ನೂರ್ ಜಹಾನ್, ಸುರಯ್ಯಾ, ಶಂಶಾದ್, ಜೊಹ್ರಾ, ಉಮಾದೇವಿಯವರು ಹಾಡುತ್ತಿದ್ದರು. ಅಂತೆಯೇ ಅಮೀರಬಾಯಿ ಕೂಡ ಹಾಡಿದರು. ನೌಶಾದ್ ಸಂಯೋಜನೆಯ 'ಮಿಲ್ಕೆ ಬಿಚಡ್ ಗಯೇ ಅಂಖಿಯಾ' (ರತನ್) ಹಾಡು ಅಮೀರಬಾಯಿಯವರ ಅತ್ಯಂತ ಮಧುರವಾದ ಹಾಡುಗಳಲ್ಲಿ ಒಂದಾಗಿದೆ. ಅಮೀರಬಾಯಿಯವರ ದನಿಸಿರಿಯನ್ನು ಅತ್ಯದ್ಭುತವಾಗಿ ಬಳಸಿಕೊಂಡ ಮತ್ತೊಬ್ಬ ಸಂಗೀತ ಸಂಯೋಜಕ ಅನಿಲ್

ಬಿಸ್ವಾಸ್. ಅಮೀರಬಾಯಿಯವರು, ತಮ್ಮ ಕಾಲದ ನೂರ್‌ಜಹಾನ್, ಸೆಹಗಲ್, ಅರುಣ ಕುಮಾರ್ ಮುಖರ್ಜಿ, ಶಾಮ್‌ಕುಮಾರ್, ಸಿ. ರಾಮಚಂದ್ರ, ಲತಾ ಮುಂತಾದ ದೊಡ್ಡ ಗಾಯಕರ ಜತೆಗೂಡಿ ಹಾಡಿದರು.

ವೈವಿಧ್ಯಮಯ ಹಾಡುಗಳು

ಅಮೀರಬಾಯಿಯ ವಿಶೇಷತೆಯೆಂದರೆ, ಹಿಂದಿಯ ಬೇರೆಬೇರೆ ಆಡುರೂಪಗಳಲ್ಲಿದ್ದ ಹಾಡುಗಳನ್ನು ಅವುಗಳ ಸಾಹಿತ್ಯದ ಅರ್ಥಕ್ಕೆ ಚ್ಯುತಿಯಾಗದಂತೆ ಹಾಡುವುದು. ಇದಕ್ಕೆ ಕಾರಣ, ಮಜರೂಹ್ ಸುಲ್ತಾನಪುರಿಯಂತಹ ಕವಿಗಳ ರಚನೆಗಳನ್ನು ಹಾಡಿ ಹಾಡಿ ಗಳಿಸಿದ ಸಾಹಿತ್ಯಕ ಸಂವೇದನೆ, ಆಳವಾದ ಶಾಸ್ತ್ರೀಯ ಸಂಗೀತದ ಜ್ಞಾನ ಹಾಗೂ ಕಂಠ ತೀಕ್ಷ್ಣತೆಯಲ್ಲಿ ಹಾಡುವ ರಂಗಭೂಮಿಯ ಹಿನ್ನೆಲೆಗಳು. ಕೊಂಚ ಮೂಗುಸ್ವರವನ್ನೂ ಸೇರಿಸಿ ಹಾಡುತ್ತಿದ್ದ ಅಮೀರಬಾಯಿಯ ಹಾಡುಗಾರಿಕೆಯಲ್ಲಿ ವೈವಿಧ್ಯವಿದೆ. ಅವರು ಹೆಚ್ಚಾಗಿ ಉಲ್ಲಾಸ ಪುಟಿಯುವ ಹಾಡುಗಳನ್ನು ಹಾಡಿದರು. ಲತಾ ಜತೆ ಅವರು ಹಾಡಿರುವ ಹಾಡೊಂದು ('ಸಮಾಧಿ' 1950) ಜನಪ್ರಿಯವಾಗಿದೆ. 'ಗೋರೆ ಗೋರೆ ವೊ ಭಾಂಕೆ ಛೋರೆ ಕಭಿ ಮೇರಿ ಗಲೀಮೆ ಆಯಾ ಕರೋ' ಎಂದು ಲತಾ ಹಾಡಿದರೆ, ಹಿಂದೆಯೆ ಅಮೀರಬಾಯಿ 'ಗೋರಿ ಗೋರಿ ಓ ಭಾಂಕಿ ಛೋರಿ, ಚಾಹೆ ರೋಜ್ ಬುಲಾಯ ಕರೊ' ಎಂದು ಹಾಡುತ್ತಾರೆ. ಈ ಹಾಡಿನಲ್ಲಿ ಲತಾರ ತಂಪಾದ ಮಾಧುರ್ಯ ಹಿತಗೊಳಿಸಿದರೆ, ಅಮೀರಬಾಯಿಯವರ ಮಾದಕತೆ ಪುಳಕಗೊಳಿಸುತ್ತದೆ. 'ಶಹನಾಯಿ' ಸಿನಿಮಾದಲ್ಲಿ ಬರುವ "ಮಾರಿಕಟಾರಿ ಮರಜಾನಾ, ಯೆ ಅಖಿಯ್ಯಾ ಕಿಸೀಸೆ ನ ಮಿಲಾನಾ ನ, ಖಾಕೆ ಜಹರ್ ಮರಜಾನ ಕೆ ಮನಮೆ ಕಿಸೀಕೊ ಬತಾನಾ ನ" ಹಾಡಂತೂ ಬಿಂಕಕೊಂಕುಗಳುಳ್ಳ ವಿರಹಗೀತೆ. ಮಧುರವಾದ ಆದರೆ ಹಾಡಲು ಸವಾಲಿರುವ ಹಾಡು. "ಧೀರೆಧೀರೆ ಆರೆ ಆರೆ ಬಾದಲ್" ಹಾಡಿನ ಮೊದಲರ್ಧ ಭಾಗದಲ್ಲಿ ಅರುಣ ಕುಮಾರ್ ಮುಖರ್ಜಿ ತುಂಬುಕಂಠದಲ್ಲಿ ಹಾಡಿದರೆ, ಎರಡನೇ ಭಾಗದಲ್ಲಿ ತಟ್ಟನೆ ತೀಕ್ಷ್ಣದನಿಯಲ್ಲಿ ಅಮೀರ್‌ಬಾಯಿ ಕಂಠವು 'ಕೌನಾ ಗಾತಾ ಹೈ ರುಬಾಯಿ ರೇ?' ಎಂದು ನುಗ್ಗಿ ಬಿಡುತ್ತದೆ. 'ಫಿರ್ ಎ ಕಿಸ್ಕಿ ಯಾದ್ ಆಯಿರೇ? ಕಿಸನೆ ಪಹಿನಾದೀ ಮುಝುಕೊ ಪ್ರೇಮಕಿ ಮಾಲಾ? ಕಿಸನೆ ಮೇರೆ ಜಿಂದಗಿಕಾ ರಂಗ್ ಬದಲ್ ಡಾಲಾ? ಅಹಹಾ ರಂಗ್ ಬದಲ್ ಡಾಲಾ' ಎಂದು ಹಗುರವಾಗಿ ಸಂಭ್ರಮದಲ್ಲಿ ಕೊನೆಗೊಳ್ಳುತ್ತದೆ. 'ಆಮ್ರಪಾಲಿ'ಯ 'ಉಡಾಜಾ ಮೋಂರೆ ತಾರೋಂಕೆ ದುನಿಯಾ ಮೆ ಮೈ ಉಡಜಾಂವೋರೆ' ಎಂಬ ಹಾಡು ಸ್ವತಃ ಗಾಯಕಿ ರೆಕ್ಕೆ ಹಚ್ಚಿಕೊಂಡು ಗಗನದಲ್ಲಿ ಹಾರಾಡುತ್ತಿರುವಂಥ ಅನುಭವ ಕೊಡುತ್ತದೆ. 'ಇಸ್ ದುನಿಯಾಕಿ ಪಗದಂಡಿ ಪರ್, ತುಮ್ಹೀ ಹೊ ಮೇರೆ ಸಾಥಿ' (ಆಮ್ರಪಾಲಿ) 'ಪಿಯಾ ಮೇರೆ ಸಾಥ್ ರಹೇಂಗೆ ಆಜಾಕಿ ರಾತ್'--ಇವು ನಲ್ಲೆಯ ಸಂತೋಷ ಸೂಸುವ ಅಪರೂಪದ ಹಾಡುಗಳಾಗಿವೆ.

ನಿಜವಾಗಿಯೂ ಅಮೀರಬಾಯಿಯವರ ಗಾನಪ್ರತಿಭೆ ವ್ಯಕ್ತವಾಗುವುದು ನಿಧಾನಗತಿಯಲ್ಲಿ ಸಾಗುವ ದುಗುಡದ ಹಾಡುಗಳಲ್ಲಿ ಅನಿಸುತ್ತದೆ. 'ಏಯ್ ದುನಿಯಾ ಬತಾ ಬಿಗಾಡ ಕ್ಯಾ ತೇರ?' ಎಂದು ನೊಂದ ದನಿಯ ಪ್ರಶ್ನೆಯ ಮೂಲಕ ಆರಂಭವಾಗುವ 'ಘರಘರಮೆ ದಿವಾಲಿ ಹೈ ಮೇರೆ ಘರಮೆ ಅಂಧೇರಾ' (ಕಿಸ್ಮತ್) ಹಾಡು ಎದೆ ಹಿಂಡುತ್ತದೆ. 'ಹಮೆ ಕ್ಯಾ ಪತಾ ಥಾ, ದಿಲ್‌ಕಿ ಕಲೀಕೊ ಮಸಲ್ ದೇಂಗೇ ವೊ? ಹಮೆ ಕ್ಯಾ ಪತಾ ಥಾ, ರಾಹತ್ ಗಂಮೆ ಬದಲ್ ದೇಂಗೆ ವೊ' ಎಂದು ಆರಂಭವಾಗುವ ಹಾಡು ಮುರಿದ ಮನಸ್ಸಿನ ಆಳದಿಂದ ಹುಟ್ಟುವ ವೇದನೆಯನ್ನು ಹೊರಚೆಲ್ಲುತ್ತದೆ. 'ದುನಿಯಾನೆ ಹಮೆ ದೊ ದಿನ್ ರಹನೇ ನ ದಿಯಾ ಮಿಲಕೆ' (ಶಿಕಾರಿ), 'ಆ ಅಜಲ್ ಯೆ ಜಿಂದಗಿ' (ಏಲಾನ್) 'ಆಸೂ ಥಿ ಮೇರೆ ಜಿಂದಗಿ' (ಭಿಖರೆ ಮೋತಿ) ಅವರ ಇತರೆ ಮುಖ್ಯ ಶೋಕ ಗೀತೆಗಳು.

ವಿರಹ ಭಾವವಿರುವ ದುಃಖಗೀತೆಗಳು ಬೇರೊಂದು ನಮೂನೆಯಲ್ಲಿ ವ್ಯಕ್ತವಾಗುತ್ತವೆ. "ಮಿಲಕೇ ಬಿಚಡ್ ಗಯೆ ಅಖಿಯ್ಯಾ, ಹಾಯ್ ರಾಮಾ" (ಭರ್ತೃಹರಿ) ಎಂಬ ಹಾಡು ಇದಕ್ಕೆ ನಿದರ್ಶನ. ಇದರಲ್ಲಿನ 'ರೋತೆ ಹೈ

ನಯನಾ ಜಿಯಾ ತಲಮಲಾಯೆ ಜಾವೂ ಕೋಹಿ ಉನಕೊ ಲಾಯೆ' ಎಂಬ ಸಾಲುಗಳಲ್ಲಿರುವ ಆರ್ತತೆ ಹೃದಯವನ್ನು ಚುಚ್ಚುವಂತಿದೆ. "ಈ ಜಾನೆವಾಲೆ ಬಾಲಂ ವಾ, ಲೌಟ್‌ಕೆ ಆ, ಲೌಟ್‌ಕೆ ಆ" (ರತನ್)–ಇದು ಶಾಂಕುಮಾರ್ ಜತೆ ಹಾಡಿರುವ ಹಾಡು. ಬಹಳ ವೇಗವಾಗಿ ಸಾಗುವ ಹಾಡು ತಟ್ಟನೆ ಮುಗಿದು ಬಿಡುತ್ತದೆ. 'ಬಸಂತ್' ಸಿನಿಮಾದ 'ಹುವಾ ಕ್ಯಾ ಖುಸೂರ್? ಜೊ ಹಮ್ಸೆ ಹೋ ದೂರ್' ಎಂಬ ಹಾಡು ಕೂಡ ವಿರಹದ ಹಾಡು.

ಆರ್ತದನಿಯ ಭಕ್ತಿ ಗೀತೆಗಳು

ಆರ್ತದನಿಯ ಭಕ್ತಿ ಗೀತೆಗಳು ಅಮೀರಬಾಯಿಯವರನ್ನು ಜನಪ್ರಿಯಗೊಳಿಸಿದವು. 'ಕಿಸ್ಮತ್'ನ 'ಅಬ್ ತೇರೆ ಸಿವಾ ಕೌನ್ ಮೆರಾ ಕೃಷ್ಣ ಕನ್ಹಯ್ಯಾ' ಹಾಡು ಎಷ್ಟು ಪ್ರಸಿದ್ಧವಾಯಿತು ಎಂದರೆ ಮುಂಬೈಗೆ ಓಡಾಡುವ ಎಲ್ಲಾ ರೈಲು ಗಾಡಿಗಳಲ್ಲಿ ಅದು ಭಿಕ್ಷುಕರ ಹಾಡಾಗಿತ್ತು. 'ಸಿಂಧೂರ್' ಸಿನಿಮಾದ 'ತಮಕೊ ಕೈಸೆ ಮನಾಂವ್ಹೂ ಓ ರೋತೇ ಹುವೇ ಭಗವಾನ್, ಓ ದುನಿಯಾ ಬನಾನೆ ವಾಲೆ ಕ್ಯಾ ಯಹೀ ಹೈ ದುನಿಯಾ ತೇರಿ' ಎಂಬ ಹಾಡುಗಳು ಕೂಡ ಹೀಗೇ ತನ್ನನ್ನು ಕಷ್ಟಕ್ಕೆ ತಳ್ಳಿದ ದೈವವನ್ನೇ ಪ್ರಶ್ನಿಸುವ ಮನೋವೇದಕ ರಚನೆಗಳು.

ಹಳೆಯ ಹಿಂದಿ ಚಿತ್ರಗೀತೆ ಕೇಳುವವರಿಗೆ ಅಮೀರಬಾಯಿವರ ಹೆಸರು ಪರಿಚಿತ. ಪುಣೆ, ದೆಹಲಿ, ಅಹಮದಾಬಾದ್ ಹಾಗೂ ದೆಹಲಿಗಳಲ್ಲಿ ಅಮೀರಬಾಯಿ ಅಭಿಮಾನಿ ಸಂಘಗಳಿವೆಯಂತೆ. ವಹಾಬ್ ಪಿಕ್ಚರ್ಸ್‌ರವರ 'ಶಹನಾಜ್' (1947) ಸಿನಿಮಾಕ್ಕಾಗಿ ಸ್ವತಃ ಅಮೀರಬಾಯಿಯವರು ಸಂಗೀತ ಸಂಯೋಜನೆಯನ್ನೂ ಮಾಡಿದರು. ನೌಷಾದ್ ಅಮೀರಬಾಯಿಯವರಿಗೆ ತುಂಬ ಆತ್ಮೀಯವಾಗಿದ್ದರು ಎಂದು ಅವರ ಸೋದರಳಿಯ ತಾಜುದ್ದೀನ್ ಹೇಳಿದರು. ಅಮೀರಬಾಯಿಯವರು, ಮರಾಠಿ, ಮಾರವಾರಿ ಮತ್ತು ಗುಜರಾತಿ ಸಿನಿಮಾಗಳಲ್ಲೂ ಹಾಡಿದರು. ಬಹುಶಃ ಲತಾ ಮಂಗೇಶ್ಕರ್ ಎಂಬ ಹಿನ್ನೆಲೆ ಗಾಯಕಿಯ ಪ್ರವೇಶದೊಂದಿಗೆ ರಂಗಭೂಮಿ ಹಿನ್ನೆಲೆಯಿಂದ ಬಂದ ಹಾಡುನಟಿಯರಾದ ಅಮೀರಬಾಯಿ ಮುಂತಾದವರ ಯುಗವು ಕೊನೆಗೊಂಡಿತು.

ವ್ಯಕ್ತಿಯಾಗಿ ಅಮೀರಬಾಯಿ

ಅಮೀರಬಾಯಿಯವರ ಜೀವನದ ಬಗ್ಗೆ ಹೆಚ್ಚಿನ ವಿವರಗಳು ತಿಳಿದು ಬರುವುದಿಲ್ಲ. ಅವರು ಹುಟ್ಟಿದ ವರ್ಷ 1906 ಎಂದು ಹೇಳಲಾಗಿದೆ. ಅವರು ಮುಂಬೈನ ಮಹೀಮ್‌ನಲ್ಲಿ ವಾಸವಾಗಿದ್ದರು. ಅತ್ತೆಯ ಮನೆಯಲ್ಲಿ ಆಡಿದ ನೆನಪುಗಳುಳ್ಳ ತಾಜುದ್ದೀನ್ ಅವರ ಪ್ರಕಾರ, ಇದ್ದೊಬ್ಬನೇ ತಮ್ಮನ ಬದುಕು ಚೆಂದವಾಗಬೇಕು ಎಂದು ಅಮೀರ್ ತುಂಬ ಕಳಕಳಿ ಮಾಡುತ್ತಿದ್ದರು. ಅಮೀರಬಾಯಿ, ಬಿಜಾಪುರದಲ್ಲಿ 1958ರಲ್ಲಿ ಒಂದು ಸಿನಿಮಾ ಥೀಯೇಟರ್ ಕಟ್ಟಿಸಿದರು. ಆ ಕಾಲಕ್ಕೆ ಅದಕ್ಕೆ 85 ಸಾವಿರ ರೂಪಾಯಿ ಖರ್ಚಾಯಿತು. ಅರ್ಧಶತಮಾನ ಪೂರೈಸಿರುವ ಅಮೀರ್ ಟಾಕೀಸಿಗೆ ಈಗ ಚಿನ್ನದ ಹಬ್ಬ. ಸುಂದರ ನಟನಂತಿರುವ ಅಮೀರಬಾಯಿಯವರ ಇನ್ನೊಬ್ಬ ಸೋದರಳಿಯ ಶೌಕತ್, ಅತ್ತೆ ಹಾಡಿದ ಹಾಡುಗಳನ್ನೆಲ್ಲ ಜತನದಿಂದ ಇಟ್ಟಿದ್ದಾರೆ. ಅಮೀರಬಾಯಿಯವರು ಮೊಟ್ಟೆಯಂತಿದ್ದ ಪುಟ್ಟ ಕಪ್ಪುಕಾರಿನಲ್ಲಿ ಮುಂಬೈನಿಂದ ಬಿಜಾಪುರಕ್ಕೆ ಬರುತ್ತಿದ್ದರಂತೆ. ರೈಲಲ್ಲಿ ಬಂದಾಗ ಊರ ಜನರೆಲ್ಲ ಅವರನ್ನು ಸೇರುತ್ತಿದ್ದರಂತೆ. ಸ್ಟೇಶನ್ನಿನಲ್ಲಿರುವ ದೊಡ್ಡ ಕುದುರೆ ಕಟ್ಟಿದ ಗಾಡಿಯಲ್ಲಿ ಕುಳಿತು ಅವರು ಮನೆಗೆ ಹೋಗುತ್ತಿದ್ದರಂತೆ. ಉಳಿದ ಟಾಂಗಾದವರಿಗೆ ನಿರಾಶೆ ಆಗಬಾರದು ಎಂದು ಎಲ್ಲ ಟಾಂಗಾದವರಿಗೂ ಅಷ್ಟೇ ಹಣ ಕೊಡುತ್ತಿದ್ದರಂತೆ. ಇಡೀ ಟಾಂಗಾಗಳ ಕಾರವಾನು ಅವರ ಹಿಂದೆ ಹೊರಡುತಿತ್ತಂತೆ.

ಶೋಕದ ಹಾಡುಗಳನ್ನು ತನ್ಮಯವಾಗಿ ಹಾಡುತ್ತಿದ್ದ ಅಮೀರಬಾಯಿಯವರ ವೈಯಕ್ತಿಕ ಬದುಕು ಕೂಡ ಏರುಪೇರುಗಳಿಂದ ಕೂಡಿದೆ. ಅವು ಅವರ ಆತ್ಮಕತೆಯ ಅಧ್ಯಾಯಗಳಂತೆ ತೋರುತ್ತವೆ. ಅವರು ಮೊದಲಿಗೆ 1940ರ ದಶಕದ ಪ್ರಸಿದ್ಧ ಖಳನಟನಾದ ಹಿಮಾಲಯವಾಲಾನ ಜತೆ ಸಂಸಾರ ಮಾಡಿದರು. ಆಗರ್ಭ ಸಿರಿವಂತ

ಕುಟುಂಬದಲ್ಲಿ ಹುಟ್ಟಿದ ಹಿಮಾಲಯವಾಲ ಅಮೀರ್‌ಬಾಯಿ ಅವರನ್ನು ಪ್ರೀತಿಸಿ ಒಂದಾದವನು. ಆದರೆ ಹಿಮಾಲಯವಾಲಾನ ಜತೆ ಅಮೀರಬಾಯಿಯವರ ಜೀವನ ಸುಖಕರವಾಗಿರಲಿಲ್ಲ. ಕಟ್ಟಿಕೊಂಡವನನ್ನೂ ಸಾಕುವ ಭಾರ ಹೊರಬೇಕಾದ ಮತ್ತು ಹಿಂಸೆ ಅನುಭವಿಸಬೇಕಾದ ಅವರ ದುರ್ದಿನಗಳವು. ಕಡೆಗೆ ಅವರು ಅವನಿಂದ ವಿಚ್ಛೇದನ ಪಡೆದರು. ನಂತರ ಅವರು ಗುಜರಾತಿ ಪತ್ರಕರ್ತ ಮತ್ತು ಸಂಕಲನಕಾರ ಬದ್ರಿ ಕಾಂಚವಾಲಾನ ಸಂಗಾತಿಯಾದರು.

ಜಾತ್ಯತೀತ ಕಲಾಲೋಕದಲ್ಲಿ

ಆದರೆ ಸಂಗೀತ ರಂಗಭೂಮಿಗಳ ಲೋಕವೇ ಇಂಥ ಸಂಕುಚಿತತೆಯನ್ನು ಮೀರಿದ್ದು. ಕಲೆಯ ಶಕ್ತಿ ಇರುವುದೇ ಸಂಪ್ರದಾಯದ ಉಲ್ಲಂಘನೆಗಳಲ್ಲಿ. ಅದರಲ್ಲೂ ಸಂಪ್ರದಾಯವಾದಿ ಇಸ್ಲಾಮ್ ಮನ್ನಿಸದ ರಂಗಭೂಮಿ ಸಂಗೀತ ಕ್ಷೇತ್ರಗಳಲ್ಲಿ ಅಪಾರ ಸಂಖ್ಯೆಯ ಮುಸ್ಲಿಮರು ತೊಡಗಿಕೊಂಡು ಸಾಧನೆ ಮಾಡಿದರು. ಕನ್ನಡ ರಂಗಭೂಮಿಯ ದೊಡ್ಡನಟ ಪೀರ್ ಮಹಮದ್, ಜನಪದ ರಂಗಭೂಮಿಯ ಕವಿ ಗಾಯಕ ತಳೇವಾಡದ ನಬಿ, ಕೃಷ್ಣಪಾರಿಜಾತನ ಅಪ್ಪಾಲಾಲ್ ನದಾಫ, ಮುಂತಾದವರು ಅಮೀರಬಾಯಿ ಸೀಮೆಯವರು ಮತ್ತು ಸಮಕಾಲೀನರು. ಅಪ್ಪಾಲಾಲ ನದಾಫರಂತೂ ಅಮಿರಬಾಯಿಯ ಕಟ್ಟಾ ಅಭಿಮಾನಿಯಾಗಿದ್ದರು. ಕಿಸ್ಮತ್ ಸಿನಿಮಾದ 'ಅಬ್‌ತೇರೆ ಸಿವಾ' ಹಾಡಿನ ಧಾಟಿಯಲ್ಲಿ ಅವರು ಪಾರಿಜಾತದ ಹಾಡುಗಳನ್ನು ಹಾಡುತ್ತಿದ್ದರಂತೆ.

ಗಾಯಕ ಮಹಮದ್ ರಫಿ ನಿಧನರಾದಾಗ, ಶಮಿಕಪೂರ್ ಅವರಿಗೆ ಯಾರೊ ಹೇಳಿದರಂತೆ: 'ಕಪೂರ್ ಸಾಹೇಬ್, ತುಮ್ಹಾರ ಆವಾಜ್ ಚಲಾ ಗಯಾ!'. ರಫಿಯವರ ದನಿಗೆ ನಟಿಸುತ್ತಿದ್ದ ಕಪೂರ್ ಬಿಕ್ಕಿ ಬಿಕ್ಕಿ ಅತ್ತರಂತೆ. ಇದೊಂದು ಚಿತ್ರರಂಗದ ಅದ್ವೈತ ತತ್ವ, ಯಾರದೊ ಸಾಹಿತ್ಯ ರಚನೆ, ಯಾರದೊ ಸಂಗೀತ ಸಂಯೋಜನೆ, ಮತ್ತ್ಯಾರೊ ಕೊರಳು ಕೊಟ್ಟು ಹಾಡುವರು, ಅದಕ್ಕೆ ತುಟಿಚಲನೆ ಮಾಡುತ್ತ ಮತ್ತ್ಯಾರೊ ತೆರೆಯ ಮೇಲೆ ನಟಿಸುವರು. ಕವಿ–ಸಂಗೀತಗಾರ–ಗಾಯಕ–ನಟರು ಏಕೀಭವಿಸದ ಹೊರತು ಸಿನಿಮಾ ಹುಟ್ಟುವುದಿಲ್ಲ. ಇದನ್ನು ನೋಡುವ ರಸಿಕರೊ ಸಮಸ್ತ ಧರ್ಮ–ಜಾತಿಯವರು. ಆದ್ದರಿಂದಲೆ ಜಾತ್ಯತೀತತೆಯು ಸಂಗೀತ, ನಾಟಕ, ಸಿನಿಮಾ ಜಗತ್ತಿನ ಆಂತರಿಕ ಆವಶ್ಯಕತೆ ಮಾತ್ರವಲ್ಲ, ಅದರ ಆತ್ಮ ಕೂಡ. ಹೃತ್ವಿಕ್ ರೋಶನ್ ನಟನಾಗಿ ಹೊಮ್ಮಿದಾಗ ಕೆಲವು ಮತೀಯ ಪತ್ರಿಕೆಗಳು 'ಖಾನ್‌ಗಳು ಮೆರೆಯುತ್ತಿರುವ ಬಾಲಿವುಡ್ ಲೋಕಕ್ಕೆ ಹಿಂದೂ ನಟನ ಲಗ್ಗೆ' ಎಂಬರ್ಥದಲ್ಲಿ ಬರೆದವು. ಆದರೆ ಹೃತ್ವಿಕ್ ಕೆಲವು ದಿನಗಳ ಬಳಿಕ ಸಂಜಯ ಖಾನರ ಮಗಳನ್ನು ಲಗ್ನವಾದನು. ಶಾರೂಖ್ ಖಾನನನ್ನು ಒಳಗೊಂಡಂತೆ ಬಾಲಿವುಡ್‌ನಲ್ಲಿ ನೂರಾರು ಅಂತರ್ಧರ್ಮೀಯ ಜೋಡಿಗಳಿವೆ.

ಸಂಗೀತ, ರಂಗಭೂಮಿ ಮತ್ತು ಸಿನಿಮಾ ಲೋಕದಲ್ಲಿ ಜಾತ್ಯತೀತವಾದ ಸಂಬಂಧಗಳಿವೆ. ಭೀಮಸೇನ ಜೋಶಿ, ಗಂಗೂಬಾಯಿ ಅವರ ಗುರುಗಳಾದ ಸವಾಯಿ ಗಂಧರ್ವ ಗುರು ಉಸ್ತಾದ್ ಕರೀಂಖಾನ್ ಮೀರಜಕರ್, ಇವರು ಒಬ್ಬ ಕಲಾವಂತೆಯನ್ನು ಜೀವನ ಸಂಗಾತಿಯಾಗಿ ಮಾಡಿಕೊಂಡರು. ಅವರ ಮಕ್ಕಳಾದ ಸುರೇಶ್ ಮಾಣೆ ಮತ್ತು ಹೀರಾಬಾಯಿ ಬಡೋದೇಕರ್ ಪ್ರಸಿದ್ಧ ಹಿಂದೂಸ್ಥಾನಿ ಗಾಯಕರಾದರು. ಶಾಂತಾ ಹುಬ್ಳೀಕರ್‌ಗೆ ಕರೀಂಖಾನರೂ ಅವರ ಮಗ ಸುರೇಶ ಮಾಣೆಯವರೂ ಗುರುಗಳು. ಇದನ್ನು ಶಾಂತ ತಮ್ಮ ಆತ್ಮಕಥೆಯಲ್ಲಿ ಆದರದಿಂದ ನೆನೆಯುತ್ತಾರೆ. ಅತಿ ಸಂಪ್ರದಾಯವಾದಿ ಬ್ರಾಹ್ಮಣ ಶಿಷ್ಯರು ಮುಸ್ಲಿಂ ಕಲಾವಿದರನ್ನು ಗುರುಗಳನ್ನಾಗಿ ಸ್ವೀಕರಿಸಿ ಸೇವೆ ಮಾಡಿದ ನಿದರ್ಶನಗಳಿವೆ. ಈ ಪರಂಪರೆಯ ಮುಂದುವರಿಕೆಯಾಗಿದ್ದ ಮುಂಬೈನ ಸಿನಿಮಾ ಜಗತ್ತು ಕೂಡ ಧರ್ಮಾತೀತವಾಗಿತ್ತು. ಅಲ್ಲಾ ರಖಾ, ಮಜರೂಹ್ ಸುಲ್ತಾನಪುರಿ, ಗುಲಜಾರ್, ಅಬ್ಬಾಸ್, ನೌಷಾದ್, ಮಹಬೂಬ್ ರಹಮಾನ್ ಮುಂತಾದವರನ್ನು ಬಿಟ್ಟು ಮುಂಬೈ ಸಿನಿಮಾ ಜಗತ್ತನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಮುಂಬೈನ ಈ ಕಾಸ್ಮೊಪಾಲಿಟನ್ ಮತ್ತು ಜಾತ್ಯತೀತ ಪರಿಸರವು ಬೀಳಗಿ ಸೋದರಿಯರ ಕರ್ಮಭೂಮಿಯಾಗಿದ್ದು ಸಹಜವಾಗಿದೆ.

ಕರ್ನಾಟಕ ಸಂಬಂಧ

ಉತ್ತರ ಕರ್ನಾಟಕವು ಹಿಂದಿ ಸಿನಿಮಾ, ಹಿಂದೂಸ್ಥಾನಿ ಸಂಗೀತ ಹಾಗೂ ಮರಾಠಿ ರಂಗಭೂಮಿಗಳಿಗೆ ಅನೇಕ ಕಲಾವಿದರನ್ನು ಕೊಟ್ಟ ಸೀಮೆ. ಅವರಲ್ಲಿ ಮುಖ್ಯರಾದವರು ಒಣಕುದರಿಯ ವಿ.ಶಾಂತಾರಾಂ, ಶಾಂತಾ ಹುಬ್ಳೀಕರ್, ಅಮೀರಬಾಯಿ ಮತ್ತು ಗೋಹರಬಾಯಿ. ಶಾಂತಾ ಅವರು ಶಾಂತಾರಾಮರ 'ಮಾಣೂಸ' ಚಿತ್ರದ ಮೂಲಕ ದೊಡ್ಡ ಖ್ಯಾತಿ ಪಡೆದವರು. ಅದು ಆ ಹೊತ್ತಿನ ಅತ್ಯಂತ ಯಶಸ್ವಿ ಸಿನಿಮಾ ಆಗಿತ್ತು. ಬಹುಶಃ ಸಮಕಾಲೀನರಾದ ಶಾಂತಾ ಹಾಗೂ ಅಮೀರಬಾಯಿಯವರ ವೃತ್ತಿಜೀವನ ಆರಂಭವಾಗಿದ್ದು ಗದಗಿನ ರಂಗಭೂಮಿಯಿಂದ. ಶಾಂತಾ ಗುಬ್ಬಿ ಕಂಪನಿಯಲ್ಲಿದ್ದರು. ಅಮೀರಬಾಯಿ ಯಾವ ಕಂಪನಿಯಲ್ಲಿದ್ದರು ಎಂಬುದು ಖಚಿತವಾಗುವುದಿಲ್ಲ. ಕನ್ನಡ ಮಾತನಾಡಲು ಬಾರದ ಶಾಂತಾರಾಂ ಅವರಿಗೆ ಹೋಲಿಸಿದರೆ, ಪುಣೆ ಮುಂಬೈಗಳಲ್ಲಿ ಬದುಕಿದರೂ ಶಾಂತಾ ಹಾಗೂ ಅಮೀರಬಾಯಿ ಕನ್ನಡವನ್ನು ಮರೆಯಲಿಲ್ಲ. ಕರ್ನಾಟಕದ ಜತೆ ಉದ್ದಕ್ಕೂ ಸಂಬಂಧ ಇರಿಸಿಕೊಂಡಿದ್ದರು. ಅಮೀರಬಾಯಿಯವರು ಬಿಜಾಪುರ ಮತ್ತು ಬೀಳಗಿಗೆ ಬಂದು ಹೋಗುತ್ತಿದ್ದರು. ಪ್ರತಿ ವರ್ಷ ಮೊಹರಮ್ಮಿಗೋ ಗುಡಿಗಳಲ್ಲೋ ಹಾಡಲು ಅವರು ಬೀಳಗಿಗೆ ಬರುತ್ತಿದ್ದರು. ಅಮೀರಬಾಯಿಯವರು ಬೀಳಗಿಯಲ್ಲಿದ್ದ ಮಧ್ವರಾವ್ ಉಮರ್ಜಿ ಎಂಬ ನಟನ ಜತೆಗೂಡಿ ಅಲ್ಲಿನ ಲಕ್ಷ್ಮೀಗುಡಿಯಲ್ಲಿ ಹಾಡುತ್ತಿದ್ದುದನ್ನು ಕೆಲವರು ಹಿರಿಯರು ನೆನೆಯುತ್ತಾರೆ. (ಬಲು ಸ್ಫುರದ್ರೂಪಿ ನಟನಾಗಿದ್ದ ಉಮರ್ಜಿಯನ್ನು ನಂತರ ಯಾರೊ ವಿಷಪ್ರಾಶನ ಮಾಡಿಸಿ ಕೊಂದರು.) ಅಮೀರಬಾಯಿ ಮುಂಬೈನಲ್ಲಿದ್ದರೂ ಆಹಾರ ಸಂಸ್ಕೃತಿ ಬದಲಿಸಲಿಲ್ಲ. ತಾಜುದ್ದೀನ್ ಪ್ರಕಾರ, ಅವರು ಜೋಳದರೊಟ್ಟಿ ಇಷ್ಟಪಟ್ಟು ತಿನ್ನುತ್ತಿದ್ದರು. ಇಬ್ಬರೂ ನಟಿಯರು ಕನ್ನಡ ಸಿನಿಮಾಗಳಲ್ಲಿ ಮಾಡಿದರು. ಅಮೀರಬಾಯಿಯವರು ಭಿಕ್ಷುಕಿಯಾಗಿ ನಟಿಸಿದ ಮತ್ತು ಹಾಡಿದ 'ಚಿರಂಜೀವಿ ಮಾರ್ಕಂಡೇಯ' (ಧಾರವಾಡದ ಕರ್ನಾಟಕ ಟಾಕೀಸಿನವರ ಪ್ರೊಡಕ್ಷನ್) ಚಿತ್ರ ಈಗ ನೋಡಲು ಸಿಗುವುದಿಲ್ಲ. ಸುರೇಶ ಕುಲಕರ್ಣಿಯವರು ಹೇಳುವಂತೆ ಅದರ ಫಿಲ್ಮ್ ಆಕಸ್ಮಿಕವಾಗಿ ಸುಟ್ಟುಹೋಯಿತು. ಅಮೀರಬಾಯಿ ಅವರು ನಟಿಸಿದ ಬಸವಣ್ಣನವರನ್ನು ಕುರಿತ ಸಿನಿಮಾ ಕೂಡ ಅರ್ಧಕ್ಕೆ ನಿಂತಿತು. ಈಗ ಅದೆಲ್ಲಿದೆಯೊ ತಿಳಿಯದು. ಅಮೀರಬಾಯಿ ಹಾಡಿರುವ ಹಲವಾರು ಕನ್ನಡ ಗೀತೆಗಳಿವೆ. 'ವಾರಿ ನೋಟ ನೋಡಿ ಮರುಳು ಮಾಡಿದವರ' ಎಂಬ ಅಮೀರಬಾಯಿಯವರ ಗೀತೆಯು ರೇಡಿಯೊ ಕೇಳುಗರಿಗೆ ಬಹಳ ಪರಿಚಿತ. ಅವರ 'ಜಾತ್ರಿಗೆ ಹೋಗೋಣ ಬಾ' ಕೂಡ ಪ್ರಸಿದ್ಧವಾಗಿದೆ. ಅಮೀರಬಾಯಿಯವರಿಗೆ 'ಕರ್ನಾಟಕದ ಕೋಕಿಲೆ' ಎಂಬ ಬಿರುದಿತ್ತು. ಇದನ್ನು ಯಾರು ಕೊಟ್ಟರೊ ತಿಳಿಯಬೇಕಿದೆ.

ಬಹಳ ಮುಖ್ಯವೆಂದರೆ, ಕರ್ನಾಟಕ ಏಕೀಕರಣ ಆಗುವ ಮುನ್ನವೇ ಕರ್ನಾಟಕಿ ಎಂದು ಹೆಸರಿಟ್ಟುಕೊಂಡಿದ್ದು. ಜೊಹ್ರಾ ಅಂಬಾಲವನ್ನೂ ಗಂಗೂಬಾಯಿಯವರು ಹಾನಗಲ್ಲನ್ನೂ ತಮ್ಮ ಹೆಸರು ಹಚ್ಚಿಕೊಂಡಿದ್ದನ್ನು ಇಲ್ಲೇ ನೆನೆಯಬಹುದು. ಮುಂಬೈಗೆ ಬಂದ ನಟರು ತಮ್ಮ ಊರು ದೇಶಗಳನ್ನು ಮರೆಸುವ ಹಾಗೆ ಹೆಸರನ್ನೂ ಬದಲಾಯಿಸಿಕೊಂಡರು. ಆದರೆ ಇವರು ತಮ್ಮ ಊರು ನಾಡುಗಳನ್ನು ಹೆಸರಲ್ಲಿ ಸೇರಿಸಿಕೊಂಡು ಅಭಿಮಾನ ಮೆರೆದರು. ಕೊನೆಯ ದಿನಗಳಲ್ಲಿ ಮರಳಿ ಮಣ್ಣಿಗೆ ಬರಲು ಬಯಸಿದರು.

ಕೊನೆಯ ದಿನಗಳು

1961–62ರ ಅವಧಿಯಲ್ಲಿ ಅಮೀರ್‌ಬಾಯಿ ಸಿನಿಮಾದಲ್ಲಿ ಕೆಲಸ ಮಾಡಿದಂತಿಲ್ಲ. ಇದಕ್ಕೆ ಕಾರಣ, ಬಹುಶಃ ಅವರ ಅನಾರೋಗ್ಯವೇ. ಅವರಿಗೆ ಪಾರ್ಶ್ವವಾಯು ಬಡಿಯಿತು. ಹಿಂದೂಜಾ ಆಸ್ಪತ್ರೆಗೆ ಅವರನ್ನು ಸೇರಿಸಲಾಯಿತು. ನಾಲ್ಕುದಿನ ನೋವುಂಡ ಅವರು 7ನೇ ಮಾರ್ಚ್ 1965ರಂದು ಪ್ರಾಣಬಿಟ್ಟರು. ಅವರ ಕೊನೆಯ ಆಸೆಯಂತೆ ಬಿಜಾಪುರಕ್ಕೆ ತಂದು ಮಣ್ಣು ಮಾಡಲಾಯಿತು. ಬಹುಶಃ ತಮ್ಮ ಕಲಾ ಜೀವನದ ತುಂಬ ದೇಶಾಟನೆ ಮಾಡುವ ಈ

ಕವಿ ಸಂಗೀತಗಾರರಿಗೆ ತಮ್ಮ ಕೊನೆಯಲ್ಲಿ ತಮ್ಮೂರ ಮಣ್ಣಿನಲ್ಲಿ ಮಲಗಬೇಕೆಂಬ ಭಾವನೆ ಕಾಡುತ್ತದೆಯೇ? ಮೊಗಲ್ ಚಕ್ರವರ್ತಿಯೂ ಕವಿಯೂ ಆಗಿದ್ದ ಬಹದೂರ್‌ಶಾ ಕೂಡ ಬ್ರಿಟಿಶರಿಗೆ ಮೊರೆಯಿಟ್ಟಿದ್ದು, ತನ್ನ ದೇಹವನ್ನು ದೆಹಲಿಯ ಮಣ್ಣಲ್ಲಿ ಧಪನ್ ಮಾಡಿ ಎಂದು. ಅಮೀರಬಾಯಿ ಅವರ ಸಮಾಧಿಯ ಮೇಲೆ ಮುಳ್ಳುಕಂಟಿಗಳು ಬೆಳೆದು ಅದು ಪಾಳುಬಿದ್ದಿದೆ. ದೇಶದ ತುಂಬ ಕೀರ್ತಿ ಪಡೆದ ತಮ್ಮ ಊರಿನ ಇಬ್ಬರು ಕಲಾವಿದರನ್ನು ಬಿಜಾಪುರದ ಜನ ಈಗ ಮರೆತುಬಿಟ್ಟಿದ್ದಾರೆಯೇ? ಎನಿಸುತ್ತದೆ. ಇದಕ್ಕೆ ಕಾರಣವೂ ಇದ್ದಂತಿದೆ ಎಂದು ಕಾರಣವನ್ನೂ ಹುಡುಕುವಂತಾಗುತ್ತದೆ. 15ನೇ ವಯಸ್ಸಿಗೇ ಬಿಜಾಪುರ ಬಿಟ್ಟುಹೋದ, ಇಡೀ ಬದುಕನ್ನು ಮುಂಬೈನಲ್ಲಿ ಕಳೆದ ಅಮೀರಬಾಯಿವರ ಪ್ರತಿಭೆ, ಸಹಜವಾಗಿಯೇ ಕನ್ನಡದಲ್ಲಿ ಪ್ರಕಟವಾಗಲು ಹೆಚ್ಚು ಅವಕಾಶ ಸಿಗಲಿಲ್ಲ. ಅವರು ಹುಟ್ಟಿ ಬೆಳೆದ ಬಿಜಾಪುರ ಜಿಲ್ಲೆಯು ಆಗ ಮುಂಬೈ ರಾಜ್ಯಕ್ಕೆ ಸೇರಿತ್ತು. ಕರ್ನಾಟಕ ಏಕೀಕರಣವಾದ ಬಳಿಕವಷ್ಟೆ ಮುಂಬೈ ಬಿಜಾಪುರಗಳು ಬೇರೆ ರಾಜ್ಯಗಳಿಗೆ ಸೇರಿದವು. ಈ ಏಕೀಕರಣ ಕೂಡ ಅಮೀರಬಾಯಿಯವರ ಕನ್ನಡ ಹಾಗೂ ಕರ್ನಾಟಕದ ಜೊತೆಯ ಸಂಬಂಧವನ್ನು ಕಡಿಮೆಗೊಳಿಸಿರಬಹುದು. ಆದರೆ ಹಳೇ ತಲೆಮಾರಿನ ಜನರನ್ನು ಮಾತಾಡಿಸುತ್ತ ಹೋದರೆ, ಅಮೀರಬಾಯಿ, ಈ ಜನರ ಸ್ಮೃತಿಯಲ್ಲಿ ಇನ್ನೂ ಜೀವಂತವಿರುವುದು ತಿಳಿಯುತ್ತದೆ. ಅಷ್ಟೇಕೆ, ಅಮೀರಬಾಯಿ ಸಮಾಧಿ ನೋಡಲು ಹೋದಾಗ, ಖಬರಸ್ಥಾನದ ಉಸ್ತುವಾರಿ ನೋಡಿಕೊಳ್ಳುವ ತರುಣನು ಅಮೀರಬಾಯಿಯವರ ಹಾಡುಗಳನ್ನು ಹಾಡಿ ತೋರಿಸಿದನು. ಅಂದರೆ ಅಮೀರ್ ಬಾಯಿಯವರು ಜನಿಸಿ ಒಂದು ಶತಮಾನವೇ ದಾಟಿದ್ದರೂ, ಅವರ ಹೆಸರು ಮತ್ತು ಹಾಡುಗಳು ಪೂರ್ತಿ ಕಳೆದು ಹೋಗದೇ ಉಳಿದಿವೆ ಎಂಬ ಸತ್ಯ ಮನದಟ್ಟಾಗುತ್ತದೆ. ಮನಸ್ಸಿಗೆ ಸಮಾಧಾನವಾಗುತ್ತದೆ.

ಅಮೀರಬಾಯಿ ಅವರ ಸಮಾಧಿಗೆ ಕೆಲವೇ ಹೆಜ್ಜೆಗಳ ದೂರದಲ್ಲಿ ಆದಿಲಶಾಹಿ ದೊರೆಯಾದ ಎರಡನೇ ಇಬ್ರಾಹಿಮನ ಸಮಾಧಿ ಇಬ್ರಾಹಿಂ ರೋಜಾ ಇದೆ. 'ಜಗದ್ಗುರು' ಎಂದು ಹೆಸರಾಗಿದ್ದ ಇಬ್ರಾಹಿಂ ಸಂಗೀತದ ಹುಚ್ಚಿದ್ದ ದೊರೆ. ಸರಸ್ವತಿ ಮತ್ತು ಗಣಪತಿ ಪ್ರಾರ್ಥನೆಯಿಂದ ಆರಂಭವಾಗುವ ಸಂಗೀತ ಗ್ರಂಥವಾದ 'ಕಿತಾಬೆ ನವರಸ್' ಬರೆದವನು; ನೂರಾರು ಸಂಗೀತಗಾರರನ್ನು ಸೇರಿಸಿ ಪ್ರಯೋಗ ಮಾಡಲು ನವರಸಪುರ ಎಂಬ ಊರನ್ನೇ ಕಟ್ಟಿಸಿದವನು; ಕಲೆಗಾಗಿ ಜೀವ ಸವೆಸಿದ ಮತ್ತು ಜನಾಪವಾದವನ್ನೂ ಹೊತ್ತ ಬಿಜಾಪುರದ ಸೀಮೆಯ ಎರಡು ಜೀವಗಳು ಒಂದೇ ಕಡೆ ಮಲಗಿರುವುದು ಅರ್ಥಪೂರ್ಣವಾಗಿದೆ.

———— * ————

ಬೆಂಗಳೂರಿನ ಉಪಮೇಯರ್ ಪಿ.ಆರ್. ಜಯಲಕ್ಷ್ಮಮ್ಮ

ವಿಜಯ ಪಿ.

ಪಿ.ಆರ್. ಜಯಲಕ್ಷ್ಮಮ್ಮನವರು ಹಾಸನದಲ್ಲಿ 1908ರ ನವೆಂಬರ್ ಹನ್ನೊಂದರಂದು ಜನಿಸಿದರು. ತಂದೆ ಭವಾನಿ ಶಂಕರ ಐಯ್ಯರ್ ಮತ್ತು ತಾಯಿ ತಾಯಮ್ಮ. ಓದಿದ್ದು ಮೆಟ್ರಿಕ್ಯುಲೇಶನ್‌ವರೆಗೆ. ಆಗಿನ ಸಂಪ್ರದಾಯದಂತೆ ಹನ್ನೆರಡನೇ ವಯಸ್ಸಿನಲ್ಲಿಯೇ ಮದುವೆಯಾಗಿ ಗೃಹಿಣಿಯ ಪಟ್ಟ ಪಡೆದರು. ಜೀವನಾಧಾರಕ್ಕೆ ಹಾಗೂ ಬದುಕಿನ ಸಾರ್ಥಕತೆಗೆ, ಬರವಣಿಗೆ ಮತ್ತು ಪ್ರತಿಕೋದ್ಯಮವನ್ನೇ ನಂಬಿಕೊಂಡಿದ್ದ ಪಿ.ಆರ್. ರಾಮಯ್ಯನವರು ಈಕೆಯ ಕೈ ಹಿಡಿದ ಜೀವನ ಸಂಗಾತಿ. ಆತ ನಡೆಸುತ್ತಿದ್ದ ಪತ್ರಿಕೆ 'ತಾಯಿನಾಡು'.

ಜಯಲಕ್ಷ್ಮಮ್ಮನವರಿಗೆ ದೇವರ ಪೂಜೆ ಎಂದರೆ ಮನಸ್ಸನ್ನು ತಲ್ಲೀನಗೊಳಿಸಿಕೊಳ್ಳುವ ಒಂದು ಧ್ಯಾನಕ್ರಿಯೆ. ಸುಮಧುರ ಕಂಠ, ಅಪಾರ ಸ್ಮರಣ ಶಕ್ತಿ, ಹಾಡುವ ಆಸಕ್ತಿ–ಇವು ಹನ್ನೆರಡನೇ ವಯಸ್ಸಿನಲ್ಲೇ ಕೀರ್ತನೆಗಳನ್ನು, ಅನೇಕ ದೇವರನಾಮಗಳನ್ನು ಕಲಿಯಲು ಪ್ರೇರೇಪಿಸಿದವು. ಕಿರಿವಯಸ್ಸಿಗೇ ಹಲವು ಕಂಠಪಾಠ ಸ್ಪರ್ಧೆಗಳಲ್ಲಿ ಬಹುಮಾನ ದೊರಕಿಸಿಕೊಟ್ಟವು. ವಯಸ್ಸಿನ ಜೊತೆಜೊತೆಗೇ ದಿನೆದಿನೇ ಹೆಚ್ಚಾಗತೊಡಗಿದ ಆಸಕ್ತಿಯಿಂದ ಅವರಿವರಿಂದ, ಹಿರಿಯರಿಂದ, ಗ್ರಂಥಗಳಿಂದ ಅವರು ಕಲಿತಿದ್ದು ವಿಧ್ಯುಕ್ತ ಶಾಸ್ತ್ರ, ಸಾಂಪ್ರದಾಯಿಕ ಹಾಡುಗಳು, ಸಕ್ರಮ ಪೂಜಾ ಪಾಠಗಳು, ಸಂಕ್ಷಿಪ್ತ ರಾಮಾಯಣ, ವಿಷ್ಣು ಸಹಸ್ರನಾಮ, ಕೇಶವ ದಂಡಕ, ರಾಮಾಯಣ ದಂಡಕ, ನಾರಾಯಣ ಮಣಿಮಾಲೆ, ಆದಿತ್ಯ ಹೃದಯ, ನವಗ್ರಹ ಸ್ತೋತ್ರಗಳು, ಪೂಜಾಂತ್ಯದ ಮಂತ್ರಪುಷ್ಪ, ಮಂಗಳಾಷ್ಟಕಗಳು, ಮಂಗಳ ಗೀತೆಗಳು ಇವೆಲ್ಲವೂ ಅವರಿಗೆ ಅನುಷ್ಠಾನಪೂರ್ವಕ ಕರತಲಾಮಲಕ.

ಆಕೆ ಸಂಪ್ರದಾಯಪ್ರಿಯೆ. ದೇವರನ್ನು ವಿಧ್ಯುಕ್ತವಾಗಿ ಪೂಜಿಸಿ, ಪ್ರಾರ್ಥಿಸಿ, ನೈವೇದ್ಯ ಸಲ್ಲಿಸಿ, ಸಂಪೂರ್ಣ ಶರಣಾಗಲು ಪ್ರೇರಕವಾಗುವ ಸ್ತೋತ್ರಗಳು, ಹಾಡುಗಳು, ಶ್ಲೋಕ ಕೀರ್ತನೆಗಳು ಆಕೆಯ ಬಾಯಲ್ಲಿತ್ತು. ತಲೆಯಲ್ಲಿತ್ತು. ಸಂಗ್ರಹಿತ ಭಂಡಾರದಲ್ಲಿ ಪುಸ್ತಕಗಳ ರೂಪದಲ್ಲಿತ್ತು. ರಾಮಯ್ಯನವರು, ವಿಜ್ಞಾನ, ತತ್ವಶಾಸ್ತ್ರ, ಇತಿಹಾಸ, ರಾಜಕಾರಣ ಮುಂತಾದ ಜ್ಞಾನಶಾಸ್ತ್ರಗಳಿಗೆ ಸಂಬಂಧಿಸಿದ ಗ್ರಂಥಗಳ ಶೇಖರಣೆ ಮಾಡಿದರೆ, ಪಿ.ಆರ್. ಜಯಲಕ್ಷ್ಮಮ್ಮನವರ ಸಂಗ್ರಹಣೆಯಲ್ಲಿ ದೇವದೇವತೆಗಳ ಪಟಗಳು, ತೀರ್ಥಕ್ಷೇತ್ರಗಳ ವಿವರಗಳು, ಕ್ಷೇತ್ರ ಮಹಿಮೆಯ ಮಾಹಿತಿಗಳು, ಪೌರಾಣಿಕ ಪಾಠಗಳು, ವ್ರತ ಕಥೆಗಳು, ದೇವತೆಗಳ ಕಥನಗಳು ಇತ್ಯಾದಿಗಳಿದ್ದುವು. ಕನ್ನಡ ಸಾಹಿತ್ಯರಾಶಿಯಲ್ಲಿ ವೇದ, ಪುರಾಣ, ಇತಿಹಾಸಗಳ ಸಾರಸರ್ವಸ್ವವಾಗಿ, ಕಂಠದಿಂದ ಕಂಠಕ್ಕೆ, ಬಾಯಿಂದ ಬಾಯಿಗೆ ತಲೆತಲಾಂತರದಿಂದ ಪ್ರವಹಿಸಿ ಬಂದಿರುವ ಈ ದಿವ್ಯ ಕೊಡುಗೆಯನ್ನು; ಪರಂಪರಾಗತವಾಗಿ ಹರಿದುಬಂದಿರುವ ಈ ಜನಪದರ ವಾಹಿನಿಯನ್ನು ಮುಂದಕ್ಕೂ ಹರಿಯಬಿಡಬೇಕೆಂಬುದು ಅವರ ಹೆಬ್ಬಯಕೆ.

ಬದುಕಿನ ಕಡೆಯಲ್ಲಿ, ಸುಮಾರು ಇಪ್ಪತ್ತೆರಡು ತಿಂಗಳುಗಳ ಕಾಲ, ಬೆಳಿಗ್ಗೆ ಹತ್ತರಿಂದ ಸಂಜೆ ಆರರವರೆಗೆ ಈ ಸಾಹಿತ್ಯ ಸಂಗ್ರಹದ ಕೆಲಸಕ್ಕಾಗಿಯೇ ಮುಡುಪಿಟ್ಟರು. ಈ ಬಗ್ಗೆ ಸಾಧ್ಯವಾದಷ್ಟೂ ಸಂಗ್ರಹಿಸಿ, ಜನಸಾಮಾನ್ಯರ ಬಳಕೆಗಾಗಿ ಒಂದು ಸಂಕಲನವನ್ನು ಪ್ರಕಟಿಸಬೇಕೆಂದು ಅವಿರತವಾಗಿ ಶ್ರಮಿಸಿದರು. ಕೆ.ಎನ್ ಮುಕುಂದರಾಜ್‌ರವರ ಸೇವಾ ನೆರವು ಪಡೆದು, ತಾವು ಸಂಗ್ರಹಿಸಿದ್ದನ್ನೆಲ್ಲ ಅವರಿಂದ ಬರೆಸಿದರು. "ನಾನು ಇವುಗಳನ್ನು ಕಲಿತುಕೊಂಡು ಹೇಳುತ್ತಿರುವುದು ಪಂಡಿತರಿಗಲ್ಲ: ನಮ್ಮ ನಾಡಿನ ಸಾಮಾನ್ಯ ಮಹಿಳೆಯರಿಗಾಗಿ ನನಗೆ ಶಕ್ತವಿದ್ದಷ್ಟು ಹೇಳಿದ್ದೇನೆ. ಅವರಲ್ಲಿ ಹೆಚ್ಚು ಜನರು ಇದನ್ನು ಅಭ್ಯಸಿಸಿ ಕಲಿತುಕೊಂಡು ಇದನ್ನು ಪುನರುಜ್ಜೀವನಗೊಳಿಸುವರೆಂಬ ಧೈರ್ಯವೂ ನಂಬಿಕೆಯೂ ನನಗೆ ಉಂಟಾಗಿದೆ" ಎಂದು ಜಯಲಕ್ಷ್ಮಮ್ಮನವರು ಆಗಾಗ್ಗೆ ಹೇಳುತ್ತಿದ್ದರಂತೆ. ಬಿಡಿಹಾಳೆ, ಪುಡಿಚೀಟಿ, ಪುಡಿಪುಡಿಯಾದ ಕಾಗದದಲ್ಲಿನ ಕೈ ಬರಹಗಳು, ಕೆಲವು ಮಸಿಯಲ್ಲಿ, ಕೆಲವು ಸೀಸದ ಕಡ್ಡಿಯ ಲಿಪಿಯಲ್ಲಿ, ಕಣ್ಣಿಗೆ ಕಾಣದ ರೀತಿಯಲ್ಲಿ ಇದ್ದರೂ ತಮ್ಮ ಅರಿವಿನ ಒರೆಯಲ್ಲಿ, ಬೆಳಕಿನಲ್ಲಿ, ಮಸೂರದಲ್ಲಿ, ತೀಕ್ಷ್ಣ ದೃಷ್ಟಿಯಲ್ಲಿ, ಪರೀಕ್ಷಿಸಿ, ಅವರು ಸಿದ್ಧಗೊಳಿಸಿದ ಇನ್ನೂರಾ ನಲವತ್ತು ಪುಟಗಳ 'ಹಸ್ತಪ್ರತಿ ಕಾವ್ಯಗಾಯನ ಸ್ತೋತ್ರ ಮಂಜರಿ'. ಇದು ಪ್ರಕಟಗೊಂಡದ್ದು ಅವರ ಮರಣಾನಂತರ. ಕನ್ನಡ ಸಂಸ್ಕೃತಿಯ ಯಾವುದೇ ಮತ, ಜಾತಿಗಳ ಜನರು ಅನುಸರಿಸಬಹುದಾದ, ಸಂಪೂರ್ಣ ಮಾನವಕುಲದ ಒಳಿತಿಗಾಗಿ ಪ್ರಾರ್ಥಿಸಲು ಯೋಗ್ಯವಾದ ಹಾಡುಗಳು, ಬೋಧಪ್ರದ ಕಥನಕಾವ್ಯಗಳು, ಸಾಂಪ್ರದಾಯಿಕ ಕವಿತೆಗಳು, ಹರಿದಾಸರ ಮತ್ತು ವಾಗ್ಗೇಯಕಾರರ ಕೀರ್ತನೆಗಳು, ವ್ರತ ಕಥೆಗಳು, ಪ್ರಹ್ಲಾದ ಚರಿತ್ರೆ, ನಳ ಚರಿತ್ರೆ, ಹನುಮಂತನ ಕೊರವಂಜಿ, ಲಕ್ಷ್ಮಣನ ನಗು, ಶ್ರೀಗೌರೀ ಮಾನಸಪೂಜೆ, ಶ್ರೀನಿವಾಸ ಕಲ್ಯಾಣ, ಧ್ರುವ ಚರಿತ್ರೆ, ಐರಾವತ, ಮುಂತಾದವುಗಳ ಸಾರಸಹಿತ ಸಂಗ್ರಹಿವಿದು.

ಜಯಲಕ್ಷ್ಮಮ್ಮನವರ ಕೃತಿಗಳ ಸಂಖ್ಯೆ ಬೆರಳೆಣಿಕೆಯಷ್ಟೇ. ವಿವಿಧ ವಿಷಯಗಳ ಬಗ್ಗೆ ಬರೆದ ಲೇಖನಗಳು, ಕವಿತೆಗಳು, ಬದರೀ ಯಾತ್ರೆ ಮಾಡಿ ಬಂದ ನಂತರ 1957ರಲ್ಲಿ ಬರೆದ 'ಬದರೀ ಯಾತ್ರೆ' ಎಂಬ ಪ್ರವಾಸ ಸಾಹಿತ್ಯ; 1975ರಲ್ಲಿ ಬರೆದ 'ಮೂಢ ನಂಬಿಕೆಗಳು' ಇಷ್ಟು ಇವರ ರಚನೆಗಳು.

ಪತಿ ಪಿ.ಆರ್. ರಾಮಯ್ಯನವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅತೀವ ಆಸಕ್ತಿ ಹೊಂದಿದ್ದ ವ್ಯಕ್ತಿ. ಗಾಂಧೀಜಿಯವರ ತತ್ವಗಳಲ್ಲಿ ಪರಮ ಭಕ್ತಿ; ಅವರ ಕಟ್ಟಾ ಅನುಯಾಯಿ. ಮದುವೆಯಾದ ಮೇಲೆ ಪತ್ನಿಗೆ ಬರೆಯುತ್ತಿದ್ದ ಪತ್ರಗಳಲ್ಲಿ ತುಂಬಿರುತ್ತಿದ್ದುದು ಗಾಂಧಿ ವಿಚಾರಗಳೇ. ಸದಾ ಅವರ ಬಗೆಗೇ ಮಾತು. ಅವರದೇ ಆಲೋಚನೆಗಳು. ಕೇಳಿ ಕೇಳಿ ಆ ಗಾಂಧಿತ್ವವನ್ನು ತಮ್ಮಲ್ಲೂ ತುಂಬಿಸಿಕೊಂಡರು ಜಯಲಕ್ಷ್ಮಮ್ಮ. ಪತಿಯೊಂದಿಗೆ ತಾವೂ ಗಾಂಧೀಜಿಯವರನ್ನು ನೋಡಿದರು. "ನೋಡಲಿ, ಇಲ್ಲದಿರಲಿ, ಗಾಂಧೀಜಿಯವರ ಮಾತು, ವ್ಯಕ್ತಿತ್ವದಲ್ಲಿ ಅದೆಂಥ ಚುಂಬಕ ಶಕ್ತಿಯಿತ್ತೋ ಅದರ ಆಳದ ಅರಿವು ಆ ಕಾಲದವರ ಅನುಭವಕ್ಕೇ ಗೊತ್ತು. ಮಾತು ಮರೆತು ಮ್ಯಾಜಿಕ್‌ಗೆ ಒಳಗಾದರವರಂತೆ ಆಗಿ ಬಿಡುತ್ತಿದ್ದರು. ಗಾಂಧಿ ಮಹಾತ್ಮರನ್ನು ಒಂದು ಸಲ ನೋಡಿದರೆ, ಅವರ ಮಾತನ್ನು ಒಂದು ಸಲ ಕೇಳಿದರೆ ಮುಗಿಯಿತು. ಯಕ್ಷಿಣಿಯ ಹಾಗೆ ತಾವಾಗಿಯೇ ತಲೆಬಾಗಿ ಶಿಷ್ಯರಾಗಿ ಹೋಗುತ್ತಿದ್ದೆವು. ಎಷ್ಟು ಸಲ ನೋಡಿದರೂ ಮತ್ತೊಮ್ಮೆ ಅವರ ದರ್ಶನ ಸಿಕ್ಕಿ ಅವರ ಅನುಗ್ರಹವಾದೀತೇ ಎನ್ನಿಸುತ್ತಿತ್ತು.. .. .. ." ಎಂಬುದು ಜಯಲಕ್ಷ್ಮಮ್ಮನವರೇ ಹೇಳಿದಂತಹ ಮಾತು.

ಸರಿ, ರಾಷ್ಟ್ರಪಿತನ ಈ ಮಹಾಪ್ರಭಾವ, ಪತಿಯ ಪ್ರೋತ್ಸಾಹ, ಪ್ರೇರಣೆಗಳಿಂದಾಗಿ ಗಾಂಧೀಜಿಯವರ ಭಾಷಣವಿದ್ದಲ್ಲೆಲ್ಲ, ಕಾಂಗ್ರೆಸ್ ಅಧಿವೇಶನಗಳು ನಡೆದಲ್ಲೆಲ್ಲ, ಈಕೆ ಅಲ್ಲಿ ಹಾಜರು. ಅವರು ನಡೆಸುವ ಭಜನೆ, ಭಗವದ್ಗೀತೆ, ಭಾಷಣ, ಎಲ್ಲವೂ ಈಕೆಯ ಮನಸ್ಸನ್ನು ಪೂರ್ಣವಾಗಿ ಅಲುಗಾಡಿಸಿಬಿಟ್ಟಿತು. ಜಯಲಕ್ಷ್ಮಮ್ಮನವರು ತಮ್ಮ ತನುಮನಗಳನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ತೊಡಗಿಸಿಬಿಟ್ಟರು. ಮನೆ ಮಕ್ಕಳು ಮತ್ತು ಕುಟುಂಬದ ಎಲ್ಲ ಜವಾಬ್ದಾರಿಗಳೊಂದಿಗೆ ದೇಶಕ್ಕಾಗಿ ಮಾಡಬಹುದಾದ ಎಲ್ಲ ಸೇವೆಗಳನ್ನೂ ತತ್ಪರರಾಗಿ ಮಾಡಿದರು.

ಸಭೆ–ಸಮಾರಂಭಗಳಲ್ಲಿ ಪಾಲ್ಗೊಂಡರು. ಮೆರವಣಿಗೆಗಳಲ್ಲಿ ಭಾಗಿಯಾದರು. ತರಬೇತಿ ಕೇಂದ್ರಗಳಲ್ಲಿ, ಸಮ್ಮೇಳನಗಳಲ್ಲಿ ಭೋಜನ ವ್ಯವಸ್ಥೆಯ ಹೊಣೆ ಹೊತ್ತರು. ನಾಗಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಸಕ್ರಿಯ ಸೇವೆ ಸಲ್ಲಿಸಿದರು. 'ಭಾರತ ಬಿಟ್ಟು ತೊಲಗಿ' ಚಳವಳಿಯ ಸಂದರ್ಭದಲ್ಲಿ ಚಾಮರಾಜಪೇಟೆಯಲ್ಲಿ ದೊಡ್ಡ ಗಲಭೆಯಾದಾಗ ತಾವು ಹದಿನೈದೇ ದಿನಗಳ ಬಾಣಂತಿ ಎಂಬುದನ್ನೂ ಮರೆತು, ರಾಮಯ್ಯನವರು ಜೈಲಿನಲ್ಲಿದ್ದರೂ ಧೈರ್ಯಗೆಡದೆ, ಪೊಲೀಸರ ಗುಂಡಿಗೆ ಗಾಯಾಳುಗಳಿಗೆ ಮನೆಯಲ್ಲಿ ಆಸರೆ ನೀಡಿ ನೋಡಿಕೊಂಡರು. ಇಂದಿರಾಗಾಂಧಿಯವರು ಮತ್ತು ಇತರರ ಬೆಂಬಲವಾಗಿದ್ದು, ಕಾಂಗ್ರೆಸ್ ಇಬ್ಭಾಗದ ಸಮಯದಲ್ಲಿ ಊಟೋಪಚಾರದ ಕಾರ್ಯವನ್ನು ತೃಪ್ತಿಕರವಾಗಿ ನಿರ್ವಹಿಸಿದರು. "ವೃತ್ತಪತ್ರಿಕೆಗಳಲ್ಲಿ ನಡೆಯುತ್ತಿದ್ದ ಚಳವಳಿ ವಿಷಯಗಳನ್ನು ಬರೆದು ಜನರನ್ನು ಪ್ರಚೋದಿಸುತ್ತಿದ್ದೆ. ಎಲೆ ಮರೆಯ ಕಾಯಂತಿದ್ದು ಕಾಯಾವಾಚಾ ಮನಸಾ ದೇಶಕ್ಕಾಗಿ ದುಡಿದಿದ್ದೇನೆ. ಜೈಲಿಗೆ ಹೋಗಲಿಲ್ಲ ಅಷ್ಟೇ. ಎಲ್ಲ ವಿಧದಲ್ಲೂ ಚಳವಳಿ ರೂಪ ತಾಳಿದಂತೆಲ್ಲ ಅದಕ್ಕೆ ತಕ್ಕಂತೆ ನನ್ನ ದೇಶಸೇವಾ ಕಾರ್ಯಗಳನ್ನು ಅಳವಡಿಸಿಕೊಳ್ಳುತ್ತಿದ್ದೆ" ಎಂಬುದು ಜಯಲಕ್ಷ್ಮಮ್ಮನವರ ಹೇಳಿಕೆ.

ಸಾಹಿತ್ಯಕ್ಕಿಂತ, ಸಾಮಾಜಿಕ ಸೇವಾಕಾರ್ಯಗಳಿಂದಾಗಿಯೇ ಜನರಿಂದ ಮತ್ತು ಸಮಾಜದಿಂದ ಗುರುತಿಸಲ್ಪಟ್ಟವರು ಅವರು. ನಲತ್ತೈದು ವರ್ಷಗಳಷ್ಟು ದೀರ್ಘಾವಧಿಗೆ, ಆರ್. ಕಲ್ಯಾಣಮ್ಮನವರು ಸ್ಥಾಪಿಸಿದ ಅಖಿಲ ಕರ್ನಾಟಕ ಮಕ್ಕಳ ಕೂಟದ ಸದಸ್ಯೆಯಾಗಿ, ಉಪಾಧ್ಯಕ್ಷೆಯಾಗಿ; ನಗರ ಸಭೆಯ ಉಪಮೇಯರ್ ಆಗಿ, ಅಶೋಕ ಶಿಶು ವಿಹಾರ ಹಿರಿಯ ಪ್ರಾಥಮಿಕ ಶಾಲೆಯ ಮತ್ತು ಬಸವನಗುಡಿ ಗೋಕುಲ ಶಿಕ್ಷಣ ಕೇಂದ್ರದ ಅಧ್ಯಕ್ಷೆಯಾಗಿ ಸಲ್ಲಿಸಿದ ಸೇವೆಯೂ ಉಲ್ಲೇಖನೀಯ.

ಈಕೆಯಿಂದ ದೇಶಕ್ಕೆ ಮಾತ್ರವಲ್ಲ, ಕನ್ನಡ ಭಾಷೆಗೂ ಸಂಸ್ಕೃತಿ ಮತ್ತು ಸಮಾಜಕ್ಕೂ ಹಲವು ರೀತಿಯಿಂದ ಸೇವೆ ಸಂದಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ಉಪಸಮಿತಿಯಲ್ಲಿ ಅನೇಕ ವರ್ಷಗಳು ಸದಸ್ಯೆಯಾಗಿ, ಈ ಪರಿಷತ್ತಿನ ಮಹಿಳಾ ಕಾರ್ಯಕ್ರಮದ ಕೆಲವಾರು ಸಭೆಗಳ ಅಧ್ಯಕ್ಷತೆ ವಹಿಸಿ, ಅಗತ್ಯ ಕಾರ್ಯಗಳನ್ನು ನಿರ್ವಹಿಸಿದ್ದರು. 1957ರಲ್ಲಿ ಬೆಂಗಳೂರು ನಗರಪಾಲಿಕೆಯ ಇಪ್ಪತ್ತಮೂರನೇ ವಿಭಾಗದಲ್ಲಿ ನಿಂತು ಅವಿರೋಧವಾಗಿ ಆಯ್ಕೆಗೊಂಡು, ತಮ್ಮ ವ್ಯಾಪ್ತಿಯ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯ ಕೈಗೊಂಡರು. ವಿಲ್ಸನ್ ಗಾರ್ಡನ್ ಚಿತಾಗಾರದ ಸುತ್ತಲ ಪರಿಸರವನ್ನು ಹಸಿರಾಗಿಸಿ, ಆರೋಗ್ಯಪೂರ್ಣ ವಾತಾವರಣವಾಗಿ ಪರಿವರ್ತಿಸಿದ್ದು ಅವರ ಕೈಗೊಂಡ ಕೆಲಸಗಳಲ್ಲೊಂದು.

ಇವರಿಗೆ 1963ರಲ್ಲಿ, ಕರ್ನಾಟಕ ಸರ್ಕಾರದಿಂದ ಸಮಾಜಸೇವಾ ಪ್ರಶಸ್ತಿಯೂ; 1982ರಲ್ಲಿ ಕರ್ನಾಟಕ ಸರ್ಕಾರದ ಮಕ್ಕಳ ಕ್ಷೇಮಾಭಿವೃದ್ಧಿ ವತಿಯಿಂದ ರಾಜ್ಯ ಪ್ರಶಸ್ತಿಯೂ; ಬಸವನಗುಡಿ ಅಬಲಾಶ್ರಮದಿಂದ ಚಿನ್ನದ ಪದಕವೂ ದೊರೆತಿದ್ದು ಅಭಿನಂದನೀಯ.

'ಕಾವ್ಯ ಗಾಯನ ಸ್ತೋತ್ರ ಮಂಜರಿ'ಗಾಗಿ ಅಗತ್ಯವೆನಿಸಿದ್ದುದನ್ನೆಲ್ಲ ಸಂಗ್ರಹಿಸಿ, ಬರೆಸುವ ಕಾಯಕವನ್ನು ಸಂಪೂರ್ಣಗೊಳಿಸಿ, ಸಮಾಧಾನ ಚಿತ್ತರಾದಾಗಲೇ ದೈಹಿಕ ಶ್ರಮಕ್ಕೆ ಸೋತ ಅವರ ಅನಾರೋಗ್ಯ ಉಲ್ಬಣಿಸಿ, 1991ರ ಏಪ್ರಿಲ್ ಇಪ್ಪತ್ತರ ಬೆಳಗಿನಂದು, ಅವರನ್ನು ಬದುಕಿನಿಂದ ಬಹುದೂರಕ್ಕೆ ಎಳೆದೊಯ್ದು ಬಿಟ್ಟಿತು.

———— * ————

ಸ್ವಾತಂತ್ರ್ಯ ಸಂಗ್ರಾಮದ ಧೀಮಂತ ಮಹಿಳೆ ಗೌರಮ್ಮ ವೆಂಕಟರಾಮಯ್ಯ

ನಂ. ನಾಗಲಕ್ಷ್ಮಿ

ಹತ್ತು ವರ್ಷಕ್ಕೆ ಮದುವೆ, ಹದಿನೇಳಕ್ಕೆ ಎರಡು ಮಕ್ಕಳ ತಾಯಿ. ಮದುವೆಯಾದಾಗ ಆಡುವ ಬಾಲೆ ಮುಂದೆ ಸ್ವಾತಂತ್ರ್ಯ ಸಮರದ ಬಿರುಸಿನ ಚಳವಳಿಗಳಲ್ಲಿ ಪಾಲ್ಗೊಂಡು, ಪೊಲೀಸರ ದೌರ್ಜನ್ಯ, ದಬ್ಬಾಳಿಕೆಯನ್ನು ದಿಟ್ಟತನದಿಂದ ಎದುರಿಸಿದ ಧೀಮಂತ ಮಹಿಳೆಯಾದರು. ಆಕೆಯೇ ಸರ್ದಾರ್ ವೆಂಕಟರಾಮಯ್ಯನವರ ಪತ್ನಿ ಗೌರಮ್ಮ. ಆ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ್ದ ಕೆಲವೇ ಮಹಿಳೆಯರ ಗುಂಪಿನಲ್ಲಿ ಅವರೂ ಒಬ್ಬರಾಗಿದ್ದರು.

ಅವು ಸ್ವಾತಂತ್ರ್ಯ ಸಂಗ್ರಾಮದ ದಿನಗಳು–ಬ್ರಿಟಿಷರ ವಿರುದ್ಧದ ಕಾರ್ಯಾಚರಣೆಯಲ್ಲಿ ದೇಶದಾದ್ಯಂತ ಲಕ್ಷಾಂತರ ಮಂದಿ ಪಾಲ್ಗೊಳ್ಳುತ್ತಿದ್ದರು. ಹಳ್ಳಿಹಳ್ಳಿಗಳಲ್ಲಿ ಸಂಘಟನೆಯಾಗುತ್ತಿತ್ತು. ಮಹಿಳೆಯರೂ ಹೊರಬಂದಿದ್ದರೂ ಅವರ ಸಂಖ್ಯೆ ಸೀಮಿತವಾಗಿತ್ತು. ಅವರಲ್ಲೂ ಮಧ್ಯಮ ವರ್ಗದ, ಸಂಪ್ರದಾಯಸ್ಥ ಕುಟುಂಬದ ಹೆಣ್ಣುಮಕ್ಕಳು ಹಿಂಜರಿಯುತ್ತಿದ್ದ ಕಾಲವಾಗಿತ್ತು.

ವೆಂಕಟರಾಮಯ್ಯ ಮದುವೆಯಾದ ಕಾಲಕ್ಕೇ ಸ್ವಾತಂತ್ರ್ಯ ಸಂಗ್ರಾಮದ ಚಟುವಟಿಕೆಗಳಲ್ಲಿ ತೊಡಗಿದ್ದರು. ಇಂದು ಈ ಊರಲ್ಲಿದ್ದರೆ ನಾಳೆ ಮತ್ತೆಲ್ಲೋ–ಮಧ್ಯೆ ಎಷ್ಟೋ ದಿನಗಳು ಭೂಗತರಾಗಿರಬೇಕಾದ ಸಂದರ್ಭಗಳೂ ಇರುತ್ತಿದ್ದವು. ಗೌರಮ್ಮನವರಿಗೆ ಆಗೊಮ್ಮೆ ಈಗೊಮ್ಮೆ ಪತಿದರ್ಶನ. ಆತನ ಚಟುವಟಿಕೆಗಳ ವಿವರಗಳನ್ನು ಕೇಳುತ್ತ ಕೇಳುತ್ತ, ಆಕೆಯಲ್ಲೂ ದೇಶಪ್ರೇಮದ ವಿಚಾರಗಳು ಮೂಡಿದ್ದವು ತಾನೂ ಅವುಗಳಲ್ಲಿ ಭಾಗಿಯಾಗಬೇಕೆಂಬ ಹಂಬಲವುಂಟಾಗಿತ್ತು. ದಾಂಪತ್ಯ ಜೀವನದ ಆಕರ್ಷಣೆಗಿಂತ ದೇಶಸೇವೆಗೆ ದೇಹ, ಮನಸ್ಸು ಹಾತೊರೆಯತೊಡಗಿದ್ದುವು. ಎರಡು ಮಕ್ಕಳ ತಾಯಿಯಾಗಿ ಮಕ್ಕಳನ್ನು ತವರಿನಲ್ಲಿ ಬಿಟ್ಟು ಬಾಗಲಕೋಟೆಯಲ್ಲಿ ನಡೆಯುತ್ತಿದ್ದ ಸೇವಾದಳದ ತರಬೇತಿಗೆ ಹಾಜರಾಗಿದ್ದರು. ನಂತರ ಮುಂಬೈನಲ್ಲಿ ನಡೆಯಲಿದ್ದ ಸೇವಾದಳ ಮಹಿಳಾ ಸ್ವಯಂಸೇವಕಿಯರ ರಾಷ್ಟ್ರೀಯ ಶಿಕ್ಷಣ ಶಿಬಿರದಲ್ಲಿಯೂ ಪಾಲ್ಗೊಳ್ಳುವ ಅವಕಾಶ ಒದಗಿತ್ತು. ಸತ್ಯಾಗ್ರಹದ ಚಟುವಟಿಕೆಗಳಲ್ಲಿ ಭಾಗಿಯಾಗಲು ಹೊರಟಾಗ ತಂದೆ ಹೇಳಿದ್ದರು. 'ಈ ಕೆಲಸಗಳು ಗಂಡಸರಿಗೆ ಸರಿ ಹತ್ತು ಜನರ ಕೆಲಸದಲ್ಲಿ ಹೆಂಗಸು ಸೇರಿಕೊಳ್ಳುವುದು ಕಷ್ಟ' ಎಂದು. ಆದರೂ ಗೌರಮ್ಮ ತನ್ನ ಗಂಡನನ್ನು ಹಿಂಬಾಲಿಸಬೇಕಾದುದು ತನ್ನ ಧರ್ಮವೆಂದು ಹೇಳಿದಾಗ ತಂದೆ ಒಂದು ಮಾತನ್ನು ಹೇಳಿದ್ದರು. 'ನೀನು ಅಷ್ಟು ಗಟ್ಟಿ ನಿರ್ಧಾರ ಮಾಡಿ. ಸತ್ಯಾಗ್ರಹದಲ್ಲಿ ಸೇರಲೇಬೇಕೆಂದಿದ್ದರೆ ಹೋಗು ನಿನಗೆ ನನ್ನ ಆಶೀರ್ವಾದವಿದೆ, ಆದರೆ, ಈ ಮನೆತನಕ್ಕೆ ಕಾಪಾಡಿಕೊಳ್ಳಬೇಕಾದ ಗೌರವವೊಂದಿದೆಯೆಂಬುದನ್ನು, ನಾನಿನ್ನೂ ನಾಲ್ಕಾರು ಹೆಣ್ಣುಮಕ್ಕಳಿಗೆ ಮದುವೆ ಮಾಡಬೇಕಾಗಿದೆಯೆಂಬುದನ್ನು ನಿನಗೇ ಇಬ್ಬರು ಹೆಣ್ಣು ಮಕ್ಕಳಿದ್ದಾರೆಂಬುದನ್ನು ಮರೆಯಬೇಡ. ಅವರ ಭವಿಷ್ಯ ನಿನ್ನ ಕೈಲಿದೆ. ನಿನ್ನ ಶೀಲಕ್ಕೆ ಅಪಚಾರವಾಗುವಂಥದ್ದೇನಾದರೂ ಆಗಿಬಿಟ್ಟರೆ ನನಗೆ ನಿನ್ನ ಮುಖ ತೋರಿಸಬೇಡ. ಮನೆಗೆ ಮರಳಿ ಬರಬೇಡ". ಗೌರಮ್ಮ ತಂದೆಗೆ ದೃಢವಾದ

ಶಬ್ದಗಳಿಂದ ಉತ್ತರಿಸಿದ್ದರು, 'ಅಪ್ಪ ನೀನು ಹೇಳಿರುವ ಒಂದೊಂದು ಶಬ್ದವನ್ನು ಜೀವನಪರ್ಯಂತ ನೆನಪಿನಲ್ಲಿಟ್ಟು ಕೊಂಡಿರುತ್ತೇನೆ. ಹಾಗೇ ನಡೆಯುತ್ತೇನೆ. ನನ್ನ ಗಂಡ ಒಳ್ಳೆಯವರು. ನನಗೆ ಕೆಡುಕೇನೂ ಆಗದೆಂದು ನನ್ನ ಮನಸ್ಸಿಗೆ ಖಾತ್ರಿಯಾಗಿದೆ. ಒಂದು ವೇಳೆ ಆಗಿಬಿಟ್ಟರೆ ನಾನು ಆಣೆ ಇಟ್ಟು ಹೇಳುತ್ತೇನೆ. ನಾನು ನಿನ್ನ ಬಳಿಗಾಗಲಿ, ಮಕ್ಕಳ ಬಳಿಗಾಗಲಿ ಹಿಂದಿರುಗುವುದಿಲ್ಲ, ಹೀಗೆ ಗೌರಮ್ಮ ಮನೆ ಬಿಟ್ಟು ಹೊರಟಾಗ ಚಿಕ್ಕ ಮಗುವಿಗೆ ಹತ್ತು ತಿಂಗಳು. ಆಕಾರ ಪುಟ್ಟದಾದರೂ ಗೌರಮ್ಮನವರಲ್ಲಿ ಧೈರ್ಯ, ಕೆಚ್ಚು, ಆತ್ಮವಿಶ್ವಾಸ ಅಪಾರವಾಗಿತ್ತು.

ಸೇವಾದಳದ ತರಬೇತಿಯಲ್ಲಿ ಒಂದು ವಿಚಾರವನ್ನು ಸ್ಪಷ್ಟವಾಗಿ ತಿಳಿಸಿದ್ದರು. ಸರ್ಕಾರದ ಕಡೆಯಿಂದ ಆಗುವ ಯಾವುದೇ ದಮನ ಕಾರ್ಯವನ್ನು ಸತ್ಯಾಗ್ರಹಿಯು ತನಗೆ ಒದಗುವ ಸ್ವಾಭಾವಿಕ ಪ್ರಕ್ರಿಯೆ ಎಂದೇ ಸ್ವೀಕರಿಸಬೇಕು. ಚಿಂತನೆ ಮತ್ತು ಕಾರ್ಯಗಳಲ್ಲಿ ಅಹಿಂಸೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಪ್ರತಿದಾಳಿಯನ್ನು ಆಲೋಚಿಸಲೂ ಬಾರದೆಂಬುದನ್ನು ಸದಾ ನೆನಪಿಡಬೇಕು; ಈ ಮಾತುಗಳನ್ನು ಗೌರಮ್ಮನವರು ಅಕ್ಷರಶಃ ಪಾಲಿಸಿದ್ದರು.

ಕರನಿರಾಕರಣೆಯ ಚಳವಳಿಯ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹಳ ಬಿರುಸಾದ ಚಟುವಟಿಕೆಗಳು ನಡೆಯುತ್ತಿದ್ದವು, ಸರಕುಗಳ ಹರಾಜನ್ನು ಮಾಡುತ್ತ ಸರ್ಕಾರಿ ನೌಕರರೇ ಹೆಚ್ಚಾಗಿ ಅವುಗಳನ್ನು ಕೊಳ್ಳುತ್ತಿದ್ದರು. ಅದನ್ನು ತಪ್ಪಿಸಬೇಕೆಂದು ಚಳವಳಿಗಾರರು ಯೋಚಿಸಿದರು. ವಸ್ತುಗಳನ್ನು ಕೊಂಡವರ ಮನೆಯ ಮುಂದೆ ಹೆಂಗಸರು ಸತ್ಯಾಗ್ರಹ ನಡೆಸಬೇಕೆಂದು ವೆಂಕಟರಾಮಯ್ಯನವರೇ ಸಲಹೆ ನೀಡಿದರು. "ಮಾನಸಿಕವಾಗಿ ಮಹಿಳೆ ಪುರುಷನಿಗಿಂತ ಹೆಚ್ಚು ಬಲಾಢ್ಯೆ-ಸತ್ಯಾಗ್ರಹಕ್ಕೆ ಅವರು ಈ ರೀತಿ ಇಳಿಯುವುದು ತುಂಬ ಒಳ್ಳೆಯದು, ಎಲ್ಲಾದರೂ ಅಗೌರವ, ಅಸಮಾನದ ಒಂದು ಪ್ರಸಂಗ ನಡೆದರೆ ಅದಕ್ಕೆ ಒಳಗಾದ ಮಹಿಳೆ ಎಲ್ಲಿದ್ದರೆ ಅಲ್ಲಿಂದಲೇ ಮಹಾತ್ಮಾಗಾಂಧೀಜಿಗೆ 'ಗಾಂಧೀಜಿ, ನಾವು ನಿಮ್ಮ ಮಾರ್ಗದರ್ಶನದಲ್ಲಿ ನಡೆಯಲು ಪ್ರಾಮಾಣಿಕ ಪ್ರಯತ್ನ ಮಾಡಿದೆವು. ಸ್ವಾತಂತ್ರ್ಯದ ಮಹಾಹೋರಾಟಕ್ಕೆ ನಮ್ಮ ಕಾಣಿಕೆ ಸಲ್ಲಿಸಬಯಸಿದೆವು. ಆದರೆ ಗೌರವದಿಂದ ಮುಂದುವರಿಯುವ ಅವಕಾಶವನ್ನು ದೈವ ನಮಗೆ ನೀಡಲಿಲ್ಲ. ನಾವು ಗೌರವ ಕಳೆದುಕೊಂಡು ಬದುಕಿರಲಾರೆವು. ಆದ್ದರಿಂದ ಇಂದೇ ನಾನು ನೀರಿನಲ್ಲಿ ಮುಳುಗಿ ಸಾಯುತ್ತೇನೆ. ದೇವರು ದೇಶಕ್ಕೆ ಬೇಗ ಸ್ವರಾಜ್ಯ ಸಿಗುವಂತೆ ಮಾಡಲಿ. ನಮ್ಮ ಆತ್ಮತ್ಯಾಗವು ಈ ಸಿದ್ಧಿಯನ್ನು ತ್ವರೆಗೊಳಿಸಲಿ. ಇದೋ, ನಿಮಗೆ ನಮ್ಮ ಅಂತಿಮ ಪ್ರಣಾಮ' ಎಂದು ಬರೆದು ನಿಮ್ಮ ಹತ್ತಿರವಿರುವ ಯಾರ ಕೈಗಾದರೂ ಕೊಡಿ-ಅದು ನನ್ನ ಕೈ ಸೇರುತ್ತದೆ. ಅದನ್ನು ನಾನು ಗಾಂಧೀಜಿಯವರಿಗೆ ಕಳುಹಿಸುತ್ತೇನೆ".

ದೊಡ್ಮನೆ ಕೃಷ್ಣಯ್ಯ ಹೆಗಡೆಯವರ ಮಗಳು ಮಹಾದೇವಿತಾಯಿ ಬಾಲವಿಧವೆ, ಸತ್ಯಾಗ್ರಹದಲ್ಲಿ ಆಕೆಯೂ ಪಾಲ್ಗೊಂಡಿದ್ದರು. ಆಕೆ ತುಂಬ ಧೈರ್ಯಶಾಲಿ, ಅವರ ವ್ಯಕ್ತಿತ್ವದ ಪ್ರಭಾವ ದೊಡ್ಮನೆ ಗ್ರಾಮದಲ್ಲಿ ಮಾತ್ರವಲ್ಲ, ಸಿದ್ಧಾಪುರ ಊರಿನಲ್ಲೂ ಇತ್ತು, ಆಕೆಯಲ್ಲಿ ನಾಯಕತ್ವದ ಲಕ್ಷಣಗಳಿರುವುದನ್ನು ಗುರುತಿಸಿ ವೆಂಕಟರಾಮಯ್ಯನವರು ಸತ್ಯಾಗ್ರಹದಲ್ಲಿ ಮುಂದಾಳತ್ವ ವಹಿಸಲು ಅನುಮತಿ ನೀಡಬೇಕೆಂದು ಆಕೆಯ ತಂದೆಯವರಲ್ಲಿ ಕೇಳಿಕೊಂಡರು. ತುಂಬ ಒತ್ತಾಯದ ನಂತರ ಹೆಗಡೆಯವರು ಮಗಳಿಗೆ ಅನುಮತಿ ನೀಡಿದ್ದರು.

ಸತ್ಯಾಗ್ರಹದಲ್ಲಿ ಮಹಿಳೆಯರ ಪಾತ್ರವನ್ನು ಕೆಲವರು ವಿರೋಧಿಸಿದರೂ ನಂತರ ಎಲ್ಲರೂ ಸಮ್ಮತಿಸಿದ್ದರು. ಆ ಸಮಯದಲ್ಲಿ ಮಹಾದೇವಿತಾಯಿ ಒಂದು ಷರತ್ತು ವಿಧಿಸಿದ್ದರು. 'ಕಾರ್ಯಕ್ರಮದಲ್ಲಿ ಗೌರಮ್ಮನವರು ಮುಂದಾಳುತನ ವಹಿಸಬೇಕು'. ಅದರಂತೆ ಮುಂಬೈನಲ್ಲಿ ಕಾರ್ಯಕರ್ತರೊಂದಿಗೆ ಸೇರಿ ವಿದೇಶೀ ವಸ್ತ್ರದ ಅಂಗಡಿ ಹೆಂಡದಂಗಡಿಗಳ ಮುಂದೆ ಹರತಾಳ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದ ಗೌರಮ್ಮನವರು ಪತಿಯ ಆದೇಶದಂತೆ ಹೊರಟು ಬಂದು ಮಹಿಳೆಯರು ಹೂಡಿದ ಆ ಮೊದಲ ಸತ್ಯಾಗ್ರಹದಲ್ಲಿ ಮುಂಚೂಣಿಯಲ್ಲಿ ನಿಂತರು.

ಮಹಾದೇವಿತಾಯಿಯೂ ಸೇರಿದಂತೆ ಎಲ್ಲ ಮಹಿಳಾ ಸತ್ಯಾಗ್ರಹಿಗಳು ಒಂದು ಪ್ರತಿಜ್ಞೆ ಮಾಡಿದ್ದರು. 'ಧೈರ್ಯದಿಂದ ನಾವು ಸತ್ಯಾಗ್ರಹಕ್ಕೆ ಇಳಿಯುತ್ತಿದ್ದೇವೆ. ಈ ಹೋರಾಟದಲ್ಲಿ ನಮ್ಮ ಗೌರವಕ್ಕೆ ಕುಂದುಂಟಾಗುವ ಪ್ರಸಂಗ ಉಂಟಾದಲ್ಲಿ ಆತ್ಮಾರ್ಪಣೆಗೆ ಸಿದ್ಧರಾಗಿದ್ದೇವೆ' ಎಂದು ಮಹಾತ್ಮಾಗಾಂಧಿಯವರನ್ನು ಸಂಭೋದಿಸಿ ಬರೆದುಕೊಡಲಾಗಿತ್ತು. ಇದರ ಔಪಚಾರಿಕ ವಿಧಿಗಳೆಲ್ಲ ತಡಗಳಲೆ ಗ್ರಾಮದಲ್ಲಿ ನಡೆದವು. ಗಾಂಧೀಜಿಯವರ ಭಾವಚಿತ್ರದ ಎದುರು ಮಹಿಳಾ ಸತ್ಯಾಗ್ರಹಿಗಳು ಪ್ರತಿಜ್ಞಾಸ್ವೀಕಾರ ಮಾಡಿದರು.

ಮೈಸೂರು ರಾಜ್ಯದಲ್ಲಿದ್ದ ಸೊರಬ ತಾಲ್ಲೂಕಿನ 'ಹೆಚ್ಚೆ' ಗ್ರಾಮದಲ್ಲಿ ಸತ್ಯಾಗ್ರಹ ಪ್ರಾರಂಭವಾಯಿತು. ಗ್ರಾಮದ ಪಟೇಲರು ರಾಮಪ್ಪ ಎಂಬುವವರು ಸಿದ್ಧಾಪುರದ ಹರಾಜಿನಲ್ಲಿ ಎಮ್ಮೆಯನ್ನು ಕೊಂಡಿದ್ದರು. ಮಹಿಳಾ ಸತ್ಯಾಗ್ರಹಕ್ಕೆ ಅವರನ್ನೇ ಮೊದಲ ವ್ಯಕ್ತಿಯನ್ನಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಆ ದಿನ ಅವರ ಮನೆಯ ಮುಂದೆ ಉಪವಾಸ ಮಾಡಿದರು. ಗೌರಮ್ಮ ಹಾಗೂ ಕಲ್ಲಾಳ ಕಾವೇರಮ್ಮ, ಮಹಾದೇವಿ ಮೇಲುಸ್ತುವಾರಿ ವಹಿಸಿದ್ದರು. ಆ ಸತ್ಯಾಗ್ರಹ ಯಶಸ್ವಿಯಾಗಿತ್ತು. ಸತ್ಯಾಗ್ರಹಿಗಳ ಆಸ್ತಿ ಹರಾಜಿನಲ್ಲಿ ಭಾಗವಹಿಸಿದ್ದು ತಪ್ಪೆಂದು ಅವರಿಗೆ ಮನವರಿಕೆ ಮಾಡಿಕೊಟ್ಟು ಎಮ್ಮೆಯನ್ನು ಅದರ ಮೊದಲ ಮಾಲೀಕರಿಗೆ ಒಪ್ಪಿಸುವಲ್ಲಿ ಮೂರು ದಿನಗಳ ಉಪವಾಸ ಸತ್ಯಾಗ್ರಹ ಸಹಕಾರಿಯಾಗಿತ್ತು. ಆ ಘಟನೆ ಕಾಂಗ್ರೆಸ್ ವಾರ್ತಾಪತ್ರದಲ್ಲಿ ಪ್ರಕಟವಾದಾಗ ಮಹಿಳಾ ಸತ್ಯಾಗ್ರಹಿಗಳಿಗೆ ಬಹಳ ಉತ್ತೇಜನ ಸಿಕ್ಕಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸೇರತೊಡಗಿದ್ದರು.

ಸಿದ್ಧಾಪುರಕ್ಕೆ ಎರಡು ಮೈಲಿ ದೂರದಲ್ಲಿ 'ಅಕ್ಕಂಜಿ' ಎಂಬ ಗ್ರಾಮ ಅಲ್ಲಿ ಸತ್ಯಾಗ್ರಹ ಪ್ರಾರಂಭಿಸಿದಾಗ ಪೋಲೀಸ್ ಪಡೆ, ಬಂದು ಮಹಿಳೆಯರನ್ನು ಬಂಧಿಸಿತ್ತು. ಆ ಸಮಯದಲ್ಲಿ ಪೋಲೀಸರು ಗೌರಮ್ಮನನ್ನು ತುಂಬ ಪೆಟ್ಟಾಗುವಂತೆ ಹೊಡೆದರು. ತಲೆಗೂದಲು ಹಿಡಿದು ಎಳೆದಾಡಿದರು. ಬಂದೂಕದ ಹಿಂಭಾಗದ ತುದಿಯಿಂದ ನೂಕಿ, ತಿವಿದರು. ಸಿದ್ಧಾಪುರದ ಸೆರೆಮನೆಗೆ ಕರೆದೊಯ್ದರು, ಅಲ್ಲಿನ ಸೆರೆಮನೆಯಲ್ಲಿ ಆಕೆಯನ್ನು ಒಂಟಿಯಾಗಿ ಕೂಡಿ ಹಾಕಿದರು. ಗೌರಮ್ಮ ರಾತ್ರಿಯಿಡೀ ಕಣ್ಣು ಮುಚ್ಚಿರಲಿಲ್ಲ, ಮನೆಯಲ್ಲಿ ಬಿಟ್ಟು ಬಂದಿದ್ದ ಎಳೆಯ ಮಕ್ಕಳನ್ನು ತಾನು ಮತ್ತೆ ಕಂಡೇನೆ? ಎಂಬ ಹಂಬಲವಾಗಿತ್ತು. ಆದರೂ ಆಕೆಯ ಮನಃಧೈರ್ಯ, ಗುರಿ ಸಾಧಿಸುವ ಛಲ ಎಳ್ಳಷ್ಟೂ ಕಡಿಮೆಯಾಗಿರಲಿಲ್ಲ. ಸೆರೆಮನೆಯಲ್ಲಿಯೂ ಉಪವಾಸ ಮುಂದುವರಿಸಿದ್ದರು. ಏಳು ದಿನಗಳ ಉಪವಾಸದ ನಂತರ ಆರು ತಿಂಗಳ ಸಜೆಯ ಶಿಕ್ಷೆ ನಿಗದಿಯಾಗಿತ್ತು. ಸಿದ್ಧಾಪುರದಿಂದ ಶಿರಸಿ, ಅಲ್ಲಿಂದ ಕಾರವಾರ, ನಂತರ ಬೆಳಗಾವಿ ಜೈಲಿಗೆ ಬಂದಾಗ ಗೌರಮ್ಮನವರಿಗೆ ಯಾರನ್ನೂ, ಎಂತಹ ಒರಟುತನವನ್ನೂ ಎದುರಿಸುವ ಎದೆಗಾರಿಕೆ ಬಂದಿತ್ತು.

ಏಕಾಂಗಿಯಾಗಿ ಪೋಲೀಸರ ದೌರ್ಜನ್ಯವನ್ನು ಎದುರಿಸಿದ್ದ ಗೌರಮ್ಮನವರ ಸಾಹಸ ಎಲ್ಲ ನಾಯಕರ ಕಿವಿ ಮುಟ್ಟಿತ್ತು. ಹರ್ಡೀಕರ್, ಕಲ್ಮಣಕರ್, ಕಮಲಾದೇವಿ ಮುಂತಾದವರು ಆಕೆ ಜೈಲಿನ ಆವರಣ ಪ್ರವೇಶಿಸುತ್ತಿದ್ದಂತೆಯೇ ಗಟ್ಟಿಯಾಗಿ ಕೂಗಿ ಸ್ವಾಗತಿಸಿದ್ದರು. 'ಹೆದರಬೇಡ, ಗೌರಮ್ಮ ನಿನ್ನ ಕೂದಲು ಕೊಂಕಲೂ ಅವಕಾಶ ಕೊಡುವುದಿಲ್ಲ, ನಾವೆಲ್ಲ ನಿನ್ನೊಂದಿಗಿದ್ದೇವೆ. ಧೈರ್ಯವಾಗಿರು' ಎಂದಿದ್ದರು.

ಬೆಳಗಾವಿ ಜೈಲಿನಲ್ಲಿದ್ದಾಗಲೂ ಗೌರಮ್ಮ ಕೈಕಟ್ಟಿ ಕುಳಿತಿರಲಿಲ್ಲ. ಸೆರೆಮನೆಯಲ್ಲಿ ವಿವಿಧ ದರ್ಜೆಗಳಲ್ಲಿ ಸೆರೆಯಾಳುಗಳನ್ನು ಇಡಲಾಗಿತ್ತು. ಕಮಲಾದೇವಿಯವರನ್ನು ಮೇಲಿನ ದರ್ಜೆಯ ಸೆರೆಯಾಳನ್ನಾಗಿ ಇಡಲಾಗಿತ್ತು. ಅಲ್ಲಿ ಎ.ಬಿ.ಸಿ. ವರ್ಗಗಳೆಂದು ಪ್ರತ್ಯೇಕ ಕೋಣೆಗಳಿದ್ದುವು. ಒದಗಿಸುತ್ತಿದ್ದ ಸವಲತ್ತುಗಳೂ ಭಿನ್ನವಾಗಿರುತ್ತಿದ್ದವು. ಬಿ.ಸಿ. ವರ್ಗದವರಿಗೆ 'ಎ' ವರ್ಗದ ಸವಲತ್ತುಗಳಿಲ್ಲ. ಉತ್ತಮ ಪೌಷ್ಠಿಕ ಆಹಾರ 'ಸಿ' ವರ್ಗದವರಿಗಿಲ್ಲ. ಬಾಣಂತಿಯರ, ಗರ್ಭಿಣಿಯರ, ಎಳೆಯ ಮಕ್ಕಳ ಕೋಣೆಗಳಲ್ಲೂ ಹಸಿವಿನ ಬಳಲಿಕೆ ಕಾಡಿಸುತ್ತಿತ್ತು. ಕಮಲಾದೇವಿ ತಮಗೆ

ಸರಬರಾಜಾಗುತ್ತಿದ್ದ ಆಹಾರವನ್ನೇ ಗೌರಮ್ಮನಿಗೂ ಕೊಡಲು ಆಶಿಸಿದರು. ಆದರೆ ಗೌರಮ್ಮ 'ದಯವಿಟ್ಟು ಇವುಗಳನ್ನು ನನಗೆ ಕೊಡಬೇಡಿ. ಮೂರನೇ ದರ್ಜೆಯಲ್ಲಿ ನನಗೆ ಸಿಗುವಷ್ಟೇ ಆಹಾರ ಸಾಕು, ಕಳ್ಳತನದಿಂದ ನನಗೆ ಸಲ್ಲದ ವಸ್ತುಗಳನ್ನು ನಾನು ಬಳಸಲಾರೆ, ದಯವಿಟ್ಟು ಕ್ಷಮಿಸಿ' ಎಂದು ನಿರಾಕರಿಸಿದ್ದರು.

ಅಷ್ಟಕ್ಕೇ ಗೌರಮ್ಮನವರು ಸುಮ್ಮನಾಗಲಿಲ್ಲ, ವರ್ಗಭೇದದ ಆ ಕೆಟ್ಟ ಸಂಪ್ರದಾಯವನ್ನು ಹೋಗಲಾಡಿಸ ಬೇಕೆಂದು ಚಿಂತಿಸಿದರು. 'ಎ' ವರ್ಗದ ಹಿರಿಯ ಕಾರ್ಯಕರ್ತರೊಡನೆ ಸಮಾಲೋಚಿಸಿದರು. ಪರಿಸ್ಥಿತಿ ತಿಳಿದ ಎಲ್ಲರೂ ತಮ್ಮ ಆಹಾರ ಕೊಡಲು ಮುಂದಾದರು. ರಾತ್ರಿಯ ವೇಳೆ ಯೂರಿಗೂ ತಿಳಿಯದಂತೆ ಗೌರಮ್ಮನವರ ಸವಾರಿ 'ಎ' ವರ್ಗದ ನೆಲೆಗೆ ಹೋಗುತ್ತಿತ್ತು. ಅವರು ಕೊಡುತ್ತಿದ್ದ ರೊಟ್ಟಿ, ಬ್ರೆಡ್, ಬೆಣ್ಣೆ, ಸಕ್ಕರೆ ಎಲ್ಲವನ್ನು ತಂದು 'ಸಿ' ವರ್ಗದಲ್ಲಿ ಹಂಚುತ್ತಿದ್ದರು. ಒಂದು ಸೆಲ್‌ನಿಂದ ಮತ್ತೊಂದು ಸೆಲ್‌ಗೆ ಅನುಮತಿ ಇಲ್ಲದೆ ಹೋಗುವುದೇ ಅಪರಾಧ, ಒಂದು ದಿನ ಸಿಕ್ಕಿಬಿದ್ದಾಗ ಗೌರಮ್ಮ ಧೈರ್ಯವಾಗಿ ಉತ್ತರಿಸಿದ್ದರು. 'ಹೌದು ನಾನು ಎಷ್ಟೋ ದಿನಗಳಿಂದ ಹೀಗೆ ಮಾಡ್ತಿದ್ದೇನೆ. ಮುಂದೆಯೂ ಮಾಡ್ತೀನಿ. ಆದರೆ, ಇದು ನನಗಾಗಿ ಅಲ್ಲ, ಹಸಿವಿನಿಂದ ನರಳುತ್ತಿರುವವರಿಗೆ ಇದು ತಪ್ಪು ಕೆಲಸವೇ?', ಗೌರಮ್ಮನವರ ಈ ಪ್ರಯತ್ನದ ಫಲವಾಗಿ ಜೈಲಿನ ಸೂಪರಿಂಟೆಂಡೆಂಟ್ ತಾವೇ ಎಲ್ಲರಿಗೂ ಉತ್ತಮ ಆಹಾರದ ವ್ಯವಸ್ಥೆ ಮಾಡಿದ್ದರು.

ಆ ಸಮಯದಲ್ಲಿ ಭೂಗತರಾಗಿದ್ದ ವೆಂಕಟರಾಮಯ್ಯನವರ ಬಗ್ಗೆ ಜೈಲಿನ ಅಧಿಕಾರಿಗಳಲ್ಲಿ ವಿಚಾರಿಸಿದರೆ ಗೌರಮ್ಮನವರು ತನಗೇನೂ ತಿಳಿಯದೆಂದೇ ಹೇಳುತ್ತಿದ್ದರು. 'ಅವರಿಗೆ ಕಾಗದ ಬರಿ, ಬರೆಯದಿದ್ದರೆ ಕತ್ತಲು ಕೋಣೆಗೆ ತಳ್ಳುತ್ತೇವೆ. ಇನ್ನೂ ಶ್ರಮದ ದುಡಿಮೆಗೆ ಹಾಕುತ್ತೇವೆ' ಎಂದು ಹೆದರಿಸಿದರೆ 'ನೀವೇನೇ ಶಿಕ್ಷೆ ಕೊಟ್ಟರೂ ಸರಿ. ನನ್ನ ಗಂಡನ ವಿಳಾಸ ನನಗೆ ಗೊತ್ತಿಲ್ಲ.' ಎಂದೇ ಹೇಳುತ್ತಿದ್ದರು.

ಮಹಿಳಾ ಸತ್ಯಾಗ್ರಹಿಯೊಬ್ಬರನ್ನು ದೈಹಿಕ ಹಿಂಸೆ ಮಾಡಿದಾಗ ಆ ಜೈಲಿನ ಮೆಟ್ರನ್ ಕ್ಷಮೆ ಯಾಚಿಸುವವರೆಗೆ ಉಪವಾಸ ಮಾಡಿದ್ದು ಗೌರಮ್ಮನವರ ಹೃದಯವಂತಿಕೆಗೆ ನಿದರ್ಶನ. ಮೂರು ದಿನಗಳ ಉಪವಾಸದಲ್ಲಿ ಇತರ ಮಹಿಳಾ ಸತ್ಯಾಗ್ರಹಿಗಳು ಪಾಲ್ಗೊಂಡು ಸಂಬಂಧಿಸಿದ್ದ ವ್ಯಕ್ತಿ ಕ್ಷಮೆ ಯಾಚಿಸುವಂತಾಗಿತ್ತು. ಗೌರಮ್ಮನವರ ಆ ಅಚಲ ನಿಲುವು ಮುಂದಿನ ದಿನಗಳಲ್ಲಿ ಯಾರೂ ಮಹಿಳಾ ಸತ್ಯಾಗ್ರಹಿಗಳ ಮೇಲೆ ಕೈ ಎತ್ತದಂತೆ ಮಾಡಿತ್ತು.

ಇವೆಲ್ಲ ಸುದ್ದಿ ಬೆಂಗಳೂರಿನ 'ದಿ ಡೆಮೊಕ್ರಾಟ್' ಪತ್ರಿಕೆಯಲ್ಲಿ ಪ್ರಕಟವಾಯಿತು. ಮೈಸೂರು ಭಾಗದಿಂದ ಬಂದಿರುವ ಗೌರಮ್ಮನನ್ನು ಕಿರುಕುಳಕ್ಕೆ ಈಡುಮಾಡಿ ಸಿದ್ಧಾಪುರವನ್ನು ಬಿಡುವಂತೆ ಮಾಡಿಬಿಟ್ಟರೆ ಸ್ಥಳೀಯ ಮಹಿಳೆಯರು ಸತ್ಯಾಗ್ರಹದಲ್ಲಿ ಭಾಗವಹಿಸುವುದಿಲ್ಲವೆಂದು ಸಿದ್ಧಾಪುರ ಪೊಲೀಸರ ಆಲೋಚನೆಯಾಗಿತ್ತು. ಆದರೆ, ಅವರಿಗೆ ನಿರಾಸೆಯಾಗಿತ್ತು. ಗೌರಮ್ಮ ದೃಢವಾಗಿ ನಿಂತರು.

ಹಲವು ಮಹಿಳೆಯರು ಅವರನ್ನು ಹಿಂಬಾಲಿಸಿದರು. ಪೊಲೀಸರು ಮಹಿಳೆಯರನ್ನು ಹೊಡೆದು, ಬಡಿದ ಪ್ರಸಂಗ ಅದೊಂದೇ. ಅನಂತರ ಮಹಿಳೆಯರೆಂದರೆ ಪೊಲೀಸರು ಮರ್ಯಾದೆಯ ಇತಿಮಿತಿಯಲ್ಲಿ ಇರತೊಡಗಿದರು. ಮಹಿಳೆಯರು ಆತ್ಮಾರ್ಪಣದ ನಿರ್ಧಾರ ಕೈಗೊಂಡಿದ್ದ ಕಾರಣ ಹೆಂಗಸರು ಅಂತಹ ಕಾರ್ಯ ಮಾಡಿಬಿಟ್ಟಾರೆಂದು ಪೊಲೀಸರು ಅಂಜಿದ್ದರು. ಗೌರಮ್ಮನವರ ಬಂಧನ, ಅವರಿಗೆ ಜೈಲುವಾಸದ ಶಿಕ್ಷೆಯಾಗಿದ್ದು, ಆ ಸಮಯದಲ್ಲಿ ಅವರು ತೋರಿದ್ದ ಕೆಚ್ಚು, ಅದಕ್ಕೆ ಸಿಕ್ಕ ಯಶಸ್ಸು ಎಲ್ಲವೂ ನೂರಾರು ಮಹಿಳೆಯರಲ್ಲಿ ಉತ್ಸಾಹ ತುಂಬಿ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದುವು. ಬಿಜಾಪುರ, ಯರವಾಡ, ಬೆಳಗಾವಿ ಮತ್ತು ಕಾರವಾರದ ಸೆರೆಮನೆಗಳಲ್ಲೆಲ್ಲದರಲ್ಲಿ ಸಿದ್ಧಾಪುರದ ಮಹಿಳೆಯರಿದ್ದರೆಂಬುದು ಆ ಊರಿನ ಒಂದು ವಿಶೇಷ ಗೌರವದ ಅಂಶವಾಗಿತ್ತು. ಮಹಿಳಾ ಸತ್ಯಾಗ್ರಹಿಗಳಿಗೆ ದೈಹಿಕ ಹಿಂಸೆ ಮಾಡಿದಾಗ ಗೌರಮ್ಮನವರು ಪ್ರತಿಭಟಿಸಿದ ರೀತಿ ಎಲ್ಲ ಸತ್ಯಾಗ್ರಹಿಗಳಲ್ಲಿ ಅಪಾರ ಉತ್ಸಾಹ, ಧೈರ್ಯ

ತುಂಬಿತ್ತು. 'ಬಂಧಿತರನ್ನು ಹೊಡೆಯಲು ನಿಮಗೆ ಯಾವ ಅಧಿಕಾರವೂ ಇಲ್ಲ. ಅವರದೇನಾದರೂ ಕಾನೂನು ಪ್ರಕಾರ ಇರುವ ಅಧಿಕಾರ ಚಲಾಯಿಸಬಹುದೇ ಹೊರತು, ಕೈ ಮಾಡುವ ಹಾಗಿಲ್ಲ. ನೀವು ಕ್ಷಮೆ ಯಾಚಿಸಬೇಕು' ಎಂದು ದಿಟ್ಟತನದಿಂದ ಆಡಿದ್ದ ಮಾತುಗಳು, ನಂತರ ಸಹಚರರೊಂದಿಗೆ ಹೂಡಿದ್ದ ಉಪವಾಸ ವ್ರತ ಎಲ್ಲವೂ ಸತ್ಯಾಗ್ರಹಿಗಳೆಲ್ಲರೂ ಆಕೆಯ ಬಗೆಗೆ ಅಭಿಮಾನ ತಳೆಯುವಂತಾಗಿತ್ತು.

1932ರ ಸೆಪ್ಟೆಂಬರ್ ತಿಂಗಳಿನಲ್ಲಿ ಗೌರಮ್ಮನವರ ಬಿಡುಗಡೆಯಾಯಿತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕರನಿರಾಕರಣೆ ಆಂದೋಲನ ಕುರಿತು ರಾಜ್ಯದ ನಾನಾ ಭಾಗಗಳಲ್ಲಿ ಪ್ರವಾಸ ಮಾಡಿ ಗೌರಮ್ಮನವರು ಭಾಷಣ ಮಾಡಿದರು. ಎಳೆಯ ಮಕ್ಕಳನ್ನು ತಂದೆ ತಾಯಿಯ ವಶಕ್ಕೆ ಒಪ್ಪಿಸಿ ದೇಶಸೇವೆಯ ಚಟುವಟಿಕೆಗಳಲ್ಲಿ ತೊಡಗಿಕೊಂಡಾಗ ಆಕೆಗೆ ಸಾರ್ವಜನಿಕ ಕ್ಷೇತ್ರದ ಯಾವ ಅನುಭವವೂ ಇರಲಿಲ್ಲ. ಬಾಗಲಕೋಟೆಯ ಸೇವಾದಳ ಶಿಬಿರಕ್ಕೆ ಸದಸ್ಯೆಯಾಗಿ ಪ್ರವೇಶಿಸಿದಾಗ ಅಡಿಗೆ ಮಾಡುವುದು ಬಿಟ್ಟರೆ ಆಕೆಗೆ ಬೇರೇನೂ ತೋಚುತ್ತಿರಲಿಲ್ಲ. 'ನನಗೆ ವಿದ್ಯೆ ಐದನೇ ತರಗತಿಯಷ್ಟೇ. ಆದರೇನು? ಜಯಕಾರ ಹಾಕಲು ನಾಲಿಗೆಯಿರಲಿಲ್ಲವೆ?' ಗೌರಮ್ಮನವರ ಆತ್ಮವಿಶ್ವಾಸದ ನುಡಿಗಳಿವು. ಶಿಬಿರದಲ್ಲಿ ಆಕೆಯ ಕಾರ್ಯಶ್ರದ್ಧೆ ಕಂಡು ಮೆಚ್ಚಿದ್ದರು.

ಮುಂದೆ ಮುಂಬಯಿಯಲ್ಲಿ ಮಹಾರಾಷ್ಟ್ರ ಹುಡುಗಿಯರೊಂದಿಗೆ ಸೇರಿ ಪರದೇಶೀ ಸಾಮಗ್ರಿಗಳ ನಿಷೇಧ. ಹೆಂಡದಂಗಡಿ ಮುಂದೆ ಹರತಾಳ, ದಿನಕ್ಕೆ ಒಂದು ಬಡಾವಣೆಯಲ್ಲಿ ಪ್ರತಿಭಟನೆ, ಒಂದೇ ಹೊತ್ತಿನ ಊಟ, ಫಲವಾಗಿ ಹಲವಾರು ಕಡೆಗಳಲ್ಲಿ ಪೊಲೀಸರಿಂದ ಏಟು, ಆದರೆ ಕೆಲಸ ಮಾತ್ರ ಮುಂದುವರಿಸಿದ್ದರು. ಒಂದು ವರ್ಷಪೂರ್ತಿ ನಡೆದ ಈ ಎಲ್ಲ ಕಾರ್ಯಾಚರಣೆ ಗೌರಮ್ಮ ದಿಟ್ಟತನದ, ಸಾಹಸೀ ಮಹಿಳೆಯಾಗಲು ಬುನಾದಿಯಾಗಿತ್ತು, ಜನರಲ್ಲಿ ಸ್ವಾತಂತ್ರ್ಯ ಪ್ರೇಮದ, ದೇಶಾಭಿಮಾನದ, ಸ್ವಾಭಿಮಾನ ಜಾಗೃತಿಯನ್ನು ಮೂಡಿಸುವ ಉಪನ್ಯಾಸಗಳನ್ನು ಮಾಡಬಲ್ಲ ಧೀರವ್ಯಕ್ತಿತ್ವ ಗೌರಮ್ಮನವರದಾಗಿತ್ತು.

ಈ ಮಧ್ಯೆ ಶಿವಮೊಗ್ಗದಲ್ಲಿ ಕರನಿರಾಕರಣಕಾರರ ಮಕ್ಕಳಿಗಾಗಿ ಒಂದು ಕಿಶೋರ ಕೇಂದ್ರವನ್ನು ತೆಗೆಯಲಾಗಿತ್ತು. ಸುಮಾರು ಒಂದು ನೂರು ಮಕ್ಕಳು ಅಲ್ಲಿದ್ದು, ಕೆಲವರ ತಾಯಂದಿರೂ ಜೊತೆಯಲ್ಲಿದ್ದರು. ಮತ್ತೆ ಕೆಲವು ಮಕ್ಕಳ ತಾಯಿ, ತಂದೆ ಇಬ್ಬರೂ ಬಂಧನಕ್ಕೆ ಒಳಗಾಗಿದ್ದರು. ಅಂತಹ ಮಕ್ಕಳಿಗೆ ಉತ್ತಮ ವಸತಿ, ಊಟೋಪಚಾರಗಳನ್ನು ಒದಗಿಸಿ ಪೋಷಿಸುವ ಉದ್ದೇಶವೇ ಅದರ ಸ್ಥಾಪನೆಗೆ ಕಾರಣವಾಗಿತ್ತು. ಜೋಳಿಗೆ ಹಾಕಿಕೊಂಡು ಮನೆಮನೆಗೆ ಹೋಗಿ ಅಗತ್ಯ ಪದಾರ್ಥ ಬೇಡಿ ತರುವ ಕಾರ್ಯವೂ ಸೇರಿದಂತೆ ಆ ಮಕ್ಕಳ ಶಿಕ್ಷಣದ ವ್ಯವಸ್ಥೆಯನ್ನು ಅಲ್ಲಿನ ಕಾರ್ಯಕರ್ತರು ನೋಡಿಕೊಳ್ಳಬೇಕಾಗಿತ್ತು. ಗೌರಮ್ಮನವರು ಎರಡು ವರ್ಷಗಳ ಕಾಲ ಈ ಜವಾಬ್ದಾರಿಯನ್ನು ನಿರ್ವಹಿಸಿದರು.

ಏಳೆಂಟು ವರ್ಷ ಮನೆ ಬಿಟ್ಟು ಹೊರಗಿದ್ದ ಗೌರಮ್ಮನವರು ಮತ್ತೆ ಗೃಹಜೀವನಕ್ಕೆ ಕಾಲಿಟ್ಟಿದ್ದರು. ತನ್ನ ಮಕ್ಕಳಲ್ಲದೆ ಆಶ್ರಮದಿಂದ ಕರೆತಂದ ನಾಲ್ಕೈದು ಬಡ ಹುಡುಗರೂ ಮನೆ ಸೇರಿದ್ದರು. ಗಂಡ ಆಗಲೂ ಸಾರ್ವಜನಿಕ ಜೀವನದಲ್ಲೇ ಇದ್ದರು– ಮನೆಯ ಜವಾಬ್ದಾರಿಯನ್ನು ಗೌರಮ್ಮನವರೇ ನಿರ್ವಹಿಸಬೇಕಾಗಿತ್ತು. ಖಾದಿ ಅಂಗಡಿಗೆ ದಿನಕ್ಕೆ ಐದುನೂರು ಟೋಪಿಗಳನ್ನು ಹೊಲಿದು ಕಳುಹಿಸುವ ಕೆಲಸ ಪ್ರಾರಂಭಿಸಿದರು. ಇಬ್ಬರು ಅನಾಥ ಹುಡುಗರು ಬೆಳ್ಳಂಬೆಳಿಗ್ಗೆ ಮನೆಮನೆಗೆ ಪತ್ರಿಕೆ ಹಂಚುವ ಕೆಲಸ ಮಾಡುತ್ತಿದ್ದರು. ಅನಂತರ ಶಾಲೆಗೆ ಹೋಗುತ್ತಿದ್ದರು. ಇಬ್ಬರಿಂದ ತಿಂಗಳಿಗೆ ಮೂವತ್ತು ರೂ. ಆದಾಯ ಬರುತ್ತಿತ್ತು. ಸಂಸಾರ ನಿರ್ವಹಣೆ ಕಷ್ಟವೇ ಆಗಿದ್ದರೂ ಗೌರಮ್ಮನವರು ಅದರ ಹೊರೆಯನ್ನು ಗಂಡನಿಗೆ ವಹಿಸಿ ಅವರ ಕೆಲಸ ಕಾರ್ಯಗಳಿಗೆ ಅಡ್ಡಿ ಪಡಿಸಲಿಲ್ಲ. ನಾಲ್ಕು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ಇವರುಗಳನ್ನು ಒಂದು ದಡ ಮುಟ್ಟಿಸುವಲ್ಲಿ ತಮ್ಮ ಶಕ್ತಿ ಮೀರಿ ಶ್ರಮಿಸಿದರು.

ಕ್ಷೀಣಕಾಯದ ಗೌರಮ್ಮ ಮತ್ತು ವೆಂಕಟರಾಮಯ್ಯನವರ ದೀರ್ಘದಾಂಪತ್ಯ ಎಷ್ಟೊಂದು ಅನ್ಯೋನ್ಯವಾಗಿತ್ತೆಂದರೆ ಆಯ್ಕೆಯಿಂದ ಕೈಗೊಂಡ ದೇಶದ ಕಾರ್ಯದ ನಡುವೆ ಯಾವುದೇ ಸಣ್ಣ ಇಲ್ಲವೆ ಸ್ವಾರ್ಥದ ಸಂಗತಿ ಅವರ ಆಂತರಿಕ ಸಾಮರಸ್ಯವನ್ನಾಗಲಿ, ಪರಸ್ಪರರ ಬಗ್ಗೆ ಸ್ನೇಹಭಾವವನ್ನಾಗಲಿ, ಕುಂದಿಸಲಿಲ್ಲ. ಗಾಂಧೀಜಿ ಭೇಟಿಯಲ್ಲಿ ಅವರಾಡಿದ್ದ ಮಾತು ಗೌರಮ್ಮನವರ ಪ್ರತಿ ನಡೆಯಲ್ಲಿಯೂ ಸಹಕಾರಿಯಾಗಿತ್ತು, 'ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ ಅತಿ ಮುಖ್ಯ, ನಿಮ್ಮ ಗೌರವಕ್ಕೆ ಧಕ್ಕೆ ಒದಗುವ ಸಮಯದಲ್ಲಿ ಆತ್ಮಾರ್ಪಣೆಗೆ ಸಿದ್ಧರಾಗಿ' ಎಂದು ನೀಡಿದ್ದ ಬಾಕು ಸದಾ ಅವರ ಬಳಿ ಇರುತ್ತಿತ್ತು. 2008 ಆಗಸ್ಟ್ 19ರಂದು ಗೌರಮ್ಮನವರು 98ರ ವಯಸ್ಸಿನಲ್ಲಿ ತಮ್ಮ ಹೋರಾಟದ ಬದುಕಿಗೆ ವಿದಾಯ ಹೇಳಿದರು.

——— * ———

ಅನನ್ಯ ಚೇತನ ಶ್ಯಾಮಲಾದೇವಿ

ಇಂದಿರಾ ಶಿವಣ್ಣ

ಕನ್ನಡ ಮಹಿಳಾ ಸಾಹಿತ್ಯ ಲೋಕದಲ್ಲಿ 1908ರಲ್ಲಿ ಪ್ರಕಟವಾದ ಕೃತಿ ಲೇಖಕಿ ಶಾಂತಾಬಾಯಿ ನೀಲಗಾರ ಅವರ 'ಸದ್ಗುಣಿ ಕೃಷ್ಣಾಬಾಯಿ.' ನಂತರ 1913ರಲ್ಲಿ ತಿರುಮಲಾಂಬ ಅವರ "ಸುಶೀಲೆ." ಮುಂದಿನ ಎರಡು ದಶಕಗಳಲ್ಲಿ ಕಲ್ಯಾಣಮ್ಮ, ಜಯಲಕ್ಷ್ಮಿ ಶ್ರೀನಿವಾಸನ್ ಮುಂತಾದ ಲೇಖಕಿಯರು ಕಂಡುಬರುತ್ತಾರೆ. 1939ರಲ್ಲಿ ಪ್ರಕಟವಾದ "ಹೊಂಬಿಸಿಲು" ಕಥಾಸಂಕಲನ ಉತ್ತರ ಕರ್ನಾಟಕದ ಸಾಹಿತ್ಯ ಕ್ಷೇತ್ರದಲ್ಲಿ ಮಹಿಳಾ ಸಾಹಿತ್ಯದ ದ್ವಿತೀಯ ಕೃತಿಯಾಗಿದೆ. ಉತ್ತರ ಕರ್ನಾಟಕದ ಸಾಹಿತ್ಯ ಕ್ಷೇತ್ರದಲ್ಲಿ ಶಾಂತಾಬಾಯಿಯವರ ನಂತರ ಪಾದಾರ್ಪಣೆ ಮಾಡಿದ ಲೇಖಕಿ ಶ್ಯಾಮಲಾದೇವಿ.

ಶ್ಯಾಮಲ ಅವರ ಜನ್ಮ ದಿನಾಂಕದ ನೇರ ದಾಖಲೆ ದೊರೆತಿಲ್ಲ. ಆದರೆ ಅವರು ಮರಣ ಹೊಂದಿದಾಗ ಅವರಿಗೆ ಮೂವತ್ತಮೂರು ವರುಷದ ಹರೆಯ ಎಂದು ದಾಖಲೆ ಇರುವುದರಿಂದ ಅವರು ಹುಟ್ಟಿದ ವರ್ಷ 1910 ಇರಬಹುದೆಂದು ಹೇಳಬಹುದು. ಅವರ ಹುಟ್ಟೂರು ಧಾರವಾಡ, ಅವರ ಬಾಲ್ಯ ಹಾಗೂ ಶಾಲಾ ಶಿಕ್ಷಣದ ಬಗ್ಗೆ ವಿವರವಾದ ಮಾಹಿತಿಗಳು ದೊರೆತಿಲ್ಲ. ಇವರು ವೇಶ್ಯಾಕುಲದ ಸಂಪ್ರದಾಯದ ಕುಟುಂಬದಲ್ಲಿ ಜನಿಸಿದವರು. ಶ್ಯಾಮಲಾ ಅವರ ಹುಟ್ಟು ಹೆಸರು ಸುಭದ್ರ. ಧಾರವಾಡದ ನ್ಯೂಗರ್ಲ್ಸ್ ಹೈಸ್ಕೂಲಿನಲ್ಲಿ ನಾಲ್ಕನೇ ತರಗತಿಯವರೆಗೆ ಇವರ ವಿದ್ಯಾಭ್ಯಾಸ ನಡೆಯಿತು. ಮುಂದೆ ಸರ್ಕಾರಿ ಶಾಲೆಯಲ್ಲಿ ಕಲಿತು ಮೆಟ್ರಿಕ್‌ವರೆಗೆ ಓದಿದರು. ಇವರು ವಿದ್ಯಾರ್ಥಿನಿಯಾಗಿದ್ದಾಗ ಕಲಿಕೆಯಲ್ಲಿ ಮುಂದಿದ್ದರು. ಇವರದು ಸರಿಸಾಟಿ ಇಲ್ಲದ ಉತ್ಸಾಹ. ಎಲ್ಲದರಲ್ಲೂ ಮುಂದಾಳುತನ. ಶಾಲೆಯಲ್ಲಿ ಕಲಿಯುತ್ತಿರುವಾಗಲೇ ಗೇಲಿ ಮಾಡುತ್ತಿದ್ದ ಹುಡುಗರಿಗೆ ಬುದ್ಧಿಕಲಿಸಿ ಅವರನ್ನು ದಾರಿಗೆ ತಂದು, ಹೆಣ್ಣುಮಕ್ಕಳೊಂದಿಗೆ ಮರ್ಯಾದೆಯಿಂದ ನಡೆದುಕೊಳ್ಳುವಂತೆ ಮಾಡಿದ್ದರು. ಸ್ತ್ರೀಜಾತಿಯ ಸಮಾನತೆಗಾಗಿ ಕಾದಿದ ದಿಟ್ಟ ಬಾಲಕಿ ಸುಭದ್ರ.

ವಿವಾಹ, ವೈವಾಹಿಕ ಜೀವನ

ವೇಶ್ಯಾಕುಲದ ಸಂಪ್ರದಾಯ ಮುರಿದು ಸುಭದ್ರ ಅವರು ಬೆಳಗಾವಿಯ ರಾಮಚಂದ್ರರಾಯರನ್ನು ಮದುವೆಯಾದರು. ಇದೂ ಒಂದು ಗಮನಾರ್ಹ ಸಂಗತಿ. ಮದುವೆಯ ನಂತರ ಇವರ ಹೆಸರು ಶ್ಯಾಮಲೆ ಎಂದಾಯಿತು. ಇವರ ಪತಿ ರಾಮಚಂದ್ರರಾಯರು ಸಾಹಿತ್ಯ ಕಲಾವಿದರೂ, ರಸಿಕ ಚಿತ್ರಕಾರರೂ, ಸುಸಂಸ್ಕೃತ ಭಾವಜೀವಿಗಳೂ ಆಗಿದ್ದರು. ಧಾರವಾಡದ ರೈಯಟರ್ಸ್ ಗಲ್ಲಿಯಲ್ಲಿ ಅವರ ಮನೆ. ರಸಿಕ ದಂಪತಿಗಳು. ಹಾಸ್ಯಮಯ ಸ್ವಭಾವದ ಅವರದು ಅಚ್ಚುಕಟ್ಟು ಸಂಸಾರ. ಸಮಾಜದ ವಿರೋಧ ಕಟ್ಟಿಕೊಂಡು ಅಂತರ್ಜಾತಿಯ ವಿವಾಹ ಮಾಡಿಕೊಂಡ ದಂಪತಿಗಳ ಬಾಳು ಮದುವೆಯಾದ ಹೊಸತದಲ್ಲಿ ಸಮಾಜದ ಕಟು ಟೀಕೆಗಳಿಗೆ ಒಳಗಾಗಿತ್ತು. ಸಮಾಜದ ತಾತ್ಸಾರವನ್ನು ಕೆಡುನುಡಿಗಳನ್ನು ಸಹಿಸಿ ಹಾಲುಜೇನಿನಂತೆ ಸಂಸಾರ ನಡೆಸಿದರು ಈ ದಂಪತಿಗಳು. ಇವರ ಕುಟುಂಬಕ್ಕೆ ಬಲವಾದ

ಆರ್ಥಿಕ ಹಿನ್ನೆಲೆ ಇರಲಿಲ್ಲ. ಅನುವಂಶವಾಗಿ ಬಂದ ಆಸ್ತಿ ಸ್ವಲ್ಪ ಇದ್ದರೂ ಮುದ್ರಣಾಲಯ ಹಾಗೂ ಜಯ ಕರ್ನಾಟಕ ಪತ್ರಿಕೆ ಇವರನ್ನು ಸಾಲಗಾರರನ್ನಾಗಿ ಮಾಡಿತ್ತು. ಶ್ಯಾಮಲ ಅವರದು ದೊಡ್ಡ ಸಂಸಾರ. ಜೊತೆಗೆ ಯುದ್ಧಕಾಲದ ಬವಣೆ, ಸಂಸಾರ ತೂಗಿಸಲು ಬವಣೆಪಟ್ಟವರು ಶ್ಯಾಮಲ. ಇಂಥ ಸಂಕಷ್ಟ ಸಮಯದಲ್ಲಿ ಟೊಂಕಕಟ್ಟಿ ಕಣಕ್ಕಿಳಿದು, ಸ್ವಂತ ಪರಿಶ್ರಮದಿಂದ ಸಂಸಾರದ ಒಳಗು–ಹೊರಗುಗಳನ್ನು ತೂಗಿಸಿಕೊಂಡು ಹೋದರು.

ಬಾಲ್ಯದಲ್ಲಿ ಹಾಗೂ ಮದುವೆಯಾದ ಹೊಸದರಲ್ಲಿ ಶ್ಯಾಮಲ ಅವರಿಗೆ ತೊಂದರೆಗಳು, ಕಟ್ಟುಪಾಡುಗಳು ಇದ್ದವು. ಜನರ ಆಡುಮಾತಿಗೆ ಅಂಜದೆ ತಮ್ಮ ಕಾರ್ಯ ಸಾಧಿಸಿದ ದಿಟ್ಟೆ ಶ್ಯಾಮಲಾದೇವಿ.

ಶ್ಯಾಮಲಾ ಅವರದು ಬಿಡುವಿಲ್ಲದ ದುಡಿಮೆಯ ಜೀವನ. ಸದಾ ಕೆಲಸ ಮಾಡುವ ಪ್ರವೃತ್ತಿ. ಹಲವಾರು ಹೊಣೆಗಾರಿಕೆಗಳನ್ನು ದಣಿವು ಬೇಸರಗಳಿಲ್ಲದೇ ನಿರ್ವಹಿಸುತ್ತಿದ್ದರು. ಪ್ರೆಸ್ಸಿನ ಮೇಲ್ವಿಚಾರಣೆ, ಕೆಲಸದವರ ಸಂಬಳ, ಮನೆಯ ಖರ್ಚು ವೆಚ್ಚ ಎಲ್ಲಾ ಶ್ಯಾಮಲ ಅವರದೇ ಜವಾಬ್ದಾರಿ. ಶ್ಯಾಮಲ ಅವರು ಮನೆಯಲ್ಲಿ ಮೂರು ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದರ ಜೊತೆಗೆ ಪತಿಯ ಸೌಕರ್ಯಗಳ ಕಡೆಗೂ ಗಮನ ಕೊಡುತ್ತಿದ್ದರು. ಅಡಿಗೆ ಮನೆಯ ಕೆಲಸದ ಜೊತೆಗೆ ಪ್ರೆಸ್‌ನಲ್ಲಿ ಕೆಲಸ ಮಾಡುವವರ ಹಿತಚಿಂತನೆ ಮಾಡುತ್ತಿದ್ದರು.

ಶ್ಯಾಮಲಾ ಅವರದು ಮುಕ್ತ ಮನಸ್ಸು, ಅವರ ಮನಸ್ಸಿನಂತೆಯೇ ಅವರ ಕೈ ಧಾರಾಳ. ಅತಿಥಿ ಸತ್ಕಾರದಲ್ಲಿ ಅವರದು ಎತ್ತಿದ ಕೈ. ಸ್ವಲ್ಪ ಕಾಲಾವಕಾಶದಲ್ಲೇ ಎಲ್ಲವನ್ನು ಅಣಿಮಾಡುತ್ತಿದ್ದರು. ಸಮಾಜಸೇವಕಿ ಹೇಗೋ ಹಾಗೇ ಉತ್ತಮ ಗೃಹಿಣಿ. ಮನೆ ಕೆಲಸದಲ್ಲೂ ಅಷ್ಟೇ. ಮನೆಯ ಖರ್ಚು ವೆಚ್ಚವನ್ನೆಲ್ಲ ಹೇಗೋ ಸರಿದೂಗಿಸಿಕೊಂಡು ಬರುತ್ತಿರುವ ಪತ್ನಿಯನ್ನು ಕಂಡು ರಾಯರಿಗೆ ಆಶ್ಚರ್ಯ ಸಂತೋಷಗಳೆರಡೂ ಏಕಕಾಲಕ್ಕೆ ಆಗುತ್ತಿತ್ತು.

ಶ್ಯಾಮಲಾ ಅವರದು ಭವ್ಯವಾದ ನಿಲುವು. ದಿವ್ಯವಾದ ರೂಪು. ಪರಿಚಿತರೊಡನೆ ಸಲುಗೆಯ ಮಾತು. ಹೊಸಬರೊಡನೆ ಮಿತಮಾತು. ಅವರ ಸ್ನೇಹಪೂರ್ಣ ವ್ಯಕ್ತಿತ್ವದಿಂದಾಗಿ ಜನಾನುರಾಗಿಯಾಗಿದ್ದರು. ಸರಳತೆ ಆತ್ಮೀಯತೆಯಿಂದ ಅವರ ಸ್ನೇಹ ಬಳಗ ವಿಸ್ತಾರವಾಗಿತ್ತು. ಮನೆಗೆ ಬರುವ ಸ್ನೇಹಿತರಿಗೆ ರುಚಿರುಚಿಯಾದ ತಿಂಡಿ ಚಹಾ ಕೊಟ್ಟಾಗಲೇ ಅವರಿಗೆ ಸಮಾಧಾನ. ಅಡುಗೆ ಫಲಹಾರ ತಯಾರಿಸುವುದರಲ್ಲಿ ಅವರು ಕುಶಲರಾಗಿದ್ದರು. ಅವರು ತಯಾರಿಸುತ್ತಿದ್ದ ಅವಲಕ್ಕಿಗೆ "ಶ್ಯಾಮಲಕ್ಕನ ಅವಲಕ್ಕಿ" ಎಂದೇ ಖ್ಯಾತಿ ಬಂದಿತ್ತು.

ಶ್ಯಾಮಲಾ ಅವರಲ್ಲಿ ಮೊದಲು ಕಾಣುತ್ತಿದ್ದುದ್ದು ಅವರ ಚಿರಂತನವಾದ ಉತ್ಸಾಹ. ದೃಢಕಾಯದ ಜೊತೆಗೆ ಧೃಡಮನಸ್ಕರೂ ಆಗಿದ್ದರು. ಗಂಡಸರೂ ಹಿಂಜರಿಯಬಹುದಾದ ಕಾರ್ಯಗಳ ಹೊಣೆಯನ್ನು ಹೊತ್ತು ನಿರ್ವಹಿಸುವ ಸಾಹಸವನ್ನು ಅವರು ತೋರುತ್ತಿದ್ದರು. ಯಾವುದೇ ಕಠಿಣ ಪರಿಸ್ಥಿತಿಯನ್ನು ಎದುರಿಸಬಲ್ಲ ಗಟ್ಟಿತನದಿಂದಾಗಿ ಶ್ಯಾಮಲ ಓರ್ವ ಯಶಸ್ವಿ ಮಹಿಳೆಯಾಗಿದ್ದರು.

ಪತ್ರಿಕೋದ್ಯಮಿ – ಶ್ಯಾಮಲಾದೇವಿ

1934ರಲ್ಲಿ ಆಲೂರು ವೆಂಕಟರಾಯರ ಸಂಪಾದಕತ್ವದಲ್ಲಿ "ಜಯ ಕರ್ನಾಟಕ" ಪತ್ರಿಕೆ ಆರಂಭವಾಯಿತು. ಮುಂದೆ ಬೇಂದ್ರೆಯವರು ಸ್ವಲ್ಪ ಕಾಲ ಪತ್ರಿಕೆಯನ್ನು ನಡೆಸಿದರು. ಮುಂದೆ 1930ರಲ್ಲಿ ಬೆಳಗಾವಿ ರಾಮಚಂದ್ರರಾಯರ ಕೈಗೆ ಬಂದಿತು. ಇಲ್ಲಿಂದ ಮುಂದೆ ಒಂದು ದಶಕಕ್ಕೂ ಮೀರಿ ರಾಮಚಂದ್ರರಾಯರೇ ಪತ್ರಿಕೆಯ ಸಂಪಾದಕರಾಗಿದ್ದರು.

ಸ್ವಾತಂತ್ರ್ಯಪೂರ್ವ ಪತ್ರಿಕೋದ್ಯಮದಲ್ಲಿ ಹಲವಾರು ಮಹಿಳಾ ಪತ್ರಕರ್ತೆಯರನ್ನು ಕಾಣುತ್ತೇವೆ. ಇಂಥವರ ಸಾಲಿನಲ್ಲಿ ಅತ್ಯಂತ ಪ್ರಮುಖವಾಗಿ ಶ್ಯಾಮಲಾದೇವಿ ಕಂಡುಬರುತ್ತಾರೆ. ರಾಮಚಂದ್ರರಾಯರ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ "ಜಯ ಕರ್ನಾಟಕ" ಪತ್ರಿಕೆ ಶ್ಯಾಮಲಾ ಅವರ ಪ್ರಗತಿಪರ ಜೀವನಕ್ಕೆ ವೇದಿಕೆಯನ್ನು ಕಲ್ಪಿಸಿತ್ತು.

ಶ್ಯಾಮಲ ಅವರಲ್ಲಿ ಸುಪ್ತವಾಗಿದ್ದ ಕಲಾರಸಿಕತೆಗೆ ತಕ್ಕ ಪ್ರೋತ್ಸಾಹ ನೀಡಿದವರು ರಾಮಚಂದ್ರರಾಯರು. ಅವರ ಕಾರ್ಯೋತ್ಸಾಹಕ್ಕೆ ತಕ್ಕ ನಿರ್ದೇಶನ ದೊರೆತು ಶ್ಯಾಮಲ ಅವರು ಕತೆಗಾರ್ತಿಯರಾಗಿ, ಪತ್ರಕರ್ತೆಯಾಗಿ, ರಂಗಕರ್ಮಿಯಾಗಿ, ಪತ್ರಿಕಾ ಸಂಪಾದಕಳಾಗಿ ಅಂದಿನ ಮಹಿಳಾ ಲೋಕದ ಆದರ್ಶ ನಾರಿಯಾಗಿ ಬೆಳೆದರು.

ಶ್ಯಾಮಲಾ ಅವರ ಸಣ್ಣ ಕತೆಗಳು ಮತ್ತು ಲೇಖನಗಳು ಆಗಾಗ ಜಯಕರ್ನಾಟಕದ ಪತ್ರಿಕೆಯಲ್ಲಿ ಬೆಳಕು ಕಂಡವು. ಕ್ರಮೇಣ ಸಹ ಸಂಪಾದಕಿಯಾಗಿ ಸೇವೆ ಸಲ್ಲಿಸತೊಡಗಿದರು.

ಶ್ಯಾಮಲಾದೇವಿ ಮಹಿಳಾ ಓದುಗರನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡಿದ್ದುದೇ ಅಲ್ಲದೇ ಸಾಧ್ಯವಾದಷ್ಟು ಲೇಖಕಿಯರಿಂದಲೇ ಲೇಖನಗಳನ್ನು ಬರೆಸಿ ಪ್ರಕಟಿಸಿದ್ದರು. ಕೊಡಗಿನ ಗೌರಮ್ಮ, ಆರ್. ರತ್ನಾಬಾಯಿ, ಎಸ್. ಕಮಲಾದೇವಿ, ಎಸ್. ಆರ್. ಜಯಲಕ್ಷ್ಮಿ, ಸರಸ್ವತಿದೇವಿ ಗೌಡ ಮೊದಲಾದ ಲೇಖಕಿಯರ ಬರಹಗಳು ಈ ವಿಭಾಗದಲ್ಲಿ ಪ್ರಕಟಗೊಂಡಿದ್ದವು. ಇದರೊಂದಿಗೆ ಅನೇಕ ಪ್ರಸಿದ್ಧ ಮಹಿಳೆಯರಾದ ನಾಗಮ್ಮ ಪಾಟೀಲ್, ಅಂಬೂಬಾಯಿ ಮೆಪೆಂದಳೆ, ಪಂಚವ್ವ ಸರದಾರ, ಸೇವಕಿಯರನ್ನು ಪರಿಚಯಿಸಿದ್ದರು. ಈ ಅಂಕಣಕ್ಕಾಗಿ ಶ್ಯಾಮಲೆಯವರು ಆರಿಸಿಕೊಂಡ ಸಮಕಾಲೀನ ವಿಷಯಗಳ ಬಗ್ಗೆ ತಿಳಿಯುವುದು ಅವಶ್ಯಕ.

ಈ ಅಂಕಣಕ್ಕಾಗಿ ಅವರು ಆರಿಸಿಕೊಂಡುದು. ಹೆಣ್ಣುಮಕ್ಕಳು ಹಾಗೂ ಕೈಗಾರಿಕೆ, ಜೀವನದಲ್ಲಿ ಸ್ತ್ರೀ ಸ್ವಾತಂತ್ರ್ಯ, ಮಾತೃತ್ವ, ಶಿಶು ಸಂಗೋಪನೆ, ಮಕ್ಕಳ ನಿದ್ದೆ, ಮಕ್ಕಳ ಕಣ್ಣು ಮುಂತಾದ ಸಮಕಾಲೀನ ವಿಷಯಗಳು. ಮಕ್ಕಳ ಸಾಹಿತ್ಯ ಕುರಿತು ಶ್ಯಾಮಲ ಅವರಿಗೆ ಅಪಾರ ಕಾಳಜಿ. ಮಕ್ಕಳ ಮನೋವಿಕಾಸಕ್ಕೆ ಮಕ್ಕಳ ಕಥೆಗಳ ಮಹತ್ವದ ಬಗ್ಗೆ ಅವರು ಹೀಗೆ ಹೇಳುತ್ತಾರೆ. "ಮಕ್ಕಳ ಕಥೆಗಳು ಶಿಕ್ಷಣವನ್ನು ಬೋಧಿಸುವಂತಿರಬೇಕು. ಮಕ್ಕಳ ಕಥೆಗಾರನು ಕೇವಲ ಕಥೆಗಾರನಾಗಿರದೇ ಬಾಲ ಕರುವಿನ ಆರೈಕೆಗಾರನಾದ ತೋಟಿಗನಾಗಿರುತ್ತಾನೆ."

ಕನ್ನಡ ಸಾಹಿತ್ಯ ಪುಟಗಳಲ್ಲಿ ಶ್ಯಾಮಲಾದೇವಿ ಅವರನ್ನು ಉತ್ತಮ ಕಲಾವಿಮರ್ಶಕಿಯನ್ನಾಗಿಯೂ ಗುರುತಿಸಲಾಗಿದೆ. ಕನ್ನಡ ವಾಕ್ಪಟ, ವಸಂತಸೇನಾ, ಆರ್ಯ ಸಂಸ್ಕೃತಿಯಲ್ಲಿ ನಾರಿದರ್ಶನ, ಸಾಹಿತ್ಯದಲ್ಲಿ ನಾರಿಸ್ಥಾನ, ಸಾಹಿತ್ಯ ಸ್ತ್ರೀಯರ ಸ್ವಭಾವಸಿದ್ಧ ಕ್ಷೇತ್ರ - ಇವು ಶ್ಯಾಮಲಾ ಅವರ ಅಪರೂಪದ ವಿಮರ್ಶಾ ಲೇಖನಗಳು. ಕಣ್ಮರೆಯಾಗುತ್ತಿರುವ ಸಾಂಪ್ರದಾಯಿಕ ಕಲೆಗಳನ್ನು ದಾಖಲಿಸಿರುವ ಅವರ ಲೇಖನ "ಲಿಲ್ಲಿ ಕೋಟೆ" ಮಹತ್ವದ ದಾಖಲೆಯಾಗಿದೆ.

ಸಮಾಜಸೇವಾಕರ್ತಳಾಗಿ ಸಮಾಜಸೇವೆಯಲ್ಲಿ ತೊಡಗಿಸಿಕೊಂಡ ಶ್ಯಾಮಲಾದೇವಿ ನೊಂದವರ ಪಾಲಿನ ಶ್ಯಾಮಲಕ್ಕ ಆಗಿದ್ದರು. ಶ್ಯಾಮಲ ಅವರು ಬದುಕಿನ ಕೊನೆಯ ದಿನಗಳವರೆಗೂ ಬೇನಿಗರ ಆರೈಕೆ, ಚಿಕಿತ್ಸೆಗಳಿಗೆ ನೆರವು, ಎಳೆಯರ ಮದುವೆಯ ಸನ್ನಾಹಗಳು ಇವರ ಪ್ರೀತಿಯ ಕೆಲಸ. ಸ್ನೇಹಿತರ ಮನೆಯ ಕಲಾಪಗಳನ್ನು ಬಿಡಿಸಲು ಯತ್ನಿಸುತ್ತಿದ್ದರು.

ಅಖಿಲ ಭಾರತ ಮಹಿಳಾ ಪರಿಷತ್ತಿನ ಧಾರವಾಡದ ಜಿಲ್ಲಾ ಮಹಿಳಾ ಮಂಡಲದ ಕಾರ್ಯದರ್ಶಿನಿಯಾಗಿದ್ದರು. ಪರಿಷತ್ತಿನ ಸ್ಥಾಯಿ ಸಮಿತಿಯಲ್ಲಿ ಕರ್ನಾಟಕದ ಪ್ರತಿನಿಧಿಯಾಗಿಯೂ ಕೆಲಸ ಮಾಡಿ ನಾಗಪುರ, ಬಡೋದೆ, ಸಾಂಗ್ಲಿ, ದಿಲ್ಲಿ, ಬೆಂಗಳೂರುಗಳಲ್ಲಿ ನಡೆದ ಸಮ್ಮೇಳನಗಳಲ್ಲಿ ಭಾಗವಹಿಸಿದ್ದರು. ಈ ಸಮ್ಮೇಳನಗಳು ಅನೇಕ ಸಮಾಜ ಕಾರ್ಯಕರ್ತರನ್ನು ಅವರಿಗೆ ಪರಿಚಯಿಸಿದ್ದವು. ಸ್ತ್ರೀವಿಮೋಚನೆಯ ದಿಕ್ಕಿನಲ್ಲಿ ಅವರ ಅನೇಕ ವಿಚಾರಗಳನ್ನು ಮೊನಚುಗೊಳಿಸಿದ್ದವು. ಈ ಅನುಭವನಗಳನ್ನು ಅವರು ತಮ್ಮ ಪತ್ರಿಕೆಯಲ್ಲಿ ಬರೆದು ಹೊಸ ವಿಚಾರಗಳನ್ನು ಜನರಿಗೆ ತಿಳಿಸಿದರು.

1942ರ ಏಪ್ರಿಲ್‌ನಲ್ಲಿ ಧಾರವಾಡದ ನಗರಸಭೆಗೆ ನಡೆದ ತ್ರೈಮಾಸಿಕ ಚುನಾವಣೆಯಲ್ಲಿ ಶ್ಯಾಮಲಾದೇವಿ ಮತ್ತು ರಾಮಚಂದ್ರರಾಯರಿಬ್ಬರೂ ಆರಿಸಿ ಬಂದರು. ಸ್ತ್ರೀಯರಿಗಾಗಿ ಕಾದಿಟ್ಟ ಜಾಗದಿಂದ ಶ್ಯಾಮಲಾದೇವಿ ಸ್ಪರ್ಧಿಸಿದ್ದರು. ಧಾರವಾಡದ ನಗರಸಭೆಯ ಮೊದಲ ಮಹಿಳಾ ಸದಸ್ಯೆಯಾಗಿದ್ದರು. ಧಾರವಾಡದ ಶೈಕ್ಷಣಿಕ ಕ್ಷೇತ್ರಕ್ಕೆ ಶ್ಯಾಮಲಾ ಅವರ ಕೊಡುಗೆ ಗಮನೀಯವಾದುದು. ಶಾಲಾ ಸಮಿತಿಯ ಸದಸ್ಯರಾಗಿಯೂ ಹಲವು ಕಾಲ ಕಾರ್ಯನಿರ್ವಹಿಸಿದರು. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗಾಗಿ "ಲಮಾಣಿ ಸ್ತ್ರೀ ಬೋರ್ಡಿಂಗ್" ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ವಿದ್ಯಾರ್ಥಿನಿಲಯದ ನಿರ್ವಹಣೆಗಾಗಿ ಹಣ ಸಂಗ್ರಹಣೆ ಮಾಡಲು ಇವರು ಪಟ್ಟಪಾಡು ಹೇಳತೀರದು. ಹೀಗೆ ಶ್ಯಾಮಲಾ ಅವರ ಸಾಮಾಜಿಕ ಕಾಳಜಿ, ಪರಿಚಿತರ, ನೆರೆಹೊರೆಯವರ ಕ್ಷೇಮಚಿಂತನೆ, ಸಹಾಯಗಳಿಂದ ಹಿಡಿದು ನಗರಸಭೆ, ಶಾಲಾ ಸಮಿತಿಗಳು, ರಾಷ್ಟ್ರೀಯ ಮಹಿಳಾ ಸಂಘಟನೆಗಳವರೆಗೂ ವ್ಯಾಪಿಸಿತ್ತು. ಆರ್ಥಿಕ ಬಿಕ್ಕಟ್ಟು, ಮೂರು ಮಕ್ಕಳ ಸಂಸಾರ, ಸಮಾಜದ ಟೀಕೆ, ತೊಡಕುಗಳ ನಡುವೆ ಅನಾನುಕೂಲಗಳೇ ಹೆಚ್ಚಾಗಿದ್ದ ಪರಿಸರದಲ್ಲಿ ತಮಗೆ ಸಿಕ್ಕಿದ ಒಂದು ದಶಕಕ್ಕೂ ಕಡಿಮೆ ಅವಧಿಯಲ್ಲಿ ಪಾದರಸದಂತೆ ದುಡಿದವರು ಶ್ಯಾಮಲಾದೇವಿ.

ಶ್ಯಾಮಲಾದೇವಿ ಸಣ್ಣಕಥೆಗಳ ಸೃಷ್ಟಿಕರ್ತೆ

ಉತ್ತರ ಕರ್ನಾಟಕದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಗೈದ ದ್ವಿತೀಯ ಮಹಿಳೆ ಶ್ಯಾಮಲಾದೇವಿ. (ಪ್ರಥಮ ಮಹಿಳಾ ಸಾಹಿತಿ ಶಾಂತಾಬಾಯಿ ನೀಲಗಾರವರು). ಅವರ 'ಹೊಂಬಿಸಿಲು' ಈ ಭಾಗದ ಸ್ತ್ರೀಸಾಹಿತ್ಯ ಕ್ಷೇತ್ರದ ಮೊದಲ ಕಥಾ ಸಂಕಲನ. ಶ್ಯಾಮಲಾದೇವಿ ಅಲ್ಪ ಆಯುಷಿ. ಅವರ ಬದುಕಿನಲ್ಲಿ ಸೃಜನಶೀಲ ಬರಹದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಅವರಿಗೆ ದೊರೆತ ಸಮಯ ತೀರ ಸ್ವಲ್ಪ. ಆತಂಕದ ಜೀವನದ ನಡುವೆಯೂ ಸುಮಾರು ಇಪ್ಪತ್ತೆರಡು ಕಥೆಗಳನ್ನು ಬರೆದಿದ್ದಾರೆ. ಈ ಕಥೆಗಳು ಅವರ ಸೃಜನಶೀಲ ಬರವಣಿಗೆಗೆ ಸಾಕ್ಷಿಯಾಗಿದೆ.

ಶ್ಯಾಮಲಾ ಅವರ ಕಥೆಗಳಲ್ಲಿ ಸಮಕಾಲೀನ ಲೇಖಕಿಯರ ಕಥೆಗಳಿಗಿಂತ ಭಿನ್ನವಾದ ಕಥಾವಸ್ತುವನ್ನು ಕಾಣುತ್ತೇವೆ. ಕೇವಲ ಬಾಲ ವಿಧವೆಯರ ಬವಣೆಯನ್ನು ಚಿತ್ರಿಸದೇ ಶ್ಯಾಮಲಾ ಅವರು ಶೋಷಿತ ವರ್ಗದ ಹೆಣ್ಣು ಮಕ್ಕಳಿಗೆ ಅದರಲ್ಲೂ ವೇಶ್ಯಾವೃತ್ತಿಯ ಕುಟುಂಬದ ಮಹಿಳೆಯರಿಗೆ ಬಾಳುವ ರೀತಿಯನ್ನು, ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕಾದ ಕ್ರಮವನ್ನು ಬೋಧಿಸುತ್ತಾರೆ. ಅವರ ಕಥೆಗಳಲ್ಲಿ ಅಪಾರ ಲೋಕಾನುಭವ ತುಂಬಿದೆ. ಅಂದಿನ ಸಾಮಾಜಿಕ ಜೀವನದ ಸ್ಪಷ್ಟ ಚಿತ್ರಣ ಕಂಡು ಬರುತ್ತದೆ. ಜೀವನದಲ್ಲಿ ಸಾಮಾನ್ಯವಾಗಿ ಘಟಿಸಬಹುದಾದ ಪ್ರಸಂಗಗಳನ್ನು ಆಯ್ದುಕೊಂಡು ಅದಕ್ಕೆ ತಕ್ಕ ಸನ್ನಿವೇಶಗಳನ್ನು ಕಲ್ಪಿಸಿದ್ದಾರೆ. ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿ ಕೆಳವರ್ಗ, ಮಧ್ಯಮ ವರ್ಗ, ಮೇಲ್ವರ್ಗಗಳ ಹಾಗೂ ಅಶಿಕ್ಷಿತರ, ಸುಶಿಕ್ಷಿತರ ಜೀವನಚಿತ್ರವನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ. ಶ್ಯಾಮಲ ಅವರು ಬಳಸಿರುವ ಉತ್ತರ ಕರ್ನಾಟಕದ ಆಡುಭಾಷೆಯ ಸರಳ ಸರಸ ಶೈಲಿಯಿಂದಾಗಿ ಅವರ ಕಥೆಗಳಲ್ಲಿ ಜೀವಂತಿಕೆಯನ್ನು ಕಾಣುತ್ತೇವೆ.

ದೀನರ ಕೇರಿಯ ಹೊಲಸೆಂದು ತೋರುವ ಜೀವನವನ್ನು ಸಹಾನುಭೂತಿಯಿಂದ ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಸ್ತ್ರೀಶೋಷಣೆ, ಸುತ್ತಲಿನ ಜೀವನ, ದೇಶದಲ್ಲಿನ ಆಗುಹೋಗುಗಳನ್ನು ತಮ್ಮ ಕಥೆಯ ವಸ್ತುವನ್ನಾಗಿ ಆರಿಸಿಕೊಂಡ ಶ್ಯಾಮಲ ಅವರು ಬರೆದಂತಹ ಎರಡು ಕೃತಿಗಳೆಂದರೆ, "ಹೂಬಿಸಿಲು" ಮತ್ತು "ಹೊಂಬಿಸಿಲು".

"ಹೂಬಿಸಿಲು", ಶ್ಯಾಮಲಾದೇವಿ ಅವರ ಪ್ರಥಮ ಸಣ್ಣಕಥೆಗಳ ಸಂಕಲನ. 1939ರಲ್ಲಿ ಬೆಳಕು ಕಂಡಿತು. ಇದರಲ್ಲಿ ಹತ್ತು ಸಣ್ಣಕಥೆಗಳಿವೆ. ಈ ಕಥಾಸಂಕಲನಕ್ಕೆ ಹಿರಿಯ ಸಾಹಿತಿ ಬೆಟಗೇರಿ ಕೃಷ್ಣಶರ್ಮರು ಮುನ್ನುಡಿ ಬರೆದಿದ್ದಾರೆ. ಉತ್ತರ ಕರ್ನಾಟಕದ ಇಂದಿನ ಸಾಹಿತ್ಯ ಚರಿತ್ರೆಯನ್ನು ಬರೆಯತೊಡಗಿದಾಗ ಸ್ತ್ರೀ ವಿಭಾಗದಲ್ಲಿ ಮೊದಲು ಹೆಸರುಗೊಳ್ಳಬೇಕಾದ ಗ್ರಂಥ ಇದು ಎಂದು ಬರೆದಿದ್ದಾರೆ. ಈ ಕೃತಿಯಲ್ಲಿ ಮುಂದೆ ಹೆಸರಿಸಿರುವ ಹತ್ತು

ಸಣ್ಣ ಕಥೆಗಳಿವೆ: (1) ನನ್ನನ್ನು ನೋಡಲು ಬಂದಾಗ (2) ಕರುಳ ಕತ್ತರಿ (3) ಬಕಪಕ್ಷಿ (4) ಮೂವರು ನಾಗರೀಕರು (5) ನೀಲೆಯ ಸಂಸಾರ (6) ಮಹಾ ಶಿವರಾತ್ರಿ (7) ದಾಜೀಬನ ಬ್ಯಾಂಕು (8) ದೊಡ್ಡಮ್ಮ ನೋಡಿದ ವರ (9) ನಡೆದು ಬಂದ ಲಕ್ಷ್ಮೀ (10) ತಾಯಿ–ಮಾತಾಯಿ

"ಹೊಂಬಿಸಿಲು", ಶ್ಯಾಮಲಾ ಅವರ ಎರಡನೆಯ ಕೃತಿ. 1943ರಲ್ಲಿ ಪ್ರಕಟವಾಯಿತು. ಇದರಲ್ಲಿಯೂ ಹತ್ತು ಸಣ್ಣ ಕಥೆಗಳಿವೆ. ಹೊಂಬಿಸಿಲು ಪ್ರಕಟವಾದ ಹತ್ತು ವರ್ಷಗಳ ನಂತರ ಬಂದ ಕೃತಿ. ಕಥೆಗಾರ್ತಿಯ ಅನುಭವವು ಪಕ್ವವಾಗಿ, ಶೈಲಿಯಲ್ಲಿ ನೈಪುಣ್ಯ ಹೆಚ್ಚಿದೆ. ಈ ಕೃತಿಗೆ ಮುನ್ನುಡಿ ಬರೆದ ಶಿ.ಶಿ. ಬಸವನಾಳರು ಸಣ್ಣಕಥೆಗಳ ಸಾಹಿತ್ಯವನ್ನು ವಿವಿಧ ರೀತಿಯಲ್ಲಿ ಬೆಳೆಸುವುದರಲ್ಲಿ ಶ್ರೀಮತಿ ಶ್ಯಾಮಲಾ ಅವರ ಪಾತ್ರ ಹಿರಿಯದು ಎಂದಿದ್ದಾರೆ. ಕೃತಿಯ ಹಿನ್ನುಡಿಯಲ್ಲಿ ಸ.ಸ. ಮಾಳವಾಡರು "ತಮ್ಮ ಕಥೆಗಳಲ್ಲಿ ಶ್ಯಾಮಲಾದೇವಿ ಅವರು ಸಾಮಾಜಿಕ ಜೀವನದ ದೃಷ್ಟಿಯಿಂದ ವಾಸ್ತವ ಸಾಹಿತ್ಯವನ್ನು ಒದಗಿಸಿ ಕೊಟ್ಟಿದ್ದಾರೆ", ಎಂದಿದ್ದಾರೆ. ಈ ಕೃತಿಯಲ್ಲಿ ಹತ್ತು ಕಥೆಗಳಿವೆ. ಅವು: (1) ಸವತಿಯರು (2) ಭೀಕರ ಪಾರುಪತ್ಯ (3) ಮೂರು ನೂರ ಅರವತ್ತೈದು (4) ಸ್ನೇಹದರ್ಶನ (5) ಕಾಳರಾತ್ರಿ (6) ವಸಂತರಾಯನ ಮದುವೆ (7) ಬ್ರಹ್ಮಚಾರಿ ರಾಮಮೂರ್ತಿ (8) ಕುಂತಿಯ ದೇಶಾಂತರ (9) ಸುಶಿಕ್ಷಿತರ ಸಂಸಾರ (10) ಶೇರಿನ ಪಾಟ್ಲಿ.

ಅಲಕ್ಷಿತ ವರ್ಗದಿಂದ ಹುಟ್ಟಿ ಮೇಲೆ ಬಂದು ಕೆಳವರ್ಗದ ಜೀವನ ಚಿತ್ರಣವನ್ನು ಉತ್ತಮವಾಗಿ ಸಾಹಿತ್ಯದಲ್ಲಿ ಮೊದಲಿಗೆ ನಿರೂಪಿಸಿದವರು ಶ್ಯಾಮಲಾದೇವಿಯವರು. ಬರೆದದ್ದು ಇಪ್ಪತ್ತೇ ಕಥೆಗಳಾದರೂ, ಅವರು ಎರಡು ಅಂಶಗಳಿಂದಾಗಿ ಒಬ್ಬ ಸಾಧಕಿಯಾಗಿ ಉಲ್ಲೇಖಿತರಾಗುತ್ತಾರೆ. ಮೊದಲನೆಯದಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಕಥೆಗಾರ್ತಿಯಾಗಿ ಹೆಸರು ಸ್ಥಾಪಿಸಿದ ಮೊದಲ ಮಹಿಳೆ.

ಶ್ಯಾಮಲಾ ಸಂಚಯ

ಕನ್ನಡ ಸಾರಸ್ವತ ಲೋಕದಲ್ಲಿ ಮರೆಯಾಗುತ್ತಿದ್ದ ಶ್ಯಾಮಲಾದೇವಿಯವರ ಹೆಸರನ್ನು ಪುನಃ ಮೇಲಕ್ಕೆತ್ತುವ ಕೆಲಸ ಮಾಡಿದವರು ಲೇಖಕಿ ವಿಮರ್ಶಕಿ ಡಾ. ವಿಜಯಾ ದಬ್ಬೆಯವರು. ಶ್ಯಾಮಲಾದೇವಿ ಅವರನ್ನು ಕುರಿತು ಆಳವಾದ ಅಧ್ಯಯನ ಮಾಡಿ "ಶ್ಯಾಮಲಾ ಸಂಚಯ" ಕೃತಿಯಲ್ಲಿ ಲೇಖಕಿಗೆ ಮರುಹುಟ್ಟು ನೀಡಿದ ಯಶಸ್ಸು ವಿಜಯಾ ದಬ್ಬೆಯವರಿಗೆ ಸಲ್ಲುತ್ತದೆ. ಶ್ಯಾಮಲಾ ಅವರ ಸಾಹಿತ್ಯ ಕುರಿತ ವಿಜಯಾ ದಬ್ಬೆ ಅವರ ಮಾತುಗಳು ಹೀಗಿವೆ. "ಶ್ಯಾಮಲಾ ಕಥನ ಸಾಹಿತ್ಯವು ಮೇಲುನೋಟಕ್ಕೆ ಕಾಣುವಂತೆ ತೆರೆದ ಮನಸ್ಸುಳ್ಳದ್ದು. ಉಲ್ಲಾಸ ಪ್ರವೃತ್ತಿಯದು. ಬದುಕಿನ ನೆಮ್ಮದಿಗಾಗಿ ಬದಲಾವಣೆಯನ್ನು ಅರಸುವಂಥದ್ದು. ಆ ಸಾಹಿತ್ಯದ ಒಳನಾಡಿಯಲ್ಲಿ ಸಂಚರಿಸಿದಂತೆಲ್ಲ ಕೆಲವು ರಚನಾತ್ಮಕ ಅಂಶಗಳು ನಮ್ಮನ್ನು ತಟ್ಟುತ್ತವೆ. ನನ್ನನ್ನು ತಟ್ಟಿದ ಅಂಥ ಕೆಲವು ಅಂಶಗಳನ್ನು ಕ್ರೋಢೀಕರಿಸಬಹುದೆಂದು ತೋರುತ್ತದೆ. ಉದಾರ ಅನುಕಂಪ, ಮನುಷ್ಯ ಸ್ವಭಾವದ ಬಗೆಗಿನ ವಿನಯ, ಹೀಗೂ ಪ್ರಪಂಚವಿದೆಯೆಂಬುದನ್ನು ಪೂರ್ವಗ್ರಹವಿಲ್ಲದೇ ನೋಡುವ ಪ್ರಬುದ್ಧತೆ ಶ್ಯಾಮಲೆ ಅವರ ಉತ್ತಮ ಕಥೆಗಳ ಕಲಾತ್ಮಕತೆಯನ್ನು ಮೌಲಿಕತೆಯನ್ನು ಹೆಚ್ಚಿಸಿವೆ. ತನ್ನ ಜನಪದ ಸತ್ವ ಮತ್ತು ಜನಪರತೆಯಿಂದ ಈ ಸಾಹಿತ್ಯವೂ ಆಪ್ತವೂ, ಪ್ರಸ್ತುತವೂ ಆಗುತ್ತದೆ. ತನ್ನ ಪ್ರಗತಿಪರ ಮುನ್ನೋಟದಿಂದ ನಿರ್ದೇಶಿತವಾದ ಇಲ್ಲಿಯ ಕಥಾಪ್ರಜ್ಞೆಗೆ ಸಮಾಜದ ಕೆಲವು ವಿರೂಪ ವೈಷಮ್ಯಗಳನ್ನು ಪ್ರತಿಬಿಂಬಿಸುವುದು ಅನಿವಾರ್ಯವಾಗಿದೆ. ಸ್ತ್ರೀಯರ ಬದುಕನ್ನು ನೋಡುವ ಚಿಕಿತ್ಸಕ ದೃಷ್ಟಿಯನ್ನು ಮಸಳಿಸದ ಈ ಸಾಹಿತ್ಯದ ಸ್ತ್ರೀ ಪರ ಗುಣಕ್ಕೆ ಇರುವ ಕಸುವು, ಸಮತೋಲನ, ಅರ್ಥಪೂರ್ಣತೆ ಬೆಲೆಯುಳ್ಳದ್ದಾಗಿದೆ. ಸ್ತ್ರೀಯರನ್ನು ವೈಭವೀಕರಿಸುವ ಅಪಾಯದಿಂದ ಪಾರಾಗಿದ್ದಾರೆ. ಕೆಳಜಾತಿ ವರ್ಗಗಳ ಬದುಕನ್ನು ಹತ್ತಿರದಿಂದ ಒಳಗಿನಿಂದ ಹಿಡಿಯುವ ಹಂಬಲ, ಪ್ರಯತ್ನದಲ್ಲಿ ಶ್ಯಾಮಲೆಯವರು ವಿಶಿಷ್ಟರಾಗಿದ್ದಾರೆ. ಶ್ಯಾಮಲಾ ಅವರ ಕಥೆಗಳು ಅವಿರುವಂತೆಯೇ ಚಿತ್ತಾರವಿಲ್ಲದೆಯೂ ಬಾಳಿಕೆ ಬರುವಂಥವಾಗಿವೆ. ಮುಖ್ಯವಾಗಿ ಈ ಕಥೆಗಳು ನಿಂತಿರುವ ಅನುಭವ ದ್ರವ್ಯದ ತಳಹದಿ ಈ ಬಗೆಯದ್ದಾಗಿದೆ."

ಶ್ಯಾಮಲಾ 1943ರ ಏಪ್ರಿಲ್ ತಿಂಗಳ ಸುಮಾರಿಗೆ ತಮ್ಮ ಮೂವತ್ತಮೂರನೆಯ ವಯಸ್ಸಿನಲ್ಲಿ ತಮ್ಮ ನಾಲ್ಕನೆಯ ಮಗುವಿಗೆ ಜನ್ಮ ನೀಡಿದರು. ಆಗಿನಿಂದಲೇ ಅವರ ಆರೋಗ್ಯ ಕ್ಷೀಣಿಸತೊಡಗಿತು. ಇದೇ ಸಮಯದಲ್ಲಿ ವಿಶ್ರಾಂತಿಗಾಗಿ ಜಯ ಕರ್ನಾಟಕದ ಎಲ್ಲಾ ಕೆಲಸಗಳಿಂದಲೂ ಮತ್ತು ಸಾರ್ವಜನಿಕ ಕಾರ್ಯಗಳಿಂದಲೂ ಬಿಡುಗಡೆ ಪಡೆದರು. ರಾಮಚಂದ್ರರಾಯರು ಇಂದೂರಿನ ಸಂಸ್ಥಾನದ ವಾರ್ತಾಧಿಕಾರಿಯಾಗಿ ಶ್ಯಾಮಲೆ ಹಾಗೂ ಮಕ್ಕಳೊಂದಿಗೆ ಇಂದೂರಿನಲ್ಲಿ ನೆಲೆಸಿದರು. ಶ್ಯಾಮಲೆಯವರಿಗೆ ಅಲ್ಲಿ ಸಾಕಷ್ಟು ಚಿಕಿತ್ಸೆ ನೀಡಲಾಯಿತು. ಆದರೆ ಅವರ ಸ್ಥಿತಿ ಸುಧಾರಿಸಲಿಲ್ಲ. ಮತ್ತೆ ತವರಿಗೆ ಬಂದು ತಾಯಿ ತಂಗಿಯರೊಡನೆ ಇರತೊಡಗಿದರು.

ಧಾರವಾಡ ಪುರಸಭೆಯ ಸದಸ್ಯರಾಗಿ ಅವರು ಆಯ್ಕೆಗೊಂಡಿದ್ದು, ಸದಸ್ಯತ್ವದ ಕಾಲಾವಧಿ ಇನ್ನೂ ಪೂರ್ಣಗೊಂಡಿರಲಿಲ್ಲ. ಅವರ ಎರಡನೇ ಕೃತಿ ಪ್ರೆಸ್‌ನ ಅಕ್ಷರಜೋಡಣೆಯಲ್ಲಿ ಜೀವ ತಳೆಯುತ್ತಿತ್ತು. ಶ್ಯಾಮಲಾದೇವಿ ಅವರು ದಿನೇ ದಿನೇ ನಿತ್ರಾಣರಾಗತೊಡಗಿದ್ದರು. ಒಂದು ಕಡೆ ಉಬ್ಬಸ ಬಳಲಿಕೆ ಮತ್ತೊಂದು ಕಡೆ ಹೃದಯದ ತೊಂದರೆ. 1943ರ ನವೆಂಬರ್ ಒಂದರಂದು ಶ್ಯಾಮಲಾ, ತಾವು ಪ್ರೀತಿಯಿಂದ ಕಟ್ಟಿದ ಸ್ನೇಹ ಬಳಗ, ಅವರ ನಾಲ್ಕು ಮಕ್ಕಳು, ಪತಿ, ಪ್ರೀತಿಯ ಸೇವೆ ಪಡೆಯುತ್ತಿದ್ದ ಸಮಾಜ– ಎಲ್ಲವನ್ನು ಬಿಟ್ಟು ಈ ಲೋಕದಿಂದ ಮರೆಯಾದರು.

ಗ್ರಂಥ ಋಣ :

ಶ್ಯಾಮಲಾ ಸಂಚಯ– ಡಾ.ವಿಜಯಾ ದಬ್ಬೆ, ಕರ್ನಾಟಕ ಲೇಖಕಿಯರ ಸಂಘ.

——— * ———

ಹೊಸಗನ್ನಡದ ಕಲಾತ್ಮಕ ಕಥೆಗಾರ್ತಿ ಕೊಡಗಿನ ಗೌರಮ್ಮ

ಕೊಪ್ಪುಮನೆ ವಿಜಯಲಕ್ಷ್ಮಿ

ಕನ್ನಡದ ಆಧುನಿಕ ಮಹಿಳಾ ಸಾಹಿತ್ಯ ಆರಂಭಗೊಂಡಿದ್ದು, ಇಪ್ಪತ್ತನೇ ಶತಮಾನದ ಆರಂಭದ ದಶಕದಿಂದ. ಜನನವಾರು ಕ್ರಮದಲ್ಲಿ; ಶಾಂತಾಬಾಯಿ ನೀಲಗಾರ, ನಂಜನಗೂಡು ತಿರುಮಲಾಂಬಾ (1897), ಆರ್. ಕಲ್ಯಾಣಮ್ಮ (1896), ತಿ.ತಾ ಶರ್ಮರ ಪತ್ನಿ ತಿರುಮಲೆ ರಾಜಮ್ಮ (ಭಾರತಿ) (1900), ಸೀತಾದೇವಿ ಪಡುಕೋಣೆ (1903), ಶ್ಯಾಮಲಾದೇವಿ ಬೆಳಗಾಂವ್‌ಕರ್ (1910), ಐ.ಏ.ಎಸ್. ಅಧಿಕಾರಿಯ ಪತ್ನಿ ಜಯಲಕ್ಷ್ಮೀ ಶ್ರೀನಿವಾಸನ್ (1911), ಮುಂತಾದ ಲೇಖಕಿಯರ ನಂತರ 1912ರ ಮಾರ್ಚ್ ಐದರಂದು ಜನಿಸಿದವರು ಕೊಡಗಿನ ಗೌರಮ್ಮನವರು. ಆಧುನಿಕ ಆಲೋಚನೆ ಹೊಂದಿದ್ದ ಆಕರ್ಷಕ ಹುಡುಗಿ. ಸ್ತ್ರೀಪರ ದೃಷ್ಟಿಯಿಂದ ಆಲೋಚಿಸಿ ಕವಿತೆಗಳನ್ನು ಬರೆಯುತ್ತಿದ್ದ ಬೆಳಗೆರೆ ಜಾನಕಮ್ಮ ಮತ್ತು ಕನ್ನಡದ ಉಳಿವಿಗೆ ಹಾಗೂ ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಜಯದೇವಿ ತಾಯಿ ಲಿಗಾಡೆಯವರು ಈಕೆಯ ಸಮಕಾಲೀನ ಲೇಖಕಿಯರು. ಇವರೆಲ್ಲ ಕನಸು, ಭ್ರಮೆ ಮತ್ತು ಅವಾಸ್ತವ ಘಟನೆಗಳನ್ನು ಕೃತಿಗಳಲ್ಲಿ ತರಲಿಲ್ಲ. ಸಮಾಜದ ಅವ್ಯವಸ್ಥೆ, ವಿಧವಾ ಮರುವಿವಾಹ, ಮಹಿಳಾ ಶಿಕ್ಷಣದ ಅಗತ್ಯ ಇವೇ ಮುಂತಾಗಿ ಸಮಾಜದ ಬೆಳವಣಿಗೆಗೆ ಅಗತ್ಯವಾದ ವಿಷಯಗಳ ಕುರಿತೇ ಇವರುಗಳೆಲ್ಲ, ಕತೆ, ಕಾದಂಬರಿ, ನಾಟಕ ಮುಂತಾದ ಪ್ರಕಾರಗಳಲ್ಲಿ ಬರೆದು ಜನರ ಮನಸ್ಸನ್ನು ಪರಿವರ್ತಿಸಲು ಮತ್ತು ಸಮಾಜದಲ್ಲಿ ಸುಧಾರಣೆ ತರಲು ಪ್ರಯತ್ನಿಸಿದಂತಹ ಲೇಖಕಿಯರು.

ಗೌರಮ್ಮನವರು ಹುಟ್ಟಿದ್ದು ಮಡಿಕೇರಿಯಲ್ಲಿ. ತಂದೆ ಪ್ಲೀಡರ್ ಎನ್. ಪುಟ್ಟರಾಮಯ್ಯನವರು. ಗೌರಮ್ಮನವರು ಆರೇಳು ವರ್ಷದವರಿದ್ದಾಗ ಹೆತ್ತವರೊಂದಿಗೆ ಕಾಶಿಗೆ ಹೋಗಿದ್ದು, ಅಲ್ಲಿ ಏನೋ ಸಮಸ್ಯೆಯಾಗಿ ತಾಯಿ ತೀರಿಕೊಂಡರು. ತಾಯಿ ಇಲ್ಲದ ತಮ್ಮ ಈ ಕೊನೆಯ ಅಚ್ಚುಮೆಚ್ಚು ಮಗಳ ಎಲ್ಲ ಆಸೆಗಳನ್ನೂ ಅಡ್ಡತಲೆ ಆಡಿಸದೇ ಪೂರೈಸುತ್ತಿದ್ದರು ತಂದೆ.

ಗೌರಮ್ಮನವರು ಒಬ್ಬ ಒಳ್ಳೆಯ ಕತೆಗಾರ್ತಿ. ಅವರ ಒಟ್ಟು ಬದುಕಿನ ಕಾಲ ಕೇವಲ ಇಪ್ಪತ್ತೇಳು ವರ್ಷಗಳು. ಇಷ್ಟರಲ್ಲೇ ಓದು, ವಿದ್ಯೆ, ವಿವಾಹ, ಸುಪುತ್ರ, ಸಾಹಿತ್ಯ ಸಾಧನೆ-- ಈ ಎಲ್ಲ ಅನುಭವಗಳನ್ನೂ ಅನುಭವಿಸಿದರು. ಅವರು ತಮ್ಮ ಈ ಕಿರು ಜೀವನದ ಅವಧಿಯಲ್ಲಿ ಬರೆದಿದ್ದು ಸುಮಾರು ಇಪ್ಪತ್ತೊಂದು ಕತೆಗಳು. ಆದರೂ ಮಹಿಳಾ ಸಾಹಿತ್ಯ ಲೋಕದಲ್ಲಿ ಇವರದು ಮುಖ್ಯ ಪಾತ್ರ. ಮುಖ್ಯರಾಗುವುದಕ್ಕೆ ಕಾರಣವೆಂದರೆ ಅವರ ಕೃತಿಗಳಲ್ಲಿ ಕಾಣಬಹುದಾದ ಸ್ತ್ರೀವಾದ, ಸಮಾನತೆ, ಕೋಮು ಸೌಹಾರ್ದತೆ, ಸರ್ವಧರ್ಮ ಸಮಾನತೆಗಳಂತಹ ಅನುಕರಣೀಯ ಅಂಶಗಳು. ಬರೆದದ್ದು ಪ್ರೇಮ-ಪ್ರೀತಿಗಳ ಕತೆಗಳನ್ನೇ ಆದರೂ ಅವುಗಳ ಮೂಲಕ ಸಮಾಜದ ಪಕ್ಷಪಾತಿತನ, ಅನ್ಯಾಯಗಳನ್ನು ಸಮಾಜದ ಗಮನಕ್ಕೆ ತಂದರು. ಈ ಅಂಶಗಳಲ್ಲಿ ಸಣ್ಣಕಥೆಗಳನ್ನು ಅದೆಷ್ಟು ಕಲಾತ್ಮಕವಾಗಿ, ಸಾಹಿತ್ಯಾತ್ಮಕವಾಗಿ ಆ ಹಳ್ಳಿಯಲ್ಲಿದ್ದುಕೊಂಡು ಆ ಕಾಲದಲ್ಲೇ ರಚಿಸಿದ್ದರು ಎಂಬುದು ಇನ್ನೊಂದು ಕಾರಣ. ಆ ಕಾಲದಲ್ಲಿ ಇವರಷ್ಟು ಕುತೂಹಲಕಾರಿಯಾಗಿ, ಕಲಾತ್ಮಕವಾಗಿ ಬರೆದ ಇಬ್ಬರಲ್ಲಿ ಇವರು ಮೊದಲಿಗರು. ಇನ್ನೊಬ್ಬರು ಶ್ಯಾಮಲಾದೇವಿ

ಎನ್ನಬಹುದು. ಮತ್ತೊಂದು ಇವರು, ಯಕ್ಷಗಾನ, ತಾಳಮದ್ದಲೆ. ಮುಂತಾದ ಕಲೆಗಳಲ್ಲಿ ತೊಡಗಿಸಿಕೊಂಡಿದ್ದರಲ್ಲದೆ. ಜಮಖಂಡಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆ ಕಾಲದಲ್ಲಿ, ಇವರು ಒಬ್ಬರೇ ಹೋಗಿದ್ದರು. ಚಿಕ್ಕಂದಿನಲ್ಲೇ ಗೌರಮ್ಮನವರಿಗೆ, ಕನ್ನಡ ಕಾದಂಬರಿಗಳನ್ನು ಓದುವ ಹಂಬಲ. ಧಾರವಾಡದಿಂದ ಪ್ರಕಟಗೊಳ್ಳುತ್ತಿದ್ದ ಗಳಗನಾಥ, ಕುರುಡಿ ಮುಂತಾದವರ ಚಾರಿತ್ರಿಕ, ಪತ್ತೇದಾರಿ, ಸಾಮಾಜಿಕ ಇತ್ಯಾದಿ ಎಲ್ಲ ರೀತಿಯ ಕಾದಂಬರಿಗಳನ್ನು ಓದುತ್ತಿದ್ದರು. ಅಲ್ಲದೆ ಕನ್ನಡವೂ ಬಾರದ ಹೆಣ್ಣುಮಕ್ಕಳ ನಡುವೆ ಇದ್ದು ಇಂಗ್ಲಿಷ್ ಪುಸ್ತಕಗಳನ್ನು ಓದುವ ಅಭ್ಯಾಸ ಇಟ್ಟುಕೊಂಡಿದ್ದರು. ಇವೆಲ್ಲವೂ ಬೆರಗು ಮೂಡಿಸುವ ವಿಷಯಗಳೇ. ಮಡಿಕೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿಯೂ ಇವರು ಅತ್ಯಂತ ಉತ್ಸಾಹದಿಂದ ಭಾಗಿಯಾಗಿ ಇತರ ಹೆಣ್ಣುಮಕ್ಕಳು ಈ ವಿಷಯಗಳಲ್ಲಿ ಮುಂದಾಗುವುದಕ್ಕೆ ಮಾದರಿಯಾಗಿ ನಿಂತರು. ಬದುಕನ್ನು ಬಹಳವಾಗಿ ಪ್ರೀತಿಸುತ್ತಿದ್ದ ಇವರಿಗೆ ಎಲ್ಲ ಧರ್ಮಗಳ ಜನರು, ಎಲ್ಲ ಜಾತಿಗಳ ಜನರೂ ಪ್ರಿಯರೆ. ಹಾಗೆಂದೇ ಈ ಅಂಶವನ್ನು ಕೃತಿಗಳಲ್ಲಿ ತಂದಿದ್ದು ಮಾತ್ರವಲ್ಲದೆ. ಗಾಂಧೀಜಿಯವರ ಹರಿಜನ ನಿಧಿಗೆ ತಮ್ಮ ಒಡವೆಗಳನ್ನು ಕೊಟ್ಟು ಹರಿಜನ ಹಿತವನ್ನೂ ಬಯಸಿದ್ದರು.

ಯಾರೂ ಕಂಡರಿಯದ ಹಳ್ಳಿಯೊಂದರ ತೋಟದ ನಡುವೆ ಮುಚ್ಚಿದಂತಿದ್ದೂ, ತನ್ನೊಳಗಿನ ಕಥೆಗಾರ್ತಿಯನ್ನು ಪ್ರಪಂಚಕ್ಕೆ ಪರಿಚಯಿಸಿಕೊಟ್ಟರು. ಗೌರಮ್ಮನೆಂಬ ತಾನೊಬ್ಬಳಿದ್ದೇನೆ ಎಂಬುದನ್ನು ತಮ್ಮ ಉತ್ತಮವಾದ ಕಥೆಗಳ ಮೂಲಕ ರಾಜ್ಯದ ಜನತೆಗೆ ತಿಳಿಸಿಕೊಟ್ಟಿದ್ದರು ಅವರು.

ಗೌರಮ್ಮನವರು 'ಮಿಸೆಸ್ ಬಿ.ಟಿ.ಜಿ.ಕೃಷ್ಣ' ಎಂಬ ಹೆಸರಿನಲ್ಲಿ ಬರೆದಂತಹ ಕಥೆಗಳು, 'ಕಂಬನಿ' ಮತ್ತು 'ಚಿಗುರು' ಎಂಬ ಎರಡು ಸಂಕಲನಗಳಲ್ಲಿ ಪ್ರಕಟಗೊಂಡಿವೆ. ಈ ಎರಡು ಸಂಕಲನಗಳಲ್ಲಿನ ಉತ್ತಮವಾದ ಕೆಲವು ಕಥೆಗಳನ್ನು ಆಯ್ದು "ಗೌರಮ್ಮನ ಕಥೆಗಳು" ಎಂಬ ಹೆಸರಿನಲ್ಲಿ ಪ್ರಕಟಗೊಂಡಿದ್ದು, ಈ ಪುಸ್ತಕವು ಕೊಡಗಿನ ಎಲ್ಲ ಹೈಸ್ಕೂಲುಗಳಲ್ಲಿ ಫೋರ್ತ್ ಫಾರ್ಮಿಗೆ ಪಠ್ಯಪುಸ್ತಕವಾಗಿ ನಿಗದಿಗೊಂಡಿತ್ತು. ಈ ಪುಸ್ತಕದ ಎರಡನೇ ಮುದ್ರಣದ ಪ್ರತಿಗಳು ಯಾವಾಗಲೋ ಮುಗಿದಿದ್ದು ಸಿಗದಂತಾಗಿತ್ತು. ಈ ಕೊರತೆಯನ್ನು ನೀಗಿಸಲೆಂದು, ಕನ್ನಡ ಪುಸ್ತಕ ಪ್ರಾಧಿಕಾರವು ಇವರ ಕಥೆಗಳನ್ನು, "ಜೀವನ ಪ್ರೀತಿ" ಎಂಬ ಹೆಸರಿನ ಪುಸ್ತಕದಲ್ಲಿ 2002ನೇ ಸಾಲಿನಲ್ಲಿ ಪುನಃ ಪ್ರಕಟಿಸಿದೆ.

ಇಬ್ಬರು ಅಕ್ಕಂದಿರು, ಇಬ್ಬರು ಅಣ್ಣಂದಿರ ಮುದ್ದಿನ ತಂಗಿ ಗೌರಮ್ಮ. ಇವರಿಗೂ ಇವರ ಅಕ್ಕನ ಮಗ ಎಸ್.ಎಸ್. ರಾಮಮೂರ್ತಿಯವರಿಗೂ ಮನೆಯಲ್ಲಿ ಲಕ್ಷ್ಮೀನಾರಾಯಣ ಶಾಸ್ತ್ರಿ ಎಂಬುವವರಿಂದ ಪ್ರಾಥಮಿಕ ಪಾಠ. ಕೊಡಗಿನ ಕಮಿಷನರ್ ಕಛೇರಿಯಲ್ಲಿ ಗುಮಾಸ್ತರಾಗಿದ್ದ ಶಾಸ್ತ್ರಿಗಳು ಬಹಳ ಕಟ್ಟುನಿಟ್ಟಿನ ಮನುಷ್ಯ. ಕ್ರಮಬದ್ಧ ಪಾಠ. ಅವರ ಕೈಯಲ್ಲಿ ಸದಾ ಕೆಂಪು ಬೆತ್ತ. ಪಾಠವನ್ನು ಉತ್ತಮವಾಗಿ ಕಲಿಯುತ್ತಿದ್ದ ಈ ಶಿಕ್ಷಕರನ್ನೇ ಪರೀಕ್ಷಿಸುವಂತೆ ಪ್ರಶ್ನೆ ಹಾಕುತ್ತಿದ್ದ ಚುರುಕು ಬುದ್ಧಿಯ ಗೌರಮ್ಮನ ಮೇಲೆ ಮಾತ್ರವಲ್ಲ ರಾಮಮೂರ್ತಿಯ ಮೇಲೂ ಈ ಬೆತ್ತದ ಪ್ರಯೋಗ ಆಗಲೇ ಇಲ್ಲ.

ಅಣ್ಣಂದಿರು, ಅಕ್ಕನ ಮಗ, ಅಣ್ಣನ ಮಕ್ಕಳು ಮುಂತಾಗಿ ಎಲ್ಲ ಬರೀ ಗಂಡುಹುಡುಗರ ನಡುವೆಯೇ ಬೆಳೆದ, ಗೌರಮ್ಮನವರಿಗೂ ಗಂಡಿನ ಗುಣಗಳೇ ಹೆಚ್ಚಿದ್ದುವಂತೆ. ಈ ಹಿನ್ನೆಲೆಯಿಂದಾಗಿಯೇ ಇರಬಹುದು, ಇವರು ಇತರ ಹೆಣ್ಣುಮಕ್ಕಳಂತೆ ಇನ್ನೊಬ್ಬರಿಗಾಗಿ ಬದುಕಿದವರಲ್ಲ. ಸಮಾಜದ ಏಕಪಕ್ಷ ನ್ಯಾಯದ ನಿಯಮಗಳಿಗೆ ತಲೆಬಾಗಿ ಬದುಕಬೇಕೆಂದು ಬೋಧಿಸಿದವರಲ್ಲ. ತಮಗೆ ನ್ಯಾಯವೆನಿಸಿದಂತೆಯೇ ಜೀವನವನ್ನು ನಡೆಸಿಕೊಂಡವರು. ತನಗೆ ಕಾನ್ವೆಂಟ್ ವಿದ್ಯಾಭ್ಯಾಸವೇ ಬೇಕು ಎಂದು ತಮ್ಮ ತಂದೆಯ ಮುಂದೆ ಬೇಡಿಕೆ ಇಟ್ಟು, ತಮ್ಮ ತಂದೆಯಿಂದ, ಮೈಲು ದೂರದ ಕಾನ್ವೆಂಟಿಗೆ ಕಳುಹಿಸುವ ವ್ಯವಸ್ಥೆ ಮಾಡುವಂತೆ ನೋಡಿಕೊಂಡಿದ್ದು; ಮದುವೆಯ ನಂತರವೂ 'ನಾನಂತೂ ನಿನ್ನೊಟ್ಟಿಗೆ ಇರುವವಳು. ಗಂಡ ಇದ್ದರೆ ಇರಲಿ. ಇಲ್ಲೇ ಬರಲಿ', ಎಂಬುದಾಗಿ, ತಂದೆಗೆ ಹೇಳಿದ್ದ ಈ ದಿಟ್ಟೆ,

ನಾಲ್ಕೈದು ವರ್ಷ ಕಾಲ ತಂದೆಯ ಮನೆ ಬಿಟ್ಟು ಮಿಸುಗಲಿಲ್ಲವೆಂಬುದು; ಮದುವೆಯಾಗಲು ಇಷ್ಟವಿಲ್ಲದಿದ್ದರೂ ತಮ್ಮ ಪತಿಯೊಂದಿಗೆ ನಿಷ್ಠೆಯಿಂದ ಬದುಕಿದ್ದು; ಹೆಣ್ಣುಮಕ್ಕಳು ಹೊಸ್ತಿಲು ದಾಟುವುದೇ ದುಸ್ತರವಾಗಿದ್ದ ವಾತಾವರಣದಲ್ಲಿದ್ದೂ, ಅಷ್ಟು ದೂರದ ಜಮಖಂಡಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆ ಕಾಲದಲ್ಲಿ, ಇವರು ಒಬ್ಬರೇ ಹೋಗಿದ್ದು– ಈ ಮಾತಿಗೆ ಉಲ್ಲೇಖಿಸಬಹುದಾದ ಒಂದೆರಡು ನಿದರ್ಶನಗಳು.

ಅಡುಗೆಗೆ ತಯಾರಾಗಬೇಕಾದ ಹೆಣ್ಣುಮಕ್ಕಳಿಗೆ ಅಕ್ಷರವೇ ಅನಗತ್ಯ ಎನ್ನುತ್ತಿದ್ದ ಕಾಲದಲ್ಲಿ ಕಾಡಿನಂತಹ ಕೊಡಗು ಪ್ರದೇಶದಲ್ಲಿದ್ದ ಗೌರಮ್ಮನವರು ಎಸ್.ಎಸ್.ಎಲ್.ಸಿ. ಮುಗಿಸಿದರು. ಹದಿನಾಲ್ಕು–ಹದಿನೈದರ ವಯಸ್ಸಿನಲ್ಲಿ, 1926ರಲ್ಲಿ ಸುಂಟಿಕೊಪ್ಪದ ಹರದೂರು ಗ್ರಾಮದಲ್ಲಿ ಗುಂಡುಕುಟ್ಟಿ ಮಂಜುನಾಥಯ್ಯನೆಂಬ ಒಬ್ಬ ಕಾಫಿ ತೋಟದ ಮಾಲಿಕರಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ, ಏಳು ವರ್ಷ ಹಿರಿಯನಾದ, ಎಸ್.ಎಸ್.ಎಲ್.ಸಿ ಮುಗಿಸಿದ್ದ ಬಿ.ಟಿ. ಗೋಪಾಲಕೃಷ್ಣ ಇವರನ್ನು ಕೈಹಿಡಿದ ಬಾಳಸಂಗಾತಿ. ಮದುವೆಯ ನಂತರ ಇವರಿಗೆ ಜನಿಸಿದ್ದು ಒಬ್ಬ ಗಂಡು ಮಗ. ಗೌರಮ್ಮನವರಿಗೆ ಮಗನ ಮೇಲೆ ಅಪಾರ ಪ್ರೀತಿಯಿದ್ದರೂ ಅವನೊಂದಿಗೆ ಮುದ್ದು–ಲಲ್ಲೆ ಇಲ್ಲದ ಅಸಾಧಾರಣ ಶಿಸ್ತು.

ಗೌರಮ್ಮನವರು, ಹರದೂರಿನಂತಹ ಹಳ್ಳಿಯಲ್ಲಿದ್ದೂ ಹೊರಜಗತ್ತಿಗೆ ಹೃದಯ ತೆರೆದುಕೊಂಡಿದ್ದವರು. ನಗರದ ಆಧುನಿಕ ಮಹಿಳೆಯ ಮನೋಭಾವ ಹೊಂದಿದ್ದವರು. ಆಲೋಚನೆಯಲ್ಲಿ, ಕ್ರಿಯೆಯಲ್ಲಿ, ಕೃತಿ ರಚನೆಯಲ್ಲಿ ತನ್ನ ಕಾಲಕ್ಕಿಂತ ಶತಮಾನದಷ್ಟು ಮುಂದಿನ ಮನಸ್ಸಿದ್ದವರು. ನೇರ ನಿರ್ಮಲ ನಿರ್ಭಯ ಮನಸ್ಸು. ಗೌರವದ ಮನೆತನದಲ್ಲಿ ಉತ್ತಮ ಗೃಹಿಣಿಯಾಗಿ, ಜನರೊಡನೆ ಬೆರೆಯುವಲ್ಲಿ, ಉಪಚಾರ, ಸೇವೆ ಮಾಡುವಲ್ಲಿ ನಿರ್ಭಿಡೆ, ಕೆಳವರ್ಗದವರಲ್ಲಿ ಅನುಕಂಪ, ಔದಾರ್ಯವಿದ್ದವರು. ಈಜುವ ವಿದ್ಯೆಯನ್ನೂ ಇವರು ಕಲಿತಿದ್ದರು. ಹಸಿರು ಬೆಟ್ಟ ಗುಡ್ಡಗಳ ನಡುವಿನಲ್ಲಿದ್ದು, ಟೆನ್ನಿಸ್ ಆಡುತ್ತಿದ್ದರೆಂದರೆ ಆಶ್ಚರ್ಯ ಹುಟ್ಟಿಸುವ ವಿಷಯವೇ.

“ನವೋದಯ ಕಾಲದಲ್ಲಿ ಬಂದ ಕನ್ನಡದ ಪ್ರಥಮ ಬಂಡಾಯ ಹಾಗೂ ಸ್ತ್ರೀವಿಮೋಚನಾವಾದಿ. ಕಳೆದ ಶತಮಾನದ ಮೂವತ್ತರ ದಶಕದಲ್ಲೆ ಮಹಿಳೆಯರ ಸಮಸ್ಯೆ ಕುರಿತು ಬರೆದಂತಹ ದಿಟ್ಟೆ. “ಮನುವಿನ ರಾಣಿ” ಇವರಿಗೆ ಶ್ರೇಷ್ಠ ಕಥೆಗಾರ್ತಿ ಎಂಬ ಪ್ರಸಿದ್ಧಿಯನ್ನು ತಂದುಕೊಟ್ಟ ಕಥೆ ಎಂದು ಹೇಳಲಾಗುತ್ತದೆ. “ಹರಿಜನ ಪತ್ರಿಕೆ”, “ಮೈಸೂರು ಪತ್ರಿಕೆ”ಗಳಲ್ಲಿ ಗೌರಮ್ಮನವರ ಬಗ್ಗೆ ಲೇಖನಗಳು ಬಂದಿವೆ. ದ.ರಾ.ಬೇಂದ್ರೆ, ದ.ಬಾ. ಕುಲಕರ್ಣಿ, ಭಾರತೀಸುತ, ಮುಂತಾದ ಖ್ಯಾತ ಸಾಹಿತಿಗಳು ಇವರ ಬರವಣಿಗೆಯ ಶೈಲಿ ಮತ್ತು ವಿಚಾರಗಳನ್ನು ಮೆಚ್ಚಿಕೊಂಡಿದ್ದರು. ಅವರೊಡನೆ ಸ್ನೇಹದಿಂದಿದ್ದರು.

ಗೌರಮ್ಮನವರು ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದವರಾದರೂ ಅವರ ಯಾವುದೇ ಕತೆಗಳಲ್ಲಿ ಜಾತಿಯ ಪ್ರಸ್ತಾಪ ಅನಗತ್ಯವಾಗಿ ಬಂದಿರುವುದಿಲ್ಲ. ಜಾತಿಯನ್ನು ಸ್ಪಷ್ಟಪಡಿಸುವ ಭಾಷೆ, ಹೆಸರು, ಶಾಸ್ತ್ರ–ಸಂಪ್ರದಾಯಗಳೂ ಇಲ್ಲ. ರಚಿಸಿದ ಕತೆಗಳಲ್ಲಿ ಗಟ್ಟಿತನವಿದೆ. ಓದಿಸಿಕೊಂಡು ಹೋಗುವ ಗುಣವಿದೆ. ಅಲ್ಲಲ್ಲಿ ತಿಳಿಹಾಸ್ಯವೂ ಇದೆ. ವಸ್ತು ವೈವಿಧ್ಯತೆಯೂ ಇದೆ. ಇವರವು ಮಾನವತೆಗೆ, ನ್ಯಾಯಕ್ಕೆ, ಧರ್ಮೈಕ್ಯತೆಗೆ, ಮನುಷ್ಯ–ಪ್ರೀತಿಗೆ, ಗಂಡು–ಹೆಣ್ಣಿನ ನೈತಿಕ ಪ್ರೇಮಕ್ಕೆ, ಸ್ತ್ರೀಶಿಕ್ಷಣ, ಆರ್ಥಿಕ ಸ್ವಾವಲಂಬನೆ, ಇತ್ಯಾದಿಗೆ ಒತ್ತುಕೊಡುವಂಥ ಕತೆಗಳು. ಆದ್ದರಿಂದ ಸರ್ವ ಕಾಲಕ್ಕೂ ಅನ್ವಯಿಸುವಂತಹವು. ಎಲ್ಲಕ್ಕಿಂತ ಮೆಚ್ಚುಗೆಯಾಗುವ ಗುಣವೆಂದರೆ ನೀತಿ–ನ್ಯಾಯಗಳ ಪರವಾಗಿರುವ ಅವರ ಕಾಳಜಿ. ಸಮಾಜದಲ್ಲಿ ಹೆಣ್ಣಿಗೊಂದು ನ್ಯಾಯ, ಗಂಡಿಗೊಂದು ನ್ಯಾಯ ಇರುವ ಬಗ್ಗೆ ಅವರು ಆ ಕಾಲದಲ್ಲೇ ಆಲೋಚಿಸಿದ್ದಾರೆ. “ಅವಳ ತಂದೆ ಸುಧಾರಿಸಿದವರು. ಹೆಣ್ಣುಮಕ್ಕಳಿಗೂ ಪ್ರೌಢ ಶಿಕ್ಷಣ ಕೊಡಿಸಬೇಕೆಂಬ ಹೆಬ್ಬಯಕೆ ಅವರದು. “ಸರಿಯಾದ ವರ ಸಿಕ್ಕಿ, ಅವನು ಮದುವೆಯಾದ ಮೇಲೂ ರೋಹಿಣಿಯು ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಬಹುದೆಂಬ ಒಪ್ಪಿಗೆಯನ್ನು ಕೊಡುವವನಾದರೆ, ಆಗಲೇ ಅವರು ಅವಳ ಮದುವೆಯನ್ನು ಮಾಡಲು

ಹಿಂತೆಗೆಯುವಂತಿರಲಿಲ್ಲ" (ಒಂದು ಚಿತ್ರ), "ಅವಳೀಗ ಜಾತಿಯಿಂದ ಬಹಿಷ್ಕರಿಸಲ್ಪಟ್ಟಿರುವವಳು ನಲಿನಾ-ರಾಯರ ಪಾಪದ ಪ್ರತಿಫಲವಾಗಿ. ಇದೇ ನೋಡು--ನಮ್ಮ ಸಮಾಜದ ನ್ಯಾಯ", "ನಮ್ಮವರ ಹೃದಯದಲ್ಲಿ ಜಾತಿಗಲ್ಲದೆ ದಯೆಗೆ ಎಡೆಯಿಲ್ಲ. ಅದೂ ಜಾತಿ ನಿಯಮಗಳು ಹೆಂಗಸರಿಗೆ ಮಾತ್ರ. ಗಂಡಸರು ಆ ನಿಯಮಕ್ಕೆ ಒಳಪಡಬೇಕಾಗಿಲ್ಲ. ಇದೇ ನೋಡು, ನಮ್ಮ ಜಾತಿಯ ದೊಡ್ಡತನದ ಕುರುಹು" (ಅಪರಾಧಿ ಯಾರು), ಮುಂತಾದ ವಾಕ್ಯಗಳು, ಇವರ ಕಥೆಗಳು ಸ್ತ್ರೀ-ದೃಷ್ಟಿಕೋನದಿಂದ ಬರೆದಂತವು ಎಂಬ ಮಾತಿಗೆ ಉದಾಹರಣೆಗಳು.

"ಮನುವಿನ ರಾಣಿ", "ನಾಲ್ಕು ಘಟನೆಗಳು," "ಮರದ ಬೊಂಬೆ", "ಒಂದು ಚಿತ್ರ", "ಅವಳ ಭಾಗ್ಯ", "ಯಾರು" ಮುಂತಾಗಿ ಎಲ್ಲ ಕಥೆಗಳಲ್ಲಿನ ವಸ್ತು ಬೇರೆಬೇರೆಯಾಗಿವೆ. ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದ್ದರಿಂದಲೇ, ಅವಳಿಗೆ ಕೀಳಾಗಿ ಕಾಣಿಸಿಕೊಳ್ಳುವ ದುಸ್ಥಿತಿ ಬಂದಿದೆ ಎಂಬುದರ ಬಗ್ಗೆ; ಒಮ್ಮೆ ಹೊಡೆದು ಬೀದಿಗೆಳೆಯುವ, ಮತ್ತೊಮ್ಮೆ ಮಗು-ಮಡದಿಯೊಡನೆ ಮುದ್ದುಗರೆವ ಕೆಳವರ್ಗದ ನಡುವಳಿಕೆ ಬಗ್ಗೆ; ಮರುಕ್ಷಣದ ಗತಿಯನ್ನರಿಯದ ಮನುಷ್ಯ ಜೀವನದ ರಹಸ್ಯದ ಬಗ್ಗೆ; "ನಾಲ್ಕ ಘಟನೆಗಳು" ಎಂಬ ಕಥೆಯಲ್ಲಿ ಅವರು ತಮ್ಮ ಆಲೋಚನೆಯನ್ನು ಹರಿಸಿದ್ದಾರೆ.

ಮೈ-ಮನಗಳ ಸುಳಿಯಲ್ಲಿ, ಗೆಜ್ಜೆಪೂಜೆ, ಘುಂತಾದ ಕಾದಂಬರಿಗಳು ಬಹುಶಃ ರಚನೆಗೊಳ್ಳುವ ಮೊದಲೇ (1937ರಲ್ಲೇ) ಪ್ರೀತಿಗೆ ಬದ್ಧಳಾಗಿ ಸುಖ-ಲಾಲಸೆಗಳನ್ನು ತೊರೆದು ನಿಲ್ಲುವ, ನಿಷ್ಠಾವಂತ ವೇಶ್ಯೆಯೊಬ್ಬಳ ಆಗಾಧ ಪ್ರೀತಿ ಮತ್ತು ಪ್ರಾಮಾಣಿಕತೆಯನ್ನು "ಮನುವಿನ ರಾಣಿ" ಎಂಬ ಕಥೆಯಲ್ಲಿ ನಿರೂಪಿಸಿದ್ದಾರೆ.

ಓದು-ವಿದ್ಯೆಗಳಿಗೆ ಹಣದ ನೆರವು ಪಡೆಯುವುದಕ್ಕಾಗಿ ಒಬ್ಬಳನ್ನು, ಆನಂತರ ಬದುಕು ನಡೆಸುವುದಕ್ಕಾಗಿ ಇನ್ನೊಬ್ಬಳನ್ನು ಮದುವೆಯಾಗಿ, ಒಂದು ಹೆಣ್ಣಿಗೆ ಮೋಸ ಮಾಡುವ ಗಂಡಿನ ತಾತ್ಸಾರವನ್ನು ಅರಗಿಸಿಕೊಂಡು ಸಿನಿಮಾ ನಟಿಯಾಗಿ ಸೋದರನ ಶಿಕ್ಷಣಕ್ಕೆ ಆಧಾರವಾಗಿ ನಿಲ್ಲುವ ಹೆಣ್ಣೊಬ್ಬಳ ಕಥೆ "ಯಾರು".

ಅತ್ಯಾಚಾರಕ್ಕೊಳಗಾಗಿ ಚಿಕ್ಕ ಮಗುವಿನೊಂದಿಗೆ ಹೊರ ದಬ್ಬಲ್ಪಟ್ಟ ಪಾರ್ವತಿಗೆ, ಯಾರ ಆಶ್ರಯವೂ ಸಿಗದೆ, 'ರಜಿಯಾ'ಳಾಗಿ ಮತಾಂತರಗೊಂಡು ಅನ್ಯಮತೀಯಳೊಬ್ಬಳಲ್ಲಿ ಆಸರೆ ಪಡೆಯುವ ಅನಿವಾರ್ಯತೆ ಬಂದಾಗ, ಹಿಂದೂ ಧರ್ಮವನ್ನು ರಕ್ಷಿಸಿಕೊಳ್ಳುವ ಬಗ್ಗೆ ಸಭೆಯೊಂದರಲ್ಲಿ ತೀರ್ಮಾನ ಕೈಗೊಳ್ಳುವುದು "ಅಪರಾಧಿ ಯಾರು" ಎಂಬ ಕಥೆಯಲ್ಲಿ. ಸಮಾಜದ ಅನ್ಯಾಯ-ನೀತಿಗೆ ಕನ್ನಡಿ ಹಿಡಿಯುವ ಈ ಕಥೆಯಲ್ಲಿ ಎಲ್ಲಕ್ಕಿಂತ ಪ್ರಮುಖವಾಗಿರಬೇಕಾದ ಮಾನವೀಯತೆಯನ್ನೇ ಮರೆತು ಧರ್ಮರಕ್ಷಣೆಯ ಬಗ್ಗೆ ಮಾತಾಡುವ ಸಮಾಜದ ಅರ್ಥಹೀನ ನಡವಳಿಕೆಯನ್ನೂ, ಬಲವಂತಿಸಿದ ದುಷ್ಟ-ಗಂಡಸನ್ನು ಬಿಟ್ಟು, ಅನ್ಯಾಯಕ್ಕೊಳಗಾದ ಹೆಂಗಸನ್ನೇ ಶಿಕ್ಷೆಗೊಳಪಡಿಸುವ ಸಮಾಜದ ತಾರತಮ್ಯ ಆಚರಣೆಯನ್ನೂ, ಈ ಕಥೆ ಎತ್ತಿ ತೋರಿಸುತ್ತದೆ. ಹೆಚ್ಚಿನ ಕತೆಗಳು ಮನಸ್ಸಿನ ಮಾತುಗಳ ಮೂಲಕ ಕತೆ ಹೇಳುವಂತವು. ಬಳಸಿದ ತಂತ್ರ ದಿನಚರಿ ಇರಲಿ, ಪತ್ರವಿರಲಿ, ವಿಚಾರ ವಿನಿಮಯವೇ ಇರಲಿ ಮನಸ್ಸಿನ ಅನಿಸಿಕೆಗಳೇ ಕತೆಗಳಾಗುತ್ತವೆ.

ಯಾವುದು ಸೌಂದರ್ಯ? ಅದು ಎಲ್ಲಿರುತ್ತದೆ? ಹೃದಯದಲ್ಲೋ, ನೋಡುವವರ ಕಣ್ಣಿನಲ್ಲೋ, ಮೇಲೆ ಕಾಣುವ ಕುರೂಪದ ಒಳಗಿನ ಯಾವುದೋ ಒಂದು ಅಂಗದಲ್ಲೋ, ಎಂಬುದರ ಬಗ್ಗೆ ಓದುಗರೂ ಚಿಂತನೆ ಮಾಡುವ ರೀತಿಯಲ್ಲಿ "ಅವಳ ಭಾಗ್ಯ" ಎಂಬ ಕಥೆಯ ಕೆಲವು ವಿಚಾರಪ್ರಚೋದಕ ಸಾಲುಗಳಿವೆ. ಪ್ರೀತಿಯ ಕೊರತೆ, ಕುರೂಪಕ್ಕೆ ಸಿಗುವ ತಾತ್ಸಾರ, ಸೌಂದರ್ಯದ ಮೀಮಾಂಸೆ, ಗಂಡಸು ಕ್ಷಯ ರೋಗಿಯಾದರೂ ಅಂದವಿಲ್ಲದ ಆರೋಗ್ಯವಂತ ಹೆಣ್ಣನ್ನು ವರಿಸುವುದೇ ಸೌಭಾಗ್ಯವೆಂಬ ಸಮಾಜಕ್ಕೆ, ಹೆಣ್ಣಿನ ಕುರಿತು ಇರುವ ತಾತ್ಸಾರ ಭಾವನೆ, ವರದಕ್ಷಿಣೆಯ ಮಹತ್ವ ಇತ್ಯಾದಿಗಳೆಲ್ಲದರ ಬಗ್ಗೆ ಆಲೋಚನೆ ಮಾಡುವಂತೆ ಮಾಡುತ್ತದೆ ಈ ಕಥೆ.

ಗೌರಮ್ಮನವರ ಕಥೆಗಳಲ್ಲಿರುವ ತಿಳಿಹಾಸ್ಯಕ್ಕೆ ಒಂದೆರಡು ಕಥೆಯ ಸಾಲುಗಳ ಉದಾಹರಣೆ ಇಲ್ಲಿ ಕೊಡಬಹುದು; "ಪಾಪನ ಮದುವೆ"; ಅವರು (ಮಾಸ್ಟರು) ಬಂದರು ಎಂದರಂತೂ ತೀರಿಹೋಯ್ತು ನಮ್ಮ ವ್ಯಸನ ಅಷ್ಟಿಷ್ಟಲ್ಲ.

ಎಂದೂ ಬಾರದ ನಿದ್ರೆ, ಬಾಯಾರಿಕೆ ಎಲ್ಲಾ ಬರಲು ಸುರುವಾಗುತ್ತಿದ್ದವು. ಒಮ್ಮೊಮ್ಮೆ ಹೊಟ್ಟೆನೋವೂ ಬರುತ್ತಿತ್ತು, ... ಹೊಟ್ಟೆನೋವೆಂದ ಕೂಡಲೆ ಬೆತ್ತದಿಂದ ಮಂತ್ರಿಸಿ ವಾಸಿ ಮಾಡುತ್ತಿದ್ದರು.. ನಮಗಂತೂ ಪ್ರತಿದಿನ ಸಂಜೆಯಾಯಿತೆಂದರೆ 'ಅಯ್ಯೋ ನಮ್ಮಾಸ್ತ್ರ ಇರದೆ ಇದ್ರೆ ಎಷ್ಟೊಂದು ಚೆನ್ನಾಗಿರುತ್ತಿತ್ತು' ಎನಿಸುತ್ತಿತ್ತು. ಆದರೆ ಅದೇಕೋ ನಾವು ಅವರು ಸಾಯಲಿ, ಅವರಿಗೆ ಜ್ವರ ಬರಲಿ ಎಂದು ಬಯಸಿದಂತೆಲ್ಲಾ ಅವರು ಆರೋಗ್ಯದಿಂದ ದೃಢಕಾಯರಾಗುತ್ತಿದ್ದರು.

ನಮ್ಮ ಅಣ್ಣನಿಗೆ ಕವಿತೆ ಬರೆಯುವ ಹುಚ್ಚು, .. ನಾವೂ .. ಒಂದು ಕವಿತೆ ಮಾಡಿದೆವು, "ಹಾಳಾದ ಮಾಸ್ತ್ರ ಸತ್ತುಹೋಗಿದ್ರೆ.." ಎಂದು ಸುರುವಾಗಿತ್ತು ನಮ್ಮ ಕವನ..

ಇತ್ತ ಶಾಸ್ತ್ರಿಗಳು ಜೋಯಿಸರ (ಹುಡುಗಿಯ ತಂದೆಯ) ಗುಣಗಾನಕ್ಕೆ ಪ್ರಾರಂಭಿಸಿದರು. ಪಾಪ (ಹುಡುಗನ ಹೆಸರು), ಮೆಲ್ಲನೆ 'ಜೋಯಿಸರ ಗುಣ ಮೆಚ್ಚಿ ಅವರನ್ನೇ ಮದ್ವೆ ಮಾಡ್ಕೊಳ್ತೇನೆ' ಎಂದ.

"ಮರದ ಬೊಂಬೆ" ; "ನಾನು ಹೊಸ ಟೀಚರ್. ಈಗ 'ಸಿಸ್ಟರ್ ಕ್ಲಾಸಿನಲ್ಲಿ ನಿದ್ದೆ ಮಾಡುತ್ತಿದ್ದಾಗ ರೆವರಂಡ್ ಮದರ್ ಕ್ಲಾಸಿಗೆ ಬಂದು ಅವರನ್ನೆಚ್ಚರಿಸಿದ ಸಂಗತಿಯನ್ನು ಕುರಿತು ಒಂದು ಉಪನ್ಯಾಸವನ್ನು ಬರೆಯಿರಿ' ಎಂದಳು".

ಈ ವಾಕ್ಯಗಳು ಅವರ ಕಥೆಗಳಲ್ಲಿ ಬರುವ ತಿಳಿಹಾಸ್ಯಕ್ಕೆ ಕೆಲವು ಉದಾಹರಣೆಗಳು.

ಈ ಲೇಖಕಿಯ ಹೆಚ್ಚಿನ ಕಥೆಗಳು ಓದುಗರ ನಿರೀಕ್ಷೆಯಂತೆ ಅಂತ್ಯವಾಗುವುದಿಲ್ಲ. ಉದಾಹರಣೆಗೆ, ಒಂದೆರಡು ಕಥೆಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ವರದಕ್ಷಿಣೆ ಕೊಡುವ ಸಾಮರ್ಥ್ಯ ಇಲ್ಲದ್ದಕ್ಕಾಗಿ, ಬಡ ಗುಮಾಸ್ತನ ಮಗಳು, ಪಾರ್ವತಿಯನ್ನು ಶ್ರೀಮಂತ ಕ್ಷಯರೋಗಿಯೊಬ್ಬನಿಗೆ ಕೊಟ್ಟು ಮದುವೆ ಮಾಡುವ 'ಅವಳ ಭಾಗ್ಯ'ದ ವಿಷಯವನ್ನು ಯಾರೂ ನಿರೀಕ್ಷಿಸಲಾರರು.

"ಪಾಪನ ಮದುವೆ" ಎಂಬ ಕಥೆಯಲ್ಲಿ, ಹುಡುಗಿಯನ್ನು ನೋಡುವುದೇ ಇಲ್ಲವೆಂದರೂ ನೋಡಿದ ಶಾಸ್ತ್ರ ಮುಗಿಸಲು ಹೇಳುವ ಹಿರಿಯರ ಬಲವಂತಕ್ಕೆ ಬಾಗಿ "ಒಪ್ಪಿಗೆಯಾಗಲಿಲ್ಲ" ಎಂಬ ಉತ್ತರವನ್ನು ಮೊದಲೇ ಸಿದ್ಧಗೊಳಿಸಿಕೊಂಡು, ಸಂದರ್ಶನಕ್ಕೆ ಹೊರಡುವ 'ಪಾಪ' ಎಂಬುವವನು, ಹುಡುಗಿಯನ್ನು ನೋಡಿದ ಮೇಲೆ, "ಮಧ್ಯಾಹ್ನ ಊರಿಗೆ ಹೊರಡೋಣವಾ"? ಎಂದು ಆಂಟಿ ಕೇಳಿದಾಗ, "ನಾಳೆ ಹೊರಟರಾಯಿತು ಆಂಟಿ" ಎಂದು ಉತ್ತರ ಕೊಡುತ್ತಾನೆ. ಈ ಒಂದು ಉತ್ತರದಲ್ಲಿ ಇಡೀ ಕಥೆಗೆ ಒಂದು ಹಾಸ್ಯದ ತಿರುವು ಸಿಕ್ಕಿದೆ. ಬೇಡವೇ ಬೇಡ ಎಂದುಕೊಂಡವಳ ಬಗ್ಗೆ ತನ್ನ ಒಪ್ಪಿಗೆಯನ್ನು ಸೂಕ್ಷ್ಮವಾಗಿ ತಿಳಿಸುವ ಜಾಣ್ಮನವಿದೆ. ಆ ಹುಡುಗಿಯ ಸೌಂದರ್ಯದ ಬಗ್ಗೆ ಮಾತಿಗೆ ಮೀರಿದ ವರ್ಣನೆ ಇದೆ. ಕಥೆಗೆ ಒಂದು ಒಳ್ಳೆಯ ಅಂತ್ಯವಾಗಿದೆ.

"ಹೋಗಿಯೇ ಬಿಟ್ಟಿದ್ದ" ಎಂಬ ಕಥೆಯಲ್ಲಿ, ಐವರು ಮಿತ್ರರು ಕೆಲದಿನಗಳ ಹಿಂದೆ ನಡೆದ ಕೊಲೆಯ ವಿಷಯ ಮಾತಾಡುತ್ತಿರುವಾಗ, ಮುದುಕನೊಬ್ಬ ನಡುವೆ ಬಂದು, ಯಾವುದೋ ಕಾಲದಲ್ಲಿ ನಡೆದ ಒಬ್ಬ ಹುಡುಗನ ಒಂದು ಕಥೆ ಹೇಳತೊಡಗುತ್ತಾನೆ. ಆ ಹುಡುಗ ಕಷ್ಟಪಟ್ಟು ಹೊಲದಲ್ಲಿ ಕೆಲಸ ಮಾಡುತ್ತಿದ್ದು, ಲತೀಫಾ ಎಂಬ ಮುಸಲ್ಮಾನ ಹುಡುಗಿಯೊಬ್ಬಳನ್ನು ಪ್ರೀತಿಸಿದ್ದುದು, ಅಂತರ್ಜಾತೀಯ ವಿವಾಹ ಅಸಾಧ್ಯವಾಗಿ, ಅವಳೊಂದಿಗೆ ಪರಲೋಕಕ್ಕೆ ಹೋಗುವ ಉದ್ದೇಶದಿಂದ ಕೊಲೆ ಮಾಡಿದ್ದು, ಜನರ ಬಲವಂತಕ್ಕೆ ಹುಚ್ಚಾಸ್ಪತ್ರೆಯಲ್ಲಿ ಮುವ್ವತ್ತು ವರ್ಷ ಕಾಲ ಕಳೆದದ್ದು, ಮುಂತಾದ ಎಲ್ಲ ಕಥೆ ಹೇಳಿ, "ಮುವ್ವತ್ತು ವರ್ಷಗಳ ನಂತರ ಇದೀಗ ಅವನಿಗೆ ಬಿಡುಗಡೆಯಾಗಿದೆ, ಇನ್ನೇನು ಸತ್ತು ಲತೀಫಾ ಜೊತೆಗೆ ಸೇರಬಹುದಲ್ಲ ಎಂದು ನೀವು ಕೇಳಬಹುದು, ಹೌದು. ಇದೋ ಹೊರಟು ಹೋಗುತ್ತೇನೆ" ಎಂದು ಹೇಳಿದ್ದೇ, ಆ ವೃದ್ಧ ರೈಲಿನ ಕೆಳಗೆ ಬೀಳುತ್ತಾನೆ. ಕಥೆ ಕೇಳುತ್ತಿದ್ದ

ಮಿತ್ರರು ರೈಲು ನಿಲ್ಲಿಸಿ ನೋಡಿದಾಗ, ಮುವ್ವತ್ತು ವರ್ಷಗಳಿಂದ ದಾರಿ ಕಾಯುತ್ತಿದ್ದ ಲತೀಫಾಳೆಡೆಗೆ ಅವನು ಹೋಗಿಯೇ ಬಿಟ್ಟಿರುತ್ತಾನೆ. ಕಥೆ ಹೇಳುವ ವೃದ್ಧ ಯಾವಾಗಲೋ ಸತ್ತು ದೆವ್ವ ಆದವನಿರಬಹುದು, ಅಥವಾ ಲತೀಫಾನ ಕಡೆಯವನಿರಬಹುದು ಎಂದುಕೊಂಡವರಿಗೆ, ಕಥೆಯ ಅಂತ್ಯ ಅನಿರೀಕ್ಷಿತ ಮಾತ್ರವಲ್ಲ, ಅಚ್ಚರಿದಾಯಕವೂ ಹೌದು.

ಗೌರಮ್ಮನವರು ಖ್ಯಾತಿ ಗಳಿಸಿದ್ದು, ಸಾಹಿತ್ಯ ಸೇವೆಯಿಂದ ಮಾತ್ರವಲ್ಲ; ಭಾರತದ ದಾಸ್ಯ, ದಾಸ್ಯದಿಂದಾಗಿ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಆಗುತ್ತಿದ್ದ ಆಭಾಸಗಳ ಅರಿವು ಹೊಂದಿದ್ದು, ದೇಶದ ಸ್ವಾತಂತ್ರ್ಯಕ್ಕಾಗಿ ಚಳವಳಿಗಳಲ್ಲಿ ಪಾಲುಗೊಳ್ಳುತ್ತಿದ್ದ ಇತರ ಕೆಲವು ಮಹಿಳೆಯರಂತೆ, ತಾನೂ ಏನಾದರೂ ಮಾಡಬೇಕೆಂಬ ಹುಮ್ಮಸ್ಸಿನಲ್ಲಿ ದೇಶಭಕ್ತಿಯನ್ನು ಮೆರೆದುದಕ್ಕಾಗಿಯೂ ಹೆಸರು ಗಳಿಸಿದರು. ಮಹಾತ್ಮಾ ಗಾಂಧೀಜಿಯವರು, ಹರಿಜನ ಕಲ್ಯಾಣಕ್ಕಾಗಿ ನಿಧಿ ಸಂಗ್ರಹಿಸಲು ಪ್ರವಾಸ ಕೈಗೊಂಡ ಸಮುಯದಲ್ಲಿ ಮಡಿಕೇರಿಗೆ ಬಂದಿದ್ದರು. ಗೌರಮ್ಮನವರ ಬಲವಂತದ ಆಹ್ವಾನಕ್ಕೆ ಮಣಿದು, ಹರಿಜನ ನಿಧಿಗೆ ಗೌರಮ್ಮನವರಿಂದ ಚಿನ್ನದ ಒಡವೆಗಳು ಸಿಗುತ್ತವೆ ಎಂಬ ಕಾರಣಕ್ಕಾಗಿ ಗಾಂಧೀಜಿ, ಅವರ ಮನೆಗೂ ಹೋದರು. ಗೌರಮ್ಮನವರು ತಾವು ಗಾಂಧೀಜಿಗೆ ನೀಡಿದ ಭಾಷೆಯಂತೆ, ತನ್ನ ಚಿನ್ನದ ಬಳೆ, ಓಲೆ ಇತ್ಯಾದಿ ಒಡವೆಗಳನ್ನು ಅವರಿಗೆ ದಾನ ಮಾಡಿದ್ದಲ್ಲದೆ, ಮುಂದೆ ಬೇರೆ ಒಡವೆಗಳನ್ನು ಮಾಡಿಸಿಕೊಡುವಂತೆ ತಮ್ಮ ಗಂಡನಿಗೆ ಎಂದೂ ಕೇಳಲಿಲ್ಲ. ಒಡವೆಯ ಬಗ್ಗೆ ಮಾತ್ರವಲ್ಲ, ಬಣ್ಣದ ಬಟ್ಟೆಗಳ ಬಗ್ಗೆಯೂ ಆಸೆಪಡದೆ, ಖಾದಿ ವಸ್ತ್ರವನ್ನೇ ಅವರು ತೊಡುತ್ತಿದ್ದರು. ಗೌರಮ್ಮನವರನ್ನು ನೋಡಿದವರೆಲ್ಲರೂ ಅವರನ್ನು ನೆನಪಿಸಿಕೊಳ್ಳುವುದು ಈ ಗೌರವಸ್ತ್ರದಲ್ಲಿಯೇ.

"ಗೌರಮ್ಮನವರ ಸಾಹಿತ್ಯದ ಜೀವನ ಆರೆಂಟು ವರ್ಷಗಳ ಅವಧಿಯದು. ಈ ಅಲ್ಪ ಕಾಲದಲ್ಲಿ ಅವರು ತಮ್ಮ ಕತೆಗಾರಿಕೆಯ ಸಿದ್ಧಿಯನ್ನು ಕಂಡುಕೊಂಡರು. .. .. .. ಗೌರಮ್ಮ ಹೊರಟುಹೋದರು. ಆದರೆ ಕನ್ನಡ ಕಥಾ ಸಾಹಿತ್ಯದ ಚರಿತ್ರೆಯಲ್ಲಿ ಅವರ ಹೆಸರು ಚಿರಕಾಲ ಉಳಿಯುವುದು. ಕನ್ನಡ ಕತೆಗಾರ್ತಿಯರಲ್ಲಿ ಮೊದಲಿಗರೆಂಬ ಅಭಿಮಾನದ ಅಭಿದಾನ ಗೌರಮ್ಮನವರಿಗೇ ಮೀಸಲು" ಎಂಬ ಭಾರತೀಸುತರ ಅಭಿಪ್ರಾಯ; ಹಾಗೂ "ಗೌರಮ್ಮನವರು ಬದುಕಿದ್ದರೆ ಅವರ ಲೇಖನಿಯಿಂದ ಇನ್ನದೆಷ್ಟು ಕೃತಿಗಳು ಹೊರಮೂಡುತ್ತಿದ್ದವೋ ಹೇಳಬಲ್ಲವರಾರು? ಅವರ ಈ ಸಾಹಿತ್ಯ ಸೇವೆಯು ಮುಂದುವರಿದಿದ್ದರೆ ಮುಂದೆ ಅವರು ಸಾಹಿತ್ಯ ಸಮ್ಮೇಳನದ ಪೀಠದಲ್ಲಿ ಕೂಡಬಹುದಾದ ಸಮಯವೂ ಬಂದೇ ಬರುತ್ತಿತ್ತೆಂದು ಧೈರ್ಯವಾಗಿ ಹೇಳಬಲ್ಲೆವು" ಎಂದು "ಗೌರಮ್ಮನವರ ಕಥೆಗಳು"– – ಪುಸ್ತಕವನ್ನು ಸಂಪಾದಿಸಿ ಪ್ರಕಟಿಸಿದ ಸಿ.ಎಂ.ರಾಮರಾವ್, ಅವರು ಹೇಳಿರುವ ಮಾತುಗಳು ಖಂಡಿತ ನಿಜವೆನಿಸುತ್ತವೆ.

ಅದ್ಭುತ ಸಾಹಿತ್ಯ ಸೇವೆ ಸಲ್ಲಿಸಬಹುದಾದ ಸಾಮರ್ಥ್ಯವಿದ್ದ ಹುಡುಗಿ, ತಮ್ಮ ಇಪ್ಪತ್ತೇಳನೇ ಹುಡುಗು ವಯಸ್ಸಿನಲ್ಲೇ ಮನೆಯ ಹಿಂದಿನ ಹೊಳೆಯಲ್ಲಿ ಈಜುವಾಗ ಸುಳಿಗೆ ಸಿಕ್ಕು ಹೋಗಿಯೇಬಿಟ್ಟಳು. ಸಾಹಿತ್ಯದ ಮೊದಲ ಮೆಟ್ಟಿಲ ಮೇಲೆ ಇಟ್ಟ ಒಂದು ಹೆಜ್ಜೆಯೊಂದಿಗೆ, ಇನ್ನೊಂದು ಹೆಜ್ಜೆ ಇಡುವುದರೊಳಗೆ, ಸಾವು ಅವರನ್ನು ಸೆಳೆದೊಯ್ದಿತ್ತು. ಆದರೆ ಆ ಒಂದೇ ಹೆಜ್ಜೆ ಊರಿದ್ದು ಮಾತ್ರ ಮಾಸದ ಮರೆಯದ ಮಹತ್ತರದ ಗುರುತು. 1939ರ ಮಾರ್ಚ್ ಹದಿನಾಲ್ಕು ಗೌರಮ್ಮನವರು ಮರಣಿಸಿದ ದಿನ.

———— * ————

ಶಿಕ್ಷಕ ಬಂಧು ಪದ್ಮಾವತಿ ವಿಠಲರಾವ್

ಕೆ.ಶಾಶ್ವತೀ

ಬಾಲ್ಯದಲ್ಲೇ ವಿದ್ಯಾಭ್ಯಾಸದ ಆಸಕ್ತಿ

ಶ್ರೀಮತಿ ಪದ್ಮಾವತಿ ವಿಠಲರಾವ್‌ರವರು 2-6-1912ರಂದು ಮಂಗಳೂರಿನ ಉಡುಪಿಯ ಶ್ರೀಮತಿ ತಂಗಮ್ಮ ದೇವರಾವ್ ದಂಪತಿಗಳಿಗೆ ನಾಲ್ಕನೆಯ ಸುಪುತ್ರಿಯಾಗಿ ಜನಿಸಿದರು. ಇವರ ತಂದೆ ದೇವರಾವ್‌ರವರು ಕವಿ ಮುದ್ದಣ್ಣನ ಸಹಪಾಠಿ. ಬಾಲ್ಯದಿಂದಲೇ ಪದ್ಮಾವತಿಯವರಿಗೆ ಓದಿನಲ್ಲಿ ತುಂಬಾ ಆಸಕ್ತಿ. ಸಾಂಪ್ರದಾಯಿಕ ಮನೆತನದಲ್ಲಿ ಜನಿಸಿದ ಪದ್ಮಾವತಿ ವಿಠಲರಾವ್‌ರವರ ಮನೆಯ ಆರ್ಥಿಕ ಪರಿಸ್ಥಿತಿ ಅಷ್ಟೊಂದು ಉತ್ತಮವಾಗಿರಲಿಲ್ಲ. ಇದಕ್ಕಾಗಿ ಅವರು ತಮ್ಮ ವ್ಯಾಸಂಗವನ್ನು ಮೂರನೆಯ ತರಗತಿಗೆ ಮೊಟಕುಗೊಳಿಸಿದರು. ಆ ವಯಸ್ಸಿನಲ್ಲಿ ಪದ್ಮಾವತಿಯವರ ಸಹೋದರ ಎನ್.ಡಿ. ಕೃಷ್ಣರಾವ್‌ರವರು ವ್ಯಾಸಂಗ ಮಾಡುತ್ತಿದ್ದು, ಅವರ ಪಠ್ಯಪುಸ್ತಕಗಳನ್ನೇ ಅಭ್ಯಸಿಸಿ ತಮ್ಮ ಜ್ಞಾನದಾಹವನ್ನು ತೀರಿಸಿಕೊಳ್ಳಲು ಮುಂದಾದರು. ಇಷ್ಟಾದರೂ ಬಾಲಕಿ ಪದ್ಮಾವತಿಯವರು ತಮ್ಮ ಪಾಲಿನ ಯಾವುದೇ ಮನೆಕೆಲಸಗಳನ್ನು ಬೇರೆಯವರಿಗೆ ವಹಿಸುತ್ತಿರಲಿಲ್ಲ. ಆಗ ಅವರ ಮನೆಯಲ್ಲಿ ವಿದ್ಯುತ್ ಸಂಪರ್ಕವಿರಲಿಲ್ಲ. ಸಣ್ಣ ಕಂದೀಲಿನ ಬೆಳಕಿನಲ್ಲಿ ಅವರು ವ್ಯಾಸಂಗ ಮಾಡಬೇಕಾಗಿತ್ತು.

ತಮ್ಮ ಹದಿನೇಳನೆಯ ವಯಸ್ಸಿನಲ್ಲಿ ಅಂದರೆ 1929ರಲ್ಲಿ ಪದ್ಮಾವತಿಯವರಿಗೆ ಬೆಳ್ಳೆ ವಿಠಲರಾವ್ ಅವರೊಡನೆ ವಿವಾಹವಾಯಿತು. ಆ ನಂತರ ಅವರು 'ಪದ್ಮಾವತಿ ವಿಠಲರಾವ್' ಎಂದೇ ಖ್ಯಾತರಾದರು. ಅವರ ಪತಿ ಆ ಕಾಲದಲ್ಲೇ ಪದವೀಧರರಾಗಿದ್ದು, ಇಂಡಿಯನ್ ಬ್ಯಾಂಕ್‌ನ ಹಿರಿಯ ನೌಕರರಾಗಿದ್ದರು. ಅವರು ಪದ್ಮಾವತಿ ವಿಠಲರಾವ್‌ರವರ ವ್ಯಾಸಂಗಾಸಕ್ತಿಯನ್ನು ಗಮನಿಸಿ ಮುಂದೆ ವಿದ್ಯಾಭ್ಯಾಸ ಮುಂದುವರೆಸುವಂತೆ ಪ್ರೋತ್ಸಾಹಿಸಿದರು. ಅಂದಿನ ದಿನಗಳಲ್ಲಿ ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡುವುದೇ ವಿಶೇಷ ಸಂಗತಿಯಾಗಿತ್ತು. ಅದರಲ್ಲೂ ಮದುವೆಯಾದ ಹೆಂಗಸೊಬ್ಬಳು ವಿದ್ಯಾಭ್ಯಾಸ ಮುಂದುವರೆಸುವುದು ಅತ್ಯಾಶ್ಚರ್ಯಕರ ಸಂಗತಿಯಾಗಿತ್ತು.

ಅಂದು ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ ಕನ್ನಡದ ಭಾಗವಾಗಿತ್ತು. ಮದ್ರಾಸ್‌ನ ಅಂದಿನ ಮುಖ್ಯಮಂತ್ರಿಗಳಾಗಿದ್ದ ಸಿ. ರಾಜಗೋಪಾಲಚಾರಿಯವರು ಹೆಣ್ಣುಮಕ್ಕಳು ಸಾಂಪ್ರದಾಯಿಕ ಶಾಲೆಗೆ ಹೋಗದೆ ಮನೆಯಲ್ಲೇ ಕುಳಿತು ವಿದ್ಯಾಭ್ಯಾಸ ಮುಂದುವರೆಸುವ ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದರು.

1930ರಿಂದ 1936ರ ಅವಧಿಯಲ್ಲಿ ಪದ್ಮಾವತಿ ವಿಠಲರಾವ್‌ರವರು ಉಡುಪಿಯ ಮನೆಯಲ್ಲಿದ್ದುಕೊಂಡೇ ವ್ಯಾಸಂಗ ಮುಂದುವರೆಸಿ ಎಸ್.ಎಸ್.ಎಲ್.ಸಿ., ಇಂಟರ್‌ಮೀಡಿಯಟ್, ಬ್ಯಾಚುಲರ್ ಆಫ್ ಓರಿಯಂಟಲ್ ಲಾಂಗ್ವೇಜಸ್ ಮೊದಲಾದ ಪದವಿಗಳನ್ನು ಪಡೆದರು. ಆಗವರ ಮೊದಲ ಮಗನಿಗೆ ಎರಡು ವರ್ಷ. ಮೂರು ಮಕ್ಕಳ ತಾಯಿಯಾಗಿದ್ದುಕೊಂಡು, ಗೃಹಿಣಿಯಾಗಿ ಮನೆಕಲಸಗಳನ್ನು ನಿರ್ವಹಿಸುತ್ತಾ ಅವರು ವ್ಯಾಸಂಗ ಮುಂದುವರಿಸಿದರು. 1938ರಲ್ಲಿ ಹಿಂದಿ ವಿದ್ವತ್ತನ್ನೂ ಸಹ ಪಡೆದರು.

ತೃಪ್ತಿ ಕೊಟ್ಟ ಶಿಕ್ಷಕ ವೃತ್ತಿ

ಶ್ರೀಮತಿ ಪದ್ಮಾವತಿ ವಿಠಲಾರಾವ್ ಅವರು ಇಪ್ಪತ್ತಾರನೆಯ ವಯಸ್ಸಿನಲ್ಲಿ ಹಿಂದಿ ಪಂಡಿತರಾಗಿ ಸರ್ಕಾರಿ ಪ್ರೌಢಶಾಲೆಯಲ್ಲಿ ವೃತ್ತಿಜೀವನವನ್ನು ಪ್ರಾರಂಭ ಮಾಡಿದರು.

1942ರಲ್ಲಿ ಕನ್ನಡ ವಿದ್ವತ್ ಹಾಗೂ ಕನ್ನಡ ಎಂ.ಎ., ಪದವಿಗಳನ್ನು ಪಡೆದರು. ಎರಡನೆಯ ಮಹಾಯುದ್ಧ ಪ್ರಾರಂಭವಾಗಿದ್ದ ಆ ಕಾಲದಲ್ಲಿ ಮದ್ರಾಸ್ ಮೇಲೆ ಬಾಂಬ್ ಬೀಳುವುದಾಗಿ ಜನ ಹೆದರಿದ್ದು, ಯಾರೂ ಅಲ್ಲಿಗೆ ಹೋಗಲು ಧೈರ್ಯ ಮಾಡುತ್ತಿರಲಿಲ್ಲ. ಅಂತಹ ಸಮಯದಲ್ಲಿ ಪದ್ಮಾವತಿ ವಿಠಲರಾವ್‌ರವರು ಧೈರ್ಯ ಮತ್ತು ದೃಢಚಿತ್ತದಿಂದ ಮದ್ರಾಸ್‌ಗೆ ಹೋಗಿ ಅಲ್ಲಿನ 'ಲೇಡಿ ವಿಲ್ಲಿಂಗ್ಡನ್ ಕಾಲೇಜಿ'ನಲ್ಲಿ 'ಲರ್ನರ್ಸ್ ಟ್ರೈನಿಂಗ್' (ಎಲ್.ಟಿ.) ಪಡೆದರು. ಅಧ್ಯಾಪಕರ ಪಾಠಗಳನ್ನು ಕೇಳುತ್ತಾ, ತಮ್ಮ ಅಧ್ಯಯನವನ್ನು ಸಮರ್ಥವಾಗಿ ಮುಂದುವರಿಸಿದರು.

1944ರಲ್ಲಿ ಕೊಯಮತ್ತೂರಿನ ಶಾಲೆಯಲ್ಲಿ ಸ್ವಲ್ಪ ದಿವಸಗಳ ಕಾಲ ಕೆಲಸ ಮಾಡಿ ಉಡುಪಿಯ ಹೈಯರ್ ಟ್ರೈನಿಂಗ್ ಸ್ಕೂಲ್‌ಗೆ ವರ್ಗಾವಣೆಯಾಗಿ ಬಂದರು. ಅಲ್ಲಿನ ವಿದ್ಯಾರ್ಥಿಗಳಿಗೆ ತಮ್ಮ ಹಿರಿಯ ವಿದ್ಯಾರ್ಥಿಗಳ ನೋಟ್ಸ್ ಕಾಪಿ ಮಾಡಿ ಅದನ್ನು ಪರೀಕ್ಷೆಯಲ್ಲಿ ಬರೆಯುವ ಅಭ್ಯಾಸವಿತ್ತು. ಅದನ್ನು ಬದಲಾಯಿಸಿ ಪದ್ಮಾವತಿ ವಿಠಲರಾವ್‌ರವರು ತಮ್ಮ ಸ್ವಂತ ಬುದ್ಧಿಶಕ್ತಿಯಿಂದ ವಿದ್ಯಾರ್ಥಿಗಳು ಹೇಗೆ ಅಭ್ಯಾಸ ಮಾಡಬೇಕೆಂಬುದನ್ನು ತಿಳಿಸಿಕೊಟ್ಟರು. ವಿದ್ಯಾರ್ಥಿಗಳಲ್ಲಿ 'ಗುಂಪುವ್ಯಾಸಂಗ'ಕ್ಕೆ ಪ್ರೋತ್ಸಾಹ ಕೊಟ್ಟು ವಿದ್ಯಾರ್ಥಿಗಳು ಓದಿನತ್ತ ಆಕರ್ಷಣೆ ಪಡೆಯುವಂತಾಯಿತು. ಪ್ರತಿ ವಿದ್ಯಾರ್ಥಿಗೆ, ನೂರು ಬೇರೆ ಬೇರೆ ಲೇಖಕರ ಹೆಸರನ್ನು ನೀಡಿ ಅವುಗಳಲ್ಲಿ ಒಂದನ್ನಾದರೂ ಓದಿ ವಿದ್ಯಾರ್ಥಿಗಳು ಸಹಜವಾಗಿ ಕಲಿಕೆಯನ್ನು ಹೆಚ್ಚುಹೆಚ್ಚು ಪ್ರೀತಿಸತೊಡಗಿದರು. ಈ ಪ್ರಯೋಗ ಅಂದಿನ ಎಲ್ಲಾ ವಿದ್ಯಾರ್ಥಿ–ಶಿಕ್ಷಕರಿಗೆ ಹಾಗೂ ಶಾಲಾ ಇನ್ಸ್‌ಪೆಕ್ಟರ್‌ಗಳಿಗೆ ಪ್ರಿಯವಾಯಿತು.

ಅಸಾಧಾರಣ ಧೈರ್ಯಶಾಲಿ

ಬಾಲ್ಯದಿಂದಲೇ ಗಾಂಧೀಜಿಯವರ ಅನುಯಾಯಿಯಾಗಿದ್ದ ಶ್ರೀಮತಿ ವಿಠಲರಾವ್ 1944ರಲ್ಲಿ ತಮ್ಮ ಬಂಧು ಮಿತ್ರರ ತೀವ್ರ ವಿರೋಧದ ನಡುವೆ ಸೈನ್ಯದ ಮುಖ್ಯಸ್ಥ ಹುದ್ದೆಗೆ ಅರ್ಜಿ ಸಲ್ಲಿಸಿದರು. ಆ ಸಂದರ್ಭದಲ್ಲಿ ಅವರನ್ನು ಸಂದರ್ಶನ ಮಾಡಿದ ಸೈನ್ಯಾಧಿಕಾರಿ ಅವರ ಬುದ್ಧಿಮತ್ತೆಯನ್ನು ಮೆಚ್ಚಿ ಮದ್ರಾಸ್‌ನ 'ಸಿವಿಲಿಯನ್ ಸ್ಕೂಲ್‌ನ ಮುಖ್ಯಸ್ಥೆ'ರನ್ನಾಗಿ ನೇಮಕ ಮಾಡಿದರು. ಅಲ್ಲಿ ಅವರು ಅನೇಕ ಹೊಸ ಸವಾಲುಗಳನ್ನು ಎದುರಿಸಬೇಕಾಯಿತು. ಎರಡನೆಯ ಮಹಾಯುದ್ಧ ಹಾಗೂ ಭಾರತ ಸ್ವಾತಂತ್ರ್ಯದ ರಾಷ್ಟ್ರೀಯ ಆಂದೋಲನದಿಂದಾಗಿ ದೇಶದ ಸ್ತ್ರೀಯರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅವರಿಗೆ ಅನುಕೂಲವಾಗುವಂತೆ 'ರೀಸೆಟಲ್‌ಮೆಂಟ್ ಯೋಜನೆ'ಗಳನ್ನು ಜಾರಿಗೆ ತಂದರು. ಸಮಾಜದಲ್ಲಿ ಸ್ತ್ರೀಯರಿಗೆ ಮನ್ನಣೆ ದೊರೆಯಬೇಕೆಂಬುದು ಅವರ ಮುಖ್ಯ ಉದ್ದೇಶವಾಗಿತ್ತು.

ಹೊಸ ಸವಾಲು

1946ರಲ್ಲಿ ಬೆಂಗಳೂರಿಗೆ ಬಂದು ಕಾರ್ಪೊರೇಷನ್‌ನ ಉರ್ದು ಶಾಲೆಯೊಂದರ ಶಿಕ್ಷಕಿಯಾಗಿ ತಮ್ಮ ಕಾರ್ಯವನ್ನಾರಂಭಿಸಿದರು. ಆಗ ಅವರಿಗೆ ಉರ್ದು ಕಲಿಯಲು ಆರು ತಿಂಗಳ ಗಡುವು ನೀಡಲಾಯಿತು. ಕೆಲಸಕ್ಕೆ ಸೇರಿದ ಒಂದೇ ತಿಂಗಳಲ್ಲಿ ಕಾರ್ಪೊರೇಷನ್‌ನ ಹಿರಿಯ ಅಧಿಕಾರಿಗಳಿಗೆ 'ತಾವು ಉರ್ದು ಕಲಿತಿರುವುದಾಗಿ, ನನಗೆ ಹಿರಿಯ ಉರ್ದು ವಿದ್ವಾಂಸರಿಂದ ಪರೀಕ್ಷೆ ನಡೆಸುವಂತೆ' ಕೋರಿದರು. ಆಗ ಪರೀಕ್ಷೆ ಏರ್ಪಾಡಾಯಿತು. ಆ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಅಷ್ಟೇ ಅಲ್ಲ, ಅವರ ದಿಟ್ಟತನ, ಚುರುಕುತನ ಹಾಗೂ ಉರ್ದು ಭಾಷೆಯಲ್ಲಿ ಅವರಿಗಿರುವ ಸಾಮರ್ಥ್ಯವನ್ನು ಕಂಡು ಉರ್ದು ವಿದ್ವಾಂಸರು ಪದ್ಮಾವತಿ ವಿಠಲರಾವ್‌ರವರ ಸಾಹಸವನ್ನು ಪ್ರಶಂಸಿಸಿ

ಬೆಂಗಳೂರು ಕಾರ್ಪೊರೇಷನ್‌ನ ಆಯುಕ್ತರಿಗೆ ಪತ್ರ ಕೂಡ ಬರೆದರು. ಇಷ್ಟೇ ಅಲ್ಲ, ಉರ್ದು ಭಾಷೆಯ ಸೊಗಸನ್ನು ಚೆನ್ನಾಗಿ ಅರಿಯಲು ಅವರು 'ಅರೇಬಿಕ್ ಹಾಗೂ ಪರ್ಶಿಯನ್ ಭಾಷೆ'ಗಳ ಅಧ್ಯಯನವನ್ನು ಮುಂದುವರೆಸಿದರು.

ಬೆಂಗಳೂರು ನಗರಸಭೆ ಶಾಲೆಗಳ ಮುಖ್ಯಸ್ಥೆಯಾಗಿಯೂ ಕರ್ತವ್ಯ ನಿರ್ವಹಿಸಿರುವ ಶ್ರೀಮತಿ ಪದ್ಮಾವತಿ ವಿಠಲರಾವ್‌ರವರು ತಮ್ಮ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು, ಜನಪ್ರತಿನಿಧಿಗಳು ಹಾಗೂ ಕಾರ್ಪೊರೇಷನ್‌ನ ಆಡಳಿತ ವರ್ಗದ ಸಹಾಯದಿಂದ ಕಾರ್ಪೊರೇಷನ್ ಶಾಲೆಗಳು ಕಾನ್ವೆಂಟ್ ಶಾಲೆಗಳಿಗಿಂತ ಹೆಚ್ಚೆಂಬಂತೆ ಅಭಿವೃದ್ಧಿಗೊಳಿಸಿದರು.

'ಆರ್ಟ್ ಆಫ್ ಸಕ್ಸಸ್', 'ಪೇರೆಂಟ್ಸ್ ಅಂಡ್ ಟೀಚರ್ಸ್ ಅಸೋಸಿಯೇಷನ್' ಹಾಗೂ 'ಸ್ಟಾರ್ ಆಫ್ ಲೈಫ್' ಎಂಬ ಅನೇಕ ಹೊಸ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು. ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಒಂದೆಡೆ ಸೇರಿ ಮುಂದಿನ ಭವಿಷ್ಯದತ್ತ ಚಿಂತಿಸುವಂತೆ ಮಾಡುವುದು ಈ ಕಾರ್ಯಕ್ರಮಗಳ ಉದ್ದೇಶವಾಗಿತ್ತು. ಸತ್ಯ, ಪ್ರಾಮಾಣಿಕತೆ, ಪ್ರೀತಿ, ಸ್ನೇಹ, ನಿರ್ಭಯತೆ, ಮೃದುತ್ವ, ಸ್ಫಟಿಕತೆ, ಕರುಣೆ ಹಾಗೂ ದುಡಿಮೆ ಇವು ವ್ಯಕ್ತಿಯಲ್ಲಿ ಪುರೋಭಿವೃದ್ಧಿಗೊಳ್ಳುವಂತೆ ಮಾಡುವುದೇ ನಿಜವಾದ ಶಿಕ್ಷಣವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಅದು ಅವರ ಸ್ವಂತ ಅನುಭವವೂ ಆಗಿತ್ತು. ಈ ಸಿದ್ಧಾಂತದ ಅನುಷ್ಠಾನಕ್ಕೆ ವಿವಿಧ ಮಾರ್ಗಗಳನ್ನು ಅವರು ಕಂಡುಕೊಂಡಿದ್ದರು.

ವಿದ್ಯಾರ್ಥಿ, ಶಿಕ್ಷಕರು, ಪೋಷಕರಿಗೆ ಒಂದು ವರ್ಷದ ಶೈಕ್ಷಣಿಕ ಅವಧಿಯಲ್ಲಿ ಆ ಶಾಲೆಯಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳ ಬಗ್ಗೆ ಮೊದಲೇ ಮಾಹಿತಿ ದೊರೆಯುವಂತೆ ಮಾಡಿದ್ದರು. ಅಂದರೆ, 'ಕ್ಯಾಲೆಂಡರ್ ಆಫ್ ಈವೆಂಟ್ಸ್' ಎಂದು ಈಗ ಪ್ರಸಿದ್ಧವಾಗಿರುವ ಶೈಕ್ಷಣಿಕ ಕಾರ್ಯಕ್ರಮ ಆ ಕಾಲದಲ್ಲಿ ಅಚ್ಚುಕಟ್ಟಾಗಿ ಜಾರಿಗೆ ತಂದ ಕೀರ್ತಿ ಇವರದು. ರಜೆ, ಪರೀಕ್ಷೆ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ, ಹಳೆಯ ವಿದ್ಯಾರ್ಥಿಗಳ ಸಮಾವೇಶ, ಪೋಷಕರ ಮತ್ತು ಶಿಕ್ಷಕರ ಸಂವಾದ, ಪಾಠ ಪ್ರವಚನಗಳು ಮೊದಲಾದ ಎಲ್ಲಾ ಶೈಕ್ಷಣಿಕ ವಿಚಾರಗಳನ್ನು ಮೊದಲೇ ಯೋಜಿಸಿ ಮುದ್ರಿಸಿ ಆಯಾ ಶಾಲೆಗೆ ತಲುಪಿಸುತ್ತಿದ್ದರು. ಕಷ್ಟಪಟ್ಟು ಅವುಗಳನ್ನು ಅನುಷ್ಠಾನ ಮಾಡುವಂತೆ ಶಾಲೆಗಳ ಮೇಲೆ ಒತ್ತಾಯ ಹಾಕುತ್ತಿದ್ದರು. ಶಾಲೆಗಳಲ್ಲಿ ಏನಾದರೂ ಸಮಸ್ಯೆಗಳಿದ್ದರೆ, ಅವರೇ ಸ್ವತಃ ಹೋಗಿ ಅದಕ್ಕೆ ಪರಿಹಾರ ಕೊಡುತ್ತಿದ್ದರು. ವಿಭಾಗ ಮಟ್ಟದ ವ್ಯಾಪ್ತಿಯ ಶಾಲೆಗಳ ಅಧ್ಯಾಪಕರ ಸಂವಾದ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಮೊದಮೊದಲಿಗೆ ಇವರ ಕಾರ್ಯಕ್ರಮದ ಬಗ್ಗೆ ಅಸಡ್ಡೆಯಿಂದಿದ್ದ ಕಾನ್ವೆಂಟ್‌ಗಳು ಕೂಡ ಇವರತ್ತ ಕುತೂಹಲದಿಂದ ನೋಡತೊಡಗಿದವು. ಇದರ ಜೊತೆಗೆ ಇವರ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಅಲ್ಲಿನ ಅಧ್ಯಾಪಕರು ಭಾಗವಹಿಸಿ, ಹೆಚ್ಚಿನ ಪ್ರಯೋಜನ ಪಡೆದರು. ಅಷ್ಟೇ ಅಲ್ಲ, ಇವರ ಸಕಾರಾತ್ಮಕ ಶೈಕ್ಷಣಿಕ ಯೋಜನೆಗಳಿಗೆ ಕಾನ್ವೆಂಟಿನ ಆಡಳಿತ ಮಂಡಳಿಯೂ ಕೂಡ ಸ್ಪಂದಿಸಿ ತಮ್ಮ ಶಾಲೆಗಳಿಗೆ ಅಗತ್ಯ ಪರಿಕರಗಳನ್ನು ಒದಗಿಸಿಕೊಟ್ಟವು.

ಬೆಂಗಳೂರಿನ 'ಟಸ್ಕರ್ ಟೌನ್ ಹೈಸ್ಕೂಲ್'ನಲ್ಲಿ ರೌಡಿಗಳ ಕಾಟವಿತ್ತು. ಅದರಿಂದಾಗಿ ಶಾಲೆಯನ್ನು ಅನುಪಯುಕ್ತ ಕಾರ್ಯಗಳಿಗಾಗಿ ಕೆಲವು ದುಷ್ಟಶಕ್ತಿಗಳು ಬಳಸಿಕೊಳ್ಳುತ್ತಿದ್ದವು. ಯಾರಾದರೂ ಅಡ್ಡಿಪಡಿಸಿದರೆ ಗೂಂಡಾಗಿರಿಯಿಂದ ಅವರನ್ನು ಸುಮ್ಮನಾಗಿಸುತ್ತಿದ್ದರು. ಆದರೆ, ಪದ್ಮಾವತಿ ವಿಠಲರಾವ್ ತಾವೇ ಆ ಶಾಲೆಗೆ ಹೋಗಿ ಮೊದಲ ದಿನವೇ ಕೊಠಡಿಗಳಿಗೆ ಬೀಗ ಜಡಿದು, ಶಾಲೆಯ ಗೇಟ್ ಮುಂದೆ ದೊಡ್ಡ ದೊಣ್ಣೆ ಹಿಡಿದು ಕುಳಿತುಕೊಂಡರು. ಅವರ ಧೈರ್ಯ ಕಂಡು ದುಷ್ಟಶಕ್ತಿಗಳು ಹೆದರಿದವು. ಯಾವ ರೌಡಿಯೂ ಅಂದಿನಿಂದ ಶಾಲೆಯ ಹತ್ತಿರ ಸುಳಿದಾಡಲಿಲ್ಲ. ಒಂದೇ ವಾರದಲ್ಲಿ ಆ ಶಾಲೆಯಲ್ಲಿ ಉತ್ತಮ ಶೈಕ್ಷಣಿಕ ಪರಿಸರ ಅರಳಿತು. ಪಾಠಪ್ರವಚನಗಳು ಚೆನ್ನಾಗಿ ನಡೆದು ವಿದ್ಯಾರ್ಥಿಗಳು ಅದರ ಪ್ರಯೋಜನ ಪಡೆದರು.

1960ರಲ್ಲಿ ಅವರ ಮಗ ಅಧಿಕೃತ ಕಾರ್ಯವೊಂದರ ಮೇಲೆ ಇಂಗ್ಲೆಂಡ್ ದೇಶಕ್ಕೆ ಪ್ರಯಾಣ ಬೆಳೆಸಿದರು. ಅವರ ತಾಯಿಯನ್ನು ತಮ್ಮ ಜೊತೆ ಬರುವಂತೆ ಒತ್ತಾಯಿಸಿದರು. 'ನಾನು ಅಲ್ಲಿಗೆ ಬರಬೇಕೆಂಬ ಇಚ್ಛೆ ನಿನಗಿದ್ದರೆ,

ಅಲ್ಲಿನ ಟೀಚರ್ಸ್ ಕಾಲೇಜಿನಲ್ಲಿ ನನಗೊಂದು ಸೀಟ್ ಕೊಡಿಸು' ಎಂದು ಮಗನಿಗೆ ಹೇಳಿದರು. ನಲವತ್ತೆಂಟರ ಹರೆಯದಲ್ಲೂ ಅವರ ಜ್ಞಾನದಾಹ ಕೊನೆಗೊಂಡಿರಲಿಲ್ಲ. ಅವರು ಅಲ್ಲಿನ 'ಡುಹ್ರಂ ವಿಶ್ವವಿದ್ಯಾಲಯ'ದಲ್ಲಿ (Univiersity of Duhrun) 'ಡಿಪ್ಲೊಮಾ ಇನ್ ಎಜುಕೇಷನ್'ಎಂಬ ಪದವಿ ಪಡೆದರು. ಆ ಕಾಲದಲ್ಲಿ ಅವರು ವಿಶೇಷವಾಗಿ ಅಭ್ಯಸಿಸಿದ ವಿಷಯ 'ಕಂಪ್ಯಾರಿಸನ್ ಬಿಟ್ವೀನ್ ಬ್ರಿಟಿಷ್ ಅಂಡ್ ಇಂಡಿಯನ್ ಎಜುಕೇಷನ್ ಸಿಸ್ಟಂ'. ಮುಖ್ಯವಾಗಿ ಬ್ರಿಟಿಷ್ ಶೈಕ್ಷಣಿಕ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳೇ ಇಲ್ಲ. ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂವಾದವೇ ಅವರ ಶೈಕ್ಷಣಿಕ ಪದ್ಧತಿಯ ಮೂಲಾಂಶ. ಅಲ್ಲಿ ವಿದ್ಯಾರ್ಥಿಗಳ ಸ್ವಂತ ಯೋಚನೆಗಳು, ಪ್ರಯೋಗಾತ್ಮಕ ಪರೀಕ್ಷೆ, ಬುದ್ಧಿವಂತಿಕೆ, ಕೃತಿಗಳು, ವಿದ್ಯಾರ್ಥಿಗಳ ಶೈಕ್ಷಣಿಕ ಅರ್ಹತೆಯನ್ನು ಅಳೆಯುವ ಮಾನದಂಡವಾಗುತ್ತವೆ.

ಪದ್ಮಾವತಿ ವಿಠಲರಾವ್‌ರವರು 'ಡುಹ್ರಂ ವಿಶ್ವವಿದ್ಯಾಲಯ'ದಲ್ಲಿ Indian Teachers Day ಅಂದರೆ 'ಭಾರತದ ಶಿಕ್ಷಕ ದಿನಾಚರಣೆ'ಯಂದು ಅಲ್ಲಿನ ವಿದ್ಯಾರ್ಥಿಗಳಿಗಾಗಿ 'ಎಜುಕೇಷನ್ ಇನ್ ಡೆವಲಪಿಂಗ್ ಕಂಟ್ರಿ' ಎಂಬ ವಿಚಾರದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ಅನಂತರ, ವಿದೇಶ ಪ್ರವಾಸ ಮುಗಿಸಿ ಬೆಂಗಳೂರಿಗೆ ಬಂದು ನೆಲೆಸಿದ ಪದ್ಮಾವತಿ ವಿಠಲರಾವ್‌ರವರು ಅಲ್ಲಿ ಕಲಿತ ಅನೇಕ ಯೋಜನೆಗಳನ್ನು ತಮ್ಮ ಕಾರ್ಪೊರೇಷನ್ ಶಾಲೆಗಳಲ್ಲಿ ಅನುಷ್ಠಾನ ಮಾಡಲು ಮುಂದಾದರು. ಸುಮಾರು 26ವರ್ಷಗಳ ದೀರ್ಘ ಕಾಲ ಪದ್ಮಾವತಿ ವಿಠಲರಾವ್ ಅವರು ಬೆಂಗಳೂರಿನ ಕಾರ್ಪೊರೇಷನ್ ಸ್ಕೂಲುಗಳ ಮೂಲಕ ಕರ್ನಾಟಕ ಶೈಕ್ಷಣಿಕ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ಕೊಟ್ಟಿದ್ದಾರೆ.

ಕರ್ನಾಟಕ ವಿಧಾನ ಪರಿಷತ್ತಿಗೆ ಶಿಕ್ಷಣತಜ್ಞೆಯ ಪ್ರವೇಶ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೇಲ್ಮನೆ ಪ್ರಜ್ಞಾವಂತರ ತಾಣವೆಂದೇ ಖ್ಯಾತವಾಗಿದೆ. ನೇರ ಚುನಾವಣೆಯಲ್ಲಿ ಆಯ್ಕೆಯಾಗಲು ಸಾಧ್ಯವಾಗದ, ಶಿಕ್ಷಣ, ವೈದ್ಯಕೀಯ, ಸಾಹಿತ್ಯ, ಕಲೆ, ಸಂಸ್ಕೃತಿ, ಸಮಾಜಸೇವೆ, ಮೊದಲಾದ ಕ್ಷೇತ್ರದ ಅನುಭವಿಗಳು ಇಲ್ಲಿಗೆ ಬರುತ್ತಾರೆ. ಅವರನ್ನು ಸದುಪಯೋಗಪಡಿಸಿಕೊಳ್ಳುವುದು ಆಯಾಯ ಸರ್ಕಾರದ ಇಚ್ಛಾಶಕ್ತಿಯನ್ನು ಅವಲಂಬಿಸಿರುತ್ತದೆ. ಅಂತಹ ಮೇಧಾವಿಗಳಲ್ಲಿ ಪದ್ಮಾವತಿ ವಿಠಲರಾವ್ ಒಬ್ಬರು.

1972ರಲ್ಲಿ ಅನೇಕ ಹಿತೈಷಿಗಳ ಒತ್ತಾಯದ ಮೇರೆಗೆ ತಮ್ಮ ಶಿಕ್ಷಕ ಹುದ್ದೆಗೆ ರಾಜಿನಾಮೆ ನೀಡಿ ತುಮಕೂರು ಮತ್ತು ಕೋಲಾರ ಶಿಕ್ಷಕ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಸ್ಪರ್ಧಿಸಿ ಬಹುಮತದಿಂದ ಆಯ್ಕೆಯಾದರು. ಮತ್ತೊಂದು ಅವಧಿಗೂ ಅವರ ಸೇವೆಯನ್ನು ಗುರುತಿಸಿ ಶಿಕ್ಷಕರು ವಿಧಾನ ಪರಿಷತ್ತಿಗೆ ಆಯ್ಕೆ ಮಾಡಿದ್ದರು. ಹೀಗೆ ಒಟ್ಟು ಹನ್ನೆರಡು ವರ್ಷಗಳ ಕಾಲ ಅವರು ವಿಧಾನಪರಿಷತ್ ಸದಸ್ಯರಾಗಿದ್ದರು. ಈ ಅವಧಿಯಲ್ಲಿ ಅವರು ಅನೇಕ ಶೈಕ್ಷಣಿಕ ಕೆಲಸಗಳನ್ನು ಮಾಡಿ ಕೀರ್ತಿ ಪಡೆದಿದ್ದಾರೆ. ಮುಖ್ಯವಾಗಿ ಸರ್ಕಾರದಿಂದ ಶಿಕ್ಷಕರ ಅದರಲ್ಲೂ ಖಾಸಗಿ ಕ್ಷೇತ್ರ ಅನುದಾನಿತ ಶಿಕ್ಷಕರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕೊಡಿಸಿದ್ದಾರೆ. ಆ ತನಕ ಅತ್ಯಂತ ಅವಹೇಳನಕ್ಕೆ ಗುರಿಯಾಗಿದ್ದ ಶಿಕ್ಷಕಿಯರಿಗೆ ಮೊದಲ ಬಾರಿಗೆ ದನಿಗೂಡಿಸಿದ ಕೀರ್ತಿ ಅವರದು. ಶಿಕ್ಷಕರ ವೇತನದಲ್ಲಿ ಅನೇಕ ತಾರತಮ್ಯಗಳಿದ್ದವು. ನಿವೃತ್ತಿ ವೇತನ ಪಡೆಯಲು ಎಲ್ಲಾ ಶಿಕ್ಷಕರೂ ಅರ್ಹರಾಗಿರಲಿಲ್ಲ. ಶಿಕ್ಷಕಿಯರಿಗೆ ಯಾವುದೇ ಸೌಲಭ್ಯಗಳೂ ಇರಲಿಲ್ಲ. ಅವರು ನಿರಂತರವಾಗಿ ಶೋಷಣೆಗೆ ಒಳಗಾಗುತ್ತಿದ್ದರು. ಅಧಿಕಾರಿಗಳ ಕೃಪಾಕಟಾಕ್ಷದಿಂದ ಬದುಕಬೇಕಾದ ಸ್ಥಿತಿ ಖಾಸಗಿ ಮತ್ತು ಅನುದಾನಿತ ಶಿಕ್ಷಕರ ಪಾಲಿಗೆ ಬಂದಿತ್ತು. ಅಂತಹ ಸಂದರ್ಭದಲ್ಲಿ ಸೂಕ್ತ ನಿಯಮಾವಳಿಗಳನ್ನು ರಚಿಸುವಂತೆ ಸರ್ಕಾರದ ಮೇಲೆ ಒತ್ತಾಯ ತಂದು ಅದರಲ್ಲಿ ಯಶಸ್ವಿಯಾದರು. ಶಿಕ್ಷಕರ ವೇತನ, ತುಟ್ಟಿಭತ್ಯೆ, ತ್ರಿವಿಧ ಸೌಲಭ್ಯ, ರಜಾ ನಗದೀಕರಣ, ಮೌಲ್ಯಮಾಪನ ಭತ್ಯೆ, ಹೆರಿಗೆ ರಜೆ, ನಿವೃತ್ತಿ ವೇತನ ಮುಂತಾದ ಅನೇಕ ವಿಚಾರಗಳಲ್ಲಿ ಶಿಕ್ಷಕರು ಅನುಭವಿಸುತ್ತಿದ್ದ ನೋವನ್ನು ಚೆನ್ನಾಗಿ ಬಲ್ಲವರಾಗಿದ್ದ ಪದ್ಮಾವತಿ ವಿಠಲರಾವ್, ಅವರ ಪರವಾಗಿ ವಿಧಾನ

ಪರಿಷತ್ತಿನಲ್ಲಿ ತಮ್ಮ ಧ್ವನಿ ಮೊಳಗಿಸಿದರು. ಸ್ಥಳೀಯ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ ಶಿಕ್ಷಕ ವೃಂದ ತ್ರಿಶಂಕು ಸ್ಥಿತಿಯಲ್ಲಿತ್ತು. ಅವರಿಗೆ ಆಗುತ್ತಿದ್ದ ಅನ್ಯಾಯವನ್ನು ಮೊದಲ ಬಾರಿಗೆ ಸರ್ಕಾರದ ಗಮನಕ್ಕೆ ತಂದವರು, ಶ್ರೀಮತಿ ವಿಠಲರಾವ್‌ರವರು.

ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ರಾಷ್ಟ್ರಾದ್ಯಂತ Half A Millon Teacher ಯೋಜನೆಯಡಿ ಕೆಲಸ ಮಾಡುತ್ತಿದ್ದ ನೂರಾರು ಶಿಕ್ಷಕರು ತಮ್ಮ ತಪ್ಪಿಲ್ಲದೇ ಕೆಲಸ ಕಳೆದುಕೊಂಡರು. ಆ ಹೊತ್ತಿಗಾಗಲೇ ಆ ಶಿಕ್ಷಕರು ಸಂಸಾರ ಹೊಂದಿದ್ದು, ಅನೇಕ ಸಂಸಾರಗಳು ಬೀದಿಗೆ ಬಿದ್ದವು. ಆ ಸಮಯದಲ್ಲಿ ತುರ್ತಪರಿಸ್ಥಿತಿ ಜಾರಿಯಲ್ಲಿತ್ತು. ಆದರೂ ಹೆದರದೆ ಪದ್ಮಾವತಿ ವಿಠಲರಾವ್‌ರವರು ನೇರವಾಗಿ ಶ್ರೀಮತಿ ಇಂದಿರಾಗಾಂಧಿಯವರನ್ನು ಕಂಡು ಶಿಕ್ಷಕರ ಸಮಸ್ಯೆಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟು, ಮೂರು ವರ್ಷ ಕೆಲಸ ಮಾಡಿದ ಯಾವುದೇ ಶಿಕ್ಷಕರನ್ನು ಕೆಲಸದಿಂದ ತೆಗೆಯದಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕೆಂದು ಮನವಿ ಮಾಡಿದರು. ಶ್ರೀಮತಿ ಇಂದಿರಾಗಾಂಧಿಯವರು ಇವರ ಹೋರಾಟವನ್ನು ಕಂಡು ಇವರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದರು.

ಬಹುದಿನಗಳಿಂದ ಸಂಕಷ್ಟದಲ್ಲಿ ಸಿಲುಕಿದ್ದ ವೃತ್ತಿ ಶಿಕ್ಷಕರಿಗೆ ಅವರ ಸೇವಾ ಭದ್ರತೆಯ ವಿಚಾರದಲ್ಲಿ ಇವರು ಸಹಾಯ ಹಸ್ತ ಚಾಚಿದರು. ಮೊತ್ತಮೊದಲ ಬಾರಿಗೆ ಕರ್ನಾಟಕದಲ್ಲಿ ಅನುದಾನಿತ ಶಾಲೆಗಳ ಶಿಕ್ಷಕರಿಗೂ ನಿಗದಿತ ದಿನದಲ್ಲಿ ಸಂಬಳ ಹಾಗೂ ನಿವೃತ್ತಿಯ ನಂತರ ನಿವೃತ್ತಿವೇತನ ಪಡೆಯುವಂತೆ ಆಯಿತು. ಪದ್ಮಾವತಿ ವಿಠಲರಾವ್‌ರವರು ಅಂದು ನಡೆಸಿದ ಬಹುದೊಡ್ಡ ಹೋರಾಟವನ್ನು ಇಂದಿಗೂ ಶಿಕ್ಷಕರು ನೆನೆಸಿಕೊಳ್ಳುತ್ತಾರೆ. ಯಾವುದೇ ಭಾಗದ ಶಿಕ್ಷಕರಾಗಲೀ, ನೇರವಾಗಿ ಇವರನ್ನು ಸಂದರ್ಶಿಸಬಹುದಾಗಿತ್ತು. ಅವರು ಪದ್ಮಾವತಿ ವಿಠಲರಾವ್‌ರವರಿಗೆ ಸಮಸ್ಯೆಗಳನ್ನು ಹೇಳಿಕೊಂಡರೆಂದರೆ, ಅದಕ್ಕೆ ಪರಿಹಾರ ದೊರೆಯಿತೆಂದೇ ಅರ್ಥ.

ಪರಿಷತ್ತಿನಲ್ಲಿ ಮೊಳಗಿದ ಜನಪರ ಧ್ವನಿ

ಶ್ರೀಮತಿ ಪದ್ಮಾವತಿ ವಿಠಲರಾವ್ ಅವರು 1980 ಜುಲೈ 12ನೆಯ ತಾರೀಕಿನಂದು ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಬಡ್ತಿ ಕೊಡಿಸುವ ಬಗ್ಗೆ ಇದೇ ಶಿಕ್ಷಣ ಮಂತ್ರಿಗಳನ್ನು ಮತ್ತೊಮ್ಮೆ ಪ್ರಶ್ನಿಸಿದ್ದರು. "ಸರ್ಕಾರಿ ಕಾಲೇಜುಗಳ ಪ್ರಿನ್ಸಿಪಾಲರ್‌ಗಳ ಉದ್ಯೋಗ ವೃಂದದವರಿಗೆ ಪದೋನ್ನತಿ ನೀಡಿಲ್ಲವೆಂದು ಹೇಳುತ್ತಿದ್ದೀರಿ. 1972ನೆಯ ಇಸವಿಯಿಂದ ಪ್ರಮೋಷನ್ ಮಾಡಿಲ್ಲವೆಂದು ಹೇಳುತ್ತೀರಾ. 1974ನೆಯ ಇಸವಿಯಲ್ಲಿ 'ಕೇಡರ್ ರಿಕ್ರೂಟ್‌ಮೆಂಟ್ ರೂಲ್ಸ್' ಮಾಡಿದ್ದರೂ ಏಕೆ ಪ್ರಮೋಷನ್ ಕೊಟ್ಟಿಲ್ಲ? ಇವರುಗಳಿಗೆ ಪ್ರಮೋಷನ್ ಕೊಡದೆ ಇರಲು ಕಾರಣವೇನು? ಅಡಿಷನಲ್ ಚಾರ್ಜ್ ಏತಕ್ಕೆ ಕೊಟ್ಟಿದ್ದೀರಿ. ಅವರಿಗೆ ಪ್ರಮೋಷನ್ ಕೊಡಲು ಇರುವ ತೊಂದರೆಯಾದರೂ ಏನು?"

ದಿನಾಂಕ: 15–07–1980ರಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ಕುರಿತು ಅವರು ಮಾಡಿದ ಭಾಷಣ ದಾಖಲಾರ್ಹವಾದುದು. ಅವು ಮುಂದಿನ ರಾಜ್ಯ ಸರ್ಕಾರಗಳಿಗೆ ಮಾರ್ಗಸೂಚಿಯಾಗಿವೆ. "ಸನ್ಮಾನ್ಯ ಸಭಾಪತಿಗಳೆ, ಕೇಂದ್ರ ಸರ್ಕಾರದಲ್ಲಿ ನಿವೃತ್ತಿ ವಯಸ್ಸು 58 ಇದೆ. ನಮ್ಮ ರಾಜ್ಯ ಸರ್ಕಾರ ನೌಕರರ ನಿವೃತ್ತಿ ವಯಸ್ಸನ್ನು 55ಕ್ಕೆ ಮಾಡಿದರೆ ನಿರುದ್ಯೋಗ ನಿವಾರಣೆಯಾಗುವುದಿಲ್ಲ. ನೌಕರರಿಗೆ 55ನೆಯ ವಯಸ್ಸಿನ ನಂತರ ಕೆಲಸ ಮಾಡುವುದಕ್ಕೆ ಸಾಧ್ಯವೇ ಇಲ್ಲವೇ? ಈ ಬಗ್ಗೆ ವೈದ್ಯಕೀಯ ಪರೀಕ್ಷೆ ನಡೆಸಲಿ. ನಿವೃತ್ತಿ ವಯಸ್ಸು 55 ಆದ ಕಾರಣ ಪ್ರೈಮರಿ ಮತ್ತು ಹೈಸ್ಕೂಲ್‌ಗಳಲ್ಲಿ ಸಾವಿರಾರು ಹುದ್ದೆಗಳು ಖಾಲಿಯಿವೆ. ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ 350 ಅಧ್ಯಾಪಕ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಭರ್ತಿ ಮಾಡುವುದಕ್ಕೆ ಕ್ರಮ ಕೈಗೊಂಡಿಲ್ಲ. ಇಲ್ಲಿ ಓದುವ ಮಕ್ಕಳು ಏನಾಗಬೇಕು? ತಾವೇ ಹೇಳಿ."

1980–81ರ ಸಾಲಿನ ಆಯವ್ಯಯದ ಬಗ್ಗೆ ಜುಲೈ 16, 1980ರಲ್ಲಿ ಪದ್ಮಾವತಿ ವಿಠಲರಾವ್‌ರವರು ಮಾಡಿದ ಭಾಷಣದ ಕೆಲವು ಪ್ರಮುಖ ಅಂಶಗಳು ಹೀಗಿವೆ. "ಇವತ್ತು ಮತದಾರರಿಗೆ ಮಂತ್ರಿಗಳಾಗಲೀ, ನಾವುಗಳಾಗಲೀ (ಜನ ಪ್ರತಿನಿಧಿಗಳು) ಸಿಗಬೇಕು. ನಮ್ಮ ಮಂತ್ರಿಗಳು ಮೇಲುಗಡೆ ಕುಳಿತಿದ್ದಾರೆ. ಅವರು ಕೆಳಗಡೆ ಬರದೆ ಹೋದರೆ ಮತದಾರರಿಗೆ ಹೇಗೆ ಸಿಗುತ್ತಾರೆ. ಇದರಿಂದ ತೊಂದರೆಯಾಗುವುದು ಮತದಾರರಿಗೆ ತಾನೆ. ಮತದಾರರು ಬಂದರೆ ತಮ್ಮ ಕಷ್ಟಸುಖಗಳನ್ನು ಹೇಳುವುದಕ್ಕೆ ಅವಕಾಶವಿಲ್ಲ. ತಾವುಗಳೇ ನೇರವಾಗಿ ಮತದಾರರಲ್ಲಿಗೆ ಹೋಗಿ ಅವರ ಕಷ್ಟಸುಖಗಳನ್ನು ವಿಚಾರಿಸುವಂಥದ್ದು ಒಳ್ಳೆಯದೆಂದು ನಾನು ಭಾವಿಸುತ್ತೇನೆ."

"ವಿಧಾನಸೌಧದಲ್ಲಿರತಕ್ಕ ಕೆಲಸಗಾರರು ವಿಧಾನಸೌಧವೇ ಕರ್ನಾಟಕವೆಂದು ತಿಳಿದುಕೊಂಡಿದ್ದಾರೆ. ಅವರಿಗೆ ಹೊರಗಿನ ಅನುಭವವಿಲ್ಲ. ಮತದಾರರು ಪತ್ರ ಬರೆದರೆ ಉತ್ತರ ಕೊಡುವಷ್ಟು ಸೌಜನ್ಯ ಅವರಲ್ಲಿಲ್ಲ."

ಬೆಂಗಳೂರಿನ ಸಮುದಾಯ ಭವನ ಕುರಿತು ಶ್ರೀಮತಿ ಪದ್ಮಾವತಿ ವಿಠಲರಾವ್‌ರವರು ಹೇಳಿರುವ ಮಾತುಗಳ ದಾಖಲಾರ್ಹವಾಗಿವೆ. "ಬೆಂಗಳೂರು ಸಿಟಿ ಕಾರ್ಪೊರೇಷನ್‌ಗೆ ಸೇರಿದ ಕಮ್ಯುನಿಟಿ ಹಾಲ್ ಅನ್ನು ನೋಡಿದರೆ ಮನಸ್ಸಿಗೆ ನೋವಾಗುತ್ತದೆ. ಇದ್ದ ಶಾಲೆಗಳನ್ನು ಸರಿಯಾಗಿ ಇಡುವ ವ್ಯವಸ್ಥೆ ಇಲ್ಲ, ಅವು ಪ್ರಯೋಜನಕ್ಕೆ ಬಾರದ ಹಾಗೆ ಮಾಡಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಶೌಚಾಲಯ ವ್ಯವಸ್ಥೆ ಇಲ್ಲ, ಇವತ್ತು ಅವೆಲ್ಲಾ ದೊಡ್ಡ ದೊಡ್ಡ ಗ್ಯಾಂಬ್ಲಿಂಗ್ ಸೆಂಟರ್ಸ್ ಆಗಿವೆ. ಚಾಮರಾಜಪೇಟೆಯಲ್ಲಿ ಹತ್ತಾರು ಮಂದಿ ಕಾರ್ಪೊರೇಷನ್ ಜಾಗವನ್ನು 10.00 ರೂ.ಗೆ ತೆಗೆದುಕೊಂಡು ದೊಡ್ಡ ದೊಡ್ಡ ಬಿಲ್ಡಿಂಗ್ ಕಟ್ಟಿಸಿದ್ದಾರೆ. ಕಾರ್ಪೊರೇಷನ್ ಆಸ್ತಿಯನ್ನು ಯಾರು ರಕ್ಷಿಸುತ್ತಾರೆ?"

ವಿಧಾನಸೌಧದ ಬಗ್ಗೆ ಅಂದರೆ ವಿಶೇಷವಾಗಿ ಆಡಳಿತದ ಬಗ್ಗೆ ಅವರು ಹೇಳುವ ಮಾತು ಹೀಗಿದೆ: "ವಿಧಾನಸೌಧದ ಬಗ್ಗೆ ಏನೂ ಹೇಳಬೇಕಾಗಿಲ್ಲ. ಅಲ್ಲಿ ಏನೂ ಕೆಲಸವಾಗುವುದಿಲ್ಲವೆಂದು ದಿನಕರ ದೇಸಾಯಿಯವರು ಚುಟುಕವೊಂದರಲ್ಲಿ ಹೇಳಿದ್ದರು. ಅವರು ಹೇಳಿದ ಮಾತು ಇಂದಿಗೂ ಕೊಟೇಷನ್ ರೀತಿಯಲ್ಲಿದೆ. ಅವರು ಏನು ಹೇಳುತ್ತಾರೆ. "ನಾನು ಬೆಂಗಳೂರಿಗೆ ಹೋಗಿ ವಿಧಾನಸೌಧಕ್ಕೆ ಹೋಗಿ ಬಂದೆ. ಅಲ್ಲಿ ದೆವ್ವಗಳಿವೆ ಎಂದು ಗೊತ್ತಿರಲಿಲ್ಲ. ನಾನು ಹಿಂದೆ ಬರುವಾಗ ನನ್ನ ಪಾಕೆಟ್ ಖಾಲಿಯಾಗಿತ್ತು."

ದಿನಾಂಕ: 01–08–1980ರಲ್ಲಿ ವಿಶ್ವವಿದ್ಯಾನಿಲಯಗಳ ತಿದ್ದುಪಡಿ ಕಾಯಿದೆ ಮೇಲೆ ಅವರು ಮಾಡಿದ ಭಾಷಣ ಇಂದಿಗೂ ನೆನೆಸಿಕೊಳ್ಳುವಂಥದ್ದು. "ವಿದ್ಯಾಭ್ಯಾಸದ ಕ್ರಮ ಸರಿ ಇಲ್ಲ. ರಾಜ್ಯದಲ್ಲಿ ನಾಲ್ಕು ವಿಶ್ವವಿದ್ಯಾನಿಲಯಗಳಿದ್ದರೂ ಮತ್ತೆ ಎರಡು ವಿಶ್ವವಿದ್ಯಾನಿಲಯಗಳನ್ನು ಏತಕ್ಕೆ ಮಾಡುತ್ತಿದ್ದೀರಿ? ಇದರ ಪ್ರಯೋಜನ ಯಾರಿಗೂ ಇಲ್ಲ. ಯಥೇಚ್ಛವಾಗಿರುವ ಅನಕ್ಷರಸ್ಥರ ಬಗ್ಗೆ ಯಾರಿಗೂ ಗಮನವಿಲ್ಲ. ಪದವೀಧರ ನಿರುದ್ಯೋಗಿಗಳನ್ನು ಸೃಷ್ಟಿ ಮಾಡಿ ಏನು ಮಾಡುತ್ತೀರಾ? ಏನೂ ಕೆಲಸಕ್ಕೆ ಬಾರದ ಗ್ರಾಜ್ಯುಯೇಟ್ಸ್‌ನ್ನು ತಯಾರಿ ಮಾಡತಕ್ಕದ್ದಲ್ಲ. ಕೆಳಗಿನ ಮಟ್ಟದಲ್ಲಿ ಅನಕ್ಷರತೆ ಶೇಕಡ 80ರಷ್ಟು ಇದೆ. ಅವರೆಲ್ಲರನ್ನು ಅಕ್ಷರಸ್ಥರನ್ನಾಗಿ ಮಾಡುವ ಕಡೆ ಸರ್ಕಾರ ಗಮನ ಕೊಡಬೇಕು."

"ವಿಶ್ವವಿದ್ಯಾನಿಲಯದಲ್ಲಿ ಅಧಿಕಾರಿಗಳನ್ನು ನೇಮಿಸಿಕೊಂಡು ಅಲ್ಲಿಗೆ ಸರ್ಕಾರ ಕೊಡುವ ಹಣವೆಲ್ಲಾ ಅವರ ಸಂಬಳಕ್ಕೆ ಖರ್ಚಾಗುತ್ತಿದೆ. ಯಾವುದೇ ಶೈಕ್ಷಣಿಕ ಅಭಿವೃದ್ಧಿಯಾಗಿಲ್ಲ. ಡಾ॥ ಹೆಚ್. ನರಸಿಂಹಯ್ಯ ಹೇಳಿದ ಹಾಗೆ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಂಪೂರ್ಣ ಸ್ವಾತಂತ್ರ್ಯವಿಲ್ಲ. ಅದನ್ನು ಕೊಡಬೇಕು. ಇಲ್ಲದಿದ್ದರೆ ವಿಶ್ವವಿದ್ಯಾನಿಲಯ ಮಾಡಿ ಏನು ಪ್ರಯೋಜನ?

"ಮೈಸೂರು ಯೂನಿವರ್ಸಿಟಿಯಲ್ಲಿ ಸೆನೆಟ್ ಸದಸ್ಯಳಾಗಿದ್ದೆ. ಒಬ್ಬರು ಬಿ.ಎಡ್. ಕಾಲೇಜು ಮಾಡಲು ಪರ್ಮಿಷನ್ ಕೊಡಬೇಕೆಂದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮನವಿ ಮಾಡಿದರು. ಬಿ.ಎಡ್., ಕಾಲೇಜು ನಡೆಸಲು

ಮನವಿ ಮಾಡಿದ ಕಾಲೇಜಿಗೆ ಸೌಕರ್ಯವಿಲ್ಲವೆಂದು ವಿಶ್ವವಿದ್ಯಾನಿಲಯ ಅವರಿಗೆ ಅನುಮತಿ ಕೊಡಲಿಲ್ಲ. ಆ ಕಾಲೇಜಿನವರು ವಿಧಾನಸೌಧದ 3ನೆಯ ಮಹಡಿಯಲ್ಲಿ ಓಡಾಡಿ ಇವತ್ತು ಬಿ.ಎಡ್., ಕಾಲೇಜಿಗೆ ಪರ್ಮಿಷನ್ ತೆಗೆದುಕೊಂಡಿದ್ದಾರೆ. ಇದರ ಅರ್ಥವೇನು? ವೈಸ್ ಚಾನ್ಸಲರ್‌ರವರ ತೀರ್ಮಾನಕ್ಕೆ ಏನು ಬೆಲೆ ಬಂತು? ಇದರಿಂದ ಯೂನಿವರ್ಸಿಟಿ ಮರ್ಯಾದೆ ಉಳಿಯುತ್ತದೆಯೆ? ಸರ್ಕಾರದವರೇ ಯೂನಿವರ್ಸಿಟಿಯವರನ್ನು ಕೇಳದೆ ಎಲ್ಲಾ ಕಡೆಗೂ ಕಾಲೇಜಿನ ಪರವಾನಿಗೆಯನ್ನು ಕೊಟ್ಟು ಬಿಟ್ಟರೆ. ವೈಸ್ ಚಾನ್ಸಲರ್ ಎಂದು ಅವರು ಅಲ್ಲಿ ಏಕಿರಬೇಕು?"

ದಿನಾಂಕ: 14–08–1980ರಂದು ಗಮನಸೆಳೆಯುವ ಮೂಲಕ ಪದ್ಮಾವತಿ ವಿಠಲರಾವ್‌ರವರು "ಶಿಕ್ಷಕರಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ಕೊಡುವ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದರು." ಶಿಕ್ಷಣಮಂತ್ರಿ ಜಿ.ಬಿ. ಶಂಕರರಾವ್‌ರವರು ಸುದೀರ್ಘ ಉತ್ತರ ಕೊಟ್ಟು ಅಲ್ಲಿರುವ ತಾರತಮ್ಯವನ್ನು ತಕ್ಷಣ ಹೋಗಲಾಡಿಸುವುದಾಗಿ ಆಶ್ವಾಸನೆ ಕೊಟ್ಟರು.

ದಿನಾಂಕ: 05–02–1981ರಂದು ಅವರು ಚಿತ್ರಕಲೆ, ವ್ಯಾಯಾಮ, ಕ್ರಾಫ್ಟ್ ಟೀಚರ್‌ಗಳಿಗೆ ಆಗುವ ಅನ್ಯಾಯದ ಬಗ್ಗೆ ಪ್ರಶ್ನೆಯೊಂದರ ಮೂಲಕ ಸರ್ಕಾರದ ಗಮನಸೆಳೆದರು. ಆಗ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರಾಗಿದ್ದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಉತ್ತರ ನೀಡಿ ನ್ಯಾಯ ದೊರಕಿಸಿಕೊಡುವುದಾಗಿ ಆಶ್ವಾಸನೆ ಕೊಟ್ಟರು. ಪದ್ಮಾವತಿ ವಿಠಲರಾವ್‌ರವರ ಕಳಕಳಿ ಹೀಗಿದೆ. "ಸರ್ಕಾರಿ ಆಜ್ಞೆಯಲ್ಲಿ ಕ್ವಾಲಿಫಿಕೇಷನ್ ಬೇಸಿಸ್ ಮೇಲೆ ಬಡ್ತಿ ನೀಡಬಹುದೆಂದು ಇದೆ. ಅದರ ಆಧಾರದ ಮೇಲೆ ಏಕೆ ಬಡ್ತಿ ನೀಡಬಾರದು? ಎರಡನೆಯದಾಗಿ ಕೇಡರ್ ಚೇಂಜ್ ಮಾಡುವುದಕ್ಕೆ ರೂಲ್ಸ್ ಇಲ್ಲವೆಂದು ಹೇಳುತ್ತಾರೆ. ಇಲ್ಲಿ ನಾವು ಸಾಕಷ್ಟು ಮಸೂದೆ ಹಾಗೂ ಆ ಮಸೂದೆಗಳಿಗೆ ತಿದ್ದುಪಡಿಗಳನ್ನು ಮಾಡಿದ್ದೇವೆ. ಹೀಗಿರುವಾಗ ಕೇಡರ್ ಚೇಂಜ್ ಮಾಡುವ ಮಸೂದೆಯನ್ನು ಸರ್ಕಾರ ಏಕೆ ತರಬಾರದು? ಕ್ರಾಫ್ಟ್ ಟೀಚರ್ ಆಗಿರುವವರಿಗೆ, ಫಿಸಿಕಲ್ ಟೀಚರ್ ಆಗಿರುವವರಿಗೆ ಕ್ವಾಲಿಫಿಕೇಷನ್ ಇರುವಾಗ ಮೇಲಿರುವ ಹುದ್ದೆ ಏಕೆ ಕೊಡಬಾರದು? ಅವರನ್ನು ಎಲ್ಲಿಗಾದರೂ ಪೋಸ್ಟ್ ಮಾಡಿದರೂ ಹೋಗಲು ತಯಾರಿದ್ದಾರೆ. ನಿಮ್ಮ ತತ್ವದ ಪ್ರಕಾರ ಅವರು ಅಲ್ಲೇ ಸಾಯಬೇಕೆ? ಕ್ವಾಲಿಫಿಕೇಷನ್ ಇದ್ದರೆ ಏಕೆ ಅವರ ಕೇಡರ್ ಚೇಂಜ್ ಮಾಡಬಾರದು? ಬಡ್ತಿ ನೀಡುವಾಗ ಸೀನಿಯಾರಿಟಿ ಮುಖ್ಯವಲ್ಲ. ಅರ್ಹತೆ ಮುಖ್ಯ ಎಂಬುದು ಸರ್ಕಾರದ ನೀತಿಯಾಗಬೇಕು. ಇದನ್ನು ಯಾವಾಗ ತರುತ್ತೀರಿ?"

ದಿನಾಂಕ: 10–03–1981ರಂದು ಪದ್ಮಾವತಿ ವಿಠಲರಾವ್‌ರವರು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುತ್ತಾ, ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ಸರ್ಕಾರಿ ನೌಕರರ ಸ್ಥಿತಿಗತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. "ನಮ್ಮ ಸ್ನೇಹಿತರೆಲ್ಲಾ ಮಾತನಾಡುವಾಗ ಹಳ್ಳಿಯ ಜನರ ಬದುಕು ಬದಲಾವಣೆಯಾಗಬೇಕು. ಹಳ್ಳಿ ಉದ್ಧಾರವಾಗಬೇಕೆಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳ ಬಗ್ಗೆ ಮಾತನಾಡದ ಸದಸ್ಯರೆ ಇಲ್ಲ. ಗ್ರಾಮಾಂತರ ಪ್ರದೇಶವು ಉದ್ಧಾರವಾಗಬೇಕು ಎಂಬುದನ್ನು ತಾವೂ ಸಹ (ಸಭಾಪತಿಗಳು) ಒಪ್ಪುತ್ತೀರಿ. ಆದರೆ, ಯಾವ ರೀತಿ ಉದ್ಧಾರವಾಗಬೇಕು. ಇವತ್ತಿನ ದಿವಸ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ನೌಕರರಾಗಲಿ, ಉಪಾಧ್ಯಾಯರಾಗಲಿ ವಾಸಿಸಲಿಕ್ಕೆ ಮನೆಯಿಲ್ಲ. ಅದರಲ್ಲೂ ಹೆಣ್ಣುಮಕ್ಕಳು ಹಳ್ಳಿಗೆ ಹೋದರೆ ಅವರು ರಾತ್ರಿ ಎಲ್ಲಿ ಇರಬೇಕು? ಸರ್ಕಾರದವರು ಎಲ್ಲೋ ಮನೆಕಟ್ಟಿದ್ದಾರೆ. ಅದು ಊರಿಂದ ದೂರ ಇರುತ್ತದೆ. ಅಲ್ಲಿ ಸೌಲಭ್ಯವಿರುವುದಿಲ್ಲ. ಸರ್ಕಾರಿ ನೌಕರರು ಗ್ರಾಮಾಂತರ ಪ್ರದೇಶಗಳಿಗೆ ಹೋದರೆ ಮನೆ ಬಾಡಿಗೆ ಭತ್ಯೆ ಕೊಡುವುದಿಲ್ಲ. ಕ್ವಾಟ್ರಸ್ ಸಿಕ್ಕರೆ ಶೇಕಡ 10ರಷ್ಟು ಮನೆ ಬಾಡಿಗೆಯೆಂದು ಕಟ್ ಮಾಡುತ್ತಾರೆ. ಅದಕ್ಕೋಸ್ಕರ ಸರ್ಕಾರಿ ನೌಕರರು ಗ್ರಾಮಾಂತರ ಪ್ರದೇಶಗಳಿಗೆ ಹೋಗಲು ಇಷ್ಟಪಡುವುದಿಲ್ಲ. ನನ್ನ ಸಲಹೆ ಏನೆಂದರೆ, ಸಿಟಿ ಕಾಂಪನ್‌ಸೇಟರಿ ಅಲೋಯನ್ಸ್ ನಿಲ್ಲಿಸಿ, ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವವರಿಗೆ ವಿಶೇಷ ಅಲೋಯನ್ಸ್ ಕೊಡಬೇಕು."

ಶ್ರೀಮತಿ ಪದ್ಮಾವತಿ ವಿಠಲರಾವ್‌ರವರು ವಿಧಾನ ಪರಿಷತ್ತಿನಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಪ್ರಶ್ನೆ ಕೇಳಿದ್ದಾರೆ ಹಾಗೂ ಸಚಿವರಿಂದ ಈ ಬಗ್ಗೆ ಖಚಿತ ಉತ್ತರ ಪಡೆದಿದ್ದಾರೆ. ದಿನಾಂಕ: 13–03–1981ರಂದು ವಸತಿ ಯೋಜನೆಯನ್ನು ಕುರಿತಂತೆ ಅಂದಿನ ನಗರಾಭಿವೃದ್ಧಿ ಸಚಿವರಾದ ಧರ್ಮಸಿಂಗ್‌ರವರಿಗೆ ಕೇಳಿದ ಪ್ರಶ್ನೆ ಹೀಗಿದೆ. "ಗೃಹ ನಿರ್ಮಾಣ ಸ್ಕೀಂನಲ್ಲಿ ಬರೀ ಹಣ ಮಾತ್ರ ಖರ್ಚಾಗುತ್ತಿದೆ. ಮನೆಗಳು ಸರಿಯಾಗಿ ಆಗಿಲ್ಲ. ರೂರಲ್ ಏರಿಯಾಸ್‌ನಲ್ಲಿ ಹಾಗೂ ಅರ್ಬನ್ ಏರಿಯಾಸ್‌ನಲ್ಲಿ ಬೇರೆ ಬೇರೆ ಇನ್‌ಕಂ ಗ್ರೂಪ್‌ನವರಿಗೆ ನಾನಾ ತರಹದ ಸ್ಕೀಂಗಳನ್ನು ಹಾಕಿಕೊಂಡಿದ್ದು, ಮನೆಯನ್ನು ಹೇಗೆ ಕಟ್ಟುತ್ತಿದ್ದಾರೆ? ಇವರಿಗೆ ಸ್ಕೀಂನ ಹಣವನ್ನು ವ್ಯರ್ಥವಾಗಿ ಬಳಸುವ ಬದಲು ಸದುಪಯೋಗಪಡಿಸಿಕೊಳ್ಳುವ ಬಗ್ಗೆ ಯಾವ ಕ್ರಮವನ್ನು ಜಾರಿಗೆ ತರುತ್ತೀರಾ?"

ದಿನಾಂಕ: 18–03–1981ರಂದು ಅಂದಿನ ಶಿಕ್ಷಣ ಸಚಿವರಾದ ಜಿ.ಬಿ. ಶಂಕರರಾವ್‌ರವರಿಗೆ ಶಿಕ್ಷಕರ ನಿವೃತ್ತಿ ನಂತರ ಖಾಲಿಯಿರುವ ಸ್ಥಾನಗಳನ್ನು ಭರ್ತಿ ಮಾಡಿರುವ ಬಗ್ಗೆ ಪ್ರಶ್ನೆ ಕೇಳಿದ್ದಾರೆ. "ಪ್ರತಿವರ್ಷ ಜನವರಿಯಲ್ಲಿ ಎಷ್ಟು ಮಂದಿ ನಿವೃತ್ತಿಯಾಗುತ್ತಾರೆ? ಎಷ್ಟು ಪೋಸ್ಟನ್ನು ಭರ್ತಿ ಮಾಡಬೇಕೆಂಬುದರ ಬಗ್ಗೆ ಸರ್ಕಾರದ ಹತ್ತಿರ ಮಾಹಿತಿ ಇರುವುದಿಲ್ಲವೆ? ಮಾಹಿತಿ ಇದ್ದರೆ ಖಾಲಿ ಜಾಗಗಳಿಗೆ ಕೂಡಲೇ ಏತಕ್ಕೆ ಭರ್ತಿ ಮಾಡಬಾರದು? ಸ್ಥಳೀಯ ಅಭ್ಯರ್ಥಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೀರಿ. ಅವರನ್ನು ಖಾಯಂ ಮಾಡುವುದಿಲ್ಲ. ಆಯಾಯ ಸ್ಥಳಗಳಿಗೆ ಅಧ್ಯಾಪಕರು ಇರುವುದಿಲ್ಲ. ಇದರ ಬಗ್ಗೆ ಮಂತ್ರಿಗಳು ಏನು ಹೇಳುತ್ತಾರೆ?" ಇದು ಶಿಕ್ಷಕರಿಗೆ ಬಡ್ತಿ ಕೊಡುವ ಬಗ್ಗೆ ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಿಕೊಡುವ ಬಗ್ಗೆ ಶ್ರೀಮತಿ ಪದ್ಮಾವತಿ ವಿಠಲರಾವ್ ಅವರಿಗಿದ್ದ ಕಾಳಜಿಯನ್ನು ಧ್ವನಿಸುತ್ತದೆ.

1984ರಲ್ಲಿ ಪದ್ಮಾವತಿ ವಿಠಲರಾವ್‌ರವರು 'ಕರ್ನಾಟಕ ವುಮೆನ್ ಟೀಚರ್ಸ್ ಅಸೋಸಿಯೇಷನ್' ಹಾಗೂ 'ಫೆಡರೇಷನ್ ಆಫ್ ಕರ್ನಾಟಕ ಟೀಚರ್ಸ್ ಅಸೋಸಿಯೇಷನ್' ಎಂಬ ಸಂಸ್ಥೆಗಳನ್ನು ಪ್ರಾರಂಭಿಸಿದರು. ಇಂದಿಗೂ ಈ ಎರಡೂ ಶೈಕ್ಷಣಿಕ ಸಂಸ್ಥೆಗಳು ಕರ್ನಾಟಕದ ಶಿಕ್ಷಣ ಕ್ಷೇತ್ರದಲ್ಲಿ ಅಮೂಲ್ಯ ಸೇವೆಸಲ್ಲಿಸುತ್ತಾ ಬಂದಿವೆ. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ 'ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆ–1983' ಜಾರಿಗೆ ಬರಲು ಇವರ ಹೋರಾಟ ಕೂಡ ಕಾರಣೀಭೂತವಾಗಿದೆ.

ಹಿರಿಯ ಚೇತನಗಳಾದ 'ಶ್ರೀಮತಿ ಲಕ್ಷ್ಮಿ ಮೆನನ್' ಹಾಗೂ 'ಶ್ರೀಮತಿ ಸುಶೀಲ ನಾಯರ್' ಅವರುಗಳು ಪ್ರಾರಂಭಿಸಿದ 'ಆಲ್ ಇಂಡಿಯಾ ಕಮಿಟಿ ಫಾರ್ ಎರಾಡಿಕೇಷನ್ ಆಫ್ ಇಲ್ಲಿಟ್ರಸಿ ಅಮಾಂಗ್ ವುಮೆನ್' ಎಂಬ ಸಂಸ್ಥೆಯಲ್ಲೂ ಕರ್ತವ್ಯ ನಿರ್ವಹಿಸಿದ ಪದ್ಮಾವತಿ ವಿಠಲರಾವ್‌ರವರು, ಸದಾ ಬಡವರು, ಶೋಷಿತರು ಹಾಗೂ ದಲಿತ ಮಹಿಳೆಯರ ಬಗ್ಗೆ ಚಿಂತಿಸುತ್ತಿದ್ದ ಅಪರೂಪದ ವ್ಯಕ್ತಿಯಾಗಿದ್ದರು.

ಹನ್ನೆರಡು ವರ್ಷ ವಿಧಾನ ಪರಿಷತ್ ಸದಸ್ಯರಾಗಿದ್ದರೂ ಸಿಟಿ ಬಸ್‌ನಲ್ಲಿ ಓಡಾಡುತ್ತಿದ್ದ ಅವರು ಸದಾ ಶಿಕ್ಷಕರ ಹಿತಚಿಂತಕರಾಗಿದ್ದರು. ಅವರು ವಿಧಾನ ಪರಿಷತ್ತು ಸದಸ್ಯರಾಗಿದ್ದ ಅವಧಿಯಲ್ಲಿ ಸರ್ಕಾರ ಮುಖ್ಯಮಂತ್ರಿಗಳ ವಿವೇಚನೆಯಡಿ ಎಲ್ಲಾ ಶಾಸಕರಿಗೆ ಬೆಂಗಳೂರಿನ ಸದಾಶಿವನಗರದಲ್ಲಿ 50x80 ಅಳತೆಯ ನಿವೇಶನ ಮುಂಜೂರು ಮಾಡಲು ನಿಶ್ಚಯಿಸಿ ಇವರಿಗೂ ಅರ್ಜಿ ಕಳುಹಿಸಿತ್ತು. ತಮಗೆ ಬೆಂಗಳೂರಿನ ನಿವೇಶನವಿಲ್ಲವೆಂದೂ ಪ್ರಮಾಣ ಪತ್ರ ಕೊಡಲು ಸಾಧ್ಯವಿಲ್ಲವೆಂಬ ಕಾರಣದಿಂದ ಅವರು ನಿವೇಶನ ಪಡೆಯಲಿಲ್ಲ. 1948ರಲ್ಲಿ ಅವರು ಬೆಂಗಳೂರು ಕಾರ್ಪೊರೇಷನ್ ಹೈಸ್ಕೂಲ್ ಅಧ್ಯಾಪಕಿಯಾಗಿದ್ದಾಗ ಮೂರು ಸಾವಿರ ಕೊಟ್ಟುಕೊಂಡ ನಿವೇಶನದಲ್ಲೇ ಸಾಲ ಮಾಡಿ ಮನೆಕಟ್ಟಿದ್ದರು. ಅದೇ ಮನೆಯಲ್ಲೆ ಅವರು ಕೊನೆಯ ತನಕ ಉಳಿದರು, ಮೂರು ಗಂಡು ಮಕ್ಕಳು ಏಳು ಮೊಮ್ಮಕ್ಕಳ ಅವರ ಸಂಸಾರದಲ್ಲಿ ಜೀವನ ಮೌಲ್ಯಗಳ ಅನುಸರಣೆಗೆ ಮೊದಲ ಆದ್ಯತೆ. 1998 ಜೂನ್ 14ರಂದು

ನಿಧನರಾದ ಕಾಲದಲ್ಲಿ ಅವರ ಹತ್ತಿರ ಕೇವಲ 20,000-00 ರೂಪಾಯಿಗಳಿದ್ದವು. ಇದೂ ಕೂಡ ಅವರ ನಿವೃತ್ತಿ ವೇತನದಿಂದ ಬಂದ ಹಣವಾಗಿತ್ತು. ಇದು ಅವರ ಪ್ರಾಮಾಣಿಕತೆಗೆ ಒಂದು ನಿದರ್ಶನ. ಅವರ ಪ್ರಾಮಾಣಿಕತೆ, ಶೈಕ್ಷಣಿಕ ಪರಿಸರವನ್ನು ನಿರ್ಮಿಸಬೇಕೆಂಬ ಮಹತ್ವಾಕಾಂಕ್ಷೆ ಸದಾಕಾಲ ಸ್ಮರಣೀಯವಾದುದು.

ಮರೆಯಲಾಗದ ಹೋರಾಟಗಾರ್ತಿ

ಸುಮಾರು ಎಂಬತ್ತೈದು ವಸಂತಗಳನ್ನು ಕಂಡಿದ್ದ ಪದ್ಮಾವತಿ ವಿಠಲರಾವ್ ತಮ್ಮ ಕ್ಯಾನ್ಸರ್ ಪೀಡಿತ ದೇಹವನ್ನು ಹೊತ್ತುಕೊಂಡು ತಮ್ಮಷ್ಟೇ ವಯಸ್ಸಾದ ಶಿಕ್ಷಕಿಯೊಡನೆ ಆ ಶಿಕ್ಷಕಿಗೆ ನಿವೃತ್ತಿ ವೇತನ ಕೊಡಿಸಲು ವಿಧಾನಸೌಧಕ್ಕೆ ಬರುತ್ತಿದ್ದುದನ್ನು ಇಂದಿಗೂ ನೆನಪಿಸಿಕೊಳ್ಳುವ ಹಿರಿಯ ಪತ್ರಕರ್ತರಿದ್ದಾರೆ. ಶ್ರೀಮತಿ ಪದ್ಮಾವತಿ ವಿಠಲರಾವ್ ಮಹಾಸಾಧಕಿ, ಒಳ್ಳೆಯ ಶಿಕ್ಷಕಿ, ಶಿಕ್ಷಣ ಆಡಳಿತದಲ್ಲಿ ಆಸಕ್ತಿಯುಳ್ಳ ಅಪರೂಪದ ವ್ಯಕ್ತಿ, ಹತ್ತಾರು ಭಾಷೆಗಳನ್ನು ಕರತಲಾಮಲಕ ಮಾಡಿಕೊಂಡ ಮೇಧಾವಿ, ಹನ್ನೆರಡು ವರ್ಷ ಶಿಕ್ಷಕರಿಗಾಗಿ ವಿಧಾನ ಪರಿಷತ್ತಿನಲ್ಲಿ ದನಿಯೆತ್ತಿ ಹೋರಾಡಿದ ಹೋರಾಟಗಾರ್ತಿ, ವಿಶೇಷವಾಗಿ ಶಿಕ್ಷಕರೆಂದರೆ ಕಲ್ಯಾಣಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದ ಅಪರೂಪದ ಚೇತನ. ಶಿಕ್ಷಕರೆಂದರೆ ನಾಗರಿಕ ಸಮಾಜಕ್ಕೆ ಸದಾಕಾಲ ಪೂಜ್ಯ ಭಾವನೆ ಇರುತ್ತದೆ. ಅಂತಹ ಶಿಕ್ಷಕಿ-ಬಂಧು ಎಂದರೆ, ಸಮಗ್ರ ಸಮಾಜದ ಹಿತೈಷಿಯೆಂದೆನ್ನಬೇಕಲ್ಲವೇ?

ಸಹಕಾರ : ರೇರ್ ಅಡ್ಮಿರಲ್ ವಸಂತ್

*

ಹಿಂದೂಸ್ತಾನಿ ಸಂಗೀತ ಸಾಮ್ರಾಜ್ಯದ ಮೇರು ಪ್ರತಿಭೆ ಗಂಗೂಬಾಯಿ ಹಾನಗಲ್

ಪ್ರೊ. ಎಂ. ಶ್ರೀಧರ ಮೂರ್ತಿ

ಡಾ.ಗಂಗೂಬಾಯಿ ಹಾನಗಲ್ ಅವರು ಈ ದೇಶದ ಸಂಗೀತ ಸಾಮ್ರಾಜ್ಯದಲ್ಲಿ ಅಭೂತಪೂರ್ವ ಪ್ರಖ್ಯಾತಿಯನ್ನು ಪಡೆದುಕೊಂಡ ಪ್ರತಿಭಾಶಾಲಿ ಗಾಯಕಿ, ಹಿಂದೂಸ್ಥಾನಿ ಶೈಲಿಯಲ್ಲಿ ಕರ್ನಾಟಕಕ್ಕೆ ಹಿರಿಮೆಯನ್ನು ಗಳಿಸಿಕೊಟ್ಟ ಹಿರಿಯ ಚೇತನ. ಸಾಧನೆಗೆ ಮಿತಿಯಿಲ್ಲ ಎಂಬ ದೃಢ ನಂಬಿಕೆಯಿಂದ ಜಾತಿ ಹಾಗೂ ಲಿಂಗಗಳ ಇತಿಮಿತಿ/ತಾರತಮ್ಯಗಳನ್ನು ಧಿಕ್ಕರಿಸಿದ ಧೀಮಂತ ಮಹಿಳೆ. ಹೆಂಗಸರು ಮನೆಯಿಂದ ಹೊರಬರುವುದೇ ಸಾಧ್ಯವಾಗಿರದ ಕಾಲಘಟ್ಟದಲ್ಲಿ ಕೇವಲ ತಮ್ಮಲ್ಲಿನ ಪ್ರತಿಭೆಯ ಮೇಲೆ ವಿಶ್ವಾಸವಿಟ್ಟು ವೇದಿಕೆ ಏರಿದವರು ಹಾಗೂ ಯಶಸ್ವಿಯಾಗಿ ಇತರರಿಗೆ ಮಾರ್ಗದರ್ಶಕರಾದವರು. ಸಂಗೀತ ಸಾಧನೆ ಜೊತೆಗೆ ಅವರು ತಮ್ಮ ಜೀವನದಲ್ಲಿ ಎದುರಿಸಿದ ಘಟನೆಗಳೇ ಅವರು ಇಂದಿನ ಯುವ ಪೀಳಿಗೆಗೆ ಹೇಳುವ ಪಾಠಗಳೂ ಹೌದು.

ಮಾರ್ಚ್ 5, 1913 ಧಾರವಾಡದ ಸಮೀಪದಲ್ಲಿರುವ ಹಾನಗಲ್ಲಿನ ಕೃಷಿಕ ಬೆಸ್ತರ ಕುಟುಂಬದಲ್ಲಿ ಜನಿಸಿದ ಗಂಗೂಬಾಯಿಯವರಿಗೆ ಅದೃಷ್ಟ ಅವರ ತಾಯಿ ಅಂಬಾಬಾಯಿಯವರ ರೂಪದಲ್ಲಿ ಸಿಕ್ಕಿತ್ತು. ಅವರ ತಾಯಿ ಕರ್ನಾಟಕ ಸಂಗೀತದಲ್ಲಿ ಪರಿಣತಿ ಹೊಂದಿದ್ದರೂ ಮಗಳನ್ನು ಹಿಂದೂಸ್ಥಾನಿ ಸಂಗೀತಕ್ಕೆ ತೊಡಗಿಸಿದರು. ನಿರಂತರವಾಗಿ ಮಗಳ ಸಂಗೀತಾಭ್ಯಾಸಕ್ಕೆ ಒತ್ತಾಸೆ ಒದಗಿಸಿದ ಅಂಬಾಬಾಯಿಯವರು ಮಗಳು ಶುದ್ಧವಾಗಿರಬೇಕೆಂದು ತನ್ನ ಸಂಗೀತದ ಅಭ್ಯಾಸವನ್ನೇ ಕಡಿಮೆ ಮಾಡಿಕೊಂಡರು. ಈ ಮಹಾಮಾತೆಯ ತ್ಯಾಗ ಮುಂದೆ ಫಲಕೊಟ್ಟಿತು.

ಗಂಗೂಬಾಯಿಯವರದು ಇಂಪಾದ ಕೇವಲ ರಂಜಿಸುವ ಸಂಗೀತವಲ್ಲ. ಅವರು ಹಾಡುತ್ತಿರುವಾಗ ಅನೇಕರು ಅವರ ಗಂಡು ದನಿಯನ್ನು ಕೇಳಿ ಬೆಸ್ತು ಬಿದ್ದಿದ್ದಾರೆ. ಒಮ್ಮೆ ಡಾ.ಗಂಗೂಬಾಯಿಯವರು ದೆಹಲಿಗೆ ಹೋಗಿದ್ದರು. ದೆಹಲಿ ಆಕಾಶವಾಣಿಯಲ್ಲಿ ಕಾರ್ಯಕ್ರಮ ಧ್ವನಿ ಮುದ್ರಣ ಹಾಗೂ ನೇರ ಬಿತ್ತರದ ವ್ಯವಸ್ಥೆಯಾಗಿತ್ತು. ಇವರು ಬಿಡಾರ ಹೂಡಿದ್ದ ಆತಿಥೇಯರ ಚಿಕ್ಕ ಮಗಳಿಗೆ ಇವರ ಹಾಡಿನ ಬಗ್ಗೆ ಕುತೂಹಲವಿತ್ತು. ಆಕಾಶವಾಣಿಯಲ್ಲಿ ಕಾರ್ಯಕ್ರಮ ಬಿತ್ತರವಾಗುವ ವಿವರಗಳನ್ನು ಪಡೆದಳು. ಕಾರ್ಯಕ್ರಮ ಮುಗಿಸಿಬಂದ ಗಂಗೂಬಾಯಿಯವರು ಆಕೆಯನ್ನು ಕೇಳಿದರು. "ಮಗೂ ನನ್ನ ಕಾರ್ಯಕ್ರಮ ಕೇಳಿದೆಯಾ?". "ಇಲ್ಲ ನೀವು ಹೇಳಿದ ಸಮಯಕ್ಕೆ ನಾನು ರೇಡಿಯೋ ಹಚ್ಚಿದರೆ ಯಾರೋ ಗಂಡಸಿನ ಸಂಗೀತ ಬರ್ತಾ ಇತ್ತು". "ಮಗೂ ಆ ಗಂಡಸು ನಾನೆ" ಎಂದರು. ಇದಕ್ಕೆ ಕಾರಣವಿದೆ. ಮೊದಲಿಗೆ ಗಂಗೂಬಾಯಿಯವರ ಧ್ವನಿ ಎಲ್ಲ ಹೆಣ್ಣುಮಕ್ಕಳ ಧ್ವನಿಯಂತೆ ನವಿರಾಗಿ ಸುಮಧುರವಾಗಿತ್ತು. ಆದರೆ ಗಂಟಲಿನಲ್ಲಿ ಬೆಳೆದ ದುರ್ಮಾಂಸವನ್ನು ತೆಗೆಯಲು ವೈದ್ಯರು ಕೌಶಲ್ಯದಿಂದ ಬರೆಗುಳಿ ಹಾಕಿ ಸುಟ್ಟು ತೆಗೆಯಲು ವಿಫಲರಾದ್ದರಿಂದ, ಅವರ ಧ್ವನಿ ಗಂಡಸರಂತೆ ಗಡಸಾಯಿತು. ಆದರೂ ಧೃತಿಗೆಡದೆ, ಅವಿರತ ಸಾಧನೆಯಿಂದ ಗಡಸಿನ ಧ್ವನಿಯನ್ನೇ ಒಗ್ಗಿಸಿಕೊಂಡು ತಮ್ಮದೇ ಛಾಪಿನ ಸಂಗೀತ ವೈಶಿಷ್ಟ್ಯವನ್ನು ಮೆರೆದರು. ಕಿರಾಣಾ ಘರಾಣೆಯಲ್ಲಿ ಗಂಡಸರು ಹೆಂಗಸರಂತೆ ಪಲುಕುತ್ತಾರೆಂದು ಮಾತಿದೆ. ಈ ಘರಾಣೆಯಲ್ಲಿರುವ ಏಕೈಕ ಗಂಡಸಿನ ಗಾಯನ ಗಂಗೂಬಾಯಿ 'ಗಂಡು' ಗಾಯನವೆಂದರೆ ಅತಿಶಯೋಕ್ತಿ ಅಲ್ಲ. ಗಾಯನಕ್ಕೆ ಬೇಕಾಗಿರುವುದು

ವಿಚಾರವೇ ಹೊರತು ಕೇವಲ ಕಂಠಸಿರಿಯಲ್ಲ ಎಂದು ಸಾಬೀತು ಮಾಡಿದ ಅದಮ್ಯ ಚೇತನ. ಅವರ ಗಾಯನ ಶುದ್ಧ ಶಾಸ್ತ್ರೀಯ ಹಾಡುಗಾರಿಕೆಗೆ ಒಂದು ವ್ಯಾಖ್ಯಾನವಿದ್ದಂತೆ. ತಮ್ಮ ವೈಶಿಷ್ಟ್ಯಪೂರ್ಣ ಗಡಸು ಧ್ವನಿಯಲ್ಲಿ ಮಂದ್ರಸ್ಥಾಯಿಯಲ್ಲಿ ವಿಹರಿಸಿ, ಹಚ್ಚಿ ರಾಗದ ಯಾತ್ರೆ ಆರಂಭಿಸಿದರೆ ಅದೊಂದು ಅನಿರ್ವಚನೀಯ ಅನುಭವ.

ಗಂಗೂಬಾಯಿಯವರ ಅಭೋಗಿ, ಅಸಾವರಿ, ಮಾರವಾ, ಮಿಯಾ ಮಲ್ಹಾರ, ದರ್ಬಾರಿ ಹಾಗೂ ಭೈರವೀಗಳನ್ನು ಆಸ್ವಾದಿಸಿದ ನಂತರ ಐಹಿಕ ಜಗತ್ತಿನ ಇತರ ಸಂಗತಿಗಳು ಶುಷ್ಕವೆನಿಸುತ್ತಿತ್ತು.

ಯಾವ ಚಮತ್ಕಾರ, ಗಿಲೀಟು-ಮೆರುಗು, ಚಪ್ಪಾಳೆಗಳ ಚಪಲಗಳಿಗೆ ಬಿದ್ದವರಲ್ಲ ಗಂಗೂಬಾಯಿಯವರು. ಜನಪ್ರಿಯ ಮಾನದಂಡಗಳನ್ನು ಎಡಗಾಲಿನಿಂದ ಒದ್ದು ಬಿಸಾಡಿದ ನಿಸ್ಪೃಹ ಸಂಗೀತಗಾರ್ತಿ. ಶುದ್ಧತೆಯ ವಿಷಯದಲ್ಲಿ ಅವರು ಹೇಗೆ ನಿಷ್ಠುರೋ ಹಾಗೆಯೇ ಬದ್ಧತೆಯ ವಿಷಯದಲ್ಲೂ ಕಿರಾಣ ಘರಾಣೆಯ ಸಂಪ್ರದಾಯಕ್ಕೆ ತಮ್ಮನ್ನು ಸಮರ್ಪಿಸಿಕೊಂಡಿದ್ದರು. ಅವರು ತಮ್ಮ ಜೀವಿತದ ಅವಧಿ ತಮ್ಮ ಸಂಗೀತದ ವಿಷಯದಲ್ಲಿ ರಾಜಿಮಾಡಿಕೊಂಡು ಲಘು ಶಾಸ್ತ್ರೀಯ ಅಥವಾ ಹಗುರವಾದದ್ದನ್ನು ಹಾಡಲೇ ಇಲ್ಲ.

"ಅಕ್ಕ ಅವರೇ, ನಿಮ್ಮದು ಶುದ್ಧ ಕಿರಾಣ ಘರಾಣೆ ನಮ್ಮದು ಕಿರಾಣೆ ಅಂಗಡಿ" ಎಂದು ಪಂ.ಭೀಮಸೇನ ಜೋಶಿಯವರು ಒಮ್ಮೆ ಅವರಿಗೆ ಹೇಳಿದ್ದರಂತೆ. ಗಂಗೂಬಾಯಿ ಹಾನಗಲ್ಲರು ಶಾಸ್ತ್ರೀಯ ಸಂಗೀತಕ್ಕೆ ಮಾತ್ರವೇ ತಮ್ಮ ಗಾಯನವನ್ನು ಸೀಮಿತಗೊಳಿಸಿದ್ದಾರೆ. ಅಂದರೆ ಪಂ. ಜೋಶಿಯವರು ಸಂಗೀತ, ಸಂತವಾಣಿ, ದಾಸವಾಣಿ, ಭಾವಗೀತೆ ಎಲ್ಲವನ್ನು ಕರತಲಾಮಲಕ ಮಾಡಿಕೊಂಡಿದ್ದರು. ಡಾ.ಗಂಗೂಬಾಯಿಯವರು ಶಾಸ್ತ್ರ ಶುದ್ಧವಾಗಿ ಹಾಡಬಲ್ಲ ಅಪರೂಪದ ರತ್ನವಾಗಿದ್ದರು. ಖಯಾಲ್ ಗಾಯನವನ್ನುಳಿದು ಅವರು ಬೇರೆ ಹಾಡಿದ್ದು ತೀರ ಅಪರೂಪ.

ಒಮ್ಮೆ ಹೀಗಾಯಿತು. ದಸರಾ ಸಂದರ್ಭದಲ್ಲಿ (1989), ನಂಜನಗೂಡಿನ ಶ್ರೀ ಕಂಠೇಶ್ವರನ ದೇವಸ್ಥಾನದ ಆವರಣದಲ್ಲಿ ಗಂಗೂಬಾಯಿಯವರ ಸಂಗೀತ ಕಾರ್ಯಕ್ರಮವಿತ್ತು. ಮೊದಲಿಗೆ ಯಮ್ಯ ರಾಗವನ್ನು ವಿಸ್ತಾರವಾಗಿ ಹಾಡಿ ಮುಗಿಸಿದ ನಂತರ ಸಭಿಕರಲ್ಲೊಬ್ಬ ವ್ಯಕ್ತಿ ಎದ್ದು ನಿಂತು ದೇವರನಾಮವನ್ನು ಹಾಡಬೇಕೆಂದು ವಿನಂತಿಸಿದ ಅದಕ್ಕೆ ಗಂಗೂಬಾಯಿಯವರು "ನಾನು ಸಂಗೀತವನ್ನೇ ದೇವರೆಂದುಕೊಂಡಿದ್ದೇನೆ" ಸೌಜನ್ಯದಿಂದ ಉತ್ತರಿಸಿದರು.

ಕುಂದಗೋಳದ ಸವಾಯ್ ಗಂಧರ್ವ ಅವರಲ್ಲಿ ಸಂಗೀತ ಕಲಿಯಲು ಗಂಗೂಬಾಯಿಯವರು ಪ್ರತಿನಿತ್ಯ ರೈಲಿನಲ್ಲಿ ಹೋಗುತ್ತಿದ್ದರು. 1920ರ ಸುಮಾರಿಗೆ ಹುಬ್ಬಳ್ಳಿಯಲ್ಲಿ ಗಂಗೂಬಾಯಿಯವರ ಕುಟುಂಬ ನೆಲೆಸಿತು. ಆಗ ಅವರಿಗಿದ್ದ ಜನಪ್ರಿಯತೆಯಲ್ಲಿ ಕಲ್ಕತ್ತಾ, ದೆಹಲಿ, ಮುಂಬೈ ನಗರಗಳಲ್ಲಿ ನೆಲೆ ಹುಡುಕಿಕೊಳ್ಳುವುದು ಅವರಿಗೆ ಕಷ್ಟವಾಗಿರಲಿಲ್ಲ. ಆದರೆ ಹುಬ್ಬಳ್ಳಿಯಂಥ ಸಣ್ಣ ಊರಿನಲ್ಲಿ ನೆಲೆಸಿ ವಿಶ್ವವಿಖ್ಯಾತರಾದವರು ಗಂಗವ್ವನವರು. ಅಂದರೆ, ರಾಜಕೀಯ ಶಕ್ತಿ ಕೇಂದ್ರಗಳಾದ ಮಹಾನಗರಗಳ ಗೊಡವೆ ಅವರಿಗೆ ಬೇಕಾಗಿರಲಿಲ್ಲ. ಅವರ ಸಂಗೀತ ಅನನ್ಯವಾಗಿದ್ದರ ಹಿಂದೆ ಅವರ ಸರಳತೆ ಹಾಗೂ ನೇರ ನಡೆನುಡಿಗಳೇ ಕಾರಣ.

ಕಲ್ಕತ್ತದಲ್ಲಿ ಸಂಗೀತ ಸಮ್ಮೇಳನವೊಂದರಲ್ಲಿ, ಸಂಘಟಕರಿಗೆ ಇವರನ್ನು ಕಂಡು ಅನುಮಾನವಾಯಿತು. ಇವರ ಬೆಡಗಿಲ್ಲದ ವಾಮನರೂಪ ಕಂಡು "ಇವರೇನು ಹಾಡಬಲ್ಲರು" ಎಂದು ಶಂಕಿಸಿ ಮೊದಲು ಸ್ವಲ್ಪ ಹಾಡಿ ಎಂದು ವಿನಂತಿಸಿದರು. ಆಗತಾನೆ ಗಾಯನ ಮುಗಿಸಿ ಬಂದಿದ್ದ ಸುಪ್ರಸಿದ್ಧ ಉಸ್ತಾದ್ ನಿಸ್ಸಾರ್ ಹುಸೇನ್ ಖಾನ್- "ನೀವೂ ನಿಮ್ಮ ಸಾಥೀದಾರರನ್ನು ಅವರ ಮನೋಧರ್ಮವನ್ನು ಗ್ರಹಿಸಿದ ಹಾಗಾಗುತ್ತದೆ. ಹಾಡಿ ಬಿಡಿ" ಎಂದರಂತೆ. ಗಂಗೂ ತಮ್ಮ ಗುರುಗಳನ್ನು ಸ್ಮರಿಸಿ ಹಾಡಿದ ಮೇಲೆ ಸಂಘಟಕರು ಹೃದಯಸ್ಥಂಭನವಾದವರಂತೆ ಸುಮ್ಮನಿದ್ದರಂತೆ!

ಹಲವಾರು ಪ್ರಶಸ್ತಿಗಳು ಅವರನ್ನು ಎಡತಾಕಿ ತಮ್ಮ ಮೆರುಗನ್ನು ಹೆಚ್ಚಿಸಿಕೊಂಡಿವೆ ಎಂದೇ ಹೇಳಬೇಕು. ಆರು ಗೌರವ ಡಾಕ್ಟರೇಟ್‌ಗಳು, ಪ್ರತಿಷ್ಠಿತ ಸನ್ಮಾನ-ಪುರಸ್ಕಾರಗಳು, ಪದ್ಮವಿಭೂಷಣ, ತಾನ್‌ಸೇನ್ ಪ್ರಶಸ್ತಿ, ದೀನಾನಾಥ್ ಮಂಗೇಶ್ಕರ್ ಪ್ರಶಸ್ತಿ, ಆದಿತ್ಯ ಬಿರ್ಲಾ ಕಲಾಶಿಖರ ಪ್ರಶಸ್ತಿ, ಹಾಗೂ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪುರಸ್ಕಾರ ಮತ್ತು ಫೆಲೋಷಿಪ್-ಹೀಗೆ ನಾಡಿನ ಹಲವಾರು ಪ್ರಮುಖ ಪ್ರಶಸ್ತಿಗಳು ಅವರನ್ನು ಅರಸಿ ಬಂದಂಥವುಗಳು.

ಡಾ.ಗಂಗೂಬಾಯಿಯವರ ಸಾಮಾಜಿಕ ಕಳಕಳಿ ಕೂಡ ಅನನ್ಯವಾದದ್ದು, ಹುಬ್ಬಳ್ಳಿಯ ಈದ್ಗಾ ಮೈದಾನದ ವಿವಾದ, ಹುಬ್ಬಳ್ಳಿಯಲ್ಲಿ ನೈರುತ್ಯ ರೇಲ್ವೆ ವಲಯ ಸ್ಥಾಪನೆಯ ವಿಷಯ, ಧಾರವಾಡದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಹೋರಾಟ, ರಾಜ್ಯ ಸಂಗೀತ ನಾಟಕ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಗೋಕಾಕ್ ಚಳವಳಿಯನ್ನು ಬೆಂಬಲಿಸಿ ಕೊಟ್ಟ ರಾಜೀನಾಮೆ, ಆಕಾಶವಾಣಿಯ ತಾತ್ಕಾಲಿಕ ಗುತ್ತಿಗೆಗೆ ನೇಮಕ ಗೊಂಡಿದ್ದ ತಂಬೂರಿ ಮೀಟುವ ಕಲಾವಿದರ ಕೆಲಸವನ್ನು ಖಾಯಂಗೊಳಿಸುವಂತೆ ಆಗ್ರಹಿಸಿದ್ದು – ಇವೆಲ್ಲವೂ ಅವರ ಸಾಮಾಜಿಕ ಹೊಣೆಗಾರಿಕೆ ಮತ್ತು ಬದುಕಿನೆಡೆಗೆ ಅವರಿಗಿದ್ದ ಅದಮ್ಯವಾದ ಪ್ರೀತಿಯನ್ನು ತೋರಿಸುತ್ತದೆ.

ಈಗ ಕರ್ನಾಟಕ ಸರ್ಕಾರ ಧಾರವಾಡದ ಶುಕ್ರವಾರ ಪೇಟೆಯ ಮನೆಯನ್ನು ಸ್ಮಾರಕವನ್ನಾಗಿಸಿದೆ, ಹಾಗೂ ರಾಜ್ಯಸರ್ಕಾರ ಇತ್ತೀಚೆಗಷ್ಟೇ ಮೈಸೂರಿನಲ್ಲಿ ಪ್ರಾರಂಭವಾದ ಸಂಗೀತ ವಿಶ್ವವಿದ್ಯಾಲಯಕ್ಕೆ ಡಾ.ಗಂಗೂಬಾಯಿಯವರ ಹೆಸರನ್ನಿಟ್ಟು ಕೃತಾರ್ಥವಾಗಿದೆ.

———— * ————

ಮಹಿಳಾ ಚಟುವಟಿಕೆಯ ಕೇಂದ್ರ ಬಿಂದು ಎಂ.ಆರ್. ಲಕ್ಷ್ಮಮ್ಮ

ವಿಜಯಾ ಪ್ರಸಾದ್

ಮನೆ, ಮದುವೆ, ಮಕ್ಕಳ ಮೋಹ-ಬಂಧನದಲ್ಲಿಯೇ ಹೆಣ್ಣಿನ ಬದುಕಿನ ಸಾರ್ಥಕವಿದೆ ಎಂಬ ದೃಢ ನಂಬಿಕೆಯಿದ್ದ ಸಮಾಜದ ನಡುವಿನಲ್ಲಿ, ಹೆಣ್ಣಿನ ಜಗತ್ತು ಇಷ್ಟೇ ಅಲ್ಲ, ಆಕೆಯೂ ಸಾಹಿತ್ಯ, ಪ್ರತಿಕೋದ್ಯಮ, ರಾಜಕಾರಣ, ಶಾಸನ ಅಧ್ಯಯನ, ಸಂಘ-ಸಂಸ್ಥೆಗಳ ಸೇವೆ, ಚಳವಳಿ, ಇತ್ಯಾದಿ ಕ್ಷೇತ್ರಗಳಲ್ಲಿ ಯೋಗ್ಯ ಸೇವೆ ಸಲ್ಲಿಸಬಲ್ಲಳು, ದಕ್ಷತೆಯಿಂದ ಎಲ್ಲ ನಿರ್ವಹಿಸಬಲ್ಲಳು, ಅಧಿಕಾರದ ಚುಕ್ಕಾಣಿ ಹಿಡಿಯಬಲ್ಲಳು, ಎಂಬುದನ್ನು ಮಾತು ಮತ್ತು ಕ್ರಿಯೆಗಳೆರಡಲ್ಲೂ ತೋರಿಸಿ ಕೊಟ್ಟವರು, ಎಂ.ಎ.ಪದವೀಧರೆ, ಎಂ.ಆರ್. ಲಕ್ಷ್ಮಮ್ಮನವರು. ಜನಿಸಿದ್ದು 1913ರ ಮಾರ್ಚ್ ಇಪ್ಪತ್ತನಾಲ್ಕರಂದು. ಅನಂತಪುರ ಜಿಲ್ಲೆಯ ಅಯ್ಯಗಾರ್ಲರಪಳ್ಳಿಯಲ್ಲಿ. ಓದಿದ್ದು ಮೈಸೂರಿನಲ್ಲಿ, ನಂತರ ನೆಲೆಸಿದ್ದು ಬೆಂಗಳೂರಿನಲ್ಲಿ.

ದೇಶ, ಮನೆ, ಜನಗಳ ಪ್ರಗತಿಗೆ, ಹೆಣ್ಣಿಗೂ ಶಿಕ್ಷಣ ಅತ್ಯಗತ್ಯ ಎಂಬುದನ್ನು ಕಂಡುಕೊಂಡ, ಮೈಸೂರು ಮಹಾರಾಜರ ಸರ್ಕಾರ, ಕಾಲೇಜಿಗೆ ಹೋಗುವ ಹುಡುಗಿಯರನ್ನು, ಅವರವರ ಮನೆಯಿಂದ ಕುದುರೆಗಾಡಿಯಲ್ಲಿ, ಕಾಲೇಜಿಗೆ ಕರೆದೊಯ್ದು ಕರೆತಂದು ಬಿಡುವ ವ್ಯವಸ್ಥೆ ಮಾಡಿದ್ದರೂ, ಮದುವೆಯೇ ಕೊನೆಯ ಧ್ಯೇಯವೆಂಬ ನಿರ್ಬಂಧಕ್ಕೆ ಒಳಪಟ್ಟ ಹುಡುಗಿಯರು ಕಾಲೇಜಿಗೆ ಹೋಗಲು ತಯಾರಾಗದಿದ್ದ ಕಾಲವದು. ಈ ಸಾಮಾನ್ಯರಿಗಿಂತ ಸ್ವಲ್ಪ ಭಿನ್ನ ಆಸಕ್ತಿಯಿಂದ ಕಾಲೇಜಿಗೆ ಹೋಗತೊಡಗಿದ ಒಂದಿಬ್ಬರು ಮೂವರೊಡನೆ ಎಂ.ಆರ್.ಲಕ್ಷ್ಮಮ್ಮ ಒಬ್ಬರು. ಹೆರುವ, ಹೊರುವ ಹೊಣೆಗಾರಿಕೆಗಳಿಗೆಲ್ಲ ಹೆಗಲು ಕೊಡುವ ಕರ್ತವ್ಯಗಳು; ಓದಿಗಾಗಲೀ, ಕಾಯಕಕ್ಕಾಗಲೀ ಅಡ್ಡಿಯಾಗಲಾರವು ಎಂಬುದಕ್ಕೆ ಒಂದು ಉದಾಹರಣೆಯಾಗುವಂತೆ ಓದಿದರು. ಹನ್ನೊಂದನೇ ವಯಸ್ಸಿನಲ್ಲಿ ಮದುವೆಯಾಗಿ, ಮೊದಲನೇ ಮಗುವಿಗೆ ಒಂದು ತಿಂಗಳಾಗಿದ್ದಾಗ ಕುಳಿತಿದ್ದು ಬಿ.ಎ.ಪರೀಕ್ಷೆಗೆ. ಎಂಟೊಂಬತ್ತು ತಿಂಗಳ ಮಗು ಗರ್ಭದಲ್ಲಿದ್ದಾಗ ಎದುರಿಸಿದ್ದು ಎಂ.ಎ. ಪರೀಕ್ಷೆ. ಆದರೂ ಅಸಾಧಾರಣ ಜಾಣ್ಮೆಯ ಈ ಹುಡುಗಿ ಇಂಟರ್‌ಮೀಡಿಯೇಟ್‌ನಲ್ಲಿ ಗಿಟ್ಟಿಸಿದ್ದು ರಾಜ್ಯದಲ್ಲಿ ಪ್ರಥಮ ರ್‍ಯಾಂಕ್, ಎಂ.ಎ.ನಲ್ಲಿ ಪ್ರಥಮ ದರ್ಜೆ ಮತ್ತು ಚಿನ್ನದ ಪದಕ. ಕಾರಾಗೃಹವಾಸ ಅನುಭವಿಸುವಾಗ ಈಕೆ ಹತ್ತು ತಿಂಗಳ ಮಗುವಿನ ತಾಯಿ. ಇವರಿಗೆ ಒಟ್ಟು ಮಕ್ಕಳು ಏಳು.

ಗಳಿಸಿದ ವಿದ್ಯೆ, ಆರ್ಜಿಸಿದ ಜ್ಞಾನದ ನಿಜವಾದ ಉಪಯೋಗ ನೌಕರಿ ಮಾಡುವುದರಲ್ಲಿದೆ ಎಂಬ ಭಾವನೆಯಿಂದ ಕೆಲಸಕ್ಕೆ ಹೋಗಲು ತಂದೆಯ ಅನುಮತಿ ಕೇಳಿದಾಗ, "ಸಮಾಜ ಸೇವೆ ಮಾಡು" ಎಂದು ಅವರ ಇಚ್ಛೆಯನ್ನು ತಿಳಿಸಿದರಂತೆ. ಪಿತೃ ಪ್ರೋತ್ಸಾಹ, ಪತಿಯ ಉತ್ತೇಜನ, ಸ್ವಂತದ ಪ್ರತಿಭೆ, ಲಕ್ಷ್ಮಮ್ಮನವರನ್ನು ಸೇವೆಯ ಕಣಕ್ಕಿಳಿಸಿತು. 1945ರಲ್ಲಿ ಮೈಸೂರು ಮಹಿಳಾ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಗೊಂಡಿದ್ದು; 1946ರಿಂದ 1948ರವರೆಗೆ ಎರಡು ಅವಧಿಗೆ ಮೈಸೂರು ಮುನಿಸಿಪಲ್ ಕೌನ್ಸಿಲ್‌ಗೆ ಆಯ್ಕೆಯಾಗಿದ್ದು; ಕೆಲಕಾಲ ಪುರಸಭೆಯ ಕಾಂಗ್ರೆಸ್ ಪಕ್ಷಕ್ಕೆ ನೇತಾರರಾಗಿದ್ದು, 1952ರಲ್ಲಿ ಅಸೆಂಬ್ಲಿಯಿಂದ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ; ಪುನಃ 1958ರಲ್ಲಿ ಪದವೀಧರ ಕ್ಷೇತ್ರದಿಂದ ಆಯ್ಕೆ; ಮೈಸೂರು ಪ್ರದೇಶ ಕಾಂಗ್ರೆಸ್ ಪಕ್ಷದಿಂದ ನಾಲ್ಕು ವರ್ಷಗಳ ಕಾಲ ಜಂಟಿ ಕಾರ್ಯದರ್ಶಿಯಾಗಿದ್ದು;

ಎಂ.ಆರ್. ಲಕ್ಷ್ಮಮ್ಮನವರ ಸಮಾಜ ಸೇವೆಯ ಅಭಿಲಾಷೆಯನ್ನು ಪೂರೈಸಿಕೊಳ್ಳಲು, ದೊರೆತ ಸುವರ್ಣಾವಕಾಶಗಳು. ಪತಿ ಮತ್ತು ಪಿತರ ಪ್ರೋತ್ಸಾಹ ಸದಾ ಇದ್ದುದರಿಂದ ಅವರ ಈ ರಾಜಕೀಯ ಮತ್ತು ಸಮಾಜ ಸೇವೆಯ ಕೈಂಕರ್ಯ ಅವ್ಯಾಹತವಾಗಿ ಮುಂದುವರಿಯಿತು. ಸರ್ಕಾರದ ಹಲವಾರು ಸಮಿತಿಗಳಿಗೆ; ವಿಶ್ವವಿದ್ಯಾಲಯದ ಸೆನೆಟ್‌ಗೆ; ಸಕ್ರಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಹಲವಾರು ಕಲ್ಯಾಣ ಸಂಸ್ಥೆಗಳನ್ನು, ವಿದ್ಯಾರ್ಥಿನಿಯರ ನಿಲಯಗಳನ್ನು; ನರ್ಸರಿ ಶಾಲೆಗಳನ್ನು ಹಾಗೂ ಅಗತ್ಯವಿದ್ದ ಮಹಿಳಾ ಸಮಾಜಗಳನ್ನು ಆರಂಭಿಸಲು ಕಾರಣರಾದರು. ಅಮೇರಿಕಾ ದೇಶಕ್ಕೆ ಹೋಗಿ ಜನಸಾಮಾನ್ಯರ ಜೀವನ ವಿಧಾನವನ್ನು ತಿಳಿದು ಬಂದರು. ರಾಜ್ಯದ ಸಮಾಜ ಕಲ್ಯಾಣ ಸಲಹಾ ಮಂಡಲಿಯ ಛೇರ್‌ಮನ್ ಆಗಿ; ಎರಡು ವರ್ಷ ಮಿಥಿಕ್ ಸೊಸೈಟಿಯ ಉಪಾಧ್ಯಕ್ಷೆಯಾಗಿ, ಭಾರತೀಯ ವಿದ್ಯಾ ಭವನದ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ, ಇಪ್ಪತ್ತು ವರ್ಷಗಳ ಕಾಲ ಗರ್ಲ್‌ಗೈಡ್ ಕಮಿಷನರ್ ಆಗಿ, ಕರ್ನಾಟಕ ವಿಧಾನ ಪರಿಷತ್ತಿನ ಉಪಸಭಾಪತಿಯಾಗಿ, ಇನ್ನೂ ಹೀಗೆಯೇ ಹಲವಾರು ಕ್ಷೇತ್ರಗಳಲ್ಲಿ, ಏಳು ಮಕ್ಕಳ ಈ ತಾಯಿ, ಕಾರ್ಯ ನಿರ್ವಹಿಸಿ, ತಮ್ಮೊಂದು ಮಿದುಳಿಗೆ, ಎರಡು ಹೆಣ್ಣು ಕೈಗಳಿಗೆ, ಹತ್ತು ತಲೆ, ಇಪ್ಪತ್ತು ಕೈಗಳ ಸಾಮರ್ಥ್ಯವಿದ್ದುದನ್ನು ತೋರಿಸಿಕೊಟ್ಟಿದ್ದಾರೆ.

ಆ ಕಾಲದಲ್ಲಿ ಮಹಿಳಾ ಮಂಡಲಗಳ ಸ್ಥಾಪನೆಯ ಉದ್ದೇಶ; ಕೇವಲ ಮಹಿಳೆಯರ ಮನರಂಜನೆ, ಶಿಕ್ಷಣದ ಕುರಿತಾದ ವಿಚಾರ ಸಂಕಿರಣ ಮಾತ್ರವಾಗಿರಲಿಲ್ಲ. ಸಾರಾಯಿ ಅಂಗಡಿ ಪಿಕೆಟಿಂಗ್, ಅಗತ್ಯ ಬೇಡಿಕೆಗಳಿಗಾಗಿ ಸತ್ಯಾಗ್ರಹ, ಸರ್ಕಾರದ ಅನ್ಯಾಯಗಳ ವಿರುದ್ಧ ಪ್ರತಿಭಟನೆ, ಶಾಲಾ ಕಾಲೇಜುಗಳ ತ್ಯಾಗ. ನೌಕರಿ ತ್ಯಾಗ, ಅಧಿವೇಶನಗಳಲ್ಲಿ ಭಾಗವಹಿಸುವುದು, ಇತ್ಯಾದಿಗಳನ್ನೂ ಒಳಗೊಂಡಿತ್ತು. ಸಂಘ ಸಂಸ್ಥೆಗಳನ್ನು ಕಟ್ಟುವ ಚಾತುರ್ಯವಿದ್ದ ಎಂ.ಆರ್.ಲಕ್ಷ್ಮಮ್ಮನವರು ಇಂಥ ಹಲವಾರು ಮಹಿಳಾ ಮಂಡಲಗಳ ಸ್ಥಾಪನೆಗೆ ಕಾರಣಕರ್ತೆ.

ದೇಶದ ಬಗ್ಗೆ, ಸ್ವಾತಂತ್ರ್ಯದ ಮಹತ್ವದ ಬಗ್ಗೆ, ಪ್ರಜಾಪಭುತ್ವದ ಬಗ್ಗೆ ಭಾಷಣಕ್ಕೆ ವ್ಯವಸ್ಥೆಯಾಗುತ್ತಿದ್ದದ್ದು, ಪೊಲೀಸರಿಗೆ ಸಿಗದಂತೆ ಪತ್ರವ್ಯವಹಾರ, ಮುಖಂಡರುಗಳಿಗೆ ಪತ್ರಗಳ ಹಂಚಿಕೆ, ಸತ್ಯಾಗ್ರಹಕ್ಕೆ ಪೂರ್ವವ್ಯವಸ್ಥೆ, ಕರ ಪತ್ರಗಳ ಪ್ರಕಟಣೆ, ಮುಂತಾದ ಗುಪ್ತ ಕಾರ್ಯಾಚರಣೆಗಳು ನಡೆಯುತ್ತಿದ್ದುದು ರಾತ್ರಿಯ ವೇಳೆಯಲ್ಲಿ. ಲಕ್ಷ್ಮಮ್ಮನವರು ಈ ಕೆಲಸಗಳನ್ನು ನಿರ್ಭಯದಿಂದ ಇತರ ಮಹಿಳೆಯರೊಂದಿಗೆ ಸೇರಿ ಮಾಡಿದರು. ಸೆಪ್ಟೆಂಬರ್‌ನಲ್ಲಿ, 1947ರಲ್ಲಿ ಸ್ವಾತಂತ್ರ್ಯ ಬಂದ ನಂತರವೂ ಮಹಾರಾಜರ ಸರ್ಕಾರ ಮುಂದುವರಿದಿದ್ದಾಗ, ಜವಾಬ್ದಾರಿ ಸರ್ಕಾರ ತಮಗೆ ಬೇಕೆಂದು ಆಗ್ರಹಿಸಿ, ಮೈಸೂರಿನ ಟೌನ್‌ಹಾಲ್‌ನಲ್ಲಿ; ಎಚ್.ವಿ. ದಾಸಪ್ಪನವರು, ಮತ್ತು ಟಿ.ಸುನಂದಮ್ಮನವರೊಂದಿಗೆ ಭಾಷಣ ಮಾಡಿದರು. ಮೈಸೂರು ಸರ್ಕಾರದಿಂದ ಸೆರೆಮನೆಗೆ ಹೋದರು. ಎರಡು ವಾರದ ನಂತರ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ವರ್ಗಾಯಿಸಲ್ಪಟ್ಟರು. ಅಕ್ಟೋಬರ್‌ನಲ್ಲಿ ಮಹಾರಾಜರು ಅಧಿಕಾರ ಬಿಟ್ಟುಕೊಟ್ಟಾಗ ಬಿಡುಗಡೆಗೊಂಡರು.

ಲಕ್ಷ್ಮಮ್ಮನವರು 'ಸಾಧ್ವಿ' ಮತ್ತು 'ಪ್ರಬುದ್ಧ ಕರ್ನಾಟಕ' ಪ್ರತಿಕೆಗಳಿಗೆ ಲೇಖನ ಬರೆಯುತ್ತಿದ್ದರು. ಸಾಕ್ಷರತಾ ಇಲಾಖೆಯ 'ಬೆಳಕು' ಎಂಬ ಪತ್ರಿಕೆಯಲ್ಲಿ ಸಂಪಾದಕಿಯಾಗಿ ಕೆಲಸ ಮಾಡಿದ ಹಿನ್ನೆಲೆಯಲ್ಲಿ, ಅವರು ಆರಂಭಿಸಿದ್ದು, 1950ರಲ್ಲಿ 'ಸೋದರಿ' ಎಂಬ ವಾರಪತ್ರಿಕೆಯನ್ನು. ತಮ್ಮ ಮಕ್ಕಳನ್ನೂ ಈ ಪತ್ರಿಕೆಯ ಕೆಲಸಕ್ಕೆ ಹಚ್ಚುತ್ತಿದ್ದರು. ಹಾಸ್ಯ, ಹರಟೆ, ಮಹಿಳಾ ಜಗತ್ತು, ಮಹಿಳೆಯರ ಮುನ್ನಡೆ, ನಳಪಾಕ, ಸಣ್ಣ ಕಥೆಗಳು, ಈ ಪತ್ರಿಕೆಯ ಪುಟಗಳನ್ನು ತುಂಬುತ್ತಿದ್ದ ವಿಷಯಗಳು. ಮಹಿಳೆಯರ ಅರಿವಿನ ವಿಸ್ತಾರಕ್ಕಾಗಿ, ವಿವಿಧ ಕ್ಷೇತ್ರಗಳಲ್ಲಿ ನಡೆದ ಮಹಿಳಾ ಕಾರ್ಯಕ್ರಮಗಳ ವರದಿಗಳು, ಸಮಾಜ ಕಲ್ಯಾಣ ಮಂಡಲಿಯ ಯೋಜನೆಗಳು, ಮಹಿಳೆಯರಿಗೆ ದೊರೆವ ಸೌಲಭ್ಯ-ಸೌಕರ್ಯಗಳು ಹಾಗೂ ಮಹಿಳಾ ಪ್ರಪಂಚದ ಆಗುಹೋಗುಗಳ ಮೇಲೆ ಈ ಪತ್ರಿಕೆ ಕನ್ನಡಿ ಹಿಡಿವ ಕೆಲಸ ಮಾಡುತ್ತಿತ್ತು, ಜಯಲಕ್ಷ್ಮಿ ಆರ್. ಶ್ರೀನಿವಾಸನ್, ಪ್ರತಿಭಾ, ಸರಸ್ವತಿದೇವಿ ಗೌಡರ, ಬಾಲಾಂಬ, ಟಿ.ಎಸ್.ರುಕ್ಮಾಯಿ, ಎಂ.ಕೆ. ಜಯಲಕ್ಷ್ಮಿ, ಸರೋಜಿನಿ ಮಹಿಷಿ, ಚಿ.ನ.ಮಂಗಳ ಮುಂತಾದವರು ಈ ಪತ್ರಿಕೆಗೆ ಕಥೆ, ಲೇಖನಗಳನ್ನು ಬರೆಯುತ್ತಿದ್ದರು.

ಹಲವಾರು ಮಹಿಳೆಯರಿಗೆ ಬರೆಯಲು ಪ್ರಚೋದಿಸಿ ಬರವಣಿಗೆಯಲ್ಲಿ ಆಸಕ್ತಿ ಬರುವಂತೆ ಮಾಡಿದರು. ಪತ್ರಿಕೆಯ ಪ್ರಥಮ ಪುಟವನ್ನು ಲಕ್ಷ್ಮಮ್ಮನವರೇ ಬರೆಯುತ್ತಿದ್ದರು ಎನಿಸುತ್ತದೆ. ಈ ಪತ್ರಿಕೆಯನ್ನು ಎಲ್ಲ ಹೆಣ್ಣುಮಕ್ಕಳ ಶಾಲೆಗಳಿಗೆ ಖರೀದಿಸಲು ಸರ್ಕಾರದ ಅನುಮತಿ ಇತ್ತು. ಇವರ ಮಕ್ಕಳು ದೊಡ್ಡವರಾಗುತ್ತ ಬೇರೆ ಬೇರೆ ಓದು, ವಿದ್ಯೆಗಳಿಗೆ ತೊಡಗಿಸಿಕೊಂಡಂತೆಲ್ಲ, ಧನ ಬಲವಲ್ಲದೆ ಜನಬಲವೂ ಕಡಿಮೆಯಾಯಿತು. ನೆರವು ಕುಗ್ಗಿದಂತೆ, ಇದು ಮಾಸಿಕ ಪತ್ರಿಕೆಯಾಗಿ ಕೆಲಕಾಲ ನಡೆದು, ಆ ನಂತರ 1956ರ ಹೊತ್ತಿಗೆ ನಿಂತುಹೋಯಿತು. 'ಕೊಂಕಮ್ಮನವರ ಪದಗಳು' ಎಂಬ ಜಾನಪದ ಹಾಡುಗಳ ಬಗ್ಗೆ ವಿಮರ್ಶಾ ಕೃತಿ, ಏಕಾಂಕಗಳು, ಕೆಲವಾರು ಆಕಾಶವಾಣಿ ನಾಟಕಗಳು, ಅವರ ರಚನೆಗಳು.

ರೈಲಿನಲ್ಲಿ ಸಾಮಾನ್ಯರೊಡನೆ, ಜನಸಾಮಾನ್ಯರ ಕಷ್ಟಕೋಟಲೆಗಳ ಬಗ್ಗೆ ತಿಳಿದುಕೊಳ್ಳುವ ಸಲುವಾಗಿಯೇ ಮೂರನೇ ದರ್ಜೆಯ ಬೋಗಿಯಲ್ಲಿ ಪ್ರಯಾಣ ಮಾಡುತ್ತಿದ್ದುದು, ಕೊಳಚೆ ಪ್ರದೇಶಗಳಲ್ಲಿ ಮಹಿಳಾ ಮಂಡಲ ಕಟ್ಟುವುದು, ಅವರನ್ನು ಸಾಕ್ಷರರನ್ನಾಗಿ ಮಾಡುವುದು, ಟ್ಯಾಕ್ಸಿ ರಿಕ್ಷಾಗಳನ್ನು ಹತ್ತದೇ ನಡೆದೇ ಹೋಗುತ್ತಿದ್ದುದು, ಮೊದಲು ಭಜನೆಯ ಗುಂಪು ಕಟ್ಟಿ ಆನಂತರ ಅದನ್ನೇ ಮಹಿಳಾ ಸಮಾಜವಾಗಿ ನೊಂದಣಿ ಮಾಡುವುದು, ಇತ್ಯಾದಿಗಳೆಲ್ಲ ಲಕ್ಷ್ಮಮ್ಮನವರಿಗೆ, ಸಾಮಾನ್ಯ ಜನರ ಬಗ್ಗೆ ಇದ್ದ ಕಾಳಜಿಯನ್ನು ತೋರಿಸುತ್ತದೆ.

ಇಂದಿನ ಕಾಲದ ಬಹುವಿಧದ ಪ್ರಶಸ್ತಿಗಳು ಆಗ ಇದ್ದಿದ್ದಲ್ಲಿ, ಲಕ್ಷ್ಮಮ್ಮನವರು ಸಲ್ಲಿಸಿದ ಸಮಾಜ ಸೇವೆಗಾಗಿ, ಅವರ ಗಾತ್ರಕ್ಕಿಂತ ಪ್ರಶಸ್ತಿಗಳ ಗಾತ್ರವೇ ಹೆಚ್ಚಾಗುವಷ್ಟು ಪ್ರಶಸ್ತಿಗಳು ಲಭ್ಯವಾಗುತ್ತಿದ್ದುವೇನೋ. ಆದರೆ, ಅವರಿಗೆ ಸಿಕ್ಕ ಪ್ರಶಸ್ತಿ ಬಗ್ಗೆ ಅವರ ಮಕ್ಕಳಿಗೆ ಕೇಳಿದರೆ, ಅವರ ನೆನಪಿನ ಸರಕಿನಿಂದ ಮೇಲೆಳುವುದು ಒಂದೇ ಒಂದು ಸಂಗತಿ. ಅದು ತಮ್ಮ ತಾಯಿಯ ಯಾವುದೋ ಒಂದು ಕಥೆಗೆ ಎಪ್ಪತ್ತೈದು ರೂಪಾಯಿ ಬಹುಮಾನ ಬಂದಿತ್ತು ಎಂಬುದು. ರೇಷ್ಮೆ ಚೀಲದಲ್ಲಿ ಎಪ್ಪತ್ತೈದು ಹೊಸ ಹೊಸ ನಾಣ್ಯಗಳನ್ನು ಬಹುಮಾನವಾಗಿ ಅವರ ತಾಯಿ ತಂದಿದ್ದರು ಎಂಬುದಷ್ಟೆ, ಆಗ ತೀರ ಚಿಕ್ಕವರಿದ್ದ, ಅವರ ಮಗ ಮಾಧು ಮೂರ್ಚಿಂಗ್ ಅವರಿಗೆ ನೆನಪು. ಲಕ್ಷ್ಮಮ್ಮನವರ ಒಂದು ಏಕಾಂಕ ನಾಟಕಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ, ಹೊಸ ಸಾಹಿತ್ಯ ಶೀರ್ಷಿಕೆಯಲ್ಲಿ ವೆಂಕಾಜಿರಾವ್ ಬಹುಮಾನ ಲಭಿಸಿತ್ತು.

ಜನಪದ ಗೀತೆಗಳ ಸಂಗ್ರಹಣೆ, ಶಾಸನಗಳ ಸಂಶೋಧನೆ, ಇತಿಹಾಸ ಅಧ್ಯಯನ ಇತ್ಯಾದಿ ಲಕ್ಷ್ಮಮ್ಮನವರ ಇನ್ನಿತರ ಆಸಕ್ತಿಗಳು. 1962ರಲ್ಲಿ ಚೈನಾ ಆಕ್ರಮಣ ನಡೆಸಿದಾಗ, ಎಲ್ಲ ಕಡೆಯಿಂದ ನೆರವಿಗಾಗಿ, ಹಣ ಮತ್ತು ವಸ್ತುಗಳು ಸಂಗ್ರಹಗೊಳ್ಳತೊಡಗಿದಾಗ, ದೇಶದ ರಕ್ಷಣಾ ನಿಧಿಗೆ, ತಮ್ಮಲ್ಲಿದ್ದ ಎಲ್ಲ ಆಭರಣಗಳನ್ನು ದಾನ ಮಾಡಿದ ಮಹಿಳೆ ಈ ಎಂ.ಆರ್. ಲಕ್ಷ್ಮಮ್ಮನವರು. ಖಾದಿ ವಸ್ತ್ರ ಧರಿಸುತ್ತಿದ್ದ ಸ್ವದೇಶಿ ಪ್ರೇಮದ ಈಕೆ ತಮ್ಮ ಕೊನೆಯುಸಿರು ಎಳೆದಿದ್ದು 1984ರ ಜೂನ್ ತಿಂಗಳಲ್ಲಿ.

——— * ———

ಅನುವಾದ ಕ್ಷೇತ್ರದ ಮುಕುಟಮಣಿ ಎಚ್.ವಿ. ಸಾವಿತ್ರಮ್ಮ

ಎಲ್.ವಿ. ಶಾಂತಕುಮಾರಿ

ಬಾಲ್ಯ, ವಿದ್ಯಾಭ್ಯಾಸ

ತಮ್ಮ ಸಮಕಾಲೀನ ಸಂಪ್ರದಾಯಬದ್ಧ ವಿಚಾರಧಾರೆಯೊಡನೆ, ಆಧುನಿಕ ವಿಚಾರಧಾರೆಯನ್ನು ಮೈಗೂಡಿಸಿಕೊಂಡಿದ್ದ ಎಚ್.ವಿ.ಸಾವಿತ್ರಮ್ಮನವರ ಸ್ಥಾನ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟವಾದದ್ದು. ತಿರುಮಲಾಂಬ, ಶ್ಯಾಮಲಾದೇವಿ, ಕೊಡಗಿನ ಗೌರಮ್ಮ, ಸರಸ್ವತೀಬಾಯಿ ರಾಜವಾಡೆ, ತಿರುಮಲೆ ರಾಜಮ್ಮ ಮುಂತಾದ ಲೇಖಕಿಯರ ಸಾಲಿನಲ್ಲಿದ್ದು ತಮ್ಮದೇ ಆದ ವೈಶಿಷ್ಟ್ಯಗಳನ್ನುಳಿಸಿಕೊಂಡಿದ್ದ ಲೇಖಕಿ ಸಾವಿತ್ರಮ್ಮ. ಇವರ ಎಲ್ಲ ಕೃತಿಗಳಲ್ಲಿಯೂ, ಸ್ತ್ರೀಸಂವೇದನೆ, ಸ್ತ್ರೀಪರ ಕಾಳಜಿ, ಸ್ತ್ರೀಪುರುಷ ಸಂಬಂಧದ ಹಲವು ಆಯಾಮಗಳು ಅನಾವರಣಗೊಳುತ್ತವೆ.

ಶ್ರೀಮಂತ ಸುಸಂಸ್ಕೃತ ಮನೆತನದಲ್ಲಿ ಜನಿಸಿದ ಸಾವಿತ್ರಮ್ಮನವರಿಗೆ ಹಲವಾರು ಸದ್ಗುಣಗಳು, ಮಾನಸಿಕ ದೃಢತೆ, ಬುದ್ಧಿಮತ್ತೆಗಳು ಆನುವಂಶಿಕವಾಗಿ ಮೈಗೂಡಿಬಂದಿದ್ದವು. ಸಾವಿತ್ರಮ್ಮನವರ ತಾತ, ಹೆಬ್ಬೆಳಲು ಮೇಲ್ಪನೂರು ನಂಜುಂಡಯ್ಯನವರು ತಮ್ಮ ಬುದ್ಧಿಮತ್ತೆ ಮತ್ತು ಕಠಿಣ ಪರಿಶ್ರಮಗಳಿಂದಾಗಿ, ಮೈಸೂರು, ಮದರಾಸುಗಳಲ್ಲಿ, ಎಂ.ಎ.ಬಿ.ಎಲ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಅಸಿಸ್ಟೆಂಟ್ ಕಮೀಷನರಾಗಿ ಉದ್ಯೋಗ ಪ್ರಾರಂಭಿಸಿದ್ದವರು. ಅವರು ಮನೆಯಲ್ಲಿ ಆಡುತ್ತಿದ್ದ ಭಾಷೆ ತೆಲುಗು ಆದರೂ ಕನ್ನಡ ಸಾಹಿತ್ಯದ ಬಗೆಗೆ ವಿಶೇಷ ಒಲವು. ಹಾಗೆಯೇ ಇತಿಹಾಸ, ರಾಜಕಾರಣದಲ್ಲಿಯೂ ಅವರಿಗೆ ಆಸಕ್ತಿ. ಕನ್ನಡ ಭಾಷೆಯ, ಸಾಹಿತ್ಯದ ಸರ್ವಾಂಗೀಣ ಅಭಿವೃದ್ಧಿಯಾಗಬೇಕೆಂಬ ಆಶಯದಿಂದ, ಕನ್ನಡಾಭಿಮಾನಿಗಳೊಡನೆ ಸೇರಿ 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸಂಸ್ಥಾಪಿಸಿ, ಅದರ ಸಂಸ್ಥಾಪಕರಲ್ಲಿ ಒಬ್ಬರಾದರು, ಮತ್ತು ವ್ಯವಹಾರ ದೀಪಿಕೆ ವ್ಯವಹಾರ ಶಾಸ್ತ್ರ ಲೇಖಬೋಧಿನಿ ಮುಂತಾದ ಕೃತಿಗಳನ್ನು ರಚಿಸಿದ ದೂರದರ್ಶಿಗಳು. ಇಂತಹ ನಂಜುಂಡಯ್ಯನವರ ಮಗ ಎಚ್.ವಿ. ರಾಮರಾವ್ ಮತ್ತು ಅವರ ಪತ್ನಿ ಮೀನಾಕ್ಷಮ್ಮನವರ ಮಗಳಾಗಿ 1913ನೇ ಮೇ ತಿಂಗಳ ಎರಡನೇಯ ತಾರೀಖು, ಸಾವಿತ್ರಮ್ಮ ಬೆಂಗಳೂರಿನಲ್ಲಿ ಜನಿಸಿದರು.

ಸಾವಿತ್ರಮ್ಮನವರು ಜನಿಸಿದ ಕಾಲದಲ್ಲಿ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಯಾವುದೇ ಅನುಕೂಲವಾಗಲಿ, ಪ್ರೋತ್ಸಾಹವಾಗಲಿ ಇರಲಿಲ್ಲ. ಶ್ರೀಮಂತರು, ಮಧ್ಯಮ ಮೇಲ್ದರ್ಜೆಯ ಮಧ್ಯಮ ವರ್ಗದವರು ಎನ್ನದೆ, ಎಲ್ಲ ಹೆಣ್ಣು ಮಕ್ಕಳಿಗೂ ಸಾಮಾಜಿಕ ಸಾಂಪ್ರದಾಯಕ ಕಟ್ಟುಪಾಡುಗಳಿರುತ್ತಿದ್ದವು. ಇಂತಹ ಸನ್ನಿವೇಶದಲ್ಲಿಯೂ, ಸಾವಿತ್ರಮ್ಮ ಕಾಲೇಜು ವಿದ್ಯಾಭ್ಯಾಸ ಮುಗಿಸಿ, ಬಿ.ಎ.ಪದವಿ ಪಡೆದದ್ದು ಆಶ್ಚರ್ಯದ ಸಂಗತಿ. ಎಳೆಯ ಹುಡುಗಿ ಸಾವಿತ್ರಮ್ಮನಿಗೆ ವಿದ್ಯಾಭ್ಯಾಸಕ್ಕೆ ಪ್ರೇರಣೆ, ಪ್ರೋತ್ಸಾಹಗಳು ದೊರೆತಿದ್ದು ದೊಡ್ಡಪ್ಪನವರಿಂದ. ಮೈಸೂರಿನ ಲಂಡನ್ ಮಿಷನ್ ಸ್ಕೂಲಿನಲ್ಲಿ ಲೆಕ್ಕ, ಇಂಗ್ಲಿಷ್ ಮುಂತಾದ ವಿಷಯಗಳನ್ನು ಕಲಿಸುತ್ತಿದ್ದ ಅವರಿಗೆ ಆಪರೇಷನ್‌ನಿಂದಾಗಿ ಕಣ್ಣಿನ ದೃಷ್ಟಿ ಹೋಗಿ ಬಿಟ್ಟಿತ್ತು. ಅವರ ಜೊತೆಯಲ್ಲಿರಲೆಂದು ಸಾವಿತ್ರಮ್ಮನವರ ಅಕ್ಕನನ್ನು ದೊಡ್ಡಪ್ಪನ ಮನೆಗೆ ಕಳಿಸಿಕೊಟ್ಟರು. ಅವರು ಸಾವಿತ್ರಮ್ಮನವರ

ಅಕ್ಕ ಎಸ್.ಎಸ್.ಎಲ್.ಸಿ. ತೇರ್ಗಡೆಯಾಗುವಂತೆ ಶಿಕ್ಷಣ ಕೊಡಿಸಿದರು. ಇದು ಸಾವಿತ್ರಮ್ಮನವರೂ ಶಿಕ್ಷಣ ಪಡೆಯಲು ಅನುಕೂಲವಾಯಿತು. ಆರೇಳು ವರ್ಷಗಳವರೆಗೂ ಮೈಸೂರಿನ ಲಂಡನ್ ಮಿಷನ್ ಸ್ಕೂಲಿಗೇ ಹೋಗುತ್ತಿದ್ದ ಸಾವಿತ್ರಮ್ಮನವರಿಗೆ ತಮ್ಮ ತಂದೆ, ಮ್ಯಾಜಿಸ್ಟ್ರೇಟ್ ಆಗಿದ್ದ ರಾಮರಾವ್ ಅವರು, ಬೇರೆ ಬೇರೆ ಊರಿಗೆ ವರ್ಗವಾಗಿ ಹೋಗುತ್ತಿದ್ದುದರಿಂದಾಗಿ, ಒಂದೇ ಕಡೆ ಶಿಕ್ಷಣ ಪಡೆಯಲು ಸಾಧ್ಯವಾಗಲಿಲ್ಲ. ರಾಮರಾವ್ ಅವರಿಗೆ ರಾಮನಗರಕ್ಕೆ ವರ್ಗವಾದಾಗ, ಸಾವಿತ್ರಮ್ಮ ಲೋಯರ್ ಸೆಕೆಂಡರಿಯ ಎರಡನೆಯ ಫಾರಂನಲ್ಲಿ ಓದುತ್ತಿದ್ದರು. ಆ ಶಾಲೆಯಲ್ಲಿ ಆಗ ಎರಡನೆಯ ಫಾರಂನಲ್ಲಿ ಓದುತ್ತಿದ್ದ ಹುಡುಗಿಯರು ಯಾರೂ ಇರಲೇ ಇಲ್ಲವಂತೆ! ಇಡೀ ತರಗತಿಯಲ್ಲಿ ಗಂಡು ಹುಡುಗರ ಜೊತೆಗೆ ಒಂದೇ ಹುಡುಗಿಯನ್ನು ಕೂಡಿಸುವುದು ಹೇಗೆ ಎಂದು ಈ ಹುಡುಗಿಯ ಜೊತೆಗೆ ಒಂದನೇ ಫಾರಂನಲ್ಲಿ ಓದುತ್ತಿದ್ದ ಹುಡುಗಿಯನ್ನು ಕೂಡಿಸುತ್ತಿದ್ದರಂತೆ! ಸಾವಿತ್ರಮ್ಮನವರ ತಂದೆಗೆ ರಾಮನಗರದಿಂದ ಹಾಸನಕ್ಕೆ ವರ್ಗವಾಯಿತು, ಹಾಸನದಲ್ಲಿ ಆಗಿನ್ನು ಬಾಲಕಿಯರ ಪ್ರೌಢಶಾಲೆ ಇರಲಿಲ್ಲವಾಗಿ ಸಾವಿತ್ರಮ್ಮ ಹುಡುಗರ ಶಾಲೆಯಲ್ಲಿಯೇ ಕಲಿಯಬೇಕಾಯಿತು: ಹಾಗಾಗಿ ಈ ಹುಡುಗಿ ದೊಡ್ಡ ಗಂಡುಹುಡುಗರ ಕೀಟಲೆಗೂ ಗುರಿಯಾಗುತ್ತಿದ್ದಳಂತೆ! (1925ರಲ್ಲಿ).

ಸಾವಿತ್ರಮ್ಮನವರ ಬಾಲ್ಯ ಮತ್ತು ವಿದ್ಯಾಭ್ಯಾಸ, ಭಾರತದ ಇತಿಹಾಸದಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ದೃಷ್ಟಿಯಿಂದ ವಿಶಿಷ್ಟವಾದದ್ದು. ಇತಿಹಾಸದ ಆ ನಿರ್ದಿಷ್ಟ ಕಾಲಘಟ್ಟದಲ್ಲಿ, ಶ್ರೀಮಂತ ಮನೆತನದ ಹುಡುಗಿಯರಿಗೂ ಶಾಲಾ ಶಿಕ್ಷಣ ದೊರೆಯುವುದು ಅಪರೂಪವೇ ಆಗಿತ್ತು. ಎಲ್ಲ ಮನೆಗಳಲ್ಲಿಯೂ ಹೆಣ್ಣುಮಕ್ಕಳಿಗೆ ಶಿಸ್ತು, ಸಂಯಮ, ಗೃಹೋಪಯೋಗಿ ಶಿಕ್ಷಣ ಮಾತ್ರ ಅವಶ್ಯಕವೆಂದು ಭಾವಿಸಲಾಗುತ್ತಿತ್ತು. ಮ್ಯಾಜಿಸ್ಟ್ರೇಟ್‌ರ ಮಗಳಾಗಿದ್ದಾಗ್ಯೂ, ಸಾವಿತ್ರಮ್ಮ ಹದಿಮೂರು ವರ್ಷಕ್ಕೇ ಮದುವೆಯಾಗಬೇಕಾಯಿತು. ಆ ವೇಳೆಗೆ, ಮೈಸೂರಿನ ಮಿಷನ್ ಸ್ಕೂಲಿನಲ್ಲಿ ಸಾವಿತ್ರಮ್ಮ ಎಸ್.ಎಸ್.ಎಲ್.ಸಿ ಓದಿ ಮುಗಿಸಿದ್ದರು. ಸಾವಿತ್ರಮ್ಮನವರ ಸೋದರ ಮಾವನ ಮಗ ಎಚ್.ವಿ. ನಾರಾಯಣರಾವ್ ಅಧ್ಯಯನಕ್ಕಾಗಿ ವಿದೇಶಕ್ಕೆ ಹೋಗಬೇಕಾಯಿತು. ಅಗ ಹುಡುಗನಿಗೆ ಮದುವೆ ಮಾಡಿಯೇ ವಿದೇಶಕ್ಕೆ ಕಳಿಸಬೇಕೆಂಬ ಹಿರಿಯರ ಅಭಿಪ್ರಾಯದಿಂದಾಗಿ ಹದಿಮೂರು ವರ್ಷದ ಸಾವಿತ್ರಮ್ಮನವರ ವಿವಾಹವಾಯಿತು. ಈ ವಿವಾಹ, ವಿದ್ಯಾನಾಶಕ್ಕೆ ಕಾರಣವಾಗದಿದ್ದುದು ಸಾವಿತ್ರಮ್ಮನವರ ಮತ್ತು ಕನ್ನಡ ಸಾಹಿತ್ಯದ ಅದೃಷ್ಟವೆನ್ನಬೇಕು. ಪತಿ ವಿದೇಶದಲ್ಲಿ ಅಧ್ಯಯನ ಮಾಡುತ್ತಿದ್ದಾಗ. ಪತ್ನಿ ಕಾಲೇಜಿಗೆ ಸೇರಿ, ಶಿಕ್ಷಣವನ್ನು ಮುಂದುವರೆಸಿ 1931ರಲ್ಲಿ ಮೂರು ಚಿನ್ನದ ಪದಕ ಮತ್ತು ಬಹುಮಾನಗಳೊಂದಿಗೆ, ಬಿ.ಎ.ಪದವಿ ಗಳಿಸಿದರು. ಕಾನ್ವೆಂಟ್ ಶಿಕ್ಷಣದಿಂದಾಗಿ ಅದರಲ್ಲಿ ಮೂಡಿದ್ದ ಇಂಗ್ಲಿಷ್ ಸಾಹಿತ್ಯ ಶಕ್ತಿ, ಮೊದಲು ಮೊದಲು ಅವರನ್ನು ಕನ್ನಡ ಸಾಹಿತ್ಯದಿಂದ ದೂರವಿರಿಸಿದರೂ, ಕಾಲೇಜಿನಲ್ಲಿ ತೀ.ನಂ.ಶ್ರೀ. ಅವರ ಪಾಠ, ಉಪನ್ಯಾಸಗಳನ್ನು ಕೇಳುತ್ತಾ ಅವರಿಗೆ ಕನ್ನಡ ಸಾಹಿತ್ಯದಲ್ಲಿ ಅಭಿರುಚಿ ಮೊಳೆಯಿತು.

ಗೃಹಕೃತ್ಯ ನಿರ್ವಹಣೆ–ಸೃಜನಶೀಲ ಕಾರ್ಯ

ಎಸ್.ಎಸ್.ಎಲ್.ಸಿ. ಹಂತದಲ್ಲಿಯೇ ಸಾವಿತ್ರಮ್ಮನವರ ಮನಸ್ಸಿನಲ್ಲಿ ಬರೆಯುವ ಆಸೆ ಮೂಡಿತ್ತು. ಕಾಲೇಜಿನಲ್ಲಿ ಓದುತ್ತಿದ್ದಾಗ ತೀ.ನಂ.ಶ್ರೀ. ಅವರ ಪ್ರಭಾವಲಯಕ್ಕೆ ಸಿಲುಕಿ, ಕನ್ನಡ ಸಾಹಿತ್ಯದ ಬಗೆಗೆ ಆಸ್ಥೆ ಬೆಳೆಯಿತು. ಅವರ ಪತಿ ವಿದೇಶದಿಂದ ಹಿಂದಿರುಗಿದ ನಂತರ ಸಂಸಾರ ಮಕ್ಕಳು ಮನೆಯ ನಿರ್ವಹಣೆ, ಈ ಗಡಿಬಿಡಿಯಲ್ಲಿ ಸೃಜನ ಕ್ರಿಯೆಗೆ ಇಂಬು ಸಿಕ್ಕಿರಲಿಲ್ಲ. ಸಾವಿತ್ರಮ್ಮ ಮತ್ತು ನಾರಾಯಣರಾಯರದು ಇಬ್ಬರು ಗಂಡುಮಕ್ಕಳು ಮತ್ತು ಮೂರು ಹೆಣ್ಣುಮಕ್ಕಳ ಕುಟುಂಬ. ಪತಿ ನಾರಾಯಣರಾಯರೂ ಸಹ ಕನ್ನಡ ಸಾಹಿತ್ಯಾಸಕ್ತರು. ಪತಿ, ರಾಜ್ಯದ ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಪವರ್ ಕಾರ್ಪೊರೇಷನ್‌ನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಮಕ್ಕಳು ಶಾಲೆಗೆ ಹೋಗತೊಡಗಿ ಗೃಹಕೃತ್ಯದಿಂದ ಸ್ವಲ್ಪ ಬಿಡುವು ದೊರೆತಾಗ ತಾವು ಕಥೆಗಳನ್ನು ಬರೆಯಲು ಆರಂಭಿಸಿದುದಾಗಿ ಸಾವಿತ್ರಮ್ಮ ಹೇಳಿದ್ದಾರೆ. 'ಕಥೆಗಾರ' 'ಕಥಾಂಜಲಿ' ಮೊದಲಾದ ನಿಯತಕಾಲಿಕಗಳಿಗೆ ಕಥೆ

ಬರೆದು ಕಳಿಸುತ್ತಿದ್ದರು. ಎಷ್ಟೋ ಬಾರಿ ಸ್ಪರ್ಧೆಗೂ ಕಥೆಗಳನ್ನು ಕಳಿಸುತ್ತಿದ್ದರು. ಐದು ರೂಪಾಯಿ ಬಹುಮಾನ ಬಂದಾಗ ಸಂತೋಷಪಡುತ್ತಲೂ ಇದ್ದರು. ಆದರೂ ಕಥೆ ಬರೆದರೆ ಪ್ರಕಟವಾಗುತ್ತೆ, ಪ್ರಕಟವಾಗಬೇಕು ಎನ್ನುವ ದೃಷ್ಟಿಕೋನದಿಂದ ಬರೆಯುತ್ತಿರಲಿಲ್ಲ, 'ಕಾವ್ಯಾಲಯ' ಪ್ರಕಾಶನದ ಶ್ರೀ ಚಿದಂಬರಂ ಅವರ ಪರಿಚಯವಾದ ಮೇಲೆ ಸಾವಿತ್ರಮ್ಮನವರ ಮೊದಲ ಕಥಾ ಸಂಕಲನ "ನಿರಾಶ್ರಿತೆ" ಪ್ರಕಟವಾಯಿತು, ಡಿ.ವಿ. ಗುಂಡಪ್ಪನವರು, ಇವರ ಕಥೆಗಳನ್ನು ಓದಿ, ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ ಸಲಹೆ ಕೊಡುತ್ತಿದ್ದುದು ಸಾವಿತ್ರಮ್ಮನವರ ಬರವಣಿಗೆಯ ಬೆಳವಣಿಗೆಗೆ ಸಹಾಯವಾಯಿತು. ಪತಿಯೂ ಸೇರಿದಂತೆ, ಮನೆಯಲ್ಲಿ ಯಾರೂ ಇವರ ಬರವಣಿಗೆಯನ್ನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಆದರೆ ಬರವಣಿಗೆಗೆ ಅಡ್ಡಿಯನ್ನೂ ಉಂಟುಮಾಡಲಿಲ್ಲ. ತಮ್ಮ ಬಾಲ್ಯದಲ್ಲಿನ ಪರಿಸರದ ಪ್ರಭಾವ, ಶಿಕ್ಷಣ, ಜೀವನಾನುಭವ, ಬದಲಾಗುತ್ತಿದ್ದ ಸಾಮಾಜಿಕ ಪರಿಸರ ಹಾಗೂ ಜೀವನ ಮೌಲ್ಯಗಳ ಬಗೆಗಿನ ಸೂಕ್ಷ್ಮಸಂವೇದನಾಶೀಲತೆಗಳು ಸಮ್ಮಿಳಿತಗೊಂಡು, ಸಾವಿತ್ರಮ್ಮನವರ ಕಥೆಗಳ ಸಂರಚನೆಯಲ್ಲಿ ನವಿರಾದ ಪ್ರತಿಭಟನೆ, ವ್ಯಂಗ್ಯ ಹೆಣ್ಣಿನ ಅಸಹಾಯಕತೆಯೊಡನೆಯೇ, ಅವಳು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ ದಿಟ್ಟ ನಿಲುವುಗಳು ಕಂಡುಬರುತ್ತವೆ.

ಸಾವಿತ್ರಮ್ಮನವರಿಗೆ ಇಂಗ್ಲಿಷ್ ಸಾಹಿತ್ಯದ ಮೇಲೆ ಅಪಾರ ಪ್ರೀತಿಯಿದ್ದು ಆ ಪ್ರೀತಿ ಅವರನ್ನು ಅನೇಕ ಕೃತಿಗಳ ಅನುವಾದಗಳಿಗೆ ಪ್ರೇರೇಪಿಸಿತು. ಅರವತ್ತರ ದಶಕದಲ್ಲಿ ಅಮೆರಿಕೆಯ ಸ್ತ್ರೀವಾದಿ ಬೆಟ್ಟಿ ಫ್ರೈಡನ್ ವಿವರಿಸಿದ "ಫೆಮಿನೈನ್ ಮಿಸ್ಟಿಕ್"ನ ಆಲೋಚನೆಗಳ ಛಾಯೆಯನ್ನು ಸಾವಿತ್ರಮ್ಮನವರ ಕೃತಿಗಳಲ್ಲಿ ಕಾಣಬಹುದು. ರವೀಂದ್ರನಾಥ ಠಾಗೋರ್, ಭವಾನಿ ಭಟ್ಟಾಚಾರ್ಯರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಸಾವಿತ್ರಮ್ಮನವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಹಾಗೆಯೇ ಎಫ್.ಎಫ್.ಡಬ್ಲ್ಯೂ ಬೇಯ್ಸ್‌ನ ಕೃತಿಗಳನ್ನು, ಚೆಕಾಫ್‌ನ ಕೃತಿಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರಿಸಿದರು. ಇತಿಹಾಸದ ಬಗೆಗೆ ಅವರಿಗಿದ್ದ ಪ್ರೇಮದಿಂದಾಗಿ ಸ್ಟೇನ್‌ಲೇ ಲೇನ್‌ಪೂಲ್‌ನ "The Medieval Histry" ಮತ್ತು ಲೂಯಿ ಫಿಷರ್‌ನ "Mahatma Gandhi; His message to the world" ಈ ಎರಡೂ ಮಹತ್ವದ ಕೃತಿಗಳು ಸಾವಿತ್ರಮ್ಮನವರಿಂದ ಅನುವಾದಗೊಂಡವು. ಹನ್ನೊಂದು ಅನುವಾದಿತ ಕೃತಿಗಳು, ಐದು ಕಥಾ ಸಂಕಲನಗಳು, ಎರಡು ಕಾದಂಬರಿಗಳು, ಒಂದು ಜೀವನ ಚರಿತ್ರೆ (ತಾತ ನಂಜುಂಡಯ್ಯನವರದು), ಸಾವಿತ್ರಮ್ಮನವರ ಸಾಹಿತ್ಯ ಕೃಷಿಯ ಫಲಗಳು.

ವ್ಯಕ್ತಿತ್ವ ವಿಕಸನ

ಸಾವಿತ್ರಮ್ಮನವರ ಬಾಲ್ಯದ ಸಮಯದಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಮತ್ತು ಆಟಪಾಟಗಳಿಗೆ ಸಮಾಜ ಗಮನವನ್ನೇ ಕೊಡುತ್ತಿರಲಿಲ್ಲ. ಹೆಣ್ಣಮಕ್ಕಳು ಜೋರಾಗಿ ನಕ್ಕರೂ, "ಅದೇನು ಗಂಡಸಿನ ತರಹ ಅಷ್ಟು ಗಟ್ಟಿಯಾಗಿ ನಗುವುದು" ಎಂದು ಹೆಣ್ಣುಮಕ್ಕಳ ನಗುವನ್ನು ಹತ್ತಿಕ್ಕುತ್ತಿದ್ದ ಕಾಲಘಟ್ಟದಲ್ಲಿ ಸಾವಿತ್ರಮ್ಮ ತಮ್ಮದೇ ಆದ ರೀತಿಯಿಂದ ಈ ಮನೋಭಾವವನ್ನು ಪ್ರತಿಭಟಿಸುತ್ತಿದ್ದರು. ಗೋಡೆ ಹಿಡಿದು ಸೈಕಲ್ ಸವಾರಿ ಮಾಡಿ ಸೈಕಲ್ ಕಲಿತಿದ್ದರು. ತನ್ನ ತಮ್ಮನ ಮೋಟಾರ್ ಸೈಕಲ್ ಹತ್ತಿ ಸ್ಟಾರ್ಟ್ ಮಾಡಿಬಿಟ್ಟು, ಮನೆಯ ಆವರಣದಲ್ಲಿಯೇ ಸುತ್ತಿ ಸುತ್ತಿ, ವಾಹನವನ್ನು ನಿಲ್ಲಿಸಲೂ ಬರದೇ ಮನೆಯವರಿಗೆಲ್ಲರಿಗೂ ಗಾಬರಿ ಹುಟ್ಟಿಸಿದ್ದರು. ಕಾರ್ ಡ್ರೈವಿಂಗ್ ಕೂಡ ಕಲಿತಿದ್ದರು. ಹೆಣ್ಣು ಮಕ್ಕಳು ಚಿಕ್ಕವಯಸ್ಸಿನಲ್ಲಿಯೇ ಸೀರೆಯನ್ನೇ ಉಡಬೇಕೆಂಬ ಕಡ್ಡಾಯ ನಿಯಮವಿದ್ದ ಕಾಲದಲ್ಲಿ, ಸೀರೆಯನ್ನು ಕಚ್ಚೆ ಹಾಕಿ ನದಿಯಲ್ಲಿ ಈಜು ಕಲಿಯಲೂ ಪ್ರಯತ್ನಿಸಿದ್ದುಂಟು. ಮರ ಹತ್ತುವುದರಲ್ಲಿಯೂ ಪ್ರವೀಣೆ ಮರಹತ್ತಿ ಸೀಬೆ ಕಾಯಿ ಕೀಳುವ ಸಾಹಸ ಪ್ರವೃತ್ತಿ ಗರ್ಭಿಣಿಯಾದಾಗಲೂ ಉಳಿದುಬಂದಿತ್ತೆಂದು ತಿಳಿದಾಗ ಆಶ್ಚರ್ಯವಾಗುತ್ತದೆ. ಸಾವಿತ್ರಮ್ಮ ಗರ್ಭಿಣಿಯಾಗಿದ್ದಾಗೊಮ್ಮೆ ಸೀಬೆಯ ಮರ ಹತ್ತಿ ಕಾಯಿಕೀಳಲು ಹೋಗಿ ಜಾರಿ ಬಿದ್ದು ಎಷ್ಟೋ ದಿನಗಳವರೆಗೂ ಕುಳಿತುಕೊಳ್ಳಲೂ ಸಹ ಕಷ್ಟಪಟ್ಟಿದ್ದರಂತೆ. ಅಂದರೆ, ಪುರುಷನ ಸುಖ ಸೌಕರ್ಯಗಳಿಗೆ ಪೂರಕವಾಗುವ

ಅಡುಗೆ, ಹೊಲಿಗೆ ಹಾಡು-ಹಸೆಯಂತಹ ವಿದ್ಯೆಗಳನ್ನಷ್ಟೇ ಹೆಣ್ಣುಮಕ್ಕಳು ಕಲಿಯಬೇಕೆಂದು ಸಮಾಜವು ನಿರೀಕ್ಷಿಸುತ್ತಿದ್ದ ಕಾಲದಲ್ಲಿ ಇವುಗಳನ್ನು ಹೊರತುಪಡಿಸಿದ ವಿದ್ಯೆಗಳನ್ನು ಕಲಿತುದೇ ಸಾವಿತ್ರಮ್ಮನವರ ವ್ಯಕ್ತಿತ್ವದ ವಿಶೇಷ. ಅದೇ ಒಂದು ಸಾಧನೆ. ಪತಿ ವಿದೇಶದಲ್ಲಿ ಅಧ್ಯಯನ ಮುಗಿಸಿ ಬಂದದ್ದು, ತಾವು ಕಾಲೇಜಿನಲ್ಲಿ ಅಭ್ಯಾಸ ಮಾಡಿದ್ದು ಇವುಗಳ ಪರಿಣಾಮವಾಗಿ ಸಾವಿತ್ರಮ್ಮನವರ ಮನಸ್ಸಿನಲ್ಲಿ ಆಧುನಿಕ ವಿಚಾರಗಳು ಮೊಳೆಯಲು ಆರಂಭವಾದವು. ಅವಿಭಕ್ತ ಕುಟುಂಬಕ್ಕೆ ಹಿರಿಯ ಸೊಸೆಯಾಗಿ ಬಂದ ಸಾವಿತ್ರಮ್ಮನವರಿಗೆ ತಮ್ಮ ಅತ್ತೆಯ ವಿಪರೀತ ಮಡಿಮುಡಿಗಳಲ್ಲಿ ವಿಶ್ವಾಸವಿರಲಿಲ್ಲ. ಮೂಲತಃ, ಅಡಿಗೆ ಮನೆಯ ಕೆಲಸಕಾರ್ಯಗಳು, ಅಡಿಗೆ ಮಾಡುವುದು ಇವುಗಳಲ್ಲಿ ಹೆಚ್ಚಿನ ಆಸಕ್ತಿ ಇರದಿದ್ದರೂ ಆಕೆ ಪಾಕಪ್ರವೀಣೆಯೂ ಹೌದು. ಕನ್ನಡದಂತೆಯೇ ಇಂಗ್ಲಿಷ್‌ನಲ್ಲಿಯೂ ಬರೆಯಬಲ್ಲ, ನಿರರ್ಗಳವಾಗಿ ಮಾತನಾಡಬಲ್ಲ ಪ್ರತಿಭಾವಂತೆ ಸಾವಿತ್ರಮ್ಮ. ಮಿತಭಾಷಿ, ಏಕಾಂತ ಪ್ರಿಯೆ ಶಿಸ್ತನ್ನು ರೂಢಿಸಿಕೊಂಡ ಮಹಿಳೆ. ಸಾವಿತ್ರಮ್ಮನವರು ನೇರವಾಗಿ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯಲ್ಲಿ ಭಾಗವಹಿಸದಿದ್ದರೂ, ಅವರಲ್ಲಿ ದೇಶಪ್ರೇಮ, ಸ್ವಾತಂತ್ರ್ಯ ಚಳುವಳಿಯ ಬಗೆಗೆ ಅಭಿಮಾನ ತುಂಬಿ ತುಳುಕುತ್ತಿತ್ತು. ಅವರು ಭದ್ರಾವತಿಯಲ್ಲಿದ್ದಾಗ ನಡೆದ ಒಂದು ಸಣ್ಣ ಘಟನೆ ಇದಕ್ಕೊಂದು ನಿದರ್ಶನ. ದೇಶವಿಡೀ ಮೊಟ್ಟಮೊದಲ ಸ್ವಾತಂತ್ರ್ಯೋತ್ಸವವನ್ನಾಚರಿಸಲು ಸಿದ್ಧವಾಗಿತ್ತು. ಕರ್ನಾಟಕದಲ್ಲಿ ಪ್ರತ್ಯೇಕ ಪ್ರಾಂತ್ಯದ ಬೇಡಿಕೆಗಾಗಿ, ರಾಮಸ್ವಾಮಿ ಮೊದಲಿಯಾರ್ ಅವರು ಒಂದು ಚಳುವಳಿಯನ್ನೇ ಪ್ರಾರಂಭಿಸಿದ್ದು, ಸ್ವಾತಂತ್ರ್ಯ ದಿನೋತ್ಸವನ್ನು ಆಚರಿಸುವಾಗಲೂ ಪ್ರಾಂತೀಯ ಧ್ವಜವನ್ನೇ ಹಾರಿಸಬೇಕೆಂಬ ಆಜ್ಞೆ ಹೊರಡಿಸಿದ್ದು ವಾತಾವರಣ ಬಿಗುವಾಗಿದ್ದಿತು. ಸಾವಿತ್ರಮ್ಮ ಮತ್ತು ಗೆಳತಿಯರು ತಮ್ಮ ಲೇಡೀಸ್ ಕ್ಲಬ್ಬಿನಲ್ಲಿಯೂ ಸ್ವಾತಂತ್ರ್ಯೋತ್ಸವ ಆಚರಿಸಲು ಸಿದ್ಧರಾಗಿದ್ದರು. ಕರ್ನಾಟಕದ ಧ್ವಜವನ್ನೇ ಹಾರಿಸಬೇಕೆಂಬ, ಅಸಂಬದ್ಧ ಆಲೋಚನೆಯನ್ನು ಒಪ್ಪದೇ, ಸಾವಿತ್ರಮ್ಮನವರ ನೇತೃತ್ವದ ಗೆಳತಿಯರ ತಂಡ ರಾಷ್ಟ್ರಧ್ವಜವನ್ನು ಏರಿಸಿಯೇ ಬಿಟ್ಟಿತು. ಪರಿಣಾಮ? ಇವರೆಲ್ಲರ ಹೆಸರೂ ಶಿವಮೊಗ್ಗ ಪೊಲೀಸರ ಕಪ್ಪುಪಟ್ಟಿಗೆ ಸೇರಿತು, ಮತ್ತು ಇವರ ಪತಿ ಮ್ಯಾಜಿಸ್ಟ್ರೇಟ್ ನಾರಾಯಣರಾಯರಿಗೆ, ತಕ್ಷಣವೇ ಕೆ.ಜಿ.ಎಫ್.ಗೆ ವರ್ಗವೂ ಆಯಿತು. ಆದರೂ ಸಾವಿತ್ರಮ್ಮನವರಿಗೆ ತಾವು ಮಾಡಿದ್ದು ನ್ಯಾಯ ಎನ್ನುವ ಗಟ್ಟಿ ನಿಲುವು.

ತಮ್ಮ ಎತ್ತರದ ನಿಲುವು, ಗೌರವರ್ಣ, ಸುಂದರ, ಗಂಭೀರ ವ್ಯಕ್ತಿತ್ವ, ಸರಳ ನಡೆನುಡಿ, ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿನ ಪ್ರಭುತ್ವ, ಇತಿಹಾಸ ಮತ್ತು ಸಂಶೋಧನೆಗಳಲ್ಲಿನ ಅವರ ಅಪಾರ ಆಸಕ್ತಿ ವ್ಯಕ್ತಿತ್ವದಲ್ಲಿನ ಅಪೂರ್ವ ಛವಿ ಎಲ್ಲರನ್ನೂ ಆಕರ್ಷಿಸುತ್ತಿತ್ತು. 1994ರಲ್ಲಿ ಅವರು 81 ವರ್ಷದವರಿದ್ದಾಗ ಒಮ್ಮೆ ಹೃದಯಾಘಾತವಾಯಿತು. ಆ ಆಘಾತದಿಂದ ಚೇತರಿಸಿಕೊಂಡು ಮತ್ತೆ ತಮ್ಮ ಚಟುಚಟಿಕೆಗಳಲ್ಲಿ ನಿರತರಾದರು, ಬೆಳಗಿನ ತಿರುಗಾಟ ಒಂದು ದಿನವೂ ತಪ್ಪುತ್ತಿರಲಿಲ್ಲ. ಮತ್ತೆ 1995 ಡಿಸೆಂಬರ್ 27ರಂದು ಎರಡನೆಯ ಆಘಾತವನ್ನು ತಡೆಯಲಾರದೆ ಈ ಚೇತನ ತನ್ನ ಎಂಬತ್ತೆರಡು ವರ್ಷಗಳ ದೀರ್ಘ ಜೀವನದಿಂದ ಮುಕ್ತಿ ಪಡೆಯಿತು. "ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನ" ಎಂಬ ಉಕ್ತಿ ಸಾವಿತ್ರಮ್ಮನವರ ಜೀವನಕ್ಕೆ ಹೇಳಿ ಮಾಡಿದ್ದೆನ್ನುವಂತಿದೆ.

ಸಾವಿತ್ರಮ್ಮನವರು ತಮ್ಮ ಬದುಕಿನಲ್ಲಿ ಎಂದೂ ಯಾರನ್ನು ಏತಕ್ಕಾಗಿಯೂ ಬೇಡಿದವರಲ್ಲ! ಗೌರವ, ಪ್ರಶಸ್ತಿ, ಸನ್ಮಾನಗಳಿಗೆ ಹಾತೊರೆದವರೂ ಅಲ್ಲ. ಆದರೂ ಯಾರಾದರೂ ಸನ್ಮಾನಿಸಿದರೆ ನಮ್ರತೆಯಿಂದ ಸ್ವೀಕರಿಸುತ್ತಿದ್ದರು. ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, (1925) ಸಾಹಿತ್ಯ ಅಕಾಡೆಮಿ ಪ್ರಶಸ್ತಿ, (1975) ಅನುಪಮಾ ಪ್ರಶಸ್ತಿ, (1992) ದೇ.ಜ.ಗೌ ಪ್ರತಿಷ್ಠಾನದ ಸಾವಿತ್ರಮ್ಮ ದತ್ತಿ ನಿಧಿ ಪ್ರಶಸ್ತಿ, ಸ್ವರಲಿಪಿ ಪ್ರತಿಷ್ಠಾನದ ಲಿಪಿಪ್ರಾಜ್ಞೆ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1975)ಗಳು ಸಾವಿತ್ರಮ್ಮನವರನ್ನು ಹುಡುಕಿಕೊಂಡು ಬಂದವು. ಕರ್ನಾಟಕ ಲೇಖಕಿಯರ ಸಂಘ, ಸಾವಿತ್ರಮ್ಮನವರ ಅನುವಾದ ಕೃತಿಗಳು, ಸಣ್ಣ ಕಥೆಗಳು ಮತ್ತು ಅವರ ಅತ್ಯಂತ ಮಹತ್ವದ ಕೃತಿಗಳಾದ "ಸೀತೆ-ರಾಮ-ರಾವಣ" ಮತ್ತು "ವಿಮುಕ್ತಿ" ಗಳ ಬಗೆಗೆ ಎಲ್ಲರ ಗಮನ ಸೆಳೆಯುವ ವಿಚಾರ ಸಂಕಿರಣಗಳನ್ನೇರ್ಪಡಿಸಿತು.

ಯಾವುದೇ ಪ್ರತಿ ಫಲಾಪೇಕ್ಷೆಯಿಲ್ಲದೆ, ಆತ್ಮತೃಪ್ತಿ, ಸ್ವಸಂತೋಷಕ್ಕಾಗಿ ಮಾಡಿಕೊಂಡ ಸಾಹಿತ್ಯ ರಚನೆ, ಕನ್ನಡ ಲೇಖಿಕಿಯರ ಸಾಹಿತ್ಯ ಚರಿತ್ರೆಯ ಒಂದು ಮುಖ್ಯ ಘಟ್ಟವಾಗಿ ಗುರುತಿಸಲ್ಪಟ್ಟಿದ್ದು, ಅದಕ್ಕೆ ಕಾರಣ ಅವರ ಕೃತಿಗಳಲ್ಲಿ ಕಾಣಬರುವ ಸ್ತ್ರೀಯರ ಆಧುನಿಕ ಆಲೋಚನೆಗಳು, ಹೊಸ ಧೋರಣೆ ಹಾಗೂ ಅನಿರೀಕ್ಷಿತ ಅಂತ್ಯಗಳು. 1992ರಲ್ಲಿ ಕರ್ನಾಟಕ ಲೇಖಿಕಿಯರ ಸಂಘವು ಸ್ಥಾಪಿಸಿದ "ಅನುಪಮಾ ಪ್ರಶಸ್ತಿ", ಸಾವಿತ್ರಮ್ಮನವರ "ವಿಮುಕ್ತಿ" ಕಾದಂಬರಿಗೆ ದೊರೆತಿತು. ಅದುವರೆಗೂ ತಮಗೆ ಸಂದ ಎಲ್ಲ ಪ್ರಶಸ್ತಿಗಳಿಗಿಂತಲೂ ಈ ಪ್ರಶಸ್ತಿ ತಮಗೆ ಹೆಚ್ಚು ಸಂತಸ ತಂದಿತು ಎನ್ನುತ್ತಿದ್ದರು. 1975ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಾಗ ಅವರಿಗೆ ಅರವತ್ತೆರಡು ವರ್ಷಗಳು.

ಸಾವಿತ್ರಮ್ಮನವರ ಬರಹದ ವೈಶಿಷ್ಟ್ಯ

ಕಾಲಕಾಲಕ್ಕೆ ಬದಲಾಗುತ್ತಿದ್ದ ಸ್ತ್ರೀಸಂವೇದನೆಗಳಿಗೆ ಸ್ಪಂದಿಸುತ್ತಾ, ಹೆಣ್ಣಿನ ಮನಸ್ಸಿನ ಒಳತೋಟಿಯನ್ನು ಅರ್ಥಮಾಡಿಕೊಂಡು, ಅದನ್ನು ತಮ್ಮ ಬರಹದಲ್ಲಿ ಮೂಡಿಸಿ ಯಶಸ್ವಿಯಾದವರು ಸಾವಿತ್ರಮ್ಮ. ಅವರ ಈ ಸೂಕ್ಷ್ಮ ಸಂವೇದನಾಶೀಲತೆ, ಕೇವಲ ತಮ್ಮ ಸಮಕಾಲೀನ ಸ್ತ್ರೀಯರ ಮಾನಸಿಕ ಸಂಘರ್ಷಗಳನ್ನು ಪ್ರತಿಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿರದೆ, ಪೌರಾಣಿಕ ಕಾಲಕ್ಕೆ ಹಿನ್ನಡೆದು, ಸೀತೆ, ಊರ್ಮಿಳೆ, ಕೌಸಲ್ಯೆ, ಮಂಡೋದರಿ, ರಾಮ, ರಾವಣ, ಲಕ್ಷ್ಮಣ ಮುಂತಾದ ಸ್ತ್ರೀ ಪುರುಷ ಪಾತ್ರಗಳ ಅಂತರಂಗಗಳನ್ನು, ಅಚ್ಚರಿ ಮೂಡುವಂತೆ ಅನಾವರಣಗೊಳಿಸುತ್ತದೆ. ಹಾಗೂ ಈ ಪೌರಾಣಿಕ ಪಾತ್ರಗಳ ನಡೆನುಡಿಗಳನ್ನು ಆಧುನಿಕ ವಿಚಾರ, ಹಾಗೂ ಮಾನವ ಸಹಜ ನಡೆನುಡಿಗಳ ನೆಲೆಯಿಂದ ವಿಶ್ಲೇಷಿಸುತ್ತದೆ.

"ನಿರಾಶ್ರಿತೆ" ಕಥಾ ಸಂಕಲನದಿಂದ ಮೊದಲುಗೊಂಡು, "ಸೀತೆ-ರಾಮ-ರಾವಣ", "ವಿಮುಕ್ತಿ" ಕಾದಂಬರಿಗಳವರೆಗೆ, ಸಾವಿತ್ರಮ್ಮನವರ ಎಲ್ಲ ಕೃತಿಗಳ ಸಂರಚನೆಯಲ್ಲಿ ಪಾತ್ರಗಳ ಅರಳುವಿಕೆಯಲ್ಲಿ, ವೈಚಾರಿಕ ನೆಲೆಯಲ್ಲಿ ಸ್ಪಷ್ಟ ಮಾದರಿ ಕಂಡುಬರುತ್ತದೆ. ಅವರ ಕಥಾನಕದ ಸ್ತ್ರೀಪಾತ್ರಗಳು, ಸ್ತ್ರೀವಾದದ ಪ್ರವಾದಿಗಳಾಗಲಿ, ಪುರುಷ ಪ್ರಧಾನ ಸಮಾಜದ ಕಟುಟೀಕಾಕಾರರಾಗಲಿ ಅಲ್ಲ, ಹಾಗೆಂದು ಅವು ಯಾರದೋ ಸೂತ್ರಕ್ಕೆ ಸಂಪೂರ್ಣ ಮಣಿದು ಕುಣಿಯುವ ಬೊಂಬೆಗಳೂ ಅಲ್ಲ. ತಾವು ಬದುಕುತ್ತಿರುವ ನಿರ್ದಿಷ್ಟ ಕಾಲಾವಧಿಯ, ಸಾಂಪ್ರದಾಯಕ ಚೌಕಟ್ಟಿನಲ್ಲಿ ಬದುಕುತ್ತಲೇ, ತಮ್ಮ ಅಸ್ತಿತ್ವವನ್ನುಳಿಸಿಕೊಂಡು, ತಮ್ಮತನವನ್ನು ಕಂಡುಕೊಂಡು, ತಮ್ಮದೇ ಆದ ಗಟ್ಟಿ ನೆಲೆಯಲ್ಲಿ ನಿಂತುಬಿಡುತ್ತವೆ. "ನಿರಾಶ್ರಿತೆ" ಕಥೆಯ ತುಳಸಿ, "ವಿಮುಕ್ತಿ"ಯ ಸೀತೆ ಮತ್ತಿತರ ಪಾತ್ರಗಳನ್ನು ಈ ಮಾತಿಗೆ ಉದಾಹರಿಸಬಹುದು. ಸಾವಿತ್ರಮ್ಮನವರ ಸ್ತ್ರೀ ಪಾತ್ರಗಳು, ತಮ್ಮ ಪುರುಷರ ಬಗೆಗೆ, ಅವರ ಮನೋಧರ್ಮದ ಬಗೆಗೆ ಭ್ರಮನಿರಸನ ಹೊಂದಿದ ಮೇಲೆ ಒಂದು ರೀತಿ ಒಳಸರಿದುಬಿಡುತ್ತವೆ. ಆ ಪಾತ್ರಗಳಲ್ಲಿ ಉಗ್ರ ಪ್ರತಿಭಟನೆಯಿಲ್ಲ. ಭ್ರಮನಿರಸನಗೊಂಡ ನಂತರ ಮತ್ತೆ ದಾಂಪತ್ಯ ಜೀವನಕ್ಕೆ ಆಶಿಸುವುದಿಲ್ಲ. ದಾಂಪತ್ಯದ ಹೊರಗಿನ ಯಾವುದೇ ಕಾಮ ಪ್ರೇಮಗಳ ಚಕ್ರಸುಳಿಗಳಿಗೂ ಸಿಕ್ಕಿಕೊಳ್ಳುವುದಿಲ್ಲ. "ಪಾತು ಕತೆ"ಯ ಪಾತು ಇದಕ್ಕೊಂದು ಅಪವಾದ. ಇದಕ್ಕೆ ಮುಖ್ಯ ಕಾರಣ ಸಾವಿತ್ರಮ್ಮನವರು ಬರೆಯುತ್ತಿದ್ದ ಕಾಲಘಟ್ಟ ಮತ್ತು ಅವರ ಪಾತ್ರಗಳು ಬದುಕಿದ ಸಮಾಜದಲ್ಲಿ ಅವರು ಎದುರಿಸಬೇಕಾಗಿದ್ದ ಸಾಮಾಜಿಕ, ಆರ್ಥಿಕ, ನೈತಿಕ ಪರಿಮಿತಿಗಳು. ಎಂ.ಕೆ.ಇಂದಿರಾ ಅವರ ಫಣಿಯಮ್ಮನಂತೆ, ಕಾರಂತರ ಮೂಕಜ್ಜಿಯಂತೆ, ಈ ಪಾತ್ರಗಳೂ, ತಮ್ಮ ಆಲೋಚನಾ ವಿಧಾನದಲ್ಲಿ ತಾವು, ಸಾಂಪ್ರದಾಯಕ ಕಟ್ಟುಪಾಡುಗಳ ಚಿಪ್ಪೊಡೆದು ಬಂದಿರುವುದನ್ನು ಅಭಿವ್ಯಕ್ತಿಸುತ್ತವೆ. ಆದರೆ ಆ ಪಾತ್ರಗಳಂತೆಯೇ ಇವುಗಳಿಗೂ, ತಾವು ಬದುಕುತ್ತಿರುವ ಸಾಂಪ್ರದಾಯಕ ಸಮಾಜದ ಬಾಹ್ಯ ಚೌಕಟ್ಟನ್ನು ಮೀರುವುದು ಸಾಧ್ಯವಾಗುವುದಿಲ್ಲ. ಈ ರೀತಿ ಒಳಸರಿದ ಹೆಣ್ಣು, ಕೆಲವು ವೇಳೆ, ತನ್ನ ಮಾಧುರ್ಯ, ಕೋಮಲತೆ, ಪ್ರೇಮ, ಶೃಂಗಾರಗಳ ಬಗೆಗಿರುವ ಮಧುರಭಾವಗಳನ್ನು ಕಳೆದುಕೊಂಡು, ಸುಟ್ಟು ಕರಕಲಾಗುತ್ತಾಳೆ, ಇಲ್ಲ ಶಿಲೆಯಾಗಿಬಿಡುತ್ತಾಳೆಂಬುದನ್ನು ಸಾವಿತ್ರಮ್ಮನವರ ಹಲವು ಪಾತ್ರಗಳು ನಿರೂಪಿಸುತ್ತವೆ. 'ಪಶ್ಚಾತ್ತಾಪ' ಕಥೆಯ ಶಾರದೆ ಇದಕ್ಕೊಂದು ಉದಾಹರಣೆ.

ಸಾವಿತ್ರಮ್ಮನವರ ಕಥೆಗಳು ವಸ್ತುವೈವಿಧ್ಯದಿಂದಾಗಿ ಓದುಗನನ್ನು ಆಕರ್ಷಿಸುತ್ತವೆ. ಸ್ವಾತಂತ್ರ್ಯ ಸಂಗ್ರಾಮ, ತ್ಯಾಗ, ಬಲಿದಾನ, ಸ್ವಾತಂತ್ರ್ಯಾನಂತರ ಭುಗಿಲೆದ್ದ ಕೋಮು ದ್ವೇಷ, ಜಾತಿ ಸಮಸ್ಯೆ. ಮನೋವಿಜ್ಞಾನ, ಮಾನವೀಯತೆ, ಇವುಗಳ ವಿವಿಧ ಆಯಾಮಗಳು ಕಥೆಗಳಾಗಿ ರೂಪುಗೊಂಡಿವೆ. 'ಪಾತುಕತೆ'ಯ ನಾಯಕಿ ಪಾತು ವಿಧವೆ. ತನ್ನ ಕಹಿ ಅನುಭವಗಳಿಂದ ಆಚೆ ಬಂದು ಮೂರನೆಯ ಬಾರಿ ವ್ಯಕ್ತಿಯೊಬ್ಬನನ್ನು ಸಂಗಾತಿಯಾಗಿ ಒಪ್ಪಿಕೊಳ್ಳುತ್ತಾಳೆ. 'ಪ್ರತೀಕ್ಷೆ' ಸಂಕಲನಗ ನೀಳ್ಗತೆಯ ನಾಯಕಿ ಸೀತೆಯ ಪಾತ್ರದಲ್ಲಿ ಈಗ ಸಾಮಾನ್ಯವಾಗಿರುವ Single Parent ಪರಿಕಲ್ಪನೆ ಅನಾವರಣಗೊಂಡಿರುವುದು ಆಶ್ಚರ್ಯಜನಕವಾಗಿದೆ. ಹಾಗೆಯೇ "ಹಳೆಯ ಜೋಡು" ಕಥೆಯಲ್ಲಿ ಮದುವೆಯ ವಯಸ್ಸಿನ ಮಗನಿರುವ ಮಧ್ಯವಯಸ್ಸು ದಾಟಿದ ಗೃಹಿಣಿಯ ಮನಸ್ಸು, ತಾನು ಮದುವೆಗೆ ಮುನ್ನ ಪ್ರೀತಿಸಿದ್ದ ವ್ಯಕ್ತಿಯ ಬಗೆಗೆ ಮಧುರಭಾವ ತಾಳುವುದನ್ನು ಚಿತ್ರಿಸಲ್ಪಟ್ಟಿರುವದೂ ಕೂಡಾ. ಇಂತಹ ಚಿತ್ರಣಗಳು ಸಾವಿತ್ರಮ್ಮನವರ ಮುಕ್ತ ಆಲೋಚನೆಗೆ ಉದಾಹರಣೆಗಳಾಗಿವೆ.

ಕಾದಂಬರಿಗಳು: "ಸೀತೆ-ರಾಮ-ರಾವಣ" "ವಿಮುಕ್ತಿ" ಸಾವಿತ್ರಮ್ಮನವರ ಮಹತ್ವದ ಕೃತಿಗಳು. ಭಾರತದ ರಾಷ್ಟ್ರೀಯ ಮಹಾಕಾವ್ಯಗಳಾದ "ರಾಮಾಯಣ" "ಮಹಾಭಾರತ"ಗಳ ವಸ್ತುವನ್ನು ಉಪಯೋಗಿಸಿಕೊಂಡು, ಯುಗ ಯುಗದಲ್ಲಿಯೂ, ಹೊಸ ಹೊಸ ರಚನೆಗಳು ಸೃಷ್ಟಿಯಾಗುತ್ತಿರುತ್ತವೆ. "ವಿಮುಕ್ತಿ" 'ಅನುಪಮಾ ಪ್ರಶಸ್ತಿ' ಪಡೆದ ಕೃತಿ. "ರಾಮಾಯಣ"ದ ಪೌರಾಣಿಕ ವಸ್ತು ಮತ್ತು ಪಾತ್ರಗಳನ್ನು, ಸಮಕಾಲೀನ ವಿಚಾರಧಾರೆಗಳಿಂದ, ಸಮಕಾಲೀನ ಹಾಗೂ ಎಲ್ಲಕಾಲದ ಸ್ತ್ರೀಸಂವೇದನೆಯಿಂದ ವಿಶ್ಲೇಷಿಸಿ, ಆ ಪಾತ್ರಗಳ ಪೌರಾಣಿಕತೆಯನ್ನು ಕಳಚಿ, ಆ ಪಾತ್ರಗಳನ್ನು ಸಾಮಾನ್ಯ ಮನುಷ್ಯರಂತೆ ಪರಿವೀಕ್ಷಿಸಿ, ಅವುಗಳ ಒಳತೋಟಿ, ತಲ್ಲಣಗಳನ್ನು ಮನೋಜ್ಞವಾಗಿ ತೆರೆದಿಡುತ್ತವೆ ಈ ಎರಡೂ ಕೃತಿಗಳು.

"ಸೀತೆ-ರಾಮ-ರಾವಣ", ಮೂಲ ರಾಮಾಯಣವನ್ನು ಅನುಸರಿಸುತ್ತಲೇ, ಹಲವು ಬದಲಾವಣೆಗಳನ್ನು ಅಳವಡಿಸಿಕೊಂಡು, ಸರಳವಾಗಿ, ಸಾಮಾಜಿಕ ಕಾದಂಬರಿಯಂತೆ ರೂಪುಗೊಂಡಿದೆ. ಪೌರಾಣಿಕ ಚೌಕಟ್ಟನ್ನು, ಅಂದಿನ ಸಾಮಾಜಿಕ ನಿಯಮವನ್ನು ಮೀರದೆ ಕೌಸಲ್ಯೆ, ಸುಮಿತ್ರೆ, ಊರ್ಮಿಳೆ, ಸೀತೆ, ಮಂಡೋದರಿಯರ ಪಾತ್ರಗಳನ್ನು ಸಾಮಾನ್ಯ ವ್ಯಕ್ತಿಗಳಂತೆ ಪರಿಗಣಿಸಿ, ಅವರ ಒಳಗನ್ನು ಮುಕ್ತವಾಗಿ ತೆರೆದಿಟ್ಟಿದ್ದಾರೆ. ಸಾವಿರ ಸುಂದರ ಕನಸುಗಳನ್ನು ಹೊತ್ತು, ರಾಮನನ್ನು ಮದುವೆಯಾಗಿ ಬಂದ ಸೀತೆಗೆ ಅಯೋಧ್ಯೆಯ ಅರಮನೆಯ ಪರಿಸರ, ಅಲ್ಲಿ ಸವತಿಯರ ಶೀತಲ ಸಮರ ಎಲ್ಲವೂ ವಿಚಿತ್ರವೆನಿಸುತ್ತದೆ. ಕೌಸಲ್ಯೆ, ಸುಮಿತ್ರೆ, ಕೈಕೇಯಿಯ ಪೂರ್ವಕಥೆಗಳನ್ನು ತಿಳಿಸಿ ಕೌಸಲ್ಯೆಯ ಬಾಯಲ್ಲಿ ಲೇಖಕಿ ಈ ಮಾತುಗಳನ್ನಾಡಿಸುತ್ತಾರೆ "ರಾಜರೇನು, ಗಂಡಸರ ಮನೋವೃತ್ತಿಯೇ ಹಾಗೆ. ಒಂದೇ ಹೆಣ್ಣಿನಲ್ಲಿ ಎಲ್ಲ ಸುಖವನ್ನು ಕಂಡುಕೊಳ್ಳುವವರು ವಿರಳ.." ಆರ್ಥಿಕ ಪರಿಸ್ಥಿತಿ, ಅರಮನೆಯ ಸುಖಜೀವನ ಮಹಾರಾಣಿಯ ಅಂತಸ್ತುಗಳನ್ನು ಬಿಟ್ಟರೆ, ದಾಸಿಯ ಜೀವನಕ್ಕೂ, ಮಹಾರಾಣಿಯ ಜೀವನಕ್ಕೂ ಯಾವುದೇ ವ್ಯತ್ಯಾಸವಿಲ್ಲವೆಂದು ನಿರೂಪಿಸುತ್ತಾರೆ. ತಮ್ಮ ವಂಶದ ರಾಜರ ಸ್ವಭಾವದ ಬಗ್ಗೆ ಕೌಸಲ್ಯೆ ಹೀಗೆ ಹೇಳುತ್ತಾಳೆ.. "ತಮ್ಮ ಅಹಂಕಾರ ಪ್ರತಿಷ್ಠೆಗಳಿಗೆ ಚಕ್ರದ ಕೆಳಗೆ ಎಷ್ಟು ಹೆಣ್ಣು ಜೀವನಗಳು ನಲುಗಿ ನಾಶವಾದರೂ ಅವರಿಗೆ ಲಕ್ಷ್ಯವಿಲ್ಲ" ಊರ್ಮಿಳೆಯ ಪಾತ್ರದಲ್ಲಿ ಸ್ವತಂತ್ರ ಮನೋಭಾವ ಮತ್ತು ಆಧುನಿಕ ಹೆಣ್ಣಿನ ಕಲ್ಪನಾ ವಿಲಾಸ ಕಾಣಿಸುತ್ತಾರೆ. ಮೂಲದ ಆಶಯಕ್ಕೆ ಚ್ಯುತಿ ತರದೆಯೇ ಸೀತೆಯ ಪಾತ್ರಕ್ಕೆ ಮಾನವ ಸಹಜ, ಆಸೆ, ಆಕಾಂಕ್ಷೆ, ನೋವು, ಕೋಪಗಳ ರಂಗನ್ನು ಸೇರಿಸಿದ್ದಾರೆ. ಪುರಾಣದ ರಾವಣನಂತೆ "ಸೀತೆ-ರಾಮ-ರಾವಣ" ದಲ್ಲಿ ರಾವಣ ಹತ್ತು ತಲೆಗಳ ಭಯಾನಕ ರಾಕ್ಷಸನಲ್ಲ- ಅತ್ಯಂತ ಪರಾಕ್ರಮ, ಸುಂದರ ಸ್ತ್ರೀಯರ ಬಗೆಗೆ ಲಘುವಾಗಿ ಮಾತನಾಡುವವನಲ್ಲ. ರಾಮ ಪುರುಷನಲ್ಲಿರುವ ಅಹಂ ಮತ್ತು ಅನುಮಾನ ಪ್ರವೃತ್ತಿಗಳನ್ನು ಪದೇ ಪದೇ ಹೊರ ತೋರಿಸುತ್ತಾ ಸಾಮಾನ್ಯ ಮಾನವನಾಗಿ ಉಳಿದುಬಿಡುತ್ತಾನೆ.

ಸೀತೆಯನ್ನು ರಾವಣ ಅಪಹರಿಸಿದ ಮೇಲೆ, ರಾಮನ ಮನಸ್ಸಿನಲ್ಲಿ ನಡೆಯುವ ತುಮುಲವನ್ನು ಸಾವಿತ್ರಮ್ಮ ಸಾಮಾನ್ಯ ಪುರುಷನೊಬ್ಬನ ದೃಷ್ಟಿಕೋನದಿಂದಲೇ ವಿಶ್ಲೇಷಿಸಿರುವುದು ಅವರ ಕಲಾಭಿಜ್ಞತೆಗೆ ಸಾಕ್ಷಿಯಾಗಿದೆ. ಯುದ್ಧದಲ್ಲಿ ವಿಜಯ ಗಳಿಸಿದ ನಂತರದ ರಾಮನ ಮನಸ್ಸು ಕಾಠಿಣ್ಯ ತಾಳಿ ಸೀತೆಯ ಪಾತಿವ್ರತ್ಯದ ಪರೀಕ್ಷೆ ಸಾರ್ವಜನಿಕವಾಗಿಯೇ ನಡೆಯಬೇಕೆಂದು ಹಟಹಿಡಿಯುತ್ತಾನೆ ರಾಮ. ಸೀತೆಯ ಅಗ್ನಿಪ್ರವೇಶವಾದಾಗ, ಅಗ್ನಿಪುರುಷನು ಸೀತೆಯನ್ನು ಅಗ್ನಿಕುಂಡದಿಂದ ಕರೆತರುವ ಪವಾಡವನ್ನು ಸಾವಿತ್ರಮ್ಮನವರು ಉಪಯೋಗಿಸುವುದಿಲ್ಲ. ಉರಿಯುತ್ತಿದ್ದ ಚಿತೆ; ಮಳೆ, ಗಾಳಿಗಳಿಂದಾಗಿ ತಣ್ಣಗಾಗುತ್ತದೆ. "ರಾಮ, ಸೀತೆ ಪರಿಶುದ್ಧ" ಎಂಬ ವಾಕ್ಯ ಗುಡುಗಿನಂತೆ ಕೇಳಿಬರುತ್ತದೆ. ಹಲವು ಬದಲಾವಣೆಗಳೊಂದಿಗೆ, "ಸೀತೆ-ರಾಮ-ರಾವಣ" ದಲ್ಲಿ ಅತ್ಯಂತ ಮೌಲಿಕ ವಿಚಾರಗಳನ್ನು ಪ್ರಶ್ನೆಗಳನ್ನು ಎತ್ತುತ್ತಾ, ಇಡಿಯ ರಾಮಾಯಣದ ಸನ್ನಿವೇಶಗಳನ್ನು ಸ್ತ್ರೀ ಸಂವೇದನೆಯ ನೆಲೆಯಿಂದ ವಿಶ್ಲೇಷಿಸಿದ್ದಾರೆ ಲೇಖಕಿ.

"ಸೀತೆ-ರಾಮ-ರಾವಣ" ಹಾಗೂ "ವಿಮುಕ್ತಿ"ಗಳಲ್ಲಿ, ಆರ್ಯ ಸಂಸ್ಕೃತಿ, ವಾನರ ಸಂಸ್ಕೃತಿ ಮತ್ತು ರಾಕ್ಷಸ ಸಂಸ್ಕೃತಿಗಳ ಪರಿಚಯ ಹಾಗೂ ಮೌಲ್ಯ ವಿಶ್ಲೇಷಣೆ ನಡೆಯುತ್ತದೆ. "ವಿಮುಕ್ತಿ"ಯ ಸೀತೆ ಭೂಮಿಯ ಆಶ್ರಯ ಕೋರಿ ಈ ಜೀವನದಿಂದ ದೂರಹೋಗಿ ಬಿಡುಗಡೆ ಪಡೆದುಕೊಳ್ಳುವ ಸೋತ ಹೃದಯದ ಹೆಣ್ಣಲ್ಲ. ವಾಲ್ಮೀಕಿಯ ಆಶ್ರಮದಲ್ಲಿ, ರಾಮ ಬಂದು ಸೀತೆಯನ್ನು ಅರಮನೆಗೆ ಬರುವಂತೆ ಕರೆಯುತ್ತಾನಾದರೂ, ಲವಕುಶರು ರಾಮನ ಮಕ್ಕಳೇ ನಿಜವೆಂದು ಮಕ್ಕಳ ತಲೆಮೇಲೆ ಕೈ ಇಟ್ಟು ಸೀತೆ ಪ್ರಮಾಣ ಮಾಡಬೇಕೆಂದಾಗ ಸೀತೆಯ ಮನಸ್ಸು ಸಂಪೂರ್ಣ ಒಳಸರಿದು, ಸಂಸಾರದ ಆಸೆಯ ದೀಪ ಆರಿಯೇ ಹೋಗುತ್ತದೆ. ರಾಮನೊಡನೆ ಮತ್ತೆ ಅವಳೊಂದು ಮಾತನ್ನೂ ಆಡುವುದಿಲ್ಲ. ಲಕ್ಷ್ಮಣನೊಡನೆ ಹೇಳುತ್ತಾಳೆ "ನನಗೆ ನಿಮ್ಮಣ್ಣನೊಡನೆ ಇದ್ದ ಸಂಬಂಧ ಎಂದೋ ಕಳಚಿ ಹೋಯಿತು, ಆತನ ಮುಖಾವಲೋಕನ ಮಾಡುವ ಅಭಿಲಾಷೆಯೂ ನನಗಿಲ್ಲ.." ಹೀಗೆ ಹೇಳಿ ಸೀತೆ ವಾಲ್ಮೀಕಿಯ ಆಶ್ರಮಕ್ಕೆ ಹೋಗುತ್ತಾಳೆ. ಈಗವಳು ತಪಸ್ವಿನಿ, ವಿಮುಕ್ತೆ, ತನ್ನ ಅಂತಸ್ಸತ್ವವನ್ನು ಸಾಕ್ಷಾತ್ಕರಿಸಿಕೊಂಡಂತಹ ಧೀಮಂತೆ. ಇಂತಹ ಸೀತೆಯ ಪಾತ್ರದಲ್ಲಿ ಸಾವಿತ್ರಮ್ಮ, ನವಯುಗದ ಎಚ್ಚೆತ್ತ ಹೆಣ್ಣನ್ನು ಕಂಡರಿಸಿದ್ದಾರೆ, ವಿಜಯಾ ದಬ್ಬೆ ಹೇಳಿರುವ "ಸಾವಿತ್ರಮ್ಮನವರ ರಾಮಾಯಣವು ರಾಮಾಯಣ ಪರಂಪರೆಯೊಡನೆ ಒಂದು ಆಧುನಿಕ ಮನಸ್ಸು ನಡೆಸಿದ ಸಂವಾದ" ಎಂಬುದು ಅಕ್ಷರಶಃ ಸತ್ಯ. ಸಾವಿತ್ರಮ್ಮ ತಮ್ಮ ಸೃಜನಶೀಲ ಬರಹಗಳ ಮೂಲಕ ಕನ್ನಡಕ್ಕೆ ವಿಶಿಷ್ಟದನಿಗಳನ್ನು ಕೇಳಿಸಿದಂತಹ ಸಾಧಕಿ ಎಂಬುದು ನಿರ್ವಿವಾದವಾಗಿದೆ.

ಸಾವಿತ್ರಮ್ಮನವರ ಕೃತಿಗಳು

ಅನುವಾದಿತ ಕೃತಿಗಳು : ಮಧ್ಯಯುಗದ ಭಾರತದ ಚರಿತ್ರೆ, ಮಹಾತ್ಮ ಗಾಂಧಿ; ಜಗತ್ತಿಗೆ ಅವರ ಸಂದೇಶ, ಗೋರಾ, ಮನೆಜಗತ್ತು, ನೌಕಾಘಾತ, ಚಿನ್ನದ ದೋಣಿ, ಹಸಿವೋ ಹಸಿವು; ಮತ್ತು ಹುಲಿಯ ಬೆನ್ನೇರಿದಾಗ, ಸ್ಮರಭಸ್ಮ, ಶಶಿಲೇಖಾ, ನೀಲನೇತ್ರೆ, ಮಹಾದೇವನ ಜಟಾಜೂಟದಲ್ಲಿ, ಮದುವಣಗಿತ್ತಿ.

ಕಾದಂಬರಿಗಳು : ಸೀತೆ-ರಾಮ-ರಾವಣ, ವಿಮುಕ್ತಿ, ಜೀವನ ಚರಿತ್ರೆ: ಎಚ್.ವಿ.ನಂಜುಂಡಯ್ಯ (ಜೀವನ ಮತ್ತು ಕಾರ್ಯ)

ಕಥಾಸಂಕಲನಗಳು : ನಿರಾಶ್ರಿತೆ, ಮರುಮದುವೆ, ಸರಿದ ಬೆರಳು, ಪ್ರತೀಕ್ಷೆ. ಲಕ್ಷ್ಮೀ.

*

ಸಾಹಿತ್ಯ ಸಮ್ಮೇಳನಾಧ್ಯಕ್ಷೆಯಾದ ಮೊದಲ ಮಹಿಳೆ ಜಯದೇವಿ ತಾಯಿ ಲಿಗಾಡೆ

ಪದ್ಮ ಶಿವರುದ್ರಪ್ಪ

ಕರ್ನಾಟಕದಲ್ಲಿ 'ತಾಯಿ' ಎಂದೇ ಪ್ರಸಿದ್ಧರಾಗಿದ್ದ ಜಯದೇವಿ ತಾಯಿ ಲಿಗಾಡೆಯವರು ಸಾಹಿತ್ಯ ಸಮಾಜಸೇವೆ ಅನುಭಾವಗಳ ತ್ರಿವೇಣಿ ಸಂಗಮವಾಗಿದ್ದರು. ಅವರು ಜನಿಸಿದ್ದು ಕನ್ನಡದ ಗಡಿನಾಡಾದ ಸೊಲ್ಲಾಪುರದಲ್ಲಿ, 1913ನೆಯ ವರ್ಷದ ಜೂನ್ ತಿಂಗಳ 23ನೆಯ ತಾರೀಖಿನ ಶುಭದಿನದಂದು. 12ನೆಯ ಶತಮಾನದ ಶಿವಯೋಗಿ ಸಿದ್ಧರಾಮನ ಪುಣ್ಯಕ್ಷೇತ್ರವಾದ ಸೊನ್ನಲಿಗೆಯೇ ಇಂದಿನ ಸೊಲ್ಲಾಪುರ. 'ತಾಯಿ'ಯವರು ಸಿದ್ಧರಾಮನ ಪರಮ ಭಕ್ತೆ. ಅವರು ಹುಟ್ಟಿದ ಮನೆ, ಸೇರಿದ ಮನೆ ಎರಡೂ ಆಗರ್ಭ ಶ್ರೀಮಂತ ಮನೆತನಗಳಾಗಿದ್ದುವು. ಅವರ ತಾಯಿಯ ತಂದೆಯವರಾದ ವಾರದ ಮಲ್ಲಪ್ಪನವರು, ಐದು ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದ ಮಿಲ್ಲಿನ ಮಾಲೀಕರೂ, ಸಾವಿರಾರು ಎಕರೆ ಭೂಮಿಗೆ ಒಡೆಯರೂ ಆಗಿದ್ದುದಲ್ಲದೆ ಮಹಾ ಧಾರ್ಮಿಕರೂ, ಉದಾರ ದಾನಿಗಳೂ, ಲಿಂಗಾಯಿತ ಸಮಾಜದ ಧುರೀಣರೂ ಆಗಿದ್ದರು. ಶೈಕ್ಷಣಿಕ ರಂಗದ ಪ್ರಗತಿಗಾಗಿ ಶ್ರಮಿಸಿದ ಅವರು ಸ್ತ್ರೀ ಶಿಕ್ಷಣದ ಮಹತ್ವವನ್ನು ಅರಿತುಕೊಂಡು, ತಮ್ಮ ಮನೆಯಲ್ಲೇ ಮಹಿಳಾ ಜ್ಞಾನ ಮಂದಿರವೆಂಬ ಸಂಸ್ಥೆಯನ್ನು ಸ್ಥಾಪಿಸಿದರು. ವಾರದ ಮಲ್ಲಪ್ಪನವರ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು, ಚಿಕ್ಕಂದಿನಿಂದಲೂ ಅವರ ಮಗಳ ಮಗಳಾದ ಜಯದೇವಿತಾಯಿಯವರ ಮನಸ್ಸಿನ ಮೇಲೆ ಪರಿಣಾಮ ಬೀರಿದವು. ಮಲ್ಲಪ್ಪನವರ ಮಗಳಾದ ಸಂಗವ್ವ ಮತ್ತು ಅವರಷ್ಟೇ ಶ್ರೀಮಂತ ಮನೆತನದವರಾದ ಮಡಕಿ ಚೆನ್ನಬಸಪ್ಪನವರಿಗೆ ಎರಡು ಗಂಡು ಮಕ್ಕಳ ನಂತರ ಜನಿಸಿದ ಹೆಣ್ಣುಮಗು ಜಯದೇವಿತಾಯಿಯವರು, ನೋಡಲು ತುಂಬ ಸುಂದರವಾಗಿದ್ದರು. ತಂದೆ ಚೆನ್ನಬಸಪ್ಪನವರು ಸತ್ಯನಿಷ್ಠುರರೂ, ದಯಾಪರರೂ, ಕುಶಲಮತಿಯೂ ಆಗಿದ್ದರು. ತಾಯಿ ಸಂಗವ್ವ ಶಿವಭಕ್ತೆ, ಹಾಡುಗಾರ್ತಿ, ಸೇವಾಕಾಂಕ್ಷಿ, ಶಾಂತಚಿತ್ತೆ. ತಂದೆ, ತಾಯಿ, ಅಜ್ಜ ಇವರೆಲ್ಲರ ಸಂಸ್ಕೃತಿಯೇ ಕೆನೆಗಟ್ಟಿದಂತೆ ಜಯದೇವಿ, ತಮ್ಮ ತಾಯಿಯ ತಂದೆಯ ಮನೆಯಲ್ಲೇ ಬೆಳೆದರು.

ಆಗ ಸೊಲ್ಲಾಪುರದಲ್ಲಿ ಕನ್ನಡ ಶಾಲೆಗಳು ಇರಲಿಲ್ಲವಾದ್ದರಿಂದ ಜಯದೇವಿಯವರು ಮರಾಠಿ ಶಾಲೆಗೇ ಹೋಗಬೇಕಾಯ್ತು. ಮನೆಯಲ್ಲಿ ಮತ್ತು ಊರಿನ ಸಭೆಗಳಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ಜಯದೇವಿಯವರು ದಿಟ್ಟವಾಗಿ ಸರಾಗವಾಗಿ ಭಾವತುಂಬಿ ಭಕ್ತಿಗೀತೆಗಳನ್ನು ಹಾಡುತ್ತಿದ್ದರು. ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ, ಲಿಂಗಪೂಜೆಗೆ ಕುಳಿತ ತಾಯಿಯಿಂದ ತಾವು ಕಲಿತ ಶಿವಸ್ತೋತ್ರಗಳನ್ನು ಮಧುರವಾಗಿ, ತಲ್ಲೀನರಾಗಿ ಹಾಡುತ್ತಿದ್ದರಂತೆ. ಸಾಕು ಪ್ರಾಣಿಗಳನ್ನು ಕಂಡರೂ ಆಕೆಗೆ ಅಕ್ಕರೆ. ಗೆಳತಿಯರನ್ನೆಲ್ಲ ಸೇರಿಸಿಕೊಂಡು ಎತ್ತರದ ವೇದಿಕೆಯಲ್ಲಿ ಕುಳಿತು ಪುರಾಣಗಳನ್ನು ಓದುತ್ತಿದ್ದರಂತೆ. ತಮ್ಮ ತಂದೆಯವರು ತಂದುಕೊಡುತ್ತಿದ್ದ, ವೀರ ನಾರಿಯರನ್ನು ಕುರಿತ ಮರಾಠಿ ಕಾದಂಬರಿಗಳನ್ನು ಓದಿದ ಜಯದೇವಿಯವರ ಮನಸ್ಸಿನಲ್ಲಿ ಭಾರತದ ಸ್ವಾತಂತ್ರ್ಯದ ಕನಸು, ರಾಷ್ಟ್ರೀಯತೆಯ ಭಾವನೆ ಚಿಗುರೊಡೆಯಿತು. ವರ್ಷದ ಆರು ತಿಂಗಳ ಕಾಲ ಮನೆಯವರೆಲ್ಲ ಊರ ಹೊರಗಿನ, ಹಸಿರು ತುಂಬಿದ ತೋಟದ ಮನೆಯಲ್ಲಿ ವಾಸಿಸುತ್ತಿದ್ದರಂತೆ. ಸುತ್ತಲಿದ್ದ ರೈತಮಕ್ಕಳನ್ನು ಸೇರಿಸಿಕೊಂಡು ಲಿಂಗಪೂಜೆ ಮಾಡಿ ಎಲ್ಲರಿಗೂ ತಿನಿಸು ಹಂಚುತ್ತಿದ್ದ

ಜಯದೇವಿಗೆ ಆಗಿನಿಂದಲೇ ಬಡವ–ಬಲ್ಲಿದ, ಮೇಲು–ಕೀಳು ಎಂಬ ಬೇದ–ಭಾವ ಮಾಯವಾಗಿತ್ತು. ಹಳ್ಳಿಯ ಹುಡುಗಿಯರು ಆಟದ ವೇಳೆಯಲ್ಲಿ ಹಾಡುತ್ತಿದ್ದ ಜಾನಪದ ಧಾಟಿಯ ಹಾಡುಗಳನ್ನು ಅವರೊಡನೆ ಹಾಡುತ್ತಿದ್ದ ಜಯದೇವಿಗೆ, ಮುಂದೆ ತ್ರಿಪದಿಯ ಲಯಕ್ಕೆ ಒಲಿದು 'ಸಿದ್ಧರಾಮ ಪುರಾಣ'ದಂತಹ ಮಹಾಕಾವ್ಯವನ್ನು ರಚಿಸಲು ಈ ಪರಿಸರವೇ ನಾಂದಿಯಾಗಿರಬಹುದು.

ಜಯದೇವಿಯವರ ಹದಿನಾಲ್ಕನೆಯ ವಯಸ್ಸಿನಲ್ಲಿ ಆ ಊರಿನ ಮತ್ತೊಂದು ಪ್ರತಿಷ್ಠಿತ ಮನೆತನದ ಚೆನ್ನಮಲ್ಲಪ್ಪ ಎಂಬ ಹದಿನಾರು ವರ್ಷದ ವರನೊಡನೆ ಅವರ ವಿವಾಹವಾಯಿತು. ಜಯದೇವಿಯವರು ತಮ್ಮ ಸಹನಶೀಲತೆ ಮತ್ತು ಶಾಂತಸ್ವಭಾವಗಳಿಂದ ಪತಿಯ ಮನೆಯವರ ಮನಸ್ಸನ್ನು ಗೆದ್ದು, ಅವರ ಪ್ರೀತ್ಯಾದರಗಳಿಗೆ ಪಾತ್ರರಾದರು, ತಾಯಿಯವರಿಗೆ ಮೂರು ಗಂಡು, ಎರಡು ಹೆಣ್ಣು ಒಟ್ಟು ಐವರು ಮಕ್ಕಳು. ತಾಯಿಯವರ ಕನ್ನಡ ಪ್ರೇಮ ಎಷ್ಟಿತ್ತೆಂದರೆ ಮೂವರು ಮಕ್ಕಳಾದ ನಂತರ ತಮ್ಮ ಅಜ್ಜನವರು ಕಟ್ಟಿದ್ದ ಜ್ಞಾನ ಮಂದಿರಕ್ಕೆ ಸೇರಿ ಕನ್ನಡ ಕಲಿತರು. ಅವರು ಅಭ್ಯಸಿಸಿದ ವಚನ ಸಾಹಿತ್ಯ, ಶಿವಶರಣಶರಣೆಯರ ಜೀವನ ಗಾಥೆ ಮುಂದಿನ ಅವರ ಸಾಹಿತ್ಯ ರಚನೆಗೆ ದಾರಿದೀಪವಾಯಿತು. ದೇಶಪ್ರೇಮ, ಶರಣನಿಷ್ಠೆ, ಗಾಂಧಿವಾದಗಳು ಅವರ ಬದುಕಿನ ಮೂಲಮಂತ್ರವಾದುವು. ಸ್ವಲ್ಪ ಕಾಲದಲ್ಲಿಯೇ ಸೊಲ್ಲಾಪುರದಲ್ಲಿ ಕನ್ನಡ ಶಾಲೆಯನ್ನು ಪ್ರಾರಂಭಿಸಿದರು. ಸೊಲ್ಲಾಪುರದಲ್ಲಿ ಮರಾಠಿಯ ದಾಳಿಯನ್ನು ಎದುರಿಸಿ ಕನ್ನಡ ಭಾಷೆ ಈವರೆಗೂ ಉಸಿರಾಡುತ್ತಿರುವುದಕ್ಕೆ ಜಯದೇವಿಯವರ ಪರಿಶ್ರಮವೇ ಕಾರಣವೆನ್ನಬಹುದು.

ನಂದಗೋಕುಲದಂತಿದ್ದ ಜಯದೇವಿತಾಯಿಯವರ ಸಂಸಾರಕ್ಕೆ ಸಿಡಿಲು ಬಡಿದಂತೆ 38ನೆಯ ವಯಸ್ಸಿನಲ್ಲಿಯೇ ಅವರಿಗೆ ವೈಧವ್ಯ ಪ್ರಾಪ್ತವಾಯಿತು. ಆದರೆ ಚಿಕ್ಕ ವಯಸ್ಸಿನಿಂದಲೂ ವೀರಮಹಿಳೆಯರ ಚರಿತ್ರೆಯಿಂದ ಪ್ರಭಾವಿತರಾಗಿದ್ದ ತಾಯಿಯವರು, ಧೈರ್ಯ ಕಳೆದುಕೊಳ್ಳದೆ ಆ ದೊಡ್ಡ ಮನೆತನದ ವ್ಯವಹಾರವನ್ನು ನಿಭಾಯಿಸಿದ್ದಲ್ಲದೆ, ಮಕ್ಕಳಿಗೂ ಉತ್ತಮ ಶಿಕ್ಷಣ ಕೊಡಿಸಿ ಸತ್ಪ್ರಜೆಗಳನ್ನಾಗಿ ಮಾಡಿ, ಕನ್ನಡ ನಾಡು–ನುಡಿಯ ಏಳಿಗೆಗಾಗಿ ಹೋರಾಟ ನಡೆಸಿ, ಸಾಮಾಜಿಕ ಕಾರ್ಯಗಳಲ್ಲಿಯೂ ತೊಡಗಿಸಿಕೊಂಡು ಶಿವಭಕ್ತೆಯಾಗಿ ವಿರಕ್ತಜೀವನವನ್ನು ನಡೆಸಿ, ಸಾಹಿತ್ಯ ದೇವಿಯ, ಆರಾಧನೆಯನ್ನು ನಡೆಸಿಕೊಂಡು ಬಂದುದು ಅವರ ವ್ಯಕ್ತಿತ್ವದ ವಿಶೇಷವೆನ್ನಬಹುದು.

"ಜಯದೇವಿತಾಯಿಯವರ ಸಾತ್ವಿಕರೂಪ, ಎಂತವರಲ್ಲಿಯೂ ಭಕ್ತಿ–ಗೌರವಗಳನ್ನು ಹುಟ್ಟಿಸುತ್ತಿತ್ತು. ಸರಳ, ಸುಂದರ, ಗಂಭೀರ, ಶ್ರೀಮಂತ ಆಕೃತಿಯಿಂದಾಗಿ ಜಯದೇವಿಯವರು ಅಕ್ಕಮಹಾದೇವಿಯವರಂತೆ ಕಂಗೊಳಿಸುತ್ತಿದ್ದರು", ಎಂದು ಬಸವರಾಜ ಕಟ್ಟೀಮನಿಯವರು ಅವರನ್ನು ವರ್ಣಿಸಿದ್ದಾರೆ. ಸುತ್ತಮುತ್ತಣ ಜನರ ಬಗೆಗೆ ಅವರಿಗಿದ್ದ ಪ್ರೀತಿ, ವಾತ್ಸಲ್ಯಗಳು ಅಪಾರ. ಅವರ ವಾತ್ಸಲ್ಯದ ಹೊಳೆಯಲ್ಲಿ ನಿಂದ ಜನ ಅವರನ್ನು 'ತಾಯಿ' ಎಂದೇ ಕರೆಯುತ್ತಿದ್ದರು. ಆಕೆ ಉತ್ತಮ ವಾಗ್ಮಿ, ಸುಮಧುರ ಹಾಡುಗಾರ್ತಿ, ಶರಣ ಭಕ್ತಿಯ ಮೂರ್ತಿರೂಪಿ, ಸಾಹಿತ್ಯ ಸಾಧಕಿ, ಸಮಾಜ ಸೇವಕಿ, ರಾಷ್ಟ್ರಭಕ್ತೆ, ಕನ್ನಡ ನಾಡು–ನುಡಿಯ ಸಂರಕ್ಷಕಿ, ವಿವಿಧ ಕ್ಷೇತ್ರಗಳಲ್ಲಿ ಅವರು ಕೈಗೊಂಡ ಕೈಂಕರ್ಯಕ್ಕಾಗಿ ತಾಯಿಯವರು ಪಡೆದ ಪ್ರಶಸ್ತಿ ಸನ್ಮಾನಗಳು ಅಪಾರ, ಹೀಗೆ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡ ತಾಯಿಯವರು 1986ರಲ್ಲಿ ಬಸವಕಲ್ಯಾಣದಲ್ಲಿ ಲಿಂಗೈಕ್ಯರಾದರು.

ತಾಯಿಯವರದು ಸುಧಾರಕ ಮನೋಭಾವ. ಒಮ್ಮೆ ಸೊಲ್ಲಾಪುರ ಸಿದ್ಧರಾಮೇಶ್ವರ ದೇವಾಲಯದಲ್ಲಿ ರುದ್ರಪಠಣ ಮಾಡುವ ಹಕ್ಕು ಸ್ತ್ರೀಯರಿಗಿಲ್ಲವೆಂದು ಶಾಸ್ತ್ರಿಗಳು ಹೇಳಿದಾಗ, ಜಯದೇವಿತಾಯಿಯವರು, ಎಂಟುನೂರು ವರ್ಷಗಳ ಹಿಂದೆಯೇ, ಬಸವೇಶ್ವರರು ಸ್ತ್ರೀಯರಿಗೆ ಧಾರ್ಮಿಕ, ಸಾಮಾಜಿಕ, ಸಮಾನತೆ ಕೊಟ್ಟಿದ್ದರೆಂದು ಪ್ರತಿಪಾದಿಸಿ, ಹಠ ಹಿಡಿದು ತಮ್ಮ ಸ್ತ್ರೀ ಸಮೂಹಕ್ಕೆ ರುದ್ರ ಹೇಳುವ ಹಕ್ಕನ್ನು ದೊರಕಿಸಿಕೊಂಡರು. ಅವರು ಸ್ತ್ರೀ ಸಮಾನತೆಯನ್ನು ಕೇವಲ ಮಾತಿನಲ್ಲಷ್ಟೆ ಪ್ರತಿಪಾದಿಸಲಿಲ್ಲ; ಹೋರಾಡಿ ಅದನ್ನು ದೊರಕಿಸಿಕೊಳ್ಳುವ ಛಲ ಅವರಿಗಿತ್ತು. ಸ್ತ್ರೀ ಶಿಕ್ಷಣಕ್ಕೆ

ಅವರು ಹೆಚ್ಚು ಮಹತ್ವ ಕೊಟ್ಟರು. ಜನರ ಅಜ್ಞಾನ, ಬಡತನ, ವರ್ಗಕಲಹ–ಇವುಗಳಿಲ್ಲದ ಸಮಾಜ ರಚನೆಯಾಗಲು ಸ್ತ್ರೀ ಶಿಕ್ಷಣ ಹೆಚ್ಚು ಮುಖ್ಯ ಎಂದು ಅವರು ಪ್ರತಿಪಾದಿಸಿದರು. ಮಹಿಳಾ ಜ್ಞಾನಮಂದಿರದ ಕನ್ಯಾಶಾಲೆಯನ್ನು ಸ್ಥಾಪಿಸಿ ಮರಾಠಿ ಬದಲು ಅಲ್ಲಿ ಹೆಣ್ಣುಮಕ್ಕಳು ಕನ್ನಡ ಕಲಿಯಲು ಸಾಧ್ಯವಾಗುವಂತೆ ಮಾಡಿದರು. ಧಾರವಾಡದಲ್ಲಿ ಹೆಣ್ಣುಮಕ್ಕಳ ಶಾಲೆಗಳು ನಡೆಯಲು ಧನಸಹಾಯ ಮಾಡಿದರು. ಕಾರ್ಮಿಕರಲ್ಲಿ ಕನ್ನಡ ಕಲಿಯುವ ಆಸಕ್ತಿ ಮೂಡಿಸಿದರು. ವರದಕ್ಷಿಣೆ ಪದ್ಧತಿ, ಪಾಶ್ಚಾತ್ಯರ ಅಂಧಾನುಕರಣೆ ಇವುಗಳನ್ನು ಖಂಡಿಸಿದರು. ಗಾಂಧೀಜಿಯವರಿಂದ ಪ್ರಭಾವಿತರಾದ ತಾಯಿಯವರು ಅಸ್ಪೃಶ್ಯತಾ ನಿವಾರಣೆಗಾಗಿ ಕೆಲಸ ಮಾಡಿದರು. ಕುಟುಂಬ ಕಲ್ಯಾಣ ಯೋಜನೆಯ ಪ್ರಚಾರಕ್ಕಾಗಿಯೂ ದುಡಿದರು.

ತಮ್ಮ ವ್ಯಕ್ತಿತ್ವದ ವೈಭವೀಕರಣವನ್ನವರು ಸಹಿಸುತ್ತಿರಲಿಲ್ಲ. ಅಂತರಂಗ–ಬಹಿರಂಗಗಳೆರಡೂ ಒಂದಾದ ವ್ಯಕ್ತಿತ್ವ ಅವರದು. ಜನರ ಮನಮುಟ್ಟುವಂತೆ ಮಾತಾಡುವ ಶಕ್ತಿ ಅವರಿಗಿತ್ತು. ಹೈದರಾಬಾದಿನಲ್ಲಿ ರಜಾಕಾರರ ಹಾವಳಿಯಿಂದಾಗಿ ಜನ ಹಿಂಸೆಪಡುತ್ತಿದ್ದಾಗ. ಅಲ್ಲಿ ನಡೆದ ಮಹಾಧಿವೇಶನಕ್ಕೆ 'ತಾಯಿ' ಯವರ ಪ್ರವೇಶವನ್ನು ನಿಜಾಮ ನಿಷೇಧಿಸಿದ್ದರೂ ತಾವು ದಸ್ತಗಿರಿಯಾಗಬಹುದಾದ ಪರಿಸ್ಥಿತಿಯಲ್ಲಿಯೂ, ಅವರು ಧೈರ್ಯವಾಗಿ ಅಲ್ಲಿಗೆ ಹೋಗಿ ಭಾಷಣ ಮಾಡಿದರು. ನಿಜಾಮನ ಉತ್ತೇಜನದಿಂದಾಗಿ ರಜಾಕಾರರು ಜನರಿಗೆ ಚಿತ್ರಹಿಂಸೆ ಕೊಡತೊಡಗಿದಾಗ ಹೈದರಾಬಾದಿನ ಜನ ಸೊಲ್ಲಾಪುರಕ್ಕೆ ರಕ್ಷಣೆಗಾಗಿ ಓಡಿಬಂದಾಗ, ತಾಯಿಯವರು ಆ ಜನರಿಗೆ, ವಸತಿ, ವಸ್ತ್ರ, ಆಹಾರಗಳನ್ನು ಒದಗಿಸಿದರು, ಹೆಸರಿಗೆ ತಕ್ಕಂತೆ ಆಕೆ ಎಲ್ಲರಿಗೂ ತಾಯಿಯೇ ಆಗಿದ್ದರು. ತಮ್ಮಲ್ಲಿದ್ದ ಸಂಪತ್ತನ್ನು ಸಂದರ್ಭ ಬಂದಾಗ ದಾನ ಮಾಡುವ ಔದಾರ್ಯ ಹೊಂದಿದ ಮಹಾನುಭಾವರಾಗಿದ್ದರು ಅವರು. ಹಿಂದುಳಿದ ಊರುಗಳಲ್ಲಿ ಶಾಲೆಗಳನ್ನು ತೆರೆಯಲು ಸ್ವಂತ ಸಂಪತ್ತನ್ನು ವ್ಯಯಮಾಡಿದರು. ಅವರ ಮೇಲಿನ ಪ್ರೀತಿ–ಗೌರವಗಳಿಂದ ಜನ ಶಾಲೆಗೆ ಅವರ ಹೆಸರನ್ನಿಡಲು ಬಯಸಿದಾಗ ತಾಯಿಯವರು ಅದನ್ನು ಒಪ್ಪಲಿಲ್ಲ. ತಮ್ಮ ಪೂರ್ವಜರ ಸ್ವತ್ತನ್ನು ಸತ್ಕಾರ್ಯಕ್ಕೆ ಬಳಸಿದರೆ ಅದರಲ್ಲಿ ತಮ್ಮದೇನು ಹಿರಿಮೆ? ಎಂದವರು ಪ್ರಶ್ನಿಸುತ್ತಿದ್ದರು. ಇಂದಿನ ಶ್ರೀಮಂತರು, ರಾಜಕಾರಣಿಗಳು, ಕೀರ್ತಿಗಾಗಿ ನಡೆಸುವ ಕುತಂತ್ರವನ್ನು ವೀಕ್ಷಿಸಿದಾಗ, ತಾಯಿಯವರು ಎಷ್ಟು ದೊಡ್ಡವರು ಎಂಬುದರ ಅರಿವಾಗುತ್ತದೆ. ಅವರ ಈ ಔದಾರ್ಯ, ತ್ಯಾಗಗಳಿಂದ ಪ್ರಭಾವಿತರಾದ ಜನ ತಮ್ಮ ಮನೆಯಲ್ಲಿ ಮಂಗಳಕಾರ್ಯವಿದ್ದಾಗ ತಾಯಿಯವರಿಂದ ಆಶೀರ್ವಾದ ಪಡೆಯಲು ಬರುತ್ತಿದ್ದರಂತೆ. ಚಿಕ್ಕಂದಿನಿಂದಲೂ ದೇಶಪ್ರೇಮ ಬೆಳೆಸಿಕೊಂಡಿದ್ದ ಅವರು ಕೋಮು–ಸೌಹಾರ್ದಕ್ಕಾಗಿ, ದೇಶ ಸಂಕಷ್ಟಕ್ಕೊಳಗಾದಾಗ ಧನಸಂಗ್ರಹಕ್ಕಾಗಿ ಶ್ರಮಿಸಿದರು. ಅವರ ಈ ಎಲ್ಲ ನಿಸ್ವಾರ್ಥ ಸೇವೆಗಾಗಿ ಬ್ರಿಟಿಷ್ ಸರ್ಕಾರ ಪ್ರತಿಷ್ಠಿತ 'ಕೈಸರ್ ಇ ಹಿಂದ್' ಪದವಿ ಕೊಡಮಾಡಲು ಬಂದಾಗ ಅದನ್ನು ನಿರಾಕರಿಸಿದರು. ಅವರ ದೇಶಭಕ್ತಿ, ಸ್ವಾಭಿಮಾನ ಅಪೂರ್ವವಾದುದು. ಶ್ರೀಮಂತಿಕೆಯಲ್ಲಿ ಬೆಳೆದು ಬಾಳಿದರೂ ಅವರು ಬಡವರಿಗಾಗಿ ದಲಿತರಿಗಾಗಿ ಮರುಗಿದರು. 'ದುಡಿದವರಿಗೇ ದೊರೆತನ, ದಣಿದವರಿಗೇ ಧರಣಿ ಸಿಕ್ಕಬೇಕು' ಎಂದು ತಮ್ಮ ಕಾವ್ಯದ ಮೂಲಕವೂ ಪ್ರತಿಪಾದಿಸಿದರು.

ಭಾರತದ ಸ್ವಾತಂತ್ರ್ಯಾನಂತರ, ಭಾಷಾವಾರು ಪ್ರಾಂತ್ಯರಚನೆಯ ಆಶಯಕ್ಕೆ ಬಲ ಬಂದಿತು. ಕಾವೇರಿಯಿಂದ ಗೋದಾವರಿಯವರೆಗಿದ್ದ ಕನ್ನಡ ನಾಡು ಹರಿದು ಹಂಚಿಹೋಗಿ ಕರ್ನಾಟಕ ಏಕೀಕರಣ ಚಳುವಳಿ ಪ್ರಾರಂಭವಾಗಿತ್ತು. ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಒಂದು, ಎರಡು, ಮೂರು ಕರ್ನಾಟಕಗಳಾಗಬೇಕೆಂಬ ವಾದವನ್ನು ಹುಟ್ಟು ಹಾಕಿದರು. (ಇಂದಿಗೂ ಈ ವಾದ ಜೀವಂತವಾಗಿರುವುದನ್ನು ನೋಡಬಹುದು) 1952ರಲ್ಲಿ ನಡೆದ ಬೇಲೂರಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೋದ ತಾಯಿಯವರು, ಕೆರಳಿದ ಸಿಂಹಿಣಿಯಂತೆ ಗರ್ಜಿಸಿ ಕನ್ನಡಿಗರನ್ನು ಬಡಿದೆಬ್ಬಿಸಿದರು. ಏಕೀಕರಣಕ್ಕಾಗಿ ತನ್ನ ಪ್ರಾಣ ಕೊಡಲು ಸಿದ್ಧವಿರುವೆನೆಂದು ಕಂಬನಿಗೆರೆದರು. ನಂತರ ಅವರು ಕರ್ನಾಟಕದ ವಿವಿಧ ಭಾಗಗಳಿಗೆ ಭೇಟಿ ಕೊಟ್ಟು ಭಾಷಣಗಳ ಮೂಲಕ ಜನಮನವನ್ನು ಏಕೀಕರಣದ

ಉದ್ದೇಶಕ್ಕಾಗಿ ಒಲಿಸಿದರು. ಆಗರ್ಭ ಶ್ರೀಮಂತೆಯಾದ ಆಕೆ, ಕಾರು ಹೋಗಲು ಸಾಧ್ಯವಿಲ್ಲದ ಸ್ಥಳಗಳಿಗೆ ಎತ್ತಿನ ಗಾಡಿನಲ್ಲಿ ಹೋಗಿ ಸ್ವಂತ ಹಣ ಖರ್ಚು ಮಾಡಿಕೊಂಡು, ಕನ್ನಡ ಜನರನ್ನು ಜಾಗೃತಗೊಳಿಸಿದರೆಂದರೆ, ಅವರ ಹೋರಾಟದ ಕೆಚ್ಚು ಎಷ್ಟಿರಬಹುದೆಂದು ಊಹಿಸಬಹುದು. ಬೆಳಗಾವಿಯನ್ನು ಕರ್ನಾಟಕದಲ್ಲಿ ಉಳಿಸುವ ಕಾರ್ಯದಲ್ಲಿ ಕೂಡ ತಾಯಿಯವರು ಹೋರಾಡಿದರು. ತಮ್ಮ ಊರಾದ, ಅಚ್ಚಗನ್ನಡ ಪ್ರದೇಶವಾದ ಸೊಲ್ಲಾಪುರವನ್ನು ಕರ್ನಾಟಕಕ್ಕೆ ಸೇರಿಸಲು, ಮರಾಠಿಗರ ಕುತಂತ್ರ ಹಾಗೂ ನಮ್ಮ ರಾಜಕಾರಣಿಗಳ ನಿಷ್ಕ್ರಿಯತೆಯಿಂದಾಗಿ ಸಾಧ್ಯವಾಗಲಿಲ್ಲವೆಂಬ ನೋವು ಅವರನ್ನು ಕೊನೆಯತನಕ ಕಾಡಿತು. ಮರಾಠಿಗರು ಅವರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವ ಸಲುವಾಗಿ ಲೋಕಸಭೆಗೆ ರಾಜ್ಯಸಭೆಗೆ ಟಿಕೆಟ್ ಕೊಡಿಸುವ ಆಮಿಷ ಒಡ್ಡಿದರೂ, ತಾಯಿಯವರು ಅದನ್ನು ತಿರಸ್ಕರಿಸಿದರು. “ಕನ್ನಡ ನನ್ನ ಜೀವನದ ಉಸಿರು, ಸಾಹಿತ್ಯ ನನ್ನ ಕಾರ್ಯಾಂಗ, ರಾಜಕಾರಣಿ ನಾನಲ್ಲ” ಎಂಬುದೊಂದೇ ಅವರ ಉತ್ತರವಾಗಿತ್ತು. 1950ರಲ್ಲಿ ಸೊಲ್ಲಾಪುರದಲ್ಲಿ ‘ಕನ್ನಡ ಕೋಟೆ’ ಎಂಬ ಸಂಘ ಮತ್ತು ಅದೇ ಹೆಸರಿನ ಪ್ರಕಾಶನ ಸಂಸ್ಥೆಯೊಂದನ್ನು ಸ್ಥಾಪಿಸಿ, ಲೇಖನ, ಭಾಷಣ, ಸಂಘಟನೆಗಳ ಮೂಲಕ ಕನ್ನಡದ ಹೋರಾಟ ನಡೆಸಿ ತಮ್ಮ ತನು–ಮನ–ಧನಗಳನ್ನು ಕನ್ನಡದ ರಕ್ಷಣೆಗಾಗಿ ಅರ್ಪಿಸಿದರು. ಕನ್ನಡ, ಕರ್ನಾಟಕಕ್ಕೆ ತಮ್ಮನ್ನೇ ಅರ್ಪಿಸಿಕೊಂಡ ತಾಯಿಯವರಿಗೆ ಕರ್ನಾಟಕ ಏಕೀಕರಣದ ಹೋರಾಟದ ಇತಿಹಾಸದಲ್ಲಿ ಸರಿಯಾದ ಸ್ಥಾನ ದೊರಕಿಲ್ಲ ಎಂದು ಶ್ರೀಮತಿ ಶಶಿಕಲಾ ವೀರಯ್ಯಸ್ವಾಮಿಯವರು ನೊಂದು ನುಡಿದಿದ್ದಾರೆ. ತಾಯಿಯವರು ಕನ್ನಡದ ಉಳಿವಿಗಾಗಿ ನಡೆಸಿದ ಹೋರಾಟ, ಕರ್ನಾಟಕ ಏಕೀಕರಣದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದಂತಹ ಅಧ್ಯಾಯ ಎಂಬುದನ್ನು ಕನ್ನಡಿಗರು ಮರೆಯಬಾರದು.

ತಾಯಿಯವರ ಸಾಹಿತ್ಯ ಸಾಧನೆ

ತಾಯಿಯವರು ಸೊನ್ನಲಿಗೆಯ ಸಿದ್ಧರಾಮನ ಪರಮಭಕ್ತೆ. ಲೌಕಿಕ ಸಂಸಾರವನ್ನು ನಿರ್ವಹಿಸಿ, ನಾಡು–ನುಡಿಗಾಗಿ ಅನೇಕ ರೀತಿಯ ಹೋರಾಟಗಳನ್ನು ನಡೆಸಿದರೂ, ಆಕೆ ಮೂಲಭೂತವಾಗಿ ಭಕ್ತೆ ಮತ್ತು ವಿರಕ್ತೆ, ಅವರ ಲೌಕಿಕ ಸಂಸಾರದ ಜಂಜಾಟಗಳು ನಾಡು–ನುಡಿಯ ಪ್ರೇಮ, ಭಕ್ತಿ, ವೈರಾಗ್ಯ ಇವುಗಳೆಲ್ಲವೂ ಅವರು ರಚಿಸಿದ ಅನೇಕ ಸಾಹಿತ್ಯ ಕೃತಿಗಳಲ್ಲಿ ಜಾನಪದ ಛಂದಸ್ಸಿನಲ್ಲಿ ಅಭಿವ್ಯಕ್ತಿಗೊಂಡಿವೆ. ಚಿಕ್ಕಂದಿನಲ್ಲಿ ತಾವು ಬೆಳೆದ ಹಳ್ಳಿಯ ರೈತ ಹೆಣ್ಣಮಕ್ಕಳ ಜಾನಪದ ಧಾಟಿಯ ಹಾಡುಗಳು ಹಾಗೂ ತಾವು ಮೆಚ್ಚಿದ ಸರ್ವಜ್ಞನ ವಚನಗಳು, ಅವರ ಸಾಹಿತ್ಯ ರಚನೆ ತ್ರಿಪದಿಯ ಛಂದಸ್ಸಿಗೆ ಒಲಿಯಲು ಕಾರಣವಾಗಿರಬಹುದು. “ಜಯದೇವಿ ತಾಯಿಯವರು ಮೊದಲು ಸಾಧಕರು, ಆಮೇಲೆ ಕವಿಗಳು” ಎನ್ನುತ್ತಾರೆ, ಡಾ. ಶೈಲಜ ಉಡುಚಣ ಅವರು. ಕೇವಲ ಆರನೆಯ ಇಯತ್ತೆಯವರೆಗೆ ಮರಾಠಿಯಲ್ಲಿ ವಿದ್ಯಾಭ್ಯಾಸ ಮಾಡಿದ ತಾಯಿಯವರು, ಮೂರು ಮಕ್ಕಳಾದ ನಂತರ ಕಲಿತು, ಕನ್ನಡ ಮತ್ತು ಮರಾಠಿ ಎರಡೂ ಭಾಷೆಗಳಲ್ಲಿ ಸಾಹಿತ್ಯ ರಚನೆ ಮಾಡಿರುವುದು ಅವರ ಪ್ರತಿಭೆ ಮತ್ತು ಛಲಕ್ಕೆ ಹಿಡಿದ ಕನ್ನಡಿಯಾಗಿದೆ. ಕನ್ನಡ, ಮರಾಠಿ, ಹಿಂದಿ–ಈ ಮೂರು ಭಾಷೆಗಳನ್ನು ಅರಿತಿದ್ದ ಅವರು ಈ ಭಾಷೆಗಳಲ್ಲಿ ಒಳ್ಳೆಯ ವಾಗ್ಮಿಗಳಾಗಿದ್ದರು ಮತ್ತು ಸಾಹಿತ್ಯ ರಚನೆ ಮಾಡಬಲ್ಲವರಾಗಿದ್ದರು. ಕನ್ನಡ ಮತ್ತು ಮರಾಠಿ ಈ ಎರಡೂ ಭಾಷೆಗಳಲ್ಲಿ ಅವರು ಬರೆದ ಕೃತಿಗಳಲ್ಲಿ ಕೆಲವು ಪ್ರಕಟವಾಗಿದ್ದರೆ ಮತ್ತೆ ಕೆಲವು ಪ್ರಕಟವಾಗಿಲ್ಲ.

ಜಯದೇವಿಯವರ ಮೊದಲಕೃತಿ “ಜಯಗೀತೆ” ಪ್ರಕಟವಾದಾಗ ಅವರಿಗೆ ನಲವತ್ತು ವರ್ಷ ವಯಸ್ಸು. ಈ ಕೃತಿಯಲ್ಲಿರುವ ನಲವತ್ತು ಕವನಗಳು ಅವರ ಹೃದಯದಿಂದ ಹೊಮ್ಮಿದ ಭಾವ ಕುಸುಮಗಳಾಗಿವೆ. ಜೀವನಯಾತ್ರೆಯ ಮಾರ್ಗದಲ್ಲಿ ಉದ್ಭವಿಸುವ ಎಡರುತೊಡರುಗಳಿಗೆ ಧ್ಯಾನ, ಭಕ್ತಿಗಳು ಪರಿಹಾರವೆಂದು ನಂಬಿದ ಸಾತ್ವಿಕ, ಸರಳ ಸ್ವಭಾವದ ಜೀವವೊಂದರ ಸಾಧನೆಯ ಅಭಿವ್ಯಕ್ತಿ ಇಲ್ಲಿ ಕಂಡುಬರುತ್ತದೆ. “ಸಿರಿವಂತರ ಕುವರಿ, ಸಿರಿವಂತರ ಸತಿಯಾಗಿ ಸಿರಿತನದ ಶೃಂಗಾರವೆಲ್ಲವನು ಭೋಗಿಸಿದೆ. ಸಿರಿತನ ದೊರೆತನ ಹಿರಿಯತನ ಎನ್ನನಾವರಿಸಿದೆ, ಶ್ರೀಲೋಲನ ದರ್ಶನವು

ಒಮ್ಮೆ ಇಲ್ಲ ಎನ್ನುತ್ತಾ ಓ, ಎನ್ನೋ ಒಮ್ಮೆ ಓ, ಎಮ್ಮ ಸಿದ್ಧರಾಮ" ಎಂದು ಸಿದ್ಧರಾಮನ ದರ್ಶನಕ್ಕಾಗಿ ಹಂಬಲಿಸುತ್ತಾರೆ. "ದಾನಿ ಎನ್ನುವರೆನಗೆ, ಯಾರ ದಾನವನ್ನು ಯಾರಿಗಿಕ್ಕುವೆ ನಾನು, ಆ ಮಹಾದಾನಿಯಾದ ದರುಶನವು ಎನಗಿಲ್ಲ" ಎಂದು ಆ ಶಿವ ಕೊಟ್ಟದ್ದನ್ನು ಅವನಿಗೇ ಕೊಡುತ್ತಿದ್ದೇನೆ ಎಂಬ ಅವರ ಅರ್ಪಣಾ ಭಾವ ನಮ್ಮ ಮನತಟ್ಟುತ್ತದೆ. ಭಕ್ತಿ, ವೈರಾಗ್ಯ, ದೇಶಭಕ್ತಿ, ನಿಸರ್ಗ ಸೌಂದರ್ಯ, ಕನ್ನಡಾಭಿಮಾನ-ಅಂತರಂಗದ ಈ ಎಲ್ಲ ಭಾವನೆಗಳಿಗೂ ತಾಯಿಯವರು ಸರಳ ಸುಂದರವಾಗಿ ಅಭಿವ್ಯಕ್ತಿ ನೀಡಿದ್ದಾರೆ.

ಎರಡನೆಯ ಕೃತಿ 'ತಾಯಿಯ ಪದಗಳು'-ತಾಯ್ತನದ ಹಿರಿಮೆಯಿಂದ ಕೂಡಿದ ಈ ಪದಗಳು ತಾಯಿಯವರು ಮಾನವಕುಲಕ್ಕೆ ನೀಡಿದ ನೀತಿಸಂಹಿತೆಗಳಂತಿವೆ. "ಸಾವಿರದ ನುಡಿಸರವ ಸರಸಗೊಳಿಸಿದೆನವ್ವಾ ಸಾವೆಷ್ಟು ಅವಕ ಬದುಕೆಷ್ಟು, ನಾನರಿಯೆ, ಸಾವು ಬದುಕಿನ ದೊರೆಗೆ ಧರಿಸೇನ" ಎಂದು ಹೇಳುತ್ತಾ ಸಿದ್ಧರಾಮನ ಪಾದಗಳಿಗೆ ಈ ಭಾವಕುಸುಮಗಳನ್ನು ಅರ್ಪಿಸುತ್ತಾರೆ. ರೈತರ ಬವಣೆಯನ್ನು ಕುರಿತು "ಬಿತ್ತಿ ಬೆಳೆಸಿದ ಅನ್ನ, ಮರ್ತ್ಯಕ್ಕೆ ನೀಡ್ಯಾನ, ತುತ್ತ ಮಾಡಿ ತಾ ಉಣಿಸ್ಯಾನ/ ಹೊಲದಣ್ಣ ಬುತ್ತಿ ತನಗಿಲ್ಲ ಕುಂತಾನ" ಎಂದು ಹೇಳುವಾಗ ತಾಯಿಯವರ ಹೃದಯವಂತಿಕೆ ಮತ್ತು ವಾಸ್ತವಪ್ರಜ್ಞೆಗಳು ನಮ್ಮಲ್ಲಿ ಬೆರಗು ಹುಟ್ಟಿಸುತ್ತವೆ. ಶಿವಯೋಗಿ ಸಿದ್ಧರಾಮನ ಕರೆಗೆ ಹಂಬಲಿಸುವ ಜೀವವೊಂದರ ಉದ್ಗಾರಗಳು ಈ ಕೃತಿಯಲ್ಲಿ ಭಾವಗೀತಾತ್ಮಕವಾಗಿ ಮೂಡಿಬಂದಿವೆ.

"ಸಿದ್ಧರಾಮೇಶ್ವರ ಪುರಾಣ" ತಮ್ಮ ಇಷ್ಟದೈವವಾದ ಸೊನ್ನಲಿಗೆಯ ಶಿವಯೋಗಿ ಸಿದ್ಧರಾಮನನ್ನು ಕುರಿತು ರಚಿಸಿದ ಒಂಬೈನೂರು ಪುಟಗಳ ಮಹಾಕಾವ್ಯ, ತಾಯಿಯವರ ಅನುಭಾವ ತಾನೇತಾನಾಗಿ ಬಚ್ಚಿಟ್ಟ ಭಯಕೆ ಫಲವಾದ ಕೃತಿ ಇದು. ನಲವತ್ತೊಂದು ಸಂಧಿಗಳ 4100 ಪದ್ಯಗಳ ತ್ರಿಪದಿ ಛಂದಸ್ಸಿನಲ್ಲಿ ರಚಿತವಾದ ಹತ್ತು ವರ್ಷಗಳ ವಾಙ್ಮಯದ ಫಲ ಈ ಕೃತಿ. ಹನ್ನೆರಡನೆಯ ಶತಮಾನದ ಪ್ರಸಿದ್ಧ ವೀರಶೈವ ಕವಿ ರಾಘವಾಂಕನ ಸಿದ್ಧರಾಮ ಚಾರಿತ್ರ್ಯ ಮತ್ತು ಸಿದ್ಧರಾಮನನ್ನು ಕುರಿತ ಇತರ ಕೆಲವು ಕಥೆಗಳು ತಾಯಿಯವರ ಈ ಮಹಾಕಾವ್ಯಕ್ಕೆ ಮೂಲ ಆಕರಗಳು. ಬಾಲ್ಯದಲ್ಲಿ ಮುಗ್ಧ ಭಕ್ತನಾಗಿದ್ದ, ಧೂಳಿಮಾಕಾಳ ಶಿವನ ಕೃಪೆಯಿಂದ ಸಿದ್ಧರಾಮನಾಗಿ ಸೊನ್ನಲಿಗೆಯಲ್ಲಿ ಕೆರೆ ಕಟ್ಟಿ, ಮಠ, ದೇವಾಲಯಗಳನ್ನು ಕಟ್ಟಿಸಿ, ಜನರನ್ನು ಉದ್ಧರಿಸಿ ಕರ್ಮಯೋಗಿ ಎಂದು ಪ್ರಸಿದ್ಧನಾಗಿ ಪವಾಡಗಳನ್ನು ಮೆರೆದು ಕೊನೆಗೆ ಅಲ್ಲಿಯೇ ಲಿಂಗೈಕ್ಯನಾದ ಕಥೆ ಈ ಕಾವ್ಯದ ವಸ್ತು. ಮೂಲ ಸಿದ್ಧರಾಮ ಚಾರಿತ್ರ್ಯದಲ್ಲಿರುವಂತೆ ತಾಯಿಯವರ ಕಾವ್ಯದಲ್ಲಿ ಅತಿಯಾದ ವರ್ಣನೆಗಳಾಗಲೀ, ಉಪಕಥೆಗಳಾಗಲೀ ಇಲ್ಲ. ಶಿವಜ್ಞಾನಿಯ ಬದುಕನ್ನು ಚಿತ್ರಿಸುವಾಗ ಶಾಂತರಸ ತುಂಬಿ ತುಳುಕಿದೆ. ಈ ಕೃತಿಗೆ ತಾಯಿಯವರು ಬರೆದ ಆತ್ಮನಿವೇದನೆಯಲ್ಲಿ, ಈ ಕೃತಿ ರಚಿಸಲು ಪ್ರೇರಣೆ, ಕೃತಿ ರಚಿಸುವಾಗ ಎದುರಾದ ಅಡ್ಡಿ ಆತಂಕಗಳು, ಅಂದಿನ ತಮ್ಮ ಮನಃಸ್ಥಿತಿ ಇವನ್ನೆಲ್ಲ ಕಾವ್ಯಮಯವಾಗಿ ಹೇಳಿಕೊಂಡಿದ್ದಾರೆ. ಕೃತಿರಚನೆಗೆ ತೊಡಗಿದಂದಿನಿಂದ ಹತ್ತು ನಿಟ್ಟಿನಿಂದಲೂ ಕೌಟುಂಬಿಕ ಜಟಿಲತೆಗಳು, ವ್ಯವಹಾರಿಕ ಅಡ್ಡಿ ಆತಂಕಗಳು ತಾಯಿಯವರನ್ನು ಹಿಡಿದು ಅಲ್ಲಾಡಿಸಿದುವು. ಅವುಗಳನ್ನು ಪರಿಹರಿಸುವಂತೆ ತಾಯಿಯವರು, ಸಿದ್ಧರಾಮನಿಗೇ ಮೊರೆಯಿಟ್ಟರು. ಬರಬರುತ್ತಾ ಊಟನಿದ್ದೆಗಳೂ ಅವರಿಗೆ ಬೇಡವಾದವು. ಅನಿರೀಕ್ಷಿತವಾಗಿ ಅನಾರೋಗ್ಯದಾಳಿಯಿಟ್ಟು ಹಾಸಿಗೆ ಹಿಡಿದು ಅವರು ಆಸ್ಪತ್ರೆ ಸೇರಬೇಕಾಯ್ತು. "ನನ್ನದಲ್ಲಿದು, ಎಲ್ಲ ನಿನ್ನದು" ಎಂದು ತಾಯಿ ತನುಮನಗಳನ್ನೆಲ್ಲ ಸಿದ್ಧನಿಗೇ ಅರ್ಪಿಸಿಬಿಟ್ಟರು. ಚಿನ್ನದ ಕಂಕಣ ಕಳಚಿ ಕೈಗೆ ರುದ್ರಾಕ್ಷಿ ಕಂಕಣ ಕಟ್ಟಿದರು. ಕೊನೆಗೂ ಅವರ ಭಕ್ತಿಭಾವಕ್ಕೆ ಒಲಿದ ಸಿದ್ಧರಾಮ ಅವರಿಗೆ ಬೆಳಕಿನ ಹಾದಿ ತೋರಿ ಕಾವ್ಯ ಪೂರ್ಣಗೊಳ್ಳುವಂತೆ ಕೃಪೆತೋರಿದ ಎನ್ನುತ್ತಾರೆ ಜಯದೇವಿತಾಯಿ. ಜಿ.ಪಿ.ರಾಜರತ್ನಂ. ವಿ.ಕೃ.ಗೋಕಾಕರು, ನಿರಂಜನ, ಶಾಂತರಸರು, ಬಿ.ಎಸ್.ಸ್ವಾಮಿಯವರು, ಕಮಲಾ ಹಂಪನಾ, ಮುಂತಾದ ಆ ಕಾಲದ ಗಣ್ಯ ಸಾಹಿತಿಗಳೆಲ್ಲ ಈ ಕಾವ್ಯವನ್ನು ಹಾಡಿ ಹೊಗಳಿದ್ದಾರೆ. 1969ರ ರಾಜ್ಯೋತ್ಸವದ ದಿನ ಹುಬ್ಬಳ್ಳಿ ಮಹಾನಗರದಲ್ಲಿ, ಆನೆಯ ಅಂಬಾರಿ ಮೇಲೆ ಈ ಕಾವ್ಯದ ಮೆರವಣಿಗೆ ನಡೆಯಿತು. ಇಷ್ಟೆಲ್ಲ ಹೊಗಳಿಕೆಯ ತೋರಣಗಳನ್ನು ಕಟ್ಟಿಸಿಕೊಂಡಿದ್ದರೂ, ಈ

ಕೃತಿಗೆ ಸಿಗಬೇಕಾದಷ್ಟು ಸ್ಥಾನಮಾನಗಳು ಕನ್ನಡ ಸಾಹಿತ್ಯದಲ್ಲಿ ಸಿಕ್ಕಲಿಲ್ಲವೆನ್ನುವುದು ವಿಪರ್ಯಾಸದ ಸಂಗತಿಯಾಗಿದೆ. ಈ ಕೃತಿಗಳಲ್ಲದೆ ತಾರಕ ತಂಬೂರಿ, ಬಂದೇವ ಕಲ್ಯಾಣಕ, ಸಾವಿರದ ಪದಗಳು, ಮಕ್ಕಳಿಗಾಗಿ ಬರೆದ ಗದ್ಯಕೃತಿ ಸಿದ್ಧರಾಮ, ಮುಂತಾದ ಅನೇಕ ಕೃತಿಗಳನ್ನು ತಾಯಿಯವರು ರಚಿಸಿದ್ದಾರೆ. ಮಹಾವೀರವಾಣಿ ಎಂಬ ಹಿಂದಿ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಕನ್ನಡ-ಮರಾಠಿ ಭಾಷೆಗಳ ಗಡಿನಾಡಲ್ಲಿ ಬದುಕಿ, ಚಿಕ್ಕಂದಿನಲ್ಲಿ ಮರಾಠಿ ಭಾಷೆಯಲ್ಲಿ ಕಲಿತವರಾದ್ದರಿಂದ, ತಾಯಿಯವರು ಕನ್ನಡ ಮರಾಠಿ, ಈ ಎರಡೂ ಭಾಷೆಗಳಲ್ಲಿ ಪರಿಣತಿ ಇದ್ದ ಲೇಖಕಿಯೂ ವಾಗ್ಮಿಯೂ ಆಗಿದ್ದರು. ಮರಾಠಿಯಲ್ಲಿಯೂ ಅನೇಕ ಕೃತಿಗಳನ್ನು ರಚಿಸಿ, ಕರ್ನಾಟಕದ ಶಿವಶರಣರ ಸಾಹಿತ್ಯ ಹಾಗೂ ಕನ್ನಡದ್ದೇ ಆದ ತ್ರಿಪದಿ ಛಂದಸ್ಸನ್ನು ಮರಾಠಿಗೆ ಪರಿಚಯಿಸುವುದರ ಮೂಲಕ ಈ ಎರಡೂ ಭಾಷೆಗಳ ಸ್ನೇಹ ಸಂಬಂಧಕ್ಕೆ ಸೇತುವೆಯಾಗಿದ್ದಾರೆ. ತಾಯಿಯವರು ಮಾಡಿದ ಈ ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯ ಸೇವೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯತ್ವ, ಕರ್ನಾಟಕ ವಿಶ್ವವಿದ್ಯಾಲಯದ ಡಿ.ಲಿಟ್. ಪದವಿ ಮೊದಲುಗೊಂಡು, ಅನೇಕ ವೀರಶೈವ-ಸಮ್ಮೇಳನಗಳು, ಮಹಿಳಾ ಸಮ್ಮೇಳನಗಳು ಇವುಗಳ ಅಧ್ಯಕ್ಷ ಪದವಿ ಮತ್ತು ಪ್ರಶಸ್ತಿಗಳನ್ನು ಅವರು ಪಡೆದಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ 1974ರಲ್ಲಿ ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ, ನಾಡು-ನುಡಿಯ ಸೇವೆಗಾಗಿ ಅವರಿಗೆ ದೊರೆತ ಮಹತ್ವದ ಗೌರವವಾಗಿದೆ. ಹೀಗೆ ಅಖಿಲ ಕರ್ನಾಟಕ ಮಟ್ಟದ ಸಾಹಿತ್ಯ ಸಮ್ಮೇಳನಕ್ಕೆ ಸರ್ವಾಧ್ಯಕ್ಷೆಯಾಗಿ ಆಯ್ಕೆಯಾದ ಮೊದಲ ಮಹಿಳೆ ಈಕೆ. ಕನ್ನಡ ನಾಡು-ನುಡಿಯ ಬಗೆಗಿನ ಅಭಿಮಾನ ಕರ್ನಾಟಕದಲ್ಲಿರುವ ಕನ್ನಡೇತರರಿಗೆ ಕನ್ನಡ ಕಲಿಸಬೇಕೆಂಬ ಕಾಳಜಿ, ಕನ್ನಡದ ಶ್ರೇಷ್ಠ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದಿಸಬೇಕೆನ್ನುವ ಅಭಿಲಾಷೆ, ಜಾತಿ-ಮತಗಳ ಬೀಜದಿಂದ ನಮ್ಮ ದೇಶ ಅನುಭವಿಸುತ್ತಿರುವ ಕಹಿ ಫಲ, ಮಹಿಳೆಯರಿಂದ ಒಳ್ಳೆಯ ಸಾಹಿತ್ಯ ಸೃಷ್ಟಿಯಾಗಬೇಕೆಂಬ ಹಂಬಲ. ಕನ್ನಡಕ್ಕೆ ಬರುವ ಬೇರೆ ಭಾಷೆಯ ಶಬ್ದಗಳಿಂದ ಕನ್ನಡ ಭಾಷೆ ಬಲಗೊಳ್ಳಬೇಕೆಂಬ ಆಶಯ, ಸಾಹಿತಿಗಿರಬೇಕಾದ ಸಾಮಾಜಿಕ ಪ್ರಜ್ಞೆ, ಎಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯಾಗಬೇಕೆಂಬ ಕಳಕಳಿ- ಈ ಎಲ್ಲ ವಿಷಯಗಳ ಬಗೆಗೂ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಅವರಾಡಿದ, ಇಂದಿಗೂ ಪ್ರಸ್ತುತವೆನ್ನಿಸುವ ಮಾತುಗಳಲ್ಲಿ ಕಂಡುಬರುವ ವಿದ್ವತ್ತು, ದೂರದರ್ಶಿತ್ವ ಅನನ್ಯವಾಗಿವೆ.

"ಈ ಸಂಸಾರ ಹೇಯವಲ್ಲ, ಪಾಪವಲ್ಲ, ಸಂಸಾರದಲ್ಲಿದ್ದುಕೊಂಡೇ ಶಿವನನ್ನು ಕಾಣಬೇಕು" ಎಂದು ಶಿವಶರಣರು ನುಡಿದು ನಡೆದ ಸತ್ಯವನ್ನೇ, ತಾಯಿಯವರು ತಮ್ಮ ಬದುಕಿನಿಂದ ಮತ್ತು ಸಾಹಿತ್ಯದಿಂದ ಜಗತ್ತಿಗೆ ಸಾರಿ ಹೇಳಿದರು. ಅವರ ಮಾತು ಮೃದು ಆದರೆ ಸಂದರ್ಭ ಬಂದಾಗ ಅವರ ಮಾತು ವಜ್ರದಷ್ಟು ಕಠೋರವೂ ಆಗಬಲ್ಲುದಾಗಿತ್ತು. ಬಡವರು-ಬಲ್ಲಿದರು, ರಾಜಕಾರಣಿಗಳು, ಸಾಹಿತಿಗಳು-ಹೀಗೆ ಎಲ್ಲ ರೀತಿಯ ಜನ ಅವರ ಮನೆಗೆ ಭೇಟಿಕೊಡುತ್ತಿದ್ದರು. ಹಾಗೆ ಹೋದವರು ಅವರು ಪ್ರೀತಿವಾತ್ಸಲ್ಯದ ಹೊಳೆಯಲ್ಲಿ ಮಿಂದು ಅವರ ಬಗೆಗೆ ಭಕ್ತಿ, ಗೌರವ ತುಂಬಿದ ಹೃದಯದಿಂದ ಹೊರಬರುತ್ತಿದ್ದರು, ಬದುಕು ಇರುವುದು ಭೂತದಲ್ಲಿಯೂ ಅಲ್ಲ, ಭವಿಷ್ಯತ್ತಿನಲ್ಲಿಯೂ ಅಲ್ಲ, ಅದಿರುವುದು ವರ್ತಮಾನದಲ್ಲಿ, ವರ್ತಮಾನದಲ್ಲಿ ಬದುಕಲು ಕಲಿತರೆ ಮಾನವನ ಬಾಳು ಸುಖಕರವಾಗುತ್ತದೆ ಎಂದು ತಾಯಿಯವರು ನಂಬಿದ್ದರು. ಸರಳತೆ, ವಾತ್ಸಲ್ಯ, ಕನ್ನಡ ಪ್ರೇಮ, ಸಾಹಿತ್ಯ ನಿರ್ಮಿತಿ, ಸಮಾಜ ಸೇವೆ, ಅನುಭಾವ-ಇವೆಲ್ಲವುಗಳ ಸಂಗಮವಾಗಿದ್ದ ಜಯದೇವಿ ತಾಯಿಯವರದು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಮರೆಯಲಾಗದ ಹೆಸರಾಗಿದೆ.

ಇವರ "ಸಿದ್ದರಾಮೇಶ್ವರ ಪುರಾಣ"ಕ್ಕೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ದೇವರಾಜ ಬಹದ್ದೂರ್ ಪ್ರಶಸ್ತಿ; 1968ರಲ್ಲಿ ಲಲಿತಕಲಾ ಅಕಾಡೆಮಿ ಪ್ರಶಸ್ತಿ; 1974ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಜಾನಪದ ಸಮ್ಮೇಳನದ ಅಧ್ಯಕ್ಷತೆ; 1976ರಲ್ಲಿ ಕರ್ನಾಟಕ ವಿಶ್ವವಿದ್ಯಾಯವು ನೀಡಿದ ಡಿ.ಲಿಟ್ ಪದವಿ; ಇವು ಜಯದೇವಿ ತಾಯಿಯವರ ನಾಡುನುಡಿಯ ವೈವಿಧ್ಯಮಯ ಸೇವೆಗೆ ಸಂದ ಪ್ರಮುಖ ಗೌರವಗಳು. ಈ ಗೌರವಗಳನ್ನು ಪಡೆದ ತಾಯಿಯವರು ಭೌತಿಕವಾಗಿ ಈ ಲೋಕದಿಂದ ಮರೆಯಾಗಿ ಹೋದದ್ದು, 1986ರ ಜುಲೈ 24ರಂದು.

——— * ———

ಮಹಾಚೇತನ 'ಗಿರಿಬಾಲೆ'

ಡಾ. ಶ್ರೀವಲ್ಲಿ ಟಿ.ಎಸ್.

'ಗಿರಿಬಾಲೆ' ಕನ್ನಡ ಸಾಹಿತ್ಯ ಕಂಡ ಮೊದಲ ಲೇಖಕಿಯರಲ್ಲಿ ಒಬ್ಬರು. 1929ರಿಂದ ಸತತವಾಗಿ ಮೂರು ದಶಕಗಳ ಕಾಲ ಸಾಹಿತ್ಯ ಸೇವೆ ಸಲ್ಲಿಸಿದ ಈ ಲೇಖಕಿಯ ನಿಜವಾದ ಹೆಸರು, ಸರಸ್ವತಿಬಾಯಿ ರಾಜವಾಡೆ. 'ಗಿರಿಬಾಲೆ' ಇವರ ಪ್ರಮುಖ ಕಾವ್ಯನಾಮಗಳಲ್ಲಿ ಒಂದು. ಇವರು ಇನ್ನೂ ಹಲವು ಕಾವ್ಯನಾಮಗಳಿಂದ ಬರೆಯುತ್ತಿದ್ದರು. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಇವರು ತಮ್ಮ ಪ್ರತಿಭೆಯನ್ನು ಮೆರೆದಿರುವುದು ಇವರ ವೈಶಿಷ್ಟ್ಯ

1940–50ರ ದಶಕದಲ್ಲಿ "ಗಿರಿಬಾಲೆ" ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದ ಅವರು ಕನ್ನಡ ಸಾಹಿತ್ಯದಲ್ಲಿ "ಉತ್ತಮ ಲೇಖಕಿ" "ದಿಟ್ಟ ಬರಹಗಾರ್ತಿ" ಎಂದು ಖ್ಯಾತರಾಗಿದ್ದರು. ಗಿರಿಬಾಲೆ ಎಂಬ ಕಾವ್ಯನಾಮದಿಂದ ಓದುಗರಿಗೆ, ಸಾಹಿತ್ಯಾಸಕ್ತರಿಗೆ ಪರಿಚಯವಾದ ನಂತರ "ವಿಶಾಖ" "ವೀಣಾಪಾಣಿ" "ಸರಸ್ವತೀಬಾಯಿ" ಮೊದಲಾದ ಹೆಸರುಗಳಿಂದ ಬರೆಯತ್ತಿದ್ದರು. "ಗಿರಿಬಾಲೆ" ಎಂಬ ಹೆಸರಿನಿಂದ ನಾನು ಬರೆದದ್ದನ್ನು ಮೆಚ್ಚುತ್ತಾರೆಯೋ ಅಥವಾ ನಿಜವಾಗಿಯೂ ನನ್ನ ಬರವಣಿಗೆಯಲ್ಲಿ ಸತ್ವವಿದೆಯೋ ಎಂದು ಪರೀಕ್ಷಿಸಿಕೊಳ್ಳಲು ಬೇರೆ ಬೇರೆ ಕಾವ್ಯನಾಮದಿಂದ ಬರೆಯುತ್ತಿದ್ದೆ" ಎಂದು ಸರಸ್ವತೀಬಾಯಿಯವರು ಹೇಳುತ್ತಿದ್ದರು. ಹೀಗೆ ತಮ್ಮನ್ನು ತಾವು ವಿಮರ್ಶಿಸಿಕೊಂಡು ಬೆಳೆದ ಚಿಕಿತ್ಸಕ ಬುದ್ಧಿಯ ಸಾಹಿತಿ ಸರಸ್ವತೀಬಾಯಿ ಅವರದು ವೈವಿಧ್ಯಪೂರ್ಣ ಆಸಕ್ತಿಯನ್ನು ಹೊಂದಿದ್ದ ವ್ಯಕ್ತಿತ್ವ. ಸಾಹಿತ್ಯದ ಎಲ್ಲಾ ಕ್ಷೇತ್ರದಲ್ಲೂ ಬರೆದಿದ್ದಾರೆ. ಅಲ್ಲದೇ ಬಾಲ್ಯದಲ್ಲಿ ನಾಟಕಗಳಲ್ಲೂ ಅಭಿನಯಿಸಿದ್ದರು. ಇಂಪಾದ ಕಂಠಶ್ರೀಯನ್ನು ಹೊಂದಿದ್ದ ಅವರು ಅನೇಕ ಸಂಗೀತ ಕಛೇರಿಗಳನ್ನು ನಡೆಸಿದ್ದರು. ಹಾಡುವುದರ ಜೊತೆಗೆ ವೀಣೆಯನ್ನು ನುಡಿಸುತ್ತಿದ್ದರು. ಪ್ರತಿಭೆ, ಪರಿಶ್ರಮ, ಅದಮ್ಯ ಉತ್ಸಾಹಗಳನ್ನು ಅವರಲ್ಲಿ ಗುರುತಿಸಬಹುದಾಗಿತ್ತು. ಯಾವುದೇ ಕೆಲಸವನ್ನೂ ಛಲದಿಂದ ಸಾಧಿಸುವ, ಅಚ್ಚುಕಟ್ಟಾಗಿ ನಿರ್ವಹಿಸುವ, ಕರ್ತೃತ್ವ ಶಕ್ತಿ ಅವರದ್ದಾಗಿತ್ತು. ನಾನು ಅವರನ್ನು 1987ರಲ್ಲಿ ಭೇಟಿಯಾದಾಗ ಸಾಹಿತ್ಯದಿಂದ ವಿಮುಕ್ತರಾಗಿ ಶಾರದಾಂಬಾ ದೇವಾಲಯದ ಅಭಿವೃದ್ಧಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಆಗ ಒಂದೇ ಹಾಲಿನಲ್ಲಿದ್ದ ದೇವಾಲಯ ಮತ್ತೆರಡು ವರ್ಷಗಳ ನಂತರ ಹೋದಾಗ ಗುರುತೇ ಹತ್ತದಷ್ಟು ಬೆಳೆದಿದ್ದು, ಅವರ ಕಾರ್ಯವೈಖರಿಗೆ ಸಾಕ್ಷಿ ನುಡಿಯುತ್ತಿತ್ತು. ಆ ಇಳೀ ವಯಸ್ಸಿನಲ್ಲಿಯೂ ಅವರ ಕಂಠಮಾಧುರ್ಯವನ್ನು ಗುರುತಿಸಬಹುದಾದಷ್ಟು ಚೆನ್ನಾಗಿ ಹಾಡುತ್ತಿದ್ದರು.

ವಯಸ್ಸಾದ ನಂತರದಲ್ಲೂ ಸ್ವಲ್ಪವೂ ಬಾಗಿರದ ಅವರ ನಿಲುವು, ಅವರ ಸ್ವಭಾವದ ಪ್ರತಿಬಿಂಬವಾಗಿತ್ತು. ಬಹಳ ಬಡತನದಲ್ಲಿ ಬಾಲ್ಯ ಕಳೆದಿದ್ದು, ಕಲಿಯಬೇಕೆಂಬ ಅದಮ್ಯ ಬಯಕೆ, ಅದಕ್ಕೆ ಬೇಕಾದ ಹಣವಿಲ್ಲದೇ ಎಳೆಯ ಮನಸ್ಸು ಬಹಳ ನೊಂದಿತ್ತು. "ನಾನು ಎರಡನೇ ತರಗತಿಯಲ್ಲಿದ್ದಾಗ ನನ್ನ ಕುಂಬಳಕಾಯಿ ಅಕ್ಷರದಲ್ಲಿ ದೇವರಿಗೆ ಒಂದು ಪತ್ರ ಬರೆದೆ. ನಾನು ತುಂಬಾ ಓದಬೇಕು ನನಗೆ ಹಣವಿರುವ ಗಂಡನನ್ನು ಕೊಡು" ಎಂದು ದೇವರಲ್ಲಿ

ಎಳೆಯಬಾಲೆ ಮೊರೆ ಇಟ್ಟಿದ್ದಳು. ದೇವರು ಅವರ ಮೊರೆಯನ್ನು ಕೇಳಿದ. ಅವರು ಕೇಳಿದಂತೆ ತುಂಬಾ ಹಣಪಿದ್ದ ಗಂಡನನ್ನು ಅವರಿಗೆ ದೊರಕಿಸಿಕೊಟ್ಟ. ಆದರೆ ಆ ಜೀವನವಾದರೂ ಎಂತಹುದು, ಅವರ ಮಾತಲ್ಲೇ ಕೇಳಿ. "ನನ್ನ ಹದಿನೈದನೆಯ ವಯಸ್ಸಿನಲ್ಲಿಯೇ ಮದುವೆಯಾಯಿತು. ನಮ್ಮ ಯಜಮಾನರಿಗೆ ನಾನು ಎರಡನೇ ಹೆಂಡತಿ. ಆಗ ಅವರಿಗೆ 51 ವರ್ಷ ವಯಸ್ಸಾಗಿತ್ತು. ನನಗೆ ತಂದೆ ಇಲ್ಲ. ದುಡ್ಡೂ ಇಲ್ಲ. ಸೋದರ ಮಾವ ಮದುವೆ ಮಾಡಿಸಿದರು" ಎನ್ನುವ ಸರಸ್ವತಿಯವರು ಅವರ ಗಂಡನನ್ನು "ನಿಮ್ಮ ಮಗಳಂಥವಳನ್ನು ಮದುವೆಯಾಗಿದ್ದು ಯಾತಕ್ಕೆ" ಎಂದು ಪ್ರಶ್ನಿಸಿದ್ದರಂತೆ. ಗಂಡ, ಆಗ ಅವರು ಶಾರದಾಂಬೆಯ ವಿಗ್ರಹದ ಮುಂದೆ ನಿಲ್ಲಿಸಿ "ನಾನು ಲೌಕಿಕ ಸುಖಕ್ಕಾಗಿ ಮದುವೆಯಾಗಲಿಲ್ಲ, ಈ ಅಮ್ಮನ ಸೇವೆಗಾಗಿ" ಎಂದು ಉತ್ತರ ಹೇಳಿದ್ದರಂತೆ. ಗಂಡನ ಸೇವೆಯೋ, ಅವರ ದೇವಸ್ಥಾನದ ಶಾರದಾಂಬೆಯ ಸೇವೆಯೋ, ಸರಸ್ವತಿಯವರ ಲೌಕಿಕ ಜೀವನವಂತೂ ಈ ಮದುವೆಯಿಂದ ಅರ್ಥಹೀನವಾಯಿತು ಎಂಬುದಷ್ಟೇ ನಿಜ. "ಹೌದು ನೋಡಿ ಅವರ ಮಾತು ಎಷ್ಟು ಸತ್ಯ. ಈ ಅಮ್ಮನ ಮಹಿಮೆ ಎಷ್ಟು ಅಪಾರವೆಂಬುದು ಈ ದೇವಾಲಯ ಕಟ್ಟಿದ ಮೇಲೆಯೇ ನನಗೆ ಅರಿವಾದದ್ದು" ಎಂದು ಇಳಿವಯಸ್ಸಿನಲ್ಲಿ ದೇವಸ್ಥಾನದ ಸೇವೆಗೆ ನಿಂತ ಮೇಲೆ ಅವರು ಹೇಳಿದ ಮಾತು. ಸರಸ್ವತೀಬಾಯಿಯವರು ಬಾಲ್ಯದಿಂದಲೂ ದೈವಭಕ್ತಿಯ ಮನಸ್ಸು, ಏನೇ ಕಷ್ಟ ಬಂದರೂ ದೇವರಲ್ಲಿ ಮೊರೆಯಿಡುತ್ತಿದ್ದರು. ಶಾರದಾಂಬೆಯ ಮಾತು ಎಂದೊಡನೆ ಅವರ ಮುಖದಲ್ಲಿ ಒಂದು ರೀತಿ ಬೆಳಕು ಚಿಮ್ಮುತ್ತಿತ್ತು. ಅವರ ಬಾಳಿನ ಎಲ್ಲಾ ನೋವಿಗೂ ಪವಾಡದ ಲೇಪನ ಹಚ್ಚಿಯೇ ಹೇಳುತ್ತಿದ್ದರು. ಇದರಿಂದ ಅವರ ಮನಸ್ಸಿನ ದುಗುಡ ಕಡಿಮೆಯಾಗುತ್ತಿತ್ತೋ ಏನೊ! ಒಮ್ಮೆ ಮಾತಾಡುತ್ತಿದ್ದಾಗ ಹೇಳಿದರು. 'ಎರವಲ ಮಸಿ' ಅಂತ ಒಂದು ಬರದಿದ್ದೆ ಅದು ನೋಡಿ ನಿಮಗೆ ಕೊಟ್ಟಿರಬಹುದು. ಅದು ನನ್ನ ಮದುವೆ ನಂತರದ ಕಥೆ, ಅದರಲ್ಲಿ ಅವರ ಮಾನಸಿಕ ತೊಳಲಾಟ ಚಿತ್ರಿತವಾಗಿದೆ. ಅವರ ಜೀವನದ ಕೆಲವು ಘಟನೆಗಳು ನಿರೂಪಿತವಾಗಿವೆ."

ಸರಸ್ವತೀಬಾಯಿಯವರು ತಮ್ಮ ಪತಿ ತಮ್ಮನ್ನು ಮುಂದೆ ಓದಲು ಪ್ರೋತ್ಸಾಹಿಸಿದರು ಎಂದು ಹೇಳುತ್ತಿದ್ದರು. ಆದರೆ ಸತ್ಯ ಸಂಗತಿ ಸ್ವಲ್ಪ ಭಿನ್ನವಾಗಿದೆ. ಸರಸ್ವತೀಬಾಯಿಯವರು ತಮ್ಮ ಹಠದಿಂದ, ಛಲದಿಂದ, ಓದಲು ಮುಂದಾದರು. ಆಗ ಏನೂ ಮಾಡಲಾಗದೇ ಅವರ ಪತಿ ಸಹಕರಿಸಬೇಕಾಯಿತು. ತಮ್ಮ ಬರವಣಿಗೆಯನ್ನು ರೂಢಿಸಿಕೊಳ್ಳುವಾಗಲೂ ಅವರು ಬಹಳ ಶ್ರಮಪಡಬೇಕಾಯಿತು. ಮನೆ ಹೆಂಗಸರು ಮನೆಯಿಂದ ಹೊರಗೆ ಹೆಚ್ಚು ಹೋಗಬಾರದು ಎಂಬ ಅಭಿಪ್ರಾಯವನ್ನು ಹೊಂದಿದವರು. ಹೆಂಗಸರು ಹೆಚ್ಚು ಓದುವುದು ಅವರಿಗೆ ಇಷ್ಟವಿರಲಿಲ್ಲ. ಆದರೆ ಅನಿವಾರ್ಯದಿಂದ ನನಗೆ SSLC ಪರೀಕ್ಷೆ ಕಟ್ಟಿಸಿದ್ದರು. ಹಿಂದೀ ವಿಶಾರದ ಪರೀಕ್ಷೆಯನ್ನು ಮುಗಿಸಿಕೊಂಡೆ. ಇವೆಲ್ಲಕ್ಕೂ ಮನೆಯಲ್ಲಿಯೇ ಪಾಠ ಹೇಳಿಸಿದರು. ಅವರ ಈ ಆಸೆಗೆ ನೀರೆರೆದಿದ್ದು, ಧೈರ್ಯವನ್ನು ತುಂಬಿದ್ದು, ಸಿಂಗಪುರದಲ್ಲಿ ಅವರ ಮನೆಯ ಬಳಿಯಲ್ಲಿದ್ದ ಒಂದು ಕುಟುಂಬದವರು. ಈ ವಿಷಯಗಳನ್ನು ಸರಸ್ವತೀಬಾಯಿಯವರು "ಎರವಲು ಮಸಿಯಲ್ಲಿ" ದಾಖಲಿಸಿದ್ದಾರೆ.

ಸರಸ್ವತೀಬಾಯಿಯವರು ಸಿಂಗಪುರದಲ್ಲಿದಾಗ, ಆಗ ಪ್ರಸಿದ್ಧವಾಗಿದ್ದ ಸುಹಾಸಿನಿ, ಕಂಠೀರವ ಮೊದಲಾದ ಪತ್ರಿಕೆಗಳನ್ನು ತರಿಸಿ ಓದುತ್ತಿದ್ದರು. ಅವರಿಗೂ ಬರೆಯಬೇಕೆಂಬ ಆಸೆ ಹುಟ್ಟಿತು. 1929ರಲ್ಲಿ "ನನ್ನ ಜ್ಞಾನ" ಎಂಬ ಕಥೆಯನ್ನು ಕಂಠೀರವ ಪತ್ರಿಕೆಗೆ ಕಳಿಸಿದರು. ಕಥೆ ಪ್ರಕಟಗೊಂಡಿತು. ಜೊತೆಗೆ "ಕಥೆ ಚೆನ್ನಾಗಿದೆ ಮತ್ತೂ ಬರೆಯುತ್ತಿರಿ" ಎಂಬ ಪ್ರೋತ್ಸಾಹದ ಮಾತುಗಳನ್ನೊಳಗೊಂಡ ಪತ್ರವೂ ಬಂದಿತು. ಅಂದಿನಿಂದ ನಿರಂತರವಾಗಿ ಮೂರೂವರೆ ದಶಕಗಳವರೆಗೆ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿ, ತಮ್ಮ ಸೇವೆ ಸಲ್ಲಿಸಿದ್ದರು. ನಂತರ 1976ರಲ್ಲಿ ತಮ್ಮ ಯಜಮಾನರ ಮನೆಯಲ್ಲಿದ್ದ ಶಾರದಾಂಬ ವಿಗ್ರಹಕ್ಕೆ ಉಡುಪಿಯಲ್ಲಿ ಒಂದು ದೇವಾಲಯ ಕಟ್ಟಿಸಿ ಶಾರದಾಂಬೆಯ ಸೇವೆಯನ್ನು ಮಾಡುತ್ತಾ ಶಾಂತವಾಗಿ ಬದುಕಿದರು.

ಸರಸ್ವತೀಬಾಯಿಯವರ ಜೀವನವು ಬಹಳ ಸಂಕೀರ್ಣವಾಗಿದ್ದಿತು. ಬಾಲ್ಯದಲ್ಲಿ ಜೀವನ ನಿರ್ವಹಣೆಗಾಗಿ ಅನೇಕ ರೀತಿಯ ಕೆಲಸಗಳನ್ನು ಮಾಡಬೇಕಾಗಿತ್ತು. "ಬೇಬಿ ಸರೋಜ" ಎಂಬ ಹೆಸರಿನಲ್ಲಿ ಸಿನಿಮಾದಲ್ಲಿ ನಟಿಸಿದರು. "ಅಂಬಾ ಪ್ರಸಾದಿತ" ಎಂಬ ನಾಟಕ ಕಂಪನಿಯಲ್ಲಿ ಬಾಲ ನಟಿಯಾಗಿ ಅಭಿನಯಿಸಿದರು. ಇವೆಲ್ಲವೂ ಅವರಿಗೆ ಜೀವನದ ನಾನಾ ಮುಖಗಳನ್ನು ತೋರಿಸಿತು. ಸಮಸ್ಯೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ವಿಮರ್ಶಕ ಮನಸ್ಸನ್ನು ಅದು ನೀಡಿತು.

ಬಡತನದ ಬೇಗೆಯ ಅರಿವಿದ್ದ ಅವರು ಮನೆ ಬಾಗಿಲಿಗೆ ಬಂದು ಬೇಡಿದವರಿಗೆ ಎಂದೂ ಬರಿಗೈಯಲ್ಲಿ ಕಳುಹಿಸಲಿಲ್ಲ.

ಈ ಲೇಖಕಿಯದು ಸಾಹಿತ್ಯ ಸೇವೆ ಮಾತ್ರವಲ್ಲ, ಧಾರ್ಮಿಕ ಹಾಗೂ ಸಮಾಜಕ್ಕೂ ಇವರ ಸೇವೆ ಸಂದಿದೆ. ಬಡತನದ ಬೇಗೆಯ ಅರಿವಿದ್ದ ಅವರು ತಮ್ಮ ಮನೆ ಬಾಗಿಲಿಗೆ ಬಂದು ಬೇಡಿದವರಿಗೆ ಎಂದೂ ಬರಿಗೈಯ್ಯಲ್ಲಿ ಹಿಂತಿರುಗಿಸಿ ಕಳಿಸಿಲ್ಲ. "ತುಂಬಾ ಹಣಕೊಡು" ಎಂದು ದೇವರಲ್ಲಿ ಮೊರೆ ಇಟ್ಟೆ. ಅವನು ಕರುಣಿಸಿದ, ಅದನ್ನು ಅಗತ್ಯವಿದ್ದವರೊಡನೆ ಹಂಚಿಕೊಳ್ಳಬೇಕಾದದ್ದು ನನ್ನ ಕರ್ತವ್ಯ ಎಂಬುದು ಅವರ ಅಭಿಪ್ರಾಯವಾಗಿತ್ತು. ಆಸ್ಪತ್ರೆ, ದೇವಾಲಯಗಳಿಗೆ ಸಾಕಷ್ಟು ದಾನವನ್ನಿತ್ತಿದ್ದಾರೆ. 1961ರಲ್ಲಿ ಉಡುಪಿಯ ಸರ್ಕಾರಿ ಆಸ್ಪತ್ರೆಗೆ 25000 ರೂ.ಗಳನ್ನು ದಾನ ಮಾಡಿದ್ದಾರೆ. ತಮ್ಮ ಅರವತ್ತನೇ ಹುಟ್ಟಿದ ಹಬ್ಬದಂದು ದೀನ ದಲಿತರಿಗೆ ಅನ್ನದಾನ ಮಾಡಿದರು. ಆ ದಿನ ಉಡುಪಿಯ ಬಳಿಯಿರುವ ಕಡಿಯಾಳ ಅಯರ್ ಪ್ರೈಮರಿ ಶಾಲೆಗೆ ಒಂದು ಸಾವಿರ ರೂ.ಗಳ ನಿಧಿಯನ್ನು ನೀಡಿದರು. 1962ರಲ್ಲಿ ಭಾರತ ಚೀನ ಯುದ್ಧ ಆರಂಭವಾದಾಗ. ದೇಶಕ್ಕೆ ತಮ್ಮ ಕೈಲಾದ ಸಹಾಯ ಮಾಡಬೇಕೆಂಬ ಉದ್ದೇಶದಿಂದ ರಕ್ಷಣಾ ನಿಧಿಗೆ 13.5 ಗ್ರಾಂ ಚಿನ್ನವನ್ನು ದಾನವಾಗಿತ್ತರು. ಉಡುಪಿಯ ಶ್ರೀ ಕೃಷ್ಣ ದೇವಾಲಯದಲ್ಲಿ ಮೂರು ಬಾರಿ ಸತತವಾಗಿ "ಸಪ್ತೋತ್ಸವ"ದ ಸೇವೆ ಸಲ್ಲಿಸಿದ್ದಾರೆ. ಈ ಸೇವೆ ಅತ್ಯಂತ ಹೆಚ್ಚಿನ ವೆಚ್ಚದ್ದು. ಇತ್ತೀಚಿನ ದಿನಗಳಲ್ಲಿ ಅಂದರೆ 1991ರಲ್ಲಿ ಫಲಿಮಾರು ಮಠದಲ್ಲಿ ದೇವರ ಪೂಜೆಯ ಸಿಹಿ ನೀರಿಗಾಗಿ ಮಠದ ಒಳಗೆ ಒಂದು ಬಾವಿಯನ್ನು ತೋಡಿಸಿದ್ದಾರೆ. ಅವರದ್ದು ಮೂಲತಃ ಅಧ್ಯಾತ್ಮ ನೆಲೆಯ ಮನಸ್ಸು. ಆದರೆ ಮೂರ್ತಿ ಪೂಜೆಯನ್ನು, ಮೂಢ ನಂಬಿಕೆಗಳನ್ನು ಅವರ ಬರವಣಿಗೆಗಳಲ್ಲಿ ಕಟುವಾಗಿಯೇ ಟೀಕಿಸಿದ್ದಾರೆ. "ಕಟ್ಟು ಗುಡಿಯ ನಿನ್ನ ಗುಡಿಯ ಗರ್ಭದೊಳಗೆ" ಎಂದು ತಮ್ಮ ಒಂದು ಕವನದಲ್ಲಿ ಸಂದೇಶವನ್ನು ಸಾರಿದ ಲೇಖಕಿ ಇಳಿವಯಸ್ಸಿನಲ್ಲಿ ತಾವೇ ಒಂದು ಗುಡಿ ಕಟ್ಟಿ. ಅದರ ಸಮಸ್ತ ಜವಾಬ್ದಾರಿಯನ್ನು ವಹಿಸಿಕೊಂಡು ನಡೆಸುತ್ತಾ ಬಂದರು. ಆ ದೇವಾಲಯದಲ್ಲಿ ವಾರಕ್ಕೊಮ್ಮೆ ನಡೆಸುತ್ತಿದ್ದ "ದರ್ಶನ" ಪೂಜೆ, ಮೂಢ ನಂಬಿಕೆಯ ತಳಹದಿಯಿಂದಲೇ ನಡೆಯುತ್ತಿತ್ತು. ಆ ದಿನ ಒಬ್ಬ ಪಾದ್ರಿಯ ಮೇಲೆ ಶಾರದಾಂಬೆಯ ಆವಾಹನೆ. ಆಗ ಭಕ್ತಾದಿಗಳು ಬಂದು ತಮಗೆ ಇರುವ ಸಮಸ್ಯೆಗಳ ಬಗ್ಗೆ ಪ್ರಶ್ನೆ ಕೇಳಿ ಉತ್ತರ ಪಡೆಯಬಹುದು. ನಾನು ಒಮ್ಮೆ ಈ ಪೂಜೆಯ ಪ್ರತ್ಯಕ್ಷದರ್ಶಿಯಾಗಿದ್ದೆ. ಭಕ್ತಾದಿಗಳು ಕೇಳಿದ ಪ್ರಶ್ನೆಗೆ ಇಕ್ಕಟ್ಟಿಗೆ ಸಿಲುಕದಂತೆ ಆ ಪಾದ್ರಿ ಉತ್ತರಿಸುತ್ತಿದ್ದ. ಅವನಿಗೆ ಉತ್ತರಿಸಲಾಗದ ಸಂದರ್ಭಗಳಲ್ಲಿ ಸರಸ್ವತೀಬಾಯಿಯವರೆ ಅದಕ್ಕೆ ತಕ್ಕದಾದ ಉತ್ತರವನ್ನು ಹೇಳಿ ಅವರನ್ನು ತೃಪ್ತಿಗೊಳಿಸುತ್ತಿದ್ದರು. ಈ ಪೂಜೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು. ಸರಸ್ವತೀಬಾಯಿಯವರ ವ್ಯವಹಾರ ಚಾತುರ್ಯ, ಒಬ್ಬರು ಒಂದು ಬಾರಿ ಮಾತ್ರ ಪ್ರಶ್ನೆ ಕೇಳಬೇಕು. ಪ್ರಶ್ನೆಯೊಂದಕ್ಕೆ ಹತ್ತು ರೂಪಾಯಿ, ಪ್ರಶ್ನೆ ಕೇಳುವವರ ಹೆಸರನ್ನು ಗುರುತುಹಾಕಿಕೊಳ್ಳುವ ಜವಾಬ್ದಾರಿ ಸರಸ್ವತಿಬಾಯಿಯವರದೇ. ಮತ್ತೊಂದು ಪ್ರಶ್ನೆ ಕೇಳಬೇಕಾದರೆ ಮತ್ತೆ ಹತ್ತು ರೂಪಾಯಿ ಕೊಡಬೇಕು. ತಮ್ಮ ಸಮಸ್ತ ಆಸ್ತಿಯನ್ನು ದೇವಾಲಯಕ್ಕಾಗಿ ವಿನಿಯೋಗಿಸಿರುವ ಸರಸ್ವತೀಬಾಯಿಯವರು "ದೇವಾಲಯದ ಕಾರ್ಯಗಳು ನಿರ್ವಿಘ್ನವಾಗಿ ಸಾಗಬೇಕಾದರೆ ಸಾರ್ವಜನಿಕರ ಬೆಂಬಲ ಬೇಕು. ಸಾರ್ವಜನಿಕರ ಹಣದಿಂದ ಪಡೆಯಬೇಕು. ಆದ್ದರಿಂದ ವಿಷಯದಲ್ಲಿ ನಾನು ಕಟ್ಟುನಿಟ್ಟು" ಎಂದು ತಮ್ಮ ಕಾರ್ಯವನ್ನು ಸಮರ್ಥಿಸಿಕೊಳ್ಳುತ್ತಿದ್ದರು.

ಸರಸ್ವತೀಬಾಯಿಯವರಿಗೆ ಗುರುಹಿರಿಯರಲ್ಲಿ ಅಪಾರ ಭಕ್ತಿ ಗೌರವ. ಮೊದಲು ಮುದ್ರಿತವಾದ ಕಥಾ ಸಂಕಲನ, ಆಹುತಿ ಇತ್ಯಾದಿ ಕಥೆಗಳು ಒಬ್ಬ ಹಿರಿಯರಿಗೆ ಅರ್ಪಿತವಾಗಿದೆ. "ಕದಂಬ" ಸಂಕಲನವನ್ನು ಪುತ್ತಿಗೆ ಮಠದ ನಾರಾಯಣ ಭಟ್ಟರಿಗೆ ಅರ್ಪಿಸಿದ್ದಾರೆ. "ಶಾರದಾಂಬ ದೇವಸ್ಥಾನದ ಪೂರ್ವ ಇತಿಹಾಸ" ಈ ಕೃತಿ ಅವರ ಪತಿ ಶ್ರೀರಾಯಶಾಸ್ತ್ರಿ ರಾಜವಾಡೆಯವರಿಗೆ ಅರ್ಪಿತವಾಗಿದೆ. ತಮ್ಮ ಅಸಮ ವಿವಾಹದ ಬಗ್ಗೆ ಅವರಿಗೆ ಬೇಸರವಿತ್ತು. ಮದುವೆಯ ನಂತರದ ಗೃಹಬಂಧನದಿಂದ ಪತಿಯ ಬಗ್ಗೆ ಆಗ ಅಸಮಾಧಾನವಿತ್ತು. ಆದರೆ ವಯಸ್ಸಾದಂತೆ ಅವೆಲ್ಲಾ ಕಳೆದು, ಪತಿಯ ಬಗ್ಗೆ ಕೃತಜ್ಞತಾ ಭಾವ ಮೂಡಿತು. "ಜಗಜ್ಜನನಿಯರಾದ ಶ್ರೀ ಶಾರದಾಂಬೆಯು ಅಕಿಂಚನೆಯಾದ ನನ್ನನ್ನು ನಿಮಿತ್ತವಾಗಿರಿಸಿ ಗುಡಿ ಕಟ್ಟಿಸಿಕೊಂಡು ಉಡುಪಿಯಲ್ಲಿ ನೆಲೆಸುವಂತಾಗಲು ಯಾರ ಪೂಜ್ಯ ಪ್ರಭಾವವು ಕಾರಣವಾಯಿತೋ ಆ ನನ್ನ ದಿವಂಗತರಾದ ಪತಿದೇವರ ಆತ್ಮಕ್ಕೆ ಈ ಗ್ರಂಥವು ಅರ್ಪಿತವಾಗಿದೆ" ಎಂದು ಅರ್ಪಣೆಯ ನುಡಿಗಳಲ್ಲಿ ಹೇಳಿದ್ದಾರೆ. ಅನೇಕ ರೀತಿಯಲ್ಲಿ ತಮ್ಮ ಪತಿಗೆ ಅವರು ಕೃತಜ್ಞತೆಯನ್ನು ಅರ್ಪಿಸಿದ್ದಾರೆ. ಸರಸ್ವತೀ ಬಾಯಿಯವರ ಸಾಹಿತ್ಯ ವಿಫುಲವಾದದ್ದು. 72 ಸಣ್ಣ ಕಥೆಗಳು, 54 ಪ್ರಬಂಧಗಳು, 7 ನಾಟಕಗಳು, 24 ಕವನಗಳು, 100ಕ್ಕೂ ಮಿಕ್ಕ ದೇವರ ನಾಮಗಳು, 3 ಕಾದಂಬರಿಗಳು, ಮತ್ತು ಹಲವು ಆರೋಗ್ಯ ಲೇಖನಗಳು. ಅಲ್ಲದೆ ಪತ್ರಿಕೋದ್ಯಮಿಯಾಗಿಯೂ ದುಡಿದಿದ್ದಾರೆ. ಅದರ ಮೂಲಕ ಮಹಿಳೆಯರ ಸರ್ವತೋಮುಖ ಏಳ್ಗೆಗಾಗಿ ಶ್ರಮಿಸಿದ್ದಾರೆ.

ಸರಸ್ವತೀಬಾಯಿಯವರದು ಬಹುಮುಖ ಪ್ರತಿಭೆ, ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಷ್ಟೇ ಅಲ್ಲದೇ, ಅವರು ಸಂಗೀತ, ನಾಟಕ ಮುಂತಾದ ಕಲೆಗಳನ್ನು ಕಲಿತು ಪ್ರದರ್ಶನ ನೀಡಿದ್ದಾರೆ. ಕಸೂತಿ ಕೆಲಸದಂತಹ ಕರಕುಶಲ ಕೆಲಸಗಳನ್ನು ಮಾಡಿದ್ದಾರೆ. ಮಂಗಳೂರು, ಉಡುಪಿ ಮುಂತಾದ ಸ್ಥಳಗಳಲ್ಲಿ ಸಂಗೀತ ಕಛೇರಿಯನ್ನು ನೀಡಿದ್ದಾರೆ. ತಾವೇ ರಚಿಸಿದ ನಾಟಕಗಳಲ್ಲಿ ಅಭಿನಯಿಸಿದ್ದಾರೆ, ನಿರ್ದೇಶಿಸಿದ್ದಾರೆ. ಜೀವನದ ಬಗ್ಗೆ ಅವರಿಗಿದ್ದ ಪ್ರೀತಿ, ಕೆಲಸ ಕಾರ್ಯಗಳಲ್ಲಿನ ಉತ್ಸಾಹ, ಇವೆಲ್ಲವೂ ಅವರನ್ನು ಭೇಟಿಯಾದ ಎಲ್ಲರಿಗೂ ಸ್ಫೂರ್ತಿದಾಯಕವಾಗಿದ್ದವು.

ಬಡತನದಲ್ಲಿ ಬಾಲ್ಯ ಕಳೆದ 'ಗಿರಿಬಾಲೆ"ಯವರು ತಮ್ಮ ಯೌವ್ವನದಲ್ಲಿ ಅಪಾರ ಸಂಪತ್ತಿನ ಒಡತಿಯಾದರು. ಸಾಹಿತ್ಯ ಕ್ಷೇತ್ರದಲ್ಲಿ ಕೀರ್ತಿಗಳಿಸಿದರು. ಹುಟ್ಟಿನಿಂದಲೇ ಬಂದ ರೂಪ ಸಂಪತ್ತು ಅವರದಾಗಿತ್ತು. ಮನುಷ್ಯ ಅಹಂಕಾರಿಯಾಗಲು ರೂಪ, ಕೀರ್ತಿ, ಸಂಪತ್ತು ಈ ಮೂರರಲ್ಲಿ ಒಂದಿದ್ದರೂ ಸಾಕು, ಆದರೆ ಈ ಎಲ್ಲವೂ ಇದ್ದೂ 'ಗಿರಿಬಾಲೆ'ಯವರು ತಮ್ಮ ಸ್ಥಿಮಿತವನ್ನು ಕಳೆದುಕೊಳ್ಳಲಿಲ್ಲ. ಇಂಥ ಮಹಾಚೇತನ 23.4.1994ರಂದು ಶಾಂತವಾಗಿ ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿದರು. ಇಂಥ ಮಹಾನ್‌ಚೇತನಗಳು ಇಂದಿಗೂ ನಮಗೆ ಸ್ಫೂರ್ತಿದಾಯಕ.

——— * ———

ಮಲೆನಾಡಿನ ಸಾಹಿತ್ಯ ಧ್ವನಿ ಎಂ.ಕೆ. ಇಂದಿರಾ

ಕೆ.ಎಂ. ವಿಜಯಲಕ್ಷ್ಮಿ

ಸೊಸೆ ಮನೆಗೆ ಬಂದು ಮೊಮ್ಮಗುವೂ ಆಗಿ ಅಜ್ಜಿಯಾದ ಮೇಲೆ, ಓದು-ಬರಹ ಇರಲಿ, ಎಲ್ಲದರ ಬಗ್ಗೆ ಆಸಕ್ತಿಯನ್ನು ಕಳೆದುಕೊಳ್ಳಬಹುದಾದಂತಹ ಮತ್ತು ಮರೆವು ಹೆಚ್ಚುವ ವಯಸ್ಸಿನಲ್ಲಿ, ಸಾಹಿತ್ಯ ರಚನೆ ಆರಂಭಿಸಿ, ರಾಜ್ಯದ ಮನೆ ಮನೆಯ ಮಾತಾದವರು ಎಂ.ಕೆ. ಇಂದಿರಾ. ಸಾಧನೆಗೆ ವಯಸ್ಸಿನ ಮಿತಿ ಇಲ್ಲ ಎಂಬುದಕ್ಕೆ ಮೊದಲ ಚರಿತ್ರಾರ್ಹ. ಉದಾಹರಣೆಯಾಗಿ ಕನ್ನಡ ಸಾಹಿತ್ಯದಲ್ಲಿ ಸದಾ ನಿಂತಿದ್ದಾರೆ ಈ ಲೇಖಕಿ. ಕೇವಲ ಆರನೆಯ ತರಗತಿ ಓದಿದ ಈಕೆ ಬರೆದಂತಹ ಕೃತಿಗಳು ಪ್ರೌಢ ಮತ್ತು ಪದವಿ ತರಗತಿಗಳಿಗೆ ಪಠ್ಯವಾಗಿದ್ದವೆಂಬುದು ಮತ್ತು ಸಂಶೋಧನೆಗೆ ವಸ್ತುವಾಗುತ್ತದೆಂಬುದೂ ಉಲ್ಲೇಖನೀಯ ವಿಷಯ.

ಜನನ

ಬ್ರಾಹ್ಮಣ ಜಾತಿಯ ಹೊಯ್ಸಳ ಕರ್ನಾಟಕ ಪಂಗಡಕ್ಕೆ ಸೇರಿದ ತರೀಕೆರೆ ಸೂರ್ಯನಾರಾಯಣರಾವ್ ಇಂದಿರಾ ಅವರ ತಂದೆ. ತಾಯಿ ಬನಶಂಕರಮ್ಮ. ಈ ದಂಪತಿಗಳ ದ್ವಿತೀಯ ಪುತ್ರಿಯಾಗಿ, ಇಂದಿರಾರವರು ಹುಟ್ಟಿದ್ದು 1917ನೇ ಇಸವಿಯ ಜನವರಿ ತಿಂಗಳ ಐದರಂದು. ತಾಯಿ ತಂದೆ ಇವರನ್ನು ಇಂದಿರಾ, ಮಂದಾಕಿನಿ, ಶಾಕಾಂಬರಿ, ಜಾಹ್ನವಿ ಎಂಬೆಲ್ಲ ಹೆಸರುಗಳಿಂದ ಕರೆದರು. ಕೊನೆಗೆ ಉಳಿದ ಹೆಸರು ಇಂದಿರಮ್ಮ. ಕಾವ್ಯನಾಮವಾದದ್ದು ಇಂದಿರಾ.

ಮನೆತನದ ಹಿನ್ನೆಲೆ

ಇಂದಿರಾರ ತಾಯಿಯ ತಂದೆ ಮಾಳೂರು ಕೃಷ್ಣಪ್ಪನವರು. ತಾಯಿಯ ತಾಯಿ ಫಣಿಯಮ್ಮ, ಸಾಹಿತಿಗಳು ಮತ್ತು ಕಲಾವಿದರಿಂದ ತುಂಬಿದ, ಶಿವಮೊಗ್ಗ ಜಿಲ್ಲೆಯ ಒಂದು ಸಣ್ಣ ಗ್ರಾಮವಾದ ಅರಗದ ಮನೆತನಕ್ಕೆ ಸೇರಿದವರು. ಅಜ್ಜಿ ಫಣಿಯಮ್ಮನವರ ಏಳು ಮಂದಿ ಕಿರಿಯ ಸಹೋದರರಲ್ಲಿ, ಹಿರಿಯ ತಮ್ಮ ಶೇಷಾಚಲಯ್ಯನವರು ವಕೀಲ ವೃತ್ತಿ ಮಾಡುತ್ತಿದ್ದ ಸಂಸ್ಕೃತ ವಿದ್ವಾಂಸರು. ಆಶು ಕವಿತೆಗಳನ್ನು ಬರೆಯುವ ಮತ್ತು ಹಾಡುವ ಹವ್ಯಾಸವಿದ್ದ, ಎಕ್ಸೈಸ್ ಇನ್ಸ್‌ಪೆಕ್ಟರ್ ಸೀತಾರಾಮಯ್ಯನವರು ಫಣಿಯಮ್ಮನವರ ನಾಲ್ಕನೆಯ ತಮ್ಮ ಬರಹಗಾರರೂ ದೇಶ ಭಕ್ತರೂ ಮತ್ತು ಅಪ್ಪಟ ಗಾಂಧೀವಾದಿಗಳೂ ಆಗಿದ್ದ ಅನಂತಶರ್ಮರು ಆರನೆಯ ತಮ್ಮ. ಈ ಅನಂತಶರ್ಮರು ಒಬ್ಬ ದೊಡ್ಡ ಸಾಧಕ. ಏಳನೆಯ ತಮ್ಮ 'ಹೊಯ್ಸಳ' ಕಾವ್ಯನಾಮದಿಂದ ಮಕ್ಕಳ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು ಕೊಟ್ಟಂತಹ ಲಕ್ಷ್ಮಣರಾಯರು. ಅವರು ರವೀಂದ್ರನಾಥ ಟಾಗೂರರ ಶಿಷ್ಯರೂ ಕೂಡ. 'ಭೂ ಕೈಲಾಸ', ನಾಟಕವನ್ನು ಮೊದಲಿಗೆ ಬರೆದಂತಹ ಮತ್ತು ಇದರೊಂದಿಗೆ ಹೋಂರೂಲ್, ಬಡತನದಲ್ಲಿ ಭಾಗ್ಯ, ಎಂಬ ನಾಟಕಗಳನ್ನು ಆಡಿದ ಅಜ್ಜಂಪುರರವರು ಇವರ ಕುಟುಂಬದ ಸದಸ್ಯರು.

ಅಜ್ಜಿ ಫಣಿಯಮ್ಮ ಮತ್ತು ತಾಯಿ ಬನಶಂಕ್ರಮ್ಮ-ಇಬ್ಬರೂ ಸ್ವತಃ ಕಲಾವಿದರು. ಆ ಕಾಲದ ಹೆಣ್ಣುಮಕ್ಕಳಿಗೆ ಕಲಿಯಲು ಅವಕಾಶವಿದ್ದ ಹಾಡು-ಹಸೆ, ಕಸೂತಿ-ಹೆಣಿಗೆ ಇತ್ಯಾದಿಗಳಲ್ಲಿ ಪರಿಣಿತರು. ತಾಯಿ ಬನಶಂಕ್ರಮ್ಮನವರು ಅತ್ಯಂತ ಚೆಲುವೆ. ಮಾತ್ರವಲ್ಲ, ಹಾರ್ಮೋನಿಯಂ ನುಡಿಸುತ್ತಿದ್ದರು. ಸಹಸ್ರ ನುಡಿಗಳ ಯಕ್ಷಗಾನ ಪ್ರಸಂಗವನ್ನು ಬಾಯಲ್ಲೇ ಇಟ್ಟುಕೊಂಡಿದ್ದರು. ಆ ಕಾಲದಲ್ಲೇ ಸುಪ್ರಭಾ ಎಂಬ ನಾಟಕವನ್ನೂ ಬರೆದಿದ್ದರು.

ಇಂದಿರಾ ಅವರ ತಂದೆ, ತರೀಕೆರೆ ಸೂರ್ಯನಾರಾಯಣರಾವ್‌ರವರು ನರಸಿಂಹರಾಜಪುರದ ದೊಡ್ಡ ಜಮೀನುದಾರರು. ಆಗಿನ ಕಾಲದ ಎಫ್.ಎ.(ಈಗಿನ ಪಿ.ಯು.ಸಿ.?) ಓದಿದ್ದರು. ಹಿರಿಯರಾದಿಯಾಗಿ ಹಲವಾರು ಸದಸ್ಯರಿಂದ ಮತ್ತು ಸದಾ ಅತಿಥಿಗಳಿಂದ ತುಂಬಿರುತ್ತಿದ್ದ ದೊಡ್ಡ ಮನೆ. ಕೊಟ್ಟಿಗೆಯ ತುಂಬ ಹಾಲಿನ ಹೊಳೆ ಹರಿಸುವ ಹಸುಗಳು. ಅಡಿಕೆ, ಭತ್ತ, ಕಬ್ಬು, ಮಾವು, ತೆಂಗು, ಪೇರಲೆ, ನೇರಳೆ, ಚಕ್ಕೋತ, ಇತ್ಯಾದಿ ಬೆಳೆಯುತ್ತಿದ್ದ ಕುಟುಂಬದಲ್ಲಿ ಕೊರತೆಯೇ ಕಾಣದ ಶ್ರೀಮಂತಿಕೆ. ಈ ಶ್ರೀಮಂತರ ಮನೆಯಲ್ಲಿ ಎರಡನೆಯ ಮಗಳಾಗಿ ಜನಿಸಿದವರು ಇಂದಿರಾ. ಇವರ ಅಕ್ಕ ಶಾರದಮ್ಮ. ಇಬ್ಬರು ತಮ್ಮಂದಿರು. ಒಬ್ಬರು ಪ್ರಜಾವಾಣಿಯಲ್ಲಿ ಮೂವತ್ತು ಸುದೀರ್ಘ ವರ್ಷಗಳ ಕಾಲ ಸಂಪಾದಕರಾಗಿದ್ದ ಟಿ.ಎಸ್. ರಾಮಚಂದ್ರರಾವ್. ಇನ್ನೊಬ್ಬ ತಮ್ಮ ಆನಂದರಾವ್. ಆ ನಂತರದಲ್ಲಿ ಆಕಾಶವಾಣಿಯ ನಾಟಕ ವಿಭಾಗದಲ್ಲಿ ಕಾರ್ಯಕ್ರಮ ನಿರ್ಮಾಹಕರಾಗಿದ್ದ ಎಚ್.ಕೆ. ರಂಗನಾಥ್, ಇಂದಿರಾರ ಚಿಕ್ಕಪ್ಪನ ಮಗ. ಕಲೆ, ಸಂಸ್ಕೃತಿ, ಸಂಗೀತ, ಸಾಹಿತ್ಯಗಳ ಒಲವು ಹೊಂದಿದ್ದ ಕುಟುಂಬವಿದು.

ಬಾಲ್ಯದ ಗೆಳೆಯರಲ್ಲದೆ, ಲೇಖಕಿಯಾದ ಮೇಲೆ, ಹಲವಾರು ಲೇಖಕಿಯರು ಮತ್ತು ವಿಮರ್ಶಕಿಯರು ಇವರ ಗೆಳತಿಯರಾಗಿದ್ದರು. ಅವರಲ್ಲಿ ಎಲ್ಲರಿಗಿಂತ ಮೊದಲು ಗೆಳೆತನ ಬೆಳೆದಿದ್ದು ಕಾದಂಬರಿಗಾರ್ತಿ ತ್ರಿವೇಣಿಯವರೊಂದಿಗೆ. ಹಿಂದಿ ಪಾಠಕ್ಕೆ ಇಬ್ಬರೂ ಒಟ್ಟಿಗೇ ಹೋಗುತ್ತಿದ್ದ ಸಂದರ್ಭದಲ್ಲಿ.

ವಿದ್ಯೆ-ಓದು-ಕಲಿಕೆ

ಇಂದಿರಾರವರ ವಿದ್ಯಾರ್ಹತೆ ಎಂದರೆ ಮಾಧ್ಯಮಿಕ ಎರಡನೇ ತರಗತಿ(6ನೇ)ಯಷ್ಟೆ. ಅವರು ಎಲ್ಲ ತರಗತಿಗಳ ಪರೀಕ್ಷೆಗಳಲ್ಲೂ ಸದಾ ಮುಂದಿದ್ದರೂ, ಅತ್ತು ಗೋಗರೆದರೆ, ಇವರ ಬುದ್ಧಿವಂತಿಕೆಯನ್ನು ಮೆಚ್ಚಿದ ಶಾಲೆಯ ಶಿಕ್ಷಕಿಯೇ ಸ್ವತಃ ಮನೆಗೆ ಬಂದು ಮಾತಾಡಿದರೂ, ತಂದೆ ಮತ್ತು ಇತರ ಹಿರಿಯರಿಂದ ಓದು ಮುಂದುವರೆಸಲು ಒಪ್ಪಿಗೆ ದೊರೆಯಲಿಲ್ಲ. ಆಸೆ, ಆಸಕ್ತಿ, ಗ್ರಹಿಸುವ ಜಾಣತನ ಎಲ್ಲ ಇದ್ದರೂ ಮನೆಯವರ ಬೆಂಬಲವಿಲ್ಲದೆ, ಶಿಷ್ಟ ಶಿಕ್ಷಣ ಅಲ್ಲಿಗೇ ನಿಂತುಹೋಯಿತು. ಆದರೆ ಜಗತ್ತು-ಜನ-ಜೀವನಗಳಿಂದ ಅವರು ಕಲಿತ ಪಾಠ ಅಪಾರ. ಮುಂದೆ ಇವರ ಜೀವನ ಮತ್ತು ಕೃತಿಗಳ ಕುರಿತಾಗಿಯೇ ಶೋಧಿಸಿ, ಅಧ್ಯಯನ ಮಾಡುವಷ್ಟರ ಎತ್ತರಕ್ಕೆ ಅವರ ಸಾಧನೆ ಸಾಗಿತು ಎಂಬುದು ಗಮನಾರ್ಹ.

ವಿವಾಹಾನಂತರ ಮಂಡ್ಯದಲ್ಲಿದ್ದಾಗ ಹಿಂದಿ ತರಗತಿಗೆ ಹೋಗಿ, ಹಿಂದಿಯ ರಾಷ್ಟ್ರಭಾಷಾವರೆಗಿನ ಮೂರು ಪರೀಕ್ಷೆಗಳನ್ನು ಮುಗಿಸಿದರು. ತಾಯಿ ಮತ್ತು ಅಕ್ಕನಿಂದ ಭಕ್ತಿ ಗೀತೆ, ಯಕ್ಷಗಾನದ ಗೀತೆಗಳನ್ನೂ ಸೋದರಮಾವ ಹೊಯ್ಸಳರಿಂದ ತಾಯಿಯ ಕಣ್ತಪ್ಪಿಸಿಕೊಳ್ಳಲು ನುಡಿಸುವುದನ್ನೂ; ಸ್ವಂತ ಆಸಕ್ತಿಯಿಂದ ಹಾರ್ಮೋನಿಯಂ ಮತ್ತು ಬುಲಬುಲ್ ತರಂಗವನ್ನೂ ಕಲಿತರು. ಊರಿಗೆ ಬಂದ ಸಿನಿಮಾ ನಾಟಕಗಳನ್ನು ನೋಡುತ್ತ ನೋಡುತ್ತ, ಸಿನಿಮಾಗಳು, ನಾಟಕಗಳು, ಕಲಾವಿದರು, ನಟರು, ಹಿನ್ನೆಲೆ ಗಾಯಕರು, ಮುಂತಾಗಿ ಕಲಾ ಜಗತ್ತಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಕುರಿತು ಜ್ಞಾನ ಹೊಂದಿದರು. ಮನೆಯಲ್ಲೇ ಕುಳಿತು ಬೆಂಗಾಲಿ ಬರಹಗಾರರ ಮತ್ತು ಕನ್ನಡ ಸಾಹಿತಿಗಳ ಕೃತಿಗಳನ್ನು ಓದಿದರು. ವಿವಾಹಾನಂತರ ತಮ್ಮ ಪತಿಯಿಂದ ಕೆಲದಿನ ಕಾರು ಓಡಿಸುವುದನ್ನೂ ಕಲಿತರು.

ವಿವಾಹ, ಸಂಸಾರ

1929ರಲ್ಲಿ ಅವರ ಹನ್ನೆರಡನೇ ವಯಸ್ಸಿನಲ್ಲಿ ಇಂದಿರಾ ಅವರ ವಿವಾಹವು, ಹತ್ತೊಂಬತ್ತು ವರ್ಷ ವಯಸ್ಸಿನ ಎಲ್.ಎಸ್. ಓದಿದ್ದ ಅವರ ತಾಯಿಯ ಚಿಕ್ಕಪ್ಪನ ಮಗನಾದ ಮಂಡಗದ್ದೆ ಕೃಷ್ಣರಾವ್‌ರವರೊಂದಿಗೆ ಒಂದು ವಾರ ಕಾಲ ನಡೆಯಿತು. ಮೆಕ್ಯಾನಿಕ್ ಆಗಿ, ಚಾಲಕರಾಗಿ, ಮೋಟಾರ್ ಸರ್ವೀಸ್ ನಡೆಸುವವರಾಗಿ ವಿವಿಧ ಬಗೆಯ ಕೆಲಸ ಮಾಡಿದ ಕೃಷ್ಣರಾವ್ ಅವರಿಗೆ 1950ರಲ್ಲಿ ಬೆಂಗಳೂರು ನಗರ ಸಾರಿಗೆ (ಬಿ.ಟಿ.ಎಸ್.)ಯಲ್ಲಿ ಖಾಯಂ ಆದ ನೌಕರಿ ದೊರೆತ ಮೇಲೆ ಪತ್ನಿಯೊಂದಿಗೆ ಬೆಂಗಳೂರಿಗೆ ಬಂದು ನೆಲೆಸಿದರು. ಕೆಲಸ ಬಿಡುವವರೆಗೆ ಬಿ.ಟಿ.ಎಸ್.ನಲ್ಲಿ ವೆಹಿಕಲ್ ಎಕ್ಸಾಮಿನರ್ ಆಗಿ ಕಾರ್ಯನಿರ್ವಹಿಸಿದರು.

ಅತ್ತೆ ಹಿರಿಯಕ್ಕನವರದು, ತುಂಬ ಸಂಪ್ರದಾಯಸ್ಥ ಕುಟುಂಬ. ತಾಯಿಯ ಮನೆಯಲ್ಲಿದ್ದಷ್ಟು ಸ್ವಾತಂತ್ರ್ಯ, ಕಲಾಭಿವ್ಯಕ್ತಿಗೆ ಸೂಕ್ತ ಪರಿಸರ ಇಂದಿರಾಗೆ ಅಲ್ಲಿ ಇರಲಿಲ್ಲ. ಮುಂದೆ ಬರವಣಿಗೆಗೆ ಅಗತ್ಯ ಉತ್ತೇಜನವನ್ನು, ತಮಗೆ ತಿಳಿದಷ್ಟು ಸಲಹೆ–ಸಹಕಾರ–ಸಹಾಯಗಳನ್ನು ಕೊಡುತ್ತಿದ್ದವರು ಪತಿ ಕೃಷ್ಣರಾಯರು ಮಾತ್ರ.

ಕನ್ನಡಿಗರು ಸಂಭ್ರಮಿಸುವ ನವೆಂಬರ್ ಒಂದರ ಕನ್ನಡ ರಾಜ್ಯೋತ್ಸವ ದಿನ, ಇಂದಿರಾ ಅವರು ಪತಿಯನ್ನು ಕಳೆದುಕೊಂಡ ಶೋಕದ ದಿನ. ಆ ಹೊತ್ತಿಗೆ ಮೊದಲ ಮಗನದು ಮಾತ್ರ ವಿವಾಹವಾಗಿದ್ದು. ಉಳಿದ ನಾಲ್ಕು ಮಕ್ಕಳ ಮದುವೆ–ಬದುಕು–ಸಾಧನೆಗಳ ಸಂಪೂರ್ಣ ಜವಾಬ್ದಾರಿ ಇಂದಿರಾ ಅವರೇ ನಿಭಾಯಿಸಬೇಕಾಯಿತು.

ಮಕ್ಕಳು

ಇಂದಿರಾ ಅವರು ಹೆತ್ತ ಎಂಟು ಮಕ್ಕಳಲ್ಲಿ, ದೊಡ್ಡವರಾಗುವವರೆಗೆ ಉಳಿದಿದ್ದು ಐದು ಮಕ್ಕಳು ಮಾತ್ರ. ನಾಲ್ಕು ಗಂಡು ಮತ್ತು ಒಬ್ಬ ಮಗಳು. ತಮ್ಮ ಜೀವಿತದಲ್ಲಿ ಸಾಕಷ್ಟು ಸಾವು–ಸಂಕಷ್ಟಗಳನ್ನು ಎದುರಿಸಿದರು, ನೋವು–ಬೇಸರಗಳನ್ನು ಅನುಭವಿಸಿದರು. ಯಾವ ಮಕ್ಕಳಿಂದಲೂ ಪ್ರೀತಿಯೊಂದನ್ನು ಬಿಟ್ಟು ಹೆಚ್ಚಿನದೇನನ್ನೂ ಅಪೇಕ್ಷಿಸಲಿಲ್ಲ. ತಮ್ಮ ಮೊದಲ ಮಗನಿಗೆ ಮಲೆಯಾಳಿ ಹುಡುಗಿಯೊಂದಿಗೆ ನಿಜವಾದ ಪ್ರೀತಿಯಿಂದ ಎರಡೂ ಖರ್ಚು ಹಾಕಿ ಮದುವೆ ಮಾಡಿಸಿದ್ದರು. ಕೇವಲ ಕೃತಿಗಳಲ್ಲಿ ಮಾತ್ರವಲ್ಲದೆ, ಈ ಮದುವೆ ಮಾಡುವ ಮೂಲಕ, ಜಾತಿ ಮತಗಳ ಅಭೇದ ಮನೋಭಾವವನ್ನು, ನಿಜಜೀವನದಲ್ಲೂ ಈ ದಂಪತಿಗಳು ತೋರಿದ್ದರು. ಈಗ ಇವರ ಮೂರು ಗಂಡು ಮಕ್ಕಳು ಬೆಂಗಳೂರಿನಲ್ಲೇ ನೆಲೆಸಿದ್ದಾರೆ. ಇಬ್ಬರು ನಿವೃತ್ತರು. ಮೂರನೆಯವರು ವಿಜಯಾ ಬ್ಯಾಂಕ್‌ನಲ್ಲಿ ಸೀನಿಯರ್ ಎಕ್ಸಿಕ್ಯುಟಿವ್ ಆಗಿ ಕೆಲಸ ಮಾಡುತ್ತಿದ್ದಾರೆ.

ಬರವಣಿಗೆ

ಚಿಕ್ಕಂದಿನಿಂದಲೇ ಪ್ರಖ್ಯಾತರ ಅನೇಕ ಕಾದಂಬರಿಗಳನ್ನು ಓದುತ್ತ ಬಂದ ಇಂದಿರಾಗೆ, ತಾವೂ ಹಾಗೆಯೇ ಬರೆಯಬೇಕೆಂಬ ಆಸೆ ಇದ್ದರೂ, ಬರೆಯಲು ಸಮಯ ಮತ್ತು ಅವಕಾಶಗಳು, ಸಿಗದೇ ಮನದೊಳಗೇ ಆಸೆ ಗೂಡು ಕಟ್ಟಿತ್ತು. ಹಿರಿಯ ಮಗನ ಮದುವೆಯಾಗಿ, ಮೊಮ್ಮಗುವೂ ಹುಟ್ಟಿದ ಮೇಲೆ ಬರೆಯಲು ಪುರುಸೊತ್ತು ಸಿಕ್ಕಿತು. ನಲವತ್ತಾರನೇ ವಯಸ್ಸಿನಲ್ಲಿ ತಮ್ಮ ಮೊದಲ ಕೃತಿಯನ್ನು ಪ್ರಕಟಿಸಿ, ಆಸಕ್ತಿ ಮತ್ತು ಛಲ ಇದ್ದರೆ, ಇಳಿ ವಯಸ್ಸಿಗೆ ತಿರುಗಿದಾಗಲೂ ಮನುಷ್ಯ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಒಂದು ಉತ್ತಮ ನಿದರ್ಶನವಾಗಿ ನಿಂತಿದ್ದಾರೆ ಈಕೆ.

'ತುಂಗಭದ್ರ' 1963ರಲ್ಲಿ ಹೊರಬಂದ, ಎಂ.ಕೆ. ಇಂದಿರಾರವರ ಪ್ರಥಮ ಪ್ರಕಟಿತ ಕಾದಂಬರಿ. ಅವರ ಪತಿಯೇ ಅವರ ಮೊದಲ ಓದುಗ ಮತ್ತು ಸಲಹೆಗಾರ. ತಮ್ಮ ಕುಟುಂಬದ ವಿಷಯವನ್ನೇ ಇಟ್ಟುಕೊಂಡು

1954ರಲ್ಲಿ ಈಕೆ ಬರೆದ 'ಹೆತ್ತೊಡಲು' ಎಂಬ ಕೃತಿಯೇ ಇವರ ಪ್ರಥಮ ಸಾಹಿತ್ಯಕ ರಚನೆ . ಆದರೆ ಪ್ರಕಟಗೊಂಡಿದ್ದು ಮಾತ್ರ 'ತುಂಗಭದ್ರ'ದ ನಂತರದಲ್ಲಿ. 'ಪ್ರಜಾವಾಣಿ' ಪತ್ರಿಕೆಯ ವಾರ್ಷಿಕ ಕಥಾ ಸ್ಪರ್ಧೆಯಲ್ಲಿ ಬಹುಮಾನಕ್ಕೆ ಆಯ್ಕೆಗೊಂಡ ಎರಡು ಕೃತಿಗಳಲ್ಲಿ ಇವರ 'ಹೆತ್ತೊಡಲು' ಕೃತಿಗೆ ಪ್ರಥಮ ಬಹುಮಾನ ಬಂದಿದ್ದರೂ, ಇವರ ತಮ್ಮ ಟಿ.ಎಸ್. ರಾಮಚಂದ್ರರಾಯರು ತಮ್ಮ ತಮ್ಮವರಿಗೇ ಬಹುಮಾನ ಕೊಟ್ಟಂತಾಗುತ್ತದೆಂಬ ಭಾವನೆಯಿಂದ, ಇಂದಿರಾಗೆ ಕೊಡದೇ, ರಾಮಚಂದ್ರಶರ್ಮರ ಕಥೆಗೆ ಪ್ರಥಮ ಬಹುಮಾನವನ್ನು ಘೋಷಿಸಿದರು. ಮುಂದೆ ಇದೇ 'ಹೆತ್ತೊಡಲು' 'ಕಸ್ತೂರಿ' ಮಾಸ ಪತ್ರಿಕೆಯಲ್ಲಿ ಪ್ರಕಟಗೊಂಡಿತು. ನಂತರ ಈ ಲೇಖಕಿಯ 'ನವರತ್ನ' ಎಂಬ ಕಥಾ ಸಂಕಲನದಲ್ಲಿ ಮೊದಲನೆಯ ಕಥೆಯಾಗಿ ಸೇರಿತು. ಈ ಸಂಕಲನ 1967ರಲ್ಲಿ ಪ್ರಕಟವಾಗಿ, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನವನ್ನು ಗಳಿಸಿತು.

'ತುಂಗಭದ್ರ' ಈ ಕೃತಿ ಹೊರ ಬರುವ ಮುನ್ನಿನ ಒಂದು ಸುದೀರ್ಘ ಕಥೆ ಅತ್ಯಂತ ಸ್ವಾರಸ್ಯಕರ. ಮಾತ್ರವಲ್ಲ, ಆಗಿನ ಲೇಖಕರು ಮತ್ತು ಪ್ರಕಾಶಕರ ಸಂಬಂಧ, ಶ್ರದ್ಧೆ ಮತ್ತು ಬದ್ಧತೆಗಳನ್ನು ತಿಳಿಸುವುದರಿಂದ ಚರಿತ್ರಾರ್ಹ ಕೂಡ. ಬರೆದ ಕೃತಿಯನ್ನು ಅಭಿಪ್ರಾಯಕ್ಕಾಗಿ, ಆಗಿನ ಹೆಸರಾಂತ ಕನ್ನಡ ಕಾದಂಬರಿಕಾರರಾದ, ಅ.ನ.ಕೃ ಅವರಿಗೆ ಕೊಟ್ಟು ಒಂದು ವರ್ಷವೇ ಕಳೆದರೂ ಅ.ನ.ಕೃ ಅವರಿಂದ ಯಾವ ಅಭಿಪ್ರಾಯವೂ ಬರದೆ, ಹಿಂತಿರುಗಿ ಪಡೆದು, ತಮ್ಮ ಚಿಕ್ಕಪ್ಪನ ಮಗ ಎಚ್.ಕೆ. ರಂಗನಾಥ್‌ಗೆ ಕೊಟ್ಟರು. ಓದಿ ಮೆಚ್ಚಿದ ಈ ಸೋದರ, ಅದನ್ನು ಧಾರವಾಡದ ಮನೋಹರ ಗ್ರಂಥಮಾಲೆಗೆ ಪ್ರಕಟಣೆಗಾಗಿ ಕಳಿಸಿಕೊಟ್ಟರು. ಸದರಿ ಗ್ರಂಥಮಾಲೆಯ ಪ್ರಕಾಶಕರೂ ಅದನ್ನು ಮೆಚ್ಚಿದರು. ಅದರ ಪರಿಷ್ಕರಣೆ ಮತ್ತು ಶುದ್ಧ ಪ್ರತಿಯ ಸಿದ್ಧತೆಗೆಂದು ಸಾಹಿತ್ಯ-ಸಲಹೆಗಾರ ಕೀರ್ತಿನಾಥ ಕುರ್ತುಕೋಟಿಯವರ ಕೈ ಸೇರಿದ ಈ ಪ್ರತಿ ಅವರ ಮುಂಬಯಿಯ ರೈಲು ಪ್ರಯಾಣ ಕಾಲದಲ್ಲಿ ಹಣದ ಚೀಲ ಸಹಿತ ಕಳುವಾಯಿತು.

ಒಂದೂವರೆ ವರ್ಷದ ನಂತರ ಈ ಸುದ್ದಿ ತಿಳಿದ ಲೇಖಕಿ, ಮತ್ತೊಮ್ಮೆ ಬರೆಯಲು ನಿರ್ಧರಿಸಿದರು. ಅವರ ತಲೆಯಲ್ಲಿ ಅದರ ಒಂದು ಅಕ್ಷರವೂ ಕಳೆಯದೇ ಉಳಿದಿತ್ತು. ಪತಿ ಕೃಷ್ಣರಾವ್, ಮನೆಗೆಲಸ ಮತ್ತು ಮಕ್ಕಳ ಊಟ ತಿಂಡಿಗಳ ಹೊಣೆಗಾರಿಕೆಯನ್ನು ತಮ್ಮ ಹೆಗಲಿಗೆ ಹೊತ್ತು ಪತ್ನಿಗೆ ಬರೆಯಲು ಬಿಡುವು ಮಾಡಿಕೊಟ್ಟರು. ಕೇವಲ ಹನ್ನೆರಡು ದಿನಗಳಲ್ಲಿ ಇನ್ನಷ್ಟು ಜೀವಂತಿಕೆಯ ಪರಿಷ್ಕೃತ 'ತುಂಗಭದ್ರ' ಕೃತಿ ಸಿದ್ಧಗೊಂಡಿತು. ಈ ಕೃತಿ ಮೊಟ್ಟ ಮೊದಲಿಗೆ ಬರೆದ ನಾಲ್ಕೈದು ವರ್ಷಗಳ ನಂತರ 1963ರಲ್ಲಿ ಪ್ರಥಮ ಬಾರಿಗೆ ಪ್ರಕಟಗೊಂಡು, ಸಾಹಿತಿಗಳ, ವಿಮರ್ಶಕರ ಮೆಚ್ಚುಗೆ ಗಳಿಸಿ, ಇಟ್ಟ ಮೊದಲನೇ ಹೆಜ್ಜೆಗೇ ಖ್ಯಾತಿ ದೊರಕಿಸಿಕೊಟ್ಟಿತು. ಯಶಸ್ಸಿನ ಮೊದಲ ಮೆಟ್ಟಿಲ ಮೇಲೇರಿ ನಿಂತರು ಈಕೆ.

'ತುಂಗಭದ್ರ' ಮೂಲಕ ಹರಿದ ಈ ಲೇಖಕಿಯ ಲೇಖನಿಯ ಮಸಿ, ಅರವತ್ತೈದು ಕೃತಿಗಳನ್ನು ರಚಿಸಿದರೂ ಆರಲಿಲ್ಲ. ಸದಾನಂದ (1964), ಕನಸು-ನನಸು (65), ಹೆಣ್ಣಿನ ಆಕಾಂಕ್ಷೆ, (66), ಗೆಜ್ಜೆಪೂಜೆ (66), ಕಲಾದರ್ಶಿ (67), ತಪೋವನದಲ್ಲಿ (68), ಬ್ರಹ್ಮಚಾರಿ (69), ಗಿರಿಬಾಲೆ (69), ಮನ ತುಂಬಿನ ಮಡದಿ (69), ಚಿದ್ವಿಲಾಸ, (71), ಡಾಕ್ಟರ್ (73), ಟು-ಲೆಟ್ (73), ಕತೆಗಾರ (74), ಫಣಿಯಮ್ಮ (76), ನೂರೊಂದು ಬಾಗಿಲು (80), ಶಾಂತಿಧಾಮ (86), ತೆಗ್ಗಿನ ಮನೆ ಸೀತೆ (84), ಮುಂತಾಗಿ ನಲವತ್ತೆಂಟು ಕಾದಂಬರಿಗಳು; ನವರತ್ನ (67), ಚೆಲ್ಲಿದ ನೀರು (69) ಅಂಬರದ ಅಪ್ಸರೆ (70), ದಶಾವತಾರ (73), ಕಲ್ಪನಾ ವಿಲಾಸ (74), ಪವಾಡ (77), ಮೋಹನ ಮಾಲೆ (80), ಪೌರ್ಣಿಮೆ (80), ಮುಂತಾದ ಹದಿನೈದು ಕಥಾ ಸಂಕಲನಗಳು; ಕನ್ನಡ ಚಿತ್ರಶಿಲ್ಪಿ ಪುಟ್ಟಣ್ಣ ಕಣಗಾಲ್ (86), ಚಿತ್ರ ಭಾರತ (ಚಲನ ಚಿತ್ರ ವಿಮರ್ಶೆ 1985) ಮತ್ತು ನಗಬೇಕು (ಹರಟೆಗಳು 1968) ಎಂಬ ಇನ್ನಿತರ ಪ್ರಕಾರದ ಕೃತಿಗಳು; 'ಅನುಭವ ಕುಂಜ' ಎಂಬ ದಕ್ಷಿಣ ಭಾರತದ ಪ್ರವಾಸ ಸಾಹಿತ್ಯ (81) –ಇವೆಲ್ಲ ಎಂ.ಕೆ. ಇಂದಿರಾ ಅವರು ಕನ್ನಡ ಸಾಹಿತ್ಯ ಕಣಜಕ್ಕೆ ಸೇರಿಸಿದ ಗಟ್ಟಿ ಕೃತಿ ಕಾಳುಗಳು. ಈ ಲೇಖಕಿಯ ಹೆಚ್ಚಿನ

ಕೃತಿಗಳು ಐದಾರು ಬಾರಿ ಮುದ್ರಣಗೊಂಡಿವೆ. 'ಗೆಜ್ಜೆಪೂಜೆ' ಎಂಟಕ್ಕಿಂತ ಹೆಚ್ಚು ಸಲ ಮುದ್ರಿತವಾಗಿದೆ, ಎಂದರೆ ಈಕೆಯ ಓದುಗರ ಸಂಖ್ಯೆಯನ್ನು ಊಹಿಸಬಹುದು.

ಎಷ್ಟು ದೊಡ್ಡ ಕೃತಿಯೇ ಇರಲಿ ಮನದಲ್ಲೇ ಪಕ್ವಗೊಳಿಸಿಕೊಂಡು ಒಂದೇ ಸಲಕ್ಕೆ ಬರೆದುಬಿಡುವಂಥ ಪ್ರತಿಭೆ ಈಕೆಯದು. ಚಿತ್ತು-ಕಾಟುಗಳಿಲ್ಲ. 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ, ಇಟ್ಟ ಪದವನು ಅಳಿಪದೊಂದಗ್ಗಳಿಕೆ.." ಎಂಬ ಕುಮಾರವ್ಯಾಸನ ಅಗ್ಗಳಿಕೆಯೇ ಈ ಲೇಖಕಿಯದೂ ಕೂಡ. ತಯಾರಿಸುತ್ತಿದ್ದುದೂ ಒಂದೇ ಪ್ರತಿ. ಸಣ್ಣಪುಟ್ಟ ತಿದ್ದುಪಡಿಗಳಿದ್ದರೆ ಆ ಒಂದು ಪ್ರತಿಯಲ್ಲೇ.

ಸಾಹಿತ್ಯದಲ್ಲಿ ಸಾಧನೆ

ಕಥೆ ಮತ್ತು ಕಾದಂಬರಿ ಪ್ರಕಾರಗಳು ಇಂದಿರಾರವರ ಸಾಹಿತ್ಯಾಭಿವ್ಯಕ್ತಿಯ ಮುಖ್ಯ ಮಾಧ್ಯಮ. ಈ ಪ್ರಕಾರಗಳು, ಹೆಚ್ಚಿನ ಪ್ರಚಾರ ಪಡೆಯುತ್ತಿದ್ದ ಮತ್ತು ಆಸಕ್ತಿಯ ವಿಷಯಗಳಾಗಿದ್ದ ಕಾಲದಲ್ಲಿ ಇಂದಿರಾ ಕೃತಿ ರಚನೆಗೆ ಇಳಿದುದರಿಂದ, ಕಥಾಭೂಮಿ ಫಲವತ್ತಾಗಿತ್ತು. ತಮ್ಮ ಪ್ರತಿಭೆ ಮತ್ತು ಅನುಭವ ಮಿಳಿತ ಸ್ವಾರಸ್ಯಕರ ಕೃತಿ-ಬೀಜಗಳನ್ನು ಈ ಭೂಮಿಯಲ್ಲಿ ನೆಡತೊಡಗಿದ ಈ ಲೇಖಕಿಗೆ ದೊರೆತುದು ಗಮನಾರ್ಹ ಯಶಸ್ಸು.

ಈ ಯಶಸ್ಸು, ಈಕೆಯ ಬಾಗಿಲಿಗೆ ಹಲವಾರು ಪತ್ರಿಕೆಗಳ ಬೇಡಿಕೆಗಳನ್ನು ತಂದು ಹಾಕಿತು. ಭಾವಚಿತ್ರಕ್ಕೆ, ಆಟೋಗ್ರಾಫ್‌ಗೆ ಅಭಿಮಾನಿಗಳಿಂದ ಬೇಡಿಕೆಗಳು ಬಂದುವು. ಆದರೆ ಆಗಲೇ ಮೊಮ್ಮಗುವಿಗೆ ಅಜ್ಜಿಯಾದ ತಾವು, ತಮ್ಮ ಭಾವಚಿತ್ರ ಕಳಿಸಿದರೆ, ಕೇಳಿದವರ ಉತ್ಸಾಹ ಕುಂದಬಹುದೆಂದು ಭಾವಿಸಿದ ಈ ಲೇಖಕಿ ಯಾರಿಗೂ ಭಾವಚಿತ್ರವನ್ನು ಕಳಿಸಲೇ ಇಲ್ಲ. 'ತುಂಗಭದ್ರ' ಪ್ರಕಟಿಸಿದ ಪ್ರಕಾಶಕರೂ, ಈ ಭಾವನೆಯಿಂದಲೇ 'ಇಂದಿರಮ್ಮ' ಎಂಬುದಾಗಿ ಇದ್ದ ಹೆಸರನ್ನು 'ಇಂದಿರಾ' ಎಂದು ಅಂದಗೊಳಿಸಿ ಪ್ರಕಾಶಿಸಿದ್ದರು. ಅದೇ ಹೆಸರು ಕೊನೆಯ ತನಕ ಉಳಿದು, ಹೆಸರಾಂತವಾಯಿತು. ಇವರ ಕಾದಂಬರಿಗಳನ್ನು ಕನ್ನಡಿಗರು ಆಸೆ-ಆಸಕ್ತಿಗಳಿಂದ ಸ್ವೀಕರಿಸಿದರು. ಮುಂದೇನು, ಮುಂದೇನಾಗುತ್ತದೆ ಎಂದು ಕಾತರಿಸಿ, ಕಾದು ಓದುತ್ತಿದ್ದರು. ಓದುಗರಿಂದ ಅವರಿಗೆ ಮೂರು ಸಾವಿರಕ್ಕೂ ಹೆಚ್ಚು ಪತ್ರಗಳು ಬಂದಿದ್ದುವಂತೆ. ನೆಲದಿಂದ ಮೂರ್‍ನಾಲ್ಕು ಅಡಿ ಎತ್ತರದ ದೊಡ್ಡ ಒಂದು ಟ್ರಂಕಿನ ತುಂಬ ಈ ಪತ್ರಗಳು ತುಂಬಿದ್ದವು ಎಂದು ಅವರ ಮಗ ಹೇಳುತ್ತಾರೆ.

ಕತೆ, ಕಾದಂಬರಿಗಳಲ್ಲದೆ ಹಾಸ್ಯ, ಹರಟೆ, ಬದುಕಿನ ರಸಮಯ ನೆನಪುಗಳು, ಇತ್ಯಾದಿ ಇವರ ಲೇಖನಗಳು ಕರ್ನಾಟಕದ ಹೆಸರಾಂತ ಪತ್ರಿಕೆಗಳಾದ ಸುಧಾ, ಮಯೂರ, ಪ್ರಜಾವಾಣಿ, ಮಲ್ಲಿಗೆ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಕಸ್ತೂರಿ, ತರಂಗ, ಮುಂತಾದವುಗಳಲ್ಲಿ ಪ್ರಕಟವಾಗತೊಡಗಿದವು. ಕೆಲವು ಕಾದಂಬರಿಗಳು ಧಾರವಾಹಿಯಾಗಿ ಹರಿದು, ಕನ್ನಡಿಗರಿಗೆ ಸಂತೋಷವನ್ನೂ, ಇಂದಿರಾಗೆ ಕೀರ್ತಿ ಮತ್ತು ಸಂಪತ್ತನ್ನೂ ತಂದುಕೊಟ್ಟವು.

ಇಂದಿರಾಗೆ, ಬಾಲ್ಯದ ಮನೆಯಲ್ಲಿ ಹಣ, ಆಳು-ಕಾಳುಗಳಿದ್ದುದರಿಂದ ಮನರಂಜನೆಗೆ ಮಾರ್ಗವಿತ್ತು. ಬಸ್ ಸರ್ವೀಸ್ ಮಾಡುವ ಸಿನಿಮಾಗೆ ಪಾಸ್ ಸಿಗುತ್ತಿದ್ದುದರಿಂದ ಊರಿಗೆ ಬಂದ ಸಿನಿಮಾ-ನಾಟಕಗಳನ್ನು ಬೇಕಾದಷ್ಟು ಸಲ ನೋಡಲು ಧಾರಾಳವಾದ ಅವಕಾಶವಿತ್ತು. ಈ ಅನುಕೂಲ ಅವಕಾಶಗಳು ಅವರಿಗೆ ಸಿನಿಮಾ-ನಾಟಕಗಳ ಇತಿಹಾಸ, ಜೀವನದ ಸಮಸ್ಯೆಗಳು ಮುಂತಾದ ಬಗ್ಗೆ ತಿಳಿದುಕೊಳ್ಳಲು ಸಾಧ್ಯ ಮಾಡಿಕೊಟ್ಟವು. ಫಣಿಯಮ್ಮ, ಗೆಜ್ಜೆಪೂಜೆ ಮುಂತಾದ ಆರಂಭದ ಕೃತಿಗಳು ಚಲನಚಿತ್ರಗಳಾಗುವಾಗ, ಇವರೂ ಆ ತಂಡದಲ್ಲಿ ಒಬ್ಬರಾಗಿ, ಅದರೊಳಗಿನ ಗುಣಾವಗುಣ, ಲಾಭ-ನಷ್ಟಗಳ ಅರಿವು ಪಡೆದರು. 'ಫಣಿಯಮ್ಮ' ಚಿತ್ರಕ್ಕೆ ಲೊಕೇಷನ್‌ಗೆ, ಹಳ್ಳಿ ಮತ್ತು ಮನೆಗಳನ್ನು ನೋಡಲು, ಪ್ರೇಮಾ ಕಾರಂತರೊಂದಿಗೆ ಐವತ್ತು ಹಳ್ಳಿಗಳನ್ನು ಸುತ್ತಿದ್ದರು. ಈ ಎಲ್ಲ ಜ್ಞಾನ ಮತ್ತು ಅನುಭವಗಳ ಆಧಾರದ ಮೇಲೆ ಅವರು ಬರೆದ ಪುಸ್ತಕ 'ಚಿತ್ರಭಾರತ'.

ಲೇಖಕಿಗಿದ್ದ ನೆನಪಿನ ಸಾಮರ್ಥ್ಯ ಅಗಾಧ. ಅರವತ್ತು ವರುಷಗಳ ಹಿಂದೆ ನೋಡಿದ ಸಿನಿಮಾದ ದೃಶ್ಯಗಳು ಅವರಿಗೆ ಇಳಿವಯಸಿನಲ್ಲೂ ನೆನಪಿನಲ್ಲಿತ್ತು. ಸುಮಾರು ಮೂರು ಸಾವಿರ ಚಿತ್ರಗಳನ್ನು ಆರು ಭಾಷೆಗಳಲ್ಲಿ ನೋಡಿದ ಬಗ್ಗೆ ಇದರಲ್ಲಿ ತಿಳಿಸಿದ್ದಾರೆ. ಬಾಲ್ಯದಿಂದ ನೋಡಿದ ಚಿತ್ರಗಳ ಕಥೆ, ನಟನೆ, ದೃಶ್ಯ, ಹಾಡು, ಸಾಹಿತ್ಯ, ಸನ್ನಿವೇಶ, ಸಂಭಾಷಣೆ, ಇತ್ಯಾದಿಗಳ ಕುರಿತು ಹಲವು ಸಂಗತಿಗಳನ್ನು ನೆನಪಿಟ್ಟುಕೊಂಡಿರುವುದು ಬೆರಗುಗೊಳಿಸುತ್ತದೆ.

ಅವರು ಆರಂಭಿಸಿದ ಆತ್ಮಚರಿತ್ರೆ 'ಸಿಂಧುವಿನಲ್ಲಿ ಬಿಂದು' ಪೂರ್ಣವಾಗದೇ ಸುಮಾರು ಇನ್ನೂರಾ ನಲವತ್ತು ಪುಟಗಳಿಗೆ ನಿಂತುಹೋಯಿತು. ಇದರಿಂದ ಬಹುಶಃ ಮಾರ್ಗದರ್ಶಕವಾಗಲಿದ್ದ ಅಂಶಗಳು, ಆತ್ಮಸ್ಥೈರ್ಯ, ಧೈರ್ಯ, ಇವುಗಳನ್ನು ಹೊಂದಲಾಗದೇ ಕನ್ನಡ ಓದುಗರಿಗೆ ಅಪಾರ ನಷ್ಟವಾಗಿದೆಯೆಂದೇ ಹೇಳಬಹುದು.

ಚಲನಚಿತ್ರಗಳು ಮತ್ತು ಕಿರುತೆರೆ

ಚಲನಚಿತ್ರಗಳ ನಿರ್ಮಾಣಕ್ಕೆ ಕಾದಂಬರಿಗಳನ್ನು ಆಧರಿಸುವ ಪರಿಪಾಠ ಹೆಚ್ಚಾಗಿದ್ದು ಎಪ್ಪತ್ತು ಎಂಬತ್ತರ ದಶಕಗಳಲ್ಲಿ. ಕಾದಂಬರಿಗಳನ್ನು ಓದುವುದು ಅಂದಿನವರ ಪ್ರಮುಖ ಮನರಂಜನೆಯಾಗಿತ್ತು. ಅಲ್ಲದೆ, ಸಿನಿಮಾಗಳಿಗೆ ಅತಿ ಹೆಚ್ಚಿನ ಮಹತ್ವವೂ ಇತ್ತು. ಕಾದಂಬರಿಗಳು, ಸಿನಿಮಾಗಳು ಮತ್ತು ಅದನ್ನು ಬರೆದವರಿಗೂ ಅಷ್ಟೇ ಬೆಲೆ ಸಿಗುತ್ತಿದ್ದುದರಿಂದ, ಕಾದಂಬರಿಕಾರ್ತಿಯರು ಪ್ರಸಿದ್ಧರಾಗಲು ಸಹಕಾರಿಯಾಯಿತು. ಇಂದಿರಾರವರ ಗೆಜ್ಜೆಪೂಜೆ (1969), ಮುಸುಕು (1971), ಸದಾನಂದ (1976), ಹೂ ಬಾಣ (1980) (ಮುತ್ತು ಒಂದು ಮುತ್ತು ಎಂಬ ಹೆಸರಿನಲ್ಲಿ), ಫಣಿಯಮ್ಮ (1981), ಗಿರಿಬಾಲೆ (1985) ಮತ್ತು ಪೂರ್ವಾಪರ (2004)-- ಈ ಏಳು ಕಾದಂಬರಿಗಳು ಚಲನಚಿತ್ರಗಳಾಗಿ ಉತ್ತಮ ಯಶಸ್ಸು ಕಂಡವು.

ಇವರ ಗೆಜ್ಜೆಪೂಜೆ, ಫಣಿಯಮ್ಮ ಚಿತ್ರಗಳ ವಸ್ತುಗಳಂತೂ ಅತ್ಯಂತ ಪ್ರಭಾವಯುತವಾಗಿದ್ದು ಸ್ತ್ರೀ ಸಮಸ್ಯೆಗಳ ಕುರಿತು ಸಮಾಜದ ದೃಷ್ಟಿಕೋನವನ್ನೇ ಬದಲಿಸಲು ಸಹಕಾರಿಯಾದುವು. ಸಮಾಜದಲ್ಲಿ, ಎಲ್ಲವನ್ನೂ ಸ್ತ್ರೀ ದೃಷ್ಟಿಕೋನದಿಂದ ನೋಡುವ ಹೊಸಅಲೆಯೊಂದು ಎಂಬತ್ತರ ದಶಕದಲ್ಲಿ ಏಳತೊಡಗಿದ್ದು, ಸ್ತ್ರೀವಾದವನ್ನು ಬೆಂಬಲಿಸುವಂತಹ ಕೃತಿಗಳಾಗಿ ಕಂಡು ಇವು ಪ್ರಶಂಸಾರ್ಹವೆನಿಸಿದವು. ಅಮೆರಿಕಾ ಖಂಡದ ಹದಿಮೂರು ದೇಶಗಳು ಮತ್ತು ಇಂಗ್ಲೆಂಡ್, ಪ್ಯಾರಿಸ್, ಜರ್ಮನಿ, ಇಟಲಿ, ಫ್ರಾನ್ಸ್, ಪೋಲೆಂಡ್, ಪೋರ್ಚುಗಲ್, ಜಪಾನ್ ಮತ್ತು ಹವಾಯ್‌ಗಳನ್ನು ಸುತ್ತಿದ ಇವರ 'ಫಣಿಯಮ್ಮ' ಚಿತ್ರ, ತನ್ನ ಈ ಪ್ರಪಂಚ ಪರ್ಯಟನದಿಂದ ಕನ್ನಡದ ಕೀರ್ತಿಯನ್ನು ಇಡೀ ಜಗತ್ತಿಗೆ ಪಸರಿಸಿದ್ದು, ಇಂದಿರಾಗೆ ಮಾತ್ರವಲ್ಲ, ಕನ್ನಡಿಗರಿಗೇ ಹೆಮ್ಮೆ ತಂದಂತಹ ವಿಷಯ.

ಇವರ ಕಾದಂಬರಿ ಆಧಾರಿತ 'ಸೀತೆ' ಕಿರುತೆರೆಯಲ್ಲಿ ಧಾರಾವಾಹಿಯಾಗಿ ಕಾಣಿಸಿಕೊಂಡಿದೆ. 'ಸದಾನಂದ' ಕಿರುತೆರೆ ಧಾರಾವಾಹಿಯಾಗಿ ಬಿತ್ತರಗೊಳ್ಳಲು ಸಿದ್ಧವಾಗುತ್ತಿದ್ದು, ಇಂದಿರಾ ಅವರ ಎರಡನೇ ಮಗ ಎಂ.ಕೆ.ಮಂಜುನಾಥ ಅವರು ಅನುಮತಿ ನೀಡಲಿದ್ದಾರೆ.

ಕೃತಿಗಳ ಗುಣಾವಗುಣಗಳು

1. ಇವರ ಎಲ್ಲ ಕೃತಿಗಳೂ ಸರಳ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಹವ್ಯಕರೋ, ಉತ್ತರ ಕರ್ನಾಟಕದವರೋ, ಮಂಗಳೂರಿನವರೋ-ಆಯಾ ಪ್ರದೇಶಕ್ಕೆ ಉಚಿತವಾದ ಆಡು ಭಾಷೆಯಲ್ಲಿ ಸಂಬಂಧಿತ ಪಾತ್ರಗಳು ಸಂಭಾಷಿಸುತ್ತವೆ. ಬರೆದ ಎಲ್ಲವೂ ಸಾಮಾಜಿಕ ವಸ್ತುಗಳನ್ನಾಧರಿಸಿಯೇ ಬರೆದಂತಹವು.
2. ಮಲೆನಾಡಿನ ಜನಜೀವನ, ಮಾತು, ಭಾಷೆ, ಉಡುಪು, ಸಂಪ್ರದಾಯ, ನಂಬಿಕೆಗಳು, ಅಂಧಾನುಕರಣೆಗಳು, ದೆವ್ವಗಳು, ದೇವರುಗಳು, ಮನ-ಮನೆಗಳು, ಗಿಡಮರಗಳು, ನದಿ, ತೊರೆ-ಇತ್ಯಾದಿಗಳೆಲ್ಲವನ್ನೂ ಯಥಾವತ್ತಾಗಿ

ಕಣ್ಣಮುಂದೆ ನಿಲ್ಲುವಂತೆ ಚಿತ್ರಿಸಿದ್ದಾರೆ. ಫಣಿಯಮ್ಮ, ಸದಾನಂದ, ತುಂಗಭದ್ರ, ತೆಗ್ಗಿನಮನೆ ಸೀತೆ, ನೂರೊಂದು ಬಾಗಿಲು, ಮುಂತಾದ ಕಾದಂಬರಿಗಳಲ್ಲಿ ಮಲೆನಾಡಿನ ಹೊಳೆ, ಸುರಿಯುವ ಮಳೆ, ದಟ್ಟವಾದ ಕಾಡು, ಹಚ್ಚ ಹಸಿರು, ಎತ್ತರದ ಬೆಟ್ಟ, ಬಾಯಲ್ಲಿ ನೀರೂರಿಸುವ ಊಟ, ಹಲವು ಸದಸ್ಯರನ್ನೊಳಗೊಂಡ ಜಂಟಿ ಕುಟುಂಬಗಳು, ಹಳೆಯ ಕಾಲದ ದೊಡ್ಡ ಮನೆಗಳು, ಇವುಗಳ ನಡುವಿನ ಜನರ ಜೀವನದ ರೀತಿಗಳು––ಇವುಗಳ ಚಿತ್ರಣದಿಂದ ಓದುಗರನ್ನು ಮಲೆನಾಡು ಹಸಿರಿಗೆ ಕರೆದೊಯ್ದು ಬಿಡುವುದು ಈ ಲೇಖಕಿಯ ರಚನೆಯ ವಿಶಿಷ್ಟತೆ.

3. ಯಾವುದೇ ಪದ್ಧತಿ–ಪರಿಪಾಠಗಳನ್ನು ಕುರಿಗಳಂತೆ ಮುಂದುವರಿಸಿಕೊಂಡು ಹೋಗುವುದನ್ನು ಇವರು ಇಚ್ಛಿಸುವವರಲ್ಲ. ಕಾಲ, ಅರ್ಥಗಳಿಗೆ ಒರೆ ಹಚ್ಚಿ, ಪಾತ್ರ ಮತ್ತು ಸನ್ನಿವೇಶಗಳನ್ನು ಸೃಷ್ಟಿಸುತ್ತಾರೆ. ಸಮಾಜದ ಸುಧಾರಣೆಗೆ ಬೆಂಬಲಿಸುತ್ತಾರೆ. ಹೊಲೇರ ಹೆಂಡತಿಯ ಹೆರಿಗೆಯನ್ನು ಯಾವುದೇ ಮುಜುಗರವಿಲ್ಲದೆ ತನ್ನ ಕೈಯ್ಯಲ್ಲೆ ಮಾಡುವ ಮತ್ತು ಗಂಡ ಸತ್ತ ಬಾಲೆಯ ಅನೈತಿಕ ಸಂಬಂಧವನ್ನು ಒಪ್ಪುವ 'ಫಣಿಯಮ್ಮ'; ವಿಧವೆಯನ್ನೇ ಮದುವೆಯಾಗಬೇಕೆಂಬ ಆದರ್ಶದಿಂದ ವಿಧವೆ ಕಮಲೆಯನ್ನು ವಿವಾಹವಾಗುವ ಸಕಲ ಕಲಾನಿಪುಣ ವಿಧುರ ಸದಾನಂದ; ಕುಂಟಿಯನ್ನು ಪ್ರೇಮಿಸಿ ಕೈ ಹಿಡಿವ 'ಸದಾನಂದ'ದ ರಾಜು; ಈ ಮಾತಿಗೆ ಒಂದೆರಡು ಉದಾಹರಣೆಗಳು.

4. ಸಾಮಾಜಿಕ ಪಿಡುಗುಗಳು, ಸ್ತ್ರೀ ಪುರುಷರ ನಡುವಿನ ಸಮಾಜದ ತಾರತಮ್ಯ ನಡವಳಿಕೆ, ಅರ್ಥಹೀನ ಸಂಪ್ರದಾಯಗಳು, ಪ್ರೀತಿ–ಪ್ರೇಮ, ಇತ್ಯಾದಿ ಇವರ ಲೇಖನಿಗೆ ಸಿಕ್ಕ ವಸ್ತುಗಳು. ಕೇವಲ ಸ್ವಾನುಭವದಲ್ಲಿ ಸಂಗ್ರಹಗೊಂಡ ಬದುಕನ್ನು ತನ್ನ ಆಲೋಚನೆಗಳ ಒರೆಯಲ್ಲಿ ಪರಿಶೀಲಿಸಿ ಕೃತಿ ರಚಿಸುವ ಮೂಲಕ ತಮ್ಮ ಬರವಣಿಗೆಯ ಶಕ್ತಿಯನ್ನು ತೋರಿಸಿದ್ದಾರೆ. ಇದೊಂದು ಮಿತಿಯೂ ಆಗಿತ್ತು ಎನ್ನುವುದೂ ನಿಜ. ಪ್ರಗತಿಪರ ಆಲೋಚನಾ ಸಾಮಾರ್ಥ್ಯವಿದ್ದ ಈ ಲೇಖಕಿ ಜನಪ್ರಿಯತೆಗೆ, ಪತ್ರಿಕೆ ಮತ್ತು ಪ್ರಕಾಶಕರ ಬೇಡಿಕೆಗಳಿಗೆ ಈಡಾಗಿದ್ದುದರಿಂದ ವಿಶಿಷ್ಟ ಕೃತಿಗಳೊಂದಿಗೆ, ಹೆಣ್ಣಿನ ಆಕಾಂಕ್ಷೆ, ಸುಖಾಂತ, ಹಂಸಗಾನ, ಸಂದರ್ಶನ, ಮುಂತಾದ ಸಾಧಾರಣವಾದ ಕೃತಿಗಳೂ ರಚನೆಗೊಂಡವು.

5. ಯಾವುದೇ ವಾದವನ್ನು ಪ್ರತಿಪಾದಿಸುವ ಉದ್ದೇಶವಿಲ್ಲದೆ ಬರೆದುದಾದರೂ, ಇವರು ಸ್ತ್ರೀವಾದಿ (ಸಮಾನ ನ್ಯಾಯವಾದಿ) ಎಂಬುದಕ್ಕೆ ಅವರ ಕೃತಿಗಳಲ್ಲಿ ಅನೇಕ ಅಂಶಗಳು ದೊರೆಯುತ್ತವೆ. ಹದಿನಾರು ವರ್ಷದ ವಿಧವೆ ದಾಕ್ಷಾಯಣಿ ಕೇಶಮುಂಡನಕ್ಕೆ ಒಲ್ಲದೆ ಪ್ರತಿಭಟಿಸುವುದು, ಮಠ–ಮಾನ್ಯಗಳಲ್ಲಿ ಸ್ತ್ರೀಯರ ಸಂಬಂಧವಾಗಿ ನಡೆಯುವ ವ್ಯಭಿಚಾರ ಮತ್ತು ಅನ್ಯಾಯಗಳನ್ನು ಬಯಲಿಗೆಳೆಯುವುದು, ದಾಕ್ಷಾಯಣಿ ಮೈದುನನಿಂದ ಗರ್ಭಿಣಿಯಾದಾಗ, ಅವಳನ್ನು ತವರಿಗೆ ಅಟ್ಟಲು ಪ್ರಯತ್ನಿಸಿದಾಗ, "ನಿಮ್ಮ ಮಗನೇ ಬಸಿರು ತುಂಬಿದವನು ನಾ ಯಾಕೆ ತೌರಿಗೆ ಹೋಗ್ಲಿ? ನೀವೇ ಬಾಣಂತನ ಮಾಡಿ. ಆ ಮಗನ ಬದ್ಲಿ ಈ ಮಗ ಇಷ್ಟೇ" ಎನ್ನುತ್ತಾ ಎಲ್ಲ ದಿಗ್ಬಂಧನಗಳಿಂದ ಹೊರ ಬಂದು ಪ್ರಶ್ನಿಸುವುದು; ಪುರಾಣ ಕಥೆಗಳಲ್ಲಿ ಬರುವ ರೇಣುಕ, ಅಹಲ್ಯರ ಪಾತಿವ್ರತ್ಯದ ಕುರಿತು ಶಂಕೆಪಡುವ ಪ್ರಸಂಗಗಳನ್ನು ತಂದು, ಸಾವಿರ ಹೆಂಗಸರೊಂದಿಗೆ ಕೂಡಿಯೂ ಶುದ್ಧರಾಗಿಯೇ ಉಳಿವ ಗಂಡಸರೊಂದಿಗೆ ಹೋಲಿಸಿ ಇದು ಯಾವ ನ್ಯಾಯವೆಂಬಂತೆ ಪ್ರಶ್ನಿಸುವುದು, ಇವೇ ಮುಂತಾದ ಅನೇಕ ಸಂದರ್ಭಗಳಿರುವ 'ಫಣಿಯಮ್ಮ' ಒಂದೇ ಕೃತಿಯೇ ಈ ಮಾತಿಗೆ ಉದಾಹರಣೆಯಾಗಲು ಸಾಕು.

6. ಹೆಚ್ಚು ಓದಿಲ್ಲದಿದ್ದರೂ ವಿವೇಕ ಮತ್ತು ಪ್ರಗತಿಪರ ಆಲೋಚನೆಗಳಿವೆ. ಅದರಿಂದಲೇ ಗೆಜ್ಜೆಪೂಜೆ, ಸದಾನಂದ, ತಪೋವನ, ಫಣಿಯಮ್ಮದಂತಹ ಕೃತಿಗಳು; ಮೂಢನಂಬಿಕೆಗಳು, ಸಂಪ್ರದಾಯಗಳಲ್ಲಿನ ಕ್ರೌರ್ಯ, ದೇವರ ಹೆಸರಲ್ಲಿ ಸ್ವಾಮಿ ಸನ್ಯಾಸಿಗಳು ಮಾಡುವ ಮೋಸ, ಅಸಮಾನ ಮೌಲ್ಯಗಳು, ಇತ್ಯಾದಿ ಅಂಶಗಳ ಮೇಲೆ ಬೆಳಕು ಚೆಲ್ಲಿ, ಸಮಾಜದಲ್ಲಿ ಆಗಬೇಕಾದ ಸುಧಾರಣೆಯ ಬಗ್ಗೆ ಅಲೋಚಿಸುವಂತೆ ಮಾಡುತ್ತವೆ.

7. 'ಬಾರದು', 'ಕೂಡದು' ಎಂಬ ನಿಯಮಗಳನ್ನು ಕುರಿಗಳಂತೆ ಪರಿಪಾಲಿಸುವುದನ್ನು ಈಕೆ ಒಪ್ಪುವುದಿಲ್ಲ. ಇವುಗಳ ಬಗ್ಗೆ ಅರ್ಥಪೂರ್ಣ ಪ್ರಶ್ನೆಗಳಿರುತ್ತವೆ. 'ಸದಾನಂದ'ದಲ್ಲಿ ಕೀಳು ಜಾತಿಯ 'ಬಚ್ಚ'ನೆಂಬ ಹುಡುಗ, ದೇವಸ್ಥಾನದ ಗೋಪುರವನ್ನು ಹತ್ತಿದಾಗ, ಗೌರಿ ಅವನ ಕಿವಿ ಹಿಂಡಿ, 'ಹತ್ತಾರೇನೋ ದೇವಸ್ಥಾನದ ಗೋಪ್ರಾನಾ? ಶಾಸ್ತ್ರಿಗಳು ಕಂಡ್ರೆ ನಿನ್ನ ಸ್ವಂಟ ಮುರೀತಾರೆ ಗೊತ್ತನಾ'? ಎಂದು ಕೇಳುತ್ತಾಳೆ, ಆ ಬಚ್ಚನ ಉತ್ತರ ನೋಡಿ, "ಯಾಕೆ ಹತ್ಬಾರ್ದು? ಮಂಗ, ಕಾಗೆಯೆಲ್ಲ ಹತ್ತಿ ಗೋಪ್ರದ ತುಂಬ ಹೇತ್ಬಂದಾವೆ?" ಅಂದರೆ ಕಾಗೆ, ಮಂಗಗಳ ಹೇಸಿಗೆಗಿಂತ, ದಲಿತ ಮನುಷ್ಯನೊಬ್ಬ ಬರೀ ಗೋಪುರ ಹತ್ತುವುದು ಅಪವಿತ್ರವೇ? ಎಂಬುದು ಬಚ್ಚನ ಅರ್ಥಬದ್ಧ ವಾದ.

8. ಇಂದಿರಾರ ಆಧುನಿಕ ಆಲೋಚನೆಗೆ ಇನ್ನೊಂದು ಉದಾಹರಣೆ ಅವರ 'ಸದಾನಂದ'. ಕುಡಿತಕ್ಕೆ ನಿಷಿದ್ಧವಿದ್ದ ಅಂದರೆ ನಲವತ್ತೆಂಟು ವರುಷಗಳ ಹಿಂದಿನ ಕಾಲದಲ್ಲಿ, ಕುಡುಕ ಸಂಸಾರವನ್ನು ಸಾಗಿಸಲಾರ ಎಂಬ ಭಾವನೆಯಿಂದ ಹುಡುಗಿಯನ್ನು ಕೊಡುವುದಕ್ಕೂ ನಿರಾಕರಿಸುತ್ತಿದ್ದಂತಹ ಸಮಯದಲ್ಲಿ (1965ರಲ್ಲಿ), ಇವರು 'ಸದಾನಂದ' ಕಾದಂಬರಿಯನ್ನು ಬರೆದಿದ್ದಾರೆ. ಆದರೆ ಅದರಲ್ಲಿ ಸರ್ವಗುಣ ಸಂಪನ್ನನೂ, ಸಕಲಕಲಾ ಚತುರನೂ ಮತ್ತು ಆದರ್ಶ ಸಮಾಜ ಸುಧಾರಕನೂ ಆದ ಸದಾನಂದ ಕುಡಿಯುವುದನ್ನೂ ಕಲಿತಿರುತ್ತಾನೆ. 'ಒಮ್ಮೊಮ್ಮೆ ಅಪರೂಪದ ಗೆಳೆಯರು ಸಿಕ್ಕಿದರೆ ಒಮ್ಮೆ ಕುಡಿತವೂ ಉಂಟು ನನಗೆ. ಆದರೆ ಅದು ಚಟವಲ್ಲ. ಅಭ್ಯಾಸವೂ ಅಲ್ಲ. ಆ ಗಳಿಗೆಯ ಮೋಜು ಆಯ್ತು. ಹಗಲೆಲ್ಲ ಈ ನಮೂನೆ ಪುಂಡತನ ಮಾಡಿದರೆ ನನ್ನ ಅಮ್ಮ ಬಾಯಿ ಬಡಿದುಕೊಂಡು ಸತ್ತೀತು", ಎಂದು ಸದಾನಂದನೇ ತಾನು ಕುಡಿಯುವ ವಿಷಯವನ್ನು ಹೊರಗೆಡಹುತ್ತಾನೆ. ಮಿತಿಯ ಕುಡಿತ, ಮೋಜಿಗೆ ಮಾತ್ರ ಸೀಮಿತ. ಮನೆ ಹಾಳು ಮಾಡುವಂತಹದಲ್ಲವಾದ್ದರಿಂದ ಈ ಸತ್ಪಾತ್ರ, ಕ್ಷಣಿಕ ಮೋಜಿಗೆ ಕುಡಿದರೂ ತಪ್ಪಲ್ಲ ಎನ್ನುವಂತೆ ಪರಿಚಯಿಸಿರುವುದು, ಅವರ ಆಲೋಚನೆಯ ದಿಕ್ಕು ಮುಂದಿನ ಶತಮಾನದಲ್ಲಿತ್ತು ಎಂಬುದನ್ನು ಸೂಚಿಸುತ್ತದೆ.

9. ಇವರ ಕೃತಿಗಳಲ್ಲಿ ಪರಭಾಷಾ ಕೃತಿಗಳ ಪ್ರಭಾವವಾಗಲೀ, ಬೌದ್ಧಿಕವಾಗುವ ಗೀಳಾಗಲೀ, ಪಾಂಡಿತ್ಯ ಪ್ರತಿಭೆಗಳ ಪ್ರದರ್ಶನಗಳಾಗಲೀ ಇಲ್ಲ. ಈ ನೆಲದ ಕನ್ನಡ ಭಾಷೆಯಲ್ಲಿ, ವಾಕ್ಯ ಚಮತ್ಕಾರ, ಕ್ಲಿಷ್ಟ ಪದಗಳ ಪ್ರಯೋಗಗಳಿಲ್ಲದೇ, ತಗ್ಗಿಗೆ ಹರಿಯುವ ನೀರಿನಂತೆ ಹರಿವ ಸರಳ ನಿರೂಪಣೆ ಇರುತ್ತದೆ.

10. ಓದುಗರ ಅಂತರಂಗದ ಆಳಕ್ಕೆ ಹೋಗಿ ಚಿಂತನೆಗೆ ತೊಡಗಿಸುವ ತತ್ವಗಳಿಂದ ಜೀವನವನ್ನು ವಿಶ್ಲೇಷಿಸುವ ಅಥವಾ ಅಧ್ಯಾತ್ಮ ಚಿಂತನೆಗಳನ್ನೊಳಗೊಂಡ ಕೃತಿಗಳು ಇವರದಲ್ಲ.

11. ಇವರಿಗೆ ಸೂಕ್ಷ್ಮ ನಿರೀಕ್ಷಣೆಯ ದೃಷ್ಟಿ ಇದೆ. ಆದ್ದರಿಂದಲೇ ವೈವಿಧ್ಯಮಯ ಪಾತ್ರಗಳನ್ನು ಚಿತ್ರಿಸಲು ಸಾಧ್ಯವಾಗಿದೆ. ಇವರ ಕೃತಿಗಳಲ್ಲಿ ಹಾಸ್ಯ ಸಹಜವಾಗಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತದೆ. ಪ್ರಣಯ ಅಥವಾ ಆದರ್ಶವನ್ನು ಜೀವನದ ವಿವಿಧ ಪರಿಸರದಲ್ಲಿ ಚಿತ್ರಿಸುವ ಕೃತಿಗಳು ಹೆಚ್ಚಾಗಿವೆ.

12. ಇಂದಿರಾರ ಬರವಣಿಗೆಯಲ್ಲಿ ಯಾವುದೇ ಮಡಿ–ಮುಜುಗರಗಳಿಲ್ಲ. ನಾಚಿಕೆ, ಹಿಂಜರಿಕೆಗಳಿಲ್ಲ. ಹೇಳಬೇಕೆನಿಸಿದ್ದೆಲ್ಲವನ್ನೂ ಮುಕ್ತವಾಗಿ, ಬಿರುಬೀಸಾಗಿ ಬರೆದು ಬಿಡುವ ಧೈರ್ಯ ಕಾಣಬರುತ್ತದೆ. ಇಲ್ಲಿ

ಒಂದು ಅಂಥ ಉದಾಹರಣೆ ಇದೆ. "ತುಸನಾದ್ರೂ ನಾಚ್ಕೆ ಇಲ್ಲ ಈ ಗಂಡಸರಿಗೆ. ಆಪಾಟಿ ನೋಡಾಕೆ ಏನಿದೆ ಅಲ್ಲಿ? ಎಲ್ಲ ಬೆತ್ ಬೆತ್ತಾಗಿ (ಗುಡಿಯ ಶಿಲಾ ಬಾಲಿಕೆಯರು) ಸೊಟ್ಟು ಸೊಟ್ಟಾಗಿ ನಿಂತವೆ. ನಿಮ್ಮ ಹಾಗೆ ನಾವೇನು ಸಂದಿಗೊಂದಿಯಲ್ಲಿ ನೋಡ್ತಾ ನಿಂತ್ಗಳಲ್ಲ" (ಸದಾನಂದದಲ್ಲಿ)

ಸ್ವಭಾವತಃ ಇಂದಿರಾ ನಿಗರ್ವಿ. ಸರಳ ಮತ್ತು ಸತ್ಯಜೀವಿ. ನಿರ್ಮತ್ಸರಿ. ಯಾರೊಂದಿಗೇ ಆದರೂ ಅವರದು ಸೌಹಾರ್ದತೆಯ ವರ್ತನೆ. ಅವರ ಮನೆಗೆ ಹೋದವರಿಗೆ ಮಾತಿನ ಪ್ರೀತಿಯಿಂದ, ಊಟೋಪಹಾರದಿಂದ ಉಪಚರಿಸಿ ಕಳಿಸಿದರೇ ಅವರಿಗೆ ತೃಪ್ತಿ. ಇವರಿಗೆ ಹಣದ ದುರಾಸೆಯೂ ಇರಲಿಲ್ಲ. ಪುಸ್ತಕ ಮಾರಾಟವಾಗಿ ಬರುವ ಲಾಭಕ್ಕೆ ಅನುಗುಣವಾಗಿ ಗೌರವಧನ ನೀಡುವಂತೆ ಅವರು ಪ್ರಕಾಶಕರಿಗೆ ಹೇಳುತ್ತಿದ್ದರಂತೆ.

ಇಂದಿರಾ ಪ್ರಶಸ್ತಿಗಾಗಿ ಸಾಹಿತ್ಯ ರಚನೆ ಮಾಡಿದವರಲ್ಲ. ಅವರು ತಮ್ಮ ಕೃತಿಗಳ ಕುರಿತಾದ ವಿಮರ್ಶೆಗೂ ಗಮನ ಕೊಡುತ್ತಿರಲಿಲ್ಲ. 'ಫಣಿಯಮ್ಮ'ನನ್ನ ಒಬ್ಬರು ದಲಿತ ಪ್ರಜ್ಞೆಯ ಕಾದಂಬರಿ ಎಂದಿದ್ದರೂ ಅವರು ಅದನ್ನು ಅಲ್ಲಗಳೆಯುತ್ತಿರಲಿಲ್ಲ. "ಇಂದಿರಾರವರ ಕಾದಂಬರಿಯಲ್ಲಿ ವಾಸ್ತವತೆ ಇದೆಯೇ ವಿನಃ ಪ್ರತಿಭೆ, ಪಾಂಡಿತ್ಯಗಳಿರುವುದಿಲ್ಲ", ಎಂದರೂ ಕುಗ್ಗುತ್ತಿರಲಿಲ್ಲ, ಬರೆಯುವ ಕರ್ಮ ಮಾತ್ರ ತಮ್ಮದು ಎಂಬಂತೆ "ಏನಾದರೂ ಅಂದುಕೊಳ್ಳಲಿ ಬಿಡಿ ನನಗೇನು" ಎನ್ನುವಂತಹ ನಿರ್ಲಕ್ಷ್ಯ.

ಇಂದಿರಾರವರ ಬರವಣಿಗೆಯ ರೀತಿ, ನೀತಿ, ವಿಚಾರ, ಶೈಲಿಗಳನ್ನು, ನಾಟಕಕಾರ ಶ್ರೀರಂಗ, ರಾಷ್ಟ್ರಕವಿ ಕುವೆಂಪು, ನೀಳಾದೇವಿ, ವಿಮರ್ಶಕಿ ಬಿ.ಎನ್. ಸುಮಿತ್ರಾಬಾಯಿ, ಡಾ. ಪು.ತಿ.ನ., ಕೆ.ಎಸ್.ನರಸಿಂಹಸ್ವಾಮಿ, ಡಾ. ಅನುಪಮಾ ನಿರಂಜನ, ಡಾ. ರಂ. ಶ್ರೀ. ಮುಗಳಿ, ತಾ. ಕೀರ್ತಿನಾಥ ಕುರ್ತುಕೋಟಿ, ಮುಂತಾದ ಹಿರಿಯ ಸಾಹಿತಿಗಳೂ, ಪ್ರಬುದ್ಧ ಪಂಡಿತರುಗಳೂ ಅವಲೋಕಿಸಿ, ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ.

ಪ್ರಶಸ್ತಿ–ಗೌರವಗಳು

ಎಂ.ಕೆ. ಇಂದಿರಾರವರಿಗೆ ಸಂದ ಸನ್ಮಾನಗಳು, ಪಡೆದ ಗೌರವಗಳಿಗೆ ಲೆಕ್ಕವಿಲ್ಲ. 'ತುಂಗಭದ್ರ' 1968ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪದವಿ ತರಗತಿಗಳಿಗೂ; ಇವರ 'ಮನದಣಿಯೆ ನೋಡಿ ಮಣಿದೆ' ಎಂಬ ಲೇಖನ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೂ; 'ತೆಗ್ಗಿನಮನೆ ಸೀತೆ'– 2003–04 ಮತ್ತು 2004–05ನೇ ಸಾಲುಗಳಲ್ಲಿ, ಬಿ.ಎ. ಬಿ.ಎಸ್‌ಸಿ. ಬಿ.ಕಾಂ, ಮತ್ತು ಬಿ.ಬಿ.ಎಂ. ತರಗತಿಗಳಿಗೂ; 'ಫಣಿಯಮ್ಮ' ಕಾದಂಬರಿ ಮೂರು ವರ್ಷಗಳ ಅವಧಿಗೆ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎ. ಪರೀಕ್ಷೆಗೂ; ಪಠ್ಯಪುಸ್ತಕಗಳಾಗಿ ನಿಗದಿಯಾಗಿದ್ದವು. ಮಾತ್ರವಲ್ಲ 'ಫಣಿಯಮ್ಮ' 1976ನೇ ಸಾಲಿನ ಶ್ರೇಷ್ಠ ಕೃತಿ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪುರಸ್ಕಾರವನ್ನೂ ಪಡೆಯಿತು.

ರಾಜ್ಯದ ವಿವಿಧೆಡೆಗಳಲ್ಲಿ ನಡೆದ ವಿವಿಧ ರೀತಿಯ ಸಮಾರಂಭಗಳಲ್ಲಿ ಸಮ್ಮೇಳನಗಳಲ್ಲಿ, ಇಂದಿರಾ ಪಾಲ್ಗೊಂಡಿದ್ದಾರೆ. ಹುನಗುಂದ ಜಿಲ್ಲಾ ಸಮ್ಮೇಳನದ ಮಹಿಳಾ ಗೋಷ್ಠಿಯ ಅಧ್ಯಕ್ಷತೆ; ಧರ್ಮಸ್ಥಳದಲ್ಲಿ 1979ರಲ್ಲಿ ನಡೆದ ಸಮ್ಮೇಳನದ ವಿಶೇಷ ಅತಿಥಿ; 1980ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಏರ್ಪಡಿಸಲಾದ ಲೇಖಕಿಯರ ಸಮ್ಮೇಳನದಲ್ಲಿ ಸನ್ಮಾನ; ದಾವಣಗೆರೆ ಕಲಾರಂಗ ಸಂಸ್ಥೆಯು 1981ರಲ್ಲಿ ವ್ಯವಸ್ಥೆಗೊಳಿಸಿದ ಅಖಿಲ ಕರ್ನಾಟಕ ಲೇಖಕಿಯರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ; ಗುಲ್ಬರ್ಗಾದಲ್ಲಿ 1982ರಲ್ಲಿ ನಡೆದ ಲೇಖಕಿಯರ ಎರಡನೆಯ ಸಮ್ಮೇಳನದಲ್ಲಿ ಕಾದಂಬರಿ ಗೋಷ್ಠಿಗೆ ಅಧ್ಯಕ್ಷತೆ; 1984ರಲ್ಲಿ ನಡೆದ ಲೇಖಕಿಯರ ಮೂರನೇ ಸಮ್ಮೇಳನದಲ್ಲಿ ಸನ್ಮಾನ; ಇವೆಲ್ಲ ಈ ಲೇಖಕಿಯ ಸಾಹಿತ್ಯ ಸೇವೆಯನ್ನು ಗುರುತಿಸಿ ಸಲ್ಲಿಸಲ್ಪಟ್ಟ ವಿವಿಧ ರೂಪದ ಗೌರವಗಳು.

ಇನ್ನು ಆರಂಭದಲ್ಲಿ ಬರೆದ ಕೃತಿಗಳಿಗೆ ಒಂದಲ್ಲ ಒಂದು ಬಹುಮಾನ ಅಥವಾ ಪ್ರಶಸ್ತಿ ಸಿಕ್ಕಿದೆ ಎನ್ನಬಹುದು. ಮೊದಲ ಕಾದಂಬರಿ 'ತುಂಗಭದ್ರ'ಕ್ಕೆ 1964ರ ತ್ರಿವೇಣಿ ಕಥಾ ಸ್ಪರ್ಧೆಯಲ್ಲಿ ವಿಶೇಷ ಬಹುಮಾನವೂ; 1965ರಲ್ಲಿ, ಇದೇ ಕೃತಿಗೆ ಪ್ರಾದೇಶಿಕ ಉತ್ತಮ ಕತೆ ಪ್ರಶಸ್ತಿಯೂ ದೊರೆತಿದೆ. 'ನವರತ್ನ' ಮತ್ತು 'ಫಣಿಯಮ್ಮ' ಕೃತಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನಗಳನ್ನು, ಕ್ರಮವಾಗಿ 1970 ಮತ್ತು 1983ರಲ್ಲಿ, ಇವರಿಗೆ ದೊರಕಿಸಿ ಕೊಟ್ಟಿವೆ. 1975ರ 'ವರ್ಷದ ಶ್ರೇಷ್ಠ ಲೇಖಕಿ' ಎಂದು ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ವಿಶೇಷ ಮನ್ನಣೆ ದೊರೆತಿದೆ. ಚಲನಚಿತ್ರವಾದ 'ಗೆಜ್ಜೆಪೂಜೆ' ಕಾದಂಬರಿ ರಾಷ್ಟ್ರ ಪ್ರಶಸ್ತಿಯನ್ನು ಗಿಟ್ಟಿಸಿತು. 1970ರಲ್ಲಿ, ಈ ಚಿತ್ರದ ನೂರನೇ ದಿನದ ಸಮಾರಂಭ ನಡೆದು. ಅಂದು ರಾಜ್ಯಪಾಲರಿಂದ ಬಹುಮಾನವನ್ನು ಲೇಖಕಿ ಸ್ವೀಕರಿಸಿದ್ದು ವಿಶೇಷ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ, ಕರ್ನಾಟಕ ಸರ್ಕಾರವು, 1978ರಲ್ಲಿ ಇವರಿಗೆ ಮಾಸಿಕ ವೇತನವನ್ನು ಮಂಜೂರು ಮಾಡಿತು.

1991ರಲ್ಲಿ ಇಂದಿರಾ ಎಪ್ಪತ್ತೈದನೇ ವರ್ಷಕ್ಕೆ ಕಾಲಿಟ್ಟ ಸಂದರ್ಭದಲ್ಲಿ, ಕರ್ನಾಟಕ ಲೇಖಕಿಯರ ಸಂಘವು, ರವೀಂದ್ರ ಕಲಾಕ್ಷೇತ್ರದಲ್ಲಿ, ಅಭಿನಂದನಾ ಸಮಾರಂಭವನ್ನು ಏರ್ಪಡಿಸಿ, 'ಸುರಗಿ' ಎಂಬ ಅಭಿನಂದನಾ ಗ್ರಂಥವನ್ನೂ, 75,000 ರೂಗಳ ನಿಧಿಯನ್ನೂ ಇವರಿಗೆ ಸಮರ್ಪಿಸಿ, ಬಹು ಉನ್ನತ ಮಟ್ಟದಲ್ಲಿ ಸನ್ಮಾನಿಸಿ ಸತ್ಕರಿಸಿದೆ. ಡಾ. ಮಂದಾಕಿನಿ ಪುರೋಹಿತ್ ಎಂಬುವವರು, ಇವರ ಬದುಕು ಬರಹಗಳ ಕುರಿತು ಸಂಶೋಧನೆ ಮಾಡಿ ಸಲ್ಲಿಸಿದ 'ಎಂ.ಕೆ.ಇಂದಿರಾ–ಸಮಗ್ರ ಅಧ್ಯಯನ' ಎಂಬ ಮಹಾಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿ ಪುರಸ್ಕರಿಸಿದೆ. ಅಂದರೆ ಕೇವಲ ಮಾಧ್ಯಮಿಕ ತರಗತಿ ಮುಗಿಸಿ, ರಚಿಸಿದ ಇಂದಿರಾರವರ ಕೃತಿಗಳು, ಸಂಶೋಧನೆಗೆ ಒಳಪಡಿಸುವಷ್ಟು ಸತ್ವಪೂರ್ಣ ಅಥವಾ ಉತ್ಕೃಷ್ಟ ಎಂಬುದು ಪುನಃ ಪುನಃ ಉಚ್ಚರಿಸಬೇಕೆನಿಸುವಂತಹ ಮಾತು–ಮಂತ್ರ.

ಕೊನೆಯ ದಿನಗಳು

ಕೊನೆಯ ಒಂದೆರಡು ತಿಂಗಳು, ಅವರ ಹಿರಿ ಮಗ ಸುಬ್ಬರಾಯರ ಮನೆಯಲ್ಲಿದ್ದರು. ಸುಮಾರು ಒಂದೂವರೆ ತಿಂಗಳ ಅವಧಿಯಲ್ಲಿ ಮೂರು ಬಾರಿ ಪೀಡಿಸಿದ ಪಾರ್ಶ್ವವಾಯು, ಅವರಿಗೆ ಮಾರಣಾಂತಿಕವಾಯಿತು. 1994ರ ಮಾರ್ಚ್ ಹದಿನೈದರಂದು ತಮ್ಮ ಇಹಲೋಕದಲ್ಲಿ ತಮ್ಮ ಹೆಸರನ್ನು ಮಾತ್ರ ಬಿಟ್ಟು ಉಳಿದೆಲ್ಲ ವ್ಯಾಪಾರಗಳನ್ನು ಮುಕ್ತಾಯಗೊಳಿಸಿ ಅನಂತದಲ್ಲಿ ಲೀನಗೊಂಡರು ಇಂದಿರಾ.

———— * ————

ಪರಿಶುದ್ಧತೆ ಉಳಿಸಿಕೊಂಡ ಹಾಸ್ಯ ಲೇಖಕಿ ಟಿ. ಸುನಂದಮ್ಮ

ನೀಳಾದೇವಿ

ಅರ್ಧ ಶತಮಾನದ ಹಿಂದೆ 'ಕೊರವಂಜಿ' ಹಾಸ್ಯ ಮಾಸಪತ್ರಿಕೆ ನೋಡಿದ್ದರೆ, ಬರೆಹಗಾರರ ಪಟ್ಟಿಯಲ್ಲಿ ಎಲ್ಲಾ ಪುರುಷ ಸರಸ್ವತಿಯರೇ ಇದ್ದು, ಒಂದೇ ಒಂದು ಮಹಿಳೆ ಹೆಸರು ಮಾತ್ರ ಅದರಲ್ಲಿ ಇಣುಕಿರುತ್ತಿತ್ತು. ಆ ಸ್ತ್ರೀ ಸರಸ್ವತಿಯೇ ಟಿ. ಸುನಂದಮ್ಮ. ಹಾಸ್ಯ ಸಾಹಿತ್ಯ ಎಂದರೆ ಮಹಿಳೆಯಿಂದ ಬಲುದೂರ, ಅವಳೇನಿದ್ದರೂ ಕಥೆ, ಕಾದಂಬರಿಗಳಲ್ಲಿ ದುಃಖತೋಡಲು ಮಾತ್ರ ತನ್ನ ಲೇಖನಿ ಬಳಸುತ್ತಾಳೆ ಎಂಬ ಭಾವನೆ ಇದ್ದಾಗ ಇದಕ್ಕೆ ಅಪವಾದವಾಗಿದ್ದವರು ಶ್ರೀಮತಿ ಸುನಂದಮ್ಮನವರು. ಈಗ ಸಹ, ಹಾಸ್ಯ ಸಾಹಿತಿ ಎಂದು ಹೇಳಿಸಿಕೊಳ್ಳಬಲ್ಲ ಲೇಖಕಿಯರು ಒಂದಿಬ್ಬರು ಇರಬಹುದಷ್ಟೇ. ಟಿ. ಸುನಂದಮ್ಮನವರು ಹಾಸ್ಯ ಸಾಹಿತಿಯಾಗಿ ಅರ್ಧ ಶತಮಾನ ಕಳೆದುಹೋಗಿದ್ದರೂ ಅವರ ಸ್ಥಾನ ಪೂರ್ಣವಾಗಿ ತುಂಬಲು ಯಾವ ಲೇಖಕಿಗೂ ಸಾಧ್ಯವಾಗಿಲ್ಲ.

ಹಾಸ್ಯವೆಂಬುದು ಬಲು ನಾಜೂಕಿನ ವಿಷಯ. ಪರಿಶುದ್ಧ ಹಾಸ್ಯ ಸಾಹಿತ್ಯ ಕಾಣಬೇಕಿದ್ದರೆ ನೀವು ಅಂದಿನ 'ಕೊರವಂಜಿ'ಯನ್ನು ಎಲ್ಲಾದರೂ ದೊರಕಿಸಿಕೊಂಡು ಓದಿಯೇ ತಿಳಿದುಕೊಳ್ಳಬೇಕಾದೀತು. ಕೊರವಂಜಿ ಪತ್ರಿಕೆ ಮುಖಪುಟದಲ್ಲಿ ಸುಪ್ರಸಿದ್ಧ ವ್ಯಂಗ್ಯ ಚಿತ್ರಕಾರ ಆರ್.ಕೆ.ಲಕ್ಷ್ಮಣ್ ಅವರ ಚಿತ್ರ, ಅದರಲ್ಲಿ ಕೊರವಂಜಿಯೊಬ್ಬಳು ಮಗುವೊಂದನ್ನು ಎತ್ತಿ ಹಿಡಿದು ನಗುತ್ತಿರುತ್ತಾಳೆ. ಬಹುಶಃ ಆ ಕಣಿ ಹೇಳುವವಳು ಲೇಖಕರಾಗಿ, ಕೈನ ಮಗು ಓದುಗರಿರಬಹುದು! ಲೇಖನಗಳಲ್ಲಿ ಹುದುಗಿರುವ ಹಾಸ್ಯ, ಆ ಓದುಗ ಶಿಶುವಿಗೆ ಅರ್ಥವಾಯಿತೊ ಇಲ್ಲವೊ ಎಂದು ನೋಡುತ್ತಾ ಕೊರವಂಜಿ ನಗುತ್ತ ಇರಬಹುದು. ಸರಿಯಾದ ತಿಳಿ ಹಾಸ್ಯ ಅರಿಯುವುದಕ್ಕೂ ಒಂದು ಸಂಸ್ಕಾರ, ಪ್ರೌಢಿಮೆ ಬೇಕಾಗುತ್ತದೆ. ಬೇಗ ಜನಪ್ರಿಯವಾಗಿ ಬಿಡುವ ಕೀಳ್ದರ್ಜೆ ಹಾಸ್ಯ ಕಂಡರೆ, ಹೀಗೇಕೆ ಬರೆಯುತ್ತಾರೊ ಎಂದು ಸಂಕಟವಾಗಿಬಿಡುವುದು.

'ಕೊರವಂಜಿ' ಲೇಖಕರೆಲ್ಲಾ ಉತ್ತಮ ಹಾಸ್ಯ ಬೆಳೆಸಿ ಸಾಹಿತ್ಯಕ್ಕೆ ಉತ್ತಮ ಪುಷ್ಟಿ ನೀಡಿದವರೇ. ಅದರಲ್ಲಿ ಬರೆಯುತ್ತಿದ್ದವರೆಂದರೆ, ನಾ. ಕಸ್ತೂರಿ, ಜಿ.ಪಿ. ರಾಜರತ್ನಂ, ಟಿಎಸ್ಸಾರ್, ಸ್ವತಃ ಸಂಪಾದಕರಾಗಿದ್ದ ಡಾ. ಶಿವರಾಂ, ದಾಶರಥಿ ದೀಕ್ಷಿತ್, ಹೆಚ್.ಕೆ.ರಂಗನಾಥ್, ಹಾ.ರಾ.... ಮುಂತಾದವರ ನಡುವೆ ಏಕೈಕ ಲೇಖಕಿ ಟಿ. ಸುನಂದಮ್ಮ ಇರುತ್ತಿದ್ದರು.

ಹಾಸ್ಯ ಲೇಖನಗಳಿಂದ ಆಕರ್ಷಣೆಗೊಳಗಾಗಿದ್ದ ಸುನಂದಮ್ಮನವರನ್ನು ನಾನು ಮುಖತಃ ಕಂಡದ್ದು ಇಪ್ಪತ್ತು ವರ್ಷಗಳ ಮೇಲೆ. ನಾನು ಆಗ ಕರ್ನಾಟಕದಲ್ಲಿರಲಿಲ್ಲವಾದರೂ ಅವರ ಕೃತಿಗಳಿಂದ ಎಂದೂ ದೂರವಾಗಿ ಇರಲೇ ಇಲ್ಲ. ಮೊಟ್ಟ ಮೊದಲ ಬಾರಿಗೆ ಅವರನ್ನು ಕಂಡದ್ದು ಬೆಂಗಳೂರಿಗೆ ಬಂದು ನೆಲೆಸಿದ ಮೇಲೆ. ಬೆಂಗಳೂರಿನಲ್ಲಿ ಕೆಲವು ಲೇಖಕಿಯವರು ಸೇರಿ ಮಾಡಿಕೊಂಡಿದ್ದ ಲೇಖಕಿಯರ ಕೂಟದಲ್ಲಿ ನಾನು ಸೇರಿಕೊಂಡಾಗ ನಾನವರನ್ನು ನೋಡಿದೆ. ಆ ಸಾಹಿತ್ಯ ಕೂಟದಲ್ಲಿ ಡಾ. ಅನುಪಮಾ ನಿರಂಜನ, ಹೆಚ್.ಎಸ್. ಪಾರ್ವತಿ, ನುಗ್ಗೆಹಳ್ಳಿ ಪಂಕಜಾ,

ಡಾ. ನಿರುಪಮಾ, ನಾಗಮಣಿ ಎಸ್. ರಾವ್, ಸರೋಜ ನಾರಾಯಣರಾವ್, ಟಿ.ಎಸ್.ಆರ್ ಅವರ ಮಡದಿ ಲಲಿತಮ್ಮ, ಮೊದಲಾದವರಿದ್ದರು. ಅವರೆಲ್ಲರಿಗೂ ಹಿರಿಯರಾಗಿ ಟಿ. ಸುನಂದಮ್ಮ ಇದ್ದರು. ಗುಂಪಿನಲ್ಲಿ ಎದ್ದುಕಾಣುವ ವ್ಯಕ್ತಿತ್ವ ಅವರದ್ದಾಗಿತ್ತು. ಎತ್ತರದ ನಿಲುವು, ಮಂದಹಾಸದ ಗತ್ತಿನ ಮುಖ, ಉಡುತ್ತಿದ್ದುದು ಇಸ್ತ್ರಿ ಮಾಡಿದ ರೇಶ್ಮೆಸೀರೆ. ಕಿವಿಯಲ್ಲಿ ಹೊಳೆಯುತ್ತಿದ್ದ ವಜ್ರದ ಓಲೆ. ಇವೆಲ್ಲಾ ಸಂಪ್ರದಾಯಸ್ಥ ಶ್ರೀಮಂತಿಕೆ ಮತ್ತು ಸುಸಂಸ್ಕೃತ ಮಹಿಳೆ ಎಂಬುದನ್ನು ತೋರುತ್ತಿದ್ದಂತಹ ಲಕ್ಷಣಗಳು. ಅವರ ತಂದೆ ಟಿ. ರಾಮಯ್ಯನವರು ಮೂಲತಃ ವೈದಿಕ ವೃತ್ತಿಯನ್ನೇ ಅವಲಂಬಿಸಿದ್ದ ಕುಟುಂಬದಲ್ಲಿ ಜನಿಸಿ, ಮುಂದೆ 'ಮೈಸೂರು ಸಿವಿಲ್ ಸರ್ವಿಸ್' ಪರೀಕ್ಷೆಯಲ್ಲಿ ಸುವರ್ಣ ಪದಕ ಗಳಿಸಿದ ಉನ್ನತ ಅಧಿಕಾರಿಯಾಗಿದ್ದರು. ತಾಯಿ ನಾಗಮ್ಮನವರು ವಿದ್ಯಾ ಇಲಾಖೆಯ ಅಧಿಕಾರಿಗಳಾಗಿದ್ದ ಡಿ. ವೆಂಕಟರಾಮಯ್ಯನವರ ಮಗಳು. ವೆಂಕಟರಾಮಯ್ಯನವರು ಇಂಗ್ಲಿಷ್ ಮತ್ತು ಸಂಸ್ಕೃತದ ವಿದ್ವಾಂಸರು. ಇವರು ಉಪನಿಷತ್ತನ್ನು ಕನ್ನಡದಲ್ಲಿ ಬರೆದಿದ್ದರು. ಇಂತಹ ವಿದ್ಯಾವಂತ ಮತ್ತು ಸುಸಂಸ್ಕೃತ ಮನೆತನದಲ್ಲಿ ಟಿ.ಸುನಂದಮ್ಮನವರು 1917ರ ಆಗಸ್ಟ್ ಎಂಟರಂದು ಜನಿಸಿದರು. ಇವರ ತಾಯಿ ನಾಗಮ್ಮನವರಿಗೆ ವಿದ್ಯೆಯ ಬಗ್ಗೆ ತುಂಬ ಬಲವಿತ್ತು. ಹೆಣ್ಣುಮಗಳಾದರೂ ಸಹ, ಸುನಂದಮ್ಮನವರು ವಿದ್ಯೆ ಕಲಿಯಲು ಎಲ್ಲಾ ಸೌಕರ್ಯವನ್ನು ಆ ಆಧುನಿಕ ಮನೋಭಾವದ ತಾಯಿ ಮಾಡಿಕೊಟ್ಟರು. ಮನೆತುಂಬಾ ತಾತ ಶೇಖರಿಸಿದ್ದ ಪುಸ್ತಕದ ಭಂಡಾರವೇ ಇತ್ತು. ಅದರ ನಡುವೆಯೇ ಬೆಳೆಯುತ್ತಿದ್ದ ಪುಟ್ಟ ಸುನಂದಳು ತನ್ನ ಮೊದಲ ಕವನವನ್ನು ಒಂಭತ್ತನೇ ವಯಸ್ಸಿಗೇ ಬರೆದು, ಮುಂದೆ, ಕನ್ನಡದ ಹಾಸ್ಯ ಸಾಮ್ರಾಜ್ಯದ ರಾಣಿಯಾಗಲು ಗೆಜ್ಜೆ ಕಟ್ಟಿಕೊಂಡಳು.

ಹೂವೇ ಹೂವೇ ನೀನೆಲ್ಲಿರುವೆ?
ನಾರಿಯ ತುರುಬೊಳೂ ಇರುವೆ,
ಮಾರಪಿತನ ಕೊರಳೊಳೂ ಇರುವೆ,
ಯಾರು ನೀನೆಂಬುದನು ನಾನರಿತಿರುವೆ.

ಈ ಕವನ ಅಂದಿನ ಪ್ರಸಿದ್ಧ ಪತ್ರಿಕೆಯಾದ 'ಮಕ್ಕಳ ಪುಸ್ತಕ'ದಲ್ಲಿ ಪ್ರಕಟವಾಗಿ ಬಿಟ್ಟಿತು. ಸಾಹಿತ್ಯದ 'ಅರಂಗೇಟ್ರಂ' ಆಗಿಬಿಟ್ಟ ಹುಮ್ಮಸ್ಸಿನಲ್ಲಿ ಬರವಣಿಗೆ ಕೈಯನ್ನು ಮುಂದುವರಿಸಿಯೇ ಬಿಟ್ಟರು. ಹನ್ನೆರಡನೇ ವಯಸ್ಸಿಗೆ ಆದ ಮದುವೆ ವೇಳೆಗೆ, ಈ ಮದುಮಗಳು ಪತ್ರಿಕೆಗಳಲ್ಲಿ ಕತೆ ಬರೆಯುತ್ತಾಳೆಂಬ ಜನಮೆಚ್ಚಿಕೆಯ ಹೂವೂ ತಲೆಯನ್ನಲಂಕರಿಸಿತು! ಹದಿವಯಸ್ಸು ಪ್ರಾರಂಭವಾಗುವ ವೇಳೆಗೆ ಇವರ ಸಣ್ಣ ಕತೆಗಳು 'ವಿಶ್ವ ಕರ್ನಾಟಕ', 'ವನಜೀವನ', ಮುಂತಾದ ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಮುಂದೆ ಇದೇ ಲೇಖಕಿ ಹಾಸ್ಯ ಸಾಹಿತ್ಯದ ಕಡೆ ಒಲಿದು, ಹಾಸ್ಯ ಸಾಹಿತ್ಯದ ಅನಭಿಷಿಕ್ತ ರಾಣಿಯಾಗುವಳೆಂದು ಯಾರೂ ಊಹಿಸಿರಲಿಲ್ಲ. ಆ ಹಿಂದೆ ಅವರು ಸುಖದ ಸುಪ್ಪತ್ತಿಗೆ ಮೇಲೆ ಬರೀ ಸುಖವನ್ನೇ ಉಂಡು ಅರಳಿದ್ದರು. ಆದರೂ ಬರೆದದ್ದು ವರದಕ್ಷಿಣೆ ಕಷ್ಟಗಳ ಬಗ್ಗೆ ಮತ್ತು ಬಾಲ ವಿಧವೆಯರ ಬವಣೆಗಳ ಬಗ್ಗೆ! ವಿಪರ್ಯಾಸವೆಂದರೆ ಮುಂದೆ ಮುಂದೆ ಅವರು ಅನುಭವಿಸಿದ್ದು ಸಾವು-ನೋವುಗಳ ಅನುಭವಗಳ ಮಾಲೆ. ಆಗ ಬೆಳೆಸಿಕೊಂಡದ್ದು ಹಾಸ್ಯ ಸಾಹಿತ್ಯ!

ಸುನಂದಮ್ಮನವರ ಮದುವೆ ಆ ಕಾಲದ ಪದ್ಧತಿಯಂತೆ ಋತುಮತಿಯಾಗುವ ಮುನ್ನವೇ ಆಗಿಹೋಯಿತು. ಸೀರೆ ಉಡಲೂ ಬಾರದ ಬಾಲೆಯು ಹದಿನೆಂಟು ಮೊಳದ ಅಂದರೆ ಒಂಭತ್ತು ಗಜದ ಸೀರೆಯನ್ನು ಉಟ್ಟುಕೊಂಡು ಇರಬೇಕಿತ್ತು. ಆದರೆ ಪತಿ ವೆಂಕಟನಾರಣಪ್ಪನವರು ಪುಣೆಯಲ್ಲಿ ಲಾ ಓದುತ್ತಿದ್ದರಿಂದ ಅವರ ಓದು ಮುಗಿಯುವ ತನಕ ಸುನಂದಮ್ಮನ ಓದೂ ಮುಂದುವರಿಯಿತು.

ಆ ಕಾಲದಲ್ಲಿ ಮದುವೆಯಾದ ಮೇಲೆ ವ್ರತಗಳನ್ನು ಐದು ವರ್ಷ ನೇಮದಿಂದ ಮದುವೆಯಾದ ಹುಡುಗಿಯರು ಕಡ್ಡಾಯವಾಗಿ ಮಾಡುತ್ತಿದ್ದರು. ತಂದೆ ಕಡೆ ಬಹಳ ಸಂಪ್ರದಾಯಸ್ಥ ಕುಟುಂಬವಾದ್ದರಿಂದ ಸುನಂದಮ್ಮನವರೂ

ತಮ್ಮ ಎಳೇ ಶರೀರಕ್ಕೆ ಒಂಭತ್ತು ಗಜದ ದೊಡ್ಡ ರೇಶ್ಮೆ ಸೀರೆ ಉಟ್ಟುಕೊಂಡು ವ್ರತಗಳನ್ನು ಮಾಡುವುದರ ಜೊತೆಜೊತೆಗೇ ಆಧುನಿಕ ಮನೋಭಾವದ ತಾಯಿಯ ದೆಸೆಯಿಂದ ಬಾಲಕರ ಶಾಲೆಗೆ ಹೋಗಿ ಓದನ್ನು ಮುಂದುವರಿಸಿದರು. ಇಡೀ ತರಗತಿಗೆಲ್ಲಾ ಈಕೆ ಒಬ್ಬಳೇ ಹೆಣ್ಣು ಹುಡುಗಿ. ಏಕೆಂದರೆ, ಆ ಕಾಲದಲ್ಲಿ ಹೆಣ್ಣುಮಕ್ಕಳ ಜೀವನದ ಗುರಿ ಮದುವೆಯಾಗುವುದೊಂದೇ. ಬೇಗ ಮದುವೆ ಗುರಿ ತಲುಪಿ ವಿದ್ಯಾಭ್ಯಾಸಕ್ಕೆ ಎಳ್ಳು ನೀರು ಬಿಟ್ಟು, ಗೃಹಬಂಧಿಯಾಗಿರುತ್ತಿದ್ದರು. ಧೈರ್ಯಶಾಲಿ ನಾಗಮ್ಮ ಮಗಳನ್ನು ಶಾಲೆಗೆ ಕಳುಹಿಸಿದರು. ಆಗ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶಾಲೆ ಎಲ್ಲ ಊರುಗಳಲ್ಲಿ ಇರುತ್ತಿರಲಿಲ್ಲವಾಗಿ ಸುನಂದಮ್ಮ ಬಾಲಕರ ಶಾಲೆಗೇ ಹೋಗಲೇಬೇಕಾಯಿತು. ಅಲ್ಲಿ ಈ ಹುಡುಗಿ ಎಲ್ಲ ವಿದ್ಯಾರ್ಥಿಗಳಿಗಿಂತ ಹೆಚ್ಚು ಅಂಕ ಪಡೆಯಲಾರಂಭಿಸಿದಳು. ಇದು ಸಹಪಾಠಿ ಹುಡುಗರ ಪೋಷಕರಿಗೆ ಸೈರಿಸಲಾಗದೆ, ಅವಳನ್ನು ಶಾಲೆಯಿಂದ ಹೊರಗಟ್ಟಲು ಮುಖ್ಯೋಪಾಧ್ಯಾಯರಿಗೆ ಬೆದರಿಕೆ ಹಾಕಿದರಂತೆ. ಒಂದು ಮಧ್ಯಾಹ್ನ ಸುನಂದ ಶಾಲೆಯಿಂದ ಮನೆಗೆ ಕಳಿಸಲ್ಪಟ್ಟಳು. ವಿಧಿ ಇರದೆ ಮಗಳಿಗೆ ಶಾಲೆ ಬಿಡಿಸಿ, ಮನೆಯಲ್ಲೇ ಟ್ಯೂಟರ್ ಇಡಿಸಿದರು. ಹೀಗೆ ವಿದ್ಯೆ ಮುಂದುವರಿಸಿಕೊಂಡು ಬೆಂಗಳೂರಿಗೆ ಬಂದು 'ವಾಣಿವಿಲಾಸ ಇನ್‌ಸ್ಟಿಟ್ಯೂಟ್'ನಲ್ಲಿ ಇಂಟರ್‌ಮೀಡಿಯಟ್ ಮುಗಿಸಿದರು. ತಂದೆಗೆ ಬೆಂಗಳೂರಿಗೆ ವರ್ಗವಾದದ್ದು ಸುನಂದಮ್ಮನವರಿಗೆ ಕಾಲೇಜು ಮೆಟ್ಟಲು ಹತ್ತಲು ಸಾಧ್ಯವಾಯಿತಲ್ಲದೆ, ಹಿಂದಿ ಪರೀಕ್ಷೆಗಳನ್ನು ಮಾಡುತ್ತ, ಜೊತೆಗೆ ಟೆನ್ನಿಸ್ ಕಲಿಯಲು ಅವಕಾಶವಾಯಿತು. ಈ ವೇಳೆಗೆ ಪತಿ ವೆಂಕಟನಾರಣಪ್ಪನವರ ಓದೂ ಮುಗಿದದ್ದರಿಂದ ಅವರ ಜೊತೆ ತುಮಕೂರಿಗೆ ಹೋಗಿ ಅತ್ತೆಮನೆ ಹೊಕ್ಕರು. ಕೆಲಕಾಲದ ನಂತರ ಪತಿಯ ಕಾರ್ಯನಿಮಿತ್ತವಾಗಿ ಮತ್ತೆ ಬೆಂಗಳೂರಿಗೇ ಹಿಂದಿರುಗಿದರು. ಬೆಂಗಳೂರಲ್ಲೇ ನೆಲೆನಿಂತ ಸುನಂದಮ್ಮನವರ ಸಂಸಾರ ಬೆಳೆದು ಎರಡು ಹೆಣ್ಣುಮಕ್ಕಳು ಮತ್ತು ಒಂದು ಗಂಡುಮಗನ ತಾಯಾದರು. ಇದರ ನಡುವೆ ಅವರ ಸಾಹಿತ್ಯ ಚಟುವಟಿಕೆ ನಿಲ್ಲಲಿಲ್ಲ. ಅವರು ಇಂಗ್ಲಿಷ್‌ನ 'ಪಂಚ್' ಪ್ರಿಯರಾದರು. ಅದರ ಪ್ರಭಾವ ಸುನಂದಮ್ಮನವರ ಬರವಣಿಗೆ ಮೇಲೆ ಆಗಿದ್ದಿರಬಹುದು. ಬೆಂಗಳೂರು ನಗರದ ಮಧ್ಯಮ ವರ್ಗದವರ ಜೀವನವನ್ನು ಹೊಸ ಹಾಸ್ಯ ದೃಷ್ಟಿಯಲ್ಲಿ ನೋಡುವ ಪರಿ ಕಂಡುಕೊಂಡರು. ಎಳೆಯ ವಯಸ್ಸಿನ ರಚನಾ ವಿಧಾನ ಆ ವಯಸ್ಸಿಗೇ ಬಿಟ್ಟುಹೋಯಿತು. ಸಂಸಾರ, ಸುತ್ತಮುತ್ತಲ ಜನರ ಜೀವನದ ರೀತಿಗಳನ್ನು ಹಾಸ್ಯದ ದೃಷ್ಟಿಯಲ್ಲೇ ನೋಡಿ ಬರೆಯಲಾರಂಭಿಸಿದರು. ಅದೇ ವೇಳೆಗೆ 'ಕೊರವಂಜಿ' ಇವರನ್ನು ಕರೆದು ಪೋಷಿಸಲಾರಂಭಿಸಿದಳು. 'ಕೊರವಂಜಿ' ಬಾಳಿದ ಇಪ್ಪತ್ತೈದು ವರ್ಷಗಳಲ್ಲೂ ಟಿ. ಸುನಂದಮ್ಮ ಅದರಲ್ಲಿ ತಪ್ಪದೇ ಬರೆದು 'ಕೊರವಂಜಿ ಸುನಂದಮ್ಮ' ನಾಗಿಬಿಟ್ಟರು (ಏಕೆಂದರೆ ಮತ್ತೊಬ್ಬ ಟಿ.ಸುನಂದಮ್ಮ ಶ್ರೀಮತಿ ಯಶೋಧರಾ ದಾಸಪ್ಪನವರ ಒಡನಾಡಿಯಾಗಿ ಅದೇ ಕಾಲದಲ್ಲಿ ಪ್ರಸಿದ್ಧರಾಗಿದ್ದರು. ಅವರು ರಾಜಕೀಯದಲ್ಲಿ ಹೆಸರು ಮಾಡಿದ ಗಾಂಧಿವಾದಿ).

ಕೊರವಂಜಿ ಕಾಡಿಗೆ ಹೋದರೂ 'ಕೊರವಂಜಿ ಸುನಂದಮ್ಮ' ತಮ್ಮ ಉಸಿರಿರುವತನಕ ಹಾಸ್ಯ ಸಾಹಿತ್ಯ ಒಂದನ್ನೇ ಬೆಳಸಿ, ಬೆಳಗಿದರು. ಹಾಸ್ಯ ಲೇಖನಗಳ ಜೊತೆಜೊತೆಗೆ ಹಾಸ್ಯಭರಿತ ನಾಟಕಗಳನ್ನು ಯಥೇಚ್ಛವಾಗಿ ಬರೆದರು. ಅವರ ಹಾಸ್ಯ ಕೃತಿಗಳನ್ನು ಮೊದಲಿಂದ ಕೊನೆಯ ತನಕ ಓದಿಬಿಟ್ಟರೆ ನಮ್ಮ ಸಮಾಜ ಹೇಗೆ ಬದಲಾಯಿಸುತ್ತ ಬರುತ್ತಿದೆ ಎಂಬುದರ ಸ್ಪಷ್ಟ ಚಿತ್ರಣ ತಿಳಿದುಹೋಗುತ್ತದೆ. 'ಮಳ್ಳಂಗಾಯಿ'ಯಿಂದ ಪ್ರಾರಂಭವಾದ ಅವರ ಕಾಲ 'ಪೀಟ್ಸಾ' ತನಕ, ಒಂಭತ್ತು ಗಜದ ಸೀರೆಯಿಂದ ಮಿನಿಸ್ಕರ್ಟ್ ತನಕ, ಲಾಯರ್ ಆಫೀಸಿನ ಕೊಟಕೊಟ 'ಟೈಪ್ ರೈಟರ್'ನಿಂದ 'ಇಂಟರ್ ನೆಟ್ ಜಾಲ' ಜಗತ್ತಿನವರೆಗಿನ ಎಲ್ಲ ಬದಲಾವಣೆಗಳನ್ನು ವಸ್ತುವಾಗಿ ನಾವು ಅವರ ಕೃತಿಗಳಲ್ಲಿ ಕಾಣಬಹುದು. ಮೊದಲ ಕವನ 'ಮಾರಪಿತನಕೊರಳೊಳು' ಎಂದು ಹಾಡಿದವರು ನಂತರ ಕೃತಿಯಲ್ಲಿ ಪಾಪ್' ಸಂಗೀತವನ್ನು ಹಾಡಿಸಿಬಿಟ್ಟರು. ಸಮಾಜದ ಅಂದಂದಿನ ದೃಶ್ಯ ತೋರುವ ದರ್ಪಣ ಇವರ ಕೃತಿಗಳು. ಕಾಲ ಬದಲಾದಂತೆ ವಿಷಯಗಳನ್ನು ಬದಲಾಯಿಸುತ್ತಾ ಹೋದರು. ಎಂಬತ್ತು ದಶಕಕ್ಕೂ ಮಿಕ್ಕಿ ಬಾಳಿದ ಸುನಂದಮ್ಮನವರು ವಿಷಯದ ಆಯ್ಕೆಯಲ್ಲಿ ಎಂದೂ ಮುದಿಯಾಗಲಿಲ್ಲ. ಹೊಸಹೊಸತನ್ನು ಗ್ರಹಿಸಿ, ಚಟುವಟಿಕೆಯಿಂದ ನಿತ್ಯ ನೂತನವಾಗಿಯೇ ಬಾಳಿದ್ದರು. ಸುಮಾರು ಆರೇಳು ದಶಕದ ಹಾಸ್ಯ ಸಾಹಿತ್ಯದಲ್ಲಿ ಅವರೆಂದೂ ಕೀಳಾದ

ಹಾಸ್ಯ ಮಾಡಲಿಲ್ಲ. ಯಾವ ಅವಹೇಳನ, ಅಸಹ್ಯ, ದ್ವಂದಾರ್ಥಗಳೂ ಅವರ ಹಾಸ್ಯದಲ್ಲಿರುತ್ತಿರಲಿಲ್ಲ. "ಹಾಸ್ಯದ ಒಳಪದರದಲ್ಲಿ ಗಾಂಭೀರ್ಯವಿರಬೇಕು" ಎಂಬುದು ಅವರ ಅಭಿಪ್ರಾಯವಾಗಿತ್ತು.

ಸುನಂದಮ್ಮನವರು ಸರಸೂ–ಮೈಲಾರಿಯರನ್ನು ಸೃಷ್ಟಿಸಿ ಅವರ ಮೂಲಕ ಕನ್ನಡದಲ್ಲಿ ಒಂದು ಹಾಸ್ಯದ ಬ್ರಹ್ಮಾಂಡವನ್ನೇ ತೆಗೆದಿಟ್ಟರು. !976ರಲ್ಲಿ, ಅವರೇ ಮೊದಲ ಅಧ್ಯಕ್ಷರಾಗಿದ್ದ 'ಕರ್ನಾಟಕ ಲೇಖಕಿಯರ ಸಂಘ'ದಲ್ಲಿ ಕೆಲ ವರ್ಷಗಳ ನಂತರ ಅವರ ಸಮಗ್ರ ಹಾಸ್ಯ ಸಾಹಿತ್ಯದ ಕೃತಿ ಬಿಡುಗಡೆಯಾಯಿತು. ಸಾವಿರದ ಇನ್ನೂರು ಪುಟಗಳ ಈ ಗ್ರಂಥ ಹಾಸ್ಯ ಸಾಹಿತ್ಯದ ಪ್ರಥಮ ಸಮಗ್ರ ಕೃತಿ. ಇದು ಹಾಸ್ಯ ಸಾಹಿತ್ಯಕ್ಕೊಂದು ಅಪೂರ್ವ ದಾಖಲೆ! ಈ ಪುಸ್ತಕದಲ್ಲಿ ನಾನು "ಸುನಂದಮ್ಮನವರ ಸೃಷ್ಟಿ–ಸರಸು" ಲೇಖನ ಬರೆದಿದ್ದೆ. ಇದೇ ಲೇಖನ 'ಸುನಂದಾಭಿನಂದನ' ಗ್ರಂಥಕ್ಕೂ ತೆಗೆದುಕೊಂಡರು. ಈ ಲೇಖನ ಜನಪ್ರಿಯತೆ ಪಡೆಯಲು ಕಾರಣವೆಂದರೆ ಅದರಲ್ಲಿ ಸರಸೂ, ಮೈಲಾರಿ ಪಾತ್ರದ ಐವತ್ತು ವರ್ಷದ ಬೆಳವಣಿಗೆಯನ್ನೆಲ್ಲಾ ತೋರಿಸಿದ್ದೆ. ಈ ಲೇಖನ ಶ್ರೀಮತಿ ಸುನಂದಮ್ಮನವರಿಗೂ ಬಹಳ ಮೆಚ್ಚಿಗೆಯಾಗಿತ್ತು. ಅದಕ್ಕೇ ಇಲ್ಲಿ ಆ ಲೇಖನವನ್ನು ಮತ್ತೊಮ್ಮೆ ಕೊಡುತ್ತಿದ್ದೇನೆ. ಇದನ್ನು ಓದಿದಾಗ ಚುಟುಕಿನಲ್ಲೇ ನೀವು ಸರಸೂ–ಮೈಲಾರಿಯರನ್ನು ಅರಿತಂತಾಗುತ್ತದೆ!

ಇದೋ ನೋಡಿ, ಸುನಂದಮ್ಮನ ಸೃಷ್ಟಿ 'ಸರಸು' – "ಬೆಳಗಿನ ಜಾವ ರಾತ್ರಿ ಯಾವ ನೆನಪಿನಲ್ಲಿ ಮಲಗಿದ್ನೊ, ಕನಸಿನಲ್ಲಿ 'ಕೊರವಂಜಿ' ಕಾಡಿನಿಂದ ಊರಿಗೆ ಬರುತ್ತಿದ್ದಾಳೆ". ಸೊರಕ್‌ಗಂಟು, ಕುತ್ತಿಗೆಗೆ ಮಣಿಹಾರ, ಕಾಲಿಗೆ ಕೊಡುಬಳೆ, ಕಿವಿಗೆ ಉಂಗುರ ಹಾಕಿಕೊಂಡು, ಡೇರೆಯಂಥ ಲಂಗದ ಮೇಲೆ ದುಪ್ಪಟ ಹೊದ್ದುಕೊಂಡು ಅವಳು ನಿಜಕ್ಕೂ ಬರ್‍ತಿದ್ದಾಳೆ! ಎಡಗೈಲೇನೊ ಅವಳ ಮಗುವೇ ಎಂದಿನಂತಿದೆ. ಮತ್ತೊಂದು ಕೈ ನೋಡ್ತೀನಿ; ಸರಸು! ಗೌರಮ್ಮ ಸೃಷ್ಟಿಸಿದ ಗಣೇಶನ ಹಾಗೆ ನಮ್ಮ ಸುನಂದಮ್ಮ ಸೃಷ್ಟಿಸಿದ ಸರಸು!.

ಅದೇನು ಭ್ರಮೆಯೋ!... ಕಣ್ತುಂಬಿದ್ದ ಕೊರವಂಜಿ ಇದ್ದಕ್ಕಿದ್ದ ಹಾಗೇ ಬಿಳಿಯಾದಳು... ಸುತ್ತಾ ಬಿಳಿ ಹೊಗೆ.. ನೋಡುತ್ತಿದ್ದ ಹಾಗೇ ಆ ಹೊಗೇಲಿ ಅದೃಶ್ಯವಾಗೇ ಬಿಟ್ಟು ನಗುನಗುತ್ತಾ.

ಸರಸೂ ಮಾತ್ರ ಕ್ಷಣ ಕ್ಷಣಕ್ಕೆ ಗಾತ್ರದಲ್ಲಿ ದೊಡ್ಡದಾಗುತ್ತಾ ಬಂದುಬಿಟ್ಟು ಮೊದಲು ಮನೆತುಂಬಿ, ನಂತರ ಬೀದಿ ತುಂಬಿ, ಆ ಮೇಲೆ ನಾಡನ್ನೆಲ್ಲಾ ತುಂಬಿ ನಿಂತಿದ್ದಾಳಲ್ಲ ಈ ಬಿನ್ನಾಣಗಿತ್ತಿ! ಗಂಡನ್ನ ಪೆದ್ದ, ತಾನೇ ಅತೀ ಮೇಧಾವಂತೆ ಅಂತ ತಿಳಿದಿರೊ ಮಹಾತ್ವಾಕಾಂಕ್ಷೆಯ ಸಮಯ ಸ್ಫೂರ್ತಿಯ ಸರಸು! – ಸರಸೂನಂತಹ ಮಧ್ಯಮ ವರ್ಗದ ಗೃಹಿಣಿ ನಿಮಗೆಲ್ಲಾದರೂ ಸಿಕ್ಕಿದ್ದಾಳೆಯೆ?

ಸರಸೂ ಸಾಹಿತಿ, ಅವಳು ಸಮಾಜ ಸುಧಾರಕಿ, ಪುಳ್ಳಂಗಾಯಿ ಉಂಡೆ, ಚಕ್ಕುಲಿ, ಹುರಿಗಾಳು, ಕುಸುರೆಳ್ಳು, ಹೆಸರುಕಾಳು ಕುರುಕಲನ್ನು ಗಂಡ ಮೈಲಾರಯ್ಯನಿಗೆ ತಿನ್ನಿಸಿ, ತಿನ್ನಿಸಿ, ಅವನಲ್ಲಿ ರಾತ್ರಿ ನಕ್ಷತ್ರದಂತೆ– ಅಂದರೆ ರಾತ್ರಿಯಾಯಿತೆಂದರೆ ಹೊರ ಬರುವ, 'ಕೃತಕ ದಂತ'ವಾಗಿಸಿದ ಮಡದಿ ಇವಳು!

ನಮ್ಮ ಸರಸೂಗೆ ನಾನು ನೋಡಿದಾಗ ಇನ್ನೂ ಇಪ್ಪತ್ತು ವರ್ಷ. ಹುಡ್ಕಿ ಹುಡ್ಕಿ, ಸರಸ್ವತಿ ದ್ವೇಷಿ ಸರಸೂನ್ನೇ ಆರಿಸಿ ಮದ್ವೆ ಆದ ಅವಳ ಗಂಡ. ಆದರೆ ಅವನದ್ದೇನು ದುರಾದೃಷ್ಟವೊ, ಮನೆಗೆ ಕಾಲಿಡುತ್ತಿದ್ದ ಹಾಗೇ ಆರಂಭಿಸಿ ಬಿಟ್ಟಳು ಸರಸೂ ಸರಸ್ವತಿ ಸೇವೇನ! ಗಂಡ ಟೂರ್ ಹೋಗಿದ್ದಾಗ ಹೊತ್ತು ಕಳೆಯೋಕೆ ಅಂತ ತನ್ನ ಮಧುಚಂದ್ರದ ಅನುಭವಗಳನ್ನೆಲ್ಲಾ ಅರ್ಥಾತ್ ಭಟ್ಟಿ ಇಳ್ಸಿ ಒಂದೇ ವಾರದಲ್ಲಿ ಒಂದು ಕಾದಂಬರಿ ಬರ್‍ದು, ಮುದ್ರಿಸಿ, ಎಂಟೇ ದಿನದಲ್ಲಿ ಎರಡು ಸಾವಿರ ಪ್ರತಿ ಮುಗಿಸಿ ಪುನರ್‌ಮುದ್ರಣ ಮಾಡಿದ್ದಲ್ದೆ, ಅದನ್ನಾಗಲೇ ಸಿನಿಮಾಗೂ ಕೊಟ್ಟು, ಆರು ಭಾಷೆಗಳಲ್ಲಿ ಅನುವಾದಿಸಲಿಕ್ಕೆ ಅನುಮತಿ ಸಹ ಕೊಟ್ಟು ಆಗಿಬಿಟ್ಟಿತ್ತು.

ಉಬ್ಬಿಹೋದ ಅವಳಿಗೆ ಒಂದೇ ವಾರದಲ್ಲಿ ಕಾದಂಬರೀಲಿ ಸ್ಫೂರ್ತಿ ಎಲ್ಲಾ ಬತ್ತಿ ಹೋದಾಗ, ಪ್ರಕಾಶಕರು ಬೇರೆ ಮೇಲಿಂದ ಮೇಲೆ ಕೃತಿಗಳಿಗಾಗಿ ಅವಳನ್ನ ಪೀಡಿಸ್ತಾರೆ. ಸರಸೂಗೆ ಬಿಕ್ಕಿ ಬಿಕ್ಕಿ ಅಳೋ ಹಾಗೆ ಆಗುತ್ತೆ. ಆಗ ಗಂಡ ಅವಳಿಗೆ ಸಮಾಧಾನ ಹೇಳ್ತಾನೆ, 'ಆದ್ಯಾಕೆ ಯೋಚ್ನೆ?.......ಓದ್ತಿದ್ದಾಗ ನಾನು ಒಂದಿಷ್ಟು ಗೀಚಿದ್ದೆ. ಎಲ್ಲಾ ಸಂಪಾದಕರಿಂದ್ಲೂ ಹಿಂದಿರುಗಿ ಬಂದಾಗ ಎಲ್ಲಾನೂ ಕೂಡ್ಸಿ ಅಟ್ಟದ ಮೇಲೆ ಜಾಯಿಕಾಯಿ ಪೆಟ್ಗೇಲಿ ಇಟ್ಟಿದ್ದೇನೆ. ಅದನ್ನೇ ನಿನ್ನ ಹೆಸ್ರು ಹಾಕ್ಸಿ ಕಳ್ಸಿಬಿಡು........ಒಂದೊಂದಾಗಿ.......'

ಈಗ ಅವಳ ಹೆಸರು ಹಾಕಿ ಎಂಥಾ ಲೇಖನ ಬರದ್ರೂ ಅಚ್ಚಾಗೇ ಆಗುತ್ತೆ ಅನ್ನೋ ಭರವಸೆ ಆತನಿಗೆ!

ಸರಸೂ ಅನುಮಾನಿಸ್ತಾಳೆ, 'ಆದ್ರೆ ಬರೆದೋರು ನೀವು!.........ಹೆಸ್ರು ನಂದೇ.......'

'ಬರ್ದ ಕೈ ಯಾವ್ದಾದ್ರೇನು ಸರ್ಸು!.... ಮುಕ್ಕಿಸೋ ಮಣ್ಣು ಮುಖ್ಯ ಅಷ್ಟೆ!......' ಎಂದು ಹುಮ್ಮಸ್ಸು ಕೊಟ್ಟ!

ಅದರೂ ಮೋಡ ಕ್ರಮೇಣ ಕವಿದು ಬಿತ್ತು. ಬರುಬರುತ್ತಾ ಅವಳ ಸಾಹಿತ್ಯ ಸೇವೆಯಿಂದಾಗಿ ಉಪಯೋಗ ಪಡೆಯತೊಡಗಿದವರೆಂದರೆ ಪೇಪರ್ ಅಂಗಡಿಯವರು, ಕಳಿಸಿದ ಕೃತಿ ವಾಪಸ್ಸು ಮಾಡೊ ಅಂಚೆ ಕಛೇರಿಯವ್ರು ಮತ್ತು ಕಾಫಿ ಒಲೆ!

ಮೋಡ ಕೂಡ ಸದಾ ಇರಲು ಸಾಧ್ಯವೇ? ಪುನಃ ಬೆಳಗಿ ಬಂತು ಪ್ರಕಾಶ. ಅವಳ 'ಹಾವಿನ ಸಾವು', 'ಉದುರಿದ ಹಲ್ಲು' 'ಬರೆಯಿಕ್ಕಿದ ಬಾಣಲೆ' ಮುಂತಾದವು ಜನಮತದಲ್ಲಿ ಪ್ರಕಾಶಗೊಂಡೇ ಬಿಟ್ಟವು. ಆ ಪತ್ರಿಕೆಯವರೇ ಸತ್ಕಾರ ಕೂಟವೊಂದಕ್ಕೆ ಸರಸೂನ್ನ ಆಹ್ವಾನಿಸಿದಾಗ, ಗ್ರೂಪ್ ಫೋಟೊ ತೆಕ್ಕೊಂಡಾಗ, ಸರಸು ಹಿಗ್ಗಿಬಿಟ್ಟಳು. ಹೊರಡೊ ಸಮಯದಲ್ಲಿ ಮಾತ್ರಾ ಮತ್ತೊಬ್ಬನನ್ನು ಸಂಪಾದಕರು ಸರಸೂ ಬಳಿ ಕರೆತಂದು, "ಇವ್ರು 'ಆಸ್ಟ್ರೋ' (ತಲೆನೋವಿನ) ಮಾತ್ರೆ ಕಂಪನಿಯೋರು, ನಿಮ್ಮ ಲೇಖನ ನಮ್ಮ ಪತ್ರಿಕೇಲಿ ಬಂದಷ್ಟು ದಿನದಿಂದ ಇವರ ವ್ಯಾಪಾರ ಕುದುರಿತಂತೆ... ಅವ್ರೇ ಆ ಸಂತೋಷಕ್ಕಾಗಿ ಈ ಸತ್ಕಾರ ಸಮಾರಂಭ ನಿಮ್ಮಂಥಾ ಲೇಖಕಿಯರಿಗಾಗಿ ಏರ್ಪಡಿಸಿದ್ದಾರೆ..." ಎಂದಾಗ, ಪಾಪ ನಮ್ಮ ಸರಸೂ ಹಿಗ್ಗಿದ್ದ ಮುಖ ಹೇಗಾಗಿದ್ದಿರಬೇಕು!.

ಆದ್ರೆ ಸರಸೂ ಉತ್ಸಾಹದ ಸೆಲೆ, ಸಾಹಿತ್ಯ ಒಂದರಲ್ಲೇ ಬತ್ತೋ ಅಂತಹದ್ದಲ್ಲ. ಮೂರು ಮಕ್ಕಳು ಆಗೋ ಹೊತ್ತಿಗೆ ಸಮಾಜಸೇವೆ ಮಾಡೋದ್ರಲ್ಲೆ ತನ್ನ ಉತ್ಸಾಹ ಹರಿಸಿದ್ದು. ಅವ್ಳಿದ್ದ ಕುಂಬ್ಳೂರಿನಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳ ಹೆಂಡತಿಯರು ಸಮಾಜ ಸೇವೆನೆಲ್ಲಾ ಹೊತ್‌ಕೊಂಡು ಬಿಟ್ಟಿದ್ರಿಂದ ಸರಸೂ ಕಿರಿಯೂರಿಗೆ ವರ್ಗ ಆಗೋದನ್ನೇ ಕಾದಿದ್ದು, ಆ ಸಣ್ಣೂರಿಗೆಲ್ಲಾ ಅವ್ಳ ಯಜಮಾನ್ರೇ ಮೇಲಾಧಿಕಾರಿಯಾದದ್ರಿಂದ ಭರದಿಂದ ಸಮಾಜ ಸೇವೆ ಆರಂಭಿಸಿಯೇ ಬಿಡ್ತಾಳೆ ಶೇಖಧಾರಿಣಿ–ಶಿರಸ್ತೇಧಾರಿಣಿ ನೆರವು ತೆಗೆದುಕೊಂಡು. ಎಲ್ಲರೂ ತನ್ನ ಚುರುಕುತನ ಕಂಡು ಮೂಗಿನ ಮೇಲೆ ಬೆರಳಿಟ್ಟು ಕೊಂಡಾಗ ಮೂಗು ಅಂತರಿಕ್ಷಕ್ಕೆ ಏರಿಸಿ ನಿಲ್ಲಬೇಕೆಂಬ ಬಯಕೆ ಅವಳಿಗೆ ಸದಾ. ಸರಕಾರಿ ಜೀಪು ತೆಗೆದುಕೊಂಡು ಸುತ್ತಮುತ್ತ ಹಳ್ಳಿಗಳಲ್ಲೆಲ್ಲಾ ಸುತ್ತಿ ಮಕ್ಕಳನ್ನು ಹಿಡಿದು ಮಿಾಯಿಸೋದು, ಹೆಂಗಸರ ಬಟ್ಟೆ ಶುಭ್ರವಾಗಿ ಒಗೆದುಕೊಡೋದು, ತಾಯಂದಿರಿಗೆ ಮಕ್ಕಳಿಗೆ ವಿದ್ಯಾದಾನ ಮಾಡೋದು... ಇತ್ಯಾದಿ ಇತ್ಯಾದಿ.

ಕೊನೆಗೆ ಒಂದು ತಿಂಗಳು ಕಳೆಯೋದ್ರಲ್ಲಿ ಜೀಪು ಕೆಲವು ದಿನ ಕೆಟ್ಟುಹೋದದ್ದಕ್ಕೆ ಅತ್ತ ಕಡೆ ಹೋಗಲಾಗಲಿಲ್ಲ. ಪುನಃ ಹೋದಾಗ ಮೂವತ್ತೈದು ಮಣ್ಣು ಮೆತ್ತಿದ ಮಕ್ಕಳು, ಗೂಡೆಗೂಡೆ ಕೊಳೆ ಬಟ್ಟೆಗಳು ಅವಳಿಗಾಗಿ ಕಾದು ನಿಂತಿದ್ದವು!. 'ನೀವೇ ಏಕೆ ಬಟ್ಟೆ ಒಗೀಲಿಲ್ಲ, ಮಕ್ಕಳಿಗೆ ಸ್ನಾನ ಮಾಡಿಸಿಲ್ಲ?'– ಎಂದು ಕೇಳಿದ್ದಕ್ಕೆ ಆ ತಾಯಂದ್ರು, 'ಭಾವಿಲಿ ನೀರು ಯಾರು ಸೇತ್ತಾರೆ? ಸಾಬೂನೇನು ಬಿಟ್ಟಿ ಬರುತ್ತಾ' ಎಂದು ಸುತ್ತಿಕೊಂಡು ಬಿಟ್ಟರು! ಸುಸ್ತಾಗಿ ಮನೆ ಸೇರಿದಾಗ ಮನೇಲಿ ಮೂರೂ ಮಕ್ಕಳು ಫೇಲಾದ ರಿಸಲ್ಟ್ ಬಂದಿತ್ತು!.

ಸರಸೂ ಊರ ಮಕ್ಕಳಿಗೆಲ್ಲಾ ವಿದ್ಯಾಭ್ಯಾಸ ಹೇಳಿಕೊಡೋ ಗಲಾಟೇಲಿ ತನ್ನ ಮಕ್ಕಳಿಗೆ ಬೇರೆ ಮೇಷ್ಟ್ರನ್ನಿಟ್ಟು ಪಾಠ ಹೇಳಿಸಿದ್ದರ ಫಲ! ಅಷ್ಟು ಸಾಲದೆ, ಕೆಲಸದೋಳೇ ಮೈತೋಳೀತಿದ್ರಿಂದ ಮಕ್ಕಳ ಮೈ ಮೇಲೆಲ್ಲಾ ಕಜ್ಜಿ ಬೇರೆ!.

ಮಧ್ಯಮ ತರಗತಿ ಈ ಗೃಹಿಣಿಗೆ ತಾಪತ್ರಯಗಳು, ಸಮಸ್ಯೆಗಳು ಒಂದೇ ಎರಡೆ?! ಅವ್ರೆಂತಹ ಸಾಹಿತ್ಯ ಸೇವೆ ಸಮಾಜ ಸೇವೆ ಮಾಡಿದ್ರೂ ನೆರೆಹೊರೆಯ ತಾಪತ್ರಯ ಅವ್ರಿಗೆ ತಪ್ಪುತ್ಯೆ? ನೆರೆಮನೆ ಹುಡ್ಗೀಗೆ ಮದುವೆ ಎಂದಾಗ ಹುಡುಗೀಗೆ ಉಡುಗೊರೆ ಕೊಡ್ಬೇಕೆ ಬೇಡ್ವೆ! ಎಂದು ಗಂಡ ಮೈಲಾರಿಗೂ ಸರಸೂಗೂ ವಾಗ್‌ಯುದ್ಧ ನಡೆಯಿತು. ಇಬ್ಬರಿಗೂ ಉಡುಗೊರೆ ಕೊಡುವ ಮನಸ್ಸು ಇರಲಿಲ್ಲ. ಆದ್ರೂ, ಕೊಡದಿದ್ರೆ ಚೆನ್ನಾಗಿರೊಲ್ಲ ಅನ್ನೋದೂ ಅವ್ರಿಗೆ ಗೊತ್ತು! ಹಾಗಾದ್ರೆ ಏನು ಕೊಡೋಣ? ಕನ್ನಡಿ ಕೊಡೋಣ ಅಂದ್ರೆ ಕನ್ಯೆ ಮುಖದ ತುಂಬಾ ಇದ್ದ ಸಿಡುಬಿನ ಕಲೇನ ಮದ್ವೆ ಸಮಯದಲ್ಲೂ ನೆನಪಿಸಿಕೊಡಬೇಕೆ ಎಂದುಕೊಂಡಾಗ, ಎಲಕ್ಟ್ರಿಕ್ ಕಂಬ ಕೊಡೋಣ ಅಂದ್ಕೊಂಡ್ರು, ಆದ್ರೆ ಮದ್ವೆ ಗಂಡು ಇದ್ದ ಎಲೆಕ್ಯಾತನ ಪುರದಲ್ಲಿ ಎಲಕ್ಟ್ರಿಸಿಟಿನೇ ಇಲ್ಲದ್ದು ನೆನಪಾಗುತ್ತದೆ. ಹೋಗಲಿ ಸ್ಟೈಯಿನ್ ಲೆಸ್ ಸ್ಟೀಲ್ ಪಾತ್ರೆ ಅಂದ್ರೆ, ನೆರೆ ಮನೆಯವ್ರಿಗೆ ತಕ್ಷಣ ಗೊತ್ತಾಗಿ ಬಿಡುತ್ತೆ ಅದು, ಮೈಲಾರಿ ಹಳೇ ಹರುಕಲು ಪ್ಯಾಂಟ್‌ಗಳನ್ನು ಕೊಟ್ಟು ಹಳೇ ಬಾಗಿನ ಕಂಬೀಲಿ ತಗೊಂಡ ಪಾತ್ರೆ ಅನ್ನೋದು! ಅದೂ ಚೆನ್ನಾಗಿರೊಲ್ಲ. ದಂತದ ಬಾಚಣಿಗೆ ಅಂದ್ರೆ ಆ ಚೌರಿಧಾರಿ ಹುಡುಗೀನ್ ಅವಮಾನ ಪಡಿಸ್ದ ಹಾಗಾಗುತ್ತೆ. ಅದೆಲ್ಲಾ ಬೇಡ್ವೇಬೇಡ. ಉಡುಗೊರೆ ಉಳಿತಾಯ ಮಾಡೋದೇ ಉಪಾಯ ಅಂತ ಲಗ್ನದ ದಿನ ಆ ಊರಲ್ಲಿರದ ಹಾಗೆ ಮೈಲಾರಿ ಜೊತೇಲಿ ತೌರೂರಿಗೆ ಆನಂದವಾಗಿ ಹೋಗಿ ಇದ್ದು ಬರ್ತಾಳೆ. ಆದ್ರೆ ಅವಳ ದುರಾದೃಷ್ಟ... ಬಂದೊಡನೆಯೇ ಹುಡ್ಗೀ ತಾಯಿ ಬಂದು, ಮದ್ವೇನ ಮುಂದಿನ ತಿಂಗ್ಳ ಮೂರ್ನೆ ತಾರೀಖಿಗೆ ಮುಂದೂಡಿದ್ವಿ... ಆ ವರನ ಕಡೆ ಯಾವ್ದೋ ಮುದ್ಕಿ ಗೊಟಕ್ ಅಂತೂ'–ಅನ್ನಬೇಕೆ!

ಹೀಗೆ ತಿರುಗುಬಾಣಗಳು ಸರಸೂಗೆ ಬಿದ್ದದ್ದು ಎಷ್ಟೋ ಇವೆ. ಸರಸೂ ಒಬ್ಬಳಿಗೇ ಏನು, ಅವಳ ಕೈ ಹಿಡ್ಡಿದ್ದ 'ಕೊರವಂಜಿ'ಗೇ ಒಮ್ಮೆ ಬಿದ್ಬಿಟ್ಟು!

ಸುನಂದಮ್ಮನವರು 'ಹೆಸ್ರಲ್ಲೇನಿದೆ?' ಅನ್ನೋ ಲೇಖನ ಬರೆದಿದ್ದು ಅರವತ್ತೇಳರ ಮಾರ್ಚ್‌ನಲ್ಲಿ. ತಲೆಬರಹಕ್ಕೆ ತಕ್ಕಂತೆ ಅಚ್ಚಾದ ಲೇಖನದ ಅಡಿಯಲ್ಲಿ ಅಕಸ್ಮಾತ್ತಾಗಿ ಲೇಖಕಿಯ ಹೆಸರೇ ಬಿಟ್ಟುಹೋಯಿತು. 'ಹೆಸರಲ್ಲೇನಿದೇಂತಾ ನಿನ್ನ ಹೆಸರೇ ಹಾಕ್ದೇ ಹೋದ್ರೇನೆ!...' ಎಂದು ಗೆಳತಿಯರೇ ಚುಡಾಯಿಸಿದಾಗ ನಮ್ಮ ಹೆಸರಾಂತ ಹಾಸ್ಯ ಲೇಖಕಿ ಕೆರಳಿದರು. ಹೊಡೆದರು ಮತ್ತೊಂದು ತಿರುಗುಬಾಣ, ಊರಲ್ಲೇ ಇದ್ದ 'ಕೊರವಂಜಿಗೆ'. ತಮಗಾದ ಅನುಭವದ್ದೇ ಬಾಣವಾಗಿಸಿ 'ಸರಸೂ'ನ್ನೇ ಎಂದಿನಂತೆ ಮುಂದಿಟ್ಟುಕೊಂಡು ಬಿಟ್ಟೇಬಿಟ್ಟರು ಇನ್ನಷ್ಟು ಬಾಣಗಳನ್ನ! ಅದರಲ್ಲಿ ಹೀಗೆ ಬರುತ್ತೆ; ಆಹಾರ ಪಧಾರ್ಥಗಳ ದುಂದು, ಹಬ್ಬದ ಆಡಂಬರ, ಹನ್ನೆರಡು ಬಗೆ ಊಟ, ಇದನ್ನೆಲ್ಲಾ ಖಂಡಿಸಿ ಸರಳ ಹಬ್ಬಗಳ ಬಗ್ಗೆ ಭಾಷಣ ಬಿಗೀತಿದ್ದ ಗಂಡ ಮೈಲಾರಯ್ಯನಿಗೇ ಉಗಾದಿ ದಿನ ಬೆಲ್ಲದ ನೀರು – ಬೇವಿನ ಸೊಪ್ಪಿನ ತಿಳೀಸಾರು ಇದ್ರಲ್ಲೇ ಹಬ್ಬದೂಟ ಮುಗಿಸಿದಾಗ ಅವ್ನು ಮೆಚ್ಚಿ "ಪರ್ವಾಗಿಲ್ಲ, ನನ್ನ ಬುದ್ಧಿವಾದಾನ ಚನ್ನಾಗಿ ಅನುಸರಿಸ್ದೆ.." ಎಂದು ಬೀಗಿದ. ಉಂಡು ಮಂಚದ ಮೇಲೆ ಮಗ್ಗುಲಾಗೊ ವೇಳೆಗೆ ಕೊನೇ ಹುಡ್ಗಿ ಪದ್ದಿ, 'ಡರ್ರ್' ಎಂದು ತೇಗಿದಾಗ ಮೈಲಾರಯ್ಯ 'ಏನೇ ಪದ್ದೀ, ಬೆಲ್ಲದ ಪಾಯಸ ತಿಳಿಸಾರನ್ನ ತಿಂದಿದ್ದಕ್ಕೆ ಹೊಟ್ಟೆ ಭಾರ ಆಯ್ತೆ?' ಎಂದಾಗ ಆ ಮೂರು ವರ್ಷದ ಪದ್ದಿ, 'ಬೆಲ್ಲದ ಪಾಯ್ಸಾನಾ?.... ಒಬ್ಬಟ್ಟು, ಚಿತ್ರಾನ್ನ, ಕೋಚಂಬ್ರಿ, ಪಲ್ಲ..ಎಲ್ಲ ತಿನ್ಲಿಲ್ಲಾ?' ಎಂದಿತು. ಪೆಚ್ಚಾದ ಮೈಲಾರಯ್ಯ ನೋಡಿದಾಗ ನಾಲ್ಕು ಕಂಠಗಳು ಮುಸಿ ಮುಸಿ ನಕ್ಕ ಸದ್ದು ಕೇಳಿಸಿತು. ಅದು ಸರಸೂ ಮೈಲಾರಯ್ಯನಿಗೆ ಹೊಡೆದ ತಿರುಗುಬಾಣ. ಇದೇ ರೀತಿ ಮೂರ್ನಾಕು ಬಾಣಗಳು ಅಪರೋಕ್ಷವಾಗಿ ಆ ಲೇಖನದಲ್ಲಿ ಬಂದು ಚುಚ್ಚಿದಾಗ 'ಕೊರವಂಜಿ' ಎಚ್ಚೆತ್ತಳು. ಅರವತ್ತಾರನೇ ಇಸವಿ ಆ ಏಪ್ರಿಲ್ 'ಕೊರವಂಜಿ'ಯ ಈ 'ತಿರುಗುಬಾಣ' ಲೇಖನದ ಅಡಿಯಲ್ಲಿ ಸಂಪಾದಕರಿಂದ ವಿ.ಸೂ. ಹೀಗಿದ್ದಿತ್ತು. (ಪ್ರಮಾದ ದೋಷದಿಂದ ಹೋದ ತಿಂಗಳ 'ಹೆಸರಲ್ಲೇನಿದೆ?" ಲೇಖನದಲ್ಲಿ ಲೇಖಕಿಯ ಹೆಸರೇ ಮಾಯವಾಗಿತ್ತು. ಆದರೆ ಸಹೃದಯಿ ಲೇಖಕಿ ಅಪರಾಧವನ್ನು ಮನ್ನಿಸಿ, ಆ ವಿಷಯವನ್ನೇ ಆರಿಸಿಕೊಂಡು ಹಾಸ್ಯವಾಗಿ ನಗೆಯಾಡಿದ್ದಾರೆ. ನಮ್ಮ ದೋಷ

ಈ ರೀತಿ ಪ್ರತಿಭಾವಂತರನ್ನು ಕೆಣಕಿದ್ದೂ ಒಳ್ಳೆಯದಾಯಿತು– ಒಳ್ಳೆ ಲೇಖನ ದೊರೆಯಿತು–ಸಂ.) ಅವರೂ ಸಹೃದಯ ಸಂಪಾದಕರೇ.

ಇಂಥಾ ಸೃಷ್ಟಿ ದೈವವನ್ನು ಪಡೆದಿದ್ದ ಸರಸೂಗೆ ಕಾಡುವ ಅತ್ತೆ–ಕೊತ್ತಿ ಇರಲಿಲ್ಲ. ಆದ್ರೂ ಈಗ ಭಾರಿ ಸಂಸಾರ ಆಗಿ ಹೋಯ್ತು. ಮೈಲಾರಯ್ಯ ಮತ್ತು ಮಕ್ಕಳಾದ ಅ–ಆ–ಇ–ಈ–ಉ–ಊ (ಅಂದರೆ ಅನಂತ, ಆನಂದ, ಆರತಿ, ಇಳಾ, ಈಶ್ವರಿ, ಉಷಾ, ಊರ್ಮಿಳಾ) ಇಂಥಾ ಸಂಸಾರಾನ ನಿಭಾಯಿಸೋದು ಜೊತೆಗೆ ಸಮಾಜ ಸೇವೆನೂ ಮಾಡ್ತಿದ್ಲೂಂದ್ರೆ, ಅವಳ ಜಾಣತನ ಎಷ್ಟಿರಬಹುದು ನೋಡಿ!. ಇಂಥಾ ಜಾಣೆ ಸರಸು ತನ್ನ ಅತೀ ಜಾಣತನದಿಂದ ಎಷ್ಟೋ ಬಾರಿ ಹೀಗೇ ಪೆದ್ದಾಗಿಯೂ ಬಿಡ್ತಾಳೆ. ಹಬ್ಬ, ಸಮಾರಂಭಗಳಲ್ಲಿ ಮಿಕ್ಕ ತಿಂಗಳು ಶೇಖರಿಸಿ ಬಡವರಿಗೆ ಹಂಚೋದೂ ಅನ್ನೋ ಉದ್ಧಾರದ ಐಡಿಯಾ ಒಂದು ಅವಳ ತಲೇಲಿ ಹೊಳೆಯಿತು. ಬಡಾವಣೇಲೆಲ್ಲಾ ಎಲ್ರಿಗೂ ಹೇಳಿದಳು. ಉಗಾದಿ ಹಬ್ಬ ಬಂತು–ಎಲ್ರಿಂದ್ಲೂ ಪತ್ರಾನೂ ಬಂತು. "ಹಬ್ಬದ ಉಳಿದ ಪದಾರ್ಥ ನಿಮ್ಮ ಮನೆಗೇ ತಂದಿಡ್ತೇವೆ" ಅಂತ ಸರಸೂ ಹಿಗ್ಗಿದಳು. ಕೊನೆಗೆ ಮನೆಗೆ ಬಂದದ್ದು ಬೆಲ್ಲ ಖರ್ಚಾಗಿ ಉಳಿದ ಬೇವು ತುಂಬಿದ ಬಟ್ಟಲುಗಳು!

ಮತ್ತೊಂದ್ಸಲ ಅವ್ರು ಸಮಾಜ ಸೇವೆಗೆ ಸೊಂಟದ ಸುತ್ತೂ ಸೆರಗು ಬಿಗಿದು ನಿಲ್ತಾಳೆ. ಗಲ್ಲಿ–ಗತಾರದವರೆಲ್ಲ ರೋತೆ ಮಕ್ಳು, ಮುದ್ಕೀರ್ಗೆ ಸಹಾಯ ಮಾಡ್ತಿದಾಗ, ಧಿಡೀರ್ನೆ ಒಂದಿನ ಮಿರಮಿರ ಮಿಂಚೊ ಅಂಬಾಸಿಡರ್ ಕಾರು ಬಂದು ಮನೆಮುಂದೆ ನಿಲ್ಲುತ್ತೆ. ಮಿಸೆಸ್ ದಿವಾಕರ ಈ ಸರಸವ್ನೋರ್ನ "ಬಿಹಾರ ಕ್ಷಾಮ ನಿವಾರಣಾ" ನಿಧಿಗೆ ಗೋಧಿ–ಬಟ್ಟೆ–ಹಿಟ್ಟು ಇತ್ಯಾದಿ ಸಂಗ್ರಹಿಸಿಸಲು ಒಳ್ಳೆ ಯಜಮಾನಿಕೆ ಒಪ್ಪಿಸಿ ಹೋಗ್ತಾರೆ. ತನ್ನ ಸಮಾಜಕಾರ್ಯ ಇಷ್ಟು ಮೇಲ್ದರ್ಜೆಗೆ ಮುಟ್ಟಿ ತಾನೂ ಅವರ ಸಾಲ್ನಲ್ಲೇ ನಿಂತ್ನಲ್ಲಾ ಎಂದು ಸರಸೂಗೆ ಹೆಮ್ಮೆ!....

ತಾನು ಕಷ್ಟಪಟ್ಟು ಇಷ್ಟು ಸಂಗ್ರಹಣೆ ಮಾಡಿದ್ದೂ ಸಾರ್ಥಕವಾಗಿ ಪೇಪರ್ನಲ್ಲಿ ತನ್ನ ಫೋಟೊ ಬರುತ್ತೇಂತ ಸರಸೂ ಸ್ವರ್ಗದಲ್ಲೇ ವಿಹರಿಸಿದ್ಳು. ಮಾರನೇ ದಿನ ಕಾತರತೆಯಿಂದ ಪೇಪರ್ ನೋಡಿದಾಗ ಅದ್ರಲ್ಲಿ ಮಂತ್ರಿ, ಮಿಸಸ್ ದಿವಾಕರ್ ಫೋಟೋನೇ ಇತ್ತು. ಆದ್ರೆ, ಸರಸೂ ಬಲಗಿವಿ, ಸೆರಗಿನ ಕೊನೆಯ ಅರ್ಧ ಮೀಟರ್ ಮತ್ತು ಬಲಗೈ ಮೂರು ಬೆರಳುಗಳು ಮಾತ್ರ ಬಿದ್ದಿತ್ತು!.

ಎಲ್ಲಾ ಪ್ರಯೋಗಗಳನ್ನೂ ಮುಗಿಸಿಯಾದ ಮೇಲೆ ಇನ್ನೂ ಒಂದು ಮಹದಾಸೆಯನ್ನು ಅವಳು ಪೂರೈಸಿಕೊಳ್ಳುವುದು ಬಾಕಿ ಇತ್ತು!. ಅದು ಸನ್ಮಾನಿಸಿಕೊಳ್ಳುವುದು!! – ಅದಕ್ಕೂ ಕಾಲ ಬರಿಸಿಕೊಂಡಳು. 'ಸಹೃದಯ ಸನ್ಮಾನ ಸಭೆ' ಯವರು ಗೌರವಾರ್ಥ ಸಮಾರಂಭಕ್ಕೆ ಸರಸೂನ ಮನೆಗೆ ಬಂದು ಕರ್ದೇ ಬಿಡ್ತಾರೆ. ಸನ್ಮಾನದ ಹಿಂದಿನ ದಿನ ಆತಿಥ್ಯ ಮಾಡಬಯಸುವವರು ಶಾಲಿಗೆ ಮಾತ್ರ ಮೈಲಾರಯ್ಯನನ್ನೇ ಬೇಡಿ, ಅವರ ಪಿತಾಮಹರ ಕಾಲದ ಅರಮನೆ ಶಾಲನ್ನೇ ಕೊಂಡೊಯ್ದಿದ್ದರು. ಸರಸೂಗೆ ಅದಕ್ಕೂ ಮನಸ್ಸೇನೂ ಚಿಕ್ಕದಾಗಲಿಲ್ಲ. ಅದನ್ನೇ ಸಾರ್ವಜನಿಕ ಸ್ಥಳದಲ್ಲಿ ಹೊದ್ದುಕೊಂಡು ತೃಪ್ತಿಪಟ್ಟುಕೊಳ್ಳುವ ಆಸೆ!. ಅದಕ್ಕೂ ಪುಣ್ಯಾವಕಾಶ ಬರ್ಲಿಲ್ವೆ....ಪಾಪ! ಆ ದಿನ "ಕುಂಬ್ಳೂರು ಬಂದ್" ಪ್ರಯುಕ್ತ ಕಾರ್ಯಕ್ರಮವೇ ರದ್ದಾಗಿಬಿಟ್ಟಿತ್ತು.

ಹೀಗೆ ಸರಸೂ ಮೈಲಾರಯ್ಯ ಎಂಬ ಸ್ಥಾಯಿ ದಂಪತಿಗಳನ್ನಿಟ್ಟುಕೊಂಡು, ಸುನಂದಮ್ಮನವರು ನೂರಾರು ಹಾಸ್ಯ ಲೇಖನಗಳನ್ನೂ, ಸುಮಾರು ಮೂವತ್ತು ಕಿರುನಾಟಕಗಳನ್ನೂ, ಅನೇಕ ಹರಟೆಗಳನ್ನು ಪ್ರಕಟಿಸಿದ್ದಾರೆ. ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ, ಇವುಗಳಲ್ಲಿ ಪ್ರಮುಖವಾದುವೆಂದರೆ, ಸರ್ಕಾರ ಕೊಡುವ ಅತ್ಯುನ್ನತ 'ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ', 'ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', ಕರ್ನಾಟಕ ಲೇಖಕಿಯರ ಸಂಘದಿಂದ ಕೊಡ ಮಾಡಿರುವ ಅನುಪಮಾ ಪ್ರಶಸ್ತಿಗಳು. ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವವೂ ಸಹ ಸಂದಿತ್ತು.

ಇಷ್ಟೆಲ್ಲಾ ಸಾಹಿತ್ಯಕ ಚಟುವಟಿಕೆಗಳ ನಡುವೆ ಅವರು ತಮ್ಮ ಕೈಲಾಗುವತನಕ ತಮ್ಮ ಮೆಚ್ಚಿನ 'ಬಸವನಗುಡಿ ಸ್ತ್ರೀ ಸಂಘ'ಕ್ಕೂ ತಪ್ಪದೆ ತಿಂಗಳಿಗೊಮ್ಮೆಯಾದರೂ ಹೋಗುತ್ತಿದ್ದರು. ಊಟ ಉಪಚಾರಗಳಲ್ಲಿ ಸುನಂದಮ್ಮ ಭೋಗಿ. ಅವರ ಮನೆಗೆ ಹೋದಾಗಲೆಲ್ಲ ಎಲ್ಲರೂ ಈ ಉಪಚಾರದ ಅನುಭವ ಪಡೆದೇ ಬರುತ್ತಿದ್ದರು. ಕೊನೆಕೊನೆಗೆ ಕಾಲಿನ ಮೂಳೆ ಮುರಿದು ಕೋಲೂರಿಕೊಂಡು ನಡೆಯುತ್ತಿದ್ದರೂ, ಅಡುಗೆಮನೆಗೆ ಹೋಗಿ ತಾವೇ ಏನಾದರೊಂದು ಪಾನೀಯ, ಕುರುಕಲು ತಿಂಡಿ ತಂದುಕೊಡುತ್ತಿದ್ದರು.

ಸುನಂದಮ್ಮನವರಿಗೆ ಬಾಳಿನಲ್ಲಿ ಎಷ್ಟೋ ಕಹಿಗಳು ಇದ್ದವು. ಆದರೆ ಅದನ್ನು ಹಾಸ್ಯದ ಸಿಹಿಲೇಪನದಲ್ಲಿ ಅದ್ದಿ, ನೋವು ನುಂಗಿಬಿಡುತ್ತಿದ್ದರು.

ಹಾಸ್ಯ ಸಾಹಿತ್ಯದಲ್ಲಿ ಶಿಖರವನ್ನೇ ಮುಟ್ಟಿದ್ದರೂ ಅವರಿಗೆ ಒಂದು ಕೊರತೆ ಕಾಣುತ್ತಿತ್ತು. 'ಓದುಗರು ಕಥೆ ಕಾದಂಬರಿಗಳನ್ನು ಸ್ವಾಗತಿಸುವಷ್ಟು ತೀವ್ರವಾಗಿ ಹಾಸ್ಯ ಸಾಹಿತ್ಯನ ಸ್ವಾಗತಿಸುವುದಿಲ್ಲ' ಎನ್ನುತ್ತಿದ್ದರು. ಸುನಂದಮ್ಮನವರ ಅನೇಕ ಕಿರುನಾಟಕಗಳು 'ಆಕಾಶವಾಣಿ'ಯಲ್ಲಿ ಪ್ರಸಾರವಾಗಿ ಹೆಸರನ್ನು ಗಳಿಸಿಕೊಟ್ಟಿದ್ದವು. ಬೇರೆ ಬೇರೆ ಕಡೆ ಕೂಡ ಇವರ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ಆದರೆ ಯಾರಿಗೂ ಗೌರವಧನ ಕೊಡುವ ಮತ್ತು ಅಪ್ಪಣೆ ಪಡೆದು ನಾಟಕವಾಡುವ ಪರಿಪಾಠ ಇರುತ್ತಿರಲಿಲ್ಲ!. ತಮಗೆ ಹೇಳದೇ ಅನೇಕ ಕಡೆ ನಾಟಕಗಳನ್ನಾಡಿದರೂ ಅದಕ್ಕೆ ಬೇಸರ ಪಟ್ಟುಕೊಳ್ಳದೆ, ಅನೇಕರು ನಾಟಕ ನೋಡಿ ಸಂತೋಷಪಟ್ಟರಲ್ಲಾ ಎಂದುಕೊಂಡು ತಾವೂ ಖುಷಿಪಟ್ಟುಕೊಂಡು ಬಿಡುತ್ತಿದ್ದರು.

ಸುನಂದಮ್ಮನವರು ಕಣ್ಮರೆಯಾದ ಮೇಲೆ ಅವರ ನಾಟಕಗಳೂ ದುಡಿಯುತ್ತಿವೆ. ಅರುಂಧತಿ ನಾಗ್ ಅವರ 'ರಂಗಶಂಕರ'ದಲ್ಲಿ ಸುನಂದಮ್ಮನವರ ನಾಟಕಗಳು ವ್ಯವಸ್ಥಿತ ರೀತಿಯಲ್ಲಿ ನಡೆದು ಅವರ ಹೆಸರನ್ನು ಜೀವಂತಗೊಳಿಸುತ್ತಿವೆ. ಅವರ ಅನೇಕ ಪುಸ್ತಕಗಳು ಹೊಸ ಮುದ್ರಣ ಕಾಣುತ್ತಿವೆ.

ಅವರು ಬಾಳಲ್ಲಿ ಹೇಗೆ ಶಿಸ್ತಿನಿಂದ ಬದುಕಿದ್ದರೋ ಸತ್ತ ರೀತಿಯೂ ಅಷ್ಟೇ ಶಿಸ್ತಿನದ್ದಾಗಿತ್ತು. ಟಿ.ವಿ.ನೋಡುತ್ತ, ಸೇಬು ಹಣ್ಣು ಹೆಚ್ಚಿ ಬಾಯಲ್ಲಿಟ್ಟು ಅಗಿಯುವಷ್ಟರಲ್ಲಿ ಪ್ರಾಣ ಪಕ್ಷಿ ತಪ್ಪಿಸಿಕೊಂಡು ಹಾರಿಹೋಗಿ ಬಿಟ್ಟಿತು. 2006ರ ಜನವರಿ ಇಪ್ಪತ್ತೇಳು ಈಕೆ ಮರಣಿಸಿದ ದಿನ.

ಆದರೆ ಅವರ ಹೆಸರಿಗೆ ಸಾವಿಲ್ಲ. ತಮ್ಮ ಹಾಸ್ಯ ಸಾಹಿತ್ಯದ ಮೂಲಕ ಶಾಶ್ವತವಾಗಿ ಕನ್ನಡದ ನೆಲದಲ್ಲಿ ಅವರ ಹೆಸರು, ಜೊತೆಗೆ ಅವರೂ ಬದುಕಿ ಉಳಿದಿದ್ದಾರೆ.

———— * ————

ಚಿತ್ರಕಲಾವಿದೆ ಸುಭಾಷಿಣಿದೇವಿ

ಡಾ. ಅ.ಲ. ನರಸಿಂಹನ್

ಕಳೆದ ಶತಮಾನದ ಎರಡನೇ ಪಾದದ ಆರಂಭದಲ್ಲಿ ಕರ್ನಾಟಕದ ಚಿತ್ರಕಲೆಯಲ್ಲಿ ಮಹತ್ತರವಾದ ಬದಲಾವಣೆ ಆಯಿತು. ಕಲಾವಿದರ ಮುಂದೆ ಇದ್ದದ್ದು ಎರಡು ಆಯ್ಕೆಗಳು. ಒಂದು ಮುಂಬಯಿಯ ಜೆ.ಜೆ. ಕಲಾಶಾಲೆ ಮತ್ತೊಂದು ರವೀಂದ್ರನಾಥ ಠಾಗೂರರಿಂದ ಆರಂಭವಾದ ಶಾಂತಿನಿಕೇತನ ಕಲಾಶಾಲೆ. ಮೈಸೂರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಅರಮನೆಯಲ್ಲಿ ಆರಂಭವಾದ 'ರಾಜಾಸ್ಕೂಲ್' ಹತ್ತೊಂಬತ್ತನೇ ಶತಮಾನದ ಅಂತ್ಯಕ್ಕೆ ಹಲವಾರು ವಿಭಾಗಗಳಾಗಿ ಬೇರ್ಪಟ್ಟು ಚಿತ್ರಕಲೆ ಹಾಗೂ ಕರಕುಶಲ ಕಲೆಗೆ ಚಾಮರಾಜೇಂದ್ರ ತಾಂತ್ರಿಕ ಕಲಾಶಾಲೆಯಾಗಿ ರೂಪುಗೊಂಡಿತು. ಬ್ರಿಟಿಷ್ ಅಧಿಕಾರಿಗಳಿಂದಾಗಿ ಇಲ್ಲಿ ಜೆ.ಜೆ.ಕಲಾಶಾಲೆಯ ಪಠ್ಯವಸ್ತುಗಳನ್ನೇ ಅಳವಡಿಸುವಂತಾಯಿತು. ಅಭ್ಯರ್ಥಿಗಳು ಇದೇ ಪಠ್ಯವಸ್ತುವಿದ್ದ ಮದರಾಸ್ ಕಲೆ ಹಾಗೂ ಕರಕುಶಲ ಕಲೆಯ ಶಾಲೆಗೆ ಪರೀಕ್ಷೆಗಾಗಿ ಹೋಗಬೇಕಿತ್ತು.

ಇದೇ ಸಂದರ್ಭದಲ್ಲಿ ಗಾಂಧೀಜಿಗಳಿಂದ ಪ್ರೇರಿತರಾದ ರವೀಂದ್ರನಾಥ ಠಾಕೂರರು ಶಾಂತಿನಿಕೇತನದಲ್ಲಿ ದೇಶೀಯ ಪರಂಪರಾನುಗತ ಕಲೆಗೆ ಪುನರುಜ್ಜೀವನ ನೀಡಿದರು. ಅಜಂತೆಯ ಮುಂದುವರಿದ ರೂಪವಾಗಿ ಕಲಾ ಪರಂಪರೆಯೊಂದು ಶಾಂತಿನಿಕೇತನದ ಕಲಾ ಅಧ್ಯಾಪಕರಿಂದ ಪ್ರವರ್ಧನಗೊಂಡಿತು. ಕರ್ನಾಟಕದ ಖ್ಯಾತ ಕಲಾವಿದ ವೆಂಕಟಪ್ಪನವರು ಕಲ್ಕತ್ತೆಯ ಕಲಾಶಾಲೆಯಲ್ಲಿ ಅಭ್ಯಸಿಸಿದರಾದರೂ ಅವರು ಹೆಚ್ಚಾಗಿ ಪ್ರಯೋಗ ನಡೆಸಿದ್ದು ಶಾಂತಿನಿಕೇತನದ ಕಲಾಶೈಲಿಯಲ್ಲಿಯೆ.

ಇದೇ ಸಂದರ್ಭದಲ್ಲಿ ಸುಭಾಷಿಣಿದೇವಿ ಅವರ ಕಲಾಪಯಣ ಆರಂಭಗೊಂಡಿತು. ಇವರ ಚಿತ್ರ ಕಲಾಕೃತಿಗಳಲ್ಲಿ ಜೆ.ಜೆ. ಕಲಾಶಾಲೆ ಹಾಗೂ ಶಾಂತಿನಿಕೇತನ ಕಲಾಶಾಲೆಯ ಎರಡೂ ಪ್ರಕಾರಗಳನ್ನು ಕಾಣಬಹುದು. ಇದಲ್ಲದೆ ಶಿಲ್ಪಕಲಾಕೃತಿಯಲ್ಲಿಯೂ ಪರಿಣತಿ ಪಡೆದು ಹಲವಾರು ಶಿಲಾಶಿಲ್ಪಗಳನ್ನು ರಚಿಸಿದ್ದಾರೆ. ಇದರೊಂದಿಗೆ ಸುಭಾಷಿಣಿದೇವಿಯವರು ಸಮಾಜಸೇವೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಜನಹಿತ ಕಾರ್ಯಗಳನ್ನು ಕೈಗೊಂಡಿದ್ದರು.

ಮೈಸೂರಿನಲ್ಲಿ ಇಪ್ಪತ್ತನೇ ಮೇ 1920ರಲ್ಲಿ ಜೆ.ವೆಂಕಟಸ್ವಾಮಿ ಶೆಟ್ಟಿ ಹಾಗೂ ರತ್ನಮ್ಮ ಅವರಿಗೆ ಮಗಳಾಗಿ ಜನಿಸಿದರು. ತಂದೆ ವ್ಯಾಪಾರಸ್ಥರಾಗಿದ್ದು ತಕ್ಕಮಟ್ಟಿಗೆ ಅನುಕೂಲಸ್ಥರಾಗಿದ್ದರು. ವೆಂಕಟಸ್ವಾಮಿಯವರು ಕಲ್ಕತ್ತಾದಲ್ಲಿ ವೈದ್ಯಕೀಯ ಪರೀಕ್ಷೆಗಾಗಿ ಅಭ್ಯಸಿಸುತ್ತಿದ್ದಾಗ ವೆಂಕಟಪ್ಪನವರ ಪರಿಚಯವಾಗಿದ್ದು, ಇಬ್ಬರೂ ಮರಳಿ ಮೈಸೂರಿಗೆ ಬಂದ ಮೇಲೆ ಗೆಳೆಯರು ಅಗಾಗ ಭೇಟಿಯಾಗುತ್ತಿದ್ದರು, ಹಾಗೂ ಕಲೆ, ಕಲಾವಿದರ ಬಗ್ಗೆ ಚರ್ಚಿಸುತ್ತಿದ್ದರು. ಬಾಲಕಿ ಸುಭಾಷಿಣಿದೇವಿಯವರು ತಮ್ಮ ತಂದೆ ಹಾಗೂ ವೆಂಕಟಪ್ಪನವರ ನಡುವೆ ನಡೆಯುತ್ತಿದ್ದ ಸಂಭಾಷಣೆ, ಚರ್ಚೆಗಳನ್ನು ಬಹಳ ಹತ್ತಿರದಿಂದ ಗಮನಿಸುತ್ತಿದ್ದುದರಿಂದ ಅವರಿಗೂ ಸಹ ಚಿತ್ರಕಲೆಯಲ್ಲಿ ಆಸಕ್ತಿಯುಂಟಾಗಿ

ಚಿತ್ರಗಳನ್ನು ಬರೆಯಬೇಕೆನ್ನಿಸಿತು. ಹಾಗೆ ಬರೆದ ಚಿತ್ರಗಳನ್ನು ತಂದೆಯವರ ಮೂಲಕ ವೆಂಕಟಪ್ಪನವರಿಗೆ ತೋರಿಸುತ್ತಿದ್ದರು. ವೆಂಕಟಪ್ಪನವರು ಅವುಗಳನ್ನು ತಿದ್ದಿ ಚಿತ್ರಕಲೆಯ ಮೂಲಭೂತ ಸಂಗತಿಗಳನ್ನು ತಿಳಿಯಹೇಳುತ್ತಿದ್ದರು. ಸ್ವಾತಂತ್ರ್ಯಾನಂತರ ಅರಮನೆಯಲ್ಲಿ ಕೆಲವು ಬದಲಾವಣೆಗಳಾಗಿ ವೆಂಕಟಪ್ಪನವರು ಬೆಂಗಳೂರಿಗೆ ಬಂದು ನೆಲೆಸಿದರು.

ಆಗ ಸುಭಾಷಿಣಿದೇವಿಯವರಿಗೆ ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳು ಗುರುಗಳಾಗಿ ದೊರೆತರು. ಅವರು ಅರಮನೆಯ ಗುರುಗಳೂ ಹೌದು. ಸಿದ್ಧಾಂತಿಗಳು ಆಳವಾದ ವೇದಾಧ್ಯಯನ ಮಾಡಿದ್ದಲ್ಲದೆ. ಶಿಲ್ಪ ಮತ್ತು ಚಿತ್ರಕಲೆಯಲ್ಲಿ ಆಳವಾದ ಪರಿಣತಿಯನ್ನು ಹೊಂದಿದ್ದರು ಹಾಗೂ ಆಧುನಿಕ ಮನೋಭಾವವನ್ನು ಪಡೆದಿದ್ದರು. ಸುದೈವವಶಾತ್ ಇಂತಹ ಗುರುಗಳು ದೊರೆತಿದ್ದು ಸುಭಾಷಿಣಿದೇವಿಯವರಿಗೆ ಜಲ ಹಾಗೂ ತೈಲವರ್ಣಗಳಲ್ಲಿ ಚಿತ್ರರಚನೆ ಅಭ್ಯಸಿಸಲು ಸಾಧ್ಯವಾಯಿತು. ಅಲ್ಲದೆ ಸಿದ್ಧಲಿಂಗಸ್ವಾಮಿಗಳು ಶಿಲಾಶಿಲ್ಪ ರಚಿಸಲು ಪ್ರೋತ್ಸಾಹ ನೀಡಿ ತಾಳಮಾನ, ಆಗಮ, ಇತ್ಯಾದಿಗಳನ್ನು ಕಲಿಸಿದರು. ಬಾದಾಮಿ ಚಾಲುಕ್ಯರ ಕಾಲದಿಂದ ಮೈಸೂರು ಅರಸರ ಕಾಲದವರೆಗೆ ಕರ್ನಾಟಕದಾದ್ಯಂತ ನೂರಾರು ಶಿಲ್ಪಿಗಳ ಹೆಸರುಗಳು ದೊರೆಯುತ್ತದಾದರೂ ಒಂದೇ ಒಂದು ಮಹಿಳಾ ಶಿಲ್ಪಿಯ ಹೆಸರು ಕಂಡುಬರುವುದಿಲ್ಲ. ಆ ಕಾರಣದಿಂದ ಕರ್ನಾಟಕ ಶಿಲ್ಪಕಲೆಯ ಇತಿಹಾಸದಲ್ಲಿ ಸುಭಾಷಿಣಿದೇವಿಯವರು ಮೊಟ್ಟ ಮೊದಲಿಗರೆಂದು ಹೇಳಬಹುದು. ಇವರಿಂದ ಸ್ಫೂರ್ತಿ ಪಡೆದರೋ ಎಂಬಂತೆ ಹಲವಾರು ಮಹಿಳಾ ಶಿಲ್ಪಿಗಳು ಇಂದು ಕ್ರಿಯಾಶೀಲರಾಗಿದ್ದಾರೆ.

ಸುಭಾಷಿಣಿದೇವಿಯವರು ಒಟ್ಟಾರೆಯಾಗಿ ಎಷ್ಟು ಚಿತ್ರಗಳನ್ನು ರಚಿಸಿದ್ದಾರೆಂದು ತಿಳಿದುಬರುವುದಿಲ್ಲ. ಕಲಾವಿದೆ ಜೀವಂತವಿದ್ದಾಗಲೆ ಹಲವಾರು ಬಾರಿ ಸಂದರ್ಶಿಸಿ ಕಲಾಕೃತಿಗಳ ಛಾಯಾಚಿತ್ರಗಳನ್ನು ಪಡೆದು ಲೇಖನಗಳು ಹಾಗೂ ಕರ್ನಾಟಕದ ಲಲಿತಕಲಾ ಅಕಾಡೆಮಿಗೆ ಕಿರುಪುಸ್ತಕವನ್ನು ರಚಿಸಿಕೊಟ್ಟಿರುವ, ಪ್ರಸ್ತುತ ಮೈಸೂರಿನಲ್ಲಿ ನೆಲಸಿರುವ ಶ್ರೀ ಎಲ್.ಶಿವಲಿಂಗಪ್ಪನವರು ತಮಗೆ ಲಭ್ಯವಿದ್ದ ಚಿತ್ರಗಳ ಪಟ್ಟಿಯೊಂದನ್ನು ಕೊಡುತ್ತಾರಲ್ಲದೆ, ಕೆಲವು ಚಿತ್ರಗಳನ್ನು ವಿವರವಾಗಿ ವಿಮರ್ಶಿಸಿದ್ದಾರೆ. ಅದರಂತೆ ದೇವತಾಚಿತ್ರಗಳಲ್ಲಿ ಮಹಿಷಾಸುರಮರ್ದಿನಿ, ಶಿವಪಾರ್ವತಿ, ಗಜೇಂದ್ರ ಮೋಕ್ಷ, ಅಂಧಕಾಸುರಸಂಹಾರ, ನಟರಾಜ, ಇತ್ಯಾದಿಗಳನ್ನೂ, ಭಾವಚಿತ್ರಗಳಲ್ಲಿ ಮಹಾತ್ಮಾಗಾಂಧಿ, ಜವಹರಲಾಲ್ ನೆಹರು, ಇಂದಿರಾಗಾಂಧಿ, ಸರೋಜಿನಿ ಮಹಿಷಿ, ರವೀಂದ್ರನಾಥ ಠಾಕೂರ್, ಸುಭಾಸ್ ಚಂದ್ರಬೋಸ್‌ರವರಲ್ಲದೆ ತಮ್ಮ ಕಲಾಗುರುಗಳಾದ ಕೆ.ವೆಂಕಟಪ್ಪ ಹಾಗೂ ಸಿದ್ಧಲಿಂಗ ಸ್ವಾಮಿಗಳನ್ನು, ತಮ್ಮ ತಂದೆ ಹಾಗೂ ತಾತನ ಚಿತ್ರಗಳನ್ನು ಚಿತ್ರಿಸಿದ್ದಾರೆ. ಚಾಮುಂಡಿಬೆಟ್ಟ ಪರಿಸರದ ಭೂದೃಶ್ಯಗಳು ಇವರ ಕುಂಚದಿಂದ ಮೂಡಿಬಂದಿವೆ.

ಸುಭಾಷಿಣಿದೇವಿಯವರ ಎಲ್ಲ ಚಿತ್ರಗಳಲ್ಲಿ ಕಂಡುಬರುವುದು ನವಿರಾದ ರೇಖಾವಿನ್ಯಾಸ ಹಾಗೂ ವರ್ಣಶುದ್ಧತೆ–ಚಲನಶೀಲಗತಿಯಲ್ಲಿರುವ ಸರಸ್ವತಿಯ ಚಿತ್ರಗಳು, ಶಿವನ ಪಂಚವಂಶತಿಲೀಲೆಗಳ ಕೆಲವು ದೃಶ್ಯಗಳಲ್ಲಿ ಸಿದ್ಧಲಿಂಗಸ್ವಾಮಿಯವರ ಪ್ರಭಾವ ದಟ್ಟವಾಗಿ ಕಾಣಿಸುತ್ತದೆ. ಅದರೊಂದಿಗೆ ಶಾಂತಿನಿಕೇತನದ ನಂದಲಾಲಬಸು, ಅವನೀಂದ್ರನಾಥ್ ಠಾಕೂರ್, ಮಜುಮದಾರ್ ಅವರುಗಳ ಕಲಾಕೃತಿಗಳಲ್ಲಿ ಕಂಡುಬರುವ ಸಪೂರವಾದ ಆಕಾರಗಳು ಮೈಗೆ ಹತ್ತಿದಂತಿರುವ ವಸ್ತ್ರಾಭರಣಗಳು, ತೆಳುವಾಗಿ ಪದರಪದರವಾಗಿ ಹಚ್ಚಿದ ಬಣ್ಣಗಳು, ಅಜಂತೆಯ ಕಲೆಯಿಂದ ಮುಂದುವರಿದ ರೂಪಗಳು, ದೇಶೀಯ ಸೊಬಗಿನಿಂದ ಕೂಡಿದ್ದು, ವೆಂಕಟಪ್ಪನವರ ಮೂಲಕ ಮುಂದುವರಿದಿದ್ದು ಸುಭಾಷಿಣಿದೇವಿಯವರೂ ಸಹ ಯಶಸ್ವಿಯಾಗಿ ಬಳಸಿಕೊಂಡಿರುವದನ್ನು ಕಾಣಬಹುದು.

ಸುಭಾಷಿಣಿದೇವಿಯವರ ಕಲಾಸೇವೆಯನ್ನು ಗಮನಿಸಿ 1985ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಪ್ರಶಸ್ತಿ, 1999ರಲ್ಲಿ ಎಂ.ಟಿ.ವಿ. ಆಚಾರ್ಯ ಪ್ರಶಸ್ತಿ, 2000ದಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಇವರಿಗೆ ಸಂದಾಯವಾಗಿದ್ದವು. 1957ರ ದೆಹಲಿಯ ಕರಕುಶಲಮಂಡಳಿ ಕಲೆ ಮತ್ತು ಕರಕುಶಲಕಲೆ ಕ್ಷೇತ್ರಗಳಲ್ಲಿ ಮಹಿಳಾ ಕಲಾವಿದರ ಪ್ರದರ್ಶನದಲ್ಲಿ ರಾಜ್ಯದಿಂದ ವಿಶೇಷ ಆಹ್ವಾನಿತ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಕರ್ನಾಟಕ

ಚಿತ್ರಕಲಾ ಪರಿಷತ್ತಿನ ಆಜೀವ ಸದಸ್ಯೆಯಾಗಿದ್ದರಲ್ಲದೆ ಹಲವಾರು ವರ್ಷ ಕಾರ್ಯಕಾರಿ ಸಮಿತಿಯಲ್ಲಿ ಸೇವೆ ಸಲ್ಲಿಸಿದ್ದರು. ಮೈಸೂರು ದಸರಾ ವಸ್ತುಪ್ರದರ್ಶನದ ಕಲಾವಿಭಾಗದ ಸಮಿತಿಯಲ್ಲಿ 1947ರಿಂದ 1970ರ ವರೆಗೆ ಸದಸ್ಯೆ ಆಗಿದ್ದರು. ದೆಹಲಿಯ ಅಖಿಲ ಭಾರತ ಕಲೆ ಮತ್ತು ಕರಕುಶಲಕಲೆ ಸೊಸೈಟಿಯ ಸದಸ್ಯರಾಗಿದ್ದರು. ಬೆಂಗಳೂರಿನಲ್ಲಿರುವ ಅಖಿಲ ಭಾರತ ಕರಕುಶಲ ಅಭಿವೃದ್ಧಿ ಮಂಡಳಿ ಮತ್ತು ಪ್ರಾದೇಶಿಕ ತರಬೇತಿ ಕೇಂದ್ರ ಇವರ ಆಹ್ವಾನದ ಮೇರೆಗೆ ಶಿಲ್ಪಕಲೆಯಲ್ಲಿ ಎರಕಹೊಯ್ಯುವಿಕೆ, ಗೊಂಬೆಗಳ ತಯಾರಿಕೆ ಇತ್ಯಾದಿಗಳ ತರಬೇತಿ ಪಡೆದಿದ್ದರು. ನವದೆಹಲಿಯ ಕಲೆ ಮತ್ತು ಕರಕುಶಲ ಸೊಸೈಟಿಯಿಂದ ಹಾಗೂ ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಿಕ ಗೌರವ ವೇತನ ದೊರೆಯುತ್ತಿತ್ತು.

ಸುಭಾಷಿಣಿದೇವಿಯವರು ಕಲಾಬರಹಗಾರರೂ ಆಗಿದ್ದು, ಹಲವಾರು ಲೇಖನಗಳನ್ನು ವಿವಿಧ ಪ್ರತಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅಲ್ಲದೆ ಆಕಾಶವಾಣಿಯಿಂದಲೂ ಕಲಾವಿದರನ್ನು ಕುರಿತು ಉಪನ್ಯಾಸಗಳನ್ನು ನೀಡಿದ್ದಾರೆ. ವಿಶೇಷವಾಗಿ ವೆಂಕಟಪ್ಪನವರ ಬಗ್ಗೆ ನೀಡಿದ ಉಪನ್ಯಾಸಕ್ಕೆ ಸಾಕಷ್ಟು ಪ್ರಶಂಸೆಗಳು ಬಂದವು. ಸ್ಥಪತಿ ಸಿದ್ಧಲಿಂಗಸ್ವಾಮಿಗಳು ಹಾಗೂ ರಾಜಪ್ರಮುಖರಾಗಿದ್ದ ಜಯಚಾಮರಾಜ ಒಡೆಯರ್ ಅವರುಗಳು, ಇವರಿಗೆ ಮೆಚ್ಚುಗೆಯ ಪತ್ರವನ್ನು ಬರೆದರು, ಇವರ ಭಾಷಣ ಮೈಸೂರಿಗೆ ಮಾತ್ರ ಸೀಮಿತವಾಗದೆ ರಾಜ್ಯದ ಎಲ್ಲಾ ಕೇಂದ್ರಗಳಲ್ಲೂ ಮರುಪ್ರಸಾರವಾಗಲಿ ಎಂದು ಒತ್ತಾಯಗಳು ಬಂದವು.

ಸುಭಾಷಿಣಿದೇವಿಯವರ ಮತ್ತೊಂದು ಪ್ರಮುಖವಾದ ಕಾರ್ಯಕ್ಷೇತ್ರವೆಂದರೆ ಸ್ತ್ರೀಯರಿಗೆ ಅನುಕೂಲ ವಾಗುವಂಥ ಸ್ತ್ರೀಸಮುದಾಯಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಕೈಗೊಂಡರು. ಕಾಂಗ್ರೆಸ್ ಕಾರ್ಯಕರ್ತೆಯಾಗಿದ್ದು ಮೈಸೂರಿನಲ್ಲಿ ಹಲವಾರು ಮಹಿಳಾ ಅಧಿವೇಶನಗಳನ್ನು ಸಂಯೋಜಿಸಿದರು. ಮಹಿಳೆಯರ ಸ್ವಉದ್ಯೋಗಕ್ಕಾಗಿ ತನುಮನ ಧನಗಳನ್ನು ಮೀಸಲಿರಿಸಿದರು. ಅನೇಕ ಜನಪರ ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದು ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು. ನಂಜನಗೂಡು ಮಹಿಳಾ ವಿದ್ಯಾಪೀಠದ ಕಾರ್ಯಕಾರಿ ಸಮಿತಿಯಲ್ಲೂ ಹಾಗೂ ಪೋಷಕರಾಗಿಯೂ 1973ರಿಂದ ತಮ್ಮ ಅಂತ್ಯದ ಕಾಲದವರೆಗೂ ಸೇವೆಸಲ್ಲಿಸಿದ್ದರು. ನಂಜನಗೂಡು ರೈಲ್ವೆಗೆ ಸಲಹಾ ಸಮಿತಿಯ ಸದಸ್ಯರು, ಶಾಲೆಗಳು, ಆಸ್ಪತ್ರೆಗಳು ಹಾಗೂ ಪೋಲೀಸ್ ಇಲಾಖೆಗಳ ಸಲಹಾ ಸಮಿತಿಯಲ್ಲಿದ್ದರು. ಮೈಸೂರಿನಲ್ಲಿಯೂ ಜೆ.ಎಸ್.ಎಸ್.ಕಾಲೇಜು, ದಳವಾಯಿ ಪ್ರೌಢಶಾಲೆ ಇತ್ಯಾದಿಗಳಲ್ಲಿ ಸೇವೆಸಲ್ಲಿಸಿದ್ದಾರೆ. ಒಬ್ಬ ಮಹಿಳೆಯಾಗಿ ಕೇವಲ ಚಿತ್ರ ಮತ್ತು ಶಿಲ್ಪಕಲಾಕ್ಷೇತ್ರಕ್ಕೆ ತಮ್ಮ ಸೇವೆಯನ್ನು ಸೀಮಿತಿಗೊಳಿಸದೆ ಮಹಿಳಾಪರ ಚಟುವಟಿಕೆಗಳಿಗೆ ಹಾಗೂ ಸಾರ್ವಜನಿಕ ಕ್ಷೇತ್ರದ ಸೇವೆಗಳಿಗಾಗಿ ತಮ್ಮನ್ನು ತೊಡಗಿಸಿಕೊಂಡು ಸಾರ್ಥಕ ಸೇವೆ ಸಲ್ಲಿಸಿದ ಅಪೂರ್ವ ಮಹಿಳೆ ಸುಭಾಷಿಣಿದೇವಿಯವರಾಗಿದ್ದರು.

ಜೀವನ ಸಂಧ್ಯೆಯಲ್ಲಿ ಸುಭಾಷಿಣಿದೇವಿಯವರು ಬೃಹತ್ ಪ್ರಮಾಣದ ಪಿತ್ರಾರ್ಜಿತ ಆಸ್ತಿ ಸರ್ಕಾರದ ಹಾಗೂ ಸಾರ್ವಜನಿಕರ ಪಾಲಾಗಿ, ತಮಗೆ ದೊರಕುತ್ತಿದ್ದ ಮಾಸಾಶನದಲ್ಲಿ ತೃಪ್ತರಾಗಿ ಆಜೀವಪರ್ಯಂತ ಬ್ರಹ್ಮಚಾರಿಣಿಯಾಗಿ ಉಳಿದು ತಮ್ಮ ಹುಟ್ಟೂರಾದ ನಂಜನಗೂಡಿನಲ್ಲಿ ನೆಲೆಸಿ 29ನೇ ಸೆಪ್ಟೆಂಬರ್ 2002ರಲ್ಲಿ ಎಂಬತ್ತೆರಡು ವರ್ಷಗಳ ತುಂಬು ಜೀವನ ನಡೆಸಿ ಇಹಲೋಕವನ್ನು ತ್ಯಜಿಸಿದರು. ಆದರೂ ಅವರು ಮಾಡಿದ ಕಾರ್ಯಗಳು ಹಾಗೂ ರಚಿಸಿದ ಕೃತಿಗಳನ್ನು ಮುಂದಿನ ಪೀಳಿಗೆಯ ಅಧ್ಯಯನಕ್ಕಾಗಿ ಬಿಟ್ಟುಹೋಗಿದ್ದಾರೆ.

*

ಮಹಾಕಾವ್ಯ ಕರ್ತೃ ಮಲ್ಲಿಕಾ

ಉಷಾ ಪಿ.ರೈ

ಮಲೆನಾಡಿನ ಪರಿಸರದಲ್ಲಿ, ಎಸ್ಟೇಟ್‌ನ ಶ್ರೀಮಂತ ವಾತಾವರಣದಲ್ಲಿ ಪ್ರಕೃತಿಯೊಡನೆ ಆಟವಾಡುತ್ತಾ ಬೆಳೆದ ಮಲ್ಲಿಕಾ ಇತ್ತೀಚೆಗೆ ತಮ್ಮ 92ನೇ ವಯಸ್ಸಿನಲ್ಲಿ ಈ ಲೋಕದ ಸಂಬಂಧಗಳಿಂದ ದೂರವಾದರು. ಈ ಇಳಿವಯಸ್ಸಲ್ಲಿ ಲೇಖನಿಯ ಓಟ ಕಡಿಮೆಯಾದರೂ ಅವರ ಶ್ರೀಮಂತ ಅನುಭವ, ಮಲ್ಲಿಕಾ ಅವರ ಸಾಹಿತ್ಯ ಸೃಷ್ಟಿಗೆ ಬಹಳಷ್ಟು ಕಸುವು ನೀಡಿದೆ. ಎಸ್ಟೇಟ್‌ನ ಜೀವನದ ಅನುಭವ. ಸುಖ ಸಂಪತ್ತಿನ ಮಧ್ಯೆ ಕಳೆದ ಸುಂದರ ಬಾಲ್ಯ, ಬಾಲ್ಯದ ಕೊನೆಯ ಘಟ್ಟದಲ್ಲಿ ಬ್ರಿಟಿಷರ ಕಾಲದ ಬೆಂಗಳೂರಿನ ಜೀವನದ ನೆನಪುಗಳು, ಸ್ವಾತಂತ್ರ್ಯ ಸಂಗ್ರಾಮ ಕಾಲದ ಅನುಭವಗಳು, ರಾಜಕಾರಣಿಯ ಸಹಚರ್ಯ, ನಾಡಿನ ಮುಖ್ಯಮಂತ್ರಿಯೊಬ್ಬರ ಹೆಂಡತಿಯಾಗಿ ಪಡೆದ ಅನುಭವಗಳು, ವೈಧವ್ಯದ ಕಷ್ಟ ಎಲ್ಲವನ್ನೂ ಅನುಭವಿಸಿ ರಚಿಸಿದ ಸಾಹಿತ್ಯ ಅವರನ್ನು ಹಲವಾರು ಪ್ರಶಸ್ತಿ ಬಹುಮಾನಗಳಿಗೆ ಭಾಜನರಾಗಿ ಮಾಡಿದೆ. ತೆರೆಯ ಮರೆಯ ಕಾಯಿಯಂತೆ ಬೆಳೆದು ತೆರೆಯ ಮರೆಯಿಂದ ಹೊರಕ್ಕೆ ಜಿಗಿದ ಧೀಮಂತೆ ಮಲ್ಲಿಕಾ ಕಡಿದಾಳ್ ಮಂಜಪ್ಪ.

ಬಾಲ್ಯ

ಚಿಕ್ಕಮಗಳೂರು ಜಿಲ್ಲೆಯ ಸುಪ್ರಸಿದ್ಧ ಮನೆತನ 'ಬಾಗಮನೆ'. ಅಲ್ಲಿಯ ನಾಲ್ಕನೇ ತಲೆಮಾರಿನವರಾದ ಚನ್ನೇಗೌಡ ಹಾಗೂ ಪಾರ್ವತಮ್ಮನ ನಾಲ್ಕನೇ ಪುತ್ರಿಯಾಗಿ 15.6.1920ರಲ್ಲಿ, ಈ ಮುದ್ದಿನ ಮಲ್ಲಿಕಾ ಹುಟ್ಟಿದರು. ಅತ್ತಿಗೊಂಡ ಎಸ್ಟೇಟ್‌ನ ಅರಮನೆಯಂತಹ ಮನೆಯಲ್ಲಿ, ಕಾಫಿ ಎಸ್ಟೇಟ್‌ನ ಸುಂದರವಾದ ವಾತಾವರಣದಲ್ಲಿ ತನಗಿಂತ ಹಿರಿಯರಾದ ಒಡಹುಟ್ಟಿದವರೊಡನೆ ಆಟವಾಡುತ್ತಾ ಬಾಲ್ಯ ಕಳೆದರು ಸುತ್ತಲೂ ಅಗಾಧವಾದ ಪ್ರಕೃತಿ ಸೌಂದರ್ಯ, ಕಾಡುಮೇಡು, ಬೆಟ್ಟಗುಡ್ಡಗಳು, ಅಚ್ಚುಕಟ್ಟಾದ ಕಾಫಿತೋಟ, ಹಚ್ಚನೆಯ ಪೈರು, ಹಟ್ಟಿ ತುಂಬಾ ದನಕರುಗಳು, ಅಂಗಳದ ತುಂಬ ಕೆಲಸದಾಳುಗಳು. ಶ್ರೀಮಂತ ಜೀವನ. ಹೊರಗಿನ ಸಂಪರ್ಕವಿಲ್ಲ. ಶಾಲೆಗೆ ಹೋಗಿಲ್ಲ. ಓದು ಬರಹ ಕಲಿಯಬೇಕೆನ್ನುವ ತಹತಹ ಶುರುವಾಗಿತ್ತು. ಆಗಲೇ ಮನೆಯಲ್ಲೇ ಅಕ್ಷರಾಭ್ಯಾಸ ಶುರುವಾಗಿ ಒಮ್ಮನಸ್ಸಿನಿಂದ ವಿದ್ಯೆಯನ್ನು ಕಲಿತಾಗ ಪುಸ್ತಕಗಳನ್ನು ಓದುವ, ಮನಸ್ಸಿಗೆ ತೋಚಿದ್ದನ್ನು ಬರೆಯುವ ಗೀಳು ಹುಟ್ಟಿತು.

ಅವರ ಎಸ್ಟೇಟ್ ಇದ್ದುದು ಬ್ರಿಟಿಷರ ಕಾಲದಲ್ಲಿ. ಬೆಂಗಳೂರು ಅವರಿಗೆ ತುಂಬಾ ದೂರ. ಅವರ ತಂದೆ ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿ ಮೂರು ನಾಲ್ಕು ಎಕರೆಗಳಷ್ಟು ವಿಸ್ತೀರ್ಣದ ಮೋಟಾರು ರಿಪೇರಿ ಹಾಗೂ ಮಾರಾಟ ಕಂಪನಿಯನ್ನು ಖರೀದಿಸಿದಾಗ ಇಡೀ ಸಂಸಾರ ಎಸ್ಟೇಟ್ ಬಿಟ್ಟು ಬೆಂಗಳೂರಿಗೆ ಬಂತು. ಆಗ ಮಲ್ಲಿಕಾಗೆ ಒಂಬತ್ತು ವರುಷ. ಆಗ ಬೆಂಗಳೂರಿನ ಬ್ರಿಗೇಡ್ ರೋಡ್, ಕಂಟೋನ್ಮೆಂಟ್ ಎಲ್ಲ ಬ್ರಿಟಿಷರ ಪ್ರಾಬಲ್ಯವಿದ್ದ ಜಾಗ. ಗ್ಯಾರೇಜನ ಮಧ್ಯ ಭಾಗದಲ್ಲಿಯೇ ಅರಮನೆಯಂತಹ ಮನೆ. ಆದರೆ ಅವರಿದ್ದಲ್ಲಿ ಹಿಂದೂಗಳು ಇರಲೇ ಇಲ್ಲವಂತೆ.

ಬೆಂಗಳೂರಿನಲ್ಲಿ ಅವರ ಅಣ್ಣಂದಿರು ಅಲ್ಲಿಯೇ ಹತ್ತಿರದ ಸೈಂಟ್ ಜೋಸೆಫ್ಸ್ ಶಾಲೆಗೆ ಸೇರಿದರು. ಹೆಣ್ಣು ಮಕ್ಕಳನ್ನು ಶಾಲೆಗೆ ಹಾಕುವ ಧೈರ್ಯ ತಂದೆ ಚನ್ನೇಗೌಡರಿಗಿರಲಿಲ್ಲ.

ಶಾಲೆಗೆ ಹೋಗಿ ವಿದ್ಯೆ ಕಲಿಯಲಾಗದ ಅಸಹಾಯಕತೆ ಬೆಂಗಳೂರಿನಲ್ಲಿ ಅವರನ್ನು ಬಹಳವಾಗಿ ಕಾಡಿತ್ತು. ಆದರೆ ಸೈಂಟ್ ಜೋಸೆಫ್ಸ್ ಶಾಲೆಯ ಕನ್ನಡ ಮಾಸ್ತರು ಸಂಜೆ ಮನೆಗೆ ಬಂದು ಮಕ್ಕಳಿಗೆ ಪಾಠ ಹೇಳುವ ಏರ್ಪಾಡನ್ನು ತಂದೆಯವರು ಮಾಡಿದ್ದರು. ಗಂಡುಮಕ್ಕಳ ಜೊತೆಗೆ ಹೆಣ್ಣುಮಕ್ಕಳಿಗೂ ಈ ಕಲಿಯುವ ಅವಕಾಶ ದೊರೆತಾಗ ಏಳನೇ ತರಗತಿಯ ವಿದ್ಯೆ ಮಲ್ಲಿಕಾರವರಿಗೆ ಲಭಿಸಿತ್ತು. ಅಷ್ಟರಲ್ಲಿಯೇ ಅವರ ವಿದ್ಯಾಭ್ಯಾಸ ಮುಕ್ತಾಯವಾಯಿತು.

ಒಳ್ಳೆಯ ರೀತಿಯಲ್ಲಿ ನಡೆಯುತ್ತಿದ್ದ ಕಂಪನಿಯನ್ನು ಎರಡನೇ ಮಹಾಯುದ್ಧದ ಪರಿಣಾಮವಾಗಿ ಬಿಡಿಭಾಗಗಳು ಬರುವುದು ನಿಂತುಹೋಗಿ ಮುಚ್ಚಬೇಕಾಗಿ ಬಂದಾಗ ಅವರು ತಮ್ಮ ಎಸ್ಟೇಟ್‌ಗೆ ಹಿಂತಿರುಗಲೇಬೇಕಾದಂತಹ ಅಸಹಾಯ ಪರಿಸ್ಥಿತಿಯುಂಟಾಯಿತು. ಅತ್ತಿಗೊಂಡ ಎಸ್ಟೇಟ್‌ಗೆ ಹಿಂತಿರುಗಿ ಬಂದಾಗ ಅವರ ಎಸ್ಟೇಟ್ ಸರಿಯಾದ ಮೇಲ್ವಿಚಾರಣೆಯಿಲ್ಲದೆ ನಿರ್ಲಕ್ಷಿತವಾಗಿತ್ತು. ಸ್ವಂತದ ಜನರೇ ಮೋಸ ಮಾಡಿದ್ದರು. ಅವರ ಆರುನೂರು ಎಕರೆ ಜಮೀನಿನಲ್ಲಿ ಮುನ್ನೂರು ಎಕರೆ ದಾಯಾದಿಗಳು ಕಬಳಿಸಿದ್ದರು. ಉಳಿದ ಮುನ್ನೂರು ಎಕರೆ ಎಸ್ಟೇಟ್‌ನಲ್ಲಿ ಬೆಳೆಯುತ್ತಿದ್ದ ಕಾಫಿಯ ಉತ್ಪಾದನೆಯಿಂದ ಕೆಲಸಗಾರರ ಸಂಬಳವೂ ದಕ್ಕುತ್ತಿರಲಿಲ್ಲ. ಆದರೆ ಈ ಎರಡೂ ಪೆಟ್ಟುಗಳೂ ಚನ್ನೇಗೌಡರನ್ನಾಗಲೀ ಪಾರ್ವತಮ್ಮನವರನ್ನಾಗಲೀ ಧೃತಿಗೆಡಿಸಲಿಲ್ಲ. ಅವರು ಬಹಳ ಬುದ್ಧಿವಂತರಾದುದರಿಂದ ಮಕ್ಕಳಿಗೆ ಕಷ್ಟದ ಸೋಂಕು ತಟ್ಟದಂತೆ ಜಾಗ್ರತೆ ವಹಿಸಿದ್ದರು. ಚನ್ನೇಗೌಡರು ಬಡಗಿತನದಿಂದ ಹಿಡಿದು ಮನೆ ಕಟ್ಟುವ ತನಕ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದರು. ತಮ್ಮ ಸುಬ್ಬೇಗೌಡರೊಂದಿಗೆ ಸೇರಿ ಕಟ್ಟಿದ ಮಧುಗುಂಡಿ ಎಸ್ಟೇಟ್‌ನ ಮನೆ ಇವತ್ತಿನ ನಾಗರಿಕತೆಗೂ ಸಾಟಿಯಾಗುವಂತಾದ್ದು.

ತಾಯಿ ಪಾರ್ವತಮ್ಮ ನಿರಕ್ಷರಿಯಾದರೂ ಬುದ್ಧಿವಂತರು. ಮಹಾ ದೈವಭಕ್ತರು. ಪುರಾಣ ಪುಣ್ಯಕತೆಗಳಲ್ಲಿ ಹರಿಕಥೆಗಳಲ್ಲಿ ಅಪಾರ ಆಸಕ್ತಿ ಇದ್ದವರು. ಮಲ್ಲಿಕಾರ ಅಕ್ಕಂದಿರು ಬೆಂಗಳೂರಿನಲ್ಲಿ ಸರಿಯಾಗಿ ಅಕ್ಷರಾಭ್ಯಾಸ ಮಾಡಿದ್ದುದರಿಂದ ಅವರು ತಾಯಿಗೆ ಜೈಮಿನಿ ಭಾರತ, ರಾಮಾಯಣ, ವಿವೇಕಾನಂದ ಕಥಾಮೃತಗಳನ್ನು ಓದಿ ಹೇಳುತ್ತಿದ್ದರು. ಅದನ್ನೆಲ್ಲಾ ಕೇಳುತ್ತಾ ಬೆಳೆದ ಮಲ್ಲಿಕಾರಲ್ಲೂ ಕಥೆ ಹೇಳುವ ಆಸಕ್ತಿ ಬೆಳೆಯುತ್ತಿತ್ತು.

ಅದರಲ್ಲೂ ಬೆಂಗಳೂರಿನಲ್ಲಿರುವಾಗ ಇದ್ದ ತಮಿಳು ಕೆಲಸದವಳು ಹೇಳುತ್ತಿದ್ದ ಕಥೆಗಳು ಅವರ ಮನದಲ್ಲಿ ಅಚ್ಚೊತ್ತಿ ನಿಂತಿದ್ದವು. ನಾರೀ ದುರಂತದ ಕಥೆಗಳು ಅವರ ಮನದಲ್ಲಿ ಯಾವಾಗಲೂ ತಾಕಲಾಟ ನಡೆಸುತ್ತಿದ್ದುವು. ಅವರಲ್ಲಿ ಖಿನ್ನತೆಯನ್ನು ಮೂಡಿಸುತ್ತಿದ್ದವು. ಬಾಲ್ಯವೆಲ್ಲಾ ಅರಮನೆಯಂತಹ ಮನೆಗಳಲ್ಲಿ ಕಳೆದಿದ್ದರೂ ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲದೆ ಏನನ್ನೋ ಕಳಕೊಂಡ ನೋವು ಕಾಡಲು ಶುರುವಾಯಿತು. ಆ ನೋವು ಅವರ ವಿದ್ಯಾಭ್ಯಾಸಕ್ಕೆ ಹೊಸ ತಿರುವು ಕೊಟ್ಟಿತು. ಕಲಿಯಬೇಕು ತಾನೂ ಎಲ್ಲರಂತೆ ದೊಡ್ಡ ದೊಡ್ಡ ಪುಸ್ತಕಗಳನ್ನು ಓದಬೇಕು, ತನ್ನ ಮನದೊಳಗೆ ಮೂಡುತ್ತಿದ್ದ ಭಾವನೆಗಳನ್ನು ಬರೆಯಬೇಕು ಎನ್ನುವ ತಹತಹ ಶುರುವಾದದ್ದೇ ಮಲ್ಲಿಕಾ ತಾನಾಗಿಯೇ ಸರಸ್ವತಿಯನ್ನು ಒಲಿಸಿಕೊಳ್ಳಲು ಮುಂದಾದರು.

ಕರ್ನಾಟಕ ಲೇಖಕಿಯರ ಸಂಘ ಪ್ರಕಟಿಸಿರುವ ಲೇಖ–ಲೋಕ–3 ರಲ್ಲಿ ಅವರೇ ಹೇಳಿಕೊಂಡಿರುವಂತೆ 'ದಿನವೂ ಬಿಡುವಿನ ವೇಳೆಯನ್ನು ಓದು ಬರಹಕ್ಕಾಗಿ ಮೀಸಲಿಡುತ್ತಿದ್ದೆ. ನನ್ನ ಜ್ಞಾನ ವಲಯದಲ್ಲಿ ಎಷ್ಟೆಷ್ಟು ಚಿಂತನೆಗಳು–ಸಾಧನೆಗಳು ಸಾಧ್ಯವೋ ಅಷ್ಟು ಏಕ ಪ್ರಕಾರವಾಗಿ ಮುಂದುವರಿದವು ತಾನೇ ತಾನಾಗಿ. ನನ್ನ ಮನ ಬುದ್ಧಿಗಳಲ್ಲಿದ್ದ ಕರ್ತವ್ಯ ಸಾಧನೆ ಎರಡೂ ಸ್ವಾನುಭವಕ್ಕೆ ಆಧಾರವಾದುವು. ಯಾವುದು ಹೆಚ್ಚು ಯಾವುದು ಕಡಿಮೆ ಎಂಬುದರ ವಿಮರ್ಶೆಯೂ ಜೊತೆ ಜೊತೆಗೆ ನಡೆಯುತ್ತಿದ್ದುವು. ಮನಸ್ಸು ಬುದ್ಧಿಗಳ ಹೊಯ್ದಾಟದಿಂದ ಸುಜ್ಞಾನದ ದೀವಿಗೆ

ಕುಡಿಕಟ್ಟಿದಂತೆ ಉರಿಯತೊಡಗಿತು. ನಿಂತಲ್ಲಿ ಕುಳಿತಲ್ಲಿ ಒಂದು ಕ್ಷಣವೂ ಹಾಳಾಗದಂತೆ ಮನಸ್ಸು ಎಚ್ಚರದಿಂದಿರುತ್ತಿತ್ತು. ಉದ್ಯಾನದಲ್ಲಿ ಗಾಳಿ ವಿಹಾರವನ್ನು ನಡೆಸುವಾಗಲೂ ಅಡಿಗೆ ಮಾಡುವಾಗಲೂ ಉದ್ಯಾನದ ಕಾಮಗಾರಿ ನಡೆಸುವಾಗಲೂ ಅಲ್ಲಲ್ಲೇ ಶತಪತ ತಿರುಗುವಾಗಲೂ ಮನಸ್ಸು ಬುದ್ಧಿಗಳು ಹರಿದಾಡುತ್ತಿದ್ದದು, ತಾಯಿ ಸರಸ್ವತಿಯ ಪಾದ ಪದ್ಮಗಳ ಬಳಿಯಲ್ಲಿಯೇ. ಹಾಗಾಗಿ ನನ್ನ ಪೂಜಾದ್ರವ್ಯ ಮಹತ್ವಪೂರ್ಣ ಪ್ರಸಾದವನ್ನು ನೀಡಿತು. ನಾನು ಅತ್ಯಂತ ಸಂತುಷ್ಟಳಾಗಿ ಹೆಜ್ಜೆ ಇಡುತ್ತಿದ್ದೆ." ವಿದ್ಯೆ ಕಲಿತದ್ದು ಶಾಲೆಗೆ ಹೋಗಿ ಅಲ್ಲ. ಮನೆಯಲ್ಲಿಯೇ ಅದರಲ್ಲಿ ಸಂಪೂರ್ಣ ಲೀನಳಾಗಿ. ಅವರ ಪ್ರಯತ್ನ ಫಲ ಕೊಟ್ಟದ್ದು ಅವರಿಗೆ ದೊರೆತ ಸರಸ್ವತೀ ಪ್ರಸಾದವೆಂದು ಅವರು ತುಂಬ ತೃಪ್ತರಾಗಿ ಹೇಳಿಕೊಳ್ಳುತ್ತಾರೆ. ಈ ಪ್ರಸಾದದಿಂದಲೇ ಅವರ ಮನಸ್ಸು ಬುದ್ಧಿಗಳಲ್ಲಿ ಸುಜ್ಞಾನದ ಅಮೃತ ಹನಿಹನಿಯಾಗಿ ಒಸರೊಡೆದು ಹಳ್ಳಿಗರಿಂದ ಕೇಳಿದ ಜಾನಪದ ಕಥೆಗಳು ಅವರದ್ದೇ ಭಾಷೆಯಲ್ಲಿ ಕಥಾರೂಪಕ್ಕೆ ಇಳಿದವು. ಆದರೆ ಅದನ್ನು ಹೊರಗಿನವರು ಮೆಚ್ಚುವರೆನ್ನುವ ಆತ್ಮವಿಶ್ವಾಸವಿರಲಿಲ್ಲ. ಈ ಕೊರತೆಯನ್ನು ಹೋಗಲಾಡಿಸಲು ಅವರು ರಾಮಾಯಣ ಮಹಾಭಾರತಗಳನ್ನು ಓದುವುದರಲ್ಲಿ ಮೈಮರೆಯುತ್ತಿದ್ದರಂತೆ. ಇದು ಮುಂದಿನ ಅವರ ಸಾಹಿತ್ಯ ಸೃಷ್ಟಿಗೆ ತುಂಬ ನೆರವಾಯಿತು.

ಎಪ್ಪತ್ತೈದು ವರುಷಗಳ ಹಿಂದೆ ಹೆಚ್ಚು ಕಲಿಯಲಿಲ್ಲ ಎನ್ನುವ ನೋವು ಅವರಿಗಿದ್ದರೂ ಅವರು ಕಲಿತಿದ್ದ ವಿದ್ಯಾ ವೈವಿಧ್ಯತೆಯಲ್ಲಿ ಅವರಿಗೆ ತೃಪ್ತಿ ಇದೆ. ಟೈಲರಿಂಗ್, ಎಲ್ಲ ಬಗೆಯ ಕರಕುಶಲ ಕಲೆಗಳು, ಲಲಿತ ಕಲೆಗಳು ಆಗಿನ ಹೆಣ್ಣುಮಕ್ಕಳಿಗೆ ಕರಗತವಾಗುತ್ತಿತ್ತು. ಹಾಗೇ ಮಲ್ಲಿಕಾ ಕೂಡಾ ತನ್ನ ಅಕ್ಕಂದಿರ ಜೊತೆಗೆ ಎಲ್ಲವನ್ನೂ ಕಲಿತುಕೊಂಡಿದ್ದರು. ಹಾಗಾಗಿ ಓದುವುದು ಬರೆಯುವುದು ಹೆಚ್ಚು ಇರಲಿಲ್ಲವಾದರೂ ಕೈಕೆಲಸಗಳಲ್ಲಿ ಬಿಡುವಿರದೆ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಓದುವ ಹವ್ಯಾಸ ಬೆಳೆದಂತೆಲ್ಲ ಬರೆಯುವ ಆಸಕ್ತಿಯೂ ಹೆಚ್ಚಾಯಿತು. ಮನಸ್ಸು ಬೆಳೆದಂತೆ ಆಲೋಚನಾ ಶಕ್ತಿಯೂ ಬೆಳೆಯಿತು. ಭೌದ್ಧಿಕ ಪ್ರಪಂಚ ವಿಸ್ತಾರವಾದಂತೆ ಆತ್ಮವಿಶ್ವಾಸವೂ ಬೆಳೆಯಿತು. ಬಿಡುವಿನ ಎಲ್ಲ ಘಳಿಗೆಗಳೂ ಸಾಹಿತ್ಯ ರಚಿಸುವುದರ ಕಡೆಗೆ ಕೇಂದ್ರೀಕೃತವಾಯಿತು.

ಅವರ ಮೊದಲ ಸಣ್ಣಕತೆ ಪ್ರಕಟವಾದದ್ದು ಆ ಕಾಲದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ವಿಶ್ವ ಕರ್ನಾಟಕ ಪತ್ರಿಕೆಯಲ್ಲಿ. ಆಗ ಮಲ್ಲಿಕಾ ಪರಮಾನಂದವನ್ನು ಅನುಭವಿಸಿದ್ದರಂತೆ. ಅದು ಪ್ರಕಟವಾದ ಮರುವಾರವೇ ಇನ್ನೊಂದು ಕವನ ಬರೆದು ಇನ್ನೊಂದು ಪತ್ರಿಕೆಗೆ ಕಳುಹಿಸಿಕೊಟ್ಟಾಗ ಅದೂ ಒಂದೇ ವಾರದಲ್ಲಿ ಪ್ರಕಟವಾಗಿತ್ತು. ಆಗ ಅವರು ಚಿಕ್ಕಪ್ಪನ ಮನೆಯಲ್ಲಿದ್ದರು. ಚಿಕ್ಕಪ್ಪನಿಗೂ ತಮ್ಮ ಎಸ್ಟೇಟ್‌ನ ಹೆಸರು ಕವನದ ಕೆಳಗೆ ಪ್ರಕಟವಾದ ಮಲ್ಲಿಕಾರವರ ವಿಳಾಸದಲ್ಲಿ ಪ್ರಕಟವಾದದ್ದು ಹೆಚ್ಚಿನ ಸಂತಸಕೊಟ್ಟಿತ್ತಂತೆ. ಹೀಗೆ ಅವರು ಹದಿಹರಯದಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರು. ಆದರೆ ಮನೆಯಲ್ಲಿ ಹಿರಿಯರಿಂದ ಪ್ರೋತ್ಸಾಹ ಸೊನ್ನೆಯಾದಾಗ ಮಾನಸಿಕವಾಗಿ ನೋವುಂಟಾದರೂ ತೋರಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ನಿರಾಸೆಯನ್ನು ಮನದಲ್ಲಿಯೇ ಅದುಮಿ ಹಿಡಿದು ದೇವರ ಮೇಲೆ ಭಾರಹಾಕಿ ಬರವಣಿಗೆಯಲ್ಲಿ ಮಲ್ಲಿಕಾ ತೊಡಗಿಕೊಂಡಿದ್ದರು.

ವಿವಾಹ– ಸಾಂಸಾರಿಕ ಜೀವನ

ಮಂಜಪ್ಪನವರು ಮದುವೆಯಾಗುವಾಗಲೇ ರಾಜಕೀಯ ವ್ಯಕ್ತಿ. ಮನೆಯಲ್ಲಿ ಯಾವಾಗಲೂ ಅವರ ರಾಜಕೀಯ ಗೆಳೆಯರು, ಕುಟುಂಬದ ಓದುವ ಹುಡುಗರು, ವಾರಾನ್ನದ ವಿದ್ಯಾರ್ಥಿಗಳು, ಮಂಜಪ್ಪನ ಸಂಬಂಧಿಕರು ಊರಿನವರು, ಚಿಕಿತ್ಸೆಗೆಂದು ಒಬ್ಬರ ಹಿಂದೆ ಒಬ್ಬರು ಬೆಂಗಳೂರಿಗೆ ಬರುತ್ತಿದ್ದುದರಿಂದ ಮನೆ ತುಂಬಿರುತ್ತಿತ್ತು. ಗೃಹಿಣಿಯಾದ ಮಲ್ಲಿಕಾರಿಗೆ ಮನೆಯ ಕೆಲಸಗಳ ಹೊರೆ. ಪುರಸ್ತೊತ್ತಿಲ್ಲದಷ್ಟು ಕೆಲಸ. ಎಂಟು ಮಂದಿಗೆ ಅಡುಗೆ ಮಾಡಿಟ್ಟಿದ್ದರೆ ಊಟ ಮಾಡುವಾಗ ಅದರ ಎರಡಷ್ಟು ಮಂದಿ ಊಟಕ್ಕೆ. ಮಲ್ಲಿಕಾಗೆ ಉಭಯ ಸಂಕಟ. ಸಾಹಿತ್ಯ ಸೇವೆಗೆ ಒಂದಿನಿತೂ ಸಮಯವಿಲ್ಲದಾಗ ಮಲ್ಲಿಕಾ ಚಿಕ್ಕಮಕ್ಕಳಂತೆ ಅಳುತ್ತಿದ್ದರಂತೆ.

ಹೀಗೆ ಅವರ ಜೀವನ, ಮನೆ-ಸಂಸಾರ-ಮಕ್ಕಳು, ಮಕ್ಕಳ ವಿದ್ಯಾಭ್ಯಾಸವೆಂದು ಅವರ ಸುತ್ತಲೇ ಗಿರಕಿ ಹೊಡೆಯುತ್ತಿದ್ದಾಗ ಬರೆಯಲಾಗದ ಅಸಹಾಯಕತೆ ಕಾಡುತ್ತಿದ್ದರೂ ಮನಸ್ಸಿನಲ್ಲಿಯೇ ಸಾಹಿತ್ಯ ಸೃಷ್ಟಿ ಮಾಡುತ್ತಿದ್ದರಂತೆ. ಸಮಯವಿದ್ದಾಗ ತಾನು ಚಿಕ್ಕಂದಿನಲ್ಲಿ ಕಲಿತಿದ್ದ ಲಲಿತ ಕಲೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸ್ವಲ್ಪ ಮಟ್ಟಿಗೆ ಬೇಸರವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದರಂತೆ. ಕ್ರೋಶ, ಟ್ಯಾಟಿಂಗ್, ಕಟ್‌ವರ್ಕ್, ಎಂಬ್ರಾಯಿಡರಿ, ಕೈಚೀಲ ತಯಾರಿಸುವುದು, ಡಾನ್ ಥ್ರೆಡ್ ವರ್ಕ್, ಎಲ್ಲದರಲ್ಲೂ ಪರಿಣಿತರಾಗಿದ್ದರು. ಅವರು ಸಾಹಿತ್ಯದಿಂದ ದೂರ ಉಳಿದದ್ದು ಅವರಲ್ಲಿ ಅತೃಪ್ತಿಯನ್ನು ತುಂಬಿದ್ದರೂ ಅವರ ಕರ್ತವ್ಯ ಪ್ರಜ್ಞೆ ಅವರ ಲೇಖನಿಯನ್ನು ಕೆಳಗಿರಿಸಿತ್ತು. ಅಲ್ಲದೆ ರಾಜಕೀಯವಾಗಿ ಮಂಜಪ್ಪನವರು ಬಹಳವಾಗಿ ಬೆಳೆದುದರಿಂದ ಮಲ್ಲಿಕಾಗೆ ಬೆಳೆಯಲು ತಮ್ಮದೇ ಆದ ಸಮಯವಿರಲಿಲ್ಲ. ಅವರಿಂದಲೂ ಬರವಣಿಗೆಗೆ ಹೆಚ್ಚಿನ ಪ್ರೋತ್ಸಾಹವಿರಲಿಲ್ಲವೆಂದೇ ಹೇಳಬಹುದು. ಇಲ್ಲದಿದ್ದರೆ ಮುಖ್ಯಮಂತ್ರಿಯೊಬ್ಬರ ಹೆಂಡತಿಯಾಗಿ ಅವರು ಎಷ್ಟೋ ಹೆಸರು ಗಳಿಸಬಹುದಿತ್ತು.

ಸಾಹಿತ್ಯ ಸಾಧನೆ

ಮಲ್ಲಿಕಾರವರು ಮತ್ತೆ ಲೇಖನಿ ಕೈಗೆತ್ತಿಕೊಂಡದ್ದು ತನ್ನ ನಲ್ವತ್ತೆರಡರ ವಯಸ್ಸಿನಲ್ಲಿ. ಮಕ್ಕಳೆಲ್ಲರೂ ಅವರವರ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ಸ್ವಲ್ಪ ಬಿಡುವ ದೊರೆಯುವುದರ ಜೊತೆಗೆ ಮನದಾಳದಲ್ಲಿ ಅರಳುತ್ತಿದ್ದ ಚಿಂತನೆಗಳು ಹೊರಹರಿಯುವ ಒತ್ತಡ ಹೇರಿದಾಗ. ಆಗಲೂ ಮನದಲ್ಲಿ ಹಲವಾರು ಚಿಂತೆಗಳಿದ್ದರೂ ವಯಸ್ಸು ಅವರನ್ನು ಮಾಗಿಸಿತ್ತು. ಎಲ್ಲವನ್ನೂ ಎದುರಿಸುವ ಧೈರ್ಯ ಅವರಲ್ಲಿ ಮೂಡಿತ್ತು. ಹಗಲಲ್ಲಿ ಮನೆಯ ಕೆಲಸಗಳು ಅತಿಥಿ ಅಭ್ಯಾಗತರ ಸೇವೆ. ರಾತ್ರಿ ಕಣ್ಣಿಗೆ ನಿದ್ದೆ ಹತ್ತುವ ತನಕ ಬರವಣಿಗೆ. ಬೆಳಗ್ಗೆ ಬೇಗ ಎದ್ದು ಬರವಣಿಗೆ. ಅದೊಂದು ಸಾಹಸ ಯಾತ್ರೆಯೆಂದು ಅವರೇ ಹೇಳಿಕೊಳ್ಳುತ್ತಾರೆ. ಆಮೇಲೆ ಯಾವ ತಡೆಯೂ ಇಲ್ಲದೆ ಒಂದರ ಹಿಂದೆ ಒಂದರಂತೆ ಸುಮಾರು ಐವತ್ತೈದು ಪುಸ್ತಕಗಳನ್ನು ಪ್ರಕಟಿಸಿದರು. ಮೊದಲ ಕಾದಂಬರಿ 'ಜೀವನ ಗಂಗಾ'ಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಬಂತು. ಅವರ ಸಾಹಿತ್ಯ ಸೇವೆಗೆ ಇದು ಹೆಚ್ಚಿನ ಪ್ರೋತ್ಸಾಹ ನೀಡಿತು. ಆಮೇಲಿಂದ ಲೇಖನಿಗೆ ಬಿಡುವೇ ಕೊಡದೆ ಅವರು ಬರೆದರು. ಎಲ್ಲ ಪ್ರಕಾರಗಳಲ್ಲಿ ಬರೆದಾದಮೇಲೆ ಏನೋ ಅತೃಪ್ತಿ. ಹೆಚ್ಚಿನದ್ದೇನನ್ನಾದರೂ ಮಾಡುವ ಹಪಹಪಿ. ಕಥೆ ಕಾದಂಬರಿಗಳಲ್ಲಿ ಆಸಕ್ತಿ ಕಡಿಮೆಯಾಗಿ ಏನಾದರೂ ಮಹತ್ತರವಾದುದನ್ನು ಬರೆಯಬೇಕೆನ್ನುವಾಗ ಅವರಿಗೆ ತೋರಿದ್ದು ಸ್ವಾಮಿ ವಿವೇಕಾನಂದರು. ವಿವೇಕಾನಂದರ ಕುರಿತು, 1278 ಪುಟಗಳ ಮಹಾಕಾವ್ಯವನ್ನು ಬರೆಯಲು ಅವರು ದೊಡ್ಡ ತಪಸ್ಸನ್ನೇ ಮಾಡಿರುವುದಾಗಿ ಅವರ ಆತ್ಮ ಕಥನದಲ್ಲಿ ಹೇಳಿಕೊಂಡಿದ್ದಾರೆ. ಐದು ವರುಷಗಳ ಸತತ ಸಾಧನೆಯ ಫಲ 'ವಿವೇಕಾನಂದ ವಿಜಯಂ ಮಹಾಕಾವ್ಯ.'

ಮಲ್ಲಿಕಾರವರು ಒಟ್ಟು ಹನ್ನೊಂದು ಕಾದಂಬರಿಗಳನ್ನು ಬರೆದಿದ್ದಾರೆ. ಯಾವುದೇ ಕಾದಂಬರಿ ಕಥಾನಕ ಕಾಲದ ಜೀವನವನ್ನು, ಪರಿಸರವನ್ನು, ಆಚಾರ ವಿಚಾರಗಳನ್ನು ತೋರಿಸಬೇಕು. ಅದಕ್ಕೆ ಜನರ ಸ್ಪಂದನಗಳನ್ನು, ಒಪ್ಪಿಗೆ-ನಿರಾಕರಣೆಗಳನ್ನು, ಸ್ವೀಕಾರ-ಪ್ರತಿಭಟನೆಗಳನ್ನು ಹೇಳಬೇಕು. ಆಗ ಅವು ಸಾರ್ವಕಾಲಿಕ ಮೌಲ್ಯ ಪಡೆಯುತ್ತವೆ. ಮಲ್ಲಿಕಾರವರು ತಮ್ಮ ಕಾದಂಬರಿಗಳಲ್ಲಿ ಈ ಕೆಲಸವನ್ನು ಸಮರ್ಪಕವಾಗಿ ಮಾಡಿದ್ದಾರೆ ಎಂದು ಅವರ ಯಾವುದೇ ಕಾದಂಬರಿ ಓದುವಾಗ ಅರಿವಾಗುತ್ತದೆ. ಅದರಿಂದಾಗಿ ಅವರ ಕಾದಂಬರಿಗಳು ಮನೋರಂಜನೆ ನೀಡುವ ಕತೆಗಳಾಗಿ ಮಾತ್ರ ಉಳಿಯದೆ ಆಯಾ ಕಾಲದ ಸಾಮಾಜಿಕ ಮತ್ತು ರಾಜಕೀಯ ಆಗುಹೋಗುಗಳ ದಾಖಲಾತಿಗಳೂ ಆಗಿ ಸಾರ್ವಕಾಲಿಕವಾಗಿ ಉಳಿಯಬಲ್ಲಂಥವುಗಳಾಗಿವೆ.

ವಿಭಿನ್ನ ಕಥಾವಸ್ತುಗಳನ್ನು ತೆಗೆದುಕೊಂಡು ಕಥೆ ಕಾದಂಬರಿಗಳು ಬರೆದಿರುವರಾದರೂ ಅವರ ಕೆಲಸವನ್ನು ಯಾರೂ ಸರಿಯಾಗಿ ಗುರುತಿಸಿಲ್ಲ ಎನ್ನುವ ನೋವು ಅವರಿಗಿದೆ. ಅವರ ಕಾದಂಬರಿಗಳನ್ನು ಓದಿದ ನಂತರ ಅವರ ನೋವು ಸಹಜವೆಂದು ನನಗೂ ಅನಿಸಿದೆ. ರಾಜಕೀಯ ವ್ಯಕ್ತಿಗಳಿಗೆ ಸ್ವಲ್ಪ ನಿಕಟರಾಗಿರುವವರೂ ದಿಢೀರ್

ಹೆಸರುವಾಸಿಯಾಗುವ ಈ ಕಾಲದಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಕಡಿದಾಳ್ ಮಂಜಪ್ಪನವರ ಪತ್ನಿಯಾಗಿದ್ದೂ ಅವರು ಅನಾಮಧೇಯರಾಗಿ ಉಳಿದದ್ದು ಒಂದು ವಿಚಿತ್ರವಾದರೂ ಸತ್ಯ. ಒಂದೆರಡು ಕಾದಂಬರಿಗಳನ್ನು ಹೊರತುಪಡಿಸಿ ಅವರ ಹೆಚ್ಚಿನ ಕಾದಂಬರಿಗಳು ಪ್ರಕಟವಾದದ್ದು 1990ರ ನಂತರದಲ್ಲಿ. ಮಲ್ಲಿಕಾರವರು ತನ್ನ ಪತಿಯ ಪ್ರಭಾವದಲ್ಲಿ ಬೆಳೆದವರಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ.

ಮಲ್ಲಿಕಾರವರ ವಯಸ್ಸು, ಅವರು ಬರೆದ ಕಾಲ, ಅವರು ಬದುಕಿ ಬಾಳಿದ ಪರಿಸರ ಎಲ್ಲವನ್ನೂ ಗಮನಿಸಿದಾಗ ಅವರು ಆರಿಸಿಕೊಂಡ ಕಥಾವಸ್ತುಗಳು, ಅವರು ಅಭಿವ್ಯಕ್ತಿಗೆ ಉಪಯೋಗಿಸಿದ ಸಂಸ್ಕೃತ ಬೆರೆತ ಸಮೃದ್ಧ ಭಾಷೆ, ಕನ್ನಡ ಸಾಹಿತ್ಯದಲ್ಲಿ ಒಂದು ಭಿನ್ನ ರೀತಿಯ ಸಾಹಿತ್ಯವನ್ನೇ ಸೃಷ್ಟಿ ಮಾಡಿದೆ ಎಂದು ಅನಿಸುತ್ತದೆ. ತಿರುಮಲಾಂಬ, ಆರ್. ಕಲ್ಯಾಣಮ್ಮ ಇವರನ್ನು ಆಧುನಿಕ ಸಾಹಿತ್ಯದ ಪ್ರಾರಂಭದ ಲೇಖಕಿಯರೆಂದು ಗುರುತಿಸಿದರೆ, ಎರಡನೆಯ ಘಟ್ಟದಲ್ಲಿ ಬರುವ ಶಾಮಲಾ ದೇವಿ ಬೆಳಗಾಂವ್‌ಕರ್, ಕೊಡಗಿನ ಗೌರಮ್ಮ, ಶಾಂತಾದೇವಿ ಮಾಳವಾಡ, ಸರಸ್ವತಿ ಗೌಡ, ಸರಸ್ವತಿಬಾಯಿ ರಾಜವಾಡೆ (ಗಿರಿಬಾಲೆ) ಇವರ ಸಾಲಿನಲ್ಲಿ ಮಲ್ಲಿಕಾರವರನ್ನು ಗುರುತಿಸಬೇಕಿತ್ತು ಅಥವಾ ಹೆಚ್.ವಿ.ಸಾವಿತ್ರಮ್ಮ, ಎಂ.ಕೆ.ಇಂದಿರಾ, ಅನುಪಮಾ ನಿರಂಜನರವರ ಸಾಲಿನಲ್ಲಾದರೂ ಗುರುತಿಸಬೇಕಿತ್ತು. ಆದರೆ ಆ ಎರಡು ತಲೆಮಾರಿನಲ್ಲೂ ಇವರ ಸಾಹಿತ್ಯದ ಸರಿಯಾದ ಮೌಲ್ಯಮಾಪನವಾಗಿಲ್ಲ.

ಒಂಭತ್ತು ದಶಕಗಳನ್ನು ಕಂಡ ಇವರ ಜೀವಾನುನುಭವ ಗಾಢವಾದದ್ದು; ವಿಸ್ತಾರವಾದದ್ದು ಪರಿಪಕ್ವವಾದದ್ದು. ಅವರ ಜೀವನೋತ್ಸಾಹ, ಶೋಷಿತ ಸ್ತ್ರೀ ವರ್ಗದ ಮೇಲೆ ಅವರಿಗಿರುವ ಅನುಕಂಪ, ಕಾಳಜಿ ಅಪಾರವಾದದ್ದು. ಸ್ವಾತಂತ್ರ್ಯ ಹೋರಾಟ ಕಾಲದಿಂದ ಇಂದಿನವರೆಗೆ ಮಹಿಳೆಯರ ಜೀವನಕ್ರಮದಲ್ಲಿ ಆದ ಬದಲಾವಣೆಗಳನ್ನು ಅವರು ಪ್ರತ್ಯಕ್ಷ ನೋಡಿ ಅನುಭವಿಸಿರುವದರಿಂದ ಮಹಿಳೆಯರನ್ನು ಪುರುಷವರ್ಗ ಹೇಗೆ ತನ್ನ ಸ್ವಾರ್ಥಕ್ಕೆ ತಕ್ಕಂತೆ ಉಪಯೋಗಿಸಿಕೊಂಡು ಬಂದಿದೆ ಎನ್ನುವ ಆರ್ಥಿಕ ವಿಶ್ಲೇಷಣೆಯನ್ನು ಸಮರ್ಪಕವಾಗಿ ತಮ್ಮ ಕಾದಂಬರಿಗಳಲ್ಲಿ ಮಾಡಲು ಅವರಿಗೆ ಸಾಧ್ಯವಾಗಿದೆ. ಸ್ತ್ರೀ ಸ್ವಾತಂತ್ರ್ಯದ ಅಗತ್ಯ, ಸ್ತ್ರೀಯರ ಆರ್ಥಿಕ ಸ್ವಾತಂತ್ರ್ಯದ ಅಗತ್ಯವನ್ನು ಅವರು ಎಲ್ಲ ಕಾದಂಬರಿಗಳಲ್ಲೂ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಸ್ತ್ರೀಯರನ್ನು ತುಳಿಯುವ ಪುರುಷ ವರ್ಗದ ಮೇಲೆ ಅವರ ಆಕ್ರೋಶ, ಅವರ ಎಲ್ಲ ಕಾದಂಬರಿಗಳಲ್ಲೂ ವ್ಯಕ್ತವಾಗಿದೆ. ಸ್ತ್ರೀವಾದದ ಚಳುವಳಿಯಲ್ಲಿ ಪಾಲುಗೊಳ್ಳದೆಯೂ ಅವರು ತಮ್ಮ ಕಾದಂಬರಿಗಳಲ್ಲಿ ತುಂಬ ಸ್ತ್ರೀವಾದದ ದಿಟ್ಟ ನಿಲುವುಗಳನ್ನು ಸ್ಪಷ್ಟಪಡಿಸಿದ್ದಾರೆ. ಅವರು ವ್ಯಕ್ತಪಡಿಸಿರುವ ಸ್ತ್ರೀವಾದ ಅಪ್ಪಟ ಭಾರತೀಯವಾದದ್ದು. ಅಲ್ಲಿ ಪಾಶ್ಚಾತ್ಯ ನಿಲುವುಗಳ ಛಾಯೆ ಇಲ್ಲ. ಸ್ತ್ರೀವಾದಿ ನೆಲೆಯಿಂದ ತೆಗೆದುಕೊಂಡರೂ ಅವರ ಬರವಣಿಗೆಯನ್ನು ಈ ಮೊದಲೇ ಚರ್ಚೆಗೆ ಒಳಪಡಿಸಬೇಕಿತ್ತು. ಅವರ ಸಾಹಿತ್ಯದ ಸರಿಯಾದ ಮೌಲ್ಯಮಾಪನ ಈಗಲಾದರೂ ಸರಿಯಾದ ವಿಮರ್ಶಕರಿಂದ ಆಗಬೇಕಾಗಿರುವುದು ಸಾಹಿತ್ಯಕ್ಷೇತ್ರದ ಒಂದು ಅಗತ್ಯವೂ ಆಗಿದೆ. ಮಹಿಳಾ ಸಾಹಿತ್ಯವನ್ನು ಅಡುಗೆಮನೆ ಸಾಹಿತ್ಯವೆಂದು ಅಲ್ಲಗಳೆಯುವವರು ಇವರ ಕಾದಂಬರಿಗಳನ್ನು ಅಗತ್ಯವಾಗಿ ಓದಬೇಕು. ಅವರ ವಂದೇಮಾತರಂ ಕಾದಂಬರಿ ಒಂದನ್ನೇ ಓದಿದರೂ ಸಾಕು. ಅಡುಗೆ ಮನೆಯಿಂದ ಅದೆಷ್ಟು ದೂರವಿದೆಯೆಂದು ತಿಳಿಯಬಹುದು.

ಮಲ್ಲಿಕಾರವರ ಕಾದಂಬರಿಗಳನ್ನು ವಿಶ್ಲೇಷಿಸುವಾಗ ಶಾಲಿನಿ ರಘುನಾಥ್‌ರವರು ಸಮನ್ವಿತದಲ್ಲಿ ವ್ಯಕ್ತಪಡಿಸಿರುವ ಒಂದು ಮಾತು ಇಲ್ಲಿ ಪ್ರಸ್ತುವೆನಿಸುತ್ತದೆ. "ಪುರುಷ ಅಥವಾ ಮಹಿಳೆ ಸಾಹಿತ್ಯ ರಚಿಸಿದ ಕಾಲ, ಪರಿಸರ, ಪ್ರಭಾವ ಹಾಗೂ ಉದ್ದೇಶಗಳ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ಅರ್ಥೈಸಿಕೊಳ್ಳುವ ಕಾರ್ಯ ಮೊದಲು ಆಗಬೇಕು. ಸಂಪ್ರದಾಯದ ಉದರದಲ್ಲಿ ಉದಾರತೆ ಗೋಚರಿಸಬಹುದು. ಪ್ರಗತಿಶೀಲರೆಂದು ಕ್ರಾಂತಿಕಾರರೆಂದು ಹಣೆಪಟ್ಟಿ ಕಟ್ಟಿಕೊಂಡು ಬರೆದವರಲ್ಲೂ ಕಂಡುಬಾರದ ಪ್ರಗತಿಪರ ಆಲೋಚನೆಗಳು, ದಿಟ್ಟ ನಿಲುವುಗಳು ಪರಂಪರೆಯಲ್ಲಿ ಬರೆಯುತ್ತಿರುವವರಲ್ಲಿ ಹುಟ್ಟಿಕೊಂಡಿರಬಹುದು." ಈ ಹಿನ್ನೆಲೆಯಲ್ಲಿ ಮಲ್ಲಿಕಾರವರ ಬರವಣಿಗೆಯನ್ನು ಪರಿಶೀಲಿಸಿದರೆ ಎಂಟು ದಶಕಗಳನ್ನು

ದಾಟಿರುವ ಅವರಲ್ಲಿ ತುಂಬಿರುವ ಪ್ರಗತಿಪರ ಆಲೋಚನೆಗಳು ನಮ್ಮನ್ನು ದಂಗುಬಡಿಸುತ್ತವೆ. ಅವರ ಜೀವನ ಶ್ರದ್ಧೆ, ಬದುಕುವ ಉತ್ಸಾಹ, ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆ ಬೆರಗು ಹುಟ್ಟಿಸುತ್ತದೆ. ಶಾಲೆಯ ಮೆಟ್ಟಲು ಹತ್ತದ, ಮನೆಯಲ್ಲೆ ಕುಳಿತು ಓದಿದ ಸಂಪ್ರದಾಯ ಮನೆತನದ ಹುಡುಗಿ, ಮುಂದೆ ಓದನ್ನೇ ತನ್ನ ಕಾರ್ಯಾಗಾರವನ್ನಾಗಿಸಿಕೊಂಡು, ಸಂಸ್ಕೃತ, ಕನ್ನಡ, ಇಂಗ್ಲಿಷ್ ಭಾಷೆಯ ಪುಸ್ತಕಗಳನ್ನೋದಿ, ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಅರಗಿಸಿಕೊಂಡು, ಜೀವಾನಾನುಭವದ ಪರಿಪಕ್ವತೆಯಲ್ಲಿ ತನ್ನ ಲೇಖನಿಯಿಂದ ಹೊರಹರಿಸಿದ ಸಮೃದ್ಧ ಸಾಹಿತ್ಯ ಸರಿಯಾಗಿ ಗುರುತಿಸದೆ ಮೂಲೆ ಸೇರಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಕಂಡುಬರುತ್ತಿರುವ ದುರಂತಗಳಿಗೆ ಒಂದು ಉದಾಹರಣೆಯಾಗಿ ನಮ್ಮ ಮುಂದಿದೆ.

ಅವರ ಭಾಷೆ ಮತ್ತು ನಿರೂಪಣಾ ಶೈಲಿ ಬಹಳ ಭಿನ್ನವಾದದ್ದು. ತಮ್ಮ ಬರವಣಿಗೆಯಲ್ಲಿ ಅವರು ಧಾರಾಳವಾಗಿ ಸಂಸ್ಕೃತ ಮತ್ತು ಹಳಗನ್ನಡ ಪದಗಳನ್ನು ಕಾವ್ಯಮಯವಾಗಿ ಉಪಯೋಗಿಸಿ ತನ್ನಲ್ಲಿರುವ ಭಾಷಾ ಶ್ರೀಮಂತಿಕೆಯನ್ನು ತೋರಿದ್ದಾರೆ. ಇಂಗ್ಲಿಷ್ ಸಾಹಿತ್ಯವನ್ನೂ ಓದಿರುವದರಿಂದ ಅದೂ ಅವರ ಬರವಣಿಗೆಯ ಮೇಲೆ ಬಹಳ ಪ್ರಭಾವ ಬೀರಿದೆಯೆಂದು ಅವರ ಕಾದಂಬರಿಗಳನ್ನು ಓದುವಾಗ ಮನದಟ್ಟಾಗುತ್ತದೆ. ಅವರ ಭಾಷೆ ಕೆಲವೊಮ್ಮೆ ಸಾಮಾನ್ಯ ಓದುಗನ ಓದುವ ಗತಿಯನ್ನು ಕುಗ್ಗಿಸುತ್ತದೆ. ಅವರ ಭಾಷೆಯ ರಸಾಸ್ವಾದ ಮಾಡಬೇಕಾದರೆ ನಿಧಾನವಾಗಿ ಓದಬೇಕಾಗುತ್ತದೆ.

ಶೈಲಿ

ಮಲ್ಲಿಕಾರವರ ಕಥನ ಮತ್ತು ನಿರೂಪಣಾ ಶೈಲಿ ಹಳೆಯ ರೀತಿಯದ್ದು. ಅವರ ಎಲ್ಲ ಕಾದಂಬರಿಗಳಲ್ಲೂ ನಿರೂಪಕ ತೆರೆಯ ಮರೆಯ ಪಾತ್ರವಾಗಿ ತನ್ನ ಅಭಿಪ್ರಾಯಗಳನ್ನು ಅಲ್ಲಲ್ಲಿ ವ್ಯಕ್ತಪಡಿಸುವುದು ಕಂಡುಬರುತ್ತದೆ. ಅಲ್ಲಲ್ಲಿ ಅವರು ಉದ್ಧರಿಸುವ ಸಂಸ್ಕೃತ ಶ್ಲೋಕಗಳು, ಧಾರ್ಮಿಕ ಗ್ರಂಥಗಳ ಮಾತುಗಳು, ಆಂಗ್ಲ ಕವಿಗಳ ಮಾತುಗಳು, ಪಾತ್ರಗಳಿಗೆ ಕೇಳುವ ಅಶರೀರ ವಾಣಿಗಳು ನಿರೂಪಕಿಯ ಮಾತುಗಳಾಗಿ ವ್ಯಕ್ತವಾಗಿವೆ. ಪುರಾಣಗಳನ್ನು, ಹಳೆಯ ಮಹಾಕಾವ್ಯಗಳನ್ನು, ಧರ್ಮಗ್ರಂಥಗಳನ್ನು ಓದಿದಾಗ ಮನಸ್ಸಿಗೆ ತಾಗಿ ನಿಂತ ವಿಚಾರಗಳು, ಅವರು ಓದಿ ಮೆಚ್ಚಿದ್ದ ಇಂಗ್ಲಿಷ್ ಸಾಹಿತ್ಯದ ಸಾಲುಗಳು, ಸಂಸ್ಕೃತ ಶ್ಲೋಕಗಳು ಅವರ ಕಾದಂಬರಿಗಳ ತುಂಬ ಕಾಣಸಿಗುತ್ತವೆ. ಹಾಗಾಗಿ ಅವರ ಕಾದಂಬರಿಗಳಲ್ಲಿ ಬರಹಗಾರ್ತಿ ಹೊರಗುಳಿಯುವುದಿಲ್ಲ. ಅಲ್ಲಲ್ಲಿ ನಮೂದಿಸಿರುವ ಅವರ ಸ್ವಂತ ಅಭಿಪ್ರಾಯಗಳೂ ಜೀವಾನುನುಭವದಿಂದ ಹೊರ ಹರಿದ ಸತ್ಯಗಳಾದುರಿಂದ ಓದುಗರಿಗೆ ಬೇಸರ ಎನಿಸುವುದಿಲ್ಲ.

ಕಥಾವಸ್ತು

"ಮನೋನ್ಮಣಿ" ಮತ್ತು "ವಂದೇಮಾತರಂ" ಬಿಟ್ಟರೆ ಅವರ ಕಾದಂಬರಿಗಳಲ್ಲಿ ಮುಖ್ಯವಾಗಿ ಕಂಡು ಬಂದಿರುವುದು ಪುರುಷ ವರ್ಗದ ದಬ್ಬಾಳಿಕೆಯ ವಿರುದ್ಧ ಹೆಣ್ಣಿನ ಹೋರಾಟದ ಕಥೆಗಳು. 1972ರಲ್ಲಿ ಪ್ರಕಟವಾದ 436 ಪುಟಗಳ ಬೃಹತ್ ಕೃತಿ "ವಂದೇಮಾತರಂ" ಸುಮಾರು 30 ವರುಷಗಳ ಸ್ವಾತಂತ್ರ್ಯ ಹೋರಾಟದ ಚಿತ್ರಣವನ್ನು ನೀಡುತ್ತದೆ. ಇದರ ಮುಖ್ಯ ಥೀಂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನರ ಪಾಲುಗೊಳ್ಳುವಿಕೆ. ಸ್ವಾತಂತ್ರ್ಯ ಸಮರ ಮಡಿಕೇರಿಯ ಒಂದು ಚಿಕ್ಕ ಹಳ್ಳಿಯ ಒಂದು ಕುಟುಂಬದ ಮೇಲೆ ಮಾಡಿದ ಪರಿಣಾಮ ಈ ಕಾದಂಬರಿಯ ಕಥಾವಸ್ತು. ಮನೆಯ ಗಂಡಸರು ದೇಶಕ್ಕಾಗಿ ಹೋರಾಡುವ ಹುರುಪಿನಲ್ಲಿ ಮನೆಯಿಂದ ದೂರವಾದಾಗ ಮನೆಯ ಹೆಂಗಸರು ಪಡುವ ಬವಣೆ ಇಲ್ಲಿ ವಿವರಿಸಲ್ಪಟ್ಟಿದೆ. ಸ್ವಾತಂತ್ರ್ಯ ಹೋರಾಟದ ಹಲವು ಹಸಿಹಸಿ ಚಿತ್ರಣಗಳು ಈ ಕಾದಂಬರಿಯಲ್ಲಿ ಬರುತ್ತವೆ. ಎರಡನೆಯ ಮಹಾ ಯುದ್ಧ, ಅದರ ನಂತರದ ಬರಗಾಲ, ದೇಶದಾದ್ಯಂತ ಹತ್ತಿಕೊಂಡ ಪ್ಲೇಗಿನ ಹಾವಳಿ, ಮಹಾತ್ಮ ಗಾಂಧಿಯವರ ಸಂಧಾನ ಅನುಸಂಧಾನಗಳು, ಅವು ನಿಷ್ಫಲವಾದಾಗ ನಡೆಯುವ

ಚಳುವಳಿಗಳು, ಸತ್ಯಾಗ್ರಹಗಳು, ಗೋಲಿಬಾರುಗಳು, ಹಳ್ಳಿಗಳಲ್ಲಿ ನಡೆಯುವ ಚಳುವಳಿಗಳು, ಸುಭಾಷ್ ಚಂದ್ರಬೋಸರ ಬಹುಬಲದ ಹೋರಾಟ, ಅವರ ಮರಣ, ಪೊಲೀಸರ ಗೋಲಿಬಾರುಗಳು, ಜನರ ನೋವುಗಳು, ಚೀರಾಟಗಳು, ಹೆಂಗಸರ ಧೈರ್ಯ, ಸ್ವಾತಂತ್ರ್ಯ ಸಿಕ್ಕಿದ್ದು, ಮಹಾತ್ಮರ ಕೊಲೆ, ಅಲ್ಲಿಂದ ಮುಂದಿನ ಭಾರತದ ಚಿತ್ರಣ ಎಲ್ಲವನ್ನೂ ಈ ಕಾದಂಬರಿಯಲ್ಲಿ ಕಾಣಬಹುದು.

"ಮನೋನ್ಮಣಿ" ಹಿಂದೂ ಮುಸ್ಲಿಂ ವೈರತ್ವದ ಹಿನ್ನೆಲೆಯಲ್ಲಿ ಹಿಂದೂ ಕುಟುಂಬದ 15 ಜನ ಅಗ್ನಿಗಾಹುತಿಯಾದಾಗ ಉಳಿದ ಒಬ್ಬಳು ಹೆಣ್ಣುಮಗಳು ಅನುಭವಿಸಿದ ನೋವಿನ ಕಥೆ. ಇಲ್ಲಿ ಹಿಂದೂ ಮುಸ್ಲಿಂ ಗಲಭೆಗಳ ಸೂಕ್ಷ್ಮ ಪರಿಚಯವಿದೆ. ವಿಭಜನೆಯ ಬಗ್ಗೆ ಅವರ ಕೆಲವು ಸ್ವಂತ ಅಭಿಪ್ರಾಯಗಳಿವೆ.

ಅವರ ಮಾತಿನಲ್ಲಿಯೇ ಹೇಳುವುದಾದರೆ ಬೃಹತ್ ಮನುಕುಲದ ಜೀವನ ಜಗತ್ತಿನಲ್ಲಿ ಭಾರತದ ಗೃಹಿಣಿಯರ ಸ್ಥಿತಿಗತಿಯ ಕಿಂಚಿತ್ ಪರಿಸ್ಥಿತಿಯನ್ನು ಸಹೃದಯರ ಮುಂದಿಡುವ ಸಲುವಾಗಿ ರಚಿಸಿದ ಕಾದಂಬರಿ. ಹುಟ್ಟಿನಿಂದ ಸಾಯುವವರೆಗೂ ಹೆಣ್ಣು ಎನ್ನುವ ಯಜ್ಞ ಕುಂಡದಲ್ಲಿ ಉರಿಯುತ್ತಾ ಬಾಳಿದ ಮೂರು ಹೆಣ್ಣುಮಕ್ಕಳ ಕಥೆ ಇದರಲ್ಲಿದೆ.

ಕನ್ನಡ ಸಾಹಿತ್ಯ ಅಕಾಡೆಮಿಯಿಂದ ಬಹುಮಾನ ಪಡೆದ ಅವರ ಮೊದಲ ಕಾದಂಬರಿ "ಜೀವನಗಂಗಾ" ಹೆಣ್ಣಿನ ಮೇಲೆ ನಡೆದ ದೌರ್ಜನ್ಯದಿಂದ ನೊಂದ ಹೆಣ್ಣೊಬ್ಬಳ ಕತೆಯಾಗಿ ಮನ ತಟ್ಟುತ್ತದೆ. ಸದಾ ಗಂಡನ ಅಂಕೆಯೊಳಗೇ ಅದುಮಿ ಹಿಡಿದಿಡಲ್ಪಟ್ಟಿದ್ದ ಶಿವಮ್ಮ ಗಂಡನ ನಿರ್ಗಮನದಿಂದ ನಿರ್ಗತಿಕಳಾಗುವಾಗ ಅವಳ ಹೆಗಲ ಮೇಲೆ ಐದು ಮಕ್ಕಳ ಹೊರೆ ಬಿದ್ದಾಗ ಆ ಹೊರೆ ಹೊರಲು ಆಕೆ ಎಲ್ಲ ಸಂಪ್ರದಾಯವಾದಿಗಳನ್ನು ಎದುರಿಸಿ ಮನೆಯಿಂದ ಹೊರ ಬಂದು ನಿಭಾಯಿಸಿದ ಮನೋಜ್ಞ ಕತೆ ಇಲ್ಲಿದೆ. ವಿದ್ಯೆ ಇಲ್ಲದ ಅವಳು ಬೆಳೆದು ನಿಂತು ತನ್ನ ಹಾಗೂ ತನ್ನ ನಾದಿನಿಯ ಮಕ್ಕಳಿಗೆ ಸರಿಯಾದ ವಿದ್ಯೆ ಇತ್ತು ಅವರನ್ನು ಗಂಡನಿಗಿಂತ ಬೇರೆಯಾಗಿ ರೂಪಿಸಿ ಸಾರ್ಥಕತೆಯನ್ನು ಕಂಡುಕೊಂಡ ನಂತರ ಒಂದು ಶಾಲೆ ಕಟ್ಟಿಸಿ ಅನಾಥ ಮಕ್ಕಳಿಗೆ ಆಧಾರವಾಗಿ ನಿಲ್ಲುವುದು ಇದರ ಕಥಾವಸ್ತು.

"ಅನಂತಾನಂತದೆಡೆಗೆ" ಕೂಡಾ ಒಂದು ಹೆಣ್ಣಿನ ಕಥೆ. ತಂದೆಯ ಮರಣಾನಂತರ ಅನಾಥವಾಗಿದ್ದ ಮನೆಗಾಗಿ ತನ್ನ ಆಸೆ ಆಕಾಂಕ್ಷೆಗಳೆಲ್ಲವನ್ನೂ ಬಲಿಗೊಟ್ಟು ತಮ್ಮಂದಿರನ್ನು ವಿದ್ಯಾವಂತರನ್ನಾಗಿ ಮಾಡಿದ ಮೇಲೆ ಅವರೆಲ್ಲ ಬೆನ್ನು ತಿರುಗಿಸಿ ಹೋದಾಗ ಅವಳು ಅನುಭವಿಸುವ ಮಾನಸಿಕ ನೋವು ಈ ಕಥೆಯಲ್ಲಿ ಚಿತ್ರಿತವಾಗಿದೆ.

"ಆಸೆಯ ಸುಳಿಯಲ್ಲಿ" ಕೂಡಾ ಕಾಣುವುದು ಹೆಣ್ಣಿನ ಮೇಲೆ ನಡೆಯುತ್ತಿರುವ ಹಲವಾರು ರೀತಿಯ ದೌರ್ಜನ್ಯಗಳೇ. ಮೊದಲು ಅಣ್ಣನಿಂದ, ಆ ಮೇಲೆ ಗಂಡನಿಂದ ಹಲವಾರು ರೀತಿಯ ಕಷ್ಟಗಳನ್ನು ಅನುಭವಿಸಿ ಗಂಡ ಓಡಿ ಹೋದ ಮೇಲೆ ಅವಳು ಧೈರ್ಯದಿಂದ ಜೀವನವನ್ನು ರೂಪಿಸಿಕೊಂಡು ಜೀವನಕ್ಕೊಂದು ಅರ್ಥಕೊಡುವುದು ಇದರ ಕಥಾವಸ್ತು.

"ಕಮಲಾನಿಕಥಾ" ದಿಟ್ಟ ಹೆಣ್ಣೊಬ್ಬಳ ಕಥೆ. ಆಕೆಯ ಆದರ್ಶಗಳು, ಆದರ್ಶಗಳ ಉಳಿಯುವಿಕೆಗೆ ಆಕೆ ಮಾಡುವ ಪ್ರೀತಿಯ ತ್ಯಾಗ ಇಲ್ಲಿಯ ಕಥಾವಸ್ತು. ಇದರಲ್ಲಿ ಬಲಾತ್ಕಾರಕ್ಕೆ ಒಳಗಾದ ಹೆಣ್ಣೊಬ್ಬಳ ಮಾನಸಿಕ ಹಾಗೂ ದೈಹಿಕ ನೋವನ್ನು ವಿವರಿಸಿ ಅದಕ್ಕೆ ಪರಿಹಾರ ಹುಡುಕುವ ಪ್ರಯತ್ನವನ್ನೂ ಮಾಡಿದ್ದಾರೆ. ಕೆಲವು ವ್ಯಕ್ತಿಗಳು ಒಂದು ಹಳ್ಳಿಯನ್ನು ಹೇಗೆ ಹಾಳುಗೆಡಿಸುತ್ತಾರೆ ಎಂದು ತೋರಿಸುವ ಯತ್ನವನ್ನೂ ಈ ಕಾದಂಬರಿಯಲ್ಲಿ ಮಾಡಿದ್ದಾರೆ.

1977ರಲ್ಲಿ ಮೊದಲ ಪ್ರಕಟಣೆಯನ್ನು ಕಂಡು ಎರಡು ಬಾರಿ ಮರು ಮುದ್ರಣವನ್ನು ಕಂಡ "ಕೃತಂಸ್ವರ ಕ್ರತುಂಸ್ವರ" ಪುರಾಣೇತಿಹಾಸಗಳ ಉಪನಿಷತ್ಕಥಾವಳಿಯನ್ನು ಮನನ ಮಾಡಿಕೊಂಡು ಬರೆದ ಕೃತಿ. ಅವರೇ ಹೇಳುವಂತೆ ಇದರ ಕಥಾಶೈಲಿಯು ಸ್ವಂತದ್ದೇ ಆದರೂ ಇದಕ್ಕೆ ಸರ್ವಾಧಾರ ವೇದೋಪನಿಷತ್ತಿನ ದೇವಾಂಗ–

ವಾಹಿನಿಯಲ್ಲಿನ ಒಂದು ಕಣ. ಉಪನಿಷತ್ತುಗಳಿಂದ ಆಯ್ದ ಕೆಲವು ಸಂಗತಿಗಳನ್ನು ತನ್ನ ಮನಸ್ವೇಚ್ಛೆಯ ಪ್ರಕಾರ ಜೋಡಿಸಿ ಈ ಕೃತಿಯನ್ನು ರಚಿಸಿದ್ದಾರೆ. ವಿಶ್ವಪ್ರಪಂಚದಲ್ಲಿ ಸದಾ ಸ್ಪಂದಿಸುತ್ತಿರುವ ಆಧ್ಯಾತ್ಮಿಕ ಸತ್ವಗಳು ನಿತ್ಯ ಮನ್ನಣೆಗೆ ಪಾತ್ರವಾಗಬೇಕೆನ್ನುವ ಅವರ ತುಡಿತ ಈ ಕಾದಂಬರಿಯಲ್ಲಿ ಸ್ಪಷ್ಟವಾಗಿ ಮೂಡಿದೆ ಎನ್ನಬಹುದು.

(ಅವರ ಉಳಿದ ನಾಲ್ಕು ಕಾದಂಬರಿಗಳು ಡಾ.ಅಘೋರ, ಸಂತ್ರಾಸಿನಿ, ಪದ್ಮಾಲಯ ಮತ್ತು ಶ್ರದ್ಧಾಲಯ ನನಗೆ ಓದಲು ಸಿಕ್ಕಿಲ್ಲ.)

ಮಲ್ಲಿಕಾ ಚಿತ್ರಿಸಿರುವ ಸ್ತ್ರೀ ಮತ್ತು ಪುರುಷ ಪಾತ್ರಗಳು

ಮಲ್ಲಿಕಾರವರು ಚಿತ್ರಿಸಿರುವ ಸ್ತ್ರೀ ಪಾತ್ರಗಳು ಅವರ ಕಾದಂಬರಿಗಳ ಜೀವಾಳಗಳು ಅಂದರೆ ತಪ್ಪಾಗುವುದಿಲ್ಲ. ಚಿಕ್ಕಂದಿನಿಂದಲೂ ಆದರ್ಶ ಹೊತ್ತು ಸಾಗಿದವಳು. ಸ್ವಾಭಿಮಾನಿ. ಪರೋಪಕಾರಿ. ಮದುವೆಯಾಗುವ ತನಕ ದಿಟ್ಟ ಪಾತ್ರ. ಮದುವೆಯಾದ ಮೇಲೆ ಅವಳು ಪಡುವ ಪಾಡು, ಸಂಸಾರ ಉಳಿಸಲು ಅವಳ ಹೆಣಗಾಟ, ಗಂಡು ಬೀರಿ ಎಂದೆನಿಸಿಕೊಂಡವಳೂ ವಾಸ್ತವದಲ್ಲಿ ಗಂಡಿನ ಎಲ್ಲ ಒತ್ತಡಗಳಿಗೂ ತನ್ನನ್ನು ಒಡ್ಡುತ್ತಾ ತನ್ನ ವ್ಯಕ್ತಿತ್ವವನ್ನೇ ಕಳಕೊಳ್ಳುತ್ತಾ ಸಾಗುವುದು ಇಂದಿನ ಹೆಚ್ಚಿನ ಉದ್ಯೋಗಸ್ಥ ಮಹಿಳೆಯರ ಜೀವನಕ್ಕೆ ಕನ್ನಡಿ ಹಿಡಿದಂತಿದೆ. ಕಮಲೇಶ್ ಮತ್ತು ಅವಳ ಗೆಳತಿಯರ ಪಾತ್ರ ಚಿತ್ರಣಗಳಲ್ಲಿ ಇಂದಿಗೂ ಸ್ತ್ರೀ ಪರಿಸ್ಥಿತಿಗಳ ಗೊಂಬೆ ಎನ್ನುವ ಸತ್ಯಕ್ಕೆ ಒತ್ತುಕೊಟ್ಟಿದ್ದಾರೆ. ಇಲ್ಲಿ ಬರುವ ಪುರುಷ ಪಾತ್ರಗಳು ಸ್ತ್ರೀ ಪಾತ್ರಗಳ ಮೇಲೆ ಒತ್ತಡ ಹೇರುವವರು. ಕಮಲೇಶ್‌ನ ಅಣ್ಣ ಮದುವೆ ಮೊದಲು ಆಕೆಯನ್ನು ಶೋಷಿಸಿದರೆ, ಮುಂದೆ ಚಂದ್ರಕಾಂತ ಮದುವೆಯಾಗಿ ಆಕೆಯನ್ನು ಮಾನಸಿಕವಾಗಿ ಆರ್ಥಿಕವಾಗಿ ಶೋಷಿಸುವ ಪಾತ್ರವಾಗಿ ಮೂಡಿಬಂದಿದೆ.

ವಂದೇಮಾತರಂನಲ್ಲಿ ಬರುವ ಸ್ತ್ರೀ ಪಾತ್ರಗಳು ಅಷ್ಟೊಂದು ವಿದ್ಯಾವಂತರಲ್ಲದಿದ್ದರೂ ಗಟ್ಟಿ ಪಾತ್ರಗಳು. ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವ ಎದೆಗಾರಿಕೆ ಉಳ್ಳವರು. ಕರ್ತವ್ಯ ಎನ್ನುವುದು ಹುಡುಗರಿಗೆ ಮಾತ್ರ ಮೀಸಲೇ ಎಂದು ಪ್ರಶ್ನಿಸುವ ಧೈರ್ಯ ತೋರುವವರು. ಯಾವುದೇ ವಿಚಾರಸರಣಿ ಸ್ತ್ರೀತ್ವಕ್ಕೆ ಮಾತ್ರವಲ್ಲ ಪುರುಷತ್ವಕ್ಕೂ ಅನ್ವಯಿಸುತ್ತದೆ ಎಂದು ಗಟ್ಟಿಯಾಗಿ ಹೇಳಬಲ್ಲ ಪೂವಿ ಇಲ್ಲಿಯ ನಾಯಕಿಯಾಗಿ ಮನದಲ್ಲಿ ನಿಲ್ಲುವಂತಹ ಪಾತ್ರ. ಕೊನೆಯಲ್ಲಿ ಗಂಡನ ಪತ್ತೆ ಇಲ್ಲದಾಗ ತನ್ನ ಮತ್ತು ಮೈದುನನ ಮಕ್ಕಳಿಗೆ ದಿಕ್ಕಾಗಲು ಪ್ರೀತಿಯ ಗಂಡನನ್ನು ಮರೆತು ಮೈದುನನ ಕೈ ಹಿಡಿಯುವ ಪ್ರಾಕ್ಟಿಕಲ್ ಮೈಂಡೆಡ್‌ನ ಹೆಣ್ಣಾಗಿ ಚಿತ್ರಿತವಾಗಿದ್ದಾಳೆ. ಇಲ್ಲಿ ಬರುವ ಇನ್ನೊಂದು ಗಟ್ಟಿ ಪಾತ್ರ ಪೂವಿಯ ಅತ್ತೆ ಕಾವೇರಿಯಮ್ಮನದ್ದು. ಎರಡು ಗಂಡುಮಕ್ಕಳು ದೂರವಾದಾಗ ಸೊಸೆಯಂದಿರಿಗೆ ಧೈರ್ಯ ತುಂಬುತ್ತಾ ಜೀವನದ ಕಷ್ಟಗಳಿಗೆ ಹೆಗಲು ಕೊಟ್ಟು ನಿಲ್ಲುವ, ಕೊನೆಯಲ್ಲಿ ಕಿರಿಯ ಸೊಸೆ ಎರಡು ಮಕ್ಕಳನ್ನು ಅನಾಥರನ್ನಾಗಿ ಮಾಡಿ ಸತ್ತಾಗ ಹಿರಿಯ ಸೊಸೆಯನ್ನೇ ಕಿರಿಯಮಗನ ಕೈ ಹಿಡಿಸಿ ಜೀವನದ ಮುಂದುವರಿಕೆಗೆ ಕಾರಣವಾಗುವ ಹೊಸ ಆಲೋಚನೆಗಳನ್ನು ಹೊತ್ತ ಪಾತ್ರ. ಇಡೀ ಕಾದಂಬರಿಯ ತುಂಬಾ ಕಾವೇರಿಯಮ್ಮನ ದಿಟ್ಟತನ ವಿಜೃಂಭಿಸುತ್ತದೆ. ಜೀವನದ ಕೊನೆಯ ಶಕ್ತಿಯ ಕಣ ಇರುವವರೆಗೆ ಹೋರಾಡುವುದೇ ಜೀವನ ಧರ್ಮ ಎಂದು ಕೊನೆಯವರೆಗೆ ಹೋರಾಡುವ ಈ ಪಾತ್ರ ಪುಸ್ತಕ ಕೆಳಗಿಟ್ಟಮೇಲೂ ಜೀವಂತವಾಗಿ ಉಳಿಯುವ ಪಾತ್ರ.

ಇಲ್ಲಿ ಬರುವ ಪುರುಷ ಪಾತ್ರಗಳು ಮಾನವೀಯ ಗುಣಗಳುಳ್ಳ ಪಾತ್ರಗಳು. ಮುದ್ದಣ್ಣ, ಮಾದಯ್ಯ ಇಬ್ಬರೂ ಸ್ವಾತಂತ್ರ್ಯ ಹೋರಾಟಗಾರರು. ಕೈ ಹಿಡಿದ ಹೆಂಡತಿಯನ್ನು ಪ್ರೀತಿಯಿಂದ ಕಾಣುವವರು. ಆದರ್ಶವಾಗಿ ಉಳಿಯುವವರು.

ಸದಾಕಾಲ ಪಾತಾಳಕ್ಕೆ ಅಮುಕಲ್ಪಟ್ಟಿದ್ದು ಅಲ್ಲಿಂದ ಎದ್ದು ನಿಲ್ಲುವ ದಿಟ್ಟ ಹೆಣ್ಣಾಗಿ ಮೂಡಿ ಬಂದ ಶಿವಮ್ಮ "ಜೀವನಗಂಗಾ" ಕಾದಂಬರಿಯ ಜೀವಾಳ. ನಾಲ್ಕು ಗೋಡೆಗಳ ಒಳಗೇ ಜೀವನ ಸಾಗಿಸಿದ್ದ ಆಕೆ ತನ್ನ ಹೆಗಲಿಗೆ

ಬಿದ್ದ ಐದು ಮಕ್ಕಳ ಭಾರ ಹೊತ್ತು ಮುಂದುವರಿಯಬೇಕಾದಾಗ ತೋರುವ ಸ್ಥೈರ್ಯ ಸ್ತ್ರೀಶಕ್ತಿಯ ಪ್ರತೀಕವಾಗುತ್ತದೆ. ಕೊನೆಗೆ ಆಕೆ ಶಾಲೆ ತೆರೆದು ಅನಾಥ ಮಕ್ಕಳ ಸಹಾಯಕ್ಕಾಗಿ ಪಣತೊಟ್ಟು ನಿಲ್ಲುವುದು ಮಲ್ಲಿಕಾರವರ ಆದರ್ಶವಾದಕ್ಕೆ ನಿದರ್ಶನವಾಗುತ್ತದೆ.

ಶಿವಮ್ಮನ ಗಂಡನಾಗಿ ಚಿತ್ರಿತನಾದ ಸ್ವಾಮಿ ಓದುಗರ ಕ್ರೋಧಕ್ಕೆ ಪಾತ್ರನಾಗುವನಾದರೂ ಮಗನಾಗಿ ಚಿತ್ರಿತನಾದ ರವಿ ಹೆಣ್ಣಿನ ನೋವು ಅರಿಯುವ ಆದರ್ಶ ಪಾತ್ರವಾಗಿ ನಿಲ್ಲುತ್ತಾನೆ. ಶಿವಮ್ಮ ಜೀವನದಲ್ಲೆದುರಿಸುವ ಎಲ್ಲ ಶೋಷಣೆಗಳಿಗೆ ಪರಿಹಾರ ಕಾಣಿಸುವವನಾಗಿ ರವಿ ಕಾದಂಬರಿಯುದ್ದಕ್ಕೂ ಗಮನ ಸೆಳೆಯುತ್ತಾನೆ. ಸಮಾಜ ಸುಧಾರಕ ಚಂದಣ್ಣನ ಮೂಲಕ ಭಗವಂತನ ಸೃಷ್ಟಿಯಲ್ಲಿ ಹೆಣ್ಣು ಗಂಡು ಒಂದೇ ಅವರನ್ನು ನಿರ್ಬಂಧಿಸಲು ನೀವು ಯಾರು ಎನ್ನುವ ಪ್ರಶ್ನೆ ಹಾಕಿಸಿ ಎಲ್ಲ ಪುರುಷರಿಂದಲೂ ಇದಕ್ಕೆ ಉತ್ತರ ಅಪೇಕ್ಷಿಸುತ್ತಾರೆ ಮಲ್ಲಿಕಾ. ಹಳೆಯ ಕಂದಾಚಾರಗಳಿಂದ ಹೆಣ್ಣೊಬ್ಬಳ ಜೀವನವನ್ನು ಕೆದಕುವ ಗಂಡಸರ ಎದುರು ಆದರ್ಶವಾದಗಳನ್ನು ಪ್ರತಿಪಾದಿಸುವ ಗಂಡಸರನ್ನೂ ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

"ಅನಂತಾನಂತದೆಡೆಗೆ"ಯ ನಿರ್ಮಲಾ ತ್ಯಾಗಮೂರ್ತಿಯಾಗಿ ಚಿತ್ರಿತವಾಗಿದ್ದರೆ ಇಲ್ಲಿ ಬರುವ ಪುರುಷ ಪಾತ್ರಗಳು ಸ್ವಾರ್ಥಿಗಳು, ಮೋಸಗಾರರು. ಅಕ್ಕನಿಂದ ಎಲ್ಲ ಸಹಕಾರ ಪಡೆದ ತಮ್ಮಂದಿರು, ನಿರ್ಮಲಾಳನ್ನು ಪ್ರೀತಿಸುವ ನಾಟಕವಾಡಿ ಅವಳಿಂದ ಬೇಕಾದಷ್ಟು ಉಪಕಾರ ಪಡೆದು ವಂಚಿಸುವ ಅಮರನಾಥ ಗಂಡಸರೆಂದರೆ ಅಸಹ್ಯ ಹುಟ್ಟಿಸುವಂಥ ಪಾತ್ರಗಳು.

"ಕಮಲಾನಿಕಥಾ"ದಲ್ಲಿ ಬರುವ ಕಮಲಾನಿ ಪ್ರಾರಂಭದಿಂದ ಕೊನೆಯವರೆಗೆ ಸೋಲದ ಪಾತ್ರ, ಲಲಿತೆ ಶೋಷಿತೆ. ಸುಲೋಚನ ಪ್ರೀತಿಯನ್ನು ಅತಿಯಾಗಿ ಹಚ್ಚಿಕೊಂಡು ಮನಸ್ವಾಸ್ಥ್ಯ ಕಳಕೊಳ್ಳುವ ವೀಕ್ ಹುಡುಗಿ, ಜಾನಕಮ್ಮ ಕಷ್ಟದಲ್ಲೂ ಪರಿಹಾರ ಹುಡುಕುವ ಪ್ರಯತ್ನಶೀಲೆ; ಇದರಲ್ಲಿ ಮನವನ್ನಾಕ್ರಮಿಸಿ ನಿಲ್ಲುವ ಸ್ತ್ರೀಪಾತ್ರ ಒಬ್ಬಳು ಚಿಕ್ಕ ಹುಡುಗಿ–ಕಲ್ಯಾಣಿ. ಆಕೆಯಲ್ಲಿ ಮಾದರಿ ಹೆಣ್ಣನ್ನು ಚಿತ್ರಿಸಿದ್ದಾರೆ. ಅನೂಪ್ ಆದರ್ಶವಾದಿ. ರಾಮೇಶ್ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ಒದ್ದಾಡುವ ಕ್ಯಾನ್ಸರ್ ರೋಗಿ. ಇಬ್ಬರೂ ಮಹಿಳೆಯರನ್ನು ಶೋಷಿಸುವವರಲ್ಲ, ಗೌರವಿಸುವವರು. ಇಲ್ಲಿ ಬರುವ ಹಿರಿಯರಾದ ಗುರುನಾಥ್, ಉಪಾಧ್ಯಾಯರು, ಪಾಲಾಕ್ಷ ಎಲ್ಲರೂ ಒಳ್ಳೆಯತನಕ್ಕೆ ನಿದರ್ಶನರು. ಜತೆಗೆ ಲಲಿತೆಯ ಕಷ್ಟಕ್ಕೆಲ್ಲ ಕಾರಣರಾದ ತಂದೆ ಮಹಾದೇವನಂತಹ, ಅವಳನ್ನು ಮದುವೆಯಾಗಬಯಸಿದ ತೊನ್ನು ರೋಗಿ ವೆಂಕಟೇಶ್‌ನಂತಹ ಸ್ತ್ರೀವರ್ಗವನ್ನು ಶೋಷಿಸುವ ಕೆಟ್ಟ ಪಾತ್ರಗಳನ್ನೂ ಚಿತ್ರಿಸಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ ಅವರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳಿಗೇ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಪುರುಷ ಪಾತ್ರಗಳನ್ನು ಹಿಂದಕ್ಕೆ ತಳ್ಳಿದ್ದಾರೆ. ಇವರ ಕಾದಂಬರಿಗಳಲ್ಲಿ ಪುರುಷ ಪಾತ್ರಗಳು ಮುಖ್ಯರಾಗುವುದೇ ಇಲ್ಲ.

ಮಲ್ಲಿಕಾರವರ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ

ಮಲ್ಲಿಕಾರವರ ಕಾದಂಬರಿಗಳಲ್ಲಿ ಈ ಎರಡೂ ಪ್ರಜ್ಞೆಗಳೂ ಬಹಳವಾಗಿ ವಿಜೃಂಭಿಸಿವೆ. ಸ್ವಾತಂತ್ರ್ಯ ಸಂಗ್ರಾಮವೂ ಸೇರಿದಂತೆ ಹಲವಾರು ರಾಜಕೀಯ ಆಗುಹೋಗುಗಳು ಅವರ ಕಾದಂಬರಿಗಳಲ್ಲಿ ಸಹಜವಾಗಿ ಸೇರಿಹೋಗಿರುವುದನ್ನು ಕಾಣಬಹುದು. ಹಲವಾರು ಸಾಮಾಜಿಕ ಸುಧಾರಣೆಗಳಿಗೂ ಅವರು ಒತ್ತುಕೊಟ್ಟಿರುವುದು ಕಾಣುತ್ತದೆ. ಪಾನನಿರೋಧ ಚಳುವಳಿ; ಹೆಂಗಸರ ಹಕ್ಕಿಗಾಗಿ ತುಡಿತ; ಸ್ತ್ರೀಯರಿಗೆ ವಿದ್ಯೆಯ ಅಗತ್ಯ; ಹಳ್ಳಿಯನ್ನು ಮಾದರಿ ಗ್ರಾಮವನ್ನಾಗಿ ಮಾಡುವುದು; ಈ ಪ್ರಬುದ್ಧ ದೇಶದ ನವಚೈತನ್ಯದಲ್ಲಿ ಜಾತಿನೀತಿಗಳ ಬಗ್ಗೆ ಇನ್ನೂ ಅಭಿಮಾನವಿದೆಯಲ್ಲ ಎಂದು ಹೀಯಾಳಿಸುವುದು; ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರವ್ಯಾಪೀ ಚಳುವಳಿಯಲ್ಲಿ ಸ್ತ್ರೀಯರನ್ನು ಒಮ್ಮತದಿಂದ ಉಪಯೋಗಿಸಿಕೊಂಡ ಪುರುಷವರ್ಗ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದದ್ದೇ ತಡ ಸ್ತ್ರೀಯರನ್ನು ಸಂಪೂರ್ಣ ಕಡೆಗಣಿಸಿತು.

ಪುರುಷರನ್ನು ರಾಜಕೀಯ ಸಂತ್ರಸ್ತರೆಂದು ಗುರುತಿಸಿದ ಸರಕಾರ ಸ್ತ್ರೀಯರನ್ನೇಕೆ ಕೈಬಿಟ್ಟರು? ಎನ್ನುವ ಪ್ರಶ್ನೆ ಎತ್ತಿ ರಾಜಕೀಯವಾಗಿ ಮಹಿಳೆಯರನ್ನು ಎಷ್ಟು ಕಡೆಗಣಿಸಿದ್ದಾರೆ ಎನ್ನುವ ಸತ್ಯಕ್ಕೆ ಕನ್ನಡಿ ಹಿಡಿದಿರುವುದು; ಗಂಡಿನ ಆಕ್ರಮಣಕ್ಕೆ ಒಳಗಾದವಳಿಗೆ ಮದುವೆ ಮಾಡಿಸುವುದು; ಹೆಣ್ಣಿಗೆ ಅನಿವಾರ್ಯ ಕಾರಣವಿದ್ದಾಗ ಎರಡನೆಯ ಮದುವೆ ಮಾಡಿಸುವುದು; ಮುಂತಾದ ಹಲವು ಸಾಮಾಜಿಕ ಆದರ್ಶಗಳನ್ನು ಅಭಿವ್ಯಕ್ತಿಸಿರುವುದನ್ನು ಕಾಣಬಹುದು. ಹಾಗೇ ಮೂಢನಂಬಿಕೆಗಳ ವಿರುದ್ಧವೂ ಅವರು ಅಲ್ಲಲ್ಲಿ ದನಿ ಎತ್ತಿದ್ದಾರೆ.

ಮಲ್ಲಿಕಾರ ಕಾದಂಬರಿಗಳಲ್ಲಿ ಸ್ತ್ರೀವಾದಿ ನಿಲುವುಗಳು

ಈ ಬಗ್ಗೆ ಲೇಖನದ ಪ್ರಾರಂಭದಲ್ಲೇ ಉಲ್ಲೇಖಿಸಿರುವುದರಿಂದ ಪುನಃ ಅದರ ಪುನರಾವರ್ತನೆಯ ಅಗತ್ಯವಿಲ್ಲ ಸೂಕ್ಷ್ಮವಾಗಿ ಹೇಳುವುದಾದರೆ ಮಹಿಳೆಯರು ಪ್ರಾಚೀನ ಕಟ್ಟುಕಟ್ಟಳೆಗಳನ್ನು ಮುರಿದು ಹೊರಬರಬೇಕೆಂಬ ಅವರ ಆಸೆ ಅವರ ಎಲ್ಲ ಕಾದಂಬರಿಗಳಲ್ಲೂ ಕಾಣುತ್ತದೆ. "ಹೆಣ್ಣಿಗೆ ಪ್ರಾಣವೆನ್ನುವುದು ಇದ್ದರಲ್ಲವೇ ಹೋಗುವುದು? ಭಗವಂತ ನಮಗೆ ದೈವಿಕ ಚೇತನ ನೀಡಿ ನೂರು ಗಂಡಾಂತರಗಳಲ್ಲಿ ನೂಕಿ ಸಂಯಮ ಕಲಿಸುತ್ತಾನೆ. ಅಂತಲೆ ಬೆಂಕಿಯಲ್ಲಿ ಧುಮುಕಿದರೂ ಸ್ತ್ರೀತ್ವಕ್ಕೆ ಸಾವಿಲ್ಲ", ಎನ್ನುವ ಮಾರ್ಮಿಕ ಸತ್ಯವನ್ನು ಅವರು ಎಲ್ಲ ಕಾದಂಬರಿಗಳಲ್ಲೂ ತೋರಿಸಿಕೊಟ್ಟಿದ್ದಾರೆ. ಈ ಸತ್ಯದ ವಿರುದ್ಧ ಹೋರಾಟ ಇಂದಿನ ಅಗತ್ಯವೆಂದೂ ಹೇಳಿದ್ದಾರೆ.

ತಮ್ಮ ಕಾದಂಬರಿಗಳ ತುಂಬ ಹೆಣ್ಣಿನ ನೋವುಗಳ ಚಿತ್ರಣ ಕೊಡುತ್ತಾ "ಹೆಂಗಸಿನ ಈ ಪರಿಸ್ಥಿತಿಗೆ ಸಮಾಜ ಪಿತೃಗಳೆ ಕಾರಣ. ಶಾಸ್ತ್ರಗಳ ಸಂಕೋಲೆ ತೊಡಿಸಿ, ಮಂಗಳ ದ್ರವ್ಯಗಳ ಹುಚ್ಚು ಹಿಡಿಸಿ ಮುಗ್ಧ ಮನಕ್ಕೆ ಪುರಾಣ, ದೇವಿಯರ ಕಥೆ ಹೇಳಿ ಮೂಲೆಗೆ ಕೂಡಿಸಿದ್ದಾರೆ. ಲೋಕದೃಷ್ಟಿಯಲ್ಲಿ ಗೌರವ. ಒಳಗಡೆ ಮುಳ್ಳಿನ ಪಂಕ. ಅಬಲತೆಯ ನೇಮದಲ್ಲಿ, ಗೌರವದ ನೇಮದಲ್ಲಿ, ರಕ್ಷಣೆಯ ನೇಮದಲ್ಲಿ ನಾಲ್ಕು ಗೋಡೆಗಳ ಭದ್ರ ಕೋಟೆಯೊಳಗೆ ಕೂಡಿಹಾಕುವ ಸಾಮಾಜಿಕ ವ್ಯವಸ್ಥೆ"ಗೆ ಆಕ್ರೋಶ ವ್ಯಕ್ತಪಡಿಸುತ್ತಾ ಬರೆದ ಅವರ ಕಾದಂಬರಿಗಳು ಸ್ತ್ರೀವಾದಗಳ ದಿಟ್ಟ ನಿಲುವಿನಿಂದ ಮೆರೆದಿವೆ.

ಇದು ಅವರ ಕಾದಂಬರಿಗಳ ಸೂಕ್ಷ್ಮ ಪರಿಚಯ. ಸರಿಯಾದ ಪರಿಚಯವಾಗಬೇಕಾದರೆ ಅವರ ಬರಹಗಳನ್ನು ಎಲ್ಲರೂ ಓದಬೇಕು. ಅದೇ ಅವರಿಗೆ ನಾವು ಮಾಡುವ ದೊಡ್ಡ ಸನ್ಮಾನವಾಗುತ್ತದೆ. ಅವರ ಬರಹಗಳು ಇನ್ನಾದರೂ ಖ್ಯಾತರೆಂದೆನಿಸಿಕೊಂಡ ವಿಮರ್ಶಕರಿಂದ ಮುಖ್ಯವಾಗಿ ಸ್ತ್ರೀವಾದಿ ವಿಮರ್ಶಕರಿಂದ ಚರ್ಚಿತವಾಗಬೇಕು; ಅವರು ಮಾಡಿರುವ ಕೆಲಸದ ಮೌಲ್ಯಮಾಪನವಾಗಬೇಕು.

ಪ್ರಶಸ್ತಿ–ಗೌರವಗಳು

ಶಾಲೆಗೇ ಹೋಗದೆ, ಶಿಷ್ಯ ವಿದ್ಯೆಯನ್ನೂ ಕಲಿಯದೆ, ತಮ್ಮದೇ ಆದ ಆಸಕ್ತಿಯಿಂದ ಅಕ್ಷರ ಕಲಿತು, ಓದಲು ಅಭ್ಯಸಿಸಿ ಪ್ರತಿಕೂಲ ಪರಿಸ್ಥಿತಿಯನ್ನೆದುರಿಸಿ, ಐವತ್ತೈದಕ್ಕಿಂತ ಹೆಚ್ಚು ಕೃತಿಗಳನ್ನು ರಚಿಸಿದ್ದು ಮಲ್ಲಿಕಾರವರ ಮಹತ್ಸಾಧನೆ. ಇವರ ಶ್ರಮ, ಸಾಧನೆ, ಸಾಹಿತ್ಯ ರಚನೆಗಳನ್ನು ಗುರುತಿಸಿ, ಕರ್ನಾಟಕ ಸರ್ಕಾರವು, 1999ರಲ್ಲಿ ಒಂದು ಲಕ್ಷ ಮೊತ್ತದ ಅತ್ಯುನ್ನತ ಸಾಹಿತ್ಯಿಕ ಮಹಿಳಾ ಪ್ರಶಸ್ತಿಯಾದ "ದಾನ ಚಿಂತಾಮಣಿ ಅತ್ತಿಮಬ್ಬೆ" ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಮೊಟ್ಟ ಮೊದಲ ಕೃತಿ 'ಜೀವನಗಂಗಾ'ಕ್ಕೆ ಸಾಹಿತ್ಯ ಅಕಾಡೆಮಿಯ ಬಹುಮಾನ ಲಭಿಸಿದೆ. ಹೆಸರಾಂತ ಕರ್ನಾಟಕ ಲೇಖಕಿಯರ ಸಂಘದಿಂದ 1999ರಲ್ಲಿ ಸನ್ಮಾನ; ದೆಹಲಿ ಕನ್ನಡಿಗರ ಗಾರ್ಗಿ ಪ್ರಶಸ್ತಿ; 2000ನೇ ಸಾಲಿನಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ; ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನಿಂದ, 2000ನೇ ಸಾಲಿನಲ್ಲಿ ಬಿ. ಸರೋಜಾದೇವಿ ಪ್ರಶಸ್ತಿ–ಗೌರವಗಳು ಈಕೆಗೆ ಲಭ್ಯವಾಗಿರುವುದು ಸಂತೋಷದ ವಿಷಯ.

——— * ———

ಕನ್ನಡ ಚಿತ್ರರಂಗದ ಮೊದಲ ನಿರ್ಮಾಪಕಿ ಎಂ.ವಿ. ರಾಜಮ್ಮ

ಡಾ. ಮಲ್ಲಿಕಾರ್ಜುನ ಕೂಡ್ಲಿಗೆರೆ

ಕನ್ನಡ ಚಿತ್ರರಂಗದ ಪ್ರಥಮ ಮಹಿಳಾ ನಿರ್ಮಾಪಕಿ, ನಟಿ ಎಂ.ವಿ. ರಾಜಮ್ಮ ತನ್ನ ಮೋಹಕರೂಪ, ಸುಶ್ರಾವ್ಯ ಕಂಠಶ್ರೀ ಹಾಗೂ ಸಹಜಾಭಿನಯ ಪ್ರತಿಭೆಯಿಂದ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಚಿತ್ರರಸಿಕರ ಹೃನ್ಮನ ಸೂರೆಗೊಂಡ ಅಭಿಜಾತ ಕಲಾವಿದೆ. ಕನ್ನಡದ ಮೊಟ್ಟಮೊದಲಸೆಯ ಸಾಮಾಜಿಕ ಚಿತ್ರದ ನಾಯಕ–ನಟಿಯಾಗಿ, ನಿರ್ಮಾಪಕಿಯಾಗಿ ಹಲವು ಉತ್ತಮ ಕೊಡುಗೆಗಳನ್ನು ನೀಡಿದ್ದಾರೆ, ರಾಜಮ್ಮ.

ಸ್ಫುರದ್ರೂಪ, ಅಭಿಜಾತ ಅಭಿನಯ ಪ್ರತಿಭೆ, ಇಂಪಾದ ಕಂಠದಿಂದ ರಂಗಭೂಮಿಯಲ್ಲಿ ಹಾಡಿ, ಅಭಿನಯಿಸಿ ಸಹಸ್ರಾರು ಪ್ರೇಕ್ಷಕರ ಕಣ್ಮಣಿಯಾಗಿ ಬೆಳೆದ ಎಂ.ವಿ.ರಾಜಮ್ಮ ಕನ್ನಡ ಚಿತ್ರರಂಗದಲ್ಲಿ ನಟಿಯಾಗಿ, ನಿರ್ಮಾಪಕಿಯಾಗಿ ಹಲವು ಪ್ರಥಮಗಳನ್ನು ಸಾಧಿಸಿದ ಅಪೂರ್ವ ಕಲಾವಿದೆ. ಕನ್ನಡದ, ಅಷ್ಟೇಏಕೆ, ಇಡೀ ದಕ್ಷಿಣ ಭಾರತದ ಪ್ರಪ್ರಥಮ ಸಾಮಾಜಿಕ ಚಿತ್ರ 'ಸಂಸಾರ ನೌಕ'ದ ನಾಯಕ ನಟಿಯಾಗಿ ಚಿತ್ರರಂಗ ಪ್ರವೇಶ.

1936ರಿಂದ 1978ರ ವರೆಗೆ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದ ರಾಜಮ್ಮ ಹಲವು ಕಲಾವಿದರ ಅಭ್ಯುದಯಕ್ಕೆ ಕಾರಣರಾಗಿದ್ದಾರೆ. ಪುಟ್ಟಣ್ಣ ಕಣಗಾಲ್ ಅವರ ಯಶೋಗಾಥೆಯಲ್ಲಿ ರಾಜಮ್ಮನವರ ಪಾತ್ರ ಮಾತೃವಾತ್ಸಲ್ಯದಿಂದ ಕೂಡಿದ್ದು. 1942ರಲ್ಲಿ ರಾಜಮ್ಮ ಅವರೇ ಸ್ವಂತವಾಗಿ ತಯಾರಿಸಿದ್ದ 'ರಾಧಾರಮಣ' ಚಿತ್ರದ ಮೂಲಕ ಜಿ.ವಿ.ಅಯ್ಯರ್ ಮತ್ತು ಟಿ. ಎನ್. ಬಾಲಕೃಷ್ಣ ಅವರುಗಳನ್ನು ಬೆಳ್ಳಿತೆರೆಗೆ ಪರಿಚಯಿಸಿದರು. 1960ರಲ್ಲಿ ಅವರೇ ತಯಾರಿಸಿದ 'ಮಕ್ಕಳ ರಾಜ್ಯ' ಚಿತ್ರದ ಮೂಲಕ ಹಾಸ್ಯನಟ ಉಮೇಶ್ ಅವರನ್ನು ಬಾಲನಟನಾಗಿ ಪರಿಚಯಿಸಿದರು.

ಕನ್ನಡದ ಮೊದಲ ಸಾಮಾಜಿಕ ಚಿತ್ರ 'ಸಂಸಾರ ನೌಕ' (1936) ರಾಜಮ್ಮನವರು ನಾಯಕಿಯಾಗಿ ಅಭಿನಯಿಸಿದ ಮೊದಲ ಚಿತ್ರ, ಖ್ಯಾತ ನಿರ್ದೇಶಕ ಹೆಚ್.ಎಲ್.ಎನ್.ಸಿಂಹ ಇವರನ್ನು ಬೆಳ್ಳಿತೆರೆಗೆ ಪರಿಚಯಿಸಿದರು.

ಬೆಂಗಳೂರು ಜಿಲ್ಲೆ ಅಗ್ಗೊಂಡಹಳ್ಳಿಯಲ್ಲಿ 1923ರ ಮಾರ್ಚ್‌ನಲ್ಲಿ ಜನಿಸಿದ ರಾಜಮ್ಮ ಬಾಲ್ಯದಲ್ಲಿಯೇ ಅಭಿನಯ ಕಲೆಯ ಬಗ್ಗೆ ಆಕರ್ಷಿತರಾದರು. ಸುಪ್ರಸಿದ್ದ ಜಮೀನ್ದಾರ್ ಕುಟುಂಬದ ವ್ಯಾಪಾರಿ ನಂಜಪ್ಪ ಹಾಗೂ ಸುಬ್ಬಮ್ಮ ಇವರ ತಂದೆ– ತಾಯಿ.

ದೈವದತ್ತವಾದ ಮೋಹಕ ರೂಪ, ಸುಮಧುರ ಕಂಠಶ್ರೀ ಹೊಂದಿದ್ದ ರಾಜಮ್ಮ ತಾನು ಓದುತ್ತಿದ್ದ ಶಾಲೆಯ ನಾಟಕಗಳಲ್ಲಿ ಏಕಪಾತ್ರಗಳಲ್ಲಿ ಅಭಿನಯಿಸಿ ಎಲ್ಲರ ಮೆಚ್ಚುಗೆ ಗಳಿಸಿದ್ದರು. ಜೊತೆಗೆ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಅಕ್ಕರೆಯ, ಅಚ್ಚುಮೆಚ್ಚಿನ ಹುಡುಗಿಯಾಗಿದ್ದರು. ಬೆಂಗಳೂರಿನ ಆರ್ಯ ಬಾಲಿಕಾ ಶಾಲೆಯಲ್ಲಿ 8ನೆಯ ತರಗತಿಯವರೆಗೆ ವಿದ್ಯಾಭ್ಯಾಸ. ಒಮ್ಮೆ ಆಕೆ ಓದುತ್ತಿದ್ದ ಶಾಲೆಯಲ್ಲಿ 'ಕೃಷ್ಣಲೀಲಾ' ನಾಟಕವನ್ನು ಏರ್ಪಡಿಸಲಾಗಿತ್ತು. ಸಹಜವಾಗಿಯೇ ಕೃಷ್ಣನ ಪಾತ್ರಕ್ಕೆ ರಾಜಮ್ಮ ಆಯ್ಕೆಯಾಗಿದ್ದರು.

ಎಂ.ವಿ.ರಾಜಮ್ಮನವರ ಕಲಾಪಿಪಾಸೆ ಬಗ್ಗೆ ಹಲವರಿಂದ ತಿಳಿದುಕೊಂಡ ಪೀರ್ ಸಾಹೇಬರು ಆಕೆಯನ್ನು ತಮ್ಮ ನಾಟಕ ಮಂಡಳಿಗೆ ಸೇರಲು ಆಹ್ವಾನಿಸಿದರು. ಹಿರಿಯರ ಸಮ್ಮತಿ ಪಡೆದು 'ಚಂದ್ರಕಲಾ ನಾಟಕ ಮಂಡಳಿ' ಮೂಲಕ ರಂಗಭೂಮಿಗೆ ಪಾದಾರ್ಪಣೆ ಮಾಡಿದರು. 'ಸಂಸಾರನೌಕ' ಮತ್ತು 'ಗೌತಮಬುದ್ದ' ನಾಟಕಗಳಲ್ಲಿ ಸಮವಾಗಿ 'ಸರಳ' ಹಾಗೂ 'ಯಶೋಧರ' ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಈ ಪಾತ್ರಗಳಲ್ಲಿ ಅವರ ಅಭಿನಯ ಲಾಲಿತ್ಯ, ಗಾಯನದ ಮಾಧುರ್ಯ, ಪಂಡಿತ ಪಾಮರರೆಲ್ಲರಿಗೆ ಮೆಚ್ಚುಗೆಯಾಗಿ ಕನ್ನಡ ರಂಗಭೂಮಿಯ ಶ್ರೇಷ್ಠ ಅಭಿನೇತ್ರಿ ಸ್ಥಾನಕ್ಕೆ ಏರಿದರು.

ಅಭಿನವ ಭಕ್ತಶಿರೋಮಣಿ ಸಿ.ಬಿ.ಮಲ್ಲಪ್ಪನವರ ಕಂಪನಿ, ಹಾಸ್ಯ ಕಲಾನಿಧಿ ಹಲಗೇರಿ ಜೆಟ್ಟಪ್ಪನವರ ಕಂಪನಿಗಳು ಮೊಕ್ಕಾಂ ಮಾಡಿದ್ದವು. ಇಷ್ಟಾದರೂ ಪೀರ್ ಸಾಹೇಬರ ಕಂಪನಿಯ ನಾಟಕಗಳಿಗೆ ಜನ ಕಿಕ್ಕಿರಿದು ನೆರೆಯುತ್ತಿದ್ದರು. ಇದಕ್ಕೆ ಮುಖ್ಯ ಕಾರಣ 'ಸಂಸಾರ ನೌಕ' ನಾಟಕದಲ್ಲಿ ಪೀರ್ ಸಾಹೇಬರ ಸುಂದರನ ಪಾತ್ರ, ಎಂ.ವಿ. ರಾಜಮ್ಮನವರ ಸರಳೆಯ ಪಾತ್ರಗಳ ನಿರ್ವಹಣೆ.

ರಾಜಗೋಪಾಲ ಚೆಟ್ಟಿ ಸಹೋದರರು ಮದರಾಸ್ ನಗರದಲ್ಲಿ ಒಂದೇ ಕಟ್ಟಡದಲ್ಲಿ ದೇವಿ, ದೇವಿಬಾಲ, ದೇವಿಕಲಾ ಮತ್ತು ದೇವಿ ಪ್ಯಾರಡೈಸ್ ಎಂಬ ನಾಲ್ಕು ಥಿಯೇಟರ್‌ಗಳನ್ನು ಸ್ಥಾಪಿಸಿ ನಡೆಸಿಕೊಂಡು ಬರುತ್ತಿದ್ದರು. ಅದರೂ ಅವರ ಮನೆಮಾತು ಕನ್ನಡ. ಆ ಅಭಿಮಾನದಿಂದ 'ಸಂಸಾರನೌಕ' ಚಿತ್ರ ತಯಾರಿಸಲು ಮುಂದೆ ಬಂದರು. ಸಿಂಹ ಅವರೇ ಚಿತ್ರವನ್ನು ನಿರ್ದೇಶಿಸುವುದೆಂದು ನಿರ್ಧಾರವಾಯಿತು. ನಾಟಕದಲ್ಲಿ ಅಭಿನಯಿಸುತ್ತಿದ್ದ ಕಲಾವಿದರನ್ನೇ ತಾರಾಗಣಕ್ಕೆ ಆಯ್ಕೆ ಮಾಡಲಾಯಿತು. ಎಂ.ವಿ.ರಾಜಮ್ಮ ಅವರ ಅಭಿನಯ ಹಾಗೂ ಸಂಭಾಷಣಾ ಚಾತುರ್ಯರನ್ನು ಗಮನಿಸಿ ನಾಯಕಿ ಸರಳೆಯ ಪಾತ್ರ ನೀಡಲಾಯಿತು.

ಚಿತ್ರ ಕರ್ನಾಟಕದಾದ್ಯಂತ ಬಿಡುಗಡೆಯಾಗಿ ಯಶಸ್ವಿಯಾಯಿತು. ಆನಂತರ ಈ ಚಿತ್ರ ತಮಿಳಿನಲ್ಲಿ ತಯಾರಾಯಿತು. ಹೀಗೆ ದಕ್ಷಿಣ ಭಾರತದ ಮೊಟ್ಟಮೊದಲ ಸಾಮಾಜಿಕ ಚಿತ್ರದ ನಾಯಕಿಯಾಗಿ ಎಂ.ವಿ. ರಾಜಮ್ಮ ಚಿತ್ರರಂಗ ಪ್ರವೇಶಿಸಿದರು. ಈ ಚಿತ್ರದ ಮೂಲಕ ರಾಜಮ್ಮ ಅವರಿಗೆ ಪಂತಲು ಅವರೊಂದಿಗೆ ಸ್ನೇಹ ನಿಕಟವಾಯಿತು. ಮುಂದೆ ಇಬ್ಬರೂ ಹಲವಾರು ತಮಿಳು ಚಿತ್ರಗಳಲ್ಲಿ ಅಭಿನಯಿಸಿ ಕಾಲಕ್ರಮದಲ್ಲಿ ತಾರಾದಂಪತಿಗಳಾದರು.

ತನ್ನ ಮಾತೃಭಾಷೆ ಕನ್ನಡದಲ್ಲಿ ಅಭಿನಯಿಸಬೇಕು ಎಂಬ ತುಡಿತ ಅವರನ್ನು ಕಾಡುತ್ತಿತ್ತು ಹಾಗಾಗಿ 'ಕಲ್ಯಾಣಿ ಫಿಲಿಂಸ್' ಲಾಂಛನದಲ್ಲಿ ಕೆ. ಸುಬ್ರಹ್ಮಣ್ಯಂ ಅವರ 'ಭಕ್ತ ಪ್ರಹ್ಲಾದ' ಚಿತ್ರದಲ್ಲಿ ಅಭಿನಯಿಸಿದರು. 'ರಾಧಾರಮಣ' ಕಥೆಯನ್ನು ತೆಗೆದುಕೊಳ್ಳಬಹುದೆಂದು ಸೊರಟ್ ಅಶ್ವತ್ಥ್ ಅವರೇ ಸಲಹೆ ಮಾಡಿದರು. ರಾಜಮ್ಮನವರು ಅದಕ್ಕೆ ಒಪ್ಪಿ ಕುಲಕರ್ಣಿಯವರನ್ನು ಮದರಾಸಿಗೆ ಕರೆಸಿದರು. ಚಿತ್ರಕಥೆ ಸಿದ್ಧವಾಯಿತು. ನಟರ ಆಯ್ಕೆಯೂ ಆಯಿತು. ಬಂಗಾಳದ ಜ್ಯೋತಿಷಿ ಸಿನ್ಹಾ ಅವರ ನಿರ್ದೇಶನದಲ್ಲಿ ಚಿತ್ರೀಕರಣ ಶುರುವಾಯಿತು. ಮಧ್ಯದಲ್ಲಿ ಜ್ಯೋತಿಷಿ ಸಿನ್ಹಾ ಅವರು ಬಿಟ್ಟುಹೋದರು. ಆಗ ಇತರ ತಂತ್ರಜ್ಞರ ಸಲಹೆಯ ಮೇರೆಗೆ ರಾಜಮ್ಮನವರೇ ಚಿತ್ರೀಕರಣವನ್ನು ಪೂರ್ತಿ ಮಾಡಿದರು. ಹಾಗಾಗಿ ಅವರೇ ಕನ್ನಡದ ಮೊದಲ ಮಹಿಳಾ ನಿರ್ದೇಶಕಿ ಎಂದರೂ ತಪ್ಪಾಗಲಾರದು. ಹೀಗೆ 'ರಾಧಾರಮಣ' ಚಿತ್ರ ತಯಾರಾಯಿತು.

ಬಿ.ಆರ್. ಪಂತಲು 'ಪದ್ಮಿನಿ ಪಿಕ್ಚರ್ಸ್' ಸಂಸ್ಥೆ ಸ್ಥಾಪಿಸಿದಾಗ ಅವರಿಗೆ ಬೆನ್ನೆಲುಬಾಗಿ ನಿಂತವರು ಎಂ.ವಿ. ರಾಜಮ್ಮ. ಕೊನೆಯವರೆಗೂ ಅವರ ಜತೆಯಲ್ಲೇ ಇದ್ದರು. 'ಪದ್ಮಿನಿ ಪಿಕ್ಚರ್ಸ್' ಸಂಸ್ಥೆ ತಯಾರಿಸಿದ ಬಹುತೇಕ ಕನ್ನಡ ತಮಿಳು ಚಿತ್ರಗಳಲ್ಲಿ ರಾಜಮ್ಮ ಮುಖ್ಯಪಾತ್ರಗಳಲ್ಲಿ ಅಭಿನಯಿಸಿದರು. ಅವುಗಳಲ್ಲಿ ಮುಖ್ಯವಾದವು ಎಂದರೆ 'ರತ್ನಗಿರಿ ರಹಸ್ಯ', 'ಸ್ಕೂಲ್‌ಮಾಸ್ಟರ್'. 'ಗಾಳಿಗೋಪುರ', 'ಅಮ್ಮ', 'ಸಾಕುಮಗಳು'. 'ಚಿನ್ನದ ಗೊಂಬೆ', 'ಕಿತ್ತೂರು ಚೆನ್ನಮ್ಮ' ಹಾಗೂ 'ಶ್ರೀಕೃಷ್ಣದೇವರಾಯ'.

ಈ ಮಧ್ಯೆ ಎಂ.ವಿ.ರಾಜಮ್ಮ ಅವರು ತಮ್ಮದೇ 'ಎಂ.ವಿ.ಆರ್. ಪ್ರೊಡಕ್ಷನ್' ಲಾಂಛನದಡಿ 'ಮಕ್ಕಳ ರಾಜ್ಯ' ಚಿತ್ರವನ್ನು ತಯಾರಿಸಿದರು. ಈ ಚಿತ್ರದ ಮೂಲಕ ಹಾಸ್ಯನಟ ಉಮೇಶ್ ಅವರನ್ನು ಬಾಲನಟನಾಗಿ ಪರಿಚಯಿಸಿದರು. ಈ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ದೊರೆಯಿತು. ಎಂ.ವಿ.ರಾಜಮ್ಮ ಅವರು ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್ ಅವರಿಂದ ಪ್ರಶಸ್ತಿ ಸ್ವೀಕರಿಸಿದರು.

ಮದರಾಸಿನಲ್ಲಿ ನೆಲೆಸಿದ್ದ ಚಿತ್ರರಂಗದ ಎಲ್ಲರಿಗೆ ರಾಜಮ್ಮ ಅಕ್ಕರೆಯ ಅಮ್ಮನಾಗಿದ್ದರು. ಕಷ್ಟದಲ್ಲಿದ್ದ ಅನೇಕ ಕಲಾವಿದರಿಗೆ ಹಲವಾರು ರೀತಿಯಲ್ಲಿ ಸಹಾಯಮಾಡಿ ಅವರ ಜೀವನದಲ್ಲಿ ಬೆಳಕು ಮೂಡುವಂತೆ ಮಾಡಿದ್ದರು. ಅನೇಕ ಬಡ ಹೆಣ್ಣುಮಕ್ಕಳಿಗೆ ತಮ್ಮ ಮನೆಯಲ್ಲೇ ಆಶ್ರಯ ನೀಡಿ ಅವರು ಬೆಳೆದು ದೊಡ್ಡವರಾದ ಮೇಲೆ ಮದುವೆ ಮಾಡಿಸಿ ಅವರ ಭವಿಷ್ಯಕ್ಕೊಂದು ದಾರಿ ಮಾಡುತ್ತಿದ್ದರು.

ಕನ್ನಡದ ಮೇರುನಟ ರಾಜಕುಮಾರ್, ತಮಿಳು ಶ್ರೇಷ್ಠನಟರಾದ ಶಿವಾಜಿ ಗಣೇಶನ್, ಎಂ.ಜಿ.ಆರ್., ತೆಲುಗಿನ ಎನ್.ಟಿ.ರಾಮರಾವ್, ಎ.ನಾಗೇಶ್ವರರಾವ್ ಮುಂತಾದ ಘಟಾನುಘಟಿಗಳೂ ರಾಜಮ್ಮನವರ ಬಗ್ಗೆ ಅಪಾರ ಗೌರವ ಹೊಂದಿದ್ದರು.

1942ರ ಸಮಯದಲ್ಲಿ ರಾಜಮ್ಮ 'ಭಕ್ತ ಪ್ರಹ್ಲಾದ' ಚಿತ್ರದಲ್ಲಿ ಅಭಿನಯಿಸುತ್ತಿದ್ದರು. ಆ ಚಿತ್ರದಲ್ಲಿ ಒಂದು ರಾಕ್ಷಸ ಪಾತ್ರಕ್ಕೆ ರಾಜ್ ಅವರ ತಂದೆ ಪುಟ್ಟಸ್ವಾಮಯ್ಯನವರನ್ನು ರಾಜಮ್ಮ ಅವರೇ ಕರೆಸಿದ್ದರಂತೆ.

ಅದಾದ ಎಷ್ಟೋ ವರ್ಷಗಳ ನಂತರ 'ಪದ್ಮಿನಿ ಪಿಕ್ಚರ್ಸ್' ಅವರ 'ಕಿತ್ತೂರು ಚೆನ್ನಮ್ಮ' ಚಿತ್ರದಲ್ಲಿ ಪಾತ್ರ ನಿರ್ವಹಿಸಲು ರಾಜಕುಮಾರ್ ಅವರನ್ನು ಪ್ರೋತ್ಸಾಹಿಸಿದವರು ರಾಜಮ್ಮ. ಆನಂತರ 'ಶ್ರೀಕೃಷ್ಣದೇವರಾಯ' ಸೇರಿದಂತೆ ಪಂತಲು ಅವರ ಹಲವು ಚಿತ್ರಗಳಲ್ಲಿ ರಾಜ್ ಅಭಿನಯಿಸಿದರು.

ಔದಾರ್ಯವೇ ಮೂರ್ತಿವೆತ್ತಂಥ ವ್ಯಕ್ತಿತ್ವ ರಾಜಮ್ಮನವರದು. ಚಿತ್ರರಂಗದ ಅತಿರಥ ಮಹಾರಥರೆಲ್ಲರಿಗೂ 'ಅಮ್ಮ' ಎನಿಸಿಕೊಂಡರು ರಾಜಮ್ಮ - ಒಂದು ರೀತಿಯಲ್ಲಿ ರಾಜಮಾತೆಯಿದ್ದಂತೆ. ಬಣ್ಣದ ಬದುಕು ಹಾಗೂ ದಾಂಪತ್ಯ ಜೀವನ-ಇದರಲ್ಲಿ ಒಂದನ್ನು ಆಯ್ದುಕೊಳ್ಳಬೇಕಾಗಿ ಬಂದಾಗ ರಾಜಮ್ಮನವರು ಆರಿಸಿಕೊಂಡದ್ದು ಬಣ್ಣದ ಬದುಕನ್ನು. ಬಿ.ಆರ್. ಪಂತಲು ಅವರು 'ಪದ್ಮಿನಿ ಪಿಕ್ಚರ್ಸ್' ಸಂಸ್ಥೆ ಪ್ರಾರಂಭಿಸಿದಾಗ ರಾಜಮ್ಮ ಅವರೊಂದಿಗೆ ಸೇರಿ ಹಲವಾರು ಶ್ರೇಷ್ಠ ಕನ್ನಡ, ತಮಿಳು, ತೆಲುಗು ಚಿತ್ರಗಳನ್ನು ತಯಾರಿಸಿದರು.

ತಮಿಳುನಾಡಿನ ಸಂಗೀತ ನಾಟಕ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ರಾಜಮ್ಮನವರಿಗೆ ಸಂದವು. ಬಹಳ ತಡವಾಗಿ ಕರ್ನಾಟಕ ಸರ್ಕಾರ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿತು. ಅವರ 85ನೇ ವಯಸ್ಸಿನಲ್ಲಿ ತೀವ್ರ ಅನಾರೋಗ್ಯದ ಪರಿಸ್ಥಿತಿಯಲ್ಲಿದ್ದಾಗ ಕರ್ನಾಟಕ ಸರ್ಕಾರ ಅವರಿಗೆ ಡಾ.ರಾಜಕುಮಾರ್ ಪ್ರಶಸ್ತಿ ನೀಡಿತು. ಅದನ್ನು ನೇರವಾಗಿ ಸ್ವೀಕರಿಸುವ ಸ್ಥಿತಿಯಲ್ಲಿ ಅವರಿರಲಿಲ್ಲ. 23-4-1999 ರಂದು ರಾಜಮ್ಮ ಇಹಲೋಕವನ್ನು ತ್ಯಜಿಸಿ ನೇಪಥ್ಯಕ್ಕೆ ಸೇರಿದರು.

ಎಂ.ವಿ.ರಾಜಮ್ಮನವರ ಆದಿಶಕ್ತಿ ಅಂಬಾ ಅವರ ಕುಲದೇವತೆ. ಹಾಗೆಯೇ ಮಂತ್ರಾಲಯದ ಗುರು ರಾಘವೇಂದ್ರರಲ್ಲಿ ಅಪಾರ ನಂಬಿಕೆ. ಶಬರಿಮಲೆ ಅಯ್ಯಪ್ಪಸ್ವಾಮಿ ಅವರ ಇಷ್ಟದೈವ.

ಎಂ.ವಿ.ರಾಜಮ್ಮ ತಮ್ಮ ಕಲಾಜೀವನದಲ್ಲಿ ಬೇಕಾದಷ್ಟು ಆಸ್ತಿ ಗಳಿಸಿದ್ದರು. ಅವರು ಹುಟ್ಟೂರಾದ ಅಗ್ಗೊಂಡಹಳ್ಳಿಯಲ್ಲಿ ಸರ್ಕಾರಿ ಸ್ಕೂಲ್‌ನ ಕಟ್ಟಡ ಕಟ್ಟಿಸಿಕೊಟ್ಟಿದ್ದಾರೆ. ಒಂದು ಆಶ್ರಮವನ್ನು ಸ್ಥಾಪಿಸಿ ಅದನ್ನು ನಡೆಸಲು ಬೇರೆಯವರಿಗೆ ವಹಿಸಿಕೊಟ್ಟರು.

1961ರಲ್ಲಿ 'ಮಕ್ಕಳ ರಾಜ್ಯ' ಚಿತ್ರದ ನಿರ್ಮಾಪಕಿಯಾಗಿ ರಾಷ್ಟ್ರಪ್ರಶಸ್ತಿ, ತಮಿಳುನಾಡು ಸರ್ಕಾರ 1964ರಲ್ಲಿ ಸಂಗೀತ ನಾಟಕ ಅಕಾಡೆಮಿಯ 'ಕಲಾಶಿಖಾಮಣಿ' ಪ್ರಶಸ್ತಿ, 1966ರಲ್ಲಿ ಕರ್ನಾಟಕ ಸಂಗೀತ ನಾಟಕ ಅಕಾಡೆಮಿಯ ಗೌರವ ಪ್ರಶಸ್ತಿ, ಮದರಾಸಿನ ದಕ್ಷಿಣಭಾರತ ಕಲಾವಿದರ ಸಂಘದಿಂದ 'ಕಲೈಚಿಲ್ವಂ' ಮುಂತಾದ ಪ್ರಶಸ್ತಿಗಳನ್ನು ಗಳಿಸಿರುವ ಎಂ.ವಿ. ರಾಜಮ್ಮ ನಮ್ಮ ನಾಡಿನ ಹಿರಿಯ ಪ್ರತಿಭಾನ್ವಿತ ಕಲಾವಿದೆ.

ಅಭಿನಯಿಸಿದ ಕನ್ನಡ ಚಿತ್ರಗಳು

ಸಂಸಾರನೌಕ (1936), ಪ್ರಹ್ಲಾದ (1942), ರಾಧಾರಮಣ (1943– ಸ್ವಂತ ತಯಾರಿಕೆ), ರಾಜಾವಿಕ್ರಮ (1951), ಮೊದಲತೇದಿ (1955), ಶಿವಶರಣೆ ನಂಬೆಕ್ಕ (1955), ರತ್ನಗಿರಿ ರಹಸ್ಯ (1957), ಸ್ಕೂಲ್ ಮಾಸ್ಟರ್ (1958), ಅಬ್ಬಾ ಆ ಹುಡುಗಿ (1959), ಮಕ್ಕಳ ರಾಜ್ಯ (1960– ಸ್ವಂತ ತಯಾರಿಕೆ), ಕಿತ್ತೂರು ಚೆನ್ನಮ್ಮ (1961), ಗಾಳಿಗೋಪುರ (1962), ತಾಯಿ ಕರುಳು (1962), ಸಾಕುಮಗಳು (1963), ಸತಿಶಕ್ತಿ (1963), ಚಿನ್ನದಗೊಂಬೆ (1964), ದುಡ್ಡೇ ದೊಡ್ಡಪ್ಪ (1966), ಎಮ್ಮೆ ತಮ್ಮಣ್ಣ (1966), ಅಮ್ಮ (1968), ಶ್ರೀಕೃಷ್ಣದೇವರಾಯ (1970), ತಾಯಿ ದೇವರು (1971), ಮಾಲತಿ ಮಾಧವ (1971), ಒಂದು ಹೆಣ್ಣಿನ ಕಥೆ (1972), ಬಂಗಾರದ ಪಂಜರ (1974), ಸಂಪತ್ತಿಗೆ ಸವಾಲ್ (1974), ದಾರಿ ತಪ್ಪಿದ ಮಗ (1975), ವಿಜಯವಾಣಿ (1975).

ಹೀಗೆ ಕನ್ನಡ 27, ತಮಿಳು ಹಾಗೂ ತೆಲುಗು ಚಿತ್ರಗಳು ಸೇರಿದರೆ ಅವರು ಅಭಿನಯಿಸಿದ ಚಿತ್ರಗಳ ಸಂಖ್ಯೆ 95ಕ್ಕೂ ಮೀರುತ್ತದೆ.

——— * ———

ಅರವತ್ತೆಂಟನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು ಶಾಂತಾದೇವಿ ಮಾಳವಾಡ

ಗಿರಿಜಾತನುಜೆ

ಮಹಿಳಾ ಪ್ರಪಂಚದ ಕಡೆ ವಿಶೇಷವಾಗಿ ಗಮನ ಹರಿಸಿ, ಕನ್ನಡ ನವೋದಯ ಸಾಹಿತ್ಯ ಸಂದರ್ಭದಲ್ಲಿ ಸಾಹಿತ್ಯ ಕೃಷಿಗಿಳಿದ ಕೆಲವೇ ಕೆಲವು ಲೇಖಕಿಯರಲ್ಲಿ ಶ್ರೀಮತಿ ಶಾಂತಾದೇವಿ ಮಾಳವಾಡರು ಅಗ್ರಗಣ್ಯರು. ಅರವತ್ತೆಂಟನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾದವರು. ಈ ಅಧ್ಯಕ್ಷತೆಯ ಅಪರೂಪದ ಅವಕಾಶ ಪಡೆದ ಎರಡನೇ ಮಹಿಳೆ.

ಹುಟ್ಟಿದ ಎರಡನೇ ವರ್ಷದಲ್ಲೇ ಇವರ ತಂದೆ ತೀರಿಹೋದರು. ಇವರ ತಾಯಿ, ದೇವರು–ಪೂಜೆ–ಅಧ್ಯಾತ್ಮಗಳಲ್ಲಿ ಮುಳುಗಿ ಕತ್ತಲ ಕೋಣೆ ಸೇರಿಕೊಂಡರು. ದಿಕ್ಕಿಲ್ಲದಂತಾದ ಮಗುವಿಗೆ ತಾಯಿಯ ತಾಯಿಯೇ ತಾಯಿಯಾದರು. ಮುರಿಗೆಪ್ಪ ಶೆಟ್ಟಿ ಮತ್ತು ಜಯವಂತಿದೇವಿಯವರ ಮಗಳಾಗಿ ಇವರು ಹುಟ್ಟಿದ್ದು 1922ರ ಡಿಸೆಂಬರ್ ಹತ್ತರಂದು, ಬೆಳಗಾವಿಯಲ್ಲಿ. ಅಜ್ಜಿ ಹೇಳುವ ಕಥೆಗಳನ್ನು ಕೇಳುತ್ತ; ಮರಾಠಿಗರೊಡನೆ ಶಾಲೆಗೆ ಹೋಗುತ್ತ, ತಾಯಿ ತರಿಸುತ್ತಿದ್ದ 'ಶಿವಾನುಭವ' ಮತ್ತು 'ಸರಸ್ವತಿ' ಪತ್ರಿಕೆಗಳನ್ನು ಮೊದಲಿನಿಂದ ಕೊನೆಯ ಅಕ್ಷರದವರೆಗೂ ಬಿಡದೇ ಓದುತ್ತ; ಹದಿನೈದರ ಹೊಸ್ತಿಲಲ್ಲಿ ವಿವಾಹದ ಬಂಧನಕ್ಕೆ ಒಳಗಾಗಿ ಗೃಹಕೃತ್ಯ ನಿಭಾಯಿಸುತ್ತ; ಹೆಸರಾಂತ ಮಹಿಳಾ ಸಾಹಿತಿಯಾಗಿ, ಉತ್ತಮ ಸಂಘಟಕಿಯಾಗಿ ಬೆಳೆದವರು ಶ್ರೀಮತಿ ಶಾಂತಾದೇವಿ ಮಾಳವಾಡರವರು. ಇವರ ತೊಟ್ಟಿಲ ಹೆಸರು ದಾನಮ್ಮ. ಇವರ ಚಿಕ್ಕಮ್ಮನ ಮಗಳೇ ಆದ ಶಾಂತಾದೇವಿ ಕಣವಿಯವರಿಗೆ ಈಗಲೂ ದಾನಕ್ಕನೇ. ಮಾಸ್ತಿಯವರ 'ಶಾಂತಾ' ಎಂಬ ಕೃತಿಯನ್ನು ಓದಿ, ಅದರಲ್ಲಿ ಋಷ್ಯಶೃಂಗನ ಒಂಟಿ ಬಾಳಿಗೆ ಶಾಂತಾ ಎಂಬ ಪಾತ್ರ ಒದಗಿಸಿದ ಶಾಂತಿ–ಸವಿಗಳನ್ನು ಗಮನಿಸಿ ತನ್ನ ಪತ್ನಿಯಾಗುವವಳ ಹೆಸರು ಅದೇ ಇರಬೇಕೆಂದು ಯೋಚಿಸಿ, ಸ.ಸ.ಮಾಳವಾಡರು, ದಾನಮ್ಮನಿಗೆ 'ಶಾಂತ' ಎಂದು ಹೆಸರಿಟ್ಟು, ಕೈ ಹಿಡಿದರು. ನಂತರ ಈ ದಾನಮ್ಮ ಪುಸ್ತಕಗಳಲ್ಲಿ ಶಾಂತಾದೇವಿ ಮಾಳವಾಡರಾದರು. ಇತರರಿಗೆ 'ಶಾಂತಕ್ಕ' ನಾದರು.

ಆಗಿನ ಸಮಾಜದ ನಿಯಮಗಳನ್ನು ಮನಸಾರೆ ಒಪ್ಪಿಕೊಂಡಿದ್ದ ಗದುಗಿನ ದೊಡ್ಡಪ್ಪ ಹೆಣ್ಣುಮಕ್ಕಳು ಹನ್ನೆರಡರ ನಂತರ ಶಾಲೆಗೆ ಹೋಗಬಾರದು, ಎಂದು ಆಣತಿ ಮಾಡಿ, ಆ ಹುಡುಗಿ ಮಾಡಿದ ಎರಡು ದಿನಗಳ ಉಪವಾಸ ಸತ್ಯಾಗ್ರಹಕ್ಕೂ ಬಗ್ಗದೆ ಶಾಲೆ ಬಿಡಿಸಿದರು. ಇವರ ಪತಿಯಾಗಲಿದ್ದ ಖ್ಯಾತ ಸಾಹಿತಿ ಪತಿ ಸ.ಸ.ಮಾಳವಾಡರು, ನನ್ನ ಪತ್ನಿ ಮನೆಗೆಲಸದ ದಾಸಿಯಾಗದೇ ಬಾಳಸಂಗಾತಿಯಾಗಿರಬೇಕು, ಎಂದು ಮದುವೆಗೆ ಮುಂಚಿನ ಪತ್ರವೊಂದರಲ್ಲಿ ತಿಳಿಸಿ, ತನ್ನ ಸಮಕ್ಕೆ ಇವರನ್ನು ಮೇಲಕ್ಕೆಳೆಯಲು ಪ್ರಯತ್ನಿಸಿದರು. ಇಬ್ಬರೂ ಪುರುಷರೇ. ಒಬ್ಬ ಸಂಪ್ರದಾಯವಾದಿ. ಇನ್ನೊಬ್ಬ ಪಾಶ್ಚಾತ್ಯ ಶಿಕ್ಷಣದ ಪ್ರಭಾವವನ್ನು ಮೈಗೂಡಿಸಿಕೊಂಡ ಆಧುನಿಕವಾದಿ ಮತ್ತು ಮಾನವತಾವಾದಿ. ಮದುವೆಗೆ ಮುನ್ನವೆ 'ಸೂತ್ರದ ಗೊಂಬೆ, ಬಂಧನದ ಆಚೆ' ಮುಂತಾದ ಪುಸ್ತಕಗಳನ್ನು ಓದಿ ಅಭಿಪ್ರಾಯ ತಿಳಿಸಲು ಪತ್ನಿಗೆ ಪತ್ರ ಬರೆಯುತ್ತಿದ್ದುದಲ್ಲದೇ ವಿವಾಹಾನಂತರ, ಪತ್ರ ಓದುತ್ತಿದ್ದ ಲಲಿತ ಸಾಹಿತ್ಯಗಳ ಜೊತೆಗೆ, ವಿಚಾರ ಸಾಹಿತ್ಯ, ಪ್ರಾಚೀನ

ಕಾವ್ಯಗಳನ್ನು ಮುಂದಿಟ್ಟು, ಓದು ಎಂದು ಓದಿ ತೋರಿಸಿ, ಆಕೆಗೆ, ನೀರಿಳಿಯದ ಗಂಟಲೊಳ್ ಕಡುಬು ತುರುಕಿದಂತೆ ಆದರೂ ಬಿಡದೆ, ಗಂಭೀರ ಸಾಹಿತ್ಯದತ್ತ ಆಕೆಯ ಮನಸ್ಸು ತಿರುಗಿಸಿದರು. ಜ್ಞಾನದಾಹವಿದ್ದ ಶಾಂತಕ್ಕ, ಅಧ್ಯಾಪಕರನ್ನು ಮನೆಗೇ ಕರೆಸಿ, ಇಂಗ್ಲಿಷ್, ಹಿಂದಿ, ಭಾಷೆಯನ್ನು ಕಲಿತುಕೊಂಡರು. ಸಾಹಿತ್ಯ ಪರಿಷತ್ತಿನ ಕಾವ, ಜಾಣ ಪರೀಕ್ಷೆಗಳನ್ನು ಪಾಸಾದರು. ದೊರೆತಿದ್ದು ಇಷ್ಟೇ ವಿದ್ಯೆ. ಆದರೆ ಸಾಧಿಸುವ ಮನಸ್ಸಿಗೆ ಈ ಸಲಕರಣೆ ಸಾಕಿತ್ತು. ಇಪ್ಪತ್ತಾರಕ್ಕೂ ಹೆಚ್ಚು ಕೃತಿಗಳನ್ನು ಬರೆದು ಹೊರತಂದರು. ಹಲವಾರು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಹಲವು ಮಹಿಳೆಯರ ಮುನ್ನಡೆಗೆ ಕಾರಣರಾದರು. ಸಾಹಿತಿ ಪತಿ, ಸದಾ ಮನೆಗೆ ಬರುತ್ತಿದ್ದ ಸಾಹಿತ್ಯ ಆಸಕ್ತ ಅತಿಥಿಗಳು, ನಡೆಯುತ್ತಿದ್ದ ಚರ್ಚೆಗಳು, ವಿಚಾರ ವಿನಿಮಯಗಳು ಶಾಂತಾದೇವಿಯರ ಅರಿವು-ಆಲೋಚನೆಗಳನ್ನು ಆಳಕ್ಕಿಳಿಸಿದವು. ಭಿನ್ನ ದೃಷ್ಟಿಕೋನಗಳಿದ್ದರೂ, ಸಾಮರಸ್ಯದ ದಾಂಪತ್ಯ, ಸಾಹಿತ್ಯಾಸಕ್ತಿ, ಸ್ನೇಹಶೀಲ ಸ್ವಭಾವ, ಪರಸ್ಪರರ ಪ್ರಗತಿಗೆ ಪೂರಕವಾಗುವ ಗುಣಗಳು, ಇಬ್ಬರಿಗೂ ಕೀರ್ತಿ ಗಳಿಸಿ ಕೊಟ್ಟುವು.

'ಶರತ್‌ಚಂದ್ರರ, ರವೀಂದ್ರರ ಕಾದಂಬರಿಗಳ ನಾಯಕಿಯಂತಿದ್ದ ಆ ಕೋಮಲ ಬಾಲೆ"; ವಿಶುದ್ಧ ಹೃದಯದ ಸದುವಿನಯದ ಸ್ನೇಹಮಯಿ ಹುಡುಗಿ"-- ಎಂದು ಪ್ರಸಿದ್ಧ ಕಾದಂಬರಿಕಾರರಾದ ಬಸವರಾಜ ಕಟ್ಟೀಮನಿಯವರಿಂದ ಹೊಗಳಿಕೆ ಪಡೆದಿದ್ದ, ಶಾಂತಾಗೆ, ಅವರ ಪತಿ ಸ.ಸ. ಮಾಳವಾಡರ ಸಂಪೂರ್ಣಪ್ರೀತಿ-ಬೆಂಬಲಗಳು ದೊರೆತಿದ್ದವು. ಆದರೆ ಸಂಸಾರದ ಸವಿ ಹೆಚ್ಚಿಸಲು ಅವರಿಗೆ ಬಹಳವಾಗಿ ಬೇಕೆನಿಸಿದ್ದ ಮಕ್ಕಳ ಸುಖ ಮಾತ್ರ ದೊರಕಲೇ ಇಲ್ಲ. ಮೇಲಿಂದ ಮೇಲೆ ಆಕೆಗೆ ಗರ್ಭಪಾತಗಳಾಗಿ ಒಂದು ಮಗುವೂ ಉಳಿಯದೇ ಕೊರಗು ಕಾಡಿತು. ಮೊಮ್ಮಕ್ಕಳ ಕಾಣುವ ಅತ್ತೆಯ ಅತಿಯಾಸೆಯ ಈಡೇರಿಕೆಗೆ ತಮ್ಮ ಪತಿ ಮಾಳವಾಡರಿಗೆ ಇನ್ನೊಂದು ಮದುವೆ ಮಾಡಿಸುವ ಯೋಚನೆ ಮಾಡಿದ್ದೂ ಉಂಟು. ಸುಸ್ತಾಗಿ ಸೋತು ಆತ್ಮಹತ್ಯೆಯ ಆಲೋಚನೆ ಮಾಡಿದ್ದೂ ಸತ್ಯ. ಸದಾ ತಲೆಯೊಳಗೆ ಕುಳಿತು ಕೊರೆಯುತ್ತಿದ್ದ ಚಿಂತೆಯ ಕೀಟಗಳ ಕಾಟದಿಂದ ಬಿಡಿಸಿಕೊಳ್ಳಲು ಅವರು ಕಡೆಯಲ್ಲಿ ಮೊರೆ ಹೋಗಿದ್ದು ಪಾಂಡಿಚೆರಿಯ ಅರವಿಂದರ ಆಶ್ರಮಕ್ಕೆ. ಕೆಲಕಾಲ ಅಲ್ಲಿ ಉಳಿದಿದ್ದರು. ಆ ನಂತರ ಆಗಾಗ ಅಲ್ಲಿಗೆ ಹೋಗಿ ಬರುತ್ತಿದ್ದರು. ಅಧ್ಯಾತ್ಮಿಕ ಆಲೋಚನೆಗಳತ್ತ ಮನಸ್ಸು ಹಾಯಿಸಿದ್ದು ಅವರಿಗೆ ಮನಃಶಾಂತಿ ದೊರಕಿಸಿ ಕೊಟ್ಟ ಅಂಶಗಳು. ಸಾಹಿತ್ಯ, ಸಂಘಟನೆ, ಅಧ್ಯಯನ ಮತ್ತು ಬರಹಗಳೂ ಅವರ ಎಲ್ಲ ನೋವುಗಳನ್ನು ಮರೆಸಲು ನೆರವಾದಂತಹ ಹವ್ಯಾಸಗಳು.

ಶಾಂತಾದೇವಿಯವರು ಕನ್ನಡಪ್ರೇಮಿ, ಬೆಳಗಾವಿಯಲ್ಲಿ ಮರಾಠಿಗರ ಪ್ರಾಬಲ್ಯವಿದ್ದ ಸಮಯವದು, ಚಿಕ್ಕವರಿದ್ದಾಗ, ಅಂಗಡಿಗಳಿಗೆ ಹೋದಾಗ, ಕನ್ನಡದಲ್ಲೇ ತಮಗೆ ಬೇಕಾದ ಸಾಮಾನುಗಳನ್ನು ಕೇಳುತ್ತಿದ್ದರು, ಮಾತ್ರವಲ್ಲ, ಗೆಳತಿಯೊಂದಿಗೆ ನಿರ್ಧರಿಸಿದಂತೆ, ಕನ್ನಡದಲ್ಲೇ ರಸೀತಿ ಬೇಕೆನ್ನುತ್ತಿದ್ದುದೂ ಅಲ್ಲದೇ, ಕನ್ನಡ ಜನರಿಂದ ನಿಮ್ಮ ಅಂಗಡಿ ನಡೆದಿವೆ, ಬೋರ್ಡುಗಳನ್ನೇಕೆ ಕನ್ನಡದಲ್ಲಿ ಹಾಕುವುದಿಲ್ಲ" ಎಂದು ತಪ್ಪದೇ ಕೇಳುತ್ತಿದ್ದರು. ತಮ್ಮ ಕನ್ನಡ ಪ್ರೀತಿಯನ್ನು ಬೆಳೆಸುತ್ತಿದ್ದರು. ಮಹಿಳಾ ಮಂಡಳಗಳಲ್ಲಿ ಕನ್ನಡ ಉಳಿಸಿದ್ದೂ ಅವರೇ, ಹೆಣ್ಣು ಹೊಸ್ತಿಲು ದಾಟುವುದೇ ದುಸ್ತರವಾಗಿದ್ದ ಆ ಕಾಲದಲ್ಲಿ, ಶಾಂತಕ್ಕ, ಮಹಿಳೆಯರ ಮುನ್ನಡೆಗಾಗಿ ಸಂಘಟನೆಗಳಲ್ಲಿ ತೊಡಗಿಸಿಕೊಂಡಿದ್ದು ಮಹತ್ತರ ಕಾರ್ಯವೇ. ಇವರ ಮುಖ ಕಂಡೊಡನೆ ಮುಂಬಾಗಿಲು ಮುಚ್ಚುತ್ತಿದ್ದ ಮಹಿಳಾ ಹಿರಿಯರನ್ನು ಒಲಿಸಿ ಸಂಘಟಿಸಿದ್ದು, ಸ್ತ್ರೀ ಜಾಗೃತಿ ಚಟುವಟಿಕೆಗಳಲ್ಲಿ ಅವರನ್ನು ತೊಡಗುವಂತೆ ಮಾಡಿದ್ದು, ಸಣ್ಣ ಸಾಧನೆಯೇನಲ್ಲ. 1938ರಲ್ಲಿ ಧಾರವಾಡದಲ್ಲಿ ಅಕ್ಕನ ಬಳಗದ ಸ್ಥಾಪಕ ಸದಸ್ಯೆಯಾಗಿ; 1940ರಲ್ಲಿ ಕಾರ್ಯದರ್ಶಿಯಾಗಿ; 1941ರಲ್ಲಿ ಅಖಿಲ ಭಾರತ ಮಹಿಳಾ ಪರಿಷತ್ತಿನ ಧಾರವಾಡ ಜಿಲ್ಲಾ ಮಹಿಳಾ ಮಂಡಳದ ಕಾರ್ಯದರ್ಶಿಯಾಗಿ; ಧಾರವಾಡ ಜಿಲ್ಲಾ ಮಹಿಳಾ ಮಂಡಳದ ಅಧ್ಯಕ್ಷಿಣಿಯಾಗಿ; ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಸಮಿತಿ ಸದಸ್ಯೆಯಾಗಿ ಉತ್ತಮ ಕೆಲಸಗಳನ್ನು ಸ್ವಾತಂತ್ರ್ಯ ಪೂರ್ವದಲ್ಲಿಯೇ ಮಾಡಿದ್ದು ಉಲ್ಲೇಖನೀಯ ಸಂಗತಿ. ಇವರ ಪ್ರಾಮಾಣಿಕ ಕೆಲಸ ಕಾರ್ಯಗಳನ್ನು ಕಂಡೇ ಆ

ನಂತರ ಇವರಿಗೆ ಸರ್ಕಾರದ ಹಲವಾರು ಮಹಿಳಾ ಸಂಬಂಧದ ಸಮಿತಿಗಳಿಗೆ ತೊಡಗಿಸಲಾಯಿತು. ಧಾರವಾಡ ತಾಲ್ಲೂಕು ಸಮಾಜ ವಿಕಾಸ ಯೋಜನೆ ಸಮಿತಿ; ಧಾರವಾಡ ಆಕಾಶವಾಣಿ ಆಡಿಷನ್ ಕಮಿಟಿ; ಮೈಸೂರು ರಾಜ್ಯ ರಾಷ್ಟ್ರೀಯ ಉಳಿತಾಯ ಯೋಜನಾ ಸಮಿತಿ; ಮೈಸೂರು ರಾಜ್ಯದ ಮಹಿಳೆಯರ ಮಕ್ಕಳ ಶಿಕ್ಷಣ ಸಮಿತಿ; ರೂರಲ್ ಇಂಡಸ್ಟ್ರೀಸ್ ಪ್ರಾಜೆಕ್ಟ್; ಕೇಂದ್ರ ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿ ಹೀಗೇ ಮುಂದುವರಿಯುತ್ತಲೇ ಹೋಗುತ್ತದೆ ಅವರ ಸದಸ್ಯತ್ವದ ವಿವರಗಳು, ಧಾರವಾಡದ ರಿಮ್ಯಾಂಡ್ ಹೋಮಿನ ಆನರರಿ ಲೇಡಿ ಮ್ಯಾಜಿಸ್ಟ್ರೇಟ್ ಆಗಿಯೂ ಕೆಲಸ ಮಾಡಿದ್ದಾರೆ.

ಶಾಂತಾದೇವಿಯರು ಸಾಹಿತಿಯಾಗಿ ಮಾತ್ರವಲ್ಲ, 'ಹಸಿದು ಬಂದವಗೆ ಅಶನವೀಯಲು ಬೇಕು' ಎಂಬ ಭಾರತೀಯ ಸಂಸ್ಕೃತಿಯ ತತ್ವವನ್ನು ಅನುಸರಿಸುವ ಉತ್ತಮ ಆತಿಥೇಯರಾಗಿ, ಸತ್ಕಾರಕ್ಕೂ, ರಸಪಾಕ ಸಿದ್ಧಿಗೂ ಪ್ರಸಿದ್ಧರು. ಹೆಸರಿಗೆ ತಕ್ಕಂತೆ ಶಾಂತ ಸ್ವಭಾವದವರು. ಸಂಪ್ರದಾಯ–ಆಧುನಿಕತೆಗಳ ಸಂಗಮಗೊಂಡ ಮನಸ್ಸು. ಹಾಗಾಗಿಯೇ ಮಾಳವಾಡರ ಆಧುನಿಕ ಮನಸ್ಸಿನ ನಡವಳಿಕೆಗಳೂ; ಅತ್ತೆ, ಮಾವ, ಮತ್ತಿತರ ಹಿರಿಯರ ಸಂಪ್ರದಾಯಸ್ಥ ಧೋರಣೆಗಳೂ, ಸಮಸ್ಯೆಗಳಾದಂತೆ ನೋಡಿಕೊಂಡು, ಈ ಎರಡರ ನಡುವಿನ ಸೇತುವೆ ತಾನಾಗಿ, ಉತ್ತಮ ಜೀವನ ನಿಭಾಯಿಸುವಲ್ಲಿ ಸಫಲರಾದರು.

ಪ್ರೌಢಶಿಕ್ಷಣವನ್ನೂ ಪೂರೈಸದಿದ್ದರೂ, ಶಾಂತಾರವರು, 1940ರಲ್ಲಿ ನವಲಗುಂದದಲ್ಲಿ ನಡೆದ ಧಾರವಾಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಮಹಿಳಾ ವಿಚಾರ ಗೋಷ್ಠಿಯ ಸ್ವಾಗತಾಧ್ಯಕ್ಷೆಯಾಗಿದ್ದು; 1950ರಲ್ಲಿ ಕರ್ನಾಟಕ ಪ್ರಾಂತೀಯ ಮಹಿಳಾ ಪರಿಷತ್ ಸ್ವಾಗತಾಧ್ಯಕ್ಷಿಣಿಯಾದದ್ದು; ಅಖಿಲ ಭಾರತ ಪ್ರಾಚ್ಯ ವಿದ್ಯಾ ಪರಿಷತ್ತಿನ ದಿಲ್ಲಿ ಅಧಿವೇಶನದ ದ್ರಾವಿಡ ವಿಭಾಗಕ್ಕೆ ಪ್ರಬಂಧ ಸಲ್ಲಿಸಿದ್ದು; ಮಲೆನಾಡ ಮಹಿಳಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದು; ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾರತೀಯ ಸಾಹಿತ್ಯ ನಿರ್ಮಾಣಕಾರರು ಎಂಬ ಮಾಲಿಕೆಗಾಗಿ, ಸುನೀತಿಕುಮಾರ ಚಟರ್ಜಿಯವರು ಇಂಗ್ಲಿಷ್‌ನಲ್ಲಿ ರಚಿಸಿದ ಜಯದೇವ ಕೃತಿಯನ್ನು ಕನ್ನಡಕ್ಕೆ ತಂದಿದ್ದು; ರಾಜ್ಯಾದ್ಯಂತ ನಡೆದ ಹಲವಾರು ವಿಚಾರ ಸಂಕಿರಣಗಳಲ್ಲಿ ಮತ್ತು ವಿವಿಧ ರೀತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ತಮ್ಮ ವಿಚಾರಗಳನ್ನು ಮಂಡಿಸಿದ್ದು; 1999ರಲ್ಲಿ ಬೆಳಗಾಂವ್‌ನಲ್ಲಿ ನಡೆದ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದು; ಹಲವಾರು ಮಹಿಳಾ ಗೋಷ್ಠಿಗಳಿಗೆ, ಜಿಲ್ಲಾ ಸಮ್ಮೆಳನಗಳಿಗೇ ಅಲ್ಲದೇ ಬೆಂಗಳೂರಿನ ಕರ್ನಾಟಕ ಲೇಖಕಿಯರ ಸಂಘವು ಧಾರವಾಡದಲ್ಲಿ 1993ರಲ್ಲಿ ನಡೆಸಿದ ಅಖಿಲ ಕರ್ನಾಟಕ ಲೇಖಕಿಯರ ಮೂರನೇ ಸಮ್ಮೇಳನಕ್ಕೆ ಅಧ್ಯಕ್ಷೆಯಾಗಿದ್ದು; ಅತ್ಯಂತ ಮಹತ್ವದ ವಿಷಯಗಳು.

ಶಾಂತಾದೇವಿಯವರು ಕಥೆ, ಕಾದಂಬರಿ, ಸಂಶೋಧನ ಪ್ರಬಂಧಗಳು, ಜೀವನ ಚರಿತ್ರೆ, ಗೃಹಾಲಂಕಾರ, ಪ್ರವಾಸ ಸಾಹಿತ್ಯ ಇತ್ಯಾದಿ ಹಲವು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. 1941ರಲ್ಲಿ ಪ್ರಕಟಗೊಂಡ 'ಮೊಗ್ಗೆಯ ಮಾಲೆ" ಶಾಂತಾದೇವಿಯವರ ಮೊದಲ ಕೃತಿ. ವಿವಾಹಿತ ಬದುಕಿನಲ್ಲಿನ ಸಮಸ್ಯೆಗಳ ಕುರಿತಾದ ಆರು ಸಣ್ಣ ಕಥೆಗಳನ್ನೊಳಗೊಂಡ ಸಂಕಲನವಿದು. 1954ರಲ್ಲಿ ಬಂದದ್ದು 'ಕಂಕುಮ ಬಲ' ಕಥಾ ಸಂಕಲನ, ಕುಟುಂಬ', ಬೆಳವಡಿ ಮಲ್ಲಮ್ಮ', ನೀಲಾಂಬಿಕೆ'–ಇವು ಮೂರು ಮಕ್ಕಳಿಗಾಗಿ ಬರೆದ ಕಥೆಗಳು. ಮಹಿಳೆಯರ ಆತ್ಮಶ್ರೀ, ಕನ್ನಡ ತಾಯಿ, ಮಹಿಳೆಯರ ಅಲಂಕಾರ, ಸೊಬಗಿನ ಮನೆ, ಬಸವ ಪ್ರಕಾಶ (ಕಾದಂಬರಿ); ಧಾರವಾಡ ಜಿಲ್ಲಾ ಪರಿಚಯ: ಶ್ರೀಗಿರಿಯಿಂದ ಹಿಮಗಿರಿಗೆ (ಪ್ರವಾಸ); ರಸಪಾಕ; 1998ರಲ್ಲಿ ಹೊರಬಂದ 'ಶೂರರಾಣಿ ಕೆಳದಿಯ ಚೆನ್ನಮ್ಮಾಜಿ' ಮುಂತಾಗಿ ಇಪ್ಪತ್ತಾರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಪ್ರಾಚೀನ ಕಾಲದಿಂದ ಅರ್ವಾಚೀನದವರೆಗೆ ಮಹಿಳೆಯರ ಆತ್ಮೋನ್ನತಿಯ ಚಿಂತನೆಯನ್ನೊಳಗೊಂಡ ಕೃತಿ ಮಹಿಳೆಯರ ಆತ್ಮಶ್ರೀ. ಮಹಿಳೆಯರ ಅಲ್ಪತೆಯ ಭ್ರಾಂತಿಯನ್ನು ಹೋಗಲಾಡಿಸಲು, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ಆಧ್ಯಾತ್ಮಿಕ ವಿವೇಚನೆಗೆ ಗಮನ ಕೊಡುವ ಬಗ್ಗೆ

ಮಹಿಳೆಯರಿಗೆ ತಿಳಿವಳಿಕೆ ನೀಡುವ ಪ್ರಯತ್ನ ಮಹಿಳೆಯರ ಚೇತನದಲ್ಲಿದೆ. 'ಹಚ್ಚೇವು ಕನ್ನಡದ ದೀಪ' ಕನ್ನಡದ ಉಳಿವಿಗಾಗಿ ಕನ್ನಡ ನಾಡು–ನುಡಿಯ ಹಿರಿಮೆಯ ಪರಿಚಯಿಸುವ ಕೃತಿ. ಮಹಿಳೆಯರ ಅಲಂಕಾರ, ಸೊಬಗಿನ ಮನೆ ಪುಸ್ತಕಗಳು ಕೇವಲ ಸೌಂದರ್ಯ–ಸ್ವಚ್ಛತೆಗಳ ಕುರಿತಾಗಿರದೆ, ಸಂಶೋಧನೆಯನ್ನು ಒಳಗೊಂಡ, ಪ್ರಾಚೀನತೆ ಹಾಗೂ ಸಂಸ್ಕೃತಿಗಳ ಕುರಿತಾಗಿಯೂ ತಿಳಿಸುವ ಕೃತಿಗಳಾಗಿವೆ. ಬಿಡಿಮುಡಿ, ಬಿಡುಮುಡಿ, ಎಲ್ಲುಡಿ, ಬಳಮುಡಿ, ಸಡಿಲ್ಮುಡಿ, ಸೋರ್ಮುಡಿ, ಸಿರ್ಮುಡಿ, ತಳಿರ್ಮುಡಿ, ಕರೀಟ ಮುಡಿ, ಸೋಗೆ, ದುರುಂಬು ಮುಂತಾದ ವಿಭಿನ್ನ ಮುಡಿ, ಕಟ್ಟುವ ರೀತಿ, ಇಂದಿನ ಮುಡಿಗಳಿಗೆ ಹೋಲಿಕೆ, ಅಲಂಕಾರ, ಆಭರಣಗಳು, ವೇಷ ಭೂಷಣಗಳ ತುಲನಾತ್ಮಕ ವಿವರಗಳು, ಒಂದು ವಿಶಿಷ್ಟ ಬರವಣಿಗೆಯೇ.

"ಕನ್ನಡ ತಾಯಿ" ಕೃತಿಯಲ್ಲಿ (1956), ದಾನ ಚಿಂತಾಮಣಿ ಅತ್ತಿಮಬ್ಬೆ, ಬೆಳವಡಿ ಮಲ್ಲಮ್ಮ, ಕಂತಿ, ಅಕ್ಕ ಮಹಾದೇವಿ, ಸಂಚಿಯ ಹೊನ್ನಮ್ಮ, ಅಕ್ಕನಾಗಮ್ಮ, ಇವರುಗಳ ಜೀವನ ಚಿತ್ರಣವನ್ನೂ; "ಭಾರತದ ಮಾನಸ ಪುತ್ರಿಯರು" (1982), ಎಂಬ ಹೊತ್ತಿಗೆಯಲ್ಲಿ, ಭಾರತದ ಸಂಸ್ಕೃತಿಗೆ ಮನಸೋತ ಐದು ವಿದೇಶೀ ಮಹಿಳೆಯರ ಜೀವನ ಚಿತ್ರಣವನ್ನೂ ನಿರೂಪಿಸಿದ್ದಾರೆ. ಬಸವಯುಗದ ಶಿವಶರಣೆಯರು, ಎಣ್ಣೆಹೊಳೆಯ "ನಂದಾದೀಪ", ಗಂಗಾಂಬಿಕೆ", ಮುಂತಾದುವು, ವಚನ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿ ಬರೆದಂತಹ ಕೃತಿಗಳು,

ಶಾಂತಕ್ಕನವರ ಅಪಾರ ಸಮಾಜ ಸೇವೆ ಮತ್ತು ವಿಶಿಷ್ಟ ಸಾಹಿತ್ಯ ಸೇವೆಗಳಿಗೆ ಸಾರ್ಥಕತೆಯ ತೃಪ್ತಿ ಕೊಡುವಂತೆ ಸನ್ಮಾನಗಳು, ಗೌರವಗಳು ಮತ್ತು ಉನ್ನತ ಪ್ರಶಸ್ತಿಗಳು ಅವರ ಕೈ ಸೇರಿವೆ. ಹಲವಾರು ಖಾಸಗಿ ಸಂಘ–ಸಂಸ್ಥೆಗಳಿಂದ ಅಲ್ಲದೇ, 1977ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1982ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 1994ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ, 1997ರಲ್ಲಿ ಕರ್ನಾಟಕ ಸರ್ಕಾರದ ಅತ್ಯುನ್ನತ "ದಾನ ಚಿಂತಾಮಣಿ ಅತ್ತಿಮಬ್ಬೆ" ಪ್ರಶಸ್ತಿ; ಜೂನ್ 2000ದಲ್ಲಿ ಬಾಗಲಕೋಟೆಯಲ್ಲಿ ನಡೆದ ಅರವತ್ತೆಂಟನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಮುಂತಾದವು, ಸರ್ಕಾರದ ಹಂತದಲ್ಲೂ, ಅವರ ಹೆಸರನ್ನು ಅಜರಾಮರಗೊಳಿಸಿದ ಪ್ರಮುಖ ಪ್ರಶಸ್ತಿಗಳು. ಅವರ 'ಶೂರ ರಾಣಿ ಕೆಳದಿ ಚೆನ್ನಮ್ಮ' ಕೃತಿಯನ್ನು ಹೆಸರಿಸಿ, 1999ರಲ್ಲಿ ಬೆಂಗಳೂರಿನ ಕರ್ನಾಟಕ ಲೇಖಕಿಯರ ಸಂಘದಿಂದ ಅವರಿಗೆ ನೀಡಲಾದ 'ಅನುಪಮಾ ಪ್ರಶಸ್ತಿ'ಯ ಮೊತ್ತ ಹತ್ತು ಸಾವಿರಗಳನ್ನು ವಿಶ್ವಾಸದಿಂದ ಸ್ವೀಕರಿಸಿ, ಆ ಮೊತ್ತವನ್ನು ಸಂಘಕ್ಕೇ ನೀಡಿ ತಮ್ಮ ಔದಾರ್ಯವನ್ನು ತೋರಿಸಿದ್ದು, ಅವರ ಹೆಸರಿನ ಈ ದತ್ತಿನಿಧಿಯಲ್ಲಿ ಉಪನ್ಯಾಸ ಕಾರ್ಯಕ್ರಮಗಳನ್ನು ಈ ಸಂಘ ಪ್ರತಿವರ್ಷ ನಡೆಸುತ್ತದೆ. ಶ್ರೀಮತಿ ಶಾಂತಾದೇವಿ ಕಣವಿ ಅವರು ಇವರಿಗೆ 'ಪ್ರಶಾಂತ' ಎಂಬ ಅಭಿನಂದನಗ್ರಂಥ ಅರ್ಪಿಸಿದ್ದಾರೆ.

———— * ————

ಸ್ವಾತಂತ್ರ್ಯ ಹೋರಾಟದ ಕಣ್ಮಣಿ ಬಳ್ಳಾರಿ ಸಿದ್ಧಮ್ಮ

ಡಾ. ಎಸ್.ಎಂ. ಗಂಗಾಧರಯ್ಯ

ಸ್ವಾತಂತ್ರ್ಯೋತ್ತರ ಸಂದರ್ಭವು ಇಚ್ಛಾಶಕ್ತಿಯಿಂದ ಸೊರಗುತ್ತಿದೆ. ಸಾಮಾಜಿಕ ಬದುಕಿನ ಪರಿವರ್ತನೆಯ ಹಂತದಲ್ಲಿ ನೈಜ ನಾಯಕತ್ವಗಳು ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. 1947ರ ನಂತರ ರಾಜಕೀಯ ಬದುಕು ಬದಲಾದ ಪರಿಸರದಲ್ಲಿ ಹೊಸ ವ್ಯಾಖ್ಯಾನಗಳನ್ನು ತೊಡುತ್ತಿದೆ. ಬದಲಾದ ಜಾಗತಿಕ ಸಂದರ್ಭವೂ ಕೂಡ! ಅಭಿವೃದ್ಧಿ ವ್ಯಾಖ್ಯಾನಗಳನ್ನು ಬದಲಿಸುತ್ತಿದೆ. ಭಾರತದ ಮಟ್ಟಿಗೆ ಇದೊಂದು ಸಂಧಿಯ ಕಾಲಘಟ್ಟ. ಪೂರ್ವ ನಿದರ್ಶನಗಳನ್ನು ಅವಲೋಕಿಸಿ ನಾಡನ್ನು ಕಟ್ಟುವುದಾದರೆ ಅದು ನೈತಿಕ ಭಾರತ ಅಥವಾ ಮೌಲ್ಯಾಧಾರಿತ ಭಾರತವೆಂಬ ಪರಿಕಲ್ಪನೆಗೆ ನಮ್ಮವರು ಸ್ವಾತಂತ್ರ್ಯ ಸಮರದಲ್ಲಿ ತೊಡಗಿಕೊಂಡದ್ದು ಕೇವಲ ಪ್ರವೃತ್ತಿಗಲ್ಲ; ಅಥವಾ ಅದನ್ನೊಂದು ವೃತ್ತಿಯೆಂದು ಮಾಡಿಕೊಳ್ಳಲಿಕ್ಕೂ ಅಲ್ಲ. ಸತ್ಯ ಪ್ರತಿಪಾದನೆ, ಅಭಿವೃದ್ಧಿ ಮಂತ್ರ ಹೊಸ ಆಶಯಗಳೊಂದಿಗೆ ಸಮಾಜದ ಪ್ರತಿ ನಿರ್ಮಾಣ, ಜಾತಿ ವಿನಾಶ, ಅನಕ್ಷರತೆ ಹಾಗೂ ಅಜ್ಞಾನವನ್ನು ತೊಡೆದುಹಾಕುವ ಪ್ರಯತ್ನದ ಭಾಗವಾಗಿ ಭಾವಪೂರ್ಣವಾಗಿ ಅದೊಂದನ್ನು ಇಚ್ಛಾಶಕ್ತಿಯ ಪ್ರತೀಕವೆಂದು ಪರಿಭಾವಿಸಿಕೊಂಡರು. ಸ್ವಾತಂತ್ರ್ಯಪೂರ್ವದ ಭಾರತದ ಆದರ್ಶಗಳೆಂದರೆ ಗಾಂಧಿವಾದ ಮತ್ತು ನೆಹರು ಅವರ ವಾದ. ಈ ಎರಡೂ ಆರ್ಥಿಕ ವಿಚಾರಧಾರೆಗಳನ್ನು ಒಂದನ್ನೊಂದು ಸಮಾನ ಪಾತಳಿಗಳ ರೈಲ್ವೆ ಹಳಿಗಳಂತೆ ಜೋಡಿಸಬಹುದಾಗಿತ್ತು. ಗಾಂಧೀಜಿ ಪ್ರತಿಪಾದನೆ ಮಾಡಿದ್ದು ಗ್ರಾಮೀಣ ಸ್ವಾವಲಂಬನೆಯ ಗ್ರಾಮ ಸ್ವರಾಜ್ಯವನ್ನು. ಆದರೆ ನೆಹರು ಅವರ ಚಿಂತನೆ ಬೇರೆಯಾಗಿತ್ತು. ರಷ್ಯಾದ ಮಾದರಿ ಅವರಿಗೆ ಅಪ್ಯಾಯಮಾನವಾಗಿತ್ತು. ದೊಡ್ಡ ನಗರಗಳು, ದೊಡ್ಡ ದೊಡ್ಡ ಕಾರ್ಖಾನೆಗಳು ಅಲ್ಲದೆ ಅದಕ್ಕೆ ಪೂರಕವಾದ ಬ್ಯಾಂಕಿಂಗ್ ವ್ಯವಸ್ಥೆ, ಸಾರಿಗೆ-ಸಂಪರ್ಕ ಮುಂತಾದ ಚಿತ್ರಣಗಳನ್ನು ನೆಹರು ಕಲ್ಪಿಸಿಕೊಂಡಿದ್ದರು. ಆದರೆ ಗಾಂಧಿ ಹಳ್ಳಿಗಳ ಸ್ವಾವಲಂಬನೆ ಬಯಸಿದರು. ಹಳ್ಳಿಗಳೇ ತಮಗೆ ಬೇಕಾದ ಉತ್ಪಾದಕ ಸಾಮರ್ಥ್ಯದಿಂದ ಸ್ವಾವಲಂಬನೆಯನ್ನು ಗಳಿಸಿ ಆರ್ಥಿಕವಾಗಿ ಸಮನ್ವಯ ಮಾಡಿಕೊಳ್ಳಬೇಕು ಎಂಬುದು ಅವರ ಆಶಯವಾಗಿತ್ತು. ಈ ವಿಚಾರಧಾರೆಗಳೇನೇ ಇರಲಿ, ಇಬ್ಬರು ತುಳಿದ ಹಾದಿ ಒಂದೇ ಆಗುತ್ತಿತ್ತು. ಇಬ್ಬರು ತುಡಿದ ಆಲೋಚನೆ ಒಂದೇ ಆಗಿತ್ತು. ಅಭಿವೃದ್ಧಿ ಸಿದ್ಧಾಂತಗಳು ಮಾತ್ರ ಬೇರೆಯಾಗಿದ್ದವು ಎಂಬ ಮಾತ್ರಕ್ಕೆ ಆ ಇಬ್ಬರು ಅಧಿನಾಯಕರಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳಿದ್ದವೆಂದೇನಲ್ಲ.

ಸ್ವಾತಂತ್ರ್ಯ ಹೋರಾಟವು ಭಾರತದ ಮಟ್ಟಿಗೆ ನಾಯಕತ್ವವನ್ನು ರೂಪಿಸುವ ವೇದಿಕೆಯಾಗಿದ್ದು ನಿಜ. ಕಳೆದ ಶತಮಾನದ ಮಧ್ಯಭಾಗದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನತೆ ನಾಯಕತ್ವವನ್ನು ರೂಪಿಸಿಕೊಂಡಿತು. ಈ ನಾಯಕತ್ವ ರೂಪಿತವಾಗಲು ಗಾಂಧೀಜಿ ಮತ್ತು ನೆಹರು ಇಬ್ಬರೂ ಅಷ್ಟೇ ಕಾರಣಕರ್ತರಾದರು. ಕಾಂಗ್ರೆಸ್ ಸಂಘಟನೆಯ ನಾಯಕತ್ವವನ್ನು ರೂಪಿಸಿಕೊಳ್ಳುವವರಿಗೆ ತರಬೇತಿ ನೀಡುವ ವೇದಿಕೆಯಾಯಿತು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಆಯಾಯಾ ಸ್ಥಳೀಯಮಟ್ಟದಲ್ಲಿ ನಾಯಕತ್ವಗಳು ಹುಟ್ಟಿಕೊಳ್ಳುತ್ತಾ ಹೋದವು. ಸಂಪರ್ಕ ಸಾಧನಗಳೇ ಇಲ್ಲದ ಅಂದಿನ ಸಂದರ್ಭದಲ್ಲಿ ಒಂದು ಸಂದೇಶವನ್ನು ತಲುಪಿಸುವುದು, ತಿಂಗಳುಗಟ್ಟಲೆ ಸಮಯ

ಬೇಕಾಗುತ್ತಿತ್ತು. ಗಾಂಧೀಜಿ ಬರೋಡಾದಲ್ಲೋ ಲಖನೋದಲ್ಲೋ, ಲಾಹೋರ್‌ನಲ್ಲೋ, ಇಸ್ಲಾಮಾಬಾದ್‌ನಲ್ಲೋ ನೀಡಿದ ಹೇಳಿಕೆಗಳು ಜನತೆಯನ್ನು ತಲುಪುತ್ತಿದ್ದುದು ಒಂದು ತಿಂಗಳ ತರುವಾಯದಲ್ಲೆ. ಇಷ್ಟಿದ್ದರೂ ಅವರ ಸಂದೇಶ ಆ ಸಂದರ್ಭದಲ್ಲಿ ಪ್ರಸ್ತುತವಾಗುತ್ತಾ ಹೋಗುತ್ತಿತ್ತು. ಗಾಳಿಸುದ್ದಿಗಳೂ ಅಂದು ಕಡಿಮೆಯೇನಿರಲಿಲ್ಲ. ಗಾಂಧೀಜಿಯವರು ನೀಡಿದ ಹೇಳಿಕೆಗಳು ಕೆಲವು ಪ್ರಕ್ಷಿಪ್ತಗಳೊಡನೆ ನಾಡಿನ ಮೂಲೆಮೂಲೆಯಲ್ಲಿರುವ ನಾಯಕರಿಗೆ ವಾರದೊಪ್ಪತ್ತಿನಲ್ಲಿ ತಲುಪುತ್ತಿದ್ದವು. ಇದರಿಂದ ಪ್ರಭಾವಿತರಾಗಿ ಸಾಕಷ್ಟು ಜನ ಗಾಂಧೀಜಿಯವರ ವಿಚಾರಧಾರೆಗಳಿಗೆ ಕಿವಿಗೊಡುತ್ತಾ ಹೋದರು. ಅಷ್ಟೇ ಅಲ್ಲ, ಗಾಂಧೀಜಿಯವರನ್ನು ಮೈದುಂಬಿಸಿಕೊಂಡರು. ಇದರಲ್ಲಿ ಪುರುಷ–ಮಹಿಳೆ, ಬಾಲ–ವೃದ್ಧ ಎನ್ನುವ ಭೇದಗಳಿಲ್ಲದೆ ಸಮಾಜದ ಅಂಚಿನಲ್ಲಿರುವ ಪ್ರತಿ ಸಮುದಾಯಗಳಲ್ಲಿಯ ಎಲ್ಲರೂ ತನ್ಮಯತೆಯಿಂದ ಭಾಗಿಯಾಗುತ್ತಾ ಹೋದರು. ಪ್ರಾಂತೀಯವಾಗಿ ಅಥವಾ ಪ್ರಾದೇಶಿಕವಾಗಿ ಸ್ವಾತಂತ್ರ ಹೋರಾಟವನ್ನು ಅಣಿಗೊಳಿಸುತ್ತಾ ಹೋದರು. ಅಂದಿನ ಸಂಘಟನೆಯನ್ನು ಸಂಘಟಿಸುವ ತರುಣ–ತರುಣಿಯರು ಸಾರ್ವಜನಿಕ ಉದ್ದೇಶಗಳಿಗಾಗಿ, ದೇಶದ ಬಿಡುಗಡೆಗಾಗಿ ಶ್ರಮಿಸುತ್ತಾ ಹೋದರು. ಇಡೀ ನಾಡೆಂಬುದು ಸ್ವಾರ್ಥವನ್ನು ಮರೆತು ರಾಷ್ಟ್ರೀಯತೆಯೆಂಬ ಗಾಂಧಿಯ ಮಂತ್ರದಲ್ಲಿ ತೇಲಿಹೋಯಿತು. ಗಾಂಧೀಜಿ ಸೃಷ್ಟಿಸಿದ ಅಲೆ ಹಾಗಿತ್ತು. ಮೈಸೂರು, ಮಂಡ್ಯ, ಬಳ್ಳಾರಿ, ಬೆಳಗಾವಿ ಮುಂತಾದ ಪ್ರದೇಶಗಳಲ್ಲಿ ಸ್ವಯಂಪೂರ್ಣ ಇಚ್ಛೆಯಿಂದ ಜನತೆ ಗಾಂಧೀಜಿಯವರನ್ನೇ ಅನುಸರಿಸಿತು. ಬ್ರಿಟಿಷರ ವಿರುದ್ಧ ಎದ್ದು ನಿಂತಿತು. ಇಂತಹ ಸಂದರ್ಭದಲ್ಲಿ ಕರ್ನಾಟಕದ ಸ್ವಾತಂತ್ರ್ಯ ಹೋರಾಟವು ನಿಜದ ನಿಟ್ಟಿನಲ್ಲಿ ರಾಷ್ಟ್ರಭಕ್ತಿಯ ಬೇಗೆಯಲ್ಲಿ ಬೇಯತೊಡಗಿತು.

ಕರ್ನಾಟಕ ಮಟ್ಟಿಗೆ ಹೇಳುವುದಾದರೆ ಶ್ರೀಮತಿ ಯಶೋಧರಮ್ಮ ದಾಸಪ್ಪ, ಬಳ್ಳಾರಿ ಸಿದ್ದಮ್ಮ, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದ ಗಣ್ಯ ಮಹಿಳೆಯರು ಸ್ವಾತಂತ್ರ್ಯ ಚಳವಳಿಯ ಕಹಳೆಗೆ ದನಿಗೂಡಿಸಿದರು. ದೇಶವ್ಯಾಪಿ ನಡೆದ ಈ ಚಳವಳಿಯಲ್ಲಿ ಸರೋಜಿನಿ ನಾಯ್ಡು, ರಾಜಕುಮಾರಿ ಅಮೃತಾ ಕೌರ್, ಸುಚೇತಾ ಕೃಪಲಾನಿ, ಅನಿಬೆಸೆಂಟ್, ಆಶಾದೇವಿ, ಮಿಸ್ ಸ್ಲೇಡರ್ ಮುಂತಾದ ಗಣ್ಯರು ಆಗಲೇ ಪಣತೊಟ್ಟು ಬೀದಿಗಿಳಿದು ಹೋರಾಟ ನಡೆಸಿದ್ದರು. ಇವರಿಂದ ಪ್ರಭಾವಿತರಾದ ಬಳ್ಳಾರಿ ಸಿದ್ದಮ್ಮನವರು ಆ ಭಾಗದಲ್ಲಿ ಆ ಸಂಘಟನೆಯನ್ನು ಮಾಡಿ ಬೀದಿಗಿಳಿದು ಸ್ವಾತಂತ್ರ್ಯ ಹೋರಾಟ ಮಾಡತೊಡಗಿದರು. ಇವರು ನಿಜವಾದ ಅರ್ಥದಲ್ಲಿ ಸಮಾಜ ಸೇವಕಿ. ಗಾಂಧಿ ತತ್ವದಲ್ಲಿ ಅಚಲವಾದ ಭಕ್ತಿ, ವಿಶ್ವಾಸಗಳನ್ನಿಟ್ಟುಕೊಂಡವರು. 1939ನೆಯ ಸೆಪ್ಟೆಂಬರ್ 18ರಂದು ಅಸಹಕಾರ ಚಳವಳಿಯ ಮುಂದುವರೆದ ಭಾಗವಾದ ಕಾನೂನು ಭಂಗ ಚಳುವಳಿಯಲ್ಲಿ ನಿರತರಾಗಿ ತುರುವನೂರು ಅರಣ್ಯ ಸತ್ಯಾಗ್ರಹದಲ್ಲಿ ಪ್ರಪ್ರಥಮವಾಗಿ ಭಾಗವಹಿಸಿದರು. ಆದರೆ ಬ್ರಿಟಿಷ್ ಸರ್ಕಾರ ಅವರನ್ನು 19ನೆಯ ತಾರೀಖಿನಂದು ದಸ್ತಗಿರಿ ಮಾಡಿತು. 1938ರಲ್ಲಿ ನಡೆದ ಶಿವಪುರದ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ತಮ್ಮ ಸಾಮರ್ಥ್ಯವನ್ನು ಮೆರೆದರು. ಆಗ ಅವರಿಗೆ ಮೂರು ತಿಂಗಳ ಸೆರೆಮನೆ ವಾಸವಾಯಿತು. ಮೈಸೂರು ರಾಜ್ಯದಲ್ಲಿ ಸೆರೆಮನೆ ವಾಸವನ್ನು ಅನುಭವಿಸಿದ ಮೊದಲ ಮಹಿಳೆ ಎಂಬ ಕೀರ್ತಿಗೆ ಇವರು ಭಾಜನರು. ಇವರಿಗೆ ಶಿಕ್ಷೆ ವಿಧಿಸಿದ ನ್ಯಾಯಾಧಿಪತಿಯು ಇವರ ನಿರ್ಭಿಡೆಯ ಮನೋಭಾವ ಮತ್ತು ನಿಸ್ವಾರ್ಥ ರಾಷ್ಟ್ರಸೇವೆಯನ್ನು ನೆನೆದು ಶಿಕ್ಷೆಯ ಸಾಲುಗಳನ್ನು ಬರೆಯುವಂತಹ ಸಂದರ್ಭದಲ್ಲಿ ಕೈನಡುಗಿ ಹೋಯಿತು ಎನ್ನುವುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು.

ಇಲ್ಲಿಂದ ಬಿಡುಗಡೆಯಾದ ತರುವಾಯ ಮೈಸೂರು ಸಂಸ್ಥಾನದಲ್ಲಿ ಖಾದಿ ಪ್ರಚಾರ ಪ್ರವಾಸ ಕಾರ್ಯಕ್ರಮವನ್ನು ನಾಡಿನಾದ್ಯಂತ ಹಮ್ಮಿಕೊಂಡರು. ಖಾದಿ ಪ್ರಚಾರ ಸಂಘಗಳನ್ನು ತೆರೆಯುತ್ತಾ ಹೋದರು. ಇದರಿಂದ ಕೇವಲ ಅವರಿಗೆ ಖಾದಿ ಪ್ರಚಾರ ಮಾಡುವ ಉದ್ದೇಶವಿರದೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಜನತೆಯನ್ನು ಎಳೆಯುತ್ತಾ ಹೋದರು. 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಮೂರು ಬಾರಿ ಸೆರೆಮನೆ ವಾಸವನ್ನು ಅನುಭವಿಸಿದರು. 1949ರಲ್ಲಿ ಕರ್ನಾಟಕದ ಯುವ ಪರಿಷತ್ತಿನ ಅಧ್ಯಕ್ಷರಾಗಿದ್ದ ಕೆ.ಎಂ. ರುದ್ರಪ್ಪನವರು ಅರಸೀಕೆರೆಯಲ್ಲಿ ಕರೆದಿದ್ದ ಸರ್ವಪಕ್ಷ ಸಭೆಯಲ್ಲಿ ಬಳ್ಳಾರಿ ಸಿದ್ದಮ್ಮನವರನ್ನು ಅಧ್ಯಕ್ಷ ಸ್ಥಾನ ಅಲಂಕರಿಸುವಂತೆ ಕೋರಿದರು. ಆದರೆ ಅವರು

ನಾನು ನಿಷ್ಪಕ್ಷಪಾತವಾದ ರಾಜಕೀಯೇತರ ಸಮಾಜಸೇವೆಯನ್ನು ಬಯಸುತ್ತೇನೆ ಎಂದು ಮತ್ತು ಬಡವರ ಪರ ನನ್ನ ಜೀವನ ಮುಡುಪಾಗಿರುತ್ತದೆ ಎಂದು ಘೋಷಿಸಿಕೊಂಡರು. ರಾಜಕೀಯೇತರ ಸಂಘಟನೆಯಾದರೆ ಮಾತ್ರ ನಾನು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸುತ್ತೇನೆ ಎಂದು ಹೇಳಿದರು. ಅನಂತರದಲ್ಲಿ ಬಳ್ಳಾರಿ ಸಿದ್ದಮ್ಮನವರು ಎರಡು ಅವಧಿಗೆ ಮೈಸೂರು ವಿಧಾನಸಭೆಗೆ ಆಯ್ಕೆಯಾದರು. ದಾವಣಗೆರೆ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಅವರು ರಾಜಕೀಯೇತರ ದೃಷ್ಟಿಕೋನದಿಂದ ಕ್ಷೇತ್ರವನ್ನು ಪ್ರತಿನಿಧಿಸಲು ಇಷ್ಟಪಟ್ಟರು. ಅವರ ಜನಪರ ಕಾಳಜಿಗಳು ಅನುಕರಣೀಯವಾದವುಗಳು. ದಾವಣಗೆರೆ ಮತ್ತು ಚಿತ್ರದುರ್ಗಗಳಲ್ಲಿ ಅನೇಕ ಮಾತೃಮಂದಿರಗಳನ್ನು ಸ್ಥಾಪಿಸಿದರು. ನಾಡಿನಾದ್ಯಂತ ಈ ತರದ ಚಿಕಿತ್ಸಾ ಕೇಂದ್ರಗಳನ್ನು ತೆರೆಯುತ್ತಾ ಹೋದರು. ಭರಮಸಾಗರದಲ್ಲಿ ಒಂದು ಮಾತೃಮಂದಿರವನ್ನು ಸ್ಥಾಪಿಸಿ ಎಸ್. ನಿಜಲಿಂಗಪ್ಪನವರ ಪತ್ನಿಯಾದ ಮುರಿಗೆಮ್ಮನವರ ಹೆಸರಿನಲ್ಲಿ ಕರ್ತವ್ಯಕ್ಕೆ ಅಣಿಗೊಳಿಸಿದರು.

——— * ———

ಉತ್ತರ ಕರ್ನಾಟಕದ ಪ್ರಥಮ ಮಹಿಳಾ ರಾಜಕಾರಣಿ

ರಾಜೇಶ್ವರಿ

ಸುಮಾರು ನಲವತ್ತು ವರ್ಷಗಳ ಕಾಲ ಕರ್ನಾಟಕದ ರಾಜಕೀಯ ರಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಸಮರ್ಥವಾಗಿ ನಿಭಾಯಿಸಿ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಖ್ಯಾತರಾಗಿದ್ದ ಶ್ರೀಮತಿ ಬಸವರಾಜೇಶ್ವರಿಯವರು, ಏಕೀಕರಣಪೂರ್ವ ಬಳ್ಳಾರಿ ಜಿಲ್ಲೆಯ, ರಾಯಘಡ ತಾಲ್ಲೂಕಿನ, ಹನುಮಾಪುರ ಗ್ರಾಮದವರು. ರಾಜಕೀಯ ಹಿನ್ನೆಲೆಯುಳ್ಳ ಸುಸಂಸ್ಕೃತ ಜಮೀನುದಾರಿ ಕುಟುಂಬದ ಹಿನ್ನೆಲೆಯಿಂದ ಬಂದವರು. ಇವರ ತಂದೆ ವೀರಾರೆಡ್ಡಿ. ತಾಯಿ ಶ್ರೀಮತಿ ತಿಮ್ಮಮ್ಮ. ಕುಟುಂಬದ ಹಿರಿಯ ಮಗಳಾಗಿ ಇವರು 17-2-1923 ರಂದು ಜನಸಿದರು. ಇವರಿಗೆ ಐವರು ತಂಗಿಯರು ಮತ್ತು ಇಬ್ಬರು ತಮ್ಮಂದಿರು. ಹೀಗೆ ಇವರದ್ದು ದೊಡ್ಡ ಅವಿಭಕ್ತ ಕುಟುಂಬ.

ಶ್ರೀಮತಿ ಬಸವರಾಜೇಶ್ವರಿಯವರ ಚಿಕ್ಕಪ್ಪ ಕುಮಾರರೆಡ್ಡಿಯವರು ಆಗಿನ ಕಾಲದಲ್ಲಿ ಪ್ರಸ್ತಿದ್ಧ ವಕೀಲರಾಗಿದ್ದರು. ಜೊತೆಗೆ ತಾಲ್ಲೂಕು ಬೋರ್ಡ್ ಅಧ್ಯಕ್ಷರೂ ಆಗಿದ್ದರು. ಕುಮಾರರೆಡ್ಡಿಯವರಿಗೆ ಬಸವರಾಜೇಶ್ವರಿಯವರನ್ನು ಕಂಡರೆ ಅಕ್ಕರೆ. ಅದೇ ರೀತಿ ಬಸವರಾಜೇಶ್ವರಿಯವರಿಗೂ ದೊಡ್ಡ ವಕೀಲರೂ, ರಾಜಕೀಯ ಮುಖಂಡರೂ ಆಗಿದ್ದ ಚಿಕ್ಕಪ್ಪನನ್ನು ಕಂಡರೆ ಪ್ರೀತಿ ಮತ್ತು ಗೌರವ. ವಿದ್ಯಾಭ್ಯಾಸ, ರಾಜಕೀಯ ತಿಳುವಳಿಕೆ ಇವೆಲ್ಲಕ್ಕೂ ಚಿಕ್ಕಪ್ಪನವರದ್ದೇ ಪ್ರೇರಣೆ.

ಬಳ್ಳಾರಿಯಲ್ಲಿ ಇಂಟರ್‌ಮೀಡಿಯಟ್‌ವರೆಗೆ ವಿದ್ಯಾಭ್ಯಾಸ ಮಾಡಿದ ಶ್ರೀಮತಿ ಬಸವರಾಜೇಶ್ವರಿಯವರು, ವಿದ್ಯಾರ್ಥಿನಿಯಾಗಿ ಆಟಪಾಠಗಳಲ್ಲಿ ಸದಾ ಮುಂದು. ಜೊತೆಗೆ ಕೌಟಂಬಿಕ ಜವಾಬ್ದಾರಿಯ ನಿರ್ವಹಣೆಯಲ್ಲಿ, ರಾಜಕೀಯ ವಿಚಾರಗಳಲ್ಲಿ ಉತ್ತಮ ಪರಿಜ್ಞಾನವನ್ನು ಹೊಂದಿದ್ದರು. ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವ ಸಾಮರ್ಥ್ಯ ಇತ್ತು.

ಅಂದಿನ ಕಾಲದ ಸಂಪ್ರದಾಯದಂತೆ ಅವರ ತಂದೆತಾಯಿಗಳು ಬಸವರಾಜೇಶ್ವರಿಯವರ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ವಿವಾಹ ಮಾಡಲು ನಿಶ್ಚಯಿಸಿದರು. ನಿಜಾಮರ ಆಡಳಿತಕ್ಕೊಳಪಟ್ಟಿದ್ದ ಹೈದರಾಬಾದ್ ರಾಜ್ಯದ, ರಾಯಚೂರು ಜಿಲ್ಲೆಯ, ಲಿಂಗಸೂಗೂರು ತಾಲ್ಲೂಕಿನ, ಗೆಜ್ಜಲಘಟ್ಟ ಗ್ರಾಮದ ಜಹಗೀರ್‌ದಾರ್ ರಾಜಾ ವೆಂಕಟರಾವ್ ಅವರ ಹಿರಿಯ ಹೆಂಡತಿ ಮಗ ರಾಜಾ ಶರಣಬಸವ ಅವರೊಂದಿಗೆ ಬಸವರಾಜೇಶ್ವರಿಯವರ ವಿವಾಹವು ನಡೆಯಿತು. ಆಗ ಅವರಿಗೆ 17 ವರ್ಷ. ವೆಂಕಟರಾಯರು ಹದಿಮೂರು ಹಳ್ಳಿಗಳ ಒಡೆತನ ಹೊಂದಿದ್ದ ಜಹಗೀರ್‌ದಾರರು. ಸಾವಿರಾರು ಎಕರೆ ಭೂಮಿ, ಕೊಪ್ಪರಿಗೆಯಷ್ಟು ಹಣ, ದೊಡ್ಡ ಪೆಟ್ಟಿಗೆಗಳಲ್ಲಿ ತುಂಬಿಡುವಷ್ಟು ಬಂಗಾರದ ಒಡವೆಗಳು, ಹಂಡೆ ತುಂಬುವಷ್ಟು ವಿಕ್ಟೋರಿಯಾ ರಾಣಿಯ ಮುದ್ರೆ ಇದ್ದ ಅಂದಿನ ಕಾಲದ ಬೆಳ್ಳಿಯ ರೂಪಾಯಿಗಳು, ನೂರಾರು ಆಳುಕಾಳುಗಳು, ಹೀಗೆ ಅವರೊಬ್ಬರು ಸ್ಥಳೀಯ ಮಹಾರಾಜರಿದ್ದಂತೆ. ಆದರೆ ಆ ಮನೆತನದಲ್ಲಿ ವಿದ್ಯಾವಂತರಾರೂ

ಇರಲಿಲ್ಲ. ಆ ಮನೆತನದ ಘನತೆ ಗೌರವಗಳಿಗೆ ತಕ್ಕಂತೆ, ಬಸವರಾಜೇಶ್ವರಿಯವರ ಮದುವೆ ಬಹಳ ಅದ್ದೂರಿಯಿಂದ ನಡೆಯಿತು. ಮದುವೆಯಾದ ಬಸವರಾಜೇಶ್ವರಿಯವರನ್ನು ಮೇನೆಯಲ್ಲಿ ಕೂರಿಸಿಕೊಂಡು ಹೋಗುತ್ತಿದ್ದುದನ್ನು ನೋಡಿದ ಅನೇಕರು ಆ ಭಾಗದಲ್ಲಿದ್ದಾರೆ.

ರಾಜಾ ವೆಂಕಟರಾಯರ ಮೂರನೆಯ ಹೆಂಡತಿ ನೀಲಮ್ಮ. ಅವರು ಬಸವರಾಜೇಶ್ವರಿಯವರಿಗಿಂತ ಎರಡು ವರ್ಷ ದೊಡ್ಡವರು. ಹೀಗಾಗಿ ಅವರು ಗೆಳತಿಯರಂತೆ ಇದ್ದರು. ಮಾವನವರಿಗೆ ವಿದ್ಯಾವಂತ ಸೊಸೆಯ ಬಗ್ಗೆ ಬಹಳ ಅಭಿಮಾನ. ಆಕೆ ತಮ್ಮ ಜಹಗೀರ್‌ದಾರಿಯನ್ನು ಸಮರ್ಥವಾಗಿ ನಿಭಾಯಿಸಿ ನಡೆಸಿಕೊಂಡು ಹೋಗುತ್ತಾಳೆ ಎಂಬ ವಿಶ್ವಾಸ ಇತ್ತು.

ಅಂದಿನ ನಿಜಾಮ್‌ಶಾಹಿಯ ಜಹಗೀರ ಪದ್ಧತಿಯ ಪ್ರಕಾರ ವೆಂಕಟರಾಯರು ತಮ್ಮ ಮಗ ರಾಜಾ ಶರಣಬಸವನೇ ಮುಂದಿನ ಜಹಗೀರ್‌ದಾರ್ ಎಂದು 'ಜಹಗೀರ್‌ದಾರ್ ಅಡ್ಮಿನಿಸ್ಟ್ರೇಟೀವ್ ಟ್ರಿಬ್ಯೂನಲ್'ನಲ್ಲಿ ದಾಖಲಿಸಿದರು. ಆಗ ಸವತಿ ಮತ್ಸರ ಹೊಗೆಯಾಡತೊಡಗಿತು. ಅವರಿವರ ದುರ್ಬೋಧನೆಯಿಂದ ಗೆಳತಿಯಂತೆ ಇದ್ದ ಅತ್ತೆ ನೀಲಮ್ಮನವರು ಮಗ ಶರಣಬಸವ ಮತ್ತು ಸೊಸೆ ಬಸವರಾಜೇಶ್ವರಿಯವರ ವಿರುದ್ಧ ತಿರುಗಿಬಿದ್ದರು. ಶರಣಬಸವನು ಬುದ್ಧಿಮಾಂದ್ಯ, ಅವನಿಗೆ ಜಹಗೀರುದಾರಿಕೆಯನ್ನು ನಡೆಸುವಷ್ಟು ಬುದ್ಧಿಸಾಮರ್ಥ್ಯ ಇಲ್ಲದವನು, ಎಂದು ಜಹಗೀರುದಾರಿಕೆ ಇಲಾಖೆಯ ಮುಖ್ಯಸ್ಥನಾದ ಆಯ್‌ಮುಕ್ತಿಯಾರ್ ಎಂಬ ಅಧಿಕಾರಿಯ ಮುಂದೆ ನೀಲಮ್ಮನವರು ವಾದಮಂಡಿಸಿ, ಲಂಚರುಷವತ್ತುಗಳನ್ನು ನೀಡಿ, ಜಹಗೀರುದಾರಿಕೆಯನ್ನು ಶರಣಬಸವನಿಂದ ಕಿತ್ತುಕೊಂಡು ತಮ್ಮ ಮಗ ರಾಜಾ ಶಿವಶಂಕರನಿಗೆ ಕೊಡಿಸಿದರು. ನಗನಾಣ್ಯ ಒಡವೆ ವಸ್ತ್ರ, ಹಣಕಾಸು ಎಲ್ಲವನ್ನೂ ಗೆಜ್ಜಲಘಟ್ಟದಿಂದ ತಮ್ಮ ತವರುಮನೆ ಧಾರವಾಡ ಜಿಲ್ಲೆಯ ಶಿರೋಳಕ್ಕೆ ಸಾಗಿಸಿದರು.

ಇದನ್ನು ಕಂಡ ಬಸವರಾಜೇಶ್ವರಿಯವರು, ಕಾನೂನು ಪ್ರಕಾರ ಹಿರಿಯ ಮಗನಿಗೇ ಜಹಗೀರಿಯ ಹಕ್ಕುದಾರಿಕೆ ದೊರೆಯಬೇಕೆಂಬುದನ್ನು ಮನಗಂಡು, ಅವರ ಬೆಂಬಲಿಗರ ಸಹಕಾರದಿಂದ ನಗನಾಣ್ಯಗಳನ್ನು, ಒಡವೆ ವಸ್ತುಗಳನ್ನು ಸಾಗಿಸುವುದನ್ನು ತಡೆದು ತಾವೂ ಕೂಡಾ ಬೇರೆ ಕಡೆಗೆ ಸಾಗಿಸತೊಡಗಿದರು. ಆಗ ನೀಲಮ್ಮನವರು ನಿಜಾಮ್ ರಾಜ್ಯದ ಪೊಲೀಸರಿಗೆ ದೂರು ನೀಡಿದರು. ಪೊಲೀಸರ ಆಗಮನವಾಯಿತು. ಈ ಹಂತದಲ್ಲಿ ಹದಿಮೂರು ಹಳ್ಳಿಗಳ ಪಟೇಲರುಗಳು, ಪಕ್ಕದ ಗುರುಗುಂಟಾ ಸಂಸ್ಥಾನದ ಸಂಸ್ಥಾನಿಕರಾದ ರಾಜಾ ಜಡಿಸೋಮಪ್ಪನಾಯಕರು, ಮಧ್ಯ ಪ್ರವೇಶಿಸಿ, ಬಸವರಾಜೇಶ್ವರಿ ಮತ್ತು ಶರಣಬಸವರ ಪರ ನಿಂತು, ರಾಜೀಮಾಡಿಸಿ, ಅವರಿಬ್ಬರೂ ಗೆಜ್ಜಲಘಟ್ಟದ ಅರಮನೆಯಲ್ಲಿ ವಾಸ ಮಾಡುವಂತೆ ನೋಡಿಕೊಂಡರು.

ಇವರ ಬೆಂಬಲಿಗರಾದ ಮೂರು ಪ್ರಬಲ ಪಟೇಲರು, ರಾಜಾ ಶರಣಬಸವರಿಗೆ ಜಹಗೀರ್‌ದಾರಿಕೆಯನ್ನು ಮರಳಿಕೊಡಿಸಲು ಪ್ರಯತ್ನಿಸತೊಡಗಿದರು. ಅರಮನೆಯಲ್ಲಿ ಅವರ ಜನರನ್ನು ಇರಿಸಿ ಬಸವರಾಜೇಶ್ವರಿ ದಂಪತಿಗಳಿಗೆ ರಕ್ಷಣೆ ನೀಡಿದರು. ಇವರಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲು ಬರುತ್ತಿದ್ದ ಹಾಗೂ ಇವರಿಗೆ ಬೆಂಗಾವಲಾಗಿ ನಿಂತ ಹದಿಮೂರು ಹಳ್ಳಿಗಳ ಪ್ರಜೆಗಳಿಗೆಲ್ಲ ದಿನವೂ ಊಟೋಪಚಾರವನ್ನು ಬಸವರಾಜೇಶ್ವರಿಯವರೇ ನಿಭಾಯಿಸುತ್ತಿದ್ದರು. ಇವರಿಗೆ ತೊಂದರೆ ಕೊಡುವುದಿಲ್ಲವೆಂದು, ನೀಲಮ್ಮನವರಿಂದ ಅಮರೇಶ್ವರ ದೇವಾಲಯದಲ್ಲಿ ಆಣೆಪ್ರಮಾಣ ಕೂಡಾ ಮಾಡಿಸಿದ್ದರು.

ಆದರೆ ಜನರಿಗೆ ಊಟೋಪಚಾರಕ್ಕೆ ಹಗೇವಿನಿಂದ ಕಾಳುಕಡ್ಡಿ ತೆಗೆದಂತೆಲ್ಲಾ ನೀಲಮ್ಮ ಒಂದೊಂದು ಪೊಲೀಸ್ ಕ್ರಿಮಿನಲ್ ಕೇಸ್ ದಾಖಲಿಸುತ್ತಾ ಬಂದರು. ಒಟ್ಟಾರೆ ಬಸವರಾಜೇಶ್ವರಿ ದಂಪತಿಗಳ ಮೇಲೆ 13 ಕ್ರಿಮಿನಲ್ ಕೇಸ್‌ಗಳು ದಾಖಲಾದವು. ಕೊನೆಗೆ ಜಾಮೀನುರಹಿತ ಬಂಧನದ ವಾರೆಂಟ್ ಕೂಡಾ ಇವರ ಮೇಲೆ

ಹೊರಟಿತು. ಆಗ ಬೇರೆ ದಾರಿ ಇಲ್ಲದೆ ಈ ದಂಪತಿಗಳು ಕೆಲವು ದಿನಗಳ ಕಾಲ ಭೂಗತರಾಗಿಯೂ ಇರಬೇಕಾಯಿತು. ಮಾವ ವೆಂಕಟರಾಯರು ಕಿರಿಯ ಹೆಂಡತಿ ಮತ್ತು ಅವರ ಮಗನ ಪರವೇ ಇದ್ದರು. ಬಸವರಾಜೇಶ್ವರಿ ದಂಪತಿಗಳನ್ನು ಪ್ರಬಲವಾಗಿ ಬೆಂಬಲಿಸುತ್ತಿದ್ದವರಲ್ಲಿ ಪ್ರಮುಖರಾದ ಪಟೇಲ್ ತಿಮ್ಮನಗೌಡರ ಮೇಲೆ ಬಂಧನದ ವಾರೆಂಟ್ ಹೊರಟಿತು. ಅವರನ್ನು ರಾತ್ರಿ ವೇಳೆ ಬಂಧಿಸಲು ಬಂದಾಗ, ಬಸವರಾಜೇಶ್ವರಿಯವರು ನಮ್ಮ ಮನೆಗೆ ಅತಿಕ್ರಮ ಪ್ರವೇಶ ಮಾಡಿದಲ್ಲಿ ಕಾನೂನು ಕ್ರಮ ಎದುರಿಸಬೇಕಾಗುತ್ತದೆಂದು ಪೊಲೀಸರೆದುರು ಧೈರ್ಯವಾಗಿ ವಾದ ಮಾಡಿದಾಗ, ಅವರೂ ಹೆದರಿ ಹಿಂಜರಿದರು. ಇದರಿಂದ ಮಾವ ವೆಂಕಟರಾಯರಿಗೆ ಅವಮಾನವಾಯಿತು. ಮಾವನವರನ್ನು ಎದುರು ಹಾಕಿಕೊಂಡು ಪೊಲೀಸರ ವಿರುದ್ಧ ಮೇಲಾಧಿಕಾರಿಗಳಿಗೆ ದೂರು ದಾಖಲು ಮಾಡಿದರು.

ಕೈಹಿಡಿದ ಗಂಡನನ್ನು, ಅವರಿಗೆ ನ್ಯಾಯವಾಗಿ ಬರಬೇಕಾಗಿದ್ದ ಆಸ್ತಿಪಾಸ್ತಿ ಹಾಗೂ ಜಹಗೀರುದಾರಿಕೆಯನ್ನು ಉಳಿಸಿಕೊಳ್ಳುವ ಹೋರಾಟ, ಮಾವನವರ ಪಕ್ಷಪಾತ, ಚಿಕ್ಕಮ್ಮನ ಕಿರುಕುಳ, ಕಾನೂನು ಸಮಸ್ಯೆಗಳು, ಪೊಲೀಸರ ಕಾಟ, ಇವೆಲ್ಲವುಗಳನ್ನು ಬಸವರಾಜೇಶ್ವರಿಯವರು ಸಮರ್ಥವಾಗಿ ಎದುರಿಸಿದರು. ಪಟೇಲರುಗಳು, ಜನರು ಇವರ ಪರವಾಗಿ ನಿಂತಿದ್ದು ಇವರಿಗೆ ಧೈರ್ಯ ತಂದುಕೊಟ್ಟಿತ್ತು.

ಈ ಸಮಯದಲ್ಲಿ ಗೆಜ್ಜಲಘಟ್ಟಕ್ಕೆ ನವಾಬ್ ಮನೆತನದ, ದಕ್ಷತೆಯುಳ್ಳ ಒಬ್ಬ ಯುವಕನು ಪೊಲೀಸ್ ಅಧಿಕಾರಿಯಾಗಿ ಬಂದನು. ಜಹಗೀರ್‌ದಾರರ ಮನೆತನದ ಆಸ್ತಿವಿವಾದ ಕಲಹಗಳ ಹಿನ್ನೆಲೆಯನ್ನು ಸೂಕ್ಷ್ಮವಾಗಿ ತಿಳಿದುಕೊಂಡನು. ಬಸವರಾಜೇಶ್ವರಿ ದಂಪತಿಗಳ ಮೇಲಿದ್ದ ಎಲ್ಲ ಖಟ್ಲೆಗಳನ್ನೂ ರದ್ದುಗೊಳಿಸಿದನು. ಶರಣಬಸವರಿಗೆ ಅಭಯ ನೀಡಿ ಅವರನ್ನು ಕರೆತಂದನು. ಎರಡೂ ಕಡೆಯವರನ್ನೂ ಕೂರಿಸಿ ರಾಜೀಕಬೂಲಿ ಮಾಡಿಸಿ, ಆಸ್ತಿಯನ್ನು ಸಮಾನವಾಗಿ ಹಂಚಿಕೆ ಮಾಡಿಸಿ, ಅರಮನೆಯಲ್ಲಿ ಅವರು ವಾಸಿಸುವಂತೆ ಏರ್ಪಾಡು ಮಾಡಿದನು. ಅಂದಿನಿಂದ ಆಸ್ತಿಯ ಕಲಹಗಳು ನಿಂತುಹೋದವು. ಆದರೆ ನೀಲಮ್ಮನವರ ಸವತಿ ಮಾತ್ಸರ್ಯ ಮಾತ್ರ ಇನ್ನೂ ಹೊಗೆಯಾಡುತ್ತಿತ್ತು.

ನೆಮ್ಮದಿಯ ಜೀವನ ಕಂಡುಕೊಂಡ ಬಸವರಾಜೇಶ್ವರಿಯವರಿಗೆ ಮೊದಲ ಗಂಡು ಮಗುವಿನ ಜನನವಾಯಿತು. ಆದರೆ ಚಿಕ್ಕಮ್ಮನು ಸೂಲಗಿತ್ತಿಯನ್ನು ಒಳಗೆ ಹಾಕಿಕೊಂಡು ಮಗುವಿನ ಸಾವಿಗೆ ಕಾರಣರಾದರು. ಇದರಿಂದ ಬಸವರಾಜೇಶ್ವರಿಯವರು ಬಹಳ ದುಃಖಿತರಾದರು. ನೀಲಮ್ಮನವರು ಮೇಲಿನ ಅಧಿಕಾರಿಗೆ ಲಂಚ ನೀಡಿ ಪ್ರಕರಣವನ್ನು ಮುಚ್ಚಿ ಹಾಕಿದರೆಂದು ತಿಳಿದುಬಂದಿದೆ. ಬಸವರಾಜೇಶ್ವರಿಯವರಿಗೆ ಮದ್ದನ್ನೂಡಿಸುವ ಕೆಲಸವೂ ನಡೆದಿದೆ ಎಂಬ ವದಂತಿಗಳೂ ಹರಡಿದವು. ಜಹಗೀರ್‌ದಾರರ ಮನೆಯ ಒಳಜಗಳ ಉಲ್ಬಣವಾಯಿತು. ಕೊನೆಗೆ ಇವರು ಮಾವನವರಿಗೆ ಸೇರಿದ ಮತ್ತೊಂದು ಮನೆಯಲ್ಲಿ ಸಂಸಾರ ಹೂಡಿದರು. ಆ ಮನೆಗೆ ಅರಮನೆಯಿಂದ ದವಸಧಾನ್ಯವನ್ನು ಬಟ್ಟೆಬರೆಗಳನ್ನೂ ಸಾಗಿಸುವಾಗ, ಚಿಕ್ಕಮ್ಮನು ಮತ್ತೆ ಪೊಲೀಸ್ ಕೇಸ್ ಹಾಕಿಸಿ, ಅದನ್ನೆಲ್ಲಾ ಸಾಗಿಸುತ್ತಿದ್ದ ರೈತರನ್ನು ಬಂಧಿಸುವಂತೆ ಮಾಡಿದರು. ಇವರು ವಾಸಿಸುತ್ತಿದ್ದ ಮನೆಗೂ ಬೀಗ ಜಡಿದರು. ಮತ್ತೆ ಊರಿನ ಜನರು ಇವರ ನೆರವಿಗೆ ಬಂದರು. ಕೆರೆಯ ಹಿಂದೆ ಅರವತ್ತೆಂಟು ಎಕರೆಯಲ್ಲಿ ಬೆಳೆದಿದ್ದ ಗೋಧಿಯನ್ನು ನಾಗಮ್ಮ ಮತ್ತು ಬಸಮ್ಮ ಎಂಬ ಇಬ್ಬರು ಸದೃಢ ಮಹಿಳೆಯರು ಕೊಯ್ಲು ಮಾಡಿ ಬಸವರಾಜೇಶ್ವರಿಯವರ ಮನೆಗೆ ಸಾಗಿಸಿ ರಾಶಿ ಮಾಡಿದರು. ಬಸವರಾಜೇಶ್ವರಿ ದಂಪತಿಗಳನ್ನು ಕೊಲೆ ಮಾಡುವ ಸಂಚು ನಡೆಯಿತು. ಬಸವರಾಜೇಶ್ವರಿಯವರ ತಂದೆಯವರು ನಾಲ್ಕು ಜನ ಸದೃಢರನ್ನು ಇವರ ಅಂಗರಕ್ಷಕರನ್ನಾಗಿ ಕಳುಹಿಸಿದರು. ಇವರ ಕೊಲೆಯ ಸಂಚಿನಿಂದ ಕೋಟೆ ಮಲ್ಲಪ್ಪನೆಂಬುವವನು ರಾಜಾ ಶರಣಬಸವರನ್ನು ಬೆನ್ನಿಗೆ ಕಟ್ಟಿಕೊಂಡು ಕೋಟೆಯ ಗೋಡೆಯನ್ನೇರಿ ಪಾರುಮಾಡಿ ಜೀವ ಉಳಿಸಿದನು. ಬೇಡ ಜನಾಂಗದ ತಾತಯ್ಯ ಅಲಿಯಾಸ್ ಭೀಮ ಎಂಬ ಬಲಿಷ್ಠನೂ ಧೈರ್ಯಶಾಲಿಯೂ ಆದ ವ್ಯಕ್ತಿ ಇವರನ್ನು ರಕ್ಷಿಸಿದರು.

ಈ ಸಮಯದಲ್ಲಿ ರಾಜಾ ವೆಂಕಟರಾವ್ ನಿಧನರಾದರು. ನೀಲಮ್ಮ ಮತ್ತು ಅವರ ಮಗ ರಾಜಾ ಶಿವಶಂಕರ್ ಅವರು ಗೆಜ್ಜಲಘಟ್ಟ ಗ್ರಾಮದ ಪಕ್ಷದಲ್ಲಿದ್ದ ನೀಲಗಾ ಗ್ರಾಮಕ್ಕೆ ಬಂದು ನೆಲೆಸಿದರು. ಆ ಗ್ರಾಮಕ್ಕೆ ಕಂದಾಯ ವಸೂಲಿ ಮಾಡಲು ಹೋದ ಭೀಮನನ್ನು ಆ ಊರಿನ ಜನರು ಕಲ್ಲುಗಳಿಂದ ಹೊಡೆದು ಕೊಲೆ ಮಾಡಿದರು. ಊರು ರಣರಂಗವಾಯಿತು. ಕೊನೆಗೆ ಜಹಗೀರದಾರಿಕೆಗೆ ಸೇರಿದ್ದ ಎಲ್ಲ ಗ್ರಾಮಗಳ ಜನರೂ ಸೇರಿ ಆಸ್ತಿಯನ್ನು ಸಮಭಾಗ ಮಾಡಿ ಎರಡೂ ಮನೆತನಗಳಿಗೆ ಹಂಚಿಕೆ ಮಾಡಿ ಈ ವ್ಯಾಜ್ಯಗಳನ್ನು ಬಗೆಹರಿಸಿದರು. ಈ ಹೊತ್ತಿಗೆ ನೀಲಮ್ಮನವರಿಗೆ ಕ್ಯಾನ್ಸರ್ ತಗುಲಿತು. ಹಿಂದಿನ ದ್ವೇಷಾಸೂಯೆಗಳನ್ನು ಮರೆತ ಬಸವರಾಜೇಶ್ವರಿಯವರು ಅವರ ಆರೈಕೆ ಮಾಡಿದರು.

ಸಾಂಸಾರಿಕವಾಗಿ ಮತ್ತು ವ್ಯವಹಾರಿಕವಾಗಿ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದ ಬಸವರಾಜೇಶ್ವರಿಯವರಿಗೆ ಬದುಕು ಅಪಾರ ಅನುಭವದ ಪಾಠವನ್ನು ಕಲಿಸಿತ್ತು. ಜನಗಳ ಪ್ರೀತಿ ವಿಶ್ವಾಸವನ್ನು ಗಳಿಸಿಕೊಳ್ಳುವುದೇ ಮುಖ್ಯ ಅದರಿಂದ ಏನು ಬೇಕಾದರೂ ಸಾಧಿಸಬಹುದೆಂಬುದು ಅವರ ಅನುಭವಕ್ಕೆ ಬಂದಿತು. ಈ ಹೊತ್ತಿಗೆ ಕರ್ನಾಟಕದ ಏಕೀಕರಣವೂ ಆಗಿ, ಬಳ್ಳಾರಿ, ರಾಯಚೂರು ಜಿಲ್ಲೆಗಳು ಕರ್ನಾಟಕಕ್ಕೆ ಸೇರಿದವು. ನಿಜಲಿಂಗಪ್ಪ, ಬಿ.ಡಿ.ಜತ್ತಿ, ಸೇರಿದಂತೆ ಅನೇಕ ರಾಜಕೀಯ ಮುತ್ಸದ್ದಿಗಳ ಸಂಪರ್ಕ ಬಸವರಾಜೇಶ್ವರಿಯವರಿಗೆ ಬಂದಿತು. ಅವರೆಲ್ಲರ ಒತ್ತಾಸೆಯ ಮೇರೆಗೆ ಹಾಗೂ ಜನಗಳ ಅಭಿಲಾಷೆಯಂತೆ ಅವರು ರಾಜಕೀಯ ಪ್ರವೇಶ ಮಾಡಿದರು.

1956ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ಸೇರಿದ ಅವರು, 1957ರಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಮಾನ್ವಿ ಕ್ಷೇತ್ರದಿಂದ ಸ್ಪರ್ಧಿಸಿ ಭಾರೀ ಬಹುಮತ ಪಡೆದು ವಿಧಾನಸಭಾ ಸದಸ್ಯೆಯಾಗಿ ಆಯ್ಕೆಯಾದರು. ಮುಂದೆ 1962 ಮತ್ತು 1967ರಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲೂ ಕೂಡಾ ಅವರು ಜಯಶಾಲಿಯಾಗಿ ವಿಧಾನಸಭೆಗೆ ಸತತವಾಗಿ ಮೂರು ಸಲ ಆಯ್ಕೆಯಾದ ಮೊದಲ ಮಹಿಳಾ ರಾಜಕಾರಣಿಯೆನಿಸಿದರು. ಇದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ಅಭಿವೃದ್ಧಿಗೆ ಶ್ರಮಿಸಿದರು. ವಿದ್ಯಾಕ್ಷೇತ್ರದಲ್ಲಿ ಹಿಂದುಳಿದಿದ್ದ ರಾಯಚೂರಿನಲ್ಲಿ ಟ್ಯಾಗೋರ್ ಮೆಮೊರಿಯಲ್ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿ, ಅದರ ಮೂಲಕ ಅನೇಕ ಕಡೆಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಿದರು. ಈ ಭಾಗದ ಮೊಟ್ಟ ಮೊದಲ ಮಹಿಳಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಿ ಬಾಲಕಿಯರ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟರು. ಈಗ ಈ ಸಂಸ್ಥೆಯು ಬೃಹದಾಕಾರವಾಗಿ ಬೆಳೆದು ನಿಂತಿದೆ. ಉತ್ತರ ಕರ್ನಾಟಕದ ಸಮಸ್ಯೆಗಳನ್ನು ವಿಧಾನಸಭೆಯಲ್ಲಿ ಬಹಳ ಸಮರ್ಥವಾಗಿ ಮಂಡಿಸಿ ಸರ್ಕಾರಿಂದ ಪರಿಹಾರ ಪಡೆಯುತ್ತಿದ್ದರು ಎಂಬ ಅಂಶ ಅಂದಿನ ವಿಧಾನಸಭಾ ನಡವಳಿಕೆಗಳನ್ನು ನೋಡಿದಾಗ ಕಂಡುಬರುತ್ತದೆ.

ಶ್ರೀ ವೀರೇಂದ್ರ ಪಾಟೀಲ್‌ರವರ ಸಚಿವ ಸಂಪುಟದಲ್ಲಿ 30.5.1968ರಿಂದ ಏಪ್ರಿಲ್ 1971ರವರೆಗೆ ಶ್ರೀಮತಿ ಬಸವರಾಜೇಶ್ವರಿಯವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿ ಸೇವೆ ಸಲ್ಲಿಸಿದರು. ರಾಜ್ಯದ ಅನೇಕ ಕಡೆಗಳಲ್ಲಿ ರಿಮ್ಯಾಂಡ್ ಹೋಮ್‌ಗಳು, ಸ್ಟೇಟ್ ಹೋಮ್ ಫಾರ್ ವುಮೆನ್ ಇವುಗಳನ್ನು ಪ್ರಾರಂಭಿಸಿ ಅವುಗಳ ಸುಧಾರಣೆಗೆ ಕಾರಣಕರ್ತರಾದರು. ಮಹಿಳಾ ಖೈದಿಗಳಿಗೆ ಕರಕುಶಲ ಕಸುಬುಗಳಲ್ಲಿ ತರಬೇತಿ ನೀಡುವ ಯೋಜನೆಯನ್ನು ವಿಸ್ತರಿಸಿ, ಅವರು ಬಿಡುಗಡೆಯಾದ ನಂತರ ಅವರಿಗೆ ಪುನರ್‌ವಸತಿ ಕಲ್ಪಿಸುವ ಯೋಜನೆಗಳನ್ನು ಚುರುಕುಗೊಳಿಸಿ ಅನುಷ್ಠಾನಕ್ಕೆ ತಂದರು. ರಾಜ್ಯದ ಅನೇಕ ಕಡೆಗಳಲ್ಲಿ ಶಿಶುವಿಹಾರಗಳನ್ನು ಪ್ರಾರಂಭಿಸಿದರು. ಇವೇ ಇಂದಿನ ಅಂಗನವಾಡಿಗಳಿಗೆ ಮೂಲವಾಗಿದೆ.

ಶ್ರೀಮತಿ ಬಸವರಾಜೇಶ್ವರಿಯವರು ರಾಜ್ಯ ಕೃಷಿಕ ಸಮಾಜದ ಸದಸ್ಯರಾಗಿ ಅದರ ಬೆಳವಣಿಗೆಗೆ ಮುಖ್ಯ ಕಾರಣಕರ್ತರಾಗಿದ್ದಾರೆ. ತಮ್ಮ ವೇತನದ ಕಾಲುಪಾಲನ್ನು ಅವರು ಕೃಷಿಕ ಸಮಾಜದ ಚಟುವಟಿಕೆಗಳಿಗೆ ನೀಡುತ್ತಿದ್ದರು. ಅಖಿಲಭಾರತ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯೆಯಾಗಿದ್ದಾಗ, ಅಂದಿನ ಲೋಕಸಭಾ ಅಧ್ಯಕ್ಷರಾದ

ಬಲರಾಮ್ ಜಾಖಡ್ ಅವರು ಅದರ ಅಧ್ಯಕ್ಷರಾಗಿದ್ದರು. ಬಲರಾಮ್ ಜಾಖಡ್ ಅವರ ನೇತೃತ್ವದಲ್ಲಿ ಕೃಷಿಕ ಸಮಾಜದ ಕಾರ್ಯಕರ್ತರು ಜಪಾನ್, ಮಲೇಶಿಯಾ, ಇಂಡೋನೇಷಿಯ ಮುಂತಾದ ದೇಶಗಳಲ್ಲಿ ಅಧ್ಯಯನ ಪ್ರವಾಸ ಮಾಡಿದರು. ಇದು ಶ್ರೀಮತಿ ಬಸವರಾಜೇಶ್ವರಿಯವರು ಮಾಡಿದ ಮೊದಲ ವಿದೇಶ ಪ್ರವಾಸವಾಗಿತ್ತು. ಬೆಂಗಳೂರಿನಲ್ಲಿರುವ ಕೃಷಿಕ ಸಮಾಜದ ಕಟ್ಟಡ ನಿರ್ಮಾಣದಲ್ಲಿ ಅವರ ಪಾಲು ಬಹಳ ಪ್ರಮುಖವಾದುದು.

ಶ್ರೀಮತಿ ಬಸವರಾಜೇಶ್ವರಿಯವರು 1976ರಿಂದ 82 ಮತ್ತು 1982ರಿಂದ 1984 ಹೀಗೆ ಎರಡು ಅವಧಿಗೆ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯೆಯಾಗಿ ಕೆಲಸ ಮಾಡಿದರು. ಅವರು ಕರ್ನಾಟಕ ವಿಧಾನ ಸಭಾ ಕ್ಷೇತ್ರದಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರು. ಈ ಅವಧಿಯಲ್ಲಿ ಅವರು 12.6.1980ರಿಂದ 11.6.1982ರವರೆಗೆ ಎರಡು ವರ್ಷಗಳ ಕಾಲ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯಾಗಿ ಕೆಲಸ ಮಾಡಿದರು. ಭೂಸುಧಾರಣಾ ಕಾಯಿದೆ ಮತ್ತು ಪಂಚಾಯತ್ ರಾಜ್ ವಿಧೇಯಕದ ಜಂಟಿ ಸದನದ ಸಮಿತಿಗಳ ಸದಸ್ಯರಾಗಿ ಆ ವಿಧೇಯಕಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಶ್ರೀಮತಿ ನಾಗರತ್ನಮ್ಮನವರು ಹೇಗೆ ಕರ್ನಾಟಕ ವಿಧಾನ ಪರಿಷತ್ತಿನ ಮಹಿಳಾ ಸಭಾಧ್ಯಕ್ಷರಾಗಿದ್ದರೋ, ಹಾಗೆಯೇ ಶ್ರೀಮತಿ ಬಸವರಾಜೇಶ್ವರಿಯವರು ಕೂಡಾ ಕರ್ನಾಟಕ ವಿಧಾನ ಪರಿಷತ್ತಿನ ಪ್ರಪ್ರಥಮ ಮಹಿಳಾ ಸಭಾಪತಿಯಾಗಿದ್ದರು ಎಂಬ ಮಹತ್ವದ ಅಂಶ ಹೆಚ್ಚಾಗಿ ಯಾರ ಗಮನಕ್ಕೂ ಬರದೇ ಇರುವುದು ಲೋಪವಾಗಿದೆ. ಅವರು ವಿಧಾನ ಪರಿಷತ್ ಸಭಾಪತಿಯಾಗಿ ಅತ್ಯಂತ ನಿಷ್ಪಕ್ಷಪಾತವಾಗಿ, ಶಿಸ್ತುಬದ್ಧವಾಗಿ ಹಿರಿಯರ ಮನೆಯನ್ನು ಮುನ್ನಡೆಸಿದರು ಎಂಬುದು ಗಮನಾರ್ಹ. ವಿಧಾನ ಪರಿಷತ್ ಸಭಾಪತಿಯಾಗಿದ್ದಾಗ ಇವರು ಜಾಂಬಿಯಾದಲ್ಲಿ ಜರುಗಿದ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಕಾನ್‌ಫರೆನ್ಸ್‌ನಲ್ಲಿ ಭಾಗವಹಿಸಿದ್ದರು.

ಇಂದಿರಾಗಾಂಧಿಯವರ ಕಾಲದಿಂದ ಲೋಕಸಭೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ದೊರೆಯತೊಡಗಿತು. ಕರ್ನಾಟಕದ ಬಳ್ಳಾರಿಯಿಂದ ಲೋಕಸಭೆಗೆ ಸ್ಪರ್ಧಿಸಲು ಕೆ.ಪಿ.ಸಿ.ಸಿ. ಒಬ್ಬ ಸಮರ್ಥ ಮಹಿಳಾ ಪ್ರತಿನಿಧಿಗಾಗಿ ಶೋಧ ನಡೆಸಿದಾಗ ಅದರ ಕಣ್ಣುಂದೆ ಬಂದವರು ಶ್ರೀಮತಿ ಬಸವರಾಜೇಶ್ವರಿಯವರು. 1984–89, 1990–91, ಮತ್ತು 1991ರಿಂದ 96 ಹೀಗೆ ಮೂರು ಸಲ ಶ್ರೀಮತಿ ಬಸವರಾಜೇಶ್ವರಿಯವರು ಅನಾಯಾಸವಾಗಿ ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ ಗೆದ್ದು ಕ್ರಮವಾಗಿ 8, 9 ಮತ್ತು 10ನೇ ಲೋಕಸಭೆಗಳ ಸದಸ್ಯೆಯಾಗಿ ಸೇವೆ ಸಲ್ಲಿಸಿದರು. 1996ರ ಲೋಕಸಭಾ ಚುನಾವಣೆಯಲ್ಲಿ ಮತ್ತೆ ಸ್ಪರ್ಧಿಸಲು ಇವರಿಗೆ ಟಿಕಟ್ಟನ್ನು ನಿರಾಕರಿಸಲಾಯಿತು ಎಂಬುದು ಇಂದಿಗೂ ಅಚ್ಚರಿಯ ವಿಷಯವಾಗಿದೆ.

ಎಂಟನೆಯ ಲೋಕಸಭೆಯಲ್ಲಿ ಅವರು ಉಕ್ಕು ಮತ್ತು ಗಣಿ ಸಲಹಾ ಸಮಿತಿಯ ಸದಸ್ಯೆಯಾಗಿ ಸೇವೆ ಸಲ್ಲಿಸಿದರು. ಮುಂದೆ ಅವರು ಹತ್ತನೇ ಲೋಕಸಭೆಯಲ್ಲಿ ಪಿ.ವಿ. ನರಸಿಂಹರಾಯರ ಮಂತ್ರಿಮಂಡಲದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯ ರಾಜ್ಯ ಸಚಿವೆಯಾಗಿ ಸೇವೆ ಸಲ್ಲಿಸಿದರು. ಮಹಿಳೆಯ ಅಧಿಕಾರ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಬೀಜಿಂಗ್‌ನಲ್ಲಿ ನಡೆದ ಸಮಾವೇಶದಲ್ಲಿ ಇವರು ಭಾರತವನ್ನು ಪ್ರತಿನಿಧಿಸಿದ್ದಾಗ, ಪ್ರಧಾನ ಮಂತ್ರಿ ಪಿ.ವಿ. ನರಸಿಂಹರಾಯರು ಹಠಾತ್ತಾಗಿ ಇವರ ರಾಜೀನಾಮೆಯನ್ನು ಪಡೆದರು. ಸಚಿವೆಯಾಗಿ ಉತ್ತಮ ಕೆಲಸ ಮಾಡುತ್ತಿದ್ದ ಸಮರ್ಥ ಮಹಿಳೆಯ ರಾಜೀನಾಮೆ ಪಡೆದ ವಿಷಯ, ಇವತ್ತಿಗೂ ಕೂಡಾ ಬಿಡಿಸಲಾಗದ ಒಗಟಾಗಿದೆ.

ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾಗಿದ್ದಾಗ, ಇವರು ಕರ್ನಾಟಕ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಕೇಂದ್ರದ ನೆರವಿನಿಂದ ಬಾಲವಾಡಿಗಳು ಪ್ರಾರಂಭವಾಗುವಂತೆ ಮಾಡಿದರು. ಬೀಚ್‌ಕ್ಯಾಂಡಿ ಮತ್ತು ಬೀಜಿಂಗ್‌ಗಳಲ್ಲಿ ನಡೆದ ಜಾಗತಿಕ ಮಹಿಳಾ ಸಮ್ಮೇಳನಗಳಲ್ಲಿ ಭಾರತವನ್ನು ಪ್ರತಿನಿಧಿಸಿದರು. ಮಹಿಳೆಯರ ಆರ್ಥಿಕ

ಮತ್ತು ಸಾಮಾಜಿಕ ಅಭಿವೃದ್ಧಿ ಹಾಗೂ ಸಶಕ್ತೀಕರಣದ ಬಗ್ಗೆ ನಡೆದ ವಿಚಾರಗೋಷ್ಠಿಗಳಲ್ಲಿ ಪಾಲ್ಗೊಂಡು ನಿರ್ಣಯಗಳನ್ನು ಮಂಡಿಸುವ ಅವಕಾಶ ಇವರಿಗೆ ದೊರೆಯಿತು. ಸಾರ್ಕ್ ಸಮ್ಮೇಳನದಲ್ಲೂ ಕೂಡಾ ಇವರು ಮಹಿಳೆಯರ ಪರವಾಗಿ ಭಾರತವನ್ನು ಪ್ರತಿನಿಧಿಸಿ ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

ಲೋಕಸಭಾ ಸದಸ್ಯತ್ವ ಕೊನೆಗೊಂಡ ನಂತರ ಇವರು ಬಳ್ಳಾರಿ ಜಿಲ್ಲೆಯ ಸಾರ್ವಜನಿಕ ಜೀವನದಲ್ಲಿ ಪ್ರಮುಖ ಪಾತ್ರ ವಹಿಸತೊಡಗಿದರು. ಹಿಂದುಳಿದ ಜಿಲ್ಲೆಯಾದ ಇಲ್ಲಿ ಕೈಗಾರಿಕಾ ಮತ್ತು ಶೈಕ್ಷಣಿಕ ಕ್ಷೇತ್ರಗಳ ಬೆಳವಣಿಗೆಗೆ ಕಾರಣರಾದರು. ಬಳ್ಳಾರಿಯಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಎಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಿದರು. ಈ ಸಂಸ್ಥೆಯು ಇಂದು ಬಹುದೊಡ್ಡ ವಿದ್ಯಾಸಂಸ್ಥೆಯಾಗಿ ಬೆಳೆದು ನಿಂತಿದೆ. ನವಕರ್ನಾಟಕ ಸ್ಟೀಲ್ಸ್ ಎಂಬ ಉಕ್ಕು ಉತ್ಪಾದನಾ ಕಾರ್ಖಾನೆಯನ್ನು ಸ್ಥಾಪಿಸಿದರು. ನಮ್ಮಲ್ಲಿ ದೊರೆಯುವ ಕಬ್ಬಿಣದ ಅದಿರನ್ನು ನಮ್ಮ ರಾಜ್ಯದಲ್ಲೇ ಸಂಸ್ಕರಿಸಿ ಉಕ್ಕನ್ನು ತಯಾರಿಸಬೇಕೆಂಬ ಕಲ್ಪನೆ ಅವರಲ್ಲಿತ್ತು. ಅದರ ಫಲವಾಗಿಯೇ ಈ ಕಾರ್ಖಾನೆಯು ಆರಂಭವಾಯಿತು. ಅಮರೇಶ್ವರ ರೋಲಿಂಗ್ ಮಿಲ್ ಮತ್ತು ಮೈಕ್ರೋ ಕಾಂಕ್ರೀಟ್ ಪ್ಲಾಂಟ್‌ಗಳನ್ನೂ ಕೂಡಾ ಸ್ಥಾಪಿಸಿದರು.

ಶ್ರೀಮತಿ ಬಸವರಾಜೇಶ್ವರಿಯವರು, ರಾಜ್ಯ ವಿಧಾನಸಭೆ, ವಿಧಾನಪರಿಷತ್ ಸದಸ್ಯೆಯಾಗಿ, ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಮಂತ್ರಿಯಾಗಿ, ಲೋಕಸಭಾ ಸದಸ್ಯೆಯಾಗಿ, ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವೆಯಾಗಿ, ಕರ್ನಾಟಕ ವಿಧಾನಮಂಡಲ ಹಾಗೂ ಲೋಕಸಭೆಗಳಲ್ಲಿ ಮಾಡಿದರು. ಆ ಭಾಷಣಗಳ ಸಾರಾಂಶವನ್ನು ಅವಲೋಕಿಸಿದರೆ ಅವರ ಚಿಂತನೆ ಯಾವ ರೀತಿ ರಾಜ್ಯದ ಮತ್ತು ದೇಶದ ಅಭಿವೃದ್ಧಿಯ ಬಗ್ಗೆ ಹರಿಯುತ್ತಿತ್ತು ಎಂಬುದನ್ನು ಗುರುತಿಸಬಹುದು. ಆ ಕಾಲದಲ್ಲಿ ಅವರು ಮಾಡಿದಂತಹ ಕೆಲವು ಪ್ರಮುಖ ಭಾಷಣಗಳ ಮುಖ್ಯಾಂಶಗಳನ್ನು ನೋಡಬಹುದು.

ಕರ್ನಾಟಕ ವಿಧಾನಸಭೆಯಲ್ಲಿ ಮಾಡಿದ ಭಾಷಣಗಳು

"ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ವಿದ್ಯಾಮಟ್ಟ ಕಡಿಮೆಯಾಗುತ್ತಿದೆ, ಫಲಿತಾಂಶದ ಪ್ರಮಾಣ ಕೂಡಾ ಕಡಿಮೆ ಆಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವರ್ಷ ಎಂಟು ಹಾಸ್ಟೆಲ್‌ಗಳಲ್ಲಿ ಅರೆಕಾಲಿಕ ಉಪಾಧ್ಯಾಯರನ್ನು ನೇಮಕ ಮಾಡಿಕೊಂಡು ಯಾವ ವಿದ್ಯಾರ್ಥಿಗಳು ವೀಕ್ ಇದ್ದಾರೆ ಅವರಿಗೆ ಪಾಠ ಹೇಳಿಕೊಡುವ ಏರ್ಪಾಡನ್ನು ಮಾಡಲಾಗಿದೆ. ಈ ಹಾಸ್ಟೆಲ್‌ಗಳಲ್ಲಿ ಮೆಟ್ರಿಕ್ಯುಲೇಷನ್ ಆದವರು ಸೂಪರಿಂಟೆಂಡೆಂಟ್ ಆಗಿದ್ದಾರೆ. ಇನ್ನು ಮುಂದೆ ಬಿ.ಎ., ಬಿ.ಇಡಿ. ಆದವರನ್ನು ನೇಮಕ ಮಾಡಬೇಕೆಂದು ಇದ್ದೇವೆ. ಇದರಿಂದ ಈ ವಿದ್ಯಾರ್ಥಿಗಳಿಗೆ ಒಳ್ಳೆಯ ವಿದ್ಯಾಭ್ಯಾಸ ಸಿಗುವುದಕ್ಕೆ ಅನುಕೂಲವಾಗುತ್ತದೆ. 1968–69ನೇ ಸಾಲಿನಲ್ಲಿ ಪೋಸ್ಟ್ ಮೆಟ್ರಿಕ್ ಸ್ಕಾಲರ್‌ಶಿಪ್‌ಗಳಿಗಾಗಿ ಸರ್ಕಾರ 33,94,151 ರೂಪಾಯಿಗಳನ್ನು ವಿತರಣೆ ಮಾಡಿದೆ. ಈಗ ಹೈದರಾಬಾದ್ ಕರ್ನಾಟಕ ಪ್ರದೇಶದ ಮತ್ತು ಹಳೆಯ ಮೈಸೂರು ಪ್ರದೇಶದ ಮಕ್ಕಳಿಗೆ ಕೊಡುತ್ತಿರುವ ಸಹಾಯಧನ ಬೇರೆ ಬೇರೆ ರೂಪದಲ್ಲಿ ಇದೆ. ಈ ತಾರತಮ್ಯವನ್ನು ಹೋಗಲಾಡಿಸಲು ಮುಂದಿನ ವರ್ಷದಿಂದ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಯೂನಿಫಾರಂ ಗ್ರಾಂಟ್–ಇನ್–ಏಡ್ ಜಾರಿಗೆ ತರಬೇಕೆಂದಿದ್ದೇವೆ. ಫ್ರೀ ಮೆಟ್ರಿಕ್ ಸ್ಕಾಲರ್‌ಶಿಪ್ ಕೊಡಬೇಕೆಂದು ಇದೆ."

"ಅಸ್ಪೃಶ್ಯತಾ ನಿವಾರಣೆ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇದನ್ನು ಯಾವ ರೀತಿ ನಿರ್ಮೂಲನ ಮಾಡಬೇಕು? ಏನು ಕ್ರಮಗಳನ್ನು ಕೈಗೊಳ್ಳಬೇಕೆಂದು ಸರ್ಕಾರ ವಿಚಾರ ಮಾಡುತ್ತಿದೆ. ಕೆಲವು ಹಾಸ್ಟೆಲ್‌ಗಳನ್ನು ಡಿನಾಮಿನೇಷನ್ ಹಾಸ್ಟೆಲ್‌ಗಳು ಎಂದು ಮಾಡಿ ಅದರಲ್ಲಿ ಶೇಕಡ 25ರಷ್ಟು ಬೇರೆ ಹುಡುಗರು ಇರುವುದಕ್ಕೆ ಅವಕಾಶ ಮಾಡಿದೆ. ಕಾಲೇಜು ಮಟ್ಟಕ್ಕೆ ಹೋದ ಆ ಮಕ್ಕಳಿಗೆ ಅಸ್ಪೃಶ್ಯತೆಯ ವಿಚಾರ ಮನಸ್ಸಿನಲ್ಲಿ ಇರಬಾರದೆಂದು

ಈ ರೀತಿ ಮಾಡಿದೆ. ಪೋಸ್ಟ್ ಮೆಟ್ರಿಕ್ ತರಗತಿಗಳಲ್ಲಿ ಓದುವಾಗ ಅವರನ್ನು ಜನರಲ್ ಹಾಸ್ಟೆಲ್‌ಗಳಲ್ಲಿ ಇಡುವ ವ್ಯವಸ್ಥೆ ಮಾಡಿ ಬೋರ್ಡಿಂಗ್ ಸ್ಕಾಲರ್‌ಶಿಪ್ ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ."

1967ರ ಅಧಿವೇಶನದಲ್ಲಿ ಪಶುಸಂಗೋಪನಾ ಇಲಾಖೆಯ ಬೇಡಿಕೆಗಳ ಮೇಲೆ ಮಾಡಿದ ಚರ್ಚೆ

"ಈ ವರ್ಷ ಸುಮಾರು 40 ರೂರಲ್ ವೆಟರ್ನರಿ ಡೆಸ್ಪೆನ್‌ಸರಿಗಳನ್ನು ಮತ್ತು ಮೂರು ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್‌ಗಳನ್ನು ಮಾಡುತ್ತಾರೆಂದು ಗೊತ್ತಾಗಿದೆ. 19 ಜಿಲ್ಲೆಗಳಿಗೆ 40 ಆಸ್ಪತ್ರೆಗಳು ಎಲ್ಲಿ ಸಾಕಾಗುತ್ತದೆ. ಇವತ್ತು ಒಂದು ಜೋಡಿ ಎತ್ತುಗಳ ಬೆಲೆ ಒಂದು ಸಾವಿರಕ್ಕೆ ಕಡಿಮೆ ಇಲ್ಲ. ಒಂದು ಎತ್ತು ಬೇನೆ ಬಂದು ಸತ್ತುಹೋದರೆ ಒಕ್ಕಲುತನ ಮಾಡುವವನ ಜೀವನವೇ ನಿರ್ಜೀವವಾಗುತ್ತದೆ. ಇವತ್ತಿನ ದಿವಸ ವ್ಯವಸಾಯ ಅಭಿವೃದ್ಧಿ ಮಾಡಬೇಕು, ಹೆಚ್ಚು ಬೆಳೆ ಬೆಳೆಯಬೇಕೆಂದು ಹೇಳುತ್ತೇವೆ. ಉತ್ತಮ ತಳಿಯ ದನಗಳನ್ನು ಕಟ್ಟಿಕೊಳ್ಳಬೇಕು. ಅವುಗಳಿಂದ ಗೊಬ್ಬರ ಪಡೆಯಬೇಕು, ಗೊಬ್ಬರವನ್ನು ಹೊಲಕ್ಕೆ ಹಾಕಬೇಕು, ಉತ್ತು ಬಿತ್ತು ವ್ಯವಸಾಯ ಮಾಡಬೇಕು, ಆಗ ಒಳ್ಳೆಯ ಬೆಳೆ ಬರುತ್ತದೆ. ಎತ್ತುಗಳು ಚೆನ್ನಾಗಿ ವ್ಯವಸಾಯ ಮಾಡುವುದಕ್ಕೆ ಮುಖ್ಯ. ದನಗಳನ್ನು ಜೋಪಾನ ಮಾಡುವುದರಿಂದ ನಮಗೆ ಹಾಲೂ ಸಿಗುತ್ತದೆ, ಗೊಬ್ಬರವೂ ಸಿಗುತ್ತದೆ, ಇವರೆಡೂ ಇಲ್ಲದೆ ಒಕ್ಕಲುತನ ಹೆಚ್ಚು ಮಾಡುವುದಕ್ಕೆ ಸಾಧ್ಯ ಇಲ್ಲ. ಆದುದರಿಂದ ಈ ವಿಚಾರಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು, 40 ಆಸ್ಪತ್ರೆಗಳು ಏನೇನೂ ಸಾಲದು. ಈಗಾಗಲೇ ಇರುವ ರೂರಲ್ ವೆಟರ್ನರಿ ಡಿಸ್ಪೆನ್ಸರಿಗಳಲ್ಲಿ ಡಾಕ್ಟರ್‌ಗಳಿಲ್ಲ, ಸ್ಟಾಕ್‌ಮನ್‌ಗಳಿಲ್ಲ, ಔಷಧಗಳಿಲ್ಲ. ಆಸ್ಪತ್ರೆಗಳಿಗೆ ಕೇವಲ ಪೌಡರ್ ಮತ್ತು ಅಯೋಡಿನ್ ಕೊಡುವುದರಿಂದ ಪ್ರಯೋಜನ ಇಲ್ಲ, ಹೈಯರ್ ಆಂಟಿಬಯಾಟಿಕ್ಸ್ ಕೊಡಬೇಕು. ಎಕ್ಸ್‌ಟೆನ್‌ಷನ್ ಆಫೀಸರ್ ಹುದ್ದೆಗಳನ್ನು ರದ್ದು ಮಾಡುತ್ತಾರೆಂದು ವರದಿ ಇದೆ. ಈ ಹುದ್ದೆಗಳನ್ನು ರದ್ದು ಮಾಡುವುದು ಅಷ್ಟು ಸೂಕ್ತವಲ್ಲ, ಒಕ್ಕಲುತನ ಪಶುಸಂಗೋಪನೆ ಎರಡೂ ಒಟ್ಟಿಗೆ ನಡೆಸಬೇಕು. ಫಾಡರ್ ಡೆವೆಲಪ್‌ಮೆಂಟ್ ಕೆಲಸವನ್ನು ಕ್ರಾಶ್ ಪ್ರೋಗ್ರಾಂನಲ್ಲಿ ಮಾಡಬೇಕು. ಹೈಬ್ರಿಡ್ ಗ್ರಾಸ್ ಬೆಳೆಯತಕ್ಕ ರೈತರಿಗೆ ಬೀಜಗಳನ್ನು ಒದಗಿಸಬೇಕು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡಾ ಬೀಜ ತಯಾರು ಮಾಡುವ ಫಾಡರ್‌ಸ್ಟೇಷನ್ ಮಾಡಿ, ಬೀಜ ಕೊಡತಕ್ಕ ಪದ್ಧತಿಯನ್ನು ಜಾರಿಗೆ ತರಬೇಕು."

1968ರ ಅಧಿವೇಶನದಲ್ಲಿ ಸಹಕಾರ, ಗ್ರಾಮೀಣ ಅಭಿವೃದ್ಧಿ ಇಲಾಖೆಯ ಬೇಡಿಕೆ ಬಗ್ಗೆ ಚರ್ಚೆ

"ಬಳ್ಳಾರಿ ಜಿಲ್ಲೆಯ ಸಿರಗುಪ್ಪಾ ತಾಲ್ಲೂಕಿನಲ್ಲಿರುವ ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಸರಬರಾಜು ಮಾಡಿದಂತಹ ರೈತರಿಗೆ ದುಡ್ಡು ಮುಟ್ಟಿಲ್ಲ. ಈಗ ಆ ಸಕ್ಕರೆ ಕಾರ್ಖಾನೆ ಮುಚ್ಚಿ ಹೋಗಿದೆ. ಈ ಸಕ್ಕರೆ ಕಾರ್ಖಾನೆಯನ್ನು ಪುನಃ ಪ್ರಾರಂಭಿಸುವ ಬಗ್ಗೆ ಸರ್ಕಾರದಲ್ಲಿ ಎರಡು ಮೂರು ಸಲ ಪ್ರಯತ್ನ ಮಾಡಿದ್ದಾಯಿತು. ಆದರೂ ಇನ್ನೂ ತೆಗೆಯಲಿಲ್ಲ. ಸರ್ಕಾರ ಕೂಡಲೇ ಆ ಸಕ್ಕರೆ ಕಾರ್ಖಾನೆಯ ಕೆಲಸ ಕಾರ್ಯಗಳು ಪ್ರಾರಂಭವಾಗುವ ಹಾಗೆ ವ್ಯವಸ್ಥೆ ಮಾಡಬೇಕು. ಕಬ್ಬು ಸರಬರಾಜು ಮಾಡಿದ ರೈತರಿಗೆ ದುಡ್ಡು ಕೊಡುವುದಕ್ಕೆ ಪ್ರಯತ್ನ ಮಾಡಬೇಕು."

"ಕೆಲವು ಪ್ರೈಮರಿ ಸೊಸೈಟಿಗಳಿಗೆ ಟ್ರಾಕ್ಟರ್‌ಗಳನ್ನು ಕೊಳ್ಳುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ಅದು ಮಿಸ್‌ಯೂಸ್ ಆಗುತ್ತಾ ಇದೆ. ಸಿಂಧನೂರು ಮಾನ್ವಿ ಪ್ರದೇಶದಲ್ಲಿ ಟ್ರಾಕ್ಟರ್ ಅಸೋಸಿಯೇಷನ್ ಮಾಡಿಕೊಂಡಿದ್ದಾರೆ ಅವರಿಗೆ ಸಹಾಯ ಮಾಡಿದರೆ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ ಸರ್ವೀಸ್ ಸ್ಟೇಷನ್ ಬಿಲ್ಟ್‌ಅಪ್ ಮಾಡುವುದಕ್ಕೆ ಸ್ಪೇರ್ ಪಾರ್ಟ್ಸ್ ರೈತರಿಗೆ ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು."

"ಅತೀ ಮುಖ್ಯವಾದ ತುಂಗಭದ್ರಾ ಡೆವೆಲಪ್‌ಮೆಂಟ್ ವಿಷಯದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ. ತುಂಗಭದ್ರಾ ಯೋಜನೆಯ ಡೆವೆಲಪ್‌ಮೆಂಟ್ ಕೆಲಸಗಳು ಆ ಬೋರ್ಡ್ ಮೂಲಕ ನಡೆಯುತ್ತಿದೆ. ನಮ್ಮಲ್ಲಿ ಯಾವ ಡೆವೆಲಪ್‌ಮೆಂಟ್ ಆಗಿದೆ ಎಂದು ದಯವಿಟ್ಟು ಹೇಳಿ. ಡೆವೆಲಪ್‌ಮೆಂಟ್ ಮಾಡುವ ಕಾಲಕ್ಕೆ ಒಂದೇ ಸಾರಿ

ಸರ್ಕಾರದವರು 12 ಸಾವಿರ ಎಕರೆಯನ್ನು ಬೇರೆಯವರಿಗೆ ಕೊಡುತ್ತಾ ಇದ್ದಾರೆ. 5 ಸಾವಿರ ಎಕರೆಯನ್ನು ಪಾಕಿಸ್ತಾನದ ರೆಫ್ಯೂಜೀಸ್‌ಗೋಸ್ಕರ ತೆಗೆದುಕೊಂಡು ಅಲ್ಲಿರುವ ರೈತರನ್ನು ಲ್ಯಾಂಡ್‌ಲೆಸ್ ಮಾಡಿದ್ದಾರೆ. ಅದರ ಜೊತೆಗೆ ಪಾಕಿಸ್ತಾನದ ರೆಫ್ಯೂಜೀಸ್‌ಗೆ ಒಂದು ಸ್ಟೇಟ್ ಫಾರಂ ಮಾಡಬೇಕೆಂದು 7 ಸಾವಿರ ಎಕರೆ ಅಕ್ವೈರ್ ಮಾಡಿಕೊಂಡಿದ್ದಾರೆ. ಒಂದೇ ಸಲ ಇಷ್ಟು ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತಿದ್ದಾರೆ. ಈ ರೀತಿ ಜನರ ಒಪ್ಪಿಗೆ ಇಲ್ಲದೆ ಸ್ಕೀಮನ್ನು ಹಾಕಿಕೊಂಡು ಅವರ ಮೇಲೆ ಹೇರಿ ಅವರ ಜಮೀನನ್ನು ಅಕ್ವೈರ್ ಮಾಡಿಕೊಂಡರೆ ಹೇಗೆ. ಹೀಗೆ 12 ಸಾವಿರ ಎಕರೆಯನ್ನು ಒಂದೇ ಗ್ರಾಮದಲ್ಲಿ ಜನರಿಂದ ತೆಗೆದುಕೊಂಡರೆ ಅದರಿಂದ ಪ್ರಯೋಜನೆ ಏನು? ಡೆವೆಲಪ್‌ಮೆಂಟ್ ಮಾಡುವ ಸಮಯದಲ್ಲಿ ಸದಸ್ಯರಾದಂತಹ ನಮಗೆ ತಿಳಿಸಿ, ಇದು ಸೂಕ್ತವೇ, ಮಾಡೋಣವೇ, ಬಿಡೋಣವೇ ಎಂದು ನಮ್ಮನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಮಾಡಿ. ಅದನ್ನು ಬಿಟ್ಟು ನಿಮ್ಮಷ್ಟಕ್ಕೆ ನೀವೇ ಮಾಡಬಾರದು."

ಕೆ.ವಿ. ಶಂಕರಗೌಡರು ಶಿಕ್ಷಣ ಸಚಿವರಾಗಿದ್ದಾಗ, ಶಿಕ್ಷಣ ಇಲಾಖೆಯ ಮೇಲೆ ನಡೆದ ಚರ್ಚೆ

"ಪ್ರಮೋಷನ್ ವಿಚಾರದಲ್ಲಿ ಲೆಕ್ಚರರ್‌ಗಳಾಗಿ 10–15 ವರ್ಷ ಸರ್ವೀಸ್ ಮಾಡಿದ್ದರೂ ಸಹ ಅವರಿಗೆ ಪ್ರಮೋಷನ್ ಕೊಡುತ್ತಿಲ್ಲವೆಂದು ತಿಳಿದುಬಂದಿದೆ. ಎಲ್ಲಾ ಇಲಾಖೆಗಳಲ್ಲೂ ಪ್ರಮೋಷನ್ ಕೊಡುವಂತೆ ಇವರಿಗೆ ಏತಕ್ಕೆ ಕೊಡಬಾರದು. 10–15 ವರ್ಷ ಸರ್ವೀಸ್ ಆದ ಲೆಕ್ಚರರ್‌ಗಳಿಗೆ ಪ್ರಮೋಷನ್ ಕೊಟ್ಟರೆ ಅವರು ಉತ್ಸಾಹದಿಂದ ಕೆಲಸ ಮಾಡುತ್ತಾರೆ."

"ಇನ್ನು ಪಿ.ಯು.ಸಿ.ಯಲ್ಲಿ ಕನ್ನಡ ಮೀಡಿಯಂನ್ನು ಜಾರಿಗೆ ತಂದಿದ್ದೀರಿ. ಕನ್ನಡದಲ್ಲಿ ಪಾಠ ಹೇಳಿಕೊಂಡುವ ಎಲ್ಲಾ ಸಬ್ಜೆಕ್ಟ್‌ಗಳಲ್ಲಿ ವಿದ್ಯಾರ್ಥಿಗಳು ಪಾಸ್ ಆಗುತ್ತಾರೆ. ಅದೇ ಇಂಗ್ಲಿಷ್‌ನಲ್ಲಿ 26–27 ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಕೂತರೆ 20–21 ಜನ ವಿದ್ಯಾರ್ಥಿಗಳು ಫೇಲ್ ಆಗಿರುತ್ತಾರೆ. ಆದ್ದರಿಂದ ಎಲ್ಲಾ ಕಡೆಗಳಲ್ಲೂ ಕನ್ನಡ ಮೀಡಿಯಂ ಹುಡುಗರು ಇರುತ್ತಾರೆಂದು ತಿಳಿದುಬಂದಿದೆ. ಇಷ್ಟು ಜನ ಹುಡುಗರಿಗೆ ಒಬ್ಬ ಲೆಕ್ಚರರ್ ಪಾಠ ಹೇಳುವುದರಿಂದ ಹುಡುಗರಿಗೆ ತೊಂದರೆಯಾಗುತ್ತದೆ. 70–80 ಜನ ಹುಡುಗರು ಒಂದೊಂದು ಸೆಕ್ಷನ್‌ನಲ್ಲಿದ್ದರೆ ತೊಂದರೆಯಾಗುವುದಿಲ್ಲ. ಈ ಕಡೆ ಸ್ವಲ್ಪ ಲಕ್ಷ್ಯ ಕೊಟ್ಟು ಇದನ್ನು ಸರಿಪಡಿಸಬೇಕು."

"ಇನ್ನು ನಮ್ಮ ರಾಯಚೂರು ಜಿಲ್ಲೆಗೆ ಒಂದು ವ್ಯವಸಾಯದ ಕಾಲೇಜು ಬೇಕು ಎನ್ನುವ ವಿಷಯ ಎಲ್ಲರಿಗೂ ತಿಳಿದಿದೆ. ಎಂಜಿನಿಯರಿಂಗ್ ಕಾಲೇಜನ್ನು ಗುಲ್ಬರ್ಗಾಕ್ಕೆ ಕೊಡುವಾಗ ರಾಯಚೂರಿಗೆ ಮೆಡಿಕಲ್ ಕಾಲೇಜು ಕೊಡುತ್ತೇವೆಂದು ಹೇಳಿದರು. ಮತ್ತೆ ಕಾಲೇಜು ಕೊಡಬೇಕೆಂದು ಕೇಳಿದಾಗ ವ್ಯವಸಾಯದ ಕಾಲೇಜನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ರಾಯಚೂರಿಗೆ ಒಂದು ವ್ಯವಸಾಯದ ಕಾಲೇಜನ್ನು ಕೊಡುತ್ತೇವೆಂದು ಹೇಳಿದರೂ ಇದುವರೆಗೆ ಪ್ರಾರಂಭವಾಗಿಲ್ಲ."

1967–68ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆ ಬಗ್ಗೆ ಮಾಡಿದ ಚರ್ಚೆ

"ಎರಡನೇ ಪಂಚವಾರ್ಷಿಕ ಯೋಜನೆಯ ಅವಧಿಯವರೆಗೆ ನಾನು ಸೋಷಿಯಲ್ ವೆಲ್‌ಫೇರ್ ಬೋರ್ಡ್‌ನಲ್ಲಿ ಕೆಲಸ ಮಾಡಿದ್ದೇನೆ. ಈಗಲೂ ನಾನು ಸೋಷಿಯಲ್ ವೆಲ್‌ಫೇರ್ ಬೋರ್ಡ್ ಮೆಂಬರ್ ಆಗಿದ್ದೇನೆ. ನಮ್ಮ ಕಡೆ ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕೋಸ್ಕರ ಮಹಿಳಾ ಮಂಡಲಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದವು. ಪೂರ್ತಿ ಗ್ರಾಂಟ್ ಸಿಕ್ಕುತ್ತಿತ್ತು. ಪ್ರತಿಯೊಂದು ಬ್ಲಾಕಿಗೂ 10 ಮಹಿಳಾ ಮಂಡಲಿಗಳು ಕೆಲಸ ಮಾಡುತ್ತಿದ್ದವು. ಪ್ರತಿಯೊಂದಕ್ಕೂ ಬಿ.ಡಿ.ಒ. ಕಂಟ್ರೋಲ್ ಇತ್ತು. ಕಮಿಟಿಗಳು ಇದ್ದವು. ನಿಗಾವಣೆ ಚೆನ್ನಾಗಿತ್ತು. ಪ್ರತಿಯೊಂದು ಕೇಂದ್ರದಲ್ಲಿಯೂ ಕೂಡಾ ಮುಖ್ಯಸೇವಿಕೆಯರು, ತಾಲ್ಲೂಕು ಲೆವೆಲ್‌ನಲ್ಲಿ ಗ್ರಾಮಸೇವಕಿಯರು ಇದ್ದರು. ಮಹಿಳಾ ಮಂಡಲಿಗಳು ಕ್ರಾಫ್ಟ್ ಸೆಂಟರ್‌ಗಳನ್ನು, ಶಿಶುವಿಹಾರಗಳನ್ನು ಚೆನ್ನಾಗಿ ನಡೆಸಿಕೊಂಡು ಬಂದವು. ಎರಡನೆಯ

ಪಂಚವಾರ್ಷಿಕ ಯೋಜನೆಯ ನಂತರ ಈ ಮಹಿಳಾಮಂಡಲಿಗಳನ್ನು ರದ್ದುಮಾಡಬೇಕು. ವಾಲಂಟರಿ ಇನ್‌ಸ್ಟಿಟ್ಯೂಷನ್‌ಗಳನ್ನು ರಿಜಿಸ್ಟರ್ ಮಾಡಬೇಕು. ಶೇಕಡ ಐವತ್ತರಷ್ಟು ಮ್ಯಾಚಿಂಗ್ ಗ್ರಾಂಟ್ ಕೊಡಬೇಕು ಎನ್ನುವ ಪದ್ಧತಿ ಜಾರಿಗೆ ಬಂದಿತು. ಯಾವಾಗ ಈ ರೀತಿ ಸರ್ಕಾರದವರು ನಿಯಮವನ್ನು ಮಾಡಿದರೋ, ಅದರಿಂದ ಈ ಮಹಿಳಾ ಮಂಡಲಿಗಳೆಲ್ಲವೂ ಮುಚ್ಚುವ ಪರಿಸ್ಥಿತಿ ಬಂದಿದೆ. ಕೊಡತಕ್ಕ ಗ್ರಾಂಟ್ ಸಿಕ್ಕುವುದಿಲ್ಲ. ಮ್ಯಾಚಿಂಗ್ ಗ್ರಾಂಟ್ ಮಾಡುವುದಕ್ಕೂ ಕಷ್ಟ ಇದೆ. ನಾವೇ ಹೋಗಿ ಕರೆದುಕೊಂಡು ಬಂದರೂ ಬಾರದೇ ಇರುವ ಹೆಣ್ಣುಮಕ್ಕಳು, ದುಡ್ಡು ಕೊಟ್ಟು ಬನ್ನಿ ಎಂದರೆ ಬರುತ್ತಾರೆಯೆ? ಇದರಿಂದಾಗಿ ಮಹಿಳಾಮಂಡಲಿಗಳ ಚಟುವಟಿಕೆಗಳು ನಡೆಯುತ್ತಿಲ್ಲ. ಯಾವ ಕೇಂದ್ರದಲ್ಲೂ ಗ್ರಾಮಸೇವಕಿಯರು, ಮುಖ್ಯಸೇವಕಿಯರು ಇಲ್ಲ. ಮಹಿಳಾ ಕಾರ್ಯಕರ್ತರೂ ನಿಂತು ಹೋಗಿದ್ದಾರೆ. ದಯವಿಟ್ಟು ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಈಗ ಗ್ರಾಂಟ್ ಏನಿದ್ದರೂ ಅರ್ಬನ್ ಏರಿಯಾಕ್ಕೆ ಸಿಗುತ್ತದೆ. ರೂರಲ್ ಏರಿಯಾಕ್ಕೆ ಸಿಗುವುದಿಲ್ಲ. ಸೋಷಿಯಲ್ ವೆಲ್‌ಫೇರ್ ಮಂತ್ರಿಗಳೇ ನೇರವಾಗಿ ಇದನ್ನು ವಹಿಸಿಕೊಂಡು, ಅವರ ಮೂಲಕವೇ ಮಹಿಳಾಮಂಡಲಿಗಳಿಗೆ ಪೂರ್ತಿ ಗ್ರಾಂಟ್ ಕೊಟ್ಟು ಮಹಿಳಾಮಂಡಲಿಗಳು ತಮ್ಮ ಮುಂದಿನ ಕಾರ್ಯಕ್ರಮವನ್ನು ನಡೆಸುವುದಕ್ಕೆ ಪ್ರಯತ್ನ ಮಾಡಿದರೆ ಚೆನ್ನಾಗಿರುತ್ತದೆ ಎಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ."

"ಹರಿಜನರಿಗೆ ಮನೆಗಳನ್ನು ಕಟ್ಟಿಕೊಡುವುದರಲ್ಲಿ ಹರುಕುಮುರುಕು ಕೆಲಸವಾಗಿದೆ. ಒಂದು ತಾಲ್ಲೂಕಿನವರಿಗೆ ಮನೆ ಕಟ್ಟಲು ಹಣ ಸಿಕ್ಕಿದರೆ ಇನ್ನೊಂದು ತಾಲ್ಲೂಕಿನವರಿಗೆ ಸಿಕ್ಕಿಲ್ಲ. ಇದರಿಂದ ತುಂಬಾ ಜನರಿಗೆ ಅನಾನುಕೂಲವಾಗಿದೆ. ಹಿಂದೆ ಅವರಿಗೆ ಮನೆ ಕಟ್ಟಲು ನೇರವಾಗಿ 400 ರೂಪಾಯಿಗಳನ್ನು ಕೊಡುತ್ತಿದ್ದರು. ಈಗ ಸೊಸೈಟಿ ಮಾಡಿ ಅದರ ಮೂಲಕ ಸಾಲ ಕೊಡುವ ವ್ಯವಸ್ಥೆ ಮಾಡಿದ ಮೇಲೆ ಕೆಲವರಿಗೆ ಹಣ ಸಿಕ್ಕಿದರೆ, ಕೆಲವರಿಗೆ ಸಿಕ್ಕಿಲ್ಲ. ಅನೇಕ ಸಲ ಹಣ ಕೊಟ್ಟರೂ ಅವರಿಗೆ ಜಾಗ ಸಿಗುವುದಿಲ್ಲ. ಜಮೀನನ್ನು ಖರೀದಿ ಮಾಡುವುದಕ್ಕಾಗುವುದಿಲ್ಲ. ಮನೆಕಟ್ಟುವ ಸ್ಥಳದ ಅಕ್ಕಪಕ್ಕದ ಜಮೀನನ್ನು ಅಕ್ವೈರ್ ಮಾಡಬೇಕಾಗುತ್ತದೆ. ಜಮೀನನ್ನು ಅಕ್ವೈರ್ ಮಾಡಿಕೊಂಡರೆ ಈ ಮನೆ ಕಟ್ಟುವ ಸ್ಕೀಂ ಯಶಸ್ವಿಯಾಗುತ್ತದೆ. ಸಾಮಾನ್ಯವಾಗಿ ಕುರಿ ಸಾಕುವುದಕ್ಕೆ, ನೇಗಿಲು, ಎತ್ತು ಬಂಡಿ ಕೊಂಡುಕೊಳ್ಳುವುದಕ್ಕೆ ಅವರಿಗೆ ಆರ್ಥಿಕ ನೆರವು ನೀಡುತ್ತೀರಿ. ಆದರೆ ಈ ದುಡ್ಡು ಅವರಿಗೆ ಮುಟ್ಟುವುದಿಲ್ಲ. ಈ ದುಡ್ಡು ಪಡೆಯುವುದಕ್ಕಾಗಿ ಅವರಿಂದ ರಸೀತಿ ಮಾಡಿಸಿಕೊಂಡು ಪ್ರಭಾವಶಾಲಿಗಳು ಹಣ ಪಡೆದುಕೊಂಡು ಅದನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ಅಲ್ಲದೆ ಒಬ್ಬಿಬ್ಬರಿಗೆ ಮಾತ್ರ ಈ ಹಣ ಕೊಡಲಾಗುತ್ತಿದೆ. ಒಂದು ತಾಲ್ಲೂಕಿನಲ್ಲಿ ಸಾವಿರಾರು ಅರ್ಜಿಗಳೂ ಬಂದಿರುತ್ತವೆ. ಆದುದರಿಂದ ಈ ಧನಸಹಾಯ ಸ್ಕೀಂಗಳನ್ನು ರದ್ದುಮಾಡಿ ಅವರ ಏಳಿಗೆಗಾಗಿ ಇರತಕ್ಕಂತಹ ಹಾಸ್ಟೆಲ್‌ಗಳಿಗೆ ಈ ಧನಸಹಾಯ ಕೊಡಬೇಕು. ಹಾಸ್ಟೆಲ್‌ಗಳಲ್ಲಿ ಇದ್ದು ವಿದ್ಯಾಭ್ಯಾಸ ಮಾಡತಕ್ಕಂತಹ ಈ ಜನಾಂಗದ ವಿದ್ಯಾರ್ಥಿಗಳಿಗೆ ಒಳ್ಳೆಯ ಆಹಾರ, ಒಳ್ಳೆಯ ಬಟ್ಟೆ, ದೊರಕಿಸಿಕೊಡುವುದಕ್ಕೆ ಹಣ ಹೆಚ್ಚು ಮಾಡಬೇಕು. ಹಣ ದುರುಪಯೋಗ ಮಾಡತಕ್ಕಂತಹ ಸ್ಕೀಮುಗಳನ್ನು ಮಾಡಬೇಡಿ ಎಂದು ಸರ್ಕಾರಕ್ಕೆ ಹೇಳಬಯಸುತ್ತೇನೆ."

"ಸರ್ಕಾರದವರು ದರಖಾಸ್ತು ರೂಲ್ಸು ಅಳವಡಿಸಿಕೊಂಡು ಹಿಂದುಳಿದವರಿಗೆ ಭೂಮಿ ಕೊಡುತ್ತಾರೆ. ಈ ಯೋಜನೆಯಿಂದ ಅನೇಕ ಹರಿಜನರು ಭೂಮಿ ಪಡೆದಿದ್ದಾರೆ. ಆದರೆ ಬಹು ಜನರು ಇವತ್ತಿನ ದಿವಸ ತಹಸೀಲ್ದಾರ್ ಕಛೇರಿ ಮುಂದೆ ಅಲೆಯುತ್ತಿದ್ದಾರೆ. ಈ ಭೂಮಿ ಬಗ್ಗೆ ಅವರಿಗೆ ಕಬ್ಜಾ ಇದ್ದರೂ ಕೂಡಾ ಅವರಿಗೆ ಪಟ್ಟಾ ಆಗಿರುವುದಿಲ್ಲ. ಪ್ರಭಾವಶಾಲಿಯಾದವರ ಕೈವಾಡದಿಂದ ಅವರಿಗೆ ಪಟ್ಟಾ ಸಿಗುವುದಿಲ್ಲ. ಅನ್-ಆಥರೈಸ್ಡ್ ಕಲ್ಟಿವೇಷನ್ ಮಾಡಿದ್ದಾರೆಂದು ಅವರಿಗೆ ಎರಡುಮೂರು ಪಟ್ಟು ಕಂದಾಯ ವಸೂಲು ಮಾಡುತ್ತಿದ್ದಾರೆ. ಅಂಥವರು ನಮ್ಮ ಕಡೆ ಬರುತ್ತಾರೆ. ಆದುದರಿಂದ ನಾನು ಸೂಚಿಸುವುದೇನೆಂದರೆ ಯಾರಾದರೂ ಮೂರು ವರ್ಷ ಸಾಗುವಳಿ ಮಾಡಿದ್ದರೆ ಅವರ ರಿಕಾರ್ಡು ತರಿಸಿ ಅವರ ಹೆಸರಿಗೆ ಪಟ್ಟಾ ಮಾಡಿಕೊಟ್ಟು ಅವರ ತೊಂದರೆ ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ."

"ನಮ್ಮ ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ದೇವದಾಸಿ ಪದ್ಧತಿ ಇದೆ. ಇದು ಅನೀತಿಯ ಪದ್ಧತಿ. ಇದರಿಂದ ವೇಶ್ಯಾವೃತ್ತಿ ಬೆಳೆಯುತ್ತಿದೆ. ವೇಶ್ಯಾವೃತ್ತಿ ಬೆಳೆಯುವುದಕ್ಕೆ ಬಸವಿ ಬಿಡುವ ಪದ್ಧತಿ ಆಚರಣೆಯಲ್ಲಿದೆ. ಇದನ್ನು ತಡೆಗಟ್ಟುವುದಕ್ಕೆ ಆಗಿಲ್ಲ. ಇದನ್ನು ತಡೆಗಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದನ್ನು ಕಾಯಿದೆ ಮೂಲಕ ತಡೆಗಟ್ಟಬೇಕೇ ಹೊರತು, ಕೇವಲ ಭಾಷಣಗಳ ಮೂಲಕ ತಡೆಗಟ್ಟುವುದು ಅಸಾಧ್ಯ ಎಂದು ಕಂಡುಬರುತ್ತಿದೆ. ಮಹಿಳೆಯರಾದಂತಹ ನಾವು ಈ ಪ್ರಜಾಪ್ರಭುತ್ವದಲ್ಲಿ ಈ ರೀತಿ ಇರುವುದನ್ನು ನೋಡಿ ನಮಗೆ ದುಃಖವಾಗುತ್ತಿದೆ. ದಯವಿಟ್ಟು ಕಾಯಿದೆ ಮೂಲಕ ಸರಿಯಾದಂತಹ ತಿಳುವಳಿಕೆ ಕೊಟ್ಟು ಈ ಜನರಲ್ಲಿ ಈ ವೃತ್ತಿಯನ್ನು ಬಿಡುವುದಕ್ಕೆ ಪ್ರಯತ್ನ ಮಾಡಬೇಕು. ಅದನ್ನು ಮಾಡಿದರೆ ಅವರ ಉದ್ಧಾರ ಆಗುತ್ತದೆ. ಅಸ್ಪೃಶ್ಯತೆ ಎರಡನೆಯದು. ಇದು ಮೊದಲನೆಯ ಸೋಷಿಯಲ್ ಈವಿಲ್ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಅನೀತಿಯುತ ಕೆಲಸವನ್ನು ಮಾಡದೇ ಇರುವ ಹಾಗೆ ತಕ್ಕ ಕಾರ್ಯಕ್ರಮ ಹಾಕಿಕೊಂಡು ಇದನ್ನು ತಡೆಗಟ್ಟಬೇಕೆಂದು ಹೇಳುತ್ತೇನೆ."

ಲೋಕಸಭೆಯಲ್ಲಿ ಮಾಡಿದ ಭಾಷಣಗಳು (1975)– ಜವಳಿ ಕಾಯಿದೆಯ ಬಗ್ಗೆ

(ಈ ಭಾಷಣವನ್ನು ಕನ್ನಡದಲ್ಲಿ ಮಾಡಿದ್ದಾರೆ)

"ಹೊಸ ಜವಳಿ ಕಾಯ್ದೆ ಹತ್ತಿ ಬೆಳೆಗಾರರನ್ನು ಕಂಗೆಡಿಸಿದೆ. ಇದರಿಂದ ಕೈಮಗ್ಗ ಮತ್ತು ಪವರ್‌ಲೂಮ್ ಬಿಕ್ಕಟ್ಟಿಗೆ ಸಿಲುಕಿದೆ. ಇತ್ತೀಚಿನವರೆಗೆ ಮಿಲ್ ಮತ್ತು ಪವರ್‌ಲೂಮ್‌ಗಳಲ್ಲಿ ಒಂದಿಷ್ಟು ಪ್ರಮಾಣದ ಕಚ್ಚಾ ಹತ್ತಿಯ ಬಳಕೆಯನ್ನು ಕಡ್ಡಾಯಗೊಳಿಸಲಾಗಿತ್ತು. ಆದರೆ ಈಗ ಅದನ್ನು ತೆಗೆದು ಹಾಕಲಾಗಿದೆ. ಇದು ಹತ್ತಿ ಬೆಳೆಯುವ ರೈತರಿಗೆ ದೊಡ್ಡ ಹೊಡೆತ ನೀಡಿದೆ. ಇದರ ಫಲವಾಗಿ ನಮ್ಮ ರಾಷ್ಟ್ರದಲ್ಲಿ ಸಿಂಥೆಟಿಕ್ ಬಟ್ಟೆ ಮೇಲುಗೈ ಸಾಧಿಸಿರುವುದನ್ನು ಕಾಣಬಹುದು. ಸಿಂಥೆಟಿಕ್ ಕಳ್ಳ ಹಾದಿಯ ಮೂಲಕ ರಾಷ್ಟ್ರದೊಳಗೆ ಹರಿದುಬರುತ್ತಿದೆ. ಮೊದಲು ಇದಕ್ಕೆ ತಡೆ ಹಾಕುವ ಅಗತ್ಯ ಇದೆ. ಈ ನಿಟ್ಟಿನಲ್ಲಿ ಸರ್ಕಾರ ಅನುಸರಿಸುತ್ತಿರುವ ನೀತಿಯನ್ನು ಪರಿಷ್ಕರಿಸುವ ಅನಿವಾರ್ಯತೆ ಇದೆ. ಕಬ್ಬು ಬೆಳೆಯ ನಂತರ ಹತ್ತಿ ನಮ್ಮ ರಾಷ್ಟ್ರದ ಅತೀ ಹೆಚ್ಚು ಆದಾಯ ತರುವ ಎರಡನೆಯ ಬೆಳೆ ಎನಿಸಿದೆ. ಹತ್ತಿ ಬೆಳೆಗಾರರ ರಕ್ಷಣೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ತಕ್ಷಣವೇ ಜವಳಿ ನೀತಿಗೆ ಬದಲಾವಣೆಗೆ ತರುವ ಜರೂರತ್ತಿದೆ.

"ಮೂರನೆಯದಾಗಿ, ಜಿನ್ನಿಂಗ್ ಮತ್ತು ಪರಿಷ್ಕರಣೆಯ ಬಗ್ಗೆ ಸಚಿವರು ತಮ್ಮ ಮಾತಿನ ಮಧ್ಯೆ ಪ್ರಸ್ತಾಪಿಸಿದರು. ನನ್ನ ಸ್ವಂತ ಕ್ಷೇತ್ರದಲ್ಲಿಯೇ ಈ ನಿಟ್ಟಿನಲ್ಲಿ ರೈತರು ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಕರ್ನಾಟಕದ ಬಳ್ಳಾರಿ ಮತ್ತು ರಾಯಚೂರಿನಲ್ಲಿ ಉದ್ದ ಮತ್ತು ಅತೀ ಉದ್ದನೆಯ ಎಳೆಯ ಹತ್ತಿ ಬೆಳೆಯಲಾಗುತ್ತದೆ. ಜಿನ್ನಿಂಗ್ ಮತ್ತು ಪರಿಷ್ಕರಣೆ ದೃಷ್ಟಿಯಿಂದ ಈ ಹತ್ತಿಗೆ ಭಾರೀ ಬೇಡಿಕೆ ಇದೆ. ಈ ವಿಷಯದಲ್ಲಿ ರೈತರು ಮಹತ್ವದ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಸರ್ಕಾರ ಅದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇಲ್ಲದೇ ಹೋದರೆ ಹತ್ತಿ ಅನೇಕ ತಿಂಗಳು ಗೋದಾಮುಗಳಲ್ಲಿ ಕೊಳೆಯಬೇಕಾಗುತ್ತದೆ. ಬೇಸಿಗೆ ದಿನಗಳಲ್ಲಿ ಅಗ್ನಿ ಆಕಸ್ಮಿಕಗಳೂ ಆಗಿ ರೈತರು ದೊಡ್ಡ ಪ್ರಮಾಣದಲ್ಲಿ ನಷ್ಟಕ್ಕೆ ಗುರಿಯಾಗಬೇಕಾಗುತ್ತದೆ.

"ಅಗ್ನಿ ಆಕಸ್ಮಿಕಗಳು ಹತ್ತಿ ಬೆಳೆಗಾರರ ಬದುಕನ್ನೇ ನುಂಗಿ ಹಾಕುತ್ತಿವೆ. ಆದ್ದರಿಂದ ಬೃಹತ್ ಪ್ರಮಾಣದಲ್ಲಿ ಹತ್ತಿ ಬೆಳೆಯುವ ವಲಯಗಳಲ್ಲಿ ಅಗ್ನಿಶಾಮಕ ಪಡೆಗಳನ್ನು ನಿಯೋಜಿಸುವ ವ್ಯವಸ್ಥೆ ಮಾಡಬೇಕಾಗಿದೆ. ಮಾನ್ಯ ಸಚಿವರು ಇದುವರೆಗೆ ನಾನು ಪ್ರಸ್ತಾಪಿಸಿರುವ ಅಂಶಗಳತ್ತ ಗಮನಹರಿಸುತ್ತಾರೆಂದು ಭಾವಿಸುತ್ತೇನೆ.

ಲೋಕಸಭೆಯಲ್ಲಿ ಮಾಡಿದ ಭಾಷಣ (1980)
(ಉಕ್ಕಿನ ಕಾರ್ಖಾನೆ ಮತ್ತು ಅಣು ವಿದ್ಯುತ್ ಸ್ಥಾವರ ಸ್ಥಾಪನೆಯ ಬಗ್ಗೆ)

"2000ನೇ ಇಸವಿಯ ವೇಳೆಗೆ ಈ ದೇಶದಲ್ಲಿ ಉಕ್ಕಿನ ಭಾರೀ ಬೇಡಿಕೆ ಸೃಷ್ಟಿಯಾಗಲಿದೆ. ನಮಗೆ ಅಪಾರ ಪ್ರಮಾಣದ ಉಕ್ಕಿನ ಅಗತ್ಯ ಇದೆ. ಎಂಟನೆಯ ಪಂಚವಾರ್ಷಿಕ ಯೋಜನೆಯಲ್ಲಿ ವಿಜಯನಗರ ಉಕ್ಕು ಘಟಕ ಸ್ಥಾಪಿಸುವ ಪ್ರಸ್ತಾಪ ಮಾಡಲಾಯಿತು. 7ನೇ ಯೋಜನೆಯಲ್ಲಿ ನಾವು ಅದನ್ನು ಸೇರಿಸಿರಲಿಲ್ಲ. ವಿಜಯನಗರ ಘಟಕ ಸ್ಥಾಪನೆಯ ಬಗ್ಗೆ ಅಗತ್ಯ ಈಗ ಹೆಚ್ಚಾಗಿದೆ. ಏಕೆಂದರೆ ಹೊಸಪೇಟೆ ಪ್ರದೇಶದಲ್ಲಿ ಉತ್ತಮ ಕಬ್ಬಿಣದ ಅದಿರು ಮತ್ತು ಹೇರಳ ನೈಸರ್ಗಿಕ ಖನಿಜ ಸಂಪತ್ತು ಇದೆ. ಅದರ ಸದ್ಬಳಕೆಯಾಗಬೇಕಾದರೆ ವಿಜಯನಗರ ಉಕ್ಕು ಘಟಕ ಸ್ಥಾಪನೆಯಾಗುವ ಅಗತ್ಯ ಇದೆ. 8ನೇ ಯೋಜನೆ ಸಿದ್ಧಪಡಿಸುವ ಸಂದರ್ಭದಲ್ಲಿ ಹೊಸಪೇಟೆಯಲ್ಲಿ ಉಕ್ಕು ಘಟಕ ಸ್ಥಾಪಿಸುವ ಬಗ್ಗೆ ಗಮನ ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ."

"ಕರ್ನಾಟಕದಲ್ಲಿ ಅಣುವಿದ್ಯುತ್ ಸ್ಥಾಪಿಸುವ ತುರ್ತು ಇದೆ. ಇತ್ತೀಚೆಗೆ ಕೈಗಾರಿಕಾ ಕ್ಷೇತ್ರ ಬೆಳೆಯುತ್ತಿದೆ. ಆದರೆ ಉತ್ಪಾದನೆ ಮಾತ್ರ ಕುಂಠಿತಗೊಂಡಿದೆ. ಇದಕ್ಕೆ ಕಾರಣ ವಿದ್ಯುತ್ ಕೊರತೆ. ಆದ್ದರಿಂದ ಎಂಟನೇ ಯೋಜನೆಯಲ್ಲಿ ದೇಶದ ವಿವಿಧ ಕಡೆ ಹೆಚ್ಚುಹೆಚ್ಚಾಗಿ ಅಣು ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವತ್ತ ಗಮನ ಹರಿಸಬೇಕಿದೆ. ಇಲ್ಲದೇ ಹೋದರೆ ಕೈಗಾರಿಕಾ ಉತ್ಪನ್ನ ನೆಲಕಚ್ಚುವ ಅಪಾಯವಿದೆ. ಈ ಹಿನ್ನೆಲೆಯಲ್ಲಿ ಹೊಸಪೇಟೆಯಲ್ಲಿ ಸೂಪರ್ ಥರ್ಮಲ್ ಘಟಕ ಸ್ಥಾಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದುವರೆಗೆ ಕರ್ನಾಟಕ ಹೆಚ್ಚಾಗಿ ಜಲವಿದ್ಯುತ್‌ನ್ನು ಆಧರಿಸಿದೆ. ಆದ್ದರಿಂದ ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಹೆಚ್ಚಾಗಿದೆ. ಇದನ್ನು ನೀಗಿಸುವತ್ತ ನಾವು ಗಮನ ಹರಿಸಬೇಕಾಗಿದೆ."

ಈ ರೀತಿ ಶ್ರೀಮತಿ ಬಸವರಾಜೇಶ್ವರಿಯವರು ಅಂದು ಪ್ರಸ್ತಾಪಿಸಿದ ಅನೇಕ ಸಮಸ್ಯೆಗಳು, ಅನೇಕ ವಿಷಯಗಳು ಇಂದಿಗೂ ಸಂಪೂರ್ಣ ಪರಿಹಾರ ಪಡೆಯದ ಸಮಸ್ಯೆಗಳಾಗಿ, ಇಂದಿಗೂ ಅನ್ವಯವಾಗುವ ವಿಷಯಗಳಾಗಿ ಮುಂದುವರೆದಿರುವುದನ್ನು ನಾವು ನೋಡಬಹುದು. ಹೀಗಾಗಿ ಅವರು ದೂರದೃಷ್ಟಿಯನ್ನುಳ್ಳ ನಾಯಕಿಯಾಗಿದ್ದರು ಎಂಬುದನ್ನು ಮೇಲೆ ಉಲ್ಲೇಖಿಸಿದ ಅವರ ಭಾಷಣಗಳೇ ಎತ್ತಿ ಹೇಳುತ್ತವೆ. ಅವುಗಳಲ್ಲಿ ಬೇರೆ ವ್ಯಾಖ್ಯಾನ ಬೇಕಿಲ್ಲ. ಲೋಕಸಭೆಯಲ್ಲಿ ಕರ್ನಾಟಕ ರಾಜ್ಯದ ಅನೇಕ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿರುವುದನ್ನು ನಾವು ನೋಡಬಹುದು.

ಶ್ರೀಮತಿ ಬಸವರಾಜೇಶ್ವರಿಯವರದ್ದು ತುಂಬು ಸಂಸಾರ, ಅವರಿಗೆ ನಾಲ್ಕು ಜನ ಗಂಡುಮಕ್ಕಳು, ನಾಲ್ಕು ಜನ ಹೆಣ್ಣುಮಕ್ಕಳು. ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಜನರು ಇಂದಿಗೂ ಅವರನ್ನು ಕೊಂಡಾಡುತ್ತಾರೆ. ಅವರು ಸ್ಥಾಪಿಸಿದ ಸಂಸ್ಥೆಗಳು ಮುನ್ನಡೆಯುತ್ತಿವೆ. ಶ್ರೀಮತಿ ಬಸವರಾಜೇಶ್ವರಿಯವರು ಫೆಬ್ರವರಿ 20,2008ರಂದು ಇಹಲೋಕದ ಯಾತ್ರೆಯನ್ನು ಪೂರೈಸಿದರು. ಅವರ ನೆನಪು ಅಮರವಾಗಿ ಉಳಿದಿದೆ.

——— * ———

ಮೊದಲ ಮಹಿಳಾ ವಿಧಾನಸಭಾಧ್ಯಕ್ಷರು ಕೆ.ಎಸ್. ನಾಗರತ್ನಮ್ಮ

ಎಸ್. ನಂಜುಂಡಸ್ವಾಮಿ

ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಮೂಲತಃ ಹಾಸನ ಜಿಲ್ಲೆ, ಆಲೂರು ತಾಲ್ಲೂಕಿನ, ಚೌಲಗೆರೆ ಗ್ರಾಮದವರು. ಅವರ ತಂದೆ ಶ್ರೀ ಸಿ.ಆರ್. ಗೌಡರು ಅಂದಿನ ಮೈಸೂರು ಸರ್ಕಾರದಲ್ಲಿ ಮುಖ್ಯ ಇಂಜಿನಿಯರ್ ಆಗಿದ್ದರು. ಅವರ ತಾಯಿ ಶ್ರೀಮತಿ ಚನ್ನಮ್ಮನವರು ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು ಮೂಗೂರು ಗ್ರಾಮದ ಗೌಡರ ಬಸಪ್ಪನವರ ಮಗಳು. ಸಿ.ಆರ್. ಗೌಡರು ಮುಖ್ಯ ಇಂಜಿನಿಯರ್ ಆಗಿ ತುಮಕೂರು, ಬೆಂಗಳೂರುಗಳಲ್ಲಿ ಸೇವೆ ಸಲ್ಲಿಸಿದ್ದರೂ ಕೂಡಾ ಕುಟುಂಬ ಸಮೇತ ಖಾಯಂ ಆಗಿ ಬೆಂಗಳೂರು ನಗರದಲ್ಲೇ ನೆಲೆಸಿದ್ದರು. ಆದುದರಿಂದ ನಾಗರತ್ನಮ್ಮನವರು ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದರು.

ಸಿ.ಆರ್. ಗೌಡ ಮತ್ತು ಚನ್ನಮ್ಮ ದಂಪತಿಗಳದ್ದು ತುಂಬಿದ, ವಿದ್ಯಾವಂತ ಕುಟುಂಬ. ಇವರಿಗೆ ಆರು ಹೆಣ್ಣು ಮಕ್ಕಳು ಮತ್ತು ಎರಡು ಗಂಡು ಮಕ್ಕಳು. ಜೇಷ್ಠ ಪುತ್ರಿ ಶ್ರೀಮತಿ ನಾಗರತ್ನಮ್ಮನವರು ಇಪ್ಪತ್ತೂರನೇ ನವೆಂಬರ್ 1923ರಂದು ಜನಿಸಿದರು. ಶ್ರೀಮತಿ ನಾಗರತ್ನಮ್ಮನವರಿಗೆ ಐದು ವರ್ಷ ತುಂಬಿದ ತಕ್ಷಣ ತಂದೆತಾಯಿಗಳು ಅವರನ್ನು ಬೆಂಗಳೂರಿನ ಯೂರೋಪಿಯನ್ ಕಾನ್ವೆಂಟ್‌ಗೆ ಸೇರಿಸಿದರು. ವಿದ್ಯಾಭ್ಯಾಸದಲ್ಲಿ ಚುರುಕಾಗಿದ್ದ, ಅವರು ಆ ಕಾನ್ವೆಂಟ್ ನಡೆಸುತ್ತಿದ್ದ ಕೇಂಬ್ರಿಡ್ಜ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ನಂತರ ಅವರ ಪ್ರೌಢ ವಿದ್ಯಾಭ್ಯಾಸ ಅದೇ ವಿದ್ಯಾಸಂಸ್ಥೆಯ ಇಂಗ್ಲಿಷ್ ಶಾಲೆಯಲ್ಲಿ ಮುಂದುವರೆಯಿತು.

ಆಗಿನ ಕಾಲದ ಸಂಪ್ರದಾಯದಂತೆ ನಾಗರತ್ನಮ್ಮನವರ ತಂದೆತಾಯಿಗಳು ಅವರನ್ನು ಹೆಚ್ಚು ಓದಿಸಲು ಇಚ್ಛಿಸದೆ, ಮದುವೆ ಮಾಡಿ ಗಂಡನ ಮನೆಗೆ ಕಳುಹಿಸುವ ಯೋಚನೆ ಮಾಡಿದರು. ನಾಗರತ್ನಮ್ಮನವರಿಗೆ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂಬ ಇಚ್ಛೆ ಇದ್ದರೂ, ಆ ಕಾಲದ ಸಂಪ್ರದಾಯಸ್ಥ ಕುಟುಂಬದ ಹೆಣ್ಣುಮಗಳಂತೆ ತಂದೆತಾಯಿಗಳ ಪ್ರಯತ್ನಕ್ಕೆ ಸಮ್ಮತಿಸಿದರು. ಹನ್ನೊಂದು–ಹನ್ನೆರಡನೇ ವರ್ಷಕ್ಕೇ ಅವರಿಗೆ ಮದುವೆಯಾಯಿತು.

1943ನೇ ಇಸವಿ, ಕಾರ್ತಿಕ ಮಾಸದ ಒಂದು ದಿನ, ನಾಗರತ್ನಮ್ಮನವರನ್ನು, ಮೈಸೂರು ಜಿಲ್ಲೆ (ಇಂದಿನ ಚಾಮರಾಜನಗರ ಜಿಲ್ಲೆ), ಗುಂಡ್ಲುಪೇಟೆ ತಾಲ್ಲೂಕು, ಕಬ್ಬಳ್ಳಿಯ ಸಾಹುಕಾರ್ ಚನ್ನಬಸಪ್ಪನವರ ಮಗ ಕೆ.ಸಿ.ಸುಬ್ಬಣ್ಣನವರಿಗೆ ಕೊಟ್ಟು ವಿವಾಹ ಮಾಡಲಾಯಿತು. ಕಬ್ಬಳ್ಳಿ ಮನೆತನವು ಅಂದಿಗೂ, ಇಂದಿಗೂ ಅತ್ಯಂತ ಹೆಸರುವಾಸಿಯಾದ ಮನೆತನವಾಗಿದೆ.

ನಾಗರತ್ಮಮ್ಮನವರ ವ್ಯಕ್ತಿತ್ವ ಮತ್ತು ಸಾಧನೆಯ ದೃಷ್ಟಿಯಿಂದ ಈ ಮನೆತನದ ಹಿನ್ನೆಲೆಯನ್ನು ತಿಳಿದುಕೊಳ್ಳುವುದು ಸೂಕ್ತವಾದುದು. ಕಬ್ಬಳ್ಳಿ ಗುಂಡ್ಲುಪೇಟೆ ತಾಲ್ಲೂಕಿನ ಒಂದು ಸಣ್ಣಹಳ್ಳಿ. ಕಬ್ಬಕ್ಕಿ(ಕಬ್ಬುಹಕ್ಕಿ)ಗಳು ಹೆಚ್ಚು ಸಂಖ್ಯೆಯಲ್ಲಿದ್ದುದರಿಂದ ಇದಕ್ಕೆ ಕಬ್ಬಳ್ಳಿ ಎಂಬ ಪ್ರಕೃತಿ(ಪ್ರಾಣಿ)ಜನ್ಯವಾದ ಸ್ಥಳನಾಮವು ಬಂದಿದೆ. ಆ ಹಳ್ಳಿಯವರು,

ನಮ್ಮದು ಕಬ್ಬಿಗರು ಅಂದರೆ ಕವಿಗಳು ಇದ್ದ ಹಳ್ಳಿಯಾಗಿದ್ದರಿಂದ ಕಬ್ಬಳ್ಳಿಯಾಗಿದೆ ಎಂದು ಹೇಳುವುದೂ ಉಂಟು. ದಾನ, ಧರ್ಮ ಮತ್ತು ಸಮಾಜಸೇವೆಗೆ ಹೆಸರಾದ ಶ್ರೀಮಂತ ಕುಟುಂಬದ ಶ್ರೀ ಸಿದ್ಧಲಿಂಗಪ್ಪ ಮತ್ತು ಶ್ರೀಮತಿ ಶರಣಮ್ಮ ದಂಪತಿಗಳ ಮೂರನೆಯ ಮಗನಾಗಿ 1881ರಲ್ಲಿ ಜನಿಸಿದ ಚನ್ನಬಸಪ್ಪನವರೇ ಮುಂದೆ ಕಬ್ಬಳ್ಳಿ ಸಾಹುಕಾರ್ ಚನ್ನಬಸಪ್ಪನವರೆಂದು ಪ್ರಖ್ಯಾತರಾದರು.

ಚನ್ನಬಸಪ್ಪನವರ ಪ್ರಾಥಮಿಕ ವಿದ್ಯಾಭ್ಯಾಸ ಸ್ವಂತ ಊರಿನಲ್ಲಿಯೇ ನಡೆಯಿತು. ಮಾಧ್ಯಮಿಕ ವಿದ್ಯಾಭ್ಯಾಸಕ್ಕಾಗಿ, ಗುಂಡ್ಲುಪೇಟೆಗೆ ಅಥವಾ ಮೈಸೂರಿಗೆ ಹೋಗಬೇಕಾದ ಸ್ಥಿತಿ ಇದ್ದುದರಿಂದ ಅವರ ವಿದ್ಯಾಭ್ಯಾಸ ಮುಂದುವರೆಯಲಿಲ್ಲ. ಕಾವ್ಯ, ಸಾಹಿತ್ಯ, ಪುರಾಣಗಳನ್ನು ಮನನ ಮಾಡಿಕೊಂಡಿದ್ದ ಅವರಿಗೆ ಕನ್ನಡ ಭಾಷೆಯ ಮೇಲೆ ಮನೆತನದ ಪುಟ್ಟವೀರಪ್ಪನವರ ಮಗಳು ಮಲ್ಲವ್ವೆಯ ಜೊತೆ ವಿವಾಹವಾಯಿತು. ಈ ದಂಪತಿಗಳಿಗೆ 1911ರಲ್ಲಿ ಸುಬ್ಬಣ್ಣ ಎಂಬ ಗಂಡುಮಗುವೂ, ನಂತರದ ವರ್ಷದಲ್ಲಿ ಸುಬ್ಬಮ್ಮ ಎಂಬ ಹೆಣ್ಣುಮಗುವೂ ಜನಿಸಿತು. ಕಬ್ಬಳ್ಳಿ ಹಾಗೂ ಸುತ್ತಮುತ್ತ ಹಳ್ಳಿಯ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದುದನ್ನು ನೋಡುತ್ತಿದ್ದ, ಚನ್ನಬಸಪ್ಪನವರು, ಸರ್ಕಾರದಿಂದ ಅನುಮತಿ ಪಡೆದು, 1914ರ ನವೆಂಬರ್ ತಿಂಗಳಲ್ಲಿ ತಮ್ಮ ತಂದೆ ದಿವಂಗತ ಶ್ರೀ ಸಿದ್ಧಲಿಂಗಪ್ಪನವರ ಹೆಸರಿನಲ್ಲಿ ಅಂದಿನ ಕಾಲದಲ್ಲಿ 16,000 ರೂಪಾಯಿಗಳ ವೆಚ್ಚದಲ್ಲಿ ಮಾಧ್ಯಮಿಕ ಶಾಲೆಯನ್ನು ಕಟ್ಟಿಸಿದರು. ಆ ಶಾಲೆಯಲ್ಲಿ ಬೋಧಿಸುವ ಉಪಾಧ್ಯಾಯರುಗಳ ವೇತನಕ್ಕಾಗಿ 13,000 ರೂಪಾಯಿಗಳನ್ನು ಬ್ಯಾಂಕಿನಲ್ಲಿಟ್ಟು, ಅದರಿಂದ ಬರುವ ಬಡ್ಡಿಯಿಂದ ಉಪಾಧ್ಯಾಯರ ಸಂಬಳಕ್ಕೆ ವ್ಯವಸ್ಥೆ ಮಾಡಿದರು. ಜೊತೆಗೆ ತಮ್ಮ ಸಹೋದರ ಪುಟ್ಟಪ್ಪನವರ ಹೆಸರಿನಲ್ಲಿ ಒಂದು ವಸತಿಗೃಹವನ್ನು ಕಟ್ಟಿಸಿ, ಅದರಲ್ಲಿ ಉಪಾಧ್ಯಾಯರಿಗೆ ಹಾಗೂ ದೂರದ ಹಳ್ಳಿಗಳಿಂದ ಬರುವ ಮಕ್ಕಳಿಗೆ ವಸತಿ ಸೌಕರ್ಯ ಕಲ್ಪಿಸಿಕೊಟ್ಟರು. ವಿದ್ಯಾರ್ಥಿಗಳಿಗೆ ತಮ್ಮ ಮನೆಯಲ್ಲೇ ಊಟದ ವ್ಯವಸ್ಥೆಯನ್ನೂ ಮಾಡಿದರು. ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಆ ಶಾಲೆಯಲ್ಲಿ ಒಂದು ಗ್ರಂಥ ಭಂಡಾರವನ್ನು ಸ್ಥಾಪಿಸಿದರು, ಆ ಊರಿನ ಹಾಗೂ ಸುತ್ತಮುತ್ತಲ ಹಳ್ಳಿಗಳ ಜನರ ಆರೋಗ್ಯ ರಕ್ಷಣೆಯ ವ್ಯವಸ್ಥೆಗಾಗಿ ಕಬ್ಬಳ್ಳಿಯಲ್ಲಿ ಒಂದು ಆಸ್ಪತ್ರೆಯನ್ನೂ ಕಟ್ಟಿಸಿದರು. ಇದರಿಂದಾಗಿ ಕಬ್ಬಳ್ಳಿ ಗ್ರಾಮವು ಮಾದರಿ ಗ್ರಾಮವೆಂಬ ಖ್ಯಾತಿಯನ್ನು ಪಡೆಯಿತು.

ಚನ್ನಬಸಪ್ಪನವರ ಸಾಮಾಜಿಕ ಕಳಕಳಿಯನ್ನು, ಸಮಾಜ ಸೇವೆಯನ್ನು ಗಮನಿಸಿದ ಮೈಸೂರು ಮಹಾರಾಜರು ಮೆಚ್ಚಿಕೊಂಡು ಅವರನ್ನು ಹಂತಹಂತವಾಗಿ, ತಾಲ್ಲೂಕು ಬೋರ್ಡ್, ಜಿಲ್ಲಾಬೋರ್ಡ್, ಪ್ರಜಾಪ್ರತಿನಿಧಿ ಸಭೆಗಳ ಸದಸ್ಯರನ್ನಾಗಿ ನಾಮಕರಣ ಮಾಡಿದರು. ಜೊತೆಗೆ ಸಂಸ್ಥಾನದ ಸ್ಕಾಲರ್‌ಶಿಪ್ ಕಮಿಟಿ ಸದಸ್ಯರನ್ನಾಗಿಯೂ ಮಾಡಿದರು.

ಮೈಸೂರು ನಗರದಲ್ಲಿ ತಮ್ಮ ಜನಾಂಗದ ವಿದ್ಯಾರ್ಥಿಗಳು ಹೈಸ್ಕೂಲು ಮತ್ತು ಕಾಲೇಜು ವಿದ್ಯಾಭ್ಯಾಸಕ್ಕಾಗಿ ಕಷ್ಟಪಡುತ್ತಿದ್ದುದನ್ನು, ತಕ್ಕ ಸೌಕರ್ಯಗಳಿಲ್ಲದೆ ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದುದನ್ನೂ ನೋಡಿ, ಮೈಸೂರಿನಲ್ಲಿ ಒಂದು ವೀರಶೈವ ವಿದ್ಯಾರ್ಥಿ ನಿಲಯವನ್ನು ತೆರೆಯುವ ಬಗ್ಗೆ ಚಿಂತನೆ ನಡೆಸಿದರು. ಮೈಸೂರಿನ ಇಂದಿನ ಝೂನ್ಸಿರಾಣಿ ಲಕ್ಷ್ಮೀಭಾಯಿ ರಸ್ತೆಯಲ್ಲಿದ್ದ ಒಂದು ವಿಶಾಲ ಕಟ್ಟಡವನ್ನು 1920ನೇ ಇಸವಿಯಲ್ಲಿ 45,000 ರೂಪಾಯಿಗಳಿಗೆ ಖರೀದಿಸಿ, ಅದನ್ನು ಜೀರ್ಣೋದ್ಧಾರ ಮಾಡಿ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿದರು. ವಿದ್ಯಾರ್ಥಿ ನಿಲಯದ ನಿರ್ವಹಣೆಗೆ ಬೋರ್ಡ್ ಆಫ್ ಟ್ರಸ್ಟೀಸ್ ಸಮಿತಿಯನ್ನು ಸ್ಥಾಪಿಸಿದರು. ಇಂದಿಗೂ ಆ ಸಮಿತಿಯೇ ವಿದ್ಯಾರ್ಥಿ ನಿಲಯವನ್ನು ನಿರ್ವಹಿಸಿಕೊಂಡು ಬರುತ್ತಿದೆ. ಈ ವಿದ್ಯಾರ್ಥಿ ನಿಲಯದಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ತಮ್ಮ ಪುತ್ರಿ ಚಿ.ಸೌ.ಸುಬ್ಬಮ್ಮನವರ ವಿವಾಹ ಮಹೋತ್ಸವದ ಅಂಗವಾಗಿ 5000 ರೂಪಾಯಿಗಳ ವೆಚ್ಚದಲ್ಲಿ ಒಂದು ಸುಸಜ್ಜಿತ ಗ್ರಂಥಭಂಡಾರವನ್ನು ಸ್ಥಾಪಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಓದುವ ಬಡ ಮಕ್ಕಳ ವಿದ್ಯಾರ್ಥಿ ವೇತನಕ್ಕಾಗಿ 15,000 ರೂಪಾಯಿಗಳನ್ನು ನೀಡಿ ಒಂದು ಮುದುವಟ್ಟನ್ನು ಸ್ಥಾಪಿಸಿದರು. ಬೆಂಗಳೂರಿನ ಶ್ರೀ ಜಯದೇವ ಹಾಸ್ಟೆಲ್‌ನ ಶಂಕು ಸ್ಥಾಪನೆ ಸಮಾರಂಭದಲ್ಲಿ ಭಾಗವಹಿಸಿದ್ದ ಶ್ರೀಮನ್ ಮಹಾರಾಜರು,

ಅಲ್ಲಿ ಉಪಸ್ಥಿತರಿದ್ದ ಶ್ರೀ ಚನ್ನಬಸಪ್ಪನವರ ಸಮಾಜಸೇವೆ ಮತ್ತು ದಾನಶೀಲತೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ಇಂತಹ ಮಹಾನ್ ಸಮಾಜಸೇವಕರು 1926ನೇ ಫೆಬ್ರವರಿ 21 ರಂದು, ತಮ್ಮ ನಲವತ್ತೈದನೆಯ ವಯಸ್ಸಿನಲ್ಲಿಯೇ ಅಕಾಲಿಕವಾಗಿ ನಿಧನರಾದರು.

ಇಂತಹ ಸಾಹುಕಾರ್ ಚನ್ನಬಸಪ್ಪ ಮತ್ತು ಮಲ್ಲಪ್ಪ ದಂಪತಿಗಳಿಗೆ 1911ರಲ್ಲಿ ಜನಿಸಿದ ಸುಬ್ಬಣ್ಣನವರು ತಮ್ಮ ಹುಟ್ಟೂರು ಕಬ್ಬಳ್ಳಿಯಲ್ಲಿಯೇ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ, ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದು, ತಂದೆಯವರು ಸ್ಥಾಪಿಸಿದ್ದ ವಿದ್ಯಾರ್ಥಿನಿಲಯದಲ್ಲಿಯೇ ಇದ್ದುಕೊಂಡು ಎಸ್.ಎಸ್.ಎಲ್.ಸಿ ವರೆಗೆ ಓದಿದರು. ಆದರೆ ತಂದೆಯವರ ಅಕಾಲಿಕ ನಿಧನದ ನಂತರ ತಾಯಿಯವರ ಅಪೇಕ್ಷೆಯಂತೆ ವಿದ್ಯಾಭ್ಯಾಸವನ್ನು ನಿಲ್ಲಿಸಿ, ಊರಿಗೆ ಬಂದು ಸಂಸಾರದ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಯಿತು. ತಮ್ಮ ತಾಯಿಯವರ ಸೇವೆ ಹಾಗೂ ತಂದೆಯವರು ಕೈಗೊಂಡಿದ್ದ ಕಾರ್ಯಗಳನ್ನು ಮುಂದುವರಿಸಲು ತಾವೇ ಊರಿನಲ್ಲಿ ಉಳಿಯಲು ನಿರ್ಧರಿಸಿದರು.

ಕೆ.ಸಿ.ಸುಬ್ಬಣ್ಣನವರರಿಗೆ 18 ವರ್ಷ ತುಂಬಿದಾಗ. 1929ನೇ ಇಸವಿಯಲ್ಲಿ ಸಂತೇಮರಹಳ್ಳಿ ಗ್ರಾಮದ ಆಗರ್ಭ ಶ್ರೀಮಂತಾದ ಪಟೇಲ್ ಪುಟ್ಟಸ್ವಾಮಿಯವರ ಮಗಳು ಸುಬ್ಬಮ್ಮನವರೊಡನೆ ವಿವಾಹವಾಯಿತು. 1933ರಲ್ಲಿ ಸುಬ್ಬಣ್ಣವರ ತಾಯಿ ಮಲ್ಲವ್ವೆ ನಿಧನರಾದರು. ಪತ್ನಿ ಸುಬ್ಬಮ್ಮನವರೂ ಕೂಡಾ 1934ರಲ್ಲಿ ವಿಧಿವಶರಾದರು, ಸುಬ್ಬಣ್ಣನವರ ಬಾಳನೌಕೆ ದಿಕ್ಕು ತಪ್ಪಿತ್ತು. ಇಂತಹ ಸಮಯದಲ್ಲಿ 1934ರಲ್ಲಿ ಸುಬ್ಬಣ್ಣನವರ ಕೈಹಿಡಿದು, ಅವರ ಬಾಳನೌಕೆಯನ್ನು ಮುನ್ನಡೆಸಿ, ಕಬ್ಬಳ್ಳಿ ಮನೆತನಕ್ಕೆ ಬೆಳಕಾದವರು ಶ್ರೀಮತಿ ನಾಗರತ್ನಮ್ಮನವರು. ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ಇವರು ಕಬ್ಬಳ್ಳಿ ಮನೆತನದ ಸೊಸೆಯಾದರು, ಮುಂದೆ ಯಾವ ರೀತಿ ಅಗಾಧವಾದ ಸಾಧನೆಗಳನ್ನು ಮಾಡಿ, ಆ ಕುಟುಂಬದ ಹೆಸರು ಕರ್ನಾಟಕದಲ್ಲಿ, ಅದರಲ್ಲೂ ಹಳೆಯ ಮೈಸೂರು ಪ್ರಾಂತ್ಯದಲ್ಲಿ ಮನೆಮಾತಾಗುವಂತೆ ಮಾಡಿದರು ಎಂದಾಗ ಅವರ ಕರ್ತೃತ್ವಶಕ್ತಿ, ದಕ್ಷತೆ, ದೂರದೃಷ್ಟಿಗಳ ಅರಿವಾಗುತ್ತದೆ. ಅದಕ್ಕಾಗಿಯೇ ಕಬ್ಬಳ್ಳಿ ಮನೆತನದ ಹಿನ್ನೆಲೆಯನ್ನು ಸಂಕ್ಷೇಪವಾಗಿ ನೀಡಲಾಗಿದೆ.

1935ರಲ್ಲಿ ಪ್ಲೇಗ್‌ಮಾರಿ ಕಬ್ಬಳ್ಳಿಗೆ ಬಂತು. ಆ ಊರಿನ ಅನೇಕರು ಮನೆಮಾರುಗಳನ್ನು ಬಿಟ್ಟುಹೋದರು. ಈ ಸನ್ನಿವೇಶದಲ್ಲಿ ಸುಬ್ಬಣ್ಣನವರು ಪತ್ನಿ ನಾಗರತ್ನಮ್ಮನವರ ಜೊತೆ ಮೈಸೂರಿಗೆ ಬಂದು ನೆಲೆಸಿದರು. ತಂದೆಯವರು ಸ್ಥಾಪಿಸಿದ್ದ ವಿದ್ಯಾರ್ಥಿ ನಿಲಯದ ಮೇಲ್ವಿಚಾರಣೆ ನೋಡಿಕೊಳ್ಳುತ್ತಾ, ಆಗಾಗ್ಗೆ ಹಳ್ಳಿಗೆ ಹೋಗಿ ಅಲ್ಲಿ ಒಂದು ಎರಡು ತಿಂಗಳುಗಳ ಕಾಲ ವಾಸ್ತವ್ಯ ಹೂಡಿ, ಕೃಷಿ ಕಾರ್ಯಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಾ ಇದ್ದರು.

ಮೈಸೂರಿನಲ್ಲಿ ಸುಬ್ಬಣ್ಣನವರ ಕಾರ್ಯಕ್ಷೇತ್ರ ವಿಸ್ತೃತವಾಯಿತು. ಅವರು ಅನೇಕ ಸಂಘ ಸಂಸ್ಥೆಗಳ ಸದಸ್ಯರೂ, ಅಧ್ಯಕ್ಷರೂ ಆಗಿ ಕಾರ್ಯನಿರ್ವಹಿಸಿದರು. ಡಿಸ್ಟ್ರಿಕ್ಟ್ ಬೋರ್ಡ್, ಮೈಸೂರು ರೈಲ್ವೆ ಅಡ್ವೈಸರಿ ಬೋರ್ಡ್, ಸ್ಕಾಲರ್‌ಶಿಪ್ ಕಮಿಟಿಗಳ ಸದಸ್ಯರಾದರು. ಮುಂದೆ 1938ರಿಂದ ಸತತವಾಗಿ ಒಂಬತ್ತು ವರ್ಷಗಳ ಕಾಲ ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾಗಿ ಅನನ್ಯವಾದ ರೀತಿಯಲ್ಲಿ ಸೇವೆಯನ್ನು ಸಲ್ಲಿಸಿದರು. ಆಗ ಮೈಸೂರು ಜಿಲ್ಲೆಯ ಅತ್ಯಂತ ಪ್ರಭಾವಿ ಮುಖಂಡರಲ್ಲಿ ಒಬ್ಬರು, ಮೈಸೂರು ಸರ್ಕಾರದ ಮಂತ್ರಿಗಳೂ ಆಗಿದ್ದ ದಿವಂಗತ ಎಚ್.ಎಂ. ಚನ್ನಬಸಪ್ಪನವರು ಜಿಲ್ಲಾ ಬೋರ್ಡ್ ಅಧ್ಯಕ್ಷ ಸ್ಥಾನಕ್ಕೆ ಇವರ ಪ್ರತಿಸ್ಪರ್ಧಿಯಾಗಿ ಹೋರಾಡಿ ಸೋತರೆಂದು ತಿಳಿದುಬರುತ್ತದೆ. ಈ ಕಾಲದಲ್ಲಿ ಜಿಲ್ಲೆಯಾದ್ಯಂತ ಅನೇಕ ಹಳ್ಳಿಗಳಿಗೆ ಹೊಸದಾಗಿ ರಸ್ತೆಗಳಾದವು. ಸೇತುವೆಗಳನ್ನು ಕಟ್ಟಲಾಯಿತು. ರಸ್ತೆಗಳನ್ನು ರಿಪೇರಿ ಮಾಡಲಾಯಿತು. ಕೆರೆಗಳ ಜೀರ್ಣೋದ್ಧಾರವಾಯಿತು. ಅನೇಕ ಗ್ರಾಮಗಳಲ್ಲಿ ಶಾಲೆಗಳು ಸ್ಥಾಪಿತವಾದವು. ಆಸ್ಪತ್ರೆಗಳಿಲ್ಲದ ಹಳ್ಳಿಗಳಿಗೆ ವೈದ್ಯರನ್ನು ಕಳುಹಿಸಿ, ಕ್ಯಾಂಪ್‌ಗಳನ್ನು ಮಾಡಿಸಿ, ಜನರ ಆರೋಗ್ಯ ಸುಧಾರಣೆಗೆ ಗಮನ ಹರಿಸಿದರು. ಮುಂದೆ ಇವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಆಗಿ ಸೇವೆ ಸಲ್ಲಿಸಿದರು.

ಕಬ್ಬಳ್ಳಿ ಗ್ರಾಮದಲ್ಲಿ ತಂದೆಯವರು ಸ್ಥಾಪಿಸಿದ್ದ ಶಾಲೆ ಅಭಿವೃದ್ಧಿಯತ್ತ ಸಾಗಿತ್ತು. ಹುಡುಗರ ಸಂಖ್ಯೆ ಹೆಚ್ಚಾಗಿತ್ತು. ಹೊಸದಾಗಿ ಕೊಠಡಿಗಳನ್ನು ನಿರ್ಮಿಸಿ ಶಾಲೆಯನ್ನು ವಿಸ್ತರಿಸಿದರು. ವಿದ್ಯಾರ್ಥಿಗಳ ಊಟವಸತಿಗಾಗಿ ತಮ್ಮ ದೊಡ್ಡಪ್ಪ ದಿವಂಗತ ಸುಬ್ಬಪ್ಪನವರ ದೊಡ್ಡ ಮನೆಯನ್ನು ಪಡೆದುಕೊಂಡು, ಪಡಗೂರು ಮಠದ ಶ್ರೀ ಶಿವಕುಮಾರ ಸ್ವಾಮಿಗಳ ನೇತೃತ್ವದಲ್ಲಿ ವಿದ್ಯಾರ್ಥಿ ನಿಲಯವನ್ನಾಗಿ ಮಾರ್ಪಡಿಸಿದರು. ಮೈಸೂರಿನಲ್ಲಿ ತಮ್ಮ ತಂದೆಯವರು ಸ್ಥಾಪಿಸಿದ್ದ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಕೇವಲ ವಸತಿ ಸೌಕರ್ಯವನ್ನು ಕಲ್ಪಿಸಿ ಕೊಡಲಾಗಿತ್ತು. ಈ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆ ಕಲ್ಪಿಸಲು ಗುಂಡ್ಲುಪೇಟೆ ಹತ್ತಿರದ ಕೋಡಿಹಳ್ಳಿ ಗ್ರಾಮದಲ್ಲಿ ತಮಗೆ ಸೇರಿದ್ದ 60 ಎಕರೆ ನೀರಾವರಿ ಸೌಕರ್ಯವುಳ್ಳ ಜಮೀನನ್ನು ವಿದ್ಯಾರ್ಥಿ ನಿಲಯಕ್ಕೆ ದಾನವಾಗಿ ನೀಡಿದರು. ಆದರೆ ಅದು ಮುಂದೆ ಭೂಸುಧಾರಣಾ ಕಾಯಿದೆ ಅನ್ವಯ ಉಳುವವರಿಗೇ ಸೇರಿ ಉಚಿತ ಊಟದ ವ್ಯವಸ್ಥೆ ನಿಂತು ಹೋಯಿತು. 1941ರಲ್ಲಿ ದಿವಾನ್ ಮಿರ್ಜಾ ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದಲ್ಲಿ ವೀರಶೈವ ಸಮ್ಮೇಳನವನ್ನು ನಡೆಸಿದರು. ಹೀಗೆ ವಿದ್ಯಾಕ್ಷೇತ್ರ, ಸಮಾಜ ಸೇವಾಕ್ಷೇತ್ರ ಮತ್ತು ರಾಜಕೀಯ ಕ್ಷೇತ್ರದಲ್ಲಿ ನಾಗರತ್ನಮ್ಮನವರ ಪತಿ ಸುಬ್ಬಣ್ಣನವರು ಅಪಾರ ಸಾಧನೆಯನ್ನು ಮಾಡಿದರು.

ಪತಿ ಈ ಎಲ್ಲ ಸಮಾಜಸೇವಾ ಕಾರ್ಯಗಳಲ್ಲಿ ಶ್ರೀಮತಿ ನಾಗರತ್ನಮ್ಮನವರು ಸ್ಫೂರ್ತಿಯಾಗಿ ಹಿನ್ನೆಲೆಯಲ್ಲಿದ್ದರು ಎಂಬುದು ಮುಖ್ಯ. ಆದರೆ ಈ ಎಲ್ಲ ರೀತಿಯಿಂದಲೂ ಸಾರ್ಥಕ ಜೀವನವನ್ನು ನಡೆಸಿ, ಅನ್ಯೋನ್ಯ ದಂಪತಿಗಳಾಗಿದ್ದ ಇವರ ಬಾಳಿನಲ್ಲಿ ದೊಡ್ಡ ಆಘಾತ ಉಂಟಾಯಿತು. 1947ರ ಆಗಸ್ಟ್ ತಿಂಗಳಲ್ಲಿ ತಮ್ಮ ಮೂವತ್ತಾರನೇ ವಯಸ್ಸಿನಲ್ಲಿ ಸುಬ್ಬಣ್ಣನವರು ಅಲ್ಪಕಾಲದ ಅಸ್ವಸ್ಥತೆಯಿಂದ ಕೈಲಾಸವಾಸಿಗಳಾದರು. ಶ್ರೀಮತಿ ನಾಗರತ್ನಮ್ಮನವರಿಗೆ ಆಗಿನ್ನೂ 25ರ ಹರೆಯ, ಮಾನಸಿಕವಾಗಿ ಅವರಿಗೆ ತಡೆದುಕೊಳ್ಳಲಾರದ ಆಘಾತವಾಯಿತು. ಆದರೂ, ವಿದ್ಯಾವಂತರಾಗಿ ದಿಟ್ಟತನವನ್ನು ಮೈಗೂಡಿಸಿಕೊಂಡಿದ್ದ ಅವರು ಎದೆಗುಂದದೆ ಕಬ್ಬಳ್ಳಿ ಕುಟುಂಬದ ಇಡೀ ಜವಾಬ್ದಾರಿಯನ್ನು ತಮ್ಮ ಹೆಗಲಮೇಲೆ ಹೊತ್ತು ಸಮರ್ಥವಾಗಿ ಮುನ್ನಡೆಸಲು ಬದ್ಧಕಂಕಣರಾದರು. ಪತಿ ಸುಬ್ಬಣ್ಣನವರು ರಾಜಕೀಯವಾಗಿ ಪ್ರವರ್ಧಮಾನವಾಗಿದ್ದರಷ್ಟೆ. ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುವಂತೆ, ಗುಂಡ್ಲುಪೇಟೆ ತಾಲ್ಲೂಕಿನ ಜನತೆ, ಹಿತೈಷಿಗಳು,, ನಾಗರತ್ನಮ್ಮನವರ ಮೇಲೆ ಒತ್ತಡ ತಂದರು. ಮುಡುಗೂರು ಗುರುಮಠದವರ ಆಶೀರ್ವಾದವೂ ದೊರೆಯಿತು. ಅದೇ ಊರಿನ ಗೌಡರ ಸುಬ್ಬಣ್ಣನವರಂತಹ ಮುಂದಾಳುಗಳು ಕೂಡಾ ನಾಗರತ್ನಮ್ಮನವರ ರಾಜಕೀಯ ಪ್ರವೇಶಕ್ಕೆ ಒತ್ತಾಸೆಯಾಗಿ ನಿಂತರು. ಆಗ ಕಾಂಗ್ರೆಸ್ ಪಕ್ಷದ ಕಾಲ. ಕಾಂಗ್ರೆಸ್ ಹುರಿಯಾಳುಗಳ ಮುಂದೆ ಚುನಾವಣೆಗೆ ಸ್ಪರ್ಧಿಸಿ ಗೆಲ್ಲುವುದು ಕಷ್ಟವಾಗಿತ್ತು. ಈ ಬಗ್ಗೆ ವಿಚಾರ ಮಾಡುವ ಹೊತ್ತಿಗೆ 1957ರ ಎರಡನೇ ಮಹಾಚುನಾವಣೆಗಳು ಬಂದವು. ಗುಂಡ್ಲುಪೇಟೆ ತಾಲ್ಲೂಕಿನ ಜನರ ಆಕಾಂಕ್ಷೆಗೆ ನಾಗರತ್ನಮ್ಮನವರು ಸ್ವತಂತ್ರ ಅಭ್ಯರ್ಥಿಯಾಗಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯ ವಿರುದ್ಧ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಿಂದ ಶಾಸಕ ಸ್ಥಾನಕ್ಕೆ ಸ್ಪರ್ಧಿಸಿದರು. ಕಬ್ಬಳ್ಳಿ ಮನೆತನದ ಸಮಾಜ ಸೇವೆಯನ್ನು, ಜನಪರ ಕಾರ್ಯಗಳನ್ನು ಮೆಚ್ಚಿಕೊಂಡಿದ್ದ ಜನತೆ ಸ್ವಪ್ರೇರಣೆಯಿಂದ ನಾಗರತ್ನಮ್ಮನವರ ಪರವಾಗಿ ನಿಂತರು. ಸದರಿ ಚುನಾವಣೆಯಲ್ಲಿ ನಾಗರತ್ನಮ್ಮನವರು ಕಾಂಗ್ರೆಸ್ ಅಭ್ಯರ್ಥಿಯನ್ನು ಹನ್ನೆರಡು ಸಾವಿರ ಮತಗಳ ಭಾರೀ ಅಂತರದಿಂದ ಸೋಲಿಸಿ ವಿಧಾನಸಭಾ ಸದಸ್ಯ ಸ್ಥಾನಕ್ಕೆ ಆಯ್ಕೆಯಾದರು. ಇದೊಂದು ವಿಕ್ರಮವೇ ಸರಿ.

ಸ್ವತಂತ್ರ ಅಭ್ಯರ್ಥಿಯಾಗಿ ಚುನಾಯಿತರಾಗಿದ್ದ ಅವಧಿಯಲ್ಲಿ ನಾಗರತ್ನಮ್ಮನವರಿಗೆ ಯಾವುದೇ ರಾಜಕೀಯ ಪಕ್ಷದ ಶಾಸಕರಂತೆ ಇತಿಮಿತಿಗಳಿರಲಿಲ್ಲ. ಈ ಅವಕಾಶವನ್ನು ಚೆನ್ನಾಗಿಯೇ ಉಪಯೋಗಿಸಿಕೊಂಡ ಅವರು ಶಾಸನ ಸಭೆಯ ಒಳಗೆ ಹೊರಗೆ ಗುಂಡ್ಲುಪೇಟೆ ಕ್ಷೇತ್ರದ ಶಾಶ್ವತ ಅಭಿವೃದ್ಧಿಗಾಗಿ ಹೋರಾಡಿದರು. ವಿಧಾನಸಭೆಯಲ್ಲಿ ಆಯವ್ಯಯ, ಮಸೂದೆಗಳ ಮೇಲಿನಿಂದ ಒಡಿದು, ಅನೇಕ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

1960ರ ದಶಕದಲ್ಲಿ ಅವರು ಕಾಂಗ್ರೆಸ್ ನಾಯಕರ ಒತ್ತಾಯದ ಮೇರೆಗೆ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, ಕಾಂಗ್ರೆಸ್ ಪಕ್ಷದಲ್ಲಿಯೇ ಇದ್ದರು. ಯಾವ ಕಾರಣಕ್ಕೂ ಪಕ್ಷಾಂತರ ಮಾಡಲಿಲ್ಲ. ಕಾಂಗ್ರೆಸ್ ಪಕ್ಷ ಸೇರಿದ್ದರೂ ಕೂಡಾ ಅವರು ಕಾಂಗ್ರೆಸ್ ಸರ್ಕಾರದ ತಪ್ಪು ನಡೆಗಳ ವಿರುದ್ಧವಾಗಿ ನಿರ್ಭೀತಿಯಿಂದ ಮಾತನಾಡುತ್ತಿದ್ದರು. ಕಾಂಗ್ರೆಸ್ ಪಕ್ಷದ ಅಂದಿನ ಮಂತ್ರಿಗಳು, ನಾಯಕರನ್ನು ಖಂಡಿಸುತ್ತಿದ್ದರು. ವಿಧಾನ ಸಭಾ ಅಧಿವೇಶನಗಳಲ್ಲಿ ತಪ್ಪದೇ ಭಾಗವಹಿಸಿ ಮಾತನಾಡುತ್ತಾ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದರು. 30–40 ವರ್ಷಗಳ ರಾಜಕೀಯ ಜೀವನದಲ್ಲಿ ಅವರು ವಿಧಾನಸಭಾ ಸದಸ್ಯರಾಗಿ, ವಿಧಾನಸಭಾ ಅಧ್ಯಕ್ಷರಾಗಿ, ವಿಧಾನಸಭೆಯ ವಿರೋಧಪಕ್ಷದ ನಾಯಕಿಯಾಗಿ, ಆರೋಗ್ಯ ಮತ್ತು ಕುಟುಂಬಕಲ್ಯಾಣ ಮಂತ್ರಿಗಳಾಗಿ ಸೇವೆ ಸಲ್ಲಿಸಿದರು. ಈ ವಿಶಾಲವಾದ ಹರಹಿನ ಸಂಸದೀಯ ಜೀವನದ ಅವಧಿಯಲ್ಲಿ ಅವರು ವಿಧಾನಸಭೆಯಲ್ಲಿ ಪ್ರಸ್ತಾಪಿಸಿರತಕ್ಕ ಎಲ್ಲ ವಿಷಯಗಳನ್ನು, ಅವರು ಮಾಡಿರತಕ್ಕ ಎಲ್ಲ ಭಾಷಣಗಳನ್ನು ಇಸವಿಯ ಪ್ರಕಾರ ಒಂದು ಲೇಖನದಲ್ಲಿ ಹೇಳುವುದು ಕಷ್ಟ. ಅವರು ಪ್ರಸ್ತಾಪಿಸಿರತಕ್ಕ ಬಹಳ ಮುಖ್ಯವಾದ ವಿಚಾರಗಳನ್ನು ವಿಷಯವಾರು ಉಲ್ಲೇಖಿಸಬಹುದು.

ನೀರಾವರಿ

ಸುಮಾರು 10ಲಕ್ಷ ರೂ. ವೆಚ್ಚದಲ್ಲಿ ಸರ್ಕಾರ ನಿರ್ಮಿಸಲು ಹೊರಟಿದ್ದ ಆಲಹಳ್ಳಿ ಅಣೆಕಟ್ಟಿನಿಂದ ಬೇಗೂರು ಮತ್ತು ಆಲಹಳ್ಳಿಗಳಲ್ಲಿ 4000 ಕುಟುಂಬಗಳಿವೆ. ಆದರೆ ಈ ಅಣೆಕಟ್ಟಿನಿಂದ ಕೇವಲ 40 ಕುಟುಂಬಗಳಿಗೆ ಅನುಕೂಲವಾಗುತ್ತದೆ 400 ಎಕರೆ ಮುಳುಗಡೆ ಆಗುತ್ತದೆ. ಅದು ಕಾರ್ಯ ಸಾಧ್ಯವಲ್ಲ ಎಂಬ ತಾಂತ್ರಿಕ ವರದಿ ಇದ್ದರೂ ಅದನ್ನು ಕಡೆಗಣಿಸಿ ಸರ್ಕಾರ ಅಣೆಕಟ್ಟೆಯನ್ನು ಕಟ್ಟಿಸುವುದಕ್ಕೆ ಹೊರಟಿದೆ. ಅಣೆಗಟ್ಟಿಗೆ ನೀರು ಸಾಕಾಗುವುದಿಲ್ಲ ಎಂದು ಎಷ್ಟೋ ವರ್ಷಗಳ ಹಿಂದೆ ಮಂಜೂರಾಗಿದ್ದ ಪಿಕ್‌ಅಪ್‌ಗಳನ್ನು ರದ್ದುಪಡಿಸಿದ್ದಾರೆ. ಸಾಗುವಳಿ ಆಗುತ್ತಿದ್ದರೂ ನಿಂತು ಹೋಗುತ್ತದೆ. ಅವರ ಹೊಟ್ಟೆಗೆ ಬೆಂಕಿ ಇಟ್ಟು ಇವರ ಸಂಬಂಧಿಕರು ಕಂಠಪೂರ್ತಿ ಊಟಮಾಡಿದರೆ ಸಾಕು ಎಂದು ಹೇಳುತ್ತಿದ್ದಾರೆ ಎಂದು ಬಲವಾಗಿ ಖಂಡಿಸಿದರು. ಬಡಗಕಟ್ಟೆ, ಕೊಳಕಟ್ಟೆ, ಜೊಸಹಳ್ಳಿಯಲ್ಲಿ ಪಿಕ್‌ಅಪ್‌ಗಳನ್ನು ಕೆರೆಗಳನ್ನು ಕಟ್ಟುವುದಕ್ಕೆ ಇನ್‌ವೆಸ್ಟಿಗೇಷನ್ ಆಗಿಲ್ಲ ಎಂದು ಹೇಳಿದರು. ಮೂರು ನಾಲ್ಕು ಜನರಿಗೆ ಅನುಕೂಲ ಆಗುತ್ತದೆಂದು ಈ ಕೆಲಸ ನಿಲ್ಲಿಸುವುದು ಸರಿಯಲ್ಲವೆಂದು ಹೇಳಿದರು.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅಭಿವೃದ್ಧಿ ಕಾರ್ಯಗಳು ಹೆಚ್ಚಾಗಿ ಆಗುತ್ತಿಲ್ಲ. ತಾಲ್ಲೂಕಿಗೆ ಯಾವ ಮಂತ್ರಿಗಳು, ಅಧಿಕಾರಿಗಳು ಬರುವುದಿಲ್ಲ. ಯಾವ ಯೋಜನೆಯನ್ನೂ ತೆಗೆದುಕೊಳ್ಳುತ್ತಿಲ್ಲ. ಪಕ್ಷದ ಕ್ಷೇತ್ರದ ಸದಸ್ಯರಾದ ರಾಚಯ್ಯನವರು ನೀರಾವರಿ ಇಲ್ಲದಿರುವ ಗುಂಡ್ಲು ಪೇಟೆ ಕ್ಷೇತ್ರದಲ್ಲಿ ಯಾವುದೇ ಕೆರೆ ನಿರ್ಮಾಣ ಮುಂತಾದ ನೀರಾವರಿ ಯೋಜನೆಗಳಾದರೆ ಅದಕ್ಕೆ ತಡೆ ಮಾಡುತ್ತಿದ್ದಾರೆ.

ನುಗು ಜಲಾಶಯವನ್ನು ಕಬಿನಿ ಜಲಾಶಯದಿಂದ ಬೇರ್ಪಡಿಸುವ ಯತ್ನವನ್ನು ಅವರು ಖಂಡಿಸಿದರು. ಕಬಿನಿ ಜಲಾಶಯದಿಂದ ಫೀಡರ್ ಚಾನಲ್‌ನ್ನು ನುಗು ಜಲಾಶಯಕ್ಕೆ ತಂದು ಕುಡಿಯುವ ನೀರಿಗೆ ಹಾಗೂ ಸುಮಾರ 20 ಸಾವಿರ ಎಕರೆ ನೀರಾವರಿಗೆ ಅನುಕೂಲ ಮಾಡಿ ಕೊಡಬೇಕೆಂದು ಅವರು ಹೇಳಿದರು. ಹೆಬ್ಬಳ್ಳ ಯೋಜನೆಯನ್ನು ತೆಗೆದುಕೊಂಡು ಅದನ್ನು ಗುಂಡಾಲ್ ಯೋಜನೆಗೆ ಲಿಂಕ್ ಮಾಡಿದರೆ, ಅದರಿಂದ ಗುಂಡ್ಲುಪೇಟೆಯ ಜನರಿಗೆ ಕುಡಿಯುವ ನೀರಿಗೆ ಅನುಕೂಲವಾಗುತ್ತದೆಂದು ಪ್ರತಿಪಾದಿಸಿದರು.

ಕಮರಹಳ್ಳಿ ಯೋಜನೆಯನ್ನು ತೆಗೆದುಕೊಂಡಿರುವುದರಿಂದ ಗುಂಡ್ಲುಪೇಟೆ ತಾಲ್ಲೂಕಿನವರ ಸಾವಿರಾರು ಎಕರೆ ಜಮೀನು ಮುಳುಗಡೆಯಾಗಿದೆ, ಅವರಿಗೆ ಕೂಡಲೇ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು. ಸಣ್ಣ ಕಾರುಗಳ ನಿರ್ಮಾಣ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ಸ್ಥಾಪನೆ ಮಾಡುವಂತೆ ಕೇಂದ್ರ ಸರ್ಕಾರದ ಮೇಲೆ

ಒತ್ತಾಯ ಮಾಡಬೇಕು. ಇದರಿಂದ ನಮ್ಮ ರಾಜ್ಯದವರಿಗೂ ಕೆಲಸ ಸಿಗುತ್ತದೆ. ಸರ್ಕಾರಕ್ಕೂ ತೆರಿಗೆ ಬರುತ್ತದೆ. ಮುಂದಿನ ಪೀಳಿಗೆ ನಮ್ಮನ್ನು ಅಭಿನಂದಿಸುತ್ತದೆ. ಕೈಗಾರಿಕಾ ಇಲಾಖೆಯಲ್ಲಿರುವ ಕೆಲವು ಅಧಿಕಾರಿಗಳು ಇದಕ್ಕೆ ಅಡ್ಡಗಾಲು ಹಾಕುತ್ತಿದ್ದು ಅವರನ್ನು ಬದಲಾಯಿಸಿದರೆ ಈ ಕೆಲಸ ಜಾಗ್ರತೆಯಾಗಿ ಆಗುತ್ತದೆ ಎಂದು ಸರ್ಕಾರವನ್ನು ಒತ್ತಾಯಿಸಿದರು.

ನಲ್ಲೂರು ಅಮಾನಿಕೆರೆ ನಿರ್ಮಾಣಕ್ಕೆ ಎರಡು ಸಲ ಸರ್ವೆ ಆಗಿದ್ದರೂ ರಿಇನ್‌ವೆಸ್ಟಿಗೇಷನ್‌ಗೆ ಹಾಕಿ ಸರ್ಕಾರದ ಹಣ ಪೋಲು ಮಾಡುತ್ತಿದೆ ಎಂದರು. ಬಡಗಕಟ್ಟೆ ಪಿಕ್‌ಅಪ್ ಯೋಜನೆಯಿಂದ ಮೂರು ನಾಲ್ಕು ಜನರಿಗೆ ಅನಾನುಕೂಲವಾಗುತ್ತದೆ ಎಂದು, ಈ ಕೆಲಸವನ್ನು ನಿಲ್ಲಿಸುವುದು ಸರಿಯಲ್ಲವೆಂದು ನೀರಾವರಿ ಇಲಾಖೆಯ ದಕ್ಷ ಇಂಜಿನಿಯರ್ ಅವರು ವರದಿ ಕೊಟ್ಟಿದ್ದರೂ ಆ ಕೆಲಸವನ್ನು ನಿಲ್ಲಿಸಿದ್ದಾರೆ ಎಂದು ಹೇಳಿದರು.

ಗುಂಡ್ಲುಪೇಟೆ ತಾಲ್ಲೂಕು ಮೂಲೆಹೊಳೆ ಪ್ರಾಜೆಕ್ಟ್ ಬಹಳ ವರ್ಷಗಳಿಂದ ನಿಂತುಹೋಗಿದೆ. ಇದನ್ನು ಬೇಗ ಮಾಡಿಸಬೇಕೆಂದು ನಾನು ಪತ್ರಬರೆದು ಒತ್ತಾಯ ಮಾಡಿದ ಮೇಲೆ ಮುಖ್ಯಮಂತ್ರಿಗಳು ಆ ಸ್ಥಳಕ್ಕೆ ಇಂಜಿಯರ್‌ರವರನ್ನು ಕಳುಹಿಸುತ್ತಿದ್ಧಾರೆಂದು ತಿಳಿದುಬಂದಿದೆ. ನಮ್ಮ ಭಾಗದ ಕಡೆಗೆ ಇಷ್ಟು ಬೇಗ ಸರ್ಕಾರಿ ಕೆಲಸ ಆಗಬೇಕಾದರೆ ಕನಸು ಕಂಡಂತೆ ನಮ್ಮ ತಾಲ್ಲೂಕಿಗೆ ಒಳ್ಳೆಯ ಭವಿಷ್ಯ ಇದೆ. ಈ ಯೋಜನೆ ಕಾರ್ಯಗತವಾದರೆ ಸುಮಾರು 25–30 ಸಾವಿರ ಎಕರೆಗೆ ನೀರಾವರಿ ಸೌಕರ್ಯ ಒದಗುತ್ತದೆ. ಮುಖ್ಯಮಂತ್ರಿಗಳು ಇನ್ನು ಮುಂದೆ ಜಾಗರೂಕತೆ ವಹಿಸಿ ಇದನ್ನು ನೋಡಿಕೊಳ್ಳಬೇಕಂದು ಹೇಳುತ್ತೇನೆ ಎಂದು ಹೇಳಿದರು.

ಸಾರಿಗೆ ಸೌಕರ್ಯ

ಸಾರಿಗೆ ಸಂಸ್ಥೆಯವರು ಬಸ್ ದರಗಳನ್ನು ಹೆಚ್ಚು ಮಾಡಿದ್ದಾರೆ. ದರಗಳನ್ನು ಜಾಸ್ತಿ ಮಾಡಿ ಜನಗಳಿಗೆ ತೊಂದರೆ ಮಾಡುವುದು ಬಹಳ ಅನ್ಯಾಯ. ಅನುಕೂಲಸ್ಥರು, ಮಂತ್ರಿಗಳು ಅವರ ಕುಟುಂಬದವರು ಫಸ್ಟ್ ಕ್ಲಾಸ್‌ನಲ್ಲೋ, ಕಾರ್‌ಗಳಲ್ಲೋ ಸಂಚಾರ ಮಾಡುತ್ತಾರೆ. ಸಾಮಾನ್ಯ ಜನರು ಬಸ್‌ಗಳಲ್ಲಿ ಪ್ರಯಾಣ ಮಾಡಲೇಬೇಕು, ಹೆಚ್ಚು ದುಡ್ಡು ಕೊಡಲೇಬೇಕು. ಬೇಗೂರಿನಿಂದ ಗುಂಡ್ಲುಪೇಟೆಗೆ ಬರಬೇಕಾದರೆ 50 ಪೈಸೆ ಜಾಸ್ತಿ ಕೊಡಬೇಕು. ಬಡವರಿಗೆ 50 ಪೈಸೆ ಎಂದರೆ ಒಂದು ಹೊತ್ತಿಗೆ ಅನ್ನ ಆಗುತ್ತದೆ. ಕೆಲವು ಗ್ರಾಮಗಳು ಒಂದು ದ್ವೀಪದ ಹಾಗೆ ಆಗಿವೆ. ಅಲ್ಲಿಗೆ ಹೋಗಲು ರಸ್ತೆಗಳಿಲ್ಲ. ಅಂತಹ ಕಡೆ ರಸ್ತೆಗಳನ್ನು ಮಾಡಲು ತಾಲ್ಲೂಕ್ ಬೋರ್ಡ್‌ಗೆ ಕೊಟ್ಟರೆ ಆಗುವುದಿಲ್ಲ. ಲೋಕೋಪಯೋಗಿ ಇಲಾಖೆಯವರೇ ಮಾಡಬೇಕು. ಆದರೆ ಅವರು ದುಡ್ಡಿಲ್ಲ ಎನ್ನುತ್ತಾರೆ. ನನ್ನ ತಾಲ್ಲೂಕಿಗೆ ಮಾತ್ರ ದುಡ್ಡಿಲ್ಲವೋ ರಸ್ತೆಗಳು ಕೆಟ್ಟು ಹೋದರೆ ಬಸ್‌ಗಳು ಹೇಗೆ ಓಡಾಡಬೇಕು. ಗುಂಡ್ಲುಪೇಟೆಯಿಂದ ತೆರಕಣಾಂಬಿ ಸಂತೆಗೆ ಹೋಗುವುದಕ್ಕೆ ಸರಿಯಾದ ರಸ್ತೆ ಸೌಕರ್ಯ ಇಲ್ಲ. ಗ್ರಾಮೀಣ ಪ್ರದೇಶದ ಕಡೆ ಬಸ್‌ಗಳ ಸಂಖ್ಯೆ ಜಾಸ್ತಿ ಇಲ್ಲದೆ ಜನರು ಅದರಲ್ಲೂ ಹೆಣ್ಣುಮಕ್ಕಳು ಕುಳಿತುಕೊಂಡು ಹೋಗುವುದಕ್ಕೂ ಜಾಗವಿಲ್ಲದೆ ತೊಂದರೆಗೆ ಒಳಗಾಗಿದ್ದಾರೆ ಎಂದು ಬಸ್‌ನಲ್ಲಿ ಪ್ರಯಾಣ ಮಾಡುವಾಗ ನಡೆದ ಒಂದು ಘಟನೆಯನ್ನು ವಿವರಿಸಿದ್ದಾರೆ.

ಹರಿಜನ–ಗಿರಿಜನರಿಗೆ ವಸತಿ ಅನುಕೂಲ

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಹಂಗಳದ ಬಳಿ ಸ್ಯಾಂಡಲ್ ರಿಸರ್ವ್ ಎಂದು ಸಾವಿರಾರು ಎಕರೆ ಕಾಡಿದೆ. ಅಲ್ಲಿ ಕೇವಲ 50 ಮರ ಇದೆ. 300 ಹರಿಜನರ ಸಂಸಾರ, 200 ಪರಿವಾರದವರ ಸಂಸಾರ ಇರುವುದಕ್ಕೆ ಜಾಗ ಇಲ್ಲದೆ ಒದ್ದಾಡುತ್ತಿದ್ದಾರೆ. ದಯವಿಟ್ಟು ಈ ಜಾಗವನ್ನು ಅವರಿಗೆ ರಿಲೀಸ್ ಮಾಡಿ ಅವರಿಗೆ ಅಲ್ಲಿ ಒಂದು ಕಾಲೋನಿಯನ್ನು ನಿರ್ಮಿಸಿ ಎಲ್ಲ ಅನುಕೂಲಗಳನ್ನು ಒದಗಿಸಿಕೊಡುವಂತೆ ಒತ್ತಾಯಿಸಿದರು. (1960)

ಮೈಸೂರು ನಗರಾಭಿವೃದ್ಧಿ ಬಗ್ಗೆ

ಮೈಸೂರಿನ ವಾಣಿ ವಿಲಾಸ ಮೊಹಲ್ಲಾ ಬಡಾವಣೆ 1930ರಲ್ಲಿ ಟಿ.ಜಿ.ರಾಮ ಅಯ್ಯರ್ ಕಾಲದಲ್ಲಿ ಆಯಿತು. ಅಲ್ಲಿಗೆ ಇನ್ನೂ (1960) ಅಂಡರ್‌ಗ್ರೌಂಡ್ ಡ್ರೈನೇಜ್ ಬಂದಿಲ್ಲ. ಅದು ಇನ್ನೂ ಎಸ್ಟಿಮೇಟ್ ಸ್ಟೇಜ್‌ನಲ್ಲಿದೆ. 1945-46 ರಲ್ಲಿ ಜಯಲಕ್ಷ್ಮಿಪುರ ಎಕ್ಸ್‌ಟೆನ್‌ಷನ್ ಆಯಿತು. ಅಲ್ಲಿ ನಿವೇಶನಗಳನ್ನು ದುಬಾರಿ ಬೆಲೆಗೆ ಹರಾಜು ಮಾಡಿದ್ದಾರೆ. ಅಲ್ಲಿಗೆ ಇನ್ನೂ ನೀರಿನ ಸೌಕರ್ಯ ಬಂದಿಲ್ಲ. ನೀರಿನ ಪೈಪ್ ಎಳೆಯಲು ಟ್ರಸ್ಟ್ ಬೋರ್ಡ್‌ನವರು ಜಾಗವನ್ನೇ ಬಿಟ್ಟುಕೊಂಡಿಲ್ಲ ಎಂದು ಹೇಳಿದರು. ಸರ್ಕಾರದವರು ನೀರು ಸರಬರಾಜು ಯೋಜನೆಗೆ ಸಾಲ ಕೊಡುತ್ತಾರಂತೆ. ಮೈಸೂರು ಮುನಿಸಿಪಾಲಿಟಿಯವರು ಈ ಸಾಲ ತೆಗೆದುಕೊಂಡು ನೀರು ಸರಬರಾಜು ವ್ಯವಸ್ಥೆ ಮಾಡುವಂತೆ ಒತ್ತಾಯಿಸಿದರು. (1960)

ಶಿಕ್ಷಣ

ಮೈಸೂರು ಮಹಾರಾಣೀಸ್ ಕಾಲೇಜು ಮತ್ತು ವಾಣಿವಿಲಾಸ್ ಕಾಲೇಜಿನಲ್ಲಿ ಎಷ್ಟೋ ಕೆಲಸಗಳಾಗಬೇಕು ಮೈಸೂರಿನಲ್ಲಿರುವ ಕಾಲೇಜಿನ ಮಕ್ಕಳಿಗೆ ಕೂಡಲು ಜಾಗವಿಲ್ಲದೆ ಕಷ್ಟವಾಗಿದೆ. ಹೋಮ್‌ಸೈನ್ಸ್ ಓದಬೇಕಾದರೆ ಬೆಂಗಳೂರಿಗೆ ಬರಬೇಕು. ಸೈನ್ಸ್ ಓದಬೇಕಾದರೆ ಮಹಾರಾಜಾಸ್ ಕಾಲೇಜಿಗೆ ಹೋಗಬೇಕು. ದಯಮಾಡಿ ಈ ಕಾಲೇಜಿಗೆ ಸರಿಯಾದ ಕಟ್ಟಡ ಕಟ್ಟಿಸಿಕೊಡಿ. ಐದಾರು ವರ್ಷದಿಂದ ಹೇಳುತ್ತಿದ್ದರೂ ಈ ಬಗ್ಗೆ ಏನೂ ಕೆಲಸ ಆಗಿಲ್ಲ. ಹೆಣ್ಣುಮಕ್ಕಳಿಗೆ ಸರಿಯಾಗಿ ಗೌರವ ಕೊಡುತ್ತಿಲ್ಲ. (1960)

ಕಾಲೇಜ್ ಟೀಚರ್ ಆಗಿದ್ದ ಹೆಣ್ಣುಮಗಳೊಬ್ಬಳು ಧಾರವಾಡ, ಬಿಜಾಪುರ ಕಡೆ 15-20ವರ್ಷ ಕೆಲಸ ಮಾಡಿ ತಮ್ಮ ಊರಾದ ಮೈಸೂರಿಗೆ ಬಂದರು. ಈಗ ಪುನಃ ಅವರನ್ನು ಆ ಕಡೆಗೆ ವರ್ಗ ಮಾಡಿದ್ದಾರೆ. ಕೇಳಿದರೆ ನೀವು ಇಪ್ಪತ್ತು ವರ್ಷ ಆ ಕಡೆ ಇದ್ದು ಚೆನ್ನಾಗಿ ಕೆಲಸ ಮಾಡಿದ್ದೀರಿ, ಅಲ್ಲಿ ನಿಮ್ಮ ತರಹ ಚೆನ್ನಾಗಿ ಕೆಲಸ ಮಾಡುವ ಹೆಣ್ಣು ಮಕ್ಕಳು ಇಲ್ಲ. ನೀವೆ ಹೋಗಿ ಎಂದು ಇವರಿಗೇ ಒತ್ತಾಯ ಮಾಡುತ್ತಿದ್ದಾರೆ. ಒಬ್ಬೊಬ್ಬರಿಗೆ ಒಂದೊಂದು ಕಾನೂನು ಆಗಿದೆ. (1963)

ಹಿಂದಿ ವಿದ್ವಾನ್‌ಗಳು ಹಿಂದಿನಲ್ಲಿ ಎಂ.ಎ.ಗೆ ಸಮಾನವಾಗಿರುವ ಪರೀಕ್ಷೆ ಪಾಸು ಮಾಡಿದ್ದಾರೆ. ಅವರಿಗೆ ಸರ್ಕಾರದಿಂದ ಟ್ರೈನಿಂಗ್ ಕೊಟ್ಟಿದ್ದಾರೆ. ಅವರ ಬಗ್ಗೆ ಹೇಳುವವರು ಕೇಳುವವರು ಯಾರೂ ಇಲ್ಲ. ಟ್ರೈನಿಂಗ್ ಆಗಿರುವವರನ್ನು ಕೆಲಸಕ್ಕೆ ತೆಗೆದುಕೊಂಡು ಅವರ ಜೀವನಕ್ಕೆ ಅನುಕೂಲ ಮಾಡಿಕೊಡಿ. (1963)

ಅಗ್ರಿಕಲ್ಚರಲ್ ಕಾಲೇಜುಗಳಲ್ಲಿ ಹಳ್ಳಿಯ ಮಕ್ಕಳಿಗೆ, ರೈತರ ಮಕ್ಕಳಿಗೆ ಹೆಚ್ಚಿನ ಸೀಟುಗಳನ್ನು ಮೀಸಲಿಡಬೇಕೆಂದು ಹೇಳಿದರು. (1967) ಗ್ರಾಮೀಣ ಪ್ರದೇಶದಲ್ಲಿ ಐಟಿಐ, ಪಾಲಿಟೆಕ್ನಿಕ್‌ಗಳನ್ನು ಸ್ಥಾಪಿಸಬೇಕೆಂದು ಒತ್ತಾಯಿಸುತ್ತಿದ್ದರು.

ಆರೋಗ್ಯ ಇಲಾಖೆ ಮತ್ತು ವೈದ್ಯರು

ವೈದ್ಯವೃತ್ತಿ ವ್ಯಾಪಾರೋದ್ಯಮವಾಗಿದೆ. ಮೆಡಿಕಲ್ ಕಾಲೇಜಿನ ಒಬ್ಬ ವಿದ್ಯಾರ್ಥಿ ಫೀಸ್ ಕೊಡುವುದು ವರ್ಷಕ್ಕೆ 720 ರೂಪಾಯಿ. ಸರ್ಕಾರದವರು ಒಬ್ಬ ವಿದ್ಯಾರ್ಥಿಗೆ ವರ್ಷಕ್ಕೆ 3500 ರೂಪಾಯಿ ಖರ್ಚು ಮಾಡುತ್ತಾರೆ. ಒಬ್ಬ ಹುಡುಗ ಆಸ್ಪತ್ರೆಯಲ್ಲಿ ಡಾಕ್ಟರ್ ಆಗುವುದಕ್ಕೆ ಸರ್ಕಾರದವರು 20,000 ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಆಮೇಲೆ ಅವನನ್ನು ಸ್ಪೆಷಲಿಸ್ಟ್ ಮಾಡುವುದಕ್ಕೆ ಫಾರಿನ್‌ಗೆ ಕಳುಹಿಸುತ್ತಾರೆ. ಇದೆಲ್ಲವೂ ಬಡ ಬೋರೇಗೌಡನ ದುಡ್ಡು. ಡಾಕ್ಟರ್ ಆಗಿ, ಸ್ಪೆಷಲಿಸ್ಟ್ ಆಗಿ ಬರುವವರು ನಾವು ಪ್ರಿವಿಲೇಜ್ಡ್ ಕ್ಲಾಸ್ ಎಂದು ತಿಳಿದುಕೊಂಡು ಬರುತ್ತಾರೆ. ಯಾವ ಆಸ್ಪತ್ರೆಗೆ ಹೋದರೂ ಎಲ್ಲರೂ ದುಡ್ಡು ಕೇಳುತ್ತಿದ್ದಾರೆ. ಯಾರಿಗೆ ಎಷ್ಟು ಸಂಬಳವನ್ನು ಕೊಟ್ಟರೂ ಸಾಕಾಗುವುದಿಲ್ಲ. ಇದಕ್ಕೆ ಏನು ಕಾರಣವೂ ನನಗೆ ಗೊತ್ತಾಗುತ್ತಿಲ್ಲ. ನಾವು ಕೇವಲ ಡಾಕ್ಟರ್‌ಗಳನ್ನು ಮತ್ತು ಇತರ ನೌಕರರುಗಳನ್ನು ಬ್ಲೇಮ್ ಮಾಡಿದರೆ ಅದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಈ ರೀತಿ ನಡೆಯುವುದಕ್ಕೆ ಸರ್ಕಾರವ್ದೂ

ಕಾರಣ ಇದೆ. ಇದಕ್ಕೆ ಕಾರಣ ಸರ್ಕಾರದ ಅಡ್ಮಿನಿಸ್ಟ್ರೇಟೀವ್ ಸ್ಲ್ಯಾಕ್‌ನೆಸ್. ಅಸೋಸಿಯೇಟೆಡ್ ಪ್ರೊಫೆಸರ್ಸ್, ಟೀಚಿಂಗ್ ಇನ್‌ಸ್ಟಿಟ್ಯೂಷನ್ಸ್‌ನಲ್ಲಿರುವವರು ಪ್ರೈವೇಟ್ ಪ್ರಾಕ್ಟೀಸ್ ಮಾಡಬಾರದೆಂದು ಸರ್ಕಾರದ ಆದೇಶ ಇದೆ. ಆದರೆ ಅವರು ಆಸ್ಪತ್ರೆಗೆ ಬಂದ ರೋಗಿಗಳನ್ನು ಸರಿಯಾಗಿ ನೋಡುವುದಿಲ್ಲ. ಅವರನ್ನು ಆಸ್ಪತ್ರೆಯಲ್ಲಿ ನೆಗ್ಲೆಕ್ಟ್ ಮಾಡಿ ಅವರನ್ನು ಮನೆಗೆ ಬರುವ ಹಾಗೆ ಮಾಡಿಕೊಂಡು ಮನೆಯಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸರಿಯಾದ ಚಿಕಿತ್ಸೆ ದೊರೆಯುವುದಿಲ್ಲ ಅವರು ಪ್ರೈವೇಟ್ ಪ್ರಾಕ್ಟೀಸ್ ಮಾಡಬಾರದೆಂದು ಸರ್ಕಾರದವರು ಹೇಳಬೇಕು. (1964). 1975ರಲ್ಲಿ ಕಬ್ಬಳ್ಳಿಯಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆಯಾಗಲು ಕಾರಣಕರ್ತರಾದರು. ಈ ಆರೋಗ್ಯ ಕೇಂದ್ರವನ್ನು ಭಾರತದ ಉಪರಾಷ್ಟ್ರಪತಿಗಳಾಗಿದ್ದ ಬಿ.ಡಿ ಜತ್ತಿಯವರು ಉದ್ಘಾಟಿಸಿದರು. ಹಾಗೂ ಈ ಆರೋಗ್ಯ ಕೇಂದ್ರಕ್ಕೆ 1985ರಲ್ಲಿ ಅವರ ಪತಿ ಕೆ.ಸಿ. ಸುಬ್ಬಣ್ಣನವರ ಹೆಸರನ್ನು ಇಡಲಾಯಿತು.

ಕೈಗಾರಿಕೆಗಳು, ಉದ್ಯೋಗ

ನಮ್ಮ ರಾಜ್ಯದಲ್ಲಿ ಅಲ್ಯೂಮಿನಿಯಂ ಮತ್ತು ಸ್ಟೀಲ್ ಪ್ಲಾಂಟ್‌ಗಳ ಸ್ಥಾಪನೆಯ ವಿಚಾರ ಎಲ್ಲಿಗೆ ಬಂದಿದೆ. ಸ್ಟೀಲ್ ಪ್ಲಾಂಟ್‌ನ್ನು ಗೋವಾದಲ್ಲೋ ಹೊಸಪೇಟೆಯಲ್ಲೋ ಸ್ಥಾಪಿಸಲಾಗುತ್ತದೆ ಎಂಬ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಎಂದ ಹಾಗೆ ಎಲ್ಲಿ ಇದು ಗೋವಾಕ್ಕೆ ಹೋಗಿಬಿಡುತ್ತದೋ ಎಂಬ ಶಂಕೆ ನನಗೆ ಬಂದಿದೆ. ಅದು ಗೋವಾಕ್ಕೆ ಹೋದರೆ ನಮ್ಮ ಶರಾವತಿಯಲ್ಲಿ ತಯಾರಾಗುವ ಪವರ್‌ನ್ನು ನಾವು ಏನು ಮಾಡಬೇಕು. ಹೊಸಪೇಟೆಯಲ್ಲಿ ಹಾಕಿದರೆ ಹೊಸಪೇಟೆಯಿಂದ ಮದ್ರಾಸ್‌ಗೆ ಬ್ರಾಡ್‌ಗೇಜ್ ರೈಲ್ವೆ ಲೈನ್ ಕೇಳುವುದಕ್ಕೆ ಅನುಕೂಲವಾಗುತ್ತದೆ.

ರೇಷ್ಮೆ ವಿಚಾರದಲ್ಲಿ ಪ್ರೈವೇಟ್ ಗ್ರೋಯರ್ಸ್‌ಗೆ ಒಳ್ಳೆಯ ಬಿತ್ತನೆಯ ಗೂಡುಗಳನ್ನು ಒದಗಿಸಬೇಕೆಂಬುದು ಮತ್ತು ಈ ಉದ್ಯಮವನ್ನು ನ್ಯಾಷನಲೈಸ್ ಮಾಡಬೇಕೆಂಬುದು ನನ್ನ ಅಭಿಪ್ರಾಯ. ಯಾರು ರೇಷ್ಮೆಯನ್ನು ಬೆಳೆಸುತ್ತಾರೋ ಅಂಥವರಿಗೆಲ್ಲಾ ಒಳ್ಳೆಯ ಗೂಡುಗಳು ಸಿಗುವಂತೆ ಮಾಡಬೇಕೆಂಬುದು ನನ್ನ ಉದ್ದೇಶ.

ಚಾಕಿ ಸೆಂಟರ್‌ಗಳನ್ನು ಮಾಡೆಲ್ ಚಾಕಿ ಸೆಂಟರ್‌ಗಳನ್ನಾಗಿ ಮಾಡಿ ಅಲ್ಲಿ ಒಂದೇ ತರಹದ ಚಂದ್ರಿಕೆ, ತಟ್ಟೆ, ಸೊಪ್ಪು ಎಲ್ಲವೂ ಒಂದೇ ರೀತಿ ಇರುವಂತೆ ಮಾಡಿ, ಮಾಡೆಲ್ ಆಗಿ ರೇಷ್ಮೆಯನ್ನು ತಯಾರಿಸತಕ್ಕ ವಿಧಾನವನ್ನು ಜಾರಿಗೆ ತರಬೇಕು. ಚರಕಗಳನ್ನು ರಿಪ್ಲೇಸ್ ಮಾಡಿ ಬೇಸನ್‌ಗಳನ್ನು ಕೊಡಬೇಕು. ಈ ಬದಲಾವಣೆಗಳನ್ನು ಮಾಡದೇ ಹೋದರೆ ಈ ದಿವಸ ನಾವು ಒಳ್ಳೆಯ ರೇಷ್ಮೆ ದಾರವನ್ನು ಚೆನ್ನಾಗಿ ತೆಗೆಯುತ್ತೇವೆಂದು ಹೇಳಿಕೊಳ್ಳುತ್ತಿದ್ದರೂ, ಮುಂದೆ ಇದರಿಂದ ನಮ್ಮ ದೇಶಕ್ಕೆ ಕೆಟ್ಟ ಹೆಸರು ಬರುತ್ತದೆ.

ರೇಷ್ಮೆಯನ್ನು ಕೊಂಡುಕೊಳ್ಳತಕ್ಕಂತಹ 4–5 ಜನರ ರಿಂಗ್ ಇದೆ. ಅವರು ರೈತರಿಂದ ಕಡಿಮೆ ಬೆಳೆಗೆ ರೇಷ್ಮೆ ಖರೀದಿಸಿ ಬೇರೆ ಕಡೆಗೆ ತೆಗೆದುಕೊಂಡು ಹೋಗಿ ಹೆಚ್ಚಿನ ಬೆಲೆಗೆ ಮಾರುತ್ತಿದ್ದಾರೆ. ಅದನ್ನು ತಪ್ಪಿಸಬೇಕು. ಏಜೆಂಟರನ್ನು ನೇಮಿಸಿಕೊಳ್ಳುವುದನ್ನು ತಪ್ಪಿಸಬೇಕು.

ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಮೊದಲೇ ಹೇಳಿದ್ದರು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಗೃಹ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ನಮ್ಮ ತಾಲ್ಲೂಕಿನಲ್ಲಿ ಇರುವ ಗೋಪಾಲಸ್ವಾಮಿ ಬೆಟ್ಟದಲ್ಲಿ ಬೆಲೆಬಾಳತಕ್ಕಂತಹ ರತ್ನದ ಕಲ್ಲುಗಳು ಸಿಗುತ್ತವೆಂದು ಹೇಳುತ್ತಾರೆ. ಅದನ್ನೂ ಸಹ ನೋಡಿಸಿ ಅನುಕೂಲ ಮಾಡಿಕೊಡಬೇಕು. ಸರ್ಕಾರದವರಿಗೆ ಯಾವುದೂ ಸಾಧ್ಯವಾಗದೇ ಹೋದರೆ, ಮಣ್ಣಿನಿಂದ ಆಗತಕ್ಕ ಹೆಂಚು ಕಾರ್ಖಾನೆಗಳನ್ನಾದರೂ ಪ್ರಾರಂಭಿಸಬೇಕು.

ಪ್ರವಾಸೋದ್ಯಮ ಮತ್ತು ದೇವಾಲಯಗಳು

ನಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ದೇವಸ್ಥಾನಗಳಿವೆ. ಅಭಿವೃದ್ಧಿ ಸ್ಥಿತಿಗೆ ತರಬೇಕಾದಂತಹ ಕಟ್ಟಡಗಳು ದೇವಸ್ಥಾನಗಳೂ ಇವೆ. ಗೋಪಾಲಸ್ವಾಮಿ ಬೆಟ್ಟ ಬಹಳ ಸುಂದರವಾದ ಪ್ರದೇಶ. ಅಲ್ಲಿಯ ದೇವಸ್ಥಾನವನ್ನು ಉತ್ತಮ ಸ್ಥಿತಿಗೆ ತರಬೇಕು. ರವಿನ್ಯೂ ಮಂತ್ರಿಗಳನ್ನು ಕರೆದದ್ದಾಯಿತು, ಟೂರಿಸಂ ಮಿನಿಸ್ಟರ್‌ರವನ್ನು ಕರೆದದ್ದು ಆಯಿತು. ಯಾರೂ ಬಂದು ನೋಡುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿರುವ ದೇವಸ್ಥಾನಗಳು ಮತ್ತು ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿಪಡಿಸಬೇಕು. ತೆರಕಣಾಂಬಿ ದೇವಸ್ಥಾನದ ಅಭಿವೃದ್ಧಿಗೆ ಈ ವರ್ಷ ಮುಜರಾಯಿ ಇಲಾಖೆಯಿಂದ ಹಣ ಕೊಟ್ಟಿದ್ದಾರೆ. ಅದಕ್ಕಾಗಿ ನಿಜವಾಗಿಯೂ ನಾನು ಆಭಾರಿಯಾಗಿದ್ದೇನೆ. ಜಕಣಾಚಾರಿ ಕಾಲದಲ್ಲಿ ಕಟ್ಟಿದ ಅನೇಕ ದೇವಾಯಲಗಳಿವೆ ಇವಗಳನ್ನೆಲ್ಲಾ ರಿನೋವೇಟ್ ಮಾಡಬೇಕು.

ವಿಧಾನಸಭಾಧ್ಯಕ್ಷರಾಗಿ

ನಾಗರತ್ನಮ್ಮನವರು 1972ರಿಂದ 1978ರ ವರೆಗೆ ಕರ್ನಾಟಕ ವಿಧಾನಸಭೆಯ ಅಧ್ಯಕ್ಷರಾಗಿದ್ದರು. ನಮ್ಮ ದೇಶದ ರಾಜ್ಯದ ವಿಧಾನಸಭೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ನಾಗರತ್ನಮ್ಮನವರು ಮೊಟ್ಟ ಮೊದಲನೇ ಮಹಿಳಾ ಸ್ಪೀಕರ್ ಆಗಿದ್ದವರು. ಅವರು ಸಭಾಧ್ಯಕ್ಷರಾಗಿದ್ದಾಗ, ಬಹಳ ಶಿಸ್ತಿನಿಂದ ವಿಧಾನಸಭೆಯ ಕಲಾಪಗಳನ್ನು ನಡೆಸುತ್ತಿದ್ದರು. ಪ್ರಶ್ನೆಗಳ ಅವಧಿ ಒಂದು ಘಂಟೆ ಎಂದರೆ ಸರಿಯಾಗಿ ಒಂದು ಘಂಟೆಗೆ ಮುಗಿಸಿ ಮುಂದಿನ ವಿಷಯಗಳನ್ನು ತೆಗೆದುಕೊಳ್ಳುತ್ತಿದ್ದರು. ಮಸೂದೆಗಳ ಮೇಲೆ ಸದಸ್ಯರು ಮಾತನಾಡಲು ಹೆಚ್ಚಿನ ಅವಕಾಶ ಒದಗಿಸಿಕೊಡುತ್ತಿದ್ದರು. ಶಾಸನಗಳನ್ನು ಮಾಡುವುದೇ ಶಾಸನ ಸಭೆಗಳ ಮೊದಲ ಕರ್ತವ್ಯ ಎಂದು ಹೇಳುತ್ತಿದ್ದರು. ಅದುವರೆಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಒಂದು ಭಾಗವಾಗಿದ್ದ ವಿಧಾನ ಮಂಡಲವನ್ನು ಸ್ವತಂತ್ರ ಸಚಿವಾಲಯದ ಸ್ಥಾನಮಾನಕ್ಕೆ ತಂದರು. ಅನೇಕ ಹುದ್ದೆಗಳನ್ನು ಹೊಸದಾಗಿ ಮಂಜೂರು ಮಾಡಿಸಿಕೊಂಡು ಬಂದರು. ಇವರು ಸ್ಪೀಕರ್ ಆಗಿದ್ದ ಅವಧಿಯಲ್ಲಿ ರಾಷ್ಟ್ರಪತಿಗಳ ಆಡಳಿತ ಕೂಡಾ ಇತ್ತು. ಮುಖ್ಯಮಂತ್ರಿ ದೇವರಾಜ ಅರಸ್ ಅವರ ಅಳಿಯನ ವಿರುದ್ಧ ಹಕ್ಕುಚ್ಯುತಿ ಸೂಚನೆ ಬಂದಾಗ ಅದನ್ನು ಮಂಡಿಸಿ ಮಾತನಾಡಲು ಸದಸ್ಯರಿಗೆ ಅವಕಾಶ ನೀಡಿ, ನಿಷ್ಪಕ್ಷಪಾತವಾಗಿ ಅದನ್ನು ಹಕ್ಕು ಬಾಧ್ಯತಾ ಸಮಿತಿಗೆ ಒಪ್ಪಿಸಿದರು. ನಾಗರತ್ನಮ್ಮನವರು ಆಡಳಿತ ಪಕ್ಷದ ಪರವಾಗಿದ್ದಾರೆ, ಈ ಸೂಚನೆಯನ್ನು ತಳ್ಳಿಹಾಕುತ್ತಾರೆ ಎಂದು ಭಾವಿಸಿದ್ದವರಿಗೆ ಇದರಿಂದ ಆಶ್ಚರ್ಯವಾಯಿತು.

ವಿರೋಧ ಪಕ್ಷದ ನಾಯಕಿಯಾಗಿ

ನಾಗರತ್ನಮ್ಮನವರು 1987ರಿಂದ 1989ರ ವರೆಗೆ ಕರ್ನಾಟಕ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕಿಯಾಗಿಯೂ ಕೆಲಸ ಮಾಡಿದರು. ಸರ್ಕಾರವನ್ನು ಚಿಕ್ಕದಾದ ಚೊಕ್ಕವಾದ ಮಾತುಗಳಲ್ಲಿ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಚೆನ್ನಾಗಿ ಅಧ್ಯಯನ ಮಾಡಿಕೊಂಡು ಬಂದು ತಮ್ಮ ವಾದ ಮಂಡಿಸುತ್ತಿದ್ದರು. ಪಕ್ಷದ ಇತರ ಸದಸ್ಯರಿಗೆ ಅದರಲ್ಲೂ ಹೊಸ ಸದಸ್ಯರಿಗೆ ಮಾತನಾಡಲು ಹೆಚ್ಚು ಸಮಯ ಬಿಟ್ಟು ಕೊಡುತ್ತಿದ್ದರು. ನಾಗರತ್ನಮ್ಮನವರು ವಿರೋಧಪಕ್ಷದ ನಾಯಕಿಯಾಗಿದ್ದಾಗ, ಮಾನ್ಯ ಶ್ರೀ ಬಿ.ಜಿ ಬಣಕಾರ್ ಅವರು ಸಭಾಧ್ಯಕ್ಷರಾಗಿದ್ದರು, ಅವರೇ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು. ಸಾವಿರಾರು ಜನ ಗುತ್ತಿಗೆ ಶಿಕ್ಷಕರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದುದನ್ನು ಕಟುವಾದ ಮಾತುಗಳಲ್ಲಿ ಸರ್ಕಾರದ ಗಮನಕ್ಕೆ ತಂದು ಆ ಸಮಸ್ಯೆಯನ್ನು ಪರಿಹರಿಸಬೇಕೆಂದು ಒತ್ತಾಯಿಸಿದರು. ರೈತರಿಗೆ ಬಜೆಟ್‌ನಲ್ಲಿ ಸರ್ಕಾರದ ಅನೇಕ ಯೋಜನೆಗಳನ್ನು ಘೋಷಿಸಿದಾಗ, ಇವೆಲ್ಲಾ ಬಹಳ ಚೆಂದದ ಹೆಸರುಗಳೇ ಹೊರತು ಉಪಯೋಗಕ್ಕೆ ಬರುವ ಕೆಲಸ ಅಲ್ಲ. ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜ, ಕ್ರಿಮಿನಾಶಕ, ಮಿನಿಕಿಟ್ಸ್, ಸಾಲ ಇವುಗಳನ್ನು ನೀಡಬೇಕು. ಇವು ಯಾವುವೂ ಸರಿಯಾಗಿಲ್ಲ. ದಿನ ಬೆಳಗಾದರೆ ರಾದ್ಧಾಂತ ಆಗುತ್ತಿದೆ ಎಂದರು,

ಮಿಲ್ಕ್ ಫೆಡರೇಷನ್ ವಿಚಾರದಲ್ಲಿ 32 ಚಿಲ್ಲಿಂಗ್ ಸೆಂಟರ್ಸ್ ಮಾಡುತ್ತೇವೆಂದು ಹೇಳಿದ್ದಾರೆ, ಇದು ಸರಸ್ವತಿ ಪ್ರಸನ್ನ ಎಂದು ಮೆಚ್ಚಿಕೊಳ್ಳಬೇಕು. ಇರುವ ಸಹಕಾರಿ ಸಂಘಗಳಲ್ಲಿ ಈಗಾಗಲೇ ರಾಜಕೀಯ ಜಾಸ್ತಿಯಾಗಿದೆ. ಈಗ ಇರುವ ಸಹಕಾರಿ ಸಂಘಗಳ ಗತಿ ಹಾಲು ಉತ್ಪಾದಕರ ಸಹಕಾರಿ ಸಂಘಗಳಿಗೆ ಆಗಬಾರದು ಎಂದು ಎಚ್ಚರಿಕೆ ನೀಡಿದರು. ವಿದ್ಯುಚ್ಛಕ್ತಿ ಮಂಡಲಿಗೆ 13. 17 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ, ಇಷ್ಟು ಮೊತ್ತದ ಹಣವನ್ನು ಇವರು ಒಬ್ಬ ಇಂಡಸ್ಟ್ರಿಯಲಿಸ್ಟ್‌ಗೆ ಕೊಡುತ್ತಾರೆ. ಅವರಿಗೆ ಬೇಕಾದರೆ ಕೋಟ್ಯಂತರ ರೂಪಾಯಿಗಳ ಸಹಾಯ ಮಾಡುತ್ತಾರೆ. ಆದರೆ ರೈತರ ವಿಚಾರದಲ್ಲಿ ಧಾರಾಳತೆ ಇಲ್ಲ ಎಂದು ಹೇಳಿದರು. ರೂರಲ್ ಡೆವೆಲಪ್‌ಮೆಂಟ್ ಇವರಿಗೆ ಸೊಂಪಾದ ಸಬ್ಜೆಕ್ಟ್. ನಾನಾದರೂ ಅನೇಕ ಬಾರಿ ಹೇಳಿದ್ದೇನೆ. ರೂರಲ್ ಡೆವೆಲಪ್‌ಮೆಂಟ್, ಜಿಲ್ಲಾಪರಿಷತ್, ಪಂಚಾಯತ್ ಇವು ಯಾವುವೂ ಹೊಸ ಕಾನ್‌ಸೆಪ್ಟ್ ಅಲ್ಲ. ನಿಮಗೆಲ್ಲ ಹೊಸದಿರಬಹುದು. ಹಳೇ ಮೈಸೂರಿನ ನಮಗೆ ಹಳೇ ಕಾನ್‌ಸೆಪ್ಟ್, ಮಹಾರಾಜರ ಕಾಲದಿಂದ ಡಿಸ್ಟ್ರಿಕ್ಟ್ ಬೋರ್ಡ್, ತಾಲ್ಲೂಕ್ ಬೋರ್ಡ್‌ಗಳಿದ್ದವು. ಈಗ ನೀವು ಏನು ಕೆಲಸ ಮಾಡುತ್ತಿದ್ದೀರಿ, ಅದು ಹಿಂದೇನೇ ಇತ್ತು ಎಂದು ಬಲವಾಗಿ ಟೀಕಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳಾಗಿ

ಎಸ್. ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, 1990ರಿಂದ 1992ರ ವರೆಗೆ ನಾಗರತ್ನಮ್ಮನವರು ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳಾಗಿ ಸೇವೆ ಸಲ್ಲಿಸಿದರು. ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಬೇರೆ ಬೇರೆಯಾಗಲು ಇವರ ಕಾಲದಲ್ಲೇ ಉಪಕ್ರಮ ಪ್ರಾರಂಭವಾಯಿತು. ಮುಖ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಕಾರಣಕರ್ತರಾದರು. ದಾದಿಯರ ತರಬೇತಿ ಕೇಂದ್ರಗಳನ್ನು ಹೆಚ್ಚು ಮಾಡಿದರು ಹಾಗೂ ದಾದಿಯರ ನೇಮಕಾತಿಯನ್ನು ಹೆಚ್ಚಿಸಿದರು.

ಇತರ ಕಾರ್ಯಕ್ಷೇತ್ರಗಳು

ಇವರ ಕಾರ್ಯಕ್ಷೇತ್ರ ವಿಶಾಲವಾದುದು. ಕೆಪಿಸಿಸಿ ಉಪಾಧ್ಯಕ್ಷೆಯರಾಗಿದ್ದರು. ಕೇಂದ್ರ ರೇಷ್ಮೆ ಮಂಡಲಿ ಸದಸ್ಯೆಯಾಗಿದ್ದರು. ಅಖಿಲ ಭಾರತ ಮಹಿಳಾ ಪರಿಷತ್ತಿನ ಮೈಸೂರು ವಿಭಾಗದ ಅಧ್ಯಕ್ಷೆಯಾಗಿದ್ದರು. ಅಖಿಲ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗದ ಉಪಾಧ್ಯಕ್ಷೆಯರಾಗಿದ್ದರು. ಕೇಂದ್ರೀಯ ಸಮಾಜ ಕಲ್ಯಾಣ ಮಂಡಲಿ ಸದಸ್ಯೆಯರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ 95 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಲಲಿತಕಲಾ ಸಂಕೀರ್ಣವನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಮುಂದೆ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿ, ಅದಕ್ಕೆ ಸುಂದರವಾದ ಕ್ಯಾಂಪಸ್ ಮತ್ತು ಕಟ್ಟಡ ನಿರ್ಮಾಣವಾಗುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಅನೇಕ ಬಾರಿ ವಿದೇಶ ಪ್ರವಾಸ ಮಾಡಿ ಸಾಕಷ್ಟು ಅನುಭವ ಗಳಿಸಿದರು. ತಮ್ಮ ಜಮೀನಿನಲ್ಲಿ ಜಪಾನ್‌ನಿಂದ ಹಿಪ್ಪುನೇರಳೆ ಕಡ್ಡಿಗಳನ್ನು ತರಿಸಿ ವ್ಯವಸಾಯ ಮಾಡಿಸಿ ರೇಷ್ಮೆ ವ್ಯವಸಾಯ ಮಾಡಿಸುತ್ತಿದ್ದರು.

ಶ್ರೀಮಂತ ಮನೆತನದಲ್ಲಿ ಜನ್ಮತಳೆದು, ಶ್ರೀಮಂತ ಮನೆತನದ ಸೊಸೆಯಾದರೂ, ಯೂರೋಪಿಯನ್ ಕಾನ್ವೆಂಟ್‌ನಲ್ಲಿ ಅಭ್ಯಾಸ ಮಾಡಿದ್ದರೂ, ವ್ಯವಸಾಯ, ಹೊಲಗದ್ದೆಗಳ ವಿಚಾರದಲ್ಲಿ ಅಪಾರ ಅನುಭವವನ್ನು ಪಡೆದಿದ್ದರು. ಹಾಗೂ ಯಾವಾಗಲೂ ಪ್ರಕೃತಿಯ ನಡುವೆ ಇರಬಯಸುತ್ತಿದ್ದರು. ವಿಧಾನಸಭಾಧ್ಯಕ್ಷರಾಗುವ ಮೊದಲು ಮೈಸೂರಿನಲ್ಲಿಯೇ ನೆಲೆಸಿದ್ದರು. ತಮ್ಮ ಮಾವನವರು ಹಾಗೂ ಪತಿಯವರ ನೆಚ್ಚಿನ ಸಂಸ್ಥೆಯಾಗಿದ್ದ ಕಬ್ಬಳ್ಳಿ ಸಾಹುಕಾರ್ ಚನ್ನಬಸಪ್ಪ ವೀರಶೈವ ವಿದ್ಯಾರ್ಥಿನಿಲಯದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಅಲ್ಲಿಗೆ ಹೊಸ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರು. ಕಬ್ಬಳ್ಳಿಯ ಕಡೆಗೆ ಹೋಗಿ ಬಂದು ವ್ಯವಸಾಯ, ತೋಟ ಮನೆ ಮೇಲ್ವಿಚಾರಣೆಗಳನ್ನು ನೋಡಿಕೊಳ್ಳುತ್ತಿದ್ದರು. ವಿಧಾನ ಸಭಾ ಅಧ್ಯಕ್ಷಿಣಿಯವರಾದ ನಂತರ ಅವರು ಬೆಂಗಳೂರಿಗೆ ಬಂದು, ಆಗಿನ ಕಾಲದಲ್ಲಿ ಬೆಂಗಳೂರಿಗೆ

ಹೊರವಲಯದಲ್ಲಿ ದೂರದಲ್ಲಿದ್ದ ಕೆಂಚೇನಹಳ್ಳಿಯ ಬಳಿ ಜಮೀನು ಖರೀದಿಸಿ ಅಲ್ಲೇ ತೋಟವನ್ನು ಮಾಡಿ, ಅದಕ್ಕೆ "ಮಲರಸಿ" ಎಂಬ ಸುಂದರವಾದ ಹೆಸರನ್ನಿಟ್ಟು ಅಲ್ಲೇ ವಾಸಿಸುತ್ತಿದ್ದರು. ಸಚಿವೆಯಾದಾಗಲೂ ಕೂಡಾ ಅವರು ಸರ್ಕಾರಿ ನಿವಾಸಕ್ಕೆ ಹೋಗದೇ ಅಲ್ಲೇ ಇರುತ್ತಿದ್ದರು.

ಶ್ರೀಮಂತ ಮನೆತನದಿಂದ ಬಂದು, ಆಂಗ್ಲಮಾಧ್ಯಮದ ಕಾನ್ವೆಂಟ್ ಶಾಲೆಯಲ್ಲಿ ಓದಿದ್ದರೂ ಶ್ರೀಮತಿ ನಾಗರತ್ನಮ್ಮನವರು ತಮ್ಮ ಸಂಸ್ಕೃತಿ, ಸಂಪ್ರದಾಯವನ್ನು ಕಡೆಗಣಿಸಲಿಲ್ಲ. ಮಾತೃಭಾಷೆಯನ್ನು ಮರೆಯಲಿಲ್ಲ. ಹಳ್ಳಿಗಾಡಿನ ಜನಸಾಮಾನ್ಯರೊಂದಿಗಾಗಲೀ, ಶಾಸನ ಸಭೆಯಲ್ಲಾಗಲೀ, ಸಭಾಧ್ಯಕ್ಷಿಣಿ ಹಾಗೂ ಮಂತ್ರಿ ಆಗಿದ್ದಾಗ ಅಧಿಕಾರಿಗಳೊಡನಾಗಲೀ ಮಾತೃಭಾಷೆಯಾದ ಕನ್ನಡದಲ್ಲಿಯೇ ಮಾತನಾಡುತ್ತಿದ್ದರು. ಉಡುಪಿನಲ್ಲೂ ಅಷ್ಟೇ. ಯಾವಾಗಲೂ ಮೈಸೂರು ಸಿಲ್ಕ್ ಸೀರೆಯನ್ನು ಉಟ್ಟು, ಮೈತುಂಬ ಸೆರಗು ಹೊದ್ದುಕೊಳ್ಳುತ್ತಿದ್ದರು. ಹಣೆಗೆ ಅಗಲವಾದ ಕುಂಕುಮವನ್ನು ಧರಿಸುತ್ತಿದ್ದರು. ಒಟ್ಟಿನಲ್ಲಿ ನಮ್ಮ ಭಾರತೀಯ ಹಾಗೂ ಕರ್ನಾಟಕ ಸಂಸ್ಕೃತಿಯ ಮಹಿಳೆಯನ್ನು ಅವರು ತಮ್ಮ ನಡೆ, ನುಡಿಗಳಲ್ಲಿ ಪ್ರತಿನಿಧಿಸುತ್ತಿದ್ದರು. ಹಳ್ಳಿಗಾಡಿನ ಜನ ಸಾಮಾನ್ಯರ ಜೊತೆ ಅವರು ಯಾವುದೇ ದರ್ಪ, ದವಲತ್ತು, ಸಂಕೋಚಗಳಿಲ್ಲದೆ ಮಾತನಾಡುತ್ತಿದ್ದರು. ಅವರ ಕಷ್ಟಸುಖ ವಿಚಾರಿಸುತ್ತಿದ್ದರು. ಸರಳತೆ ಅವರ ಮೂಲ ಮಂತ್ರವಾಗಿತ್ತು. ಇದರಿಂದಾಗಿಯೇ ಅವರು ಅನೇಕಬಾರಿ ನಿರಾಯಾಸವಾಗಿ ವಿಧಾನಸಭೆಗೆ ಗೆದ್ದು ಬರುತ್ತಿದ್ದರು.

ಉತ್ತಮ ವಾಗ್ಮಿ/ಗಾದೆ ಮಾತುಗಳ ಬಳಕೆ

ಮಾತನಾಡುವಾಗ ಸರಾಗವಾಗಿ ಕನ್ನಡದ ನುಡಿಗಟ್ಟುಗಳನ್ನು ಗಾದೆಗಳನ್ನು ಉಪಯೋಗಿಸುತ್ತಿದ್ದರು. ಕುರಿ ಕಾಯಿ ತೋಳ ಎಂದ ಹಾಗಾಯಿತು, ಉಪ್ಪು ತಿಂದವರು ನೀರು ಕುಡಿಯಲೇಬೇಕು, ಹೆಣ್ಣು ಚೆಂದ ಕಣ್ಣು ಕುರುಡು, ಅವರ ಧರ್ಮ ದಪ್ಪ, ಊರು ಸೂರೆ ಹೋದಮೇಲೆ ಕೋಟೆ ಬಾಗಿಲು ಹಾಕಿದರು, ಹುಚ್ಚಲ್ಲ ಬೆಪ್ಪಲ್ಲ ಶಿವಲೀಲೆ, ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ, ಈ ರೀತಿ ಗಾದೆ ಮತುಗಳನ್ನು ಸಂದರ್ಭಕ್ಕೆ ತಕ್ಕಂತೆ ಪ್ರಯೋಗಿಸಿ, ಪರಿಣಾಮಕಾರಿಯಾಗಿ ಮಾಡನಾಡುತ್ತಿದ್ದರು.

ನಾಗರತ್ನಮ್ಮನವರ ಮನೋಭಾವನೆ

ಶ್ರೀಮತಿ ನಾಗರತ್ನಮ್ಮನವರ ಮನೋಭಾವನೆ ಯಾವ ರೀತಿ ಇತ್ತು ಎಂಬುದಕ್ಕೆ ಅವರು ವಿಧಾನಸಭೆಯಲ್ಲಿ ಆಡಿದ ಮಾತುಗಳನ್ನೇ ಸಾಕ್ಷಿಯಾಗಿ ನೀಡಬಹುದು. ಇದು ಅವರ ಅಂತರಾಳದಿಂದ ಬಂದ ಮಾತುಗಳಾಗಿದ್ದವು.

ತಾಲ್ಲೂಕಿನ ಅನೇಕ ಯೋಜನೆಗಳ ಬಗ್ಗೆ ಇವರು ಮಾತನಾಡುವಾಗ ಯಾರೋ ಏನೋ ಟೀಕೆ ಮಾಡಿದ್ದಕ್ಕೆ "ನನಗೆ ಮಕ್ಕಳಿಲ್ಲ, ಆದರೂ ಒಂದು ಲಕ್ಷ ಪ್ರಜೆಗಳು ನಮ್ಮ ಕಡೆ ನನ್ನನ್ನು ಅವ್ವ ಎಂದು ಬಾಯಿ ತುಂಬಾ ಕರೆಯುತ್ತಾರೆ, ಅವರ ಸಾಕ್ಷಿಯಾಗಿ ನಾನು ಹೇಳುತ್ತಿದ್ದೇನೆ, ನೀವು ಅನ್ಯಾಯ ಮಾಡುತ್ತಿದ್ದೀರಿ ಎಂದು ಚಾಲೆಂಜ್ ಮಾಡುತ್ತೇನೆ' ಎಂದರು.

ನಾಗರತ್ನಮ್ಮನವರು ಹೇಳುವುದೆಲ್ಲಾ ಸುಳ್ಳು, ಸುಳ್ಳಿನ ಮೊಟ್ಟೆ ಎಂದು ಯಾರೋ ಹೇಳಿದರು. ಅವರಿಗೆ ಮತ್ತು ಈ ರೀತಿ ಅವರಿಗೆ ಯಾರು ಹೇಳಿದರೋ ಅವರಿಗೂ ಹೇಳುತ್ತೇನೆ. ಅವರು ಸುಳ್ಳಿನ ಮೊಟ್ಟೆ, ಇದೆಲ್ಲಾ ಸುಳ್ಳು ಎಂದು ಹೇಳಿದ್ದಕ್ಕೆ ನನಗೆ ಬಹಳ ವ್ಯಸನವಾಯಿತು. ಏಕೆಂದರೆ ಅಂತಹ ಸುಳ್ಳು ಹೇಳಬೇಕಾದ ಪ್ರಮೇಯವೇನೂ ನನಗೆ ಒದಗಿಲ್ಲ. ಪ್ರಪಂಚದಲ್ಲಿ ಬರಬಾರದಂತಹ ಕಷ್ಟ ಬಂದರೂ ನಗುತ್ತಾ ಅದನ್ನು ಎದುರಿಸುತ್ತೇನೆ. ಹೊಟ್ಟೆಯಲ್ಲಿ ಎಷ್ಟೇ ಸಣ್ಣ ಕುದಿಯಿರಲಿ ಅದನ್ನು ತೋರ್ಪಡಿಸುವುದಿಲ್ಲ. ಸುಳ್ಳು ಹೇಳಿ ನಾನು ಬದುಕಬೇಕಾಗಿಲ್ಲ, ಎಂದು ತಿರುಗೇಟು ನೀಡಿದರು.

ಅಬ್ದುಲ್ ನಜೀರ್ ಸಾಬ್‌ರಂತಹ ಪ್ರಾಮಾಣಿಕ ಕ್ರಿಯಾಶೀಲ ರಾಜಕಾರಣಿಯನ್ನು ಬೆಳೆಸಿ ರಾಜ್ಯದ ರಾಜಕೀಯದಲ್ಲಿ ಬೆಳಕಿಗೆ ತಂದರು. ಅಬ್ದುಲ್ ನಜೀರ್‌ಸಾಬ್‌ರವರು ನಾಗರತ್ನಮ್ಮನವರನ್ನು ತಾಯಿ ಎಂದೇ ಸಂಬೋಧಿಸುತ್ತಿದ್ದರು. ಮುಂದೆ ನಜೀರ್‌ಸಾಬರು ಜನತಾ ಪಕ್ಷಕ್ಕೆ ಹೋದರೂ, ನಾಗರತ್ನಮ್ಮನವರು ಅವರನ್ನು ಮಗನಂತೇ ಪರಿಗಣಿಸಿ ಪ್ರೀತಿಯಿಂದ ಕಾಣುತ್ತಿದ್ದರು. ಮಾನವೀಯತೇಯೇ ಅವರಿಗೆ ಮುಖ್ಯವಾಗಿತ್ತು.

ನಾಗರತ್ನಮ್ಮನವರು 1993ರಲ್ಲಿ ನಿಧನರಾದರು.

——— * ———

ಸಾಲುಮರದ ತಿಮ್ಮಕ್ಕ

ಡಾ. ಮಂಜುಳ, ಚಿತ್ರದುರ್ಗ.

ಜಾಗತೀಕರಣದ ಪ್ರಕ್ರಿಯೆ ಪರಿಸರವನ್ನು ನಾಶಗೊಳಿಸುತ್ತಿದೆ. ಸದಾ ಹಸಿರಾಗಿದ್ದ ಪರಿಸರ ಇದೀಗ ಒಣಗುಡುತ್ತಿದೆ, ಅಂತರ್ಜಲ ಬತ್ತಿ ಹೋಗಿದೆ. ಬಿಸಿಲು ಹೆಚ್ಚಾಗಿದೆ. ಆಮ್ಲಜನಕ ಬರಿದಾಗುತ್ತಿದೆ. ಓಜೋನ್ ಪದರಕ್ಕೆ ಧಕ್ಕೆ ಉಂಟಾಗುತ್ತಿದೆ. ಮನುಕುಲ ಉಳಿಯಬೇಕೆಂದರೆ ಮರಗಳ ಅಗತ್ಯವಿದೆ. ಪರಿಸರ ಪ್ರಜ್ಞೆ, ವಿಶ್ವದ ಪ್ರಜೆಗಳೆನಿಸಿದವರ ಪ್ರತಿಯೊಬ್ಬರ ಕರ್ತವ್ಯವೂ ಆಗಿದೆ. ಇಂಥ ಸಿದ್ಧಾಂತಗಳನ್ನರಿಯದ ಹೆಣ್ಣೊಬ್ಬಳು ಮರಗಳನ್ನು ನೆಡುವ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಅವಳೇ ಸಾಲುಮರದ ತಿಮ್ಮಕ್ಕ. ಕನ್ನಡನಾಡಿನಲ್ಲಿ ಅವಳ ಹೆಸರು ಅರಿಯದವರೇ ಇಲ್ಲ.

ಇಂಥ ತಿಮ್ಮಕ್ಕ ಹುಟ್ಟಿದ್ದು ಗುಬ್ಬಿ ಹೊಸಳ್ಳಿ ಬಳಿಯ ಕಕ್ಕೇನಹಳ್ಳಿ. ತಿಮ್ಮಕ್ಕನ ತಂದೆ ತಾಯಿಗಳು ಚಿಕ್ಕರಂಗಯ್ಯ ಹಾಗೂ ವಿಜಯಮ್ಮ. ಬಾಲ್ಯದಿಂದಲೂ ಇವಳಿಗೆ ಪರೋಪಕಾರ ಬುದ್ಧಿ ಜಾಸ್ತಿ. ಕಿತ್ತು ತಿನ್ನುವ ಬಡತನದಲ್ಲೂ ಈ ಸ್ವಭಾವವನ್ನು ಬಿಡಲಿಲ್ಲ. ಇದಕ್ಕಾಗಿ ತಾಯಿಂದ ಏಟು ಬೈಗುಳಗಳನ್ನು ತಿನ್ನಬೇಕಾಗುತ್ತಿತ್ತು.

ಬಡತನದ ಕಾರಣದಿಂದ ಇವರ ತಂದೆ ಕಕ್ಕೇನಹಳ್ಳಿಗೆ ಸಮೀಪದಲ್ಲೇ ಎರಡು ಮೈಲಿ ದೂರದಲ್ಲಿರುವ ಮುದ್ದಳ್ಳಿಯ ಮುತ್ತೇಗೌಡ ಎಂಬುವವರ ಮನೆಯಲ್ಲಿ ಜೀತಕ್ಕಿರುತ್ತಾರೆ. ಒಂದು ಸಾರಿ ತಿಮ್ಮಕ್ಕ ತಾಯಿಯ ಜೊತೆ ಜಗಳವಾಡಿಕೊಂಡು ಹೋಗಿ ತಂದೆ ಬಳಿ ಸೇರುತ್ತಾರೆ. ಮುತ್ತೇಗೌಡರ ಹೆಂಡತಿ ನರಸಮ್ಮ ತಾಯಿಗಿಂತ ಹೆಚ್ಚಾಗಿ ನೋಡಿಕೊಂಡರು. ಅವರ ಮನೆಯಲ್ಲಿಯೇ ಕೆಲಸ ಮಾಡಿಕೊಂಡು ಅಲ್ಲಿಯೇ ನೆಲೆಸಿದರು. ಹದಿನಾರು ವಯಸ್ಸು ತುಂಬಿದಾಗ ತಿಮ್ಮಕ್ಕನನ್ನು ಬಿಕ್ಕಲು ಚಿಕ್ಕಯ್ಯನಿಗೆ ಕೊಟ್ಟು ಮದುವೆ ಮಾಡಿದರು.

ಮದುವೆಯಾದರೂ ತಿಮ್ಮಕ್ಕನ ಬಡತನ ನೀಗಲಿಲ್ಲ, ಕಾಯಕ ನಿಲ್ಲಲಿಲ್ಲ. ತಿಮ್ಮಕ್ಕ ಹೊಲಗದ್ದೆಗಳಿಗೆ ಹೋಗಿ ಪೈರು ನಾಟಿ ಮಾಡುವುದು, ಕಳೆ ತೆಗೆಯುವುದು, ಕೊಯ್ಲು ಮಾಡುವುದು. ಕೃಷಿ ಕೆಲಸಗಳಲ್ಲಿ ಸದಾ ನಿರತಳಾಗಿರುತ್ತಿದ್ದಳು. ಇದರ ಜೊತೆಗೆ ಕಣ-ಒಕ್ಕಣೆಗಳ ಕಾರ್ಯವನ್ನು ಮಾಡುತ್ತಿದ್ದಳು.

ಒಟ್ಟು ಕುಟುಂಬದಲ್ಲಿದ್ದ ತಿಮ್ಮಕ್ಕ ಸಂಸಾರದಲ್ಲಿನ ವೈಮನಸ್ಸುಗಳಿಂದಾಗಿ ಗಂಡನ ಜೊತೆ ಬೇರೆ ಹೋಗಬೇಕಾದ ಪರಿಸ್ಥಿತಿಯುಂಟಾಯಿತು. ಆದರೆ ಹಿರಿಯರ ಮಾತಿನಂತೆ ಅತ್ತೆ ಮನೆಯಲ್ಲಿಯೇ ಉಳಿದರು. ಮೈದುನನ ಮದುವೆ ಏರ್ಪಾಡಾದಾಗ ವಧುವಿಗೆ ತಿಮ್ಮಕ್ಕ ತನ್ನ ಬಳಿ ಇದ್ದ ಒಡವೆಗಳನ್ನೆಲ್ಲ ನೀಡಿ ಹೃದಯ ವೈಶಾಲ್ಯವನ್ನು ಮೆರೆದಳು.

ಮದುವೆಯಾಗಿ 20 ವರ್ಷ ಕಳೆದರೂ ತಿಮ್ಮಕ್ಕನಿಗೆ ಮಕ್ಕಳಾಗಲಿಲ್ಲ. ಈ ಕೊರಗು ದಂಪತಿಗಳನ್ನು ನಿರಂತರವಾಗಿ ಕಾಡಿತು. ಬಂಜೆ ಪಟ್ಟ ಕಟ್ಟಿಕೊಂಡ ತಿಮ್ಮಕ್ಕನ ಬದುಕು ಯಾತನಮಯವಾಗಿತ್ತು. ಮನೆಯೊಳಗೆ ಹೊರಗೆ ಕತ್ತೆಯಂತೆ ದುಡಿಯುತ್ತಿದ್ದರೂ ಯಾರೂ ಮನೆಯಲ್ಲಿ ಪ್ರೀತಿ ವಿಶ್ವಾಸದಿಂದ ಮಾತನಾಡಿಸುತ್ತಿರಲಿಲ್ಲ. ಗಂಡನು ಸಹ ಮಕ್ಕಳಿಲ್ಲದ್ದಕ್ಕೆ ಬೈಯುವುದು, ಅವಮಾನ ಮಾಡುವುದು ನಡೆದಿತ್ತು. ಮಕ್ಕಳ ಬಗೆಗಿನ ಆಸೆ ಗಂಡ ಬಿಕ್ಕಲು ಚಿಕ್ಕಯ್ಯನ ಮನಸ್ಸನ್ನು ಕೊರೆಯುತ್ತಿತ್ತು.

ದಿನಗಳೆದ ಹಾಗೆ ತಮಗೆ ಮಕ್ಕಳಾಗುವುದಿಲ್ಲ ಎಂಬ ವಾಸ್ತವತೆಯ ಅರಿವು ದಂಪತಿಗಳಿಗಾಯಿತು. ಈ ಕೊರಗನ್ನು ನೀಗಿಸಿಕೊಳ್ಳಲು ಅವರು ಬೇರೆ ಮಾರ್ಗವನ್ನು ಕಂಡುಕೊಂಡರು. ಒಂದು ಬಾಗಿಲು ಮುಚ್ಚಿದರೆ ದೇವರು ಇನ್ನೊಂದು ಬಾಗಿಲನ್ನು ಇವರಿಗಾಗಿ ತೆರೆದಿದ್ದ. ಗಂಡ ಬಿಕ್ಕಲು ತಿಮ್ಮಯ್ಯ ಮಕ್ಕಳಿಲ್ಲದ ಕೊರಗನ್ನು ಗಿಡಮರ ಬೆಳೆಸುವುದರ ಮೂಲಕ ಏಕೆ ನೀಗಿಸಿಕೊಳ್ಳಬಾರದು ಎಂಬ ಆಲೋಚನೆ ಬಂದು ಹೆಂಡತಿಯ ಜೊತೆ ಈ ವಿಚಾರವನ್ನು ಪ್ರಸ್ತಾಪಿಸಿದಾಗ, ತಿಮ್ಮಕ್ಕ ಇದನ್ನು ಸಂತೋಷದಿಂದ ಸ್ವಾಗತಿಸಿದಳು. ಇಲ್ಲಿಂದ ಮುಂದೆ ಇಬ್ಬರು ಸೇರಿ ಆಲದ ದೊಡ್ಡ ಕಡ್ಡಿ ನೆಟ್ಟು ಮರವಾಗಿಸುವೆಡೆ ತಮ್ಮ ಮನಸ್ಸು ತೊಡಗಿಸಿದರು.

ತಿಮ್ಮಕ್ಕ ದಂಪತಿಗಳು ಮಾಗಡಿ ತಾಲ್ಲೂಕಿನ ಕುದೂರಿನಿಂದ ಹುಲಿಕಲ್ಲಿಗೆ ಹೋಗುವ ಹಾದಿಯಲ್ಲಿ ಮರಗಳಿಲ್ಲದೆ ಬರಡಾಗಿರುವ ಪ್ರದೇಶವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು.

ಇವರು ಬೆಳಗಿನ ಕೆಲಸ ಮುಗಿಸಿ ದನಗಳನ್ನು ಮೇಯಲು ಬಿಟ್ಟು ಈ ಕಾರ್ಯದಲ್ಲಿ ನಿರತರಾಗುತ್ತಿದ್ದರು. ಗುಣಿ ತೋಡಿ ಬಲಿತ ಆಲದ ಕಡ್ಡಿಗಳನ್ನು ಕಡಿದು ತಂದು ನೆಟ್ಟು, ಇಬ್ಬರೂ ತಲೆ ಮೇಲೆ ಮಡಿಕೆ ಹೊತ್ತು ಮೂರು ಕಿ.ಮೀ. ದೂರದಲ್ಲಿರುವ ಕಲ್ಯಾಣಿಯಿಂದ ನೀರು ತಂದು ಈ ಗಿಡಗಳಿಗೆ ಉಣಿಸುತ್ತಿದ್ದರು. ಇದರ ಫಲವಾಗಿ ಮಾಗಡಿ ತಾಲ್ಲೂಕಿನ ಕುದೂರಿನಿಂದ ಹುಲಿಕಲ್ಲಿಗೆ ಹೋಗುವ ಮೂರು ಕಿ.ಮೀ. ರಸ್ತೆಯ ಉದ್ದಕ್ಕೂ ಇಕ್ಕೆಲಗಳಲ್ಲಿ ಇಂದು 284 ಮರಗಳು ಸಂತೋಷದಿಂದ ಬೀಗಿ ನಲಿಯುತ್ತಿವೆ.

ಈ ದಂಪತಿಗಳ ನಿಸ್ವಾರ್ಥ ಸೇವೆಯಿಂದಾಗಿ ಆಕಾಶದುದ್ದಕ್ಕೂ ಸಾಲು ಸಾಲಾಗಿ ತಲೆಯೆತ್ತಿ ನಿಂತಿರುವ ಮರಗಳು ಬಿಸಿಲಿನಲ್ಲಿ ಬಳಲಿದ ಜನರಿಗೆ ತಂಪು ನೀಡಿವೆ. ಪರಿಸರದ ಮಾಲಿನ್ಯವನ್ನು ತಡೆಗಟ್ಟಿದೆ. ವಾತಾವರಣವನ್ನು ಶುದ್ಧಿಗೊಳಿಸುವ ಬೇವಿನ ಮರಗಳು, ಆಮ್ಲಜನಕ ಕಾರ್ಖಾನೆಯಾದ ಅಶ್ವತ್ಥ ಮರಗಳು ಪರಿಸರಕ್ಕೆ ದೊಡ್ಡ ಕೊಡುಗೆಯನ್ನು ನೀಡಿವೆ.

ಲಕ್ಷ್ಮೀಧರನ ತಾಯಿ ಅವನು ಮಗುವಿದ್ದಾಗ ಹಾಲು ಕುಡಿಸುವಾಗ ಅವನ ಕಿವಿಯಲ್ಲಿ ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು ಎಂಬ ಪರೋಪಕಾರ ಬುದ್ಧಿಯನ್ನು ಹೇಳುತ್ತಿದ್ದಳಂತೆ, ಸಿದ್ಧರಾಮ ಸದಾ ಕಾಲ ಕೆರೆ ಕಟ್ಟೆಗಳನ್ನು ಕಟ್ಟುವುದರಲ್ಲಿ ನಿರತನಾಗಿದ್ದ, ಅಶೋಕ ಚಕ್ರವರ್ತಿ ರಸ್ತೆಯುದ್ದಕ್ಕೂ ಸಾಲು ಮರಗಳನ್ನು ನೆಡಿಸಿದ – ಎಂಬುದು ಇತಿಹಾಸ ಬಲ್ಲವರಿಗೆಲ್ಲ ತಿಳಿದ ಸಂಗತಿ. ಇವರೆಲ್ಲ ಉಳ್ಳವರು, ಕಾರ್ಯ ಮಾಡಲು ಅವರಿಗೆ ಯಾವ ಕಷ್ಟವೂ ಇಲ್ಲ. ಇಂಥ ಕೆಲಸಗಳು ದೊಡ್ಡವರಿಗೆ ಮೀಸಲಾಗಿದ್ದ ಸಂದರ್ಭದಲ್ಲಿ ಊಟಕ್ಕೂ ಕಷ್ಟ ಪಡಬೇಕಿದ್ದ, ಅನಕ್ಷರಸ್ಥರಾಗಿದ್ದ ತಿಮ್ಮಕ್ಕ ದಂಪತಿಗಳು ಇಂಥ ದುಸ್ಸಾಹಸ ಕೆಲಸಕ್ಕೆ ಕೈಹಾಕಿ ಯಶಸ್ವಿಯಾಗಿರುವುದನ್ನು ಕಾಣಬಹುದು.

ಯಾವ ಪ್ರತಿಫಲದ ಅಪೇಕ್ಷೆಯೂ ಇಲ್ಲದೆ ನೆಟ್ಟ ಮರಗಳು ಸಮಾಜಕ್ಕೆ ಉಸಿರಾಗಿವೆ. ಸಸ್ಯ ವಿಜ್ಞಾನಿಗಳ ವರದಿಯಂತೆ ತಿಮ್ಮಕ್ಕ ಬೆಳೆಸಿದ ಮರಗಳ ಒಟ್ಟು ಮೌಲ್ಯ 497 ಕೋಟಿ ರೂ. ತಿಮ್ಮಕ್ಕ ಇಂಥ ಮಹಾಸಂಪತ್ತಿನ ಒಡತಿಯಾಗಿದ್ದರು. ಬಂದ ಪ್ರಶಸ್ತಿಗಳನ್ನು ಗೋಣಿ ಚೀಲದಲ್ಲಿ ಕಟ್ಟಿ ಇಟ್ಟು ಗುಡಿಸಲಲ್ಲಿ ಬದುಕಿ ಬಾಳಿದರು. ಕೊನೆಗೆ ಸರ್ಕಾರ ಕಣ್ಣು ತೆರೆದು ಇವರಿಗೆ ವಾಸಿಸಲು ತಾರಸಿ ಮನೆಯೊಂದನ್ನು ಕಟ್ಟಿಸಿಕೊಟ್ಟಿದೆ. ಇಷ್ಟಲ್ಲದೆ ಇವಳ ಸೇವಾಮನೋಭಾವ ತನ್ನ ಊರಲ್ಲಿ ಹೆರಿಗೆ ಆಸ್ಪತ್ರೆ ಕಟ್ಟಿಸುವವರೆಗೂ ವಿಸ್ತಾರವಾಗಿದೆ. ಆಸ್ಪತ್ರೆ ಕಟ್ಟಿಸಲು ತನಗೆ ಬಂದ ಪ್ರಶಸ್ತಿ ಪುರಸ್ಕಾರದ ಹಣವನ್ನು ಕೂಡಿ ಇಡುತ್ತಿದ್ದಾಳೆ. ಜೊತೆಗೆ ಸರ್ಕಾರವನ್ನು ನೆರವಿಗೆ ಒತ್ತಾಯಿಸುತ್ತಿದ್ದಾಳೆ.

ಮರಗಳೇ ಆಸ್ತಿ, ದೇವರು ಎಂದು ಭಾವಿಸಿದ ತಿಮ್ಮಕ್ಕನಿಗೆ ಸಾಲು ಸಾಲು ಪ್ರಶಸ್ತಿಗಳ ಮಳೆ ಸುರಿದಿದೆ. ಅವುಗಳದೇ ಒಂದು ದೊಡ್ಡ ಪಟ್ಟಿಯಿದೆ. ಕೆಲವನ್ನು ಮಾತ್ರ ಉಲ್ಲೇಖಿಸಬಹುದು. ಅವು ಹೀಗಿವೆ:

ಅರಣ್ಯ ಇಲಾಖೆಯ ಸಂರಕ್ಷಣಾಧಿಕಾರಿಯಾಗಿದ್ದ ದಾಸೇಗೌಡರು ಸರ್ಕಾರಕ್ಕೆ ಶಿಫಾರಸ್ಸು ಮಾಡಿದಾಗ, ಅಂದಿನ ಮುಖ್ಯಮಂತ್ರಿಯಾಗಿದ್ದ ಶ್ರೀಯುತ ಎಂ. ವೀರಪ್ಪ ಮೊಯ್ಲಿ ಅವರು 'ವನಶ್ರೀ ಪ್ರಶಸ್ತಿ' ನೀಡಿ ಗೌರವಿಸಿದರು. ಕೇಂದ್ರ ಸರ್ಕಾರದ – 'ನ್ಯಾಶನಲ್ ಸಿಟಿಜನ್ ಅವಾರ್ಡ್' ರಾಷ್ಟ್ರಪ್ರಶಸ್ತಿ, ಇಂದಿರಾ ಪ್ರಿಯದರ್ಶಿನಿ ವೃಕ್ಷ ಮಿತ್ರ ಪುರಸ್ಕಾರ 1997, ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು ಇವರ 'ಕರ್ನಾಟಕ ಪರಿಸರ ಪ್ರಶಸ್ತಿ', ಮಾಗಡಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ವಿದ್ಯಾಸಂಸ್ಥೆ ಹಾಗೂ ಮಾಗಡಿ ತಾಲ್ಲೂಕು ಯುವ ಜನ ವೇದಿಕೆಯ ಸಂಯುಕ್ತ ಆಶ್ರಯದಲ್ಲಿ – 'ಮಾಗಡಿ ವ್ಯಕ್ತಿ 1997', ಸಾಂಸ್ಕೃತಿಕ ಸಂಘಟನೆ ಮಂಡ್ಯ ಇವರಿಂದ 'ಜನದನಿ', ಅಂಬೇಡ್ಕರ್ ಪ್ರಶಸ್ತಿ, 'ಕೆಂಗಲ್ ಹನುಮಂತಯ್ಯ ಪ್ರಶಸ್ತಿ', ಭಾರತೀಯ ಜೈನ ಮಹಿಳಾ ಸಮ್ಮೇಳನದಲ್ಲಿ 'ಸಾಧನ ಪ್ರಶಸ್ತಿ', ಬಳ್ಳಾರಿಯ ಪರಿಸರ ವೇದಿಕೆಯಿಂದ 'ಪಂಪಾಪತಿ ಪರಿಸರ' ಚಿತ್ರದುರ್ಗದ ಮುರುಘ ರಾಜೇಂದ್ರ ಮಠದಿಂದ ಸನ್ಮಾನ ವೃಕ್ಷಮಾತೆ, ಪರಿಸರ ಪ್ರೇಮಿ, ಪ್ರಕೃತಿ ಮಾತೆ – – – ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ತಿಮ್ಮಕ್ಕನಿಗೆ ಗೌರವಿಸಿ ನೀಡಿದ ಶಾಲು, ಹಾರಗಳಿಗೆ ಲೆಕ್ಕವಿಲ್ಲ. ಗಿಡನೆಟ್ಟು ಬೆಳೆಸಿದ ಕೈಗೆ ಬೆಳ್ಳಿ ಕಡಗ, ಬೆರಳುಗಳಿಗೆ ಚಿನ್ನದ ಉಂಗುರ ನೀಡಿ ಸನ್ಮಾನಿಸಿದ್ದಾರೆ. ಆದರೆ ಎಲ್ಲ ಪ್ರಶಸ್ತಿಯ ಮೊತ್ತವೂ ತಿಮ್ಮಕ್ಕನಿಗೆ ದಕ್ಕಿದೆ ಎನ್ನಲಾಗುವುದಿಲ್ಲ. ಪ್ರಶಸ್ತಿ ಪಡೆಯಲು ಕರೆದೊಯ್ದವರು ಮೊತ್ತದ ಬಹುಪಾಲು ತಾವಿಟ್ಟುಕೊಂಡು ತಿಮ್ಮಕ್ಕನ ಕೈಗೆ ಒಂದಿಷ್ಟು ಹಣ ಕೈಗಿಟ್ಟು ಮೋಸ ಮಾಡಿದ್ದೂ ಉಂಟು.

ಈಕೆಯನ್ನು ಕುರಿತು ಇಂಗ್ಲಿಷ್ ಪತ್ರಿಕೆಯಲ್ಲಿ "Thimmakka and her 284 children" ಎಂಬ ಲೇಖನ ಪ್ರಕಟವಾಗಿದೆ. ಇವರ ಕುರಿತ ಆಕಾಶವಾಣಿ ದೂರದರ್ಶನಗಳು ಸಾಕ್ಷ್ಯ ಚಿತ್ರವನ್ನು ನಿರೂಪಿಸಿದೆ.

ಇಂಥ ಸಾಧನೆಗೈದ ತಿಮ್ಮಕ್ಕನ ಬದುಕು ಎಲ್ಲರಿಗೂ ಆದರ್ಶ. ಇಷ್ಟು ಮರಗಿಡಗಳನ್ನಲ್ಲದಿದ್ದರೂ ಪ್ರತಿಯೊಬ್ಬ ಮನುಷ್ಯನು ಕನಿಷ್ಠ ಒಂದೊಂದು ಮರ ಬೆಳೆಸುವುದೇ ಅವಳಿಗೆ ಮಾಡುವ ಸನ್ಮಾನ.

——— * ———

ಕನ್ನಡದ ಚಲನಚಿತ್ರದ ಪ್ರಥಮ ನಿರ್ದೇಶಕಿ ಪ್ರೇಮಾ ಕಾರಂತ

ಕೆ. ಹೆಚ್. ಸಾವಿತ್ರಿ

ಬಡತನ ವರವೋ? ಶಾಪವೋ?

ಅನೇಕರನ್ನು ಈ ಪ್ರಶ್ನೆ ಕಾಡುತ್ತದೆಯಾದರೂ ಜೀವನದಲ್ಲಿ ಯಶಸ್ಸು ಸಾಧಿಸಿದವರ ಸಂಖ್ಯೆ ನೋಡಿದರೆ ಬಡತನಕ್ಕೂ, ಸಾಧನೆಗೂ ಯಾವುದೇ ಸಂಬಂಧ ಇಲ್ಲದಿರುವುದು ಗೋಚರವಾಗುತ್ತದೆ.

ನೋವು, ಅವಮಾನಗಳಿಗೂ ಸಾಧನೆಗೂ ಎಲ್ಲಿಲ್ಲದ ನಂಟು. ಪ್ರತಿಯೊಬ್ಬರು ಜೀವನದ ಒಂದಲ್ಲ ಒಂದು ಹಂತದಲ್ಲಿ ಬಡತನದ ಬೇಗೆಗೆ ಸಿಲುಕಿ ನಲುಗಿದವರೇ. ಅದರ ಬವಣೆಗಳಿಗೆ ತುತ್ತಾದವರೇ. ಆದರೆ ಬದುಕನ್ನು ನಾವು ಹೇಗೆ ಸ್ವೀಕರಿಸುತ್ತೇವೆ ಎಂಬುದರ ಮೇಲೆಯೇ, ನಾವು ಏನಾಗಬೇಕು ಎಂದು ನಿರ್ಧರಿಸುತ್ತೇವೆಯೋ ಅದು ಆಗಲು ಸಾಧ್ಯ ಎಂದು ನಂಬಿದವರು. ಅವರೆಂದೂ ಕೈ ಚೆಲ್ಲಿ ಕುಳಿತವರಲ್ಲ. ಬದುಕನ್ನು ಬಂದ ಹಾಗೆ ಸ್ವೀಕರಿಸಿದವರೂ ಅಲ್ಲ. ಬದಲಿಗೆ ತಮ್ಮ ಇಚ್ಛೆಯಂತೆ ಬದುಕು ಕಟ್ಟಿಕೊಂಡವರು.

ಜೀವನದಲ್ಲಿ ಪ್ರತಿಯೊಬ್ಬರ ಪ್ರಾರ್ಥನೆ ಸೋಲಿಸಬೇಡ...ಗೆಲಿಸಯ್ಯಾ. ಆದರೆ ಗೆಲುವು ಅಷ್ಟು ಸುಲಭವಲ್ಲ. ನಾವು ಏನಾಗಬೇಕು ಎಂದು ತೀರ್ಮಾನಿಸಿದ ಮೇಲೆ, ಸಂಪೂರ್ಣವಾಗಿ ಏಕ ಚಿತ್ತದಿಂದ ಅದನ್ನೇ ಧ್ಯಾನಿಸಿದರೆ ಜಗತ್ತಿನ ಎಲ್ಲಾ ಶಕ್ತಿಗಳು ಅದಕ್ಕೆ ಬೆಂಬಲ ನೀಡುತ್ತವೆಯಂತೆ.

ನಮ್ಮ ಪ್ರೇಮಾ ಕಾರಂತರ ಬದುಕು ಕೂಡಾ ಹಾಗೆಯೇ. ಜೀವನದಲ್ಲಿ ಅವರೆಂದೂ ಬದುಕಿಗೆ ಬೆನ್ನು ತೋರಿಸಿದವರಲ್ಲ. ಬಂದದ್ದೆಲ್ಲ ಬರಲಿ ಎಂದು ಎಲ್ಲವನ್ನು ಧೈರ್ಯದಿಂದ ಎದುರಿಸಿದವರು. ಬದುಕು ಮನ್ನಿಸು ಪ್ರಭುವೇ ಎಂದುಕೊಂಡರೂ ಅವರಿಗೆ ಸ್ವ ಸಾಮರ್ಥ್ಯದ ಮೇಲೆ ಅಪಾರ ನಂಬಿಕೆ. ಜೀವನದುದ್ದಕ್ಕೂ ಅವರನ್ನು ಕೈ ಹಿಡಿದು ನಡೆಸಿದ್ದು ಇದೇ ಆತ್ಮವಿಶ್ವಾಸ.

ಹೀಗಾಗಿಯೇ ಪ್ರೇಮಾಲೀಲಾ ಆ ಕಾಲದಲ್ಲಿ ಎಂ.ಎ(1958) ಮಾಡಿದರು. ಮಹಿಳೆಯರು ಕಾಲಿಡಲು ಹಿಂಜರಿಯುತ್ತಿದ್ದ ರಂಗಭೂಮಿಗೂ ಅಡಿ ಇಟ್ಟರು. ಫಣಿಯಮ್ಮ ಚಿತ್ರವನ್ನು ನಿರ್ದೇಶಿಸುವ ಮೂಲಕ ಕನ್ನಡದ ಮೊದಲ ನಿರ್ದೇಶಕಿ ಎನಿಸಿಕೊಂಡರು. ಅನುವಾದ, ನಾಟಕಗಳ ರಚನೆ, ನಾಟಕಗಳ ನಿರ್ದೇಶನ, ಸಾಕ್ಷ್ಯಚಿತ್ರಗಳ ನಿರ್ಮಾಣ, ನಿರ್ದೇಶಕಿ, ವಸ್ತ್ರವಿನ್ಯಾಸಕಿಯಾದರು. ಮಕ್ಕಳ ರಂಗಭೂಮಿಗೆ ಚಾಲನೆ ನೀಡಿದರು.

ಇವೆಲ್ಲದರ ಜೊತೆಗೆ ಬಿ.ವಿ. ಕಾರಂತರ ಸಂಗಾತಿಯಾಗಿ ನಿಜವಾದ ಅರ್ಥದಲ್ಲಿ ಸಹಧರ್ಮಿಣೀಯೂ ಆದರು. 1935, ಆಗಸ್ಟ್ 15ರಂದು ಭದ್ರಾವತಿಯಲ್ಲಿ ಹುಟ್ಟಿದ ಪ್ರೇಮಾ ಕಾರಂತ ಮೂಲತಃ ಸ್ವಾತಂತ್ರ್ಯ ಪ್ರೇಮಿ. ಬಾಲ್ಯದಲ್ಲೇ ಅಪ್ಪ ದೇವೋಜಿರಾವ್, ಅಮ್ಮ ಕಮಲಮ್ಮ ಅವರನ್ನು ಕಳೆದುಕೊಂಡು ಮೈಸೂರಿನಲ್ಲಿ ತಾತ ರಾಘವೇಂದ್ರರಾವ್, ಅಜ್ಜಿ ಮಹಾಲಕ್ಷ್ಮೀ ಆಶ್ರಯದಲ್ಲಿ ಬೆಳೆದರೂ ಅವರಿಗೆ ಎಂದೂ ಜೀವನದಲ್ಲಿ ಕೀಳರಿಮೆ ಕಾಡಲಿಲ್ಲ. ಅದಕ್ಕೆ ಕಾರಣ, ನಿರಂತರವಾದ ಅಧ್ಯಯನ.

ಓದುವುದು ಅಚ್ಚುಮೆಚ್ಚು

ಪ್ರೇಮಾ ಅವರಿಗೆ ಬಾಲ್ಯದಿಂದಲೂ ಓದುವುದು ಎಂದರೆ ಅಚ್ಚುಮೆಚ್ಚು. ಹತ್ತನೇ ವಯಸ್ಸಿನಲ್ಲಿ ಇದ್ದಾಗಲೇ ಪ್ರೇಮಾಲೀಲಾ ಅವರು 'ರಾಮಾಯಣ', 'ಮಹಾಭಾರತ', 'ಜೈಮಿನಿ ಭಾರತ', ಬಿ ವೆಂಕಟಾಚಾರ್ಯರ ಹಲವಾರು ಕಾದಂಬರಿಗಳನ್ನು ಓದಿ ಮುಗಿಸಿದ್ದರು. ಎಲ್ಲಾ ಹದಿಹರೆಯದವರಂತೆ ಎನ್.ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿ ಎಂದರೆ ಆಗ ಅವರಿಗೆ ಬಲು ಇಷ್ಟ. ಶಿಡ್ಲಘಟ್ಟದಲ್ಲಿ ಮೆಟ್ರಿಕ್ಯುಲೇಶನ್ ಓದಿದ ಪ್ರೇಮಾ, ಸ್ವಾವಲಂಬಿಯಾಗಬೇಕು ಎಂಬ ಛಲದಿಂದ ಬೆಂಗಳೂರಿಗೆ ಬಂದರು. ಖ್ಯಾತ ಪತ್ರಕರ್ತ ಹಾಗೂ ಸಾಹಿತಿ ವೈ.ಎನ್.ಕೆ ಅವರ ತಾಯಿ ಪದ್ಮಾವತಿಬಾಯಿ ಪ್ರೇಮಾ ಅವರ ಚಿಕ್ಕಮ್ಮ. ಅವರ ಮನೆಯಲ್ಲೇ ನೆಲೆ ನಿಂತ ಪ್ರೇಮಾ ಸೇಂಟ್ ತೆರೇಸಾ ಕಾನ್ವೆಂಟಿನಲ್ಲಿ ಟಿ.ಸಿ.ಎಚ್. ಮಾಡಿ ಅಲ್ಲೇ ಅಧ್ಯಾಪಕಿಯಾಗಿ ನೇಮಕಗೊಂಡರು.

ಶಾಲಾ ದಿನಗಳಿಂದಲೂ ಕನ್ನಡ ಪುಸ್ತಕಗಳನ್ನು ಇಷ್ಟಪಟ್ಟು ಓದುತ್ತಿದ್ದರಿಂದ ಬರವಣಿಗೆ ಅವರಿಗೆ ಸಿದ್ಧಿಸಿತ್ತು. ಕೆಲವು ಕಥೆಗಳನ್ನು ಬರೆದಿದ್ದರು. ಓದುವುದರಲ್ಲಿ ಮುಂದಿದ್ದ ಪ್ರೇಮಾ ದೈಹಿಕವಾಗಿಯೂ ಬಹಳ ಬಲವಾಗಿದ್ದರು. ಶಾಲಾ ಬಾಲಕಿಯಾಗಿದ್ದಾಗಲೇ ಎರಡು, ಮೂರನೇ ತರಗತಿಯ ವಿದ್ಯಾರ್ಥಿಗಳಿಗೆ ಪಾಠ ಮಾಡಿ ತಮ್ಮ ಖರ್ಚನ್ನು ನೀಗಿಸಿಕೊಳ್ಳುತ್ತಿದ್ದ ಪ್ರೇಮಾರವರು ಮೊದಲಿನಿಂದಲೂ ಸ್ವತಂತ್ರ ಮನೋಭಾವದವರು. ಯಾರ ಹಂಗಿನಲ್ಲೂ ಇರಬಾರದು ಎಂಬುದು ಅವರ ದೃಢ ನಿರ್ಧಾರ. ಬದುಕಿನುದ್ದಕ್ಕೂ ಅದನ್ನು ವ್ರತದಂತೆ ಪಾಲಿಸಿಕೊಂಡು ಬಂದ ದಿಟ್ಟ ಮಹಿಳೆ ಅವರು.

ಮಕ್ಕಳಿಗೆ ಕಥೆ ಹೇಳುವ ಉತ್ಸಾಹ

ಪ್ರೇಮಾರವರು ಶಿಡ್ಲಘಟ್ಟದಲ್ಲಿದ್ದಾಗ ಚಿಕ್ಕ ಮಕ್ಕಳಿಗೆ ಕಥೆ ಹೇಳುತ್ತಿದ್ದರು. ಅದು ಅವರ ಮೆಚ್ಚಿನ ಹವ್ಯಾಸ. ಮಕ್ಕಳ ರಂಗಭೂಮಿಗೆ ಒತ್ತು ಕೊಡಲು ಇದೇ ಮುಖ್ಯ ಪ್ರೇರಣೆ ಆಗಿದ್ದಿರಬಹುದು. ತಮ್ಮ ಓರಗೆಯ ಹುಡುಗರಿಗೆ ಬ್ರಿಟಿಷರ ವಿರುದ್ಧ ಘೋಷಣೆಗಳನ್ನು ಬರೆದುಕೊಡುತ್ತಿದ್ದರು. ಅದರ ಒಂದು ಸ್ಯಾಂಪಲ್ ಹೀಗಿದೆ. 'ಚಂಬು ಚಟ್ಟಿ ಚಟ್ಟ ಕಟ್ಟಿ ಆರ್ ಕಾಟ್ ಬಾಯ್ ಕಾಟ್, ಬ್ರಿಟಿಷರಿಗೆ ಧಿಕ್ಕಾರ'. ಸ್ವಾತಂತ್ರ್ಯ ಅವರ ಹುಟ್ಟುಗುಣ, ಮನೋಧರ್ಮವಾಗಿತ್ತು.

ಬೆಂಗಳೂರಿನಲ್ಲಿದ್ದಾಗಲೇ ಪ್ರೇಮಾ ಅವರಿಗೆ ಬಿ.ವಿ. ಕಾರಂತರ ಪರಿಚಯವಾಗಿದ್ದು. ಕಾಶಿಯಲ್ಲಿದ್ದ ಕಾರಂತರು ದಸರಾ ರಜೆಗೆಂದು ಬೆಂಗಳೂರಿಗೆ ಬಂದಾಗ ಸ್ನೇಹಿತರು ಪ್ರೇಮಾ ಅವರ ಬಗ್ಗೆ ಹೇಳಿದ್ದನ್ನು ಕೇಳಿ ಕುತೂಹಲದಿಂದ ಪ್ರೇಮಾ ಅವರನ್ನು ಭೇಟಿಯಾದಾಗ ಅವರ ದಿಟ್ಟ ಸ್ವಭಾವ ಅವರಿಗೆ ಇಷ್ಟವಾಯಿತು. ಪ್ರೇಮಾ ಅವರಿಗೂ ಕಾರಂತರ ದಿಟ್ಟ ನಿಲುವು, ಗಡ್ಡ, ಗಂಭೀರ ಮುಖಭಾವ, ಅವರ ಹಾಡು ಎಲ್ಲವೂ ಇಷ್ಟವಾಗಿ ಬಿಟ್ಟಿತು. ಕಾರಂತರು ಪ್ರೇಮಾ ಅವರ ಮನಸ್ಸನ್ನು ಗೆದ್ದು ಬಿಟ್ಟಿದ್ದರು.

ಪ್ರೇಮಲೀಲಾ ಪ್ರೇಮಾ ಕಾರಂತ್ ಆದರು

ಅದೇ ವರ್ಷ ಜೂನ್-6ಕ್ಕೆ ಬಿ.ವಿ ಕಾರಂತ ಮತ್ತು ಪ್ರೇಮಲೀಲಾರವರು ಮೈಸೂರಿನ ಆಂಜನೇಯ ದೇವಸ್ಥಾನದಲ್ಲಿ ಆರ್ಯಸಮಾಜ ಪದ್ಧತಿಯಲ್ಲಿ ಶಾಸ್ತ್ರೋಕ್ತವಾಗಿ ಸತಿ-ಪತಿಗಳಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಅಲ್ಲಿಯವರೆಗೆ ಪ್ರೇಮಲೀಲಾ ಆಗಿದ್ದವರು ಮುಂದೆ ಪ್ರೇಮಾ ಕಾರಂತ್ ಎಂದೇ ಪರಿಚಿತರಾದರು.

ಮದುವೆ ಸಂಭ್ರಮದ ನಂತರ ಶಾಲೆಯ ಕೆಲಸಕ್ಕೆ ತೆರಳಿದ್ದ ಪ್ರೇಮಾರವರಿಗೆ ಆಘಾತ ಕಾದಿತ್ತು. 'ನಿಮಗೆ ಮದುವೆಯಾಗಿರುವುದರಿಂದ ನಿಮ್ಮ ಸರ್ವಿಸನ್ನು ಮುಂದುವರೆಸುವುದಕ್ಕೆ ಆಗುವುದಿಲ್ಲ'ವೆಂದು ಶಾಲೆಯ ಮ್ಯಾನೇಜ್‌ಮೆಂಟ್ ಒಂದು ತಿಂಗಳ ಸಂಬಳ ಕೊಟ್ಟು ವಿದಾಯ ಹೇಳಿತು. ಮೂರು ತಿಂಗಳು ಕಲ್ಕತ್ತದಲ್ಲಿದ್ದ

ಕಾರಂತರು ಕಾಶಿಗೆ ಬಂದು ಮಾನಸ ಸರೋವರ ಘಾಟ್‌ನಲ್ಲಿ ಹನ್ನೆರಡು ರೂಪಾಯಿ ಬಾಡಿಗೆ ಮನೆ ಗೊತ್ತು ಮಾಡಿ ಪ್ರೇಮಾರವರನ್ನು ಕರೆಯಿಸಿಕೊಂಡರು. ಮನೆಮಾಡಿದ ಮೇಲೆ ಪ್ರೇಮಾ ಅವರ ಚಿಕ್ಕಮ್ಮನೂ ಕಾಶಿಗೆ ಬಂದರು. ಮೂವರೂ ಗಯಾ, ಅಲಹಾಬಾದ್, ಕಾಶಿ, ಸಾರನಾಥಗಳನ್ನೆಲ್ಲಾ ಸುತ್ತಿ ಬಂದರು. ಮೂಲತ: ದಿಟ್ಟಮನಸ್ಸಿನ ಪ್ರೇಮ ಕಷ್ಟ ಕಂಡುಂಡು ಬೆಳೆದವರು. ಸ್ವಂತಿಕೆಯಿಂದ ಬದುಕು ರೂಪಿಸಿಕೊಂಡವರು. ಭವಿಷ್ಯದ ಬಗ್ಗೆ ಯೋಚಿಸದೆ ಇಂದು ಏನಾಗಬೇಕು ಎಂಬುದರ ಕಡೆಯೇ ಸದಾ ಅವರ ಗಮನ.

ಪ್ರೇಮಾರವರು ಕಾಶಿಗೆ ಬಂದು ಸೇರುತ್ತಿದ್ದಂತೆಯೇ ಕಾರಂತರಲ್ಲಿ ಮತ್ತೆ ಉತ್ಸಾಹ ಮೂಡಿತು. ಪ್ರೇಮಾರವರು ಕೇವಲ ಗೃಹಿಣಿ ಮಾತ್ರವಲ್ಲ. ದುಡಿದು ಸಂಸಾರ ಸಾಗಿಸುವ ಛಾತಿ ಉಳ್ಳವರಾಗಿದ್ದರು. ಕಾಶಿಯಲ್ಲಿ ಟೈಪ್‌ರೈಟಿಂಗ್ ಕಲಿಯಲು ಪ್ರಾರಂಭ ಮಾಡಿದರು ಪ್ರೇಮಾ.

ಕಾರಂತರು ಕಾಶಿ ಬಿಟ್ಟು ದೆಹಲಿಯ ಎನ್.ಎಸ್.ಡಿ ಸೇರಲು ಹೊರಟಾಗ ಅವರಿಗೆ ಜೊತೆಯಾದರು ಪ್ರೇಮಾ. ಕಾರಂತರಿಗೆ ಎನ್.ಎಸ್.ಡಿ ಪ್ರವೇಶ ಹಾಗೂ ಪ್ರೇಮಾರವರಿಗೆ ಮದ್ರಾಸ್ ಸ್ಕೂಲಲ್ಲಿ ಉಪಾಧ್ಯಾಯಿನಿಯಾಗಿ ನೇಮಕದ ಪತ್ರ ಎರಡೂ ಜೊತೆಯಲ್ಲೇ ಬಂದಿತ್ತು, ಆಗ ಪ್ರೇಮಾರ ಸಂಬಳ 120ರೂ. ಇದರ ಜೊತೆಗೆ ಕಾರಂತರು ಪ್ರೇಮ ಅವರನ್ನೂ ಎನ್.ಎಸ್.ಡಿಗೆ ಸೇರಿಸಿದರು. ಅವರು ಅಲ್ಲಿ ವಿದ್ಯಾರ್ಥಿನಿಯಾಗಿದ್ದಾಗಲೇ ಕಾರಂತರು ಅನುವಾದಿಸಿದ್ದ ಕನ್ನಡದ "ಹಿಟ್ಟಿನ ಹುಂಜ' ನಾಟಕವನ್ನು "ಆಟೇಕಾ ಕುಕ್ಕಟ್" ಎಂಬ ಹೆಸರಿನಲ್ಲಿ ಹಿಂದಿಯಲ್ಲಿ ಆಡಿಸಿದ್ದರು.

'ಸ್ಕಂದಗುಪ್ತ' ನಾಟಕ ಅವರು ಸ್ವತಂತ್ರವಾಗಿ ವಸ್ತ್ರವಿನ್ಯಾಸ ಮಾಡಿದ ಮೊದಲ ನಾಟಕ. ಎರಡು ವರ್ಷದ ಕೋರ್ಸ್ ಮುಗಿಯುತ್ತಿದ್ದಂತೆಯೇ ಪ್ರೇಮಾರವರಿಗೆ ಕಾರಂತರಿದ್ದ ಪಟೇಲ್ ಸ್ಕೂಲಿನಲ್ಲಿ ಇಂಗ್ಲೀಷ್ ಟೀಚರಾಗಿ ಕೆಲಸ ಸಿಕ್ಕಿತು.

ಹಂಸಗೀತೆ ಬೆಸೆದ ಸಿನಿಮಾ ನಂಟು

ಕಾರಂತರು ಬೆಂಗಳೂರಿಗೆ ಬಂದು ನಾಟಕವಾಡಲು ಮುಂದಾದಾಗ ಪ್ರೇಮಾ ಹಿಂಬಾಲಿಸಿದರು. ಜಿ.ವಿ. ಅಯ್ಯರ್ ನಿರ್ದೇಶನದ 'ಹಂಸಗೀತೆ' ಚಲನಚಿತ್ರಕ್ಕೆ ವಸ್ತ್ರವಿನ್ಯಾಸ ಮಾಡುವುದರ ಜೊತೆಗೆ ಈ ಸಿನಿಮಾದಲ್ಲಿ ವೆಂಕಟಸುಬ್ಬಯ್ಯನ ತಾಯಿಯ (ಬೋಳು ತಲೆ ಹೆಂಗಸಿನ) ಪಾತ್ರ ಮಾಡುವ ಮೂಲಕ ಪ್ರೇಮಾ ಚಿತ್ರರಂಗಕ್ಕೆ ಕಾಲಿಟ್ಟರು. ಸಿಂಹಾಸನ, ತಬ್ಬಲಿಯು ನೀನಾದೆ ಮಗನೆ, ಅಮರ ಮಧುರ ಪ್ರೇಮ, ಒಂದು ಪ್ರೇಮದ ಕಥೆ ಹೀಗೆ ಹತ್ತಾರು ಚಿತ್ರಗಳಲ್ಲಿ ನಟಿಸಿದರು.

ಕನ್ನಡದ ಮೊದಲ ನಿರ್ದೇಶಕಿ

ಪ್ರೇಮಾ ಕಾರಂತರು ಮೊದಲು ನಿರ್ದೇಶಿಸಿದ ಸಿನಿಮಾ 1983ರ 'ಫಣಿಯಮ್ಮ' (1983). ಬಾಬುಕೋಡಿ ಮೂವೀಸ್ ಲಾಂಛನದಲ್ಲಿ ಪ್ರೇಮಾ ಕಾರಂತರೇ ನಿರ್ಮಿಸಿದ ಚಿತ್ರವಿದು. ಈ ಚಿತ್ರ ಮಾಡಲು ಸಾಕಷ್ಟು ಪೂರ್ವಭಾವಿ ಸಿದ್ಧತೆ ನಡೆಸಿದ್ದರು. 'ಫಣಿಯಮ್ಮ' ಆ ವರ್ಷ ರಾಷ್ಟ್ರೀಯ ಮಟ್ಟದಲ್ಲಿ ಪ್ರಾದೇಶಿಕ ಅತ್ಯುತ್ತಮ ಪ್ರಶಸ್ತಿಯನ್ನು, ರಾಜ್ಯ ಮಟ್ಟದಲ್ಲಿ ಎರಡನೇ ಉತ್ತಮ ಚಿತ್ರ ಪ್ರಶಸ್ತಿಯನ್ನು ಪಡೆದುಕೊಂಡಿತು. ಮ್ಯಾನ್ ಹೀಂ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮೂರು ಪ್ರಶಸ್ತಿಗಳನ್ನು ಪಡೆದುಕೊಂಡಿತ್ತು. ಜೊತೆಗೆ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ. ಇಟಲಿ, ಪೋಲೆಂಡ್, ಜಪಾನ್, ಹಾವಾಯ್ ಮತ್ತು ಅಮೆರಿಕಾದ ಹದಿಮೂರು ದೇಶಗಳನ್ನು 'ಫಣಿಯಮ್ಮ' ಸುತ್ತಿ ಬಂದಿದೆ.

1990 ರಲ್ಲಿ 'ನಕ್ಕಳಾ ರಾಜಕುಮಾರಿ' ಚಿತ್ರ ನಿರ್ದೇಶಿಸಿದರು. ಆರು ಸಾಕ್ಷ್ಯ ಚಿತ್ರಗಳನ್ನು ಮಾಡಿದರು. 1997ರಲ್ಲಿ ಶಶಿದೇಶಪಾಂಡೆಯವರ ಕಾದಂಬರಿ 'ದ ಡಾರ್ಕ್ ಹೋಲ್ಸ್ ನೋ ಟೆರರ್ಸ್' ಆಧಾರಿತ 'ಬಂದ್ ಜರೋಕೆ' ಎಂಬ ಹಿಂದಿ ಚಲನಚಿತ್ರ ನಿರ್ದೇಶಿಸಿದ್ದರು. ಈ ಚಿತ್ರಕ್ಕೆ ವ್ಯಾಪಕ ಪ್ರಶಂಸೆ ದೊರಕಿತ್ತು.

ಬಂದೆರಗಿತು ಬರ ಸಿಡಿಲು

ಎಲ್ಲೆಡೆ ಜೋಡಿ ಹಕ್ಕಿಯಂತೆ ಸುತ್ತಾಡುತ್ತಿದ್ದ ಕಾರಂತ ದಂಪತಿಗಳ ಜೀವನದಲ್ಲಿ ಮಧ್ಯ ಪ್ರದೇಶದ ಭೂಪಾಲ್‌ನ ದುರ್ಘಟನೆ ಬರ ಸಿಡಿಲಿನಂತೆ ಬಂದೆರಗಿತು. ಅವರಿಬ್ಬರು ದೈಹಿಕವಾಗಿ, ಮಾನಸಿಕವಾಗಿ ಕುಗ್ಗಿ ಹೋಗುವಂತೆ ಮಾಡಿಬಿಟ್ಟಿತು. ಅದೇ ಕುಖ್ಯಾತ ಕಾರಂತ– ವಿಭಾ ಪ್ರಕರಣ. ಅಡಿಗೆ ಮಾಡುವಾಗ ಆಕಸ್ಮಿಕವಾಗಿ ವಿಭಾ ಮಿಶ್ರಾ ಅವರಿಗೆ ಬೆಂಕಿ ತಗಲಿ ಆ ಆರೋಪ ಬಿ. ವಿ. ಕಾರಂತರನ್ನು ಸುತ್ತಿಕೊಂಡು ಅವರು ಜೈಲು ಸೇರಬೇಕಾಗಿ ಬಂದಿತು. ನಂತರ ಅವರು ನಿರ್ದೋಷಿ ಎಂದು ಸಾಬೀತಾಯಿತು. ಆದರೆ ಇದಕ್ಕಾಗಿ ಆ ದಂಪತಿಗಳು ತೆತ್ತ ಬೆಲೆ?

"ಈ ಪ್ರಕರಣದ ಸಮಯದಲ್ಲಿ ನಾನು ಭೂಪಾಲಿನಲ್ಲಿ ಕಾರಂತರೊಂದಿಗೆ ಇಲ್ಲದೆ ಇರುತ್ತಿದ್ದರೆ ಬಹುಶಃ ಅವರನ್ನು ನಾನು ತೊರೆದು ಓಡಿ ಹೋಗುತ್ತಿದ್ದೆ" ಎಂದು ಪ್ರೇಮಾ ಅವರೇ ಹೇಳಿಕೊಂಡಿದ್ದಾರೆ. ಎಂಟು ವರ್ಷಗಳ ದೀರ್ಘ ಕಾಲ ನಡೆದ ಈ ಕೇಸಿನ ಸಂಬಂಧ ಲಾಯರ್‌ನ್ನು ಗೊತ್ತು ಮಾಡಿಕೊಂಡು ಕೋರ್ಟು, ಕಚೇರಿಗಳಿಗೆ ಅಲೆದಾಡಿ ಪತಿ ಜೈಲು ಪಾಲಾಗದಂತೆ ನೋಡಿಕೊಂಡು ತಾವೆಷ್ಟು ದಿಟ್ಟ ಮಹಿಳೆಯೆಂದು ಲೋಕಕ್ಕೆ ತೋರಿಸಿಕೊಟ್ಟರು. ಈ ಹಂತದಲ್ಲಿ ಅವರು ಪಟ್ಟ ಪಾಡು ಆ ದೇವರಿಗೇ ಪ್ರೀತಿ. **ಆ ಸಂಕಟದ ದಿನಗಳನ್ನು ಅವರಿಬ್ಬರು ಅನುಭವಿಸಿದ ಮಾನಸಿಕ ಯಾತನೆಯನ್ನು ಪ್ರೇಮಾ ಕಾರಂತರ ಆತ್ಮಕಥನ ಸೋಲಿಸಬೇಡ ಗೆಲಿಸಯ್ಯಾ ಓದಿಯೇ ಅರ್ಥೈಸಿಕೊಳ್ಳಬೇಕು.**

ಭೂಪಾಲದ ಜಂಜಾಟದಿಂದ ಮುಕ್ತರಾಗಿ ಬೆಂಗಳೂರಿಗೆ ಬಂದ ದಂಪತಿಗಳು ಜಯನಗರದ ಮನೆಯಲ್ಲಿ ವಾಸ್ತವ್ಯ ಹೂಡಿದರು. ಕಿರಿಯರ ಜೊತೆ ಸೇರಿ 'ಶಕಶೈಲೂಷರು' ಎಂಬ ನಾಟಕ ತಂಡ ಕಟ್ಟಿದರು. ಈ ತಂಡಕ್ಕೆ ಮೊದಲಿಗೆ ಪ್ರೇಮಾ ಅವರು 'ಹಕ್ಕಿಹಾರುತಿದೆ ನೋಡಿದಿರಾ' ನಾಟಕ ನಿರ್ದೇಶಿಸಿದರು. ಆಮೇಲೆ 'ಕುಣಿಯೋ ಕತ್ತೆ' ಎಂಬ ಮಕ್ಕಳ ನಾಟಕ ಮಾಡಿಸಿದರು.

ನಂತರ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಅಭಿನಯ ಪಾಠ ಮಾಡುವ ಉಪನ್ಯಾಸಕಿಯಾಗಿ ಸೇರಿಕೊಂಡರು. ಸುಮಾರು ಎಂಟು ವರ್ಷಗಳ ಕಾಲ ಅಲ್ಲಿ ಕೆಲಸ ಮಾಡಿದರು.

ಬೆನಕ ಮಕ್ಕಳ ನಾಟಕ ಕೇಂದ್ರ

1979ರಲ್ಲಿ ಹೊಸೂರಿನಲ್ಲಿ ನಡೆದ 'ಆಲಿಬಾಬ' ನಾಟಕಕ್ಕೆ ಹನ್ನೆರಡರಿಂದ ಹದಿನೆಂಟು ವಯಸ್ಸಿನೊಳಗಿನ ಅರವತ್ತೊಂಬತ್ತು ಬಾಲಕ–ಬಾಲಕಿಯರು ಅತ್ಯುತ್ಸಾಹದಿಂದ ಶಿಬಿರದಲ್ಲಿ ಭಾಗವಹಿಸಿದ್ದರು. ಒಂಬತ್ತು ದಿನಗಳ ಈ ಶಿಬಿರದ ನಿರ್ದೇಶನದ ಹೊಣೆ ಹೊತ್ತ ಪ್ರೇಮಾ ಕಾರಂತ್, ಕೇವಲ 216 ಗಂಟೆಗಳಲ್ಲಿ ಈ ಮಕ್ಕಳನ್ನು ಬೆರಗುಗೊಳ್ಳುವಷ್ಟು ತರಬೇತು ಮಾಡಿದ್ದರು. ಆಗಲೇ 'ಬೆನಕ ಮಕ್ಕಳ ನಾಟಕ ಕೇಂದ್ರ' ಅಸ್ತಿತ್ವಕ್ಕೆ ಬಂದಿದ್ದು.

'ಬೆನಕ ಮಕ್ಕಳ ನಾಟಕ ಕೇಂದ್ರ' ಪ್ರತಿ ವರ್ಷ ಬೇಸಿಗೆ ರಜೆಯಲ್ಲಿ ನಾಟಕ ಶಿಬಿರವೊಂದನ್ನು ಮಾಡಿ ನಾಟಕವನ್ನು ಪ್ರದರ್ಶಿಸುತ್ತಾ ಬಂದಿದೆ. ಆಲಿಬಾಬ ನಾಟಕದಿಂದ ಪ್ರಾರಂಭವಾಗಿ ನಿರಂತರವಾಗಿ 'ಬಂದಾ ಬಂದಾ ಗುಣವಂತ' 'ಕುಣಿಯೋ ಕತ್ತೆ', 'ಹೆಡ್ಡಾಯಣ', 'ಜಯಂಟ್ ಮಾಮ', 'ನಕ್ಕಳಾ ರಾಜಕುಮಾರಿ', 'ನಿರುಪಮ,' 'ಶೆಟ್ಟಿಕಥೆ', 'ಅಜ್ಜಿಕಥೆ' 'ಇಸ್ಪೀಟ್ ರಾಜ್ಯ' 'ಅಪಕಾರಿಯ ಕಥೆ' 'ಪುಷ್ಪರಾಣಿ', 'ಅಳಿಲು ರಾಮಾಯಣ', 'ಪಂಜರಶಾಲೆ'

'ಸಿಂದಾಬಾದ್' 'ಸುಣ್ಣದ ಸುತ್ತು', 'ಅದಲಿ ಬದಲಿ', 'ಕಿಂದರಜೋಗಿ' 'ಹುಚ್ಚು ದೊರೆ' ಮತ್ತು 'ಮೂವರು ಮಕ್ಕಳು' 'ಮಾಮಾ ಮೋಷಿ', 'ಕುಣಿ ಕುಣಿ ನವಿಲೆ' ಈ ಎಲ್ಲ ನಾಟಕಗಳನ್ನು ಪ್ರೇಮಾಕಾರಂತರೇ ನಿರ್ದೇಶಿಸಿರುವುದು ವಿಶೇಷ.

ಮಕ್ಕಳಿಗೆ ನಾಟಕದ ರುಚಿ ಹತ್ತಿಸಿದರು

ಪ್ರೇಮಾ ದಿಟ್ಟ ಮಹಿಳೆ, ಸ್ವಾಭಿಮಾನಿ, ಜೀವನದಲ್ಲಿ ಯಾವುದೇ ಸಂದರ್ಭದಲ್ಲಿ ಎದೆಗುಂದಿದವರಲ್ಲ. ಬಿ.ವಿ.ಕಾರಂತರಿಗೆ ಎಲ್ಲಾ ಕಾಲಕ್ಕೂ ಸಾಥ್ ನೀಡಿದವರು. ಅವರ ಅಭ್ಯುದಯದಲ್ಲಿ ಮಹತ್ವದ ಪಾತ್ರ ವಹಿಸಿದವರು. ಪ್ರೇಮಾ ಕಾರಂತ ರಂಗಚಟುವಟಿಕೆಗಳಲ್ಲಿ ತೊಡಗಿಕೊಂಡು ನಿರ್ದೇಶಕಿಯಾಗಿ ಹಲವಾರು ಮಕ್ಕಳ ನಾಟಕಗಳನ್ನು, ಸಿನಿಮಾಗಳನ್ನು ಕೊಟ್ಟವರು. ಬೆನಕ ಮಕ್ಕಳ ನಾಟಕ ಕೇಂದ್ರವನ್ನು ಸುಮಾರು ಇಪ್ಪತ್ತೈದು ವರ್ಷಗಳಿಂದಲೂ ನಡೆಸಿಕೊಂಡು ಬಂದವರು. ನಗರದ ಅನೇಕ ಶಾಲೆಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳ ರಂಗತರಬೇತಿ ಶಿಬಿರ ಹಾಗೂ ನಾಟಕ ಪ್ರದರ್ಶನ ಹಮ್ಮಿಕೊಂಡು ಮಕ್ಕಳಲ್ಲಿ ರಂಗಭೂಮಿಯ ಬಗ್ಗೆ ಅಭಿರುಚಿ ಬೆಳೆಸಿದವರು. ರಂಗಭೂಮಿಗೆ ಅದರಲ್ಲೂ ಮಕ್ಕಳ ರಂಗಭೂಮಿಗೆ ಅವರ ಕೊಡುಗೆ ಅಪಾರ.

"ಮಕ್ಕಳಲ್ಲಿರುವುದು ಸ್ವಾಭಾವಿಕವಾದ ಮಾತಿನ ಶೈಲಿ, ಮುಖಭಾವ, ಅಪಾರ ಚೈತನ್ಯ. ಇವೆಲ್ಲಾ ಮಕ್ಕಳ ಬೆಳವಣಿಗೆಗೆ ಅವಶ್ಯಕ. ಶಾಲೆಗಳಲ್ಲಿ ಕಲ್ಪನಾಶಕ್ತಿಯಿರುವ ಅಧ್ಯಾಪಕರಿಂದ ಮಕ್ಕಳಲ್ಲಿ ಇರುವ ಈ ಸೃಜನಾತ್ಮಕ ಶಕ್ತಿ ಸೃಜನಾತ್ಮಕ ನಾಟಕ ರೂಪ ಹೊಂದಿದರೆ ಎಷ್ಟೊಂದು ಚಂದ. ಇದೇ ಮಕ್ಕಳ ನಾಟಕ ಸ್ವಯಂ ಪ್ರೇರಿತ ನಾಟಕ. ಇಲ್ಲಿ ಮಕ್ಕಳು ಸಂಭಾಷಣೆಗಳನ್ನು ಉರು ಹೊಡೆಯ ಬೇಕಾಗಿಲ್ಲ. ಹೆಚ್ಚಿನ ನಿರ್ದೇಶನದ ಅಗತ್ಯವಿಲ್ಲ. ಬರೀ ಮಾರ್ಗದರ್ಶನವಿದ್ದರೆ ಸಾಕು. ಮಕ್ಕಳು ಅಸಾಧ್ಯವಾದುದನ್ನೆಲ್ಲಾ ಮಾಡಿ ಬಿಡುತ್ತಾರೆ. ಅವರದೇ ಆದ ಅಭಿನಯ, ಅವರದೇ ಆದ ಸಂಭಾಷಣೆ ಈ ರೀತಿಯ ಅನೌಪಚಾರಿಕ ನಾಟಕಕ್ಕೆ ಬೇಕಾದುದು ಜಾಗ ಮತ್ತು ಕಲ್ಪನಾಶಕ್ತಿ. ಇದಕ್ಕೆ ಪ್ರೇಕ್ಷಕರೂ ಬೇಕಿಲ್ಲ. ಭಾಗವಹಿಸುವ ಮಕ್ಕಳೇ ಪ್ರೇಕ್ಷಕರು" ಎಂದು ಪ್ರೇಮಾ ಕಾರಂತರು ಹೇಳಿರುವುದು ಅವರ ಸ್ವಾನುಭವದ ಅಭಿವ್ಯಕ್ತಿ.

ಪ್ರೇಮಾ ಅವರಿಗೆ ಮಕ್ಕಳೆಂದರೆ ತುಂಬಾ ಪ್ರೀತಿ. ಸ್ವಂತ ಮಕ್ಕಳಿಲ್ಲದ ಪ್ರೇಮಾ ಎಲ್ಲ ಮಕ್ಕಳನ್ನು ಸ್ವಂತ ಮಕ್ಕಳಂತೆ ಪ್ರೀತಿಸುತ್ತಿದ್ದರು. ಬಹುಶಃ ಇದೇ ಕಾರಣಕ್ಕಾಗಿಯೇ ಏನೋ ಅವರು ಕೊನೆಯುಸಿರಿನತನಕ ಮಕ್ಕಳ ರಂಗಭೂಮಿಯಲ್ಲಿ ಕಾರ್ಯೋನ್ಮುಖರಾಗಿದ್ದರು. ಸದಾ ರಂಗ ಚಟುವಟಿಕೆಗಳಲ್ಲಿ ಮಗ್ನರಾಗುತ್ತ ಜೀವನೋತ್ಸಾಹವನ್ನು ತುಂಬಿಕೊಳ್ಳುತ್ತ ಸಮಾಜ ಮುಖಿಯಾಗಿ ಜೀವನ ನಿರ್ವಹಿಸಿದ ಧೀಮಂತೆ ಪ್ರೇಮಾ ಕಾರಂತರು.

ಸಾಕ್ಷ್ಯ ಚಿತ್ರಗಳು

- ಮಣಿಪುರದ ಬಗ್ಗೆ ಸಾಕ್ಷ್ಯ ಚಿತ್ರ ನಿರ್ದೇಶನ.
- ಇನ್‌ಕಮ್‌ಟ್ಯಾಕ್‌ನವರಿಗಾಗಿ 'ಅಪ್ಪಿಕೋ' ಚಳವಳಿಯ ಸಾಕ್ಷ್ಯಚಿತ್ರ ನಿರ್ದೇಶನ
- ಸ್ವಪ್ನ ಹುವಿ ಸರ್ಕಾರ್
- ವಿಕ್ರಾಂತ್ ಟಯರ್ಸ್ ಬಗ್ಗೆ ಸಾಕ್ಷ್ಯ ಚಿತ್ರ
- ಅವಲೋಕನ – ಸಾಕ್ಷ್ಯ ಚಿತ್ರ
- ಶ್ರೀ ನಾಟಕ ಮಂಡಳಿಯ ಆರ್. ನಾಗರತ್ನಮ್ಮ ನವರ ಬಗ್ಗೆ ಸಾಕ್ಷ್ಯ ಚಿತ್ರ

ಸಿನಿಮಾಗಳು

- ಫಣಿಯಮ್ಮ
- ನಕ್ಕಳಾ ರಾಜಕುಮಾರಿ – ಮಕ್ಕಳ ಸಿನಿಮಾ
- ಶಶಿದೇಶಪಾಂಡೆ ಅವರ 'ದಿ ಡಾರ್ಕ್ ಹೋಲ್ಡ್ಸ್ ಟೆರರ್' ಕಾದಂಬರಿ ಆಧರಿಸಿ 'ಬಂದ್ ಜರೋಕೆ' ಎಂಬ ಹಿಂದಿ ಚಲನಚಿತ್ರ (ಎನ್.ಎಫ್.ಡಿ.ಸಿ ಪ್ರೊಡಕ್ಷನ್) ನಿರ್ದೇಶನ. ಮಧು ಅಂಬಟ್ – ಛಾಯಾಗ್ರಹಣ
- ಲಕ್ಷ್ಮೀ ಕಟಾಕ್ಷ
- ಅಬ್ದುಲ್ಲ ಗೋಪಾಲ
- ಕರ್ನಾಟಕದ ರಂಗವಾದ್ಯಗಳು, ರಂಗಪರಿಕರಗಳು, ರಂಗವಸ್ತ್ರಗಳು, ಡ್ಯಾಕುಮೆಂಟೇಷನ್ ಮೇಲೆ ಹೆಚ್ ಆರ್ ಡಿಯ ಸುದೀರ್ಘ ಪ್ರಾಜೆಕ್ಟ್. ಡಾಕ್ಯುಮೆಂಟೇಷನ್ ಥ್ರೂ ಫೋಟೋಗ್ರಾಪ್.
- 1980ರಲ್ಲಿ 'ಸಮುದಾಯ' ತಂಡದಲ್ಲಿ ಪ್ರಸನ್ನ ನಿರ್ದೇಶನದ "ಮ್ಯಾಕ್‌ಬತ್" ನಾಟಕದಲ್ಲಿ ಲೇಡಿ ಮ್ಯಾಕ್‌ಬೆತ್ ಪಾತ್ರ ನಿರ್ವಹಣೆ.

ನಿರ್ದೇಶಿಸಿದ ನಾಟಕಗಳು

ಆಲಿಬಾಬ ಮತ್ತು ನಲವತ್ತು ಕಳ್ಳರು (1978–79) ಬಂದ ಬಂದ ಗುಣವಂತ (1979–80), ಕುಣಿಯೋ ಕತ್ತಿ (1980–81), ಹೆಡ್ಡಾಯಣ (1981–82), ಪೈಂಟ್ ಮಾಮ (1982–83),

ನಕ್ಕಳಾ ರಾಜಕುಮಾರಿ (1986–87), ನಿರುಪಮ (1987–88), ಶೆಟಿಕಥೆ (1988–89), ಅಜ್ಜಿ ಕಥೆ (1992–93), ಇಸ್ಪೀಟ್ ರಾಜ್ಯ (1993–94), ಅಪಕಾರಿಯ ಕಥೆ 1996–97), ಪುಷ್ಪ ರಾಣಿ (1997–98), ಇಸ್ಪೀಟ್ ರಾಜ್ಯ (1998–99), ಅಳಿಲು ರಾಮಾಯಣ (1999–2000), ಪಂಜರ ಶಾಲೆ (2000–2001), ಸಿಂದಬಾದ್ (2001–2002), ಸುಣ್ಣದ ಸುತ್ತ (2002–2003), ಅದಲಿ ಬದಲಿ ಕಂಚಿ ಕದಲಿ (ಬೆಳ್ಳಿ ಹಬ್ಬದ ವರ್ಷ) (2003)

ಪ್ರಶಸ್ತಿಗಳು

ಅಂತಾರಾಷ್ಟ್ರೀಯ ಪ್ರಶಸ್ತಿಗಳು – ಮ್ಯಾನ್ ಹ್ಯಾಂನಲ್ಲಿ ಫಣಿಯಮ್ಮ ಚಿತ್ರಕ್ಕೆ ಮೂರು ಪ್ರಶಸ್ತಿಗಳು, ರಾಷ್ಟ್ರೀಯ ಪ್ರಶಸ್ತಿಗಳು–ಅತ್ತ್ಯುತ್ತಮ ಕನ್ನಡ ಚಿತ್ರ ದ್ವಿತೀಯ ಉತ್ತಮ ಕನ್ನಡ ಚಿತ್ರ, ಅತ್ತ್ಯುತ್ತಮ ಕಥೆ, ಅತ್ತ್ಯುತ್ತಮ ಪೋಷಕ ನಟಿ

ಫಿಲಂಫೇರ್ ಪ್ರಶಸ್ತಿ– – ಅತ್ತ್ಯುತ್ತಮ ಚಿತ್ರ
– ಅತ್ತ್ಯುತ್ತಮ ನಿರ್ದೇಶಕಿ
– ರಾಜ್ಯ ನಾಟಕ ಆಕಾಡೆಮಿ ಪ್ರಶಸ್ತಿ

ಆಕರ: 1. ಬಿ.ವಿ. ಕಾರಂತ– ಪ್ರೇಮಾ ಕಾರಂತ: ಟಿಎಸ್. ನಾಗಾಭರಣ
2. ಕನ್ನಡ ಚಲನಚಿತ್ರ ಇತಿಹಾಸ. ಡಾ. ವಿಜಯ.ವಿ.ಎನ್.ಸುಬ್ಬರಾವ್
3. ಆತ್ಮಕಥನ– ಸೋಲಿಸಬೇಡ ಗೆಲಿಸಯ್ಯಾ

———— * ————

ಪದ್ಮಶ್ರೀ ಪುರಸ್ಕೃತರಾದ ಸಾಹಿತಿ, ಸಮಾಜ ಸೇವಕಿ ಉದ್ಯಮಿ ಸುಧಾ ಮೂರ್ತಿ

ಅಂಜನಾ ರಂಜನಾ

ಹಿರಿಯರ ಕಥೆಗಳ ಮೂಲಕ ಮತ್ತು ಅನುಭವದಿಂದ ಕಂಡುಕೊಂಡ ಜೀವನ-ತತ್ವ-ಮೌಲ್ಯಗಳನ್ನು ತಿಳಿಸುವ ಮೂಲಕ ಯಾರಿಗೇ ಆದರೂ ಮಾರ್ಗದರ್ಶಕಿಯಾಗಬಲ್ಲ ಒಂದು ಬೆಳಕಿನ ಬಂಡಿ ಶ್ರೀಮತಿ ಸುಧಾ ಮೂರ್ತಿ ಅವರು. ಆಕೆ ಪ್ರಮುಖವಾಗಿ ಒಬ್ಬ ಜನೋಪಕಾರಿ ಸಮಾಜ ಸೇವಕಿ, ಗಣಕ ಯಂತ್ರ ತಂತ್ರಜ್ಞೆ, ಲೇಖಿಕಿ, ಅಂಕಣ ಗಾರ್ತಿ, ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಆಗ ಟಾಟಾ ಸಂಸ್ಥೆ) ನೇಮಕಗೊಂಡ ಮೊಟ್ಟ ಮೊದಲ ಮೇಧಾವಿ ಮಹಿಳಾ ಎಂಜಿನಿಯರ್, ಪದ್ಮಶ್ರೀ ಪ್ರಶಸ್ತಿ ವಿಜೇತೆ ಮತ್ತು ಉತ್ತಮ ಶಿಕ್ಷಕಿಯೂ ಹೌದು. ಈಕೆಯ ಈ ಒಂದು ಸಾಲಿನ ಪರಿಚಯದಲ್ಲಿ ಹಲವು ರೀತಿಯ ಪ್ರತಿಭೆಗಳು ಮೇಳೈಸಿರುವುದನ್ನು ಕಾಣಬಹುದು. ಇನ್ನೂ ಒಂದು ಗಮನೀಯ ಅಂಶವೆಂದರೆ, ಭಾರತದ ಮಾದರಿ ಪ್ರತಿಮೆ, ಯಶಸ್ವೀ ಸಾಂಸ್ಥಿಕ ವ್ಯಕ್ತಿ(ಕಾರ್ಪೋರೇಟ್), ಮಹೋನ್ನತ ಉದ್ಯಮಿ, ಗಣಕ ಯಂತ್ರ ವಿಜ್ಞಾನಿ, ಭಾರತದ ಬೃಹತ್ ಸಾಫ್ಟ್‌ವೇರ್ ಕಂಪನಿಗಳಲ್ಲಿ ಎರಡನೆಯ ಸ್ಥಾನದಲ್ಲಿರುವ ಇನ್‌ಫೋಸಿಸ್‌ನ ಸಂಸ್ಥಾಪಕರಾದ ಎನ್. ಆರ್. ನಾರಾಯಣ ಮೂರ್ತಿ ಅವರು ಈಕೆಯ ಜೀವನ ಸಂಗಾತಿ ಎಂಬುದು ಸುಧಾ ಅವರ ಎರಡನೇ ಪರಿಚಯ. ಇವರ ಕುರಿತು ಒಂದೆರಡು ಹಿಡಿ ಮಾಹಿತಿಯನ್ನು ಈ ಲೇಖನದಲ್ಲಿ ನೋಡಬಹುದು.

ಹುಬ್ಬಳ್ಳಿಯ ಮಧ್ಯಮ ವರ್ಗದ ಸಂಪ್ರದಾಯಸ್ಥ ಮಾಧ್ವ ಕುಟುಂಬಕ್ಕೆ ಸೇರಿದ ಸುಧಾ ಮೂರ್ತಿ ಅವರು ಜನಿಸಿದ್ದು 1950ರ ಆಗಸ್ಟ್ ಎಂಟರಂದು, ಧಾರವಾಡ ಜಿಲ್ಲೆಯ ಶಿಗ್ಗಾಂವ್ ಎಂಬ ಊರಿನಲ್ಲಿ. ಇವರ ತಂದೆ ರಾಮಚಂದ್ರ ಕುಲಕರ್ಣಿಯವರು, ವೈದ್ಯರು. ತಾಯಿಯ ಹೆಸರು ವಿಮಲಾ. ಇಪ್ಪತ್ತನೇ ಶತಮಾನ ಕಂಡ ಅತ್ಯುತ್ತಮ ಉಪಾಧ್ಯಾಯರಲ್ಲಿ ಒಬ್ಬರಾದ ನಾರಾಯಣ ಮೆಳಿಗೇರಿಯವರು ಈಕೆಯ ತಾತ. ಪ್ರಖ್ಯಾತ ಜ್ಯೋತಿರ್ಭೌತ ವಿಜ್ಞಾನಿ ಶ್ರೀನಿವಾಸ ಕುಲಕರ್ಣಿಯವರು ಹಾಗೂ ಬಿಲಿಯನೇರ್ ಟೆಲಿಕಾಂ ಟೈಕೂನ್ ಗುರುರಾಜ ದೇಶಪಾಂಡೆ ಅವರ ಪತ್ನಿ ಜಯಶ್ರೀ ದೇಶಪಾಂಡೆ ಅವರುಗಳ ಸಹೋದರಿ ಈ ಸುಧಾ – ಹೀಗೆ ಸುಸಂಸ್ಕೃತ ವಾತಾವರಣದಲ್ಲಿ ಹಾಗೂ ಸುತ್ತ ಮುತ್ತ ಇರುವ ವಿದ್ಯಾವಂತ ಸಂಬಂಧಿಗಳ ಸಂಪರ್ಕದಲ್ಲಿ, ಪರಿಪಕ್ವ ನಡೆ-ನುಡಿಗಳ ನೆರಳಲ್ಲಿ ಇವರ ಗುಣ-ಸ್ವಭಾವಗಳು ರೂಪಿತಗೊಂಡಿವೆ. ಇವರ ಬುದ್ಧಿವಂತಿಕೆಯನ್ನು ಇನ್ನಷ್ಟು ಮೊನಚುಗೊಳಿಸಿವೆ.

ಆರಂಭದ ಸಾರ್ವತ್ರಿಕ ಪರೀಕ್ಷೆಗಳೇ ಸುಧಾ ಅವರ ಮೇಧಾವಿ ಮಿದುಳಿನ ಪರಿಚಯ ಮಾಡಿಕೊಡುತ್ತವೆ. ಹುಬ್ಬಳ್ಳಿಯ ನ್ಯೂ ಎಜುಕೇಷನ್ ಸೊಸೈಟಿ ಇಂಗ್ಲಿಷ್ ಸ್ಕೂಲ್‌ನಲ್ಲಿ, 1966ರಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದು ಎಸ್.ಎಸ್.ಎಲ್.ಸಿ ತೇರ್ಗಡೆಯಾದ ಹುಡುಗಿ. 1968ರಲ್ಲಿ ಇಲ್ಲಿಯ ಬಿ.ವಿ.ಬಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಪ್ರವೇಶ ಪಡೆದ ಏಕೈಕ ವಿದ್ಯಾರ್ಥಿನಿ. ಎಂಜಿನಿಯರಿಂಗ್ ಎಂದರೆ ಹೆಣ್ಣು ಮಕ್ಕಳು ಕಲಿಯಲು ಅಸಾಧ್ಯವಾದ ಒಂದು ಬ್ರಹ್ಮವಿದ್ಯೆ ಎಂಬ ಭಾವನೆ ಇದ್ದ ಕಾಲದಲ್ಲಿ, ಈ ಭಾವನೆಗೆ ಅಚ್ಚರಿಯಾಗುವಂತೆ ಕರ್ನಾಟಕ ರಾಜ್ಯದಲ್ಲಿದ್ದ

ಎಲ್ಲ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಅಂಕ ಪಡೆದು ಅತ್ಯುನ್ನತ ಸ್ಥಾನದಲ್ಲಿ ನಿಂತ ಹುಡುಗಿ. 1972ರಲ್ಲಿ ಅಂದಿನ ಮುಖ್ಯ ಮಂತ್ರಿಗಳಿಂದ ಚಿನ್ನದ ಫಲಕ ಸ್ವೀಕರಿಸುವ ಅವಕಾಶ ದೊರಕಿಸಿ ಕೊಟ್ಟಿತು ಆಕೆ ಗಳಿಸಿದ ಈ ಮೊದಲ ಸ್ಥಾನ. ಗಣಕ ಯಂತ್ರ ವಿಜ್ಞಾನದಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಿಂದ 1974ರಲ್ಲಿ ಎಂ.ಟೆಕ್ ಸ್ನಾತಕೋತ್ತರ ಪದವಿಯನ್ನೂ, ಎಂಜಿನಿಯರಿಂಗ್‌ನ ಎಲ್ಲ ಶಾಖೆಯ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಅಂಕ ಪಡೆದು ಪ್ರಥಮ ಸ್ಥಾನವನ್ನೂ ಪಡೆದದ್ದರಿಂದ, ಇಂಜನಿಯರ್ಸ್ ಸಂಸ್ಥೆಯಿಂದ ಸುವರ್ಣ ಪದಕ ಪಡೆದ ಮತ್ತೊಂದು ಹೆಗ್ಗಳಿಕೆ ಇವರದು.

ಓದುತ್ತಿರುವಾಗಲೇ ಟೆಲ್ಕೋ ಕಂಪೆನಿಯ ಜಾಹೀರಾತೊಂದು ಈಕೆಯ ಕಣ್ಣಿಗೆ ಬಿತ್ತು. ಅದು ತರಬೇತುದಾರ ಎಂಜಿನಿಯರ್‌ಗಳ ಪ್ರವೇಶಕ್ಕೆ ಆಹ್ವಾನ. ಆದರೆ 'ಮಹಿಳೆಯರು ಇದಕ್ಕೆ ಅರ್ಜಿ ಹಾಕುವಂತಿಲ್ಲ' ಎಂಬ ಸೂಚನೆಯೂ ಅದರ ಜೊತೆಗೇ ಇತ್ತು. ಕಣ್ಣಿಗೆ ರಾಚಿದ ಈ ಲಿಂಗ-ಭೇದ ಸೂಚನೆ, ಸುಧಾ ಅವರ ಅಭಿಮಾನವನ್ನು ಕೆರಳಿಸಿತು. ತಕ್ಷಣ ಅವರು, ಒಂದು ಪೋಸ್ಟ್ ಕಾರ್ಡ್‌ನಲ್ಲಿ ಈ ಸೂಚನೆಯನ್ನು ಖಂಡಿಸಿ ಪತ್ರ ಬರೆದರು. ಯಾರ ವಿಳಾಸಕ್ಕೆ ಬರೆಯಬೇಕೆಂದು ತಿಳಿಯದೇ ಸ್ವಲ್ಪ ಆಲೋಚಿಸಿ ಸಂಸ್ಥೆಯ ಉನ್ನತ ಸ್ಥಾನದಲ್ಲಿದ್ದ ಜೆ.ಆರ್.ಡಿ.ಟಾಟಾ ಅವರಿಗೆ ವಿಳಾಸಕ್ಕೆ ಕಳಿಸಿದರು. ವಿಶಾಲ ಮನಸ್ಸಿನ ಜೆ.ಆರ್.ಡಿ ಟಾಟಾ ಅವರು ಸಣ್ಣ ಹುಡುಗಿಯ ಮಾತೆಂದು ಅಸಡ್ಡೆ ಮಾಡದೆ, ಪತ್ರದ ಒಕ್ಕಣೆಗೆ ಬೆಲೆ ಕೊಟ್ಟಿದ್ದರು. ಹತ್ತು ದಿನಗಳೊಳಗೆ ಸುಧಾ ಅವರಿಗೆ ಬಂದಿದ್ದು ವಿಶೇಷ ಸಂದರ್ಶನಕ್ಕೆ ತಂತಿ ಮೂಲಕ ಕರೆ. ಕರೆ ನೋಡಿ ಬೆಚ್ಚಿದರು. ತಾವು ಬರೆದುದು ತಪ್ಪಾಯಿತೇ ಎಂದು ಒಳಗೇ ಒಂದಿಷ್ಟು ಗಾಬರಿಯೂ ಆದರು. ಉಚಿತವಾಗಿ ಊರು ನೋಡಲು ಸಿಕ್ಕಿರುವ ಅವಕಾಶವನ್ನು ಬಿಡಬೇಡ ಎಂದ ಗೆಳತಿಯರ ಉತ್ತೇಜನ ಈಕೆಗೆ ಉತ್ಸಾಹ ನೀಡಿತು. ತಮಾಷೆ ಎಂದರೆ, ಪುಣೆಯಲ್ಲಿ ಸೋವಿಗೆ ಸಿಗುವ ಸೀರೆಗಳನ್ನು ನಮಗೂ ಕೊಂಡು ತಾ ಎಂದ ಗೆಳತಿಯರ ಮಾತಿಗೆ ತಲೆ ಆಡಿಸಿ, ಸೀರೆ ಬೇಕೆಂದ ಎಲ್ಲ ಗೆಳತಿಯರಿಂದ ತಲಾ ಮೂವತ್ತು ರೂಪಾಯಿಗಳನ್ನು ಸಂಗ್ರಹಿಸಿ ಪುಣೆಗೆ ಹೊರಟರು.

ಸಂದರ್ಶನ ಸುಲಭದ್ದಾಗಿರಲಿಲ್ಲ. ಎರಡು ಮೂರು ಗಂಟೆಗಳ ಕಾಲ ಸಂದರ್ಶಕರ ತಂಡವು ಸತತವಾಗಿ ಸುರಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ನೀಡಿದರು ಸುಧಾ. ಆದರೂ ಕೊನೆಯಲ್ಲಿ ಸಂದರ್ಶಕರಲ್ಲೊಬ್ಬರು, 'ಮಹಿಳೆಯರು ಮದುವೆಯಾದ ಮೇಲೆ ತಮ್ಮ ಪತಿಯೊಂದಿಗೆ ಸಂಸಾರ ನಡೆಸಲು ಕೆಲಸವನ್ನು ಬಿಟ್ಟು ಬಿಡುತ್ತಾರೆ. ತರಬೇತಿಗೆ ಸಾಕಷ್ಟು ಖರ್ಚು ಮಾಡಿ, ಅವರು ಬಿಟ್ಟು ಹೋದರೆ ಕಂಪನಿಗೆ ನಷ್ಟ. ಟೆಲ್ಕೋಗೆ ಮಹಿಳೆಯರನ್ನು ನೇಮಕ ಮಾಡದಿರಲು ಇದೇ ಕಾರಣ' ಎಂದು ಹೇಳಿದರಂತೆ.

ಅವರ ಮಾತನ್ನು ಒಪ್ಪಿದ ಸುಧಾ ಅವರು, 'ನೀವುಗಳೂ ಹಲವರು ಮದುವೆಯಾದಾಗ ನಮ್ಮ ಪದ್ಧತಿಯ ಪ್ರಕಾರ ನಿಮ್ಮ ಪತ್ನಿಯರು ನೀವಿರುವ ಸ್ಥಳಕ್ಕೆ ನಿಮ್ಮೊಡನೆ ಬಂದಿರುತ್ತಾರೆ. ಮಹಿಳೆಯರು ಅವರವರ ಪತಿಯರಿರುವಲ್ಲಿಗೆ ಹೋಗಿ ಸೇರಿಕೊಳ್ಳುವುದು ಅನಿವಾರ್ಯವಾಗುತ್ತದೆ. ಆದರೆ ಸಾಮಾನ್ಯವಾಗಿ ಹೆಚ್ಚಿನ ಪುರುಷರು ಹೆಚ್ಚು ಹಣ ಸಿಗುವ ಅವಕಾಶ ಬಂದರೆ ಇಲ್ಲಿಂದ ಬಿಟ್ಟು ಬೇರೆ ಕೆಲಸಕ್ಕೆ ಹೋಗುತ್ತಾರೆ. ಅವರ ತರಬೇತಿಗೂ ಹಣ ಖರ್ಚು ಮಾಡಿರುತ್ತೀರಿ. ಅದಕ್ಕೆ ನಿಮ್ಮಲ್ಲಿ ಯಾವ ನಿಯಮವೂ ಇಲ್ಲ. ಹಾಗೆ ಬಿಡದಂತೆ ನೋಡಿಕೊಳ್ಳಲು ನಿಮ್ಮಿಂದ ಸಾಧ್ಯವಿಲ್ಲ' ಎಂಬ ಉತ್ತರ ಕೊಟ್ಟಿದ್ದರು. ಈ ಉತ್ತರ ಸಂದರ್ಶಕರ ತಂಡವನ್ನು ಬೆಚ್ಚಿಸಿತ್ತು.

ಅಂದರೆ ಸ್ತ್ರೀಯರಿಗೆ ಮದುವೆಯ ಕಾರಣಕ್ಕೆ (ಪತಿಯಾದವನು ಪತ್ನಿಯು ಎಷ್ಟೇ ಉನ್ನತ ಹುದ್ದೆಯಲ್ಲಿದ್ದರೂ ಕೆಲಸ ಬಿಟ್ಟು ಪತ್ನಿ ಇರುವಲ್ಲಿಗೆ ಬಾರದ್ದರಿಂದ ತಾನೇ) ಕೆಲಸ ಬಿಡುವ ಅನಿವಾರ್ಯತೆ ಒದಗಿದರೆ, ಪುರುಷರು ಹೆಚ್ಚಿನ ಹಣ ಗಳಿಸುವ ಕಾರಣಕ್ಕೆ ಕೆಲಸ ಬಿಡುವ ಮನಸ್ಸು ಮಾಡುತ್ತಾರೆ. ಕಾರಣ ಏನೇ ಇರಲಿ ಕಂಪೆನಿಗೆ ಪರಿಣಾಮ(ನಷ್ಟ) ಒಂದೇ ಅಲ್ಲವೇ? ಎಂದು ಈ ಹುಡುಗಿ ಸಂದರ್ಶಕರ ತಂಡಕ್ಕೇ ಸವಾಲು ಹಾಕಿ ಸ್ಪಷ್ಟ ಪಡಿಸಿದ್ದು ಆ ಕಾಲಕ್ಕೆ ಸಾಮಾನ್ಯ ಸಂಗತಿಯಲ್ಲ.

ಕೆಲವೇ ದಿನಗಳಲ್ಲಿ ಟೆಲ್ಕೋದಿಂದ ಕೆಲಸದ ಆದೇಶ ಸುಧಾ ಅವರ ಕೈ ಸೇರಿತು. ಟೆಲ್ಕೋದ ಶಾಪ್ ಫ್ಲೋರ್‌ನಲ್ಲಿ, ಮೊಟ್ಟ ಮೊದಲ ಮಹಿಳಾ ಡೆವಲಪ್‌ಮೆಂಟಲ್ ಎಂಜಿನಿಯರ್ ಆಗಿ ಪುಣೆಯಲ್ಲಿ ಕೆಲಸ ಆರಂಭಿಸಿದರು ಸುಧಾ ಅವರು. 1974ರಿಂದ 1981ರ ವರೆಗಿನ ಪುಣೆಯ ದುಡಿಮೆಯ ನಂತರ ಮುಂಬಯಿಗೆ ವರ್ಗಾವಣೆಗೊಂಡರು. ಇಲ್ಲಿ ಬಾಂಬೆ ಹೌಸ್‌ನಲ್ಲಿ ಅವರ ಕೆಲಸ. ಒಬ್ಬ ಸಣ್ಣ ಹುಡುಗಿ ಒಂದು ಪುಟ್ಟ ಪೋಸ್ಟ್ ಕಾರ್ಡ್‌ನಲ್ಲಿ ಬರೆದ ಸಾಲುಗಳು ವಿಚಾರಾರ್ಹವಾದಂಥವು ಎಂಬುದನ್ನು ಮನಗಂಡು ಸಂದರ್ಶನಕ್ಕೆ ಕರೆಯಲು ವ್ಯವಸ್ಥೆ ಮಾಡಿದ ಆ ಮಹಾತ್ಮ ಜೆಆರ್‌ಡಿ ಟಾಟಾ ಅವರನ್ನು ಮಾತ್ರ ಸುಧಾ ಅವರು ಎಷ್ಟೋ ಕಾಲದವರೆಗೆ ಕಂಡಿರಲೇ ಇಲ್ಲ. ಕಾಗದ ಬರೆದಾಗ ಯಾರೋ ಏನೋ ಆಗಿದ್ದ ವ್ಯಕ್ತಿ, ತಾವೀಗ ಕೆಲಸ ಮಾಡುವ ಸಂಸ್ಥೆಯ, ಟಾಟಾ ಸಮೂಹದ ಅಧ್ಯಕ್ಷರಾದವರಾಗಿದ್ದರು. ಅತ್ಯುನ್ನತ ಸ್ಥಾನದಲ್ಲಿದ್ದವರಾಗಿದ್ದರು. ಅವರ ಎದುರಿಗೆ ಇವರು ಒಬ್ಬ ಕೇವಲ ಇಂಜಿನಿಯರ್ ಮಾತ್ರವಾಗಿದ್ದರು. ಅಂಥ ಉನ್ನತ ವ್ಯಕ್ತಿ ಸಣ್ಣ ವಯಸ್ಸಿನ ಸಣ್ಣ ಹುದ್ದೆಯ ಒಬ್ಬ ಎಂಜಿನಿಯರ್ ಜೊತೆ ನಡೆದುಕೊಳ್ಳುತ್ತಿದ್ದ ರೀತಿಯಿಂದಾಗಿ ಸುಧಾ ಅವರಿಗೆ ಸದಾ ಸ್ಮರಣೀಯರಾಗಿ ಮನದಲ್ಲಿ ಉಳಿದರು. ಇವರ ನಡೆ-ನುಡಿಗಳನ್ನೂ ರೂಪಿಸಿಕೊಳ್ಳಲು ಕಾರಣರಾದರು.

ಸುಧಾ ಅವರು, ಎನ್. ಆರ್ ನಾರಾಯಣಮೂರ್ತಿಯವರನ್ನು ಭೇಟಿಯಾದದ್ದು ಆಕಸ್ಮಿಕ. ಪುಣೆಯಲ್ಲಿದ್ದಾಗ ಸ್ನೇಹಿತರೊಬ್ಬರ ಮೂಲಕ ಆದ ಪರಿಚಯ ಗೆಳೆತನಕ್ಕೆ ತಿರುಗಿ, ಪ್ರೇಮವಾಗಿ ಮದುವೆಯಲ್ಲಿ ಯಶಸ್ಸು ಕಂಡಿತು. ಈಗ ಇವರಿಗೆ ಇಬ್ಬರು ಮಕ್ಕಳು. ಅಕ್ಷತಾ ಮತ್ತು ರೋಹನ್. ಸ್ಟ್ಯಾನ್‌ಫೋರ್ಡ್‌ನಲ್ಲಿ ತಮ್ಮ ಬ್ಯಾಚ್‌ಮೇಟ್ ಆದ, ಭಾರತಮೂಲದ ಬ್ರಿಟಿಷ್ ನಾಗರಿಕ, ರಿಷಿ ಸುನಕ್ ಅವರನ್ನು ಮದುವೆಯಾಗಿದ್ದಾರೆ.

ಇನ್‌ಫೋಸಿಸ್‌ನ ಸ್ಥಾಪನೆ :

ನಾರಾಯಣಮೂರ್ತಿ ಅವರು ತಮ್ಮ, ಆರು ಸಮಾನ ಮನಸ್ಕ ಸಹೋದ್ಯೋಗಿಗಳೊಂದಿಗೆ ಸೇರಿ ಒಂದು ಸ್ವಂತ ಸಂಸ್ಥೆಯನ್ನು ಸ್ಥಾಪಿಸುವ ನಿರ್ಧಾರ ಕೈಗೊಂಡು ಆರಂಭಕ್ಕೆ ಅಗತ್ಯವಿದ್ದ ಹಣಕ್ಕೆ ಪತ್ನಿಯ ನೆರವು ಕೋರಿದರು. ಪ್ರತಿ ಪಾಲುದಾರರೂ ಹತ್ತು ಸಾವಿರದಂತೆ ಆರಂಭಿಕ ಬಂಡವಾಳವನ್ನು ತೊಡಗಿಸಬೇಕಾಗಿತ್ತು. ಸುಧಾ ಅವರು ಖಾಸಗಿ ಉದ್ಯಮದಿಂದ ಆಗಬಹುದಾದ ನಷ್ಟಕ್ಕೆ ಹೆದರಿ ಮೊದಲು ಬೇಡವೆಂದರು. ಆದರೆ ಹೆಚ್ಚಿನ ಬಂಡವಾಳ ಬಯಸದ ಕೇವಲ ಬೌದ್ಧಿಕ ಚಾಲನೆಯೇ ಪ್ರಮುಖವಾಗುತ್ತದೆಂಬ ಅಂಶವನ್ನೂ, ತಾಂತ್ರಿಕೋದ್ಯಮ ಕ್ರಾಂತಿಯ ಅಗತ್ಯವನ್ನೂ, ಹೊಸ ರೀತಿಯ ತಮ್ಮ ಉದ್ದಿಮೆಯ ವಿವರಗಳನ್ನೂ ನೀಡಿದಾಗ ಮೂರ್ತಿಯವರ ಪ್ರಾಮಾಣಿಕತೆಯ ಮೇಲೆ ಅತಿವಿಶ್ವಾಸವಿದ್ದ ಸುಧಾ ಅವರು ಒಪ್ಪಿದರು. ತಮ್ಮ ತಾಯಿಯ ಸಲಹೆಯನ್ವಯ, ಪ್ರತಿ ತಿಂಗಳೂ ಕಷ್ಟಕಾಲಕ್ಕೆಂದು ಅಡುಗೆಮನೆಯಲ್ಲಿ ಒಂದು ಡಬ್ಬದಲ್ಲಿ ಹಾಕುತ್ತಿದ್ದುದರಲ್ಲಿ, ಆ ವರೆಗೆ ಕೂಡಿದ್ದ ಹತ್ತು ಸಾವಿರ ರೂಪಾಯಿಗಳನ್ನು ತಮ್ಮ ಹೃತ್ಪೂರ್ವಕ ಹಾರೈಕೆಗಳೊಂದಿಗೆ ಮೂರ್ತಿಯವರ ಕೈಯ್ಯಲ್ಲಿಟ್ಟರು. ಈ ಬಂಡವಾಳವೇ ನಾರಾಯಣ ಮೂರ್ತಿಯವರ ಇನ್‌ಫೋಸಿಸ್‌ನ ಸ್ಥಾಪನೆಗೆ ಮೂಲವಾಗಿ ಭಾರತಾದ್ಯಂತ ತಂತ್ರೋದ್ಯಮದ ಬೆಳವಣಿಗೆಗೆ ಮತ್ತು ಈ ಕ್ಷೇತ್ರದಲ್ಲಿ ಒಂದು ರೀತಿಯ ಕ್ರಾಂತಿಯನ್ನೇ ತರುವುದಕ್ಕೆ ಸಹಕಾರಿಯಾಯಿತು ಎನ್ನಬಹುದು. ಪುಡಿಗಾಸಿನ ಉಳಿತಾಯದ ಅದೇ ಹತ್ತು ಸಾವಿರವೇ ಮುಂದೆ ಕೋಟಿ ರೂ.ಗಳಾಗಿ ಅಕ್ಷಯಗೊಂಡಿತು. ಮತ್ತು ನಾರಾಯಣಮೂರ್ತಿಯವರ ಮಿದುಳ ಮಗುವಾದ 'ಇನ್‌ಫೋಸಿಸ್', 1981ರಲ್ಲಿ ಕಾರ್ಯಾರಂಭಗೊಂಡು ಭಾರತದ ಒಂದು ಬೃಹತ್ ಸಂಸ್ಥೆಯಾಗಿ ಬೆಳೆಯಲು ಕಾರಣವಾಯಿತು.

ಆದರೆ ಸುಧಾ ಅವರಿಗೆ ತಾವೂ ಇದರಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಮಹತ್ತಾಸೆ ಇದ್ದರೂ, 'ಇಬ್ಬರಲ್ಲಿ ಒಬ್ಬರು ಇನ್‌ಫೋಸಿಸ್‌ನ ಕಾರ್ಯಕ್ಕೆ ತೊಡಗಿಸಿಕೊಳ್ಳೋಣ. ನೀನು ಇರುವುದಾದರೆ, ನಾನು ಇದರಿಂದ ದೂರ ಸರಿಯುತ್ತೇನೆ' ಎಂದು ನಾರಾಯಣಮೂರ್ತಿ ಅವರು ನಿರ್ಧಾರಿತವಾಗಿ ಹೇಳಿದ್ದರಿಂದ, ಮೂರು ದಿನಗಳು

ಸತತವಾಗಿ ಯೋಚಿಸಿದರಂತೆ ಸುಧಾ. ಇಷ್ಟವಿಲ್ಲದ ಮನಸ್ಸಿನಿಂದ ಟೆಲ್ಕೋ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದರೂ ತಮ್ಮದೇ ಆದೊಂದು ಸಂಸ್ಥೆಯಲ್ಲಿ ಸ್ವಂತವಾಗಿ ದುಡಿಯಬಹುದೆಂಬುದಾಗಿ ಹುಟ್ಟಿದ್ದ ಹುಮ್ಮಸ್ಸನ್ನೂ ಈಗ ಮಣ್ಣು ಮಾಡಬೇಕಿತ್ತು. ಇನ್‌ಫೋಸಿಸ್‌ನಲ್ಲೂ ಇರಬೇಕೆಂದು ಬಯಸಿದ ಮನಸ್ಸಿಗೆ ಅತೀವ ನೋವಾದರೂ, ಚಿಕ್ಕ ಮಕ್ಕಳಿಗೆ ತಾಯಿಯ ಅಗತ್ಯ ಹೆಚ್ಚಿರುತ್ತದೆ ಎಂಬುದನ್ನು ಕಂಡುಕೊಂಡು, ತಾವೇ ಕುಟುಂಬದ ನಿರ್ವಹಣೆಯನ್ನು ತಮ್ಮ ಪಾಲಿಗೆ ಆಯ್ಕೆ ಮಾಡಿಕೊಂಡರು.

ಸಮಾಜ ಸೇವೆ: ಇನ್‌ಫೋಸಿಸ್ ಫೌಂಡೇಶನ್ ಮೂಲಕ ಬಡವರು, ದಲಿತರು, ಸಂಕಷ್ಟದಲ್ಲಿ ಇರುವವರನ್ನು ಗುರುತಿಸಿ ಸಾಧ್ಯವಾದಷ್ಟೂ ಸಹಾಯ ಮಾಡಿ ಸಾಮಾಜಿಕ ಸಮಾನತೆಯನ್ನು ತರಬೇಕೆನ್ನುವುದು ಸುಧಾ ಅವರ ಆಶಯ. ಅವರ ಸಮಾಜ ಸೇವೆಗೆ ಕೆಲವು ಸ್ವಾರಸ್ಯಕರ ಹಾಗೂ ತಿಳಿಯಲರ್ಹ ಹಿನ್ನೆಲೆಯ ಸಂಗತಿಗಳೂ ಇವೆ.

ಬಾಲ್ಯದಲ್ಲಿ ಸುಧಾ ಅವರು, ಪದ್ಯವೊಂದನ್ನು ಪೂರ್ತಿ ಮಾಡಿದ ಸಾಲುಗಳನ್ನು ಗಮನಿಸಿದ ಇವರ ತಾತ, ಇವರಿಗೆ ಪುಸ್ತಕಗಳ ಮೇಲಿರುವ ಪ್ರೀತಿಯನ್ನು ಕಂಡುಕೊಂಡು ಪುಸ್ತಕ–ಪ್ರೇಮಿಯೊಬ್ಬರ ಕಥೆ ಹೇಳಿದರಂತೆ. ಶತಮಾನದ ಹಿಂದೆ, ಅಮೆರಿಕಾದಲ್ಲಿ ಕೋಟ್ಯಾಧಿಪತಿಯಾಗಿದ್ದ ಕಾರ್ನೆಗೀ ಎಂಬುವವ, ತನ್ನೆಲ್ಲ ಹಣವನ್ನು ಮಕ್ಕಳಿಗೆ ಬರೆಯದೇ, ಸಾಧ್ಯವಾದಷ್ಟು ಗ್ರಾಮಗಳಲ್ಲಿ, ಗ್ರಂಥಾಲಯಗಳಿಗೆ ಕಟ್ಟಡಗಳನ್ನು ಕಟ್ಟಲು ಕೊಡಬೇಕೆಂದು ಬರೆದನಂತೆ. ಅಮೇರಿಕಾದ ಹಳ್ಳಿಗಳಲ್ಲಿ ಕಟ್ಟಲ್ಪಟ್ಟಿರುವ ಎಲ್ಲ ಗ್ರಂಥಾಲಯಗಳನ್ನೂ ಕಾರ್ನೆಗೀಯ ಹಣವನ್ನು ಬಳಸಿ ಕಟ್ಟಿದ್ದಾರಂತೆ, ಎಂಬ ಒಂದು ವಿಚಾರವನ್ನು ತಿಳಿಸಿದ ತಾತನವರು, "ಮುಂದೆ ನೀನು ಏಳ್ಗೆಯಾಗಿ ಅಗತ್ಯಕ್ಕಿಂತ ಹೆಚ್ಚು ಹಣ ನಿನ್ನಲ್ಲಿ ಕೂಡಿದರೆ, ಕಡೆಯ ಪಕ್ಷ ಒಂದು ಗ್ರಂಥಾಲಯಕ್ಕಾದರೂ ಪುಸ್ತಕಗಳನ್ನು ಖರೀದಿಸಿ ಕೊಡು", ಎಂದು ಈ ಬಾಲಕಿಯಿಂದ ಭಾಷೆಯನ್ನು ತೆಗೆದುಕೊಂಡಿದ್ದರಂತೆ. ತಾನು ಬಾಲ್ಯದಲ್ಲಿ ಕೊಟ್ಟ ಆ ಮಾತನ್ನು ಮರೆಯದೇ ಸುಧಾ ಅವರು ತಮ್ಮ ಇನ್‌ಫೋಸಿಸ್ ಫೌಂಡೇಷನ್ ಮೂಲಕ ಇದನ್ನು ಕಾರ್ಯರೂಪಕ್ಕೆ ತಂದಿದ್ದಾರೆ.

ಬೆಂಗಳೂರಿನ ರಮಣ ಮಹರ್ಷಿ ಅಕಾಡೆಮಿಯಲ್ಲಿ, ಅಂಧರ ಶಾಲೆಯ ಮಕ್ಕಳಿಗಾಗಿ ಓದಿ ಹೇಳುವುದು ಸುಧಾ ಅವರ ಮಗಳು ಅಕ್ಷತಾಳ ಒಂದು ಪ್ರವೃತ್ತಿಯಾಗಿತ್ತು. ದ್ವಿತೀಯ ಪಿಯು.ಸಿ. ವಿದ್ಯಾರ್ಥಿಯಾದ, ಆನಂದ ಶರ್ಮ ಎಂಬ ಅತಿ ಬುದ್ಧಿವಂತ ಅಂಧ ಬಾಲಕನೊಬ್ಬನಿಗೆ ದೆಹಲಿಯ ಸೇಂಟ್ ಸ್ಟೀಫನ್ಸ್‌ನಲ್ಲಿ ಓದುವ ಇಚ್ಛೆ ಇದೆ ಎಂದೂ ಅವನಿಗೆ ಬೇರೆ ಯಾರೂ ಸಹಾಯ ಮಾಡುವವರಿಲ್ಲವೆಂದೂ ತಿಳಿಸಿ, ತನ್ನ ತಾಯಿಯ ಸಹಾಯ ಕೇಳಿದ್ದಳು, ಅವಳು ಹತ್ತನೇ ತರಗತಿಯಲ್ಲಿದ್ದಾಗ. ಅಪೇಕ್ಷಿತ ಉತ್ತರ ಸುಧಾ ಅವರಿಂದ ಬಾರದಿದ್ದಾಗ, ಅವಳು ಹೇಳಿದ ಮಾತುಗಳು ಸುಧಾ ಅವರ ಮನಸ್ಸನ್ನೇ ಕಲಕಿ ಆಲೋಚನೆಗೀಡು ಮಾಡಿದವು. "ನಿಮ್ಮಂಥ ವಿದ್ಯಾವಂತೆ, ಹಲವಾರು ದೇಶಗಳನ್ನು ಸುತ್ತಿದವರು, ಚೆನ್ನಾಗಿ ಓದಿಕೊಂಡವರು, ಹಣದ ದುರಾಸೆ ಇಲ್ಲದವರು, ಬಡವರಿಗೆ ಸಹಾಯ ಮಾಡದ ಮೇಲೆ ಬೇರೆ ಯಾರೋ ಸಹಾಯ ಮಾಡಬೇಕೆಂದು ನಿರೀಕ್ಷಿಸಬೇಡಿ. ಅಂಥ ನತದೃಷ್ಟರಿಗೆ ಹಿಂತಿರುಗಿ ನೆರವು ನೀಡುವುದು ನಮ್ಮ ಕರ್ತವ್ಯವಲ್ಲವೇ? ಬದುಕಿನಲ್ಲಿ ನಿಮಗೆ ಬೇಕಾಗಿರುವುದೇನು? ಮೋಹಕ ಸೌಂದರ್ಯವೇ? ಹೆಸರಿನ ಪ್ರಚಾರವೇ? ಒಬ್ಬ ವೈದ್ಯರ ಮಗಳಾಗಿ, ಒಬ್ಬ ಶಿಕ್ಷಕರ ಮೊಮ್ಮಗಳಾಗಿ, ಒಂದು ಉತ್ತಮ ಮನೆತನದಿಂದ ಬಂದವಳಾಗಿ ನೀವೇ ಸಹಾಯ ಮಾಡದಿದ್ದ ಮೇಲೆ ಇನ್ನಾರೋ ಮಾಡಲಿ ಎಂದು ನಿರೀಕ್ಷಿಸಬೇಡಿ" ಎನ್ನುವುದೇ ಮಗಳ ಮಾತಾಗಿತ್ತು. ಮಗಳ ಈ ಮಾತುಗಳು ಸುಧಾ ಅವರನ್ನು ಗಂಭೀರ ಆಲೋಚನೆಗೆ ತೊಡಗಿಸಿದವು. ಉಳಿದ ಜೀವನವನ್ನು ದೀನ–ದಲಿತರ ಸೇವೆಗಾಗಿ ಮುಡುಪಿಡಲು ನಿರ್ಧರಿಸಿದರು ಸುಧಾ. ಸ್ಥಳೀಯ ಕಾಲೇಜೊಂದರಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥೆಯಾಗಿದ್ದವರು ಆ ಹುದ್ದೆಗೆ ರಾಜೀನಾಮೆ ಕೊಟ್ಟು ಕೇವಲ ಒಬ್ಬ ಶಿಕ್ಷಕಿ ಮಾತ್ರವಾಗಿ ಉಳಿದರು. ಅಷ್ಟೇ ಅಲ್ಲದೆ, ಇನ್‌ಫೋಸಿಸ್‌ನ ಸ್ಥಾಪಕ ಟ್ರಸ್ಟಿಯಾಗಿ ಸೇರಿ, ಹಲವಾರು ಯೋಜನೆಗಳ ಮೂಲಕ ಸಂತ್ರಸ್ತರ ಸಹಾಯಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡರು.

ಸುಧಾ ಅವರು ಪುಣೆಯಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಕಾಲ. ಒಂದು ಸಂಜೆ ಕೆಲಸ ಮುಗಿಸಿ ತಮ್ಮನ್ನು ಕರೆದೊಯ್ಯಲು ಪ್ರತಿದಿನ ಬರುತ್ತಿದ್ದ ತಮ್ಮ ಪತಿ ಮೂರ್ತಿಯವರಿಗಾಗಿ ಕಾಯುತ್ತ ನಿಂತಿದ್ದರಂತೆ. ಜೆ.ಆರ್‌ಡಿ ಟಾಟಾ ಅವರು ಇವರ ಹತ್ತಿರದಲ್ಲೇ ನಿಂತಿದ್ದು, ಇವರ ಕಾಯುವಿಕೆಗೆ ಕಾರಣ ಕೇಳಿದರಂತೆ. ನಾರಾಯಣ ಮೂರ್ತಿಯವರಿಗಾಗಿ ಕಾಯುತ್ತಿರುವ ಸಂಗತಿ ತಿಳಿಸಿದರು ಸುಧಾ. ಆಗ ಜೆ.ಆರ್‌ಡಿ. ಟಾಟಾ ಅವರು ಹೇಳಿದ ಮಾತು ಅವರ ಸಜ್ಜನ ಮನಸ್ಸಿನ ಪರಿಚಯ ಕೊಡುತ್ತದೆ. “ಕತ್ತಲಾಗುತ್ತಿದೆ. ಈ ಕಾರಿಡಾರ್‌ನಲ್ಲಿ ಯಾರೂ ಇಲ್ಲ. ಅದರಿಂದ ನಿಮ್ಮ ಪತಿ ಬರುವವರೆಗೆ ನಾನೂ ನಿಮ್ಮೊಂದಿಗೆ ಕಾಯುತ್ತೇನೆ” ಎಂದು ತಾವೂ ಇವರೊಂದಿಗೆ ಕಾದು ನಿಂತರಂತೆ. ಟಾಟಾ ಸಮೂಹದ ಅಧ್ಯಕ್ಷರಾಗಿದ್ದ ಉನ್ನತ ಸ್ಥಾನದ ಅಧಿಕಾರಿ, ಬಿಡುವಿಲ್ಲದ ಕೆಲಸಗಳ ಹೊರೆ ಹೊತ್ತ ವ್ಯಕ್ತಿ, ಇಡೀ ಭಾರತದ ಜನತೆಯ ಗೌರವಕ್ಕೆ ಪಾತ್ರರಾದ ಆ ದೊಡ್ಡ ಮನುಷ್ಯ, ಒಂದು ಬಿಳಿಯ ಪ್ಯಾಂಟ್ ಮತ್ತು ಷರ್ಟ್ ತೊಟ್ಟ ಸರಳ ಉಡುಗೆಯಲ್ಲಿದ್ದು, ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವ ಒಬ್ಬ ಸಾಮಾನ್ಯ ಮಹಿಳಾ ಇಂಜಿನಿಯರ್‌ರ ರಕ್ಷಣೆಗಾಗಿ ಕಾದು ನಿಂತಿದ್ದರು. ಅಲ್ಲದೆ ನಾರಾಯಣ ಮೂರ್ತಿಯವರು ಬಂದ ಮೇಲೆ, ‘ಇನ್ನು ಮೇಲೆ ಹೀಗೆ ಪತ್ನಿಯನ್ನು ಕಾಯಿಸಬೇಡಿ ಎಂದು ಅವರಿಗೆ ಹೇಳಿ” ಎಂದು ಸುಧಾ ಅವರನ್ನು ಕರೆದು ತಿಳಿಸಿದರಂತೆ. ಈ ಘಟನೆ ಸುಧಾ ಅವರ ಮನಸ್ಸಿನಲ್ಲಿ ಅಚ್ಚಳಿಯದೇ ನಿಂತಿತು.

ನಾರಾಯಣಮೂರ್ತಿಯವರು ಇನ್‌ಫೋಸಿಸ್ ಕಂಪೆನಿಯ ಸ್ಥಾಪನೆಯ ನಿರ್ಧಾರ ಮಾಡಿದಾಗ, ಸುಧಾ ಅವರು ಟೆಲ್ಕೋ ಕೆಲಸವನ್ನು ಬಿಡಬೇಕಾದುದು ಅನಿವಾರ್ಯವಾಗಿತ್ತು. ಬಾಂಬೆ ಹೌಸ್‌ನಲ್ಲಿ ತಮ್ಮ ಅಂತಿಮ ಕ್ಲೇಮುಗಳ ಇತ್ಯರ್ಥ ಮುಗಿಸಿ ಕೆಳಗಿಳಿಯುವಾಗ ಎದುರು ಬಂದ ಜೆ.ಆರ್.ಡಿ. ಟಾಟಾ ಅವರು ಸುಧಾ ಅವರನ್ನು ಮಾತಾಡಿಸಿದರು. ತಾವು ಟೆಲ್ಕೋ ಕೆಲಸ ಬಿಡುತ್ತಿರುವ ವಿಷಯವನ್ನೂ ಇನ್‌ಫೋಸಿಸ್‌ನ ಸ್ಥಾಪನೆಯ ಸಂಗತಿಯನ್ನೂ ಅವರಿಗೆ ತಿಳಿಸಿದಾಗ, “ವಾಟ್ ವಿಲ್ ಯು ಡು ವೆನ್ ಯು ಆರ್ ಸಕ್ಸಸ್‌ಫುಲ್” ಎಂದು ಕೇಳಿದರು ಜೆಆರ್‌ಡಿ ಟಾಟಾ ಅವರು. ಇನ್ನೂ ಆರಂಭವಾಗಬೇಕಾದ ಸಂಸ್ಥೆಯ ಯಶಸ್ಸಿನ ಬಗ್ಗೆ ತಮ್ಮ ಆತಂಕ, ಅನುಮಾನವನ್ನು ವ್ಯಕ್ತ ಪಡಿಸಿದ ಸುಧಾ ಅವರಿಗೆ, ಜೆ.ಆರ್.ಡಿ. ಅವರು ನೀಡಿದ ಸಲಹೆ ಯಾವುದೇ ಸಾಧಕನಿಗೆ ಅತಿ ಮುಖ್ಯವಾಗುತ್ತದೆ. “ನೆವರ್ ಸ್ಟಾರ್ಟ್ ವಿತ್ ಡಿಫಿಡೆನ್ಸ್. ಆಲ್ವೇಸ್ ಸ್ಟಾರ್ಟ್ ವಿತ್ ಕಾನ್‌ಫಿಡೆನ್ಸ್. ವೆನ್ ಯು ಆರ್ ಸಕ್ಸಸ್‌ಫುಲ್ ಯು ಮಸ್ಟ್ ಗಿವ್ ಇಟ್ ಬ್ಯಾಕ್ ಟು ದಿ ಸೊಸೈಟಿ. ಸೊಸೈಟಿ ಗಿವ್ಸ್ ಯು ಸೋ ಮಚ್; ವಿ ಮಸ್ಟ್ ರೆಸಿಪ್ರೊಕೇಟ್. ಐ ವಿಶ್ ಯು ಆಲ್ ದಿ ಬೆಸ್ಟ್” ಎಂದು ಹರಸಿ ಮೆಟ್ಟಿಲು ಹತ್ತಿ ಮೇಲೆ ಹೋದ ಜೆಆರ್‌ಡಿ ಟಾಟಾ ಅವರ ಸಲಹೆ ಸುಧಾ ಅವರ ಸಮಾಜ ಸೇವೆಗೆ ಪ್ರೇರಕವಾದ ಇನ್ನೊಂದು ಪ್ರಮುಖ ಸಂಗತಿ. (ಇನ್‌ಫೋಸಿಸ್ ಯಶಸ್ಸು ಸಾಧಿಸಿ ಉತ್ತುಂಗಕ್ಕೇರಿದ ಸುದ್ದಿ ಕೇಳಿ ಸಂತೋಷ ಪಡಲು ಜೆಆರ್‌ಡಿ ಟಾಟಾ ಅವರು ಮಾತ್ರ ಬದುಕುಳಿಯಲಿಲ್ಲ).

ಸುಧಾ ಅವರು ಇನ್‌ಫೋಸಿಸ್‌ನ ಮಹಾ-ಮುಖ್ಯಸ್ಥೆ ಯಾಗಲಿಲ್ಲ. ಆದರೆ ಆ ನಂತರದಲ್ಲಿ ಅವರು “ಜೀವನದಲ್ಲಿ ತಾಂತ್ರಿಕೋದ್ಯಮವೊಂದೇ ದೊಡ್ಡದಲ್ಲ. ಬೇರೆ ಬೇಕಾದಷ್ಟು ಮುಖ್ಯವಾದ ಕ್ಷೇತ್ರಗಳಿವೆ. ಒಂದು ಕಿಟಕಿ ಮುಚ್ಚಿದರೆ ಇನ್ನೊಂದು ದಾರಿ ಇದ್ದೇ ಇರುತ್ತದೆ” ಎಂದು ಆಲೋಚಿಸಿದಾಗ ಇವರಿಗೆ ಕಂಡದ್ದು ಸಮಾಜದ ಒಳಿತಿಗಾಗಿ ದುಡಿಯುವ ಮಾರ್ಗ. ಬಡವರ ಆರೋಗ್ಯ, ವಿದ್ಯೆ ಮತ್ತು ಸಾಮಾಜಿಕ ಪುನರ್‌ವಸತಿಗೆ ನೆರವು ನೀಡುವ ಉದ್ದೇಶವಿಟ್ಟುಕೊಂಡು ಇನ್‌ಫೋಸಿಸ್ ಫೌಂಡೇಶನ್ ಅನ್ನು ಇತರ ಟ್ರಸ್ಟಿಗಳೊಡನೆ 1996ರಲ್ಲಿ ಸ್ಥಾಪಿಸಿ, ಅದರ ಮುಖ್ಯ ಪ್ರವರ್ತಕರಾದರು. ತಿಂಗಳಲ್ಲಿ ಹದಿನೈದು-ಇಪ್ಪತ್ತು ದಿನಗಳ ಕಾಲ ಕರ್ನಾಟಕ, ತಮಿಳು ನಾಡು, ಆಂಧ್ರ, ಮಹಾರಾಷ್ಟ್ರ, ಪಂಜಾಬ್ ಮತ್ತು ಒರಿಸ್ಸಾ ರಾಜ್ಯಗಳ ಗ್ರಾಮೀಣ ಪ್ರದೇಶಗಳಿಗೆ ಪಯಣಿಸಿ, ಅಲ್ಲಿಯ ಜನತೆಯ ತೊಂದರೆಗಳನ್ನು ಗಮನಿಸಿ ಅವರಿಗೆ ಈ ಸಂಸ್ಥೆಯ ಮೂಲಕ ಅಗತ್ಯ ನೆರವು ನೀಡುವುದೇ ಇವರ ಈಗಿನ ಕಾಯಕ. ಕೆಲವೇ ಸಂಗತಿಗಳನ್ನು ಇಲ್ಲಿ ವಿವರಿಸಲಾಗಿದೆ.

ಇನ್‌ಫೋಸಿಸ್ ಫೌಂಡೇಶನ್ ಮೂಲಕ 2005ರಲ್ಲಿ ತಮಿಳುನಾಡಿನಲ್ಲಿ ಸುನಾಮಿ ತೆರೆಗಳು ಅಪ್ಪಳಿಸಿ, ಅನೇಕ ಜನರನ್ನು ನಿರ್ಗತಿಕರನ್ನಾಗಿ ಮಾಡಿದಾಗ, ಈ ದತ್ತಿ ಸಂಸ್ಥೆಯಿಂದ, ಸಂತ್ರಸ್ತರಿಗೆ 'ಜೀವರಕ್ಷಕ' ಪೆಟ್ಟಿಗೆಗಳನ್ನು ಸ್ವತಃ ಹೋಗಿ ಹಂಚುವ ಕೆಲಸ ಮಾಡಿದ್ದರು. ಒಂದಿಷ್ಟು ಲಕ್ಷ ರೂಪಾಯಿಗಳಿಗೆ ಒಂದು ಚೆಕ್ ಬರೆದು ಕೊಟ್ಟು ಕಳಿಸಿಬಿಟ್ಟಿದ್ದರೆ ಶ್ರಮವಿಲ್ಲದೇ ದಾನದ ಕೆಲಸ ಆಗಿಬಿಡಬಹುದಿತ್ತು. ಆದರೆ ಇವರಿಗೆ ತಾವೇ ಖುದ್ದು ಹೋಗಿ ಸಂತ್ರಸ್ತರು ತಮ್ಮ ಜೀವನವನ್ನು ಪುನಃ ಆರಂಭಿಸುವ ಸ್ಥಿತಿಗೆ ಬಂದಿದ್ದಾರೆಯೇ ಎಂಬುದನ್ನು ನೋಡಿ ಖಚಿತಪಡಿಸಿಕೊಳ್ಳುವ ಮನಸ್ಸು. ಸುಧಾ ಅವರು ಮೊದಲು ಕೆಲವು ಪ್ರದೇಶಗಳಿಗೆ ಹೋಗಿ ಸೀರೆ, ಪಂಚೆ, ಹೊದಿಕೆ, ಹಾಸು, ಚಾಪೆ, ಪಾತ್ರೆಗಳು ಮುಂತಾಗಿ ಒಟ್ಟು ನಲವತ್ತು ಲಕ್ಷ ರೂಪಾಯಿಗಳ ಪದಾರ್ಥಗಳನ್ನು ಹಂಚಿದರು. ಹಿಂತಿರುಗುವಾಗ ಜನರಿಗೆ ಬೇಕಾದುದನ್ನು ಕಂಡುಕೊಂಡು ಒಂದು ಪಟ್ಟಿ ಮಾಡಿ, ಒಂದು ಸಾವಿರದ ಐನೂರು ಕುಟುಂಬಗಳಿಗೆ 'ಜೀವರಕ್ಷಕ' ಪೆಟ್ಟಿಗೆಗಳನ್ನು ಒದಗಿಸುವ ಯೋಜನೆ ಹಾಕಿದರು. ಹಲ್ಲಿನ ಪೇಸ್ಟ್, ಒಂದು ಕ್ಯಾನ್ ನೀರು, ಒಂದು ಕನ್ನಡಿ ಮತ್ತು ಬಾಚಣಿಗೆ, ಚಹಾಪುಡಿ, ಹಾಲಿನ ಪುಡಿ, ಸಾಬೂನು, ಸ್ವಚ್ಛತೆಯ ವಸ್ತು(ಡಿಟರ್‌ಜೆಂಟ್), ಎಣ್ಣೆ, ಶಾಂಪೂ, ಅನಾಸಿನ್, ಕ್ರೋಸಿನ್ ಮತ್ತು ಕೆಲವು ಆ್ಯಂಟಿಬಯೋಟಿಕ್ಸ್, ಒಂದು ಕೆ.ಜಿ. ಬೇಳೆ, ಐದು ಕೆ.ಜಿ. ಅಕ್ಕಿ. ಒಂದು ಪಾಕೆಟ್ ಕೆಂಪು ಮೆಣಸಿನಕಾಯಿ, ಕೊತ್ತಂಬರಿ ಕಾಳು, ಬೆಂಕಿಕಡ್ಡಿ ಪೆಟ್ಟಿಗೆ, ಒಂದು ಟಾರ್ಚ್, ಬ್ಯಾಟರಿಯನ್ನೂ ಒಳಗೊಂಡ ಒಂದು ರೇಡಿಯೊ, ಮಸ್ಕಿಟೋ ಕಾಯಿಲ್, ಒಂದು ಬೀಗ ಮತ್ತು ಬೀಗದಕೈ ಹಾಗೂ ಟಾರ್ಪಾಲಿನ್– ಇವಿಷ್ಟು ಸಾಮಾನುಗಳು ಈ ಜೀವರಕ್ಷಕ ಪೆಟ್ಟಿಗೆಗಳಲ್ಲಿದ್ದವು. ಹತ್ತು ಸ್ವಯಂ ಸೇವಕರ ನೆರವಿನೊಂದಿಗೆ ಪ್ರತಿ ದಿನ ಬೆಳಿಗ್ಗೆ ಆರು ಗಂಟೆಯಿಂದ ರಾತ್ರಿಯವರೆಗೆ ಈ ಪೆಟ್ಟಿಗೆಗಳನ್ನು ತುಂಬಿಸಿ, ಸರಬರಾಜು ಮಾಡುವ ಕೈಂಕರ್ಯ ನಡೆಸಿದರು. ಸುಮಾರು 200–250 ಇಂಥ ಪೆಟ್ಟಿಗೆಗಳನ್ನು ಹೊತ್ತ ಒಂದು ಕಿರು ನೌಕಾದಳವು, ಪ್ರತಿ ಎರಡು ದಿನಗಳಿಗೊಮ್ಮೆ ಹೆಚ್ಚಿನ ತೊಂದರೆಗೆ ಒಳಗಾದ ಪ್ರದೇಶಗಳಿಗೆ ಹೋಗಿ ಹಂಚಿ ಬರುತ್ತಿತ್ತು. ವಿಲಂದವಾಡಿ, ಕುಟ್ಟಿಯಂದು, ವೆಳಕೋಯಿಲ್ ಮತ್ತು ಸಂದ್ರಪದಿ ಎಂಬ ನಾಲ್ಕು ಕೊಂಪೆಯಂಥ ಹಳ್ಳಿಗಳು ಸುನಾಮಿಯಿಂದ ಬಹುವಾಗಿ ತೊಂದರೆಗೊಳಗಾಗಿದ್ದವು. ಇಂಥ ಹಳ್ಳಿಗಳು ನೆರವು ತಲುಪದೇ ಉಳಿದು ಹೋಗಿದ್ದವು. ಈ ಹಳ್ಳಿಗಳನ್ನು ಸುಧಾ ಮೂರ್ತಿಯವರು ತಮ್ಮ ದತ್ತಕ್ಕೆ ತೆಗೆದುಕೊಂಡು ಅಲ್ಲಿ ಈ ಜೀವರಕ್ಷಕ ಪೆಟ್ಟಿಗೆಗಳನ್ನು ಒದಗಿಸಿದ್ದರು. ನಂತರದಲ್ಲಿ ಮೀನುಗಾರರಿಗೆ ಮೀನ–ಬಲೆಗಳನ್ನು ಸಹಕಾರಿ ಸಂಘಗಳ ಮೂಲಕ ಒದಗಿಸುವ ಯೋಜನೆಯನ್ನೂ ಹಾಕಿದರು ಇವರು.

ಶಾಲಾ ಮಕ್ಕಳಿಗೆ ಅನ್ನದಾನ ಮಾಡುವುದು ಎಲ್ಲಕ್ಕಿಂತ ಉತ್ತಮವಾದ ಸಮಾಜಸೇವೆ ಎಂಬ ಭಾವನೆಯಿಂದ, ಇನ್‌ಫೋಸಿಸ್ ಫೌಂಡೇಶನ್‌ನ ಅಧ್ಯಕ್ಷೆಯಾಗಿ, ಸುಧಾ ಅವರು 'ಅಕ್ಷಯಪಾತ್ರೆ' ಎಂಬ ಮಧ್ಯಾಹ್ನದ ಊಟದ ಯೋಜನೆಯನ್ನು ಗುಲ್ಬರ್ಗ ಹಾಗೂ ಬಿಜಾಪುರ ನಗರಗಳಿಗೂ ವಿಸ್ತರಿಸಲು, ಇಸ್ಕಾನ್ ಸಂಸ್ಥೆಗೆ 2004ರಲ್ಲಿ ಒಂದು ಕೋಟಿ ರೂಪಾಯಿಗಳ ನೆರವು ನೀಡಿದ್ದು; ಒರಿಸ್ಸಾದ ಭುವನೇಶ್ವರದಲ್ಲಿ ಬಡ ಮಕ್ಕಳಿಗಾಗಿ ನೂರಾ ಐವತ್ತು ಹಾಸಿಗೆಗಳ ಮಕ್ಕಳ ಆಸ್ಪತ್ರೆಯನ್ನು ಕಟ್ಟಿಸಿ, ಮಕ್ಕಳನ್ನು ಪ್ರೀತಿಸುವ, ಅಂದಿನ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರಿಂದ ಅದರ ಉದ್ಘಾಟನೆ ಮಾಡಿಸಿದ್ದು; ನಿಮ್ಹಾನ್ಸ್ ಆಸ್ಪತ್ರೆಗೆ ವಾರ್ಡ್‌ಗಳ ಮತ್ತು ಧರ್ಮಶಾಲೆ(ವಿಶ್ರಾಂತಿ ಗೃಹಗಳ) ನಿರ್ಮಾಣ; ಔಷಧಿಗಳು ಹಾಗೂ ಉಪಕರಣಗಳ ಸರಬರಾಜು; ಒಳಮೂಲೆಯ ಪ್ರದೇಶಗಳಲ್ಲಿ ಆರೋಗ್ಯ ಕ್ಯಾಂಪ್‌ಗಳ ವ್ಯವಸ್ಥೆ ಮಾಡಿದ್ದು; ನೆರೆಹಾವಳಿಯಿಂದಾಗಿ ನಿರಾಶ್ರಿತರಾದವರಿಗೆ ಸಾವಿರಾರು ಮನೆಗಳನ್ನು ಕಟ್ಟಿಸಿ ಕೊಟ್ಟಿದ್ದು – ಪ್ರಶಂಸಾರ್ಹ ಕಾರ್ಯಗಳು.

'ಹೌ ಐ ಟಾಟ್ ಮೈ ಗ್ರ್ಯಾಂಡ್ ಮದರ್ ಟು ರೀಡ್ ಅಂಡ್ ರೈಟ್ ಅಂಡ್ ಅದರ್ ಸ್ಟೋರೀಸ್', ಎಂಬ ಕೃತಿಯ ಸಂಭಾವನೆಯ ಮೊತ್ತವನ್ನು ಯುವಜನ ಬೆಳವಣಿಗೆಯ ಕಾರ್ಯಕ್ರಮಕ್ಕೆ ಬಳಸಲು, ಬೆಳಗಾಂನ ರಾಮಕೃಷ್ಣಾಶ್ರಮಕ್ಕೆ

ದಾನ ಮಾಡಿದರು. ತಮ್ಮ ತಾತನವರಿಗೆ ಭಾಷೆ ಕೊಟ್ಟ ಪ್ರಕಾರ, ಹತ್ತು ಸಾವಿರ ಗ್ರಾಮೀಣ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ದಾನ ಮಾಡಿದರು.

ಹೀಗೆ ಆರೋಗ್ಯರಕ್ಷಣೆ, ಶಿಕ್ಷಣ, ಗ್ರಾಮಾಭಿವೃದ್ಧಿ, ಅನಾಥರಕ್ಷಣೆ, ಸಂಸ್ಕೃತಿ – ಎಂಬ ವಿಭಾಗಗಳಡಿಯಲ್ಲಿ ವಿವಿಧ ಯೋಜನೆಗಳನ್ನು ಅಳವಡಿಸಿಕೊಂಡು, ಅಗತ್ಯ ನೆರವು ನೀಡುವ ಅತ್ಯುಪಯುಕ್ತ ಕಾರ್ಯಗಳನ್ನು ಈ ಇನ್‌ಫೋಸಿಸ್ ದತ್ತಿ ಸಂಸ್ಥೆ, 1996ರಿಂದಲೂ ಮಾಡುತ್ತಲೇ ಬಂದಿದೆ. ಇನ್‌ಫೋಸಿಸ್‌ನ ನೆರವೂ ಈ ಫೌಂಡೇಶನ್‌ಗೆ ಸಿಗುತ್ತದೆ. ಮತ್ತು ಸ್ವಯಂ ಸೇವಾ ಕೇಂದ್ರಗಳ ಸಹಾಯ–ಸಹಕಾರಗಳನ್ನೂ ಇದು ಪಡೆಯುತ್ತದೆ. 2010–11ನೇ ಸಾಲಿನಲ್ಲಿ ಈ ವಿಭಾಗಗಳಡಿ ನೀಡಲಾದ ನೆರವುಗಳನ್ನು ಕೆಲವೇ ಸಾಲುಗಳಲ್ಲಿ ಇಲ್ಲಿ ಪರಿಚಯಿಸಲಾಗಿದೆ.

ಆಂಧ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಗ್ರಾಮೀಣ ಪ್ರದೇಶಗಳ ಮಹಿಳೆಯರಿಗೆ ಹೊಲಿಗೆ ಯಂತ್ರಗಳ ವಿತರಣೆ; ತೊರೆಯಲ್ಪಟ್ಟ ಮನೆಗೆಲಸದ ಹೆಣ್ಣು ಮಕ್ಕಳಿಗೆ ನೆರವು ನೀಡಿ, ಬಹರೇನ್‌ನಿಂದ ಭಾರತಕ್ಕೆ ವಾಯುಯಾನದ ಖರ್ಚು ನೀಡಿದ್ದು; ರಾಯಚೂರಿನ ದೇವದಾಸಿಯರಿಗೆ ವಿದ್ಯೆ ಮತ್ತು ತರಬೇತಿ ಒದಗಿಸಿ ಪುನರ್‌ವಸತಿ ಕಲ್ಪಿಸಿದ್ದು; ಕರ್ನಾಟಕ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಅನಾಥಾಲಯಗಳಿಗೆ ಹಾಗೂ ಅಂಗವಿಕಲ ಮಕ್ಕಳ ಶಾಲೆಗಳಿಗೆ ಆರ್ಥಿಕ ನೆರವು ನೀಡಿದ್ದು; 2010–11ನೇ ಸಾಲಿನಲ್ಲಿ ಅನಾಥ ರಕ್ಷಣೆ ಯೋಜನೆಯಡಿ ಕೈಗೊಂಡ ಸಮಾಜಸೇವಾ ಕಾರ್ಯಗಳಾಗಿವೆ.

ಬೆಳಗಾಂ, ಗುಲ್ಬರ್ಗಾ, ಧಾರವಾಡ, ಗದಗ್, ಬಾಗಲಕೋಟೆ, ಬಿಜಾಪುರ ಮತ್ತು ಕಾರವಾರಗಳಲ್ಲಿ ನೆರೆಹಾವಳಿಯಿಂದ ಸಂಕಷ್ಟಕ್ಕೊಳಗಾದವರಿಗಾಗಿ 2,541 ಮನೆಗಳನ್ನು ನಿರ್ಮಿಸಿದ್ದು; ಕರ್ನಾಟಕ, ಒರಿಸ್ಸಾ ರಾಜ್ಯಗಳ ಬುಡಕಟ್ಟು ಜನಾಂಗಕ್ಕೆ ವ್ಯವಸಾಯ, ಕೃಷಿ, ರೇಷ್ಮೆ ಬೆಳೆ, ಬಡಗಿ, ಪುಷ್ಪೋದ್ಯಮ, ಜೇನು–ಸಾಕಾಣಿಕೆ, ಹಾಲಿನ ಕೇಂದ್ರ, ಮೀನುಗಾರಿಕೆ, ಕೋಳಿ ಸಾಕಾಣಿಕೆ, ವೆಲ್ಡಿಂಗ್‌ಗಳಲ್ಲಿ ತರಬೇತಿ ನೀಡಿದ್ದು; ಆಂಧ್ರ ಮತ್ತು ಕರ್ನಾಟಕದ ಗ್ರಾಮೀಣ ಮಹಿಳೆಯರಿಗೆ ಹೊಲಿಗೆಯಂತ್ರಗಳನ್ನು ಉಚಿತವಾಗಿ ಒದಗಿಸಿದ್ದು– ಇವೆಲ್ಲ ಗ್ರಾಮಾಭಿವೃದ್ಧಿ ಯೋಜನೆಯಡಿ 2010–11ರನೇ ಸಾಲಿನಲ್ಲಿ, ಈ ಫೌಂಡೇಶನ್ ಮೂಲಕ ಸಮಾಜಕ್ಕೆ ಮಾಡಿದ ಸೇವಾ ಕೈಂಕರ್ಯಗಳಾಗಿವೆ.

ಗುಲ್ಬರ್ಗಾ ವಿಶ್ವವಿದ್ಯಾಲಯದ ಮೇಧಾವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಪುಣೆಯ ಅನನುಕೂಲ ಪರಿಸ್ಥಿತಿಯಲ್ಲಿರುವ ಮಕ್ಕಳಿಗಾಗಿ ಸಂಚಾರೀ ಶಾಲೆಗಳು, ಪುಸ್ತಕಗಳು; ಮಹಾರಾಷ್ಟ್ರ, ಆಂಧ್ರ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಗ್ರಾಮೀಣ ಶಾಲೆಗಳಿಗೆ ಆರ್ಥಿಕ ನೆರವು, ಪಿ.ಎಚ್‌ಡಿ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗೋಖಲೆ ಸಂಸ್ಥೆಯ ಗ್ರಂಥಾಲಯದ ಜೀರ್ಣೋದ್ಧಾರ; ಕನ್ನಡದ ವಿಶೇಷ ಪುಸ್ತಕಗಳ, ಕಥೆಗಳು, ಕಾದಂಬರಿಗಳ ಪ್ರಕಟಣೆ; – ಇವು ಶಿಕ್ಷಣ ಯೋಜನೆಯಡಿ 2010–11ನೇ ಸಾಲಿನಲ್ಲಿ ಕಲ್ಪಿಸಲಾದ ನೆರವುಗಳು.

ನಾಟಕ, ಭಾರತೀಯ ವಿದ್ಯಾ ಭವನದಲ್ಲಿ ಸಂಗೀತ ಕಛೇರಿ, ಇಂಡಿಯಾ ಫೌಂಡೇಶನ್ ಫಾರ್ ಆರ್ಟ್ಸ್ ಜೊತೆಗೆ 'ಕಾಂತಾ' ಪುಸ್ತಕದ ಪ್ರಕಟಣೆ, ಕೊಗ್ಗ ಕಾಮತ್ ಮತ್ತು ಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘದ ಗ್ರಾಮೀಣ ಕಲಾವಿದರಿಂದ ಯಕ್ಷಗಾನ, ಕಾಸರಗೋಡು ಮತ್ತು ಹೈದರಾಬಾದಿನ ಸುರಭಿ ಸಮೂಹಗಳಿಂದ ಹಾಗೂ ಸ್ಥಳೀಯ ಮತ್ತು ಅಂತರರಾಷ್ಟ್ರೀಯ ತಂಡಗಳಿಂದ ಬೆಂಗಳೂರಿನ ರಂಗಶಂಕರದಲ್ಲಿ ನಾಟಕ ಪ್ರದರ್ಶನಗಳಿಗೆ ಪ್ರಾಯೋಜನೆ, ಪುಸ್ತಕಗಳ ಪ್ರಕಟಣೆಗೆ ಧನ ಸಹಾಯ; – ಇವು ಸಾಂಸ್ಕೃತಿಕ ಯೋಜನೆಯಡಿ ಈ ಸಂಸ್ಥೆಯು 2010–11ನೇ ಸಾಲಿನಲ್ಲಿ ನೀಡಿದ ನೆರವುಗಳಾಗಿವೆ.

ಸಮಾನ ಸಾಮಾಜಿಕ ವ್ಯವಸ್ಥೆಗಾಗಿ ಇನ್‌ಫೋಸಿಸ್ ದತ್ತಿ ಸಂಸ್ಥೆಯು ಮೇಲಿನ ಎಲ್ಲ ಕಾರ್ಯಗಳನ್ನು ಮಾಡುತ್ತಿರುವುದು ನಿಜಕ್ಕೂ ಅಸಾಧಾರಣವಾದುದು. ಇದರ ಪ್ರಮುಖ ವ್ಯಕ್ತಿಯಾಗಿರುವ ಸುಧಾ ಮೂರ್ತಿಯವರು ಮಹತ್ತರ ಸಾಧಕಿಯೇ ಸರಿ.

ಬರವಣಿಗೆಯ ಕಾರ್ಯ :

ತಮ್ಮ ಇಬ್ಬರು ಮಕ್ಕಳು ಮಾತ್ರವಲ್ಲದೇ, ತಾವೂ ಸೇರಿ ಕಟ್ಟಿದ 'ಇನ್‌ಫೋಸಿಸ್'ನ ಜನನ, ಬಾಲ್ಯ, ಯೌವ್ವನದವರೆಗಿನ ಬೆಳವಣಿಗೆಯಲ್ಲಿ ತಮ್ಮ ಸಮಯವನ್ನು ಸವೆಸುತ್ತ ಬಂದ ಸುಧಾ ಅವರಿಗೆ, ಅಂತರಂಗದಲ್ಲಿದ್ದ ಬರವಣಿಗೆಯ ಚಡಪಡಿಕೆಯನ್ನು ತೃಪ್ತಿ ಪಡಿಸಲು ಸಾಧ್ಯವಾದದ್ದು, ತಮ್ಮ ಮಕ್ಕಳು ಮತ್ತು ತಮ್ಮ ಸಂಸ್ಥೆ ಸಾಕಷ್ಟು ಬೆಳೆದು ಆ ಜವಾಬ್ದಾರಿಗಳು ಸ್ವಲ್ಪ ಕಡಿಮೆಯಾದ ಮೇಲೆಯೇ. ಆದರೆ ಈಗಲೂ ಈ ಸಂಸ್ಥೆಯ ಮತ್ತು ಮನೆವಾರ್ತೆಗಳ ಹೊಣೆಗಾರಿಕೆಯೊಂದಿಗೇ, ಇವರ ಲೇಖನಿಯೂ ಸತತವಾಗಿ ಸಾಗಿ, ಈ ವರೆಗೆ ನೂರಾ ಮುವ್ವತ್ತಾರು ಪುಸ್ತಕಗಳನ್ನು ಈಕೆಯಿಂದ ಬರೆಯಿಸಿದೆ. ಕಾದಂಬರಿಗಳು, ಕತೆಗಳು, ಪ್ರವಾಸ ಕಥನಗಳು, ಮಕ್ಕಳ ಕಥೆಗಳು, ಗಣಕಯಂತ್ರದ ಕುರಿತ ಲೇಖನಗಳು, ಚಿಂತನಗಳು--ಹೀಗೆ ವಿವಿಧ ಪ್ರಕಾರಗಳಲ್ಲಿ ಪುಸ್ತಕಗಳನ್ನು ಬರೆದು ತಮ್ಮ ಬರವಣಿಗೆಯ ಸಾಮರ್ಥ್ಯವನ್ನೂ ಬೆಳಕಿಗೆ ತಂದಿದ್ದಾರೆ. ಹೆಚ್ಚಿನ ಪ್ರಚಾರ ಪಡೆದು ಬಹುಭಾಷೆಗಳಿಗೆ ಇವರ ಪುಸ್ತಕಗಳು ಭಾಷಾಂತರಗೊಂಡಿವೆ. ಕನ್ನಡ, ಇಂಗ್ಲಿಷ್, ಮಲೆಯಾಳಂ, ಹಿಂದಿ, ಮುಂತಾಗಿ ವಿವಿಧ ಭಾಷೆಗಳಲ್ಲಿ ಇವರ ಕೃತಿಗಳು ಪ್ರಕಟಗೊಂಡಿವೆ. 'ಅಟ್ಲಾಂಟಿಕದಾಚೆಗೆ', ಅತಿರಿಕ್ತೆ(ಕಾದಂಬರಿ), ಮಹಾಶ್ವೇತೆ, ಅವ್ಯಕ್ತೆ, ಡಾಲರ್ ಸೊಸೆ, ಯಶಸ್ವಿ, ಶಾಲಾ ಮಕ್ಕಳಿಗೆ ಕಂಪ್ಯೂಟರ್, ಪರಿಧಿ, ಋಣ, ತುಮುಲ, ಮುಂತಾದವು ಕನ್ನಡದಲ್ಲಿ ಬರೆದವಾದರೆ, ಮ್ಯಾಜಿಕ್ ಡ್ರಂ ಅಂಡ್ ಅದರ್ ಫೇವರಿಟ್ ಸ್ಟೋರೀಸ್, ವೈಸ್ ಅಂಡ್ ಅದರ್‌ವೈಸ್, ಹೌ ಐ ಟಾಟ್ ಮೈ ಗ್ರಾಂಡ್ ಮದರ್ ಟು ರೀಡ್ & ರೈಟ್, ಗ್ರ್ಯಾಂಡ್ ಮಾಸ್ ಬ್ಯಾಗ್ ಸ್ಟೋರೀಸ್, ದ ಬರ್ಡ್ ವಿತ್ ಗೋಲ್ಡನ್ ವಿಂಗ್ಸ್, ದಿ ಓಲ್ಡ್ ಮ್ಯಾನ್ ಅಂಡ್ ಹಿಸ್ ಗಾಡ್, ಇತ್ಯಾದಿಗಳು ಇಂಗ್ಲಿಷ್‌ನಲ್ಲಿ ಬರೆದವಾಗಿವೆ. 'ಸುಕೇಶಿನಿಯುಂ ಮತ್ತು ಕಡಕುಲಂ' ಮಲೆಯಾಳಿ ಭಾಷೆಯಲ್ಲಿ ಪ್ರಕಟವಾದ ಒಂದು ಕೃತಿ. ಇಲ್ಲಿ ಪುಟಗಳ ಮಿತಿ ಇರುವುದರಿಂದ ಅವರ ಒಂದೆರಡು ಕೃತಿಗಳ ಸಾರಾಂಶವನ್ನು ಮಾತ್ರ ಕಾಣಿಸಲು ಸಾಧ್ಯ.

ಅರೋಕಿಯ ವೇಲು ಎಂಬ ಅನುವಾದಕರಿಂದ ತಮಿಳಿಗೆ ಅನುವಾದಗೊಂಡು 'ಆನಂದ ವಿಕಟನ್' ಎಂಬ ತಮಿಳು ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿದ್ದ ಸುಧಾ ಅವರ ಒಂದು ಅಂಕಣವನ್ನು ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರು ಪ್ರತಿ ಸಲ ಓದುತ್ತಿದ್ದರೆಂಬುದು ಗಮನಾರ್ಹ ಸಂಗತಿ. ಅಲ್ಲದೇ 'ಐಟಿ ಡಿವೈಡ್' ಎಂಬ ಅಂಕಣ ಓದಿದಾಗ, ಸುಧಾ ಅವರಿಗೆ ಫೋನ್ ಮಾಡಿ ತಮ್ಮ ಅನಿಸಿಕೆ ತಿಳಿಸುವಷ್ಟು ಅವರಿಗೆ ಪ್ರಿಯವಾಯಿತೆಂಬುದೂ ಉಲ್ಲೇಖನೀಯ. ಆ ನಂತರ ಸುಧಾ ಅವರಿಗೆ ಕಲಾಂ ಅವರ ಪರಿಚಯ ಬೆಳೆದು ಆಗಾಗ ಅವರನ್ನು ಭೇಟಿಯಾಗುವ ಸಂದರ್ಭಗಳೂ ಒದಗಿ, ಕಲಾಂ ಅವರಿಂದ ಕಲಿಯಬಹುದಾದ ಅಂಶಗಳನ್ನು ಕಂಡುಕೊಂಡಿದ್ದೂ ಸಹ ಈ ಬರವಣಿಗೆಯ ಮೂಲಕವೇ ಎಂಬುದು ವಿಶೇಷ.

'ಮಹಾಶ್ವೇತ' ಬರವಣಿಗೆಯ ಆರಂಭ ಕಾಲದಲ್ಲಿ ಬಂದ ಒಂದು ಕಾದಂಬರಿ. ಬಡ ಕುಟುಂಬದ ಸುಂದರ ಹುಡುಗಿಯೊಬ್ಬಳನ್ನು ಶ್ರೀಮಂತ ಹುಡುಗನೊಬ್ಬನು ವರಿಸುತ್ತಾನೆ. ನಂತರದಲ್ಲಿ ಅವಳಿಗೆ ತೊನ್ನು ಆವರಿಸಿದಾಗ ಕೈ ಹಿಡಿದವನು ನಿರ್ದಯೆಯಿಂದ ಅವಳನ್ನು ಹೊರಗಟ್ಟುತ್ತಾನೆ. ಅವನಿಂದ ಯಾವ ನೆರವೂ ದೊರಕದಿದ್ದರೂ ಆಕೆ, ಸ್ವತಃ ಧೈರ್ಯ ತಳೆದು ಬಂದ ಸಮಸ್ಯೆಗಳನ್ನು ಎದುರಿಸುತ್ತ, ಮುಂಬಯಿಯಲ್ಲಿ ಹೊಸ ಜೀವನವನ್ನು ಪ್ರಾರಂಭಿಸುತ್ತಾಳೆ. ಸ್ವಂತ ಕಾಲ ಮೇಲೆ ನಿಲ್ಲುವಂತಹ ಯಶಸ್ಸಿನ ದಾರಿ ಕಂಡುಕೊಳ್ಳುತ್ತಾಳೆಂಬುದು ಈ ಕೃತಿಯ ವಸ್ತು.

'ಜಂಟ್ಲೀ ಫಾಲ್ಸ್ ದಿ ಬಕುಲ' ಇಬ್ಬರು ಬುದ್ಧಿವಂತ ದಂಪತಿಗಳ ಸಂಸಾರದ ಕಥೆ. ಶ್ರೀಮತಿ ದೇಶಪಾಂಡೆ ಮತ್ತು ಶ್ರೀಕಾಂತ್ ಇಬ್ಬರೂ ಮೇಧಾವಿ ವಿದ್ಯಾರ್ಥಿಗಳು. ಶಾಲಾ ವಯಸ್ಸಿನಿಂದ ಸಹಪಾಠಿಗಳು, ನೆರೆಮನೆವಾಸಿಗಳೂ ಸಹ. ಹುಡುಗಿಗೆ ಸದಾ ಶಾಲೆಯಲ್ಲಿ ಪ್ರಥಮ ಸ್ಥಾನ. ಹುಡುಗನದು ದ್ವಿತೀಯ. ಶಾಲೆಯಲ್ಲಿ ಯಾವಾಗಲೂ ಪರಸ್ಪರ ಕಚ್ಚಾಡುವ ಇವರು, ಬೆಳೆಯುತ್ತ ಹೋದಂತೆ ತಮಗೇ ತಿಳಿಯದಂತೆ ಗೆಳೆಯರಾಗುತ್ತಾರೆ. ಮುಂದೆ ಅವರ ಈ ಗೆಳೆತನ ಪ್ರೇಮಕ್ಕೆ ತಿರುಗುತ್ತದೆ. ಒಂದು ಬಕುಲ ಮರದ ಕೆಳಗೆ ಇವರಿಬ್ಬರ ಪ್ರೇಮ ಅರಳುತ್ತದೆ. ಹಿಂದಿನಿಂದಲೂ ಶತೃತ್ವ ಬೆಳೆಸಿಕೊಂಡು ಕಾದಾಡುವ ಇವರುಗಳ ಹಿರಿಯರು ಇವರ ಪ್ರೇಮವನ್ನು ಪೋಷಿಸಲು, ಮುಂದುವರೆಸಲು ಒಪ್ಪುವುದಿಲ್ಲ. ಆದರೂ ತಮ್ಮ ಹಿರಿಯರ ಮನಸ್ಸಿನ ವಿರುದ್ಧವಾಗಿ ಎಲ್ಲ ಅಡಚಣೆಗಳನ್ನೂ ಮೀರಿ ಇಬ್ಬರೂ ಮದುವೆಯಾಗುತ್ತಾರೆ. ಶ್ರೀಕಾಂತನಿಗೆ ಮುಂಬಯಿಯಲ್ಲಿ ನೌಕರಿ ದೊರೆಯುತ್ತದೆ. ಇಂಡಸ್ಟ್ರಿಯಲ್ ಟೆಕ್ನಾಲಜಿಯ ಕ್ಷೇತ್ರದಲ್ಲಿ ತನ್ನ ಕನಸುಗಳನ್ನು ಕಾರ್ಯಗತ ಗೊಳಿಸುವುದು ಅವನ ಗುರಿ. ಮೇಧಾವಿ ವಿದ್ಯಾರ್ಥಿನಿಯಾಗಿಯೂ ಚರಿತ್ರಕಾರಳಾಗಬೇಕೆಂಬ ತನ್ನ ಕನಸನ್ನೂ ಮತ್ತು ತನ್ನೆಲ್ಲ ಬುದ್ಧಿವಂತಿಕೆಯನ್ನೂ ಮೂಲೆಗೆ ತಳ್ಳಿ ತನ್ನ ದೀರ್ಘ ಜೀವನವನ್ನು ಗಂಡನ ಕನಸುಗಳ ಸಾಫಲ್ಯಕ್ಕಾಗಿ ಮೀಸಲಿಡುತ್ತಾಳೆ ಶ್ರೀಮತಿ. ಪಿತೂರಿ ಮಾಡುವ ಅತ್ತೆ ಮತ್ತು ನಾದಿನಿಯಿಂದ ಎಂದೂ ವಿಶ್ವಾಸಕ್ಕೆ ಪಾತ್ರಳಾಗದ ಈ ಶ್ರೀಮತಿ ಕೊನೆಗೊಮ್ಮೆ ಎಚ್ಚೆತ್ತುಕೊಳ್ಳುತ್ತಾಳೆ. ತನ್ನೆಲ್ಲ ವಿದ್ವತ್ತು ಕುಟುಂಬದ ಸಮಸ್ಯೆಗಳಲ್ಲಿ ಮುಳುಗಿ ಸುಮ್ಮನೇ ವ್ಯರ್ಥವಾಗುತ್ತಿದೆ, ತಾನು ಗಂಡನ ಕೇವಲ ಒಬ್ಬ ಸಹಾಯಕಿ ಮಾತ್ರವಾಗಿದ್ದೇನೆ ಎಂಬ ನೋವು ಕಾಡಿ, ಪಿ.ಎಚ್‌ಡಿ. ಮಾಡುವ ನಿರ್ಧಾರ ಕೈಗೊಳ್ಳುತ್ತಾಳೆ.

ಇವರ ನಿಜ ಜೀವನದಲ್ಲಿ ಇನ್‌ಫೋಸಿಸ್‌ನ ಏಳ್ಗೆಗೆ ದುಡಿದರೂ, ಸಂಸ್ಥೆಯ ಬೆಳವಣಿಗೆಯ ಕನಸನ್ನು ಸಂಪೂರ್ಣ ಪತಿಗೇ ಬಿಟ್ಟುಕೊಟ್ಟ ಹಾಗೆಯೇ 'ಮಹಾಶ್ವೇತ' ಮತ್ತು 'ಜಂಟ್ಲೀ ಫಾಲ್ಸ್ ದಿ ಬಕುಲ' ಎಂಬ ಕಾದಂಬರಿಗಳ ನಾಯಕಿಯರೂ ಮೊದಲು ತಮ್ಮ ಕೈಹಿಡಿದವರ ಕನಸಿನ ಸಾಫಲ್ಯಕ್ಕೆ ತಮ್ಮ ಕನಸನ್ನು ಅದುಮಿಟ್ಟರೂ, ತಮ್ಮ ಕನಸುಗಳ ಈಡೇರಿಕೆಯ ಬಗ್ಗೆ ಒಳಗೊಳಗೇ ಚಡಪಡಿಸಿ ಕೊನೆಯಲ್ಲಿ ಎಚ್ಚೆತ್ತುಕೊಂಡು, ತಮ್ಮ ದಾರಿ ನೋಡಿಕೊಳ್ಳುವ ನಿರ್ಧಾರ ಮಾಡುವುದು ಒಂದು ಗುಣಾತ್ಮಕ ಅಂಶ.

'ಡಾಲರ್ ಸೊಸೆ' ಇಬ್ಬರು ಗಂಡು ಮಕ್ಕಳಿರುವ ಒಂದು ಸಂಸಾರದ ಕಥೆ. ಒಬ್ಬ ಮಗ ಭಾರತದಲ್ಲಿರುವ ಒಬ್ಬ ಹುಡುಗಿಯನ್ನು ಮದುವೆಯಾಗಿ ಈ ದೇಶದಲ್ಲೇ ಉಳಿಯುತ್ತಾನೆ. ಇನ್ನೊಬ್ಬ ಮಗ ಮತ್ತು ಸೊಸೆ ಅಮೆರಿಕಾಗೆ ಹೋಗಿ ನೆಲೆಸಿರುತ್ತಾರೆ. 'ದೂರದ ಗುಡ್ಡ ಕಣ್ಣಿಗೆ ನುಣ್ಣಗೆ'ಎಂಬ ಗಾದೆಯನ್ವಯ ಈ ಗಂಡು ಮಕ್ಕಳ ತಾಯಿ ಸದಾ ಅಮೆರಿಕಾದಲ್ಲಿರುವ ಸೊಸೆಯನ್ನು ಹೆಚ್ಚು ಮೆಚ್ಚಿಕೊಳ್ಳುತ್ತಾಳೆ. ಅವಳ ಪರ ವಹಿಸುತ್ತಿರುತ್ತಾಳೆ ಹಾಗೂ ಜೊತೆಗಿರುವ ಸೊಸೆಯನ್ನು ಕಾಲಕಸವಾಗಿ ಕಾಣುತ್ತಾಳೆ. ಆದರೂ ಭಾರದ ಸೊಸೆ ಅತ್ತೆಯ ಎಲ್ಲ ಆಕ್ಷೇಪಣೆ–ಅನಾದರಗಳನ್ನು ಯಾವುದೇ ದೂರಿಲ್ಲದೆ ಸಹಿಸಿಕೊಳ್ಳುತ್ತಾಳೆ. ಒಮ್ಮೆ ಅತ್ತೆಗೆ ಡಾಲರ್ ಸೊಸೆಯ ಅಂದರೆ ಅಮೇರಿಕಾದಲ್ಲಿರುವ ಮಗನ ಮನೆಗೆ ಹೋಗಿ ಅವರೊಂದಿಗೆ ಇರುವ ಸಂದರ್ಭ ಬರುತ್ತದೆ. ಆಗ ಅಲ್ಲಿ ಆ ಸೊಸೆಯ ಸ್ವಭಾವಗಳ ನಿಜ ಬಣ್ಣ ಬಯಲಾಗುತ್ತದೆ. ಅತ್ತೆಗೆ ಬುದ್ಧಿ ಬರುತ್ತದೆ. ಪ್ರಪಂಚದಲ್ಲಿರುವುದು ಒಂದು ಒಳ್ಳೆಯ ಚಹರೆ ಮತ್ತೊಂದು ಕೆಟ್ಟ ಚಹರೆ ಎಂಬಂತೆ, ಒಂದು ಕಾಲದಲ್ಲಿ ಹೆಚ್ಚಿನ ಜನಪ್ರಿಯ ಕಾದಂಬರಿಗಾರ್ತಿಯರು ಬರೆಯುತ್ತಿದ್ದ ಕಪ್ಪು–ಬಿಳುಪಿನ ಮಾದರಿಯ ಕಾದಂಬರಿ ಇದು. ಈ ಕಾದಂಬರಿ 'ಡಾಲರ್ ಬಹು' ಎಂದು ಹಿಂದಿಗೆ ಅನುವಾದಗೊಂಡು, 2001ರಲ್ಲಿ ದೂರದರ್ಶನದಲ್ಲಿ ಧಾರಾವಾಹಿಯಾಗಿ ಪ್ರಸಾರಗೊಂಡಿದೆ.

ಪ್ರವಾಸ ಸಮಯದಲ್ಲಿ ಮತ್ತು ಇತರ ವಿವಿಧ ಸಂದರ್ಭಗಳಲ್ಲಿ ನಡೆದ ಸಂಗತಿಗಳನ್ನು ಅರ್ಥವತ್ತಾಗಿ, ಮನಸ್ಸಿಗೆ ಮುಟ್ಟುವಂತೆ ನಿರೂಪಿತವಾಗಿರುವ ಐವತ್ತೊಂದು ಕಥೆಗಳ ಸಂಕಲನ 'ವೈಸ್ ಅಂಡ್ ಅದರ್‌ವೈಸ್'. ಇಲ್ಲಿಯ ಹಲವು ಪ್ರಸಂಗಗಳು ಇತರರಿಗೆ ಪಾಠವಾಗಬಲ್ಲಂತಹವು. ಇಲ್ಲಿ ಕಾಣಬರುವ ನೀತಿ, ಕಾಳಜಿ, ವಿಚಾರಗಳು,

ಅನುಭವಗಳು ಓದುಗರಿಗೆ ಪ್ರಿಯವಾಗುತ್ತವೆ. ತಾನು ಅತ್ಯಂತ ಮಮತೆಯಿಂದ ನೋಡುತ್ತಿದ್ದ ಕಿರಿಯ ಸೋದರನೇ ರಾಖಿಯ ದಿನ ವೃತ್ತಿಗೆ ಪ್ರೋತ್ಸಾಹಿಸುವ 'ಘರ್‌ವಾಲಿ'; ವೃದ್ಧಾಶ್ರಮಕ್ಕೆ ಸೇರಿಸುವ ಸಲುವಾಗಿ ತನ್ನ ತಂದೆಯನ್ನೇ ನಿರಾಶ್ರಿತನೆಂದು ತೋರ್ಪಡಿಸುವ,'ಹೋಂಲೆಸ್' ಎಂಬಂತಹ ಕಥೆಗಳು ದಾರುಣ ಜೀವನದ ಕಥೆಗಳನ್ನು ಮುಂದಿಡುತ್ತವೆ. ಈ ಪುಸ್ತಕದಿಂದ ಪ್ರಭಾವಿತರಾಗಿ ಅನೇಕರು, ತಮ್ಮ ಜೀವನವನ್ನು ಸದುದ್ದೇಶಕ್ಕಾಗಿ ಬಳಸುವ ನಿರ್ಧಾರ ಕೈಗೊಂಡಿದ್ದಾರೆಂಬುದು, ಇಂಟರ್‌ನೆಟ್‌ನಲ್ಲಿ ಬರೆದಿರುವ ಈ ಓದುಗರ ಅಭಿಪ್ರಾಯಗಳಿಂದ ತಿಳಿದುಬರುತ್ತದೆ. ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಆದ ಅನುಭವಗಳ ಹಾಗೂ ಯಶಸ್ಸಿನ ಅರ್ಥ ವಿವರಿಸುವ ಅಂಶಗಳನ್ನೊಳಗೊಂಡ ಕೃತಿ, 'ಯಶಸ್ವಿ'.

ಕೈರೋದಲ್ಲಿ ನಡೆದ ಸೌತ್ ಪೆಸಿಫಿಕ್ ದೇಶಗಳ ಆರ್ಥಿಕ ಸಮ್ಮೇಳನಕ್ಕೆ ಆ ನಂತರ ಅಲ್ಲಿಯ ಕನ್ನಡ ಮಿತ್ರ-ಮಿತ್ರೆಯರು ಏರ್ಪಡಿಸಿದ್ದ ಭಾಷಣಕ್ಕಾಗಿ ಪ್ರವಾಸ ಕೈಗೊಂಡು ತಾವು ನೋಡಿದ ಚೈನಾ ಕುರಿತು ಸುಧಾ ಮೂರ್ತಿಯವರು ಬರೆದ ಪ್ರವಾಸ ಕಥನ 'ಹಕ್ಕಿಯ ತೆರದಲಿ'(01).

ಇನ್‌ಫೋಸಿಸ್ ಫೌಂಡೇಶನ್‌ನ ಸ್ಥಾಪನೆಗೆ ಮೂಲ ಕಾರಣವಾದ ಮಗಳು ಅಕ್ಷತಾಳ ಸಲಹೆಯ ಸನ್ನಿವೇಶ ಅವರ ನಿರಕ್ಷರಸ್ಥೆ ಅಜ್ಜಿ ಕ್ರಿಷ್ಟಕ್ಕ, ಕಾದಂಬರಿಗಾರ್ತಿ ತ್ರಿವೇಣಿಯವರು ಬರೆದ 'ಕಾಶಿಯಾತ್ರೆ' ಎಂಬ ಕೃತಿಯ ಧಾರಾವಾಹಿಯನ್ನು ಪ್ರತಿ ವಾರ ಓದಲಾಗದೇ ಪರಿತಪಿಸಿ, ಇನ್ನೊಬ್ಬರನ್ನು ಅವಲಂಬಿಸದೆ ತಾನೇ ಓದು ಕಲಿಯಬೇಕೆಂಬ ಹಟ ತೊಟ್ಟು ಓದು ಕಲಿತಿದ್ದು; ಪೆಟ್ರೋಲ್‌ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಚಿಕ್ಕ ಹುಡುಗರಿಗೆ ಸುಧಾ ಅವರು ಕತೆಗಳನ್ನು ಹೇಳುತ್ತಿದ್ದು ಆ ಕತೆಯೇ ಸ್ಫೂರ್ತಿಯಾಗಿ ಒಬ್ಬ ಹುಡುಗ ವಿದ್ಯೆ ಕಲಿತು, ತಾನೇ ಸ್ವತಃ ಪೆಟ್ರೋಲ್ ಬಂಕ್ ಒಂದನ್ನು ಆರಂಭಿಸಿ ನಡೆಸುವಷ್ಟು ದೊಡ್ಡವನಾಗಿ ಬೆಳೆದದ್ದು; ಇವೇ ಮುಂತಾದ ಇವರ ಜೀವನದಲ್ಲಿ ನಡೆದ ಕೆಲವು ಮಹತ್ವದ ಘಟನೆಗಳನ್ನು ಬಿಡಿ ಬಿಡಿಯಾಗಿ ಮಂಡಿಸಿರುವ ಲೇಖನಗಳ ಸಂಕಲನವೇ 'ಹೌ ಐ ಟಾಟ್ ಮೈ ಗ್ರ್ಯಾಂಡ್ ಮದರ್ ಟು ರೀಡ್ ಅಂಡ್ ರೈಟ್ ಅಂಡ್ ಅದರ್ ಸ್ಟೋರೀಸ್', ಎಂಬುದು. ತಮ್ಮ ಶಿಷ್ಯರ ಜೀವನದಲ್ಲಿ ತಾವೂ ಒಬ್ಬರಾಗಿ ತೊಡಗಿಕೊಳ್ಳುವ ಸ್ವಭಾವವನ್ನೂ, ಇತರರಿಗೆ ಹೇಳಿಕೊಡುವುದರಲ್ಲಿ ಇರುವ ಉತ್ಸಾಹವನ್ನೂ ಮತ್ತು ಕುಟುಂಬದ ಹಿರಿಯರೊಂದಿಗೆ ಒಂದಾಗುವ ಗುಣವನ್ನೂ ಇವರು ಬರೆದಿರುವ ಈ ಕೃತಿಯಲ್ಲಿ ಕಾಣಿಸಿದ್ದಾರೆ. ಇದು ಮಕ್ಕಳಿಗೂ, ದೊಡ್ಡವರಿಗೂ ಯಾವುದೇ ಸಾಧನೆಗೆ ಸಹಾಯಕವಾಗುವ ಸಂಗತಿಗಳಾಗಿ ಉದಾಹರಣೆಗೆ ಯೋಗ್ಯವಾಗುತ್ತವೆ.

ತುಂಬ ಸರಳ ಭಾಷೆ, ಸಾಮಾನ್ಯ ಪದಗಳ ಬಳಕೆ, ಸುಲಭವಾಗಿ ಯಾರಿಗಾದರೂ ಅರ್ಥವಾಗ ಬಹುದಾದ ನಿರೂಪಣೆ, ಸುಧಾ ಅವರ ಬರಹದ ರೀತಿ. ಅತಿ ಭಾವುಕತೆ, ಕಲಾತ್ಮಕತೆ, ಚಮತ್ಕಾರ, ಆಡಂಬರ, ಭಾರೀ ಪದಗಳ ಬಳಕೆ, ಇವರ ಬರಹಗಳಲ್ಲಿ ಹೆಚ್ಚು ಕಾಣುವುದಿಲ್ಲ. ಸ್ತ್ರೀಯರಿಗೆ ಸಂಬಂಧಿಸಿದ ವಿಷಯಗಳು ಅವರ ಹೆಚ್ಚಿನ ಕೃತಿಗಳಿಗೆ ವಸ್ತುವಾಗಿವೆ. ಅಲ್ಲದೇ ಸಹನೆ, ಸಹಾಯ, ಸಂಪ್ರದಾಯಬದ್ಧ ಚೌಕಟ್ಟಿನೊಳಗೇ ಹೆಣ್ಣಿನ ಪ್ರತಿಭಟನೆಯ ಆಲೋಚನೆಗಳು, ದಾನದ ಬಗೆಗಿನ ಚಿಂತನೆಗಳು, ಅರಿವು, ಆತಿಥ್ಯಗಳು, ಸಾಧನೆಯ ಮಾರ್ಗಗಳು, ಬಹುವಾದುದನ್ನು ಕೊಟ್ಟ ಸಮಾಜಕ್ಕೆ ಹಿಂತಿರುಗಿಸುವ ಕರ್ತವ್ಯಗಳು, ನೀತಿ ತತ್ವಗಳು, ಜೀವನ ಮೌಲ್ಯಗಳು, ಸುಧಾ ಅವರಿಗೆ ಮುಖ್ಯ ವಸ್ತುಗಳಾಗುತ್ತವೆ ಎಂಬುದನ್ನು ಇವರ ಮೇಲಿನ ಕೃತಿಗಳಿಂದ ತಿಳಿಯಬಹುದು.

ಚಲನಚಿತ್ರ : ಬಹುಮುಖ ಪ್ರತಿಭೆಯ ಸುಧಾ ಅವರ ಒಳಗೆ ಒಬ್ಬ ಕಲಾವಿದೆಯೂ ಹುದುಗಿದ್ದಾಳೆ ಎಂಬುದಕ್ಕೆ ಸಾಕ್ಷಿಯಾಗಿ ಹೊರಬರಲಿರುವ ಚಿತ್ರ, ಸದಾಶಿವ ಶೆಣೈ ಅವರ 'ಪ್ರಾರ್ಥನೆ'. ಅನಂತ ನಾಗ್, ಸುಧಾ ರಾಣಿ, ಪವಿತ್ರ ಲೋಕೇಶ್, ಪ್ರಕಾಶ್ ರೈ ಮುಂತಾದ ಹೆಸರಾಂತರು 'ಪ್ರಾರ್ಥನೆ'ಯ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿರುವ ಇನ್ನಿತರ ಕಲಾವಿದರುಗಳು.

ಪ್ರಶಸ್ತಿ/ಪುರಸ್ಕಾರಗಳು :

ಶ್ರದ್ಧೆ, ಶ್ರಮ, ಬುದ್ಧಿವಂತಿಕೆಗಳು ಮೇಳವಿಸಿದ ವ್ಯಕ್ತಿಗೆ ಯಶಸ್ಸು ಮಾತ್ರವಲ್ಲದೆ, ಜೊತೆಗೇ ಪ್ರಶಸ್ತಿ ಪುರಸ್ಕಾರಗಳು ಅರಸಿಕೊಂಡು ಬರುವುದು ಖಚಿತ. ಸುಧಾ ಅವರಿಗೂ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳು, ಪುರಸ್ಕಾರ, ಸನ್ಮಾನಗಳು ಸಾಧನೆಯ ಜೊತೆಜೊತೆಯಾಗಿ ಲಭ್ಯವಾಗಿವೆ. ಕರ್ನಾಟಕ ರಾಜ್ಯದ ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ಅಪ್ರತಿಮರಾಗಿದ್ದಕ್ಕೆ ಸರ್ಕಾರದ ಯುವಜನ ಸೇವೆ ಇಲಾಖೆಯಿಂದ ಬಹುಮಾನ; 1995ರಲ್ಲಿ ಬೆಂಗಳೂರಿನ ರೋಟರಿ ಕ್ಲಬ್‌ನಿಂದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ; ಪಬ್ಲಿಕ್ ರಿಲೇಶನ್ ಸೊಸೈಟಿ ಆಫ್ ಇಂಡಿಯಾದಿಂದ ಇವರ ಸಮಾಜಸೇವೆಗಾಗಿ ರಾಷ್ಟ್ರೀಯ ಪ್ರಶಸ್ತಿ; ಇವರ ತಾಂತ್ರಿಕ ಪುಸ್ತಕ 'ಶಾಲಾ ಮಕ್ಕಳಿಗಾಗಿ ಕಂಪ್ಯೂಟರ್'ಗೆ ಅತ್ತಿಮಬ್ಬೆ ಪ್ರಶಸ್ತಿ; ಹುಬ್ಬಳ್ಳಿಯ ದಕ್ಷಿಣ ರೋಟರಿಯಿಂದ ಉತ್ಕೃಷ್ಟ ಸಮಾಜ ಸೇವೆಗೆ ಪ್ರಶಸ್ತಿ; 2000ನೇ ಸಾಲಿನಲ್ಲಿ ಸಾಹಿತ್ಯ ಮತ್ತು ಸಮಾಜ ಸೇವೆಗಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ; ಉತ್ಕೃಷ್ಟ ಸಮಾಜ ಸೇವಾ ಕಾರ್ಯಕರ್ತೆ ಎಂದು 2000ನೇ ಸಾಲಿನಲ್ಲಿ 'ಓಜಸ್ವಿನಿ ಪ್ರಶಸ್ತಿ; 'ಮಿಲೆನಿಯಂ ಮಹಿಳಾ ಶಿರೋಮಣಿ ಪ್ರಶಸ್ತಿ; 'ಪರಿಧಿ' ಕೃತಿಗೆ ಎಂ.ಕೆ. ಇಂದಿರಾ ಪ್ರಶಸ್ತಿ; ನವದೆಹಲಿಯ ಲಕ್ಷ್ಮಿ ಎನ್. ಮೆನನ್ ಪ್ರಶಸ್ತಿ;ಚೆನ್ನೈನ ಆರ್.ಕೆ. ನಾರಾಯಣ ಪ್ರಶಸ್ತಿ; ಮುಂಬಯಿಯ ಯಶವಂತರಾವ್ ರಾಷ್ಟ್ರೀಯ ಪ್ರಶಸ್ತಿ; 'ಏರಿಳಿತದ ದಾರಿಯಲ್ಲಿ' ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ದತ್ತಿ ಪ್ರಶಸ್ತಿ; 2001ರ ಗಣಕ ಪ್ರಪಂಚ ರಾಷ್ಟ್ರೀಯ ಮಟ್ಟದ ಪ್ರಶಸ್ತಿ; 2002ನೇ ಸಾಲಿನಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ ಬೆಂಗಳೂರಿನ ಎಫ್. ಎಂ. ಸ್ಟೇಷನ್ ನಡೆಸಿದ ಸ್ಪರ್ಧೆಯಲ್ಲಿ 'ವರ್ಷದ ಮಹಿಳೆ'ಯಾಗಿ ಚುನಾಯಿತ ಮಹಿಳೆ; ಅಸಾಧಾರಣ ಸಮಾಜ ಸೇವೆಗಾಗಿ, 2004ರಲ್ಲಿ ಚೆನ್ನೈನ ರಾಜಲಕ್ಷ್ಮಿ ಫೌಂಡೇಶನ್‌ನಿಂದ ಕೊಡಮಾಡುವ ಒಂದು ಲಕ್ಷ ಮೊತ್ತದ 'ರಾಜಲಕ್ಷ್ಮಿ ಪ್ರಶಸ್ತಿ' ; ಭಾರತ ಸರ್ಕಾರದಿಂದ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ; ಮಧ್ಯ ಪ್ರದೇಶದ ಇಂದೋರಿನಲ್ಲಿ ಕೊಡಮಾಡಿರುವ ದೇವಿಅಹಿಲ್ಯಾ ರಾಷ್ಟ್ರೀಯ ಪ್ರಶಸ್ತಿ; ಮುಂಬಯಿಯ ಹಾರ್ಮೊನಿ ದತ್ತಿ ಸಂಸ್ಥೆಯಿಂದ ಮದರ್‌ಥೆರೇಸಾ ಸ್ಮರಣಾರ್ಥ ಅಂತರರಾಷ್ಟ್ರೀಯ ಪ್ರಶಸ್ತಿ; ಸರ್.ಎಂ.ವಿ. ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ ಪ್ರಶಸ್ತಿ; ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಬರ್ಕ್ಲಿ ಯಿಂದ 'ಇಂಟರ್‌ನ್ಯಾಷನಲ್ ಅಂಡ್ ಏರಿಯಾ ಸ್ಟಡೀಸ್ ಗ್ಲೋಬಲ್ ಲೀಡರ್ಸ್ ಅವಾರ್ಡ್; 2010ರ ಬಸವಶ್ರೀ ಪ್ರಶಸ್ತಿ; ಕರ್ನಾಟಕ ಸರ್ಕಾರದ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ; ಮುಂತಾದವು ಸುಧಾ ಅವರ ಹೆಸರಿನೊಂದಿಗೆ ಬಂದು ಸೇರಿಕೊಂಡಿರುವ ಪ್ರಶಸಿಗಳಲ್ಲಿ ಕೆಲವು.

ಪ್ರಶಸ್ತಿಗಳಿಗಿಂತ ಅತ್ಯಂತ ವಿಶೇಷವಾದುದೆಂದರೆ ಏಳು ವಿಭಿನ್ನ ವಿಶ್ವ ವಿದ್ಯಾಲಯಗಳಿಂದ ಇವರಿಗೆ ಗೌರವ ಡಾಕ್ಟರೋರೇಟ್ ಪದವಿಗಳನ್ನು ನೀಡಿರುವುದು. ಗುಲ್ಬರ್ಗಾ ವಿಶ್ವವಿದ್ಯಾಲದಿಂದ ಸಾಹಿತ್ಯಕ್ಕಾಗಿ ಗೌರವ ಡಾಕ್ಟೊರೇಟ್; ಚೆನ್ನೈನ ಸತ್ಯಭಾಮಾ ವಿಶ್ವವಿದ್ಯಾಲಯ, ಬಾಂಬೆಯ ಎಸ್.ಎನ್.ಡಿ.ಟಿ. ಮಹಿಳಾ ವಿಶ್ವ ವಿದ್ಯಾಲಯ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ, ಕೊಲ್ಲಾಪುರದ ಶಿವಾಜಿ ವಿಶ್ವವಿದ್ಯಾಲಯ, ತಿರುಪತಿಯ ಪದ್ಮಾವತಿ ಮಹಿಳಾ ವಿಶ್ವವಿದ್ಯಾಲಯ ಮತ್ತು ತುಮಕೂರಿನ ತುಮಕೂರು ವಿಶ್ವವಿದ್ಯಾಲಯ– ಇವುಗಳಿಂದ ಡಾಕ್ಟೋರೇಟ್ ದೊರೆತಿರುವುದು ಇವರ ಅಮೋಘ ಸಾಮರ್ಥ್ಯಕ್ಕೆ ಸಾಕ್ಷಿ.

ರಜೆಯ ಮೋಜಿಗೆ, ಕಛೇರಿ ಕೆಲಸಕ್ಕೆ, ಮಾಹಿತಿ ಸಂಗ್ರಹಣೆಗೆ ಎಂದು ಯೂರೋಪ್, ಅಮೆರಿಕಾ, ಕೈರೋ, ಚೈನಾ, ಆಸ್ಟ್ರೇಲಿಯ, ಆಷ್ಟ್ರಿಯ, ಬಹರೇನ್, ಭೂತಾನ್, ಕೆನಡ, ಕಾಂಬೋಡಿಯ, ಚೈನಾ, ಡೆನ್‌ಮಾರ್ಕ್, ದುಬೈ, ಫ್ರಾನ್ಸ್, ಜರ್ಮನಿ, ಹಾಲೆಂಡ್, ಇಂಡೋನೇಷಿಯ, ನೇಪಾಲ್, ಸಿಂಗಪೂರ್, ನಾರ್ವೆ, ನ್ಯೂಸಿಲ್ಯಾಂಡ್, ಮೆಕ್ಸಿಕೊ, ಶ್ರೀಲಂಕ, ಸೌತ್ ಆಫ್ರಿಕ, ಟರ್ಕಿ, ಪೋರ್ಚುಗಲ್ ವಿಯಟ್ನಾಂ, ಥೈಲ್ಯಾಂಡ್, ರಷಿಯ, ಮುಂತಾಗಿ ಹಲವಾರು ದೇಶಗಳಲ್ಲಿ ಹಲವಾರು ಬಾರಿ ಪ್ರವಾಸ ಮಾಡುತ್ತಿರುವ ಸುಧಾ ಅವರು ಹಿಂದಿ, ಇಂಗ್ಲಿಷ್, ಮರಾಠಿ ಮತ್ತಿತರ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದು ಎಲ್ಲಾ ದೇಶಗಳನ್ನು ಸುತ್ತಿದರೂ, ಕನ್ನಡದಂತೆಯೇ ಇಂಗ್ಲಿಷ್‌ನಲ್ಲಿಯೂ

ಹಲವು ಕೃತಿಗಳನ್ನು ಉತ್ತಮವಾಗಿ ರಚಿಸಿರುವರಾದರೂ, ಇನ್‌ಫೋಸಿಸ್ ನಂತಹ ಇಂಗ್ಲಿಷ್ ವಾತಾವರಣದ ಸಂಸ್ಥೆಯ ಸ್ಥಾಪನೆಗೆ ಕಾರಣಕರ್ತೆಯಾದರೂ, ಈಕೆಗೆ ಕನ್ನಡ ಮತ್ತು ಕನ್ನಡಿಗರ ಬಗ್ಗೆ ಪ್ರೀತಿ ಇದೆ. ಅವರು ಉಳಿಸಿಕೊಂಡಿರುವುದೂ ಅಪ್ಪಟ ಕನ್ನಡತನವನ್ನು. ತಮ್ಮ ತಾಯಿ ನೆಲ, ತಾಯಿ ಭಾಷೆ, ಮತ್ತು ತಾಯಿ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುವ ಕಥೆಯುಳ್ಳ ಚಲನ ಚಿತ್ರವೇ ಇವರು ಅಭಿನಯಿಸಿರುವ 'ಪ್ರಾರ್ಥನೆ'. ಈ 'ಪ್ರಾರ್ಥನೆ' ಚಿತ್ರ ಮಾತ್ರವಾಗಿ ಅಲ್ಲ, ನಿಜವಾಗಿಯೂ ಕನ್ನಡ ಭಾಷೆಯನ್ನು, ಕನ್ನಡ ಸಂಸ್ಕೃತಿಯನ್ನು ಉಳಿಸುವಲ್ಲಿ, ಇನ್ನಷ್ಟೂ ಬೆಳೆಸುವಲ್ಲಿ ಸಫಲವಾಗಲಿ, ಕನ್ನಡಕ್ಕೆ ಸಕಲ ಯಶಸ್ಸೂ ಸಿಗಲಿ ಎಂಬುದೇ ನಮ್ಮ 'ಪ್ರಾರ್ಥನೆ'.

———— * ————

ಗೀಗೀ ಪದದ ಕಲಾವಿದೆ ಫಕೀರವ್ವ ಗುಡಿಸಾಗರ

ಡಾ. ಎಚ್. ಜಯಮ್ಮ

ಜಾನಪದದ ಉಗಮ ಸ್ಥಾನ ಜನಪದ. ಇದು ಜನಪದರ ಸಮಷ್ಟಿ ಕ್ರಿಯೆ. ಜನಪದ ಗೀತೆಗಳು ಜನಪದರ ನಿತ್ಯಜೀವನದ ಬದುಕಿನ ಜೊತೆಜೊತೆಯಲ್ಲಿ ಬೆಳೆದು ಬಂದು ಸಾಕಷ್ಟು ಪರಿಚಿತವಾಗಿವೆ. ಜನಪದ ಗೀತೆಗಳಿಗೆ ಸಂಬಂಧಿಸಿದಂತೆ ಅನೇಕ ವಿಭಾಗಗಳಲ್ಲಿ ಸಾಕಷ್ಟು ಕೆಲಸ ನಡೆದಿದೆ. ಜನಪದ ಗೀತೆಗಳನ್ನು ಬದಲಾವಣೆಗಳು, ಕಥನಗೀತೆಗಳು, ಕೆಲಸದ ಹಾಡುಗಳು, ನಾಟ್ಯಗೀತೆಗಳು, ಮಕ್ಕಳ ಹಾಡುಗಳು ಹೀಗೆ ನಾನಾ ಗುಂಪುಗಳಾಗಿ ವರ್ಗೀಕರಿಸಲಾಗಿದೆ. ಕೆಲಸದ ಹಾಡುಗಳಲ್ಲಿ, ಹೊಲಗದ್ದೆಗಳಲ್ಲಿ ನಾಟಿಹಾಕುವ, ಕಳೆಕೀಳುವ, ಕಣಮಾಡಿ ಧಾನ್ಯಗಳನ್ನು ಶುದ್ಧಿ ಮಾಡುವಾಗ ಗುಂಪಿನಲ್ಲಿ ಕೆಲಸಮಾಡುವ ಮಹಿಳೆ ಅಥವಾ ಪುರುಷರೂ ಸೇರಿದಂತೆ ಭೇದವಿಲ್ಲದೆ ಸಾಮೂಹಿಕವಾಗಿ ಹಾಡುವ ಗೀತೆಗಳಿವೆ. ಅಲ್ಲದೆ ಕುಟ್ಟುವಾಗ, ಬೀಸುವಾಗ ಸಹ ತಮ್ಮ ಏಕತಾನತೆಯನ್ನು ದೂರಮಾಡಿಕೊಳ್ಳುವಾಗ ಹಾಡುವ ಪದಗಳನ್ನು ಗುರುತಿಸಬಹುದು. ಇವಲ್ಲದೆ ಸಮಾಜದಲ್ಲಿ ನಡೆಯುವ ದೇವರ ಮೆರವಣಿಗೆ, ರಥೋತ್ಸವ, ಪೂಜೆಗೆ ಸಂಬಂಧಿಸಿದಂತೆ, ಮದುವೆ ಕಾರ್ಯಗಳಲ್ಲಿ ಹಸೆ ಹಚ್ಚುವಾಗ, ಹಸೆಗೆ ಕರೆಯುವಾಗ, ಹರಿಸಿಣದ ನೀರಿನ ಸ್ನಾನ, ಕಂಕಣ ಕಟ್ಟುವಾಗ ಮತ್ತು ಬಿಚ್ಚುವಾಗ ಸಂಪ್ರದಾಯದ ಹಾಡುಗಳನ್ನು ಇಬ್ಬರು ಅಥವಾ ನಾಲ್ವರ ಗುಂಪಿನಲ್ಲಿ ಅಂದರೆ ಮುಮ್ಮೇಳ, ಹಿಮ್ಮೇಳದ ಸೊಲ್ಲಾಗಿ ಹಾಡುತ್ತಾರೆ.

ಜಾನಪದ ಗೀತೆಗಳು ಅನಕ್ಷರಸ್ಥ ಸಮಾಜದಲ್ಲಿ ವಾಕ್ ಸಂಪ್ರದಾಯದಲ್ಲಿ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿರುವುದನ್ನು ಕಾಣುತ್ತೇವೆ. ಜನಪದ ಗೀತೆಗಳ ನಿರ್ಮಾಣ ತನ್ನ ಆರಂಭದ ದಿನಗಳಲ್ಲಿ ಸಾಮೂಹಿಕವಾಗಿಯೇ ಆರಂಭವಾಗಿದೆ. ಇವುಗಳ ಕರ್ತೃ ಯಾರು, ಯಾವಾಗ, ಎಲ್ಲಿ ಹೇಗೆ ಎಂದು ಹೇಳಲು ಬರುವುದಿಲ್ಲ. ಒಟ್ಟಾರೆ ಇವು ಅಜ್ಞಾತ ಕರ್ತೃಗಳ ಸೃಷ್ಟಿ ಬಳಕೆಯಲ್ಲಿ ಮಾತ್ರ ವ್ಯಕ್ತಿಗತವಾಗಿ ಸಮಯ, ಸಂದರ್ಭಾನುಸಾರ ಕಟ್ಟುಕಟ್ಟಳೆಗೆ ಅನುಸಾರವಾಗಿ ಬಳಕೆಯಾಗಿರುತ್ತದೆ.

ಜನಪದ ಗೀತೆಗಳ ಹರವು ಬಾಲ್ಯ ಯೌವನ, ಮುಪ್ಪಿಗೆ ಸಂಬಂಧಿಸಿದಂತೆ ಮದುವೆ, ಮುಂಜಿಯಂತಹ ಸಾಮಾಜಿಕ ಕಾರ್ಯಗಳಲ್ಲಿಯೂ ಮಹತ್ವದ ಪಾತ್ರ ವಹಿಸುತ್ತವೆ.

ಮದುವೆಗಳಲ್ಲಿ ಹೆಣ್ಣಿನ ಕಡೆಯವರು, ಗಂಡನ್ನು ಮತ್ತು ಗಂಡಿನ ಕಡೆಯವರನ್ನು; ಗಂಡಿನ ಕಡೆಯವರು ಹೆಣ್ಣನ್ನು ಮತ್ತು ಹೆಣ್ಣಿನ ಕಡೆಯವರನ್ನು; ಹಾಡಿನ ಮೂಲಕ ಜರೆದಾಡುವ ಪದ್ಧತಿ ಇನ್ನೂ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ವಿವಾಹಗಳಲ್ಲಿ ಕಾಣಬಹುದು. ಜನಪದ ಕಾವ್ಯ ಬೆಳೆಯುತ್ತಾ, ಸಂದರ್ಭಕ್ಕೆ ತಕ್ಕಂತೆ ಕಾಲ, ದೇಶಗಳಿಗೆ ಅನುಗುಣವಾಗಿ ಲಾವಣಿ ಗೀಗಿ ಪದಗಳ ಅಭಿದಾನವನ್ನು ಹೊತ್ತು ಹಿಗ್ಗಿ ಬೆಳೆದವು.

ಕನ್ನಡ ಜಾನಪದ ಸಾಹಿತ್ಯದಲ್ಲಿ ಗೀಗೀ ಪದಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಹಾಡಿನ ನುಡಿಗಳ ಕೊನೆಗೆ ಗೀಗೀ ಎಂಬ ಸೊಲ್ಲು ಹೊರಡಿಸುವುದರಿಂದ ಈ ತರಹದ ಹಾಡುಗಳಿಗೆ ಗೀಗೀ ಪದಗಳೆಂದು ಕರೆಯಲಾಯಿತು.

ಗೀಗೀ ಹಾಡುಗಳು ವೈವಿಧ್ಯಮಯದಿಂದ ಕೂಡಿದ್ದರೂ ಅವುಗಳಲ್ಲಿ ಹರದೇಶಿ-ನಾಗೇಶಿ ಅಥವಾ ಗಂಡು ಹೆಚ್ಚೋ ಇಲ್ಲವೆ ಹೆಣ್ಣು ಹೆಚ್ಚೋ ಎಂಬ ಸವಾಲ್-ಜವಾಬ್ ಹಾಡುಗಳು ಜನರಲ್ಲಿ ವಿಶೇಷ ಆಸಕ್ತಿಯನ್ನುಂಟುಮಾಡಿವೆ. ಉತ್ತರ ಕರ್ನಾಟಕದಲ್ಲಿ ಈ ಮಾದರಿಯ ಹಾಡುಗಳನ್ನು ಹೇಳುವುದಕ್ಕಾಗಿಯೇ ಹಲವು ಮೇಳಗಳು ತಲೆಯೆತ್ತಿರುವುದುಂಟು. ಅವುಗಳಲ್ಲಿ ಈ ಲೇಖನಕ್ಕೆ ಸಂಬಂಧಿಸಿದ ಶ್ರೀಮತಿ ಫಕೀರವ್ವ ಗುಡಿಸಾಗರ ಅವರದೂ ಒಂದು ಮೇಳ.

ಶ್ರೀಮತಿ ಫಕೀರವ್ವ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಗುಡಿಸಾಗರದಲ್ಲಿ ದಿನಾಂಕ 1925ರ ಮಾರ್ಚ್ ಹತ್ತರಂದು ಜನಿಸಿದರು. ಅಸ್ಪೃಶ್ಯಜಾತಿಯ ತಂದೆ ಮರಿಯಪ್ಪ, ತಾಯಿ ನೀಲವ್ವ ಆ ಕಾಲದ ಪದ್ಧತಿಯಂತೆ ಶಿಕ್ಷಣ ಸೌಲಭ್ಯವಿಲ್ಲದೆ, ತಾರುಣ್ಯಕ್ಕೆ ತಲುಪಿದೊಡನೆ ಮನೆತನದ ಸಂಪ್ರದಾಯದಂತೆ ದೇವದಾಸಿ ವೃತ್ತಿಗೆ ಕಾಲಿಟ್ಟರು ಅಥವಾ ತಳ್ಳಲ್ಪಟ್ಟರು. ಆದರೆ ಆಕೆ ಗದುಗಿನ ಶ್ರೀ ಶಿವಾನಂದ ಸ್ವಾಮಿಗಳಿಂದ ಲಿಂಗದೀಕ್ಷೆ ಪಡೆದು ಹೊಸಜೀವನ ಪ್ರಾರಂಭಿಸಿದರು.

ಗೀಗೀ ಪದದ ಹಾಡುಗಾರ್ತಿಯಾಗಿ ಫಕೀರವ್ವ ರೂಪುಗೊಂಡದ್ದು ಆಕಸ್ಮಿಕ. ಒಮ್ಮೆ ತಾಯಿಯ ತವರಾದ ಹೆಬ್ಬಾಳಕ್ಕೆ ಹೋದಾಗ ಮನ್ನಿಕಟ್ಟೆ ಗಂಗೂಬಾಯಿಯವರ ಹಾಡು ಕೇಳಿ ಪ್ರಭಾವಿತರಾದರು. ತಾನೂ ಕೂಡ ಅವರಂತೆ ಏಕೆ ಹಾಡಬಾರದೆಂದು ಮನಸ್ಸಿನಲ್ಲಿ ನಿರ್ಧಾರದ ಸಂಕಲ್ಪ ಮಾಡಿದರು. ಈಕೆಯ ಸೋದರಮಾವನಾದ ಹನುಮಂತಪ್ಪ ಹಾಡುಗಾರನಾಗಿದ್ದು, ತನ್ನ ಬಯಕೆಯನ್ನು ಅವನ ಮುಂದಿಟ್ಟಳು. ಮಾವ ಪ್ರೋತ್ಸಾಹ ನೀಡಿದನು. ಇದರಿಂದ ಫಕೀರವ್ವ ನಿಜವಾದ ಕಲಾಕಾರಳಾಗಿ ರೂಪುಗೊಂಡಳು. ತನ್ನ ಸೋದರಮಾವನ ಮಾರ್ಗದರ್ಶನದಲ್ಲಿ ಹಾಡಲು ಪ್ರಾರಂಭಿಸಿದ ನಾಗೇಶ್ ಪಂಥ ಪ್ರತಿಪಾದಿಸುವ ಪ್ರಮುಖ ಕಲಾವಿದೆಯಾದರು. ಈಕೆ ದೆಹಲಿ, ಹೈದರಾಬಾದ್, ದೂರದರ್ಶನದಲ್ಲಿ, ಆಕಾಶವಾಣಿಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ವಿಶ್ವಕನ್ನಡ ಸಮ್ಮೇಳನ ಮೊದಲಾದ ಸಂಘ-ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಹಾಡಿ ಶ್ರೋತೃಗಳಿಗೆ ಆನಂದವನ್ನುಂಟುಮಾಡಿದ್ದಾರೆ. ಫಕೀರವ್ವ ಗುಡಿಸಾಗರ ಅವರ ಕಲೆಗೆ ಮನ್ನಣೆಯನ್ನಿತ್ತ ಕರ್ನಾಟಕ ಸರ್ಕಾರ ಇವರಿಗೆ ತಿಂಗಳಿಗೆ 250/-ರೂಗಳ ಗೌರವಧನ ಮಂಜೂರು ಮಾಡಿ ಗೌರವಿಸಿದೆ.

ಕ್ಯಾಸೆಟ್‌ನಲ್ಲಿ ರೆಕಾರ್ಡ್

ಗೀಗೀ ಪದ – ಬಾರೇ ಸರಸತಿ
ನಾ ಕಂದನತಿ. ಮಂದಮತಿ
ಮಂದಮತಿಯು ನಿನಗೊಂದಿಸಿ ಬೇಡುವೆ
ಬಾರೆ ನವುಲ ಹತ್ತಿ ಸರಸತಿ॥ ಗೀಯ ಗೀಯ ಗೀಯ ಗೀಯ....
ಬೀಡಾ ಇಡಿದಿರತಿ ಕಮಲದಲಿ ಪಾದವನಿಟ್ಟಿರತಿ
ಪಾದತೊಳೆದು ನಿನ್ನ ಪೂಜೆ ಮಾಡತಿನಿ
ಪ್ರಸನ್ನಾಗಿ ಸುಲಲಿತೆ ಸರಸತಿ॥ ಗೀಯ.....
ಪ್ರಸನ್ನಾಗಿ ಕೊಡ ವರವ
ಭಯ ಕಳೆದು ನೀಡೆ ತಾಯೆ ಅರುವ
ಅರಿವಿಂದ ಮಾಡುವೆ ನಿಮ್ಮ ಸೇವ
ಕೊಡಬ್ಯಾಡವ್ವ ಗುರುವ ತಾಯವ್ವ॥ ಗೀಯ.....
ಓ ಬಾರೆ ಸರಸತಿ ನಾಮಾಡತೇನಿ ನಿನ್ನ ಸ್ತುತಿ
ಉಷಾ ಆಗಿ ನಿನ್ನ ದ್ಯಾಸ ಮಾಡತಿನಿ
ಬಂದು ಆಗ ಸಾರಥಿ ಸರಸತಿ॥ ಗೀಯ.....

ತನ್ನ ಇಳಿವಯಸ್ಸಿನಲ್ಲಿಯೂ ನವತರುಣಿಯಂತೆ ಫಕೀರವ್ವ ಡಪ್ಪು ಬಡಿಯುತ್ತಾ ಹಾಡಿ ರಂಜಿಸುತ್ತಿದ್ದರು ಅವರಿಗೆ 1984ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ಲಭ್ಯವಾಗಿತ್ತು. ಕೆಳಜಾತಿಯಲ್ಲಿ ಹುಟ್ಟಿ ಗಂಧರ್ವಗಾನ ಗೀಗಿ ಪದವನ್ನು ಹಾಡುತ್ತಾ ತನ್ನ ಜೀವನವನ್ನು ಕಳೆದ ಶ್ರೀಮತಿ ಫಕೀರವ್ವ ಗುಡಿಸಾಗರ ಅವರು ಇತ್ತಿಚೆಗೆ ತೀರಿಕೊಂಡರು.

ದೇವದಾಸಿ ವೃತ್ತಿಯನ್ನು ನಿರಾಕರಿಸಿ ವಿದ್ಯೆ ಇಲ್ಲದೆಯೂ ಗೀಗೀ ಪದಗಳನ್ನು ಕಟ್ಟಿ ಹಾಡುತ್ತಾ ತನ್ನ ಹುಟ್ಟನ್ನು ಸಾರ್ಥಕ ಪಡಿಸಿಕೊಂಡು ರಾಜ್ಯಾದ್ಯಂತ ಹೆಸರು ಮಾಡಿದ ಸಾಧಕಿ ಫಕೀರವ್ವ ಗುಡಿಸಾಗರ ಅವರು.

(ಕೃಪೆ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ; ಡಾ॥ ಚಿಕ್ಕರೆ ಶಿವಶಂಕರ್ ಮತ್ತು ಡಾ. ವೆಂಕಟೇಶಮೂರ್ತಿ.)

——— * ———

ಸ್ತ್ರೀ ನಾಟಕ ಮಂಡಳಿಯ ರೂವಾರಿ ಪದ್ಮಶ್ರೀ ಆರ್. ನಾಗರತ್ನಮ್ಮ

ಬಿ.ಎಸ್. ಕೇಶವರಾವ್

ಇಂದಿಗೂ ಸಹ ಸ್ತ್ರೀ ನಾಟಕ ಮಂಡಳಿ ಎನ್ನುತಿದ್ದಂತೆ, ಯಾರಿಗಾದರೂ ಅಷ್ಟೆ ಥಟ್ಟನೆ ಹೊಳೆಯುವುದು ಆರ್. ನಾಗರತ್ನಮ್ಮನವರ ಸ್ತ್ರೀ ನಾಟಕ ಮಂಡಳಿ ಅಷ್ಟೆ. ಅದರೆ ಈ ನಾಗರತ್ನಮ್ಮನವರಿಗೂ ಬಹು ಹಿಂದೆಯೇ ಕೆಲವು ಮಂದಿ ಸ್ತ್ರೀಯರು ನಾಟಕಗಳಲ್ಲಿ ಎಲ್ಲ ಪಾತ್ರಗಳನ್ನು ಸ್ತ್ರೀಯರೇ ನಿರ್ವಹಿಸುವಂತಹ ಕಂಪನಿಗಳನ್ನು ಕಟ್ಟಿ ಹಲವಾರು ವರುಷ ನಾಡಿನಾದ್ಯಂತ ನಾಟಕಗಳನ್ನಾಡಿದ್ದುಂಟು. ಹೀಗೆ ಹಿಂದಿನ ಒಂದಾನೊಂದು ಕಾಲದಲ್ಲಿ ಇಂತಹ ಸ್ತ್ರೀ ನಾಟಕ ಮಂಡಳಿಗಳನ್ನು ಅಸ್ತಿತ್ವಕ್ಕೆ ತಂದು ಸಾಕಷ್ಟು ಹಣ ಹೆಸರು ಮಾಡಿದವರಲ್ಲಿ ಬಹುತೇಕರು ದೇವದಾಸಿಯರು ಅರ್ಥಾತ್ ವೇಶ್ಯಾವೃತ್ತಿಯವರು. 1907ರಲ್ಲಿ ಪಾಪಾಸಾನಿ, 1916ರಲ್ಲಿ ಬಚ್ಚಾಸಾನಿ, ಸುಮಾರು ಅದೇ ಕಾಲಕ್ಕೆ ಲಕ್ಷ್ಮಾಸಾನಿ, 1929ರಲ್ಲಿ ನಂಜಾಸಾನಿ, ಮತ್ತು ಇನ್ನೂ ಕೆಲವರು ಸ್ತೀ ನಾಟಕ ಮಂಡಳಿಗಳನ್ನು ಸ್ಥಾಪಿಸಿ ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳನ್ನು ಆಡುತ್ತಿದ್ದರು. ಅಲ್ಲದೆ ಮಳವಳ್ಳಿ ಸುಂದರಮ್ಮ, ಗಂಗೂಬಾಯಿ ಗುಳೇದಗುಡ್ಡ, ಸೋನೋಬಾಯಿ ದೊಡ್ಡಮನಿ, ಬಳ್ಳಾರಿ ಲಲಿತಮ್ಮ, ನಂತರದಲ್ಲಿ ಪಂಢರಿಬಾಯಿ ಮೊದಲಾದವರು ನಾಟಕ ಮಂಡಳಿಗಳನ್ನು ಸ್ಥಾಪಿಸಿ ಪುರುಷರನ್ನು ನಟವರ್ಗದಲ್ಲಿ ಸೇರಿಸಿಕೊಂಡಿದ್ದಾಗ್ಯೂ ಸ್ತ್ರೀ ಪ್ರಧಾನವೆಂಬಂತಿದ್ದ ಹೇಮರೆಡ್ಡಿ ಮಲ್ಲಮ್ಮ, ಕಿತ್ತೂರು ಚೆನ್ನಮ್ಮ, ಮೀರಾ, ಅಕ್ಕಮಹಾದೇವಿ, ಇಂತಹ ನಾಟಕಗಳನ್ನು ಆಡಿಸಿ ಹೆಸರು ಮಾಡಿದ್ದರು.

ಈ ವಾತಾವರಣದ ಹಿನ್ನೆಲೆಯಲ್ಲಿ ವಿಚಾರ ಹೀಗಿದ್ದಾಗ 1926ರ ಜೂನ್ ಇಪ್ಪತ್ತೊಂದರಂದು ಕೃಷ್ಣಭಟ್ಟ ರುಕ್ಮಿಣಮ್ಮ ಎಂಬ ವೈಷ್ಣವ ದಂಪತಿಗಳಿಗೆ ಮೈಸೂರಿನಲ್ಲಿ ಜನಿಸಿದವರು ಆರ್. ನಾಗರತ್ನಮ್ಮ. ಈಕೆಯ ತಾಯಿತಂದೆಗಳು ವಾಸಿಸುತ್ತಿದ್ದುದು ಹಳೆ ಅಗ್ರಹಾರದ ತೊಗರಿ ಬೀದಿಯಲ್ಲಿ. ಇವರ ಮನೆಯ ಎದುರಿಗೇ ಗುಬ್ಬಿ ಕಂಪನಿಯವರ ನಾಟಕದ ಮನೆ. ಮತ್ತದೇ ಬೀದಿಯಲ್ಲಿ ಹೆಸರು ಮಾಡಿದ್ದ ಚಾಮುಂಡೇಶ್ವರಿ ಕಂಪನಿಯ ಕೆಲವು ಕಲಾವಿದರು ವಾಸಿಸುತ್ತಿದ್ದರು. ಒಟ್ಟಿನಲ್ಲಿ ಆ ತೊಗರಿ ಬೀದಿಯ ಪರಿಸರದಲ್ಲಿ ನಾಟಕದ ಗುಂಗು ಸೊಗಡು ಸೊಂಪು ಸಾಮಾನ್ಯವಾಗಿ ವರ್ಷದಾದ್ಯಂತವೂ ಇರುತ್ತಿತ್ತು.

ಹೀಗಾಗಿ ನಾಗರತ್ನಮ್ಮ ಬಾಲ್ಯಾವಸ್ಥೆಯಲ್ಲಿದ್ದಾಗಲೇ ನಾಟಕ ಕಲೆಯ ಬಲೆಗೆ ಬಿದ್ದವಳು. ಬಿಡುವು ಸಿಕ್ಕಿದಾಗಲೆಲ್ಲ ಆ ನಾಟಕದ ಮನೆಗಳಲ್ಲಿ ನಡೆಯುತ್ತಿದ್ದ ನಾಟಕಗಳ ತಾಲೀಮು ತಯಾರಿಯನ್ನು ಕಣ್ಣರಳಿಸಿಕೊಂಡು ಕಿವಿ ನಿಮಿರಿಸಿಕೊಂಡು ನೋಡುತ್ತ ಕೇಳುತ್ತ ರೋಮಾಂಚನಗೊಂಡು ಪರೋಕ್ಷವಾಗಿ ಪ್ರಚೋದಿತಳಾಗುತ್ತಿದ್ದವಳು ಈ ಬಾಲೆ.

ದಶಕಗಳ ಹಿಂದಿನ ಮಾತು; ತೀರ ಮಡಿದಂತಿಕೆಯ ಕಾಲ; ಸ್ತ್ರೀ ಪಾತ್ರಗಳನ್ನು ನಿರ್ವಹಿಸಲು ವೇಶ್ಯೆಯರೂ ಒಪ್ಪದಿರುತ್ತಿದ್ದ ಕಾಲ. ಅಂತಹ ಕಾಲದಲ್ಲಿ ಹವ್ಯಾಸಿ ರಂಗಭೂಮಿಯಲ್ಲಿ ಹಾಗಿರಲಿ, ವೃತ್ತಿ ರಂಗಭೂಮಿಯಲ್ಲೂ ಸ್ತ್ರೀ ಪಾತ್ರಗಳನ್ನು ಪುರುಷರೇ ನಿರ್ವಹಿಸುತ್ತಿದ್ದ ಕಾಲವದು. ನಂತರದಲ್ಲಿ ನಾಯಕ ನಟರಾಗಿ, ಭಯಂಕರ ಪಾತ್ರಗಳಿಗೂ

ಹೆಸರಾದ ಅನೇಕ ಮಂದಿ ವೃತ್ತಿರಂಗದ ನಟರು ತಮ್ಮ ಪೂರ್ವಾಶ್ರಮದ ದಿನಗಳಲ್ಲಿ ಸ್ತ್ರೀ ಪಾತ್ರಗಳಿಗಾಗಿಯೇ ಮೀಸಲಾಗಿದ್ದವರು! ಆರ್.ನಾಗೇಂದ್ರರಾಯರು, ಸುಬ್ಬಯ್ಯನಾಯಿಡು, ಕಾಳಿಂಗರಾಯರು, ಭೋದರಾಯರು, ಏಣಗಿ ಬಾಳಪ್ಪನವರು, ರಾಣಿ ಪಾರ್ಟ್ ಸುಬ್ಬಣ್ಣನವರು, ಮೊದಲಾದವರೆಲ್ಲಾ ಸ್ತ್ರೀ ಪಾತ್ರಗಳನ್ನು ನಿರ್ವಹಿಸುವುದರಲ್ಲಿ ನಿಸ್ಸೀಮರಾಗಿದ್ದವರು. ಅದರಲ್ಲೂ ಇಂಥವರ ಪೈಕಿ ಬೋಧರಾಯರು ಎಷ್ಟರಮಟ್ಟಿಗೆ ಸ್ತ್ರೀ ಪಾತ್ರಗಳ ಬಗ್ಗೆ ಅವಿನಾಭಾವ ಸಂಬಂಧವನ್ನು ಕಲ್ಪಿಸಿಕೊಂಡಿದ್ದರೆಂದರೆ, ಅನೇಕ ವರುಷ ವರದಾಚಾರ್ಯರು ಆಡುತಿದ್ದ ಎಲ್ಲ ನಾಟಕಗಳಲ್ಲೂ ಅವರಿಗೆ ನಾಯಕಿಯಾಗಿ ಅಭಿನಯಿಸುತ್ತಿದ್ದ ಬೋಧರಾಯರು, ಆಚಾರ್ಯರು 1926ರಲ್ಲಿ ಅಸ್ತಂಗತರಾಗುತ್ತಿದ್ದಂತೆಯೆ, ಮಡಿವಂತ ವರ್ಗದವರ ಪೈಕಿ ಗಂಡನನ್ನು ಕಳೆದುಕೊಂಡ ಹೆಂಡತಿಯರು ಕೇಶಮುಂಡನ ಮಾಡಿಸಿಕೊಂಡು ಮಡಿ ಹಿಡಿದು ಮೂಲೆಯಲ್ಲಡುಗುವಂತೆ ಇವರೂ ರಂಗಭೂಮಿಯ ಬದುಕಿಗೇ ತಿಲಾಂಜಲಿಯನ್ನಿತ್ತು ತೆಪ್ಪಗಾಗಿ ಬಿಟ್ಟರು. ಮುಂದೆ ಅವರು ಬೇರೆ ಯಾವ ನಾಯಕ ನಟನಿಗೂ ನಾಯಕಿಯಾಗಿ ಅಭಿನಯಿಸಲೇ ಇಲ್ಲ. ಹೀಗೆಯೇ ಮುಂಡಾಜೆ ರಂಗನಾಥ ಭಟ್ಟರ ಅಂಬಾ ಪ್ರಸಾದಿತ ನಾಟಕ ಮಂಡಳಿಯಲ್ಲಿ ಸ್ತ್ರೀ ಪಾತ್ರವನ್ನು ನಿರ್ವಹಿಸುತ್ತಿದ್ದ ಪಿ.ಕಾಳಿಂಗರಾಯರಿಗೆ ಪ್ರತಿಬಾರಿ ನಟಿಸಿದಾಗಲೂ ಬರುತ್ತಿದ್ದ ಪ್ರೇಮ ಪತ್ರಗಳು ಹತ್ತು ಹಲವಾರು! ಬಾಲಕಿಯಾಗಿದ್ದ ನಾಗರತ್ನಮ್ಮ ಇಂತಹ ಮಹಾನ್ ನಟರೆಲ್ಲರ ಸ್ತ್ರೀ ಪಾತ್ರ ನಿರ್ವಹಣೆಯನ್ನು ಬೆರಗುಗಣ್ಣುನಿಂದ ನೋಡುತ್ತಿದ್ದಳು. ಅಂತೆಯೇ ಗಂಭೀರ ಹಾಗೂ ಭಯಂಕರ ಪಾತ್ರಗಳಿಗೇ ಮೀಸಲೆಂಬಂತಿದ್ದ ನಟಭಯಂಕರ ಗಂಗಾಧರರಾಯರು, ವರದಾಚಾರ್ಯರು, ನಟಭಯಂಕರ ಕೃಷ್ಣಮೂರ್ತಿರಾಯರು, ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರು, ಸುಬ್ಬಯ್ಯನಾಯಿಡುರವರು, ಮುಂತಾದವರ ಅದ್ಭುತ ನಟನೆಯನ್ನು ಕಾಣುತ್ತಿದ್ದ ಬಾಲಕಿ ನಾಗರತ್ನಮ್ಮ ಬೆಕ್ಕಸ ಬೆರಗಾಗುತ್ತಿದ್ದಳು. ಮುಂದೀಕೆ ಅಂತಹ ಭಯಂಕರ ರಕ್ಕಸ ಪಾತ್ರಗಳನ್ನು ನಿರ್ವಹಿಸಲು ನಾಗರತ್ನಮ್ಮನಿಗೆ ಬಾಲ್ಯದಲ್ಲಿ ರಂಗಭೂಮಿ ಸಂಪರ್ಕದಿಂದಾದ ಇಂತಹ ವೀಕ್ಷಣಾನುಭವಗಳೇ ಕಾರಣ ಎಂದರೆ ತಪ್ಪಾಗದು. ಅಲ್ಲದೆ ಇವರ ಮನೆ ಬೀದಿಯಲ್ಲೆ ಬಿಡಾರ ಹೂಡಿದ್ದ ಚಾಮುಂಡೇಶ್ವರಿ ಕಂಪನಿಯ ಮಾದಪ್ಪ ಎಂಬುವರು ನಾಗರತ್ನಮ್ಮನ ತಾಯಿಯವರಿಗೆ ಸಂಗೀತ ಹೇಳಿಕೊಡುತ್ತಿದ್ದರು. ಈ ಸಮಯದಲ್ಲಿ ತಾಯಿಯೊಡನಿರುತ್ತಿದ್ದ ನಾಗರತ್ನಮ್ಮನಿಗೂ ಸಂಗೀತದ ಪರಿಚಯವಾಯಿತು. ಹೀಗಾಗಿ ಬಾಲಕಿಯಾಗಿದ್ದಾಗಲೇ ನಾಗರತ್ನಮ್ಮ ಕೀರ್ತನೆ, ದೇವರನಾಮ ಮತ್ತು ವಚನಗಳನ್ನು ಸುಶ್ರಾವ್ಯವೆಂಬುವಂತಲ್ಲದಿದ್ದರೂ ಶ್ರವ್ಯವೆಂಬಂತೆ ಹಾಡಲಾರಂಭಿಸಿ ಅಲ್ಲಿ ಆಜುಬಾಜುವಿನಲ್ಲಿದ್ದ ಕಂಪನಿ ಕಲಾವಿದರ ಗಮನ ಸೆಳೆದಿದ್ದಳು. ಅಲ್ಲದೆ ಅಲ್ಲಿದ್ದ ಕಂಪನಿ ಕಲಾವಿದರೆಲ್ಲರಿಗೂ ಈ ನಾಗು ಮುದ್ದಿನ ಮಗಳಿದ್ದಂತೆ ಇದ್ದಳು. ಇಂತಹ ದಿನಗಳಲ್ಲಿ ನಡೆದ ಒಂದು ಸಣ್ಣ ಸ್ವಾರಸ್ಯಕರ ಪ್ರಸಂಗವನ್ನು ಖ್ಯಾತ ಲೇಖಕಿ ಎಚ್.ಎಸ್.ಪಾರ್ವತಿಯವರು ಹೀಗೆ ನಿರೂಪಿಸಿದ್ದಾರೆ.

ಚಾಮುಂಡೇಶ್ವರಿ ಕಂಪನಿಯ 'ತುಕಾರಾಂ' ನಾಟಕದ ಪ್ರದರ್ಶನ ನಡೆಯುತ್ತಿದ್ದ ಸಮಯ. ಆ ನಾಟಕದ ಒಂದು ದೃಶ್ಯದಲ್ಲಿ ಮುದುಕನೊಬ್ಬ ಚಿಕ್ಕ ಹುಡುಗಿಯನ್ನು ವಿವಾಹವಾಗುವ ಸಂದರ್ಭ ಇತ್ತು. ಆ ಹುಡುಗಿಯ ಪಾತ್ರದಲ್ಲಿ ಸಂಭಾಷಣೆ, ಸಂಗೀತ ಯಾವುದೂ ಇರಲಿಲ್ಲವಾದ್ದರಿಂದ ಅದನ್ನು ಇಂತಹವರೇ ಅಭಿನಯಿಸಬೇಕೆಂಬ ನಿಯಮ ಇರಲಿಲ್ಲ. ಆ ಸಮಯಕ್ಕೆ ಯಾರು ಸಿಕ್ಕಿದರೆ ಅವರನ್ನೇ ರಂಗದ ಮೇಲೆ ತರುತ್ತಿದ್ದರು. ಹೀಗೆಯೇ ಒಂದು ದಿನ ನೇಪಥ್ಯದಲ್ಲಿ ಓಡಾಡುತ್ತಿದ್ದ ನಾಗುವನ್ನು ಕರೆತಂದು ಮುದುಕನ ಜೊತೆ ಕೂರಿಸಿದರು. ಯಾವ ರೀತಿಯ ಅಲಂಕಾರ, ಉಡುಗೆ, ತೊಡುಗೆ ಇಲ್ಲದೆ (ಹೀಗೆ ಬಿಜ್ಜೋಲೆ ಗೌರಮ್ಮನಂತೆ) ನಾಗರತ್ನಮ್ಮ ರಂಗಭೂಮಿಯನ್ನು ಪ್ರವೇಶಿಸುವಂತಾಯಿತು. (ಅಂದು ಹೀಗಾಯಿತು ನಾಗರತ್ನಮ್ಮನವರ 'ಅರಂಗೇಟ್ರಮ್') ಈ ಹುಡುಗಿ ಅಳುಕಿಲ್ಲದೆ ರಂಗದಲ್ಲಿ ಕುಳಿತಿದ್ದ ರೀತಿಯನ್ನು ನೋಡಿ ಕಂಪನಿಯವರೆಲ್ಲಾ ಮೆಚ್ಚಿಕೊಂಡ ಕಾರಣ ನಾಗರತ್ನಮ್ಮನಿಗೆ ಈ ಕಂಪೆನಿಯಲ್ಲಿ ಸಣ್ಣಪುಟ್ಟ ಪಾತ್ರಗಳು ದೊರೆಯಿತು. ಗುಂಪಿನಲ್ಲಿ ಹಾಡುವುದು, ಸಖಿಯರೊಂದಿಗೆ ಬಂದು ಕುಣಿದು ಹೋಗುವುದು, ಹೀಗೆ ಒಂದೊಂದು ಮೆಟ್ಟಿಲಾಗಿ ರಂಗುರಂಗಿನ ರಂಗಲೋಕದಲ್ಲಿ ಮೇಲೇರಿದಳು ನಾಗರತ್ನಮ್ಮ. ಕೇವಲ ಹನ್ನೆರಡರ ಹರೆಯಕ್ಕೆ ಬರುವಷ್ಟರಲ್ಲೇ ಈ ಬೆಡಗಿನ ಬಾಲಕಿ ನಾಗರತ್ನಮ್ಮ ನಾಟಕಗಳಲ್ಲಿ ಎರಡನೆಯ ನಾಯಕಿಯ ಪಟ್ಟ

ಮುಟ್ಟುವ ಮಟ್ಟಕ್ಕೇರಿದ್ದಳೆಂದರೆ ಅಚ್ಚರಿಯಾಗುತ್ತದಲ್ಲವೆ? ಅಲ್ಲದೆ ಇಂತಹ ಅಪ್ರಾಪ್ತ ವಯಸ್ಸಿನಲ್ಲೇ ಈ ಬಾಲಕಿ ನಾಗರತ್ನಮ್ಮ ನಟನೆಯಲ್ಲಿ ಎಂತಹ ಬೆಡಗು ಬಿರುಸನ್ನು ಬೀರಿದ್ದಳೆಂದರೆ–1938ರಲ್ಲಿ ಚಂದ್ರಕಲಾ ಮಂಡಳಿಯ ಪೀರ್‌ಸಾಹೇಬರು ಅನಿರೀಕ್ಷಿತವಾಗಿ ಕಾಲೈಕ್ಯರಾಗಿ ಹೋದರು. ನಂತರ ಅವರ ಕಂಪನಿಯಲ್ಲಿದ್ದ ಎಂ.ಮಾಧವರಾವ್ (ತಮಾಷ್ ಮಾಧು), ಸೋರಟ್ ಅಶ್ವತ್ಥ್, ಬಿ.ಎನ್.ಚಿನ್ನಪ್ಪ ಮುಂತಾವರೆಲ್ಲ ಸೇರಿ ಅದೇ ವರ್ಷ 'ಕಲಾ ಸೇವಾ ಮಂಡಳಿ' ಎಂಬ ನಾಟಕ ಕಂಪನಿಯನ್ನು ಆರಂಭಿಸಿದರು. ಇವರು ಈ ಕಂಪನಿಯಿಂದ ಮೊಟ್ಟಮೊದಲಿಗೆ ಆಡಲು ತೆಗೆದುಕೊಂಡದ್ದು 'ಭಕ್ತ ಕಬೀರ್‌ದಾಸ್' ಎಂಬ ನಾಟಕವನ್ನು. ಅಚ್ಚರಿಗೊಳಿಸುವ ಸಂಗತಿಯೆಂದರೆ ಈ ನಾಟಕದಲ್ಲಿ ಕಬೀರನ ಪತ್ನಿ ಬೇಗಂಬೀಬಿಯ ಘನವಾದ ಪಾತ್ರಕ್ಕೆ ಈ ಕಂಪನಿಯವರು ಆಯ್ಕೆ ಮಾಡಿಕೊಂಡದ್ದು ಲಂಗ ಜಂಪರ್ ಹಾಕಿಕೊಂಡು ಓಡಾಡುತ್ತಿದ್ದ ನಾಗರತ್ನಮ್ಮನನ್ನು! ಅಲ್ಲದೆ ಈ ನಾಟಕಕ್ಕೆ ನಾಗರತ್ನಮ್ಮನ ತಂಗಿ ಸುಂದರಮ್ಮನನ್ನೂ ಮತ್ತು ತಮ್ಮ ಪರಮಶಿವ ಎಂಬುವನನ್ನು ತೆಗೆದುಕೊಂಡು ತರಬೇತಿ ನೀಡಿದ್ದರು. ಈ ಇಬ್ಬರ ಪೈಕಿ ಪರಮಶಿವ ಅಭಿಮಾನ ವಿಶಾರದ ಎಂದೇ ಖ್ಯಾತ ನಾಮರಾಗಿದ್ದ ನಾಗೇಶರಾಯರಿಗೆ ಅತಿ ಮೆಚ್ಚಿನವನಾಗಿದ್ದು ಅವರಿಂದಲೇ ಸಂಗೀತವನ್ನು ಕೆಲವು ವರ್ಷ ಕ್ರಮಬದ್ಧವಾಗಿ ಕಲಿತು ರಂಗಗೀತೆಗಳನ್ನು ಹಾಡುವುದರಲ್ಲೂ, ಹಾರ್ಮೋನಿಯಂ ನುಡಿಸುವುದರಲ್ಲೂ ನಿಸ್ಸಿಮನಾದ. ಕೆಲವು ವರುಷಗಳ ಹಿಂದೆ ನಮ್ಮವರೊಬ್ಬರಿದ್ದರು. ಅವರ ಹೆಸರು ಯೋಗಾನರಸಿಂಹ ಉರುಫ್ ಯೋಗಣ್ಣ ಎಂದು ಈಗವರಿಲ್ಲ. ಆ ಯೋಗಣ್ಣ 'ರಂಗಗೀತೆಗಳ ರಾಜ' ಎಂದೇ ಪ್ರಸಿದ್ಧರಾಗಿದ್ದವರು. ನಾಟಕ ಶಿರೋಮಣಿ ವರದಾಚಾರ್ಯರಿಂದ ಹಿಡಿದು ಕನ್ನಡ ನಾಡಿನಲ್ಲಿ ಮೆರೆದ ಎಲ್ಲ ಮೇರು ನಟರು ಹಾಡುತ್ತಿದ್ದ ರಂಗ ಗೀತೆಗಳನ್ನು ಯಥಾವತ್ತಾಗಿ ಹಾಡುತ್ತಿದ್ದವರೆಂದರೆ ಪ್ರಾಯಶಃ ನನಗೆ ತಿಳಿದಿರುವಂತೆ ಅವರೊಬ್ಬರೆ! ವರದಾಚಾರ್ಯರು, ನಾಗೇಶರಾಯರು, ದೇವೇಂದ್ರಪ್ಪನವರು, ರಾಜಯ್ಯಂಗಾರ್ಯರು, ಸುಬ್ಬಯ್ಯನಾಯಿಡು, ಕಾಳಿಂಗರಾಯರು, ಶ್ರೀಕಂಠಮೂರ್ತಿ, ಅಚ್ಯುತರಾಯರು, ಪಾರ್ಥಸಾರಥಿ, ಕೆ.ಹಿರಣ್ಣಯ್ಯನವರು, ಹೀಗೆ ಇವರೆಲ್ಲ ಹಾಡುತ್ತಿದ್ದ ರಂಗಗೀತೆಗಳು ಯೋಗಣ್ಣನವರಿಗೆ ಕಂಠಸ್ತ; ಇವರ ಪೈಕಿ ಯಾರು ಹಾಡಿದ ಯಾವುದೇ ಗೀತೆಯನ್ನು ಯಾರು ಯಾವಾಗ ಎಲ್ಲಿ ಕೇಳಿದರೂ ಯೋಗಣ್ಣ ಅರೆಕ್ಷಣವೂ ಯೋಚಿಸದೆ ಹೇಳುವಂತಹ ಅಪೂರ್ವ ಶಕ್ತಿಯನ್ನು ಗಳಿಸಿದ್ದರು. ಅವರಲ್ಲಿದ್ದ ರಂಗಗೀತೆಗಳ ಸರಕು ಅಪಾರವಾದದ್ದು. ಅವರು ಹಾಡುತಿದ್ದ ರಂಗಗೀತೆಗಳನ್ನೆಲ್ಲ ಧ್ವನಿ ಮುದ್ರಿಸಿಕೊಂಡಿದ್ದರೆ ರಂಗಲೋಕಕ್ಕೆ ಅದೊಂದು ಅದ್ಭುತ ಕೊಡುಗೆಯಾಗುತ್ತಿತ್ತು. ಆ ಕೆಲಸವನ್ನು ಆಮೂಲಾಗ್ರವಾಗಿ ಯಾರೂ ಮಾಡಲಿಲ್ಲ. ಹೀಗಾಗಿ ಅವರು ಸುಶ್ರಾವ್ಯವಾಗಿ ಹಾರ್ಮೋನಿಯಂ ನುಡಿಸಿಕೊಂಡು ಹಾಡುತಿದ್ದ ಅಸಂಖ್ಯಾತ ರಂಗಗೀತೆಗಳ ಪೈಕಿ ಹಲವೇ ಹಲವು ಗೀತೆಗಳು ಧ್ವನಿಸುರುಳಿಗಳಲ್ಲಿ ಲಭ್ಯ. ಮಿಕ್ಕ ನೂರಾರು ರಂಗಗೀತೆಗಳು ಅವರೊಡನೆಯೇ ಮರೆಯಾಗಿ ಹೋದವು. ಇನ್ನವನ್ನು ಸೆರೆಹಿಡಿಯಲು ಸಾಧ್ಯವಿಲ್ಲ.

ಪ್ರಸ್ತುತ ಯೋಗಣ್ಣನವರ ಸ್ಥಾನವನ್ನು ಅಷ್ಟೇ ಶಕ್ತಿಯುತವಾಗಿ ತುಂಬಿಕೊಂಡಿರುವವರು ನಮ್ಮ ಆರ್. ನಾಗರತ್ನಮ್ಮನವರ ಖಾಸಾ ಸಹೋದರ ಪರಮಶಿವು ಅವರು. ಇಳಿವಯಸ್ಸಿನಲ್ಲಿದ್ದರೂ ಪರಮಶಿವು ಅವರಿಗೆ ರಂಗಗೀತೆಗಳನ್ನು ಹಾಡುವ ಉತ್ಸಾಹ ಕಿಂಚಿತ್ತೂ ಕುಂದಿಲ್ಲ, ಕಂಠಸಿರಿ ಕುಗ್ಗಿಲ್ಲ. ಸ್ವರದಲ್ಲಿ ಹಿಂದಿನದೇ ನುಡಿಕಾರ ನವಿರು ನಾಜೂಕು. ಹಿಂದೆ ವೃತ್ತಿ ರಂಗಭೂಮಿಯ ನಾಟಕಗಳು ಎಷ್ಟು ಸಂಗೀತ ಪ್ರಧಾನವಾಗಿರುತ್ತಿತ್ತು. ಅದರಿಂದ ಆಗಿನ ಕಾಲದಲ್ಲಿಯ ನಟರಲ್ಲಿ ಬಹುತೇಕರು ಸಂಗೀತ ವಿದ್ವಾಂಸರೇ ಆಗಿರುತ್ತಿದ್ದರು. ಸವಾಯಿ ಗಂಧರ್ವ, ಬಾಲ ಗಂಧರ್ವ, ದೇವೇಂದ್ರಪ್ಪ, ಬಿಡಾರಂ ಕೃಷ್ಣಪ್ಪ, ಚಿಕ್ಕರಾಮರಾಯರು, ಶ್ರೀಕಂಠಮೂರ್ತಿ, ಜಿ.ನಾಗೇಶರಾಯರು, ಕಾಳಿಂಗರಾಯರು, ಮುಂಡಾಜೆ ರಂಗನಾಥ ಭಟ್ಟರು, ಮುಸುರಿ ಕೃಷ್ಣಮೂರ್ತಿ, ಅಚ್ಯುತರಾಯರು, ಸುಬ್ಬಯ್ಯನಾಯಿಡು, ಆರ್.ನಾಗೇಂದ್ರರಾಯರು, ಹೀಗೆ ಇವರಲ್ಲಿ ಬಹುತೇಕರು ಸಂಗೀತ ವಿದ್ವಾಂಸರು. ನಟನೆಗಿಂತ ಹೆಚ್ಚಾಗಿ ಸಂಗೀತವನ್ನು ಸವಿಯುವುದಕ್ಕಾಗಿಯೇ ಪ್ರೇಕ್ಷಕರು ಕಿಕ್ಕಿರಿದು ಸೇರುತ್ತಿದ್ದ ಕಾಲವದು. ಹೆಂಗಸರ ಪೈಕಿಯೂ ಹೀಗೆಯೇ–ಬಿ. ಜಯಮ್ಮ ಸಾಗರದ ನಾಗರತ್ನಮ್ಮ, ಮಳವಳ್ಳಿ ಸುಂದರಮ್ಮ, ಕಮಲಾಬಾಯಿ, ಸೋನೂಬಾಯಿ, ಇವರುಗಳು ರಂಗಗೀತೆಗಳನ್ನು

ಹಾಡುವುದರಲ್ಲಿ ಸುವಿಖ್ಯಾತರಾಗಿದ್ದವರು. ಇವರ ಪೈಕಿ, ಮಳವಳ್ಳಿ ಸುಂದರಮ್ಮ, ಅಶ್ವತ್ಥಮ್ಮ, ಇವರು ಹಾಡಿದ ಧ್ವನಿ ಮುದ್ರಿತ ತಟ್ಟೆಗಳು ಆಗ ಮನೆಮನೆ ಮಾತು.

ಜಿ.ನಾಗೇಶರಾಯರು ರಂಗಗೀತೆಯ ಒಂದೇ ಒಂದು ಸಾಲನ್ನು ಮುವತ್ತಾರು ವಿಧದಲ್ಲಿ ಬೇರೆ ಬೇರೆ ಶೈಲಿಯಲ್ಲಿ ಹಾಡುತ್ತಿದ್ದರಂತೆ! ಅಂಥವರ ಆಪ್ತಶಿಷ್ಯನಾಗಿ ಅವರಿಂದಲೇ ಸಂಗೀತ ಹಾಗೂ ರಂಗಗೀತೆಗಳನ್ನು ಕಲಿತುಕೊಂಡವರು ಪರಮಶಿವು!

ನಾಗರತ್ನಮ್ಮನವರಿಗೂ ರಂಗಭೂಮಿಯ ಶ್ರೇಷ್ಠ ನಾಯಕ ನಟನಟಿಯರ ಸಂಪರ್ಕವಿದ್ದುದರಿಂದ ಅಭಿನಯ ಮಾತ್ರವಲ್ಲದೆ ಹಾಡುವುದರಲ್ಲೂ ತಕ್ಕಮಟ್ಟಿನ ಪ್ರಾವೀಣ್ಯತೆಯನ್ನು ಪಡೆದರೆಂಬುದು ನಿಜ, ಆದರೆ ಏಕೋ ಏನೋ, ರಂಗಸಂಗೀತ ನಾಗರತ್ನಮ್ಮನವರಿಗೆ ಅಷ್ಟಾಗಿ ಸಿದ್ಧಿಸಲಿಲ್ಲ; ಬದಲಿಗೆ ಬೆರುಗುಗೊಳಿಸುವಂತೆ ಇವರು ಬಲಗೊಂಡಿದ್ದು ಅಭಿನಯ ಪ್ರಕಾರದಲ್ಲೇ.

ಮೊದಮೊದಲಿಗೆ ಚಾಮುಂಡೇಶ್ವರಿ ಕಂಪನಿಯಲ್ಲಿ ಬಣ್ಣದ ಬದುಕಿಗೆ ಕಾಲಿರಿಸಿದಾಗ ನಾಗರತ್ನಮ್ಮನವರು ನಿರ್ವಹಿಸುತ್ತಿದ್ದುದು ಸ್ತ್ರೀ ಪಾತ್ರಗಳನ್ನೇ. ದ್ರೌಪದಿ, ಸೋಮಪ್ರಭೆ, ಸುಭದ್ರೆ, ಅಂಬೆ, ತಿಲೋತ್ತಮೆ, ಮೋಹಿನಿ, ಕೈಕೇಯಿ, ಹಾಗೂ ಸಾಮಾಜಿಕ ನಾಟಕಗಳಲ್ಲಿ ಸುನಂದೆ, ಮಣಿಮಂಜರಿ ಮೊದಲಾದ ಪಾತ್ರಗಳನ್ನು ನಿರ್ವಹಿಸುತ್ತ ಜನಪ್ರಿಯತೆಯನ್ನು ಗಳಿಸಿದ ನಾಗರತ್ನಮ್ಮನವರು ಅದೇ ಕಂಪನಿಯಲ್ಲಿದ್ದ ಶ್ರೇಷ್ಠ ಕಲಾವಿದ ಎಂ.ಆರ್.ಪಾರ್ಥಸಾರಥಿ ಎಂಬುವರನ್ನು ಪ್ರೀತಿಸಿ ಮದುವೆಯಾದರು. ಇವರ ಮದುವೆಗೆ ಪುರೋಹಿತ್ಯ ವಹಿಸಿದ್ದವರು ಶೇಷಕಮಲ ಕಲಾ ಮಂಡಳಿಯ ಸುವಿಖ್ಯಾತ ನಟ ಶೇಷಾಚಾರ್ ಅವರು. ನಂತರದಲ್ಲಿ ಅನೇಕ ವರುಷ ಪಾರ್ಥಸಾರಥಿ ಹಾಗೂ ನಾಗರತ್ನಮ್ಮನವರು ಶೇಷಚಾರ್ಯ ಕಂಪನಿಯಲ್ಲೇ ಸೇವೆ ಸಲ್ಲಿಸುತ್ತಿದ್ದರು. ಆರ್. ನಾಗರತ್ನಮ್ಮನವರು ತಮ್ಮದೇ ಆದ "ಸ್ತ್ರೀ ನಾಟಕ ಮಂಡಳಿ"ಯನ್ನು ಸ್ಥಾಪಿಸಿದ್ದು 1958ರಲ್ಲಿ. ಆಕೆಗೆ ಆಗ ಇನ್ನೂ 29 ವರ್ಷವಷ್ಟೆ. ಈ ಮಂಡಳಿಯ ವಿಶೇಷವೆಂದರೆ ಇದರ ಎಲ್ಲ ಸದಸ್ಯೆಯರು ಸ್ತ್ರೀಯರೇ. ನಾಗರತ್ನಮ್ಮನವರು ಭೀಮನಂತಹ ವೀರನ ಮತ್ತು ಕಂಸನಂತಹ ಖಳನಾಯಕನ ಪಾತ್ರಗಳನ್ನು ಪುರುಷನೇ ಪಾತ್ರವಹಿಸಿದಂತೆ ಅಭಿನಯಿಸುತ್ತಿದ್ದರು. ಅದೇ ಅವರಿಗೆ ಹೆಸರು ತಂದುಕೊಟ್ಟ ಅಂಶ. ಆ ಸಮಯದಲ್ಲಿ ನನಗೆ ತಿಳಿದಿರುವಂತೆ ಪಾರ್ಥಸಾರಥಿಯವರಿಗೆ ಹೊಗೆಸೊಪ್ಪು ಹೊಡೆಯುವ ಹವ್ಯಾಸವೊಂದನ್ನು ಬಿಟ್ಟರೆ ಬೇರಾವ ಚಟವೂ ಇರಲಿಲ್ಲ. ಹೆಂಡ ಮತ್ತು ಹೆಣ್ಣು ಎಂದರೆ ಅವರು ತಲೆ ಎತ್ತಿಯೂ ನೋಡುತ್ತಿರಲಿಲ್ಲ. ನಾಟಕ ಕಂಪನಿಯಲ್ಲಿ ಹಲವಾರು ಹವ್ಯಾಸಗಳಿದ್ದವರ ಜೊತೆಗಿದ್ದರೂ ಪಾರ್ಥಸಾರಥಿ ಎಂದೆಂದೂ ಕೆಸರಿನ ನಡುವಿನ ಕಮಲದಂತೆ ಕಂಗೊಳಿಸುತಿದ್ದವರು, ಸೊಗಸಾಗಿ ಹಾಡುತ್ತಿದ್ದರು. ಪಾತ್ರಗಳಲ್ಲಿ ಅವರಾಡುತ್ತಿದ್ದ ಮಾತಿನ ಸೊಗಸೇ ಸೊಗಸು, ನಟನೆಯಲ್ಲಿ ಅಷ್ಟೆ, ಎಲ್ಲವೂ ತೂಗಿ ನೋಡಿ ಲೆಕ್ಕಹಾಕಿದಂತೆ. 'Settle acting' ಎಂದರೆ ಏನೆಂಬುದನ್ನು ಅವರಿಂದ ಉಳಿದವರಿಗೆ ತಿಳಿಯಬೇಕು ಎಂಬುವಂತಿರುತ್ತಿತ್ತು ಅವರ ಅಭಿನಯ. ಆದರೆ ಮುಂದಾದದ್ದೇನು? ಕಾರಣ ಹತ್ತುಹಲವು ಮಹಾಮಡಿವಂತಿಕೆಯ ಕುಟುಂಬದಲ್ಲೇ ಜನಿಸಿ ಬೆಳೆದು ಬಂದಿದ್ದ ಪಾರ್ಥಸಾರಥಿಯವರು ಎಷ್ಟೇ ಸುಸಂಸ್ಕೃತ ವ್ಯಕ್ತಿಯಾಗಿದ್ದರೂ ಸಹ ಅದೊಂದು ಕೆಟ್ಟಹಂತದಲ್ಲಿ ಮಂಡಳಿಯ ಹೀನ ಸಂಸ್ಕೃತಿಯವರೊಂದಿಗೆ ಬೆರೆತುಹೋದದ್ದರಿಂದ ಕೆಲವಾರು ದುಶ್ಚಟಗಳಿಗೆ ಪಾರ್ಥಸಾರಥಿಯವರೂ ದಾಸರಾಗಿ ಹೋದರು. ದಮ್ಮುಕೆಮ್ಮು ಅಟಕಾಯಿಸಿಕೊಂಡಿತು. ಆ ಹಂತದಲ್ಲೇ ಕೆಲವು ವಿಕೃತ ಮನಸ್ಸಿನ ಚಾಂಡಾಲರು ದೃಷ್ಟಿ ಬಡಿಯವಂತಿದ್ದ ಈ ಇಬ್ಬರು ಕಲಾವಿದ ದಂಪತಿಗಳು ಬೇರೆಬೇರೆಯಾಗಿ ದುಡಿಯುವಂತೆ ಮಾಡಿ ಸಂತೋಷ ಪಟ್ಟರು. ಕೆಲಕಾಲವಷ್ಟೆ ಪಾರ್ಥಸಾರಥಿಯವರ ಆರೋಗ್ಯ ಕುಸಿಯಿತು. ಯಾವ ವೈದ್ಯಶಿಖಾಮಣಿಯೂ ಗುರುತಿಸಿ ಸರಿಪಡಿಸಲಾಗದ ಖಾಯಿಲೆಗೆ ತುತ್ತಾದ ಪಾರ್ಥಸಾರಥಿ ತನ್ನ ಕೊನೆಗಾಲಕ್ಕೆ ಮೈಸೂರಿನಲ್ಲಿದ್ದ ತನ್ನಪ್ಪನ ಮನೆ ಸೇರಿ ಮಂಚ ಕಚ್ಚಿ ಮಲಗಿಬಿಟ್ಟರು. ಮತ್ತವರಿಗೆ ಏಳಲಾಗಲೇ ಇಲ್ಲ. ಆ ಕಾಲಕ್ಕಾಗಲೇ 'ಶ್ರೀ ಸ್ತ್ರೀ ನಾಟಕ ಮಂಡಳಿ'ಯನ್ನು

ಸ್ಥಾಪಿಸಿ, ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳಲ್ಲಿಯ ಭೀಮ, ಕಂಸ, ರಾವಣ ಎಚ್ಚಮನಾಯಕ ಪಾತ್ರಗಳಲ್ಲಿ ಗಂಡು ನಟ ಭಯಂಕರರ ಗುಂಡಿಗೆಯೂ ನಡುಗುವಂತೆ ಅಭಿನಯಿಸುತ್ತಾ ನಾಡಿನಾದ್ಯಂತ ಕೀರ್ತಿಗಳಿಸಿ ಮನೆಮನೆ ಮಾತಾಗಿದ್ದ ನಾಗರತ್ನಮ್ಮನವರು ಗಂಡನ ದುಃಸ್ಥಿತಿಯನ್ನು ಕಂಡು ಕೇಳಿ ಮಮ್ಮಲ ಮರುಗಿದರು. ಕಣ್ಣೀರು ಬತ್ತುವಷ್ಟು ಕಾಲವೂ ಕೊರಗಿದರು. ಪಾರ್ಥಸಾರಥಿಯವರೂ ಅಷ್ಟೆ, ಸುಮಕೋಮಲ ಸರಳ ಜೀವಿಯಾಗಿದ್ದ ಅವರು, ಕೆಟ್ಟ ವಿಧಿಯ ಸೊಟ್ಟನೋಟಕ್ಕೆ ಸಿಕ್ಕಿ ತತ್ತರಿಸುತ್ತಿದ್ದ ತಮ್ಮ ಕೊನೆಗಾಲದ ದಿನಗಳಲ್ಲಿ ಕ್ಷಣಕ್ಷಣವು ಕಣ್ಣೀರ್ಗರೆಯುತ್ತ ನೆನೆಯುತ್ತಿದ್ದುದು ತಮ್ಮ ನೆಚ್ಚಿನ ಮಡದಿ ನಾಗರತ್ನಮ್ಮನವರನ್ನೇ. ವೃಥಾ ಆ ಹೆಂಗಸಿನ ಮೇಲೆ ಮಕ್ಕಳ ಜವಾಬ್ದಾರಿಯನ್ನೆಲ್ಲಾ ಹೊರೆಸಿಬಿಟ್ಟೆನಲ್ಲಾ ಎಂದು ಕೊರಗುತ್ತ ಕ್ಷಣಕ್ಷಣಕ್ಕೂ ಕರಗಿ ಕ್ಷಯಿಸಿಹೋದರು. ಅಂತಹ ದಾರುಣಮಯ ದುಃಸ್ಥಿತಿಗೆ ಆ ಮೇರು ಕಲಾವಿದನನ್ನು ಈಡು ಮಾಡಿದ ಅವರ ಆಪ್ತರೆಂದೆನಿಸಿಕೊಂಡಿದ್ದ ಯಾರೊಬ್ಬರೂ ಅವರನ್ನು ವಿಚಾರಿಸಲಾಗಲೀ, ಸಹಾಯ ಹಸ್ತ ನೀಡುವುದಕ್ಕಾಗಲೀ ಬರಲೇ ಇಲ್ಲವಲ್ಲಾ! ಅಲ್ಲದೆ ಆ ಸಮಯದಲ್ಲಿ ನಾಗರತ್ನಮ್ಮನವರೂ ಅಸಹಾಯಕರು. ಕಟ್ಟಿಕೊಂಡಿದ್ದ ನಾಟಕದ ಕಂಪನಿಯನ್ನು ಬಿಟ್ಟು ಬರುವಂತಿರಲಿಲ್ಲ. ಒಪ್ಪಿಕೊಂಡಿದ್ದ ನಾಟಕದ ಕಾಂಟ್ರ್ಯಾಕ್ಟುಗಳನ್ನು ಒಲ್ಲೆ ಎನ್ನುವಂತಿಲ್ಲ. ಜೊತೆಗೆ ಬೆಳೆಯುತ್ತಿದ್ದ ಮಕ್ಕಳು: ಆಶ್ರಿತರಾಗಿದ್ದ ತಂಗಿ, ತಮ್ಮನ್ನು ನೆಚ್ಚಿಕೊಂಡಿದ್ದ ಸ್ತ್ರೀ ಕಲಾವಿದರು. ಅಸಹಾಯಕ ಪರಿಸ್ಥಿತಿ, ಅಚ್ಚುಮೆಚ್ಚನಿಸಿದ್ದ ಪತಿ ಅತಂತ್ರನಾಗಿ ಹಾಸಿಗೆ ಕಚ್ಚಿ ಮಲಗಿ ಬದುಕಿನ ಕೊನೆಯ ಕ್ಷಣಗಳನ್ನು ಎಣಿಸುತ್ತಿರಬೇಕಾದರೆ ಇತ್ತ ರಂಗದ ಮೇಲೆ ಭೀಮ, ಕಂಸ, ಜರಾಸಂಧರ ಪಾತ್ರಗಳಲ್ಲಿ ಸಿಡಿಲಿನಂತಹ ಮಾತುಗಳನ್ನು ಸಿಡಿಸುತ್ತ, ಹುರಿಮೀಸೆಯನ್ನು ತಿರುವುತ್ತ ಹೆಂಗಸೊಬ್ಬಳು ಇಂತಹ ಮಹಾಪುರುಷ ಪಾತ್ರಗಳನ್ನು ಹೀಗೆ ಮಾಡುವುದು ಸಾಧ್ಯವೇ ಎನ್ನುವಂತೆ ಭ್ರಮೆ ಮೂಡಿಸುತ್ತ, ಇಡೀ ರಂಗ ಮಂಚವನ್ನು ಗುತ್ತಿಗೆಗೆ ತಾನೊಬ್ಬಳೇ ತೆಗೆದುಕೊಂಡಿರುವಂತೆ ಮೆಟ್ಟಿ ಮೆರೆದಾಡುತ್ತ ಅಟ್ಟಹಾಸದ ಅಭಿನಯ ಮಾಡುತ್ತ ಸಂಭ್ರಮಪಡುತ್ತಿದ್ದ ನಾಗರತ್ನಮ್ಮನವರು ಹಾಗೆ ರಂಗಭೂಮಿಯ ಮೇಲಿದ್ದ ಕಾಲ ಮಾತ್ರ ತನ್ನನ್ನು ಕಿತ್ತು ತಿನ್ನುತ್ತಿದ್ದ ಕಷ್ಟನಷ್ಟಗಳನ್ನೆಲ್ಲಾ ಮರೆತು ಚಿತ್ತೈಕಾಗ್ರತೆಯಿಂದ ನಟಿಸಿ ಅಷ್ಟುಹೊತ್ತು ಮಾತ್ರ ಎಣೆಯಿಲ್ಲದ ಆನಂದವನ್ನು ಅನುಭವಿಸುತ್ತಿದ್ದರು. ಆದರೆ ನಾಟಕ ಮುಗಿಯುತ್ತಿದ್ದಂತೆ, ಬಣ್ಣ ಕರಗುತಿದ್ದಂತೆ ಬದುಕಿನ ನಿಜ ಬಣ್ಣ ಬಯಲಾಗಿ ಎಲ್ಲವೂ ಬರಡಾಗಿವೆಯೆಂಬ ಭಾವನೆ ಬರುತ್ತಲೆ ಜರ್ಜರಿತರಾಗುತ್ತಿದ್ದ ನಾಗರತ್ನಮ್ಮ ಕಂಗಾಲಾಗಿ ಕುಸಿದು ಕಂಪನಿ ಮನೆಯಲ್ಲಿ ಮೂಲೆ ಹಿಡಿದು ಮುದುಡಿಕೊಳ್ಳುತ್ತಿದ್ದರು. ಮತ್ತೀಕೆಗೆ ಜೀವನೋತ್ಸಾಹ ಚಿಮ್ಮಿಬರುತ್ತಿದ್ದುದು ಮರು ರಾತ್ರಿ ಮುಖಕ್ಕೆ ಬಣ್ಣ ಬಿದ್ದಾಗಲೇ! ವಿಚಾರ ಹೀಗಿದ್ದಾಗ, ಕಷ್ಟನಷ್ಟ ಕೋಟಲೆಗಳ ಸರಮಾಲೆ ಸುತ್ತಿಕೊಂಡಾಗಲು ಧೃತಿಗೆಡದೆ ಆತ್ಮವಿಶ್ವಾಸ ಕಳೆದುಕೊಳ್ಳದೆ ನಾಟಕಗಳ ಎಲ್ಲ ಪಾತ್ರಗಳಿಗೂ ತಮ್ಮ ಕಂಪನಿಯ ಸ್ತ್ರೀ ಬಳಗವನ್ನೇ ಬಳಸಿಕೊಂಡು ಕೆಲವಾರು ವರುಷಗಳ ಕಾಲ ನಭೂತೋ ನಭವಿಷ್ಯತಿ ಎಂಬಂತೆ ನಾಟಕಗಳನ್ನು ನಾಡಿನಾದ್ಯಂತ ಆಡುತ್ತ ಒಂದು ಕಂಪನಿಯನ್ನು ಸುವ್ಯವಸ್ಥಿತ ರೀತಿಯಲ್ಲಿ ನಾಗರತ್ನಮ್ಮನವರು ನಡೆಸಿದ್ದು ನಿಜಕ್ಕೂ ಪವಾಡ; ಶ್ಲಾಘನೀಯ; ಪ್ರಶಂಸನೀಯ. ಎಲ್ಲವೂ ಸರಿಯೇ. ಆದರೆ ಕ್ರೂರ ವಿಧಿರಾಯನಿಗೆ ನಾಗರತ್ನಮ್ಮನ ಕಣ್ಣೀರು ಕಾಣಿಸಲಿಲ್ಲ. ಕೊರಗಿನ ಧ್ವನಿ ಕೇಳಿಸಲಿಲ್ಲ. ಪತಿ ಪಾರ್ಥಸಾರಥಿಯನ್ನು ಕೊಂಡೊಯ್ದೇ ಬಿಟ್ಟ. ಪಾರ್ಥಸಾರಥಿ ಕಾಲೈಕ್ಯರಾದಾಗ ಅವರಿಗೆ ಕೇವಲ ಐವತ್ತೊಂದರ ಪ್ರಾಯ. ನಡು ವಯಸ್ಸೆಂದರೂ ನಡೆದೀತು. ಆಯುಷ್ಯದಲ್ಲಿ ಅರ್ಧಸೆಂಚುರಿ ಆಯಿತೆನ್ನುವಷ್ಟರಲ್ಲೇ ಔಟಾಗಿ ಹೋದರು ಪಾರ್ಥಸಾರಥಿ.

ನಾಗರತ್ನಮ್ಮನವರ ಇನ್ನೊಂದು ಸಾಧನೆ ಎಂದರೆ ಸ್ತ್ರೀ ನಾಟಕ ಮಂಡಳಿ ಕಲಾವಿದೆಯರ ಮರ್ಯಾದೆಯನ್ನು ಕಾಪಾಡಿಕೊಂಡ ಬಂದ ರೀತಿ. ಇತರ ಎಲ್ಲ ವೃತ್ತಿ ಕಂಪನಿಗಳು ಅನುಭವಿಸಿದಂತೆ ಸಾಕಷ್ಟು ಏಳುಬೀಳುಗಳನ್ನು ಅವರೂ ಕಂಡರು. ಸಂಪೂರ್ಣ ಸ್ತ್ರೀಯರಿಂದಲೇ ಕಟ್ಟಲ್ಪಟ್ಟ ಕಂಪನಿ. ಸ್ತ್ರೀಯರೆಂದರೆ ಅಬಲೆಯರು ಎನ್ನಲಾಗುತ್ತಿದ್ದ ಕಾಲದಲ್ಲಿ ಕಂಪನಿಯನ್ನು ಪ್ರಬಲವೆಂಬಂತೆಯೇ ಕಟ್ಟುನಿಟ್ಟಾಗಿ ನಡೆಸಿಕೊಂಡು ಬಂದರು. ಅಲ್ಲದೆ ಯಾವ ಹೆಣ್ಣಿಂದಲೂ ಎಂಥದೇ ಕೆಟ್ಟ ಹೆಸರಿನ ಕೆಸರು ಕಂಪನಿಗೆ ಮೆತ್ತಿಕೊಳ್ಳದಂತೆ ಕಟ್ಟೆಚ್ಚರ ವಹಿಸಿ ಈ ನಿಟ್ಟಿನಲ್ಲೂ ಮೆಚ್ಚುಗೆಗೆ ಪಾತ್ರರಾದದ್ದು

ಮತ್ತೊಂದು ಅಚ್ಚರಿಗೊಳಿಸುವ ಉಲ್ಲೇಖನೀಯ ಸಂಗತಿ! ದಿನ ನಿತ್ಯ ರಾತ್ರಿ ರಂಗು ಬಳಿದುಕೊಂಡು ರಂಗದ ಮೇಲೆ ರಾರಾಜಿಸುತ್ತಿದ್ದ ಈ ಮಂಡಳಿಯ ಮಹಿಳೆಯರ ಮೇಲೆ ಸಾವಿರಾರು ಜನರ ದೃಷ್ಟಿ ಬೀಳುತ್ತಿತ್ತು. ಅವುಗಳ ಪೈಕಿ ಕಾಮುಕ ಕಣ್ಣುಗಳಿಂದ ಹರಿದು ಬರುತ್ತಿದ್ದ ಕೆಟ್ಟ ದೃಷ್ಟಿಗಳು ಎಷ್ಟೋ. ನಾಟಕದವರ ಬಗ್ಗೆ ಜನರಲ್ಲಿ ಸದ್ಭಾವನೆ ಇಲ್ಲದಿದ್ದ ಕಾಲದಲ್ಲಿ ತನ್ನ ಮಂಡಳಿಯ ಮಹಿಳೆಯರು ಯಾರ ದೃಷ್ಟಿಗೂ ಬಿದ್ದು ಮೈಲಿಗೆಯಾಗದಂತೆ ಎಲ್ಲರ ಸಚ್ಚಾರಿತ್ರ್ಯವನ್ನು ಸದಾಕಾಲವೂ ಸುಸಂಸ್ಕೃತವೆಂಬಂತೆ ಸುಭದ್ರವಾಗಿರುವಂತೆ ಕಟ್ಟೆಚ್ಚರದಿಂದಿದ್ದು ಕಾಪಾಡುತ್ತಿದ್ದ ನಾಗರತ್ನಮ್ಮ ಎಲ್ಲ ವೃತ್ತಿ ನಾಟಕ ಮಂಡಳಿಯವರಿಗೂ ಒಂದು ಮೇಲ್ಪಂಕ್ತಿ ಎಂಬಂತಿದ್ದ ಆದರ್ಶ ಮಹಿಳೆ. ಅವರ ಮಡಿವಂತಿಕೆಯ ಬದುಕು ವೃತ್ತಿರಂಗದ ಎಲ್ಲ ಸ್ತ್ರೀಯರಿಗೆ ಮಾರ್ಗದರ್ಶಿ; ಅನುಕರಣೀಯ.

ಆದರೇನು? ನೋಡುಗರ ಗರ್ಭ ನಿರ್ಭೇದವಾಗುವಂತೆ ಪುರುಷ ಪಾತ್ರಗಳಲ್ಲಿ ಮಿಂಚಿ ಮೆರೆಯುತ್ತಿದ್ದರೂ ನಾಗರತ್ನಮ್ಮ ಮೂಲತಃ ಮಹಿಳೆ ತಾನೇ? ನಮ್ಮಲ್ಲಿ ನಾಟಕದ ಕಂಪನಿಗಳು ಅವು ಎಂಥವೇ ಆಗಿದ್ದರೂ ಅನುಭವಿಸುತಿದ್ದುದು ಲಾಭಕ್ಕಿಂತ ನಷ್ಟವನ್ನೇ! ಕಂಪನಿ ಕಟ್ಟಿ ಉದ್ಧಾರವಾದವರು ನಮ್ಮಲ್ಲಿ ಯಾರೊಬ್ಬರೂ ಇಲ್ಲ! ಈ ಮಾತಿಗೆ ಮಾಸ್ಟರ್ ಹಿರಣ್ಣಯ್ಯನವರೊಬ್ಬರು ಅಪವಾದವೇನೋ, ಅಷ್ಟೆ. ಮಿಕ್ಕವರ ಪೈಕಿ ಹೆಚ್ಚಿನವರು ನೆಲಕಚ್ಚಿ ನಿರ್ನಾಮವಾದವರೇ! ಹೀಗಾಗಿ ಸುಮಾರು ಎರಡು ದಶಕಗಳಿಗೂ ಹೆಚ್ಚು ಕಾಲ 'ಸ್ತ್ರೀ ನಾಟಕ ಮಂಡಳಿ'ಯನ್ನು ನಡೆಸಿದ ನಾಗರತ್ನಮ್ಮ ಕಂಪನಿಯ ಏಳುಬೀಳುಗಳಿಗೆ ಮೈಯೊಡ್ಡಿಕೊಂಡು ಮುಪ್ಪಾಗಿ ಹೋದರು. ಹೀಗಾಗಿ 1978ರಿಂದ ತಮ್ಮ ಕಂಪನಿಗೆ ಮಂಗಳ ಹಾಡಿದ ನಾಗರತ್ನಮ್ಮ ವರ್ಷಕಾಲ ತಮ್ಮ ಮಂಡಳಿಯೊಡನೆ ಊರೂರು ತಿರುಗುವುದನ್ನು ಬಿಟ್ಟುಬಿಟ್ಟರು. ಆದರೆ ಬಣ್ಣ ಹಚ್ಚಿಕೊಳ್ಳುವುದನ್ನು ಬಿಡಲಿಲ್ಲ. ಇಚ್ಛೆಯಿಂದ ಗುತ್ತಿಗೆದಾರರು ಬಂದು ಸೂಕ್ತ ಸಂಭಾವನೆಯನ್ನು ಸಲ್ಲಿಸಿದಾಗ ಮಾತ್ರ ನಾಗರತ್ನಮ್ಮನವರು ತಮ್ಮ ಕಂಪನಿಯಲ್ಲಿದ್ದ ಕಲಾವಿದರನ್ನು ಕರೆಸಿಕೊಂಡು ನಾಟಕಗಳನ್ನಾಡಿಸುವ ಹೊಣೆಯನ್ನು ಹೊರಲಾರಂಭಿಸಿದರು. ಈ ರೀತಿಯಿಂದ ಬಂದ ಹಣವನ್ನು ಯಾವ ರೀತಿಯಲ್ಲೂ ವಂಚನೆ ಮಾಡದೆ ಕಲಾವಿದರಿಗೆ ಸಮರ್ಪಿತವೆಂಬಂತೆ ಹಂಚಿಬಿಡುತ್ತಿದ್ದರು. ಈ ಕಾರಣದಿಂದಲೆ ನಾಗರತ್ನಮ್ಮನವರು ಕರೆಯುತ್ತಿದ್ದಂತೆಯೆ ಕಲಾವಿದೆಯರು ಯಾವ ಸಬೂಬನ್ನು ನೀಡದೆ ಬಂದು ನಾಟಕಗಳಲ್ಲಿ ಪಾತ್ರವಹಿಸಿ ಸಾಕಷ್ಟು ಸಂಭಾವನೆ ಪಡೆದು ಸಂತೋಷದಿಂದ ಹಿಂತಿರುಗುತ್ತಿದ್ದರಂತೆ.

ನಾಗರತ್ನಮ್ಮನವರದು ಬದುಕಿನುದ್ದಕ್ಕೂ ಬೆಂದ ಜೀವ; ನೊಂದ ಜೀವ. ನಲಿವನ್ನು ಕಂಡದ್ದು ಕೆಲದಿನಗಳಲ್ಲಷ್ಟೆ. ಉಳಿದೆಲ್ಲ ಕಾಲದಲ್ಲೂ ಅನುಭವಿಸಿದ್ದು ಆತಂಕವನ್ನು ಅವಘಡವನ್ನು, ಅಪಾಯವನ್ನು, ಅನಿಶ್ಚಿತ ಬದುಕನ್ನು.

ನಾಗರತ್ನಮ್ಮನವರಿಗೆ ನಾಲ್ಕು ಮಕ್ಕಳು. ಒಂದು ಮಗು ವರ್ಷ ತುಂಬುವ ಮೊದಲೇ ತೀರಿಕೊಂಡಿತು. ಉಳಿದ ಮಕ್ಕಳು ಓದಿದ್ದಾರೆ; ಒಳ್ಳೆಯ ನೆಲೆ ಕಂಡಿದ್ದಾರೆ; ಸುಸ್ಥಿತಿಯಲ್ಲಿದ್ದಾರೆ. ಇಬ್ಬರು ಅಳಿಯಂದಿರನ್ನು, ಒಬ್ಬಳು ಸೊಸೆಯನ್ನು ಮತ್ತು ಮೊಮ್ಮಕ್ಕಳನ್ನು ಪಡೆದಿರುವ ನಾಗರತ್ನಮ್ಮನವರ ಬದುಕು ಪ್ರಸ್ತುತ ಸುಭದ್ರ, ನಿರಾಳ, ಆತಂಕರಹಿತ, ಎಲ್ಲರಿಗೂ ಈ ಬಣ್ಣದ ಬೆಡಗಿನ ಹಿರಿಯ ಜೀವವನ್ನು ಕಂಡರೆ ಎಲ್ಲಿಲ್ಲದ ಪ್ರೀತಿ ಗೌರವ. ಹೀಗೆ ವರುಷಗಳ ಕಾಲ ಕಾಣದಿದ್ದ ನೆಮ್ಮದಿಯನ್ನು ಇತ್ತೀಚಿನ ವರುಷಗಳಲ್ಲಿ ನಾಗರತ್ನಮ್ಮನವರು ಕಾಣುತ್ತಿದ್ದಾರೆ. ಆನಂದವನ್ನು ಅನುಭವಿಸುತ್ತಿದ್ದಾರೆ.

ನಾನು ನಾಗರತ್ನಮ್ಮನವರ ಕೆಲವು ನಾಟಕಗಳನ್ನು ನೋಡಿದ್ದೇನೆ. ವೃತ್ತಿಯಿಂದ ಇಂಜಿನಿಯರಿಂಗ್ ಉಪನ್ಯಾಸಕನಾಗಿದ್ದರೂ ಪ್ರವೃತ್ತಿಯಿಂದ ನಾನೂ ಒಬ್ಬ ನಟ, ನಿರ್ದೇಶಕ, ನಾಟಕಕಾರ, ರಂಗಕರ್ಮಿ. ಈ ಎಲ್ಲದರ ಅನುಭವದಿಂದ ರಂಗಕ್ಷೇತ್ರದಲ್ಲಿ ಬೆಳೆದಿರುವ ನಾನು ನಾಗರತ್ನಮ್ಮನವರ ರಂಗಾಸಕ್ತಿ ಹಾಗೂ ಅಭಿನಯವನ್ನು ಕಂಡು ವಿಸ್ಮಯಗೊಂಡಿದ್ದೇನೆ. ಅಲ್ಲದೆ 1995ರಲ್ಲಿ ತುಮಕೂರಿನ ವಿದ್ಯಾವಾಹಿನಿ ಸಂಸ್ಥೆಯವರು ಇದೇ ಪ್ರತಿಷ್ಠಿತ ರಂಗಕರ್ಮಿ ಆರ್. ನಾಗರತ್ನಮ್ಮನವರ ಹಾಗೂ ಖ್ಯಾತ ಕವಿ ದೊಡ್ಡರಂಗೇಗೌಡರ ಸಮ್ಮುಖದಲ್ಲಿ ನನಗೆ ಸನ್ಮಾನ್ಯವನ್ನು

ಮಾಡಿದರು. ನಂತರದಲ್ಲಿ ನಾಗರತ್ನಮ್ಮನವರು ಅಲ್ಲಿಯವರ ಬಲವಂತಕ್ಕೆ ಮಣಿದು ಇದ್ದ ಸ್ಥಿತಿಯಲ್ಲೇ ಭೀಮನ ಪಾತ್ರವನ್ನು ಮಾಡಿ ಎಲ್ಲರೂ ಹುಬ್ಬೇರಿಸಿ ನಿಬ್ಬೆರಗಾಗುವಂತೆ ಮಾಡಿಬಿಟ್ಟರು. ಅಂದು ನಿಜವಾದ ಅರ್ಥದಲ್ಲಿ ಸನ್ಮಾನ ನಡೆದದ್ದು ನಾಗರತ್ನಮ್ಮನವರಿಗೆ, ನನಗಲ್ಲ!

ನಾಗರತ್ನಮ್ಮನವರಿಗೆ ಕರ್ನಾಟಕ ರಾಜ್ಯಪ್ರಶಸ್ತಿ, ನಾಟಕ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಜಯಚಾಮರಾಜೇಂದ್ರ ಅಕಾಡೆಮಿ ಪ್ರಶಸ್ತಿ, ಹೀಗೆ ಇನ್ನೂ ಹತ್ತು ಹಲವು ಪ್ರತಿಷ್ಠಿತ ಪ್ರಶಸ್ತಿಗಳು ಸಂದಿವೆ.

ಅದೊಂದು ಸಂದರ್ಭದಲ್ಲಿ ನಾಗರತ್ನಮ್ಮನವರು ತಮ್ಮ ತಂಡದ ಕೆಲವರೊಡನೆ ಅಮೇರಿಕಾಕ್ಕೂ ಹೋಗಿ, ಅಲ್ಲಿ ಕೆಲವು ನಾಟಕಗಳನ್ನು ಆಡಿ ನಮ್ಮ ರಂಗಸಂಸ್ಕೃತಿಯ ಹಿರಿಮೆಯನ್ನು ಸಾರಬೇಕೆಂದು ಆಶಿಸಿದ್ದರು. ಕಾರ್ಯೋನ್ಮುಖರೂ ಆಗಿದ್ದರು. ಪಾರ್ವತಮ್ಮ ರಾಜಕುಮಾರ್, ಚಿ.ನ.ಮಂಗಳ ಸೇರಿದಂತೆ ಇನ್ನೂ ಕೆಲವರು ನಾಗರತ್ನಮ್ಮನವರ ಈ ರಂಗಯಾತ್ರೆಗೆ ಸಹಾಯ ಮಾಡಲು ಸಿದ್ಧರಾಗಿದ್ದರು. ಆದರೆ, ಇನ್ನೇನು ಎಲ್ಲವೂ ಕೈಗೂಡಿತು ಎನ್ನುವಷ್ಟರಲ್ಲಿ ಅವರ ಕಂಪನಿಯ ಕೆಲವು ಕಲಾವಿದೆಯರೇ ನಾಗರತ್ನಮ್ಮನವರ ಈ ಯೋಜನೆಯನ್ನು ತಪ್ಪಾಗಿ ತಿಳಿದು ಬಾಯಿಗೆ ಬಂದಂತೆ ಬೇಜವಾಬ್ದಾರಿಯಿಂದ ಮಾತನಾಡಲಾರಂಭಿಸಿದಾಗ, ಅಂತಹ ತಿರುಳಿಲ್ಲದ ಮಾತುಗಳನ್ನು ಕೇಳಿ ಬಹುವಾಗಿ ನರಳಿದ ನಾಗರತ್ನಮ್ಮ ಅಮೇರಿಕಾಕ್ಕೆ ಹೋಗುವ ಆ ಯೋಜನೆಯನ್ನೇ ಕೈಬಿಟ್ಟರು. ಹೋಗಿ ಬಂದಿದ್ದರೆ ನಮ್ಮ ವೃತ್ತಿರಂಗದ ಇತಿಹಾಸದಲ್ಲಿ ಈ ಕಾರ್ಯ ಒಂದು ಅಪೂರ್ವ ದಾಖಲೆಯಾಗಿ ಉಳಿಯುತ್ತಿತ್ತು, ಅದಾಗಲಿಲ್ಲ. ಲಾಗಾಯ್ತಿನಿಂದಲೂ ಅಷ್ಟೆ. ಇಂತಹ ವಿಚಾರಗಳಲ್ಲಿ ನಮ್ಮವರು ಅಸೂಯಾಪರರು, ಸ್ವಾರ್ಥಿಗಳು, ಸಮಯಸಾಧಕರು, ಎಂದು ಹೇಳುವುದಕ್ಕೆ ಇದಕ್ಕಿಂತ ಉತ್ತಮ ನಿದರ್ಶನವಿರಲಾರದು. ಹಾಳಾಗಲಿ ಬಿಡಿ. ಎಷ್ಟೋ ರೀತಿಯ ನಂಜನ್ನು ನುಂಗಿ ನೀರ್ಕುಡಿದು ನಿಟ್ಟುಸಿರುಬಿಟ್ಟಿರುವ ನಟಿ ಶಿರೋಮಣಿ ನಾಗರತ್ನಮ್ಮನವರಿಗೆ ಇದರಿಂದ ತುಸು ಬೇಸರವಾದರೂ ಆಘಾತವೇನಾಗಲಿಲ್ಲ. ತಪ್ಪಾಗಿ ತಿಳಿಯುವ ಬೆಪ್ಪರ ಕೂಟದಲ್ಲಿ ಹೀಗೆಲ್ಲ ಅಗುವುದು ಸಹಜವೆಂದು ಹೇಳುತ್ತ ನಕ್ಕು ಬಿಟ್ಟರು.

ಇಂತಹ ಮುಗ್ಧ ಮನಸ್ಸಿನ ನಿರ್ಲಿಪ್ತ ಸರಳ ಸುಂದರ ಜೀವಿ, ದೈತ್ಯ ಪ್ರತಿಭೆಯ ಅಪೂರ್ವ ರಂಗ ಕಲಾವಿದೆ, ನಾಗರತ್ನಮ್ಮನವರ ಸಮ್ಮುಖದಲ್ಲಿ ಸನ್ಮಾನಿತನಾದೆನಲ್ಲಾ, ಅವರೊಟ್ಟಿಗೆ ವೇದಿಕೆಯನ್ನು ಹಂಚಿಕೊಂಡೆನಲ್ಲಾ ಅದೇ ನನಗೆ ಹೆಮ್ಮೆ. ಈಕೆ ರಂಗಭೂಮಿಗೆ ಸಲ್ಲಿಸಿರುವ ಸೇವೆ ಅಮೋಘವಾದ್ದು, ಅಪೂರ್ವವಾದ್ದು, ಈ ಅಚ್ಚರಿಗೊಳಿಸುವಂತಹ ಸಾಧನೆಗಾಗಿಯೇ 2012 ರಲ್ಲಿ ಪದ್ಮಶ್ರೀ ಪ್ರಶಸ್ತಿ ಅವರನ್ನು ಹುಡುಕಿಕೊಂಡು ಬಂದು ಅವರ ಕೈ ಸೇರಿದೆ. ಮತ್ತೀಕೆ ರಂಗಭೂಮಿಯ ಕ್ಷೇತ್ರದಲ್ಲಿ ನೆಟ್ಟಿರುವ ಮೈಲುಗಳನ್ನು, ಮಾಡಿರುವ ದಾಖಲೆಗಳನ್ನು ಮುಂದೆ ಯಾವ ಸ್ತ್ರೀಯೂ ನೆಡಲಾರಳು, ಮುರಿಯಲಾರಳು ಪ್ರಾಯಶಃ.

ಇಂತಹ ನೆಚ್ಚಿನ ಮತ್ತು ಪೌರುಷದ ನಟನೆಯ ನಟಿ ನಾಗರತ್ನಮ್ಮ ನೂರ್ಕಾಲ ನೆಮ್ಮದಿಯಿಂದ ನಗುನಗುತ ನಮ್ಮೊಡನಿರಲಿ ಎಂಬುದು ಕನ್ನಡಿಗರೆಲ್ಲರ ಹಾರೈಕೆ.

(ಆಧಾರ: ಎಚ್.ಎಸ್.ಪಾರ್ವತಿ ಅವರ 'ಆರ್.ನಾಗರತ್ನಮ್ಮ' ಪುಸ್ತಕ)

*

ಪ್ರತಿಭಾ ಸಂಪನ್ನೆ ಡಾ. ಸರೋಜಿನಿ ಮಹಿಷಿ

ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ

ಡಾ. ಸರೋಜಿನಿ ಮಹಿಷಿಯವರ ಬದುಕು ಮತ್ತು ಬೃಹತ್ತಾದ ಸಾಧನೆಗಳನ್ನು, ಎರಡೇ ಪುಟಗಳಿಗೆ ಕಿರಿದುಗೊಳಿಸಿ ಹೇಳುವುದೆಂದರೆ, ದೂರದ ಬೆಟ್ಟದ ಮೇಲೆ ನಿಂತು, ಮಹಾನಗರವೊಂದರ ಭಾವಚಿತ್ರ ಹಿಡಿದಂತೆ. ಇಡೀ ನಗರವನ್ನೊಳಗೊಂಡ ಫೋಟೊ ಕಾಣಿಸುತ್ತದೆ. ಆದರೆ, ಯಾವುದೂ ನಿಚ್ಚಳವಾಗಿ ಕಾಣುವುದಿಲ್ಲ, ಕಾಣಿಸುವುದು ಯಾವುದೂ ಸ್ಪಷ್ಟವಿರುವುದಿಲ್ಲ. ರಾಜಕೀಯ, ಶಿಕ್ಷಣ, ಸಾಹಿತ್ಯ, ಸಮಾಜಸೇವೆ, ಸಂಘಟನೆ, ಭಾಷೆ, ಪತ್ರಿಕೋದ್ಯಮ, ಮಹಿಳಾಪರ ಚಿಂತನೆ, ಇವು ಸರೋಜಿನಿಯವರ ಸೇವೆಯ ಕ್ಷೇತ್ರಗಳು. ಕವನ, ಕಥೆ, ಹರಟೆ, ವಿಮರ್ಶೆ, ಪ್ರವಾಸ, ಮಕ್ಕಳ ಸಾಹಿತ್ಯ–ಇವು ಇವರು ಬರವಣಿಗೆಗೆ ಆಯ್ದುಕೊಂಡ ಸಾಹಿತ್ಯ ಪ್ರಕಾರಗಳು. ಈ ಎಲ್ಲಕ್ಕಿಂತ ಕನ್ನಡ ಪರ ಆಡಳಿತ ಮತ್ತು ಉದ್ಯೋಗ ಜಾರಿಗಾಗಿ ನೀಡಿರುವ, 'ಸರೋಜಿನಿ ಮಹಿಷಿ ವರದಿ' ಮೂಲಕವೇ ಕನ್ನಡಿಗರಿಗೆ ಹೆಚ್ಚು ಪರಿಚಿತರು.

ಅಸೀಮ ವಿದ್ವತ್‌ಪ್ರತಿಭೆಯ ಸರೋಜಿನಿ, ಹುಟ್ಟಿದ್ದು ಧಾರವಾಡದಲ್ಲಿ, 1927ರ ಮಾರ್ಚ್ ಮೂರರಂದು. ಇದರ ತಾಯಿ ಕಮಲಾಬಾಯಿ ಮತ್ತು ತಂದೆ ಬಿಂದುರಾಜ್ ಮಹಿಷಿಯವರು. ಹೆಣ್ಣುಮಕ್ಕಳಿಗೆ ಪ್ರಾಥಮಿಕ ಶಿಕ್ಷಣಕ್ಕಿಂತ ಮುಂದೆ ಕಲಿಸಲು, ಸಮಾಜದಲ್ಲಿ ಅಲಿಖಿತ ಅಸಮ್ಮತಿ ಇದ್ದ ಕಾಲದಲ್ಲಿ, ಇವರ ವಿದ್ಯಾರ್ಹತೆ ಹನುಮಂತನ ಬಾಲದಷ್ಟು ಹಿರಿದು. ಎಂ.ಎ., ಎಲ್.ಎಲ್.ಬಿ., ಪಿಎಚ್.ಡಿ., ಹಿಂದಿಯಲ್ಲಿ ಎಂ.ಎ.ಗೆ ಸರಿಸಮನಾದ ಸಾಹಿತ್ಯ ರತ್ನ, ಹೊಲಿಗೆ ಮತ್ತು ಕಸೂತಿಯಲ್ಲಿ ಡಿಪ್ಲೊಮೊ. ಅವರ ಈ ವಿದ್ಯೆಯೇ ಒಂದು ಅದ್ಭುತ ದಾಖಲೆ. ಬಹುಶಃ ಇದೂ ಪ್ರಥಮವೇ. ಮಧ್ಯಪ್ರದೇಶದ, ಉಜ್ಜಯಿನಿಯ ವಿಕ್ರಂ ವಿಶ್ವವಿದ್ಯಾಲಯದಿಂದ ಇವರಿಗೆ ಗೌರವ ಡಿ.ಲಿಟ್., ದೊರೆತಿದ್ದು, ಇವರ ವಿದ್ವತ್ತಿನ ಕಿರೀಟಕ್ಕೆ ಸೇರಿದ ಇನ್ನೊಂದು ಗರಿ. ಆಡುಮುಟ್ಟದ ಸೊಪ್ಪಿಲ್ಲ ಎಂಬಂತೆ, ಇವರಿಗೆ ಬಾರದ ವಿದ್ಯೆ ಇಲ್ಲ. ಇವರು ಕಲಿಯದ ಕಲಿಕೆ ಇಲ್ಲ. ಸಿತಾರ್ ಕಲಿತಿದ್ದರು. ಚೆನ್ನಾಗಿ ಹಾಡುತ್ತಿದ್ದರು. ಉತ್ತಮವಾಗಿ ಪೇಂಟಿಂಗ್ ಮಾಡುತ್ತಿದ್ದರು.

ಧಾರವಾಡದಲ್ಲಿ ಕಾನೂನು ವಿಭಾಗದ ಪ್ರೊಫೆಸರ್ ಆಗಿ ಆರು ವರ್ಷಗಳು ಗಮನಾರ್ಹ ಕೆಲಸ ಮಾಡಿ, ರಾಷ್ಟ್ರೀಯ ಮಟ್ಟದಲ್ಲಿ ವಿವಿಧ ವಿಸ್ತಾರಗಳಲ್ಲಿ ಸೇವೆ ಸಲ್ಲಿಸುವ ಆಸಕ್ತಿಯಿಂದ, ಲೋಕಸಭೆಯ ಚುನಾವಣೆಯ ಕಣಕ್ಕಿಳಿದರು ಸರೋಜಿನಿಯವರು. ಮೈಸೂರು ರಾಜ್ಯದಿಂದ ಪ್ರಥಮ ಮಹಿಳೆಯಾಗಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ, ದೇಶದಲ್ಲಿ ಅತಿ ಹೆಚ್ಚು ಮತಗಳಿಂದ ಗೆದ್ದು ಬಂದವರು ಇವರೇ. ಸರೋಜಿನಿಯವರ ಸಾಧನೆಗಳ ಪಟ್ಟಿಯಲ್ಲಿ ಹೀಗೆ ಹಲವು ಪ್ರಥಮಗಳಿವೆ. ಬಾಂಬೆ ಯೂನಿವರ್ಸಿಟಿಯ ಮೆಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ. ಅನಂತರ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿಯೂ ಪ್ರಥಮ ರ್‍ಯಾಂಕ್. ಲೋಕಸಭಾ ಸದಸ್ಯರಾಗಿದ್ದುಕೊಂಡು ಡಾಕ್ಟರೇಟ್ ಪಡೆದ ಪ್ರಥಮ ಸದಸ್ಯೆ ಎಂದು ಆಗಿನ ಸ್ಪೀಕರ್, ಲೋಕಸಭೆಯಲ್ಲಿ ಈ ವಿಷಯವನ್ನು ಪ್ರಕಟಿಸಿದ್ದರಂತೆ. ಹೀಗೆ

ಪ್ರಕಟಿಸಿದ್ದೂ ಪ್ರಥಮ. ಸದನದ ವ್ಯವಹಾರಗಳನ್ನು ನಿಯಂತ್ರಿಸುವ ಸಭಾಪತಿಗಳ ಹೆಸರಿನ ಪಟ್ಟಿಯಲ್ಲಿ ಇವರ ಹೆಸರು ಸೇರಿದ್ದು; 1965ರಲ್ಲಿ ಕಾಮನ್ ವೆಲ್ತ್‌ನ ಆಹ್ವಾನದನ್ವಯ, ಬ್ರಿಟಿಷ್ ಪ್ರಜಾಪ್ರಭುತ್ವದ (ಬ್ರಿಟಿಷ್ ಪಾರ್ಲಿಮೆಂಟರಿ ಡೆಮಾಕ್ರಸಿ) ಏಳುನೂರನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸುವುದಕ್ಕಾಗಿ ಬ್ರಿಟನ್ನಿಗೆ ಹೋಗಲು, ಪಂಡಿತ ನೆಹರೂರವರಿಂದ ಆಯ್ಕೆಗೊಂಡಿದ್ದು; ಪರಸ್ಪರರನ್ನು ಅರ್ಥಮಾಡಿಕೊಳ್ಳಲು ಹಾಗೂ ಸದ್ಭಾವನೆ ಬೆಳೆಸುವ ಉದ್ದೇಶದ ಸಫಲತೆಗೆ, ಲಾಲ್‌ಬಹದೂರ್ ಶಾಸ್ತ್ರಿಯವರು ಇವರನ್ನು ಆಯ್ದು ಆಫ್ರಿಕನ್ ದೇಶಗಳಿಗೆ ರಾಯಭಾರಿಯಾಗಿ ಕಳಿಸಿದ್ದು; 1966ರಲ್ಲಿ ಮತ್ತು 1967ರ ಚುನಾವಣೆಯ ನಂತರ, ಮಾನ್ಯ ಪ್ರಧಾನಮಂತ್ರಿಗಳಾಗಿದ್ದ ಇಂದಿರಾ ಗಾಂಧಿಯವರಿಗೆ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿದ್ದು; ಪ್ರಧಾನಮಂತ್ರಿಗಳ ಕಚೇರಿಯಲ್ಲಿ ಉಪಮಂತ್ರಿ ಸ್ಥಾನಕ್ಕೇರಿ ಅವರ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಕೆಲಸ ಮಾಡಿದ್ದು; ಅಣುಶಕ್ತಿ ಆಯೋಗದ ಕಾರ್ಯಕಲಾಪಗಳ ಉಸ್ತುವಾರಿ ನಿರ್ವಹಣೆ ಮಾಡಿದ್ದು; ದೆಹಲಿಯ ಅಶೋಕ ಹೋಟೆಲ್ ಕಾರ್ಮಿಕರ ಯೂನಿಯನ್ನಿನೊಂದಿಗೆ ಇವರು ಮಾಡಿಕೊಂಡ ಯಶಸ್ವೀ ಸಂಧಾನಕ್ಕೆ ರಾಜ್ಯ ಸಭೆಯಲ್ಲಿ ಪ್ರಶಂಸೆ ದೊರೆತಿದ್ದು; ಇವೆಲ್ಲವೂ ಡಾ. ಸರೋಜಿನಿ ಮಹಿಷಿಯವರ ಸಾರ್ವಜನಿಕ ಸಂಪರ್ಕಜ್ಞಾನ ಮತ್ತು ಸಾಧನೆಗಳ ಸರಪಣಿಗಳು, ಹಾಗೂ ಇವರ ರಾಜಕೀಯ ರೀತಿನೀತಿಗಳ ಅರಿವು, ನಿಭಾಯಿಸುವ ಸಾಮರ್ಥ್ಯ ಮತ್ತು ಅಗಾಧ ಆತ್ಮವಿಶ್ವಾಸಕ್ಕೆ ಉದಾಹರಣೆಗಾಗಿ ನಿಲ್ಲುವ ಗೆಲುವಿನ ಅಂಶಗಳು. 1962ರಲ್ಲಿ ಚುನಾವಣೆಯ ಪ್ರಚಾರಕ್ಕೆ ಆಕೆ ಮಾಡಿದ ಖರ್ಚು ಕೇವಲ ಐದು ಸಾವಿರ ರೂಪಾಯಿಗಳು.

ಸರೋಜಿನಿಯವರು ಬರೆದ ಪುಸ್ತಕಗಳ ಸಂಖ್ಯೆ ಸುಮಾರು ಮೂವತ್ತೈದು. ರೂಪಾ(ಕಥಾ ಸಂಕಲನ), ಸಾಹಿತ್ಯ ಮಂಥನ, ಕಸೂತಿ ಕಲೆ, ಶಕುಂತಲಾ(ಕಾಂದಬರಿ ಅನುವಾದ), ಸ್ವಾತಂತ್ರ್ಯ ಕಹಳೆ, ಹಿಮಾಲಯದಿಂದ ರಾಮೇಶ್ವರ (ಕವನ ಸಂಕಲನ), ಸುಲಭ ಗೃಹವಿಜ್ಞಾನ, ಕಾಳಿದಾಸ, ಶ್ರೀಹರ್ಷ, ಭವಭೂತಿ ಎಂಬ ವಿಮರ್ಶಾ ಕೃತಿಗಳು, ಇತ್ಯಾದಿ. ಇವರ ಕನ್ನಡ ರಚನೆಗಳು ನವಿಲು, ಇಂಚರ ಮತ್ತು ಮುಳ್ಳು ಗುಲಾಬಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಬಹುಮಾನಗಳನ್ನು ಗಳಿಸಿದ ಎರಡು ಶಿಶುಗೀತೆಗಳು. ವೇದಕಾಲದಿಂದ ಇಪ್ಪತ್ತನೇ ಶತಮಾನದವರೆಗಿನ ಕರ್ನಾಟಕ ರಾಜ್ಯದ ಕವಯತ್ರಿಯರ ಕುರಿತು ಸಂಶೋಧನೆ ಮಾಡಿ ಸಲ್ಲಿಸಿದ, 'ಕರ್ನಾಟಕ ಕವಯತ್ರಿಯರು' ಇವರಿಗೆ ಡಾಕ್ಟರೇಟ್ ಗಳಿಸಿಕೊಟ್ಟ ಮಹಾಪ್ರಬಂಧ.

ಕೃತಿಯನ್ನು ಓದದೆಯೇ ವಿಮರ್ಶೆ ಮಾಡುವ ಬಗ್ಗೆ, ಸಾಹಿತಿಗಳು, ವಿಮರ್ಶಕರು, ಪತ್ರಿಕೆ ಸಂಪಾದಕರು– ಇವರ ಪರಸ್ಪರ ಸಂಬಂಧಗಳಿಂದ, ದೊಡ್ಡ ಸಾಹಿತಿಯನ್ನು ಕೆಳಕ್ಕುರುಳಿಸಿ, ಚಿಕ್ಕಸಾಹಿತಿಯನ್ನು ಮೇಲಕ್ಕೇರಿಸಬಹುದೆಂಬುದು ಸರೋಜಿನಿಯವರ ಅಭಿಪ್ರಾಯ. ವಿಮರ್ಶೆಯ ಲಾಭ–ನಷ್ಟಗಳು ಮತ್ತು ವಿಮರ್ಶಕರ ಪಕ್ಷಪಾತದ ಕುರಿತು ಸಾಹಿತ್ಯ ಮಂಥನದಲ್ಲಿ ಹಲವಾರು ವಿಚಾರಗಳನ್ನು ವಿವರಿಸಿದ್ದಾರೆ. ಸಾಮಾನ್ಯವಾಗಿ, ಜನರು ಅಭಿಪ್ರಾಯಪಡುವುದಕ್ಕಿಂತ ಭಿನ್ನವಾಗಿ, ಹರಟೆಯೂ ಇವರ ಪ್ರಕಾರ ಪ್ರಯೋಜನಕಾರಿಯೇ. ರಾಜಕೀಯ ಕ್ಷೇತ್ರದಲ್ಲಿ ಹರಟೆಗೆ ವಿಶಿಷ್ಟ ಸ್ಥಾನವಿದೆ ಎಂದೂ, ವಿವಿಧ ರಾಜಕೀಯ ಅಭಿಪ್ರಾಯಗಳನ್ನು ರೂಪಿಸಲೂ ಇದು ಸಹಕಾರಿ ಮಾತ್ರವಲ್ಲ ಆರೋಗ್ಯಕಾರಿ ಎಂದೂ, ಹರಟೆಯೂ ಒಂದು ಕಲೆ ಎಂದೂ ಈ ಬಗ್ಗೆ, ಇವರ ಅತಿಥಿ ಸತ್ಕಾರದಲ್ಲಿ ಹರಟೆ ಹೊಡೆದಿದ್ದಾರೆ. ಇವರ ರಚನೆಗಳಲ್ಲಿ ಸರಳತೆ ಮತ್ತು ಸ್ಪಷ್ಟತೆ ಇದೆ. ಮಕ್ಕಳ ಕವನಗಳಲ್ಲಿ ಕುತೂಹಲ ಕೆರಳಿಸುವ ಕಥೆಗಳಿವೆ. ನಿರಾಳವಾಗಿ ಓದಿಸುವ ಲಯ ಹಾಗೂ ಗೇಯತೆ ಇದೆ. ಮಾವಿನ ಹೂಗಳ ಗೊಂಚಲ ನಡುವೆ/ ಕುಳಿ ಕುಳಿತೇ ದನಿ ಸಿಹಿಯಾಯ್ತೆ? (ಕೋಗಿಲೆ); ಕಾಗೆಯ ಬಳಗದಿ ಕೋಗಿಲೆ ಬೆಳೆಯೆ/ ಮೋಸವೆ ಅದರ ಇಂಚರಕೆ?/ಕೆಸರಿನ ಕೊಳದಲಿ ಕಮಲವು ಬೆಳೆಯೆ/ ತಾಗದೆ ಭ್ರಮರವು ಗಂಧಕ್ಕೆ? (ಕಾಗೆ–ಕೋಗಿಲೆ)/ ಪಕ್ಷಿಗಳೆಲ್ಲ ಒಂದೆಡೆ ಸೇರಿ /ಯೋಚನೆಗೈದವು ಚಿಂತೆಯಲಿ/ ಕಣ್ಕಪ್ಪಡಿಯು ಪಕ್ಷಿಯೆ ಅಲ್ಲವೆ/ಚರ್ಚಿಸಿ ದಣಿದವು ವ್ಯರ್ಥದಲಿ/ (ಕಣ್ಕಪ್ಪಡಿ) ಎಂಬಂತಹ ಶಿಶು ಗೀತೆಗಳ ಲಯಬದ್ಧ ಸಾಲುಗಳು ಓದಲು ಮೋಜೆನಿಸುವುದು ಮಾತ್ರವಲ್ಲ, ಮಕ್ಕಳ ಆಲೋಚನೆಯನ್ನು ಕೆದಕುವಂತೆ ಮಾಡುತ್ತವೆ. ಪ್ರಾಣಿ ಪ್ರಪಂಚದ ಪರಿಚಯ ಮಾಡಿಕೊಡುತ್ತವೆ.

ಡಾ. ಸರೋಜಿನಿ ಒಬ್ಬ ಉತ್ತಮ ವಾಗ್ಮಿ. ಶಿಕ್ಷಣ, ರಾಮಾಯಣ, ರಾಜಕೀಯ ಯಾವುದೇ ವಿಷಯವಿರಲಿ ಘಂಟೆಗಟ್ಟಲೆ, ನಿರರ್ಗಳವಾಗಿ ಮಾತಾಡಬಲ್ಲ ಶಕ್ತಿ ಇದ್ದವರು. ಎತ್ತಣ ಮಾಮರ ಎತ್ತಣ ಕೋಗಿಲೆ? ಎಂಬಂತೆ ರಾಜಕೀಯ ಮುತ್ಸದ್ದಿಯಾದ ಸರೋಜಿನಿಯವರನ್ನು, ದೇವಸ್ಥಾನಗಳಿಗೆ ರಾಮಾಯಣ, ಮಹಾಭಾರತ, ಪುರಾಣ, ಪುಣ್ಯಕಥೆಗಳಿಗೆ ಪ್ರವಚನ ನೀಡಲು ಸಹಾ ಆಹ್ವಾನಿಸುತ್ತಿದ್ದರಂತೆ.

ಧಾರವಾಡದಿಂದ ಪ್ರಕಟಗೊಳ್ಳುತ್ತಿದ್ದ ವೀರಮಾತೆ ಎಂಬ ಮಾಸಿಕಕ್ಕೆ, ಸರೋಜಿನಿಯವರೇ ಸಂಪಾದಕಿ. ಬೆಂಗಳೂರಿನಿಂದ ಹೊರಬರುತ್ತಿದ್ದ 'ಸಮಾಜ ಕಲ್ಯಾಣ' ಪತ್ರಿಕೆಗೂ ಸಂಪಾದಕಿಯಾಗಿದ್ದರು. ಕನ್ನಡದ ಹೆಸರಾಂತ ಸಾಹಿತಿ ಡಾ.ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗವನ್ನು ಹಾಗೂ ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಕೃತಿಗಳನ್ನು ಹಿಂದಿಗೆ ಭಾಷಾಂತರಿಸಿ, ಈ ಸಾಹಿತಿಗಳನ್ನು ಹಿಂದಿ ಭಾಷಿಕರಿಗೆ ಪರಿಚಯಿಸಿರುವುದು, ಹೆಚ್ಚಿನ ಸಂಗತಿ. ಹಿಂದಿ ಹೆಚ್ಚು ತಿಳಿಯದ ಡಿ.ವಿ.ಜಿ.ಯವರಿಂದ ಇದಕ್ಕಾಗಿ ಮೆಚ್ಚುಗೆ ಗಳಿಸಿದ್ದರು. ಹಿಂದಿಯಲ್ಲಿ ಬರೆದ 'ಅತಿಥಿ ಸತ್ಕಾರ'ಕ್ಕೆ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದಿಂದ ಸರೋಜಿನಿಯವರಿಗೆ ಬಹುಮಾನ ಬಂದಿದೆ.

1958ರಲ್ಲಿ ನಡೆದ ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ ಸಣ್ಣ ಕಥೆಗಾರರ ಸಮಾವೇಶಕ್ಕೆ; 1960ರಲ್ಲಿ ಧರ್ಮಸ್ಥಳದಲ್ಲಿ ಜರುಗಿದ ಸರ್ವಧರ್ಮ ಸಮ್ಮೇಳನಕ್ಕೆ; 1960ರಲ್ಲಿ ಮೈಸೂರು ರಾಜ್ಯ ಮಹಿಳಾ ಸಮಾವೇಶಕ್ಕೆ ಅಧ್ಯಕ್ಷರಾಗಿ ವಿದ್ವತ್ ಸಮೂಹವನ್ನು ಪ್ರಭಾವಿಸುವಂತೆ ಮಾತನಾಡಿದವರು ಈಕೆ.

ಹಿಂದಿ ಭಾಷಿಕರು ಬೇಕಾದಷ್ಟು ಜನರಿದ್ದೂ, ಪಾರ್ಲಿಮೆಂಟರಿ ಹಿಂದಿ ಪರಿಷತ್‌ಗೆ ಈಕೆ ಅಧ್ಯಕ್ಷೆಯಾಗಿ ಆಯ್ಕೆಯಾದ ಕನ್ನಡತಿ ಎಂದರೆ ಇವರ ವ್ಯಕ್ತಿತ್ವ ಮತ್ತು ಸಾಮರ್ಥ್ಯಗಳ ಅರಿವಾಗುತ್ತದೆ. ಸಂಸ್ಕೃತ ಭಾಷಾ ಸಂಘಟನೆಯಾದ ಪ್ರಾಚ್ಯವಾಣಿಗೆ, ದಕ್ಷಿಣ ಭಾರತದ ಹಿಂದಿ ಬರೆಹಗಾರರ ಬೆಳವಣಿಗೆಗಾಗಿ ಇದ್ದ ಭಾರತೀಯ ಪ್ರತಿಷ್ಠಾನ, ದೆಹಲಿ ಕರ್ನಾಟಕ ಸಂಘ ಮುಂತಾದವಕ್ಕೆ ಅಧ್ಯಕ್ಷೆಯಾಗಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಏಳಿಗೆಗೆ, ಉತ್ತರ ದಕ್ಷಿಣದ ಜನರ ಬಾಂಧವ್ಯದ ಬೆಳವಣಿಗೆಗೆ ದುಡಿದಿದ್ದರು ಸರೋಜಿನಿ. ಈಕೆಗೆ ಸಂಸ್ಕೃತದ ಬಗ್ಗೆಯೂ ಅಪಾರ ಪ್ರೀತಿ. ಸಂಸ್ಕೃತವನ್ನು ಸಂವಿಧಾನದ ಅನುಮೋದಿತ ಪಟ್ಟಿಗೆ ಒಳಪಡಿಸಲು ಶ್ರಮಿಸಿದರು, ಆಕಾಶವಾಣಿಯಲ್ಲಿ ಸಂಸ್ಕೃತದಲ್ಲಿ ವಾರ್ತೆ ಆರಂಭಿಸಲು ಈಕೆ ಕಾರಣಕರ್ತೆ.

ಕನ್ನಡ ಭಾಷಾ ಅನುಷ್ಠಾನದ ಕುರಿತು, ಕನ್ನಡಿಗರಿಗೆ ಉದ್ಯೋಗಾವಕಾಶ ನೀಡುವ ಕುರಿತು, ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಲಾಗಿದ್ದು, 'ಸರೋಜಿನಿ ಮಹಿಷಿ ವರದಿ' ಎಂದೇ ಪ್ರಚಲಿತವಾಗಿರುವ ಈ ವರದಿಯನ್ನು ಜಾರಿಗೆ ತರುವಂತೆ ಹಲವಾರು ಸಂಘ ಸಂಸ್ಥೆಗಳು, ವ್ಯಕ್ತಿಗಳು, ಸರ್ಕಾರವನ್ನು ಒತ್ತಾಯಿಸಿದ್ದು, ಇನ್ನೂ ಕಾರ್ಯಗತವಾಗಿಲ್ಲ.

ವಿವಿಧ ಕ್ಷೇತ್ರಗಳಲ್ಲಿ ಹಲವಾರು ಸಾಮರ್ಥ್ಯಗಳಲ್ಲಿ ಸೇವೆ ಸಲ್ಲಿಸಿದ ಡಾ॥ ಸರೋಜಿನಿಯವರಿಗೆ, ಜನತೆಯ ಸನ್ಮಾನಗಳಲ್ಲದೆ, ಮಧ್ಯಪ್ರದೇಶದ ವಿಶ್ವವಿದ್ಯಾಲಯವೊಂದು ಗುರುತಿಸಿ, ಡಿ.ಲಿಟ್ ನೀಡಿ ಗೌರವಿಸಿದ್ದು; ಮಂತ್ರಾಲಯದ ಸ್ವಾಮಿಗಳು ವಿದ್ವತ್ ರತ್ನ ಎಂಬ ಬಿರುದು ದಯಪಾಲಿಸಿದ್ದು; ಕನ್ನಡ ವಿಶ್ವವಿದ್ಯಾಲಯವು 2006ನೇ ಸಾಲಿನಲ್ಲಿ ಈಕೆಗೆ ನಾಡೋಜ ಪದವಿಯನ್ನು ದಯಪಾಲಿಸಿದ್ದು; ಆಕೆಯ ಅಪಾರ ಅರ್ಹತೆಗೆ ಸಿಕ್ಕ ಯೋಗ್ಯ ಗೌರವಗಳು. ಆಕೆಯ ಜೀವಿತಾವಧಿಯಲ್ಲೇ, ಆಕೆಯ ವರದಿಯಲ್ಲಿನ ಶಿಫಾರಸುಗಳೆಲ್ಲವನ್ನೂ ಅನುಷ್ಠಾನಕ್ಕೆ ತಂದರೆ ಎಲ್ಲಕ್ಕಿಂತ ಹೆಚ್ಚಿನ ಪ್ರಶಸ್ತಿಯನ್ನು ಆಕೆಗೆ ನೀಡಿದಂತಾಗುತ್ತದೆಂಬುದು ಕನ್ನಡಿಗರ ಆಶಯ.

*

ಅಪರೂಪದ ಲೇಖಕಿ ಗೀತಾಕುಲಕರ್ಣಿ

ಡಾ. ಮಂದಾಕಿನಿ ಪುರೋಹಿತ

ಎತ್ತರದ ನಿಲುವಿನ, ಗೌರವರ್ಣದ, ಆಕರ್ಷಕ ವ್ಯಕ್ತಿತ್ವದ ಎಲ್ಲರೊಂದಿಗೂ ಅಂತಃಕರಣ ತುಂಬಿ ತುಳುಕುವಂತೆ ಮಾತಾಡುತ್ತಿದ್ದ ಗೀತಾ ಕುಲಕರ್ಣಿಯವರನ್ನು ನಾನು 1982ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಹತ್ತಿರದಿಂದ ನೋಡಿದೆ. ಗೀತಾ ಕುಲಕರ್ಣಿ ಆ ಕಾಲದ ಸಮಾಜದ ದಿಟ್ಟ ಮಹಿಳೆ. ಸಾಂಸ್ಕೃತಿಕ ವಲಯದ ದಿಟ್ಟ ಲೇಖಕಿ. ರಜತಗಿರಿಯ 'ರಾಜಹಂಸ'ದ ಸಾಮ್ರಾಜ್ಞಿಯಾಗಿದ್ದರು. ಬರವಣಿಗೆ ಸಮಯದಲ್ಲಿ ಏಕಾಂತವಾದರೆ, ಸಾಮಾಜಿಕವಾಗಿ ಲೋಕಾಂತಪ್ರಿಯೆಯಾಗಿದ್ದರು. "ಅಪಾರವಾಗಿ ಪ್ರೀತಿಸುವ ಸಾಹಿತ್ಯಿಕ ಬಳಗದ ಸ್ನೇಹಿತೆಯಾಗಿದ್ದರು. ಗೀತಾ. ಅವರು ಹೋದಲೆಲ್ಲ ನಗು ತುಂಬಿರುತ್ತಿತ್ತು" ಎಂದು ಹಾ.ಮಾ.ನಾ. ನೆನೆದಿದ್ದರು. ಗೀತಾ ಬರೆದಂತೆ ಬದುಕಿದರು. ಬದುಕಿದಂತೆ ಬರೆದರು. ಧಾರವಾಡಕ್ಕೆ ಬರುತ್ತಿದ್ದ ಸಾಹಿತಿಗಳೆಲ್ಲ 'ರಾಜಹಂಸ'ದ ಗೀತಕ್ಕನ ಆತಿಥ್ಯವನ್ನು ಪಡದೇ ಹೋಗುತ್ತಿದ್ದರು. ಗೀತಾ ಹೆಣ್ಣಿನ ನೋವಿಗೆ ಮಿಡಿದರು. ಅವರ ಕೌಟುಂಬಿಕ, ಸಾಮಾಜಿಕ ಕತೆ ಕಾದಂಬರಿಗಳಲ್ಲಿ ಹೆಣ್ಣಿನ ಬದುಕಿನ ನೋವು-ನಲಿವುಗಳನ್ನು ಎಳೆಎಳೆಯಾಗಿ ಚಿತ್ರಿಸಿದ್ದಾರೆ.

ಗೀತಾ ಕುಲಕರ್ಣಿಯವರ ವಿವಾಹಪೂರ್ವದ ಹೆಸರು ಅಹಲ್ಯಾ. ಜನಿಸಿದ್ದು 1927ರ ಜುಲೈ ನಾಲ್ಕರಂದು. ತಂದೆ ದಕ್ಷಿಣ ಕನ್ನಡ ಜಿಲ್ಲೆಯ ಪಾವೂರಿನ ಕೆ. ಪಿ. ಆಳ್ವ, ತಾಯಿ ಕಮಲಾ. ಮನೆಯ ಮಾತು ತುಳು. ಚಿಕ್ಕ ವಯಸ್ಸಿನಲ್ಲೆ ತಾಯಿಯನ್ನು ಕಳೆದುಕೊಂಡು; ಮಂಗಳೂರು, ಪುತ್ತೂರು, ಉಡುಪಿ ಹೀಗೆ ಅಲ್ಲಷ್ಟು ಇಲ್ಲಷ್ಟು ವರ್ಷ ಅಲೆದಾಡಿ ಮೆಟ್ರಿಕ್ಯುಲೇಶನ್‌ವರೆಗೆ ಶಿಕ್ಷಣ ಪಡೆದರು. ಇವರ ಅಕ್ಕ ಲೀಲಾ ಕಾರಂತ ಮತ್ತು ಭಾವ ಶಿವರಾಮ ಕಾರಂತರ ಹತ್ತಿರವಿದ್ದು ಕಲಿತದ್ದು ಬಹಳ.

ಅಂದಿನ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯನ್ನು ಮೀರಿ ಅಹಲ್ಯಾ ಆಳ್ವ, ಧಾರವಾಡದ ಶೇ.ಗೋ ಕುಲಕರ್ಣಿಯವರನ್ನು ವಿವಾಹವಾದರು. ಕೌಟುಂಬಿಕ ಹೊಣೆಗಾರಿಕೆಯನ್ನು ನಿರ್ವಹಿಸುತ್ತಲೇ ಧಾರವಾಡ ಸಾಂಸ್ಕೃತಿಕ ಪರಿಸರದಲ್ಲಿ, ತಮ್ಮ ಅನುಭವಗಳಿಗೆ ಅಭಿವ್ಯಕ್ತಿಯ ಅವಕಾಶವನ್ನು ಕಲ್ಪಿಸಿಕೊಂಡರು, ಸಾಹಿತಿ ದ.ಬಾ. ಕುಲಕರ್ಣಿಯವರು ಗೀತಾ ಅವರು ಬರೆದ ಮೊದಲ ಕತೆಯನ್ನು ಮೆಚ್ಚಿಕೊಂಡರು. ದ.ಬಾ.ಕುಲಕರ್ಣಿಯವರು ಪ್ರಕಟಿಸಿದ 'ಆರತಿ' ಕಥಾ ಸಂಕಲನದಲ್ಲಿ ಮೊದಲ ಕತೆ 'ಅಂದು ಇಂದು' (1944) ಪ್ರಕಟಗೊಂಡಿತು. ಧಾರವಾಡದ ಸಾಮಾಜಿಕ ಪರಿಸರದಲ್ಲಿ ಅವರ ಅನುಭವ ಪ್ರಪಂಚ ವಿಶಾಲವಾಯಿತು, ತಾವು ಕಂಡು ಕೇಳಿದ ಘಟನೆಗಳನ್ನು ವಸ್ತುವಾಗಿಸಿಕೊಂಡು ಕತೆ, ಕಾದಂಬರಿಗಳಲ್ಲಿ ಚಿತ್ರಿಸಿದರು.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಗೀತಾ ಕುಲಕರ್ಣಿ ಕೃಷಿ ಮಾಡಿದ್ದಾರೆ. 'ತೇಲಿಹೋದ ಮೋಡ', 'ಮೌನ ಸಂಧಾನ', 'ಸುವರ್ಣಿಯ ಗ್ರೀನ್ ರೂಂ', 'ಚಿಪ್ಪಿನೊಳಗಣ ಮುತ್ತು', 'ಪಾತಾಳ', 'ಪ್ರಶ್ನೆಗೆ ಉತ್ತರ' ಇವು ಆರು ಕಥಾ ಸಂಕಲನಗಳು.

'ಕಂಬನಿ ಬರೆಸಿದ ಕೈ', 'ಸ್ವಪ್ನ ಮಂದಿರ', 'ಶೋಭನಾ', 'ದೀಪ ಮಿಂಚಿತು', 'ನೂಲ ಏಣಿ', 'ಸಂಬಂಧ', 'ಗರ್ಭ' ಏಳು ಕಾದಂಬರಿಗಳನ್ನು ಗೀತಾ ಕನ್ನಡಕ್ಕೆ ಕೊಟ್ಟಿದ್ದಾರೆ.

'ಕಿಟಕಿ ತೆರೆಯಿತು', 'ಪೊಳ್ಳುಮರ', 'ಕಲ್ಲುಗಳು', ಮೂರು ನಾಟಕ ಸಂಗ್ರಹಗಳು, 'ಹುರಿಗಾಳು' ಲಲಿತ ಪ್ರಬಂಧ ಸಂಗ್ರಹ. 'ಮಹರ್ಷಿಕರ್ವೆ', 'ತಿಮ್ಮಪ್ಪ ನಾಯಕ' ಈ ಜೀವನಚಿತ್ರಗಳನ್ನು ಗೀತಾ ಬರೆದಿದ್ದಾರೆ. ಮಕ್ಕಳ ಸಾಹಿತ್ಯಕ್ಕೂ ಅವರ ಕೊಡುಗೆ ಇದೆ. 'ಹೂಮನೆ', 'ನೇಜಿ ಗುಬ್ಬಚ್ಚಿ' ಇವು ಮಕ್ಕಳಿಗಾಗಿ ಬರೆದವುಗಳು. ಕಾರಂತ, ದ.ಬಾ.ಕುಲಕರ್ಣಿ, ಬ.ಕ., ಪಾ.ವೆಂ. ಆಚಾರ್ಯ ಮೊದಲಾದ ಹಿರಿಯ ಲೇಖಕರನ್ನು ಕುರಿತು ವ್ಯಕ್ತಿಚಿತ್ರಗಳನ್ನು ಗೀತಾ ಬರೆದಿದ್ದಾರೆ. ಲೇಖಕಿಯರ ಸಂಖ್ಯೆ ವಿರಳವಾಗಿದ್ದ ಕಾಲದಲ್ಲಿ ಗೀತಾ ಹೆಣ್ಣಿನ ಜೀವನದ ನೋವುಗಳನ್ನು ಚಿತ್ರಿಸುತ್ತಲೇ, ಸಾಂಪ್ರದಾಯಿಕ ವ್ಯವಸ್ಥೆಯಿಂದ ಅನಿವಾರ್ಯವಾಗಿ ಹೊರಬರುವ ಪಾತ್ರಗಳನ್ನು ಅವರು ಚಿತ್ರಿಸಿದರು.

'ತೇಲಿ ಹೋದ ಮೋಡಗಳು' ಸಂಕಲನದ ಕತೆಗಳು ದಾಂಪತ್ಯದಲ್ಲಿ ಕಾಣಿಸಿಕೊಳ್ಳುವ ವಿರಸ, ಕ್ರಮೇಣ ತಿಳುವಳಿಕೆಯಿಂದ ಕರಗಿ ಹೋಗುವುದನ್ನು ಚಿತ್ರಿಸುತ್ತದೆ. ಅದೇ ರೀತಿ 'ಮೌನ-ಸಂಧಾನ' ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ತಂದೆ-ತಾಯಿಯ ಪಾತ್ರವನ್ನು ಸಮರ್ಥಿಸುತ್ತದೆ. 'ಕಂಬನಿ ಬರೆಸಿದ ಕೈ' ಮೂರು ಕುಟುಂಬಗಳ ಕಥೆಯನ್ನೊಳಗೊಂಡಿದೆ. ಮಾನವೀಯ ಅಂತಃಕರಣದ ಹಿನ್ನೆಲೆಯಲ್ಲಿ ಈ ಕಾದಂಬರಿ ರೂಪುಗೊಂಡಿದೆ. 'ಸಂಬಂಧ' ಗಂಡು-ಹೆಣ್ಣಿನ ಸಂಬಂಧಗಳ ವಿವಿಧ ಆಯಾಮಗಳನ್ನು ಚಿತ್ರಿಸುತ್ತದೆ.

ಗೀತಾ ಕುಲಕರ್ಣಿ ಸೂಕ್ಷ್ಮ ಸಂವೇದನಶೀಲ ಲೇಖಕಿಯಾಗಿರುವುದರ ಜೊತೆಗೆ ಪ್ರಗತಿಪರ ಧೋರಣೆಯ, ಸ್ತ್ರೀಪರ ಚಿಂತನೆಯ ಲೇಖಕಿಯಾಗಿದ್ದರು. ಅವರಿಂದ ಸಾಹಿತ್ಯ ಲೋಕ ಇನ್ನೂ ಮಹತ್ತರ ಕೊಡುಗೆಯನ್ನು ನಿರೀಕ್ಷಿಸುತ್ತಿದ್ದಾಗಲೇ, 25-5-1986ರಲ್ಲಿ ಅವರು ವಿಧಿವಶರಾದರು. ಅವರಿಲ್ಲದ ಕನ್ನಡ ಸಾಂಸ್ಕೃತಿಕ ಲೋಕ ಮೌನವಾಗಿ ರೋದಿಸಿತು, ಧಾರವಾಡದ 'ರಾಜಹಂಸ' ಮೂಕವಾಯಿತು.

ಕರ್ನಾಟಕ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳಲ್ಲಿ ಇನ್ನಿತರ ಕೆಲವಾರು ಸಮಿತಿಗಳಲ್ಲಿ ಸದಸ್ಯೆಯಾಗಿದ್ದ ಗೀತಾ ಕುಲರ್ಣಿಯವರು ಕರ್ನಾಟಕದ ಪ್ರತಿಷ್ಠಿತ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ; ಸರ್ಕಾರದ ಸಗಟು ಪುಸ್ತಕ ಖರೀದಿ ಪ್ರಾಧಿಕಾರದ ಸದಸ್ಯರಾಗಿ, ಬೆಂಗಳೂರಿನ ಜ್ಞಾನ ಗಂಗೋತ್ರಿಯ ಸಂಪಾದಕೀಯ ಸದಸ್ಯೆಯಾಗಿ ಕಾರ್ಯನಿರ್ವಹಿಸಿದ್ದರು. ಮೌಲಿಕ ಕೃತಿಗಳಷ್ಟೇ ಪಠ್ಯವಾಗಿ ಆಯ್ಕೆಯಾಗುತ್ತಿದ್ದಂತಹ ಕಾಲದಲ್ಲಿ ಗೀತಾರವರು ಬರೆದ 'ಕಂಬನಿ ಒರೆಸಿದ ಕೈ' ಕಾದಂಬರಿ, ಬಿ.ಎಸ್‌ಸಿ.ಮತ್ತು ಬಿ.ಕಾಂ ತರಗತಿಗಳಿಗೆ; 'ಸಂಬಂಧ' ಕಾದಂಬರಿ, ಬಿ.ಎ.ತರಗತಿಗೆ; 'ದೀಪ ಮಿಂಚಿತು' ಕಾದಂಬರಿ ಪಿ.ಯು. ತರಗತಿಗೆ', ಹಾಗೂ 'ಮೌನ ಸಂಧಾನ' ಎಂಬ ಕಥಾ ಸಂಕಲನ, ಬಿ.ಎ. ತರಗತಿಗೆ ಪಠ್ಯ ಪುಸ್ತಕಗಳಾಗಿದ್ದುದು ಗಮನಾರ್ಹ ಸಂಗತಿ.

ಗೀತಾ ಕುಲಕರ್ಣಿಯವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಗೆ ರಾಜ್ಯ ಸಾಹಿತ್ಯ ಅಕಾಡೆಮಿ 1979ರಲ್ಲಿ ಗೌರವ ಪ್ರಶಸ್ತಿಯನ್ನಿತ್ತು ಸನ್ಮಾನಿಸಿತು.

———— * ————

ಸಂವೇದನಾಶೀಲ ಕಾದಂಬರಿಗಾರ್ತಿ ತ್ರಿವೇಣಿ

ಡಾ. ಎ.ಮಂಜುಳಾ ಶಿವನಾಥ್

ಪ್ರಗತಿಪರ ಧೋರಣೆಗಳನ್ನು ಪ್ರತಿಪಾದಿಸಿ ಬರೆಯುವವರಲ್ಲಿ ತ್ರಿವೇಣಿಯವರು ಮೊದಲಿಗರು. ಓದುಗವರ್ಗವನ್ನು ಅದರಲ್ಲೂ ಯುವಜನಾಂಗವನ್ನು ತನ್ನತ್ತ ಸೆಳೆಯುವ ಆಕರ್ಷಣೆ ತ್ರಿವೇಣಿಯವರ ಕಾದಂಬರಿ, ಹಾಗೂ ಸಣ್ಣ ಕಥೆಗಳಿಗಿದೆ. ಇವರ ಕೃತಿಗಳು ಓದುಗರಲ್ಲಿ ಚಲನಶೀಲತೆಯನ್ನು ಉಂಟುಮಾಡಿ, ಅಪಾರವಾದ ಯಶಸ್ಸನ್ನು ತ್ರಿವೇಣಿಯವರಿಗೆ ತಂದುಕೊಟ್ಟಿತು. ಅನೇಕ ಹಿರಿಯ ಲೇಖಕಿಯರಾದ ಶ್ಯಾಮಲಾದೇವಿ, ಜಯಲಕ್ಷ್ಮೀ ಶ್ರೀನಿವಾಸನ್, ಕೊಡಗಿನ ಗೌರಮ್ಮ ಮುಂತಾದವರಿಗಿಂತ ಭಿನ್ನವಾದ ಬರವಣಿಗೆಯ ಮೂಲಕ ಯಶಸ್ಸನ್ನು ಸಾಧಿಸಿದವರು ತ್ರಿವೇಣಿ.

ತ್ರಿವೇಣಿಯವರು ಸಣ್ಣಕತೆಗಳ ಮೂಲಕ ಸಾಹಿತ್ಯ ಪ್ರಪಂಚವನ್ನು ಪ್ರವೇಶಿಸಿದರು. ಅತ್ಯಂತ ಸಂಕೋಚದ ಸ್ವಭಾವದ ತ್ರಿವೇಣಿಯವರು ಕಥೆಗಳನ್ನು ಬರೆದು ಟ್ರಂಕಿನಲ್ಲಿ ಇಟ್ಟುಬಿಡುತ್ತಿದ್ದರಂತೆ. ಅವರ ತಾಯಿ ನೋಡಿ, ಓದಿ ಪತ್ರಿಕೆಗಳಿಗೆ ಕಳುಹಿಸೆಂದು ಹೇಳುತ್ತಿದ್ದರೆಂದು, ತ್ರಿವೇಣಿಯವರ ತಂಗಿ ಖ್ಯಾತ ಸಾಹಿತಿ ಆರ್ಯಾಂಬಪಟ್ಟಾಭಿಯವರು ಒಂದು ಕಡೆ ಹೇಳಿದ್ದಾರೆ. ಇವರ ಕಥೆಗಳಾಗಲಿ, ಕಾದಂಬರಿಗಳಾಗಲಿ ಸಾಮಾಜಿಕ, ಸಾಂಸಾರಿಕ ಸಮಸ್ಯೆಗಳನ್ನು ತೆಗೆದುಕೊಂಡು ಮನೋವೈಜ್ಞಾನಿಕ ರೀತಿಯಲ್ಲಿ ಚಿಂತಿಸಿ, ಆ ಎಳೆಯ ಮೂಲಕ ತಮ್ಮ ಕಾದಂಬರಿಗಳಿಗೆ ವಿದ್ಯುತ್ ಸ್ಪರ್ಶವನ್ನು ನೀಡಿ. ಓದುಗರ ಮನವನ್ನು ಬೆಳಗಿಸುತ್ತಿದ್ದರು. ಆದುದರಿಂದ ತ್ರಿವೇಣಿಯವರ ಕಾದಂಬರಿಗಳು ಅಂದಿಗೂ-ಇಂದಿಗೂ ಪ್ರಸ್ತುತವೆನಿಸುತ್ತವೆ.

ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ, ಮೂಢನಂಬಿಕೆಯ ವಿರುದ್ಧ, ಬರಹಗಾರ್ತಿಗೆ ಇರಬೇಕಾದ ಸೂಕ್ಷ್ಮ ಅವಲೋಕನಾ ಶಕ್ತಿ, ಸಂವೇದನಾಶೀಲತೆ, ಮಾನವೀಯ ನೆಲೆಗಟ್ಟಿನಲ್ಲಿ ಯೋಚಿಸುವ ಶಕ್ತಿ ಅವರದಾಗಿತ್ತು.

ಹೆಣ್ಣು ಹೊಸ್ತಿಲು ದಾಟಿ ಹೊರಗೆ ಹೋಗದೆ ನಾಲ್ಕು ಗೋಡೆಗಳ ಮಧ್ಯೆಯೇ ಇರಬೇಕು ಎಂಬ ಧೋರಣೆಯನ್ನು ಧಿಕ್ಕರಿಸಿ, ಸೂಕ್ಷ್ಮವಾಗಿ ಪ್ರಗತಿ ಪರ ವಿಚಾರಗಳೊಂದಿಗೆ ತಮ್ಮ ಕಥಾ ವಸ್ತುವಿನಲ್ಲಿ ದಿಟ್ಟವಾಗಿ ತಂದು ಪಾತ್ರಗಳನ್ನು ಮತ್ತು ಸಾಹಿತ್ಯವನ್ನು ಜೀವಂತ ಕಳೆಯಿಂದ ಇರುವಂತೆ ರೂಪಿಸುತ್ತಿದ್ದರು.

ತ್ರಿವೇಣಿಯವರು 1.9.1928 ರಂದು ಮಂಡ್ಯದಲ್ಲಿ ಜನಿಸಿದರು. ಇವರ ತಾಯಿ ಶ್ರೀಮತಿ ತಂಗಮ್ಮ, ತಂದೆ ಶ್ರೀಯುತ ಬಿ.ಎಂ. ಕೃಷ್ಣಸ್ವಾಮಿ ವೃತ್ತಿಯಲ್ಲಿ ವಕೀಲರು ಖ್ಯಾತ ಸಾಹಿತಿಗಳಾದ ಬಿ.ಎಂ. ಶ್ರೀಕಂಠಯ್ಯನವರ ತಮ್ಮ. ತ್ರಿವೇಣಿಯವರ ಜನ್ಮನಾಮ 'ಭಾಗೀರಥಿ'. ಮನೆಯಲ್ಲಿ ಪ್ರೀತಿಯಿಂದ ಕರೆಯುತ್ತಿದ್ದುದು 'ಅಂಚು' ಎಂದು. ಆದರೆ ಶಾಲೆಗೆ ಸೇರಿಸಿದಾಗ ಅಲ್ಲಿ ನೋಂದಾಯಿಸಿದ ಹೆಸರು 'ಅನಸೂಯ' ಎಂದು. ಮಂಡ್ಯದಲ್ಲಿ ಪ್ರೌಢಶಾಲೆಯ ವಿದ್ಯಾಭ್ಯಾಸ ಮುಗಿಸಿ ಮುಂದಿನ ವಿದ್ಯಾಭ್ಯಾಸವನ್ನು ತಮ್ಮ ಅಜ್ಜನ ಮನೆ ಮೈಸೂರಿನಲ್ಲಿ ಮುಂದುವರಿಸಿದರು.

ಮಹಾರಾಜ ಕಾಲೇಜಿನಲ್ಲಿ ಮನಃಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು 1947ರಲ್ಲಿ ಬಿ.ಎ. ಪದವೀಧರರಾದರು. ಸಿದ್ದೇಗೌಡ ಚಿನ್ನದ ಪದಕ ಹಾಗೂ ತಾತಯ್ಯ ಕ್ಯಾಷ್ ಬಹುಮಾನ ಇವರಿಗೆ ದೊರೆತಿದ್ದು ಇವರಿಗಿದ್ದ ಪ್ರತಿಭೆಯ ಸಂಕೇತ.

ಇವರ ಬದುಕಿನಲ್ಲಿ ಅತ್ಯಂತ ಗಾಢವಾಗಿ ಕಾಡಿದ ಸಮಸ್ಯೆ ಎಂದರೆ ಅನಾರೋಗ್ಯ. ಸದಾ ಉಬ್ಬಸಕಾಯಿಲೆ ಅವರನ್ನು ನೆರಳಿನಂತೆ ಜೊತೆಯಾಗಿ ಕಾಡುತ್ತಿತ್ತು. ಪ್ರಥಮವಾಗಿ ಮಂಡ್ಯದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ ಅವರು ಅನಾರೋಗ್ಯದ ಕಾರಣದಿಂದ ಶಿಕ್ಷಕ ವೃತ್ತಿಯನ್ನು ಬಿಟ್ಟರು. 1951ರಲ್ಲಿ ಇವರ ತಾಯಿಯ ಕಡೆಯ ಸಂಬಂಧಿಯಾದ ಎಸ್.ಎನ್. ಶಂಕರ್ ಅವರೊಂದಿಗೆ ಇವರ ವಿವಾಹವಾಯಿತು. ಶಂಕರ್ ಅವರು ತ್ರಿವೇಣಿಯವರಿಗಿಂತ ಕೇವಲ ಎರಡು ವರ್ಷ ದೊಡ್ಡವರೆಂದು ಮೊದಲು ಅವರ ತಂದೆ ತಾಯಿಗಳಿಗೆ ಈ ಸಂಬಂಧ ಅಷ್ಟಾಗಿ ಇಷ್ಟವಿರಲಿಲ್ಲ. ಆದರೆ ಮಹಾರಾಜ ಕಾಲೇಜಿನಲ್ಲಿ ಸಹಪಾಠಿಯಾಗಿದ್ದ ಶಂಕರ್ ಅನಸೂಯ ಅವರನ್ನೆ ವಿವಾಹವಾಗಲು ನಿರ್ಧರಿಸಿದ್ದರು. ತಂದೆತಾಯಿಯರನ್ನು ನಿಧಾನವಾಗಿ ಒಪ್ಪಿಸಿ ವಿವಾಹವಾದರು. ಮದುವೆಯಾದ ನಂತರ ಶಾರದಾವಿಲಾಸ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾದ ಎಸ್.ಎನ್. ಶಂಕರ್ ಅವರು ತ್ರಿವೇಣಿಯವರ ಬರವಣಿಗೆಗೆ ಚೇತನ ತುಂಬಿದರು. ಪತಿಯ ತುಂಬು ಪ್ರೋತ್ಸಾಹ ಅವರಿಗೆ ದೊರಕಿದ್ದು ಒಂದು ಅದೃಷ್ಟ. ಉಬ್ಬಸ–ಶೀತ–ನೆಗಡಿಯಿಂದ ಸದಾ ನರಳುತ್ತಿದ್ದ ತ್ರಿವೇಣಿಯವರು ತಮ್ಮ ಕಥೆ ಪಾತ್ರಗಳಲ್ಲೂ ಈ ಬಗ್ಗೆ ಬರೆದಿದ್ದಾರೆ. ಒಂದು ಕಥೆಯ ಪಾತ್ರ ಹೀಗೆ ಹೇಳುತ್ತದೆ. "ರಾತ್ರಿ ತಲೆದಿಂಬಿಗೆ ತಲೆ ಇಟ್ಟು ಸುಖವಾಗಿ ನಿದ್ರಿಸುವವರು ಎಷ್ಟು ಸುಖಿಗಳು" ಮತ್ತೊಂದು ಪಾತ್ರ ಹೀಗೆ ಹೇಳುತ್ತದೆ. "ನನಗೆ ನೋವಿಗೆ ಒಳಗಾಗದ ದಿನವೇ ಜ್ಞಾಪಕವಿಲ್ಲ" ಹೀಗೆ ಸದಾ ಅನಾರೋಗ್ಯದಿಂದ ಇರುತ್ತಿದ್ದ ಅನಸೂಯ ಸಹಜವಾಗಿ ಆಟದಿಂದ ದೂರವಾಗಿ ಪುಸ್ತಕಗಳ ಅಧ್ಯಯನ ಮತ್ತು ಬರವಣಿಗೆಯಲ್ಲಿ ತೃಪ್ತಿ ಕಾಣತೊಡಗಿದರು.

ಅನಸೂಯ ಅವರು ತ್ರಿವೇಣಿಯಾದದ್ದು ಒಂದು ವಿಶೇಷ. ಅನೇಕ ಸ್ವಾರಸ್ಯಕರ ಕತೆಗಳೂ ಇವೆ. ತ್ರಿವೇಣಿಯವರೇ ತಮ್ಮ ಪತ್ರದಲ್ಲಿ ತಿಳಿಸಿರುವಂತೆ, ಮಹಾತ್ಮ ಗಾಂಧೀಜಿಯವರ ಮರಣದ ನಂತರ, ಅವರ ಚಿತಾಭಸ್ಮವನ್ನು ತ್ರಿವೇಣಿ ಸಂಗಮದಲ್ಲಿ ಕದಡಿದರೆಂಬ ಒಂದು ಸುದ್ದಿಯನ್ನು ಅಂದಿನ ಪತ್ರಿಕೆಗಳಲ್ಲಿ ಪುನಃ ಪುನಃ ಓದಿದ ಪರಿಣಾಮ 'ತ್ರಿವೇಣಿ' ಹೆಸರು ಇಷ್ಟವಾಗಿ, ಅದನ್ನು ತಮ್ಮ ಕಾವ್ಯನಾಮವಾಗಿ ಇಟ್ಟುಕೊಂಡರೆಂದು ತಿಳಿಸಿದ್ದಾರೆ. ತ್ರಿವೇಣಿಯವರಿಗೆ ಕಪ್ಪಾದ ದಟ್ಟವಾದ, ಉದ್ದವಾದ ನೀಳ ಕೇಶರಾಶಿ ಇತ್ತು. ತ್ರಿವೇಣಿಯವರ ತಾಯಿ ನೀಳಕೇಶರಾಶಿಯನ್ನು ಒಪ್ಪವಾಗಿ ಬಾಚಿ ಎರಡು ಜಡೆ ಹೆಣೆಯುತ್ತಿದ್ದರಂತೆ. ಆಗ ಅವರ ಗೆಳತಿಯರು ಎರಡು ಜಡೆ ಬದಲಾಗಿ ಮೂರು ಜಡೆ ಹೆಣೆಯಬೇಕು ಎಂದು ರೇಗಿಸುತ್ತಿದ್ದರಂತೆ. ತ್ರಿವೇಣಿಯವರ ಗೆಳತಿಯೂ ಆಗಿದ್ದ ಎಂ.ಕೆ. ಇಂದಿರಾ ಕನ್ನಡ ಖ್ಯಾತ ಸಾಹಿತಿ, ಅವರ ಜಡೆಯ ಕುರಿತಾಗಿ ನಡೆದ ಚರ್ಚೆಯ ಸಂದರ್ಭದಲ್ಲಿ ತ್ರಿವೇಣಿ ಎಂಬ ಕಾವ್ಯನಾಮವನ್ನು ಸೂಚಿಸಿದರೆಂಬುದು ತಿಳಿದುಬರುತ್ತದೆ. ಬಹುಶಃ ಈ ಎರಡೂ ಕಾರಣಗಳೂ ಅವರಿಗೆ "ತ್ರಿವೇಣಿ" ಎಂಬ ಕಾವ್ಯನಾಮವನ್ನು ಇಟ್ಟುಕೊಳ್ಳಲು ಪ್ರೇರೇಪಿಸಿರಬಹುದಾದರೂ, ಅವರಿಗೆ ತಾವೇ ಇಟ್ಟುಕೊಂಡ ಈ ಕಾವ್ಯನಾಮ ಸಮಾಧಾನ ಕೊಟ್ಟಿರಲಿಲ್ಲವೆಂಬುದು ಅವರು ದಿನಾಂಕ 1.8.1957ರಲ್ಲಿ ಶ್ರೀ ಸುಬ್ರಹ್ಮಣ್ಯರವರಿಗೆ ಬರೆದ ಪತ್ರದಲ್ಲಿ ಬರೆದ "ನನ್ನ ಕಾವ್ಯನಾಮಕ್ಕಿಂತ ನನ್ನ ಹೆಸರೇ ಚೆನ್ನಾಗಿತ್ತು. ಆದರೆ ಕಾಲ ಕೈಮೀರಿದೆ" ಎಂಬ ಒಕ್ಕಣೆಯಿಂದ ತಿಳಿದುಬರುತ್ತದೆ. ಹೆಸರಿನ ಪುರಾಣ ಏನೇ ಇರಲಿ, ಈಕೆ ಕನ್ನಡ ಸಾರಸ್ವತ ಲೋಕಕ್ಕೆ ಅನನ್ಯವಾದ ಕೊಡುಗೆ ನೀಡಿ. ಪ್ರಾತಃಸ್ಮರಣೀಯರ ಪಟ್ಟಿಗೆ ಸೇರಿದ್ದಂತೂ ನಿಜ.

ತ್ರಿವೇಣಿಯುವರು ಸಾಹಿತ್ಯ ಪರಿಸರದಲ್ಲೇ ಬೆಳೆದವರು. ಕನ್ನಡ ಹೆಸರಾಂತ ಸಾಹಿತಿಗಳಾದ ಬಿ.ಎಂ. ಶ್ರೀಕಂಠಯ್ಯನವರು ತ್ರಿವೇಣಿಯವರ ದೊಡ್ಡಪ್ಪ. ಖ್ಯಾತ ಸಾಹಿತಿಗಳಾದ ಬಿ.ಸಿ. ರಾಮಚಂದ್ರ ಶರ್ಮ,

ಅಶ್ವತ್ಥ್, ಎನ್.ಎಸ್. ರಾವ್, ರಾಜಲಕ್ಷ್ಮೀ ಇವರೆಲ್ಲ ಹತ್ತಿರದ ಬಂಧುಗಳು. ಹಿರಿಯ ಖ್ಯಾತ ಕಾದಂಬರಿಗಾರ್ತಿ ಶ್ರೀಮತಿ ವಾಣಿ ಇವರ ಚಿಕ್ಕಮ್ಮ. ಇವರ ಇಡೀ ಕುಟುಂಬವೇ ಸರಸ್ವತಿಯ ಸಂಸಾರದ ಭಂಡಾರದಂತಿತ್ತು. ಸದಾ ಸಾಹಿತ್ಯದ ಚಿಂತನ ಮಂಥನಗಳನ್ನು ಕೇಳಿಸಿಕೊಂಡೇ ಬೆಳೆದವರು ತ್ರಿವೇಣಿ.

ತ್ರಿವೇಣಿಯವರಿಗೆ ಮೂರು ಆಸೆಗಳಿದ್ದವೆಂದು ಅವರ ತಂಗಿ, ಹಾಗೂ ಕಾದಂಬರಿಗಾರ್ತಿ ಆರ್ಯಾಂಭ ಪಟ್ಟಾಭಿ ಹೇಳುತ್ತಾರೆ. ಒಂದು ನವೀನವಾದ ಮನೆಯನ್ನು ಕಟ್ಟಿಸಬೇಕು. ಎರಡು ತಾವು ಬರೆದ ಕಾದಂಬರಿ ಚಲನಚಿತ್ರವಾಗಬೇಕು. ಮೂರನೆಯದು ವಿದೇಶ ಪ್ರವಾಸ ಮಾಡಬೇಕು ಎಂಬುದು. ಆದರೆ ಅವರು ಬದುಕಿದ್ದಾಗ ಯಾವುದೂ ನೆರವೇರಲಿಲ್ಲ. ಒಂದಲ್ಲ ಅವರ ಐದು ಕಾದಂಬರಿಗಳು ಚಲನಚಿತ್ರವಾಗಿ ಅಪಾರ ಯಶಸ್ಸನ್ನು ಗಳಿಸಿದವು. 'ಬೆಳ್ಳಿಮೋಡ', 'ಹಣ್ಣೆಲೆ ಚಿಗುರಿದಾಗ', 'ಕಂಕಣ' 'ಶರಪಂಜರ' ಮತ್ತು 'ಹೂವು-ಹಣ್ಣು'. 'ಬೆಕ್ಕಿನಕಣ್ಣು' ತೆಲುಗು ಮತ್ತು ಮಲೆಯಾಳಂಗಳಲ್ಲಿ ಚಲನಚಿತ್ರವಾಯಿತು. ಅಂದಿನ ಸಿನೆಮಾವಲಯದ ನಿರ್ದೇಶಕರು, ನಾಯಕರು ನಾಯಕಿಯರಿಗೆ ಒಳ್ಳೆ ಹೆಸರು, ಪ್ರತಿಷ್ಠೆ, ಪ್ರಶಸ್ತಿ, ಗೌರವವನ್ನು ತಂದುಕೊಟ್ಟ ಕಾದಂಬರಿಗಳು ಇವು.

ತುಂಬ ಸಂಕೋಚ ಸ್ವಭಾವದವರಾದ ತ್ರಿವೇಣಿಯವರು, ಯಾವುದೇ ಸಭೆ ಸಮಾರಭಗಳಿಗೆ ಹೋಗಿ ಭಾಷಣ ಮಾಡಲು ಹಿಂಜರಿಯುತ್ತಿದ್ದರು. 'ನಾನು ಎಷ್ಟು ಬೇಕಾದರೂ ಬರೆಯಬಲ್ಲೆ, ಆದರೆ ಭಾಷಣ ಮಾಡಲು ಹೆದರಿಕೆ' ಎಂದೇ ಮೊದಲು ಹೇಳುತ್ತಿದ್ದರಂತೆ. ಆದರೆ ಅವರ ಕಾದಂಬರಿಗಳು ಜನಪ್ರಿಯವಾದಂತೆಲ್ಲ ಓದುಗ ಅಭಿಮಾನಿಗಳನ್ನು ಕುರಿತು ಮಾತನ್ನಾಡುತ್ತಿದ್ದರು. ಪುರುಷ ಪ್ರಧಾನ ಸಮಾಜದ ವಿರುದ್ಧ ತೀವ್ರ ಪ್ರತಿಭಟಿಸಿದ್ದರು. ಮಹಿಳಾ ಸ್ಥಾನಮಾನವನ್ನು ಉನ್ನತೀಕರಿಸುವ ಕುರಿತು ಹೇಳುತ್ತಿದ್ದರು. ಅನೇಕ ಸಾಹಿತ್ಯ ಸಮಾವೇಶಗಳಲ್ಲಿ ಮಹಿಳಾ ಜಾಗೃತಿಯ ಬಗ್ಗೆ ಮಾತನ್ನಾಡುತ್ತಿದ್ದರು.

ಜೀವನದಲ್ಲಿ ಸುಖ-ಸಂತೋಷಗಳೆರಡೂ ತ್ರಿವೇಣಿಯವರ ಪಾಲಿಗಿತ್ತು. ಅತ್ಯಂತ ಪ್ರೀತಿಸುವ ಒಲವಿನ ಪತಿ, ತಮ್ಮದೇ ಆದ ಮನೆ, ಓದುಗ ಅಭಿಮಾನಿವೃಂದ. ಅವರನ್ನು ತುಂಬ ಕಾಡಿದ ಕೊರಗು ಎಂದರೆ ಮಕ್ಕಳಿಲ್ಲವೆಂಬುದು. ಮೊದಲೇ ಅನಾರೋಗ್ಯದಿಂದ ದುರ್ಬಲರಾದ ತ್ರಿವೇಣಿಯವರು ಮೂರು ಬಾರಿ ಗರ್ಭ ಧರಿಸಿದರಾದರೂ ನಿರೀಕ್ಷಿಸಿದ ಅತಿಥಿ ಬರಲಿಲ್ಲ. ಇದರಿಂದ ಬಹಳ ದುಃಖಕ್ಕೆ ಒಳಗಾದ ಅವರು ತಮ್ಮ ಸ್ವಾನುಭವವನ್ನೇ ಅತ್ಯಂತ ಹೃದಯಸ್ಪರ್ಶಿಯಾಗಿ 'ಅತಿಥಿ ಬರಲಿಲ್ಲ' ಎಂಬ ಕತೆಯಾಗಿಸಿ ಓದುಗರಿಗೆ ನೀಡಿದ್ದು, ಓದುಗರು ಸಹ ಅವರ ದುಃಖದಲ್ಲಿ ಪಾಲ್ಗೊಳ್ಳುವ ರೀತಿಯಲ್ಲಿದೆ. ಅಂತೂ ಕಡೆಗೊಮ್ಮೆ ಅತಿಥಿಯ ಆಗಮನವೇನೋ ಆಯಿತು. ಆದರೆ ತೀರ ಅನಾರೋಗ್ಯಕ್ಕೆ ಒಳಗಾಗಿ ತ್ರಿವೇಣಿಯವರು 29-7-1963ರಂದು ವಿಧಿವಶರಾದರು.

ತ್ರಿವೇಣಿಯವರು 1953ರಿಂದ 1963ರ ವರೆಗೆ ಅಂದರೆ ಒಂದು ದಶಕದಲ್ಲಿ ಮೂರು ಕಥಾ ಸಂಕಲನ, ಇಪ್ಪತ್ತು ಕಾದಂಬರಿ, ಒಂದು ಅಪೂರ್ಣ ಕಾದಂಬರಿಗಳನ್ನು ಬರೆದಿದ್ದಾರೆ. ಈ ಅಪೂರ್ಣ ಕಾದಂಬರಿಯನ್ನು ಮುಂದೆ ಅವರ ಮಗಳು ಪೂರ್ಣಗೊಳಿಸುತ್ತಾರೆ. ತ್ರಿವೇಣಿಯವರು ಬರೆಯಲು ಕುಳಿತುಕೊಂಡರೆ ಒಂದೇ ಸಮನೆ 2 ರಿಂದ 8 ಗಂಟೆಗಳು ಬರೆಯುತ್ತಿದ್ದರಂತೆ. ಇಲ್ಲದಿದ್ದರೆ ದಿನಗಟ್ಟಳೆ ಬರೆಯುತ್ತಲೇ ಇರಲಿಲ್ಲವೆಂದು ಅವರ ಪತಿ ಎಸ್.ಎನ್.ಶಂಕರ್ ಒಂದು ಕಡೆ ಹೇಳಿದ್ದಾರೆ. ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ತ್ರಿವೇಣಿಯವರು ಸಣ್ಣಕಥೆಗಳು-ಕಾದಂಬರಿ ಕ್ಷೇತ್ರವನ್ನು ಬಿಟ್ಟರೆ ಬೇರೆ ಪ್ರಕಾರಗಳಲ್ಲಿ ಕೈಯಾಡಿಸಹೋಗಲಿಲ್ಲ.

ಅವರ ಮೂರು ಕಥಾ ಸಂಕಲನಗಳಾದ ಹೆಂಡತಿಯ ಹೆಸರು, ಎರಡು ಮನಸ್ಸು ಹಾಗೂ ಸಮಸ್ಯೆಯ ಮಗು. ಇವುಗಳಲ್ಲಿ ತ್ರಿವೇಣಿಯವರು ಸಮಸ್ಯೆಯನ್ನು ತೆಗೆದುಕೊಂಡು ಕಥೆ ಕಟ್ಟುವ ರೀತಿ, ಸಾಮಾಜಿಕ ಸಮಸ್ಯೆಗಳನ್ನು ಮನೋವೈಜ್ಞಾನಿಕ ರೀತಿಯಲ್ಲಿ ನೋಡಿ, ಮಹಿಳಾ ಒಳತುಮುಲಗಳನ್ನು ನಿರೂಪಿಸುವ ತಂತ್ರ ಮೆಚ್ಚುವಂಥದ್ದು. ಆ ಒಳ ಹರಿವುಗಳ ಅನಾವರಣ ಮನಃಶಾಸ್ತ್ರವನ್ನು ಅಧ್ಯಯನ ಮಾಡಿದ ತ್ರಿವೇಣಿಯವರಿಂದ ಮಾತ್ರ ಸಾಧ್ಯ ಎಂದೆನಿಸದಿರದು.

"ಮನಃಶಾಸ್ತ್ರ ಮನುಷ್ಯನ ಅಧ್ಯಯನದ ವಿಶಿಷ್ಟ ಕ್ಷೇತ್ರವಾಗುವ ಮುನ್ನವೇ ಸಾಹಿತ್ಯ ರಚನೆ ಮಾಡಿದ ಕವಿಗಳು, ಮನುಷ್ಯನ ಮನಸ್ಸನ್ನು ಅರ್ಥ ಮಾಡಿಕೊಂಡಿದ್ದರು. ಸಾಹಿತ್ಯ ಕೃತಿಯಲ್ಲಿ ಪಾತ್ರಗಳ ಸ್ವಭಾವ ನಡೆನುಡಿಯನ್ನು ಜೀವನವನ್ನು ಎದುರಿಸುವ ಅಥವಾ ಎದುರಿಸಲು ಹಿಂಜರಿಯುವ ರೀತಿಯಲ್ಲಿ ಪ್ರಕಟವಾಗಬೇಕು ಎಂಬುದು ನೆನಪಿಡಬೇಕಾದ ಅಂಶ. ಮನಃಶಾಸ್ತ್ರವನ್ನು ಕ್ರಿಯೆಯಲ್ಲಿ ಅರಗಿಸಿಕೊಳ್ಳಲು ಶಕ್ತರಾದಾಗ ಯಶಸ್ವಿಯಾಗುತ್ತದೆ. ತ್ರಿವೇಣಿಯರು ಬೆಕ್ಕಿನಕಣ್ಣು, ಶರಪಂಜರ ಇಂತಹ ಕಾದಂಬರಿಗಳಲ್ಲಿ–ಈ ಅಭಿಪ್ರಾಯ ಸಮಂಜಸವೆನಿಸುತ್ತದೆ" ಎಂದು ಎಲ್.ಎಸ್. ಶೇಷಗಿರಿರಾವ್ ಅವರು ಹೊಸಗನ್ನಡ ಸಾಹಿತ್ಯರೂಪಗಳು ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.

ತ್ರಿವೇಣಿಯವರು ಸಣ್ಣಕಥೆಗಳ ಮೂಲಕ ಸಾಹಿತ್ಯ ಕ್ಷೇತ್ರ ಪ್ರವೇಶಿಸಿದರು. ಅವರಿಗೆ ಒಗ್ಗಿಕೊಂಡದ್ದು ಮಾತ್ರ ಕಾದಂಬರಿ ಕ್ಷೇತ್ರ ಇವರು ಮೊಟ್ಟ ಮೊದಲು ಬರೆದ ಕಾದಂಬರಿ 'ಅಪಸ್ವರ'. ಇದನ್ನು ಪ್ರಕಾಶಕರೊಬ್ಬರು ಪ್ರಕಟಿಸುವುದಾಗಿ ಹೇಳಿ ತೆಗೆದುಕೊಂಡು ಹೋಗಿ ಹಲವಾರು ತಿಂಗಳು ಕಳೆದರೂ ಯಾವ ಉತ್ತರವನ್ನೂ ಕೊಡದೆ ವಾಪಸ್ಸು ಕಳುಹಿಸಿದರಂತೆ. ಮತ್ತೊಬ್ಬ ಪ್ರಕಾಶಕ ಆರು ತಿಂಗಳು ತಮ್ಮಲ್ಲಿ ಇಟ್ಟುಕೊಂಡು ಓದಲು ಸಮಯವಿಲ್ಲವೆಂದು ಹಿಂತಿರುಗಿಸಿದರಂತೆ. ಎರಡು ವರ್ಷಗಳ ಕಾಲ ಹಸ್ತಪ್ರತಿಯನ್ನು ತಮ್ಮಲ್ಲಿ ಇಟ್ಟುಕೊಂಡಿದ್ದರಂತೆ. ಅದನ್ನು ನೋಡಿದಾಗ ಬಹಳ ಹಸ್ತಪ್ರತಿಯನ್ನು ಹರಿದು ಬಿಸುಡುವಷ್ಟು ನಿರಾಶೆಯಾಗುತ್ತಿತ್ತೆಂದು ಒಂದು ಕಡೆ ಹೇಳಿಕೊಂಡಿದ್ದಾರೆ. ಕನ್ನಡಿಗರ ಭಾಗ್ಯ ಎನ್ನುವಂತೆ ಕಡಿಮೆ ಬೆಲೆಯಲ್ಲಿ ಪ್ರಕಟಿಸುವ ಸಾಹಸ ಮಾಡಿದ ವಾಹಿನಿ ಪ್ರಕಾಶನ 'ಅಪಸ್ವರ' ಕಾದಂಬರಿಯನ್ನು ಪ್ರಕಟಿಸಿತು. ಮೊಟ್ಟ ಮೊದಲು 1949–50ರಲ್ಲಿ ಬರೆದ ಕಾದಂಬರಿ ಅಪಸ್ವರ. ಆದರೆ ಮೊದಲು ಪ್ರಕಟವಾಗಿ ಓದುಗರ ಕೈತಲುಪಿದ್ದು 'ಹೂವು–ಹಣ್ಣು' ಕಾದಂಬರಿ. 'ಅಪಸ್ವರ' ಪ್ರಕಟವಾದ ಮೂರು ವಾರದಲ್ಲೆ ಎಲ್ಲ ಪ್ರತಿಗಳು ಮಾರಾಟವಾಯಿತು. 'ಸೋತುಗೆದ್ದವಳು' ಮೂರನೇ ಕಾದಂಬರಿ, ನಾಲ್ಕನೆಯದು 'ಬೆಕ್ಕಿನಕಣ್ಣು'. 'ಬೆಕ್ಕಿನಕಣ್ಣು' ಓದುಗರಲ್ಲಿ ವಿದ್ಯುತ್ ಸಂಚಾರವನ್ನು ಉಂಟುಮಾಡಿತು. ಪ್ರಕಾಶಕರು ತ್ರಿವೇಣಿಯವರ ಮನೆಗೆ ಓಡಾಡಲು ಪ್ರಾರಂಭಿಸಿದರು, ಅನೇಕ ಪ್ರಕಾಶಕರಿಗೆ ನಿರಾಶೆ ಕೂಡ ಆಯಿತು. ತ್ರಿವೇಣಿಯವರೆ ಒಂದು ಕಡೆ ಹೇಳುವಂತೆ, "ಪ್ರಕಾಶಕರೆಲ್ಲರ ಆಸೆ ಪೂರೈಸಿದ್ದರೆ ಹತ್ತು ವರ್ಷಗಳಲ್ಲಿ ನಾನು ಐವತ್ತು ಕಾದಂಬರಿಗಳನ್ನು ಬರೆಯಬೇಕಿತ್ತು" ಎಂದಿದ್ದಾರೆ.

ತ್ರಿವೇಣಿಯವರು ಮಹಿಳಾ ಧ್ವನಿಯಾಗಿ ಲಿಂಗ–ಪಕ್ಷಪಾತವಿಲ್ಲದೆ ತಮ್ಮ ಕಾದಂಬರಿಗಳಲ್ಲಿ ಪಾತ್ರಗಳನ್ನು ರೂಪಿಸಿದ್ದಾರೆ. ಸಾಮಾಜಿಕ ಸಮಸ್ಯೆಗಳನ್ನು, ಸಾಂಸಾರಿಕ ಜಂಜಾಟಗಳ ಒಳ ಹರಿವುಗಳನ್ನು ಮಹಿಳಾ ಸಂಕಷ್ಟಗಳನ್ನು. ಮಾನಸಿಕ ನೆಲೆಯಲ್ಲಿ ಅತ್ಯದ್ಭುತವಾಗಿ ಚಿತ್ರಿಸಿದ್ದಾರೆ. ಅವರ ಪ್ರಥಮ ಕಾದಂಬರಿ 'ಹೂವು–ಹಣ್ಣು,' ಅನಿವಾರ್ಯ ಕಾರಣಗಳಿಂದ ವೇಶ್ಯಾವೃತ್ತಿಯನ್ನು ನಡೆಸಬೇಕಾದ ಒಂದು ಹೆಣ್ಣಿನ ದಾರುಣ ಕತೆಯನ್ನು ಚಿತ್ರಿಸುವ ಕಾದಂಬರಿ. 'ತಾಯಿ' ಎಂಬ ಪದದ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ. ತಾಯಿ ಕೂಲಿಯವಳಾಗಲೀ, ವೇಶ್ಯೆಯಾಗಲೀ ಅಥವಾ ಗೃಹಿಣಿಯಾಗಲೀ ತಾಯಿ ತಾಯಿಯೇ. ಅವಳ ಅಂತರಂಗದ ಒಳ ಮನಸ್ಸನ್ನು ಚಿತ್ರಿಸಿರುವ ತ್ರಿವೇಣಿಯವರ ತಾಯಿಯಾಗುವ ಹಂಬಲ ಇದರಲ್ಲಿ ಮನೋಜ್ಞವಾಗಿ ಮೂಡಿಬಂದಂತಿದೆ. ಇದರಲ್ಲಿ ತಾಯಿ ಮಗಳ ಸಂಬಂಧವನ್ನು ಎಳೆಎಳೆಯಾಗಿ ನವಿರು ನವಿರಾಗಿ ಬಿಡಿಸುವ ರೀತಿ ಅನನ್ಯವಾದುದು.

ಅಪಸ್ವರ–ಅಪಜಯ ಇವೆರಡು ಸಾಮಾಜಿಕ ಸಮಸ್ಯೆಯನ್ನು ನಿರೂಪಿಸುವ ಕಾದಂಬರಿಗಳು. ಮಹಿಳೆ ತನ್ನ ಪರಿಸರದ ಮೂಲಕ ಯಾವುದೇ ಸಮಸ್ಯೆ ಬಂದರೂ ತನ್ನ ಯೋಚನಾಶಕ್ತಿ, ಬುದ್ಧಿಶಕ್ತಿಯಿಂದ ಸ್ವಾವಲಂಬಿಯಾಗಿ, ಸ್ವಾಭಿಮಾನದಿಂದ ಬದುಕಬೇಕೆಂದಾಗ ಅದು ಈಡೇರದೆ ಪರಾವಲಂಬನೆ ಅನಿವಾರ್ಯವಾದಾಗ ಅವಳಿಗಾಗುವ ನೋವು, ಹಿಂಸೆ ಏನೆಂಬುದನ್ನು ಇಲ್ಲಿ ನೋಡಬಹುದು. ಮದುವೆಯೊಂದೆ ಜೀವನದ ಗುರಿಯಲ್ಲ. ಅದರಾಚೆಯೂ ಇನ್ನೂ ಸಾಧಿಸುವುದು ಇದೆ ಎಂಬುದನ್ನು ತಮ್ಮ ಈ ಕಾದಂಬರಿಯ ಮೂಲಕ ತಿಳಿಸಿದ್ದಾರೆ.

ತ್ರಿವೇಣಿಯವರ 'ಕಂಕಣ' ಮತ್ತು 'ಮುಕ್ತ' ಕಾದಂಬರಿಗಳಲ್ಲಿ ಅವಿವಾಹಿತ ಯುವತಿಯರು ತಮ್ಮ ಭವಿಷ್ಯದ ಬಗ್ಗೆ ಕಟ್ಟುವ ಕನಸುಗಳು, ತಮ್ಮ ಸಂಸಾರದ ಸಮಸ್ಯೆಗಳು, ಮಾನಸಿಕ ತೊಳಲಾಟಗಳು, ಪ್ರೀತಿ-ಪ್ರೇಮ-ವಿವಾಹದ ಬಗ್ಗೆ ಅವರಿಗಿರುವ ಅನಿಸಿಕೆಗಳು ಈ ಎಲ್ಲವನ್ನು ಚಿತ್ರಿಸಲಾಗಿದೆ.

'ಗೃಹಿಣಿಯ ಜೀವನವೇ ಹೆಣ್ಣಿನ ಆದರ್ಶ' ಎಂಬ ರೀತಿಯಲ್ಲೂ ತ್ರಿವೇಣಿಯವರು ಕಾದಂಬರಿಗಳನ್ನು ಬರೆದಿದ್ದಾರೆ. ಸಂಸಾರ, ಸಂಸಾರದ ನೋವು, ನಲಿವು, ದಾಂಪತ್ಯದ ಸಂಬಂಧಗಳ ಚಿತ್ರಣ ಇವೆಲ್ಲವನ್ನು ವಸಂತಗಾನ, ಬಾನು ಬೆಳಗಿತು, ಅವಳ ಮನೆ, ಹೃದಯಗೀತೆ, ಕಾದಂಬರಿಗಳಲ್ಲಿ ಸಂಸಾರದ ಒಲವು ನಲಿವುಗಳು ನಿರೂಪಿತವಾಗಿವೆ.

ಮತ್ತೊಂದು ಸಾಂಸಾರಿಕ ಕಾದಂಬರಿ 'ಕೀಲುಗೊಂಬೆ'. ಇದರಲ್ಲಿ ಹೆಣ್ಣು ತನ್ನ ಪತಿಯಿಂದಲೇ ಯಾವ ರೀತಿಯಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಾಳೆ ಎಂಬುದನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಒಬ್ಬ ಶಿಕ್ಷಕನಿಗೆ ಸೀತಾ ಎಂಬ ಬಾಲಕಿಯನ್ನು ಕೊಟ್ಟು ಮದುವೆ ಮಾಡುತ್ತಾರೆ, ಅವಳ ಕೈ ಹಿಡಿದ ಹುಡುಗ ವಿದ್ಯಾವಂತನಾದರೂ ಅವನು ಬೆಳೆದ ಪರಿಸರ ಅವನಿಗೆ ಸಂಯಮ, ವಿವೇಕಗಳನ್ನು ಕಲಿಸಿರುವುದಿಲ್ಲ. ಹೆಣ್ಣೆಂದರೆ ಸಂಬಳವಿಲ್ಲದೆ ದುಡಿಯುವ, ಕೇಳಿದಾಗ ಕಾಮತೃಷೆಯನ್ನು ನೀಗಿಸುವ ಮಕ್ಕಳನ್ನು ಹೆರುವ ಯಂತ್ರವೆಂದೇ ಅವನ ಭಾವನೆ. ಇದರಿಂದ ಸೀತೆ ಪ್ರತಿದಿನ ಹಿಂಸೆ ಅನುಭವಿಸುತ್ತಾಳೆ. ಮೇಲೆ ಮೇಲೆ ಗರ್ಭಪಾತವಾಗಿ ತೀರ ಅನಾರೋಗ್ಯಕ್ಕೆ ಒಳಗಾಗುತ್ತಾಳೆ. ಕೊನೆಯಲ್ಲಿ ಉಳಿಯುವ ಒಂದು ಗಂಡು ಮಗು ಉಳಿದು ದೊಡ್ಡವನಾದ ಮೇಲೆ ತನ್ನ ತಾಯಿಗೆ ತಂದೆಯು ಕೊಡುವ ಹಿಂಸೆಯನ್ನು ಪ್ರತಿಭಟಿಸುತ್ತಾನೆ. ತಂದೆ ಮಗನ ಘರ್ಷಣೆಯನ್ನು ನಿಲ್ಲಿಸಲು ಆಗದಷ್ಟು ಶಕ್ತಿ ಕುಂದಿದ ಸೀತಾ ಸಾವನ್ನಪ್ಪುತ್ತಾಳೆ. ಸೀತಾ ಆಸ್ಪತ್ರೆಗೆ ಸೇರಿದಾಗ ಅನೇಕ ಮಹಿಳೆಯರ ಪರಿಚಯ ಮಾಡಿಕೊಡುತ್ತಾರೆ. ಅವರೆಲ್ಲ ಒಂದಲ್ಲ ಒಂದು ಬಗೆಯಲ್ಲಿ ಶೋಷಣೆಗೆ ಒಳಗಾದವರೇ ಆಗಿರುತ್ತಾರೆ. ಇದರ ಮೂಲಕ ಸ್ವತಃ ಪತಿಯಿಂದಲೇ ಮಹಿಳೆ ಹೇಗೆ ಶೋಷಿತಳಾಗುತ್ತಾಳೆ ಎಂಬುದನ್ನೂ ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯ ಹಾಗೂ ಶಿಕ್ಷಣ ದೊರೆಯಬೇಕು ಎಂಬುದನ್ನೂ ಓದುಗರಿಗೆ ಮನವರಿಕೆ ಮಾಡಿಕೊಡಲಾಗಿದೆ.

'ಮೊದಲ ಹೆಜ್ಜೆ' ಮಹಿಳೆಗೆ ಎದುರಾಗುವ ಸಮಸ್ಯೆಯ ಇನ್ನೊಂದು ಮುಖ. ಕಪ್ಪು ಬಣ್ಣ ಹೊತ್ತು ಹುಟ್ಟುವ ಹೆಣ್ಣು ಮಗುವೊಂದು ತಂದೆ-ತಾಯಿಗೆ ಬೇಡದ ಮಗುವಾಗಿ ಎಲ್ಲರಿಂದಲೂ ತಿರಸ್ಕಾರ, ತಾತ್ಸಾರಕ್ಕೆ ಒಳಗಾಗುತ್ತದೆ. ಇವಳ ನಂತರ ಹುಟ್ಟಿದ ತಮ್ಮ, ತಂಗಿಯರು ತಂದೆ, ತಾಯಿಯ ಪ್ರೀತಿ ಪಡೆದು ಸಕ್ಕರೆ ಅಚ್ಚುಗಳಂತೆ ಬೆಳೆಯುತ್ತಾರೆ. ಕಪ್ಪೆಂಬ ಕಾರಣಕ್ಕೆ ಕಪ್ಪಾದ ಗಂಡು ಒಪ್ಪದಿದ್ದಾಗ ವಿಧಿಯಿಲ್ಲದೆ ಅವಳ ತಂದೆ ತಾಯಿ ತಂಗಿಯ ಮದುವೆ ಮಾಡಿಬಿಡುತ್ತಾರೆ. ತಂಗಿಯ ಬಾಣಂತನಕ್ಕೆ ಹೋದ ಸಮಯದಲ್ಲಿ ಅವರೀರ್ವರ ಪ್ರೇಮ ಸಲ್ಲಾಪವನ್ನು ನೋಡುತ್ತಾ ನೋಡುತ್ತಾ ಇವಳ ಭಾವನೆಗಳು ಗರಿಗೆದರುತ್ತವೆ. ಇದಕ್ಕಾಗಿ ಕಾದವನಂತೆ, ಮೊದಲೆ ಪ್ರೇಮದಿಂದ ಭಗ್ನಗೊಂಡ, ಅದನ್ನು ಸೇಡಂತೆ ತೀರಿಸಿಕೊಳ್ಳಲು ಕಾದಿದ್ದ ಪಕ್ಕದ ಮನೆಯ ಹುಡುಗನ ಪ್ರೇಮದ ಬಲೆಗೆ ಬಿದ್ದು ಗರ್ಭವತಿಯಾಗುತ್ತಾಳೆ. ಹೆರಿಗೆಯಾದ ನಂತರ ಕೂಸನ್ನು ಕೊಂದು ಜೈಲು ಸೇರುತ್ತಾಳೆ.

ಜೈಲಿನಲ್ಲಿ ಅನೇಕ ಮಹಿಳೆಯರ ಪರಿಚಯವಾಗುತ್ತದೆ. ಕಳ್ಳತನ ಮಾಡಿದವರು, ಕಳ್ಳಭಟ್ಟಿ ತಯಾರಿಸುವಲ್ಲಿ ಸಿಕ್ಕಿ ಬಿದ್ದವರು, ವೇಶ್ಯಾವೃತ್ತಿ ಮಾಡುವಾಗ ಸಿಕ್ಕಿಬಿದ್ದವರು, ಕೊಲೆ ಮಾಡಿದವರು ಇತ್ಯಾದಿ. ಆದರೆ ಇವರೆಲ್ಲ ಪುರುಷ ಪ್ರಧಾನ ಸಮಾಜದಲ್ಲಿ ವಿಧಿಯಿಲ್ಲದೆ ಅಥವಾ ಸಂದರ್ಭಕ್ಕೆ ಸಿಲುಕಿ ಅಪರಾಧವನ್ನು ಮಾಡಿದವರಾಗಿರುತ್ತಾರೆ. ಲೇಖಕಿ ಪಾತ್ರದ ಮೂಲಕ ಹೇಳಿಸುವ ಒಂದು ಮಾತು ನಿತ್ಯ ಸತ್ಯವಾಗಿದೆ. "ನಾವೇನೋ ಸಣ್ಣ-ಪುಟ್ಟ ಅಪರಾಧವನ್ನು ಮಾಡಿ ಜೈಲಿಗೆ ಬಂದಿದ್ದೇವೆ, ಆದರೆ ದೊಡ್ಡ ದೊಡ್ಡ ಅಪರಾಧವನ್ನು ದೊಡ್ಡ ದೊಡ್ಡ ಸ್ಥಾನದಲ್ಲಿದ್ದು ತಪ್ಪು ಮಾಡಿದವರು ಹೊರಗೆ ಇದ್ದಾರೆ, ಅವರಿಗೆ ಯಾವ ಶಿಕ್ಷೆಯಿಲ್ಲ. ನಮ್ಮಂಥ ಬಡಪಾಯಿಗಳಿಗೆ ಈ ಶಿಕ್ಷೆ".

ಜೈಲಿನ ಹೊರಗೆ ಮನುಷ್ಯರನ್ನು ದ್ವೇಷಿಸಿತೊಡಗಿದ್ದ ನಾಯಕಿ, ಜೈಲಿನಲ್ಲಿ ಬದುಕನ್ನು ಪ್ರೀತಿಸುವುದನ್ನು ಕಲಿಯುತ್ತಾಳೆ. ಅದು ಒಬ್ಬ ಭಿಕ್ಷುಕಿಯ ಮೂಲಕ. ಆ ಭಿಕ್ಷುಕಿ ಗರ್ಭಿಣಿಯಾಗಿ ಹೆರಲು ಜಾಗವಿಲ್ಲದೆ ಬೇಕೆಂದೇ ಅಪರಾಧ ಮಾಡಿ ಜೈಲಿಗೆ ಬಂದಿರುತ್ತಾಳೆ. ಆಗ ನಾಯಕಿಗೆ 'ಅಯ್ಯೋ ನಾನು ನನ್ನ ಮಗುವನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡದೆ ಕೊಂದೆನಲ್ಲ' ಎಂದು ಪಶ್ಚಾತ್ತಾಪವಾಗುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಅಂಶ, 'ಪುರುಷ ತನಗೆ ಬೇಕಾದಾಗ ಮಹಿಳೆಯನ್ನು ಉಪಯೋಗಿಸಿಕೊಂಡು. ಬೇಡವಾದಾಗ ಹೇಗೆ ಎಸೆಯುತ್ತಾನೆ' ಎಂಬುದು. ತಾನು ಸುಂದರನಾಗಿಲ್ಲದಿದ್ದರು, ಕಪ್ಪಾದರೂ ತನಗೆ ಮಾತ್ರ ಸುಂದರಿಯಾದ ಹೆಣ್ಣು ಬೇಕೆಂದು ಬಯಸುವುದು. "ತನ್ನ ಕೆಲಸವಾಗುವವರೆಗೆ ಗಂಡಸು ಹೆಣ್ಣಿನ ದಾಸ. ಅನಂತರ ತನಗೂ ಅವಳಿಗೂ ಏನೇನೂ ಸಂಬಂಧವಿಲ್ಲದಂತೆ ವರ್ತಿಸುತ್ತಾನೆ. ಗಂಡಸರು ಬೆಂಕಿಯ ಹಾಗೆ, ಅವರನ್ನು ಮುಟ್ಟಿದ್ದರೆ ಕೈ ಸುಡುತ್ತದೆ. ಸುಟ್ಟ ಗಾಯದ ಕಲೆ ಸಾಯುವವರೆಗೆ ಮಾಸುವುದಿಲ್ಲ." ಇಂತಹ ಮಾತುಗಳಿಂದ ತ್ರಿವೇಣಿಯವರು ಹೆಣ್ಣು-ಗಂಡಿನ ಸ್ಥಾನಮಾನದಲ್ಲಿನ ತಾರತಮ್ಯವನ್ನು ಸಮಾಜದ ಗಮನಕ್ಕೆ ತರುತ್ತಾರೆ.

'ಬೆಳ್ಳಿಮೋಡ' ಕಾದಂಬರಿ ಚಲನಚಿತ್ರವಾಗಿ ಸಿನಿಮಾ ಮಾಧ್ಯಮವನ್ನೇ ಎತ್ತರಕ್ಕೇರಿಸಿದ ಕೀರ್ತಿ ಈ ಚಲನಚಿತ್ರಕ್ಕೆ ಸಲ್ಲುತ್ತದೆ. ಇದು ಕಾದಂಬರಿಯೊಳಗಿನ ಗಟ್ಟಿತನವನ್ನು ತೋರಿಸುತ್ತದೆ. ಕಾಫಿ ಪ್ಲಾಂಟರ್ ಒಬ್ಬಳೇ ಮಗಳು ನಾಯಕಿ, ಅವಳನ್ನು ಮದುವೆಯಾಗಲು ಬಂದ ಧನದಾಹಿ ಯುವಕ. ಕೊನೆಗೆ ಕಾಫಿ ಪ್ಲಾಂಟರ್‌ಗೆ ಗಂಡು ಮಗುವಾದಾಗ ಇನ್ನು ತನಗೆ ಆಸ್ತಿ ಸಿಗಲಾರದೆಂದು ಮದುವೆಯಾಗಲು ತಿರಸ್ಕರಿಸುತ್ತಾನೆ. ನಾಯಕ ಅಪಘಾತವಾಗಿ ಅನಿವಾರ್ಯವಾಗಿ ಅವನ ಶುಶ್ರೂಷೆಗೆ ನಿಂತ ನಾಯಕಿಯ ಮನವನ್ನು ಅರಿತು ಅವಳನ್ನು ಮತ್ತೆ ಮದುವೆಯಾಗಲು ಒಪ್ಪಿಗೆ ಸೂಚಿಸಿದಾಗ, ನಾಯಕಿ, ಅವನ ದುರಾಸೆ ಮತ್ತು ಸ್ವಾರ್ಥವನ್ನು ಇಷ್ಟಪಡದೇ ಅವನೊಂದಿಗೆ ಮದುವೆಯಾಗಲು ನಿರಾಕರಿಸುತ್ತಾಳೆ. ಹೆಣ್ಣಿನ ಸ್ವಾಭಿಮಾನವನ್ನು ಮೇಲೆತ್ತಿ ತೋರಿಸುವ ಕಾದಂಬರಿ ಇದು.

'ಹಣ್ಣೆಲೆ ಚಿಗುರಿದಾಗ' ಕಾದಂಬರಿಯು ಕೂಡ ಚಲನಚಿತ್ರವಾಗಿ ಯಶಸ್ಸನ್ನು ಕಂಡ ಚಿತ್ರ. ಸುಮಾರು ಎಪ್ಪತ್ತು ವಯಸ್ಸಿನ 'ರಾಯರು' ಕಾದಂಬರಿಯ ನಾಯಕ. ಅವರ ಸಂಸಾರದಲ್ಲಿ ನಡೆಯುವ ಹಲವಾರು ಘಟನೆ, ತಿರುವುಗಳು ಕಾದಂಬರಿಯ ವಸ್ತು. ಆರು ಮಂದಿ ಮಕ್ಕಳು ರಾಯರಿಗೆ. ನಾಯಕನ ದರ್ಪ, ವಯಸ್ಸಿಗೆ ತಕ್ಕಂತ ಗಾಂಭೀರ್ಯ ಮೂಡಿ ಬಂದರೂ ಸಂಪ್ರದಾಯನಿಷ್ಠ ರಾಯರು ನಾಟಕದಲ್ಲಿ ನಟಿಸುವ ಮಗ ಸಹ ನಟಿಯನ್ನು ವಿವಾಹವಾದಾಗ ಪ್ರತಿಭಟಿಸುತ್ತಾರೆ. ಆಗ ಮಗ ಮನೆಬಿಟ್ಟು ಹೋಗುತ್ತಾನೆ. ಕೊನೆಯ ಮಗಳಿಗೆ ವಿವಾಹ ಮಾಡುತ್ತಾರೆ. ಆದರೆ ಕೆಲವೇ ದಿಗಳಲ್ಲಿ ಅವಳು ವಿಧವೆಯಾಗಿ ಮನೆ ಸೇರುತ್ತಾಳೆ. ತರುಣ ವಿಧುರನನ್ನು ಪ್ರೀತಿಸುತ್ತಾಳೆ. ಇಬ್ಬರೂ ವಿವಾಹವಾಗಲು ನಿರ್ಧರಿಸುತ್ತಾರೆ. ರಾಯರಿಗೆ ಹೇಳಿದಾಗ ಸಂಪ್ರದಾಯಸ್ಥರಾದ ರಾಯರು ಇದನ್ನು ನಿರಾಕರಿಸುತ್ತಾರೆ. ದಿನಗಳೆದಂತೆ ಮಗಳ ಬದುಕಿನ ಹಾಗೂ ಅವಳ ತ್ಯಾಗದ ಅರಿವಾಗಿ ರಾಯರ ಮನಸ್ಸು ಪರಿವರ್ತಿತವಾಗುತ್ತದೆ. ಇಬ್ಬರಿಗೂ ತಾವೇ ನಿಂತು ವಿವಾಹ ಮಾಡಿಸುತ್ತಾರೆ ಈ ಕಾದಂಬರಿಯಲ್ಲಿ ವಿಧವಾ ವಿವಾಹವನ್ನು ಎತ್ತಿ ಹಿಡಿದು ಹಿರಿಯ ಪಾತ್ರಗಳ ಮನೋಭಾವವನ್ನು ಬದಲಿಸುವ ಮೂಲಕವೇ ಸುಧಾರಣೆ ತಂದಿರುವುದು ಕ್ರಾಂತಿಕಾರಕ ವಿಚಾರ.

ಇಂತಹ ಇನ್ನೂ ಅನೇಕ ವಿಚಾರ ಪೂರ್ಣವಾದ ಕಾದಂಬರಿಗಳನ್ನು ತ್ರಿವೇಣಿಯವರು ರಚಿಸಿದ್ದಾರೆ. ಬೆಕ್ಕಿನ ಕಣ್ಣು, ದೂರದ ಬೆಟ್ಟ, ಮುಚ್ಚಿದ ಬಾಗಿಲು, ಶರಪಂಜರ, ಇವು ಮನೋವೈಜ್ಞಾನಿಕಕ್ಕೆ ಸಂಬಂಧಪಟ್ಟ ಕಾದಂಬರಿಗಳು.

'ಬೆಕ್ಕಿನ ಕಣ್ಣು' ಕಾದಂಬರಿ ಕೆಳಮಧ್ಯಮ ವರ್ಗಕ್ಕೆ ಸಂಬಂಧಪಟ್ಟ ಕಾದಂಬರಿ. ಜಗನ್ನಾಥರಾಯರು ಮತ್ತು ರಾಜಮ್ಮ ದಂಪತಿಗಳ ಅತಿಮುದ್ದಿನ ಮಗಳು, ಕಾದಂಬರಿಯ ನಾಯಕಿ ಕುಸುಮಾ. ರಾಜಮ್ಮ ತೀರಿಕೊಂಡಾಗ ಅತಿಮುಚ್ಚಟೆಯಿಂದ ಬೆಳೆಸಲ್ಪಟ್ಟವಳು. ತಂದೆ ಎರಡನೆ ಮದುವೆಯಾಗಿ ಪದ್ಮನನ್ನು ಮನೆಗೆ ಕರೆತರುತ್ತಾರೆ. ಮನೆಯ

ವಾತಾವರಣ ಬದಲಾಗುತ್ತದೆ. ತಂದೆ ತನ್ನಿಂದ ದೂರವಾಗುತ್ತಿರುವುದನ್ನು ಸಹಿಸಿಕೊಳ್ಳಲಾಗದ ಮೃದು ಹೃದಯದ ಕುಸುಮ. ಚಿಕ್ಕ ವಯಸ್ಸಿಗೆ ಎರಡನೇ ಸಂಬಂಧ ಇಷ್ಟವಿಲ್ಲದಿದ್ದರೂ ವಿವಾಹವಾಗಿ ಬಂದವಳು. ಬೆಕ್ಕನಕಣ್ಣಿನ ಪದ್ಮ. ತಂದೆ ಮಗಳು ಪ್ರೀತಿಯಿಂದಿರುವುದನ್ನು ಸಹಿಸದೆ ತನ್ನ ಕ್ರೂರತೆಯ ಮೂಲಕ ಕುಸುಮಾಳನ್ನು ನಿಯಂತ್ರಿಸುತ್ತೊಡಗುತ್ತಾಳೆ ಪದ್ಮ. ಕುಸುಮ ಬೇರೆ ದಾರಿ ಕಾಣದೆ ಚಿಕ್ಕಮ್ಮನ ಮೇಲಿನ ಸೇಡನ್ನು ರೋಷವನ್ನು, ತಾನು ಅತ್ಯಂತ ಪ್ರೀತಿಯಿಂದ ಸಾಕಿದ ಬೆಕ್ಕಿನ ಮೇಲೆ ತೀರಿಸಿಕೊಳ್ಳುತ್ತಾಳೆ. ಕೊನೆಗೆ ಕುಸುಮಳ ಮನಸ್ಸು ಹತೋಟಿಮೀರಿ. ಜನರ ಕಣ್ಣಲ್ಲಿ ಹುಚ್ಚಿಯಾಗುತ್ತಾಳೆ, ಹುಚ್ಚಾಸ್ಪತ್ರೆಯನ್ನು ಸೇರುತ್ತಾಳೆ. ಅಲ್ಲಿ ರೋಗಿಗಳ ಚಿತ್ರಣ. ಕುಸುಮಾಳಿಗೆ ಪದ್ಮಾಳ ತಮ್ಮನಿಂದ ದೊರೆಯುವ ಪ್ರೀತಿಯಿಂದ ಮತ್ತೆ ಮನುಷ್ಯಳಾಗಿ ಹೊರಬರುತ್ತಾಳೆ. ಪದ್ಮಾಳಿಗೆ ಡಾಕ್ಟರಿಂದ ದೊರೆಯುವ ಸನ್ಮಾರ್ಗ ಇವೆಲ್ಲವನ್ನು ಕಂಡ ಬೆಕ್ಕಿನಕಣ್ಣು ತ್ರಿವೇಣಿಯರವರು ಸಮಾಜಕ್ಕೆ ಕೊಟ್ಟ ಒಂದು ಉತ್ತಮ ಸಾಹಿತ್ಯದ ಉಡುಗೊರೆ.

'ಶರಪಂಜರ' ಅತ್ಯಂತ ಮನೋಜ್ಞ ಕಾದಂಬರಿ. ಇದು ಚಲನಚಿತ್ರವಾಗಿ ಅತ್ಯಂತ ಅದ್ಭುತ ಹೆಸರನ್ನು ತಂದುಕೊಟ್ಟ ಚಿತ್ರ. ಇದರಲ್ಲಿ ಕಲ್ಪನಾ ಅವರ ಮನೋಜ್ಞ ಅಭಿನಯ ಎಂದಿಗೂ ಮರೆಯುವುದಕ್ಕೆ ಸಾಧ್ಯವಿಲ್ಲ.

ಮಡಿಕೇರಿಯ ಪ್ರಕೃತಿಯ ಮಡಿಲಲ್ಲಿ ಬೆಳೆದ ಕಾವೇರಿ ನಾಯಕಿ. ನಾಲ್ಕಂಕೆ ಸಂಬಳ ತೆಗೆದುಕೊಳ್ಳುವ ಸತೀಶ ನಾಯಕ. ಇಬ್ಬರೂ ಬೇರೆ ಯಾರದೋ ಮದುವೆಯಲ್ಲಿ ಪರಸ್ಪರ ನೋಡುತ್ತಾರೆ. ತಾನು ಮದುವೆಯಾಗಬೇಕಾದ ಹುಡುಗಿ ಇವಳೇ ಎಂದು ನಿರ್ಧರಿಸುವ ಸತೀಶ, ಕಾವೇರಿಯ ಬಗ್ಗೆ ವಿಚಾರಿಸಿದಾಗ ಒಡಕು ಮಾತು ಕೇಳಿದರೂ ಕಿವಿಗೆ ಹಾಕಿಕೊಳ್ಳದೆ, ಮದುವೆಯಾಗುತ್ತಾನೆ. ಆದರೆ ಅವನ ಆಫೀಸಿನಲ್ಲಿಯೇ ಚಲುವನಾದ ಇವನನ್ನು ಒಲಿಸಿಕೊಳ್ಳಲು ಕೆಲ ಯುವತಿಯರಿರುತ್ತಾರೆ. ಕಾವೇರಿ ಸದಾ ಚಟುವಟಿಕೆಯಿಂದ, ಜೀವನೋತ್ಸಾಹದಿಂದ ಇರುವವಳು ಜೊತೆ ರೂಪವತಿ ಕೂಡ. ಆದರೆ ಆಫೀಸಿನ ವಿಮಲ ಎನ್ನುವವಳು ಅವನನ್ನು ಹೊಂದುವವರೆಗೆ ಬಿಡೆನೆನ್ನುವ ಛಲ ಹೊಂದಿರುತ್ತಾಳೆ. ಸತೀಶ್ ಕಾವೇರಿಗೆ ಇಬ್ಬರು ಮಕ್ಕಳಾಗುತ್ತಾರೆ. ಬಾಣಂತನದ ಸಮಯದಲ್ಲಿ ದುರ್ಬಲಗೊಂಡ ಕಾವೇರಿಯ ಮನಸ್ಸಿಗೆ, ಹಿಂದೊಮ್ಮೆ ಶ್ರೀರಂಗಪಟ್ಟಣಕ್ಕೆ ಹೋದಾಗ ತನ್ನ ಶೀಲವನ್ನು ಕಳೆದುಕೊಂಡ ಸಂದರ್ಭವು ನೆನಪಿಗೆ ಬರುತ್ತದೆ. ನೋವು ಖಿನ್ನತೆ ಅಸಹಾಯಕತೆ ಆಕ್ರಮಿಸಿ ಅತ್ತು ರಂಪಾಟ ಮಾಡುತ್ತಾಳೆ. ಸತೀಶ್ ಅವಳನ್ನು ಕರೆದುಕೊಂಡು ಬಂದು ಹುಚ್ಚಾಸ್ಪತ್ರೆಗೆ ಸೇರಿಸುತ್ತಾನೆ. ಛಲ ಬಿಡದ ವಿಮಲ, ಕಾವೇರಿಯ ಅನಾರೋಗ್ಯದ ಸಂದರ್ಭವನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡು ಸತೀಶನ ಮನಸ್ಸು ತನ್ನೆಡೆ ಬಾಗಿಸಿಕೊಳ್ಳುವಲ್ಲಿ ಸಫಲಳಾಗುತ್ತಾಳೆ. ಬಹಳ ಅನ್ಯೋನ್ಯ ದಂಪತಿಗಳಾದ, ಒಂದು ದಿನವು ಒಬ್ಬರನ್ನೊಬ್ಬರು ಬಿಟ್ಟಿರದ ಸತೀಶ್–ಕಾವೇರಿಯ ಬದುಕಲ್ಲಿ ಬಿರುಕು ಮೂಡುತ್ತದೆ. ಸತೀಶ್ ಕಾವೇರಿಯಿಂದ ವಿಮುಖನಾಗಿ ವಿಮಲಾಳ ಬಲೆಗೆ ಬೀಳುತ್ತಾನೆ. ಕಾವೇರಿಯ ಹುಚ್ಚು ಸಂಪೂರ್ಣ ಬಿಟ್ಟರೂ ಸುತ್ತಲಿನವರ ನಡತೆ ಮತ್ತು ಚುಚ್ಚು ಮಾತುಗಳೇ ಅವಳಿಗೆ ಪುನಃ ಹುಚ್ಚು ಹಿಡಿಯುವಂತೆ ಮಾಡುತ್ತವೆ.

ಇಲ್ಲಿ ಅಸ್ವಸ್ಥ ಮನಸ್ಸಿನ ಮಹಿಳೆಯ ಸೂಕ್ಷ್ಮ ಮಾನಸಿಕ ಸ್ಥಿತಿಯನ್ನು ತ್ರಿವೇಣಿಯವರು ಸಮರ್ಥವಾಗಿ ನಿರೂಪಿಸಿದ್ದಾರೆ.

'ದೂರದ ಬೆಟ್ಟ' ಹಾಗೂ 'ಮುಚ್ಚಿದ ಬಾಗಿಲು' ಮಾನಸಿಕ ಅಸ್ವಸ್ಥತೆಯ ವಸ್ತುಗಳನ್ನೇ ಪ್ರಧಾನವಾಗಿಟ್ಟುಕೊಂಡು ರಚಿಸಿದ ಕಾದಂಬರಿಗಳು. 'ದೂರದ ಬೆಟ್ಟ' ನಾಯಕಿ ಚಿಕ್ಕ ವಯಸ್ಸಿನಲ್ಲೆ ವಿಧವೆಯಾಗುತ್ತಾಳೆ. ಅವಳ ಅಣ್ಣ ಅವಳಿಗೆ ಮರುವಿವಾಹವಾಗಲು ಪ್ರಯತ್ನಿಸಿದಾಗ ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದ ಅವಳು ನಿರಾಕರಿಸುತ್ತಾಳೆ. ಆದರೆ ಒಳಗಿನ ಚಿಂತೆಗಳ ಕಾರಣದಿಂದ ನಿದ್ರೆಯಲ್ಲಿ ನಡೆದಾಡುವ ಕಾಯಿಲೆ ಪ್ರಾರಂಭವಾಗಿ ಅವಳು ತನ್ನ ಗಂಡನಾಗುವವನ ಎಲ್ಲಾ ವಸ್ತುವನ್ನು ಬಾವಿಗೆ ಹಾಕುತ್ತಿರುತ್ತಾಳೆ. ಅಂದರೆ ಅವಳ ಒಳಮನಸ್ಸು ಮರುವಿವಾಹಕ್ಕೆ ಒಪ್ಪಿದರೂ ಸಂಪ್ರದಾಯದ, ಸಮಾಜ ಭಯದ ಕಾರಣ ಅವಳು ನಿರಾಕರಿಸುತ್ತಿದ್ದಾಳೆಂಬುದನ್ನು ಕಂಡುಹಿಡಿದ

ಮನಃಶಾಸ್ತ್ರಜ್ಞರು ಅವಳಿಗೆ ತಿಳಿಹೇಳಿದಾಗ ಅವಳು ಮರುವಿವಾಹವಾಗುತ್ತಾಳೆ. ವಿಧವಾ ವಿವಾಹಕ್ಕೆ ಒತ್ತು ನೀಡುವ ಈ ಕಾದಂಬರಿ ಜನಸಾಮಾನ್ಯರ ಅಪಾರ ಮೆಚ್ಚುಗೆ ಗಳಿಸಿರಬಹುದು.

'ಮುಚ್ಚಿದ ಬಾಗಿಲು' ಕಾದಂಬರಿ ಮನಃಶಾಸ್ತ್ರಜ್ಞನಿಂದ ನಿರೂಪಿಸಲ್ಪಡುತ್ತದೆ. ಅಲ್ಲಿಗೆ ಬರುವ ಅನೇಕ ಮಾನಸಿಕ ಅಸ್ವಸ್ಥ ಯುವಕ-ಯುವತಿಯರ ಸಾಮಾಜಿಕ ಸಮಸ್ಯೆ, ಅಂತರ್ ಜಾತಿಯ ಪ್ರೇಮದಿಂದ ತೊಳಲಾಟ, ಮಧ್ಯಮವರ್ಗದ ದಂಪತಿಗಳ ಸಮಸ್ಯೆಗಳು – ಮುಂತಾದುವುಗಳನ್ನು ವಸ್ತುವಾಗಿ ಆಯ್ದು ಈ ಕಾದಂಬರಿಯು ರೂಪಿಸಲ್ಪಟ್ಟಿದೆ. ಹೊರ ಪ್ರಪಂಚದಲ್ಲಿ ಬಲವಂತಕ್ಕೆ ತನ್ನಿಷ್ಟದ ವಿರುದ್ಧ ಬದುಕು ನಡೆಸುವಾಗ, ಆಂತರಂಗಿಕ ಮನಸ್ಸು ಹೇಗೆ ಮಾನಸಿಕ ವಿಕಲ್ಪತೆಯಿಂದ ತನ್ನ ಕಾರ್ಯವನ್ನು ನಡೆಸುತ್ತದೆ ಎಂಬುದನ್ನು ಅರ್ಥವತ್ತಾಗಿ ನಿರೂಪಿಸಿರುವ ಕಾದಂಬರಿ 'ಮುಚ್ಚಿದಬಾಗಿಲು'.

ಮಹಿಳೆಯರು ಹೇಗೆ ಬರೆಯುತ್ತಾರೆ ಎಂಬ ಪ್ರಶ್ನೆಗೆ, ತಮ್ಮ ಸತ್ವಯುತ ಕೃತಿಗಳ ಮೂಲಕ ಸಮರ್ಥವಾದ ಉತ್ತರವನ್ನು ಕೊಟ್ಟವರು ತ್ರಿವೇಣಿಯವರು. ತ್ರಿವೇಣಿಯವರ ಕಾದಂಬರಿಗಳು ವಿಮರ್ಶಾವಲಯದಲ್ಲೂ ಹೆಚ್ಚು ಖ್ಯಾತಿಯನ್ನು ಗಳಿಸಿ, ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡಿವೆ. 'ಶರಪಂಜರ' ಕಾದಂಬರಿಯನ್ನು "The Mood Woman" ಎಂಬ ಹೆಸರಿನಲ್ಲಿ ಮೀರಾ ನರ್ವೆಕರ್ ಇಂಗ್ಲಿಷ್‌ಗೆ ಅನುವಾದ ಮಾಡಿದರು. 'ಅಪಸ್ವರ' ಮತ್ತು 'ಅಪಜಯ' ಕಾದಂಬರಿ ಹಾಗೂ ಏಳು ಸಣ್ಣ ಕತೆಗಳನ್ನು 'ತ್ರಿವೇಣಿ ಸಪ್ತಕ' ಎಂಬ ಹೆಸರಿನಲ್ಲಿ ಹಿಂದಿಗೆ ಎಸ್.ಎಮ್. ರಾಮಸ್ವಾಮಿ ಅವರು ಅನುವಾದಿಸಿದ್ದಾರೆ. 'ಬೆಕ್ಕಿನ ಕಣ್ಣು' ಕಾದಂಬರಿಯನ್ನು ತೆಲುಗಿಗೆ ಶರ್ವಾಣಿಯವರು ಅನುವಾದಿಸಿದ್ದಾರೆ.

ಸಮಾಜದಲ್ಲಿ ಸುಧಾರಣೆಯಾಗಿದೆ ಮತ್ತು ಸ್ತ್ರೀಯರ ಸ್ಥಾನಮಾನ ಹೆಚ್ಚಿದೆ ಎಂದರೂ, ಮಹಿಳೆಯರನ್ನು ಪುರುಷರು ನಡೆಸಿಕೊಳ್ಳುವ ರೀತಿ, ಅವರ ಲೈಂಗಿಕ ತೃಷೆ, ದಬ್ಬಾಳಿಕೆ, ಹಿಂಸೆ, ಸಮಾಜದಲ್ಲಿ ಗಂಡಿಗೆ ಒಂದು ನೀತಿ, ಹೆಣ್ಣಿಗೆ ಒಂದು ನೀತಿ, ಅಸಮಾನತೆ, ಆ ಅಸಮಾನತೆಯ ನಡುವೆ ಸಿಕ್ಕಿ ನರಳುವ ಹೆಣ್ಣಿನ ಮಾನಸಿಕ ಹಿಂಸೆ, ತೊಳಲಾಟಗಳು ಇವುಗಳಿಗೆ ಇಂದಿಗೂ ಪೂರ್ಣ ಪರಿಹಾರ ದೊರಕಿಲ್ಲ. ಹೆಣ್ಣಿನ ಸ್ಥಾನಮಾನ ಹೊರನೋಟಕ್ಕೆ ಬದಲಾದಂತಿದ್ದರೂ ಅವಳನ್ನು ಅಂತರಂಗದಲ್ಲಿ ಬೇಯಿಸುವ, ಕಾಯಿಸುವ, ಉರಿಸುವ, ಸಾಮಾಜಿಕ ಸಂದರ್ಭಗಳು ಈಗಲೂ ಇವೆ. ಆದ್ದರಿಂದ ತ್ರಿವೇಣಿಯವರ ಕಾದಂಬರಿಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. ಸರಳ ನಿರೂಪಣೆ, ಶುದ್ಧ ಭಾಷೆ, ಹೊಸ ವಸ್ತುಗಳ ಮೂಲಕ ಇಡೀ ರಾಜ್ಯದ ಜನತೆಯ ಮೆಚ್ಚುಗೆಗೆ ಪಾತ್ರರಾದ ತ್ರಿವೇಣಿ ಒಬ್ಬ ಅದ್ಭುತ ಅಮರ ಮಹಿಳಾ ಸಾಹಿತಿ.

———— * ————

ಬೆಳ್ಳಿ – ಬೆಳಕಿನ ಮಹಾಯಾನ

ಡಾ. ಜಯಮಾಲಾ

ಸತ್ಯ ಹರಿಶ್ಚಂದ್ರ ಚಿತ್ರದಲ್ಲಿ ಕರ್ತವ್ಯದ ಪರಾಕಾಷ್ಠೆಯಲ್ಲಿ ಉಗ್ರ ಪ್ರಾಮಾಣಿಕತೆಯಿಂದ ಸ್ಮಶಾನ ಕಾವಲು ಕಾಯುತ್ತಿದ್ದ ಹರಿಶ್ಚಂದ್ರ, ಅಲ್ಲಿಗೆ ಹಾವು ಕಚ್ಚಿ ಸತ್ತ ಲೋಹಿತಾಶ್ವನ ಶವವನ್ನು ಸಂಸ್ಕಾರ ಮಾಡಲು ಚಂದ್ರಮತಿ ಮಗನ ಶವದೊಂದಿಗೆ ಬರುತ್ತಾಳೆ. ಆದರೆ ಸಂಸ್ಕಾರಕ್ಕೆ ಕಟ್ಟಬೇಕಾದ ತೆರಿಗೆ ಕಟ್ಟಲು ಚಂದ್ರಮತಿ ಅಸಮರ್ಥಳಾಗಿದ್ದರಿಂದ ಸಂಸ್ಕಾರ ಮಾಡಲು ಕಾವಲುಗಾರನಾದ ಹರಿಶ್ಚಂದ್ರ ನಿರಾಕರಿಸುತ್ತಾನೆ. ಆದರೆ ಆಗ ಆಕೆಯ ಕೊರಳಲ್ಲಿರುವ ಮಾಂಗಲ್ಯವನ್ನು ಒತ್ತೆ ಇಡುವಂತೆ ಅವನು ಕೇಳುತ್ತಾನೆ. ತನ್ನ ಗಂಡನಲ್ಲದೆ ಬೇರೆಯವರ ಕಣ್ಣಿಗೆ ಕಾಣದ 'ಮಾಂಗಲ್ಯ'ವನ್ನು ಕಂಡಾತ ತನ್ನ ಗಂಡನೆಂದು ಆಕೆಗೆ ಅರಿವಾದರೂ ತನ್ನನ್ನು ಗುರುತಿಸುವುದಿರಲಿ ಸತ್ತ ಮುದ್ದಿನ ಮಗುವನ್ನು ಕಂಡು ವಿಚಲಿತನಾಗದಿರುವ ಗಂಡನ ಕರ್ತವ್ಯನಿಷ್ಠೆಯನ್ನು ಕಂಡು ರೋಸುವ ಹಾಗೂ ಮಗನನ್ನು ಕಳೆದುಕೊಂಡಿರುವ ತಾಯಿಯಾಗಿ ಮರುಗುವ ಪಾತ್ರದಲ್ಲಿ ಅನನ್ಯವೆಂಬಂತೆ ಅಭಿನಯಿಸಿದವರು ಪಂಡರಿಬಾಯಿ. ಆ ದೃಶ್ಯದಲ್ಲಿ ಗಂಡನ ಬಗ್ಗೆ ಅಪಾರ ಪ್ರೀತಿ, ಅಸಾಧ್ಯ ನಂಬಿಕೆ ಮತ್ತು ಭಕ್ತಿಯಿರುವ ಸಾಧ್ವಿಯೊಬ್ಬಳು ಅಸಹಾಯಕ ತಾಯಿಯಾಗಿ ಪ್ರತಿಕ್ರಿಯಿಸುವುದು; ಆ ಭಾವವನ್ನು ಅಭಿನಯಿಸುವುದು ಕಷ್ಟಸಾಧ್ಯ. ಆ ಅಸಹಾಯಕತೆಯ ವಿಷಾದ, ದುಃಖ, ದಿಗ್ಭ್ರಮೆಗಳನ್ನು ಕಣ್ಣಿನ ಮುಖಭಾವದಲ್ಲಿ ಶಾರೀರಿಕ ಭಂಗಿಯಲ್ಲಿ ಅಭಿವ್ಯಕ್ತಿಸುವುದು ನಟನೆಗೆ ದೊಡ್ಡ ಪರೀಕ್ಷೆ. ಈ ಪಾತ್ರಕ್ಕೆ ರಾಷ್ಟ್ರೀಯ ಪುರಸ್ಕಾರ ಸಿಕ್ಕಿದ್ದು ನನ್ನ ಮಾತಿಗೆ ಸಾಕ್ಷಿ. ಅಂತಹ ಪಾತ್ರವೊಂದೇ ಅಲ್ಲದೆ ಇಂತಹ ಹತ್ತು ಹಲವು ಪಾತ್ರಗಳನ್ನು ಲೀಲಾಜಾಲವಾಗಿ ಅಭಿನಯಿಸಿ ಜನರ ಮನಸ್ಸಿನಲ್ಲಿ ಮರೆಯಲಾಗದ ನಕ್ಷತ್ರದಂತೆ ಉಳಿದಿರುವ ಪಂಡರಿಬಾಯಿಯವರನ್ನು ಏನೆಂದು ಸಂಬೋಧಿಸಬೇಕೆನ್ನುವುದೇ ಮೊದಲ ಸಮಸ್ಯೆ. ಪಂಡರಿಬಾಯಿ ನಟಿಯೋ, ಸಾಮಾನ್ಯ ಹೆಣ್ಣೋ, ಗೃಹಿಣಿಯೋ, ಲೋಕದ ದುಃಖವನ್ನು ಹೆಗಲಿಗೆ ಕಟ್ಟಿಕೊಂಡು ಸವೆದ ಸಂತಳೊ ಅಥವಾ ಕೃಷ್ಣಭಕ್ತೆಯೊ ಈ ಎಲ್ಲವುಗಳು ಕೂಡ ನಿಜವೋ ಎಂಬ ಗೊಂದಲ ಯಾರನ್ನಾದರೂ ಕಾಡುತ್ತದೆ. ಪಂಡರಿಬಾಯಿಯಂತಹವರು ರೂಪಗೊಳ್ಳುವದೇ ಒಂದು ಬೆಡಗು. ಪಂಡರಿಬಾಯಿಯನ್ನು ನೆನೆದರೆ ಥುತ್ತನೆ ನೆನಪಿಗೆ ಬರುವ ಚಿತ್ರ ಮೇಣದಬತ್ತಿ. ತಾನು ಉರಿದು ಬೆಂದು ಕರಗಿ ತನ್ನ ಸುತ್ತ ಪರಿಸರವನ್ನು ಬೆಳಗಬೇಕೆನ್ನುವ ಹಠ; ಉರಿಯುವ ನೋವನ್ನು ಬೆಳಕಾಗಿಸುವ ಆನಂದದಲ್ಲಿ ಎಲ್ಲ ದುಃಖವನ್ನು ಮರೆವ ತನ್ನನ್ನು ಕಷ್ಟಕ್ಕೆ ದೂಡಿದ ಬದುಕು ಮತ್ತು ಉಳಿದವರು. ತಾನು ನಡೆದು ಬಂದ ಕಷ್ಟದ ಹಾದಿ, ತುಳಿದ ಮುಳ್ಳಿನ ಕಂಟಿ, ತಿರುವಿನ ಕೊರಕಲನ್ನ ಮರೆಯದೆ ತನ್ನ ಹಿಂದೆ ನಡೆಯುವವರಿಗೆ ಘಾಸಿಯಾಗಬಾರದೆಂದು ನಡೆದ ದಾರಿಯನ್ನ ಹಸನುಗೊಳಿಸಲು ಹಗಲಿರುಳು ಶ್ರಮಿಸಿದಾಕೆ. ಪಂಡರಿಬಾಯಿಯವರ ಹಾಗೆ ಶ್ರಮವನ್ನ ದೇವರಾಗಿಸಿಕೊಂಡು ಬಾಳಿದ ಜನರನ್ನು ಕಾಣುವುದು ಬಹಳ ಅಪರೂಪ. ತಳುಕಿನ ಬಣ್ಣಗಳಲ್ಲಿ ಕಣ್ಣುಕೋರೈಸುವ ಭ್ರಮೆಗಳಲ್ಲಿ ಸುತ್ತುವರೆದಿದ್ದರೂ ತನ್ನ ಮಾನವೀಯವಾದ ಹೃದಯಕ್ಕೆ ಯಾವುದೇ ಅಂಟು ಸೋಕದ ಹಾಗೆ ಬಾಳಿದಾಕೆ. ಆದ್ದರಿಂದಲೇ ಇಷ್ಟು ವರ್ಷಗಳಾದರೂ ಪಂಡರಿಬಾಯಿ ದಕ್ಷಿಣ ಭಾರತದ ಬಹುದೊಡ್ಡ ತಾರೆಯಾಗಿ ಮಾತ್ರವಲ್ಲ ಸಾಂಸ್ಕೃತಿಕ ವ್ಯಕ್ತಿತ್ವವಾಗಿ ರೂಪಗೊಂಡಿದ್ದನ್ನು

ಕಾಣುತ್ತೇವೆ. ಪಂಡರಿಬಾಯಿಯ ಬದುಕಿನ ಚರಿತ್ರೆಯೆಂದರೆ ಅದು ಕೇವಲ ಅವರೊಬ್ಬರ ಚರಿತ್ರೆಯಲ್ಲ. ಅದು ಒಂದು ಅರ್ಥದಲ್ಲಿ ಕನ್ನಡ ಚಿತ್ರರಂಗದ ಅಷ್ಟೇ ಏಕೆ ದಕ್ಷಿಣ ಭಾರತ ಚಿತ್ರರಂಗದ ಚರಿತ್ರೆಯಾಗುವಷ್ಟು ವಿಶಾಲವ್ಯಾಪ್ತಿಯನ್ನು ಪಡೆದಿದೆ. ಚಿಕ್ಕಂದಿನಿಂದಲೇ ಅತೀವ ಬಡತನವನ್ನು ತುಂಬು ಕುಟುಂಬವನ್ನು ಸಲಹುವ ಹೊಣೆಗಾರಿಕೆಯನ್ನು ಹೆಗಲೇರಿಸಿಕೊಂಡ ಪಂಡರಿಬಾಯಿ, ಮುಂದೆ ಪುಣ್ಯಕೋಟಿಯ ಹಾಗೆ ಬೆಳೆಯುವ ಮನೋಭಾವಕ್ಕೆ ತಳಹದಿಯನ್ನು ಅವರ ಬಾಲ್ಯವೇ ನಿರ್ಮಾಣ ಮಾಡಿಕೊಟ್ಟಿತು. ಪಂಡರಿಬಾಯಿಯವರ ಬದುಕನ್ನ ವಿಶ್ಲೇಷಿದರೆ ಅವರ ಬಲವೆಂದರೆ ಅವರ ದೈವಭಕ್ತಿ. ಕೃಷ್ಣನಲ್ಲಿ ಅವಿಚ್ಛಿನ್ನವಾದ ನಂಬಿಕೆ ಉಳ್ಳವರಾಗಿದ್ದ ಪಂಡರಿಬಾಯಿ ಎಂದೂ ಬದುಕಿನ ಕಠೋರತೆ ಎದುರು ಸೋತು ತಲೆ ತಗ್ಗಿಸಿದವರಲ್ಲ. ದೈವವನ್ನು ದೂರಿದವರಲ್ಲ. 1948–49ರ ವೇಳೆಗೆ ಎ.ವಿ.ಎಂ. ಸಂಸ್ಥೆಯಲ್ಲಿ ಕಲಾವಿದೆಯಾಗಿ ತಿಂಗಳ ಸಂಬಳದ ಮೇಲೆ ದುಡಿಯಲು ಆರಂಭಿಸಿದ ಪಂಡರಿಬಾಯಿ ಮುಂದಿನ ಐವತ್ತು ವರ್ಷಗಳಲ್ಲಿ ಅಪಘಾತಕ್ಕೆ ಗುರಿಯಾಗುವವರೆಗೆ ನಿರಂತರವಾಗಿ ಪರರಿಗಾಗಿ ದುಡಿದ ದೊಡ್ಡ ಜೀವ. ಕನ್ನಡ, ತೆಲುಗು, ಮಲೆಯಾಳಂ, ತಮಿಳು, ಕೊಂಕಣಿ, ತುಳು, ಹಿಂದಿ ಹೀಗೆ ಅವರು ಅಭಿನಯಿಸಿದ ಚಿತ್ರಗಳ ಸಂಖ್ಯೆಯೆ ಸಾವಿರಕ್ಕೂ ಮಿಗಿಲು. ಕನ್ನಡದ ಮೇರು ನಟರಾದ ರಾಜ್‌ಕುಮಾರ್ ಹಾಗೂ ತಮಿಳಿನ ಶಿವಾಜಿ ಗಣೇಶನ್‌ರವರ ಮೊದಲ ಚಿತ್ರಗಳ ನಾಯಕಿ ಎಂಬ ಹೆಗ್ಗಳಿಕೆ ಇವರದ್ದು.

ಭಾರತೀಯ ಹೆಣ್ತನದ ಶೋಧ

ಸ್ವಾತಂತ್ರ್ಯಪೂರ್ವದಲ್ಲಿ ಅಂದರೆ 1944ರಲ್ಲಿ 'ವಾಣಿ' ಚಿತ್ರದಲ್ಲಿ ಬಾಲನಟಿಯಾಗಿ ಅಭಿನಯಿಸುವುದರ ಮೂಲಕ ಪಂಡರಿಬಾಯಿ ಭಾರತೀಯ ಚಲನಚಿತ್ರ ರಂಗವನ್ನು ಪ್ರವೇಶ ಮಾಡಿದರು. ಇಂಗ್ಲಿಷ್ ವಿದ್ಯಾಭ್ಯಾಸದಿಂದಾಗಿ ಆಧುನಿಕ ವಿಚಾರಗಳು, ಜೀವನ ಕ್ರಮಗಳು ನಿಧಾನವಾಗಿ ಜನಜೀವನವನ್ನು ಪ್ರಭಾವಿಸುತ್ತಿದ್ದ ಕಾಲಘಟ್ಟವದು. ವಿದೇಶಗಳಿಗೆ ಹೋಗಿ ಓದಿಕೊಂಡು ಹಿಂತಿರುಗಿದವರು ಜಾತಿ, ಧರ್ಮಗಳ ಕಾಠಿಣ್ಯದ ಬಗ್ಗೆ ತಕರಾರುಗಳನ್ನು ಎತ್ತುತ್ತಿದ್ದ ಸಂದರ್ಭ ಅದು. ಅಲ್ಲದೆ ರಾಜಾರಾಮ್ ಮೋಹನ್‌ರಾಯ್, ದಯಾನಂದ ಸರಸ್ವತಿ, ಮಹಾತ್ಮಫುಲೆ ಇಂಥವರ ಹೋರಾಟಗಳಿಂದ 'ಭಾರತೀಯ ಸ್ತ್ರೀ'ಯ ಕಲ್ಪನೆಯಲ್ಲಿ ತೀವ್ರತರವಾದ ಬದಲಾವಣೆಯನ್ನು ತಂದಿತ್ತು. ರಾಷ್ಟ್ರೀಯ ಚಳವಳಿಯಲ್ಲಿ ಅನೇಕ ಜನ ಮಹಿಳೆಯರು ಕುಟುಂಬ ಮತ್ತು ಪಾರಂಪರಿಕ 'ಹೆಣ್ಣಿ'ನ ಚೌಕಟ್ಟನ್ನು ಧಿಕ್ಕರಿಸಿ ಸಾರ್ವಜನಿಕ ಜೀವನದಲ್ಲಿ ಪಾಲ್ಗೊಂಡಿದ್ದರು. ಮಹಾತ್ಮಗಾಂಧಿ ಅವರ ಬೆಂಬಲವು ಅವರಿಗಿತ್ತು. ಆದರೆ ಇದಕ್ಕೆ ವಿರುದ್ಧವಾಗಿ ಚಲನಚಿತ್ರದಲ್ಲಿ ನಿರ್ವಚನಗೊಳ್ಳುತ್ತಿದ್ದ 'ಸ್ತ್ರೀ' ಮಾತ್ರ ಪುರುಷಪ್ರಧಾನ ಮೌಲ್ಯಗಳಾದ ಪಾತಿವ್ರತ್ಯ, ಗಂಡಿನ ತಾರತಮ್ಯವನ್ನು ಪ್ರಶ್ನಿಸದಿರುವ, ಮನೆ ಮತ್ತು ಮಕ್ಕಳಿಗಾಗಿ ತನ್ನನ್ನೇ ಗಂಧದ ಹಾಗೆ ತೇಯ್ದುಕೊಳ್ಳುವ ಪಾತ್ರಗಳನ್ನೇ ಚಲನಚಿತ್ರಗಳು ಚಿತ್ರಿಸುತ್ತಿದ್ದವು. ಇದು ಅತ್ಯಂತ ಅಭ್ಯಾಸ ಬಲದ ಸಂಗತಿಯಾಗಿ ಕಂಡುಬರುತ್ತದೆ. ಒಂದು ಕಡೆ ರಾಷ್ಟ್ರೀಯ ಹೋರಾಟದ ಮೂಲಕ ಹೊಸ ವ್ಯಕ್ತಿತ್ವವನ್ನು ಅನ್ವೇಷಣೆ ಮಾಡುವ 'ಸ್ತ್ರೀ'ಯ ಸಾಮಾಜಿಕ ಚಲನೆ ಕಂಡುಬಂದರೆ ಮತ್ತೊಂದೆಡೆ ಹೆಣ್ಣನ್ನು ಪಾರಂಪರಿಕವಾದ ಚೌಕಟ್ಟಿನಲ್ಲೇ ಚಿತ್ರಿಸುವ, ಅವಳ ತ್ಯಾಗ ಮತ್ತು ನೋವನ್ನು ವೈಭವೀಕರಿಸುವ ಮೂಲಕ ಅವಳ ಸ್ವಾತಂತ್ರ್ಯ ಮತ್ತು ಸ್ವಾವಲಂಬಿಯಾಗುವ ನೆಲೆಗಳನ್ನು ಛಿದ್ರಿಸುವ ಕೆಲಸ ನಡೆಯುತ್ತಿದ್ದುದನ್ನು ಕಾಣಬಹುದು. ಹೀಗೆ ಆರಂಭದ ಚಲನಚಿತ್ರಗಳು ತನ್ನ ಕಾಲಘಟ್ಟದ 'ಸ್ತ್ರೀ'ಯ ಜಗತ್ತಿನಲ್ಲಿ ನಡೆಯುತ್ತಿದ್ದ ಹಾಗೆ ಪ್ರತಿಕ್ರಿಯೆ ಇರುವಂತೆ 'ಹೆಣ್ಣನ್ನು' ಮನೆಯ ಚೌಕಟ್ಟಿಗೆ ಬದ್ಧಗೊಳಿಸಿ ಚಿತ್ರಿಸಿರುವುದನ್ನು ಕಾಣುತ್ತೇವೆ. ಪಂಡರಿಬಾಯಿ ಅವರು ಅಂದಿಗೆ ಅತ್ಯಂತ ಪ್ರಸಿದ್ಧ ನಾಯಕಿಯಾಗಿ ಸ್ವೀಕಾರವಾಗಿದ್ದು ಇಂಥ ಪಾತ್ರಗಳನ್ನು ಅಭಿನಯಿಸುವುದರ ಮೂಲಕ ಎನ್ನುವುದು ಮುಖ್ಯವಾದದು. "ಬೇಡರಕಣ್ಣಪ್ಪ" ನಿಂದ ಆರಂಭಗೊಂಡ 'ಭಾರತೀಯ ನಾರಿ'ಯ ಮಾದರಿಯನ್ನು ಚಿತ್ರರಂಗ ಪೋಷಿಸಿಕೊಂಡು ಬಂದಂತೆಯೇ ಜನರು ಕೂಡ ಪಂಡರಿಬಾಯಿ ಅಂದರೆ ಸಾಂಪ್ರದಾಯಿಕ ಹೆಣ್ಣಿನ ವಿನ್ಯಾಸದ ಅಭಿವ್ಯಕ್ತರೂಪವಾಗಿ ಕನ್ನಡದಲ್ಲಿ ಮಾತ್ರವಲ್ಲ ಭಾರತೀಯ ಚಲನಚಿತ್ರ ರಂಗದಲ್ಲಿ

ಗುರುತಿಸಲ್ಪಟ್ಟರು. ಆ ಕಾರಣದಿಂದಲೇ ಈ ಹೆಣ್ತನದ ಅನ್ವೇಷಣೆಯ ಸಾಮಾಜಿಕ ವಿನ್ಯಾಸದ ಪರಾಕಾಷ್ಠೆಯನ್ನು ಮುಟ್ಟಿದ್ದು ಪಂಡರಿಬಾಯಿ ಅವರ ತಾಯ್ತನದಲ್ಲಿ ವಿಜೃಂಭಿಸಿ ಧನ್ಯತೆಯನ್ನು ಪಡೆದುಕೊಂಡಿತು. ಪಂಡರಿಬಾಯಿ ಅಂದರೆ ಹಳೆಯ ಮಾದರಿಯ ತಾಯಿಯ ಮುಖವೊಂದು ತಟ್ಟನೆ ನೆನಪಾಗುವಷ್ಟರ ಮಟ್ಟಿಗೆ 'ಮಾತೃತ್ವ'ದ ಪಾತ್ರಗಳಲ್ಲಿ ಅವರು ಲೀನವಾಗಿ ಹೋದರು. ಪಂಡರಿಬಾಯಿಯವರು ತಾಯಿಯ ಪಾತ್ರಗಳಲ್ಲಿ ಕಾಣುತ್ತಿದ್ದ ಮಾತೃತ್ವದ ದೈವಿಕ ಛಾಯೆ ಮಾತ್ರ ಸಿನಿಮಾ ನೋಡುಗರನ್ನಷ್ಟೇ ಅಲ್ಲ ಆಕೆಯೊಟ್ಟಿಗೆ ನಟಿಸುತ್ತಿದ್ದ ಸಹ ನಟ-ನಟಿ ವರ್ಗವೆಲ್ಲವು ಆಕೆಯನ್ನು ತಾಯಿಯೆಂದೇ ಭಾವಿಸಿ ನಡೆದುಕೊಳ್ಳುವ ಮಟ್ಟಕ್ಕೆ ಹಿರಿದಾಗಿತ್ತು. ಹೀಗೆ ಆಕೆ ನಿರ್ವಹಿಸುತ್ತಿದ್ದ ಮುಖ್ಯವಾಗಿ ಎರಡು ಪಾತ್ರ ವಿನ್ಯಾಸಗಳಾದ 'ಭಾರತೀಯ ಸ್ತ್ರೀ' ಹಾಗೂ 'ತಾಯಿ' ಇವುಗಳನ್ನು ಆ ಕಾಲದಲ್ಲಿ ನಡೆಯುತ್ತಿದ್ದ ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳ ಹಿನ್ನೆಲೆಯಲ್ಲಿ ಇಟ್ಟುಕೊಂಡು ಅಧ್ಯಯನ ಮಾಡಿದರೆ ಪಂಡರಿಬಾಯಿ ಅವರ ಮೂಲಕ ಭಾರತೀಯ ಸಮಾಜದಲ್ಲಿ ಹೆಣ್ಣು-ಗಂಡುಗಳ ಸ್ಥಾನಮಾನ ಅರ್ಥೈಸಲು ಅಗತ್ಯವಿರುವ ಮಾಹಿತಿಗಳು ಲಭ್ಯವಾಗುವುವು. ಈ ದಿಕ್ಕಿನಲ್ಲಿ ಶೋಧ-ಅಧ್ಯಯನ ನಡೆಯುವ ಅಗತ್ಯವಿದೆ.

ಪಂಡರಿಬಾಯಿ ನಟಿ ಆದದ್ದು

ಪಂಡರಿಬಾಯಿ 1928ರ ಸೆಪ್ಟೆಂಬರ್ ತಿಂಗಳ 18ರಂದು ರಂಗರಾವ್ ಮತ್ತು ಕಾವೇರಿ ಅವರ ಮಗಳಾಗಿ ಉತ್ತರಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಹುಟ್ಟಿದರು. ರಂಗರಾವ್ ವೃತ್ತಿಯಿಂದ ಸಂಗೀತಗಾರರಾಗಿದ್ದರು, ಕಲಾವಿದರಾಗಿದ್ದರು. ಕಾವೇರಿ ಅವರು ಭಟ್ಕಳದ ಶಾಲೆಯೊಂದರಲ್ಲಿ ಅಧ್ಯಾಪಕಿಯಾಗಿದ್ದರು. ರಂಗರಾವ್ ಅವರಿಗೆ ನಿಶ್ಚಿತವಾದ ವರಮಾನವಿರಲಿಲ್ಲವಾಗಿ ಕುಟುಂಬ ಆರ್ಥಿಕ ಸಂಕಷ್ಟದಿಂದ ತೊಂದರೆಗೆ ಒಳಗಾಗಿತ್ತು. ರಂಗರಾವ್ ಮತ್ತು ಕಾವೇರಿಯವರಿಗೆ ಮನೆತುಂಬ ಮಕ್ಕಳು. ಹುಟ್ಟಿದ ಹದಿನೆಂಟು ಮಕ್ಕಳಲ್ಲಿ ಬದುಕುಳಿದದ್ದು ಹತ್ತು ಮಕ್ಕಳು. ಊರೂರು ಅಲೆಯುತ್ತಿದ್ದ ರಂಗರಾವ್ ಅವರ ಆದಾಯವನ್ನು ನಂಬಿಕೊಂಡು ಮನೆ ನಡೆಯುವ ಹಾಗೆ ಇರಲಿಲ್ಲ. ಕಾವೇರಿ ಅವರಿಗೆ ಬರುತ್ತಿದ್ದ ಸಂಬಳವು ಮನೆಯವರೆಲ್ಲರ ತುತ್ತಿನ ಚೀಲ ತುಂಬಿಸಲು ಸಾಲುತ್ತಿರಲಿಲ್ಲ. ಇಂಥ ಕೌಟುಂಬಿಕ ಪರಿಸರದಲ್ಲಿ ಹುಟ್ಟಿ ಬೆಳೆದ ಪಂಡರಿಬಾಯಿ ಅವರಿಗೆ ಅವರ ಬಾಲ್ಯವೇ ಬದುಕಿನ ಮೂಲಭೂತ ಪಾಠವನ್ನು ಹೇಳಿಕೊಟ್ಟಿತ್ತು. ರಂಗರಾವ್ ಕಲಾವಿದರಾದರೂ ಹೆಣ್ಣುಮಕ್ಕಳು ರಂಗಭೂಮಿಯಲ್ಲಿ ಅಭಿನಯಿಸುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದವರೇ ಆಗಿದ್ದರು. ಇನ್ನು ತನ್ನ ಸ್ವಂತ ಹೆಣ್ಣುಮಕ್ಕಳನ್ನು ನಟನೆಗೆ ಇಳಿಸುವುದು ಸುತರಾಂ ಅವರಿಗೆ ಇಷ್ಟವಿರಲಿಲ್ಲ. ಆ ಕಾಲದ ಸಾಂಪ್ರದಾಯಿಕ ಸಮುದಾಯದ ಪುರುಷನೊಬ್ಬ ಯೋಚಿಸುವ ಹಾಗೇ ಅವರೂ ಯೋಚಿಸುತ್ತಿದ್ದರು. ಬಣ್ಣ ಹಾಕಿ ರಂಗದಲ್ಲಿ ಕುಣಿಯುವ 'ಪಾತ್ರ'ದವಳ ಬಗ್ಗೆ ಪ್ರಚಲಿತವಾಗಿದ್ದ ಸಾಮಾಜಿಕ ನಿಂದೆಯೂ ಇಂತಹ ಅಭಿಪ್ರಾಯವನ್ನು ಮತ್ತಷ್ಟು ಬಲಪಡಿಸುತ್ತಿತ್ತು. ಇಂತಹ ಇಕ್ಕಟ್ಟಿನ ಸಂದರ್ಭದಲ್ಲಿ ಆಕಸ್ಮಿಕವಾದ ಪವಾಡವೊಂದು ನಡೆಯಿತು. ಪ್ರತಿಯೊಬ್ಬರ ಜೀವನದಲ್ಲಿ 'ಆಕಸ್ಮಿಕ'ಗಳದೇ ಬಹುಮುಖ್ಯ ಪಾತ್ರ ಇದ್ದೇ ಇರುತ್ತದೆ. ಇದು ಅವರ ಜೀವನವನ್ನು ಸಂಪೂರ್ಣವಾಗಿ ಬದಲು ಮಾಡುತ್ತದೆ ಮತ್ತು ಅದರ ಪ್ರಭಾವ ಎಷ್ಟಿರುತ್ತದೆಂದರೆ ಯಾವುದನ್ನು ಅವರು ತಿರಸ್ಕರಿಸುತ್ತಾರೂ ಅದೇ ಅವರ ಜೀವನದ ಗುರಿಯಾಗಿ ಪರಿವರ್ತನೆಯಾಗುತ್ತದೆ. ಇಂತಹ ಆಕಸ್ಮಿಕಗಳು ಜಗತ್ತಿನ ಬಹುದೊಡ್ಡವರ ಜೀವನದಲ್ಲಿ ನಡೆದದ್ದು ಕಂಡುಬರುತ್ತದೆ. ಉದಾಹರಣೆಗೆ ಚಾಪ್ಲಿನ್, ಲತಾ ಮಂಗೇಶ್ವರ್ ಅವರ ಜೀವನದಲ್ಲಿ ಎದುರಾದ ಆಕಸ್ಮಿಕಗಳೇ ಅವರ ಪ್ರತಿಭೆಯನ್ನು ಧುತ್ತನೆ ಅನಾವರಣಗೊಳಿಸಿದ್ದನ್ನು ಚರಿತ್ರೆ ದಾಖಲಿಸಿದೆ. ಪಂಡರಿಬಾಯಿ ಇನ್ನೂ ಚಿಕ್ಕ ಹುಡುಗಿ. ಪಂಡರಿಬಾಯಿಯವರ ಹಿರಿಯಣ್ಣ ವಿಮಲಾನಂದ ಮೈಸೂರಿನಲ್ಲಿ ರತ್ನಾವಳಿ ಥಿಯೇಟರ್ ಕಂಪೆನಿಯ ನಾಟಕಗಳನ್ನು ನಡೆಸುತ್ತಿದ್ದರು. ಸುಮಾರು 1940ರ ದಿನಗಳವು. ಒಂದು ದಿನ ಇನ್ನೇನು ನಾಟಕ ಆರಂಭವಾಗಬೇಕು ಎನ್ನುವ ಹಂತದಲ್ಲಿ ನಾಟಕದಲ್ಲಿ ಪಾತ್ರ ನಿರ್ವಹಿಸುಬೇಕಿದ್ದ ಬಾಲ ನಟಿ ನಾಪತ್ತೆಯಾಗಿದ್ದಳು. ನಾಟಕಕ್ಕೆ ಬೆಳಗಿನಿಂದಲೇ ಜನ ಟಿಕೇಟ್ ಖರೀದಿಸಿದ್ದರು. ಈಗ ನಾಟಕ ಆರಂಭವಾಗುವ ಅರ್ಧಗಂಟೆ ಮುನ್ನ ನಾಟಕವನ್ನು ರದ್ದುಮಾಡುವ ಅವಕಾಶವಂತೂ ಇಲ್ಲವೇ ಇಲ್ಲ. ಅಂತಹ ಸಂಕಷ್ಟದಲ್ಲಿ ತಲೆಮೇಲೆ

ಕೈ ಹೊತ್ತು ಕೂತ ಅಣ್ಣನಿಗೆ, ಹನ್ನೆರಡರ ಬಾಲೆ ಪಂಡರಿಬಾಯಿ ತಾನು ಆ ಪಾತ್ರವನ್ನು ಮಾಡುವುದಾಗಿಯೂ ರಿಹರ್ಸಲ್‌ನಲ್ಲಿ ಆ ಪಾತ್ರದ ಸಂಭಾಷಣೆಯನ್ನು ಕಲಿತಿರುವುದಾಗಿಯೂ ಹೇಳಿದಾಗ ಅಚ್ಚರಿ ಜೊತೆಗೆ ಭಯವೊಂದು ಕಾಣಿಸಿಕೊಂಡಿತ್ತು. ತಂದೆ ರಂಗರಾವ್‌ರವರಿಗೆ ಈ ವಿಷಯ ತಿಳಿಸಿದಾಗ ವಿಮಲಾನಂದರು ಮೊದಲೇ ನಿರೀಕ್ಷಿಸಿದಂತೆ ಕೆಂಡಾಮಂಡಲವಾಗಿದ್ದರು. ನಾಟಕದಲ್ಲಿ ಬಣ್ಣ ಹಚ್ಚಿದರೆ ಅವಳ ಜೀವನ ಸಂಪೂರ್ಣವಾಗಿ ನಾಶವಾದಂತೆ ಎಂದು ಅವರು ಭಾವಿಸಿದ್ದರು. ಆದರೆ ನಾಟಕ ನಡೆಯಲೇಬೇಕಿತ್ತು. ಸಾಮಾಜಿಕ ಕಟ್ಟಲೆಗಳನ್ನು ಮುರಿಯಬಲ್ಲ ಶಕ್ತಿ ಇರುವುದು ಕೇವಲ 'ಹಸಿವು'ಗೆ ಮಾತ್ರ ಎಂಬುದು ಪಂಡರಿಬಾಯಿ ಅವರ ರಂಗಪ್ರವೇಶದಲ್ಲೂ ನಿಜವಾಯಿತು. ಅಂದು ಹುಣಸೂರು ಕೃಷ್ಣಮೂರ್ತಿ ಅವರ ಎದುರಿಗೆ ಪಂಡರಿಬಾಯಿ ನಟಿಸಿದರು. ಅಂದು ಯೋಗಾಯೋಗವೆಂಬಂತೆ ಕೆ.ಹಿರಣ್ಣಯ್ಯ ಹಾಗೂ ಪಿಟೀಲ್ ವಿದ್ವಾನ್ ಚೌಡಯ್ಯ ಅವರು ನಾಟಕ ನೋಡಲು ಬಂದಿದ್ದರು. ಬಾಲನಟಿಯ ಪಾತ್ರಕ್ಕೆ ಮನದೂಗಿ ಅವರು ನಿರ್ಮಾಣ ಮಾಡಲು ಯೋಚಿಸಿದ 'ವಾಣಿ' ಚಲನಚಿತ್ರದ ಬಾಲನಟಿ ಪಾತ್ರಕ್ಕೆ ಪಂಡರಿಬಾಯಿ ಅವರನ್ನು ಆಯ್ಕೆಯೂ ಮಾಡಿಕೊಂಡರು. ಈ ಘಟನೆ, ಮುಂದೆ ಭಾರತೀಯ ಚಿತ್ರರಂಗದ ಒಂದು ಅಪೂರ್ವ ಅಧ್ಯಾಯಕ್ಕೆ ಕಾರಣವಾಗುವುದೆಂದು ಆ ದಿನ ಆ ಘಟನೆಯಲ್ಲಿ ಪಾಲ್ಗೊಂಡವರಾರಿಗೂ ಹೊಳೆದಿರಲಿಲ್ಲ. ಮುಂದಿನ ಅವರ ಐವತ್ತು ವರ್ಷಗಳ ಸುಧೀರ್ಘ ಬಣ್ಣದ ಬದುಕಿನ ಹಾದಿ ಅತ್ಯಂತ ರೋಚಕವಾದದ್ದು ಮತ್ತು ಮನರಂಜಿತವಾದದ್ದು ಆಗಿದೆ. ಆದರೆ ಈ ಅಭಿನಯದ ಸಾಗರಕ್ಕೆ ದುಃಖದ ಗುಪ್ತ ನದಿಯೊಂದು ನಿತ್ಯವೂ ಬಂದು ಸೇರುತ್ತಿದ್ದದ್ದು ಮಾತ್ರ ಯಾರಿಗೂ ತಿಳಿಯುವಂತದ್ದಾಗಿರಲಿಲ್ಲ.

ಸರಿಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ ದಾಖಲೆ ಪಂಡರಿಬಾಯಿಯವರ ಪಾಲಿಗಿದೆ. ಕನ್ನಡ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಜನಮಾನಸದ ನೆನಪಿನಲ್ಲಿ ಅಳಿಯದ ನೆನಪಾಗಿ ಉಳಿದು ಹೋಗಿರುವುದು ಪಂಡರಿಬಾಯಿ ಅವರನ್ನು ಜನ ವರ್ಗ ಸ್ವೀಕಾರ ಮಾಡಿದ್ದರ ಗುರುತಾಗಿದೆ. ಪಂಡರಿಬಾಯಿಯವರು ಐವತ್ತು ವರ್ಷಗಳಿಗೂ ಹೆಚ್ಚು ಕಾಲ ಚಿತ್ರರಂಗದಲ್ಲಿ ಕಾರ್ಯನಿರ್ವಹಿಸಿದಂತಹ ಮಹಿಳೆ. ಒಬ್ಬ ನಟಿ ಇಷ್ಟು ಸುದೀರ್ಘ ಕಾಲ ಅಭಿನಯಿಸಿದ್ದು ಕೂಡ ದಾಖಲಾರ್ಹ ಅಂಶ.

ಸ್ವಯಂ-ವರ

ತೆರೆಯ ಮೇಲೆ ತುಂಬು ಕುಟುಂಬವನ್ನು ತಾಯ್ತನವನ್ನು ಆಧ್ಯಾತ್ಮಿಕವಾದ ನೆಲೆಗೇರಿಸಿ ಅಭಿನಯಿಸುತ್ತಿದ್ದ ಪಂಡರಿಬಾಯಿರವರು ಮಾತ್ರ ತನ್ನ ಏರುಯೌವ್ವನದ ಕಾಲದಲ್ಲಿ ಮದುವೆಯ ಬಂಧನದಿಂದ ದೂರ ಉಳಿದದ್ದು ಚಿತ್ರರಂಗದವರಿಗೆ ಬಹುದೊಡ್ಡ ವಿಸ್ಮಯವಾಗಿತ್ತು. ಪಾಂಡುರಂಗನ ಭಕ್ತೆಯಾಗಿದ್ದರೂ ಲೌಕಿಕ ಬದುಕಿನ ಬಗ್ಗೆ ಅಪಾರವಾದ ಅನುರಕ್ತೆಯುಳ್ಳವರಾಗಿದ್ದ ಪಂಡರಿಬಾಯಿ ನಲವತ್ತು ವರ್ಷಗಳಾದರೂ ವಿವಾಹವಾಗದೇ ಉಳಿದಿದ್ದರ ಹಿಂದೆ ಕುಟುಂಬದ ಅಥವಾ ವಿವಾಹದ ಬಗ್ಗೆ ಆಕೆಗೆ ಅನಾದರಣೆಯಿತ್ತು ಎಂಬ ಪುಕಾರು ಹಬ್ಬಿತ್ತು. ಆ ಕಾಲದ ಬಹುದೊಡ್ಡ ನಟರಾದ ಎನ್.ಟಿ.ರಾಮರಾವ್, ಅಕ್ಕಿನೇನಿ ನಾಗೇಶ್ವರರಾವ್, ಬಲರಾಜ್ ಸಹಾನಿ, ರಾಜ್‌ಕುಮಾರ್, ಎಂ.ಜಿ.ಆರ್., ರಾಜೇಶ್‌ಖನ್ನ, ಶಿವಾಜಿಗಣೇಶನ್ ಇಂತಹವರ ಜೊತೆ ನಟಿಸುತ್ತಿರುವಾಗಲೂ ಕೂಡ ಆಕೆಯೆಂದೂ ವಿವಾಹದ ಬಗ್ಗೆ ಯೋಚಿಸದೇ ಇದ್ದಿದ್ದು ಇತರರಿಗೆ ಬಹುದೊಡ್ಡ ಕೌತುಕದ ವಿಷಯವಾಗಿತ್ತು. ಆದರೆ ಜನ ಅರಿಯದ ಸಂಗತಿಯೇನೆಂದರೆ ಪಂಡರಿಬಾಯಿಯವರಿಗೆ ವಿವಾಹವಾಗಬೇಕೆಂದು ಯೋಚಿಸುತ್ತಿರುವ ಕಾಲದಲ್ಲಿ ಒಮ್ಮೆ ಅವರ ತಂದೆ ತಾಯಿಯವರು ಗುಟ್ಟಾಗಿ "ಇವಳನ್ನು ಮದುವೆ ಮಾಡಿಕೊಟ್ಟರೆ ಮುಂದೆ ನಾವು ಹೇಗಿರುವುದು ನಮ್ಮ ಜೀವನವನ್ನು ಹೇಗೆ ಸಾಗಿಸುವುದು" ಎಂದು ಮಾತನಾಡಿಕೊಳ್ಳುವುದನ್ನು ಕೇಳಿಸಿಕೊಂಡ ಪಂಡರಿಬಾಯಿ ಮದುವೆಯಾಗುವ ಆಸೆಯನ್ನೇ ಮುಂದೂಡಿದರು. ಮುಂದೆ ಅವರು 1971ರ ಏಪ್ರಿಲ್ 13ರಂದು ಮದರಾಸಿನಲ್ಲಿ ರಾಮರಾಯರು ಎನ್ನುವ ವಿವಾಹಿತ ವ್ಯಕ್ತಿಯೊಬ್ಬರನ್ನು ಮದುವೆಯಾದರು. ಈ ಸಂಗತಿ ಚಿತ್ರರಂಗಕ್ಕೆ ಬಹು ದೊಡ್ಡ

ಆಘಾತವಾಗಿ ಕಂಡಿತು. ಮಂಡ್ಯದ ರೈತರ ವಿವಿಧೋದ್ದೇಶದ ಸಹಕಾರದ ಸಂಘದಲ್ಲಿ ಮ್ಯಾನೇಜರ್ ಆಗಿದ್ದ ರಾಮರಾಯರು 1966ರಲ್ಲಿ ಮುನಿಸಿಪಲ್ ಕೌನ್ಸಿಲರ್ ಕೂಡ ಆಗಿದ್ದರು. ಆಗ ಸಂಗೀತ, ನಾಟಕ, ವಸ್ತುಪ್ರದರ್ಶನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಚಲನಚಿತ್ರ ನಟಿ-ನಟಿಯರನ್ನು ಕರೆಸಿ ಅವರನ್ನ ಸನ್ಮಾನಿಸುವುದು, ಜನರಿಗೆ ಪರಿಚಯಿಸುವುದು ರಾಮರಾಯರಿಗೆ ವಹಿಸಿದ ಕಾರ್ಯವಾಗಿತ್ತು. ಹೀಗೆ ಪಂಡರಿಬಾಯಿ ಯವರನ್ನ ಒಮ್ಮೆ ಸನ್ಮಾನಕ್ಕೆ ಮಂಡ್ಯ ಜಿಲ್ಲೆಗೆ ಕರೆದಾಗ ಪಂಡರಿಬಾಯಿಗೆ ರಾಮರಾಯರ ಪರಿಚಯವಾಗಿತ್ತು. ಅಲ್ಲಿಂದ ಮುಂದೆ ನಾಲ್ಕೈದು ವರ್ಷಗಳ ಕಾಲ ಮತ್ತೆ ಮತ್ತೆ ತಪ್ಪದೇ ಪರಸ್ಪರ ಭೇಟಿಯಾಗುತ್ತಿದ್ದರೂ ಇವರು ವಿವಾಹವಾಗಬಹುದೆಂಬ ಸೂಚನೆ ಯಾರಿಗೂ ದೊರೆತಿರಲಿಲ್ಲ. ಆದರೆ ಪಂಡರಿಬಾಯಿಯವರು ರಾಮರಾಯರನ್ನು ಕಂಡಂದೇ ಅವರೇ ತನ್ನ ಸಂಗಾತಿಯೆಂದು ನಿರ್ಧರಿಸಿದಂತಿತ್ತು. ಈ ಮದುವೆಗೆ ಸಾಮಾಜಿಕ ಒಪ್ಪಿಗೆ ಪಡೆಯುವುದು ಕಷ್ಟವಿತ್ತು. ಅಲ್ಲದೆ ರಾಮರಾಯರ ಮೊದಲ ಹೆಂಡತಿ ನರಸಮ್ಮ ಮತ್ತು ಮಕ್ಕಳಾದ ಗುರುಪ್ರಸಾದ್ ಹಾಗೂ ನಿತ್ಯಾನಂದ ಇವರುಗಳು ಪಂಡರಿಬಾಯಿಯನ್ನು ಹೇಗೆ ಸ್ವೀಕರಿಸುತ್ತಾರೆಂಬ ಪ್ರಶ್ನೆಯೂ ಇತ್ತು. ಆದರೆ ಬೇಂದ್ರೆ ಹೇಳುವ ಹಾಗೆ "ನನಗೂ ನಿನಗೂ ಅಂಟಿದ ಕೊನೆಬಲ್ಲವರಾರು ಕಾಮಾಕ್ಷಿಯೇ" ಎಂಬಂತೆ ಇವರ ವಿವಾಹ ನಡೆದುಹೋಯಿತು. ತನ್ನ ವಿವಾಹಕ್ಕೆ ಒಪ್ಪಿಗೆ ಕೊಡದ ತಂದೆಯನ್ನು, "ಅಪ್ಪಾ ನಾನು ಮತ್ತೊಂದು ಜನ್ಮವೆತ್ತಿ ಹೆಣ್ಣಾಗಿ ಹುಟ್ಟಲಾರೆ. ಈ ಜನ್ಮದಲ್ಲಿ ಮದುವೆಯಾಗದೆ ಹೋದರೆ ನಾನು ಅಂತರ ಪಿಶಾಚಿಯಾಗಬೇಕಾಗುತ್ತದೆ. ನನಗೆ ಅಂತಹ ಶಿಕ್ಷೆಯನ್ನು ಕೊಡಬೇಡಿ" ಎಂದು ಬೇಡಿ ಅವರನ್ನು ಒಪ್ಪಿಸಿದರು. ತಮ್ಮನ್ನು ವಿವಾಹವಾಗುವಂತೆ ರಾಮರಾಯರಿಗೆ ಆಹ್ವಾನ ಕೊಟ್ಟವರೇ ಪಂಡರಿಬಾಯಿಯವರು. ಪಂಡರಿಬಾಯಿಯವರ ಇಷ್ಟವನ್ನು ನಿರಾಕರಿಸಲಾಗದ ರಾಮರಾಯರು, ಅವರ ಮಿತ್ರರೆಲ್ಲರೂ ಈ ವಿವಾಹಕ್ಕೆ ವ್ಯತಿರಿಕ್ತವಾಗಿದ್ದಾಗ್ಯೂ ತಮ್ಮ ಸಮ್ಮತಿ ನೀಡಿದ್ದರು. ಮುಂದೆ ರಾಮರಾಯರು ತನ್ನ ಸಣ್ಣ ಸಂಸಾರದೊಂದಿಗೆ ಮದರಾಸಿಗೆ ಬಂದು ನೆಲೆಸಿದರು. ಪಂಡರಿಬಾಯಿಯವರಿಗೆ ಈ ಹೊಸ ಜೀವನಕ್ಕೆ ಹೊಂದಿಕೊಳ್ಳುವುದು ಕಷ್ಟವಾಗಲಿಲ್ಲವೆಂದು ಕಾಣುತ್ತದೆ. ತಾಯಿ ಆಗದೆಯೂ ರಾಮರಾಯರ ಮಕ್ಕಳಿಗೆ ತಾಯಿಯಾಗಿ ಅವರ ಶಿಕ್ಷಣ, ಬೆಳವಣಿಗೆ ಮತ್ತು ಯಜಮಾನಿಕೆಯನ್ನು ಅತ್ಯಂತ ಪ್ರೀತಿಯಿಂದ ನೆರವೇರಿಸಿಕೊಂಡು ಬಂದರು. ಈ ಬಗೆಯ ದಾಂಪತ್ಯ ಜೀವನ, ತನ್ನದಲ್ಲದ ಮಕ್ಕಳ ಜವಾಬ್ದಾರಿ, ಕುಟುಂಬದ ನಿರ್ವಹಣೆ-ಇವು ಎಂದಿಗೂ ಅವರಿಗೆ ಬೇಸರವಾಗಲಿ ಅಥವಾ ತಪ್ಪು ಎಂದಾಗಲೀ ಅನ್ನಿಸದೇ ಇದ್ದದ್ದು ಅವರಲ್ಲಿನ ಸಾಧ್ವಿತನಕ್ಕೆ ಸಾಕ್ಷಿ.

ಹಂಚಿ ತಿಂದರೆ ಹಸಿವಿಲ್ಲ

ಪಂಡರಿಬಾಯಿ ಕೇವಲ ನಟಿಯಾಗಿ ಅಷ್ಟೇ ಅಲ್ಲದೆ ಮಾನವೀಯ ಅಂತಃಕರಣಿಯೂ ಆಗಿದ್ದರು. 50-60ರ ದಶಕದಲ್ಲಿ ಹೆಚ್ಚು ಚಲನಚಿತ್ರಗಳಲ್ಲಿ ಕೆಲಸವಿಲ್ಲದಿದ್ದಾಗ, ತನ್ನಂತೆ ಅನೇಕ ಜನ ನಟ-ನಟಿಯರು ಜೀವನದೂಡಲೂ ಹೆಣಗುತ್ತಿರುವುದನ್ನು ಕಂಡು ತಾನೇ 'ಶ್ರೀ ಕೃಷ್ಣಚೈತನ್ಯ ನಾಟಕ ಸಭಾ' ಎಂಬ ಹೆಸರಿನ ಕಂಪನಿಯನ್ನು ಕಟ್ಟಿ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸಲು ಪ್ರಾರಂಭಿಸಿದರು. ಪಂಡರಿಬಾಯಿ ಮತ್ತು ಅಶ್ವತ್ಥ್ ಜೋಡಿಯಾಗಿ ಮೊದಲು ಹೆಸರು ಮಾಡಿದ ನಾಟಕವೆಂದರೆ 'ಶಾಂತಿನಿವಾಸ'. ಕರ್ನಾಟಕದ ಬೇರೆ ಬೇರೆ ಕಡೆ ಯಶಸ್ವಿಯಾದ ಈ ನಾಟಕ ದಾವಣಗೆರೆಯಲ್ಲಿ ನೂರಾ ಒಂದು ಪ್ರದರ್ಶಗಳನ್ನು ನೀಡಿ ಯಶಸ್ವಿಯಾದದ್ದು ಮಾತ್ರ ಇಂದಿಗೂ ಚರಿತ್ರೆ. ಪಂಡರಿಬಾಯಿಯವರ ಕಂಪನಿಯಲ್ಲಿ ರಮಾದೇವಿ, ವಾದಿರಾಜ್, ರತ್ನಾಕರ್, ಅಶ್ವತ್ಥ್ ಮುಂತಾದವರೆಲ್ಲ ಅಭಿನಯಿಸಿದ್ದಾರೆ. 'ಶಾಂತಿನಿವಾಸ' ಸಂಸಾರ ಚಕ್ರದಲ್ಲಿ ಸಿಕ್ಕ ಹೆಣ್ಣೊಬ್ಬಳು ಅನುಭವಿಸುವ ಕೌಟುಂಬಿಕ ಹಿಂಸೆಯನ್ನು ಪ್ರತಿನಿಧಿಸುವ ನಾಟಕ. ಅತ್ತೆಯಾಗಿ ರಮಾದೇವಿ ಮತ್ತು ಸೊಸೆಯಾಗಿ ಪಂಡರಿಬಾಯಿ ನೀಡಿದ ಅಮೋಘ ಅಭಿನಯ, ಆ ಕಾಲಕ್ಕೆ ಮನೆಮಾತಾಗುವಷ್ಟು ಪ್ರಸಿದ್ಧವಾಗಿತ್ತು. ಹೀಗೆ ಕೆಲವೇ ವರ್ಷಗಳಲ್ಲಿ ಪಂಡರಿಬಾಯಿಯವರು ಕಟ್ಟಿದ,

'ಶ್ರೀ ಕೃಷ್ಣ ಚೈತನ್ಯ ನಾಟಕ ಸಭಾ' ನೆಲೆಗೊಂಡು ನಿಂತಿತ್ತು. ಈ ಕಂಪೆನಿ ಆಡಿದ್ದು ಎರಡು–ಮೂರು ನಾಟಕಗಳಾದರೂ ಜನಮಾನಸದಲ್ಲಿ ಅಚ್ಚಳಿಯದ 'ಸಕ್ಕುಬಾಯಿ', 'ಭಕ್ತ ಮೀರಾ', 'ಗೌತಮ ಪುತ್ರ', 'ವಿಕ್ರಮ ಶಶಿಕಲಾ' ಮುಂತಾದ ನಾಟಕಗಳನ್ನು ಈ ಕಂಪನಿಯ ಮೂಲಕ ಪ್ರದರ್ಶಿಸಲಾಗಿತ್ತು. ಹೀಗೆ ಕಂಪನಿ ಆರ್ಥಿಕ ಸಂಕಷ್ಟದಲ್ಲಿದ್ದ ಕಲಾವಿದರ ಬದುಕಿಗೆ ಆಸರೆ ಒದಗಿಸಿದ್ದನ್ನ ನೆನೆಯದವರಿಲ್ಲ. ಪಂಡರಿಬಾಯಿಯವರು 1955ರಲ್ಲಿ 'ಸಂತ ಸಕ್ಕು' ಎಂಬ ಚಿತ್ರವನ್ನು 'ಶ್ರೀ ಪಾಂಡುರಂಗ ಪ್ರೊಡಕ್ಷನ್ಸ್' ಎಂಬ ನಿರ್ಮಾಣ ಸಂಸ್ಥೆಯಿಂದ ನಿರ್ಮಿಸಿದರು. ಚಲನಚಿತ್ರಗಳಿಂದ ಪಡೆದ ಹಣವನ್ನು ಮತ್ತೆ ಆ ರಂಗದಲ್ಲಿಯೇ ತೊಡಗಿಸಿ ಡಾ. ರಾಜ್‌ಕುಮಾರ್‌ರವರು ಅಭಿನಯಿಸಿದ 'ಕೆರಳಿದ ಸಿಂಹ' ಚಿತ್ರವೂ ಸೇರಿದಂತೆ ಹದಿನೈದಕ್ಕೂ ಹೆಚ್ಚು ಚಲನಚಿತ್ರಗಳನ್ನು ನಿರ್ಮಿಸಿ 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬ ಧನ್ಯತೆಗೆ ಒಳಗಾಗಿದ್ದಾರೆ.

ಲೌಕಿಕದೊಳಗಿನ ಅಲೌಕಿಕ ಬದುಕು

ಚಿಕ್ಕಂದಿನಿಂದಲೂ ಕೃಷ್ಣಭಕ್ತೆಯಾಗಿದ್ದ, ಹರಿಕಥೆಗಳನ್ನು ಕಲಿತು ಪಾಂಡುರಂಗನನ್ನು ಸ್ತುತಿಸುತ್ತಿದ್ದ, ಬಾಲೆ ಪಂಡರಿಬಾಯಿ ಮುಂದೆ ಬೆಳೆದಂತೆ ಮನೆತನವನ್ನು ಪೋಷಿಸುವ ಲೌಕಿಕ ವ್ಯಾಪಾರ–ವ್ಯವಹಾರಗಳಲ್ಲಿ ತೊಡಗಿ–ಕೊಂಡಿದ್ದರೂ ಅವರ ಆಂತರಂಗ ಮಾತ್ರ ಅಲೌಕಿಕದಲ್ಲಿ ವ್ಯವಹರಿಸುತ್ತಲೇ ಇತ್ತು. ಹೊರಲೋಕಕ್ಕೆ ಪಂಡರಿಬಾಯಿಯಾಗಿ ಕಾಣುತ್ತಿದ್ದರೂ ವಾಸ್ತವದಲ್ಲಿ ಭಕ್ತ ಮೀರಳಾಗಿ ಬಾಳುತ್ತಿದ್ದರು ಅವರು. ಬಾಲ್ಯಕಾಲದಲ್ಲೇ ಪಡೆದ ಕೃಷ್ಣನ ವಿಗ್ರಹವೊಂದನ್ನು ಆಕೆ ಎಲ್ಲೇ ಹೋದರೂ ಜೊತೆಗೆ ಕೊಂಡೊಯ್ಯುತ್ತಿದ್ದರು. ಆದರೆ ಒಂದು ದಿನ ಆ ವಿಗ್ರಹ ಕಳುವಾಯಿತು. ಆಗ ಕೆಲ ದಿನಗಳ ಕಾಲ ಪಂಡರಿಬಾಯಿ ಅವರು ತನ್ನ ಬದುಕಿನ ಆಸರೆಯಾಗಿದ್ದ ದೈವ ದೂರವಾಯಿತೆಂದು ಮರುಗಿದರು. ಅಂತಹ ಸ್ಥಿತಿಯಲ್ಲಿ ಒಂದು ದಿನ ಕೃಷ್ಣ ತನಗೆ ಮಾತ್ರ ಸೇರಿದವನಲ್ಲ ತನ್ನಂತೆ ಈ ಜಗತ್ತಿಗೆ ಸೇರಿದವನು, ಅವನನ್ನು ತಾನು ಕಟ್ಟಿ ಹಾಕಲು ಸಾಧ್ಯವಿಲ್ಲ ಎಂಬ ಅರಿವು ಧಿಗ್ಗನೆ ಮೂಡಿ, ಮನಸ್ಸು ಕುದುರಿತು ಎಂದು ಅವರೇ ಆಪ್ತರಲ್ಲಿ ಹೇಳಿಕೊಂಡಿದ್ದರು.

ಮೂಲತಃ ಸಾಧ್ವಿಯಾದ ಪಂಡರಿಬಾಯಿರವರು ತನ್ನ ಬಿಡುವಿನ ವೇಳೆಯಲ್ಲಿ ಅಭಂಗಗಳನ್ನು (ಹಾಡಲು ಯೋಗ್ಯವಾದ ಪದ್ಯ ಮರಾಠಿಯಲ್ಲಿ) ರಚಿಸುವುದರಲ್ಲಿ ತೊಡಗುತ್ತಿದ್ದರು. ಪ್ರಾರ್ಥನೆಗಳಲ್ಲಿ ಮೈಮರೆಯುತ್ತಿದ್ದರು. ಆದ್ದರಿಂದಲೇ ಮನೆಯಲ್ಲಿ, ಸೆಟ್‌ನಲ್ಲಿ, ಎಲ್ಲೇ ಇದ್ದರೂ ಅವರ ಹಾಜರಿಯಿಂದ ಸುತ್ತಲ ವಾತಾವರಣಕ್ಕೆ ಒಂದು ಬಗೆಯ ದೈವಿಕತೆ ಪ್ರಾಪ್ತವಾಗುತ್ತಿತ್ತು. ಚಿತ್ರದಲ್ಲಿ ಕಾಣುವ ಸಕ್ಕು ಅಥವಾ ಮೀರ ಪಾತ್ರಗಳಲ್ಲಿ ಲೀನವಾಗುತ್ತಿದ್ದ ಪಂಡರಿಬಾಯಿ ಅವರು ದೈವದ ಆಕರ್ಷಣೆಯಿಂದ ಮುಕ್ತವಾಗಲೇ ಇಲ್ಲ. ತನ್ನ ಇಷ್ಟದೈವಕ್ಕೊಂದು ಬೆಂಗಳೂರಿನಲ್ಲಿ ದೇವಾಲಯ ಕಟ್ಟಿಸಬೇಕು ಎಂದು ಆಸೆಪಟ್ಟರು. ಅದು ಸರ್ಕಾರದ ಅಸಹಕಾರದಿಂದ ಸಾಧ್ಯವಾಗದೇ ಹೋದುದರಿಂದ ಮದರಾಸಿನಲ್ಲಿ ದೇವಾಲಯವನ್ನು ಕಟ್ಟಿಸಿ, ಅಲ್ಲಿ ನಿತ್ಯವೂ ದೈವ ಸಂಕೀರ್ತನೆಯನ್ನು ನಡೆಸಿ ಆನಂದಪಟ್ಟಿದ್ದರು.

ಈ ಮಧ್ಯೆ ಪಂಡರಿಬಾಯಿ ಅವರು ಜ್ಞಾನೇಶ್ವರ ಮಹಾರಾಜರು ಹದಿಮೂರನೇ ಶತಮಾನದಲ್ಲಿ ಬರೆದರೆನ್ನಲಾದ 'ಜ್ಞಾನೇಶ್ವರಿ' ಎಂಬ ಗ್ರಂಥದ ಒಂಬತ್ತು, 12 ಹಾಗೂ 18ನೇ ಅಧ್ಯಾಯಗಳು ಸರ್ವಶ್ರೇಷ್ಠವಾದ್ದರಿಂದ, ಅವುಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು. ಜ್ಞಾನೇಶ್ವರಿಯ ಪರಮ ಭಕ್ತೆ. ಅವರಿಗದು ಪಾಂಡುರಂಗನ ಪ್ರತಿನಿಧಿ. ಮೂಲ ಮರಾಠಿಯಲ್ಲಿ ನಿತ್ಯ ಪಾರಾಯಣ ಮಾಡುತ್ತಿದ್ದ ಅವರು ಮರಾಠಿ ತಿಳಿಯದ ಕನ್ನಡಿಗರಿಗಾಗಿ ಅದನ್ನ ಭಾಷಾಂತರಿಸಿ ಉಪಕಾರ ಮಾಡಿದ್ದಾರೆ.

ಅಭಂಗದ ಕೊನೆಯ ಚರಣ

ಈ ಬದುಕು ವಿಚಿತ್ರ ಎನ್ನುವುದು ಕೆಲವರ ಬದುಕನ್ನು ಅವಲೋಕಿಸಿದಾಗ ಮಾತ್ರ ಗೋಚರಿಸುತ್ತದೆ. ಪಂಡರಿಬಾಯಿಯವರ ಬದುಕು ಖಂಡಿತವಾಗಿಯೂ ಈ ಬಗೆಯ ವಿಚಿತ್ರಗಳಿಂದ ತುಂಬಿಕೊಂಡಿದೆ. ಅವರು ಎಪ್ಪತ್ತೈದು ವರ್ಷಗಳ ಕಾಲ ಬದುಕಿದ್ದರು ಯಾವುದೇ ಜೀವಿಗೂ ಹಾನಿ ಮಾಡದ, ಕಲ್ಪನೆಯಲ್ಲೂ ಹಿಂಸೆಯನ್ನು ಯೋಚಿಸದ ಪಂಡರಿಬಾಯಿಯವರು ತಮ್ಮ ಇಳಿವಯಸ್ಸಿನಲ್ಲಿ ರಸ್ತೆ ಅಪಘಾತದಲ್ಲಿ (18ನೇ ಡಿಸೆಂಬರ್, 1994) ಕೈ ಕಳೆದುಕೊಂಡಿದ್ದು, ಅನೂಹ್ಯವಾದ ನೋವನ್ನ ಅನುಭವಿಸಿದ್ದು ಅವರ ಅಭಿಮಾನಿಗಳಿಗೆ ಅತ್ಯಂತ ದುಃಖದ ಸಂಗತಿ. ಆದರೆ ಸ್ವತಃ ಪಂಡರಿಬಾಯಿಯವರು ಇದೆಲ್ಲವೂ ಕೂಡ ದೈವಲೀಲೆಯೆಂದು ತನ್ನ ಇಷ್ಟದೈವವಾದ ಪಾಂಡುರಂಗನು ಒಡ್ಡಿರುವ ಪರೀಕ್ಷೆಯೆಂದು ನಂಬಿದ್ದರಿಂದ ಆ ಅಸಾಧ್ಯ ನೋವನ್ನ ಮರೆಯಲು ಸಾಧ್ಯವಾಯಿತೆನ್ನಬಹುದು. ಅಪಘಾತದ ನಂತರವೂ ಮೊಂಡು ಕೈಯಿದ್ದರೂ ಸಹ ಒಂದೆರಡು ಚಿತ್ರಗಳಲ್ಲಿ ಅಭಿನಯಿಸುವ ಮೂಲಕ ತಮ್ಮ ಅಂತಃಶಕ್ತಿಯನ್ನು ಹೊರಸೂಸಿದರು. ಅವರು 29ನೇ ಜನವರಿ 2003ರಂದು ಲೌಕಿಕ ಬದುಕಿನ ನೋವುಗಳಿಂದ ಬಿಡುಗಡೆಗೊಂಡು ಅಲೌಕಿಕದೆಡೆಗೆ ಪಯಣಿಸುವುದರೊಂದಿಗೆ ಬಣ್ಣ ತೊಳೆದುಕೊಂಡರು. ಪಂಡರಿಬಾಯಿ ತೀರಿಕೊಂಡು ಇಷ್ಟು ದಿನವಾದರೂ, ಭಾರತೀಯ ಚಿತ್ರರಂಗದಲ್ಲಿ ದಿನನಿತ್ಯ ಅನೇಕ ಅನಂತತೆಯ ಪಾತ್ರಗಳು ಸೃಷ್ಟಿಯಾಗುತ್ತಿದ್ದರೂ, ದೈವೀಕತೆಯ ತಾಯೊಬ್ಬಳ ಪಾತ್ರದ ಗೈರುಹಾಜರಿ ಮಾತ್ರ ಎದ್ದು ಕಾಣುತ್ತಿದೆ. ಕನ್ನಡ ಚಿತ್ರರಂಗ ಪಂಡರಿಬಾಯಿಯವರನ್ನ 'ಗುಣಸಾಗರಿ' ಎಂಬ ಅನ್ವರ್ಥಕವಾದ ಬಿರುದಿತ್ತು ಗೌರವಿಸಿದ್ದು ಆಕೆಗೆ ಸಂದ ಲೆಕ್ಕವಿಲ್ಲದಷ್ಟು ಪ್ರಶಸ್ತಿಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದಾಗಿದೆ.

——— * ———

ಲೋಕಮಾತೆ ರತ್ನಮ್ಮ ಹೆಗಡೆ

ಡಾ: ಬಿ.ಎಲ್.ಶಂಕರ್

ಪರೋಪಕಾರಾಯ ಫಲಂತಿ ವೃಕ್ಷಾಃ
ಪರೋಪಕಾರಾಯ ವಹಂತಿ ನದ್ಯಃ
ಪರೋಪಕಾರಾಯ ದುಹಂತಿ ಗಾವಃ
ಪರೋಪಕಾರಾರ್ಥಮಿದಂ ಶರೀರಮ್

–ಭಾರತೀಯ ಸನಾತನ ಸಂಸ್ಕೃತಿಯ ಈ ನುಡಿಮುತ್ತಿನಂಥವರು ಧರ್ಮಾನುರಾಗಿ ಮಾತೃಶ್ರೀ ಧರ್ಮಸ್ಥಳ ರತ್ನಮ್ಮ ಹೆಗ್ಗಡೆಯವರು. "ಮಾನವನ ಬದುಕಿನಲ್ಲಿ ಧರ್ಮ ಮತ್ತು ಸಂಸ್ಕೃತಿಗಳೆರಡೂ ಬಹಳ ಮುಖ್ಯ. ಧರ್ಮ ಜೀವನದಲ್ಲಿ ಶಿಸ್ತು ಮತ್ತು ಸಂಯಮಗಳನ್ನು ತಂದುಕೊಟ್ಟರೆ ಸಂಸ್ಕೃತಿ ಜೀವನಸೌಂದರ್ಯವನ್ನು ರೂಪಿಸುತ್ತದೆ. ಧರ್ಮದಿಂದ ಚ್ಯುತನಾದ ವ್ಯಕ್ತಿಯ ಜೀವನ ಲಂಗುಲಗಾಮಿಲ್ಲದ ಕುದುರೆಯ ಓಟದಂತೆ. ಆದರೆ ಸಂಸ್ಕೃತಿಹೀನನ ಜೀವನ ಬರಡಾಗುತ್ತದೆ. ಹೀಗಾಗದೆ ಜೀವನರಥ ಸುಗಮವಾಗಿ ಸಾಗಬೇಕಾದರೆ, ನಾವು ಜೀವನದಲ್ಲಿ ಧರ್ಮವನ್ನು ಅಂಗೀಕರಿಸಿ ಆ ಮೂಲಕ ನಿತ್ಯಜೀವನದಲ್ಲಿ ಒಂದು ಶಿಸ್ತುಬದ್ಧತೆ ಸಂಯಮವನ್ನು ಪಾಲಿಸುತ್ತಾ ಆದರ್ಶಜೀವನ ನಡೆಸಬೇಕು. ಸಮ್ಯಗ್ದರ್ಶನ ಜ್ಞಾನಚಾರಿತ್ರ್ಯಗಳನ್ನು ಹೊಂದುವ ಪ್ರಾಮಾಣಿಕ ಪ್ರಯತ್ನದಲ್ಲಿ ನಿರತರಾಗಬೇಕು.ಸಮಯದ ಸದುಪಯೋಗಮಾಡುತ್ತಾ ಸತ್‌ಚಿಂತನೆ ಮತ್ತು ಸತ್ಕಾರ್ಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು" –ಎಂಬ ಆದರ್ಶಮಯ ಸಂದೇಶವನ್ನು ರತ್ನಮ್ಮನವರು ಸಮಾಜಕ್ಕೆ ನೀಡಿದ್ದು ಮಾತ್ರವಲ್ಲ, ಅಂತೆಯೇ ತಮ್ಮ ಬಾಳಪಯಣದುದ್ದಕ್ಕೂ ಅಳವಡಿಸಿಕೊಂಡು, ಭಾರತೀಯ ಸಂಸ್ಕೃತಿಯ ಆದರ್ಶನಾರಿ ಪರಿಕಲ್ಪನೆಯನ್ನು ಶ್ರೀಮಂತಗೊಳಿಸಿ, ಒಬ್ಬ ಶ್ರೇಷ್ಠ ಶ್ರಾವಕಿಯಾಗಿ ರೂಪುಗೊಂಡರು.

ಸುಸಂಸ್ಕೃತ ಹಿನ್ನೆಲೆ ಮತ್ತು ವ್ಯಕ್ತಿತ್ವದರ್ಶನ

ಸಂಸ್ಕೃತ–ಪ್ರಾಕೃತ, ಅರ್ಧಮಾಗಧಿ, ಜೈನ ಆಗಮಶಾಸ್ತ್ರ ಹಾಗೂ ಸಾಹಿತ್ಯವನ್ನು ಅಭ್ಯಸಿಸಿ ವಿದ್ಯಾಸಂಪನ್ನೆಯಾಗಿದ್ದ ತಮ್ಮ ದೊಡ್ಡಮ್ಮ ಶಿವದೇವಿ ಅಮ್ಮನವರ ಪ್ರಭಾವಲಯದಲ್ಲಿ ಜೀವನದರ್ಶನ ಪಡೆದವರು ರತ್ನಮ್ಮನವರು. ಉತ್ತಮ ಆಚಾರ–ವಿಚಾರಗಳು, ಧಾರ್ಮಿಕ ಪರಿಸರ, ಸಂಯಮಬದ್ಧ ಜೀವನ, ಪೂಜೆ–ವ್ರತಾಚರಣೆಗಳ ಪರಿಸರದಲ್ಲಿ ಬೆಳೆದುಬಂದ ಶ್ರೀಮತಿ ರತ್ನಮ್ಮನವರು ಪ್ರಾರ್ಥನೆಗೆ ಇನ್ನಿಲ್ಲದ ಮಹತ್ವ ನೀಡಿದ್ದರು. ಸಂಗೀತಗಾರನೊಬ್ಬ ತನ್ನ ಶಾರೀರವನ್ನು ಮೂಲಶೃತಿಯೊಂದಿಗೆ ಸಂಲಗ್ನಗೊಳಿಸಿ ಹಾಡುವಂತೆ, ಪ್ರಾರ್ಥಿಸುವಾತ ತನ್ನ ವೈಯಕ್ತಿಕತೆಯನ್ನು ವಿಶ್ವಚೈತನ್ಯದೊಂದಿಗೆ ಶೃತಿಗೊಳಿಸುವಂತೆ, ವ್ಯಕ್ತಿಯ ಉಸಿರು ಮಹಾಪ್ರಜ್ಞೆಯ ಉಸಿರಲ್ಲಿ ಸೇರಿ, ತನ್ನ ಪ್ರತ್ಯೇಕತೆಯನ್ನು ಕಳೆದುಕೊಳ್ಳುತ್ತದೆ; ಆಗಲೇ ಪ್ರಾರ್ಥನೆ ತಪಸ್ಸಾಗುತ್ತದೆ ಎಂಬ ಸತ್ಯವನ್ನು ಅರಿತಿದ್ದ ಮಾತೃಶ್ರೀಯವರು ಪ್ರಾರ್ಥನೆಯೊಂದಿಗೇ ತನ್ನ ದಿನಚರಿಯನ್ನು ಆರಂಭಿಸುತ್ತಿದ್ದರು. ಚತುರ್ವಿಧ ದಾನ, ಮಠ–ಮಂದಿರ–ಜಿನಾಲಯಗಳ ಜೀರ್ಣೋದ್ಧಾರ, ಧಾರ್ಮಿಕ ಗ್ರಂಥಗಳ ಪ್ರಕಾಶನ, ಶಾಸ್ತ್ರದಾನ, ಭಗವಾನ್ ಬಾಹುಬಲಿಮೂರ್ತಿ ನಿರ್ಮಾಣ ಮತ್ತು ಪ್ರತಿಷ್ಠಾಪನೆ, ನಾಡಿನ ವಿವಿಧ

ಜೈನಕ್ಷೇತ್ರಗಳಲ್ಲಿ ಮಹಾಮಸ್ತಕಾಭಿಷೇಕಗಳಲ್ಲಿ ಪಾಲ್ಗೊಳ್ಳುವಿಕೆ, ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರಾವಿಕಾಶ್ರಮ, ಲಲಿತಕಲೆಗಳಿಗೆ ಪ್ರೋತ್ಸಾಹ, ...ಹೀಗೆ ಎಲ್ಲಿಲ್ಲ? ಎಲ್ಲುಂಟು? ಎಂಬ ರೀತಿಯಲ್ಲಿದೆ ಶ್ರೀಮತಿ ರತ್ನಮ್ಮನವರ ಸೇವಾಕೈಂಕರ್ಯ. ಭವಾವಳಿಯಲ್ಲಿ ಮೇರುನಂಬಿಕೆಯನ್ನು ಹೊಂದಿದ್ದರಿಂದಲೋ ಏನೋ ತನ್ನ ವ್ಯಾಪ್ತಿಗೆ ಬಂದ ಪ್ರತಿಯೊಂದು ಜವಾಬ್ದಾರಿಯನ್ನು ಸತ್ಯಧರ್ಮಗಳೆಂದೇ ಬಗೆದು ಅನುಷ್ಠಾನಗೊಳಿಸಿದರು.

ರತ್ನಮ್ಮ ಹೆಗ್ಗಡೆಯವರ ಸಮಗ್ರ ವ್ಯಕ್ತಿತ್ವದರ್ಶನವನ್ನು ಬಹುಶಃ ನಾವು ಡಾ. ಕಮಲಾಹಂಪನಾರವರ ಈ ಕೆಳಗಿನ ಮಾತುಗಳಲ್ಲಿ ಕಾಣಬಹುದು: "ಅವರು ಹೆಜ್ಜೆ ಇಟ್ಟಲ್ಲಿ ದಾನದ ಗುರುತು, ಕಣ್ಣಾಡಿಸಿದಲ್ಲಿ ಧರ್ಮದ ನಡೆ, ಕೈಯಾಡಿಸಿದಲ್ಲಿ ನವಚೈತನ್ಯ, ಮನಮಾಡಿದಲ್ಲಿ ಮಹಾನವಮಿಯಾದರು. ತನ್ನ ಈವ ಗುಣ-ಕಾವ ಗುಣದಿಂದ ಕರ್ನಾಟಕ ಜೈನಸಮಾಜದ ಕಾಮಧೇನುವಾದರು. ಧರ್ಮಸ್ಥಳದ ನಂದನವನದ ಕಲ್ಪವೃಕ್ಷವಾದರು."

ರೂಢಿಗತವಾಗಿರುವ ಸಂಗತಿಗಳಲ್ಲಿ ಅನೂಹ್ಯವಾದ ಹೊಸತನವನ್ನು ಕಂಡು, ಅನುಭವಿಸಲು ಸಹಾಯ ಮಾಡುವ ಮೂರನೆಯ ಕಣ್ಣು-"ಪ್ರತಿಭಾಚಕ್ಷು"ಗಳನ್ನು ಶ್ರೀಮತಿ ರತ್ನಮ್ಮನವರು ಹೊಂದಿದ್ದರೆನ್ನಿಸುತ್ತಿದೆ. ಧರ್ಮಸ್ಥಳದ ಆಧುನಿಕ ನಿರ್ಮಾತೃ ರತ್ನವರ್ಮ ಹೆಗ್ಗಡೆಯವರು ಕ್ಷೇತ್ರದ ಅಭಿವೃದ್ಧಿ ದಿಸೆಯಲ್ಲಿ ಕೈಗೊಂಡ ಕಾರ್ಯಗಳಲ್ಲಿ ಕಾರ್ಯಸೂಚಿಯಾಗಿ, ಆದರ್ಶಸತಿಯಾಗಿ, ಕರ್ತವ್ಯನಿಷ್ಠೆಯಿಂದ ದುಡಿದು; ಅಭಿವನಶಿಲ್ಪಿ ರಾಜರ್ಷಿ ಡಾ. ವೀರೇಂದ್ರ ಹೆಗ್ಗಡೆಯವರ ಸಮಾಜಸೇವಾ ಕಾರ್ಯಗಳಲ್ಲಿ ಮಾರ್ಗದರ್ಶಕ ಶಕ್ತಿಯಾಗಿದ್ದು ಕೊಂಡು; ಮಕ್ಕಳ ಶ್ರೇಯೋಭಿವೃದ್ಧಿ ಹಾಗೂ ಅವರನ್ನು ಸನ್ಮಾರ್ಗದಲ್ಲಿ ಮುನ್ನಡೆಸುವ ಎರಡೂ ಜವಾಬ್ದಾರಿಗಳೊಂದಿಗೆ ಮಮತಾಮಯಿ ತಾಯಿಯಾಗಿದ್ದಲ್ಲದೆ, ಶ್ರೀ ಕ್ಷೇತ್ರ ಧರ್ಮಸ್ಥಳದ ದಾನಪರಂಪರೆಯನ್ನು ಮುಂದುವರಿಸಿಕೊಂಡು ಬರುವಲ್ಲಿ ತಮ್ಮ ನಿಷ್ಠಾಪೂರ್ಣ ಕರ್ತವ್ಯಪರತೆಯನ್ನು ಮೆರೆಯುವ ಮುಖೇನ ಅಭಿವನ ದಾನಚಿಂತಾಮಣಿ ಅತ್ತಿಮಬ್ಬೆಯೆಂದು ಪರಿಗಣಿತರಾಗಲು ಸಾಧ್ಯವಾಯಿತೆಂಬುದು ಎಲ್ಲರ ಭಾವನೆ.

ಪ್ರತಿಭಾಚಕ್ಷುಗಳನ್ನು ಹೊಂದಿರುವವರು ದಿನನಿತ್ಯವೂ ಎದುರಾಗುತ್ತಿರುವ ಪರಿಚಿತ ದೃಶ್ಯಗಳಲ್ಲಿ, ಘಟನೆಗಳಲ್ಲಿ ಅಸಾಧಾರಣವಾದುದೇನನ್ನೋ ಕಾಣುತ್ತಾರೆಂಬ ನಂಬಿಕೆಯಿದೆ. ಅಂತಹವರಿಗೆ ಹಸುಗೂಸಿನ ಕಣ್ಣಿನ ಬೆಳಕು 'ಶಿವನ ಕೈ ಅಲಗು ಹೊಳೆದಂತೆ' ಕಾಣುತ್ತದೆ; ಆಕಾಶದಲ್ಲಿ ಹಾರುವ ಬೆಳ್ಳಕ್ಕಿಗಳ ಸಾಲಿನ ವಿನ್ಯಾಸ 'ದೇವರರುಜು' ಎನ್ನಿಸುತ್ತದೆ; ಬಿಳಿಮುಗಿಲು ಬಾನಿನ ಜಗುಲಿಯಲ್ಲಿ ಆಡುತ್ತಿರುವ ಮಗುವಿನಂತೆ ತೋರುತ್ತದೆ; ಹಕ್ಕಿಗಳ ಹಾಡು 'ಗಿಡಗಂಟೆಗಳ ಕೊರಳಗಾನ' ಎಂದು ಭಾಸವಾಗುತ್ತದೆ; ಹಾರುತ್ತಿರುವ ಗರುಡನ ನೆರಳು ಗಾಂಧೀಜಿಯ ಪ್ರತೀಕವೆನ್ನಿಸುತ್ತದೆ; ಗಾಳಿಯಲ್ಲಿ ತೇಲಿಬರುವ ಹಕ್ಕಿಯ ಗರಿಯೊಂದರ ಸ್ಪರ್ಶ ರಾಮಾಯಣವನ್ನೇ ಬಗೆಗಣ್ಣಿನೆದುರು ತೆರೆದಿಡುತ್ತದೆಂಬುದು ಕವಿಗಳ ವರ್ಣನೆ. ಇವು ಮಾತೃಶ್ರೀಯವರ ಕಾರ್ಯವೈಖರಿಯಲ್ಲಿ ಸ್ಫುಟಗೊಂಡಿವೆ. To me the meanest flower that blows can give thoughts that do often lie to deep for tears ಎಂಬ ವರ್ಡ್ಸ್‌ವರ್ತ್ ಕವಿಯ ಉದ್ಗಾರ ಇದನ್ನೇ ಹೇಳುತ್ತದೆ.

ಪ್ರತಿಭೆಗೆ 'ಅಪೂರ್ವ ವಸ್ತುನಿರ್ಮಾಣ ಸಾಮರ್ಥ್ಯವಿದೆ' ಎನ್ನುತ್ತಾನೆ ಮಹಾದಾರ್ಶನಿಕ ಅಭಿನವಗುಪ್ತ. ಲೌಕಿಕದ ಒಡಲಲ್ಲಿ ಮರೆಯಾಗಿರುವ 'ಅಲೌಕಿಕತೆ'ಯನ್ನೂ, ವ್ಯಾವಹಾರಿಕತೆಯಲ್ಲಿ ಹುದುಗಿರುವ ಪಾರಮಾರ್ಥಿಕತೆಯನ್ನೂ ಕಾಣಬೇಕಾದರೆ ಪ್ರತಿಭೆಯ ಸಹಕಾರ ಬೇಕು. ತಾತ್ತ್ವಿಕ ಭಾಷೆಯಲ್ಲಿ ಹೇಳಬೇಕಾದರೆ ಪ್ರತಿಭೆಯಿಂದಾಗಿ ಮನುಷ್ಯನಿಗೆ ಒಂದು 'ದಿವ್ಯದೃಷ್ಟಿ' ಪ್ರಾಪ್ತವಾಗುತ್ತದೆ. ವಸ್ತುಗಳ ಅಂತರಾಳದಲ್ಲಿರುವ ಆಧ್ಯಾತ್ಮಿಕ ಸೌಂದರ್ಯವನ್ನು ಕಾಣಬೇಕಾದರೆ ಇಂಥ ದಿವ್ಯದೃಷ್ಟಿ ಒದಗಿ ಬರಬೇಕು. ಬಹುಶಃ ಇದು ರತ್ನಮ್ಮನವರಿಗೆ ಒದಗಿಬಂದಿದ್ದರಿಂದಲೇ ಶತಮಾನದ ಅದ್ಭುತವೆಂದು ಪರಿಗಣಿಸಲ್ಪಟ್ಟ ಭಗವಾನ್ ಬಾಹುಬಲಿ ಮೂರ್ತಿನಿರ್ಮಾಣ, ಸಾಗಣೆ ಮತ್ತು ಪ್ರತಿಷ್ಠಾಪನೆ ಸಾಧ್ಯವಾಯಿತು!

ಬರಹಗಾರ್ತಿಯಾಗಿ ಶ್ರೀಮತಿ ರತ್ನಮ್ಮನವರು

ಒಂದು ಪುಟ್ಟ ಮಗುವಿನ ನಿರ್ಮಲ ಮುಗ್ಧ ನಗುವಿನಲ್ಲಿ, ಯಾವುದೋ ಹೂವಿನ ವರ್ಣವೈಭವದಲ್ಲಿ, ಅಜ್ಞಾತಪಕ್ಷಿಯೊಂದರ ಕುಕಿಲಿನಲ್ಲಿ, ನೀಲಾಕಾಶದಲ್ಲಿನ ಚುಕ್ಕೆಗಳ ಕಾಂತಿಯಲ್ಲಿ...ಹೀಗೆ ಎಲ್ಲ ಕಡೆಗಳಲ್ಲಿ ಅನೂಹ್ಯ, ಅನಿರ್ವಚನೀಯವೆನ್ನಿಸುವ ಆನಂದ ನಮ್ಮ ಪಾಲಿಗೆ ಪ್ರಕೃತಿಯಲ್ಲಿ ದೊರೆಯುತ್ತದೆ. ಇದರಿಂದಾಗಿ ಬದುಕೆಂಬುದು ಸುಂದರವೆನ್ನಿಸುತ್ತದೆ; ಪರಿಪೂರ್ಣವೆನ್ನಿಸುತ್ತದೆ. ಇಂಥ ಶುದ್ಧ ಆನಂದ ಅವ್ಯಯವಾದುದು, ಅವಿನಾಶಿಯಾದುದು ಎಂಬುದು ಶ್ರೀಮತಿ ರತ್ನಮ್ಮನವರ ಬಲವಾದ ನಂಬಿಕೆಯಾಗಿತ್ತು. ಆದ್ದರಿಂದಲೇ ಶ್ರೀಮತಿ ರತ್ನಮ್ಮನವರು ಪ್ರಕೃತಿಯ ಆರಾಧಕರಾಗಿದ್ದರು; ಅಷ್ಟೇ ಅಲ್ಲ, ಪ್ರಕೃತಿ–ಪರಿಸರಸಂರಕ್ಷಣೆಯ ಮಹತ್ತ್ವವನ್ನು ಇತರರಿಗೆ ತಿಳಿಯಪಡಿಸಿ, ಆ ದಿಸೆಯಲ್ಲಿ ಹತ್ತುಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದರು.

ಪ್ರವಾಸ ಸಾಹಿತ್ಯದಲ್ಲಿ ಬಹಳಷ್ಟು ಆಸಕ್ತಿಯನ್ನು, ವಿದ್ವಾಂಸರೊಂದಿಗಿನ ತಾತ್ತ್ವಿಕ ಜಿಜ್ಞಾಸೆ–ಸ್ವಾಧ್ಯಾಯಗಳ ಫಲರೂಪವಾಗಿ ಜೀವನಪ್ರೀತಿಯನ್ನೂ ಬೆಳೆಸಿಕೊಂಡಿದ್ದರಿಂದಲೋ ಏನೋ, ಅವರ ಸರಳಮಾತುಗಳೂ ಕೂಡಾ ಮಾರ್ಗದರ್ಶನದ ರೂಪವನ್ನೇ ಹೊಂದಿರುತ್ತಿದ್ದವು. ವಿಷಯ ಯಾವುದೇ ಇರಲಿ, ಎಷ್ಟೇ ಚಿಕ್ಕದಿರಲಿ, ಪ್ರಮಾಣಕ್ಕಿಂತ ಪರಿಪೂರ್ಣತೆಗೇ ಹೆಚ್ಚು ಒತ್ತು ನೀಡುತ್ತಿದ್ದುದು ಮಾತೃಶ್ರೀಯವರ ಹೆಗ್ಗಳಿಕೆ. ಬರಹಗಾರ್ತಿಯಾಗಿಯೂ ಕೈಯಾಡಿಸಿರುವ ಮಾತೃಶ್ರೀಯವರು ತಮ್ಮ ಬದುಕಿನ ಅನುಭವ–ಚಿಂತನಗಳ ಸಾರವನ್ನು ಧರ್ಮಸ್ಥಳ ಕ್ಷೇತ್ರದ ಮಂಜುವಾಣಿ ಪತ್ರಿಕೆಯಲ್ಲಿ "ಮಗಳಿಗೊಂದು ಪತ್ರ" ಅಂಕಣದಲ್ಲಿ ಹಂಚಿಕೊಳ್ಳುತ್ತಿದ್ದರು. ಈ ಲೇಖನಗಳಲ್ಲಿ ಅಡಕವಾಗಿರುತ್ತಿದ್ದ ವಿಚಾರಗಳು ಮತ್ತು ಅವುಗಳ ಪ್ರಭಾವದ ಬಗ್ಗೆ ರಾಷ್ಟ್ರಕವಿ ಕುವೆಂಪುರವರ ಮಾತನ್ನಿಲ್ಲಿ ಸ್ಮರಿಸುವುದು ಬಹಳ ಪ್ರಸ್ತುತವೆನ್ನಿಸುತ್ತಿದೆ. "ಮಂಜುವಾಣಿ ಕೈಗೆ ಬಂದರೆ ನಾನು ಮೊದಲು ಓದುವುದು 'ಮಗಳಿಗೊಂದು ಪತ್ರ' ಮತ್ತು ಅದನ್ನೊಂದನ್ನೇ" –ಇದು ಮಾತೃಶ್ರೀಯವರ ಬರಹಗಾರಿಕೆಯ ಸತ್ತ್ವಕ್ಕೆ ಹಿಡಿದ ಕೈಗನ್ನಡಿ.

ಸಮಾಜಮುಖಿ ಚಿಂತನೆ

ವಾಣಿಜ್ಯೀಕರಣಕ್ಕೆ ಒಳಗಾಗದ ವ್ಯವಸಾಯ ಹಲವಾರು ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನೊಳ–ಗೊಂಡಿರುತ್ತದೆ. ಶ್ರದ್ಧಾವಂತ ಕೃಷಿಕ, ಶರೀರಶ್ರಮವನ್ನು ಒಂದು ಮೌಲ್ಯವೆಂದು ಪರಿಗಣಿಸುತ್ತಾನೆ. ದೈಹಿಕ ದುಡಿಮೆಯಿಂದ ಗಳಿಸುವ ಅನ್ನ ಆತನ ಪಾಲಿಗೆ ಅಮೃತವಾಗುತ್ತದೆ. ಆದ್ದರಿಂದಲೇ ತನ್ನಷ್ಟಕ್ಕೆ ತಾನು ದುಡಿಯುತ್ತಾ ಬದುಕುವ, ಹಾಗೆಯೇ ಇತರರನ್ನೂ ಬದುಕಿಸುವ ರೈತನನ್ನು ಕುವೆಂಪು 'ನೇಗಿಲಯೋಗಿ' ಎಂದು ಕರೆದಿರುವುದು. ಗಾಂಧೀಜಿಯವರು ಸ್ವೀಕರಿಸಿದ್ದ ಏಕಾದಶ ವ್ರತಗಳಲ್ಲಿ ಶರೀರಶ್ರಮವೂ ಒಂದು. ಯಾಂತ್ರೀಕರಣಗೊಳ್ಳುವ ಮೊದಲು ಕೃಷಿ ಎಂಬುದು ಸಮುದಾಯದಲ್ಲಿ ಸಾಮರಸ್ಯ, ಸಹಕಾರ ಮುಂತಾದ ಗುಣಗಳನ್ನು ಪ್ರೇರಿಸುವ ಒಂದು ವೃತ್ತಿಯಾಗಿತ್ತು. ಕುಟುಂಬದ ಮತ್ತು ಸಮಾಜದ ಒಗ್ಗಟ್ಟಾಗಿ ದುಡಿದಾಗ ವ್ಯವಸಾಯ ಸುಲಭವಾಗುತ್ತಿತ್ತು. 'ಸಫಲ' ವೆನ್ನಿಸಿಕೊಳ್ಳುತ್ತಿತ್ತು. ಗ್ರಾಮೀಣ ಉಪಕಸುಬುಗಳಾದ ಬಡಗಿತನ, ಕಮ್ಮಾರಿಕೆ, ಕುಂಬಾರಿಕೆ ಇಂಥವೆಲ್ಲವೂ ಕೃಷಿಗೆ ಪೂರಕವಾಗಿ ಬೆಳೆದು, ಗ್ರಾಮಜೀವನ ಸುಂದರವಾಗಿ, ವ್ಯವಸ್ಥಿತವಾಗಿ ರೂಪುಗೊಳ್ಳುತ್ತಿತ್ತು. ಕೃಷಿಯ ಬುನಾದಿಯ ಮೇಲೆ ನಿಂತ ಬದುಕು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅರಳಿಕೊಳ್ಳಲು ಸಾಧ್ಯವಾಗುತ್ತಿತ್ತು ಎಂಬುದನ್ನು ಮನಗಂಡಿದ್ದ ಮಾತೃಶ್ರೀ ರತ್ನಮ್ಮನವರು ಗ್ರಾಮಾಭಿವೃದ್ಧಿ, ಗ್ರಾಮೀಣ ಕೃಷಿಕ ಕುಟುಂಬಗಳ ಭೇಟಿ, ಗ್ರಾಮೀಣ ಕರಕುಶಲ ವೃತ್ತಿಗಳ ಬಗ್ಗೆ ಅಭಿಮಾನ, ಮಹಿಳಾ ಸಬಲೀಕರಣದ ಬಗ್ಗೆ ಒತ್ತಾಸೆ, ಶ್ರೀಕ್ಷೇತ್ರದ ನೌಕರರ ಕುಟುಂಬಗಳ ಒಳಿತಿನ ಬಗೆಗಿನ ಸದಾ ಪ್ರೋತ್ಸಾಹ, ನಾಡಿನ ಲಲಿತಕಲೆಗಳಿಗೆ ಹಾಗೂ ಸಾಹಿತಿ–ಕಲಾವಿದರುಗಳಿಗೆ ನೀಡುತ್ತಿದ್ದ ಪ್ರೀತ್ಯಾಭಿಮಾನ, ಪ್ರಕೃತಿಚಿಕಿತ್ಸಾ ಪದ್ಧತಿಯನ್ನು ಜನಪ್ರಿಯಗೊಳಿಸುವಲ್ಲಿನ ಆಸ್ಥೆ, ಕ್ಷೇತ್ರದ ಶಿಕ್ಷಣಸಂಸ್ಥೆಗಳಲ್ಲಿ ಮಾನವೀಯ ಸಂಸ್ಕಾರವನ್ನು ಅಳವಡಿಸಲು ಪಡುತ್ತಿದ್ದ ಶ್ರಮ...ಇವುಗಳನ್ನು

ತಾವೇ ಸ್ವತಃ ಕಂಡುಕೊಂಡ ಮಾತೃಶ್ರೀ ರತ್ನಮ್ಮನವರ ಸಮಾಜಮುಖೀ ಚಿಂತನೆಯ ಕೆಲವು ಮಗ್ಗಲುಗಳಷ್ಟೇ. ಶ್ರೀ ಕ್ಷೇತ್ರದ ಶಿಕ್ಷಣಸಂಸ್ಥೆಗಳಲ್ಲೊಂದಾದ ಧಾರವಾಡದ ಜೆ.ಎಸ್.ಎಸ್. ಕಾಲೇಜಿನಲ್ಲಿ ಪದವಿಶಿಕ್ಷಣವನ್ನು ಹಾಗೂ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಉಜಿರೆಯಲ್ಲಿ ಪಡೆಯುವ ಅವಕಾಶ ನನಗೂ ಲಭಿಸಿತ್ತೆಂಬುದನ್ನು ನಾನಿಲ್ಲಿ ಸ್ಮರಿಸಿಕೊಳ್ಳಬಯಸುತ್ತೇನೆ.

ಅಧ್ಯಯನಶೀಲತೆಯನ್ನು ಬಹುವಾಗಿ ನೆಚ್ಚಿಕೊಂಡಿದ್ದ ಶ್ರೀಮತಿ ರತ್ನಮ್ಮನವರ ಗ್ರಂಥಗಳು ವ್ಯಕ್ತಿಯ ಜೀವನಸಂಸ್ಕಾರ ನಿರ್ಮಾಣ-ನಿರೂಪಣೆಯಲ್ಲಿ ಹೇಗೆ ಪ್ರಮುಖ ಪಾತ್ರವಹಿಸಬಲ್ಲವು ಎಂಬ ಬಗ್ಗೆ ಸ್ವತಃ ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ. ತಮ್ಮ ಬದುಕಿನಲ್ಲಿ ಸಮಚಿತ್ತ ಮತ್ತು ಜೀವನಪ್ರೀತಿಯನ್ನು ಉಳಿಸಿ ಬೆಳೆಸಿಕೊಳ್ಳುವಲ್ಲಿ ಸಮಯಸಾರ, ರಯಣಸಾರ ಮತ್ತು ಶ್ರೀ 108 ಶಾಂತಿಸಾಗರಮುನಿಗಳ ಜೀವನಚರಿತ್ರೆ ಎಂಬ ಮೂರು ಗ್ರಂಥಗಳು ತಮ್ಮ ಮೇಲೆ ಅಗಾಧ ಪ್ರಭಾವ ಬೀರಿರುವ ಕುರಿತು ಮುಕ್ತವಾಗಿ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

ಮಾತೋಶ್ರೀಯವರ ನಿತ್ಯಸಂದೇಶ

ನಮಗೆ ಹಳೆಯದು ಬೇಕು; ಒಂದು ಸಾಂಸ್ಕೃತಿಕ ಸಂಪತ್ತಿನ ರೂಪದಲ್ಲಿ, ಅನುಭವ ಸಂಪತ್ತಿನ ರೂಪದಲ್ಲಿ, ಜ್ಞಾನ, ವಿಜ್ಞಾನ, ಅಧ್ಯಾತ್ಮ ಪರಿಪಾಕ ಮಾರ್ಗದರ್ಶನದ ರೂಪದಲ್ಲಿ. ಅಂದರೆ, ವರ್ತಮಾನವೆಂಬುದು ಸಶಕ್ತವಾಗಿ ಸತ್ತ್ವಭರಿತ ಹೆಜ್ಜೆ ಇಡಬೇಕಾದರೆ ಅದಕ್ಕೆ ಹಳೆಯದರ ಬುನಾದಿ ಬೇಕು. ಈ ಬುನಾದಿಯನ್ನು ನಾವು ಪರಂಪರೆಯೆಂದು ಗುರುತಿಸುತ್ತೇವೆ. ಒಂದು ಶ್ರೀಮಂತ ಪರಂಪರೆಯಿರುವ ಜನಾಂಗಕ್ಕೆ ಶ್ರೀಮಂತವಾದ ತತ್ತ್ವಜ್ಞಾನದ ಕಲಾ ಜಗತ್ತಿನ, ಜನಪದ ಸ್ವರೂಪದ ಸತ್ತ್ವಗಳು ವರ್ತಮಾನವನ್ನು ಕಟ್ಟಿ ಕೈಹಿಡಿದು ನಡೆಸುತ್ತವೆ. ಇದು ಅನೇಕ ಸಂದರ್ಭಗಳಲ್ಲಿ ಕಲಿಕೆಯ ರೂಪದಿಂದ ವರ್ತಮಾನಕ್ಕೆ ವೇದ್ಯವಾಗದೆ ಅಮೂರ್ತ ನೆಲೆಗಳಲ್ಲಿ ವಂಶವಾಹಿಗಳ ರೂಪದಲ್ಲಿ ಗಮ್ಯವಾಗುತ್ತವೆ. ಈ ಶಕ್ತಿ ಈ ಅಂಶಗಳಾಗಿರುವುದರಿಂದಲೇ ವರ್ತಮಾನ ಪ್ರಜ್ಞಾಪೂರ್ವಕವಾಗಿ ಅವುಗಳನ್ನು ನಿವಾರಿಸಿಕೊಳ್ಳಬೇಕೆಂದು ಬಯಸಿದರೂ ತ್ಯಜಿಸಲಾಗುವುದಿಲ್ಲ. ಅವು ನಮ್ಮ ನಡೆ-ನುಡಿಗಳಲ್ಲಿ, ಆಂಗಿಕ ಭಾಷೆಯಲ್ಲಿ, ಆಹಾರಶೈಲಿಯಲ್ಲಿ ಮತ್ತು ನಮ್ಮ ದೈಹಿಕಚಹರೆ ಮತ್ತು ವಿನ್ಯಾಸದಲ್ಲಿ ಅಯಾಚಿತವಾಗಿ ಜಿಂಜಿತವಾಗಿರುತ್ತವೆ.

ವಿಶಾಲವಾದ ಮಾನವತೆಯ ಆಧಾರದ ಮೇಲೆ ವಿಶ್ವಕುಟುಂಬಿಯಾಗಬೇಕಾಗಿರುವ ಮನುಷ್ಯ ತನ್ನ ಜಾತಿ-ಮತದ ಸೀಮಿತ ವೃತ್ತದಲ್ಲಿ ಬಿದ್ದು ಒದ್ದಾಡುವಂತಾದರೆ, ಅದೇ ಸತ್ಯವೆಂಬ ಅಲ್ಪಜ್ಞಾನದಿಂದ ಪರಮತ, ಪರಜನಾಂಗ-ವರ್ಣಗಳನ್ನು, ದ್ವೇಷಿಸುವ ಹಂತಕ್ಕೆ ತಲುಪುವಂತಾಗಿದೆ. ಇಂಥಾ ಒಂದು ಸಂಕೀರ್ಣ ಜೀವನಶೈಲಿಯಲ್ಲಿ ಬದುಕು ನಡೆಸುತ್ತಿರುವ ಇಂದಿನ ಮಕ್ಕಳನ್ನು ದೇಶದ ಮುಂದಿನ ಜವಾಬ್ದಾರಿಯುತ ಪ್ರಜೆಗಳನ್ನಾಗಿ ಹೇಗೆ ರೂಪಿಸಬೇಕು? ಈ ಬಗ್ಗೆ ಮಕ್ಕಳ ಪಾಲಕರು-ಹಿರಿಯರು ಯಾವರೀತಿಯಲ್ಲಿ ತಮ್ಮ ಜವಾಬ್ದಾರಿಯನ್ನು ನಿಭಾಯಿಸಬೇಕೆಂಬ ಬಗ್ಗೆ ಮಾತೋಶ್ರೀ ರತ್ನಮ್ಮನವರ ಹಿತನುಡಿ- "ಇಂದಿನ ಮಕ್ಕಳಲ್ಲಿ ಉತ್ತಮ ಸಂಸ್ಕಾರಗಳನ್ನು ರೂಪಿಸುವುದು, ಹಿರಿಯರ ಕರ್ತವ್ಯವಾಗಿದೆ. ಪಾಶ್ಚಾತ್ಯ ಸಂಸ್ಕೃತಿ ಭಾರತೀಯತೆಯನ್ನು ನುಂಗಿ ನೀರುಕುಡಿಯಲು ಹೊರಟಿರುವ ಈ ಕಾಲದಲ್ಲಿ ನಾವು ಎಷ್ಟು ಯೋಚಿಸಿದರೂ ಸಾಲದು. ಹೀಗಿರುವಾಗ ಮುಂದಿನ ಜನಾಂಗವಾಗಲಿರುವ ಇಂದಿನ ಮಕ್ಕಳಿಗೆ ನನ್ನ ಸಂದೇಶವೆಂದರೆ, ಮನುಷ್ಯನನ್ನು ಮನುಷ್ಯತ್ವದಿಂದ ದೇವತ್ವದೆಡೆಗೆ ಕೊಂಡೊಯ್ಯಬಲ್ಲ ಶಕ್ತಿ ಇರುವ ಭಾರತೀಯ ಸಂಸ್ಕೃತಿಯನ್ನು ಕಡೆಗಣಿಸಬೇಡಿ. ವಿದೇಶೀಯರಿಗೂ ಇಂದು ದಾರಿದೀಪವಾಗಿ ಪರಿಣಮಿಸುತ್ತಿರುವ ನಮ್ಮ ಮಾತೃಸಂಸ್ಕೃತಿಯನ್ನು ಹೃದಯ ಪೂರ್ವಕವಾಗಿ ಅನುಷ್ಠಾನದಲ್ಲಿ ಉಳಿಸಿಕೊಳ್ಳುವ ಪ್ರಯತ್ನಮಾಡಿರಿ."

——— * ———

ಸೃಜನಶೀಲತೆ ಹಾಗೂ ವಿದ್ವತ್ತು ಸಂಗಮ ನಾಡೋಜಾ ಕಮಲಾ ಹಂಪನಾ

ಡಿ. ಸ್ಮಿತಾರೆಡ್ಡಿ

ಕನ್ನಡ ಸಾಹಿತ್ಯ ಚರಿತ್ರೆಯ ಪುಟಗಳನ್ನು ಪರಿವೀಕ್ಷಿಸುವಾಗ ಡಾ॥ ಕಮಲಾ ಹಂಪನಾರವರು ನಮಗೆ ದೃಗ್ಗೋಚರವಾಗುವುದು ಬಹುಮುಖಿ ಪ್ರತಿಭೆಯ ಸಾಹಿತಿಯಾಗಿ. ಅವರು ಸೃಜನಶೀಲ ಸಾಹಿತಿಯಾಗಿ, ಪರಿಣಿತ ಗ್ರಂಥ ಸಂಪಾದಕಿಯಾಗಿ, ಪಾಂಡಿತ್ಯಪೂರ್ಣ ಸಂಶೋಧಕಿಯಾಗಿ, ವಿಮರ್ಶಕಿಯಾಗಿ, ಅನುವಾದಕಿಯಾಗಿ ನಾನಾ ಪ್ರಕಾರಗಳಲ್ಲಿ ಕೈಯಾಡಿಸಿದ್ದಾರೆ. ಕಮಲಾ ಹಂಪನಾರವರ ಸಾಧನಾ ಕ್ಷೇತ್ರದ ಹರಹು ತುಂಬಾ ವಿಸ್ತಾರ. ಅದೊಂದು ಮಹಾಸಾಗರ. ಅದನ್ನು ಈ ಲೇಖನದಲ್ಲಿ ಕಾಣಿಸುವುದು ಅಸಂಭವ. ಅದರಲ್ಲಿ ಒಂದು ಬೊಗಸೆಯಷ್ಟನ್ನು ಮಾತ್ರ ಲೇಖನದಲ್ಲಿ ನೀಡಲು ಸಾಧ್ಯವಾಗುತ್ತಿದೆ.

ಡಾ॥ ಕಮಲಾ ಹಂಪನಾರವರು ಶ್ರೀಮಂತ ಸುಸಂಸ್ಕೃತ ಮನೆತನದಲ್ಲಿ ಶ್ರೀ ಸಿ. ರಂಗಧಾಮ ನಾಯಕ ಮತ್ತು ಶ್ರೀಮತಿ ರಂಗಲಕ್ಷ್ಮಮ್ಮನವರ ಏಳನೇ ಮಗಳಾಗಿ 1935ರಲ್ಲಿ ಜನ್ಮತಾಳಿದರು. ಎಳವೆಯಲ್ಲೇ ತಂದೆಯನ್ನು ಕಳೆದುಕೊಂಡು ಅಜ್ಜಿಯ ಕಥಾಸಾಗರದಲ್ಲಿ ಈಜುತ್ತಾ ಇತಿಹಾಸ-ಪುರಾಣದ ಪಾತ್ರಗಳನ್ನು ಪರಿವೀಕ್ಷಿಸುತ್ತಾ ಬೆಳೆದಂತೆ, ಸಹಜವಾಗಿಯೇ ಕನ್ನಡ ನಾಡು-ಸಾಹಿತ್ಯ-ಸಂಸ್ಕೃತಿಯ ಬಗ್ಗೆ ಒಲವು ಮೂಡಲಾರಂಭಿಸಿತು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಂಧುಬಳಗದ ಆಸರೆಯಲ್ಲಿ ಚಳ್ಳಕೆರೆ, ಯಳಂದೂರು, ಅಮೃತೂರು, ಭದ್ರಾವತಿ, ತುಮಕೂರು, ಮೈಸೂರು ಮುಂತಾದ ಕಡೆ ನಡೆಸಿದರು. ಮೈಸೂರಿನಲ್ಲಿ ಬಿ.ಎ ಆನರ್ಸ್ ಮತ್ತು ಎಂ.ಎ. ಅಭ್ಯಸಿಸುವಾಗ ಕುವೆಂಪು, ಡಿ.ಎಲ್.ಎನ್, ತೀನಂಶ್ರೀ, ತ.ಸು.ಶಾಮರಾವ್ ಮುಂತಾದ ಹಿರಿಯ ಕವಿ, ವಿದ್ವಾಂಸರ ಬೋಧನೆ, ಉಪನ್ಯಾಸಗಳಿಂದ ಸ್ಫೂರ್ತಿಪಡೆದರು. ಅಲ್ಲಿಯೇ ಮೈಸೂರು ವಿಶ್ವವಿದ್ಯಾಲಯದಲ್ಲಿ 'ತುರಂಗ ಭಾರತ-ಒಂದು ಅಧ್ಯಯನ' ಎಂಬ ವಿಷಯದ ಬಗ್ಗೆ ಪಿಹೆಚ್.ಡಿ. ಪದವಿ ಪಡೆದರು. ಉತ್ತಮ ಸಂಶೋಧಕರಾದ ಡಾ॥ ಹಂ.ಪ. ನಾಗರಾಜಯ್ಯನವರನ್ನು ತಮ್ಮ ಬಾಳಸಂಗಾತಿಯನ್ನಾಗಿ ಸ್ವೀಕರಿಸಿ ವೈವಾಹಿಕ ಜೀವನಕ್ಕೆ ಕಾಲಿಟ್ಟರು. 35 ವರ್ಷಗಳ ಯಶಸ್ವಿ ಅಧ್ಯಾಪನ ವೃತ್ತಿಯನ್ನು ಪೂರ್ಣಗೊಳಿಸಿ 1993ರಲ್ಲಿ ನಿವೃತ್ತಿಯಾದರೂ ಸಾಹಿತ್ಯ ಸೇವೆಯ ಪ್ರವೃತ್ತಿಯನ್ನು ಕೈಬಿಡಲಿಲ್ಲ. ನಿವೃತ್ತಿಯ ನಂತರ ಮೈಸೂರು ವಿಶ್ವವಿದ್ಯಾಲಯದ ಜೈನಶಾಸ್ತ್ರ-ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷರಾಗಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಬರಹಗಳು

ಕಮಲಾ ಹಂಪನಾರವರು ಮಹಿಳೆಯರಿಗೆ ಮುಚ್ಚಿದಂತಿದ್ದ ಎಲ್ಲ ಕ್ಷೇತ್ರಗಳಿಗೆ ನುಗ್ಗಿ, ಹಲವಾರು ಹೊಸ ಹೊಸ ವಿಷಯಗಳನ್ನು ಬೆಳಕಿಗೆ ತಂದಿದ್ದಾರಲ್ಲದೆ, ಆ ಕ್ಷೇತ್ರಗಳ ಪ್ರಖರತೆಗೂ ಕಾರಣರಾಗಿದ್ದಾರೆ. ಅರವತ್ತರ ದಶಕದಲ್ಲಿ ಬರೆಯಲು ಪ್ರಾರಂಭಿಸಿದ ಪ್ರೊ॥ ಕಮಲಾ ಹಂಪನಾರವರು ಈವರೆಗೆ ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸುಮಾರು ಐವತ್ತಕ್ಕೂ ಅಧಿಕ ಕೃತಿಗಳನ್ನು ಬರೆದಿದ್ದಾರೆ. ಇದಲ್ಲದೆ, ಬಾನುಲಿ ನಾಟಕಗಳು,

ರೂಪಕಗಳನ್ನು ಸಹ ರಚಿಸಿದ್ದಾರೆ. ಸಮಾನಾಂತರ ಸಾಹಿತ್ಯ ವೇದಿಕೆಯಲ್ಲಿ ಮಹಿಳಾ ಸಾಹಿತ್ಯ ಮತ್ತು ಪುರುಷ ಸಾಹಿತ್ಯವೆಂದು ಪ್ರತ್ಯೇಕೀಕರಿಸಿ ಚರ್ಚೆ-ವಿಮರ್ಶೆಗೆ ಅವಕಾಶವೇ ಮಾಡಿಕೊಡದಂಥ ಪ್ರಸಕ್ತ ಸಾಹಿತ್ಯ ಸಂದರ್ಭದಲ್ಲಿ ಡಾ॥ ಕಮಲಾ ಹಂಪನಾರವರ ಬರಹಗಳು ಇವೆಲ್ಲವನ್ನು ಮೀರಿ ನಿಂತು ಓದುಗರ ಸಾಹಿತ್ಯವಾಗಿ ಗಟ್ಟಿಯಾಗಿ ತಳವೂರಿವೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಆಳವಾಗಿ ಶೋಧಿಸಿ ಹಲವಾರು ಕೃತಿರತ್ನಗಳನ್ನು ಹೊರದೆಗೆದಿದ್ದಾರೆ. ಇವರು ಸ್ಪರ್ಷಿಸದ ಸಾಹಿತ್ಯ ಪ್ರಕಾರವೇ ಇಲ್ಲವೆಂದರೆ ಅತಿಶಯೋಕ್ತಿಯಾಗದು. ಕಥಾ ಸಾಹಿತ್ಯ, ಶಿಶು ಸಾಹಿತ್ಯ, ಆಧುನಿಕ ವಚನಗಳು, ಗ್ರಂಥ ಸಂಪಾದನೆ, ವಿಮರ್ಶೆ, ಸಂಶೋಧನೆ, ಅನುವಾದ, ವ್ಯಕ್ತಿಚಿತ್ರಗಳು ಹೀಗೆ ಇನ್ನೂ ಹಲವಾರು ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ.

ಕಥಾ ಸಾಹಿತ್ಯ

ಕಮಲಾ ಹಂಪನಾರವರು ಈ ವರೆಗೆ "ನಕ್ಕಿತು ಹಾಲಿನ ಬಟ್ಟಲು, ರೆಕ್ಕೆ ಮುರಿದಿತ್ತು, ಬಣವೆ, ಚಂದನಾ, ಎಂಬ ನಾಲ್ಕು ಕಥಾ ಸಂಕಲನಗಳನ್ನು ಹೊರತಂದಿದ್ದಾರೆ. ಇವುಗಳಲ್ಲಿ 'ಚಂದನಾ' ಕಥಾ ಸಂಕಲನ ಮೊದಲ ಮೂರು ಸಂಕಲನಗಳಿಗಿಂತ ಭಿನ್ನವಾಗಿದ್ದು ಪುರಾಣ, ಇತಿಹಾಸ, ಜನಪದದ ಆದರ್ಶ ಸ್ತ್ರೀ/ಪುರುಷರ ಕಥೆಗಳನ್ನು ಹೊಂದಿದೆ. ಮೂಲತಃ ಕಮಲಾ ಹಂಪನಾರವರು ಯಾವುದೇ ಸಾಹಿತ್ಯ ಮನೋಭೂಮಿಕೆಯೊಂದಿಗೆ ಗುರುತಿಸಿಕೊಳ್ಳದಿದ್ದರೂ, ಅವರ ಕಥೆಗಳಲ್ಲಿ ಸ್ತ್ರೀಪರ ಕಾಳಜಿ ವ್ಯಕ್ತವಾಗಿದೆ.

ಮಾನವ ಮಾನವರ ನಡುವಿನ ಸಂಬಂಧಗಳ ಅನ್ವೇಷಣೆಯೇ ಇವರ ಕತೆಗಳ ವಸ್ತು, ಯಾವುದೇ ಚಳುವಳಿಯ ಪ್ರಭಾವದ ತೆಕ್ಕೆಗೆ ಬೀಳದೆ ನಿರ್ಲಿಪ್ತತೆಯಿಂದ ಹೆಣ್ಣಿನ ಶೋಷಣೆ (ಊರಿಗೆ ಹೊರಟೇ ಹೋದರು), ಸಾಂದರ್ಭಿಕ ಅಸಹಾಯಕತೆ (ರೆಕ್ಕೆ ಮುರಿದಿತ್ತು), ಅನುಭವಿಸುವ ತಣ್ಣನೆಯ ಕ್ರೌರ್ಯಗಳನ್ನು ಧ್ವನಿಸಿದ್ದಾರೆ. ಕೆಲವು ಕತೆಗಳನ್ನು ಬಿಟ್ಟರೆ ಬಹುತೇಕ ಎಲ್ಲ ಕತೆಗಳೂ ಸ್ತ್ರೀಕೇಂದ್ರೀಕೃತವಾಗಿವೆ. ಇವರ ಕತೆಗಳಲ್ಲಿ ಗಂಡಿನ ಹೋರಾಟದ ಗತಿಶೀಲತೆಗೂ (ನಾನು ಹೀಗಾಗುತ್ತಿರಲಿಲ್ಲ), ಹೆಣ್ಣಿನ ಹೋರಾಟದ ಪ್ರಗತಿಶೀಲತೆಗೂ (ಯೌವನ ನುಡಿಯಿತು), (ಊರಿಗೆ ಹೊರಟೇ ಹೋದರು), ಸಾಕಷ್ಟು ಅಂತರ ಕಂಡುಬರುತ್ತದೆ. ಉದಾಹರಣೆಗೆ ಹೇಳುವುದಾದರೆ. 'ನಾನು ಹೀಗಾಗುತ್ತಿರಲಿಲ್ಲ' ಕಥಾ ನಾಯಕ ತಾನು ಅನುಭವಿಸಿದ ಕಷ್ಟಕೋಟಲೆಗಳನ್ನು ಮೆಟ್ಟಿ ನಿಂತು ಸಾಮಾಜಿಕ ಸ್ತರದಲ್ಲಿ ಸಾಧನಶೀಲ ವ್ಯಕ್ತಿಯಾಗಿ ಗುರುತಿಸಲ್ಪಟ್ಟರೆ, ಯೌವನ ನುಡಿಯಿತು, ವರ್ತುಲ, ಊರಿಗೆ ಹೊರಟೇ ಹೋದರು ಕಥೆಗಳಲ್ಲಿನ ನಾಯಕರು ಮದುವೆಯನ್ನೇ ನಿರಾಕರಿಸಿ ಸ್ವಯಂ ಅಸ್ತಿತ್ವ ಕಾಪಾಡಿಕೊಳ್ಳಲು ಪ್ರಯತ್ನಿಸಿ ವಿಫಲರಾಗಿ ಕೊನೆಗೆ ಸಂಸಾರಿಕ ವ್ಯವಸ್ಥೆಯೊಳಗೆ ಪ್ರವೇಶಿಸಿ ಅಲ್ಲಿ ತಮ್ಮ ಭದ್ರತೆ/ ಸಾರ್ಥಕ್ಯ ಕಂಡುಕೊಳ್ಳುತ್ತಾರೆ. ಕೆಲವು ಕತೆಗಳನ್ನು ಗಮನಿಸಿದಾಗ ಅವರ ಕತೆಗಳ ಸ್ತ್ರೀ ಪಾತ್ರಗಳು ಮೇಲುನೋಟಕ್ಕೆ ಗಟ್ಟಿಗಿತ್ತಿಯರಾಗಿ, ಲಿಂಗ, ಜಾತ್ಯಾಧಾರಿತ ಸಮಾಜದ ಸಂರಚನೆಗಳನ್ನು ಮೆಟ್ಟಿ ಮುನ್ನುಗ್ಗುವಂತೆ ತೋರುತ್ತಾರಾದರೂ ಅಂತಿಮವಾಗಿ ಆ ಸಾಮಾಜಿಕ ಸಂರಚನೆಯಲ್ಲೇ ಸಂಲಗ್ನಗೊಳ್ಳುತ್ತಾರೆ. ಆ ಮೂಲಕ ಇಲ್ಲಿಯ ಪಾತ್ರಗಳು ಸಾಮಾಜಿಕ ಒತ್ತಡಗಳಿಗೆ ಶರಣಾಗಿ ಸೋಲಿಗಭಿಮುಖರಾಗುತ್ತಾರೆ. ಒಟ್ಟಿನಲ್ಲಿ ಇವರ ಕತೆಗಳ ಹೆಣ್ಣು ತನ್ನನ್ನು ತಾನು ಪುರುಷರಿಗೆ 'ಅರ್ಪಿಸಿ'ಕೊಳ್ಳುವುದರಲ್ಲೇ ಸಾರ್ಥಕ್ಯ ಕಂಡುಕೊಳ್ಳುತ್ತಾಳೆ, ಹಾಗೆಯೇ ಇನ್ನೂ ಕೆಲವು ಕತೆಗಳಲ್ಲಿ ಜಾತಿಗಳ ನೆಲೆಯನ್ನು ಮೀರಿ ಪ್ರೀತಿಸಿ ವಿವಾಹವಾದ ದಂಪತಿಗಳನ್ನು ವ್ಯವಸ್ಥೆಯೇ ಬಲಿತೆಗೆದುಕೊಳ್ಳುವಂತಾಗುವುದು ವಿಪರ್ಯಾಸ (ಕತೆಯಾಯಿತು ಘಟನೆ). ಆ ಮೂಲಕ ಜಾತಿ ವ್ಯವಸ್ಥೆಗೆ ತಲೆಬಾಗಬೇಕಾಗುತ್ತದೆ ಅಥವಾ ಅಸಹಾಯಕತೆಯಿಂದ ಸಮಾಜವನ್ನು ಧಿಕ್ಕರಿಸಿ ಬದುಕಲಾಗದೆ ಆತ್ಮಹತ್ಯೆಯೆಡೆ ತಲೆಬಾಗಬೇಕಾಗುತ್ತದೆ. ಆದರೂ, ಸ್ತ್ರೀವಾದಿ ನೆಲೆಯಿಂದ ಹೊರತುಪಡಿಸಿ ವಾಸ್ತವದ ನೆಲೆಗಟ್ಟಿನಲ್ಲಿ ನಿಂತು ಅವರ ಕತೆಗಳನ್ನು ಓದಿದಾಗ ಹೆಚ್ಚಿನ ಕತೆಗಳು ಸಮಾಜ ವ್ಯವಸ್ಥೆಯ ಕನ್ನಡಿಯಾಗಿ ಗೋಚರಿಸುತ್ತವೆ.

'ಚಂದನಾ' ಕಥಾ ಸಂಕಲನವು ವಸ್ತುದೃಷ್ಟಿಯಿಂದ ಉಳಿದ ಮೂರು ಸಂಕಲನಗಳಿಗಿಂತ ಭಿನ್ನವಾಗಿದೆ. "ಇತಿಹಾಸದ ಪುಟಗಳನ್ನು ತಿರುವಿ, ಶಾಸನಗಳನ್ನು ಓದಿ, ಪುರಾಣಗಳಲ್ಲಿ ಈಜಾಡಿ, ಜಾನಪದದಲ್ಲಿ ಕೈಯಾಡಿಸಿ" ಪಡೆದ ಸಾಮಗ್ರಿಗಳಿಂದ ನಿರ್ಮಿಸಿದ ಸುಂದರ ಸಾಹಿತ್ಯ ಸೃಷ್ಟಿ ಇದಾಗಿದೆ. ಶಾಸನವನ್ನಾಧರಿಸಿ ಮಹಾಸತಿ ಹರ್ಯಲೆ, ಜಾನಪದ-ಐತಿಹ್ಯಗಳನ್ನಾಧರಿಸಿ ಕಂಬದಮ್ಮ, ತಾಳೆರಾಜನ ಕತೆ, ಪುರಾಣಗಳನ್ನಾಧರಿಸಿ ವರ್ಧಮಾನ ಮಹಾವೀರ, ಚಾವುಂಡರಾಯ ಮುಂತಾದ ಕತೆಗಳನ್ನು ಆಯಾ ಪಾತ್ರಗಳೇ ಜೀವಕಳೆಯಿಂದೆದ್ದು ಬಂದಂತೆ ರಚಿಸಿದ್ದಾರೆ. ಹೃದ್ಯ ಹಾಗೂ ಸಂಭಾಷಣಾ ಪ್ರಾಧಾನ್ಯ ಕಥನ ಶೈಲಿಯಿಂದಾಗಿ ಇವು ಓದುಗರ ನೆನಪಿನಲ್ಲುಳಿಯುತ್ತವೆ.

ಶಿಶು ಸಾಹಿತ್ಯ

ಕಮಲಾ ಹಂಪನಾರವರು ಮಕ್ಕಳಿಗಾಗಿ ಹೆಳವನಕಟ್ಟೆ ಗಿರಿಯಮ್ಮ, ಅಕ್ಕಮಹಾದೇವಿ, ವೀರವನಿತೆ ಓಬವ್ವ, ಚಿಕ್ಕವರಿಗಾಗಿ ಚಿತ್ರದುರ್ಗ, ಮುಳಬಾಗಿಲು, ಜನ್ನ, ಡಾ॥ ಬಿ.ಆರ್. ಅಂಬೇಡ್ಕರ್ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಮಕ್ಕಳಿಗಾಗಿ ಕೃತಿಗಳನ್ನು ರಚಿಸುವಾಗ ಅವರು ಮಕ್ಕಳ ಮನೋವರ್ತುಲದೊಳಕ್ಕೆ ಸುಲಭವಾಗಿ ಪ್ರವೇಶಿಸುವಂಥ ವಸ್ತು/ವ್ಯಕ್ತಿಗಳನ್ನು ಆಯ್ಕೆಮಾಡಿಕೊಂಡಿದ್ದಾರೆ. ಜನ್ನ, ಅಕ್ಕಮಹಾದೇವಿಯಂಥವರ ಬಗ್ಗೆ ಮಕ್ಕಳಿಗೆ ಅರ್ಥವಾಗುವಂತೆ ಹೇಳುವುದು ಸುಲಭವಲ್ಲ. ಭವಾವಳಿಗಳ ಸಂಕೀರ್ಣತೆಯಿಂದ ತುಂಬಿರುವ ಜನ್ನ ವಿರಚಿತ ಯಶೋಧರ ಚರಿತೆ, ಅನಂತನಾಥ ಪುರಾಣದಂಥ ಕೃತಿಗಳನ್ನು ಹಾಗೂ ಅಕ್ಕಮಹಾದೇವಿಯ ಅಂತರಂಗದ ಅನುಸಂಧಾನ, ಆಧ್ಯಾತ್ಮಿಕತೆಗಭಿಮುಖವಾಗುವ ಆಕೆಯ ಪರಿಯನ್ನು, ಅನುಭಾವದ ನೆಲೆಯಿಂದ ಹೊರತಾದ ಮಕ್ಕಳ ಮುಗ್ಧ ಮನೋಭೂಮಿಕೆಯೊಳಗೆ ಪ್ರವೇಶಿಸಿ ಅವರಿಗೆ ಹೃದ್ಯವಾಗುವಂತೆ ತುಂಬಾ ಸುಭಗತೆಯಿಂದ ಸೊಗಸಾಗಿ ನಿರೂಪಿಸಿದ್ದಾರೆ.

ಡಾ॥ ಬಿ.ಆರ್. ಅಂಬೇಡ್ಕರ್ ಕೃತಿಯಲ್ಲಿ ಅವರ ಸಮಷ್ಟಿ ವ್ಯಕ್ತಿತ್ವವನ್ನು ಆತ್ಮೀಯವಾಗಿ ಆದರ್ಶನೀಯವಾಗಿ ನೀಡಿದ್ದರೆ, ಹೆಳವನಕಟ್ಟೆ ಗಿರಿಯಮ್ಮ ಕೃತಿಯಲ್ಲಿ ಅವರ ಜೀವನ ಚರಿತ್ರೆಯನ್ನು ಅವರು ತೋರಿಸಿದ ಪವಾಡಗಳನ್ನು ಸರಳವಾಗಿ ನೀಡಿದ್ದಾರೆ. ಚಿಕ್ಕವರಿಗೆ ಚಿತ್ರದುರ್ಗ, ಮುಳಬಾಗಿಲು, ವೀರವನಿತೆ ಓಬವ್ವ, ಕೃತಿಗಳಲ್ಲಿ ಮಕ್ಕಳ ಅರಿವಿನ ಆಳಕ್ಕಿಳಿದು ಚರಿತ್ರೆಯ ಎಳೆಎಳೆಗಳನ್ನು ಕಥನ ತಂತ್ರ ಬಳಸಿ ನಿರೂಪಿಸಿದ್ದಾರೆ. ಇವರ ಬಹುತೇಕ ಮಕ್ಕಳ ಕೃತಿಗಳು ಪ್ರಶ್ನೋತ್ತರ ರೂಪದಲ್ಲಿವೆ. ಮಕ್ಕಳ ಮನಸ್ಸನ್ನು ಮನನ ಮಾಡಿಕೊಂಡು ಆಡಂಬರವಿಲ್ಲದೆ ಶಿಶುಭಾವದ ಲಲಿತ ಶೈಲಿಯಲ್ಲಿ ಬರದಿದ್ದಾರೆ. ಇವರ ಈ ಕೃತಿಗಳ ಓದಿನಿಂದ ಮಕ್ಕಳಷ್ಟೇ ಅಲ್ಲದೆ, ದೊಡ್ಡವರೂ ಸಹ ತಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳಲು ಸಹಾಯಕವಾಗುತ್ತದೆ. ಮಕ್ಕಳಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಪರಂಪರೆಯ ಬಗ್ಗೆ ಅರಿವು ಮೂಡಿಸಲು ಈ ಕೃತಿಗಳು ಸಹಾಯಕವಾಗುತ್ತದೆ.

ಆಧುನಿಕ ವಚನಗಳು

ಹನ್ನೊಂದು-ಹನ್ನೆರಡನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ವಚನ ಸಾಹಿತ್ಯ ದೇಶಿ ಭಾಷೆಯಲ್ಲಿ ಮೂಡಿಬಂದ ಸರಳ ಅಭಿವ್ಯಕ್ತಿ, ಸಮಾಜದ ಧೋರಣೆಗಳಿಗೆ ಅದು ತೋರಿದ ಪ್ರತಿಕ್ರಿಯೆ, ಸರ್ವಸಮಾನತೆಯ ಸಂಕಲ್ಪ ಮುಂತಾದ ಕಾರಣಗಳಿಗಾಗಿ ಸರ್ವಾದರಣೀಯ ಸಾಹಿತ್ಯವಾಗಿ ರೂಪುಗೊಂಡಿತು. ಕಲ್ಯಾಣ ಕ್ರಾಂತಿಯ ನಂತರ ವಚನಗಳ ರಚನೆ ವಿರಳವಾದರೂ ಅದು ತನ್ನ ಅಸ್ತಿತ್ವವನ್ನೇನೂ ಕಳೆದುಕೊಂಡಿರಲಿಲ್ಲ. ನಂತರದ ಹರಿದಾಸ ಸಾಹಿತ್ಯ ಸರ್ವಜ್ಞನ ತ್ರಿಪದಿಗಳು ಮತ್ತಿತರ ಸಾಹಿತ್ಯದ ಮೇಲೆ ಅದರ ಪ್ರಭಾವ ವ್ಯಾಪಕವಾಗೇ ಇತ್ತು.

ಆಧುನಿಕ ಸಂದರ್ಭದಲ್ಲಿ ನವೋದಯ ಕಾಲಘಟ್ಟದಲ್ಲಿ ಸಹ ಎಸ್.ವಿ.ರಂಗಣ್ಣನವರಿಂದ ಮೊದಲುಗೊಂಡು ಹಲವಾರು ಕವಿಗಳು ಆಧುನಿಕ ವಚನಗಳ ರಚನೆಗೆ ಕೈಹಾಕಿದರು. ಡಾ॥ ಕಮಲಾ ಹಂಪನಾರವರ 'ಬಿಂದಲಿ' ಮತ್ತು 'ಬುಗುಡಿ' ಆಧುನಿಕ ವಚನ ಸಾಹಿತ್ಯಕ್ಕೆ ಸೇರ್ಪಡೆಯಾದಂತಹ ಎರಡು ಕೃತಿಗಳು. 'ಬಿಂದಲಿ' ಸಂಕಲನವಲ್ಲಿ

'ಕಮಲಾಪ್ರಿಯ' ಎಂಬ ನಾಮಾಂಕಿತದಿಂದ ರಚಿಸಲ್ಪಟ್ಟ ಸುಮಾರು ಎಪ್ಪತ್ತು ವಚನಗಳಿವೆ. 'ಬುಗುಡಿ' ಸಂಕಲನದಲ್ಲಿ 'ಬಿಂದಲಿ'ಯ ವಚನಗಳ ಜೊತೆಗೆ ಹೊಸ ವಚನಗಳು ಸೇರಿ ಒಟ್ಟು 108 ವಚನಗಳಿವೆ. ಡಾ॥ ಕಮಲಾ ಹಂಪನಾರವರೇ ಹೇಳುವಂತೆ "ಕ್ಷಣದ ಚಿಂತನೆಗಳನ್ನು ಹಿಡಿದಿಟ್ಟುಕೊಳ್ಳಲು ಇದರಷ್ಟು ಖಚಿತವಾದ ಅಭಿವ್ಯಕ್ತಿ– ಮಾಧ್ಯಮ ಬೇರೊಂದಿಲ್ಲ". ಆಧುನಿಕ ನಾಗರಿಕ ಪ್ರಪಂಚದ ದೈನಂದಿನ ಸಾಮಾನ್ಯ ಘಟನೆ ಸಂದರ್ಭ ಸನ್ನಿವೇಶಗಳನ್ನು ತಮ್ಮ ವಚನಗಳ ಮೂಲಕ ಅತ್ಯುತ್ತಮವಾಗಿ ಅಭಿವ್ಯಕ್ತಪಡಿಸಿದ್ದಾರೆ. ಪ್ರತಿಯೊಂದು ವಚನಗಳ ವಿಷಯವೂ ಭಿನ್ನವಾಗಿದೆ, ಹೃದಯಹೀನ ಸಮಾಜವನ್ನು ಖಂಡಿಸಿವೆ. ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧ ಬಂಡೆದ್ದಿವೆ. ಸಮಾಜದ ವ್ಯವಸ್ಥೆಯ ಹೇತ್ಲಾಂಡಿತನವನ್ನು ಧಿಕ್ಕರಿಸಿವೆ. ಧರ್ಮಾಂಧತೆಯನ್ನು ಧಿಕ್ಕರಿಸಿವೆ. ಒಟ್ಟಾರೆಯಾಗಿ ಹೇಳಬಹುದಾದರೆ, ಇವರ ವಚನಗಳಲ್ಲಿ ಸಾಮಾಜಿಕ ಕಳಕಳಿ, ವಿಡಂಬನೆ, ಆತ್ಮಾನುಭೂತಿ, ತಾತ್ವಿಕ ಚಿಂತನೆ ಮಡುಗಟ್ಟಿದ್ದು ಸಮಕಾಲೀನ ಸಮಾಜದ ಸನ್ನಿವೇಶಗಳಿಗೆ ಸೂಕ್ಷ್ಮವಾಗಿ ಸಂವೇದಿಸಿವೆ.

ಎಲ್ಲ ವಚನಗಳ ಸಂದರ್ಭಗಳಲ್ಲೂ ಇವರ ವಚನಗಳು ಅತ್ಯುತ್ತಮವೆಂದು ಹೇಳಲಾಗದು. ಕೆಲವು ವಚನಗಳಂತೂ ಸಾಮಾನ್ಯ ಗದ್ಯವನ್ನು ಓದಿದಂತೆ ಭಾಸವಾಗಿ, ಸೃಜನಶೀಲ ಸಾಹಿತ್ಯದ ಸಂವೇದನೆಯಾಗಿ ಮೂಡುವುದಿಲ್ಲ. ಆದರೂ ಕೆಲವು ವಚನಗಳು ಉತ್ಕೃಷ್ಟ ವಚನಗಳಾಗಿವೆ. ವಚನಗಳ ಭಾಷೆ ಜನಭಾಷೆಯಾಗಿದ್ದು, ಸರಳವಾದ ಅಭಿವ್ಯಕ್ತಿ ಗತಿಯಲ್ಲಿವೆ. ಕೆಲವು ವಚನಗಳಂತೂ ಭಾವಗೀತಾತ್ಮಕವಾಗಿ ಗೇಯವಾಗಿವೆ. ಪ್ರಾತಿನಿಧಿಕವಾಗಿ ಒಂದು ವಚನವನ್ನು ಗಮನಿಸಬಹುದು.

ನನ್ನನೇಕೆ ಬಂಧಿಸುವೆಯಯ್ಯ
ಕತ್ತಲೆಯ ಗರ್ಭಗುಡಿಯಲಿ
ನನ್ನನೇಕೆ ಪೂಜಿಸುವೆಯಯ್ಯ
ದೇವತೆಯ ಮಾಡಿ ಸ್ತುತಿಯಲಿ
ಬಿಡು ನನ್ನ ಹೊರಗೆ
ಮೆರವಣಿಗೆಯ ದೇವತೆಯಾಗಿ ಬೀದಿ ಬೀದಿಯಲಿ ಚಲಿಸಿ ಬರುವೆ
ಬಸವಿಯಾಗಲ್ಲ, ಜಂಗಮ ದೇವತೆಯಾಗಿ
ಬಿಡು ನನ್ನ ಹೊರಗೆ ತುರಿದು ಬರುವೆ
ಮಾನವಳಾಗಿ ಮಿಡಿದು ಬರುವೆ ಕಮಲಾಪ್ರಿಯಾ (ಬಿಂದುಲಿ 19).

ಗ್ರಂಥ ಸಂಪಾದನೆ

ಡಾ॥ ಕಮಲಾ ಹಂಪನಾರವರ ಸಂಪಾದನಾ ಕಾರ್ಯದಲ್ಲಿ ಗ್ರಂಥಗಳು, ಸ್ಮರಣ ಸಂಚಿಕೆ, ಸ್ಮೃತಿ ಗ್ರಂಥಗಳ ಸಂಪಾದನೆ ಸೇರಿದೆ. ಕಮಲಾ ಹಂಪನಾರವರಿಂದ ಸೃಜನಾತ್ಮಕ ಸಾಹಿತ್ಯ ನಿರ್ಮಿತಿಯಾಗಿದ್ದರೂ ಅವರ ಒಲವು ಸೃಜನೇತರ ಸಾಹಿತ್ಯವಾದ ಗ್ರಂಥಸಂಪಾದನೆ, ಸಂಶೋಧನೆಯಂಥ ಜ್ಞಾನಕ್ಷೇತ್ರಗಳ ಕಡೆಗೆ ಹೆಚ್ಚಿದೆ. ಗ್ರಂಥ ಸಂಪಾದನೆಯಂಥ ಕಾರ್ಯಕ್ಕೆ ಕೈಹಾಕಬೇಕಾದರೆ, ಆಳವಾದ ಪಾಂಡಿತ್ಯ, ಹಳಕನ್ನಡ ಭಾಷೆ–ಕಾವ್ಯಗಳ ಪರಿಣತಿ ಅಗತ್ಯ. ಮಹಿಳೆಯರಿಗೆ ಮುಚ್ಚಿಹೋಗಿದ್ದ ಜ್ಞಾನಕ್ಷೇತ್ರಕ್ಕೆ ಪ್ರವೇಶಿಸಿ ಅಮೂಲ್ಯವಾದ ಕೃತಿಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ. ಹಲವಾರು ಚದುರಿಹೋಗಿದ್ದ ಕೃತಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಪಾದನೆ ಮಾಡಿದ್ದಾರೆ. ಆ ಕೃತಿಗಳ ಪ್ರಸ್ತಾವನೆಯಲ್ಲಿ ಕಾವ್ಯವಸ್ತುವನ್ನು ಪರಿಚಯಿಸುವುದರೊಂದಿಗೆ ಕವಿಚರಿತೆ ಮತ್ತು ಕೃತಿಯ ಗುಣಾತ್ಮಕ ಮೌಲ್ಯಮಾಪನವನ್ನು ಮಾಡಿದ್ದಾರೆ. ಇವರು ಸುಕುಮಾರ ಚರಿತೆಯನ್ನು ತಾವೇ ಸಂಪಾದಿಸಿದ್ದರೆ, ಭರತೇಶ ವೈಭವ, ಚಾವುಂಡರಾಯ ಪುರಾಣ, ಜೈನ ಕಥಾಕೋಶಗಳನ್ನು ಇತರರೊಡಗೂಡಿ ಸಂಪಾದಿಸಿದ್ದಾರೆ.

ಸುಕುಮಾರ ಚರಿತೆ – ಇದು ಹನ್ನೊಂದನೇ ಶತಮಾನದ ಶಾಂತಿನಾಥ ವಿರಚಿತ ಕೃತಿ. ಭವಾವಳಿಗಳ ಬಲೆಯಾದ ಹಾಗೂ ಜೈನಧರ್ಮದ ಸಿದ್ಧಾಂತಗಳ ನಿರೂಪಣೆಯನ್ನೊಳಗೊಂಡ ಈ ಕೃತಿಯ ಸಂಗ್ರಹ ಕಾರ್ಯದಲ್ಲಿ ಅರ್ಥಕ್ಕೆ ಬಾಧಕವಾಗದಂತೆ ಭವಾವಳಿಗಳ ನಡುವಿನ ಕೊಂಡಿಗಳು ಕಳಚಿಹೋಗದ ಹಾಗೆ ಉಚಿತಾನುಚಿತ ವಿವೇಕದಿಂದ ಸಂಪಾದಿಸಿದ್ದಾರೆ.

ಚಾವುಂಡರಾಯ ಪುರಾಣ – ಇದನ್ನು ಕೆ.ಆರ್. ಶೇಷಗಿರಿಯವರೊಂದಿಗೆ ಸಂಪಾದಿಸಿದ್ದಾರೆ. ವೈಜ್ಞಾನಿಕವಾಗಿ ಗ್ರಂಥಸಂಪಾದನಾ ಶಾಸ್ತ್ರವನ್ನನುಸರಿಸಿ ಈವರೆಗೆ ಪ್ರಕಟವಾಗಿದ್ದ ಆವೃತ್ತಿಗಳನ್ನು ಅಭ್ಯಸಿಸಿ ಪರಿಷ್ಕೃತ ರೂಪದ ಚಾವುಂಡರಾಯ ಪುರಾಣವನ್ನು ಓದುಗರು ಸರಾಗವಾಗಿ ಅಭ್ಯಸಿಸಲು ಸಾಧ್ಯವಾಗುವಂತೆ ಸಂಪಾದಿಸಿದ್ದಾರೆ. ಕೆಲವು ಮಾರ್ಪಾಟುಗಳನ್ನು ಸಹ ಸೂಚಿಸಿದ್ದಾರೆ.

ಭರತೇಶ ವೈಭವ – ಇದನ್ನು ಜಿ. ಬ್ರಹ್ಮಪ್ಪ ಮತ್ತು ಡಾ॥ ಹಂಪ ನಾಗರಾಜಯ್ಯನವರೊಡನೆ ಸೇರಿ ಸಂಪಾದಿಸಿದ್ದಾರೆ. 'ಉಂಡುಪವಾಸಿ ಬಳಸಿ ಬ್ರಹ್ಮಚಾರಿಯಾದ' ಭರತನ ಯೋಗ–ಭೋಗ ಜೀವನದ ಸಮನ್ವಯತೆಯ ಕತೆಯನ್ನು ಒಳಗೊಂಡ ಭರತೇಶ ವೈಭವವನ್ನು ಅತ್ಯುತ್ತಮವಾಗಿ ಸಂಗ್ರಹಿಸಿದ್ದಾರೆ.

ಗ್ರಂಥ ಸಂಪಾದನಾ ಕಾರ್ಯವನ್ನಲ್ಲದೆ ಇವರು ಹಲವಾರು ಸಂಸ್ಮರಣ ಗ್ರಂಥಗಳನ್ನು ಹಾಗೂ ಸ್ಮರಣ ಗ್ರಂಥಗಳನ್ನು ಹೊರತಂದಿದ್ದಾರೆ. ಶ್ರವಣಬೆಳಗೊಳದಲ್ಲಿ 1981ರಲ್ಲಿ ನಡೆದ ಸಹಸ್ರವರ್ಷದ ಬಾಹುಬಲಿಯ ಮಹಾಮಸ್ತಕಾಭಿಷೇಕದ ಸಂಸ್ಮರಣ 'ಸಹಾಸ್ರಾಭಿಷೇಕ'ದಲ್ಲಿ ಶ್ರವಣಬೆಳಗೊಳ, ಗೊಮ್ಮಟನ ಶಿಲ್ಪ, ಚಾವುಂಡರಾಯ, ರನ್ನ ಕುರಿತಂತೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಲೇಖನಗಳಿವೆ. ಹಾಗೆಯೇ ಅಖಿಲ ಕರ್ನಾಟಕ ಜೈನ ಸಮ್ಮೇಳನದ ಸ್ಮರಣ ಸಂಚಿಕೆ "ಶ್ರೀ ಪಚ್ಚೆ". ಇದರಲ್ಲಿ ಜೈನ ಶಿಲ್ಪಗಳು, ಜೈನ ಮಂತ್ರಿಗಳು, ಜೈನಧರ್ಮದ ಸಾಂಸ್ಕೃತಿಕ ಹಿರಿಮೆ ಇತ್ಯಾದಿ ವಿಷಯಗಳ ಕುರಿತಂತೆ 16 ಮೌಲಿಕವಾದ ಲೇಖನಗಳಿವೆ.

ಡಿಎಲ್‌ಎನ್ ಆಯ್ದ ಲೇಖನಗಳು – ಡಿಎಲ್‌ಎನ್ 90ಕ್ಕೂ ಅಧಿಕ ಲೇಖನಗಳನ್ನು ಬರೆದಿದ್ದಾರೆ. ಅವರು ಯಾವುದೇ ವಿಷಯದ ಬಗ್ಗೆ ಲೇಖನ ಬರೆದರೂ ಆ ವಿಷಯದ ಮೂಲಕ್ಕೆ ಹೋಗಿ ಅದನ್ನು ಆದ್ಯಂತವಾಗಿ ಪರಿಶೀಲಿಸಿ ಪರಾಮರ್ಶೆಯ ತೆಕ್ಕೆಗೆ ಹಚ್ಚಿ ನಂತರ ಪ್ರಕಟಿಸುತ್ತಿದ್ದರು. ಅವರ ಒಂದೊಂದು ಲೇಖನವೂ ಅತಿ ಮುಖ್ಯವೇ ಆಗಿರುವುದರಿಂದ ಇವರ ಲೇಖನಗಳನ್ನು ಸಂಪಾದಿಸುವ ಕೆಲಸ ಸುಲಭವಲ್ಲ. ಅತ್ಯಂತ ಹೆಚ್ಚು ಪ್ರಧಾನವಾದ ಮತ್ತು ಪ್ರಸ್ತುತವಾದ ಒಂಬತ್ತು ಲೇಖನಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಸಂಪಾದಕರ ಸದಭಿರುಚಿಯಿಂದಾಗಿ ಅತ್ಯುತ್ತಮ ಪ್ರಾತಿನಿಧಿಕ ಲೇಖನಗಳು ಈ ಕೃತಿಯಲ್ಲಿ ಸೇರಿವೆ.

ಡಾ॥ ಎಸ್.ಪಿ. ಪದ್ಮಪ್ರಸಾದ್‌ರೊಂದಿಗೆ 'ಸುವರ್ಣ ಭಾರತಿ ಸಂಪುಟ–3ರ' ಸಂಪಾದನೆ – ಇಲ್ಲಿ ಹಳಗನ್ನಡ ಸಾಹಿತ್ಯವನ್ನು ಸ್ಥೂಲವಾಗಿ ಪರಿಚಯಿಸಿದ್ದಾರೆ. ಹಲ್ಮಿಡಿ ಶಾಸನ, ಶಾಂತಲೆಯ ಕುರಿತ ಶಾಸನಪದ್ಯ ಸೇರಿದಂತೆ ಬ್ರಾಜಿಷ್ಣು, ಪಂಪನಾದಿಯಾಗಿ ಮುದ್ದಣ್ಣನವರೆಗೆ ಹಲವಾರು ಕನ್ನಡ ಕವಿಗಳ ಕಾವ್ಯ ಪ್ರಸಂಗಗಳನ್ನು ಒಳಗೊಂಡಿದೆ. ಇದಲ್ಲದೆ, ಜೈನಧರ್ಮದ ಸಾಂಸ್ಕೃತಿಕ ಇತಿಹಾಸಕ್ಕೆ ತಮ್ಮದೇ ಆದ ಕೊಡುಗೆ ನೀಡಿರುವ ಕಾ.ಸ. ಧರಣೇಂದ್ರಯ್ಯನವರ ಸ್ಮರಣ ಸಂಚಿಕೆಯನ್ನು ಹೊರತಂದಿದ್ದಾರೆ.

ಸಂಶೋಧನೆ/ವಿಮರ್ಶೆ

ಡಾ॥ ಕಮಲಾ ಹಂಪನಾರವರ ಒಲುಮೆಯ ಕ್ಷೇತ್ರ ಸಂಶೋಧನೆ ಮತ್ತು ವಿಮರ್ಶೆ. ಇವರ ಸಂಶೋಧನಾ ಲೇಖನ/ಕೃತಿಗಳು ಒಂದು ಅಂತರಶಿಸ್ತೀಯ ಗುಣವನ್ನು ಮೈಗೂಡಿಸಿಕೊಂಡಿವೆ. ಜೈನ ಸಾಹಿತ್ಯದ ಅಧ್ಯಯನ ಮತ್ತು ಸಂಶೋಧನೆಯಲ್ಲಿ ಇವರ ಕೆಲಸ ಪ್ರಾತಿನಿಧಿಕವಾಗಿದ್ದು ಹಲವಾರು ಸಂಶೋಧನಾ ಕೃತಿಗಳನ್ನು ರಚಿಸಿದ್ದಾರೆ.

ಗುಣದಂಕಕಾರ್ತಿ ಅತ್ತಿಮಬ್ಬೆ, ಶಾಂತಿನಾಥ, ಆದರ್ಶ ಜೈನ ಮಹಿಳೆಯರು, ಜೈನ ಸಾಹಿತ್ಯ ಪರಿಸರ, ಅನೇಕಾಂತವಾದ, ಬದ್ದವಣ–ಇವರ ಮುಖ್ಯ ಸಂಶೋಧನಾ ಕೃತಿಗಳು, ಅಲ್ಲದೆ, ಬಡಬಾಗ್ನಿ, ಬಾಸಿಂಗ, ದಲಿತ ಸಾಹಿತ್ಯ, ಮಹಿಳಾ ಸಾಹಿತ್ಯ, ಬಿತ್ತರ, ಬಾಂದಳ ಮುಂತಾದ ವಿಮರ್ಶಾ ಅಥವಾ ವೈಚಾರಿಕ ಕೃತಿಗಳನ್ನು ರಚಿಸಿದ್ದಾರೆ.

ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಅತ್ತಿಮಬ್ಬೆಯ ಕೊಡುಗೆ ಅಪಾರ. ಪೊನ್ನ, ರನ್ನ, ಬ್ರಹ್ಮಶಿವ ಕವಿಯ ಪದ್ಯಗಳು, ಲಕ್ಕುಂಡಿ ಶಾಸನಗಳ ಹಿನ್ನೆಲೆಯಲ್ಲಿ ಜಿನಧರ್ಮ ದೀಪಿಕೆ ಅತ್ತಿಮಬ್ಬೆಯ ಪವಾಡಸದೃಶ ಮೇರು ವ್ಯಕ್ತಿತ್ವವನ್ನು ಅನಾವರಣಗೊಳಿಸಿದ್ದಾರೆ. ಶಾಸನದಲ್ಲಿ ಅತ್ತಿಮಬ್ಬೆಯ ಕುರಿತು ಹೇಳಿರುವ ಏಳು ಪವಾಡಗಳನ್ನು ವಿವೇಚನೆಯ ತೆಕ್ಕೆಗೆ ತಂದು ಅವುಗಳ ಸಾಧ್ಯಾಸಾಧ್ಯತೆಗಳನ್ನು ಒರೆ ಹಚ್ಚಿದ್ದಾರೆ.

ಶಾಸನ–ಕಾವ್ಯಗಳಲ್ಲಿ ಪ್ರಕಟವಾಗಿರುವ ಜೈನ ಮಹಿಳೆಯರ ಸಾಂಸ್ಕೃತಿಕ ಕೊಡುಗೆಗಳನ್ನು 'ಆದರ್ಶ ಜೈನ ಮಹಿಳೆಯರು' ಕೃತಿ ಪರಿಚಯಿಸುತ್ತದೆ. ಜೈನ ಪುರಾಣ, ಶಾಸನ, ಜೈನ ಧರ್ಮದ ಉತ್ಥಾನಕ್ಕಾಗಿ ಪ್ರತ್ಯಕ್ಷವಾಗಿ/ಪರೋಕ್ಷವಾಗಿ ದುಡಿದ ಉದಾತ್ತ ಮನೋಭಾವದ, ಸಾವಿಯಬ್ಬೆ, ಅತ್ತಿಮಬ್ಬೆ, ಜಕ್ಕಿಯಬ್ಬೆ, ಕವಿಯತ್ರಿ ಕಂತಿ ಮುಂತಾದ ಮಹಿಳೆಯರ ಬದುಕನ್ನು ಆದರ್ಶನೀಯವೆನಿಸುವಂತೆ ಸಂಕ್ಷಿಪ್ತವಾಗಿ ಸಜೀವವಾಗಿ ಕಟ್ಟಿಕೊಟ್ಟಿದ್ದಾರೆ. ಜೈನ ಸಾಹಿತ್ಯದಲ್ಲಿನ ಹೊಸ ಸಂಶೋಧನೆಯ ಮತ್ತೊಂದು ಕೃತಿ 'ಜೈನ ಸಾಹಿತ್ಯ ಪರಿಚಯ'. 'ಅನೇಕಾಂತವಾದ' ಕೃತಿಯು ಜೈನ ದರ್ಶನ, ತಾತ್ವಿಕ ಚಿಂತನೆಗಳ ಬಗ್ಗೆ ಆಗಮ ಗ್ರಂಥಗಳ ಆಧಾರದಿಂದ ಸಿದ್ಧಪಡಿಸಿದ ಹದಿಮೂರು ಲೇಖನಗಳ ಸಂಕಲನ. ಜೈನಧರ್ಮದ ಅಡಿಪಾಯವನ್ನು ಗಟ್ಟಿಗೊಳಿಸಿದ ಶಿಲ್ಪಿಗಳ ಜೀವನಚಿತ್ರ, ಜೈನಧರ್ಮದ ಆಚಾರ ವಿಚಾರಗಳು. ಆ ಧರ್ಮದೊಂದಿಗೆ ಸಂಯೋಜಿಸಬಹುದಾದ ಕೆಲವು ಕ್ಷೇತ್ರಗಳ ಪರಿಚಯವನ್ನು ಒಳಗೊಂಡಿದೆ. ಚಾವುಂಡರಾಯನ ಗುರುಗಳು, ಜೈನಧರ್ಮದಲ್ಲಿ ಕರ್ಮ ಸಿದ್ಧಾಂತ, ಮರೆತುಹೋದ ಮಹಾ ಕ್ಷೇತ್ರಗಳು ಮುಂತಾದ ಲೇಖನಗಳನ್ನು ಜೈನಧರ್ಮದ ಹಿನ್ನೆಲೆಯಲ್ಲಿ ತಲಸ್ಪರ್ಷವಾಗಿ ಅಧ್ಯಯನ ನಡೆಸಿ ಬರೆದಿದ್ದಾರೆ. ಆದರೂ ಕೆಲವು ಲೇಖನಗಳನ್ನು ಆ ಧರ್ಮದ ದರ್ಶನದ ಅರಿವಿಲ್ಲದೆ, ಗ್ರಹಿಸಲು ಸಾಧ್ಯವಾಗಲಾರದು. ಇನ್ನೂ ಸ್ವಲ್ಪ ಸರಳೀಕರಿಸಿ ಬರೆಯಬಹುದಿತ್ತೆನಿಸುತ್ತದೆ. ವಡ್ಡಾರಾಧನೆ ಒಂದು ಸ್ಥೂಲ ಪರಿಚಯ, ರನ್ನನ ರಸಘಟ್ಟ, ರತ್ನಾಕರನ ಸ್ತ್ರೀಪಾತ್ರಗಳು, ಕನ್ನಡದ ಕವಿಯತ್ರಿ ಕಂತಿ, ಕನ್ನಡ ಸಾಹಿತ್ಯದಲ್ಲಿ ಬಾಹುಬಲಿ ಕಲ್ಪನೆ ಇದರಲ್ಲಿನ ಪ್ರಮುಖ ಲೇಖನಗಳು. ಈ ಲೇಖನಗಳನ್ನು ಕನ್ನಡ ಸಾಹಿತ್ಯದ ಹಿನ್ನೆಲೆಯಲ್ಲಿ ತೌಲನಿಕವಾಗಿ ವಿಚಾರ ಮಾಡಿ ಸಂಶೋಧನೆಯ ದೃಷ್ಟಿಯಿಂದ ಪರಾಮರ್ಶಿಸಿದ್ದಾರೆ. ಇದೊಂದು ಅತ್ಯುತ್ತಮ ಕೃತಿಗಳ ಸಾಲಿನಲ್ಲಿ ನಿಲ್ಲಬಹುದಾದಂಥ ಕೃತಿಯಾಗಿದೆ.

'ಜೈನ ಸಾಹಿತ್ಯ ಪರಿಸರ' ಕೃತಿಯಲ್ಲಿ ಜೈನ ಸಾಹಿತ್ಯಕ್ಕೆ ಸಂಬಂಧಿಸಿದ ಹದಿನಾರು ಲೇಖನಗಳಿವೆ.

'ಶಾಂತಿನಾಥ ಕವಿ' ಪ್ರಚಾರ ಉಪನ್ಯಾಸಮಾಲೆಯ ಮೂಲಕ ಪ್ರಕಟವಾದ ಕಿರುಹೊತ್ತಿಗೆ, ಶಾಂತಿನಾಥ ಕವಿಯ ಪರಿಚಯ, ಕೃತಿ ವಿಮರ್ಶೆಯನ್ನು ಒಳಗೊಂಡಿದೆ.

'ಬದ್ದವಣ' (ಜೈನ ಸಾಹಿತ್ಯ, ಸಂಸ್ಕೃತಿ ಶೋಧದ ಪ್ರಬಂಧಗಳು) ಇದು ಅಧ್ಯಯನಾತ್ಮಕ ಪ್ರಬಂಧಗಳ ಸಂಕಲನವಾಗಿದ್ದು ಪ್ರಾಚೀನ ಮತ್ತು ಅರ್ವಾಚೀನ ಜ್ಞಾನ ವಿಷಯಗಳ ಸಂಗಮವಾಗಿದೆ. ಇಲ್ಲಿರುವ 39 ಲೇಖನಗಳನ್ನು ಕನ್ನಡ ಸಾಹಿತ್ಯ, ಶಾಸನ, ಇತಿಹಾಸ, ವಾಸ್ತುಶಿಲ್ಪ, ಸ್ಥಳಪುರಾಣ, ಸಿದ್ಧಾಂತ ಗ್ರಂಥಗಳನ್ನು ಬಗೆದು, ಒಳಸ್ತರದಲ್ಲಿನ ಜ್ಞಾನಸೆಲೆಯನ್ನು ಓದುಗರಿಗೆ ಸಿಂಚಿಸಿದ್ದಾರೆ. ಇದಕ್ಕೆ ಆದಿಪುರಾಣ–ಅಭಿವ್ಯಕ್ತಿಯ ಸವಾಲುಗಳು ಲೇಖನವನ್ನು ತೆಗೆದುಕೊಳ್ಳಬಹುದು. ಪುರಾಣಗಳ ಭವಾವಳಿಗಳ ಸೀಗೆಮೆಳೆಯನ್ನು ಪಂಪ ಹೇಗೆ ಸುಂದರ ಕಾವ್ಯ ಪ್ರಸಂಗಗಳಾಗಿ ಕಂಡರಿಸಿದನೆಂಬುದನ್ನು ಈ ಲೇಖನದಲ್ಲಿ ಸೊಗಸಾಗಿ ವಿಮರ್ಶಿಸಿದ್ದಾರೆ. ಆಧುನಿಕ ಸಾಹಿತಿಗಳಾದ ಮಿರ್ಜಿ ಅಣ್ಣಾರಾಯ, ಜಿ.ಪಿ. ರಾಜರತ್ನಂರವರು ಜೈನಧರ್ಮಕ್ಕೆ ಸಲ್ಲಿಸಿದ ಸೇವೆಯನ್ನು ಸಹ ಇಲ್ಲಿ ಉಲ್ಲೇಖಿಸಿದ್ದಾರೆ. 'ಮರೆತು ಹೋದ

ಜೈನ ಮಹಾಕ್ಷೇತ್ರಗಳಲ್ಲಿ' ಶಾಸನಗಳ ಹಿನ್ನೆಲೆಯಲ್ಲಿ ಹಲವಾರು ಪ್ರಾಚೀನ ಜೈನಕ್ಷೇತ್ರಗಳ ಆದ್ಯಂತ ಪರಿಚಯವನ್ನು ಓದುಗರಿಗೆ ನೀಡುತ್ತಾರೆ.

'ಬಡಬಾಗ್ನಿ' (ವಿಮರ್ಶೆ) ವಿವಿಧ ವಿಚಾರ ಸಂಕಿರಣ/ಸಮ್ಮೇಳನಗಳಲ್ಲಿ ಮಂಡಿಸಿರುವ ಆರು ಪ್ರಬಂಧಗಳ ಸಂಕಲನ ಇದರ ಎಲ್ಲ ಲೇಖನಗಳು ದಲಿತ-ಬಂಡಾಯ ಸಾಹಿತ್ಯದತ್ತಲೇ ಅಭಿಕೇಂದ್ರಿತವಾಗಿವೆ. ದಮನಿತ ವರ್ಗಗಳ ಅಸಹನೀಯ ಬದುಕಿಗೆ ಈ ಪರಿಸರ ಹೇಗೆ ಕಾರಣವಾಗಿದೆ ಎಂಬ ಬಗ್ಗೆ ಚಿಂತನೆ ನಡೆಸಿದ್ದಾರೆ. ದಲಿತ ಸಾಹಿತ್ಯದ ಧೋರಣೆಗಳ ಬಗ್ಗೆ ವಿಶ್ಲೇಷಿಸುತ್ತಾ "ಇತರರು ಅಸ್ಪೃಶ್ಯರ ಬಗ್ಗೆ. ದಲಿತರ ಬಗ್ಗೆ ಎಷ್ಟೇ ಬರೆದರೂ, ಎಷ್ಟೇ ಕಲಾತ್ಮಕವಾಗಿದ್ದರೂ ಅದು 'ದಲಿತ ಅನುಕಂಪ ಸಾಹಿತ್ಯವಾಗುತ್ತದೆಯೇ ಹೊರತು ದಲಿತ ಸಾಹಿತ್ಯವಾಗುವುದಿಲ್ಲ' ಎಂದು ಹೇಳಿ 'ದಲಿತರೇ ಬರೆದಾಗ ದಲಿತ ಜೀವನದ ಆಳವಾದ ಸಂಕೀರ್ಣ ಸಂವೇದನೆಗೆ ಸಾಕ್ಷಿಯಾಗಿ ನಿಲ್ಲಬಲ್ಲದು' ಎಂದು ಹೇಳುತ್ತಾರೆ. 'ಸಮಾನವಾದಿ ಒಲವುಗಳು ಮತ್ತು ದಲಿತ ಸಾಹಿತ್ಯ' ಲೇಖನದಲ್ಲಿ ದಲಿತರೆಂದರೆ ಯಾರು ಎಂಬುದನ್ನು ವಿವಿಧ ಲೇಖಕರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಪರಿಭಾಷಿಸುತ್ತಾರೆ. ದ್ರಾವಿಡರು ದಲಿತರಾಗಿ ಗಿರಿಜನರಾಗಿ ರೂಪುಗೊಳ್ಳಲು ಕಾರಣವಾದ ಚಾರಿತ್ರಿಕ ಹಿನ್ನೆಲೆಯನ್ನು ವಿಶ್ಲೇಷಿಸಿದ್ದಾರೆ.

'ಬಾಸಿಂಗ' ಸಂಕಲನದಲ್ಲಿ ಸಮಕಾಲೀನ ಸಾಮಾಜಿಕ ವ್ಯವಸ್ಥೆ ಮತ್ತು ಜಾಗತೀಕರಣಕ್ಕೆ ಪಕ್ಕಾಗಿ ನಾಡು, ನುಡಿ, ಶಿಕ್ಷಣ, ಮಹಿಳೆ ಮುಂತಾದ ಕ್ಷೇತ್ರಗಳು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳೆಡೆ ದೃಷ್ಟಿಗರಿಸಿರುವ 23 ಪ್ರಬಂಧಗಳಿವೆ. ಬಹುತೇಕ ಲೇಖನಗಳು ಸ್ತ್ರೀಪರವಾಗಿದ್ದರೆ, ನಂತರದ ಸ್ಥಾನ ನಾಡುನುಡಿ, ಶಿಕ್ಷಣ, ನಿಮ್ನವರ್ಗ ಮುಂತಾದವುಗಳನ್ನು ಕುರಿತದ್ದಾಗಿದೆ. ಅಜ್ಞಾತ ಕವಯಿತ್ರಿಯ ಕೃತಿಗಳನ್ನು, ಅವರ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಪರಂಪರೆಯ ಅಗಾಧ ಜ್ಞಾನದ ಹಿನ್ನೆಲೆಯಲ್ಲಿ ಬರೆಯಲಾದ ಈ ಲೇಖನಗಳು ಪ್ರೌಢತೆಯಿಂದ ಕೂಡಿದ್ದು ಸಂಶೋಧನಾತ್ಮಕ ಗುಣಗಳನ್ನು ಹೊಂದಿವೆ.

'ಬಿತ್ತರ' ವಿವಿಧ ಗೋಷ್ಠಿ/ಸಮ್ಮೇಳನಗಳಲ್ಲಿ ಮಂಡಿಸಿದ ಆಧುನಿಕ ಸಾಹಿತ್ಯಕ್ಕೆ ಸಂಬಂಧಿಸಿದ ವಿಮರ್ಶಾ ಲೇಖನಗಳನ್ನು ಒಳಗೊಂಡ ಕೃತಿ. 'ಬಾಂದಳ'ದಲ್ಲಿ 23 ಪ್ರಬಂಧಗಳಿದ್ದು ಭಾಷೆ, ಮತಧರ್ಮ, ಮಹಿಳೆ, ಸಾಹಿತ್ಯ ಇತ್ಯಾದಿ ವಿಭಿನ್ನ ವಿಷಯಗಳಿಗೆ ಸಂಬಂಧಿಸಿದ ಲೇಖನಗಳಿವೆ. 'ಮಹಿಳಾ ಸಾಹಿತ್ಯ' ಕೃತಿಯಲ್ಲಿ ಮಹಿಳಾ ಸಾಹಿತ್ಯದ ಕುರಿತು ಹಲವಾರು ಲೇಖನಗಳಿವೆ. ಮಹಿಳೆಯರು ಜೊಳ್ಳು ಸಾಹಿತ್ಯ ನಿರ್ಮಿಸುತ್ತಿದ್ದಾರೆಂದು ಹೇಳುತ್ತಲೇ ಆ ಮೂಲಕ ಅದಕ್ಕೆ ಕಾರಣವಾದ ಐತಿಹಾಸಿಕ ಪ್ರಜ್ಞೆಯತ್ತಲೂ ಓದುಗರ ಗಮನ ಸೆಳೆಯುತ್ತಾರೆ. ಅಲ್ಲದೆ ಮಹಿಳಾ ಸಾಹಿತ್ಯ / ಪುರುಷ ಸಾಹಿತ್ಯ ಎಂಬ ವರ್ಗೀಕರಣವೇ ಅಸಂಗತವೆಂದು ಹೇಳಿ ಸಾಹಿತ್ಯ ವಿಮರ್ಶೆ ಲಿಂಗಾಧಾರಿತವಾಗಿರದೆ, ಕೃತಿಯಧಾರಿತವಾಗಬೇಕೆಂದು ಹೇಳುತ್ತಾರೆ. ಮಹಿಳಾ ಸಾಹಿತ್ಯದ ನೆಲೆ-ಬೆಲೆ, ಪರಂಪರೆ, ಪ್ರತಿಭಟನೆ ಮತ್ತು ಲೇಖಕಿಯರು ಈ ಕೃತಿಯ ಪ್ರಮುಖ ಲೇಖನಗಳು.

'ದಲಿತ ಸಾಹಿತ್ಯ' ಕೃತಿಯಲ್ಲಿ ಮೂರು ಲೇಖನಗಳಿವೆ. ಈ ಲೇಖನಗಳಲ್ಲಿ ದಮನಿತರ ಪರ ದನಿಯಾಗಿದ್ದಾರೆ. ಅಲ್ಲದೆ, ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ', ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಮರೆಯಾದ ಮಾರಮ್ಮ' ಕೃತಿಗಳ ವಿಮರ್ಶಾತ್ಮಕ ಪರಿಚಯವಿದೆ.

ಮಹಾವೀರರ ಜೀವನ ಸಂದೇಶ ಒಂದು ಪುಟ್ಟ ಪುಸ್ತಕ. ಮಹಾವೀರರ ಜೀವನ ಚರಿತ್ರೆ, ಸಂದೇಶ, ಅವರ ಬಗೆ ಪ್ರಾಜ್ಞರ ಅಭಿಪ್ರಾಯೋಕ್ತಿಗಳನ್ನು ಸಾಮಾನ್ಯ ಓದುಗರ ಜ್ಞಾನದ ಮಟ್ಟಕ್ಕೆ ನಿಲುಕುವಂತೆ ಸಂಗ್ರಹಿಸಿಕೊಟ್ಟಿದ್ದಾರೆ. ಶಾಂತಿನಾಥ ಕವಿ ಕುರಿತ 'ಶಾಂತಿನಾಥ' ಇವರ ಮತ್ತೊಂದು ಕಿರು ಹೊತ್ತಿಗೆ.

ಅನುವಾದ

ಭಾಷಾಂತರ ಅಥವಾ ಅನುವಾದವೆಂಬುದು ಒಂದು ಕೃತಿಯನ್ನು ಪುನರ್‌ಸೃಷ್ಟಿ ಮಾಡುವ ಪ್ರಕ್ರಿಯೆ. ಇದನ್ನು ಸಾಧಿಸಲು ಉಭಯಭಾಷೆಗಳ ತೀಕ್ಷ್ಣ ಪರಿಜ್ಞಾನ ಅಗತ್ಯ. ಕಮಲಾ ಹಂಪನಾರವರಿಗೆ ಭಾಷಾಂತರ ಕಲೆ ಸಿದ್ಧಿಸಿದೆ. ಬೀಜಾಕ್ಷರ ಮಾಲೆ, ಅಂಬೇಡ್ಕರ್‌ರವರ ಜಾತಿ ನಿರ್ಮೂಲನೆ, ಭಾರತದಲ್ಲಿ ಜಾತಿಗಳು ಹಾಗೂ ಏಷಿಯಾದ ಹಣತೆಗಳು ಎಂಬ ಕೃತಿಗಳನ್ನು ಅನುವಾದಿಸಿದ್ದಾರೆ.

ಬೀಜಾಕ್ಷರ ಮಾಲೆ ವಿ.ವಿ. ಗಿರಿಯವರ ಶ್ರೀಮತಿಯವರಾದ ಸರಸ್ವತಿ ಬಾಯಿಯವರ ತೆಲುಗು ಕೃತಿ. ಇದು ಶಿವಸ್ತುತಿಯನ್ನು ಒಳಗೊಂಡ 65 ಪದ್ಯಗಳಿಂದ ಕೂಡಿದೆ. ಹೆಸರೇ ಸೂಚಿಸುವಂತೆ ಇದು ವರ್ಣಮಾಲೆಯ ಪ್ರತಿಯೊಂದು ಅಕ್ಷರದಿಂದಲೂ ಆರಂಭವಾಗುವ ಪದ್ಯಗಳಿವೆ. ಅನುವಾದ ಮಾಡಲು ಅಸಾಧ್ಯವೆಂದು ಹೇಳಬಹುದಾದಂಥ ಈ ಕೃತಿಯನ್ನ ಕಮಲಾ ಹಂಪನಾರವರು ಸಾಕಷ್ಟು ಶ್ರಮವಹಿಸಿ ಅನುವಾದ ಮಾಡಿದ್ದಾರೆ. ಕನ್ನಡದಲ್ಲಿ ಜ,ಞ,ಳಕಾರಗಳಿಂದ ಪ್ರಾರಂಭವಾಗುವ ಅಕ್ಷರಗಳು ಇಲ್ಲ, ಅಂಥ ಸಂದರ್ಭದಲ್ಲಿ ಕಮಲಾ ಹಂಪನಾರವರು ತುಂಬ ಯಥೋಚಿತವಾಗಿ, ಮೂಲ ಆಶಯಕ್ಕೆ ಭಂಗ ಬಾರದ ರೀತಿಯಲ್ಲಿ ಅವುಗಳಿಗೆ ಸಂವಾದಿ ಪದಗಳನ್ನು ಬಳಸಿರುವುದು ಅವರ ಔಚಿತ್ಯ ಪ್ರಜ್ಞೆ, ಮತ್ತು ಸೃಜನಶೀಲತೆಗೆ ಸಾಕ್ಷಿಯಾಗಿದೆ. ಕೆಲವು ಕಡೆ ಯಥಾವತ್ತಾಗಿ ಅನುವಾದಿಸದೆ ಸಂದರ್ಭಾನುಸಾರವಾಗಿ ಭಾವಾನುವಾದ ಮಾಡಿದ್ದಾರೆ. ವಚನ ಧಾಟಿಯಲ್ಲಿ ಇರುವ ಈ ಪದ್ಯಗಳನ್ನು ಕನ್ನಡದ ಭಾಷಾಲಯಕ್ಕೆ ಒಗ್ಗುವಂತೆ ಆತ್ಮೀಯ ಶೈಲಿಯಲ್ಲಿ ಭಕ್ತಿರಸ ಒಸರಿಸುವಂತೆ ಅನುವಾದಿಸಿದ್ದಾರೆ.

ಉಳಿದ ಕೃತಿಗಳು ಅಂಬೇಡ್ಕರ್‌ರವರು ಭಾರತದ ಜಾತಿ ವ್ಯವಸ್ಥೆಯ ಬಗ್ಗೆ ವಿವಿಧ ಸಂದರ್ಭದಲ್ಲಿ ಬರೆದಂಥ ಕೃತಿಗಳಾಗಿವೆ. ಅಂಬೇಡ್ಕರ್‌ರವರ ಪಾಂಡಿತ್ಯ, ವಾಸ್ತವಾಂಶಗಳ ಗ್ರಹಿಕೆ, ವಿಶ್ಲೇಷಣಾಮತಿಯ ಅರಿವು, ಅವರ ಚಿಂತನೆಗಳು ಕನ್ನಡಿಗರೆಲ್ಲರಿಗೂ ತಲುಪಲಿ ಎಂಬ ಸದುದ್ದೇಶದಿಂದ ಕಮಲಾ ಹಂಪನಾರವರು ಈ ಕೃತಿಗಳನ್ನು ಅನುವಾದಿಸಿದ್ದಾರೆ. ಅಂಬೇಡ್ಕರ್‌ರವರ ಮೂಲ ಆಶಯ/ ಅಭಿಪ್ರಾಯಗಳಿಗೆ ಹಾನಿಯಾಗದ ರೀತಿಯಲ್ಲಿ ಸ್ಪಷ್ಟವಾಗಿ, ಸರಳವಾಗಿ ಇದೇ ಮೂಲಕೃತಿ ಎಂಬಂತೆ ಕನ್ನಡೀಕರಿಸಿದ್ದಾರೆ.

ವ್ಯಕ್ತಿ ಚಿತ್ರಗಳು

ಕನ್ನಡ ಸಾಹಿತ್ಯದಲ್ಲಿ ವ್ಯಕ್ತಿಚಿತ್ರಗಳ ಕೊರತೆ ಸ್ವಲ್ಪಮಟ್ಟಿಗಿದೆ ಎಂಬುದು ವಾಸ್ತವ. ಡಾ॥ ಕಮಲಾ ಹಂಪನಾ ಅವರು ಆ ಕೊರತೆಯನ್ನು ತಕ್ಕಮಟ್ಟಿಗೆ ನೀಗಿಸಿದ್ದಾರೆ. ಅವರು 'ನುಡಿಮಲ್ಲಿಗೆ' ಮತ್ತು 'ಆ ಮುಖ' ಎಂಬ ಎರಡು ಕೃತಿಗಳಲ್ಲಿ ಪ್ರಸಿದ್ಧ ವ್ಯಕ್ತಿಗಳ ಚಿತ್ರಣವನ್ನು ನಮಗೆ ಕಟ್ಟಿಕೊಟ್ಟಿದ್ದಾರೆ.

'ನುಡಿಮಲ್ಲಿಗೆ'ಯಲ್ಲಿ ಗಳಗನಾಥರು, ನೆಲ್ಲಿಕಾರು ರಾಧಮ್ಮ, ಕಸ್ತೂರಿ ಬಾ, ರತ್ನಮ್ಮ, ಮಿರ್ಜಿ ಅಣ್ಣಾರಾಯ, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದಂಥ ಹಿರಿಯ ವ್ಯಕ್ತಿತ್ವದ 10 ಚೇತನಗಳ ಕುರಿತ ಲೇಖನಗಳಿವೆ. ಸಾಹಿತ್ಯ ಸಂರಚನೆಗಾಗಿ ಹಾಗೂ ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವುದಕ್ಕಾಗಿ ಇಂತಹ ವ್ಯಕ್ತಿಗಳು ಸಲ್ಲಿಸಿದ ಸೇವೆಯ/ ನೀಡಿದ ಕೊಡುಗೆಯ ಹಿನ್ನೆಲೆಯಲ್ಲಿ ಪರಿಚಯಿಸಲಾಗಿದೆ.

ಇಂಥದೇ ಮತ್ತೊಂದು ಕೃತಿ 'ಆ ಮುಖ'. ಇದು ಸೃಜನಶೀಲ ಮುಖಗಳ ಹಿಂದೆ ಕೆಲಸ ಮಾಡಿರುವ 'ಆ ಮುಖಗಳನ್ನು' ಸಂದರ್ಶಿಸಿ ಬರೆದಿರುವ ಸ್ವಾರಸ್ಯಕರ ಸಂಗತಿಗಳನ್ನು ಒಳಗೊಂಡ ಸಂಕಲನ, ಪ್ರಸಿದ್ಧ ಪುರುಷನ ಹಿಂದಿರುವ ಸ್ತ್ರೀಯನ್ನು ಆ ಪುರುಷನ ಸಾರ್ಥಕ್ಯ ಜೀವನದ ಸಾಫಲ್ಯಕ್ಕೆ ಕಾರಣಕರ್ತರನ್ನಾಗಿ ಪರಿಗಣಿಸಿ ಹೊಗಳಲಾಗುತ್ತದೆಯೇ ವಿನಾ, ಅವಳ ಅನನ್ಯತೆಯನ್ನು ಎಲ್ಲೂ ಗುರುತಿಸುವುದಿಲ್ಲ. ಪ್ರಸಿದ್ಧ ಸಾಹಿತಿಗಳಿಗೆ ಸ್ಫೂರ್ತಿಚೇತನರಾದ ಸ್ತ್ರೀಯರ ಸ್ವೋಪಜ್ಞತೆಯನ್ನು ಗುರುತಿಸುವ ಕಾರ್ಯವನ್ನು ಶ್ರೀಮತಿ ಕಮಲಾ ಹಂಪನಾರವರು

ಇಲ್ಲಿ ಮಾಡಿದ್ದಾರೆ. ಕುವೆಂಪು, ಮಾಸ್ತಿ, ಪು.ತಿ.ನ., ಅ.ನ.ಕೃ., ಗೋ.ಕಾ.ಕ್., ಡಿ.ಎಲ್.ಎನ್., ಸಿದ್ಧಯ್ಯ ಪುರಾಣಿಕ ಮುಂತಾದ ಹಿರಿಯ ಸಾಹಿತಿಗಳ ಶ್ರೀಮತಿಯರೊಡನೆ ಆತ್ಮೀಯವಾಗಿ ಸಂದರ್ಶಿಸಿ, ಅವರ ವಿಚಾರಗಳನ್ನು ಬರೆಯುವಾಗ ಆ ಮೂಲಕ ಆ ಸಾಹಿತಿಯ ಬಗ್ಗೆ ಸಹೃದಯರಿಗೆ ಅರಿವಿಲ್ಲದ ಹಲವಾರು ಸ್ವಾರಸ್ಯಕರವಾದ ವಿಚಾರಗಳನ್ನು ಅನಾವರಣಗೊಳಿಸಿದ್ದಾರೆ.

ಜೀವನ ಚರಿತ್ರೆ

ಕಮಲಾರವರು, ಜೈನಧರ್ಮದ 23ನೇ ತೀರ್ಥಂಕರನಾದ ಮಹಾವೀರನ ಜೀವನ ಚರಿತ್ರೆ ರಚಿಸಿದ್ದಾರೆ. ಸಾಮಾನ್ಯ ಮಾನವನಾದ ಮಹಾವೀರ ತನ್ನ ಲೌಕಿಕತೆಯನ್ನು ಮೀರಿ ಕೈವಲ್ಯಜ್ಞಾನಿಯಾದ ಬಗೆಯನ್ನು ಮಹಾವೀರನಿಗೆ ಸಂಬಂಧಿಸಿದ ಕೃತಿಗಳನ್ನು ಆಳವಾಗಿ ಅಭ್ಯಾಸ ಮಾಡಿ ಅವರ ಮೇರು ವ್ಯಕ್ತಿತ್ವವನ್ನು ತುಂಬಾ ಹೃದ್ಯವಾಗಿ ನೀಡಿದ್ದಾರೆ.

ಇವಲ್ಲದೆ, ಡಾ॥ ಕಮಲಾ ಹಂಪನಾರವರು ಆಕಾಶವಾಣಿಯಲ್ಲಿ ಹಲವಾರು ಭಾಷಣ, ನಾಟಕ, ರೂಪಕಗಳನ್ನು ಪ್ರಸ್ತುತಪಡಿಸಿದ್ದಾರೆ. ಅವರು 'ಚಿಂತನ' ಕಾರ್ಯಕ್ರಮದಲ್ಲಿ ನೀಡಿದ ಪ್ರೌಢವಾದ ಭಾಷಣಗಳು 'ಬೆಳ್ಳಕ್ಕಿ' ಸಂಕಲನದಲ್ಲೂ, ಅವರು ಆಕಾಶವಾಣಿಗಾಗಿ ರಚಿಸಿದ ನಾಟಕ ಹಾಗೂ ರೂಪಕಗಳನ್ನು ಕ್ರಮವಾಗಿ 'ಬಕುಳ' ಹಾಗೂ 'ಬಾನಾಡಿ' ಕೃತಿಗಳಲ್ಲಿ ಪ್ರಕಟಿಸಿದ್ದಾರೆ.

ಡಾ॥ ಕಮಲಾ ಹಂಪನಾರವರ ಸಮಗ್ರ ಬರಹಗಳ ರಾಶಿಯನ್ನು ಅವಲೋಕಿಸಿದಾಗ ಅದರ ಬಹುತೇಕ ಕೃತಿಗಳು ಜೈನಧರ್ಮಕ್ಕೆ ಸಂಬಂಧಿಸಿರುವುದರಿಂದ, ಅವರ ಕೃತಿಗಳನ್ನು ಅವರ ಪರಿಸರದ ಸಾಮಾಜಿಕ ಧಾರ್ಮಿಕ ಅಂಶಗಳು ನಿಯಂತ್ರಿಸಿವೆಯೇನೋ ಎಂಬ ಅನುಮಾನ ಮೂಡುತ್ತದೆ. ಆದರೆ ಆ ಬರಹಗಳಲ್ಲಿ ಎಲ್ಲಿಯೂ ಧರ್ಮದ ಶ್ರೇಷ್ಠತೆಯನ್ನು ಪ್ರತಿಪಾದಿಸದೆ ಕೇವಲ ಸತ್ಯ ಶುದ್ಧ ಸಂಶೋಧನೆಗೆ ಒತ್ತು ನೀಡಿದ್ದಾರೆ. ಸೃಜನಾತ್ಮಕ ಸಾಹಿತ್ಯದ ಸೆಲೆಯಲ್ಲಿಯೇ ಹಲವಾರು ಸಂಶೋಧನಾತ್ಮಕ ಕೃತಿಗಳು/ ಲೇಖನಗಳು ಒಡಮೂಡಿವೆ.

ಸಂಘ-ಸಮಿತಿಗಳಲ್ಲಿ ಸೇವೆ

ಡಾ॥ ಕಮಲಾ ಹಂಪನಾರವರು ಸಲ್ಲಿಸಿದ ಸೇವೆ ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಸೀಮಿತವಾದುದಲ್ಲ, ಹಲವಾರು ಸಂಘ ಸಂಸ್ಥೆಗಳಲ್ಲಿ, ಸರಕಾರದ ಸಮಿತಿಗಳಲ್ಲಿ ವಿವಿಧ ಸ್ಥಾನಗಳಲ್ಲಿ ನೇಮಕಗೊಂಡು ಕಾರ್ಯನಿರ್ವಹಿಸಿದ್ದಾರೆ. ಅವುಗಳಲ್ಲಿ, ರಾಜ್ಯ ಸಾಹಿತ್ಯ ಅಕಾಡೆಮಿಯ ಸದಸ್ಯೆಯಾಗಿ, ಕರ್ನಾಟಕ ರಾಜ್ಯ ಗ್ಯಾಸೆಟಿಯರ್‌ನ ಸಲಹಾ ಸಮಿತಿಯ (ಗುಲ್ಬರ್ಗಾ, ಬಿಜಾಪುರ ಮತ್ತು ಮಂಡ್ಯ ಜಿಲ್ಲೆಗಳ ಗ್ಯಾಸೆಟಿಯರ್ ರಚನೆಗೆ) ಸದಸ್ಯೆಯಾಗಿ; ಕರ್ನಾಟಕ ರಾಜ್ಯ ಪಂಪ ಪ್ರಶಸ್ತಿ ಆಯ್ಕೆ ಸಮಿತಿ ಹಾಗೂ ದಾನ ಚಿಂತಾಮಣಿ ರಾಜ್ಯ ಪ್ರಶಸ್ತಿ ಆಯ್ಕೆ ಸಮಿತಿಗಳಿಗೆ ಅಧ್ಯಕ್ಷೆಯಾಗಿ; ಕುಪ್ಪಳಿಯ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸ್ಥಾಪಕ ಸದಸ್ಯೆಯಾಗಿ; ಗ್ರಂಥಾಲಯ ಇಲಾಖೆಯ ಸಗಟು ಖರೀದಿ ಸಮಿತಿಯ ಸದಸ್ಯೆಯಾಗಿ ಮತ್ತು ಆ ನಂತರವೂ ಬೆಂಗಳೂರು ವಿಭಾಗದ ಅಧ್ಯಕ್ಷೆಯಾಗಿ; ಪ್ರಧಾನಿ ವಾಜಪೇಯಿಯವರ ಅಧ್ಯಕ್ಷತೆಯಡಿ, ಮಹಾವೀರರ 2006ನೇ ವರ್ಷದ ಜನ್ಮ ಜಯಂತಿಯ ರಾಷ್ಟ್ರೀಯ ಕಾರ್ಯಕ್ರಮ ಜಾರಿ ಸಮಿತಿ ಮತ್ತು ಉನ್ನತ ಸಲಹೆ ಸಮಿತಿಗಳಿಗೆ ನೇಮಕವಾದ ಒಟ್ಟು ಐವತ್ತೆರಡು ಸದಸ್ಯರಲ್ಲಿ ಒಬ್ಬ ಸದಸ್ಯೆಯಾಗಿ, ಕೆಲಸ ಮಾಡಿದ್ದು ಉಲ್ಲೇಖನೀಯ.

ಪ್ರಶಸ್ತಿ–ಪುರಸ್ಕಾರಗಳು

ಕರ್ನಾಟಕಾದ್ಯಂತ ಖ್ಯಾತಿ ಪಡೆದಿರುವ ಕಮಲಾರವರಿಗೆ ಅನೇಕ ಪ್ರಶಸ್ತಿ–ಪುರಸ್ಕಾರಗಳು ಸಂದಿವೆ. ಹಲವು ಸಂಘ–ಸಂಸ್ಥೆಗಳು ಸನ್ಮಾನಿಸಿವೆ. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (1985), ಬಾಬಾ ಆಮ್ಟೆ ರಾಷ್ಟ್ರಿಯ ಪ್ರಶಸ್ತಿ (1990), ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕದ ರಾಷ್ಟ್ರೀಯ ಪುರಸ್ಕಾರ (1993), ಸಾಹಿತ್ಯ ವಿಶಾರದೆ (1994), ರನ್ನಕವಿ ಪ್ರಥಮ ಪ್ರಶಸ್ತಿ (1996), ಸಾಹಿತ್ಯ ಸರಸ್ವತಿ ಪ್ರಶಸ್ತಿ (1997), ಸಾಹಿತ್ಯ ರತ್ನ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ (1997), ಸರ್ಕಾರದ ಅತ್ಯುನ್ನತ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ (1999), ಕರ್ನಾಟಕ ಲೇಖಕಿಯರ ಸಂಘದ ಅನುಪಮಾ ಪ್ರಶಸ್ತಿ (2003), ಭಾರತ ಭೂಷಣ, ಮುಂತಾದ ಪ್ರಶಸ್ತಿಗಳು ಈವರೆಗೆ ಇವರಿಗೆ ಬಂದಿರುವ ಪ್ರಮುಖ ಪ್ರಶಸ್ತಿಗಳಲ್ಲಿ ಕೆಲವು. 2003ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆಯಾಗಿ ಆಯ್ಕೆಯಾಗಿದ್ದು ಈ ಎಲ್ಲಕ್ಕಿಂತ ವಿಶೇಷ. ಈವರೆಗೆ ನಡೆದ ಸಮ್ಮೇಳನಗಳಲ್ಲಿ ಅಧ್ಯಕ್ಷತೆಯಾಗಿ ಆಯ್ಕೆಯಾದ ಮೂರು ಮಹಿಳೆಯರಲ್ಲಿ ಈಕೆ ಮೂರನೆಯವರು.

———— * ————

ಪದ್ಮವಿಭೂಷಣೆ – ಅಪೂರ್ವ ಕಲಾವಿದೆ – ಬಿ. ಸರೋಜಾದೇವಿ

ಡಾ. ವೈ.ಎಸ್. ಜ್ಯೋತಿ ಶಶಿಕುಮಾರ್

ಚಲನಚಿತ್ರ ಕ್ಷೇತ್ರ ಹಲವು ಕಲೆಗಳ ಆಗರ. ಈ ಕ್ಷೇತ್ರದಲ್ಲಿ ದೀರ್ಘಕಾಲ ಕೀರ್ತಿ, ಹಣ, ಸಂತೃಪ್ತಿ ಗಳಿಸುವುದು ಹಾಗೂ ಅವುಗಳನ್ನು ಉಳಿಸಿಕೊಳ್ಳುವುದು ಕಷ್ಟಸಾಧ್ಯ. ಏಕೆಂದರೆ ಹಿಂದಿನ ಕಾಲದ ಮೂಕಿ ಹಾಗೂ ಟಾಕಿ ಚಿತ್ರಗಳಿಂದ ಆರಂಭಿಸಿ ಇಂದಿನ ಅನಿಮೇಷನ್ನಿನ ತನಕ ಚಲನಚಿತ್ರರಂಗದಲ್ಲಿ ಅಗಾಧ ತಂತ್ರಜ್ಞಾನದ ಬೆಳವಣಿಗೆಯನ್ನು ಕಾಣುತ್ತಿದ್ದೇವೆ. ವೈವಿಧ್ಯಯಮ ವಿಸ್ಮಯಕರ ಚಿತ್ರಗಳ ಸಂಖ್ಯೆ ಹೆಚ್ಚುತ್ತಿದೆ. ಜೊತೆಜೊತೆಗೆ ನಟನಟಿಯರು, ಗಾಯಕರು ತಂತ್ರಜ್ಞರ ಸಂಖ್ಯೆಯೂ ಏರಿದೆ. ಪ್ರತಿದಿನವೂ ಹೊಸತನ್ನು, ಹೊಸಬರನ್ನು ಜನಸಾಮಾನ್ಯರ ದೃಷ್ಟಿಗೆ ತರಲು ಪೈಪೋಟಿಯೇ ನಡೆದಿದೆ. ಹೀಗಾಗಿ ಹಳಬರು, ಹಳೆಯ ಚಿತ್ರಗಳು ಮರೆಯಾಗುವ ಸಂಭವವಿಲ್ಲದಿಲ್ಲ. ಆದರೆ ಅಪ್ಪಟ ಕಲಾವಿದರಿಗೆ ಹಾಗೂ ಅಳಿಯದ ಕಲೆಗೆ ಎಂದೂ ಮುಪ್ಪು ಅಥವಾ ಮಸುಕು ಅಡ್ಡವಾಗುವುದಿಲ್ಲ. ಇಂಥ ಅಪರೂಪದ ಕಲಾಸಂಪತ್ತು, ಸೌಂದರ್ಯ ಹೊಂದಿ ಕೀರ್ತಿ–ಶಿಖರದಲ್ಲಿ ವಿರಾಜಮಾನರಾಗಿದ್ದಾರೆ ಕನ್ನಡತಿ ಚತುರ್ಭಾಷಾತಾರೆ ಶ್ರೀಮತಿ ಡಾ. ಬಿ.ಸರೋಜಾದೇವಿ ಶ್ರೀಹರ್ಷ ಅವರು.

ಮಹಾಕವಿ ಕಾಳಿದಾಸ ಚಿತ್ರದ ಮೂಲಕ ನಾಯಕಿ ಪಾತ್ರದಿಂದಲೇ ಸರೋಜಾದೇವಿಯವರು ಕನ್ನಡ ಸಿನಿಮಾ ಲೋಕಕ್ಕೆ ಪ್ರವೇಶ ಪಡೆದರು. ಅದೇ ಗಾಂಭೀರ್ಯ, ಧೀಮಂತಿಕೆ, ಏಕಮೇವಾದ್ವಿತೀಯ ನಾಯಕಿ ಗುಣಗಳನ್ನು ಇಂದಿಗೂ ಉಳಿಸಿಕೊಂಡು ಗೌರವಾನ್ವಿತೆಯಾಗಿರುವ ಅಭಿಜಾತ ಕಲಾವಿದೆ ಈಕೆ. ದಕ್ಷಿಣ ಭಾರತದ ಚಲನಚಿತ್ರರಂಗದಲ್ಲಿ ಶಿವಾಜಿ ಗಣೇಶನ್, ಎಂ.ಜಿ. ರಾಮಚಂದ್ರನ್, ಹಾಗೂ ಕನ್ನಡದ ವರನಟ ಡಾ.ರಾಜಕುಮಾರ್ ಇವರುಗಳನ್ನು ಮೇರು ಶಿಖರಗಳೆಂದೇ ಪರಿಗಣಿಸಲಾಗಿದೆ. ಇಂಥ ಮಹಾನ್‌ನಟರ ಜೊತೆಗೆ ಚಿಕ್ಕವಯಸ್ಸಿನಲ್ಲಿಯೇ ಸರಿಸಮಾನವಾಗಿ ನಟಿಸಿ ಅವರೆಲ್ಲರ ಪ್ರಶಂಸೆಗೆ ಪಾತ್ರರಾಗಿದ್ದರು ಸರೋಜಾದೇವಿ. ಅಷ್ಟೇ ಅಲ್ಲ, ಸಾಮಾಜಿಕ ವ್ಯವಸ್ಥೆಯಲ್ಲಿ ಕೌಟುಂಬಿಕ ಪರಿಸರದ ಪಾತ್ರಗಳಲ್ಲಿ ಕೂಡ ತಮ್ಮ ಪ್ರತಿಭೆ ಮೆರೆದಿರುವ ಈ ನಟನಾ ಚತುರೆ ಜನರ ಮನಸ್ಸಿನಲ್ಲಿ ಅಚ್ಚಳಿಯದ ಪರಿಣಾಮಕಾರಿ ಅಭಿನಯ ನೀಡಿದ್ದಾರೆ.

1969ನೇ ಇಸವಿಯಲ್ಲಿ ಈಕೆಗೆ ಪದ್ಮಶ್ರೀ ಪ್ರಶಸ್ತಿ, 1992ರಲ್ಲಿ ಪದ್ಮಭೂಷಣದ ಗರಿ. ಜೊತೆಗೆ ಬೆಂಗಳೂರು ವಿಶ್ವವಿದ್ಯಾಲಯವು 2007ನೇ ಇಸವಿಯಲ್ಲಿ ಈ ಅಪ್ರತಿಮ ಕಲಾವಿದೆಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಸನ್ಮಾನಿಸಿದೆ. ಹೀಗೆ ಪ್ರತಿಭೆ, ಕಲೆಯ ಬಗ್ಗೆ ಅಪಾರ ಶ್ರದ್ಧೆಯಿಂದ ತಮ್ಮ ಕಲಾ ಜೀವನವನ್ನು ಸಾರ್ಥಕಪಡಿಸಿಕೊಂಡಿರುವ ಕನ್ನಡ ಚಿತ್ರಕಲಾರಂಗದ ಹೆಮ್ಮೆಯಾಗಿದ್ದಾರೆ ಶ್ರೀಮತಿ ಸರೋಜಾದೇವಿ.

ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದ ಸರೋಜಾದೇವಿಯವರು ಚಿಕ್ಕ ವಯಸ್ಸಿನಲ್ಲಿ ಶಿಕ್ಷಕಿಯಾಗಿ ಮಕ್ಕಳಿಗೆ ವಿದ್ಯಾದಾನ ಮಾಡಿ ಗೌರವ ಪಡೆಯುವ ಹಂಬಲ ಹೊಂದಿದ್ದರಂತೆ. ಆದರೆ ಅಂದಿನ ಪ್ರಸಿದ್ಧ ಕಲಾವಿದರಲ್ಲೊಬ್ಬರಾಗಿದ್ದ

ಸಿ.ಹೊನ್ನಪ್ಪ ಭಾಗವತರ್ ಅವರು ಸಿನಿಮಾದಲ್ಲಿ ಅಭಿನಯಿಸಲು ಆಹ್ವಾನಿಸಿದಾಗ ಅಳುಕಿನಿಂದಲೇ ಒಪ್ಪಿಕೊಂಡಿದ್ದರು. ಆದರೆ ಅನಂತರ ಅವರು ಹಿಂದಿರುಗಿ ನೋಡುವ ಪ್ರಮೇಯವೇ ಬರಲಿಲ್ಲ. ಚೆಲುವು, ಅಭಿನಯ, ಪಾತ್ರಗಳ ಬಗ್ಗೆ ಶ್ರದ್ಧೆ, ಎಲ್ಲಕ್ಕಿಂತ ಹೆಚ್ಚಾಗಿ ಶಿಸ್ತುಬದ್ಧ ನಡವಳಿಕೆಯಿಂದಾಗಿ ಅನೇಕ ಧೀಮಂತ ನಾಯಕಿಯರ ಪಾತ್ರಗಳು ಆಕೆಯನ್ನೇ ಅರಸಿ ಬಂದವು. ಕಿತ್ತೂರು ಚೆನ್ನಮ್ಮ, ಮಲ್ಲಮ್ಮನ ಪವಾಡ, ಅಮರ ಶಿಲ್ಪಿ ಜಕಣಾಚಾರಿ, ಕಥಾ ಸಂಗಮ, ಬಭ್ರುವಾಹನ, ನ್ಯಾಯವೇ ದೇವರು ಹೀಗೆ ಜನಸಾಮಾನ್ಯರು ಹಾಗೂ ಮೇಲ್ವರ್ಗ ಎಂಬ ಅಂತರವಿಲ್ಲದೆ ಎಲ್ಲ ಸಹೃದಯರ ಮನದಲ್ಲಿ ಅಚ್ಚಳಿಯದ ಪಾತ್ರ ಸೃಷ್ಟಿಮಾಡಿದ ಕಲಾವಿದೆ ಈಕೆ.

ತಾನು ವಹಿಸಿದ ಪಾತ್ರಗಳ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ಮಾಡುವುದು ಅಭಿಜಾತ ಕಲಾವಿದರ ಹುಟ್ಟುಗುಣವಾಗಿರುತ್ತದೆಯೇನೊ. ಸರೋಜಾದೇವಿಯವರು ತಮ್ಮ ಪಾತ್ರಗಳಲ್ಲಿ ಸಂಪೂರ್ಣ ತನ್ಮಯರಾಗಿ ಆವೇಶ ಹೊಕ್ಕಂತೆ ಆಯಾ ಪಾತ್ರಗಳಿಗೆ ಜೀವ ತುಂಬುತ್ತಿದ್ದರು. ಕಿತ್ತೂರು ರಾಣಿಯಾಗಿ ಆಕೆಯ ಚೆನ್ನಮ್ಮನ ಪಾತ್ರ ಇಂಥದೊಂದು ಅದ್ಭುತ ಸೃಷ್ಟಿಯಾಗಿದೆ. ಹದಿಹರೆಯದ ಲಾವಣ್ಯವತಿ ಕನ್ಯೆ ವೀರನಂತೆ ವೇಷತೊಟ್ಟು ಹುಲಿಯನ್ನು ಬೇಟೆಯಾಡುವ ದೃಶ್ಯ, ಆಂಗ್ಲ ಅಧಿಕಾರಿಯೊಡನೆ 'ಕಪ್ಪವೇಕೆ ಕೊಡಬೇಕೆಂದು' ಗದರಿಸುವ ಆವೇಶ ಅಷ್ಟು ಪ್ರಬುದ್ಧವಾಗಿ ಅಭಿವ್ಯಕ್ತಿಯಾಗಬೇಕಾದರೆ ಆ ನಟಿಯಲ್ಲಿ ಪಾತ್ರವೇ ಮೈಹೊಕ್ಕಂತಿದ್ದರೆ ಮಾತ್ರ ಸಾಧ್ಯವಲ್ಲವೆ? ಕನ್ನಡಿಗರ ಮನದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನನ್ನು ಸದಾ ಸಾಕಾರಗೊಳಿಸಿದ ಅದ್ಭುತ ಕಲಾವಿದೆ ಸರೋಜಾದೇವಿ ಎಂಬುದನ್ನು ಎಲ್ಲರೂ ಒಪ್ಪಿಕೊಂಡ ಸಂಗತಿ. ಅಷ್ಟೇ ಅಲ್ಲ ಅವರು ಬೆಳಗಾವಿಗೆ ಭೇಟಿ ನೀಡಿದ್ದಾಗ ಜನರು ಸರೋಜಾದೇವಿಯಲ್ಲಿ ರಾಣಿ ಚೆನ್ನಮ್ಮನೇ ಆವಿರ್ಭವಿಸಿದ್ದಾಳೇನೋ ಎಂಬಷ್ಟು ಪ್ರೀತಿಗೌರವ ತೋರಿದ್ದರಂತೆ. ಕಿತ್ತೂರು ಚೆನ್ನಮ್ಮ ರಾಣಿಯ ಪ್ರತಿಮೆ ಕೂಡ ತಮ್ಮ ಪಾತ್ರದ ಎರಕದಂತೆ ಕಂಡು ಕಲಾವಿದೆಯಾಗಿ ತಮಗೆ ಅತ್ಯಂತ ಪುಳಕ ಹಾಗೂ ಸಾರ್ಥಕ ಭಾವನೆ ಮೂಡಿದವೆಂದು ಈಕೆ ಹೇಳಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಎಲ್ಲ ನೋವುಗಳ ನಡುವೆ ದಿಟ್ಟೆಯಾಗಿ ಧೈರ್ಯದಿಂದ ಬದುಕಲು ಚೆನ್ನಮ್ಮ ಪ್ರೇರಣೆಯೂ ಆಗಿದ್ದಾಳೆ ಎಂದಿದ್ದಾರೆ. ಇದೇ ರೀತಿ ಮಹಿಷಾಸುರಮರ್ದಿನಿ ಚಿತ್ರದಲ್ಲಿ ಚಾಮುಂಡೇಶ್ವರಿಯ ಪಾತ್ರ ಮಾಡುವಾಗ ತ್ರಿಶೂಲ ಚುಚ್ಚಿ ಸಹನಟ ದಿನೇಶ್‌ರಿಗೆ ಗಾಯವಾದಾಗ ಚಾಮುಂಡಿಯ ಭಕ್ತೆಯಾದ ಸರೋಜಾದೇವಿ ಬೆಚ್ಚಿಬಿದ್ದರಂತೆ. ಅಷ್ಟರಮಟ್ಟಿಗೆ ತಮ್ಮ ಪಾತ್ರಗಳಲ್ಲಿ ತಾದಾತ್ಮ್ಯವನ್ನು ಹೊಂದುವ ಶ್ರದ್ಧೆ ಇವರಿಗಿತ್ತು. ಅವರ ಅಭಿಪ್ರಾಯದಂತೆ "ಚಿತ್ರಗಳು ಅವರಿಗೆ ಅನೇಕ ಪಾಠಗಳನ್ನು ಕಲಿಸಿವೆ. ಬದುಕಿನ ಕಷ್ಟನಷ್ಟಗಳನ್ನು ಯಾವುದೇ ಶಾಲೆಯಲ್ಲಿ ಕಲಿಸಲಾರದು. ಜೀವನವೇ ಶಿಕ್ಷಣವೆಂಬ ಭಾವನೆ ಕೂಡ ಇದರಿಂದ ಅರಿವಾಗುತ್ತದೆ." ಅದೇ ರೀತಿ ಕುದುರೆ ಸವಾರಿ, ಕತ್ತಿ ಹಿಡಿದು ಹೋರಾಡುವುದು, ತುರ್ತು ಸ್ಥಿತಿಯಲ್ಲಿ ವೀರಾವೇಶದಿಂದ ಜನರನ್ನು, ಸೈನಿಕರನ್ನು ಹುರಿದುಂಬಿಸುವುದು ಇಂಥ ಹಲವಾರು ಅಸಾಧ್ಯ ಅಥವಾ ಕಷ್ಟಸಾಧ್ಯವೆನಿಸುವ ಕಾರ್ಯಗಳನ್ನು ತೆರೆಯ ಮೇಲೆ ಅತ್ಯಂತ ಸಮರ್ಥವಾಗಿ ಅಭಿನಯಿಸಿದ್ದಾರೆ. ಅಂದರೆ ಕೆಚ್ಚೆದೆಯ ಸಾಹಸವಿರಲಿ, ಏಕಾಂಗಿತನದಲ್ಲೂ, ಅಸಹಾಯಕತೆಯ ಪರಿಸ್ಥಿತಿಯಲ್ಲೂ ಮಹಿಳೆಯರು ಸ್ವಯಂ ರಕ್ಷಣೆ ಮಾತ್ರವಲ್ಲ ತನ್ನ ಅವಲಂಬಿತರು ಹಾಗೂ ಇತರರನ್ನು ಕೂಡ ರಕ್ಷಿಸುವ ಆತ್ಮಬಲ ಹೊಂದಿರುವುದನ್ನು ತಮ್ಮ ಪಾತ್ರಗಳಲ್ಲಿ ಜೀವಂತಗೊಳಿಸುವಂತೆ ಅಭಿನಯಿಸಿದ್ದಾರೆ.

ಕನ್ನಡದ ಮೊದಲ ವರ್ಣಚಿತ್ರವಾದ ಅಮರ ಶಿಲ್ಪಿ ಜಕಣಾಚಾರಿಯ ನಾಯಕಿ ಪಾತ್ರದಲ್ಲಿ ಸರೋಜಾದೇವಿ ಕನ್ನಡ ಹಾಗೂ ತೆಲುಗು ಭಾಷೆಗಳೆರಡಲ್ಲೂ ಏಕಕಾಲದಲ್ಲಿ ಅಭಿಯಿಸಿ ಅಪಾರ ಪ್ರಶಂಸೆ ಪ್ರಶಸ್ತಿಗಳನ್ನು ಪಡೆದರು. ಸೌಂದರ್ಯ, ಕಲಾವಂತಿಕೆ, ವೃತ್ತಿ ನಿಷ್ಠೆಯ ಕಲಾವಿದೆಗೆ ಈ ಚಿತ್ರ ಮತ್ತೊಂದು ಗರಿ ಮೂಡಿಸಿ ಎರಡೂ ಭಾಷೆಗಳಲ್ಲೂ ಶ್ರೇಷ್ಠ ನಟನೆಗಾಗಿ ರಾಷ್ಟ್ರೀಯ ಪ್ರಶಸ್ತಿ ಲಭಿಸಿತ್ತು. ಅಷ್ಟೇ ಅಲ್ಲ 'ಅಭಿನಯ ಸರಸ್ವತಿ' ಎಂಬ ಬಿರುದನ್ನು ಅಂದಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ನೀಡಿ, ಗೌರವವನ್ನು ಇಮ್ಮಡಿಗೊಳಿಸಿದ್ದರು. 'ವಿಜಯ ನಗರದ ವೀರಪುತ್ರ', 'ಮಲ್ಲಮ್ಮನ ಪವಾಡ' ಮುಂತಾದ ಚಿತ್ರಗಳಲ್ಲಿ ಕೂಡ ಸರೋಜಾದೇವಿಯವರು ತಮ್ಮ ಅಭಿನಯವನ್ನು ಜನರ ನಿರೀಕ್ಷಿತ ಮಟ್ಟದಲ್ಲಿ ಕಟ್ಟಿಕೊಟ್ಟಿದ್ದರು.

ಸಾಮಾಜಿಕ ಚಿತ್ರಗಳಲ್ಲಿ ಕೂಡ ಈ ತಾರೆ ತಾವು ಅದ್ವಿತೀಯ ಅಭಿನೇತ್ರಿಯೆಂಬುದನ್ನು ಜನರ ಮನದಲ್ಲಿ ಬಿಂಬಿಸಿದ್ದಾರೆ. ಮುಖ್ಯವಾಗಿ ಮಹಿಳೆಯರು ಸ್ವಂತಿಕೆಯನ್ನು ಸ್ವಾವಲಂಬನೆಯನ್ನು ಹೊಂದುವುದು ಅತಿಮುಖ್ಯವೆಂಬುದನ್ನು ತಮ್ಮ ಪಾತ್ರಪೋಷಣೆಯಲ್ಲಿ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಅಸಹಾಯಕ ತಂಗಿ ಹಾಗೂ ಅಂಥ ಹೆಣ್ಣಿನ ಬೆಂಬಲವಾಗಲು ತನ್ನನ್ನೇ ಅಗ್ನಿಪರೀಕ್ಷೆಗೊಡ್ಡಿಕೊಳ್ಳುವ ಸೋದರಿಯಾಗಿ 'ಲಕ್ಷ್ಮೀ ಸರಸ್ವತಿ' ಚಿತ್ರದಲ್ಲಿ, ಪರಿತ್ಯಕ್ತ ಹೆಣ್ಣಾಗಿ 'ನ್ಯಾಯವೇ ದೇವರು' ಚಿತ್ರದಲ್ಲಿ; ಸ್ವತಂತ್ರ ಮನೋಭಾವದ ಅವಿವಾಹಿತ ಮಧ್ಯವಯಸ್ಸಿನ ಮಹಿಳೆಯಾಗಿ 'ಕಥಾ ಸಂಗಮ'ದಲ್ಲಿ; ಸರೋಜಾದೇವಿ ವಿದ್ಯಾವಂತ ಉದ್ಯೋಗಸ್ಥ ಮಹಿಳೆಯರು ಸಮಾಜದಲ್ಲಿ ಎದುರಿಸಬೇಕಾಗುವ ಹಲವಾರು ಸಮಸ್ಥೆಗಳನ್ನು ಮಾನಸಿಕವೇದನೆ, ಒಂಟಿತನ, ಹಾಗೂ ಅಸಹಾಯಕತೆ–ಇವೆಲ್ಲವನ್ನೂ ಅತ್ಯಂತ ಪರಿಣಾಮಕಾರಿಯಾಗಿ ಅಭಿನಯಿಸಿದ್ದಾರೆ. ಇವರಲ್ಲದಿದ್ದರೆ ಇನ್ನಾರೂ ಆ ಪಾತ್ರಗಳಿಗೆ ನ್ಯಾಯ ಒದಗಿಸುತ್ತಿರಲಿಲ್ಲವೇನೋ ಎಂಬ ಅಭಿಪ್ರಾಯ ಜನಮನದಲ್ಲಿ ಮೂಡಿಸಿದರು ಈಕೆ. ಕನ್ನಡದ ನಟಸಾರ್ವಭೌಮ ಡಾಕ್ಟರ್ ರಾಜ್‌ಕುಮಾರ್‌ರೊಂದಿಗೆ ಈ ತಾರೆ ಹಲವಾರು ಚಿತ್ರಗಳಲ್ಲಿ ಅವರಿಗೆ ಸರಿಸಮವಾಗಿ ಅಭಿನಯಿಸಿ ಆ ಮೇರು ನಟನಿಂದಲೇ ಪ್ರಶಂಸೆ ಪಡೆದಿದ್ದರು. ಭಾಗ್ಯವಂತರು, ಶ್ರೀಕೃಷ್ಣರುಕ್ಮಿಣಿಸತ್ಯಭಾಮ, ಶ್ರೀನಿವಾಸಕಲ್ಯಾಣ, ಮುಂತಾದುವುಗಳಲ್ಲಿ ಮಾತ್ರವಲ್ಲ 'ಬಭ್ರುವಾಹನ' ಚಿತ್ರದಲ್ಲಿ ದ್ವಿಪಾತ್ರದಲ್ಲಿದ್ದ ರಾಜ್‌ಕುಮಾರ್ ಅರ್ಥಾತ್ ಅರ್ಜುನ ಹಾಗೂ ಬಭ್ರುವಾಹನ– (ತಂದೆ–ಮಗ) ಇವರಿಬ್ಬರಿಗೆ ಪತ್ನಿ ಮತ್ತು ತಾಯಿಯಾಗಿ ಅದ್ಭುತ ನಟನೆಯನ್ನು ಪ್ರದರ್ಶಿಸಿದ್ದಾರೆ. ರಾಜ್‌ಕುಮಾರ್ ಕುಟುಂಬಕ್ಕೆ ಅತ್ಯಂತ ಆಪ್ತರಾದ ಸರೋಜಾದೇವಿಯವರು ಆ ಮೇರುನಟನ ಅಭಿನಯ ಸಾಮರ್ಥ್ಯದ ಬಹುಮುಖದ ಆಯಾಮಗಳು ಮಾತ್ರವಲ್ಲ ಸರಳ ನಡೆನುಡಿ, ಮುಗ್ಧ ವ್ಯಕ್ತಿತ್ವವನ್ನು ಆತ್ಮೀಯರಾಗಿದ್ದು ಅರ್ಥಮಾಡಿಕೊಂಡಿದ್ದರು.

ಸಿನಿಮಾ ಲೋಕ ಕಾಲ್ಪನಿಕವಾಗಿ ವಾಸ್ತವವನ್ನು ಚಿತ್ರಿಸುತ್ತದೆ ಅಥವಾ ವೈಭವೀಕರಿಸುತ್ತದೆ. ಆದರೆ ಬದುಕು ಎಷ್ಟೋ ಬಾರಿ ಅತ್ಯಂತ ಕಠೋರ ಅನುಭವಗಳನ್ನು ತೆರೆದಿಡುತ್ತದೆ. ಹೀಗಾಗಿ ತೆರೆಯ ಮೇಲಿನ ಥಳುಕು ಕಲಾವಿದರ ನಿಜಜೀವನದಲ್ಲಿ ಭ್ರಮೆಯಾಗಿರಲೂ ಸಾಧ್ಯ. ಚಿತ್ರದಲ್ಲಿ ವಹಿಸುವ ಅನೇಕ ಪಾತ್ರಗಳಿಗೆ ದೊರೆಯುವ ಅನುಭವಗಳು ಕೆಲವೊಮ್ಮೆ ನಿಜಜೀವನದಲ್ಲೂ ಘಟಿಸಿ ಸುಖದುಃಖಗಳನ್ನು ಆಯಾ ಪಾತ್ರಧಾರಿಗಳಿಗೆ ತರುವುದುಂಟು. ಅದೇ ರೀತಿ 1986ರಲ್ಲಿ ಶ್ರೀಮತಿ ಸರೋಜಾದೇವಿಯವರ ಜೀವನಸಖನಾಗಿದ್ದ ಪತಿ ಶ್ರೀಹರ್ಷ ತೀರಿಕೊಂಡರು. ಮುಂದೆ ಮುದ್ದಿನ ಮಗಳನ್ನು ಅವರು ಕಳೆದುಕೊಳ್ಳಬೇಕಾಯಿತು. ಅಂಥ ಘಟನೆಗಳಿಂದ ಈ ತಾರೆ ವಿಚಲಿತರಾಗಿ ದುಃಖತಪ್ತರಾಗಿ ಕಂಗೆಟ್ಟಿದ್ದು ನಿಜ. ಆದರೆ ಅದರಿಂದ ತಮ್ಮ ಜೀವನದಿಂದ ವಿಮುಖರಾಗಲಿಲ್ಲ. ತಮ್ಮ ಪ್ರೀತಿಯ ಮಗಳ ಹೆಸರಿನಲ್ಲಿ ದತ್ತಿನಿಧಿ ಸ್ಥಾಪಿಸಿ ಅರ್ಹರಿಗೆ ಸನ್ಮಾನ ಮಾಡಿ ಅದರಲ್ಲಿ ಸಮಾಧಾನ ಕಂಡಿದ್ದಾರೆ. ಇಷ್ಟೆಲ್ಲ ಖ್ಯಾತಿ, ಪ್ರಶಂಸೆ, ಪ್ರಶಸ್ತಿ ಹಾಗೂ ಜನರ ಆದರ, ಪ್ರೀತಿ ವಿಶ್ವಾಸ ಗಳಿಸಿರುವ ಸರೋಜಾದೇವಿ ಈಗಲೂ ಚಟುವಟಿಕೆಯಿಂದ ಹಲವಾರು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಉತ್ಸಾಹ, ಚೈತನ್ಯಗಳನ್ನು ಹರಡುತ್ತಿದ್ದಾರೆ. ಇಂಥ ಮಹಾನ್ ಕಲಾವಿದೆ ಸಮಾಜ ಸೇವಾ ಕಾರ್ಯಗಳಲ್ಲಿ ಕೂಡ ಖಂಡಿತವಾಗಿಯೂ ತೊಡಗಿಕೊಂಡು ಅದರಲ್ಲೂ ನೆಮ್ಮದಿ ಪಡೆಯುತ್ತಾರೆ. ಆದರೆ ತಮ್ಮ ಅಭಿನಯ ಕಲೆಯ ಸಾಮರ್ಥ್ಯವನ್ನು ಕಿರಿಯರಿಗೆ ಎಂದರೆ ಇಂದಿನ ತಲೆಮಾರಿನ ಯುವತಿಯರಿಗೆ ಕಲಿಸುವ ಅಥವಾ ಮಾರ್ಗದರ್ಶನ ಮಾಡುವ ಬಗ್ಗೆ ಏಕೆ ಚಿಂತಿಸಿಲ್ಲವೆಂಬ ಪ್ರಶ್ನೆ ಮೂಡುತ್ತದೆ. ನಿಜ, ಹಲವಾರು ನಟನಕಲಾ ಶಾಲೆಗಳು, ಸಂಗೀತ, ಅಭಿನಯ, ನಾಟ್ಯ ಹಾಗೂ ಹೊಡೆದಾಟ ಕಲಿಸುವುದಕ್ಕಾಗಿ ಸಂಸ್ಥೆಗಳೇ ತಲೆಯೆತ್ತಿವೆ. ಆದರೆ ಸರೋಜಾದೇವಿಯವರಂಥ ಹಿರಿಯ, ಪಕ್ವ ಅಭಿನಯದ ತಾರೆ ಕಡೇಪಕ್ಷ ಪಾತ್ರದೊಳಹೊಕ್ಕು ನಟಿಸುವ ಬಗ್ಗೆ ಹುಡುಗಿಯರಿಗೆ ತರಬೇತಿ ನೀಡಿದರೆ; ಈಗಿನ ನಟ–ನಟಿಯರು ಕೇವಲ ಅಂಗಾಂಗ ಪ್ರದರ್ಶನ, ಹಾಗೂ ಥಳುಕು ಬಳುಕಿನಿಂದಲೇ ಚಲನಚಿತ್ರರಂಗದಲ್ಲಿ ಉಳಿಯಬಯಸಿ ಅಷ್ಟೇ ಬೇಗ ಕಣ್ಮರೆಯಾಗುವ ವೃತ್ತಿಯೂ ನಿಲ್ಲಬಹುದು. ಅಷ್ಟೇ ಅಲ್ಲ ನಿಜವಾದ ಕಲೆಗೆ ಅಪಚಾರವಾಗದಂತೆ ಬಹುಕಾಲ ನೆನಪಿನಲ್ಲುಳಿಯುವ ಪ್ರತಿಭಾವಂತ ತಾರೆಯರನ್ನು

ಸೃಜಿಸಲೂ ನೆರವಾಗಬಹುದು. 'ಕನ್ನಡನಾಡು ಕಂಡ ಅಪರೂಪದ, ಅದ್ಭುತ ಕಲಾವಿದೆ ಶ್ರೀಮತಿ ಸರೋಜಾದೇವಿ ಶ್ರೀಹರ್ಷ ತಮ್ಮ ಸೌಂದರ್ಯ, ಅಭಿನಯ ಹಾಗೂ ವೃತ್ತಿನಿಷ್ಠೆ, ಮತ್ತು ಶಿಸ್ತುಬದ್ಧ ಜೀವನದಿಂದ ನಿಜಕ್ಕೂ ದಂತಕಥೆ' ಅಥವಾ 'ಲೆಜೆಂಡ್' ಎಂದು ಕರೆಯಬಹುದಾದ ಪ್ರತಿಭಾವಂತ ಕಲಾವಿದೆಯಾಗಿದ್ದಾರೆ.

——— * ———

ಮಹಿಳೆಯರ ಏಳ್ಗೆಗೆ ದುಡಿದ ಶಿಕ್ಷಣ ತಜ್ಞೆ ಚಿ.ನ. ಮಂಗಳ

ಅನುಸೂಯರಾವ್

1982 ರಲ್ಲಿ ಫುಲ್ ಬ್ರೈಟ್ ಅನುದಾನದಲ್ಲಿ ಭಾರತದಿಂದ ಆಯ್ಕೆಯಾಗಿ ಅಮೆರಿಕಾ, ಇಂಗ್ಲೆಂಡ್‌ಗಳಿಗೆ ಭೇಟಿ ನೀಡಿದ ಫುಲ್ ಬ್ರೈಟ್ ವಿದ್ವಾಂಸೆ ಪ್ರೊ. ಚಿ.ನ. ಮಂಗಳಾ. 1976ರಲ್ಲಿ 'ಏಷ್ಯನ್ ಕಾನ್ಫರೆನ್ಸ್ ಫಾರ್ ವಿಮೆನ್ಸ್' ನಲ್ಲಿ ಭಾಗವಹಿಸಲು ಮಲೇಶಿಯಾಗೆ ಭೇಟಿ ನೀಡಿದ್ದರು.

ಚಿ.ನ. ಮಂಗಳಾ ಅವರು ಹುಟ್ಟಿದ್ದು ಬೆಂಗಳೂರಿನಲ್ಲಿ, ದಕ್ಷತೆಗೆ ಹೆಸರಾಗಿದ್ದ ಐ.ಎ.ಎಸ್. ಅಧಿಕಾರಿ, ಸಿ. ನರಸಿಂಹಮೂರ್ತಿಯವರು ಇವರ ತಂದೆ. ಬಾಲವಿಧವೆ ರಾಜೇಶ್ವರಿಯನ್ನು ವಿವಾಹವಾಗಿ ಆ ಕಾಲಕ್ಕೆ ಆದರ್ಶರಾದವರು. ಶ್ರೀಮತಿ ರಾಜೇಶ್ವರಿ ನರಸಿಂಹಮೂರ್ತಿಯವರೂ ಕಥೆ ಹಾಗೂ ಲೇಖನಗಳನ್ನು ಬರೆಯುವ ಹವ್ಯಾಸವಿದ್ದ ಮಹಿಳೆ. ಈ ದಂಪತಿಗಳ ನಾಲ್ಕು ಮಕ್ಕಳಲ್ಲಿ ಹಿರಿಯ ಮಗಳು ಚಿ.ನ. ಮಂಗಳಾ. ಮಾಡಿದ್ದು, ಮದ್ರಾಸ್ ವಿಶ್ವವಿದ್ಯಾಲಯದ ಇಂಗ್ಲೀಷ್ ಎಂ.ಎ.

ಶಿಕ್ಷಣ ತಜ್ಞೆ, ಸಾಹಿತಿ, ಅತ್ಯುತ್ತಮ ಅಧ್ಯಾಪಕಿ, ಬೆಂಗಳೂರಿನ ಎನ್.ಎಂ.ಕೆ.ಆರ್.ವಿ ಕಾಲೇಜಿನ ಹೆಸರಾಂತ ಪ್ರಾಂಶುಪಾಲೆ, ಪ್ರತಿಭೆಗಳನ್ನು ಗುರುತಿಸಿ, ಉತ್ತಮ ವ್ಯಕ್ತಿತ್ವವನ್ನು ರೂಪಿಸುವ ರೂವಾರಿ, ಇತ್ಯಾದಿಯಾಗಿ, ರಾಜ್ಯಾದ್ಯಂತ ಹೆಸರಾದ ಬಹುದೊಡ್ಡ ವ್ಯಕ್ತಿ-ಶಕ್ತಿ. ಈಕೆಗೆ ಸಂಗೀತ, ಪತ್ರಿಕೋದ್ಯಮ ಮತ್ತು ಪ್ರವಾಸಗಳಲ್ಲಿಯೂ ಆಸಕ್ತಿ.

ಈಕೆ ಮೊದಲ ಕತೆ ಬರೆದಿದ್ದು ಅವರ ಹನ್ನೆರಡನೇ ವಯಸ್ಸಿನಲ್ಲಿ. ಆದರೆ ಆ ಕ್ಷೇತ್ರದಲ್ಲಿ ಮುಂದುವರಿಯದೇ ಅಧ್ಯಾಪನ ಕೇತ್ರದಲ್ಲಿ ಮುಂದುವರೆದರು. ಆಚಾರ್ಯ ಪಾಠಶಾಲೆ, ನ್ಯಾಷನಲ್ ಕಾಲೇಜ್‌ಗಳಲ್ಲಿ ಅಧ್ಯಾಪಕಿಯಾದರು.

ಮಂಗಳಾ ಸೃಜನಶೀಲ ಮಹಿಳೆ, ಎಂದೂ ಬತ್ತದ ಉತ್ಸಾಹದ ಕಾರಂಜಿಯಂತಿದ್ದವರು. ಎನ್.ಎಂ.ಕೆ.ಆರ್.ವಿ. ಕಾಲೇಜನ್ನೂ. ಶಾಶ್ವತೀ ಎಂಬ ಸಂಸ್ಥೆಯನ್ನೂ ರೂಪಿಸಿದ ಶಿಲ್ಪಿ, ಇತರ ಕಾಲೇಜುಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೇ ಪ್ರವೇಶ ನೀಡುತ್ತಿದ್ದ ಸಂದರ್ಭದಲ್ಲಿ, ಅಂಕಗಳ ಗಳಿಕೆಯ ಸ್ಪರ್ಧಾ ಜಗತ್ತಿನಲ್ಲಿ; ಎನ್.ಎಂ.ಕೆ.ಆರ್.ವಿ. ಕಾಲೇಜಿನ ಆರಂಭದ ಸಮಯದಲ್ಲಿ ಪ್ರವೇಶಕ್ಕೆ ಅರ್ಜಿಗಳು ಆಹ್ವಾನಿಸಿದ್ದು ಮೂರನೇ ದರ್ಜೆಯಲ್ಲಿ ಪಾಸಾದ ವಿದ್ಯಾರ್ಥಿನಿಯರನ್ನು. ಅಂಥವರನ್ನು ಪ್ರಥಮ ದರ್ಜೆಯಲ್ಲಿ ಪಾಸಾಗುವ ಹಂತಕ್ಕೆ ತಂದು, ಅವರೊಳಗಿನ ಆಸಕ್ತಿ, ಪ್ರತಿಭೆಗಳನ್ನು ಹೊರಕ್ಕೆ ತಂದು, ಅವರನ್ನೂ ಬೆಳೆಸಿ, ಕಾಲೇಜಿನ ಹೆಸರನ್ನೂ ಎತ್ತರಕ್ಕೇರಿಸಿದ್ದು ಮಂಗಳಾ ಅವರ ಇನ್ನೊಂದು ಅದ್ಭುತ ಸಾಧನೆ. ವಿದ್ಯಾರ್ಥಿನಿಯರ ವ್ಯಕ್ತಿತ್ವ ವಿಕಸನಕ್ಕೆ, ಅವರಲ್ಲಿ ನೇತಾರರ ಸ್ವಭಾವಗಳನ್ನು ತುಂಬಿಸುವುದಕ್ಕೆ, ಅವರು ಅನುಸರಿಸಿದ, ಉತ್ತೇಜನದ ಪರಿಯೇ ಒಂದು ಉತ್ತಮ ಮಾದರಿ.

ಮಹಿಳೆಯರು ಮಾಡಿದುದರ ಮಹತ್ವ ತಿಳಿಸಲು; ಪುಸ್ತಕಗಳು, ಬೊಂಬೆ, ಕಸೂತಿ, ಕೆತ್ತನೆ, ಜರಿಗೆಲಸ, ನಾಣ್ಯ, ಗಾಜು, ಶಿಲ್ಪಕೃತಿ, ಇತ್ಯಾದಿ ಎಲ್ಲ ರೀತಿಯ ಕೃತಿಗಳನ್ನೂ; ಹಲವಾರು ಗಣ್ಯರು ಮತ್ತು ಲೇಖಕಿಯರೊಂದಿಗೆ

ಗುಂಪುಗೂಡಿ ಸಂಗ್ರಹಿಸಿದರು. ಸಂಗ್ರಹಿಸಿದ್ದನ್ನು ತಮ್ಮ ಕಾಲೇಜಿನಲ್ಲಿ ಸ್ಥಾಪಿಸಿದ 'ಶಾಶ್ವತೀ' ಎಂಬ ಸಂಸ್ಥೆಯಲ್ಲಿ ಪ್ರದರ್ಶನ ಮತ್ತು ಅಧ್ಯಯನಕ್ಕಾಗಿ ಇಟ್ಟರು. ಉತ್ತಮವೆನಿಸಿದ ಈ ಕಾರ್ಯದಿಂದ ಸಮಾಜದ ಗಮನ ಸೆಳೆದಿದ್ದು ಸಣ್ಣ ಸಂಗತಿಯಲ್ಲ.

ವಿವಿಧ ದತ್ತಿನಿಧಿ ಮೂಲಗಳಿಂದ ಶಾಶ್ವತೀ ಸಂಸ್ಥೆಯ ಮೂಲಕ, ಉತ್ತಮ ಸಾಹಿತ್ಯಕ್ಕಾಗಿ ಲೇಖಕಿಯೊಬ್ಬರಿಗೆ ಕೊಡಲಾಗುವ 'ನಂಜನಗೂಡು ತಿರುಮಲಾಂಬಾ ಪ್ರಶಸ್ತಿ' ಸೃಜನೇತರ ಸಾಹಿತ್ಯಕ್ಕಾಗಿ ನೀಡುವ 'ಸದೋದಿತ ಪ್ರಶಸ್ತಿ' ಮತ್ತು ಕರ್ನಾಟಕ ಜನತೆಯ ಸೇವೆಯಲ್ಲಿ ಗುರುತರ ಕೆಲಸ ಮಾಡಿರುವ ಮಹಿಳೆಯನ್ನು ಗುರುತಿಸಿ ಕೊಡುವ 'ಕರ್ನಾಟಕ ಕಲ್ಪವಲ್ಲಿ' ಪುರಸ್ಕಾರ ಇವು ಇಡೀ ಭಾರತದಲ್ಲೇ ಪ್ರತಿಷ್ಠಿತ ಪ್ರಶಸ್ತಿಗಳು ಎನ್ನಿಸಿಕೊಂಡಿದ್ದು ಇದರ ಹಿಂದೆ ದತ್ತಿನಿಧಿ ನೀಡುವವರು ಮಂಗಳಾ ಅವರ ಮೇಲೆ ಇಟ್ಟ ಭರವಸೆ ಮತ್ತು ನಂಬಿಕೆಗಳಿವೆ.

ಸ್ತ್ರೀಯರ ಸ್ಥಿತಿಗತಿಗಳ ಸುಧಾರಣೆಗೆ ಶ್ರಮ ವಹಿಸಿ, ಮಹಿಳಾ ಸಾಹಿತ್ಯ ಪರಂಪರೆಯಲ್ಲಿ, ಮೊದಲಿಗರೆನಿಸಿದ ನಂಜನಗೂಡು ತಿರುಮಲಾಂಬಾರವರ ಮರುಶೋಧನೆ ಮಾಡಿ, ಬೆಳಕಿಗೆ ತಂದಿದ್ದು; ಅವರ ಹೆಸರಿನಲ್ಲಿ ಕಾಲೇಜಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿ ಸ್ಥಾಪಿಸಿದ್ದು; ಸ್ತ್ರೀಯರ ಸ್ಥಾನಮಾನದ ಕುರಿತ ಆಳ ಅಧ್ಯಯನಕ್ಕೆ ಕಾಲೇಜಿನಲ್ಲಿ 'ಮಹಿಳಾ ಅಧ್ಯಯನ'ದ ಕೋರ್ಸನ್ನು ಪದವಿ ಮತ್ತು ಸ್ನಾತಕೋತ್ತರರಿಗಾಗಿ ಆರಂಭಿಸಿದ್ದು; ಕ್ರಮೇಣ ಎಲ್ಲ ವಿಶ್ವ ವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನ ವಿಭಾಗ ತೆರೆಯುವಂತಾದದ್ದು, ಇಂಡೋ ಕೆನೆಡಿಯನ್ ಸಂಸ್ಥೆಯ ಫೆಲೋ ಆಗಿ ನಾಲ್ಕು ವಿಶ್ವವಿದ್ಯಾಲಯಗಳ ಮಹಿಳಾ ಅಧ್ಯಯನ ಶಾಖೆಯಲ್ಲಿ ಕೆಲಸ ಮಾಡಿದ್ದು; ಎಲ್ಲವೂ ದಾಖಲರ್ಹ ಸಾಧನೆಗಳೇ, ಅವರ ಮಹಿಳಾ ಅಧ್ಯಯನದ ಫಲವಾಗಿ ಇಂದು ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ತಲೆಯೆತ್ತಿ ಕೆಲಸ ಮಾಡುತ್ತಿದೆ.

ಮಂಗಳಾ ಅವರು ಮಹಿಳೆಯರ ಪ್ರಗತಿಗೆ ಮತ್ತು ಜಾಗೃತಿಗೆ ಬಳಸಿದ ಇನ್ನೊಂದು ಸಾಧನ ಸಾಹಿತ್ಯ. ವಿಮರ್ಶೆ, ನಾಟಕ, ಅನುವಾದ, ಆತ್ಮಾನುಭವ, ಕವನ, ಜೀವನ ಚರಿತ್ರೆ, ಮುಂತಾದ ಪ್ರಕಾರಗಳಲ್ಲಿ ಕೃತಿಗಳ ರಚನೆ ಮಾಡಿದರು. ಅಭಾಗಿನಿ (ಕಾದಂಬರಿ), ಹೆಲೆನ್ ಕೆಲರ್(69), ಫ್ಲಾರೆನ್ಸ್ ನೈಟಿಂಗೇಲ್, ತೋರುದತ್ ಇವರುಗಳ ಜೀವನ ಚರಿತ್ರೆಗಳು, ಮಾರ್ಗದರ್ಶಿ(ಅನು), ಎಚ್ಚೆತ್ತ ಹಾದಿಯಲ್ಲಿ ಮಹಿಳೆ, ತಿರುಮಲಾಂಬಾ, ಕೆನಡ ಕವನಗಳು, ಸ್ನೇಹ ಸಿಂಧು, ಇತ್ಯಾದಿ ಒಟ್ಟು ಇಪ್ಪತ್ತಮೂರು ರಚನೆಗಳೊಂದಿಗೆ, ತಂದೆ ತಾಯಿಯರ ಕುರಿತಾದ ಸಂಸ್ಮರಣ ಗ್ರಂಥ 'ನಮನ' ಇವರ ಸಂಪಾದಿತ ಕೃತಿ.

ಶ್ರೀಯವರ 'ಇಂಗ್ಲೀಷ್ ಗೀತ'ಗಳಲ್ಲಿ ವರ್ಡ್ಸ್‌ವರ್ತ್ ಮತ್ತು ಬರ್ನ್ಸ್; ಡಿ.ವಿ.ಜಿ. ಅವರು ಚಿತ್ರಿಸಿದ ಮಂಕುತಿಮ್ಮ; ಬೇಂದ್ರೆಯವರ ಕಾವ್ಯದಲ್ಲಿ ಅರವಿಂದ ದರ್ಶನ, ಗೋವಿಂದ ಪೈ ಅವರ 'ಗೊಲ್ಗೊಥಾ; ಹೀಗೆ ಆಗಿನ ಸಾಹಿತ್ಯ ದಿಗ್ಗಜರಾದ ಕುವೆಂಪು, ವೀ.ಸೀ. ರಸಿಕ ರಂಗ, ರಾಜರತ್ನಂ, ಕೆ.ಎಸ್.ನ, ಅಡಿಗ, ರಾಘವ ಇವರೆಲ್ಲರ ಕೆಲವು ಕೃತಿಗಳ ಕರಿತಾಗಿ ಬರೆದು ಸಂಯುಕ್ತ ಕರ್ನಾಟಕದಲ್ಲಿ ಪ್ರಕಟವಾದ ಹದಿನೇಳು ಲೇಖನಗಳ ಸಂಗ್ರಹ, "ಕಾವ್ಯ ಕಲ್ಪನೆ."

ಸ್ತ್ರೀಯರ ಸಾಧನೆ, ಸ್ವಾತಂತ್ರ್ಯ, ಪ್ರತಿಭಟನೆ, ಪ್ರಗತಿಗಳ ಬಗ್ಗೆ ಅರಿವು, ಆಲೋಚನೆಗಳು ಅತ್ಯಗತ್ಯವಿದ್ದ ಕಾಲದಲ್ಲಿ, ಸ್ತ್ರೀ ದೃಷ್ಟಿಕೋನದಿಂದ ಸಾಹಿತ್ಯ ರಚಿಸಲು ಕರೆ ನೀಡಿದ ಪ್ರಮುಖರಲ್ಲಿ ಚಿ.ನ.ಮಂಗಳಾ ಒಬ್ಬರು. 'ಕೆನಡ ಕವನಗಳು' (89) ಕೃತಿಯಲ್ಲಿ ಅಲ್ಲಿಯ ಜೀವನ ವಿಧಾನ, ಕಂಡ ವ್ಯತ್ಯಾಸಗಳು, ಹೊಸತುಗಳು, ಆಶ್ಚರ್ಯಗಳು, ಇತ್ಯಾದಿಗಳಲ್ಲದೆ. ಸ್ತ್ರೀ ವ್ಯಕ್ತಿತ್ವ ವಿಕಸನಕ್ಕೆ ಪ್ರಚೋದಿಸುವ ಕಾವ್ಯಗಳಿವೆ. ಇವು ಹೊಸ ಆಲೋಚನೆಗಳನ್ನೆಬ್ಬಿಸಿವೆ.

ಹೆಣ್ಣಿಗೆ ನೆಮ್ಮದಿ ಇಲ್ಲದಿರುವುದಕ್ಕೆ ಕಾರಣವನ್ನು 'ನಾವು'ನಲ್ಲಿ ಸೊಗಸಾಗಿ ತಂದಿದ್ದಾರೆ. "ಹದಿನೆಂಟಾಯಿತು ನನಗೆ/ನಾನಿನ್ನು ಮನೆಯ ಹೊರಗೆ/ ತಂದೆ ತಾಯಿ ತಮ್ಮ ತಂಗಿ/ ಇವರಿಂದಗಲಿ ನಾ ನಿಸ್ಸಂಗಿ/ ಅವರಿಗಿಲ್ಲ ನನ್ನ

ತೊರೆ/ನನಗೆ ಬೇಡ ಅವರ ನೆರೆ/ ನಾ ಸ್ವತಂತ್ರೆ, ಬೇಡ ನನಗಾಸರೆ/ ಹುಟ್ಟಿದ ಮನೆ ನನಗೆ ಸೆರೆ" ಎಂದು ಸ್ವಾತಂತ್ರ್ಯಾನುಭವವನ್ನು 'ಸ್ವಾತಂತ್ರ್ಯ'ದಲ್ಲಿ;

"ನಾವು/ ಹುಟ್ಟಿ ಬಂದಿರುವುದೇ ಹೀಗೆ/ ತಲೆ ತಲೆಮಾರಿನಿಂದ/ ಯಾವುದನ್ನೂ ನಾವು/ ಹಚ್ಚಿಕೊಳ್ಳುವುದೇ ಹೆಚ್ಚು/ಮನೆ ಮಠ ಗಂಡ ಮಕ್ಕಳು/ ನನ್ನವರು ತನ್ನವರು/ ಕಾರ್ಯ ಕೆಲಸ/ ದೇವರು ದಿಂಡರು/ ಹೀಗೆ ನಮಗೆ ಹಲವು ಹುಚ್ಚು/ ನಾವು ಹಚ್ಚಿಕೊಂಡಂತೆ/ ಬೇರೆಲ್ಲೂ ಹಚ್ಚಿಕೊಳ್ಳುವುದಿಲ್ಲ/ಅವರವರ ಪಾಡಿಗವರವರು/ಅದಕೇ ಹೀಗೆ/ ನಮಗೆ ನೆಮ್ಮದಿಯೇ ಇಲ್ಲ/" ಎಂದು ಹೆಣ್ಣಿಗೆ ನೆಮ್ಮದಿ ಇಲ್ಲದಿರುವುದಕ್ಕೆ ಕಾರಣವನ್ನು "ನಾವು"ನಲ್ಲಿ;

"ಮನೆಯಲ್ಲಿ ಹಚ್ಚಡ ಹೊದ್ದು/ ಬೆಚ್ಚಗೆ ಕುಳಿತು ವಿಡಿಯೊ ನೋಡುತ್ತ/ ಕೋಲ ಕುಡಿಯುವವಳಲ್ಲ/ ಹಿಮದಲ್ಲೆ ಈಜಾಡಿ/ ಹಿಮದಲ್ಲೆ ಮನೆ ಮಾಡಿ/ ಹಸಿದ ಮಕ್ಕಳಿಗಾಗಿ/ ತಾನೆ ಗಂಡಾಗಿ/ ಬಿಲ್ಲು ಬಾಣವ ಹಿಡಿದು/ ಹಿಮಗಡ್ಡೆ ಕಡಿಕಡಿದು/ಮೈಲುಗಟ್ಟಲೆ ನಡೆದ/ತನ್ನ ಬೇಟೆಯ ಹೊಡೆದು/ ಹಿಡಿದು ತಂದೆಳೆದು/ ಮಕ್ಕಳನು ಪೊರೆದವಳು/ ಮಂಜಿಗಂಜಿದವಳಲ್ಲ/ ಮಂಜನಂಜಿಸಿದವಳು/ ಗಂಡಸನು ಮೀರಿಸಿದ ಎಸ್ಕಿಮೋ ಹೆಣ್ಣವಳು" ಎಂದು ಓದುಗರಲ್ಲೂ ಗಟ್ಟಿತನ ಹುಟ್ಟುವಂತೆ ಒಂದು ಗಟ್ಟಿ ಸ್ತ್ರೀ ಚಿತ್ರಣವನ್ನು 'ಲ್ಯಾಬ್ರಡಾರ್ ಹೆಂಗಸು' ನಲ್ಲಿ' – ನೀಡಿದ್ದಾರೆ.

"ಮೇರಿ ಜೇನ್ಸ್, ಲಿವಿಂಗ್ ರೂಂಸ್/ ಮದರ್ಸ್ ಗ್ರೇಸ್/ ಒಂದೆ ಎರಡೆ?/ ಈ ದೇಶದಲ್ಲಿ/ ಮಹಿಳೆಯರ ರಾಜ್ಯ/ರಾಷ್ಟ್ರಗಳ ಸಾಮ್ರಾಜ್ಯ! ಅವಲಂಬಿಗಳಲ್ಲವರು/ಸ್ವಾವಲಂಬಿಗಳು/ನಿತ್ರಾಣೆಯರಲ್ಲ/ ಸೂರ್ಯ ಪ್ರಭೆಯವರು/ ಬೇಕರಿಯನಿಟ್ಟವರು/ಫುಡ್ ಷಾಪು ತೆರೆದವರು/ ಜ್ಞಾನದಲಿ ಮಿಂದೆದ್ದು / ವಿಜ್ಞಾನಿಗಳಾದವರು/ ಧೈರ್ಯಗೆಡದವರು/ ಸ್ಥೈರ್ಯವಿರುವವರು/ ಮಹಿಳೆ ತಾನೆಂಬ ಅಳುಕಿಲ್ಲದವರು" ಎಂದು ಮಹಿಳೆಯರು ಹಾಗಾಗಲು ಪ್ರೇರಣೆ ನೀಡುವ ಪರಿಯಲ್ಲಿ ಪ್ರತಿಭಾ ಸ್ತ್ರೀಯರ ಉದಾಹರಣೆಗಳನ್ನು 'ಸ್ವಾವಲಂಬಿಗಳು'ನಲ್ಲಿ – ನೀಡುತ್ತಾರೆ.

"ಮಗಳೇ/ ನೀನು ಬಳಕುವ ಬಳ್ಳಿಯಲ್ಲ/ ರಂಭೆ ಊರ್ವಶಿಯಲ್ಲ ಮೇನಕೆಯಲ್ಲ/ ಥಳುಕಿನ ಬೊಂಬೆಯಲ್ಲ/ ಬೆಡಗಿನ ಬಿನ್ನಾಣಗಿತ್ತಿಯಲ್ಲ/ ಹಂಸತೂಲಿಕಾತಲ್ಪದಲಿ ಮಲಗಿ/ ವಿರಹ ವ್ಯಥೆಯಲಿ ಸೊರಗಿ/ ಚಂದನದಲೊಂದಾಗಿ ಕರಗಿ/ ಮರೆಯಾಗುವವಳಲ್ಲ. .. ಸೋತಾಗ/ ಒರಗಿಕೊಳ್ಳಲು/ ಪುರುಷ ಭುಜವೇ/ ಬೇಕೆಂದೇನಲ್ಲ. ಎದ್ದುನಿಲ್ಲು/ ನುಗ್ಗಿ ಹೋಗು/ಜಗ್ಗದೆ ಕುಗ್ಗದೆ/ಮುನ್ನಡೆದು ಸಾಗು. ಕಲ್ಲೊತ್ತಿದರೆ ಒತ್ತಲಿ/ರಕ್ತ ಬಂದರೆ ಬರಲಿ/ಬಿಸಿಲೇರಿದರೆ ಏರಲಿ/ ಬಿರುಗಾಳಿ ಬೀಸಿದರೆ/ಬೀಸಲಿ,/ಧೈರ್ಯಗೆಡಬೇಡ/ಬಡ ಬಡಿಸುವ ಬಾಯ್ಗೆ ಹೆದರಿ/ಬಗ್ಗಿ ಬರಡಾಗಬೇಡ/ ಆತ್ಮ ಬಲವೇ ಬಲ/ ಬೆಳೆಸಿಕೊ/ ಬದುಕಿ ಬಾಳುವ ಛಲ. ಅತ್ತದ್ದು ಸಾಕು/ ಉಳಿಸಿಕೋ ನಿನ್ನತನ/ ಸೀತೆಯಾದದ್ದು ಸಾಕು/ ನೀನಾಗು ಕಾಳಿ/ ಅಷ್ಟ ಭುಜಬಲೆ ನೀನು/ ಖಡ್ಗ ಧಾರಿಣಿ ನೀನು/ ಚಾಚು ನೀ ನಾಲಗೆಯ/ ನುಂಗು ನುಂಗು/ ... ನೀ/ದುಃಖಹಾರಿಣಿ ದೇವಿ/ ದುಃಖಿ ನೀನಲ್ಲ/ ನೀ ಬೆಳಕೆ ಹೊರತು/ ಕತ್ತಲಲ್ಲ. ನಿನ್ನ ಪತಿಪರ ಪೊರೆವ/ ಗಾಯತ್ರಿ ನೀನು/ ಯಮನನ್ನೇ ಗೆದ್ದ/ ಸಾವಿತ್ರಿ ನೀನು/'ಅಂಗ ಲಿಂಗದಿ ಬೆರೆವ/ ನಿಃಸ್ಥಲ ನಿಲವನರಿಂದ/ ಬೆಳಗಿನೊಳಗಣ ಬೆಳಕು' ಅಕ್ಕ ನೀನು/ ವೀರ ವಿವೇಕಾನಂದದಲಿ/ ಮಿಂದ/ ಶಕ್ತಿ ಶರಧಿ ನೀನು/" ಎಂದು ಸ್ತ್ರೀಯರ ಕೆಚ್ಚನ್ನು ಬಡಿದೆಬ್ಬಿಸಿ ಅರಿವು, ಶಕ್ತಿಗಳ ತುಂಬುವ ಪ್ರಯತ್ನವನ್ನು 'ಶಕ್ತಿ ಶರಧಿ' ಕವನದಲ್ಲಿ ಹೇಳುತ್ತಾರೆ.

ತಮ್ಮ ಬರಹಗಳಲ್ಲಿ ಸ್ತ್ರೀಧ್ವನಿಯನ್ನು ಮನನಾಟುವಂತೆ ಮಾಡಿದ್ದಾರೆ. ತಾಯಿ, ಹೆಣ್ಣು, ನನ್ನನು ನೀನಾಗಿಸು, ನಾನು– ಅವನು, ಮಗುವಿನ ಹುಟ್ಟು ಹಬ್ಬ, ಕಾದಿದ್ದೇನೆ, ಮುಂತಾದವೂ ಸ್ತ್ರೀ ಸಂವೇದನೆಯ ಕವನಗಳು, "ಉತ್ತಮ ಶಿಕ್ಷಕಿ, ವ್ಯವಸ್ಥಾಪಕಿ ಎಲ್ಲ ಸಿಗಬಹುದು, ಆದರೆ ಮಹಿಳೆಯರಿಗೆ ಆಗುವ ಅನ್ಯಾಯವನ್ನು ಖಂಡಿಸುವಂತಹ, ಕೆಲವೇ ಗಟ್ಟಿ ಮಹಿಳಾ ದನಿಗಳಲ್ಲಿ ಒಂದಾದ ಮಂಗಳಾರವರ ದೊಡ್ಡ ದನಿಯನ್ನು ಕಳೆದುಕೊಂಡದ್ದು ಮಾತ್ರ ಭಾರಿಯಾದ ನಷ್ಟ ಎಂಬುದಕ್ಕೆ ನನಗೆ ನೋವಾಗಿದೆ" ಎಂದು ಖ್ಯಾತ ವಕೀಲೆ ಹೇಮಲತಾ ಮಹಿಷಿಯವರು, ಮಂಗಳಾರವರು

ಮರಣಿಸಿದಾಗ, ಹೇಳಿದ ಮಾತೂ ಮಂಗಳಾರವರು ಸ್ತ್ರೀ ಶೋಷಣೆಯ ವಿರುದ್ಧ ನಿಲ್ಲುತ್ತಿದ್ದರೆಂಬುದನ್ನು ಸ್ಪಷ್ಟ ಪಡಿಸುವಂಥದು.

"ಮಂಗಳಾರವರ ಕಾವ್ಯದ ಶೈಲಿಯಲ್ಲಿ, ತಾಳಲಯದಲ್ಲಿ, ಆವೇಶದಲ್ಲಿ, ದನಿಯಲ್ಲಿ ಪರಿಣಿತಿ ಮನೆ ಮಾಡಿಕೊಂಡಿದೆ. ತುಂಬು ವಿಕಸನ ಹೊಂದಿದ ಒಂದು ಪರಿಣಿತ ವ್ಯಕ್ತಿತ್ವಕ್ಕೆ ಒಡೆದ ಸೆಲೆ ಈ ಕಾವ್ಯ" ಎಂದು ವಿ.ಕೃ.ಗೋಕಾಕರು ಹೇಳಿರುವ ಮಾತು ತುಂಬ ಅರ್ಥಪೂರ್ಣ.

'ಎಲ್ಲರೂ ನನ್ನವರೆ' ಬೆಂಗಳೂರು, ದೆಹಲಿ, ಮದರಾಸುಗಳಲ್ಲಿ, ಪ್ರದರ್ಶನಗೊಂಡು ನಾಟಕಕಾರರ ಮತ್ತು ಪತ್ರಕರ್ತರ ಮೆಚ್ಚುಗೆ ಗಳಿಸಿದ, ಈ ನೆಲದಲ್ಲಿಯೇ ನಡೆದದ್ದೆಂಬಂತಿರುವ ಅಚ್ಚುಕಟ್ಟಾದ ರೂಪಾಂತರ ನಾಟಕ. ದುಷ್ಟ ಬುದ್ಧಿಯ ಸೋಹನ್‌ಲಾಲ್, ಮಗ ಹಿಂತಿರುಗಿ ಬರುತ್ತಾನೆಂದು, ಸದಾ ಕನವರಿಸುವ ತಾಯಿ ವಿಮಲಾ, ಇತ್ಯಾದಿ ಪಾತ್ರಗಳು, ಸ್ವಾರಸ್ಯಕರ ಸನ್ನಿವೇಶಗಳು, ಸರಳ ಸಂಭಾಷಣೆಗಳು, ಬಂಡವಾಳಶಾಹಿ ವ್ಯಕ್ತಿಗಳಿಂದಾಗುವ ಅನ್ಯಾಯ, ಶೋಷಣೆಗಳು ಇದರಲ್ಲಿ ಕುತೂಹಲಕರವಾಗಿ ಮುಂದಿಡಲ್ಪಟ್ಟಿವೆ.

ಅತ್ಯಂತ ಶ್ರೀಮಂತ ಮನೆತನದ ಫ್ಲಾರೆಂನ್ಸ್ ನೈಟಿಂಗೇಲ್‌ಳ ಬದುಕು ಮತ್ತು ಸಾಧನೆಗಳ ಕುರಿತಾಗಿ ಬರೆದ ಪುಸ್ತಕ 'ಫ್ಲಾರೆಂನ್ಸ್ ನೈಟಿಂಗೇಲ್'. ಮನೆ, ಆಸ್ತಿ, ಹಣ, ತಂದೆ ತಾಯಿಗಳ ಸಂಬಂಧದ ಮಮತೆ– ಈ ಎಲ್ಲ ಬಂಧನ ಬಿಡಿಸಿಕೊಂಡು, ಬಯಸಿ ಬಂದವನನ್ನು ಮದುವೆಯೂ ಆಗದೆ, ರೋಗಿಗಳ ಸೇವೆಯಲ್ಲಿ ಬದುಕಿನ ತೃಪ್ತಿಯನ್ನು ಕಂಡವಳು ಈಕೆ, ಎಂಬ ಸತ್ಯವೇ ಒಂದು ವಿಸ್ಮಯದ ವಿಷಯ. ಅಲ್ಲಿಯ ಆಸ್ಪತ್ರೆಗಳಲ್ಲಿ ಆಗಿದ್ದ ಅಶ್ಲೀಲ ವಾತಾವರಣ, ಸೆಖೆ ತುಂಬಿದ ಕೋಣೆಗಳು, ಮುರಿದ ಮಂಚಗಳು, ಪಾಚಿಯ ಗೋಡೆಗಳು, ಕೊಳಕು ನೆಲ, ಹಾಸಿಗೆಯ ಅಭಾವ, ಇತ್ಯಾದಿ ದುರವಸ್ಥೆಯನ್ನೆಲ್ಲ ತನ್ನ ಸಲಹೆ ಸೂಚನೆಗಳಿಂದ ಸರಿಪಡಿಸುತ್ತ ಸುವ್ಯವಸ್ಥೆಗೊಳಿಸಲು ಮಾಡಿದ ಪ್ರಯತ್ನಗಳ ಬಗ್ಗೆ, ಮಂಗಳಾ ಬರೆದಿರುವ ಈ ಜೀವನ ಚರಿತ್ರೆಗಳಲ್ಲಿ ವಿವರಣೆಗಳಿವೆ.

'ಅಧ್ಯಾಪಕಿಯಾಗಿ 25 ವರುಷ', ಅರಿಯಬೇಕೆನಿಸುವ ಅನುಭವಗಳ ಸಂಗ್ರಹವೆನ್ನಬಹುದು. ಆದರೆ, 'ಪ್ರಾಂಶುಪಾಲಳಾಗಿ 20 ವರ್ಷ'ದಲ್ಲಿ ಪ್ರಾಂಶುಪಾಲರೆಂದರೆ ಯಾರು, ಅವರ ಜವಾಬ್ದಾರಿಗಳು, ನಿರ್ವಹಿಸುವ ರೀತಿಯಿಂದ ಶೈಕ್ಷಣಿಕ ಕ್ಷೇತ್ರದಲ್ಲಿ ಆಗುವ ಮಾರ್ಪಾಟುಗಳು, ಶಿಕ್ಷಣ ಪದ್ಧತಿ, ಪರದೇಶಗಳೊಂದಿಗೆ ತುಲನೆ, ಇರಬೇಕಾದ ಸಮರಸ ಸಾಧನೆ, ಇತ್ಯಾದಿ ಹಲವಾರು ಮಾಹಿತಿಗಳೂ ಇವೆ. ಮೈಸೂರಿನ ರಾಜರ ಉಚಿತ ಶಾಲೆಯ ಪ್ರಾಂಶುಪಾಲರುಗಳ ಭವ್ಯ ಪರಂಪರೆ ವಿವರಗಳು ಉಪಯುಕ್ತವೆನಿಸುವುದಲ್ಲದೆ ; ಮಹಾರಾಣಿ ಕಲಾ ಮತ್ತು ವಿಜ್ಞಾನ ಕಾಲೇಜುಗಳು ಸರ್ಕಾರಿಯಾಗಿಯೂ ಅಲ್ಲಿದ್ದ ಉತ್ತಮ ಪ್ರಾಂಶುಪಾಲರುಗಳಿಂದಾಗಿಯೂ, ಐದು ವರ್ಷಗಳ ಅವರ ಸತತ ಶ್ರಮ ಮತ್ತು ಸಜ್ಜು–ಸಿದ್ಧತೆಗಳಿಂದ ನಡೆಸಲು ಸಾಧ್ಯವಾದ ಅಭೂತಪೂರ್ವ ವಜ್ರಮಹೋತ್ಸವದ ವರ್ಣನೆಗಳು ಇದರಲ್ಲಿವೆ. ಇದನ್ನು ಓದುವಾಗ, ಅಂತಹ ವ್ಯಕ್ತಿಗಳು ಎಲ್ಲ ಕಾಲೇಜುಗಳಲ್ಲಿ ಇದ್ದಿದ್ದರೆ ಎಷ್ಟು ಚೆನ್ನ ಎಂದು ಭ್ರಮಿಸುವಂತಾಗುತ್ತದೆ. ಕಡಿಮೆ ಅಂಕ ತೆಗೆದ ಹುಡುಗಿಯೊಬ್ಬಳಿಂದ ಇವರು ಕಲಿತ ಪಾಠ; ಮತ್ತು ಇಂಥ ಅವರ ಕೆಲವು ಅನುಭವಗಳು ಓದುಗರ ಮನದಲ್ಲಿ ಮರೆಯಲಾಗದ ಸಂಗತಿಯಾಗಿಯೂ ಉಳಿಯುತ್ತವೆ. ಕಡಿಮೆ ಅಂಕ ತೆಗೆದ ಹುಡುಗಿಯರಿಗೆ ಚೆನ್ನಾಗಿ ಬೈದಾಗ, ಅವರಲ್ಲೊಬ್ಬ ಹುಡುಗಿ ಬಂದು, 'ಕಡಿಮೆ ಅಂಕ ಗಳಿಸಿದ್ದಕ್ಕೆ ಬೈದಿರಿ. ಆದ್ರೆ ಯಾಕೆ ಅಂಕ ಕಡಿಮೆ ಬಂದಿದೆ ಎಂದು ಒಂದು ಸಲವೂ ಕೇಳಲಿಲ್ಲವಲ್ಲ ನೀವು ಅದನ್ನು ತಿಳಿಬೇಡವೇ"? ಎಂದು ಪ್ರಶ್ನಿಸಿ, ಮನೆಗೊಮ್ಮೆ ಬಂದು ನೋಡಿ ಎಂದದ್ದು; ಅವರ ಮನೆಗೆ ಹೋದಾಗ, ಶೆಡ್‌ನಂತ ಸೆಖೆಯ ಕೊಠಡಿಯಲ್ಲಿ, ಪಾರ್ಶ್ವ ವಾಯು ಪೀಡಿತ ತಂದೆ, ಕ್ಷಯ ರೋಗಿ ತಾಯಿ ಜೊತೆಗೆ ಆರು ಮಕ್ಕಳ ಸಂಸಾರ ನೋಡಿ, ಈ ಹಿರಿಯ ಹುಡುಗಿ ತೆಗೆದ ಅಂಕವನ್ನೇ ಹೆಚ್ಚು ಎನ್ನುವ ಮಾತು ಮನಸ್ಸಿಗೆ ಬಂದಿದ್ದು; ಅಂದಿನಿಂದ ಎಲ್ಲರೆದುರು ಬೈಯ್ಯಬಾರದೆಂಬ ಆದರೆ ಪ್ರತ್ಯೇಕವಾಗಿ ತಿಳಿಹೇಳಬೇಕೆಂಬ ಪಾಠ ಕಲಿತಿದ್ದು; ಇಂಥ ಅವರ ಕೆಲವು ಅನುಭವಗಳು ಓದುಗರ ಮನದಲ್ಲಿ

ಮರೆಯಲಾಗದ ಸಂಗತಿಯಾಗಿಯೂ ಉಳಿಯುತ್ತವೆ. ತನ್ನ ತಪ್ಪನ್ನು ಒಪ್ಪಿಕೊಂಡು ತನ್ನ ನಡೆನುಡಿಯಲ್ಲಿ ತಿದ್ದಿಕೊಳ್ಳುವಂಥ ದೊಡ್ಡ ಗುಣವೇ ಇವರನ್ನು ಇಷ್ಟು ದೊಡ್ಡವರನ್ನಾಗಿ ಮಾಡಿದೆ ಎಂದೂ ಅನಿಸುತ್ತದೆ.

ಆಡಳಿತ ಮಂಡಳಿ ಒಂದೆಡೆ, ಅಧ್ಯಾಪಕ ವರ್ಗ ಒಂದೆಡೆ, ಪ್ರಾಂಶುಪಾಲನೆಂಬೊಬ್ಬ ವ್ಯಕ್ತಿ ಮಾತ್ರ, ಅಧ್ಯಾಪಕರಪರವೂ ಆಗದೆ, ಆಡಳಿತ ಮಂಡಳಿಯ ಸದಸ್ಯನೂ ಆಗದೇ ಒಂಟಿಯಾಗಿ ಉಳಿಯುವ ನಿಜ ಸ್ಥಿತಿ ಅರಿವಿಗೆ ಬಂದಾಗ, ಪ್ರಾಂಶುಪಾಲರ ಬಗ್ಗೆ ಕನಿಕರವೂ ಮೂಡುತ್ತದೆ.

ಇವರ ಎಲ್ಲ ಕೃತಿಗಳಲ್ಲಿ ಕಾಣಿಸುವ ಕೆಲವು ತತ್ವಗಳು ನುಡಿಮುತ್ತುಗಳಾಗಿ ತುಂಬ ಮೆಚ್ಚಿನಿಸುತ್ತವೆ. ಅವುಗಳಲ್ಲಿ ಒಂದೆರಡೆಂದರೆ;

(1) ಹ್ಯಾಮ್‌ಲೆಟ್‌ನಲ್ಲಿ ಪಲೋನಿಯಸ್ ತನ್ನ ಮಗ ಲಯಾರ್ಟಿಸನಿಗೆ ಉಪದೇಶಿಸುವಂತೆ ಇರಬೇಕು. ಪ್ರಾಂಶುಪಾಲರು ಇರಬೇಕಂತೆ. 'Give every man thine ear; but few thy voice/ Take each man's censure' but reserve the judgement; ಎಂಬುದು.

(2) ಪಾಪೇಗೌಡರು ಮತ್ತು ರಾಮಕೃಷ್ಣಗೌಡರ ಕೆಲಸವನ್ನು ಗಮನಿಸಿ ಹೇಳುವ ಒಂದು ಮಾತು, "ನಾವು ಇತರರನ್ನು ನೋಡಿ ಕಲಿಯಬೇಕಾದ್ದು ಬಹಳವಿದೆ. ಅಷ್ಟೇ ಅಲ್ಲ. ಕಲಿಯುತ್ತಲೇ ಇರಬೇಕಾಗುತ್ತದೆ. ಹೀಗೆ ಕಲಿಯುವಾಗ ಜೀವನದಲ್ಲಿ 'ಖಾಲಿ'ಗಳನ್ನೇ ನೋಡದೆ 'ಭರ್ತಿ'ಗಳನ್ನು ಗಮನಿಸಬೇಕಾಗುತ್ತದೆ. ಎಷ್ಟಾದರೂ ದೃಷ್ಟಿಯಂತೆ ಸೃಷ್ಟಿ. ಬೀದಿಯಲ್ಲಿನ ಬಚ್ಚಲನ್ನೇ ಬೇಕಾದರೂ ನೋಡುತ್ತಿರಬಹುದು. ಬಚ್ಚಲಿದೆ. ಇದ್ದೇ ಇರುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ತಲೆಯೆತ್ತಿ ನೀಲಿಮರದ ಸೊಗಸನ್ನು ನೋಡಬಹುದು. ಆಗಸದೆತ್ತರಕ್ಕೆ ಏರಲು ಪ್ರಯತ್ನಿಸಬಹುದು. ಆಗಸಕ್ಕೇರಲು ಪ್ರಯತ್ನಿಸಿದರೆ ಮರದ ತುದಿಯನ್ನಾದರೂ ನೋಡುತ್ತೇವೆ. ತಲೆಯನ್ನೇ ಎತ್ತದೇ ಬರೀ ಬಚ್ಚಲನ್ನೇ ನೋಡುತ್ತಿದ್ದರೆ ಬಚ್ಚಲು ಮಾತ್ರವೇ ನಮ್ಮದಾಗುತ್ತದೆ. ಬಚ್ಚಲಿನಲ್ಲಿರುವ ಕೊಚ್ಚೆ ತೊಳೆದು ಸೂರ್ಯನ ರಶ್ಮಿ ಬಚ್ಚಲನ್ನೂ ಬೆಳಗುವಂತೆ ಮಾಡಬೇಕಾಗುವುದೇ ನಮ್ಮ ಕರ್ತವ್ಯ";

(3) "ಪರಸ್ಪರ ಟೀಕೆ ಟಿಪ್ಪಣಿಗಳೇನೇ ಇದ್ದರೂ ವ್ಯಕ್ತಿಗಿಂತ ಸಂಸ್ಥೆ ದೊಡ್ಡದು ಎಂಬ ಮೂಲ ತತ್ವದ ಮೇಲೆ, ದಿವಾನನಿಗಿಂತ ದೇಶ ದೊಡ್ಡದು ಎಂಬ ಅರಿವಿನ ಬುನಾದಿಯ ಮೇಲೆ ಪ್ರಾಂಶುಪಾಲರು ತಮ್ಮ ಪ್ರತಿಯೊಂದು ಹೆಜ್ಜೆಯನ್ನೂ ಇಡಬೇಕು" ಎಂಬುದು ಅವರ ಅನುಭವ ನುಡಿ.

ಅಪಾರ ವಿದ್ವತ್ತು, ಆಸಕ್ತಿ, ಚುರುಕುತನ, ಕರ್ತವ್ಯನಿಷ್ಠೆ, ದೃಢ ನಿರ್ಧಾರ, ಸೇವಾ ಮನೋಭಾವ, ಎಲ್ಲವೂ ಮೇಳವಿಸಿದ್ದ, ಮಂಗಳಾರವರಿಗೆ ಸಂದ ಸನ್ಮಾನಗಳು, ಲಭ್ಯವಾದ ಪ್ರಶಸ್ತಿಗಳು ಅಗಣಿತ. ಅವುಗಳಲ್ಲಿ, 'ಗೈಡ್'ನ ಅನುವಾದಿತ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ; ಹೆಲೆನ್ ಕೆಲರ್ ಜೀವನ ಚರಿತ್ರೆಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ; 'ಎಚ್ಚೆತ್ತ ಹಾದಿಯಲ್ಲಿ ಮಹಿಳೆ'ಗೆ, ರತ್ನಮ್ಮ ಹೆಗ್ಗಡೆ ಬಹುಮಾನ; 'ಎಲ್ಲರೂ ನನ್ನವರೆ' ನಾಟಕಕ್ಕೆ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ; ತಿರುಮಲಾಂಬ ಕೃತಿಗೆ ಆರ್ಯ ಭಟ ಪ್ರಶಸ್ತಿ; ಮತ್ತು ಕರ್ನಾಟಕ ನಾಟಕ ಅಕಾಡೆಮಿಯ ಫೆಲೋಶಿಪ್; ರಾಜ್ಯೋತ್ಸವ ಪ್ರಶಸ್ತಿ– ಇವರಿಗೆ ದೊರೆತ ವಿಶೇಷ ಗೌರವಗಳು. ಇನ್ನೂ ಅಪಾರ ಸಾಧನೆ ಮಾಡುವ ವಯಸ್ಸು, ಆಸಕ್ತಿ ಇರುವಾಗಲೇ 1997ರ ಮೇ 30ರಂದು ಅವರು ಮರಣಿಸಿದ್ದು, ಸಮಾಜಕ್ಕೆ ವಿಶೇಷವಾಗಿ ಯುವ ವೃಂದಕ್ಕೆ ಮತ್ತು ಮಹಿಳಾ ವೃಂದಕ್ಕೆ ಆದ ಅಪಾರ ನಷ್ಟ.

ಗ್ರಂಥಋಣ:– ಚಿ.ನ. ಮಂಗಳ ಬರೆದ ಪುಸ್ತಕಗಳು : ಕೆನಡ ಕವನಗಳು, ಅಧ್ಯಾಪಕಿಯಾಗಿ 25 ವರುಷ, ಪ್ರಾಂಶುಪಾಲರಾಗಿ 20 ವರ್ಷ, ವಿನಾಯಕ 25, ಕಾವ್ಯ ಕಲ್ಪನೆ, ಎಲ್ಲರೂ ನನ್ನವರೆ ಹಾಗೂ ನಮನ.

---- * ----

ಇಂಗ್ಲಿಷ್ ಕಾದಂಬರಿಗಾರ್ತಿ ಶಶಿ ದೇಶಪಾಂಡೆ

ಡಾ. ವಿಮಲ ರಾಮರಾವ್

ನಮ್ಮ ದೇಶದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಬಳಕೆಗೆ ಬಂದಾಗಿನಿಂದ ಒಂದಲ್ಲ ಒಂದು ರೀತಿಯಲ್ಲಿ ಭಾರತೀಯರು ಇಂಗ್ಲಿಷನ್ನು ತಮ್ಮದಾಗಿ ಮಾಡಿಕೊಂಡಿದ್ದಾರೆ. ಪದ್ಯ, ಕಥೆ, ಕಾದಂಬರಿಗಳನ್ನು ಬರೆದವರು ಹಲವರಾದರೆ ನಿತ್ಯ ಉಪಯೋಗದ ಭಾಷೆಯಾಗಿ ಅದಕ್ಕೆ ನಮ್ಮದೇ ಆದ ಭಾರತೀಯ ರಂಗು, ಕಂಪುಗಳನ್ನು ಸೇರಿಸಿದೆ. ಇಲ್ಲಿ ನಾವು ಬಳಸುವ ಇಂಗ್ಲಿಷ್ ಪದಕೋಶದ ಮಟ್ಟದಲ್ಲಿ ಮಾತ್ರ ಪಾಶ್ಚಿಮಾತ್ಯ ದೇಶಗಳಲ್ಲಿ ಸಾಮ್ಯ ಹೊಂದಿದೆ. ವ್ಯಾಕರಣ ನುಡಿಗಟ್ಟು ಇವುಗಳೆಲ್ಲ ಬಹಳಷ್ಟು ಭಾರತೀಯ ಭಾಷೆಗಳ ವಾಕ್ಯ ರಚನೆ, ನುಡಿಗಟ್ಟುಗಳನ್ನು ಹೋಲುತ್ತವೆ.

ಸುಮಾರು ನೂರು ವರ್ಷಗಳಿಗೂ ಹೆಚ್ಚಿನ ಕಾಲದಿಂದ ಭಾರತೀಯರು ಇಂಗ್ಲಿಷಿನಲ್ಲಿ ತಮ್ಮ ಸಂವೇದನೆಗೆ ಅಭಿವ್ಯಕ್ತಿ ಕೊಟ್ಟಿದ್ದಾರೆ. ಮೊದಲಿನಲ್ಲಿ ಬ್ರಿಟಿಷ್ ಲೇಖಕರ ಬರಹದ ಛಾಯೆ ದಟ್ಟವಾಗಿತ್ತು. ಕ್ರಮೇಣ ಭಾರತೀಯ ಲೇಖಕರ ಸಾಂಸ್ಕೃತಿಕ ಹಾಗೂ ಪ್ರಾದೇಶಿಕ ಅರಿವು ಮತ್ತು ಸ್ವಂತಿಕೆ ಇಂಗ್ಲಿಷನ್ನು ತಮ್ಮ ಛಾಪಿನಿಂದ ಒಂದು ಹೊಸ ರೂಪಕ್ಕೆ ಅಳವಡಿಸಿತು. ಹಾಸನದ ರಾಜಾರಾವ್ ಅವರ ಕಾಂತಾಪುರ ಎಂಬ ಕಾದಂಬರಿ ಈ ದಿಕ್ಕಿನಲ್ಲಿ ಒಂದು ಹೊಸ ಪಥವನ್ನೇ 1944ರಲ್ಲಿ ಸ್ಥಾಪಿಸಿತು.

ಸ್ವಾತಂತ್ರ್ಯೋತ್ತರ ದಶಕಗಳಲ್ಲಿ ಕೆಲವಾರು ಮಹಿಳೆಯರು ಕಾದಂಬರಿಗಳನ್ನು ಬರೆದಿದ್ದರು. ಇವರು ಸಾಮಾನ್ಯವಾಗಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಮೇಲು ವರ್ಗದಿಂದ ಬಂದವರು ಮತ್ತು ಕಾನ್ವೆಂಟ್ ಶಾಲೆ ಕಾಲೇಜುಗಳಲ್ಲಿ ಓದಿದವರು. ಭಾಷೆಯಲ್ಲಿಯಾಗಲೀ, ವಸ್ತುವಿನಲ್ಲಾಗಲೀ ಯಾವ ಹೊಸತನ ಕಾಣಿಸಲಿಲ್ಲ. ಪಾತ್ರಗಳ ಹೆಸರು, ಕಥೆ ನಡೆಯುವ ಸ್ಥಳ ಇವು ಭಾರತೀಯವೇ ಹೊರತು ಬೇರೆ ಯಾವ ಪ್ರಯೋಗಶೀಲತೆಯೂ ಕಂಡು ಬರುವುದಿಲ್ಲ.

ಶಶಿ ದೇಶಪಾಂಡೆಯವರು ಎಪ್ಪತ್ತರ ದಶಕದಲ್ಲಿ ಸಣ್ಣ ಕಥೆಗಳ ಮೂಲಕ ಓದುಗರಿಗೆ ಪರಿಚಿತರಾದರು. ಈ ಕಥೆಗಳ ವಸ್ತು ಮಧ್ಯಮವರ್ಗದ ಜನರ ಕೌಟುಂಬಿಕ ಜೀವನ ಮತ್ತು ಅದರಲ್ಲಿ ಹಾಸುಹೊಕ್ಕಾಗಿರುವ ಪೌರಾಣಿಕ ಪ್ರಜ್ಞೆ. ನಮ್ಮಲ್ಲಿ ಯಾವುದಾದರೂ ಜಟಿಲ ಸಮಸ್ಯೆ ಎದುರಾದಾಗ ಮಾರ್ಗದರ್ಶನಕ್ಕೆ ಭಾರತೀಯರು ತಿರುಗುವುದು ಪುರಾಣ, ಪುಣ್ಯಕಥೆಗಳಿಗೆ. ಶಶಿ ದೇಶಪಾಂಡೆ ತಮ್ಮ ಸಣ್ಣ ಕಥೆಗಳಲ್ಲಿ ಪುರಾಣ ಪುರುಷರ, ಸ್ತ್ರೀಯರ ಒಳತೋಟಿಯನ್ನು ಪರೀಕ್ಷಿಸಿದ್ದಾರೆ. ಈ ದೃಷ್ಟಿಯಲ್ಲಿ ಪೌರಾಣಿಕ ನೆಲೆ ಒಂದಾದರೆ ಒಬ್ಬ ಹೆಂಗಸಿಗೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಕಟ್ಟಿಟ್ಟ ಕಟ್ಟುಪಾಡುಗಳ ಮೇಲೆ ಹೇರಿದ, ಸಮಾಜಕ್ಕೆ ಅನುಕೂಲವಾದ ಆದರ್ಶಗಳು, ಇವುಗಳ ತೀಕ್ಷ್ಣ ಪರಿಶೀಲನೆ ಇದೆ.

ಈ ನಿಟ್ಟಿನಲ್ಲಿ ಈಕೆ ಕೆಲವೇ ವರ್ಷಗಳ ಹಿಂದೆ ಬರೆದ ಕಥಾ ಗುಚ್ಛವೊಂದು ಮುಖ್ಯವಾಗಿದೆ. "ಶಿಲಾಬಾಲಿಕೆಯರು" ಎಂಬ ಕಥೆಯಲ್ಲಿ ಲೇಖಕಿ ಒಂದು ಪ್ರಶ್ನೆ ಕೇಳುತ್ತಾರೆ. ಸೊಂಪಿನ ಮೈಗಟ್ಟಿನ ಈ ಸುಂದರಿಯರು

ಕನ್ನಡಿಯಲ್ಲಿ ಮುಖನೋಡಿ ಕೊಳ್ಳುತ್ತ, ಸಂಗೀತವಾದ್ಯಗಳನ್ನು ನುಡಿಸುತ್ತ ನಾಟ್ಯದ ಭಂಗಿಗಳಲ್ಲಿ ಬಳುಕುತ್ತ ಅಂತಃಪುರ ಗೀತೆಗಳ ಸಾಕ್ಷ್ಯ ಮೂರ್ತಿಗಳಂತೆ ಕಾಣುತ್ತಾರೆ. ಸೌಂದರ್ಯ ಪ್ರಜ್ಞೆಯ ದೃಷ್ಟಿಯಿಂದ ನೋಡಿದರೆ ಬೇಲೂರು ದೇವಸ್ಥಾನದಲ್ಲಿ ಕಲ್ಲಿನಲ್ಲಿ ಕಡೆದ ಈ ಬೆಡಗಿಯರು ನೇತ್ರಾನಂದ ಕೊಡುತ್ತಾರೆ. ಸುಖಸಂತೋಷದಲ್ಲಿ ಮೈಮರೆತಂತಿರುವ ಈ ಶಿಲಾಬಾಲಿಕೆಯರು ಪುರುಷರ ಲೈಂಗಿಕ ಪ್ರಜ್ಞೆಯ ಸೃಷ್ಟಿ. ಇಂತಹ ಯಾವ ಚಿಂತೆಯೂ ಇಲ್ಲದೆ ಕೇವಲ ತಮ್ಮ ಸುಖಾಸಕ್ತಿಯೆಯಲ್ಲಿ ಕಾಲಕಳೆಯುವ ಯೋಗ ಎಷ್ಟು ಜನ ಹೆಂಗಸರಿಗಿದೆ? ಕಥೆಯ ನಾಯಕಿಯನ್ನು ಈ ಪ್ರಶ್ನೆ ಕಾಡುತ್ತದೆ.

ಪಿತೃಪ್ರಾಧಾನ್ಯ ಸಾಮಾಜಿಕ ಚೌಕಟ್ಟಿನಲ್ಲಿ ಹೆಂಗಸರು ಎದುರಿಸಬೇಕಾದ ಹಲವು ಹನ್ನೊಂದು ಸಮಸ್ಯೆಗಳು ಲೇಖಕಿಯನ್ನು ಪ್ರಚೋದಿಸುತ್ತವೆ. ಆಕೆ ಬರೆದಿರುವ ಕಾದಂಬರಿಗಳಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಎದ್ದು ಕಾಣುವದೆಂದರೆ ಕೌಟುಂಬಿಕ ಜೀವನದಲ್ಲಿ ಹಾಸುಹೊಕ್ಕಾಗಿರುವ ಮನುಷ್ಯ ಸಂಬಂಧಗಳು, ನಮ್ಮ ದೇಶದಲ್ಲಿ ಈಚೆಗೆ ಅವಿಭಕ್ತ ಕುಟುಂಬಗಳು ಕಡಿಮೆಯಾಗುತ್ತಿದ್ದರೂ, ಒಟ್ಟಿಗೆ ಒಂದು ಮನೆಯಲ್ಲಿ ವಾಸಿಸದಿದ್ದರೂ ಒಂದು ಕುಟುಂಬದವರಾಗಿರುವ ಭಾವನೆ ಸಾಮಾನ್ಯವಾಗಿರುತ್ತದೆ. ಅಷ್ಟೇ ಅಲ್ಲದೆ ಶಶಿ ದೇಶಪಾಂಡೆಯವರ ಕಾದಂಬರಿಗಳಲ್ಲಿ ನಾವು ಕನ್ನಡದಲ್ಲಿ "ಮನೆ" ಎಂಬ ಪದಕ್ಕೆ ಕೊಡುವ ಅರ್ಥವೈಶಾಲ್ಯ ಪೂರ್ಣವಾಗಿ ಉಪಯೋಗವಾಗಿದೆ. ಮನೆ ಎಂದರೆ ಕಟ್ಟಡವಷ್ಟೇ ಅಲ್ಲದೆ, ಅಲ್ಲಿ ಬದುಕಿ ಬಾಳಿದವರ ಜೀವನ ಹಲವಾರು ತಲೆಗಳಿಂದ ನಡೆಸಿಕೊಂಡು ಬಂದ ಪದ್ಧತಿ, ಸಂಪ್ರದಾಯಗಳು ಇವೆಲ್ಲಾ ಸೇರಿ ಒಂದು ಮನೆಯನ್ನು ತನ್ನದೆ ಆದ ಸಂಕೇತ ಹೊಂದುವಂತೆ ಮಾಡುತ್ತವೆ. ಇಂಗ್ಲಿಷಿನಲ್ಲಿ ಬರೆದ ಬೇರೆ ಯಾವ ಭಾರತೀಯ ಲೇಖಕಿಯೂ ನಮ್ಮ ಜೀವನದ ಈ ಅಂಶವನ್ನು ಎದ್ದುಕಾಣುವಂತೆ ತೋರಿಸಿರಲಿಲ್ಲ. ತೊಂಭತ್ತರ ದಶಕದಲ್ಲಿ ಅರುಂಧತಿ ರಾಯ್ ಬರೆದ ಏಕೈಕ ಕಾದಂಬರಿಯಲ್ಲಿ ಈ ಬಗೆಯ ಕೌಟುಂಬಿಕ ಪ್ರಜ್ಞೆ ಗುಪ್ತ ಗಾಮಿನಿಯಾಗಿ ಒಂದು ವಂಶದಲ್ಲಿ ಹರಿಯುವುದನ್ನು ಕಾಣಬಹುದು. ಕೆಲವಾರು ವಿಮರ್ಶಕರು ಶಶಿದೇಶಪಾಂಡೆ ಅವರನ್ನು "ನಿಮ್ಮ ಕಾದಂಬರಿಗಳು ಸ್ತ್ರೀವಾದಿ ನಿಲುವನ್ನು ಹೊಂದಿವೆಯಲ್ಲವೆ?" ಎಂದು ಪ್ರಶ್ನಿಸಿದ್ದಾರೆ. ಆಕೆ ಇಚ್ಛಿಸಿ, ಪ್ರಜ್ಞಾಪೂರ್ವಕವಾಗಿ ಸ್ತ್ರೀವಾದವನ್ನು ತಮ್ಮ ಬರಹದಲ್ಲಿ ಅಳವಡಿಸಿಲ್ಲ. ಸಾಂಪ್ರದಾಯಿಕ ಕುಟುಂಬದಲ್ಲಿ ಹುಟ್ಟಿ ಬೆಳೆದು, ಮದುವೆಯಾಗಿ ಸಂಸಾರಮಾಡಿ, ಮಕ್ಕಳನ್ನು ಸಾಕಿ ಇತ್ಯಾದಿ ಎಲ್ಲಾ ಕರ್ತವ್ಯಗಳನ್ನೂ ನೆರವೇರಿಸಿದರೂ, ಆಕೆಯ ತಂದೆ ಆದ್ಯರಂಗಾಚಾರ್ಯ ಅವರ ವಿದ್ವತ್ತು, ವಿಚಕ್ಷಣೆ, ಮಹಿಳಾ ವಿದ್ಯಾಭ್ಯಾಸಕ್ಕೆ ಒಂದು ಅರ್ಥ ದಿಕ್ಕು ತೋರಿಸಿದ್ದವು. "ಗಂಡು ಸಿಗುವ ತನಕ ಹೋಗಿಬರಲಿ" ಎನ್ನುವ ಹೀನಾಯ ಧೋರಣೆ ಅವರಿಗಿರಲಿಲ್ಲ. ವಿದ್ಯಾಭ್ಯಾಸ ಮನಸ್ಸನ್ನು ವಿಕಸಿಸಿ, ಸ್ವಂತವಾಗಿ ಆಲೋಚಿಸುವ ಶಕ್ತಿ ಬೆಳೆಸಬೇಕು ಎನ್ನುವ ವಾತಾವರಣ ಮನೆಯಲ್ಲಿದ್ದುದರಿಂದ ಭವಿಷ್ಯದ ಲೇಖಕಿಗೆ ಪುಸ್ತಕಗಳ ಪ್ರಪಂಚ ಬಹು ಹತ್ತಿರವಾಗಿತ್ತು. ಸಾಹಿತ್ಯ ಹಾಗೂ ನ್ಯಾಯಶಾಸ್ತ್ರಗಳಲ್ಲಿ ಪದವಿಗಳನ್ನು ಹೊಂದಿರುವ ಈಕೆ ತಮ್ಮ ಸೂಕ್ಷ್ಮಮತಿ ಹಾಗೂ ಸ್ತ್ರೀ ಸಂವೇದನೆಗಳನ್ನು ಜೊತೆಗೂಡಿಸಿ ತಮ್ಮ ಕಾದಂಬರಿಗಳನ್ನು ಹೆಣೆದಿದ್ದಾರೆ. That Long Scheme ಕಾದಂಬರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆಯಿತು. ಇದರ ಮುಖ್ಯಪಾತ್ರ ಜಯ ಎಲ್ಲರಂತೆ ಗಂಡ, ಮಕ್ಕಳು ಸಂಸಾರದಲ್ಲಿ ಮುಳುಗಿದ್ದರೂ ತನ್ನದೇ ಆದ ಹವ್ಯಾಸವಾಗಿ ಕಥೆಗಳನ್ನು ಬರೆದು ನಿಯತಕಾಲಿಕೆಗಳಿಗೆ ಕಳಿಸುತ್ತಾಳೆ. ಜಾಹೀರಾತುಗಳಲ್ಲಿ ಬಿಂಬಿಸಿರುವ, ಸುಖೀ ಸಂಸಾರದಂತಿರುವ ಆಕೆಯ ಪ್ರಪಂಚ ಗಂಡನ ಉದ್ಯೋಗ ಸ್ಥಳದಲ್ಲಿ ನಡೆದ ಪ್ರಕರಣದಿಂದ ಇದ್ದಕ್ಕಿದ್ದಂತೆ ತಲೆಕೆಳಗಾಗುತ್ತದೆ. ಕೆಲಸಕ್ಕೇ ಸಂಚಕಾರ ಬಂದು ತತ್ತರಿಸಿರುವ ಗಂಡನನ್ನು ಕಷ್ಟದ ಕಲ್ಪನೆಯೇ ಇಲ್ಲದೆ ಮಕ್ಕಳನ್ನು ಸಂಬಾಳಿಸುವ ಮತ್ತು ಸಂಸಾರವನ್ನು ನಡೆಸಿಕೊಂಡು ಹೋಗುವ ಭಾರ ಜಯಳ ಮೇಲೆ ಬೀಳುತ್ತದೆ. ಸಂಸಾರದ ಗುಟ್ಟು ಕಾಪಾಡಿಕೊಂಡು ಗಂಡನೇ ಸರ್ವಸ್ವ ಎಂದು ನಡೆಯುವುದೇ ಧರ್ಮ ಎಂದು ಬಾಲ್ಯದಿಂದ ಕೇಳಿದ್ದ ಜಯ ತನ್ನ ಜೀವನವನ್ನು ಬೇರೆ ಒಂದು ದೃಷ್ಟಿಕೋನದಿಂದ ಪರಿಶೀಲಿಸಬೇಕಾಗುತ್ತದೆ.

The Dark Holds No Terrors ನ ನಾಯಕಿ ಸರಿತ ಚಿಕ್ಕಂದಿನಲ್ಲಿ ಅವಳ ತಮ್ಮ ಧ್ರುವ ಆಟವಾಡುತ್ತ ಹಳ್ಳದಲ್ಲಿ ಬಿದ್ದು ಮುಳುಗಿ ಸತ್ತು ಹೋಗಿದ್ದನ್ನು, ಆಕೆಯ ತಾಯಿ ಸರಿತಳ ತಪ್ಪೆಂದು ಅವಳನ್ನು ಎಂದಿಗೂ ಕ್ಷಮಿಸಲಾರದೆ ದೂರುತ್ತಾಳೆ. ಹೆಚ್ಚು ಮಾತಾಡದ ತಂದೆ ಮಗಳನ್ನು ಓದಿಸಿ ವೈದ್ಯಳಾಗಲು ಪ್ರೋತ್ಸಾಹಿಸುತ್ತಾರೆ. ಮನೆ ಬಿಟ್ಟು ಹೋಗಿ, ತನ್ನ ಜೀವನವನ್ನು ರೂಪಿಸಿಕೊಂಡ ಸರಿತ, ತಾನೇ ಮೆಚ್ಚಿ ಮದುವೆಯಾದ ಗಂಡನಲ್ಲಿ ಹಿಂಸೆ ಪ್ರವೃತ್ತಿ ತಲೆಯೆತ್ತುವುದನ್ನು ಅನುಭವಿಸುತ್ತಾಳೆ. ಒಳ್ಳೆ ಸಂಪಾದನೆ ಇರುವ ಹೆಂಡತಿಯ ವೃತ್ತಿ ಜೀವನವನ್ನು ಸೈರಿಸದ ಮನೋಹರ ಅವಳನ್ನು ಲೈಂಗಿಕ ಹಿಂಸೆಗೆ ಗುರಿಮಾಡುತ್ತಾನೆ. ತನ್ನ ತಾಯಿ ತೀರಿಕೊಂಡ ವಿಷಯ ತಿಳಿದು, ಸರಿತ ತಂದೆಯ ಮನೆಗೆ ಬಂದಾಗ ಆಕೆಗೆ ತನ್ನ ಜೀವನದ ಕೆಲವಾರು ಜಂಜಾಟಗಳು ತಿಳಿಯಾಗಿ, ಅರಿವಾಗುತ್ತದೆ ಮತ್ತು ಮುಂದಿನ ದಾರಿ ಗೋಚರವಾಗುತ್ತದೆ.

ಶಶಿ ದೇಶಪಾಂಡೆಯವರು ಒಂಬತ್ತು ಕಾದಂಬರಿಗಳನ್ನೂ ಆರು ಸಣ್ಣ ಕಥೆಗಳ ಸಂಕಲನಗಳನ್ನೂ ಪ್ರಕಟಿಸಿದ್ದಾರೆ, ಇದಷ್ಟೇ ಅಲ್ಲದೆ ಮಕ್ಕಳಿಗಾಗಿ ಬರೆದ ನೀಳ್ಗತೆಗಳೂ, ಉಂಟು. ಎಲ್ಲಕಿಂತ ಮುಖ್ಯವಾಗಿ ಈಕೆ ಗಂಭೀರವಾದ ಸಾಹಿತ್ಯ ಸಂಬಂಧ ಚರ್ಚೆಗಳಿಗೆ ಗುರುತರವಾದ ಕೊಡುಗೆ ಕೊಟ್ಟಿದ್ದಾರೆ. Writing from the margin ನಲ್ಲಿ ಹದಿನಾರು ಪ್ರಬಂಧಗಳಿವೆ. ಇಂದಿನ ಸಾರಸ್ವತ ಪ್ರಪಂಚದಲ್ಲಿರುವ ಸಾಹಿತ್ಯಕ್ಕೆ ಸಂಬಂಧಪಟ್ಟ ಹಲವಾರು ಅತಿಮುಖ್ಯ ವಿಷಯಗಳ ಬಗ್ಗೆ ಇಲ್ಲಿ ಶಶಿ ದೇಶಪಾಂಡೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಪದ್ಮಶ್ರೀ ಪ್ರಶಸ್ತಿ ಪಡೆದ, ಹತ್ತಾರು ಭಾಷೆಗಳಿಗೆ ತಮ್ಮ ಕಾದಂಬರಿಗಳು ಭಾಷಾಂತರವಾಗಿರುವ ಸಾಹಿತ್ಯ ಅಕಾಡೆಮಿ ಬಹುಮಾನ ಸಮಿತಿಗಳಲ್ಲಿ ಕೂತು ಚರ್ಚಿಸಿರುವ ಈಕೆ ಸಾಹಿತ್ಯದ ಘನತೆ, ಗಾಂಭೀರ್ಯ ಮತ್ತು ಪರಿಣಾಮಗಳ ಬಗ್ಗೆ ಆಳವಾಗಿ, ಚಿಂತಿಸಿದ್ದಾರೆ. ಆಕೆ ನಂಬಿರುವುದು ಸಾಹಿತ್ಯ ಸಾವಿರಾರು ವರ್ಷದಿಂದ ಪುರುಷರ ಸೃಷ್ಟಿಯಾಗಿದ್ದು, ಸ್ತ್ರೀಯರ ಧ್ವನಿ ಕೇಳಿಸುತ್ತಿರಲೇ ಇಲ್ಲ; ಇವತ್ತು ಆ ಧ್ವನಿಗೊಂದು ಅವಕಾಶವಿರುವುದು ಸಂತೋಷದ ವಿಷಯ ಎಂದು.

ಶಶಿ ದೇಶಪಾಂಡೆಯವರ ಬಗ್ಗೆ ಅಡಕವಾಗಿ ಬರೆಯುವುದು ಕಷ್ಟ ಆಕೆಯ ಬರವಣಿಗೆಯ ಬಗ್ಗೆ ಓದುವುದಕ್ಕಿಂತ ಬರಹವನ್ನೇ ಓದುವುದು ಹೆಚ್ಚು ಫಲಪೂರ್ಣವಾಗಿರುತ್ತದೆ.

ಇಂಗ್ಲಿಷಿನಲ್ಲಿರುವ ಭಾರತೀಯ ಸಾಹಿತ್ಯಕ್ಕೆ ಶಶಿ ದೇಶಪಾಂಡೆಯವರ ಕೊಡುಗೆ ಅಮೂಲ್ಯ. ಧಾರವಾಡದಲ್ಲಿ ಹುಟ್ಟಿ ಬೆಳೆದು ಬೆಂಗಳೂರಿನಲ್ಲಿ ನೆಲಸಿರುವ ಈ ಲೇಖಕಿ ಇಂಗ್ಲಿಷ್ ಭಾಷೆಯನ್ನು ತಮ್ಮ ಸೃಜನಶೀಲ ಬರಹಕ್ಕೆ ಆಯ್ಕೆ ಮಾಡಿಕೊಂಡು, ನಮ್ಮ ಸಂಸ್ಕೃತಿಯ, ನಡೆನುಡಿಯ ಕಂಪನ್ನು, ಅದಕ್ಕೆ ಕೊಟ್ಟಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿ ಕರ್ನಾಟಕದವರೆಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿರುವ ಲೇಖಕಿ ಶಶಿ ದೇಶಪಾಂಡೆಯವರು.

———— * ————

ಗಣಿತಶಾಸ್ತ್ರಜ್ಞೆ ಶಕುಂತಲಾದೇವಿ

ಕೆ. ಗಾಯಿತ್ರಿ ಮೂರ್ತಿ

1945ರ ಸರಿಸುಮಾರು, ಸಾಮಾನ್ಯವಾಗಿ ಆರು ವರ್ಷದ ಹೆಣ್ಣುಮಕ್ಕಳು ಕುಂಟೆಬಿಲ್ಲೆ, ಜೂಟಾಟ, ಚೌಕಾಭಾರ ಇಂತಹ ಆಟಗಳಲ್ಲಿ ನಿರತರಾಗಿರುತ್ತಿದ್ದ ಕಾಲ. ಆದರೆ ಆರು ವರ್ಷದ ಹಾಲುಗಲ್ಲದ ಬಾಲೆಯೊಬ್ಬಳಿಗೆ ಇಂತಹ ಆಟಗಳಿಗಿಂತ ಬಹುಶಃ ಸಂಖ್ಯೆಗಳೊಂದಿಗೆ ಆಡುವುದೇ ಹೆಚ್ಚು ಆಕರ್ಷಕವೆನಿಸಿತ್ತೇನೋ? ಅವಳು ಮೈಸೂರು ವಿಶ್ವವಿದ್ಯಾಲಯದ ಘನ ವಿದ್ವಾಂಸರು ಹಾಗೂ ವಿದ್ಯಾರ್ಥಿಗಳ ಮುಂದೆ ತನ್ನ ಸಂಖ್ಯಾಚಾತುರ್ಯವನ್ನು ಎರಡು ಗಂಟೆಗಳ ಕಾಲ ಪ್ರದರ್ಶಿಸಿ ಶಾಬ್ಬಾಸ್‌ಗಿರಿ ಪಡೆದಳು. ವಿದ್ವಾಂಸರುಗಳೇ ಗಂಟೆಗಟ್ಟಲೆ ಪರದಾಡಿ ಬಿಡಿಸಬೇಕಾದ ಅನೇಕ ಸಂಕೀರ್ಣ ಗಣಿತ ಸಮಸ್ಯೆಗಳನ್ನು ಕೆಲವೇ ಸೆಕೆಂಡುಗಳಲ್ಲಿ ಮಾನಸಿಕವಾಗಿ ಲೆಕ್ಕಾಚಾರ ಮಾಡಿದ ಆರು ವರ್ಷದ ಪುಟ್ಟ ಹುಡುಗಿಯ ಪ್ರತಿಭೆ ಕಂಡು ಎಲ್ಲರೂ ಚಕಿತರಾದರು. ಮತ್ತೆ ಅವಳು ಎಂಟು ವರ್ಷದವಳಿದ್ದಾಗ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಅಲ್ಲಿನ ವಿದ್ವಾಂಸರ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿ, ಅಲ್ಲಿನ ಉಪಕುಲಪತಿಗಳು ಆ ಪುಟ್ಟ ಬಾಲೆಯನ್ನು 'ಜೀಪಂತ ಅದ್ಭುತ' ಎಂದು ಕೊಂಡಾಡಿದರಂತೆ. ಆ ಧೀರೆ, ಚತುರೆ ಯಾರೆಂದು ಕುತೂಹಲವೇ? 'ಮಾನವ ಗಣಕ ಯಂತ್ರ'ವೆಂದು ಜಗದ್ವಿಖ್ಯಾತಳಾಗಿರುವ ಶಕುಂತಲಾದೇವಿಯಲ್ಲದೆ ಆ ಪುಟ್ಟ ಬಾಲೆ ಮತ್ತಿನ್ಯಾರಾಗಿರಲು ಸಾಧ್ಯ? ಶೀಘ್ರದಲ್ಲೆ ವಿವಿಧ ಕ್ಷೇತ್ರಗಳ ಗಣ್ಯರ ಮುಂದೆ ಅನೇಕ ಪ್ರದರ್ಶನಗಳನ್ನು ನೀಡಿದ ಶಕುಂತಲಾದೇವಿ 'ಬಾಲ ವಿಸ್ಮಯ' ಎಂದು ಖ್ಯಾತಿ ಪಡೆದರು.

ಬೆಂಗಳೂರಿನಲ್ಲಿ 1939ರ ನವೆಂಬರ್ 4ರಂದು ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಶಕುಂತಲಾ ದೇವಿ ಅಪ್ಪಟ ಕನ್ನಡಿತಿ. ತಂದೆ ಸರ್ಕಸ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು. ಮೂರು ವರ್ಷದ ಪುಟ್ಟ ಮಗುವಿದ್ದಾಗಲೇ ಇಸ್ಪೀಟ್ ಆಟದಲ್ಲಿ ತಮ್ಮ ತಂದೆ ಮತ್ತವರ ಜೊತೆಗಾರರನ್ನು ಸೋಲಿಸಿದ್ದರಂತೆ. ಹಾಗೆ ಮಾಡಿದ್ದು ಇತರರಂತೆ ಕೈಚಳಕದಿಂದಲ್ಲ, ನೆನಪಿನ ಶಕ್ತಿಯಿಂದ ಎಂದು ಅರಿತ ಅವರ ತಂದೆ ಬಹು ಬೇಗ ಸಂಖ್ಯೆಗಳ ಲೆಕ್ಕಾಚಾರದಲ್ಲಿ ಮಗಳ ಅಪ್ರತಿಮ ಪ್ರತಿಭೆಯ ಸುಳುಹನ್ನು ಗಮನಿಸಿದರಂತೆ. ಐದು ವರ್ಷದ ಮಗುವಾಗಿದ್ದಾಗಲೇ ಶಕುಂತಲಾ ದೇವಿ ಸಂಕೀರ್ಣವಾದ ಗಣಿತ ಲೆಕ್ಕಗಳನ್ನು ಶರವೇಗದಲ್ಲಿ ಮಾನಸಿಕವಾಗಿ ಲೆಕ್ಕಾಚಾರ ಮಾಡುವ ಪರಿಣತಿ ಪಡೆದು, ಜಗತ್ತನ್ನೇ ಅಚ್ಚರಿಗೊಳಿಸಿದರು. ಸಾಮಾನ್ಯವಾಗಿ ಬಾಲ ಪ್ರತಿಭೆಗಳು ಬೆಳೆದು ದೊಡ್ಡವರಾಗುವಷ್ಟರಲ್ಲಿ ಅವರ ಗಮನ ಹತ್ತಾರು ಕಡೆ ಹರಿದು ಆ ಪ್ರತಿಭೆ ಮುರುಟಿ ಹೋಗುವುದೇ ಹೆಚ್ಚು. ಆದರೆ ಶಕುಂತಲಾ ದೇವಿಯ ವಿಷಯ ಹಾಗಾಗಲಿಲ್ಲ. ಬಹುಶಃ ಅವರಿಗೆ ಗಣಿತ ಪ್ರತಿಭೆ ದೈವದತ್ತವಾಗಿ ಬಂದಿರಬೇಕು. ಆದ್ದರಿಂದಲೇ ಆ ಪ್ರತಿಭೆ ದಿನೇದಿನೇ ವೃದ್ಧಿಯಾಗಿ ಅವರು ಕಂಪ್ಯೂಟರ್‌ಗಿಂತ ಹೆಚ್ಚಿನ ವೇಗದಲ್ಲಿ ಲೆಕ್ಕಾಚಾರ ಮಾಡಬಲ್ಲರು ಎಂದು ಖ್ಯಾತಿಪಡೆದ ಧೀಮಂತ ಮಹಿಳೆ ಎನಿಸಿದರು.

ಕೈಯಲ್ಲಿ ಸೀಮೆಸುಣ್ಣವಿಲ್ಲ, ಇಲ್ಲವೇ ಕಾಗದದ ಮೇಲೆ ಬರೆಯುವುದಿಲ್ಲ, ಆದರೆ ಎದುರು ನಿಂತವರು ಅತ್ಯಂತ ಸಂಕೀರ್ಣವಾದ ಲೆಕ್ಕವನ್ನು ಹೇಳುವುದೇ ತಡ, ಅವರ ಮಿಂಚಿನಂತಹ ಮಿದುಳು ಕ್ಷಣ ಮಾತ್ರದಲ್ಲಿ

ಉತ್ತರವನ್ನು ಕಂಡುಹಿಡಿದು, ಅವರ ಬಾಯಿಂದ ತಟ್ಟನೆ ಹೊರಡಿಸಿಬಿಡುತ್ತದೆ. ಮೈಸೂರಿನಲ್ಲಿ ನಾನು ಶಾರದಾ ವಿಲಾಸ ಕಾಲೇಜಿನಲ್ಲಿ ಓದುತ್ತಿದ್ದಾಗ ಅವರ ಅಪ್ರತಿಮ ಪ್ರತಿಭೆ ಕಂಡು ಬೆಕ್ಕಸ ಬೆರಗಾಗಿದ್ದೆ. ಅನೇಕ ವಿದ್ಯಾರ್ಥಿಗಳು, ಅಧ್ಯಾಪಕರು ದೊಡ್ಡದೊಡ್ಡ ಸಂಖ್ಯೆಗಳನ್ನು ಒಳಗೊಂಡ ಗುಣಾಕಾರ, ಭಾಗಾಕಾರ, ಕೂಡು, ಕಳೆಯುವ ಲೆಕ್ಕಗಳ ಸವಾಲೆಸೆದರೂ ಥಟ್ಟಂತ ಉತ್ತರ ಹೇಳಿ ನೆರೆದವರನ್ನು ನಿಬ್ಬೆರಗಾಗಿಸಿದ ಸಂಗತಿ ನನ್ನ ನೆನಪಿನಲ್ಲಿ ಹಚ್ಚ ಹಸುರಾಗಿದೆ.

ಬಹುಶಃ 1950ರಲ್ಲಿ 12 ವರ್ಷದ ಈ ಚತುರೆ ಯೂರೋಪ್ ಯಾತ್ರೆ ಕೈಗೊಂಡರು. ಲಂಡನ್‌ನಲ್ಲಿ ಬಿಬಿಸಿಯು ಶಕುಂತಲಾದೇವಿಯ ಪ್ರದರ್ಶನವನ್ನು ಪ್ರಸ್ತುತಪಡಿಸಿತು. ಬಿಬಿಸಿ ಮುಂದಿಟ್ಟ ಗಣಿತದ ಸವಾಲುಗಳಿಗೆ ಶಕುಂತಲಾ ಮಿಂಚಿನ ವೇಗದಲ್ಲಿ ಉತ್ತರ ನೀಡಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದರು. ಕೆಲವು ಸವಾಲುಗಳನ್ನು ಬಿಬಿಸಿ ಶಕುಂತಲಾ ದೇವಿಯನ್ನು ಕೇಳಿದಾಗ, ಈ ಸಮಸ್ಯೆಗಳು ಸರಿಯಿಲ್ಲ, ನೀವು ತಪ್ಪಾಗಿ ಲೆಕ್ಕಾಚಾರ ಮಾಡಿದ್ದೀರಿ ಎಂದು ಶಕುಂತಲಾದೇವಿ ಉತ್ತರಿಸಿದರಂತೆ. ಆಗ ಅವರ ಸಂದರ್ಶಕ ಲೆಸ್ಲೀ ಮಿಶೆಲ್ ಎಂಬುವರು ಅದರ ತನಿಖೆ ಮಾಡಿ ಬಿಬಿಸಿ ಲೆಕ್ಕಾಚಾರದಲ್ಲಿ ತಪ್ಪಿದೆ, ಶಕುಂತಲಾದೇವಿ ಹೇಳಿದ್ದು ಸರಿ ಎಂದು ತಪ್ಪೊಪ್ಪಿಗೆ ನೀಡಿದರಂತೆ!

ಗಣಕ ಯಂತ್ರವಾದರೂ ತಪ್ಪು ಲೆಕ್ಕಾಚಾರ ಮಾಡೀತು, ಆದರೆ ಶಕುಂತಲಾದೇವಿಯ ಮಿಂಚಿನಂತಹ ಮಿದುಳು ತನ್ನ ಮಾನಸ ಲೆಕ್ಕಾಚಾರದಲ್ಲಿ ತಪ್ಪೆಸಗುವುದಿಲ್ಲ. ಒಮ್ಮೆ ರೋಮ್‌ನ ಪ್ರದರ್ಶನವೊಂದರಲ್ಲಿ ಗಣಕ ಯಂತ್ರ ಶಕುಂತಲಾದೇವಿಯ ಉತ್ತರ ತಪ್ಪೆಂದು ಹೇಳುತ್ತದೆ. ಆದರೆ ಮತ್ತೆ ಪರಿಶಿಲಿಸಿದಾಗ ತಪ್ಪೆಸಗಿದ್ದು ಗಣಕ ಯಂತ್ರ, ಶಕುಂತಲಾದೇವಿಯದಲ್ಲ ಎಂದು ಸಾಬೀತಾಯಿತಂತೆ!

ಆಸ್ಟ್ರೇಲಿಯಾ ಪ್ರವಾಸದಲ್ಲಿ ಸಿಡ್ನಿಯಲ್ಲೊಂದು ಪ್ರದರ್ಶನದಲ್ಲಿ ಆಗಿನ ಸೂಪರ್ ಕಂಪ್ಯೂಟರ್‌ನ ಸವಾಲನ್ನು ಯಶಸ್ವಿಯಾಗಿ ಎದುರಿಸಿ, ಅದರ ಚಾಕಚಕ್ಯತೆಗೆ ಸರಿಸಾಟಿ ಎನಿಸಿದರು. ಕಂಪ್ಯೂಟರ್ ಮೂಲಕ ಪ್ರಶ್ನೆಗಳನ್ನು ಕೇಳಿದವರು ಅಲ್ಲಿನ ಖ್ಯಾತ ಪ್ರೊಫೆಸರ್‌ಗಳಾಗಿದ್ದ ಪ್ರೊ. ಬ್ಯಾರಿ ಥಾರ್ಬನ್ ಮತ್ತು ಪ್ರೊ. ಆರ್.ಈ.ಸ್ಮಾರ್ಟ್ ಎಂಬುವರು. ಪ್ರಶ್ನೆಗಳನ್ನು ಕೇಳುತ್ತ, ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ ಮುಗಿಸುವ ಮುನ್ನವೇ ಶಕುಂತಲಾದೇವಿಯವರ ಉತ್ತರಗಳು ಸಿದ್ಧ! 'ಶಕುಂತಲಾದೇವಿಯವರ ಈ ಮಟ್ಟದ ಬುದ್ಧಿಮತ್ತೆ, ಭಯ ಹುಟ್ಟಿಸುವಂತಹುದು' ಎಂದು ಉದ್ಗರಿಸಿದರಂತೆ ಪ್ರೊ. ಥಾರ್ಬನ್.

'ಜಗವೇ ನಾಟಕ ರಂಗ' ಎಂಬ ನಾಣ್ಣುಡಿಯಂತೆ ಇಡೀ ಜಗತ್ತಿನಲ್ಲಿ ಶಕುಂತಲಾದೇವಿಯವರ ಪ್ರತಿಭೆ ಸಾವಿರಾರು ಪ್ರದರ್ಶನಗಳನ್ನು ಕಂಡಿದೆ, ಕಂಡು ಮೂಕವಿಸ್ಮಿತವಾಗಿದೆ. ಶಾಲಾಕಾಲೇಜುಗಳು, ವಿಶ್ವವಿದ್ಯಾಲಯಗಳು, ರಂಗಶಾಲೆಗಳು, ಟೆಲಿವಿಶನ್‌ಗಳು ಹೀಗೆ ನಾನಾ ಕ್ಷೇತ್ರಗಳಲ್ಲಿ ಅತ್ಯಂತ ಯಶಸ್ವೀ ಪ್ರದರ್ಶನಗಳನ್ನು ನೀಡಿ, ಸೆಕೆಂಡುಗಳ ಅಂತರದಲ್ಲಿ ಅತ್ಯಂತ ಸಂಕೀರ್ಣ ಗಣಿತ ಸಮಸ್ಯೆಗಳಿಗೆ ಉತ್ತರ ನೀಡಿದ ಖ್ಯಾತಿ ಶಕುಂತಲಾದೇವಿಯವರದು.

ವಯಸ್ಸಾದಂತೆ ಶಕುಂತಲಾದೇವಿಯ ಪ್ರತಿಭೆ ಪುಟವಿಟ್ಟ ಚಿನ್ನದಂತೆ ಹೊಳೆಯುತ್ತಿದೆಯೇ ಹೊರತು ಮಸುಕಾಗಿಲ್ಲ. 1977ರಲ್ಲಿ ಅವರು 201 ಅಂಕೆಗಳುಳ್ಳ ಸಂಖ್ಯೆಯೊಂದರ 23ನೆಯ ವರ್ಗಮೂಲವನ್ನು ಕ್ಷಣಮಾತ್ರದಲ್ಲಿ ಮಾನಸಿಕ ಲೆಕ್ಕಾಚಾರ ಮಾಡಿ ಹೇಳಿ, ನೆರೆದಿದ್ದ ಜನರನ್ನು ಮೂಕವಿಸ್ಮಿತರನ್ನಾಗಿಸಿದರು. 1980ರಲ್ಲಿ ಲಂಡನ್ನಿನ ಇಂಪೀರಿಯಲ್ ಕಾಲೇಜಿನ ಕಂಪ್ಯೂಟರ್ ವಿಭಾಗದವರು ಪ್ರಸ್ತುತ ಪಡಿಸಿದ ಹದಿಮೂರು ಅಂಕೆಗಳುಳ್ಳ ಎರಡು ಸಂಖ್ಯೆಗಳ ಗುಣಾಕಾರದ (7,686,369,774,8702,465,099,745,779) ಉತ್ತರವನ್ನು ಶಕುಂತಲಾದೇವಿ 28 ಸೆಕೆಂಡುಗಳಲ್ಲಿ ಹೇಳಿದರಂತೆ. ಈ ಸಮಯವು 26 ಅಂಕೆಗಳ ಅದರ ಉತ್ತರವನ್ನು (18,947,668,177,995, 426,462,773,730) ಹೇಳುವ ಸಮಯದಷ್ಟೇ ಆಗಿತ್ತು ಎಂದು 1995ರ ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ದಾಖಲಿಸಿದೆ.

'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಬಹುಶಃ ಜಗತ್ತಿನಲ್ಲಿ ಶಕುಂತಲಾದೇವಿ ಪ್ರದರ್ಶನ ನೀಡದ ದೇಶವಿಲ್ಲ. ಇಂತಹ ಪ್ರತಿಭಾವಂತ ಮಹಿಳೆಗೆ ಫಿಲಿಪೀನ್ಸ್ ವಿಶ್ವವಿದ್ಯಾಲಯವು 1969ರಲ್ಲಿ ನೀಡಿದ 'ಅತ್ಯಂತ ಪ್ರತಿಷ್ಠಿತ ಮಹಿಳೆ' ಬಿರುದು ಮತ್ತು 1988ರಲ್ಲಿ ವಾಷಿಂಗ್ಟನ್ ಡಿ.ಸಿ ಯಲ್ಲಿ ಭಾರತದ ರಾಯಭಾರಿ ನೀಡಿದ 'ರಾಮಾನುಜನ್ ಮ್ಯಾಥಮ್ಯಾಟಿಕಲ್ ಜೀನಿಯಸ್' ಪ್ರಶಸ್ತಿಯೂ ಸೇರಿದಂತೆ ಅನೇಕ ಪ್ರಶಸ್ತಿಗಳ ಸುರಿಮಳೆಯಾಗಿರುವುದು ಅಚ್ಚರಿಯ ಸಂಗತಿಯಲ್ಲ.

ಶಕುಂತಲಾದೇವಿಯ ಪ್ರತಿಭೆ ಇಷ್ಟಕ್ಕೆ ಮೀಸಲಾಗಿಲ್ಲ. ಸಂಖ್ಯೆಗಳ ಬಗ್ಗೆ ಅಪಾರ ಒಲವಿರುವ ಗಣಿತದ ಬಗ್ಗೆ ಅಷ್ಟಾಗಿ ಒಲವು ತೋರದವರೂ ಕೂಡ ಗಣಿತ ಕಲಿಯಲಿ ಎಂದು ಬಯಸುವ ಅವರು ಗಣಿತದ ಬಗ್ಗೆ, ಶೀಘ್ರವಾಗಿ ಲೆಕ್ಕಾಚಾರ ಮಾಡುವ ವಿಧಾನದ ಬಗ್ಗೆ ಅನೇಕ ಕಾರ್ಯಾಗಾರಗಳನ್ನು ನಡೆಸಿಕೊಟ್ಟಿದ್ದಾರೆ. ಗಣಿತ ಎಂದರೆ ನನಗಂತೂ ಕಬ್ಬಿಣದ ಕಡಲೆ ಎನ್ನುವವರೂ ಸಹ ಅವರ ಕಾರ್ಯಾಗಾರದಿಂದ ಪ್ರಯೋಜನ ಪಡೆದಿದ್ದಾರೆ ಎಂದು ಶಕುಂತಲಾದೇವಿ ಹೇಳುತ್ತಾರೆ. ಗಣಿತದ ಬಗ್ಗೆ ಹಲವಾರು ಪುಸ್ತಕಗಳನ್ನೂ ರಚಿಸಿದ್ದಾರೆ. ಸಂಖ್ಯೆಗಳೊಂದಿಗೆ ಆಡುವ ಅವರಿಗೆ ಸಹಜವಾಗಿಯೇ ಜ್ಯೋತಿಶ್ಶಾಸ್ತ್ರದಲ್ಲಿ ಆಸಕ್ತಿ ಮೂಡಿ, ಅದನ್ನು ವೃತ್ತಿಪರವಾಗಿಯೂ ನಡೆಸಿಕೊಂಡು ಬಂದಿದ್ದಾರೆ. ಜೊತೆಗೆ ಆ ಬಗ್ಗೆ ಪುಸ್ತಕ ಕೂಡ ರಚಿಸಿದ್ದಾರೆ.

2006ರಲ್ಲಿ ಸಂಖ್ಯೆಗಳ ಬಗ್ಗೆ ಅಪಾರ ಆಸಕ್ತಿ ಹೊಂದಿರುವ ನೇಹಾ ಎಂಬ ಹುಡುಗಿಯ ಬಗ್ಗೆ ಅವರು "In the Wonderland of Numbers" ಎಂಬ ಪುಸ್ತಕ' ರಚಿಸಿದ್ದಾರೆ. ಅವರು ಸಲಿಂಗಿಗಳ ಬಗ್ಗೆ ರಚಿಸಿರುವ ಪುಸ್ತಕ 1977ರಲ್ಲಿ ಬಿಡುಗಡೆಯಾದರೂ ಅದರ ಬಗ್ಗೆ ಯಾರೂ ಅಷ್ಟಾಗಿ ಗಮನ ಹರಿಸಲಿಲ್ಲ. ಬಹುಶಃ ಗಣಿತ ಪ್ರಾಜ್ಞೆಯಿಂದ ಸಮಾಜ ಇಂತಹ ವಿವಾದಾಸ್ಪದ ವಿಷಯದ ಬಗ್ಗೆ ಪುಸ್ತಕವನ್ನು ನಿರೀಕ್ಷಿಸಿರಲಿಲ್ಲವೇನೋ? ಅಥವಾ ಆ ಸಂದರ್ಭ ಇಂತಹುದೊಂದು ಪುಸ್ತಕದ ಬಗ್ಗೆ ಕುತೂಹಲ ತೋರಿಸುವಂತಿರಲಿಲ್ಲವೇನೋ?

ನನ್ನ ಮಟ್ಟಿಗೆ ಸಂಖ್ಯೆಗಳೆಂದರೆ ಜೀವಂತ ಚಿತ್ರಗಳು ಎನ್ನುವ ಅವರು, ತಮ್ಮ ಪ್ರತಿಭೆ ಹುಟ್ಟಿನಿಂದ ಬಂದಿದ್ದು ಎನ್ನುತ್ತಾರೆ. ಆದರೂ ಬಹುಮಟ್ಟಿಗೆ ಸಂಖ್ಯಾ ಚಾತುರ್ಯವನ್ನು ಆಸಕ್ತಿಯಿದ್ದವರು ಕಲಿಯಬಹುದು ಎಂದು ಕೂಡ ಹೇಳುತ್ತಾರೆ. ಆಧುನಿಕ ಜಗತ್ತಿನಲ್ಲಿ ಜನರು ಗಣಕ ಯಂತ್ರವನ್ನು ತೀವ್ರವಾಗಿ ಅವಲಂಬಿಸಿರುವುದು ದುರಾದೃಷ್ಟಕರ ಎಂದು ಹೇಳಿದ್ದಾರೆ. ಅತಿ ಸರಳ ಲೆಕ್ಕಾಚಾರ ಮಾಡಲೂ ಕ್ಯಾಲ್ಕ್ಯುಲೇಟರ್ ಮೊರೆ ಹೋಗುವ ಇಂದಿನ ಯುವಜನಾಂಗದ ನಡುವೆ ಶಕುಂತಲಾದೇವಿ ತೀರಾ ವಿಭಿನ್ನವಾಗಿ, ವಿಶಿಷ್ಟ ವ್ಯಕ್ತಿಯಾಗಿ ತೋರುತ್ತಾರೆ.

ಜಗದ್ವಿಖ್ಯಾತ ಭೌತ ವಿಜಾನಿ ಆಲ್ಬರ್ಟ್ ಐನ್‌ಸ್ಟೈನ್ ಸಮ್ಮುಖದಲ್ಲಿ ಶಕುಂತಲಾದೇವಿ ತಮ್ಮ ಗಣಿತ ಪ್ರತಿಭೆ ಪ್ರದರ್ಶಿಸಿದರಂತೆ. ಶಕುಂತಲಾವರ ಸಂಖ್ಯಾ ಚಾತುರ್ಯಕ್ಕೆ ಬೆರಗಾದ ಐನ್‌ಸ್ಟೈನ್ ಮೆಚ್ಚುಗೆಯಿಂದ ಅವರಿಗೆ ಒಂದು ಸರ್ಟಿಫಿಕೇಟ್ ನೀಡಿದರಂತೆ. ಅದರಲ್ಲಿ, 'ಶಕುಂತಲಾ ಅವರು ಸೆಕೆಂಡುಗಳಲ್ಲಿ ನೀಡಿದ ಉತ್ತರವನ್ನು ಪಡೆಯಲು ನಾನು ಕನಿಷ್ಠ ಪಕ್ಷ ಮೂರು ತಾಸುಗಳಾದರೂ ಲೆಕ್ಕ ಮಾಡಬೇಕು. ಏಕೆಂದರೆ ಲೆಕ್ಕಾಚಾರ ಮಾಡದೆ ನನಗೆ ಉತ್ತರ ತಿಳಿಯುವುದಿಲ್ಲ. ಅದಕ್ಕಿಂತ ಕಡಿಮೆ ಸಮಯದಲ್ಲಿ ಬೇರಾರೂ ಆ ಲೆಕ್ಕ ಮಾಡಲು ಸಾಧ್ಯವಿಲ್ಲ. ಉತ್ತರ ಎಷ್ಟು ದೊಡ್ಡದಿತ್ತೆಂದರೆ ಅದನ್ನು ಬರೆಯಲು ಇಡೀ ಬೋರ್ಡ್ ಉಪಯೋಗಿಸಬೇಕಾಯಿತು. ಆದರೆ ಶಕುಂತಲಾದೇವಿ ಅವರು ಪ್ರಶ್ನೆಯನ್ನು ಪೂರ್ತಿ ಹೇಳುವ ಮೊದಲೇ ಉತ್ತರ ಬರೆಯತೊಡಗಿದ್ದರು,' ಎಂದು ಹೇಳಿದ್ದಾರೆ. ಇವರ ಗಣಿತ ಚಾತುರ್ಯ ಕಂಡು ಚಕಿತರಾದ ಐನ್‌ಸ್ಟೈನ್ 'ಇದೆಲ್ಲ ನಿಮಗೆ ಹೇಗೆ ಸಾಧ್ಯವಾಯಿತು?' ಎಂದು ಕೇಳಿದರಂತೆ.

ಅವರ ಪ್ರಶ್ನೆಗೆ ಶಕುಂತಲಾ ಅವರು, 'ನಾನು ಹೇಗೆ ಲೆಕ್ಕಾಚಾರ ಮಾಡ್ತೀನೋ ನನಗೆ ಗೊತ್ತಿಲ್ಲ. ಪ್ರಶ್ನೆ ಕೇಳಿದ ತಕ್ಷಣ ನನ್ನ ಕಣ್ಮುಂದೆ 1, 2, 3---ಹೀಗೆ ಸಂಖ್ಯೆಗಳು ಕಾಣತೊಡಗುತ್ತವೆ. ಅವುಗಳನ್ನು ನಾನು ಬರೆಯುತ್ತೇನೆ

ಅಷ್ಟೆ.' ಎಂದರಂತೆ. ಬಹುಶಃ ಅವರ ಮಿದುಳು ಒಂದು ಸಮರ್ಥ ಕಂಪ್ಯೂಟರ್ ರೀತಿಯಲ್ಲಿ ರೂಪುಗೊಂಡಿರಬಹುದೇ? ಎಂದು ಅಚ್ಚರಿಯಾಗುತ್ತದೆ.

'ಯಾವುದೇ ಪ್ರದರ್ಶನಕ್ಕೆ ಮೊದಲು ನಾನು ಮೊದಲು ನನ್ನ ಮನಸ್ಸಿಗೆ ಸಂಪೂರ್ಣ ವಿಶ್ರಾಂತಿ ನೀಡುತ್ತೇನೆ. ಯಾವುದೇ ವೈಯಕ್ತಿಕ ಸಮಸ್ಯೆಯೂ ನನ್ನನ್ನು ಕಾಡಲು ಬಿಡುವುದಿಲ್ಲ. ವೇದಿಕೆಯ ಮೇಲೆ ನಿಂತಾಗ ಜನರು ಕೇಳುವ ಪ್ರಶ್ನೆಗಳಿಗೆ ಸರಿಯುತ್ತರ ಕೊಡಬೇಕೆಂಬ ಬಗ್ಗೆ ಮಾತ್ರ ನಾನು ಯೋಚಿಸುತ್ತೇನೆ. ಒಂದು ಪ್ರದರ್ಶನದಲ್ಲಿ ಒಂದುವರೆಗಂಟೆಯಿಂದ ಎರಡು ಗಂಟೆಯವರೆಗೆ ನಾನು ಕಾರ್ಯಕ್ರಮ ನೀಡಬಲ್ಲೆ. ಒಮ್ಮೆ ಆರಂಭಿಸಿದರೆ ನನ್ನನ್ನು ಮೀರಿಸಲು ಯಾರಿಗೂ ಸಾಧ್ಯವಿಲ್ಲ. ದೇವರ ಕೃಪೆಯಿಂದ ಮಾತ್ರ ಇದೆಲ್ಲ ಸಾಧ್ಯವಾಗಿದೆ. ಒಂದು ಪ್ರದರ್ಶನದ ನಂತರ ನನಗೆ ಒಂದೆರಡು ದಿನಗಳ ವಿಶ್ರಾಂತಿ ಅವಶ್ಯಕ.' ಎಂದು ನಮ್ರತೆಯಿಂದ ಹೇಳುತ್ತಾರೆ.

ದಾರ್ಶನಿಕ ಒಶೊ ರಜನೀಶ್ ಅವರು ಶಕುಂತಲಾದೇವಿಯ ಅಂತಃಸ್ಫೂರ್ತಿಯ ಬಗ್ಗೆ ಹೇಳುತ್ತಾ, 'ಇಂಡಿಯಾದಲ್ಲಿ ಒಬ್ಬ ಮಹಿಳೆಯಿದ್ದಾರೆ. ಆಕೆ ದೇಶವಿದೇಶಗಳಲ್ಲಿ ತನ್ನ ಅಂತಃಸ್ಫೂರ್ತಿಯ ಪ್ರದರ್ಶನ ನೀಡುತ್ತಾರೆ. ಆಕೆ ಮೆಟ್ರಿಕ್ಯುಲೇಶನ್‌ವರೆಗೆ ಕಲಿತಿರಬಹುದು ಅಷ್ಟೆ, ಆದರೆ ಆಕೆ ಗಣಿತಶಾಸ್ತ್ರದಲ್ಲಿ ಮಹಾ ಪಂಡಿತೆ. ಆಕೆಯ ಅಂತಃಸ್ಫೂರ್ತಿಯು ಹುಟ್ಟಿನಿಂದ ಬಂದಿದೆ. ಏಕೆಂದರೆ ಆಕೆಯೊಬ್ಬ ಪ್ರದರ್ಶನ ವಸ್ತುವಾಗಿದ್ದಾರೆ. ಅವರಂತಹ ಅಂತಃಸ್ಫೂರ್ತಿಯಿಂದ ಹುಟ್ಟಿದ ವ್ಯಕ್ತಿಯು ಅತ್ಯಂತ ಸುಲಭವಾಗಿ ದೈವ ಸಾಕ್ಷಾತ್ಕಾರ ಪಡೆಯಬಹುದು. ಆದರೆ ಆಕೆ ಬೇಲಿಯ ಮೇಲೆ ನಿಂತಿದ್ದಾರೆ. ಒಂದು ಹೆಜ್ಜೆ ಮುಂದಿಟ್ಟರೆ ಸಾಕು, ಅವರಿಗೆ ಜ್ಞಾನೋದಯವಾಗುವುದು ಖಂಡಿತ. ಆದರೆ ಆಕೆಗೆ ಈ ಬಗ್ಗೆ ತಿಳಿದಿಲ್ಲ. ಅವರೊಂದು ಪ್ರಕೃತಿ ವೈಚಿತ್ರ ಎಂದಷ್ಟೆ ಹೇಳಬಹುದು,' ಎಂದು ಅಭಿಪ್ರಾಯ ಪಡುತ್ತಾರೆ.

ಇತ್ತೀಚೆಗೆ ಬೆಂಗಳೂರಿನಲ್ಲಿರುವ ಶಕುಂತಲಾದೇವಿಯ ಸಂದರ್ಶನವನ್ನು ಜುಲೈ 18ರಂದು 'ಕನ್ನಡಪ್ರಭ ದಿನಪತ್ರಿಕೆ ಪ್ರಕಟಿಸಿತು. ಅದರಲ್ಲಿನ ಕೆಲವು ಅಂಶಗಳು ಹೀಗಿವೆ. ಸಂಖ್ಯೆಗಳೊಡನೆ ಆಡುವ, ಶಕುಂತಲಾದೇವಿ, 'ನನ್ನ ಬುದ್ಧಿ ಸೂಪರ್ ಫಾಸ್ಟ್. ಈಗ ದಿನಕ್ಕೊಂದು ಸಾಫ್ಟ್‌ವೇರ್ ಸೃಷ್ಟಿಯಾಗುತ್ತಿದೆ. ಆದರೆ ನಾನು ಕಂಪ್ಯೂಟರ್‌ಗೆ ಸವಾಲು ಹಾಕುತ್ತೇನೆ. ಲೆಕ್ಕಾಚಾರದಲ್ಲಿ ಕಂಪ್ಯೂಟರ್‌ಗಿಂತ ನಾನು ಸ್ಪೀಡ್' ಎಂದಿದ್ದಾರೆ. ಎಪ್ಪತ್ತರ ಇಳಿ ವಯಸ್ಸಿನಲ್ಲಿರುವ ಶಕುಂತಲಾ ಅವರಲ್ಲಿ ಇಂದಿಗೂ ಅದೇ ಸೂಪರ್ ಫಾಸ್ಟ್ ಲೆಕ್ಕಾಚಾರ, ಸಂಖ್ಯಾ ಸಮೂಹದೊಂದಿಗಿನ ತಮ್ಮ ಒಡನಾಟ, ಅವು ಎಷ್ಟೇ ದೊಡ್ಡದಿರಲಿ, ಕ್ಷಣಮಾತ್ರದಲ್ಲಿ ಅವುಗಳನ್ನು ಪಳಗಿಸಿ, ಸಮಸ್ಯೆಗೆ ಕೆಲವೇ ಸೆಕೆಂಡುಗಳಲ್ಲಿ ಉತ್ತರ ನೀಡುವ ಕೌಶಲ ಸ್ವಲ್ಪವೂ ಮಸುಕಾಗಿಲ್ಲ, ಎನ್ನುವುದು ಸಂತೋಷವಷ್ಟೇ ಅಲ್ಲ, ಆಶ್ಚರ್ಯಕರ ಸಂಗತಿ ಕೂಡ.

ಶಕುಂತಲಾದೇವಿಗೆ ಮಗಳೊಬ್ಬಳಿದ್ದಾಳೆ. ಆವಳು ಲಂಡನ್ನಿನಲ್ಲಿ ನೆಲಸಿದ್ದಾಳೆ. ಶಕುಂತಲಾ ಅವರು ಈಗ ಒಬ್ಬಂಟಿ. ಆದರೆ ಅವರು ಹಾಗೆ ಹೇಳುವುದಿಲ್ಲ, 'ನನ್ನನ್ನು ನಾನು ಇಡೀ ವಿಶ್ವಕ್ಕೆ ಸಮರ್ಪಿಸಿಕೊಂಡಿದ್ದೇನೆ. ಇಡೀ ವಿಶ್ವದ ಜನತೆ ನನ್ನೊಂದಿಗಿದ್ದಾರೆ,' ಎನ್ನುತ್ತಾ ವಿಶ್ವ ಮಾನವರಾಗಿ ಕಂಗೊಳಿಸುತ್ತಾರೆ.

ಶಕುಂತಲಾದೇವಿ ತಮಾಷೆಯ ಸ್ವಭಾವದವರು. ಅಮೆರಿಕಾದ ಮ್ಯಾನ್ ಹಟ್ಟನ್‌ನ ತಮ್ಮ ಮನೆಯ ಬಳಿ ಇರುವ ಬ್ಯಾಂಕ್‌ಗೆ ಹೋಗುತ್ತಿದ್ದರಂತೆ. ಆ ಬ್ಯಾಂಕ್ ಬಳಿ ಒಂದು ಸರ್ಕಾರಿ ಕಛೇರಿ. ಅಂದು ಅಲ್ಲಿಗೆ ಗವರ್ನರ್ ಬರುವವರಿದ್ದರಂತೆ. ಅಂದೇನೋ ಅವರು ಬರುವುದು ತಡವಾಯಿತಂತೆ. ಅಲ್ಲಿ ಯಾರೇ ಆಗಲಿ, ತಡವಾಗಿ ಬಂದರೆ ಸ್ವಾಗತಿಸಲು ಯಾರೂ ನಿಲ್ಲುವುದಿಲ್ಲವಂತೆ. ತಡವಾಗಿ ಬಂದ ಗವರ್ನರ್ ಸರ್ಕಾರಿ ಕಛೇರಿಯೆದುರು ನಿಂತಿದ್ದ ಶಕುಂತಲಾದೇವಿಯನ್ನೇ ಸ್ವಾಗತಕಾರಿಣಿ ಎಂದು ತಿಳಿದು, 'ಐ ಆಮ್ ಪಟಾಕಿ' ಎಂದು ಪರಿಚಯಿಸಿಕೊಂಡರಂತೆ. ಸರಿ, ಶಕುಂತಲಾದೇವಿ ತಮಾಷೆಗಾಗಿ, 'ಐ ಆಮ್ ಮತಾಪು, ಸುರ್ಸುರ್ ಬಾಣ. ಸಿಟ್ಟಿಂಗ್ ಎಟ್ ಹೋಮ್' ಎಂದು ಪರಿಚಯಿಸಿಕೊಂಡರಂತೆ! ಸ್ವಲ್ಪ ಹೊತ್ತು ಆ ಗವರ್ನರ್ ಶಕುಂತಲಾದೇವಿಯನ್ನು, 'ಮಿಸ್ ಮತಾಪು' ಎಂದೇ

ಸಂಬೋಧಿಸುತ್ತಿದ್ದರಂತೆ. ಗವರ್ನರ್‌ರನ್ನು ಸ್ವಾಗತಿಸಲು ಸರ್ಕಾರಿ ಅಧಿಕಾರಿಗಳು ಹೊರಬಂದ ಕೂಡಲೆ ಶಕುಂತಲಾದೇವಿ ಅಲ್ಲಿಂದ ಜಾರಿಕೊಂಡರಂತೆ!

ಸದಾಕಾಲ ದೇಶವಿದೇಶಗಳನ್ನು ಸುತ್ತುತ್ತಾ ಇದ್ದರೂ ಶಕುಂತಲಾದೇವಿ ತಮ್ಮ ಮಾತೃಭಾಷೆ ಕನ್ನಡದ ಬಗ್ಗೆ ಅಪಾರ ಅಭಿಮಾನವಿಟ್ಟುಕೊಂಡಿದ್ದಾರೆ ಎಂಬುದು ಸಂತಸ ಹಾಗೂ ಸಮಾಧಾನದ ಸಂಗತಿ. ಅವರು ಒಮ್ಮೆ ಸಿಂಗಪೂರ್ ಕನ್ನಡಸಂಘದ ಕಾರ್ಯಕ್ರಮವೊಂದರಲ್ಲಿ ಅಧ್ಯಕ್ಷತೆ ವಹಿಸಲು ಸಿಂಗಪೂರ್‌ಗೆ ಹೋದರಂತೆ. ಅಧ್ಯಕ್ಷ ಭಾಷಣ ಮಾಡಲು ಅವರನ್ನು ವೇದಿಕೆಗೆ ಕರೆದು, 'ಮೇಡಂ, ನಿಮಗೆ ಕನ್ನಡ ಬರುತ್ತದಾ?' ಎಂದು ಒಬ್ಬ ಕಾರ್ಯಕರ್ತ ಕೇಳಿದನಂತೆ. ಆಗ, ಶಕುಂತಲಾದೇವಿಗೆ ಎಲ್ಲಿತ್ತೋ ಕೋಪ, 'ನಾನು ಕನ್ನಡದವಳು, ಮಾತೃಭಾಷೆ ಮರೀತೀನಿ ಅಂದ್ಕೋಡಿದೀಯಾ?' ಎಂದು ಅವನನ್ನು ಹೊಡೆಯಲು ಹೋಗಿದ್ದರಂತೆ! ತಾವೂ ಇಂಗ್ಲೀಷಿನಲ್ಲೇ ಮಾತನಾಡುತ್ತಾ, ಮಕ್ಕಳಿಗೂ ಅದನ್ನೇ ಕಲಿಸಿ, ಕೃತಕೃತರಾದೆವು ಎಂದು ತಿಳಿದಿರುವ ಇಂದಿನ ಅನೇಕ ಕನ್ನಡಿಗರಿಗೆ ಶಕುಂತಲಾದೇವಿಯ ಮಾತೃಭಾಷಾ ಪ್ರೇಮ ದಾರಿದೀಪವಾಗಬಹುದು ಎಂದು ಆಶಿಸೋಣವೇ?

ಪಕ್ಕಾ ಸಸ್ಯಾಹಾರಿಯಾದ ಶಕುಂತಲಾದೇವಿ 'ಕುಕ್ ಬುಕ್ ಫಾರ್ ಮೆನ್' ಎಂಬ ಅಡುಗೆ ಪುಸ್ತಕವನ್ನೂ ಬರೆದಿದ್ದಾರೆ ಎಂದರೆ ಅವರ ವೈವಿಧ್ಯಮಯ ಆಸಕ್ತಿಗಳ ಪರಿಚಯವಾಗುತ್ತದೆ. ಹಾಗೆ ಪುಸ್ತಕ ಬರೆಯಲು ಒಂದು ಹಿನ್ನೆಲೆ ಕೂಡ ಇದೆ ಎನ್ನುತ್ತಾರೆ ಶಕುಂತಲಾದೇವಿ. ವಿದೇಶಗಳಲ್ಲಿ ಪ್ರವಾಸ ಮಾಡುವಾಗ ಅವರಿಗೆ ತಮಗೆ ಹೊಂದುವ ಆಹಾರ ಸಿಗುವುದು ಕಷ್ಟವಾಗುತ್ತಿತ್ತಂತೆ. ಅಮೆರಿಕಾ, ಹಾಗೂ ಇಂಗ್ಲೆಂಡ್ ಪ್ರವಾಸ ಮಾಡುವಾಗ ಪ್ರದರ್ಶನದ ನಂತರ ಅಲ್ಲಿನ ಭಾರತೀಯ ವಿದ್ಯಾರ್ಥಿಗಳು ಅವರನ್ನು ತಮ್ಮ ಮನೆಗೆ ಆಹ್ವಾನಿಸಿ ಅಡುಗೆ ಮಾಡಿ ಬಡಿಸುತ್ತಿದ್ದರಂತೆ. ಆ ಸಂದರ್ಭದಲ್ಲಿ ಶಕುಂತಲಾದೇವಿ ಆ ವಿದ್ಯಾರ್ಥಿಗಳಿಗೆ, ಹೆಚ್ಚು ಶ್ರಮವಿಲ್ಲದೆ ಆಹಾರ ತಯಾರಿಕೆಯ ಬಗ್ಗೆ ಕೆಲವು ಸೂಚನೆಗಳನ್ನು ನೀಡುತ್ತಿದ್ದರಂತೆ. ನಂತರ ಆ ವಿದ್ಯಾರ್ಥಿಗಳು ಆ ಪದಾರ್ಥಗಳನ್ನು ತಯಾರಿಸುವ ವಿಧಾನ ಕೇಳುತ್ತಿದ್ದರಂತೆ. ಸಮಯಾಭಾವದಿಂದ ಶಕುಂತಲಾರವರು, ಅವರಿಗೆ ಇ-ಮೇಲ್ ಮೂಲಕ ಬರೆದು ಕಳುಹಿಸುತ್ತಿದ್ದರಂತೆ. ಇದೇ ಅವರಿಗೆ ಅಡುಗೆ ಪುಸ್ತಕ ರಚಿಸಲು ಸ್ಫೂರ್ತಿ ನೀಡಿತಂತೆ.

ಸಾಮಾನ್ಯವಾಗಿ ಗಣಿತದಲ್ಲಿ ಆಸಕ್ತಿಯುಳ್ಳ ಎಲ್ಲರ ಮನೆಗಳಲ್ಲೂ ಶಕುಂತಲಾದೇವಿ ರಚಿಸಿರುವ ಗಣಿತ ಸಮಸ್ಯೆಗಳನ್ನೊಳಗೊಂಡ ಪುಸ್ತಕಗಳು ಸಿಗುತ್ತವೆ. ಅವರು ಬರೆದ ಪುಸ್ತಕಗಳ ಪಟ್ಟಿ;

- Puzzles to Puzzle You
- More Puzzles to Puzzle You
- Awaken the Genius in Your Child
- Book of Numbers
- Astrology for You
- Figuring -- The Joy of Numbers
- Mathability
- In the Wonderland of Numbers
- Perfect Murder
- Master of game
- The World of Homosexuals

——— * ———

ಜನಪ್ರಿಯ ಲೇಖಕಿ ಉಷಾ ನವರತ್ನರಾಂ

ಡಾ॥ ನಾಗರತ್ನಮ್ಮ

ಶ್ರೀಮತಿ ಉಷಾ ನವರತ್ನರಾಂ ಬೆಂಗಳೂರಿನ ಎಂ.ವಿ. ಸುಬ್ಬರಾವ್ ಮತ್ತು ಶ್ರೀಮತಿ ಶಾಂತಮ್ಮ ದಂಪತಿಗಳಿಗೆ ಹಿರಿಯ ಮಗಳಾಗಿ 1939 ನವೆಂಬರ್ 23ರಂದು ಮೈಸೂರಿನಲ್ಲಿ ಜನಿಸಿದರು. ಇಬ್ಬರು ಅಣ್ಣಂದಿರು, ಒಬ್ಬ ತಂಗಿ, ಒಬ್ಬ ತಮ್ಮ ಇವರಿಂದ ಕೂಡಿದ ದೊಡ್ಡ ಕುಟುಂಬದ ಸದಸ್ಯೆಯಾಗಿ ಬೆಳೆದರು. ಸುಸಂಸ್ಕೃತ ವಿದ್ಯಾವಂತ ಕುಟುಂಬ, ಉಷಾರವರ ವಿದ್ಯಾಭ್ಯಾಸಕ್ಕೆ ಒಳ್ಳೆಯ ಪ್ರೋತ್ಸಾಹ ದೊರಕಿತು. ಬೆಂಗಳೂರಿನ ಪ್ರತಿಷ್ಠಿತ ಮೌಂಟ್ ಕಾರ್ಮಲ್ ಕಾಲೇಜಿನಲ್ಲಿ ಬಿ.ಎ. ಪದವಿಯನ್ನು, ನಂತರ ಇತಿಹಾಸವನ್ನು ಐಚ್ಛಿಕ ವಿಷಯವಾಗಿರಿಸಿಕೊಂಡು ಸ್ನಾತಕೋತ್ತರ ಪದವಿಯನ್ನು ಪಡೆದರು. ಚಿಕ್ಕಂದಿನಿಂದಲೇ ಒಳ್ಳೆಯ ಓದುಗರಾಗಿದ್ದ ಇವರು ಬರೆಯುವ ಹವ್ಯಾಸವನ್ನು ಬೆಳೆಸಿಕೊಂಡು ಬಂದರು.

1963ನೇ ಇಸವಿ ಫೆಬ್ರವರಿ ಎರಡನೇ ತಾರೀಖು ಉಷಾ ಅವರು ನವರತ್ನರಾಂ ಅವರೊಂದಿಗೆ ಸಪ್ತಪದಿ ತುಳಿದರು. ಗೃಹಿಣಿಯಾದ ಉಷಾರಿಗೆ ಬರವಣಿಗೆ ಬಗ್ಗೆ ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಲು ಪತಿಯ ಪ್ರೋತ್ಸಾಹ ದೊರಕಿತು. ಉಷಾ ಮತ್ತು ನವರತ್ನರಾಂ ದಂಪತಿಗಳು ಅನ್ಯೋನ್ಯವಾಗಿ ಹಾಲುಜೇನಿನಂತೆ ಬೆರೆತುಹೋಗಿದ್ದರು. ವಿವಾಹದ ನಂತರ ಉಷಾರವರು ಉಷಾ ನವರತ್ನರಾಂ ಆಗಿ ಪ್ರಸಿದ್ಧಿಯನ್ನು ಪಡೆದರು. ಅವರು ತಮ್ಮ ಪತಿಯ ಬಗ್ಗೆ ಹೇಳುತ್ತಾ "ನನ್ನ ಬದುಕಿನಲ್ಲಿ ಹರ್ಷದ ಹೊನಲಾಗಿ, ತಿಳಿಹಾಸ್ಯದ ಮಹಾಪೂರವಾಗಿ, ಸ್ಫೂರ್ತಿಯ ಚಿಲುಮೆಯಾಗಿ, ಪ್ರೋತ್ಸಾಹದ ಬೆನ್ನೆಲುಬಾಗಿ ಕಷ್ಟಸುಖಗಳನ್ನು ಹಂಚಿಕೊಂಡು ನಗುನಗುತ್ತಾ ನನಗೆ ನೆರಳಾಗಿದ್ದ ರಾಮ್ ನನ್ನ ಪತಿಯೊಬ್ಬರೇ ಆಗಿರದೆ ನನ್ನ ಅತ್ಯಂತ ಹತ್ತಿರದ ಬಾಳ ಗೆಳೆಯರೂ ಆಗಿದ್ದರು" ಎಂದಿದ್ದಾರೆ. ಇವರಿಗೆ ಅಂಜಲಿ, ಆಶ್ರಯ, ಆರತಿ ಮೂವರು ಹೆಣ್ಣುಮಕ್ಕಳು. ತನ್ನ ಪತ್ನಿ ಎಲ್ಲಾ ಸಾಮಾನ್ಯ ಸ್ತ್ರೀಯಂತೆ ಗೃಹಿಣಿಯಾಗಿ ಮನೆಗೆಲಸ, ಮಕ್ಕಳ ಲಾಲನೆ-ಪಾಲನೆ ಮಾಡುತ್ತಾ ಕೂರಬಾರದು, ಆಕೆ ಬರೆಯಬೇಕು ಬರೆದು ಪ್ರಖ್ಯಾತ ಲೇಖಕಿಯಾಗಬೇಕು, ಎಂಬುದು ನವರತ್ನರಾಂರವರ ಆಸೆ. ದಿವಸಕ್ಕೆ ಒಂದೆರಡು ಪುಟಗಳನ್ನಾದರೂ ಪತ್ನಿ ಬರೆಯಬೇಕೆಂದು ಪ್ರೀತಿ ಪೂರ್ವಕ ಆಗ್ರಹ. ನವರತ್ನರಾಂ ಸ್ವತಃ ಸಾಹಿತಿಯಾಗಿದ್ದು ಅನೇಕ ಕಾದಂಬರಿಗಳನ್ನು 50ಕ್ಕೂ ಹೆಚ್ಚು ಏಕಾಂಕ ನಾಟಕಗಳನ್ನೂ ಬರೆದಿದ್ದಾರೆ. ಎಂ.ಕೆ ಇಂದಿರಾರವರ ಗೆಜ್ಜೆಪೂಜೆ ಕಾದಂಬರಿ ಆಧಾರಿತ ಚಲನಚಿತ್ರಕ್ಕೆ ಸಂಭಾಷಣೆ ಬರೆದು ರಾಜ್ಯ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಉಷಾ ಬರಹಗಾರ್ತಿಯಾಗಿ ಬೆಳೆಯಲು ಇವೆಲ್ಲವೂ ಅಡಿಪಾಯಗಳಾದವು.

ಹೀಗೆ ಬರವಣಿಗೆ ಆರಂಭಿಸಿದ ಉಷಾರವರು ಸಾಹಿತ್ಯದ ಅನೇಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕಾದಂಬರಿಗಳಲ್ಲದೇ ಇತರ ವಿಷಯಗಳ ಬಗ್ಗೆಯೂ ತಮ್ಮ ಲೇಖನಿಯನ್ನು ಹರಿಸಿದ್ದಾರೆ. ಸೌಂದರ್ಯವನ್ನು ಕುರಿತಾದ ಕೃತಿ "ಸೌಂದರ್ಯ ಸಂಕಿರಣ", ಪಾಕಶಾಸ್ತ್ರ ಕುರಿತಾದ ಕೃತಿ "ಸವಿ" ಹಾಗೂ ಪ್ರಾಣಿಗಳ ಕುರಿತಾದ "ನನ್ನ ಮುದ್ದುಮತಿ" ಎಂಬ ಕೃತಿಯನ್ನು ರಚಿಸಿದ್ದಾರೆ. ಸಂಗೀತ, ನೃತ್ಯ, ಕರಕುಶಲಕಲೆ, ಪತ್ರಿಕಾ ಸಂಪಾದನೆ, ಸಮಾಜ

ಸೇವೆ ಮೊದಲಾದುವುಗಳಲ್ಲಿಯೂ ಹೆಚ್ಚಿನ ಆಸಕ್ತಿ ಹೊಂದಿದ್ದರು. ಅಷ್ಟೇ ಅಲ್ಲದೇ ಒಳ್ಳೆಯ ವಾಗ್ಮಿಯೂ ಆಗಿದ್ದ ಉಷಾರವರು ಸಾಹಿತ್ಯ ಸಂಬಂಧಿ ಸಭೆ ಸಮಾರಂಭಗಳಲ್ಲಿ ಉತ್ಸುಕತೆಯಿಂದ ಭಾಗವಹಿಸುತ್ತಿದ್ದರು. ಮಹಿಳಾ ಸೇವಾ ಸಮಾಜದಲ್ಲಿ ಮೂವತ್ತು ವರ್ಷಗಳ ಕಾಲ, ಸೆನ್ಸಾರ್ ಮಂಡಳಿಯಲ್ಲಿ ಎರಡು ವರ್ಷಗಳು ಹಾಗೂ "ಗೆಳತಿ" ಮಾಸ ಪತ್ರಿಕೆಯಲ್ಲಿ ಸಂಪಾದಕಿಯಾಗಿ ಕೆಲವು ವರ್ಷಗಳು ಸೇವೆ ಸಲ್ಲಿಸಿದ್ದಾರೆ. ಸುಮಧುರ ಜೀವನ, ಹೊಸ ಪ್ರಪಂಚದ ಆಳವಾದ ಅನುಭವ, ಚಿಂತನ ಸಾಮರ್ಥ್ಯ, ಸೃಜನಶೀಲತೆ ಈ ಎಲ್ಲವುಗಳ ಸಾರವನ್ನು ಅವರ ಬದುಕು ಮತ್ತು ಬರಹಗಳಲ್ಲಿ ಕಾಣಬಹುದು.

ಉಷಾ ಅವರ ಕಾದಂಬರಿಗಳು ಅರವತ್ತರ-ಎಪ್ಪತ್ತರ ದಶಕದಲ್ಲಿ ಯುವಜನತೆಗೆ ಓದುವ ಹುಚ್ಚು ಹಿಡಿಸಿತ್ತೆಂದರೆ ತಪ್ಪಾಗಲಾರದು. ಆಂಗ್ಲ ಭಾಷೆಯ ಮಿಲ್ಸ್-ಎನ್-ಬೂನ್ ಕಾದಂಬರಿಗಳಂತೆ ಕನ್ನಡದಲ್ಲಿ ಉಷಾರವರ ಕಾದಂಬರಿಗಳು ಯುವಜನತೆಯ ಹೃದಯಕ್ಕೆ ಲಗ್ಗೆ ಹಾಕಿದವು. ಸುಧಾ, ಪ್ರಜಾಮತ, ಮಂಗಳ, ಕರ್ಮವೀರ, ತರಂಗ ಮೊದಲಾದ ವಾರಪತ್ರಿಕೆಗಳಲ್ಲಿ ತುಷಾರ, ಮಲ್ಲಿಗೆ, ವನಿತಾ, ಪ್ರಿಯಾಂಕ, ರಾಗಸಂಗಮ, ಹಂಸರಾಗ ಮೊದಲಾದ ಮಾಸಪತ್ರಿಕೆಗಳಲ್ಲೂ ಅವರ ಕಾದಂಬರಿಗಳು ಧಾರವಾಹಿಯಾಗಿ ಪ್ರಕಟವಾಗುತ್ತಿದ್ದವು.

ಅವರ ಕಾದಂಬರಿ 'ಹೊಂಬಿಸಿಲು' ಅತಿಜನಪ್ರಿಯವಾಯಿತು. ಚಲನಚಿತ್ರವಾಗಿಯೂ ಹೆಚ್ಚು ಜನ ಜನಿತವಾಯಿತು. ವಿಷ್ಣುವರ್ಧನ್-ಆರತಿಯವರ ಅಭಿನಯದ ಚಿತ್ರ ರಸಿಕರ ಮನಸೂರೆಗೊಂಡು ಚಿತ್ರಕಥೆ ಎಲ್ಲರ ಮನದಲ್ಲೂ ಒಳ್ಳೆಯ ಅಭಿಪ್ರಾಯವನ್ನು ಮೂಡಿಸಿತು. ಈ ಕಾದಂಬರಿಯನ್ನು ಉಷಾರವರು ತಾವೇ ಆಂಗ್ಲ ಭಾಷೆಗೆ ಅನುವಾದಿಸಿ "ಸಿಟಿ ಟ್ಯಾಬ್" ಎಂಬ ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟಿಸಿದರು. ಈ ಕಾದಂಬರಿ ಅವರ ಬದುಕಿನಲ್ಲಿ ಹೊಂಬಿಸಿಲನ್ನು ಮೂಡಿಸಿದ್ದರಿಂದ ಅವರ ಮನೆಗೂ "ಹೊಂಬಿಸಿಲು" ಎಂದೇ ಹೆಸರಿಟ್ಟರು.

ಬಂಧನ, ತಾಳೀಪೂಜೆ, ಪ್ರೀತಿಸಿ ನೋಡು ಈ ಚಲನಚಿತ್ರಗಳು ಉಷಾರವರ ಕಾದಂಬರಿಗಳನ್ನು ಆಧರಿಸಿ ನಿರ್ಮಿತವಾದವು. 'ಬಂಧನ' ಚಿತ್ರವಂತೂ ಉಷಾರವರಿಗೆ 'ಅತ್ಯುತ್ತಮ ಚಿತ್ರಕಥೆ' ಪ್ರಶಸ್ತಿಯನ್ನು ತಂದು ಕೊಟ್ಟಿತಲ್ಲದೇ ಚಿತ್ರದ ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಅವರ ಬದುಕಿನಲ್ಲಿ ಮೈಲಿಗಲ್ಲಾಯಿತು. ಈ ಯಶಸ್ಸಿನಿಂದ ರಾಜೇಂದ್ರಸಿಂಗ್ ಬಾಬುರವರು ತಮ್ಮ ಮನೆಗೂ 'ಬಂಧನ'ವೆಂದೇ ಹೆಸರಿಟ್ಟಿದ್ದಾರೆ.

ಉಷಾರವರ ಹೊಸರಾಗ, ಮೂಡಿ ಬಂದ ಬೆಳಕು, ಕರುಣಾಳು ಬಾ ಬೆಳಕೆ, ಬಿರುಕು, ಮುಳ್ಳಿನ ಬೇಲಿ ಈ ಕಾದಂಬರಿಗಳು ಟೆಲಿ ಧಾರಾವಾಹಿಯಾಗಿ ಜನಪ್ರಿಯವಾಗಿವೆ. ಅಲ್ಲದೇ ಸಮರ್ಪಣೆ, ಪ್ರೀತಿಸಿ ನೋಡು, ಬಂಗಾರದ ಜಿಂಕೆ, ಮುಂಗಾರಿನ ಮಿಂಚು ಮೊದಲಾದ ಚಿತ್ರಗಳಿಗೆ ಉಷಾ ನವರತ್ನರಾಂ ಚಿತ್ರಕಥೆ ಮತ್ತು ಸಂಭಾಷಣೆಯನ್ನು ಬರೆದಿದ್ದಾರೆ. ಹೀಗೆ ಜನಪ್ರಿಯತೆಯ ಶಿಖರವನ್ನೇರಿದ ಇವರು ಸುಮಾರು ನೂರಾಎಂಟು ಕಾದಂಬರಿಗಳನ್ನು ಬರೆದಿರುವರೆಂದು ತಿಳಿದುಬರುತ್ತದೆ. ಕೆಲವು ಪ್ರಕಟವಾಗಿಲ್ಲ.

ಮೊದಲೇ ಪ್ರಸ್ತಾಪಿಸಿದಂತೆ ಇವರ ಕಾದಂಬರಿಗಳು ಓದುಗರ ಮನದಾಳದಲ್ಲಿ ನೆಲೆ ನಿಲ್ಲುತ್ತವೆ. ಸನ್ನಿವೇಶ ಮತ್ತು ಪಾತ್ರಗಳಲ್ಲಿ ಓದುಗ ಒಂದಾಗಿ ಹೋಗುವ ಅನುಭವವನ್ನು ಪಡೆಯುತ್ತಾನೆ. ನಿತ್ಯಜೀವನದ ಸನ್ನಿವೇಶಗಳು ಮಾನವ ಸಹಜ ಭಾವನೆಗಳು, ಪರಿಸರ, ಓದುಗರ ಜೀವನಕ್ಕೆ ಅತಿನಿಕಟವಾಗಿರುತ್ತವೆ. ಗಂಡು-ಹೆಣ್ಣಿನ ನಡುವಿನ ಪ್ರೀತ್ಯಾದರ, ಪ್ರೇಮ-ಕಾಮ ಇತ್ಯಾದಿ ಮೌಲ್ಯಗಳಿಗೆ ಕಲ್ಪನೆಯ ಮೆರಗನ್ನು ನೀಡುವುದರಲ್ಲಿ ಉಷಾ ಅವರು ನಿಷ್ಣಾತರು. ಹೀಗಾಗಿ ಅವರು ರಚಿಸಿದ ಹಲವು ಕಾದಂಬರಿಗಳನ್ನು ಚಿತ್ರ ನಿರ್ಮಾಪಕರು ಚಲನಚಿತ್ರ ಮಾಧ್ಯಮದ ಮೂಲಕ ಜನತೆಯತ್ತ ಕೊಂಡೊಯ್ದರು.

ಉಷಾ ನವರತ್ನರಾಂ ಅವರ ಸರಳ ಭಾಷಾಶೈಲಿ, ಓದಿಸಿಕೊಂಡು ಹೋಗುವ ಕಥನ ವೈಖರಿ, ಸಾಮಾಜಿಕ ಪರಿಸರದ ಅಭಿವ್ಯಕ್ತಿ, ಇವು ಹೆಚ್ಚು ಹೆಚ್ಚು ಓದುಗರನ್ನು ಆಕರ್ಷಿಸುತ್ತವೆ. ಬದುಕಿನ ವಿವಿಧ ಮುಖಗಳು, ಕ್ಷೇತ್ರಗಳು, ಸ್ತ್ರೀಯ ಬದುಕಿನ ಸಮಸ್ಯೆಗಳು, ಮಕ್ಕಳ ಶೋಷಣೆ, ಪರಿಸರ ಸಂರಕ್ಷಣೆ ಹೀಗೆ ಹತ್ತು ಹಲವು ಸಾಮಾಜಿಕ ಸಮಸ್ಯೆಗಳನ್ನು ಇವರ ಅನೇಕ ಕಥೆ, ಕಾದಂಬರಿ, ಸಣ್ಣಕತೆ ಮತ್ತು ನೀಳ್ಗತೆಗಳಲ್ಲಿ ವಸ್ತುವಾಗಿಸಿಕೊಂಡಿರುವುದನ್ನು ಕಾಣಬಹುದು.

ಗ್ರಾಮೀಣ ಭಾವನೆಗಳು, ಹಳೆಯ ರಾಜಕೀಯ, ಗ್ರಾಮೀಣ ಬೈಗಳು ಇವೆಲ್ಲವನ್ನೂ ಬಹಳ ಅಚ್ಚುಕಟ್ಟಾಗಿ ಗ್ರಾಮ್ಯ ಭಾಷೆಯಲ್ಲೇ ತಂದಿದ್ದಾರೆ. ಸಹಜವಾಗಿಯೇ ಇಂಥ ಜನಪ್ರಿಯ ಬರಹಗಾರ್ತಿಗೆ ಪ್ರಶಸ್ತಿಗಳ ಮಹಾಪೂರವೇ ಹರಿದು ಸಂಘ ಸಂಸ್ಥೆಗಳ ಮೂಲಕ ಪ್ರಶಸ್ತಿ ರೂಪವಾಗಿ ಮಡಿಲನ್ನು ಸೇರಿದವು. 1975ರಲ್ಲಿ ರಾಯಚೂರಿನ ಕನ್ನಡ ಸಂಘವು ಅತ್ಯುತ್ತಮ ಕನ್ನಡ ಲೇಖಕಿ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಅದೇ ವರ್ಷ ಲಯನ್ಸ್ ಸಂಸ್ಥೆ ಉತ್ತಮ ಅಧ್ಯಾಪಕಿ ಎಂದು ಗೌರವ ಪುರಸ್ಕಾರ ನೀಡಿ ಸನ್ಮಾನ ಮಾಡಿದೆ. 1982-83ರಲ್ಲಿ ಕರ್ನಾಟಕ ಸರ್ಕಾರ ರಾಜ್ಯ ಪ್ರಶಸ್ತಿ ನೀಡಿ ಸನ್ಮಾನಿಸಿತು. 1994ರಲ್ಲಿ ಬೆಂಗಳೂರಿನ ಅತ್ತಿಮಬ್ಬೆ ಪ್ರತಿಷ್ಠಾನವು ಮನುಶ್ರೀ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿಯನ್ನು ಪ್ರಪ್ರಥಮವಾಗಿ ಇವರಿಗೆ ನೀಡಿದೆ. 1995ರಲ್ಲಿ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನವೂ ಪ್ರಶಸ್ತಿಯನ್ನು ಪ್ರದಾನ ಮಾಡಿದೆ. ಇನ್ನೂ ಅನೇಕ ಸಂಘ ಸಂಸ್ಥೆಗಳು ಉಷಾರವರಿಗೆ ಸನ್ಮಾನ ಪುರಸ್ಕಾರಗಳನ್ನು ನೀಡಿ ಆದರಿಸಿವೆ. ಸಾಹಿತ್ಯ ಕ್ಷೇತ್ರದಲ್ಲಿ ಇಷ್ಟೆಲ್ಲಾ ಪ್ರಖ್ಯಾತಿಯನ್ನು ಪಡೆದ ಉಷಾ ನವರತ್ನರಾಂ ಅವರು ಅರವತ್ತೆರಡು ವಸಂತಗಳನ್ನು ಕಂಡರು. ಇನ್ನೂ ಹಲವಾರು ಕನಸುಗಳನ್ನು ನನಸು ಮಾಡಿಕೊಳ್ಳುವ ಮೊದಲೇ ವಿಧಿವಶರಾದರು. ಬದುಕಿನ ಕೊನೆಯ ದಿನಗಳಲ್ಲಿ ಅವರ ಆರೋಗ್ಯ ತುಂಬಾ ಹದಗೆಟ್ಟಿದ್ದು ಹೃದಯ ದೌರ್ಬಲ್ಯ, ಸಿಹಿಮೂತ್ರರೋಗ, ರಕ್ತದೊತ್ತಡಗಳು ಅವರ ಆರೋಗ್ಯವನ್ನು ಕೆಡಿಸಿದ್ದವು. ಈ ಕಾಯಿಲೆಗಳೊಂದಿಗೆ ಸೆಣಸಿಕೊಂಡೇ ಅವರು ಬರೆಯುತ್ತಿದ್ದರು. ಕೊನೆಯ ಘಳಿಗೆಯವರೆಗೂ ಅವರು ಬರವಣಿಗೆಯೊಂದಿಗಿನ ತಮ್ಮ ಸಂಬಂಧವನ್ನು ಕಡಿದುಕೊಂಡಿರಲಿಲ್ಲ. ಆಲೋಚನೆ, ಅಧ್ಯಯನಗಳು ಅವರ ಕಾದಂಬರಿಗಳಿಗೆ ಮೂಲ ಬಂಡವಾಳಗಳಾಗಿದ್ದವು.

1997ರ ಅಕ್ಟೋಬರ್ ಹದಿನೇಳರಂದು ತಮ್ಮ ಪ್ರೀತಿಯ ಬಾಳ ಸಂಗಾತಿಯ ವಿಯೋಗವಾದಾಗ ಉಷಾ ಒಬ್ಬಂಟಿಯಾದರು. ಅಂತರ್ಮುಖಿಯಾದರು. ದುಃಖವನ್ನು ಏಕಾಕಿತನವನ್ನು ಮರೆಯಲು ಅವರಿಗೆ ಬರವಣಿಗೆ ಸಹಾಯ ಮಾಡಿತು. ಅದರಲ್ಲೇ ನೆಮ್ಮದಿ ಕಂಡುಕೊಳ್ಳುತ್ತಿದ್ದರು.

ಉಷಾರವರ ಬಗ್ಗೆ ಅವರ ಪುತ್ರಿ ಡಾ॥ ಆರತಿ ವೆಂಕಟೇಶ್ ಹೇಳುವಂತೆ "ಅಮ್ಮನ ಜ್ಞಾನಾರ್ಜನಾ ಆಸಕ್ತಿಯ ಬಗ್ಗೆ ನನಗೆ ಬಹಳ ಹೆಮ್ಮೆ. ಅವರು ತುಂಬಾ ಓದುತ್ತಿದ್ದರು. ಜ್ಞಾನದ ಪರಿಧಿಯನ್ನು ಸದಾ ವಿಸ್ತರಿಸಿಕೊಳ್ಳಬೇಕು, ತಿಳುವಳಿಕೆ ನಿಂತ ನೀರಾಗಬಾರದು ಎನ್ನುತ್ತಿದ್ದರು." ಆದ್ದರಿಂದಲೇ ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಮಾಡಲು, ಫ್ರೆಂಚ್, ಜರ್ಮನ್ ಭಾಷೆ ಕಲಿಯಲು ಅವರಿಗೆ ಸಾಧ್ಯವಾಯಿತು, ಸಂಗೀತ ನೃತ್ಯದಲ್ಲಿಯೂ ಅವರಿಗೆ ಆಸಕ್ತಿ ಇತ್ತು. ತಮ್ಮ ಬದುಕಿನ ಕೊನೆಗಾಲದವರೆಗೂ ಭಾವಗೀತೆಗಳನ್ನು ಇಷ್ಟಪಡುತ್ತಿದ್ದರು.

ಉಷಾರವರ ಅಧ್ಯಯನಶೀಲತೆಯ ಬಗ್ಗೆ ಹೇಳುತ್ತಾ ವೇಶ್ಯಾವಾಟಿಕೆಯನ್ನು ಕುರಿತ "ಹಗಲುಗನಸು" ಮತ್ತು "ಹೊಟ್ಟೆಗಾಗಿ ಗೇಣುಬಟ್ಟೆಗಾಗಿ" ಕಾದಂಬರಿಗಳ ವಿಷಯ ಸಂಗ್ರಹಕ್ಕಾಗಿ ಮಾಡಿದ ಅಧ್ಯಯನ ಆಶ್ಚರ್ಯ ಉಂಟು ಮಾಡುತ್ತದೆ. ಕಾದಂಬರಿಗೆ ಕಥಾವಸ್ತುವಿನ ಆಯ್ಕೆಯನ್ನು ತುಂಬಾ ಎಚ್ಚರದಿಂದ ಮಾಡಿ ಓದುಗರ ಮನ ಮುಟ್ಟುವಂತೆ ಭಾವನೆಗಳನ್ನು ಬಿಂಬಿಸುತ್ತಾರೆ. ಸದಾ ಅಧ್ಯಯನಶೀಲರಾದ ಇವರಿಗೆ ವೈದ್ಯಕೀಯ ಬರಹಗಳೆಂದರೆ ತುಂಬಾ ಇಷ್ಟ. ಚಿಕ್ಕ ವಯಸ್ಸಿನಲ್ಲಿ ವೈದ್ಯೆಯಾಗುವ ಕನಸು ಕಟ್ಟಿದ್ದೇ ಇದಕ್ಕೆ ಕಾರಣವಿರಬಹುದೇನೋ. ಹಾಗೆಯೇ ತಮ್ಮ ಬರವಣಿಗೆಯಲ್ಲೂ ವೈದ್ಯಕೀಯ ವಿಷಯಕ್ಕೆ ಹೆಚ್ಚು ಒತ್ತನ್ನು ನೀಡಿದ್ದಾರೆ.

ಸಿಡ್ನಿ ಶೆಲ್ಡನ್, ರಾಬಿನ್ ಕುಕ್, ಆರ್ಥರ್ ಹೇಲಿ, ಡಾಫ್ನೆ, ಡುಮಾರಿಯರುಗಳು ಇವರ ಪ್ರಿಯ ಲೇಖಕರಾಗಿದ್ದರು. ಆಂಗ್ಲ ಸಾಹಿತ್ಯ ಉಷಾರಿಗೆ ಬಹಳ ಇಷ್ಟವಾಗಿತ್ತು. ಅವರ ನಡೆನುಡಿ ಬಹಳ ಸರಳ, ನೇರ ವ್ಯಕ್ತಿತ್ವ; ಸ್ವತಂತ್ರ ಅಭಿಪ್ರಾಯ ವ್ಯಕ್ತಪಡಿಸಲು, ನಿರ್ಧಾರ ಕೈಗೊಳ್ಳಲು ಮಕ್ಕಳಿಗೆ ಸದಾ ಉತ್ತೇಜನ ನೀಡುತ್ತಿದ್ದರು. ಹೆಣ್ಣುಮಕ್ಕಳು ಆರ್ಥಿಕವಾಗಿ, ಮಾನಸಿಕವಾಗಿ ಸ್ವಾವಲಂಬಿಗಳಾಗಬೇಕು, ಎಂಥ ಪರಿಸ್ಥಿತಿಯಲ್ಲೂ ಸ್ವಾಭಿಮಾನ ಉಳಿಸಿಕೊಳ್ಳಬೇಕು ಎಂಬುದೇ ಅವರ ನಿಲುವಾಗಿತ್ತು. ಅವರ ಕಾದಂಬರಿಗಳ ನಾಯಕಿಯರ ವ್ಯಕ್ತಿತ್ವದ ಚಿತ್ರಣವೂ ಬಹುತೇಕ ಈ ಅಭಿಪ್ರಾಯವನ್ನೇ ಹೋಲುತ್ತವೆ.

2000ನೇ ಸಾಲಿನ ಅಕ್ಟೋಬರ್ ಒಂದರಂದು ಉಷಾ ಅವರು ನಿಧನರಾದ ಕಾಲಕ್ಕೆ ಆರು ಅಪೂರ್ಣ ಕಾದಂಬರಿಗಳನ್ನು ಬಿಟ್ಟು ಅಗಲಿದರು. ನಿನಗಾಗಿ ಓಡೋಡಿ ಬಂದೆ, ಬೆಳಕಿನೆಡೆಗೆ, ನನ್ನ ಬಾಳ ಪುಟದಲ್ಲಿ, ರಾಗಸಂಗಮ ಇನ್ನೆರಡು ಇನ್ನೂ ಹೆಸರಿಡದ ಕಾದಂಬರಿಗಳು, "ಬೆಳಕಿನೆಡೆಗೆ" "ರಾಗಸಂಗಮ" ಎಂಬ ಕಾದಂಬರಿಗಳನ್ನು ಮಗಳು ಡಾ॥ ಆರತಿ ವೆಂಕಟೇಶ್ ಪೂರ್ಣಗೊಳಿಸಿದ್ದಾರೆ. ಉಷಾರವರ ಕಾರ್ಯಶೀಲತೆ, ಸಾಹಿತ್ಯಾಸಕ್ತಿಗಳು ಅವರ ಕೊನೆಯ ದಿನಗಳಲ್ಲೂ ಕಡಿಮೆಯಾಗಿರಲಿಲ್ಲ ಎಂಬುದಕ್ಕೆ ಅವರ ಅಪೂರ್ಣ ಕಾದಂಬರಿಗಳೇ ಸಾಕ್ಷಿ. ಒಟ್ಟಿನಲ್ಲಿ ಹೇಳುವುದಾದರೆ ಸದಾ ಹಸನ್ಮುಖಿ, ಎಲ್ಲರನ್ನು ಹುರಿದುಂಬಿಸುವ ವ್ಯಕ್ತಿತ್ವ, ಹೃದಯ ಶ್ರೀಮಂತಿಕೆ ಹೊಂದಿದ ಸ್ನೇಹಜೀವಿ ಉಷಾನವರತ್ನರಾಂ, ಜನಪ್ರಿಯತೆ ಮತ್ತು ಸಾಹಿತ್ಯ ಮೌಲ್ಯ ಎರಡನ್ನೂ ಉಳಿಸಿಕೊಂಡ ಕೆಲವೇ ಮಹಿಳಾ ಸಾಹಿತಿಗಳಲ್ಲಿ ಒಬ್ಬರು. ತಮ್ಮ ಕಾದಂಬರಿಯ ಪ್ರಕಟಣೆಗಳ ಜೊತೆಜೊತೆಗೆ ಇತರ ಉದಯೋನ್ಮುಖ ಲೇಖಕಿಯರ ಪುಸ್ತಕಗಳೂ ಪ್ರಕಟವಾಗಬೇಕೆಂಬ ನಿಸ್ವಾರ್ಥ ಮನೋಭಾವ ಈಕೆಯದು. ಅದರಿಂದ ತಾನು "ಗೆಳತಿ" ಪ್ರತಿಕೆಯ ಸಂಪಾದಕಿಯಾಗಿದ್ದಾಗ, ಅನೇಕ ಲೇಖಕಿಯರ ಕಥೆ, ಕಾದಂಬರಿಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದ್ದರು.

ಪ್ರಸಿದ್ಧ ಕಾದಂಬರಿಗಳು : 1. ಒಲವಿನ ಬದುಕು–(1974) 2. ಹ್ಯಾಪಿ ಬರ್ತಡೇ–(1976) 3. ಆಶ್ವಾಸನ–(1976) 4. ಹರಿದ ಹೊನಲು–(1977) 5. ಹೊಸರಾಗ–(1977) 6. ಪ್ರೀತಿಸಿ ನೋಡು–(1978) 7. ನಾನೇ ವೀಣೆ, ನೀನೆ ತಂತಿ–(1979) 8. ಹೃದಯ ಮಿಲನ–(1979) 9. ಎಲ್ಲಾದರೂ ಸುಖವಾಗಿರು–(1980) 10. ಆಂದೋಲನ–(1980) 11. ಹೊಂಬಿಸಿಲು–(1981) 12. ಬಂಧನ–(1981) 13. ಮೂಡಿ ಬಂದ ಬೆಳಕು–(1981) 14. ಹಗಲುಗನಸು–(1981) 15. ಇಲ್ಲೇ ಸ್ವರ್ಗ–(1983) 16. ಮರೆವು–(1983) 17. ಸೌಂದರ್ಯ ಸಂಕಿರಣ–(1983) 18. ಹಕ್ಕಿ ಹಾರುತಿದೆ–(1984) 19. ಹರಸು ಬಾ ನನ್ನನು–(1984) 20. ನಾಳೆಯು ಬರಲಿ–(1985) 21. ಪ್ರಗತಿಯ ಪಥದಲ್ಲಿ–(1985) 22. ಕಂಡು ಕಂಡು ನೀ ಎನ್ನ–(1986) 23. ಕತೆ ಹೇಳುವೆ–(1986) 24. ಕರುಣಾಳು ಬಾ ಬೆಳಕೆ–(1986) 25. ಯೌವ್ವನದ ಹೊನಲಲ್ಲಿ–(1986) 26. ಹೂವನ್ನು ಮುಡಿಯಬೇಕು–(1986) 27. ಆಲಾಪನಾ–(1987) 28. ಆಸರೆ–(1987) 29. ಇರುಳು–ಹಗಲು–(1987) 30. ಕರೆಗಂಟೆ–(1987) 31. ಕೊನೆಯ ರಾತ್ರಿ–(1987) 32. ವಧು ಬೇಕಾಗಿದೆ–(1987) 33. ಸವಿ–(1987) 34. ಅತಿಕ್ರಮಣ–(1988) 35. ನನ್ನ ಮರಿ ಮುದ್ದುಮತಿ–(1988) 36. ಹೊಸಬಾಳಿಗೆ ನೀ ಜೊತೆಯಾದೆ–(1988) 37. ಕಳೆದುಹೋದುದು–(1989) 38. ಕೇಳು ನನ್ನ ಕಥೆಯಾ–(1989) 39. ಭಲೆ ಹುಡುಗಿ–(1990) 40. ಬಾಳೊಂದು ಬಂಧನ–(1990) 41. ಮನೆಯೇ ಬೃಂದಾವನ–(1990) 42. ಸಲಹೆ ಸೂಚನೆ–(1990) 43. ವಿಭಜನೆ–(1990).

—— * ——

ಅನಕ್ಷರಸ್ಥೆ ಅಪೂರ್ವ ಸಸ್ಯವಿಜ್ಞಾನಿ

ಡಾ॥ ಕೆ.ಪಿ.ಮಂಜುಳಾ ರೆಡ್ಡಿ

ಮನುಷ್ಯನ ಆಸೆಯನ್ನು ಪೂರೈಸುವಷ್ಟು ಶಕ್ತಿ ಪ್ರಕೃತಿಗಿದೆ ದುರಾಸೆಯನ್ನಲ್ಲ.

– ಮಹಾತ್ಮಗಾಂಧಿ

ನಾಗರಿಕತೆ ಬೆಳೆದಂತೆ ಮನುಷ್ಯ ಮತ್ತು ನಿಸರ್ಗದ ನಡುವೆ ಇದ್ದ ಹೊಕ್ಕುಳ ಬಳ್ಳಿ ಸಂಬಂಧ ಬದಲಾಗಿದೆ. ಮನುಷ್ಯ ಪ್ರಕೃತಿಯನ್ನು ಸಂಪತ್ತಿನ ಮೂಲ ಎಂದು ಭಾವಿಸಿದ್ದಾನೆ. ಇದರ ಪರಿಣಾಮ ಪ್ರಕೃತಿಯ ಮೇಲೆ ನಿರಂತರ ಅತಿಕ್ರಮಣ ನಡೆದಿದೆ. ಪರಿಸರವನ್ನು ಕಾಪಾಡಬೇಕಾದದ್ದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ನಮ್ಮನ್ನು ಹೊರೆಯುತ್ತಿರುವವಳು ಪ್ರಕೃತಿ, ಅವಳನ್ನು ಕಾಪಾಡಬೇಕಾದದ್ದು ಮನುಷ್ಯನಾದ ನಮ್ಮ ಕರ್ತವ್ಯ ಎಂದು ಪರಿಸರ ಪ್ರಜ್ಞೆ ತುಳಸಿಗೌಡರಿಗಿದೆ.

ಕರ್ನಾಟಕದ ಉತ್ತರ ಕನ್ನಡ ಜಿಲ್ಲೆ ರಾಜ್ಯಕ್ಕೆ ಮಾತ್ರವಲ್ಲದೆ ದೇಶಕ್ಕೆ ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ಅನೇಕ ಕಾಣಿಕೆಗಳನ್ನು ನೀಡಿ ಪ್ರಸಿದ್ಧಿ ಹೊಂದಿದೆ. ಉತ್ತರ ಕನ್ನಡ ಜಿಲ್ಲೆ ಸದಾ ಸುದ್ದಿಯ ಮುಂಚೂಣಿಯಲ್ಲಿರುತ್ತದೆ. ಇಂಥ ಕೀರ್ತಿ ಪಡೆದ ಜಿಲ್ಲೆಯಲ್ಲಿ ಬುಡಕಟ್ಟಿಗೆ ಗೌರವವನ್ನು ತಂದುಕೊಟ್ಟ ಎರಡು ಧ್ರುವತಾರೆಗಳೆಂದರೆ ನಾಡೋಜ ಪ್ರಶಸ್ತಿ ವಿಜೇತೆ ಸುಕ್ರಿ ಬೊಮ್ಮನಗೌಡ ಮತ್ತು ತುಳಸಿ ಬೊಮ್ಮನಗೌಡ. ಇವರಿಬ್ಬರೂ ತಮ್ಮದೇ ಆದ ಕ್ಷೇತ್ರದಲ್ಲಿ ಸಾಧನೆ ಮಾಡಿ ಆಯಾ ಕ್ಷೇತ್ರದಲ್ಲಿ ವಿಶಿಷ್ಟವಾದ ಛಾಪು ಮೂಡಿಸಿದ್ದಾರೆ.

ಯಲ್ಲಾಪುರದ ಬಳಿ ರಾಮನಗುಳಿ ಎಂಬ ಅರಣ್ಯ ಇಲಾಖೆಯ ನರ್ಸರಿಯಲ್ಲಿ ಸಾಮಾನ್ಯ ದಿನಗೂಲಿಯಾಗಿ ಕೆಲಸ ಮಾಡುತ್ತಿದ್ದ ತುಳಸಿಗೌಡ ತನ್ನ ಅಳಿಲು ಸೇವೆಯಿಂದ ತನ್ನ ಹೆಸರನ್ನು ಅನ್ವರ್ಥಗೊಳಿಸಿಕೊಂಡ ಧೀಮಂತ ಚೇತನ.

ಹಾಲಕ್ಕಿ ಬುಡಕಟ್ಟಿಗೆ ಸೇರಿದ ತುಳಸಿಗೌಡರಿಗೆ 10–12ನೇ ವಯಸ್ಸಿಗೆ ಮದುವೆ ಮಾಡಲಾಗಿತ್ತು. ಈ ವಯಸ್ಸಿನಿಂದಲೇ ಅವರಿಗೆ ಗಿಡಮರಗಳನ್ನು ಬೆಳೆಸುವ ಸ್ವ–ಇಚ್ಛೆಯಿತ್ತು. ಹಾಗಾಗಿ ಅನೇಕ ನರ್ಸರಿಗಳಲ್ಲಿ ಕೂಲಿಯಾಳಾಗಿ ಕೆಲಸಕ್ಕೆ ಸೇರಿದರು.

ದೇಹ ಕೃಶವಾಗಿದ್ದರೂ ಕೆಲಸದಲ್ಲಿ ಪಾದರಸ, ಕಾಯಕದಲ್ಲಿ ಸದಾ ತನ್ಮಯ. ಅವರದೇ ಆದ ಪದ್ಧತಿಯನ್ನು ಅನುಸರಿಸಿ ಬೀಜಗಳನ್ನು ತಂದು ಗಿಡ ಮಾಡುವುದು, ಪ್ಲಾಸ್ಟಿಕ್ ಚೀಲಗಳಿಗೆ ಮಣ್ಣು ಗೊಬ್ಬರ ಹಾಕುವುದು, ಸಸಿಗಳಿಗೆ ನೀರು ಹಾಕುವುದು– ಇದೇ ಮಾದರಿಯನ್ನು ಅರಣ್ಯ ಇಲಾಖೆಯವರಿಗೂ ಹಾಕಿಕೊಟ್ಟರು. ಬೇರೆ ಕೂಲಿಯಾಳುಗಳಿಗೂ ಸಲಹೆ ಸೂಚನೆಗಳನ್ನು ಕೊಡುತ್ತಾ ಸದಾ ತಮ್ಮನ್ನು ತಾವು ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಹಿಂದಿನ ದಿನಗಳಲ್ಲಿ ಅವರಿಗೆ ದಿನಗೂಲಿ 75 ಪೈಸೆಯಿಂದ 1 ರೂಪಾಯಿಯವರೆಗೆ ನೀಡುತ್ತಿದ್ದರೂ ಅದರಲ್ಲಿಯೇ ತೃಪ್ತಿ ಕಾಣುತ್ತಿದ್ದ ಜೀವ. ಅತಿ ಚಿಕ್ಕವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡು ಇಬ್ಬರು ಮಕ್ಕಳನ್ನು ಸಾಕುವ

ಜವಾಬ್ದಾರಿ ಜೊತೆಗೆ ಗಿಡಮರಗಳನ್ನು ಬೆಳೆಸುವ ಜವಾಬ್ದಾರಿಯನ್ನು ನಿಷ್ಕಾಮವಾಗಿ ಕೈಗೊಂಡಿದ್ದಾರೆ. ಶಾಂತಸ್ವಭಾವದ ತುಳಸಿಗೌಡ ಬೇರೆ ಯಾರಾದರೂ ಸಸಿಗಳನ್ನು ತುಳಿದು ನುಜ್ಜುಗುಜ್ಜು ಮಾಡಿದರೆ ಕೆರಳಿದ ಕೆಂಡವಾಗಿ ಹಿರಿ-ಕಿರಿಯರೆನ್ನದೆ ಬಯ್ಯುತ್ತಿದ್ದರು. ಅವುಗಳಿಗೆ ನೋವಾದರೆ ತನ್ನ ಮಕ್ಕಳಿಗೆ ನೋವಾದಂತೆ ಸಂಕಟ ಪಡುತ್ತಿದ್ದಳು.

ಇವಳಿಗೆ ಪರಿಸರವೇ ಗುರು. ಇವಳ ಸಸ್ಯಜ್ಞಾನ ಸಂಪತ್ತು ಅಪಾರ, ಅಗಾಧ, ವಿಸ್ಮಯಕಾರಿಯಾದದ್ದು, ಅನಕ್ಷರಸ್ಥಳಾದರೂ ಅನುಭವದಿಂದ ಬೀಟೆ, ಬಿನಾಟ್, ಅತ್ತಿ, ಆಲ, ದಿಂಡಲ, ಹುನಾಲು, ನಂದಿ, ಮತ್ತಿ, ಹೆಬ್ಬಲಸು ಮುಂತಾದ ಮರಗಳನ್ನು ಗುರುತಿಸಿ, ಅವು ಯಾವಾಗ ಹೂ ಬಿಡುತ್ತವೆ, ಅವುಗಳ ಬೀಜ ಯಾವಾಗ ಒಣಗುತ್ತವೆ, ಯಾವ ಮರದ ಬೀಜವನ್ನು ಯಾವ ಋತುವಿನಲ್ಲಿ ಮೊಳಕೆ ಬರಿಸಬೇಕು, ಗೊಬ್ಬರ, ನೀರು ಎಷ್ಟು ಹಾಕಬೇಕು, ಯಾವಾಗ ನಾಟಿ ಮಾಡಿದರೆ ಎಂಬ ಜ್ಞಾನ, ತಿಳುವಳಿಕೆ ಇವಳಿಗೆ ಅಗಾಧವಾಗಿತ್ತು. ಸರ್ಕಾರಿ ಅರಣ್ಯ ಪಾಲಕರಿಗೆ ಇವಳು ಎಷ್ಟೋ ಬಾರಿ ಮಾರ್ಗದರ್ಶನವನ್ನು ಮಾಡಿದ್ದಾಳೆ. ಇಂಗ್ಲಿಷ್ ಗಂಧಗಾಳಿಯಿಲ್ಲದಿದ್ದರೂ ಕೂಡ ಸಸ್ಯಗಳ ಇಂಗ್ಲಿಷ್ ಹೆಸರುಗಳು ಇವಳಿಗೆ ಕರತಲಾಮಲಕ. ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಅವಳು ಇಂಗ್ಲಿಷಿನ ಹೆಸರುಗಳನ್ನು ಹೇಳುತ್ತಾ ಅವುಗಳನ್ನು ಪ್ರಯೋಜನಗಳನ್ನು ತಿಳಿಸಿಕೊಡುತ್ತಾಳೆ. ಉದಾಹರಣೆಗೆ ಅಕೇಶಿ- ಕಟ್ಟಿಗೆ ಸುಡುವುದಕ್ಕೆ ಬರುತ್ತದೆ. ಸುಬಾಬುಲ್ಲು - ದನಕರುಗಳಿಗೆ ಒಳ್ಳೆಯ ಮೇವು - ಕ್ಯಾಲಂದ್ರೆ - ಇದರಿಂದ ಒಳ್ಳೆ ಜೇನು ಮತ್ತು ಉತ್ತಮ ಗೊಬ್ಬರವೂ ಆಗುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಅಂದಿನ ಡಿಎಫ್‌ಓ ಆಗಿದ್ದ ಯಲ್ಲಪ್ಪರೆಡ್ಡಿ ಅವರಿಗೆ ತುಳಸಿಯ ವೃಕ್ಷಜ್ಞಾನ ಅಪಾರ ಬೆರಗನ್ನುಂಟು ಮಾಡುತ್ತಿತ್ತು. ಯಲ್ಲಪ್ಪರೆಡ್ಡಿ ಅವರ ಆತ್ಮಕತೆ 'ಹಸಿರು ಹಾದಿ' ಯನ್ನು ಓದುತ್ತಿದ್ದರೆ ಈ ತುಳಸಿ ಪೂರ್ಣಚಂದ್ರ ತೇಜಸ್ವಿ ಅವರ ಕಾದಂಬರಿಯಲ್ಲಿ ಬರುವ ಅನಕ್ಷರಸ್ಥ, ಹಳ್ಳಿಗಾಡಿನ ಮುಗ್ಧ ಮಂದಣ್ಣನನ್ನು ಹೋಲುತ್ತಾಳೆ. ಕಾದಂಬರಿಯ ವಿಜ್ಞಾನಿ ಕರ್ವಾಲೋಗೆ ಸಾಧಾರಣ ಹಳ್ಳಿಯ ವ್ಯಕ್ತಿ ಮಂದಣ್ಣ, ಹಾರುವ ಓತಿಯ ಅನ್ವೇಷಣೆಯಲ್ಲಿ ನೆರವಾಗುತ್ತಾನೆ. ಅವನ ಪರಿಸರ ಜ್ಞಾನ ಅದ್ಭುತವಾದದ್ದು. ಕರ್ವಾಲೋ ಅನಕ್ಷರಸ್ಥನಾದ ಮಂದಣ್ಣನನ್ನು ಓರ್ವ ಪ್ರಕೃತಿ ಶಾಸ್ತ್ರಜ್ಞ, ಹುಟ್ಟಾ ನಾಚ್ಯುರಲಿಷ್ಟು ಎಂದು ಭಾವಿಸುತ್ತಾರೆ- ಇವನಂತೆ ಸ್ಥಳಜನ್ಯ (indigenous) ಪ್ರತಿಭೆ, ಜ್ಞಾನ, ಶಕ್ತಿಗಳಿಂದ ಕೂಡಿದ ತುಳಸಿಯೂ ಓರ್ವ ಸಸ್ಯವಿಜ್ಞಾನಿ.

ಅತ್ಯಂತ ಚಿಕ್ಕವಯಸ್ಸಿನಿಂದಲೇ ಅರಣ್ಯ ಇಲಾಖೆಯಲ್ಲಿ ಗಿಡ-ಮರಗಳನ್ನು ಬೆಳೆಸುವುದರಲ್ಲಿ ಆಸಕ್ತಿ ಹೊಂದಿದ್ದ ತುಳಸಿ ಅರಣ್ಯ ಇಲಾಖೆಯವರು ಗಿಡಗಳನ್ನು ತಂದು ಬೆಟ್ಟ ಗುಡ್ಡಗಳಲ್ಲಿ ನೆಡುವಾಗ ಅವರ ಜೊತೆ ಕೆಲಸ ಮಾಡುತ್ತಿದ್ದಳು- ಅರಣ್ಯದಲ್ಲಿ ಬಿದ್ದಂಥ ಬೀಜಗಳನ್ನು ಆಯ್ದುಕೊಂಡು ಸಸಿಗಳನ್ನು ಮಾಡಿ ಜನರಿಗೆ ಉಚಿತವಾಗಿ ನೀಡುವಲ್ಲಿ ಅವಳ ಪರಿಸರ ಪ್ರಜ್ಞೆ ಕಾಳಜಿ, ಪ್ರೇಮಗಳನ್ನು ಗುರುತಿಸಬಹುದು.

ಯಲ್ಲಪ್ಪರೆಡ್ಡಿ ಅವರು ಉತ್ತರ ಕನ್ನಡ ಜಿಲ್ಲೆಗೆ ವರ್ಗವಾಗಿ ಬಂದ ಒಂದೇ ವರ್ಷದಲ್ಲಿ, ಅಲ್ಲಿನ ಅರಣ್ಯ ಪ್ರಯೋಗಗಳ ಯಶಸ್ಸನ್ನು ಕಂಡು ಕೇಂದ್ರ ಸರ್ಕಾರ 'ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ' ಪ್ರಶಸ್ತಿಯನ್ನು ನೀಡಲು ನಿರ್ಧರಿಸಿತು. ಈ ಪ್ರಶಸ್ತಿ ಒಬ್ಬ ವ್ಯಕ್ತಿಗೆ ನೀಡುವಂಥದ್ದಲ್ಲ, ಕೆನರಾ ವೃತ್ತಕ್ಕೆ ಸಂಬಂಧಿಸಿದ್ದು, ಕೆನರಾ ವೃತ್ತದಲ್ಲಿದ್ದ ಮತ್ತೊಬ್ಬ ಕನ್ಸರ್ವೆಟರ್ ಅಧಿಕಾರಿ ತನಗೆ ಈ ಪ್ರಶಸ್ತಿ ನೀಡಬೇಕೆಂದು ಮನವಿ ಮಾಡಿಕೊಂಡಿದ್ದರು. ಈ ವಿಷಯದ ಬಗ್ಗೆ ಬೆಂಗಳೂರಿನ ಅರಣ್ಯ ಭವನದಲ್ಲಿ ಚರ್ಚಿಸಲಾಯಿತು. ನಂತರ ಈ ಪ್ರಶಸ್ತಿಗೆ ಕಾರಣಕರ್ತರಾದ ಡಿಎಫ್‌ಓ ಯಲ್ಲಪ್ಪರೆಡ್ಡಿಯವರೇ ಡೆಲ್ಲಿಗೆ ಹೋಗಿ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ವಿ.ಪಿ. ಸಿಂಗ್ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಬೇಕು ಎಂದು ತೀರ್ಮಾನಿಸಿ, ಯಲ್ಲಪ್ಪರಡ್ಡಿ ಅವರಿಗೆ ಈ ವಿಷಯವನ್ನು ತಿಳಿಸಲಾಯಿತು. ಆಗ ಯಲ್ಲಪ್ಪರೆಡ್ಡಿ ಅವರು ಒಂದು ಕ್ಷಣವೂ ಯೋಚಿಸದೆ ತಮಗಿಂತ ಈ ಪ್ರಶಸ್ತಿಯನ್ನು ಸ್ವೀಕರಿಸಲು ಯೋಗ್ಯಳಾದ ತುಳಸಿಯನ್ನು ಕಳುಹಿಸೋಣ ಎಂದರು. ಇದಕ್ಕೆ ಸಮರ್ಥನೆ ಹೀಗಿದೆ. 'ಇಂಥ ಪ್ರಶಸ್ತಿ ಬರಲು ಕಾರಣ ಹಗಲು ರಾತ್ರಿ ಲೆಕ್ಕಿಸದೆ

ಮಳೆ–ಗಾಳಿ ಎನ್ನದೆ ದುಡಿಯುವ ದಿನಗೂಲಿಗಳು. ಅಂಥ ಮುಗ್ಧ ಜನರ ಬೆವರಿನ ಫಲವನ್ನು ತಾನು ಅನುಭವಿಸುವುದು ಸರಿಯಲ್ಲ, ಅದು ಅವರಿಗೆ ಸಲ್ಲಬೇಕು, ಅರಣ್ಯ ಸಂವರ್ಧನೆ ನೀಡುವ ಹಿನ್ನೆಲೆಯಲ್ಲಿ 'ಅರಣ್ಯದ ವೈಜ್ಞಾನಿಕ ನಿರ್ವಹಣೆ' ಎಂದು ಹೆಸರಿನಲ್ಲಿ ಸ್ಥಳೀಯರನ್ನು ದೂರ ಇಟ್ಟು, ಅರಣ್ಯಕ್ಕೆ ಸಂಬಂಧವಿಲ್ಲದ ತರಬೇತಿ ಪಡೆದ ಜನರನ್ನು ಅರಣ್ಯ ರಕ್ಷಣೆ, ಪೋಷಣೆಗೆ ಸೇರಿಸಿಕೊಳ್ಳುತ್ತಾರೆ. ಈಗ ಮತ್ತೆ ಸ್ಥಳೀಯರ ಪರಂಪರಾಗತ ಜ್ಞಾನ, ಅನುಭವ ಗಳಿಸಿಕೊಂಡ ಸ್ಥಳೀಯರಿಂದಲೇ ಅರಣ್ಯ ಅಭಿವೃದ್ಧಿ ಕಾರ್ಯ ಸಾಧ್ಯ ಎಂಬ ನೆಲೆಯಲ್ಲಿ ಸರ್ಕಾರ ಈಗ ಹೆಜ್ಜೆ ಇಡುತ್ತಿದೆ. ಆದ್ದರಿಂದ ತುಳಸಿಯಂಥವರನ್ನು ಪ್ರೋತ್ಸಾಹಿಸಲು, ಅವಳನ್ನೇ ಡೆಲ್ಲಿಗೆ ಕಳುಹಿಸುವುದು ಸೂಕ್ತ. ಜೀವಮಾನದಲ್ಲೇ ರೈಲು ನೋಡಿರದ ಬುಡಕಟ್ಟು ಜನಾಂಗದ ಮಹಿಳೆಯೊಬ್ಬಳು ರೈಲು ಏರಿ ಡೆಲ್ಲಿಗೆ ಹೋಗಿ ಪಂಚತಾರ ಹೋಟೆಲಿನಲ್ಲಿ ತಂಗಿ, ಕಣ್ಣುಕುಕ್ಕುವ ಸಮಾರಂಭದಲ್ಲಿ ಪ್ರಧಾನಿಯವರಿಂದ ಪ್ರಶಸ್ತಿ ಸ್ವೀಕರಿಸುವುದು – ಇವೆಲ್ಲ ಕನಸಿನಲ್ಲಿಯೂ ಕೂಡ ಊಹಿಸಲು ಸಾಧ್ಯವಿಲ್ಲ. ಇಂಥ ಎಲೆಯ ಮರೆಯ ಕಾಯಿಗಳನ್ನು ಬೆಳಕಿಗೆ ತರುವ, ಅವರ ಕಾರ್ಯಗಳಿಗೆ ಮೌಲಿಕತೆಯನ್ನು ತಂದುಕೊಡುವಂಥ ಅಗತ್ಯ ಇಂದು ಹೆಚ್ಚಾಗಿದೆ.

ಶ್ರೀಮತಿ ತುಳಸಿಗೌಡ ಅವರಿಗೆ ಕವಿತಾ ಸ್ಮಾರಕ ಪ್ರಶಸ್ತಿ, ಜನದನಿ ಸಾಂಸ್ಕೃತಿಕ ಮಂಡ್ಯ ಇವರಿಂದ ಪ್ರಶಸ್ತಿ ಹಾಗೂ ಅನೇಕ ಸಂಘ ಸಂಸ್ಥೆಯವರು ಇವರನ್ನು ಗೌರವಿಸಿ ಸನ್ಮಾನಿಸಿದ್ದಾರೆ.

ತಮ್ಮ 70ನೇ ವಯಸ್ಸಿನಲ್ಲೂ ಕೂಡ ಗಿಡಮರಗಳ ಬಗ್ಗೆ ಇದೇ ಪ್ರೀತಿಯನ್ನು ಹೊಂದಿದ್ದಾರೆ. ಇವರಿಗೆ ಇನ್ನು ಅನೇಕ ಸರ್ಕಾರಿ ಸೌಲಭ್ಯ ಗೌರವಗಳು ಲಭ್ಯವಾಗಬೇಕಿತ್ತು. ಪ್ರಶಸ್ತಿಗಳು ಅವಳ ಬದುಕನ್ನು ಮಾರ್ಪಾಡಿಸಿಲ್ಲ ಅದೇ ಬಡತನ, ಅದೇ ಅಸಂಖ್ಯಾ ಮಣಿಗಳ ಸರ, ಬ್ಲೌಸ್ ಇಲ್ಲದ ಸೀರೆ ಧರಿಸಿ ಶ್ರೀಮತಿ ತುಳಸಿಗೌಡ ಬದುಕುತ್ತಿದ್ದಾಳೆ.

——— * ———

ಎಪ್ಪತ್ತಾರನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷೆ ಡಾ. ಗೀತಾ ನಾಗಭೂಷಣ

ವಿಜಯಲಕ್ಷ್ಮಿ ವೈ.ಎಸ್.

ಕಲಬುರ್ಗಿ ಜಿಲ್ಲೆಯ ಸಾವಳಗಿಯಲ್ಲಿ 1942 ಮಾರ್ಚ್ 25ರಂದು ಜನನ. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಬಿ.ಎಡ್. ಪದವಿ. ಕಲಬುರ್ಗಿಯ ನಗರೇಶ್ವರ ಸಂಯುಕ್ತ ಕಿರಿಯ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ವೃತ್ತಿ ಆರಂಭ. ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತಿ. ಸಮಾಜದ ಕೆಳವರ್ಗದಿಂದ ಬಂದ ಗೀತಾ ನಾಗಭೂಷಣ ಅವರು ಆ ವರ್ಗದ ಜನರ ಬಗೆಗೆ ಕಾಳಜಿ ಹೊಂದಿದವರು. ಅವರ ದಾರುಣ ಬದುಕನ್ನು ವಿಶೇಷವಾಗಿ ಆ ವರ್ಗದ ಹೆಣ್ಣಿನ ಮೇಲೆ ನಡೆಯುವ ಶೋಷಣೆಯನ್ನು ಕಣ್ಣಾರೆ ಕಂಡವರು; ಹೀಗಾಗಿ ಅವರ ಮುಗ್ಧತೆ, ದೈನೇಸಿತನ, ಮೂಢನಂಬಿಕೆ ಹಾಗೂ ಅವರ ಶೋಷಣೆಯ ವಿವಿಧ ಮುಖಗಳನ್ನು ತಮ್ಮ ಕೃತಿಗಳಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಲು ಅವರಿಗೆ ಸಾಧ್ಯವಾಯಿತು. ಹೈದರಾಬಾದ್ ಕರ್ನಾಟಕ ಪ್ರದೇಶದ ಲೇಖಕಿಯಾಗಿರುವುದರಿಂದ ಉರ್ದು, ತೆಲುಗು, ಮರಾಠಿ ಮಿಶ್ರವಾದ ಕನ್ನಡವು ಅವರಲ್ಲಿ ಸತ್ವಪೂರ್ಣವಾಗಿ ಕಂಡುಬರುತ್ತದೆ. ಕಲಬುರ್ಗಿ ಜನರ ನಂಬಿಕೆ ಆಚರಣೆಗಳು ಅವರ ಕೃತಿಗಳಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿವೆ. ಅಲ್ಲಿಯ ಭಾಷೆಯ ಸಮರ್ಥ ಬಳಕೆ ಅವರ ಕೃತಿಗಳಿಗೆ ವಿಶೇಷತೆಯನ್ನು ತಂದುಕೊಟ್ಟಿದೆ. ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸುವ ಎದೆಗಾರಿಕೆ ಗೀತಾ ನಾಗಭೂಷಣ ಅವರದು. ಪುರುಷವರ್ಗದ ದಬ್ಬಾಳಿಕೆಯ ಚಿತ್ರಣದ ಜೊತೆಜೊತೆಗೆ ಮಹಿಳೆಯೇ ಮಹಿಳೆಯನ್ನು ಶೋಷಿಸುವ ಬಗೆಗೂ ಅವರ ಬರಹ ಬೆಳಕು ಚೆಲ್ಲುತ್ತದೆ. ಈ ವರೆಗೆ 36 ಕಾದಂಬರಿಗಳು, 15 ನಾಟಕಗಳು, ಹಲವಾರು ಸಣ್ಣಕತೆಗಳು ಪ್ರಕಟವಾಗಿವೆ. 'ಆಘಾತ' ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ, ರಾಜಾರಾಮ್ ದತ್ತಿ ಹಾಗೂ ಬಿ.ಸರೋಜಾದೇವಿ ಸಾಹಿತ್ಯ ಪ್ರಶಸ್ತಿ; 'ಬದುಕು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿ ಚಲನಚಿತ್ರವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಹಲವಾರು ಕತೆಗಳು ದೂರದರ್ಶನ, ಆಕಾಶವಾಣಿಗಳಲ್ಲಿ ಪ್ರಸಾರವಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ 1995ನೆಯ ಸಾಲಿನ ಗೌರವ ಪ್ರಶಸ್ತಿ, ಕರ್ನಾಟಕ ಸರ್ಕಾರದ ದಾನಚಿಂತಾಮಣಿ ಪ್ರಶಸ್ತಿ, ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯತ್ವ, ನಂತರ ಅಧ್ಯಕ್ಷ ಪದವಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರ ಸದಸ್ಯತ್ವ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷೆ ಸ್ಥಾನ – ಇವು ಶ್ರೀಮತಿ ಗೀತಾ ನಾಗಭೂಷಣ ಅವರಿಗೆ ಸಂದ ಪ್ರಶಸ್ತಿ ಪುರಸ್ಕಾರಗಳು. ಇವರ ಹಲವು ಕೃತಿಗಳು ಪಠ್ಯಪುಸ್ತಕವಾಗಿವೆ ಹಾಗೂ ಕೆಲವು ಕೃತಿಗಳು ಮರಾಠಿ, ತೆಲುಗು ಹಾಗೂ ತಮಿಳಿಗೆ ಅನುವಾದವಾಗಿವೆ.

ಗೀತಾ ನಾಗಭೂಷಣ ಅವರು ಕಲಬುರ್ಗಿ ಹಾಗೂ ಅದರ ಸುತ್ತಮುತ್ತಲಿನ ಆಡುನುಡಿಯನ್ನು ಬಳಸಿ, ದಲಿತರ ಹೆಣ್ಣಿನ ನೋವಿಗೆ ದನಿಯಾಗಿ ಪ್ರತಿಭಟನಾತ್ಮಕ ಕಾದಂಬರಿಗಳ ಮೂಲಕ ಕನ್ನಡ ಸಾರಸ್ವತ ಲೋಕದಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿದವರು. ಇಲ್ಲಿಯತನಕ ಬಂದಿರುವ ಅವರ ಕಾದಂಬರಿಗಳನ್ನು ಎರಡು ಭಾಗವಾಗಿ ವಿಂಗಡಿಸಬಹುದಾಗಿದೆ. ಮಹಾಮನೆಯಿಂದ ಹಸಿಮಾಂಸ ಮತ್ತು ಹದ್ದುಗಳವರೆಗಿನ ಕೃತಿಗಳು ಸ್ಥಳೀಯ ಸಮಸ್ಯೆಗಳ

ಕಾದಂಬರಿಗಳಾದರೆ, ಧುಮ್ಮಸದಿಂದ ಬದುಕಿನವರೆಗೆ ಬಂದ ಕೃತಿಗಳು ಲೋಕೋತ್ತರ ವಿಚಾರ ಕಾದಂಬರಿಗಳಾಗಿರುವುವು. ಮೊದಲನೆಯದರಲ್ಲಿ ಊಳಿಗಮಾನ್ಯ ಪದ್ಧತಿಯ ಜನಗಳಾದ ಗೌಡ, ಕುಲಕರ್ಣಿ, ಸಾಹುಕಾರ, ಊರಿನ ಮುಖಂಡ, ಹಣ, ಅಧಿಕಾರ ಹೊಂದಿದ್ದ ಜನಗಳ ದಬ್ಬಾಳಿಕೆ, ದೌರ್ಜನ್ಯ, ಕುತಂತ್ರ, ಆಮಿಷ, ನಾನಾ ನಮೂನೆಯ ಹಿಂಸೆಯಲ್ಲಿ ಕೆಳಸ್ತರದ ಹೆಣ್ಣುಮಕ್ಕಳು ಶೋಷಣೆಗೆ ಒಳಗಾಗುವುದು ಪ್ರಧಾನವಾಗಿ ಕಂಡುಬಂದರೆ, ಎರಡನೆಯದರಲ್ಲಿ ಜೀವನದ ಎಲ್ಲಾ ಸಮಸ್ಯೆಗಳಲ್ಲಿ ಹೆಣ್ಣು ಸಿಕ್ಕು ತೊಳಲಾಡುವುದು ಕಾಣುತ್ತದೆ.

ಗೀತಾ ನಾಗಭೂಷಣ ಅವರು ಕಾದಂಬರಿಗಳಲ್ಲದೇ ಕತೆಗಳನ್ನೂ ಬರೆದಿದ್ದಾರೆ. ನೀಲಗಂಗಾ, ಹಸಿಮಾಂಸ ಮತ್ತು ಹದ್ದುಗಳು, ಮಾಪುರ ತಾಯಿಯ ಮಕ್ಕಳು, ಇತ್ಯಾದಿ ಕಾದಂಬರಿಗಳು ಹೆಚ್ಚೂ ಕಡಿಮೆ ಹೈದರಾಬಾದ್ ಕರ್ನಾಟಕದ ಅದರಲ್ಲೂ ಕಲಬುರ್ಗಿ ಜಿಲ್ಲೆಯ ಆಡುಭಾಷೆಯಲ್ಲೇ ರಚನೆಯಾಗಿರುವುದನ್ನು ನಾವು ಕಾಣುತ್ತೇವೆ. ಜೊತೆಗೆ ಗ್ರಾಂಥಿಕ ಭಾಷೆಯಲ್ಲಿಯೂ ಹೆಚ್ಚಿನ ಬರವಣಿಗೆಯನ್ನು ನೀಡಿದ್ದಾರೆ. ಆದರೆ ಈ ಶಿಷ್ಟ ಭಾಷೆಯಲ್ಲಿ ಕತೆಗಳು ರಚನೆಯಾಗಿರುವುದು ಕಡಿಮೆ. ಕಥಾರಚನೆಯಲ್ಲಿ ಗೀತಾ ನಾಗಭೂಷಣ ಅವರು ಪ್ರಾದೇಶಿಕ ಭಾಷೆಯನ್ನೇ ಹೆಚ್ಚು ಬಳಸಿಕೊಂಡಿರುವುದು ಕಂಡುಬರುತ್ತದೆ.

ಅವರ ಸಂಭಾಷಣೆಗಳು ಮಡಿವಂತ ಓದುಗರಲ್ಲಿ ಮುಜುಗರ ಉಂಟು ಮಾಡಬಹುದು. ಎಂತಹ ಪರಿಸರದಲ್ಲಿ ಯಾವ ವ್ಯಕ್ತಿ ಈ ಮಾತು ಹೇಳುತ್ತಿದ್ದಾನೆ ಅಥವಾ ಹೇಳುತ್ತಿದ್ದಾಳೆ ಅನ್ನುವ ಅರಿವಾದಾಗ ಆ ಮಾತುಗಳು ಸಹಜವೆನ್ನಿಸದಿರದು. ಎಲ್ಲ ಭಾಗಗಳಲ್ಲಿಯೂ ಆಯಾ ಪ್ರಾದೇಶಿಕ ಭಾಷೆಗಳೊಂದಿಗೇ ಆ ಭಾಗದ ನೆರೆಯ ಭಾಷೆಗಳ ಅನೇಕ ಪದಗಳು, ನುಡಿಗಟ್ಟುಗಳು ನಮ್ಮವೇ ಅನ್ನುವಷ್ಟರಮಟ್ಟಿಗೆ ಸಹಜವಾಗಿ ಮೂಡಿವೆ. ಉದಾಹರಣೆಗೆ ಹೈದರಾಬಾದ್ ಕರ್ನಾಟಕ ಪ್ರದೇಶದ ಕನ್ನಡದಲ್ಲಿ ಹಾಸುಹೊಕ್ಕಾಗಿರುವ ಉರ್ದು ಮತ್ತು ಮರಾಠಿ ಪದಗಳು. ಹಿಂದಿ, ಉರ್ದು, ಬೀದರ ಭಾಷೆ ಮಿಶ್ರಿತ ಸಂಭಾಷಣೆ ಅವರ 'ಮೂಡಿ ಬರ್‍ತಾನ ಚಂದ್ರಾಮ ನೋಡ' ಕತೆಯಲ್ಲಿ ಕಂಡುಬರುತ್ತದೆ.

ಈ ಭಾಗದ ಅನ್ಯಭಾಷೆಗಳು ಕೂಡ ನಮ್ಮ ಆಡುಮಾತುಗಳಲ್ಲಿ ಆಳಕ್ಕೆ ಬೇರುಬಿಟ್ಟು ಕನ್ನಡದ ಪದಗಳೇ ಆಗಿ ಹೋಗಿವೆ. ಲಾವಾರಿಸ್, ಬಿಲ್‌ಕುಲ್, ಜಬರದಸ್ತಿ, ಭರೋಸಾ, ದವಾಖಾನಿ, ಲಫಂಗ್ ಮತ್ತು ಇಜ್ಜತ್ ಇತ್ಯಾದಿ ಉರ್ದು ಪದಗಳು ಕನ್ನಡಿಗರಿಗೆ ಹೊಸದಲ್ಲ. ಪ್ರಾದೇಶಿಕ ಭಾಷೆಯ ಸಮರ್ಥ ಬಳಕೆ ಗೀತಾ ನಾಗಭೂಷಣ ಅವರ ಬಹುತೇಕ ಕತೆಗಳಲ್ಲಿ ಕಾಣಬಹುದು. ಗ್ರಾಮೀಣ ಜನರ ಬದುಕಿನೊಂದಿಗೆ ಬೆರೆತಿದ್ದಾರೆ. ಅವರ ಬದುಕು–ಬವಣೆ, ನೋವು–ನಲಿವು, ಆಚಾರ–ವಿಚಾರ, ಪ್ರೀತಿ–ಆದರ, ಸ್ನೇಹ–ಕಲಹ ಎಲ್ಲವನ್ನೂ ತಮ್ಮ ವಸ್ತುವಾಗಿಸಿದ್ದಾರೆ. ನೊಂದವರಿಗೆ ಸಾಂತ್ವನ ಹೇಳಿದ್ದಾರೆ. ತುಳಿತಕ್ಕೊಳಗಾದವರ ದನಿಯಾಗಿದ್ದಾರೆ. ಹೀಗಾಗಿಯೇ ಅವರು ಬಂಡಾಯ ಧೋರಣೆಯ ಅನೇಕ ಕತೆಗಳನ್ನು ಬರೆಯಲು ಸಾಧ್ಯವಾಯಿತು.

ಶ್ರೀಮತಿ ಗೀತಾ ಅವರ 'ಮುಂಡಿ ಪೂಜಾರಿಯಾದಾಗ' ಕತೆಯಲ್ಲಿ ಹಳ್ಳಿಯ ಒಬ್ಬ ದಲಿತ ಯುವಕ ಯಾವುದೇ ಆಡಂಬರ ಇಲ್ಲದೆ ಸಹಜವಾಗಿ ತನ್ನ ಆಡುಭಾಷೆಯಲ್ಲೇ ಮಾತಾಡುತ್ತಾನೆ. ಬಂಡಾಯ ಈ ಕತೆಯಲ್ಲೂ ಕಂಡುಬರುತ್ತದೆ. ತಮ್ಮ ಅನೇಕ ಕತೆಗಳಲ್ಲಿ ಪ್ರಾದೇಶಿಕ ಭಾಷೆಯ ಹಸಿಹಸಿ ಬೈಗುಳನ್ನು ಪಾತ್ರಗಳ ಮುಖಾಂತರ ಹೇಳಿಸುತ್ತಾರೆ. 'ಈ ಲೋಕವೆಲ್ಲ ಘೋರ' ಕತೆಯಲ್ಲಿ ಈ ಬೈಗುಳಗಳ ಚೆಂದದೊಂದಿಗೇ ಹಳ್ಳಿಯ ಬಡವನ ಬದುಕಿನ ಚಿತ್ರಣವನ್ನು ಸೊಗಸಾಗಿ ಹಿಡಿದಿಡುತ್ತಾರೆ. ಹೀಗೆ ಗೀತಾ ನಾಗಭೂಷಣ ಅವರು ದುರಂತ, ವಾಸ್ತವ, ಚಕ್ಕರಕಟ್ಟಾ ಚೌಕ, ಐಬು, ಮಾನಾಪಮಾನ ನಿಮ್ಮದಯ್ಯ ಮತ್ತು ಗೂಡಿನೊಳಗಿನ ಗುಟ್ಟು –ಮೊದಲಾದ ಅನೇಕ ಕತೆಗಳಲ್ಲೂ ಕಲಬುರ್ಗಿ ಜಿಲ್ಲೆಯ ಪ್ರಾದೇಶಿಕ ಭಾಷೆಯ ಬಳಕೆ ಆಗಿರುವುದು ಕಂಡುಬರುತ್ತದೆ.

ಗೀತಾ ನಾಗಭೂಷಣ ಅವರು ಬರೆದ ಪ್ರಾರಂಭಿಕ ಕಾದಂಬರಿಗಳು ಮಧ್ಯಮ ದರ್ಜೆಯ ಶೋಕಿಲಾಲರ ವೈಭವಪೂರಿತ ಬದುಕಿಗೆ ಮೀಸಲಾಗುಳಿದು ಜನಪ್ರಿಯ ಲೇಖಕಿಯರ ಜಾಡನ್ನೇ ಹಿಡಿದು ಹಸಿಹಸಿ ಪ್ರೇಮ,

ಪ್ರಣಯ, ಕಾಮ ಇವುಗಳ ಸುತ್ತಲೇ ಸುತ್ತು ಹೊಡೆಯುತ್ತವೆ. ಇಂತಹ ಕಾದಂಬರಿಗಳನ್ನು ಹೊರತುಪಡಿಸಿ ಸಾಮಾಜಿಕ ವೈಪರಿತ್ಯ, ದಲಿತ ಸ್ತ್ರೀಯರ ಸಂಘರ್ಷ, ಕೊಳಗೇರಿಯ ಹೆಣ್ಣುಗಳ ಸಂಕೀರ್ಣಾನುಭವಗಳ ಕುರಿತು ಬರೆದ ಕಾದಂಬರಿಗಳು ಹೆಚ್ಚು ಗಮನ ಸೆಳೆಯುತ್ತವೆ. ಹಸಿಮಾಂಸ ಮತ್ತು ಹದ್ದುಗಳು, ಮಾಪುರ ತಾಯಿಯ ಮಕ್ಕಳು, ಧುಮ್ಮಸ್ಸು, ದಂಗೆ, ಆಸರೆ, ನೀಲಗಂಗಾ, ಇತ್ತೀಚಿನ ಬದುಕು ಹಾಗೂ ಕಾಗೆ ಮುಟ್ಟಿತು ಮುಂತಾದ ಕಾದಂಬರಿಗಳು ಮಹಿಳಾ ಸಂವೇದನೆಯ ಅಧ್ಯಯನಕ್ಕೆ ಒಳಪಡಿಸಬಹುದಾದ ಕೃತಿಗಳಾಗಿವೆ.

ಜನಪರ ಕಾಳಜಿ ಮತ್ತು ಸಾಮಾಜಿಕ ಪರಿವರ್ತನೆಯ ಧ್ಯೇಯವನ್ನು ಹೊತ್ತುಕೊಂಡ ಇವರ ಕೃತಿಗಳು ಉಳಿದವರಿಗಿಂತ ತುಸು ಭಿನ್ನವಾಗಿರುವುದರಿಂದ ಮುಖ್ಯವೆನಿಸುತ್ತವೆ. ಗೀತಾ ನಾಗಭೂಷಣ ಅವರು ತಮ್ಮ ಕಾದಂಬರಿಗಳಿಗೆ ವಸ್ತುವಾಗಿ ಸ್ತ್ರೀಪರ ಕಾಳಜಿಗಳನ್ನು ಕೇಂದ್ರವಾಗಿಸಿಕೊಂಡಿದ್ದು, ಅದರಲ್ಲೂ ದಲಿತ ಮಹಿಳೆಯರ 'ನೆಗ್ಲಿಮುಳ್ಳಿ'ನಂತಹ ಅಪರಿಚಿತ ಆಯಾಮಗಳನ್ನು ಅವರದೇ ಭಾಷೆಯಲ್ಲಿ ಹಿಡಿದಿಡುವ ಸಾಹಸಕ್ಕೆ ಇಳಿದರು. ಶೋಷಣೆಯ ಹಲವು ಮುಖಗಳನ್ನು, ಅವರ ಒಳತೋಟಿಗಳನ್ನು ವಿಭಿನ್ನ ಸಂದರ್ಭ ಮತ್ತು ನೆಲೆಯಲ್ಲಿಟ್ಟು ಕೆದಕುವ ಪ್ರಯತ್ನ ಮಾಡುತ್ತಾರೆ. 'ಮಾಪುರ ತಾಯಿ ಮಕ್ಕಳು' ಕಾದಂಬರಿಯು ಮೊದಲ ಬಾರಿಗೆ ಈ ಭಾಗದ ಜೋಗತಿ ಸಂಪ್ರದಾಯವನ್ನು ಯಥಾವತ್ತಾಗಿ ಚಿತ್ರಿಸಿದ ಕೃತಿ.

ಹೊಲೆಯರ ಚಂದಪ್ಪನ ಮಗಳು ಸಿಂಗಾರಿ ಸೋದರ ಮಾವನ ಮಗ ಶಿವರುದ್ರನನ್ನು ಪ್ರೀತಿಸಿದರೂ ಜೋಗತಿ ಸಂಪ್ರದಾಯದ ಮೌಢ್ಯಕ್ಕೆ ಬಲಿಯಾಗಿ ಬಲವಂತವಾಗಿ ಸೂಳೆಗಾರಿಕೆಗೆ ಇಳಿಸಲ್ಪಟ್ಟದ್ದೇ ಈ ಕಾದಂಬರಿಯ ವಸ್ತು. ಶತಮಾನಗಳುದ್ದಕ್ಕೂ ನಡೆದು ಬಂದ ಲೈಂಗಿಕ ದಬ್ಬಾಳಿಕೆಯನ್ನು ಧ್ವನಿಸುವ ಕಾದಂಬರಿ 'ಜೋಗತಿ' ಸಂಪ್ರದಾಯದ ವಿಭಿನ್ನ ಮಗ್ಗಲುಗಳ ಮೇಲೆ ಬೆಳಕು ಚೆಲ್ಲುವಲ್ಲಿ ಯಶಸ್ವಿಯಾಗುತ್ತದೆ.

'ಹಸಿ ಮಾಂಸ ಮತ್ತು ಹದ್ದುಗಳು' ಕೃತಿಯ ಕಥಾವಸ್ತು ತೀರ ತೆಳುವಾದದ್ದು. ಔಪಚಾರಿಕ ನೆಲೆಯಲ್ಲಿ ಸಾಗುವಂತಹದ್ದು ಎಂದೆನಿಸಿದರೂ ಹೊಲೆ-ಮಾದಿಗ ಸ್ತ್ರೀಯರ ಬದುಕಿನ ನಗ್ನ ಸತ್ಯಗಳು ಕಾಣಿಸಿಕೊಂಡಿದ್ದೇ ಹೆಚ್ಚುಗಾರಿಕೆ ಎನ್ನುವಂತಾಗುತ್ತದೆ. ಹೆಣ್ತನದ ಮೇಲೆರಗುವ ಕ್ರೌರ್ಯವೇ ಈ ಕಾದಂಬರಿಯ ತಿರುಳು. ಮಹಿಳಾ ಶೋಷಣೆಯ ಎಲ್ಲ ಮುಖಗಳು ಅನಾವರಣಗೊಳ್ಳಲಿ ಎಂಬ ಕಾಳಜಿ ಪ್ರಮುಖವಾಗುವುದರಿಂದಲೇ ಹೆಚ್ಚು ಕಡಿಮೆ ಇದೇ ವಸ್ತುವನ್ನೆತ್ತಿಕೊಂಡು 'ಧುಮ್ಮಸು' ಕಾದಂಬರಿ ಹುಟ್ಟಿಕೊಂಡಿರಬಹುದು.

ಶಹರದಲ್ಲಿಯ ಝೋಪಡಪಟ್ಟಿಯ ನರಕ ಸದೃಶ ಬದುಕನ್ನು ಇರುವ ಸ್ಥಿತಿಯಲ್ಲಿಯೇ ಬಟಾಬಯಲು ಗೊಳಿಸುತ್ತಲೇ ಅಂತಹ ಪ್ರದೇಶದಲ್ಲಿರುವ ಹೆಣ್ಣುಗಳ ಅಸಹಾಯಕ ಸ್ಥಿತಿಗೆ ಅಕ್ಷರದ ದನಿಯಾಗುವ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. 'ಧುಮ್ಮಸು' ಕಾದಂಬರಿಯ ಮುನ್ನುಡಿಯಲ್ಲಿ ಬರೆದ ಈ ಮಾತುಗಳು ಮೇಲಿನ ಹೇಳಿಕೆಗೆ ಸಾಕ್ಷಿಯಾಗಿದೆ. 'ಮನಸ್ಸಿಗೆ ಕಿರಿಕಿರಿಯೆನಿಸಿ ನಾನು ಬೇಜ್ಯಾರಾದಾಗ ಆಗಾಗ ನನ್ನ ಹಳ್ಳಿಗೋ ಇದೇ ಶಹರದಲ್ಲಿನ ಝೋಪಡಪಟ್ಟಿಗೋ ಭೇಟಿ ಕೊಟ್ಟು ಅಲ್ಲಿಯ ಮಂದಿಯೊಂದಿಗೆ ಮಾತಾಡಿ ಬರುವುದು. ನನಗೆ ಹತ್ತಿಕೊಂಡ ಚಟ. ಹೀಗೊಮ್ಮೆ ಹೋದಾಗ ಗುಡಿಸಲೊಂದರಲ್ಲಿ ಹರೆಯ ಹೊಳ್ಳಿ ನಿಂತ ಹೆಂಗಸೊಬ್ಬಳು ಸೆರಗು ಬಾಯಿಗೊತ್ತಿಕೊಂಡು ಅಳು ನುಂಗುತ್ತ ಕುಂತಿದ್ದಳು. ಮಾತಾಡಿಸಿದರೆ ತುಟಿ ಬಿಚ್ಚಲಿಲ್ಲ. ಅಂದು ನಾನು ಆಡಿಸಿದ ಮಾತಿಗೆ ಮೂಕಿಯಾಗಿದ್ದ ಆ ಹೆಂಗಸು ನನಗೆ ಈಟುದ್ದದ ಕಾದಂಬರಿ ಬರೆಯಲು ಹಚ್ಚಿದ್ದು ಮಾತ್ರ ನನಗೂ ತಿಳಿಯದ ಒಗಟು'. ಲೇಖಕಿಯ ಈ ಒಗಟೇ ಮಹಿಳಾ ಸಂವೇದನೆಯ ಹಲವು ಕಾದಂಬರಿಗಳಿಗೆ ಪ್ರೇರಣೆಯಾಗಿದೆ.

ಗೀತಾ ಅವರು ದಲಿತ ಮಹಿಳೆಯ ಅಸಹಾಯಕತೆಯನ್ನು ಎಷ್ಟು ಢಾಳಾಗಿ ಚಿತ್ರಿಸಬಲ್ಲರೋ, ಅವರಲ್ಲಿ ಅಂತರ್ಗತವಾಗಿರುವ ಶಕ್ತಿ-ಸಾಮರ್ಥ್ಯಗಳನ್ನು ಹಿಡಿದಿಡಬಲ್ಲರು ಎಂಬುವಕ್ಕೆ 1997ರಲ್ಲಿ ಪ್ರಕಟವಾದ ಅವರ 'ದಂಗೆ' ಕಾದಂಬರಿ ಸಾಕ್ಷಿಯಾಗಿದೆ. ದಲಿತ ಮಹಿಳೆಯೊಬ್ಬಳು ಅನೂಚಾನವಾಗಿ ನಡೆದುಬಂದ ಜಮೀನ್ದಾರೀ ವ್ಯವಸ್ಥೆಯ

ಲೈಂಗಿಕ ದೌರ್ಜನ್ಯದ ವಿರುದ್ಧ ದಂಗೆ ಏಳುವುದೇ ಈ ಕಾದಂಬರಿಯ ವಸ್ತು. ಹೆಣ್ತನದ ನವಿರಾದ ಭಾವಗಳು ಜಮೀನ್ದಾರೀ ವ್ಯವಸ್ಥೆಯ ಗಂಡಸರ ಒರಟು ಕೈಗಳಲ್ಲಿ ನಲುಗಿ ಹೋದಾಗ ಬಂಡೇಳಬೇಕಾದ ಅನಿವಾರ್ಯತೆಯನ್ನು ಲೇಖಕಿ ಇಲ್ಲಿ ಅನಾವರಣಗೊಳಿಸುತ್ತಾರೆ.

ಗೀತಾ ನಾಗಭೂಷಣರ ಕಾದಂಬರಿಗಳಲ್ಲಿ 'ಬದುಕು' ಶಿಖರಪ್ರಾಯವಾಗಿದೆ. ಇಲ್ಲಿಯ ಬಹುತೇಕ ವ್ಯಕ್ತಿಗಳಲ್ಲಿ ತಳಮಳ, ಕಳವಳ, ಕೋಲಾಹಲ, ಹೊಯ್ದಾಟ, ತೂಗುಯ್ಯಾಲೆಗಳಿಂದ ಮನಸ್ಸಿನ ಪ್ರಬುದ್ಧತೆ ಕಂಡುಬರುವುದು. ಈ ಕಾದಂಬರಿಯಲ್ಲಿ ಜನಪದದ ನುಡಿಗಟ್ಟು, ವಾಕ್ಯ, ಗಾದೆ, ಒಗಟು, ಹಾಡು ಉರ್ದು ಭಾಷೆಯ ಪದಪುಂಜಗಳು ಬಳಸುವುದರ ಮೂಲಕ ಕಾದಂಬರಿಯ ಸತ್ವ, ಶಕ್ತಿ, ಸೊಬಗು ಹೆಚ್ಚಾಗಿದೆ. ಈ ಜನರ ಬದುಕಿನ ಬಹಳಷ್ಟು ಮಗ್ಗಲುಗಳನ್ನು ಎಳೆಎಳೆಯಾಗಿ ತೆರೆದಿಡಲಾಗಿದೆ. ಅವರೇ ಹೇಳುವಂತೆ ನನ್ನ ಮತ್ತು ನನ್ನಂಥವರು ಹುಟ್ಟಿಬೆಳೆದ ಅನುಭವಿಸಿದ ಬದುಕಿನ ಹಲವು ಹದಿನೆಂಟು ಮುಖವಾಡಗಳನ್ನು ಕಿತ್ತೆಸೆದು ಅವುಗಳ ಹಿಂದಿರುವ ಮೇಕಪ್ಪಿಲ್ಲದ ಮಾರಿಗಳಿಗೆ ಭೂತಕನ್ನಡಿ ಹಿಡಿಯುವ ಸಾಚಾ ಕಳಕಳಿಯ ಪ್ರಾಮಾಣಿಕ ಪ್ರಯತ್ನವೇ ಈ ಕಾದಂಬರಿ. ಹೀಗಾಗಿ ಬದುಕು ಕಾದಂಬರಿ ಮಾನವ ಬದುಕಿನ ಕನ್ನಡಿ. ಒಂದು ಊರಿನ ಕೆಳಗೇರಿಯ ಕೆಳವರ್ಗದ ಜನರ ಕತೆ–ವ್ಯಥೆ. ಬದುಕು ಸಂಪೂರ್ಣ ಸ್ತ್ರೀಕೇಂದ್ರಿತ ಕೃತಿಯಾದರೂ ಗಂಡು ಪಾತ್ರಗಳು ವ್ಯವಸ್ಥೆಗೆ ಹೊಂದಿಕೊಂಡು ಹೋದರೂ ಅಲ್ಲಲ್ಲಿ ಮಲ್ಲಪ್ಪ, ಕಲ್ಯಾಣಿ, ಮುಕುಡಪ್ಪ ವ್ಯವಸ್ಥೆಯ ವಿರುದ್ಧ ಸ್ವರ ಎತ್ತಿದರೂ ಸ್ತ್ರೀಯರಂತೆ ಗಟ್ಟಿಯಾಗಿ ದಲಿತ ಬಂಡಾಯದ ಚಳವಳಿಯ ಹೋರಾಟದ ದನಿ ಎತ್ತುವುದು ತೀರ ಕಡಿಮೆ. ಮೇಲ್ವರ್ಗಗಳ ಹಿಂಸೆಗೆ, ಕ್ರೌರ್ಯಕ್ಕೆ, ಶೋಷಣೆಗೆ ಬಲಿಯಾಗುವ ಹೆಣ್ಣುಮಕ್ಕಳಲ್ಲಿ ನೀಲವ್ವ, ತುಳಜವ್ವ, ಬೆಳ್ಳಿಯರ ಪ್ರತಿಭಟನೆ ನಮ್ಮ ಮೇಲೆ ಹೆಚ್ಚು ಪ್ರಭಾವ ಬೀರುವುದು.

ಇಡೀ ಕಾದಂಬರಿಯಲ್ಲಿ ನೀಲವ್ವ, ತುಳಜವ್ವ ಬೆಳ್ಳಿಯರು ದಲಿತ ಬಂಡಾಯ ಚಳವಳಿಯ ಹೋರಾಟಗಾರ್ತಿಯರಾಗಿದ್ದಾರೆ. ಸಣ್ಣದಾಗಿ ಪ್ರತಿಭಟಿಸಿದ ಪೆಟ್ಟಿಗಿಂತ ಆತ್ಮಹತ್ಯೆ ಮಾಡಿಕೊಂಡು ನೀಡುವ ಮೌನಕ್ರಾಂತಿಯ ಪೆಟ್ಟು ಅಗಾಧವಾಗಿರುವುದು. ತಂದೆಗೆ ಬಹಿಷ್ಕಾರ ಹಾಕಿದ್ದು ಧಿಕ್ಕರಿಸಿ ತಾಯ್ತಂದೆಗಳ ಜೊತೆಗೆ ಗಂಡ ಮತ್ತೆ ತನ್ನ ಕೂಸಿನ ಜೊತೆಗೆ ಊರು ಬಿಟ್ಟು ಹೋಗುವ ತುಳಜವ್ವನ ಪರಿಣಾಮವು ನೂರಕ್ಕೆ ನೂರಿರುವುದು. ಕೆಳವರ್ಗದ ಹೆಣ್ಣು ಮಕ್ಕಳ ಹಸಿಮಾಂಸಕ್ಕಾಗಿ ಹಾದಿ ಕಾಯುವ ಮೇಲ್ವರ್ಗದ ಗಂಡುಗಳನ್ನು ಧಿಕ್ಕರಿಸಿ ಅವರೆದುರಿಗೆ ಗಂಡುಗಚ್ಚೆ ಹಾಕಿಕೊಂಡು ಹದಿನಾಲ್ಕು ವರುಷ ಗಂಡ ಕಲಬುರ್ಗಿ ಜೈಲಿನಲ್ಲಿದ್ದಾಗಲೂ ಅಂಜದೆ ಅಳುಕದೆ ಧೈರ್ಯವಾಗಿ ಗರತಿ ಗಂಗಮ್ಮನಾಗಿ ಬಾಳುವೆ ಮಾಡುವ ಬೆಳ್ಳಿಯ ಪ್ರಭಾವವು ಕಡಿಮೆಯದ್ದಲ್ಲ.

'ಬದುಕು' ಕೃತಿ ಒಂದು ಜನಾಂಗದ ಅನೌಪಚಾರಿಕ ಜೀವನ ವಿಧಾನಗಳನ್ನು ಹೊರಗೆಡಹುತ್ತದೆ. ದಲಿತ ಕೇರಿ ಮಂದಿಯ ಶ್ರದ್ಧೆ, ನಂಬಿಕೆ, ಕೆಚ್ಚು, ಸ್ಥೈರ್ಯಗಳನ್ನು ಹಿಡಿದಿಡುತ್ತಲೆ ಚಾರಿತ್ರಿಕ ಸಂಘರ್ಷಗಳೊಂದಿಗೆ ತಳಕು ಹಾಕಿಕೊಳ್ಳುತ್ತದೆ. ಮೂಢನಂಬಿಕೆಗಳನ್ನು ಅಭಿವ್ಯಕ್ತಿಸುತ್ತಲೇ ಅವುಗಳನ್ನು ವೈಚಾರಿಕ ಒರೆಗೆ ಹಚ್ಚುವ ಪ್ರಕ್ರಿಯೆಯೂ ಕಂಡುಬರುತ್ತದೆ. ಕಾಶಿಬಾಯಿ, ಬೆಳ್ಳಿ ಇಬ್ಬರು ದಲಿತ ಸ್ತ್ರೀಯರ ಬದುಕಿನ ಸುತ್ತ ಹೆಣೆದ ಈ ಕಾದಂಬರಿ ಮುಖ್ಯವಾಗಿ ಒಂದು ಸಾಂಸ್ಕೃತಿಕ ಹುಡುಕಾಟವಾಗಿ, ನಿರ್ದಿಷ್ಟ ಪ್ರದೇಶವೊಂದರ, ನಿರ್ದಿಷ್ಟ ಜನಾಂಗದ ಚಿತ್ರಣವಾಗುತ್ತಲೆ ಇಡೀ ದಲಿತ ಲೋಕಕ್ಕೆ ಸಂವಾದಿಯಾಗುತ್ತದೆ. ಅದೇ ಹೊತ್ತಿಗೆ ಸ್ತ್ರೀಯ ಬದುಕಿನ ಸಂಘರ್ಷವಾಗಿಯೂ ಗಮನ ಸೆಳೆಯುತ್ತದೆ.

'ಬದುಕು' ಕಾದಂಬರಿಯ ಬೆಳ್ಳಿ ಎಂಥ ಕಠಿಣ ಪರಿಸ್ಥಿತಿಯಲ್ಲೂ ಧೃತಿಗೆಡದೆ, ಎಲ್ಲರ ಕಾಕದೃಷ್ಟಿಯನ್ನು ಮೆಟ್ಟಿನಿಂತು ಆಶ್ಚರ್ಯವನ್ನು ಹುಟ್ಟಿಸುತ್ತಾರೆ. ಆದರೆ ಕಾದಂಬರಿಯ ಜೋಗಿಣಿ ತುಳಸಾ, ಜಡಸಂಸ್ಕೃತಿಯನ್ನು ತಿರಸ್ಕರಿಸಿ ತನ್ನ ಆಯ್ಕೆಯ ಬದುಕನ್ನು ಒಪ್ಪಿಕೊಳ್ಳುತ್ತಾಳೆ. ಗಂಡನನ್ನು ಬಿಟ್ಟು ಪ್ರೀತಿಸಿದ ಲಿಂಗರಾಜನೊಡನೆ ಓಡಿಹೋದ ಕಾಶಮ್ಮನಂಥವರೂ ಇಲ್ಲಿ ಕಾಣುತ್ತಾರೆ. ಹೀಗೆ ಗೀತಾ ನಾಗಭೂಷಣ ಅವರ ಪರಿಕಲ್ಪನೆಯಲ್ಲಿ ವಿವಿಧ ಸ್ತರದ, ವಿವಿಧ ಮನೋಧರ್ಮದ ಪಾತ್ರಗಳು ತೀರ ಸಹಜವೆನ್ನುವಂತೆ ಆಕಾರ ಪಡೆದಿವೆ.

'ಬದುಕು' ಹಾಗೂ 'ಕಾಗೆ ಮುಟ್ಟಿತು' ಎರಡೂ ಕಾದಂಬರಿಗಳಲ್ಲಿ ಕಾಣುವುದು 'ಶಿವಳ್ಳಿ' ಮತ್ತು ಅದರ ಸುತ್ತಮುತ್ತಣ ಪರಿಸರ. ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಮಗ್ಗಲುಗಳೂ ಇಲ್ಲಿ ಚಾಚಿಕೊಂಡಿವೆ. ಗ್ರಾಮೀಣರ ಹಬ್ಬ-ಹರಿದಿನಗಳ ಆಚರಣೆ, ಅಂಧಶ್ರದ್ಧೆ, ನಂಬಿಕೆ, ಹುಟ್ಟು-ಸಾವು-ಸಂಸ್ಕಾರದ ಸಂದರ್ಭಗಳು, ಪಂಚರ ನ್ಯಾಯದಾನ ಪದ್ಧತಿ ಇವೆಲ್ಲವುಗಳ ನೈಜ ಚಿತ್ರಣ ಗಮನ ಸೆಳೆಯುತ್ತದೆ. 'ಸೆರಗು', 'ಬೇಲಿ ಇಲ್ಲದ ಹೊಲಾ', 'ಹಾದಿ ಬಾಜು ಹಬ್ಬಿದ ಸಮತಿ ಬಳ್ಳಿ' ಗ್ರಾಮೀಣರ ಇಂತಹ ಜೀವನಾನುಭವಗಳೇ ದೃಷ್ಟಾಂತ, ರೂಪಕ, ಸಂಕೇತಗಳಾಗಿ ಆಡುಮಾತಿನ ಸೊಗಡನ್ನು ಹೆಚ್ಚಿಸಿವೆ.

ಗೀತಾ ನಾಗಭೂಷಣರ 'ಬದುಕು' ಕಾದಂಬರಿ ಪುಟಗಳನ್ನು ತೆರೆದು ಒಮ್ಮೆ ಒಳಹೊಕ್ಕರೆ ಸಾಕು, ಬದುಕಿನ ಅಗಾಧವಾದ ವಾಸ್ತವಿಕ ವಿವರಗಳಲ್ಲಿ ಮುಳುಗಿಬಿಡುತ್ತೇವೆ. ಓದಿ ಕೆಳಗಿಟ್ಟ ನಂತರವೂ ದಿನಗಟ್ಟಲೇ ಆ ಪ್ರಪಂಚದ ನೋವು, ಯಾತನೆ, ಕಷ್ಟಕಾರ್ಪಣ್ಯಗಳೆಲ್ಲ ಗುಂಗಾಗಿ ಕಾಡುತ್ತವೆ. ಈ ಕಲೆಗಾರಿಕೆ, ತನ್ಮಯತೆಯನ್ನುಂಟುಮಾಡುವ ಗುಣ ಕೃತಿ ಸಾಧಿಸಿರುವ ಅಪೂರ್ವ ಯಶಸ್ಸಿನ ಪ್ರಮುಖ ಅಂಶ.

ಕನ್ನಡ ಕಾದಂಬರಿ ಪರಂಪರೆಯ ಪ್ರಾದೇಶಿಕ ಮಹಾಕಾದಂಬರಿಗಳ ಸಾಲಿನಲ್ಲಿ ಪ್ರಸ್ತುತ ಕೃತಿ ನಿಲ್ಲುತ್ತದೆ. ಈ ಕೃತಿಯಲ್ಲಿ ಹೈದರಾಬಾದ್ ಕರ್ನಾಟಕದ, ವಿಶೇಷವಾಗಿ ಕಲ್ಬುರ್ಗಿ ಜಿಲ್ಲೆಯ ಸುತ್ತಮುತ್ತಲಿನ ಜನ ಬದುಕು, ಅದರಲ್ಲೂ ಕೆಳವರ್ಗದ ದಲಿತರ ಬದುಕು ಅತ್ಯಂತ ವಾಸ್ತವಿಕ ನೆಲೆಯಲ್ಲಿ ಚಿತ್ರಣಗೊಂಡಿದೆ. ತಮ್ಮ ಹಿಂದಿನ ಕಾದಂಬರಿಗಳಲ್ಲಿ ಇಂತ ಬದುಕಿನ ಬೇರೆ ಬೇರೆ ಮುಖಗಳಿಗೆ ಕನ್ನಡಿ ಹಿಡಿದಿದ್ದ ಲೇಖಕಿ ಇಲ್ಲಿ ಆ ಬದುಕಿನ ಒಂದು ಇಡಿಯಾದ ಸಮಗ್ರ ದರ್ಶನಕ್ಕೆ ಪ್ರಯತ್ನಿಸಿದ್ದಾರೆ. ಕಥೆಯ ಮುಖ್ಯ ಎಳೆ ಮಲ್ಲಪ್ಪ ಜಮಾದಾರನ ಕುಟುಂಬದ ಕಥೆ-ವ್ಯಥೆ. ಆದರೆ ಈ ಎಳೆಗೆ ಸಂಬಂಧಿಸಿದಂತೆಯೇ ದಲಿತ ಬದುಕಿನ ಇತರ ಆಯಾಮಗಳೂ ಅನಾವರಣಗೊಳ್ಳುತ್ತಾ ಹೋಗುತ್ತವೆ.

ಕಥೆ ಆಗಾಗ ಕಲ್ಬುರ್ಗಿ ನಗರಕ್ಕೂ ಎಡತಾಕುವುದರಿಂದ ನಗರದ ದಲಿತ ಬದುಕಿನ ಚಿತ್ರಣವೂ ಸೇರಿಕೊಳ್ಳುತ್ತದೆ. ಕಥಾವಸ್ತುವಿನ ಮಹತ್ವ ಹೆಚ್ಚುವುದು ಅದರ ದೇಸೀತನದಿಂದ. ಒಂದು ಇಡೀ ಸಂಸ್ಕೃತಿಯ ವ್ಯವಸ್ಥೆಯ ಅಂಗವಾಗಿ ಮನುಷ್ಯ ಬದುಕು ಅನಾವರಣಗೊಳ್ಳುತ್ತ ಹೋಗುತ್ತದೆ. ಈ ನೆಲೆಯಲ್ಲಿ ಕಾದಂಬರಿಯಲ್ಲಿ ವರ್ಣಿತವಾಗುವ ಕಾರಹುಣ್ಣಿಮೆಯ ಕರಿ ಹರಿಯುವ ಸಂಪ್ರದಾಯ, ಹೋಳೀ ಹುಣ್ಣಿಮೆಯ ಆಚರಣೆ, ಮೊಹರಂ ಹಬ್ಬದ ಆಚರಣೆ, ಕುಣಿತ, ಖತಲ್ ಸಾಹೇಬ ಪೀರ ಮತ್ತು ನಿಂಬಾಜಿ ಪೀರರು, ಅವರ ಮೆರವಣಿಗೆ ಇವೆಲ್ಲ ಮಹತ್ವ ಪಡೆದುಕೊಳ್ಳುತ್ತವೆ. ಈ ವರ್ಣನೆಗಳು ಕೇವಲ ವರ್ಣನೆಗಾಗಿ ಮಾತ್ರವಲ್ಲದೆ, ಕಥೆಯ ಮುಂದಿನ ದುರಂತದ ಮುನ್ಸೂಚನೆಯೂ ಆಗಿಬಿಡುತ್ತವೆ.

'ಬದುಕು' ಕಾದಂಬರಿಯ ಪ್ರಮುಖ ವೈಶಿಷ್ಟ್ಯವೆಂದರೆ, ಅದರ ಸರಳ ನೇರ ನಿರೂಪಣಾ ಶೈಲಿ. ಅತ್ಯಂತ ವಿಶಾಲವಾದ ಕಥಾಭಿತ್ತಿಯನ್ನು ಹೆಣೆಯುವಲ್ಲಿ ಯಾವ ಆಡಂಬರವಿಲ್ಲ, ಕಲಾತ್ಮಕ, ಸಾಂಕೇತಿಕ, ಧ್ವನಿಪೂರ್ಣ ತಾಂತ್ರಿಕತೆಯ ಪ್ರಯತ್ನಗಳಿಲ್ಲ. ನೇರವಾಗಿ ದಲಿತ ಬದುಕಿನ ವಿವರಗಳನ್ನು ಗೀತಾ ನಾಗಭೂಷಣ ಅವರು ನೀಡುತ್ತಾ ಹೋಗುತ್ತಾರೆ. 'ವರ್ಣವ್ಯವಸ್ಥೆಯ ಉಸಿರು ಕಟ್ಟಿಸುವ ಕೇರಿ ಒಳಗೇರಿಗಳಿಂದ ಬಂದ ಲೇಖಕಿ ಪ್ರಜ್ಞೆಗೆ ತನ್ನೆಲ್ಲ ಅನುಭವ ವೈಚಿತ್ರ್ಯಗಳನ್ನು ಬಿಚ್ಚಿಡುವುದಕ್ಕೆ ಕಾದಂಬರಿ ಸಮರ್ಥ ಮಾಧ್ಯಮ. ಪ್ರತಿಮೆ ಸಂಕೇತ ರೂಪಕ ಇತ್ಯಾದಿ ಅಲಂಕಾರಗಳಿಗಿಂತ ನೇರವಾಗಿ ವಿವರಣಾತ್ಮಕವಾಗಿ ಮಾನವ ಮನಸ್ಸು ಮತ್ತು ಸಾಮಾಜಿಕ ಬದುಕಿನ ಒಳ-ಹೊರಗನ್ನು ಸಮರ್ಥವಾಗಿ ಸೆರೆಹಿಡಿಯಬಲ್ಲ ಭಿತ್ತಿ ಶಕ್ತಿ ಈ ಪ್ರಕಾರಕ್ಕಿದೆ'. ಈ ವಿಮರ್ಶೆಯ ಮಾತುಗಳು 'ಬದುಕು' ಕಾದಂಬರಿಗೆ ಅಕ್ಷರಶಃ ಅನ್ವಯಿಸುತ್ತದೆ.

ಗೀತಾ ನಾಗಭೂಷಣ ಅವರ ಕಲಾಸೃಷ್ಟಿಯ ಸಾಮರ್ಥ್ಯ ಸಣ್ಣದೇನಲ್ಲ. ಅವರ ಕಾದಂಬರಿಗಳುದ್ದಕ್ಕೂ ಹರಡಿಕೊಂಡಿರುವ ದಲಿತ ಸಂವೇದನೆ ಮತ್ತು ಸಾಂಸ್ಕೃತಿಕ ವಿವರಣೆಗಳು ತಾಜಾತನದಿಂದ ಕೂಡಿದ ಪ್ರಕೃತಿ ವರ್ಣನೆಗಳಲ್ಲಿ ಈ ಮಣ್ಣಿನ ಭಾಷಿಕ ಶಕ್ತಿಯನ್ನು ದುಡಿಸಿಕೊಂಡಿರುವುದು ಅಪರೂಪದ ಸಂಗತಿ. 'ಕಾಗೆ ಮುಟ್ಟಿತು' ಕಾದಂಬರಿಯಲ್ಲಿ 'ಇದು ನನ್ನ ಅನುಭವಗಳಿಗೆ ತನ್ನದೇ ಆದ ಹೊಸ ಆಯಾಮವೊಂದನ್ನು ಕೊಟ್ಟು ರೂಪತಳೆದು ನಿಂತಿದೆ' ಎಂದು ಹೇಳಿಕೊಂಡಿದ್ದಾರೆ.

ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶ ಹೈದರಾಬಾದ್ ಕರ್ನಾಟಕದವರಾದ ಗೀತಾ ನಾಗಭೂಷಣ, ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯನ್ನು ಅರ್ಥಮಾಡಿಕೊಂಡು ದಲಿತ, ಗ್ರಾಮೀಣ ಬದುಕಿನ ವಿವಿಧ ಸ್ತರಗಳನ್ನು ವಾಸ್ತವವಾಗಿ ದಾಖಲಿಸುವ ಅಪರೂಪದ ಲೇಖಕಿ. ವೃತ್ತಿಯಲ್ಲಿ ಅಧ್ಯಾಪಿಕೆಯಾಗಿ ವಿವಿಧ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

'ನಾನು ಕಂಡುಂಡ ಅನುಭವಗಳ ಅಡಿಪಾಯದ ಮೇಲೆಯೆ ಕತೆಯ ಕಟ್ಟುವ ಕಳಕಳಿಯ ಕಾಯಕ ನನ್ನದು. ಇದು ನನ್ನ ಅನುಭವಗಳಿಗೆ ತನ್ನದೆ ಆದ ಹೊಸ ಆಯಾಮವನ್ನು ಕೊಟ್ಟು ರೂಪು ತಳೆದು ನಿಂತಿದೆ' ಎಂದು 'ಕಾಗೆ ಮುಟ್ಟಿತು' ಕಾದಂಬರಿಯ ಆರಂಭದಲ್ಲಿ ಲೇಖಕಿ ಹೇಳಿಕೊಂಡಿದ್ದಾರೆ. ಹೀಗಾಗಿ ಆ ಕಾದಂಬರಿ ಕಟ್ಟು ಕಥೆಯಲ್ಲ, ವಾಸ್ತವಿಕ ಸತ್ಯವಾಗಿದೆ. ಸಾವಿರಾರು ವರ್ಷಗಳಿಂದ ಆರ್ಥಿಕ ಗುಲಾಮಗಿರಿಯೊಂದಿಗೆ ಸಾಂಸ್ಕೃತಿಕವಾಗಿಯೂ ಗುಲಾಮಗಿರಿಯಲ್ಲಿಯೇ ಉಳಿದ ದಲಿತ ಜನಾಂಗದ ನೋವಿನ ನೆಲೆಗಳನ್ನು, ಲಿಂಗಭೇದದ ಸಾಮಾಜಿಕ ಅಸಮಾನತೆಯ ವಿವಿಧ ರೂಪಗಳನ್ನು ಗುರುತಿಸಿರುವ, ಊಳಿಗಮಾನ್ಯ ಜಮೀನುದಾರಿಕೆಯ ಕ್ರೌರ್ಯಗಳಿಂದ ಶೋಷಣೆಗೊಳಪಡುವ ಮಹಿಳೆಯರ ಸಂವೇದನೆಗಳನ್ನು ದಾಖಲಿಸಿರುವ ವಿಶಿಷ್ಟ ಕಾದಂಬರಿಯಾಗಿ ಈ ಕೃತಿ ಗಮನಾರ್ಹವೆನಿಸುತ್ತದೆ. ದುಡಿಯುವ ಅಸಂಘಟಿತ ಜನ ಕೇವಲ ದೈಹಿಕವಾಗಿ ಮಾತ್ರವಲ್ಲ' ಅವರ ಬದುಕು. ಆಸ್ತಿ, ಮಡದಿ, ಮಕ್ಕಳು, ಅವರ ಸಂಸ್ಕೃತಿ, ಅವರ ತಿಪ್ಪೆಯ ಗೊಬ್ಬರ – ಇವೆಲ್ಲ ಒಟ್ಟಂದದಲ್ಲಿ ಬಂಡವಾಳಶಾಹಿಗಳ ಸೊತ್ತಾಗುತ್ತದೆ. ಕೆಳಸ್ತರದ ಪುರುಷರು ಶ್ರಮದ ನೆಲೆಯಲ್ಲಿ ಶೋಷಣೆಗೊಳಗಾದರೆ. ಸ್ತ್ರೀಯರು ಶ್ರಮ ಹಾಗೂ ಲೈಂಗಿಕ ನೆಲೆಯಲ್ಲಿ ಸ್ವಜಾತಿ ಪುರುಷರಿಂದ ಮಾನಸಿಕ ನೆಲೆಯಲ್ಲಿ ಶೋಷಿತರಾಗುತ್ತಾರೆ ಎಂಬ ಕಟು ಸತ್ಯವನ್ನು ಪ್ರಸ್ತುತ ಕಾದಂಬರಿ ಅನಾವರಣಗೊಳಿಸುತ್ತದೆ.

'ಕಾಗೆ ಮುಟ್ಟಿತು' ಇಡೀ ಕಾದಂಬರಿಯ ಆಶಯವನ್ನು ಸಂಕೇತಿಸುವ ಔಚಿತ್ಯಪೂರ್ಣ ಶಿರೋನಾಮೆ. ನಾಲ್ಕು ಬಾರಿ ಇಲ್ಲಿ ಕಾಗೆಯ ಪ್ರಸ್ತಾಪ ಬರುತ್ತದೆ. ಎರಡು ಬಾರಿ ಮನುಷ್ಯರನ್ನು–ಬಲವಂತವಾಗಿ ಸೋನಿಯ ಮೇಲೆ ಅತ್ಯಾಚಾರವೆಸಗಿದ ಗೌಡನ ನೆತ್ತಿಯನ್ನು, ಬಾಳ್ಯಾನೊಂದಿಗೆ ಸಂಬಂಧ ಬೆಳೆಸಿದ ಗಂಗಮ್ಮನ ಭುಜವನ್ನು ತಟ್ಟಿ ಮುಂಬರುವ ದುರಂತವನ್ನು ಸೂಚಿಸುವ ಅಪಶಕುನವಾಗುತ್ತದೆ. ಇನ್ನೆರಡು ಬಾರಿ – ಬಾಳ್ಯಾನ ಪಿಂಡದ ಕೂಳನ್ನು, ಉಗ್ರಪ್ಪಗೌಡನ ಪಿಂಡದ ಕೂಳನ್ನು– ಮುಟ್ಟಿ ಸತ್ಯವನ್ನು ಬಯಲುಗೊಳಿಸುತ್ತದೆ.

ಶಿವಳ್ಳಿಯ ಉಗ್ರಪ್ಪಗೌಡ, ಆತನ ಎರಡನೆಯ ಹೆಂಡತಿ ಗಂಗಮ್ಮ, ಕಿಲಾರಿಯ ಭೂಕಂಪದಲ್ಲಿ ನಿರ್ಗತಿಕನಾಗಿ ಬಂದು ಗೌಡನಲ್ಲಿ ಜೀತದಾಳಾಗಿ ನೆಲೆ ನಿಲ್ಲುವ ಬಾಳ್ಯಾ, ಆತನ ಹೆಂಡತಿ ಸೋನಿ–ಈ ನಾಲ್ಕು ಪ್ರಮುಖ ಪಾತ್ರಗಳ ನೆಲೆಗಟ್ಟಿನ ಮೇಲೆ ಕಾದಂಬರಿಯ ಕಥಾವಸ್ತು ಬೆಳೆಯುತ್ತದೆ. ಇದಕ್ಕೆ ಪೂರಕವಾಗುವಂತೆ ಸಾಂದರ್ಭಿಕವಾಗಿ ಬರುವ ಮಾದರ ಮೂಕ್ಯಾ, ಚೆನ್ನಿ ಹಾಗೂ ಕುಕ್ಕಣ್ಣಿಯರ ಪ್ರಸಂಗ ದಲಿತ ಮಹಿಳೆಯರ ಬದುಕಿನ ಸಂಕೀರ್ಣ ಸ್ವರೂಪವನ್ನು, ಪುರುಷ ಶೋಷಣೆಯ ಇನ್ನೊಂದು ಮುಖವನ್ನು ಸೂಕ್ಷ್ಮವಾಗಿ ಹೊರಗಡಹುತ್ತದೆ.

ದಲಿತ ಜನಾಂಗದ ಬದುಕು ಬವಣೆಗಳನ್ನು ಹತ್ತಿರದಿಂದ ಕಂಡ, ಅನುಭವಿಸಿದ ಗೀತಾ ನಾಗಭೂಷಣ ಅವರು ಅಲ್ಲಿನ ಸಮಾಜ ಜೀವನದ ಅನೇಕ ಅಪರಿಚಿತ ಮಜಲುಗಳನ್ನು ಗಮನಿಸಿದ್ದಾರೆ. ಪ್ರಭುತ್ವದಡಿ ನಲುಗಿ

ಹೋಗುವ ಹೆಣ್ಣುಗಳ ಒಳದನಿಯನ್ನು ಪರಿಣಾಮಕಾರಿಯಾಗಿ ಗುರುತಿಸಿದ್ದಾರೆ. ಅವರ ಕಾದಂಬರಿಗಳಲ್ಲಿನ ಶೋಷಿತ ಮಹಿಳೆಯರು ಕೆಲವೊಮ್ಮೆ ನೇರವಾಗಿ ಪ್ರತಿಭಟನೆಗಿಳಿಯುತ್ತಾರೆ. ಆದರೆ ಅನ್ಯಾಯವನ್ನು ಮೆಟ್ಟಿ ನಿಲ್ಲುವ, ಬಂಡೇಳುವ, ಸಂಘರ್ಷಕ್ಕೆ ತೊಡಗುವ ಸಾಮುದಾಯಿಕ ಬೆಂಬಲವಿಲ್ಲದೆ ಆ ಪ್ರತಿಭಟನೆ ವ್ಯಕ್ತಿಗತ ನೆಲೆಯಲ್ಲಿಯೆ ಪರ್ಯವಸಾನಗೊಳ್ಳುವುದು; ಸಮಾಜದ ಕ್ರೂರ ವ್ಯಂಗ್ಯ. ಅವರ 'ಹಸಿಮಾಂಸ ಹಾಗೂ ಹದ್ದುಗಳು' ಕಾದಂಬರಿಯ ಲಚ್ಚಿ, ಮುಂದೊಮ್ಮೆ ಹದ್ದಾಗಬಹುದಾದ ಹೆತ್ತ ಗಂಡು ಮಗುವನ್ನೆ ಕೊಂದು ಪುರುಷದ್ವೇಷಿಯಾಗಿ ಕಂಡರೆ, ಪ್ರಸ್ತುತ ಕಾದಂಬರಿಯ ಸೋನಿ, 'ಮಟಗ್ಯಾಗಿನ ಮಾತು ಮುಟಗ್ಯಾಗಿದ್ದರೇ ಛಂದ, ಮುಟಗಿ ಬಿಚ್ಚಿದರ ಅದರ ಮಜಾನೇ ಹೋಗ್ತದ' ಎಂದು ಭಾವಿಸಿ ದ್ವೇಷದ, ಸಾವಿನ ಆಯ್ಕೆಗಿಂತ ಪರಿಸ್ಥಿತಿಯನ್ನು ಎದುರಿಸುವ, ಸಂಘರ್ಷದ, ದುಡಿಮೆಯ ಬದುಕನ್ನು ಒಪ್ಪಿಕೊಂಡ ಛಲದ ಪಾತ್ರವಾಗಿ ಕಾಣಿಸುತ್ತಾಳೆ.

ಮಹಿಳಾ ಸಂವೇದನೆಯುಳ್ಳ ಲೇಖಕಿ ಗೀತಾ ನಾಗಭೂಷಣ ಅವರು 'ಹಾಡಿ ಹಾಡಿ ನನ್ನ ದನಿ ಕುಂತು ಹೋಗ್ಯಾದ, ನನ್ನ ಗೆಳತಿ ಹೆಂಗಸರ ಗೋಳು ತಪ್ಪಿಲ್ಲ, ಆದ್ದರಿಂದ ಹೊಸ ಬರಹಗಾರರಲ್ಲಿ ಮಹಿಳಾ ಸಂವೇದನೆಗೆ ಸ್ಪಂದಿಸುವ ಹೃದಯವಂತಿಕೆ ಕಾಣಿಸಿಕೊಂಡು ಅವರು ಸಾಮಾಜಿಕ ನ್ಯಾಯವನ್ನು ಮೂಲಧಾತುವಾಗಿ ಮಾಡಿಕೊಳ್ಳಬೇಕು ಎಂಬ ಕರೆಯನ್ನು ನೀಡಿದ್ದಾರೆ. ಸದಾ ಸಾಮಾಜಿಕ ಕ್ರೌರ್ಯಗಳತ್ತ; ಮುಖವಾಡಗಳ ಹಿಂದಿನ ಪಶುತ್ವದತ್ತ ಸಿಡಿದೇಳುವ ಅದನ್ನು ಬಟಾಬಯಲಿಗೆಳೆಯುವ ನಾಡೋಜ ಗೀತಾ ನಾಗಭೂಷಣ ಅವರು ಸಾಮಾಜಿಕ ಕಳಕಳಿಯುಳ್ಳ ಶ್ರೇಷ್ಠ ವೈಚಾರಿಕ ಕಾದಂಬರಿಕಾರರಲ್ಲಿ ಒಬ್ಬರಾಗಿದ್ದಾರೆ.

ಅತ್ಯುತ್ತಮ ಬರಹಗಾರ್ತಿಯಾದ ಇವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಲ್ಲಬೇಕಾದುದು ನ್ಯಾಯವೇ. ಇವರ "ಬದುಕು" ಕಾದಂಬರಿಗೆ 2004ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ; ಸರ್ಕಾರದ ಅತ್ಯುನ್ನತ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ; ಹಂಪಿಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ; ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟೋರೇಟ್ ಪುರಸ್ಕಾರ; ಮರಾಠಿಯ ಶ್ರೇಷ್ಠ ಪ್ರಶಸ್ತಿ ಎನಿಸಿರುವ ಮಾಣಿಕ್ಯಬಾಯಿ ಪಟೇಲ್ ಪ್ರಶಸ್ತಿಗಳು ಇವರಿಗೆ ಸಂದಿರುವುದು ಹೆಮ್ಮೆಯ ಸಂಗತಿ. ಇಷ್ಟೇ ಅಲ್ಲದೆ, ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮೊದಲ ಮಹಿಳಾ ಅಧ್ಯಕ್ಷೆಯಾಗಿದ್ದು ಹಾಗೂ ಗದಗ್‌ನಲ್ಲಿ ಫೆಬ್ರವರಿ 2010ರಲ್ಲಿ ನಡೆದ 76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷೆಯಾಗಿ ನೇಮಕಗೊಂಡದ್ದು ವಿಶೇಷ ಗೌರವದ ಸಂಗತಿಗಳು. ಇವೆಲ್ಲ ಶೋಷಿತ ವರ್ಗದ ಒಬ್ಬ ಮಹಿಳೆ ತನ್ನ ಪ್ರತಿಭೆಯ ಮೂಲಕ ಮಾಡಿದ ಅಸಾಧ್ಯ ಸಾಧನೆಗಳು.

———— * ————

ಸವ್ಯಸಾಚಿ ಬಿ.ಟಿ. ಲಲಿತಾ ನಾಯಕ

ಡಾ. ಗೀತಾ ಶೆಣೈ

ಬಹುಮುಖಿ ಸಂಸ್ಕೃತಿಯ ಪರಿಸರದಲ್ಲಿ ನಿರ್ದಿಷ್ಟತೆಯನ್ನು ಕಾಪಾಡಿಕೊಂಡು ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಯ ಅನನ್ಯತೆಯನ್ನು ಸಾಧಿಸುವುದು ಒಂದು ಗುಂಪಿಗಾಗಲಿ ವ್ಯಕ್ತಿಗಳಿಗಾಗಲಿ ಕಷ್ಟಸಾಧ್ಯದ ಕೆಲಸವಾಗಿದೆ. ಬಾಹ್ಯ ಆಕರ್ಷಣೆಗಳು, ಆಂತರಿಕ ಒತ್ತಡಗಳು ತಮ್ಮದೆ ಆದ ರೀತಿಯಿಂದ ಕಾರ್ಯಪ್ರವೃತ್ತವಾಗಿ ಅಡ್ಡಿರೂಪಗಳಾಗಿ ಕಾಣಿಸಿಕೊಳ್ಳುವುದು ಸರ್ವೇಸಾಮಾನ್ಯ. ಆಶೋತ್ತರಗಳು, ಗುರಿಸಾಧನೆಗಳು ವ್ಯಕ್ತಿ ಬದುಕಿನಲ್ಲಿ ಮರೀಚಿಕೆಯಾಗಿ ಗೋಚರಿಸುವುದು ಇದೇ ಹಿನ್ನೆಲೆಯಲ್ಲಿ. ಈ ಎಲ್ಲಾ ಆತಂಕಗಳನ್ನು ಮೀರಿ ಓರ್ವ ವ್ಯಕ್ತಿ ತನ್ನ ಬದುಕಿನ ಗುರಿಯನ್ನು ಸಾಧಿಸಿದ್ದು ನಿಜವಾದರೆ, ಅದಕ್ಕೆ ಆ ವ್ಯಕ್ತಿಯಲ್ಲಿರುವ ದೃಢಸಂಕಲ್ಪ ಮತ್ತು ಸಾಧನೆಗಳು ಮುಖ್ಯವಾಗುತ್ತವೆ.

ವೈಯಕ್ತಿಕ ಬದುಕು

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಅಲೆಮಾರಿ ಬುಡಕಟ್ಟು ಲಂಬಾಣಿಗಳ ತಂಗ್ಲಿ ತಾಂಡ್ಯಕ್ಕೆ ಸೇರಿದ ಲಲಿತಾ ನಾಯಕ ಹುಟ್ಟಿದ್ದು 1945ನೇ ಇಸವಿ, ಏಪ್ರಿಲ್ ನಾಲ್ಕರಂದು. ಇವರ ತಂದೆ ಬಾಲಾಜಿ ನಾಯಕ. ತಾಯಿ ಗಂಗೂಬಾಯಿ. ಪತಿ ಚಂಡ್ಲಾನಾಯಕ. ತಾಂಡ್ಯದ ಮುಖ್ಯಸ್ಥರಾಗಿದ್ದ ತಂದೆಯ ಪ್ರಗತಿಪರ ವಿಚಾರಗಳಿಂದ ಮತ್ತು ಹೆತ್ತತಾಯಿಯ ಶಿಕ್ಷಣ ಕಾಳಜಿಯಿಂದ ಬಾಲ್ಯದಲ್ಲಿ ಉತ್ತಮ ಅವಕಾಶಗಳನ್ನು ಪಡೆದ ಲಲಿತಾನಾಯಕ್ ತಮ್ಮ ತಾತನ ನಾಟಕ ಪ್ರೇಮದಿಂದ ಪ್ರಭಾವಿತರಾಗಿ ಎಳೆಯ ವಯಸ್ಸಿನಲ್ಲಿಯೇ ನಾಟಕ ರಚನೆಯಲ್ಲಿ ಆಸಕ್ತಿ ಹೊಂದಿದವರು. ವಿವಾಹದ ನಂತರ ಹೊಸ ಪರಿಸರದಲ್ಲಿ ಸರಕಾರಿ ನೌಕರರಾಗಿದ್ದ ಪತಿಯ ಪ್ರೋತ್ಸಾಹ ಹಾಗೂ, ಶಾಂತರಸ, ಚಂಪಾ, ಸಿದ್ಧಯ್ಯ ಪುರಾಣಿಕ, ಚೆನ್ನಣ್ಣ ವಾಲೀಕರ ಮೊದಲಾದ ಸಾಹಿತಿಗಳ ಒಡನಾಟಗಳು ಧಾರಾಳವಾಗಿ ಲಭಿಸಿದ್ದರಿಂದ ಸಾರ್ವಜನಿಕ ಬದುಕಿಗೆ ತೆರೆದುಕೊಳ್ಳುವುದು ಅವರಿಗೆ ಸಾಧ್ಯವಾಯಿತು. ಮೊದಲು ಲೇಖಕಿಯಾಗಿ, ನಂತರ ರಾಜಕಾರಣಿಯಾಗಿ ತಮ್ಮನ್ನು ಗುರುತಿಸಿಕೊಂಡಿರುವ ಲಲಿತಾನಾಯಕ್ 1998ರಿಂದ 1992ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ನಂತರ ರಾಯಚೂರಿನ ದೇವದುರ್ಗ ಕ್ಷೇತ್ರದಿಂದ ಚುನಾಯಿತರಾಗಿ 1994ರಿಂದ 1999ರವರೆಗೆ ವಿಧಾನಸಭಾ ಸದಸ್ಯರಾಗಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿ, ಕರ್ನಾಟಕ ರಾಜ್ಯ ಬಾಲಭವನ ಸೊಸೈಟಿಯ ಅಧ್ಯಕ್ಷರಾಗಿ, ಜಾತ್ಯಾತೀತ ಜನತಾದಳದ ರಾಷ್ಟ್ರೀಯ ಕಾರ್ಯಕಾರಣಿಯ ಸದಸ್ಯರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಬಂಡಾಯ ಸಂಘಟನೆಯೊಂದಿಗೆ ಸಂಪರ್ಕವಿರಿಸಿಕೊಂಡು, ರಾಜ್ಯಸಂಚಾಲಕರಾಗಿ ಸಂಘಟನೆಯ ಅನೇಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದವರು. ಸಂಘಟನಾ ಕಾರ್ಯಗಳು ಮತ್ತು ಸಮಾಜದ ವಿವಿಧ ವರ್ಗಗಳ ಸಂಪರ್ಕ ತಮ್ಮ ವ್ಯಕ್ತಿತ್ವದಲ್ಲಿ ಬದಲಾವಣೆಗಳನ್ನು ಉಂಟುಮಾಡಲು ಮುಖ್ಯ ಕಾರಣವೆಂದು ಅವರು ಭಾವಿಸುತ್ತಾರೆ.

ಲಲಿತಾನಾಯಕ್ ಅವರು ತಮ್ಮ ಸಮುದಾಯದ ಕುರಿತು ಬದ್ಧತೆಯನ್ನು ಅನೇಕ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ತಮ್ಮ ಕೃತಿಗಳಲ್ಲಿ ತಾಂಡ್ಯಾದ ಬದುಕಿನ ಸ್ವರೂಪವನ್ನು ಅದರ ಎಲ್ಲಾ ಆಯಾಮಗಳ ಮೂಲಕ

ಅನಾವರಣಗೊಳಿಸಿದ್ದಾರೆ. ಲಂಬಾಣಿ ಭಾಷೆಯ ಕವಿಗೋಷ್ಠಿ ನಡೆಸಿದ್ದಾರೆ. ಲಂಬಾಣಿ ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಹಲವಾರು ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡಿದ್ದಾರೆ. ಎಚ್.ಡಿ.ಲಮ್ಹಾಣಿ ನಿರ್ದೇಶನದ ಲಂಬಾಣಿ ಭಾಷೆಯ ಚಿತ್ರ 'ಜಾಡಿರೋ ಪಂಚೇರು' (ಕಾಡಿನ ಪಕ್ಷಿ) ಯಲ್ಲಿ ನಟಿಸಿದ್ದಾರೆ. ಭಾಷೆಯನ್ನು ಉಳಿಸುವುದು ಮತ್ತು ಸಂಸ್ಕೃತಿಯಲ್ಲಿ ಅಡಗಿರುವ ಮಹತ್ವಪೂರ್ಣ ವಿಚಾರಗಳನ್ನು ಬೆಳಕಿಗೆ ತರುವುದು, ಇಂದಿನ ಅಗತ್ಯಗಳಲ್ಲಿ ಮುಂಚೂಣಿಯಲ್ಲಿ ಇರಬೇಕಾದ ವಿಚಾರಗಳೆಂದು ಅವರ ಭಾವನೆ. ಸಣ್ಣಪುಟ್ಟ ಬುಡಕಟ್ಟುಗಳು ತಮ್ಮ ಮಾತೃಭಾಷೆಯನ್ನು ಉಳಿಸಿಕೊಳ್ಳುವುದು ಕಷ್ಟವೆಂದು ತೋರುವ ಇಂದಿನ ವಾತಾವರಣದಲ್ಲಿ ಈ ನಿಟ್ಟಿನಲ್ಲಿ ನಡೆಯಬೇಕಾದ ಕಾರ್ಯಗಳು ಹಲವು ಇವೆ ಎಂದು ಅವರು ತಿಳಿಯುತ್ತಾರೆ.

ಬುಡಕಟ್ಟು ಜನಾಂಗಗಳ ಹಾಗೂ ಮಧ್ಯಮವರ್ಗದ ಕಷ್ಟಪರಂಪರೆಗಳನ್ನು ಸ್ವತಃ ಅನುಭವಿಸಿ ತಿಳಿದುಕೊಂಡಿರುವ ಲಲಿತಾನಾಯಕ, ಲಿಂಗ ಮತ್ತು ಆರ್ಥಿಕ ನೆಲೆಯಲ್ಲಿ ವ್ಯಕ್ತಗೊಳ್ಳುವ ಕೌಟುಂಬಿಕ ಹಾಗೂ ಸಾಮಾಜಿಕ ಅಸಮಾನತೆಯನ್ನು, ಶ್ರೇಣೀಕರಣವನ್ನು ವಿರೋಧಿಸುವ ಮನೋಧರ್ಮದವರು. ಇದನ್ನು ಅವರು ತಮ್ಮ ಲೇಖನಗಳಲ್ಲಿ ಕೃತಿಗಳಲ್ಲಿ ಹಾಗೂ ಭಾಷಣಗಳಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. 'ಕಾಲಗತಿಯಲ್ಲಿ ಕಾಡು ಜನಾಂಗ ಕ್ರಮೇಣ ಕಣ್ಣು ತೆರೆದು, ಸಂಕುಚಿತತೆಯ ಹೊಂಡದಿಂದ ಹೊರಬಂದು, ಶುದ್ಧ ಪ್ರಜ್ಞಾವಂತಿಕೆಯನ್ನು ಗಳಿಸಿ, ಹೊಸತನದ ಅನುಭವಗಳಿಗೆ ಒಡ್ಡಿಕೊಂಡು ಮನುಷ್ಯರಾಗಿ ಬಾಳಬೇಕು' ಎನ್ನುವ ಆಶಯ ಲಲಿತಾ ಅವರದು.

ಸಾಹಿತ್ಯ ಸಾಧನೆ

'ಲಂಕೇಶ್ ಪತ್ರಿಕೆ'ಯಲ್ಲಿ ಲೇಖನಗಳನ್ನು ಪ್ರಕಟಿಸುವುದರ ಮೂಲಕ ಬರವಣಿಗೆಯನ್ನು ಪ್ರಾರಂಭಿಸಿದ ಲಲಿತಾನಾಯಕರ ಮೊದಲ ಕೃತಿ 'ಚಂದ್ರಪರಾಭವ' (1972). ಇದು ರೇಡಿಯೋ ನಾಟಕಗಳ ಸಂಗ್ರಹವಾಗಿದೆ. ನಂತರ ಹಲವಾರು ಸಣ್ಣಕತೆ, ಕಾದಂಬರಿಗಳನ್ನು, ಕವನ, ಶಿಶುಸಾಹಿತ್ಯ ಹಾಗೂ ಕ್ಷೇತ್ರದರ್ಶನದ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಮೊದಲ ಕಾದಂಬರಿ 'ನೆಲೆ-ಬೆಲೆ' ಪ್ರಕಟವಾಗಿರುವುದು 1980ರಲ್ಲಿ. 'ಸುಧಾ' ಪತ್ರಿಕೆಯ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಕೃತಿ ಇದು. ಲಂಕೇಶ ಪತ್ರಿಕೆಯಲ್ಲಿ ಧಾರಾವಾಹಿಯಾಗಿ. ನಂತರ 1986ರಲ್ಲಿ ಕೃತಿರೂಪವಾಗಿ ಬೆಳಕಿಗೆ ಬಂದ 'ಗತಿ' ಕಾದಂಬರಿಯು ಕರ್ನಾಟಕ ವಿಶ್ವವಿದ್ಯಾಲಯದ ಮೂರನೆಯ ವರ್ಷದ ಕನ್ನಡ ಐಚ್ಛಿಕ ತರಗತಿಗೆ ಪಠ್ಯಗ್ರಂಥವಾಗಿತ್ತು. 'ನಂರೂಪ್ಲಿ' (1983), 'ಇದೇ ಕೂಗು ಮತ್ತೆ ಮತ್ತೆ' (1986), 'ಒಡಲ ಬೇಗೆ' (ಆಯ್ದ ಕವನಗಳು. 1996) ಕವನ ಸಂಕಲನಗಳು; 1983ರಿಂದ 1997ರವರೆಗಿನ ಕವಿತೆಗಳ ಸಂಗ್ರಹ 'ಬಿದಿರು ಮಳೆ ಕಂಟಿಯಲಿ' (1997). ಚುಟುಕು ಪ್ರಕಾರದಲ್ಲಿ ಕೂಡಾ ಇವರು ಕೃಷಿ ನಡೆಸಿದ್ದಾರೆ. 'ಹಬ್ಬ ಮತ್ತು ಬಲಿ' (1989) ಹನ್ನೊಂದು ಕಥೆಗಳ ಸಂಕಲನ; 'ದೇವದುರ್ಗ' ಮತ್ತು 'ರಾಯಚೂರು ದರ್ಶನ' ಇವುಗಳು ಕ್ಷೇತ್ರದರ್ಶನ ಕೃತಿಗಳು. 'ಭಟ್ಟನ ಕನಸು' (1979) ಮಕ್ಕಳ ಕಥೆಗಳ ಸಂಗ್ರಹ.

ಅಲಕ್ಷಿತ ಸಮುದಾಯಕ್ಕೆ ಸೇರಿದ (ವಿಶೇಷವಾಗಿ ಬುಡಕಟ್ಟು ಸಮುದಾಯದ) ಹೆಣ್ಣುಮಕ್ಕಳ ಬದುಕನ್ನು ಅನಾವರಣಗೊಳಿಸುವುದು ಲೇಖಕಿಯ ಕೃತಿಗಳ ಉದ್ದೇಶ. ಹೆಣ್ಣಿನ ಸಮಸ್ಯೆಗಳ ಸಾರ್ವತ್ರಿಕತೆಯ ವಸ್ತುನಿಷ್ಠ ಧೋರಣೆಯನ್ನು ವ್ಯಕ್ತಪಡಿಸುವ ಇವರ ಕೃತಿಗಳು, ಹುಟ್ಟು ಮತ್ತು ಪರಿಸರಗಳು ಹೆಣ್ಣಿನ ಬದುಕಿನ ಮೇಲೆ ಬೀರುವ ಪರಿಣಾಮಗಳ ಕುರಿತು ನಿಖರ ಮಾಹಿತಿಯನ್ನು ಒದಗಿಸುತ್ತವೆ. ನಗರವಾಸಿ ಮಹಿಳೆಯರಿಗಿಂತ ಗ್ರಾಮೀಣ ಪರಿಸರದ ಮಹಿಳೆಯರು ನಡೆಸುವ ಯಾತನಾಮಯ ಬದುಕಿನ ಕುರಿತು ನೈಜ ಕಾಳಜಿಯನ್ನು ವ್ಯಕ್ತಪಡಿಸುವ ಈ ಲೇಖಕಿಯ ಕತೆ, ಕಾದಂಬರಿಗಳು ಈ ಮಹಿಳೆಯರ ಬದುಕು ಸುಧಾರಿಸಬೇಕೆಂಬ ಆಶಯವನ್ನು ಹೊಂದಿವೆ.

ಗೊಡ್ಡು ಸಂಪ್ರದಾಯಗಳು. ಕಂದಾಚಾರ ಪದ್ಧತಿಗಳು, ಜಾತಿವಿರೋಧಿ ಮೂಢನಂಬಿಕೆಗಳು, ದೇವರು-ಧರ್ಮದ ಹೆಸರಿನಲ್ಲಿ ಶೋಷಿಸುವ ಪುರೋಹಿತಶಾಹಿ. ಅನಕ್ಷರತೆ, ಬಡತನ, ಮತ್ತು ದಾರಿದ್ರ್ಯ ತುಂಬಿತುಳುಕುವ

ಪರಿಸರದಲ್ಲಿ ಬದುಕು ಸಾಗಿಸುವ ಅನಿವಾರ್ಯತೆಗೆ ಗುರಿಯಾಗಿರುವ ಹೆಣ್ಣುಮಕ್ಕಳು ತಮ್ಮತನವನ್ನು ಉಳಿಸುವ ಸಲುವಾಗಿ ನಡೆಸುವ ಹೋರಾಟವನ್ನು ಅವರು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ತಾವು ಚಿತ್ರಿಸಿದ ಕೆಲವು ಪಾತ್ರಗಳ ಕುರಿತು ಲಲಿತಾನಾಯಕ್ ವ್ಯಕ್ತಪಡಿಸಿದ ಅಭಿಪ್ರಾಯ ಹೀಗಿದೆ:

"ಯಾವುದೇ ಮಾಧ್ಯಮಗಳ ಮೂಲಕ ಚಿತ್ರಿತವಾಗುವ ಪಾತ್ರಗಳು ಸಹ ಸಾಮಾನ್ಯವಾಗಿ ಆಯಾ ಲೇಖಿಕರ ಹುಟ್ಟು, ಬೆಳೆದ ಪರಿಸರ, ಸಾಂಸ್ಕೃತಿಕ ಹಿನ್ನೆಲೆಯಿಂದ ಪಡೆದುಕೊಂಡ ಜೀವನಾನುಭವ ಇತ್ಯಾದಿಗಳನ್ನು ಒಳಗೊಂಡಿರುತ್ತವೆ. ನನ್ನ ಕೃತಿಯ ಪಾತ್ರಗಳು ಸಹ ಈ ಮಾತಿಗೆ ಹೊರತಲ್ಲವೆಂದೇ ನನ್ನ ಭಾವನೆ. ಮಹಿಳೆ ತಮ್ಮ ಬದುಕಿನುದ್ದಕ್ಕೂ ಹಲವಾರು ರೀತಿಯ ಶೋಷಣೆ, ದಬ್ಬಾಳಿಕೆಗೆ ಒಳಗಾಗುತ್ತಲೇ ಇರುತ್ತಾಳೆ ಎಂಬುದನ್ನು ನನ್ನ ಕತೆ ಹಾಗೂ ಕಾದಂಬರಿಗಳ ಪಾತ್ರಗಳು ಸ್ಪಷ್ಟವಾಗಿ ಸಾಬೀತುಗೊಳಿಸುತ್ತವೆ."

'ತಾಯಿ ಸಾಕೀಬಾಯಿ'ಯ ಸಾಕೀಬಾಯಿ, 'ಲೂಟಿ'ಯ ರಾಮಿ', 'ನೆಲೆಬೆಲೆ'ಯ ಜಯಾ; ಗ್ರಾಮೀಣ ಪ್ರದೇಶದ ಮಹಿಳೆ ಗಂಡಿನ ಸರಿಸಮವಾಗಿ ದುಡಿದರೂ ಸಹ ಗಂಡನ ದಬ್ಬಾಳಿಕೆಗೆ ಹೇಗೆ ಒಳಗಾಗುತ್ತಾಳೆ ಎಂಬುದನ್ನು ಸೋನಿಯ ಪಾತ್ರದಲ್ಲಿ ಕಾಣಬಹುದು. ಇದೇ ಕತೆಯಲ್ಲಿ ಲಚುಮಿ ಬಡವಳಾದರೂ ಸ್ವಾಭಿಮಾನಕ್ಕೆ ಕೊರತೆ ಇಲ್ಲದೆ, ವಿಧವೆಯಾದರೂ ಅಬಲೆಯಾಗದೆ ಸ್ವಾವಲಂಬಿಯಾಗಿ, ಪ್ರಜ್ಞಾವಂತೆಯಾಗಿ, ಧೈರ್ಯಶಾಲಿಯಾಗಿ ಸಿಂಹಿಣಿಯಂತೆ, ಧೈರ್ಯವಾಗಿ, ಪರೋಪಕಾರಿಯಾಗಿ ಸ್ತ್ರೀಯರಿಗೆ ಸ್ಫೂರ್ತಿಯ ನೆಲೆಯಾಗಿ ಚಿತ್ರಿತಳಾಗಿದ್ದಾಳೆ.

ಹೆಣ್ಣಿನ ಮೇಲೆ ನಡೆಯುತ್ತಿರುವ ಶೋಷಣೆಯು ಜಾತಿ, ಧರ್ಮ, ವರ್ಗ ಮತ್ತು ದೇಶಕ್ಕೆ ಸೀಮಿತವಲ್ಲವೆಂಬ ವಿಚಾರವನ್ನು ಒಪ್ಪಿಕೊಳ್ಳುವ ಈ ಲೇಖಿಕಿ, ದಬ್ಬಾಳಿಕೆ ನಡೆಸುವವರ ವಿರುದ್ಧ ಧ್ವನಿ ಎತ್ತುತ್ತಾರೆ. ನಗರಕೇಂದ್ರಿತ ಮಹಿಳೆಯರ ಸಮಸ್ಯೆಗಳ ಪರಿಹಾರಕ್ಕೆ ಸಂಘ ಸಂಸ್ಥೆಗಳಿಂದ ಸ್ವಲ್ಪಮಟ್ಟಿಗೆ ನೆರವು ದೊರೆಯಬಹುದಾದರೂ, ಗ್ರಾಮೀಣ ಪರಿಸರದಲ್ಲಿ ಬದುಕು ಸಾಗಿಸುವವರ ಬವಣೆಗಳು ದಾರುಣ ಸ್ವರೂಪದ್ದಾಗಿದ್ದು, ಯಾತನೆಯನ್ನು ಒಳಗೊಂಡಿವೆ. ಹಾಗಾಗಿ ಈ ಹೆಣ್ಣುಮಕ್ಕಳ ಕುರಿತು ಕಾಳಜಿ ಇರಬೇಕಾಗಿದೆ ಎನ್ನುವ ಧೋರಣೆಯನ್ನು ಅವರು ತಮ್ಮ ಕತೆ, ಕಾದಂಬರಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಪರಿವರ್ತನೆಯ ಸೂಕ್ಷ್ಮ ಹಾಗೂ ನಿರೀಕ್ಷಣೆಗಳಿರುವ ಲಲಿತಾ ನಾಯಕರ ಕೃತಿಗಳು ಲಂಬಾಣಿ ಜನಾಂಗದ ಸಾಮಾಜಿಕ ವಲಯವನ್ನು ಪರಿಚಯಿಸುತ್ತವೆ ಎನ್ನುವ ಕಾರಣಕ್ಕೆ ಮಹತ್ವವನ್ನು ಪಡೆಯುತ್ತವೆ, ಎಂಬುದನ್ನು ಕನ್ನಡದ ವಿಮರ್ಶೆ ಗುರುತಿಸಿದೆ. 'ಲಲಿತಾ ನಾಯಕರಿಗೆ ಲಂಬಾಣಿ ಸಂಸ್ಕೃತಿಯೆಂಬುದು ವೈಭವೀಕರಣದ ವಸ್ತುವಲ್ಲ. ಜೊತೆಗೆ ಅವರ ಸಾಮಾಜಿಕ ಪ್ರಜ್ಞೆ ಈ ಸಂಸ್ಕೃತಿಯಲ್ಲಿ ಅಂತರ್ಗತವಾದ, ಇಡೀ ಸಮಾಜದಲ್ಲಿ ಕಾಣಸಿಗುವಂಥ ವಸ್ತುಸಂಗತಿಗಳನ್ನು ಹುಡುಕುತ್ತದೆ. ಹೀಗಾಗಿ ಇಲ್ಲಿ ಇರುವ ಲಂಬಾಣಿ ಪಾತ್ರ ಮತ್ತು ಪರಿಸರಗಳು ತಮ್ಮ ಸಾಮಾಜಿಕ ಹಿನ್ನೆಲೆಯನ್ನು ಪಡೆಯುತ್ತಲೇ ಸಾಮಾನ್ಯೀಕೃತವಾಗುತ್ತವೆ' ಎಂದು ಬರಗೂರು ರಾಮಚಂದ್ರಪ್ಪ ಗುರುತಿಸಿದ್ದಾರೆ (ಮುನ್ನುಡಿ; "ಹಬ್ಬ ಮತ್ತು ಬಲಿ") ಜಿ.ಎಸ್. ಅಮೂರ ಅವರ ಪ್ರಕಾರ "ಲಲಿತಾರ ಕಾದಂಬರಿ 'ಗತಿ' ಎರಡು ಕಾರಣಗಳಿಂದ ನಮ್ಮ ಗಮನ ಸೆಳೆಯುತ್ತದೆ. ಮೊದಲನೆಯದು ಅದು ಕೊಡುವ ಲಂಬಾಣಿ ಸಮುದಾಯದ ವಾಸ್ತವ ಚಿತ್ರಣ. ಎರಡನೆಯದು ಪರಿವರ್ತನೆಯ ಪ್ರಕ್ರಿಯೆಯಲ್ಲಿ ಅದು ತೋರುವ ಆಸ್ಥೆ ತಮ್ಮ ಸಮುದಾಯದ– ಅದರಲ್ಲಿಯೂ ಆ ಸಮುದಾಯದ ಹೆಣ್ಣುಗಳ–ದಾರುಣ ಸ್ಥಿತಿಯನ್ನು ಯಾವ ಮುಲಾಜೂ ಇಲ್ಲದೆ ಲಲಿತಾ ಚಿತ್ರಿಸಿದ್ದಾರೆ. ಆದರೆ ಈ ಸಮುದಾಯದಲ್ಲಿ ನಡೆಯುತ್ತಿರುವ ಬದಲಾವಣೆಗಳನ್ನು ಅವರು ಗಮನಿಸಿರುವುದರಿಂದ ಭವಿಷ್ಯದ ಬಗ್ಗೆ ಅವರು ಆಶಾವಾದಿಗಳೂ ಆಗಿದ್ದಾರೆ." (ಕನ್ನಡ ಕಥನ ಸಾಹಿತ್ಯ ಪು. 455)

ಲಲಿತಾನಾಯಕರ ಮಾತಿನಲ್ಲಿ ಹೇಳುವುದಾದರೆ ಬಾಲ್ಯದಲ್ಲಿ ತಾನು ಬೆಳೆದ ಪರಿಸರ, ಪಡೆದ ಶಿಕ್ಷಣ ಅವಕಾಶಗಳು, 'ಮದುವೆಯಾಗುವವರೆಗೆ ಹಳ್ಳಿಯಲ್ಲಿ ಕಳೆದ ಎಂಟೊಂಬತ್ತು ವರುಷಗಳ ಕೌಮಾರ್ಯ ಜೀವನ, ನನ್ನ

ಈವೊತ್ತಿನ ಸಾಹಿತ್ಯಕ, ರಾಜಕೀಯ ಬದುಕಿನ ಅಮೂಲ್ಯ ಅನುಭವದ ಬುತ್ತಿಯನ್ನು ಕಟ್ಟಿಕೊಟ್ಟಿತು. (ಲೇಖಲೋಕ: ಪುಟ 52). ಮೆಟ್ರಿಕ್ ಕಲಿಯುವವರೆಗೆ ಹಾಸ್ಟೆಲಲ್ಲಿ ಉಳಿದು, ನಂತರ ಮನೆವಾಳ್ತೆಯಲ್ಲಿ ತೊಡಗಿಕೊಂಡು 1964ರಲ್ಲಿ ಮದುವೆಯಾಗಿ ಸೇರಿದ ತಿಪ್ಪಾಪುರ ತಾಂಡಾದ ಮನೆಯಲ್ಲಿದ್ದ ಬಡತನ, ಹಸಿವುಗಳ ನಡುವೆಯೇ ಸ್ವಪ್ರಯತ್ನದಿಂದ ಮೂರು ಮಕ್ಕಳ ಸಂಸಾರವನ್ನು ತೂಗಿಸಿಕೊಂಡು, ಬರವಣಿಗೆಯ ಕಡೆಗೆ ಮನಸ್ಸು ಹರಿಸಿ, ನಂತರ ರಾಜಕೀಯ ಕ್ಷೇತ್ರದಲ್ಲಿಯೂ ಅಪೂರ್ವ ಯಶಸ್ಸು ಪಡೆದ ಲಲಿತಾ ನಾಯಕರ ಸಾಧನೆಯ ಹಿಂದೆ ಅವರ ದೃಢಚಿತ್ತ ಹಾಗೂ ಕ್ರಿಯಾಶೀಲ ಮನಸ್ಸು ಕೆಲಸ ಮಾಡಿದೆ. ತಂದೆ, ತಾಯಿ, ಅಜ್ಜಿ, ತಾತ ಹಾಗೂ ಪತಿಯಿಂದ ನಿರಂತರ ಸಹಕಾರ ಹಾಗೂ ಪ್ರೋತ್ಸಾಹಗಳನ್ನು ಪಡೆದಿರುವ ಲಲಿತಾನಾಯಕರದು ಪ್ರಾಮಾಣಿಕ ದುಡಿಮೆಗೆ ಆದ್ಯತೆ ನೀಡುವ ವ್ಯಕ್ತಿತ್ವವಾಗಿದೆ.

ಲಂಬಾಣಿ ತಾಂಡಾದಿಂದ ಬಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆಯ ಸಚಿವೆಯ ಸ್ಥಾನದವರೆಗೆ, ಸಾಹಿತಿಯವರೆಗೆ, ಕಲಾವಿದೆಯವರೆಗೆ ಬೆಳೆದದ್ದು ದೊಡ್ಡ ಸಾಧನೆಯೇ.

ಪ್ರಶಸ್ತಿ, ಗೌರವಗಳು

ರಾಜಕೀಯ, ಸಾಮಾಜಿಕ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಾಗಿ ಲಲಿತಾ ನಾಯಕ ಅನೇಕ ಪ್ರಶಸ್ತಿ ಮತ್ತು ಗೌರವಗಳನ್ನು ಪಡೆದಿದ್ದಾರೆ. ಉತ್ತಮ ಶಾಸಕ ಪ್ರಶಸ್ತಿ, ರಾಜೀವಗಾಂಧಿ ರಾಷ್ಟ್ರೀಯ ಏಕತಾ ಪ್ರಶಸ್ತಿ, ನಾಡಚೇತನ ಪ್ರಶಸ್ತಿ, ಕಿರಣಪ್ರಭ ಪ್ರಶಸ್ತಿ, ಮಹಿಳಾರತ್ನ ಪ್ರಶಸ್ತಿ, ಕಾಯಕ ಸಮ್ಮಾನ ಪ್ರಶಸ್ತಿ, ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶ್ರೀಮತಿ ಸಾವಿತ್ರಮ್ಮ ದೇಜಗೌ ಪ್ರಶಸ್ತಿ ಮೊದಲಾದುವುಗಳು ಇವರಿಗೆ ಸಂದ ಪ್ರಶಸ್ತಿಗಳಾಗಿವೆ. ಇವರ ಬದುಕು ಮತ್ತು ಸಾಹಿತ್ಯ ಸಾಧನೆಯನ್ನು ಕೇಂದ್ರವಾಗಿಟ್ಟು ವಿಶ್ವ ವಿದ್ಯಾಲಯಮಟ್ಟದಲ್ಲಿ ಅಧ್ಯಯನಗಳು (ಎಂ.ಫಿಲ್.,ಪಿಹೆಚ್.ಡಿ.) ನಡೆದಿವೆ. ಇವರ ಕತೆ, ಕಾದಂಬರಿ, ಕವನಗಳು ಕಾಲೇಜು, ವಿದ್ಯಾರ್ಥಿಗಳ ಪಠ್ಯಗಳಾಗಿವೆ. ಇವರು ಹಲವಾರು ಸಂಘಸಂಸ್ಥೆಗಳಿಗೆ ಅಧ್ಯಕ್ಷರಾಗಿ, ಗೌರವಾಧ್ಯಕ್ಷರಾಗಿ, ಟ್ರಸ್ಟಿಗಳಾಗಿ ಸೇವೆ ಸಲ್ಲಿಸಿದ್ದಾರೆ.

ಗ್ರಂಥ ಋಣ: 1. ಲೇಖಲೋಕ, ಕಲೇಸಂ ಪ್ರಕಟಣೆ, 1998 2. ಲೇಖಕಿಯ ಕೃತಿಗಳು.

*

ರಂಗಭೂಮಿ ಕಂಡ ಅಪೂರ್ವ ಪ್ರತಿಭೆ ಬಿ. ಜಯಶ್ರೀ

ರೋಹಿಣಿ ರಘುನಂದನ್

ಬಿ.ಜಯಶ್ರೀ – ಈ ಹೆಸರೇ ಒಂದು ಸಂಚಲನವನ್ನು ಉಂಟುಮಾಡುಬಲ್ಲಂಥ ವ್ಯಕ್ತಿ–ಶಕ್ತಿ. ಎಲ್ಲರಿಗೂ ತಿಳಿದಿರುವಂತೆ ತಮ್ಮ ನಾಲ್ಕನೇ ವಯಸ್ಸಿನಲ್ಲೇ ಅಭಿನಯ ರಂಗಕ್ಕೆ ಪಾದಾರ್ಪಣೆ ಮಾಡಿದ ಅಭಿಜಾತ ಕಲಾವಿದೆ, ರಂಗಭೂಮಿಯ ದಂತಕಥೆ ಶ್ರೀ ಗುಬ್ಬಿ ವೀರಣ್ಣನವರ ಹೆಮ್ಮೆಯ ಮೊಮ್ಮಗಳು, ತಮ್ಮ ವಿಶಿಷ್ಟ ಕಂಠಸಿರಿಯಿಂದ ದೇಶದಾದ್ಯಂತ ಮನೆ ಮಾತಾಗಿರುವ ಅತ್ಯುತ್ತಮ ಗಾಯಕಿ, ಭಾರತ ದೇಶದ ಕೆಲವೇ ಮಹಿಳಾ ರಂಗ ನಿರ್ದೇಶಕಿಯರ ಸಾಲಿನಲ್ಲಿ ಮುಂಚೂಣಿಯಲ್ಲಿರುವ ನಿರ್ದೇಶಕಿ, ಕರ್ನಾಟಕದ ಅನೇಕ ಜನಪದ ಪ್ರಕಾರಗಳನ್ನು ಅಭ್ಯಸಿಸಿ–ಅಳವಡಿಸಿ–ಪ್ರದರ್ಶನ ನೀಡಿ–ಜನಪ್ರಿಯಗೊಳಿಸಿರುವ ಹೆಗ್ಗಳಿಕೆ ಇವರದು, ಎಲ್ಲಕ್ಕಿಂತ ಮಿಗಿಲಾಗಿ ಅಪ್ಪಟ ಸ್ವಾವಲಂಬಿ, ಸಶಕ್ತ ಮಹಿಳೆ ಮತ್ತು ಮಾನವತಾವಾದಿ.

ತಮ್ಮ ತಾತ ಗುಬ್ಬಿ ವೀರಣ್ಣನವರ ಗುಬ್ಬಿ ಕಂಪನಿಯಲ್ಲಿ ಪಾತ್ರವಹಿಸುತ್ತಾ, ಅವರ ದೂರದೃಷ್ಟಿಯನ್ನೂ, ಸಾಹಸಿ ಮನೋಭಾವವನ್ನೂ, ಕಲಾಬದ್ಧತೆಯನ್ನೂ ಮೈಗೂಡಿಸಿಕೊಂಡು ತಮ್ಮದೇ ವಿಶಿಷ್ಟ ವ್ಯಕ್ತಿತ್ವವನ್ನು ಬೆಳಸಿಕೊಂಡಿರುವವರು ಬಿ.ಜಯಶ್ರೀ. ದೆಹಲಿಯ ರಾಷ್ಟ್ರೀಯ ನಾಟಕಶಾಲೆಯಲ್ಲಿ ಪದವಿಗಳಿಸಿ, ಅದೇ ಸಂಸ್ಥೆಯಲ್ಲಿ ಅನೇಕ ಯೋಜನಾತ್ಮಕ ಹುದ್ದೆಗಳಿಗೆ ನಾಮ ನಿರ್ದೇಶಿತಗೊಂಡು ಅರ್ಥಪೂರ್ಣ ಕಾರ್ಯಗಳಿಗೆ ಒತ್ತು ನೀಡುತ್ತಾ ಬಂದಿದ್ದಾರೆ. ನಮ್ಮ ದೇಶದ ಅನೇಕ ಮಹಾನ್ ರಂಗ ನಿರ್ದೇಶಕರುಗಳ ವಿವಿಧ ಯಶಸ್ವೀ ನಾಟಕಗಳಲ್ಲಿ ಅಭಿನಯಿಸಿ ಮೆಚ್ಚುಗೆ ಗಳಿಸಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಚಿತ್ರರಂಗದಲ್ಲೂ ಅಭಿನಯ ಕಂಠದಾನ ಮಾಡಿ ಹೆಸರು ಗಳಿಸಿದ್ದಾರೆ. ಹಲವು ಚಿತ್ರಗಳಲ್ಲಿ ಹಾಡಿ ಅಭಿಮಾನಿಗಳನ್ನು ಸೆಳೆದಿದ್ದಾರೆ. ಭಾರತವಷ್ಟೇ ಅಲ್ಲದೆ ಅನೇಕ ಹೊರ ದೇಶಗಳಲ್ಲೂ ನಾಟಕಗಳಲ್ಲಿ ಅಭಿನಯಿಸಿ, ನಿರ್ದೇಶನವನ್ನೂ ಮಾಡಿ ಸೈ ಎನಿಸಿಕೊಂಡಿದ್ದಾರೆ. ಭಾರತದ ಉದ್ದಗಲಕ್ಕೂ ಅನೇಕ ಜನಪದ ಉತ್ಸವಗಳಲ್ಲಿ ರಂಗ–ನೃತ್ಯ ಸಂಯೋಜನೆಯ ಅರ್ಥಪೂರ್ಣ ಅಭಿವ್ಯಕ್ತಿ ಮಾಡಿದ್ದಾರೆ. ಇವರ ಸತತ ಸಾಂಸ್ಕೃತಿಕ ಕಾಳಜಿಗೆ, ಅಪಾರವಾದ ಕಲಾಸೇವೆಗೆ ದೇಶದ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು– 'ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಸಂದೇಶ್ ಪ್ರಶಸ್ತಿ, ಬಿ.ವಿ ಕಾರಂತ ಸ್ಮೃತಿ ಪುರಸ್ಕಾರ, ಕರ್ನಾಟಕ ನಾಟಕ ಅಕಾಡಮಿ ಪ್ರಶಸ್ತಿ, ಅತ್ಯುತ್ತಮ ನಟಿ ಪುರಸ್ಕಾರ ಮುಂತಾದವು ಅರಸಿ ಬಂದಿವೆ. ಕಲೆ–ಸಂಸ್ಕೃತಿಗಳಿಗೆ ಇವರು ನೀಡಿರುವ ಕೊಡುಗೆಯನ್ನು ಗುರುತಿಸಿ ಮೈಸೂರಿನ ಮುಕ್ತ ವಿಶ್ವವಿದ್ಯಾಲಯವು 'ಗೌರವ ಡಾಕ್ಟರೇಟ್' ನೀಡಿ ಪುರಸ್ಕರಿಸಿದೆ.

ಜಯಶ್ರೀ ಅವರ ಜೀವನದಲ್ಲಿ ಇತ್ತೀಚೆಗೆ ಬಂದ ಅನಿರೀಕ್ಷಿತ, ಮಹತ್ವದ ತಿರುವು ಎಂದರೆ–ಭಾರತ ಸರ್ಕಾರವು 2010ರಲ್ಲಿ "ಸನ್ಮಾನ್ಯ ರಾಜ್ಯಸಭಾ ಸದಸ್ಯರಾಗಿ" ನಾಮ ನಿರ್ದೇಶನಗೊಳಿಸಿದ್ದು. ಅಂದಿನಿಂದ ಓರ್ವ ಎಂ.ಪಿ ಆಗಿ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುವಂತೆ, ಆ ಹುದ್ದೆಯ ಎಲ್ಲಾ ಸಾಧಕ–ಬಾಧಕಗಳನ್ನು ಅಭ್ಯಸಿಸಿ, ಅರಿತು, ಹಗಲಿರುಳು ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವುದು– ಅವರ ವ್ಯಕ್ತಿತ್ವದ ಇನ್ನೊಂದು

ಮಜಲು. ಯಾವುದೇ ರಾಜಕೀಯ ಪಕ್ಷ ಅಥವಾ ರಾಜಕಾರಣಿಗಳ ಅನೇಕ ಬಗೆಯ ಒತ್ತಡ ಆಮಿಶಗಳಿಗೆ ಕಿವಿಗೊಡದೆ, ತಮ್ಮದೇ ಆದ ಸೈದ್ಧಾಂತಿಕ ನಿಲುವನ್ನು ತಳೆದು ಅದಕ್ಕೆ ಬದ್ಧರಾಗಿ ವಿದ್ಯೆ, ಆರೋಗ್ಯ, ಮಹಿಳಾ ಅಭಿವೃದ್ಧಿ, ಭಾಷೆ ಮತ್ತು ಸಂಸ್ಕೃತಿ, ಜೊತೆಗೆ ಸಾಧ್ಯವಿರುವ ಎಲ್ಲಾ ಕ್ಷೇತ್ರಗಳಲ್ಲೂ ಸ್ವತಃ ಖುದ್ದಾಗಿ ಪರಿಶೀಲಿಸಿ, ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರಲು ಶ್ರಮಿಸುತ್ತಿದ್ದಾರೆ.

ಇವೆಲ್ಲವೂ ಸಾಧಾರಣವಾಗಿ ಎಲ್ಲರಿಗೂ ಬಿ.ಜಯಶ್ರೀ ಅವರ ಬಗ್ಗೆ ತಿಳಿದಿರುವ ಮಾಹಿತಿಗಳು. ಅಥವಾ ಇಂದಿನ ತಾಂತ್ರಿಕ ಯುಗದಲ್ಲಿ ಒಂದು 'Google search' ನಲ್ಲೋ ಅಥವಾ 'U Tube' ನಲ್ಲೋ ಅವರ ಬಗ್ಗೆ ದೊರೆಯಬಹುದಾದ ವಿಷಯಗಳು. ಆದರೆ ಬಿ.ಜಯಶ್ರೀ ಒಬ್ಬ ವ್ಯಕ್ತಿಯಾಗಿ–ಅನೇಕ ಸಂದರ್ಭಗಳಲ್ಲಿ ಪ್ರಶ್ನೆಗಳನ್ನು ಹುಟ್ಟಿಸುವ ಉತ್ತರ ಹುಡುಕಲು ಪ್ರೇರೇಪಿಸುವ ಶಕ್ತಿ. ಆ ಬಗ್ಗೆ ನಾನು ಹೇಳುವ ಪ್ರಯತ್ನ ಮಾಡುತ್ತಿದ್ದೇನೆ. ಅವರ ಅಗಾಧ ವ್ಯಕ್ತಿತ್ವದ ಸಾರಾಂಶ ಹೇಳುವುದಾಗಲೀ ವಿವರಿಸುವುದಾಗಲೀ ಆಗದ ಕೆಲಸ. ಆದರೆ ಒಬ್ಬ ಕಲಾವಿದೆಯಾಗಿ, ನಿರ್ದೇಶಕಿಯಾಗಿ ಅವರು ನಮ್ಮ ಅರಿವಿನ ಅನೇಕ ಕಿಟಕಿ ಬಾಗಿಲುಗಳನ್ನು ತೆರೆಸುವ ಪ್ರಕ್ರಿಯೆ ಮಾತ್ರ ಅನನ್ಯ. ಅವರ ಸೂಕ್ಷ್ಮತೆ, ಒಳನೋಟ ಎಂಥವರನ್ನೂ ಬೆರಗುಗೊಳಿಸುವಂಥದ್ದು.

ಬಿ.ಜಯಶ್ರೀ ಕಲಿಕೆಯಲ್ಲಿ ಒಂದು ಮಗುವಿನಂತೆ. ಯಾವುದೇ ಹೊಸ ಹಾಡಾಗಲೀ, ವಿಷಯವಾಗಲೀ, ಅಭಿನಯದ ಭಾಗವಾಗಲೀ ಕಲಿಯುವ ಪ್ರಕ್ರಿಯೆಯಲ್ಲಿ ಒಬ್ಬ ಸಣ್ಣ ಮಗುವಿನ ಕುತೂಹಲ, ಕೌತುಕ, ಉತ್ಸುಕತೆ ಎಲ್ಲವೂ ಹೊಂದಿರುತ್ತಾರೆ. ಆ ವಿಷಯ ಮನದಟ್ಟಾಗುವವರೆಗೂ ಬಿಡದ ಛಲ–ಹಠ ಹಾಗೂ ಸಾಧನೆಯ ಗಟ್ಟಿತನ, ಕಲಿತಮೇಲೆ ಅಪಾರವಾದ ವಿಶ್ವಾಸ, ಪರಿಣಿತಿ. ಇದನ್ನು ಹಾಡಬೇಕಾದದ್ದೇ ಹೀಗೇನೋ ಅಭಿನಯಿಸಬೇಕಾದ ಪರಿಯೇ ಇದೇನೋ ಎಂದೆನಿಸುವಂಥ ವಿಶಿಷ್ಟ ಅಭಿವ್ಯಕ್ತಿ. ಅಂಥ ಅನನ್ಯ–ಅಸಾದೃಶ ಪ್ರತಿಭೆ ಬಿ.ಜಯಶ್ರೀ. ಇದು ಅನುಭವಗಳಿಗೆ ತನ್ನನ್ನು ತಾನೇ ಒಟ್ಟಿಕೊಂಡಿದ್ದರಿಂದ ಸಾಧ್ಯವಾಗಿರುವ ಪರಿ...! ಕಲಾವಿದೆಯಾಗಿ ವ್ಯಕ್ತಿ ಬದುಕಿನ, ಸಂಸಾರದ, ನಿಸರ್ಗದ, ಮನುಷ್ಯನೊಬ್ಬನ ಬದುಕಿನಲ್ಲಿ ದೊರೆಯಬಹುದಾದ ಭಾವ ಸಂಕೀರ್ಣತೆಗಳನ್ನೆಲ್ಲ ಅಭಿನಯದ ಹಾಗೂ ಗಾಯನದ ಮೂಲಕವೇ ತೋರ್ಪಡಿಸಬಹುದೆಂಬುದನ್ನು ಬಿ. ಜಯಶ್ರೀ ಸಾಧ್ಯವಾಗಿಸಿದ್ದಾರೆ. ಜೊತೆಗೆ ಅಗಾಧ ಸಾಗರದಲ್ಲಿ ತಾನೊಂದು ಪುಟ್ಟ ಹನಿ ಎಂದು ಭಾವಿಸಬಲ್ಲ ವಿನಯ–ವಿಶ್ವಾಸಗಳಿರುವ ಸಾಧಕಿ.

ಕೆಲವೊಮ್ಮೆ ಸಹಜ ಮೌನದ ತಣ್ಣನೆಯ ಜ್ವಾಲೆಯಂತೆ ಕಾಣುವ ಜಯಶ್ರೀ ಅವರು, ಪ್ರತಿ ವ್ಯಕ್ತಿಯಿಂದಲೂ– ಅಂದರೆ ಹಿರಿಯರಾಗಲೀ, ಕಿರಿಯರಾಗಲೀ ನಾಟಕ ತಂಡಕ್ಕೆ ಬರುವ ಯಾರೇ ಕಲಾವಿದರಾಗಲೀ, ಎಲ್ಲರಿಂದಲೂ ನಾನು ಕಲಿತಿದ್ದೇನೆ, ಕಲಿಯುತ್ತಲೇ ಇರುತ್ತೇನೆ ಎಂಬ ಮಾತನ್ನು ಸದಾ ಹೇಳುವುದುಂಟು. ಬಿ.ಜಯಶ್ರೀ ಅವರೊಟ್ಟಿಗೆ ಸುಮಾರು ಇಪ್ಪತ್ತೈದು ವರ್ಷಗಳಿಂದ (ನನ್ನ ಬಾಲ್ಯದಿಂದಲೂ) ಒಡನಾಟವಿದ್ದರೂ, ಅವರ ಕುರಿತಾಗಿ ತುಂಬಾ ಪ್ರೀತಿ, ಗೌರವ, ಮೆಚ್ಚುಗೆ, ಶ್ರದ್ಧೆ, ಪ್ರಾಮಾಣಿಕತೆಗಳಿರುವ ನನಗೆ ಅವರ ಬಗ್ಗೆ ಕೆಲವು ವಿಷಯಗಳನ್ನು ಹಂಚಿಕೊಳ್ಳುವುದು ಎಷ್ಟು ಸಂತೋಷವೋ, ಅಷ್ಟೇ ಕಷ್ಟದ ಕೆಲಸವೂ ಆಗಿದೆ. ತಮ್ಮ ದೌರ್ಬಲ್ಯ, ಸಾಮರ್ಥ್ಯ, ಮಿತಿ, ಯಾವುದನ್ನೂ ಅತಿ ಖಾಸಗಿಯಾಗಿ ಬಚ್ಚಿಟ್ಟುಕೊಳ್ಳುವ ವ್ಯಕ್ತಿಯಲ್ಲ ಬಿ. ಜಯಶ್ರೀ. ಅವರು ಪ್ರತಿ ಕ್ಷಣದಲ್ಲೂ ಯಾರೊಂದಿಗೆ ಕೆಲಸ ಮಾಡುತ್ತಿದ್ದಾರೋ ಅವರೆಲ್ಲರೂ ನಾನು ಇವರಿಗೆ ಪರಮಾಪ್ತ ಎನಿಸುವಷ್ಟು ಹತ್ತಿರವಾಗಿಬಿಡುತ್ತಾರೆ. ಬಿ.ಜಯಶ್ರೀ ಅವರನ್ನು "ಸಂಪೂರ್ಣವಾಗಿ ಬಲ್ಲೆ" ಎನ್ನುವ ದಾರ್ಷ್ಟ್ಯವನ್ನು ನಾನು ಮಾಡಲಾರೆ. ಏಕೆಂದರೆ ಈವರೆಗೂ ಆ ಅಗಾಧವಾದ ವ್ಯಕ್ತಿತ್ವವನ್ನು ಯಾರಾದರೂ ಪೂರ್ತಿಯಾಗಿ ಅರ್ಥಮಾಡಿಕೊಂಡಿದ್ದಾರೋ ಇಲ್ಲವೋ–ಹೇಳಲಾರೆ.

ಒಂದಂತೂ ಸತ್ಯ, ಬಿ.ಜಯಶ್ರೀ ಒಬ್ಬ **WORKOHOLIC**– ಇದನ್ನು ನಾನು ಪ್ರಮಾಣೀಕರಿಸಿ ಹೇಳಬಲ್ಲೆ. ತಮ್ಮ ಕರ್ತವ್ಯ–ಕೆಲಸದ ಬಗ್ಗೆ ಈ ಮಟ್ಟದ ನಿಷ್ಠೆ, ಬದ್ಧತೆಯನ್ನು ಕಾಣುವುದು ಬಹಳ ವಿರಳ. ಪ್ರತಿ ಕೆಲಸದಲ್ಲೂ ಅಚ್ಚುಕಟ್ಟು, ದಣಿವರಿಯದ ಕಾಳಜಿ, ನಾಟಕವಾಗಲೀ, ಸಂಗೀತದ ಕಾರ್ಯಕ್ರಮವಾಗಲೀ **Rehearsal** ಇಲ್ಲದೆ

ವೇದಿಕೆ ಹತ್ತಿದ ಉದಾಹರಣೆಯೇ ಇಲ್ಲ. ಅವರ ಪಾಂಡಿತ್ಯ-ಕಲೆಗಾರಿಕೆಯಲ್ಲಿ ಒಂದು ಪಾಲಿನಷ್ಟೂ ಅರಿಯದ ನಾವುಗಳೇ "ಅಯ್ಯೋ ರಂಗಗೀತೆ **Programme** ಅಲ್ವಾಮ್ಮಾ, ಎಲ್ಲಾ ಹಾಡೂ ಬರತ್ತೆ, **Rehearsals** ಬೇಡ..." ಅಂತ ರಾಗವೆಳೆದರೂ, "ಇಲ್ಲ, ನಾನು ಸ್ವಲ್ಪ ಶ್ರುತಿ ನೋಡ್ಕೋತಿನಿ, ಇಲ್ದೇ ಹೋದ್ರೆ **Voice open** ಆಗಲ್ಲ ನಿನಗಾದ್ರೆ ಹಾಡು," ಅಂದಾಗ, ಎಲ್ಲರೂ ತೆಪ್ಪಗೆ **Rehearsal** ಮಾಡೇ ಮಾಡ್ತಿವಿ. ಅದರಿಂದಲೇ **Stage** ಮೇಲೆ ಆ ಮಟ್ಟದ **perfection and quality of programme will be immense.** ಬೆಳಗಿನಿಂದ ಪ್ರಯಾಣ ಮಾಡಿದ್ದರೂ ಸಂಜೆ 6.30ಕ್ಕೆ ನೇರವಾಗಿ **Rehearsal** ಜಾಗದಲ್ಲಿ ಪ್ರತ್ಯಕ್ಷ್ಯವಾಗಿರುತ್ತಾರೆ. ಹಾಗಾಗಿ ಬೇರೇ ನಟರ್‍ಯಾರೂ ಅಸಡ್ಡೆ ಮಾಡಲು ಆಸ್ಪದವೇ ಇರುವುದಿಲ್ಲ. ಜಯಶ್ರೀ ಬರಿಯ ಉಪದೇಶ ಮಾಡುವುದಿಲ್ಲ; ತಾನೇ ನಡೆದು ಉದಾಹರಣೆಯಾಗಿ ನಿಲ್ಲುತ್ತಾರೆ.

ಅವರ ಪಾತ್ರಗಳ ಬಗ್ಗೆ, ಅಭಿನಯ ಚಾತುರ್ಯದ ಬಗ್ಗೆ ವಿಮರ್ಶಿಸಿ, ವಿಶ್ಲೇಷಿಸುವಷ್ಟು ಪಾಂಡಿತ್ಯ ನನಗಿಲ್ಲ; ಆದರೆ ಒಂದಂತೂ ಸತ್ಯ. ಅವರು ಪಾತ್ರಗಳನ್ನು ಅಭಿನಯಿಸುವುದಿಲ್ಲ; ಪಾತ್ರವೇ ತಾನಾಗಿರುತ್ತಾರೆ. ಮಂಥರಾ ನಾಟಕದ ಮಂಥರೆ, ಚಿತ್ರಪಟದ-ಕೊರವಂಜಿ, ಲಕ್ಷಾಧಿಪತಿಯ-ಜೋಗಿ, **Mother** ನಲ್ಲಿ-ತಾಯಿ, ಜೋಕುಮಾರ ಸ್ವಾಮಿಯ-ಶಾರಿ, ಉರಿಯ ಉಯ್ಯಾಲೆಯ-ದ್ರೌಪದಿ, ನಾಗಮಂಡಲದ ಕುರುಡವ್ವ, ಮೂಕಜ್ಜಿಯ ಕನಸುಗಳಲ್ಲಿನ-ಅಜ್ಜಿ, ಬ್ಯಾರಿಸ್ಟರ್‌ನ-ಚಿಕ್ಕಮ್ಮ, ಅಗ್ನಿಪಥದ- ಕುಂತಿ, ಸದಾರಮೆಯ-ಕಳ್ಳ...... ಹೀಗೆ ಅವರು ನಟಿಸಿದ ಪ್ರತಿಯೊಂದು ಪಾತ್ರವೂ ಹಲವಾರು ದಿನಗಳು ನಮ್ಮನ್ನು ಕಾಡುವುದುಂಟು. ಅಭಿನಯ ಜನ್ಮತಃ ಸಿದ್ಧಿಸಿದ್ದರೂ, ಅವರು ಮಾಡಿಕೊಳ್ಳುವ ತಯಾರಿ-ಸಿದ್ಧತೆಗಳು ಬೆರಗುಗೊಳಿಸುವಷ್ಟು ತೀವ್ರ, ಇನ್ನು ನಿರ್ದೇಶನ ಮಾಡುವಾಗಲಂತೂ ಅವರು ಒಬ್ಬ ಅಪ್ಪಟ ವಿದ್ಯಾರ್ಥಿಯೇ ಆಗಿಬಿಡುತ್ತಾರೆ. ಪ್ರತಿಯೊಂದು ಪಾತ್ರದ ಹರವು, ಇತಿ-ಮಿತಿ, ವೇಶಭೂಷಣ, ಮಾತಿನ ಶೈಲಿ, ಹಾವ-ಭಾವಗಳು – ಹೀಗೆ ಎಲ್ಲದರ ಬಗೆಗೂ ವಿಸ್ತೃತವಾದ ಅಧ್ಯಯನ ಮಾಡಿ, ಚರ್ಚಿಸಿ, ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು, ಒಂದು ನಿರ್ದಿಷ್ಟ ರೂಪವನ್ನು ಕೊಡುವ ಪ್ರಕ್ರಿಯೆಯಂತೂ ಒಂದು ಕೂಸನ್ನು ಹೊತ್ತು-ಹೆರುವಷ್ಟೇ ಕಾಳಜಿ, ಹೆಮ್ಮೆ, ಆಸಕ್ತಿಯಿಂದ ಆಗುವಂಥದ್ದು. ಹೀಗೆ ದಣಿವರಿಯದೆ ಅರ್ಥಗಳ ರಂಗಲೋಕ ಸೃಷ್ಟಿಸುತ್ತಾ, ತಾನು ಕಂಡದ್ದು, ಕಟ್ಟಿಕೊಂಡದ್ದು ಮತ್ತು ತನ್ನ ಸುತ್ತಲಿನ ಎಲ್ಲವನ್ನೂ ದಕ್ಕಿಸಿಕೊಂಡು ಇನ್ನೊಂದು ಆಯಾಮಕ್ಕೆ ದಾಟಿಕೊಂಡುಬಿಡುತ್ತಾರೆ-ಜಯಶ್ರೀ. ಇದನ್ನು ನಾನು ಕಂಡಿದ್ದೇನೆ; ಅನುಭವಿಸಿದ್ದೇನೆ; ಸಂತಸಪಟ್ಟಿದ್ದೇನೆ.

ಜಯಶ್ರೀ ಎಲ್ಲದರಲ್ಲೂ ಇತರರಿಗಿಂತ ವಿಭಿನ್ನ-ವಿಶಿಷ್ಟ. ಅವರು ಉಡುಗೆ-ತೊಡುಗೆ, ಮಾತು, ಆಚರಣೆಗಳು-ಎಲ್ಲದರಲ್ಲೂ ತನ್ನ ಸ್ವಂತ ಛಾಪನ್ನು ಮೂಡಿಸಿದ್ದಾರೆ. ಕೂದಲಿನಲ್ಲಿ ಬೆಳ್ಳಿ ಗೆರೆಗಳು ಮೂಡುತ್ತಿರುವಾಗಲೇ ಆಕಾಶವೇ ತಲೆಯ ಮೇಲೆ ಬಿದ್ದಂತೆ ದುಃಖಿಸಿ, ಎಲ್ಲರೂ ಅದನ್ನು ಮರೆಮಾಚಲು ಹೆಣಗಾಡುತ್ತಾ ಪರದಾಡುತ್ತಿದ್ದರೆ; ಈಕೆ ತಣ್ಣಗೆ ಅದರ ಪರಿವೆಯೇ ಇಲ್ಲವೇನೋ ಎಂಬಂತೆ ಅದನ್ನು ಅತ್ಯಂತ ಸಹಜವಾಗಿ ತನ್ನದಾಗಿಸಿಕೊಂಡು ಅದರಿಂದಲೇ ವಿಶೇಷ ಗಾಂಭೀರ್ಯವನ್ನು, ವರ್ಚಸ್ಸನ್ನು ಪಡೆದಾಕೆ. ಸದಾ ಕಾಟನ್ ಸೀರೆಗಳನ್ನು ಧರಿಸಿ, ಯಾವ ಚಿನ್ನದ ಆಭರಣಗಳ ಮೋಹವೇ ಇಲ್ಲದೇ, ತನ್ನ ಒಂದು ವಿಶೇಷವಾದ "ಸರ" ದಿಂದಲೇ ಗುರುತಿಸಲ್ಪಡುವವರು-ಜಯಶ್ರೀ. ಆ "ಹಾರ" ನಿಜವಾಗಿಯೂ ವಿಶೇಷವಾದದ್ದೇ. ತಮ್ಮ ತಾತ ಗುಬ್ಬಿ ವೀರಣ್ಣನವರು ನೀಡಿದ ಒಂದು ಪದಕ, ಬೆಳ್ಳಿಯ ಪುಟ್ಟ ಕರಡಿಗೆಗಳು, ಅಜ್ಜಿಯ ಹವಳ, ಸ್ನೇಹಿತರ ನೆನಪಿನ ಕಾಣಿಕೆ, ಅಮ್ಮನ ಕರಿಮಣಿ, ಬೇರೆ ಬೇರೆ ದೇಶಗಳ ವಿಶಿಷ್ಟವಾದ ಆಕಾರಗಳ ಡಾಲರ್ಸ್, ವಿವಿಧ ಭಂಗಿಗಳ ಗಣೇಶಗಳು, ಚಿತ್ರವಿಚಿತ್ರ ವಿನ್ಯಾಸಗಳು-ಇನ್ನೂ ಏನೇನೋ-ಒಟ್ಟಿನಲ್ಲಿ ಯಾವುದೋ ಮಾಂತ್ರಿಕನ ಮಾಯಾ ಪೆಟ್ಟಿಗೆಯಂತಹ ಆಕರ್ಷಣೆ ಅದರ ಬಗ್ಗೆ ನಮ್ಮೆಲ್ಲರಿಗೂ.. ಆದರೆ, ದಿರಿಸು ಏನೇ ಇರಲಿ, ಅದನ್ನು ಸಹಜವಾಗಿಸುವ ಆತ್ಮಸ್ಥೈರ್ಯ, ತನ್ನ ಛಾಪನ್ನು ಮೂಡಿಸುವ ದಿಟ್ಟತನ, ಕಣ್ಣಿನ ಮಿಂಚಿನಲ್ಲಿರುವ ತನ್ನತನ – ಒಟ್ಟಿನಲ್ಲಿ ಒಂದು ಜ್ವಾಲೆಯಂತೆ ಕಾಣುತ್ತಾರೆ- ಜಯಶ್ರೀ.

ಇಂದು ಯಶಸ್ಸಿನ ಉತ್ತುಂಗದಲ್ಲಿರುವ ಜಯಶ್ರೀರವರ ಆರಂಭದ ದಿನಗಳು- ಸಾಧನೆಯ ಹಾದಿ ಅತ್ಯಂತ ಸುಗಮವಾಗೇನಿರಲಿಲ್ಲ. ಸಂಗೀತ-ರಂಗಭೂಮಿಯ ಪ್ರಪಂಚ ಸಹ "Male dominated" ಆಗಿದ್ದದ್ದೇ. 70ರ ದಶಕದಲ್ಲಿ ತನ್ನ ಹೆಜ್ಜೆ ಗುರುತನ್ನು ಮೂಡಿಸುವ ಪ್ರಯತ್ನದಲ್ಲಿ ಜಯಶ್ರೀ ಅನೇಕ ಅಡೆ-ತಡೆಗಳನ್ನ, ಕುಹಕಗಳನ್ನ, ಒತ್ತಡಗಳನ್ನ ಸಮರ್ಥವಾಗಿ ಎದುರಿಸಿ, ಅದನ್ನೆಲ್ಲ ಮೀರಿ ನಿಲ್ಲುವ ಎದೆಗಾರಿಕೆಯನ್ನು ತೋರಿದರು. ಅದು ವಾಸ್ತವವಾಗಿತ್ತು. ಆದರೆ ರಂಗಭೂಮಿಯ ಬಗೆಗೆ ಅವರಿಗಿದ್ದ ಅಪಾರವಾದ ತುಡಿತ; ಅದೇ ಸಕಲವೂ ಆಗಿತ್ತು ಅವರಿಗೆ. ಅವರ ಭಕ್ತಿ, ಪ್ರೀತಿ, ಗೌರವ, ಮಮತೆ ಎಲ್ಲವೂ ರಂಗಭೂಮಿಯೇ ಆಗಿತ್ತು. ಅನುಭವದ ಬಯಲನ್ನು ಅರ್ಥದ ಆಲಯವಾಗಿಸುವುದೇ ಬದುಕು-ಎಂಬಂತೆ ನಿಷ್ಠರಾಗಿ, ಅದೇ ಇಂದಿನ ಅವರ ಯಶಸ್ಸಿಗೆ, ಸ್ಥಾನಮಾನಕ್ಕೆ, ಗೌರವಾಭಿಮಾನಗಳಿಗೆ ಭದ್ರ ಬುನಾದಿಯಾಯ್ತು ಎಂಬ ಅನಿಸಿಕೆ ನನ್ನದು. ಇಂದಿನ ನನ್ನಂತಹ ಎಲ್ಲಾ ಅಭಿಮಾನಿ ಮಹಿಳೆಯರಿಗೂ ಖಂಡಿತ ಜಯಶ್ರೀಯವರು ಆದರ್ಶಪ್ರಾಯರಾಗಿ ನಿಲ್ಲುತ್ತಾರೆ.

ಸಹಜವಾಗಿಯೇ ಇತರರ ಬಗ್ಗೆ ಮರುಗುವ, ಬಹಳ ಬೇಗ ಕರಗಿಹೋಗುವ ಅಂತಃಕರಣ; ವಾತ್ಸಲ್ಯ- ಜಯಶ್ರೀ ಅವರದ್ದು. ಮೇಲ್ನೋಟಕ್ಕೆ ಕಾಠಿಣ್ಯ ಕಂಡರೆ ಅದು ಜೀವಿತದ ಅನುಭವದ, ಕಂಡುಂಡ ಕಷ್ಟಕೋಟಲೆಗಳಿಂದ ಉಂಟಾದದ್ದು ಮಾತ್ರ, ಯಾವುದೇ ವ್ಯಕ್ತಿಯಾಗಲಿ- "ಅಮ್ಮಾ ನನಗೆ ಕಷ್ಟ"- ಎಂದು ಅವರಲ್ಲಿ ಬಂದರೆ ಖಂಡಿತ ನಿರಾಶರಾಗಿ ಹಿಂತಿರುಗುವುದಿಲ್ಲ. ಹೆಣ್ಣುಮಕ್ಕಳಿಗಂತೂ ಅವರಲ್ಲಿ ವಿಶೇಷ ಮಿಡಿತ-ತುಡಿತ. ಹಾಗೆಂದು ಕೈ ಹಿಡಿದು ನಡೆಸುತ್ತಾ ಆಶ್ರಯ ನೀಡುವುದು ಮಾತ್ರ ಎಂದರ್ಥವಲ್ಲ; ಅವಳನ್ನು ಸಶಕ್ತಳನ್ನಾಗಿಸಿ, ಜೀವನ್ಮುಖಿಯಾಗಿಸುವಂಥ ಸಾಮರ್ಥ್ಯ-ಜಯಶ್ರೀ ಅವರಲ್ಲಿ ನಾನು ಕಂಡಿದ್ದೇನೆ. ಕಷ್ಟವೋ-ಕಾಠಿಣ್ಯವೋ-ಸವಾಲೋ-ಬೆನ್ನು ತೋರಿಸಿ ಹೇಡಿಯಾಗಿ ಓಡದೆ, ವಿಮುಖರಾಗದೇ, ಎದುರು ನಿಂತು ಮುಖಾ-ಮುಖಿಯಾಗಿ ಎದುರಿಸಿ, ಹೋರಾಡಿ ಜಯವೋ-ಅಪಜಯವೋ ಅದರೊಂದಿಗೆ ಬದುಕುವ ಸಾಹಸ ಛಲದ ದಿಟ್ಟ ಹೆಣ್ಣು ಜಯಶ್ರೀ.. ಅಮ್ಮಾ..... ಇದೋ ನಿಮಗೆ ನನ್ನ **"Salute"...!**

——— * ———

ಮೊದಲ ಮಹಿಳಾ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್

ಹೇಮಲತಾ ಮಹಿಷಿ

ಮಹಿಳೆಯರು ಉಪಾಧ್ಯಾಯರಾಗಬಹುದು, ವೈದ್ಯರಾಗಬಹುದು, ದಾದಿಯರಾಗಬಹುದು, ಆದರೆ, ವಕೀಲರಾಗಲು ನ್ಯಾಯಾಧೀಶರಾಗಲು, ಇಂಜನಿಯರ್‌ಗಳಾಗಲು ಅವರ ಸ್ವಭಾವ-ಗುಣಗಳಿಗೆ ಹೊಂದುವುದಿಲ್ಲ ಎನ್ನುವ ಕಾಲವೊಂದಿತ್ತು. ಆದರೆ, ಇಂದು ಸಾವಿರಾರು ಮಹಿಳೆಯರು ಈ ಎಲ್ಲಾ ವೃತ್ತಿ ಕೈಗೊಂಡು ತಮ್ಮ ಸಾಮರ್ಥ್ಯವನ್ನು ಸಾಬೀತು ಪಡಿಸುತ್ತಾ ಬಂದಿದ್ದಾರೆ.

ಮಹಿಳೆಯರು ವಕೀಲರಾದರೆ ಕೇವಲ ಕೆಲವೇ ಸಮಯ ಆ ವೃತ್ತಿಯಲ್ಲಿರುತ್ತಾರೆ. ವಿವಾಹವಾದ ಕೂಡಲೇ ಬಿಟ್ಟುಬಿಡುತ್ತಾರೆ ಎನ್ನುವ ಭಾವನೆಯೂ ಬಲವಾಗಿಯೇ ಬೇರೂರಿತ್ತು. ಕೊನೆಯಲ್ಲಿ ಈ ವೃತ್ತಿಯಲ್ಲಿ ಉಳಿಯುವವರು ಅವಿವಾಹಿತ ಮಹಿಳೆಯರು, ಇಲ್ಲವೇ ವೈವಾಹಿಕ ಜೀವನದಿಂದ ಕಾರಣಾಂತರದಿಂದ ವಂಚಿತರಾದವರು ಎನ್ನುವ ಪಿಸುಮಾತುಗಳೂ ಕೇಳಿಬರುತ್ತಿದ್ದವು. ಆದರೆ, ಶ್ರೀಮತಿ ಮಂಜುಳಾ ಚೆಲ್ಲೂರ್ ಅವರಂತಹ ಮಹಿಳೆಯರು ಈ ವೃತ್ತಿಯಲ್ಲಿ ಉಳಿದು, ಬೆಳೆದು ಅಂತಹ ಕಲ್ಪನೆಗಳೆಲ್ಲಾ ಮಿಥ್ಯೆ ಎನ್ನುವುದನ್ನು ತೋರಿಸಿದ್ದಾರೆ.

ದಿ. 1-12-1955ರಲ್ಲಿ ಶ್ರೀ ಸಿ. ಭೀಮಪ್ಪಶೆಟ್ಟಿ ಮತ್ತು ಶ್ರೀಮತಿ ರಂಗಮ್ಮ ಅವರ ಮಗಳಾಗಿ ಬಳ್ಳಾರಿಯಲ್ಲಿ ಜನಿಸಿದ ಶ್ರೀಮತಿ ಮಂಜುಳಾ ಅವರಿಗೆ ಬಳ್ಳಾರಿಯೇ ಅವರ ಕರ್ಮಭೂಮಿ, ತಂದೆಯೇ ಅವರ ಗುರುವಾದರು. ತಂದೆ ಶ್ರೀ ಭೀಮಪ್ಪಶೆಟ್ಟಿ ಅವರು ಆಗ ಬಳ್ಳಾರಿಯ ಹೆಸರಾಂತ ನ್ಯಾಯವಾದಿಗಳು. ಸರ್ಕಾರಿ ವಕೀಲರು ಹಾಗೂ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಹಲವಾರು ಪ್ರಮುಖ ಮೊಕದ್ದಮೆಗಳನ್ನು ನಡೆಸಿದವರು. ಸಹಜವಾಗಿಯೇ ಈ ವೃತ್ತಿಯತ್ತ ಶ್ರೀಮತಿ ಮಂಜುಳಾ ಅವರ ಒಲವು ಮೂಡಿತು.

ಬಳ್ಳಾರಿಯ ಅಲ್ಲಂ ಸುಮಂಗಲಮ್ಮ ಮಹಿಳಾ ಕಾಲೇಜಿನಲ್ಲಿ ಬಿ.ಎ.ಡಿಗ್ರಿ ಪಡೆದ ನಂತರ ಅತ್ತಿತ್ತ ನೋಡದೇ, ಮತ್ತೇನು ವಿಚಾರ ಮಾಡದೇ ಶ್ರೀಮತಿ ಮಂಜುಳಾ ನೇರವಾಗಿ ಬೆಂಗಳೂರಿಗೆ ಬಂದು ರೇಣುಕಾಚಾರ್ಯ ಕಾನೂನು ಕಾಲೇಜಿನಲ್ಲಿ ಪ್ರವೇಶ ಪಡೆದರು. ಅವರ ಕಾನೂನು ಶಿಕ್ಷಣದ ಆಸಕ್ತಿಗೆ ನೀರೆರೆದವರು ಅವರ ತಂದೆಯವರು. 1977 ರಲ್ಲಿ ಕಾನೂನು ಪದವಿ ಗಳಿಸಿಯೇ ಬಳ್ಳಾರಿಗೆ ಅವರು ಹಿಂತಿರುಗಿದ್ದು.

ಬಳ್ಳಾರಿಯ ಬಾರ್‌ಗೆ ಸೇರುವ ಮೊದಲು, ಎಂದರೆ, ವಕೀಲಿವೃತ್ತಿಗೆ ಪ್ರವೇಶ ಪಡೆಯುವ ಮೊದಲು ಅವರಿಗೆ ಯೂರೋಪ್ ದೇಶಗಳ ಪ್ರವಾಸ ಮಾಡುವ ಅವಕಾಶ ದೊರಕಿತು. ಆ ಸಂದರ್ಭದಲ್ಲಿ ಒಂದು ವರ್ಷಕಾಲ ಅವರು ಇಂಗ್ಲೆಂಡಿನಲ್ಲಿ ತಮ್ಮ ಜ್ಞಾನದ, ಅನುಭವದ ಪರಿಧಿಯನ್ನು ವಿಸ್ತರಿಸಿಕೊಂಡರು. ತರಹಾಂನ ಕ್ರೌನ್ ಕೋರ್ಟ್‌ಗೆ ಹೋಗುತ್ತಾ ಆ ದೇಶದ ನ್ಯಾಯದಾನ ವ್ಯವಸ್ಥೆಯ ಪರಿಚಯವನ್ನು ಮಾಡಿಕೊಂಡರು. ನಂತರ ಭಾರತಕ್ಕೆ ಹಿಂತಿರುಗಿ ಬಂದು ವಕೀಲಿ ವೃತ್ತಿ ಸ್ವೀಕರಿಸಿ ತಮ್ಮ ತಂದೆಯವರ ಕಚೇರಿಯಲ್ಲಿ ಅವರ ಕೈಕೆಳಗೆ ತರಬೇತಿ ಪಡೆಯುತ್ತಾ ಎಲ್ಲರ ಮೆಚ್ಚಿಗೆ ಗಳಿಸಿದರು; ವೃತ್ತಿಯಲ್ಲಿ ಮಿಂಚಿದರು. ವೃತ್ತಿ ನಿಷ್ಠೆಯಿಂದ ಜೊತೆಯ ವಕೀಲರ, ನ್ಯಾಯಾಧೀಶರ ಗಮನ

ಸೆಳೆದರು. ಮಹತ್ವದ ಅಂಶವೆಂದರೆ ಅವರ ಪ್ರಥಮಗಳ ಸರಣಿ ಆರಂಭವಾದುದು ಅಲ್ಲಿಯೇ-ಬಳ್ಳಾರಿಯಲ್ಲಿ ವಕೀಲಿ ವೃತ್ತಿ ಕೈಗೊಂಡ ಮೊದಲ ಮಹಿಳಾ ನ್ಯಾಯವಾದಿ ಎನ್ನುವ ಹೆಗ್ಗಳಿಕೆ ಶ್ರೀಮತಿ ಮಂಜುಳಾ ಅವರಿಗೆ ಸಲ್ಲುತ್ತದೆ. ಪುರುಷ ಪ್ರಧಾನವಾದ ವಕೀಲ ವೃತ್ತಿಯಲ್ಲಿ ಏಕೈಕ ಮಹಿಳಾ ವಕೀಲಳಾಗಿ ಕೆಲಸ ಮಾಡುವುದು ಸುಲಭದ ವಿಷಯವಲ್ಲ. ಕಕ್ಷಿಗಾರರು ಅವರ ಸಾಮರ್ಥ್ಯದ ಮೇಲೆ ನಂಬಿಕೆ ಇಡಬೇಕಾಗುತ್ತದೆ. ನ್ಯಾಯಾಧೀಶರು ಅವರ ಕೆಲಸವನ್ನು ಸೂಕ್ತವಾಗಿ ಗುರುತಿಸಬೇಕಾಗುತ್ತದೆ. ಎಂದರೆ ಮಹಿಳೆಯರಿಗೆ ವೃತ್ತಿ ಗಾಂಭೀರ್ಯ ಉಳಿಸಿಕೊಳ್ಳಲು, ಸಾಮರ್ಥ್ಯ ಬೆಳೆಸಿಕೊಳ್ಳಲು, ಆತ್ಮವಿಶ್ವಾಸ ಗಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಈ ಬಗ್ಗೆ ಶ್ರೀಮತಿ ಮಂಜುಳಾ ಅದೃಷ್ಟ ಶಾಲಿಗಳು, ಅವರ ತಂದೆಯವರ ಶ್ರೀರಕ್ಷೆ ಮಾರ್ಗದರ್ಶನ ಸದಾ ಅವರಿಗೆ ಲಭ್ಯವಿತ್ತು. ಹೆಣ್ಣುಮಕ್ಕಳಿಗೆ ಹುಟ್ಟಿದ ಮನೆಯಲ್ಲಿ ಸೂಕ್ತ ಸ್ಥಾನ, ಪ್ರೋತ್ಸಾಹವಿದ್ದರೆ ಜೀವನದಲ್ಲಿ ಏನನ್ನು ಬೇಕಾದರೂ ಸಾಧಿಸಬಲ್ಲರು ಎಂಬುದಕ್ಕೆ ಶ್ರೀಮತಿ ಮಂಜುಳಾ ಅವರು ಸಾಕ್ಷಿಯಾಗಿದ್ದಾರೆ. ಅನೇಕ ಬ್ಯಾಂಕುಗಳಿಗೆ, ಆಗ್ರೋ ಇಂಡಸ್ಟ್ರೀಗೆ, ಕೆಇಬಿ, ಕೆಎಂಎಫ್, ಎಪಿಎಂಸಿ ಇತ್ಯಾದಿ ಸಂಸ್ಥೆಗಳಿಗೆ ಶ್ರೀಮತಿ ಮಂಜುಳಾ ಕಾನೂನು ಸಲಹೆಗಾರರಾಗಿದ್ದುದೂ ಅಲ್ಲದೇ ಅನೇಕ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ನಡೆಸಿ ಅನುಭವ ಗಳಿಸಿಕೊಂಡಿದ್ದರು.

ಅನೇಕ ವರ್ಷಗಳ ಕಾಲ ಮಹಿಳೆಯರಿಗೆ ನ್ಯಾಯಾಧೀಶರಾಗಿ ಕೆಲಸ ಮಾಡಲು ಅವಕಾಶವೇ ಇರಲಿಲ್ಲ. ಕೇರಳ, ಉತ್ತರ ಪ್ರದೇಶ, ಪಂಜಾಬ್ ಅಂತಹ ರಾಜ್ಯಗಳಲ್ಲಿ ಮಹಿಳಾ ನ್ಯಾಯಾಧೀಶರು, ಕೇರಳದಲ್ಲಂತೂ ಬಹಳ ಮೊದಲೇ ಉಚ್ಚ ನ್ಯಾಯಾಲಯದ ಮಹಿಳಾ ನ್ಯಾಯಮೂರ್ತಿಗಳು ಇದ್ದ ಕಾಲದಲ್ಲೂ, ನಮ್ಮ ರಾಜ್ಯದಲ್ಲಿ ತೀರ ಕೆಳಹಂತದ ನ್ಯಾಯಾಧೀಶರಾದ ಮುನ್ಸಿಫ್ ಮ್ಯಾಜಿಸ್ಟ್ರೇಟ್ ಹುದ್ದೆಗೂ ಮಹಿಳೆಯರನ್ನು ನೇಮಕ ಮಾಡಲು ಹಿಂಜರಿಯುತ್ತಿದ್ದ ಕಾಲವದು. 1980ರ ದಶಕದಲ್ಲಿ ನಿಧಾನವಾಗಿ ಒಬ್ಬಿಬ್ಬರು ಮುನ್ಸಿಫರಾಗಿ ಮಹಿಳೆಯರು ನೇಮಕಗೊಂಡಿದ್ದರು. ಮಹಿಳಾ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರನ್ನಂತೂ ಕನಸಿನಲ್ಲಿಯೂ ಕಲ್ಪಿಸಿಕೊಳ್ಳಲಾಗದಷ್ಟು ಮಹಿಳಾ ವಿರೋಧಿ ಕಾಲವದು. ಅಂತಹ ವಿರುದ್ಧ ಪರಿಸ್ಥಿತಿಯಲ್ಲೂ ಶ್ರೀಮತಿ ಮಂಜುಳಾ ರಾಜ್ಯದ ಒಬ್ಬ ಸಮರ್ಥ ಮಹಿಳಾ ವಕೀಲರಾಗಿ ಆಯ್ಕೆ ಸಮಿತಿಯ ಗಮನ ಸೆಳೆದರು. 1988ರಲ್ಲಿ ನಮ್ಮ ರಾಜ್ಯದ ಮೊಟ್ಟ ಮೊದಲ ಮಹಿಳಾ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ನೇಮಕಗೊಂಡರು. ಆ ಕಾಲಕ್ಕೆ ಇದೊಂದು ಬಹಳ ಹೆಮ್ಮೆಯ ಸಾಧನೆ.

ಮಹಿಳೆಯರನ್ನು ಮುನ್ಸಿಫರಾಗಿ / ಮ್ಯಾಜಿಸ್ಟ್ರೇಟರಾಗಿ, ಜಿಲ್ಲಾ ನ್ಯಾಯಾಧೀಶರಾಗಿ ನೇಮಕ ಮಾಡಿದರೆ ಅವರು ವರ್ಗಾವಣೆಗೊಂಡಾಗ ಬೇರೆ ಊರಿಗೆ ಹೋಗಿ ಕೆಲಸ ಮಾಡಲಾರರು, ಅವರಿಗೆ ತಂದೆಯ / ಗಂಡನ ರಕ್ಷಣೆ ಇಲ್ಲದಿದ್ದರೆ ಹೇಗೆ ಅಲ್ಲಿ ಕೆಲಸ ಮಾಡುತ್ತಾರೆ ಎನ್ನುವ ಪುರುಷರ ಅನಾವಶ್ಯಕ ಕಾಳಜಿ ನಿರಾಧಾರ ಎನ್ನುವುದನ್ನು ಶ್ರೀಮತಿ ಮಂಜುಳಾ ತೋರಿಸಿಕೊಟ್ಟರು. ಕೋಲಾರ, ಮೈಸೂರಿನ ಮುಖ್ಯ ಜಿಲ್ಲಾ ನ್ಯಾಯಾಧೀಶರಾಗಿ ಹಲವಾರು ವರ್ಷಕಾಲ ಕೆಲಸಮಾಡಿ ಅಲ್ಲಿಯ ವಕೀಲರ, ನ್ಯಾಯಾಪೇಕ್ಷಿಗಳ ಮೆಚ್ಚಿಗೆ ಗಳಿಸಿದರು. ಎಂತಹ ಕಠಿಣ ಮೊಕದ್ದಮೆಗೂ ಹೆದರದ ಗಟ್ಟಿತನ ಅವರದು. ನಂತರ ಬೆಂಗಳೂರಿನಲ್ಲಿಯೂ ಲಘು ವ್ಯಾಜ್ಯಗಳ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ಕೆಲಸ ಮಾಡಿದರು. ಕೌಟುಂಬಿಕ ನ್ಯಾಯಾಲಯಗಳ ಮುಖ್ಯ ನ್ಯಾಯಾಧೀಶರಾಗಿ ಅವರು ಕೌಟುಂಬಿಕ ವ್ಯಾಜ್ಯಗಳ ಬಗ್ಗೆ ತೋರುತ್ತಿದ್ದ ಸೂಕ್ಷ್ಮ ದೃಷ್ಟಿ, ಒಳನೋಟ ಅಂತಹ ನ್ಯಾಯಾಲಯಗಳ ನ್ಯಾಯಾಧೀಶರಲ್ಲಿ ಇರಬೇಕೆಂದು ನಿರೀಕ್ಷಿಸಿದ ಗುಣವಾಗಿತ್ತು.

1997ರಲ್ಲಿ ಇಂಗ್ಲೆಂಡಿನ ವಾರ್‌ವಿಕ್ ವಿಶ್ವವಿದ್ಯಾಲಯದಲ್ಲಿ "ಲಿಂಗ ಮತ್ತು ಕಾನೂನು" ವಿಷಯ ಕುರಿತು ವಿಶೇಷ ಅಧ್ಯಯನಕ್ಕಾಗಿ ಸರ್ವೋಚ್ಚ ನ್ಯಾಯಾಲಯ, ಶ್ರೀಮತಿ ಮಂಜುಳಾ ಚೆಲ್ಲೂರ್ ಅವರನ್ನು ಆಯ್ಕೆ ಮಾಡಿದುದು ಸೂಕ್ತವಾಗಿತ್ತು. ಈ ಅಧ್ಯಯನ ಮಂಜುಳಾ ಅವರಿಗೆ ವಿಶ್ವದ ಮಹಿಳೆಯರ ಸ್ಥಾನ-ಮಾನ, ಸ್ಥಿತಿ-ಗತಿ ಕುರಿತಂತೆ ದೊಡ್ಡ ಕಾನ್‌ವಾಸನ್ನು ಒದಗಿಸಿತು, ಮಹಿಳೆಯರ ಬಗೆಗಿನ ಕಾಳಜಿ ಕುರಿತಂತೆ ಅವರ ದೃಷ್ಟಿ ವಿಶಾಲವಾಯಿತು.

21-2-2000 – ಕರ್ನಾಟಕ ನ್ಯಾಯಾಂಗ ಇತಿಹಾಸದಲ್ಲಿ ಮಹತ್ವದ ದಿನ. ಅನೇಕ ವರ್ಷಕಾಲ ಮಹಿಳಾ ನ್ಯಾಯವಾದಿಗಳು ಉಚ್ಚ ನ್ಯಾಯಾಲಯದಲ್ಲಿ ಮಹಿಳಾ ನ್ಯಾಯಾಧೀಶರು ನೇಮಕಗೊಳ್ಳಬೇಕೆಂದು ನಡೆಸುತ್ತಾ ಬಂದಿದ್ದ ಹೋರಾಟ ಫಲಿತವಾದ ವರ್ಷ. ಶ್ರೀಮತಿ ಮಂಜುಳಾ ಚೆಲ್ಲೂರು ಅವರು ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಥಮ ಮಹಿಳಾ ನ್ಯಾಯಾಧೀಶರಾಗಿ ನೇಮಕಗೊಂಡು ಮಹಿಳೆಯರ ನಿರೀಕ್ಷೆ ಹೆಚ್ಚಿಸಿದರು. ನಿರೀಕ್ಷೆ ಹುಸಿಯಾಗದಂತೆ ಗುರುತರವಾದ ಜವಾಬ್ದಾರಿಯನ್ನು ಅವರು ನಿರ್ವಹಿಸುತ್ತಾ ಬಂದಿದ್ದಾರೆ, ಅನೇಕ ಮಹತ್ತರ ತೀರ್ಪುಗಳನ್ನು ನೀಡಿದ್ದಾರೆ.

ಹೊರ ಪ್ರಪಂಚ, ಕುಟುಂಬ, ಮಕ್ಕಳ ಹೊಣೆಗಾರಿಕೆ ಎಲ್ಲವನ್ನು ಮಹಿಳೆ ಸಮರ್ಥವಾಗಿ ತೂಗಿಸಿಕೊಂಡು ಹೋಗಬಲ್ಲಳು ಎಂಬುದನ್ನು ಶ್ರೀಮತಿ ಮಂಜುಳಾ ತೋರಿಸಿಕೊಟ್ಟಿದ್ದಾರೆ. ಡಾ. ಸಿ.ಎಸ್.ಗುಪ್ತಾ ಅವರನ್ನು ವಿವಾಹವಾಗಿ ನೆಮ್ಮದಿಯ ಕುಟುಂಬ ಜೀವನ ನಡೆಸುತ್ತಾ, ಇಬ್ಬರು ಮಕ್ಕಳನ್ನು ಪಡೆದಿದ್ದಾರೆ. ಮಗಳು ಕುಸುಮ ಭಾರತ, ವಿದೇಶಗಳಲ್ಲಿ ಭರತನಾಟ್ಯ ಕಾರ್ಯಕ್ರಮಗಳನ್ನು ಕೊಟ್ಟಿದ್ದರೆ, ಮಗ ವಂಶಿಕೃಷ್ಣ ಇಂಗ್ಲೆಡಿನಲ್ಲಿ ಎಲ್.ಎಲ್.ಎಂ. ಡಿಗ್ರಿ ಪಡೆದು ತಾತ-ತಾಯಿಯ ಹೆಜ್ಜೆಯಲ್ಲಿ ಹೆಜ್ಜೆ ಹಾಕುತ್ತಾ ವಕೀಲ ವೃತ್ತಿ ಕೈಗೊಂಡಿದ್ದಾನೆ.

ಮಂಜುಳಾ ಕೇವಲ ಕಾನೂನು ಪುಸ್ತಕ ಓದುತ್ತಾ ಕೂರುವವರಲ್ಲ, ಅವರಿಗೆ ಸಾಹಿತ್ಯದಲ್ಲಿ, ಕಲೆಯಲ್ಲಿ ಸಂಗೀತದಲ್ಲಿ ಅಪಾರ ಆಸಕ್ತಿ ಇದೆ. ತೋಟ ಮಾಡುವುದರಲ್ಲಿ, ಗಿಡ ಬೆಳೆಸುವುದರಲ್ಲಿ ಸಂತೋಷ ಕಾಣುತ್ತಾರೆ. ಇಂತಹ ಅನೇಕ ಮುಖಗಳ, ಆಸಕ್ತಿಗಳ ಶ್ರೀಮತಿ ಮಂಜುಳಾ ಚೆಲ್ಲೂರ್ ಅಪರೂಪದ ವ್ಯಕ್ತಿ. ಪತಿಯ, ಮಕ್ಕಳ ಬೆಂಬಲ, ಸಹಕಾರ ಅವರ ಪಾಲಿಗಿದೆ. ಎಲ್ಲಾ ಮಹಿಳೆಯರಿಗೂ ಹುಟ್ಟಿದ-ವಿವಾಹವಾದ ಮನೆಯಲ್ಲಿ ಇಂತಹ ಪರಿಸರ ದೊರೆತರೆ ಅದಕ್ಕಿಂತ ಹೆಚ್ಚಿನ ಅದೃಷ್ಟ ಬೇರಾವುದಿದೆ? ಮಹಿಳೆಯರು ಸಾಧಕಿಯರಾಗಲು ಉತ್ತಮ ಪರಿಸರ ಒದಗಿಸುವ ಹೊಣೆಗಾರಿಕೆ ಸಮಾಜದ್ದು, ಸರ್ಕಾರದ್ದು, ಹಾಗೂ ದೇಶದ್ದು. ಆಗ ಮಹಿಳೆಯರು ಕುಟುಂಬದ, ಸಮಾಜದ, ದೇಶದ ಅಮೂಲ್ಯ ಆಸ್ತಿಗಳಾಗುತ್ತಾರೆ.

ನ್ಯಾಯಮೂರ್ತಿ ಶ್ರೀಮತಿ ಮಂಜುಳಾ ಚೆಲ್ಲೂರು ಇನ್ನೂ ಮುಂದಿನ ದಿನಗಳಲ್ಲಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗುವ, ಸರ್ವೋಚ್ಚ ನ್ಯಾಯಾಲಯದ ನ್ಯಾಯಪೀಠವನ್ನು ಅಲಂಕರಿಸುವ ಅವಕಾಶ ಹೊಂದಿದ್ದಾರೆ. ಅದು ಅವರ ಸಾಮರ್ಥ್ಯದ ಗುರುತಿಸುವಿಕೆಯೂ ಆಗುತ್ತದೆ, ಹಾಗೆಯೇ ಅವರ ಸಾಮರ್ಥ್ಯಕ್ಕೆ ಸವಾಲೂ ಆಗುತ್ತದೆ. ಆ ಸವಾಲನ್ನು ಸಮರ್ಥವಾಗಿ ನಿಭಾಯಿಸುವ ಅರ್ಹತೆ, ಶಕ್ತಿ ಅವರಿಗಿದೆ.

——— * ———

ಅಂತಾರಾಷ್ಟ್ರೀಯ ಅಂಗವಿಕಲ ಕ್ರೀಡಾಪಟು ಮಾಲತಿ ಹೊಳ್ಳ

ಜಿ. ಶಿವಣ್ಣ

ಸಾಮಾನ್ಯ ಕ್ರೀಡಾಪಟು ರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿ ಪದಕಗಳನ್ನು ಗಳಿಸಿ ಕ್ರೀಡಾಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡುತ್ತಾರೆ. ಆದರೆ ದೇಹದಲ್ಲಿ ಅಂಗವೈಕಲ್ಯತೆ ಹೊಂದಿ ದಿನನಿತ್ಯದ ಕೆಲಸ ಕಾರ್ಯಗಳನ್ನು ನಿರ್ವಹಿಸುವುದೇ ಕಷ್ಟಕರವಾದ ಹಿನ್ನೆಲೆಯಲ್ಲಿ ಒಬ್ಬ ವ್ಯಕ್ತಿ ಕ್ರೀಡೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ರಾಷ್ಟ್ರೀಯ ಹಂತದ ಕ್ರೀಡೆಗಳಲ್ಲಿ ಅಲ್ಲದೇ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಪಂದ್ಯಾವಳಿಗಳಲ್ಲಿ ವಿಶೇಷ ಸಾಧನೆ ಮಾಡಿರುವವರು ಕರ್ನಾಟಕದ ಅಂಗವಿಕಲ ಕ್ರೀಡಾಪಟು ಕು. ಮಾಲತಿ ಕೃಷ್ಣಮೂರ್ತಿ ಹೊಳ್ಳ ಅವರು. ಒಬ್ಬ ಆರೋಗ್ಯವಂತ ಕ್ರೀಡಾಪಟು ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ವಿಶೇಷ ಸಾಧನೆ ಮಾಡುವುದು ಸಾಮಾನ್ಯ ಸಂಗತಿ. ಆದರೆ ಅಂಗವೈಕಲ್ಯತೆ ಇರುವಂತಹ ಕ್ರೀಡಾಪಟು ಅಂತಾರಾಷ್ಟ್ರಿಯ ಮಟ್ಟದ ಕ್ರೀಡಾಪಂದ್ಯಾವಳಿಗಳಲ್ಲಿ ಭಾಗವಹಿಸುವುದೇ ಒಂದು ವಿಶೇಷ. ಅದರಲ್ಲೂ ಅಂತರಾಷ್ಟ್ರೀಯ ಮಟ್ಟದ ಪಂದ್ಯಾವಳಿಗಳಲ್ಲಿ ಪದಕಗಳನ್ನು ಗಳಿಸುವುದು ಇನ್ನೂ ಹೆಮ್ಮೆಯ ವಿಷಯ. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ಗಾದೆಯಂತೆ ಕ್ರೀಡಾಪಟು ಕು. ಮಾಲತಿ ಕೃಷ್ಣಮೂರ್ತಿ ಹೊಳ್ಳ ಇವರು ಸಾಧಿಸದ ಯಾವುದೇ ಕ್ಷೇತ್ರವಿಲ್ಲ.

ಸಾಮಾನ್ಯ ಕ್ರೀಡಾಪಟುಗಳಿಗಾಗಿ ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಪಂದ್ಯಾವಳಿಗಳನ್ನು ಅಂತರಾಷ್ಟ್ರಿಯ ಮಟ್ಟದ ಕ್ರೀಡಾ ಫೆಡರೇಷನ್‌ಗಳು, ಒಲಂಪಿಕ್ ಸ್ಪೋರ್ಟ್ಸ್, ಏಷಿಯನ್ ಗೇಮ್ಸ್, ಸಾಫ್ಟ್‌ಗೇಮ್ಸ್, ಅಪ್ರೋ ಏಷಿಯನ್ ಗೇಮ್ಸ್‌ಗಳನ್ನು ಆಯೋಜಿಸುತ್ತವೆ. ಇದೇ ಮಾದರಿಯಲ್ಲಿ ವಿಶೇಷವಾಗಿ ಅಂಗವಿಕಲ ಕ್ರೀಡಾಪಟುಗಳ ಶ್ರೇಯೋಭಿವೃದ್ಧಿಗಾಗಿ ರೂಪಿತಗೊಂಡಿರುವ ಅಂಗವಿಕಲ ಕ್ರೀಡಾ ಸಂಸ್ಥೆ ಹಾಗೂ ಅಂಗವಿಲಕರ ಕ್ರೀಡಾ ಫೆಡರೇಷನ್‌ಗಳು, ಪ್ಯಾರಾ ಒಲಿಂಪಿಕ್ಸ್, ಏಷಿಯನ್ ಗೇಮ್ಸ್ ಹಾಗೂ ಸಂಬಂಧಿಸಿದ ಕ್ರೀಡಾ ವಿಭಾಗದ ಚಾಂಪಿಯನ್‌ಷಿಪ್‌ಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸುತ್ತವೆ. ಇಂತಹ ಅಂತರಾಷ್ಟ್ರೀಯ ಪಂದ್ಯಾವಳಿಗಳಿಗೆ ಆಯ್ಕೆಯಾಗುವುದೇ ಅಂಗವಿಕಲ ಕ್ರೀಡಾಪಟುಗಳಿಗೆ ದುರ್ಲಭವಾದ ಇಂದಿನ ಪರಿಸ್ಥಿತಿಯಲ್ಲಿ ಕು. ಮಾಲತಿ ಕೃಷ್ಣಮೂರ್ತಿ ಹೊಳ್ಳ ಅಂತರರಾಷ್ಟ್ರೀಯ ಪಂದ್ಯಾವಳಿಗಳಾದ ಪ್ಯಾರಾಲಿಂಪಿಕ್ಸ್, ಏಷಿಯನ್ ಗೇಮ್ಸ್‌ಗಳಂತಹ ಚಾಂಪಿಯನ್‌ಶಿಪ್‌ಗಳಿಗೆ ಆಯ್ಕೆಯಾಗಿ ಕ್ರೀಡಾ ಪಂದ್ಯಾವಳಿಗಳಲ್ಲಿ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಬಾಚಿಕೊಂಡಿರುವುದು ಇವರ ಕ್ರೀಡಾ ಪ್ರತಿಭೆಗೆ ಸಾಕ್ಷಿಭೂತವಾಗಿದೆ. ಇವರು ಈವರೆಗೆ ರಾಜ್ಯ, ರಾಷ್ಟ್ರೀಯ, ಅಂತರರಾಷ್ಟೀಯ ಮಟ್ಟದ ಕ್ರೀಡೆಗಳಲ್ಲಿ ಹೆಚ್ಚಿನ ಪ್ರತಿಭೆ ತೋರಿ ಇಂದಿನ ಅಂಗವಿಕಲ ಯುವಪೀಳಿಗೆಗೆ ಒಂದು ದಾರಿದೀಪವಾಗಿದ್ದಾರೆ.

ಮಾಲತಿ ಅವರು ಒಂದು ವರ್ಷದ ವಯಸ್ಸಿನ ಮಗುವಾಗಿದ್ದಾಗ ಪೋಲಿಯೊ ರೋಗಕ್ಕೆ ತುತ್ತಾಗಿ ಕಾಲುಗಳ ಶಕ್ತಿ ಕಳೆದುಕೊಂಡರು. ಒಟ್ಟು 27 ಬಾರಿ ಆಪರೇಷನ್‌ಗೆ ಒಳಗಾಗಿದ್ದರೂ ತನ್ನಲ್ಲಿನ ಈ ಅಂಗವೈಕಲ್ಯತೆಯನ್ನು ಬದಿಗಿಟ್ಟು ಕ್ರೀಡೆಯಲ್ಲಿ ಸಾಧಿಸಿದ ಗಣನೀಯ ಸಾಧನೆಗಾಗಿ ಇವರನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು

ಪ್ರಶಸ್ತಿಗಳನ್ನು ನೀಡಿ ಪುರಸ್ಕರಿಸಿ ಗೌರವಿಸಿರುವುದು ಔಚಿತ್ಯಪೂರ್ಣವೆನಿಸುತ್ತದೆ. ಮಾನಸಿಕ ಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವೀಧರೆಯಾಗಿರುವ ಮಾಲತಿ ಕೃಷ್ಣಮೂರ್ತಿ ಹೊಳ್ಳ ಇವರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಮ್ಯಾನೇಜರ್. ಇವರಿಗೆ ಈವರೆಗೆ ಸಂದ ಪ್ರಶಸ್ತಿಗಳು ಅನೇಕ – ಕೇಂದ್ರ ಸರ್ಕಾರದ ಪ್ರದ್ಮಶ್ರೀ, ಅರ್ಜುನ ಪ್ರಶಸ್ತಿ, ಕೆ.ಕೆ ಬಿರ್ಲಾ ಫೌಂಡೇಶನ್ ಪ್ರಶಸ್ತಿ, ರಾಜ್ಯ ಸರ್ಕಾರದ ಏಕಲವ್ಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ದಸರಾ ಪ್ರಶಸ್ತಿ. ಇವಲ್ಲದೆ ಭಾರತದ ಮತ್ತು ಹೊರದೇಶದ ಅನೇಕ ಸಂಘ ಸಂಸ್ಥೆಗಳು ಗೌರವಿಸಿ ಅನೇಕ ಬಿರುದು ಬಾವಲಿಗಳನ್ನು ನೀಡಿವೆ.

ಅಂಗವಿಕಲರಿಗಾಗಿಯೇ ರೂಪುಗೊಂಡಿರುವ ಪೆಸಿಫಿಕ್ ಗೇಮ್ಸ್‌ನಲ್ಲಿ ಪದಕ ಗೆದ್ದುಕೊಂಡ ಪ್ರಪ್ರಥಮ ಭಾರತೀಯ ಮಹಿಳೆ ಎಂಬ ಹಿರಿಮೆಗೆ ಪಾತ್ರರಾದವರು ಇವರು. ಅಂತರರಾಷ್ಟ್ರೀಯ ಅಂಗವಿಕಲ ಕ್ರೀಡಾ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಪದಕ ಪಾತ್ರರಾದವರು. ಇವರು ಅಂತರಾಷ್ಟ್ರಿಯ ಅಂಗವಿಕಲ ಕ್ರೀಡಾ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಪದಕ ಗಳಿಸಿರುವ ಹೊಳ್ಳ ಅವರು 1988ರಲ್ಲಿ ಸಿಯೋಲ್‌ನಲ್ಲಿ ಜರುಗಿದ ಪ್ಯಾರಾಲಿಂಪಿಕ್ಸ್‌ನಲ್ಲಿ ಎಂಟನೇ ಸ್ಥಾನ, 1989ರಲ್ಲಿ ವಿಶ್ವ ಪರಿಣಿತರ ಕ್ರೀಡಾಕೂಟ, ಡೆನ್‌ಮಾರ್ಕ್‌ನಲ್ಲಿ ಇವರು ಗಳಿಸಿದ್ದು ನಾಲ್ಕು ಚಿನ್ನ ಅಲ್ಲದೆ, 1991ರಲ್ಲಿ ಆಸ್ಟ್ರೇಲಿಯಾದ ಓಪನ್ ಚಾಂಪಿಯನ್‌ಷಿಪ್‌ನಲ್ಲಿ ಇವರು ಗಳಿಸಿದ್ದು ಮೂರು ಚಿನ್ನ, 1992ರಲ್ಲಿ ಅಂಗವಿಕಲರಿಗಾಗಿಯೇ ರೂಪಿತಗೊಂಡಿರುವ ಬಾರ್ಸಿಲೋನಾ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾಗವಹಿಸಿದ ಕೀರ್ತಿ ಇವರದು. 1994ರಲ್ಲಿ ಬೀಜಿಂಗ್‌ನಲ್ಲಿ ಜರುಗಿದ ದಕ್ಷಿಣ ಪೆಸಿಫಿಕ್ ಗೇಮ್ಸ್‌ನಲ್ಲಿ ಇವರು ಬೆಳ್ಳಿ ಪದಕ ಗಳಿಸಿರುತ್ತಾರೆ. 1999ರಲ್ಲಿ ಬ್ಯಾಂಕಾಕ್‌ನಲ್ಲಿ ಜರುಗಿದ ಅಂಗವಿಕಲ ಏಷಿಯನ್ ಗೇಮ್ಸ್‌ನಲ್ಲಿ ಕು. ಮಾಲತಿ ಕೆ. ಹೊಳ್ಳ ಇವರು ಕಂಚಿನ ಪದಕ ಗಳಿಸಿರುವುದು, ಇವರೂ ಈಗಲೂ ಸಹ ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ ಎಂಬುದನ್ನು ದೃಢೀಕರಿಸುತ್ತದೆ. ಅಂತರಾಷ್ಟ್ರೀಯ ಪಂದ್ಯಾವಳಿಗಳಲ್ಲದೆ ರಾಷ್ಟ್ರೀಯ ಕ್ರೀಡೆಗಳಲ್ಲೂ ಭಾಗವಹಿಸಿ ಪದಕ ಪಡೆದಿದ್ದಾರೆ. ಅವುಗಳಲ್ಲಿ ಪ್ರಮುಖವಾದ 1990ರಲ್ಲಿ ಅಹಮದಾಬಾದ್‌ನಲ್ಲಿ ಜರುಗಿದ ಅಖಿಲ ಭಾರತ ಅಂಗವಿಕಲ ಕ್ರೀಡಾಕೂಟದಲ್ಲಿ ನಾಲ್ಕು ಚಿನ್ನದ ಪದಕ ಗಳಿಸಿ ಪ್ರಥಮರೆನಿಸಿದ್ದರು. 1992ರಲ್ಲಿ ಕೊಲ್ಕತ್ತಾದಲ್ಲಿ ಜರುಗಿದ ಐದನೇ ರಾಷ್ಟ್ರೀಯ ಅಂಗವಿಕಲರ ಕ್ರೀಡಾಕೂಟದಲ್ಲಿ ಪಡೆದಿದ್ದಾರೆ. ಇವರು ವೈಯುಕ್ತಿಕವಾಗಿ ಮಾತೃ ಫೌಂಡೇಷನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ದೈಹಿಕವಾಗಿ ಅಂಗವೈಕಲ್ಯತೆ ಹೊಂದಿರುವ ಹುಡುಗರಿಗೆ ಉಚಿತ ವಸತಿ ನೀಡಿ, ಅವರುಗಳ ಶಾಲೆ ಹಾಗೂ ವೈದ್ಯಕೀಯ ವೆಚ್ಚಗಳನ್ನು ಭರಿಸುವ ಕಾಯಕವನ್ನು ಹೊಂದಿದ್ದಾರೆ. ಅಂಗವಿಕಲರ ಕಲ್ಯಾಣಕ್ಕೋಸ್ಕರವಾಗಿ ದುಡಿಯುತ್ತಿದ್ದು ತಾನು ಸ್ವತಃ ಕ್ರೀಡಾಪಟುವಾಗಿದ್ದು ಇತರೆ ಅಂಗವೈಕಲ್ಯತೆ ಹೊಂದಿರುವ ಕ್ರೀಡಾಪಟುಗಳನ್ನು ಪ್ರೇರೇಪಿಸಿ, ಅವರುಗಳು ಸಹ ಇತರೆ ಸಾಮಾನ್ಯ ಜನರಂತೆ ತಮ್ಮ ದಿನನಿತ್ಯದ ಕೆಲಸ ಕಾರ್ಯಗಳನ್ನು ಸರಿದೂಗಿಸಿಕೊಂಡು ಹೋಗುವಂತೆ ಆಗಲು ಹಾಗೂ ಇಂದಿನ ಕಿರಿಯ ಕ್ರೀಡಾಪಟುಗಳು ಕೂಡ ಇವರದೇ ಮಾದರಿಯಲ್ಲಿ, ವಿವಿಧ ಕ್ರೀಡೆಗಳಲ್ಲಿ ಹೆಚ್ಚಿನ ಸಾಧನೆ ಮಾಡುವಂತಾಗಲು ಕಾರಣಕರ್ತರಾಗಿದ್ದಾರೆ. ಕ್ರೀಡಾಕ್ಷೇತ್ರದಲ್ಲಿನ ಇವರ ಈ ಸಾಧನೆಯ ದ್ಯೋತಕವಾಗಿ ಕೇಂದ್ರ ಸರ್ಕಾರವು ಇವರಿಗೆ 2000–01ನೇ ಸಾಲಿಗೆ ಅತ್ಯುತ್ಕೃಷ್ಟ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿರುವುದು ಔಚಿತ್ಯಪೂರ್ಣವೆನಿಸುತ್ತದೆ.

ದೇಹದಲ್ಲಿನ ತನ್ನ ಅಂಗವೈಕಲ್ಯತೆಯನ್ನು ಕಡೆಗಣಿಸಿ ಕ್ರೀಡಾಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ಕು. ಮಾಲತಿ ಕೆ. ಹೊಳ್ಳ ಆತ್ಮವಿಶ್ವಾಸದದ ಗಣಿ. ಇವರು ಈವರೆಗೆ ರಾಷ್ಟ್ರೀಯ, ಅಂತರಾಷ್ಟ್ರೀಯ ಕ್ರೀಡಾಪಂದ್ಯಾವಳಿಗಳಲ್ಲಿ ಗಳಿಸಿರುವ ಒಟ್ಟು ಪದಕಗಳ ಸಂಖ್ಯೆ 211. ಇದು ಅವರಲ್ಲಿನ ಮನೋಸ್ಥೈರ್ಯವನ್ನು ಬಿಂಬಿಸುತ್ತದೆ. ರಾಷ್ಟೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಗಹಿಸಿದ್ದಲ್ಲದೆ ವಿಶ್ವ ಮಾಸ್ಟರ್‌ಗೇಮ್ಸ್, ಪ್ಯಾರಾಲಿಂಪಿಕ್ಸ್ ಮತ್ತು ಏಷಿಯನ್ ಪೆಸಿಫಿಕ್ ಗೇಮ್ಸ್ ಈ ಪಂದ್ಯಾವಳಿಗಳಲ್ಲಿ ಡಿಸ್‌ಕಸ್, ಷಾಟ್‌ಪುಟ್, ವೀಲ್‌ಚೇರ್ ರೇಸ್, ಜಾವೆಲಿನ್ ಥ್ರೋ ಮುಂತಾದ ಸ್ಪರ್ಧೆಗಳಲ್ಲಿ ಭಾಗವಹಿಸಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗಳಿಸಿದ ದಾಖಲೆ ಅಪೂರ್ವ. ಮಾಲತಿಯವರೇ

ಹೇಳುವಂತೆ ಇವರ ತಂದೆ ಕೃಷ್ಣಮೂರ್ತಿ ಹೊಳ್ಳ ಇವರ ಮಾರ್ಗದರ್ಶಕರು, ಸ್ನೇಹಿತರು ಹಾಗೂ ಪ್ರೋತ್ಸಾಹಕರು, ಸಮಾಜದ ಬೇರೆ ಜನರಂತೆ ಬದುಕಲು ಕಲಿಸಿದ ಮಾರ್ಗದರ್ಶನ ಮಾಡಿದ ಗುರು ಎಂದು ತನ್ನ ತಂದೆಯನ್ನು ನೆನಪಿಸಿಕೊಳ್ಳುತ್ತಾರೆ.

ಪ್ರಸ್ತುತ ಸಿಂಡಿಕೇಟ್ ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿರುವ ಮಾಲತಿ ಕೆ. ಹೊಳ್ಳ ಅವರು ಕ್ರೀಡೆಯ ಬಗ್ಗೆ ತಮ್ಮಲ್ಲಿರುವ ಅದಮ್ಯ ಉತ್ಸಾಹದ ಜೊತೆಗೆ ಅಂಗವೈಕಲ್ಯತೆಯುಳ್ಳ ಇತರ ಕ್ರೀಡಾಪಟುಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಹಾಗೂ ಅವರುಗಳನ್ನು ಕ್ರೀಡಾ ಕ್ಷೇತ್ರಕ್ಕೆ ತೊಡಗಿಸುವ ತಾವೇ ಅವರುಗಳಿಗೆ ತರಬೇತುದಾರರಾಗುವ ಅಭಿಲಾಷೆಯನ್ನು ಹೊಂದಿದ್ದಾರೆ. ಹಾಗೂ ಮಾನಸಿಕವಾಗಿ ಅವರನ್ನು ಸದೃಢಗೊಳಿಸಲು ಇನ್ನೂ ಎರಡು ವರ್ಷ ತಾವು ಕಾರ್ಯೋನ್ಮುಖರಾಗುವ, ಮತ್ತು ಹೊಸ ಕಾರ್ಯಕ್ರಮ ರೂಪಿಸುವ ಅದಮ್ಯ ಉತ್ಸಾಹ ಹೊಂದಿದ್ದಾರೆ.

ಬೆಂಗಳೂರು ಆಸ್ಪತ್ರೆಯಲ್ಲಿ ಇವರಿಗೆ ಮೂರು ವರ್ಷ ವಯಸ್ಸಿನಿಂದ 15 ವರ್ಷಗಳವರೆಗೆ ಸತತವಾಗಿ ಷಾಕ್ ಶುಶ್ರೂಷೆ ನೀಡಲಾಯಿತು. ಆಡ್ಯಾರ್‌ನ, ಆರ್ಥೋಪೆಡಿಕ್ ಸೆಂಟರ್‌ನಲ್ಲಿ ಚಿಕಿತ್ಸೆ ಪಡೆಯುವುದರ ಜೊತೆ ಜೊತೆಗೇ ಇವರು ತಮ್ಮ ಕ್ರೀಡಾಭ್ಯಾಸವನ್ನೂ, ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನೂ ಮುಂದುವರೆಸಿದರು. ಮನಃಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವೀಧರೆಯಾಗಿರುವ ಇವರು ಕೇಂದ್ರ ಸರ್ಕಾರದ ಅರ್ಜುನ ಪ್ರಶಸ್ತಿ ಹಾಗೂ ಪದ್ಮಶ್ರೀ ಪ್ರಶಸ್ತಿ ಪಡೆದಿದ್ದಾರೆ.

ಮಾಲತಿ ಹೊಳ್ಳ ಅವರು ಪಡೆದ ಪ್ರತಿಷ್ಠಿತ ಪ್ರಶಸ್ತಿಗಳು

- 1. • 2000 – ಪದ್ಮಶ್ರೀ ಪ್ರಶಸ್ತಿ
- 2. • 1995 – ಅರ್ಜುನ ಪ್ರಶಸ್ತಿ
- 3. • 1995 – ಕೆ.ಕೆ. ಬಿರ್ಲಾ ಫೌಂಡೇಶನ್ ಪ್ರಶಸ್ತಿ
- 4. • 1989 – ರಾಜ್ಯೋತ್ಸವ ಪ್ರಶಸ್ತಿ
- 5. • 1988 – ದಸರಾ ಪ್ರಶಸ್ತಿ
- 6. • 1990 – ಕರ್ನಾಟಕ ರಾಜ್ಯದ ಔಟ್ ಸ್ಟ್ಯಾಂಡಿಂಗ್ ಕ್ರೀಡಾಪಟು
- 7. • 1995 – ಏಕಲವ್ಯ ಪ್ರಶಸ್ತಿ
- 8. • 1999 – ಇಂಗ್ಲೆಂಡಿನ ಕೇಂಬ್ರಿಡ್ಜ್ ಅಂತರಾಷ್ಟ್ರೀಯ ಬಯೋಗ್ರಫಿಕಲ್ ಕೇಂದ್ರದಿಂದ 'ಇಂಟರ್‌ನ್ಯಾಷನಲ್ ವುಮನ್'
- 9. • 1999 – ಅಮೇರಿಕಾ ಬಯೋಗ್ರಫಿಕಲ್ ಕೇಂದ್ರದಿಂದ ವುಮನ್ ಆಫ್ ದಿ ಇಯರ್
- 10. • 1999 – ಗ್ರೇಟ್ ಇಂಡಿಯನ್ ಅಚೀವರ್ಸ್ ಅವಾರ್ಡ್
- 11. • 1999 – ಸಿಂಡಿಕೇಟ್ ಆನ್ಯುಯಲ್ ಅವಾರ್ಡ್
- 12. • 2000 – ಡಿಸೇಬಲ್ಡ್ ಸ್ಪೋರ್ಟ್ಸ್ ವುಮೆನ್
- 13. • 2003 – ಮೋಟಿವೇಷನ್ ಆಫ್ ಎಕ್ಸಲೆನ್ಸ್ ಅವಾರ್ಡ್
- 14. • 1999 – ದಿ ಸಿಟಿಜನ್ ಆಫ್ ಇಂಡಿಯಾ ಅವಾರ್ಡ್
- 15. • 1997 – ಪ್ರತಿಭಾ ರತ್ನ ಪ್ರಶಸ್ತಿ

- 16. • 1997 – ಮಾರ್ಗದರ್ಶಿ ಪ್ರಶಸ್ತಿ
- 17. • 1996 – ಪ್ರತಿಭಾಶ್ರೀ ಪ್ರಶಸ್ತಿ
- 18. • 1989 – ಔಟ್ ಸ್ಟಾಂಡಿಂಗ್ ಡಿಸೇಬಲ್ಡ್ ಸ್ಪೋರ್ಟ್ಸ್ ಪರ್ಸನ್ ಅವಾರ್ಡ್
- 19. • 1988 – ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ
- 20. • 1983 – ಬೆಸ್ಟ್ ಸ್ಪೋರ್ಟ್ಸ್ ಮೊಬೆಲೈಸರ್ ಅವಾರ್ಡ್
- 21. • 2003 – ವುಮನ್ ಆಫ್ ದಿ ಇಯರ್
- 22. • 1992 – ಮಾಲತಿ ಹೊಳ್ಳ ಅಂತರರಾಷ್ಟ್ರೀಯ ಅಂಗವಿಕಲ ಆಥ್ಲೆಟ್ ಬಗ್ಗೆ ಸಿದ್ಧಪಡಿಸಿದ್ದ ಥೀಸೀಸ್‌ಗೆ ಅನಂತಮೂರ್ತಿ ಅವರಿಗೆ ಎಂ.ಫಿಲ್. ಪದವಿ.
- 23. • ಕಾಮನಬಿಲ್ಲು ಚಿತ್ರದಲ್ಲಿ ಡಾ. ರಾಜಕುಮಾರ್ ಜೊತೆ ಸಹನಟಿಯಾಗಿ
- 24. • 2004 – ಕರ್ನಾಟಕ ಸರ್ಕಾರದಿಂದ ಬೆಸ್ಟ್ ಸ್ಪೋರ್ಟ್ಸ್ ವುಮೆನ್ ಪ್ರಶಸ್ತಿ

ಮೆಡಲ್ಸ್ ಟ್ಯಾಲಿ

ಚಿನ್ನ – 177
ಬೆಳ್ಳಿ – 26
ಕಂಚು – 8

ಗೆದ್ದ ಒಟ್ಟು ಪದಕಗಳು =211

ವಿವರಗಳು

	ಚಿನ್ನ	ಬೆಳ್ಳಿ	ಕಂಚು
ಅಂತರರಾಷ್ಟ್ರೀಯ ಮಟ್ಟ	10	5	–
ರಾಷ್ಟ್ರೀಯ ಮಟ್ಟ	124	16	7
ರಾಜ್ಯ ಮಟ್ಟ	43	5	1

ಟ್ರೋಫಿಯೊಂದಿಗೆ 13 ಬಾರಿ ಮಹಿಳಾ ಚಾಂಪಿಯನ್‌ಶಿಪ್

- ರಾಷ್ಟ್ರೀಯ ಮಟ್ಟ • 13 ಬಾರಿ
- ರಾಜ್ಯ ಮಟ್ಟ • 18 ಬಾರಿ

1981ರಿಂದ ರಾಷ್ಟ್ರೀಯ ಮಟ್ಟದ ಚಾಂಪಿಯನ್‌ಶಿಪ್ ಅನ್ನು ಉಳಿಸಿಕೊಂಡಿದ್ದಾರೆ.

ಮಾಲತಿ ಹೊಳ್ಳ ಅವರು, ವಿವಿಧ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಇನ್ನಷ್ಟು ಭಾಗವಹಿಸಿ, ಇನ್ನೂ ಹೆಚ್ಚಿನ ಪದಕಗಳನ್ನು ಗಳಿಸಲಿ, ಇವರದೇ ಮಾದರಿಯಲ್ಲಿ ಇತರ ಅಂಗವಿಕಲ ಕ್ರೀಡಾಪಟುಗಳೂ ಸಹ ಇವರ ನೆರವು ಮತ್ತು ಮಾರ್ಗದರ್ಶನದಿಂದ ಹೆಚ್ಚಿನ ಯಶಸ್ಸು ಸಾಧಿಸುವಂತಾಗಲಿ ಎಂಬ ಹಾರೈಕೆ ನಮ್ಮದು.

———— * ————

ಕರ್ನಾಟಕದ ಕ್ರೀಡಾತಾರೆಗಳು

ಜಿ. ಶಿವಣ್ಣ

ಕರ್ನಾಟಕದಲ್ಲಿ ಕ್ರೀಡಾಪಟುಗಳು ಹಲವು ಸಾಧನೆಗಳ ರೂವಾರಿಗಳು. ಪುರುಷ ಕ್ರೀಡಾಪಟುಗಳೊಂದಿಗೆ ಮಹಿಳಾ ಕ್ರೀಡಾಪಟುಗಳು ಕೂಡ ಸಮನಾಗಿ ಸೆಣಸುತ್ತಿದ್ದಾರೆ. ರಾಜ್ಯ-ರಾಷ್ಟ್ರಮಟ್ಟದಲ್ಲಿ ಮಿಂಚಿದ ಹಲವಾರು ಕ್ರೀಡಾಪಟುಗಳು ಇಂದು ವಿಶ್ವವಿಖ್ಯಾತರಾಗಿದ್ದಾರೆ. ಕರ್ನಾಟಕ ರಾಜ್ಯಕ್ಕೆ ಕೀರ್ತಿ ತಂದ ಹಲವಾರು ಕ್ರೀಡಾಪಟುಗಳು ರಾಜ್ಯದ ಏಕಲವ್ಯ ಪ್ರಶಸ್ತಿ, ರಾಷ್ಟ್ರಮಟ್ಟದ ಅರ್ಜುನ, ದ್ರೋಣಾಚಾರ್ಯ ಪ್ರಶಸ್ತಿಗಳು, ರಾಜೀವ್‌ಗಾಂಧಿ ಖೇಲ್ ರತ್ನ ಅಲ್ಲದೆ ಪದ್ಮಶ್ರೀ ಪ್ರಶಸ್ತಿಗಳಿಂದ ಪುರಸ್ಕೃತಗೊಂಡಿದ್ದಾರೆ.

ಪ್ರಖ್ಯಾತ ಅಂತಾರಾಷ್ಟ್ರೀಯ ಕ್ರೀಡಾಪಟುಗಳಲ್ಲಿ ಹಲವರು ಕರ್ನಾಟಕದವರು. ಅವರಲ್ಲಿ ಪ್ರಮುಖರಾದವರು ಎಲ್ವಿರಾ ಬ್ರಿಟ್ಟೋ, ಇ.ಎ.ಎಸ್.ಪ್ರಸನ್ನ, ಬಿ.ಎಸ್.ಚಂದ್ರಶೇಖರ್, ಜಿ.ಆರ್.ವಿಶ್ವನಾಥ್, ಎಂ.ಪಿ.ಗಣೇಶ್, ಶಾಂತಾ ರಂಗಸ್ವಾಮಿ, ಏಂಜಲ್ ಮೇರಿ ಜೊಸೆಫ್, ಎ.ಬಿ. ಸುಬ್ಬಯ್ಯ, ಮಾಲತಿ ಹೊಳ್ಳ, ಮಹಾದೇವ, ಎಸ್.ಡಿ.ಈಶನ್, ಎಸ್.ಎಂ.ಎಚ್. ಕಿರ್ಮಾನಿ, ಅರವಿಂದ ಸವೂರ್, ಎಸ್. ಪ್ರಕಾಶ್, ಡಿ.ವಿ. ಪ್ರಸಾದ್, ಕಲ್ಲೇಗೌಡ, ಶೋಭಾ ನಾರಾಯಣ, ಸತೀಶ್ ರೈ, ಟಿ. ರಮೇಶ್, ಜೆ.ಜೆ. ಶೋಭಾ, ಹೆಲನ್ ಮೇರಿ, ಜಿ. ವೆಂಕಟರಮಣಪ್ಪ, ಜಾವಗಲ್ ಶ್ರೀನಾಥ್, ಪ್ರಕಾಶ್ ಪಡುಕೋಣೆ, ರಂಜನಿ ರಾಮಾನುಜಂ, ರೀತ್ ಅಬ್ರಾಹಂ, ನಿಶಾ ಮಿಲ್ಲೆಟ್, ಆಶೀಶ್ ಬಳ್ಳಾಲ್, ಶೋಭಾ ಮೂರ್ತಿ, ಜಯಮ್ಮ ಶ್ರೀನಿವಾಸನ್, ಬಿ.ಪಿ. ಗೋವಿಂದ, ಸಿ.ಸಿ. ಮಾಚಯ್ಯ, ವಂದನಾರಾವ್, ಸಿ. ಹೊನ್ನಪ್ಪ, ವೆಂಕಟೇಶ್ ಪ್ರಸಾದ್, ಅಭಿಜಿತ್, ಅರ್ಪಣ ಪೊಪಟ್, ಶಿಖಾ ಟಂಡನ್, ಜಿ ಮನೋಹರನ್, ಬಿ.ಸಿ. ರಮೇಶ್, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ದ್ರೋಣಾಚಾರ್ಯ ಪ್ರಶಸ್ತಿ ವಿಜೇತರು- ಅರವಿಂದ ಸವೂರ್, ದ್ರೋಣಾಚಾರ್ಯ ಪ್ರಶಸ್ತಿ ವಿಜೇತರು- ಕ್ಯಾಪ್ಟನ್ ವೇಣು, ರಾಜೀವ್ ಗಾಂಧೀ ಖೇಲ್ ರತ್ನ ಪ್ರಶಸ್ತಿ ವಿಜೇತರು- ಪಂಕಜ್ ಅದ್ವಾನಿ, ಧ್ಯಾನ್‌ಚಂದ್ ಪ್ರಶಸ್ತಿ ವಿಜೇತರು- ಉದಯ ಕೆ. ಪ್ರಭು ಅವರು ಸಾಧಿಸಿದ ಉನ್ನತ ಶ್ರೇಣಿ ರಾಜ್ಯ ಮೆಚ್ಚುವಂತಹದು. ರಾಷ್ಟ್ರದ ಹೆಮ್ಮೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಇವರ ಹೆಸರು ಅಜರಾಮರ.

ರಾಜ್ಯವು ಜಿಲ್ಲೆಗಳನ್ನು ಹೊಂದಿದ್ದು ಈ ಜಿಲ್ಲೆಗಳ ಪೈಕಿ ಅತಿ ಚಿಕ್ಕ ಜಿಲ್ಲೆ ಕೊಡಗು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆಯಂತೆ ಈ ಜಿಲ್ಲೆಯ ಮಹಾನ್ ಯೋಧರನ್ನು ಹಾಗೂ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕಲಿಗಳನ್ನು ರಾಷ್ಟ್ರಕ್ಕೆ ಸರ್ಮಪಿಸಿದೆ. ಅವರುಗಳಲ್ಲಿ ಪ್ರಮುಖ ಯೋಧ ಕೊಡಗಿನ ಕಲಿ, ಫೀಲ್ಡ್ ಮಾರ್ಷಲ್ ಕಾರಿಯಪ್ಪ ಹಾಗೂ ಜನರಲ್ ತಿಮ್ಮಯ್ಯ. ಇಲ್ಲಿನ ಯುವಕರು ಸೇನೆಯಲ್ಲಿ ಮಹಾನ್ ಸಾಧನೆ ಮಾಡಲು ಯಾವಾಗಲೂ ಉತ್ಸುಕರಾಗಿರುತ್ತಾರೆ. ದೇಶ ಸೇವೆಯೇ ಇವರ ಮುಖ್ಯ ಗುರಿ. ಸೇನೆಯಲ್ಲದೆ ಕ್ರೀಡಾ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕಲಿಗಳನ್ನು ಸೃಷ್ಟಿಸಿದ ಜಿಲ್ಲೆ ಕೊಡಗು. ಇವರುಗಳಲ್ಲಿ ಪ್ರಮುಖರೆಂದರೆ ಒಲಂಪಿಕ್ಸ್‌ನಲ್ಲಿ ಅಂದು ಭಾರತ ಸ್ವರ್ಣ ಗೆಲ್ಲಲು ಮುಖ್ಯ ಕಾರಣಕರ್ತರೆಂದರೆ ಎಂ.ಪಿ ಗಣೇಶ್, ಬಿ.ಪಿ.ಗೋವಿಂದ, ಕರ್ನಾಟಕದ ಕಾಶ್ಮೀರವೆಂದೇ ಗುರುತಿಸಲ್ಪಟ್ಟಿರುವ ಕೊಡಗಿನ ಇತರೆ ಕ್ರೀಡಾಪಟುಗಳೆಂದರೆ ಎ.ಬಿ.ಸುಬ್ಬಯ್ಯ ಎಂ.ಡಿ.ಮುತ್ತಯ್ಯ. ಎಂ.ವಿ.ಅಪ್ಪಯ್ಯ, ವಿನೋದ್ ಚಿನ್ನಪ್ಪ, ಸಿ.ಎಸ್. ಪೂಣಚ್ಚ, ಬಿ.ಸಿ ಪೂಣಚ್ಚ, ಕೆ.ಕೆ.ಬೋಪಣ್ಣ, ಆಶಿಶ್‌ಕುಮಾರ್ ಬಲ್ಲಾಳ್.

ಇತ್ತೀಚೆಗೆ 2002ರಲ್ಲಿ ಆಸ್ಟ್ರೇಲಿಯಾದ ಹೋಬರ್ಟ್ ನಗರದಲ್ಲಿ ನಡೆದ ವಿಶ್ವ ಜೂನಿಯರ್ ಹಾಕಿ ಪಂದ್ಯಾವಳಿಯನ್ನು ಗೆದ್ದ ಭಾರತ ತಂಡದಲ್ಲಿ ಇದ್ದು ಪ್ರಚಲಿತ ಭಾರತ ಹಾಕಿ ತಂಡದ ಸದಸ್ಯ ಅರ್ಜುನ್ ಹಾಲಪ್ಪ ಸಹ ಕೊಡಗಿನವರೆ. ಏಷಿಯನ್ ಗೇಮ್ಸ್, ದಕ್ಷಿಣ ಏಷಿಯನ್ ಫೆಡೆರೇಷನ್ ಗೇಮ್ಸ್‌ನಂಥ ಖ್ಯಾತ ಅಂತರಾಷ್ಟ್ರೀಯ ಪಂದ್ಯಗಳ ಪದಕ ವಿಜೇತೆ ಅಶ್ವಿನಿ ನಾಚಪ್ಪ ಅಥ್ಲೆಟಿಕ್ಸ್‌ನಲ್ಲಿ ಮೇರು ಸಾಧನೆ ಮಾಡಿದವರು.

ಅಶ್ವಿನಿ ನಾಚಪ್ಪ ಮೂಲತಃ ಕೊಡಗಿನವರು. ಇವರು ಹುಟ್ಟಿದ್ದು 21.10.1967ರಲ್ಲಿ. ಇವರ ತಂದೆ ಪಶ್ಚಿಮ ಬಂಗಾಳದಲ್ಲಿ ಉದ್ಯೋಗದಲ್ಲಿದ್ದುದರ ದೆಸೆಯಿಂದ ಅಲ್ಪಕಾಲದವರೆಗೆ ಇವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕೋಲ್ಕತ್ತದಲ್ಲಿ ಮುಂದುವರೆಸಬೇಕಾಯಿತು. ನಂತರ ಇವರ ಕುಟುಂಬ ಬೆಂಗಳೂರಿಗೆ ಬಂದು ನೆಲೆಸಿತು. ಈ ಹಿನ್ನೆಲೆಯಲ್ಲಿ ಅಶ್ವಿನಿ ನಾಚಪ್ಪ ಪ್ರಾಥಮಿಕ ಹೈಯರ್ ಸೆಕೆಂಡರಿ ಪದವಿ ತಮ್ಮ ಈ ಎಲ್ಲಾ ವಿದ್ಯಾಭ್ಯಾಸವನ್ನು ಸಂಪೂರ್ಣವಾಗಿ ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿಯೇ ಮುಂದುವರೆಸಿದರು. ಸಾಮಾನ್ಯವಾಗಿ ಕ್ರೀಡೆಯಲ್ಲಿ ಹೆಚ್ಚಿನ ಸಾಧನೆ ಮಾಡಿದವರಿಗೆ ಶೈಕ್ಷಣಿಕ ವಿದ್ಯಾಭ್ಯಾಸದ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸಲು ಸಮಯದ ಅಭಾವ ಇರುತ್ತದೆ. ಶಿಕ್ಷಣ ಹಾಗೂ ಕ್ರೀಡೆ ಈ ಎರಡೂ ಕ್ಷೇತ್ರಗಳಲ್ಲಿ ಸಮಾನ ಸಾಧನೆಗೈಯಲು ಸಾಧ್ಯವಾಗುವುದಿಲ್ಲ. ಇದಕ್ಕೆ ಅಪವಾದವಾಗಿ ನಿಲ್ಲುತ್ತಾರೆ ಅಶ್ವಿನಿ ನಾಚಪ್ಪ ಇವರು ಬಿ.ಎ.ಪದವೀಧರೆ.

ಕೊಡಗಿನ ಮಹಾನ್ ಅಥ್ಲೆಟಿಕ್ ತಾರೆ ಅಶ್ವಿನಿ ನಾಚಪ್ಪ

ಆಟದ ಮೈದಾನ ಇಲ್ಲದ ಶಾಲೆಗಳಿಗೆ ಸರ್ಕಾರದ ಅನುಮತಿ ಕೊಡುತ್ತದೆ? ಆಟದ ಮೈದಾನ ಇಲ್ಲದ ಶಾಲೆಗಳಲ್ಲಿ ಮಕ್ಕಳು ಆಟವಾಡಲು ಎಲ್ಲಿಗೆ ಹೋಗ್ತಾರೆ? ಅಥ್ಲೆಟ್ ಇನ್ನಿತರೆ ಕ್ರೀಡೆಗಳಲ್ಲಿ ಸಾಧನೆ ಮಾಡು ಎಂದರೆ ಹೇಗೆ ಎಂದು ಪ್ರಶ್ನೆ ಕೇಳುವ ಅಶ್ವಿನಿ ನಾಚಪ್ಪ ಕ್ರೀಡೆಯಲ್ಲಿ ಗಿರಿ ತಲುಪಿ ಪ್ರಶಸ್ತಿ ಪಡೆದಿದ್ದರಿಂದ ಖ್ಯಾತಿ ಪಡೆದಂತಹ ಕ್ರೀಡಾಪಟು. ಕಿತ್ತಲೆ ನಾಡೆಂದೇ ಪ್ರಖ್ಯಾತಿ ಪಡೆದ ಕೊಡಗಿನ ಬೆಡಗಿ ಈಕೆ. ಅಥ್ಲೆಟ್‌ನಲ್ಲಿ ರಾಜ್ಯಕ್ಕೆ ಘನತೆ ಗೌರವ ತಂದುಕೊಟ್ಟಿದ್ದರ ಜೊತೆಗೆ ಚಲನಚಿತ್ರ ಕ್ಷೇತ್ರದಲ್ಲಿಯೂ ನಟಿಯಾಗಿ ಮಿಂಚಿದ್ದರಿಂದ ಗ್ಲಾಮರ್ ಬಂದಿದೆ. ಅಶ್ವಿನಿ ನಾಚಪ್ಪ ಮೊದಲನೆ ದರ್ಜೆ ಅಥ್ಲೆಟ್ ಆಗಿ ನಿವೃತ್ತರಾಗಿದ್ದರೂ ಕ್ರೀಡೆ ಕುರಿತಂತೆ ತಮ್ಮ ಆಸಕ್ತಿಯನ್ನು ಮುಂದುವರಿಸಿದ್ದಾರೆ. ತಮ್ಮ ಮಗಳಿಗೆ ಬ್ಯಾಟ್‌ಮಿಂಟನ್ ತರಬೇತಿ ನೀಡುತ್ತಿರುವ ಅಶ್ವಿನಿ ನಾಚಪ್ಪ ಕೊಡಗಿನ ಗೋಣಿಕೊಪ್ಪಲಿನಲ್ಲಿ ಶಿಕ್ಷಣ ಹಾಗೂ ಕ್ರೀಡೆ ಕಲಿಕೆ ಶಾಲೆಯೊಂದನ್ನು ಆರಂಭಿಸಿದ್ದಾರೆ.

ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿಲ್ಲ ಎಂದು ಸ್ಪಷ್ಟವಾಗಿ ನುಡಿಯುವ ಇವರು "ಈಗ ಅಥ್ಲೆಟಿಕ್‌ನಲ್ಲಿ ಅಂಜು ಬಾಬಿ ಟ್ರಾಕ್‌ನಲ್ಲಿದ್ದಾಳೆ. ಪುರುಷರು ಅಥ್ಲೆಟಿಕ್‌ನಲ್ಲಿ ಕಾಣುತ್ತಿಲ್ಲ. ಕ್ರೀಡೆಗೆ ಪ್ರೋತ್ಸಾಹ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಹಿನ್ನೆಲೆಯಲ್ಲಿ ನಾವು ಆಡುತ್ತಿದ್ದ ಕಾಲದಲ್ಲಿ ಸೌಕರ್ಯಗಳ ಕೊರತೆ ಎದ್ದು ಕಾಣುತ್ತಿತ್ತು. ಉಷಾ, ವಲ್ಸಮ್ಮ, ವಂದನಾ, ವಂದನಾರಾವ್ ಶ್ಯಾನುಭಾಗ್ ಅಥ್ಲೆಟ್‌ನಲ್ಲಿದ್ದಾಗ ನಾವು ಸಾಕಷ್ಟು ಸಮಸ್ಯೆಗಳನ್ನು ಎದುರಿಸಿದ್ದೇವೆ. ಈಗ ಕ್ರೀಡಾಂಗಣಗಳಿಗೆ ಸರ್ಕಾರ ಕೂಡ ಅಥ್ಲೆಟ್ ಕ್ರೀಡೆಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತಿದೆ. ನಮ್ಮ ಕಾಲದಲ್ಲಿ ಕ್ರೀಡೆಗೆ ಮಿತವಾದ ಸೌಲಭ್ಯಗಳಿದ್ದವು. ಈಗ ಕ್ರೀಡಾಪಟುಗಳಿಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಯ ಅವಕಾಶಗಳು ಹೆಚ್ಚಿವೆ. ಆದರೆ ಸಮಸ್ಯೆ ಇರೋದು ಇವತ್ತಿನ ಮಕ್ಕಳ ಮುಂದಿರುವ ಸವಾಲಿನಲ್ಲಿ. ಇವತ್ತಿನ ಮಕ್ಕಳಲ್ಲಿ ಉದ್ಯೋಗದ ಬೇಟೆಗಾಗಿ ಓದುವುದೇ ಮುಖ್ಯವಾಗಿ ಬಿಟ್ಟಿದೆ. ಆ ಕಾಲದಲ್ಲಿ ಕ್ರೀಡಾಪಟುಗಳಿಗೆ ಬ್ಯಾಂಕ್‌ಗಳಲ್ಲಿ, ರೈಲ್ವೆಯಲ್ಲಿ ಉದ್ಯೋಗ ನೀಡಿ ಪ್ರೋತ್ಸಾಹ ನೀಡುತ್ತಿದ್ದರು. ಇಂದು ಕ್ರೀಡಾಪಟುಗಳು ಕೆಲಸ ಸಿಕ್ಕಿದ ತಕ್ಷಣ ಕ್ರೀಡೆಯನ್ನು ಮರೆತುಬಿಡುತ್ತಾರೆ ಎನ್ನುವ ಅಶ್ವಿನಿ ನಾಚಪ್ಪ ಕೂಡ ವಿಜಯಾ ಬ್ಯಾಂಕ್‌ನಲ್ಲಿ ಸ್ಪೋರ್ಟ್ಸ್ ಆಫೀಸರ್ ಆಗಿದ್ದವರು.

"ಅಥ್ಲೆಟಿಕ್‌ನಲ್ಲಿ ಸಾಧನೆಗೆ ನಮ್ಮ ಕುಟುಂಬದ ಬೆಂಬಲ ಸಾಕಷ್ಟಿತ್ತು. ಇಲ್ಲಾಂದ್ರೆ ನನ್ನ ಸಾಧನೆ ಶೂನ್ಯವಾಗುತ್ತಿತ್ತು. ಶ್ರಮಪಟ್ಟು ಸಾಧಿಸುವ ಛಲ ಇತ್ತು ಸಾಧಿಸಿದೆ. ಈ ಕಾಲದ ವಿದ್ಯಾರ್ಥಿಯಂತೆ ಶೇಕಡಾ 90ರಷ್ಟು ಅಂಕ ಗಳಿಸುವ ಒತ್ತಡಗಳಿರಲಿಲ್ಲ. ಇವತ್ತು ಫಸ್ಟ್ ಸ್ಟ್ಯಾಂಡರ್ಡ್ ಮಕ್ಕಳಿಗೆ ಟ್ಯೂಷನ್‌ಗೆ ಕಳಿಸ್ತಾರೆ. ನಮ್ಮ ಮಕ್ಕಳನ್ನು ಎಂಥ ಒತ್ತಡದಲ್ಲಿ ಬೆಳೆಸ್ತಾ ಇದ್ದೇವೆ ಎಂದು ಒಮ್ಮೆ ಯೋಚಿಸಿ ನೋಡಿ. ಶೇಕಡಾ 98ರಷ್ಟು ಅಂಕ ತೆಗೆಯುವ ವಿದ್ಯಾರ್ಥಿಗಳು ತಮ್ಮ ಬದುಕನ್ನು ಕಟ್ಟಿಕೊಳ್ಳುವುದರಲ್ಲಿ ಸೋಲ್ತಾರೆ. ಅವರ ವ್ಯಕ್ತಿತ್ವ ಜೀವನದಲ್ಲಿ ಸೃಷ್ಟಿಯಾಗುವ ಒತ್ತಡಗಳನ್ನು ನಿಭಾಯಿಸುವುದನ್ನು ಕಲಿಯುವುದರಲ್ಲಿ ಸೋಲುತ್ತೆ. ಟ್ಯೂಷನ್-ಟೀಚರ್-ಮಾರ್ಕ್ಸ್- ರ‍್ಯಾಂಕ್ ಇಷ್ಟೇನಾ ಜೀವನವೆಂದರೆ? ಇದೊಂದು ಕೆಟ್ಟ ವ್ಯವಸ್ಥೆ" ಎನ್ನುತ್ತಾರೆ ಅಶ್ವಿನಿ ನಾಚಪ್ಪ. ಮುಂದುವರೆದು "ಸರ್ಕಾರ ಶೈಕ್ಷಣಿಕ ಪದ್ಧತಿಯನ್ನು ಬದಲಾಯಿಸಬೇಕು. ಇವತ್ತಿಗೂ ಓದಿನ ಜೊತೆಜೊತೆಗೆ ಕ್ರೀಡೆಯನ್ನು ಕಲಿಸಲು ಗಂಭೀರವಾಗಿ ಪರಿಗಣಿಸಬೇಕು. ಕ್ರೀಡೆ ಈಗ ಎಲ್ಲಾ ಸ್ಕೂಲು ಕಾಲೇಜುಗಳಲ್ಲಿ ಕಲಿಸುತ್ತಿಲ್ಲ. ಈಗ ಎಷ್ಟು ಶಾಲೆ ಕಾಲೇಜುಗಳಲ್ಲಿ ಆಟದ ಮೈದಾನವಿದೆ. ಆಟ ಮತ್ತು ಓಟ ಪಠ್ಯದ ಒಂದು ಭಾಗವಾಗಬೇಕು. ಆಟದ ಮೈದಾನವಿಲ್ಲದ ಶಾಲೆಗಳಿಗೆ ಸರ್ಕಾರ ಖಂಡಿತ ಅನುಮತಿ ನೀಡಬಾರದು. ಆಟದ ಮೈದಾನವಿಲ್ಲದಿದ್ದರೆ ಮಕ್ಕಳು ಎಲ್ಲಿ ಆಡುತ್ತಾರೆ ಹೇಳಿ? ಇದು ಯೋಚಿಸಬೇಕಾದ ವಿಷಯ ಅಲ್ವೆ ಮತ್ತೆ, ಕ್ರೀಡೆಯಲ್ಲಿ ಸಾಧನೆ ನಿರೀಕ್ಷೆ ಹೇಗೆ ಸಾಧ್ಯ" ಎಂದು ಪ್ರಶ್ನಿಸುತ್ತಾರೆ.

"ಗಂಡ ಹೆಂಡತಿ ಇಬ್ಬರೂ ದುಡೀತಿದ್ರೆ, ಅವರ ಮಕ್ಕಳಿಗೆ ಕ್ರೀಡೆಯಲ್ಲಿ ತರಬೇತಿ ಕೊಡಲು ಹೇಗೆ ಸಾಧ್ಯವಾಗುತ್ತೆ? ಪುರುಸೊತ್ತು ಎಲ್ಲಿದೆ? ಓದುವ ಶಾಲೆಯಲ್ಲಿಯೇ ನಿಗದಿತ ಕಾಲಾವಧಿಯಲ್ಲಿ ಕ್ರೀಡೆಗೆ ತರಬೇತಿ ಕೊಟ್ಟರೆ ಆಗುವುದಿಲ್ಲವಾ. ಪ್ರಸಕ್ತ ಶಿಕ್ಷಣ ವ್ಯವಸ್ಥೆ ಬದಲಾಗದ ಹೊರತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ನಿರೀಕ್ಷೆ ಮಾಡೋದು ತಪ್ಪು. ಈ ಬಗ್ಗೆ ಸರ್ಕಾರ ಬೇಗ ಎಚ್ಚೆತ್ತುಕೊಳ್ಳಬೇಕು" ಎಂದು ಎಚ್ಚರಿಸುತ್ತಾರೆ.

"ಅಮೆರಿಕದಂತಹ ಮುಂದುವರಿದ ದೇಶಗಳಲ್ಲಿ ಅಲ್ಲಿನ ವಿದ್ಯಾರ್ಥಿಗಳು ಮೊದಲು ಕ್ರೀಡಾ ಸಾಧನೆ ಮಾಡುತ್ತಾರೆ. ಅಂಥವರು ತಮ್ಮ ಸಾಧನೆಯ ನಂತರ ಪದವಿ ಪಡೆಯುವ ವ್ಯವಸ್ಥೆ ಇದೆ. ಕ್ರೀಡೆಯಲ್ಲಿ ಸಾಧನೆ ಮಾಡ್ತೀವಿ ಎನ್ನುವ ವಿದ್ಯಾರ್ಥಿಗಳಿಗೆ ಸರ್ಕಾರ ಎಲ್ಲಾ ಸೌಲಭ್ಯ ಸಹಕಾರವನ್ನು ಒದಗಿಸಿಕೊಡುತ್ತೆ. ಈ ದೇಶದಲ್ಲಿ ಅಂತಹ ವ್ಯವಸ್ಥೆ ಇಲ್ಲವೇ ಇಲ್ಲ. ಕ್ರೀಡೆಗೆ ಕನಿಷ್ಠ, ಕೊನೇ ಸಾಲಿನ ಮಣೆ ಹಾಕುವ ಪರಿಪಾಠ ನಿಲ್ಲಬೇಕು."

"ಸರ್ಕಾರ ಇಂದು ನಗರಗಳನ್ನು ಅಡ್ಡಾದಿಡ್ಡಿ ಬೆಳೆಸ್ತಾ ಇದೆ. ಗ್ರಾಮೀಣ ಪ್ರದೇಶದಲ್ಲೇ ಬುದ್ಧಿವಂತ ಮತ್ತು ದೈಹಿಕವಾಗಿ ಸದೃಢವಾಗಿರುವ ಸಮರ್ಥ ವಿದ್ಯಾರ್ಥಿಗಳು ಇರುವುದು. ನಾನು ಕೂಡ ಗ್ರಾಮೀಣ ಪ್ರದೇಶದಿಂದ ಬಂದವಳೇ, ಅದರಿಂದ ನನ್ನ ಹುಟ್ಟೂರು ಗೋಣಿಕೊಪ್ಪಲ್‌ನಲ್ಲಿ ಕ್ರೀಡಾಶಾಲೆ 120 ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಆಟ ಓಟ ಓದು ಕಲಿಕೆ ಇವು ಶಿಕ್ಷಣದ ಮೂಲಭೂತ ನೀತಿಯಾಗಬೇಕು. ಅಥ್ಲೆಟಿಕ್ ಬ್ಯಾಡ್ಮಿಂಟನ್ ಹಾಕಿ ಟೆನ್ನಿಸ್ ಈಜು ಸೇರಿದಂತೆ ಹಲವಾರು ಆಟಗಳ, ತರಬೇತಿ 25 ಎಕರೆ ಪ್ರದೇಶದಲ್ಲಿ ಎಲ್ಲ ಸೌಲಭ್ಯ ಸೃಷ್ಟಿಯಾಗಿದೆ. ಸರ್ಕಾರದಿಂದ ಸದ್ಯಕ್ಕೆ ಯಾವುದೇ ರೀತಿಯ ನೆರವನ್ನು ಇನ್ನೂ ಪಡೆದಿಲ್ಲ. ಈ ದೇಶದಲ್ಲಿ ಕ್ರಿಕೆಟ್ ಒಂದೇ ಭವ್ಯವಾಗಿ ಬೆಳೆಯಬೇಕಾ, ಮಿಕ್ಕ ಕ್ರೀಡೆಗಳನ್ನು ಸಮನಾಗಿ ಪ್ರೋತ್ಸಾಹಿಸಿ ಬೆಳೆಸಲು ಏನು ತೊಂದರೆ, ಹೆಚ್ಚು ಜನರು ಸಕ್ರಿಯವಾಗಿ ಭಾಗವಹಿಸಿ ಹೆಸರು ಮಾಡುವುದನ್ನು ಏಕೆ ತಡೆಯಬೇಕು" ಎಂದು ಕೇಳುವ ಅಶ್ವಿನಿ ನಾಚಪ್ಪ, ಎಲ್ಲ ಕ್ರೀಡೆಗೂ ಸಮಾನಾವಕಾಶ ದೊರಕಲಿ ಎನ್ನುತ್ತಾರೆ.

ಭಾರತದ ಮಾಜಿ ಅಥ್ಲೆಟ್ ಅಶ್ವಿನಿ ನಾಚಪ್ಪ ಅವರನ್ನು ಹೀರೋ ಇಂಡಿಯನ್ ಸ್ಪೋರ್ಟ್ಸ್ ಅಕಾಡೆಮಿಯ ಸದಸ್ಯರಾಗಿ ನೇಮಿಸಲಾಗಿದೆ.

ಕ್ರೀಡಾ ಕ್ಷೇತ್ರದಲ್ಲಿನ ಅತ್ಯುನ್ನತ ಸಾಧನೆಯನ್ನು ಕೇಂದ್ರ ಸರ್ಕಾರವು ಪ್ರತಿಷ್ಠಿತ ಅರ್ಜುನ ಪ್ರಶಸ್ತಿಗೆ ಪರಿಗಣಿಸುತ್ತದೆ. ಈ ಪ್ರಶಸ್ತಿಗೆ ಪುರಸ್ಕೃತರಾದ ಕರ್ನಾಟಕದ ಅರ್ಜುನ ಪ್ರಶಸ್ತಿ ವಿಜೇತರಾದ ಬಿ.ಸಿ ರಮೇಶ್–ಕಬಡ್ಡಿ, ನಿಶಾ–ಮಿಲೆಟ್–ಈಜು, ಎ.ಬಿ.ಸುಬ್ಬಯ್ಯ–ಹಾಕಿ, ಆಶಿಶ್‌ಕುಮಾರ್ ಬಲ್ಲಾಳ್–ಹಾಕಿ, ಅಮಲ್ ದಾಸ್–ಬಾಕ್ಸಿಂಗ್, ಉಷಾ ಸುಂದರರಾಜ್–ಟೇಬಲ್ ಟೆನ್ನಿಸ್, ಶೋಭಾ ನಾರಾಯಣ್–ಖೋ ಖೋ, ಅರವಿಂದ ಸವೂರ್ ಹಾಗೂ ಪಂಕಜ್ ಅದ್ವಾನಿ–ಬಿಲಿಯರ್ಡ್ಸ್, ಸ್ನೂಕರ್ ಅಂಗವಿಕಲ ಕ್ರೀಡಾಪಟು–ಮಾಲತಿ ಹೊಳ್ಳ, ಅಥ್ಲೆಟಿಕ್ ಕ್ರೀಡಾಪಟು ಎಸ್.ಡಿ. ಈಶನ್ ಇವರೊಂದಿಗೆ ಇವರು ದಕ್ಷಿಣ ಏಷಿಯ ಫೆಡರೇಷನ್ ಗೇಮ್ಸ್, ಏಷಿಯ ಗೇಮ್ಸ್ ವಿಶ್ವ ಚಾಂಪಿಯನ್‌ಷಿಪ್‌ನಂಥ ಅಂತಾರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿದ ಪದಕ ವಿಜೇತೆ.

ಗುಂಪು ಕ್ರೀಡೆಗಳಲ್ಲಿನ ಸಾಧನೆಯು ಇಡೀ ತಂಡದ್ದಾಗಿರುತ್ತದೆ. ಆದರೆ ವೈಯುಕ್ತಿಕ ಕ್ರೀಡೆಗಳಲ್ಲಿ ಕ್ರೀಡಾಪಟು ತನ್ನ ವೈಯುಕ್ತಿಕ ನೆಲೆಗಟ್ಟಿನ ಮೇಲೆ ಸಾಧಿಸುವ ಸಾಧನೆ ಪ್ರಮುಖವಾಗುತ್ತದೆ. ಕ್ರೀಡಾಪಟುವಿಗೆ ವೈಯುಕ್ತಿಕ ಪ್ರತಿಭೆ ಇರಬೇಕು. ಅಥ್ಲೆಟಿಕ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಖ್ಯಾತಿ ತಂದಿರುವ ಅಥ್ಲೆಟ್‌ಗಳಿದ್ದಾರೆ ಅವರುಗಳಲ್ಲಿ ಪ್ರಮುಖರೆಂದರೆ ಎಸ್.ಡಿ.ಈಶನ್, ವಂದನಾರಾವ್, ರೀತ್ ಅಬ್ರಾಹಾಂ, ಎಂ.ಕೆ.. ಆಶಾ, ಸುಮಾವತಿ, ರೋಸಾಕುಟ್ಟಿ, ಕೆನೆರ್ ಪೊವೆಲ್, ಏಂಜೆಲ್ ಮೇರಿ, ಜೋಸೆಫ್ ಹಾಗೂ ಅಶ್ವಿನಿ ನಾಚಪ್ಪ, ರಾಜ್ಯವು ವಿಶ್ವವಿಖ್ಯಾತ ಕ್ರಿಕೆಟಿಗರಾದ ಜಿ.ಆರ್. ವಿಶ್ವನಾಥ್, ಸೈಯದ್ ಕಿರ್ಮಾನಿ, ಇ.ಎ.ಎಸ್.ಪ್ರಸನ್ನ, ಬಿ.ಎಸ್.ಚಂದ್ರಶೇಖರ್ ಹಾಗೂ ಪ್ರಸ್ತುತ ತಂಡವನ್ನು ಪ್ರತಿನಿಧಿಸುತ್ತಿರುವ ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆರಂಥ ಕ್ರಿಕೆಟಿಗರನ್ನು ಕಂಡಿದೆ. ಈ ಕ್ರಿಕೆಟ್‌ಗರಿಗೆ ಸಮಾನಾಂತರವಾಗಿ ಅಥ್ಲೆಟ್‌ನಲ್ಲಿ ಕರ್ನಾಟಕದ ಅಶ್ವಿನಿ ನಾಚಪ್ಪ ಹೆಸರು ಮಾಡಿದವರು. ಅಂದು ಭಾರತದ ಕೀರ್ತಿ ಪತಾಕೆಯನ್ನು ವಿದೇಶಗಳಲ್ಲಿ ಅತಿ ಎತ್ತರಕ್ಕೆ ಹಾರಿಸಿದ ಕೀರ್ತಿ ಇವರದು. ಅಂತಾರಾಷ್ಟ್ರೀಯ ದಕ್ಷಿಣ ಏಷಿಯಾ ಫೆಡರೇಷನ್ ಗೇಮ್ಸ್‌ಗಳಲ್ಲಿ ಇವರು ಮೂರು ಬಾರಿ ಭಾಗವಹಿಸಿ ಪದಕ ವಿಜೇತರಾದರು. ಪ್ರಪ್ರಥಮವಾಗಿ ಇವರು ಭಾಗವಹಿಸಿದ್ದು ನೇಪಾಳದಲ್ಲಿ ನಡೆದ 1984ರ ದಕ್ಷಿಣ ಏಷಿಯಾ ಫೆಡರೇಷನ್ ಗೇಮ್ಸ್‌ಗಳಲ್ಲಿ ಇವರು ಬಾಚಿದ್ದು ಒಟ್ಟು ಮೂರು ಚಿನ್ನದ ಪದಕಗಳು. ಅಂತಾರಾಷ್ಟ್ರೀಯ ಪಂದ್ಯಗಳ ಸಾಧನೆ ಇವರದು. ತಮ್ಮ 17ನೇ ವಯಸ್ಸಿನಲ್ಲಿಯೇ ಇಂಥ ಅಂತಾರಾಷ್ಟ್ರೀಯ ಖ್ಯಾತಿವೆತ್ತ ಪಂದ್ಯಗಳ ಪದಕ ವಿಜೇತರಾಗುವುದು ಅಸಾಮಾನ್ಯ ಸಂಗತಿ. ಮತ್ತೊಬ್ಬ ಆಟಗಾರ ಈ ಮಟ್ಟಕ್ಕೇರುವುದು ಅಸಾಧ್ಯ. ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ದೇಶವನ್ನು ಪ್ರತಿನಿಧಿಸಿ ತಂಡದಲ್ಲಿ ಸ್ಥಾನಗಳಿಸುವುದೇ ದುರ್ಲಭ. ಇಷ್ಟೇ ಅಲ್ಲದೆ ಇವರು ಕ್ರೀಡಾ ಕ್ಷೇತ್ರದಲ್ಲಿಯೇ ಉನ್ನತ ಪಂದ್ಯವೆಂದು ಪರಿಗಣಿಸಲ್ಪಟ್ಟಿರುವ ಏಷ್ಯನ್ ಗೇಮ್ಸ್‌ಗಳಲ್ಲಿ ಭಾಗವಹಿಸಿ ಪದಕ ವಿಜೇತರಾಗಿರುವುದು ಇವರ ಪ್ರತಿಭೆಯನ್ನು ತೋರಿಸುತ್ತದೆ. 1986ರಲ್ಲಿ ಸೌತ್ ಕೊರಿಯದಲ್ಲಿ ಜರುಗಿದ ಏಷ್ಯನ್ ಗೇಮ್ಸ್‌ನಲ್ಲಿ ಲಾಂಗ್ ಜಂಪ್ ವಿಭಾಗದಲ್ಲಿ ಇವರು ಗಳಿಸಿದ್ದು ಆರನೇ ಸ್ಥಾನ. 1990ರ ಚೈನಾದ ಬೀಜಿಂಗ್‌ನಲ್ಲಿ ಭಾಗವಹಿಸಿ 4x400 ಮೀ. ರಿಲೇ ವಿಭಾಗದಲ್ಲಿ ಇವರು ಪಡೆದಿದ್ದು ಬೆಳ್ಳಿ ಪದಕ. ದಕ್ಷಿಣ ಏಷಿಯಾ ಫೆಡರೇಷನ್ ಗೇಮ್ಸ್‌ಗಳಲ್ಲಿ ಹಾಗೂ ಏಷ್ಯನ್ ಗೇಮ್ಸ್‌ಗಳಲ್ಲಿ ಭಾಗವಹಿಸಿದ್ದುದು ಮಾತ್ರವಲ್ಲದೇ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗಳಲ್ಲಿಯೂ ಸಹ ಭಾಗವಹಿಸಿ ತಮ್ಮ ಹಿರಿಮೆಯನ್ನು ವಿದೇಶಗಳಲ್ಲಿ ಮೆರೆದ ಕೀರ್ತಿ ಇವರದು. 1987ರಲ್ಲಿ ರೋಮ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಇವರು ಭಾಗವಹಿಸಿದ್ದು 4x400 ಮೀ. ರಿಲೆನಲ್ಲಿ. 1991ರಲ್ಲಿ ಟೋಕಿಯಾದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ 4x400 ಮೀ. ರಿಲೆಯಲ್ಲಿ ಭಾಗವಹಿಸಿದ್ದರು. 1985ರಲ್ಲಿ ಇಂಡೋನೇಶಿಯಾದಲ್ಲಿನ ಜಕಾರ್ತದಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ರಿಲೆಯಲ್ಲಿ ಇವರು ಗಳಿಸಿದ್ದು ಕಂಚು.

1987ರಲ್ಲಿ ಸಿಂಗಪೂರನಲ್ಲಿ ಚಾಂಪಿಯನ್‌ಷಿಪ್‌ನಲ್ಲಿ ಇವರು ಗಳಿಸಿದ್ದು ರಿಲೆ ವಿಭಾಗದಲ್ಲಿ ಬೆಳ್ಳಿ ಪದಕ ಅಲ್ಲದೆ 200 ಮೀ. ವಿಭಾಗದಲ್ಲಿ ಇವರು ಪಡೆದದ್ದು ನಾಲ್ಕನೇ ಸ್ಥಾನ. ನವದೆಹಲಿಯಲ್ಲಿ 1989ರಲ್ಲಿ ಜರುಗಿದ

ಚಾಂಪಿಯನ್‌ಷಿಪ್‌ನಲ್ಲಿ 200 ಮೀ. ಹಾಗೂ ರಿಲೆ ವಿಭಾಗದಲ್ಲಿ ಎರಡು ಬೆಳ್ಳಿ ಪದಕ ಪಡೆದರು. 1991ರಲ್ಲಿ ಮಲೇಷಿಯಾದಲ್ಲಿ ಜರುಗಿದ ಚಾಂಪಿಯನ್‌ಷಿಪ್‌ನಲ್ಲಿ 4x400 ಮೀ. ರಿಲೆ ವಿಭಾಗದಲ್ಲಿ ಇವರು ಗಳಿಸಿದ್ದು ಚಿನ್ನದ ಪದಕ. ಇಷ್ಟೇ ಅಲ್ಲದೆ ಅನೇಕ ಅಂತಾರಾಷ್ಟ್ರೀಯ ಆಹ್ವಾನ ಪಂದ್ಯಗಳಲ್ಲಿ ಭಾಗವಹಿಸಿದ್ದಾರೆ ಅಶ್ವಿನಿ ನಾಚಪ್ಪನವರು.

1998ರಲ್ಲಿ ಜರ್ಮನಿಯಲ್ಲಿ ಜರುಗಿದ ಪಂದ್ಯದಲ್ಲಿ 400 ಮೀ. ವಿಭಾಗದಲ್ಲಿ ಜರುಗಿದ ಪಂದ್ಯದಲ್ಲಿ 400 ಮೀ. ವಿಭಾಗದಲ್ಲಿ ಇವರು ಗಳಿಸಿದ್ದು ಚಿನ್ನದ ಪದಕ. ಇನ್ವಿಟೇಷನ್ ಪರ್ಮಿಟ್ ಮೀಟ್‌ಗಳಲ್ಲಿ ಸಹ ಭಾಗವಹಿಸಿದ್ದು 1997ರಲ್ಲಿ ನವದೆಹಲಿಯಲ್ಲಿ ಜರುಗಿದ ಪರ್ಮಿಟ್ ಮೀಟ್‌ನ 100 ಮೀ. ವಿಭಾಗದಲ್ಲಿ ಇವರು ಗಳಿಸಿದ್ದು ಚಿನ್ನದ ಪದಕ. ಪುನಃ 1999ರಲ್ಲಿ ನವದೆಹಲಿಯಲ್ಲಿ ಜರುಗಿದ ಪರ್ಮಿಟ್ ಮೀಟ್‌ನ 200 ಮೀ. ಓಟದಲ್ಲಿ ಭಾಗವಹಿಸಿ ಬೆಳ್ಳಿ ಪದಕವನ್ನು ತಮ್ಮದಾಗಿಸಿಕೊಂಡರು.

1981ರಲ್ಲಿ ಬೆಂಗಳೂರಿನಲ್ಲಿ ಜರುಗಿದ ಆಲ್ ಇಂಡಿಯಾ ಓಪನ್ ನ್ಯಾಷನಲ್ಸ್‌ನಲ್ಲಿ ಇವರು ಪಡೆದಿದ್ದು ಚಿನ್ನ. 1982ರಲ್ಲಿ ಕೊಲ್ಕತ್ತಾದಲ್ಲಿ ಜರುಗಿದ ಆಲ್ ಇಂಡಿಯಾ ಓಪನ್ ನ್ಯಾಷನಲ್ಸ್ ಜೂನಿಯರ್‌ನಲ್ಲಿ ಇವರು ಪಡೆದಿದ್ದು ಚಿನ್ನ. 1993ರ ಆಲ್ ಇಂಡಿಯಾ ಓಪನ್ ನ್ಯಾಷನಲ್ಸ್ (ಜೂನಿಯರ್)ನಲ್ಲಿ ಕೊಲ್ಕತ್ತಾದಲ್ಲಿ ಇವರು ಪಡೆದಿದ್ದು ಬೆಳ್ಳಿ. 1987ರಲ್ಲಿ ಮಂಗಳೂರಿನಲ್ಲಿ ಜರುಗಿದ ಸೀನಿಯರ್ ಆಲ್ ಇಂಡಿಯಾ ಓಪನ್ ನ್ಯಾಷನಲ್ಸ್ ಪಂದ್ಯಾವಳಿಯಲ್ಲಿ 100 ಮೀ. ವಿಭಾಗದಲ್ಲಿ ಚಿನ್ನ, 200 ಮೀ. ವಿಭಾಗದಲ್ಲಿ ಬೆಳ್ಳಿ, ರಿಲೆ ವಿಭಾಗದಲ್ಲಿ ಮತ್ತೊಂದು ಚಿನ್ನ ಪಡೆದು ಮೇಲುಗೈ ಸಾಧಿಸಿದ್ದಾರೆ. 1987ರಲ್ಲಿ ಕಾನ್ಪುರದಲ್ಲಿ ಜರುಗಿದ ಆಲ್ ಇಂಡಿಯಾ ಏಷ್ಯನ್ ನ್ಯಾಷನಲ್ಸ್‌ನ 200 ಮೀ. ವಿಭಾಗದಲ್ಲಿ ಇವರು ಪಡೆದದ್ದು ಚಿನ್ನ. 1990ರಲ್ಲಿ ನವದೆಹಲಿಯಲ್ಲಿ ಆಲ್ ಇಂಡಿಯಾ ಓಪನ್ ನ್ಯಾಷನಲ್ಸ್‌ನಲ್ಲಿ ಇವರು ಬಾಚಿದ ಪದಕಗಳೆಂದರೆ 200 ಮೀ. ವಿಭಾಗದಲ್ಲಿ ಚಿನ್ನ, 100 ಮೀ. ವಿಭಾಗದಲ್ಲಿ ಬೆಳ್ಳಿ. 1991ರಲ್ಲಿ ಕೋಲ್ಕತ್ತಾದಲ್ಲಿ ಜರುಗಿದ ಆಲ್ ಇಂಡಿಯಾ ಓಪನ್ ನ್ಯಾಷನಲ್ಸ್‌ನಲ್ಲಿ 100 ಮೀ. 200 ಮೀ. ಮತ್ತು 400 ಮೀ. ರಿಲೆಯಲ್ಲಿ ಚಿನ್ನದ ಪದಕಗಳು ಇವರದಾದುವು. ಕೊಡಗು ಜಿಲ್ಲೆ ರಾಜ್ಯದಲ್ಲೇ ಅತಿ ಚಿಕ್ಕದಾದ ಜಿಲ್ಲೆಯಾಗಿದ್ದು, ಸೋಮವಾರಪೇಟೆ, ವಿರಾಜಪೇಟೆ, ಮಡಿಕೇರಿ ತಾಲ್ಲೂಕುಗಳನ್ನು ಹೊಂದಿದೆ. ಆದರೆ ಈ ಜಿಲ್ಲೆಯಲ್ಲಿ ಉದಯಿಸಿದ ಅಶ್ವಿನಿ ನಾಚಪ್ಪರಂತಹ ಅಥ್ಲೆಟ್‌ಗಳು ರಾಜ್ಯವನ್ನಲ್ಲದೇ ಇಡೀ ದೇಶದ ಕೀರ್ತಿಯನ್ನು ವಿದೇಶದಲ್ಲಿ ಮೆರೆದಿರುವುದು ಅಭಿಮಾನದ ಸಂಗತಿ. ಪ್ರತಿಯೊಬ್ಬ ಕ್ರೀಡಾಪಟು ಅಶ್ವಿನಿ ನಾಚಪ್ಪನವರ ಮಟ್ಟಕ್ಕೆ ಏರಲು ಪ್ರಯತ್ನಿಸಬೇಕು. ಇವರ ಈ ಸಾಧನೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರ ಇವರಿಗೆ ಅನೇಕ ಬಿರುದು, ಪ್ರಶಸ್ತಿ, ಪದಕಗಳನ್ನು ನೀಡಿದೆ. ಕ್ರೀಡಾ ಕ್ಷೇತ್ರಗಳಲ್ಲಿನ ಅತ್ಯುನ್ನತ ಸಾಧನೆಗಾಗಿ ಕೇಂದ್ರ ಸರ್ಕಾರವು ಅನೇಕ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ. ಅಂತಾರಾಷ್ಟ್ರೀಯ ದಕ್ಷಿಣ ಏಷಿಯಾ ಫೆಡರೇಷನ್ ಗೇಮ್ಸ್‌ಗಳಲ್ಲಿ ಏಷಿಯನ್ ಗೇಮ್ಸ್‌ಗಳಲ್ಲಿನ ಸಾಧನೆಗಾಗಿ ಕೇಂದ್ರ ಸರ್ಕಾರವು ಇವರನ್ನು 1990ರ ಪ್ರತಿಷ್ಠಿತ ಅರ್ಜುನ ಪ್ರಶಸ್ತಿಗೆ ಆಯ್ಕೆ ಮಾಡಿ ಗೌರವಿಸಿದೆ. ಈ ಪ್ರಶಸ್ತಿಯು ನಗದು, ನೆನಪಿನ ಕಾಣಿಕೆಯನ್ನು ಒಳಗೊಂಡಿತ್ತು. ಕ್ರೀಡಾ ಕ್ಷೇತ್ರವಲ್ಲದೆ ಅಶ್ವಿನಿ ನಾಚಪ್ಪ ಅವರ ಪ್ರತಿಭೆಯನ್ನು ಸಿನಿಮಾ ಜಗತ್ತೂ ಸಹ ಗುರುತಿಸಿ ತನ್ನತ್ತ ಕೈ ಬೀಸಿ ಕರೆಯಿತು. ಆ ಕ್ಷೇತ್ರದಲ್ಲಿಯೂ ಸಹ ಅದ್ವಿತೀಯವಾಗಿ ಮಿಂಚಿ ಸೈ ಎನಿಸಿಕೊಂಡ ತಾರೆ ಇವರು. ತೆಲುಗು ಭಾಷೆಯ ಐದು ಚಿತ್ರಗಳಲ್ಲಿ ತನ್ನ ಕಲಾವಂತಿಕೆಯನ್ನು ಮೆರೆದು ಆಂಧ್ರಪ್ರದೇಶ ಸರ್ಕಾರದಿಂದ ವಂಶಿ ಪ್ರಶಸ್ತಿ ಹಾಗೂ ಚೆನ್ನೈನ ಫೈನ್ ಆರ್ಟ್ಸ್ ಅಕಾಡೆಮಿ ವತಿಯಿಂದ ಬೆಸ್ಟ್ ನ್ಯೂ ಕಮರ್ ಎಂಬ ಬಿರುದಾಂಕಿತರಾದರು.

ಅಶ್ವಿನಿ ನಾಚಪ್ಪ ಶಿಕ್ಷಣದಲ್ಲೂ ಮುಂದು, ಕ್ರೀಡಾಕ್ಷೇತ್ರದಲ್ಲೂ ಮುಂದು. ಹಾಗೆಯೇ ಚಿತ್ರಜಗತ್ತಿನಲ್ಲೂ ತಾವೇನೂ ಕಡಿಮೆಯಿಲ್ಲ ಎಂದು ಮಿಂಚಿದವರು. ಕ್ರೀಡಾ ಕ್ಷೇತ್ರದಿಂದ 1991ರಷ್ಟು ಹಿಂದೆಯೇ ನಿವೃತ್ತಿ ಹೊಂದಿದ್ದರೂ ತಮ್ಮ ಇಬ್ಬರು ಮಕ್ಕಳಾದ ಅನಿಷಾ ಹಾಗೂ ದೀಪಾಲಿ ಅವರುಗಳನ್ನು ಕ್ರೀಡಾ ಕ್ಷೇತ್ರದಲ್ಲಿ ತೊಡಗಿಸಬೇಕೆಂಬ ಅದಮ್ಯ ಉತ್ಸಾಹ ಇವರದು. ಇವರ ಪತಿ ಕರುಂಬಯ್ಯ ಹನ್ನೆರಡು ವರ್ಷದೊಳಗಿನ ಮಕ್ಕಳಿಗೆ ಸ್ಪೆಷಲ್ ಒಲಂಪಿಕ್

ಪ್ರೋಗ್ರಾಂ ಏರ್ಪಡಿಸುವ ಅಕಾಡೆಮಿಯನ್ನು ಸ್ಥಾಪಿಸಿದ್ದಾರೆ. ಈ ಅಕಾಡೆಮಿಯಲ್ಲಿ ಅಭ್ಯಾಸದ ಜೊತೆಗೆ ಕ್ರೀಡೆಗೂ ಸಹ ಹೆಚ್ಚು ಒತ್ತು ನೀಡಲಾಗಿದೆ ಎನ್ನುತ್ತಾರೆ ಇವರು. ಈ ಅಕಾಡೆಮಿಯಲ್ಲಿ ನಮ್ಮ ಜಿಲ್ಲೆಗಷ್ಟೇ ಅಲ್ಲದೆ ರಾಜ್ಯದ ಇತರೆ ಜಿಲ್ಲೆಗೂ ಪ್ರಾತಿನಿಧ್ಯ ನೀಡಿ ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಅಭಿವ್ಯಕ್ತಪಡಿಸಬೇಕೆಂಬ ಉತ್ಸಾಹ ತಮ್ಮದೆಂದು ಉತ್ಸುಕತೆಯಿಂದ ಹೇಳುತ್ತಾರೆ. ಈ ಅಕಾಡೆಮಿಯಲ್ಲಿ ಅಥ್ಲೆಟಿಕ್ಸ್, ಹಾಕಿ, ಬ್ಯಾಡ್‌ಮಿಂಟನ್, ಈಜು ಮತ್ತು ಟೆನ್ನಿಸ್ ಕ್ರೀಡಾ ವಿಭಾಗದಲ್ಲಿ ಮಕ್ಕಳಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಯಾವುದೇ ಒಬ್ಬ ವ್ಯಕ್ತಿ ಒಂದು ಕ್ಷೇತ್ರವನ್ನು ಸೀಮಿತವಾಗಿಟ್ಟುಕೊಂಡು ಆ ಕ್ಷೇತ್ರದ ಮಿತಿಯಲ್ಲಿಯೇ ಕಾರ್ಯೋನ್ಮುಖನಾಗುತ್ತಾನೆ. ಆದರೆ ಅಶ್ವಿನಿ ನಾಚಪ್ಪ ಅವರು ಶಿಕ್ಷಣ, ಕ್ರೀಡೆ, ತಾರೆಯರ ಜಗತ್ತಾದ ಸಿನಿಮಾ ಈ ಮೂರು ವಿಭಿನ್ನ ಕ್ಷೇತ್ರಗಳಲ್ಲಿ ತನ್ನ ಕ್ರೀಡೆಯ ಛಾಪನ್ನು ಮೂಡಿಸಿದ್ದಾರೆ. ಎಳೆಯ ಕ್ರೀಡಾ ಪ್ರತಿಭೆಗಳು ತಮ್ಮಲ್ಲಿನ ಪ್ರತಿಭೆಯನ್ನು ಅಭಿವ್ಯಕ್ತಿಪಡಿಸುವ ನಿಟ್ಟಿನಲ್ಲಿ ಅಶ್ವಿನಿ ನಾಚಪ್ಪ ಅವರು ಸ್ಥಾಪಿಸಿರುವ ಕ್ರೀಡಾ ಅಕಾಡೆಮಿ ಮರುಳುಗಾಡಿನಲ್ಲಿ ಸಿಗುವ ಓಯಸಿಸ್‌ನಂತಿದೆ.

——— * ———

ಸತತ ಪರಿಶ್ರಮ, ದಕ್ಷತೆ, ನಿರಂತರ ಅಧ್ಯಯನಶೀಲತೆಯ ವ್ಯಕ್ತಿತ್ವದ ಪ್ರೊ. ಪಿ. ಸೆಲ್ವಿದಾಸ್

ನಂದಕಿಶೋರ್

ದಕ್ಷ ಆಡಳಿತ ತಜ್ಞೆ, ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಅನುಭವಸ್ಥೆ, ಹಿಡಿದ ಕೆಲಸವನ್ನು ಪಟ್ಟುಬಿಡದೆ ಮಾಡಿ ಮುಗಿಸುವ ಛಲವಂತಿಕೆ ಇರುವ ಗಟ್ಟಿಗಿತ್ತಿ, ಹೊರ ನೋಟಕ್ಕೆ ಗಂಭೀರವಾಗಿ ಕಂಡರೂ ಒಳಗೆ ಮಗುವಿನಂಥ ಮುಗ್ಧತೆಯನ್ನು ತುಂಬಿಕೊಂಡ ಮಹಿಳೆ! ಕರ್ನಾಟಕದ ವಿಶಿಷ್ಟ ಮಹಿಳೆ ಪಿ. ಸೆಲ್ವಿದಾಸ್ ಅವರನ್ನು ಹತ್ತಿರದಿಂದ ಕಂಡವರು; ಅವರೊಡನೆ ಕೆಲಸ ಮಾಡಿದವರು, ಅವರ ಸಾಧನೆಗಳನ್ನು ಬಲ್ಲವರು ಮೇಲಿನ ವಿಶೇಷಣಗಳಿಂದಲೇ ಅವರನ್ನು ಸ್ಮರಿಸಿಕೊಳ್ಳುತ್ತಾರೆ.

ಶಿಕ್ಷಣ ತಜ್ಞೆಯಾಗಿ, ಅತ್ಯಂತ ದಕ್ಷ ಆಡಳಿತಗಾರ್ತಿಯಾಗಿ ಅವರು ಮಾಡಿದ ಸಾಧನೆಗಳು; ಮುಟ್ಟಿದ ಮೇರುಗಳು ಕಡಿಮೆಯೇನಲ್ಲ. ಚಿನ್ನದ ಗಣಿಗಳ ನಾಡು ಕೋಲಾರ ಜಿಲ್ಲೆಯ ಕೋಲಾರ್ ಗೋಲ್ಡ್ ಫೀಲ್ಡ್ಸ್‌ನಲ್ಲಿ (ಕೆಜಿಎಫ್) 1932ರಲ್ಲಿ ಜನಿಸಿದ ಸೆಲ್ವಿದಾಸ್ ತಮ್ಮ ಪ್ರತಿಭೆ, ಸತತ ಪರಿಶ್ರಮ, ಅಪಾರ ಉತ್ಸಾಹಗಳ ಮೂಲಕ ಗಡಿಜಿಲ್ಲೆ ಕೋಲಾರದ ಗಡಿಗಳನ್ನು ದಾಟಿ, ವಿಶ್ವಪ್ರಜೆಯಾಗುವ ಅರ್ಹತೆಯನ್ನು ಗಳಿಸಿದರು. ಪ್ರತಿಭೆ ಮತ್ತು ಯೋಗಾಯೋಗಗಳು ಮೇಳೈಸಿದ ಬದುಕು ಅವರದು.

ಎತ್ತರದ ಬೆಟ್ಟಕ್ಕೆ ಬುಡದಲ್ಲೇ ಮೊದಲ ಹೆಜ್ಜೆ ಎಂಬಂತೆ, ಸೆಲ್ವಿದಾಸ್ ಸ್ನಾತಕೋತ್ತರ ಪದವಿಯ ಬಳಿಕ ತಮ್ಮ ವೃತ್ತಿಯನ್ನು ಆರಂಭಿಸಿದ್ದು ಸಹಾಯಕ ಸಂಶೋಧಕಿಯಾಗಿ. ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ ಸೇರಿದಾಗ ಅವರಿನ್ನೂ ಇಪ್ಪತ್ತೂ್ಮರರ ತರುಣಿ. ಆದರೆ ಅಧ್ಯಯನ ಮತ್ತು ಸಂಶೋಧನೆಯ ಕುರಿತು ಅವರಿಗಿದ್ದ ಹುಮ್ಮಸ್ಸು, ನಿರಂತರ ಕಾರ್ಯತತ್ಪರತೆಯ ಮನಸ್ಸು ಅವರು ಪಿಎಚ್‌ಡಿ, ಪಿಎಚ್‌ಡಿಯ ನಂತರದ ಉನ್ನತ ವ್ಯಾಸಂಗಕ್ಕೆ ಪ್ರೋತ್ಸಾಹಿಸಿತು. ಅರ್ಥಶಾಸ್ತ್ರವನ್ನು ಮುಖ್ಯ ವಿಷಯವಾಗಿರಿಸಿಕೊಂಡು, ಮಾನವ ಅಭಿವೃದ್ಧಿ ಮತ್ತು ಶಿಶು ಶಿಕ್ಷಣ ಕ್ಷೇತ್ರದಲ್ಲಿ ಅಮೆರಿಕದಲ್ಲಿ ಪಿಎಚ್.ಡಿ. ಪೂರೈಸಿದ ಸೆಲ್ವಿದಾಸ್ ಅವರು ಅನಂತರ ಅದೇ ವಿಷಯದಲ್ಲಿ ಎಂ.ಎಸ್. ಕೂಡ ಮಾಡಿದರು.

ಕೆಲವು ವರ್ಷಗಳ ಕಾಲ ಪ್ರಾಧ್ಯಾಪಕಿ, ಪ್ರವಾಚಕಿ, ಪ್ರಿನ್ಸಿಪಲ್ ಹೀಗೆ ವಿವಿಧ ಹುದ್ದೆಗಳನ್ನು ನಿರ್ವಹಿಸಿದರು. ಪ್ರಾಥಮಿಕಪೂರ್ವ ಮಕ್ಕಳ ಕುರಿತು ಅವರು ನಡೆಸಿರುವ ಅಧ್ಯಯನ ಮತ್ತು ಸಂಶೋಧನೆಯಲ್ಲಿ ಅನ್ವೇಷಿಸಿದ ಅಂಶಗಳು ಎಲ್ಲ ಕಾಲಕ್ಕೂ ಮಹತ್ವವಾದುದೇ ಆಗಿವೆ. ಭಾರತಕ್ಕೆ ಬಾಲವಾಡಿಯ ಪರಿಕಲ್ಪನೆ ಅವರೇ ನೀಡಿದ ಸಂಶೋಧನೆಯ ಫಲಶ್ರುತಿಯೇ. ಭಾರತದ ಮಕ್ಕಳ ಅಭಿವೃದ್ಧಿಗಾಗಿ ಮಾನವಶಾಸ್ತ್ರ ಆಧಾರಿತ ಸೂತ್ರವೊಂದನ್ನು ಸಿದ್ಧಪಡಿಸಿದ್ದೂ ಅವರ ಸಂಶೋಧನೆಯೇ ಎಂಬುದನ್ನು ಗಮನಿಸಿದರೆ ಅವರ ಅಧ್ಯಯನ ಮಹತ್ವ ಅರಿವಾಗುತ್ತದೆ. ಮಾತ್ರವಲ್ಲ, ಮಾನವಶಾಸ್ತ್ರದ ಕ್ಷೇತ್ರದಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಸಂಶೋಧನೆಯಲ್ಲಿ ಮಾರ್ಗದರ್ಶನ ಮಾಡಿರುವುದು ಕೂಡ ಸೆಲ್ವಿ ಅವರ ದೊಡ್ಡ ಕೊಡುಗೆಯೇ ಆಗಿದೆ. ಭಾರತದ ಅನೇಕ ವಿಶ್ವವಿದ್ಯಾನಿಲಯಗಳಿಗೆ, ಗಣ್ಯಸಂಸ್ಥೆಗಳಿಗೆ

ಸದಸ್ಯರು, ಅಧ್ಯಕ್ಷರು, ಸಲಹೆಗಾರರು, ಸಮಾಲೋಚಕರು ಆಗಿ ಸೆಲ್ವಿ ನಿರ್ವಹಿಸಿದ ಪಾತ್ರ ಸಹ ಅತ್ಯಂತ ಹಿರಿದಾದುದೇ ಆಗಿದೆ. ಅದರಲ್ಲೂ ವ್ಯಾಸಂಗಕ್ರಮ, ಗೃಹವಿಜ್ಞಾನ, ಮಾನವಶಾಸ್ತ್ರಗಳ ಕ್ಷೇತ್ರದಲ್ಲಿ ಅವರು ನೀಡಿರುವ ಕೊಡುಗೆ ಯಾವಾಗಲೂ ಸ್ಮರಣಾರ್ಹವೇ ಆಗಿರುತ್ತದೆ.

ಕರ್ನಾಟಕದ ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ ಸೆಲ್ವಿದಾಸ್ ಹೊಸ ಆಡಳಿತ ಪರಂಪರೆ ಸೃಷ್ಟಿಸಿರುವುದರಿಂದಲೂ ಆಡಳಿತಗಾರರು ಅವರನ್ನು ನೆನಪಿಸಿಕೊಳ್ಳುತ್ತಾರೆ. ಆಡಳಿತದ ಜತೆಜತೆಗೇ ಶಿಕ್ಷಣತಜ್ಞೆಯಾಗಿ ಇಲಾಖೆಗೆ ಹೊಸ ನೀರು ಹರಿಸಿದ್ದು ಕೂಡ ಸೆಲ್ವಿದಾಸ್ ಅವರ ಸಾಧನೆಯೇ. ಉನ್ನತ ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳನ್ನು ಪರಿಚಯಿಸಿದ್ದು, ರಾಷ್ಟ್ರೀಯ ಶಿಕ್ಷಣ ನೀತಿಯ ಕುರಿತು ಕರ್ನಾಟಕದ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಜಾಗೃತಿ ಮೂಡಿಸಿದ್ದು ಇವರ ಕಾಲದಲ್ಲೇ. ಭಾರತ ಆಡಳಿತ ಸೇವೆಯ ಅಧಿಕಾರಿಗಳು ಮಾತ್ರ ಉನ್ನತ ಹುದ್ದೆಗಳಿಗೆ ಶೋಭೆ ತರಬಲ್ಲರು ಎಂಬ ಸಾಮಾನ್ಯ ನಂಬಿಕೆ ಅಷ್ಟೇನೂ ಸರಿಯಲ್ಲ. ದಕ್ಷತೆ ಎಲ್ಲರಲ್ಲೂ ಇದ್ದು ಗಟ್ಟಿಯಾದ ಚಿಂತನೆ, ಮುಂಗಾಣ್ಕೆಗಳಿದ್ದರೆ ಅಕೆಡೆಮಿಕ್ ವ್ಯಕ್ತಿಗಳು ಕೂಡ ಸಮರ್ಥ ಆಡಳಿತಗಾರರಾಗಬಲ್ಲರು ಎಂಬುದನ್ನು ಡಾ. ಸೆಲ್ವಿದಾಸ್ ಆಚರಣೆಗೆ ತಂದು ತೋರಿಸಿದವರಲ್ಲಿ ಮೊದಲಿಗರು. ಈ ಇಲಾಖೆಯಲ್ಲಿ 1977ರಿಂದ 1988ರ ವರೆಗೆ ಅವರು ನಿರ್ದೇಶಕರಾಗಿ ಸೇವೆ ಸಲ್ಲಿಸಿದರು.

1988ರಿಂದ 1991ರ ವರೆಗೆ ಮೈಸೂರು ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿ ಸೆಲ್ವಿದಾಸ್ ಕಾರ್ಯ ನಿರ್ವಹಿಸಿದ್ದು ಅವರ ವೃತ್ತಿ ಜೀವನದ ಉತ್ತುಂಗವೆನ್ನಬಹುದು. ಆ ಕಾಲದಲ್ಲಿ ಅಭೂತ ಪೂರ್ವವೆನ್ನುವ ಸಾಧನೆಗಳನ್ನು ಅವರು ಮಾಡಿದರು ಎಂದೇ ಗುರುತಿಸಲಾಗುತ್ತದೆ. ಮೈಸೂರು ವಿ.ವಿಯಲ್ಲಿ ಮಹಿಳಾ ಅಧ್ಯಯನ ಕೇಂದ್ರ ಸ್ಥಾಪಿಸಿದ್ದು, ಸಂಶೋಧನೆಗೆ ಅಡಿಗಲ್ಲು ಹಾಕಿದ್ದು, ಸಾಮಾಜಿಕ ಸಂಯೋಜನೆಯ ಕುರಿತು ರಾಷ್ಟ್ರೀಯ ಅಂತಾರಾಷ್ಟ್ರೀಯ ಸೆಮಿನಾರುಗಳನ್ನು ಸಂಘಟಿಸಿದ್ದು, ಮೌಲ್ಯ ಆಧಾರಿತ ಶಿಕ್ಷಣ ಕುರಿತು ವ್ಯಾಪಕ ಅರಿವು ಮೂಡಿಸಲು ಪ್ರಯತ್ನಿಸಿದ್ದು ಗಮನಾರ್ಹವಾಗಿವೆ.

ತಮ್ಮ ನಿಷ್ಕಾಮ ಸೇವೆಗಾಗಿ ಪ್ರೊ. ಸೆಲ್ವಿದಾಸ್ ಅನೇಕ ಪುರಸ್ಕಾರಗಳನ್ನು ಪಡೆದಿದ್ದಾರೆ. ಕರ್ನಾಟಕ ರಾಜ್ಯೋತ್ಸವ ಪುರಸ್ಕಾರ, ಮಂಗಳೂರು, ತುಮಕೂರು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್, ಇಂದಿರಾ ಪ್ರಿಯದರ್ಶಿನಿ ಪ್ರಶಸ್ತಿ, ಮದರ್ ತೆರೇಸ ಪುರಸ್ಕಾರ ಮಹತ್ವದ ಪ್ರಶಸ್ತಿಗಳಲ್ಲಿ ಕೆಲವು. ವಿಶ್ವವಿದ್ಯಾಲಯ ನಿಧಿ ಆಯೋಗದ ಸದಸ್ಯತ್ವ (1988–91), ಕೇಂದ್ರ ಸಾರ್ವಜನಿಕ ಸೇವಾ ಆಯೋಗದ ಸದಸ್ಯತ್ವ (1991–97) ಅವರ ಅರ್ಹತೆಗೆ ಸಂದ ಗೌರವಗಳಾಗಿವೆ. ಮಾತ್ರವಲ್ಲ, 1997ರಿಂದ 2003ರ ಕಾಲಾವಧಿಗೆ ಭಾರತ ಸರ್ಕಾರದಿಂದ ರಾಜ್ಯಸಭೆಗೆ ನಾಮಾಂಕಿತರಾಗಿದ್ದು ಸಹ ಅವರ ಪರಿಶ್ರಮಕ್ಕೆ ದೊರಕಿದ ಫಲವೇ ಆಗಿದೆ.

*

ಗಮಕ ಶಾರದೆ

ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್ಟ

ಕನ್ನಡ ನಾಡು ಲಲಿತಕಲೆಗಳ ಬೀಡು! ಅನೇಕ ಮಹಿಳೆಯರೂ ಕೂಡ ಈ ನಾಡಿನಲ್ಲಿ ಸಂಗೀತ, ನೃತ್ಯ, ಚಿತ್ರವೇ ಮೊದಲಾದ ಕಲೆಗಳಿಂದ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅದೇ ರೀತಿಯಲ್ಲಿ ನಮ್ಮ ನಾಡಿನ ಅತೀ ಪ್ರಾಚೀನ ಕಲೆಯೆಂದು ಗುರುತಿಸಲ್ಪಟ್ಟ 'ಕಾವ್ಯ ವಾಚನ ಕಲೆ' ಅಥವಾ 'ಗಮಕ ಕಲೆ'ಯಲ್ಲಿ ಪ್ರಖ್ಯಾತರಾದವರಿದ್ದಾರೆ. 20ನೇ ಶತಮಾನದ ಆದಿಯಲ್ಲಿ – ಮೈಸೂರಿನಲ್ಲಿ ಅಭಿನವ ಕಾಳಿದಾಸ ಬಸಪ್ಪ ಶಾಸ್ತ್ರಿಗಳ ಶಿಷ್ಯೆಯೂ, ಅರಮನೆಯ ಕಟ್ಟಳೆಯ ಮುತ್ತೈದೆಯೂ ಆಗಿದ್ದ ಹಾಡಿನ ನಾಗಮ್ಮ (1900), ಕನ್ನಡ ಪಂಡಿತೆಯೂ, ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳ ತಂಗಿ ಶ್ರೀಮತಿ ಎಂ. ರಮಾಬಾಯಿ (1901), ಬೆಂಗಳೂರಿನ 'ಭಾರತ'ದ ಲಲಿತಮ್ಮ (1907), ಮಂಡ್ಯ ಜಿಲ್ಲೆಯ ಹೇಮಾವತಿಯ ಶ್ರೀಮತಿ ಜಯಲಕ್ಷ್ಮೀ ಗಣೇಶಮೂರ್ತಿ ಮೊದಲಾದವರು ಕಾವ್ಯವಾಚನದಿಂದ ಬೆಳಕಿಗೆ ಬಂದವರು.

ಆದರೆ, ಗಮಕ ಕಲೆಯನ್ನೇ ತಮ್ಮ ಬಾಳ ಉಸಿರಾಗಿಸಿ, 'ಗಮಕ ಶಾರದೆ'ಯೆನಿಸಿ, ಗಮಕ ಜಗತ್ತಿನ ಪ್ರಾತಃಸ್ಮರಣೀಯರಾದ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರು ತಮ್ಮ ಸಾಧನೆಯಿಂದ ಗಮಕ ಕಲಾ ಇತಿಹಾಸದಲ್ಲಿ ಸುವರ್ಣಾಧ್ಯಾಯವನ್ನು ಬರೆದಿರುತ್ತಾರೆ. 'ಮಹಿಳೆಯರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದೇ ಒಂದು ಅಪರಾಧ'ವೆಂದು ಪರಿಗಣಿಸಲ್ಪಟ್ಟ ಕಾಲದಲ್ಲಿ 'ಗಮಕಿ'ಯಾಗಿ ನಾಡ–ನುಡಿ ಸೇವೆಗೈದ ಶ್ರೀಮತಿ ಶಕುಂತಲಾ ಬಾಯಿಯವರ ಕೊಡುಗೆ ಅನನ್ಯವಾದುದು!

ಜನನ ಮತ್ತು ಬಾಲ್ಯ:– ರೈಲ್ವೇ ಇಲಾಖೆಯಲ್ಲಿ ಗಾರ್ಡ್ ಆಗಿ ಸೇವೆ ಸಲ್ಲಿಸುತ್ತಿದ್ದ ನಾರಾಯಣಕೆರೆ ವೆಂಕೋಬರಾಯರು 'ಗಾರ್ಡ್ ವೆಂಕೋಬರಾವ್' ಎಂದೇ ಪ್ರಸಿದ್ಧಿ. ಇವರು ಬೆಂಗಳೂರಿನಲ್ಲಿ ಸೇವೆಯಲ್ಲಿದ್ದರು. ಇವರ ಪತ್ನಿ ಶ್ರೀಮತಿ ಸುಂದರಾಬಾಯಿ. ಈ ದಂಪತಿಗಳ ಪುತ್ರಿಯಾಗಿ, ಏಪ್ರಿಲ್ 5, 1921ರಂದು ಶಕುಂತಲಾ ಜನಿಸಿದರು. ಸುಲ್ತಾನ್ ಪೇಟೆಯ ಆರ್ಯಬಾಲಿಕಾ ಪಾಠಶಾಲೆಯಲ್ಲಿ ಲೋಯರ್ ಸೆಕೆಂಡರಿವರೆಗೆ ಶಿಕ್ಷಣ ಪಡೆದ 'ಶಕುಂತಲೆ'ಗೆ ಸಂಗೀತ, ಹಾಡು ಎಂದರೆ ಬಹಳ ಇಷ್ಟ! ಹೀಗಾಗಿ ಎಳವೆಯಲ್ಲಿಯೇ ಸಂಗೀತ ಶಿಕ್ಷಣವನ್ನು ಗುರುಗಳಾದ ವಿದ್ವಾನ್ ಚಿಂತಲಪಲ್ಲಿ ಕೃಷ್ಣಮೂರ್ತಿಯವರಿಂದ ಪಡೆದು 'ಸೀನಿಯರ್ ಗ್ರೇಡ್' ತೇರ್ಗಡೆಯಾದರು.

ಬಿಂಗೀಪುರದ ಶ್ರೀನಿವಾಸರಾಯರ ಮಗ ಪಾಂಡುರಂಗರಾಯರು 'ಶಕುಂತಲೆ'ಯ ತಾಯಿಯ ತಮ್ಮ; ಸೋದರಮಾವ. ತಮ್ಮನಿಗೇ ಮಗಳನ್ನು ಕೊಡುವುದೆಂದು 'ಶಕುಂತಲೆ'ಯ ತೊಟ್ಟಿಲಿಗೆ ಬಾಸಿಂಗವನ್ನೂ ಕಟ್ಟಿದ್ದರು. ಹೀಗಾಗಿ ಕೇವಲ ಎಂಟೂವರೆ ವರ್ಷ ವಯಸ್ಸಿನಲ್ಲಿ 'ಶಕುಂತಲೆ'ಯ ವಿವಾಹವು ಪಾಂಡುರಂಗರಾಯರೊಂದಿಗೆ ನೆರವೇರಿತು. ಆದರೆ, ತವರುಮನೆಯಿಂದ ಗಂಡನಮನೆಗೆ ಗೃಹಿಣಿಯಾಗಿ ಪಾದಾರ್ಪಣೆ ಮಾಡಿದ್ದು ಮಾತ್ರ ಮದುವೆಯಾಗಿ ಏಳುವರ್ಷಗಳ ಬಳಿಕ!

ಗಮಕಾಭ್ಯಾಸ:– ಪಾಂಡುರಂಗರಾಯರಿಗೆ ಕಾವ್ಯ, ಸಾಹಿತ್ಯಗಳಲ್ಲಿ ಆಸಕ್ತಿ; ಗಮಕ ಕಲೆಯನ್ನು ಕೇಳಿ ಅಭಿರುಚಿ ಬೆಳಸಿಕೊಂಡಿದ್ದರು. ತನ್ನ ಪತ್ನಿ ಶಕುಂತಲಾಬಾಯಿಯವರು ಸಂಗೀತವನ್ನು ಬಲ್ಲವರೆಂದು ತಿಳಿದಿದ್ದರು. ಆಕೆಯನ್ನು 'ಗಮಕಿ'ಯನ್ನಾಗಿಸಬೇಕೆಂದು ನಿಶ್ಚಯಿಸಿದ ರಾಯರು 1937ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪೂಜ್ಯ ಡಿ.ವಿ. ಗುಂಡಪ್ಪನವರ ಮಾರ್ಗದರ್ಶನದಲ್ಲಿ ಗಮಕಿ ಸಂತೇಬೆನ್ನೂರು ಗೋವಿಂದರಾವ್ ಬಿಂದೂರಾವ್ ಅವರ ಗಮಕ ತರಗತಿಗೆ ಸೇರಿಸಿದರು. ಅಲ್ಪಕಾಲದಲ್ಲಿಯೇ ಗುರುಗಳ ಕಾವ್ಯವಾಚನದ ಮಟ್ಟುಗಳನ್ನು ತಮ್ಮದಾಗಿಸಿಕೊಂಡ ಶಕುಂತಲಾಬಾಯಿಯವರನ್ನು ಪರೀಕ್ಷಿಸಿದ ಪ್ರೊ. ಸಿ. ಕೆ. ವೆಂಕಟರಾಮಯ್ಯ ಮತ್ತು ಪ್ರೊ. ವಿ. ಸೀತಾರಾಮಯ್ಯ (ಸಾಹಿತ್ಯ ವಿಭಾಗ) ಹಾಗೂ ವಿದ್ವಾನ್ ಬಿ. ವೆಂಕಟಕೃಷ್ಣಪ್ಪ ಮತ್ತು ವಿದ್ವಾನ್ ತಿರುಮಲೆ ರಾಜಮ್ಮ (ಸಂಗೀತ ವಿಭಾಗ), ಇವರುಗಳು, 'ಈಕೆ ಗಮಕಿಯಾಗಲು ತಕ್ಕವಳು!', ಎಂದು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಗೊಳಿಸಿದರು. ಪತಿಯ ಸಹಕಾರ ಮತ್ತು ಪ್ರಯತ್ನ, ಗುರುಗಳಾದ ಗಮಕಿ ಸಂ.ಗೋ. ಬಿಂದೂರಾಯರ 'ಗಮಕ ಪಾಠ'ಗಳಿಂದ ನಾರಾಯಣಕೆರೆಯ ಚಿಪ್ಪಿನಿಂದ ಗಮಕದ ಮುತ್ತೊಂದು ಮೂಡಿ ಬಂದಂತಾಯಿತು! ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಥಮ ಗಮಕ ತರಗತಿಯಿಂದ ಪ್ರಥಮ ಮಹಿಳಾ ಗಮಕಿಯಾಗಿ ಹೊರಬಂದರು!

ಗಮಕಿಯಾಗಿ ಸಾಧನೆ:– 1938ರಲ್ಲಿ ಶ್ರೀಮತಿ ಶಕುಂತಲಾಬಾಯಿಯವರು ವೇದಿಕೆಯೇರಿ ಗಮಕ ಕಾರ್ಯಕ್ರಮಗಳನ್ನು ಕೊಡಲು ಪ್ರಾರಂಭಿಸಿದರು. ಇದೇ ಸಂದರ್ಭದಲ್ಲಿ ಪಾಂಡುರಂಗರಾಯರು ಕನ್ನಡ–ಸಂಸ್ಕೃತ ಸಾಹಿತ್ಯವನ್ನಭ್ಯಸಿಸಿ, ಶಿಶು ಸಾಹಿತ್ಯ, ಶಿಕ್ಷಣಕ್ಕೆ ಸಂಬಂಧಿಸಿದ ಗ್ರಂಥ ರಚನೆಗಳನ್ನು ಮಾಡಿದ್ದಲ್ಲದೆ, ಗಮಕ ವ್ಯಾಖ್ಯಾನಕಾರರಾಗಿ ತಮ್ಮ 'ಗಮಕ ಸೇವೆ'ಯನ್ನು ಪ್ರಾರಂಭಿಸಿದರು. ತಮ್ಮ ಪತ್ನಿಯ ಗಮಕ ವಾಚನಕ್ಕೆ ತಾವೇ ವ್ಯಾಖ್ಯಾನಕಾರನಾಗಿ ಕಾರ್ಯಕ್ರಮಗಳನ್ನು ಕೊಡುವ ಮೂಲಕ ಕರ್ನಾಟಕದಲ್ಲಿ 'ಪ್ರಥಮ ಗಮಕ ಜೋಡಿ'ಯೊಂದರ ಉದಯವಾಗಿ, ತಾವೀರ್ವರೂ ಗಮಕ ಕಲೆಯ ಪ್ರಚಾರಕ್ಕೆ ತಮ್ಮನ್ನು ಅರ್ಪಿಸಿಕೊಂಡರು.

ತಮ್ಮ ಪತ್ನಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳಲ್ಲದೆ ಇತರ ಷಟ್ಪದಿ, ಚಂಪೂ, ರಗಳೆ, ಸಾಂಗತ್ಯ ಮತ್ತು ಮಹಾಛಂದಸ್ಸಿನ ಕಾವ್ಯಗಳನ್ನೂ ಗಮಕ ರೀತಿಯಲ್ಲಿ ವಾಚಿಸಲು ಅಭ್ಯಸಿಸಬೇಕೆಂಬುದು ಪಾಂಡುರಂಗರಾಯರ ಬಯಕೆಯಾಗಿತ್ತು. ಆದುದರಿಂದ ಶ್ರೀಮತಿಯವರು ಕನ್ನಡ ಕಾವ್ಯಗಳ ಎಲ್ಲ ಪ್ರಕಾರಗಳ ವಾಚನ ಮಾಡಲು ಪ್ರಯತ್ನಿಸಿ, ಸಫಲರಾದರು. ಶ್ರೀಮತಿ ಶಕುಂತಲಾಬಾಯಿಯವರು ಸಾರ್ವಜನಿಕವಾಗಿ ಗಮಕ ಕಾರ್ಯಕ್ರಮಕ್ಕೆ ಪ್ರಥಮವಾಗಿ ಚಾಮರಸನ 'ಪ್ರಭುಲಿಂಗ ಲೀಲೆ'ಯ ಕಾವ್ಯಭಾಗವನ್ನು ಆರಿಸಿಕೊಂಡು ಬೆಂಗಳೂರಿನಲ್ಲಿ ಕಾರ್ಯಕ್ರಮವಿತ್ತುದನ್ನು ಪ್ರಶಂಸಿಸಿ, ಅಂದಿನ 'ತಾಯಿನಾಡು' ಪತ್ರಿಕೆ ವಿಶೇಷ ಲೇಖನವನ್ನು ಪ್ರಕಟಿಸಿತು. ಇದರಿಂದಾಗಿ ಕನ್ನಡ ನಾಡಿಗೆ ಗಮಕ ವಿದುಷಿಯೊಬ್ಬರ ಪರಿಚಯವಾದಂತಾಯಿತು.

ಈ ಪ್ರಥಮ ಯಶಸ್ಸಿನ ನಂತರ ಶ್ರೀಮತಿ ಶಕುಂತಲಾಬಾಯಿಯವರು ಕನ್ನಡದ ಕಣ್ವ ಬಿ.ಎಂ.ಶ್ರೀ.ಯವರ 'ಕನ್ನಡ ತಾಯ್ ನೋಟ', ಮಂಜೇಶ್ವರ ಗೋವಿಂದ ಪೈಗಳ 'ಗೊಲ್ಗೊಥಾ, ವೈಶಾಖಿ' ಖಂಡಕಾವ್ಯಗಳನ್ನು ಪ್ರಯೋಗಶೀಲೆ ಗಮಕಿಯಾಗಿ ಪ್ರಸ್ತುತಪಡಿಸಿ ಕವಿಗಳಿಂದಲೇ ಮೆಚ್ಚುಗೆ ಪಡೆದರು. ಚಾಮರಸನ 'ಪ್ರಭುಲಿಂಗ ಲೀಲೆ'ಯನ್ನು ಬೆಂಗಳೂರು, ಚಿತ್ರದುರ್ಗ, ಅಜ್ಜಂಪುರ ಮೊದಲಾದೆಡೆಗಳಲ್ಲಿ ವೀರಶೈವ ಮಠಾಧಿಪತಿಗಳ ಸನ್ನಿಧಿಯಲ್ಲಿ ವಾಚನ ಮಾಡಿ, ಅವರೆಲ್ಲರ ಗೌರವಕ್ಕೆ ಪಾತ್ರರಾದರು.

ಗಮಕಿ ಮೈ.ಕೇ. ಅನಂತಪದ್ಮನಾಭರಾಯರ, 'ಶ್ರೀರಾಮಚರಿತಮಾನಸ' ಗದಗಿನ ತುಪ್ಪದ ಬಸವರಾಜ ವಿರಚಿತ, 'ಬಸವ ದರ್ಶನಂ', ರಾಘವಾಂಕನ 'ಹರಿಶ್ಚಂದ್ರಕಾವ್ಯ' ತೋಂಟದಾರ್ಯ ಕವಿಯ 'ಶ್ರೀ ಸಿದ್ಧಲಿಂಗೇಶ್ವರ ಪುರಾಣ', ಕುವೆಂಪುರವರ 'ಶ್ರೀರಾಮಾಯಣ ದರ್ಶನಂ', ಡಿ.ವಿ.ಜಿ.ಯವರ 'ಶ್ರೀರಾಮ ಪರೀಕ್ಷಣಂ' ಮೊದಲಾದ ಕಾವ್ಯಗಳನ್ನು ಗಮಕ ರೂಪದಲ್ಲಿ ವಾಚಿಸಿ, ಕುವೆಂಪು, ಡಿ.ವಿ.ಜಿ.ಯೇ ಮುಂತಾದ ಕನ್ನಡ ಸಾಹಿತ್ಯ ದಿಗ್ಗಜಗಳಿಂದಲೇ

'ಸೈ' ಎನ್ನಿಸಿಕೊಂಡರು. ಡಾ. ವಿ.ಕೃ.ಗೋಕಾಕರು ತಮ್ಮ 'ಭಾರತ ಸಿಂಧು ರಶ್ಮಿ' ಕಾವ್ಯವನ್ನು ತಮ್ಮೆದುರಿಗೇ ವಾಚಿಸಿದ ಗಮಕಿ ಶ್ರೀಮತಿ ಶಕುಂತಲಾಬಾಯಿಯವರ ವಾಚನ ಶೈಲಿಯನ್ನು, ಕಂಠಮಾಧುರ್ಯವನ್ನು ಬಾಯ್ತುಂಬ ಹೊಗಳಿದರು.

1953ರಲ್ಲಿ ಬೇಲೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀಮತಿ ಶಕುಂತಲಾ ಬಾಯಿಯವರ 'ಶ್ರೀರಾಮಾಯಣ ದರ್ಶನಂ' ಕಾವ್ಯ ಭಾಗದ ವಾಚನವನ್ನು ಕೇಳಿ ಮನಸೋತ ಸಾಹಿತ್ಯ ಸಂಸ್ಕೃತಿ ಹಿತೈಷಿಯಾದ ಶ್ರೀ ಕೆಂಗಲ್ ಹನುಮಂತಯ್ಯನವರು ಗಮಕ ಪ್ರಚಾರಕ್ಕೆಂದು ಆರ್ಥಿಕ ನೆರವನ್ನಿತ್ತರು. ಇದರಿಂದಾಗಿ 'ಶ್ರೀರಾಮಾಯಣ ದರ್ಶನಂ' ಕಾವ್ಯದ ವಾಚನವು ರಾಜ್ಯದ ಸುಮಾರು ಹನ್ನೆರಡು ಕಡೆಗಳಲ್ಲಿ ನಡೆದು, ಆ ಕಾವ್ಯವು ಜನಮಾನಸದಲ್ಲಿ ನಲಿಯುವಂತಾಯಿತು. ಶ್ರೀ ಪಾಂಡುರಂಗರಾಯರು ಪತ್ನಿಗೆ ಎಲ್ಲ ವಿಧದಲ್ಲೂ ನೆರವಾಗುತ್ತ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣರಾಗುತ್ತಿದ್ದರು. 1958ರಲ್ಲಿ 'ಶ್ರೀರಾಮಾಯಣ ದರ್ಶನಂ' ಕಾವ್ಯದ "ಶಬರಿಗಾದನು ಅತಿಥಿ ದಾಶರಥಿ" ಭಾಗವನ್ನು ಶ್ರೀಮತಿಯವರ ಕಂಠದಾನದಲ್ಲಿ ಮೈಸೂರಿನ ವಯಸ್ಕರ ಶಿಕ್ಷಣ ಸಮಿತಿಯವರು ವಾಕ್ಚಿತ್ರವನ್ನಾಗಿ ತಯಾರಿಸಿದರು.

ಶ್ರೀ ಪಾಂಡುರಂಗರಾಯರು ರಚಿಸಿದ 'ಕರ್ನಾಟಕ ದರ್ಶನ' 'ಪುರಂದರ ದಾಸರು ಕಂಡ ಕರ್ನಾಟಕ' 'ಗಾಂಧೀ ದರ್ಶನ' ವೇ ಮೊದಲಾದ ರೂಪಕಗಳನ್ನು ಶ್ರೀಮತಿ ಶಕುಂತಲಾಬಾಯಿಯವರು ಗಮಕ ರೂಪದಲ್ಲಿ ನಾಡಿನಾದ್ಯಂತ ಸರ್ಕಾರದ ಸಾಹಿತ್ಯ-ಸಂಸ್ಕೃತಿ ಪ್ರಚಾರದ ಅಂಗವಾಗಿ ಪ್ರಸ್ತುತಪಡಿಸಿದರು. ಕನ್ನಡದ ಅನೇಕ ಕಾವ್ಯಗಳ ವಾಚನ-ವ್ಯಾಖ್ಯಾನ ಕಾರ್ಯಕ್ರಮಗಳು ನಾಡಿನ ಎಲ್ಲ ಜಿಲ್ಲೆಗಳಲ್ಲೂ ಈ ಗಮಕ ದಂಪತಿಗಳ ಮೂಲಕ ನಡೆಯಿತು.

'ಕಲೆಯು ಸೀಮಾತೀತ'ವೆಂಬುದನ್ನು ಸಾದರಪಡಿಸುವಂತೆ ಈ ಗಮಕ ದಂಪತಿಗಳು ಆಂಧ್ರದ ತಿರುಪತಿ, ಹೈದರಾಬಾದ್, ಮದರಾಸಿನ ಅಯನಾವರಂ, ನವದೆಹಲಿ, ಪ್ರಯಾಗ, ಕೊಲ್ಕತ್ತಾ, ಮುಂಬಯಿ ಮೊದಲಾದೆಡೆಗಳಲ್ಲಿ ಕನ್ನಡ ಸಂಘ-ಸಂಸ್ಥೆಗಳ ಸಹಾಯದಿಂದ ಗಮಕ ಕಾರ್ಯಕ್ರಮಗಳನ್ನಿತ್ತರು. ತೆಲುಗು, ತಮಿಳು, ಹಿಂದೀ, ಬಂಗಾಳಿಯೇ ಮೊದಲಾದ ಅನ್ಯಭಾಷಿಕರೂ ಕೂಡ ಶ್ರೀಮತಿಯವರ ಕಾವ್ಯವಾಚನ ಕಲೆಗೆ ಮನಸೋತು ಅವರನ್ನು ಅಭಿನಂದಿಸಿ, ಗೌರವಿಸಿದರು. ಕನ್ನಡದ ಗಮಕ ಕಲೆಗೆ, ಕನ್ನಡದ ಮಹಿಳಾ ಗಮಕಿಗೆ ರಾಷ್ಟ್ರ ಮಟ್ಟದಲ್ಲಿ ಪ್ರಚಾರ ಮತ್ತು ಕೀರ್ತಿ ಬಂತೆಂದರೆ ಅತಿಶಯೋಕ್ತಿಯಲ್ಲ.!

1974-ಮಹಾವೀರ ವರ್ಧಮಾನ ಸ್ವಾಮಿಯ 2500ನೆಯ ಜಯಂತ್ಯುತ್ಸವ ವರ್ಷ! ಈ ಉತ್ಸವದಲ್ಲಿ ಶ್ರೀಮತಿ ಶಕುಂತಲಾಬಾಯಿಯವರು ಎರಡನೆಯ ನಾಗವರ್ಮ ವಿರಚಿತ 'ವಧಮಾನ ಪುರಾಣಂ', ಆಚಣ್ಣ ಕವಿಯ 'ವರ್ಧಮಾನ ಪುರಾಣಂ', ಮತ್ತಿತರ ಜೈನಕಾವ್ಯಗಳಿಂದಾಯ್ದ ಭಾಗಗಳ ಗಮಕ ವಾಚನವನ್ನು ಮಾಡಿದರು. ಆಕಾಶವಾಣಿಯವರು ಇವರ 'ಭರತೇಶ ವೈಭವ' ಕಾವ್ಯ ವಾಚನವನ್ನು ಬಿತ್ತರಿಸಿದರು.

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ 90ನೇ ವರ್ಷದ ಗೌರವವಾಗಿ, ಒಂದು ವರ್ಷಕಾಲ ಅವರು ರಚಿಸಿದ 'ಶ್ರೀರಾಮ ಪಟ್ಟಾಭಿಷೇಕ'ವನ್ನು ಬೆಂಗಳೂರಿನ ಅನೇಕ ಕಡೆಗಳಲ್ಲೂ ಹೊರಜಿಲ್ಲೆಗಳಲ್ಲೂ ಶ್ರೀಮತಿಯವರು ಗಮಕ ಶೈಲಿಯಲ್ಲಿ ವಾಚನ ಮಾಡಿ 'ಕನ್ನಡದ ಆಸ್ತಿ-ಮಾಸ್ತಿ'ಯವರಿಗೆ ಗೌರವ ಸಲ್ಲಿಸಿದರು.

ರಾಜಕೀಯ ಧುರೀಣ ರಾಮಕೃಷ್ಣ ಹೆಗಡೆ, ಕಾದಂಬರಿ ಸಾರ್ವಭೌಮ ಅ.ನ.ಕೃಷ್ಣರಾವ್, ತಿ.ತಾ.ಶರ್ಮ, ಮೊದಲಾದ ಗಣ್ಯರು ಶ್ರೀಮತಿ ಶಕುಂತಲಾಬಾಯಿಯವರ ಗಮಕ ಸೇವೆಯನ್ನು ಕೊಂಡಾಡಿದರು.

ಸನ್ಮಾನ-ಗೌರವ-ಪ್ರಶಸ್ತಿಗಳು:- ಶ್ರೀಮತಿ ಶಕುಂತಲಾಬಾಯಿಯವರ 'ಗಮಕ ಕಲಾ ಸೇವೆ'ಯನ್ನು ಗುರುತಿಸಿ, ಅವರಿಗೆ (60 ವರ್ಷ) 1981ರಲ್ಲಿ ಅವರಿಗೆ 'ಗಮಕ ಶಾರದೆ' ಎಂಬ 658 ಪುಟಗಳ ಬೃಹತ್ ಅಭಿನಂದನಾ ಗ್ರಂಥವನ್ನು ಸಮರ್ಪಿಸಿ ನಾಡು ಅವರನ್ನು ಗೌರವಿಸಿತು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1991), ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ (1996), ಬೆಂಗಳೂರು ಗಾಯನ ಸಮಾಜ ಪ್ರಶಸ್ತಿ, ಮೈಸೂರಿನಲ್ಲಿ ನಡೆದ ಎರಡನೆಯ ಗಮಕ ಕಲಾ ಸಮ್ಮೇಳನ (1979–ಕ.ಸಾ.ಪ.)ದ ಅಧ್ಯಕ್ಷತೆಯ ಗೌರವ, 2001ರಲ್ಲಿ ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ಮುಳಿಯ ತಿಮ್ಮಪ್ಪಯ್ಯ ಸ್ಮಾರಕ ಪ್ರಶಸ್ತಿ– ಇನ್ನೂ ಅನೇಕ ಗೌರವ ಪ್ರಶಸ್ತಿಗಳು ಶ್ರೀಮತಿಯವರಿಗೆ ಸಂದವು.

'ಕಾವ್ಯವಾಚನ ಪ್ರವೀಣೆ, ಗಮಕ ಕೋವಿದೆ, ಗಮಕ ಕಲೆಯ ಧ್ರುವತಾರೆ, ಗಮಕದ ಸುಬ್ಬುಲಕ್ಷ್ಮಿ'–ಮುಂತಾದ ಗೌರವ ಬಿರುದುಗಳು ಈ ಗಮಕ ಶಾರದೆಗೆ ಸಂದವು.

ಕೊಲಂಬಿಯಾ ಗ್ರಾಮಾಫೋನ್ ಕಂಪೆನಿಯವರು ಶ್ರೀಮತಿಯವರೇ ರಚಿಸಿದ 'ರಾಘವೇಂದ್ರ ಗುರೂಜೀ' ಎಂಬ ಪದ್ಯಮಾಲಿಕೆಯನ್ನು ಗಮಕ ಶೈಲಿಯಲ್ಲಿ ಧ್ವನಿಮುದ್ರಿಸಿತು.

ಬಡತನದ ಕುಟುಂಬದ ನೋವು ನಲಿವುಗಳನ್ನನುಭವಿಸಿ, ಓರ್ವಮಗ (ಮೋಹನರಾವ್) ಮತ್ತು ಇಬ್ಬರು ಹೆಣ್ಣುಮಕ್ಕಳನ್ನು ಪಡೆದ ಸಂತೃಪ್ತ ಕಲಾ ದಂಪತಿಗಳು–ಶ್ರೀ ಪಾಂಡುರಂಗರಾಯರು ರಾಷ್ಟ್ರಮಟ್ಟದ 'ಆದರ್ಶ ಶಿಕ್ಷಕ' ಪ್ರಶಸ್ತಿ ಭಾಜನರಾದರು. ಶ್ರೀಮತಿ ಶಕುಂತಲಾಬಾಯಿಯವರು 'ಗಮಕ ರಸಾಯನ' ಹಾಗೂ 'ಗಮಕ ಮತ್ತು ಮಹಿಳೆ' ಎಂಬ ಕೃತಿಗಳನ್ನು ರಚಿಸಿದ್ದಾರೆ. ಸರಳತೆಯನ್ನೇ ಮೈಗೂಡಿಸಿ, 'ಸಾಧಕ ದಂಪತಿ'ಗಳೆಂದೇ ಗುರುತಿಸಲ್ಪಟ್ಟ ಶ್ರೀ ಪಾಂಡುರಂಗರಾಯರು ದಿವಂಗತರಾದ (1998) ಬಳಿಕವೂ ಶ್ರೀಮತಿ ಶಕುಂತಲಾಬಾಯಿಯವರು ತಮ್ಮ ಗಮಕ ಕಲಾರಾಧನೆಯನ್ನು ಮುಂದುವರಿಸಿ, 2008 ಆಗಸ್ಟ್ 9ರಂದು ಬೆಂಗಳೂರಿನಲ್ಲಿ ನಿಧನರಾದರು. ಹೀಗೆ ಮಹಿಳಾ ಗಮಕಿಯಾಗಿ ಅನೇಕ ಪ್ರಥಮಗಳನ್ನು ಸಾಧಿಸಿದ ಕಲಾವಿದೆಯೋರ್ವಳು ಇಂದಿಗೂ 'ಗಮಕ ಶಾರದೆ'ಯಾಗಿ ನೆನೆಪಿನಲ್ಲಿದ್ದಾರೆ.

———— * ————

ಲೇಖಕರ ವಿಳಾಸ

ಯಶೋಧರಾ ಗಾಥೆ

ಎಸ್. ನಿಜಲಿಂಗಪ್ಪ
ಮಾಜಿ ಮುಖ್ಯಮಂತ್ರಿಗಳು,
ಚಿತ್ರದುರ್ಗ.

ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್
ಬೆಂಗಳೂರು.

ಎಂ.ಎನ್. ಜೋಯಿಸ್
ಸ್ವಾತಂತ್ರ್ಯ ಹೋರಾಟಗಾರರು,
ಮೈಸೂರು.

ಹೆಚ್.ಡಿ. ದೇವೇಗೌಡ
ಮಾಜಿ ಪ್ರಧಾನಿಗಳು ಹಾಗೂ
ಲೋಕಸಭಾ ಸದಸ್ಯರು,
ಪದ್ಮನಾಭನಗರ, ಬನಶಂಕರಿ,
1ನೇ ಹಂತ, ಬೆಂಗಳೂರು.

ಬಿ.ಆರ್. ಪ್ರಾಣೇಶರಾವ್
ಮೈಸೂರು.

ಶರಣಗೌಡ ಇನಾಂದಾರ್
ಬೆಳಗಾವಿ.

ಎಸ್.ಎಂ. ಕೃಷ್ಣ
ಕೇಂದ್ರ ವಿದೇಶಾಂಗ ಸಚಿವರು,
ಭಾರತ ಸರ್ಕಾರ, ನವದೆಹಲಿ.

ಎಚ್.ಎಸ್. ದೊರೆಸ್ವಾಮಿ
ಸ್ವಾತಂತ್ರ್ಯ ಹೋರಾಟಗಾರರು,
4ನೇ ಟಿ ಬ್ಲಾಕ್, ಬೆಂಗಳೂರು.

ಸಿ.ಕೆ. ಜಾಫರ್ ಷರೀಫ್
ಮಾಜಿ ಕೇಂದ್ರ ಸಚಿವರು,
ಬೆಂಗಳೂರು.

ಎಂ.ವಿ. ರಾಜಶೇಖರನ್
ಮಾಜಿ ಕೇಂದ್ರ ಸಚಿವರು ಹಾಗೂ
ವಿಧಾನ ಪರಿಷತ್ ಸದಸ್ಯರು, ಬೆಂಗಳೂರು.

ಜಿ. ನಾರಾಯಣ
ಬೆಂಗಳೂರು.

ಎಂ. ವೀರಪ್ಪ ಮೊಯಿಲಿ
ಕೇಂದ್ರ ಕಾರ್ಪೊರೇಷನ್ ಸಚಿವರು,
ಭಾರತ ಸರ್ಕಾರ, ನವದೆಹಲಿ.

ಎನ್. ಧರ್ಮಸಿಂಗ್
ಮಾಜಿ ಮುಖ್ಯಮಂತ್ರಿಗಳು ಹಾಗೂ
ಲೋಕಸಭಾ ಸದಸ್ಯರು, ಆರ್.ಟಿ. ನಗರ,
ಬೆಂಗಳೂರು.

ಹೆಚ್. ಹನುಮಂತಪ್ಪ
ಮಾಜಿ ಸಂಸದರು, ಚಿತ್ರದುರ್ಗ.

ಎಂ. ಮಲ್ಲಿಕಾರ್ಜುನ ಖರ್ಗೆ
ಕೇಂದ್ರ ಕಾರ್ಮಿಕ ಸಚಿವರು,
ಭಾರತ ಸರ್ಕಾರ, ನವದೆಹಲಿ.

ಎಂ.ಪಿ. ಪ್ರಕಾಶ
ಮಾಜಿ ಉಪಮುಖ್ಯಮಂತ್ರಿಗಳು,
ಬೆಂಗಳೂರು.

ಕೆ.ಎಚ್. ಪಾಟೀಲ
ಮಾಜಿ ಸಚಿವರು,
ಹುಲಿಕೋಟೆ, ಗದಗ.

ಪ್ರೊ. ಹೆಚ್.ಆರ್. ದಾಸೇಗೌಡ
ಅನುರಾಧ ಅನುರೂಪ,
ನಂ. 681, 12ನೇ ಕ್ರಾಸ್ ರೋಡ್,
ವಿಜಯನಗರ, ಬೆಂಗಳೂರು.

ಸರೋಜಮ್ಮ ತುಳಸೀ ದಾಸಪ್ಪ
ಯಶೋ ನಿವಾಸ, ನಂ. 6,
ಲಾಂಗ್ ಫೋರ್ಡ್ ಗಾರ್ಡನ್,
ಬೆಂಗಳೂರು–38.

ಲೀಲಾದೇವಿ ಆರ್. ಪ್ರಸಾದ್
ನಂ. 64, 1ನೇ ಮುಖ್ಯರಸ್ತೆ,
ಲೋಯರ್ ಪ್ಯಾಲೇಸ್ ಆರ್ಚರ್ಡ್,
ಸದಾಶಿವನಗರ, ಬೆಂಗಳೂರು–3.

ಹೇಮಲತಾ ಮಹಿಷಿ
ಅಡ್ವೊಕೇಟ್,
ನಂ.10, ವೆಸ್ಟ್‌ಲಿಂಕ್ ರೋಡ್, 2 ಮತ್ತು 3ನೇ ಕ್ರಾಸ್
ಮಧ್ಯೆ, ಮಲ್ಲೇಶ್ವರಂ, ಬೆಂಗಳೂರು–3.

ಮನೋರಮಾ ಮಧ್ವರಾಜ್
ಮಾಜಿ ಸಂಸದರು, ಉಡುಪಿ.

ಭಾಗೀರಥಿ ಮುರುಳುಸಿದ್ಧನಗೌಡ
ಮಾಜಿ ಸಚಿವರು, ಕೂಡ್ಲಿಗಿ.

ನಾಗಮಣಿ ಎಸ್. ರಾವ್
ಚಾಮರಾಜಪೇಟೆ,
ಬೆಂಗಳೂರು.

ಪ್ರಮೀಳಾ ನೇಸರ್ಗಿ
ಇಂದಿರಾನಗರ,
ಬೆಂಗಳೂರು.

ರಾಣಿ ಸತೀಶ್
ಮಾಜಿ ಸಚಿವರು,
ಬಿ.ಟಿ.ಎಂ. ಲೇಔಟ್, ಬೆಂಗಳೂರು.

ಪ್ರೇಮಾ ಭಟ್
ನಂ. 845, 4ನೇ ಮುಖ್ಯರಸ್ತೆ,
ವಿಜಯನಗರ,
ಬೆಂಗಳೂರು–40

ಎಸ್.ಎನ್. ಸರೋಜಮ್ಮ
ನೃಪತುಂಗ,
ಉಪ್ಪಾರಹಳ್ಳಿ,
ತುಮಕೂರು.

ಪ್ರೊ. ಬಿ.ಎಲ್. ಭಾಗ್ಯಲಕ್ಷ್ಮಿ
ಜಯನಗರ,
ಬೆಂಗಳೂರು.

ಕೆ.ಬಿ. ಮುದಗಲ್
ಧಾರವಾಡ

ಪ್ರೊ. ಆರ್. ರಾಜಣ್ಣ
ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಮಾನಸ ಗಂಗೋತ್ರಿ,
ಮೈಸೂರು–6.

ಡಾ. ಸಿ.ವಿ. ಶೈಲಜಾ
ನಂ. 698, 4ನೇ ಕ್ರಾಸ್, 6ನೇ ಮೈನ್,
ವಿಜಯನಗರ, ಬೆಂಗಳೂರು.

ಕರ್ನಾಟಕ ಸಾಧಕಿಯರು

ಲೋಕನಾಥ ದೀಕ್ಷಿತ್
ನಂ. 37, 2ನೇ ಮೈನ್, 1ನೇ ಕ್ರಾಸ್,
ಜಯನಗರ, 3ನೇ ಬ್ಲಾಕ್ (ಪೂರ್ವ),
ಬೆಂಗಳೂರು-11

ಪ್ರೊ. ಎಂ.ಆರ್. ಲಕ್ಷ್ಮೀದೇವಿ
ನಂ. 95, 34ನೇ ಬಿ. ಅಡ್ಡರಸ್ತೆ,
10ನೇ ಮೈನ್, 4ನೇ ಟಿ. ಬ್ಲಾಕ್,
ಜಯನಗರ, ಬೆಂಗಳೂರು.

ಡಾ. ಕಮಲಾ ಹಂಪನಾ
ನಂ. 1078, 18ನೇ ಎ ಮೈನ್,
66ನೇ ಕ್ರಾಸ್, 5ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-10

ಅರುಣಾ ಕುಮಾರಿ ಡಾ. ಸಂಗೀತ ಸುವರ್ಣ
ಸಹಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಮಾನಸ ಗಂಗೋತ್ರಿ, ಮೈಸೂರು-6.

ಡಾ. ಕೆ.ಆರ್. ಕಮಲೇಶ್
ನಂ. 9, ನೃಪತುಂಗ, 15ನೇ ಕ್ರಾಸ್,
ಉಳ್ಳಾಲ ಮುಖ್ಯರಸ್ತೆ,
ಮುನೇಶ್ವರ ನಗರ,
ಬೆಂಗಳೂರು-56.

ಡಾ. ಶಾಲಿನಿ ರಘುನಾಥ
ಅಧ್ಯಕ್ಷರು ಹಾಗೂ ಪ್ರಾಧ್ಯಾಪಕರು,
ಜಾನಪದ ಅಧ್ಯಯನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಡಾ. ಹೆಚ್. ಜಯಮ್ಮ ಕರಿಯಣ್ಣ
'ಆಶೀರ್ವಾದ' ನಂ. 2933,
13ನೇ ಮೈನ್, ವಿಜಯನಗರ,
2ನೇ ಹಂತ, ಬೆಂಗಳೂರು-40

ಶಾಂತಾಕುಮಾರಿ
ನಂ. 1261, 20ನೇ ಅಡ್ಡರಸ್ತೆ, 16ನೇ ಮೈನ್,
'ಎ' ಬ್ಲಾಕ್, ಸಹಕಾರನಗರ
ಬೆಂಗಳೂರು-90

ಡಾ. ಎಂ.ಬಿ. ಪದ್ಮ
ನಂ. 710, 2ನೇ ಕ್ರಾಸ್, ತ್ಯಾಗರಾಜ ರಸ್ತೆ,
ಕೆ.ಆರ್. ಮೊಹಲ್ಲಾ,
ಮೈಸೂರು-24.

ಡಾ. ಅಕ್ಕಮಹಾದೇವಿ
ಪರಿಶೋಧನಾ ಸಹಾಯಕರು,
ಕುವೆಂಪು ಕನ್ನಡ ಅಧ್ಯಯನ ಕೇಂದ್ರ
ಮಾನಸ ಗಂಗೋತ್ರಿ, ಮೈಸೂರು-6

ಎನ್. ಭಾರತಿ
ನಂ. 9, ನೃಪತುಂಗ, 15ನೇ ಕ್ರಾಸ್,
ಉಳ್ಳಾಲ ಮುಖ್ಯರಸ್ತೆ,
ಮುನೇಶ್ವರ ನಗರ, ಬೆಂಗಳೂರು-56.

ಡಾ. ವೈ.ಸಿ. ಭಾನುಮತಿ
ನಂ. 1123, ಕೇಶವದೀಪ, ಲಲಿತಾದ್ರಿ,
1ನೇ ಕ್ರಾಸ್, ಕುವೆಂಪು ನಗರ,
ಮೈಸೂರು-23.

ಲಲಿತಾ ರವೀಂದ್ರ
ಕೌಶಿಕ, ಕೆ.ಹೆಚ್.ಬಿ. ಆಫೀಸ್ ಮೈನ್,
3ನೇ ತಿರುವು, ರಾಜೇಂದ್ರನಗರ,
ಶಿವಮೊಗ್ಗ- 577204.

ಬಿ.ಎಲ್ ವೇಣು
ಖ್ಯಾತ ಕಾದಂಬರಿಕಾರರು,
ಕೋಟೆಬೀದಿ,
ಚಿತ್ರದುರ್ಗ.

ಲೀಲಾದೇವಿ ಆರ್. ಪ್ರಸಾದ್
ನಂ. 64, 1ನೇ ಮುಖ್ಯರಸ್ತೆ,
ಲೋಯರ್ ಪ್ಯಾಲೇಸ್ ಆರ್ಚರ್ಡ್,
ಸದಾಶಿವನಗರ, ಬೆಂಗಳೂರು.

ಎಸ್.ಎ. ಶ್ರೀನಿವಾಸರಾವ್
ನಂ. 430, ಸೌರಭ, 17ನೇ ಮೈನ್,
ಹನುಮಂತನಗರ, ಬೆಂಗಳೂರು–50.

ಗುಡಿಬಂಡೆ ಪೂರ್ಣಿಮಾ
ನಂ. 60, 31ನೇ ಅಡ್ಡರಸ್ತೆ, 7ನೇ ಬ್ಲಾಕ್,
ಜಯನಗರ, ಬೆಂಗಳೂರು–82.

ಎಂ.ಕೆ. ಉಮಾದೇವಿ
ನಂ. 57, ಪಚ್ಚೆತೆನೆ, 4ನೇ ಮುಖ್ಯರಸ್ತೆ,
ಆರ್.ಎಂ.ವಿ, 2ನೇ ಹಂತ,
ಎ.ಜಿ.ಎಸ್. ಬಡಾವಣೆ, ಬೆಂಗಳೂರು–54.

ವಿಜಯಲಕ್ಷ್ಮಿ ಕೃಷ್ಣಪ್ರಸಾದ್
ನಂ. 59, 40ನೇ ಕ್ರಾಸ್, 6ನೇ ಮೈನ್,
5ನೇ ಬ್ಲಾಕ್, ಜಯನಗರ,
ಬೆಂಗಳೂರು–4.

ಡಾ. ಕೆ.ಆರ್. ಸಂಧ್ಯಾ ರೆಡ್ಡಿ
ನಂ. 1044, 4ನೇ ಮೈನ್,
8ನೇ ಕ್ರಾಸ್, ಶ್ರೀನಿವಾಸನಗರ,
ಬೆಂಗಳೂರು–5.

ಹೆಚ್.ಎಸ್. ಪಾರ್ವತಿ
ಸ್ನೇಹ, ನಂ. 3368, 13ನೇ ಕ್ರಾಸ್,
ಕೆ.ಆರ್. ರಸ್ತೆ, ಶಾಸ್ತ್ರಿನಗರ,
ಬೆಂಗಳೂರು–28.

ಶಾಂತಾ ನಾಗರಾಜ್
ನಂ. 161, ಎ/16, ಮಹಡಿ, 1ನೇ ಎನ್. ವಿಭಾಗ,
ರಾಜಾಜಿನಗರ, ಬೆಂಗಳೂರು–10.

ವಿಜಯಲಕ್ಷ್ಮಿ ಕೆ.ಎಂ.
ನಂ. 59, 40ನೇ ಕ್ರಾಸ್, 6ನೇ ಮೈನ್,
5ನೇ ಬ್ಲಾಕ್, ಜಯನಗರ,
ಬೆಂಗಳೂರು–41

ಶ್ರೀವತ್ಸ
ನಂ.9, ನೃಪತುಂಗ, 15ನೇ ಕ್ರಾಸ್, ಉಳ್ಳಾಲ ಮುಖ್ಯರಸ್ತೆ
ಮುನೇಶ್ವರ ನಗರ, ಬೆಂಗಳೂರು–56.

ಪ್ರೊ. ಹೆಚ್.ಆರ್. ದಾಸೇಗೌಡ
ನಂ.681, ಅನುರಾಧ ಅನುರೂಪ, 12ನೇ ಕ್ರಾಸ್ ರೋಡ್,
ವಿಜಯನಗರ, ಬೆಂಗಳೂರು.

ವೈ.ಎಸ್. ವಿಜಯಲಕ್ಷ್ಮಿ
ನಂ. 18, 114/21 ಬಿಳಿಗಿರಿ,
ಕಾವೇರಿನಗರ, ಕತ್ತರಿಗುಪ್ಪೆ
ಬನಶಂಕರಿ, 3ನೇ ಹಂತ, ಬೆಂಗಳೂರು–85.

ಡಾ. ರಹಮತ್ ತರೀಕೆರೆ
ಸೂಫಿ, ಎಂ.ಪಿ. ಪ್ರಕಾಶನಗರ,
ಹೊಸಪೇಟೆ–583276.

ವಿಜಯ ಪಿ.
ಬೆಂಗಳೂರು

ನಂ. ನಾಗಲಕ್ಷ್ಮಿ
ಹವ್ಯಾಸಿ ಅಂಕಣಕಾರರು,
ಜೆ.ಪಿ. ನಗರ, 1ನೇ ಹಂತ,
ಬೆಂಗಳೂರು.

ಇಂದಿರಾ ಶಿವಣ್ಣ
ನಂ. 82, 4ನೇ ಎ ಕ್ರಾಸ್,
36ನೇ ಮೈನ್, ಡಾಲರ್ಸ್ ಸ್ಕೀಂ,
ಬಿ.ಟಿ.ಎಂ. ಲೇಔಟ್,
1ನೇ ಹಂತ, ಬೆಂಗಳೂರು–68.

ಕೊಪ್ಲುಮನೆ ವಿಜಯಲಕ್ಷ್ಮಿ
ನಂ. 59, 40ನೇ ಕ್ರಾಸ್, 6ನೇ ಮೈನ್,
5ನೇ ಬ್ಲಾಕ್, ಜಯನಗರ,
ಬೆಂಗಳೂರು-41.

ಕೆ. ಶಾಶ್ವತೀ
ಕೃಷಿ ಅಧಿಕಾರಿ
ಬ್ಯಾಂಕ್ ಆಫ್ ಇಂಡಿಯಾ
ಕೆ.ಜಿ. ರಸ್ತೆ, ಬೆಂಗಳೂರು.

ಪ್ರೊ. ಎಂ. ಶ್ರೀಧರಮೂರ್ತಿ
ಪ್ರಾಧ್ಯಾಪಕರು, ಮನಶಾಸ್ತ್ರ ವಿಭಾಗ,
ಎಸ್.ಎಂ.ಕೆ.ಆರ್.ವಿ. ಕಾಲೇಜು,
ಜಯನಗರ, ಬೆಂಗಳೂರು-9.

ವಿಜಯಾ ಪ್ರಸಾದ್
ಬೆಂಗಳೂರು.

ಎಲ್.ವಿ. ಶಾಂತಕುಮಾರಿ
ನಂ. 158, ರಾಯರರಕ್ಷೆ,
4ನೇ ಮುಖ್ಯರಸ್ತೆ, 5ನೇ ಅಡ್ಡ ರಸ್ತೆ,
ಪೂರ್ಣಪ್ರಜ್ಞ ಲೇಔಟ್,
ಬನಶಂಕರಿ 3ನೇ ಹಂತ,
ಬೆಂಗಳೂರು-83.

ಪದ್ಮ ಶಿವರುದ್ರಪ್ಪ
ನಂ. 619, ಕಾರ್ತೀಕ, 18ನೇ ಮೈನ್,
ಪದ್ಮನಾಭನಗರ,
ಬೆಂಗಳೂರು-70.

ಡಾ. ಟಿ.ಎಸ್. ಶ್ರೀವಳ್ಳಿ
'ಸಿಂಧೂರ', ನಂ. 1187, ಗಂಗೆ ರಸ್ತೆ,
ಕುವೆಂಪು ನಗರ, ಮೈಸೂರು-23.

ವಿಜಯಲಕ್ಷ್ಮಿ ಕೆ.ಎಂ.
ಬೆಂಗಳೂರು.

ನೀಳಾದೇವಿ
ನಂ. 85, 13ನೇ ಅಡ್ಡ ರಸ್ತೆ,
10ನೇ ಮೈನ್, ಮಲ್ಲೇಶ್ವರಂ
ಬೆಂಗಳೂರು-3.

ಡಾ. ಅ.ಲ. ನರಸಿಂಹನ್
ನಂ. 13, 1ನೇ ಟೆಂಪಲ್ ರಸ್ತೆ,
18ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-3

ಉಷಾ ಪಿ. ರೈ.
ಸಮೃದ್ಧ, ನಂ. 345, 7ನೇ ಕ್ರಾಸ್,
ಶಾಂತಿನಗರ, ಬೆಂಗಳೂರು-27.

ಡಾ. ಮಲ್ಲಿಕಾರ್ಜುನ ಕೂಡ್ಲಿಗೆರೆ
ನಂ. ಯು-12, 'ಎ' ಕ್ರಾಸ್,
ಬಸಪ್ಪ ಗಾರ್ಡನ್,
ಪೈಪ್‌ಲೈನ್, ಮಲ್ಲೇಶ್ವರಂ,
ಬೆಂಗಳೂರು-3.

ಗಿರಿಜಾ ತನುಜೆ
ಬೆಂಗಳೂರು.

ಡಾ. ಎಸ್.ಎಂ. ಗಂಗಾಧರಯ್ಯ
ಮುಖ್ಯಸ್ಥರು,
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಕೇಂದ್ರ,
ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ರಾಜೇಶ್ವರಿ
ಲೇಖಕರು,
ಬಳ್ಳಾರಿ.

ಎಸ್. ನಂಜುಂಡಸ್ವಾಮಿ
ಸೌಜನ್ಯ, ನಂ. 411, 1ನೇ ಜಿ. ಕ್ರಾಸ್,
4ನೇ ಮುಖ್ಯರಸ್ತೆ, ಬನಶಂಕರಿ, 3ನೇ ಹಂತ,
ಬೆಂಗಳೂರು-85.

ಡಾ. ಮಂಜುಳ, ಚಿತ್ರದುರ್ಗ
ಕೋಟೆ ಬಡಾವಣೆ,
ಚಿತ್ರದುರ್ಗ.

ಕೆ.ಹೆಚ್. ಸಾವಿತ್ರಿ
ಸುಶೀಲಾ, 7ನೇ ಎ ಕ್ರಾಸ್, ಶಾರದ ಕಾಲೋನಿ,
ಬಸವೇಶ್ವರನಗರ, ಬೆಂಗಳೂರು.

ಅಂಜನಾ ರಂಜನಾ
ಆರ್.ಎಂ.ಬಿ. ಬಡಾವಣೆ,
ದಾವಣಗೆರೆ.

ಡಾ. ಹೆಚ್. ಜಯಮ್ಮ
ನಂ.2933, ಆಶೀರ್ವಾದ,
13ನೇ ಮೈನ್, ವಿಜಯನಗರ,
2ನೇ ಹಂತ, ಬೆಂಗಳೂರು–40.

ಬಿ.ಎಸ್. ಕೇಶವರಾವ್
ನಂ.1261, ವೃಂದಾ ರೋಡ್,
46ನೇ ಕ್ರಾಸ್, 1ನೇ ಹಂತ,
ಕೆ.ಎಸ್. ಲೇಔಟ್, ಬೆಂಗಳೂರು–78.

ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ
ಬ್ರಾಹ್ಮಣರ ಬೀದಿ, ಬಿಜಾಪುರ.

ಡಾ. ಮಂದಾಕಿನಿ ಪುರೋಹಿತ
ಕನ್ನಡ ಉಪನ್ಯಾಸಕರು,
ಸತ್ಯಸಾಯಿ ಗೃಹ ವಿಜ್ಞಾನ ಕಾಲೇಜು,
ಸಪ್ತಾಪುರ, ಧಾರವಾಡ–1.

ಡಾ. ವೀ. ಮಂಜುಳಾ ಶಿವನಾಥ್
ನಂ.36, 2ನೇ ಮೈನ್, ಶೇಷಾದ್ರಿಪುರಂ,
ಬೆಂಗಳೂರು–20.

ಡಾ. ಜಯಮಾಲಾ
ನಂ.496, 6ನೇ ಮೈನ್, ಡಾಲರ್ಸ್ ಕಾಲೋನಿ,
ಆರ್.ಎಂ.ವಿ. 2ನೇ ಹಂತ, ಬೆಂಗಳೂರು.

ಡಾ. ಬಿ.ಎಲ್. ಶಂಕರ್
ನಂ.72, 4ನೇ ಕ್ರಾಸ್, 4ನೇ ಬ್ಲಾಕ್,
ಆರ್.ಎಂ.ವಿ. 2ನೇ ಹಂತ,
ಎಂ.ಎಲ್.ಎ. ಲೇಔಟ್, ಬೆಂಗಳೂರು–94.

ಡಿ. ಸ್ಮಿತಾರೆಡ್ಡಿ
ಬೆಂಗಳೂರು.

ಡಾ. ವೈ.ಎಸ್. ಜ್ಯೋತಿ ಶಶಿಕುಮಾರ್
'ಶರಧಿ' ನಂ.115/10, 15ನೇ ಕ್ರಾಸ್,
ವೈಯಾಲಿ ಕಾವಲ್, ಬೆಂಗಳೂರು–3.

ಅನುಸೂಯರಾವ್
ನಂ.430, ಸೌರಭ, 17ನೇ ಮೈನ್,
ಹನುಮಂತನಗರ,
ಬೆಂಗಳೂರು–50.

ಡಾ. ವಿಮಲ ರಾಮರಾವ್
D/o ದಿ.ಎಂ.ವಿ. ರಾಮರಾವ್,
ಸದಾಶಿವನಗರ, 1ನೇ ಮೈನ್,
ಬೆಂಗಳೂರು.

ಕೆ. ಗಾಯಿತ್ರಿ ಮೂರ್ತಿ
ನೃಪತುಂಗ ರಸ್ತೆ, ಬೆಂಗಳೂರು–1.

ಡಾ. ನಾಗರತ್ನಮ್ಮ
ನಂ.632, ಜನತಾನಗರ,
9ನೇ ಕ್ರಾಸ್,
ಮೈಸೂರು–9.

ಡಾ. ಕೆ.ಪಿ. ಮಂಜುಳಾ ರೆಡ್ಡಿ
ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.

ವೈ.ಎಸ್. ವಿಜಯಲಕ್ಷ್ಮಿ
ನಂ.18, 114/2 ಬಿಳಿಗಿರಿ, ಕಾವೇರಿನಗರ, ಕತ್ತರಿಗುಪ್ಪೆ:
ಬನಶಂಕರಿ, 3ನೇ ಹಂತ, ಬೆಂಗಳೂರು–85.

ಡಾ. ಗೀತಾ ಶೆಣೈ
ನಂ. 1903, 7ನೇ ಮೈನ್, 'ಇ' ಬ್ಲಾಕ್,
ರಾಜಾಜಿನಗರ, ಬೆಂಗಳೂರು–10.

ರೋಹಿಣಿ ರಘುನಂದನ್
ಮಾನ್ಯ ರಾಜ್ಯ ಸಭಾ ಸದಸ್ಯರ ವಿಶೇಷಾಧಿಕಾರಿಗಳು
ನಂ. 1 (9), ಪಿಡಬ್ಲ್ಯೂಡಿ ಬಿಲ್ಡಿಂಗ್,
ಬಿ.ಎಂ.ಆರ್.ಡಿ.ಎ. ಕಾಂಪ್ಲೆಕ್ಸ್,
ಅಲಿ ಆಸ್ಕರ್ ರೋಡ್,
ಬೆಂಗಳೂರು–1.

ಹೇಮಲತಾ ಮಹಿಷಿ
ಅಡ್ವೊಕೇಟ್,
ನಂ. 10, ವೆಸ್ಟ್‌ಲಿಂಕ್ ರೋಡ್,
2 ಮತ್ತು 3ನೇ ಕ್ರಾಸ್ ಮಧ್ಯೆ,
ಮಲ್ಲೇಶ್ವರಂ, ಬೆಂಗಳೂರು–3.

ಜಿ. ಶಿವಣ್ಣ
ಮಾಜಿ ಸಂಪಾದಕರು, ಯುವ ಕರ್ನಾಟಕ,
ಯುವಜನ ಸೇವಾ ಕ್ರೀಡಾ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು–1.

ಜಿ. ಶಿವಣ್ಣ
10ನೇ ಮೈನ್, ಹನುಮಂತನಗರ
ಬೆಂಗಳೂರು.

ನಂದಕಿಶೋರ್
ನಂ. 15, 7ನೇ ಬಿ ಕ್ರಾಸ್,
ಗಾರ್ಡನ್ ವಿಲ್ಲಾಸ್, ನಾಗರಬಾವಿ,
ಬೆಂಗಳೂರು–72.

ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್ಟ
ನಂ. 386, 'ಶ್ರೀ ಗುರುಕೃಪಾ', 14 'ಇ' ಅಡ್ಡರಸ್ತೆ,
ವಿವೇಕಾನಂದ ಮಾರ್ಗ, ಸಾರಕ್ಕಿ ಗೇಟ್,
ಜೆ.ಪಿ.ನಗರ, 1ನೇ ಹಂತ,
ಬೆಂಗಳೂರು – 560 078.

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು – 59

ಸ್ವಾತಂತ್ರ್ಯ ಹೋರಾಟದಲ್ಲಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಅನೇಕ ಮಹಿಳೆಯರು ಗಾಂಧೀಜಿಯವರ ಪ್ರಭಾವದಿಂದ ಭಾಗವಹಿಸುವುದರ ಮೂಲಕ ಚಳವಳಿಯ ಅಭಿಯಾನದ ದಿಕ್ಕಿನ ಪಥವನ್ನೇ ಬದಲಾಯಿಸಿದರು. ಅಂತಹ ಮಹಿಳೆಯರ ಸಾಲಿನಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪ ಕೂಡ ಒಬ್ಬರು. ಆಕೆ ಒಬ್ಬ ಧೀಮಂತ ವ್ಯಕ್ತಿತ್ವದ ಮಹಿಳೆ.

ನನ್ನ ಸಮಕಾಲೀನರಾದ ಇವರು ಮತ್ತು ಇವರ ಪತಿ ಹೆಸ್.ಸಿ.ದಾಸಪ್ಪ ಅತ್ಯಂತ ನಿಕಟವರ್ತಿಗಳಾಗಿದ್ದರು. ಶ್ರೀಮಂತಿಕೆಯ ಆಡಂಬರದ ಪ್ರಭಾವಕ್ಕೆ ಒಳಗಾಗದೆ ಗಾಂಧೀಜಿಯುವರ ತತ್ವಗಳನ್ನು ನಿಷ್ಠೆಯಿಂದ ಪಾಲಿಸಿಕೊಂಡು ಬಂದಂತಹ ಈ ದಂಪತಿಗಳ ಕೊಡುಗೆ ದೇಶಕ್ಕೆ ಅಪಾರ. ದೇಶದ ಅಭಿವೃದ್ಧಿಗಾಗಿ ಯಾವುದೇ ಅಧಿಕಾರದ ಆಮಿಷಕ್ಕೆ ಒಳಗಾಗದೆ ಸೇವೆ ಸಲ್ಲಿಸಿದ್ದಾರೆ. ಕಾರ್ಯಕರ್ತರೊಡನೆ ಇವರಿಗಿದ್ದ ಒಡನಾಟ ಸಂಘಟನಾ ಸಾಮರ್ಥ್ಯ ನಿಜಕ್ಕೂ ಅಭಿನಂದನೀಯ. ಸಚಿವರಾಗಿದ್ದಾಗ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಿದ್ದರು.

–ಕರ್ನಾಟಕ ರತ್ನ ಎಸ್ ನಿಜಲಿಂಗಪ್ಪ

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು